ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ ೧೬

ವಚನ ಸಾಹಿತ್ಯ : ಭಾಗ-೮



ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ - ೫೮೬೧೦೩

ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ-೧೬ : ವಚನ ಸಾಹಿತ್ಯ : ಭಾಗ-೮

❖

- ಬಸವಣ್ಣನವರ ಟೀಕಿನ ವಚನಗಳು, ಭಾಗ-೨

❖

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ

ಧಾರವಾಡ

ಸಂಪಾದಕರು

ಡಾ. ಪಂಡಿತ ರಾಠೋಡ

ಧಾರವಾಡ

ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ. ಎಲ್. ಡಿ. ಇ. ಸಂಸ್ಥೆ

ವಿಜಯಪುರ

೨೦೨೧

COMPLETE WORK OF DR. M.M.KALBURGI
VOLUME - 16 : VACHANA SAHITY : BHAGA : 8
Edited by : Dr. Pandit Rathod, Dharwad

Published by : Dr. P.G. Halakatti Research Centre
B.L.D.E. Association, Vijayapur, Karnatak

First Edition : 2021
Pages : xxxiv + 646=680

Copies: 1000
Price Rs: 340/-

❖❖

Cover page design : K.K. Makali, Hampi.
Type set : Dr. Hanumanth Melinamani, Dr. Saraswatidevi Bhagawati, Dharwad.
Printer : **The Print Point,** No. 9/8 6th Cross, 4th Main, Rajajinagar, Industrial Town,
Bangalore-560044. Ph. 97390 67359

ಆರ್ಥಿಕ ನೆರವು : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರಕಾರ

ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ, ಸಂಪುಟ : ೧೬–ವಚನ ಸಾಹಿತ್ಯ : ಭಾಗ–೮

ಸಂಪಾದಕರು : ಡಾ. ಪಂಡಿತ ರಾಠೋಡ, ಧಾರವಾಡ

ಪ್ರಕಾಶಕರು : ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ. ಎಲ್. ಡಿ. ಇ. ಸಂಸ್ಥೆ, ವಿಜಯಪುರ
ಪ್ರಥಮ ಮುದ್ರಣ: ೨೦೨೧
ಪುಟಗಳು: xxxiv + ೬೪೬=೬೮೦

ಪ್ರತಿಗಳು: ಒಂದು ಸಾವಿರ
ಬೆಲೆ ರೂ: ೩೪೦/–

❖❖

ಮುಖಪುಟ ವಿನ್ಯಾಸ: ಕೆ.ಕೆ. ಮಕಾಳಿ, ಹಂಪಿ
ಅಕ್ಷರ ಸಂಯೋಜನೆ: ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಧಾರವಾಡ
ಮುದ್ರಣ: **ಪ್ರಿಂಟ್ ಪಾಯಿಂಟ್,** ನಂ. ೯/೮ ೬ನೆಯ ಕ್ರಾಸ್, ೪ನೆಯ ಮುಖ್ಯರಸ್ತೆ, ರಾಜಾಜಿನಗರ,
ಇಂಡಸ್ಟ್ರಿಯಲ್ ಟೌನ್, ಬೆಂಗಳೂರು–೫೬೦೦೪೪. ಫೋನೆ : ೯೭೩೯೦ ೬೭೩೫೯

ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

ಸಲಹಾ ಸಮಿತಿ

❖

ಗೌರವಾಧ್ಯಕ್ಷರು

ಡಾ. ಎಂ. ಬಿ. ಪಾಟೀಲ, ವಿಜಯಪುರ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ ಮತ್ತು ಗೃಹ ಸಚಿವರು, ಕರ್ನಾಟಕ ಸರ್ಕಾರ

ಅಧ್ಯಕ್ಷರು

ಶ್ರೀ ಜಿ. ಕೆ. ಪಾಟೀಲ, ವಿಜಯಪುರ

ಕಾರ್ಯದರ್ಶಿಗಳು

ಡಾ. ಎಂ. ಎಸ್. ಮದಭಾವಿ, ವಿಜಯಪುರ

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ, ಧಾರವಾಡ

ಯೋಜನಾ ಸಂಯೋಜಕರು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ವಿಜಯಪುರ

❖

ಸಲಹಾ ಸದಸ್ಯರು

ಡಾ. ಗುರುಲಿಂಗ ಕಾಪಸೆ, ಧಾರವಾಡ

ಶ್ರೀ ಶ್ರೀವಿಜಯ ಕಲಬುರ್ಗಿ, ಧಾರವಾಡ

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರತಿನಿಧಿಗಳು

❖❖

ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

ಸಂಪಾದಕ ಸದಸ್ಯರು

❖

❖❖

*

ಪ್ರಧಾನ ಸಂಪಾದಕರ ಮಾತು

ಡಾ. ವೀರಣ್ಣ ರಾಜೂರ

ಮಾರ್ಗಕ್ಕೆ ಕೊನೆಯಿಲ್ಲ.....

ಡಾ. ಎಂ. ಎಂ. ಕಲಬುರ್ಗಿ ಅವರು ಕನ್ನಡ ಸಂಶೋಧನ ಮಹಾಮಾರ್ಗದ ಮಹಾಶಿಲ್ಪಿ; ಕನ್ನಡ ವಿದ್ವತ್ ಪರಂಪರೆಯ ಪ್ರಥಮ ಶ್ರೇಣಿಯ ಗಟ್ಟಿ ವಿದ್ವಾಂಸರು; ಕನ್ನಡ ಭಾಷೆ-ಸಾಹಿತ್ಯ-ಸಂಸ್ಕೃತಿಗಳ ಬಹುಶಿಸ್ತೀಯ ಅಧ್ಯಯನದ ಸವ್ಯಸಾಚಿ ಸತ್ಯಶೋಧಕರು. ಅವರ ಘನವ್ಯಕ್ತಿತ್ವ, ಕರ್ತೃತ್ವಶಕ್ತಿ, ಕಾರ್ಯಕ್ಷಮತೆ, ನಾಡು-ನುಡಿ-ಸಂಸ್ಕೃತಿ ಪ್ರೀತಿ, ಸಾಮಾಜಿಕ ಕಳಕಳಿ, ಶೈಕ್ಷಣಿಕ ಶಿಸ್ತು, ಸಾಹಿತ್ಯಿಕ-ಸಾಧನೆ, ಸಂಶೋಧನ ಸಿದ್ಧಿ, ಆಡಳಿತ ದಕ್ಷತೆ ಹಾಗೂ ಮಾನವೀಯ ಮೌಲ್ಯಗಳ ಅನುಷ್ಠಾನ ಅಪೂರ್ವ-ಅದ್ವಿತೀಯ-ಅನುಕರಣೀಯ.

ಡಾ. ಎಂ. ಎಂ. ಕಲಬುರ್ಗಿ ಅವರದು ಬಹುಮುಖ ವ್ಯಕ್ತಿತ್ವ; ಬಹುಮುಖ ಪ್ರತಿಭೆ-ಪಾಂಡಿತ್ಯ-ಪ್ರಭುತ್ವ; ಬಹುಮುಖ ಕಾರ್ಯ ಯೋಜನೆ, ಕಾರ್ಯಸಾಧನೆ, ಕಾರ್ಯಸಿದ್ಧಿ. ಕನ್ನಡದ ಶ್ರೇಷ್ಠ ಪ್ರಾಧ್ಯಾಪಕರಾಗಿ, ಪ್ರಥಮ ಶ್ರೇಣಿಯ ಸಂಶೋಧಕರಾಗಿ, ಸಮರ್ಥ ಸಂಶೋಧನ ಮಾರ್ಗದರ್ಶಕರಾಗಿ, ವಿಭಾಗದ ದಕ್ಷ ಅಧ್ಯಕ್ಷರಾಗಿ, ವಿಶ್ವವಿದ್ಯಾಲಯದ ಮಾದರಿಯ ಕುಲಪತಿಗಳಾಗಿ, ಉನ್ನತ ಶಿಕ್ಷಣ ತಜ್ಞರಾಗಿ, ಅನೇಕ ವಿನೂತನ ಯೋಜನೆಗಳ ಯೋಜಕರಾಗಿ, ಹಲವಾರು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಸಂಘಸಂಸ್ಥೆಗಳ ನಿರ್ದೇಶಕರಾಗಿ ಅವರು ಮಾಡಿದ ಕಾರ್ಯ, ಕೊಟ್ಟ ಕೊಡುಗೆ ಅಚ್ಚರಿ ಮೂಡಿಸುವಂತಹವು; ಅಭಿಮಾನ ಉಕ್ಕಿಸುವಂತಹವು.

ಜೀವನ-ಸಾಧನೆ :

ಡಾ. ಎಂ. ಎಂ. ಕಲಬುರ್ಗಿ (ಮಲ್ಲೇಶಪ್ಪ ಮಡಿವಾಳಪ್ಪ ಕಲಬುರ್ಗಿ) ಅವರು ೧೯೩೮ ನವ್ಹಂಬರ್ ೨೮ ರಂದು ತಾಯಿಯ ತವರೂರು ಗುಬ್ಬೇವಾಡ(ತಾ. ಸಿಂದಗಿ, ಜಿ: ವಿಜಯಪುರ)ದಲ್ಲಿ ಜನಿಸಿದರು. ತಂದೆ ಮಡಿವಾಳಪ್ಪ; ತಾಯಿ ಗುರಮ್ಮ. ಶ್ರಮಸಂಸ್ಕೃತಿಯ ಒಕ್ಕಲುತನ ಮನೆತನ. ಮಧ್ಯಮವರ್ಗದ ಸುಸಂಸ್ಕೃತ-ಅವಿಭಕ್ತ ಕುಟುಂಬ. ಇಂಥ ಪರಿಸರದಲ್ಲಿ ಬೆಳೆದ ಕಲಬುರ್ಗಿ ಅವರಿಗೆ ಶ್ರಮಗೌರವ ಹಾಗೂ ಸಹಬಾಳ್ವೆಯ ಪಾಠ ಬಾಲ್ಯದಿಂದಲೇ ಬಳುವಳಿಯಾಗಿ ದೊರೆಯಿತು.

ಕಲಬುರ್ಗಿ ಅವರ ಪ್ರಾಥಮಿಕ ಶಿಕ್ಷಣ (ಮುಲ್ಕೀ ಪರೀಕ್ಷೆಯವರೆಗೆ) ತಂದೆಯವರ ಊರಾದ ಯರಗಲ್ಲ (ತಾ. ಸಿಂದಗಿ, ಜಿ. ವಿಜಯಪುರ)ದಲ್ಲಿ ನಡೆಯಿತು. ಮಾಧ್ಯಮಿಕ ವ್ಯಾಸಂಗವನ್ನು ಸಿಂದಗಿಯ ಎಚ್.ಜಿ. ಬಾಡ ಹೈಸ್ಕೂಲಿನಲ್ಲಿ ಪೂರೈಸಿದರು. ೧೯೫೬ ರಲ್ಲಿ ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತು ಉಚ್ಚಶ್ರೇಣಿಯಲ್ಲಿ ತೇರ್ಗಡೆ ಹೊಂದಿದರು.

ಕಲಬುರ್ಗಿ ಅವರ ಉನ್ನತವ್ಯಾಸಂಗ ವಿಜಯಪುರ ಮತ್ತು ಧಾರವಾಡದಲ್ಲಿ ನೆರವೇರಿತು. ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ವಿಜಯ ಕಾಲೇಜಿನಿಂದ ಬಿ.ಎ. ಪದವಿಯನ್ನು (೧೯೬೦) ಪ್ರಥಮಶ್ರೇಣಿಯಲ್ಲಿ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದಿಂದ ಎಂ.ಎ. ಪದವಿಯನ್ನು (೧೯೬೨) ಪ್ರಶಸ್ತಿ ಸಹಿತ ಪ್ರಥಮ ಶ್ರೇಣಿಯಲ್ಲಿ ಗಳಿಸಿಕೊಂಡರು. ಮೊದಲಿನಿಂದಲೂ ಪ್ರತಿಭೆ–ಪರಿಶ್ರಮಗಳ ಸಂಗಮವೆನಿಸಿದ್ದ ಕಲಬುರ್ಗಿ ಅವರಿಗೆ ಕಾಲೇಜಿನಲ್ಲಿ ಪ್ರೊ. ಬಿ.ಟಿ. ಸಾಸನೂರ ಅವರು, ವಿಶ್ವವಿದ್ಯಾಲಯದಲ್ಲಿ ಡಾ. ಆರ್.ಸಿ. ಹಿರೇಮಠ ಅವರು ಪ್ರೀತಿಯ ಗುರುಗಳಾಗಿ ದೊರೆತು ತಮ್ಮ ವಿದ್ವತ್ತಿನ ಜ್ಞಾನಾಮೃತವನ್ನು ನೆಚ್ಚಿನ ವಿದ್ಯಾರ್ಥಿಗೆ ಧಾರಾಳವಾಗಿ ಧಾರೆಯೆರೆದರು. ಗುರುಗಳ ಸಮರ್ಥ ಮಾರ್ಗದರ್ಶನ, ಕಲಬುರ್ಗಿ ಅವರ ಪ್ರತಿಭೆ–ಪರಿಶ್ರಮ–ಪ್ರಯತ್ನಗಳಿಂದ ಮುಪ್ಪುರಿಗೊಂಡ ಸ್ವಸಾಮರ್ಥ್ಯದ ಬಲದಿಂದ ಅವರೊಬ್ಬ ಸಶಕ್ತ–ಮಾದರಿಯ–ಆದರ್ಶ ವಿದ್ಯಾರ್ಥಿಯಾಗಿ ರೂಪುಗೊಂಡರು.

ಎಂ. ಎ. ಅಧ್ಯಯನ ಮುಗಿಯುತ್ತಲೆ ಕಲಬುರ್ಗಿ ಅವರಿಗೆ ಕಲಿತ ವಿಶ್ವವಿದ್ಯಾಲಯದಲ್ಲಿಯೇ ಕೆಲಸ ದೊರೆಯಿತು. ಕನ್ನಡ ವಿಭಾಗದಲ್ಲಿ ಆಗ ತಾನೆ ಆರಂಭವಾಗಿದ್ದ 'ಸಮಗ್ರ ವಚನ ವಾಙ್ಮಯ ಸಂಶೋಧನ ಸಂಸ್ಕರಣ ಪ್ರಕಟಣ ಯೋಜನೆ'ಯಲ್ಲಿ ಸಹಾಯಕ ಸಂಶೋಧಕರಾಗಿ ವೃತ್ತಿಜೀವನ(೧೯೬೨) ಆರಂಭಿಸಿದರು. ಕೆಲವೇ ದಿವಸಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರತಿಷ್ಠಿತ ಕಾಲೇಜು ಎನಿಸಿದ ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ಕನ್ನಡ ಅಧ್ಯಾಪಕರಾಗಿ ಸ್ಥಾನ ಪಡೆದರು. ತಮ್ಮ ಸತತಾಭ್ಯಾಸ ಪ್ರವೃತ್ತಿ, ವ್ಯವಸ್ಥಿತ ಅಚ್ಚುಕಟ್ಟಾದ ಪ್ರಭಾವಶಾಲಿ ಪಾಠಬೋಧನೆ, ಶಿಸ್ತಿನ ನಡೆ–ನುಡಿಗಳಿಂದ ವಿದ್ಯಾರ್ಥಿಗಳ–ಸಹೋದ್ಯೋಗಿಗಳ ವಿಶೇಷ ಪ್ರೀತಿ–ವಿಶ್ವಾಸ–ಗೌರವಗಳಿಗೆ ಪಾತ್ರರಾದರು.

ಪಾಠಬೋಧನೆಯ ಜೊತೆಗೆ ಕಲಬುರ್ಗಿ ಅವರು ತಮ್ಮ ನೆಚ್ಚಿನ ಗುರುಗಳಾಗಿದ್ದ ಡಾ. ಆರ್.ಸಿ. ಹಿರೇಮಠ ಅವರ ಮಾರ್ಗದರ್ಶನದಲ್ಲಿ 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಎಂಬ ವಿಷಯದ ಮೇಲೆ ಪಿಎಚ್.ಡಿ. ಸಂಶೋಧನೆಯನ್ನೂ ಕೈಕೊಂಡರು. ಆ ಸಮಯದಲ್ಲಿ ಕರ್ನಾಟಕ ಕಾಲೇಜಿನ ಗ್ರಂಥಾಲಯವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಂಡು ತಮ್ಮ ವಿಭಿನ್ನ ಆಸಕ್ತಿಯ ಜ್ಞಾನ ಕ್ಷೇತ್ರಗಳನ್ನು ಫಲಭರಿತಗೊಳಿಸಿಕೊಂಡರು. ೧೯೬೮ ರಲ್ಲಿ ಡಾಕ್ಟರೇಟ್ ಪದವಿ ಪಡೆದರು.

ನಾಲ್ಕು ವರ್ಷ (೧೯೬೨–೬೬) ಕರ್ನಾಟಕ ಕಾಲೇಜಿನಲ್ಲಿ ಯಶಸ್ವಿಯಾಗಿ ಸೇವೆ ಪೂರೈಸಿದ ನಂತರ ಕಲಬುರ್ಗಿ ಅವರನ್ನು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠ ತನ್ನತ್ತ ಕರೆದುಕೊಂಡಿತು. ಅಲ್ಲಿ ಅವರು ಅಧ್ಯಾಪಕರಾಗಿ, ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ, ವಿಭಾಗದ ಅಧ್ಯಕ್ಷರಾಗಿ, ಬಸವಪೀಠದ ಪ್ರಾಧ್ಯಾಪಕರಾಗಿ ಅಖಂಡ ೩೨ ವರ್ಷ (೧೯೬೬–೯೮) ಅದ್ವಿತೀಯವಾದ

ಶೈಕ್ಷಣಿಕ ಸೇವೆ ಸಲ್ಲಿಸಿದರು. 'ಕನ್ನಡ ವಿಭಾಗ' ಅನೇಕ ಅಧ್ಯಯನ ಶಾಖೆಗಳನ್ನು ಹೊಂದಿ, 'ಕನ್ನಡ ಅಧ್ಯಯನಪೀಠ'ವೆಂಬ ಮಹಾವೃಕ್ಷವಾಗಿ ಬೆಳೆದು ನಿಲ್ಲುವಲ್ಲಿ ಕಲಬುರ್ಗಿ ಅವರು ಪಟ್ಟ ಶ್ರಮದ ಪಾಲು ಅತ್ಯಧಿಕವಾಗಿದೆ. ಬಸವೇಶ್ವರಪೀಠವನ್ನು ಕಟ್ಟಿ ಬೆಳೆಸುವಲ್ಲಿ ಅವರು ತೋರಿದ ನಿಷ್ಠೆ ನಿಬ್ಬೆರಗು ಹುಟ್ಟಿಸುವಂತಿದೆ.

ವಿಶ್ವವಿದ್ಯಾಲಯದ ಸೇವೆಯಲ್ಲಿದ್ದಾಗ ಕಲಬುರ್ಗಿ ಅವರು ನಿರ್ವಹಿಸಿದ ಹುದ್ದೆಗಳು ಹಲವಾರು. ಕಲಾನಿಕಾಯದ ಡೀನರಾಗಿ, ವಿದ್ಯಾವಿಷಯಕ ಮಂಡಳಿ, ಪರೀಕ್ಷಾ ಮಂಡಳಿ, ಅಭ್ಯಾಸ ಮಂಡಳಿಗಳ ಅಧ್ಯಕ್ಷರಾಗಿ, ಸಿಂಡಿಕೇಟ್ ಸದಸ್ಯರಾಗಿ, ಕನ್ನಡ ಸಂಶೋಧನ ಸಂಸ್ಥೆಯ ಪ್ರಭಾರ ನಿರ್ದೇಶಕರಾಗಿ, ಸ್ನಾತಕೋತ್ತರ ವಿದ್ಯಾರ್ಥಿ ಕೂಟದ ಅಧ್ಯಕ್ಷರಾಗಿ, ಅನೇಕ ಶೈಕ್ಷಣಿಕ ಸಲಹಾ ಮಂಡಳಿಗಳ ಸದಸ್ಯರಾಗಿ ಅವರು ಮಾಡಿದ ಕಾರ್ಯ, ನೀಡಿದ ಮಾರ್ಗದರ್ಶನ, ಕಾರ್ಯರೂಪಕ್ಕೆ ತಂದ ನೀತಿ-ನಿಯಮಾವಳಿಗಳು ಮೌಲಿಕವಾಗಿದ್ದು, ವಿಶ್ವವಿದ್ಯಾಲಯದ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ವಿಶೇಷ ನೆರವು ನೀಡಿವೆ.

ಡಾ. ಎಂ. ಎಂ. ಕಲಬುರ್ಗಿ ಅವರು ೧೯೯೮ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸೇವೆಯಿಂದ ನಿವೃತ್ತಿ ಹೊಂದಿದರು. ಅಷ್ಟರಲ್ಲಿ ಅವರಿಗೆ ಮತ್ತೊಂದು ಉನ್ನತ ಅವಕಾಶದ ಬಾಗಿಲು ತೆರೆದುಕೊಂಡಿತ್ತು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿ ನೇಮಕಗೊಂಡರು. ಅದು ಅವರ ಅನೇಕ ನೂತನ ಯೋಜನೆಗಳಿಗೆ ಕಾರ್ಯರಂಗವೆನಿಸಿತು. ತಾವು ಕಂಡ ಕನಸುಗಳನ್ನೆಲ್ಲ ಅಲ್ಲಿ ನನಸುಗೊಳಿಸಲು ತಕ್ಷಣದಲ್ಲಿಯೇ ಕಾರ್ಯ ಪ್ರವೃತ್ತರಾದರು. ಹಿಂದೆ ಇದ್ದ ಕೆಲವು ಶಾಖೆಗಳ ಜೊತೆಗೆ ಮತ್ತೆ ಹಲವು ನೂತನ ಶಾಖೆಗಳನ್ನು ಆರಂಭಿಸಿ, ಎಲ್ಲ ಶಾಖೆಗಳಿಗೂ ಸಮಾನಸ್ಥಾನ-ಮಾನ, ಆರ್ಥಿಕ ಸಹಾಯ, ಮಾನವ ಸಂಪನ್ಮೂಲಗಳನ್ನು ಒದಗಿಸಿ, ಎಲ್ಲರೂ ಶಿಸ್ತುಬದ್ಧವಾಗಿ, ಸಮಯ ನಿಷ್ಠವಾಗಿ ಕೆಲಸ ಮಾಡಲು ತೊಡಗುವಂತೆ ಮಾಡಿದರು. ಅದರಿಂದಾಗಿ ಎಲ್ಲರಲ್ಲಿ ನವಚೈತನ್ಯ ತುಂಬಿಕೊಂಡಿತು. ಸಾಂಘಿಕ, ವೈಯಕ್ತಿಕ ಸಂಶೋಧನ ಯೋಜನೆಗಳಿಂದಾಗಿ ಅನೇಕ ಹೊಸ ಕ್ಷೇತ್ರಗಳಿಗೆ ಸಂಬಂಧಿಸಿದ ಅಪೂರ್ವ ಗ್ರಂಥಗಳು ಪ್ರಕಟವಾದವು. ಅದರಿಂದಾಗಿ ಕನ್ನಡ ವಿಶ್ವವಿದ್ಯಾಲಯದ ಕೀರ್ತಿ ಇಮ್ಮಡಿಗೊಂಡಿತು. ಹಗಲಿರುಳೆನ್ನದೆ ತಾವೂ ದುಡಿದು, ಇತರೆಲ್ಲರನ್ನೂ ದುಡಿಸಿ-ಶ್ರಮಸಂಸ್ಕೃತಿಯನ್ನು ಅಲ್ಲಿ ಗಟ್ಟಿಗೊಳಿಸಿ ಮೂರು ವರ್ಷಗಳಲ್ಲಿ ಅದನ್ನೊಂದು ಮಾದರಿಯ ವಿಶ್ವವಿದ್ಯಾಲಯವನ್ನಾಗಿಸಿ-೨೦೦೧ ರಲ್ಲಿ ನಿವೃತ್ತಿ ಹೊಂದಿದರು. ಹಿಂದಿನವರಂತೆ ಕಲಬುರ್ಗಿಯವರ ಸೇವೆಯನ್ನೂ ಇನ್ನೂ ಮೂರು ವರ್ಷ ವಿಸ್ತರಿಸಿದ್ದರೆ, ಕನ್ನಡ ವಿಶ್ವವಿದ್ಯಾಲಯವನ್ನು ಜಾಗತಿಕ ಮಟ್ಟದಲ್ಲಿ ಗಮನ ಸೆಳೆಯುವ ಒಂದು ಮಹಾಸಂಸ್ಥೆಯನ್ನಾಗಿ ಬೆಳೆಸಿ ನಿಲ್ಲಿಸುತ್ತಿದ್ದರು.

ನಿವೃತ್ತಿಯ ನಂತರ ಡಾ. ಕಲಬುರ್ಗಿ ಅವರ ಕಾರ್ಯಕ್ಷೇತ್ರ ಇನ್ನೂ ವಿಸ್ತಾರಗೊಂಡಿತು. ಮುಕ್ತವಾಗಿ ಅವರು ಸಾಹಿತ್ಯ-ಸಂಶೋಧನೆ-ಸಮಾಜಸೇವೆ-ಸಾಂಸ್ಕೃತಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅನೇಕ ಸಂಘ-ಸಂಸ್ಥೆಗಳಿಗೆ ಸಾಹಿತ್ಯಿಕವಾಗಿ, ಸಾಮಾಜಿಕವಾಗಿ ಮಾರ್ಗದರ್ಶನ ನೀಡುತ್ತ, ಭಾಷಣ-ಬರಹಗಳ ಮೂಲಕ ಅಸತ್ಯ, ಅನ್ಯಾಯ, ಮೂಢಾಚಾರಗಳನ್ನು ಖಂಡಿಸುತ್ತ, ಶರಣರು ಕಂಡ ಸಮಾನತೆಯ-ಸದಾಚಾರದ-ಸ್ವಸ್ಥ ಸಮಾಜ ನಿರ್ಮಾಣವಾಗಬೇಕೆಂದು ಸಾಮಾಜಿಕರಲ್ಲಿ ಜಾಗೃತಿಯನ್ನು ಮೂಡಿಸುವ ಕಾರ್ಯದಲ್ಲಿ ತೊಡಗಿದರು. ಸ್ಥಾವರಗೊಂಡ ವ್ಯವಸ್ಥೆಯನ್ನು

ಚಲನಶೀಲಗೊಳಿಸಬೇಕು, ಜಂಗಮಗೊಳಿಸಬೇಕು ಎಂದು ನಿರಂತರ ಸಮಾಜ ಶುದ್ಧಿಯ ಕಾರ್ಯದಲ್ಲಿ ನಿರತರಾಗಿದ್ದರು. ಅವರ ಪ್ರಖರ ವಿಚಾರಗಳು, ವೈಚಾರಿಕ ನಿಲವುಗಳು, ನಿಷ್ಠುರ ಸತ್ಯಗಳು ಪಟ್ಟಭದ್ರ ಹಿತಾಸಕ್ತಿಗಳಿಗೆ, ಸಂಕುಚಿತ ಭಾವದ ಸನಾತನಿಗಳಿಗೆ ರುಚಿಸಲಿಲ್ಲ; ಅಪಥ್ಯವೆನಿಸಿದವು. ಹೀಗಾಗಿ ಸತ್ಯ ಶೋಧಕರಾದ ಡಾ. ಎಂ. ಎಂ. ಕಲಬುರ್ಗಿ ಅವರು ದುಷ್ಟಶಕ್ತಿಗಳ ಗುಂಡೇಟಿಗೆ ಬಲಿಯಾಗಬೇಕಾಯಿತು. ೩೦-೦೮-೨೦೧೫ ಕರ್ನಾಟಕದ ಇತಿಹಾಸದಲ್ಲಿ ಒಂದು ಕರಾಳದಿನ. ಸಾಂಸ್ಕೃತಿಕ ಶ್ರೀಮಂತ ನಗರವೆನಿಸಿದ ಧಾರವಾಡದಲ್ಲಿ ಹಾಡುಹಗಲೇ ವಿದ್ಯಾರ್ಥಿ ವೇಷದಲ್ಲಿ ಮನೆಯೊಳಗೆ ನುಗ್ಗಿ ಸಾತ್ವಿಕ ಶರಣ, ಸ್ವತಂತ್ರ ವಿಚಾರವಾದಿ, ನ್ಯಾಯ ನಿಷ್ಠುರಿಯ ಅಮಾನುಷ ಹತ್ಯೆ ಮಾಡಲಾಯಿತು. ಇದು ಸತ್ಯದ ಕೊಲೆ; ಅಭಿವ್ಯಕ್ತಿ ಸ್ವಾತಂತ್ರ್ಯದ ಕಗ್ಗೊಲೆ. ಇದರಿಂದ ನಾಡು ಒಬ್ಬ ಅಪ್ರತಿಮ ವಿಚಾರವಾದಿಯನ್ನು ಕಳೆದುಕೊಂಡು ಬಡವಾಯಿತು. ಲಿಂಗಾಯತ ಸಮಾಜ ಒಬ್ಬ ತತ್ವನಿಷ್ಠ ಚಿಂತಕನ ಅಗಲಿಕೆಯಿಂದ ಅನಾಥವಾಯಿತು. ವಿದ್ವತ್‌ಲೋಕ ಒಬ್ಬ ಸತ್ಯನಿಷ್ಠ ಸಂಶೋಧಕನನ್ನು ಕಳೆದುಕೊಂಡು ಭರಿಸಲಾರದ ಹಾನಿಗೊಳಗಾಯಿತು.

* * * *

ಡಾ. ಎಂ. ಎಂ. ಕಲಬುರ್ಗಿ ಅವರ ಬೋಧಕೇತರ ಸಾಹಿತ್ಯಿಕ-ಸಾಂಸ್ಕೃತಿಕ ಕ್ಷೇತ್ರಗಳ ಕಾರ್ಯವ್ಯಾಪ್ತಿ ಬಹು ದೊಡ್ಡದು. ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ, ಅಖಿಲ ಕರ್ನಾಟಕ ಕೇಂದ್ರ ಕ್ರಿಯಾ ಸಮಿತಿಯ ಕಾರ್ಯದರ್ಶಿಯಾಗಿ; ಯುಜಿಸಿ ಭಾರತೀಯ ಭಾಷೆಗಳ ಸಲಹಾ ಸಮಿತಿ, ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ರಚನಾ ಸಮಿತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯರಾಗಿ; ದ.ರಾ.ಬೇಂದ್ರೆ ಟ್ರಸ್ಟ್, ಬಸವರಾಜ ಕಟ್ಟಿಮನಿ ಪ್ರತಿಷ್ಠಾನ, ಆದಿಲ್‌ಶಾಹಿ ಸಾಹಿತ್ಯ ಅನುವಾದ ಯೋಜನೆಯ ಅಧ್ಯಕ್ಷರಾಗಿ; ಗದಗ ಲಿಂಗಾಯತ ಅಧ್ಯಯನ ಸಂಸ್ಥೆ, ಬೆಳಗಾವಿ ಲಿಂಗಾಯತ ಅಧ್ಯಯನ ಅಕಾಡೆಮಿ, ನಿಡಸೋಸಿ ಶರಣ ಸಂಸ್ಕೃತಿ ಅಕಾಡೆಮಿ, ಕೂಡಲಸಂಗಮ ಬಸವೇಶ್ವರ ಅಧ್ಯಯನ ಸಂಸ್ಥೆ, ಮೈಸೂರು ಸಮಗ್ರ ಸ್ವರವಚನ ಸಾಹಿತ್ಯ ಪ್ರಕಟಣ ಮಾಲೆ, ಶಿವಮೊಗ್ಗ ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆಗಳ ನಿರ್ದೇಶಕರಾಗಿ; ಸಮಗ್ರ ವಚನ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಅಪ್ರಕಟಿತ ಕನ್ನಡ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಗದ್ಯ ಸಾಹಿತ್ಯ ಪ್ರಕಟಣ ಯೋಜನೆ, ವಚನ ಬಹುಭಾಷಾ ಭಾಷಾಂತರ ಯೋಜನೆ, ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಬಸವರಾಜ ಕಟ್ಟಿಮನಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಗಳಗನಾಥ ಸಮಗ್ರ ಕಾದಂಬರಿ ಪ್ರಕಟಣ ಯೋಜನೆ, ಕೆರೂರ ವಾಸುದೇವಾಚಾರ್ಯ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆಗಳ ಪ್ರಧಾನ ಸಂಪಾದಕರಾಗಿ ಅವರು ಮಾಡಿದ ಕಾರ್ಯಗಳು ಚಿರಸ್ಮರಣೀಯವೆನಿಸಿವೆ.

ಡಾ. ಕಲಬುರ್ಗಿ ಅವರ ಈ ಬಹುಮುಖ-ಮೌಲಿಕ ಸಾಹಿತ್ಯ-ಸಂಶೋಧನ ಕಾರ್ಯ ಸಾಧನೆಗಾಗಿ ಸಾಹಿತ್ಯ ಅಕಾಡೆಮಿ, ಸರ್ಕಾರ ಹಾಗೂ ಅನೇಕ ಸಂಘ ಸಂಸ್ಥೆಗಳು ಉನ್ನತ-ಪ್ರತಿಷ್ಠಿತ ಪ್ರಶಸ್ತಿ-ಪುರಸ್ಕಾರಗಳನ್ನು ನೀಡಿ ಗೌರವಿಸಿವೆ. ಅವರಿಗೆ ದೊರೆತ ೨೫ ಕ್ಕೂ ಹೆಚ್ಚು ಪ್ರಶಸ್ತಿಗಳಲ್ಲಿ ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ, ರಾಷ್ಟ್ರೀಯ ಬಸವ ಪುರಸ್ಕಾರ, ಕನ್ನಡ ಸಾಹಿತ್ಯ ಪರಿಷತ್ತಿನ ನೃಪತುಂಗ ಪ್ರಶಸ್ತಿ, ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಗಳ ಗ್ರಂಥ ಪುರಸ್ಕಾರ, ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ ಪ್ರಮುಖವಾದವು.

ಸಾಹಿತ್ಯ ರಾಶಿ :

ಡಾ. ಎಂ. ಎಂ. ಕಲಬುರ್ಗಿ ಅವರ ಆಸಕ್ತಿ ಕ್ಷೇತ್ರಗಳ ಹರಹು ಬಲು ದೊಡ್ಡದು; ಬರವಣಿಗೆಯ ವ್ಯಾಪ್ತಿ ಬಹು ವಿಸ್ತಾರ. ಸೃಜನ–ಸೃಜನೇತರ ಉಭಯ ಕ್ಷೇತ್ರಗಳಲ್ಲಿ ಸಮರ್ಥ ಕೃಷಿ. ಅದರಲ್ಲಿಯೇ ಸಂಶೋಧನ ಕ್ಷೇತ್ರದ ಬೆಳೆ ತುಂಬ ಹುಲುಸು; ಫಲಭರಿತ. ಅದಕ್ಕೆ ಗರಿಷ್ಠ ಬೆಲೆ–ಬೇಡಿಕೆ.

ಕನ್ನಡ ಸಂಶೋಧನ ಕ್ಷೇತ್ರವನ್ನು ಸಂಪದ್ಭರಿತಗೊಳಿಸಿ, ಅದಕ್ಕೊಂದು ನೂತನ ಆಯಾಮ ಆವಿಷ್ಕಾರವನ್ನು ನೀಡಿದ ಕಲಬುರ್ಗಿ ಅವರು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ವಿಷಯಗಳ ವೈವಿಧ್ಯತೆ ಬೆರಗುಗೊಳಿಸುತ್ತದೆ: ಶಾಸನ, ಹಳಗನ್ನಡ–ನಡುಗನ್ನಡ–ಹೊಸಗನ್ನಡ ಸಾಹಿತ್ಯ, ಚರಿತ್ರೆ, ಜಾನಪದ, ಹಸ್ತಪ್ರತಿಶಾಸ್ತ್ರ, ಗ್ರಂಥಸಂಪಾದನೆ, ನಾಮವಿಜ್ಞಾನ, ಛಂದಸ್ಸು, ವ್ಯಾಕರಣ, ಪ್ರಾಚ್ಯವಸ್ತುಶಾಸ್ತ್ರ ಸಂಶೋಧನೆ, ವಿಮರ್ಶೆ, ನಾಡು–ನುಡಿ–ಸಂಸ್ಕೃತಿ–ಹೀಗೆ ಅದು ಅನಂತಮುಖಿಯಾಗಿದೆ.

ಡಾ. ಕಲಬುರ್ಗಿ ಅವರು ತಮ್ಮ ಆಸಕ್ತಿಯ ಕ್ಷೇತ್ರಗಳು, ಅಧ್ಯಯನದ ಸ್ವರೂಪ–ವ್ಯಾಪ್ತಿ ಮತ್ತು ವಿಧಾನ ಕುರಿತು ಬೇರೆ ಬೇರೆ ಕೃತಿಗಳ ಅರಿಕೆ, ಲೇಖಕರ ನುಡಿ, ಮಾರ್ಗಕ್ಕೆ ಮೊದಲು ಇತ್ಯಾದಿ ಬರಹಗಳಲ್ಲಿ ಹೀಗೆ ಹೇಳಿಕೊಂಡಿದ್ದಾರೆ:

"ನನ್ನದು ಬಹುಮುಖಿ ಅಧ್ಯಯನ. ಪ್ರಾಚೀನ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಮೈ–ಮನಸ್ಸುಗಳನ್ನು ಅಭ್ಯಸಿಸುತ್ತಲೇ ವ್ಯಾಕರಣ, ಅಲಂಕಾರ, ಛಂದಸ್ಸು ಇತ್ಯಾದಿ ಶಾಸ್ತ್ರಗಳನ್ನು ತೆಕ್ಕೆಗೆ ಅಳವಡಿಸಿಕೊಂಡ ಬಳಿಕ, ನಾನು ಪ್ರವೇಶಿಸಿದ ಹೊಸ ಕ್ಷೇತ್ರ ಶಾಸನ. ಆಮೇಲೆ ಆಧುನಿಕ ಶೈಕ್ಷಣಿಕ ಶಿಸ್ತುಗಳೆನಿಸಿದ ಜಾನಪದ, ನಾಮವಿಜ್ಞಾನ, ಗ್ರಂಥಸಂಪಾದನೆ ಇತ್ಯಾದಿಗಳತ್ತ ನನ್ನ ಒಲವು ಬೆಳೆಯಿತು. ಹೀಗಾಗಿ ಈ ಎಲ್ಲ ಕ್ಷೇತ್ರಗಳಿಗೆ ಸಂಬಂಧಿಸಿದ ಪುಸ್ತಕ, ಲೇಖನ ಬರವಣಿಗೆ ನನ್ನಿಂದ ಸಾಧ್ಯವಾಯಿತು. ಈ ಎಲ್ಲ ಬರವಣಿಗೆಯ ಹಿಂದೆ ಸಂಶೋಧನೆಯ ಸಶಬ್ದ ಶ್ರುತಿ, ಕೆಲವೊಮ್ಮೆ ನಿಃಶಬ್ದ ಶ್ರುತಿ ಕೆಲಸಮಾಡಿದೆ."

"ಸಾಹಿತ್ಯವನ್ನು ಘಟಿತವಸ್ತು (Fact) ಕೇಂದ್ರಿತ ಮತ್ತು ಕಲ್ಪಿತವಸ್ತು (Fiction) ಕೇಂದ್ರಿತವೆಂದು ವರ್ಗೀಕರಿಸಬಹುದಾಗಿದೆ. ಇವುಗಳಲ್ಲಿ ಸಂಭವಿಸಿದ ಜೀವನವನ್ನು, ಜೀವನ ಮೌಲ್ಯಗಳನ್ನು ನಮ್ಮ ಮುಂದೆ ಕಲಾತ್ಮಕವಾಗಿ ಸ್ಥಾಪಿಸುವ ಘಟಿತವಸ್ತು ಸಾಹಿತ್ಯವೇ ಸಮಾಜಕ್ಕೆ ಹೆಚ್ಚು ಮಾರ್ಗದರ್ಶಕ, ಹೆಚ್ಚು ಪ್ರಯೋಜಕವೆಂದು ನನ್ನ ಭಾವನೆ. ಹೀಗಾಗಿ ನನಗೆ ಸಂಭವನೀಯ ವಸ್ತುವನ್ನೊಳಗೊಂಡ ಕಥೆ, ಕಾದಂಬರಿ ಸಾಹಿತ್ಯಕ್ಕಿಂತ, ಸಂಭವಿಸಿದ ವಸ್ತುವನ್ನೊಳಗೊಂಡ ಆತ್ಮಚರಿತ್ರೆ, ಜೀವನ ಚರಿತ್ರೆ, ಸಾಹಿತ್ಯ ಹೆಚ್ಚು ಪ್ರಿಯವಾದುದು. ಈ ಕಾರಣದಿಂದಾಗಿ ನಾನು ಕಲ್ಪಿತ ಸಾಹಿತ್ಯದ ಜೊತೆಗೆ ಘಟಿತ ಸಾಹಿತ್ಯದತ್ತ ವಿಶೇಷ ಒಲವು ಬೆಳೆಸಿಕೊಂಡಿದ್ದೇನೆ"(ಕನ್ನಡ ಶಾಸನ ಸಾಹಿತ್ಯ–ಲೇಖಕರ ಮಾತು).

"ಕನ್ನಡ ಸೃಜನ ಸಾಹಿತ್ಯ ನವೋದಯ, ನವ್ಯ, ನವ್ಯೋತ್ತರವೆಂಬ ಘಟ್ಟಗಳನ್ನು ರೂಪಿಸಿಕೊಳ್ಳುತ್ತ ಬಂದ ಹಾಗೆ, ಕನ್ನಡ ಸಂಶೋಧನ ಸಾಹಿತ್ಯವೂ ರೂಪಿಸಿಕೊಳ್ಳುತ್ತ ಬಂದ ಸಾಮಗ್ರಿ ಶೋಧನಿಷ್ಠ, ಸಾಮಗ್ರಿ ವಿಶ್ಲೇಷಣನಿಷ್ಠ, ಸಾಮಗ್ರಿವ್ಯಾಖ್ಯಾನ ನಿಷ್ಠ ಘಟ್ಟಗಳಲ್ಲಿ ನಾನು ದುಡಿಯುತ್ತ ಬಂದಿದ್ದೇನೆ. ಇದೇ ರೀತಿ ಕನ್ನಡ ಸಂಶೋಧನೆ ಆಗಾಗ ಅಳವಡಿಸಿಕೊಳ್ಳುತ್ತ ಬಂದ ಸಂಸ್ಕೃತಿ, ಶಾಸನ, ಜಾನಪದ, ನಾಮವಿಜ್ಞಾನ ಇತ್ಯಾದಿ ಹೊಸ ಹೊಸ ಕ್ಷೇತ್ರಗಳಲ್ಲಿಯೂ ನಾನು ಬಿಚ್ಚಿಕೊಂಡಿದ್ದೇನೆ. ಹೀಗೆ ಈ

ಮೂರು ಆಯಾಮಗಳನ್ನೊಳಗೊಂಡ ಕನ್ನಡ ಸಂಶೋಧನ 'ಮಹಾಮಾರ್ಗ'ದಲ್ಲಿ ನಡೆದು ಬಂದವನಾದುದರಿಂದ ನನ್ನ (ಸಂಪ್ರಬಂಧಗಳ ಸಂಕಲನ) ಕೃತಿಗಳಿಗೆ 'ಮಾರ್ಗ' ಎಂದು ಹೆಸರಿಟ್ಟಿದ್ದೇನೆ. ಕನ್ನಡ ಸಂಶೋಧನೆಯ ಎಲ್ಲ ಮಾದರಿಗಳನ್ನು ಈ ಪ್ರಬಂಧಗಳು ಪ್ರತಿನಿಧಿಸುತ್ತವೆ ಎಂದು ಸೂಚಿಸಬಯಸುತ್ತೇನೆ."

"ಸಂಶೋಧನೆ ಎನ್ನುವುದು ಅಲ್ಪ ವಿರಾಮ, ಅರ್ಧವಿರಾಮಗಳ ಮೂಲಕ ಪೂರ್ಣವಿರಾಮಕ್ಕೆ ಸಾಗುವ ಕ್ರಿಯೆಯಾಗಿದೆ. ಹೀಗಾಗಿ ಹೊಸ ಹೊಸ ಆಕರಗಳು ಲಭ್ಯವಾದಂತೆ ಸಂಶೋಧಕ ತನ್ನ ಅಭಿಪ್ರಾಯಗಳನ್ನು ತಿದ್ದಿಕೊಳ್ಳಬೇಕಾಗುತ್ತದೆ.'ಸಂಶೋಧಕ ತಪ್ಪು ಹೇಳಿರಬಹುದು, ಸುಳ್ಳು ಹೇಳಿರಲಾರ' ಎನ್ನುವುದು ಈ ಅರ್ಥದಲ್ಲಿ. ಸಂಶೋಧನ ಪ್ರಬಂಧಗಳನ್ನು ಬರೆಯುವಾಗ ಈ ಎಲ್ಲ ಆದರ್ಶಗಳು ನನ್ನ ಮನಸ್ಸಿನಲ್ಲಿರುತ್ತವೆ. 'ಜನಮೆಚ್ಚೆ ನಡಕೊಂಡರೇನುಂಟು ಲೋಕದಿ ಮನಮೆಚ್ಚೆ ನಡಕೊಂಬುದೇ ಚೆಂದವು' ಎಂಬುದಂತೂ ನನ್ನನ್ನು ಸದಾ ಎಚ್ಚರಿಸುತ್ತಲಿರುತ್ತದೆ"(ಮಾರ್ಗ-೧, ೨ ಅರಿಕೆ).

"೨೦ನೆಯ ಶತಮಾನದ ಉತ್ತರಾರ್ಧದಲ್ಲಿ 'ಚಾರಿತ್ರಿಕ ಶೋಧ'ದೊಂದಿಗೆ 'ಸಾಂಸ್ಕೃತಿಕ ಶೋಧ' ಹೆಸರಿನ ಹೊಸಬಗೆಯ 'ಸಾಮಾಜಿಕ ಪ್ರಕ್ರಿಯಾ ಶೋಧ' ಕರ್ನಾಟಕದ ತುಂಬ ಕಣ್ಣು ತೆರೆಯಿತು. ಕಾಲಗತಿಸಿದಂತೆ ಇದರ ಹಿಂದಿರುವ 'ಸಾಮಾಜಿಕ ಕಾರಣ ಶೋಧ'ದ ಮೇಲೆ ಹೆಚ್ಚು ಒತ್ತು ಬಿದ್ದಿತು. ಹೀಗಾಗಿ ಇಂದು ಕರ್ನಾಟಕದಲ್ಲಿ ಆಕರಶೋಧ, ಚಾರಿತ್ರಿಕ ಶೋಧ, ಸಾಮಾಜಿಕ ಶೋಧ, ಸಾಮಾಜಿಕ ಪ್ರಕ್ರಿಯಾ ಶೋಧ ಮತ್ತು ಸಾಮಾಜಿಕ ಕಾರಣಶೋಧಗಳೆಂಬ ಐದು ಆಯಾಮಗಳು ನಮ್ಮ ಸಂಶೋಧನೆಯಲ್ಲಿ ಕಾಣಿಸಿಕೊಂಡಿವೆ. ನಾನು ಈ ಐದೂ ಆಯಾಮಗಳಲ್ಲಿ ಬಿಚ್ಚಿಕೊಂಡುದರ ಫಲಿತಗಳನ್ನು 'ಮಾರ್ಗ' ಹೆಸರಿನ ನನ್ನ ಮೂರು ಸಂಪುಟಗಳಲ್ಲಿ, ಅದೇ ರೀತಿ ಈ ನಾಲ್ಕನೆಯ ಸಂಪುಟದಲ್ಲಿ ಕಾಣಬಹುದು".

"ಇತ್ತೀಚೆ ಸಮಾಜದಲ್ಲಿ ಸಹಜ ಬದಲಾವಣೆಯ ಜೊತೆಗೆ, ರಾಜಕೀಯ-ಧಾರ್ಮಿಕ-ಧುರೀಣರಿಂದಾಗಿ ಕೃತಕ ಬದಲಾವಣೆಗಳು ಸಂಭವಿಸುತ್ತಲಿವೆ. ಇವರು ಸುಳ್ಳು ಇತಿಹಾಸದ ಮೂಲಕ ವರ್ತಮಾನದಲ್ಲಿ ಹುಟ್ಟುಹಾಕುತ್ತಲಿರುವ ಶೋಷಣೆಯನ್ನು ಹತ್ತಿಕ್ಕಲು ನಿಜ ಇತಿಹಾಸವನ್ನು ಶೋಧಿಸಿಕೊಡುವುದು ಸಂಶೋಧಕನ ಕರ್ತವ್ಯವಾಗಿದೆ. ಅಂದರೆ ಸಂಶೋಧನೆ ಎನ್ನುವುದು ಕೇವಲ ಇತಿಹಾಸದ ಶೋಧವಲ್ಲ, ಸುಳ್ಳು ಇತಿಹಾಸವನ್ನು ಮುಂದುಮಾಡಿಕೊಂಡು ವರ್ತಮಾನವನ್ನು ದುರುಪಯೋಗ ಮಾಡಿಕೊಳ್ಳುವವರೊಂದಿಗೆ ನಡೆಸುವ ಹೋರಾಟವಾಗಿದೆ. ಸತ್ಯವೆಂಬ ಭೂತಕಾಲದ ಬಲದಿಂದ ಅಸತ್ಯವೆಂಬ ವರ್ತಮಾನಕಾಲವನ್ನು ಸರಿಪಡಿಸುವುದಾಗಿದೆ. ಹೀಗಾಗಿ ನನ್ನ ಸುತ್ತಲಿನ ವರ್ತಮಾನದ ಅಸತ್ಯಗಳು ಭೂತದ ಸತ್ಯವನ್ನು ಹುಡುಕಲು ನನ್ನನ್ನು ಒತ್ತಾಯಿಸಿದ ಫಲವಾಗಿ, ಇಲ್ಲಿಯ ಬಹಳಷ್ಟು ಲೇಖನಗಳು ಹುಟ್ಟಿಕೊಂಡಿವೆ. ಸಮಾಜದ ಪ್ರಚಲಿತ ಸಮಸ್ಯೆಗಳನ್ನು ಎತ್ತಿಕೊಂಡುದಲ್ಲದೆ, ಶಿಷ್ಟ ಆಕರಗಳೊಂದಿಗೆ ಪರಿಶಿಷ್ಟ ಆಕರಗಳನ್ನೂ ಬಳಸಿಕೊಂಡ ಕಾರಣ, ಇವು ಒಂದಿಷ್ಟು ಸಾಮಾಜಿಕ ಹೊಳಪನ್ನು ಒಳಗೊಂಡಿವೆ"(ಮಾರ್ಗ-೪, ಅರಿಕೆ).

ಈ ಮೇಲಿನ ಉದ್ಧರಣೆಗಳು ಡಾ. ಎಂ. ಎಂ. ಕಲಬುರ್ಗಿ ಅವರ ಒಟ್ಟು ಸಂಶೋಧನೆಯ ಸ್ವರೂಪ-ವ್ಯಾಪ್ತಿ-ವಿಧಾನ-ದೃಷ್ಟಿ ಧೋರಣೆಗಳನ್ನು ಸ್ಪಷ್ಟಪಡಿಸುತ್ತವೆ. ಅಂದರೆ ಅವರು ಆಕರಮುಖಿ ಶೋಧದ ಮೂಲಕ ಹೊರಟು, ವಿಶ್ಲೇಷಣಮುಖಿ ಶೋಧದಲ್ಲಿ ಮುಂದುವರೆದು, ವ್ಯಾಖ್ಯಾನಮುಖಿ

ಶೋಧವನ್ನು ತಲುಪಿದ ರೀತಿಯನ್ನು; ವಸ್ತುನಿಷ್ಠ ಸಂಶೋಧನೆಯಿಂದ ತೊಡಗಿ, ಸಂಸ್ಕೃತಿನಿಷ್ಠ ಸಂಶೋಧನೆಯಲ್ಲಿ ಸಾಗಿ, ಕೊನೆಗೆ ಸಮಾಜನಿಷ್ಠ ಸಂಶೋಧನೆಯಲ್ಲಿ ನೆಲೆನಿಂತ ನಿಲವನ್ನು ನಿಚ್ಚಳವಾಗಿ ನಿರ್ವಚಿಸುತ್ತವೆ.

* * * *

ಡಾ. ಕಲಬುರ್ಗಿ ಅವರ ಸಾಹಿತ್ಯ ಸೃಷ್ಟಿ ಎರಡು ಬಗೆಯಾಗಿ ನಡೆದಿದೆ. ಒಂದು ಇಡಿಯಾದ ಗ್ರಂಥ ರೂಪದಲ್ಲಿ; ಮತ್ತೊಂದು–ಬಿಡಿಯಾದ ಸಂಪ್ರಬಂಧ ಸ್ವರೂಪದಲ್ಲಿ. ಅವರು ತಮ್ಮ ಎಪ್ಪತ್ತೇಳು ವರ್ಷದ ಜೀವಿತಾವಧಿಯಲ್ಲಿ–ಸು. ೫೦ ವರ್ಷ ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದಾರೆ. ೧೯೬೭ ರಲ್ಲಿ ಪ್ರಕಟವಾದ 'ಬಸವಣ್ಣನವರ ಜೀವನ ಚರಿತ್ರೆ' ಅವರ ಮೊದಲ ಲೇಖನವೆನಿಸಿದರೆ, ೧೯೬೮ ರಲ್ಲಿ ಹೊರ ಬಂದ 'ಬಸವಣ್ಣನವರನ್ನು ಕುರಿತ ಶಾಸನಗಳು' ಎಂಬುದು ಮೊದಲ ಕೃತಿಯಾಗಿದೆ. ಹಾಗೆಯೇ 'ನಾಲ್ಕು ಜಾತಿವಿಡಿದು ಬಂದ ಜಂಗಮವೆ ಶ್ರೇಷ್ಠ?' ಎಂಬುದು ಅವರ ಕೊನೆಯ ಲೇಖನ; 'ವಚನ ವರ್ಷ' ಎಂಬುದು ಕೊನೆಯ ಕೃತಿ. ಈ ಮಧ್ಯದ ಅವಧಿಯಲ್ಲಿ ಅವರು ಒಟ್ಟು ೧೧೬ ಕೃತಿಗಳನ್ನು ಮತ್ತು ೮೯೩ ಲೇಖನಗಳನ್ನು ಪ್ರಕಟಿಸಿದ್ದಾರೆ.

ಡಾ. ಕಲಬುರ್ಗಿ ಅವರ ಒಟ್ಟು ಕೃತಿಗಳನ್ನು ಸೃಜನ ಮತ್ತು ಸೃಜನೇತರ ಎಂದು ಎರಡು ಭಾಗಗಳಲ್ಲಿ ವಿಂಗಡಿಸಬಹುದು. ಸೃಜನ ಸಾಹಿತ್ಯದಲ್ಲಿ ಅವರ ಕಾವ್ಯ ಮತ್ತು ನಾಟಕ ಕೃತಿಗಳು ಸೇರುತ್ತವೆ. ಸೃಜನೇತರದಲ್ಲಿ ಸ್ವತಂತ್ರ ಕೃತಿಗಳು, ಸಂಪಾದಿತ ಕೃತಿಗಳು ಎಂದು; ಸಂಪಾದಿತ ಕೃತಿಗಳಲ್ಲಿ ಪ್ರಾಚೀನ–ಆಧುನಿಕ ಎಂದು ಮತ್ತೆ ಎರಡೆರಡು ವಿಭಾಗಗಳನ್ನು ಮಾಡಬಹುದು. ಸ್ವತಂತ್ರ ಕೃತಿಗಳಲ್ಲಿ ಶಾಸನ, ಶಾಸ್ತ್ರ, ಸಂಶೋಧನೆ ಮತ್ತು ಜಾನಪದಕ್ಕೆ ಸಂಬಂಧಿಸಿದ ಕೃತಿಗಳು ಸೇರಿದರೆ, ಪ್ರಾಚೀನ ಸಂಪಾದಿತ ಕೃತಿಗಳಲ್ಲಿ ಶಾಸನ, ಕಾವ್ಯ, ವಚನ, ದಾಖಲು ಸಾಹಿತ್ಯ ಕೃತಿಗಳು ಮತ್ತು ಆಧುನಿಕ ಸಂಪಾದಿತ ಕೃತಿಗಳಲ್ಲಿ ಲೇಖನ ಸಂಗ್ರಹ, ಜೀವನ ಚರಿತ್ರೆ ಮತ್ತು ಅಭಿನಂದನ ಗ್ರಂಥಗಳು ಸೇರುತ್ತವೆ. ಅವುಗಳ ವಿವರ ಹೀಗಿದೆ :

ಸೃಜನ ಸಾಹಿತ್ಯ

೧. ನೀರು ನೀರಡಿಸಿತ್ತು (ಕವನ), ೨. ನೀರಾಗ ನಿಂತೀನಿ ನೀರಡಿಸಿ (ಕವನ), ೩. ಕೆಟ್ಟಿತ್ತು ಕಲ್ಯಾಣ (ನಾಟಕ), ೪. ಖರೇ ಖರೇ ಸಂಗ್ಯಾ ಬಾಳ್ಯಾ (ನಾಟಕ), ೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ).

ಸೃಜನೇತರ ಸಾಹಿತ್ಯ (ಸ್ವತಂತ್ರ ಕೃತಿಗಳು) :

ಶಾಸನ ಸಾಹಿತ್ಯ

೬. ಬಸವಣ್ಣನವರನ್ನು ಕುರಿತ ಶಾಸನಗಳು, ೭. ಶಾಸನಗಳಲ್ಲಿ ಶಿವಶರಣರು, ೮. ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು, ೯. ಮಹಾರಾಷ್ಟ್ರದ ಕನ್ನಡ ಶಾಸನಗಳು.

ಶಾಸ್ತ್ರ ಸಾಹಿತ್ಯ

೧೦. ಕನ್ನಡ ಗ್ರಂಥಸಂಪಾದನಶಾಸ್ತ್ರ, ೧೧. ಪ್ರತಿಬಿಂಬ. ೧೨. [illegible] ೧೩. ಕನ್ನಡ ನಾಮವಿಜ್ಞಾನ, ೧೪. ಕನ್ನಡ ಸಂಶೋಧನಶಾಸ್ತ್ರ, ೧೫. [illegible]

ಸಂಶೋಧನ ಸಾಹಿತ್ಯ

೧೬. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ೧೭. ಶಾಸನ ವ್ಯಾಸಂಗ–೧, ೧೮. ಶಾಸನ ವ್ಯಾಸಂಗ–೨, ೧೯. ಕನ್ನಡ ಶಾಸನ ಸಾಹಿತ್ಯ, ೨೦. ಐತಿಹಾಸಿಕ, ೨೧. ವೀರಶೈವ : ಇತಿಹಾಸ ಭೂಗೋಳ, ೨೨. ಶುದ್ಧಶೈವ ಮತ್ತು ಗೋಳಕಿಮಠ ಸಂಪ್ರದಾಯ, ೨೩. ಪರಿಕಲ್ಪನೆ, ೨೪. ಪಂಚಾಚಾರ್ಯರ ನಿಜಸ್ವರೂಪ, ೨೫. ಸಂಸ್ಕೃತಿ–ವಿಕೃತಿ, ೨೬. ಕನ್ನಡ ಅರಸರ ಅಕನ್ನಡ ಪ್ರಜ್ಞೆ, ೨೭. ನಿರ್ವಚನ.

ಜಾನಪದ ಸಾಹಿತ್ಯ

೨೮. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ, ೨೯. ಜನಪದ ಮಾರ್ಗ.

ಲೇಖನ ಸಂಪುಟ

೩೦. ಮಾರ್ಗ–೧, ೩೧. ಮಾರ್ಗ–೨, ೩೨. ಮಾರ್ಗ–೩, ೩೩. ಮಾರ್ಗ–೪, ೩೪. ಮಾರ್ಗ–೫, ೩೫. ಮಾರ್ಗ–೬, ೩೬. ಮಾರ್ಗ–೭, ೩೭. ಮಾರ್ಗ–೮.

ಸೃಜನೇತರ ಸಾಹಿತ್ಯ (ಪ್ರಾಚೀನ ಸಂಪಾದಿತ ಕೃತಿಗಳು):

ಶಾಸನ ಸಾಹಿತ್ಯ

೩೮. ಶಾಸನ ಸಂಪದ, ೩೯. ಧಾರವಾಡ ಜಿಲ್ಲೆಯ ಶಾಸನ ಸೂಚಿ, ೪೦. ವಿಜಾಪುರ ಜಿಲ್ಲೆಯ ಶಾಸನ ಸೂಚಿ, ೪೧. ಧಾರವಾಡ ತಾಲೂಕಿನ ಶಾಸನಗಳು, ೪೨. ಶಾಸನ ಸೂಕ್ತಿಸುಧಾರ್ಣವ.

ದಾಖಲು ಸಾಹಿತ್ಯ

೪೩. ಕರ್ನಾಟಕದ ಕೈಫಿಯತ್ತುಗಳು, ೪೪. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ ಜೈನ ಬಸದಿ ಹಸ್ತಪ್ರತಿಸೂಚಿ, ೪೫. ವಚನ ಸಾಹಿತ್ಯ ಆಕರ ಕೋಶ, ೪೬. ತೋಂಟದಾರ್ಯ ಮಠದ ದಾಖಲು ಸಾಹಿತ್ಯ–೧.

ವಚನ ಸಾಹಿತ್ಯ

೪೭. ಬಸವಸ್ತೋತ್ರದ ವಚನಗಳು, ೪೮. ಬಸವಣ್ಣನವರ ಟೀಕಿನ ವಚನಗಳು ಭಾಗ–೧, ೪೯. ಬಸವಣ್ಣನವರ ಟೀಕಿನ ವಚನಗಳು ಭಾಗ–೨, ೫೦. ವಚನ ಸಂಕಲನ ಸಂಪುಟ–೪, ೫೧. ವಚನ ಸಂಕಲನ ಸಂಪುಟ–೬, ೫೨. ಬಸವಣ್ಣನವರ ವಚನ ಸಂಪುಟ, ೫೩. ಸಂಕೀರ್ಣ ವಚನ ಸಂಪುಟ, ೫೪. ಚೆನ್ನಬಸವಣ್ಣನವರ ವಚನ ಮಹಾಸಂಪುಟ, ೫೫. ಸಿದ್ಧರಾಮಯ್ಯದೇವರ ವಚನಗಳು, ೫೬. ಪರಮಾನಂದ ಸುಧೆ, ೫೭. ವಚನ, ೫೮. ಏಕೋತ್ತರಶತಸ್ಥಲ, ೫೯. ಶೂನ್ಯಸಂಪಾದನೆ, ೬೦. ವಚನ ವರ್ಷ, ೬೧. ವಚನಶಾಸ್ತ್ರಸಾರ(ಸಂಪುಟ–೧), ೬೨ ಡಾ. ಫ. ಗು. ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫.

ಕಾವ್ಯ ಸಾಹಿತ್ಯ

೬೩. ಮಲ್ಲಿನಾಥ ಪುರಾಣ ಸಂಗ್ರಹ, ೬೪. ಶಬ್ದಮಣಿದರ್ಪಣ ಸಂಗ್ರಹ, ೬೫. ಶಿವಯೋಗ ಪ್ರದೀಪಿಕಾ, ೬೬. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ೬೭. ಕೊಂಡಗುಳಿ ಕೇಶಿರಾಜನ ಕೃತಿಗಳು, ೬೮. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ, ೬೯. ಆದಯ್ಯನ ಲಘುಕೃತಿಗಳು, ೭೦. ನಿಂಬಸಾಮಂತ ಚರಿತೆ, ೭೧. ಸಿರುಮಣ ನಾಯಕನ ಸಾಂಗತ್ಯ, ೭೨. ಸಿರುಮನ ಚರಿತೆ, ೭೩. ಗೊಲ್ಲ ಸಿರುಮನ ಚರಿತೆ, ೭೪. ಷಟ್‌ಸ್ಥಲ ಶಿವಾಯಣ, ೭೫. ಹರಿಹರನ ರಗಳೆಗಳು, ೭೬. ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು, ೭೭. ಹೊಸಕುಮಾರರಾಮನ ಸಾಂಗತ್ಯ, ೭೮. ಕೊಮಾರ ರಾಮಯ್ಯನ ಚರಿತ್ರೆ, ೭೯. ಬಾಲರಾಮಯ್ಯನ ಸಾಂಗತ್ಯ, ೮೦. ಹಳೆಯಕುಮಾರ ರಾಮನ ಸಾಂಗತ್ಯ, ೮೧. ಸಿದ್ಧಮಂಕ ಚರಿತೆ, ೮೨. ತಗರ ಪವಾಡ, ೮೩. ಗುಂಡಬಸವೇಶ್ವರ ಪುರಾಣ, ೮೪. ಕೊಡೆಕಲ್ಲ ವಚನ ವಾಕ್ಯ, ೮೫. ಕಿತ್ತೂರ ಸಂಸ್ಥಾನ ಸಾಹಿತ್ಯ–೧, ೮೬. ಕಿತ್ತೂರ ಸಂಸ್ಥಾನ ಸಾಹಿತ್ಯ–೨, ೮೭. ಕಿತ್ತೂರ ಸಂಸ್ಥಾನ ಸಾಹಿತ್ಯ–೩.

ಸೃಜನೇತರ ಸಾಹಿತ್ಯ (ಆಧುನಿಕ ಸಂಪಾದಿತ ಕೃತಿಗಳು):

ಲೇಖನ ಸಂಗ್ರಹಗಳು :

೮೮. ದಿಗಂಬರ(ಕವನ ಸಂಗ್ರಹ), ೮೯. ಬಸವ ಮಾರ್ಗ–೧(ಲೇಖನ ಸಂಗ್ರಹ), ೯೦. ಬಸವ ಮಾರ್ಗ–೨, ೯೧. ಬಸವ ಮಾರ್ಗ–೩, ೯೨. ವಚನಸಾಹಿತ್ಯದ ಪ್ರಕಟಣೆಯ ಇತಿಹಾಸ, ೯೩. ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪ, ೯೪. ಕೆಳದಿ ಸಂಸ್ಥಾನ : ಸಮಗ್ರ ಅಧ್ಯಯನ, ೯೫. ಮಾನಸೋಲ್ಲಾಸ ಪರಿಚಯ, ೯೬. ಮಾನಸೋಲ್ಲಾಸ ಸಂಪುಟ ೧–೨, ೯೭. ಸ್ವಾದಿ ಅರಸು ಮನೆತನ, ೯೮. ಬೀಳಗಿ ಅರಸು ಮನೆತನ, ೯೯. ಸ್ವರವಚನ ವಿಚಾರ ಸಂಕಿರಣ ಸಂಪುಟ, ೧೦೦. ಭಾರತಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣ : ಲಿಂಗಾಯತರ ಪಾತ್ರ, ೧೦೧. ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು.

ಜೀವನ ಚರಿತ್ರೆಗಳು

೧೦೨. ಅರಟಾಳ ರುದ್ರಗೌಡರ ಚರಿತ್ರೆ, ೧೦೩. ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ ಸಂಪುಟ–೨, ೧೦೪. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ, ೧೦೫. ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ, ೧೦೬. ಮಡಿವಾಳಪ್ಪ ಸಾಸನೂರ ಬದುಕು–ಬರೆಹ, ೧೦೭. ಶಿವಾನುಭವ ಪತ್ರಿಕೆ.

ಅಭಿನಂದನ ಗ್ರಂಥಗಳು

೧೦೮. ಬೆಳ್ವೊಲ, ೧೦೯. ಸಾರಂಗಶ್ರೀ, ೧೧೦. ವಜ್ರಕುಸುಮ, ೧೧೧. ಲಿಂಗಾಯತ, ೧೧೨. ಕಲ್ಯಾಣದೀಪ್ತಿ, ೧೧೩. ಶರಣಶ್ರೀ.

ಇತರೆ

೧೧೪. ನನ್ನ ಜೀವನ ಚರಿತ್ರೆ(ಷಣ್ಮುಖಪ್ಪ ಅಂಗಡಿಯವರ ಆತ್ಮಚರಿತ್ರೆ), 115. My Autobiography, 116. Heaven of Equality.

ಇವುಗಳಲ್ಲಿ ಸಂಶೋಧನ ಸಾಹಿತ್ಯ ವಿಭಾಗಕ್ಕೆ ಸೇರಿರುವ ಶಾಸನ ವ್ಯಾಸಂಗ ೧,೨, ಕನ್ನಡ ಶಾಸನ ಸಾಹಿತ್ಯ, ಐತಿಹಾಸಿಕ, ವೀರಶೈವದ ಇತಿಹಾಸ ಭೂಗೋಳ, ಶುದ್ಧಶೈವ ಮತ್ತು ಗೊಳಕಿಮಠ ಸಂಪ್ರದಾಯ, ಪರಿಕಲ್ಪನೆ, ಪಂಚಾಚಾರ್ಯರ ನಿಜಸ್ವರೂಪ, ಸಂಸ್ಕೃತಿ–ವಿಕೃತಿ, ಕನ್ನಡ ಅರಸರ ಅಕನ್ನಡ ಪ್ರಜ್ಞೆ, ನಿರ್ವಚನ ಎಂಬ ೧೧ ಕೃತಿಗಳು ಮಾರ್ಗ ಸಂಪುಟಗಳಲ್ಲಿನ ಲೇಖನಗಳನ್ನು ಆಯ್ದು ಸಂಗ್ರಹಿಸಿದ ಸಂಕಲನಗಳಾಗಿರುವುದರಿಂದ ಅವು ಸ್ವತಂತ್ರ ಕೃತಿಗಳಲ್ಲ; ಹಾಗೆಯೇ ವಚನ ಸಾಹಿತ್ಯ ಸಂಪಾದನೆಗಳಲ್ಲಿ ಸೇರಿದ ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫ ಅದೇ ಭಾಗಕ್ಕೆ ಸೇರಿದ ವಚನಶಾಸ್ತ್ರಸಾರದ ಪುನರ್ ಮುದ್ರಣವಾಗಿದೆ. ಕಾವ್ಯ ಸಂಪಾದನೆಗಳಲ್ಲಿ ಸೇರಿದ 'ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು' ಹರಿಹರನ ರಗಳೆಗಳು ಗ್ರಂಥದಿಂದ ಆಯ್ದ ಸಂಗ್ರಹರೂಪದ ಕೃತಿಯಾಗಿದೆ. ಜೀವನ ಚರಿತ್ರೆ ಭಾಗದಲ್ಲಿ ಸೇರಿದ 'ಶಿವಾನುಭವ ಪತ್ರಿಕೆ' ಎಂಬುದನ್ನು 'ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ'ಯಲ್ಲಿ ಅಳವಡಿಸಲಾಗಿದೆ. ಹೀಗಾಗಿ ಈ ೧೪ ಕೃತಿಗಳನ್ನು ಕೈಬಿಟ್ಟರೆ ಕಲಬುರ್ಗಿ ಅವರ ಒಟ್ಟು ಕೃತಿಗಳ ಸಂಖ್ಯೆ ೧೦೨ ಆಗುತ್ತದೆ.

ಡಾ. ಎಂ. ಎಂ. ಕಲಬುರ್ಗಿ ಅವರು ತಮ್ಮ ಬಿಡಿ ಬರಹ (ಸಂಪ್ರಬಂಧ–ಲೇಖನ)ಗಳನ್ನು 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ (ಇವುಗಳಲ್ಲಿ ೭ ಮತ್ತು ೮ ಎರಡು ಸಂಪುಟಗಳು ಮರಣೋತ್ತರ ಪ್ರಕಟಿಸಿದವು) ಪ್ರಕಟಿಸಿದ್ದಾರೆ. ಅವುಗಳಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದ ಸಂಪ್ರಬಂಧಗಳು, ಸಂಪಾದಿತ ಕೃತಿಗಳಿಗೆ ಬರೆದ ಪ್ರಸ್ತಾವನೆ, ಅರಿಕೆ, ಇತರರ ಕೃತಿಗಳಿಗೆ ಬರೆದ ಮುನ್ನುಡಿ, ಬೆನ್ನುಡಿ, ವ್ಯಕ್ತಿಚಿತ್ರ, ಭಾಷಣ, ಸಂದರ್ಶನ, ಸಂಪಾದಕೀಯ, ಕೃತಿ ವಿಮರ್ಶೆ, ಇತ್ಯಾದಿ ಸಮಾವೇಶಗೊಂಡಿವೆ. ಇವುಗಳನ್ನು ಆಧರಿಸಿ ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದ ಲೇಖನಗಳನ್ನು ಆಯ್ಕೆ ಮಾಡಿ ಕೆಲವು ಪ್ರತ್ಯೇಕ ಕೃತಿಗಳನ್ನು ಸಿದ್ಧಪಡಿಸಿ ಪ್ರಕಟಿಸುವ ಕಾರ್ಯವನ್ನು ಸ್ವತಃ ಕಲಬುರ್ಗಿಯವರೇ ಮಾಡುತ್ತ ಬಂದಿದ್ದಾರೆ. ಮೇಲೆ ಹೆಸರಿಸಿದ ೧೧ ಕೃತಿಗಳು ಆ ಮಾದರಿಯವು. ಅಲ್ಲದೆ ಇತರರಿಗೂ ಅಂಥ ಆಯ್ದ ಲೇಖನಗಳ ಸಂಗ್ರಹಗಳನ್ನು ಸಿದ್ಧಪಡಿಸಲು ಅವರು ಪ್ರೇರಣೆ ನೀಡಿದ್ದಾರೆ. ಹಾಗೆ ರೂಪಿತವಾದ ೧೬ ಕೃತಿಗಳು ಈ ಕೆಳಗಿನಂತಿವೆ :

ಜಂಗಮದಿಂದ ಸ್ಥಾವರಕ್ಕೆ (ಡಾ. ಮೃತ್ಯುಂಜಯ ರುಮಾಲೆ), ಹಾಲುಮತ ಅಧ್ಯಯನಗಳು (ಡಾ. ಎಫ್.ಟಿ. ಹಳ್ಳಿಕೇರಿ), ನಾಟಕದ ನೆಲೆಗಳು (ಡಾ. ರಾಮಕೃಷ್ಣ ಮರಾಠೆ), ಪಂಪನ ಅಧ್ಯಯನಗಳು (ಡಾ. ಎನ್. ಎಸ್. ತಾರಾನಾಥ), ಕನ್ನಡ ಭಾಷಾವಲೋಕನ (ಡಾ. ಎಸ್. ಎಸ್. ಅಂಗಡಿ), ಛಂದಸ್ಸಿನ ಅಧ್ಯಯನದ ನೆಲೆಗಳು (ಡಾ. ಎಸ್. ಎಸ್. ಅಂಗಡಿ), ಬಸವಣ್ಣ ಮತ್ತು... (ಡಾ. ನಂದೀಶ ಹಂಜೆ), ಸಿದ್ಧರಾಮ ಮತ್ತು...(ಡಾ. ಎಸ್.ಕೆ. ಕೊಪ್ಪ), ರೇವಣಸಿದ್ಧ ಮತ್ತು... (ಡಾ. ಕೆ. ರವೀಂದ್ರನಾಥ), ಶರಣರು ಮತ್ತು...(ಡಾ. ವಿ.ಎಸ್. ಮಾಳಿ), ಗ್ರಂಥಸಂಪಾದನ ವ್ಯಾಸಂಗ (ಡಾ. ವಾಯ್.ಸಿ. ಭಾನುಮತಿ), ಜೈನ ಅಧ್ಯಯನಗಳು (ಡಾ. ಶಾಂತಿನಾಥ ದಿಬ್ಬದ), ನಾಮವ್ಯಾಸಂಗ (ಡಾ. ಎಚ್. ಶಶಿಕಲಾ), ಮಹಾಮರಣ(ಡಾ. ಜೆ. ಎಂ. ನಾಗಯ್ಯ), ಇತಿಹಾಸ ಮತ್ತು... (ಡಾ. ಎನ್.ಎಸ್. ಮಹಾಂತೇಶ), ಸಂಘರ್ಷದ ನೆಲೆಗಳು (ಡಾ. ಪಿ.ಕೆ. ರಾಠೋಡ).

ಇವುಗಳನ್ನು ಗಮನಿಸಿದರೆ ಡಾ. ಕಲಬುರ್ಗಿ ಅವರ ಅಧ್ಯಯನದ ವ್ಯಾಪ್ತಿ, ಬರವಣಿಗೆಯ ಹರಹು, ಅದಕ್ಕಾಗಿ ಅವರು ತೋರಿದ ನಿಷ್ಠೆ, ಪಟ್ಟ ಪರಿಶ್ರಮ, ವಹಿಸಿದ ತಾಳ್ಮೆ, ತನ್ಮೂಲಕ ಈ

ಕ್ಷೇತ್ರದಲ್ಲಿ ಅವರು ಏರಿದ ಎತ್ತರ, ಪಡೆದ ಪ್ರಸಿದ್ಧಿ, ನೀಡಿದ ಕೊಡುಗೆ ಎಲ್ಲವೂ ಏಕಕಾಲಕ್ಕೆ ಕಣ್ಣ ಮುಂದೆ ಬಂದು ನಿಲ್ಲುತ್ತವೆ.

ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ :

ಡಾ. ಎಂ. ಎಂ. ಕಲಬುರ್ಗಿ ಅವರ ಈ ಸಮೃದ್ಧ ಸಾಹಿತ್ಯವನ್ನು ಸಮಗ್ರ ಸಂಪುಟಗಳಲ್ಲಿ ಪ್ರಕಟಿಸುವ ಯೋಜನೆಯೊಂದನ್ನು ವಿಜಯಪುರದ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ–ಕರ್ನಾಟಕ ಸರ್ಕಾರದ ಧನ ಸಹಾಯದಿಂದ–ಕೈಗೆತ್ತಿಕೊಂಡಿತು. ಯೋಜನೆಯ ವ್ಯವಸ್ಥಿತ ಪೂರೈಕೆಗಾಗಿ ಎಂಟು ಜನರ ಒಂದು ಸಲಹಾ ಸಮಿತಿಯನ್ನು ರಚಿಸಲಾಯಿತು. ಅದರಲ್ಲಿ ಶ್ರೀ ಎಂ.ಬಿ. ಪಾಟೀಲ ಅವರನ್ನು ಗೌರವಾಧ್ಯಕ್ಷರೆಂದು, ಶ್ರೀ ಜಿ.ಕೆ.ಪಾಟೀಲ ಅವರನ್ನು ಅಧ್ಯಕ್ಷರೆಂದು, ಡಾ. ಎಂ.ಎಸ್. ಮದಭಾವಿ ಅವರನ್ನು ಕಾರ್ಯದರ್ಶಿಯೆಂದು, ಡಾ. ವೀರಣ್ಣ ರಾಜೂರ ಅವರನ್ನು ಪ್ರಧಾನ ಸಂಪಾದಕರೆಂದು, ಡಾ. ಕೃಷ್ಣಕೊಲ್ಹಾರ ಕುಲಕರ್ಣಿ ಅವರನ್ನು ಯೋಜನಾ ಸಂಯೋಜಕರೆಂದು, ಡಾ. ಗುರುಲಿಂಗ ಕಾಪಸೆ, ಶ್ರೀ ವಿಜಯ ಕಲಬುರ್ಗಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರನ್ನು ಸದಸ್ಯರೆಂದು ಗುರುತಿಸಲಾಯಿತು.

ಸಲಹಾ ಸಮಿತಿ ೧೪–೭–೨೦೧೭ ರಂದು ತನ್ನ ಮೊದಲ ಸಭೆ ಕರೆಯಿತು. ಅದರಲ್ಲಿ ಭಾಗವಹಿಸಲು ನಾಡಿನ ಹಲವು ವಿದ್ವಾಂಸರನ್ನು ಆಹ್ವಾನಿಸಿತು. ಅವರೆಲ್ಲರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಕಲಬುರ್ಗಿಯವರ ಸಮಗ್ರ ಸಾಹಿತ್ಯ ಪ್ರಕಟಣೆಯ ರೂಪ–ರೇಷೆ, ಸಂಪುಟಗಳ ಸ್ವರೂಪ, ಸಂಪಾದಕರ ಆಯ್ಕೆ ಕುರಿತು ಒಂದು ನೀಲನಕ್ಷೆಯನ್ನು ಸಿದ್ಧಪಡಿಸಿತು. ಅದನ್ನು ಪ್ರಧಾನ ಸಂಪಾದಕರಿಗೆ ಒಪ್ಪಿಸಿ, ಅಂತಿಮ ಸ್ವರೂಪ ಕೊಡಲು ತಿಳಿಸಿತು.

೨೩–೯–೨೦೧೭ ರಂದು ಪ್ರಧಾನ ಸಂಪಾದಕರು ಎರಡನೆಯ ಸಭೆ ಕರೆದರು, ಯೋಜನೆಯ ಒಟ್ಟು ಸ್ವರೂಪವನ್ನು ೫ ಅಂಶಗಳಲ್ಲಿ ಅಳವಡಿಸಿ ಕೆಳಗಿನಂತೆ ನಿರೂಪಿಸಿದರು.

೧. ಡಾ. ಕಲಬುರ್ಗಿ ಅವರ ಒಟ್ಟು ಸಾಹಿತ್ಯವನ್ನು (ಪ್ರಕಟಿತ–ಅಪ್ರಕಟಿತ)೪೦ ಸಂಪುಟಗಳಲ್ಲಿ ಪ್ರಕಟಿಸುವುದು. ಅವುಗಳ ಸಂಪಾದನ ಕಾರ್ಯವನ್ನು ಒಟ್ಟು ೧೬ ಜನ ವಿದ್ವಾಂಸರಿಗೆ ವಹಿಸುವುದು.

೨. ಒಟ್ಟು ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸುವುದು.

೩. ಸ್ವತಂತ್ರ ಮತ್ತು ಪ್ರಾಚೀನ ಗ್ರಂಥ ಸಂಪಾದನ ಕೃತಿಗಳನ್ನು ಮಾತ್ರ ಪ್ರಕಟಣೆಗೆ ಆಯ್ದುಕೊಳ್ಳುವುದು. ಆಧುನಿಕ ಸಂಪಾದಿತ ಕೃತಿಗಳನ್ನು (ವಿಚಾರ ಸಂಕಿರಣಗಳಲ್ಲಿ ವಿವಿಧ ವಿದ್ವಾಂಸರು ಮಂಡಿಸಿದ ಪ್ರಬಂಧಗಳ ಸಂಗ್ರಹ), ಅಭಿನಂದನ ಗ್ರಂಥಗಳನ್ನು ಕೈಬಿಡುವುದು.

೪. ಒಂದೊಂದು ಸಂಪುಟದ ವ್ಯಾಪ್ತಿಯನ್ನು ೫೦೦ ಪುಟಗಳಿಗೆ ಮಿತಿಗೊಳಿಸುವುದು.

೫. ಎರಡು ವರ್ಷಗಳ ಕಾಲಾವಧಿಯಲ್ಲಿ ಯೋಜನೆಯನ್ನು ಪೂರ್ಣಗೊಳಿಸಿ, ೨೦೧೯ ನವ್ಹೆಂಬರ್ ೨೮ ರಂದು ಎಲ್ಲ ಸಂಪುಟಗಳನ್ನು ಏಕಕಾಲಕ್ಕೆ ಬಿಡುಗಡೆಗೊಳಿಸುವುದು.

ಒಟ್ಟು ಸಂಪುಟಗಳ ವಿಸ್ತೃತ ಸ್ವರೂಪ ಹೀಗಿದೆ :

ನಾಲ್ವತ್ತು ಸಂಪುಟಗಳನ್ನು ವ್ಯಾಪಕವಾದ ಹಿನ್ನೆಲೆಯಲ್ಲಿ ಸ್ವತಂತ್ರ ಕೃತಿ ಸಂಪುಟಗಳು, ಸಂಪಾದಿತ ಕೃತಿ ಸಂಪುಟಗಳು, ಲೇಖನ ಸಾಹಿತ್ಯ ಸಂಪುಟಗಳು ಮತ್ತು ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು ಎಂದು ನಾಲ್ಕು ಭಾಗಗಳಲ್ಲಿ ವಿಂಗಡಿಸಲಾಗಿದೆ. ಮೊದಲ ಭಾಗದಲ್ಲಿ ಮತ್ತೆ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ಸಂಶೋಧನ ಸಾಹಿತ್ಯ, ಜನಪದ ಸಾಹಿತ್ಯ ಮತ್ತು ಸೃಜನ ಸಾಹಿತ್ಯ ಎಂದು ನಾಲ್ಕು ವಿಭಾಗಗಳನ್ನು ಕಲ್ಪಿಸಲಾಗಿದೆ. ಎರಡನೆಯ ಭಾಗದಲ್ಲಿ ಸಂಪಾದಿತ ಕೃತಿಗಳನ್ನು ಶಾಸನ ಸಾಹಿತ್ಯ, ದಾಖಲು ಸಾಹಿತ್ಯ, ವಚನ ಸಾಹಿತ್ಯ, ಕಾವ್ಯ ಸಾಹಿತ್ಯ ಮತ್ತು ಜೀವನ ಚರಿತ್ರ ಸಾಹಿತ್ಯ ಎಂದು ವಿಭಜಿಸಲಾಗಿದೆ. ಮೂರನೆಯದಾದ ಲೇಖನ ಸಂಪುಟಗಳಲ್ಲಿ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ವಚನಸಾಹಿತ್ಯ, ಕಾವ್ಯಸಾಹಿತ್ಯ ಮತ್ತು ವ್ಯಕ್ತಿಚಿತ್ರಣ, ಮುನ್ನುಡಿ, ಬೆನ್ನುಡಿ, ಅರಿಕೆ, ಭಾಷಣ, ಸಂದರ್ಶನ ಎಂದು ಐದು ಭಾಗಗಳನ್ನು ಮಾಡಲಾಗಿದೆ. ಕೊನೆಯದಾದ ಪ್ರಾತ್ಯಕ್ಷಿಕೆ ಸಂಪುಟಗಳಲ್ಲಿ ಚಿತ್ರ, ಪತ್ರ-ವರದಿಗಳು, ಆಡಿಯೋ-ವಿಡಿಯೋ ಎಂದು ಮೂರು ಭಾಗಗಳನ್ನು ಯೋಜಿಸಲಾಗಿದೆ.

ಸಂಪುಟಗಳು, ಅದರಲ್ಲಿ ಅಳವಟ್ಟ ಕೃತಿಗಳು ಮತ್ತು ಸಂಪಾಕರ ವಿವರ ಕೆಳಗಿನಂತಿದೆ:

I. ಸ್ವತಂತ್ರ ಕೃತಿ ಸಂಪುಟಗಳು

ಸಂಪುಟ ೧ : ಶಾಸನ ಸಾಹಿತ್ಯ **–ಸಂ. ಡಾ. ಎಸ್.ಕೆ. ಕೊಪ್ಪಾ**

೧. ಬಸವಣ್ಣನವರನ್ನು ಕುರಿತ ಶಾಸನಗಳು
೨. ಶಾಸನಗಳಲ್ಲಿ ಶಿವಶರಣರು
೩. ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು
೪. ಮಹಾರಾಷ್ಟ್ರದ ಕನ್ನಡ ಶಾಸನಗಳು

ಸಂಪುಟ ೨ : ಶಾಸ್ತ್ರ ಸಾಹಿತ್ಯ **–ಸಂ. ಡಾ. ಬಿ.ವ್ಹಿ. ಶಿರೂರ**

೧. ಕನ್ನಡ ಗ್ರಂಥಸಂಪಾದನಶಾಸ್ತ್ರ
೨. ಪ್ರತಿಬಿಂಬ
೩. ಸಾಹಿತ್ಯ ಸಂಪಾದನೆ
೪. ಕನ್ನಡ ನಾಮವಿಜ್ಞಾನ
೫. ಕನ್ನಡ ಸಂಶೋಧನಶಾಸ್ತ್ರ
೬. ಕನ್ನಡ ಹಸ್ತಪ್ರತಿಶಾಸ್ತ್ರ

ಸಂಪುಟ ೩ : ಸಂಶೋಧನ ಸಾಹಿತ್ಯ **–ಸಂ. ಶಶಿಧರ ತೋಡ್ಕರ**

೧. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ

ಸಂಪುಟ : ೪ ಜನಪದ ಸಾಹಿತ್ಯ **–ಸಂ. ಶಶಿಧರ ತೋಡ್ಕರ**

೧. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ
೨. ಜನಪದ ಮಾರ್ಗ

ಸಂಪುಟ : ೫ ಸೃಜನ ಸಾಹಿತ್ಯ **–ಸಂ. ಡಾ. ಗುರುಪಾದ ಮರಿಗುದ್ದಿ**

೧. ನೀರು ನೀರಡಿಸಿತ್ತು (ಕವನ ಸಂಕಲನ)
೨. ನೀರಾಗ ನಿಂತೀನಿ ನೀರಡಿಸಿ (ಕವನ ಸಂಕಲನ)
೩. ಕೆಟ್ಟಿತ್ತು ಕಲ್ಯಾಣ (ನಾಟಕ)
೪. ಖರೇ ಖರೇ ಸಂಗ್ಯಾಬಾಳ್ಯಾ (ನಾಟಕ)
೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ)

II. ಸಂಪಾದಿತ ಕೃತಿ ಸಂಪುಟಗಳು

ಸಂಪುಟ ೬ : ಶಾಸನ ಸಾಹಿತ್ಯ **–ಸಂ. ಡಾ. ಎಸ್. ಕೆ. ಕೊಪ್ಪಾ**

೧. ಶಾಸನ ಸಂಪದ
೨. ಧಾರವಾಡ ಜಿಲ್ಲೆಯ ಶಾಸನ ಸೂಚಿ
೩. ವಿಜಾಪುರ ಜಿಲ್ಲೆಯ ಶಾಸನ ಸೂಚಿ
೪. ಧಾರವಾಡ ತಾಲೂಕಿನ ಶಾಸನಗಳು
೫. ಶಾಸನ ಸೂಕ್ತಿಸುಧಾರ್ಣವ

ಸಂಪುಟ : ೭ ದಾಖಲು ಸಾಹಿತ್ಯ : ಭಾಗ–೧ **–ಸಂ. ಡಾ. ಪಂಡಿತ ರಾಠೋಡ**

೧. ಕರ್ನಾಟಕದ ಕೈಫಿಯತ್ತುಗಳು

ಸಂಪುಟ : ೮ ದಾಖಲು ಸಾಹಿತ್ಯ : ಭಾಗ– ೨ **–ಸಂ. ಡಾ. ಪಂಡಿತ ರಾಠೋಡ**

೧. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ
ಜೈನ ಬಸದಿ ಹಸ್ತಪ್ರತಿಸೂಚಿ
೨. ವಚನ ಸಾಹಿತ್ಯ ಆಕರ ಕೋಶ
೩. ತೋಂಟದಾರ್ಯ ಮಠದ ದಾಖಲು ಸಾಹಿತ್ಯ–೧

ಸಂಪುಟ : ೯ ವಚನ ಸಾಹಿತ್ಯ : ಭಾಗ–೧ **–ಸಂ. ಡಾ. ವೀರಣ್ಣ ರಾಜೂರ**

೧. ಬಸವಸ್ತೋತ್ರದ ವಚನಗಳು
೨. ಬಸವಣ್ಣನವರ ವಚನ ಸಂಪುಟ

ಸಂಪುಟ : ೧೦ ವಚನ ಸಾಹಿತ್ಯ : ಭಾಗ-೨ –ಸಂ. ಡಾ. ಗುರುಲಿಂಗ ಕಾಪಸೆ

೧. ಚೆನ್ನಬಸವಣ್ಣನವರ ಷಟ್ಸ್ಥಲವಚನ ಮಹಾಸಂಪುಟ
೨. ಸಿದ್ಧರಾಮಯ್ಯದೇವರ ವಚನಗಳು

ಸಂಪುಟ : ೧೧ ವಚನ ಸಾಹಿತ್ಯ : ಭಾಗ-೩ –ಸಂ. ಡಾ. ವೀರಣ್ಣ ರಾಜೂರ

೧. ಸಂಕೀರ್ಣ ವಚನ ಸಂಪುಟ

ಸಂಪುಟ : ೧೨ ವಚನ ಸಾಹಿತ್ಯ : ಭಾಗ-೪ –ಸಂ. ಡಾ. ವೀರಣ್ಣ ರಾಜೂರ

೧. ವಚನ

ಸಂಪುಟ : ೧೩ ವಚನ ಸಾಹಿತ್ಯ : ಭಾಗ-೫ –ಸಂ. ಡಾ. ವೀರಣ್ಣ ರಾಜೂರ

೧. ಶೂನ್ಯಸಂಪಾದನೆ

ಸಂಪುಟ : ೧೪ ವಚನ ಸಾಹಿತ್ಯ : ಭಾಗ-೬ –ಸಂ. ಡಾ. ವೀರಣ್ಣ ರಾಜೂರ

೧. ಪರಮಾನಂದ ಸುಧೆ
೨. ಏಕೋತ್ತರಶತಸ್ಥಲ

ಸಂಪುಟ : ೧೫ ವಚನ ಸಾಹಿತ್ಯ : ಭಾಗ-೭ –ಸಂ. ಡಾ. ಪಂಡಿತ ರಾಠೋಡ

೧. ಬಸವಣ್ಣನವರ ಟೀಕಿನ ವಚನಗಳು, ಭಾಗ-೧

ಸಂಪುಟ : ೧೬ ವಚನ ಸಾಹಿತ್ಯ : ಭಾಗ-೮ –ಸಂ. ಡಾ. ಪಂಡಿತ ರಾಠೋಡ

೧. ಬಸವಣ್ಣನವರ ಟೀಕಿನ ವಚನಗಳು, ಭಾಗ-೨

ಸಂಪುಟ : ೧೭ ವಚನ ಸಾಹಿತ್ಯ : ಭಾಗ-೯ –ಸಂ. ಶಶಿಧರ ತೋಡ್ಕರ

೧. ವಚನ ಸಂಕಲನ-೪
೨. ವಚನ ಸಂಕಲನ-೬
೩. ವಚನ ವರ್ಷ

ಸಂಪುಟ : ೧೮ ವಚನ ಸಾಹಿತ್ಯ : ಭಾಗ-೧೦ –ಸಂ. ಡಾ. ವೀರಣ್ಣ ರಾಜೂರ

೧. ವಚನಶಾಸ್ತ್ರಸಾರ(ಸಂಪುಟ-೧)

ಸಂಪುಟ : ೧೯ ಕಾವ್ಯ ಸಾಹಿತ್ಯ : ಭಾಗ-೧ –ಸಂ. ಡಾ. ಗುರುಪಾದ ಮರಿಗುದ್ದಿ

೧. ಹರಿಹರನ ರಗಳೆಗಳು, ಭಾಗ-೧

ಸಂಪುಟ : ೨೦ ಕಾವ್ಯ ಸಾಹಿತ್ಯ : ಭಾಗ–೨ –ಸಂ. ಡಾ. ಗುರುಪಾದ ಮರಿಗುದ್ದಿ

೧. ಹರಿಹರನ ರಗಳೆಗಳು, ಭಾಗ–೨

ಸಂಪುಟ: ೨೧ ಕಾವ್ಯ ಸಾಹಿತ್ಯ : ಭಾಗ–೩ –ಸಂ. ಡಾ. ಬಿ.ವ್ಹಿ. ಶಿರೂರ

೧. ಮಲ್ಲಿನಾಥ ಪುರಾಣ ಸಂಗ್ರಹ
೨. ಶಬ್ದಮಣಿದರ್ಪಣ ಸಂಗ್ರಹ
೩. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ
೪. ಆದಯ್ಯನ ಲಘುಕೃತಿಗಳು
೫. ಕೊಂಡಗುಳಿ ಕೇಶಿರಾಜನ ಕೃತಿಗಳು

ಸಂಪುಟ: ೨೨ ಕಾವ್ಯ ಸಾಹಿತ್ಯ : ಭಾಗ–೪ –ಸಂ. ಡಾ. ಎಫ್. ಟಿ. ಹಳ್ಳಿಕೇರಿ

೧. ಷಟ್‌ಸ್ಥಲ ಶಿವಾಯಣ
೨. ಶಿವಯೋಗ ಪ್ರದೀಪಿಕಾ

ಸಂಪುಟ: ೨೩ ಕಾವ್ಯ ಸಾಹಿತ್ಯ : ಭಾಗ–೫ –ಸಂ. ಡಾ. ಎಫ್. ಟಿ. ಹಳ್ಳಿಕೇರಿ

೧. ತಗರ ಪವಾಡ
೨. ಸಿದ್ಧಮಂಕ ಚರಿತೆ
೩. ಗುಂಡಬಸವೇಶ್ವರ ಪುರಾಣ
೪. ಕೊಡೆಕಲ್ಲ ವಚನ ವಾಕ್ಯ

ಸಂಪುಟ: ೨೪ ಕಾವ್ಯ ಸಾಹಿತ್ಯ : ಭಾಗ–೬ –ಸಂ. ಡಾ. ಹನುಮಂತ ಮೇಲಿನಮನಿ

೧. ಹೊಸಕುಮಾರರಾಮನ ಸಾಂಗತ್ಯ
೨. ಹಳೆಯಕುಮಾರ ರಾಮನ ಸಾಂಗತ್ಯ

ಸಂಪುಟ: ೨೫ ಕಾವ್ಯ ಸಾಹಿತ್ಯ : ಭಾಗ–೭ –ಸಂ. ಡಾ. ಹನುಮಂತ ಮೇಲಿನಮನಿ

೧. ಕೊಮಾರ ರಾಮಯ್ಯನ ಚರಿತ್ರೆ
೨. ಬಾಲರಾಮನ ಸಾಂಗತ್ಯ

ಸಂಪುಟ: ೨೬ ಕಾವ್ಯ ಸಾಹಿತ್ಯ : ಭಾಗ–೮ –ಸಂ. ಡಾ. ಸರಸ್ವತಿದೇವಿ ಭಗವತಿ

೧. ಸಿರುಮಣ ನಾಯಕನ ಸಾಂಗತ್ಯ
೨. ಸಿರುಮನ ಚರಿತೆ
೩. ಗೊಲ್ಲ ಸಿರುಮನ ಚರಿತೆ

ಸಂಪುಟ: ೨೭ ಕಾವ್ಯ ಸಾಹಿತ್ಯ : ಭಾಗ–೯ **–ಸಂ. ಡಾ. ಸರಸ್ವತಿದೇವಿ ಭಗವತಿ**

೧. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ

೨. ನಿಂಬಸಾಮಂತ ಚರಿತೆ

ಸಂಪುಟ: ೨೮ ಕಾವ್ಯ ಸಾಹಿತ್ಯ : ಭಾಗ–೧೦ **–ಸಂ. ಡಾ. ಎಂ ಎಸ್. ಮದಭಾವಿ**

೧. ಕಿತ್ತೂರ ಸಂಸ್ಥಾನ ಸಾಹಿತ್ಯ–೧

೨. ಕಿತ್ತೂರ ಸಂಸ್ಥಾನ ಸಾಹಿತ್ಯ–೨

೩. ಕಿತ್ತೂರ ಸಂಸ್ಥಾನ ಸಾಹಿತ್ಯ–೩

ಸಂಪುಟ: ೨೯ ಜೀವನ ಚರಿತ್ರೆ ಸಾಹಿತ್ಯ : ಭಾಗ–೧ **–ಸಂ. ಡಾ. ಎಂ ಎಸ್. ಮದಭಾವಿ**

೧. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ

೨. ಫ.ಗು.ಹಳಕಟ್ಟಿಯವರ ಆತ್ಮಚರಿತ್ರೆ

೩. ಮಡಿವಾಳಪ್ಪ ಸಾಸನೂರ ಬರೆಹ–ಬದುಕು

ಸಂಪುಟ: ೩೦ ಜೀವನ ಚರಿತ್ರೆ ಸಾಹಿತ್ಯ : ಭಾಗ–೨ **–ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ**

೧. ರಾಷ್ಟ್ರಧರ್ಮ ದ್ರಷ್ಟಾರ ಹರ್ಡೇಕರ
ಮಂಜಪ್ಪ, ಭಾಗ : ೧

ಸಂಪುಟ: ೩೧ ಜೀವನ ಚರಿತ್ರೆ ಸಾಹಿತ್ಯ : ಭಾಗ–೩ **–ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ**

೧. ರಾಷ್ಟ್ರಧರ್ಮ ದ್ರಷ್ಟಾರ ಹರ್ಡೇಕರ
ಮಂಜಪ್ಪ, ಭಾಗ : ೨

ಸಂಪುಟ: ೩೨ ಜೀವನ ಚರಿತ್ರೆ ಸಾಹಿತ್ಯ : ಭಾಗ–೪ **–ಸಂ. ಡಾ. ವಿ.ಎಸ್. ಮಾಳಿ**

೧. ಅರಟಾಳ ರುದ್ರಗೌಡರ ಚರಿತ್ರೆ

III. ಲೇಖನ ಸಾಹಿತ್ಯ ಸಂಪುಟಗಳು(ಮಾರ್ಗ ಸಂಪುಟಗಳು)

ಸಂಪುಟ: ೩೩. ಲೇಖನ ಸಾಹಿತ್ಯ : ಭಾಗ–೧ **–ಸಂ. ಡಾ. ಕೆ. ರವೀಂದ್ರನಾಥ**

ಶಾಸನ ಸಾಹಿತ್ಯ

ಸಂಪುಟ: ೩೪. ಲೇಖನ ಸಾಹಿತ್ಯ : ಭಾಗ–೨ **–ಸಂ. ಡಾ. ಕೆ. ರವೀಂದ್ರನಾಥ**

ಶಾಸ್ತ್ರ ಸಾಹಿತ್ಯ

ಸಂಪುಟ: ೩೫. ಲೇಖನ ಸಾಹಿತ್ಯ : ಭಾಗ–೩ –ಸಂ. ಡಾ. ಕೆ. ರವೀಂದ್ರನಾಥ
ವಚನ ಸಾಹಿತ್ಯ

ಸಂಪುಟ: ೩೬. ಲೇಖನ ಸಾಹಿತ್ಯ : ಭಾಗ–೪ –ಸಂ. ಡಾ. ಕೆ. ರವೀಂದ್ರನಾಥ
ಕಾವ್ಯ ಸಾಹಿತ್ಯ

ಸಂಪುಟ: ೩೭. ಲೇಖನ ಸಾಹಿತ್ಯ : ಭಾಗ–೫ –ಸಂ. ಡಾ. ಕೆ. ರವೀಂದ್ರನಾಥ
ವ್ಯಕ್ತಿಚಿತ್ರಣ–ಮುನ್ನುಡಿ–ಬೆನ್ನುಡಿ
ಅರಿಕೆ–ಭಾಷಣ–ಸಂದರ್ಶನ

IV. ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು

ಸಂಪುಟ : ೩೮–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೧ –ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ
ಚಿತ್ರ –ಡಾ. ವಿ.ಡಿ. ಐಹೊಳ್ಳಿ

ಸಂಪುಟ : ೩೯–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೨ –ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ
ಪತ್ರ–ವರದಿಗಳು –ಡಾ. ವಿ.ಡಿ. ಐಹೊಳ್ಳಿ

ಸಂಪುಟ : ೪೦–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೩ –ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ
ಆಡಿಯೋ–ವಿಡಿಯೋ –ಡಾ. ವಿ.ಡಿ. ಐಹೊಳ್ಳಿ

ಹೀಗೆ ೪೦ ಸಂಪುಟಗಳಲ್ಲಿ ೭೯ ಕೃತಿಗಳನ್ನು ಅಳವಡಿಸಲಾಗಿದೆ. ಮಾರ್ಗ ಸಂಪುಟದಿಂದಾಯ್ದು ಡಾ. ಕಲಬುರ್ಗಿಯವರೇ ಸಿದ್ಧಪಡಿಸಿದ ೧೧ ಸಂಕಲನ ಕೃತಿಗಳನ್ನು, ಹರಿಹರನ ರಗಳೆ ಸಂಪುಟದಿಂದಾಯ್ದು ಸಿದ್ಧಪಡಿಸಿದ 'ಕನ್ನಡ ಶರಣರ ಕಥೆಗಳು' ಎಂಬ ಕೃತಿಯನ್ನು, ವಚನ ಶಾಸ್ತ್ರಸಾರದ ಪುನರ್ ಮುದ್ರಣವಾದ 'ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂಪುಟ–೫'ನ್ನು; 'ಶಿವಾನುಭವ ಪತ್ರಿಕೆ'ಯನ್ನು, ವಿಚಾರ ಸಂಕಿರಣಗಳಲ್ಲಿ ಮಂಡಿಸಿದ ವಿವಿಧ ವಿದ್ವಾಂಸರ ಪ್ರಬಂಧಗಳ ಸಂಕಲನಗಳೆನಿಸಿದ ಆಧುನಿಕ ಸಂಪಾದಿತ ೧೪ ಕೃತಿಗಳನ್ನು ಮತ್ತು ೬ ಅಭಿನಂದನಗ್ರಂಥ, ಎರಡು ಇಂಗ್ಲಿಷ್‌ಗ್ರಂಥ ಹೀಗೆ ಒಟ್ಟು ೩೫ ಗ್ರಂಥಗಳನ್ನು–ಪುನರುಕ್ತಿಕಾರಣವಾಗಿ– ಈ ಸಂಪುಟಗಳಲ್ಲಿ ಸೇರಿಸದೆ ಕೈಬಿಡಲಾಗಿದೆ.

ಸಂಪುಟಗಳ ಸಂಯೋಜನೆಯಲ್ಲಿ ಈ ಕೆಳಗಿನ ಕ್ರಮವನ್ನು ಅನುಸರಿಸಲಾಗಿದೆ:

ಒಂದು ಕೃತಿ ೫೦೦ ಪುಟ ವ್ಯಾಪ್ತಿಯನ್ನು ಹೊಂದಿದ್ದರೆ ಅದನ್ನು ಒಂದು ಸ್ವತಂತ್ರ ಸಂಪುಟವೆಂದು ಪರಿಗಣಿಸಲಾಗಿದೆ(ಉದಾ: ಶೂನ್ಯಸಂಪಾದನೆ, ವಚನ). ಪುಟ ಸಂಖ್ಯೆ ಕಡಿಮೆ

ಇದ್ದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳನ್ನು ಸೇರಿಸಿ ೫೦೦ ಪುಟಕ್ಕೆ ಹೊಂದುವಂತೆ ಜೋಡಿಸಲಾಗಿದೆ(ಉದಾ: ಹೊಸ ಕುಮಾರರಾಮನ ಸಾಂಗತ್ಯ, ಹಳೆಯ ಕುಮಾರರಾಮನ ಸಾಂಗತ್ಯ). ಹಾಗೆ ಜೋಡಿಸುವಲ್ಲಿ ವಿಷಯದ ಏಕತೆಯನ್ನು ದೃಷ್ಟಿಯಲ್ಲಿಟ್ಟುಕೊಳ್ಳಲಾಗಿದೆ. ಒಂದು ಕೃತಿ ಸಾವಿರ ಅಥವಾ ಅದಕ್ಕಿಂತ ಹೆಚ್ಚು ಪುಟ ವ್ಯಾಪ್ತಿಯನ್ನು ಪಡೆದಿದ್ದರೆ, ಅದನ್ನು ಎರಡು ಭಾಗಗಳಾಗಿ ವಿಭಜಿಸಿ ಪ್ರತ್ಯೇಕ ಸಂಪುಟವೆಂದು ಗಣಿಸಲಾಗಿದೆ(ಉದಾ: ಬಸವಣ್ಣನವರ ಟೀಕಿನ ವಚನಗಳು, ಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪನವರು).

ಡಾ. ಕಲಬುರ್ಗಿ ಅವರ ಬಿಡಿ ಲೇಖನಗಳು (ಸಂಪ್ರಬಂಧಗಳು) ಮೂಲದಲ್ಲಿ 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ ಪ್ರಕಟವಾಗಿವೆ. ಕಾಲಕಾಲಕ್ಕೆ ಪ್ರಕಟವಾದ ಅವುಗಳಲ್ಲಿ ಒಂದೇ ವಿಷಯ ಕ್ಷೇತ್ರಕ್ಕೆ ಸಂಬಂಧಿಸಿದ ಲೇಖನಗಳು ಬೇರೆಬೇರೆ ಸಂಪುಟಗಳಲ್ಲಿ ಹಂಚಿ ಹೋಗಿವೆ. ಅವುಗಳನ್ನು ಒಂದೆಡೆ ತರುವ ಉದ್ದೇಶದಿಂದ ಎಲ್ಲ ಲೇಖನಗಳನ್ನು ವಿಷಯಾನುಗುಣವಾಗಿ ಮರುವರ್ಗೀಕರಣ ಮಾಡಿ ೫ ಸಂಪುಟಗಳಲ್ಲಿ ಅಳವಡಿಸಲಾಗಿದೆ. ಹಾಗೆ ಮಾಡುವಲ್ಲಿ ಮೂಲ ಮಾರ್ಗ ಸಂಪುಟ ೫ ರಲ್ಲಿ ಅಳವಡಿಸಿದ್ದ ಪ್ರಾಚೀನ ಸಂಪಾದಿತ ಕೃತಿಗಳ ಪ್ರಸ್ತಾವನೆಗಳನ್ನು-ಅವು ಆಯಾ ಕೃತಿಗಳಲ್ಲಿ ಅಲ್ಲಲ್ಲಿಯೇ ಪ್ರಕಟವಾಗುವುದರಿಂದ-ಕೈಬಿಡಲಾಗಿದೆ. ಆಧುನಿಕ ಸಂಪಾದಿತ ಕೃತಿಗಳು ಈ ಯೋಜನೆಯಿಂದ ಹೊರಗುಳಿದಿರುವುದರಿಂದ ಅವುಗಳ ಅರಿಕೆ, ಸಂಪಾದಕರ ಮಾತು, ಪ್ರಧಾನ ಸಂಪಾದಕರ ಮಾತು-ಇವುಗಳನ್ನು ಮಾತ್ರ ಹಾಗೇ ಉಳಿಸಿಕೊಳ್ಳಲಾಗಿದೆ. ಮರು ಹೊಂದಾಣಿಕೆ ಮಾಡಿದ ಲೇಖನಗಳ ಮೂಲ ಆಕರಗಳನ್ನು ಆಯಾ ಲೇಖನದ ಕೆಳಗೆ ನಮೂದಿಸಲಾಗಿದೆ.

ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳಲ್ಲಿ ಒಂದು-ಡಾ. ಕಲಬುರ್ಗಿಯವರಿಗೆ ಸಂಬಂಧಿಸಿದ ಚಿತ್ರ ಸಂಪುಟವಾಗಿದೆ. ಇದರಲ್ಲಿ ಅವರ ವೈಯಕ್ತಿಕ ಬದುಕು ಮತ್ತು ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಿಗೆ ಸಂಬಂಧಿಸಿದ ಆಯ್ದ ಭಾವ ಚಿತ್ರಗಳನ್ನು ಅಳವಡಿಸಲಾಗಿದೆ. ಎರಡನೆಯದಾದ ಪತ್ರ-ವರದಿ ಸಂಪುಟದಲ್ಲಿ ಕಲಬುರ್ಗಿ ಅವರು ಇತರರಿಗೆ ಬರೆದ, ಇತರರು ಕಲಬುರ್ಗಿಯವರಿಗೆ ಬರೆದ ಮಹತ್ವದ ಪತ್ರಗಳನ್ನು ಮತ್ತು ಕಲಬುರ್ಗಿಯವರು ಭಾಗವಹಿಸಿದ ಕಾರ್ಯಕ್ರಮಗಳ ಪತ್ರಿಕಾ ವರದಿಗಳನ್ನು ಸಂಗ್ರಹಿಸಲಾಗಿದೆ. ಮೂರನೆಯ ಸಂಪುಟದಲ್ಲಿ ಕಲಬುರ್ಗಿ ಅವರನ್ನು ಕುರಿತ ಸಾಕ್ಷ್ಯಚಿತ್ರ, ದೂರದರ್ಶನ ಸಂದರ್ಶನ ಮತ್ತು ಭಾಷಣಗಳು; ಅವರ ನಾಟಕಗಳ ಪ್ರದರ್ಶನದ ಚಿತ್ರೀಕರಣ ಮಾಡಿದ ಆಡಿಯೋ-ವಿಡಿಯೋಗಳನ್ನು ಒಂದುಗೂಡಿಸಲಾಗಿದೆ.

ಡಾ. ಕಲಬುರ್ಗಿ ಅವರ ಕೃತಿಗಳಲ್ಲಿ ಕೆಲವು ಒಂದೇ ಮುದ್ರಣ ಕಂಡಿದ್ದರೆ, ಮತ್ತೆ ಕೆಲವು ಒಂದಕ್ಕಿಂತ ಹೆಚ್ಚು ಮುದ್ರಣ ಹೊಂದಿವೆ. ಹೀಗಾಗಿ ಈ ಸಂಪುಟಗಳನ್ನು ಸಿದ್ಧಪಡಿಸುವಲ್ಲಿ ಎಲ್ಲ ಆವೃತ್ತಿಗಳನ್ನೂ ಅವಲೋಕಿಸಿ, ಕೊನೆಯ ಆವೃತ್ತಿಯನ್ನು ಆಧಾರವಾಗಿಟ್ಟುಕೊಳ್ಳಲಾಗಿದೆ.

ಒಂದು ಕೃತಿಯಲ್ಲಿ ಒಪ್ಪೋಲೆ ಇದ್ದರೆ ಮೊದಲು ಅದನ್ನು ಸರಿಪಡಿಸಿಕೊಳ್ಳುವುದು. ಕೃತಿಯ ಅಥವಾ ಲೇಖನದ ಒಳಗೆ ಕೆಲವು ಭಾಗ ಅಥವಾ ಪುಟ ಅಥವಾ ಪದ-ವಾಕ್ಯ ಬಿಟ್ಟುಹೋಗಿದ್ದರೆ ಮೂಲ ಆವೃತ್ತಿಯನ್ನು ನೋಡಿ ಸೇರಿಸಿಕೊಳ್ಳುವುದು. ಅಕ್ಷರ ದೋಷಗಳನ್ನು ತಿದ್ದುಪಡಿಮಾಡುವುದು. ಅಡಿಟಿಪ್ಪಣಿ, ಅನುಬಂಧಗಳಲ್ಲಿ ವ್ಯತ್ಯಾಸಗಳಾಗಿದ್ದರೆ ಹೊಂದಾಣಿಕೆ ಮಾಡುವುದು. ಆಕರಗಳು

ಬಿಟ್ಟು ಹೋಗಿದ್ದರೆ ಬೇರೆ ಮೂಲಗಳಿಂದ ಹುಡುಕಿ ಅಳವಡಿಸಿಕೊಳ್ಳುವುದು. ಈ ಹಿನ್ನೆಲೆಯಲ್ಲಿ ಆಯಾ ಸಂಪುಟಗಳ ಸಂಪಾದಕರು ತಮ್ಮ ತಮ್ಮ ಸಂಪುಟಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ, ಶುದ್ಧರೂಪದಲ್ಲಿ ಸಿದ್ಧಪಡಿಸುವುದು. ಅನಂತರ ಆ ಸಂಪುಟದ ಸ್ವರೂಪ–ವಿಶೇಷತೆ ಕುರಿತು ನಾಲ್ಕಾರು ಪುಟದ ಸಂಪಾದಕರ ಮಾತು ಬರೆದು ಜೋಡಿಸುವುದು–ಇದು ಈ ಸಂಪುಟಗಳನ್ನು ರೂಪಿಸುವಲ್ಲಿ ಅನುಸರಿಸಿದ ವಿಧಾನ.

ಗ್ರಂಥ ವಿನ್ಯಾಸ ಕುರಿತಂತೆ–ಕೃತಿಯ ಆರಂಭದ ಪುಟಗಳು (ಪ್ರಿಲಿಮ್ಸ್) ಮುಗಿದು ಮೂಲ ಗ್ರಂಥ ಆರಂಭವಾಗುವಲ್ಲಿ ಮೊದಲ ಆವೃತ್ತಿಯ ಮೊದಲ ಪುಟವನ್ನು (ಕೃತಿಯ ಹೆಸರು, ಲೇಖಕರು/ಸಂಪಾದಕರು, ಪ್ರಕಾಶಕರು, ಪ್ರಕಟಣ ವರ್ಷಗಳನ್ನೊಳಗೊಂಡಂತೆ) ಹಾಗೆಯೇ ಇಟ್ಟುಕೊಳ್ಳಲಾಗಿದೆ. ಮೂಲದಲ್ಲಿನ ಪ್ರಕಾಶಕರ ಮಾತು, ಮುನ್ನುಡಿಗಳನ್ನು ತೆಗೆದುಹಾಕಿ ಲೇಖಕರ ಮಾತು, ಪ್ರಸ್ತಾವನೆಗಳನ್ನು ಮಾತ್ರ ಉಳಿಸಿಕೊಳ್ಳಲಾಗಿದೆ. ಒಂದು ಸಂಪುಟದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳಿದ್ದರೆ ಒಂದೊಂದು ಕೃತಿಯ ಮೂಲ ಸ್ವರೂಪವನ್ನು ಹಾಗೆಯೇ ಉಳಿಸಿಕೊಂಡು ಪುಟ ಸಂಖ್ಯೆಯನ್ನು ಮಾತ್ರ ಮೊದಲಿನಿಂದ ಕೊನೆಯವರೆಗೆ ಬೆಳೆಸಲಾಗಿದೆ. ಪರಿವಿಡಿಯಲ್ಲಿ ಎಲ್ಲ ಕೃತಿಗಳ ವಿವರವನ್ನು ಕೊಡಲಾಗಿದೆ.

ಒಟ್ಟಿನಲ್ಲಿ ಅಚ್ಚುಕಟ್ಟಾದ ವಿನ್ಯಾಸ, ಅರ್ಥಪೂರ್ಣ–ಆಕರ್ಷಕ ಮುಖಪುಟ, ದೋಷರಹಿತ ಸುಂದರ ಮುದ್ರಣ, ಭಾರವೆನಿಸದ ಗಾತ್ರ ಮತ್ತು ಸುಲಭವಾದ ಬೆಲೆಯಲ್ಲಿ ಡಾ. ಕಲಬುರ್ಗಿ ಅವರ ಅಮೂಲ್ಯವಾದ ಸಮಗ್ರ ಸಾಹಿತ್ಯ ಒಂದೆಡೆ ಎಲ್ಲರಿಗೂ ದೊರಕುವಂತೆ ಮಾಡುವುದು ಈ ಯೋಜನೆಯ ಉದ್ದೇಶವಾಗಿದೆ. ಅದನ್ನು ಬಹುಮಟ್ಟಿಗೆ ಈಡೇರಿಸಿದ್ದೇವೆ ಎಂಬ ತೃಪ್ತಿ ನಮ್ಮದಾಗಿದೆ.

ಕೃತಜ್ಞತೆಗಳು :

‘ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ’ ಕನ್ನಡದ ಒಂದು ಮಹತ್ವಾಕಾಂಕ್ಷೆಯ ಪ್ರತಿಷ್ಠಿತ ಗ್ರಂಥಪ್ರಕಟಣ ಯೋಜನೆ. ಇದನ್ನು ಯಶಸ್ವಿಯಾಗಿ ಪೂರೈಸುವಲ್ಲಿ ಹಲವಾರು ವ್ಯಕ್ತಿಗಳು ನೆರವಾಗಿದ್ದಾರೆ. ಅವರನ್ನು ಈ ಸಂದರ್ಭದಲ್ಲಿ ಗೌರವಪೂರ್ವಕವಾಗಿ ನೆನೆಯುವುದು ನನ್ನ ಪರಮ ಕರ್ತವ್ಯವೆಂದು ಭಾವಿಸಿದ್ದೇನೆ.

ಈ ಯೋಜನೆಗೆ ಅನುಮೋದನೆ ನೀಡಿ, ಧನ ಸಹಾಯ ಮಾಡಿದವರು ಕರ್ನಾಟಕ ಸರ್ಕಾರದ ಅಂದಿನ ಮುಖ್ಯ ಮಂತ್ರಿಗಳಾಗಿದ್ದ ಮಾನ್ಯ ಶ್ರೀ ಸಿದ್ಧರಾಮಯ್ಯನವರು. ಅದಕ್ಕೆ ಪೂರ್ವಭಾವಿಯಾಗಿ ಸಹಾಯ ಮಾಡಿದವರು ಕನ್ನಡ ಮತ್ತು ಸಂಸ್ಕೃತಿ ಖಾತೆಯ ಸಚಿವರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು. ಅವರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಈ ಮಹತ್ವದ ಯೋಜನೆ ಕಾರ್ಯರೂಪಕ್ಕೆ ಬರಲು ಮುಖ್ಯಮಂತ್ರಿಗಳ ಮನ ಒಲಿಸಿ ಹಣ ಬಿಡುಗಡೆ ಮಾಡಿಸುವುದರ ಜೊತೆಗೆ ತಮ್ಮ ಬಿಎಲ್‌ಡಿಇ ಸಂಸ್ಥೆಯ ಅಡಿಯಲ್ಲಿರುವ ‘ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ’ದ ಮೂಲಕ ಇದು ಸಾಕಾರಗೊಳ್ಳಲು ಕಾರಣರಾದವರು ಕರ್ನಾಟಕ ಸರ್ಕಾರದ ಪ್ರಭಾವೀ ಗೃಹಸಚಿವರೂ, ಉತ್ಕಟ ಬಸವತತ್ವಾಭಿಮಾನಿಗಳೂ ಲಿಂಗಾಯತ ಸ್ವತಂತ್ರ ಧರ್ಮ ಮಾನ್ಯತೆಯ ಹೋರಾಟದ ಮುಂಚೂಣಿ ನಾಯಕರೂ ಆದ

ಮಾನ್ಯ ಶ್ರೀ ಎಂ.ಬಿ. ಪಾಟೀಲ ಅವರು. ಡಾ. ಎಂ. ಎಂ. ಕಲಬುರ್ಗಿ ಅವರ ಬಗೆಗೆ ಪಾಟೀಲರಿಗೆ ಅನನ್ಯವಾದ ಪ್ರೀತಿ-ವಿಶ್ವಾಸ-ಗೌರವ. ಅವರ ಮಾರ್ಗದರ್ಶನದಲ್ಲಿ ತಮ್ಮ ಬಿ.ಎಲ್.ಡಿ.ಇ. ಸಂಸ್ಥೆಯಿಂದ 'ಡಾ. ಫ.ಗು. ಹಳಕಟ್ಟಿ ಸಮಗ್ರ ಸಾಹಿತ್ಯ', 'ಆದಿಲ್‌ಶಾಹಿ ಸಮಗ್ರ ಸಾಹಿತ್ಯ' ಪ್ರಕಟಿಸಿದ ಕೀರ್ತಿ ಅವರದು. ಈಗ ಕಲಬುರ್ಗಿ ಅವರ ಸಮಗ್ರ ಸಾಹಿತ್ಯ ಪ್ರಕಟಿಸುವ ಮೂಲಕ ಅವರಿಗೆ ತಮ್ಮ ಕೃತಜ್ಞತಾಪೂರ್ವಕ ಗೌರವ ಸಲ್ಲಿಸುತ್ತಿರುವುದು ಅಪೇಕ್ಷಣೀಯ ಉಪಕ್ರಮವೆನಿಸಿದೆ. ಶ್ರೀ ಎಂ.ಬಿ. ಪಾಟೀಲ ಅವರ ಈ ಕಾರ್ಯಕ್ಷಮತೆಗೆ ಅನಂತ ಶರಣಾರ್ಥಿಗಳನ್ನು ಸಲ್ಲಿಸುತ್ತೇನೆ.

ಈ ಯೋಜನೆ ನಿಗದಿತ ವೇಳೆಯಲ್ಲಿ ಸಮಯಬದ್ಧವಾಗಿ ಮತ್ತು ವ್ಯವಸ್ಥಿತವಾಗಿ ಪೂರ್ಣಗೊಳ್ಳಲು ಅರ್ಪಣಾಭಾವದಿಂದ ನಿರಂತರ ಶ್ರಮಿಸಿದವರು ಹಳಕಟ್ಟಿ ಸಂಶೋಧನ ಕೇಂದ್ರದ ಹಾಗೂ ಈ ಯೋಜನೆಯ ಕಾರ್ಯದರ್ಶಿಗಳಾದ ಡಾ. ಎಂ. ಎಸ್. ಮದಭಾವಿ ಮತ್ತು ಯೋಜನಾ ಸಂಯೋಜಕರಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ಹಾಗೂ ಸಂಶೋಧನ ಕೇಂದ್ರದ ಎಲ್ಲ ಸಿಬ್ಬಂದಿ ವರ್ಗ. ಅವರ ಅವಿರತ ಪರಿಶ್ರಮಕ್ಕೆ ಅನಂತ ವಂದನೆಗಳು.

ಈ ಯೋಜನೆಗೆ ಬೇಕಾದ ಆಕರ ಸಾಮಗ್ರಿಯನ್ನು, ಅಂದರೆ ಗ್ರಂಥಗಳನ್ನು ಒದಗಿಸಿದವರು ಡಾ. ಎಂ. ಎಂ. ಕಲಬುರ್ಗಿ ಅವರ ಕುಟುಂಬವರ್ಗದವರು. ಈ ಸಂದರ್ಭದಲ್ಲಿ ಶ್ರೀಮತಿ ಉಮಾದೇವಿ ಕಲಬುರ್ಗಿ, ಶ್ರೀ ವಿಜಯ ಕಲಬುರ್ಗಿ ಮತ್ತು ರೂಪಾ ಕಲಬುರ್ಗಿ ಅವರು ಅನೇಕ ವಿಧದಲ್ಲಿ ಸಹಾಯ-ಸಹಕಾರ ಮತ್ತು ಮಾರ್ಗದರ್ಶನ ನೀಡಿದ್ದಾರೆ. ಅವರಿಗೆ ನಾವು ಚಿರಋಣಿಯಾಗಿದ್ದೇವೆ.

ಒಂದು ಯೋಜನೆ ನಿರೀಕ್ಷಿತ ಮಟ್ಟದಲ್ಲಿ ತೃಪ್ತಿಕರವಾಗಿ ಕೈಗೂಡಬೇಕಾದರೆ ಬದ್ಧತೆಯುಳ್ಳ ವಿದ್ವಾಂಸರ ನಿಶ್ಚಿತ ನೆರವು ಮತ್ತು ಪ್ರಾಮಾಣಿಕ ಪ್ರಯತ್ನ ಅಗತ್ಯ. ಅಂಥ ೧೬ ಜನ ವಿದ್ವಾಂಸರು ನಮಗೆ ಸಂಪಾದಕರಾಗಿ ದೊರೆತುದು ಈ ಯೋಜನೆ ಸುಗಮವಾಗಿ ಪೂರ್ಣಗೊಳ್ಳಲು ಸಹಕಾರಿಯಾಗಿದೆ. ಅವರೆಲ್ಲರ ವಿದ್ವತ್ ಪ್ರೀತಿಗೆ, ಕಲಬುರ್ಗಿ ಸರ್ ಮೇಲಿನ ಅಭಿಮಾನಕ್ಕೆ ತುಂಬು ಹೃದಯದ ಅಭಿನಂದನೆಗಳು.

ಸಂಪುಟಗಳು ಸುಂದರವಾಗಿ-ಬಂಧುರವಾಗಿ ಹೊರಬರಲು ಕಾರಣರಾದವರು ಛಾಯಾಕ್ಷರ ಜೋಡಿಸಿ, ಗ್ರಂಥವಿನ್ಯಾಸಗೊಳಿಸಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಮುಖಪುಟ ರೂಪಿಸಿದ ಕೆ.ಕೆ. ಮಕಾಳಿ ಮತ್ತು ಮುದ್ರಣಗೊಳಿಸಿದ ಪ್ರಿಂಟ್‌ಪಾಯಿಂಟ್ ಮಾಲಿಕರಾದ ಬಸವರಾಜ ಪಾಟೀಲ(ಹೆಬ್ಬಾಳ) ಅವರು. ಇವರೆಲ್ಲರಿಗೆ ಅನಂತ ಕೃತಜ್ಞತೆಗಳು.

ಡಾ. ಕಲಬುರ್ಗಿ ಅವರು ಅನೇಕ ಯೋಜನೆಗಳ ಮಹಾಯೋಜಕರು. ಅವರು ನೆರವೇರಿಸಿದ ಹಲವಾರು ಯೋಜನೆಗಳಲ್ಲಿ ಜೊತೆಗೂಡಿ ಕೆಲಸ ಮಾಡುವ ಅವಕಾಶ ದೊರಕಿಸಿಕೊಂಡ ನನಗೆ ಈಗ ಅವರ ಸಮಗ್ರಸಾಹಿತ್ಯ ಪ್ರಕಟಣ ಯೋಜನೆಯ ಪ್ರಧಾನ ಸಂಪಾದಕನಾಗಿ ಕಾರ್ಯ ಮಾಡುವ ಯೋಗ ಒದಗಿ ಬಂದುದು ನನ್ನ ಬದುಕಿನ ಮಹಾಭಾಗ್ಯವೆಂದು ಭಾವಿಸಿದ್ದೇನೆ. ಈ ಕಾರ್ಯಗೌರವವನ್ನು ಆ ಗುರುವಿನ ದಿವ್ಯಚೇತನಕ್ಕೆ ವಿನಮ್ರವಾಗಿ ಅರ್ಪಿಸುತ್ತೇನೆ.

❖❖

*

ಸಂಯೋಜಕರ ನುಡಿ

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಡಾ. ಎಂ.ಎಂ. ಕಲಬುರ್ಗಿಯವರು ತಮ್ಮ ಅಮೂಲ್ಯ ಸಾಹಿತ್ಯದ ಮೂಲಕ ನಾಡು, ನುಡಿ ಸೇವೆಗೈದು ದೇಶ-ವಿದೇಶದಲ್ಲಿ ದಟ್ಟವಾದ ಪ್ರಭಾವವನ್ನು ಬೀರಿದ ವ್ಯಕ್ತಿ. ೨೦ನೆಯ ಶತಮಾನದ ಉತ್ತರಾರ್ಧ ಹಾಗೂ ೨೧ನೆಯ ಶತಮಾನದ ಪೂರ್ವಾರ್ಧದ ಹೊಸ್ತಿಲಲ್ಲಿ ನಿಂತು ಸಾಹಿತ್ಯ ವಾರಸುದಾರರಿಗೆ ಮಾರ್ಗ ತೋರಿದ ಮಹಾನ್ ವಿದ್ವಾಂಸ, ಸಂಶೋಧಕ, ವಿಮರ್ಶಕ, ಚಿಂತಕ ಹಾಗೂ ಸಾಹಿತ್ಯದ ಆರಾಧಕರವರು.

ಇಂಥ ಅಪರೂಪದ ವ್ಯಕ್ತಿಯ ವ್ಯಕ್ತಿತ್ವದ ಬಹುಮುಖಗಳನ್ನು ಒಂದೆಡೆ ಸೇರಿಸಿ ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅಕ್ಷರ ಮಾಧ್ಯಮದಲ್ಲಿ ಬಂದ ಅವರ ಸಮಗ್ರ ಸಾಹಿತ್ಯವನ್ನು ವಿಷಯವಾರು ವಿಂಗಡಿಸಿ ೪೦ ಸಂಪುಟಗಳಲ್ಲಿ ಪ್ರಕಟಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

- ಅವರು ನುಡಿದ ಮಾತುಗಳು(ದೃಶ್ಯ ಮತ್ತು ಧ್ವನಿ) ರೇಡಿಯೊ, ದೂರದರ್ಶನದಲ್ಲಿ ಅಲ್ಲದೆ ಹಲವಾರು ಮಹತ್ವದ ಕಾರ್ಯಕ್ರಮಗಳಲ್ಲೂ ದಾಖಲಾಗಿವೆ. ಅವುಗಳನ್ನು ಇದ್ದ ರೀತಿಯಲ್ಲೆ ಸಂಗ್ರಹಿಸುವುದರ ಜೊತೆಗೆ, ಅವುಗಳನ್ನು ಅಕ್ಷರ ಮಾಧ್ಯಮಕ್ಕೆ ತಂದು ಸಂಪುಟ ರೂಪದಲ್ಲಿ ಪ್ರಕಟಿಸುವುದು.
- ಡಾ. ಕಲಬುರ್ಗಿಯವರ ವಿಪುಲವಾದ ಅಪ್ರಕಟಿತ ಸಾಹಿತ್ಯವು ಆತ್ಮಚರಿತ್ರೆಯ ರೂಪದ ದಿನಚರಿಯ ಪುಟಗಳಲ್ಲಿ ಲಭ್ಯವಿವೆ ಎಂದು ಬಲ್ಲ ಮೂಲಗಳಿಂದ ತಿಳಿದುಬಂದಿದೆ. ಅದನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ ಪ್ರಕಟಸುವುದು.
- ಐದು ದಶಕಗಳ ಕಾಲದಿಂದಲೂ ದಿನಪತ್ರಿಕೆಯಲ್ಲಿ, ನಿಯತಕಾಲಿಕೆಗಳಲ್ಲಿ ಪ್ರಕಟವಾದ ಅವರ ಲೇಖನಗಳನ್ನು ಮತ್ತು ಸಭೆ, ಸಮಾರಂಭಗಳಲ್ಲಿ ನೀಡಿರುವ ವಿದ್ವತ್ಪೂರ್ಣವಾದ ಮಾತುಗಳನ್ನು ಪತ್ರಿಕೆಯವರು ಪ್ರಕಟಿಸಿರುವುದುಂಟು. ಇವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.

- ❖ ಸಾವಿರಾರು ವಿದ್ಯಾರ್ಥಿಗಳಿಗೆ, ಸಹೋದ್ಯೋಗಿ ಬಂಧುಗಳಿಗೆ, ವಿದ್ವಾಂಸರುಗಳಿಗೆ, ಗುರುಗಳಿಗೆ, ಮಠಮಾನ್ಯಗಳಿಗೆ ಅವರು ಹಲವಾರು ಪತ್ರಗಳನ್ನು ಬರೆದವರಾಗಿದ್ದಾರೆ. ಅವುಗಳೆಲ್ಲವನ್ನು ಒಂದೆಡೆ ಸೇರಿಸಿ ಪತ್ರ ಸಂಪುಟಗಳನ್ನು ಪ್ರಕಟಿಸುವುದು.
- ❖ ಸರಕಾರ ಮತ್ತು ಸರಕಾರೇತರ ಪ್ರತಿಷ್ಠಾನಗಳು, ಸಂಘ-ಸಂಸ್ಥೆಗಳು, ವಿಶ್ವವಿದ್ಯಾಲಯ ಇವುಗಳಲ್ಲಿ ಹಲವಾರು ಸಾಹಿತ್ಯಿಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಅವುಗಳು ಕನ್ನಡ ನಾಡು ಮತ್ತು ಹೊರನಾಡುಗಳಲ್ಲಿ ಚದುರಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ❖ ಡಾ. ಕಲಬುರ್ಗಿಯವರ ಹಲವಾರು ಶೈಕ್ಷಣಿಕ, ಸಾಹಿತ್ಯಿಕ, ಸಾಮಾಜಿಕ ಮತ್ತು ಸಂಶೋಧನಾತ್ಮಕ ಲೇಖನಗಳು ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ❖ ಭಾಷಣಗಳು, ಉಪನ್ಯಾಸಗಳು, ಹಲವಾರು ವಿಚಾರಸಂಕಿರಣದಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ವೇದಿಕೆಗಳಲ್ಲಿ ಮಂಡಿಸಿದ ಪ್ರಬಂಧಗಳನ್ನು ಒಂದೆಡೆ ಸಂಗ್ರಹಿಸುವುದಲ್ಲದೆ, ರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ವರದಿಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ❖ ಅವರ ಸಾವಿರಾರು ಶಿಷ್ಯವರ್ಗದ ಗ್ರಂಥಗಳಿಗೆ ಬರೆದ ಮುನ್ನುಡಿ, ಹಿನ್ನುಡಿ, ಮಾರ್ಗದರ್ಶಕ ಟಿಪ್ಪಣಿಗಳು, ಪ್ರಸ್ತಾವನೆಗಳು ಮತ್ತು ಸಂಪಾದಕ ನುಡಿಗಳು ಇವುಗಳೆಲ್ಲವನ್ನು ಸಂಗ್ರಹಿಸಿ ಪ್ರಕಟಿಸುವುದು.
- ❖ ಡಾ. ಕಲಬುರ್ಗಿಯವರು ಜಾನಪದ ಸಾಹಿತ್ಯದಲ್ಲೂ ಅಪರೂಪದ ಕೆಲಸ ಮಾಡಿದ್ದಾರೆ. ಹಲವಾರು ಹಾಡುಗಳನ್ನು ಸಂಗ್ರಹಿಸಿದ್ದಾರೆ. ಅವುಗಳನ್ನು ಸಂಗ್ರಹಿಸಿ, ಪ್ರಕಟಿಸುವುದು.
- ❖ ಐದು ದಶಕಗಳ ಅವರ ನಿರಂತರ ಕಾರ್ಯಚಟುವಟಿಕೆಗಳ ಭಾವಚಿತ್ರಗಳನ್ನು ಸಂಗ್ರಹಿಸಿ ಚಿತ್ರ ಸಂಪುಟಗಳನ್ನು ಪ್ರಕಟಿಸುವುದು.
- ❖ ಅವರು ಬರೆದ, ರಂಗಪ್ರದರ್ಶನ ಕಂಡ ನಾಟಕಗಳನ್ನು ಪುನರ್ ಪ್ರದರ್ಶಿಸಿ ದೃಶ್ಯಮಾಧ್ಯಮದಲ್ಲಿ ಸೆರೆಹಿಡಿದು ಪ್ರಕಟಿಸುವುದು.
- ❖ ಮುಂದುವರೆದ ಈ ತಾಂತ್ರಿಕ ಯುಗದಲ್ಲಿ ಅವರ ಸಮಗ್ರ ಸಾಹಿತ್ಯವನ್ನು ಅಂತರ್ಜಾಲಕ್ಕೆ ರವಾನಿಸುವುದು.

ಹಳಕಟ್ಟಿ ಸಂಶೋಧನ ಕೇಂದ್ರವು ಕಳೆದ ಸುಮಾರು ೨ ದಶಕಗಳ ಸಂಶೋಧನ ಕ್ಷೇತ್ರದಲ್ಲಿ ಅಪರೂಪದ ಕೆಲಸವನ್ನು ಮಾಡುತ್ತಿದೆ. ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯವನ್ನು ೧೫ ಸಂಪುಟಗಳಲ್ಲಿ ಆದಿಲಶಾಹಿ ಕಾಲದ ಸಾಹಿತ್ಯವನ್ನು ೧೮ ಸಂಪುಟಗಳಲ್ಲಿ ಅನುವಾದಿಸಿ ಪ್ರಕಟಿಸಿದೆ. ೯ ವಿದ್ಯಾರ್ಥಿಗಳು ವಿವಿಧ ವಿಷಯದಲ್ಲಿ ಪಿಎಚ್.ಡಿ.ಪದವಿಯನ್ನು ಪಡೆದಿದ್ದಾರೆ. ಇನ್ನು ಕೆಲವರು ಪದವಿಯನ್ನು ಪಡೆಯುವ ದಾರಿಯಲ್ಲಿ ಇದ್ದಾರೆ. ಇದಕ್ಕೆಲ್ಲ ಬಿ.ಎಲ್.ಡಿ.ಇ.ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ.ಬಿ.ಪಾಟೀಲ ಅವರ ನಿರಂತರ ಬೆಂಬಲವೇ ಕಾರಣವಾಗಿದೆ. ಈ ಯೋಜನೆಯ ಕರಡು ಪ್ರತಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಳುಹಿಸಿತು. ಈ ಯೋಜನೆಗೆ ಅನುದಾನ

ನೀಡುವಲ್ಲಿ ತೀವ್ರ ಆಸಕ್ತಿ ವಹಿಸಿದವರು ಈ ಹಿಂದೆ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯನವರು ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ಮತ್ತು ಅಧಿಕಾರಿಗಳು. ಇವರಿಗೆಲ್ಲ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಯೋಜನೆಯಲ್ಲಿ ಬಿ.ಎಲ್.ಡಿ.ಇ. ಸಂಸ್ಥೆಯ ಅಧ್ಯಕ್ಷರು, ನಾಡಿನ ಹಿರಿಯ ರಾಜಕಾರಣಿಗಳು ಆದ ಡಾ. ಎಂ.ಬಿ.ಪಾಟೀಲ ಗೌರವ ಅಧ್ಯಕ್ಷರಾಗಿ, ಶ್ರೀ ಜಿ.ಕೆ.ಪಾಟೀಲರು ಅಧ್ಯಕ್ಷರಾಗಿ, ಡಾ. ಎಂ.ಎಸ್. ಮದಭಾವಿ ಕಾರ್ಯದರ್ಶಿಗಳಾಗಿ, ಡಾ. ವೀರಣ್ಣ ರಾಜೂರ ಪ್ರಧಾನ ಸಂಪಾದಕರಾಗಿ, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಸಂಯೋಜಕರಾಗಿ ಹಾಗೂ ಡಾ. ಗುರುಲಿಂಗ ಕಾಪಸೆ, ಶ್ರೀವಿಜಯ ಕಲಬುರ್ಗಿ, ಡಾ. ವಿ.ಡಿ.ಐಹೊಳ್ಳಿ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು, ಸಲಹಾ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಇವರೆಲ್ಲರನ್ನು ಪ್ರೀತಿಯಿಂದ ನೆನೆಯುತ್ತೇವೆ.

ಪ್ರಸ್ತುತ ಸಂಪುಟದ ಸಂಪಾದಕರಾದ ಡಾ. ಪಂಡಿತ ರಾಠೋಡ, ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಕೆ.ಕೆ.ಮಕಾಳಿ ಹಾಗೂ ಸುಂದರವಾಗಿ ಅಕ್ಷರ ಸಂಯೋಜನೆ ಮಾಡಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ ಮತ್ತು ಅಂದವಾಗಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾಯಿಂಟಿನ ಶ್ರೀ ಬಿ.ಸಿ.ಪಾಟೀಲ(ಹೆಬ್ಬಾಳ) ಹಾಗೂ ಅವರ ಸಿಬ್ಬಂದಿಗೆ ಕೃತಜ್ಞತೆಗಳು.

❖❖

*

ಸಂಪಾದಕರ ನುಡಿ

ಡಾ. ಪಂಡಿತ ರಾಠೋಡ

ಜಾಗತಿಕ ಮಟ್ಟದ ಸಾಹಿತ್ಯಕ್ಕೆ ಮೌಲಿಕವಾದ ಕೊಡುಗೆ ನೀಡಿದ ಸಾಹಿತ್ಯ ವಚನಸಾಹಿತ್ಯ. ಇದಕ್ಕೆ ಭದ್ರವಾದ ಬುನಾದಿ ಹಾಕಿದವರು ಬಸವಾದಿ ಶರಣರು. ಇವರ ಗಂಭೀರ ಚಿಂತನೆ, ಹೋರಾಟದ ಫಲವಾಗಿ ಮೂಡಿಬಂದ ಈ ಸಾಹಿತ್ಯ ಕೇವಲ ಮನರಂಜನೆಗಾಗಿ ಅಥವಾ ಉಪದೇಶಕ್ಕಾಗಿರುವ ಸಾಹಿತ್ಯವಲ್ಲ. ಅದು ಹಿಂದಿನ, ಇಂದಿನ ಹಾಗೂ ಮುಂದಿನ ತಲೆಮಾರಿಗೆ ಮಾರ್ಗದರ್ಶನ ಮಾಡುವ ಕೈದೀವಿಗೆ. ಬಸವಾದಿ ಶರಣರು ಇದನ್ನು ಒಂದು ಸಾಹಿತ್ಯವೆಂದಾಗಲೀ, ಶಾಸ್ತ್ರವೆಂದಾಗಲೀ ರಚನೆ ಮಾಡಲಿಲ್ಲ. ಅದು ಪ್ರತಿವ್ಯಕ್ತಿಯ ಜೀವನಾನುಭವದ ಅನುಭಾವವಾಣಿಯಾಗಿ ಸಹಜವಾಗಿ ಹರಿದುಬಂದಿದೆ.

೧೨ನೆಯ ಶತಮಾನದಲ್ಲಿ ವಚನ ಸಾಹಿತ್ಯದ ಜೊತೆಜೊತೆಯಲ್ಲಿ ಅದಕ್ಕೆ ಬರೆದ ಟೀಕಾ ಸಾಹಿತ್ಯವೂ ಹುಟ್ಟಿಕೊಂಡಿತ್ತು ಎಂಬುದಕ್ಕೆ 'ಹತ್ತು ಸಾವಿರ ಗೀತವಹಾಡಿ ಅರ್ಥವಿಟ್ಟಲ್ಲಿ, ಫಲವೇನು? ಮುಟ್ಟುವ ತೆರನನರಿಯದನಕ್ಕ' ಎಂಬಂತಹ ಮಾತುಗಳು ಸೂಚನೆ ನೀಡುತ್ತವೆ. ಅದಕ್ಕೆ ೧೫ನೇ ಶತಮಾನದ ನಿಶ್ಚಿತ ನಿದರ್ಶನವಾಗಿ ನಂತರ ಅನೇಕ ಪುರಾವೆಗಳು ದೊರೆಯುತ್ತವೆ.

ವಿಜಯನಗರದ ಸಂಗಮ ವಂಶದ ಪ್ರೌಢದೇವರಾಯನ ಕಾಲದಲ್ಲಿ ಮಂತ್ರಿ ಜಕ್ಕಣ್ಣ ಮತ್ತು ಮಹಾಲಿಂಗದೇವರಂಥ ಗುರುಗಳ ಆಸಕ್ತಿ ಮತ್ತು ಶ್ರಮದ ಫಲವಾಗಿ ವಚನ ಸಂಗ್ರಹದ ಜೊತೆಗೆ ಅವುಗಳನ್ನು ವಿಷಯಾನುಸಾರವಾಗಿ ಸ್ಥಲಕಟ್ಟಿಗೆ ಅನುಗುಣವಾಗಿ ಜೋಡಿಸುವ, ವಿಂಗಡಿಸಿಕೊಡುವ ಮತ್ತು ಅವುಗಳಿಗೆ ಟೀಕೆ ಬರೆಯುವಂತಹ ಕಾರ್ಯಗಳೂ ಭರದಿಂದ ಸಾಗಿದವು. ಹದಿನೈದನೆಯ ಶತಮಾನದಲ್ಲಿ ಬಂದ ಮಹಾಲಿಂಗದೇವನು (೧೪೨೫) ಪ್ರಭುದೇವರ ಷಟ್ಸ್ಥಲಜ್ಞಾನ ಚಾರಿತ್ರ್ಯದ ವಚನದ ಟೀಕೆ, ಕುಮಾರ ಬಂಕನಾಥನು(೧೪೩೦) ಪ್ರಭುದೇವರ ಷಟ್‌ಸ್ಥಲೋಪದೇಶ ಎಂಬ ವಚನಟೀಕಾಗ್ರಂಥಗಳನ್ನು ರಚಿಸಿದರೆ, ಕಲ್ಲುಮಠದ ಪ್ರಭುದೇವ ಲಿಂಗಲೀಲಾವಿಲಾಸ ಚಾರಿತ್ರ್ಯ ಸಂಯೋಜಿಸಿ ವಚನಗಳಿಗೆ ಟೀಕೆ ಬರೆದ. ಏಕೋತ್ತರಶತಸ್ಥಲ ಟೀಕೆ, ಷಟ್ಸ್ಥಲಸಾರಾಮೃತ ಟೀಕೆ ಹೀಗೆ ಮುಂದೆ ಅನೇಕ ರೀತಿಯಲ್ಲಿ ವಚನಟೀಕಾ ಸಾಹಿತ್ಯ ಬೆಳೆದು ಬಂದಿತು. ಅಂತೆಯೇ ಬಸವಣ್ಣನವರ ಷಟ್ಸ್ಥಲವಚನಗಳಿಗೆ ಐದು ಜನರು ಬರೆದ ಟೀಕೆಗಳು ದೊರೆಯುತ್ತವೆ.

ಡಾ.ಎಂ.ಎಂ. ಕಲಬುರ್ಗಿಯವರು ಈ ಐದು ಟೀಕೆಗಳನ್ನು ಒಂದೆಡೆ ಸೇರಿಸಿ ಎರಡು ಸಂಪುಟಗಳಲ್ಲಿ ಪರಿಷ್ಕರಿಸಿ ಪ್ರಕಟಿಸಿದ್ದಾರೆ. ಇವು ವಚನಸಾಹಿತ್ಯ ಸಂಪಾದನೆಗೆ ಅವರು ಕೊಟ್ಟ ಬಹು ಮಹತ್ವಪೂರ್ಣ ಕೊಡುಗೆಗಳೆನಿಸಿವೆ. ಮೊದಲ ಸಂಪುಟದಲ್ಲಿ ಒಟ್ಟು ೧ ರಿಂದ ೫೨೭ ವಚನಗಳಿಗೆ ಬರೆದ ಟೀಕೆಗಳಿದ್ದರೆ, ಎರಡನೆಯ ಸಂಪುಟದಲ್ಲಿ ೫೨೮ ರಿಂದ ೯೬೧ ವಚನಗಳಿಗೆ ಬರೆದ ಟೀಕೆಗಳಿವೆ. ಜೊತೆಗೆ ಇಲ್ಲಿ ಲಿಂಗಲೀಲಾವಿಲಾಸ ಚಾರಿತ್ರ್ಯ, ಏಕೋತ್ತರಶತಸ್ಥಲ, ವಿಶೇಷಾನುಭವ ಷಟ್‌ಸ್ಥಲ ಕೃತಿಗಳಲ್ಲಿ ದೊರೆಯುವ ಹೆಚ್ಚಿನ ೯೦ ವಚನ ಟೀಕೆಗಳು ಇಂಬು ಪಡೆದಿವೆ. ಇದೆಲ್ಲವನ್ನು ಕೂಡಿಸಿದರೆ ಒಟ್ಟು ೧೦೫೧ ವಚನಗಳಿಗೆ ಟೀಕೆ ದೊರೆತಂತಾಗುತ್ತದೆ.

ಈ ಪೂರ್ವದಲ್ಲಿ ಬಸವಣ್ಣನವರ ವಚನಗಳಿಗೆ ಬರೆದ ಐದು ಟೀಕೆಗಳಲ್ಲಿ ಒಂದು ಮತ್ತು ನಾಲ್ಕನೆಯ ಟೀಕೆಗಳು ರಚನೆಯಾಗಿರುವುದು ಯಾರಿಗೂ ಗೊತ್ತಿರಲಿಲ್ಲ. ಒಂದು, ಮೂರು, ಐದನೆಯ ಟೀಕೆಗಳಿದ್ದ ವಿಷಯ ಗೊತ್ತಿದ್ದರೂ ಸಮಗ್ರವಾಗಿ ಪ್ರಕಟವಾಗಿರಲಿಲ್ಲ. ಒಂದನೆಯ ಟೀಕೆಯ ಆರಂಭದ ೧೦೩ ವಚನಗಳನ್ನು ಮಾತ್ರ ೧೯೫೪ರಲ್ಲಿ ಶ್ರೀವಿರೂಪಾಕ್ಷಪ್ಪ ಚೆನ್ನಪ್ಪ ಯಾಳಗಿ ಅವರು ಪ್ರಕಟಿಸಿದರೆ, ಡಾ. ಎಸ್.ಎಂ. ಹುಣಶ್ಯಾಳ ಅವರು ೧೯೭೧ರಲ್ಲಿ ಕೇವಲ ಭಕ್ತಸ್ಥಲವನ್ನು ಮಾತ್ರ ಪ್ರಕಟಿಸಿದ್ದರು. ಇದನ್ನು ಗಮನಿಸಿದ ಡಾ. ಕಲಬುರ್ಗಿಯವರು ಐದೂ ಟೀಕೆಗಳನ್ನು ಶಾಸ್ತ್ರೀಯವಾಗಿ ಪರಿಷ್ಕರಿಸಿ ಎರಡು ಸಂಪುಟಗಳಲ್ಲಿ ಪ್ರಕಟಿಸಿದರು. ೧೯೭೯ರಲ್ಲಿ ಮೊದಲ ಸಂಪುಟ, ೧೯೮೧ರಲ್ಲಿ ಎರಡನೆಯ ಸಂಪುಟ ಶ್ರೀ ಮುರಗೋಡ ಮಹಾಂತ ಶಿವಯೋಗೀಶ್ವರ ಶತಮಾನೋತ್ಸವ ಸ್ಮಾರಕ ಶ್ರೀಬಸವೇಶ್ವರ ಪೀಠದ ಅಡಿಯಲ್ಲಿ ಹೊರಬಂದವು. ಇದರಿಂದ ಬಸವಣ್ಣನ ವಚನಗಳಿಗೆ ಸಂಬಂಧಿಸಿದ ಸಮಗ್ರ ಟೀಕಾಸಾಹಿತ್ಯ ಒಂದೆಡೆ ಸಿಗುವಂತಾಯಿತು.

ಈ ಟೀಕಾ ಗ್ರಂಥಗಳನ್ನು I (ಕರ್ತೃ–?) II (ಕರ್ತೃ–?) III(ಸೋಮಶೇಖರ ಶಿವಯೋಗಿ) IV(ಗುರುಬಸವರಾಜು) V(ಪರ್ವತಶಿವಯೋಗಿ) ಎಂದು ರೋಮನ್ ಅಂಕಿಗಳ ಸಂಕೇತದಿಂದ ಗುರುತಿಸಿದ್ದಾರೆ. ಒಂದೊಂದು ವಚನದ ಕೆಳಗೆ ಟೀಕೆಗೆ ಸಂವಾದಿಯಾಗಿ ಭಿನ್ನಪಾಠಗಳನ್ನು ನೀಡಿದ್ದಾರೆ. ವಚನದ ಪಾಠಾಂತರ ಸೂಚನೆಗೆ ಇಂಗ್ಲಿಷ್ ಅಂಕಿ, ಟೀಕೆಯ ಪಾಠಾಂತರ ಸೂಚನೆಗೆ ಕನ್ನಡ ಅಂಕಿ ಬಳಸಿಕೊಂಡಿದ್ದಾರೆ. ಒಂದು ವಚನ ಮತ್ತು ಅದರ ಟೀಕೆಗಳನ್ನು ಇನ್ನೊಂದು ವಚನ ಮತ್ತು ಅದರ ಟೀಕೆಗಳಿಂದ ಬೇರ್ಪಡಿಸಲು ಸರಳ ರೇಖೆಯನ್ನು, ಟೀಕೆಯಿಂದ ಟೀಕೆಯನ್ನು ಬೇರ್ಪಡಿಸಲು ತುಂಡು ಸರಳ ರೇಖೆಯನ್ನು, ಟೀಕೆಯಿಂದ ಪಾಠಾಂತರಗಳನ್ನು ಬೇರ್ಪಡಿಸಲು ಬಿಂದು ಸರಳ ರೇಖೆಯನ್ನು ಬಳಸಿಕೊಂಡಿದ್ದಾರೆ. ಪ್ರಾರಂಭದ ಪ್ರಸ್ತಾವನೆಯಲ್ಲಿ ಪ್ರಾಚೀನ ಟೀಕಾಸಾಹಿತ್ಯ, ಕನ್ನಡದಲ್ಲಿ ಟೀಕಾಸಾಹಿತ್ಯ, ವೀರಶೈವ ಟೀಕಾಸಾಹಿತ್ಯವನ್ನು ಕುರಿತು ವಿವೇಚಿಸಿ, ತರುವಾಯ ಪ್ರತಿಯೊಬ್ಬ ಟೀಕಾಕಾರನ ಹೆಸರು, ಕಾಲ, ದೇಶ, ಸ್ಥಳ ಮೊದಲಾದವನ್ನು ಗುರುತಿಸಲು ಪ್ರಯತ್ನಿಸಿದ್ದಾರೆ. ಜೊತೆಗೆ ಆಯಾ ಟೀಕೆಗಳ ವೈಶಿಷ್ಟ್ಯಗಳನ್ನು ಸಾಧನೆಯನ್ನು ಹಲವಾರು ಉದಾಹರಣೆಗಳ ಮೂಲಕ ತಿಳಿಸಲಾಗಿದೆ. ಕಡೆಯಲ್ಲಿ ವಚನಗಳ ಟೀಕೆಯ ಅಂಕಿ ಅಂಶಗಳ ತೌಲನಿಕ ವಿವರಣೆ ನೀಡಿದ್ದಾರೆ. ಕೊನೆಯಲ್ಲಿ ಈ ಗ್ರಂಥದ ಪರಿಷ್ಕರಣೆ ಕುರಿತು ಬಳಸಿದ ಹಸ್ತಪ್ರತಿಗಳ ವಿವರಗಳನ್ನು ಕೊಡಲಾಗಿದೆ. ಹಾಗೆಯೇ ಗಮನಾರ್ಹವಾದ ಪದಕೋಶವನ್ನು ಎರಡೂ ಸಂಪುಟಗಳಲ್ಲಿ ನೀಡಿದ್ದಾರೆ.

ಟೀಕಾಕೃತಿಗಳಿಗೆ ಬಳಸಿಕೊಂಡ ಹಸ್ತಪ್ರತಿಗಳ ವಿವರ

ಮೊದಲನೆಯ ಟೀಕೆ:

ಮೊದಲನೆಯ ಟೀಕಾಕೃತಿ ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿಭಾಂಡಾರದಲ್ಲಿರುವ ೪೮೧ನೆಯ ಕ್ರಮಾಂಕಿನ ಕೋರಿಕಾಗದ ಹಸ್ತಪ್ರತಿಯಿಂದ ಪರಿಷ್ಕರಣಗೊಂಡಿದೆ. ಇದರಲ್ಲಿ ೧ರಿಂದ ೪೧೪ ಪುಟಗಳಿವೆ. ಇದಕ್ಕೆ 'ಕ' ಎಂದು ಸಂಕೇತ ಕೊಡಲಾಗಿದೆ. ಇದರಲ್ಲಿ ೯೬೧ ವಚನಗಳಿಗೆ ಟೀಕೆ ಬರೆಯಲಾಗಿದೆ. (ಇದು ಕಲಬುರ್ಗಿಯ ಗುರುಬಸವ ಮಠಕ್ಕೆ ಸೇರಿದ್ದು) ಮತ್ತು ಇದೆ ಕನ್ನಡ ಅಧ್ಯಯನಪೀಠದ ಹಸ್ತಪ್ರತಿಭಾಂಡಾರದಲ್ಲಿರುವ ೨೭೪ ಕ್ರಮಾಂಕಿನ ಹಸ್ತಪ್ರತಿಯನ್ನು ಪಾಠಾಂತರ ಪ್ರತಿಯನ್ನಾಗಿ ಬಳಸಿಕೊಂಡಿದ್ದಾರೆ. ಇದರಲ್ಲಿ ೯೫೮ ವಚನಗಳಿಗೆ ಟೀಕೆ ಬರೆಯಲಾಗಿದೆ. ಇದಕ್ಕೆ 'ಗ' ಎಂದು ಸಂಕೇತಕೊಡಲಾಗಿದೆ.

ಪ್ರಸ್ತುತ ಈ ಟೀಕೆಯ ಕರ್ತೃ ಅಜ್ಞಾತವೆಂದು ಡಾ. ಕಲಬುರ್ಗಿಯವರು ಹೇಳಿದ್ದರು. ಆದರೆ ಅನಂತರ ಎಸ್. ಶಿವಣ್ಣನವರು ಇದರ ಟೀಕಾಕಾರ ಹುಮನಾಬಾದಿನ ನಿರಂಜನಸ್ವಾಮಿ ಎಂಬುದಾಗಿ ಗುರುತಿಸಿದರು.(ಡಾ. ಸಿ. ನಾಗಭೂಷಣ– ವೀರಶೈವ ಸಾಹಿತ್ಯದ ಕೆಲವು ಒಳನೋಟಗಳು –ಪುಟ–೧೮೦)

ಈ ಟೀಕೆಯಲ್ಲಿ ತುಂಗಭದ್ರೆ, ಹಂಪೆಯ ವಿರೂಪಾಕ್ಷ, ಕೊಟ್ಟೂರು ಮುಂತಾದ ಜಿಲ್ಲೆ, ತಾಲೂಕುಗಳಿಗೆ ಸಂಬಂಧಿಸಿದ ಪದಗಳ ಉಲ್ಲೇಖವನ್ನು ನೋಡಿದರೆ ಈ ಟೀಕಾಕಾರ ಮೂಲತಃ ಬಳ್ಳಾರಿ ಜಿಲ್ಲೆಯವನೆಂದು, ಈತ ಕೆಲ ಕಾಲದ ಬಳಿಕ ಹುಮನಾಬಾದಿನ ವಿರಕ್ತಮಠಕ್ಕೆ ಹೋಗಿರುವ ಸಾಧ್ಯತೆ ಇರುವುದನ್ನು ಸಿದ್ಧವೀರಸ್ವಾಮಿ ಕೃತ ಮುಕ್ತಿಕಂಠಾಭರಣ ಹೆಸರಿನ ವಚನ ಸಂಕಲನ ಗ್ರಂಥವನ್ನು ಆಧರಿಸಿ ಕಲಬುರ್ಗಿಯವರು ತಮ್ಮ (ಮಾರ್ಗ: ಸಂಪುಟ–೧–ಪುಟ–೩೭೧) ಕೃತಿಯಲ್ಲಿ ಹೇಳಿಕೊಂಡಿದ್ದಾರೆ. ಹೀಗಾಗಿ ಈ ಟೀಕೆಯ ಕರ್ತೃ ಅಜ್ಞಾತನಾಗಿರದೆ ಹುಮನಾಬಾದ ನಿರಂಜನ ಸ್ವಾಮಿಯೆಂದು ಹೇಳಬಹುದಾಗಿದೆ.

ಎರಡನೆಯ ಟೀಕೆ:

ಈ ಟೀಕೆಯನ್ನು ಸಂಪಾದಿಸಲು ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಭಾಂಡಾರದ ೬೧೫ ನೆಯ ಕ್ರಮಾಂಕಿನ ತಾಳೆಪ್ರತಿ ಮತ್ತು ಎಸ್.ಆರ್. ಗುಂಜಾಳ ಅವರಲ್ಲಿದ್ದ ಕೋರಿಕಾಗದ ಪ್ರತಿಯನ್ನು ಬಳಸಿಕೊಂಡಿದ್ದಾರೆ. ಕನ್ನಡ ಅಧ್ಯಯನಪೀಠದ ಪ್ರತಿಗೆ 'ಚ' ಎಂದು ಸಂಕೇತಕೊಡಲಾಗಿದೆ. ಇದರಲ್ಲಿ ೯೫೭ ವಚನಗಳನ್ನು ಬರೆದಿದ್ದರೂ ಟೀಕೆ ಇರುವುದು ೩೧೪ ವಚನಗಳಿಗೆ ಮಾತ್ರ. ಈ ಟೀಕೆಯ ಹೆಸರು ಮತ್ತು ಟೀಕಾ ಕರ್ತೃವಿನ ಹೆಸರು ಇನ್ನೂ ನಿಗೂಢವಾಗಿದೆ ಎಂದು ಹೇಳಿದ್ದಾರೆ. 'ಚ' ಪ್ರತಿಯ ಆರಂಭದಲ್ಲಿ ಕವಿ ಮತ್ತು ಟೀಕೆಯ ಹೆಸರು ನಮೂದಾಗಿಲ್ಲ. ಈ ಪ್ರತಿಯ ಅಂತ್ಯದಲ್ಲಿ ಮಾತ್ರ ಷಟ್‌ಸ್ಥಲ ಆಚಾರ್ಯನಾದ ಸಿದ್ಧೇಶ್ವರಸ್ವಾಮಿ ಅವರ ಬೋಧಾಪುತ್ರರಾದ ಗೂಳೂರ ಸಿದ್ಧಲಿಂಗಸ್ವಾಮಿಗಳು ಅವರ ಬೋಧಾಪುತ್ರರಾದ ಕಟ್ಟಿಗೆಹಳ್ಳಿ ಸ್ವಾಮಿಗಳು ಅವರ ಬೋಧಾಪುತ್ರರಾದ ರೇವಣಸಿದ್ಧಸ್ವಾಮಿಗಳು ಎಂದು ಹೇಳಿದ ಬಳಿಕ ಕೃತಿ ನಿಂತು ಬಿಡುತ್ತದೆ.

ಮೂರನೆಯ ಟೀಕೆ:

ಈ ಟೀಕೆಯ ಕರ್ತೃ ಸೋಮಶೇಖರ ಶಿವಯೋಗಿ. ಇದರಲ್ಲಿ ೩೪೮ ವಚನಗಳಿಗೆ ಟೀಕೆ ಬರೆಯಲಾಗಿದೆ. ಇದನ್ನು ಸಂಪಾದಿಸಲು ದಾವಣಗೆರೆಯ ಎಸ್. ಉಮಾಪತಿ ಅವರ ಬಳಿ ಇದ್ದ 'ಟ' ಮತ್ತು 'ಡ' ಸಂಕೇತದ ಎರಡು ತಾಳೆಪ್ರತಿಗಳನ್ನು ಬಳಸಿಕೊಂಡಿದ್ದಾರೆ. ಈ ಟೀಕಾಕಾರನೇ ತನ್ನ ಕೃತಿಯಲ್ಲಿ 'ಬಸವರಾಜದೇವರ ಷಟ್ಸ್ಥಲ ವಚನದ ಘಟ್ಟಿ ಘಟ್ಟಿ ನುಡಿಗಳ ಬರವುದಕ್ಕೆ ಶುಭಮಸ್ತು' ಎಂಬುದಾಗಿ ಹೇಳಿಕೊಂಡಿರುವುದರಿಂದ ಕೇವಲ ಘಟ್ಟಿ(ಬೆಡಗಿನ) ವಚನಗಳಿಗೆ ಮಾತ್ರ ಟೀಕೆಯನ್ನು ಬರೆದಿದ್ದಾನೆಂದು ತಿಳಿದುಬರುತ್ತದೆ. ಈತನ ಕಾಲದ ಬಗ್ಗೆ ಮತ್ತು ಊರಿನ ಬಗ್ಗೆ ಇರುವ ಭಿನ್ನಾಭಿಪ್ರಾಯಗಳನ್ನು ಕುರಿತು ಚರ್ಚಿಸಿದ್ದಾರೆ. ಈತನ ಟೀಕೆಯ ಮಾದರಿಗಳನ್ನು ಡಾ. ಕಲಬುರ್ಗಿಯವರು ಹೀಗೆ ಗುರುತಿಸಿದ್ದಾರೆ. ಶುದ್ಧವಾಚ್ಯಾರ್ಥದಲ್ಲಿರುವ ಪ್ರತಿಪದಾರ್ಥ, ವಾಚ್ಯಾರ್ಥದಲ್ಲಿರುವ ವಿವರಣ ರೂಪದ ಪ್ರತಿಪದದ ಅರ್ಥ, ತಾತ್ವಿಕ ಅರ್ಥ, ತಾತ್ಪರ್ಯಾರ್ಥ.

ನಾಲ್ಕನೆಯ ಟೀಕೆ:

ಈ ಟೀಕೆಯನ್ನು ಮಹಾಲಿಂಗಪುರದ ಮಹಾಲಿಂಗೇಶ್ವರ ಮಠಕ್ಕೆ ಸೇರಿದ ಸದ್ಯ ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಭಾಂಡಾರದಲ್ಲಿ ಇರುವ ೧೦೭ ನೆಯ ಕ್ರಮಾಂಕದ ಏಕೈಕ ತಾಳೆಪ್ರತಿಯನ್ನು ಬಳಸಿಕೊಂಡು ಸಂಪಾದಿಸಿದ್ದಾರೆ. ಇದಕ್ಕೆ 'ತ' ಪ್ರತಿಯೆಂದು ಸಂಕೇತ ಕೊಟ್ಟಿದ್ದಾರೆ. ಇತಿವೃತ್ತದ ಕುರಿತಂತೆ ಹೆಚ್ಚಿನ ಮಾಹಿತಿಗಳು ಇದುವರೆಗೆ ಲಭ್ಯವಾಗಿಲ್ಲವೆಂದು ದಾಖಲಿಸಿದ್ದಾರೆ. ಆದರೆ ಇದರ ಟೀಕಾಕಾರನ ಹಸ್ತಪ್ರತಿಯ ಕೊನೆಯಲ್ಲಿ ಬರುವ 'ಶ್ರೀ ರಾಕ್ಷಸನಾಮ ಸಂವತ್ಸರದ ಪುಷ್ಯಮಾಸದ ಬಹುಳ ಆದಿಚತುರ್ದಶಿ ದಿವ್ಯವಾರದಲಿ ಟೀಕು ಸಮಾಪ್ತ ಮಂಗಳಮಹಾಶ್ರೀಶ್ರೀ' ಎಂಬ ಉಲ್ಲೇಖವು ಕಾಲನಿರ್ದೇಶನಕ್ಕೆ ನೆರವಾಗುತ್ತದೆಂದು ಹೇಳಿದ್ದಾರೆ. ಈತನು ಸೋಮಶೇಖರ ಶಿವಯೋಗಿಗೆ ಸ್ವಲ್ಪ ಪ್ರಾಚೀನನಾಗಿರುವನು. ಅಂದರೆ ೧೭ನೆಯಶತಮಾನಕ್ಕೆ ಸೇರಿದವನಾಗುತ್ತಾನೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಇದು ಬಸವಣ್ಣನವರ ಷಟ್ಸ್ಥಲ ವಚನಗಳು ಕೃತಿಯ ಪಿಂಡಸ್ಥಲದಿಂದ ಐಕ್ಯ ಸ್ಥಲದವರೆಗಿನ ೩೭೪ ವಚನಗಳನ್ನು ಆಯ್ದು ಸೇರಿಸಿದ ಸಂಕಲನ ಕೃತಿಯಾಗಿದೆ. ಇದನ್ನು ಡಾ. ರಾಜೂರ ಅವರು ಪ್ರತ್ಯೇಕಿಸಿ ಪರಿಷ್ಕರಿಸಿ ಸ್ವತಂತ್ರ ಕೃತಿರೂಪದಲ್ಲಿ ೨೦೧೧ರಲ್ಲಿ ಗದುಗಿನ ತೋಂಟದಾರ್ಯ ಮಠದಿಂದ ಪ್ರಕಟಿಸಿದ್ದಾರೆ.

ಐದನೆಯ ಟೀಕೆ:

ಪರ್ವತ ಶಿವಯೋಗಿಯ ಈ ಟೀಕೆಯನ್ನು ಕಲಬುರ್ಗಿಯವರು ಮೈಸೂರ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಾಂಡಾರದಲ್ಲಿರುವ ೧೦೪೯ನೆಯ ಕ್ರಮಾಂಕದ ತಾಳೆಪ್ರತಿಯನ್ನು ಬಳಸಿಕೊಂಡು ಸಂಪಾದಿಸಿದ್ದಾರೆ. ಇದರಲ್ಲಿ ಒಟ್ಟು ೨೦೨ ವಚನಗಳಿಗೆ ಟೀಕೆ ಬರೆಯಲಾಗಿದೆ. ಇದರ ಪ್ರಸ್ತಾವನೆಯಲ್ಲಿ ಪರ್ವತಶಿವಯೋಗಿಯ ಪರಿಚಯವನ್ನು ಸ್ಥೂಲವಾಗಿ ಮಾಡಿಕೊಟ್ಟಿದ್ದಾರೆ. ಲಭ್ಯಹಸ್ತಪ್ರತಿಯ ೧೭ನೆಯ ಪತ್ರದಿಂದ ಮುಂದಿನ ಪತ್ರಗಳಲ್ಲಿ ಬಸವೇಶ್ವರನ ವಚನದ ನುಡಿಗಳು ಎಂಬ ಶೀರ್ಷಿಕೆ ಅಡಿಯಲ್ಲಿ ಪ್ರಾರಂಭವಾದ ಆಯ್ದ ಕೆಲವು ವಚನಗಳಿಗೆ ಬರೆದ ಬೇರೊಂದು ಬಗೆಯ ಅಸ್ಪಷ್ಟ ಟೀಕೆಯಿದೆ ಎಂದು ಹೇಳಿದ್ದಾರೆ. ಪ್ರಸ್ತುತ ಸಂಪಾದನೆಯಲ್ಲಿ ಈ ಅಸ್ಪಷ್ಟ ಟೀಕೆಯನ್ನು ಬಳಸಿಕೊಂಡಂತೆ ಕಾಣುವುದಿಲ್ಲ.

ಬಸವಣ್ಣನವರ ಟೀಕಿನ ವಚನಗಳ ವೈಶಿಷ್ಟ್ಯ

ಒಟ್ಟಾರೆಯಾಗಿ, ಬಸವಣ್ಣನವರ ವಚನಗಳಿಗೆ ರಚನೆಯಾದ ಪಂಚಟೀಕೆಗಳು ಲೌಕಿಕದಿಂದ ಆರಂಭವಾದರೂ ಪಾರಮಾರ್ಥದಲ್ಲಿ ಮುಕ್ತಾಯಗೊಳ್ಳುತ್ತವೆ. ವಚನಗಳಲ್ಲಿಯ ಸೃಜನಶೀಲವಾದ ಭಾವಸ್ಪರ್ಶವುಳ್ಳ ರಸಾನುಭವ ಉಂಟುಮಾಡುವ ಅಂಶಗಳು ಟೀಕು ರಚನೆಯಿಂದಾಗಿ ಮೂಲಸ್ವಾರಸ್ಯವನ್ನು ಕಳಚಿಕೊಂಡು ನೀರಸಗೊಂಡಿವೆ. ಮೂಲ ವಚನದ ಓದಿನಲ್ಲಿ ಸಿಗುವ ಅನುಭವ ಸಂತೋಷ ಟೀಕಿನಿಂದಾಗಿ ಮಾಯವಾಗಿ ಅತೃಪ್ತಿಯನ್ನುಂಟು ಮಾಡುತ್ತದೆ. ಅಂದರೆ ಜಂಗಮರೂಪಿ ವಚನಗಳನ್ನು ಸ್ಥಾವರಗೊಳಿಸಿದಂತಹ ಅನುಭವ ಕೆಲವೊಂದು ಟೀಕುಗಳಿಂದ ವೇದ್ಯವಾಗುತ್ತದೆ. ಒಟ್ಟಾರೆಯಾಗಿ ಬಸವಣ್ಣನವರ ಟೀಕಿನ ವಚನಗಳಿಂದ ಲಿಂಗಾಯತಧರ್ಮದ ತಾತ್ವಿಕ ಸಿದ್ಧಾಂತವನ್ನು ಅರಿಯಲು ಸಹಾಯಕವಾಗಿದೆ. ವಚನಕಾರರ ವೈಚಾರಿಕ, ಐತಿಹಾಸಿಕ, ಸಾಂಸ್ಕೃತಿಕ ಒಳನೋಟವನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ. ವೈವಿಧ್ಯತೆ ಇಲ್ಲದ ಟೀಕುಗಳಿಂದ ಓದುಗರಿಗೆ ಬೇಸರವೆನಿಸಿದರೂ ಶಬ್ದಾರ್ಥ, ವಾಕ್ಯಾರ್ಥ ಮಾದರಿಯ ಟೀಕುಗಳಿಂದ ಕನ್ನಡ ಭಾಷೆಯ ವೈಶಿಷ್ಟ್ಯ ಮತ್ತು ಶಬ್ದಭಂಡಾರದ ವಿಪುಲತೆಯನ್ನು ಅರಿಯಲು ನೆರವಾಗುತ್ತದೆ.

ಪರಿಷ್ಕರಣೆ

ಡಾ. ಕಲಬುರ್ಗಿಯವರು ಸಂಪಾದಿಸಿದ ಬಸವಣ್ಣನವರ ಟೀಕಿನ ವಚನಗಳು ಕೃತಿಯ ಎರಡು ಸಂಪುಟಗಳನ್ನು ಯಥಾವತ್ತಾಗಿ ಮರು ಮುದ್ರಣಗೊಳಿಸಲಾಗಿದೆ. ಒಂದು ಮತ್ತು ಎರಡನೆಯ ಟೀಕುಗಳ ಕರ್ತೃ ಅಜ್ಞಾತವೆಂದು ಗುರುತಿಸಿದ್ದರು. ಇತ್ತೀಚಿನ ಸಂಶೋಧನೆಯ ಹಿನ್ನೆಲೆಯಲ್ಲಿ ಅವುಗಳ ಟೀಕಾಕಾರರು ಯಾರೆಂಬುದನ್ನು ಎಸ್. ಶಿವಣ್ಣ ಮತ್ತು ವೀರಣ್ಣ ರಾಜೂರ ಅವರು ಶೋಧಿಸಿ ತೆಗೆದಿದ್ದಾರೆ. ಅದನ್ನು ಇಲ್ಲಿ ಎತ್ತಿ ತೋರಿಸಲಾಗಿದೆ. ಅಲ್ಲಲ್ಲಿ ತಪ್ಪಾಗಿರುವ ಅಕ್ಷರಗಳನ್ನು ತಿದ್ದುಪಡಿಮಾಡಲಾಗಿದೆ. ಕಲಬುರ್ಗಿಯವರು ತುಂಬ ಪರಿಶ್ರಮದಿಂದ ಸಿದ್ಧಪಡಿಸಿದ ಮಹತ್ವದ ಸಂಪಾದನ ಕೃತಿಯಾಗಿರುವ ಇದನ್ನು ಬಹುಮಟ್ಟಿಗೆ ಶುದ್ಧರೂಪದಲ್ಲಿ ಪ್ರಕಟಿಸಲು ಪ್ರಯತ್ನಿಸಲಾಗಿದೆ.

ಕೃತಜ್ಞತೆಗಳು

ಈ ಯೋಜನೆಯಲ್ಲಿ ನನಗೆ ಅವಕಾಶ ಕಲ್ಪಿಸಿ ಬಸವಣ್ಣನವರ ಟೀಕಿನ ವಚನಗಳು ಎರಡು ಸಂಪುಟಗಳನ್ನು ಸಂಪಾದಿಸಲು ಅನುವು ಮಾಡಿಕೊಟ್ಟ ಈ ಯೋಜನೆಯ ಪ್ರಧಾನ ಸಂಪಾದಕರಾದ ಮತ್ತು ವಚನ ಸಾಹಿತ್ಯ ಸಂಶೋಧಕರಾದ ಡಾ. ವೀರಣ್ಣ ರಾಜೂರ ಅವರಿಗೆ ಕೃತಜ್ಞತೆಗಳು. ಅಕ್ಷರ ಸಂಯೋಜನೆ ಮಾಡಿದ ಸಾಹಿತ್ಯ ದಂಪತಿಗಳಾದ ಡಾ. ಹನುಮಂತ ಮೇಲಿನಮನಿ ಮತ್ತು ಸರಸ್ವತಿದೇವಿ ಭಗವತಿ ಅವರಿಗೆ, ಕರಡು ತಿದ್ದುವಲ್ಲಿ ನೆರವಾದ ರಂಗಪ್ಪ ಧೊರಿ, ಚಿದಾನಂದ ಮಾಸನಕಟ್ಟಿ, ಭರಮಪ್ಪ ದ್ಯಾಮಣ್ಣನವರ, ಭೀಮೇಶ ನಾಯಕ, ನಾಜಿಯಾ ಬೇಗಂ, ಆರತಿ ತಮದಡ್ಡಿ, ಶಿವಕುಮಾರ ಅಂಗಡಿ, ಕುಮಾರ ಇವರೆಲ್ಲರಿಗೂ ಪ್ರೀತಿಯಿಂದ ನೆನೆಯುತ್ತೇನೆ.

❖❖

ಬಸವಣ್ಣನವರ ಟೀಕಿನ ವಚನಗಳು

[ಸಂಪುಟ : ಎರಡು]

ಸಂಪಾದಕರು

ಡಾ. ಎಂ. ಎಂ. ಕಲಬುರ್ಗಿ

ಶ್ರೀ ಮುರುಗೋಡ ಮಹಾಂತಶಿವಯೋಗೀಶ್ವರ ಶತಮಾನೋತ್ಸವ ಸ್ಮಾರಕ

ಶ್ರೀ ಬಸವೇಶ್ವರಪೀಠ

ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೯೮೧

*

ಪ್ರಸ್ತಾವನೆ

ಬಸವಣ್ಣನವರ ಚರಿತ್ರೆ–ಸಾಹಿತ್ಯಗಳನ್ನು ಅರ್ಥಮಾಡಿಕೊಳ್ಳಲು, ಕಳೆದ ಎಂಟು ನೂರು ವರ್ಷಗಳಿಂದ ನಿರಂತರ ಪ್ರಯತ್ನಗಳು ನಡೆದಿವೆ. ಆದರೆ ಹೀಗೆ ಪ್ರಯತ್ನ ಮಾಡಿದವರ ವ್ಯಯಕ್ತಿಕ ಪರಿಮಿತಿ ಮತ್ತು ಆಯಾ ಕಾಲದ ಸಮಾಲೋಚನಾ ದೃಷ್ಟಿ ಕಾರಣವಾಗಿ ಈ ಕಾರ್ಯಗಳು ಇಂದಿಗೂ ಅಸಮರ್ಪಕ ಸ್ಥಿತಿಯಲ್ಲಿ ಉಳಿದುಕೊಂಡಿವೆ ಎಂಬುದನ್ನು ಮೊದಲು ಒಪ್ಪಿಕೊಳ್ಳಬೇಕು.

ಬಸವಣ್ಣನವರ ಚರಿತ್ರೆಗೆ ಸಂಬಂಧಿಸಿದಂತೆ ಕನ್ನಡದಲ್ಲಿ ಹರಿಹರ ತೆಲುಗಿನಲ್ಲಿ ಪಾಲ್ಕುರಿಕೆ ಸೋಮನಾಥರಿಂದಾಗಿ ಎರಡು ವಿಭಿನ್ನ ಮಾರ್ಗಗಳು ರೂಪಗೊಂಡವು. ಸಿಂಗಿರಾಜನದು ಈ ಎರಡರ ಸಮನ್ವಯ ಮಾರ್ಗ. ಹೀಗೆ ಮೂರು ವಿಧದಲ್ಲಿ ಸಿಗುವ ಬಸವ ಚರಿತ್ರೆಗಳಲ್ಲಿ ಪಾಲ್ಕುರಿಕೆ ಸೋಮನಾಥನ ಮಾರ್ಗವೇ ಹೆಚ್ಚು ಪ್ರಚಾರದಲ್ಲಿದೆ.

ಬಸವಣ್ಣನವರ ಚರಿತ್ರೆಯನ್ನು ಕೆಲವರು ಭಾಗಶಃ ಕೆಲವರು ಇಡಿಯಾಗಿ ಚಿತ್ರಿಸಿದ್ದು, ಇವರು ಚರಿತ್ರೆಯೊಂದಿಗೆ ಪವಾಡ–ಅತ್ಯುಕ್ತಿಗಳನ್ನು ಬೆರೆಸಿದರು: ಕೆಲವರಂತೂ ಮತದ್ವೇಷದಿಂದಾಗಿ ವಿಕಾರಗೊಳಿಸಿದರು. ಹೀಗೆ ಅವರ 'ವ್ಯಕ್ತಿ ಚರಿತ್ರೆ'ಯನ್ನು ಬರೆಯುವಲ್ಲಿ, ಅದೇ ರೀತಿ ಅವರ 'ವ್ಯಕ್ತಿತ್ವ ಚಿತ್ರ'ವನ್ನು ಬಿಡಿಸುವಲ್ಲಿ ಎಲ್ಲಾ ಕೈಗಳು ಸೋತು ಹೋಗಿವೆ. ಕಾರಣ ಬಸವಣ್ಣನವರನ್ನು ಸರ್ವಸಮಗ್ರವಾಗಿ, ಸರ್ವಸಮರ್ಪಕವಾಗಿ ಪ್ರಕಟಿಸುವ ಒಂದು ದಾರ್ಶನಿಕ ಮಹಾಕಾವ್ಯವೊಂದು ಇನ್ನೂ ಹುಟ್ಟಿಬರಬೇಕಾಗಿದೆ.

ಶಿವಶರಣರ ಸಾಹಿತ್ಯ ರಾಶಿಯಲ್ಲಿ ಬಸವಣ್ಣವರ ಸಾಹಿತ್ಯ ತುಂಬಾ ಮಹತ್ವವುಳ್ಳದ್ದು. ಅದನ್ನು ಶಿವ ಕವಿಗಳು, ಶಿವಶರಣರು ಅಭ್ಯಸಿಸಿದ ಬಗೆ ಮೂರು ತೆರನಾಗಿದೆ.

೧. ವಚನಗಳಲ್ಲಿ ಮಿಂಚುವ ಸೂಚನೆಗಳನ್ನಾಧರಿಸಿ ಬಸವಣ್ಣನವರ ಜೀವನ ಘಟನೆಗಳನ್ನು ಹೆಣೆಯುವುದು. ಉದಾ : ಹರಿಹರನ ಬಸವರಾಜ ದೇವರ ರಗಳೆ, ಭೀಮ ಕವಿಯ ಬಸವ ಪುರಾಣ, ಸಿಂಗಿರಾಜ ಪುರಾಣ ಇತ್ಯಾದಿ.

೨. ಬಸವಣ್ಣನವರ ವಚನಗಳನ್ನು ಇಲ್ಲವೇ ಅವುಗಳೊಂದಿಗೆ ಮಿಕ್ಕವರ ವಚನಗಳನ್ನು ಒಂದು ಕ್ರಮದಲ್ಲಿ ಜೋಡಿಸಿ 'ಸಂಪಾದನಕಾರ್ಯ'ವನ್ನು ನಿರ್ವಹಿಸುವುದು. ಉದಾ : ಬಸವಣ್ಣನವರ ಷಟ್ಸ್ಥಲದ ವಚನಗಳು, ಶೂನ್ಯಸಂಪಾದನೆ, ಏಕೋತ್ತರಶತಸ್ಥಲ ಇತ್ಯಾದಿ.

೩. ಮೇಲೆ ಹೇಳಿದ ಸ್ವತಂತ್ರ ಸಂಕಲನ ಇಲ್ಲವೇ ಮಿಶ್ರ ಸಂಕಲನಗಳಿಗೆ ಟೀಕೆ, ಟಿಪ್ಪಣಿ, ವ್ಯಾಖ್ಯಾನಗಳನ್ನು ಬರೆಯುವುದು. ಉದಾ : ಬಸವಣ್ಣನವರ ವಚನ ಟೀಕೆ. ಲಿಂಗಲೀಲಾವಿಲಾಸಚಾರಿತ್ರ, ವಿಶೇಷಾನುಭವ ಷಟ್ಸ್ಥಲ ಇತ್ಯಾದಿ.

"ಬಸವಣ್ಣನವರ ಟೀಕಿನ ವಚನಗಳು" ಇವುಗಳಲ್ಲಿ ಮೂರನೆಯ ವಿಧಾನಕ್ಕೆ ಸಂಬಂಧ ಪಟ್ಟಿದ್ದು, ಈವರೆಗೆ ಐದು ಜನರು ಈ ಕ್ಷೇತ್ರದದಲ್ಲಿ ದುಡಿದುದು ಬೆಳಕಿಗೆ ಬಂದಿದೆ.

• ಟೀಕಾ ಸಾಹಿತ್ಯ •

ಸೃಜನ ಸಾಹಿತ್ಯವನ್ನು ಹಿಂಬಾಲಿಸಿ ಹುಟ್ಟುತ್ತದೆ, ವಿಮರ್ಶನಾ ಸಾಹಿತ್ಯ. ಅಂದರೆ ಅದು ಒಂದು ಕೃತಿಯ ಅರ್ಥ- ಭಾವ ಇತ್ಯಾದಿಗಳ ಪದರನ್ನು ಬಿಚ್ಚಿ ಬಿಚ್ಚಿ ತೋರಿಸುತ್ತದೆ. ಇಂತಹ ವಿಮರ್ಶನ ವರ್ಗಕ್ಕೆ ಸೇರುತ್ತದೆ, ಟೀಕಾ ಸಾಹಿತ್ಯ. ಕೃತಿಹೃದಯವನ್ನು ತೆರೆದು ತೋರಿಸುವ ಈ ಸಾಹಿತ್ಯದಲ್ಲಿ ಅನೇಕ ವಿಧಗಳಿವೆ. ಅವುಗಳನ್ನು ಟೀಕೆ, ಟಿಪ್ಪಣಿ, ವ್ಯಾಖ್ಯಾನ, ಭಾಷ್ಯ, ವಿವರಣೆ ಎಂದು ಮುಂತಾಗಿ ಭಾರತೀಯರು ಹೆಸರಿಟ್ಟು ಕರೆದಿದ್ದು, ಇವುಗಳಲ್ಲಿಯೇ ಮತ್ತೇ ಒಳ ವಿಧಾನಗಳಿರುವುದನ್ನು ನೆನೆದರೆ ಗ್ರಂಥ ದುರ್ಗವನ್ನು ಪ್ರವೇಶಿಸುವವರಿಗೆ ಇವು ಮಹಾದ್ವಾರ- ಉಪದ್ವಾರಗಳಂತೆ ನೆರವಾಗುವವೆಂದು ಸ್ಪಷ್ಟವಾಗುತ್ತದೆ. ಇವುಗಳ ಸ್ವರೂಪ, ಉದ್ದೇಶ ಇತ್ಯಾದಿಗಳ ತಿಳುವಳಿಕೆ ಒಂದು ಸ್ವತಂತ್ರ ಅಭ್ಯಾಸವೇ ಸರಿ.

ಭಾರತೀಯ ಸಾಹಿತ್ಯದಲ್ಲಿ ಸಂಸ್ಕೃತ ಪ್ರಾಕೃತ ಕೃತಿಗಳಿಗೆ ಬರೆದ ಟೀಕಾಸಾಹಿತ್ಯ ವಿಪುಲವೂ ಶ್ರೀಮಂತವೂ ಆಗಿದೆ. ಪತಂಜಲಿಯ ಮಹಾಭಾಷ್ಯ, ಸಾಯಣಾಚಾರ್ಯರ ವೇದ ಭಾಷ್ಯ, ಸಮಂತ ಭದ್ರನ ಗಂಧಹಸ್ತಿ ಮಹಾಭಾಷ್ಯ (ಅನುಪಲಬ್ಧ) ಮಲ್ಲಿನಾಥನ ಕಾಳಿದಾಸಕೃತಿಪಂಚಕಟೀಕಾ ಮೊದಲಾದವು ಟೀಕಾಸಾಹಿತ್ಯದ ಸುಪ್ರಸಿದ್ಧ ಉದಾಹರಣೆಗಳೆನಿಸಿವೆ.

• ಕನ್ನಡದಲ್ಲಿ ಟೀಕಾ ಸಾಹಿತ್ಯ •

ಸಮಗ್ರ ಕನ್ನಡ ಸಾಹಿತ್ಯದಲ್ಲಿ, ಸಂಕಲನ ಸಾಹಿತ್ಯದ ಜೊತೆಗೆ ಟೀಕಾ ಸಾಹಿತ್ಯವು ಸಮೃದ್ಧವಾಗಿ ಬೆಳೆದು ಬಂದಿದೆ. ಯಾವುದೇ ಭಾಷೆಯ ಸಾಹಿತ್ಯ, ಮೊದಲು ಅನುವಾದ-ಟೀಕೆಗಳ ಮೂಲಕ ಇನ್ನೊಂದು ಭಾಷೆಯಲ್ಲಿ ಪ್ರವೇಶ ಪಡೆದು, ಆ ಮೇಲೆ ಆ ಭಾಷೆಯಲ್ಲಿ ಸ್ವತಂತ್ರ ಸಾಹಿತ್ಯ ಸೃಷ್ಟಿಗೆ ನೆಲೆಯನ್ನು ಮಾಡಿಕೊಳ್ಳುತ್ತದೆ. ಈ ಮೇರೆಗೆ ಕನ್ನಡದಲ್ಲಿ ಸ್ವತಂತ್ರ ಸಾಹಿತ್ಯ ನಿರ್ಮಾಣವಾಗುವುದಕ್ಕೆ ಮೊದಲು, ಪ್ರಾಕೃತ ಸಂಸ್ಕೃತ ಭಾಷೆಗಳಲ್ಲಿರುವ ಜೈನ ಸಾಹಿತ್ಯಕ್ಕೆ ಕನ್ನಡ ಟೀಕೆ ಬರೆಯುವ ಕಾರ್ಯವೇ ನಡೆದಿರಬೇಕು. 'ಉಭಯ ಸಿದ್ಧಾಂತ'ಗಳಿಗೆ ಶ್ಯಾಮಕುಂದಾಚಾರ್ಯ- ತೆಂಬಳೂರಾಚಾರ್ಯರಿಂದ ವ್ಯಾಖ್ಯಾನ, ಉಮಾಸ್ವಾತಿಯ 'ತತ್ವಾರ್ಥಸೂತ್ರ'ಕ್ಕೆ ಅನಾಮದೇಯನಿಂದ 'ಚೂಡಾಮಣಿ' ಹೆಸರಿನ ವ್ಯಾಖ್ಯಾನ, ಆರಾಧನಾ ಸಾಹಿತ್ಯಕ್ಕೆ 'ಆರಾಧನಾ ಕರ್ಣಾಟ ಟೀಕಾ' ಬರೆದುವೆಲ್ಲ ಸೃಜನ ಸಾಹಿತ್ಯಕ್ಕೆ ಪೂರ್ವಭಾವಿಯಾಗಿ ನಡೆದ ಪ್ರಯತ್ನಗಳಾಗಿರುವುದನ್ನು ಇಲ್ಲಿ ನೆನೆಯಬೇಕು. ಹೀಗೆ ಸೆಲೆಯೊಡೆದ ಜೈನ ಟೀಕಾ ಸಾಹಿತ್ಯ ಅನ್ಯ ಭಾಷಾ ಕೃತಿಗಳಿಗೆ, ಕನ್ನಡ

ಭಾಷಾ ಕೃತಿಗಳಿಗೆ ಬರೆದ ಟೀಕೆಗಳ ರೂಪದಲ್ಲಿ ಶತಮಾನದಿಂದ ಶತಮಾನಕ್ಕೆ ಕವಲು-ಕಾಲುವೆಯಾಗಿ ಹಬ್ಬಿನಿಂತಿದೆ.

ಬ್ರಾಹ್ಮಣರು ಈ ನಾಡಿನ ಪ್ರಮುಖ ಜನಾಂಗವಾದರೂ ಕನ್ನಡದ ವಿಷಯವಾಗಿ ಅವರಿಗೆ ೧೫ನೆಯ ಶತಮಾನದವರೆಗೆ ಒಂದು ಬಗೆಯ ಉಪೇಕ್ಷ ಮನೋಭಾವವಿದ್ದಕಾರಣ, ಅನ್ಯ ಭಾಷಾಕೃತಿಗಳಿಗಾಗಲೀ ಕನ್ನಡ ಭಾಷಾಕೃತಿಗಳಿಗಾಗಲೀ ಅವರು ಈ ಅವಧಿಯಲ್ಲಿ ಕನ್ನಡ ಟೀಕೆಯನ್ನು ರಚಿಸುವ ಸಾಧ್ಯತೆ ಕಡಿಮೆ. ೧೫ನೆಯ ಶತಮಾನದ ತರುವಾಯ ಅಲ್ಲೊಂದು ಇಲ್ಲೊಂದು ಕನ್ನಡ ಟೀಕಾ ಕೃತಿಗಳು ಇವರಿಂದ ಹುಟ್ಟಿಕೊಂಡವು; ಅದು ಸಾಮಾನ್ಯವಾಗಿ ಸಂಸ್ಕೃತ ಕೃತಿಗಳಿಗೆ. ಆದರೆ ಜೈನರಂತೆ, ಕನ್ನಡ ಭಾಷೆಯ ಅಭಿಮಾನಿಗಳಾದ ವೀರಶೈವರಿಂದ ಮಾತ್ರ ಟೀಕಾ ಸಾಹಿತ್ಯ ಮೊದಲಿನಿಂದಲೂ ಅಧಿಕ ಪ್ರಮಾಣದಲ್ಲಿ ಸೃಷ್ಟಿಯಾಗುತ್ತಾ ಬಂದಿದೆ.

• ವೀರಶೈವ ಟೀಕಾ ಸಾಹಿತ್ಯ •

ಕನ್ನಡನಾಡು ವೀರಶೈವದ ಮಾತೃಭೂಮಿ. ಈ ತಾಯಿ ನೆಲದ ಗರ್ಭಸತ್ವವನ್ನುಂಡು, ವಾತಾವರಣವನ್ನು ಮೈಗೂಡಿಸಿಕೊಂಡು ಬೆಳೆದ ವೀರಶೈವ ಜನಾಂಗಕ್ಕೆ ಕನ್ನಡತ್ವ ಉಸಿರೆನಿಸಿದೆ. ಇದನ್ನು ಗಮನಿಸಿದ ವಿದ್ವಾಂಸರೊಬ್ಬರು 'ವೀರಶೈವ ಧರ್ಮವೆಂದರೆ ಕನ್ನಡ ಧರ್ಮ; ವೀರಶೈವ ಸಾಹಿತ್ಯವೆಂದರೆ ಕನ್ನಡ ಸಾಹಿತ್ಯ' ಎಂದು ಹೇಳಿದ ಮಾತು ಬಹುಮಟ್ಟಿಗೆ ಸತ್ಯವೇ ಸರಿ.

ಜೈನ, ವೀರಶೈವ, ಬ್ರಾಹ್ಮಣ-ಈ ಮೂರು ಕರ್ನಾಟಕವನ್ನು ಕಟ್ಟಿದ ಪ್ರಮುಖ ಜನಾಂಗಗಳು. ಇವುಗಳಲ್ಲಿ ಜೈನ, ಬ್ರಾಹ್ಮಣ ಮತಗಳು ತಮ್ಮ ಲೌಕಿಕ ವ್ಯವಹಾರಕ್ಕೆ ಕನ್ನಡವನ್ನು, ಧಾರ್ಮಿಕ ಆಲೋಚನೆಗೆ ಕ್ರಮವಾಗಿ ಪ್ರಾಕೃತ ಸಂಸ್ಕೃತವನ್ನು ಬಳಸಿಕೊಂಡರೆ, ವೀರಶೈವವು ತನ್ನ ಲೌಕಿಕ ಧಾರ್ಮಿಕಗಳೆಂಬ ಉಭಯ ವ್ಯಾಪಾರಗಳಿಗೆ ಕನ್ನಡವನ್ನೇ ಪ್ರಮಾಣ ಭಾಷೆಯನ್ನಾಗಿ ಬಳಸಿತು. ಹೀಗಾಗಿ ಕರ್ನಾಟಕದ ಬ್ರಾಹ್ಮಣರ ಮಾತೃಭಾಷೆ ಕನ್ನಡ, ಧರ್ಮಭಾಷೆ ಸಂಸ್ಕೃತ; ಜೈನರ ಮಾತೃ ಭಾಷೆ ಕನ್ನಡ, ಧರ್ಮಭಾಷೆ ಪ್ರಾಕೃತ. ಆದರೆ ವೀರಶೈವರ ಧರ್ಮಭಾಷೆಯು ಕನ್ನಡ, ಮಾತೃ ಭಾಷೆಯು ಕನ್ನಡ. ಈ ಕನ್ನಡವನ್ನು ಕುರಿತು 'ನೋಡಿರೆ ಕನ್ನಡವ, ನುಡಿಸಿರಿ ಕನ್ನಡವ, ತಲೆಯೊಲೆಯುತ ಬಂದು ಕುಣಿಯುವ ಕನ್ನಡವ' ಎಂದು ೧೭ನೆಯ ಶತಮಾನದ ಶರಣ ನಿಜಗುಣ, 'ಬರಿಯ ಕನ್ನಡ ಭಾಷೆಯೆಂದೆನಲಾಗದಿಳೆಗಿದು ಲೇಸೆನಿಪ ವೇದ ಪ್ರಮಾಣವೆನಿಪುದು' ಎಂದು ೧೪ನೆಯ ಶತಮಾನದ ಭೀಮಕವಿ ನುಡಿದ ಮಾತುಗಳು ವೀರಶೈವರ ಕನ್ನಡ ಪ್ರೇಮಕ್ಕೆ ಕನ್ನಡಿಯೆನಿಸಿವೆ. ೧೨ನೆಯ ಶತಮಾನದ ಸುಮಾರಿಗೆ ಇದಕ್ಕೆ ವ್ಯತಿರಿಕ್ತವಾಗಿ ಬ್ರಾಹ್ಮಣರು ಮೃತಭಾಷೆಯಾದ ಸಂಸ್ಕೃತವನ್ನು ಬಳಸಿ ಮಡಿವಂತಿಕೆಯನ್ನು, ಜೈನರು ಗತಭಾಷೆಯಾದ ಹಳಗನ್ನಡವನ್ನು ಬಳಸಿ ಪಾಂಡಿತ್ಯವನ್ನು ಮೆರೆಯುವಲ್ಲಿ, ಜನತೆ ಸಾಹಿತ್ಯದಿಂದ ವಂಚಿತವಾಗಿದ್ದಿತು. ಈ ಪ್ರಸಂಗದಲ್ಲಿ ನಡುಗನ್ನಡವನ್ನು ಬಳಸಿ ಶ್ರೀ ಸಾಮಾನ್ಯ ಮತ್ತು ಸಾಹಿತ್ಯಗಳ ಮಧ್ಯ ಸೇತುವೆಯನ್ನು ನಿರ್ಮಿಸಿದ ಕೀರ್ತಿ ವಚನಕಾರರಿಗೆ ಸಲ್ಲುತ್ತದೆ.

ಭಾಷೆಯ ಬಗೆಗೆ ಇದ್ದ ಈ ಅಪಾರ ಗೌರವ, ವೀರಶೈವರಿಗೆ ವಿಪುಲವಾದ ಸೃಜನ ಸಾಹಿತ್ಯವನ್ನು, ಸಾಹಿತ್ಯ ಪ್ರಸಾರದ ವಿಧಾನವಾದ ಟೀಕಾ ಸಾಹಿತ್ಯವನ್ನು ನಿರ್ಮಿಸಲು ಪ್ರಚೋದಿಸಿತು. ಹೀಗೆ ಬೆಳೆದು ಬಂದ ವೀರಶೈವ ಟೀಕಾ ಸಾಹಿತ್ಯವನ್ನು ಅನ್ಯಭಾಷಾ ಸಾಹಿತ್ಯಕ್ಕೆ ಬರೆದ ಕನ್ನಡ ಟೀಕೆ, ಕನ್ನಡ ಭಾಷಾ ಸಾಹಿತ್ಯಕ್ಕೆ ಬರೆದ ಕನ್ನಡ ಟೀಕೆ ಎಂದು ವರ್ಗೀಕರಿಸಬಹುದು.

ಅನ್ಯ ಭಾಷಾ ಸಾಹಿತ್ಯಕ್ಕೆ ಬರೆದ ಭಾಷಾ ಟೀಕೆ :

ಅನ್ಯ ಭಾಷಾ ಸಾಹಿತ್ಯಗಳಲ್ಲಿ ವೀರಶೈವರಿಂದ ಟೀಕೆ ಬರೆಯಿಸಿಕೊಂಡಿದ್ದು ಸಂಸ್ಕೃತ ಸಾಹಿತ್ಯ. ಸಾಮಾನ್ಯವಾಗಿ ವೀರಶೈವ ವಿಚಾರಗಳನ್ನೊಳಗೊಂಡ ಸಂಸ್ಕೃತ ಆಗಮಾದಿಗಳಿಗೆ, ಕವಿ ಕೃತಿಗಳಿಗೆ ಉಭಯ ಭಾಷಾ ಪ್ರವೀಣರಾದ ವೀರಶೈವರು ಟೀಕೆಯನ್ನು ಬರೆದಿರುವರು.

ಬಸವಣ್ಣನವರಿಗೆ ಸಮಕಾಲೀನನಾದ ಶಿವಲೆಂಕ ಮಂಚಣ್ಣನ ತಂದೆ 'ಕಾಮಿಖಾದ್ಯಖಿಳ ಶಿವಕಥಿತ ತಂತ್ರಾವಳಿಗೆ ಪ್ರೇಮದಿಂ ವೃತ್ತಿ ದೀಪಿಕೆಗಳ ಬಿತ್ತರಿಸಿದ'ನೆಂಬ ಮಾತು, ಸಂಸ್ಕೃತ ಕೃತಿಗಳಿಗೆ ಬರೆದ ಕನ್ನಡ ಟೀಕೆಯನ್ನೇ ಸೂಚಿಸಿರುತ್ತಿರಬಹುದು. ಆ ಮೇಲೆ ವಾತುಲತಂತ್ರ ಟೀಕೆ. ವೀರಮಾಹೇಶ್ವರಾಚಾರಸಾರೋದ್ಧಾರ ಟೀಕೆ; ಸಿದ್ಧಾಂತಶಿಖಾಮಣಿ ಟೀಕೆ, ಶಿವಯೋಗಪ್ರದೀಪಿಕೆ ಟೀಕೆ, ಶ್ರೀ ರುದ್ರಭಾಷಾ ಟೀಕು, ಶಿವಾನುಭವಸೂತ್ರ ಟೀಕು, ಸಾರಸ್ವತವ್ಯಾಕರಣ ಟೀಕು, ಪುರಷಸೂಕ್ತ ಟೀಕು, ನಮಕಚಮಕ ಟೀಕು, ಕೈವಲ್ಯಸಾರ ಟೀಕು. ಯಜುರ್ವೇದ ಭಾಷ್ಯ ಟೀಕು, ವೀರಮಾಹೇಶ್ವರಾ ಚಾರಸಂಗ್ರಹವ್ಯಾಖ್ಯಾನ ವಿಶೇಷಾರ್ಥಪ್ರಕಾಶಿಕೆ ಟೀಕು, ಮಲಯರಾಜಸ್ತೋತ್ರ ಟೀಕು, ಮಲ್ಹಣನಸ್ತೋತ್ರ ಟೀಕು, ಮಹಿಮ್ನಸ್ತೋತ್ರ ಟೀಕು, ಇತ್ಯಾದಿ ಟೀಕಾ ಗ್ರಂಥಗಳು ಹುಟ್ಟಿಕೊಂಡಿವೆ. ಈ ಪ್ರತಿಯೊಂದರಲ್ಲಿ ಟೀಕಾಕರ್ತೃವಿನ ಉಭಯ ಭಾಷಾ ಪಾಂಡಿತ್ಯ, ವಿಷಯ ಪ್ರಭುತ್ವ, ನಿರೂಪಣ ಸಾಮರ್ಥ್ಯ, ಪರಿಕರ ಸಾಹಿತ್ಯದ ಪರಿಜ್ಞಾನಗಳು ಎದ್ದು ತೋರುತ್ತವೆ. ಈ ಟೀಕಾ ಸಾಹಿತ್ಯ. ವೀರಶೈವ ದ್ವಿತೀಯ ಘಟ್ಟವಾದ ನೂರೊಂದು ವಿರಕ್ತರ ಮತ್ತು ಏಳುನೂರೊಂದು ವಿರಕ್ತರ ಅವಧಿಯಲ್ಲಿ ವಿಪುಲವಾಗಿ ಬೆಳೆಯಿತು.

ಕನ್ನಡ ಭಾಷಾಸಾಹಿತ್ಯಕ್ಕೆ ಬರೆದ ಕನ್ನಡ ಟೀಕೆ :

ಸಂಸ್ಕೃತಸಾಹಿತ್ಯಕ್ಕೆ ಕನ್ನಡವ್ಯಾಖ್ಯಾನ ಜೋಡಿಸಲು ಭಾಷಾಭೇದ ಕಾರಣವಾದರೆ, ಕನ್ನಡವ್ಯಾಖ್ಯಾನ ಜೋಡಿಸಲು ಕನ್ನಡ ಭಾಷೆಯ ಅವಸ್ಥಾಭೇದ, ಅರ್ಥಜಟಿಲತೆಗಳು ಕಾರಣವೆನಿಸಿವೆ.

ವೀರಶೈವರು ಸಾಹಿತ್ಯಕೃಷಿಗೆ ಕೈಹಾಕಿದ ಪ್ರಥಮದಲ್ಲಿ ಅಂದರೆ ೧೨ನೆಯ ಶತಮಾನದಲ್ಲಿಯೇ ಸೃಜನಸಾಹಿತ್ಯವನ್ನು ಹಿಂಬಾಲಿಸಿ ಟೀಕಾಸಾಹಿತ್ಯವೂ ಹುಟ್ಟಿರುವ ಸಾಧ್ಯತೆಯಿದೆ. ಶರಣರ ವಚನಗಳನ್ನು, ಅದರಲ್ಲಿಯೂ ಬೆಡಗಿನ ವಚನಗಳನ್ನು ಸಾಮಾನ್ಯರಿಗೆ ಅರ್ಥೈಸಿಕೊಡುವ ಪ್ರಯತ್ನಗಳು ಅಂದೇ ನಡೆದಿರುವುದಕ್ಕೆ 'ಹತ್ತುಸಾವಿರ ಗೀತವ ಹಾಡಿ ಅರ್ಥವಿಟ್ಟಲ್ಲಿ ಫಲವೇನು? ಮುಟ್ಟುವ ತೆರನನರಿಯದನ್ನಕ್ಕ' ಮೊದಲಾದ ವಚನಗಳು ಸೂಚನೆ ನೀಡುತ್ತವೆ. ಹೀಗೆ ವಚನಗಳಿಗೆ ಟೀಕೆ ಬರೆಯುವ ಸಂಪ್ರದಾಯ ಮುಂದುವರಿದಂತೆ ತರುವಾಯದಲ್ಲಿ ವೀರಶೈವ ಕಾವ್ಯಶಾಸ್ತ್ರಗಳಿಗೂ ಟೀಕೆ ಬರೆಯುವುದು

ಬೆಳೆದುಬಂದಿತು. ಹೀಗಾಗಿ ವೀರಶೈವ ಟೀಕಾಸಾಹಿತ್ಯವನ್ನು ವಚನಟೀಕೆ, ಕಾವ್ಯಶಾಸ್ತ್ರಟೀಕೆಯೆಂದು ವರ್ಗೀಕರಿಸಬಹುದು. ಕೆಲವರಂತೂ ಜೀವನದುದ್ದಕ್ಕೂ ಕೇವಲ ಟೀಕಾಸಾಹಿತ್ಯ ನಿರ್ಮಾಣಕಾರ್ಯದಲ್ಲಿ ತೊಡಗಿದ್ದ ಕಾರಣ 'ಟೀಕಿನ ಗುರುಪಾದದೇವ' ಎಂಬಂತಹ ಅನ್ವರ್ಥಕನಾಮಗಳಿಂದ ಪ್ರಸಿದ್ಧಿ ಪಡೆದಿದ್ದಾರೆ. ಈ ಪರಂಪರೆಯಲ್ಲಿ ಪ್ರಭುದೇವರ ಟೀಕಿನ ವಚನ, ಬೆಡಗಿನ ವಚನಟೀಕೆ, ಅಕ್ಕಮಹಾದೇವಿಯ ಸೃಷ್ಟಿಯ ವಚನಟೀಕು, ಚೆನ್ನಬಸವೇಶ್ವರನ ಪದಮಂತ್ರಗೋಪ್ಯಟೀಕೆ, ಪ್ರಭುದೇವರ ಸೃಷ್ಟಿಯ ವಚನಟೀಕೆ, ಚೆನ್ನಬಸವೇಶ್ವರನ ಕರಣಹಸಿಗೆಟೀಕೆ, ಪ್ರಭುದೇವರ ಮಂತ್ರಗೋಪ್ಯ ಟೀಕು, ಚೆನ್ನಬಸವೇಶ್ವರನ ಮಿಶ್ರಾರ್ಪಣಟೀಕು, ಬಸವಣ್ಣನವರ ವಚನಟೀಕೆ, ಲಿಂಗಲೀಲಾವಿಲಾಸ ಗ್ರಂಥದ ವ್ಯಾಖ್ಯಾನ, ಏಕೋತ್ತರಶತಸ್ಥಲ ಟೀಕೆ, ಷಟ್‌ಸ್ಥಲಜ್ಞಾನಸಾರಾಮೃತ ಟೀಕೆ, ಮನೋವಿಜಯ ವ್ಯಾಖ್ಯಾನ, ಶತಕತ್ರಯ ವ್ಯಾಖ್ಯಾನ, ಪಂಚಗದ್ಯಟೀಕೆ, ಭಾವಚಿಂತಾರತ್ನ ಟೀಕೆ, ಬಸವೇಶ್ವರನ ಪಂಚಸ್ತೋತ್ರಟೀಕೆ, ಮಣ್ಣೇಶ್ವರನಾಂದ್ಯದ ಟೀಕೆ, ಮರುಳದೇವರ ಕಂದಸಾರದ ಟೀಕೆ, ರಾಜಶೇಖರವಿಲಾಸದ ವ್ಯಾಖ್ಯಾನ, ಶಬ್ದಮಣಿದರ್ಪಣ ಟೀಕೆ, ಶೀಲವಂತಯ್ಯನ ತ್ರಿವಿಧಿ ಟೀಕೆ, ಕರಸ್ಥಲದ ನಾಗಲಿಂಗದೇವರ ತ್ರಿವಿಧಿ ಟೀಕೆ, ಕೈವಲ್ಯಪದ್ಧತಿ ಟೀಕೆ, ಗುರುಸ್ತೋತ್ರ ತ್ರಿವಿಧಿ ಟೀಕೆ, ವಾರ್ತೆಯ ಸೋಮಣ್ಣನ ಪಂಚೀಕರಣ ಟೀಕೆ, ಪ್ರಭುಲಿಂಗ ಕಂದದ ಟೀಕೆ, ಪರಮಾರ್ಥಗೀತೆ ಟೀಕೆ–ಹೀಗೆ ದಟ್ಟವಾಗಿ ಹುಟ್ಟಿಬಂದ ವೀರಶೈವ ಟೀಕಾಸಾಹಿತ್ಯ ಸಮೂಹದಲ್ಲಿ ಬಸವಣ್ಣನವರ 'ಷಟ್ಸ್ಥಲವಚನ' ಸಂಪುಟಕ್ಕೆ ಐದು ಜನರು ಟೀಕೆ ಬರೆದುದಾಗಿ ಈವರೆಗೆ ತಿಳಿದುಬಂದಿದೆ.* ಕನ್ನಡ ಸಾಹಿತ್ಯದಲ್ಲಿಯೇ ಬಸವಣ್ಣನವರನ್ನು ಕುರಿತು ಹುಟ್ಟಿದಷ್ಟು ಕೃತಿಗಳು ಬೇರೊಬ್ಬರ ವಿಷಯವಾಗಿ ಹುಟ್ಟಿಲ್ಲ. ಅದೇ ರೀತಿ ಅವರ ವಚನಸಂಪುಟಕ್ಕೆ ಬರೆದಷ್ಟು ಟೀಕೆಗಳು ಬೇರೊಬ್ಬರ ವಚನ ಸಂಪುಟಕ್ಕೆ ಬರೆಯಲಾಗಿಲ್ಲವೆಂಬುದು ಬಸವಣ್ಣನವರ ವ್ಯಕ್ತಿತ್ವ ಮತ್ತು ಸಾಹಿತ್ಯಗಳ ಘನತೆಯನ್ನು ಸಾರುತ್ತವೆ.

• ಬಸವಣ್ಣನವರ ಟೀಕಿನ ವಚನಗಳು •

ಬಸವಣ್ಣನವರು ಲಕ್ಷದ ಮೇಲೆ ತೊಂಬತ್ತಾರು ಸಾವಿರ ವಚನಗಳನ್ನು ಬರೆದರೆಂದು ಪರಂಪರಾಗತ ಪ್ರತೀತಿ. ಈ ವಿಪುಲ ಸಂಪತ್ತಿನಿಂದ ಆಯ್ದ ೯೫೯ ವಚನಗಳನ್ನೊಳಗೊಂಡಿದೆ, ಬಸವಣ್ಣನವರ 'ಷಟ್ಸ್ಥಲದ ವಚನಗಳು' ಹೆಸರಿನ ಕೃತಿ. ಬಹುಶಃ ತರುವಾಯದ ಅನುಭಾವಿಯೊಬ್ಬನು ಹೀಗೆ ಅವರ ವಚನಗಳನ್ನು ಷಟ್ಸ್ಥಲಕ್ರಮದಲ್ಲಿ ಜೋಡಿಸಿರಬಹುದು. ತುಂಬ ಪ್ರಚಾರದಲ್ಲಿರುವ ಈ 'ಷಟ್ಸ್ಥಲದ ವಚನ' ಸಂಪುಟಕ್ಕೆ ಒಟ್ಟು ೫ ಜನ ಟೀಕೆ ಬರೆದಿರುವರು.* ಹೀಗಾಗಿ ಈ ಷಟ್ಸ್ಥಲ ಕಟ್ಟು ಸಿದ್ಧವಾದ ತರವಾಯದ ಕಾಲದಲ್ಲೇ ಈ ಟೀಕೆಗಳು ಹುಟ್ಟಿರುವುದ ಸಹಜ. I, II, III, IV ಮತ್ತು V ಹೀಗೆ ನಮ್ಮಿಂದ ಸಂಕೇತ ಕೊಡಲ್ಪಟ್ಟ ಈ ಐದೂ ಟೀಕೆಗಳ ಕರ್ತೃ, ಕಾಲ ಮೊದಲಾದ ಸಂಗತಿಯನ್ನು ಇಲ್ಲಿ ವಿವೇಚಿಸಬಹುದು.

---

* ಇದಲ್ಲದೆ ಇನ್ನೂ ಕೆಲವು ಬಿಡಿ ಟೀಕೆಗಳಿವೆ. 'ಹೆಚ್ಚಿನ ವಚನ ಟೀಕೆ' ನೋಡಿರಿ.

I ನೆಯ ಟೀಕೆ :

'ಶ್ರೀಗುರು ಬಸವರಾಜದೇವರು ನಿರೂಪಿಸಿದ ಷಟ್ಸ್ಥಲದ ವಚನವ್ಯಾಖ್ಯಾನ' ಎಂಬುದು ಇದರ ಹೆಸರು. ಈ ಗ್ರಂಥದ ಕರ್ತೃ ತನ್ನ ಹೆಸರಿನ ಬಗೆಗೆ ಮೌನತಾಳಿದ್ದಾನೆ. 'ಶ್ರೀಗುರು ಬಸವಲಿಂಗಾಯ ನಮಃ ಎಂಬ ವಾಕ್ಯಕ್ಕೆ ಬರೆದ ವಿಸ್ತಾರವಾದ ಟೀಕೆಯೊಂದಿಗೆ ಇದು ಪ್ರಾರಂಭವಾಗುತ್ತದೆ.' ಹೀಗೆಯೇ ಪ್ರಾರಂಭವಾಗುವ ಟೀಕೆ–

೧. ಏಕೋತ್ತರಶತಸ್ಥಲ ಟೀಕೆ (ಮಹಲಿಂಗದೇವ ?).

೨. ಕರಣಹಸಿಗೆ ಟೀಕೆ (ಚೆನ್ನಬಸವಣ್ಣ).

೩. ಕರಸ್ಥಲದ ನಾಗಲಿಂಗದೇವರ ತ್ರಿವಿಧಿ ಟೀಕೆ.

೪. ಕೈವಲ್ಯ ಪದ್ಧತಿ ಟೀಕೆ (ನಿಜಗುಣ ಶಿವಯೋಗಿ).

ಈ ಟೀಕಾಕೃತಿಗಳ ಆದಿಯಲ್ಲಿಯೂ ಬರುವುದರಿಂದ, ಇಲ್ಲಿ ಹೇಳಲಾದ ಬಸವಣ್ಣನವರ ಷಟ್ಸ್ಥಲದ ವಚನವ್ಯಾಖ್ಯಾನಕಾರ ಮತ್ತು ಈ ನಾಲ್ಕು ಕೃತಿಗಳ ವ್ಯಾಖ್ಯಾನಕಾರ ಒಬ್ಬನೇ ಎಂದು ಊಹಿಸಬಹುದು.

ಈ ವಚನಟೀಕೆಯಲ್ಲಿ ತುಂಗಭದ್ರೆ, ಹಂಪೆಯ ವಿರೂಪಾಕ್ಷ, ಕೊಟ್ಟೂರೇಶ್ವರ ಕೊಟ್ಟೂರು ಇತ್ಯಾದಿ ಉಲ್ಲೇಖಗಳು, ಆಗಾಗ ಬರುವುದರಿಂದ ಈತನು ಹಂಪೆಯ ಪ್ರದೇಶದವನಿರಬಹುದು. ಗುಳ್ಳಿರಾಮನ ಕೆರೆ, ಮರಗದ ಕೆರೆ. ಪಾಲಕೆರೆ, ಸೂಳೆಕೆರೆ ಇತ್ಯಾದಿ ಕೆರೆಗಳನ್ನು ಉಲ್ಲೇಖಿಸುವುದರಿಂದ ಇವುಗಳ ನೆರೆಹೊರೆಯ ಗ್ರಾಮದವನಾಗಿರಬಹುದು. 'ಕ' ಪ್ರತಿಯ ಕೊನೆಯಲ್ಲಿ ಬರುವ 'ಬಿಜೋತ್ಪತ್ತಿ ನಾಮ ಸಂವತ್ಸರ ವೈಶಾಖ ಶುದ್ಧ ಬುಧವಾರ ಬಸವರಾಜದೇವರ ವಚನಶಾಸ್ತ್ರ ಮುಗಿಸಿದ್ದು' ಎಂಬ ಹೇಳಿಕೆ ಈ ಕೃತಿರಚನೆಯ ಕಾಲನಿರ್ಣಯಕ್ಕೆ ನೆರವು, ನೀಡುವುದಿಲ್ಲ. ಆದರೆ ಈ ಟೀಕೆಯ ಬೇರೊಂದು ಪ್ರತಿ (ಶ್ರೀಮಹಾಂತಯ್ಯನವರ ಪ್ರತಿ)* ಯ ಕೊನೆಯಲ್ಲಿಯ ಶಕ ೧೭೬೨ ಪ್ರವರ್ತ ಮಾನೇ ಪ್ರಮೋದೂತ ಸಂವತ್ಸರ ಮಿತಿ ಮಾರ್ಗಶಿರ ಶುದ್ಧ ಪಂಚಮಿಯಲ್ಲಿ ಲೇಖನ ಸಮಾಪ್ತ' ಎಂಬುದು ಇದರ ಇತ್ತೀಚಿನ ಗಡುವನ್ನು ಕ್ರಿ.ಶ. ೧೮೭೦ಕ್ಕೆ ನಿಲ್ಲಿಸುತ್ತದೆ. ಅದೇನೆ ಇದ್ದರೂ ಟೀಕೆ ಯುದ್ದಕ್ಕೂ ಬರುವ ಲುಕ್ಸಾನ, ಭೋಪದಾರ, ಮಾಲದಾರ, ಮಕಾನ, ಬಾಜು, ಚಾಕು, ಖಾಂದರ ಮೊದಲಾದ ಉರ್ದು ಪದಗಳ ನಿರರ್ಗಳ ಬಳಕೆ ಮತ್ತು ಕನ್ನಡ ಭಾಷೆಯ ಆಧುನಿಕತೆಗಳು ಈತನು ೧೯ನೆಯ ಶತಮಾನಕ್ಕೆ ಸಂಬಂಧಪಟ್ಟವನೆಂದು ಸೂಚಿಸುತ್ತವೆ. ಮೊಗಲ ಪಠಾಣರು ದಕ್ಕಣೆಯರು ಎಂಬಲ್ಲಿಯ ದಕ್ಕಣೆ(ಡೆಕ್ಕನ) ಎಂಬುದೂ 'ಸಬಕಾ' ಪದಪ್ರಯೋಗವೂ ಈ ಅಭಿಪ್ರಾಯವನ್ನು ಬೆಂಬಲಿಸುತ್ತದೆ. ನಮ್ಮ ಗಮನಕ್ಕೆ ಬಂದ ಹಸ್ತಪ್ರತಿಗಳು, ೧೯ನೆಯ ಶತಮಾದಲ್ಲಿ ಲಿಪಿಸಿದವುಗಳೆಂಬುದನ್ನೂ ಇಲ್ಲಿ ನೆನೆಯಬೇಕು. ಅಲ್ಲಿ 'ಜಂಗಮ', 'ಭಕ್ತ', 'ಶರಣ' ಪದಗಳಿಗೆ ತಾತ್ವಿಕ ಅರ್ಥದ ಜೊತೆ ಲೌಕಿಕ ಅರ್ಥವನ್ನು ಹೇಳುವಲ್ಲಿ 'ಜಂಗಮ'ದ ಬಗ್ಗೆ ಹಲವರ ಧ್ವನಿ

---

* ಹೈದರಾಬಾದಿನ ನಿಜಾಂ ಕಾಲೇಜಿನ ಪ್ರೊ. ಎಂ.ಎಸ್. ಮಹಾಂತಯ್ಯನವರ ಪ್ರತಿ. ಇದು ಈಗ ಕನ್ನಡ ಅಧ್ಯಯನಪೀಠದ ಹಸ್ತಪ್ರತಿ ಭಂಡಾರದಲ್ಲಿದೆ.

ಕೇಳಿಬರುವುದರಿಂದ ಈತನು ಜಂಗಮನಾಗಿರುವ ಸಾಧ್ಯತೆಯಿದೆ. ಟೀಕೆಯ ಒಡಲಲ್ಲಿ ಆಗಾಗ ಬರುವ ಅಡ್ಡಕಥೆ, ಅತಿ ವಿವರ, ಅಗಾಧ ಲೋಕಾನುಭವ, ಮಾತನಾಡಿದಂತಿರುವ ಜಾನಪದ ಶೈಲಿಗಳು ಈತನು ವೃತ್ತಿಯಿಂದ ಪುರಾಣಿಕನಾಗಿರಬಹುದೆಂಬ ಭಾವ ಮೂಡಿಸುತ್ತವೆ. ವಚನಗಳಿಗೆ ಕೆಲವುಸಲ ವಾಚ್ಯಾರ್ಥವಲ್ಲದೆ ಇನ್ನೆರಡು ಬಗೆಯ ತಾತ್ವಿಕಾರ್ಥ-ಹೀಗೆ ಮೂರು ಬಗೆಯ ಅರ್ಥ (ವ, ೬೮೧) ಬರೆಯುವನಾದರೂ ವಾಚ್ಯಾರ್ಥ ಮತ್ತು ತಾತ್ವಿಕಾರ್ಥಗಳೆಂಬ ಎರಡು ಬಗೆಯ ಅರ್ಥ ಬರೆದುದು ಸರ್ವಸಾಮಾನ್ಯ. ಕೆಲವು ಸಲ ಕೇವಲ ವಾಚ್ಯಾರ್ಥ ಬರೆದಿರುವನು. ಉದಾ:

ನೀರಕಂಡಲ್ಲಿ-ಉದಕವ ನೋಡಿದಲ್ಲಿ, ಮುಳುಗುವರಯ್ಯಾ-ಗುಂಡುಮುಳುಗನ ಹಕ್ಕಿಯೋಪಾದಿಯಲ್ಲಿ ಮುಳುಗಿ ಏಳುವರಯ್ಯಾ, ಮರನಕಂಡಲ್ಲಿ, ಅಶ್ವತ್ಥವೃಕ್ಷವ ಕಂಡಲ್ಲಿ, ಸುತ್ತುವರಯ್ಯಾ-ಕುಂಬಾರನ ತಿಗರಿಯ ಹಾಂಗೆ ತಿರುಗುವರಯ್ಯಾ, ಬತ್ತುವ ಜಲದ-ಮಳೆಗಾಲದಲ್ಲಿ ತುಂಬಿರ್ದು ಬೇಸಗೆ ಬಂದಲ್ಲಿ ಇಮರಿ ಹೋಗುವ ಉದಕವನ್ನು, ಒಣಗುವ ಮರನ-ಕಡಿಹಾಯ್ದು ಕಾಲಾಂತರದಲ್ಲಿ ಬೇರು ಸಡಲು ಬುಡವರಸಿ ಬಿದ್ದು ಹೋಗುವಂಥ ಅರಳೆಮರನ, ಮಚ್ಚಿದವರು-ದೈವವೆಂತ ಮಮಕರಿಸಿದವರು, ನಿಮ್ಮನೆತ್ತ ಬಲ್ಲರು-ಸಮರಸಭಾವದಿಂದ ಲಿಂಗಪೂಜೆಯ ಮಾಡಿ ಲಿಂಗವ ಕರುಣವನ್ನು ಹಡೆಯಬೇಕೆಂಬುವಂಥದನ್ನು ಅವರು ಯಾವ ಕಡೆಗೆಂದು ತಿಳಿದಿಪ್ಪರು, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ (೫೮೧).

ಹೀಗೆ ಶುದ್ಧ ವಾಚ್ಯಾರ್ಥ ಬರೆಯುವನಾದರೂ ಕೆಲವು ಸಲ ಲೋಕಾನುಭವ, ಉಪಮೆ-ಗಳನ್ನು ಬಳಸಿಕೊಂಡು ಇದನ್ನು ವಿವರಣ ರೂಪದಲ್ಲಿಯೂ ಹೇಳುವನು, ಉದಾ:

ಮಡಕೆದೈವ-ಭುವನಕೋಶದಲ್ಲಿ ಸಮಸ್ತದೈವವಾಗಿಪ್ಪವು ಎಂಬಲ್ಲಿ, ಲೋಕದಲ್ಲಿ ಆತ್ಮರುಗಳು ಭಾಂಡಂಗಳಲ್ಲಿ ಪಾಕ ಪ್ರಯತ್ನಂಗಳನು ಮಾಡಿ ನಿಮ್ಮಲ್ಲಿ ಹೊತ್ತು ಪರಿಯಂತರ ಅಡಿಗೆಮಾಡಿದೆವೆಂದು ಹೆಗಲ ತೊಳೆದು ಬೂದಿಯ ಕಟ್ಟನ್ನು ಬರೆದು, ನಮ್ಮ ಕಾಲು ತಗುಲಿದವು ಕೈತಗಲಿದವೆಂದು ನಮಸ್ಕರಿಸಿ ಒತ್ತಟ್ಟಿಗೆ ಮಡುಗುತ್ತಿಹರು. ಅದಲ್ಲದೆ ಐರಾಣಿ ಗಡಿಗೆ ಜಕ್ಕಣಿಯರ ಗಡಿಗೆ ಮೊದಲಾದವನ್ನು ದೇವರೆಂದು ಆರಾಧಿಸಿ ನಮಸ್ಕರಿಸುತ್ತಿಹರು, ಮೊರದೈವ-ಹದಿನೆಂಟು ಧಾನ್ಯಂಗಳನು ಕೇರುವಂಥ ಶೂರ್ಪನೇನಾದರೂ ಕೇರೋ ತನಕ ಕೇರಿ ಕಡೆಯಲ್ಲಿ ಇಷ್ಟು ಹೊತ್ತು ತನಕ ಕುಟ್ಟಿ ಬೀಸಿ ಕೇರುವಾಗ ಕಾಲು ತಗಲಿದವು ಕೈತಗಲಿದವೆಂದು ನಮಸ್ಕರಿಸಿ ದೇವರೆಂದು ಭಾವಿಸಿ ಒತ್ತಟ್ಟಿಗೆ ಮಡಗುತ್ತಿಹರು. ಬೀದಿಯ ಕಲ್ಲು ದೈವ-ಗ್ರಾಮದ ಮಧ್ಯದಲ್ಲಿರುವವಂಥ ಕುರುಗಲ್ಲನ್ನು ಹತ್ತೆಂಟು ಕೊಡ ಉದಕವ ನೀಡಿ ಅವನ್ನು ದೇವರೆಂದು ಆರಾಧಿಸಿ ನಮಸ್ಕರಿಸುತ್ತಿಹರು. ಹಣಿಗೆ ದೈವ-ಜಾಡರು ನೆಯ್ವಂತ ಹಣಿಗೆಯನ್ನು ಕೆಚ್ಚೋ ತನಕ್ಕೆ ಕೆಚ್ಚಿ ಕಡೆಯಲ್ಲಿ ಇಷ್ಟು ಹೊತ್ತು ಪರಿಯಂತರ ಕಾಲಲಿ ಮೆಟ್ಟಿ ಉಗುಳ ಹಚ್ಚಿ ಹೊಳಚಿದೇವೆಯೆಂದು ಅದನ್ನು ದೇವರೆಂದು ಭಾವಿಸಿ ನಮಸ್ಕರಿಸುತ್ತಿಹರು. ಬಿಲ್ಲ ನಾರಿ ದೈವ-ಕಿರಾತರುಗಳೇನಾದರೂ ಮಿಟ್ಟೆ ಅಂಬನ್ನು ಕಾಲಲಿ ತುಳಿದು ಕೈಯಲ್ಲಿ ಬಗ್ಗಿಸಿ ಹೆದೆಯನ್ನು ಏರಿಸಿ ನಮಸ್ಕಾರವನ್ನು ಮಾಡಿ ಕೈಯಲ್ಲಿ ಪಿಡಿದುಕೊಂಬುತ್ತಿಹರು, ಕಾಣಿರೊ-ಕಂಡಿರೋ.

ಕೊಳಗ ದೈವ-ಹದಿನೆಂಟು ಧಾನ್ಯಗಳನು ಅಳೆವಲ್ಲಿ ನಮ್ಮ ಕಾಲು ಕೈತಗಲಿದವೆಂದು ನಮಸ್ಕರಿಸಿ ದೇವರೆಂದು ಭಾವಿಸುತ್ತಿಹರು, ಕೋಲು ದೈವ ಗಿಣಲು ದೈವ-ಚರಂತಿ ದೇವರು

ಅತೀತ ದೇವರು ಆರಾಧ್ಯ ದೇವರು ಮೊದಲಾದವರು ದಂಡ ಗಿಣಿಲು ಶಂಖವನ್ನು ಒಂದು ಗರ್ದುಗೆಯ ಮೇಲೆ ಮಡಗಿ ಅದಕ್ಕೂ ಪತ್ರಪುಷ್ಪಾದಿಗಳಿಂದಾರಾಧಿಸಿ ಅದನ್ನು ದೇವರೆಂದು ಭಾವಿಸುತ್ತಿಹರು. ಕಾಣಿರೊ-ಕಂಡಿರೋ. ದೈವದೈವವೆಂದ-ದೇವರು ದೇವರುಯೆನುತ್ತ, ಕಾಲಿಡಲು-ಹೆಜ್ಜೆಯನಿಕ್ಕಿ ಚರಿಸುವುದಕ್ಕೆ, ಇಂಬಿಲ್ಲ-ತೆರಪಿಲ್ಲವು, ದೇವನೊಬ್ಬನೆ-ಕರ್ತನೊರ್ವನೆ, ನಮ್ಮ ಕೂಡಲಸಂಗಮದೇವ-ನಮ್ಮ ಪರಶಿವ ಲಿಂಗವು" (೫೬೩).

ಶುದ್ಧ ಜಾನಪದೀಯವಾಗಿರುವ ಈ ಬಗೆಯ ವಿವರಣರೂಪದ ಟೀಕೆಗಳು ಬಹುಸಂಖ್ಯೆ-ಯಲ್ಲಿ ಸಿಗುತ್ತವೆ. ಇಂಥಲ್ಲಿ ಈ ಟೀಕಾ ಕಾರನ ಮಾತಿನ ಶೈಲಿ, ಲೋಕಾನುಭವಗಳು, ತುಂಬ ಕುತೂಹಲವನ್ನು ಹುಟ್ಟಿಸುತ್ತವೆ. ಹೀಗೆ ಕೇವಲ ವಾಚ್ಯಾರ್ಥದ ಟೀಕೆಗಳನ್ನಲದೆ ಜೊತೆಗೆ ತಾತ್ವಿಕ ಅರ್ಥವನ್ನೂ ಜೋಡಿಸುತ್ತಾನೆ. ಉದಾ:

"ದೇವನೊಬ್ಬ ನಾಮ ಹಲವು : ದೇವ-ಪರಮೇಶ್ವರನು, ಒಬ್ಬ-ಓರ್ವನು, ನಾಮ-ಅಭಿಧಾನವು, ಹಲವು-ನಾನಾ ಪ್ರಕಾರವು. ಪರಮ ಪತಿವ್ರತೆಗೆ, ಪತಿವ್ರತಾಭಾವವನುಳ್ಳಂಥ ಸ್ತ್ರೀಯಳಿಗೆ, ಗಂಡ-ಸ್ವಭರ್ತೃವಾದ ರಮಣನು, ಒಬ್ಬ-ಓರ್ವನು. [ಮತ್ತೊಂದಕ್ಕೆಱಗಿದಡೆ-] ಮತ್ತೊಬ್ಬ ಪಾಣ್ಬ ಪುರುಷನಿಗೆ ಇಚ್ಛೈಸಿದರೆ, ಕಿವಿಮೂಗ ಕೊಯ್ವನೆಂಬ ದೃಷ್ಟೋಪಮಾನದ ಹಾಂಗೆ.

● ಪರಮ ಪತಿವ್ರತೆಗೆ-ಶರಣನೆ ಸತಿಯಾಗಿ ಲಿಂಗವೇ ಪತಿಯಾಗಿ ಶರಣಸತಿ ಲಿಂಗಪತಿತ್ವ ವಿಡಿದಾಚರಿಸುವಂಥ ಶರಣಸತಿಯಳಿಗೆ, ಗಂಡ-ಇಷ್ಟ ಲಿಂಗವೆಂಬ ರಮಣನು, ಒಬ್ಬ-ಒರ್ವನು. ಮತ್ತೊಂದಕ್ಕೆರಗಿದಡೆ-ಮತ್ತೊಂದು ಸ್ಥಾವರಾದಿಗಳಿಗೆ ಇಚ್ಛೈಸಿದರೆ, ಸ್ಥಾವರಾದಿಗಳಿದ್ದೆಡೆಗೆ ಹೋಗಿ ಎಣ್ಣೆ ಮಜ್ಜನವನ್ನು ನೀಡಿಸಿ ಎಲೆಪೂಜೆಯನ್ನು ಕಟ್ಟಿಸಿ ಪರವು ಪಾಡ್ಯವನ್ನು ಮಾಡಿ ದಾನ ದಕ್ಷಿಣವನ್ನು ಕೊಟ್ಟು ಅಡ್ಡಡ್ಡ ಬಿದ್ದು ಆರಾಧಿಸಿದರೆ, ಕಿವಿ ಮೂಗಕೊಯ್ವ: ಕಿವಿ-ನಿಜಶ್ರುತಿಯೆಂಬ ಶ್ರವಣವನ್ನು, ಮೂಗ-ಶಿವಾಭಿಮಾನವೆಂಬ ಘ್ರಾಣವನ್ನು, ಕೊಯ್ವ-ಅಪಹರಿಸಿ ಮಾನಭಂಗವ ಮಾಡಿ ಭವಕ್ಕೆ ಹಾಕಿ ಬಿಡುವನು. ಹಲವು ದೈವದೆಂಜಲ ತಿಂಬುವರ: ಹಲವು ದೈವದ-ತಿಮ್ಮ ಬೊಮ್ಮ ಬೀರ ಜಟ್ಟಿಂಗ ಮೊದಲಾದ ನೀಚದೈವಂಗಳ, ಎಂಜಲ-ಉಚ್ಚಿಷ್ಟವನ್ನು, ತಿಂಬುವರ-ಅನುಭವಸುವಂಥವರನು, ಏನೆಂಬೆ-ನಾ ಎಂತೆಂದು ಹೇಳಲಿ, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ"(೭೧೫).

ಇನ್ನು ಕೆಲವು ಸಲ ಒಂದು ವಚನಕ್ಕೆ ಮೂರು ಬಗೆ ಅರ್ಥ ಹೇಳುತ್ತಿದ್ದು ಇವುಗಳ ತುಲನೆಗಾಗಿ "ಕಬ್ಬಿನ ಹಣಿದವನಾಡುವರಲ್ಲದೆ..." ವಚನಕ್ಕೆ ಬರೆದ ಟೀಕೆಯನ್ನು ನೋಡ- ಬಹುದು.:

"ಕಬ್ಬಿನ ಹಣಿದವನಾಡುವರಲ್ಲದೆ-ಲೋಕದಲ್ಲಿ ಆತ್ಮರುಗಳು ಜೂಜನ್ನು ಆಡಬೇಕಾದರೆ ಒಂದು ಕಬ್ಬಿನ ಹೊರೆಯನ್ನಾಗಲೀ ಒಂದು ಬಾಳೆದಿಂಡನ್ನಾಗಲೀ ಒಂದು ಮೊಟ್ಟೆ ತೆಂಗಿನಕಾಯನ್ನಾಗಲೀ ತೆಗೆದುಕೊಂಡು ಬಂದು ಇವನೆಲ್ಲ ಒಂದೇ ವೇಳೆಗೆ ಕಡಿದರೆ ತನ್ನವೆಲ್ಲ ನಿನಗೆ ಕೊಡುತ್ತೈದೇನಿ, ಕಡಿಯಲಾರದಿದ್ದರೆ ನಿನ್ನವೆಲ್ಲ ನನಗೆ ಕೊಡಬೇಕಾದೀತೆಂದು ಜೂಜನಾಡುವರಲ್ಲದೆ, ಕಾಯದ ಹಣಿದವನಾಡುವರೆ?-ನನ್ನ ದೇಹವ ನೀ ಕಡಿದು ನೋಡು ನಿನ್ನ ದೇಹವ ನಾ ಕಡಿದು ನೋಡುತ್ತೈದೇನಿ ಎಂದು ದೇಹದೇಹಕ್ಕೆ ಜೂಜನಾಡುವಂಥವರಿದ್ದಾರೆ? ಇಲ್ಲವು ಮೇಲೊಡ್ಡಾಯಿತ್ತೆಂದು-ಕಡಿಯಲಾರದಿದ್ದರೆ ನನ್ನವೆಲ್ಲವೂ ಅವನಿಗೆ ಕೊಡಬೇಕಾದೀತೆಂದು, ಕೂಡಲಸಂಗಮದೇವಾ-ಎಲೆ ಜೂಜುಗಾರನೆ, ನೀನಿಕ್ಕಿದ-ನೀಹಾಕಿದಂಥ ಜೂಜಿಂಗೆ-ಪಂಥಕ್ಕೆ,

ಸಿರಿಯಾಳ–ಸಿರಿಯಾಳನೆಂಬ, ಜೂಜುಗಾರನು, ಹೊಯ್ದು ಗೆದ್ದ–ಒಂದು ವೇಳೆಗೆ ಕಡಿದು ಕತ್ತರಿಸಿ ಅವನೆಲ್ಲ ತಾ ತೆಗೆದುಕೊಂಡನೆಂಬ ದೃಷ್ಟೋಪಮಾನದ ಹಾಂಗೆ.

● ಕಬ್ಬಿನ ಹಣಿದವನಾಡವರಲ್ಲದೆ–ಬಹಿರಂಗದ ಪದಾರ್ಥವ ಕೊಟ್ಟು ಭಕ್ತಿಯ ಮಾಡುವರಲ್ಲದೆ, ಕಾಯದ ಹಣಿದವನಾಡುವರೆ?–ಆತ್ಮ ಪದಾರ್ಥವನ್ನು ವಂಚಿಸಿಕೊಂಡು ಬಹಿರಂಗದ ಪದಾರ್ಥವನ್ನು ಕೊಟ್ಟು ಭಕ್ತಿಯ ಮಾಡಿದರೆ, ಮೇಲೊಡ್ಡಾಯಿತ್ತೆಂದು–ಕಿಂಚಿನ್ಮಾತ್ರ ಫಲಪದಂಗಳು ದೊರೆಕೊಂಡು ಭವದುಃಖವುಂಟಾಯಿತ್ತೆಂದು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನೀನಿಕ್ಕಿದ–ನೀನುಂಟು ಮಾಡಿದ, ಜೂಜಿಂಗೆ–ಆತ್ಮಪದಾರ್ಥವನ್ನು ಸಮರಸಭಾವದಿಂದ ಕೊಟ್ಟು ಭಕ್ತಿಯ ಮಾಡಬೇಕೆಂಬಂಥ ಪಂಥಕ್ಕೆ, ಹೊಯ್ದು ಗೆದ್ದ ಸಿರಿಯಾಳ : [ಸಿರೆಯಾಳ–] ಸಿರಿಯಾಳನೆಂಬ ನಿರ್ವಂಚಕ ಸದ್ಭಕ್ತನು, ಹೊಯ್ದು ಗೆದ್ದ–ಒಂದೇ ವೇಳೆಗೆ ಕೊಂದು ಬಾಣಸವ ಮಾಡಿ ನೀಡಿ ಶಿವನುಂಟುಮಾಡಿದ ಸಕಲ ಪ್ರಪಂಚವನ್ನು ಜಯಿಸಿದನೆಂಬ ದೃಷ್ಟೋಪಮಾನದ ಹಾಂಗೆ.

● ಕೂಡಲಸಂಗಮದೇವಾ–ಎಲೆಪರಶಿವಲಿಂಗವೆ, ನೀನಿಕ್ಕಿದ ಜೂಜಿಂಗೆ–ಆತ್ಮಪದಾರ್ಥವನ್ನು ಕೇಳಿ ಹಿಮ್ಮೆಟ್ಟಿಸಬೇಕೆಂಬಂಥ ಪಂಥಕ್ಕೆ, ಹೊಯ್ದು ಗೆದ್ದ ಸಿರಿಯಾಳ:[ಸಿರಿಯಾಳ–] ಸಿರಿಯಾಳನೆಂಬ ಜ್ಞಾನಕಲಾತ್ಮನು, ಹೊಯ್ದು ಗೆದ್ದ–ಸಮರಸಭಾವದಿಂದ ಆತ್ಮಪದಾರ್ಥವನ್ನು ಕೊಟ್ಟು ಭಕ್ತಿಯ ಮಾಡಿ ಶಿವನುಂಟುಮಾಡಿದ ಕಾಲಕಾಮ ಮಾಯಾಪ್ರಪಂಚನ್ನು ಜಯಿಸಿದನು" (೬೮೧).

ಈ ಬಗೆಯ ಯೋಜನೆಯನ್ನು ರೂಪಿಸಿಕೊಂಡು ಟೀಕೆ ಬರೆಯುತ್ತಿರುವ ಈತನು ಶಬ್ದಾರ್ಥಕೊಡುವಲ್ಲಿ, ಭಾವಾರ್ಥ ವಿವರಿಸುವಲ್ಲಿ ಕೆಲವು ಸಲ ಗೆಲುವಿನೊಂದಿಗೆ ಸೋಲನ್ನು ಅನುಭವಿಸಿದ್ದಾನೆ. ಉದಾ : "ಜೋಳವಾಳಿಯವ ನಾನಲ್ಲವಯ್ಯ, ನಿಮ್ಮ ವೇಳೆವಾಳಿಯವ ನಾನಯ್ಯ" (೭೦೦) ಎಂಬ ಮಾತಿಗೆ ಬರೆದ ಎರಡು ಅರ್ಥಗಳು ಹೀಗಿವೆ:

ಜೋಳವಾಳಿಯವ ನಾನಲ್ಲವಯ್ಯ–ಒಂದು ಪಡಿ ಜೋಳಕ್ಕೆ ಚೆಂಗೂಲಿಯ ಮಾಡಲ್ಪಟ್ಟಂಥಾತ ನಾನಲ್ಲವಯ್ಯ, ನಿಮ್ಮ ವೇಳೆವಾಳಿಯವ ನಾನಯ್ಯ–ನಿಮ್ಮ ವೇಳೆಯ ಹೊತ್ತಿಗೆ ಹೋಗಿ ಕೂಲಿಯ ಮಾಡಲ್ಪಟ್ಟಾತ ನಾನಯ್ಯ.

● ಜೋಳವಾಳಿಯವ ನಾನಲ್ಲವಯ್ಯ–ಆತ್ಮಪದಾರ್ಥವನ್ನು ವಂಚಿಸಿಕೊಂಡು ಬಹಿರಂಗ ಪದಾರ್ಥವನ್ನು ಕೊಟ್ಟು ಭಕ್ತಿಯ ಮಾಡುವಾತ ನಾನಲ್ಲವಯ್ಯ, ನಿಮ್ಮ ವೇಳೆವಾಳಿಯವ, ನಾನಯ್ಯ–ಆತ್ಮ ಪದಾರ್ಥವನ್ನು ಸಮರಸಭಾವದಿಂದ ಕೊಟ್ಟು ಭಕ್ತಿಯ ಮಾಡಲ್ಪಟ್ಟಾತ ನಾನಯ್ಯ.

ಇಲ್ಲಿ ಪ್ರತಿಯೊಂದು ವಚನಕ್ಕೆ ವಾಚ್ಯಾರ್ಥದ ಜೊತೆಗೆ ತಾತ್ವಿಕಾರ್ಥವನ್ನೂ ಬರೆದೇ ತೀರಬೇಕೆಂದು ಹಟ ಕಾರಣವಾಗಿ ತತ್ವಾರ್ಥವನ್ನೂ ತಪ್ಪು ಬರೆಯಲಾಗಿದೆ, ಇಂಥ ಪ್ರಸಂಗಗಳಲ್ಲಿ ಈತನ ಬರವಣಿಗೆ ತೀರ ಲಘವಾಗಿ ತೋರುತ್ತದೆ, ಅಲ್ಲದೆ ನಾರಿವಾಣ–ಹರಿವಾಣ, ಸಂಬೋಳಿಯೆನುತ್ತೆ–ಲಿಂಗವೇ ಎನುತ್ತೆ, ಮಾಗಡವ ಮಿಂದಡೆ–ಮಾಗಿಯ ಕಾಲದಲ್ಲಿ ಹೊಳೆಗೆ ಹೋಗಿ ಸ್ನಾನಪಾನವ ಮಾಡಿಕೊಂಡು ಬಂದರೆ, ಇತ್ಯಾದಿಯಾಗಿ ತಪ್ಪು ಅರ್ಥ ಬರೆದುದೂ ಸ್ಪಷ್ಟವಾಗುತ್ತದೆ.

ಈತನ ಟೀಕೆಗಳು ತುಂಬಾ ವಿಸ್ತಾರವಾಗಿದ್ದು ಎಲ್ಲ ವಚನಗಳಿಗೂ ಬರೆಯಲಾಗಿದೆ. ಬೇಸರವಿಲ್ಲದೆ ವ್ಯಾಖ್ಯಾನ ಮಾಡುತ್ತಹೋದ ಇವನ ಶ್ರಮ, ನಿಷ್ಠೆ ಮೆಚ್ಚುವಂತಹದು. ಈತನ ಕಾಲದ ಜನಜೀವನದ ಅಧ್ಯಯನ ಮಾಡುವಷ್ಟರ ಮಟ್ಟಿಗೆ ಈ ಟೀಕೆ ಸಮಕಾಲೀನ ಜೀವನವನ್ನು ಹೊಸೆದುಕೊಂಡು ಮುಂದುವರಿದಿದೆ.

II ನೆಯ ಟೀಕೆ :

ಈ ಟೀಕೆಯ ಹೆಸರು ಮತ್ತು ಟೀಕಾಕರ್ತೃವಿನ ಹೆಸರು ಇನ್ನೂ ನಿಗೂಢವಾಗಿ ಉಳಿದಿವೆ. ನಾವು ಬಳಸಿದ 'ಜ' ಪ್ರತಿಯ ಕೊನೆಯಲ್ಲಿ ಬರುವ 'ಶ್ರೀ ಬಸವೇಶ್ವರ ವಚನದೊಳಗೆ ಕಠಿಣವಾದ ಸಂಕ್ಷೇಪವಚನಕ್ಕೆ ಟಿಪ್ಪಣವಾಗಿ ಲಿಂಗಾಂಗಸಾಮರಸ್ಯವನ್ನು ಬಲ್ಲ, ಷಟಸ್ಥಲ ಸಮ್ಯಕ್ಕಜ್ಞಾನ ಮಹಾನುಭಾವಿಗಳು ನಿರೂಪಿಸಿದುದು ಲಿಖಿಸಿ ಸಮಾಪ್ತಿಯಾಯಿತ್ತು' ಎಂಬ ಮಾತು ಕವಿನಾಮ, ಕೃತಿನಾಮಗಳನ್ನು ತಿಳಿಸುವುದಿಲ್ಲ. 'ಚ' ಪ್ರತಿಯ ಕೊನೆಯ ಗದ್ಯಖಂಡ'...ಪ್ರಥಮಾಚಾರ್ಯರಾದ ಸಿದ್ಧೇಶ್ವರಸ್ವಾಮಿಗಳು, ಅವರ ಬೋಧಾಪುತ್ರರಾದ ಬೋಳಬಸವೇಶ್ವರಸ್ವಾಮಿಗಳು ಅವರ ಬೋಧಾಪುತ್ರರಾದ ಗುಮ್ಮಳಾಪುರದ ಸಿದ್ದವೀರಣ್ಣಸ್ವಾಮಿಗಳು, ಅವರ ಬೋಧಾಪುತ್ರರಾದ ಗುಳೂರು ಸಿದ್ಧಲಿಂಗಸ್ವಾಮಿಗಳು, ಅವರ ಬೋಧಾಪುತ್ರರಾದ ಗಗನದ ಸ್ವಾಮಿಗಳು, ಅವರ ಬೋಧಾಪುತ್ರರಾದ ಕಟ್ಟಿಗೆಹಳ್ಳಿಸ್ವಾಮಿಗಳು, ಅವರ ಬೋಧಾಪುತ್ರರಾದ ಮುರಿಗೆಸ್ವಾಮಿಗಳು, ಅವರ ಬೋಧಾಪುತ್ರರಾದ ರೇವಣಸಿದ್ಧೇಶ್ವರಸ್ವಾಮಿಗಳು' ಎಂದು ತಟ್ಟನೆ ನಿಂತುಬಿಡುತ್ತದೆ. ಇದರಿಂದ ರೇವಣಸಿದ್ಧೇಶ್ವರಸ್ವಾಮಿಗಳು ಇದರ ಕರ್ತೃಗಳೆಂದು ಊಹಿಸಬಹುದಾದರೂ ಸಂದೇಹ ಉಳಿದುಕೊಳ್ಳುತ್ತದೆ. ಈ ಪರಂಪರೆ ಯನ್ನು ಗಮನಿಸಿದರೆ ಪ್ರಸ್ತುತಟೀಕೆ ಸುಮಾರು ೧೮ನೆಯ ಶತಮಾನದಲ್ಲಿ ಹುಟ್ಟಿರಬಹುದೆನಿಸುತ್ತದೆ. ನಾವು ಬಳಸಿದ 'ಜ' ಪ್ರತಿಯ ಕೊನೆಯಲ್ಲಿ ಬರುವ '೧೭೬೪ ಶುಭಕೃತನಾಮ ಸಂವತ್ಸರ ಕಾರ್ತಿಕ ಬಹುಳ ೧೩ ತದಿಗಿ ರವಿವಾರದೊಳಗೆ ಸಮಾಪ್ತಿಯಾಯಿತ್ತು' ಎಂಬ ಲೇಖನಮಿತಿ ಟೀಕಾಕಾರನ ಕಾಲನಿರ್ಣಯಕ್ಕೆ ನೆರವಾಗದಿರುವುದು ದುರ್ದೈವದ ಸಂಗತಿ.

ಈ ಟೀಕೆಯ ಪ್ರಾರಂಭದಲ್ಲಿ ಬರುವ 'ಆದ್ಯರು, ವೇದ್ಯರು, ಸಾಧ್ಯರು' ಎಂಬ ಸುದೀರ್ಘ ಪ್ರಸ್ತಾವನೆ ಜಕ್ಕಣಾರ್ಯನ ಸ್ವರಯೇಕೋತ್ತರ ಶತಸ್ಥಲದ ಟೀಕೆಗೂ ಇರುವುದರಿಂದ ಆ ಟೀಕೆಯನ್ನೂ ಈತನೇ ಬರೆದಿರುವ ಸಾಧ್ಯತೆ ಇದೆ.

ಈತನು ಸಾಮಾನ್ಯವಾಗಿ ವಚನಕ್ಕೆ ಒಂದು ಅರ್ಥವನ್ನು ಬರೆಯುತ್ತಿದ್ದರೂ ಕ್ವಚಿತ್ತಾಗಿ ಎರಡು ಅರ್ಥಗಳನ್ನೂ ಬರೆಯುತ್ತಾನೆ(೫೫೩, ೫೯೮, ೭೭೧, ೮೧೬, ೯೩೧, ೯೩೨, ತೀರಕ್ವಚಿತ್ತಾಗಿ ಮೂರು ಅರ್ಥಗಳನ್ನು ಬರೆದಿದ್ದಾನೆ-(೮೩೭, ೮೫೨) ಒಂದನೆಯದು ಶಬ್ದಗಳಿಗೆ ಬರೆದ ಪರಿಮಿತ ಅರ್ಥವಾಗಿರದೆ ವಾಕ್ಯರೂಪದಲ್ಲಿ ಬರೆದ ಅರ್ಥವಾಗಿದ್ದರೆ, ಎರಡನೆಯದು ಗದ್ಯದಲ್ಲಿ ಬರೆದ ಸಾರರೂಪದ ಅರ್ಥವಾಗಿದೆ. ಎರಡನೆಯ ಅರ್ಥವನ್ನು 'ಮತ್ತಂ' ಎಂಬ ಪದದಿಂದ ಪ್ರಾರಂಭ ಮಾಡುತ್ತಾನೆ. ಇವೆರಡರ ಸ್ಪಷ್ಟತೆಗೆ ಒಂದು ಉದಾಹರಣೆಯನ್ನು ನೋಡಬಹುದು:

ಕುಜೆವಿಂಡು ಕಬ್ಬಿನ ಉಲಿವ ತೋಂಟವ ಹೊಕ್ಕ ತೆಱನನಱಿಯದೆ-ಭೂಸುರರೆಂಬ ಕಿರಿಪಶುಗಳು ಪರಬ್ರಹ್ಮಪ್ರಯೋಜನವಾದ ವೇದಾಗಮ ಶಾಸ್ತ್ರಂಗಳೆಂಬ ಕ್ಷೇತ್ರವನ್ನು ಪ್ರವೇಶವಾಗಿ ಶಿವಾಗಮಂಗಳ ಪ್ರಕಾರವನು ತಿಳಿಯದೆ, ತನಿರಸದ ಹೊಱಗಣೆಲೆಯನೆ ಮೇದವು-ತಣ್ಣಿತ್ತಾದ ಸಂಸಾರ ವಿಷಯ ಸಾರವನುಳ್ಳ ಬಾಹಿರದ ಪರಶಾಸ್ತ್ರಂಗಳೆಂಬ ಪರ್ಣವನೋದಿ ವೇದಿಸಿದರು. ನಿಮ್ಮನಱಿದ ಮದಕರಿಯಲ್ಲದೆ-ನಿಮ್ಮ ಸ್ವರೂಪವನು ತಿಳಿದ ಚಿತ್ತಿನ ಮಹದಹಂಕಾರ ಭೂಷಣವಾದ ಶಿವಶರಣನಲ್ಲದೆ, ಕುಜೆಬಲ್ಲುದೆ ಕೂಡಲಸಂಗಮದೇವಾ-ಕರಣಂಗಳ ಪ್ರಕೃತಿಯನುಳ್ಳ ಜೀವರು ಗಳು ಬಲ್ಲರೆ ಎಲೆ ಲಿಂಗವೆ.

● ಮತ್ತಂ ಕರಣಂಗಳ ಪ್ರಕೃತಿ ಸ್ವಭಾವವನುಳ್ಳ ಜೀವರುಗಳು ಶಿವಾನುಭಾವವೆಂಬ ಇನಿದಂಡ ಕ್ಷೇತ್ರವನು ಪ್ರವೇಶವಾಗಿ ಶಿವಾನುಭಾವದ ವರ್ಮವನು ತಿಳಿಯದೆ, ತಣ್ಣಿತ್ತಾದ ಕಾಮುಕಮಾರ್ಗ ರಕ್ತವಿದ್ಯೆ ಶೃಂಗಾರಾದಿ ನವರಸಯುಕ್ತವಾದ ಬಾಹಿರದ ಪರಶಾಸ್ತ್ರಂಗಳೆಂಬ ಪರ್ಣವನೋದಿ ಅರಿದು ವೇದಿಸಿದರು. ನಿಮ್ಮ ತ್ರಿವಿಧಲಿಂಗಾನುಭಾವಿಗಳ ವರ್ಮವನು ತಿಳಿವ ಮಹಾಜ್ಞಾನಿಯಲ್ಲದೆ ಕರಣಂಗಳ ಪ್ರಕೃತಿಯನುಳ್ಳ ಜೀವರುಗಳರಿಯರೆಂಬುದರ್ಥ(೫೯೮).

ಹೀಗೆ ಎರಡು ಅರ್ಥಗಳನ್ನು ಬರೆಯುವ ಪದ್ಧತಿಯನ್ನು ಇಟ್ಟುಕೊಂಡಿದ್ದು ಸಾಮಾನ್ಯವಾಗಿ ಇವು ೧ನೆಯ ಟೀಕೆಯ ಸಂಕ್ಷಿಪ್ತರೂಪಗಳಂತೆ ಆಗಾಗ ತೋರುತ್ತವೆ* ಕೆಲವು ವೇಳೆ ಇಲ್ಲಿಯ ಟೀಕೆ ೧ನೆಯ ಟೀಕೆಯ ಎರಡನೆಯ ಅರ್ಥವನ್ನು ಹೋಲುತ್ತದೆ. ಉದಾ:

ಬೆಟ್ಟಕ್ಕೆ–ಮೂಲ ಅಹಂಕಾರವೆಂಬ ಅದ್ರಿಗೆ, ಬೆಳ್ಳಾರ–ಪಂಚಭೂತಯುಕ್ತವಾದ ದೇಹ ವೆಂಬ ಬಲಿಯ, ಸುತ್ತಿತ್ತಯ್ಯ–ಪ್ರವೇಷ್ಠಿಸಿಕೊಂಡಿತ್ತಯ್ಯ, ಪಾಪದ ಬಲೆಯ–ಪಾಪದ ಸ್ವರೂಪವಾದ ಹೊನ್ನು ಹೆಣ್ಣು ಮಣ್ಣೆಂಬ ಪಾಪವನ್ನು, ತಂದು–ಆಗುಮಾಡಿಕೊಂಡು ಬಂದು, ಮುಂದೆ–ಆತ್ಮನ ಕ್ರಿಯಾ ದೃಷ್ಟಿಯ ಸಮ್ಮುಖದಲ್ಲಿ, ಒಟ್ಟಿದರಯ್ಯ–ಉಂಟುಮಾಡಿದರಯ್ಯ, ಬೇಂಟೆಕಾಱನು–ಯಮನೆಯ ವ್ಯಾಧನು, ಮೃಗವ–ಜೀವರುಗಳನು, ಅಟ್ಟಿ–ಜನನ ಮರಣಂಗಳಲ್ಲಿ ತಂದು ಸಂಹರಿಸಲು, ಮೃಗ–ಸಜ್ಜೀವಸ್ವರೂಪವಾದ ಶರಣನು, ಗೋರಿಗೊಳಗಾಗದನಯ್ಯ–ಅಷ್ಟರೊಳಗೆ ಶಿವಕೃಪೆಯಾಗಿ ಅಂತ ರಂಗವಲ್ಲಿ ಜ್ಞಾನೋದಯವಾಗಿ ಗುರೂಪಾವಸ್ಥೆಯಮಾಡಿ ಗುರುಕಾರುಣ್ಯಾನ ಹಡದು ಲಿಂಗಾಂಗ ಸಂಬಂಧಿಯಾದಂಥ ಶಿವಶರಣನು ಯವವನ ಮರಣಬಾಧೆಗೆ ವಶಗತವಾಗಸಯ್ಯ, ಹರನೊಡ್ಡಿದ ಬಲೆಯಲ್ಲಿ–ಪರಮೇಶ್ವರನುಂಟುಮಾಡಿದ ಸತ್ಕ್ರಿಯಾಚಾರವೆಂಬ ಪಾಶದಲ್ಲಿ, ಸಿಲುಕಿದ–ವಶಗತವಾದ, ಮೃಗ–ಸಜ್ಜೀವ ಸ್ವರೂಪವಾದ ಶರಣನು, ಕೂಡಲಸಂಗಮದೇವರಿಗೆ–ಇಷ್ಟಮಹಾಲಿಂಗಕ್ಕೆ, ಆರೋಗಣೆ ಯಾಯಿತ್ತು–ಆತ್ಮದ ಪದಾರ್ಥವೇ ರೂಪುಪದಾರ್ಥವಾಗಿ ಸಮರ್ಪಣೆಯಾಯಿತ್ತು(೮೩೭ I).

ಬೆಟ್ಟಕ್ಕೆ ಬೆಳ್ಳಾರ ಸುತ್ತಿತ್ತಯ್ಯ–ಸ್ಥೂಲತನುವನು ಪ್ರವೇಷ್ಠಿಸಿಕೊಂಡಿರುವಂಥ ಮೂಲಹಂಕಾರ ವೆಂಬ ಪರ್ವತಕ್ಕೆ ಇಂದ್ರಿಯಂಗಳೆಂಬ ಬೇಲಿಯು ಪ್ರವೇಷ್ಠಿಕೊಂಡಿತ್ತಯ್ಯ, ಪಾಪದ ಬಲೆಯ ತಂದು ಮುಂದೆ ಒಡ್ಡಿದರಯ್ಯ–ದೋಷಯುಕ್ತವಾದ ಮಲತ್ರಯಂಗಳೆಂಬ ಪಾಶವನಾಗುಮಾಡಿ ತಂದು ಭವಿಷ್ಯದಲ್ಲಿ ಮಡಗಿದರಯ್ಯ, ಬೇಂಟೆಕಾಱನುಮೃಗವನಟ್ಟಿ–ಯಮನೆಂಬ ವ್ಯಾದನು ಜೀವನೆಂಬ ಮೃಗವತಗುಳಲಾಗಿ ಮೃಗ ಗೋರಿಗೊಳಗಾಗದಯ್ಯ

ಜೀವನು ಮರಣವೆಂಬ ಲಕ್ಷಕ್ಕೆ ವಶಗತವಾಗದಯ್ಯ, ಹರನೊಡ್ಡಿದ ಬಲೆಯಲ್ಲಿ ಸಿಕ್ಕಿದ ಮೃಗವು ಕೂಡಲಸಂಗಮದೇವಂಗೋಗರವಾಯಿತ್ತು–ಪರಮೇಶ್ವರನುಂಟುಮಾಡಿದ ಮಹಾನುಭಾವವೆಂಬ ಬಲೆಯಲ್ಲಿ ವಶಗತವಾದ ಸಜ್ಜೀವನು ಪರಶಿವಲಿಂಗಕ್ಕೆ ಓದನವಾಯಿತ್ತು. (೮೩೭ II)

ಈತನು ಕೆಲವು ಸಲ ವಚನದ ಒಂದೆರಡು ಸಾಲುಗಳಿಗೆ ಮಾತ್ರ ಅರ್ಥ ಹೇಳಿ "ಮುಂದಕ್ಕೆ ಕಾಣಬಂದರ್ಥ" ಎಂದು ಹೇಳಿ ಮುಗಿಸುತ್ತಾನೆ. ಒಟ್ಟಿನಲ್ಲಿ ಸಾಮಾನ್ಯವಾಗಿ ವಾಚ್ಯಾರ್ಥವನ್ನು ಬಿಟ್ಟು ಒಮ್ಮೆಲೇ ತಾತ್ವಿಕಾರ್ಥ ಹೇಳುವ ಧೋರಣೆ ಇಟ್ಟುಕೊಂಡಿದೆ, ಈ ಟೀಕೆ.

---

* ಈ ಮಾತು ಬಸವಣ್ಣನವರ ಟೀಕಿನ ವಚನಗಳು, ಸಂಪುಟ ೧ಕ್ಕೆ ಹೆಚ್ಚು ಅನ್ವಯಿಸುತ್ತವೆ. ನೋಡಿ ವ, ೧೧೯.

III ನೆಯ ಟೀಕೆ :

"ಬಸವರಾಜದೇವರ ಷಟ್ಸ್ಥಲದ ವಚನದ ಬೆಡಗಿನ ಟೀಕು" ಎಂಬುದು ಇದರ ಹೆಸರು. ಈ ಟೀಕೆ ಕರ್ತೃ ಸೋಮಶೇಖರಶಿವಯೋಗಿಯೆಂದು, ಕೊನೆಗೆ ಬರುವ "ಸಚ್ಚಿದಾನಂದ ನಿತ್ಯಪರಿಪೂರ್ಣ ಅವಿರಳ ಪರಂಜ್ಯೋತಿ ಲೀಲಾವಿಗ್ರಹಮೂರ್ತಿಯಾದ ಸೋಮಶೇಖರಲಿಂಗ-ಚರಣಾರವಿಂದ ಮಕರಂದರಸಪಾನ ಮತ್ತಮಧುಕರಾಯಯಾನ ಸೋಮಶೇಖರ ಶಿವಯೋಗಿಕೃತ ಬಸವರಾಜದೇವರ ಷಟ್ಸ್ಥಲದ ವಚನದ ಬೆಡಗಿನ ಟೀಕು ಪರಿಸಮಾಪ್ತ ಮಂಗಳಮಹಾಶ್ರೀ ಶ್ರೀ" ಎಂಬ ಗದ್ಯಖಂಡದಿಂದ ಸ್ಪಷ್ಟವಾಗುತ್ತದೆ. ಈತನ ಇನ್ನೊಂದು ಕೃತಿ ತೋಂಟದ ಸಿದ್ಧಲಿಂಗನ 'ಷಟ್ಸ್ಥಲಜ್ಞಾನಸಾರಾಮೃತದ ಬೆಡಗಿನ ವಚನ ಟೀಕೆ.' ಈ ಎರಡೂ ವಚನಸಂಕಲನಗಳು ಬೆಡಗಿನ ವಚನಗಳಿಗೆ ಮಾತ್ರ ಬರೆದ ಟೀಕೆಗಳಾಗಿದ್ದು, ಈತನ "ಬೆಡಗು" ಪಾಂಡಿತ್ಯಕ್ಕೆ ಸಾಕ್ಷಿಯಾಗಿವೆ.

ಷಟ್ಸ್ಥಲಜ್ಞಾನ ಸಾರಾಮೃತದ ಬೆಡಗಿನ ವಚನಟೀಕೆಯ ಆದಿಯಲ್ಲಿ ಬರುವ "..ತೋಂಟದ ಸಿದ್ಧೇಶ್ವರನೆಂಬ ದೇಶಿಕಶಿರೋಮಣಿಯ ಕರುಣಾ ಪ್ರಸಾದಪಾತ್ರರಾದ ಬೋಳಬಸವೇಶ್ವರನು, ಅವರ ಕರುಣಾಪ್ರಸಾದಪಾತ್ರರಾದ ಗೂಳೂರು ಸಿದ್ಧಲಿಂಗಯ್ಯನವರು, ಅವರ ಕೃಪಾ-ಪ್ರಸಾದಪಾತ್ರರಾದ ಗಗನದಯ್ಯನವರು, ಅವರ ದಯಾನುಗ್ರಹಕ್ಕೆ ಯೋಗ್ಯರಾದ ಕಟ್ಟಿಗೆಹಳ್ಳಿ ಸಿದ್ಧಲಿಂಗೇಶ್ವರನು, ಅವರ ಅನುಗ್ರಹಪಾತ್ರರಾದ ಮುರಿಗಾಶಾಂತವೀರೇಶ್ವರನು, ಅವರಿಂದ ಅನುಗ್ರಹವ ಪಡೆದ ಮುರುಗಾ ಗುರುಸಿದ್ಧೇಶ್ವರನು, ಹೀಂಗೆ ಗುರುಸಂಪ್ರದಾಯವಿಡಿದು ಬಂದ ಬಸವಾದಿ ಪ್ರಮಾಥಗಣಂಗಳ ವಚನಾನುಭವವನು ಬೆಸಗೊಂಡ ಸೋಮಶೇಖರ ಶಿವಯೋಗಿ..."ಎಂಬ ಉಲ್ಲೇಖ ಈತನ ಶ್ರೀಮಂತ ಗುರುಪರಂಪರೆಯನ್ನು ಸಾರುತ್ತದೆ.

ತೋಂಟದಾರ್ಯನ ಕಾಲ ಕ್ರಿ.ಶ. ೧೪೭೦ ಎಂದು ಭಾವಿಸಿ ಕವಿಚರಿತೆಕಾರರು ಅವನಿಂದ ಎಂಟನೆಯ ತಲೆಮಾರಿನವನಾದ ಸೋಮಶೇಖರ ಶಿವಯೋಗಿಯ ಕಾಲ ಕ್ರಿ.ಶ. ೧೭೦೦ ಎಂದು ಹೇಳುತ್ತಾರೆ. ಆದರೆ ಇತ್ತೀಚಿನ ಸಂಶೋಧನೆಯಿಂದಾಗಿ ತೋಂಟದಾರ್ಯನ ಕಾಲ ಕ್ರಿ . ಶ. ೧೬೦೦ ಎಂದು ಖಚಿತವಾಗಿದೆ.* ಕಾರಣ ಅವನಿಂದ ಎಂಟನೆಯ ತಲೆಮಾರಿನ ಸೋಮಶೇಖರ ಶಿವಯೋಗಿಯ ಕಾಲ ಕ್ರಿ.ಶ. ಸುಮಾರ ೧೮೦೦ ಆಗುತ್ತದೆ. ಇಷ್ಟೇ ಏಕೆ, ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲೂಕಿನ ಮಾದಾಪುರಕ್ಕೆ ಸಂಬಂಧಿಸಿದ.

೧. ಶ್ರೀ ಮುರಿಗಾಸ್ವಾಮಿಗಳವರ

೨. ಚರಮೂರ್ತಿಗಳಾದಂಥ ಶಾಂತವೀರಸ್ವಾಮಿಗಳವರ ಕರಕಮಲಸಂಜನಿತವಾ

೩. ದ ಸೋಮಶೇಖರಶಿವಯೋಗಿಶ್ವರನು ಕಲಿಸಂದ ೪೯೪೩ ನೆಯ ಶೋಭನಕೃತು ಸಂವತ್ಸರದ ಕಾರ್ತಿಕ ಬ. ೨

೪. ಗುರುವಾರ ರೋಹಿಣೀ ನಕ್ಷತ್ರ ಪ್ರಾತಃಕಾಲ ಗಂಟೆ ೨ರ ಒಳಗೆಯಿ ಗದಿಗೆಯ ಮೇಲೆ ಕಳಶದ ಸ್ಥಾಪನ

೫. ಮಾಡಿದ್ದು.

---

* ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ(ಎಂ. ಎಂ. ಕಲಬುರ್ಗಿ ಮತ್ತು ಬಿ.ಆರ್.ಹಿರೇಮಠ) ಪ್ರಸ್ತಾವನೆ, ಪು.v-xix.

ಎಂಬ ಶಾಸನ ಪ್ರಸ್ತುತ ಟೀಕಾಕಾರ ಸೋಮಶೇಖರ ಶಿವಯೋಗಿಯನ್ನೇ ಸೂಚಿಸುವುದರಿಂದ ಈ ಶಾಸನದ ಕಾಲವಾದ ೨೫-೧೦-೧೮೪೫ರಲ್ಲಿ ಸೋಮಶೇಖರ ಶಿವಯೋಗಿ ಬದುಕಿದ್ದನೆಂಬುದು ಸ್ಪಷ್ಟ.

ಈತನು ಬಸವಣ್ಣನವರ 'ಷಟ್ಸ್ಥಲ ವಚನ' ಸಂಪುಟದಿಂದ ಬೆಡಗಿನ ವಚನಗಳನ್ನಾಯ್ದು ಟೀಕೆ ಬರೆದಿರುವನು. ತೀರಕ್ವಚಿತ್ತಾಗಿ ಒಂದು ವಚನಕ್ಕೆ ಎರಡು ಅರ್ಥ ಬರೆದುದೂ ಕಂಡು ಬರುತ್ತದೆ (೯೨೯). ಸಾಮಾನ್ಯವಾಗಿ ಪ್ರತಿಪದಾರ್ಥ ಬರೆದ ಇಲ್ಲವೆ ವಾಕ್ಯವನ್ನು ಹಿಮ್ಮೆಟ್ಟಿಸಿ ಬರೆವ ಟೀಕಾಲೇಖನ ಪದ್ಧತಿಯನ್ನು ಇಟ್ಟಿಕೊಂಡಿದ್ದರೂ ಕೆಲವು ಸಲ ಇವುಗಳ ಮಿಶ್ರಣವೂ ಎಡೆಪಡೆದಿದೆ. ಈ ಮೂರಕ್ಕೂ ಉದಾಹರಣೆ.

೧. "ಸತ್ಯವಿದೆ-ಯಥಾರ್ಥಜ್ಞಾನಸಂಬಂಧ ಉಂಟಾಗಿರುತಿದೆ, ಸಮಾಧಾನವಿದೆ-ಸಕಲೇಂದ್ರಿಯಂಗಳ ವಿಷಯಪದಾರ್ಥದಲ್ಲಿ ಲಿಂಗಸಂಬಂಧಮಾಡಿ ಆ ಲಿಂಗಪ್ರಸಾದವ ಸ್ವೀಕರಿಸುವ ತರಹರ ಉಂಟಾಗಿರುತ್ತದೆ. ಮತ್ತಂ ಶಮೆ ದಮೆ ಶಾಂತಿ ದಾಂತಿಗಳ ತರಹರ ಉಂಟಾಗಿರುತ್ತದೆ. ಸರ್ವಸನುಮತವೆಂಬ ಸುಖವಿದೆ-ಸಮಸ್ತ ಇಂದ್ರಿಯಂಗಳಲ್ಲಿ ಲಿಂಗಪರಿಣಾಮ ಉಂಟಾಗಿರುತ್ತದೆ. ಮನಕ್ಕೆ ಬಾರದಿದೇನಯ್ಯ-ಈ ಪ್ರಕಾರದಲ್ಲಿದ್ದಲ್ಲಿ ಶರಣಸತಿಯಾಚರಣೆಯು ನಿನ್ನ ಮನಸ್ಸಿಗೆ ಮಂಜುಳವಾಗದೆ ಇರುವುದಿದೇನು ಕಾರಣವಯ್ಯ ಮನಕ್ಕೆ ಸೋಂಕದಿದೇನಯ್ಯ-ನನ್ನ ಮನಸ್ಸಿಗೆ ತಿಳಿಯಲ್ಪಡದೆಯಿರುವುದೇನು ಕಾರಣವಯ್ಯ. ಅನು ನೀನೆಂಬುದೊಂದು ಘನವಿದೆ-ಶರಣ ಲಿಂಗ ಸಂಬಂಧವೆಂಬುದೊಂದಧಿಕತ್ವವುಂಟಾಗಿರುತ್ತದೆ. ಕೂಡಲಸಂಗಮದೇವ-ಎಲೆ ಪರಶಿವಲಿಂಗವೆ, ಭ್ರಮೆಯೊ-ಲಿಂಗಭ್ರಾಂತೋ"(೯೧೫).

೨. "ಇಷ್ಟಲಿಂಗದ ಸತ್ಕ್ರಿಯಾಚರಣೆಯನೇನೆಂದುಪಮಿಸುವೆನೆಂದು ಕ್ರಿಯಾಶಕ್ತಿಸ್ವರೂಪವಾದ ಶರಣನು ಸುಜ್ಞಾನಶಕ್ತಿಯೆಂಬ ಮಾತೆಯ ಕೂಡೆ ಮಾಡುವ ಪ್ರಶ್ನೆಯು ಎಂಬುದೀಗ, ಮನೆಯ ಗಂಡನ ಮನೆವಾರ್ತೆಯನೇನ ಹೇಳುವೆನವ್ವಾ ಎಂಬ ಶಬ್ದಕ್ಕರ್ಥ. ದೇವಭಾವದ ವರ್ತನೆಯನಂಗೀಕಸನೆಂಬುದೀಗ, ಅಂಗವಿದ್ಯೆಯನೊಲ್ಲನೆಂಬ ಶಬ್ದಕ್ಕರ್ಥ. ಭಿನ್ನರೂಪಭ್ರಾಂತಿ ನಷ್ಟವಾದಲ್ಲದೆ ಲಿಂಗ ನೀರಿಕ್ಷಣೆ ದೊರಕೊಳ್ಳದೆಂಬುದೀಗ, ಕಂಗಳೊಳಗಣ ಕಸವ ಕಳೆದಲ್ಲದೆ ನೋಡಲೀಯನೆಂಬ ಶಬ್ದಕ್ಕರ್ಥ. ಕುಚಿತ್ತಾದಿ ಹಸ್ತಗಳು ಮಂತ್ರ ಲಿಂಗ ಸಂಬಂಧದಿಂದೆ ನಿವೃತ್ತಿಯಾದಲ್ಲದೆ ಸುಚಿತ್ತಾದಿ ಹಸ್ತಗಳಲ್ಲಿ ಲಿಂಗಸ್ಪರ್ಶನ ದೊರೆಕೊಳ್ಳಲಿಲ್ಲವೆಂಬುದೀಗ, ಕೈಯ ತೊಳೆದಲ್ಲದೆ ಮುಟ್ಟಲೀಯನೆಂಬ ಶಬ್ದ ಕ್ಕರ್ಥ. ದುಶ್ಚರಿತ್ರವೆಂಬ ಚರಣನಿವೃತ್ತಿಯಾಗಿ ಸಚ್ಚರಿತ್ರ ನೆಲೆಗೊಂಡಲ್ಲದೆ ಲಿಂಗವು ತನ್ನ ದಿಕ್ಕ ಹೊದ್ದಲೀಸನೆಂಬುದೀಗ, ಕಾಲ ತೊಳೆದಲ್ಲದೆ ಹೊದ್ದಲೀಯನೆಂಬ ಶಬ್ದಕ್ಕರ್ಥ. ಇಂತು-ಹಿಂಗೆ, ಸಕಲೇಂದ್ರಿಯಂಗಳು ಮಂತ್ರ ಲಿಂಗ ಸಂಬಂಧದಿಂದ ನಿವೃತ್ತಿಯಾಗಿ ಸುಜ್ಞಾನವಳವಟ್ಟ ಕಾರಣ ಲಿಂಗದಲಿ ಏಕಾರ್ಥ ದೊರಕೊಂಡಿತ್ತೆಂಬುದೀಗ, ಸರ್ವಾಂಗ ತಲೆದೊಳೆದ ಕಾರಣ ಕೂಡಲಸಂಗಮದೇವನೆನ್ನ ಕೂಡಿಕೊಂಡನವ್ವಾ ಎಂಬ ಶಬ್ದಕ್ಕರ್ಥ"(೯೧೩).

೩. "ಇಷ್ಟಲಿಂಗವೆಂಬ ಜಾಮಾತೃವಿನ ದರ್ಶನಮಾತ್ರದಿಂದೆ ಅಂತರಂಗದಷ್ಟಪಾಶ ಬಹಿರಂಗದ ಪಂಚಪಾಶಂಗಳ ನಿವೃತ್ತಿಯ ಮಾಡೆಂದು ಜ್ಞಾನಶಕ್ತಿಯೆಂಬ ಮಾತೆ ಕ್ರಿಯಾಶಕ್ತಿಸ್ವರೂಪವಾದ ಶರಣ ಸತಿಯ ಕೂಡೆ ಮಾಡುವ ಪ್ರಶ್ನೆಯೆಂಬುದೀಗ ಅಳಿಯನ ಕಂಡರೆ ನಾಚೆಂಬೆ ಮಗಳೆ ಎಂಬ

ಶಬ್ದಕ್ಕರ್ಥ. ಇಷ್ಟಲಿಂಗದೇವನೆಂಬ ಜಾಮಾತೃವಿನ ದರ್ಶನವಾದಲ್ಲಿ ಪ್ರಪಂಚನಿಂದೆ ಹೊರಚ್ಚಾಗುಯೆಂದು ಜ್ಞಾನಶಕ್ತಿಯೆಂಬ ಮಾತೆಯು ಕ್ರಿಯಾಶಕ್ತಿಯ ಕೂಡೆ ಮಾಡುವ ಪ್ರಶ್ನೆಯೆಂಬುದೀನಿಗ ಅಳಿಯನ ಕಂಡರೆ ತೊಲಗೆಂಬೆ ಮಗಳೆಯೆಂಬ ಶಬ್ದಕ್ಕರ್ಥ. ನಾಚುವರೆ ಮೋರೆಯಿಲ್ಲ-ಅಭಿಮಾನಿಸಿಕೊಂಬುವರೆ ದುರ್ವಿವೇಕವೆಂಬ ವದನ ಉಂಟಾಗಲರಿಯದು. ತೊಲಗುವರೆ-ಹೊರಚ್ಚಾಗುವರೆ, ನೆಲನಿಲ್ಲ-ದೇಹಭಾವದ ವರ್ತನೆಯು ಶರಣಸತಿಗೆ ದೊರೆಕೊಳ್ಳದೆಂಬುದರ್ಥ. ಜ್ಞಾನಶಕ್ತಿಸ್ವರೂಪಾದ ಶ್ರೀಗುರುದೇವನು ಕ್ರಿಯಾಶಕ್ತಿಸ್ವರೂಪಾದ ಶರಣಸತಿಯರೀರ್ವರಿಗೂ ಇಷ್ಟಲಿಂಗದೇವನೊರ್ವನೇ ವಲ್ಲಭನಾದ ಮೇಲೆ ದುರ್ವಿವೇಕನೆಂಬ ವದನ ಉಂಟಾಗದುಯೆಂದು ಜ್ಞಾನಶಕ್ತಿಸ್ವರೂಪಾದ ಶ್ರೀಗುರು ದೇವರು ಕ್ರಿಯಾಶಕ್ತಿ ಸ್ವರೂಪಾದ ಶರಣಸತಿ ಕೂಡೆ ಮಾಡುವ ಪ್ರಶ್ನೆಯೆಂಬುದೀಗ ಇಬ್ಬರಿಗೊಬ್ಬ ಗಂಡನಾದ ಬಳಿಕ ಇನ್ನೆಲ್ಲಿಯು ಮೋರೆ-ಮಗಳೆಯೆಂಬ ಶಬ್ದಕ್ಕರ್ಥ ಕೂಡಲಸಂಗಮದೇವಯ್ಯನೆಂಬ-ಪರಶಿವಲಿಂಗವೆಂಬ, ಗಂಡನಾದ ಬಳಿಕ-ವಲ್ಲಭನಾದ ಮೇಲೆ, ಇನ್ನೆಲ್ಲಿಯ ಮೋರೆ ಮಗಳೆ-ಇನ್ನಾವ ಕಡೆಯ ದುರ್ವಿವೇಕವೆಂಬ ವಕ್ತ್ರವು ಶರಣ ಸತಿಯೆ, ಇಲ್ಲವೆಂಬುದರ್ಥ"(೯೧೪).

ಕೆಲವು ಸಲ ಈತನು ವಚನದಿಂದ ಕೇವಲ ಒಂದೆರಡು ವಾಕ್ಯ ಇಲ್ಲವೆ ಒಂದೆರಡು ಪದಗಳನ್ನು ಎತ್ತಿಕೊಂಡು ಅರ್ಥ ಬರೆದುದೂ ಉಂಟು. ಇಲ್ಲಿ ವಿಶೇಷವಾಗಿ ಗಮನಿಸಬೇಕಾದ ಸಂಗತಿಯೆಂದರೆ ಇಲ್ಲಿಯ ಕೆಲವೇ ಟೀಕೆಗಳು ಗುರುಬಸವರಾಜನ ಟೀಕೆ(IV)ಗಳಾಗಿವೆ. ಕೆಲವು ಅಲ್ಪಮಟ್ಟಿಗೆ ಅವುಗಳನ್ನು ಹೋಲುತ್ತವೆ; ಇನ್ನು ಕೆಲವು ಸಂಪೂರ್ಣ ಬೇರೆಯಾಗಿವೆ.*

IV ನೆಯ ಟೀಕೆ :

ಈ ಟೀಕೆಯ ಹೆಸರು 'ಬಸವ ವಚನ ಸಾರಾಮೃತ'ವೆಂದೂ ಕರ್ತೃ ಗುರುಬಸವರಾಜದೇವನಾಗಿರಬಹುದೆಂದೂ ಪ್ರಾರಂಭದ "ಗುರುಬಸವರಾಜದೇವರು ಸೇರಿಸಿದ ಬಸವ ವಚನಸಾರಾಮೃತ' ಎಂಬ ವಾಕ್ಯ ಸ್ಪಷ್ಟಪಡಿಸುತ್ತವೆ. ಇಲ್ಲಿ ಬಸವಣ್ಣನವರ "ಷಟ್‌ಸ್ಥಲದ ವಚನಗಳು" ಸಂಪುಟಕ್ಕೆ ಸಂಬಂಧಿಸಿದ ಕೆಲವು ವಚನಗಳಿಗೆ ಮಾತ್ರ ಟೀಕೆಯಿದೆ. ಇಲ್ಲಿಯ ಸುಮಾರು ೭೩ ವಚನ ಟೀಕೆಗಳು ಲಿಂಗ ಲೀಲಾವಿಲಾಸ ಚಾರಿತ್ರದಲ್ಲಿ ಕೆಲವು ವಚನ ಟೀಕೆಗಳು ಸೋಮಶೇಖರ ಶಿವಯೋಗಿಯ (III ನೆಯ) ಟೀಕೆಯಲ್ಲಿ* ಬೇರೆ ಕೆಲವು ವಚನ ಟೀಕೆಗಳು ಕಟ್ಟಿಗೆಹಳ್ಳಿಸ್ವಾಮಿಗಳು ಸೇರಿಸಿದ 'ಏಕೋತ್ತರ ಶತಸ್ಥಲಸಾರದಲ್ಲಿ ಗೋಚರಿಸುತ್ತವೆ. ಈ ನಾಲ್ಕು ಕೃತಿಗಳಲ್ಲಿ ಬಸವಣ್ಣವರ ಇನ್ನೂ ಕೆಲವು ವಚನಗಳಿಗೆ ಟೀಕೆ ಇರುವುದರಿಂದ ಇವರಲ್ಲಿ ಪ್ರಾಚೀನವಾದ ಕಲ್ಲಮಠದ ಪ್ರಭುದೇವನೇ ಬಸವಣ್ಣನವರ ಎಲ್ಲ ಷಟ್‌ಸ್ಥಲದ ವಚನಗಳಿಗೆ ಟೀಕೆಯನ್ನು ಬರೆದಿದ್ದನೆ? ಅಥವಾ ಇವರೆಲ್ಲರಿಗೂ ಮೂಲವಾದ ಬೇರೊಂದು ಟೀಕಾಗ್ರಂಥವಿದ್ದಿತೆ? ಎಂಬ ಸಂದೇಹ ಹುಟ್ಟುವದಲ್ಲದೆ ಅದು ಕನಿಷ್ಟಪಕ್ಷ ಲಿಂಗಲೀಲಾವಿಲಾಸ ಚಾರಿತ್ರದಷ್ಟು ಹಿಂದಿನದೆಂದು ವೇದ್ಯವಾಗುತ್ತದೆ. ಆ ಕೃತಿಯಿಂದ ೩೭೪ ವಚನ ಟೀಕೆಗಳನ್ನು ಆಯ್ದುಕೊಂಡು ಇಲ್ಲಿ "ಸೇರಿಸಿದ" ಗುರುಬಸವರಾಜದೇವನ ಕಾಲ ೧೫

* ಈ ಮಾತು ಬಸವಣ್ಣನವರ ಟೀಕಿನ ವಚನಗಳು, ಸಂಪುಟ ೧ಕ್ಕೆ ಹೆಚ್ಚು ಅನ್ವಯಿಸುತ್ತದೆ.

ನೆಯ ಶತಮಾನದ ತರುವಾಯ ಎಲ್ಲಿ ನಿಲ್ಲುತ್ತದೆ? ಹೇಳುವುದು ಕಷ್ಟ. ಈ IV ನೆಯ ಟೀಕೆ ಮತ್ತು V ನೆಯ ಟೀಕೆಗಳಲ್ಲಿ ಸಾಮ್ಯತೆ ಕಂಡುಬರುತ್ತದೆ. ಈ ಮಾತು ಬಸವಣ್ಣನವರ ಟೀಕಿನ ವಚನಗಳು ಸಂಪುಟ ೨ಕ್ಕೆ ಹೆಚ್ಚು ಅನ್ವಯಿಸುತ್ತದೆ. ಈ ಕಟ್ಟಿನಲ್ಲಿರುವ ಪ್ರಭುದೇವರ ವಚನ ಟೀಕೆಯ ಕೊನೆಗೆ ಬರುವ "ಶ್ರೀ ರಾಕ್ಷಸನಾಮ ಸಂವತ್ಸರದ ಪುಷ್ಯಮಾಸದ ಬಹುಳ ಆದಿ ಚತುರ್ದಶಿ ದಿವ್ಯವಾರದಲು ಟೀಕು ಸಮಾಪ್ತ ಮಂಗಳ ಮಹಾ" ಎಂಬುದೂ ಗುರುಬಸವರಾಜದೇವನ ಕಾಲ ನಿರ್ದೇಶನಕ್ಕೆ ನೆರವಾಗದು. ಆದರೆ ಈತನು ಸೋಮಶೇಖರ ಶಿವಯೋಗಿಗೆ ಸ್ವಲ್ಪ ಪ್ರಾಚೀನನಾಗಿರುವ ಅಂದರೆ ೧೭ ನೆಯ ಶತಮಾನದವನಾಗಿರುವ ಸಂಭವವಿದೆ.

"ಬಸವ ವಚನಸಾರಾಮೃತ" ಎಂಬ ಶೀರ್ಷಿಕೆಯೇ ಹೇಳುವಂತೆ ವಚನಗಳ ಒಳತುಡಿತವನ್ನೇ ಸಾರವತ್ತಾದ, ಸಂಗ್ರಹವತ್ತಾದ ಗದ್ಯದಲ್ಲಿ ಇಲ್ಲಿಯ ಟೀಕೆಗಳು ವ್ಯಕ್ತಪಡಿಸುತ್ತವೆ. ಉದಾ: ಲಿಂಗವಿದ್ದಠಾವೇ ಮಂಗಳವಾದಕಾರಣ ಲಿಂಗವಂತನಿರ್ದ ಕೇರಿ ಶಿವಲೋಕ, ಆತನಿರ್ದುದೇ ಶಿವನ ಮನೆಯೆಂಬುದೀ ವಚನದರ್ಥ" (೬೧೯).

ಹೀಗೆ ಪರಿಮಿತ ಗಾತ್ರದಲ್ಲಿ ವಚನಗಳ ಒಳತೋಟಿಯನ್ನು ಕಾಣಲು ಮಾಡಿದ ಶ್ರದ್ಧೆಯ ಪ್ರಯತ್ನ ಈ ಟೀಕೆಯಲ್ಲಿ ಎದ್ದು ತೋರುತ್ತದೆ.

V ನೆಯ ಟೀಕೆ :

"ಬಸವೇಶ್ವರದೇವರ ವಚನಸಾರಾರ್ಥ" ಎಂಬುದು ಈ ಕೃತಿಯ ಹೆಸರು. ಪರ್ವತಶಿವಯೋಗಿ ಇದರ ಕರ್ತೃ. ಈ ಅಂಶವನ್ನು ಭಕ್ತಸ್ಥಲದ ಅಂತ್ಯದಲ್ಲಿ ಬರುವ "ಶ್ರೀಮತ್ ಷಟ್ಸ್ಥಲಾದ್ವೈತ ವಿದ್ಯಾ ಪ್ರಮೋದಿತ ಶ್ರೀ ವೀರಮಾಹೇಶ್ವರ ಬಾಲೇಂದುಪುರದ ಹರೀಶ್ವರ ಶಾಂತವೀರೇಶ್ವರ ಚಿದ್ಗರ್ಭ ಸಂಭವ ಪರ್ವತಶಿವಯೋಗೀಶ್ವರ ವಿರಚಿತಮಪ್ಪ ಬಸವೇಶ್ವರದೇವರ ವಚನಸಾರಾರ್ಥ" ಎಂಬ ವಾಕ್ಯ ಸ್ಪಷ್ಟಪಡಿಸುತ್ತದೆ. ಈತನು ಎಳಂದೂರ ಹರೀಶ್ವರ ಶಾಂತವೀರೇಶ್ವರನ ಶಿಷ್ಯನೆಂದು ಸೂಚಿಸುತ್ತದೆ. ಮುರಿಗೆಯ ಶಾಂತವೀರನ ಪ್ರಭುಲಿಂಗ ಕಂದದ ಟೀಕೆಯ ಕೊನೆಯಲ್ಲಿ "ಶ್ರೀಮತ್ಸರ್ವಜ್ಞತ್ವಾದಿಷಟ್ಭಕ್ತಿ ಷಡಂಗಸಂಯೋಗ ಷಟ್ಸ್ಥಲಬ್ರಹ್ಮಜ್ಞಾನಪಾರಾಂಗನ ವರ್ಣಾಶ್ರಮಾತೀತ ವೀರಮಹೇಶ್ವರಾಚಾರ್ಯ ಸಿದ್ಧಲಿಂಗಸ್ವಾಮಿಗಳ ಜ್ಞಾನೋಪದೇಶಪಾತ್ರನಾದ ಬಾಲೇಂದುಪುರದ ಹರೀಶ್ವರ ಶಾಂತವೀರೇಶ್ವರ ಕರಸರಸಿಜಾತ ಶ್ರೀ ವೀರಮಾಹೇಶ್ವರ ಪರ್ವತಶಿವಯೋಗಿ ವಿರಚಿತ" ಎಂದು ಹೇಳಿರುವುದರಿಂದ ಎಳಂದೂರ ಹರೀಶ್ವರ ಶಾಂತವೀರೇಶ್ವರನ ಶಿಷ್ಯನಾದ ಈತನು ಸಿದ್ಧಲಿಂಗನೆಂಬವನ ಶಿಷ್ಯನೆಂದೂ ವೇದ್ಯವಾಗುತ್ತದೆ.

ಈತನು ಬಸವೇಶ್ವರದೇವರ ವಚನಸಾರಾರ್ಥವನ್ನಲ್ಲದೆ ಮುರಿಗೆಯ ಶಾಂತವೀರನ ಪ್ರಭುಲಿಂಗ ಕಂದದ ಟೀಕೆ, ಕರಸ್ಥಲದ ನಾಗಲಿಂಗ ತ್ರಿಪದಿಯ ಟೀಕೆ, ಚೆನ್ನಮಲ್ಲನ ಗುರುಸ್ತೋತ್ರ ತ್ರಿಪದಿಯ ಟೀಕೆ, ಚೆನ್ನಬಸವಣ್ಣನವರ ಕರಣಹಸಿಗೆಯ ಟೀಕೆ, ಚೆನ್ನಬಸವಣ್ಣನವರ ಮಿಶ್ರಾರ್ಪಣ ಟೀಕೆ, ಭೋಜದೇವಕೃತ ತತ್ತ್ವಪ್ರಕಾಶಿಕಾ ಟೀಕೆ, ಏಕೋತ್ತರಶತಸ್ಥಲಟೀಕೆ, ಷಡ್ವಕ್ತ್ರ ಸ್ತೋತ್ರದ ಟೀಕೆ, "ಸಂಗಮೇಶ್ವರ" ಅಂಕಿತದ ಗುರುಸ್ತೋತ್ರ ತ್ರಿವಿಧಿಯ ಟೀಕೆಗಳನ್ನೂ ಬರೆದಿರುವನು.

ತೋಂಟದಾರ್ಯನ ಕಾಲ ಕ್ರಿ.ಶ. ೧೪೭೦ ಇವನ ಪರಂಪರೆಯ ಮುರಿಗೆಯ ಶಾಂತ ವೀರೇಶನ (ಕ್ರಿ.ಶ.೧೫೩೦)ಗ್ರಂಥಕ್ಕೆ ಟೀಕೆ ಬರೆದಿರುವುದರಿಂದ ಇವನ ಕಾಲ ಕ್ರಿ.ಶ. ೧೬೫೦ ಎಂದು ಕವಿಚರಿತೆಕಾರರು ಹೇಳುತ್ತಾರೆ. ಆದರೆ ಮುರಿಗೆಯ ಶಾಂತವೀರನು ೫-೫-೧೭೦೩ ರಲ್ಲಿ ಐಕ್ಯನಾದನೆಂದು ಶಿಷ್ಯ ಮುರಿಗೆಯ ಗುರುಸಿದ್ಧನ "ಮುರಿಗಾಶಾಂತವೀರೇಶ್ವರ" ತಾರಾವಳಿಯಿಂದ ತಿಳಿದುಬರುತ್ತದೆ. ಅಲ್ಲದೆ ಇತ್ತೀಚಿನ ಸಂಶೋಧನೆಯಿಂದಾಗಿ ತೋಂಟದಾರ್ಯರ ಕಾಲ ೧೦೦ ವರ್ಷ ಮುಂದೆ ಬಂದಿದೆ. ಹೀಗಾಗಿ ಈ ಪರಂಪರೆಗೆ ಸಂಬಂಧಿಸಿದ ಪರ್ವತ ಶಿವಯೋಗಿಯ ಕಾಲವೂ ೧೦೦ ವರ್ಷದಷ್ಟು ಮುಂದೆ ಬಂದು ಕ್ರಿ.ಶ. ೧೭೫೦ ಆಗುತ್ತದೆ.

ಚತುರಾಸ್ಯ ಪುರಾಣದ ಕರ್ತೃ ಸಂಪಾದನೆಯ ಪರ್ವತೇಶ್ವರ, ವಿರಕ್ತ ತೋಂಟದಾರ್ಯನ ಗುರು ಪರ್ವತೇಂದ್ರ, ನನ್ನಯ್ಯಗಳ ಚಾರಿತ್ರ್ಯದ ಕರ್ತೃ ಪರ್ವತದೇವ ಇವರಿಂದ ಭಿನ್ನನಾಗಿದ್ದಾನೆ, ಈ ಪರ್ವತಶಿವಯೋಗಿ. ಗುರುಬಸವರಾಜನ ಟೀಕೆಯಂತೆ ಈತನ ಟೀಕೆಯದೂ ಈ ವರೆಗೆ ಒಂದೇ ಪ್ರತಿ ಸಿಕ್ಕಿದೆ. ಸಿಕ್ಕ ಒಂದು ಪ್ರತಿಯೂ ಬಹುಶಃ ಲಿಪಿಕಾರನ ಹೊಣಗೇಡಿತನದಿಂದಾಗಿ ಅಚ್ಚುಕಟ್ಟಾಗಿ ಲಿಪಿಸಲ್ಪಟ್ಟಿಲ್ಲ. ಕಾರಣ ಈತನ ಟೀಕೆ ಅಲ್ಲಲ್ಲಿ ಒಂದು ಬಗೆಯ ಅಪೂರ್ಣ ಸ್ಥಿತಿಯಲ್ಲಿ ನಿಂತಂತಾಗಿದೆ. ಈ ಟೀಕೆ ವಾಚ್ಯಾರ್ಥಕ್ಕಿಂತ ತಾತ್ವಿಕ ಅರ್ಥದತ್ತ ತನ್ನ ಒಲವನ್ನು ತೋರಿಸುತ್ತದೆ. ಉದಾ:

ಸತ್ಕ್ರಿಯೆಗಳನು ಸಮ್ಯಕ್ ಜ್ಞಾನದಲ್ಲಿ ಮಥನವ ಮಾಡಿದವರಾರಾದೊಡೆಯುಂಟಾದರೆ ಯೆಂಬುದೀಗ, ನಾರುಳಿಯ ಹಣಿದವನಾರಾದರೂ ಆದರೆಯೆಂಬ ಶಬ್ದಕ್ಕರ್ಥ. ನಾರುಳಿಯಲು– ಕ್ರಿಯಾಫಲವವಶೇಷಿತವಾಗಲು. ಮುಂದೆ–ಜನ್ಮಾಂತರದಲ್ಲಿ, ಅಂಕುರಿತ ಫಲ ತಪ್ಪದು–ಜೀವನಿಗೆ [ಜೀವಭಾವ] ಬಿಡಲಜೆಯದು, ಮಾಡುವನ್ನಕ್ಕ-–ಅಂಗ ಲಿಂಗಕ್ಕೆ ಭಿನ್ನವಿಟ್ಟು ಪೂಜೆಯನಸಗುವ ಪರ್ಯಂತರವು, ಫಲದಾಯಕ–ಫಲಪ್ರಾಪ್ತಿಯುಳ್ಳಾತನು, ಮಾಟವಱತು–ನಾ ಮಾಡುತ್ತೈದೇನೆ ಇವರು ಕೈಕೊಳ್ಳುತ್ತೈದಾರುಯೆಂಬ ಭಿನ್ನಭಾವವು ಲಿಂಗದಲ್ಲಿ ನಿವೃತ್ತಿಯಾಗಿ ನಿಮ್ಮಲ್ಲಿ ಸ್ವಯವಾದರೆ ಲಿಂಗದಲ್ಲಿ ಸಹಜ ಸಮರಸೈಕ್ಯವು ದೊರೆಕೊಂಡರೆ.

ಮೇಲಿನ ಎಲ್ಲ ವಿವರಣೆಯಿಂದ ಈ ಟೀಕೆಗಳಲ್ಲಿ I ನೆಯದು ೧೯ನೆಯ ಶತಮಾನದಲ್ಲಿ II ನೆಯದು ೧೮ನೆಯ ಶತಮಾನದಲ್ಲಿ ಹುಟ್ಟಿರಬಹುದು, III ಮತ್ತು Vನೆಯವು ೧೮ ನೆಯ ಶತಮಾನದಲ್ಲಿ ಹುಟ್ಟಿವೆ. IV ನೆಯದು ಬಹುಶಃ ೧೭ನೆಯ ಶತಮಾನದಲ್ಲಿ ಸಂಕಲಿತವಾಗಿದ್ದಾದರೂ ಅಲ್ಲಿಯ ಟೀಕೆಗಳ ಸೃಷ್ಟಿ ೧೫ ನೆಯ ಶತಮಾದಲ್ಲಿ ಹುಟ್ಟಿದ ಲಿಂಗಲೀಲಾವಿಲಾಸ ಚಾರಿತ್ರ್ಯಕ್ಕೆ ಪ್ರಾಚೀನವೆಂದು ಹೇಳಬಹುದು (೮೬೫).

• ಟೀಕೆಗಳ ಸಾಧನೆ •

ಒಂದು ಕೃತಿಗೆ ಬರೆದ ಟೀಕೆ, ಅದರ ಹೊರಮೈ ಇಲ್ಲವೆ ಒಳಮೈ, ಇಲ್ಲವೆ ಇವೆರಡನ್ನೂ ಕುರಿತು ನಡೆಸಿದ ಅಧ್ಯಯನವಾಗಿರುತ್ತದೆ. ಇವುಗಳಲ್ಲಿ ಹೊರಮೈ ಅಧ್ಯಯನ ಶಬ್ದಾರ್ಥಪಾತಾಳಿ ಯಲ್ಲಿ ವ್ಯವಹರಿಸಿದರೆ, ಒಳಮೈ ಅಧ್ಯಯನ ಭಾವಾರ್ಥ ಪಾತಳಿಯಲ್ಲಿ ವ್ಯವಹರಿಸುತ್ತದೆ.

ಟೀಕೆಯೆಂಬುದು ಸಾಹಿತ್ಯಕೃತಿಗೆ ಬರೆದ ಒಂದು ವಿಧದ ವಿಮರ್ಶೆಯೇ ಸರಿ. ಆದರೆ ಸಾಹಿತ್ಯವನ್ನು ವಿಮರ್ಶಿಸುವ ದೃಷ್ಟಿ ಜನಾಂಗದಿಂದ ಜನಾಂಗಕ್ಕೆ, ಕಾಲದಿಂದ ಕಾಲಕ್ಕೆ ಭಿನ್ನವಾಗುವುದು ಸಹಜ. ವಚನನಿಧಿಯನ್ನೇ ಕುರಿತು ಹೇಳುವುದಾದರೆ ಅದನ್ನು ಹರಿಹರಾದಿಗಳು ಸಾಹಿತ್ಯ ದೃಷ್ಟಿಯಿಂದ ನೋಡಿದರೆ, ತರುವಾಯದ ನೂರೊಂದು ಮತ್ತು ಏಳು ನೂರೊಂದು ವಿರಕ್ತರು ತಾತ್ವಿಕದೃಷ್ಟಿಯಿಂದ ನೋಡಿದರು. ಇಂದು ಅದು ಸಾಮಾಜಿಕ ದೃಷ್ಟಿಯಿಂದ ತುಂಬ ಬೆಲೆಯುಳ್ಳುದಾಗಿ ಕಾಣಿಸತೊಡಗಿದೆ.

ಬಸವಣ್ಣನವರ ವಚನಗಳಿಗೆ ಟೀಕೆಗಳು ಹುಟ್ಟಿದುದು ವಚನಗಳನ್ನು ತಾತ್ವಿಕ ದೃಷ್ಟಿಯಿಂದ ನೋಡುತ್ತಲಿದ್ದ ಕಾಲದಲ್ಲಿ. ಹೀಗಾಗಿ ಸಾಹಿತ್ಯಿಕ, ಸಾಮಾಜಿಕ ದೃಷ್ಟಿಗಳಿಂದ ಈ ಟೀಕೆಗಳನ್ನು ನೋಡಬಯಸುವವರಿಗೆ ಇಲ್ಲಿ ನಿರಾಶೆ ಖಂಡಿತ. ಟೀಕಾಕಾರರ ಉದ್ದೇಶವು ಅದಾಗಿರಲಿಲ್ಲ. ಕಾರಣ ಈ ಟೀಕೆಗಳು ವಚನಗಳಿಗೆ ಬರೆದ ಸಾಹಿತ್ಯಕ ವಿಮರ್ಶೆ, ಸಾಮಾಜಿಕ ವಿಮರ್ಶೆಗಳಾಗಿರದೆ ಶಬ್ದಕ್ಕೆ ಅರ್ಥವನ್ನು ಕೊಡುತ್ತ ಬರೆದ ತಾತ್ವಿಕ ವಿವರಣೆ ವಿಮರ್ಶೆಗಳಾಗಿವೆ ಯೆಂಬುದನ್ನು ಓದುಗರು ನೆನಪಿನಲ್ಲಿಟ್ಟುಕೊಳ್ಳಬೇಕು.

ಇನ್ನೊಂದು ಸಂಗತಿಯೆಂದರೆ ಈ ಟೀಕೆಗಳು ಹುಟ್ಟಿದುದು ವೀರಶೈವವು ಧರ್ಮದ ತಿಳಿಜಲ ಪ್ರವಾಹಘಟ್ಟವನ್ನು ದಾಟಿ ಒಂದು ವ್ಯವಸ್ಥೆಗೆ ಒಳಪಟ್ಟ ಮತೀಯ ತಟಾಕವಾಗಿದ್ದ ಮತ್ತು ಅದನ್ನೂ ದಾಟಿ ಜಾತಿಕೂಪವಾಗಿದ್ದ ಕಾಲದಲ್ಲಿ; ಪಾರಿಭಾಷಿಕ ಪದಗಳು ವಾಚ್ಯಾರ್ಥಕ್ಕೆ ಇಳಿಯುತ್ತಿದ್ದ ಕಾಲದಲ್ಲಿ. ಹೀಗಾಗಿ ಇವುಗಳಲ್ಲಿ ಶಕ್ತಿವಿಶಿಷ್ಟಾದ್ವೈತದ ಶುದ್ಧ ತಾತ್ವಿಕವಿವರಣೆ ಕೆಲವು ಸಲ ಕಂಡುಬರುವುದಿಲ್ಲ. ಅಂದರೆ ಆ ಕಾಲದಲ್ಲಿ ವಚನಗಳಿಗೆ ಹೇಳುತ್ತಿದ್ದ ಸಾಂಪ್ರದಾಯಿಕ ಅರ್ಥ ಮತ್ತು ಟೀಕಾಕಾರನ ವ್ಯಕ್ತಿಗತ ಪರಿಮಿತಿಗಳ ಹಿನ್ನೆಲೆಯಲ್ಲಿ ಈ ಟೀಕೆಗಳು ಹುಟ್ಟಿಕೊಂಡಿವೆ. ಈ ಮಾತು ಸ್ವಲ್ಪ ಹೆಚ್ಚು ಕಡಿಮೆ ಮಹಾಲಿಂಗದೇವಕೃತ ಪ್ರಭುದೇವರ ವಚನ ಟೀಕೆ, ಕಲ್ಲುಮಠದ ಪ್ರಭುದೇವಕೃತ ಲಿಂಗಲೀಲಾ ವಿಲಾಸ ಚಾರಿತ್ರ ಟೀಕೆ ಮೊದಲಾದವುಗಳಿಗೂ ಅನ್ವಯಿಸುತ್ತದೆ.

ವಚನಗಳು ಸಾಮಾನ್ಯ, ಶಾಸ್ತ್ರ, ಬೆಡಗು ಎಂದು ಮೂರು ವಿಧವಾಗಿವೆ. ಈ ಟೀಕಾಗ್ರಂಥಗಳು ಇವುಗಳ ವಿಷಯವಾಗಿ ನಡೆದುಕೊಂಡ ರೀತಿಯನ್ನು ಇಲ್ಲಿ ನೋಡಬಹುದು. ಸಾಮಾನ್ಯ ವಚನಗಳಿಗೆ ಬರೆದ ಟೀಕೆಯ ಮಾದರಿ ಹೀಗಿವೆ. :

ಶರಣಂಗೆ-ಶಿವಶರಣಂಗೆ, ಪರಧನವನೊಲ್ಲೆನೆಂಬ-ಅನ್ಯದ್ರವ್ಯವನ್ನು ಹಿಡಿಯಬಾರದೆಂಬಂಥ ಛಲಭೇಕು-ಫಲಗ್ರಾಹಕತ್ವವೇ ಉಂಟಾಗಿರಬೇಕು. ಶರಣಂಗೆ-ಶಿವಶರಣಂಗೆ, ಪರವಧುವನೊಲ್ಲೆನೆಂಬ-ಅನ್ಯಸ್ತ್ರೀಯಳ ಸಂಸರ್ಗವ ಮಾಡಬಾರದೆಂಬಂಥ, ಛಲಬೇಕು-ಛಲಗ್ರಾಹಕತ್ವವೇ ಉಂಟಾಗಿರಬೇಕು. ಶರಣಂಗೆ-ಶಿವಶರಣಂಗೆ, ಪರದೈವವನೊಲ್ಲೆನೆಂಬ-ಅನ್ಯದೈವಂಗಳ ಭಜನೆಯ ಮಾಡಬಾರದೆಂಬಂಥ, ಛಲಬೇಕು-ಛಲಗ್ರಾಹಕತ್ವವೇ ಉಂಟಾಗಿರಬೇಕು. ಶರಣಂಗೆ-ಶಿವಶರಣಂಗೆ, ಲಿಂಗ ಜಂಗಮ ಒಂದೆ ಎಂಬ-ಲಿಂಗವೇ ಜಂಗಮದಂಗ ಜಂಗಮವೇ ಲಿಂಗದ ಪ್ರಾಣಕಳೆಯೆಂದು ಲಿಂಗ ಪೂಜೆ ಜಂಗಮ ದಾಸೋಹವನ್ನು ಸಮರಸಭಾವದಿಂದ ಮಾಡಬೇಕೆಂಬಂಥ, ಛಲಬೇಕು-ಛಲಗ್ರಾಹಕತ್ವವೇ ಉಂಟಾಗಿರಬೇಕು. ಶರಣಂಗೆ-ಶಿವಶರಣಂಗೆ, ಪ್ರಸಾದ ದಿಟವೆಂಬ:[ಪ್ರಸಾದ-] ಆ ಚಿತ್ಕಲಾ ಪ್ರಸಾದವೇ ಈ ಕ್ರಿಯಾಪ್ರಸಾದವಾಗಿ ಬಂದಿರ್ಪುದು, ಈ ಪ್ರಸಾದವನ್ನು ಅನುಭವಿಸಿದರೆ ಸಮಸ್ತ ಪಾಪವೆಲ್ಲ ಕ್ಷಯವಾಗಿ ಹೋಗಿ ನಿತ್ಯವಾದ ನಿಜ ಮೋಕ್ಷವೇ ಆಗುತ್ತೈತೆಂಬಂಥ, ದಿಟವೆಂಬ-

ನಿಶ್ಚಯವೆಂಬ, ಫಲಬೇಕು–ಫಲಗ್ರಾಹಕತ್ವವೇ ಉಂಟಾಗಿರಬೇಕು. ಶರಣಂಗೆ–ಶಿವಶರಣಂಗೆ, ಫಲವಿಲ್ಲದವರ–ಇಂತಿಷ್ಟರಲ್ಲಿ ಫಲಗ್ರಾಹಕತ್ವವೇ ಉಂಟಾಗಿರಬೇಕು. ಇಲ್ಲದವರ, ನಮ್ಮ ಕೂಡಲಸಂಗಮ ದೇವ–ನಮ್ಮ ಪರಶಿವಲಿಂಗವು, ಮೆಚ್ಚ–ಮಮಕರಿಸಿಕೊಂಡು ನಿಜಮೋಕ್ಷವನ್ನು ಕರುಣಿಸಿಕೊಟ್ಟಾನೆ? ಕರುಣಿಸಿಕೊಡನು[೬೭೮].

ಹೀಗೆ ನೇರ ಟೀಕೆಗಳು I ನೆಯದರಲ್ಲಿ ತಪ್ಪದೇ ಮಿಕ್ಕವುಗಳಲ್ಲಿ ಆಗಾಗ ಬಂದು ವಚನದ ವಾಚ್ಯಾರ್ಥವನ್ನು ವ್ಯಕ್ತಪಡಿಸುತ್ತವೆ. ಶಬ್ದಾರ್ಥ ಬಯಸುವವರಿಗೆ ಇವು ತುಂಬ ನೆರವಾಗುವಲ್ಲಿ ಸಂದೇಹವಿಲ್ಲ. ಶಾಸ್ತ್ರವಚನಗಳಿಗೆ ಬಂದರೆ ಟೀಕೆ ಇನ್ನೂ ಅವಶ್ಯ. ಉದಾ :

"ಶುದ್ಧವಗುರುವಿಂಗೆಕೊಟ್ಟು–ತನುವಿನಲ್ಲಿ ಗುರುಸಂಬಂಧವ ಮಾಡಿಕೊಂಡು ಅಂಗ ಆಪ್ತ ಸ್ಥಾನ ಸದ್ಭಾವವೆಂಬ ಚತುರ್ವಿಧಭಕ್ತಿಯ ಮಾಡುವ ನೆವದಿಂದ ತನುಪದಾರ್ಥವ ಗುರುವಿಂಗೆ ಸಮರ್ಪಣೆಯ ಮಾಡಿ, ಶುದ್ಧವಾಯಿತ್ತೆಂಬೆನಯ್ಯ–ಶುದ್ಧಪ್ರಸಾದಸ್ವರೂಪವಾದ ಗುರುವಿನಲ್ಲಿ ಕೂಡಿ ಗುರು ಸ್ವರೂಪವಾಯಿತ್ತೆಂದು ಹೇಳುವೆನಯ್ಯ.

ಸಿದ್ಧವ ಲಿಂಗಕ್ಕೆ ಕೊಟ್ಟು–ಮನ ಪದಾರ್ಥವ ಲಿಂಗಕ್ಕೆ ಕೊಟ್ಟು ಮನದಲ್ಲಿ ಲಿಂಗ ಸಂಬಂಧವ ಮಾಡಿಕೊಂಡು ಅಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳಮಾಡುವ ನೆವದಿಂದ ಮನಪದಾರ್ಥವು ಲಿಂಗಕ್ಕೆ ಸಮರ್ಪಣೆಯ ಮಾಡಿ, ಸಿದ್ಧವಾಯಿತ್ತೆಂಬೆನಯ್ಯ–ಆ ಲಿಂಗವರ್ಪಿಸಿಕೊಂಡ ಮನವೆಲ್ಲವೂ ಲಿಂಗದಲ್ಲಿ ಕೂಡಿ ಲಿಂಗಸ್ವರೂಪವಾಯಿತ್ತೆಂದು ಹೇಳುವೆನಯ್ಯ.

ಪ್ರಸಿದ್ಧವ–ಪ್ರಾಣಾದಿ ದ್ರವ್ಯಪದಾರ್ಥವನು, ಜಂಗಮಕ್ಕೆ ಕೊಟ್ಟು–ಪ್ರಾಣಜ್ಞಾನದಲ್ಲಿ ಜಂಗಮ ಸಂಬಂಧವ ಮಾಡಿಕೊಂಡು ಅನ್ನೋದಕ ಸಜ್ಜೆ ಶಿವದಾರ ಕೂಡೆ ಪಾದರಕ್ಷೆ ವಸ್ತ್ರ ಕಪ್ಪಟಂಗಳನು ಕೊಟ್ಟು ಭಕ್ತಿಯ ಮಾಡುವ ನೆವದಿಂದ ಧನಪದಾರ್ಥವನ್ನು ಜಂಗಮಕ್ಕೆ ಸಮರ್ಪಣೆಯ ಮಾಡಿ, ಪ್ರಸಿದ್ಧವಾಯಿತ್ತೆಂಬೆನಯ್ಯ–ಆ ಜಂಗಮವರ್ಪಿಸಿಕೊಂಡ ಪ್ರಾಣಾದಿ ದ್ರವ್ಯಪದಾರ್ಥವೆಲ್ಲವೂ ಜಂಗಮ ದಲ್ಲಿ ಕೂಡಿ ಜಂಗಮಸ್ವರೂಪವಾಯಿತ್ತೆಂದು ಹೇಳುವೆಲ್ಲನಯ್ಯ.

ಗುರುಲಿಂಗ ಜಂಗಮವನು–ಶುದ್ಧಸಿದ್ಧಪ್ರಸಿದ್ಧಸ್ವರೂಪವಾದ ಗುರುಲಿಂಗ ಜಂಗಮವನು, ಏಕತ್ರವಾಗಿ ಕಾಣಲಜೆಯದಿದ್ದಡೆ–ಒಂದೇ ಸ್ವರೂಪವೆಂದು ತಿಳಿಯಬೇಕು;ತಿಳಿಯದಿದ್ದರೆ, [ಶುದ್ಧ ಸಿದ್ಧ ಪ್ರಸಿದ್ಧ–] ಶುದ್ಧಸಿದ್ಧಪ್ರಸಿದ್ಧ ಸ್ವರೂಪವಾದ ಗುರುಲಿಂಗಜಂಗಮವು, ಒಡನೆ ನಗುತ್ತೈದಾದೆ– ಅಂಗ ಪ್ರಾಣಾತ್ಮಾಂಗದಲ್ಲಿ ನೆಲೆಗೊಳ್ಳದೆ ಗಹಗಹಿಸಿ ಹಾಸ್ಯೋಪಮಾನವ ಮಾಡುತ್ತೈದಾವೆ.

ತನುಮನಧನವ ನಿವೇದಿಸಲಜೆಯೆನಾಗಿ–ತನುಮನಧನದ ಸಮರ್ಪಣೆ ಮಾಡುವಂಥದನು ತಿಳಿಯೆನಾಗಿ, ಕೂಡಲಸಂಗಮದೇವ–ಪರಶಿವಲಿಂಗವು, ಒಲಿಯೆಂದಡೆ–ಪ್ರಸನ್ನವಾಗಿ ನಿಜದ ಮೋಕ್ಷವನ್ನು ಕರುಣಿಸಿ ಕೊಡುಯೆಂದು ಹೇಳಿದರೆ, ಎಂತೊಲಿವ–ಹೇಂಗೆ ಒಲಿದು ನಿಜ ಮೋಕ್ಷವನ್ನು ಕರುಣಿಸಿ ಕೊಟ್ಟಾನು? ಕೊಡಲರಿಯನು"(೭೮೫).

ವಚನಸಾಹಿತ್ಯದಲ್ಲಿ ರೂಪಕ, ಉಪಮೆ ಮೊದಲಾದ ಅಲಂಕಾರಗಳ ಮೂಲಕ ಹೇಳಿದ ಇಂಥ ಇತರ ಶಾಸ್ತ್ರ ವಚನಗಳ ಸಂಖ್ಯೆ ಹೇರಳವಾಗಿದೆ. ಇವುಗಳ ಅಂತರಾರ್ಥವನ್ನು ಅರಿಯಲು ಟೀಕೆ ಅವಶ್ಯ.

ಬಸವಣ್ಣನವರ ವಚನಗಳಲ್ಲಿ ಸಂಕೇತ ಮೂಲವಾದ ಬೆಡಗು ಕಡಿಮೆ, ಆದರೂ ಅಲ್ಲಲ್ಲಿ ಗೋಚರಿಸುವ ಇವುಗಳಿಗೆ ಟೀಕೆಯನ್ನುಳಿದರೆ "ಅನ್ಯಥಾ ಶರಣಂನಾಸ್ತಿ". ಸೋಮಶೇಖರ ಶಿವ ಯೋಗಿಯ "ಘಟ್ಟಿ ಘಟ್ಟಿ ವಚನ ಟೀಕೆ" ಸಾಮಾನ್ಯವಾಗಿ ಇಂಥವುಗಳನ್ನೇ ಗುರಿಯಿಟ್ಟು ಬರೆದು ದಾಗಿದೆ. ಉದಾ:

"ಇಷ್ಟಲಿಂಗದ ಸತ್ಕ್ರಿಯಾಚರಣೆಯನೇನೆಂದುಪಮಿಸುವೆನೆಂದು ಕ್ರಿಯಾಶಕ್ತಿಸ್ವರೂಪವಾದ ಶರಣನು ಸುಜ್ಞಾನಶಕ್ತಿಯೆಂಬ ಮಾತೆಯ ಕೂಡೆ ಮಾಡುವ ಪ್ರಶ್ನೆಯು ಎಂಬುದೀಗ, ಮನೆಯ ಗಂಡನ ಮನೆವಾರ್ತೆಯನೇನ ಹೇಳುವೆನವ್ವಾ ಎಂಬ ಶಬ್ದಕ್ಕರ್ಥ. ದೇಹಭಾವದ ವರ್ತನೆಯನಂಗೀ ಕರಿಸನೆಂಬುದೀಗ, ಅಂಗವಿದ್ಯೆಯನೊಲ್ಲನೆಂಬ ಶಬ್ದಕ್ಕರ್ಥ. ಭಿನ್ನರೂಪಭ್ರಾಂತಿ ನಷ್ಟವಾದಲ್ಲದೆ ಲಿಂಗ ನಿರೀಕ್ಷಣೆ ದೊರಕೊಳ್ಳದೆಂಬುದೀಗ ಕಂಗಳೊಳಗಣ ಕಸವ ಕಳೆದಲ್ಲದೆ ನೋಡಲೀಯನೆಂಬ ಶಬ್ದಕ್ಕರ್ಥ. ಕುಚಿತ್ತಾದಿ ಹಸ್ತಗಳು ಮಂತ್ರಲಿಂಗ ಸಂಬಂಧದಿಂದೆ ನಿವೃತ್ತಿಯಾದಲ್ಲದೆ ಸುಚಿತ್ತಾದಿ ಹಸ್ತಗಳಲ್ಲಿ ಲಿಂಗಸ್ಪರ್ಶನ ದೊರೆಕೊಳ್ಳಲಿಲ್ಲವೆಂಬುದೀಗ, ಕೈಯ ತೊಳೆದಲ್ಲದೆ ಮುಟ್ಟಲೀಯನೆಂಬ ಶಬ್ದಕ್ಕರ್ಥ. ದುಶ್ಚರಿತ್ರವೆಂಬ ಚರಣನಿವೃತ್ತಿಯಾಗಿ ಸಚ್ಚರಿತ್ರ ನೆಲೆ ಇಲ್ಲದೆ ಲಿಂಗವು ತನ್ನ ದಿಕ್ಕ ಹೊದ್ದಲೀಸನೆಂಬುದೀಗ, ಕಾಲ ತೊಳೆದಲ್ಲದೆ ಹೊದ್ದಲೀಯನೆಂಬ ಶಬ್ಬಕ್ಕರ್ಥ. ಇಂತು–ಹೀಂಗೆ, ಸಕಲೇಂದ್ರಿಯಂಗಳು ಮಂತ್ರ ಲಿಂಗ ಸಂಬಂಧದಿಂದ ನಿವೃತ್ತಿಯಾಗಿ ಸುಜ್ಞಾನವಳವಟ್ಟ ಕಾರಣ ಲಿಂಗದಲಿ ಏಕಾರ್ಥ ದೊರಕೊಂಡಿತ್ತೆಂಬುದೀಗ, ಸರ್ವಾಂಗ ತಲೆದೊಳೆದ ಕಾರಣ ಕೂಡಲಸಂಗಮ ದೇವನೆನ್ನ ಕೂಡಿಕೊಂಡನವ್ವಾ ಎಂಬ ಶಬ್ದಕ್ಕರ್ಥ".[೯೧೩]

ಹೀಗೆ ಸಾಮಾನ್ಯ, ಶಾಸ್ತ್ರ, ಬೆಡಗು ರೂಪದ ವಚನಗಳಿಗೆ ಕ್ರಮವಾಗಿ ಟೀಕೆಗಳ ಅವಶ್ಯಕತೆ ಹೆಚ್ಚುತ್ತ ಹೋಗುತ್ತದೆ. ಈ ರೀತಿ ನಮಗೆ ಪ್ರಯೋಜಕವಾಗುತ್ತಿದ್ದರೂ ಓದುಗನು ವಚನ ಓದಿ ಟೀಕೆಗೆ ಬಂದರೆ ಕೆಲವು ಸಲ ನೀರಿನಿಂದ ಹೊರಗೆಬಂದ ಮೀನಿನಂತಾಗುತ್ತಾನೆ. ಇದಕ್ಕೆ ಕಾರಣ ವಚನಗಳಲ್ಲಿಯ ಸೊಗಸು ಟೀಕೆಯಲ್ಲಿ ಸೋರಿಹೋದುದು, ಉದ್ದುದ್ದವಾಕ್ಯಗಳು, ಕರ್ತೃ, ಕರ್ಮ, ಕ್ರಿಯಾ ಸಂಬಂಧ ತಪ್ಪಿದುದು, ಮಾತನಾಡಿದಂತೆ ವಾಕ್ಯ ರಚನೆ ಯೋಜಿಸಿದುದು–ನಮ್ಮ ಎಷ್ಟೋ ಜನ ವಿದ್ವಾಂಸರು ವಚನ ಟೀಕೆಗಳ ಬಗ್ಗೆ ನಿರುತ್ಸಾಹ ತೋರಿಸಲು ಬಹುಶಃ ಈ ಸಂಗತಿಗಳು ಕಾರಣ, ಹೀಗಿದ್ದರೂ ಪ್ರಸ್ತುತ ಟೀಕಾಕಾರರು ಅಲ್ಲೊಂದು ಇಲ್ಲೊಂದು ರಸಾವಿಷ್ಟ ಟೀಕೆ ಬರೆದಿರುವರು. ಉದಾ:

> "ಹಾಲೆಂಜಲು ಪೇಯನ, ಉದಕ ಎಂಜಲು ಮತ್ಸ್ಯದ, ಪುಷ್ಪ ಎಂಜಲು ತುಂಬಿಯ,
>
> ಎಂತು ಪೂಜಿಸುವೆನಯ್ಯಾ ಶಿವ ಶಿವಾ!
>
> ಈ ಎಂಜಲ ಅತಿಗಳೆವೊಡೆ ಎನ್ನಳವಲ್ಲ, ಬಂದುದ ಕೈಕೊ ಕೂಡಲಸಂಗಮದೇವಾ.

ಹಾಲೆಂಜಲು ಪೇಯನ–ಪ್ರಾತಃಕಾಲದಲೆದ್ದು ಆಕಳನು ಕರಕೋಬೇಕಾದರೆ ಕರುವ ಬಿಟ್ಟಲ್ಲದೆ ಮೊಲೆಯ ತೊರೆಯದು; ಆಕಳು ಕೊಡದು ಮೊದಲು ಕರುವ ಬಿಟ್ಟು ಕಡೆಯಲ್ಲಿ ಹಾಲನ್ನು ಕರಕೊಂಡಲ್ಲಿ ಕರ ತಿಂದು ಉಚ್ಚಿಷ್ಟವಾಗಿರ್ಪುದು, ಉಚ್ಚಿಷ್ಟವಾದಂಥ ಕ್ಷೀರವನ್ನು ತೆಗೆದುಕೊಂಡು ಬಂದು ನಾನು ಲಿಂಗಕ್ಕೆ ಹೇಂಗೆ ಅಭಿಷೇಕವ ನೀಡಲಿ? ಉದಕ ಎಂಜಲು ಮತ್ಸ್ಯದ–ಪ್ರಾತಃಕಾಲ ದಲೆದ್ದು ಬಿಂದಿಗೆ ಕುಜಾಯುವನ್ನು ತೆಗೆದುಕೊಂಡು ಬಂದು ಹಳ್ಳಹೊಳೆ ಕೆರೆ ಬಾವಿ ಕೊಳನ

ತಡಿಗಳಲ್ಲಿಗೆ ಹೋಗಿ ಹತ್ತೆಂಟು ಕೊಡ ಉದಕವನ್ನು ಮೊಗೆದುಕೊಂಡು ಬಂದು ಲಿಂಗಕ್ಕೆ ಅಭಿಷೇಕವ ನೀಡೇನೆಂದರೆ ಮೀನೆಂಬುವಂಥದು ಉದಕವನ್ನೇ ಹಾಸಿಕೊಂಡು ಉದಕವನ್ನೇ ಹೊದ್ದುಕೊಂಡು ಉದಕವನ್ನೇ ಜೀವಚೈತನ್ಯವ ಮಾಡಿಕೊಂಡಿರುವುದು. ಮೀನ ಸೋಂಕಿ ಉಚ್ಛಿಷ್ಟವಾಗಿರ್ಪುದು. ಆ ಉಚ್ಛಿಷ್ಟವಾದ ಉದಕವನ್ನೇ ತೆಗೆದುಕೊಂಡು ಬಂದು ಲಿಂಗಕ್ಕೆ ನಾನು ಹೇಂಗೆ ನೀಡಲಿ? ಪುಷ್ಪ ಎಂಜಲು ತುಂಬಿಯ–ಪ್ರಾತಃಕಾಲದಲ್ಲೆದ್ದು ಹೂವಿನ ಕರಡಿಗೆ ಜೋಳಿಗೆ ಮೊದಲಾದವನ್ನು ತೆಗೆದುಕೊಂಡು ಪುಷ್ಪದ ವನಾಂತರಗಳಿಗೆ ಹೋಗಿ ಪತ್ರಪುಷ್ಪಾದಿಗಳನ್ನು ತೆಗೆದುಕೊಂಡು ಬಂದು ಲಿಂಗಕ್ಕೆ ಧರಿಸೇನೆಂದರೆ ಭಮರ ಸೋಂಕಿ ಉಚ್ಚಿಷ್ಟವಾಗಿರ್ಪವು, ಆ ಉಚ್ಛಿಷ್ಟವಾದಂಥ ಪತ್ರ ಪುಷ್ಪಾದಿಗಳನ್ನು ತೆಗೆದುಕೊಂಡು ಬಂದು ಲಿಂಗಕ್ಕೆ ಧರಿಸೇನೆಂದರೆ ಭ್ರಮದ ಸೋಂಕಿ ಉಚ್ಛಿಷ್ಟವಾಗಿರ್ಪವು. ಆ ಉಚ್ಛಿಷ್ಟವಾದಂಥ ಪತ್ರ ಪುಷ್ಪಾದಿಗಳನ್ನು ತೆಗೆದುಕೊಂಡು ಬಂದು ಲಿಂಗಕ್ಕೆ ನಾನು ಹೇಂಗೆ ಧರಿಸಲಿ? ಎಂತು ಪೂಜಿಸುವೆನಯ್ಯ–ನಾನು ಹೇಂಗೆ ಅರ್ಚಿಸುವೆನಯ್ಯ? ಶಿವ ಶಿವಾ–ಲಿಂಗವೇ ಲಿಂಗವೇ.

ಈ ಎಂಜಲನತಿಗಳೆವೊಡೆ : ಈ ಎಂಜಲ–ಈ ಉಚ್ಛಿಷ್ಟಭಾವವನ್ನು, ಅತಿಗಳವೊಡೆ–ನಷ್ಟವ ಮಾಡುವಡೆ, ಎನ್ನಳವಲ್ಲ–ಎನ್ನ ಕೂಡ ಶಕ್ಯವಲ್ಲವು ಬಂದುದ–ಶರಣನ ಮುಖದಿಂದ ಪವಿತ್ರವಾಗಿ ಬರಲಿ ಅಪವಿತ್ರವಾಗಿ ಬರಲಿ ಬಂದಂಥ ನಿಲುಕಡೆಯಲ್ಲಿ, ಕೈ ಕೊ–ಸಮರ್ಪಿಸಿಕೋ, ಕೂಡಲ–ಸಂಗಮದೇವಾ–ಎಲೆಪರಶಿವಲಿಂಗವೆ."(೮೮೭).

"ಉಚಿ ತಾಗಿದ ಮೃಗವು ಒಂದಡಿಯನಿಡುವುದೆ?
ತನುವ ತಾಗಿದ ಸುಖವು ಅಗಲುವುದೆ?
ಕೂಡಲಸಂಗನ ಶರಣರ ಅನುಭಾವವಜಿದವರ ಮರಳಿ ಮರ್ತ್ಯರೆನಬಹುದೆ? ಅಯ್ಯ."

ಉಚಿ–ಚೆನ್ನಾಗಿ, ತಾಗಿದ–ಬಾಣವ ನಟ್ಟುಕೊಂಡ, ಮೃಗವು–ಎರಳೆಯು, ಒಂದಡಿಯನಿಡುವುದೆ–ಅಲ್ಲೆ ಬಿದ್ದು ಸತ್ತು ಹೋಗುವುದಲ್ಲದೆ ಮುಂದಕ್ಕಡಿಯಿಟ್ಟು ಗಮಿಸೀತೆ? ಗಮಿಸಲರಿಯದು. ತನುವ–ಅಂಗವನು, ಶರಣನ ದೇಹವನು, ತಾಗಿದ–ತಟ್ಟಿದ, ಸುಖವು ಸ್ರಕ್ಚಂದನವನಿತಾದಿ ಪರಿಣಾಮ ಗಳು, ಅಗಲುವುದೆ–ವಿಯೋಗವಾದೀತೆ? ಆಗದು ಎಂಬಲ್ಲಿ, ಉಪ್ಪಿನ ಕಟ್ಟೆಯಲ್ಲಿ ಬಿದ್ದ ತೃಣಕಾಷ್ಟಂಗಳೆಲ್ಲವೂ ಉಪ್ಪುಮಯವಾಗುವ ಹಾಗೆ ರಸಘುಟಿಕೆಯ ನುಂಗಿದ ಸಿದ್ದನ ಅಂಗಕ್ಕೆ ಬಂದು ತಟ್ಟುವ ಅಮಗು ಆಯುಧಂಗಳನು ಆ ರಸಘುಟಿಕೆ ಅಂತಕೊಂಬುವ ಹಾಂಗೆ ಶರಣನಂಗಕ್ಕೆ ಬಂದು ತಟ್ಟುವ ಪದಾರ್ಥಗಳಷ್ಟೂ ಲಿಂಗಕ್ಕೆ ಸಮರ್ಪಣೆಯಾಗುತ್ತಿಹುದು.

ಕೂಡಲಸಂಗನ ಶರಣರ–ತ್ರಿವಿಧಲಿಂಗಾನುಭಾವಿಗಳಾದ ಜ್ಞಾನಗುರುಮೂರ್ತಿಗಳ, ಅನು ಭಾವವಜಿದವರ–ಶಿವಾನುಭಾವವನ್ನು ಬೆಸಗೊಂಡು ಕೇಳುವಂಥವರುಗಳ, ಮರಳಿ–ಪುನರಪಿಯಾಗಿ, ಮರ್ತ್ಯರೆಂದೆನಬಹುದೆ?–ಎಲ್ಲಾ ಲೋಕದಾತ್ಮರುಗಳೊಳಗೆ ಅವರೂ ಮನುಷ್ಯರುಗಳೊಳಗೆಂದು ಹೇಳುವುದಕ್ಕಾದೀತೆ? ಆಗದು, ಅಯ್ಯ–ಎಲೆ ಲಿಂಗವೆ"(೭೯೪).

ಹೀಗೆ ಕೆಲವು ಟೀಕೆಗಳು ಸೃಜನಕ್ರಿಯೆಯಿಂದ ಕೂಡಿದ್ದು ತುಂಬ ಲವಲವಿಕೆಯಿಂದ ಶೋಭಿಸುತ್ತವೆ. ಇದಕ್ಕೆ ಹೆಚ್ಚಿನದಾಗಿ ಅಪರೂಪವಾದ ಶಬ್ದಾರ್ಥಗಳು ಹೀಗೆ ಬರೆಯಲ್ಪಟ್ಟಿವೆ.

ಗಾಡಿಗ-ಮನೆಯ ಜಗುಲಿಯ ಮೇಲೆ ಕುಳಿತುಕೊಂಡು ಪೂಜೆ ಕೈಕೊಂಬಂಥದೇ ಗಾಡಿಗನೆಂಬ ಭೂತನು. ಡಿಂಬುಗ-ದನದಹಕ್ಕೆಯಲ್ಲಿ ಕುಳಿತುಕೊಂಡು ಪೂಜೆಯ ಕೈಕೊಂಬುವಂಥದೀಗ ಡಿಂಬುಗನೆಂಬ ಭೂತನು. ಚೆಕ್ಕು-ಹಲಚೆಗಡಬು, ಮೈಲಾರನಪೂಜಿಸಿ-ಮಾಳಚಿ ಭರ್ತಾಧೀಶ ಮೈಲಾರನ ದೇವರೆಂದಾರಾಧಿಸಿ; ಮೀಂಬುಲಿಗನ ಹಕ್ಕಿಯಂತೆ-ಗುಂಡುಮುಳುಗನ ಹಕ್ಕಿಯೋಪಾದಿ ಯಲ್ಲಿ, ಸ್ವಪಚೋಪಿಯಾದಡೇನು-ಹಿರೇಕುಲದವರಾದರೇನು, ಸಕಲಜೀವಾತ್ಮರುಗಳಿಗೆ-ಇರುವೆ ಮೊದಲಾಗಿ ಗಜವೇ ಕಡೆಯಾದ ಸಮಸ್ತ ಸ್ಥಲಸೂಕ್ಷ್ಮ ಪ್ರಾಣಿಗಳಿಗೆ, ಉಚ್ಚೆಯಹೊಯ್ದು-ಮೈಜಲವ ಬಿಟ್ಟು, ಕಾಮಧೇನು-ಕಾಮಿಸಿದವರಿಗೆ ಪಂಚಕುಚಂಗಳಿಂದ ಪಂಚಾಮೃತವನ್ನು ಕರೆಯಲ್ಪಟ್ಟ ಸುರಧೇನು, ಯುಗಪಾಣರು-ಹೊಲೆಪಾತ್ರದವರು, ಕಲ್ಯಾಣ-ಮಂಗಳವಾಡವೆಂಬ ಪಟ್ಟಣವು, ಹೀಗೆ ಶಬ್ದಗಳಿಗೆ ಬರೆವ ಬಿಚ್ಚು ಅರ್ಥಗಳು ತುಂಬ ಸಹಾಯ ನೀಡುತ್ತವೆ.

ಇದಲ್ಲದೆ "ಬಿತ್ತು ಬೀಜಸ್ಥಾಪನೇ","ಮುರಿಮೋಟನೇ", "ತೊರೆವಿಡಂಬೇ ನದಿಭೇದೇ ಚ", "ಕಾಯ ರಕ್ಷಣಾರ್ಥೇ", "ಈ ಪ್ರದಾನೇ", "ಹಾರು ಇಚ್ಛಾಯೇ", "ತೊಡರು ಬಂಧನೇ", "ಲೋಕಸ್ತು ಭುವನೇ ಜನೇ", "ನುಂಗು ಗಿಳನೇ"-ಹೀಗೆ ನೂರಾರು ಶಬ್ದಗಳ ಕೋಶವೊಂದು ಈ ಟೀಕೆಗಳಲ್ಲಿ ಅಡಗಿದೆ.

ಇದಕ್ಕೆ ಹೆಚ್ಚಿನದಾಗಿ ಕೇಣಸರ, ಎಡೆಗೋಲು, ಮುದ್ದಿ(ಸಿಂಬಿ), ತೇರುತಿರುನಾಳಗಳ್ಳು, ಐರಾಣಿ, ಹಾಸ, ಬುಗ್ಗಿ, ಸುಂಟಕ, ಹಿರೇಕುಲ, ಮೈಜಲ, ಅಡ್ಡ (ನಾಣ್ಯ), ಕೋರೂಟ ಇತ್ಯಾದಿ ಹೊಸ ಹೊಸ ದೇಸೀ ಪದಗಳು ಈ ಟೀಕೆಗಳ ಒಡಲಲ್ಲಿ ತೂರಿ ನಿಂತಿವೆ.

ಕುಮಾರಿ-ಹನ್ನೆರಡು ವರುಷದ ಬಾಲಕುಮಾರಿಯರು, ಕೊಡಗೂಸೆಂಬವರ-ಏಳುವರುಷದ ಕೊಡಗೂಸೆಂದು ಹೇಳುವಂಥವರ, ಆಸೆ-ಅನ್ನಾಚ್ಛಾದನ ಹೊನ್ನು ಹೆಣ್ಣು ಮಣ್ಣಾಗಬೇಕೆಂಬ ಅಪೇಕ್ಷೆಯು, ಆಮಿಷ-ಹೊನ್ನಿದ್ದು ಹೊನ್ನಾಗಬೇಕು, ಹೆಣ್ಣಿದ್ದೂ ಹೆಣ್ಣಾಗಬೇಕು, ಮಣ್ಣಿದ್ದೂ ಮಣ್ಣಾಗಬೇಕೆಂಬ ಆಸೆಯೊಳಗಣ ಅತಿಕಾಂಕ್ಷೆಯು, ಮಾರಿ-ಗ್ರಾಮದ ಮಧ್ಯದಲ್ಲಿ ಗುಡಿಯ ಕಟ್ಟಿಸಿಕೊಂಡು ಪೂಜೆಯ ಕೈಕೊಂಬುವಂಥದೇ ಮಾರಿ, ಮಸಣಿ-ಸುಡುಗಾಡದಲ್ಲಿ ಗುಡಿಯಕಟ್ಟಿಸಿಕೊಂಡು ಪೂಜೆ ಕೈಕೊಂಬುವಂಥದೇ ಮಸಣಿ, ಕೆಳಗಣದೇ ಲಜ್ಜೆ ಮೇಗಣದೇ ನಾಚಿಕೆ, ಯುಗ-ನಾಲ್ಕು ಯುಗಗಳನ್ನು ಜುಗ-ಆ ನಾಲ್ಕು ಯುಗಂಗಳು ಹದಿನೆಂಟು ವೇಳೆ ಮರಳಿ ಬಂದರೆ ಒಂದು ಜುಗವೆನಿಸಿಕೊಂಬುವುದು. ಅಂಜಲದೇಕೋ, ಭಾಂಡ-ಹಿತ್ತಾಳೆ ತಾಮ್ರ ದಿಂದ ಮಾಡಿದಂಥ ಚರಿಗೆ ಕೊಡಪಾನಂಗಳು, ಭಾಜನ-ಕಂಚಿನಲ್ಲಿ ಮಾಡಿದಂಥ ಗಂಗಾಳ ಬಟ್ಟಲಗಳು, ತಾಗು ನಿರೋಧ-ಸುಖದುಃಖ, ಆಗಹೋಗು-ಹುಟ್ಟು ಹೊಂದುಗಳು, ಹೊಲೆಯ-ಊರಿಂದ ಹೊರಗಡೆಯಲ್ಲಿ ಮನೆಯ ಕಟ್ಟಿಕೊಂಡಿರುವಂಥ ಹಿರೇಕುಲದ ಭಕ್ತನು, ಮಾದಿಗ-ಅವನಿಂದಾಚೆ ಕಡೆಗೆ ಮನೆಯನ್ನು ಕಟ್ಟಿಕೊಂಡಿರುವಂಥ ಚಾಂಡಾಲನು, ಮೊದಲಾದ ಪ್ರಸಂಗಗಳಲ್ಲಿ ವ್ಯಕ್ತಪಡಿಸಿದ ಅರ್ಥವ್ಯತ್ಯಾಸ ಟೀಕಾಕಾರರ ಸೂಕ್ಷ್ಮಮತಿಗೆ ಸಾಕ್ಷಿಯಾಗಿದೆ.

ಇದಲ್ಲದೆ ವಚನಗಳ ಒಡಲಲ್ಲಿ ಬರುವ ಸುಂದರ ವಾಕ್ಯಗಳು ಮರುಭೂಮಿಯಲ್ಲಿಯ ಒಯಾಸಿಸ್‌ದಂತೆ ಕಂಗೊಳಿಸುತ್ತವೆ. ಉದಾ: 'ಸಕಲ ಜೀವಾತ್ಮರುಗಳಿಗೆ-ಇರುವೆ ಮೊದಲಾಗಿ ಗಜವೇ ಕಡೆಯಾದ ಸಮಸ್ತ ಸ್ಥೂಲಸೂಕ್ಷ್ಮ ಪ್ರಾಣಿಗಳಿಗೆ, ಹೊನ್ನ ನೇಗಿಲಲುತ್ತಿ ಎಕ್ಕೆಯ ಬೀಜವ ಬಿತ್ತುವರೆ-ಚಿನ್ನದ ನೇಗಿಲದಿಂದ ಉಕ್ಕಿಯ ಹೊಡೆದ ಮೇಲೆ ಮುತ್ತುರತ್ನಗಳ ಬಿತ್ತಿ ಬೆಳೆಯಬೇಕಲ್ಲದೆ

ಎಕ್ಕೆಯ ಬೀಜ ಕಕ್ಕೆಯ ಬೀಜ ಮೊದಲಾದವನು ಬಿತ್ತಿ ಬೆಳೆವುದಕ್ಕಾದೀತೇ? ಆಗದು. ಹೊಂಬಿತ್ತಾಳೆಯ ಶೃಂಗಾರವ ಮಾಡಿದಂತೆ–ಹೊಂಬಿತ್ತಾಳೆಯಿಂದ ಹಸ್ತಕಡಗ ಹರಳೋಲೆ ಬುಗುಡಿಕೊಪ್ಪ ಚಿಂತಾಕ ಹೊನ್ನಹೂವು ಮೊದಲಾದವುಗಳನ್ನು ಮಾಡಿಕೊಂಡು ಇಟ್ಟು ತೊಟ್ಟು ಒಂದಾನೊಂದು ಕಾಯಭಾಗದೋಪಾದಿಯಲ್ಲಿ ಬೆಳಕಿನೋಪಾದಿಯಲ್ಲಿ ಮಲ್ಲಿಗೆ ಹೂವಿನೋಪಾದಿಯಲ್ಲಿ ಹೇಂಗೆ ಮಡಿಯ ಮಾಡಿಕೊಂಡು ಬರುತ್ತಿಹನೋ ಹಾಂಗೆ, ಲಿಂಗಕ್ಕೋಗರುವನಱಸುವ–ನಮ್ಮ ಲಿಂಗಕ್ಕೆ ಅಂಬಲಿ ತುಂಬಿಸೊಪ್ಪು ಮೊದಲಾದ ಶುಷ್ಕಾನ್ನಪಾನಂಗಳು ಆಗೋದಿಲ್ಲ, ಒಳ್ಳೆಯ ಸೋಸಿದ ಕಣಕದ ಕಡಬು ಸಣ್ಣಕ್ಕಿಬೋನ ಬೆಣ್ಣೆಕಾಸಿದ ತುಪ್ಪ ಮೊದಲಾದುವಾಗಬೇಕೆಂದು, ಉಪ್ಪಿನಕಟ್ಟೆಯಲ್ಲಿ ಬಿದ್ದ ತೃಣಕಾಷ್ಠಂಗಳೆಲ್ಲವೂ–ಉಪ್ಪುಮಯವಾಗುವ ಹಾಂಗೆ ರಸಘುಟಿಕೆಯ ನುಂಗಿದ ಸಿದ್ಧನ ಅಂಗಕ್ಕೆ ಬಂದು ತಟ್ಟುವ ಅಲಗು ಆಯುಧಂಗಳನು ಆ ರಸಘುಟಿಕೆ ಅಂತುಕೊಂಬುವ ಹಾಂಗೆ, ಶರಣನಂಗಕ್ಕೆ ಬಂದು ತಟ್ಟುವ ಪದಾರ್ಥಂಗಳಷ್ಟು ಲಿಂಗಕ್ಕೆ ಸಮರ್ಪಣೆಯಾಗುತ್ತಿಹವು. ದೇಹವೇ ದೇಗುಲ–ಕಾರಣತನುವೇ ಗರ್ಭಗೃಹವಾಗಿ ಸೂಕ್ಷ್ಮತನುವೇ ಸುಖನಾಶಿಯಾಗಿ ಸ್ಥೂಲತನುವೇ ರಂಗಮಂಟಪವಾಗಿ ತ್ರಿಕೂಟವೇ ಶಿವಾಲಯವಾಗಿಪ್ಪುದು. ಮೀನೆಂಬುವಂಥದು ಉದಕವನ್ನೇ ಹಾಸಿಕೊಂಡು ಉದಕವನ್ನೇ ಹೊದ್ದುಕೊಂಡು ಉದಕವನ್ನೇ ಜೀವಚೈತನ್ಯವ ಮಾಡಿಕೊಂಡಿರುವುದು."

ಇಂಥ ಸರಸ ವಾಕ್ಯಗಳು ಆಗಾಗ ಬಂದು ಓದುಗನ ಬೇಸರವನ್ನು ಕಳೆಯುತ್ತವೆ. ಟೀಕೆಯ ಸಾಮಾನ್ಯ ಲಕ್ಷಣ ಒಂದೆ ಬಗೆಯ ವಾಕ್ಯಗಳ ಪುನರಾವರ್ತನೆ. ಈ ಮಾತಿಗೆ ನೂರಾರು ಉದಾಹರಣೆಗಳು ಇಲ್ಲಿವೆ. ಉದಾ:

'ತಿಮ್ಮ ಬೊಮ್ಮ ಬೀರ ಜಟ್ಟಿಂಗ ಮೊದಲಾದ ನೀಚದೈವ, ಬತ್ತುವ ಜಲ ಒಣಗುವ ಮರ ಸತ್ತು ಹುಟ್ಟುವ ನಾರಾಯಣನೆ ದೈವವೆಂದಾರಾಧಿಸುವ, ಸೂತ್ರಾರ್ಥ ಸ್ವರೂಪಾರ್ಥ ಸಂಬಂಧಾರ್ಥ ಪ್ರಣವಾರ್ಥ ಚಿತ್ರಾರ್ಥ ಭಾವಾರ್ಥಂಗಳನು ಬೆಸಗೊಂಡು, ಪವಳ ಪದ್ಮಾಕ್ಷಿ ಪುತ್ರಜೀವಿ ಶಂಖ ಮೌಕ್ತಿಕ ಕುಶಗ್ರಂಥಿ ಮೊದಲಾದುವನ್ನು ಸರಗೊಳಿಸಿ, ಮೂವತ್ತೆರಡು ರಾಗ ಅರುವತ್ತುನಾಲ್ಕು ಮಿಶ್ರರಾಗಯುಕ್ತವಾಗಿ ಸಮಸ್ತ ಸ್ವರವಚನಂಗಳಿಂದ ರಾಗರಚನೆಯನ್ನು ಮಾಡಬಲ್ಲಂಥವರುಗಳು, ಸ್ಥಾವರಾದಿಗಳಿಗೆ ಹೋಗಿ ಎಣ್ಣೆ ಮಜ್ಜನವನ್ನು ನೀಡಿ ಎಲೆಪೂಜೆಯನ್ನು ಕಟ್ಟಿಸಿ ಪರವು ಪಾಡ್ಯವನ್ನು ಮಾಡಿ ದಾನ ದಕ್ಷಿಣವನ್ನು ಕೊಟ್ಟು ಅಡ್ಡಡ್ಡಬಿದ್ದು ಆರಾಧಿಸಿದರೆ. ಗಜದಹಿಂಡಿನೊಳಗೆ ಕಂಠೀರವ ಹೊಕ್ಕಹಾಂಗೆ ಹುಲ್ಲೆಹಿಂಡಿನೊಳಗೆ ಹುಲಿಹೊಕ್ಕ ಹಾಂಗೆ ಕುರಿಹಿಂಡಿನೊಳಗೆ ತೋಳಹೊಕ್ಕ ಹಾಂಗೆ ಆಚೆಲಿಂದೀಚೆಗೆ ಈಚೆಲಿಂದಾಚೆಗೆ ಕಡಕೊಂಬುತ್ತ ಬಂದೆ, ಸಿಂಹನೆಂಬಂಥದು ತನಗಾಹಾರವಾದ ಆನೆಯನ್ನು ಹೊಡೆಯಬೇಕಾದರೆ ಎಡಕ್ಕೆ ತೋರಿ ಬಲಕ್ಕೆ ಬಲಕ್ಕೆ ತೋರಿ ಎಡಕ್ಕೆ ಹಿಂದಕ್ಕೆ ತೋರಿ ಎಡಕ್ಕೆ ಹಿಂದಕ್ಕೆ ತೋರಿ ಮುಂದಕ್ಕೆ ಮುಂದಕ್ಕೆ ತೋರಿ ಹಿಂದಕ್ಕೆ ಲಂಘಿಸಿ ಹಿಡಿವಲ್ಲಿ ಮಹಾಪರಾಕ್ರಮಿಯಾಗಿರ್ಪುದು. ಜಂಗಮಗಳಗರ್ಜನೆ ದುಡುಕು ದುಂಡಾಚಾರ ಕೋಳಾಟ ಕೊಂಡಾಟ ಮೊದಲಾದುವನು ಸೈರಿಸಿಕೊಂಡು, ಅಟ್ಟೂಳಿಗ ಹರದೂಳಿಗವನ್ನು ಮಾಡಿಕೊಂಡಿರುವಂಥ ಭೃತ್ಯನ."

ಇಂಥ ನೂರಾರು ವಾಕ್ಯಗಳು ಟೀಕೆಗಳ ಶರೀರದಲ್ಲಿ ಮತ್ತೆ ಮತ್ತೆ ಬರುತ್ತವೆ. ಇವುಗಳಿಗೆ ಕಳಸವಿಟ್ಟಂತೆ ಟೀಕಾಕಾರನ ಲೋಕಾನುಭವ ಬೆರಳು ಕಚ್ಚಿಸುತ್ತದೆ. ಉದಾ:

"ಸೊಂಡಿಲು ಮುಱಿದಡೆ 'ಗಜವೇನು ಬಾತೇ?–ಸಿಂಹಳದ್ವೀಪದ ಆನೆಯ ಕೋರೆಗೆ ಕತ್ತಿಯನ್ನು ಕಟ್ಟಿ ಸೊಂಡಿಲಿಗೆ ಸರಪಳಿಯನ್ನು ಕೊಟ್ಟು ಅರಿಬಲಕ್ಕೆ ಯುದ್ಧಕ್ಕೆ ಬಿಟ್ಟಲ್ಲಿ ತನ್ನ ಬಲವನ್ನು ಬಿಟ್ಟು

ಅರಿಯ ಬಲವನ್ನು ಸಂಹರಿಸುವಂಥ, ವಿಪ್ರರು ಸತ್ತಿದ್ದಲ್ಲಿ ಒಂಟಿಕಳ್ಳಿಯ ಬಡಿಗೆಯ ಮೇಲೆ ಕಟ್ಟಿಕೊಂಡು ಹಳ್ಳದ ಕೊರಕಲು ಇದ್ದಲ್ಲಿ ಹೊತ್ತುಕೊಂಡು ಹೋಗಿ ಕಿಚ್ಚನ್ನು ಒಟ್ಟಿ ಅದರೊಳಗೆ ಹಾಕಿ ಸುಟ್ಟು ಬಿಡುವರು, ಬತ್ತಲೆಯಿಪ್ಪುದ–ತಟ್ಟನ್ನು ಉಟ್ಟುಕೊಂಡು ತಲೆಯನ್ನು ತರಿಸಿಕೊಂಡು ಹಸಿರುಗಿಡವನ್ನು ಬೊಗ್ಗಿಸಿ ಮಲಮೂತ್ರಂಗಳ ವಿಸರ್ಜನೆಯ ಮಾಡುತ್ತ ಹೊರಗೈಲಿ ಅನ್ನವನ್ನು ಭುಂಜಿಸುತ್ತ ದಿಗಂಬರದಲ್ಲಿ ವಿನೋದಿಸುವಂಥದನ್ನು, ನಾಯಾಗಿ ಬೊಗಳುವುದ–ಕುತ್ತಿಗೆಗೆ ಹಗ್ಗವನ್ನು ಹಾಕಿ ಕೊರಳಿಗೆ ಕವಡಿಯನ್ನು ಕಟ್ಟಿಸಿ ಮರದ ದೋಣಿಯಲ್ಲಿ ಮಣ್ಣ ಪಿನ್ನೆಯಲ್ಲಿ ಅಂಬಲಿಯನ್ನು ಕುಡಿವುತ್ತ ನಾಯಾಗಿ ಬೊಗಳುವುದನ್ನು, ಕುದುರೆಯಾಗಿ ಕಟ್ಟಿಸನೆ ಲಾಯದಲ್ಲಿ–ಕುದುರೆಯಾಗಿ ಕಟ್ಟಿಸಿ ಕುತ್ತಿಗೆಗೆ ಕಣ್ಣಿಯನ್ನು ಕಟ್ಟಿಸಿ ಹಿಂದಕ್ಕೆ ಎರಡು ಕಾಲುಗಳನ್ನು ಬಿಗಿದು ಕಟ್ಟಿಸಿ ತೊಗಲ ತೋಬರಿಯೊಳಗೆ ದಾಣಿಯನ್ನು ತಿನ್ನಿಸುತ್ತ ಇದು ಮೈಲಾರನ ಕುದುರೆಯೆಂದು ಚಬಕು ಚಬಕಿನಲ್ಲಿ ಹೊಡೆಯಿಸದೆ ಬಿಟ್ಟಾನೆ? ಹಿಡಿಖಂಡವ ಕೊಯ್ಯನೇ–ಕಣ್ಣಕಟ್ಟಿ ಬಂಡೆಯ ಮೇಲೆ ಕುಳ್ಳಿರಿಸಿ ಇಕ್ಕಳದಿಂದ ಖಂಡವನ್ನು ಕಿತ್ತಿ ಕಿತ್ತಿ ಉಪ್ಪಿನಲ್ಲಿ ಅದ್ದಿ ತಿನಿಸದೆ ಬಿಟ್ಟಾನೆ?. ಪಿಂಬಱಿ ಮೈಲಾರಂಗೆ–ಪಿಂಬರ ಕ್ಷೇತ್ರದಲ್ಲಿರುವ ಮಣ್ಣು ಮೈಲಾರನಿಗೆ, ಮೇಳವಾಡುತ್ತಿದ್ದ ಕಾಣಾ ತ್ರೈಜಗದೊಳಗೆ–ಸ್ವರ್ಗ ಮರ್ತ್ಯ ಪಾತಾಳದೊಳಗೆ ಮೇಳವಾಡುತ್ತಿರ್ದ. ಬೆನ್ನಸಿಡಿ ಬಾಯಬೀಗ, ತೋಳಶಸ್ತ್ರ ಸೊಪ್ಪಿನುಡಿಗೆ ಮೊದಲಾದುವನ್ನು ಉಡಿಸಿ ದಿಗಂಬರದಲ್ಲಿ ವಿನೋದಿಸುತ್ತಿರ್ದನು, ಮಡಕೆದೈವ–ಭುವನಕೋಶದಲ್ಲಿ ಸಮಸ್ತ ದೈವವಾಗಿಪ್ಪವು ಎಂಬಲ್ಲಿ ಲೋಕದ ಆತ್ಮರುಗಳು ಭಾಂಡಂಗಳಲ್ಲಿ ಪಾಕಪ್ರಯತ್ನಂಗಳನು ಮಾಡಿ ನಿಮ್ಮಲ್ಲಿ ಹೊತ್ತು ಪರಿಯಂತರ ಅಡಿಗೆ ಮಾಡಿದೆವೆಂದು ಹೆಗಲ ತೊಳೆದು ಬೂದಿಯ ಕಟ್ಟನ್ನು ಬರೆದು ನಮ್ಮ ಕಾಲು ತಗಲಿದವು ಕೈತಗಲಿದವೆಂದು ನಮಸ್ಕರಿಸಿ ಒತ್ತಟ್ಟಿಗೆ ಮಡಗುತ್ತಿಹರು. ಅದಲ್ಲದೆ ಐರಾಣಿಗಡಿಗೆ ಜಕ್ಕಣಿಯರ ಗಡಿಗೆ ಮೊದಲಾದವನ್ನು ದೇವರೆಂದು ನಮಸ್ಕರಿಸುತ್ತಿಹರು. ಲೋಕದಲ್ಲಿ ಆತ್ಮರುಗಳಿಗೆ ನಿತ್ಯಜ್ವರ ಸೀತಾಳ ಸಿಡುಬು ನಾಗಜ್ವರ ಚತುರ್ಥಿಜ್ವರ ಮೊದಲಾದವು ಬಂದು ಕಾಡುತ್ತಿದ್ದಲ್ಲಿ ಕಣಿಹೇಳುವರ ತಾವಕ್ಕೆ ವಿಳ್ಯೆ ಫಲಹಾರ ಧೂಪಗಾಣಿಕೆ ಮೊದಲಾದುವನ್ನು ತೆಗೆದು ಕೊಂಡು ಹೋಗಿ ಮುಂದಿಟ್ಟು ಕೈಯಲ್ಲಿ ಬೆತ್ತವನ್ನು ಹಿಡಿದುಕೊಂಡು ಚಿಟಕಿಯನ್ನು ಹಾಕಿ ಹಾಕಿ ಆಕಳಿಸುತ್ತ ಮೈ ಒಡ್ಡುಮುರಿಯುತ್ತ ನೂರಾರು ದೈವವನ್ನು ನೆನೆದು, ತೋಱಲುಬಾರದು–ಒಬ್ಬಾನೊಬ್ಬ ಪುರುಷನು ರಣಮಂಡಲಕ್ಕೆ ಹೋಗಿ ಕಡದಾಡಿ ಮಡಿದಲ್ಲಿ ಅವನ ಸ್ತ್ರೀಯಳು–ಎಣ್ಣೆ ಅರಿಷಿಣವನ್ನು ಹಚ್ಚಿಕೊಂಡು ಹೂವನ್ನು ಮುಡಿದುಕೊಂಡು ಮನೆ ಮನೆಗೆ ಕೋರೂಟವನ್ನು ಉಂಬುತ್ತ ಇಪ್ಪತ್ತೇಳು ದಿವಸ ಮಾಸ್ತಿಯಾಗಿ ಮೆರೆವ ಪರಿಯಂತರ ಪರಿಣಾಮವಾಗಿರುವುದು. ಕಡೆಯಲ್ಲಿ ಸತಿಕಲ್ಲ ಮೇಲೆ ನಿಂತುಕೊಂಡು ಕೈಯಲ್ಲಿ ನಿಂಬಿಹಣ್ಣನ್ನು ಹಿಡಿದುಕೊಂಡು ಕಿಚ್ಚಿನಲ್ಲಿ ಬಿದ್ದು ಪತಿವ್ರತೆಯರ ಭಾವದ ಪರೀಕ್ಷೆಯನ್ನು ಕಾಣಿಸಹೆನೆಂದರೆ ಅಶಕ್ಯವಾಗಿರ್ಪುದು."

ಈ ಹೇಳಿಕೆಗಳಲ್ಲಿಯ ಟೀಕಾಕಾರನ ಸೂಕ್ಷ್ಮ ನಿರೀಕ್ಷೆ ಲೋಕಾನುಭವ ಬೆರಗುಗೊಳಿಸುತ್ತವೆ. ಟೀಕೆಯುದ್ದಕೂ ಬಿತ್ತುತ್ತ ನಡೆದ ಇಂಥ ಅನುಭವಗಳನ್ನು ಸಂಗ್ರಹಿಸಿ ಆ ಕಾಲದ ಸಾಂಸ್ಕೃತಿಕ ಅಧ್ಯಯನ ನಡೆಸಬಹುದು.

ಹೀಗಿದ್ದರೂ ಶಬ್ದಾರ್ಥದ ದೃಷ್ಟಿಯಿಂದ ಹೇಳಬಹುದಾದ ದೋಷವೆಂದರೆ ಸರಳಪದಗಳಿಗೆ ಕಠಿಣ ಅರ್ಥಬರೆಯುವುದು. ಉದಾ : "ಕಾಗೆ–ವಾಯಸ, ವಿಷವನು–ಕ್ಷೇವಡವನ್ನು,

ಅಂಕು ಶಕ್ಕೆ–ಶೃಣಿಗೆ, ಬಿದಿರೆಲೆ–ವೇಣುಪರ್ಣ. ಮಳಲ–ಸೈಕತ, ನಾಯಿಗಿಂದ–ಶುನಿಗಿಂದಲೂ, ಗೂಗೆ–ಕೌಶಿಕ, ನರಿ–ಜಂಬುಕನು, ಬೇವಿನಹಣ್ಣು–ಪಿಚುಮಂದದಫಲ. ಚೇಳಿಂಗೆ–ವೃಶ್ಚಿಕಂಗೆ, ಬಾಳೆಗೆ–ರಂಭಾ ಸ್ತಂಭಕ್ಕೆ ಇತ್ಯಾದಿ. ಪ್ರತಿಯೊಂದು ಪದಕ್ಕೆ ಅರ್ಥ ಹೇಳುವ ಪರಿಶ್ರಮವಿಟ್ಟುಕೊಂಡ ಕಾರಣ ಟೀಕಾಕಾರರು ಅನಿವಾರ್ಯವಾಗಿ ತಿಳಿದೂ ತಿಳಿದೂ ಈ ದೋಷವನ್ನು ಮಾಡಿದ್ದಾರೆ. ಈಗ ಕನ್ನಡದ ಎಷ್ಟೋ ಸರಳ ಪದಗಳಿಗೆ ಇಂಗ್ಲೀಷದಲ್ಲಿ ಅರ್ಥಹೇಳುವಂತೆ. ಇದು ಇವರಿಗಷ್ಟೇ ಅಲ್ಲ, ಆ ಕಾಲದ ಎಲ್ಲ ಟೀಕಾಕಾರರಿಗೂ ಅನ್ವಯಿಸುವ ಮಾತು. ಇದಕ್ಕೆ ಹೆಚ್ಚಿನದಾಗಿ ಕೆಲವುಸಲ ತಪ್ಪು ಅರ್ಥ ಬರೆದುದೂ ಕಾಣುತ್ತದೆ. ಉದಾ :

"ನಾರಿವಾಣ–ಹರಿವಾಣ, ಮಾಗಡವ ಮಿಂದಡೆ–ಮಾಗಿಯಕಾಲದಲ್ಲಿ ಹೊಳೆಗೆ ಹೋಗಿ ಸ್ನಾನಪಾನವ ಮಾಡಿಕೊಂಡು ಬಂದಲ್ಲಿ, ದಿಟದೀವಿಗೆ–ಭಾಷಾ ಪತ್ರ, ಕಿಗ್ಗಡಲ–ಊರಿಗೆ ಮೂಡಗಡಿಯಾಗಿ ತೋರುವ." ಇತ್ಯಾದಿ, ಸಾವಿರಸಂಖ್ಯೆಯಷ್ಟು ವಚನಗಳಿಗೆ ಟೀಕೆ ಬರೆಯುವಲ್ಲಿ ಹತ್ತಾರು ಸಂಖ್ಯೆಯಷ್ಟು ಸಿಗುವ ಈ ದೋಷಗಳು ಸಹಜ.

ಇನ್ನು ಟೀಕೆಗಳಲ್ಲಿ ಎಷ್ಟೋ ಲೌಕಿಕ ಉದಾಹರಣೆಗಳಿದ್ದರೂ ಅದು ಗೌಣ, ತಾತ್ವಿಕ ವಿವರಣೆಯೇ ಪ್ರಧಾನ, ಕಾರಣ ಸಾಮಾನ್ಯವಾಗಿ ಎಲ್ಲ ಟೀಕೆಗಳು ಲೌಕಿಕದಿಂದ ಪ್ರಾರಂಭವಾದರೂ ವಿರಮಿಸುವುದು ಪಾರಮಾರ್ಥದಲ್ಲಿ, ಕೆಲವಂತೂ ಕೇವಲ ಪಾರಮಾರ್ಥಿಕ ಪ್ರಪಂಚದಲ್ಲಿಯೇ ವಿಹರಿಸುತ್ತವೆ. ಈ ಬಗೆಯ ಟೀಕೆಗಳು ವಚನಗಳಲ್ಲಿ ಮುಚ್ಚಿ ನಿಂತಿರುವ ಅರ್ಥಗಳನ್ನು ಬಿಚ್ಚಿ ಹೇಳುತ್ತವೆಯೇ? ವೀರಶೈವ ತತ್ವದ ಸತ್ವವನ್ನು ಎತ್ತಿ ತೋರಿಸುತ್ತವೆಯೇ? ತಿಳುವಳಿಕೆಯನ್ನು ವಿಸ್ತರಿಸುತ್ತವೆಯೆ? ಎಂಬುದೊಂದು ಪ್ರಶ್ನೆ ಇದಕ್ಕೆ ಹೌದು, ಇಲ್ಲ ಎಂಬ ಎರಡೂ ಉತ್ತರ ಹೇಳಬೇಕಾಗುತ್ತದೆ.

ಯಾವುದೇ ಧರ್ಮದ ನಿಜ ತತ್ವದ ಸುತ್ತ ಕ್ರಮೇಣ ಪ್ರತಿಷ್ಠಿತರಿಂದ ಪಾಂಡಿತ್ಯ ಜ್ಞಾನ ಮತ್ತು ಪಾಮರರಿಂದ ವ್ಯಾವಹಾರಿಕ ಜ್ಞಾನಗಳು ಆವರಿಸುತ್ತ ಹೋಗುತ್ತವೆ. ವೀರಶೈವದ ಸುತ್ತ ಈ ಎರಡೂ ಪ್ರಕ್ರಿಯೆಗಳು ಜ್ವಲಂತವಾಗಿದ್ದ ಕಾಲದಲ್ಲಿ ಹುಟ್ಟಿದ ಕಾರಣ ಈ ಟೀಕೆಗಳಲ್ಲಿ ನಿಜತತ್ವ ಪ್ರಕಾಶನ ಕಾರ್ಯ ನಡೆದಿದ್ದರೂ ಕೆಲವು ಸಲ ಈ ಪಾಂಡಿತ್ಯಿಕ ಮತ್ತು ವ್ಯಾವಹಾರಿಕ ಅರ್ಥಗಳ ಹಾವಳಿಯೂ ಎಡೆವಡೆದಿವೆ, ಈ ಮೂರಕ್ಕೂ ಉದಾಹರಣೆ.

೧. ಸ್ಥಾವರ–ಇಷ್ಟಲಿಂಗವು, ಜಂಗಮವೆಂಬ–ಚರಲಿಂಗವೆಂದು ಹೇಳುವ, ಉಭಯಪಕ್ಷ ಎರಡರ ವಿಶ್ವಾಸ, [ಒಂದೇ–] ಒಂದೇಯಾಗಿಪ್ಪುದು [ಆವಮುಖದಲ್ಲಿ ಬಂದಡೂ ತೃಪ್ತಿವೊಂದೇ–] ಗಂಡಬೇರುಂಡ ಪಕ್ಷಿಗೆ ಶರೀರವೊಂದು ಕೊಕ್ಕು ಎರಡಾಗಿಪ್ಪವು. ಯಾವ ಕೊಕ್ಕಿನಲ್ಲಿ ಆಹಾರವ ತೆಗೆದುಕೊಂಡರೂ ಶರೀರಕ್ಕೆ ತೃಪ್ತಿಯಾಗುತ್ತಿಹುದು. ಹಾಂಗೆ ಶಿವಂಗೆ ಲಿಂಗ ಜಂಗಮವೆಂಬ ಎರಡು ಮುಖವಾಗಿಪ್ಪವು. ಲಿಂಗಕ್ಕೆ ಸಕಲ ಪದಾರ್ಥವನು ಸಮರ್ಪಣೆಯ ಮಾಡಿದರೂ ಶಿವನಿಗೆ ಸಮರ್ಪಣೆಯಾಗುತ್ತಿಹುದು. ಜಂಗಮಕ್ಕೆ ಸಕಲಪದಾರ್ಥವನು ಸಮರ್ಪಣೆಯ ಮಾಡಿದರೂ ಶಿವನಿಗೆ ಸಮರ್ಪಣೆಯಾಗುತ್ತಿಹುದು. ಕೂಡಲಸಂಗಮದೇವರ–ಪರಶಿವಲಿಂಗದೇವರ, ಆಪ್ಯಾಯನವೊಂದೇ–ತೃಪ್ತಿವೊಂದೆಯಾಗಿರ್ಪುದು(೮೦೭).

೨. ಜೋಳವಾಳಿಯುವ ನಾನಲ್ಲವಯ್ಯ-ಒಂದು ಪಡಿ ಜೋಳಕ್ಕೆ ಚೆಂಗೂಲಿಯ ಮಾಡಲ್ಪಟ್ಟಂಥಾತ ನಾನಲ್ಲವಯ್ಯ. ನಿಮ್ಮ ವೇಳೆವಾಳಿಯುವ ನಾನಯ್ಯ-ನಿಮ್ಮ ವೇಳೆಯ ಹೊತ್ತಿಗೆ ಹೋಗಿ ಕೂಲಿಯ ಮಾಡಲ್ಪಟ್ಟಾತ ನಾನಯ್ಯ: ಹಾಳುಗೆಟ್ಟೋಡುವ ಆಳು ನಾನಲ್ಲವಯ್ಯ. ಹಾಳುಗೆಟ್ಟೋಡುವ-ಆರು ತಾಸು ಹೊತ್ತಿನಾಗ ಬಂದು ಮೂರು ತಾಸು ತನಕ ಕೂಲಿಯ ಮಾಡಿ ಹೊತ್ತಿರುವತ್ತಿಗೆ ಗೊತ್ತಿಗೆ ಹೋಗುವಂಥ, ಆಳು ನಾನಲ್ಲವಯ್ಯ-ಚೆಂಗೂಲಿಯುವ ನಾನಲ್ಲವಯ್ಯ (೭೦೦).

೩. ಜೋಳವಾಳಿಯುವ ನಾನಲ್ಲಯ್ಯ-ಲಿಂಗಾಂಗಕ್ಕೆ ಭಿನ್ನವಿಟ್ಟು ಪೂಜಾಕ್ರೀಗಳ ಮಾಡುವಾತ ನಾನಲ್ಲ. ವೇಳೆವಾಳಿಯುವ ನಾನಯ್ಯ-ಮಾಡುವಾತ ಕೈಕೊಳುವಾತ ನಡುವೆ ಸಲುವ ಪೂಜಾ ದ್ರವ್ಯವು ಒಂದೇಯೆಂದರಿದು ಮಾಡುವಂಥಾತ ನಾನಯ್ಯ. ಅದಲ್ಲದೆ ತಾಪತ್ರಯಾಗ್ನಿವುಳ್ಳವನಲ್ಲ. ಸತ್ತ್ರಣವ ಜ್ಞಾನವುಳ್ಳವ ನಾನಯ್ಯ. ಹಾಳುಗೆಟ್ಟೋಡವ ಆಳು ನಾನಲ್ಲಯ್ಯ-ಭಕ್ತಿಕಾಯ ನಷ್ಟವಾಗಿ ಇಹಪರಾದಿಗಳಿಗೆಡೆಯಾಡುವ ಭಕ್ತಿಭೃತ್ಯನು ನಾನಲ್ಲಯ್ಯ(೭೦೦).

ಈ ಮೂರೂ ಟೀಕೆಗಳಲ್ಲಿ ಮೊದಲಿನದು ಸರಿ. ಎರಡನೆಯದು ತಪ್ಪು ಮೂರನೆಯದು ಆಭಾಸ. ಈ ತಪ್ಪು ಆಭಾಸಗಳಲ್ಲಿ ಮೊದಲಿನದರ ಪ್ರಮಾಣ ಕಡಿಮೆ, ಎರಡನೆಯದರ ಪ್ರಮಾಣ ಹೆಚ್ಚು. ಇವೆರಡನ್ನು ಬದಿಗಿಟ್ಟು ನೋಡಿದರೆ ಈ "ಪಂಚಟೀಕೆಗಳು" ಬಸವಣ್ಣವರ ವಚನಗಳ "ತಾತ್ವಿಕ ಮುಖ"ವನ್ನು ತೆರೆದು ತೋರಿಸುವಲ್ಲಿ ಬಹುಮಟ್ಟಿಗೆ ಸಾರ್ಥಕವಾಗಿವೆಯೆನ್ನಬಹುದು. ಒಟ್ಟಿನಲ್ಲಿ ಈ ಟೀಕೆಗಳ ಧೋರಣೆ ಪರಸ್ಪರ ಹೋಲಿಕೆ ಹೀಗಿದೆ:

ಟೀಕೆ : I – ಒಂದು ಬಗೆಯ ವಾಚ್ಯಾರ್ಥ, ಒಂದು ಬಗೆಯ ಕ್ವಚಿತ್ತಾಗಿ ಎರಡು ಬಗೆಯ ತಾತ್ವಿಕಾರ್ಥ.

ಟೀಕೆ : II –ಒಂದು ಬಗೆಯ ಕ್ವಚಿತ್ತಾಗಿ ಎರಡು ಬಗೆಯ, ಇನ್ನೂ ಕ್ವಚಿತ್ತಾಗಿ ಮೂರು ಬಗೆಯ ತಾತ್ವಿಕಾರ್ಥ.

ಟೀಕೆ : III –ಬೆಡಗಿನ ವಚನಗಳ ಟೀಕೆ, ಭಕ್ತಸ್ಥಲದಲ್ಲಿ IV ನೆಯ ಟೀಕೆಯನ್ನು ಮಿಕ್ಕಸ್ಥಲಗಳಲ್ಲಿ Vನೆಯ ಟೀಕೆಯನ್ನು ಹೋಲುತ್ತವೆ.

ಟೀಕೆ : IV–ಸಾರವತ್ತಾದ ಸಂಕ್ಷಿಪ್ತಟೀಕೆ. ಭಕ್ತಸ್ಥಲದಲ್ಲಿ IIIನೆಯ ಟೀಕೆಯನ್ನು ಹೋಲುತ್ತವೆ. ಇದರ ಕೆಲವು ಟೀಕೆಗಳು ಲಿಂಗಲೀಲಾವಿಲಾಸ ಚಾರಿತ್ಯ, ಏಕೋತ್ತರ ಶತಸ್ಥಲಸಾರದಲ್ಲಿ ಸಿಗುತ್ತವೆ.

ಟೀಕೆ : V–ಅಸ್ತವ್ಯಸ್ತ ಟೀಕೆ, ಭಕ್ತೇತರ ಸ್ಥಲಗಳಲ್ಲಿ IIIನೆಯ ಟೀಕೆಯನ್ನು ಹೋಲುತ್ತದೆ.

• ಹೆಚ್ಚಿನ ವಚನಟೀಕೆ •

ಮೇಲೆ ವಿವೇಚಿಸಿದ ೫ ಟೀಕೆಗಳಲ್ಲದೆ ಬೇರೆ ಗ್ರಂಥಗಳಲ್ಲಿಯೂ ಬಸವಣ್ಣನವರ ಕೆಲವು ವಚನಗಳಿಗೆ ಟೀಕೆಗಳು ಸಿಗುತ್ತವೆ. ಅವು: ಲಿಂಗಲೀಲಾ ವಿಲಾಸ ಚಾರಿತ್ರ, ಏಕೋತ್ತರ ಶತಸ್ಥಲಸಾರ,

ವಿಶೇಷಾನುಭವ ಷಟ್ಸ್ಥಲ ಮತ್ತು ಕೆ. ಆರ್. ಆಯ್. ೬೬೩ ನೆಯ ಅನಾಮಧೇಯ ಕೃತಿ[ಇವುಗಳನ್ನು ಇತರ ವಚನ ಟೀಕೆ ಎಂದು ಅನುಬಂಧದಲ್ಲಿ ಕರೆಯಲಾಗಿದೆ].

'ಲಿಂಗಲೀಲಾವಿಲಾಸ ಚಾರಿತ್ರ' ವೀರಶೈವ ವಚನ ಸಂಕಲನ ಕೃತಿಗಳ ಶ್ರೇಣಿಯಲ್ಲಿ ಎದ್ದು ಕಾಣುವ ಗ್ರಂಥ. ಇದರ ಕರ್ತೃ ಕಲ್ಲುಮಠದ ಪ್ರಭುದೇವ, ೧೬ ಸ್ಥಲಗಳಲ್ಲಿ ಪ್ರಾಚೀನ ವಚನಗಳನ್ನು ಸಂಕಲಿಸಿ ಕೆಲವುಗಳಿಗೆ ಮಾತ್ರ ಟೀಕೆ ಬರೆಯಲಾಗಿದೆ. ಈ ಟೀಕೆಗಳನ್ನು ಈತನೇ ಬರೆದಿರಬಹುದಾದರೂ IV ನೆಯ ಗ್ರಂಥದಲ್ಲಿಯ ಕೆಲವು ಟೀಕೆಗಳು ಇಲ್ಲಿ ಕಂಡುಬರುವುದರಿಂದ ಈ ಎರಡಕ್ಕೂ ಬೇರೊಂದು ಟೀಕಾಗ್ರಂಥ ಮೂಲವಾಗಿರುವ ಸಂಭವವಿದೆ. ಅದೇನೇ ಇದ್ದರೂ ಈ ಗ್ರಂಥದ ಟೀಕೆಗಳಿಗೆ ಪ್ರಾಚೀನತೆಯ ಬೆಲೆ ಸಲ್ಲುತ್ತದೆ. ಇಲ್ಲಿ ಬಸವಣ್ಣನವರ ೪೧ ವಚನಗಳಿಗೆ ಬರೆಯಲಾದ ಟೀಕೆಗಳನ್ನು ಎತ್ತಿಕೊಳ್ಳಲಾಗಿದೆ. ಪ್ರತಿಯೊಂದು ಟೀಕೆ ಗಾತ್ರದಲ್ಲಿ ಮಿತವಾಗಿದ್ದು ಅರ್ಥಪೂರ್ಣವಾಗಿದೆ. ಪ್ರೊ. ಎಸ್.ಎಸ್.ಭೂಸನೂರಮಠ ಸಂಪಾದಿತ "ಲಿಂಗಲೀಲಾವಿಲಾಸ ಚಾರಿತ್ರ"ದಿಂದ ಇಲ್ಲಿಯ ಪಾಠವನ್ನು ಎತ್ತಿಕೊಳ್ಳಲಾಗಿದೆ.

'ಏಕೋತ್ತರ ಶತಸ್ಥಲಸಾರ'ದ ಕರ್ತೃ ತೋಂಟದಾರ್ಯ ಪರಂಪರೆಯ ಕಟ್ಟಿಗೆಹಳ್ಳಿ ಸ್ವಾಮಿಗಳು. ಇದು ಇನ್ನೂ ಅಪ್ರಕಟಿತ, ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಭಾಂಡಾರದಲ್ಲಿರುವ ೭೬ನೆಯ ನಂಬರಿನ ತಾಳೆಪ್ರತಿಯಿದು. ಶರಣರ ವಚನಗಳನ್ನು ನೂರೊಂದು ಸ್ಥಲಗಳಲ್ಲಿ ಯೋಜಿಸಿದ ಈ ಕೃತಿ ಟೀಕೆಯನ್ನೊಳಗೊಂಡಿದೆ. ಇದರಿಂದ ಬಸವಣ್ಣನವರ ೧೭ಟೀಕಿನ ವಚನಗಳನ್ನು ಮಾತ್ರ ಇಲ್ಲಿ ಎತ್ತಿಕೊಳ್ಳಲಾಗಿದೆ.

'ವಿಶೇಷಾನುಭವ ಷಟ್ಸ್ಥಲ'ದ ಕರ್ತೃ ಚೆನ್ನವೀರಾರ್ಯ, ಶರಣರ ವಚನಗಳನ್ನು ಸ್ಥಲಕಟ್ಟಿನ ಹಿನ್ನೆಲೆಯಲ್ಲಿ ಜೋಡಿಸಲಾದ ಈ ಕೃತಿ ೧೬ ನೆಯ ಶತಮಾನಕ್ಕೆ ಸೇರಿದೆ. ಇಲ್ಲಿಯ ಎಲ್ಲ ವಚನಗಳಿಗೂ ಟೀಕೆ ಬರೆಯಲಾಗಿದೆ. ಬಸವಣ್ಣನವರ ಎಲ್ಲ ೨೭ ವಚನಗಳಿಗೆ ಇರುವ ಟೀಕೆಗಳನ್ನು ಇಲ್ಲಿ ಎತ್ತಿಕೊಳ್ಳಲಾಗಿದೆ. ಟೀಕೆಗಳು ಸಂಕ್ಷಿಪ್ತವಾಗಿವೆ; ಸಾರವತ್ತಾಗಿವೆ. ಡಾ. ಆರ್. ಸಿ ಹಿರೇಮಠ ಸಂಪಾದಿತ ಆವೃತ್ತಿಯಿಂದ ಇಲ್ಲಿಯ ಪಾಠವನ್ನು ಎತ್ತಿಕೊಳ್ಳಲಾಗಿದೆ.

ಕೆ.ಆರ್.ಆಯ್.೬೬೩ ನೆಯ ಹಸ್ತಪ್ರತಿಯಲ್ಲಿ ಲಿಪಿಸಲಾದ ಈ ಕೃತಿಯ ಹೆಸರು ಗೊತ್ತಾಗುವದಿಲ್ಲ. ಸ್ಥಲಕ್ರಮದಲ್ಲಿ ಶರಣರ ವಚನಗಳನ್ನು ಯೋಜಿಸಲಾಗಿದ್ದು, ಇದರಿಂದ ಬಸವಣ್ಣನವರ ೫ ಟೀಕಿನ ವಚನಗಳನ್ನು ಎತ್ತಿಕೊಳ್ಳಲಾಗಿದೆ.

• ಗ್ರಂಥಶಿಲ್ಪ •

ಬಸವಣ್ಣನವರ ವಚನಗಳಿಗೆ ನಮ್ಮ ಪ್ರಯತ್ನದ ಫಲವಾಗಿ ಒಟ್ಟು ಐದು ಟೀಕೆಗಳು ಲಭ್ಯವಾದವು.* ಇವುಗಳನ್ನು ಪ್ರತ್ಯೇಕವಾಗಿ ಪ್ರಕಟಿಸುವ ಯೋಜನೆಯೊಂದು ಮೊದಲು ಸುಳಿದು, ಕೊನೆಗೆ 'ಸಂಯುಕ್ತ ಸಂಪುಟ'ವೇ ಪರಮ ಪ್ರಯೋಜಕವೆನಿಸಿತು. ಕನ್ನಡದಲ್ಲಿ ಪ್ರತ್ಯೇಕವಾಗಿ ಒಂದೊಂದು ಗ್ರಂಥದ ಸಂಪಾದನೆಯನ್ನು ಕೈಕೊಳ್ಳಲಾಗುತ್ತಿರುವ ಇಂದಿನ ದಿನಗಳಲ್ಲಿ, ಈ ಐದನ್ನು ಸಂಯುಕ್ತವಾಗಿ ಸಂಪಾದಿಸುವುದು ಹೇಗೆ? ಎಂಬ ಸಮಸ್ಯೆ ಎದುರಾಯಿತು. ಮೂರು ನಾಲ್ಕು

* ಅನುಬಂಧದಲ್ಲಿರುವ "ಹೆಚ್ಚಿನ ವಚನ ಟೀಕೆ"ಗಳನ್ನು ಗಮನಿಸಿರಿ.

ರೀತಿಯಲ್ಲಿ ಪ್ರಯತ್ನಿಸಿದ ತರುವಾಯ ಈ ಗ್ರಂಥಕ್ಕೆ ಅಳವಡಿಸಿರುವ ಪ್ರಸ್ತುತ ಯೋಜನೆಯ ಹೊಳಪು ಮೂಡಿನಿಂತಿತು.

ಐದೂ ಜನ ಟೀಕಾರರಲ್ಲಿ ಒಬ್ಬ ಎಲ್ಲ ವಚನಗಳಿಗೆ, ನಾಲ್ವರು ತಮಗೆ ಇಷ್ಟವೆನಿಸಿದ ವಚನಗಳಿಗೆ ಟೀಕೆ ಬರೆದಿರುವರು. ಹೀಗಾಗಿ ಎಲ್ಲ ವಚನಗಳಿಗೆ ಒಂದು ಟೀಕೆ, ಕೆಲವು ವಚನಗಳಿಗೆ ಎರಡು, ಮೂರು, ನಾಲ್ಕು ಇಲ್ಲವೆ ಐದೂ ಟೀಕೆಗಳು ಸಿಗುತ್ತವೆ. ಅವರವರಿಗೆ ಸಿಕ್ಕ ವಚನಪಾಠಗಳೇ ಭಿನ್ನವಾಗಿದ್ದು ಕಾಲಾಂತರದಲ್ಲಿ ಅವರ ವಚನಗಳಿಗೂ ಅವರು ಬರೆದ ಟೀಕೆಗಳಿಗೂ ಪಾಠಾಂತರ ಹುಟ್ಟಿಕೊಂಡಿದೆ. ಇಲ್ಲಿ ಪ್ರತಿಯೊಂದರ ವಚನಪಾಠ-ಟೀಕಾಪಾಠಗಳಲ್ಲಿ ಸಮನ್ವಯವನ್ನು ಸಾಧಿಸುತ್ತ, ಐದರಲ್ಲಿಯೂ ಸಮನ್ವಯ ಸಾಧಿಸಬೇಕಾಗುತ್ತದೆ. ಈಗ ನಮಗೆ ಕಾಡಿದ ಸಮಸ್ಯೆಯನ್ನು ಬಗೆಹರಿಸಿ ಕೊಂಡುದು ಹೀಗೆ.

ಮೊದಲು ಈ ಐದು ಟೀಕಾಗ್ರಂಥಗಳನ್ನು ಕ್ರಮವಾಗಿ ೨. (ಕ, ಗ) ೨ (ಚ, ಜ), ೨ (ಟ, ವ), ೧ (ತ), ೧ (ಪ) ಹಸ್ತಪ್ರತಿಗಳ ಸಹಾಯದಿಂದ ಸ್ವತಂತ್ರವಾಗಿ ಪರಿಷ್ಕರಿಸಲಾಯಿತು. ಆಮೇಲೆ ಸ್ಥೂಲವಾಗಿ ಅರ್ವಾಚೀನದಿಂದ ಪ್ರಾಚೀನ ಕ್ರಮದಲ್ಲಿ ಅವುಗಳಿಗೆ I (ಕರ್ತೃ?), II (ಕರ್ತೃ ?), III (ಸೋಮಶೇಖರ ಶಿವಯೋಗಿ), IV (ಗುರುಬಸವಾಜ ?), V (ಪರ್ವತಶಿವಯೋಗಿ) ಎಂದು ರೋಮನ್ ಅಂಕಿಗಳ ಸಂಕೇತವನ್ನು ಕೊಡಲಾಯಿತು. ಮೇಲೆ ವಚನ, ಕೆಳಗೆ ಲಭ್ಯವಾಗಿರುವ ಎಲ್ಲ ಟೀಕೆಗಳನ್ನು ಅಡಕಗೊಳಿಸಿದ್ದು ಪ್ರತಿಯೊಂದು ಟೀಕೆಯ ತಲೆಯ ಮೇಲೆ ವಚನಕ್ಕೆ ಸಂವಾದಿಯಾದ ಪಾಠಾಂತರ, ಅಡಿಯ ಕೆಳಗೆ ಟೀಕೆಯ ಸಂವಾದಿಯಾದ ಪಾಠಾಂತರಗಳನ್ನು ಯೋಜಿಸಲಾಗಿದೆ. ವಚನದ ಪಾಠಾಂತರ ಸೂಚನೆಗೆ ಇಂಗ್ಲೀಷ ಅಂಕಿ, ಟೀಕೆಯ ಪಾಠಾಂತರ ಸೂಚನೆಗೆ ಕನ್ನಡ ಅಂಕಿಗಳನ್ನು ಬಳಸಲಾಗಿದೆ, ಒಂದು ವಚನ ಮತ್ತು ಅದರ ಟೀಕೆಯನ್ನು ಇನ್ನೊಂದು ವಚನ ಮತ್ತು ಅದರ ಟೀಕೆಗಳಿಂದ ಬೇರ್ಪಡಿಸಲು ಸರಳರೇಖೆ (–) ಯನ್ನು, ಟೀಕೆಯಿಂದ ಟೀಕೆಯನ್ನು ಬೇರ್ಪಡಿಸಲು ತುಂಡು ಸರಳರೇಖೆಯನ್ನು (-----), ಟೀಕೆಯಿಂದ ಪಾಠಾಂತರಗಳನ್ನು ಬೇರ್ಪಡಿಸಲು ಬಿಂದು ಸರಳರೇಖೆಯನ್ನು(......) ಉಪಯೋಗಿಸಲಾಗಿದೆ. ಈ ಯೋಜನೆಯ ಸ್ಪಷ್ಟ ತಿಳಿವಳಿಕೆಗೆ ೭೯೦ನೆಯ ವಚನವನ್ನೂ ಅದರ ಎಲ್ಲ ಟೀಕೆಗಳನ್ನೂ ನೋಡಬಹುದು. ಹೀಗೆ ರೂಪಗೊಂಡ ಪ್ರಸ್ತುತ ಶಿಲ್ಪ ಹೊಸಬಗೆಯದಾಗಿದ್ದರೂ ಓದುಗರಿಗೆ ಅಕ್ಲಿಷ್ಟವಾಗಿದೆಯೆಂದೇ ನಮ್ಮ ಭಾವನೆ.

• ಗ್ರಂಥಪರಿಷ್ಕರಣ •

ಬಸವಣ್ಣವರ ವಚನಗಳಿಗೆ ಬರೆದ ಈ ಐದು ಟೀಕೆಗಳಲ್ಲಿ II ಮತ್ತು IV ನೆಯ ಟೀಕೆಗಳ ವಿಷಯ ಯಾರಿಗೂ ಗೊತ್ತಿರಲಿಲ್ಲ. ಮಿಕ್ಕ I, III, V ನೆಯ ಟೀಕೆಗಳಿದ್ದ ವಿಷಯ ಗೊತ್ತಿದ್ದರೂ I ನೆಯದು ಮಾತ್ರ ಮೂರು ಸಲ ಭಾಗಶಃ ಪ್ರಕಟವಾಗಿದ್ದಿತು. ಅಂದರೆ ಡಾ. ಫ. ಗು. ಹಳಕಟ್ಟಿಯವರು ೧೯೩೪ರಲ್ಲಿ ಪ್ರಕಟಿಸಿದ ಬಸವೇಶ್ವರನ ವಚನಗಳ (ದ್ವಿ. ಆವೃತ್ತಿ)ಗ್ರಂಥಕ್ಕೆ ಟಿಪ್ಪಣಿ ರೂಪದಲ್ಲಿ ಈ ಟೀಕೆಯನ್ನು, ೧೯೫೪ರಲ್ಲಿ ಶ್ರೀ ವಿರೂಪಾಕ್ಷಪ್ಪ ಚನ್ನಪ್ಪ ಯಾಳಗಿ ಅವರು ಪ್ರಾರಂಭದ ೧೧೩ ವಚನಗಳನ್ನು, ೧೯೭೧ರಲ್ಲಿ ಡಾ. ಎಸ್.ಎಂ. ಹುಣಸ್ಯಾಳ ಅವರು ಕೇವಲ ಭಕ್ತಸ್ಥಲವನ್ನು, ಪ್ರಕಟಿಸಿದ್ದರು. ಈಗ ಈ I ನೆಯ ಟೀಕೆಯನ್ನೊಳಗೊಂಡು ಐದೂ ಟೀಕೆಗಳು ಇಡಿಯಾಗಿ ಅದೂ ಒಂದೇ ಸಂಪುಟದಲ್ಲಿ ಅಚ್ಚಾಗುತ್ತಲಿವೆ.

ಸಾಮಾನ್ಯವಾಗಿ ಇಲ್ಲಿಯ ವಚನಪಾಠ ಮತ್ತು I ನೆಯ ಟೀಕೆಯ ಪಾಠಗಳಲ್ಲಿ ಹೊಂದಿಕೆ ಬರುವಂತೆ ನೋಡಿಕೊಳ್ಳಲಾಗಿದೆ. ಇದಕ್ಕೋಸುಗ ಸಾಧ್ಯವಿದ್ದಲ್ಲಿ I ನೆಯ ಟೀಕೆಯಂತೆ ವಚನ ಪಾಠವನ್ನು ತಿದ್ದಿಕೊಂಡಿದ್ದು, II III IV V ನೆಯ ಟೀಕೆಗಳಿಗೆ ತೋರಿಬಂದ ವಚನ ಪಾಠಾಂತರ ಗಳನ್ನು ಅವುಗಳ ತಲೆಯ ಮೇಲೆ ಕೊಡಲಾಗಿದೆ, ಟೀಕೆಗಳಿಗೆ ತೋರಿಬಂದ ಪಾಠಾಂತರಗಳನ್ನು ಅವುಗಳ ಅಡಿಯಲ್ಲಿ ಅಡಕಗೊಳಿಸಲಾಗಿದೆ.

ಈ ಪ್ರಸಂಗದಲ್ಲಿ ಊಹಿತ ಪಾಠಗಳನ್ನು ಚೌಕಕಂಸಿನಲ್ಲಿ ಕೊಡಲಾಗಿದ್ದು ಅರ್ಥವಾಗದ ದೇಶಿ ಪದಗಳನ್ನು, ಆಯಾ ಕಾಲದ ಭಾಷಾಸ್ವರೂಪವನ್ನು, ಬರವಣಿಗೆಯ ರೀತಿಯನ್ನು ಮೂಲ ರೂಪದಲ್ಲಿಯೇ ಕಾಪಾಡಿದ್ದೇವೆ. ಸಂಸ್ಕೃತ ಉದ್ಧರಣೆಗಳನ್ನು ಪರಿಷ್ಕರಿಸಲು ಪ್ರಯತ್ನಿಸಿದ್ದು, ಅವುಗಳಿಗೆ ಬರೆದ ಅರ್ಥವನ್ನು ತಿದ್ದುವ ಗೋಜಿಗೆ ಹೋಗಿಲ್ಲ. ಕೆಲವು ಸಲ ಮೇಲುನೋಟಕ್ಕೆ ತಪ್ಪು ಭಾವನೆಯನ್ನು ಹುಟ್ಟಿಸಬಹುದಾಗಿದ್ದ ಭಾಗಗಳನ್ನು ಕತ್ತರಿಸಿ ತೆಗೆದು ಅಲ್ಲಿ ನಕ್ಷತ್ರ ಚಿಹ್ನಾಂತರ್ಗತ ಚೌಕ ಕಂಸನ್ನು ಬಳಸಲಾಗಿದ್ದು, ಇಷ್ಟು ಆಳವಾದ ಪರಿಷ್ಕರಣ ಗ್ರಂಥಸಂಪಾದನಾ ಶಾಸ್ತ್ರತತ್ವಕ್ಕೆ ವ್ಯತಿರಿಕ್ತವಾಗಿದ್ದರೂ ಸಾಹಿತ್ಯಕ್ಕಿಂತ ಸಮಾಜ ದೊಡ್ಡದು ಎಂಬ ಕಾರಣದಿಂದ ಹಾಗೆ ಮಾಡಲಾಗಿದೆ. ಇಷ್ಟು ಎಚ್ಚರವಹಿಸಿದರೂ ಕಣ್ಣುತಪ್ಪಿಸಿ ಉಳಿದಿರಬಹುದಾದ ಇಂಥ ಇಲ್ಲವೆ ಯಾವುದೇ ರೂಪದ ದೋಷಗಳನ್ನು ಸಹೃದಯರು ಸೂಚಿಸಿದಲ್ಲಿ ತೆರೆದ ಮನಸ್ಸಿನಿಂದ ಸ್ವೀಕರಿಸಲಾಗುವುದು, ಮುಂದಿನ ಆವೃತ್ತಿಯಲ್ಲಿ ಸರಿಪಡಿಸಿಕೊಳ್ಳಲಾಗುವುದು.

• ಹಸ್ತಪ್ರತಿಗಳು •

ವಚನಸಾಹಿತ್ಯದಂಥ ಜನಪ್ರಿಯ ವಾಙ್ಮಯವನ್ನು ಸಂಪಾದಿಸುವಲ್ಲಿ ಹಸ್ತಪ್ರತಿಗಳ ಆಯ್ಕೆ ತುಂಬ ಜಾಗರೂಕತೆಯಿಂದ ನಡೆಯಬೇಕಾಗುತ್ತದೆ. ಅಂದರೆ ಒಂದು ಕೃತಿಯ ಎಲ್ಲ ಕುಟುಂಬಗಳ ಒಂದೊಂದು ಉತ್ತಮ ಪ್ರತಿಗಳನ್ನು ಆಯ್ದುಕೊಳ್ಳುವುದಕ್ಕಿಂತ, ಒಂದೇ ಕುಟುಂಬದ ಕೆಲವು ಉತ್ತಮ ಪ್ರತಿಗಳನ್ನು ಆಯ್ದುಕೊಳ್ಳುವುದು ಲೇಸು. ಇದಕ್ಕನುಗುಣವಾಗಿ ಮೊದಲಿನ ಮೂರು ಟೀಕೆಗಳಿಗೆ ಒಂದೇ ಕುಟುಂಬದ ಎರಡೆರಡು ಪ್ರತಿಗಳನ್ನು (ಅಧಿಕ ಸಂಖ್ಯೆಯಲ್ಲಿ ಸಿಗುತ್ತಿದ್ದರೂ) ಆಯ್ದುಕೊಳ್ಳ ಲಾಗಿದೆ. ನಾಲ್ಕು ಮತ್ತು ಐದನೆಯ ಟೀಕೆಗಳಿಗಾಗಿ ಲಭ್ಯವಿರುವ ಒಂದೊಂದೇ ಪ್ರತಿಯನ್ನು ಬಳಸಿಕೊಳ್ಳಲಾಗಿದೆ. ಹೀಗೆ ಬಳಸಿಕೊಂಡ ಒಟ್ಟು ಎಂಟು ಹಸ್ತಪ್ರತಿಗಳ ಸ್ವರೂಪ ಹೀಗಿದೆ.

I (ಕ) : ಕನ್ನಡ ಅಧ್ಯಯನ ಪೀಠದ 'ಹಸ್ತಪ್ರತಿ ಭಾಂಡಾರ'ದ ಕ್ರಮಾಂಕ ೪೮೧ನೆಯ ಕೋರಿಕಾಗದ ಪ್ರತಿ, ಮೂಲತಃ ಕಲಬುರ್ಗಿಯ ಗುರುಬಸವ ಮಠಕ್ಕೆ ಸೇರಿದುದು. ಉದ್ದ ೧೨" x ಅಗಲ ೫೨". ಪುಟ ೧-೪೧೪ರ ವರೆಗೆ ಸಂಪೂರ್ಣವಿದ್ದು, ಕೊನೆಯ ೫ ಪುಟಗಳು ತೃಟಿತವಾಗಿವೆ. ಅಕ್ಷರಗಳು ಸಾಧಾರಣ, ಒಂದೊಂದು ಪುಟದಲ್ಲಿ ೮ ರಿಂದ ೧೨ ಸಾಲುಗಳಿವೆ. ಇದರಲ್ಲಿ ೧೬೧ ವಚನಗಳೂ ಅವುಗಳಿಗೆ ಟೀಕೆಯೂ ಇದೆ.

ಆದಿ : ಶ್ರೀ ಗುರುಬಸವಲಿಂಗಾಯನಮಃ ಶ್ರೀಗುರು ರೇವಣಸಿದ್ಧೇಶ್ವರಾಯ ನಮಃ ಶ್ರೀ ಬಸವೇಶ್ವರ ದೇವರು ನಿರೂಪಿಸಿದ ಷಟ್‌ಸ್ಥಲ ವಚನ ಲಿಖಿಸುವುದಕ್ಕೆ ಶುಭಮಸ್ತು । ಶೋಭನ ಮಸ್ತು । ಪ್ರಥಮದಲ್ಲಿ ಭಕ್ತಿಸ್ಥಲದ ಪಿಂಡಸ್ಥಲ ॥

ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ......ರನೆಂಬ ಮಹಾಜ್ಞಾನ ಗುರುಮೂರ್ತಿಗಳು ನಿರೂಪಿಸಿದ ಉಪದೇಶಿಸಿದ ಷಟ್ಸ್ಥಲದ ವಚನ ಷಡ್ವಿದ ಅಂಗ ಲಿಂಗ ಭ......ಮಾಹೇಶ್ವರರುಗಳು ಶ್ರೋತ್ರ ಮುಖದಲ್ಲಿಯೇ ಮುಕ್ತಾಯವಾಯಿತು. ಮಂಗಳ ಮಂಗಳವೆಂದರೆ ನಿರ್ಮಲವು......ದೊಡ್ಡಿತ್ತಾ ದಂಥದು ಶ್ರೀ ಶ್ರೀಯೆಂದರೆ ಜ್ಞಾನ ಮತ್ತು ಶ್ರೀಯೆಂದರೆ......ಬರೆದು ಪಾಠವ ಮಾಡಿಕೊಂಡು ಜ್ಞಾನ ಗುರುಮೂರ್ತಿಗಳಿದ್ದೆಡೆಗೆ ಹೋಗಿ ದೀರ್ಘದಂಡ ನಮಸ್ಕಾರ ಮುಂತಾದ......ಅಭಿಪ್ರಾಯ ವರ್ಣಂ ಗಳನ್ನು ಶ್ರೋತ್ರಮುಖದಲ್ಲಿ ಕೇಳಿ ಮನೋಮುಖದಲ್ಲಿ ಹಾರೈಸಿ ಹೃದಯಮುಖದಲ್ಲಿಂಬು ಗೊಂಡು......ದಲ್ಲಿ ಜೈಶ್ವರ್ಯವನು ಪಡೆದು ಬಾಳುತ್ತಿಹರೆಂಬುದೀ ಶಾಸ್ತ್ರದ ಫಲಶ್ರುತಿಯು ಸಮಾಪ್ತ ಮಂಗಳ ಮಹಾ ಶ್ರೀ ಶ್ರೀ ಶ್ರೀ ಶ್ರೀ ಶ್ರೀ......ಮಾಹೇಶ್ವಸ್ಥಲಕ್ಕೆ ಸೇರಿದ ವಚನಂಗಳು ೨೪೧, ಪ್ರಸಾದಿ ಸ್ಥಲಕ್ಕೆ ಸೇರಿದ ವಚನಂಗಳು ೩೦, ಪ್ರಾಣಲಿಂಗಿಸ್ಥಲಕ್ಕೆ......ನಂಗಳು......೬೫ ಐಕ್ಯಸ್ಥಲಕ್ಕೆ ಸೇರಿದ ವಚನಂಗಳು ೪೧ ಅಂತು ಏಕುವ ೯೬೧ಕ್ಕಂ ಮಂಗಳ ಮಹಾ ಶ್ರೀ ಶ್ರೀ ಶ್ರೀ ಶ್ರೀ......ಜೋತ್ಪತ್ತಿನಾಮ ಸಂವತ್ಸರ ವೈಶಾಖಶುದ್ಧ ೬ ಬುಧವಾರ ಬಸವರಾಜದೇವರ ವಚನಶಾಸ್ತ್ರ ಮುಗಿಸಿದು. ಕಂದ॥ ತಪ್ಪಂಬರ......ಲು ಬಿಡಿರಿ ತಪ್ಪಕ್ಕು ಶುದ್ಧಮಕ್ಕುಂ ತಪ್ಪುಳ್ಳಡೆ ತಿದ್ದಿಕೊಂಬುದುತ್ತಮಪುರುಷರ್ ॥೧॥

I (ಗ) : ಕನ್ನಡ ಅಧ್ಯಯನಪೀಠದ 'ಹಸ್ತಪ್ರತಿ ಭಾಂಡಾರ ಕ್ರಮಾಂಕ ೨೭೮೪ನೆಯ ಕೋರಿ ಕಾಗದ ಪ್ರತಿ, ಉದ್ದ ೧೩.೨" x ಅಗಲ ೪." "ಶ್ರೀಗುರು ಬಸವರಾಜದೇವರು ನಿರೂಪಿಸಿದ ಷಟ್ ಸ್ಥಲದ ವಚನವ್ಯಾಖ್ಯಾನ" ಎಂದು ಕರೆಯಲ್ಪಟ್ಟಿದೆ. ಪು ೧-೫೭೩ರ ವರೆಗೆ ಸಂಪೂರ್ಣವಿದ್ದು, ಪುಟ ೪೨೫ ರಿಂದ ೫೧೪ರ ವರೆಗೆ ರಂಧ್ರಗಳಿದ್ದು, ೫೮೯ ರಿಂದ ೫೭೩ರ ವರೆಗೆ ಮೇಲಿನ ಭಾಗ ತ್ರುಟಿತವಾಗಿದೆ. ಅಕ್ಷರಗಳು ದುಂಡಾಗಿದ್ದು ಒಂದೊಂದು ಪುಟದಲ್ಲಿ ೯ ರಿಂದ ೧೦ ಸಾಲುಗಳಿವೆ. ಈ ಪ್ರತಿಯಲ್ಲಿ ೯೫೪ ವಚನಗಳಿದ್ದು ಎಲ್ಲಕ್ಕೂ ಟೀಕೆ ಇದೆ.

ಆದಿ : ಶ್ರೀಗುರು ಬಸವಲಿಂಗಾಯ ನಮಃ। ಶ್ರೀಗುರುಭ್ಯೋ ನಮಃ। ಶ್ರೀಗಣಾಧಿಪತಯೇ ನಮಃ। ಶ್ರೀಸರ್ವಮಂಗಲಾಯ್ಯೆ ನಮಃ। ಶ್ರೀಗುರು ಚೆನ್ನವೀರೇಂದ್ರಾಯ ನಮಃ। ಶ್ರೀಗುರು ಬಸವರಾಜ ದೇವರು ನಿರೂಪಿಸಿದ ಷಟ್ಸ್ಥಲದ ವಚನವ್ಯಾಖ್ಯಾನ ಸಹಿತ ಬರೆಯುವುದಕ್ಕೆ ಶುಭ ಮಸ್ತು, ಶ್ರೀರಸ್ತು ನಿರ್ವಿಘ್ನಮಸ್ತು ಪ್ರಥಮದಲ್ಲಿ ಭಕ್ತಿಸ್ಥಲದೊಳಗಣ ಪಿಂಡಸ್ಥಲಂ॥

ಅಂತ್ಯ : ಶ್ರೀ ಶ್ರೀ ಶ್ರೀ ಬಸವೇಶ್ವರದೇವ.....ರಾಧ್ಯರಾದ ಸಂಗನಬಸವೇಶ್ವರನೆಂಬ ಮಹಾ ಜ್ಞಾನ ಗುರುಮೂರ್ತಿಗಳು ನಿರೂಪಿಸಿದ-ಉಪದೇಶಿಸಿದ ಷಟ್ಸ್ಥಲದ ವಚನ, ಷಡ್ವಿದ ಅಂಗ ಲಿಂಗ ಭಕ್ತಿಗಳು ಹೇಳುವಂಥಾ ವಾಕ್ಯಾನುಭಾವವು ಸಮಾಪ್ತ. ಎಲ್ಲಾ ಭಕ್ತಮಾಹೇಶ್ವರರುಗಳ ಸ್ತೋತ್ರ ಮುಖ.....ಯತ್ತು. ಮಂಗಳ । ಮಂಗಳವೆಂದರೆ ನಿರ್ಮಲವು । ಮಹಾ । ಮಹಾವೆಂದರೆ ನಿರ್ಮಲವು । ಮತ್ತು ಮಹಾವೆಂದರೆ ದೊಡ್ಡಿತ್ತವಾದಂಥದು । ಶ್ರೀ ಶ್ರೀಯೆಂದರೆ ಜ್ಞಾನವು ಮತ್ತು ಶ್ರೀಯೆಂದರೆ ಐಶ್ವರ್ಯ । ಮತ್ತು ಶ್ರೀಯೆಂದರೆ ಪೂಜ್ಯ. ಇಂತಪ್ಪ ಜ್ಞಾನೈಶ್ವರ್ಯ ಪೂಜ್ಯವನುಳ್ಳ ಶಾಸ್ತ್ರವನ್ನು ಬರೆದು ಪಾಠವ ಮಾಡಿಕೊಂಡು ಜ್ಞಾನಗುರುಮೂರ್ತಿಗಳಿದ್ದೆಡೆಗೆ ಹೋಗಿ ದೀರ್ಘ ದಂಡ ನಮಸ್ಕಾರ ಮುಂತಾದ ಭಕ್ತೋಪಚಾರಗಳಿಂದ ಅಡಿಗೆರಗಿ ಈ ಶಾಸ್ತ್ರದ ಅರ್ಥ ಅನ್ವಯ ಅಭಿಪ್ರಾಯ ವರ್ಣಂಗಳನ್ನು ಸ್ತೋತ್ರಮುಖದಲ್ಲಿ, ಕೇಳಿ ಮನೋಮುಖದಲ್ಲಿ ಹಾರೈಸಿ ಹೃದಯ ಮುಖದಲ್ಲಿಂಬುಗೊಂಡು ಅಂಗವ ಮಾಡಿಕೊಂಡಾಚರಿಸುವಂಥಾ ಶಿವಶರಣರೆಲ್ಲರು ನಿರಃಶಯ

ಜ್ಞಾನದ ನಿಜೈಶ್ವರ್ಯವನು ಪಡೆದು ಬಾಳುತ್ತಿಹರೆಂಬುದೀ ಶಾಸ್ತ್ರದ ಫಲಶ್ರುತಿಯು ಸಮಾಪ್ತ ಮಂಗಳ ಮಹಾ ಶ್ರೀ ಶ್ರೀ ಶ್ರೀ ಶ್ರೀ ಶ್ರೀ.

ಶ್ರೀ ಶ್ರೀ ಶ್ರೀ ಶ್ರೀಗುರುಬಸವಲಿಂಗಾಯ ನಮಃ । ಅಂತು ಭಕ್ತಿಸ್ಥಲಕ್ಕೆ ಸೇರಿದ ವಚನ ೫೨೪. ಮಾಹೇಶ್ವರಸ್ಥಲಕ್ಕೆ ಸೇರಿದ ವಚನಂಗಳು ೨೪೦, ಪ್ರಸಾದಿಸ್ಥಲಕ್ಕೆ ಸೇರಿದ ವಚನಂಗಳು ೩೦, ಪ್ರಾಣಲಿಂಗಿಸ್ಥಲಕ್ಕೆ ಸೇರಿದ ೫೮, ಶರಣಸ್ಥಲಕ್ಕೆ ಸೇರಿದ ವಚನಂಗಳು ೬೫, ಐಕ್ಯಸ್ಥಲಕ್ಕೆ ಸೇರಿದ ವಚನಂಗಳು ೪೧ ಅಂತು ಏಕೂನ ೯೫೮ಕ್ಕಂ ಮಂಗಳ ಮಹಾ ಶ್ರೀ ಶ್ರೀ ಶ್ರೀ ಶ್ರೀಗುರು ವೈರಾಗ್ಯ ಚೆನ್ನಬಸವೇಶ್ವರಾಯ ನಮಃ ಬಸವಾದಿ ಪ್ರಮಥಗಣಂಗಳ ಪಾದಕ್ಕೆ ನಮೋ ನಮೋ, ರುದ್ರಗಣಂಗಳ ಪಾದಕ್ಕೆ ನಮೋ ನಮೋ.... ಪಾದಕ್ಕೆ ನಮೋ ನಮೋ ತ್ರಿಷಷ್ಟಿಪುರಾತರಿಗೆ ನಮೋ ನಮೋ ಶ್ರೀಸರ್ವಮಂಗಲಾಯ್ಯೆ ನಮಃ ಶ್ರೀ ಕೈಲಾಸಪುರಾಧೀಶಾಯನಮಃ.... ೩೪ ಪರಿಧಾವಿನಾಮ ಸಂವತ್ಸರ ದಕ್ಷಣಾನಯನೆ ವರ್ಷಋತು ಶ್ರಾವಣಮಾಸಕೆ....ಸಮಾಪ್ತ ಮಂಗಳ ಮಹಾ ಶ್ರೀ ಶ್ರೀ ಶ್ರೀ ಶೀಗುರು ಬಸವಲಿಂಗಾಯ ನಮಃ ಈ ವಚನಶಾಸ್ತ್ರ....ಪ್ಪನವರ ಕರಕಮಲ ಸಂಜಾತನಾದ ಷಡಕ್ಷರಪ್ಪ....ಸ್ಸೂರ ಖುದ್॥ ಯದ್ರುಶಿ ಪುಸ್ತಕ ದುಷ್ಟ ॥ ತದ್ರುಶಿ ಲಿಖಿತಂ ಮಯ ॥ ಅಬದ್ಧೋವ ಸುಬದ್ಧೋವ, ಮಮದೋಷ ನ ವಿದ್ಯ....॥ ತಪ್ಪಂ ಬರದವ ಕ....ಡನಪಾತಂ ಬರದನೆಂದು ಬೈಯಲು ಬ್ಯಾಡಿರಿ ॥ ತಪ್ಪಕ್ಕು ಶುದ್ಧಮಕ್ಕುಂ ॥ ತಪ್ಪುಳ್ಳ....ದುತ್ತಮ ಪುರುಷರ್ ॥೧॥ ಪ್ರತಿಯಿದ್ದಾಂಗ ಬರದೀನಿ । ನೀವು ಬಲ್ಲಂಥ ಜ್ಞಾನಿಗಳು ತಪ್ಪು ಇದ್ದರೆ ತಮ್ಮ ಬಾಲಕರ ಸರಿಯೆಂದ....ದಾರಿಸಿ ॥ ಓದುವದು. ಹಸ್ತದೋಷ ವಾಚದೋಷಂಗಳಿದ್ದರೆ ಬಲ್ಲಂಥ ಪ್ರಾಜ್ಞರು ಬಯ್ಯಲಾಗದು. ಸಾಂಬ ಗೌರೀವರದ....ಶ್ರೀ ಶ್ರೀ ಶ್ರೀ ಶ್ರೀ ಶ್ರೀಗುರು ಬಸವಲಿಂಗಾಯ ನಮಃ ಶ್ರೀ ಶ್ರೀ ಶ್ರೀ ಶ್ರೀ ಶ್ರೀಗುರು ಬಸವಲಿಂಗಾಯ ನಮಃ

II (ಚ) : ಕನ್ನಡ ಅಧ್ಯಯನ ಪೀಠದ 'ಹಸ್ತಪ್ರತಿ ಭಾಂಡಾರ'ದ ಕ್ರಮಾಂಕ ೬೧೫ನೆಯ ತಾಳೆಪ್ರತಿ. ಇದು ಮೂಲತಃ ಕಲಬುರ್ಗಿಯ ಗದ್ದಿಗಿ ಮಠಕ್ಕೆ ಸಂಬಂಧಿಸಿದುದು. ಉದ್ದ ೧೬″ x ಅಗಲ ೨.೪″. ಸ್ಥಿತಿ ಚೆನ್ನಾಗಿದೆ"ಸ್ವತಂತ್ರಸಿದ್ಧಲಿಂಗೇಶ್ವರ ವಚನ" ಗರಿ ೧.೨೬ "ಸಿದ್ದೇಶ್ವರನ ಷಟ್ಸ್ಥಲ ಜ್ಞಾನ ಸಾರಾಮೃತ" ಗರಿ ೧೪೯. "ಬಸವರಾಜದೇವ ಷಟ್ಸ್ಥಲದ ವಚನ" ಪುಟ ೪೦–೭೫–ಹೀಗೆ ಮೂರು ಕೃತಿಗಳಿವೆ. 'ಬಸವರಾಜದೇವರ ಷಟ್ಸ್ಥಲದ ವಚನ'ದಲ್ಲಿ ೩೧೪ ವಚನಗಳಿಗೆ ಬರೆದ ಕೇವಲ ಟೀಕೆ ಇದೆ. ಅಕ್ಷರಗಳು ದುಂಡಾಗಿದ್ದು ಪ್ರತಿಯೊಂದು ಪುಟದಲ್ಲಿ ೧೪–೧೫ ಸಾಲುಗಳಿವೆ.

ಆದಿ: ಶ್ರೀಗುರು ಬಸವಲಿಂಗಾಯನಮಃ । ನಿರ್ವಿಘ್ನಮಸ್ತು ॥ ಶುಭಮಸ್ತು । ಬಸವರಾಜದೇವರ ಷಟ್ಸ್ಥಲದ ವಚನ ॥ ಭಕ್ತಿಸ್ಥಲ । ಪಿಂಡಸ್ಥಲ ಆದ್ಯರು ವೇದ್ಯರು ಸಾದ್ಯರು ಆದಿಪಿಂಡ ಮಧ್ಯಪಿಂಡ ಅಂತ್ಯಪಿಂಡ ಮರ್ಕಟಜ್ಞಾನ ವಿಹಂಗಜ್ಞಾನ ಪಿಪೀಲಿಕಜ್ಞಾನ ಆದಿಗತಿ ಮಧ್ಯಗತಿ. ತೀವ್ರಗತಿ ।.....

ಅಂತ್ಯ : ಬಸವೇಶ್ವರನ ವಚನ ·ಸಮಾಪ್ತ ಮಂಗಳ ಮಹಾ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಮತ್ಸಚ್ಚಿದಾನಂದ ನಿತ್ಯಪರಿಪೂರ್ಣ ಅವಿರಳ ಪರಂಜ್ಯೋತಿ ಸ್ವರೂಪವಾದ ಅನಾದಿ ಪರಮೇಶ್ವರ ನಂತರಂಗದಲ್ಲಿ ಆದಿವಾಹನವಾದ ನಂದೀಶ್ವರನೆಂಬ ಅನಾದಿ ಭಕ್ತನ ಹೃದಯವಾಸವಾದ ಪ್ರಾಣ

ಲೀಗವೆಂಬ ಪರಮ ಜಂಗಮವೇ ಲಿಂಗಾಂಗ ಸಮರಸದ ಷಟ್ಸ್ಥಲಾಚರಣೆಯ ನಟಿಸಿ ಮೆರವೆನೆಂಬ ಲೀಲಾವಿನೋದವನು ಕುರಿತು ಪ್ರಭುವೆಂಬಭಿಧಾನದಿಂದ ಮರ್ತ್ಯಲೋಕಕ್ಕವತರಿಸಿ ಮಂಗಳವಾಡ ದೊಳಗಿರ್ದ ಬಸವಾದಿ ಪ್ರಮಥರ್ಗೆ ಭಾವಬ್ರಹ್ಮದಲ್ಲಿ ನಿಃಪತಿಯನೆಯ್ದುವ ನಿಜಲಿಂಗೈಕ್ಯವನರುಹಿ ಕೊಟ್ಟುದ್ದರಿಸಿ, ಅಂತಪ್ಪ ಆದ್ಯರಾಚರಣೆಯನೊಳಕೊಂಡು ನಮ್ಮ ಕರಸ್ಥಲದಲ್ಲಿ ಬೆಳಗುತಿರ್ದ ಶೂನ್ಯೇಷ್ಟ ಬ್ರಹ್ಮದಲ್ಲಿ ಸಂದ ಪ್ರಭುಸ್ವಾಮಿಗಳೆ ವೇದ್ಯಗಣಂಗಳೊಡನಾಡಿಯಾಗಿ ವೇದ್ಯರಾಚರಣೆಯನೊಳಕೊಂಡು ಸಾಧ್ಯಗಣಂಗಳಿಗೆ ತಾ ಸಾಧ್ಯನಾಗಿ ಇಪ್ಪತ್ತೊಂದು ಗುರುಸಂಪ್ರದಾಯವಿಡಿದು ಬಂದ ಅಚಾರ್ಯಪೀಠದ ಚನ್ನಬಸವೇಶ್ವರನೆಂಬ ದಿವ್ಯಜ್ಞಾನಗುರುಮೂರ್ತಿಯ ಕರಕಮಲದೊಳುದಯವಾಗಿ ಸಿದ್ಧೇಶ್ವರನೆಂಬಭಿಧಾನವ ತಳೆದು ಸ್ಥಲವ ಬಿಟ್ಟು ಚರಸ್ಥಲದವರೊಡಗೂಡಿ ತಿರಣಾಮಲೆಯ ಅಣ್ಣಾಮಲ್ಲೇಶ್ವರನೆಂಬ ಲಿಂಗದ ಗುಡಿಗೆ ಬಂದು, ಆ ಲಿಂಗದ ಭಕ್ತಿಯಿಂದ ಮೌಕ್ತಿಕದ ಹಾರಗಳನು ಕೈಕೊಂಬಲ್ಲಿ ಷಟ್ಸ್ಥಲ ಬ್ರಹ್ಮನ ವೀರಾಗತಿಯನಾಚರಿಸಬೇಕೆಂದು ಅವರೊಳಗೆ ನಾವು ವಿರಕ್ತರೆಂದುಚ್ಚರಿಸಿ ಚರಸ್ಥಲವ ಬಿಟ್ಟು ಪರಸ್ಥಲದ ಬ್ರಹ್ಮವಾಗಿ, ಅನೇಕ ದೇಶಚಾರಿತ್ರಂಗಳ ನೋಡಿಕೊಂಡು ಭೇಷಜ ಪರ್ವತಕ್ಕೆ ಬರಲು, ಅಲ್ಲಿರ್ದ ಸೀತಾಳ ಮಲ್ಲೇಶ್ವರನೆಂಬ ಲಿಂಗವು ಚರವೇಷವ ತಳೆದು ತಮ್ಮ ಕರಪಾತ್ರೆಯ ಭಿಕ್ಷವನು ಭಕ್ತಿಯಿಂ ನಮಿಸಿ ನೀಡಲದಂ ಸ್ವೀಕರಿಸಲು, ಆ ಲಿಂಗವು ಇನ್ನು ಶಿವಾನುಭಾವದ ಪ್ರತಿಪಾದನೆಯ ಮಾಡೆಂದು ನಿರೂಪಿಸಲು, ಆ ನಿರೂಪಣೆವಿಡಿದು ಷಟ್ಸ್ಥಲಾನುಭಾವವನು ಬೋಧಿಸುವಲ್ಲಿ ಪ್ರಥಮಾಚಾರ್ಯರಾದ ಸಿದ್ಧೇಶ್ವರಸ್ವಾಮಿಗಳು, ಅವರ ಬೋಧಾಪುತ್ರರಾದ ರೇವಣಸಿದ್ದೇಶ್ವರ ಸ್ವಾಮಿಗಳು.

II (ಜ) : ಡಾ. ಎಸ್.ಆರ್. ಗುಂಜಾಳ ಅವರಿಂದ ದೊರೆತ ಕೋರಿಕಾಗದ ಉದ್ದ ೧೧" x ಅಗಲ ೬". 'ಬಸವರಾಜ ದೇವರ ಷಟ್ಸ್ಥಲ ವಚನ, ಎಂದು ಹೆಸರಿಸಿದ ಇದು, ಪುಟ-೧-೨೫೩ರ ವರೆಗೆ ಇದೆ. ೯೫೭ ವಚನಗಳನ್ನು ಬರೆದಿದ್ದರೂ ಟೀಕೆ ಇರುವುದು ೩೧೪ ವಚನ ಗಳಿಗೆ ಮಾತ್ರ. ಅಕ್ಷರಗಳು ಸಾಧಾರಣವಿದ್ದು ಒಂದೊಂದು ಪುಟದಲ್ಲಿ ೯-೧೦ ಸಾಲುಗಳಿವೆ. ಎಲ್ಲ ಪುಟಗಳೂ ಚೆನ್ನಾಗಿ ಇರುವವು.

ಆದಿ : ಶ್ರೀ ಮದ್ಗುರು ಮುರಿಗೇಂದ್ರಾಣಿವೀರಾಭ್ಯಾಂ ನಮಃ ॥ಬಸವರಾಜದೇವರ ಷಟ್ಸ್ಥಲ। ಪಿಂಡಸ್ಥಲ। ವಚನ-ಭಕ್ತಿಸ್ಥಲ ಆದ್ಯರು ವೇದ್ಯರು ಸಾದ್ಯರು ಆದಿಪಿಂಡ ಮಧ್ಯಪಿಂಡ ಅಂತ್ಯಪಿಂಡ ಮರ್ಕಟಜ್ಞಾನ ವಿಹಂಗಜ್ಞಾನ ಪಿಪೀಲಿಕಜ್ಞಾನ ಆದಿಗತಿ ಮದ್ಯಗತಿ ತೀವ್ರಗತಿ....

ಅಂತ್ಯ : ಭಕ್ತಿಸ್ಥಲಕ್ಕೆ ಸೇರಿಸಿದ ವಚನಂಗಳು ೫೨೫, ಮಾಹೇಶ್ವರ ಸ್ಥಲಕ್ಕೆ ಸೇರಿಸಿದ ವಚನಂಗಳು ೨೫೯. ಪ್ರಸಾದಿಸ್ಥಲಕ್ಕೆ ಸೇರಿಸಿದ ವಚನ ೩೦ ಪ್ರಾಣಲಿಂಗಿಸ್ಥಲಕ್ಕೆ ಸೇರಿಸಿದ ವಚನ ೫೮ ಶರಣಸ್ಥಲಕ್ಕೆ ಸೇರಿಸಿದ ವಚನ ೬೫, ಐಕ್ಯಸ್ಥಲಕ್ಕೆ ಸೇರಿಸಿದ ವಚನ ೪೦, ಅಂತು ಸ್ಥಲ ೬ಕ್ಕಂ ಮಿ ೩೬ಕ್ಕಂ ಸೇರಿಸಿದ ವಚನ ೯೫೭ ಕ್ಕಂ ಮಂಗಳ ಮಹಾ ಶ್ರೀ ಶ್ರೀ.ಬಸವೇಶ್ವರ ವಚನದೊಳಗೆ ಕಠಿಣವಾದ ಸಂಕ್ಷೇಪವಚನಕ್ಕೆ ಟಿಪ್ಪಣವಾಗಿ ಲಿಂಗಾಂಗಸಾಮರಸ್ಯವನು ಬಲ್ಲ ಷಟ್ಸ್ಥಲ ಸಮ್ಯಕಜ್ಞಾನ ಮಹಾನುಭಾವಿಗಳು ನಿರೂಪಿಸಿದುದು ಲಿಖಿಸಿ ಸಮಾಪ್ತಿಯಾಯಿತ್ತು. ಸಮಾಪ್ತಮಂಗಳಮಸ್ತು ಶುಭಮಸ್ತು । ಶೋಭನಮಸ್ತು । ಆಯುಷ್ಯಮಸ್ತು । ಶ್ರೀರಸ್ತು । ಈ ವಚನ ಪುಸ್ತಕ ಮುಗಿದುದು ೧೭೬೪ ಶುಭಕ್ರತುನಾಮ ಸಂವತ್ಸರ । ಕಾರ್ತಿಕ ಬಹುಳ ॥೩॥ ತದಿಗಿ ರವಿವಾರದೊಳಗೆ ಸಮಾಪ್ತಿಯಾಯಿತ್ತು. ಶ್ರೀ ಮದ್ಗುರು ಮುರಿಗೇಂದ್ರಾಣಿ ವೀರಾಭ್ಯಾಂ ನಮಃ ಶ್ರೀ ಶಿವಮೂರ್ತಯೋ

ನಮಃ । ಈ ವಚನ ಪುಸ್ತಕದಾರದೆಂದರೆ ಹೇರಲಗಿ ದಾನಪ್ಪನ ತನುಜಾತನಾದ ಶಾಂತವೀರಪ್ಪನು ಭಕ್ತಿಯಿಂದ ಬರಿಸಿಕೊಂಡನು. ಬರದವರು ಆರೆಂದರೆ ಪುರಾಣಿಕರೊಳಗೆ ಶ್ರೇಷ್ಠವಹ ಪ್ರಭು ಸ್ವಾಮಿ, ಆ ಪ್ರಭುಸ್ವಾಮಿಯ ತನುಜಾತನಾದ ವೀರಪಾಕ್ಷಪ್ಪ ಪುರಾಣಿಕರು. ಆ ಪುರಾಣಿಕರ ಕರಕಮಲಸಂಭವ ಪೌರಾಣಿಕ ಸಿದ್ಧ ಮಲ್ಲಪ್ಪನು ಲಿಖಿಸಿದನು. ಇದಕೆ ಸಂದೇಹವಿಲ್ಲವು. ಈ ಮಾತು ಋಜು ಸಹಜವು, ನಿಶ್ಚಯವು, ಶಾಶ್ವತವು.

III (ಟ) : ಎಸ್. ಉಮಾಪತಿ ಅವರಿಂದ ದೊರೆತ ತಾಳೆಪ್ರತಿ, ಉದ್ದ ೧೩.೫" x ಅಗಲ ೨.೨". "ಬಸವರಾಜ ದೇವರ ಷಟ್ಸ್ಥಲದ ವಚನದ ಘಟ್ಟಿ ಘಟ್ಟಿ ನುಡಿಗಳು" ಎಂದು ಕರೆಯಲಾದ ಇದು ಪುಟ ೧೧೮ ರಿಂದ ೧೫೭ರ ವರೆಗೆ ವ್ಯಾಪಿಸಿದೆ. ಕೆಲವು ಸಲ ಇಡೀ ವಚನ ಮತ್ತು ಅವುಗಳಿಗೆ ಟೀಕೆ ಇದ್ದರೆ ಇನ್ನು ಕೆಲವು ಸಲ ಕೇವಲ ಭಾಗಶಃ ಟೀಕೆ ಇದೆ. ಇದರಿಂದಾಗಿ ಇಲ್ಲಿ ೩೪೮ ವಚನಗಳಿಗೆ ಟೀಕೆ ಬರೆದಂತಾಗಿದೆ. ಅಕ್ಷರಗಳು ಸುಂದರವಾಗಿದ್ದು ಒಂದೊಂದು ಪುಟದಲ್ಲಿ ೧೦-೧೧ ಸಾಲುಗಳಿವೆ. ಎಲ್ಲ ಪುಟಗಳು ಸುಭದ್ರವಾಗಿವೆ.

ಆದಿ : ನಂದೀಕೇಶ್ವರಾಯನಃ । ಬಸವರಾಜದೇವರ ಷಟ್ಸ್ಥಲದ ವಚನದ ಘಟ್ಟಿ ಘಟ್ಟಿ ನುಡಿಗಳ ಬರವುದಕ್ಕೆ ಶುಭಮಸ್ತು ॥ವ॥

ಅಂತ್ಯ : ಇತಿ ಶ್ರೀ ಮದ್ಬಸವರಾಜದೇವರ ಷಟ್ಸ್ಥಲದ ವಚನದ ಗಟ್ಟಿ ಗಟ್ಟಿ ನುಡಿಗಳು ಸಮಾಪ್ತ ಮಂಗಳ ಮಹಾ ಶೀ ಶ್ರೀ ಶ್ರೀ ಶ್ರೀ ಸಚ್ಚಿದಾನಂದ ನಿತ್ಯ ಪರಿಪೂರ್ಣ ಅವಿರಳ ಪರಂ ಜ್ಯೋತಿ ಲೀಲಾವಿಗ್ರಹ ಮೂರ್ತಿಯಾದ ಶ್ರೀ ಸೋಮಶೇಖರಲಿಂಗ ಚರಣಾರವಿಂದ ಮಕರಂದ ರಸಪಾನಪೀನ ಮತ್ತು ಮಧುಕರಾಯಮಾನ ಸೋಮಶೇಖರಶಿವಯೋಗಿ ಕೃತ ಬಸವರಾಜ ದೇವರ ಷಟ್ಸ್ಥಲದ ವಚನದ ಬೆಡಗಿನ ಟೀಕು ಪರಿಸಮಾಪ್ತ ಮಂಗಳಮಹಾ ಶ್ರೀ ಶ್ರೀ ಶ್ರೀ ಶ್ರೀ.

III (ಡ) : ಎಸ್.ಉಮಾಪತಿ ಅವರಿಂದ ದೊರೆತ ತಾಳೆಪ್ರತಿ ಉದ್ದ ೧೭.೪" x ಅಗಲ ೨.೧". "ಷಟ್ಸ್ಥಲಜ್ಞಾನಿ ಸೋಮಶೇಖರ ಶಿವಯೋಗಿ ಕೃತ ತೋಂಟದ ಸಿದ್ಧಲಿಂಗೇಶ್ವರನ ಷಟ್ಸ್ಥಲ ಜ್ಞಾನಸಾರಾಮೃತದ ಬೆಡಗಿನ ಟೀಕೆ" ಪುಟ ೧ ರಿಂದ ೨೨ ಬಿ, "ಬಸವರಾಜದೇವರ ಷಟ್ಸ್ಥಲದ ವಚನದ ಘಟ್ಟಿ ಘಟ್ಟಿ ನುಡಿಗಳು" ಪುಟ ೨೨(ಅ) ರಿಂದ ೪೬ (ಅ) ಹೀಗೆ ಎರಡು ಕೃತಿಗಳಿವೆ. ಇಲ್ಲಿ ವಚನಗಳಿಲ್ಲದೆ ಕೇವಲ ೩೪೮ ವಚನ ಟೀಕು ಇದೆ' ಅಕ್ಷರಗಳು ಸಣ್ಣವಿದ್ದು ಒಂದೊಂದು ಪುಟದಲ್ಲಿ ೧೧-೧೨ ಸಾಲುಗಳಿವೆ. ಎಲ್ಲ ಪುಟಗಳು ಚೆನ್ನಾಗಿವೆ.

ಆದಿ : ಶ್ರೀ ಗುರು ಬಸವಲಿಂಗಾಯನಮಃ । ಬಸವರಾಜದೇವರ ಷಟ್ಸ್ಥಲದ ವಚನದ ಘಟ್ಟಿ ಘಟ್ಟಿ ನುಡಿಗಳ ಬರವುದಕ್ಕೆ ಶುಭಮಸ್ತು ॥ವ ॥ ಟೀಕು.

ಅಂತ್ಯ : ಇತಿ ಶ್ರೀ ಮದ್ಬಸವರಾಜದೇವರ ಷಟ್ಸ್ಥದ ವಚನದ ಘಟ್ಟಿ ಘಟ್ಟಿ ನುಡಿಗಳು ಸಂಪೂರ್ಣಂ ಸಮಾಪ್ತ ಮಂಗಳ ಮಹಾ ಶ್ರೀ ಶ್ರೀ ಶ್ರೀ ಶ್ರೀ ಶ್ರೀ.

IV (ತ) : ಕನ್ನಡ ಅಧ್ಯಯನ ಪೀಠ 'ಹಸ್ತಪ್ರತಿ ಭಾಂಡಾರ'ದ ಕ್ರಮಾಂಕ ೧೦೭ ತಾಳೆ ಪ್ರತಿ. ಮೂಲತಃ ಮಹಾಲಿಂಗಪುರದ ಮಹಾಲಿಂಗೇಶ್ವರ ಮಠಕ್ಕೆ ಸಂಬಂಧಿಸಿದುದು, ಉದ್ದ ೧೩" x ಅಗಲ ೨". ಜಕ್ಕಣಾರ್ಯನ ಏಕೋತ್ತರಶತಸ್ಥಲ' ಪುಟ ೧-೯೮, 'ಪ್ರಭುದೇವರ ಟೀಕಿನ ವಚನ'

ಪುಟ ೯೯-೧೯೬ 'ಬಸವರಾಜ ದೇವರ ಷಡುಸ್ಥಲದ ವಚನದ ಕಥಾಸಾರ' ಪುಟ ೧-೧೭ 'ಬಸವ ವಚನ ಸಾರಾಮೃತ' ಪುಟ ೨೭-೫೬ ಹೀಗೆ ನಾಲ್ಕು ಕೃತಿಗಳಿವೆ. ಇವುಗಳಲ್ಲಿ ನಾಲ್ಕನೆಯದಾದ 'ಬಸವ ವಚನಸಾರಾಮೃತ'ದಲ್ಲಿ ೩೭೪ ವಚನಗಳಿದ್ದು ಅವೆಲ್ಲಕ್ಕೂ ಟೀಕೆ ಇದೆ. ಅಕ್ಷರಗಳು ಸಾಧಾರಣವಿದ್ದು ಪ್ರತಿಯೊಂದು ಪುಟದಲ್ಲಿ ೧೫-೧೬ ಸಾಲುಗಳಿದ್ದು ಎಲ್ಲ ಗರಿಗಳು ಚೆನ್ನಾಗಿವೆ.

ಆದಿ : ಶ್ರೀಗುರು ಬಸವಲಿಂಗಾಯನಮಃ । ಗುರುಬಸವರಾಜದೇವರು ಸೇರಿಸಿದ ಬಸವ ವಚನಾಮೃತ । ಪ್ರಥಮದಲ್ಲಿ ಪಿಂಡಸ್ಥಲದ ವಚನ।

ಅಂತ್ಯ : ಭಕ್ತಿಸ್ಥಲಕ್ಕೆ ಸೇರಿಸಿದ ವಚನ ೧೭, ಮಾಹೇಶ್ವರಸ್ಥಲಕ್ಕೆ ವಚನ ೪೦, ಪ್ರಸಾದಿಸ್ಥಲಕ್ಕೆ ವಚನ ೨೫, ಪ್ರಾಣಲಿಂಗಸ್ಥಲಕ್ಕೆ ವಚನ ೨೯, ಶರಣಸ್ಥಲಕ್ಕೆ ವಚನ-೩೪, ಐಕ್ಯಸ್ಥಳಕ್ಕೆ ವಚನ ೨೧, ಅಂತು ವಚನ ೩೭೪ಕ್ಕಂ ಮಂಗಳ ಮಹಾ ಶ್ರೀ ಶ್ರೀ ಶ್ರೀ ಶ್ರೀ.

V (ಪ): ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿಭಂಡಾರಕ್ಕೆ ಸಂಬಂಧಿಸಿದ ೪೦೪೯ನೆ ಕ್ರಮಾಂಕ ಕೆ ೧೮೮/೧ನೆಯ ಸಾಂಕೇತಿಕಾಂಕದ ತಾಳೆಗರಿ ಪ್ರತಿ. ಉ. ೧೭.೬" x ಅ.೨". ಪತ್ರ ೧ ರಿಂದ ೧೮ರ ವರೆಗೆ ಈ ಕೃತಿ ವ್ಯಾಪಿಸಿದೆ. ಪ್ರತಿಯೊಂದು ಪತ್ರದಲ್ಲಿ ೧೨ ಸಾಲುಗಳಿವೆ. ಕೃತಿಯ ಸ್ಥಿತಿ ಸಾಧಾರಣ. ೧ನೆಯ ಪತ್ರ ಲುಪ್ತವಾಗಿದೆ. ಅಲ್ಲಲ್ಲಿಯ ಕೆಲವು ವಚನಗಳಿಗೆ ಮಾತ್ರ ಟೀಕೆ ಬರೆಯಲಾಗಿದೆ. ೯ನೆಯ ಪತ್ರದಲ್ಲಿ ಭಕ್ತಸ್ಥಲದ ೧೦೯ನೆಯ ವಚನದ ಟೀಕೆ ಮುಗಿಯವಲ್ಲಿ "ಶ್ರೀಮತ್ಷಟ್ಸ್ಥಲಾದ್ವೈತ ವಿದ್ಯಾಪ್ರಮೋದಿತ ಶ್ರೀವೀರಮಾಹೇಶ್ವರ ಬಾಲೇಂದು ಪುರದ ಹರೀಶ್ವರ ಶಾಂತವೀರೇಶ್ವರ ಚಿದ್ಗರ್ಭಸಂಭವ ಪರ್ವತಶಿವಯೋಗೀಶ್ವರ ವಿರಚಿತಮಪ್ಪ ಬಸವೇಶ್ವರ ವಚನಸಾರಾರ್ಥ" ಎಂಬ ಹೇಳಿಕೆ ಇದೆ. ೧೭ನೆಯ ಪತ್ರದಿಂದ ಮುಂದಿನ ಪತ್ರಗಳಲ್ಲಿ "ಬಸವೇಶ್ವರನ ವಚನದ ನುಡಿಗಳನು" ಎಂಬ ಶೀರ್ಷಿಕೆಯಲ್ಲಿ ಪ್ರಾರಂಭದ ಆಯ್ದ ಕೆಲವು ವಚನಗಳಿಗೆ ಬರೆದ ಬೇರೊಂದು ಬಗೆಯ ಅಪೂರ್ಣ ಅಸ್ಪಷ್ಟ ಟೀಕೆಯಿದೆ. (ಪ್ರಸ್ತುತ ಸಂಪಾದನೆಯಲ್ಲಿ ನಾವು ಈ ಅಸ್ಪಷ್ಟ ಟೀಕೆಯನ್ನು ಬಳಸಿಕೊಂಡಿಲ್ಲ).

ಆದಿ : .....ರ ದೇವರ ವಚನ ಸಾರಾರ್ಥ ॥ಗ್ರಂ॥ ನಮಸ್ತ್ರಿಮೂರ್ತಿ ರೂಪಾಯ । ನಾದಬಿಂದುಕಳಾತ್ಮನೇ । ನಮಃ ಷಟ್ಸ್ಥಲರೂಪಾಯ ಶಾಂತವೀರಾಯ ತೇ ನಮಃ ॥೧॥ ಬಸವೇಶ್ವರ ದೇವತಾ ವಚನ ಸಾರಾರ್ಥ ॥ ಪ್ರಥಮದಲ್ಲಿ ಪಿಂ.....ಚ್ಚಿನಂತಿದ್ದಿತ್ತು । ಸಸಿಯೊಳಗಣ ರಸದ ರುಚಿಯಂತಿದ್ದಿತ್ತು । ಕೂಡಲಸಂಗಮದೇವ ಕನ್ನೆಯ ಸ್ನೇಹದಂತಿದ್ದಿತ್ತು ।ಟೀಕೆ॥ ಉದಕದಲ್ಲಿ ವಡಬಾಗ್ನಿಯಿರ್ದು । ಆ ವುದಕವನ ಶೋಷಣಂಗೈಯ್ಯದೆ.....ಷಯ ರಸ ಸೀತಳಿ ಕೃತಮಪ್ಪ ಪಿಂಡದ ಮಧ್ಯದಲ್ಲಿ ಚಿದಗ್ನಿ ಸ್ವರೂಪವಾದ ವಸ್ತುವಿರ್ದು ರಹಸ್ಯವಾಗಿರ್ಪುದೆಂಬುದೀಗ । ವುದಕದೊಳಗೆ ಬೈಚಿಟ್ಟ ಕಿಚ್ಚಿನಂತಿದ್ದಿತೆಂಬ ಶಬ್ದಕ್ಕರ್ಥ.....ಲ ತತ್ವ ಸ್ವರೂಪಮಪ್ಪ ಪಿಂಡದ ಮಧ್ಯದಲ್ಲಿ;

ಅಂತ್ಯ : ॥೨೩॥ ಆದಿಯಾಧಾರದ ॥ ಶಿವಶಕ್ತಿಸ್ವರೂಪವಾದ ವಿಶ್ವಜೀವನು । ನಾರಾಯಣನ ಪ್ರಕೃತಿಯನು ಗೆದ್ದಂಥಾ। ಧನುಜಿತನಂ । ಕಾಮಚಾಪವನು ಗೆದ್ದಂಥಾ । ಸ್ವರ್ಜಿತನು । ಸ್ವರ್ಗ ಪ್ರಪಂಚನು ಗೆದ್ದಂಥಾ । ಸೂತ್ರಾರ್ಜಿತನು । ಜ್ಞಾನ ಸೂತ್ರದಿಂದೆ ಪಡೆಯಲ್ಪಟ್ಟಂಥಾ । ನೃಜಿತನು । ಆತ್ಮರ ಪ್ರಪಂಚನು ಗೆದ್ದಂಥಾ । ವುರ್ವರಾಜಿತನು । ಭೂಪತಿಪ್ರಪಂಚನು ಗೆದ್ದಂಥಾ । ಅರ್ಜಿತನು ಅರಿಷಡ್ವರ್ಗಂಗಳನು ಗೆದ್ದಂಥಾ । ಸುಸಂವೇದ್ಯನು । ಜ್ಞಾನದಿಂದೆ ತಿಳಿಯಿಸಿಕೊಳಲ್ತಕ್ಕಂಥಾ ।

ವೇದನಾದಾತೀತನು ವೇದನಾದಂಗಳನು ಮೀರಿದಂತಾ। ತುರೀಯ ಸಕಲತತ್ವತ್ತೋತ್ತೀರ್ನನಾದಂಥಾ ಪರಾನಂದ । ಶ್ರೇಷ್ಠಾನಂದವನುಳ್ಳಂಥಾ । ನಿರವಯ । ಅವಯವಂಗಳೇನು ಯಿಲ್ಲದೆ ಇರ್ದಂಥಾ ಸೂರ್ಯಕೋಟಿ । ಅನೇಕಾದಿತ್ಯರುಗಳ ಪ್ರಭೆಯ ಸ್ಫುರಣೆ । ಬೆಳಗಿನ । ಪ್ರಕಾಶದ ಸಹಸ್ರಕಿರಣ । ಸಾವಿರ ಮಯೂಖಂಗಳ । ಅಗ್ರಪಟಲದ ಅಗ್ರ ವುಪರಿಯ । ಪಟಲದ । ಸಮೂಹದ । ಬೆಳಗು ಚಿತ್ಪ್ರಕಾಶವು ಕೂಡಲ ಸಂಗಯ್ಯ । ಪರಶಿವಲಿಂಗವು । ॥೨೪॥ ಶ್ರೀ ಶ್ರೀ ಶ್ರೀ ಶ್ರೀ ॥ ಶ್ರೀಗುರುವೇ ಗತಿ ॥ ಬಸವೇಶ್ವರನ ವಚನದ ನುಡಿಗಳು ॥ ಜಲಬುದ್ಬುದಾಕಾರಮಪ್ಪ ಪಿಂಡದ ಮಧ್ಯದಲ್ಲಿ.

***

ತುಪ್ಪದ ಸವಿಗೆ ಅಲಗನೆಕ್ಕುವ ಸೊಣಗನಂತೆಂನ ಬಾಳುವೆಯೆಂಬ ಶಬ್ದಕ್ಕರ್ಥ ॥ ವುಡುಹನ ಮಾಡಿತ್ತು । ಕ್ರಿಯಾಜ್ಞಾನರಹಿತನಾಗಿಸಿತ್ತು । ದೇಹಾತ್ಮರುಗಳಿಗೆ ಅಗಲಿಕೆಯಾಗಿ ಶರೀರವು ಭೂಮಿಯ ಮೇಲೆ ಪತನವಾದ ಬಳಿಕ ಯೆಂಬುದೀಗ ಬೆಡಗಿನ ಕೀಲಕಳದು ಕಿಡದ ಬಳಿಕಯೆಂಬ ಶಬ್ದಕ್ಕರ್ಥ ತಜೆಸಲೆವೋದನು ।

• ಕೃತಜ್ಞತೆ •

ಶ್ರೀ ಮುರಗೋಡ ಸಂಸ್ಥಾನ ಮಠಾಧೀಶರಾದ "ಶ್ರೀ ನಿ. ಪ್ರ. ಸ್ವ. ಮಹಾಂತಶಿವಯೋಗೀಶ್ವರ ಶತಮಾನೋತ್ಸವ ಸ್ಮಾರಕ ಶ್ರೀ ಬಸವೇಶ್ವರ ಪೀಠ" ಲಿಂಗಾಯತ ಸಮಾಜಗ ಸರ್ವ ಪ್ರಜೆಗಳ ತ್ಯಾಗದ ಮೇಲೆ ನಿಂತ ಒಂದು ವಿಶೇಷ ಅಧಿಷ್ಠಾನ. ಈ ಅಧಿಷ್ಠಾನದ ಪುಣ್ಯಚೇತನ ಮುರಗೋಡದ ಲಿಂ. ಶ್ರೀ ನಿ. ಪ್ರ. ಸ್ವ. ಮಹಾಂತಶಿವಯೋಗಿಗಳು, ಪುಣ್ಯವೇ ಹಣ್ಣಾದಂತೆ ನೂರು ವರ್ಷಗಳ ನಿಡುಬಾಳನ್ನು ಬದುಕಿ ಮುಕ್ತಿಯಂತೆ ಮುಕ್ತರಾದ ಈ ಪೂಜ್ಯ ಶ್ರೀಗಳವರ ಸನ್ನಿಧಿಗೆ ಭಕ್ತಿ ಪೂರ್ವಕ ಪ್ರಣಾಮಗಳು. ಈ ಪೀಠವನ್ನು ಅನುಷ್ಠಾನಕ್ಕೆ ತರುವ ಕನಸು ಕಂಡು, ನನಸಾಗುವಂತೆ ಆಶೀರ್ವದಿಸಿದ ಧಾರವಾಡ ಶ್ರೀ ಮುರಘಾಮಠದ ಶ್ರೀ ಮ. ನಿ. ಪ್ರಸ್ವ. ಮಹಾಂತಸ್ವಾಮಿಗಳವರಲ್ಲಿ, 'ಶ್ರೀ ಬಸವೇಶ್ವರ ಪೀಠ'ದ ಬಗೆಗೆ ಅಪಾರ ಆಸಕ್ತಿಯಿಟ್ಟುಕೊಂಡಿರುವ ಮುರಗೋಡ ಮಠದ ಅಧಿಪತಿಗಳಾದ ಶ್ರೀ ನಿ. ಪ್ರ. ಸ್ವ. ನೀಲಕಂಠಸ್ವಾಮಿಗಳವರಲ್ಲಿ ತ್ರಿಕರಣಪೂರ್ವಕ ಪ್ರಣಾಮಗಳು, ಶ್ರೀ ಮಹಾಂತ ಶೀವಯೋಗೀಶ್ವರ ಶತಮಾನೋತ್ಸವ ಸಮಿತಿಯ ಕಾರ್ಯಾಧ್ಯಕ್ಷರಾಗಿ 'ಶ್ರೀ ಬಸವೇಶ್ವರಪೀಠ'ವನ್ನು ಸ್ಥಾಪಿಸುವಲ್ಲಿ ನಾಯಕ ಪಾತ್ರವಹಿಸಿದ ಶ್ರೀ ಸಿದ್ಧರಾಮಣ್ಣ ಬೆಂಬಳಗಿ ಅವರಿಗೆ ವಂದನೆಗಳು.

ಈ ವರೆಗೆ ಐದು ಕೃತಿಗಳನ್ನು ಪ್ರಕಟಿಸಿದ ಈ ಪೀಠ, ಈಗ ಐದು ಕೃತಿಗಳನ್ನು ಒಂದೇ ಸಂಪುಟದಲ್ಲಿ ಪ್ರಕಟಿಸುವ ಈ ವಿಸ್ತೃತಿ ಯೋಜನೆಯನ್ನು ಕೈಗೆತ್ತಿಕೊಂಡುದು ೧೯೭೭ರಂದು, ಅಂದಿನಿಂದ ಪ್ರತಿಯೊಂದು ಕೃತಿಯನ್ನು ಹಸ್ತಪ್ರತಿಗಳ ಬಲದಿಂದ ಸ್ವತಂತ್ರವಾಗಿ ಪರಿಷ್ಕರಣ ಮಾಡುವ, ಅವುಗಳ ಶುದ್ಧಪ್ರತಿ ಬರೆಯುವ, ಕೊನೆಗೆ ಐದನ್ನೂ ಪಾಠಾಂತರ ಸಹಿತ ಒಂದೇ ಸಂಪುಟದಲ್ಲಿ ಯೋಜಿಸುವ, ಕೊನೆಗೆ ಅಚ್ಚಿಸುವ..ಈ ನಾಲ್ಕು ಹಂತಗಳಲ್ಲಿ ಮುಂದುವರಿದು ಬಂದಿದೆ, ಪ್ರಸ್ತುತ ಕಾರ್ಯ. ಇಷ್ಟು ವ್ಯಾಪಕವೂ ಸುದೀರ್ಘವೂ ಆದ ಈ ಯೋಜನೆಯನ್ನು ರೂಪಿಸಿಕೊಂಡ ಸಂದರ್ಭದಲ್ಲಿ ಅಸ್ತು ಹೇಳಿ ಮುನ್ನಡೆಯುವಂತೆ ಪ್ರೇರೇಪಿಸಿದವರು ಅಂದಿನ ಕುಲಪತಿಗಳಾಗಿದ್ದ

ಡಾ. ಆರ್.ಸಿ.ಹಿರೇಮಠ ಅವರು. ಈ ಯೋಜನೆಯ ಯೋಗಕ್ಷೇಮವನ್ನು ವಿಚಾರಿಸುತ್ತ ಸ್ಫೂರ್ತಿ ನೀಡಿದವರು ಇಂದು ಕುಲಪತಿಗಳಾಗಿರುವ ಶ್ರೀ ಎಸ್.ಎಸ್.ಒಡೆಯರ ಅವರು. ಕಾರ್ಯ ಪ್ರಗತಿಗಾಗಿ ಸರ್ವ ಅನುಕೂಲತೆಗಳನ್ನು ಒದಗಿಸಿಕೊಟ್ಟವರು, ಕನ್ನಡ ಅಧ್ಯಯನ ಪೀಠದ ನಿರ್ದೇಶಕರಾದ ಡಾ. ಎಮ್.ಎಸ್. ಸುಂಕಾಪುರ ಅವರು. ಹೀಗೆ ಈ ಯೋಜನೆಯುದ್ದಕ್ಕೂ ನನಗೆ ಬೆಂಬಲ ನೀಡಿದ ಈ ಎಲ್ಲ ಹಿರಿಯರಿಗೆ ವಂದನೆಗಳು.

ಈ ಯೋಜನೆಯ ಎಲ್ಲ ಘಟ್ಟಗಳಲ್ಲಿ ನನ್ನ ಎಡಗೈ-ಬಲಗೈಯಂತೆ ನೆರವಾದವರು 'ಶ್ರೀ ಬಸವವೇಶ್ವರ ಪೀಠ'ದ ಸಹಾಯಕ ಸಂಶೋಧಕರಾದ ಪಂ.ಶ್ರೀ ನಾಗಭೂಷಣಶಾಸ್ತ್ರಿಗಳು, ಶ್ರೀ ಪಂಚಾಕ್ಷರಿ ಹಿರೇಮಠ, ಶ್ರೀ ಎಸ್.ವ್ಹಿ. ಅಯ್ಯನಗೌಡರ, ಶ್ರೀ ಬಿ.ಆರ್. ಹೂಗಾರ. ಹೀಗಾಗಿ ಈ ಸಂಪುಟ ಒಂದರ್ಥದಲ್ಲಿ ಸಂಯುಕ್ತಶ್ರಮದ ಫಲವೆಂದು ಹೇಳಲು ಸಂತೋಷವೆನಿಸುತ್ತದೆ. ಇವರೆಲ್ಲರಿಗೆ ನನ್ನ ಕೃತಜ್ಞತೆಗಳು.

ಇಂಥ ಕಾರ್ಯಗಳಿಗೆ 'ಹಸ್ತಪ್ರತಿ'ಗಳೇ ಮೂಲ ಧನ, ಇವುಗಳನ್ನು ಒದಗಿಸಿದವರು ಮಾನ್ಯರಾದ ಡಾ.ಹಾ.ಮಾ. ನಾಯಕ, ಶ್ರೀ ಎನ್. ಬಸವಾರಾಧ್ಯ, ಡಾ.ಎಸ್.ಆರ್. ಗುಂಜಾಳ, ಪ್ರೊ.ಎಸ್. ಉಮಾಪತಿ ಇವರ ಔದಾರ್ಯಕ್ಕೆ ವಂದನೆಗಳು.

ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟನ ವಿಭಾಗದ ನಿರ್ದೇಶಕರಾದ ಶ್ರೀ ಚನ್ನವೀರ ಕಣವಿ ಅವರೂ ಉಪನಿರ್ದೇಶಕರಾದ ಶ್ರೀಎಸ್.ಬಿ.ನಾಯಕ ಅವರೂ ಈ ಕೃತಿ ಪ್ರಕಟನೆಯ ವಿಷಯದಲ್ಲಿ ನೀಡಿದ ಸಲಹೆ ಸಹಕಾರ ಅನನ್ಯವಾದುವು. ಮುದ್ರಣ ವಿಭಾಗದ ನಿರ್ದೇಕರಾದ ಶ್ರೀ ಜಿ.ಬಿ.ಮನ್ವಾಚಾರ ಅವರೂ ಅವರ ಸಿಬ್ಬಂದಿವರ್ಗವೂ ಇದರ ಸರ್ವಾಂಗ ಸುಂದರ ಮುದ್ರಣಕ್ಕೋಸುಗ ಬೇಸರಪಟ್ಟುಕೊಳ್ಳದೆ ದುಡಿದಿದ್ದಾರೆ. ಇವರೆಲ್ಲರಿಗೆ ವಂದನೆಗಳು.

ಇಷ್ಟು ದೊಡ್ಡ ಸಂಪುಟವನ್ನು ಪರಿಷ್ಕರಿಸುವಲ್ಲಿ, ಪ್ರಕಟಿಸುವಲ್ಲಿ ಅನವಧಾನವ ಅಜ್ಞಾನ, ಅನ್ಯಥಾಜ್ಞಾನ ಗಳಿಂದಾಗಿ ಉಳಿದಿರಬಹುದಾದ ದೋಷಗಳನ್ನು "ನಡೆವರೆಡಹದೆ ಕುಳಿತರೆಡಹುವರೆ?" ಎಂಬ ಭಾವನೆಯಿಂದ ಸಹೃದಯರು ಮನ್ನಿಸಬೇಕು.

ಕನ್ನಡ ಅಧ್ಯಯನಪೀಠ —ಎಂ.ಎಂ. ಕಲಬುರ್ಗಿ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಶ್ರೀಬಸವೇಶ್ವರಪೀಠ
೮-೪-೧೯೮೧

*

ಪರಿವಿಡಿ

❖❖

ಮಾಹೇಶ್ವರನ ಜ್ಞಾನಿಸ್ಥಲ

[ಮಾಹೇಶ್ವರಸ್ಥಲ–ಮಾಹೇಶ್ವರಸ್ಥಲಕ್ಕೆ ಸಂಬಂಧವಾದ ವಚನದರ್ಥವನ್ನು ನಿರೂಪಿಸುತ್ತಿಹರು(ಕ.ಗ.)]

ಮಾಹೇಶ್ವರ ಸ್ಥಲ

I –

ಮಾಹೇಶ್ವರನ ಜ್ಞಾನಿಸ್ಥಲ–ಮಾಹೇಶ್ವರಸ್ಥಲದೊಳಗಣ ಜ್ಞಾನಸ್ಥಲದಾಚರಣೆಯನು ನಿರೂಪಿಸುತ್ತಿಹರು.

೫೨೮

[1]ಜ್ಞಾನಿ ನೀನು[1], ಸ್ವಾಮಿ ನೀನು, ಶಾಶ್ವತ ನೀನು, ಎತ್ತಿದೆ ಬಿರಿದು ಜಗವೆಲ್ಲಚಿಯಲು. ಮಹಾದೇವ, ಮಹಾದೇವ, ಮಹಾದೇವ ಇಲ್ಲಿಂದ ಮೇಲೆ ಶಬ್ದವಿಲ್ಲ. ಪಶುಪತಿ ಜಗಕ್ಕೇಕೋ ದೇವ, ಸ್ವರ್ಗಮರ್ತ್ಯಪಾತಾಳದೊಳಗೊಬ್ಬನೇ ದೇವ ಕೂಡಲ ಸಂಗಮದೇವಾ.

I –

ಜ್ಞಾನಿ ನೀನು–ಸಮ್ಯಕ್‌ಜ್ಞಾನಿ ನೀನು, ಸ್ವಾಮಿ ನೀನು–ಕರ್ತ ನೀನು, ಶಾಶ್ವತ ನೀನು–ಕೇಡಿಲ್ಲದಿದ್ದಂಥ ನಿತ್ಯಸ್ವರೂಪ ನೀನು, ಜಗವೆಲ್ಲಚಿಯಲು– ಮೂರು ಲೋಕವೆಲ್ಲ ಬಲ್ಲಹಾಂಗೆ, ಎತ್ತಿದೆ ಬಿರಿದು–ನೈಷ್ಠೆಯೆಂಬ ತೊಡರನ್ನು ಅಂತರಂಗದಲ್ಲಿ ಬಂಧಿಸಿಕೊಂಡಿರ್ಪನು, ಮಹಾದೇವ–ಎಲ್ಲಾ ದೇವರಿಗೆ ವಲ್ಲಭನಾದಂಥ [ದೇವನೆ] ಮಹಾದೇವ–ಮಾಯೆಗೆ ಕರ್ತೃವಾದಂಥ ದೇವನೆ, ಮಹಾದೇವ–ಆತ್ಮನಿಗೆ ಕರ್ತೃವಾದಂಥ ದೇವನೆ, ಇಲ್ಲಿಂದ ಮೇಲೆ–ಇದರಿಂದ ಮೇಲೆ, ಶಬ್ದವಿಲ್ಲ–ಮತ್ತೊಂದು ದೈವ ಉಂಟೆಂದು ಹೇಳುವಂತ ನುಡಿ ಇಲ್ಲವು. ಪಶುಪತಿ–ಬ್ರಹ್ಮಾದಿಪಶುಗಳಿಗೆ ಒಡೆಯನಾದಂಥ ಎಲೆ ಪರಶಿವಲಿಂಗವೆ ಜಗಕ್ಕೆ–ಲೋಕಕ್ಕೆ, ಏಕೋದೇವ–ಪರಮೇಶ್ವರನೊಬ್ಬನೇ ಕರ್ತನು, ಸ್ವರ್ಗಮರ್ತ್ಯಪಾತಾಳದೊಳಗೆ–ಸ್ವರ್ಗಮರ್ತ್ಯಪಾತಾಳವೆಂಬ ಮೂರು ಲೋಕಂಗಳಲ್ಲಿ ಕೂಡಲ ಸಂಗಮದೇವಾ–ಎಲೆ ಪರಶಿವಲಿಂಗವೆ, ಒಬ್ಬನೇ ದೇವ–ಪರಮೇಶ್ವರನೋರ್ವನೆ ಕರ್ತನು.

IV –

1–1 x (ತ)

....

[1]ಎಲ್ಲಾ ದೇವತೆಗಳಿಗೆ ಮಾತಾಪಿತನು, ಎಲ್ಲಾ ದೇವತೆಗಳ ಕೈಯಲು ಪೂಜಿಸಿಕೊಂಬನು, ಜನನ ಮರಣಕ್ಕೆ ಬಾರದ ನಿತ್ಯನು, ತಾನೆಲ್ಲಾ ದೇವತೆಗಳಿಗೆ ಜನನ ಮರಣವ ಮಾಡುವನು, ಇದು ಸತ್ಯವೆಂದು ಎತ್ತಿದೆ ಕೈಯೆಂಬುದೀ ವಚನದರ್ಥ.

....

೧ + ಇನ್ನು ಮಾಹೇಶ್ವರಸ್ಥಲದ ಜ್ಞಾನಿಯ ವಚನ(ತ)

೫೨೯

ಶ್ರುತಿಗಗಮ್ಯ '[1]ದ್ವಾದಶಾದಿತ್ಯರ[1]' ಪ್ರತಿಮಹಿಮಂಗೆ ಪ್ರತಿಯುಂಟೆ? 'ಸೋಮಃ ಪವತೇ'[2] ಎಂಬ ಶ್ರುತಿಯನಱಿದು 'ಶಿವ ಏಕೋದೇವಃ ರುದ್ರಃ ನ ದ್ವಿತೀಯಃ' ಎಂದು ನಂಬುವುದು ಕಾಣಿರಣ್ಣಾ. ಕೂಡಲಸಂಗಮದೇವನಲ್ಲದೆ ಇಲ್ಲವೆಂದು ಎತ್ತಿದೆ ಬಿರಿದು ಜಗವೆಲ್ಲರಿಯಲು.

I –

ಶ್ರುತಿಗೆ–ವೇದಶುತಿತ್ರುಗಳಿಗೆ, ಅಗಮ್ಯ–ಗಮಿಸಿ ಕಾಣಿಸಿಕೊಳ್ಳಲಾರದೆ ಇದ್ದಂಥ, ದ್ವಾದಶಾದಿತ್ಯರ–ಹನ್ನೆರಡು ಸೂರ್ಯರ ಪ್ರಕಾಶವನ್ನು ಕೀಳ್ಪಡಿಸಿ ಬೆಳಗಲ್ಪಟ್ಟಂಥ, [೧][ಅ][೧] ಪ್ರತಿಮ–ಪ್ರತಿರಹಿತವಾದ ಮಹಿಮಂಗೆ–ಮಹತ್ವಾತಿಶಯವನುಳ್ಳ ಪರಶಿವಲಿಂಗಕ್ಕೆ, ಪ್ರತಿಯುಂಟೆ ?–ಮತ್ತೊಂದು ಸಮಾನವಾದ ದೈವ ಉಂಟಾಗಿದ್ದಿತ್ತೆ? ಇಲ್ಲವು. 'ಸೋಮಃ ಪವತೇ' ಎಂಬ : [ಸೋಮ ಪವತೇ–] ಪೃಥಿವ್ಯಾಃ ಜನಕಾನಾಂ ಆಪಾಂ ಜನಕಾನಾಂ ಆಗ್ನೇರ್ಜನಕಾನಾಂ ವಾಯೋರ್ಜನಕಾನಾಂ ಆಕಾಶಸ್ಯ ಜನಕಾನಾಂ ಚಂದ್ರಸೂರ್ಯಾತ್ಮನಾಂ ಜನಕನಾಂ ಎಂದು, ಪೃಥ್ವಿಗೆ ತಂದೆಯಾದಾತನು ಅಪ್ಪುವಿಗೆ ತಂದೆಯಾದಾತನು ಅಗ್ನಿಗೆ ತಂದೆಯಾದಾತನು ವಾಯುವಿಂಗೆ ತಂದೆಯಾದಾತನು ಆಕಾಶಕ್ಕೆ ತಂದೆಯಾದಾತನು ಸೂರ್ಯಚಂದ್ರಾತ್ಮರುಗಳಿಗೆ ತಂದೆಯಾದಾತನು, ಎಂಬ–ಹೀಂಗೆಂದು ಹೇಳುವ, ಶ್ರುತಿಯನಱಿದು_ವೇದಶ್ರುತಿಗಳನು ತಿಳಿದು, ಶಿವನು–ಪರಮೇಶ್ವರನು, ಏಕೋದೇವಃ–ಒಬ್ಬನೇ ಕರ್ತನು, ರುದ್ರಃ–ದುಃಖಾಪಹಾರಿಯಾದಂಥ ಪರಶಿವಲಿಂಗವು, [೨][ನ][೨] ದ್ವಿತೀಯಃ ಎಂದು–ಎರಡಿಲ್ಲದಿದ್ದಾತನೆನ್ನುತ್ತ, ನಂಬುವುದು ಕಾಣಿರಣ್ಣಾ–ವಿಶ್ವಾಸಿಸುವುದು ಕಂಡಿರಣ್ಣಾ.

ಕೂಡಲಸಂಗಮದೇವನಲ್ಲದೆ_ಪರಶಿವಲಿಂಗವಲ್ಲದೆ, ಇಲ್ಲವೆಂದು_ಅತಃಪರಂ ಮತ್ತೊಂದು ದೈವವುಂಟಾಗಿಲ್ಲವೆನುತ್ತ, ಜಗವೆಲ್ಲರಿಯಲು–ಮೂರು ಲೋಕವೆಲ್ಲ ಬಲ್ಲಹಾಂಗೆ, ಬಿರಿದು ನೈಷ್ಠೆಯೆಂಬ ತೊಡರನು, ಎತ್ತಿದೆ–ಅಂತರಂಗದಲ್ಲಿ ಸಂಬಂಧಿಸಿಕೊಂಡಿರ್ಪನು.

....

೧–೧ x (ಕ, ಗ). ೨–೨ ಅ(ಕ,ಗ).

III –

1–1 x ದ್ವಾದಶಾಂತ್ಯನ (ಡ). 2 + ಜನಿತಾ (ಡ).

....

[1]ದ್ವಾದಶಾಂತ್ಯಂ–ವೇದಂಗಳಱಿವಿನ ಮೇಲೆ ಹನ್ನೆರಡಂಗುಲ ಪ್ರಮಾಣಿನಲ್ಲಿರಲ್ಪಟ್ಟಾತನು, ಸೋಮ –ಉಮಾಸಮೇತನಾದ ಪರಶಿವನಿಂದೆ, ಪವತೇ–ವಾಯವ್ಯ ಮೊದಲಾದವರು, ಜನಿತಾ–ಜನನವು

....

೨ + ಮಾಹೇಶ್ವರ ಸ್ಥಲದ ಗಟ್ಟಿ ನುಡಿಗಳು (ಟ); ಮಾಹೇಶ್ವರ ಸ್ಥಲದ ನುಡಿಗಳು (ಡ).

೫೩೦

ಉಪ್ಪರಗುಡಿ ನಂದಿವಾಹನ ಸದ್ಯೋಜಾತನ ಬಾಗಿಲಮುಂದೆ ಸಾಱುತ್ತೈದಾವೆ ನೋಡಾ, ಶ್ರುತಿಗಳು ನಾಲ್ಕು ವೇದಂಗಳು ಹುಸಿಯದೆ 'ಭರ್ಗೋದೇವಸ್ಯ ಧೀಮಹಿ' ಎಂಬುದಾಗಿ ಕೂಡಲಸಂಗ ದೇವನಲ್ಲದೆ ಇಲ್ಲವೆಂ[1]ದಿತ್ತು[1] ವೇದ.

I –

[ಸದ್ಯೋಜಾತನ ಬಾಗಿಲ ಮುಂದೆ–]ಸದ್ಯೋಜಾತಮುಖವನ್ನುಳ್ಳ ಸದಾಶಿಮೂರ್ತಿಯ ಕೈಲಾಸದ ನಾಲ್ಕು ದ್ವಾರಂಗಳ ಸಮ್ಮುಖದಲ್ಲಿ, ಉಪ್ಪರಗುಡಿ–ಉನ್ನತವಾದ ಭಕ್ತಿಗೃಹವು ರಚಿಸಿರ್ಪುದು, ನಂದಿವಾಹನ–ನಾಲ್ಕು ದಿಕ್ಕಿಗೆ [೧]ನಾಲ್ಕು[೧] ವೃಷಭವಾಹನ [೨][ಗಳು ಇ][೨] ದ್ದಿಪ್ಪವೆಂದು, ಶ್ರುತಿಗಳು–ಮೂವತ್ತೆರಡು ಉಪನಿಷತ್ತುಗಳು, ಸಾಱುತ್ತೈದಾವೆ ನೋಡಾ–ಡಂಗರಿಸುತ್ತೈದಾವೆ ಕಂಡಾ, ನಾಲ್ಕು ವೇದಂಗಳು–ಚತುರ್ವೇದಂಗಳು, ಹುಸಿಯದೆ–[೩]ಸಟೆಯೆನ್ನದೆ[೩], 'ಭರ್ಗೋ ದೇವಸ್ಯ ಧೀಮಹಿ' ಎಂದುದಾಗಿ: ಭರ್ಗಃ–ರಕ್ಷಕನಾದಂಥ, ಯಸ್ಯ–ಆವನೋರ್ವನು, ಮಹೀ–ಎಮಗೆ, ಭರ್ಗ–ರಕ್ಷಕನಾದಂಥ, ದೇವಃ–ದಿವ್ಯಕಾಯ ಕಾಂತಿಲಾವಣ್ಯವನುಳ್ಳ ಪರಶಿವಲಿಂಗವು, ಎಂದುದಾಗಿ–ಧೀ ಎಂದುದಾಗಿ ಧರ್ಮಾದಿಗಳಿಗೆ ಗೋಚರಿಸುವ, ಬುದ್ಧಿ–ಮತಿಯನ್ನು ಕರುಣಿಸಿ ಕೊಡಲ್ಪಟ್ಟಾತನೆಂದು ಹೇಳುತ್ತಿಹವಾಗಿ, ಕೂಡಲಸಂಗಮದೇವನಲ್ಲದೆ–ಪರಶಿವಲಿಂಗವಲ್ಲದೆ, ಇಲ್ಲವೆಂದಿತ್ತು–ಅತಃಪರಂ ಮತ್ತೊಂದು ದೈವವುಂಟಾಗಿಲ್ಲವೆಂದು ಹೇಳುತಿಹವು, ವೇದ–ನಾಲ್ಕು ವೇದಂಗಳು.

....

೧–೧ x (ಕ), ೨–೨ ವನ್ನುತಿ (ಕ, ಗ), ೩–೩ x (ಗ)

III –

ಭರ್ಗಃ–ತೇಜೋಧಿಕನಾದ, ದೇವಸ್ಯ–ದೇವನನು, ಧೀಮಹಿ–ಓಲೈಸುವೆವು.

IV –

1–1 ದುದು(ತ).

....

ಶ್ರುತಿಗಳೆಲ್ಲವೂ ಭರ್ಗೋದೇವನಲ್ಲದೆ ದೇವನಿಲ್ಲಾಯೆಂದು ಸಾಱುತ್ತೈದಾವೆ, ಇದು ಸತ್ಯ ತಪ್ಪದು. ಇದಲ್ಲದೆ ಬೇಱಿಲ್ಲಾ ಎಂಬುದೀ ವಚನದರ್ಥ.

'ವೇದ ಸ್ವಯಂಭೂ'ಯೆಂಬ ವಾದಿ ನೀ ಕೇಳೆಲವೊ. 'ಏಕ ಏವ ರುದ್ರ ನ ದ್ವಿತೀಯಃ' ಎಂದು ನಂಬುವುದು ಕಾಣಿರಣ್ಣಾ. 'ಓಂ ದ್ಯಾವಾಭೂಮೀ ಜನಯನ್ ದೇವ ಏಕೋ ದೇವ ರುದ್ರಃ ನ ದ್ವಿತೀಯಃ' ಎಂದು ನಂಬುವುದು ಕಾಣಿರಣ್ಣಾ. 'ಚಕಿತಮಭಿಧತ್ತೇ' ಎಂದು ಶ್ರುತಿ ಸಾಱುತ್ತೈದಾವೆ ಜಗತ್ಕರ್ತ ಕೂಡಲಸಂಗಮದೇವನೊಬ್ಬನೆ ಕಾಣಿರಣ್ಣಾ.

I -

"ವೇದ ಸ್ವಯಂಭೂ"ಯೆಂಬ–"ವೇದೇನ ಸರ್ವಕರ್ಮಾಣಿ ಸಂಭೂತಿ ವೇದ ಸ್ವಯಂಭೂ"ವೆಂದು ವೇದವು ಭೂರಿಸತ್ವವೆಂಬ ಅರ್ಥದಿಂದೆ ಬಹಳವಾದ ಅ[1]ರ್ಥ[1]ವನುಳ್ಳಂಥದು, ಅದಲ್ಲದೆ ಪುಣ್ಯಾಪಾಪಕ್ರಿಯಗಳುಳ್ಳಂಥದು, ತನ್ನಿಂದ ತಾನೆ ಹುಟ್ಟಿದಂಥ; "ವೇದ ಸ್ವಯಂಭೂ"ಯೆಂಬ_ವೇದವೇ ದೈವವೆಂದು ಹೇಳುವ, ವಾದಿ–ಎಲೆ ತರ್ಕಿಯೇ, ನೀ ಕೇಳೆಲವೂ–ನೀನಾಲಿಸೆಲವೋ, ರುದ್ರ–ದುಃಖಾಪಹಾರಿಯಾದ ಪರಮೇಶ್ವರನು, ಏಕ ಏವ–ಒಬ್ಬನೇ ಕರ್ತನು, ನ ದ್ವಿತೀಯಃ ಎಂದು–ಎರಡಿಲ್ಲದಿದ್ದಾತನೆನುತ, ನಂಬುವುದು ಕಾಣಿರಣ್ಣಾ–ವಿಶ್ವಾಸಿಸುವುದು ಕಂಡಿರಣ್ಣಾ, ಓಂ–ಮೂಲಪ್ರಣವಸ್ವರೂಪವಾದ ಪರಬ್ರಹ್ಮವು, ದೇವ–ದಿವ್ಯಕಾಯಕಾಂತಿಯ ಲಾವಣ್ಯವನುಳ್ಳ ಪರಶಿವಲಿಂಗವು, ಭೂಮೀ–ಪೃಥ್ವಿಯು, ದ್ವಾವಾ–ಆಕಾಶವು, ಜನಯನ್–ಪೃಥ್ವಿ ಆಕಾಶದ ಮಧ್ಯದಲ್ಲಿ, [2]ಹುಟ್ಟಲ್ಪಪಟ್ಟ ಸಮಸ್ತ ಪ್ರಾಣಿಗಳಿಗೆ ಆಹಾರ ವ್ಯವಹಾರ ಭೋಗ ಭುಕ್ತ್ಯಾದಿಗಳ ಕೊಟ್ಟು ರಕ್ಷಣವ ಮಾಡುವಂಥ, ಏಕೋದೇವ–ಪರಮೇಶ್ವರನೊಬ್ಬನೆ ಕರ್ತನು, ರುದ್ರಃ–ದುಃಖಾಪಹಾರಿಯಾದ ಪರಶಿವಲಿಂಗವು, ನ ದ್ವಿತೀಯಃ ಎಂದು–ಎರಡಿಲ್ಲದಿದ್ದಾತನೆನುತ್ತ, ನಂಬುವುದು ಕಾಣಿರಣ್ಣಾ–ವಿಶ್ವಾಸಿಸುವುದು ಕಂಡಿರಣ್ಣಾ.

"ಚಕಿತಮಭಿದತ್ತೇ" ಎಂದು : ಚಕಿತಂ–ಭಯಸಂಭ್ರಮವೆಂದು ಅತ್ಯಂತ ಭಯಸಂಭ್ರಮದೊಡನೆ ಕೂಡಿರ್ಪುದುಯೆಂದು, ಅಭಿದತ್ತೇ ಎಂದು– ಹೀಗೆಂದು ಹೇಳುವ, ಶ್ರುತಿ–ವೇದವಾಕ್ಯಗಳು, ಸಾಱುತ್ತೈದಾವೆ ನೋಡಾ–ಡಂಗುರಿಸುತ್ತೈದಾವೆ ಕಂಡಾ, ಜಗತ್ಕರ್ತ–ಮೂರುಲೋಕಕ್ಕೊಡೆಯನಾದಂಥ, ಕೂಡಲಸಂಗವದೇವಾ–ಪರಶಿವಲಿಂಗವು, ಒಬ್ಬನೆ ಕಾಣಿರಣ್ಣಾ–ಒರ್ವನೆ ಕಂಡಿರಣ್ಣಾ.

....

೧–೧ ರ್ಥಾನ್ವಯ (ಕ), ೨+ ಜನಯನ್ (ಕ),

III -

ಚಕಿತಮಭಿದತ್ತೇ–ತಿರುಗುವಹಣವು ಹೇಂಗಹುದೋ ಹಾಂಗೆ.

೫೩೨

ಶ್ರುತಿತತಿಯ ಶಿರದ ಮೇಲೆ ಅತ್ಯತಿಷ್ಠದ್ದಶಾಂಗುಲನ ನಾನೇನೆಂಬೆನಯ್ಯ? ಘನಕ್ಕೆ ಘನಮಹಿಮನ ಮನಕ್ಕಗೋಚರನ! 'ಅಣೋರಣೀಯಾನ್ ಮಹತೋಮಹೀಯಾನ್' ಮಹಾದಾನಿ ಕೂಡಲಸಂಗಮ ದೇವ.

I -

ಶ್ರುತಿತತಿಯ ಶಿರದ ಮೇಲೆ : ಶ್ರುತಿ–ನಾಲ್ಕು ವೇದಂಗಳ, ತತಿಯ–ಸಮೂಹದ, ಶಿರದ ಮೇಲೆ–ಅವರವರರುಹಿನ ಮಸ್ತಕದಲ್ಲಿ, ಅತ್ಯತಿಷ್ಠದ್ದಶಾಂಗುಲನ–ಅರಿದೆನೆಂಬವರರುಹಿಂಗೆ ಹತ್ತಂಗುಲ ಪ್ರಮಾಣದಿಂದ ಆಚೆಗಾಚೆಗೆ, ತಿಷ್ಠತ್–ಮೀರಿ ತೋರಲ್ಪಟ್ಟ ಪರಶಿವಲಿಂಗವನ್ನು, ನಾನೇನೆಂಬೆನಯ್ಯಾ–ನಾನೆಂತೆಂದು ವಾಚ್ಯಕ್ಕೆ ತಂದು ಹೇಳುವೆನಯ್ಯಾ. ಘನಕ್ಕೆ ಘನ–ಆವುದು ದೊಡ್ಡಿತ್ತೋ ಅದಕ್ಕೂ ದೊಡ್ಡಿತ್ತಾದ, ಮಹಿಮನ–ಮಹತ್ವಾತಿಶಯವನುಳ್ಳ ಪರಶಿವಲಿಂಗವನ್ನು, ಮನಕ್ಕಗೋಚರನ–ವಾಕ್ಕಿನ ಸ್ತೋತ್ರಕ್ಕೆ ಮನದ ನೆನಹಿಂಗೆ ಮೀರಿ ತೋರಲ್ಪಟ್ಟಾತನ ಅಣೋರಣೀಯಾನ್–ಸೂಕ್ಷ್ಮಕ್ಕತಿ ಸೂಕ್ಷ್ಮವಾದಾತನು, ಮಹತೋಮಹೀಯಾನ್–ದೊಡ್ಡಿತ್ತಕ್ಕೆ ದೊಡ್ಡಿತ್ತವಾದಾತನು, ಮಹಾದಾನಿ–ಭಕ್ತರುಗಳಿಗೆ ಮಹಾದಾನಂದಸುಖವನ್ನು ಕರುಣಿಸಿ ಕೊಡಲ್ಪಟ್ಟಾತನು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

IV -

ಸಮಸ್ತಶ್ರುತಿಯ ಮಸ್ತಕದಲ್ಲಿ ಇಪ್ಪವನು, ವಾಕುಮನಕ್ಕೆ ಬಾರದ ಮಹಾಮಹಿಮನು, ಸೂಕ್ಷ್ಮಕ್ಕೆ ಸೂಕ್ಷ್ಮ ಸ್ಥೂಲಕ್ಕೆ ಸ್ಥೂಲ ಶಿವನಲ್ಲದೆ ಮತ್ತೆ ಆರೂ ಇಲ್ಲಾಯೆಂಬುದೀ ವಚನದರ್ಥ.

೫೩೩

ಸಕಳನಿಃಕಳವ ಕೂಡಿಕೊಂಡಿಪ್ಪೆಯಾಗಿ ಸಕಳ ನೀನೆ, ನಿಃಕಳ ನೀನೆ ಕಂಡಯ್ಯಾ. 'ವಿಶ್ವತಃ ಚಕ್ಷು' ನೀನೆ ದೇವಾ, 'ವಿಶ್ವತೋಮುಖ' ನೀನೆ ದೇವಾ, 'ವಿಶ್ವತೋಬಾಹು' ನೀನೆ ದೇವಾ, 'ವಿಶ್ವತಃ ಪಾದ' ನೀನೆ ದೇವಾ, ಕೂಡಸಂಗಮದೇವಾ.

I -

ಸಕಳನಿಃಕಳವ ಕೂಡಿಕೊಂಡಿಪ್ಪೆಯಾಗಿ: ಸಕಳ–ಪೃಥ್ವಿ ತೇಜ ಸೂರ್ಯ ಚಂದ್ರ ಇವು ಐದು ಸಾಕಾರವಾದ ತತ್ತ್ವಂಗಳ, ನಿಃಕಳವ–ವಾಯು ಆಕಾಶ ಆತ್ಮ ಇವು ಮೂರು ನಿರಾಕಾರವಾದ ತತ್ತ್ವಂಗಳ, ಕೂಡಿಕೊಂಡಿಪ್ಪೆಯಾಗಿ–ಸಾಕಾರತತ್ತ್ವ ನಿರಾಕಾರ ತತ್ತ್ವಂಗಳನಂಗವ ಮಾಡಿಕೊಂಡಿರ್ಪೆಯಾಗಿ, ಸಕಳ ನೀನೆ–ಸಾಕಾರ ತತ್ತ್ವಸ್ವರೂಪ [ನೀನೆ], ನಿಃಕಳ ನೀನೆ ಕಂಡಯ್ಯ–ನಿರಾಕಾರಸ್ವರೂಪ ನೀನೆ ಕಾಣಯ್ಯ ಎಂಬುದರ್ಥ.

● ಸಕಳನಿಃಕಳವ ಕೂಡಿಕೊಂಡಿಪ್ಪೆಯಾಗಿ: ಸಕಳ–ರುದ್ರಮೂರ್ತಿ ಮಾಹೇಶ್ವರಮೂರ್ತಿ ಈಶ್ವರಮೂರ್ತಿ ಮಹಾಲಿಂಗಮೂರ್ತಿ ಸದಾಶಿವಮೂರ್ತಿ ಇವು ಐದು ಸಗುಣಮೂರ್ತಿಗಳು ನಿಃಕಳ–ನಿಃಕಲಬ್ರಹ್ಮ ಶೂನ್ಯಬ್ರಹ್ಮ ನಿರಂಜನಬ್ರಹ್ಮ ಇವು ಮೂರು ನಿರ್ಗುಣಮೂರ್ತಿಗಳು, ಈ

ಸಗುಣನಿರ್ಗುಣ ಮೂರ್ತಿಗಳನು: ಕೂಡಿಕೊಂಡಿಪ್ಪೆಯಾಗಿ–ಒಳಗೊಂಡಿಪ್ಪೆಯಾಗಿ, ಸಕಳ ನೀನೆ೧–ಸಗುಣಮೂರ್ತಿಸ್ವರೂಪ ನೀನೇ೨, ನಿಃಕಳ ನೀನೆ ಕಂಡಯ್ಯ–ನಿರ್ಗುಣಮೂರ್ತಿಸ್ವರೂಪವು ನೀನೇ ಪರಶಿವಲಿಂಗವು ಕಾಣಯ್ಯ.

'ವಿಶ್ವತಃ ಚಕ್ಷು' ನೀನೆ ದೇವಾ: [ವಿಶ್ವತಃ ಚಕ್ಷು–] ಒಂದು ಕಡೆಗೆ ನಯನವಿದ್ದು ಒಂದು ಕಡೆಗೆ ನಯನವಿಲ್ಲದಿರುವಾತನಲ್ಲವು, ಎಲ್ಲಾ ಕಡೆಗೆ ನಯನವುಳ್ಳಾತನು; ನೀನೆ ದೇವಾ–ನೀನೆ ಪರಶಿವಲಿಂಗವು, 'ವಿಶ್ವತೋಮುಖ' ನೀನೆ ದೇವಾ : [ವಿಶ್ವತೋಮುಖ] ಒಂದು ಕಡೆಗೆ ವದನವಿದ್ದು ಒಂದು ಕಡೆಗೆ ವದನವಿಲ್ಲದಾತನಲ್ಲವು, ಎಲ್ಲಾಕಡೆಗೆ ವದನವುಳ್ಳಾತನು; ನೀನೆ ದೇವಾ–ನೀನೆ ಪರಶಿವಲಿಂಗವು, 'ವಿಶ್ವತೋಬಾಹು' ನೀನೆ ದೇವಾ [ವಿಶ್ವತೋಬಾಹು–] ಒಂದು ಕಡೆಗೆ ತೋಳುಗಳಿದ್ದು ಒಂದು ಕಡೆಗೆ ತೋಳುಗಳಿಲ್ಲದಾತನಲ್ಲವು. ಎಲ್ಲ ಕಡೆಗೆ ತೋಳುಗಳುಳ್ಳಾತನು; ನೀನೆ ದೇವಾ–ನೀನೆ ಪರಶಿವಲಿಂಗವು, 'ವಿಶ್ವತಃ ಪಾದ' ನೀನೆ ದೇವಾ: [ವಿಶ್ವತಃ ಪಾದ–] ಒಂದು ಕಡೆಗೆ ಚರಣವಿದ್ದು ಒಂದು ಕಡೆಗೆ ಚರಣವಿಲ್ಲದಾತನಲ್ಲವು, ಎಲ್ಲಾ ಕಡೆಗೆ ಚರಣವುಳ್ಳಾತನು: ನೀನೆ ದೇವಾ–ನೀನೇ ಪರಶಿವಲಿಂಗವು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

....

೧+ ದೇವಾ (ಕ, ಗ), ೨+ಪರಶಿವಲಿಂಗವು (ಕ, ಗ),

೫೩೪

ಎತ್ತೆತ್ತ ನೋಡಿದಡತ್ತತ್ತ ನೀನೆ ದೇವಾ, ಸಕಲ ವಿಸ್ತಾರದ ರೂಹು ನೀನೆ ದೇವಾ, 'ವಿಶ್ವ[1]ತಃ[1] ಚಕ್ಷು ನೀನೆ ದೇವಾ 'ವಿಶ್ವತೋಮುಖ' ನೀನೇ ದೇವಾ, 'ವಿಶ್ವತೋಬಾಹು' ನೀನೇ ದೇವಾ, [1]ವಿಶ್ವ[1] ತಃ ಪಾದ' ನೀನೆ ದೇವಾ, ಕೂಡಲಸಂಗಮದೇವಾ.

I– –

ಎತ್ತೆತ್ತ ನೋಡಿದಡೆ–ದಶದಿಕ್ಕು ಎಂಟು ದಿಕ್ಕುಗಳ ಪರಾಮರಿಸಿ ನೋಡಿದರೆ, ಅತ್ತತ್ತ ನೀನೆ ದೇವಾ–ದಶದಿಕ್ಕು ಎಂಟು ದಿಕ್ಕುಗಳಲ್ಲಿ ಪರಿಪೂರ್ಣವಾಗಿ ನೆಲಸಿರುವಾತನು ನೀನೇ ಕರ್ತನು, ಸಕಲವಿಸ್ತಾರದ ರೂಹು ನೀನೆ ದೇವಾ–ಸಚರಾಚರಪ್ರಾಣಿಗಳಿಗೆಲ್ಲಕ್ಕೂ ಚೈತನ್ಯಸ್ವರೂಪವಾಗಿರುವಾತನು ನೀನೇ ಕರ್ತನು, 'ವಿಶ್ವತಃ ಚಕ್ಷು' ನೀನೆ ದೇವಾ–ಎಲ್ಲಕಡೆಗೆ ನಯನವುಳ್ಳಾತ ನೀನೇ ಕರ್ತನು, 'ವಿಶ್ವತೋಮುಖ' ನೀನೇ ದೇವಾ–ಎಲ್ಲಕಡೆಗೆ ವದನವುಳ್ಳಾತ ನೀನೇ ಕರ್ತನು, 'ವಿಶ್ವತೋಬಾಹು' ನೀನೇ ದೇವಾ–ಎಲ್ಲಕಡೆಗೆ ತೋಳುಗಳುಳ್ಳಾತನು ನೀನೇ ಕರ್ತನು, 'ವಿಶ್ವತಃ ಪಾದ' ನೀನೇ ದೇವಾ–ಎಲ್ಲಾ ಕಡೆಗೆ ಚರಣವುಳ್ಳಾತನು ನೀನೇ ಕರ್ತನು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

IV –

1–1 ತೋ (ತ),

....

ದಶದಿಕ್ಕನು ಒಳಕೊಂಡು ತಾ ದಿಕ್ಕಿಲ್ಲದವನು. ಅನಂತ ಕಂಗಳು ಅನಂತ ಮುಖ ಅನಂತ ಬಾಹು ಅನಂತ ಪಾದವಾದ ಅಖಂಡಪರಶಿವನಲ್ಲದೆ ಮತ್ತೆ ಆರೂ ಇಲ್ಲಾ ಎಂಬುದೀ ವಚನದರ್ಥ.

೫೩೫

ಜಲ ಕೂರ್ಮ ನಾಗ ಮೇದಿನಿ ಸಪ್ತಸಾಗರ ಅಜಾಂಡಖಂಡ ಹರಿವಿರಂಚಿಗಳೆಲ್ಲ ನಿಮ್ಮುದರದ ಕೊನೆಯ ಪ್ರಾಣಿಗಳಯ್ಯ! ಕೂಡಲಸಂಗನ ಮಹಾಮನೆಯಲ್ಲಿ ಅಸ್ತಿಗ್ರಾಹಕನೆಂಬ ಗಣೇಶ್ವರನ ಇಚ್ಛಾಮಾತ್ರದಿಂದ ಜಗಜುಗವಯ್ಯ!

I– –

ಜಲ[ಕೂರ್ಮನಾಗ–] ವಿರಾಟ್‌ಮೂರ್ತಿಯ ಪಾದಚೈತನ್ಯದ ಆಸ್ಪದದಲ್ಲಿ ಮಹಾವಾಯು ಇರ್ಪುದು. ಆ ವಾಯುವಿನ ಮಧ್ಯದಲ್ಲಿ ಸಾವಿರ ಬಣ್ಣದ ಸುವರ್ಣಮಯವಾದ ಕರ್ಪುರವಿರ್ಪ್ಪುದು. ಆ ಕರ್ಪುರದಲ್ಲಿಕೋಟಿಯೋಜನ ಪ್ರಮಾಣಮಾದ ಮಹಾಘನಗಂಭೀರದಿಂದ ಪೂರಿತಮಾದ ಬಹಿರಾವರಣವಾರಿ ಇರ್ಪುದು. ಆ ವಾರಿಯ ಮೇಲೆ ಸಾಸಿರದಳ ಕಮಲವಿರ್ಪುದು, ಆ ಕಮಲಮಧ್ಯದಲ್ಲಿ ವಿಶ್ವಕರ್ಮನಿರ್ಮಿತವಾದ ದಿವ್ಯಸಿಂಹಪೀಠವಿರ್ಪುದು. ಆ ಪೀಠದ ಮಧ್ಯದಲ್ಲಿ ಆದಿಶಕ್ತಿ ಮಂಡಿಸಿರ್ಪಳು, ಆದಿಶಕ್ತಿಯ ಮುಡಿಯಲ್ಲಿ ಸೂಡಿದ ಒಂದಾನೊಂದು ಹೊಂದಾವರೆಯೋಪಾದಿಯಲ್ಲಿ ದಶಕೋಟಿಯೋಜನ [೧]ಬೆನ್ನಗಲ[೧]ವುಳ್ಳ ಆದಿಕಮಠವಿರ್ಪುದು. ಆ ಕಮಠನ [೨]ಬೆನ್ನಗಲಿನ[೨] ಮೇಲೆ ಇಂದ್ರಾದಿ ಎಂಟು ದಿಕ್ಕುಗಳಲ್ಲಿ ಗಂಡಾನೆಗಳಿರ್ಪವು. ಆ ಎಂಟು ಗಂಡಾನೆಗಳ ಮನಸಂಚಲವಾಗದ ಹಾಂಗೆ ಎಂಟು ಹೆಣ್ಣಾನೆಗಳಿರ್ಪವು. ಆ ಎಂಟು ಹೆಣ್ಣಾನೆ ಗಂಡಾನೆಗಳು ಅತ್ತಿತ್ತ ಹೋಗದ ಹಾಂಗೆ ಅಷ್ಟ ಕುಲಪರ್ವತಂಗಳು ಬಂಧಿಸಿಕೊಂಡಿರ್ಪವು. ಆ ಎಂಟು ಗಂಡಾನೆ ಹೆಣ್ಣಾನೆ ಅಷ್ಟಕುಲಪರ್ವತಂಗಳು ಸಂಚಲವಾಗದ ಹಾಂಗೆ ತನ್ನ ಬಾಲದಿಂದ ಬಂಧಿಸಿಕೊಂಡು ಒಂದೊಂದು ಪೆಡೆ, ಮೂವತ್ತು[೩] ಸಾವಿರ ಗಾವುದ ಅಡ್ಡಗಲವನುಳ್ಳ ಅಂತಪ್ಪ ಪಡೆ ಸಹಸ್ರವನುಳ್ಳ ಮಹದೈಶ್ವರ್ಯ ಸಂಪತ್ತಿನಿಂದ ಮಹಾ ಶೇಷನೊಪ್ಪುತ್ತಿಹನು. ಮೇದಿನ–ಆ ಮಹಾಶೇಷ ನಡುವಣ ಫಣಾಮಣಿಯ ಮೇಲೆ ಒಂದಾನೊಂದು ಕುಠಾರದ ಮೊನೆಯ ಮೇಲೆ ನಿಂಬೆಹಣ್ಣಿನ ಭಾಗವನು ಮಡಗಿದೋಪಾದಿಯಲ್ಲಿ ಭೂಮಿ ಒಪ್ಪುತ್ತಿಹುದು, ಸಪ್ತಸಾಗರ ಆ ಭೂಮಿಯ ಮೇಲೆ ಏಳು ಸಮುದ್ರಂಗಳು ಹಾಸಿರ್ಪವು, [ಅಜಾಂಡ–] ಬ್ರಹ್ಮಾಂಡ, ಬ್ರಹ್ಮನಿಂದ ಒಡೆದು ರಚನೆಯಾದ ಕಾರಣ ಅಜಾಂಡವೆಂಬ ಹೆಸರಾಯಿತ್ತು, ಖಂಡ–ಅದರೊಳಗೆ ಒಂಬತ್ತು ಖಂಡಂಗಳುಂಟಾಗಿರ್ಪವು, ಹರಿವಿರಂಚಿಗಳೆಲ್ಲ–ಬ್ರಹ್ಮ ವಿಷ್ಣು ಮೊದಲಾದ ಸಮಸ್ತಪ್ರಾಣಿಗಳೆಲ್ಲರು, ನಿಮ್ಮುದರದ ಕೊನೆಯ ಪ್ರಾಣಿಗಳಯ್ಯಾ : ನಿಮ್ಮ–ನಿಃಕಲ ಬ್ರಹ್ಮವು, ಉದರ–ಚಿತ್ತು, ಆ ಚಿತ್ತುವಿನ; [ಕೊನೆಯ ಪ್ರಾಣಿಗಳಯ್ಯಾ–] ಅಗ್ರದ ಕೊನೆಯ ಪ್ರಾಣಿಗಳಯ್ಯಾ.

ಕೂಡಲಸಂಗನ–ಪರಶಿವಲಿಂಗನ, ಮಹಾಮನೆಯಲ್ಲಿ–[೪]ಬ್ರಹ್ಮಾಂಡ[೪]ವೆಂಬ ಕ್ಷೇತ್ರದಲ್ಲಿ ಅಸ್ತಿಗ್ರಾಹಕನೆಂಬ ಗಣೇಶ್ವರನ–ನಿತ್ಯತ್ವವನ್ನು ಗ್ರಹಿಸಿಕೊಡಲ್ಪಟ್ಟ ನಿಃಕಲಬ್ರಹ್ಮವೆಂಬ ಗಣಾಧೀಶ್ವರನ, ಇಚ್ಛಾಮಾತ್ರದಿಂದ–ಇಚ್ಛೆಗೊದಗಲ್ಪಟ್ಟಂಥದೇ ಚಿತ್‌ಶಕ್ತಿ, ಆ ಚಿತ್‌ಶಕ್ತಿಯ ನೆನಹು ಮಾತ್ರದಿಂದ; ಜಗಜುಗವಯ್ಯಾ–ಕೃತಯುಗ ತ್ರೇತಾಯುಗ ದ್ವಾಪಾರಯುಗ ಕಲಿಯುಗವೆಂಬ ನಾಲ್ಕು ಯುಗಂಗಳು

ಹದಿನೆಂಟು ವೇಳೆ ಮರಳಿ ಮರಳಿ ಬಂದಲ್ಲಿ ಒಂದು ಜುಗವೆನಿಸುವದು, ಅಂತಪ್ಪ ಯುಗಜುಗ ದಿನಕಾಲಕಲ್ಪಿತಂಗಳುಂಟಾದವಯ್ಯ ಸ್ವಾಮಿ.

....

೧+೧ ಚೆನ್ನರ (ಕ); ಚೆನ್ನಗರ (ಗ), ೨–೨ ಚಿನ್ನಂಗರಿಯ (ಕ); ಬೆನ್ನಗರಿನ (ಗ), ೩+ಮೂವತ್ತು (ಕ), ೪–೪ ಬ್ರಹ್ಮ (ಕ).

೫೩೬

ರುದ್ರ ಮುಖದಲ್ಲಿ, ವಿಷ್ಣು ಭುಜದಲ್ಲಿ, ಜಂಘೆಯಲ್ಲಿ ಅಜನ ಜನನ[1]ವೋ[1], ಇಂದ್ರ ಪಾದದಲ್ಲಿ, ಚಂದ್ರ ಮನದಲ್ಲಿ ಚಕ್ಷುವಿನಲ್ಲಿ, ಸೂರ್ಯ ಜನನ[1]ವೋ[1]. [2]ನೊಸಲಲ್ಲ ಅಗ್ನಿ[2] ಪ್ರಾಣದಲ್ಲಿ ವಾಯು ನಾಭಿಯಲ್ಲಿ ಅಂತರಿಕ್ಷ [3]ಜನನ[3]ವೋ[4], ಶಿರದಲ್ಲುದಯ ತೆತ್ತೀಸಕೋಟಿ ದೇವತೆಗಳು, ಪಾ[5]ದತ[5]ಳದಲ್ಲಿ ಭೂಮಿ[6]ಯ[6] ಜನನ[1]ವೋ[1]. ಶ್ರೋತ್ರದಲ್ಲಿ ದಶದಿಕ್ಕುಗಳು. ಜಗವ ನಿಕ್ಷೇಪಿಸಿದ ಕುಕ್ಷಿಯಲ್ಲಿ, ಅಕ್ಷಯನಗಣಿತನು. ಸಾಸಿರ ತಲೆ, ಸಾಸಿರ ಕಣ್ಣು, ಸಾಸಿರ ಕೈ, ಸಾಸಿರ ಪಾದ, ಸಾಸಿರ ಸನ್ನಿಹಿತ ನಮ್ಮ ಕೂಡಲ ಸಂಗ[7]ಮದೇವ[7].

....

5–5 ತಾ (ಕ),

I –

ರುದ್ರ ಮುಖದಲ್ಲಿ–'ಬ್ರಾಹ್ಮಣೋಽಸ್ಯ ಮುಖಮಾಸೀತ್' ಎಂದು ಮಹಾಮಹೇಶ್ವರಮೂರ್ತಿಯ ಮುಖ ಕಮಲದಲ್ಲಿ ಶುದ್ಧ ಬ್ರಾಹ್ಮಣನಾದ ರುದ್ರಮೂರ್ತಿ ಪುಟ್ಟಿದನು. ವಿಷ್ಣುಭುಜದಲ್ಲಿ–"ಬಾಹೋ ಕ್ಷತ್ರೇರುದ್ಭವಃ" ಎಂದು ಮಹಾಮಹೇಶ್ವರಮೂರ್ತಿಯ ಭುಜಕಂಪನದಲ್ಲಿ ಶುದ್ಧ ಕ್ಷತ್ರಿಯನಾದ ನಾರಾಯಣ ಪುಟ್ಟಿದನು. ಜಂಘೆಯಲ್ಲಿ "ಅಜನ ಜನನವೋ–ಉರ್‍ವ್ಯೋಽಸ್ಯ ವೈಶ್ಯ ಇತ್ಯಾಹು" ಎಂದು ಮಹಾಮಹೇಶ್ವರಮೂರ್ತಿಯ ಕಿರುದೊಡೆಯಲ್ಲಿ ಶುದ್ಧ ವೈಶ್ಯನಾದ ಬ್ರಹ್ಮಪುಟ್ಟಿದನು. ಇಂದ್ರ ಪಾದದಲ್ಲಿ– "ಪಾದಾತ್ ಶೂದ್ರೋ ವಿಜಾಯತೇ" ಎಂದು ಮಹಾಮಹೇಶ್ವರಮೂರ್ತಿಯ ಮೇಲು ಪಾದದಲ್ಲಿ ಶುದ್ಧ ಶೂದ್ರನಾದ ದೇವೇಂದ್ರ ಪುಟ್ಟಿದನು, ಚಂದ್ರ ಮನದಲ್ಲಿ "ಮನಸಶ್ಚಂದ್ರಃ ಜಾಯತೇ" ಎಂದು ಮಹಾಮಹೇಶ್ವರ ಮೂರ್ತಿಯ ಮನದಲ್ಲಿ ಚಂದ್ರಪುಟ್ಟಿದನು, ಚಕ್ಷುವಿನಲ್ಲಿ ಸೂರ್ಯ ಜನನವೋ–"ಚಕ್ಷೋಸ್ಸೂರ್ಯೋಽಪಿ ಜಾಯತೇ" ಎಂದು ಮಹಾಮಹೇಶ್ವರಮೂರ್ತಿಯ ನೇತ್ರದಲ್ಲಿ ಸೂರ್ಯ ಪುಟ್ಟಿದನು.

ನೊಸಲಲ್ಲಿ ಅಗ್ನಿ–"ಮುಖೇಂದ್ರಿಯೇಚಾಗ್ನಿಶ್ಚ" ಎಂದು ಮಹಾಮಹೇಶ್ವರಮೂತಿಯ ಫಣಿಯಲ್ಲಿ ಪಾವಕ ಪುಟ್ಟಿದನು. ಪ್ರಾಣದಲ್ಲಿ ವಾಯು–"ಪ್ರಾಣಾದ್ವಾಯುರ್ಜಾಯತೇ" ಎಂದು ಮಹಾಮಹೇಶ್ವರಮೂರ್ತಿಯ ಪ್ರಾಣ ಚೈತನ್ಯದಲ್ಲಿ ವಾಯು ಪುಟ್ಟಿದನು, ನಾಭಿಯಲ್ಲಿ ಅಂತರಿಕ್ಷ ಜನನವೋ– "ನಾಭ್ಯಾಮಾಸೀದಂತಕ್ಷಂ" ಎಂದು ಮಹಾಮಹೇಶ್ವರ ಮೂರ್ತಿಯ, ಪೊಕ್ಕುಳ ಸ್ಥಾನದಲ್ಲಿ ಆಕಾರಪುಟ್ಟಿತ್ತು. ಶಿರದಲ್ಲುದಯ ತೆತ್ತೀಸಕೊಟಿದೇವತೆಗಳು–"ವಿಷ್ಣುದೇವೋ ಸಮವರ್ತತೇ' ಎಂದು ಮಹಾಮಹೇಶ್ವರ ಮೂರ್ತಿಯು ಕಾಳಿಕಾ ಕೂಡೆ ನಾಟ್ಯವನಾಡುವಾಗ್ಗೆ ಶಿರಕಂಪನವೆಂದು ಮಸ್ತಕವನ್ನು ಝುಳಪಿಸಿ ದಪ್ಪಕ್ಕೆ ಮೂತ್ತೂಮೂರುಕೋಟಿ ದೇವತೆಗಳು ಪುಟ್ಟಿದರು. ಪಾ^ದತ^ಳದಲ್ಲಿ ಭೂಮಿಯ

ಜನನವೋ–"ಪದ್ಭ್ಯಾಂ ಭೂಮಿಃ" ಎಂದು ಮಹಾಮಹೇಶ್ವರಮೂರ್ತಿಯ ಅಡಿಪಾಯದಲ್ಲಿ ಪೃಥ್ವಿ ಪುಟ್ಟಿತ್ತು.

ಶ್ರೋತ್ರದಲ್ಲಿ ದಶದಿಕ್ಕುಗಳು–"ದಿಶಶ್ರ್ಯೋತ್ರಾತ್" ಎಂದು ಮಹಾಮಹೇಶ್ವರಮೂರ್ತಿಯ ಶ್ರೋತ್ರದಲ್ಲಿ ಇಂದ್ರಾದಿ ಹತ್ತು ದಿಕ್ಕುಗಳು ಪುಟ್ಟಿದವು, ಜಗವನಿಕ್ಷೇಪಿಸಿದ ಕುಕ್ಷಿಯಲ್ಲಿ–"ಪ್ರಜಾಪತಿಶ್ವರತಿಗರ್ಭೇ ಅಂತಃ" ಎಂದು ಮಹಾಮಹೇಶ್ವರಮೂರ್ತಿಯ ಗರ್ಭದಲ್ಲಿ ಜಗವ–ಈರೇಳು ಲೋಕಂಗಳನು, ನಿಕ್ಷೇಪಿಸಿದ–ಒಳಕೊಂಡ, ಅಕ್ಷಯ–ಕೇಡಿಲ್ಲದ, ಅಗಣಿತನು–ಗಣನಾತೀತನು. ಸಾಸಿರ ತಲೆ–ಸಾವಿರಮಸ್ತಕವನುಳ್ಳಾತನು, ಸಾಸಿರಕಣ್ಣು–ಸಾವಿರನಯನವುಳ್ಳಾತನು, ಸಾಸಿರ ಕೈ–ಸಾವಿರಹಸ್ತವುಳ್ಳಾತನು, ಸಾಸಿರಪಾದ–ಸಾವಿರ ಚರಣಗಳುಳ್ಳಾತನು, ಸಾವಿರಸನ್ನಿಹಿತ–ಸಾವಿರದೊಡನೆ ಕೂಡಿರ್ಪನು, ನಮ್ಮ ಕೂಡಲಸಂಗಮದೇವ–ನಮ್ಮ ಪರಶಿವ ಲಿಂಗವು.

....

೧–೧ ತಾ (ಕ),

IV –

1–1 ವು (ತ), 2–2 ಮುಖದಲ್ಲಿ ಅಗ್ನಿಯು (ತ), 3+ವು (ತ), 4–4 ವು (ತ), 6–6 X (ತ), 7–7 ಯ್ಯಾ (ತ).

....

ಉಪಮಿಸಬಾರದ ಅಖಂಡಚಿದ್ಬೆಳಗನುಳ್ಳ ಪೂರ್ಣಚೈತನ್ಯವೇ ಲಿಂಗಾಕಾರವಾಗಿರ್ದ ಆ ಲಿಂಗವು, ತಾನೇ ತನ್ನ ಸ್ವಲೀಲೆಯಿಂದ ಅಂಗಕರಚರಣಂಗಳಾಗಿ ಅನಂತ ಶಿರ ಅನಂತ ಚಕ್ಷು ಅನಂತಪಾದಂಗಳನುಳ್ಳ ಮೂರ್ತಿಯಾಯಿತ್ತು. ಅಂತಪ್ಪ ಪರಶಿವಮೂರ್ತಿಯ ಚಿತ್ಪ್ರಭಾಂಗದ ಚಿತ್ಪ್ರಭಾವಕೆ ಪ್ರಭಾವಿಸಿದ ಚಿತ್ಕಲಾಂಶವೇ ಅನಂತ ಮೂರ್ತಿಗಳಾಗಿ ಅನಂತ ಜೀವಕೋಟಿಗಳಾಗಿ ಅನಂತ ತತ್ವಂಗಳಾಗಿ ಅನಂತ ಬ್ರಹ್ಮಾಂಡಂಗಳೆಂಬ ಜಗವಾದವು. ಅಂಥ ಶಿವಾಂಶಿಕರಾದ ಆತ್ಮರು ಮೊದಲಾದ ಬ್ರಹ್ಮಾಂಡಂಗಳ ಆ ಪರಶಿವನು ತನ್ನ ಜಠರದಲ್ಲಿಯೇ ಇರಿಸಿಕೊಂಡು ರಕ್ಷಿಸುತ್ತಿಹನೆಂಬುದೀ ವಚನದ ತಾತ್ಪರ್ಯಾರ್ಥ.

೫೩೭

'ವಿಶ್ವಾಧಿಕೋ ರುದ್ರ'ನ ಹೊಗಳುವ ಶ್ರುತಿಗಳು 'ವಿಶ್ವರೂಪಾಯ ವೈ ನಮಃ' 'ಪರಮರೂಪನೇ ನಮೋ, ಪರತತ್ತ್ವನೆ ನಮೋ, ಆದಿಯಾರೂಢಭಯಂಕರನೆ ನಮೋ, ಹರಿಯನು ಹರಿಸಿದನೇ' ಎಂದು ಶ್ರುತಿಯು ಸಾರುತ್ತಿರಲು ಸಂಹಾರಕಾರಣನೆ ನಮೋ, ನಮ್ಮ ಕೂಡಲಸಂಗ೧ಮದೇವರ೧ ಮಹನ್ಮಹದ್ಭ್ಯೋ ನಮಃ

I –

ವಿಶ್ವಾಧಿಕೋ ರುದ್ರನ : ವಿಶ್ವ–ಜಗತ್ಯಕ್ಕೆ, ಅಧಿಕ–ಶ್ರೇಷ್ಠವಾದ, ರುದ್ರನ–ಪರಮೇಶ್ವರನ, ಹೊಗಳುವ–ಸ್ತೋತ್ರವ ಮಾಡುವ, ಶ್ರುತಿಗಳು–ವೇದವಾಕ್ಯಂಗಳು ಏನೆಂದು ಕೊಂಡಾಡುತಿರ್ದವಯ್ಯ ಸ್ವಾಮಿ? ಎಂದು ಬೆಸಗೊಂಡು ಕೇಳಿದರೆ, ವಿಶ್ವರೂಪಾಯ ವೈ ನಮಃ : [ವಿಶ್ವರೂಪಾಯ ವೈ–]

ಜಗತ್ಸ್ವರೂಪವಾದ ಪರಶಿವಲಿಂಗಕ್ಕೋಸುಗ, ನಮಃ-ನಮಸ್ಕಾರವೆಂದು ನಮಸ್ಕರಿಸುತ್ತಿಹವು, ಪರಮರೂಪನೆ ನಮೋಃ [ಪರಮರೂಪನೆ-] ಶ್ರೇಷ್ಠವಾದ ದೇವಂಗೋಸ್ಕರ, ನಮಃ-ನಮಸ್ಕಾರವೆಂದು ನಮಸ್ಕರಿಸುತ್ತಿಹವು. ಪರತತ್ತ್ವನೇ ನಮೋಃ [ಪರತತ್ತ್ವನೆ-] ಮೂವತ್ತಾರು ತತ್ತ್ವಂಗಳಿಗೆ ಉಪರಿಯಾಗಿ ತೋರಲ್ಪಟ್ಟಂಥ ದೇವಂಗೋಸ್ಕರ, ನಮಃ-ನಮಸ್ಕಾರವೆಂದು ನಮಸ್ಸರಿಸುತ್ತಿಹವು. ಆದಿಯಾರೂಢಭಯಂಕರನೆ ನಮೋಃ [ಆದಿಯ-] ತತ್ತ್ವ ಭುವನಬ್ರಹ್ಮಾಂಡಂಗಳಿಗೆ ಮೂಲಕಾರಣವಾದ ವೃಷಭೇಶ್ವರನ ಮೇಲೆ, ಆರೂಢ-ಹತ್ತಿಗೆಯನುಳ್ಳಂಥ. ಭಯಂಕರನೆ- ಜುಂಜುರದಲೆಗಳಿಂದ ಕೋರೆ ಮೀಸೆಗಳಿಂದ ಕೆಂಗಣ್ಣುಗಳಿಂದ ಕಿಡಿಗಳನು ಉಗುಳುತ್ತ ರಾಕ್ಷಸರುಗಳನು ಹೌವೆಂದು ಹೆದರಿಸುವ ಭಯಂಕರ ಸ್ವರೂಪನಾದಂಥ ದೇವಂಗೋಸ್ಕರ, ನಮೋ- ನಮಸ್ಕಾರವೆಂದು ನಮಸ್ಕರಿಸುತ್ತಿಹವು. ಹರಿಯನು-ನಾರಾಯಣನನು, ಹರಿಸಿದನೆಂದು- ಹತ್ತಾವತಾರದಲ್ಲಿ ತಂದು ಸಂಹರಿಸಿದನೆನುತ್ತ. ಶ್ರುತಿಯು-ವೇದವಾಕ್ಯಂಗಳು, ಸಾರುತ್ತಿರಲು- ಡಂಗುರಿಸುತ್ತಿರಲು, ಸಂಹಾರ ಕಾರಣನೆ ನಮೋಃ [ಸಂಹಾರಕಾರಣೆ-] ಸಂಹಾರಕೃತ್ಯಂಗಳನು ಉಂಟುಮಾಡಿಕೊಂಡು ವಿನೋದಿಸುವಂಥ ಪರಶಿವಲಿಂಗಕೋಸ್ಕರ, ನಮಃ-ನಮಸ್ಕಾರವೆಂದು ನಮಸ್ಕರಿಸುತ್ತಿಹವು, ನಮ್ಮ ಕೂಡಲಸಂಗಮದೇವರ-ನಮ್ಮ ಪರಶಿವಲಿಂಗವನು, ಮಹಾನ್- ಪೂಜ್ಯವಾದ[1], ಮಹದ್ದೋ-ಶ್ರೇಷ್ಠವಾದ ದೇವಂಗೋಸ್ಕರ, ನಮಃ-ನಮಸ್ಕಾರವೆಂದು ನಮಸ್ಕರಿಸುತ್ತಿಹವು.

....

೧+ ಮಹಾ-ಅಧಿಕವಾದ (ಕ).

IV -

1-1 x (ತ)

....

'ವಿಶ್ವಾಧಿಕೋ ರುದ್ರ'ನ ಹೊಗಳುವ ಶ್ರುತಿಗಳು 'ವಿಶ್ವರೂಪಾಯ ವೈ ನಮಃ' ಎಂದು ನಾನಾ ಶ್ರುತಿಗಳೆಲ್ಲಾ ಒಬ್ಬನಲ್ಲದೆ ಇಬ್ಬರಿಲ್ಲಾ ಎಂದು ಹೊಗಳುತ್ತಿಹವು. ಇದು ಸತ್ಯ ಸತ್ಯ, ಸತ್ಯವೆಂಬುದೀ ವಚನದರ್ಥ.

೫೩೮

ಐದು[1]ದೇ ಬ್ರಹ್ಮನ ಕಪಾಲ ಕರದಲ್ಲಿ ? ಐದು[1]ದೇ ವಿಷ್ಣುವಿನ ನಯನ ಶ್ರೀಚರಣದಲ್ಲಿ ? ಐದು[1]ದೇ ಕಾಮನ ಸುಟ್ಟ ಭಸ್ಮ ಮೈಯಲ್ಲಿ? [2]ಇದಕೆ[2] ಮುಖ ಮೂದಲೆಯೇಕಯ್ಯ ಕೂಡಲಸಂಗಮದೇವಾ.

1- -

ಐದುದೇ ಬ್ರಹ್ಮನ ಕಪಾಲ ಕರದಲ್ಲಿ ? : ಬ್ರಹ್ಮನ-ಅಜನ, ಕಪಾಲ-ತಲೆಯೋಡು, ಕರದಲ್ಲಿ- ಹಸ್ತದಲ್ಲಿ, ಐದುದೇ-ಕರಪಾತ್ರೆಯಾಗಿ ಇರೋದಿಲ್ಲವೆ? ಇರುತ್ತಿಹುದು. ಐದುದೇ ವಿಷ್ಣುವಿನ ನಯನ

ಶ್ರೀಚರಣದಲ್ಲಿ? : ವಿಷ್ಣುವಿನ–ನಾರಾಯಣನ, ನಯನ–ನೇತ್ರಕಮಲವು, ಶ್ರೀಚರಣದಲ್ಲಿ–ಕಾಂತಿವೆತ್ತ ಪದಕಮಲದಲ್ಲಿ, ಐದುದೇ–ಪೂಜ್ಯವಾಗಿ ಇರೋದಿಲ್ಲವೇ? ಇರುತ್ತಿಹುದು. ಐದುದೇ? ಕಾಮನ ಸುಟ್ಟ ಭಸ್ಮ ಮೈಯಲ್ಲಿ? : ಕಾಮನ–ಮನ್ಮಥನ, ಸುಟ್ಟ–ದಹಿಸಿದ, ಭಸ್ಮ–ವಿಭೂತಿಯು, ಐದುದೇ–ಸರ್ವಾಂಗದಲ್ಲಿ ಉದ್ಧೂಳನವಾಗಿ ಇರೋದಿಲ್ಲವೇ? ಇರುತ್ತಿಹುದು. ಇದಕೆ ಮುಖ ಮೂದಲೆಯೇಕಯ್ಯಾ–ದಷ್ಟನಿಗ್ರಹ ಶಿಷ್ಟಪ್ರತಿಪಾಲಕನೆಂಬುದವಂಥದು ಪರಶಿವಲಿಂಗದಮೂರ್ತಿ ವಿಗ್ರಹದಲ್ಲಿ ಕಾಣಬರುತ್ತಿರಲು ಶಿವನು ದೈವವಹುದೋ ಅಲ್ಲವೋ ಎಂಬಂಥ ಅನುಮಾನ ಏನುಕಾರಣಕ್ಕೆ? ಸಲ್ಲದಯ್ಯಾ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

IV –

೧+ ವು (ತ), ೨–೨ x (ತ)

....

ಶಿವನು ಅಹಂಕರಿಸಿದ ಬ್ರಹ್ಮನ ಶಿರವ ಚಿವುಟಿ ಕರದಲ್ಲಿ ಪಿಡಿದ, ಅಹಂಕರಿಸಿದ ಕಾಲಕಾಮರ ಸುಟ್ಟ ಬೂದಿಯನಿಟ್ಟನಾಗಿ, ಇದು ದುಷ್ಟನಿಗ್ರಹ: ಅಂತಲ್ಲದೆ ಶಿವನಪಾದಕ್ಕೆ ನಯನಪುಷ್ಪ ಮೊದಲಾದ ಪುಷ್ಪಂಗಳಿಂದ ಪೂಜಿಸಿದ ವಿಷ್ಣುವಿಂಗೆ ಶಂಖ ಚಕ್ರಂಗಳನಿತ್ತು ರಕ್ಷಿಸಿದನಾಗಿ, ಇದು ಶಿಷ್ಟಪರಿಪಾಲಕತ್ವ, ಇಂತು ದುಷ್ಟನಿಗ್ರಹ ಶಿಷ್ಟಪ್ರತಿಪಾಲಕನೆಂಬುವಂಥದು ಎಲ್ಲಾ ದೇವವಲ್ಲಭನಾದ ಶಿವನ ಮೂರ್ತಿಯಲ್ಲಿ ಕಾಣಬರುತ್ತಿರಲು, ಇತರ ಸಮಯದವರು ಸಂದೇಹಬಟ್ಟು ಕೆಡುವರೆಂಬುದೀ ವಚನದ ತಾತ್ಪರ್ಯಾರ್ಥ.

೫೭೯

ಹರನ ಕೊರಳಲ್ಲಿಪ್ಪ ಕರೋಟಿಮಾಲೆಯ ಶಿರದ ಲಿಖಿತವ ಕಂಡು ಮರುಳು ತಂಡಗಳು ಓದಿನೋ[1][ಡಿ][1], ಇವನಜ, ಇವ ಹರಿ, ಇವ ಸುರಪತಿ, ಇವ ಧರಣೇಂದ್ರ, ಇವನಂತಕನೆಂದು ಹರುಷದಿಂದ ಸರಸವಾ[2]ಡುವುದ[2]ಕಂಡು ಹರ ಮುಕುಳಿತನಾಗಿ[3] ನಕ್ಕ ನಮ್ಮ ಕೂಡಲಸಂಗಮದೇವ.

....

1–1 ಡಲು (ಕ, ಗ)

I –

ಹರನ ಕೊರಳಲ್ಲಿಪ್ಪ ಕರೋಟಿಮಾಲೆಯೆ : ಹರನು–ಪರಮೇಶ್ವರನು ಶ್ರೀಕೈಲಾಸದಲ್ಲಿ ನವರತ್ನ ಖಚಿತವಾದ ದಿವ್ಯಸಿಂಹಾಸನ ಪೀಠದ ಮೇಲೆ ಮೂರ್ತವ ಮಾಡಿಕೊಂಡು ನವಕೋಟಿ ಬ್ರಹ್ಮರು ದಶಕೋಟಿ ನಾರಾಯಣರು ಏಕಾದಶಕೋಟಿ ರುದ್ರರು ಮೂವತ್ತಮೂರು ಕೋಟಿ ದೇವತೆಗಳು ಅಷ್ಟಕೋಟಿ ನಾಗರ್ಕಳು ಅರವತ್ತಾರು ಕೋಟಿ ರಾಕ್ಷಸರು ಎಂಬತ್ತೆಂಟುಕೋಟಿ ಯಮಿಜನಂಗಳು ಅನಂತಕೋಟಿ ಗರುಡ ಗಂಧರ್ವರು ಸಿದ್ಧವಿದ್ಯಾಧರರು ಕಿನರರು ಕಿಂಪುರುಷರು ಗಂಗೆಯಮಳಲಿಗೆ ಸಮಾನವಾದ ರುದ್ರ ಗಣ ಪ್ರಮಥಗಣಂಗಳಿಂದ ಓಲೈಸಿಕೊಂಬುತ್ತಿದ್ದಲ್ಲಿ ಆ ಓಲಗವೆಲ್ಲ ಹರಿದುಹೋದಬಳಿಕ ಪರಮೇಶ್ವರನಿಗೆ ವೈರಾಗ್ಯ ತಲೆದೋರಿ ಸ್ಮಶಾನವಾಟಿಕೆಯಲ್ಲಿ ಮೂರ್ತವಮಾಡಿಕೊಂಡಿರ್ದಲ್ಲಿ ಒಂದು ಕೋಟಾನುಕೋಟಿ ಭೂತಗಣಂಗಳು ಬಂದು ಒಂದು

ಹಸ್ತವನೊತ್ತುತ್ತ ಒಂದು ಪಾದವನೊತ್ತುತ್ತ ಒಂದು ಜಡೆಸಿಕ್ಕನ್ನು ಬಿಡಿಸುವಂಥ ವೇಳೆಯಲ್ಲಿ, ಹರನ–ದುರಿತಧ್ವಂಸಿಯಾದ ಪರಮೇಶ್ವರನ, ಕೊರಳಲ್ಲಿಪ್ಪ–ಕಂಠಕದಲ್ಲಿರುವ, ಕರೋಟಿಮಾಲೆಯ–ರುಂಡಮಾಲೆಗಳ, ಶಿರದ ಲಿಖಿತವ–ಫಣಿಯ ಬರಹವನ್ನು, ಕಂಡು–ನೋಡಿ, ಮರುಳು ತಂಡಗಳು–ಭೂತಗಣಗಳು, ಓದಿ ನೋಡಲು–ಪಠಿಸಿ ನೋಡಲು, ಇವನಜ–ಇದು ಬ್ರಹ್ಮನ ತಲೆ ಯೋಡೆಂದು ಓದಿ ಎಡಕ್ಕೆ ಹಾಕಿಬಿಡುತ್ತಿಹವು. ಇವಹರಿ–ಎದು ನಾರಾಯಣನ ತಲೆಯೋಡೆಂದು ಓದಿ ಎಡಕ್ಕೆ ಹಾಕಿಬಿಡುತ್ತಿಹವು, ಇವ ಸುರಪತಿ–ಇದು ತಲೆಯೋಡೆಂದು ಓದಿ ಎಡಕ್ಕೆ ಹಾಕಿಬಿಡುತ್ತಿಹವು ಇವ ಧರಣೇಂದ್ರ–ಇದು ಮಹಾಶೇಷನ ತಲೆಂಯೋಡೆಂದು ಓದಿ ಎಡಕ್ಕೆ ಹಾಕಿಬಿಡುತ್ತಿಹವು, ಇವನಂತಕನೆಂದು–ಇದು ಯಮನ ತಲೆಯೋಡೆಂದು ಓದಿ ಎಡಕ್ಕೆ ಹಾಕಿಬಿಡುತ್ತಿಹವು, ಹರುಷದಿಂದ–ಸಂತೋಷದೊಡನೆ, ಸರಸವಾಡುವುದ ಕಂಡು–ನಗೆ ನುಡಿ ಸರಸ ಸಲ್ಲಾಪದಿಂದ ವಿನೋದಿಸುವಂಥದು ನೋಡಿ, ಹರ–ದುರಿತಧ್ವಂಸಿಯಾದಂಥ ಪರಮೇಶ್ವರನು, ಮುಕುಳಿತನಾಗಿ–ನಸುಗೆಯೊಡನೆ ಕೂಡಲ್ಪಟ್ಟಾತನಾಗಿ, ನಕ್ಕ–ಬಿರಿನಗೆಯೊಡನೆ ಕೂಡಿ ನಕ್ಕರೆ ಜಗ ಪ್ರಳಯವಾದೀತೆಂದು ನಸು ನಕ್ಕನು, ನಮ್ಮ ಕೂಡಲಸಂಗಮದೇವ–ನಮ್ಮ ಪರಶಿವಲಿಂಗವು.

IV –

1–1 ಡಲು (ತ), 2–2 ಡಿತ್ತ (ತ), 3 + ನಸು (ತ)

....

ಸಮಸ್ತ ದೇವತಾದಿಗಳ ಜಗ ಜನನ ಉತ್ಪತ್ತಿ ಸ್ಥಿತಿ ಲಯಗಳಿಗೆ ಶಿವನೇ ಕರ್ತನೆಂಬುದಕ್ಕೆ ಬ್ರಹ್ಮವಿಷ್ಣ್ವಾದಿಗಳ ಶಿರೋಮಾಲೆಯ ದೃಷ್ಟವೆಂಬುದೀ ವಚನದ ತಾತ್ಪರ್ಯಾರ್ಥ.

೫೪೦

[1]ಅದರಿದವು[1] ಪಾದಾಘಾತದಿಂದ ಧರೆ, ಬಿದರಿದವು ಮಕುಟ ತಾಗಿ ತಾರಕೆಗೆಳು. ಉದುರಿದವು ಕೈ ತಾಗಿ ಲೋಕಂಗಳೆಲ್ಲಾ. ಮಹೀಪಾದಾಘಾತದ್ವ್ರಜತಿ ಸಹಸಾ ಸಂಶಯ [2]ಪದಂ[2] । ಪದಂ ವಿಷ್ಣೋ ಭ್ರಾಮ್ಯದ್ಭುಜ ಪರಿಘರುಗ್ಣಗ್ರಹಗಣಂ॥ ಮುಹುರ್ದ್ಯೌರ್ದೌಸ್ಥ್ಯಂ ಯಾತ್ಯನಿಭೃತಜಟಾತಾಡಿತತಟಾ। ಜಗದ್ರಕ್ಷಾಯೈ ತ್ವಂ ನಟಿಸಿ, ನನು [3]ವಾಮ್ಯೈವ[3]ವಿಭುತಾ ॥ ನಮ್ಮ ಕೂಡಲಸಂಗಮದೇವನಿಂದು ನಾಂಟ್ಯವನಾಡೆ.

....

I –

ಪಾದಾಘಾತದಿಂದ–ನಿನ್ನ ಚರಣದ ತಾಡನದೆಸೆಯಿಂದೆ ಎಂಬಲ್ಲಿ ಅಂಧಕಾಸುರ ಜಲಂಧರಾಸುರ ಗಜಾಸುರನ ಎದೆಯಮೇಲೆ ನಿಂತುಕೊಂಡು ನರ್ತನವಾಡುವಾಗ, ಧರೆ–ಭೂಮಿಯು, ಅದರಿದವು–ಕೌದಿಝಾಡಿಸಿದೋಪಾದಿಯಲ್ಲಿ ಅಲ್ಲಾಡಿದವು. ಮಕುಟವಾಗಿ–ನವರತ್ನಖಚಿತವಾದ ನಿನ್ನ ಕಿರೀಟವನು ತಗುಲಿ, ಗಜಾಸುರ ಅಂಧಕಾಸುರ ಜಲಂಧರಾಸುರನ ಎದೆಯಮೇಲೆ ನಿಂತು ಕುಪ್ಪಳಿಸಿ ನಾಂಟ್ಯವನಾಡುವಾಗ, ತಾರಕೆಗಳು–ಅರುವತ್ತಾರುಕೋಟಿ ನಕ್ಷತ್ರಂಗಳು, ಬಿದರಿದವು–ಮಲ್ಲಿಗೆಪುಷ್ಪ ಚೆಲ್ಲಿದೋಪಾದಿಯಲ್ಲಿ

ಬಳಬಳನೆ ಉದರಿದವು. ಕೈತಾಗಿ–ನೀನು ತಿರಪಿಯನ್ನು ತಿರುಗುವಾಗ ಹಸ್ತಗಳು ತಗುಲಿ, ಲೋಕಂಗಳೆಲ್ಲ–ಅಷ್ಟ ದಿಕ್ಪಾಲಕರ ಪಟ್ಟಣಂಗಳಷ್ಟೂ, ಉದರಿದವು–ಒಂದು ಟೊಣ್ಣೆಯ ತೆಗದುಕೊಂಡು ನೆಲ್ಲಿಕಾಯಿಗೆ ಇಟ್ಟಲ್ಲಿ ಹೇಂಗೆ ಬಳಬಳನೆ ಉದುರತ್ತಿಹವೋ ಹಾಂಗೆ ಉದುರಿಬಿದ್ದವು.[೧]

ಹೇ ಈಶ–ಎಲೆ ಪರಮೇಶ್ವರನೆ ನಿನ್ನ, ಪಾದಾಘಾತಾತ್–ಚರಣತಾಡನ ದೆಸೆಯಿಂದ, ಮಹೀ–ಭೂಮಿಯು, ಸಹಸಾ–ಶೀಘ್ರವೆ, ಸಂಶಯಪದಂ–ಉಂಟಿಲ್ಲೆಂಬ ಸಂದೇಹ ಪದವನ್ನು, ವ್ರಜತಿ–ಐದುತ್ತಿಹುದು, ವಿಷ್ಣುಪದಂ–ಆಕಾಶವು, ಬ್ರಾಮ್ಯಧ್ಭುಜ ಪರಿಘರುಗ್ಣಗ್ರಹಣಂ:[ಬ್ರಾಮ್ಯದ್ಭುಜ ಪರಿಘ–] ತಿರುಗುತಿರ್ದ ಭುಜಗಳೆಂಬ ಲೌಡಿಗಳಿಂದ, ರುಗ್ಣ–ನೋಯಿಸಲ್ಪಟ್ಟ, [ಗ್ರಹಗಣಂ–] ಗ್ರಹಗಳ ಸಮೂಹ ವಾಗುಳ್ಳದು, ಅಭೂತ್–ಆಯಿತ್ತು, ಅನಿಭೃತ ಜಟಾತಾಡಿತ ತಟಾ–ಉರವಣಿಸುತಿರ್ದ ಜಡೆಗಳಿಂದ ಹೊಯಿಸಲ್ಪಟ್ಟ ಸಮೀಪ ಪ್ರದೇಶವನುಳ್ಳಂಥ, ದ್ಯೌ:–ಸ್ವರ್ಗವು, ಮುಹುಃ–ಅಡಿಗಡಿಗೆ, ದೌಸ್ಥ್ಯಂ–ನಿಲಲರಿಯದಿರುವದನ್ನು, ಯಾತಿ–ಐದುತ್ತಿಹುದು, ತ್ವಂ–ನೀನು, ಜಗದ್ರಕ್ಷಾಯೈ–ಲೋಕಂಗಳು ರಕ್ಷಿಸು ವದಕ್ಕೋಸುಗ, ನಟಸಿ–ನೃತ್ಯವ ನಾಟುತ್ತಿಹೆ, ವಿಭುತಾ–ಒಡೆಯತನವನ್ನೈದುವದು, ವಾಮ್ಯೈವನನು–ವಿಪರೀತವಾದುದೆ ಎಲ್ಲಾ, ಈ ಪರಿಯು ನೀನು ನಿಂದು ನಾಂಟ್ಯವನಾಡಲು ಲೋಕಂಗಳಿಗಿಷ್ಟು ದುಃಖವುಂಟಾಯಿತ್ತು, ನಮ್ಮ ಕೂಡಲಸಂಗಮದೇವ–ನಮ್ಮ ಪರಶಿವಲಿಂಗವು, ನಿಂದು–ಸ್ಥಿರವಾಗಿ, ನಾಂಟ್ಯವನಾಡೆ–ನೃತ್ಯವನಟಿಸಲು.

....

೧+ಮಹಿಪಾದಾಘಾತಾದ್ವ್ರಜತಿ ಸಹಸಾ ಸಂಶಯ ಪದಂ । ಪದಂ ವಿಷ್ಣೋರ್ಭ್ರಾಮ್ಯದ್ಭುಜ ಪರಿಗರುಗ್ಣಗ್ರಹಗಣ ॥ ಮುಹುರ್ದ್ಯೌರ್ದೌಸ್ಥ್ಯಂ ಯಾತ್ಯನಿಭೃತ ಜಟಾತಾಡಿತತಟಾ । ಜಗದ್ರಕ್ಷಾಯೈ ತ್ವಂ ನಟಸಿ ನನು ವಾಮ್ಯೈವ ವಿಭುತಾ ॥ ನಮ್ಮ ಕೂಡಲಸಂಗಮದೇವನಿಂದು ನಾಂಟ್ಯವನಾಡೆ (ಕ, ಗ).

II –

1–1 ಅದುರಿತು (ಚ, ಜ)

....

ಅದುರಿತು ಪಾದಾಘಾತದಿಂದ ಧರೆ–ಪರಮೇಶ್ವರನು ನಾಟ್ಯವನಾಡುವಲ್ಲಿ ಆತನ ಚರಣ ತಾಡನದಿಂದ ಭೂಮಿಯು ಅಲುಗಿ[೨]ತು[೨] ಬಿದಿರಿದವು ಮಕುಟತಾಗಿ ತಾರಕೆಗಳು–ಪರಮೇಶ್ವರನ ಕಿರೀಟ ತಗಲಿ ನಕ್ಷತ್ರಂಗಳು ಸಿಡಿದು ಬಿದ್ದವು. ಉದುರಿದವು ಕೈತಾಗಿ ಲೋಕಂಗಳೆಲ್ಲಾ–ಹಸ್ತ ತಗಲಿ ಚತುರ್ದಶ ಭುವನಂಗಳೆಲ್ಲ ಕಂಪನವಾದವು.

ಶಿಖರಿಣಿ ವೃತ್ತ ॥ ಭೋ ಈಶ–ಎಲೆ ಪರಮೇಶ್ವರನೆ, ಮಹೀ–ಭೂಮಿ, ಪಾದಾಘಾತಾತ್–ಚರಣ ತಾಡನದಿಂದ, ಸಹಸಾ–ಶೀಘ್ರವೇ, ಸಂಶಯ ಪದಂ–ಉಂಟಿಲ್ಲೆಂಬ ಸಂದೇಹ ಪದವನು, ವ್ರಜತಿ –ಎಯ್ದುತ್ತಿಹುದು. ವಿಷ್ಣೋಃಪದಂ–ಆಕಾಶ ಪದವು, ಬ್ರಾಮ್ಯದ್ಭುಜ ಪರಿಘರುಗ್ಣ ಗ್ರಹಗಣಂ–ತಿರುಗುತ್ತಿದ್ದ ಭುಜಂಗಳೆಂಬ ಲೌಡಿಗಳಿಂದಲೊರಸಲ್ಪಟ್ಟ ಗ್ರಹಸಮೂಹವನುಳ್ಳದು, ಅಭೂತ್–ಆಯಿತ್ತು. ಅನಿಭೃತ ಜಟಾತಾಡಿತತಟಾ ಉರವಣಿಸುತ್ತಿದ್ದ ಜಡೆಗಳಿಂದ ಹೊಡೆಯಲುಪಟ್ಟ ಸಮೀಪ

ಪ್ರವೇಶವನುಳ್ಳಂಥ, ದ್ಯೌಃ–ಸ್ವರ್ಗವು, ಮುಹುಃ–ಅಡಿಗಡಿಗೆ ದೌಃಸ್ಥಂ–ನಿಲಲರಿಯದಿಹಣವನು, ಯಾತಿ–ಎಯ್ದುತ್ತಿಹುದು. ತ್ವಂ–ನೀನು, ಜಗದ್ರಕ್ಷಾಯೈ–ಲೋಕರಕ್ಷಣೆಗೋಸ್ಕರ, ನಟಸಿ–ನೃತ್ಯವನಾಡುತಿಹೆ, ವಿಭುತಾ–ಒಡೆಯತನವು, ವಾಮ್ಯೈವನನು–ವಿಪರೀತವಾದುದೆಯಲ್ಲಾ ಎಂದುದಾಗಿ–ಹೀಗೆಂದು ಹೇಳಿತ್ತಾಗಿ ನಮ್ಮ ಕೂಡಲಸಂಗಮ ದೇವನಿಂದು ನಾಟ್ಯವನಾಡೆ–ನಮ್ಮ ಸಂಬಂಧವಾದ ಪರಶಿವಲಿಂಗವು ಕಾಲೂರಿ ನೆಲಸಿ ನಟಿಸಲಾಗಿ ಜಗತ್ತಿಗೆ ಹಗೆಯಾಗಿಪ್ಪುದು.

....

೧–೧ ಅದುರಿತು (ಚ, ಜ)

III –

ವಿಭುತಾ–ವ್ಯಾಪಕಶೀಲನಾದ ಎಲೆ ಪರಶಿವನೆ, [೨][ತ್ವಂ–][೨] ನೀನು, ಏವ–ಈ ಪ್ರಕಾರದಿಂದೆ, ಜಗತ್–ಲೋಕಗಳ, ರಕ್ಷಾಯೈ[೪]–ರಕ್ಷಿಸಲೋಸ್ಕರ, ನಟಿಸಿ ನನುವಾಂ–ನರ್ತನವಾಡುತ್ತಿರಲಾಗಿ, ಸಹಸಾ–ಪರಾಕ್ರಮದ, ಪಾದ–ಚರಣಗಳ, ಘಾತಾತ್–ಸಂಘಟ್ಟನದ ದೆಸೆಯಿಂದ, ಮಹೀ–ಭೂಮಿಯು, ಸಂಶಯ ಪದಂ–ಸಂಕಲ್ಪ ಸ್ಥಲವನು; ಮತ್ತಂ ಉಂಟೋ ಇಲ್ಲವೋ ಎಂಬುದನ್ನು, ವ್ರಜತಿ–ಎಯ್ದುತ್ತು, ವಿಷ್ಣೋ: ಪದಂ –ಆಕಾಶ ಸ್ಥಲದಲ್ಲಿ, ಭ್ರಾಮ್ಯತ್–ತಿರುಗಲ್ತಕ್ಕ, ಭುಜ–ಬಾಹುಗಳೆಂಬ, ಪರಿಘ–ಡೊಣ್ಣೆಗಳಿಂದೆ, ರುಗ್ಣ–ಮುರಿಯಲ್ತಕ್ಕ, ಗ್ರಹಗಣಂ–ನವಗ್ರಹಂಗಳ ಸಮೂಹನುಳ್ಳಂಥ, ಅನಿಭೃತ–ಎಲ್ಲಾಗಳುದುರಿಸಲ್ಪಟ್ಟ, ಜಟಾ–ಜಡೆಗಳ, ತಾಡಿತ–ಹೊಡೆತದ, ತಟ–ಅರಗಿನಿಂದೆ, ಮುಹ:–ಹೆಜ್ಜೆ ಹೆಜ್ಜೆಗೆ, ದ್ಯೌಃ–ಸ್ವರ್ಗವು, ದೌಃಸ್ಥ್ಯಂ–ದುಸ್ಥಿತಿ ಯನು, ಯಾತಿ–ಎಯ್ದಿತ್ತು.

....

೨–೨ X(ಟ), ೪+ ತ್ವಂ (ಟ, ಡ).

IV –

ಏ ಈಶ–ಎಲೆ ಪರಮೇಶ್ವರ ನೀನೆ, ಮಹಿ–ಭೂಮಿ, ಪದಾಘಾತಾತ್–ಚರಣತಾಡನದಿಂದ, ಸಹಸಾ–ಶೀಘ್ರವೆ, ಸಂಶಯ ಪದಂ–ಉಂಟಿಲ್ಲವೆಂಬ ಸಂದೇಶ ಪದವನು, ವ್ರಜತಿ–ಎಯ್ದುತ್ತಿಹುದು, ವಿಷ್ಣೋಃ ಪದಂ–ಆಕಾಶವು, ಭ್ರಾಮ್ಯತ್–ತಿರುಗುತ್ತಿರ್ದ, ಭುಜ–ಭುಜಂಗಳೆಂಬ, [೫][ಪರಿಘ][೫] ತಾಡಿಗಳಿಂದ, [೬]ರುಗ್ಣ–ನೋಯಿಸಲ್ಪಟ್ಟ, ಗ್ರಹಗಣಂ–ಗ್ರಹಂಗಳ ಸಮೂಹವನುಳ್ಳುದು, ಅಭೂತ್–ಆಯಿತ್ತು. ಅನಿಭೃತ–ಉರುವಣಿಸುತ್ತಿರ್ದ, ಹಣವನು, ಯಾತಿ–ಐದುತ್ತಿಹುದು, ತ್ವಂ–ನೀನು, ಜಗದ್ರಕ್ಷಾಯೈ–ಲೋಕಂಗಳ ರಕ್ಷಿಸುವುದಕ್ಕೋಸುಗ, ನಟಸಿ–ನೃತ್ಯವನಾಡುತ್ತಿಹೆ, ವಿಭುತಾ–ಒಡೆತನವು, ವಾಮ್ಯೈವನನು–ವಿಪರೀತವಾದುದೆಯಲಾ, ಈ ವಚನದರ್ಥ ಈ ಶ್ರುತಿಯಲ್ಲಿ ಕಾಣಲಾಯಿತ್ತೆಂಬುದರ್ಥ.

....

೫+೫ X(ತ), ೬+ಪರಿಘ(ತ)

I –

ವಿಭುತಾ–ವ್ಯಾಪಕನಾದ ಎಲೆ ಪರಶಿವನೆ, ಏವ–ಈ ಪ್ರಕಾರದಿಂದೆ, ಜಗತ್–ಲೋಕವನು, ರಕ್ಷಾಯೈ–ರಕ್ಷಿಸಲೋಸ್ಕರ, ತ್ವಂ–ನೀನು, ನಟಸಿ–ನರ್ತನವಾಡುತಿರ್ದಪೆ, ವಿಭುತಾ–ಒಡೆತನವು,

ವಾಮ್ಯೆವನನು–ವಕ್ರವೆಯಲಾ, ಸಹಸಾ–ಶೀಘ್ರವಾಗಿ, ಪಾದ–ಚರಣಗಳ, ಅಘಾತಾತ್–ಸಂಘಟ್ಟಿನದ ದೆಸೆಯಿಂದೆ, ಮಹೀ–ಭೂಮಿಯು, ಸಂಶಯ ಪದಂ–ಸಂಕಲ್ಪಸ್ಥಲವುಂಟೋ ಇಲ್ಲವೋಯೆಂಬ ಸಂಶಯ ಸ್ವರೂಪವನು, ವ್ರಜತಿ–ಎಯ್ದುತ್ತಿರ್ದಪುದು, ವಿಷ್ಣೋಃ ಪದಂ–ಆಕಾಶವು, ಭ್ರಾಮ್ಯದ್–ತಿರುಗಲ್ಪಟ್ಟುದಾಗಿ, ಭುಜ–ಬಾಹುಗಳೆಂಬ, ಪರಿಘ–ಲೋಡಿಗಳಿಂದ, ರುಗ್ಣ–ಮುರಿಯಿತ್ತು, ಗ್ರಹಗಣಂ–ನವಗ್ರಹಂಗಳ ಸಮೂಹವು[೨] ಅನಿಭೃತಾ–ಎಲ್ಲಾಗಳು, ಜಟಾ–ಜಡೆಗಳಿಂದೆ, ತಾಡಿತ–ಹೊಡೆಯಲ್ಪಟ, ತಟಾ–ಅ[೮][ರಗಿ][೮]ನಿಂದೆ, ಮುಹುಃ–ಹೆಜ್ಜೆ ಹೆಜ್ಜೆಗೆ, ದ್ಯೌಃ–ಸ್ವರ್ಗವು, ದೌಸ್ಥ್ಯಂ–ದುಸ್ಥಿತಿಯ ಹತನವನು, ಯಾತಿ–ಎಯ್ದುತ್ತಿರ್ದಪುದು.

....

೭ ರುಗ್ಣ–ಮುರಿಯಿತ್ತು (ಪ) ೮+೮ ತಿ (ಪ).

೫೪೧

ಆಱು ಕೋಟಿ ಬ್ರಹ್ಮರು ಮಡಿವಲ್ಲಿ ನಾರಾಯಣಂಗೊಂದು ದಿವಸವಾಯಿತ್ತು. ನಾರಾಯಣರೊಂದು ಕೋಟಿ ಮಡಿವಲ್ಲಿ ರುದ್ರನ ಕಣ್ಣೆವೆ ಹಳಚಿತ್ತು. ಅಂಥ ರುದ್ರಾವತಾರ ಹಲವಳಿವಲ್ಲಿ ನಮ್ಮ ಕೂಡಲಸಂಗಮದೇವನೇನೆಂದು ಅಱಿಯೆ.

I –

ಆಱು ಕೋಟಿ ಬ್ರಹ್ಮರು–ಆರು ಕೋಟಿ ಅಜರುಗಳು, ಮಡಿವಲ್ಲಿ–ಮರಣವಾಗುವಲ್ಲಿ, ನಾರಾಯಣಂಗೆ–ಶ್ಯಾಮವರ್ಣವನುಳ್ಳ ವಿಷ್ಣುವಿಂಗೆ, ಒಂದು ದಿವಸವಾಯಿತ್ತು–ಹಗಲು ಇರುಳು ಕೂಡಿದರೆ ಒಂದು ದಿನ, ಅಂತಪ್ಪುದೊಂದು ದಿವಸ ಉಂಟಾಯಿತ್ತು; ನಾರಾಯಣರೊಂದು ಕೋಟಿ ಮಡಿವಲ್ಲಿ–ಅಂಥ ವಿಷ್ಣುವರೊಂದು ಕೋಟಿ ಮಡಿವಲ್ಲಿ, ರುದ್ರನಕಣ್ಣೆವೆ ಹಳಚಿತ್ತು–ರುದ್ರಮೂರ್ತಿಯು ಮುಚ್ಚಿದ ಕಣ್ಣುತೆರದೋಪಾದಿಯಲ್ಲಿ ತೆರೆದಿರ್ಪುದು, ಅಂಥ ರುದ್ರಾವತಾರ ಹಲವಳಿವಲ್ಲಿ–ರುದ್ರಮೂರ್ತಿಗಳು ಹಲಕೆಲವು ನಿಃಪತಿಯಾಗುವಲ್ಲಿ, ನಮ್ಮ ಕೂಡಲಸಂಗಮದೇವನು–ನಮ್ಮ ಪರಶಿವಲಿಂಗವು, ಏನೆಂದಱಿಯ–ಇವು ಮೊದಲಾದ ದಿನಕಾಲ ಕಲ್ಪಿತಂಗಳ ತಿಳಿಯನು.

೫೪೨

ಯುಗ ಜುಗ ಪ್ರಳಯ [1]ವಾದಂದು[1] ಕಾಣೆ, [2]ಇಂ[2]ದು ಕಾಣೆ! [3]ಧಿ[3]ಗಿಲು ಭುಗಿಲೆಂದು ಅರಿವಂದು ಕಾಣೆ, ಇಂದು ಕಾಣೆ! [4]ನಮ್ಮ[4]ಕೂಡಲಸಂಗಮದೇವನಲ್ಲದೆ ತಲೆದೋಱುವ ದೈವಂಗಳ[2]ನಂದು[2] ಕಾಣೆ, ಇಂದು ಕಾಣೆ.

I– –

ಯುಗ–ನಾಲ್ಕು ಯುಗಂಗಳು, ಜುಗ–ಆ ನಾಲ್ಕು ಯಗಂಗಳು ಹದಿನೆಂಟು ವೇಳೆ ಮರಳಿ, ಮರಳಿ ಬಂದರೆ ಒಂದು ಜುಗವೆನಿಸಿಕೊಂಬುವದು. ಅಂತಪ್ಪಾಯುಗ ಜುಗ ದಿನಕಾಲಕಲ್ಪಿತಂಗಳು, ಪ್ರಳಯವಾದಂದು–ಮರಣವಾಗಿ ಹೋಗುವಾಗ, ಕಾಣೆ–ಪರಶಿವಲಿಂಗದೇವನೋರ್ವನೆ

ನಿತ್ಯನಾಗಿಪ್ಪನಲ್ಲದೆ ಮತ್ತೊಂದು ದೈವವ ಕಂಡುದಿಲ್ಲವು, ಇಂದು ಕಾಣೆ-ಇವರಿಗೆ ಬಂದಂಥ ಎಡರು ಕಂಟಕ ವಿಘ್ನಾದಿಗಳನು ಪರಿಹರಿಸಿ ಇಷ್ಟಾರ್ಥಸಿದ್ಧಿಯನ್ನು ಕರುಣಿಸಿಕೊಡುವಂಥ ಪರಶಿವಲಿಂಗವು ಓರ್ವನೆ ನಿತ್ಯನಾಗಿಪ್ಪನಲ್ಲದೆ ಒಂದು ದೈವವ ಕಂಡುದಿಲ್ಲವು. ಧಿಗಿಲು ಭುಗಿಲೆಂದುರಿವಂದು-ಧಿಗಲ್ ಭುಗಿಲ್ ಛಟಲ್ ಛಟಲ್ ಧಳಧಳಾಯೆಂದು ಪ್ರಭಾವಿಸುವದು, ಕಾಣೆ-ನಿತ್ಯವಾಗಿರ್ದಂಥ ಪರಶಿವಲಿಂಗವೆ. ದೈವವೆಂದು ತಿಳಿದಿಪ್ಪನಲ್ಲದೆ ಮತ್ತೊಂದು ದೈವವನ್ನು ಕಂಡುದಿಲ್ಲವು. ಇಂದು ಕಾಣೆ-ಇವರಿಗೆ ಬಂದಂಥ ಎಡರು ಕಂಟಕ ವಿಘ್ನಾದಿಗಳನು ಪರಿಹರಿಸಿ ಇಷ್ಟಾರ್ಥ ಸಿದ್ಧಿಯನ್ನು ಕರುಣಿಸಿಕೊಡುವಂದು ನಿತ್ಯವಾಗಿರ್ದಂಥ ಪರಶಿವಲಿಂಗವು ಓರ್ವನೆ ದೈವವೆಂದು ತಿಳಿದಿಪ್ಪೆನಲ್ಲದೆ ಮತ್ತೊಂದು ದೈವವುಂಟೆಂಬಂಥದು ತಿಳಿಯನು. ನಮ್ಮ ಕೂಡಲಸಂಗಮದೇವನಲ್ಲದೆ- ನಮ್ಮ ಪರಶಿವಲಿಂಗವಲ್ಲದೆ, ತಲೆದೋಱುವ -ಕುರುಹುಗಾಣಿಸುವ, ದೈವಂಗಳನು-ದೈವವನು, ಅಂದುಕಾಣೆ_ಅ ಕಾಲದಲ್ಲಿ ಅವರಿಗೆ ಬಂದಂಥ ಎಡರು ಕಂಟಕ ವಿಘ್ನಾದಿಗಳನು ಪರಿಹರಿಸಿ ಇಷ್ಟಾರ್ಥಸಿದ್ಧಿಯನ್ನು ಕರುಣಿಸಿ ಕೊಡುವಂಥ ಪರಶಿವಲಿಂಗವು ಓರ್ವನೇ ನಿತ್ಯನಾಗಿಪ್ಪನಲ್ಲದೆ ತಲೆದೋರುವ ಮತ್ತೊಂದು ದೈವವನು ಕಂಡುದಿಲ್ಲವು, ಇಂದು ಕಾಣೆ-ಈ ಕಾಲದಲ್ಲಿ ಇವರಿಗೆ ಬಂದಂಥ ಎಡರು ಕಂಟಕ ವಿಘ್ನಾದಿಗಳನು ಪರಿಹರಿಸಿ ಇಷ್ಟಾರ್ಥಸಿದ್ಧಿಯನ್ನು ಕರುಣಿಸಿಕೊಡುವಂಥ ಪರಶಿವಲಿಂಗವು ಓರ್ವನೆ ನಿತ್ಯನಾಗಿಪ್ಪನಲ್ಲದೆ ತಲೆದೋರುವ ಮತ್ತೊಂದು ದೈವವನು ಕಂಡುದಿಲ್ಲವು.

IV- -

1-1 ವಹಂದೂ (ತ), 2-2 ನೆ (ತ), 3-3 ಥ (ತ), 4-4 x (ತ).

....

ನಾನಾ ದೇವತೆಗಳು ಕಾಲದಲೆ ಹುಟ್ಟಿ ಕಾಲದಲೆ ಅಳಿದರು, ಶಿವನು ನಿತ್ಯನಾಗಿ ತಾನು ಕಾಲಂಗಳ ಮಾಡಿ ಮಾಡಿ ಕೆಡಿಸುತ್ತಿಹನೆಂಬುದೀ ವಚನದರ್ಥ.

೫೪೩

ಒಬ್ಬ ಕೆಂಚ, ಒಬ್ಬ ಕರಿಕ, ಒಬ್ಬ ಶುದ್ಧ ಧವಳಿತನೆಂತಯ್ಯ ಲಿಂಗವೆ? ಒಬ್ಬರಿಗೊಬ್ಬರು ಘನವೆಂಬರು; ಅದೆಂತಯ್ಯ? ಒಬ್ಬರಿಗೊಬ್ಬರು ಕಿರಿದೆಂಬರು; ಅದೆಂತಯ್ಯ ? ಬ್ರಹ್ಮಂಗೆ ಪ್ರಳಯ, ವಿಷ್ಣುವಿಂಗೆ ಮರಣ ಉಂಟು, ನಮ್ಮ ಕೂಡಲಸಂಗಮದೇವಂಗಿಲ್ಲ.

I -

ಒಬ್ಬ ಕೆಂಚ-ಒಬ್ಬ ಕೆಂಪನ್ನ ಶರೀರವುಳ್ಳ ಬ್ರಹ್ಮನು, ಒಬ್ಬ ಕರಿಕ-ಒಬ್ಬ ಕಪ್ಪನ್ನ ಶರೀರವುಳ್ಳ ನಾರಾಯಣನು, ಒಬ್ಬ ಶುದ್ಧ ಧವಳಿತ-[ಒಬ್ಬ] ಧವಲಾಂಗವನುಳ್ಳ ರುದ್ರಮೂರ್ತಿಯು, ಎಂತಯ್ಯಾ-ಹೇಂಗಯ್ಯ, ಲಿಂಗವೆ-ಎಲೆ ಪರಶಿವಲಿಂಗವೆ, ಒಬ್ಬರಿಗೊಬ್ಬರು ಘನವೆಂಬರು-ಬ್ರಹ್ಮ ಪೂಜಕರು ಬ್ರಹ್ಮನೇ ದೊಡ್ಡವನೆಂದು ಹೇಳುವರು. ವಿಷ್ಣು ಪೂಜಕರು ವಿಷ್ಣುವೇ ದೊಡ್ಡವನೆಂದು ಹೇಳುವರು. ರುದ್ರಪೂಜಕರು ರುದ್ರನೇ ಘನವೆಂದು ಹೇಳುವರು : ಅದೆಂತಯ್ಯ?-ಅದು ಹೇಂಗಯ್ಯ? ಒಬ್ಬರಿಗೊಬ್ಬರು ಕಿರಿದೆಂಬರು-ಬ್ರಹ್ಮನ ಪೂಜಿಸುವವರು ವಿಷ್ಣುವಿನ ಸಾಮಾನ್ಯವೆಂದು ಹೇಳುವರು.

ವಿಷ್ಣುವಿನ ಪೂಜಿಸುವರು ಬ್ರಹ್ಮನೆ ಸಾಮಾನ್ಯವೆಂದು ಹೇಳುವರು. ರುದ್ರನ ಪೂಜಿಸುವವರು ಬ್ರಹ್ಮವಿಷ್ಣುಗಳ ಸಾಮಾನ್ಯನೆಂದು ಹೇಳುವರು. ಅದೆಂತಯ್ಯ ?–ಅದು ಹೇಂಗಯ್ಯ, ಬ್ರಹ್ಮಂಗೆ–ಅಜನಿಗೆ, ಪ್ರಳಯವುಂಟು–ಅಗ್ನಿಪ್ರಳಯ ಜಲಪ್ರಳಯ ವಡಬಪ್ರಳಯ ಶಕ್ತಿಪ್ರಳಯಂಗಳುಂಟಾಗಿರ್ಪವು. ವಿಷ್ಣುವಿಂಗೆ–ನಾರಾಯಣಂಗೆ, ಮರಣವುಂಟು–ದಶಾವತಾರದಲ್ಲಿ [ಹುಟ್ಟಿ ಹುಟ್ಟಿ] ಬಂದು ಸತ್ತುಹೋಗುವುದುಂಟಾಗಿರ್ಪುದು, ನಮ್ಮ ಕೂಡಲಸಂಗಮದೇವಂಗೆ–ನಮ್ಮ ಪರಶಿವಲಿಂಗಕ್ಕೆ ಇಲ್ಲ–ಜನನಮರಣಂಗಳುಂಟಾಗಿಲ್ಲವು.

೫೪೪

ಹರಿಹರನ ಒಂದೇಯೆಂದಡೆ, ಸುರಿಯವೆ ಬಾಯಲ್ಲಿ ಬಾಲಹುಳುಗಳು? ಹರಿಗೆ ಹತ್ತು ಪ್ರಳಯ, ಬ್ರಹ್ಮಂಗೆ ಅನಂತ ಪ್ರಳಯ; ಹರಂಗೆ ಪ್ರಳಯವುಂಟೆಂಬುದ ಬಲ್ಲಡೆ ನೀವು ಹೇಳಿರೋ? ಪ್ರಳಯ ಮಹಾಪ್ರಳಯವಾದಂದಂದಿಗೆ ಹಳೆಯ ನಮ್ಮ ಕೂಡಲ ಸಂಗಮದೇವ.

I -

ಹರಿ ಹರ ಒಂದೇಯೆಂದಡೆ ಸುರಿಯವೆ ಬಾಯಲ್ಲಿ ಬಾಲಹುಳುಗಳು?: ಹರಿ–ನಾರಾಯಣನು, ಹರ–ದುರಿತಧ್ವಂಸಿಯಾದಂಥ ಪರಮೇಶ್ವರನು, ಒಂದೇಯೆಂದಡೆ–ಒಂದೇ ಸಮಾನವೆಂದು ಹೇಳಿದರೆ, ಬಾಯಲ್ಲಿ–ಕದಳಿಕದಲ್ಲಿ, ಸುರಿಯವೆ ಬಾಲಹುಳುಗಳು–ಬಾವು ಬಗದಾಳ ರಣಹುಣ್ಣುಗಳಾಗಿ ಬಾಲ ಯುಕ್ತವಾದಂಥ ಕ್ರಿಮಿಗಳು ಪರಿತೋಷವಾಗದೆ? ಆಗುತ್ತಿಹವು. ಹರಿಗೆ ಹತ್ತುಪ್ರಳಯ–ನಾರಾಯಣನು ದಶಾವತಾರದಲ್ಲಿ ಹುಟ್ಟಿ, ಹುಟ್ಟಿ ಬಂದು ಸತ್ತು ಹೋಗುವಂಥ ಮರಣ ಉಂಟಾಗಿರ್ಪುದು, ಬ್ರಹ್ಮಂಗೆ–ಅಜಂಗೆ, ಅನಂತ ಪ್ರಳಯ–ಅಗ್ನಿಪ್ರಳಯ ಜಲಪ್ರಳಯ ವಡಬಪ್ರಳಯ ಶಕ್ತಿಪ್ರಳಯ ಮೊದಲಾದ ಅನಂತಪ್ರಳಯಂಗಳುಂಟಾಗಿರ್ಪುವು, ಹರಂಗೆ–ದುರಿತಧ್ವಂಸಿಯಾದಂಥ ಪರಮಾತ್ಮಂಗೆ, ಪ್ರಳಯ[ವುಂಟೆಂಬುದ–] ಅಗ್ನಿಪ್ರಳಯ ಜಲಪ್ರಳಯ ವಡಬಪ್ರಳಯ ಶಕ್ತಿಪ್ರಳಯ ಮೊದಲಾದ ಸಮಸ್ತ ಪ್ರಳಯಂಗಳುಂಟೆಂದು ಹೇಳುವಂಥದನು. ಬಲ್ಲರೆ–ಅರಿದು ಬಲ್ಲರೆ, ನೀವು ಹೇಳಿರೋ–ನೀವು ಹೇಳಿರೋ, ಪ್ರಳಯ ಮಹಾಪ್ರಳಯವಾದ_ಅಗ್ನಿಪ್ರಳಯ ಜಲಪ್ರಳಯ ವಡಬಪ್ರಳಯ ಶಕ್ತಿಪ್ರಳಯ ಮೊದಲಾದ ಅನಂತ ಪ್ರಳಯಂಗಳಾದ, ಅಂದಂದಿಗೆ, –ಆಯಾ ಕಾಲಕ್ಕೆ, ಹಳೆಯ–ಮೂಲಿಗನಾಗಿ ಕಾರಣಿಕನಾಗಿ ಒಪ್ಪುತ್ತಿಹನು, ನಮ್ಮ ಕೂಡಲಸಂಗಮದೇವಾ–ನಮ್ಮ ಪರಶಿವಲಿಂಗವು.

೫೪೫

ವಿಷ್ಣು ಕರ್ಮಿ ರುದ್ರ ನಿಃಕರ್ಮಿ: ಕ್ರಮವಜೆದೆ [1]ನುಡಿಯದಿರಿರೊ![1] ವೇದ ಶ್ರುತಿಗಳ ತಿಳಿಯಲಜೆಯದೆ ವಾದವ ಮಾಡುವರೆಲ್ಲ ಕೇಳಿ, ವಿಷ್ಣು ನಾನಾ ಯೋನಿಯಲ್ಲಿ ಬಾರದ ಭವಂಗಳಲ್ಲಿ ಬರುತ್ತಿಪ್ಪ; ರುದ್ರನಾವ ಯೋನಿಯಲ್ಲಿ [2]ಬಂದನೆಂಬುದ[2] [3]ಬಲ್ಲರೆ[3] ನೀವು ಹೇಳಿರೋ![4] [ಇದಂ ವಿಷ್ಣುರ್ವಿಚಕ್ರಮೇ ತ್ರೇಧಾನಿದದೇ ಪದಂ। ಸಮೂಳಹಮಸ್ಯ ಪಾಂಸುರೇ। ತ್ರೀಣಿ ಪದಾ ವಿಚಕ್ರಮೇ ವಿಷ್ಣುರ್ಗೋಽಪಾಽಲದಾಭ್ಯಃ। ಅತೋೀಧರ್ಮಾಣಿ ಧಾರಯನ್। ವಿಷ್ಣೋಃ ಕರ್ಮಾಣಿ ಪಶ್ಯತ'ಯತೋೀವ್ರತಾನಿ ಪಸ್ಪಶೇ॥ ಇಂದ್ರಸ್ಯಯುಜ್ಯಃ ಸಖಾ॥ ತದ್ವಿಷ್ಣೋಃ ಪರಮಂ ಪದಂ ಸದಾ ಪಶ್ಯಂತಿ ಸೂರಯಃ॥ ದಿವೀವ ಚಕ್ಷುರಾತತಂ॥ ತದ್ವಿ

ಪ್ರಾಸೋ ವಿಪನ್ಯವೋ ಜಾಗೃವಾಂ ಸಃ ಸಮಿಂಧತೇ। ವಿಷ್ಣೋರ್ಯತ್ವರಮಂ ಪದಂ॥[4]] ಎಂಬ ಶ್ರುತಿ ವಚನವ ತಿಳಿಯಿಂಭೋ! [5]ವ[5] ರ್ಮವನೆತ್ತಿ ನುಡಿದಲ್ಲದೆ ನಿಲ್ಲಿರಿ, ನಿಮ್ಮ ಕರ್ಮವು ಅತ್ಯತಿಷ್ಠದ್ದಶಾಂಗುಲದಿಂದತ್ತವೆ, ಕೂಡಲಸಂಗಮದೇವಾ.

....

4-4 ಓಂ ವಿಷ್ಣು ಕರ್ಮಾಣಿ ಪಶ್ಯತೋ ಯಥೋ ವ್ರತಾನಿ ಪಸ್ಪಶೇ ಇಂದ್ರಃ ಸಾಯುಜ್ಯಃ ॥ ಸಂಖ್ಯಾಸ್ತ್ರೀಣಿ ಪದವಿಚಕ್ರಮೆ॥ ವಿಷ್ಣು ಗೋಪಾಲದಾಭ್ಯಃ ಅಥೋ ಕರ್ಮಾಣಿ ಧಾರಯೇತ್ । ತದ್ವಿಪ್ಪಾಂಸೊ ಉಪನ್ಯಾವೋ । ಜಾಂಗ್ರುವಾಸಃ॥ ಸಂಮಿರದತೇ ವಿಷ್ಣುರ್ಯೋರ್ಕ್ ಪರಮಂ ಪದಮಂ: (ಕ, ಗ).

I –

ವಿಷ್ಣು ಕರ್ಮಿ: ವಿಷ್ಣು–ನಾರಾಯಣನು, ಕರ್ಮಿ–ಪುಣ್ಯಪಾಪಕ್ರಿಯೆಗಳುಳ್ಳಾತನು, ರುದ್ರ–ಪರಮೇಶ್ವರನು, ನಿಃಕರ್ಮಿ–ಪುಣ್ಯಪಾಪಕ್ರಿಯೆಗಳ ಪೊರ್ದುಗೆ ಇಲ್ಲದಾತನು, ಕ್ರಮವನರಿಯದೆ–ವಿಷ್ಣು ಕರ್ಮಿ ರುದ್ರ ನಿಃಕರ್ಮಿಯೆಂಬಂಥ ನಿಲುಕಡೆಯನ್ನು ತಿಳಿಯದೆ, ನುಡಿಯದಿರಿರೊ–ಹರಿಹರ ಒಂದೇ ಸಮಾನವೆಂದು ಹೇಳದಿರಿ ಭೋ, ವೇದಶ್ರುತಿಗಳ–ವೇದವಾಕ್ಯಂಗಳ, ತಿಳಿಯಲರಿಯದೆ–ಅರಿಯಲರಿಯದೆ, ವಾದವ ಮಾಡುವವರೆಲ್ಲ–ತರ್ಕವ ಮಾಡುವರೆಲ್ಲ, ಕೇಳಿ–ಆಲಿಸಿ, ವಿಷ್ಣು–ನಾರಾಯಣನು, ನಾನಾಯೋನಿಯಲ್ಲಿ–ಹಲವು ಪ್ರಕಾರವಾದ ಯೋನಿದ್ವಾರಂಗಳಲ್ಲಿ. ಬಾರದ ಭವಂಗಳಲ್ಲಿ ಬರುತಿರ್ಪ–ಎಲ್ಲ ಆತ್ಮರುಗಳು ಹುಟ್ಟಿ ಹುಟ್ಟಿ ಬರುವಂಥದೆ ಮನುಜಯೋನಿ ದೇವತಾಜನ್ಮ ಆಕಳ ಶರೀರ ಆದಲ್ಲದೆ, ಬಾರದ ಆರಾರು ಹುಟ್ಟಿ ಬರುವುದಕ್ಕೆ ಯೋಗ್ಯವಾಗದ ಭವಂಗಳಲ್ಲಿ ನಿಕೃಷ್ಟಯೋನಿದ್ವಾರಂಗಳಲ್ಲಿ ಹುಟ್ಟಿಬಂದು ಕೊರತೆಗೊಳಗಾಗುತಿರ್ಪನು, ರುದ್ರ–ಪರಮೇಶ್ವರನು, ಆವಯೋನಿಯಲ್ಲಿ ಬಂದನೆಂಬುದ ಬಲ್ಲರೆ–ಯಾವಯೋನಿದ್ವಾರದಲ್ಲಿ ಹುಟ್ಟಿಬಂದಾನೆಂಬಂಥದನು ತಿಳಿದಿದ್ದರೆ, ನೀವು ಹೇಳಿರೊ–ನೀವು ಹೇಳಿರೊ, ಶ್ರುತಿ–ಗುರುವಾಕ್ಯಕ್ಕೆ ಸದೃಶವಾಗಿ ಹರವಾಕ್ಯ ನಿರೂಪಿಸುತ್ತಿಹರು.

ಓಂ ವಿಷ್ಣು ಕರ್ಮ್ಯಣಿಃ ವಿಷ್ಣುನು ನಾರಾಯಣನು, ಕರ್ಮಾಣಿ–ಪುಣ್ಯಪಾಪಂಗಳ ಕ್ರಿಯೆಯುಳ್ಳಾತ–ಪಸ್ಯತಾ–ದೃಷ್ಟವಾದ, ಯಥೋ–ಆವು ದಾನೊಂದು, ವ್ರತಾನಿ–ವ್ರತಕ್ರಿಯೆಗಳನು, ವಿಚಕ್ರಮೇ–ಮಾಡಿ, ಪಸ್ಪಶೇ–ಪವಿತ್ರವಾದನು, ವಿಷ್ಣು–ನಾರಾಯಣನು, ಗೋಪಾಲದಾಭ್ಯಃ–ಗೋವುಗಳ ಪಾಲಿಸುವದರ ದೆಸೆಯಿಂದ, ಇಂದ್ರಃ ಸಾಯುಜ್ಯ ಸಂಖ್ಯಾ ಸ್ತ್ರೀಣಿ ಪದ: ಸಂಖ್ಯಾಸ್ತ್ರೀಣಿ ಪದ–ಮೂರು ಶಂಖ ಕೋಟಿ ವರುಷ ಪರಿಯಂತರ, ಇಂದ್ರಃ ಸಾಯುಜ್ಯಃ–ಇಂದ್ರ ಸಾಯುಜ್ಯ ಪದವಿಯನ್ನು ಕುರಿತು. ಅಥೋ–ಅಂತರಂಗದಲ್ಲಿ ಕರ್ಮಾಣಿ–ವ್ರತಕ್ರಿಯೆಗಳನು, ಧಾರಯೇತ್–ಧರಿಸಿದನು, ಓಂಕಾರ–ಪ್ರಣವಸ್ವರೂಪವಾದ ಪ್ರರಬ್ರಹ್ಮವು, ತತು–ಆ ವಿಷ್ಣುವಿಂಗೆ, ವಿಪ್ರಾಂಶೋ–ಬ್ರಾಹ್ಮಣನ ಆಕಾರದಿಂದೆ, ಉಪನ್ಯೇವೋ–ಉಪದೇಶವನ್ನು ಬೋಧಿಸುವುದಕ್ಕೋಸ್ಕರ, [ಜಾಗ್ರವಾಂ–] ಜಾಂಗ್ರುವಾಸವನ್ನು ಎಯ್ದಿದನು, ವಿಷ್ಣು–ನಾರಾಯಣನು, ಯಥಾ ಅವುದಾನೊಂದು, ಪರಾತ್ಪದಂ–ಶ್ರೇಷ್ಠ ಪದವಿಯನ್ನು ಹಡದುಕೊಂಡನು, ಎಂಬ–ಹೀಂಗೆಂದು ಹೇಳುವ, ಶ್ರುತಿ ವಚನವ–ವೇದವಾಕ್ಯವನ್ನು, ತಿಳಿಯಿಂಭೋ–ಅರಿಯಿರೆಲವೋ, ವರ್ಮವನೆತ್ತಿ ನುಡಿದಲ್ಲದೆ–ನಮ್ಮ ಕೂಡ ವಾದಿಸಿ ನಿಮ್ಮ ದೈವದ ಕ್ಷೀಣತ್ವವನ್ನು ಉಂಟುಮಾಡಿಕೊಂಡಲ್ಲದೆ, ನಿಲ್ಲಿರಿ–ಸುಮ್ಮನಾಗಲರಿಯಿರಿ. ನಿಮ್ಮ ಕರ್ಮವು–ನೀವು ಮಾಡಿದಂಥ

ಪಾಪವು ಅತ್ಯತಿಷ್ಠದ್ದಶಾಂಗುಲದಿಂದತ್ತತ್ತಲೆ-ಅರಿದೆನೆಂಬವರರುಪಿಂಗೆ ಹತ್ತಂಗುಲ ಪ್ರಮಾಣದಿಂದಾಚೆಗಾಚೆಗೆ ಮೀರಿ ತೋರುತ್ತಿಹನು, ಕೂಡಲಸಂಗಮದೇವ-ಪರಶಿವಲಿಂಗವು.

III -

ವಿಷ್ಣುಃ-ವಿಷ್ಣುವು, ಕರ್ಮಾಣಿ-ಪುಣ್ಯಪಾಪಗಳೆಂಬ ಕರ್ಮವುಳ್ಳವನಾಗಿ, ಸಂಖ್ಯಾಸ್ತ್ರೀಣಿ ಪದಂ-ಮೂವರುಷ ಪರಿಯಂತರ, ಯತ್-ಯಾವುದಾನೊಂದು, ಪಶ್ಯತಃ-ದೃಷ್ಟವಾದ, ವ್ರತಾನಿ-ವ್ರತಂಗಳನು, ವಿಚಕ್ರಮೇ-ಮಾಡಿ, ಗೋಪಾಲರಾಭ್ಯಃ-ಗೋವುಗಳ ಪಾಲಿಸುವ ದೆಸೆಯಿಂದೆ, ಸಃ-ಆ ವಿಷ್ಣುವು, ತಾಭ್ಯಃ-ಅ ವಿಷ್ಣುವಿನಿಂದ, ಅಥ-ಅನಂತರವು, ಕರ್ಮಾಣಿ ಧಾರಯಾತ್-ವ್ರತಕ್ರಿಯೆಗಳನು ಧರಿಸುವುದರ ದೆಸೆಯಿಂದ, ವಿಷ್ಣುಃ-ವಿಷ್ಣುವು, ಪಸ್ಪಶೇ-ಪವಿತ್ರವಾದನು, ಯತ್-ಅವುದಾನೊಂದು, ಪರಮಂ-ಉತ್ಕೃಷ್ಟವಾದ, ಇಂದ್ರಸಾಯುಜ್ಯಃ-ಕರ್ತೃತ್ವದೊಡನೆ ಕೂಡುವ, ಪದಂ-ಪದವನು, ಸಮಿಂಧತೇ-ಪಡೆವನೆಂದುದು, ಓಂ-ಓಂಕಾರವು, ತತ್-ಆ ವಿಷ್ಣುವಿಂಗೆ ಆ ಓಂಕಾರವೆಂಬ ಮಂತ್ರವು, ವಿಪ್ರಾಂಶೋ-ಬ್ರಾಹ್ಮಣತ್ವನೆಯ್ದಿ, ಉಪನ್ಯಾವೋ-ಉಪದೇಶವ ಹೇಳುವುದಕ್ಕೆ, ಜಾಂಗೃವಾ-ಎಯ್ದಿದನೆಂದು ಹೇಳುವುದು.

IV -

1-1 ನುಡಿವಿರೊ(ತ). 2-2 ಬಂದನೆಂದು (ತ). 3-3 x (ತ), 4-4 ವಿಷ್ಣುಃ ಕರ್ಮಾಣಿ ಪಶ್ಯತಯತೋ ವ್ರತಾನಿ ಪಸ್ಪಶೇ ಇಂದ್ರ ಸಾಯುಜ್ಯಃ ಸಂಖ್ಯಾ ಓಂ ಸ್ತ್ರೀಣಿ ಪದಂ ವಿಚಕ್ರಮೇ ವಿಷ್ಣೋರ್ಗೋಪಾಲದಭ್ಯಾಂ। ಅಥೋ ಕರ್ಮಾಣಿ ಧಾರಯೇತ್ ॥ ತದ್ ವಿಪ್ರಾಂಪೋ ಉಪನ್ಯವೋ ಜಾಂಗೃವಾ ಶಃ ಸಮಂಧತೇ । ವಿಷ್ಣೋರ್ಯತ್ಪರಮಂ ಪದಂ॥ (ತ), 5-5 ಮ (ತ).

....

ವಿಷ್ಣುಃ-ವಿಷ್ಣುವು, ಕರ್ಮಾಣಿ-ಪುಣ್ಯ ಪಾಪಂಗಳೆಂಬ ಕರ್ಮವುಳ್ಳವನಾಗಿ, ಸಂಖ್ಯಾಸ್ತ್ರೀಣಿ ಪದಂ-ಮೂರು ಸಂಖ್ಯೆ ಪರಿಯಂತರ, ಯತು-ಅವುದಾನೊಂದು, ಪಶ್ಯತ-ದೃಷ್ಟವಾದ, ವ್ರತಾನಿ-ವ್ರತಂಗಳನು, ವಿಚಕ್ರಮೇ-ಮಾಡಿ, ಗೋಪಾಲದಾಭ್ಯಃ-ಗೋವುಗಳ ಪಾಲಿಸುವ ದೆಸೆಯಿಂದ, ಸಃ-ಆ ಫಿಷ್ಣು, ತಾಭ್ಯಾಂಃ-ಅ ವಿಷ್ಣುವಿನಿಂದ, ಅಥಃ-ಅನಂತರವೂ, ಕರ್ಮಾಣಿ ಧಾರಯಾತ್-ವ್ರತಕ್ರೀಯನು ಧರಿಸುವದರ ದೆಸೆಯಿಂದ, ವಿಷ್ಣುಃ-ವಿಷ್ಣುವು, ಪಸ್ಪಶೇ-ಪವಿತ್ರವಾದನು, ಯತು-ಅವುದಾನೊಂದು, ಪರಮ-ಉತ್ಕೃಷ್ಟವಾದ, ಇಂದ್ರಸಾಯುಜ್ಯಃ-ಕರ್ತೃತ್ವವ ಕೊಡುವ, ಪದ-ಪದವನು, ಸಮಿಂಧತೇ-ಪಡೆದನೆಂದುದು, ಓಂ-ಓಂಕಾರವು, ತತ್-ಅ ವಿಷ್ಣುವಿಂಗೆ ಆ ಓಂಕಾರವೆಂಬ ಮಂತ್ರವು, ವಿಪ್ರಾಂಶೋ-ಬ್ರಾಹ್ಮಣತ್ವವನೈದಿ, ಉಪನ್ಯವೋ-ಉಪದೇಶವ ಹೇಳುವುದಕ್ಕೆ, ಜಾಂಗ್ರುವಾ-ಐದಿದನೆಂದು ಹೇಳುವುದು ಈ ವಚನದರ್ಥ, ಈ ಶ್ರುತಿಯಲ್ಲಿ ಕಾಣಲಾಯಿತ್ತಂಬುದರ್ಥ.

I -

4-4 ಓಂ ವಿಷ್ಣು ಃ ಕರ್ಮ್ಯಣಿ ಪಶ್ಯತೋಯದ್ವ್ರತಾನಿ ಪಸ್ಪಶೇಃ ಇಂದ್ರ ಸಾಯುಜ್ಯಃ ಸಖ್ಯಾಸ್ತ್ರೀಣಿ ಪದಂ-ವಿಚಕ್ರಮೆ ವಿಷ್ಣುರ್ಗೋಪಾಲದಾಭ್ಯಃ ಅಥಾ ಕರ್ಮಾಣಿ ಧಾರಯಾತ್ ತದ್ವಿಪ್ರಾಂಶೋವುಪನ್ಯಾವೊ ಜಾಂಗ್ರವಾಸಃ ಸಮಿಂಧತೆ ವಿಷ್ಣೋರ್ಯತ್ವರವಂ ಪದಂ (ಪ).

....

ವಿಷ್ಣುಃ–ವಿಷ್ಣುವು, ಕರ್ಮಾಣಿ–ಪುಣ್ಯಪಾಪಗಳೆಂಬ ಕರ್ಮವುಳ್ಳಾತನಾಗಿ, ಸಂಖ್ಯಾಸ್ತ್ರೀಣಿ ಪದಂ–ಮೂಱು ಸಂಖ್ಯೆ ಶಿವಪರ್ಯಂತರವು, ಯತ್–ಅವುದಾನೊಂದು, ಪಶ್ಯತಃ–ದೃಷ್ಟವಾದ, ವ್ರತಾನಿ–ವ್ರತಂಗಳನು, ವಿಚಕ್ರಮೆ–ಮಾಡಿ, ಗೋಪಾಲದಾಭ್ಯಃ–ಗೋವುಗಳ ಪಾಲಿಸುವ ದೆಸೆಯಿಂದೆ, ಸಃ–ಆ ಘಿಷ್ಣುವು, ತಾಭ್ಯಾಂಃ–ಅ ವಿಷ್ಣುವಿನಿಂದ, ಅಥಾ–ಅನಂತರವು, ಕರ್ಮಾಣಿ ಧಾರಯಾತ್–ವ್ರತಕ್ರಿಯೆಗಳನು ಧರಿಸುವುದರ ದೆಸೆಯಿಂದೆ, ವಿಷ್ಣುಃ–ವಿಷ್ಣುವು, ಪಸ್ವಶೇಃ–ಪವಿತ್ರವಾದನು, ಯತ್–ಅವುದಾನೊಂದು, ಪರಮಂ ಪದಂ : ಪರಮಂ–ಉತ್ಕೃಷ್ಟವಾದ, ಪದಂ–೧ಪದವನು೧, ಇಂದ್ರಸಾಯುಜ್ಯಃ–ಕರ್ತೃತ್ವವ ಕೊಡುವ, ಪದಂ–ಪದವನು, ಸಮಿಂದತೆ–ಪಡೆದನೆಂದುದು, ಓಂ–ಓಂಕಾರವು, ತತ್–ಆ ವಿಷ್ಣುವಿಂಗೆ, ಸಃ–ಆ ಓಂಕಾರವೆಂಬ ಮಂತ್ರವು, ವಿಪ್ರಾಂಶೊ–ಬ್ರಾಹ್ಮಣತ್ವವನೆಯ್ದಿದಿ, ಉಪನ್ಯಾವೋ–ಉಪದೇಶವ ಹೇಳುವುದಕ್ಕೆ, ಜಾಂಗ್ರವಾ–ಐದಿದನೆಂದು ಹೇಳುವರು, ವಿನಾ ಪಕ್ಷಿಣಾಷ್ಣವತಿ ಗಚ್ಛತೀತ ವಿಷ್ಣು –ಇತಿ ವಿಗ್ರಹಾರ್ಥ, ಈ ವಚನಾರ್ಥಂ.

....

೧–೧ x (ಪ).

೫೪೬

ಅಮೃತವತಿ ಸೋಮಶಂಭುವಿಂಗೆ ಹುಟ್ಟಿದಾತ ಇಂದ್ರ, ಸತ್ಯಋಷಿ ಜೇಷ್ಠಾದೇವಿಗೆ ಹುಟ್ಟಿದಾತ ಬ್ರಹ್ಮ. ವಸುದೇವ ದೇವಿಕಿಗೆ ಹುಟ್ಟಿದಾತ ವಿಷ್ಣು. ನಾಭಿರಾಜ ಮರುತಾದೇವಿಗೆ ಹುಟ್ಟಿದಾತನರುಹ. ಇವರೆಲ್ಲರು ಯೋನಿಜರೆಂಬುದ ತ್ರೈಜಗಬಲ್ಲುದು. ಉತ್ಪತ್ತಿ ಸ್ಥಿತಿ ಪ್ರಳಯಕ್ಕೆ ಹೊಱಗಾದ ನಮ್ಮ ಕೂಡಲಸಂಗಮದೇವಂಗೆ ಮಾತಾಪಿತರುಗಳುಳ್ಳಡೆ ನೀವು ಹೇಳಿರೋ!

I– –

ಅಮೃತವತಿ–ಅಮೃತವತಿಯೆಂಬ ಸ್ತ್ರೀಯಳಿಗೆ, ಸೋಮಶಂಭುವಿಂಗೆ–ಸೋಮಶಂಭುವೆಂಬ ಪುರಷನಿಗೆ, ಹುಟ್ಟಿದಾತ–ಉತ್ಪತ್ಯವಾದಾತನು, ಇಂದ್ರ–ದೇವೇಂದ್ರನು. ಸತ್ಯ ಋಷಿ–ಸತ್ಯ ಋಷಿಯೆಂಬ ಪುರುಷನಿಗೆ, ಜೇಷ್ಠಾದೇವಿಗೆ–ಜೇಷ್ಠಾದೇವಿಯೆಂಬ ಸ್ತ್ರೀಯಳಿಗೆ, ಹುಟ್ಟಿದಾತ–ತ್ಪತ್ಯವಾದತನು, ಬ್ರಹ್ಮ–ಅಜನು. ವಸುದೇವ–ವಸುದೇವನೆಂಬ ಪುರುಷನಿಗೆ, ದೇವಿಕಿಗೆ–ದೇವಕಿಯೆಂಬ ಸ್ತ್ರೀಯಳಿಗೆ, ಹುಟ್ಟಿದಾತ–ಉತ್ಪತ್ಯವಾದಾತನು, ವಿಷ್ಣು–ನಾರಾಯಣನು, ನಾಭಿರಾಜ–ನಾಭಿರಾಜನೆಂಬ ಪುರುಷನಿಗೆ, ಮರುತಾದೇವಿಗೆ–ಮರುತಾದೇವಿಯೆಂಬ ಸ್ತ್ರೀಯಳಿಗೆ, ಹುಟ್ಟಿದಾತ–ಉತ್ಪತ್ಯವಾದಾತನು. ಅರುಹ–ಜಿನ್ನನು. ಇವರೆಲ್ಲರು–ಹಿಂದೆ ಹೇಳಿದವರಷ್ಟೂ, ಯೋನಿಜರೆಂಬುದ–ಯೋನಿದ್ವಾರದಲ್ಲಿ ಹುಟ್ಟಲ್ಪಟ್ಟವರೆಂದು ಹೇಳಿವಂಥದನು, ತ್ರೈಜಗ ಬಲ್ಲುದು–ಸ್ವರ್ಗ ಮರ್ತ್ಯ ಪಾತಾಳವೆಂಬ ಮೂರುಲೋಕದಲ್ಲಿರುವಂಥ ದೇವದಾನದ ಮಾನವರುಗಳೆಲ್ಲರು ಅರಿದು ಬಲ್ಲರು, ಉತ್ಪತ್ಯ ಸ್ಥಿತಿ ಪ್ರಳಯಕ್ಕೆ–ಸೃಷ್ಟಿಸ್ಥಿತಿಸಂಹಾರಗಳಿಗೆ, ಹೂಱಗಾದ–ವಿಲಕ್ಷಣನಾದಂಥ, ನಮ್ಮ ಕೂಡಲಸಂಗಮದೇವಂಗೆ–ನಮ್ಮ ಪರಶಿವಲಿಂಗಕ್ಕೆ, ಮಾತಾಪಿತರುಗಳುಳ್ಳಡೆ–ಜನನಿ ಜನಕರುಗಳುಂಟಾಗಿದ್ದರೆ, ನೀವು ಹೇಳಿರೊ–ನೀವುಹೇಳಿರೊ.

೫೪೭

ಇಬ್ಬರು ಮೂವರು ದೇವರೆಂದು [1]ಉಬ್ಬುಬ್ಬಿ[1] ಮಾತನಾ[illegible]ಬ್ಬನೆ[2] ಕಾಣಿರೊ, [3]ಮೂವರೆಂಬುದು[3] ಹುಸಿ ನೋಡಾ! ಕೂಡಲಸಂಗಮದೇವನಲ್ಲದಿಲ್ಲವೆಂ[4]ದವು[4] ವೇದ.

I –

ಇಬ್ಬರು ಮೂವರು ದೇವರೆಂದು: ಇಬ್ಬರು–ಬ್ರಹ್ಮವಿಷ್ಣ್ವಾದಿಗಳೆಂಬೀರ್ವರು, ಮೂವರು–ಇಂದ್ರನೊಬ್ಬ ಬಂದು ಕೂಡಲು ಮೂವರಾದರು, ದೇವರೆಂದು–ಈ ಬ್ರಹ್ಮ ವಿಷ್ಣು ಇಂದ್ರರೆಂಬ ಮೂವರು ದೈವರುಗಳೆನುತ್ತ, ಉಬ್ಬುಬ್ಬಿ ಮಾತನಾಡಬೇಡ–ಹೆಚ್ಚೆಚ್ಚಿ ಪ್ರಸಂಗವ ಮಾಡಬೇಡ, ದೇವನೊಬ್ಬನೆ ಕಾಣಿರೊ–ಪರಮೇಶ್ವರನು ಒರ್ವನೆ ಕರ್ತನು ಕಂಡಿರೊ, ಮೂವರು ದೇವರೆಂಬುದು–ಈ ಬ್ರಹ್ಮ ವಿಷ್ಣು ಇಂದ್ರರೆಂಬುವರು ದೈವವೆಂದು ಹೇಳುವಂಥದು, ಹುಸಿನೋಡಾ!–ಅನೃತ ಕಂಡಾ. ಕೂಡಲಸಂಗಮದೇವನಲ್ಲದೆ–ಪರಶಿವಲಿಂಗವಲ್ಲದೆ, ಇಲ್ಲವೆಂದವು –ಅತಃ ಪರಂ ಮತ್ತೊಂದು ದೈವವುಂಟಾಗಿಲ್ಲವೆಂದು ಹೇಳುತ್ತಿಹವು, ವೇದ–ನಾಲ್ಕು ವೇದಂಗಳು.

IV –

1–1 ಉಬ್ಬಿ (ತ), 2–2 ಒಬ್ಬನೆ (ತ). 3–3 ಇಬ್ಬರೆಂಬುದು (ತ). 4–4 ದಿತ್ತು (ತ).

....

ಒಂದೆರಡು ಮೂಱು ದೇವರೆಂಬರು; ಒಂದೆರಡು ಮೂಱು ದೇವರುಂಟೆ? ಇಲ್ಲ. ಅಜ್ಞಾನದಿಂದ ಅಱಿಯದೆ ಆಡುವರು. ಏಕೋ ದೇವನೆಂದು ಶೃತಿಗಳು ಸಾಱುತ್ತ ಇದಾವೆ ಎಂಬುದೀ ವಚನದರ್ಥ.

I –

೫೪೮

ಹುಟ್ಟಿಸುವಾತ ಬ್ರಹ್ಮನೆಂಬರು, ರಕ್ಷಿಸುವಾತ ವಿಷ್ಣುವೆಂಬರು ನೋಡಾ. ಬ್ರಹ್ಮ ತನ್ನ [1]ಶಿರನೇಕೆ[1] [2]ಹುಟ್ಟಿಸಿಕೊಳ್ಳಲಾರದೆ[2] ಹೋದ,[2] ವಿಷ್ಣು ತನ್ನ [3]ಮಗನನೇಕೆ[3] [4]ರಕ್ಷಿಸಿಕೊಳಲಾರದೆ ಹೋದ[4], ದುಷ್ಟನಿಗ್ರಹ ಶಿಷ್ಟಪ್ರತಿಪಾಲಕ ನಮ್ಮ ಕೂಡಲಸಂಗಮದೇವ.

I –

ಹುಟ್ಟಿಸುವಾತ ಬ್ರಹ್ಮನೆಂಬರು–ಸಕಲಪ್ರಾಣಿಗಳ ಉತ್ಪತ್ಯ ಮಾಡುವಾತ ಅಜನೆಂದು ಹೇಳುವರು. ರಕ್ಷಿಸುವಾತ ವಿಷ್ಣುವೆಂಬರು ನೋಡಾ–ಬ್ರಹ್ಮನಿಂದುತ್ಪತ್ಯವಾದ ಪ್ರಾಣಿಗಳಿಗೆ ಆಹಾರ ವ್ಯವಹಾರ ಭೋಗಭುಕ್ತ್ಯಾದಿಗಳ ಕೊಟ್ಟು ರಕ್ಷಣ್ಯವ ಮಾಡುವಾತ ನಾರಾಯಣನೆಂದು ಹೇಳುವರು ಕಂಡಾ, ಬ್ರಹ್ಮ ತನ್ನ ಶಿರನೇಕೆ ಹುಟ್ಟಿಸಿಕೊಳ್ಳಲಾರ (ದೆಹೋದ–) ಸಕಲ ಪ್ರಾಣಿಗಳನು ಉತ್ಪತ್ಯವ ಮಾಡುವಾತ ಬ್ರಹ್ಮನೆ ದೊಡ್ಡಾತನೆಂದು ಹೇಳುವರು; ಹೇಳಿದಲ್ಲಿ ಅಹಂಬ್ರಹ್ಮವೆಂದು ಶಿವನಕೂಡಾ ಗರ್ವಿಸಿದಲ್ಲಿ ಐದನೆಯ ಶಿರಸ್ಸ ಛೇದನವ ಮಾಡಿದರು: ಮಾಡಿದಲ್ಲಿ ಸಕಲಪ್ರಾಣಿಗಳನ್ನು ಉತ್ಪತ್ಯವ ಮಾಡುವಾತನು ತನ್ನ ಶಿರಸ್ಸನೇನು ಕಾರಣಕ್ಕೆ ಹುಟ್ಟಿಸಿಕೊಳಲಾರ. ತನ್ನ ಶಿರಸ್ಸ ಹುಟ್ಟಿಸಿಕೊಳ್ಳಲಾರದಿರುವ ಪರಿಯಂತರವು ಅವನಿಗೂ ಕರ್ತೃತ್ವವಿಲ್ಲದೆ ಹೋಯಿತ್ತು: ವಿಷ್ಣು ತನ್ನ ಮಗನನೇಕೆ ರಕ್ಷಿಸಿಕೊಳಲಾರ (ದೆಹೋದ–)

ಸಕಲಪ್ರಾಣಿಗಳ ರಕ್ಷಣ್ಯವ ಮಾಡುತ್ತೈದಾನೆ: ನಾರಾಯಣನೆ ದೊಡ್ಡಾತನೆಂದು ಹೇಳುವರು. ಹೇಳಿದಲ್ಲಿ ತನ್ನ ಕುಮಾರನಾದ ಮನ್ಮಥನ ಶಿವನು ನೊಸಲಾಗ್ನಿಯಿಂದ ದಹಿಸಿದನು. ದಹಿಸಿದಲ್ಲಿ ಸಕಲ ಪ್ರಾಣಿಗಳ ರಕ್ಷಣ್ಯವ ಮಾಡುವಾತನು ತನ್ನ ಮಗನನೇನು ಕಾರಣಕ್ಕೆ ರಕ್ಷಣ್ಯವ ಮಾಡಲಾರದೇ ಹೋದ. ತನ್ನ ಮಗನ ರಕ್ಷಣ್ಯವ ಮಾಡಲಾರದೆ ಇರುವ ಪರಿಯಂತರವು ಅವನಿಗೂ ಕರ್ತೃತ್ವವಿಲ್ಲದೆ ಹೋಯಿತ್ತು. ದುಷ್ಟ–ಗರ್ವಿಸಿದಂಥವರುಗಳನು, ನಿಗ್ರಹ–ದಂಡಿಸಲ್ಪಟ್ಟಾತನು, ಶಿಷ್ಟ ಪ್ರತಿಪಾಲಕ–ಮರೆಹೊಕ್ಕಂಥವರುಗಳನು ರಕ್ಷಣ್ಯವ ಮಾಡಲ್ಪಟ್ಟಾತನು, ನಮ್ಮ ಕೂಡಲಸಂಗಮದೇವ–ನಮ್ಮ ಪರಶಿವಲಿಂಗವು.

IV –

1–1 ಪರಶಿವನೇತಕ್ಕೆ (ತ), 2–2 ಹುಟ್ಟಿಸಲಾಱ (ತ). 3–3 ಮಗನೇತಕ್ಕೆ (ತ). 4–4 ರಕ್ಷಿಸಲಾಱ (ತ).

....

ಹುಟ್ಟಿಸುವಾತ ಬ್ರಹ್ಮ, ರಕ್ಷಿಸುವಾತ ವಿಷ್ಣುವೆಂಬರು, ಬ್ರಹ್ಮನೇಕೆ ತನ್ನ ಶಿರವ ಹುಟ್ಟಿಸಲಾಱ. ವಿಷ್ಣು ತನ್ನ ಮಗನನೇಕೆ ರಕ್ಷಿಸಲಾಱ. ಹುಟ್ಟಿಸುವ ರಕ್ಷಿಸುವ ಭಕ್ಷಿಸುವ ಪರಮೇಶ್ವರನಲ್ಲದೆ ಬೇಱಿಲ್ಲಾ, ಇದು ಸತ್ಯವೆಂಬುದೀ ವಚನದರ್ಥ.

I –

೫೪೯

ಕೇಶವನಲ್ಲದೆ ಅತಃಪರಂ ದೈವವಿಲ್ಲವೆಂದು ವೇದವ್ಯಾಸ ಮುನಿ ಭಂಗವಾದುದನಱಿಯಿರೆ? 'ಅಹಂ ಸರ್ವಜಗತ್ಕರ್ತಾ ಮಮಕರ್ತಾ ಮಹೇಶ್ವರಃ । ಎಂದು ವಿಷ್ಣು ಹೇಳಿದ ವಚನವ ಮಱದಿರಲ್ಲಾ! ಕೂಡಲಸಂಗಮದೇವನು ದಕ್ಷ[1]ಯಾಗವ[1] ಕೆಡಿಸಿದುದ ಮಱದಿರಲ್ಲಾ !

I– –

ಕೇಶವನಲ್ಲದೆ–ನಾರಾಯಣನೇ ದೈವವಲ್ಲದೆ, ಅತಃಪರಂ–ಮತ್ತೊಂದು, ದೈವವಿಲ್ಲವೆಂದು–ಶ್ರೇಷ್ಠವಾದ ದೈವರುಗಳುಂಟಾಗಿಲ್ಲವೆನುತ್ತ, ವೇದವ್ಯಾಸಮುನಿ–ಬಾದರಾಯಣನು, ಭಂಗವಾದುದನಱಿಯಿರೆ: [ಭಂಗವಾ–ದುದನು–] ಕಾಶಿಕ್ಷೇತ್ರದಲ್ಲಿ ನಂದೀಶ್ವರಸ್ವಾಮಿಗಳಿಂದ ತೋಳುಗಳನ್ನು ಹರಿಯ ಹೊದಿಸಿಕೊಂಡು. ಕೊರತೆಗೊಳಗಾದಂಥದನ್ನು, ಅಱಯಿರೇ–ತಿಳಿಯಿರೆ? ಅಹಂ–ನಾನು, ಸರ್ವಜಗತಃ–ಸಮಸ್ತಲೋಕಕ್ಕೆ, ಕರ್ತಾ–ಒಡೆಯನು, ಮಮಕರ್ತಾ: ಮಮ–ಎನಗೆ, ಕರ್ತಾ–ಒಡೆಯನು, ಮಾಹೇಶ್ವರಃ–ಸದ್ವೀರಮಾಹೇಶ್ವರನು, ಎಂದು–ಹೀಂಗೆಂದು, ವಿಷ್ಣು–ನಾರಾಯಣನು, ಹೇಳಿದ–ನಿರೂಪಿಸಿದ, ವಚನ–ವಾಕ್ಯವನ್ನು, ಮಱೆದಿರಲ್ಲಾ–ವಿಸ್ಮೃತಿಯನ್ನೈದಿಸಿ ಬಿಟ್ಟಿರಲ್ಲಾ. ಕೂಡಲಸಂಗಮದೇವನು–ಪರಶಿವಲಿಂಗವು, ದಕ್ಷನ–ದಕ್ಷಬ್ರಹ್ಮನ ಯಾಗವ–ಮಾರಣಯಾಗವನ್ನು ಕೆಡಿಸಿದುದು–ವೀರಭದ್ರದೇವರು ಮೂರುವರೆ ಕೋಟಿ ಭೂತಂಗಳ ಕರಕೊಂಡುಬಂದು ಯಜ್ಞದ ಹೊಂಡದ [ವ] ಚಾಗಿಯ ಮುಡಿಬಿಟ್ಟಂಥದನ್ನು ಮಱೆದಿರಲ್ಲಾ!–ವಿಸ್ಮೃತಿಯನ್ನೈದಿಸಿ ಬಿಟ್ಟಿರಲ್ಲಾ!

IV –

1–1 ಯಜ್ಞವ: (ತ).

....

ಏಕೋದೇವನೆಂದು ನಂಬಿ ಪರಬ್ರಹ್ಮವಾದರು ಆದ್ಯರು. ವಿಷ್ಣು ದೈವವೆಂದು ನಂಬಿ ಕಾಶಿಯಲ್ಲಿ ವ್ಯಾಸನ ತೋಳು ಹೋಯಿತ್ತು. ಶ್ರುತಿ ಪ್ರಮಾಣು, ಹುಸಿಯಲ್ಲ, ಇನ್ನಾದರೂ ಅಜ್ಞಾನವ ಬಿಟ್ಟು ನಂ[ಬೆಂ] ಬುದೀ ವಚನದರ್ಥ.

೫೫೦

ನಾರಾಯಣನೆಂಬವನ ಕಾಣೆ ಗೀರಾಯಣನೆಂಬವನ ಕಾಣೆ! ಬೊಮ್ಮನೆಂಬವನ ಕಾಣೆ ಗಿಮ್ಮ ನೆಂಬವನ ಕಾಣೆ! ವಿಷವಟ್ಟಿ ಸುಡುವಲ್ಲಿ, ವೀರಭದ್ರ ಕೊಲುವಲ್ಲಿ ಕೂಡಲಸಂಗಯ್ಯಂಗೆ ಶರಣೆಂದು ಮೊಱೆಯಿಟ್ಟರೆಲ್ಲರು.

I –

ನಾರಾಯಣನೆಂಬವನ ಕಾಣೆ–ವೀರಭದ್ರದೇವರು ಬಡಿವಲ್ಲಿ, ವಿಷವಟ್ಟಿ ಸುಡುವಲ್ಲಿ ಸಮಸ್ತ ಆತ್ಮರುಗಳು ನಾರಾಯಣನೇ ದೈವ ನಾರಾಯಣನೇ ದೊಡ್ಡಾತನೆಂದು ಮೊರೆಬಿದ್ದಲ್ಲಿ ಅವರಿಗೆ ಬಂದಂಥ ಎಡರು ಕಂಟಕ ವಿಘ್ನಾದಿಗಳನು ಪರಿಹರಿಸಿ ಇಷ್ಟಾರ್ಥಸಿದ್ಧಿಯನ್ನು ಕರುಣಿಸಿ ಕೊಂಡುವಂಥದು ನಾರಾಯಣನಿಂದಲೂ ಆಗದೆ ಹೋಯಿತ್ತು: ನಾರಾಯಣನೆಂಬುವನು ಯಾವಕಡೆಗೆ ಹೋದನೋ ಕಂಡುದಿಲ್ಲವು: ಗೀರಾಯಣನೆಂಬವನ ಕಾಣೆ: [ಗೀರಾಯಣನೆಂಬವನ] ಗೀರಾಯಣನೆಂದರೆ ಹಾಸ್ಯವು. ಹಾಸ್ಯಕ್ಕೊಳಗಾದಂಥ ದೈವವನ್ನು, ಕಾಣೆ–ಗೀರಾಯಣನೆಂಬವನು ಯಾವಕಡೆಗೆ ಹೋದನೋ ಕಂಡುದಿಲ್ಲವು; ಬೊಮ್ಮನೆಂಬವನ ಕಾಣೆ–ವೀರಭದ್ರ ಬಡಿವಲ್ಲಿ, ವಿಷವಟ್ಟಿ ಸುಡುವಲ್ಲಿ ಸಮಸ್ತ ಆತ್ಮರು ಬ್ರಹ್ಮನೇ ದೊಡ್ಡವ ಬ್ರಹ್ಮನೇ ಶ್ರೇಷ್ಠವೆಂದು ಮೊರೆಬಿದ್ದಲ್ಲಿ ಅವರಿಗೆ ಬಂದಂಥ ಎಡರು ಕಂಟಕ ವಿಘ್ನಾದಿಗಳನು ಪರಿಹರಿಸಿ ಇಷ್ಟಾರ್ಥಸಿದ್ಧಿಯುನ್ನು ಕರುಣಿಸಿಕೊಡುವಂಥದು, ಬ್ರಹ್ಮನಿಂದಲೂ ಆಗದೆ ಹೋಯಿತ್ತು. ಆ ಬೊಮ್ಮನೆಂಬವನು ಯಾವಕಡೆಗೆ ಹೋದನೋ ಕಂಡುದಿಲ್ಲವು; ಗಿಮ್ಮನೆಂಬವನ ಕಾಣೆ: [ಗಿಮ್ಮನೆಂಬವನ–] ಗಿಮ್ಮನೆಂದರೆ ಹಾಸ್ಯವು, ಹಾಸ್ಯಕ್ಕೊಳಗಾದಂಥ ದೈವವನ್ನು, ಕಾಣೆ–ಗಿಮ್ಮನೆಂಬವನು ಯಾವಕಡೆಗೆ ಹೋದನೋ ಕಂಡುದಿಲ್ಲವು; ವಿಷ–ಮಹಾಶೇಷ ಕಾರಿದಂಥ ಕ್ಷ್ವೇಡವು, ಅಟ್ಟಿ–ಓಡಿಸಿ, ಸುಡುವಲ್ಲಿ–ದಹಿಸುವಲ್ಲಿ ವೀರಭದ್ರ ಕೊಲುವಲ್ಲಿ–ಶರಭಾವತಾರನು ತಾಡಿಸುವಲ್ಲಿ ದೇವರೆಂಬುವರೆತ್ತ ಹೋದಿರಿ. ಇಂದ್ರ ದೇವರು ಚಂದ್ರದೇವರು ಬೊಮ್ಮದೇವರು ತಿಮ್ಮದೇವರು ಎಂಬವರೆತ್ತ ಹೋದಿರಿ? ಯಾವ ಕಡೆಗೆ ಹೋದಿರಿ? ಏನು ಕಾರಣ ಸುಮ್ಮನಿದ್ದಿರಿ? ಮಾತನಾಡಿರೊ, ಕೂಡಲಸಂಗಯ್ಯಂಗೆ–ಪರಶಿವಲಿಂಗಕ್ಕೆ ಎಲ್ಲರೂ ಶರಣೆಂದು, ಮೊಱೆಯಿಟ್ಟರು–ವೀರಭದ್ರ ಬಡಿವಲ್ಲಿ, ವಿಷವಟ್ಟಿ ಸುಡುವಲ್ಲಿ ಸಮಸ್ತರು ಪರಮೇಶ್ವರನೇ ದೊಡ್ಡಾತನೆಂದು ನಮಸ್ಕರಿಸಿ ಮೊರೆಬಿದ್ದು ತಮಗೆ ಬಂದಂಥ ಎರಡು ಕಂಟಕ ವಿಘ್ನಾದಿಗಳನು ಪರಿಹರಿಸಿಕೊಂಡು ಇಷ್ಟಾರ್ಥಸಿದ್ಧಿಯನ್ನು ಹಡೆದುಕೊಂಡರು.

೫೫೧

ಅಮೃತವ ಕಡೆವಲ್ಲಿ, ವಿಷವಟ್ಟಿ, ಸುಡುವಲ್ಲಿ ದೇವರೆಂಬವರೆತ್ತ ಹೋದರೋ? ಏನೆಂಬಿರೋ? ಅಂದೊಮ್ಮೆ ಓಡಿಹೋಗಿ ಆ ಶಿವನ ಮೊಜೆ ಹೋಗುವಂದು ದೇವರೆಂಬವರೆತ್ತ ಹೋದರೋ? ಏನೆಂಬಿರೋ? ಕೂಡಲಸಂಗಯ್ಯ ದೇವರಿಗೆ ದೇವನು; ನೀವೆಲ್ಲಾ ಆಳೆಂಬುದನರಿಯಿರಿಂ ಭೋ.

I– –

ಅಮೃತವ ಕಡೆವಲ್ಲಿ–ಸಮುದ್ರವನ್ನೇ ಭಾಜನವ ಮಾಡಿಕೊಂಡು ಮಂದಾರ ಪರ್ವತವನ್ನೇ ಕಡಗೋಲ ಮಾಡಿಕೊಂಡು ಆದಿಕಮಠವನ್ನೇ ಮುದ್ದಿಯ ಮಾಡಿಕೊಂಡು ಮಹಾಶೇಷವನ್ನೇ ತೆಗೆದು ನೇಣುಮಾಡಿಕೊಂಡು ರಾಕ್ಷಸರೆಲ್ಲ ತಲೆಯ ಕಡೆಗೆ ಹಿಡಿದುಕೊಂಡು ದೇವತೆಗಳೆಲ್ಲ ಬಾಲದ ಕಡೆಗೆ ಹಿಡಿದಕೊಂಡು ಅಮೃತ[೧] ಸಮುದ್ರವನ್ನು[೨] ಮಥನಿಸುವಲ್ಲಿ, ವಿಷ–ಮಥಾಶೇಷ ಕಾರಿದಂಥ ಕ್ಷ್ವೇಡವು, ಅಟ್ಟಿ–ಓಡಿಸಿ, ಸುಡುವಲ್ಲಿ–ದಹಿಸುವಲ್ಲಿ, ದೇವರೆಂಬವರೆತ್ತ ಹೋದರೋ–ಇಂದ್ರದೇವರು ಚಂದ್ರದೇವರು ತಿಮ್ಮದೇವರು ಬೊಮ್ಮದೇವರೆಂಬವರು ಎತ್ತ ಹೋದಿರಿ, ಯಾವ ಕಡೆಗೆ ಹೋದಿರಿ; ಏನೆಂಬಿರೋ?–ಏನು ಕಾರಣಕ್ಕೆ ಸುಮ್ಮನಿದ್ದಿರೋ? ಮಾತನಾಡಿರೊ, ಅಂದು, ಆ ಕಾಲದಲ್ಲಿ, ಒಮ್ಮೆ–ಒಂದು ವೇಳೆ, ಓಡಿಹೋಗಿ–ಪಲಾಯಾನವಾಗಿ ಹೋಗಿ, ಆ ಶಿವನ ಮೊಜೆಹೋಗುವಂದು–ಆ ಪರಮೇಶ್ವರನ ಮರೆಬಿದ್ದು ತಮಗೆ ಬಂದಂಥ ಎಡರು ಕಂಟಕ ವಿಘ್ನಾದಿಗಳನು ಪರಿಹರಿಸಿಕೊಂಡು ಇಷ್ಟಾರ್ಥಸಿದ್ಧಿಯನ್ನು ಹಡದುಕೊಂಬುವಾಗ, ದೇವರೆಂಬವರೆತ್ತ ಹೋದರೋ–ಇಂದ್ರದೇವರು ಚಂದ್ರದೇವರು ತಿಮ್ಮ ದೇವರು ಬೊಮ್ಮದೇವರೆಂಬವರು ಎತ್ತ ಹೋದಿರಿ; ಯಾವಕಡೆಗೆ ಹೋದಿರಿ ಏನೆಂಬಿರೋ–ಏನು ಕಾರಣಕ್ಕೆ ಸುಮ್ಮನಿದ್ದಿರೋ, ಮಾತನಾಡಿರೋ; ಕೂಡಲಸಂಗಯ್ಯ–ಪರಶಿವಲಿಂಗವು, ದೇವರಿಗೆ ದೇವನು–ಎಲ್ಲ ದೇವರಿಗೊಲ್ಲಭನಾಗಿದ್ದಾತನ್ನು ನೀವೆಲ್ಲಾ–ಬ್ರಹ್ಮ ವಿಷ್ಣ್ವಾದಿಗಳೆಲ್ಲಾ, ಆಳೆಂಬುದ–ಭೃತ್ಯರೆಂಬುವಂಥದನ್ನು, ಅರಿಯಿರಿ ಭೋ–ತಿಳಿಯಿರೆಲವೋ.

....

೧+ಬ (ಕ, ಗ), ೨+ಕಡೆವಲ್ಲಿ (ಕ, ಗ).

೫೫೨

ವಿಷ್ಣು ಬಲ್ಲಿದವನೆಂಬೆನೆ? ದಶಾವತಾರದಲ್ಲಿ ಭಂಗಬಟ್ಟುದಕ್ಕೆ ಕಡೆಯಿಲ್ಲ! ಬ್ರಹ್ಮ ಬಲ್ಲಿದನೆಂಬೆನೆ? ತಿರಹೋಗಿ ನಾನಾವಿಧಿಯಾದ! ವೇದ ಬಲ್ಲಿತ್ತೆಂಬೆನೆ? ನಾನಾಮುಖದಲ್ಲಿ ಅರಸಿತ್ತಲ್ಲದೆ ಲಿಂಗದ ನಿಲುಕಡೆಯ ಕಾಣದು! ಶಾಸ್ತ್ರ ಬಲ್ಲಿತ್ತೆಂಬೆನೆ? ಶಬ್ದಕ್ರೀ! ಪುರಾಣ ಬಲ್ಲಿತ್ತೆಂಬೆನೆ? ಪೂರ್ವಕ್ರೀ! ಆಗಮ ಬಲ್ಲಿತ್ತೆಂಬೆನೆ? ವಾಯು ಹೊಂದಿತ್ತು! ಇದು ಕಾರಣ ಕೂಡಲಸಂಗಯ್ಯನೆ ನಿತ್ಯ; ಉಳಿದ ದೈವಂಗಳೆಲ್ಲ ಅನಿತ್ಯ ಕಾಣಿರೊ!

I –

ವಿಷ್ಣು ಬಲ್ಲಿದವನೆಂಬೆನೆ? ವಿಷ್ಣು–ನಾರಾಯಣನು, ಬಲ್ಲಿದನೆಂಬೆನೆ?–ಶ್ರೇಷ್ಠವೆಂದು ಹೇಳುವೆನೆ? ದಶಾವತಾರದಲ್ಲಿ–ಹತ್ತಾವತಾರದಲ್ಲಿ ಹುಟ್ಟಿ ಹುಟ್ಟಿ ಬಂದ, ಭಂಗಬಟ್ಟುದಕ್ಕೆ–ಕೊರತೆಗೊಳಗಾದುದಕ್ಕೆ,

ಕಡೆಯಿಲ್ಲ–ಅಷ್ಟಿಷ್ಟೆಂಬ ಮಿತಿ ಇಲ್ಲವು, ಬ್ರಹ್ಮ ಬಲ್ಲಿದನೆಂಬೆನೆ?: ಬ್ರಹ್ಮ–ಅಜನು, ಬಲ್ಲಿದನೆಂಬೆನೆ?–ಶ್ರೇಷ್ಠವೆಂದು ಹೇಳುವೆನೆ? ಶಿರಹೋಗಿ–ಮಸ್ತಕವು ಭೇದನವಾಗಿ ಹೋಗಿ, ನಾನಾವಿಧಿಯಾದ–ಆದಿ ಬ್ರಹ್ಮ ಬೀದಿಬ್ರಹ್ಮನಾಗಿ ಶುನಿಗಳಿಂದ ಮೂತ್ರಿಸಿಕೊಂಬುವುದಕ್ಕೆ ಪ್ರಾಪ್ತಿಗೊಳಗಾದನು.

ವೇದ ಬಲ್ಲಿತ್ತೆಂಬೆನೆ? ವೇದ–ನಾಲ್ಕು ವೇದಂಗಳು, ಬಲ್ಲಿತ್ತೆಂಬೆನೆ?–ಶ್ರೇಷ್ಠವೆಂದು ಹೇಳುವೆನೆ? ನಾನಾ ಮುಖದಲ್ಲರಸಿತ್ತಲ್ಲದೆ–ಆಗ್ರಾಹ್ಯಂ ಗ್ರಾಹ್ಯಂ ವಿಂದಂತಿ। ವೇದಶ್ವಾನಾಶ್ಯನ್ಯೈಶ್ಯನ್ಯೈ॥ ತ್ವತ್ವದಾನಿ ಮಹಾರಣ್ಯೇ। ತ್ವಾಂ ವಂದೇ ಶಬರೇಶ್ವರ॥ ಯೆಂದು ಶುನಿಗಳಾಗಿ ಹೆಜ್ಜೆಯನ್ನು ಘ್ರಾಣಿಸಿದುವಲ್ಲದೆ, ಲಿಂಗದ–ಮಹಾಲಿಂಗದಲ್ಲಿ ಕೂಡುವಂಥ, ನಿಲುಕಡೆಯ–ಸ್ವಸ್ವರೂಪವ, ಕಾಣದು–ಅರಿಯದು. ಶಾಸ್ತ್ರ ಬಲ್ಲಿತ್ತೆಂಬೆನೆ? ಶಾಸ್ತ್ರ–ಅನಂತಕ ಮೊದಲಾದ ಹದಿನಾರು ಧರ್ಮಶಾಸ್ತ್ರಂಗಳು, ಬಲ್ಲಿತ್ತೆಂಬೆನೆ?–ಶ್ರೇಷ್ಠವೆಂದು ಹೇಳುವೆನೆ?. ಶಬ್ದಕ್ರೀ–ಪಾಪವ ಮಾಡಿದವರಿಗೆ ಪುಣ್ಯವ ಮಾಡಬೇಕು ಪುಣ್ಯವ ಮಾಡಿದವರಿಗೆ ಪಾಪವ ಮಾಡಬೇಕು. ಧರ್ಮವ ಮಾಡಿದವರಿಗೆ ಕರ್ಮವ ಮಾಡಬೇಕು. ಕರ್ಮವ ಮಾಡಿದವರಿಗೆ ಧರ್ಮವ ಮಾಡಬೇಕು ದುಃಖವ ಮಾಡಿದವರಿಗೆ ಸುಖವ ಮಾಡಬೇಕು. ಸುಖವ ಮಾಡಿದವರಿಗೆ ದುಃಖ ಮಾಡಬೇಕು ಹೀಂಗೆ ಸುಖದುಃಖ ಪುಣ್ಯಪಾಪವೆಂಬ ಬಂಧಮೋಕ್ಷದ್ವಂದ ಕರ್ಮಂಗಳನುಂಟುಮಾಡಿ ಹೇಳುತ್ತಿಹವು.

ಪುರಾಣ ಬಲ್ಲಿತ್ತೆಂಬೆನೆ?: ಪುರಾಣ–ಬ್ರಹ್ಮಾದ್ಯಷ್ಟಾದಶ ಪುರಾಣಗಳು, ಬಲ್ಲಿತ್ತೆಂಬೆನೆ?–ಶ್ರೇಷ್ಠವೆಂದು ಹೇಳುವೆನೆ?, ಪೂರ್ವಕ್ರೀ–ರಾಮ ರಾವಣರ ಕಾಳಗ, ದೇವತಾದಿ ರಾಕ್ಷಸರುಗಳ ಕಾಳಗ ಕೌರವ ಪಾಂಡವರ ಕಾಳಗ ಕೌರವ ಪಾಂಡವರ ಕಾಳಗ ಮೌ[ರ್ಯ][೧] ಕದಂಬರ ಕಾಳಗವನ್ನುಂಟು ಮಾಡಿ ಹೇಳುತ್ತಿಹುದು, ಮತ್ತಲ್ಲದೆ ಕೃತಯುಗದಲ್ಲಿ ಕುಂಜಯಾಗ ತ್ರೇತಾಯುಗದಲ್ಲಿ ಅಶ್ವಯಾಗ ದ್ವಾಪರಯುಗದಲ್ಲಿ ಮಹಿಷಿಯಾಗ ಕಲಿಯುಗದಲ್ಲಿ ಅಜಪೆಯಾಗ ಈ ನಾಲ್ಕು ಯುಗದಲ್ಲಿ ನಾಲ್ಕು ಪ್ರಾಣಿಗಳ ಕೊಂದು ತಿನ್ನೆಂದು ಹೇಳುತ್ತಿಹುದು. ಆಗಮ ಬಲ್ಲಿತ್ತೇಂಬೆ?; ಆಗಮ–ಇಪ್ಪತ್ತೆಂಟು ದಿವ್ಯಾಗಮಂಗಳು, ಬಲ್ಲಿತ್ತೆಂಬೆನೆ?–ಶ್ರೇಷ್ಠವೆಂದು ಹೇಳುವೆನೆ? ವಾಯು ಹೊಂದಿತ್ತು–ಲಿಂಗಾಂಗವೆರಡಕ್ಕೂ ಭಿನ್ನವಿಟ್ಟುಕೊಂಡಾರಾಧಿಸಬೇಕೆಂದು ಹೇಳಿ ಮಿಥ್ಯವಾಗಿ ಹೋಯಿತ್ತು.

ಇದು ಕಾರಣ–ಇದು ನಿಮಿತ್ತಾರ್ಥ, ಕೂಡಲಸಂಗಯ್ಯನೆ–ಪರಶಿವಲಿಂಗವೆ. ನಿತ್ಯ–ಶಾಶ್ವತ ಸ್ವರೂಪನು, ಉಳಿದ ದೈವಂಗಳೆಲ್ಲ–ಮಿಕ್ಕಿನ ದೇವರುಗಳೆಲ್ಲ, ಅನಿತ್ಯಕಾಣಿರೊ–ಅಶಾಶ್ವತ ಕಂಡಿರೋ.

....

೧+೧ ; ನಿ (ಕ): ಲಿ(ಗ).

೫೫೩

ಮಱೆಯಲಾಗದು ಹರಿಯ, ಮಱೆಯಲಾಗದು ಬ್ರಹ್ಮನ, ಮಱೆಯಾಲಾಗದು ತೆತ್ತೀಸಕೋಟಿ ದೇವರ್ಕಳ ನಮ್ಮ ಕೂಡಲಸಂಗಮದೇವರ ಮಱೆಯಲಹುದು.

I– –

ಮಱೆಯಲಾಗದು ಹರಿಯ–ವೀರಭದ್ರ ಬಡಿವಲ್ಲಿ, ವಿಷವಟ್ಟಿ ಸುಡುವಲ್ಲಿ ಸಮಸ್ತರು ನಾರಾಯಣನೇ ದೊಡ್ಡವನೆಂದು ಮೊರೆಬಿದ್ದಲ್ಲಿ ಅವರಿಗೆ ಬಂದಂಥ ಎಡರು ಕಂಟಕ ವಿಘ್ನಾದಿಗಳನು

ಪರಿಹರಿಸಿ ಇಷ್ಟಾರ್ಥ ಸಿದ್ಧಿಯನ್ನು ಕರುಣಿಸಿಕೊಡುವಂಥದು ನಾರಾಯಣನಿಂದಲೂ ಆಗದೆ ಹೋಯಿತು; ಮಱೆಯಲಾಗದು ಬ್ರಹ್ಮನ-ವೀರಭದ್ರ ಬಡಿವಲ್ಲಿ, ವಿಷವಟ್ಟಿ ಸುಡುವಲ್ಲಿ ಸಮಸ್ತರು ಬ್ರಹ್ಮನೆ ದೊಡ್ಡವನೆಂದು ಮೊರೆಬಿದ್ದಲ್ಲಿ ಅವರಿಗೆ ಬಂದಂಥ ಎಡರು ಕಂಟಕ ವಿಘ್ನಾದಿಗಳನು ಪರಿಹರಿಸಿ ಇಷ್ಟಾರ್ಥಸಿದ್ಧಿಯನ್ನು ಕರುಣಿಸಕೊಡುವಂಥದು ಬ್ರಹ್ಮನಿಂದಲೂ ಆಗದೆ ಹೋಯಿತ್ತು; ಮಱೆಯಲಾಗದು ತೆತ್ತೀಸಕೋಟಿ ದೇವರ್ಕಳ-ವೀರಭದ್ರ ಬಡಿವಲ್ಲಿ, ವಿಷವಟ್ಟಿ ಸುಡುವಲ್ಲಿ ಸಮಸ್ತರು ದೇವತೆಗಳೇ ದೊಡ್ಡವರೆಂದು ಮೊರೆಬಿದ್ದಲ್ಲಿ ಅವರಿಗೆ ಬಂದಂಥ ಎಡರು ಕಂಟಕ ವಿಘ್ನಾದಿಗಳನು ಪರಿಹರಿಸಿ ಇಷ್ಟಾರ್ಥಸಿದ್ಧಿಯನ್ನು ಕರುಣಿಸಿಕೊಡುವಂಥದು ದೇವತೆಗಳಿಂದಲೂ ಆಗದೆ ಹೋಯಿತ್ತು; ನಮ್ಮ ಕೂಡಲಸಂಗಮದೇವರ ಮಱೆಯಲಹುದು-ವೀರಭದ್ರ ಬಡಿವಲ್ಲಿ, ವಿಷವಟ್ಟಿ ಸುಡುವಲ್ಲಿ ಸಮಸ್ತರು ಪರಮೇಶ್ವರನೇ ದೊಡ್ಡಾತನೆಂದು ಮೊರೆ ಬಿದ್ದಲ್ಲಿ ಅವರಿಗೆ ಬಂದಂಥ ಎಡರು ಕಂಟಕ ವಿಘ್ನಾದಿಗಳನು ಪರಿಹರಿಸಿ ಇಷ್ಟಾರ್ಥಸಿದ್ಧಿಯನ್ನು ಕರುಣಿಸಿಕೊಡುವಂಥದು ಪರಮೇಶ್ವರನಿಂದಲೇ ಉಂಟಾಯಿತ್ತು.

II- -

ಮಱೆಯಲಾಗದು ಹರಿಯ-ಲೋಕಕ್ಕೆ ಆಹಾರ [೧][ವಿ][೧] ಹಾರ ಸ್ಥಿತಿ ಭೋಗಭುಕ್ತಿಗಳನು ಕೊಟ್ಟುರಕ್ಷಣೆ ಮಾಡುವ ನಾರಾಯಣನ ವಿಸ್ಮೃತಿಯ ಮಾಡಲಾಗದು, ಮಱೆಯಲಾಗದು ಬ್ರಹ್ಮನ ಲೋಕಕ್ಕೆ ಉತ್ಪತ್ಯವ ಮಾಡಲ್ಪಟ್ಟ ಬ್ರಹ್ಮನ ವಿಸ್ಮೃತಿಯ ಮಾಡಲಾಗದು, ಮಱೆಯಲಾಗದು ತೆತ್ತೀಸ ಕೋಟಿ ದೇವರ್ಕಳ-೩೩ಕೋಟಿ ದೇವತೆಗಳು ಅಮೃತಾಹಾರಿಗಳು ನಿತ್ಯ ತೃಪ್ತರು ಅನಿಮಿಷ ದೃಷ್ಟಿಯುಳ್ಳವರು. ಅವರನು ವಿಸ್ಮೃತಿಯ ಮಾಡಲಾಗದು, ನಮ್ಮಕೂಡಲ ಸಂಗಮದೇವರ ಮಱೆಯಲಹುದು- ಪರಮೇಶ್ವರನ ಮರೆಯಬಹುದು. ಈತನೇನು ಬೆಳ್ಳಿಬೆಟ್ಟದ ಮೇಲೆ ಕುಳ್ಳಿರುವ ಬೂದಿಗೊರವನೀತನೊಂದು ವೇಳೆ ಮರೆಯಬಹುದು.

● ಮತ್ತಂ, ವಿಷವಟ್ಟಿ ಸುಡುವಲ್ಲಿ, ವೀರಭದ್ರದೇವರು ಬೆನ್ನಟ್ಟಿ ಬಡಿವಲ್ಲಿ ಹರಿಯ ಮರೆಯ ಹೊಕ್ಕರೂ ಬಿಡಿಸಿಕೊಂಡು ರಕ್ಷಿಸದಾಗದು. ಬ್ರಹ್ಮನ ಮರೆಯ ಹೊಕ್ಕರೂ ಬಿಡಿಸಿಕೊಂಡು ರಕ್ಷಿಸದಾಗದು. ೩೩ ಕೋಟಿ ದೇವತೆಗಳ ಮರೆಯ ಹೊಕ್ಕರೂ ಬಿಡಿಸಿಕೊಂಡು ರಕ್ಷಿಸದಾಗದು. ಪರಶಿವಲಿಂಗದ ಮರೆಯ ಹೊಕ್ಕರೆ ರಕ್ಷಿಸುವನು.

....

೧-೧ ವ್ಯಾ (ಚ. ಜ).

೫೫೪

ಬಿದಿರೆಲೆಯ ಮೆಲಿದಡೆ ಮೆಲಿದಂತಲ್ಲದೆ, ರಸವನು ಹಡೆಯಲು ಬಾರದು. ಮಳಲ ಹೊಸೆದಡೆ ಹೊಸೆದಂತಲ್ಲದೆ, ಸರವಿಯ ಹಡೆಯಲು ಬಾರದು. ನೀರ ಕಡೆದಡೆ ಕಡೆದಂತಲ್ಲದೆ, ಬೆಣ್ಣೆಯ ಹಡೆಯಲು ಬಾರದು. ನಮ್ಮ ಕೂಡಲಸಂಗಮದೇವನಲ್ಲದೆ ಅನ್ಯ ದೈವಕ್ಕೆಱಗಿದಡೆ ಹೊಳ್ಳ ಕುಟ್ಟಿ ಕೈ ಹೊ[1]ಡೆ[1]ಯಾದಂತಾಯಿತ್ತಯ್ಯಾ.

I -

ಬಿದಿರೆಲೆಯ ಮೆಲಿದಡೆ: ಬಿದರೆಲೆಯು-ವೇಣುಪರ್ಣವನ್ನು, ಮೆಲಿದಡೆ-ಮೆದ್ದರೆ, ಮೆಲಿದಂದತಲ್ಲದೆ-ಮೆದ್ದ ಮೆದ್ದ ಹಾಂಗೆ ಹುಡಿ ಹುಡಿಯಾಗಿ ಹೋಗುವುದಲ್ಲದೆ, ರಸವನು ಹಡೆಯಲು ಬಾರದು-ನಾಲಗೆಗೆ ಸ್ವಾದವಾಗಿದ್ದೀತೆ? ಇರಲರಿಯದು. ಮಳಲ-ಸೈಕತವನ್ನು, ಹೊಸೆದಡೆ-ಜೋಡಿಸಿದರೆ, ಹೊಸೆದಂತಲ್ಲದೆ-ಜೋಡಿಸಿದಂತಲ್ಲದೆ, ಸರವಿಯ ಹಡೆಯಲು ಬಾರದು-ಗೇಣುದ್ದ ಚೋಟುದ್ದ ಹಗ್ಗವನ್ನು ಮಾಡುವುದಕ್ಕೆ ಬಂದೀತೆ? ಬರಲರಿಯದು. ನೀರ-ಉದಕವನ್ನು, ಕಡೆದಡೆ-ಮಂಥನಗೋಲಿನಿಂದ ಮಥನಿಸಿದಡೆ, ಕಡೆದಂತಲ್ಲದೆ-ಮಥನಿಸಿದಷ್ಟಲ್ಲದೆ, ಬೆಣ್ಣೆಯ ಹಡೆಯಲು ಬಾರದು-ನವನೀತವನ್ನು ತೆಗೆವುದಕ್ಕೆ ಬಂದೀತೆ? ಬರಲರಿಯದು.

ನಮ್ಮ ಕೂಡಲಸಂಗಮದೇವನಲ್ಲದೆ-ನಮ್ಮ ಪರಶಿವಲಿಂಗವಲ್ಲದೆ, ಅನ್ಯದೈವಕ್ಕೆರಗಿದಡೆ೧-ಶಿವಾಚಾರಕ್ಕೆ ಬೇರಾದ೧ ತಿಮ್ಮ ಬೊಮ್ಮ ವೀರ ಜಟ್ಟಿಂಗ ಮೊದಲಾದ ನೀಚದೈವಂಗಳಿಗೆ ತಲೆಬಾಗಿ ನಮಸ್ಕರಿಸಿದೆ, ಹೊಳ್ಳು ಕುಟ್ಟಿ ಕೈ ಹೊಡೆಯಾದಂತಾಯಿತ್ತಯ್ಯ ಎಂಬಲ್ಲಿ, ಗಟ್ಟಿ ಧಾನ್ಯವನ್ನು ಕುಟ್ಟಿದರೆ ತಮಗೆ ಅಕ್ಕಿ ಬರುವವು, ಸುಖವಾಗುವುದಲ್ಲದೆ ಜೊಳ್ಳು ಧಾನ್ಯವನ್ನು ಕುಟ್ಟಿದರೆ ಕೈ ಹಪ್ಪಳೆದ್ದು ದುಃಖವಾಗುತ್ತಿಹುದು. ಹಾಂಗೆ ಪರಮೇಶ್ವರನೇ ದೈವವೆಂದಾರಾದಿಸಿದರೆ ಗಟ್ಟಿ ಧಾನ್ಯವನ್ನು ಕುಟ್ಟಿ ಅಕ್ಕಿ ತೆಗೆದುಕೊಂಡವರಿಗೆ ಸುಖವಾದ ಹಾಂಗೆ ನಿತ್ಯವಾದ ನಿಜಮೋಕ್ಷವೇ ಆಗುತ್ತಿಹುದು. ನೀಚದೈವಂಗಳ ಭಜನೆಯ ಮಾಡಿದರೆ ಹೊಳ್ಳು ಧಾನ್ಯವ ಕುಟ್ಟಿ ಕೈ ಹಪ್ಪಳೆದ್ದು ದುಃಖವಾದ ಹಾಂಗೆ ವ್ಯರ್ಥಸ್ಯವಾಗಿರ್ಪುದು.

....

೧-೧ x (ಕ)

II -

1-1 ಟ್ಟ . (ಚ, ಜ).

....

ಬಿದಿರೆಲೆಯ ಮೆಲಿದಡೆ ಮೆಲಿದಂತಲ್ಲದೆ ರಸವನು ಹಡೆಯಲು ಬಾರದು-ಜ್ಞಾನಸಾರವಿಹೀನವಾದವರ ಕೂಡ ಎಷ್ಟು ಮಥನಿಸಿ ಮಥನಿಸಿ ಪ್ರಸಂಗವ ಮಾಡಿದರೂ ಪ್ರಸಂಗವ ಮಾಡಿದ ಹಾಂಗೆ ಆಗೂದಲ್ಲದೆ ಜ್ಞಾನಸಾರ ಪಡೆದುಕೊಳಬಾರದು. ಮಳಲು ಹೊಸೆದಡೆ ಹೊಸೆದಂತಲ್ಲದೆ ಸರವಿಯ ಹಡೆಯಲು ಬಾರದು-ಕ್ಷಣಿಕಾತ್ಮರುಗಳ ಕೂಡೆ ಎಷ್ಟು ಮಥನಿಸಿ ಪ್ರಸಂಗವ ಮಾಡಿದರೂ ಪ್ರಸಂಗವ ಮಾಡಿದ ಹಾಂಗಲ್ಲದೆ ನಿರ್ಧರಕೆ ನಿಲ್ಲದೆ ವಾರೆಬಿದ್ದು ಹೋಗುವುದು. ನೀರ ಕಡೆದಡೆ ಕಡೆದಂತಲ್ಲದೆ ಬೆಣ್ಣೆಯ ಹಡೆಯಲು ಬಾರದು-ಮನೋಪ್ರಕೃತಿಯುಳ್ಳವರ ಕೂಡೆ ಎಷ್ಟು ಮಥನಿಸಿ ಪ್ರಸಂಗವ ಮಾಡಿದರೂ ಪ್ರಸಂಗವ ಮಾಡಿದ ಹಾಂಗಲ್ಲದೆ ಸದ್ವಿವೇಕವೆಂಬ ನವನೀತವ ಪಡೆದುಕೊಳಬಾರದು. ನಮ್ಮ ಕೂಡಲಸಂಗಮ ದೇವನಲ್ಲದೆ ಅನ್ಯದೈವಕ್ಕೆಜಿಗಿದಡೆ ಹೊಳ್ಳ ಕುಟ್ಟಿ ಕೈ ಹೊಟ್ಟೆ ಯಾದಂತಾಯಿತ್ತಯ್ಯಾ-ನಮ್ಮ ಪರಶಿವಲಿಂಗವಲ್ಲದೆ ಜ್ಞಾನಸಾರವಿಹೀನವಾದ ಪರದೈವಂಗಳಿಗೆ ನಮಸ್ಕರಿಸಿದರೆ ಸುಚಿತ್ತವೆಂಬ ಹಸ್ತವು ಗಾಸಿಯಾಯಿತ್ತೆಂಬುದರ್ಥ.

II -

೧-೧ ಟ್ಟಿ. (ಟ, ಡ).

....

ಕೈ ಹೊಟ್ಟಿಯಾದಂತಾಯಿತಯ್ಯ-ಹಸ್ತ ಗುಳ್ಳೆಯಾದ ಹಾಂಗಾಯಿತ್ತು.

೫೫೫

ಆವಾಗಲೂ ಲೋಗರ ಮನೆಯ ಬಾಗಿಲ ಕಾಯ್ದುಕೊಂಡಿಪ್ಪವು ಕೆಲವು ದೈವಂಗಳು; ಹೋಗೆಂದಡೆ ಹೋಗುವ ಕೆಲವು ದೈವಂಗಳು; ನಾಯಿಗಿಂದ ಕರಕಷ್ಟ ಕೆಲವು ದೈವಂಗಳು. ಲೋಗರ ಬೇಡಿಕೊಂಡುಂಬ ದೈವಂಗಳು ತಾವೇನ ಕೊಡುವವೋ. ಏನು ಬೇಡಿದ್ದನೀವ ನಮ್ಮ ಕೂಡಲಸಂಗಮದೇವ.

I- -

ಆವಾಗಲೂ ಲೋಗರ ಮನೆಯ ಬಾಗಿಲ ಕಾಯ್ದುಕೊಂಡಿಪ್ಪವು: ಆವಾಗಲೂ-ಎಲ್ಲಾಗಳೂ, ಲೋಗರ-ಲೋಕದಾತ್ಮರುಗಳ, ಮನೆಯ-ಮಂದಿರದ, ಬಾಗಿಲ-ಭಕ್ತಿದ್ವಾರದ ಕಡೆಬಾಗಿಲವ, ಕಾಯ್ದು ಕೊಂಡಿಪ್ಪವು, ಕೆಲವು ದೈವಂಗಳು-ಹಲವು ಕೆಲವು ದೇವರುಗಳು; ಹೋಗೆಂದಡೆ ಹೋಗವು- ನಾವು ನೈಷ್ಠೆಯುಳ್ಳವರು ನಿಮಗೆ ಅನ್ನ ಉದಕವ ನೀಡೋದಿಲ್ಲವೆಂದು ಮನೆಯ ಬಿಟ್ಟಟ್ಟಿದರೆ ಹೋಗವು; ಬಿಟ್ಟು ಹೋಗಲಾರದೆ ಮಂಡಿಯೂರಿಕೊಂಡು ಅಲ್ಲೆ ಬಿದ್ದಿರ್ಪವು, ಕೆಲವು ದೈವಂಗಳು- ಹಲವು ಕೆಲವು ದೇವರುಗಳು, ನಾಯಿಗಿಂದ ಕರಕಷ್ಟ: ನಾಯಿಗಿಂದ-ಶುನಿಗಿಂದಲೂ, ಕರಕಷ್ಟ- ಅತ್ಯಂತ ಕ್ಷೀಣತ್ವವು ಎಂಬಲ್ಲಿ, ಒಬ್ಬಾನೊಬ್ಬ, ಕಿರಾತನೇನಾದರೂ ಒಂದು ಶುನಿಯನ್ನು ಸಾಕಿಕೊಂಡಿರುವ, ಇದ್ದಲ್ಲಿ, ನಾಲ್ಕೆಂಟು ದಿವಸ ಅಂಬಲಿ ಗಂಜಿಯನ್ನು ಹೊಯ್ಯದೆ ಬಿಟ್ಟಿದ್ದಲ್ಲಿ ಅವನ ಕಡೆಬಾಗಿಲ ಬಿಟ್ಟು ಹೋಗುತ್ತಿಹುದು. ಹಾಂಗೆ, ಕೆಲವು ದೈವಂಗಳು-ಹಲವು ಕೆಲವು ದೇವರುಗಳು, ಹೋಗೆಂದರೆ ಹೋಗದೆ ಅಲ್ಲೇ ಮಂಡಿಯೂರಿಕೊಂಡು ಬಿದ್ದರ್ಪ ಕಾರಣ, ಆ ನಾಯಿಗಿಂದ ಕರಕಷ್ಟ-ಆ ಶುನಿಗಿಂತಲೂ ಅತ್ಯಂತ ಕ್ಷೀಣವಾಗಿಪ್ಪವು, ಕೆಲವು ದೈವಂಹಳು-ಹಲವು ಕಲವು ದೇವರುಗಳು.

ಲೋಗರ-ಲೋಕದಾತ್ಮರುಗಳ, ಬೇಡಿಕೊಂಡುಂಬ-ಅವರ ಪಿಡಿದುಕೊಂಡು ಪೀಡಿಸಿ ನನಗೆ ಹಣ್ಣುಕೊಡು ಕಾಯಿಕೊಡು ಎಂದು ಯಾಚಿಸಿಕೊಂಡು ಅನುಭವಿಸುವ, ದೈವಂಗಳು_ಹಲವು ಕೆಲವು ದೇವರುಗಳು, ತಾವೇನು ಕೊಡುವವೋ-ತಮ್ಮ ಹೊಟ್ಟೆಗೆ ಕಾಣದೆ ಒಬ್ಬರ ಕಾಡಿ ಬೇಡಿ ತಿಂಬ ದೈವಂಗಳಿಗೆ ಒಂದು ಫಲಪದ ಇಷ್ಟಾರ್ಥಸಿದ್ಧಿಯನ್ನು ಕರುಣಿಸಿಕೊಡೆಂದು ಕೇಳಿದರೆ ಕೊಟ್ಟಾವೆ? ಕೊಡಲರಿಯವು, ನಮ್ಮ ಕೂಡಲ ಸಂಗಮದೇವ-ನಮ್ಮ ಪರಶಿವಲಿಂಗವು, ಏನ ಬೇಡಿದ್ದನೀವಃ [ಏನು ಬೇಡಿದ್ದನು-] ಆವುದಾನೊಂದು ಇಷ್ಟಾರ್ಥಸಿದ್ಧಿಯನ್ನು ಬೇಕೆಂದರೂ, ಈವ- ಕರುಣಿಸಿಕೊಡುತ್ತಿಹನು.

೫೫೬

ಗಾಡಿಗ ಡಿಂಬುಗಂಗೆ ಚೆಕ್ಕು ಮುಟ್ಟಿಗೆ ಹಸರಂಬಲಿ ಮುಟ್ಟಿಗೆ ಹುರಿಬುತ್ತಿಯ ಬೇಡಿ, ಮನುಷ್ಯರ ಪಿಡಿದು ಪೀಡಿಸಿ [1]ತಮ್ಮ[1] ಬಸುರಿಂಗೆ ಕೂಳು ಕಾಣದೆ, ಈಡಾಡಿದ ಕೂಳಂಬಲಿಯನಾಯ್ದುಕೊಂಡು

ಕುಱುಕುವ ಹೇಸಿ ದೈವಂಗಳ ಬೇಡಿ ಬೇಡಿ ನಿರರ್ಥಕ ಕೆಡಬೇಡಲವ್ರೊ, ನಮ್ಮ ಕೂಡಲಸಂಗಮದೇವರ ನೆಱೆ ನಂಬುವುದೆಲವೋ.

1–1 ಸಂತಂ: (ಕ).

....

I –

ಗಾಡಿಗ–ಮನೆಯ ಜಗುಲಿಯ ಮೇಲೆ ಕುಳಿತುಕೊಂಡು; ಪೂಜೆ ಕೈಕೊಂಬಂಥದೆ ಗಾಡಿಗನೆಂಬ ಭೂತನು, ಡಿಂಬುಗ–ದನದ ಹಕ್ಕೆಯಲ್ಲಿ ಕುಳಿತುಕೊಂಡು ಪೂಜೆಯ ಕೈಕೊಂಬವಂಥದೀಗ ಡಿಂಬುಗನೆಂಬ ಭೂತನು, ಚೆಕ್ಕು–ಹಲಚೆಗಡಬು, ಮುಟ್ಟಿಗೆ–ಸಜ್ಜಿಮುಟ್ಟಿಗೆ ಜೋಳದಮುಟ್ಟಿಗೆ ಅಕ್ಕಿ ಮುಟ್ಟಿಗೆ, ಹಸರಂಬಲಿ–ಹೆಸರುಕಾಳು, ಹರಿವೆಸೊಪ್ಪನ್ನು ಹಾಕಿ ಮಾಡಿದಂಥದೆ ಹಸರಂಬಲಿ, ಹುರಿಬುತ್ತಿಯ–ಹುರಕ್ಕಿಯ ಹಿಟ್ಟು ಚಿಗಳಿ ತಂಬಿಟ್ಟು ಮೊಸರುಬೋನದ ಬುತ್ತಿ ಸಾಸಿವೆಬೋನದ ಬುತ್ತಿ ಅರಿಷಣ ಬೋನದ ಬುತ್ತಿಯನ್ನು, ಬೇಡಿ–ಯಾಚಿಸಿ, ಮನುಷ್ಯರ–ಆತ್ಮರುಗಳ, ಪಿಡಿದು–ಹಿಡಿದು, ಪೀಡಿಸಿ–ಕಾಡಿಸಿ, ತಮ್ಮ ಬಸುರಿಂಗೆ ಕೂಳು ಕಾಣದ–ತಮ್ಮ ಹೊಟ್ಟೆಗನ್ನವಗಾಣದೆ, ಈಡಾಡಿದ–ಚೆಲ್ಲಾಡಿದ, ಕೂಳು–ಅನ್ನವನ್ನು, ಅಂಬಲಿಯ–ನುಚ್ಚಂಬಲಿ ಆಗುಳಂಬಲಿಯನ್ನು, ಆಯ್ದುಕೊಂಡು–ನಖಾಗ್ರದಿಂದೆತ್ತಿಕೊಂಡು, ಕುಱುಕುವ–ತಮ್ಮ ನಿಜಸ್ವರೂಪದಿಂದ ಬಂದು ತಿಂದರೆ [1][ಆರಾದರೂ][1] ಕಂಡು ಹೆದರಿಕೊಂ[2]ಡಾ[2]ರಲಾಯೆಂದು ಕಾಗಿ ಗೂಗಿ ನಾಯ ನರಿಗಳಾಗಿ ಬಂದನುಭವಿಸುವ, ಹೇಸಿದೈವಂಗಳ–ಜಿಗುಪ್ಸೆಸ್ವರೂಪವಾದ ಕ್ಷೀಣದೈವಂಗಳ, ಬೇಡಿ ಬೇಡಿ–ಫಲಪದ ಇಷ್ಟಾರ್ಥಸಿದ್ಧಿಯನ್ನು ಕರುಣಿಸಿಕೊಂಡುಯೆಂದು ಕೇಳಿ ಕೇಳಿ, ನಿರರ್ಥಕ–ವ್ಯರ್ಥಸ್ಯವಾಗಿ, ಕೆಡಬೇಡೆಲವೊ–ಶಿವತತ್ವ [3]ಕೆಟ್ಟು[3] ಜೀವನಾಗಬೇಡಲವೋ ಆತ್ಮನೆ, ನಮ್ಮ ಕೂಡಲಸಂಗಮದೇವರ–ನಮ್ಮ ಪರಶಿವಲಿಂಗವನ್ನು ನೆಱೆ–ಚೆನ್ನಾಗಿ, ನಂಬುವುದೆಲವೋ–ವಿಶ್ವಾಸಿಸುವುದೆಲವೋ.

....

೧–೧ ಆರನ್ನು (ಕ, ಗ), ೨–೨ಡ (ಕ, ಗ), ೩–೩ ವಳಿದು (ಗ).

III –

ಗಾಡಿಗ ಡಿಂಬುಗನೆಂಬ ಭೂತಗಳೆ.

೫೫೭

ಹಾಳು ಮೊರಡಿಗಳಲ್ಲಿ ಊರದಾರಿಗಳಲ್ಲಿ ಕೆಱೆ ಬಾವಿ ಹೂ ಗಿಡ ಮರಂಗಳಲ್ಲಿ ಗ್ರಾಮದ ಮಧ್ಯದಲ್ಲಿ ಚೌಪಥ ಪಟ್ಟಣ ಪ್ರವೇಶದಲ್ಲಿ ಹಿರಿಯಾಲದ ಮರದಲ್ಲಿ ಮನೆಯ ಮಾಡಿ, ಕಱೆವೆಮ್ಮೆ ಹಸುಗೂಸು ಬಸುಱೆ ಬಾಣತಿ ಕುಮಾರಿ ಕೊಡಗೂಸೆಂಬವರ ಹಿಡಿದುಂಬ ತಿರಿದುಂಬ ಮಾರಯ್ಯ ಬೀರಯ್ಯ ಖೇಚರ ಗಾವಿಲ ಅಂತಱ ಬೆಂತಱ ಕಾಳಯ್ಯ ಧೂಳಯ್ಯ ಮಾಳಯ್ಯ ಕೇತಯ್ಯಗಳೆಂಬ ನೂಱು ಮಡಕೆಗೆ ನಮ್ಮ ಕೂಡಲಸಂಗಮದೇವಂಗೆ ಶರಣೆಂಬುವುದೊಂ[ದೆ] ದಡಿ ಸಾಲದೆ?

I –

ಹಾಳು ಮೊರಡಿಗಳಲ್ಲಿ–ಕೆಲವು ಗುಡ್ಡೆಗಳ ಮೇಲೆ ಮನೆಗಳ ಕಟ್ಟಿ ಆಳುತ್ತಿದ್ದಲ್ಲಿ ಕಾಲಾಂತರ ಮೇಲೆ ದಿನತುಂಬಿ ಗ್ರಾಮಂಗಳು ಹಾಳಾಗಿರ್ಪವು. ಅಂತಪ್ಪ ಹಾಳು ಗ್ರಾಮಂಗಳೆಂಬ ತಿಟ್ಟುಗಳಲ್ಲಿ, ಊರ ದಾರಿಗಳಲ್ಲಿ–ಊರಿಂದೂರಿಗೆ ಹೋಗಿಬರುವ ಮಾರ್ಗದಲ್ಲಿ, ಕೆರೆ[ಗಳಲ್ಲಿ–] ದೊಡ್ಡ ದೊಡ್ಡ ತಟಾಕಂಗಳಲ್ಲಿ, ಬಾವಿಗಳಲ್ಲಿ–ಕೂಪಂಗಳಲ್ಲಿ, ಹೂಗಿಡಂಗಳಲ್ಲಿ–ಪುಷ್ಪವಾಟಿಕೆಗಳಲ್ಲಿ, ಮರಂಗಳಲ್ಲಿ–ದೊಡ್ಡ ಹೆಮ್ಮರಂಗಳಲ್ಲಿ, ಗ್ರಾಮದ ಮಧ್ಯದಲ್ಲಿ–ನಡುವೂರಲ್ಲಿರುವ ಕುರುಹುಗಲ್ಲುಗಳಲ್ಲಿ, ಚೌಪಥ ಪಟ್ಟಣ–ನಾಲ್ಕುದಾರಿ ಕೂಡಿದ ಪಟ್ಟಣದ, ಪ್ರವೇಶದಲ್ಲಿ–ಪೊರವಳಯಲ್ಲಿ, ಹಿರಿಯಾಲದ ಮರದಲ್ಲಿ–ದೊಡ್ಡಿತ್ತಾದ ವಟವೃಕ್ಷದಲ್ಲಿ, ಮನೆಯ ಮಾಡಿ–ಆಲಯವ ಮಾಡಿಕೊಂಡು, ಕಱೆವೆಮ್ಮೆಯ–ಕರೆವಂಥ ಮಹಿಷಿಗಳನ್ನು, ಹಸುಗೂಸು–ಎಳೆಯ ಶಿಶುವು, ಬಸುಱೆ ಬಾಣತಿಃ [ಬಸುಱೆ–] ಗರ್ಭಿಣಿಯಾದಂಥ ಸ್ತ್ರೀಯಳು, ಬಾಣತಿ–ಹಡೆದು ಹೊಳೆಮೆಟ್ಟುವಂಥ ಸ್ತ್ರೀಯಳು, ಕುಮಾರಿ–ಹನ್ನೆರಡು ವರುಷದ ಬಾಲಕುಮಾರಿಯರು, ಕೊಡಗೂಸೆಂಬವರ–ಏಳು ವರುಷದ ಕೊಡಗೂಸೆಂದು ಹೇಳುವಂಥವರ, ಹಿಡಿದು–ಪಿಡಿದುಕೊಂಡು, ಉಂಬ–ಅನುಭವಿಸುವ, ತಿರಿದುಂಬ–ನನಗೆ ಹಣ್ಣುಕೊಡು ಕಾಯಿಕೊಡೆಂದು ಮನೆ ಮನೆದಪ್ಪದ ಹಾಂಗೆ ಯಾಚಿಸಿಕೊಂಡನುಭವಿಸುವ, ಮಾರಯ್ಯ–ಮಾರಯ್ಯನೆಂಬ ಭೂತನು. ಬೀರಯ್ಯ–ಬೀರಯ್ಯನೆಂಬ ಭೂತನು, ಖೇಚರ–ಖೇಚರನೆಂಬ ಭೂತನು, ಗಾವಿಲ–ಗಾವಿಲಹೆಂಬ ಭೂತನು, ಅಂತಱ–ಅಂತರನೆಂಬ ಭೂತನು, ಬೆಂತಱ–ಬೆಂತನೆಂಬ ಭೂತನು, ದೂಳಯ್ಯ–ಧೂಳಯ್ಯನೆಂಬ ಭೂತನು, ಮಾಳಯ್ಯ–ಮಾಳಯ್ಯನೆಂಬ ಭೂತನು, ಕಾಳಯ್ಯ–ಕಾಳಯ್ಯನೆಂಬ ಭೂತನು, ಕೇತಯ್ಯ–ಕೇತಯ್ಯನೆಂಬ ಭೂತನು, ಎಂಬ–ಹೀಂಗೆಂದು ಹೇಳುವ, ನೂಱು ಮಡಕೆಗೆ–ನೂರು ದೈವಂಗಳೆಂಬ ಭಾಂಡಂಗಳನು ಭಗ್ನವ ಮಾಡುವುದಕ್ಕೆ, ನಮ್ಮ ಕೂಡಲಸಂಗಮದೇವಂಗೆ–ನಮ್ಮ ಪರಶಿವಲಿಂಗಕ್ಕೆ, ಶರಣೆಂಬುವುದೊಂ[೧][ದೆ][೧] ದಡಿ ಸಾಲದೆ? [ಶರಣೆಂಬುವುದೊಂದೆ–] ಲಿಂಗಪೂಜೆಯ ಮಾಡಿ ಲಿಂಗಕ್ಕೆ ನಮಸ್ಕರಿಸುವಂಥದೊಂ[೨][ದೆ][೨] ದಡಿ ಸಾಲದೆ?–ಒಂದು ದೊಣ್ಣೆ ಸಾಲದೆ?

....

೧–೧ x (ಕ, ಗ).

೫೫೮

ಅರಗು ತಿಂದು ಕರಗುವ ದೈವವ ಎಂತು ಸರಿಯೆಂಬೆನಯ್ಯ. ಉರಿಯ ಕಂಡಡೆ ಮುರುಟುವ ದೈವವ ಎಂತು ಸರಿಯೆಂಬೆನಯ್ಯ, ಅವಸರ ಬಂದಡೆ ಮಾಱುವ ದೈವವ ಎಂತು ಸರಿಯೆಂಬೆನಯ್ಯ. ಅಂಜಿಕೆಯಾದಡೆ ಹೂಳುವ ದೈವವ ಎಂತು ಸರಿಯೆಂಬೆನಯ್ಯ. ಸಹಜಭಾವ ನಿಜೈಕ್ಯ ಕೂಡಲಸಂಗಮದೇವನೊಬ್ಬನೆ ದೇವ.

III– –

ಅರಗು ತಿಂದು ಕರಗುವ ದೈವವ ಎಂತು ಸರಿಯೆಂಬೆನಯ್ಯ–ಲೋಕದಲ್ಲಿ ಆತ್ಮರುಗಳು ಚಿನ್ನ ಬೆಳ್ಳಿ ದೇವರನ್ನು ಮಾಡಿಕೊಡೆಂದು ಕಾರಕನೊಂದಿಗೆ ಕೊಟ್ಟಲ್ಲಿ, ಆ ದೈವವನ್ನು ಮಾಡುಮಾಡುತ್ತ

ಅದರ ಹೊಟ್ಟೆಯೊಳಗೆ ಅರಗನ್ನು ತುಂಬುವರು ತುಂಬಿದಲ್ಲಿ ದಿನಂಪ್ರತಿಯಲ್ಲಿ, ಅರಗು ತಿಂದು-ಲಾಕ್ಷವನನುಭವಿಸಿ, ಕರಗುವ-ಸಣ್ಣಿಸುವ, ದೈವವ-ದೇವರುಗಳನ್ನು, ಎಂತು ಸರಿಯೆಂಬೆನಯ್ಯ-ಶಿವನಿಗೆ ಸಮಾನವೆಂದು ಹೇಂಗೆ ಹೇಳುವೆನಯ್ಯ, ಉರಿಯ ಕಂಡಡೆ ಮುರುಟುವ ದೈವವ- ಆ ಹಳೆಯ ನಗವನ್ನು ಮತ್ತೆ ಹೊಸದಾಗಿ ದೇವರನ್ನು ಮಾಡಿಕೊಡೆಂದು ಕಾರಕನೊಂದಿಗೆ ಕೊಟ್ಟಲ್ಲಿ ಅದನ್ನು ತೆಗೆದುಕೊಂಡು ಅಡ್ಡಗಲ್ಲ-ಮೇಲಿಟ್ಟು ಚಮ್ಮಟಿಗಿಲಿಂದ ಜಜ್ಜಿಕುಟ್ಟಿ ಮೂಸೆಯೊಳಗೆ ಹಾಕಿ ಬೆಂಕಿಯಲಿಟ್ಟು ಊದಿದಲ್ಲಿ ಒಂದಾನೊಂದು ಶುಷ್ಕ ಪರ್ಣದೋಪಾದಿಯಲ್ಲಿ ಮುರುಟುಗೊಂಡು ಹೋಗುವ, ದೈವವ-ದೇವರುಗಳನು, ಎಂತು ಸರಿಯೆಂಬೆನಯ್ಯ-ಶಿವನಿಗೆ ಸಮಾನವಾದ ದೈವವೆಂದು ಹೇಂಗ ಹೇಳುವೆನಯ್ಯ. ಅವಸರ ಬಂದಡೆ-ಇಟ್ಟೆಡೆ ಮುಟ್ಟೆಡೆ ಬಂದರೆ, ಮಾಱುವ ದೈವವ-ಹತ್ತು ವರಹದ್ದಾದರೆ ಐದು ವರಹಕ್ಕೆ, ಐದು ವರಹದ್ದಾದರೆ ಮೂರು ವರಹಕ್ಕೆ, ಮೂರು ವರಹದ್ದಾದರೆ ಎರಡು ವರಹ, ಎರಡು ವರಹದ್ದಾದರೆ ಒಂದು ವರಹಕ್ಕೆ, ಮಾಱುವ-ವಿಕ್ರಯಿಸುವ, ದೈವವ-ದೇವರುಗಳನ್ನು, ಎಂತು ಸರಿಯೆಂಬೆನಯ್ಯ-ಶಿವನಿಗೆ ಸಮಾನವಾದ ದೈವವೆಂದು ಹೇಂಗೆ ಹೇಳುವೆನಯ್ಯ, ಅಂಜಿಕೆಯಾದಡೆ-ರಾಜಭಯ ಚೋರಭಯ ಅಗ್ನಿಭಯ ಬಂದರೆ, ಹೂಳುವ-ತಿಪ್ಪೆಗುಂಡಿಯ ಸ್ಥಾನ ತಾರಕಂಬಿಯ ಸ್ಥಾನ ಚಾರತಂಬಿಯ ಸ್ಥಾನವೆಂಬ ಅಪಮಿತ್ರವಾದ ಭೂಮಿಯಲ್ಲಿ ನಿಕ್ಷೇಪವ ಮಾಡಿಸಿಕೊಂಬಂಥ, ದೈವವ-ದೇವರುಗಳನು, ಎಂತು ಸರಿಯೆಂಬೆನಯ್ಯ-ಶಿವನಿಗೆ ಸಮಾನವಾದ ದೈವವೆಂದು ಹೇಂಗೆ ಹೇಳುವೆನಯ್ಯ. ಸಹಜಭಾವ-ತನ್ನ ಭಕ್ತರುಗಳ ಅಂಗ ಮನ ಆತ್ಮಾಂಗದಲ್ಲಿ ಇಷ್ಟ ಪ್ರಾಣ ಭಾವಲಿಂಗವಾಗಿ ನೆಲೆಗೊಂಡಿರುವಂಥ ಸ್ವಭಾವವು, ನಿಜೈಕ್ಯ-ಅಂತಪ್ಪ ಭಕ್ತರುಗಳ ಅಂಗವೇ ಇಷ್ಟಲಿಂಗದಲ್ಲಿ ಮನವೇ ಪ್ರಾಣಲಿಂಗದಲ್ಲಿ ಆತ್ಮನೇ ಭಾವಲಿಂಗದಲ್ಲಿ ಕೂಡಿರುವಂಥ ಏಕರಸವು, ಕೂಡಲಸಂಗಮದೇವ-ಪರಶಿವಲಿಂಗವು, ಒಬ್ಬನೇ ದೇವ-ಓರ್ವನೇ ಕರ್ತನು.

೫೫೯

ಮಾರಿಕವ್ವೆಯ ನೋಂತು ಕೊರಳಲ್ಲಿ ಕಟ್ಟಿಕೊಂಬರಯ್ಯ. ಸಾಲಬಟ್ಟಡೆ ಮಾಱಿಕೊಂಬುವರಯ್ಯ! ಸಾಲಬಟ್ಟಡೆ ಅವನೊತ್ತೆಯನಿಟ್ಟು ಕೊಂಡುಂಬರಯ್ಯ! ಮಾಱುಹೋಗ ಒತ್ತೆಯ ಹೋಗ ನಮ್ಮ ಕೂಡಲಸಂಗಮದೇವ.

I –

ಮಾರಿಕವ್ವೆಯ-ಮಾರಿಕವ್ವೆಯೆಂಬ ಭೂತನ್ನು, ನೋಂತು-ಪೂಜಿಸಿ, ಕೊರಳಲ್ಲಿ-ಕಂಠದಲ್ಲಿ, ಕಟ್ಟಿಕೊಂಬರಯ್ಯ-ಸರದಾಳಿಯ ಮಾಡಿ ಹಾಕಿ ಕೊಂಬುವರಯ್ಯ, ಸಾಲಬಟ್ಟಡೆ-ರಿಣಸ್ತರಾದರೆ; ಆ ಮಾರಿಕವ್ವೆಯ, ಮಾರಿಕೊಂಬುವರಯ್ಯ-ವಿಕ್ರಯಿಸಿಕೊಂಬುವರಯ್ಯ; ಸಾಲಬಟ್ಟಡೆ-ರಿಣಸ್ತರಾದರೆ, ಅವನೊತ್ತೆಯ ನಿಟ್ಟು-ಆ ದೇವರುಗಳ ತೆಗೆದುಕೊಂಡುಹೋಗಿ ಹರದರಲ್ಲಿ ಒತ್ತೆಯ ಮಡಗಿ ಅದರಿಂದ ಬಂದಂಥ ಹಣವನ್ನು ತಂದು, ಕೊಂಡುಂಬರಯ್ಯ-ಅಕ್ಕಿ ಬೇಳೆ ಬೆಲ್ಲ ಕಣಕ ತುಪ್ಪ ಸಕ್ಕರಿ ಕಾಯಿಸೊಪ್ಪು ಮೊದಲಾದ ಎಲ್ಲವನು ತೆಗೆದುಕೊಂಡು ಬಂದು ಪಾಕ ಪ್ರಯತ್ನಂಗಳ ಮಾಡಿಕೊಂಡು, ಉಂಬುವರಯ್ಯ-ತಮ್ಮ ಘಟರಕ್ಷಣ್ಯವ ಮಾಡಿಕೊಂಬುವರಯ್ಯ; ನಮ್ಮ

ಕೂಡಲಸಂಗದೇವ-ನಮ್ಮ ಪರಶಿಲಿಂಗವು, ಮಾಱಿ ಹೋಗ-ವಿಕ್ರಯಿಸಿಕೊಂಡು ಹೋಗುವಾತನಲ್ಲವು, ಒತ್ತೆಯ ಹೋಗ-ಒತ್ತೆಯನ್ನು ಹಾಕಿಸಿಕೊಂಬು ವಾತನಲ್ಲವು.

೫೬೦

ಉಣಲುಡಲು ಮಾರಿಯಲ್ಲದೆ ಕಾಯಲು ಕೊಲ್ಲಲು ಮಾರಿಯೇ? ತನ್ನ ಮಗನ ಜವನೊಯ್ವಲ್ಲಿ ಅಂದೆತ್ತ ಹೋದಳೊ ಮಾರಿಕವ್ವೆ? ಈವೊಡೆ ಕಾವೊಡೆ, ನಮ್ಮ ಕೂಡಲಸಂಗಮದೇವನಲ್ಲದೆ ಮತ್ತೊಂದು ದೈವವಿಲ್ಲ.

I -

ಉಣಲು-ಶುಕ್ರವಾರ ಶನಿವಾರ ಹುಣ್ಣಿಮೆ ಅಮವಾಸ್ಯೆ ಹಬ್ಬ ತಿಥಿಗಳಲ್ಲಿ ಕುರಿಕೋಣಗಳ ಕಡಿಸಿಕೊಂಡು ಹೋಳಿಗೆ ಹುಗ್ಗಿ ತುಪ್ಪ ಸಕ್ಕರೆ ಮೊದಲಾದವನ್ನು ಅನುಭವಿಸುವುದಕ್ಕೆ, ಉಡಲು-ಸಣ್ಣಸೀರೆ ಬಣ್ಣದ ಕುಪ್ಪಸ ಮೊದಲಾದವನು ಅಚ್ಛಾದಿಸಕೊಂಬುವುದಕ್ಕೆ, ಮಾರಿಯಲ್ಲದೆ-ಇಂತಿವಕ್ಕೆ ಮಾರಿಯಲ್ಲದೆ, ಕಾಯಲು-ಅವರಿಗೆ ಬಂದಂಥ ಎಡರು ಕಂಟಕ ವಿಘ್ನಾದಿಗಳನು ಪರಿಹರಿಸಿ ಇಷ್ಟಾರ್ಥಸಿದ್ಧಿಯನ್ನು ಕೊಟ್ಟು ರಕ್ಷಿಸುವುದಕ್ಕೆ, ಕೊಲಲು-ಪ್ರಾಣವನ್ನು ಸಂಹರಿಸಲು, ಮಾರಿಯೇ-ಉಂಬುಡುವುದಕ್ಕೆ ಮಾರಿಯಲ್ಲದೆ ಇಂತಿವಕ್ಕೆ ಮಾರಿಯೇ? ಅಲ್ಲವು. ತನ್ನ ಮಗನ ಜವನೊಯ್ವಲ್ಲಿ-ತನ್ನ ಕುಮಾರನಾದ ಜೋಕುಮಾರನ ಹುಟ್ಟಿದೇಳುದಿವಸಕ್ಕೆ ಯಮನು ಮರಣವನ್ನೈದಿಸುವಲ್ಲಿ, ಮಾರಿಕವ್ವೆ-ಮಾರಿಕವ್ವೆಯೆಂಬ ಭೂತನು. ಅಂದೆತ್ತ ಹೋದಳೊ-ಅಂದಾಪಂಡೆಗೆ ಹೋದಳೋ, ಕಾವೊಡೆ-ಅವರಿಗೆ ಬಂದಂಥ ಎಡರು ಕಂಟಕ ವಿಘ್ನಾದಿಗಳನು ಪರಿಹರಿಸುವುದಕ್ಕೆ, ಈವೊಡೆ-ಇಷ್ಟಾರ್ಥಸಿದ್ಧಿಯನ್ನು ಕುರುಣಿಸಿಕೊಡುವುದಕ್ಕೆ, ನಮ್ಮ ಕೂಡಲಸಂಗಮದೇವನಲ್ಲದೆ-ನಮ್ಮ ಪರಶಿವಲಿಂಗವಲ್ಲದೆ, ಮತ್ತೊಂದು ದೈವವಿಲ್ಲ-ಅಂತಃಪರ ಮತ್ತೊಂದು ದೇವರುಗಳುಂಟಾಗಿಲ್ಲವು.

೫೬೧

ಮೊಱಿನ ಗೋಟಿಗೆ ಬಪ್ಪ ಕಿಱುಕುಳ ದೈವಕ್ಕೆ ಕುಱಿಯನಿಕ್ಕಿಹೆವೆಂದು ನಲಿನಲಿದಾಡುವರು; ಕುಱಿ ಸತ್ತು ಕಾವುದೆ ಹರಮುನಿದವರ? ಕುಱಿ ಬೇಡ ಮಱಿಬೇಡ ಬಱಿಯ ಪತ್ರೆಯ ತಂದು ಮಱಿಯದೆ ಪೂಜಿಸು ನಮ್ಮ ಕೂಡಲಸಂಗಮದೇವನ.

I -

ಮೊಱಿನ ಗೋಟಿಗೆ ಬಪ್ಪ-ಲೋಕದಲ್ಲಿ ಆತ್ಮರುಗಳಿಗೆ ನಿತ್ಯ ಜ್ವರ ಚಳಿ ಸೀತಾಳ ಸಿಡಬು ನಾಗಜ್ವರ [೧]ಚತುರ್ಥಿ[೧]ಜ್ವರ ಮೊದಲಾದವು ಬಂದು ಕಾಡುತಿದ್ದಲ್ಲಿ [೨]ಕಣಿ[೨]ಹೇಳುವರ ತಾವಕ್ಕೆ ವೀಳ್ಯೆಫಲಾಹಾರ ಧೂಪಗಾಣಿಕೆ ಮೊದಲಾದುವನ್ನು ತೆಗೆದುಕೊಂಡು ಹೋಗಿ ಮುಂದಿಟ್ಟು ಕೇಳಿಕೊಂಡಲ್ಲಿ ಆ [೨]ಕಣಿ[೨]ಹೇಳುವಂಥವರೇನಾದರೂ ಮೊರದೊಳಗೆ ಒಂದೀಸು ಅಕ್ಕಿಕಾಳನ್ನು ಹಾಕಿಕೊಂಡು [೩]ನಿಂಬಿಹಣ್ಣನ್ನು ಮಡಗಿಕೊಂಡು ಕೈಯಲ್ಲಿ ಬೆತ್ತವನ್ನು ಹಿಡಿದುಕೊಂಡು ಚಿಟಿಕೆಯನ್ನು ಹಾಕಿ ಹಾಕಿ ಆಕಳಿಸುತ್ತ ಮೈ ಒಡ್ಡಮುರಿವುತ್ತ ನೂರಾರು ದೈವವನ್ನು ನೆನೆದು, ಮೊಱಿನ-ಶೂರ್ಪನ, ಗೋಟಿಗೆ-ಅರಣಗೆ, ಬರುವ-ಬಪ್ಪ, ಕಿಱುಕುಳದೈವಕ್ಕೆ-ಸ್ವಕಲ್ಪಿತವಾದ ಕ್ಷೀಣದೇವರುಗಳಿಗೆ,

ಕುಜೆಯನಿಕ್ಕಿಹೆವೆಂದು–ಕುರಿಯನ್ನು ಕೊಡುತ್ತೈದೇವೆನುತ್ತ, ನಲಿನಲಿದಾಡುವರು–ನಿಮ್ಮ ದೈವವಾದಂಥದು ಇಂಥದೈವ, ಕುರಿಯ ಕೊಟ್ಟಿಹೆವೆಂದು ಹುಸಿದಿದ್ದರಿಯೆಂದು ಹೇಳಿದಲ್ಲಿ ನಲಿನಲಿದಾಡುವರು. ನಮ್ಮ ದೇವರು ನಮಗೆ ಪ್ರಸನ್ನವಾಗಿ ನಮ್ ಕೂಡ ಮಾತನಾಡುತ್ತೈತೆಯೆಂದು ಕುರಿಮರಿಯನ್ನು ಅಹುತಿಯ ಕೊಟ್ಟಿಹೆವೆನುತ್ತ ಎಡಕ್ಕೆ ಬಲಕ್ಕೆ ಹಿಂದಕ್ಕೆ ಮುಂದಕ್ಕೆ ತೊನೆತೊನೆದಾಡುವರು, ಹರ ಮುನಿದದವರ–ಪರಮೇಶ್ವರನು ಕೋಪಿಸಿ ಮರಣವನ್ನೈದಿಸುವಂಥ ಅಜ್ಞಾನ ಜೀವರುಗಳನ್ನು, ಕುಜೆ ಸತ್ತು ಅಜಪಶು ಮೃತವಾಗಿ, ಕಾವುದೇ?–ರಕ್ಷಣ್ಯವ ಮಾಡೀತೆ? ಮಾಡದು, ಕುಜೆಬೇಡ–ಅಜಪಶುವನ್ನು ಆಹುತಿಯ ಕೊಡಬೇಡವು, ಮಱಿಬೇಡ–ಕೋಳಿಮರಿಯನ್ನು ಆಹುತಿಯ ಕೊಡಬೇಡವು, ಬಜೆಯ ಪತ್ರೆಯ ತಂದು–ನಿರ್ಮಲವಾದ ಪತ್ರ ಪ್ರಸೂನಂಗಳನು ಆಗುಮಾಡಿಕೊಂಡು ಬಂದು, ಮಜೆಯದೆ–ತ್ರಿಕಾಲಂಗಳಲ್ಲಿ ಲಿಂಗಪೂಜೆಯ ಮಾಡುವಂಥದನ್ನು ವಿಸ್ಮೃತಿಯನ್ನೈದಿಸದೆ, ಪೂಜಿಸು ನಮ್ಮ ಕೂಡಲಸಂಗಮದೇವನ–ಇಷ್ಟಮಹಾಲಿಂಗವನ್ನು ಅಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳಿಂದಾರಾಧಿಸಿ ಇಷ್ಟಾರ್ಥಸಿದ್ಧಿಯನ್ನು ಹಡೆದುಕೋ.

....

೧–೧ ಚತುರ್(ಗ), ೨–೨ ಕಾಣಿ (ಕ, ಗ), ೩+ತನ (ಗ).

೫೬೨

ಬನ್ನಿರೆ ಅಕ್ಕಗಳು, ಹೋಗಿರೆ ಆಲದ ಮರಕ್ಕೆ, ಕಚ್ಚುವುವೇ ನಿಮ್ಮ ಚಿಪ್ಪಿನ ಹಲ್ಲುಗಳು? ಬೆಚ್ಚಿಸುವವೆ ನಿಮ್ಮ ಬಚ್ಚಣಿಯ ರೂಹುಗಳು? ನಮ್ಮ ಕೂಡಲಸಂಗಮದೇವನಲ್ಲದೆ ಪರದೈವಂಗಳು ಮನಕ್ಕೆ ಬಂದಾವೆ, ಬಿಕ್ಕನೆ ಬಿರಿವ ದೈವಂಗಳು?

I –

ಬನ್ನಿರೆ ಅಕ್ಕಗಳು–ವೀರಶೈವ ಸಂಪನ್ನರಾದ ಸ್ತ್ರೀಯರುಗಳಿದ್ದೆಡೆಗೆ ಅನ್ಯದೈವದ ಭಜನೆಯ ಮಾಡುವಂಥ ಸ್ತ್ರೀಯರುಗಳು ಬಂದರೆ, ಅಕ್ಕಗಳು–ಅನ್ಯದೈವದ ಭಜನೆಯ ಮಾಡುವಂಥ ಅಗ್ರ[ಜೆಯ]ರು, ಬನ್ನಿರೆ–ಈಚೆಗೆ ಎಯ್ದು ಬನ್ನಿರೆ ಎಂದು ಅವರ ಕೂಡ ಪ್ರಸಂಗವನಾಡುವ ನೆವದಿಂದ ಹಾಸ್ಯವ ಮಾಡುತ್ತಿಹರು. ಹೋಗಿರೆ ಆಲದ ಮರಕ್ಕೆ–ನಿಮ್ಮ ದೈವನಿರುವಂಥ ವಟವೃಕ್ಷಕ್ಕೆ ಹೋಗಿರೆಯೆಂದು ಅವರಕೂಡ ಪ್ರಸಂಗವಾಡುವ ನೆವದಿಂದ ಹಾಸ್ಯವ ಮಾಡುತ್ತಿಹರು. ಕಚ್ಚುವುದೇ–ನಿಮ್ಮ ಚಿಪ್ಪಿನ ಹಲ್ಲುಗಳು?–ತೆಂಗಿನಚಿಪ್ಪು ಕಪ್ಪೆಚಿಪ್ಪುಗಳಿಂದ ರಚಿಸಿದಂಥ ರದನಂಗಳು ನಿಮಗೆ ಕಚ್ಚುವುದಕ್ಕೆ ಬರೋದಿಲ್ಲವೆ? ಎಂದು ಅವರ ಕೂಡ ಪ್ರಸಂಗವಾಡುವ ನೆವದಿಂದ ಅವರ ದೈವಂಗಳ ಹಾಸ್ಯವಮಾಡಿ ನುಡಿವುತ್ತಿಹರು. ಬೆಚ್ಚಿಸುವವೆ ನಿಮ್ಮ ಬಚ್ಚಣಿಯ ರೂಹುಗಳು?–ಇಂಗಳಿಕ ಅರದಾಳ ಮೊದಲಾದ ಪಂಚವರ್ಣಿಗೆಯಿಂದ ಮಾಡಿದಂಥ ಬೊಂಬೆಗಳಿಗೆ ನೀವು ಪೂಜಿಸುವುದಕ್ಕೆ ಹೋದರೆ ಹೌ ಹೌ ಎಂದು ಹೆದರಿಸೋದಿಲ್ಲವೆ? ಎಂದು ಅವರ ಕೂಡ ಪ್ರಸಂಗವಾಡುವ ನೆವದಿಂದ ಅವರ ದೈವಂಗಳ ಹಾಸ್ಯವ ಮಾಡಿ ನುಡಿವುತ್ತಿಹರು.

ನಮ್ಮ ಕೂಡಲಸಂಗಮದೇವನಲ್ಲದೆ–ನಮ್ಮ ಪರಶಿವಲಿಂಗವಲ್ಲದೆ, ಪರದೈವಂಗಳು–ನೀಚ ದೈವಂಗಳು, ಮನಕ್ಕೆ ಬಂದಾವೆ–ವೈಜಕವ್ವೆಯೆಂಬ ಶರಣಸ್ತ್ರೀಯಳು ಮನೆಯಲ್ಲಿ ಲಿಂಗಪೂಜೆಯ ಮಾಡುತ್ತಿದ್ದಲ್ಲಿ ಅತ್ತೆ ಮಾವಂದಿರು 'ನಮ್ಮ ಕುಲದಲ್ಲಿ ಜಿನನಲ್ಲದೆ ಅನ್ಯದೈವದ ಭಜನೆಯ ಮಾಡಬಾರದು,

ನಮ್ಮ ಜಿನನಪೂಜಿಸೆಂದು ಕೋಪಿಸಿ ಬೈದು ಹೊಯಿದು ಶಿಕ್ಷಿಸಿದಲ್ಲಿ ಆಗ ಅತ್ತೆ ಮಾವನ ಕಾಟ ತಾಳಲಾರದೆ ಓಡಿಹೋಗಿ ಹಿರೇಬಸ್ತಿಯಲ್ಲಿರುವ ಜಿನ್ನನ ತರ್ಕೈಸಿಕೊಂಡಲ್ಲಿ ಒಂದುಕೋಟಿ ಸಿಡಿಲಾರ್ಭಡಿಸಿದೋಪಾದಿಯಲ್ಲಿ, ಬಿಕ್ಕನೆ–ಗಮ್ಮನೆ, ಬಿರಿವ–ಸೀಳುವ. ದೈವಂಗಳು ?–ದೇವರುಗಳು, ವೈಜಕ್ಕವ್ವೆಯೆಂಬ ಶರಣ ಸ್ತ್ರೀಯಳಿಗೆ ಸೊಗಸಿಯಾವೆ? ಸೊಗಸವು.

....

೧ + ನಮ್ಮ ದೇವರು (ಗ).

೫೬೩

ಮಡಿಕೆ ದೈವ, ಮೊಱ ದೈವ, ಬೀದಿಯ ಕಲ್ಲು ದೈವ, ಹಣಿಗೆ ದೈವ, ಬಿಲ್ಲ ನಾರಿ ದೈವ ಕಾಣಿರೊ! ಕೋಲು ದೈವ, ಕೊಳಗ ದೈವ, ಗಿಣಿಲು ದೈವ ಕಾಣಿರೊ! ದೈವದೈವವೆಂದು ಕಾಲಿಡಲಿಂಬಿಲ್ಲ. ದೇವನೊಬ್ಬನೆ ನಮ್ಮ ಕೂಡಲಸಂಗಮದೇವ.

I –

ಮಡಕೆ ದೈವ–ಭುವನಕೋಶದಲ್ಲಿ ಸಮಸ್ತದೈವನಾಗಿಪ್ಪವು ಎಂಬಲ್ಲಿ, ಲೋಕದಲ್ಲಿ ಆತ್ಮರುಗಳು ಭಾಂಡಂಗಳಲ್ಲಿ ಪಾಕಪ್ರಯತ್ನಂಗಳನು ಮಾಡಿ ನಿಮ್ಮಲ್ಲಿ ಹೊತ್ತು ಪಡಿಯಂತರ ಅಡಿಗೆ ಮಾಡಿದೆವೆಂದು ಹೆಗಲ ತೊಳೆದು ಬೂದಿಯ ಕಟ್ಟನ್ನು ಬರೆದು, ನಮ್ಮ ಕಾಲು ತಗಲಿದವು ಕೈತಗಲಿದವೆಂದು ನಮಸ್ಕರಿಸಿ ಒತ್ತಟ್ಟಿಗೆ ಮಡುಗುತ್ತಿಹರು. ಅದಲ್ಲದೆ ಐರಾಣಿ ಗಡಿಗೆ ಜಕ್ಕಣಿಯರ ಗಡಿಗೆ ಮೊದಲಾದವನ್ನು ದೇವರೆಂದು ಆರಾಧಿಸಿ ನಮಸ್ಕರಿಸುತ್ತಿಹರು. ಮೊಱದೈವ–ಹದಿನೆಂಟು ಧಾನ್ಯಂಗಳನು ಕೇರುವಂಥ ಶೂರ್ಪನೇನಾದರೂ ಕೇರೋತನಕ ಕೇರಿ ಕಡೆಯಲ್ಲಿ ಇಷ್ಟು ಹೊತ್ತುತನಕ ಕುಟ್ಟಿ ಬೀಸಿ ಕೇರುವಾಗ ಕಾಲುತಗಲಿದವು ಕೈತಗಲಿದವೆಂದು ನಮಸ್ಕರಿಸಿ ದೇವರೆಂದು ಭಾವಿಸಿ ಒತ್ತಟ್ಟಿಗೆ ಮಡಗುತ್ತಿಹರು. ಬೀದಿಯ ಕಲ್ಲು ದೈವ–ಗ್ರಾಮದ ಮಧ್ಯದಲ್ಲಿರುವಂಥ [೧]ಕುರುಹು[೧]ಗಲ್ಲನ್ನು ಹತ್ತೆಂಟು ಕೊಡ ಉದಕವ ನೀಡಿ ಅದನ್ನು [೨]ದೇವರೆಂದಾರಾಧಿಸಿ[೨] ನಮಸ್ಕರಿಸುತ್ತಿಹರು. ಹಣಿಗೆ ದೈವ–ಜಾಡರುನೆಯ್ವಂಥ ಹಣಿಗೆಯನ್ನು ಕೆಚ್ಚೋತನಕ್ಕೆ ಕೆಚ್ಚಿ ಕಡೆಯಲ್ಲಿ ಇಷ್ಟು ಹೊತ್ತು ಪರಿಯಂತರ ಕಾಲಲಿ ಮೆಟ್ಟಿ ಉಗುಳ ಹಚ್ಚಿ ಹೊಳಚಿದೇವೆ ಎಂದು ಅದನ್ನು ದೇವರೆಂದು ಭಾವಿಸಿ ನಮಸ್ಕರಿಸುತ್ತಿಹರು. ಬಿಲ್ಲ ನಾರಿ ದೈವ–ಕಿರಾತರುಗಳೇನಾದರೂ ಮಿಟ್ಟೆ ಅಂಬನ್ನು ಕಾಲಲಿ ತುಳಿದು ಕೈಯಲ್ಲಿ ಬಗ್ಗಿಸಿ ಹೆದೆಯನ್ನು ಏರಿಸಿ ನಮಸ್ಕಾರವನ್ನು ಮಾಡಿ ಕೈಯಲ್ಲಿ ಪಿಡಿದುಕೊಂಬುತ್ತಿಹರು, ಕಾಣಿರೋ–ಕಂಡಿರೋ.

ಕೊಳಗದೈವ–ಹದಿನೆಂಟು ಧಾನ್ಯಗಳನ್ನು ಅಳೆವಲ್ಲಿ ನಮ್ಮ ಕಾಲು ತಗಲಿದವು ಕೈತಗಲಿದವೆಂದು ನಮಸ್ಕರಿಸಿ ದೇವರೆಂದು ಭಾವಿಸುತ್ತಿಹರು. ಕೋಲುದೈವ ಗಿಣಿಲುದೈವ–ಚರಂತಿ ದೇವರು ಅತೀತ ದೇವರು ಆರಾಧ್ಯ ದೇವರು ಮೊದಲಾದವರು ದಂಡ ಗಿಣಿಲುಶಂಖವನ್ನು ಒಂದು ಗರ್ದುಗೆಯ ಮೇಲೆ ಮಡಗಿ ಅದಕ್ಕೂ ಪತ್ರ ಪುಷ್ಪಗಳಿಂದಾರಾಧಿಸಿ ಅದನ್ನು ದೇವರೆಂದು ಭಾವಿಸುತ್ತಿಹರು, ಕಾಣಿರೊ–ಕಂಡಿರೊ. ದೈವ ದೈವವೆಂದು–ದೇವರು ದೇವರುಯೆನುತ್ತ, ಕಾಲಿಡಲು–ಹೆಜ್ಜೆಯ ನಿಕ್ಕಿ ಚರಿಸುವುದಕ್ಕೆ, ಇಂಬಿಲ್ಲ–ತೆರಪಿಲ್ಲವು, ದೇವನೊಬ್ಬನೆ–ಕರ್ತನೊರ್ವನೆ, ನಮ್ಮ ಕೂಡಲಸಂಗಮದೇವ–ನಮ್ಮ ಪರಶಿವಲಿಂಗವು.

....

೧+೧ ಕರು {ಕ}; ಕರುವು (ಗ); ೨–೨ ದೇವರೆಂದು ಭಾವಿಸಿ (ಗ).

III –

ಬೀದಿಯ ಕಲ್ಲು–ಕುರುಗಲ್ಲು, ಹಣೆಗೆ–ತಲೆಯ ಸಿಕ್ಕ ಬಿಡಿಸುವ ಸೀರಣಿಗೆಯು.

೫೬೪

ರಿಣತಪ್ಪಿದ ಹೆಂಡತಿಯಲ್ಲಿ, ಗುಣತಪ್ಪಿದ ನಂಟನಲ್ಲಿ, ಜೀವವಿಲ್ಲದ ದೇಹದಲ್ಲಿ ಫಲವೇನು? ಆಳ್ದನೊಲ್ಲದ ಆಳಿನಲ್ಲಿ, ಸಿರಿ ತೊಲಗಿದ ಅರಸಿನಲ್ಲಿ, ವರನಿಲ್ಲದ ದೇವರಲ್ಲಿ ಫಲವೇನು? ಕಳಿತ ಹೂವಿನಲ್ಲಿ [1]ಕೆಂಪ,[1] ಕಂಪನುಳಿದ ಸೂಳೆಯಲ್ಲಿ ಹೆಂಪ, ಕೊಳಚೆಯ ನೀರಿನಲ್ಲಿ ಗುಂಪನಱಸುವಿರಿ ಮರುಳೆ, ವರಗುರು ವಿಶ್ವಕ್ಕೆಲ್ಲ ಗಿರಿಜಾಮನೋವಲ್ಲಭ ಪರಮ ಕಾರಣಿಕ ನಮ್ಮ ಕೂಡಲಸಂಗಮದೇವ.

I –

ರಿಣ ತಪ್ಪಿದ ಹೆಂಡತಿಯಲ್ಲಿ–ಲೋಕದಲ್ಲಿ ಅನ್ನೋದಕ ರಿಣಸಂಬಂಧವಾಗಿರುವ ಪರಿಯಂತರದಲ್ಲಿ ಗಂಡನ ಮಾತು ಹೆಂಡತಿ ಕೇಳುತ್ತ, ಹೆಂಡತಿಯ ಮಾತು ಗಂಡ ಕೇಳುತ್ತಿದ್ದಲ್ಲಿ ಬಹು ಪೂಜ್ಯವಾಗಿಪ್ಪದು. ಅನ್ನೋದಕ ರಿಣಾನುಬಂಧವು ತೊಲಗಿದ ಬಳಕ ಗಂಡನ ಮಾತಿನೊಳಗೆ ಹೆಂಡತಿ ಇರದೆ ಹೆಂಡತಿಯ ಮಾತಿನೊಳಗೆ ಗಂಡನಿರದೆ ಇದ್ದಲ್ಲಿ ಅದು ಹಾಸ್ಯವಾಗಿರ್ಪುದು. ಗುಣ ತಪ್ಪಿದ ನಂಟನಲ್ಲಿ–ಲೋಕದಲ್ಲಿ ೧ಈ ನಂಟನು ಆ ನಂಟನ ಮನೆಗೆ ಹೋಗಿ ಉಡುಟ್ಟು ಉಡುಗೊರೆ ಹೊದ್ದು ಉತ್ಸಾಹದಿಂದ ಪರಿಣಾಮಿಸುವ, ಆ ನಂಟನು ಈ ನಂಟನ ಮನೆಗೆ ಬಂದು ಉಂಡುಟ್ಟು ಉಡುಗೊರೆ ಹೊದ್ದು ಉತ್ಸಾಹದಿಂದ ಪರಿಣಮಿಸುವಲ್ಲಿ, ಪೂಜ್ಯವಾಗಿಪ್ಪುದು. ಒಂದು ಕೊಡಕೊಂಬುದರಿಂದಲಾದರಾಗಲೀ ಒಂದು ಹೆಣ್ಣು ಗಂಡಿನಿಂದಲಾದರಾಗಲೀ ಒಂದು ಕಡಬಡ್ಡಿ ಸಾಲದಿಂದಲಾದರಾಗಲೀ ಒಬ್ಬರಿಗೊಬ್ಬರು ಕೆಟ್ಟುಬಂದಲ್ಲಿ ಇವರ ಮನೆಗೆ ಅವರು ಬಾರದೆ ಅವರ ಮನೆಗೆ ಇವರು ಹೋಗದೆ ಹೊರ ಹೊರಗಾಗಿದ್ದಲ್ಲಿ ಹಾಸ್ಯವಾಗಿಪ್ಪುದು, ಜೀವವಿಲ್ಲದ ದೇಹದಲ್ಲಿ–ಜೀವವಿದ್ದ ದೇಹವೆ ಉಂಬುತ್ತ ಉಡುವುತ್ತ ಸುಖಸಂತೋಷದಲ್ಲಿದ್ದರೆ ನೋಡುವವರಿಗೆ ಪೂಜ್ಯವಾಗಿಪ್ಪುದು. ೨ಮೃತಘಟಕ್ಕೆ ವಸ್ತ್ರಾಭರಣವನ್ನು ಉಡಸಿ ತೊಡಸಿ ಗೂಟಕ್ಕೆ ಕೂಡಿಸಿದಲ್ಲಿ ಬಾಳುಹಳಬಡಿವುದಲ್ಲದೆ ಅಲಂಕಾರವಾಗಿದ್ದಿತೆ? ಇರಲರಿಯದು, ಫಲವೇನು?–ಪ್ರಯೋಜನವೇನು?

ಆಳ್ದನೊಲ್ಲದ ಆಳಿನಲ್ಲಿ–ಒಬ್ಬಾನೊಬ್ಬ ಒಡೆಯನೇನಾದರೂ ತನ್ನ ಕೈಕೆಳಗೆ ಸೇವಕವೃತ್ತಿಯ ಮಾಡಿಕೊಂಡಿರುವಂಥ ಭೃತ್ಯನಿಗೆ ಆಗಾಗ್ಗೆ ಸಂಬಳವನ್ನು ಕೊಡಿತ್ತಿದ್ದಲ್ಲಿ ಅವನು ಹೇಳಿದ ಚಾಕರಿಯನ್ನು ಮಾಡುತ್ತಿದ್ದಲ್ಲಿ ಆಳ್ದನಿಗೂ ಆಳಿಗೂ ಪೂಜ್ಯವಾಗಿರುವುದು. ಆ ಒಡೆಯನೇನಾದರೂ ಸಂಬಳವನ್ನು ಕೊಡದೆ ಇದ್ದಲ್ಲಿ ಅವನು ಹೇಳಿದ ಚಾಕರಿಯನ್ನು ಮಾಡದೆ ಇದ್ದಲ್ಲಿ ಹಾಸ್ಯವಾಗಿಪ್ಪುದು, ಫಲವೇನು?–ಪ್ರಯೋಜನವೇನು? ಸಿರಿ ತೊಲಗಿದ ಅರಸಿನಲ್ಲಿ–ಐಶ್ವರ್ಯ ಇದ್ದಂಥ ದೊರೆ ಏನಾದರೂ ೩ಗ೩ಡಿಗಡಿಗೆ ಕುದುರೆ ಮಂದಿಯನ್ನು ಹಾಕಿಕೊಂಡು ಸೀಮೆಭೂಮಿಯ ಸಾಗುವಳಿಯ ಮಾಡಿಕೊಂಡು ಪ್ರಜಾ ಪಾಲಕರಿಗೆ ಕೌಲು ಕರಾರು ಕೊಟ್ಟುಕೊಂಡುಯಿದ್ದಲ್ಲಿ ಪೂಜ್ಯವಾಗಿರುವುದು. ಐಶ್ವರ್ಯ ಇಲ್ಲದಂಥ

ದೊರೆ ಏನಾದರೂ [೩]ಗ[೩]ಡಿಗಡಿಗೆ ಕುದುರೆ ಮಂದಿಯನು ಹಾಕದೆ ಸೀಮೆಭೂಮಿಯನ್ನು ಸಾಗುವಳಿಯಿಲ್ಲದೆ ಜಾಲಿ ಬೊಬ್ಬುಳಿ ಬೆಳೆದು ಕಳ್ಳರು ಕಾಕರು ಹೆಚ್ಚಿದಲ್ಲಿ ಹಾಸ್ಯವಾಗಿಪ್ಪುದು. ವರವಿಲ್ಲದ ದೇವರಲ್ಲಿ-ದೃಷ್ಟವಿದ್ದಂಥ ದೇವರ ಗುಡಿಯೆ ಸಾರಣೆಗಳಿಂದ ಪೂಜೆಪುನಸ್ಕಾರಂಗಳಿಂದ ಧೂಪದೀಪಾರತಿಗಳಿಂದ ತೇರುತಿರುನಾಳುಗಳಿಂದ ಅಂಗರಂಗ ವೈಭವವೇ ಮೊದಲಾದುವನ್ನು ಕೈಕೊಂಡೊಪ್ಪುತ್ತಿದ್ದಲ್ಲಿ ಪೂಜ್ಯವಾಗಿರ್ಪುದು. ದೃಷ್ಟವಿಲ್ಲದಿದ್ದಂಥ ದೇವರ ಗುಡಿಯೆ ಸಾರಣೆ ಕಾರಣೆಗಳಿಲ್ಲದೆ ಪೂಜೆ ಪುನಸ್ಕಾರವಿಲ್ಲದೆ ತೇರುತಿರುನಾಳಂಗಳಿಲ್ಲದೆ ಧೂಪಾರತಿಗಳಿಲ್ಲದೆ ಅಂಗರಂಗವೈಭವ ಮೊದಲಾದವೇನೂ ಇಲ್ಲದೆ ಹಾಳುಬಿದ್ದು ಶುನಿಸೂಕರಾದಿಗಳು ಹೊಕ್ಕು ಹೊರಟುಬರುತ್ತಿದ್ದಲ್ಲಿ ಹಾಸ್ಯವಾಗಿರ್ಪುದು ಫಲವೇನು?-ಪ್ರಯೋಜನ ವೇನು?[೪]

ಕಳಿತ ಹೂವಿನಲ್ಲಿ-ಕಂಪುತೊಟ್ಟು ಉಚ್ಚಿಬಿದ್ದ ಅಜ್ಜಿ ಪುಷ್ಪದಲ್ಲಿ, ಕಂಪ-ಸದ್ವಾಸನೆಯನ್ನು ಹುಡುಕಿದರೆ ಇದ್ದಿತ್ತೆ? ಇರಲರಿಯದು, ಮರುಳೆ-ಎಲೆ ಹುಚ್ಚೇ[೫], ಕೊಳಚೆಯ ನೀರಿನಲ್ಲಿ-ತಿಪ್ಪಿಗುಂಡಿಗೆಯ ಉದಕದಲ್ಲಿ, ಗುಂಪನರಸುವಿರಿ-ಘಾತ ನಿರ್ಮಲತ್ವವನ್ನು ಹುಡುಕುವಿರಿ, ಕಂಪನುಳಿದ ಸೂಳೆಯಲ್ಲಿ ಹೆಂಪ-ಹನ್ನೆರಡು ವರುಷ ಹದಿನಾರು ವರುಷ ಇಪ್ಪತ್ತು ವರುಷದ ಸ್ತ್ರೀಯಳಲ್ಲಿ ಕಂದುಕಲೆ ರೂಪುಲಾವಣ್ಯ ಹಾವಭಾವ ವಿಲಾಸವಿಭ್ರಮಂಗಳನು ಹುಡುಕಿದರೆ ಉಂಟಾಗಿದ್ದಾವಲ್ಲದೆ, ಕಂಪನುಳಿದ ಸೂಳೆಯಲ್ಲಿ ಹೆಂಪ-ಯೌವನವೆಲ್ಲ ಹೋಗಿ ವೃದ್ಧತ್ವವೆ ಅವಶೇಷಿತವಾದಂಥ ಪಣ್ಯಾಂಗನೆಯಲ್ಲಿ ಹಿಂದೆ ಹೇಳಿದಷ್ಟರೊಳಗೊಂದಲ್ಲಾದರೂ ಕೋಮಲತ್ವವನ್ನು ಹುಡುಕಿದರೆ ಇದ್ದಿತ್ತೆ? ಇರಲರಿಯದು, ಮರುಳೆ-ಎಲೆ ಹುಚ್ಚೆ; ವರಗುರು; ವರ-ಶ್ರೇಷ್ಠವಾದ, ಗುರು-ಪೂಜ್ಯಕ್ಕೆ ಪ್ರಭುವಾದ ಮುಕ್ತಿಪ್ರದಾಯಕನಾದ, ವಿಶ್ವಕ್ಕೆಲ್ಲ-ಸಮಸ್ತ ಜಗಕ್ಕೆಲ್ಲ ಗಿರಿಜಾಮನೋವಲ್ಲಭ-ಪಾರ್ವತಾದೇವಿಯರಿಗೆ ಮನೋವಲ್ಲಭನಾದಂಥ, ಪರಮ-ಉತ್ಕೃಷ್ಟವಾದ, ಕಾರಣಿಕ-ಹೇತುವಾದಾತನು, ನಮ್ಮ ಕೂಡಲಸಂಗಮದೇವ-ನಮ್ಮ ಪರಶಿವ ಲಿಂಗವು.

....

೧+ನಂಟರುಗಳೇನಾದರೂ (ಕ), ೨+ ಜೀವವಿಲ್ಲದ (ಗ), ೩-೩ ಆ (ಕ), ೪+ಕಳಿತ ಹೂವಿನಲ್ಲಿ-ಮಲ್ಲಿಗೆ ಜಾಜಿ ಇರುವಂತಿ ಶಾವಂತಿಗೆ ಮೊದಲಾದ ಅನೇಕ ಸದ್ಗಂಧವುಳ್ಳ ಪುಷ್ಪವನ್ನು ತೆಗೆದುಕೊಂಡು ಘ್ರಾಣಿಸಿದರೆ ನಾಸಿಕಕ್ಕೆ ಸದ್ವಾಸನೆ ತೋರುತ್ತಿಹುದಲ್ಲದೆ (ಕ), ೫+ಕೊಳಚೆಯ ನೀರಿನಲ್ಲಿ-ಹಳ್ಳ ಹೊಳೆ ಕೆರೆ ಬಾವಿಗಳಲ್ಲಿರುವಂಥ ಉದಕದಲ್ಲಿ ನಿರ್ಮಲತ್ವವನ್ನು ಹುಡುಕಿದರೆ ಇದ್ದಾವಲ್ಲದೆ (ಕ).

II -

1+1 x (ಚ.ಜ).

....

ರಿಣತಪ್ಪಿದ ಹೆಂಡತಿಯಲ್ಲಿ-ಭಕ್ತಿವಿಶ್ವಾಸವು ಹೊರಚ್ಚಾದ ಭಿನ್ನಭಕ್ತನೆಂಬ ಸ್ತ್ರೀಯಳಲ್ಲಿ, ಗುಣತಪ್ಪಿದ ನಂಟನಲ್ಲಿ-ಸದ್ಗುಣವಿರಾಗತೆಯು ಹೊರಚ್ಚಾದ ಜಂಗಮದಲ್ಲಿ, ಜೀವವಿಲ್ಲದ ದೇಹದಲ್ಲಿ ಫಲವೇನು?-ಚಿಚ್ಚೈತನ್ಯವಿಲ್ಲದ ಜಡಪಾಷಣಲಿಂಗದಲ್ಲಿ ಪ್ರಯೋಜನವೇನು? ಅ[೧]ಲ್ದ[೧]ನೊಲ್ಲ ದಾಳಿನಲ್ಲಿ-ಗುರುಕರುಣ ದಿಲ್ಲದ ಶಿಷ್ಯನಲ್ಲಿ, ಸಿರಿತೊಲಗಿದರಿನಲ್ಲಿ-ಅಷ್ಟಾವರಣವೆಂಬ ಐಶ್ವರ್ಯವು ಹೊರಚ್ಚಾ ಗುರುವಿನಲ್ಲಿ

ವರವಿಲ್ಲದ ದೈವದಲ್ಲಿ ಫಲವೇನು?–ಅಷ್ಟವಿಧಾರ್ಚನೆ ಷೋಡಶೋಪಚಾರ ಪೂಜಾಕ್ರೀಗಳ ಕೈಕೊಂಡು ಇಷ್ಟಾರ್ಥಸಿದ್ಧಿಯೆಂಬ ವಾಂಛಿತಾರ್ಥವನು ಕೊಡಲಿಲ್ಲದ ದೈವದಲ್ಲಿ ಪ್ರಯೋಜವೇನು? ಕಳಿದ ಹೂವಿನಲ್ಲಿ–ಸುಮನವಿಲ್ಲದ ಕುಮನವನುಳ್ಳ ಕಾಳ್ಬನ ಹೃದಯದಲ್ಲಿ ಜ್ಞಾನಸದ್ವಾಸನೆಯ ಹುಡುಕುವರೆ? ಕಂಪನುಳಿದ ಸೂಳೆಯಲ್ಲಿ ೨ಹೆಂಪ೨–ಸಮರಸಭಕ್ತಿಯನು ಬಿಟ್ಟು, ಸಿದ್ಧಾಂತಿಯೆಂಬ ಪಣ್ಯಾಂಗನೆಯಲ್ಲಿ ಸಮರಸಭಕ್ತಿಯ ಹುಡುಕುವರೆ? ೮ಕೊಳಚೆಯ ನೀರಿನಲ್ಲಿ ಗುಂಪನಜಿಸುವಿರಿ ಮರುಳೆ–ಅಜ್ಞಾನ ಕಿಸುಕುಳ ಮನಸ್ಸಿನಲ್ಲಿ ಗಂಭಿರತ್ವ ಹುಡುಕುವಿರೆಲೆ ಹುಚ್ಚೇ ಮುಂದಕ್ಕೆ ಕಾಣಬಂದರ್ಥ.

....

೬–೬ ಳ (ತ), ೭–೭ x (ಜ) ರ+ ಹೆಂಪ (ಜ).

III –

ಕಂಪನುಳಿದ–ದಿನ ಮೀಜಿದ, ಕೊಳಚೆಯ ನೀರಿನಲ್ಲಿ–ಸ್ವಲ್ಪೋದಕದಲ್ಲಿ.

೫೬೫

ಲಿಂಗಶಿವಾಲಯದ ಮುಂದೆ ಸಿಂಹ ಶೂದ್ರಕನಲ್ಲದಿಲ್ಲ, ನಂದಿಕೇಶ್ವರ ಭೃಂಗಿನಾಂಟ್ಯ ನಮ್ಮ ಲಿಂಗಯ್ಯನ ಮುಂದೆ, ಇದಕ್ಕೆ ದಿಟ ದೀವಿಗೆ, ನಮ್ಮ ಲಿಂಗಯ್ಯನ ಮುಂದೆ ಅನ್ಯದೈವವೆಂಬುದು ತೂರ್ಯೆಯಿಂ ಕಾಣಬಾರದು. ನೊಸಲಕಣ್ಣಭವನೊಬ್ಬನೆ ನಮ್ಮ ಕೂಡಲಸಂಗಮದೇವ.

I –

ಲಿಂಗಶಿವಾಲಯದ ಮುಂದೆ–ಪರಶಿವಲಿಂಗದ ಗುಡಿಯ ಸಮ್ಮುಖದಲ್ಲಿ, ಸಿಂಹ ಶೂದ್ರಕನಲ್ಲದಿಲ್ಲ–ಸಿಂಹನ ರೂಪು ಶೂದ್ರಕರ ರೂಪವನ್ನು ನಮ್ಮ ಪರಶಿವಲಿಂಗದ ಗುಡಿಯ ಮುಂದೆ ತಿದ್ದಬೇಕಲ್ಲದೆ ಅನ್ಯದೈವದ ಗುಡಿಯ ಮುಂದೆ ತಿದ್ದಲಾಗದು, ನಂದಿಕೇಶ್ವರ ಭೃಂಗಿನಾಂಟ್ಯ ನಮ್ಮ ಲಿಂಗಯ್ಯನ ಮುಂದೆ ನಂದೀಶ್ವರಸ್ವಾಮಿಯವರು ಮದ್ದುಳೆಯ ನುಡಿಸುವಂಥದು, ಭೃಂಗಿನಾಂಟ್ಯ–ಭೃಂಗೀಶ್ವರಸ್ವಾಮಿಗಳು ನಾಟ್ಯಮಾಡುವಂಥದು, ನಮ್ಮ ಲಿಂಗಯ್ಯನ ಮುಂದೆ–ನಮ್ಮ ಪರಶಿವಲಿಂಗದ ಗುಡಿಯಮುಂದೆ ತಿದ್ದಬೇಕಲ್ಲದೆ ಅನ್ಯದೈವದ ಗುಡಿಯ ಮುಂದೆ ತಿದ್ದುವುದಕ್ಕಾದೀತೆ? ಆಗದು, ಇದಕ್ಕೆ–ಲಿಂಗಶಿವಾಲಯದ ಮುಂದೆ ಸಿಂಹ ಶೂದ್ರಕನ ತಿದ್ದಬೇಕು. ತಿದ್ದಬಾರದೆಂಬುದಕ್ಕೆ, ದಿಟ ದೀವಿಗೆ–ಭಾಷಾಪತ್ರವು, ನಮ್ಮ ಲಿಂಗಯ್ಯನ ಮುಂದೆ–ನಮ್ಮ ಪರಶಿವಲಿಂಗದ ಸಮ್ಮುಖದಲ್ಲಿ, ಅನ್ಯದೈವವೆಂಬುದು–ತಿಮ್ಮ ಬೊಮ್ಮ ಬೀರ ಜಟ್ಟಿಂಗ ಮೊದಲಾದ ನೀಚದೈವವೆಂಬುವಂಥದನ್ನು, ತೂರ್ಯೆಯಿಂ ಕಾಣಬಾರದು–ಸಕಲ ವೇದ ಶಾಸ್ತ್ರಾಗಮ ಪುರಾಣಂಗಳಲ್ಲಿ ಹುಡುಕಿದರೆಯೂ ಅರಿಯಬಾರದು, ನೊಸಲಗಣ್ಣಭವ–ಹಳೆಗಣ್ಣುಳ್ಳಂಥ ಅಭವ–ಭವರಹಿತವಾದಂಥ ದೇವರನು, ಒಬ್ಬನೆ–ಒರ್ವನೆ ಕರ್ತನು, ನಮ್ಮ ಕೂಡಲಸಂಗಮದೇವ–ಪರಶಿವಲಿಂಗವು.

೫೬೬

ಗುಡಿಯೊಳಗಿದ್ದು ಗುಡಿಯ ನೇಣು ಕೊಯ್ದಡೆ ಗುಡಿಯ ದಂಡಿಗೆಯು ಮೇಲೆ ಬಿದ್ದು ಹಲ್ಲು [1]ಮುರಿವವು[1] ನೋಡಾ! ಪೊಡವಿಗೀಶ್ವರನ ಗರ್ಭವಾಸದೊಳಗಿರ್ದು ನುಡಿವರು, ಮತ್ತೊಂದು

ದೈವವುಂಟೆಂದು, ತುಡುಗುಣಿ ನಾಯನು ಹಿಡಿತಂದು ಸಾಕಿದಡೆ ತನ್ನೊಡೆಯನಿಗೆ ಬೊಗಳುವಂತೆ, ಕಾಣಾ ಕೂಡಲಸಂಗಮದೇವಾ.

....

1-1 ಹೋಹುದು (ಕ, ಗ).

I- -

ಗುಡಿಯೊಳಗಿದ್ದು-ಗುಡಿ ಗುಡಾರ ರಾಯಥೇರೆದ ನೆರಳಲ್ಲಿ ಕುಳಿತುಕೊಂಡಿದ್ದು, ಗುಡಿಯ-ಗುಡಿ ಗುಡಾರ ರಾಯಥೇರೆದ, ನೇಣು-ಹಗ್ಗವನ್ನು, ಕೊಯ್ದಡೆ-ಕೃಂತಿಸಿದರೆ, ಗುಡಿಯ-ಗುಡಿ ಗುಡಾರ ರಾಯಥೇರೆದ, ದಂಡಿಗೆಯು-ಅಡ್ಡ ಬಲುಹವು, ಮೇಲೆಬಿದ್ದು-ಮೇಲೆ ಕಡಕೊಂಡು ಬಿದ್ದು, ಹಲ್ಲುಮುರಿದವು ನೋಡಾ-ದಂತಗಳು ಭಗ್ನವಾಗುವವು ಕಂಡಾ. ಪೊಡವಿಗೀಶ್ವರನ-ಜಗತ್ಕರ್ತೃವಾದಂಥ ಪರಮೇಶ್ವರನ, ಗರ್ಭವಾಸದೊಳಗಿರ್ದು-ಶಿವನ ಕುಕ್ಷಿಗೆ ಸಮಾನವಾದ ಬ್ರಹ್ಮಾಂಡವೆಂಬ ಕ್ಷೇತ್ರದಲ್ಲಿ ಮನೆಯ ಕಟ್ಟಿಕೊಂಡು ಇರ್ದು ಶಿವನು ಕರುಣಿಸಿಕೊಟ್ಟಂಥ ಅಷ್ಟಭೋಗ ಅಷ್ಟಮಹದೈಶ್ವರ್ಯವನ್ನು ಪಡೆದನುಭವಿಸಿಕೊಂಡಿರ್ದು, ನುಡಿವರು ಮತ್ತೊಂದು ದೈವವುಂಟೆದು ಶಿವನಿಗೆ ಸಮಾನವಾದ ಮತ್ತೊಂದು ದೇವರುಂಟೆಂದು ಹೇಳುವರು.

ತುಡುಗುಣಿ ನಾಯನು ಹಿಡಿತಂದು-ಕಳ್ಳನಾಯನ್ನು ಹಿಡಿದುಕೊಂಡು ಬಂದು, ಸಾಕಿದಡೆ-ಅನ್ನ ಗಂಜಿಯನ್ನು ಹೊಯ್ದು ರಕ್ಷಣೆಯ ಮಾಡಿದರೆ, ತನ್ನೊಡೆಯನಿಗೆ ಬೊಗಳುವಂತೆ-ಅಂಬಲಿ ಗಂಜಿಯನ್ನು ಹೊಯ್ದು ಸಂರಕ್ಷಣೆಯ ಮಾಡಿದಂಥ ಒಡೆಯನಿಗೆ ಬೊಗಳುವಂತೆ, ಊರು-ಕೇರಿಗೆ ಹೋಗಿ ಬರುವಂಥ ವೇಳೆಯಲ್ಲಿ ಗಳ್ಳುಹಾಕುವುದು; ಹಾಕಿದಲ್ಲಿ ನೋಡಿದೆಯಾ ನನ್ನ ತಾಯಿ ನನ್ನ ಅಂಬಲಿ ಕುಡಿದು ನನ್ನ ಮೇಲೆ ಗಳ್ಳುಹಾಕುತ್ತೈತೆಂದು ಮೈಯ್ಯನೆಲ್ಲ ಒಡೆಬಡಿದು ಆಚೆಗೆ ದಾಂಟಿಸಿಬಿಡುತ್ತಿಹನು, ಹಾಂಗೆ.

ಪೃಥ್ವಿಗೆ ಕರ್ತೃವಾದ ಪರಮೇಶ್ವರನ ಕುಕ್ಷಿಯೆಂಬ ಬ್ರಹ್ಮಾಂಡದಲ್ಲಿ ಮನೆಯನ್ನು ಕಟ್ಟಕೊಂಡಿರ್ದು ಶಿವನು ಕೊಟ್ಟ ಅಷ್ಟಯೋಗ ಅಷ್ಟಮಹದೈಶ್ವರ್ಯವನ್ನು ವಡೆದನುಭವಿಸಿಕೊಂಡಿರ್ದು, ಮತ್ತು ಶಿವನಿಗೆ ಸಮಾನವಾಗಿ ಮತ್ತೊಂದು ದೈವವುಂಟೆಂದು ಹೇಳುವಂಥವನ ಇರಸ್ಥಿತಿಯೂ ಅ ಕಳ್ಳನಾಯ ಇರಸ್ಥಿತಿಯೂ ಒಂದೇಯಾಗಿರ್ಪುದು. ಕಾಣಾ-ಕಂಡಾ, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

೫೬೭

ಅಸಮಾಕ್ಷ ಲಿಂಗಕ್ಕೆ ಅನ್ಯದೈವ ಸರಿಯೆಂಬವನ ಬಾಯಲ್ಲಿ ಮಸೆದ ಕೂರಲಗನಿಕ್ಕದೆ ಮಾಣ್ಬನೆ? ಹುಸಿಯಾಗಿ ನುಡಿವವನ ನಾಯಾಗಿ ಬೊಗಳಿಸನೆ? ಹಿರಿಯರುತ್ತಮರೆನ್ನದವರ ಕುದುರೆಯಾಗಿ ಕಟ್ಟಿಸನೆ? ಗುರುಲಘುವೆನ್ನದವರ ಬಾಯಲ್ಲಿ ಮೆಟ್ಟಿ ಹುಡಿಯ ಹೊಯ್ಯದೆ ಮಾಣ್ಬನೆ? ಪರಸ್ತ್ರೀಗಳುಪಿದವರ ಗಾಣದಲಿಕ್ಕಿ [1]ಹಿಳಿಯನೆ?[1] ಪರಧನಕ್ಕಳುಪಿದವರ ಹಿಡಿಖಂಡವ ಕೊಯ್ಯನೆ? ಎಲೆ ಕೂಡಲಸಂಗಮದೇವಾ, ನಿಮ್ಮ ಹೇಳಿದ ಹೇಳಿಕೆಯಿಂದ [2]ಪಿಂ[2]ಬಯಿ ಮೈಲಾರಂಗೆ ಮೇಳವಾಡುತ್ತಿದ್ದ ಕಾಣಾ ತ್ರೈಜಗದೊಳಗೆ.

....

1-1 ಎಳೆಸನೆ (ಕ, ಗ), 2-2 ಪೆ(ಗ).

I -

ಅಸಮಾಕ್ಷ ಲಿಂಗಕ್ಕೆ-ಬೆಸನಾದ ಲೋಚನವನುಳ್ಳ ಪರಶಿವಲಿಂಗಕ್ಕೆ, ಅನ್ಯದೈವ ಸರಿಯೆಂಬವನ-ತಮ್ಮ ಬೊಮ್ಮ ಬೀರ ಜಟ್ಟಿಂಗ ಮೊದಲಾದ ನೀಚದೈವಂಗಳು ಸಮಾನವೆಂದು ಅನ್ಯದೈವ ಹೇಳುವಂಥವನ, ಬಾಯಲ್ಲಿ-ಕಬಳಿಕದಲ್ಲಿ, ಮಸೆದ-ಇಮ್ಮೈ ಕೀಚಿದ, ಕೂರಲಗ-ನಿಶಿತಾಸ್ತ್ರವನ್ನು, ಇಕ್ಕದೆ ಮಾಣ್ಬನೆ?-ಹಾಕದೆ ಬಿಟ್ಟಾನೆ? ಬಿಡನು. ಹುಸಿಯಾಗಿ ನುಡಿವವನ-ಭಕ್ತಮಾಹೇಶ್ವರರುಗಳ ಮಧ್ಯದಲ್ಲಿ ಸಟೆಯನಾಡುವಂಥವನ, ನಾಯಾಗಿ ಬೊಗಳಿಸನೆ?-ಕುತ್ತಿಗೆಗೆ ಹಾಸವನ್ನು ಹಾಕಿ ಕೊರಳಿಗೆ ಕವಡಿಯನ್ನು ಕಟ್ಟಿಸಿ ನಾಯಾಗಿ ಬೊಗಳಿಸಿ೧ಕೋಳಿ೧ಯಾಗಿ ಕೂಗಿಸದೆ ಬಿಟ್ಟಾನೆ? ಬಿಡನು. ಹಿರಿಯರುತ್ತಮರೆನ್ನದವರ; ಹಿರಿಯ-ಶಿವನೇ ಶ್ರೇಷ್ಠನು, ಉತ್ತಮರು-ಶಿವಭಕ್ತರೇ; ಸತ್ಪುರುಷರೆಂದರಿಯಬೇಕು. [ಎನ್ನದವರ-] ಅರಿಯದೇ ಇದ್ದಂತವರ, ಕುದುರೆಯಾಗಿ ಕಟ್ಟಿಸನೆ? ಲಾಯದಲ್ಲಿ ಕುದುರೆಯಾಗಿ ಕಟ್ಟಿಸಿ ಕುತ್ತಿಗೆಗೆ ಕಣ್ಣಿಯನ್ನು ಕಟ್ಟಿಸಿ ಹಿಂದಕ್ಕೆ ಎರಡು ಕಾಲನ್ನು ಬಿಗಿದು ಕಟ್ಟಿಸಿ ತೊಗಲ ತೋಬರಿಯೊಳಗೆ ದಾಣಿಯನ್ನು ತಿನ್ನಿಸುತ್ತ ಇದು ಮೈಲಾರನ ಕುದುರೆಯೆಂದು ಚಬಕು ಚಬಕಿನಲ್ಲಿ ಹೊಡೆಯಿಸಿದೆ ಬಿಟ್ಟಾನೆ? ಬಿಡನು, ಗುರುಲಘುವೆನ್ನದವರ-ಗುರುವೇ ದೀರ್ಘಾಕ್ಷರ ಸ್ವರೂಪು, ಉಳಿದ ದೈವವೇ ಹೃಸ್ವಾಕ್ಷರ ಸ್ವರೂಪವೆಂದರಿಯಬೇಕು. ಅರಿಯದೆ ಇದ್ದಂಥವರ, ಬಾಯಲ್ಲಿ-ಕಬಳಿಕದಲ್ಲಿ, ಮೆಟ್ಟಿ-ಅಡ್ಡ ನೀಳವಾಗಿ ತುಳಿದು. ಹುಡಿಯ ಹೊಯ್ಯದೆ ಮಾಣ್ಬನೆ? ಭವರೋಗವೆಂಬ ಬುಗ್ಗಿಯನ್ನು ಹೊಯ್ಯದೆ ಬಿಟ್ಟಾನೆ? ಬಿಡನು.

ಪರಸ್ತ್ರೀಗಳುಪಿದವರ, ಅನ್ಯಸ್ತ್ರೀಯರ ಸಂಸರ್ಗವ ಮಾಡಿದಂಥವರ, ಗಾಣದಲ್ಲಿಕ್ಕಿ[ಹಿಳಿಯಾನೆ-] ಕಲ್ಲು ಗಾಣದಲ್ಲಿ ಹಾಕಿ ತಿರುಗಿಸದೆ ಬಿಟ್ಟಾನೆ? ಬಿಡನು, ಪರಧನಕ್ಕಳುಪಿದವರ-ಅನ್ಯದ್ರವ್ಯಂಗಳನು ತೆಗೆದುಕೊಂಡಂಥವರ, ಹಿಡಿ ಖಂಡವಕೊಯ್ಯನೆ? -ಕಣ್ಣಕಟ್ಟಿ ಬಂಡಿಯ ಮೇಲೆ ಕುಳ್ಳಿರಿಸಿ ಇಕ್ಕಳದಿಂದ ಖಂಡವನ್ನು ಕತ್ತಿ ಕಿತ್ತಿ ಉಪ್ಪಿನಲ್ಲಿ ಅದ್ದಿ ತಿನಿಸದೆ ಬಿಟ್ಟಾನೆ? ಬಿಡನು. ಎಲೆ ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ, ನಿಮ್ಮ ಹೇಳಿದ ಹೇಳಿಕೆಯಿಂದ-ನೀವುಕೊಟ್ಟ ಅಪ್ಪಣೆಯಿಂದ, ೨ಪಿಂ೨ಬರ ಕ್ಷೇತ್ರದಲ್ಲಿರುವಂಥ ಮಣ್ಣು ಮೈಲಾರನಿಗೆ, ಮೇಳವಾಡುತ್ತಿದ್ದ ಕಾಣಾ ತ್ರೈಜಗದೊಳಗೆ ಸ್ವರ್ಗ ಮರ್ತ್ಯ ಪಾತಾಳದೊಳಗೆ ಮೇಳವಾಡುತ್ತಿರ್ದ, ಬೆನ್ನಸಿಡಿ ಬಾಯಬೀಗ ತೋಳಶಸ್ತ್ರ ಸೊಪ್ಪಿನುಡಿಗೆ ಮೊದಲಾದವನ್ನು ಉಡಿಸಿದಿಗಂಬರದಲ್ಲಿ ವಿನೋದಿಸುತ್ತಿರ್ದನು, ಕಾಣಾ-ಕಂಡಾ.

....

೧-೧ ಕೋಳಿ (ಕ), ೨-೨ ಪೆಂ(ಗ).

I -

೩[ಪಿಂಬರ-]೩ ಮೈಲಾರನು.

....

೩-೩ ಪಿಂಬೇರ [ಟ, ಡ].

೫೬೮

ಶಿವಮಯ ವಿಷ್ಣುವಲ್ಲ, ವಿಷ್ಣುಮಯ ಶಿವನಲ್ಲ ನುಡಿಯದಿರಿಂ ಭೋ! ನಾರಾಯಣ ಹರನಲ್ಲ ನುಡಿಯದಿರಿಂ ಭೋ! ಶಿವನು ವಿಷ್ಣುವಲ್ಲ ನುಡಿಯದಿರಿಂ ಭೋ! ನಮ್ಮ ಕೂಡಲಸಂಗಯ್ಯನನಜೆಯದ ಸೂನೆಗಾಜಿರೆಲ್ಲ ನುಡಿಯದಿರಿಂ ಭೋ!

I –

ಶಿವಮಯ ವಿಷ್ಣುವಲ್ಲ; ಶಿವಮಯ–ಶಿವಸ್ವರೂಪು, ವಿಷ್ಣುವಲ್ಲ–ನಾರಾಯಣನಲ್ಲವು, ವಿಷ್ಣುಮಯ –ವಿಷ್ಣುಸ್ವರೂಪವು ಶಿವನಲ್ಲ–ಪರಮೇಶ್ವರನಲ್ಲವು, ನುಡಿಯದಿರಿಂ ಭೋ–ಹರಿಹರರೊಂದೇ ಸಮಾನ ವೆಂದು ಹೇಳದಿರಿರೊ, ನಾರಾಯಣ ಹರನಲ್ಲ ನಾರಾಯಣ–ವಿಷ್ಟು, ಹರನಲ್ಲ–ಪರಮೇಶ್ವನಲ್ಲವು.

ನುಡಿಯದಿರಿಂ ಭೋ!–ಶಿವನಿಗೆ ಸಮಾನವಾದ ಮತ್ತೊಂದು ದೈವ ಉಂಟೆಂದು ಹೇಳದಿರರೋ, ಶಿವನು ವಿಷ್ಣುವಲ್ಲ ಶಿವನು–ಪರಮೇಶ್ವರನು, ವಿಷ್ಣುವಲ್ಲ–ನಾರಾಯಣನಲ್ಲವು, ನುಡಿಯದಿರಿಂ ಭೋ!– ಹರಿಹರರೊಂದೇ ಸಮಾನವೆಂದು ಹೇಳದಿರಿರೋ. ನಮ್ಮ ಕೂಡಲಸಂಗಯ್ಯನ–ನಮ್ಮ ಪರಶಿವಲಿಂಗವನ್ನು ಅಜೆಯದ–ತಿಳಿಯದ, ಸೂನೆಗಾಜಿರೆಲ್ಲ–ಕಟುಗರಿಗೆ ಸಮಾನವಾದ ವಿಪ್ರರುಗಳೆಲ್ಲ, ನುಡಿಯದಿರಿಂ ಭೋ!–ಹರಿಹರರೊಂದೇ ಸಮಾನವೆಂದು ಹೇಳದಿರಿರೋ.

I –

ಮಾಯವು ಬ್ರಹ್ಮವಲ್ಲ, ಬ್ರಹ್ಮವು ಮಾಯವಲ್ಲ, ಮಾಯೆ ಹುಸಿ, ಬ್ರಹ್ಮನೇ ನಿತ್ಯ. ಇದು ಸತ್ಯ, ಇದು ಕಾರಣ ವಿಷ್ಣು ಮಾಯಾರೂಪು, ಶಿವನು ಮಾಯಾರಹಿತನು. ಮಾಯೆಯನು ಬ್ರಹ್ಮವನು ಒಂದೆಂಬ ಅಜ್ಞಾನಿಗಳ ನುಡಿಗೆ ನಗೆ ಬಂದಿತ್ತೆಂಬುದೀ ವಚನದರ್ಥ.

೫೬೯

ಅವಲಕ್ಷಣ ನಾಯ ನುಡಿಯ ನಾಲಗೆಯ ಸಡಗರ, ಡೊವಿಗೆ[1] ಮೃತ್ಯುವಿನ ನುಡಿಯೊಳಗಾಯಿತ್ತು, ಬೇಡವೋ ಪರ[2]ವಾದಿ ಗಳಹದಿರೋ.[1]ಬೇಡವೋ ದೂಷಕ [3]ಬೋಗ[3]ಳದಿರು. ಭಕ್ತಿಗೆಯೂ ಬೇಟಕ್ಕೆಯೂ ಜಾತಿಸೂತಕವುಂಟೆ? ಪರುಷ ಮುಟ್ಟಲು ಕಬ್ಬುನ ಹೊನ್ನಾಯಿತ್ತು ಕಾಣಾ. ನಮ್ಮ ಕೂಡಲಸಂಗನ ಶರಣರ ಅವರಿವರೆಂದಡೆ ಕುಂಭೀಪಾಕ [4]ನಾಯಕನರಕ ತಪ್ಪದು.

....

4–4 ಕುಂಭಿನಿ ಪಾತಕ (ಕ, ಗ).

I– –

ಅವಲಕ್ಷಣ ನಾಯ–ಕಿವಿ ಬಾಲವನ್ನು ಕೊಯ್ಸಿಕೊಂಡು ತಲೆ ಹುಳಿತಿರುವಂಥದೆ ಅವಲಕ್ಷಣ ನಾಯಿ. ಅಂತಪ್ಪ ಅವಲಕ್ಷಣ ನಾಯ, ನುಡಿಯ–ಪ್ರಸಂಗವು, ನಾಯಬೊಗಳಿಗೆ ಸಮಾನವು ನಾಲಗೆಯ–ಶಿವನಿಗೆ ಸಮಾನವಾಗಿ ಮತ್ತೊಂದು ದೈವ ಉಂಟೆಂದು ಹೇಳುವಂಥವನ ರಸನೆಯು ನಾಯ ನಾಲಿಗೆಗೆ ಸಮಾನವು. ನುಡಿಯ–ಪ್ರಸಂಗವು. ಸಡಗರ–ಸುನಿಯೆಂಬುವಂಥದು ಮಾಂಸವಾಗಲಿ

ಚರ್ಮವನಾಗಲಿ ಪತ್ರಾವಳಿಯನಾಗಲಿ ಅಸ್ಥಿಯನಾಗಲಿ ಕಚ್ಚಿಕೊಂಡುಬಂದು ತಿಪ್ಪೆಯಲ್ಲಿ ಹುಗಿದುಕೊಂಡು ಮಹಾಸಂಭ್ರಮದಿಂದ ತಿಂಬುತ್ತಿಹುದೋ ಹಾಂಗೆ, ಶಿವನಿಗೆ ಸಮಾನವಾಗಿ ಮತ್ತೊಂದು ದೈವ ಉಂಟೆಂದು ಹೇಳುವಂಥವನು ಒಂದು ಮದುವೆ ಮುಂಜೆ ದೇವತಾ[೧]ಕಾರ್ಯ[೧]ವನು ಬಹು ಸಂಭ್ರಮದಿಂದ ಮಹಾಸಡಗರದಿಂದ ಮಾಡಿದರೂ ಆ ನಾಯ ಸಡಗರಕ್ಕೆ ಸಮಾನವು, ಡೊವಿಗೆ–ಶಿವನಿಗೆ ಸಮಾನವಾಗಿ ಮತ್ತೊಂದು ದೈವ ಉಂಟೆಂದು ಹೇಳುವಂಥವನ ತಲೆಯೋಡು ನಾಯ ತಲೆಯೋಡಿಗೆ ಸಮಾನವು, ಮೃತ್ಯುವಿನ ನುಡಿಯೊಳ ಗಾಯಿತ್ತು–ಹಂಗಿಸಿ ಶಿಕ್ಷಿಸುವಂಥ ಯಮನ ಬಾಧೆಗೆ ವಶಗತವಾಯಿತ್ತು.

ಬೇಡವೋ ಪರವಾದ; [ಬೇಡವೋ–]ಶಿವನಿಗೆ ಸಮಾನವಾಗಿ ಮತ್ತೊಂದು ದೈವ ಉಂಟೆಂದು ಹೇಳಬೇಡವೋ; ಪರವಾದಿ–ಎಲೆ ಮತಾಂತರವಾದಿಯೇ, ಗಳಹದಿರೋ–ಬೊಗಳದಿರೋ, ಬೇಡವೋ ದೂಷಕ; ಬೇಡವೋ–ಶಿವನಿಗೆ ಸಮಾನವಾಗಿ ಮತ್ತೊಂದು ದೈವ ಉಂಟೆಂದು ಬೊಗಳದಿರೋ, ದೂಷಕ–ಎಲೆ ಶಿವದೂಷಕನೇ, ಬೊಗಳದಿರು–ಶಿವನಿಗೆ ಸಮಾನವಾಗಿ ಮತ್ತೊಂದು ದೈವ ಉಂಟೆಂದು ಗಳಹದಿರು.

ಭಕ್ತಿಗೆಯೂ ಬೇಟಕ್ಕೆಯೂ ಜಾತಿ ಸೂತಕವುಂಟೆ?–ಸ್ತ್ರೀಯಳಿಗೆ ಪುರುಷನೊಲಿದು ಪುರುಷನಿಗೆ ಸ್ತ್ರೀಯಳೊಲಿದು ಬಂದು ಏಕಾಂತಸ್ಥಾನದಲ್ಲಿ ರತಿಕೂಟವನ್ನು ಕೂಡುವಲ್ಲಿ ಕುಲಸೂತಕವ ನೋಡಿ ಬಿಡುತ್ತೈದಾರೆ? ಇಲ್ಲವು ಹಾಂಗೆ ಎಂತಪ್ಪ ಕ್ಷೀಣಕುಲದವನಾದರೂ ಗುರುಕಾರುಣ್ಯವ ಹಡದು ಲಿಂಗಾಂಗಸಂಬಂಧಿಯಾಗಿ ಭಕ್ತಿಯನ್ನು ಮಾಡುತ್ತಿದ್ದಲ್ಲಿ ಅವನ ಆಶ್ರಯಿಸಿ ಭಕ್ತಿಯನ್ನು ಕೈಕೊಳ್ಳಬೇಕಲ್ಲದೆ ಕುಲಸೂತಕವ ನೋಡಿ ಬಿಡುವುದಕ್ಕಾದೀತೆ? ಆಗದು. ಪರುಷ ಮುಟ್ಟಲು–ಪರಮಪಾವನ ಪವಿತ್ರಸ್ವರೂಪವಾದ ಇಷ್ಟಮಹಾಲಿಂಗವು ಗುರುಮುಖದಿಂದ ಬಂದು ಅಂಗದಲ್ಲಿ ಸಂಬಂಧವಾಗಲು, ಕಬ್ಬುನ–ಅವಲೋಹ ಸ್ವರೂಪವಾದ ದೇಹವು, ಹೊನ್ನಾಯಿತ್ತು–ಆಚಾರಾಂಗ ಜ್ಞಾನಕಾಯವಾಯಿತ್ತು, ಕಾಣಾ–ಕಂಡಾ.

ನಮ್ಮ ಕೂಡಲಸಂಗನ ಶರಣರ–ನಮ್ಮ ಪರಶಿವನ ಚಿತ್ಪ್ರಭಾಂಗಸ್ವರೂಪರಾದ ಜಂಗಮ ಮೂರ್ತಿಗಳ, ಅವರಿವರೆಂದಡೆ–ಆ ಜಾತಿಯವರು ಈ ಜಾತಿಯವರೆಂದು ಹೇಳಿದರೆ, [೨]ಕುಂಭೀಪಾಕ[೨] ನಾಯಕನರಕ ತಪ್ಪದು–[೨]ಕುಂಭೀಪಾಕ[೨]ವೆಂಬುವಂಥದು ಆನೆತಲೆ ಗಡುತರ ಒಡಲಿರ್ಪುದು. ಆನೆ ಸೊಂಡಿಲ ಗಡುತರ ಬಾಯಿ ಕಿರಿದಾಗಿರ್ಪುದು, ಅದರೊಳಗೆ ನೂರಾರು ನಾಯಕನರಕ ತುಂಬಿರ್ಪವು. ಅಂತಪ್ಪ ನಾಯಕನರಕ ಉಂಟಾಗುವಂಥದು ತಪ್ಪದು, ವಾರ್‍ಯಾಗದು.

....

೧–೧ ಪ್ರಸ್ತ (ಕ), ೨–೨ ಕುಂಭಿನಿ ಪಾತಕ (ಕ, ಗ).

I –

1+ ಯ (ಚ, ಜ), 2–2 ವಾದಿ ಗಳುಹದಿರು (ಚ, ಜ), 3–3 ಬಗು (ಚ, ಜ), 4–4 ಕುಂಭಿಯ ಪಾತಕ(ಚ, ಜ), 5+ಕಾಣಾ(ಚ, ಜ),

....

ಅವಲಕ್ಷಣ ನಾಯ ನುಡಿಯ ನಾಲಿಗೆಯ ಸಡಗರ ಡೊವಿಗೆಯು ಮೃತ್ಯುವಿನ ನುಡಿಯೊಳಗಾಯಿತ್ತು-ಕಾಳ್ವನ ಹೃದಯದಲ್ಲಿ ಲಕ್ಷಣವಿಹೀನವಾದ ಸಣ್ಣನಡು ಸಾಲಮೊಲೆ ಚೆಳ್ಳುಗುರು. ಈ ನಲ್ಲಳ ಬಲ್ಲರೆ ಹೇಳೊ ಕನ್ನಡಜಾಣಾ ಎಂದು ಲಕ್ಷಣವಿಹೀನವಾದ ಶುನಿಯ ವಚನದ ರಸನೆಯ ಸಂಭ್ರಮವ ತಲೆಯು ಮಿಳುತುವಿನ ವಾಕ್ಯಕ್ಕೆ ವಶಗತವಾಯಿತ್ತು. ಬೇಡವೋ ಪರವಾದಿಗಳು-ಜೈನಚಾರ್ವಾಕ ಸಾಂಖ್ಯಪಾತಂಜಲಿ ಮಾಯಾವಾದಿ ಮೀಮಾಂಸಕಾದಿ ಅನ್ಯಮತ ತರ್ಕಿಗಳು ಮಾಣೋ, ಹದಿರು ಬೇಡವೋ ದೂಷಕ-ನಗೆಹಾಸ್ಯ ಮಾಣೋ ನಿಂದಕ, ಬಗುಳದಿರು-ಕೂಗದಿರು.

ಭಕ್ತಿಗೆಯೂ ಬೇಟಕ್ಕೆಯೂ ಜಾತಿಸೂತಕವುಂಟೆ?-ಶಿವಾದ್ವೈತಭಕ್ತಿಗೂ ಸಮರಸ ಸಂಗಕ್ಕೆಯೂ ಕುಲದ ಹೊರೆ ಇದ್ದೀತೆ? ಪರುಷ ಮುಟ್ಟಲು ಕಬ್ಬುನ ಹೊನ್ನಾಯಿತ್ತು ಕಾಣಾ-ಮಹಾಜ್ಞಾನ ಪಾಂಡುರವು ಸೋಂಕಲು ಪಂಚಕರಣ ಸಪ್ತಧಾತುಗಳನುಳ್ಳ ಆತ್ಮನುಚಿತ್ಪ್ರಕಾಶಜ್ಞಾನಿಯಾದನು ನೋಡಾ.

ನಮ್ಮ ಕೂಡಲಸಂಗನ ಶರಣರನವರಿವರೆಂದಡೆ [೨]ಕುಂಭೀಪಾಕ[೨] ನಾಯಕನರಕ ತಪ್ಪದು ಕಾಣಾ-ನಮ್ಮ ಪರಶಿವಲಿಂಗದ ಪರಮೂರ್ತಿಗಳಾದ ಗುರುಲಿಂಗಜಂಗಮವನು ಆಸಕರು ಅಜ್ಞಾನಿಗಳು ಅನಾಚಾರಿಗಳೆಂದರೆ ಆನೆಸೊಂಡಿಲಗಾತ್ರನಿರಯವು ವಾರಿಯಾಗದು ಕಂಡಾ.

....

೨-೨ ಕುಂಭಿಯ ಪಾತಕ (ಚ. ಜ), ೩+ಸ (ಜ).

III -

ಸಡಗರ-ಸಂಭ್ರಮವು, ಡೊವಿಗೆ-ತಲೆಯು.

೫೭೦

ವಿಷ್ಣು[1]ವಿನ[1] ಪೂಜಿಸಿ ಮುಡುಹು ಸುಡಿಸಿಕೊಂಬುದ ಕಂಡೆ, ಜಿನ್ನನ ಪೂಜಿಸಿ ಬತ್ತಲೆಯಿಪ್ಪುದ ಕಂಡೆ, ಮೈಲಾರನ ಪೂಜಿಸಿ ನಾಯಾಗಿ [2]ಬೊ[2]ಗಳುವುದ ಕಂಡೆ, ನಮ್ಮ ಕೂಡಲಸಂಗನ ಶರಣರ ಪೂಜಿಸಿ ದೇ[3]ವ[3]ಭಕ್ತರೆನಿಸಿಕೊಂಬುದ ಕಂಡೆ.

I -

ವಿಷ್ಣುವಿನ ಪೂಜಿ-ನಾರಾಯಣನೇ ದೈವವೆಂದಾರಾಧಿಸಿ, ಮುಡುಹು ಸುಡಿಕೊಂಡುದ-ಪಂಚಲೋಹಂಗಳಿಂದ ಭುಜಗಳನು ತಪ್ತಂಗೈಯ್ಸಿ ಕೊಂಡುವಂಥವನು, ಕಂಡೆ-ಅರಿದೆನು. ಜಿನ್ನನ ಪೂಜಿಸಿ-ಅರಹುನೇ ದೈವವೆಂದಾರಾಧಿಸಿ. ಬತ್ತಲೆಯಿಪ್ಪುದ-ತಟ್ಟನ್ನು ಉಟ್ಟುಕೊಂಡು ತಲೆಯನ್ನು ತರಿಸಿಕೊಂಡು ಹಸಿರುಗಿಡವನ್ನು ಬೊಗ್ಗಿಸಿ ಮಲಮೂತ್ರಂಗಳ ವಿಸರ್ಜನೆಯವಾಡುತ್ತ ಹೊರಗೈಲಿ ಅನ್ನವನ್ನು ಭುಂಜಿಸುತ್ತಾ ದಿಗಂಬರದಲ್ಲಿ ವಿನೋದಿಸುವಂಥದನ್ನು, ಕಂಡೆ-ಅರಿವೆನು. ಮೈಲಾರನ ಪೂಜಿಸಿ-ಮಾ[೧][ಳಚಿ-][೧]ಭರ್ತಾಧೀಶ ಮೈಲಾರನೆ ದೈವವಂದಾರಾಧಿಸಿ, ನಾಯಾಗಿ ಬೊಗಳುವುದ-ಕುತ್ತಿಗೆಗೆ [೨]ಹಗ್ಗ[೨]ವನ್ನು ಹಾಕಿ ಕೊರಳಿಗೆ ಕವಡಿಯನ್ನು ಕಟ್ಟಿಸಿ ಮರದ ಡೋಣಿಯಲ್ಲಿ ಅಂಬಲಿಯನ್ನು ಕುಡಿವುತ್ತ, ನಾಯಾಗಿ ಬೊಗಳುವಂಥದನ್ನು, ಕಂಡೆ-ಅರಿದೆನು. ನಮ್ಮ ಕೂಡಲಸಂಗನ ಶರಣರ-

ನಮ್ಮ ಜಂಗವಮೂರ್ತಿಗಳನು, ಪೂಜಿಸಿ–ಆರಾಧಿಸಿ, ದೇವಭಕ್ತರೆನಿಸಿಕೊಂಬುದ–ಈತನಾರು ಭಕ್ತ? ಈತನಾರು ದೇವ? ದೇವಭಕ್ತರೆಂದು ಹೇಳಿಸಿಕೊಂಬುವಂಥದನ್ನು, ಕಂಡೆ–ಅರಿದೆನು.

....

೧–೧ ಳಾಚ (ಕ, ಗ), ೨–೨ ಹಾಸ (ಗ),

IV –

1–1 ವ (ತ), 2–2 ಬ (ತ), 3–3 ವಾ (ತ)

....

ಪರಬ್ರಹ್ಮವಾದ ಪ್ರಣಮ ಮಂತ್ರವಬಿಟ್ಟು, ಆ ಪ್ರಣಮ ಮಂತ್ರಕ್ಕೆ ಮಾತೆಯಾದ ಪರಮಲಿಂಗವ ಬಿಟ್ಟು, ವಿಷ್ಣುವ ಪೂಜಿಸಿ ಸುಡುಸಿಕೊಂಬವರು; ಜಿನನ ಪೂಜಿಸಿ ಬತ್ತಲೆ ಇಪ್ಪವರು: ಮೈಲಾರನ ಪೂಜಿಸಿ ನಾಯಾಗಿ ಬಗಳುವವರು ಇಂತೀ ಕೋಡಗವಿಚಾರದವರ ಕಂಡು ಎರಡಿಲದ್ಲ ಅದ್ವೈತಬ್ರಹ್ಮವ ಬಲ್ಲಂಥಾ ಶರಣರು ನೋಡಿ ನಗುತ್ತೈದಾರೆಂಬುದೀ ವಚನದರ್ಥ.

೫೭೧

ಬ್ರಾಹ್ಮಣನೆ ದೈವವೆಂದು ನಂಬಿದ ಕಾರಣ ಗೌತಮಗೆ ಗೋವಧೆಯಾಯಿತ್ತು. ಬ್ರಾಹ್ಮಣನೆ ದೈವವೆಂದು ನಂಬಿದ ಕಾರಣ ಬಲಿಗೆ ಬಂಧನವಾಯಿತ್ತು. ಬ್ರಾಹ್ಮಣನೆ ದೈವವೆಂದು ನಂಬಿದ ಕಾರಣ ಕರ್ಣನ ಕವಚ ಹೋಯಿತ್ತು. ಬ್ರಾಹ್ಮಣನೆ ದೈವವೆಂದು ನಂಬಿದ ಕಾರಣ ದಕ್ಷಂಗೆ ಕುಜೆದಲೆಯಾಯಿತ್ತು. ಬ್ರಾಹ್ಮಣನೆ ದೈವವೆಂದು ನಂಬಿದಕಾರಣ ಪರಶುರಾಮ ಸಮುದ್ರಕ್ಕೆ ಗುಜೆಯಾದ, ಬ್ರಾಹ್ಮಣನೆ ದೈವವೆಂದು ನಂಬಿದ ಕಾರಣ ನಾಗಾರ್ಜುನನ [1][ತಲೆಹೋಯಿತು][1] ದೇವಭಕ್ತರೆಂದು ನಂಬಿದ ಕಾರಣ ನಮ್ಮ ಕೂಡಲಸಂಗನ ಶರಣರು ಕೈಲಾಸವಾಸಿಗಳಾದರು.

....

1–1 ರಸಘುಟಿಕೆಯೆಂಬ ಪರ್ವತ ಬಿದ್ದು ಸತ್ತು ಹೋದನು (ಕ, ಗ).

I –

ಬ್ರಾಹ್ಮಣನೆ ದೈವವೆಂದು–ಬ್ರಾಹ್ಮಣನೆ ದೇವರೆಂದು, ನಂಬಿದ ಕಾರಣ–ವಿಶ್ವಾಸಿಸಿ ದಾನವ ಕೊಟ್ಟ ನಿಮಿತ್ತ. ಗೌತಮನಿಗೆ–ಗೌತಮನೆಂಬ ಋಷೀಶ್ವರನಿಗೆ, ಗೋವಧೆಯಾಯಿತ್ತು–ಗೋಹತ್ಯವೇ ಪ್ರಾಪ್ತಿಯಾಯಿತ್ತು. ಬ್ರಾಹ್ಮಣನ ದೈವವೆಂದು–ಬ್ರಾಹ್ಮಣನೆ ದೇವರೆಂದು ನಂಬಿದ ಕಾರಣ–ವಿಶ್ವಾಸಿಸಿ ದಾನವ ಕೊಟ್ಟ ನಿಮಿತ್ತ. ಬಲಿಗೆ–ಬಲಿಚಕ್ರವರ್ತಿಗೆ, ಬಂಧನವಾಯಿತ್ತು–ಪಾತಾಳಲೋಕ ಪರಿಯಂತರದಲ್ಲಿ ಕಾಲಲ್ಲಿ ಮೆಟ್ಟಿ ತುಳಿಸಿಕೊಂಡು ಹೋಗುವಂಥ ಪ್ರಾಪ್ತಿಯೇ ಉಂಟಾಯಿತ್ತು. ಬ್ರಾಹ್ಮಣನೆ ದೈವವೆಂದು–ಬ್ರಾಹ್ಮಣನೆ ದೇವರೆಂದು, ನಂಬಿದಕಾರಣ–ವಿಶ್ವಾಸಿಸಿ ದಾನವ ಕೊಟ್ಟ ನಿಮಿತ್ತ. ದಕ್ಷಂಗೆ–ದಕ್ಷಬ್ರಹ್ಮನಿಗೆ, ಕುಜೆದಲೆಯಾಯಿತ್ತು–ದೇವತಾಶಿರಸ್ಸು ಹೋಗಿ ಬದುಕು ಮನೆಯನ್ನು ಹೋಗಲಾಡಿಸಿಕೊಂಡು ಅಜಶಿರಸ್ಸಿಗೆ ಪ್ರಾಪ್ತಿಯಾದನು. ಬ್ರಾಹ್ಮಣನೆ ದೈವವೆಂದು–ಬ್ರಾಹ್ಮಣನೆ

ದೇವರೆಂದು, ನಂಬಿದ ಕಾರಣ–ವಿಶ್ವಾಸಿಸಿ ದಾನವ ಕೊಟ್ಟ ನಿಮಿತ್ತ, ಕರ್ಣನ–ಕರ್ಣನೆಂಬ ದೊರೆಯ, ಕವಚ–ವಜ್ರಾಂಗಿಯು, ಹೋಯಿತ್ತು–[೧]ರಣಾಗ್ರ[೧] ಕಾಳಗದಲ್ಲಿ ಚಾಗಿಯಾಗಿ ಹೋಯಿತ್ತು. ಬ್ರಾಹ್ಮಣನೆ ದೈವವೆಂದು–ಬ್ರಾಹ್ಮಣನೆ ದೇವರೆಂದು, ನಂಬಿದ ಕಾರಣ–ವಿಶ್ವಾಸಿಸಿ ದಾನವಕೊಟ್ಟ ನಿಮಿತ್ತ, ಪರಶುರಾಮ–ಪರಶುರಾಮನೆಂಬಂಥ ದೊರೆಯು, ಸಮುದ್ರಕ್ಕೆ–ಅಬ್ಧಿಗೆ, ಗುಜೆಯಾದ–ಈಡಾದನು, ಬ್ರಾಹ್ಮಣನೆ ದೈವವೆಂದು–ಬ್ರಾಹ್ಮಣನೆ ದೇವರೆಂದು, ನಂಬಿದ ಕಾರಣ–ವಿಶ್ವಾಸಿಸಿ ದಾನವ ಕೊಟ್ಟ ನಿಮಿತ್ತ, ನಾಗಾರ್ಜುನನ–ನಾಗಾರ್ಜುನನೆಂಬ ಸಿದ್ಧನ, ತಲೆ [ಹೊಯಿತ್ತು–] ಮಸ್ತಕವು ಹೋಯಿತ್ತು.[೨]

ದೇವಭಕ್ತರೆಂದು ನಂಬಿದ ಕಾರಣ–ದೇವಭಕ್ತರೇ ದೇವರೆಂದು ವಿಶ್ವಾಸಿಸಿ ಭಕ್ತಿಯ ಮಾಡಿದ ನಿಮಿತ್ತ, ನಮ್ಮ ಕೂಡಲಸಂಗನ ಶರಣರು–ನಮ್ಮ ಪರಶಿವನ ಚಿತ್ಪ್ರಭಾಂಗಸ್ವರೂಪರಾದ ಶಿವಶರಣರು, ಕೈವಶರಣರು, ಕೈಲಾಸವಾಸಿಗಳಾದರು–ಕಾಯವೆರಸಿ ಕೈಲಾಸಕ್ಕೆ ಹೋಗಿ ಕಾಮಧೇನು ಕಲ್ಪವೃಕ್ಷ ಚಿಂತಾಮಣಿ ಪರುಷದಖಣಿ ಪಿಯೂಷ ಮೊದಲಾದವನ್ನು ಪಡೆದುಕೊಂಡನುಭವಿಸಿ ದೇವತಾಶ್ರೇಷ್ಠರಾದರು.

....

೧+೧ x (ಗ). ೨–೨+ರಸಘಂಟಿಕೆ–ರಸಘುಟಿಕೆಯೆಂದು, ಗಾಳಿ ಪೂಜೆ ಹಬ್ಬುಗೆಯಲ್ಲಿ ಹೋಯಿತ್ತು, ಬಯಲಾಗಿ ಹೋಯಿತ್ತು (ಕ, ಗ),

III –

ನಾಗಾರ್ಜುನನೆಂಬ ರಸಸಿದ್ದನ ಶಿರಚ್ಛೇದನವಾಯಿತ್ತು, ಗಾಳಿ ಪೂಜೆ[3]ಯ[3] ಹಬ್ಬಾಗೆಯಲ್ಲಿ.

....

3–3 x (ಟ).

೫೭೨

ಆದಿಪುರಾಣ ಅಸುರರಿಗೆ, ಮಾರಿ, ವೇದಪುರಾಣ ಹೋತಿಂಗೆ ಮಾರಿ, ರಾಮಪುರಾಣ ರಕ್ಕಸರಿಗೆ ಮಾರಿ, ಭಾರತಪುರಾಣ ಗೋತ್ರಕ್ಕೆ ಮಾರಿ, ಎಲ್ಲಾ ಪುರಾಣ ಕರ್ಮಕ್ಕೆ ಮೊದಲು, ನಿಮ್ಮ ಪುರಾಣಕ್ಕೆ ಪ್ರತಿಯಿಲ್ಲ, ಕೂಡಲಸಂಗಮದೇವಾ.

I– –

ಆದಿಪುರಾಣ–ಆದಿಪುರಾಣವೆಂಬುವಂಥದು, ಅಸುರರಿಗೆ ಮಾರಿ–ದೇವತಾರಾಕ್ಷಸರಿಗೆ ಯುದ್ಧವನ್ನು ಹೇಳಿ ಕಡಿದಾಡಿಸಿ ಮರಣವನ್ನೈದಿಸುವುದಕ್ಕೆ ವೈರಿಯಾಗಿರ್ಪುದು. ವೇದಪುರಾಣ ದೇವಪುರಾಣವೆಂಬುವಂಥದು, ಹೋತಿಂಗೆ ಮಾರಿ–ಹೋತನ್ನು, ಕೊಂದು ಹೋಮವ ಮಾಡಿಸುವುದಕ್ಕೆ ವೈರಿಯಾಗಿರ್ಪುದು. ರಾಮಪುರಾಣ–ರಾಮಪುರಾಣವೆಂಬುವಂಥದು, ರಕ್ಕಸರಿಗೆ ಮಾರಿ–ರಾಮ ರಾವಣರಿಗೆ ಯುದ್ಧವನ್ನು ಹೇಳಿ ಕಡಿದಾಡಿಸಿ ಮರಣವ ನ್ನೈಯ್ದಿಸುವುದಕ್ಕೆ ವೈರಿಯಾಗಿರ್ಪುದು, ಭಾರತಪುರಾಣ–ಭಾರತಪುರಾಣ ವೆಂಬುವಂಥದು, ಗೋತ್ರಕ್ಕೆ ಮಾರಿ–ಕೌರವರು ಪಾಂಡವರು ಮೌರ್‍ಯರು ಕದಂಬರೊಂದಿಗೆ ಯುದ್ಧವ ಹೇಳಿ. ಕಡಿದಾಡಿಸಿ ಮರಣವನ್ನೈಯ್ದಿಸುವುದಕ್ಕೆ

ವೈರಿಯಾಗಿರ್ಪುದು. ಎಲ್ಲಾ ಪುರಾಣ–ಸಮಸ್ತಪುರಾಣಂಗಳು, ಕರ್ಮಕ್ಕೆ ಮೊದಲು–ಪಾಪಕ್ಕೆ ಗುರಿಯಾಗಿರ್ಪವು ನಿಮ್ಮ ಪುರಾಣಕ್ಕೆ–ಶಿವನ ಶಿವಗಣಂಗಳ ಮಹಿಮೆಯನ್ನು ಹೇಳುವಂಥ ಶಿವಪುರಾಣಕ್ಕೆ ಪ್ರತಿಯಿಲ್ಲ–ಸಮಾನವಿಲ್ಲವು, ಕೂಡಲಸಂಗಮದೇವ–ಎಲೆ ಪರಶಿವಲಿಂಗವೆ.

೫೭೩

ನಿಮ್ಮ ವಚನವೆನ್ನ ಪುಣ್ಯವೆಂಬುದು ಹುಸಿಯಾಯಿತ್ತು ನೋಡಾ. ಶಾಸ್ತ್ರದ ವಚನ ಹೋತಿಂಗೆ ಮಾರಿ; ಎಂತು ನಂಬುವೆನಯ್ಯಾ? ನಾನು ಕೊಲ್ಲೆನು ನೇಣು ಕೊಂದಿತ್ತೆಂಬ ಸೂನೆಗಾಱರಿಗೆ ನಾನೇನೆಂಬೆ, ಕೂಡಲಸಂಗಮದೇವಾ.

I– –

ನಿಮ್ಮ ವಚನನ್ನಲ್ಲ ಪುಣ್ಯವೆಂಬುದು–ನಿಮ್ಮ ವಚನವೆಂದರೆ ವೇದಂಗಳು, ಆ ವೇದಂಗಳಲ್ಲಿ ಹೇಳಿದ ಹಾಂಗೆ ನಂದಿಮುಖವಾಡ ವೃಷಭ[೧]ನಾ[೧]ಟಕ್ಕೆ ಭಸ್ಮರುದ್ರಾಕ್ಷಿಧಾರಣ ಪಂಚಾಕ್ಷರಮಂತ್ರ ಯುಕ್ತವಾಗಿ ಶಿವಾಧಿಕ್ಯವಿಡಿದಾಚರಿಸಿ ಶಿವನ ಕೃಪೆಯನ್ನು ಹಡೆವಂಥದೆ, ಎನ್ನ ಪುಣ್ಯವೆಂಬುದು–ಎನ್ನ ಸುಕೃತವೆಂಬುದು ಅದನ್ನು ಬಿಟ್ಟು ಬತ್ತುವ ಜಲ ಒಣಗುವ ಮರ ಸತ್ತು; ಹುಟ್ಟುವ ನಾರಾಯಣನೇ ದೈವವೆಂದಾರಾಧಿಸುವಂಥದು, ಹುಸಿಯಾಯಿತ್ತು ನೋಡಾ ಅಬದ್ಧವಾಯಿತ್ತು ಕಂಡಾ ಶಾಸ್ತ್ರದ ವಚನ–ತಾವು ಓದುವಂಥ ಹದಿನಾರು ಧರ್ಮಶಾಸ್ತ್ರದ ವಾಕ್ಯವು, ಹೋತಿಂಗೆ ಮಾರಿ–ಹೋತ ಕೊಂದು ಹೋಮವ ಮಾಡಿಸುವುದಕ್ಕೆ ವೈರಿಯಾಗಿರ್ಪುದು, ಎಂತು ನಂಬುವೆನಯ್ಯಾ?–ಶಿವನಿಗೆ ಸಮಾನವಾದ ದೈವವೆಂದು ಹೇಂಗೆ ವಿಶ್ವಾಸಿಸುವೆನಯ್ಯಾ? ನಾನು ಕೊಲ್ಲೆನು ನೇಣುಕೊಂದಿತ್ತೆಂಬ ಸೂನೆಗಾಱರಿಗೆ ನಾನೇನೆಂಬೆ; [ನಾನು ಕೊಲ್ಲೆನು–] ಹೋತದಾರು ಕೊಂದರು ಮೇಯೆಂದು ಕೇಳಿದಲ್ಲಿ ಕೇಶವನೇ ಕೊಂದ ಮಾಧವನೇ ಕೊಂದ ಯಂಕನೇ ಕೊಂದ ತಿಮ್ಮನೇ ಕೊಂದನೆಂದಲ್ಲಿ ನಾನು ಕೊಲ್ಲೆನು, ನೇಣು ಕೊಂದಿತ್ತೆಂಬ–ಎನ್ನ ಜನಿವಾರ ಕೊಂದಿತ್ತೆಂದು ಹೇಳುವ, ಸೂನೆಗಾಱರಿಗೆ–ಕಟುಕರಿಗೆ ಸಮಾನವಾದ ವಿಪ್ರರುಗಳಿಗೆ, ನಾನೇನೆಂಬೆ–ನಾನೆಂತೆಂದು ಹೇಳುವೆನು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

....

೧–೧ ನ(ಕ).

III –

ನಿಮ್ಮ ವಚನವೆನ್ನ ಪುಣ್ಯವು–ಎಲೆ ಪರಶಿವನೆ ನಿಮ್ಮ ವಾಕ್ಯವು ಎನ್ನ ಸುಕೃತ[೨] ಕಂಡಾ[೩]. ಹುಸಿಯಾಯಿತ್ತು ನೋಡಾ–ಅಬದ್ಧವಾಯಿತ್ತು ಕಂಡಾ.

೨+ವೆಂಬುದು (ಟ), ೩+ನೀವು ಕೃಪೆಯಾಗದಿರಲು (ಟ, ಡ).

೫೭೪

ಮಾತಿನ ಮಾತಿಂಗೆನ್ನ ಕೊಂದಿಹರೆಂದು ಎಲೆ ಹೋತೇ ಅಳು ಕಂಡಾ! ವೇದವನೋದಿದವರ ಮುಂದೆ ಅಳು ಕಂಡಾ! ಶಾಸ್ತ್ರವನೋದಿದವರ ಮುಂದೆ ಅಳು ಕಂಡಾ! ನೀನತ್ತುದಕ್ಕೆ ತಕ್ಕುದ ಮಾಡುವ ನಮ್ಮ ಕೂಡಲಸಂಗಮದೇವ.

I– –

ಮಾತಿನ–ಮಾತಿನವೆಂದರೆ ವೇದಶಾಸ್ತ್ರಂಗಳು, ಮಾತಿಂಗೆ–ಆ ವೇದಶಾಸ್ತ್ರಂಗಳ ಮಾತನ್ನು ಕಲಿತುಕೊಂಡು, ಎನ್ನ ಕೊಂದಹರೆಂದು–ಎನ್ನ ಪ್ರಾಣವನು ಸಂಹರಿಸಿಹರೆನುತ್ತ, ಎಲೆ ಹೋತೇ–ಎಲೆ ಅಜಪಶುವೆ ಅಳು ಕಂಡಾ!–ದುಃಖಿಸಿ ದುಃಖಿಸಿ ರೋದನವ ಮಾಡು ಕಂಡಾ! ವೇದವನೋದಿದವರ ಮುಂದೆ–ನಾಲ್ಕು ವೇದಂಗಳ ಪಾರಂಗತವಾಗಿ ಬಲ್ಲಂಥ ಸೋಮಯಾಜಿಗಳ ಮುಂದೆ, ಅಳು ಕಂಡಾ!–ದುಃಖಿಸಿ ದುಃಖಿಸಿ ರೋದನವ ಮಾಡು ಕಂಡಾ! ಶಾಸ್ತ್ರವ ನೋದಿದವರ ಮುಂದೆ–ಅನಂತಕ ಮೊದಲಾದ ಹದಿನಾರು ಧರ್ಮಶಾಸ್ತ್ರಂಗಳನು ಪಠಿಸಿದವರ ಮುಂದೆ, ಅಳು ಕಂಡಾ!–ದುಃಖಿಸಿ ದುಃಖಿಸಿ ರೋದನವ ಮಾಡು ಕಂಡಾ! ನೀನತ್ತುದಕ್ಕೆ–ನೀನು ಕೂಗಿದರೂ ಬಿಡದೆ ಕೊಂದುದಕ್ಕೆ, ನಮ್ಮ ಕೂಡಲಸಂಗಮದೇವ–ನಮ್ಮ ಪರಶಿವಲಿಂಗವು, ತಕ್ಕುದ ಮಾಡುವ–ಅವರನ್ನು ಹೋತಾಗಿ ಹುಟ್ಟಿಸಿ ಕೂಗಿದರೂ ಬಿಡದೆ ಕೊಲ್ಲಿಸಿಬಿಡುತ್ತಿಹನು.

೫೭೫

ದಕ್ಷಯಾಗವ ಮಾಡಲೆಂದು ಅಜಮುಖ್ಯವಾದ ಸುರರೆಲ್ಲಾ ನೆರೆದು ಬಂದ ಬಾಯ ನೋಡಾ! ಬಾಯ ತಪ್ಪಿಸಿ ಉಣಬಂದ ದೈವದ ಬೆಂದ ಬಾಯ ನೋಡಾ! ಉಣದೆ ಉಡದೆ ಹೊಗೆಯ ಕೈಯಲ್ಲಿ ಸತ್ತಣ್ಣಗಳ ಕೇಡು ನೋಡಾ ಕೂಡಲಸಂಗಮದೇವಾ.

I –

ದಕ್ಷಯಾಗವ ಮಾಡಲೆಂದು : ದಕ್ಷ–ದಲ್ಷಬ್ರಹ್ಮನ, ಯಾಗವ ಮಾಡ ಲೆಂದು–ಮರಣಯಜ್ಞವನು ಅನುಗೈಯಬೇಕೆಂದು, ಅಜಮುಖ್ಯವಾದ–ಬ್ರಹ್ಮ ಮೊದಲಾದ, ಸುರರೆಲ್ಲ–ಮೂವತ್ತುಮೂರು ಕೋಟಿ–ದೇವತೆಗಳಷ್ಟೂ, ನೆರೆದು–ಒಬ್ಬುಳಿಯಾಗಿ, ಬಂದ ಬಾಯ ನೋಡಾ–ಶಿವನ ಕೊಂದು ಕೈಲಾಸಕ್ಕೆ ನಾರಾಯಣನ ಪಟ್ಟವ ಕಟ್ಟಿ ಶಿವನೂ ಶಿವಗಣಂಗಳನುಭವಿಸುವಂಥ ಶಿವಸುಖವನ್ನು ತಾವನುಭವಿಸ ಬೇಕೆಂದು, ಬಂದ–ಐದುಬಂದ, ಬಾಯನೋಡಾ–ಭಿನ್ನಾಪೇಕ್ಷೆಯೆಂಬ ರಸನೆಯನು ಕಂಡಾ! ಬಾಯ ತಪ್ಪಿಸಿ:[ಬಾಯ–]ಶಿವನು ಶಿವನಗಂಣಳನುಭವಿಸುವಂಥ ಶಿವಾಪೇಕ್ಷೆಯೆಂಬಂಥ ರಸನೆಯನ್ನು, ತಪ್ಪಿಸಿ–ತೊಲಗಿಸಿ, ಉಣಬಂದ–ಶಿವನಕೊಂದು ಕೈಲಾಸಕ್ಕೆ ನಾರಾಯಣನ ಪಟ್ಟವಕಟ್ಟಿ ಶಿವನೂ ಶಿವಗಣಂಗಳನುಭವಿಸುವಂಥ ಶಿವಸುಖವನ್ನು ತಾವನುಭವಿಸಬೇಕೆಂದು, ಬಂದ–ಐದುಬಂದ, ದೈವದ–ದೇವರುಗಳ, ಬೆಂದ–ಆಶಾಗ್ನಿಯಿಂದ ದಗ್ಧವಾದ, ಬಾಯ ನೋಡಾ–ಭಿನ್ನಪೇಕ್ಷೆಯೆಂಬ ರಸನೆಯನು ಕಂಡಾ! ಉಣದೆ–ಆ ಶಿವಸುಖವನನುಭವಿಸದೆ, ಉಡದೆ–ಆ ಶಿವಸುಖವನಾಚ್ಛಾದಿಸಿಕೊಳ್ಳದೆ, ಹೊಗೆಯ ಕೈಯಲ್ಲಿ–ಯಜ್ಞಧೂಮದ ಹಸ್ತದಲ್ಲಿ, ಬಾಯದಲ್ಲಿ

ಸತ್ತ–ಮೃತವಾದ, ಅಣ್ಣಗಳ–ವಿಪ್ರರುಗಳೆಂಬ ಹಿರಿಯರುಗಳ, ಕೇಡು ನೋಡಾ–ಲುಕ್ಸಾನವನು ಕಂಡಾ, ಕೂಡಲಸಂಗಮದೇವಾ!–ಎಲೆ ಪರಶಿವಲಿಂಗವೆ.

....

೧–೧ ನಡೆಸಿ(ಕ, ಗ).

III– –

ಬಾಯ ತಪ್ಪಿಸಿ–ಪರಶಿವನ ಮುಖಕ್ಕೆ ಹೊಱಚ್ಚಾಗಿಸಿ, ಹೊಗೆಯ ಕೈಯಲ್ಲಿ ಸತ್ತ–ದುಃಖಧೂಮ ದಲ್ಲಿ ಮೃತವಾದ.

೫೭೬

ಏನಯ್ಯಾ, ವಿಪ್ರರು ನುಡಿದಂತೆ ನಡೆಯರು; ಅದೆಂತಯ್ಯಾ? ತಮಗೊಂದು ಬಟ್ಟೆ, ಶಾಸ್ತ್ರಕೊಂದು ಬಟ್ಟೆ! ಕೂಡಲಸಂಗಮದೇವಾ, ಹೊಲೆಯರ ಬಸುಱಲ್ಲಿ ವಿಪ್ರರು ಹುಟ್ಟಿ ಗೋಮಾಂಸವ ತಿಂಬರೆಂಬುದಕ್ಕೆ ಇದೆ ದೃಷ್ಟ.

I –

ಏನಯ್ಯಾ–ಏನು ಕಾರಣಕ್ಕಯ್ಯಾ, ವಿಪ್ರರು–ಪಾರ್ವರು, ನುಡಿದಂತೆ–ನಂದಿಮುಖವಾದ ವೃಷಭನಾಟಕ್ಕೆ ಭಸ್ಮರುದ್ರಾಕ್ಷಿಧಾರಣ ಪಂಚಾಕ್ಷರ ಮಂತ್ರಯುಕ್ತವಾಗಿ ಶಿವಾಧಿಕ್ಯವಿಡಿದಾಚರಿಸಬೇಕೆಂದು. ಹೇಳಿಕೊಂಡ ಹಾಂಗೆ, ನಡೆಯರು–ಆಚರಿಸರು, ಅದೆಂತಯ್ಯಾ?–ಅದು ಹೇಂಗಯ್ಯಾ? ತಮಗೊಂದು ಬಟ್ಟೆ–ನಂದಿಮುಖವಾಡ ವೃಷಭನಾಟಕ್ಕೆ ಭಸ್ಮರುದ್ರಾಕ್ಷಿಧಾರಣ ಪಂಚಾಕ್ಷರಮಂತ್ರಯುಕ್ತವಾಗಿ ಶಿವಾ ದಿಕ್ಯವಿಡಿದಾಚರಿಸುವಂಥ ಮಾರ್ಗವನ್ನು ಬಿಟ್ಟು ಬತ್ತುವ ಜಲ ಒಣಗುವ ಮರ ಸತ್ತು ಹುಟ್ಟುವ ನಾರಾಯಣನೆ ದೈವವೆಂದಾರಾಧಿಸುತಿರ್ದಕಾರಣ ತಮ್ಮ ಮಾರ್ಗವು ಬೇರಾಗಿರ್ಪುದು, ಶಾಸ್ತ್ರಕೊಂದು ಬಟ್ಟೆ!–ನಂದಿಮುಖವಾಡ ವೃಷಭನಾಟಕ್ಕೆ ಭಸ್ಮರುದ್ರಾಕ್ಷಿಧಾರಣಂ ಪಂಚಾಕ್ಷರಮಂತ್ರಯುಕ್ತವಾಗಿ ಶಿವಾಧಿಕ್ಯವಿಡಿದಾಚರಿಸಿ ಶಿವನ ಕೃಪೆಯನ್ನು ಹಡೆದಂಥ ಶಾಸ್ತ್ರದ ಮಾರ್ಗವೇ ಬೇರಾಗಿರ್ಪುದು. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಹೊಲೆಯರ–ಚಾಂಡಾಲರ, ಬಸುಱಲ್ಲಿ, ಗರ್ಭದಲ್ಲಿ ವಿಪ್ರರು–ಪಾರ್ವರು, ಹುಟ್ಟಿ–ಉತ್ಪತ್ಯವಾಗಿ, ಗೋಮಾಂಸವ ತಿಂಬರೆಂಬುದಕ್ಕೆ–ಗೋವಿನ ಫಲವನ್ನು ಅನುಭವಿಸುತ್ತೈದಾರೆಂದು ಹೇಳುವುದಕ್ಕೆ, ಇದೆ ದೃಷ್ಟ–ಇದೆ ತಾರ್ಕಣ್ಯವು.

೫೭೭

ಹೊಲೆಯೊಳಗೆ ಹುಟ್ಟಿ ಕುಲವನಱಸುವೆ, ಎಲವೊ, ಮಾತಂಗಿಯ ಮಗ ನೀನು! ಸತ್ತುದ ನೆಳೆವವನೆತ್ತಣ ಹೊಲೆಯ? [1]ಹೋತು[1]ತಂದು ನೀವು ಕೊಲುವಿರಿ. ಶಾಸ್ತ್ರವೆಂಬುದು ಹೋತಿಂಗೆ ಮಾರಿ, ವೇದವೆಂಬುದು ನಿಮಗೆ ತಿಳಿಯದು, ನಮ್ಮ ಕೂಡಲಸಂಗನ ಶರಣರು ಕರ್ಮವಿರಹಿತರು, ಶರಣ ಸನ್ನಿಹಿತರು, ಅನುಪಮಚರಿತ್ರರು ಅವರಿಗೆ ತೋಱಲು ಪ್ರತಿಯಿಲ್ಲವು.

I– –

ಹೊಲೆಯೊಳಗೆ ಹುಟ್ಟಿ ಕುಲವನಱಸುವೆ; ಹೊಲೆಯೊಳಗೆ–ಸೂತಕವಾದ ಯೋನಿದ್ವಾರದಲ್ಲಿ, ಹುಟ್ಟಿ–ಉತ್ಪತ್ಯವಾಗಿ, ಕುಲವನಱಸುವೆ, ಕುಲಸೂತಕವನ್ನು ಹುಡುಕುವೆ, ಎಲವೋ–ಎಲೋ ಆತ್ಮನೆ, ಮಾತಂಗಿಯ ಮಗನೀನು!–ಮಾತಂಗಿ ಕುಮಾರ ನೀನು, ಸತ್ತುದನೆಳೆವನೆತ್ತಣ ಹೊಲೆಯ?: [ಸತ್ತುದನೆಳೆದ ವನು–] ಸತ್ತಂಥ ಪ್ರಾಣಿಗಳನು ತೆಗೆದುಕೊಂಡು ಬಂದು ತಿಂಬುವಂಥವನು, ಎತ್ತಣ ಹೊಲೆಯ–ಯಾವಕಡೆಯ ಹೊಲೆಯನು, ಹೋತು ತಂದು–ಅಜಪಶುವನ್ನು ತೆಗೆದುಕೊಂಡುಬಂದು, ನೀವು–ವಿಪ್ರರು, ಕೊಲುವಿರಿ–ನವದ್ವಾರಂಗಳಲ್ಲಿ ಉಸಿರಾಡಗೊಡದ ಹಾಂಗೆ ಜನಿವಾರದಿಂದ ಬಂಧಿಸಿ ಕೇಶವ ಗುದ್ದು ಮಾದವ [ಗುದ್ದೆಂದು] ಗುದ್ದನ್ನು ಹಾಕಿ ಪ್ರಾಣವ ಕೊಲ್ಲುವಿರಿ.

ಶಾಸ್ತ್ರವೆಂಬುದು–ನೀವು ಓದುವಂಥ ಹದಿನಾರು ಧರ್ಮಶಾಸ್ತ್ರವೆಂಬುದು, ಹೋತಿಂಗೆ ಮಾರಿ–ಹೋತು ಕೊಂದು ಹೋಮವ ಮಾಡಿಸುವುದಕ್ಕೆ ವೈರಿಯಾಗಿರ್ಪುದು. ವೇದವೆಂಬುದು–ನೀವು ಓದುವಂಥ ನಾಲ್ಕುವೇದವೆಂಬುದು, ನಿಮಗೆ–ವಿಪ್ರರುಗಳಿಗೆ, ತಿಳಿಯದು–ಅರಿಯಬಾರದು, ನಮ್ಮ ಕೂಡಲ ಸಂಗನ ಶರಣರು–ಶಿವನ ಚಿತ್ತ ಭಾಂಗಸ್ವರೂಪರಾದ ಶಿವಶರಣರು, ಕರ್ಮವಿರಹಿತರು–ಷಟ್ಕರ್ಮ ಷೋಡಶಕರ್ಮಂಗಳಿಗೆ ವಿಲಕ್ಷಣ ಸ್ವರೂಪಿಗಳು, ಶರಣಸನ್ನಿಹಿತರು–ಶರಣಸತಿ ಲಿಂಗಪತಿ ಭಾವವಿಡಿದಾಚರಿಸುವಂಥ ಆಚರಣೆಯಲ್ಲಿ ಕೂಡಲ್ಪಟ್ಟಂಥವರುಗಳು, ಅನುಪಮ–ಉಪಮಿಸಬಾರದು–ಚರಿತ್ರರು–ನಡಾವಳಿಯುನುಳ್ಳಂಥವರು, ಅವರಿಗೆ–ಅಂತಪ್ಪ ಶಿವಶರಣರಿಗೆ, ತೋಱಲು–ಕಾಣಿಸಲು, ಪ್ರತಿಯಿಲ್ಲವು–ಸಮಾನವಿಲ್ಲವು.

III –

1–1 ಹೊತ್ತು (ಟ, ಡ).

....

ಹೊತ್ತು ತಂದು ನೀವು–ವಿಪ್ರರು ನೀವು ತಲೆಯಮೇಲೆ ಕುಜೆಯನು ಹೊತ್ತುಕೊಂಡುಬಂದು, ಕೊಲುವಿರಿ–ಹಿಂಸೆಯ ಮಾಡುವಿರಿ.

೫೭೮

ಇಟ್ಟಿಯ ಹಣ್ಣ ನರಿ ತಿಂದು ಸೃಷ್ಟಿಯೆಲ್ಲ ತಿರುಗಿತೆಂಬಂತೆ ಮಟ್ಟಿಯನಿಟ್ಟ ದ್ವಿಜರ ಮಾತದೇಕೆ? ಹಗಲುಗಾಣದ ಗೂಗೆ ಇರುಳಾಯಿತ್ತೆಂದಡ, ಜಗಕ್ಕೆ ಇರುಳಪ್ಪದೆ ಮರುಳೆ? ಹೋಮದ ನೇಮದಲ್ಲಿ ಹೋತ ಕೊಂದು ತಿಂಬ ಅನಾಮಿಕರೊಡನಾಡಿ ಗೆಲವುದೇನು, ಕೂಡಲಸಂಗಮದೇವಾ.

I –

ಇಟ್ಟಿಯ ಹಣ್ಣ–ಹೆಮ್ಮುಷ್ಟಿಯ ಫಳವನ್ನು ನರಿ–ಜಂಬುಕನು, ತಿಂದು–ಭಕ್ಷಿಸಿ, ಸೃಷ್ಟಿಯೆಲ್ಲ ತಿರುಗಿತೆಂಬಂತೆ–ಕೆಳಯಿಕ್ಕೆ ನೋಡಿದರೆ ಭೂಮಿ ತಿರುಗುತೈತೆ ಮೇಲಕ್ಕೆ ನೋಡಿದರೆ ಆಕಾಶ ತಿರುಗುತೈತೆ ಎಡಬಲಕ್ಕೆ ನೋಡಿದರೆ ಅಷ್ಟ ದಿಕ್ಕುಗಳು ತಿರುಗುತೈದಾವೆ, ಹೋ ಹೋ ಜಗಕ್ಕೆ ಪ್ರಳಯ ಬಂತೆಂದು ಎಲ್ಲ ಮೃಗಂಗಳ ಕರೆದು ಹೇಳಿದಲ್ಲಿ ಎಲೆ ಹುಚ್ಚೇ ನೀನು ಹೆಮ್ಮುಷ್ಟಿಯ

ಹಣ್ಣುತಿಂದು ನಿನಗೆ ಮೈ ತಿರುಗಿದರೆ ಜಗಕ್ಕೆಲ್ಲ ಪ್ರಳಯವಾದೀತೆ? ಹುಚ್ಚುಮರುಳೆಯೆಂದು ನಕ್ಕು ಹಾಸ್ಯವಮಾಡಿ ತಮ್ಮ ತಮ್ಮ ಆಹಾರವನ್ನು ಮೇವುದಕ್ಕೆ ಹೋಗುತ್ತಿಹವು. ಹಾಂಗೆ, ಮಟ್ಟಿಯನಿಟ್ಟ–ಮಟ್ಟಿ ಮಣ್ಣಿನ ಪಟ್ಟೆನಾಮವನಿಟ್ಟುಕೊಂಡು ಕೈಯಲ್ಲಿ ತುಲಸೀಮಣಿಯನ್ನು ಪಿಡಿದುಕೊಂಡು ಗೋಪಾಲಮಂತ್ರವ ಜಪಿಸುತ್ತ, ಗೋಪಾಲ ಮಂತ್ರವೇ ಮಂತ್ರ ತುಲಸೀ ಮಣಿಯೇ ಮಣಿ ಮಟ್ಟಮಣ್ಣೇ ಮಣ್ಣು ನಾರಾಯಣನೆ? ದೈವವೆಂದು ಹೇಳು ವಂಥ, ದ್ವಿಜರ ಮಾತದೇಕೆ?–ವಿಪ್ರರ ಪ್ರಸಂಗ ಏನು ಕಾರಣಕ್ಕೆ? ಸಲ್ಲದು.

ಹಗಲುಗಾಣದ ಗೂಗೆ : [ಹಗಲುಗಾಣದ_] ಹಗಲಿನ ಹೊತ್ತು ಕಣ್ಣುಗಾಣದ, ಗೂಗೆ–ಕೌಶಿಕನು, ಇರುಳಾಯಿತ್ತೆಂದಡೆ ಜಗಕ್ಕೆ ಇರುಳಪ್ಪುದೆ ಮರುಳೆ?: [ಇರುಳಾಯಿತ್ತೆಂದಡೆ ಜಗಕ್ಕೆ ಇರುಳಪ್ಪುದೆ–] ಸಾಯಂಕಾಲವಾಯಿತ್ತು ನಮ್ಮ ನಮ್ಮ ಗೂಡಿಗೆ ಹೋಗುವ ಬನ್ನಿರೆ ಎಂದು ಎಲ್ಲ ಪಕ್ಷಿಗಳ ಕರೆದು ಹೇಳಿದಲ್ಲಿ ನಿನಗೆ ಹಗಲಿನಾಗ ಕಣ್ಣು ಕಾಣದೆ ಇದ್ದರೆ ಜಗಕ್ಕೆ ಇರುಳಾಯಿತ್ತೆ;? ಮರುಳೆಯೆಂದು ನಕ್ಕು ಹಾಸ್ಯವ ಮಾಡಿ ತಮ್ಮ ತಮ್ಮ ಆಹಾರವನ್ನು ತಿಂಬುವುದಕ್ಕೆ ಹೋಗುತ್ತಿಹವು, ಮರುಳೆ?–ಎಲೆ ಹುಚ್ಚೆ?

ಹೋಮದ ನೇಮದಲ್ಲಿ–ಹದಿನೆಂಟು ಧಾನ್ಯಂಗಳ ತುಪ್ಪ ತೈಲದಲ್ಲಿ [3]ಸಮ್ಮಿ[3]ಶ್ರವಮಾಡಿ ಅಗ್ನಿ ಪುರುಷನಿಗೆ ಆಹುತಿಕೊಟ್ಟು ಯಜ್ಞವ ಮಾಡುವ ನೆವದಲ್ಲಿ, ಹೋತಕೊಂದು–ಅಜಪಶುವನ್ನು ತೆಗೆದುಕೊಂಡುಬಂದು ನವದ್ವಾರಂಗಳಲ್ಲಿ ಉಸಿರಾಡಗೊಡದ ಹಾಂಗೆ ಜನಿವಾರದಿಂದ ಬಂಧಿಸಿ ಕೇಶವ ಗುದ್ದು ಮಾಧವ ಗುದ್ದೆಂದು ಗುದ್ದನ್ನು ಹಾಕಿ ಪ್ರಾಣವ ಕೊಂದು, ತಿಂಬ–ಸುಂಟಕವೆಂದು ದುಡ್ಡು ದುಡ್ಡಿನ ತೂಕವನ್ನು ಅನುಭವಿಸುವ, ಅನಾಮಿಕರೊಡನಾಡಿ–ಸರ್ವಸೂತಕದೊಡನೆ ಕೂಡಲ್ಪಟ್ಟಂಥ ವಿಪ್ರರುಗಳ ಕೂಡಾಡಿ, ಗೆಲುವುದೇನು–ಅವರ ಕೂಡ ವಾದವ ಮಾಡಿ ಜಯಿಸುವುದೇನು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

....

೧–೧ ಟ್ಟಿ (ಗ), ೨+ಏನು (ಗ), ೩–೩ ಮಿಶ್ರ (ಗ).

೫೭೬

ಮೀಂಬುಲಿಗನ ಹಕ್ಕಿಯಂತೆ ನೀರ ತಡಿಯಲ್ಲಿರ್ದು ಮೂಗಹಿಡಿದು ಧ್ಯಾನವ ಮಾಡುವರಯ್ಯಾ; ಬಿಟ್ಟ ಮಂಡೆಯವೆರಸಿ ಬಾಯ [1]ಮಿಡುಕಿಸುತ[1] ಕಣ್ಣಮುಚ್ಚಿ ಬೆರಳನೆಣಿಸುವರಯ್ಯಾ, ನಿಮ್ಮ [2]ಕೈಯಲ್ಲಿ ಕಟ್ಟಿದ ದರ್ಭೆ ಹಲ್ಲು[2] ಕೂಡಲಸಂಗನನರಿಯದೆ ಮೊಱೆಯಿಡುವರಂತೆ!

I –

ಮೀಂಬುಲಿಗನ ಹಕ್ಕಿಯಂತೆ ಗುಂಡುಮುಳುಗನ ಹಕ್ಕಿಯೋಪಾದಿಯಲ್ಲಿ, ನೀರತಡಿಯಲ್ಲಿರ್ದು–ಉದಕದ ಬುಡದಲ್ಲಿ ಕುಳಿತುಕೊಂಡಿರ್ದು. ಮೂಗಹಿಡಿದು–ತುದಿ ಮೂರಂಗುಲಿಗಳಿಂದ ನಾಸಿಕವನ್ನು ದೃಢವಿಡಿದು, ಧ್ಯಾನವ ಮಾಡುವರಯ್ಯಾ–ಮೂರ್ತಿಧ್ಯಾನವನ್ನು ಅನುಗೈವರಯ್ಯಾ. ಬಿಟ್ಟಮಂಡೆಯ ವರೆಸಿ–[1]ಬಿರಿ[1]ದಲೆಯೊಡನೆ ಕೂಡಿ, ಬಾಯ ಮಿಡುಕಿಸುತ.[* *] ಎರಡು ತುಟಿಗಳನು

ಮಿಡಿಮಿಡಿಯೆಂದು ಮಿಡಿಕಿಸುತ್ತ, ಕಣ್ಣಮುಚ್ಚಿ-ನಯನವನ್ನು ಬಾಸಣಿಸಿಕೊಂಡು ಬೆರಳನೆಣಿಸುವರಯ್ಯಾ-ಅಂಗುಲಿಗಳನು ಗಣನೆ ಹಾ¹ಕುವ¹ರಯ್ಯಾ. ನಿಮ್ಮ ಕೈಯಲ್ಲಿ-ನಿಮ್ಮ ಹಸ್ತದಲ್ಲಿ, ಕಟ್ಟಿದ-ಬಂಧಿಸಿ ಕೊಂಡಂಥ. ದರ್ಭೆಹುಲ್ಲು ಎಂಬಲ್ಲಿ ಶಿವನ ಶಿವಗಣಂಗಳ ಮಹಿಮೆಯನ್ನು ತಿಳಿಯದೆ ವೃಥಾ ಕೆಟ್ಟು ಹೋಗಬೇಡಿರಿಯೆಂದು ಕೈಯಲ್ಲಿ ಕಡ್ಡಿಯನ್ನು ಕೊಟ್ಟು ಸಾರುವೋಪಾದಿಯಲ್ಲಿ ಒಪ್ಪುತ್ತಿಹುದು ದರ್ಭಾಂಕುರವು, ಕೂಡಲಸಂಗನನರಿಯದೆ-ಪರಶಿವಲಿಂಗನ ತಿಳಿಯದೆ, ಮೊರೆಯಿಡುವರಂತೆ-ಗೋಳಿಡುವವರ ಹಾಂಗೆ.

....

೧-೧ ಬರೆ (ಗ), ೨-೨ಿಯ್ದ (ಕ), ೩-೩ ಮಿಶ್ರ (ಗ)

III -

1-1 ಮಿಡುಕುತ್ತ (ಟ, ಡ), 2-2 ಕೈಯಲ್ಲಿ ದರ್ಭೇ ಹುಲ್ಲನು ಹಿಡಿದುಕೊಂಡು (ಟ, ಡ).

....

ಮೀಂಬುಲಿಗನ ಹಕ್ಕಿಯಂತೆ-ಶರಾರಿಪಕ್ಷಿಯ ಹಾಂಗೆ, ಬಾಯಮಿಡುಕುತ್ತ ಬಾಯಲ್ಲಿ ಪಿಟಿಪಿಟಿಗುಟ್ಟುತ್ತ, ಬೆರಳನೆಣಿಸುವರಯ್ಯಾ-ಅಂಗುಲಿಗಳನು ಗಣನೆಯ ಮಾಡಿಕೊಂಬರು, ಕೈಯಲ್ಲಿ ದರ್ಭೆಹುಲ್ಲನು ಹಿಡಿದು ಕೊಂಡು-ಹಸ್ತದಲ್ಲಿ ದರ್ಭಾಂಕ್ಕುವನು ಪರಿಗ್ರಹಿಸಿಕೊಂಡು, ಅಂತೆ-ಹಾಂಗೆ.

೫೮೦

ಮಾಣದೆ ಅರಳೆಯ ಮರನ ತಿಟ್ಟನೆ ತಿರುಗುವ ಗಾಣದೆತ್ತಿನಂತೆ ಪೂರ್ವಲಿಖಿತ ಮುಂದೆಗಾಣ-ಲೀಯದು. ನೀವೆಲ್ಲ ವಾಯಕ್ಕೆ ಕೆಡಬೇಡ, ಮಾಣದೆ ಪೂಜಿಸು ಲಿಂಗವ, ಹೆಱಿರ ಗೋಣ ಕೊಯ್ದೆನೆಂದು ಮಂತ್ರವನೋದುವ ನೇಣುಗಾಱಿರ ಮೆಚ್ಚ ನಮ್ಮ ಕೂಡಲಸಂಗಮದೇವ.

I- -

ಮಾಣದೆ-ಬಿಡದೆ, ಅರಳೆಯ ಮರನ-ಅಶ್ವತ್ಥವೃಕ್ಷವನ್ನು, ತಿಟ್ಟನೆ-ಗಮ್ಮನೆ, ತಿರುಗುವ-ಸುತ್ತುವ, ಗಾಣದೆತ್ತಿನಂತೆ-ಒಣಗಿದ ಮರವನ್ನು ಸುತ್ತುವ ಅನಡ್ವನೋಪಾದಿಯಲ್ಲಿ ಪೂರ್ವಲಿಖಿತ-ಮುನ್ನಿನ ಹಣೆಬರಹವು, ಮುಂದುಗಾಣಲೀಯದು-ಮುಂದಾಗುವಂಥ ನಿಜಮೋಕ್ಷವನ್ನು ಅರಿಯಲೀಯದು, ನೀವೆಲ್ಲ-ಪಾರ್ವ¹ರೆಲ್ಲ¹, ವಾಯಕ್ಕೆ-ಮಿಥ್ಯಕ್ಕೆ, ಕೆಡಬೇಡ-ಶಿವತತ್ತ್ವವಳಿದು ಜೀವನವಾಗಬೇಡವು, ಮಾಣದೆ-ಬಿಡದೆ, ಲಿಂಗವ ಪೂಜಿಸು-ಇಷ್ಟಮಹಾಲಿಂಗವನ್ನು ಅಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳಿಂದಾರಾಧಿಸಿ ಇಷ್ಟಾರ್ಥಸಿದ್ಧಿಯನ್ನು ಹಡೆದಕೋ, ಹೆಱಿರ ಗೋಣ ಕೊಯ್ದೆನೆಂದು-ಪರರುಗಳನ್ನು ಉಂಬುತ್ತ ಉಡುವುತ್ತ ಸುಖಸಂತೋಷದಿಂದಿದ್ದಲ್ಲಿ ಕೇಡು ಮಂತ್ರವನ್ನು ಉಚ್ಚರಿಸಿ ಇವರ ಪ್ರಾಣವನ್ನು ಕೊಲ್ಲಬೇಕೆಂದು, ಮಂತ್ರವ ನೋದುವ-ಮಂತ್ರವನ್ನು ಉಚ್ಚರಿಸುವ, ನೇಣುಗಾಱಿರ-ಜನಿವಾರಬದ್ಧರಾದಂಥ ವಿಪ್ರರುಗಳ. ನಮ್ಮ ಕೂಡಲಸಂಗಮದೇವ-ನಮ್ಮ ಪರಶಿವಲಿಂಗವು, ಮೆಚ್ಚ-ಮಮಕರಿಸಿಕೊಂಡು ನಿಜಮೋಕ್ಷವನ್ನು ಕರುಣಿಸಿ ಕೊಟ್ಟಾನೆ? ಕರುಣಿಸಿ ಕೊಂಡನು.

....

೧-೧ ರಷ್ಟು (ಕ).

೫೮೧

ನೀರ ಕಂಡಲ್ಲಿ ಮುಳುಗುವರಯ್ಯಾ, ಮರನ ಕಂಡಲ್ಲಿ ಸುತ್ತುವರಯ್ಯಾ, ಬತ್ತುವ ಜಲವ ಒಣಗುವ ಮರನ ಮಚ್ಚಿದವರು ನಿಮ್ಮನೆತ್ತ ಬಲ್ಲರು, ಕೂಡಲಸಂಗಮದೇವಾ?

I- -

ನೀರ ಕಂಡಲ್ಲಿ-ಉದಕವ ನೋಡಿದಲ್ಲಿ, ಮುಳುಗುವರಯ್ಯಾ-ಗುಂಡುಮುಳುಗನ ಹಕ್ಕಿಯೋಪಾದಿಯಲ್ಲಿ ಮುಳುಮುಳುಗಿ ಏಳುವರಯ್ಯಾ, ಮರನ ಕಂಡಲ್ಲಿ-ಅಶ್ವತ್ಥವೃಕ್ಷವ ಕಂಡಲ್ಲಿ, ಸುತ್ತುವರಯ್ಯಾ-ಕುಂಬಾರನ ತಿಗರಿಯ ಹಾಂಗೆ ತಿರುಗುವರಯ್ಯಾ, ಬತ್ತುವ ಜಲವ-ಮಳೆಗಾಲದಲ್ಲಿ ತುಂಬಿರ್ದು ಬೇಸಿಗೆ ಬಂದಲ್ಲಿ ಇ[೧]ಮು[೧]ರಿ ಹೋಗುವ ಉದಕವನ್ನು, ಒಣಗುವ ಮರನ-[೨]ಕಡಿಹಾಯ್ದು[೨] ಕಾಲಾಂತರದಲ್ಲಿ ಬೇರು ಸಡಲಿ ಬುಡದರಸಿ ಬಿದ್ದು ಹೋಗುವಂಥ ಅರಳೆಮರನ, ಮಚ್ಚಿದವರು-ದೈವವೆಂದು ಮಮಕರಿಸಿದವರು, ನಿಮ್ಮನೆತ್ತ ಬಲ್ಲರು-ಸಮರಸಭಾವದಿಂದ ಲಿಂಗಪವೂಜೆಯ ಮಾಡಿ ಲಿಂಗದ ಕರುಣವನ್ನು ಹಡೆಯಬೇಕೆಂಬು ವಂಥದನ್ನು, [೩]ಅವರು, ಯಾವಕಡೆಗೆಂದು ತಿಳಿದಿಪ್ಪರು.[೪] ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

....

೧-೧ ಮಿ, (ಗ), ೨-೨ ಕಡಿದು (ಗ), ೩+ಅವರೆತ್ತ ಬಲ್ಲರು (ಕ, ಗ), ೪+ಅರಿಯರು (ಕ, ಗ).

೫೮೨

ಕಣ್ಣಮುಚ್ಚಿ ಕನ್ನಡಿಯ ತೋಱುವಂತೆ, ಇರುಳು ಹಗಲಿನ ನಿದ್ರೆ ಸಾಲದೆ? ಬೆರಳನೆಣಿಸಿ ಪರಮಾರ್ಥವ ಹಡೆವೊಡೆ ಚೋದ್ಯವಲ್ಲವೆ? ಹೇಳಾ! ಮೂಗ ಮುಚ್ಚಿ ಮುಕ್ತಿಯ ಬಯಸುವ ನಾಚಿಕೆಯಿಲ್ಲದವರ ನಾನೇನೆಂಬೆ, ಕೂಡಲಸಂಗಮದೇವಾ?

I -

ಕಣ್ಣಮುಚ್ಚಿ ಕನ್ನಡಿಯ ತೋಱುವಂತೆ-ಆವನೊಬ್ಬಾತ್ಮನಿಗೆ ಕಣ್ಣನು ಕಟ್ಟಿ ಕನ್ನಡಿಯನ್ನು ತೋರಿದರೆ ತನ್ನ ಮುಖದಲ್ಲಿರುವ ಕಂದುಕಲೆ ಹಾವಭಾವ ವಿಲಾಸವಿಭ್ರಮಗಳು ಕಂಡಾವೆ? ಕಾಣಲರಿಯವು ಹಾಂಗೆ, ಅಂತರಂಗದಲ್ಲಿ ಶಿವಾಧಿಕ್ಯವಿಡಿದಾಚರಿಸಿ ಶಿವನ ಕೃಪೆಯನ್ನು ಹಡೆವಂಥ ಶಿವಜ್ಞಾನವನ್ನು ಬಂಧಿಸಿ ಬಹಿರಂಗದಲ್ಲಿ ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆಯಿರೆಂದು ಬೋಧಿಸಿದರೆ ಅಳವಟ್ಟಿತ್ತೆ? ಅಳವಡದು. ಇರುಳು ಹಗಲಿನ-ದಿವಾಕಾಲ ನಿಶಾಕಾಲದ, ನಿದ್ರೆ-ಶಯನವು, ಸಾಲದೆ?-ಅಷ್ಟೆ ಸಾಲದೆ? ಅಷ್ಟೆ ಸಾಕು. ಬೆರಳನೆಣಿಸಿ-ಅಂಗುಲಿಗಳ ಗಣನೆ ಹಾಯ್ದು, ಪರಮಾರ್ಥವ ಹಡೆವೊಡೆ-ಯಥಾರ್ಥವನ್ನು ಹಡೆದುಕೊಳ್ಳಬೇಕಾದರೆ, ಚೋದ್ಯವಲ್ಲವೆ?-ಆಶ್ಚರ್ಯವಲ್ಲವೆ, ಹೇಳಾ!-ನಿರೂಪಿಸಾ ಮೂಗಮುಚ್ಚಿ-ತುದಿಮೂರಂಗುಲಿಗಳಿಂದ ನಾಸಿಕವನ್ನು ಬಾಸಣಿಸಿ, ಮುಕ್ತಿಯ ಬಯಸುವ-ಮೋಕ್ಷವನ್ನು ಇಚ್ಚೈಸುವ, ನಾಚಿಕೆಯಿಲ್ಲದವರ-ಅಭಿಮಾನ

ಉಂಟಾಗಿಲ್ಲದವರ, ನಾನೇನೆಂಬೆ–ನಾ ಎಂತೆಂದು ಹೇಳಲಿ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

೫೮೩

ಬ್ರಹ್ಮಸಭೆ ನೆರೆದಲ್ಲಿ ಬ್ರಹ್ಮವಿತ್ತುಗಳು ಬ್ರಹ್ಮತ್ವವ ಹಡೆದು, ತಮ್ಮ ವಚನವೇ ಬ್ರಹ್ಮವೆನಿಸಿಕೊಂಡು, ನೆಮ್ಮುವರು ವಿಷ್ಣುವನು : ತಮ್ಮ ದೈವವ ಬಿಡುವುದಾವುದುಚಿತ? ವಿಷ್ಣು ಶಿವಭಕ್ತನಾಗಿ ಬಂದು ನಿಷ್ಠೆಯಿಂದ ಕಣ್ಣನಿತ್ತು ಹಡೆದನು, ಶಿವಭಕ್ತಿಯಿಂದ! ಕಷ್ಟಜಾತಿಜೀವರುಗಳಿಗೆ ಮಟ್ಟಿ ಎಂತು ಬಂದಿತ್ತೊ! ಮುಟ್ಟ ರೊಂದುವನು ಮೂವಿಧಿಬಟ್ಟರು. ಹುಸಿದವನೆ ಹೊಲೆಯನೆಂದು ವಚನವುಂಟು ಲೋಕದಲ್ಲಿ. ಹುಸಿದಜನ ಶಿರ ಹೋಯಿತ್ತಾದಿಯಲ್ಲಿ! [1]ಎಸೆವ ಕಿಱುಪಶುವನು[1] ಉ[2]ಸಿ[2]ರಲೀಯದೆ *ವಿಧಾನಿಸಿ*ತಿಂಬ ಜ[3]ನ್ಮವಿ[3]ದಾವ ಫಲ[4]ವೊ[4]? ದಕ್ಷ [5]ಯಾಗವ[5]ಮಾಡಿ ನಿಕ್ಷೇತ್ರ[6]ವ ನೆರೆ[6]ದ. ಅಕಟಕಟಾ ಕೇಳಿಯೂ ಏಕೆ ಮಾಣಿರೋ? ಮಮಕರ್ತ ಕೂಡಲಸಂಗನ ಶರಣರು ಅಕ್ಷಯರಧಿಕರು, ವಿಪ್ರರು ಕೀಳು ಜಗವೆಲ್ಲಜೆಯಲು!

I –

ಬ್ರಹ್ಮಸಭೆ ನೆರೆದಲ್ಲಿ: [ಬ್ರಹ್ಮಸಭೆ–] ಬ್ರಹ್ಮರ ಸಮೂಹವು, ನೆರೆದಲ್ಲಿ–ಒಬ್ಬುಳಿಯಾದಲ್ಲಿ, ಬ್ರಹ್ಮ ವಿತ್ತುಗಳು–ಬ್ರಾಹ್ಮಣರುಗಳು, ಬ್ರಹ್ಮತ್ವವ ಹಡೆದು–ಬ್ರಾಹ್ಮಣರುಪದೇಶವನ್ನು ಪಡೆದುಕೊಂಡು, ತಮ್ಮ ವಚನವೇ–ತಮ್ಮ ವಾಕ್ಯದಲ್ಲಿ, ಬ್ರಹ್ಮವೆನಿಸಿಕೊಂಡು–ಬ್ರಾಹ್ಮಣನೇ ದೈವವೆಂದು ಹೇಳಿಸಿಕೊಂಡು, ನೆಮ್ಮುವರು ವಿಷ್ಣುವನು: [ವಿಷ್ಣುವನು–] ನಾರಾಯಣನೇ ದೈವವೆಂದು, ನೆಮ್ಮುವರು–ವಿಶ್ವಾಸಿಸುವರು, ತಮ್ಮ ದೈವವ–ತಮ್ಮ ದೈವವಾದಂಥ ರುದ್ರಮೂರ್ತಿಯ, ಬಿಡುವುದು–ಬಿಟ್ಟುಬಿಡುವುದು, ಆವುದುಚಿತ?–ಆವುದು ನಡಾವಳಿಯು? ವಿಷ್ಣು–ನಾರಾಯಣನು, ಶಿವಭಕ್ತನಾಗಿ–ಹರಭಕ್ತನಾಗಿ, ಬಂದು–ಐದುಬಂದು, ನಿಷ್ಠೆಯಿಂದ–ಭಕ್ತಿಯಿಂದ, ಶಿವಭಕ್ತಿಯಿಂದ, ಕಣ್ಣನಿತ್ತು–ನೇತ್ರಕಮಲವನು ಸಮರ್ಪಿಸಿ, ಹಡೆದನು–ಪಾಂಚಜನ್ಯವೆಂಬ ಶಂಖ ಸುದರ್ಶನವೆಂಬ ಚಕ್ರ ಗದೆ ಕೌಸ್ತುಭವೆಂಬ ರತ್ನವೈಕುಂಠವೆಂಬ ಲೋಕಪದವು ಲಕ್ಷ್ಮೀ ಮೊದಲಾದುವನ್ನು ಹಡೆದುಕೊಂಡನು.

ಕಷ್ಟಜಾತಿ ಜೀವರುಗಳಿಗೆ–ಕ್ಷೀಣಜಾತಿಯೊಡನೆ ಕೂಡಲ್ಪಟ್ಟ ವಿಪ್ರರುಗಳಿಗೆ, ಮಟ್ಟಿ ಎಂತು ಬಂದಿತ್ತೊ! : [ಮಟ್ಟಿ–] ಮಟ್ಟಿಮಣ್ಣಿನ ಪಟ್ಟೆನಾಮವ ನಿಟ್ಟುಕೊಂಬುವಂಥದು ಎಂತು ಬಂದಿತ್ತೋ!–ಹೇಂಗೆ ಸಂಬಂಧವಾಯಿತ್ತು. ಮುಟ್ಟರು ಒಂದುವನು–ಗುರುಭಕ್ತಿ ಲಿಂಗಪೂಜೆ ಜಂಗಮದಾಸೋಹ ದೊಳಗೊಂದನಾದರೂ ಹಿಡಿಯರು ಮೂವಿಧಿಬಟ್ಟರು–ಬ್ರಹ್ಮನುತ್ಪತ್ಯ ವಿಷ್ಣುವಿನ ಸ್ಥಿತಿ ರುದ್ರನ ಲಯೋಥರ್ಮ ಇಂತಪ್ಪ ಉತ್ಪತ್ಯಸ್ಥಿತಿಲಯಂಗಳಿಗೆ ಒಳಗಾದವರು, ವಶಗತವಾದಂಥವರು, ಹುಸಿದವನೆ–ಸಟೆಯನಾಡಿದವನೆ, ಹೊಲೆಯನೆಂದು, ಚಾಂಡಾಲನೆಂದು ವಚನವುಂಟು–ವಾಕ್ಯ ಉಂಟಾಗಿರ್ಪುದು ಲೋಕದಲ್ಲಿ–ಜಗತ್ತಿನಲ್ಲಿ.

ಹುಸಿದ–ಸಟೆಯನಾಡಿದಂಥ, ಅಜನ–ಬ್ರಹ್ಮನ, ಶಿರಹೋಯಿತ್ತು–ಮಸ್ತಕವು ಛೇದನವಾಗಿ ಹೋಯಿತ್ತು, ಆದಿಯಲ್ಲಿ–ಮೊದಲಲ್ಲಿ, ಎಸೆವ–ಹೆಚ್ಚಾಗಿ ವರ್ಧನವಾದ. ಕಿಱುಪಶುವನು–ಸಣ್ಣ ಅಜಪಶುವನ್ನು ಉಸಿರಲೀಯದೆ–ನವದ್ವಾರಂಗಳಲ್ಲಿ ಉಸಿರನಾಡಗೊಡದ ಹಾಂಗೆ [೧]ಜನಿವಾರದಿಂದ

ಬಂಧಿಸಿ[೧] ಕೇಶವ ಗುದ್ದು ಮಾಧವ [ಗುದ್ದೆಂದು] ಗುದ್ದನ್ನು ಹಾಕಿ ಪ್ರಾಣವ ಕೊಂದು, ವಿಧಾನಿಸಿ ತಿಂಬ-ವಿಧಾನೋಕ್ತವಾಗಿ ತಿಂಬ, ಸುಂಟಕವೆಂದು ಸುಟ್ಟುಕೊಂಡು ದುಡ್ಡುದುಡ್ಡಿನ ತೂಕ ಮಾಂಸವನ್ನು ಅನುಭವಿಸುವರ, ಜನ್ಮ-ಉತ್ಪತ್ಯವು, ಇದಾವ ಫಲವೊ?-ಇದಾವ ಸುಕೃತವು. ದಕ್ಷ-ದಕ್ಷ ಬ್ರಹ್ಮನು, ಯಾಗವ ಮಾಡಿ-ಮಾರಣಯಜ್ಞವನ್ನು ಅನುಗೈದು, ನಿಕ್ಷೇತ್ರವ ನೆರೆದ-ಬದುಕು ಮನೆಯನ್ನು ಹೋಗಲಾಡಿಸಿಕೊಂಡು ಅಜಶಿರಸ್ಸಿಗೆ ಪ್ರಾಪ್ತಿಯಾದನು. ಅಕಟಕಟಾ-ಅಯ್ಯಯ್ಯೊ, ಕೇಳಿಯೂ-ಇಂತಪ್ಪ ವಾರ್ತೆಯನಾಲಿಸಿ, ಏಕೆ ಮಾಣಿರೊ-ಏನು ಕಾರಣಕ್ಕೆ ಬಿಡಿರೊ, ಮಮಕರ್ತ[೨]-ಎನಗೆ ಒಡೆಯರು, ಕೂಡಲಸಂಗನ ಶರಣರು-ಶಿವನ ಚಿತ್ರಭಾಂಗ ಸ್ವರೂಪರಾದ ಶಿವಶರಣರು, ಅಕ್ಷಯರು-ಕೇಡಿಲ್ಲದ ಇದ್ದಂಥವರು, ಅಧಿಕರು-ಶ್ರೇಷ್ಠರು, ವಿಪ್ರರು-ಪಾರ್ವರು, ಜಗವೆಲ್ಲಜೆಯಲು-ಬ್ರಹ್ಮಾಂಡವೆಲ್ಲ ಬಲ್ಲಹಾಂಗೆ, ಕೀಳು-ಕ್ಷೀಣಜಾತಿಗಳು.

....

೧-೧x(ಕ), ೨+ಜಾತಿ (ಕ, ಗ).

III -

1-1 ಎಲೆವೊಂದಜ ಕಿರುಪಶುವಂ (ಟ, ಡ), 2-2 ಸು (ಟ, ಡ), [* *]ವಿದಾರಿಸಿ (ಟ, ಡ), 3-3 ನ್ನವ (ಟ, ಡ), 4-4 ವು (ಟ, ಡ), 5-5 ಯಜ್ಞವ (ಟ, ಡ), 6-6 ವೆರ (ಟ, ಡ).

....

ಮೂವಿಧಿಬಟ್ಟರು-ಸೃಷ್ಟಿ ಸ್ಥಿತಿ ಸಂಹಾರಕ್ಕೊಳಗಾದರು, ಎಸೆವೊಂದಜ ಕಿರುಪಶುವಂ: ಎಸೆವ-ಶೋಭಿಸುವ, ಒಂದಜ-ಒಂದಾಡಿನ, ಕಿರುಪಶುವಂ-ಮರಿಗುರಿಯನು, ಉಸುರಲೀಯದೆ-ಕೂಗಬಿಡದೆ, ವಿದಾ[3][ರಿ][3] ಸಿ-ಹೋಳಿ, ತಿಂಬ-ತಿಂದುಕೊಂಬಂಥ, ಜನ್ಮವದಾವ ಫಲವು-ಆ ಯಜ್ಞವದೇನು ಪ್ರಯೋಜನವು, ದಕ್ಷ ಯಜ್ಞವಮಾಡಿ-ದಕ್ಷಬ್ರಹ್ಮನು ಯಜ್ಞಕರ್ಮವನು ರಚಿಸಿ, ನಿಕ್ಷೇತ್ರವೆರದ-ನಷ್ಟಸಂತಾನವಾದನು, ವಿಪ್ರರು-ಹಾರುವರು, ಕೀಳು-ನೀಚರು.

....

3-3 ವಿ (ಟ, ಡ)

೫೮೪

ಕುಲದಲ್ಲಿ ಹಾರುವನು ಬ್ರಹ್ಮೇತಿಗೆ ಸಾರುವನು, ಆ[1]ರು[1] ಮಾಡಿದ ಪಾಪಕ್ಕೆ ತಾನೆ ಕೈಯಾನುವನು! ಸರಿಯೆ ದೇವ ಭಕ್ತರಿಗಿವನು? ಸರಿಯೆ ಲಿಂಗಭಕ್ತರಿಗಿವನು? ಬಡಗಿ ಮಾಚಲದೇವಿಯ ಕುಲಜೆಯ [2]ಮಾಡಿಹೆ[2]ವೆಂದು ಹೊನ್ನ ಕಪಿಲೆಯ ರಾವಣಶಾಖದ ಉಚ್ಚಿಷ್ಟದ ಹಾಲಿನಿಂದ ಕೂಳನಟ್ಟುಂಬವರ [3]ನಾ[3]ನೇನೆಂಬೆ, ಕೂಡಲ ಸಂಗಮದೇವ?

I -

ಕುಲದಲ್ಲಿ ಹಾರುವನು; ಕುಲದಲ್ಲಿ-ಜಾತಿಯಲ್ಲಿ, ಹಾರುವನು-ಪಾರ್ವನು, ಬ್ರಹ್ಮೇತಿಗೆ-ಬ್ರಾಹ್ಮಣರ ಕೊಂದಂಥ ಪಾಪಕ್ಕೆ, ಸಾರುವನು-ಹೊಂದುವನು. ಅದು ಮಾಡಿದ ಪಾಪಕ್ಕೆ ತಾನೆ ಕೈಯಾನು

ವನು! ಆರೇನು ಪಾಪವ ಮಾಡಿದಲ್ಲಿ ನಿಮ್ಮ ಪಾಪವನು ನಮಗೆ ಧಾರೆಯ ಕೊಡಿರೆಂದು ನೂರಾರು ವರಹಕ್ಕೆ ಹಸ್ತವಾಂತು ತೆಗೆದುಕೊಂಬುತ್ತಿಹನು. ಸರಿಯೆ ದೇವಭಕ್ತರಿಗಿವನು; [ದೇವಭಕ್ತರಿಗಿವನು.] ದೇವಭಕ್ತರಿಗಿದನ್ನು, ಸರಿಯೆ?–ಇವನು ಸಮಾನವೇ? ಲಿಂಗಭಕ್ತರಿಗಿವನು ಸರಿಯೆ?:[ಲಿಂಗಭಕ್ತರಿಗೆ–] 'ಲಿಂಗಭಕ್ತಶ್ಚ ಜಂಗಮ' ಎಂದು ಲಿಂಗ ಭಕ್ತರಾದ ಜ್ಞಾನಜಂಗಮ ಮೂರ್ತಿಗಳಿಗೆ, ಇವನು ಸರಿಯೆ?–ಇವನು ಸಮಾನವೆ?

ಬಡಗಿ ಮಾಚಲದೇವಿಯ–ಬಡಿಗೇರ ಕುಲದಲ್ಲಿ ಹುಟ್ಟಿದಂಥ ಮಾಚಲದೇವಿಯೆಂಬಾಯಕಳನ್ನು, ಕುಲಜೆಯ ಮಾಡಿಹೆವೆಂದು–ನಳಚಕ್ರವರ್ತಿಗೆ ಶುದ್ಧಕ್ಷತ್ರಿಯಯಳಾದ ಸ್ತ್ರೀಯಳ ಮಾಡಕೊಟ್ಟೇವೆಂದು, [ಹೊನ್ನ ಕಪಿಲೆಯ–] ಮೂರುಲಕ್ಷದ್ರವ್ಯವನ್ನು ತೆಗೆದುಕೊಂಡು ಬಂದು ಒಂದು ಸುವರ್ಣದ ಗೋವನ್ನು ಮಾಡಿಸಿ ಅದರ ಹೊಟ್ಟೆಯೊಳಗೆ ಪಂಚಾಮೃತವ ತುಂಬಿಸಿ ಚಿನ್ನದ ಕೊಪ್ಪರಿಗೆಯೊಂದು ಬೆಳ್ಳಿಯಕೊಪ್ಪರಿಗೆಯೊಂದು ಕಬ್ಬಿಣದ ಕೊಪ್ಪರಿಗೆಯೊಂದು ಹೀಂಗೆ ಮೂರು ಕೊಪ್ಪರಿಗೆಗಳ ಮಾಡಿಸಿ ಚಿನ್ನದ ಕೊಪ್ಪರಿಗೆಯೊಳಗೆ ಹಾಲು ತುಂಬಿಸಿ ಬೆಳ್ಳಿಯ ಕೊಪ್ಪರಿಗೆಯೊಳಗೆ ದಧಿಯ ತುಂಬಿಸಿ ಕಬ್ಬಿಣದ ಕೊಪ್ಪರಿಗೆಯೊಳಗೆ ಸ್ವಾದೋದಕವ ತುಂಬಿಸಿ ಆ ಸುವರ್ಣ ದಾಕಳದ ಬಾಯಲ್ಲಿ ಹೊಗಿಸಿ ಪುಚ್ಚಿಲಿಂದ ತೆಗಿಸಿ ಚಿನ್ನದ ಕೊಪ್ಪರಿಗೆ ಒಳಗಿರುವ ಕ್ಷೀರದಲ್ಲಿ ಸ್ನಾನವ ಮಾಡಿಸಿ ಒಂದನೆ ಜನ್ಮವಾಯಿತೆಂದೂ ಮತ್ತೂ ಬಾಯಲ್ಲಿ ಹೊಗಿಸಿ ಪುಚ್ಚಿಲಿಂದ ತೆಗೆದು ಬೆಳ್ಳಿಕೊಪ್ಪರಿಗೆ ಒಳಗಿರುವದಧಿಯಲ್ಲಿ ಸ್ನಾನ ಮಾಡಿಸಿ ಎರಡನೆಯ ಜನ್ಮವಾಯಿತ್ತೆಂದೂ ಮತ್ತದರ ಬಾಯಲ್ಲಿ ಹೊಗಿಸಿ ಪುಚ್ಚಿಲಿಂದ ತೆಗೆದು ಕಬ್ಬಿಣದ ಕೊಪ್ಪರಿಗೆ ಒಳಗಿರುವ ಸ್ವಾದೋದಕದಲ್ಲಿ ಸ್ನಾನವ ಮಾಡಿಸಿ ಮೂರನೆಯ ಜನ್ಮವಾಯಿತ್ತು. ಶುದ್ಧ ಕ್ಷತ್ರಿಯಳಾದಳೆಂದು ನಳಚಕ್ರವರ್ತಿಗೆ ಕೊಟ್ಟು, ಆ ಉಚ್ಚಿಷ್ಟದ ಹಾಲಿನಿಂದ–ಆ ಮಲಿನವಾದ ಕ್ಷೀರದಲ್ಲಿ, ಕೂಳನಟ್ಟುಂಬವರ–ಅದರೊಳಗೆ ಮೊನೆಮರಿ ಯದಕ್ಕಿಯ ಹಾಕಿ ಹಾಲುಪಾಯಸವೆಂದು ಮಾಡಿ, [ರಾವಣಶಾಖದ–] ರಾವಣಶಾಖದಲ್ಲಿ ಉಂಬುವರು; ಉಂಬೋದಕ್ಕೆ ಪತ್ರಾವಳಿ ಎಲೆ ದೊರೆಯದಿದ್ದಲ್ಲಿ ಎಡಬಲದಲ್ಲಿ ಔಡಲವನ್ನು ಬಿತ್ತಿದ್ದಲ್ಲಿ ಕೆರಸಿ ಅಡ್ಡಗಲ ಹಬ್ಬಿ ಕೊಂಡಿರುವವು. ಆ ಔಡಲದ ಎಲೆಯನ್ನು ತಂದು ಅದರೊಳಗೆ ತಿಂಬುವರು. "ತಿನ್ನು ಭಕ್ಷಣೇ"ಯೆಂದು ಭಕ್ಷಿಸುವಂಥವರ, ನಾನೇನೆಂಬೆ ನಾನೇನೆಂತೆಂದು ಹೇಳಲಿ, ಕೂಡಲಸಂಗಮದೇವಾ?–ಎಲೆ ಪರಶಿವಲಿಂಗವೆ.

II –

1–1 ರೋ (ಚ, ಜ).

....

೧ಕುಲದಲ್ಲಿ ಹಾರುವರು ಬ್ರಹ್ಮೇತಿಗೆ ಸಾರುವನು–ಗೋತ್ರದಲ್ಲಿ ಬ್ರಾಹ್ಮಣನು ಪಾಪಕ್ಕೆ ಸಮೀಪಸ್ಥನಾಗುವನು, ಆರೋ ಮಾಡಿದ ಪಾಪಕ್ಕೆ [ತಾನೆ] ಕೈಯಾನುವನು–ಯಾರಾದರೂ ಮಾಡಿದ ದೋಷಕ್ಕೆ ತಾನೆ ಮೊದಲೇ ಹೋಗಿ ಹಸ್ತದ ಚಾಚಕವನು, ಮುಂದಕ್ಕೆ ಕಾಣಬಂದರ್ಥ.

....

೧+ ಮಹೇಶ್ವರನ ಭಕ್ತ (ಜ)

III –

2–2 ಮಾಡುವೆ (ಟ, ಡ), 3–3 x (ಟ, ಡ)

....

ಆರು ಮಾಡಿದ ಪಾಪಕ್ಕೆ ತಾನೆ ಕೈಯಾನುವನು; ಆರು–ಯಾರಾಯಿತ್ತಾದೊಡೆಯೂ, ಮಾಡಿದ–ಎಸಗಿದ, ಪಾಪಕ್ಕೆ–ದೋಷಕ್ಕೆ, ತಾನೆ–ಸ್ವಯವೇ, ಕೈಯಾನುವನು–ಹಸ್ತವನು ಆನುವನು. [ಬಡಗಿ ಮಾಚಲ ದೇವಿಯ–] ಬಡಗಿ ಮಾಚಲದೇವಿ ಎಂಬವಳ, ಕುಲಜೆಯ ಮಾಡುವೆವೆಂದು–ಸತ್ಕುಲಜೆಯನು ಮಾಡುತ್ತಿದೇವೆಯಂದು, ಹೊನ್ನಕಪಿಲೆಯ–ಸುವರ್ಣದ ಆಕಳಿನ, ರಾವಣಶಾಖದ–ಔಡಲ ಎಲೆಯ, ಉಚ್ಚಿಷ್ಟವ ಹಾಲಿನಿಂದ–ಜಳ ಕೋಚ್ಚಿಷ್ಟದ ಕ್ಷೀರದಿಂದ,ಕೂಳನಟ್ಟುಂಬವರ–ಅನ್ನವ ಮಾಡಿಕೊಂಬವರನು, ಎನೆಂಬೆ–ನಾನೇನೆಂದು ಹೇಳಲಿ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

V –

ರಾವಣ ಶಾಖದ–ಔಡಲದೆಲೆಯ, ಉಚ್ಚಿಷ್ಟದ ಹಾಲಿನಿಂದ–ಜಳಕೋಚ್ಚಿಷ್ಟದ ಕ್ಷೀರದಿಂದ, [ಕೂಳನಟ್ಟುಂಬವರ–] ಕೂಳನಟ್ಟುಂಬವರು, [ಬಡಗಿ ಮಾಚಲದೇವಿಯ–] ಬಡಗಿ ಮಾಚಲದೇವಿ ಎಂಬವಳ, ಕುಲಜೆಯ ಮಾಡಿಹೆವೆಂದು–ಸತ್ಕುಲಜೆಯ ಮಾಡಿಹೆವೆಂದು.

೫೮೫

ನರಜನ್ಮದಲ್ಲಿ ಹುಟ್ಟಿ ಲಿಂಗಮುಖವನಱಿಯದೆ [1]ಉನ್ಮದ[1] ಸೊ[2]ಕ್ಕಿ[2] ತಲೆಗೇಡಿತ್ತಯ್ಯಾ! [3]"ಜೀವಾಃ ಜೀವಂ ಭಕ್ಷಂತಿ" ಕರ್ಮ ಕರ್ಮದಲ್ಲಿಪ್ಪರಯ್ಯಾ! ಅಂದೊಮ್ಮೆ ದಕ್ಷನು ಹೋತ ಕೊಂದಲ್ಲಿ ಗೋಳಿಡಲಿ ಗೋಳಿಡಲು ತಂದಿಕ್ಕ ಹೇಳಿತ್ತೆ! ನಿಮ್ಮ ದೇವಶಾಸ್ತ್ರಗಳು ಮೂರುತಿಗೊಂಡಲ್ಲಿ ಚತುರ್ವೇದಿಗಳಿಗೊಮ್ಮೆ ಅಕ್ಕಿತ್ತೇ ಅಯ್ಯಾ! ನಮ್ಮ ಕೂಡಲಸಗಮದೇವರನಱಿಯದ ಕಾರಣ ನಾಯಕ ನರಕದಲ್ಲಿಕ್ಕಿತ್ತಯ್ಯಾ.

....

3–3 ಜೀವಂ ಜೀವೇನ ಭಕ್ಷಯೇತ್(ಕ, ಗ)

I– –

ನರಜನ್ಮದಲ್ಲಿ–ಮನುಷ್ಯಜನ್ಮದಲ್ಲಿ, ಹುಟ್ಟಿ–ಉತ್ಪತ್ಯವಾಗಿ, ಲಿಂಗಮುಖವನಱಿಯದೆ–ಅಂಗದಲ್ಲಿ ಲಿಂಗಸಂಬಂಧವ ಮಾಡಿಕೊಂಡು ಲಿಂಗಪೂಜೆಯ ಮಾಡುವಂಥದನು ತಿಳಿಯದೆ, ಉನ್ಮದ ಸೊಕ್ಕಿ–ಅನ್ನದ ಮದ ಪ್ರಾಯದ ಮದ ಹೆಚ್ಚಿ, ತಲೆಗೇಡಿತ್ತಯ್ಯಾ–ತಲೆಯೆಂದರೆ ಜ್ಞಾನ, ಅಂತಪ್ಪ ಜ್ಞಾನದ ನಪಹರಿಸಿತ್ತಯ್ಯಾ. ("ಜೀವಾಃ ಜೀವಂ ಭಕ್ಷಂತಿ")ಯೆಂದು ಜೀವವಿದ್ದ ವಿಪ್ರರುಗಳು ಜೀವವಿದ್ದಂಥ ಅಜಪಶುವನ್ನು, ಭಕ್ಷಂತಿ–ಭುಂಜಿಸುತ್ತಿಹರು, ಕರ್ಮ ಕರ್ಮದಲ್ಲಿಪ್ಪರಯ್ಯಾ–ಷಟ್ಕರ್ಮ ಷೋಡಶ ಕರ್ಮಂಗಳಲ್ಲಿ ಕೂಡಿಪ್ಪರಯ್ಯ, ಅಂದು–ಆಗ, ಒಮ್ಮೆ–ಒಂದು ವೇಳೆ, ದಕ್ಷನು–ದಕ್ಷಬ್ರಹ್ಮನು, ಹೋತ ಕೊಂದಲ್ಲಿ–ಹೋಮವ ಮಾಡಿ ಹೋತನ್ನು ಸಂಹರಿಸುವಲ್ಲಿ, ಗೋಳಿಡಲಿ ಗೋಳಿಡಲಿ--ಅರಿಯೋ ಮೊರಿಯೋಯೆಂದು ಮೊರೆಯಿಟ್ಟರೂ ಬಿಡದೆ, ತಂದಿಕ್ಕ, ಹೇಳಿತ್ತೇ?–ಹೋತು ಕೊಂದು ಹೋಮವ ಮಾಡಬೇಕೆಂದು ಹೇಳಿತ್ತೆ.

ನಿಮ್ಮ ವೇದ–ನೀವು ಓದುವಂಥ ನಾಲ್ಕು ವೇದಂಗಳು, ಶಾಸ್ತ್ರಂಗಳು–ನೀವು ಓದುವಂಥ ಹದಿನಾರು ಧರ್ಮಶಾಸ್ತ್ರಂಗಳು, ಮೂರುತಿಗೊಂಡಲ್ಲಿ–ಯಜ್ಞದ ಎಡಬಲದಲ್ಲಿ ಕುಳಿತುಕೊಂಡು ಪಠಿಸುವಾಗ, ಚತುರ್ವೇದಿಗಳಿಗೆ–ನಾಲ್ಕು ವೇದವನ್ನು ಪಾರಂಗತವಾಗಿ ಅರಿದು ಬಲ್ಲಂಥ ಸೋಮಯಾಜಿಗಳಿಗೆ, ಒಮ್ಮೆ–ಒಂದು ವೇಳೆ, ಅಕ್ಕಿತ್ತೆ–ಯಜ್ಞದ ಫಲ ದಕ್ಕಿತ್ತೇ. ಅಯ್ಯಾ–ಎಲೆ ಲಿಂಗವೆ, ನಮ್ಮ ಕೂಡಲಸಂಗಮದೇವರ–ನಮ್ಮ ಪರಶಿವಲಿಂಗವನ್ನು, ಅಱಿಯದ ಕಾರಣ–ತಿಳಿಯದ ನಿಮಿತ್ಯ, ನಾಯಿಕನರಕದಲ್ಲಿಕ್ಕಿತ್ತಯ್ಯಾ–ದೊರೆ ನಿರಯದಲ್ಲಿ ಹಾಕಿತ್ತಯ್ಯಾ.

....

೧–೧ ಜೀವಂ ಜೀವೇನ ಭಕ್ಷಯೇತ್(ಕ, ಗ)

III –

೧–೧ ಉದಮದ (ಟ, ಡ)

....

ಉದಮದ–ಅತ್ಯಂತ ಗರ್ವವು, ಮೂರುತಿಗೊಂಡಲ್ಲಿ–ಸಗುಣತ್ವವನಂಗೀಕರಿಸಿದಲ್ಲಿ.

V– –

1–1 ಉದಮದ (ಪ), 2–2 ಕ್ಕು (ಡ)

....

ಉದಮದ ಸೊಕ್ಕು ತಲೆಗೇರಿ–ಅತ್ಯಂತ ಗರ್ವವು.

೫೭೬

ಕಿಚ್ಚು ದೈವವೆಂದು ಹವಿಯನಿಕ್ಕುವ ಹಾರುವರ ಮನೆಯಲ್ಲಿ ಕಿಚ್ಚೆದ್ದು ಸುಡುವಾಗ ಬಚ್ಚಲ ನೀರು ಬೀದಿಯ ಧೂಳು ಹೊಯ್ದು ಬೊಬ್ಬಿಟ್ಟೆಲ್ಲರ ಕರೆವರಯ್ಯಾ! ಕೂಡಲಸಂಗಮದೇವಾ ವಂದನೆಯ ಮಱೆದು ನಿಂದಿಸುತ್ತಿದ್ದರು.

I –

ಕಿಚ್ಚು–ಅಗ್ನಿಯು, ದೈವವೆಂದು–ದೇವರೆಂದು ಹವಿಯನಿಕ್ಕುವ–ಹದಿನೆಂಟು ಧಾನ್ಯಂಗಳನು ತುಪ್ಪ ತೈಲದಲ್ಲಿ ಸಮ್ಮಿಶ್ರವ ಮಾಡಿ ಅಗ್ನಿಪುರುಷನಿಗೆ ಆಹುತಿಯಗೊಟ್ಟು ಯಜ್ಞವ ಮಾಡುವ, ಹಾರುವರ–ವಿಪ್ರರುಗಳ, ಮನೆಯಲ್ಲಿ–ಮಂದಿರದಲ್ಲಿ, ಕಿಚ್ಚು–ಅಗ್ನಿಯು, ಎದ್ದು–ಹೆಚ್ಚಿ, ಸುಡುವಾಗ–ದಹಿಸುವಾಗ, ಬಚ್ಚಲ ನೀರು ಬಚ್ಚಲಗುಂಡಿಯ ಉದಕವನು, ಬೀದಿಯ ಧೂಳು–ಬೀದಿ ಬಾಜಾರದ ಮಣ್ಣನ್ನು, ಹೊಯ್ದು–ಚೆಲ್ಲಿ, ಬೊಬಿಟ್ಟು–[* *] ಬೊಬ್ಬೆಯ ಹೊಯ್ದುಕೊಂಡು, ಎಲ್ಲರ ಕರೆವರಯ್ಯಾ–ಎಡಬಲದಲ್ಲಿದ್ದ ಎಂಕಣ್ಣಭಟ್ಟರೇ ತಿಮ್ಮಣ್ಣಭಟ್ಟರೇ ಕೇಶಭಟ್ಟರೇ ಶೇಷಂಭಟ್ಟರೇ ನೀವು ಬನ್ನಿರಿ ನೀವು ಬನ್ನಿರಿಯೆಂದು ಕೂಗುವರಯ್ಯಾ, ಅಹ್ವಾನಿಸುವರಯ್ಯಾ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ವಂದನೆಯ ಮಱೆದು–ನಮ್ಮ ಅಗ್ನಿದೇವರು ನಮಗೆ ಪ್ರಸನ್ನವಾಗಿ ನಮ್ಮ ಬದಕು

ಮನೆಯನ್ನು ಸಮರ್ಪಿಸಿ ಕೊಂಬುತ್ತೈತೆಂಬಂಥ, ವಂದನೆಯ–ನಮಸ್ಕಾರವೆಂದು ನಮಸ್ಕರಿಸುವಂಥದನು, ಮಱೆದು–ತಮ್ಮ ದೈವದ ಮೇಲಣ ಮಮಕಾರವನ್ನು ವಿಸ್ಮೃತಿಯನೆಯ್ದಿಸಿ ಬಿಟ್ಟು, ನಿಂದಿಸುತ್ತಿದ್ದರು–ಇದು ಹೊಲೆಯರ ಬೆಂಕಿ ಮಾದಿಗರನ ಬೆಂಕಿ ನಮ್ಮ ಸುಟ್ಟಿತ್ತು ನಮ್ಮ ಮಕ್ಕಳ ಮರಿಗಳ ಸುಟ್ಟಿತ್ತೆಂದು ದೂಷಣೆಯ ಮಾಡುತ್ತಿರ್ಪರು.

೫೮೭

ವೇದವನೋದಿದ ವಿಪ್ರರು ಹೊನಲಲ್ಲಿ ಹೋದ ಕೇಡ ನೋಡಿರೊ! "ಭರ್ಗೋ ದೇವಸ್ಯ ಧೀಮಹೀ" ಎಂಬರಿಗಾ[1]ದರೂ[1] ವಿಚಾರವಿಲ್ಲ, ನೋಡಿರೆ, ಕೂಡಲಸಂಗಮದೇವಾ.

I– –

ವೇದವನೋದಿದ ವಿಪ್ರರು; ವೇದವನೋದಿದ–ನಾಲ್ಕು ವೇದಂಗಳನು ಪಠಿಸಿದ, ವಿಪ್ರರು ಪಾರ್ವರು, ಹೊನಲಲ್ಲಿ ಹೋದ ಕೇಡ ನೋಡಿರೊ–ಹಳ್ಳ ಹಗರಿಗಳಲ್ಲಿ ತೇಲಿಹೋದಂಥ ಲುಕ್ಸಾನವನು ಕಂಡಿರೆ, ಭರ್ಗೋ ದೇವಸ್ಯ ಧೀಮಹೀ ಎಂಬರು: ಯಸ್ಯ–ಅವನೋರ್ವನ, ಮಹೀ–ಎಮಗೆ,
ಕಂಡಿರೆ, ಭರ್ಗೋ ದೇವಸ್ಯ ಧೀಮಹೀ ಎಂಬರು: ಯಸ್ಯ–ಆವನೋರ್ವನ, ಮಹೀ–ಎಮಗೆ,
ಭರ್ಗಃ–ರಕ್ಷಕನಾದಂಥ, ದೇವ, ದಿವ್ಯ ಕಾಂತಿ ಲಾವಣ್ಯವನುಳ್ಳ. ಪರಶಿವಲಿಂಗವು, ಧೀ ಎಂಬರು–ಧರ್ಮಾದಿಗಳಿಗೆ ಗೋಚರಿಸುವ ಬುದ್ಧಿ–ಮತಿಯನ್ನು ಕರುಣಿಸಕೊಡಲ್ಪಟ್ಟಾತನೆಂದು ಹೇಳುವರು. ಒಬ್ಬರಿಗಾದರೂ–ವಿಪ್ರರೊಳಗೊರ್ವರಿಗಾದರೂ, ವಿಚಾರವಿಲ್ಲ ನೋಡಿರೆ!–ವಿವೇಕ ಉಂಟಾಗಿಲ್ಲ ಕಂಡಿರೆ, ಕೂಡಲಸಂಗಮ ದೇವಾ–ಎಲೆ ಪರಶಿವಲಿಂಗವೆ.

III –

1–1 ಗಿ (ಟ, ಡ).

....

ಹೊನಲಲ್ಲಿ–ಭವಾಂಬುಧಿಯಲ್ಲಿ, ಒಬ್ಬರಿಗಾಗಿ–ಓರ್ವಗಾದರೂ.

೫೮೮

ಏನಿಸನೋದಿದಡೇನು ? ಏನಿಸ ಕೇಳಿದಡೇನು ? ಚತುರ್ವೇದಪಾಠ ತೀವ್ರವಾದಡೇನು? ಲಿಂಗಾರ್ಚನೆ ವಿಹೀನನಾದಡೆ ಶಿವಶಿವಾ, ಬ್ರಾಹ್ಮಣನೆಂಬೆನೆ ? ಎನಲಾಗದು. "ಜನ್ಮನಾ ಜಾಯತೇ ಶೂದ್ರಃ [1][ಕರ್ಮಣಾ][1] ದ್ವಿಜ ಉಚ್ಯತೇ। ಶ್ರುತೇನ ಶ್ರೋತ್ರಿಯಶ್ಚೈವ ಬ್ರಹ್ಮಚರತೀತಿ ಬ್ರಾಹ್ಮಣಃ ।" ಎಂದುದಾಗಿ, ಬ್ರಹ್ಮನಾಸ್ತಿ ಶ್ವಪಚರ ಮನೆಯೆಂದುದಾಗಿ, ಇದು ಕಾರಣ, ಕೂಡಲಸಂಗಮದೇವಾ "ವೇದಭಾರ ಭರಾಕ್ರಾಂತಾ ಬ್ರಾಹ್ಮಣಾ ಗರ್ಧಭಾಃ" ಎಂಬೆನು!

....

1–1 ಕ್ರಿಮಾನಾಂ (ಕ, ಗ)

I– –

ಎನಿಸನೋದಿದಡೇನು–ಎಷ್ಟೊಂದು ವೇದಶಾಸ್ತ್ರಾಗಮಪುರಾಣಂಗಳನು ಪಠಿಸಿದೇನು, ಎನಿಸ ಕೇಳಿದಡೇನು–ಆ ಓದಿದಂಥ ಶಾಸ್ತ್ರವನ್ನು ಶ್ರುತಿ ಗುರುಗಳ ಮುಖದಿಂದ ಸೂತ್ರಾರ್ಥ ಸ್ವರೂಪಾರ್ಥ ಸಂಬಂದಾರ್ಥ ಪ್ರವಣಾರ್ಥ ಚಿತ್ರಾರ್ಥ ಭಾವಾರ್ಥಂಗಳನು ಬೆಸಗೊಂಡಾಲಿಸಿರೇನು, ಚತುರ್ವೇದಪಾಠ ತೀವ್ರವಾದಡೇನು?–ದಿನ ಒಂದಕ್ಕೆ ಅಷ್ಟಾದಶಪರ್ವ[೧]ಮೊದಲಾದವನ್ನು ನಿಲ್ಲಿಸುವಲ್ಲಿ ಮತಿ ಚಮತ್ಕಾರವುಳ್ಳಾತನಾದರೇನು, ಲಿಂಗಾರ್ಚನೆ ವಿಹೀನನಾದಡೆ–[೨]ಶಿವ[೨]ಲಿಂಗಪವೂಜೆಯ ಮಾಡುವಂಥದು ಇಲ್ಲವೆಯಾದರೆ, ಶಿವಶಿವಾ–ಲಿಂಗವೆ ಲಿಂಗವೆ, ಬ್ರಾಹ್ಮಣವೆಂಬೆನೆ?–ಅಂತಪ್ಪವನ ಸದ್ಬ್ರಾಹ್ಮಣನೆಂದು ಹೇಳುವೆನೆ? ಎನಲಾಗದು–ಹೇಳಲಾಗದು.

ಗ್ರಂಥ–ಗುರುವಾಕ್ಯಕ್ಕೆ ಸದೃಶವಾಗಿ ಹರವಾಕ್ಯವ ನಿರೂಪಿಸುತ್ತಿಹರು. ಜನ್ಮನಾ ಜಾಯತೇ ಶೂದ್ರಃ–ತಂದೆ ಬ್ರಾಹ್ಮಣನಾಗಿ ತಾಯಿ ಶೂದ್ರಗಿತ್ತಿಯಾಗಿ, ಜನ್ಮನಾ–ಹುಟ್ಟುವುದರಿಂದೆ, [ಶೂದ್ರಃ–] ಶೂದ್ರನು.[೩] ಜಾಯತೇ–ಹುಟ್ಟುತ್ತಿಹನು. ಕರ್ಮಣಾ ದ್ವಿಜ ಉಚ್ಯತೇ ಕರ್ಮಣಾ–ಮುಂಜಿ ಕರ್ಮವನು ಮಾಡುವುದರಿಂದೆ, ದ್ವಿಜಃ–ವಿಪ್ರನಾಗುತ್ತಿಹನು ಎಂದು, ಉಚ್ಯತೇ–ಹೇಳಲ್ಪ[೪][ಡುತ್ತಾನೆ][೪] ಶ್ರುತೇನ ಶ್ರೋತ್ರಿ ಯಶ್ಚೈವಃ ಶ್ರುತೇನ ಚ–ಸಕಲ ವೇದಶಾಸ್ತ್ರಗಮ ಪುರಾಣಂಗಳನು ಬೆಸಗೊಂಡು ಕೇಳುವುದತಿರಿಂದೆ, ಶ್ರೋತ್ರಿಯಶ್ಚೈವಃ: [ಶ್ರೋಏಯಃ ಚ ತ್ರಿವ–] [೫][ಶ್ರೋತ್ತಿಯನಾಗುತ್ತಿಹನು][೫], ಉಚ್ಯತೇ–ಹೇಳಲ್ಪ[೪][ಡುತ್ತಾನೆ].[೪] ಬ್ರಹ್ಮ ಚರತೀತಿ ಬ್ರಾಹ್ಮಣ–ಬ್ರಹ್ಮ ಜ್ಞಾನವಿಡಿದಾಚರಿಸುವುದರಿಂದ ಬ್ರಾಹ್ಮಣನಾಗುತ್ತಿಹನು, ಎಂದುದಾಗಿ–ಹೀಂಗೆಂದು ಈಶ್ವರನ ವಾಕ್ಯದಲ್ಲಿ ಹೇಳುತ್ತಿಹುದಾಗಿ.

ಬ್ರಹ್ಮನಾಸ್ತಿ–ಲಿಂಗಪೂಜೆಯನ್ನು ಮಾಡುವಂಥ ಇಲ್ಲದವನ ಮನೆ, ಶ್ವಪಚರಮನೆಯಂದುದಾಗಿ–ಅವನೇ ಹೊಲೆಯ ಅವನ ಮನೆಯೇ ಹೊಲೆಯರ ಮನೆಗೆ ಸಮಾನವೆಂದು ಹೇಳುತ್ತಿಹುದಾಗಿ. ಇದು ಕಾರಣ ಇದು ನಿಮಿತ್ತಾರ್ಥ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ. ವೇದ–ನಾಲ್ಕು ವೇದಂಗಳ, ಭಾರ–ಹೊರೆಯ, ಭರಾ–ತೂಕವನ್ನು, ಅಕ್ರಾಂತಾ–ತಳೆದುಕೊಂಡಿರುವಂಥ, [೬]'ಬ್ರಾಹ್ಮಣಾಃ–'[೬]ವಿಪ್ರರು, ಗಾರ್ಧಭಾಃ ಎಂಬೆನು–ವಿಪ್ರಕತ್ತೆಗಳು ಎಂದು ಹೇಳುವೆನು.

....

೧+ತ(ಗ), ೨–೨x(ಗ), ೩+ಶೂದ್ರನೆನಿಸುತ್ತಾನೆ ವಿಧಿಕರ್ಮ ಮಾಡುವುದರಿಂದ (ಗ), ೪–೪ ಟ್ಟಿತು (ಕ, ಗ), ೫–೫ ಶ್ರವಣೇಂದ್ರಿಯ ಉಳ್ಳಾತನಾಗುತ್ತಿಹನು (ಕ,ಗ), ೬+ ಕೋ (ಕ, ಗ), ೭+ಅ (ಕ, ಗ).

III –

ಬ್ರಹ್ಮನಾಸ್ತಿ–ಪರಬ್ರ[ಹ್ಮ]ದಾಚರಣೆಯಿಲ್ಲವು. ವೇದಭಾರಭರಾಕ್ರಾಂತಃ–ವೇದದ ಬಲುಹೋಜೆಯುನು ಹೊತ್ತ.

೫೮೯

ನಿಮ್ಮನವಜೆಯದ ಕಾರಣ ಕೈಯಲ್ಲಿ ಹುಲ್ಲು! ನಿಮಗೆಜಗದ ಕಾರಣ ಕೊರಳಲ್ಲಿ ನೇಣು! ಹಿಂಡಲೇಕೆ? ತೊಳೆಯಲೇಕೆ? ಮುಳುಮುಳುಗಿ ಮೂಗಹಿಡಿಯಲೇಕೆ? ಕೂಡಲಸಂಗನ ಶರಣರಲ್ಲಿ ದ್ರೋಹರ ಕಕ್ಕುಯ್ಯುಸಾವ ತೊಳಿಸಿಯಲ್ಲಿ ಮಿಂದ.?

I -

ನಿಮ್ಮವನಱಿಯದ ಕಾರಣ ಕೈಯಲ್ಲಿ ಹುಲ್ಲು: ನಿಮ್ಮವನಱಿಯದ ಕಾರಣ–ಲಿಂಗಪೂಜೆಯ ಮಾಡಿ ಲಿಂಗದ ಕರುಣವನ್ನು ಹಡೆಯುವಂಥದನ್ನು ತಿಳಿಯದ ನಿಮಿತ್ತ, ಕೈಯಲ್ಲಿ ಹುಲ್ಲು!–ಶಿವನ ಶಿವಗಣಂಗಳ ಮಹಿಮಯನ್ನು ತಿಳಿಯದೆ ವೃಥಾ ಕೆಟ್ಟುಹೋಗಬೇಡಿರಿಯೆಂದು ಕೈಯಲ್ಲಿ ಕಡ್ಡಿಯನ್ನು ಕೊಟ್ಟು ಸಾರುವೋಪಾದಿಯಲ್ಲಿ ಒಪ್ಪುತ್ತಿಹುದು ದರ್ಭಾಂಕುರವು. ನಿಮಗೆರಗದ ಕಾರಣ–ಪರಶಿವಲಿಂಗಕ್ಕೆ ತಲೆವಾಗಿ ನಮಸ್ಕರಿಸದ ನಿಮಿತ್ತ ಕೊರಳಲ್ಲಿ–ಕುತ್ತಿಗೆಯಲ್ಲಿ, ನೇಣು!–ಗೇಣುದ್ದ ಜೋಟುದ್ದ ಜನಿವಾರವನ್ನು ಬಂಧಿಸಿಕೊಂಡಿರ್ಪರು. ಹಿಂಡಲೇಕೆ?–ಮುರಿಮುರಿಗೆಯ ಮಾಡಿ ಹಿಂಡುವುದೇನು ಕಾರಣಕ್ಕೆ, ತೊಳೆಯಬೇಕೆ?–ತಿರುತಿರುವಿ ಬಂಡೆಗೆ ಘಟ್ಟಿಸುವುದೇನು ಕಾರಣಕ್ಕೆ! ಮುಳುಮುಳುಗಿ–ಗುಂಡುಮುಳುಗನ ಹಕ್ಕಿಯೋಪಾದಿಯಲ್ಲಿ ಮುಣುಮುಣುಗಿ, ಮೂಗ ಹಿಡಿಯಬೇಕೆ–ತುದಿ ಮೂರಂಗುಲಿಯಿಂದ ನಾಸಿಕವನ್ನು ಬಾಸಣಿಸುವುದೇನು ಕಾರಣಕ್ಕೆ, ಕೂಡಲಸಂಗನ ಶರಣರಲ್ಲಿ–ಏಳುನೂರೆಪ್ಪತ್ತಮರಗಣಂಗಳಲ್ಲಿ, ಡೋಹರ ಕಕ್ಕಯ್ಯ–ಡೋಹರ ಕಕ್ಕಯ್ಯನೆಂಬ ಶಿವಶರಣನು, ಆವ ತೊರೆಯಲ್ಲಿ ಮಿಂದ?–ಆವ ನದಿಯಲ್ಲಿ ಸ್ನಾನವ ಮಾಡಿಕೊಂಡು ಪವಿತ್ರವಾದನೆ? ಇಲ್ಲವು. ಗುರುಕಾರುಣ್ಯವ ಹಡೆದು ಲಿಂಗಾಂಗ ಸಂಬಂಧಿಯಾಗಿ ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆದುಕೊಂಡನಲ್ಲದೆ ಅನ್ಯವಾದ ಪುಣ್ಯತೀರ್ಥಂಗಳಲ್ಲಿ ಸ್ನಾನವ ಮಾಡಿಕೊಂಡು ಪವಿತ್ರವಾದನೆ? ಇಲ್ಲವು.

೫೯೦

ವ್ಯಾಸ ಬೋವತಿಯ ಮಗ, ಮಾರ್ಕಂಡೇಯ ಮಾತಂಗಿಯ ಮಗ, ಮಂಡೋದರಿ ಕಪ್ಪೆಯ ಮಗಳು! ಕುಲವನಱಸದಿರಿಂ ಭೋ, ಕುಲದಿಂದ ಮುನ್ನೇನಾದರಿಂ ಭೋ, ಸಾಕ್ಷಾತ್ ಅಗಸ್ತ್ಯ ಕಬ್ಬಲಿಗ, ದುರ್ವಾಸ ಮುಚ್ಚಿಗ, ಕಶ್ಯಪ ಕಮ್ಮಾಱ, ಕೌಂಡಿಲ್ಯನೆಂಬ ಋಷಿ ಮೂಱುಲೋಕವಱಿಯಲು ನಾವಿದ ಕಾಣಿಭೋ! ನಮ್ಮ ಕೂಡಲಸಂಗನ ವಚನವಿಂತೆಂದುದು ಶ್ವಪಚೋಪಿಯಾದಡೇನು ಶಿವಭಕ್ತನೇ ಕುಲಜಂ ಭೋ.

I– -

ವ್ಯಾಸ ಬೋವತಿಯ ಮಗ; ವ್ಯಾಸ–ವೇದವ್ಯಾಸನು, ಬೋವತಿಯ ಮಗ–ಬೋಗಾರ ಕುಲದಲ್ಲಿ ಹುಟ್ಟಿದಾತನು. ಆದರೇನಾಯಿತ್ತು? ಪೂರ್ವಾಶ್ರಯವ ಬಿಟ್ಟು ಗುರುಕಾರುಣ್ಯವನ್ನು ಹಡೆದು ಭಸ್ಮರುದ್ರಾಕ್ಷಿ ಧಾರಕನಾಗಿ ಪಂಚಾಕ್ಷರಮಂತ್ರಪಾಠಕನಾಗಿ ಶಿವಾಧಿಕ್ಯವಿಡಿದಾಚರಿಸಿ ಮುನಿಶ್ರೇಷ್ಠನಾದನು. ಮಾರ್ಕಂಡೇಯ ಮಾತಂಗಿಯ ಮಗ;[ಮಾರ್ಕಂಡೇಯ–] ಮಾರ್ಕಂಡೇಯನೆಂಬ ದೊಡ್ಡ ಋಷೀಶ್ವರನು, ಮಾತಂಗಿಯ ಮಗ–ಮಾದರ ಕಾಲದಲ್ಲಿ ಹುಟ್ಟಿದವನು. ಆದರೇನಾಯಿತ್ತು? ಗುರುಕಾರುಣ್ಯವನ್ನು ಹಡೆದು ಭಸ್ಮರುದ್ರಾಕ್ಷ ಧಾರಕನಾಗಿ ಪಂಚಾಕ್ಷರಿಮಂತ್ರಮುಕ್ತನಾಗಿ ಶಿವಾಧಿಕ್ಯವಿಡಿದಾಚರಿಸಿ ಮುನಿಶ್ರೇಷ್ಠನಾದನು. ಮಂಡೋದರಿ–ಮಂಡೋದರಿಯೆಂಬ ಸ್ತ್ರಿಯಳು, ಕಪ್ಪೆಯ ಮಗಳು ಮಂಡೂಕನ ತನಯಳು, ಆದರೇನಾಯಿತ್ತು? ಪೂರ್ವಾಶ್ರಯವ ಬಿಟ್ಟು ಗುರುಕಾರುಣ್ಯವ ಪಡೆದು ಭಸ್ಮರುದ್ರಾಕ್ಷಿಧಾರಕಳಾಗಿ

ಪಂಚಾಕ್ಷರಿಮಂತ್ರಯುಕ್ತಳಾಗಿ ಶಿವಾಧಿಕ್ಯವಿಡಿದಾಚರಿಸಿ ಮುನಿಶ್ರೇಷ್ಠಳಾದಳು. ಕುಲವನಱಿಸದಿರಿಂ ಭೋ–ನಮ್ಮ ಕುಲ ಹೆಚ್ಚು ತಮ್ಮ ಕುಲ ಹೆಚ್ಚೆಂದು ಕುಲಸೂತಕವ ಹುಡುಕದಿರಿ ಭೋ, ಕುಲದಿಂದ–ಕುಲಸೂತಕವನ್ನು ಹುಡುಕುವುದರಿಂದ, ಮುನ್ನೇನಾದಿರಿಂ ಭೋ–ಮೊದಲು ಅಗಸ್ತ್ಯ ಋಷೀಶ್ವರನಿಂದ ಪ್ರಕಟಕ್ಕೆ ೧ಒಳಗಾದಿ[ರಿಂ]ಭೋ೧ ಎಂಬಲ್ಲಿ ದಧೀಚಿ ಋಷೀಶ್ವರನಿಂದ ನ್ಯಾಯವೇದಿಸಿಕೊಂಡು ಅವರು ಸತ್ತದ್ದು ತಿಂದುಕೊಂಡು ಊರ ಹೊರಗಣ ಹೊಲೆಯರಾಗಿರಿರಿ; ನೀವು ಬದುಕಿದ್ದುದ ಕೊಂದು ತಿಂದುಕೊಂಡು ಊರ ಒಳಗಣ ಹೊಲೆಯರಾಗಿರಿರೆಂದು ನ್ಯಾಯವ ತಿದ್ದಿದರು.

ಸಾಕ್ಷಾತ್–ಪ್ರತ್ಯಕ್ಷವಾಗಿ, ಅಗಸ್ತ್ಯ–ಕುಂಭಸಂಭವನು, ಕಬ್ಬಲಿಗ–ಕಬ್ಬಲಗಿತ್ತಿಯ ಹೊಟ್ಟೆಯಲ್ಲಿ ಹುಟ್ಟಿದಾತನು. ಹುಟ್ಟಿದರೇನಾಯಿತು? ಗುರು ಕಾರುಣ್ಯವ ಹಡೆದು ಭಸ್ಮರುದ್ರಾಕ್ಷಿಧಾರಕನಾಗಿ ಪಂಚಾಕ್ಷರಿಮಂತ್ರ ಯುಕ್ತನಾಗಿ ಶಿವಾಧಿಕ್ಯವಿಡಿದಾಚರಿಸಿ ಮುನಿಶ್ರೇಷ್ಠನಾದನು. ದೂರ್ವಾಸ–ದೂರ್ವಾಸ ನೆಂಬ ಋಷೀಶ್ವರನು, ಮುಚ್ಚಿಗ–ಮುಚಿಗಾರಕುಲದಲ್ಲಿ ಹುಟ್ಟಿದಾತನು. ಆದರೇನಾಯಿತು? ಗುರುಕಾರುಣ್ಯವ ಹಡೆದು ಭಸ್ಮರುದ್ರಾಕ್ಷಿದಾರಕನಾಗಿ ಪಂಚಾಕ್ಷರಿಮಂತ್ರಯುಕ್ತನಾಗಿ ಶಿವಾಧಿಕ್ಯವಿಡಿದಾಚರಿಸಿ ಮುನಿಶ್ರೇಷ್ಠನಾದನು. ಕಶ್ಯಪ–ಕಶ್ಯಪನೆಂಬ ಋಷೀಶ್ವರನು, ಕಮ್ಮಾಱ–ಕಮ್ಮಾರಕುಲದಲ್ಲಿ ಹುಟ್ಟಿದವನು, ಆದರೇನಾಯಿತ್ತು? ಗುರುಕಾರುಣ್ಯವ ಹಡೆದು ಭಸ್ಮರುದ್ರಾಕ್ಷಿಧಾರಕನಾಗಿ ಪಂಚಾಕ್ಷರಿಮಂತ್ರ ಯುಕ್ತನಾಗಿ ಶಿವಾಧಿಕ್ಯವಿಡಿದಾಚರಿಸಿ ಮುನಿಶ್ರೇಷ್ಠನಾದನು. ಕೌಂಡಿಲ್ಯ–ಕೌಂಡಿಲ್ಯನೆಂಬ ಋಷೀಶ್ವ ರನು, ಮೂರುಲೋಕವರಿಯಲು–ಸ್ವರ್ಗ ಮರ್ತ್ಯ ಪಾತಾಳವೆಂಬ ತ್ರಿಭುವನ ಬಲ್ಲಹಾಂಗೆ, ನಾವಿದ–ನಾವಿದರ ಕುಲದಲ್ಲಿ ಹುಟ್ಟಿದವನು. ಆದರೇನಾಯಿತ್ತು? ಗುರುಕಾರುಣ್ಯವ ಹಡೆದು ಭಸ್ಮರುದ್ರಾಕ್ಷಿಧಾರಕನಾಗಿ ಪಂಚಾಕ್ಷರಿಮಂತ್ರಯುಕ್ತನಾಗಿ ಶಿವಾಧಿಕ್ಯವಿಡಿದಾಚರಿಸಿ ಮುನಿಶ್ರೇಷ್ಠನಾದನು, ಕಾಣಿಭೋ!–ಕಂಡಿರೋ.

ನಮ್ಮ ಕೂಡಲಸಂಗನ–ನಮ್ಮ ಪರಶಿವಲಿಂಗದ, ವಚನ–ವಾಕ್ಯನುಭಾವವು, ಇಂತೆಂದುದು–ಹೀಂಗೆಂದು ಹೇಳುತ್ತಿಹುದು, ಶ್ವಪಚೋಪಿಯಾದಡೇನು–ಹಿರೇಕುಲದವನಾದರೇನು, ಶಿವಭಕ್ತನೇ–ಜ್ಞಾನೋದಯವಾಗಿ ಗುರೂಪಾವಸ್ಥೆಯ ಮಾಡಿ ಗುರುಕಾರುಣ್ಯವ ಪಡೆದು ಲಿಂಗಾಂಗ ಸಂಬಂಧಿಯಾಗಿ ಆಚರಿಸುವಂಥ ಹರಭಕ್ತನೇ, ಕುಲಜಂ ಭೋ–ಅವನೇ ಕುಲಶ್ರೇಷ್ಠನು.

....

೧–೧ ಒಳಗಾಗದಿರಿರೋ (ಗ)

೫೯೧

ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ. ಜಲ–ಬಿಂದುವಿನ ವ್ಯವಹಾರ ಒಂದೇ. ಆಸೆ ಆಮಿಷ ಹರುಷ ವಿಷಯಾದಿಗಳೆಲ್ಲ ಒಂದೇ. ಏನನೋದಿ ಏನಕೇಳಿ ಏನು ಫಲ? ಕುಲಜನೆಂಬುವುದಕ್ಕೆ ಅವುದು ದೃಷ್ಟ? ಗ್ರಂಥ; "ಸಪ್ತಧಾತು ಸಮಂ ಪಿಂಡಂ ಸಮಯೋನಿಸಮುದ್ಭವಂ ಆತ್ಮಜೀವ ಸಮಾಯುಕ್ತಂ ವರ್ಣಾನಾಂ ಕಿಂ ಪ್ರಯೋಜನಂ" ಎಂದುದಾಗಿ, ಕಾಸಿ ಕಮ್ಮಾಱನಾದ, ಬೀಸಿ ಮಡಿವಾಳನಾದ, ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ, ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ? ಇದು ಕಾರಣ ಕೂಡಲಸಂಗಮದೇವಾ, ಲಿಂಗಸ್ಥಲವನಱಿದವನೇ ಕುಲಜನು!

ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ: ಹೊಲೆಗಂಡಲ್ಲದೆ–ಸ್ತ್ರೀಯಳು ಸೂತಕವಾದುದಲ್ಲದೆ, ಪಿಂಡದ ನೆಲೆಗಾಶ್ರಯವಿಲ್ಲ–ಪಿಂಡೋತ್ಪತ್ಯವಾಗುವುದಕ್ಕೆ ಆಲಯವಿಲ್ಲವು. ಜಲಬಿಂದುವಿನ ವ್ಯವಹಾರ ಒಂದೇ: ಜಲ [ಬಿಂದುವಿನ ವ್ಯವಹಾರ–] ಬದ್ಬುದಮಯಸ್ವರೂಪವಾದ ದೇಹವ್ಯಾಪಾರವು ಒಂದೇ–ಉತ್ತಮಜಾತಿಯುವರಿಗೂ ಒಂದೇ ಕ್ಷೀಣಜಾತಿಯುವರಿಗೂ ಒಂದೇಯಾಗಿರ್ಪುದು. ಆಸೆ–ಅನ್ನಾಚ್ಛಾದವನ ಹೊನ್ನು ಹೆಣ್ಣು ಮಣ್ಣಾಗಬೇಕೆಂಬ ಅಪೇಕ್ಷೆಯು. ಆಮಿಷ–ಹೊನ್ನಿದ್ದೂ ಹೊನ್ನಾಗಬೇಕು. ಹೆಣ್ಣಿದ್ದೂ ಹೆಣ್ಣಾಗಬೇಕು ಮಣ್ಣಿದ್ದೂ ಮಣ್ಣಾಗಬೇಕೆಂಬ ಆಸೆಯೊಳಗನ ಅತಿ ಕಾಂಕ್ಷೆಯು, ರೋಷ–ತಾಮಸವು, ಹರುಷ–ಸಂತೋಷವು, ವಿಷಯಾದಿಗಳೆಲ್ಲ–ವಿಷಯಪ್ರಪಂಚಂಗಳೆಲ್ಲವೂ, ಒಂದೇ–ಉತ್ತಮಜಾತಿಯವರಿಗೂ ಒಂದೇ ಕ್ಷೀಣಜಾತಿಯ ವರಿಗೂ ಒಂದೇಯಾಗಿರ್ಪುದು. ಏನನೋದಿ–ಸಕಲವೇದಶಾಸ್ತ್ರಾಗಮ ಪುರಾಣಂಗಳನು ಪಠಿಸಿ, ಏನ ಕೇಳಿ–ಆ ಓದಿದಂಥ ಶಾಸ್ತ್ರವನ್ನು ಶ್ರುತಿ ಗುರುಗಳ ಮುಖದಿಂದ ಸೂತ್ರಾರ್ಥ ಸ್ವರೂಪಾರ್ಥ ಸಂಬಂಧಾರ್ಥ ಪ್ರಣವಾರ್ಥ ಭಾವಾರ್ಥಂಗಳನು ಬೆಸಗೊಂಡಾಲಿಸಿದರೂ, ಏನು ಫಲ?–ಏನು ಪ್ರಯೋಜನವು? ಕುಲಜನೆಂಬುವುದಕ್ಕೆ–ಕುಲ ಹೆಚ್ಚು ಜಾತಿ ಹೆಚ್ಚೆಂದು ಹೇಳಿಕೊಂಬುವುದಕ್ಕೆ, ಆವುದು ದೃಷ್ಟ?–ಆವುದು ತಾರ್ಕಣ್ಯವು?

ಗ್ರಂಥ–ಗುರುವಾಕ್ಯಕ್ಕೆ ಸದೃಶವಾಗಿ ಹರವಾಕ್ಯವ ನಿರೂಪಿಸುತ್ತಿಹರು. ಸಪ್ತಧಾತು ಸಮಂ ಪಿಂಡಂ ಸಪ್ತದಾತು ಪಿಂಡಂ–ಸಮ್ಮಿಶ್ರವಾಗಿ ದೇಹ ವಿಡಿದು ಹುಟ್ಟುವಂಥದು, ಸಮಂ–ಉತ್ತಮಜಾತಿಯವರಿಗೂ ಕ್ಷೀಣ ಜಾತಿಯವರಿಗೂ ಒಂದೇಯಾಗಿರ್ಪುದು, ಸಮಯೋನಿ ಸಮುದ್ಭವಂ: ಸಮಯೋನಿ ಉತ್ತಮಜಾತಿಯುವರಿಗೆ ಊರ್ಧ್ವಯೋನಿಯಾಗಿ ಕ್ಷೀಣಜಾತಿಯುವರಿಗೆ ಅಧೋಯೋನಿಯಾಗಿ ಇರುತ್ತೈತೇ? ಇಲ್ಲವು. ಇರುವಂಥ ಸ್ಥಾನವೆಲ್ಲ ಒಂದೇ ಸಮುದ್ಭವಂ–ಉತ್ತಮ ಜಾತಿಯವರು ಊರ್ಧ್ವಯೋನಿಯಲ್ಲಿ ಹುಟ್ಟಿ ಕ್ಷೀಣಜಾತಿಯವರು ಅಧೋನಿಯೋನಿಯಲ್ಲಿ ಹುಟ್ಟುತ್ತೈದಾರೆ? ಇಲ್ಲವು ಹುಟ್ಟುವಂಥ ಸ್ಥಾನವೆಲ್ಲ ಒಂದೇ. ಆತ್ಮಜೀವ ಸಮಾಯುಕ್ತಂ–ಕ್ಷೀಣಜಾತಿಯವರು ಹತ್ತಿಪ್ಪತ್ತು ವರುಷದೊಳಗೆ ಸತ್ತು ಉತ್ತಮಜಾತಿಯವರು ನೂರು ಹೆಜ್ಜೆಂದು ನೂರಯಿಪ್ಪತ್ತು ವರುಷ ಬದುಕುತ್ತೈದಾರೆ? ಇಲ್ಲವು ಬಾಳುವೆಯಲ್ಲ ಒಂದೇಯಾಗಿರ್ಪುದು. ವರ್ಣಾನಾಂ ಕಿಂ ಪ್ರಯೋಜನಂ–ವರ್ಣ ಹೆಚ್ಚುಜಾತಿ. ಹೇಳಿಕೊಂಬುವಂಥದು ಏನು ಪ್ರಯೋಜನ? ಪ್ರಯೋಜನವಿಲ್ಲವು ಎಂದುದಾಗಿ–ಹೀಂಗೆಂದು ಈಶ್ವರನ ವಾಕ್ಯದಲ್ಲಿ ಹೇಳುತ್ತಿಹುದಾಗಿ.

ಕಾಸಿ ಕಮ್ಮಾಱನಾದ–ಕಬ್ಬಿಣವನ್ನು ಕೆಂಪಗೆ ಕಾಸಿ ಬಡಿವುದರಿಂದ ಕಮ್ಮಾರ ಕುಲದಲ್ಲಿ ಹುಟ್ಟಿದವನಾದನು, ಬೀಸಿ ಮಡಿವಾಳನಾದ; ಬೀಸಿ–ಹೊದಿಕೆಯನ್ನು ತೊಳೆವುದರಿಂದ, ಮಡಿವಾಳನಾದ–ರಜಕನಾದನು, ಹಾಸನಿಕ್ಕಿ ಸಾಲಿಗನಾದ [ಹಾಸನಿಕ್ಕಿ–] ಹಾಸುಹೊಕ್ಕನಿಕ್ಕಿ ಹಚ್ಚಡ ಸೀರೆ ಮೊದಲಾದವನೆಯ್ದು. ಸಾಲಿಗನಾದ–ಪಟ್ಟಸಾಲಿಗನಾದನು. ವೇದವನೋದಿ ಹಾರುವನಾದ: [ವೇದವನೋದಿ–] ನಾಲ್ಕು ವೇದಂಗಳನು ಪಠಿಸಿ, ಹಾರುವನಾದ–ವಿಪ್ರನಾದನು, ಜಗದೊಳಗೆ–ಲೋಕದಲ್ಲಿ, ಕರ್ಣದಲ್ಲಿ ಜನಿಸಿದವನರುಂಟೆ?–ಶ್ರೋತ್ರದಲ್ಲಿ ಉತ್ಪತ್ಯವಾದಂಥವರುಗಳು ಉಂಟೆ? ಇಲ್ಲವು. ಇದು ಕಾರಣ–ಇದು ನಿಮಿತ್ತಾರ್ಥ, ಕೂಡಲಸಂಗಮದೇವಾ – ಎಲೆ ಪರಶಿವಲಿಂಗವೆ,

ಲಿಂಗಸ್ಥಲವನರಿದವನೇ–ಜ್ಞಾನೋದಯದಿಂದ ಗುರೋಪಾವಸ್ಥೆಯ ಮಾಡಿ ಗುರು ಕಾರುಣ್ಯನ ಹಡೆದು ಅಂಗದಲ್ಲಿ ಲಿಂಗಸಂಬಂಧವ ಮಾಡಿಕೊಂಡು ಲಿಂಗಪವೂಜೆಯ ಮಾಡುವಂಥದನ್ನು ತಿಳಿದಿಪ್ಪಾತನೇ, ಕುಲಜನು–ಅವನೇ ಕುಲಶ್ರೇಷ್ಠನು.

III– –

ವಿಷಯಾದಿಗಳು–ವಿಷಯ ಮುಂತಾದವು, ಎಲ್ಲ–ಸಮಸ್ತ ಆತ್ಮರುಗಳಿಗೆ, ಒಂದೇ–ಒಂದೇ ಪ್ರಕಾರವು.

೫೯೨

ಕೊಲ್ಲುವನೇ ಮಾದಿಗ, ಹೊಸಲು ತಿಂಬುವನೇ ಹೊಲೆಯ! ಕುಲವೇನೊ ಅವಂದಿರ ಕುಲವೇನೊ? ಸಕಲಜೀವಾತ್ಮರುಗಳಿಗೆ ಲೇಸನೆ ಬಯಸುವ ನಮ್ಮ ಕೂಡಲಸಂಗನ ಶರಣರೆ ಕುಲಜರು.

I– –

ಕೊಲ್ಲುವನೇ ಮಾದಿಗ; ಕೊಲ್ಲುವನೆ–ಪ್ರಾಣವ ಕೊಲ್ಲುವಂಥವನೆ, ಮಾದಿಗ–ಶ್ವಪಚನು, ಹೊಲಸು ತಿಂಬುವನೆ–ಹೋತುಕೊಂದು ಸುಂಟಕವೆಂದು ಸುಟ್ಟುಕೊಂಡು ದುಡ್ಡು ದುಡ್ಡಿನ ತೂಕ ಮಾಂಸವನ್ನು ಅನುಭವಿಸುವಂಥವನೆ, ಹೊಲೆಯ–ಚಾಂಡಾಲನು, ಕುಲವೇನು–ಕುಲಶ್ರೇಷ್ಠವೇನೂ, ಅವಂದಿರ–ಅಂತಪ್ಪವರ, ಕುಲವೇನೊ?–ಕುಲಶ್ರೇಷ್ಠವೇನೊ? ಸಕಲಜೀವಾತ್ಮರುಗಳಿಗೆ–ಇರುವೆ ಮೊದಲಾಗಿ ಗಜವೇ ಕಡೆಯಾದ ಸಮಸ್ತ ಸ್ಥೂಲ ಸೂಕ್ಷ್ಮ ಪ್ರಾಣಿಗಳಿಗೆ, ಲೇಸನೆ ಬಯಸುವ; [ಲೇಸನೆ–] ಸರ್ವಜೀವದಯಾಚಿತ್ತ ಕಾರುಣ್ಯರಸಭರಿತತ್ತ್ವ ಮುಂದುಗೊಂಡು ಸಮಸ್ತಪ್ರಾಣಿಗಳ ಮೇಲಣ ಕೃಪೆಯನ್ನು ಮುಂದುಗೊಂಡಿರುವಂಥ ಪರಿಣಾಮವನ್ನೆ, ಬಯಸುವ–ಇಚ್ಛಿಸುವ, ನಮ್ಮ ಕೂಡಲಸಂಗನ ಶರಣರೆ–ನಮ್ಮ ಪರಶಿವನ ಶರಣರೆ, ಕುಲಜರು! –ನೂರಾವೊಂದು ಕುಲ ಹದಿನೆಂಟು ಜಾತಿಗಳೊಳಗೆ ಅವರೇ ಕುಲಶ್ರೇಷ್ಠರು.

೫೯೩

ಹಾರುವನ ಭಕ್ತಿ ಓಡಿನೊಳಗೆ ಅಗೆಯ ಹೊಯ್ದಂತೆ ಕೆಳಯಕ್ಕೆ ಬೇರೂರದು, ಮೇಲಕ್ಕೆ ಫಲವಾಗದು! ಪ್ರಾಣಲಿಂಗದ ಪ್ರಸಾದವ ಮುಂದಿಟ್ಟಿಕೊಂಡು "ಪ್ರಾಣಾಯ ಸ್ವಾಹಾ, ಅಪಾನಾಯ ಸ್ವಾಹಾ, ವ್ಯಾನಾಯ ಸ್ವಾಹಾ, ಉದಾನಾಯ ಸ್ವಾಹಾ, ಸಮಾನಾಯ ಸ್ವಾಹಾ" ಎಂಬ ಕರ್ಮಿಗಳ ನಾನೇನೆಂಬೆ, ಕೂಡಲಸಂಗಮದೇವಾ?

I –

ಹಾರುವನ ಭಕ್ತಿ ಓಡಿನಲ್ಲಿ ಅಗೆಯ ಹೊಯ್ದಂತೆ ಕೆಳಯಕ್ಕೆ ಬೇರೂರದು ಮೇಲಕ್ಕೆ ಫಲವಾಗದು–ಭೂಮಿಯ ಮೇಲೆ ಹದಿನೆಂಟು ಧಾನ್ಯಂಗಳನು ಬಿತ್ತಿದರೆ ಪೈರು ಪೂರಿತವಾಗಿ ಬೆಳೆದಾವಲ್ಲದೆ ಓಡಿನೊಳಗೆ ಹದಿನೆಂಟು ಧಾನ್ಯಂಗಳನು ಒಗ್ಗು ಹೊಯ್ದರೆ ಗೇಣುದ್ದ ಚೋಟುದ್ದ

ಪೈರು ಆಗಿ ಅಲ್ಲೇ ಕಮರಿ ಹೋಗುವವಲ್ಲದೆ ಪೈರು ಪೂರಿತವಾಗಿ ಬೆಳೆದು ಬಂದಾವೆ? ಬರೆಲರಿಯವು, ಹಾಂಗೆ ಜಂಗಮಕ್ಕೆ ಸಕಲ ಪದಾರ್ಥವನ್ನು ನೀಡಿ ಸಂತುಷ್ಟಿ ಬಡಿಸಿದರೆ ಭೂಮಿಯ ಮೇಲೆ ಹದಿನೆಂಟು ಧಾನ್ಯಂಗಳನು. ಬಿತ್ತಿದರೆ ಪೈರು ಪೂರಿತವಾಗಿ ಬೆಳೆದು ಬಂದ ಹಾಂಗೆ ನಿತ್ಯವಾದ ನಿಜಮೋಕ್ಷವೇ ಉಂಟಾಗುತ್ತಿಹುದು ಜಂಗಮ ಭಕ್ತಿಬಾಹ್ಯವಾಗಿ ವಿಪ್ರರಿಗೆ ಸಕಲಪದಾರ್ಥಂಗಳನು ನೀಡಿ ಸಂತುಷ್ಟಿ ಬಡಿಸಿದರೆ, ಓಡಿನಲ್ಲಿ ಅಗೆಯ ಹೊಯ್ದರೆ ಕೆಳಯಕ್ಕೆ ಬೇರೂರದೆ ಮೇಲಕ್ಕೆ ಫಲವಾಗದೆ ಗೇಣುದ್ದ ಚೋಟುದ್ದ ಬೆಳೆದು ಅಲ್ಲೆ ಕಮರಿಹೋದ ಹಾಂಗೆ ವ್ಯರ್ಥಸ್ಯವಾಗಿರ್ಪುದು.

ಪ್ರಾಣಲಿಂಗದ–ಪ್ರಾಣಕಳಾಚೈತನ್ಯಸ್ಯರೂಪವಾದ ಇಷ್ಟಲಿಂಗದ, ಪ್ರಸಾದವ–ಶಿವಪ್ರಸಾದವನ್ನು, ಮುಂದಿಟ್ಟುಕೊಂಡು–ಸಮ್ಮುಖದಲ್ಲಿ ಮಡಗಿಕೊಂಡು, ಪ್ರಾಣಾಯ ಸ್ವಾಹಾ–ಭೋ ಎಲೆ ಪ್ರಾಣವಾಯುವೆ ನೀನು ರುದ್ರಪ್ರಸಾದವನುಭವಿಸಿ, ಶುದ್ಧತೆಯಾಗೆಂದು ಆದರೊಳಗೊಂದು ಭೋಜ್ಯವನು ತೆಗದು ಕಡೆಗೆ ಮಡಗುತ್ತಿಹರು. ಅಪಾನಾಯ ಸ್ವಾಹಾ–ಭೋ ಎಲೆ ಅಪಾನವಾಯುವೆ ನೀನು ರುದ್ರಪ್ರಸಾದವನನುಭವಿಸಿ ಶುದ್ಧತೆಯಾಗೆಂದು ಅದರೊಳಗೊಂದು ಭೋಜ್ಯವನ್ನು ತೆಗದು ಕಡೆಗೆ ಮಡುಗುತ್ತಿಹರು, ವ್ಯಾನಾಯ ಸ್ವಾಹಾ–ಭೋ ಎಲೆ ವ್ಯಾನವಾಯುವೆ ನೀನು ರುದ್ರಪ್ರಸಾದವನುಭವಿಸಿ ಶುದ್ಧತೆಯಾಗೆಂದು ಅದರೊಳಗೊಂದು ಭೋಜ್ಯವನ್ನು ಕಡೆಗೆ ಕಡೆಯಲ್ಲಿ ಮಡಗುತ್ತಿಹರು, ತೆಗೆದು ಸಮಾನಾಯ ಸ್ವಾಹಾ–ಭೋ ಎಲೆ ಸಮಾನವಾಯುವೆ ನೀನು ರುದ್ರಪ್ರಸಾದವನನುಭವಿಸಿ ಶುದ್ಧತೆಯಾಗೆಂದು ಅದರೊಳಗೊಂದು ಭೋಜ್ಯವನು ತೆಗದು ಕಡೆಯಲ್ಲಿ ಮುಡಗುತ್ತಿಹರು. ಎಂಬ–ಹೀಗೆಂದು ಹೇಳುವ, ಕರ್ಮಿಗಳ–ಪಾಪಾತ್ಮರುಗಳಾದ ಜಗದೇವಯ್ಯಗಳ, ನಾನೇನೆಂಬೆ–ನಾನೆಂತೆಂದು ಹೇಳಲಿ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

೫೯೪

'ನಾನು ಭಕ್ತ ನಾನು ಪ್ರಸಾದಿ' ಎಂದು ವಿಪ್ರಕರ್ಮವ ಮಾಡುವೆ ಕರ್ಮಿ: ಲಿಂಗದೇವನ ಮುಟ್ಟಿ ಮಜ್ಜನಕ್ಕೆಱೆವ ಕೈಯಲ್ಲಿ ವಿಪ್ರನ ಕಾಲ ತೊಳೆದಡೆ ಲಿಂಗೋದಕ ಹೃದಯದಲ್ಲಿ, ವಿಪ್ರನಕಾಲ ತೊಳೆದ ನೀರು ಮಂಡೆಯ ಮೇಲೆ! [1][ಶ್ರುತ್ಯುತ್ಕಟದುರಾಚಾರೀ ಯಜ್ಞಕೂಪ ಸಘಾತಕಃ। [2][ಉದ್ರೇಕೈಕ 2ವಿಧೌಶ್ರಾಂತೋ ವಿಪ್ರರೂಪೇಣ ರಾಕ್ಷಸಃ॥][1] ಇದು ಕಾರಣ, ಕೂಡಸಲಂಗಮದೇವಾ ಇಂತಪ್ಪ ದುರಾಚಾರಿಗಳ ಮುಖವ ನೋಡಲಾಗದು.

....

೧–೧ ಶ್ರುತ್ಯೇತ್ಕಟ ದುರಾಚಾರಿ ಯಜ್ಞಕೂಪ ಸಘಾತಕಃ। ಉದ್ರೆದ್ವೈತ ವಿಧಿಃ ಶಾಂತಿ ವಿಪ್ರರೂಪೇಣ ರಾಕ್ಷಸಃ॥ (ಕ,ಗ).

I –

ನಾನು ಭಕ್ತ–ನಾನು ಶಿವಭಕ್ತನು, ನಾನು ಪ್ರಸಾದಿ–ನಾನು ಶಿವಪ್ರಸಾದಿ, ಎಂದು ಹೀಂಗೆಂದು ಹೇಳಿಕೊಂಡು, ವಿಪ್ರಕರ್ಮವ ಮಾಡುವೆ–ಬ್ರಾಹ್ಮಣ ಕೃತ್ಯವನನುಗೈವೆ, ಕರ್ಮೀ–ಎಲೆ ಪಾಪಾತ್ಮನಾದ ಜಗದೇವಯ್ಯನೇ, ಲಿಂಗದೇವನ ಮುಟ್ಟಿ–ಇಷ್ಟಮಹಾಲಿಂಗವನ್ನು ಅಷ್ಟವಿದಾರ್ಚನೆ ಷೋಡಶೋಪಚಾರ ಕ್ರಿಯೆಗಳಿಂದಾರಾಧಿಸಿ, ಮಜ್ಜನಕ್ಕೆಱೆವ–ಹತ್ತೆಂಟುಕೊಡ ಉದಕವನ್ನು ಲಿಂಗಕ್ಕೆ ಅಭಿಷೇಕವ ನೀಡುವ,

ಕೈಯಲ್ಲಿ–ಹಸ್ತದಲ್ಲಿ, ವಿಪ್ರನ–ಪಾರ್ವನ, ಕಾಲು–ಚರಣವನು, ತೋಳದಡೆ–ಪ್ರಕ್ಷಾಲಿಸಿದರೆ, ಲಿಂಗೋದಕ ಹೃದಯದಲ್ಲಿ–ಮಜ್ಜನೋದಕವನ್ನು ಅಂತರಂಗದಲ್ಲಿ ಸಲಿಸುವುದು, ವಿಪ್ರನ–ಹಾರುವನ, ಕಾಲ–ಚರಣವನ್ನು, ತೋಳೆದ–ಪ್ರಕ್ಷಾಲಿಸಿದ, ನೀರು–ಉದಕವನ್ನು, ಮಂಡೆಯ ಮೇಲೆ ಮಸ್ತಕದ ಮೇಲೆ ಬಿದಿರಿಸಿಕೊಂಬುವುದಕ್ಕಾದೀತೆ? ಆಗದು.

ಶ್ರುತ್ಯುತ್ಕಟ ದುರಾಚಾರೀ: ಶ್ರುತಿ–ವೇದಶ್ರುತಿಗಳ, ಉತ್ಕಟ–ಮಿಗೆ ಮಿಗೆ ಹೆಚ್ಚಿಗೆಯನುಳ್ಳ. ದುರಾಚಾರೀ ;–ಹೊಲ್ಲವಾದ ನಡಾವಳಿಯನುಳ್ಳಂಥ ಎಲೆ ಜಗದೇವಯ್ಯನೇ, ಯಜ್ಞಕೂಪ ಸಘಾತಕ: [ಯಾಜ್ಞಕೂಪ-] ಯಜ್ಞಕೂಪವೆಂಬ ಹೊಂಡದಲ್ಲಿ, ಸಘಾತಕಃ–ಪಶುಮೂರ್ಖನಾದಂಥ ಎಲೆ ಜಗದೇವಯ್ಯನೇ, ಉದ್ರೇದ್ವೈಕ ವಿಧಿಃ ಶಾಂತಿ: [ಉದ್ರೇದ್ವೈಕ–] ಉದ್ರೇಕತ್ವದಿಂದ ಜಂಗಮಭಕ್ತಿಯನ್ನು ಮಾಡುವಂಥದನ್ನು ಬಿಟ್ಟು–ವಿಧಿ:–ವಿಧಾನೋಕ್ತವಾಗಿ, ಶಾಂತಿ–ವಿಪ್ರರುಗಳಿಗೆ ಸಕಲಪದಾರ್ಥಂಗಳನು ನೀಡಿ ಸಂತುಷ್ಟಿಬಡಿಸಿದರೆ, ವಿಪ್ರರೂಪೇಣ–ಬ್ರಾಹ್ಮಣನಾಕಾರದಿಂದೆ, ರಾಕ್ಷ:–ಬ್ರಹ್ಮರಾಕ್ಷಸನಾಗಿ ಹುಟ್ಟುತ್ತಿಹನು. ಇದು ಕಾರಣ–ಇದು ನಿಮಿತ್ತಾರ್ಥ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಇಂತಪ್ಪ–ಈ ಪ್ರಕಾರವಾದ, ದುರಾಚಾರಿಗಳ–ಹೊಲ್ಲವಾದ ನಡಾವಳಿಯನುಳ್ಳಂಥ ಜಗದೇವ[೧]ಯ್ಯಗಳ. ಮುಖವು–ವದನವನು, ನೋಡಲಾಗದು–ನಿರೀಕ್ಷಣೆಯ ಮಾಡಲಾಗದುಯೆಂದು ಪರದೆಯ ಮರೆಯಲ್ಲಿ ನಿಂತುಕೊಂಡು ಪ್ರಸಂಗವನಾಡುತ್ತಿಹನು, ಸಂಗನಬಸವೇಶ್ವರನು.

....

೧+ಮೊಲ್ಲೆಬೊಮ್ಮ (ಕ, ಗ)

III –

2–2 ಉದ್ರಿದಾ ಕರವಿಧಿ ಶಾಂತಿ (ಟ, ಡ)

....

ಉದ್ರಿದಾ ಕರವಿಧಿ ಶಾಂತಿ–ಉದ್ರೇಕವೊಂದಱ ಕ್ರಿಯು.

೫೯೫

ಹೊನ್ನ ನೇಗಿಲಲು[1]ತ್ತಿ[1] ಎಕ್ಕೆಯ ಬೀಜವ ಬಿತ್ತುವರೆ? ಕರ್ಪುರದ ಮರನ ಕಡಿದು ಕಳ್ಳಿಗೆ ಬೇಲಿಯನಿಕ್ಕುವರೆ? ಶ್ರೀಗಂಧದ ಮರನ ಕಡಿದು "ಬೇವಿನ ಮರಕ್ಕಡಿ[2]ಯನಿಕ್ಕುವರೆ? ನಮ್ಮ ಕೂಡಲಸಂಗನ ಶರಣರಿಗಲ್ಲದೆ ಬೇಱೆ ಇಚ್ಛಾಭೋಜನವ[3]ನಿಕ್ಕಿ[3]ದಡೆ ಕಿಚ್ಚಿನೊಳಗೆ ಉ[4]ಚ್ಚಿ[4]ಯ ಹೊಯ್ದು ಹವಿಯ ಬೆಳೆದಂತಾಯತ್ತು.

I –

ಹೊನ್ನನೇಗಿಲಲುತ್ತಿ ಎಕ್ಕೆಯ ಬೀಜವ ಬಿತ್ತುವರೆ?–ಚಿನ್ನದ ನೇಗಿಲದಿಂದ ಉಕ್ಕಿಯ ಹೊಡೆದ ಮೇಲೆ ಮುತ್ತುರತ್ನಂಗಳ ಬಿತ್ತಿ ಬೆಳೆಯ ಬೇಕಲ್ಲದೆ ಎಕ್ಕೆಯ ಬೀಜ ಕಕ್ಕೆಯ ಬೀಜ ಮೊದಲಾದವನು ಬಿತ್ತಿ ಬೆಳವುದಕ್ಕಾದೀತೆ? ಆಗದು ಹಾಂಗೆ, ಜಂಗಮಭಕ್ತಿಬಾಹ್ಯನಾಗಿ ವಿಪ್ರರಿಗೆ ಸಕಲಪದಾರ್ಥವನ್ನು

ನೀಡಿ ಸಂತುಷ್ಟಿ ಬಡಿಸುಂಥವನ ಇರಸ್ಥಿತಿಯೂ ಹೊನ್ನ ನೇಗಿಲದಿಂದಲುತ್ತಿ ಎಕ್ಕೆಯ ಬೀಜ ಕಕ್ಕೆಯ ಬೀಜ ಮೊದಲಾದವನು ಬಿತ್ತಿ ಬೆಳೆವಾತನ ಇರಸ್ಥಿತಿಯೂ ಒಂದೇಯಾಗಿರ್ಪುದು.

ಕರ್ಪುರದ ಮರನ ಕಡಿದು ಕಳ್ಳಿಗೆ ಬೇಲಿಯನಿಕ್ಕುವರೆ?–ಕಳ್ಳಿಯ ಮರನ ಕಡೆದು ಬಾಳೆಯ ಮರಕ್ಕಡಿಯನಿಕ್ಕಬೇಕಲ್ಲದೆ [1]ಎಳೆ ಎಳೆ[1] ಬಾಳೆಯ ಮರನ ಕಡಿದು ಕಳ್ಳಿಯಮರಕ್ಕಡಿಯ ನಿಕ್ಕುವುದಕ್ಕಾದೀತೆ? ಆಗದು. ಹಾಂಗೆ, ಜಂಗಮ ಭಕ್ತಿಬಾಹ್ಯವಾಗಿ ವಿಪ್ರರಿಗೆ ಸಕಲಪದಾರ್ಥವನ್ನು ನೀಡಿ ಸಂತುಷ್ಟಿಪಡಿಸುವಂಥವನ ಇರಸ್ಥಿತಿಯೂ ಕರ್ಪುರದ ಮರನ ಕಡಿದು ಕಳ್ಳಿಯ ಮರಕ್ಕಡಿಯನಿಕ್ಕುವಂಥವನ ಇರಸ್ಥಿತಿಯೂ ಒಂದೇಯಾಗಿರ್ಪುದು.

ಶ್ರೀಗಂಧದ ಮರನ ಕಡಿದು ಬೇವಿನ ಮರಕ್ಕಡಿಯನಿಕ್ಕುವರೆ?–ಬೇವಿನ ಮರನ ಕಡಿದು ಶ್ರೀಗಂಧದ ಮರಕ್ಕಡಿಯುಕೊಡಬೇಕಲ್ಲದೆ. ಶ್ರೀಗಂಧದ ಮರನ ಕಡಿದು ಬೇವಿನ ಮರಕ್ಕಡಿಯನಿಕ್ಕುವುದಕ್ಕಾದೀತೆ? ಆಗದು. ಹಾಂಗೆ, ಜಂಗಮಭಕ್ತಿಬಾಹ್ಯವಾಗಿ ವಿಪ್ರರಿಗೆ ಸಕಲಪದಾರ್ಥವನ್ನು ನೀಡಿ ಸಂತುಷ್ಟಿ ಬಡಿಸುವಂಥವನ ಇರಸ್ಥಿತಿಯೂ ಶ್ರೀಗಂಧದ ಮರನ ಕಡಿದು ಬೇವಿನ ಮರಕ್ಕಡಿಯನಿಕ್ಕುವಂಥವನ ಇರಸ್ಥಿತಿಯೂ ಒಂದೇಯಾಗಿರ್ಪುದು.

ನಮ್ಮ ಕೂಡಲಸಂಗನ ಶರಣರಿಗಲ್ಲದೆ–ನಮ್ಮ ಜಂಗಮಮೂರ್ತಿಗಳಿಗಲ್ಲದೆ, ಬೇಜೆ ಇಚ್ಛಾ ಭೋಜನವನಿಕ್ಕಿದಡೆ–ವಿಪ್ರರಿಗೆ ಬೇಕಾದಂಥ ಸಕಲಪದಾರ್ಥವನ್ನು ನೀಡಿ ಸಂತುಷ್ಟಿಬಡಿಸಿದರೆ, ಕಿಚ್ಚಿನೊಳಗೆ ಉಚ್ಚಿಯ ಹೊಯ್ದು ಹವಿಯ ಬೆಳೆದಂತಾಯಿತ್ತು ಭೂಮಿಯ ಮೇಲೆ ಹದಿನೆಂಟು ಧಾನ್ಯಂಗಳನು ಬಿತ್ತಿದರೆ ಬೆಳೆದಾವಲ್ಲದೆ ಕಿಚ್ಚನೊಳಗುಚ್ಚಿಯ ಹೊಯ್ದು ಹದಿನೆಂಟು ಧಾನ್ಯಂಗಳನು ಬಿತ್ತಿದರೆ ಅಲ್ಲಿಯೇ ಕಮರಿ ಹೋಗುವುವಲ್ಲದೆ ಫಲವಾದಾವೆ? ಆಗಲರಿಯವು. ಹಾಂಗೆ, ಜಂಗಮಭಕ್ತಿ ಬಾಹ್ಯವಾಗಿ ವಿಪ್ರರಿಗೆ ಸಕಲಪದಾರ್ಥವನ್ನು ನೀಡಿ ಸಂತುಷ್ಟಿ ಬಡಿಸುವಂಥವನ ಇರಸ್ಥಿತಿಯೂ ಕಿಚ್ಚಿನೊಳಗುಚ್ಚಿಯ ಹೊಯ್ದು ಹದಿನೆಂಟು ಧಾನ್ಯಂಗಳನು ಬಿತ್ತಿ ಬೆಳೆದೇನೆಂಬುವಂಥವನ ಇರಸ್ಥಿತಿಯೂ ಒಂದೇಯಾಗಿರ್ಪುದು.

....

೧–೧ ಎಲೆಯ (ಗ)

I –

1–1 ತ್ತು(ಚ, ಜ), 2–2 ಬೇವಿಂಗೆ ಅಡೆ (ಚ, ಜ). 3–3 ನೀಡಿ (ಚ, ಜ), 4–4 ಚ್ಚೆ (ಚ, ಜ)

....

ಹೊನ್ನನೇಗಿಲಲುತ್ತು ಎಕ್ಕೆಯ ಬೀಜವ ಬಿತ್ತುವರೆ?–ಗುರುಭಕ್ತಿಯ ಮಾಡೂದ ಬಿಟ್ಟು ತನ್ನ ಸತಿಸುತಾದಿಗಳಿಗೆ ಹಾಕುವರೆ? ಕರ್ಪುರದ ಮರನ ಕಡಿದು ಕಳ್ಳಿಗೆ ಬೇಲಿಯನಿಕ್ಕುವರೆ?–ಲಿಂಗಭಕ್ತಿಯ ಮಾಡೂದ ಬಿಟ್ಟು ತನ್ನ ಬಂಧುಬಳಗಕ್ಕೆ ಹಾಕುವರೆ? ಶ್ರೀಗಂಧದ ಮರನ ಕಡಿದು ಬೇವಿಂಗೆ ಅಡೆಯನಿಕ್ಕುವರೆ?–ಜಂಗಮಭಕ್ತಿಯ ಮಾಡೂದ ಬಿಟ್ಟು ಅಪಾತ್ರದಾನವ ಮಾಡುವರೆ?

ಅದಲ್ಲದೆ ಜ್ಞಾನಶಕ್ತಿಯನು ತುಟ್ಟಿಸಿ ಅಪಾತ್ರದಾನ ಮಾಡುವರೆ? ಸ್ವಾನುಭಾವ ಸದ್ವಾಸನೆಯ ನುಳ್ಳವರುಗಳಿಗೆ ಮಾಡುವಂಥ ಭಕ್ತಿಯನು ತುಟ್ಟಿಸಿ ಸೂಳೆಡಾಳೆಯರುಗಳಿಗೆ ಹಾಕುವರೆ? ಐಶ್ವರ್ಯೋಪ

ಲಕ್ಷಿತವಾದ ಜ್ಞಾನಿಗಳಿಗ ಮಾಡುವಂಥ ಭಕ್ತಿಯನು ತುಟ್ಟಿಸಿ ಅಂತರಂಗದಲ್ಲಿ ಸಂಕಲ್ಪ ಮುಂದುಗೊಂಡಿರುವ ಆಶಾಲಾಂಛನಿಗಳಿಗೆ ಹಾಕುವರೆ?

ನಮ್ಮ ಕೂಡಲಸಂಗನ ಶರಣರಿಗಲ್ಲದೆ-ನಮ್ಮ ಸಂಬಂಧವಾದ ಪರಶಿವಲಿಂಗವ ಪರಮೂರ್ತಿಗಳಹ ಗುರುಲಿಂಗಜಂಗಮಕ್ಕಲ್ಲದೆ, ಬೇಕೆ ಇಚ್ಛಾ ಭೋಜನವ ನೀಡಿದಡೆ ಕಿಚ್ಚಿನೊಳಗೆ ಉಚ್ಚೆಯ ಹೊಯ್ದು ಹವಿಯ ಬೆಳೆದಂತಾಯಿತ್ತು-ಪೃಥಕ್ಕಾಗಿ ಅಪಾತ್ರಕ್ಕೆ ಬಯಸಿದ ಸಕಲ ಪಡಿಪದಾರ್ಥಗಳ ನೀಡಿದರೆ ಅಗ್ನಿಯಲ್ಲಿ ಮೈಜಲವದ ಬಿಟ್ಟು ೧೮ ಧಾನ್ಯಂಗಳ ಬೆಳೆದೇನೆಂದರೆ ಬೆಳೆದಾನೆ ? ಹಾಂಗಾಯಿತ್ತು ಅಪಾತ್ರಕ್ಕೆ ನೀಡಿದಲ್ಲಿ.

೫೯೬

ಜಾತಿವಿಡಿದು ಸೂತಕವನರಸುವೆ; ಜ್ಯೋತಿವಿಡಿದು ಕತ್ತಲೆಯನಱಸುವೆ! ಇದೇಕೊ ಮರುಳುಮಾನವಾ? ಜಾತಿಯಲ್ಲಿ ಅಧಿಕನೆಂಬೆ, ವಿಪ್ರರು ಶತಕೋಟಿಗಳಿದ್ದಲ್ಲಿ ಫಲವೇನು? 'ಭಕ್ತ ಶಿಖಾಮಣಿ' ಎಂದುದು ವಚನ. ನಮ್ಮ ಕೂಡಲಸಂಗನ ಶರಣರ ಪಾದವ ಪರುಷವೆಂದು ನಂಬು, ಕೆಡಬೇಡ ಮಾನವ.

I- -

ಜಾತಿವಿಡಿದು ಸೂತಕವನಱಸುವೆ; ಜಾತಿವಿಡಿದು-ಶಿವಕುಲವ ದೃಢವಿಡಿದುಕೊಂಡು ಸೂತಕವನಱಸುವೆ-ಪಂಚಸೂತಕಂಗಳನು ಹುಡುಕುವೆ. ಜ್ಯೋತಿವಿಡಿದು-ಜ್ಞಾನಜ್ಯೋತಿಯನು ದೃಢವಿಡಿದುಕೊಂಡು, ಕತ್ತಲೆಯನಱಸುವೆ !-ಅಜ್ಞಾನವೆಂಬ ಕಾವಳವನುಂಟುಮಾಡಿಕೊಂಬುವೆ. ಇದೇಕೊ-ಇದೇನು ಕಾರಣಕ್ಕೋ ಮರುಳು ಮಾನವಾ ?-ಎಲೇ ಹುಚ್ಚು ಮನುಷ್ಯನೆ, ಜಾತಿಯಲ್ಲಿ-ಕುಲದಲ್ಲಿ, ಅಧಿಕನೆಂಬೆ-ಶ್ರೇಷ್ಠನೆಂದು ಹೇಳುವೆ, ವಿಪ್ರರು ಶತಕೋಟಿಗಳಿದ್ದಲ್ಲಿ-ನೂರುಕೋಟಿ ಹಾರುವರು ಕುಳಿತುಕೊಂಡಿದ್ದಲ್ಲಿ, ಫಲವೇನು ?-ಪ್ರಯೋಜನವೇನು ? 'ಭಕ್ತಶಿಖಾಮಣಿ' ಎಂದುದು-ನೂರುಕೋಟಿ ಪಾರ್ವರೊಳಗೊಬ್ಬ ಶಿವಭಕ್ತನು ಲಲಾಟದಲ್ಲಿ ವಿಭೂತಿ, ಕೊರಳಲ್ಲಿ ರುದ್ರಾಕ್ಷಿಮಾಲೆ ಅಂಗದ ಮೇಲೆ ಶಿವಲಿಂಗ ಮೊದಲಾದ ಭಕ್ತಿವೇಷವ ಧರಿಸಿಕೊಂಡು ಮೂರ್ತವ ಮಾಡಿಕೊಂಡಿದ್ದಲ್ಲಿ [೧]ಸರ್ವ[೧] ರತ್ನಶಿಖಾಮಣಿಯಾಗಿಪ್ಪಂತೆ, ಆ ವಿಪ್ರಸಮೂಹದೊಳಗೆಲ್ಲ ಆ ಶಿವಭಕ್ತನೇ ಶಿರೋರನ್ನವಾಗಿ ಒಪ್ಪುತಿಹನೆಂದು ಹೇಳುತ್ತಿಹುದು, ವಚನ-ವಾಕ್ಯಾನುಭಾವವು. ನಮ್ಮ ಕೂಡಲಸಂಗನ ಶರಣರ-ಶಿವನ ಚಿತ್ರಭಾಂಗಸ್ವರೂಪರಾದ ಶಿವಶರಣರ, ಪಾದವ-ಪಾದಕಮಲವನ್ನು, ಪರುಷವೆಂದು ನಂಬು-ಪರುಷದ ಖಣಿಗೆ ಸಮಾನವೆಂದು ವಿಶ್ವಾಸಿಸು, ಕೆಡಬೇಡ-ಶಿವತತ್ವವಳಿದು ಜೀವನಾಗಬೇಡ, ಮಾನವ-ಎಲೆ ಮನುಷ್ಯನೇ.

....

೧-೧ ಸರ್ವ (ಕ)

೫೯೭

ಹೊಲೆಯ ಮಾದಿಗ ಭಕ್ತನಾದಡೆ ಆತನ ಮನೆಯ ಸೊಣಗಂಗೆ ಪಂಚಮಹಾವಾದ್ಯಂಗಳಲ್ಲಿ ಸನ್ಮಾನವ ಮಾಡೆನೆ.? ನೆಲನನುಗ್ಘಡಿಸೆ ಉಘೇ, ಚಾಂಗು, ಭಲಾ ಎಂದು! ಕುಲಕ್ಕಧಿಕ ಹಾರುವಂಗೆ ಸಿದ್ಧಿಗೆಯ್ಯೆಸಲೆ! ನಿಮ್ಮ ಶರಣರ ಮಹಿಮೆ ಘನಕ್ಕೆ ಘನ! ಎಲೆ ಕೂಡಲಸಂಗಮದೇವಾ, ನಿಮ್ಮ ನಂಬದವ ಹೊಲೆಯ!

I –

ಹೊಲೆಯ ಮಾದಿಗ ಭಕ್ತನಾದಡೆ : ಹೊಲೆಯ–ಊರಿಂದ ಹೊರಗಡೆಯಲ್ಲಿ ಮನೆಯ ಕಟ್ಟಿಕೊಂಡಿರುವಂಥ ಹಿರೇಕುಲದ ಭಕ್ತನು, ಮಾದಿಗ–ಅವನಿಂದಾಚೆಕಡೆಗೆ ಮನೆಯನ್ನು ಕಟ್ಟಿಕೊಂಡಿರುವಂಥ ಚಾಂಡಾಲನು, ಭಕ್ತನಾದಡೆ–ಗುರುಕಾರುಣ್ಯವ ಹಡೆದು ಲಿಂಗಾಂಗಸಂಬಂಧಿಯಾಗಿ ಆಚರಿಸುವಂಥ ಹರ ಭಕ್ತನಾದಡೆ, ಆತನ–ಅಂತಪ್ಪ ಆರೂಢಮಲ್ಲಯ್ಯನ, ಮನೆಯ–ಮಂದಿರದ, ಸೊಣಗಂಗೆ–ಶುನಿಸತ್ತಿದ್ದಲ್ಲಿ, ಪಂಚಮಹಾವಾದ್ಯಂಗಳಲ್ಲಿ–ಐದು ಬಗೆಯ ವಾದ್ಯಂಗಳಿಂದೆ, ನೆಲನನುಗ್ಘಡಿಸೆ–ಭೂಮಿಯು ಗದ್ದಲಿಸುವ ಹಾಂಗೆ, ಉಘೇ ಚಾಂಗು ಭಲಾ ಎಂದು–"ಉಕಾರಂ ಚ ಉಮಾದೇವೀ ಘೇಕಾರಃ ಪರಮಶಿವಃ । ಉಮಾ ಪರಶಿವಾಯೋಗೇ ಉಘೇ ಶಬ್ದ ಇಹೋಚ್ಯತೇ" ಎಂದು ಭಲರೇ ಭಾಪುರೇ ಎನುತ್ತ ಸ್ತೋತ್ರವ ಮಾಡಿ, ಸನ್ಮಾನವ ಮಾಡೆನೆ ?–ಮಾನಮನ್ನಣೆಯಿಂದ ನಿಕ್ಷೇಪಿಸೋದಿಲ್ಲವೆ? ನಿಕ್ಷೇಪಿಸುತ್ತಿಹನು.

ಕುಲಕ್ಕಧಿಕ–ತನ್ನ ವಿಪ್ರಕುಲಕ್ಕೆ ಶ್ರೇಷ್ಠನಾದಂಥ ಹಾರುವಂಗೆ, ಸಿದ್ಧಿಗೆಯ್ಯೆಸಲೆ–ವಿಪ್ರರು ಸತ್ತಿದ್ದಲ್ಲಿ ಒಂಟಿ ಕಳ್ಳಿಯ ಬಡಿಗೆಯ ಮೇಲೆ ಕಟ್ಟಿಕೊಂಡು ಹಳ್ಳದ ಕೊರಕಲು ಇದ್ದಲ್ಲಿ ಹೊತ್ತುಕೊಂಡು ಹೋಗಿ ಕಿಚ್ಚನ್ನು ಒಟ್ಟಿ ಅದರೊಳಗೆ ಹಾಕಿ ಸುಟ್ಟುಬಿಡುತ್ತಿಹರು. ನಿಮ್ಮ ಶರಣರ ಮಹಿಮೆ–ನಿಮ್ಮ ಶಿವಗಣಂಗಳ ಮಹಾತ್ಮ್ಯಾತಿ ಶಯವು ಘನಕ್ಕೆ ಘನ–ಅಧಿಕಕ್ಕೆ ಅಧಿಕವು, ಎಲೆ–ಭೋ, ಕೂಡಲಸಂಗಮದೇವಾ ಪರಶಿವಲಿಂಗವೆ, ನಿಮ್ಮ ನಂಬದವ :

ನಿಮ್ಮ–ಸ್ವಾಮಿಗಳ, ನಂಬದವ–ವಿಶ್ವಾಸಿಸದವ, ಹೊಲೆಯ–ಅವನೇ ಚಾಂಡಾಲನು.

III –

ಸಿದ್ಧಿಗೆಯ್ಯೆಸಲೆ–ಚೇಷ್ಟಿನಲ್ಲಿ ಒಯ್ಯುವದೊಷ್ಟೆಯಲ್ಲವೆ.

೫೯೮

ಕಜೆ[1]ಯ ಹಿಂ[1]ಡು [2]ಉಲಿವ ಕಬ್ಬಿನ[2] [3]ತೋ[3]ಟವ ಹೊಕ್ಕು [4]ತನಿರಸದ ತೆಱನನಱಿಯದೆ[4] ಹೊಱಗಣೆಲೆಯನೆ [5]ಮೆಲಿದವು![5] ನಿಮ್ಮನಜೆ[6]ವ[6] ಮದಕರಿ[7] ಗ[7]ಳಲ್ಲದೆ ಕುಜೆ ಬಲ್ಲುದೆ, ಕೂಡಲಸಂಗಮದೇವಾ ?

I –

ಕುಜೆಯ ಹಿಂಡು–ಅಜಪಶುಗಳ ಸಮೂಹವು, ಉಲಿವ ಕಬ್ಬಿನ ತೋಟವ ಹೊಕ್ಕು ಉಲಿವ–ಪ್ರಭಾವಿಸುವಂಥ, ಕಬ್ಬಿನ ತೋಟವ–ಇಕ್ಷುಮಾಳವನ್ನು, ಹೊಕ್ಕು–ಪ್ರವೇಶವಾಗಿ, ತನಿರಸದ

ತೆಱನಱೆಯದೆ–ಒಳಗಣ ಸ್ವಾದವನ್ನು ತಿಳಿಯದೆ, ಹೊಱಗಣೆಲೆಯನೆ ಮೆಲಿದವು!–ಬಾಹ್ಯದಲ್ಲಿರುವಂಥ ಗರಿಗಳನೆ ಭಕ್ಷಿಸಿದವು. ನಿಮ್ಮನಱಿವ ಮದಕರಿಗಲ್ಲದೆ–ಕಬ್ಬನ್ನು ಕಡಿದು ಕತ್ತರಿಸಿ ಮೆಲಿದು ಒಳಗಣ ರಸವನ್ನು ಸ್ವೀಕರಿಸಬೇಕಾದರೆ ಮದ್ದಾನೆಗೆ ಅರಿಯಬರುವದಲ್ಲದೆ ಆಡುಗಳ ಸಮೂಹವು ಬಲ್ಲುವೆ? ಅರಿಯವೆಂಬ ದೃಷ್ಟೋಪಮಾನವ ಹಾಂಗೆ.

• ಕುಱಿಯ ಹಿಂಡು–ಅಜಪಶುಗಳಿಗೆ ಸಮಾನವಾದ ವಿಪ್ರರುಗಳು, ಉಲಿವ ಕಬ್ಬಿನ ತೋಟವ ಹೊಕ್ಕು : ಉಲಿವ–ಶಿವನ ಶಿವಗಣಂಗಳ ಮಹಿಮಾತಿಶಯವನ್ನು ಹೇಳಿಕೊಂಬತ್ತ ಪ್ರಭಾವಿಸುವಂಥ, ತೋಟವ ಹೊಕ್ಕು–ಸಕಲವೇದಶಾಸ್ತ್ರಾಗಮಪುರಾಣಂಗಳನು ಓದಿ, ತನಿರಸದ ತೆಱನ ನಱೆಯದೆ–ಅಲ್ಲಿ ಹೇಳುವ ಸೂತ್ರಾರ್ಥ ಸ್ವರೂಪಾರ್ಥ ಸಂಬಂಧಾರ್ಥ ಪ್ರಣಮಾರ್ಥ ಚಿತ್ರಾರ್ಥ ಭಾವಾರ್ಥಂಗಳನು ಕಲಿತುಕೊಂಡು ಉತ್ತರ ಭಾಗೆಯೊಡನೆಕೂಡಿ ಚರಿಸುವಂಥದನ್ನು ತಿಳಿಯದೆ ಹೊಱಗಣಲೆಯನೆ ಮೆಲಿದವು–ಬಾಹ್ಯದ ಕ್ರಿಯಾರ್ಥವನ್ನು ಕಲಿತುಕೊಂಡು ಪೂರ್ವಭಾಗೆಯೊಡನೆ ಕೂಡಿ ಚರಿಸುತ್ತಿಹರು. ನಿಮ್ಮನಱಿವ ಮದಕರಿಗಲ್ಲದೆ–ಅಲ್ಲಿ ಹೇಳಿರುವ ಸೂತ್ರಾರ್ಥ ಸ್ವರೂಪಾರ್ಥ ಸಂಬಂಧಾರ್ಥ ಚಿತ್ರಾರ್ಥ ಪ್ರಣವಾರ್ಥ ಭಾವಾರ್ಥಂಗಳನು ಕಲಿತುಕೊಂಡು ಉತ್ತರಭಾಗೆಯೊಡನೆ ಕೂಡಿ ಚರಿಸುವಂಥದು ಚಿತ್ತಿನ ಚಿದಹಂಕಾರ ಚಿದ್ಭೂಷಣ ಸ್ವರೂಪರಾದ ಶಿವಶರಣಂಗೆ ಅರಿಯಬರುವುದಲ್ಲದೆ. [ಕಱಿ ಬಲ್ಲುದೆ–] ಅಜಪಶುಗಳಿಗೆ ಸಮಾನವಾದ ವಿಪ್ರರುಗಳು ಬಲ್ಲರೆ ? ಅರಿಯರು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

....

೧–೧ ಮ (ಕ, ಗ)

II– –

1–1 ವಿಂ (ಚ, ಜ), 2–2 ಕಬ್ಬಿನ ಉಲಿವ (ಚ, ಜ), 3–3 ತೋಂ(ಚ, ಜ), 4–4 ತೆಱನನಱೆಯದೆ ತನಿರಸದ(ಚ, ಜ)
5–5 ಮೇದುವು (ಚ, ಜ), 6–6 ದ (ಚ, ಜ), 7–7 ಯ (ಚ, ಜ)

....

ಕುಱಿವಿಂಡು ಕಬ್ಬಿನ ಉಲಿವ ತೋಂಟವ ಹೊಕ್ಕು ತೆಱನನಱೆಯದೆ–ಭೂಸುರರೆಂಬ ಕಿರಿಪಶುಗಳು ಪರಬ್ರಹ್ಮಪ್ರಯೋಜನವಾದ ವೇದಾಗಮಶಾಸ್ತ್ರಂಗಳೆಂಬ ಕ್ಷೇತ್ರವನು ಪ್ರವೇಶವಾಗಿ ಶಿವಾಗಮಂಗಳ ಪ್ರಕಾರವನು ತಿಳಿಯದೆ, ತನಿರಸದ ಹೊಱಗಣೆಲೆಯನೆ ಮೇದವು–ತಣ್ಣಿತ್ತಾದ ಸಂಸಾರ ವಿಷಯಸಾರವನುಳ್ಳ ಬಾಹಿರದ ಪರಶಾಸ್ತ್ರಗಳೆಂಬ ಪರ್ಣವ ನೋಡಿ ವೇದಿಸಿದರು. ನಿಮ್ಮನಱಿದ ಮದಕರಿಯಲ್ಲದೆ–ನಿಮ್ಮ ಸ್ವರೂಪವನು ತಿಳಿದ ಚಿತ್ತಿನ ಮಹದಹಂಕಾರ ಭೂಷಣವಾದ ಶಿವಶರಣನಲ್ಲದೆ, ಕುಱಿಬಲ್ಲುದೆ ಕೂಡಲಸಂಗಮದೇವಾ–ಕರಣಂಗಳ ಪ್ರಕೃತಿಯನುಳ್ಳ ಜೀವರುಗಳು ಬಲ್ಲರೆ ಎಲೆ ಲಿಂಗವೆ.

• ಮತ್ತಂ, ಕರಣಂಗಳ ಪ್ರಕೃತಿ ಸ್ವಭಾವವನುಳ್ಳ ಜೀವರುಗಳು ಶಿವಾನುಭಾವವೆಂಬ ಇನಿದಂಡ ಕ್ಷೇತ್ರವನು ಪ್ರವೇಶವಾಗಿ ಶಿವಾನುಭಾವದ ವರ್ಮವನು ತಿಳಿಯದೆ, ತಣ್ಣಿತ್ತಾದ ಕಾಮುಕಮಾರ್ಗರಕ್ತವಿದ್ಯೆ ಶೃಂಗಾರಾದಿ ನವರಸಯುಕ್ತವಾದ ಬಾಹಿರದ ಪರಶಾಸ್ತ್ರಂಗಳೆಂಬ ಪರ್ಣವನೋದಿ ಅರಿದು ವೇದಿಸಿದರು. ನಿಮ್ಮ ತ್ರಿವಿಧಲಿಂಗಾನುಭಾವಿಗಳ ವರ್ಮವನು ತಿಳಿವ ಮಹಾಜ್ಞಾನಿಯಲ್ಲದೆ ಕರಣಂಗಳ ಪ್ರಕೃತಿಯನುಳ್ಳ ಜೀವರುಗಳರಿಯರೆಂಬುದರ್ಥ.

೫೯೯

ಪ್ರಣವನುಚ್ಚರಿಸುವ ಅಪ್ರಮಾಣಿಕರೆಲ್ಲರೂ ಪ್ರಣವ[1]ಮಂತ್ರವ[1]ನೋದಿ ಮಂತ್ರಾರ್ಥವನಜಿಯರು. ಪ್ರಣವ "ಓಂ ನಮಃ ಶಿವಾಯ", ಪ್ರಣವ "ಓಂ ನಮಃ ಶಿವಾಯ" ಎಂದವು ಶ್ರುತ್ರಿಗಳೆಲ್ಲ; ಪ್ರಣವ "ಭರ್ಗೋ ದೇವಾ" ಎಂದವು ಶ್ರುತ್ರಿಗಳೆಲ್ಲ! ಕೂಡಲಸಂಗಯ್ಯನನಜಿಯದ ದ್ವಿಜರೆಲ್ಲ ಭ್ರಮಿತರು!

I –

ಪ್ರಣವನುಚ್ಚರಿಸುವ: ಪ್ರಣವ–ಗಾಯತ್ರಿಪ್ರಣವವನ್ನು, ಉಚ್ಚರಿಸುವ–ಜಪಿಸುವ, ಅಪ್ರಮಾಣಿಕರೆಲ್ಲರೂ–ಪ್ರಮಾಣಹೀನರಾದ ವಿಪ್ರುರುಗಳೆಲ್ಲರೂ, ಪ್ರಣವ–ಗಾಯತ್ರಿ ಪ್ರಣವದ [೧]ಮಂತ್ರವ, ಓದಿ–ಜಪಿಸಿ, ಮಂತ್ರಾರ್ಥವನಜಿಯರು–ಗಾಯತ್ರಿ ಮಂತ್ರದ ಅನ್ವಯಂಗಳನು ತಿಳಿಯರು. ಪ್ರಣವ_ಗಾಯಿತ್ರಿ ಮಂತ್ರವು, ಓಂ–ಪ್ರಣವಸ್ವರೂಪವಾದ ಪರ ಬ್ರಹ್ಮವು, ಶಿವಾಯ–ಶಿವಂಗೋಸ್ಕರ, ನಮಃ–ನಮಸ್ಕಾರವು, ಎಂದವು–ಹೀಗೆಂದು ಸ್ತೋತ್ರವ ಮಾಡುತ್ತಿಹವು. ಶ್ರುತಿಗಳೆಲ್ಲ–ನಿಮಗೆ ಶಿರೋಭಾಗಿಯಾದ ಮೂವತ್ತೆರಡುಪನಿಷತ್ವಾಕ್ಯಂಗಳಷ್ಟೂ ಪ್ರಣವ–ಗಾಯಿತ್ರಿ ಮಂತ್ರವು, ಓಂ–ಪ್ರಣವಸ್ವರೂಪವಾದ ಪರಬ್ರಹ್ಮಹವು. ಶಿವಾಯ_ಶಿವಂಗೋಸ್ಕರ, ನಮಃ–ನಮಸ್ಕಾರವು, ಎಂದವು–ಹೀಗೆಂದು ಹೇಳುತ್ತಿಹವು. ಶ್ರುತಿಗಳೆಲ್ಲ–ಮೂವತ್ತೆರಡುಪನಿಷದ್ವಾಕ್ಯಂಗಳಷ್ಟೂ, ಪ್ರಣವ–ಗಾಯಿತ್ರಿ ಮಂತ್ರವು, ಭರ್ಗೋದೇವಾ ಎಂದವು: ಭರ್ಗ–ರಕ್ಷಕನಾದಂಥ, ದೇವಾ–ದಿವ್ಯಲಾವಣ್ಯಕಾಂತಿಯನುಳ್ಳ ಪರಶಿವ ಲಿಂಗವು, ಎಂದವು–ಹೀಂಗೆಂದು ಹೇಳುತ್ತಿಹವು. ಶ್ರುತಿಗಳಲ್ಲ–ಉಪನಿಷದ್ವಾಕ್ಯಂಗಳಷ್ಟೂ, ಕೂಡಲಸಂಗಯ್ಯನ ನಜಿಯದ–ಪರಶಿವಲಿಂಗವನ್ನು ತಿಳಿಯದ, ದ್ವಿಜರೆಲ್ಲ–ವಿಪ್ರುರುಗಳಷ್ಟೂ, ಭ್ರಮಿತರು–ಜೀವಭಾವದ ಭ್ರಮಣೆಗೊಳಗಾದಂಥವರುಗಳು.

....

೧ + ಅರ್ಥವ (ಕ, ಗ)

II– –

1–1 ಮಂತ್ರಾರ್ಥವ (ಚ,ಜ).

....

ಪ್ರಣವನುಚ್ಚರಿಸುವ ಅಪ್ರಮಾಣಿಕರೆಲ್ಲರೂ ಪ್ರಣವಮಂತ್ರಾರ್ಥವನೋದಿ ಮಂತ್ರಾರ್ಥವನಜಿಯರು–ವೇದವನೊಚಿಸುವ ಪ್ರಮಾಣಹೀನ[೨]ರೆಲ್ಲರೂ[೨] ತಾರಕ [೩]ಮಂತ್ರವನು[೩] ಪಠಿಸಿ ಪ್ರಣವ ಸಂಚಿತಕ್ರೀಯನು ತಿಳಿಯರು. ಮುಂದಕ್ಕೆ ಕಾಣಬಂದರ್ಥ.

....

೨–೨ x (ಜ). ೩–೩ ಮಂತ್ರಾಣಾಯನವನು(ಚ).

೬೦೦

ವೇದವನೋದಿದಡೇನು? ಶಾಸ್ತ್ರವ ಕೇಳಿದಡೇನಯ್ಯ? ಜಪವ ಮಾಡಿದಡೇನು? ತಪವ ಮಾಡಿದಡೇನಯ್ಯ? ಏನು ಮಾಡಿದಡೇನು ನಮ್ಮ ಕೂಡಲಸಂಗಯ್ಯನ ಮನಮುಟ್ಟದನ್ನಕ್ಕ?

I– –

ವೇದವನೋದಿದಡೇನು?_ಋಗ್ವೇದ ಯಜುರ್ವೇದ ಸಾಮವೇದ ಅಥರ್ವಣವೆಂಬ ನಾಲ್ಕು ವೇದಂಗಳನು ಓದಿದರೇನು, ಪಾರಂಗತವಾಗಿ ಪಠಿಸಿದರೇನು? ಶಾಸ್ತ್ರವ ಕೇಳಿದಡೇನಯ್ಯ?–ಅನಂತಕ ಮೊದಲಾದ ಹದಿನಾರು ಧರ್ಮಶಾಸ್ತ್ರಂಗಳನು ಕೇಳಿದಡೇನಯ್ಯ. ಶ್ರುತಿಗುರುಗಳ ಮುಖದಿಂದ ಬೆಸಗೊಂಡಾಲಿಸಿದರೇನಯ್ಯ?. ಜಪವ ಮಾಡಿದಡೇನು: ಜಪವ–ಪವಳ ಪದ್ಮಾಕ್ಷಿ ಪುತ್ರಜೀವಿ ಶಂಖ ಮೌಕ್ತಿಕ ಕುಶಗ್ರಂಥಿ ಮೊದಲಾದವನ್ನು ಸರಗೊಳಿಸಿ ಮಾಡಿದಡೇನು?–ಅನುಗೈದರೇನು? ತಪವ ಮಾಡಿದಡೇನಯ್ಯ: ತಪವ–ಊರು ತೊರೆದು ಘೋರಾರಣ್ಯಕ್ಕೆ ಹೋಗಿ ಪವನಾಹಾರ ಪರ್ಣಾಹಾರ ಜಲಾಹಾರ ಫಲಾಹಾರ ಶಿಲಾಚೂರ್ಣ ಉಕ್ಕಿನಚೂರ್ಣ ಭಸ್ಮಚೂರ್ಣ ಮೊದಲಾದುವನ್ನು ಕೊಂಡು ಕೋಡುಗಲ್ಲಮೇಲೆ ಪಂಚಾಗ್ನಿಯ ಮಧ್ಯದಲ್ಲಿ ಏಕಪಾದಸ್ಥಿತನಾಗಿ ಮಹಾ ಉಗ್ರ ತಪಸ್ಸನ್ನು, ಮಾಡಿದಡೇನಯ್ಯ–ಅನುಗೈದರೇನಯ್ಯ. ಏನುಮಾಡಿದಡೇನು–ಯಮನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನಧಾರಣ ಸಮಾಧಿ ಎಂಬ ಅಷ್ಟಾಂಗಯೋಗವನ್ನು ಅನುಗೈದರೇನು, ನಮ್ಮ ಕೂಡಲಸಂಗಯ್ಯನ–ನಮ್ಮ ಪರಶಿವಲಿಂಗವನ್ನು, ಮನ ಮುಟ್ಟದನ್ನಕ್ಕ–ಮನಶುದ್ಧವಾಗಿ ಆರಾಧಿಸಬೇಕು; ಆರಾಧಿ¹ಸದ¹ ಪರಿಯಂತರವು.

....

೧–೧ ಸುವ (ಕ).

೬೦೧

ನೀವು ಹಿರಿಯರೆಂಬಿರಿ ಕರ್ಮಿಗಳು, ನೀವೆಲ್ಲ ಕೇಳಿರೇ. ನಿಮ್ಮ ವೇದಶಾಸ್ತ್ರಂಗಳು ಆರನು ಹೊಗಳುತ್ತಿದ್ದಾವು? 'ದ್ಯಾವಾ ಭೂಮೀ ಜನಯನ್ ದೇವ ಏಕಯೇವ' ಎಂದು ಶ್ರುತಿಸ್ಮೃತಿಗಳು ಸಾಱುತ್ತಿದ್ದಾವು.[1] 'ವರ್ಣಾನಾಂ ಬ್ರಾಹ್ಮಣೋ ಗುರುಃ' ಎಂಬುವುದು ಹುಸಿ. 'ವರ್ಣಾನಾಂ ಗುರುಃ' ನಮ್ಮ ಕೂಡಲಸಂಗನ ಶರಣರು.

I– –

ನೀವು ಹಿರಿಯರೆಂಬಿರಿ: ನೀವು–ವಿಪ್ರರು, ಹಿರಿಯರೆಂಬಿರಿ–ಜ್ಞಾನಿಗಳೆಂದು ಹೇಳಿಕೊಂಬುವಿರಿ, ಕರ್ಮಿಗಳು_ಪಾಪಾತ್ಮರುಗಳು, ನೀವೆಲ್ಲ–ವಿಪ್ರರುಗಳೆಲ್ಲರು, ಕೇಳಿರೇ–ಆಲಿಸಿರೇ, [ನಿಮ್ಮ ವೇದಶಾಸ್ತ್ರಂಗಳು–] ನೀವು ವಿಪ್ರರುಗಳು ಓದುವಂಥ ವೇದಶಾಸ್ತ್ರಗಮಪುರಾಣಂಗಳು, ಆರನು ಹೊಗಳುತ್ತಿದ್ದಾವು–ಆರನು ಕೊಂಡಾಡುತಿದ್ದಾವು, ದ್ಯಾವಾ–ಆಕಾಶವು, ಭೂಮೀ–ಪೃಥ್ವಿಯು, ಜನಯನ್–ಭೂಮಿ ಆಕಾಶದ ಮಧ್ಯದಲ್ಲಿ ಹುಟ್ಟಲ್ಪಟ್ಟಂಥ ಸಮಸ್ತ ಪ್ರಾಣಿಗಳಿಗೆ ಆಹಾರ ವ್ಯವಹಾರ ಭೋಗಭುಕ್ತ್ಯಾದಿಗಳ ಕೊಟ್ಟು ¹ಸಂ¹ರಕ್ಷಣ್ಯವ ಮಾಡುವುದಕ್ಕೆ ಕರ್ತನಾದಂಥ, ದೇವ–ದಿವ್ಯ

[೨]ಲಾವಣ್ಯ[೨]ಕಾಂತಿಯನುಳ್ಳ ಪರಶಿವಲಿಂಗವು, ಏಕಯೇವ–ಒಬ್ಬನೇ ಕರ್ತನು, ಎಂದು–ಹೀಂಗೆಂದು, ಶ್ರುತಿ–ಮೂವತ್ತೆರಡುಪನಿಷದ್ವಾಕ್ಯಂಗಳು, ಸ್ಮೃತಿಗಳು–ಹತ್ತೊಂಬತ್ತು ಮನವಾಕ್ಯಂಗಳು, ಸಾರುತ್ತಿ ದ್ದಾವು–ಡಂಗುರಿಸುತ್ತಿದ್ದಾವು.

'ವರ್ಣಾನಾಂ ಬ್ರಾಹ್ಮಣೋ ಗುರುಃ' ಎಂಬುದು–ಸಮಸ್ತವರ್ಣಂಗಳಿಗೆ ನಾವೇ ಗುರುಗಳು ಸಮಸ್ತರು ನಮ್ಮ ಶಿಷ್ಯರೆಂದು ಹೇಳಿಕೊಂಬುವಂಥದು, ಹುಸಿ–ಅನೃತವು. ವರ್ಣಾನಾಂ ಗುರುಃ ನಮ್ಮ ಕೂಡಲಸಂಗನ ಶರಣರು–ನೂರಾವೊಂದು ಕುಲ ಹದಿನೆಂಟು ಜಾತಿಗಳೊಳಗಾವ ಜಾತಿಯವನಾದರೇನು? ಜ್ಞಾನೋದಯವಾಗಿ ಗುರೂಪಾವಸ್ಥೆಯ ಮಾಡಿ ಅಡಿಗೆರಗಿ ಬಂದಂಥ ಶಿಷ್ಯರುಗಳಿಗೆ ಅಂಗಕ್ಕೆ ಲಿಂಗೋಪದೇಶ ಮನಕ್ಕೆ ಮಂತ್ರೋಪದೇಶವನ್ನು ಕರುಣಿಸಿಕೊಟ್ಟು ತಮ್ಮಂತೆ ಮಾಡುತಿರ್ದ ಕಾರಣ ಸಮಸ್ತ ವರ್ಣಂಗಳಿಗೂ, ನಮ್ಮ ಕೂಡಲ ಸಂಗನ ಶರಣರೇ–ನಮ್ಮ ಜಂಗಮಮೂರ್ತಿಗಳೇ, ಗುರುವು–ಆಚಾರ್ಯಸ್ವರೂಪಿಗಳು.

....

೧–೧ x (ಗ), ೨–೨ ಕಾಯ(ಗ)

V –

1 + ಯಜ್ಞೇ ವಿಪ್ರಾ: ಮಾಂಸಂ ಖಾಂತಿ ತೇಷಾಂ ಶಿಷ್ಯಾ ಆಲಿಂಗಿನಃ । ತತ್ಕಾರಣಮಲಿಂಗಿನಾಂ (ಪ).

....

ಯಜ್ಞೇ–ಯಜ್ಞವ ಮಾಡುವ ವ್ಯಾಜದಲ್ಲಿ, ವಿಪ್ರಾ–ವೇದಾಭ್ಯಾಸಿಗಳು, ಮಾಸಂ–ಪಿಸಿತವನು ಖಾಂತಿ–ತಿನ್ನುತಿಹರು, ತೇಷಾಂ–ಆ ವಿಪ್ರರ, ಶಿಷ್ಯಾ–ಅಂತೇವಾಸಿಗಳು, ಅಲಿಂಗಿನಃ–ಭವಿಗಳು, ತತ್ಕಾರಣಂ–ಅದು ನಿಮಿತ್ತವಾಗಿ, ಅಲಿಂಗಿನಾಂ–ಭವಿಗಳಾದಂಥ, ವರ್ಣಾನಾಂ ವರ್ಣವುಳ್ಳವರಿಗೆ, ಬ್ರಾಹ್ಮಣಃ–ವಿಪ್ರನೇ, ಗುರು–ಆಚಾರ್ಯನು.

೬೦೨

ನಿಜಭಾವ ಲಕ್ಷ್ಮೀ ಸರಸ್ವತಿ ಒಲಿದಡೆ ಕುಲವನಱಿಸಲದೇಕೆ? ಆ ದೇವನೊಲಿದ ಭಕ್ತಂಗೆ ಇನ್ನಾವ ಮಂತ್ರವದೇಕೆ[1]? ಕಾಮಧೇನು ಮನೆಯಲಿರಲು ಬೇಱಿ ಹಯನವ[2]ನಱಿ[2] ಸಲದೇಕೆ? ಮೋಹವುಳ್ಳ ಶಾವಿನಲ್ಲಿ ಲಜ್ಜೆಯನಱಿಸಲದೇಕೆ[1] ? ಮಹಾದಾನಿ ಕೂಡಲಸಂಗಯ್ಯನೊಲಿದು ಮಾದಾರಚೆನ್ನಯ್ಯನ ಮನೆಯಲುಂಡ! ವೇದವನೋದಿದವರು ಲಿಂಗವನೊಲಿಸಿ[3]ದುದ[3] ತೋಱಿರೋ!

....

2–2 ಬಯ (ಕ).

ನಿಜಭಾವ; [ನಿಜ–] ತನ್ನ ಭಕ್ತರುಗಳ ತನುಮನಾತ್ಮಂಗಳಲ್ಲಿ ಇಷ್ಟಪ್ರಾಣಭಾವಲಿಂಗವಾಗಿ ನೆಲೆಗೊಂಡಿರುವಂಥದೇ ನಿಜಯಥಾರ್ಥವಾದ, ಭಾವ–ಸ್ವಭಾವವು, ಲಕ್ಷ್ಮೀ–ಲಕ್ಷೀಸಂಬಂಧವಾದ ಐಶ್ವರ್ಯವು, ಸರಸ್ವತಿ–ಸರಸ್ವತಿಸಂಬಂಧವಾದ ವಿದ್ಯೆಯು, ಒಲಿದಡೆ–ವಶವಾದರೆ,

ಕುಲವನಱಸಲದೇಕೆ?–ಆ ಜಾತಿಯವರು ಈ ಜಾತಿಯವ ರೆಂದು ಕುಲಸೂತಕವನ್ನು ಹುಡುಕುವುದೇನು ಕಾರಣಕ್ಕೆ? ಎಂತಪ್ಪ ಕ್ಷೀಣ ಕುಲದವನಾದರೇನು ಐಶ್ವರ್ಯ ಸಂಪನ್ನನಾಗಿದ್ದಲ್ಲಿ ಅವನಾವಪರಿಯಲಾದರೂ ಆಶ್ರಯಿಸಿ ದ್ರವ್ಯವನ್ನು ತೆಗೆದುಕೊಳ್ಳಬೇಕಲ್ಲದೆ ಕುಲಸೂತಕವ ನೋಡಿ ಬಿಡುತ್ತೈದಾರೆ? ಇಲ್ಲವು, ಹಾಂಗೆ, ಎಂತಪ್ಪ ಕ್ಷೀಣಕುಲದವನಾದರೂ ಗುರುಕಾರುಣ್ಯವನ್ನು ಹಡದು ಲಿಂಗಂಗಸಂಬಂಧಿಯಾಗಿ ಭಕ್ತಿಯನ್ನು ಮಾಡುತ್ತಿದ್ದಲ್ಲಿ ಅವನನ್ನು ಆಶ್ರಯಿಸಿ ಅವನು ವಿದ್ವಾಂಸನಾಗಿದ್ದಲ್ಲಿ ಅವನ ವಿದ್ಯೆಯನ್ನು ತೆಗೆದುಕೊಳಬೇಕಲ್ಲದೆ ಕುಲಸೂತಕ ನೋಡಿ ಬಿಡುವುದಕ್ಕಾದೀತೆ? ಆಗದು.

ಆ ದೇವ–ಆ ಪರಮೇಶ್ವರನು, ಒಲಿದ–ಕೃಪೆಯಾದ, ಭಕ್ತಂತೆ–ಶಿವಭಕ್ತಂಗ, ಇನ್ನಾವ ಮಂತ್ರವದೇಕೆ?–ಇಂದ್ರಮಂತ್ರ ಚಂದ್ರಮಂತ್ರ ಗೋಪಾಲಮಂತ್ರ ಮೊದಲಾದುವನ್ನು ಉಚ್ಚರಿಸುವುದೇನು ಕಾರಣಕ್ಕೆ? ಕಾಮಧೇನು–ಕಾಮಿಸಿದವರಿಗೆ ತನ್ನ ಪಂಚಕುಚಗಳಿಂದ ಪಂಚಾಮೃತವನ್ನು ಕರೆಯಲ್ಪಟ್ಟ ಸುರಧೇನು, ಮನೆಯಲ್ಲಿ–ತನ್ನ ಮಂದಿರದಲ್ಲಿ, ಇರಲು–ಉಂಟಾಗಿರಲು, ಬೇಜೆ ಹಯನವ[೧]ನಱ[೧]ಸಲದೇಕೆ?–ಮತ್ತೊಂದಾಕಳನ ಕೊಂಡು ಕೊಂಡುಬಂದು ಮಡ್ಡಿ ಮುರುವನ್ನು ಹಾಕಿ ಮೈಕೈಯನ್ನು ತಡಹಿ ಹಾಲನ್ನು ಕರೆದುಕೊಂಡನುಭವಿಸಬೇಕೆಂಬುವುದೇನು ಕಾರಣಕ್ಕೆ, ಮೋಹವುಳ್ಳ ಠಾವಿನಲ್ಲಿ ಲಜ್ಜೆಯನಱಸಲದೇಕೆ?–ಪುರುಷನಿಗೆ ಸ್ತ್ರೀಯಳೊಲಿದು ಸ್ತ್ರೀಯಳಿಗೆ ಪುರುಷನೊಲಿದು ಪುರುಷನ ಕಾಮಕಲಾದೃಷ್ಟಿ ಸ್ತ್ರೀಯಳ ಮೇಲೆ ಬಿದ್ದು ಸ್ತ್ರೀಯಳ ಕಾಮಕಲಾದೃಷ್ಟಿ ಪುರುಷನ ಮೇಲೆ ಬಿದ್ದು ಏಕಾಂತಸ್ಥಾನದಲ್ಲಿ ರತಿಕೂಟವನ್ನು ಕೂಡುವಂಥ ವೇಳೆಯಲ್ಲಿ ನನ್ನ ಅವಯವಂಗಳ ಸ್ತ್ರೀಯಳು ಕಂಡಾಳು ಸ್ತ್ರೀಯಳ ಅವಯವಂಗಳ ನಾ ಕಂಡೇನೆಂದು ಲಜ್ಜೆ ನಾಚಿಕೆಯನೋಡಿ ಬಿಡುತ್ತೈದಾರೆ? ಇಲ್ಲವು.

ಮಹಾ–ಭಕ್ತರುಗಳಿಗೆ ಮಹದಾನಂದ ಸುಖವನ್ನು, ದಾನಿ–ಕರುಣಿಸಿಕೊಡಲ್ಪಟ್ಟಂಥ, ಕೂಡಲ ಸಂಗಯ್ಯನು–ಪರಶಿವಲಿಂಗವು, ಒಲಿದು–ಕೃಪೆಯಾಗಿ, ಮಾದರಚೆನ್ನಯ್ಯನ–ಮಾದಾರಚೆನ್ನಯ್ಯನೆಂಬ ಸದ್ಭಕ್ತನ, ಮನೆಯಲ್ಲಿ–ಭಕ್ತಿಮಂದಿರದಲ್ಲಿ, ಉಂಡ!–ಅನುಭವಿಸಿದ ವೇದವನೋದಿದವರು–ನಾಲ್ಕು ವೇದಂಗಳು ಪಾರಾಂಗತವಾಗಿ ಪಠಿಸಿದಂಥವರುಗಳು, ಲಿಂಗವನೊಲಿಸಿದುದ–ಪರಶಿವಲಿಂಗವ ಮಾಡಿಕೊಂಡ[೨]ಂಥದನು.[೨] ತೋಱರೂ ? –ಕಾಣಿಸಿ[೩]ಕೊ[೩]ಡಿರೋ.

....

೧–೧ ಬಯ (ಕ). ೨–೨ ಥಾರವನ್ನು (ಕ). ೩–೩ ಕೊಂ (ಕ)

II –

1+ ಯೋ (ಚ, ಜ), 3 x 3(ಚ,ಜ)

....

ಹಿಂದಕ್ಕೆ ಕಾಣಬಂರ್ಥ, ಕಾಮಧೇನು ಮನೆಯಲಿರಲು ಬೇಜೆ ಹಯನನಱಸಲೇಕೆ?– ಮಹಾನುಭಾವ ಗುರುಮೂರ್ತಿಗಳು ಸ್ಥಳಕುಳಂಗಳೆಂಬ ಗೃಹದಲ್ಲಿ ಇರುತಿರಲು ಮತ್ತೆ, ಸಕಲಶಾಸ್ತ್ರಜ್ಞಾನವನು ಹುಡುಕುವುದೇಕೆ? ಮೋಹವುಳ್ಳ ಠಾವಿನಲ್ಲಿ ಲಜ್ಜೆಯನಱಸಲೇಕಯ್ಯ–ಭಕ್ತಿಯ ಮಮಕಾರವುಳ್ಳ ಶಿವಾನುಭಾವಸ್ಥಾನದಲ್ಲಿ ಪ್ರಾಣಾಭಿಮಾನವ ಹುಡುಕುವುದೇತಕಯ್ಯ? ಮುಂದಕ್ಕೆ ಕಾಣಬಂದರ್ಥ.

೬೦೩

ಆದ್ಯರಿಗಲ್ಲದೆ ವೇದ್ಯವಾಗದು: ಮಾಣಿಭೋ, ಮಾಣಿಭೋ! ಶಿವಭಕ್ತನೇ ಕುಲಜ. [1][ಕೈವ[2]ರ್ತಿ[3] ನ ಗರ್ಭಸಂಭೂತೋ ಮಾರ್ಕಂಡೇಯ ಮಹಾಮುನಿಃ । ತಪಸಾ ಜಾಯತೇ ವಿಪ್ರಸ್ತಸ್ಮಾದ್ಭೇದಂ ನಕಾರಯೇತ್।][2] ಜಾತನಲ್ಲ ಅಜಾತನಲ್ಲ : ಕೂಡಲಸಂಗನ ಶರಣನು ನಿಸ್ಸೀಮಯ್ಯಾ!

....

1–1 ಗ್ರಂಥ : ಕೈವರ್ತತೇ ಗರ್ಭಸಂಭವತೇ ಮಾರ್ಕಂಡೇಯ ಮಹಾಮುನೇ । ತಪಸೋ ಜಾಯತೇ ವಿಪ್ರತಸ್ಮಾಜ್ವಾತಿಭೇದ ನ ಕಾಣಾತ್ ಃ (ಕ, ಗ)

I –

ಆದ್ಯರಿಗಲ್ಲದೆ–ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆವಂಥದು ದಾಸಿದೇವ ಸಿರಿಯಾಳಸೆಟ್ಟಿ ಸಿಂಧುಬಲ್ಲಾಳರಾಯ ಮೊದಲಾದರುವತ್ತುಮೂರು ಪುರಾತರಿಗಲ್ಲದೆ, ವೇದ್ಯವಾಗದು–ಮಿಕ್ಕಿನ ಆಶಾಲಾಂಛನ ಉಪಾಧಿಕರುಗಳಿಗೆ ದೊರಕೊಳ್ಳದು. ಮಾಣಿಭೋ, ಮಾಣಿಭೋ!–ನಾವು ಭಕ್ತಿಯನ್ನು ಮಾಢಿ ಮುಕ್ತಿಯನ್ನು ಹಡೆಯುತ್ಯೈದೇವಿಯೆಂದು ಹೇಳಿಕೊಂಡುವಂಥದನು ಬಿಡಿರೋ ಬಿಡಿರೋ ಶಿವಭಕ್ತನೇ–ಗುರುಕಾರುಣ್ಯವನ್ನು ಹಡದು ಲಿಂಗಾಂಗಸಂಬಂಧಿಯಾಗಿ ಆಚರಿಸುವಂಥ ಹರಭಕ್ತನೇ, ಕುಲಜ–ಅವನೇ ಕುಲಶ್ರೇಷ್ಠನು.

ಗ್ರಂಥ : ಕೈವರ್ತತೆ–ಕಬ್ಬಿಲಿಗಿತ್ತಿಯೆಂಬ ಸ್ತ್ರೀಯಳ, ಗರ್ಭ–ಕುಕ್ಷಿಯಲ್ಲಿ, ಸಂಭವತೇ–ಹುಟ್ಟಿದಂಥ, ಮಾರ್ಕಂಡೇಯ ಮಹಾಮುನೇ–ಮಾರ್ಕಂಡೇಯನೆಂಬ ದೊಡ್ಡ ಋಷೀಶ್ವರನು, ತಪಸೋ ಜಾಯತೇ–ತಪಸ್ಸನ್ನು ಆಚರಿಸುವುದರಿಂದೆ, ವಿಪ್ರ–ಬ್ರಾಹ್ಮಣ ಕುಲವು, ಜಾಯತೇ–ಹುಟ್ಟಿತ್ತು ತಸ್ಮಾತ್–ಅದು ಕಾರಣವಾಗಿ, ಜಾತಿಭೇದ ನಕಾರಣಾತ್ :[ಜಾತಿಭೇದ–] ಜಾತಿಹೆಚ್ಚು ಕುಲ ಹೆಚ್ಚೆಂದು ಹೇಳಿಕೊಂಬುವಂಥದು, ನಕಾರಣಾತ್–ಹುಡುಕಲಾಗದು. ಜಾತನಲ್ಲ–ತಂದೆ[ಯ] ಶುಕ್ಲ ತಾಯಿ[ಯ] ಶೋಣಿತಗಳೆರಡೂ ಗಟ್ಟಿಗೊಂಡು ಬ್ರಹ್ಮನುತ್ಯಕ್ಕೊಳಗಾಗಿ ಹುಟ್ಟಿಬರುವಾತನಲ್ಲವು. ಯೋನಿಜನಲ್ಲ. ಅಜಾತನಲ್ಲ–೧ಅಥವಾ೧ ಹುಟ್ಟಿಬಂದರೂ ಶ್ರೀಗುರುನಾಥನ ಕರಗರ್ಭದಲ್ಲಿ ಶಿವಲಿಂಗಪ್ರಾಣಿ ಶಿವಮಂತ್ರಶರೀರಿಯಾಗಿ ಹುಟ್ಟಿಬರುತ್ತಿಹನು, ಯೋನಿಸಂಭವನಲ್ಲ; ಕೂಡಲಸಂಗನ ಶರಣನು–ಶಿವನ ಚಿತ್ರಭಾಂಗ ಸ್ವರೂಪನಾದ ಶಿವಶರಣನು, ನಿಸ್ಸೀಮನಯ್ಯಾ–ಮೇರೆರಹಿತನಯ್ಯಾ.

....

೧–೧ ಆದವ (ಕ).

III –

2–2 ರ್ತಕಿ (ಟ, ಡ), ತ (ಟ, ಡ).

....

ಕೈವರ್ತಕಿ–ಮಾತಂಗಿಯು, ಗರ್ಭ–ಬಸುರಲ್ಲಿ, ಸಂಭೂತ–ಹುಟ್ಟಿದ, ಮಾರ್ಕಂಡೇಯ–ಮೃಕಂಡುವಿನ ಮಗನು.

೬೦೪

ಎಲ್ಲರಿಗಿಂದಲೂ ಎಮ್ಮವರಧಿಕರು, ಪಾಕವ ಮಾಡುವ ಭಾಂಡ ಸೊಣಗನ ಡೊವಿಗೆಯಯ್ಯ, ಕೆರಹಿನಲ್ಲಿ ಮುಚ್ಚುವುದು ಆವಾಗಮವಯ್ಯ? ಕೂಡಲಸಂಗಮದೇವಾ, ನಿಮ್ಮ ವಚನವಿಂತೆಂದುದು ಭವಿ ನೋಡಿದವಾಗರ ಲಿಂಗಾರ್ಪಿತವಾಗದೆಂದು.

I -

ಎಲ್ಲರಿಗಿಂದಲೂ ಎಮ್ಮವರಧಿಕರು : ಎಲ್ಲರಿಗಿಂದಲೂ–ಬ್ರಹ್ಮ ವಿಷ್ಣು, ಮೊದಲಾದ ಸಮಸ್ತ ದೇವದಾನವ ಮಾನವರಿಗಿಂದಲೂ, ಎಮ್ಮವರು–ನಮ್ಮ [೧]ಸಂಬಂಧವಾದ[೧] ಶಿವಶರಣರು, ಅಧಿಕರು–ಶ್ರೇಷ್ಠರುಗಳು, ಪಾಕವ ಮಾಡುವ–ಅಡಿಗೆಯ ಮಾಡುವ, ಭಾಂಡ–ಗಡಿಗೆಯು, ಸೊಣಗನ–ಶುನಿಯ, ಡೊವಿಗೆಯಯ್ಯ–ತಲೆಯೋಡಯ್ಯ. ಕೆರಹಿನಲ್ಲಿ–ಪಾದರಕ್ಷೆಯಲ್ಲಿ, ಮುಚ್ಚುವುದು–ಬಾಸಣಿಸುವುದು, ಆವಾಗಮವಯ್ಯ–ಇದು ಆವಾಗಮವೆಂದು ಕೇಳಿದಲ್ಲಿ ಎಲ್ಲಕ್ಕೂ ಮಿಕ್ಕಿದಾಗಮವಯ್ಯ ಆಗಮಂಗಳಿಗೆ ಮೀರಿದಂಥ ನಡಾವಳಿಯಯ್. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ. ನಿಮ್ಮ ವಚನ–ನಿಮ್ಮ ವ್ಯಾಕ್ಯಾನುಭಾವವು, ಇಂತೆಂದುದು–ಹೇಂಗೆಂದು ಹೇಳುತ್ತಿಹುದು. ಭವಿ ನೋಡಿದ–ಭವಿಜನಾತ್ಮನಾದ ಸಾಮವೇ[೨]ದಿ[೨] ಕಂಡಂಥವಾಗರವು–ಪಾಕವು, ಲಿಂಗಾರ್ಪಿತವಾಗದೆಂದು–ಲಿಂಗಕ್ಕೆ ಸಮರ್ಪನೆಯಾಗದೆನುತ್ತ.

....

೧–೧ X (ಗ), ೨–೨ ದಿಯ (ಗ)

III -

ಸೊಣಗನ ಡೊವಿಗೆ–ನಾಯ ತಲೆಯೋಡು.

೬೦೫

ಅಯ್ಯಾ ನಿಮ್ಮ ಶರಣರ ಚಮ್ಮಾವುಗೆಗೆ ಪೃಥ್ವಿ ಸಮಬಾರದು, ಸರಿಯಲ್ಲ ನೋಡಾ ಕೂಡಲಸಂಗಮ ದೇವಾ ನಿಮ್ಮ ಶರಣರ ಚಮ್ಮಾವುಗೆಗೆ.

I -

ಅಯ್ಯಾ–ಆ ಲಿಂಗವನ್ನು ತನ್ನತ್ತಭಿಮುಖವ ಮಾಡಿಕೊಡು ಆ ಲಿಂಗದೊಡನೆ ಬಿನ್ನೈಸುವಂಥ ಬಿನ್ನಪವು, ನಿಮ್ಮ ಶರಣರ ಚಮ್ಮಾವುಗೆ, ನಿಮ್ಮ ಶರಣರ–ನಿಮ್ಮ ಶಿವಶರಣರ, ಚಮ್ಮಾವುಗೆಗೆ–ಪಾದರಕ್ಷೆಗೆ, ಪೃಥ್ವಿ–ಭೂಮಿಯು, ಸಮಬಾರದು–ಸರಿಬಾರದು. ಸರಿಯಲ್ಲ ನೋಡಾ–ಸಮಾನವಿಲ್ಲ ಕಂಡಾ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ ಶರಣರ–ನಿಮ್ಮ ಶಿವಶರಣರ, ಚಮ್ಮಾವುಗೆಗೆ–ಪಾದರಕ್ಷೆಗೆ.[೧]

....

೧ + ಸರಿಯಲ್ಲವು–ಸಮಾನವಲ್ಲವು (ಗ)

೬೦೬

ದೇವಾ ನಿಮ್ಮ ಪೂಜಿಸಿ ಚೆನ್ನನ ಕುಲ ಚೆನ್ನಾಯಿತ್ತು; ದೇವಾ ನಿಮ್ಮ ಪೂಜಿಸಿ ದಾಸನ ಕುಲ ದೆಸೆವಡೆಯಿತ್ತು, ನಿಮ್ಮಡಿಗೆರಗಿದ ಮಡಿವಾಳ ಮಾಚಯ್ಯ ಇಮ್ಮಡಿಯಾದ. ನೀನೊಲಿದ ಕುಲಕ್ಕೆ ನೀನೊಲಿಯದ ಹೊಲೆಗೆ ಮೇರೆಯುಂಟೆ, ದೇವಾ? ಶ್ವಪಚೋಪಿ, ಮುನಿಶ್ರೇಷ್ಠೋ ಯಸ್ತು ಲಿಂಗಾರ್ಚನೇ ರತಃ। ಲಿಂಗಾರ್ಚನವಿಹೀನೋಪಿ ಬ್ರಾಹ್ಮಣಃ ಶ್ವಪಚಾಧಮಃ॥ ಎಂದುದಾಗಿ, ಜಾತಿ ವಿಜಾತಿಯಾದಡೇನು? ಅಜಾತಂಗೆ ಶರಣೆನ್ನದವನು ಆತನೇ ಹೊಲೆಯ, ಕೂಡಲಸಂಗಮದೇವಾ.

I –

ದೇವಾ ನಿಮ್ಮ ಪೂಜಿಸಿ ದೇವಾ–ಎಲೆ ಪರಶಿವಲಿಂಗವೆ, ನಿಮ್ಮ ಪೂಜಿಸಿ–ಇಷ್ಟಮಹಾಲಿಂಗವನ್ನು ಅಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳಿಂದಾರಾಧಿಸಿ, ಚೆನ್ನ–ಮಾದಾರಚೆನ್ನಯ್ಯನ, ಕುಲ–ಜಾತಿಯು, ಚೆನ್ನಾಯಿತ್ತು–ನೀವು ಯಾವ ಕುಲದವರೆಂದು ಕೇಳಿದರೆ ನಾವು ಮಾದಾರ ಚೆನ್ನಯ್ಯನ ಕುಲದವರೆಂದು ಹಸ್ತವನ್ನು ಮೇಲಕ್ಕೆ ನೆಗಹಿ ಹೇಳಿಕೊಂಬುತ್ತಿಹರು. ದೇವಾ ನಿಮ್ಮ ಪೂಜಿಸಿ: ದೇವಾ–ಎಲೆ ಪರಶಿವಲಿಂಗವೆ, ನಿಮ್ಮ ಪೂಜಿಸಿ–ಇಷ್ಟಮಹಾಲಿಂಗವನ್ನು ಅಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳಿಂದಾರಾಧಿಸಿ ದಾಸನ–ಜೇಡರದಾಸಿಮಯ್ಯನ, ಕುಲ–ಜಾತಿಯು, ದೆಸೆವಡೆಯಿತ್ತು–ದಿಗ್ದೆಸೆಯಲ್ಲಿ ಕೀರ್ತಿವೆತ್ತಿರ್ಪುದು. ನಿಮ್ಮಡಿಗೆರಗಿದ–ನಿಮಗೆ ಪಾದಾಕ್ರಾಂತನಾದ, ಮಡಿವಾಳಮಾಚಯ್ಯ–ಮಡಿವಾಳ ಮಾಚಯ್ಯನೆಂಬ ಶಿವಶರಣನು, ಇಮ್ಮಡಿಯಾದ–ಒಮ್ಮಡಿ ಇಮ್ಮಡಿ ಮುಮ್ಮಡಿಯಾದನು.

ನೀನೊಲಿದ–ನೀ ಕೃಪೆಯಾದ, ಕುಲಕ್ಕೆ–ಶಿವಕುಲಕ್ಕೆ, ನೀನೊಲಿಯದ–ನೀನು ಕೃಪೆಯಾಗದ, ಹೊಲೆಗೆ–ಸೂತಕಕ್ಕೆ, ಮೇರೆಯುಂಟೆ–ಭಕ್ತರೆಲ್ಲರೂ ಭವಿಗಳಲ್ಲಿ ಬೆರೆಯಬಾರದು. ಭವಿಗಳೆಲ್ಲ ಭಕ್ತರಲ್ಲಿ ಬೆರೆಯಬಾರದೆಂಬಂಥ, ಮೇರೆಯುಂಟೆ–ಕಟ್ಟುಂಟಾಗಿರ್ಪುದೆ? ಇಲ್ಲವು, ದೇವಾ–ಎಲೆ ಒಡೆಯನೆ, ಗ್ರಂಥ–ಗುರುವಾಕ್ಯಕ್ಕೆ ಸದೃಶವಾಗಿ ಹರವಾಕ್ಯವ ನಿರೂಪಿಸುತ್ತಿಹರು.

ಶ್ವಪಚೋಪಿ ಮುನಿಶ್ರೇಷ್ಠೋ ಯಸ್ತು ಲಿಂಗಾರ್ಚನೇ ರತಃ ಯಃ–ಯಾವಾತನು[೧], ರತಃ ಬಯಕೆಯುಳ್ಳಾತನು, ಶ್ವಪಚೋಪಿ–ಹೊಲೆಯ ನಾಯಿತ್ತಾದಡೆಯೂ, ಮುನಿಶ್ರೇಷ್ಠಂ–ಮುನಿಗಳೊಳಗೆ ಬಹುಶ್ರೇಷ್ಠನು, ಲಿಂಗಾರ್ಚನ ವಿಹೀನೋಪಿ ಬ್ರಾಹ್ಮಣಃ ಶ್ವಸಚಾಧಮಃ ಲಿಂಗಾರ್ಚನ–ಲಿಂಗ ಪೂಜೆಯಲ್ಲಿ, ವಿಹೀನೋಽಪಿ–ಇಲ್ಲದೆ ಇರುವಂಥ, ಬ್ರಾಹ್ಮಣೋಽಪಿ–ಬ್ರಾಹ್ಮಣನಾಯಿತ್ತಾಡೆಯೂ, ಶ್ವಪಚಾಧಮಃ–ಹೊಲೆಯರೊಳಗಾಗಿ ಬಹು ನೀಚಾದವನು, ಎಂದುದಾಗಿ–ಹೀಂಗೆಂದು ಈಶ್ವರನ ವಾಕ್ಯದಲ್ಲಿ ಹೇಳುತ್ತಿಹುದಾಗಿ, ಜಾತಿ ವಿಜಾತಿಯಾದಡೇನು–ಉತ್ತಮ ಕುಲ ಕ್ಷೀಣಕುಲದವನಾದರೇನು, ಅಜಾತಂಗೆ–ಆಯೋನಿಸಂಭವನಾದ ಪರಶಿವಲಿಂಗಕ್ಕೆ, ಶರಣೆನ್ನದವನು–ನಮಸ್ಕಾರವೆಂದು ನಮಸ್ಕರಿಸದವನು, ಆತನೇ–ಅಂತಪ್ಪವನೇ, ಹೊಲೆಯ–ಚಾಂಡಾಲನು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

....

೧+ ಸು–ಲೇಸಾಗಿ ಲಿಂಗಪೂಜೆಯಲ್ಲಿ (ಗ)

೬೦೭

ಚತುರ್ವೇದಿಯಾದಡೇನು? ಲಿಂಗವಿಲ್ಲದವನೇ ಹೊಲೆಯ। ಶ್ವಪಚನಾದಡೇನು ಲಿಂಗವಿದ್ದವನೇ ವಾರಣಾಸಿ, ಆತನ ನುಡಿಗಡಣವೇ ಲೇಸು, ಆತ ಜಗಕ್ಕೆ ಪಾವನ, ಆತನ ಪ್ರಸಾದವೆನಗೆ ಅಮೃತ ಸೇವನೆ! [1]["ನ ಮೇ ಪಿಯಶ್ಚತುರ್ವೇದಿ ಮದ್ಭಕ್ತಃ ಶ್ವಪಚೋऽಪಿ ವಾ। ತಸ್ಮೈ ದೇಯಂ ತತೋಗ್ರಾಹ್ಯಂ ಸಚಪೂಜ್ಯೋ ಯಥಾಹ್ಯಹಂ॥"][2] ಕೂಡಲಸಂಗಮದೇವರನಜೆದು ಪೂಜಿಸಿದಾತ ಷಡುದರುಶನಕ್ಕಧಿಕ, ಜಗಕ್ಕೆ ಪಾವನ ನೋಡಾ!

....

1-1 ಮಮಃ ಪ್ರಿಯ ಚತುರ್ವೆದೀ ಮದ್ಭಕ್ತೊ ಶ್ವಪಚೋಪಿವಾನ್ । ತಸ್ಮಾದ್ಧೇಯಂ ತಥಾಗ್ರಾಹ್ಯಂ ಸಚ ಪೂಜ್ಯ ಯಥಾಮ್ಯಾಹಂ ॥ (ಕ, ಗ)

I –

ಚತುರ್ವೇದಿಯಾದಡೇನು–ನಾಲ್ಕು ವೇದಂಗಳನು ಪಾರಂಗತವಾಗಿ ಬಲ್ಲಾತನಾದರೇನು, ಲಿಂಗವಿಲ್ಲದವನೇ–ಅಂಗದಲ್ಲಿ ಲಿಂಗಸಂಬಂಧವ ಮಾಡಿಕೊಂಡು ಲಿಂಗಪೂಜೆಯ ಮಾಡಿದವನೇ, ಹೊಲೆಯ–ಚಾಂಡಾಲನು. ಶ್ವಪಚನಾದಡೇನು–ಹಿರೇಕುಲದ ಭಕ್ತನಾದರೇನು, ಲಿಂದಿದ್ಭವನೆ–ಅಂಗದ ಮೇಲೆ ಶಿವಲಿಂಗಸಂಬಂಧವ ಮಾಡಿಕೊಂಡು ಶಿವಲಿಂಗಪೂಜೆಯ ಮಾಡುವಾತನೆ, ವಾರಣಾಸಿ–ಆತನಂಗವೇ ಕಾಶೀಕ್ಷೇತ್ರಕ್ಕೆ ಸಮಾನವು; ಆತನಂಗದಲ್ಲಿ ನೆಲೆಗೊಂಡಿರುವಂಥ ಇಷ್ಟಮಹಾಲಿಂಗವೇ ವಿಶ್ವೇಶ್ವರ ಲಿಂಗಕ್ಕಧಿಕವಾಗಿರ್ಪುದು. ಆತನ–ಅಂತಪ್ಪ ಆರೂಢ ಮಲ್ಲಯ್ಯನ, ನುಡುಗಡಣವೆ–ಮಾತುಕತೆ ಪ್ರಸಂಗದ ಹೆಚ್ಚಿಗೆಯೇ, ಲೇಸು–ಬಹುಪರಿಣಾಮವು, ಆತನು–ಅಂತಪ್ಪಾತನು, ಜಗಕ್ಕೆ–ಲೋಕಕ್ಕೆ, ಪಾವನ–ಪವಿತ್ರಸ್ವರೂಪನು, ಅತನ–ಅಂತಪ್ಪ ಶಿವಶರಣನ, ಪ್ರಸಾರವು–ಶಿವಪ್ರಸಾದವು, ಎನಗೆ–ನನಗೆ, ಅಮೃತಸೇವನೆ–ನಿತ್ಯತೃಪ್ತಿಯು.

ಮಮಃಪ್ರಿಯ ಚತುರ್ವೇದಿ ಮದ್ಭಕ್ತ ಶ್ವಪಚೋಪಿಮಾನ್: ಚತುರ್ವೇದಿ–ನಾಲ್ಕು ವೇದಂಗಳನು ಪಾರಂಗತವಾಗಿ ಬಲ್ಲಾತನಾದರೂ, ಮದ್ಭಕ್ತನನ್ನ ಭಕ್ತನಲ್ಲದಿದ್ದರೆ, ಮಮಃಪ್ರಿಯ–ನನಗೆ ಪ್ರೀತಿಯುಳ್ಳಾತನಲ್ಲವು, ಹೊರೆಯನಾಯಿತ್ತಾದರೂ, ಮದ್ಭಕ್ತ–ನನ್ನ ಭಕ್ತವಾದರೆ, ಮಮಃಪ್ರಿಯ–ನನಗೆ ಪ್ರೀತಿಯುಳ್ಳಾತನು, ತಸ್ಮಾತ್–ಅದು ಕಾರಣವಾಗಿ, ದೇಹಿ–ಒಂದೇ ವಸ್ತುವನ್ನು ಅವರಿಂದ ನಾ ಗ್ರಹಿಸಿಕೊಳ್ಳಲ್ಪಟ್ಟಾತನು, ತತು–ಆತನಿಗೆ, ಗ್ರಾಹ್ಯಂ–ಒಂದು ವಸ್ತುವನ್ನು ಗ್ರಹಿಸಿಕೊಡಲ್ಪಟ್ಟಾತನು, ಸ ಚ ಪೂಜ್ಯ ಯಥಾಮ್ಯಾಹು: ಅಹು–ನಾನು, ಯಥಾ–ಹ್ಯಾಂಗೆ, ಪೂಜ್ಯಾಂ–ಸಮಸ್ತರಿಂದೆ ಪೂಜಾ ಕ್ರಿಯೆಗಳನು ಕೈಕೊಂಡೊಪ್ಪುತ್ತಿಹನೋ, ಸ ಚ.ಆತನು ಸಮಸ್ತರಿಂದ ಪೂಜಾಕ್ರಿಯೆಗಳನು ಕೈಕೊಂಬುವು ದಕ್ಕೆ ಯೋಗ್ಯನು.

III –

1+1 ಮಮಪ್ರಿಯಶ್ಚತುರ್ವೇದೀ। ಮದ್ಭಕ್ತಃ ಶ್ವಪಚೋಪಿವಾ । ತಸ್ಮೈದ್ಯೇಯಂ ಕಥೋಗ್ರಾಹ್ಯಂ। ಸ ಚ ಪೂಜ್ಯೇ ಯಥಾಹ್ಯಹಂ (ಟ, ಡ)

....

ವಾರಣಾಸಿ–ವಿಮುಕ್ತಿಕ್ಷೇತ್ರವು, ಶ್ವಪಚೋಪಿವಾ–ಹೊಲೆಯನಾದರಾಗಲಿ, ಮದ್ಭಕ್ತಃ–ಎನ್ನ ಭಕ್ತನು, ಮಮಪ್ರಿಯ: ಎನ್ನಲ್ಲಿ ಪ್ರೀತಿಯುಳ್ಳಾತನು ಚತುರ್ವೇದಿ–ಋಗ್ಯಜುಸ್ಸಾಮಥರ್ವಣವೆಂಬ ನಾಲ್ಕು ವೇದಗಳನು ತಿಳಿದಾತನು, ತಸ್ಮೈ–ಅಂಥಾತನ ದೆಸೆಯೊಡನೆ, ಧ್ಯೇಯ–ಧ್ಯಾನಿಸಲು ತಕ್ಕುದು, ತಥಃ–ಆತನು, ಗ್ರಾಹ್ಯಂ–ಗ್ರಹಿಸಲ್ತಕ್ಕಾತನು, ಅಹಂ–ನಾನು, ಯಾಥಾಹಿ–ಹೇಂಗೆ, ಪೂಜ್ಯಃ–ಪೂಜ್ಯನೋ, ತಥಾ–ಹಾಂಗೆಯೇ, ಸ, ಚ–ಆ ಭಕ್ತನು, ಪೂಜ್ಯಃ–ಸಕಲರಿಂದಲೂ ಪೂಜಿಸಿಕೊಳ್ಳು ಯೋಗ್ಯನೆಂಬುದಭಿಪ್ರಾಯಂ.

೬೦೮

ಭಕ್ತಿಹೀನ[1]ರ[1] ದಾಸೋಹವ ಸದ್ಭಕ್ತರು ಸವಿಯರು; ಬೇವಿನಹಣ್ಣು ಕಾಗೆಗೆ ಇನಿದಲ್ಲದೆ ಕೋಗಿಲೆಗೆ ಮೆಲಬಾರದು, ಲಿಂಗ ಸಂಬಂಧವಿಲ್ಲದವರ ನುಡಿ ಕೂಡಲಸಂಗನ ಶರಣರಿಗೆ ಸಮನಿಸದು.

I– –

ಭಕ್ತಿಹೀನರ ದಾಸೋಹವ ಸದ್ಭಕ್ತರು ಸವಿಯರು: ಭಕ್ತಿಹೀನರು–ಉಪಾಧಿಕರು ಮಾಡುವಂಥ ಭಿನ್ನಭಕ್ತಿ, [ದಾಸೋಹವ–]ದಾಸೋಹವನ್ನು ಸದ್ಭಕ್ತರು–ಲಿಂಗಭಕ್ತಾಶ್ವ ಜಂಗಮಃ' ಎಂದು ಲಿಂಗಭಕ್ತರಾದ ಜ್ಞಾನಜಂಗಮಮೂರ್ತಿಗಳು, ಸವಿಯರು–ಕೈಕೊಂಡನುಭವಿಸರು, ಬೇವಿನ ಹಣ್ಣು–ಪಿಚುಮಂದದ ಫಲವು, ಕಾಗೆಗೆ–ವಾಯಸನಿಗೆ, ಇನಿದಲ್ಲದೆ–ಬಹು ಪ್ರೀತಿಯಲ್ಲದೆ, ಕೋಗಿಲೆಗೆ–ಕೋಗಿಲ ಪಕ್ಷಿಗೆ, ಮೆಲಬಾರದು–ಮೆಲದೇನೆಂದರೆ ಪ್ರೀತಿಯಾದೀತೆ? ಆಗದು, ಹಾಂಗೆ ಉಪಾಧಿಕರು ಮಾಡು ವಂಥ ಭಿನ್ನಭಕ್ತಿ ದಾಸೋಹವ[೧] ಭಕ್ತಿಯ ಕೈಕೊಂಬುವಂಥ ವರ್ಮವನ್ನು ಅರಿಯದೆ ಇದ್ದಂಥ ಆಶಾ ಲಾಂಛನಿಗಳಿಗೆ ಏನು ನೀಡುತ್ತೈದಾನೆ? ತಂಬಿಗೆ ತಂಬಿಗೆ ತುಪ್ಪವ ನೀಡುತ್ತೈದಾನೆಯೆಂದಲ್ಲಿ ಆಶಾ ಲಾಂಛನಿಗಳಿಗೆ ಬಹು ಪರಿಣಾಮವಾಗುತ್ತಿಹುದು. ಉಪಾಧಿಕರು ಮಾಡುವಂಥ ಭಿನ್ನಭಕ್ತಿ ದಾಸೋಹ [೨]ವು[೨], ಭಕ್ತಿಯು ಕೈಕೊಂಬುವಂಥ ವರ್ಮವನು ಅರಿದುಬಲ್ಲಂಥ ಜ್ಞಾನಜಂಗಮಮೂರ್ತಿಗಳ ಮಧ್ಯ ದಲ್ಲಿ ಹಾಸ್ಯವಾಗಿರ್ಪುದು.

ಲಿಂಗಸಂಬಂಧವಿಲ್ಲದವರ–ಅಂಗದಲ್ಲಿ ಲಿಂಗಸಂಬಂಧವ ಮಾಡಿಕೊಂಡು ಲಿಂಗಪೂಜೆಯ ಮಾಡುವರ, ನುಡಿ–ಪ್ರಸಂಗವು, ಕೂಡಲಸಂಗನ ಶರಣರಿಗೆ--ಜ್ಞಾನಜಂಗಮಮೂರ್ತಿಗಳಿಗೆ., ಸಮನಿ ಸದು–ಕಿವಿಗೊಟ್ಟಾಲಿಸುವುದಕ್ಕೆ ಇಚ್ಛೆಬಾರದು.

....

೧+ ನ್ನು (ಕ, ಗ), ೨–೨ ವನ್ನು (ಕ, ಗ)

IV –

೧–೧ ನ (ತ)

....

ಭಕ್ತಿಯೆಂಬುದು ಎರಡಿಲ್ಲದ ಕೂಟ, ಆ ಎರಡಿಲ್ಲದ ಕೂಟವೆಂಬುದೇ ಲಿಂಗಾಂಗ ಸಂಬಂಧ. ಅಂತಪ್ಪ ಲಿಂಗಾಂಗ ಸಂಬಂಧವಿಲ್ಲದೆ ಭವಿಯಾಗಿ, ಶೈವಪೂಜಾ ದಾಸೋಹಂಗಳನು

ಆತ ನುಡಿವ ಬ್ರಹ್ಮಜ್ಞಾನದ ಮಾತುಗಳನುಸಲ್ಲವಿಟ್ಟಿಹರು ವೀರಶೈವ ಷಟ್ಸ್ಥಲಜ್ಞಾನಿಗಳೆಂಬುದೀ ವಚನದ ತಾತ್ಪರ್ಯಾರ್ಥ.

೬೧೯

ಬಂದು ಬಲ್ಲಹ ಬಿಡಲು ಹೊಲಗೇರಿ ಎಂಬ ಹೆಸರೊಳವೆ, ಅಯ್ಯ? ಲಿಂಗವಿದ್ದವರ ಮನೆ ಕೈಲಾಸವೆಂದು ನಂಬಬೇಕು. ಚಾಂಡಾಲವಾಟಿಕಾಯಾಂ ವಾ ಶಿವಭಕ್ತಃ ಸ್ಥಿತೋ ಯದಿ । ತ[1]ಚ್ಛ್ರೇ[1]ಣಿಃ ಶಿವಲೋಕ[2]ಶ್ಚ [3]ತ[3]ದ್ಗೃಹಂ ಶಿವಮಂದಿರಂ॥ [4]ಎಂದುದಾಗಿ[4]. ಲೋಕದ ಡಂಬಕರ ಮಾತುಬೇಡ, ಕೂಡಲಸಂಗ[5]ನ ಶರಣರಿ[5]ದ್ದುದೇ ಕೈಲಾಸ.

ಬಲ್ಲಹ–ಪರಾಕ್ರಮಿಯಾದಂಥ ದೊರೆಯು, ಒಂದು–ಲಕ್ಷಸಂಖ್ಯೆಬಲವನ್ನು ಕೂಡಿಕೊಂದು ಐದುಬಂದು, ಬಿಡಲು–ಹೊಲಗೇರಿಯಲ್ಲಿ ಪಾಳ್ಯವ ಬಿಟ್ಟಿಡಲು, ಹೊಲಗೇರಿ ಎಂಬ ಹೆಸರೊಳವೆ–ಹೊಲಗೇರಿಯೆಂಬಂಥ ಹೆಸರಿನೊಳಗೆ ಹೋಗಿಬರುವಂಥವರಿಗೆ ಎಲ್ಲಿಗೆ ಹೋಗಿದ್ದಿರಿ? ಎಂದು ಕೇಳಿದಲ್ಲಿ ನಾವು ದೊರೆಯಿದ್ದಂಥ ನಗರ ದೊರೆಯಿದ್ದಂಥ ಪಟ್ಟಣಕ್ಕೆ ಹೋಗಿದ್ದೇವೆಂದು ಹೇಳುವರಲ್ಲದೆ ಚಾಂಡಾಲಗೇರಿ ಶ್ವಪಚರಕೇರಿಗೆ ಹೋಗಿದ್ದೇವೆಂದು ಹೇಳುವುದಕ್ಕೆ ಅಭಿಮಾನ ಉಂಟೆ? ಇಲ್ಲವು, ಅಯ್ಯ–ಎಲೆ ಲಿಂಗವೆ. ಲಿಂಗವಿದ್ದವರ–ಅಂಗದ ಮೇಲೆ ಶಿವಲಿಂಗ ಸಂಬಂಧವ ಮಾಡಿಕೊಂಡು ಲಿಂಗಪೂಜೆಯ ಮಾಡುವಂಥವರ, ಮನೆ–ಮಂದಿರವು, ಕೈಲಾಸವೆಂದು–ಸಾಂಬಲೋಕವೆಂದು, ನಂಬಬೇಕು–ವಿಶ್ವಾಸಿಸಬೇಕು.

ಗ್ರಂಥ: ಗುರುವಾಕ್ಯಕ್ಕೆ ಸದೃಶವಾಗಿ ಹರವಾಕ್ಯವ ನಿರೂಪಿಸುತ್ತಿಹರು, ಚಾಂಡಾಲ ವಾಟಿಕಾಯಾಂ ವಾ–ಹೊಲಗೇರಿಯಲ್ಲಿ ಆಯಿತ್ತಾದರೂ, ಯದಿ–ಎತ್ತಲಾನೂ, ಶಿವಭಕ್ತಃ–ಹರಿಭಕ್ತನು, ಸ್ಥಿತಃ–ಮಂದಿರವನ್ನು ಕಟ್ಟಿಕೊಂಡಿದ್ದುದೇ ಉಂಟಾದರೆ, ತತ್–ಆತನ, ಶ್ರೇಣಿಃ–ಕೇರಿಯು, ಶಿವಲೋಕಃ–ಕೈಲಾಸಲೋಕವು, ತತ್–ಆತನ, ಗೃಹಂ–ಮಂದಿರವು, ಶಿವಮಂದಿರಂ–ಶಿವನ ಅರಮನೆಯು, ಎಂದುದಾಗಿ, ಲೋಕದ ಡಂಬಕರ ಮಾತು ಬೇಡ–ಎಂತಪ್ಪ ಉತ್ತಮ ಕುಲದವನಾದರೂ ಅಂಗದ ಮೇಲೆ ಲಿಂಗಸಂಬಂಧವಿಲ್ಲದೆ ಊರೊಳಗೆ ಮನೆಯ ಕಟ್ಟಿಕೊಂಡಿದ್ದರೂ ಅವನೇ ಹೊಲೆಯ ಅವನ ಹೊರಗೆ ಮನೆಯ ಕಟ್ಟಿಕೊಂಡಿದ್ದರೂ ಅವನೇ ಶಿವನಂತೆ, ಅವನು ಕಟ್ಟಿಕೊಂಡಿರುವಂಥ ಮನೆಯೇ ಶಿವನ ಅರಮನೆಯಂತೆ, ಅವನಿರುವಂಥ ಕೇರಿಯೇ ಕೈಲಾಸವಂತೆ, ಆತನಂಗದಲ್ಲಿ ಸಂಬಂಧವಾದ ಇಷ್ಟ ಮಹಾಲಿಂಗವೇ ಕೈಲಾಸಕ್ಕಧಿಪತಿಯಾದ ಮಹಾಲಿಂಗವಂತೆ, ಎಲ್ಲಿಯ ಮಾತು ಎತ್ತಣ ಮಾತೆಂಬ, ಲೋಕದ–ಲೌಕಿಕದ, ಡಂಬಕರ–ಹರೇತನದ ಬೂಟಕತ್ವವನುಳ್ಳ ಜೀವರುಗಳೊಂದಿಗೆ, ಮಾತುಬೇಡ–ಪ್ರಸಂಗವ ಮಾಡಬೇಡ, ಎಂದುದಾಗಿ–ಹೀಂಗೆಂದು ಈಶ್ವರನ ವಾಕ್ಯದಲ್ಲಿ ಹೇಳುತ್ತಿಹುದಾಗಿ, ಕೂಡಲ ಸಂಗನ ಶರಣರು–ಶಿವನ ಚಿತ್ರಭಾಂಗಸ್ವರೂಪರಾದ ಶಿವಶರಣರು, ಇದ್ದುದೇ–ಮನೆಯನ್ನು ಕಟ್ಟಿ ಕೊಂಡಿರ್ದುದೇ. ಕೈಲಾಸ–ಅದೇ ಸಾಂಬಲೋಕವು.

III –

ಬಂದು–ದಂಡೆತ್ತಿ ಬಂದು, [ಬಲ್ಲಹ–] ವಲ್ಲಭನಾದಂಥ ರಾಜನು, ಬಿಡಲು–ದಂಡಿಳಿಯಲು, ಹೊಲಗೇರಿ ಎಂಬ ಹೆಸರೊಳವೆ ಅಯ್ಯ?–ಚಂಡಾಲ ವಾಟಿಕೆಯೆನಿಸುವುದೇ ಸ್ವಾಮಿ?

IV -

1–1 ತ್ಶ್ರೇ (ತ), 2–2 ಸ್ಯ (ತ), 3–3 ಸ(ತ), 4–4 (ಥ (ತ), 5–5 ನಿ (ತ).

....

[೧]ಲಿಂಗವಿದ್ದಠಾವೇ ಮಂಗಳವಾದ ಕಾರಣ ಲಿಂಗವಂತನಿರ್ದ ಕೇರಿ ಶಿವಲೋಕ, ಆತ ನಿರ್ದುದೇ ಶಿವನ ಮನೆಯೆಂಬುದೇ: ವಚನದರ್ಥ.

....

೧ + ಲಿಂಗ (ತ)

೬೧೦

ಲಿಂಗವಿಲ್ಲದೆ ನಡೆವವರ, ಲಿಂಗವಿಲ್ಲದೆ ನುಡಿವವರ, ಲಿಂಗವಿಲ್ಲದೆ ಉಗುಳನುಂಗಿದಡೆ ಅಂದಂದಿಗೆ ಕಿಲ್ಬಿಷವಯ್ಯ, ಏನೆಂಬೆ ಏನೆಂಬೆನಯ್ಯ? ಲಿಂಗವಿಲ್ಲದೆ ನಡೆವವರ ಅಂಗ ಲೌಕಿಕ ಮುಟ್ಟಲಾಗದು! ಲಿಂಗವಿಲ್ಲದೆ ನುಡಿವವರ ಶಬ್ದ ಸೂತಕ, ಕೇಳಲಾಗದು! ಲಿಂಗವಿಲ್ಲದೆ ಗಮನಿಸಿದಡೆ ಆ ನಡೆ ನುಡಿಗೊಮ್ಮೆ ವ್ರತಗೇಡಿಯೆಂಬೆ, ಕೂಡಲಸಂಗಮದೇವಾ!

I -

ಲಿಂಗವಿಲ್ಲದೆ ನಡೆವವರ : [ಲಿಂಗವಿಲ್ಲದೆ–] ಅಂಗದ ಮೇಲೆ ಲಿಂಗಸಂಬಂಧವಿಲ್ಲದೆ, ನಡೆವವರ–ದಾರಿಬಟ್ಟೆಯನ್ನು ಗಮಿಸುವವರ, ಲಿಂಗವಿಲ್ಲದೆ–ಅಂಗದ ಮೇಲೆ ಲಿಂಗಸಂಬಂಧವಿಲ್ಲದೆ, ನುಡಿವವರ–ಮಾತುಕಥೆ ಪ್ರಸಂಗವನಾಡುವಂಥವರ, ಲಿಂಗವಿಲ್ಲದೆ–ಅಂಗದ ಮೇಲೆ ಲಿಂಗ ಸಂಬಂಧವಿಲ್ಲದೆ, ಉಗುಳ ನುಂಗಿದಡೆ–ಷಡ್ವಿಧ ಪದಾರ್ಥಗಳನು ಆತ್ಮಾರ್ಪಣವಾಗಿ ಅನುಭವಿಸಿದರೆ, ಅಂದಂದಿಗೆ–ಆಯಾಯ ಕಾಲಕ್ಕೆ, ಕಿಲ್ಬಿಷವಯ್ಯ–ಹುಳುಗುಪ್ಪಿಯಯ್ಯ, ಏನೆಂಬೆ ಏನೆಂಬೆನಯ್ಯ–ಏನೆಂದು ಹೇಳುವೆ, ಏನೆಂದು ಹೇಳುವೆನಯ್ಯ.

ಲಿಂಗವಿಲ್ಲದೆ–ಅಂಗದ ಮೇಲೆ ಲಿಂಗಸಂಬಂಧವಿಲ್ಲದೆ, ನಡೆವವರ–ಕ್ರೀವಿಡಿದಾಚರಿಸುವವರ, ಅಂಗ ಲೌಕಿಕ ಮುಟ್ಟಲಾಗದು–ಅವನು ಸತ್ತು ಹೋದಲ್ಲಿ ಭಕ್ತಮಾಹೇಶ್ವರರುಗಳು ಹಿಡಿದು ಕ್ರಿಯಾ ಸಮಾಧಿಯ ಮಾಡಿ ನಿಕ್ಷೇಪದ ಮಾಡಲಾಗದು. ಲಿಂಗವಿಲ್ಲದೆ–ಅಂಗದ ಮೇಲೆ ಲಿಂಗಸಂಬಂಧ ವಿಲ್ಲದೆ, ನುಡಿವವರ–ಜ್ಞಾನವಿಡಿದಾಚರಿಸುವಂಥವರ, ಶಬ್ದ–ಭಿನ್ನಶಬ್ದವು, ಸೂತಕ ಭಿನ್ನಸೂತಕವು, ಕೇಳಲಾಗದು–ಕಿವಿಗೊಟ್ಟಾಲಿಸಲಾಗದು; ಲಿಂಗವಿಲ್ಲದೆ–ಅಂಗದ ಮೇಲೆ ಲಿಂಗಸಂಬಂಧವಿಲ್ಲದೆ, ಗಮನಿಸಿದಡೆ–ಜ್ಞಾನಕ್ರಿವಿಡಿದಾಚರಿಸಿದರೆ, ಆ ನಡೆನುಡಿಗೊಮ್ಮೆ–ಆ ಜ್ಞಾನಕ್ರಿಯೆಗಳಿಗೆಗೊಂದುವೇಳೆ, ವ್ರತ ಗೇಡಿಯೆಂಬೆ–ಅಂಗಪ್ರಾಣಂಗಳಲ್ಲಿ ಇಷ್ಟಪ್ರಾಣಲಿಂಗವ ಸಂಬಂಧವ ಮಾಡಿಕೊಳ್ಳದಿರುವಾತನ ವ್ರತ ಭ್ರಷ್ಟನೆಂಬೆ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

ಇಪ್ಪತ್ತುನಾಲ್ಕು ತಿಥಿಗಿಂದ ವೆಗ್ಗಳ, ಗ್ರಹಣ ಸಂಕ್ರಾಂತಿಗಿಂದ ವೆಗ್ಗಳ, ಏಕಾದಶಿ ವ್ಯತೀಪಾತದಿಂದ ವೆಗ್ಗಳ, ಸೂಕ್ಷ್ಮ ಶಿವನ ಪಥವನಱಿದವಂಗೆ: ಹೋಮ ನೇಮ ಜಪ ತಪದಿಂದ ವೆಗ್ಗಳ ಕೂಡಲಸಂಗಮದೇವ[1][ರ][1] ಮಾಣದೆ ನೆನೆವಂಗೆ.

....

1-1 ರ (ಕ, ಗ)

I -

ಇಪ್ಪತ್ತುನಾಲ್ಕು ತಿಥಿಗಿಂದ ಒಂದು ವರುಷಕ್ಕೆ ಹನ್ನೆರಡು ಹುಣ್ಣಿವೆ ಹನ್ನೆರಡು ಅಮಾವಾಸ್ಯೆಗಳು ಬಂದಲ್ಲಿ ಇಪ್ಪತ್ತುನಾಲ್ಕು ತಿಥಿಯೆನಿಸುವುದು. ಆ ಇಪ್ಪತ್ತುನಾಲ್ಕು ತಿಥಿಯಲ್ಲಿ ಮಾಡುವಂಥ ಜಪತಪಾರಾಧನೆ ಕ್ರಿಯೆಗಳು, ವೆಗ್ಗಳ-ಬಹು ಶ್ರೇಷ್ಠವು, ಗ್ರಹಣ-ಆ ಇಪ್ಪತ್ತುನಾಲ್ಕು ತಿಥಿಯಲ್ಲಿ ಮಾಡುವಂಥ ಜಪ ತಪಾರಾಧನೆ ಕ್ರಿಯೆಗಳಿಂದಲೂ ಸೂರ್ಯಗ್ರಹಣ ಚಂದ್ರಗ್ರಹಣವಿಡಿದಾಗ ಮಾಡುವಂಥ ಜಪತಪಾರಾಧನೆ ಕ್ರಿಯೆಗಳು, ವೆಗ್ಗಳ-ಬಹು ಶ್ರೇಷ್ಠವು.

ಸಂಕ್ರಾಂತಿಗಿಂದ-ಸೂರ್ಯಗ್ರಹಣ ಚಂದ್ರಗ್ರಹಣವಿಡಿದಾಗ ಮಾಡುವಂಥ ಜಪತಪಾರಾಧನೆ ಕ್ರಿಯೆಗಳಿಂದಲೂ ವರುಷಸಂಕ್ರಾಂತಿ ಮಾಸಸಂಕ್ರಾಂತಿ ಮಕರಸಂಕ್ರಾಂತಿ [೧]ನಿತ್ಯ[೧]ಸಂಕ್ರಾಂತಿಯೆಂದು ಸಂಕ್ರಾಂತಿಯಲ್ಲಿ ಮಾಡುವಂಥ ಜಪತಪಾರಾಧನೆ ಕ್ರಿಯಗಳು. ವೆಗ್ಗಳ-ಬಹುಶ್ರೇಷ್ಠವು, ಏಕಾದಶಿ-ಸಂಕ್ರಾಂತಿಯಲ್ಲಿ ಮಾಡುವಂತಹ ಜಪತಪಾರಾಧನೆ ಕ್ರಿಯೆಗಳಿಂದಲೂ ಪ್ರಥಮ ಏಕಾದಶಿ ದ್ವಿತೀಯ ಏಕಾದಶಿಯಲ್ಲಿ ಮಾಡುವಂಥ ಜಪತಪಾರಾಧನೆ ಕ್ರಿಯೆಗಳು ವೆಗ್ಗಳ_ಬಹುಶ್ರೇಷ್ಠವು.

ವ್ಯತೀಪಾತದಿಂದ ವೆಗ್ಗಳ : [ವ್ಯತೀಪಾತದಿಂದ-] ಪ್ರಥಮ ಏಕಾದಶಿ ದ್ವಿತೀಯ ಏಕಾದಶಿಯಲ್ಲಿ ಮಾಡುವಂಥ ಜಪತಪಾರಾಧನೆ ಕ್ರಿಯೆಗಳಿಂದಲೂ ವ್ಯತೀಪಾತ ವೈಧೃತಿನಕ್ಷತ್ರದಲ್ಲಿ ಮಾಡುವಂಥ ಜಪತಪಾರಾಧನೆ ಕ್ರಿಯೆಗಳು, ವೆಗ್ಗಳ_ಬಹುಶ್ರೇಷ್ಠವು, ಸೂಕ್ಷ್ಮ ಶಿವಪಥವಟಿಜೆದವಂಗೆ-ಅಣುಸ್ವರೂಪವಾದ ಪರಬ್ರಹ್ಮವನ್ನೇ ಗುರುಮುಖದಿಂದ ಅಂಗದಲ್ಲಿ ಇಷ್ಟಲಿಂಗವಾಗಿ ಸಂಬಂಧವ ಮಾಡಿಕೊಂಡು ಆ ಇಷ್ಟಲಿಂಗಕ್ಕೆ ಅಷ್ಟವಿಧಾರ್ಚನೆ ಷೋಡಶೋಪ ಚಾರಕ್ರಿಯೆಗಳಿಂದ ಆರಾಧಿಸುವಂಥದನು ತಿಳಿದವಂಗೆ ಇಂತಿವೆಲ್ಲಕ್ಕೂ ಶ್ರೇಷ್ಠವಾದ ಪದವೇ ದೊರಕೊಂಬುತ್ತಿಹುದು.

ಹೋಮ-ಹದಿನೆಂಟು ಧಾನ್ಯಂಗಳನು ತುಪ್ಪ ತೈಲದಲ್ಲಿ ಸಮ್ಮಿಶ್ರವ ಮಾಡಿ ಅಗ್ನಿಪುರುಷನಿಗೆ ಆಹುತಿಯ ಕೊಟ್ಟು ಯಜ್ಞವ ಮಾಢುವಂಥದೆ ಹೋಮ, ನೇಮ-ಚಾಂದ್ರಾಯಣ ಕುಶ್ಚಾಂದ್ರಾಯಣ ಮೊದಲಾದ ಹದಿನಾಲ್ಕು ವ್ರತಂಗಳು, ಜಪ-ಜಪದಿಂದಾಗುವಂಥ ಪದವಿಯು, ತಪದಿಂದ-ತಪಸ್ಸಿನಿಂದಾಗುವಂಥ ಪದವಿ[೨][ಗಿಂದ][೨]. ವೆಗ್ಗಳ-ಬಹು ಶ್ರೇಷ್ಠವು, ಕೂಡಲಸಂಗಮದೇವ[೩][ರ][೩]-ಪರಶಿವಲಿಂಗದೇವರ. ಮಾಣದೆ-ಬಿಡದೆ, ನೆನೆವಂಗೆ-ಲಿಂಗಧ್ಯಾನ ಲಿಂಗಸ್ಮರಣೆಯ ಮಾಡುವಾತಂಗೆ.[೪]

....

೧+೧ ದಿನ (ಕ) ೨-೨ಥ (ಕ), ೩-೩ ರ(ಕ, ಗ), ೪+ಇವೆಲ್ಲಕ್ಕಿಂತಲೂ ಶ್ರೇಷ್ಠವಾದ ನಿಜಮೋಕ್ಷಪದವಿಯೇದೊರೆಕೊಂಬುತ್ತಿಹುದು (ಕ, ಗ).

೬೧೨

ಅಶ್ವಮೇಧಯಾಗವಂತಿರಲಿ, ಅಜಪೆಯುಪದೇಶ ಸಮಾಧಿಯಂತಿರಲಿ[1], ಹೋಮ ಗಾಯತ್ರಿ[2] ಜಪವಂತಿರಲಿ,[1] ಜನಮೋಹನ ಮಂತ್ರವಂತಿರಲಿ,[1]ಕೂಡಲಸಂಗನ ಶರಣರ ನುಡಿ[3]ಗಡ[4]ಣವೆ[4] ಎಲ್ಲಕ್ಕಧಿಕ ನೋಡಾ!

I –

ಅಶ್ವಮೇಧಯಾಗವು–ನೂರಾವೊಂದು ಕುದುರೆಯನ್ನು ತಂದು ಯಾಗವ ಮಾಡುವಂಥದೇ ಅಶ್ವಯಾಗ. ಅಂತಪ್ಪ ಅಶ್ವಯಾಗದಿಂದಾಗುವಂಥ ಪದವಿಯು, ಅಂತಿರಲಿ–ಹಾಂಗಿರಲಿ, ಅಜಪೆಯುಪದೇಶ_ಅಜಪೆಯಾಗದಿಂದಾಗುವಂಥ ಉಪದೇಶವು, ಸಮಾಧಿ–ತಾ ಕುರುಹಿಟ್ಟಂಥ ವಸ್ತುವಿನಲ್ಲಿ ಚಿತ್ತೈಕಾಗ್ರತೆಯಿಂದ ಮನೋಲಯವನ್ನೈದಿ ಕೂಡಲ್ಪಟ್ಟಂಥದೇ ಚಿತ್ತೋಪಸಮಾಧಿ, ಅಂತಪ್ಪ ಚಿತ್ತೋಪದೇಶ ಸಮಾಧಿಯಿಂದಾಗುವಂಥಪದವಿಯು, ಅಂತಿರಲಿ–ಹಾಂಗಿರಲಿ, ಹೋಮ–ಯಜ್ಞದಿಂದಾಗುವಂಥ ಪದವಿಯು, ಗಾಯತ್ರಿ–ಹಂಸಂ ಗಾಯಿತ್ರಿ ಪುರುಷಗಾಯತ್ರಿಯೆಂದು ಇದರಿಂದಾಗುವಂಥ ಪದವಿಯು, ಅದಲ್ಲದೆ ಗಾಯತ್ರಿಮಂತ್ರದಿಂದ: [ಜಪವ–] ಜಪವಂಗೈವಂಥದು. ಅಂತಿರಲಿ–ಹಾಂಗಿರಲಿ, ಜನಮೋಹನಮಂತ್ರವು–ಸಮಸ್ತ ಜನಮೋಹನಮಂತ್ರವನ್ನು ಕಲಿತುಕೊಂಡು ಸಮಸ್ತಾತ್ಮರುಗಳನು ತಾನಿದ್ದೆಡೆಗೆ ಬರಮಾಡಿಕೊಂಡು ಸಮಸ್ತರಿಂದ ವಾಲೈಸಿಕೊಂಬುವಂಥದೇ ಜನಮೋಹನಮಂತ್ರವು, ಅಂತಪ್ಪ, ಜನಮೋಹನಮಂತ್ರದಿಂದಾಗುವಂಥ ಪದವಿಯು ಅಂತಿರಲಿ–ಹಾಂಗಿರಲಿ. ಕೂಡಲಸಂಗನ ಶರಣರ–ಶಿವನ ಚಿತ್ತ್ರಭಾಂಗಸ್ವರೂಪರಾದ ಶಿವಶರಣರ, ನುಡಿಗಡಣವೆ–ಶಿವಾನುಭಾವದ ಮಾತುಕಥೆ ಪ್ರಸಂಗದ ಹೆಚ್ಚಿಗೆಯು, ಎಲ್ಲಕ್ಕಧಿಕ ನೋಡಾ !–ಹಿಂದೆ ಹೇಳಿದಂಥ ಸಮಸ್ತಪದಂಗಳಿಗೆ ಶ್ರೇಷ್ಠವಾದ ಪದವಿ ಕಂಡಾ.

IV– –

1+1 ಹೋ (ತ), 2+ ಯ(ತ), 3+ಯ (ತ), 4–4 ಣೆ (ತ).

....

ಶ್ರೀಗುರುವಾಕ್ಯದಿಂದ ಪರಬ್ರಹ್ಮವ ಕಾಣಬಹುದಾಗಿ, ಅಸ್ವಮೇಧಯಾಗ, ಗಾಯತ್ರಿ, ಅಜಪಾ ಸಮಾಧಿ ಹೋಮ ಮೊದಲಾದವು ಶಿವಮಂತ್ರಕ್ಕೆ ಸರಿಯೆ? ಸರಿಯಲ್ಲಾ ಎಂಬುದೀ ವಚನದರ್ಥ.

೬೧೩

ವೇದಶಾಸ್ತ್ರ[1]ಬಲ್ಲ[1]ವರ ಹಿರಿಯ[2]ರೆಂದೆಂಬೆನೆ[2], ಮಾಯಾಭ್ರಾಂತಿ ಕವಿದ [3]ಗೀತ[3]ಜ್ಞರ ಹಿರಿಯ[2]ರೆಂದೆಂಬೆನೆ[2]! ಇವರು ಹಿರಿಯರುಗಳೆ? [4]ಯಾಗನ[5]ಟ್ಟು[4] [6]ಯು[6]ಗ[5] [7]ಪಾ[7] [8]ಣ[8]ರು! ಇವರಿಂದಧಿಕವ ಸಾಧಿಸುವರೇನು ಕಿಜಿಯರೆ? ಇಂತು ವಿದ್ಯೆ ಗುಣ ಜ್ಞಾನ ಧರ್ಮ ಆಚಾರ ಶೀಲಂಗಳ ನಮ್ಮ ಕೂಡಲಸಂಗನ ಶರಣರು ಸಾಧಿಸಿದ ಸಾಧನೆಯ[9] ಸಾಧಿಸುವುದು.

....

4–4 ಅಂಗನಷ್ಪ (ಕ), 7–7 ಞ್ಬ (ಕ)

I –

ವೇದಶಾಸ್ತ್ರ ಬಲ್ಲವರ ಹಿರಿಯರೆಂದೆಂಬೆನೆ: ವೇದ–ನಾಲ್ಕು ವೇದಂಗಳು, ಶಾಸ್ತ್ರ–ಹದಿನಾರು ಧರ್ಮಶಾಸ್ತ್ರಗಳನು, ಬಲ್ಲವರ–ಅರಿದು ಬಲ್ಲವರುಗಳ, ಹಿರಿಯರೆಂದೆಂಬೆನೆ–ಶ್ರೇಷ್ಠರುಗಳೆಂದು ಹೇಳುವನೆ, ಮಾಯಾ–ಅವಿದ್ಯಾಪ್ರಪಂಚನ, ಭ್ರಾಂತಿ–ಭ್ರಮಣೆಯು, ಕವಿದ–ಮುಸುಕಿದ, ಗೀತಜ್ಞರ–ಮೂವತ್ತೆರಡು ರಾಗ ಆರವತ್ತುನಾಲ್ಕು ಮಿಶ್ರಯುಕ್ತವಾಗಿ ಸಮಸ್ತ ಸ್ವರವಚನಗಳಿಂದ ರಾಗರಚನೆಯನ್ನು ಮಾಡಬಲ್ಲಂಥವರುಗಳ, ಹಿರಿಯರೆಂದೆಂಬೆನೆ–ಶ್ರೇಷ್ಠರೆಂದು ಹೇಳುವೆನೆ, ಇವರು ಹಿರಿಯರುಗಳೆ?–ಇವರು ಶ್ರೇಷ್ಠರುಗಳೆ? ಯಾಗ–ಹದಿನೆಂಟು ಧಾನ್ಯಂಗಳನು ತುಪ್ಪ ತೈಲದಲ್ಲಿ ಸಮ್ಮಿಶ್ರವ ಮಾಡಿ ಅಗ್ನಿಪುರುಷಂಗೆ ಆಹುತಿಯಗೊಟ್ಟು ಯಜ್ಞವ ಮಾಡುವಂಥಾದೇ ಯಾಗ, ನಟ್ಟು–ನಟುವಿದ್ಯೆಯು, ಯುಗಪಾಣರು–ಹೊಲೆ ಪಾತ್ರದವರು, ಇವರಿಂದಧಿಕವ ಸಾಧಿಸುವರೇನು ಕಿರಿಯರೆ–ಇವರಿಂದಧಿಕವ ಸಾಧಿಸುವಂಥವರುಗಳೇ ಕಿರಿಯರೆ–ಇವರಿಂದಧಿಕವ ಸಾಧಿಸುವಂಥವರುಗಳೇ ಡೊಂಬರ ವಿದ್ಯೆದವರು; ಆ ಡೊಂಬರ ವಿದ್ಯೆದವರುಗಳೇನಾದರೂ ಅಂತರಪಲಟಿ ಹೊಡೆವಂಥದು ಮಿಣಿಯ ಮೇಲೆ ನಡೆದಾಡುವಂಥವರು ಅವರು ಕಿರಿಯರುಗಳೇ? ಅವರೇನು ಸಾಮಾನ್ಯರೆ? ತಮ್ಮ ಜಾತ್ಯಾನುಸಾರಕ್ಕೆ ಶ್ರೇಷ್ಠರವರು. ಇಂತು–ಈ ಪ್ರಕಾರ ದೆಸೆಯಿಂದ ವಿದ್ಯೆ–ಶಿವನ ಶಿವಗಣಂಗಳ ಶಿವಮಹಿಮೆಯನ್ನು ಹೇಳುವಂಥ ಷಡ್ವಿದ ಶಿವವಿದ್ಯೆಯು, ಗುಣ–ಭಕ್ತಿಸದ್ಗುಣವು, ಜ್ಞಾನ–ಸಮ್ಯಜ್ಞಾನವು, ಧರ್ಮ–ಶಿವಸದ್ಧರ್ಮವು, ಆಚಾರ–ಶಿವಾಚಾರವು. ಶೀಲಂಗಳ–ಷಡ್ವಿದ ಶೀಲ ವ್ರತ ನೇಮಾಚಾರಂಗಳನು, ನಮ್ಮ ಕೂಡಲಸಂಗನ ಶರಣರು–ನಮ್ಮ ಶಿಶರಣರು, ಸಾಧಿಸಿದ–ಅಭ್ಯಸಿಸಿದ, ಸಾಧನೆಯೇ–ಶಿವಸಾಧನೆಯ–ಸಾಧಿಸುವುದು–ಅಭ್ಯಸಿಸುವುದು.

III– –

5–5 ಟ್ಟಿಪಿಗ (ಟ, ಡ), 7–7 ಪ್ರಾ (ಟ, ಡ)

....

ಯಾಗನಟ್ಟಿಪಿಗ, ಯಜ್ಞಕರ್ಮವ ಮಾಡುವಲ್ಲಿ, ಪ್ರಾಣರು–ಹರಣವಾಗುಳ್ಳವರು.

IV –

1–1 ಜ (ಣ), 2–2 ರೆನ್ನೆ (ತ), 3–3 x (ಡ), 6–6 ವಿ (ತ) 8–8 ದ್ವ (ತ), 9+ನೆ (ತ).

....

ಅದಾವ ವಿದ್ಯೆವ ಬಲ್ಲವರೆಲ್ಲರೂ ಅವಿದ್ಯವಾಗಿ ಹೋದರು. ಭಕ್ತಿಜ್ಞಾನದ ಸಾಧಿಸಿದ ಪುರಾತನರೆಲ್ಲರೂ ನಿತ್ಯವಾದರೆಂಬುದೀ ವಚನದರ್ಥ.

೬೧೪

ಹಾರುವರೆಲ್ಲರೂ ನೆರೆದು ಶೂದ್ರನ ಹಾರುವನ ಮಾಡುವಲ್ಲಿ ನಂದಿಮುಖವಲ್ಲದೆ ಮಾಡಲಾಗದು; ವಿಭೂತಿಯಲ್ಲದೆ ಮತ್ತೇನನೂ ಧರಿಸಲಾಗದು; 'ಭರ್ಗೋದೇವ'ನೆಂಬ ಮಂತ್ರವಲ್ಲದೆ

ಮತ್ತೇನ ಜಪಿಸಲಾಗದು, ನಿಮ್ಮಿಂದ ಕುಲಜರಾಗಿ ಮತ್ತೆ ಅನ್ಯ ದೈವಕ್ಕೆಱಗುವ ಜಗದನ್ಯಾಯಿಗಳ ನಾನೇನೆಂಬೆ, ಕೂಡಲಸಂಗಮದೇವಾ?

I –

ಹಾರುವರೆಲ್ಲರೂ ನೆರೆದು: ಹಾರುವರೆಲ್ಲರೂ–ವಿಪ್ರರಷ್ಟೂ, ನೆರೆದು–ಒಬ್ಬುಳಿಯಾಗಿ, ಶೂದ್ರನ ಹಾರುವನ ಮಾಡುವಲ್ಲಿ: [ಶೂದ್ರನ–] ತಂದೆ ಬ್ರಾಹ್ಮಣನಾಗಿ ತಾಯಿ ಶೂದ್ರಗಿತ್ತಿಯಾಗಿ ಈರ್ವದಿಂದ ಹುಟ್ಟಿದ 'ವಟುವ' ಪುರುಷನ, ಹಾರುವನ ಮಾಡುವಲ್ಲಿ–ಬ್ರಾಹ್ಮಣನ ಮಾಡುವಲ್ಲಿ, ನಂದಿಮುಖ ದಲ್ಲೆ–ನಂದಿಮುಖವಾಡವನ್ನು ತಿದ್ದಬೇಕಲ್ಲದೆ, ಮಾಡಲಾಗದು–ಹನುಮನರೂಪು ಗರೂಡನರೂಪು ವನ್ನು ತಿದ್ದಲಾಗದು. ವಿಭೂತಿಯಲ್ಲದೆ–ಚಿದ್ವಿಭೂತಿಯಲ್ಲದೆ, ಮತ್ತೇನನೂ ಧರಿಸಲಾಗದು–ಮಟ್ಟಿ ಮಣ್ಣಿನ ಪಟ್ಟಿನಾಮವನಿಟ್ಟುಕೊಳಲಾಗದು. 'ಭರ್ಗೋದೇವ'ನೆಂಬ ಮಂತ್ರವಲ್ಲದೆ ಭರ್ಗ–ರಕ್ಷಕನಾದಂಥ, ದೇವ–ದಿವ್ಯಲಾವಣ್ಯಕಾಂತಿಯನುಳ್ಳ ಪರಶಿವಲಿಂಗವು, ಎಂಬ–ಹೀಂಗೆಂದು ಹೇಳುವ, ಮಂತ್ರವಲ್ಲದೆ–ಗಾಯತ್ರಿಮಾತ್ರವಲ್ಲದೆ, ಮತ್ತೇನ ಜಪಿಸಲಾಗದು–ಇಂದ್ರಮಂತ್ರ ಚಂದ್ರಮಂತ್ರ ಗೋಪಾಲಮಂತ್ರ ಮೊದಲಾದ ಭಿನ್ನಮಂತ್ರಗಳನು ಪಠಿಸಲಾಗದು.

ನಿಮ್ಮಿಂದ–ಸ್ವಾಮಿಗಳಿಂದಲು, ಕುಲಜರಾಗಿ–ನಂದಿಮುಖವಾಡ ವೃಷಭನಾಟಕ್ಕೆ ಭಸ್ಮರುದ್ರಾಕ್ಷಿ ಧಾರಣ ಪಂಚಾಕ್ಷರಿಮಂತ್ರಯುಕ್ತವಾಗಿ ಬ್ರಹ್ಮೋಪದೇಶವ ಪಡೆದುಕೊಂಡು, ಕುಲಶ್ರೇಷ್ಠರಾಗಿ, ಮತ್ತೆ–ಮರಳಿ, ಅನ್ಯದೈವಕ್ಕೆ ಎರಗುವ–ನೀಚದೈವಗಳಿಗೆ ತಲೆವಾಗಿ ನಮಸ್ಕರಿಸುವ, ಜಗದ–ಲೋಕವ, ಅನ್ಯಾಯಿಗಳ–ಆಚಾರಭ್ರಷ್ಟರ, ನಾನೇನೆಂಬೆ–ನಾನೇನೆಂದು ಹೇಳಲಿ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

....

೧–೧ ಎಂಟು (ಗ)

೬೧೫

ದೇವನೊಬ್ಬ, ನಾಮ ಹಲವು; ಪರಮ ಪತಿವ್ರತೆಗೆ ಗಂಡನೊಬ್ಬ, ಮತ್ತೊಂದಕ್ಕೆಱಗಿದಡೆ ಕಿವಿ ಮೂಗ ಕೊಯ್ವ! ಹಲವು ದೈವದೆಂಜಲ ತಿಂಬುವರನೇನೆಂಬೆ, ಕೂಡಲಸಂಗಮದೇವಾ.

I– –

ದೇವನೊಬ್ಬ ನಾಮ ಹಲವು; ದೇವ–ಪರಮೇಶ್ವರನು, ಒಬ್ಬ–ಓರ್ವನು, ನಾಮ ಅಭಿಧಾನವು, ಹಲವು–ನಾನಾ ಪ್ರಕಾರವು, ಪರಮ ಪತಿವ್ರತೆಗೆ–ಪತಿವ್ರತಾಭಾವವನುಳ್ಳಂಥ ಸ್ತ್ರೀಯಳಿಗೆ, ಗಂಡ–ಸ್ವಭರ್ತೃವಾದ ರಮಣನು, ಒಬ್ಬ–ಓರ್ವನು. [ಮತ್ತೊಂದಕ್ಕೆಱಗಿದಡೆ–] ಮತ್ತೊಬ್ಬ ಪಾಣ್ಬ ಪುರುಷನಿಗೆ ಇಚ್ಛೆಸಿದರೆ, ಕಿವಿಮೂಗ ಕೊಯ್ವನೆಂಬ ದೃಷ್ಟೋಮಾನದ ಹಾಂಗೆ.

● ಪರಮಪತಿವ್ರತೆಗೆ–ಶರಣನೇ ಸತಿಯಾಗಿ ಲಿಂಗವೇ ಪತಿಯಾಗಿ ಶರಣಸತಿ ಲಿಂಗಪತಿತ್ವವಿಡಿ ದಾಚರಿಸುವಂಥ ಶರಣ ಸತಿಯಳಿಗೆ, ಗಂಡ–ಇಷ್ಟಲಿಂಗವೆಂಬ ರಮಣನು, ಒಬ್ಬ–ಓರ್ವನು, ಮತ್ತೊಂದಕ್ಕೆರಗಿದಡೆ–ಮತ್ತೊಂದು ಸ್ಥಾವರಾದಿಗಳಿಗೆ ಇಚ್ಛೈಸಿದರೆ, ಸ್ಥಾವರಾದಿಗಳಿದ್ದೆಡೆಗೆ ಹೋಗಿ

ಎಣ್ಣೆಮಜ್ಜನವನ್ನು ನೀಡಿಸಿ ಎಲೆಪೂಜೆಯನ್ನು ಕಟ್ಟಿಸಿ ಪರವು ಪಾಡ್ಯವನ್ನು ಮಾಡಿ ದಾನ ದಕ್ಷಿಣವನ್ನು ಕೊಟ್ಟು ಅಡ್ಡಡ್ಡ ಬಿದ್ದು ಆರಾಧಿಸಿದರೆ, ಕಿವಿ ಮೂಗು ಕೊಯ್ವ: ಕಿವಿ-ನಿಜಶ್ರುತಿಯೆಂಬ ಶ್ರವಣವನ್ನು, ಮೂಗು-ಶಿವಾಭಿಮಾನವೆಂಬ ಘ್ರಾಣವನ್ನು, ಕೊಯ್ವ-ಅಪಹರಿಸಿ ಮಾನಭಂಗವ ಮಾಡಿ ಭವಕ್ಕೆ ಹಾಕಿಬಿಡುವನು, ಹಲವು ದೈವದೆಂಜಲ ತಿಂಬುವರ : ಹಲವು ದೈವದ-ತಿಮ್ಮ ಬೊಮ್ಮ ಬೀರ ಜಟ್ಟಿಂಗ ಮೊದಲಾದ ನೀಚದೈವಂಗಳ, ಎಂಜಲ-ಉಚ್ಚಿಷ್ಟವನ್ನು, ತಿಂಬುವರ-ಅನುಭವಿಸುವಂಥ ವರನು, ಏನೆಂದೆ_ನಾ ಎಂತೆಂದು ಹೇಳಲಿ, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

೬೧೬

ಕರ್ತನ ಪೂಜಿಸಿ ಕುಚಿತದೈವಕ್ಕೆಱಗುವರು ಕತ್ತೆ ಕುದುರೆಗೆ ಹುಟ್ಟಿದ ಹೇಸರನಂತೆ! ಭಕ್ತರೆಂತೆಂಬೆನೆ, ಭೃತ್ಯರೆಂತೆಂಬೆನೆ, ಶರಣರೆಂತೆಂದೆನವರ? ಎರಡುಳ್ಳ ಪ್ರಪಂಚಿಗಳ ಮೆಚ್ಚ, ಕೂಡಲಸಂಗಮದೇವ!

I -

ಕರ್ತನ-ಪಂಚಕೃತ್ಯಂಗಳಿಗೆ ಒಡೆಯನಾದ ಪರಶಿವಲಿಂಗವನ್ನು, ಪೂಜಿಸಿ-ಆರಾಧಿಸಿ, ಕುಚಿತದೈವಕ್ಕೆಱಗುವರು-ನೀಚದೈವಂಗಳಿಗೆ ತಲೆವಾಗಿ ನಮಸ್ಕರಿಸುವರು, [ಕತ್ತೆ ಕುದುರೆಗೆ ಹುಟ್ಟಿದ ಹೇಸರನಂತೆ-] ಕತ್ತೆ ಕುದುರೆಗೆ ಹುಟ್ಟಿದಂಥವೇ ಹೇಸರಗತ್ತೆಯೆನಿಸುವದು. ಅಂತಪ್ಪ ಹೇಸರಗತ್ತಿಗೆ ಸಮಾನವಾದಂಥ ಜೀವರುಗಳ, ಭಕ್ತರೆಂತೆಂಬೆ-ಭಕ್ತಿಸ್ಥಲದಾಚರಣೆಯುಳ್ಳವರೆಂದು ಹ್ಯಾಂಗೆ ಹೇಳುವೆನು, ಭೃತ್ಯರೆಂತೆಂಬೆ-ಮಾಹೇಶ್ವರಸ್ಥಲದಾಚರಣೆಯುಳ್ಳವರುಗಳೆಂದು ಹ್ಯಾಂಗೆ ಹೇಳುವೆನು, ಶರಣರೆಂತೆಂಬೆ -ಶರಣಸ್ಥಲದಾಚರಣೆಯುಳ್ಳವರೆಂದು ಹ್ಯಾಂಗೆ ಹೇಳುವೆನು, ಅವರ-ಅಂತಪ್ಪ ಆಶಾಲಾಂಛನಿ ಉಪಾಧಿಕರುಗಳು, ಎರಡುಳ್ಳ-ಗುರು ಕರುಣಿಸಿಕೊಟ್ಟಂಥ ಇಷ್ಟಲಿಂಗದ ಭಜನೆಯನ್ನು ಮಾಡುತ್ತ ಸ್ಥಾವರಲಿಂಗದ ಭಜನೆಯನ್ನು ಮಾಡುವಂಥ ಎರಡುಳ್ಳ ಭಿನ್ನಭಾವವುಂಟಾದ, ಪ್ರಪಂಚಿಗಳ-ತನುಪ್ರಂಚು ಮನಪ್ರಪಂಚು ಆತ್ಮನ ಇಂದ್ರಿಯ ವಿಷಯಪ್ರಪಂಚನುಳ್ಳಂಥವರುಗಳ, ಮೆಚ್ಚ-ಮಮ ಕರಿಸಿಕೊಂಡು ನಿಜಮೋಕ್ಷವನ್ನು ಕರುಣಿಸಿಕೊಟ್ಟಾನೆ? ಕೊಡನು, ಕೂಡಲಸಂಗಮದೇವ-ಪರಶಿವ ಲಿಂಗವು.

೬೧೭

ಕಂಡಕಂಡವರನೆಲ್ಲ ಗಂಡರೆಂದೆಂಬ ದುಂಡೆಯನವಳ ಸಜ್ಜನೆ ಎನಬಹುದೆ? ಲಿಂಗಪ್ರಸಾದವನುಂಡು ಅನ್ಯದೈವವ ಕೊಂಡಾಡುವವರ ಮೆಚ್ಚುವನೆ ನಮ್ಮ ಕೂಡಲಸಂಗಮದೇವನು." ಆ ಭಂಡರಿಗೆ ಮಾಡಿದ ಹುಳುಗೊಂಡವನು ?

I -

ಕಂಡಕಂಡವರನೆಲ್ಲ-ಕಣ್ಣಿಗೆ ರಮ್ಯವಾಗಿ ಕಾಣಬರುವಂಥವರಷ್ಟೂ, ಗಂಡರೆಂದೆಂಬ-ಅವ ನನ್ನ ರಮಣ ಇವ ನನ್ನ ರಮಣನೆಂದು ಹೇಳುವ, ದುಂಡೆಯನವಳ-ದುಂಡಾವೃತ್ತಿಯಿಂದ

ಚರಿಸುವಂಥ ಸ್ತ್ರೀಯುಳ, ಸಜ್ಜನೆ ಎನಬಹುದೆ?–ತನ್ನ ರಮಣನೇ ಪ್ರಾಣವಾಗುಳ್ಳಂಥ ಪತಿವ್ರತಾಂಗನೆಯೆಂದು ಹೇಳುವುದಕ್ಕಾದೀತೆ? ಆಗದೆಂಬ ದೃಷ್ಟೋಪಮಾನದ ಹಾಂಗೆ.

● ಕಂಡಕಂಡವರನೆಲ್ಲ–ಸಾಲಿಗ್ರಾಮ ಮೊದಲಾದ ಸಕಲದೇವತಾದಿಗಳು, ಗಂಡರೆಂದೆಂಬ–ನಮ್ಮ ಇಷ್ಟದೈವಕ್ಕೆ ಸಮಾನವೆಂದು ಹೇಳುವ, ದುಂಡೆಯನವಳ–ದಿಂಡಾವೃತ್ತಿಯನುಳ್ಳ ಉಪಾಧಿಕ ಭಕ್ತನೆಂಬ ಪಾಣ್ಬಾಂಗನೆಯ, ಸಜ್ಜನೆ ಎನಬಹುದೆ?–ಶರಣನೇ ಸತಿಯಾಗಿ ಲಿಂಗವೇ ಪತಿಯಾಗಿ ಶರಣಸತಿ ಲಿಂಗಪತಿತ್ವವಿಡಿದಾಚರಿಸುವಂಥ ಶರಣಸ್ಥಲದಾಚರಣೆಯುಳ್ಳಾತನೆಂದು ಹೇಳುವುದಕ್ಕಾದೀತೆ? ಆಗದು.

ಲಿಂಗಪ್ರಸಾದವನುಂಡು–ಸಕಲಪದಾರ್ಥವನ್ನು ಲಿಂಗ ಮುಂತಾಗಿ ಅನುಭವಿಸಿ, ಅನ್ಯದೈವವ ಕೊಂಡಾಡುವವರ–ನೀಚದೈವಂಗಳ ಸ್ತೋತ್ರವ ಮಾಡುವಂಥವರುಗಳನ್ನು, ಮಚ್ಚುವನೆ?–ಮಮಕರಿಸುವನೆ? ಮಮರಿಕಸನು, ನಮ್ಮ ಕೂಡಲಸಂಗಮದೇವನು–ನಮ್ಮ ಪರಶಿವಲಿಂಗವು. ಆ ಭಂಡರಿಗೆ–ಆ ಜಗಬಂಡರಿಗೆ, ಮಾಡಿದ ಹುಳುಗೊಂಡವನು–ಬಾಲಯುಕ್ತವಾದ ಕ್ರಿಮಿಗಳ ಹೊಂಡದಲ್ಲಿ ಹಾಕಿಬಿಡುತ್ತಿಹನು.

೬೧೮

ನಂಬಿದ ಹೆಂಡತಿಗೆ ಗಂಡನೊಬ್ಬನೆ ಕಾಣಿರೋ! ನಂಬಬಲ್ಲ ಭಕ್ತಂಗೆ ದೇವನೊಬ್ಬನೆ ಕಾಣಿರೋ ! ಬೇಡ ! ಬೇಡ ! ಅನ್ಯ ದೈವಂಗಳ ಸಂಗ ಹೊಲ್ಲ ! ಬೇಡ ! ಬೇಡ ! ಪರದೈವದ ಸಂಗ ಹೊಲ್ಲ ! ಬೇಡ ! ಬೇಡ ! ಅನ್ಯ ದೈವವೆಂಬುದು ಹಾದರ ಕಾಣಿರೋ ! ನಮ್ಮ ಕೂಡಲಸಂಗಮದೇವ ಕಂಡಡೆ ಮೂಗ ಕೊಯ್ವ ಕಾಣಿರೋ !

I –

ನಂಬಿದ ಹೆಂಡತಿಗೆ ಗಂಡನೊಬ್ಬನೆ ಕಾಣಿರೋ! : ನಂಬಿದ–ತನ್ನ ಗಂಡನೇ ಗತಿಯೆಂದು ವಿಶ್ವಾಸಿಸಿದ, ಹೆಂಡತಿಗೆ–ಸ್ತ್ರೀಯಳಿಗೆ, ಗಂಡ–ಸ್ವಭರ್ತೃವಾದ ರಮಣನು, ಒಬ್ಬನೇ ಕಾಣಿರೋ! –ಓರ್ವನೇ ಕಂಡಿರೋ, ನಂಬಬಲ್ಲ–ತನುಮನಧನವನಿತ್ತು ವಿಶ್ವಾಸಿಸಬಲ್ಲ. ಭಕ್ತಂಗೆ–ಶಿವಭಕ್ತಂಗೆ, ದೇವ –ಪರಮೇಶ್ವರನು, ಒಬ್ಬನೇ–ಓರ್ವನೆ, ಕಾಣಿರೋ!–ಕಂಡಿರೋ. ಬೇಡ ಬೇಡ–ನೀಚದೈವದ ಭಜನೆಯ ಮಾಡಬೇಕೆಂದು ಇಚ್ಛೈಸಬೇಡ ಇಚ್ಛೈಸಬೇಡ, ಅನ್ಯದೈವಂಗಳ–ನೀಚದೈವಂಗಳ, ಸಂಗ–ತತ್ಸಂಗವು, ಹೊಲ್ಲ–ಬಹುಕ್ಷೀಣವು, ಬೇಡ ಬೇಡ–ನೀಚದೈವದ ಭಜನೆಯ ಮಾಡಬೇಕೆಂದು ಇಚ್ಛೈಸಬೇಡ ಇಚ್ಛೈಸಬೇಡ.

ಪರದೈವದ–ಅನ್ಯದೈವದ, ಸಂಗ–ತತ್ಸಂಗವು, ಹೊಲ್ಲ–ಬಹು ಕ್ಷೀಣವು, ಬೇಡ ಬೇಡ–ನೀಚ ದೈವದ ಭಜನೆಯ ಮಾಡಬೇಕೆಂದು ಇಚ್ಛೈಸಬೇಡ ಇಚ್ಛೈಸಬೇಡ. ಅನ್ಯದೈವವೆಂಬುದು–ಪರದೈವೆಂಬುದು, ಹಾದರ–ತನ್ನ ಸ್ತ್ರೀಯಳನು ಬಿಟ್ಟು ಪರಸ್ತ್ರೀಯಳ ಸಂಸರ್ಗವ ಮಾಡಿದ ಹಾಂಗೆ ಜಾರಭಾವವಾಗಿರ್ಪುದು, ಕಾಣಿರೋ–ಕಂಡಿರೋ. ನಮ್ಮ ಕೂಡಲಸಂಗಮದೇವ–ನಮ್ಮ ಪರಶಿವಲಿಂಗವು, ಕಂಡಡೆ–ನೋಡಿದರೆ, ಮೂಗಕೊಯ್ವ–ಆಚಾರಾಂಗವೆಂಬ ಘ್ರಾಣವನಪಹರಿಸಿ ಮಾನಭಂಗವ ಮಾಡಿ ಭವಕ್ಕೆ ಹಾಕಿಬಿಡುತ್ತಿಹನು, ಕಾಣಿರೋ!–ಕಂಡಿರೋ.

೬೧೯

[1]ಉಣಿಸುವ ಉಡಿಸುವ[1] ಗಂಡನಿದ್ದಂತೆ, ಜೋ[2]ಡ[2]ಮಿಂಡಂಗೆ ಕಣ್ಣ ಚೆಲ್ಲುವಳ ಕೇಡಿಂಗೆ ಬೆಱಗಾದೆ[3]ನು[3]. ಕೂಡಲಸಂಗಮದೇವ[4]ನು[4] ಸಿಂಗಾರದ ಮೂಗ ಬಣ್ಣಿಸಿ ಹಲ್ಲುದೋಱಿ ಕೊಯ್ವ!

I -

ಉಣಿಸುವ–ಮೃಷ್ಟಾನ್ನ ಪದಾರ್ಥಂಗಳನು ಅನುಭವಿಸುವುದಕ್ಕೆ ಈವ, ಊಡಿಸುವ–ಸಣ್ಣಸೀರೆ ಬಣ್ಣದ ಕುಪ್ಪಸ ವಸ್ತು ಒಡವೆ ಮೊದಲಾದುವನ್ನು ಉಡುವುದಕ್ಕೆ ಕೊಡುವ. ಗಂಡನಿದ್ದಂತೆ–ಸ್ವ ಭರ್ತೃವಾದ ತನ್ನ ರಮಣಿದ್ದ ಹಾಂಗೆ, ಜೋಡಮಿಂಡಂಗೆ–ಮತ್ತೊಬ್ಬ ವಿಟಪುರುಷಂಗೆ, ಕಣ್ಣ ಚೆಲ್ಲವಳ–ಕಣ್ಣು ಹಾಕಿ ಕರೆವಂಥ ಹಾದರಗಿತ್ತಿಯ, ಕೇಡಿಂಗೆ–ಲುಕ್ಸಾನಕ್ಕೆ, ಬೆಱಗಾದೆನು–ನಾಸಿಕದ ಮೇಲೆ ತರ್ಜನಿಯನಿಟ್ಟುಕೊಂಡು ಆಶ್ಚರ್ಯಂಬಟ್ಟೆನು, ಕೂಡಲಸಂಗಮದೇವನು–ಮನೆಯ ಗಂಡನು, ಸಿಂಗಾರದ–ವದನಕ್ಕಲಂಕಾರವಾದ, ಮೂರ–ಘ್ರಾಣವನ್ನು, ಬಣ್ಣಿಸಿ–ಒಪ್ಪವಿಟ್ಟು, ಹಲ್ಲುದೋಱಿ ಕೊಯ್ವರದನಂಗಳ ಕುರುಹುಗಾಣಿಸುವ ಹಾಂಗೆ ಛೇದಿಸುತ್ತಿಹನೆಂಬ ದೃಷ್ಟೋಪಮಾನದ ಹಾಂಗೆ.

● ಉಣಿಸುವ–ಶಿವಸುಖವನ್ನು ಅನುಭವಿಸುವುದಕ್ಕೀವ, ಉಡಿಸುವ–ಶಿವಸುಖವನ್ನು ಅಚ್ಛಾದಿಸಿ ಕೊಂಬುವುದಕ್ಕೆ ಕೊಡುವ, ಗಂಡನಿದ್ದಂತೆ ಇಷ್ಟಲಿಂಗವೆಂಬ ರಮಣನು ಇರುತ್ತಿರ್ದ ಹಾಂಗೆ, ಜೋಡ ಮಿಂಡಂಗೆ ಕಣ್ಣ ಚೆಲ್ಲುವಳ–ಸ್ಥಾವರಮೂರ್ತಿಗಳಿದ್ದೆಡೆಗೆ ಹೋಗಿ ಎಣ್ಣೆ ಮಜ್ಜನವನ್ನು ನೀಡಿಸಿ ಎಲೆ ಪೂಜೆಯನ್ನು ಕಟ್ಟಿಸಿ ಪರವು ಪಾಡ್ಯವನ್ನು ಮಾಡಿ ದಾನದಕ್ಷಿಣವನ್ನು ಕೊಟ್ಟು ಅಡ್ಡಡ್ಡ ಬಿದ್ದಾರಾಧಿಸುವಂಥವರ, ಕೇಡಿಂಗೆ–ಲುಕ್ಸಾನಕ್ಕೆ ಬೆಱಗಾದೆನು–ಆಶ್ಚರ್ಯಂಬಟ್ಟೆನು. ಕೂಡಲಸಂಗಮದೇವನು–ನಮ್ಮ ಪರಶಿವಲಿಂಗವು, ಸಿಂಗಾರದ–ಅಂಗಕ್ಕೆ ಅಲಂಕಾರವಾದ, ಮೂಗ–ಆಚಾರಾಂಗವೆಂಬ ಘ್ರಾಣವನ್ನು ಬಣ್ಣಿಸಿ–ಒಪ್ಪವಿಟ್ಟು–, ಹಲ್ಲುದೋಱಿ ಕೊಯ್ವ–ಕರಣಂಗಳ ವರ್ತನೆಯನ್ನುಂಟುಮಾಡಿ ಚಿತ್ಕರಣಂಗಳನಪಹರಿಸಿ ದುಷ್ಕರಣಂಗಳಿಗೊಳಗು ಮಾಡುತ್ತಿಹನು.

II -

1–1 ಉಡುವ ಉಡಿಸುವ (ಚ, ಜ), 2–2 ಡೆ (ಚ, ಜ), 3–3 ನಾನು (ಚ, ಜ). 4–4 ರು (ಚ, ಜ)

....

ಊಡುವ ಉಡಿಸುವ ಗಂಡನಿದ್ದಂತೆ–ಗುರುಲಿಂಗಜಂಗಮದ ಶುದ್ಧಸಿದ್ಧಪ್ರಸಿದ್ಧಪ್ರಸಾದವನ ನುಭವಿಸುಗೊಡುವ ಆ ಗುರುಲಿಂಗಜಂಗಮದ ಸುಖೋಪಸುಖದಂಬರವನು ಪ್ರವೇಷ್ಟಿಸಿಕೊಂಬುದಕ್ಕೆ ಕೊಡುವ ಇಷ್ಟಲಿಂಗವೆಂಬ ಪುರಷನಿದ್ದಹಾಂಗೆ; ಜೋಡೆ ಮಿಂಡಂಗೆ ಕಣ್ಣ ಚೆಲ್ಲುವಳ ಕೇಡಿಂಗೆ ಬೆಱಗಾದೆ ನಾನು–ಅನ್ಯದೈವಂಗಳಿಗೆ ಆತ್ಮಜ್ಞಾನದೃಷ್ಟಿಯನು ಹಾಕುವ ಭಿನ್ನಭಕ್ತನ ನಷ್ಟಕ್ಕೆ ನಾನಾ ಶ್ಚರ್ಯಂಬಟ್ಟೆನು, ಕೂಡಲಸಂಗಮದೇವರು ಸಿಂಗಾರದ ಮೂಗ ಬಣ್ಣಿಸಿ ಹಲುದೋಱಿಕೊಯ್ವ–ಪರ ಶಿವಲಿಂಗದೇವರು ಸರ್ವಾಚಾರಸಂಪತ್ತಿನಾಚರಣೆಯಲ್ಲಿ ಲಾವಣ್ಯವೆತ್ತಂಥ ಶಿವಾಭಿಮಾನವನು ಒಪ್ಪವಿಟ್ಟು ಕರಣಂಗಳ ಪ್ರಕೃತಿ ಉಂಟಾಗುವ ಹಾಂಗೆ ಅಪಹರಿಸುವನೆಂಬುದರ್ಥ.

....

ಚ, ಜ, ಪ್ರತಿಗಳಲ್ಲಿ ಈ ವಚನ ಹಾಗೂ ಟೀಕು ಹಾಗೂ ಟೀಕು ೬೨೨ನೆಯ ವಚನದ ತರುವಾಯ ಬಂದಿದೆ (ಸಂ).

೬೨೦

ಅಷ್ಟಮಿ ನವಮಿ ಎಂಬ ಕಲ್ಪಿತವೇಕೊ ಶರಣಂಗೆ? ತಪ್ಪಿತು ಗಣಪದವಿ! ಲಿಂಗಕ್ಕೆ ದೂರ, ಜಂಗಮಕ್ಕೆ ದೂರ ! ಒಬ್ಬರಿಗಾಳಾಗಿ ಒಬ್ಬರನೋಲೈಸುವ ನಿರ್ಬುದ್ಧಿ ಮನುಜರ ನಾನೇನೆಂಬೆ, ಕೂಡಲಸಂಗಮದೇವಾ !

I –

ಅಷ್ಟಮಿ ನವಮಿ ಎಂಬ ಕಲ್ಪಿತವೇಕೋ ಅಷ್ಟಮಿ–ಹುಣ್ಣಿವೆ ಹೋದ ಎಂಟು ದಿವಸಕ್ಕೆ ಬರುವಂಥದೇ ಅಷ್ಟಮಿ, ಅಲ್ಲದೆ ಗೋಕುಲಾಷ್ಟಮಿಯು, ನವಮಿ–ಹುಣ್ಣಿವೆ ಹೋದ ಒಂಬತ್ತು ದಿವಸದೊಳಗೆ ಬರುವಂಥದೇ ನವಮಿ. ಅದಲ್ಲದೆ ಮಹಾನವಮಿ ೧ಮೊದಲಾದ ನವಮಿಯು,೧ ಎಂಬ–ಹೀಂಗೆಂದು ಹೇಳುವ, ಕಲ್ಪಿತವೇಕೋ–ಅಷ್ಟಮಿ ನವಮಿ ವಾರ ತಿಥಿ ಹಬ್ಬ ಹುಣ್ಣಿಮೆಗಳಲ್ಲಿ ಕುರುಹಿಟ್ಟುಕೊಂಡು ಲಿಂಗಪವೂಜೆಯ ಮಾಡುವಂಥದೇನು ಕಾರಣಕ್ಕೋ ಶರಣಂಗೆ–ಶಿವಶರಣಂಗೆ, ತಪ್ಪಿತ್ತು ಗಣಪದವಿ; [ಗಣಪದವಿ–] ಶಿವಗಣಂಗಳಿಂದಾಗುವಂಥ ಕೃಪೆ, ತಪ್ಪಿತ್ತು–ತೊಲಗಿತ್ತು. ಲಿಂಗಕ್ಕೆ ದೂರ:[ಲಿಂಗಕ್ಕೆ–] ಪರಶಿವಲಿಂಗದಲ್ಲಿ ಕೂಡುವುದಕ್ಕೆ, ದೂರ–ಎಟ್ಟುಗೊಳುವು. ಜಂಗಮಕ್ಕೆ ದೂರು: [ಜಂಗಮಕ್ಕೆ–] ಚರಲಿಂಗದಲ್ಲಿ ಕೂಡುವುದಕ್ಕೆ, ದೂರು–ಎಟ್ಟುಗೊಳವು ಒಬ್ಬರಿಗಾಳಾಗಿ–ಪರಶಿವ ಲಿಂಗವೇ ಕರ್ತೃವಾಗಿ ತಾನೇ ಭೃತ್ಯನಾಗಿರ್ದು, ಒಬ್ಬರನೋಲೈಸುವ–ತಿಮ್ಮ ಬೊಮ್ಮ ಬೀರ ಜಟ್ಟಿಂಗ ಮೊದಲಾದ ನೀಚದೈವಂಗಳ ಭಜನೆಯ ಮಾಡುವ, ನಿರ್ಬುದ್ದಿ–ಬುದ್ಧಿಬಾಹ್ಯರಾದ, ಮನುಜರ–ಮನುಷ್ಯರುಗಳ, ನಾನೇನೆಂಬೆ ನಾನೇನೆಂದು ಹೇಳಲಿ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

....

೧–೧ x (ಗ)

೬೨೧

ಎಲವೋ ಎಲವೋ ಪಾಪಕರ್ಮವ ಮಾಡಿದವನೇ, ಎಲವೋ ಎಲವೋ ಬ್ರಹ್ಮಹತ್ಯವ ಮಾಡಿದವನೇ ಶರಣೆನ್ನಲವೋ! ಒಮ್ಮೆ ಶರಣೆಂದಡೆ ಪಾಪಕರ್ಮಂಗಳು ಕಟ್ಟೋಡುವವು. ಸರ್ವಪ್ರಾಯಶ್ಚಿತ್ತಕ್ಕೆ ಹೊನ್ನಪರ್ವತಂಗಳೈದಾವೆ; ಒಬ್ಬಂಗೆ ಶರಣೆನ್ನು, ಕೂಡಲಸಂಗಮದೇವಂಗೆ!

I –

ಎಲವೋ ಎಲವೋ–ಆತ್ಮನೇ, ಪಾಪಕರ್ಮವ ಮಾಡಿದವನೇ–ಹಿಂಸಾಕೃತ್ಯಂಗಳನು ಗೈದವನೆ, ಎಲವೋ ಎಲವೋ–ಆತ್ಮನೇ ಅತ್ಮನೇ, ಬ್ರಹ್ಮಹತ್ಯವ ಮಾಡಿದವನೆ–೧ಬ್ರಹ್ಮರ೧ ಕೊಂದಂಥ ವಧೆಯನ್ನು ಅನುಗೈದವನೆ, ಎಲವೋ–ಆತ್ಮನ, ಶರಣೆನ್ನೆಲವೋ–ಲಿಂಗಪೂಜೆಯ ಮಾಡಿ ಲಿಂಗಕ್ಕೆ ನಮಸ್ಕಾರವೆಂದು ನಮಸ್ಕರಿಸಲವೋ, ಒಮ್ಮೆ ಶರಣೆಂದಡೆ–ಒಂದು ವೇಳೆ ಲಿಂಗಪವೂಜೆಯ ಮಾಡಿ ಲಿಂಗಕ್ಕೆ ನಮಸ್ಕಾರವೆಂದು ನಮಸ್ಕರಿಸಿದರೆ, ಪಾಪ–ದೋಷವು, ಕರ್ಮ–ಸಂಚಿತಾದಿ ಕರ್ಮತ್ರಯಂಗಳು, ಕೆಟ್ಟೋಡುವವು–ನಷ್ಟವಾಗುತ್ತಿಹವು. ಸರ್ವಪ್ರಾಯಶ್ಚಿತ್ತಕ್ಕೆ–ಮಾಡಬಾರದ ಪಾಪವ ಮಾಡಿ ಪಾಪಕರ್ಮ

ಂಗಳ ನಷ್ಟಮಾಡಿಕೊಳಬೇಕಾದರೆ, ಸಮಸ್ತ ಪಾಪ ಬಿಡುಗಡೆಯ ಮಾಡಿಸಿಕೊಂಬುವುದಕ್ಕೆ, ಹೊನ್ನ ಪರ್ವತಂಗಳೈದಾವೆ-ಸುವರ್ಣದಿಂದ ಪರ್ವತವನ್ನು ಮಾಡಿಸಿ ದಾನವನ್ನು ಕೊಟ್ಟರೂ ನೀ ಮಾಡಿದ ಪಾಪ ಬಿಡುಗಡೆಯಾಗಿ ಹೋಗದು, ಒಬ್ಬರಿಗೆ-ಕೂಡಲಸಂಗಮದೇವನೋರ್ವಂಗೆ, ಶರಣೆನ್ನು-ನಮಸ್ಕಾರವೆಂದು ನಮಸ್ಕರಿಸು.

....

೧-೧ ಬ್ರಾಹ್ಮಣರ (ಗ)

೬೨೨

ಹಲವು ಕೊಂಬಿಂಗೆ ಹಾಯಲುಬೇಡ : ಬಜೆ [1]ಕಾಯಕ್ಕೆ[1] ನೀಡಬೇಡ, ಲೋಗರಿಗೆ [2]ಕೊ[2]ಟ್ಟು ಭ್ರಮಿತನಾ[3]ಗ[3]ಬೇಡ! ಆಚಾರವೆಂಬುದು ಹಾವಸೆಗಲ್ಲು, ಭಾವ ತಪ್ಪಿದ ಬಳಿಕ ಏಗೈದಡಾಗದು. ಅಂಜದಿರು ಅಳುಕದಿರು ಪರದೈವಕ್ಕೆಱಗದಿರು ಕೂಡಲಸಂಗಮದೇವರ ಕೈಯಲ್ಲು ಈಸೋದೆನ್ನ ಭಾರ !

....

1-1 ಕಾಯಕ (ಗ)

I -

ಹಲವು ಕೊಂಬಿಂಗೆ ಹಾಯಲುಬೇಡ-ಸಾಲಿಗ್ರಾಮ ಮೊದಲಾದ ಸಕಲ ದೇವತಾದಿಗಳ ಭಜನೆಯೊಡನೆ ಕೂಡಿ ಚರಿಸಬೇಡ, ಬಜೆ [1]ಕಾಯಕ್ಕೆ ನೀಡಬೇಡ-ಅಂಗಕ್ಕೆ ಲಿಂಗೋಪದೇಶ ಮನಕ್ಕೆ ಮಂತ್ರೋಪದೇಶವಿಲ್ಲದಿದ್ದಂಥ ಭವಿಜನಾತ್ಮರುಗಳಿಗೆ ಸಕಲಪದಾರ್ಥವನ್ನು ನೀಡಿ ಸಂತುಷ್ಟಿಬಡಿಸಲುಬೇಡವು ಲೋಗರಿಗೆ-ಲೌಕಿಕದೊರ್ತನೆಯೊಡನೆ ಕೂಡಿ ಚರಿಸಲ್ಪಟ್ಟ ಪ್ರಾಕೃತಾತ್ಮರುಗಳಿಗೆ, ಕೊಟ್ಟು-ಹೊನ್ನು ಹಣ ವಸ್ತ್ರ ಕಪ್ಪಟಾದಿಗಳನಿತ್ತು. ಭ್ರಮಿತನಾಗಬೇಡ-ಜೀವಭಾವದ ಭ್ರಾಂತಿಯುಳ್ಳವನಾಗಿರಬೇಡ. ಆಚರವೆಂಬುದು ಹಾವಸೆಗಲ್ಲು-ಹಾವಸೆ ಇಲ್ಲದ ಪಾಷಾಣವನ್ನು ತುಳಿದರೆ ಆಚೆಗೆ ಹೋಗಿ ಒಂದು ಗೊತ್ತನ್ನು ಮುಟ್ಟುವನಲ್ಲದೆ ಹಾವಸೆ ಇದ್ದಂಥ ಪಾಷಾಣವನ್ನು ಮೆಟ್ಟಿದರೆ-ಮಧ್ಯದಲ್ಲಿ ಕಾಲುಜಾರಿ ಬಿದ್ದು ಕೈಕಾಲು ಮುರಿದು ದುಃಖವಾಗುವದಲ್ಲದೆ ಆಚೆಗೆ ಹೋಗಿ ಒಂದು ಗೊತ್ತನ್ನು ಮುಟ್ಯಾನೆ? ಮುಟ್ಟಲರಿಯನು. ಹಾಂಗೆ, ಅಷ್ಟಾವರಣವನ್ನೇ ಅಂಗವ ಮಾಡಿಕೊಂಡು ಪಂಚಾಚಾರವನ್ನೇ ಪ್ರಾಣವ ಮಾಡಿಕೊಂಡು ಏಕಲಿಂಗ ನಿಷ್ಠಾಪರನಾಗಿ ಆಚರಿಸುವಂಥ ಆಚರಣೆಯು ಕ್ರಿಯಾಚಾರದಲ್ಲಿ ಸಾವಧಾನಿಯಾದ ಶಿವಶರಣಂಗೆ ಅಳವಟ್ಟಿತ್ತಲ್ಲದೆ ಮಿಕ್ಕಿನ ದ್ವೈತಾದ್ವೈತಿಗಳಿಗೆ ಹಾವುಸೆಗಲ್ಲು ಮೆಟ್ಟಿದ ಹಾಂಗೆ ಅಶಕ್ಯವಾಗಿರ್ಪುದು. ಭಾವತಪ್ಪಿದ ಬಳಿಕ-ಪಂಚಾಚಾರಕ್ಕೆ ತಪ್ಪಿ ಪಂಚಮಹಾಪಾತಕಂಗಳಿಗೊಳಗಾದ ಮೇಲೆ, ಏಗೈದಡಾಗದು-ಏನು ಜಪ ತಪಾರಾಧನೆ ಕ್ರಿಯೆಗಳ ಮಾಡಿದರೂ ತಾವು ಮಾಡಿದ ಪಾಪ ಬಿಡುಗಡೆಯಾಗದು, ಅಂಜದಿರು-ಅಂತರಂಗದಲಿ ಭಯಂಬಡದಿರು, ಆಳುಕದಿರು-ಬಹಿರಂಗದಲ್ಲಿ ಹೆದರಿಕೊಳ್ಳದಿರು. ಪರ ದೈವಕ್ಕೆರಗದಿರು-ನೀಚದೈವಂಗಳಿಗೆ ತಲಬಾಗಿ ನಮಸ್ಕರಿಸದಿರು, ಕೂಡಲ ಸಂಗಮದೇವರ-ಪರಶಿವ

ಲಿಂಗದ, ಕೈಯಲ್ಲು–ಹಸ್ತದಲ್ಲು, ಈಸೋದು–ಇಷ್ಟಾರ್ಥಸಿದ್ಧಿಯನ್ನು ಹಡೆದುಕೊಂಬುವದು, ಎನ್ನ ಭಾರ–ಎನ್ನ ತೂಕವು.

....

೧–೧ ಕಾಯಕ

I– –

2–2 ಡೆಗೊ (ಚ, ಜ), 3–3 ಗಿರ (ಚ, ಜ)

....

ಹಲವು ಕೊಂಬಿಂಗೆ ಹಾಯಲು ಬೇಡ–ತತ್ತ್ವಂಗಳೆಂಬ ಶಾಖೆಯ ನಿಶ್ಚಯಿಸಬೇಡ, ಬಜೆಕಾಯಕ್ಕೆ ನೀಡಬೇಡ–ಜ್ಞಾನವಿಹೀನವಾಗಿ ದೇಹಬಾವ ಮುಂದುಗೊಂಡುಚರಿಸುವ ಆಶಾಲಾಂಛನಿಗಳಿಗೆ ಸಕಲಪಡಿಪದಾರ್ಥಂಗಳನೆಡೆಮಾಡಬೇಡ, ಲೋಗರಿಗೆಡೆಗೊಟ್ಟು ಭ್ರಮಿತನಾಗಿರಬೇಡ ಜಗ ಜ್ಜೀವನರುಗಳಿಗೆಡೆಯನಿತ್ತು ಸಂದೇಹಜೀವನಾಗಿರಬೇಡ, ಆಚಾರವೆಂಬುದು ಹಾವಸೆಗಲ್ಲು–ಸತ್ಕ್ರಿಯಾ ಚರವೆಂಬುದು ೨ಶೈವಾಳ೨ ಪಾಷಾಣವು, ಭಾವತಪ್ಪಿದ ಬಳಿಕ ಏಗೈದಡಾಗದು–ಸಮರಸಭಕ್ತಿಭಾವವು ಹೊಱಚ್ಚಾದ ಮೇಲೆ ಉಪಾದಿಭಕ್ತಿಯನೆಷ್ಟು ಮಾಡಿದರೂ ಮೋಕ್ಷವಾಗದು, ಅಂಜದಿರು–ಎದೆ ಬಿಚ್ಚದಿರು, ಅಳುಕದಿರು–ಆತ್ಮಸತ್ವಗುಂದದಿರು, ಪರದೈವಕ್ಕೆಱಗದಿರು–ಅನ್ಯದೈವಂಗಳಿಗೆ ಶಿರವಾಗದಿರು, ಮುಂದಕ್ಕೆ ಕಾಣಬಂದರ್ಥ.

....

೨–೨ ಯಸಿವಳ (ಕ)

೬೨೩

ದ್ವಿಜರಿಗೆ ಕೊಟ್ಟು ಹಲಬರು ಕೆಟ್ಟರು: ಉದ್ದರಿಸುವನೊಬ್ಬ ಶಿವಶರಣ ಸಾಲದೆ? ನಾರಾಯಣ ವೃದ್ಧಬ್ರಾಹ್ಮಣನಾಗಿ ಬಂದು ಬಲಿಯ ಭೂಮಿಯ ದಾನವ ಬೇಡಿದ : ಕೊಟ್ಟ ಬಲಿ ಬಂಧನ ಕ್ಕೊಳಗಾದ! ಈಶ ಜಂಗಮವಾಗಿ ಬಂದು ದಾಸನ ವಸ್ತ್ರವ ಬೇಡಿದ : ಕೊಟ್ಟ ದಾಸ ತವನಿಧಿಯ ಪಡೆದ! ಕಪಟದಿಂದ ನಾರಾಯಣ ಹಾರುವನಾಗಿ ಬಂದು ಕರ್ಣನ ಕವಚವ ಬೇಡಿದ: ಕೊಟ್ಟ ಕರ್ಣ ಕಾಳಗದಲ್ಲಿ ಮಡಿದ! ಕಾಮಾರಿ ಜಂಗಮವಾಗಿ ಬಂದು ಸಿರಿಯಾಳನ ಮಗನ ಬೇಡಿದ: ಕೊಟ್ಟ ಸಿರಿಯಾಳಸೆಟ್ಟಿ ಕಂಚಿಯಪುರವ ಕೈಲಾಸಕ್ಕೊಯ್ದ! ನಾರಾಯಣ ಹಾರುವನಾಗಿ ಬಂದು ನಾಗಾರ್ಜುನನ ಶಿರವ ಬೇಡಿದ : ಕೊಟ್ಟ ನಾಗಾರ್ಜುನನ ಶಿರಹೋಯಿತ್ತು ! ಶಿವನು ಜಂಗಮವಾಗಿ ಬಂದು ಸಿಂಧುಬಲ್ಲಾಳನ ವಧುವ ಬೇಡಿದ : ಕೊಟ್ಟ ಸಿಂಧುಬಲ್ಲಾಳ ಸ್ವಯಲಿಂಗವಾದ ! ಇದು ಕಾರಣ, ಇಲ್ಲಿದ್ದರೆಯೂ ಲೇಸು ಅಲ್ಲಿದ್ದರೆಯೂ ಲೇಸು, ಕೊಡಿರೇ ನಮ್ಮ ಕೂಡಲಸಂಗನ ಶರಣರಿಗೆ.

I– –

ದ್ವಿಜರಿಗೆ ಕೊಟ್ಟ ಹಲಬರು ಕೆಟ್ಟರು: ದ್ವಿಜರಿಗೆ–ವಿಪ್ರರುಗಳಿಗೆ, ಕೊಟ್ಟು–ದಾನ ದಕ್ಷಿಣೆಯನಿತ್ತು, ಹಲಬರು–ಹಲವು ಕೆಲವು ದೇವ ದಾನವ ಮಾನವರುಗಳು, ಕೆಟ್ಟರು–ಶಿವಶತ್ತ್ವವಳಿದು ಜೀವರಾದರು. ಉದ್ಧರಿಸುವನೊಬ್ಬ ಶಿವಶರಣ ಸಾಲದೆ: ಉದ್ಧರಿಸುವ–ಭಕ್ತಿಯನ್ನು ಕೈಕೊಂಡು ಮುಕ್ತಿಯನ್ನು ಕರುಣಿಸಿ ಕೊಡುವ, ಒಬ್ಬ ಶಿವಶರಣ–ಒಬ್ಬ ಹರಶರಣ, ಸಾಲದೆ–ಅಷ್ಟೇ ಸಾಲದೆ? ಅಷ್ಟೇ ಸಾಕು.

ನಾರಾಯಣ–ವಿಷ್ಣು, ವೃದ್ಧಬ್ರಾಹ್ಮಣನಾಗಿ–ಮುದಿಹಾರುವನಾಗಿ, ಬಂದು–ಎದ್ದು ಬಂದು, ಬಲಿಯ–ಬಲಿಚಕ್ರವರ್ತಿಯೆಂಬ ದೊರೆಯ, ಭೂಮಿಯ–ಮೂರಡಿ ಭೂಮಿಯನ್ನು, ಬೇಡಿದ–ಯಾಚಿಸಿದನು. ಕೊಟ್ಟ–ಇತ್ತಂಥ, ಬಲಿ–ಬಲಿಚರ್ಕವರ್ತಿಯು, [ಬಂಧನಕ್ಕೊಳಗಾದ–] ಬಂಧನಕ್ಕೆ ಸಿಕ್ಕಿದ ಪಾತಾಳಲೋಕ ಪರಿಯಂತರ ತುಳಿಸಿಕೊಂಡು ಹೋಗುವಂಥ ಬಾಧಕತ್ವಕ್ಕೆ ವಶವಾದನು. ಈಶ–ಪರಮೇಶ್ವರನು, ಜಂಗಮವಾಗಿ–ಚರಜಂಗಮವಾಗಿ, ಬಂದು–ಭಿಕ್ಷಕೆಂದು ಬಿಜಯಂಗೆಯ್ದು ಬಂದು, ದಾಸನ–ಜೇಡರ ದಾಸಿಮಯ್ಯನ, ವಸ್ತ್ರವ ಬೇಡಿದ–ಹನ್ನೆರಡು ವರುಷನೈದಂಥ ಪಂಚವಣ್ಣಿಗೆ ದೇವಾಂಗವನು ಕೇಳಿದ, ಕೊಟ್ಟ–ಇತ್ತಂಥ, ದಾಸ–ಜೇಡರದಾಸಿಮಯ್ಯನು, ತವನಿಧಿಯ ಪಡೆದ–ಎಂದೆಂದಿಗೂ ತೀರಕಡೆಯಾಗದಂಥ ತವನಿಧಿ ಪ್ರಸಾದವ ಹಡೆದುಕೊಂಡನು.

ಕಪಟದಿಂದ–ಕುಟಿಲ ವೇಷದಿಂದ, ನಾರಾಯಣ–ಕೃಷ್ಣನು, ಹಾರುವನಾಗಿ–ಕುಬ್ಜ ವಿಪ್ರ ನಾಗಿ, ಬಂದು–ಎಯ್ದುಬಂದು, ಕರ್ಣನ ಕವಚವ ಬೇಡಿದ–ಕರ್ಣನೆಂಬ ದೊರೆಯು ತೊಟ್ಟಂಥ ವಜ್ರಾಂಗಿಯ ಕೇಳಿದಲ್ಲಿ, ಕೊಟ್ಟ–ಇತ್ತಂಥ, ಕರ್ಣ–ಕರ್ಣನೆಂಬ ದೊರೆಯು, ಕಾಳಗದಲ್ಲಿ–ರಣಾಗ್ರದಲ್ಲಿ, ಮಡಿದ–ಮರಣವಾದನು. ಕಾಮಾರಿ–ಮನ್ಮಥಸಂಹಾರಿಯಾದ ಪರಶಿವಲಿಂಗವು, ಜಂಗಮವಾಗಿ–ಚರ ಲಿಂಗವಾಗಿ, ಬಂದು–ಭಿಕ್ಷಕೆಂದು ಬಿಜಯಂಗೆಯ್ದು ಬಂದು, ಸಿರಿಯಾಳನ–ಕಂಚಿಪಟ್ಟಣದ ಸಿರಿಯಾಳ ಸೆಟ್ಟಿಯ, ಮಗನ–ಏಳು ವರುಷದ ಕುಮಾರನಾದ ಚೀಲಾಳಯ್ಯನ, ಬೇಡಿದ–ಕೇಳಿದನು, ಕೊಟ್ಟ–ಇತ್ತಂಥ, ಸಿರಿಯಾಳಸೆಟ್ಟಿ–ಕಂಚಿಪಟ್ಟಣದ ಸಿರಿಯಾಳಸೆಟ್ಟಿಯು, ಕಂಚಿಯಪುರವ–ಕಂಚಿಪಟ್ಟಣವನ್ನು, ಕೈಲಾಸಕ್ಕೊಯ್ದ–ಕಾಯವೆರಸಿ ಕೈಲಾಸಕ್ಕೆ ತೆಗೆದುಕೊಂಡು ಹೋದನು.

ನಾರಾಯಣ–ವಿಷ್ಣು, ಹಾರುವನಾಗಿ–ವೃದ್ಧಬಾಹ್ಮಣನಾಗಿ, ಬಂದು–ಎಯ್ದುಬಂದು, ನಾಗಾರ್ಜುನನ–ನಾಗಾರ್ಜುನನೆಂಬ ಸಿದ್ಧನ, ಶಿರವ–ಮಸ್ತಕವನ್ನು, ಬೇಡಿದ–ಕೇಳಿದ, ಕೊಡ್ಟ–ಇತ್ತಂಥ, ನಾಗಾರ್ಜುನನ–ನಾಗಾರ್ಜುನನೆಂಬ ಸಿದ್ದನ, ಶಿರ–ಮಸ್ತಕವು, ಹೋಯಿತ್ತು–'ರಸಘುಂಟಿಕೆಯೆಂದು' ಗಾಳಿಪೂಜೆ ಹಬ್ಬುಗೆಯಲ್ಲಿ ಬಯಲಾಗಿ ಹೋಯಿತ್ತು. ಶಿವನು–ಪರಮೇಶ್ವರನು, ಜಂಗಮವಾಗಿ–ಚರಲಿಂಗವಾಗಿ, ಬಂದು–ಭಿಕ್ಷಕ್ಕೆಂದು ಬಿಜಯಂಗೆಯ್ದು ಬಂದು. ಸಿಂಧುಬಲ್ಲಾಳನ–ಸಿಂಧುಬಲ್ಲಾಳ ರಾಯನೆಂಬ ಶಿವಶರಣನ, ವಧುವ–ಹನ್ನೆರಡು ವರುಷದ ಪಟ್ಟಿದಂಗನೆಯನ್ನು, ಬೇಡಿದ–ಕೇಳಿದನು. ಕೊಟ್ಟ–ಇತ್ತಂಥ, [ಸಿಂದುಬಲ್ಲಾಳ–] ಸಿಂಧುಬಲ್ಲಾಳನೆಂಬ ಶಿವಶರಣನು, ಸ್ವಯಲಿಂಗವಾದ–ಶಿರುಣಾಮಲೆಯಲ್ಲಿ ಅರುಣಾಚಲೇಶ್ವರನೆಂಬ ಸ್ವಯಲಿಂಗ ಪದವಿಯನ್ನು ಹಡೆದುಕೊಂಡನು, ಇದು ಕಾರಣ–ಇದು ನಿಮಿತ್ಯಾರ್ಥವಾಗಿ, ಇಲ್ಲದ್ದರೆಯೂ–ಈ ಮರ್ತ್ಯಲೋಕದಲ್ಲಿದ್ದರೆಯೂ, ಲೇಸು–ಪರಿಣಾಮವು, ಅಲ್ಲಿದ್ದರೆಯೂ–ಆ ಕೈಲಾಸದಲ್ಲಿದ್ದರೆಯೂ, ಲೇಸು–ಪರಿಣಾಮವು; ನಮ್ಮ ಕೂಡಲ ಸಂಗನ ಶರಣರಿಗೆ–ನಮ್ಮ ಜಂಗಮಮೂರ್ತಿಗಳಿಗೆ ಕೊಡರೇ–ಇಚ್ಛಾಪದಾರ್ಥವನ್ನು ಕೊಟ್ಟು ಭಕ್ತಿಯ ಮಾಡಿರೇ.

....

೧-೧ ರಸಘುಂಟಿಕೆ (ಗ)

೬೨೪

ಎಚ್ಚು ವಾಲಿಯ ಕೊಂದ, ಕಟ್ಟಿದನು ಶರಧಿಯನು, ಹತ್ತು ತಲೆಯ ರಾವಣನ ಒಂದೇ ಅಂಬಿನಲ್ಲಿ ಮಡುಹಿದ, ಛಲದಿಂದ ಲಂಕಾದ್ವೀಪವ ನೆಲವಣ್ಣ ಮಾಡಿದ, ಕಲಿ ವಿಭೀಷಣಂಗೆ ಪಟ್ಟವ ಕಟ್ಟಿದ ರಾಮನ ತೋರಾ! ಮಾಯದ ಸಂಸಾರವ ನೆಚ್ಚಿ ವಾಯಕ್ಕೆ ಕೆಟ್ಟು ಬಱುದೊಱೆ[೨] ಹೋಗ ಬೇಡ; ಕರ್ತೃ ಕೂಡಲಸಂಗಂಗೆ ಶರಣೆನ್ನಿರಯ್ಯ!

I- -

ಎಚ್ಚು ವಾಲಿಯ ಕೊಂದು, ಕಟ್ಟಿದನು ಶರಧಿಯನು: ಎಚ್ಚು-ಬಾಣಪ್ರಯೋಗಿಸಿ, ವಾಲಿಯ-ವಾಲಿಯನ್ನು, ಕೊಂದ-ಸಂಹರಿಸಿದ, ಕಟ್ಟಿದನು ಶರಧಿಯನು-ಸಮುದ್ರಕ್ಕೆ ಸೇತುವೆಯ ಕಟ್ಟಿದನು ಅದಲ್ಲದೆ ಕಪಿಬಲಕ್ಕೆ ಸುಗ್ರಿವನ ಪಟ್ಟವ ಕಟ್ಟಿದನು. ಹತ್ತು ತಲೆಯ-ದಶ ಶಿರಸ್ಸನುಳ್ಳ; ರಾವಣನ-ರಾವಣಾಸುರನ, ಒಂದೇ ಅಂಬಿನಲ್ಲಿ-ಒಂದೇ ರಾಮಬಾಣದಲ್ಲಿ, ಮಡುಹಿದ-ಮರಣವನ್ನೈದಿಸಿದನು. ಛಲದಿಂದ-ಸೀತಾಂಗನೆಯನ್ನು ತೆಗದುಕೊಂಡು ಹೋದನೆಂಬುವಂಥ ಛಲಗ್ರಾಹಕತ್ವದಿಂದ, ಲಂಕಾ[೧]ದ್ವೀಪವ[೧]- ಲಂಕಾಪಟ್ಟಣವನ್ನು, ನೆಲವಣ್ಣ ಮಾಡಿದ-ಸುಟ್ಟು ಸೂರೆಹೊಯ್ದನು.

ಕಲಿ-ಪರಾಕ್ರಮಿಯಾದಂಥ, ವಿಭೀಷಣಂಗೆ-ವಿಭೀಷಣನೆಂಬ ರಕ್ಕಸನಿಗೆ, ಪಟ್ಟವ ಕಟ್ಟಿದ-ರಾಜಗದ್ದುಗೆಯ ಮೇಲೆ ಕುಳ್ಳಿರಿಸಿ ಮುತ್ತಿನ ರಾಶಿಯನ್ನಿಟ್ಟು ಶಿಖಾದುಂಗರವನ್ನು ಕೊಟ್ಟು ಪಟ್ಟಾಭಿಷೇಕವ ನಿರ್ಮಿತವ ಮಾಡಿದ, ರಾಮನ ತೋಱಾ-ಅಂತಪ್ಪ ಭದ್ರನೇನಾದರೂ ನಿತ್ಯನಾಗಿದ್ದಾನೆ? ಅವನು ಸತ್ತುಹೋದನು. ಮಾಯದ-ಅವಿದ್ಯ ಸಂಬಂಧವಾದ, ಸಂಸಾರವ-ಸಂಸಾರಪ್ರಪಂಚವನ್ನು, ನಚ್ಚಿ-ನಂಬಿ. ವಾಯಕ್ಕೆ-ಮಿಥ್ಯಕ್ಕೆ, ಕೆಟ್ಟು-ನಷ್ಟವಾಗಿ, ಬಱುದೊಱೆ ಹೋಗಬೇಡ-ವ್ಯರ್ಥಸ್ಯವಾಗಿ ಸತ್ತು ಹೋಗಬೇಡ. ಕರ್ತೃ ಕೂಡಲಸಂಗಂಗೆ-ಪಂಚಕೃತ್ಯಂಗಳಿಗೊಡೆಯನಾದಂಥ ಪರಶಿವಲಿಂಗಕ್ಕೆ, ಶರಣೆನ್ನಿರಯ್ಯ, ನಮಸ್ಕಾರವೆಂದು ನಮಸ್ಕರಿಸಿರಯ್ಯ.

....

೧-೧ ಕಪಿಲ ಬಾಲಕ್ಕೆ (ಕ), ೨-೨ ದ್ರಿಯ (ಗ).

III- -

ಬಱುದೊರೆವೋಗಬೇಡ-ಕಟ್ಟೆಕಾಲವೆಗಳ ಕೂಡದೆ ಹೋಗುವ ಪಿರಿಯ ಹೊಳೆಯಹಾಂಗೆ, ಅಂತರಂಗದಲ್ಲಿ ಜ್ಞಾನಸಾರಹೀನವಾಗಿ ಹೋಗಬೇಡವು.

V- -

[ಬಱುದೊಱೆ ಹೋಗಬೇಡ-] ಕಟ್ಟೆ ಕಾಲುವೆಯನು ಕೂಡದೆ ಕೊರಕಲಾಗಿ ಹೋಗಿ ಸಮುದ್ರವ ಕೂಡುವ ಪಿರಿಯ ಹೊಳೆಯ ಹಾಂಗೆ ವ್ಯರ್ಥವಾಗಬೇಡ.

ವಿಪ್ರರ ಕರೆದು "ನೃಪರುಗಳು ಇಪ್ಪರೆ ತ[1]ಮ್ಮ[1] ಶಿಶುವಿನೊಡನೆಂ"ದು ಬೆಸಗೊಂಡಡೆ, "ಇಪ್ಪರು ಇಪ್ಪರು ತಾವು ಬಿತ್ತಿದ ಫಲಂಗಳ ತಾವು ಉಣ್ಣದವರುಂಟೆ?" ಎಂದು ಕಣ್ಣು ಕಾಣದೆ ಹೇಳಿದರು, ಅಣ್ಣಗಳು–ಕರ್ಮದ ಬಟ್ಟೆಯನು. ಅಂತೆಂದ ಮಾತ ಶಿಶು ಕೇಳಿ, ಕೆಟ್ಟೋಡಿ ಬಂದು ಲಿಂಗದ ಹೊಟ್ಟೆಯ ಹೊಗಲು, ಅಟ್ಟ ಬಂದು ಖಂಡೆಯವ ತಳೆದುಕೊಂಡು ಮಂಡೆಯ ನೊಡೆಯಲು ಮಂಡೆ ಒಡೆದು ಭೂಮಂಡಲವಳೆಯೆ ನಾಲ್ಕು ಪುರವಾಗಲು, ಘಟಸರ್ಪನ ತುಡುಕಿ ನಾಗನಾಥನಾಗಿ [2]ಇ[2]ಪ್ಪತ್ತೇಳು ಬಸದಿಯನೊಡೆಯನೆ? ಆಗಳಂತೆ, ನಾ ಮಾಡಿದ ಕರ್ಮವ ನಿಮ್ಮ ಕೈಯಲ್ಲಿ ಕೆಡಿಸುವರು. ಮುನ್ನೊಬ್ಬ ಕೆಡಿಸಿಹನೆಂದು ಬಂದು ಒಂದು ತುತ್ತನಿಟ್ಟು ಮರಳಿ ಕೈಯಿಡ ಹೋದಡೆ ಆ ತುತ್ತು ಹುಳುಗುಪ್ಪಿಯಾಗದೆ? ಶಿವಧರ್ಮವ ಕೆಡಿಸಿದವನು ಅಧರ್ಮಕ್ಕಿಳಿವನು ಕೂಡಲಸಂಗಮದೇವ ನೀ ಸಾಕ್ಷಿಯಾಗಿ, ಮಕರ ಭೋಜನವಾಗನೆ ವಿನಾಶಕ್ತಿರಾಯನು?

I– –

ವಿಪ್ರರ ಕರೆದು–ಚಂದ್ರಗುಪ್ತರಾಯನು [1]ಭೂಸುರರ[1]ಬರಮಾಡಿಸಿ ನೃಪರುಗಳು–ಹಿಂದಣ ದೊರೆಗಳು, ಇಪ್ಪರೆ ತಮ್ಮ ಶಿಶುವಿನೊಡನೆಂದು–ತಮ್ಮ ಹೊಟ್ಟೆಯಲ್ಲಿ ಹುಟ್ಟಿದಂಥ ತನಯಳ ಕೂಡ ಸಂಸರ್ಗವ ಮಾಡಿದವರಿದ್ದಾರೇ ಎಂದು [ಬೆಸಗೊಂಡಡೆ–] ಬೆಸಗೊಂಡು ಕೇಳಿದರೆ. ಇಪ್ಪರು ಇಪ್ಪರು–ಉಂಟಾಗಿರುವರು ಉಂಟಾಗಿರುವರು, ತಾವು ಬಿತ್ತಿದ–ಬಿತ್ತು ಬೀಜಸ್ಥಾಪನೇಯೆಂದು ಸ್ಥಾಪಂನಂಗೈಯ್ದು, ಫಲಂಗಳ–ಮಾವಿನಫಲ ಹಲಸಿನಫಲ ಬಾಳೆಫಲ ಮೊದಲಾದುವನ್ನು, ತಾವು ಉಣ್ಣದವರುಂಟೆ"–ತಾವನುಭವಿಸಿದೆ ಬಿಟ್ಟಂಥವರಿದ್ದಾರೆ? ಇಲ್ಲವು, ಎಂದು–ಹೀಂಗೆಂದು, ಕಣ್ಣು ಕಾಣದೆ–ಒಂದಾಗುವಂಥ ಜ್ಞಾನವನ್ನು ತಿಳಿಯದೆ, ಹೇಳಿದರು–ನಿರೂಪಿಸಿದರು. ಅಣ್ಣಗಳು–ವಿಪ್ರರುಗಳೆಂಬ ಹಿರಿಯರುಗಳು, ಕರ್ಮದ ಬಟ್ಟೆಯನು–ಪಾಪದ ಮಾರ್ಗವನ್ನು.

ಅಂತೆಂದು–ಅಂತೆಂದಾಡಿದಂಥ, ಮಾತ–ಪ್ರಸಂಗವನ್ನು, ಶಿಶು–ಮಲ್ಲಿಕಾದೇವಿ, ಕೇಳಿ–ಆಲಿಸಿ, ಕೆಟ್ಟು–ಕಂಗೆಟ್ಟು, ಓಡಿ–ಪಲಾಯನವಾಗಿ, ಬಂದು–ಎಯ್ದುಬಂದು, ಲಿಂಗದ ಹೊಟ್ಟೆಯ ಹೊಗಲು–ಮುದಿಮಲ್ಲಿಕಾರ್ಜುನನ ಕುಕ್ಷಿಯಲ್ಲಿ ಪ್ರವೇಶವಾಗಲು, ಅಟ್ಟಿಬಂದು–ಓಡಿಸಿಕೊಂಡು ಬಂದು ಖಂಡೆಯವ ತಳೆದುಕೊಂಡು–ಖಡ್ಗವನ್ನು ಪಿಡಿದುಕೊಂಡು, ಮಂಡೆಯನೊಡೆಯಲು–ಮಸ್ತಕವನ್ನು ಭಗ್ನವ ಮಾಡಲು, ಮಂಡೆ–ಒಡೆದು–ಮಸ್ತಕವು ಭಗ್ನವಾಗಿ ಭೂಮಂಡಲವಳೆಯ–ಮೂರು ಲೋಕ ವೆಲ್ಲ ಬಲ್ಲಹಾಂಗೆ, ನಾಲ್ಕು ಪುರವಾಗಲು ಕೂದಲ ಬಿದ್ದಲ್ಲಿ ಕುಂತಳಾಪುರ ಅಸ್ತಿ ಬಿದ್ದಲ್ಲಿ ಅಸ್ತಿಲಾಪುರ–ಮಜ್ಜೆಬಿದ್ದಲ್ಲಿ ಮಜ್ಜಲಾಪುರ ರಕ್ತಬಿದ್ದಲ್ಲಿ ರಕ್ತಲಾಪುರವೆಂದು ನಾಲ್ಕು ಪಟ್ಟಣವಾಗಲು, ಘಟಸರ್ಪನ ತುಡುಕಿ–ಹೊಟ್ಟಲಕೇರಿಯಲ್ಲಿ ಸುಗ್ಗಲದೇವಿಯರಿಗೆ ಗುರುವಾದ ಶಿವದಾಸಿಮಯ್ಯಗಳು ಜೈನರ ಕೂಡ ವಾದದೊಂದಿಗೆ ನಿಮ್ಮ ಶಿವನೇನು ಪೂರ್ಣನೋ ಖಂಡಿತನೋ ಎಂದು ಕೇಳಿದಲ್ಲಿ ನಮ್ಮ ಶಿವನು ಪೂರ್ಣನೆಂದು ಹೇಳಿದಲ್ಲಿ ಇದಕ್ಕೆ ಸೋಲುಗೆವೇನೆಂದು ಕೇಳುವರು. ನಮ್ಮ ಶಿವನು ಪೂರ್ಣನಾದದ್ದೇ ಉಂಟಾದರೆ ನಿಮ್ಮ ಇಪ್ಪತ್ತೇಳು ಜಿನಾಲಯವನ್ನು ಶಿವಾಲಯವ ನಿರ್ಮಿತವ ಮಾಡಬೇಕೆಂದು ಹೇಳಿದಲ್ಲಿ ಅದೇ ರೀತಿಯಲ್ಲಿ ಒಂದು ಕುಂಭದೊಳಗೆ ಕಾಳೋಗರವನ್ನು ಮಡಗಿ ಅದರೊಳಗೇನೈತೆಂದು ಕೇಳಿದಲ್ಲಿ ಅದರೊಳಗೇನಿದ್ದಿತು? ಇದ್ದಾನು, ಅದರೊಳಗೆ ಶಿವನಿದ್ದಾನೆಂದು

ನಾಗನಾಥನೆಂದು ಹಸ್ತವ ಹಾಕಿದಲ್ಲಿ ಕುಂಭವೇ ಲಿಂಗವಾಗಿ ಸರ್ಪನೇ ಏಳುಹೆಡೆ ಪ್ರಭಾವಳಿಯಾಗಿ, ನಾಗನಾಥನಾಗಿ–ಉತ್ತರ[೩]ನಾಥನೆಂಬಲಿಂಗವಾಗಿ, ಇಪ್ಪತೇಳು ಬಸದಿಯನೋಡೆನೆ?–ಇಪ್ಪತೇಳು ಜಿನಾಲಯವನ್ನು ನಷ್ಟವ ಮಾಡಿ ಶಿವಾಲಯವನ್ನು ನಿರ್ಮಿತವ ಮಾಡನೆ ? ನಿರ್ಮಿತವ ಮಾಡುತ್ತಿಹನು. ಆಗಳಂತೆ–ಅದರಂತೆ, ನಾ ಮಾಡಿದ–ನಾನನುಗೆಯ್ದಂಥ, ಕರ್ಮವ–ಶಿವಸತ್ಕೃತ್ಯಂಗಳನ್ನು, ನಿಮ್ಮ ಕೈ ಯಲ್ಲಿ–ಬಿಜ್ಜಳಾಂಕನ ಹಸ್ತದಲ್ಲಿ, ಕೆಡಿಸುವರು–ಚಾಡಿಕ್ಷುದ್ರವನ್ನು ಹೇಳಿ ನಷ್ಟವ ಮಾಡಿಸುವರು.

ಮುನ್ನೊಬ್ಬ–ಅಣುಪುರ[೪]ಸಿದ್ದಾಯಿ[೪] ಮಾಡುವಂಥ ಶಿವಸದ್ದರ್ಮವನ್ನು, ಕೆಡಿಸಿಹೆನೆಂದು–ನಷ್ಟವ ಮಾಡಿಹೆನೆಂದು, ಬಂದು ಎಯ್ದು ಬಂದು, ಒಂದು ತುತ್ತನಿಟ್ಟು–ಒಂದು ಭೋಜನವನ್ನು ಮಡಗಿ, ಮರಳಿ–ಪುನರಪಿಯಾಗಿ, ಕೈಯಿಡ ಹೋದಡೆ–ಹಸ್ತವನ್ನು ಹಾಕಿ ತೆಗೆದುಕೊಂಬುವದಕ್ಕೈದಿದರೆ. ಆ ತುತ್ತು–ಆ ಭೋಜನ, ಹುಳುಗುಪ್ಪಿಯಾಗದೆ?–ಬಾಲಯುಕ್ತವಾದ ಕ್ರಿಮಿಗಳ ಮೊತ್ತವಾಗೋದಿಲ್ಲವೆ? ಶಿವಧರ್ಮವ–ಶಿವನ ಶಿವಗಣಂಗಳಿಗೆ ಮಾಡುವಂಥ ಭಕ್ತಿಸದ್ಧರ್ಮವನ್ನು, ಕೆಡಿಸದವನು–ನಾಶವ ಮಾಡಿದವನು. ಅಧರ್ಮಕ್ಕಳಿವನು–ಗುದವೆಂಬ ನರಕ್ಕೀಡಾಗಿ ಹೋಗುವನು. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನೀ ಸಾಕ್ಷಿಯಾಗಿ–ನೀ ತಾರ್ಕಣ್ಯವಾಗಿ, ಮಕರ ಭೋಜನವಾಗನೆ ವಿನಾಶಕ್ತಿರಾಯನು?–ವಿನಾಶಕ್ತಿರಾಯನೆಂಬ ದೊರೆಯು ಸಮುದ್ರದ ತೀರದಲ್ಲಿ ಕುಳಿತುಕೊಂಡು ಇಕ್ಕಳದಿಂದ ಕಂಡವನ್ನು ಕಿತ್ತಿ ಕಿತ್ತಿ ಮೀನುಗಳಿಗೆ ಆಹುತಿಯನ್ನು ಕೊಡದೆ ಬಿಟ್ಟಾನೆ? ಬಿಡನು.

....

೧+ವಿಪ್ರರ (ಕ, ಗ), ೨+ಕರೆದು (ಕ, ಗ), ೩+ನಾಗ (ಕ), ೪–೪ ಸಿದ್ಧ (ಗ).

II –

2–2 ಎ (ಚ, ಜ)

....

ಹಿಂದಕ್ಕೆ ಕಾಣಬಂಧರ್ಥ, ಭೂಮಂಡಲವಜೆಯೆ–ಮೂರು ಲೋಕವು ತಿಳಿಯೆ, ನಾಲ್ಕು ಪುರವಾಗಲು–ಅಸ್ಥಿಲಾಪುರ ಮಜ್ಜಲಾಪುರ ಅಳ್ಳಾಪುರ ರಕ್ತಾಪುರವೆಂಬ ಚತುರ್ವಿಧಪಟ್ಟಣವಾದವು, ಫಟಸರ್ಪನ ತುಡುಕಿ ನಾಗನಾಥನಾಗಿ ಎಪ್ಪತ್ತೇಳು ಬಸದಿಯನೊಡೆಯನೆ–ಮುದನೂರ ದಾಸಿಮಯ್ಯಗಳಿಗೆ ಕುಂಭದೊಳಗೆ ದೊಡ್ಡ ಸರ್ಪನ ಹಾಕಿ ಹಿಡಿ ಎಂದರು, ಇದರಲ್ಲಿ ನಿಮ್ಮ ಶಿವನೈದಾನೆ ಹಿರಿಯಿರಿ ಎನಲು ಹಿಡಿದು ತೆಗೆಯುವ ಹೊತ್ತಿಗೆ ನಾಗನಾಥನೆಂಬ ಲಿಂಗವಾಯಿತ್ತು, ಆಗ ಬಾಹತ್ತರ ಬಸದಿಯನೊಡೆದರು. ಮುಂದಕ್ಕೆ ಕಾಣಬಂದರ್ಥ.

III –

೧–೧ ನ್ನ (ಟ, ಡ)

....

ತನ್ನ ಶಿಶುವಿನೊಡನೆ–ತನ್ನ ಮಗಳೊಡನೆ, ನೃಪರುಗಳು–ರಾಜರು, ಇಪ್ಪರೆ–ಇರಬಹುದೆ ಇರಬಹುದೆಯೆಂದು ಚಂದ್ರಗುತ್ತಿರಾಯನು ವಿಪ್ರರುಗಳ ಕೇಳಿದೊಡೆ, ಅಣ್ಣಗಳು–ಅಜ್ಞಾನ ಶ್ರೇಷ್ಠರುಗಳು.,

ಕರ್ಮದ ಬಟ್ಟೆಯನು–ಪಾಪಕೃತ್ಯದ ಮಾರ್ಗವನು, ಪೇಳಿದರು ಹೇಳಿದರು. ಶಿಶು ಕೇಳಿ–ಆ ವಾಕ್ಯವನು ತನ್ನ ಮಗಳಾಲಿಸಿ, ಓಡಿಬಂದು–ಪಲಾಯನವಾಗಿ ಬಂದು, ಲಿಂಗದ ಹೊಟ್ಟೆಯ ಹೊಗಲು–ಪರಶಿವನ ಗರ್ಭಪ್ರವೇಶವಾಗಲು, ಆ ರಾಯನು–ಆ ರಾಜನು.೫

....

೫ + ಕಲ್ಲಾಗಿ–ಶಿಲೆಯಾಗಿ, ನದಿಯ ಕೂಡಿದನು–ಹೊಳೆಯ ಕೂಡಿ ಹೋದನು (ಟ, ಡ)

೬೨೬

ಅರಸು ವಿಚಾರ ಸಿರಿಯು ಶೃಂಗಾರ ಸ್ಥಿರವಲ್ಲ ಮಾನವಾ. ಕೆಟ್ಟಿತ್ತು ಕಲ್ಯಾಣ, ಹಾಳಾಯಿತ್ತು ನೋಡಾ! ಒಬ್ಬ ಜಂಗಮದಭಿಮಾನದಿಂದ ಚಾಳುಕ್ಯರಾಯನ ಆಳಿಕೆ ತೆಗೆಯಿತ್ತು ! ಸಂದಿತ್ತು, ಕೂಡಲಸಂಗಮದೇವಾ, ನಿಮ್ಮ ಕವಳಿಗೆಗೆ !

I– –

ಅರಸು–ಎಲೆ ಬಿಜ್ಜಳರಾಯನೆ, ವಿಚಾರ–ಬಹು ಪರಾಂಬರಿಕೆಯಾಗಿರುವುದು, ಸಿರಿಯು–ಅಷ್ಟಭೋಗ ಅಷ್ಟಮಹದೈಶ್ವರ್ಯವೆಂಬ ಭಾಗ್ಯವು–ಶೃಂಗಾರ–ಆಂಗಲಾವಣ್ಯವು, ಸ್ಥಿರವಲ್ಲ–ನಿತ್ಯವಲ್ಲವು, ಮಾನವಾ–ಎಲೆ ಮನುಷ್ಯನೇ, ಕಲ್ಯಾಣ–ಮಂಗಳವಾಡವೆಂಬ ಪಟ್ಟಣವು, ಕೆಟ್ಟಿತ್ತು–ನಾಶವಾಯಿತ್ತು. ಒಬ್ಬ ಜಂಗಮದಭಿಮಾನದಿಂದ–ಒಬ್ಬ ಚರಮೂರ್ತಿಗಳ ಸ್ತ್ರೀಯಳಿಗಳುಪಿದುದರಿಂದ, ಹಾಳಾಯಿತ್ತು, ನೋಡಾ–ಪಾಳಾಯಿತ್ತು, ಕಂಡಾ. ಚಾಳುಕ್ಯ ರಾಯನ–ಚಾಳುಕ್ಯರಾಯನೆಂಬ ದೊರೆಯ, ಆಳಿಕೆ–೧ಕರ್ತವ್ಯವು.೧ ತೆಗೆಯಿತ್ತು–ಕೈಲಾಸದಿಂದ ೨ಏಳು೨ ವೀರಗಣಂಗಳು ಬಂದು ಚಾಳುಕ್ಯರಾಯನ ತಲೆಯ ತುಟ್ಟಿಸಿ ಒಂಭತ್ತು ವೀರಗಣಂಗಳಾಗಿ, ಸಂದಿತ್ತು–ಸಲುವಳಿಯಾಯಿತ್ತು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೇ, ನಿಮ್ಮ ಕವಳಿಗೆಗೆ–ನಿಮ್ಮ ಪ್ರಮಥಗಣಂಗಳ ನಿಲುವಳಿಗೆಗೆ.

....

೧–೧ ಕರ್ತತ್ವವು (ಗ), ೨–೨ ಎಮಂದಿ (ಗ)

೬೨೭

ಬೇವಿನ ಬೀಜವ ಬಿತ್ತಿ, ಬೆಲ್ಲದ ಕಟ್ಟೆಯ ಕಟ್ಟಿ, ಆಕಳ ಹಾಲನೇಱೆದು, ಜೇನತುಪ್ಪವ ಹೊಯ್ದಡೆ, *ಕಹಿ [1]ಯಾಗುವು[1]ದಲ್ಲದೆ, ಸಿಹಿಯಾಗಬಲ್ಲುದೆ [2]ಅಯ್ಯ*? ಶಿವಭಕ್ತರಲ್ಲದವರ ಕೂಡೆ ನುಡಿಯಲಾಗದು, ಕೂಡಲಸಂಗಮದೇವಾ.

I –

ಬೇವಿನ ಬೀಜವ–ಪಿಚುಮಂದ ಫಲವನ್ನು, ಬಿತ್ತಿ–"ಬಿತ್ತು ಬೀಜಸ್ಥಾಪನೇ"ಯೆಂದು ಸ್ಥಾಪನಂಗೆಯ್ದು, ಬೆಲ್ಲದ ಕಟ್ಟೆಯ ಕಟ್ಟಿ–ಗೂಡದ ಪಾತಿಯ ಮಾಡಿ, ಆಕಳ ಹಾಲನೆಱೆದು–ಗೋಕ್ಷೀರವನ್ನು ನೀಡಿ, ಜೇನುತುಪ್ಪವ ಹೊಯ್ದಡೆ–ಮಧುಘೃತವನ್ನು ಎರೆದರೆ, ಕಹಿಯಾಗುವುದಲ್ಲದೆ–ವಿಷವೇ ವರ್ಧನವಾಗುವುದಲ್ಲದೆ, ಸಿಹಿಯಾಗಬಲ್ಲುದೆ?–ಮಧುರವಾಗಿದ್ದಿತ್ತೆ? ಇರಲರಿಯದು, ಅಯ್ಯ–

ಎಲೆ ಲಿಂಗವೆ. ಶಿವಭಕ್ತರಲ್ಲದವರ ಕೂಡೆ–ಅಂಗಕ್ಕೆ ಲಿಂಗೋಪದೇಶ ಮನಕೆ ಮಂತ್ರೋಪದೇಶವಿಲ್ಲದಿದ್ದಂಥ ಭವಿಜನಾತ್ಮರುಗಳೊಂದಿಗೆ, ನುಡಿಯಲಾಗದು–ಜ್ಞಾನಾನುಭಾವದ ಪ್ರಸಂಗವ ಹೇಳಲಾಗದು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

II –

೧–೧ ಯಹು (ಚ, ಜ), ೨–೨ x (ಚ, ಜ).

....

ಬೇವಿನ ಬೀಜವ ಬಿತ್ತಿ–ಮತ್ಸರಜ್ಞಾನಮೂಲಾಹಂಕಾರ ಪ್ರಕೃತಿಸ್ವಭಾವವನುಳ್ಳ ಜೀವನ ದೇಹಸಂಬಂಧಿಯ ಮಾಡಿ, ಬೆಲ್ಲದ ಕಟ್ಟೆಯ ಕಟ್ಟಿ–ನಿಜ ಭಕ್ತಿಕ್ರೀಯೆಂಬ ಆಲವಾಲವನು ಬಂಧಿಸಿ, ಆಕಳ ಹಾಲನೆಱೆದು–ಚಿತ್ಸುರಭಿಯ ಚಿದಮೃತವನು ಪೋಷಿಸಿ, ಜೇನುತ್ತುಪ್ಪ ಹೊಯಿದಡೆ–ಧ್ಯಾನವೆಂಬ ಘೃತವನು ಪೋಷಿಸಿದರೆ, ಸಿಹಿಯಾಗಬಲ್ಲುದೆ–ಮಂತ್ರಮಾಧುರ್ಯವುಳ್ಳವನಾಗಬಲ್ಲನೆ, ಕಹಿಯಹು ದಲ್ಲದೆ?–ಮತ್ಸರಜ್ಞಾನಮೂಲಹಂಕಾರ ಪ್ರಕೃತಿಸ್ವಭಾವವನುಳ್ಳ ಜೀವನಾಗೂದಲ್ಲದೆ, ಶಿವಭಕ್ತರಲ್ಲದವರ ಕೂಡೆ ನುಡಿಯಲಾಗದು, ಕೂಡಲಸಂಗಮದೇವಾ–ಲಿಂಗಭಕ್ತರಲ್ಲದವರೊಂದಿಗೆ ಪ್ರಸಂಗವ ಮಾಡಲಾಗದೆಲೆ ಲಿಂಗವೆ.

III –

– ಸಿಹಿಯಾಗಬಲ್ಲುದೆ ಅಯ್ಯಾ ಕಹಿಯಹುದಲ್ಲದೆ? (ತ)

....

ಅಜ್ಞಾನಿಯಾದ ಭವಿಗೆ ಪರಮಮಂತ್ರವ ಹೇಳಿ ಬೋಧಿಸಿದರೆ ಶಿವಭಕ್ತಿಯಾಗದಾಗಿ ನುಡಿಯಬಾರದೆಂಬುದೀ ವಚನದರ್ಥ.

೭೨೮

ಕರ್ತನನಱಿಯದವನು ವಿಪ್ರನಾದಡೇನು, ಚತುರ್ವೇದಿಯಾದಡೇನು ? ಭುಕ್ತಿಯ ಕಾರಣ ಲೋಕದ ಇಚ್ಚೆಗೆ ನುಡಿದು ನಡೆವರಯ್ಯ! ಭವಿ ಮಾಡಿದ ಪಾಕವ ತಂದು, ಲಿಂಗಕ್ಕರ್ಪಿಸುವ ಕಷ್ಟರ ಕಂಡು ನಾಚಿತ್ತೆನ್ನ ಮನವು, ಕೂಡಲಸಂಗನ ಶರಣರ ಒಕ್ಕುದ ಕೊಂಡು ಅನ್ಯವನಾಚರಿಸಿದಡೆ ತಪ್ಪದು, ಸೂಕರನ ಶುಚಿಭೂತತೆಯ ಪ್ರಾಣಿಯಂತೆ!

I –

ಕರ್ತನನು–ಪಂಚಕೃತ್ಯಂಗಳಿಗೊಡೆಯನಾದಂಥ ಪರಶಿವಲಿಂಗವನ್ನು, ಅಱಿಯದವನು–ತಿಳಿಯದವನು, ವಿಪ್ರನಾದಡೇನು–ಹಾರುವನಾದರೇನು, ಚತುರ್ವೇದಿಯಾದಡೇನು–ನಾಲ್ಕು ವೇದಂಗಳ ಪಾರಂಗತವಾಗಿ ಬಲ್ಲಾತನಾದರೇನು, ಭುಕ್ತಿಯ ಕಾರಣ–ಒಬ್ಬರಿಂದೊಂದೊಸ್ತುವನ್ನು ಹಡೆದುಕೊಂಡು ಘಟರಕ್ಷಣ್ಯವ ಮಾಡುವ ನಿಮಿತ್ಯ, ಲೋಕದ–ಜಗತ್ತಿನಲ್ಲಿರುವಂಥ ಆತ್ಮರುಗಳ, ಇಚ್ಛೆಗೆ–ಪ್ರೀತಿಗೆ, ನುಡಿದು–ಮುಖದಾಕ್ಷಣ್ಯವ ಮುಂದುಗೊಂಡು ಪ್ರಸಂಗಿಸುತ್ತ, ನಡೆವರಯ್ಯ–

ಸಕಲಸಂಸಾರಪ್ರಪಂಚದೊಡನೆ ಕೂಡಿ ಚರಿಸುವರಯ್ಯ.ಭವಿಮಾಡಿದ-ಭವಿಜನಾತ್ಮರುಗಳನುಗೆಯ್ದು, ಪಾಕವ-ರೊಟ್ಟಿ[1]ಬೋನ[1] ಕಡಬು ಕಜ್ಜಾಯ ಮೊದ[2]ಲಾದುವನ್ನು[2] ತಂದು-ತೆಗೆದುಕೊಂಡು ಬಂದು, ಲಿಂಗಕ್ಕರ್ಪಿಸುವ-ಗುರುಮುಖದಿಂದ ಬಂದ ಇಷ್ಟಮಹಾ ಲಿಂಗಕ್ಕೆ ಸಮರ್ಪಣೆಯ ಮಾಡುವ, ಕಷ್ಟರ ಕಂಡು-ಕ್ಷೀಣಾತ್ಮರ ನೋಡಿ, ಎನ್ನ ಮನವು-ಸಂಗನಬಸವೇಶ್ವರನ ಚಿತ್ತವು, ನಾಚಿತ್ತು-ಅಭಿಮಾನಿಸಿಕೊಂಡಿತ್ತು, ಕೂಡಲಸಂಗನ ಶರಣರು-ಜಂಗಮ ಮೂರ್ತಿಗಳು, ಒಕ್ಕುದಕೊಂಡು-ಅವರೊಕ್ಕುಮಿಕ್ಕ ಪ್ರಸಾದವನನುಭವಿಸಿ, ಅನ್ಯವನಾಚರಿಸಿದಡೆ-ನೀಚದೈವಂಗಳ ಭಜನೆಯೊಡನೆ ಕೂಡಿ ಚರಿಸಿದರೆ, ತಪ್ಪದು ಸೂಕರನ ಶುಚಿರ್ಭೂತತೆಯ ಪ್ರಾಣಿಯಂತೆ !-ಆಕಳಕರು ಹೋರಿಗರು ಮೊದಲಾದುವನ್ನು ಮೈದೊಳೆದು ಗಂಧ ಕಸ್ತೂರಿ ಕುಂಕುಮ ಮೊದಲಾದ ಪರಿಮಳದ್ರವ್ಯವನ್ನು ಹಚ್ಚಿ ಹೂವಿನಹಾರ ಮೊದಲಾದ ಹಾರಂಗಳನ್ನು ಹಾಕಿ ಬಹುಪ್ರೀತಿ ಹೆಚ್ಚಿ ಅಪ್ಪಿಕೊಂಡು ಮುದ್ದಾಡುವುದಕ್ಕೆ ಬಂದೀತಲ್ಲದೆ ಗ್ರಾಮ ಸೂಕರನೇನಾದರೂ ಹಿಡಿತಂದು ನಿರ್ಮಲವಾಗಿ ಮೈದೊಳೆದು ಗಂಧ ಕಸ್ತೂರಿ ಕುಂಕುಮ ಮೊದಲಾದ ಪರಿಮಳದ್ರವ್ಯಂಗಳನು ಲೇಪಿಸಿ, ಹೂವಿನ ಹಾರ ಮೊದಲಾದ ಹಾರಂಗಳನು ಹಾಕಿ ಬಹು ಪ್ರೀತಿಯಿಂದ ಅಪ್ಪಿಕೊಂಡು ಮುದ್ದಾಡುವುದಕ್ಕೆ ಬಂದೀತೇ? ಬರಲರಿಯದು. ಅದೇನು ಕಾರಣವೆಂದರೆ ಅದರ ಮನ ಶುದ್ಧವಿಲ್ಲದ ಕಾರಣ ಅದರ ದೇಹ ನಿರ್ಮಲವಿಲ್ಲವು, ಹಾಂಗೆ;

ನಿರ್ವಂಚಕಸದ್ಭಕ್ತನು ಭಕ್ತಿವೇಷವನ್ನು ಧರಿಸಿಕೊಂಡಿದ್ದರೆ. ಆಕಳಕರು ಹೋರಿಗರು ಮೊದಲಾದುವಕ್ಕೆ ಗಂಧ ಕಸ್ತೂರಿ ಕುಂಕುಮ ಮೊದಲಾದ ಪರಿಮಳದ್ರವ್ಯವನ್ನು ಹಚ್ಚಿ ಹೂವಿನ ಹಾರ ಮೊದಲಾದ ಹಾರಂಗಳನು ಹಾಕಿ ಬಹುಪ್ರೀತಿಯಿಂದ ಅಪ್ಪಿಕೊಂಡು ಮುದ್ದಾಡಿದ ಹಾಂಗೆ, ಪೂಜ್ಯವಾಗಿರ್ಪುದು, ಉಪಾಧಿಕನು ಲಲಾಟದಲ್ಲಿ ವಿಭೂತಿ ಕೊರಳಲ್ಲಿ ರುದ್ರಾಕ್ಷಿಮಾಲೆ ಅಂಗದ ಮೇಲೆ ಶಿವಲಿಂಗ ಮೊದಲಾದ ಭಕ್ತಿವೇಷವನ್ನು ಧರಿಸಿಕೊಂಡಿದ್ದರೂ ಆ ಸೂಕರನ ಶುಚಿರ್ಭೂತತೆಯ ಪ್ರಾಣಿ ಹಾಂಗಲ್ಲದೆ ಯಾತಕ್ಕೂ ಪ್ರಯೋಜನವಿಲ್ಲವು.

....

೧-೧ ಬುತ್ತಿ (ಗ), ೨-೨ ದ ಓದನವನ್ನು (ಗ)

೬೨೯

ಉಂಬಲ್ಲಿ ಉಡುವಲ್ಲಿ ಕ್ರೀಯಳಿಯಿತ್ತೆಂಬರು; ಕೊಂಬಲ್ಲಿ ಕೊಡುವಲ್ಲಿ ಕುಲವನಱಸುವರು. [1]ಅದೆಂತಯ್ಯ[1] ಅವರ ಭಕ್ತರೆಂ[2]ತೆಂ[2]ಬೆ? ಎಂತಯ್ಯ ಅವರ ಯುಕ್ತರೆಂ[2]ತೆಂ[2]ಬೆ? ಎಂತಯ್ಯ ಕೂಡಲ ಸಂಗಮದೇವ[3]ಯ್ಯ[3] ಕೇಳಯ್ಯ ಹೊಲತಿ ಶುದ್ಧ ನೀರ ಮಿಂದಂತಾಯಿತ್ತಯ್ಯ.

I -

ಉಂಬಲ್ಲಿ ಉಡುವಲ್ಲಿ-ತಾವು ಹೋಗಿ ಅವರ ಮನೆಯಲ್ಲಿ ಉಂಡುಟ್ಟು ಉಡುಗೊರೆ ಹೊದೆವಲ್ಲಿ ಅವರು ಬಂದು ತಮ್ಮ ಮನೆಯಲ್ಲಿ ಉಂಡುಟು ಉಡುಗೊರೆ ಹೊದೆವಲ್ಲಿ, ಕ್ರೀಯಳಿಯಿತ್ತೆಂಬರು-ಅವರಿಗೂ ನಮಗೂ ಕುಲಸೂತಕವಿಲ್ಲವೆಂದು ಹೇಳುವರು. ಕೊಂಬಲ್ಲಿ-

ಅವರ ಹೆಣ್ಣು ತಾವು ತೆಗೆದುಕೊಂಬುವಲ್ಲಿ, ಕೊಡುವಲ್ಲಿ–ತಮ್ಮ ಹೆಣ್ಣು ಅವರಿಗೆ ಕೊಡುವಲ್ಲಿ, ಕುಲವನಱಸುವರು–ಬಣಿಜಿಗ ಹೆಣ್ಣು ಬಣಜಿಗರಿಗೇ ಕೊಡಬೇಕು. ಸಿಂಪಿಗೇರ ಹೆಣ್ಣು ಸಿಂಪಿಕರಿಗೇ ಕೊಡಬೇಕು. ಜಾಡವ ಹೆಣ್ಣು ಜಾಡರಿಗೇ ಕೊಡಬೇಕು, ಒಕ್ಕಲಿಗರ ಹೆಣ್ಣು ಒಕ್ಕಲಿಗರಿಗೇ ಕೊಡಬೇಕೆಂದು ಕುಲಸೂತಕವ ಹುಡುಕುವರು.

ಅದೆಂತಯ್ಯ–ಅದು ಹೇಂಗಯ್ಯ, ಅವರ ಭಕ್ತರೆಂತೆಂಬೆ?–ತ್ರಿವಿಧಪದಾರ್ಥವನ್ನು ಹಿಡಿದು ಭಕ್ತಿ ಗೃಹವನ್ನು ಕಟ್ಟಿ ಭಕ್ತಿಯನ್ನು ಮಾಡುವಂಥ ಭಕ್ತಸ್ಥಲದಾಚರಣೆಯುಳ್ಳವರೆಂದು ಹಂಗೆ ಹೇಳುವೆನು, ಎಂತಯ್ಯ–ಹೇಂಗಯ್ಯ. ಅವರ ಯುಕ್ತರೆಂತೆಂಬೆ? ಅಷ್ಟಾವರಣವನ್ನೇ ಅಂಗ ಮಾಡಿಕೊಂಡು ಪಂಚಾಚಾರವನ್ನೇ ಪ್ರಾಣಮಾಡಿಕೊಂಡು ಏಕಲಿಂಗನಿಷ್ಠಾ[1]ಪರ[1]ರಾಗಿ ಆಚರಿಸುವಂಥ ಮಾಹೇಶ್ವರಸ್ಥಲದಾಚರಣೆಯುಳ್ಳವರೆಂದು ಹೇಂಗೆ ಹೇಳುವೆನು.

ಎಂತಯ್ಯ–ಹೇಂಗಯ್ಯ, ಕೂಡಲಸಂಗಮದೇವಯ್ಯ–ಎಲೆ ಪರಶಿವಲಿಂಗವೆ, ಕೇಳಯ್ಯ–ಆಲಿಸಯ್ಯ, ಹೊಲತಿ ಶುದ್ಧನೀರ ಮಿಂದಂತಾಯಿತ್ತಯ್ಯ–ಚಾಂಡಾಲಗಿತ್ತಿ ಏನಾದರೂ ಪುಣ್ಯತೀರ್ಥ ಪುಣ್ಯಕ್ಷೇತ್ರಂಗಳಲ್ಲಿಗೆ ಹೋಗಿ ಮಿಂದು ಮಡಿಯನುಟ್ಟುಕೊಂಡು ಬಾಚಿ ಬೈತಲೆಯನ್ನು ತೆಗೆದುಕೊಂಡು ಕೊರೆದು ವಿಭೂತಿಯನ್ನು ಧರಿಸಿಕೊಂಡು ಕಸ್ತೂರಿ ಮೊದಲಾದ ತಿಲಕವನಿಟ್ಟುಕೊಂಡು ಬೀದಿ ಬಾಜಾರದಲ್ಲಿ ಮಿಂಚಾಗಿ ತಿರುಗಾಡುತ್ತಿದ್ದಲ್ಲಿ ಅರಿಯದಿದ್ದಂಥವರುಗಳಿಗೆ ಇವಳೇನು ನಾಡಿಗನ ಮಗಳೋ ದೇಸಾಯಿಗಳ ಮಗಳೋ ಎಂದು ಸೋಂಕಿಕೊಂಡು ಹೋಗುವರು. ಬಲ್ಲಂಥವರುಗಳೇ ಇವಳು ಚಾಂಡಾಲಗಿತ್ತಿಯಲ್ಲವೆ? ಪುಣ್ಯತೀರ್ಥ ಪುಣ್ಯಕ್ಷೇತ್ರಂಗಳಲ್ಲಿ ಹೋಗಿ ಮಿಂದು ಮಡಿಯನ್ನುಟ್ಟುಕೊಂಡು ಮಿಂಚಾಗಿ ತಿರುಗಾಡುತ್ಯೆದಾಳೆಯೆಂದು ದೂರಾಗಿ ಹೋಗುವರು, ಹಾಂಗೆ, ಉಂಬಲ್ಲಿ ಉಡುವಲ್ಲಿ [2]ಕ್ರೀಯಳಿಯಿತೆಂಬರ ಕೊಂಬಲ್ಲಿ ಕೂಡುವಲ್ಲಿ[2] ಕುಲಸೂತಕವನರಸುವಂಥವರ ಇರಸ್ಥಿತಿಯೂ ಆ ಚಾಂಡಾಲಗಿತ್ತಿ ಮಿಂಚಾಗಿ ತಿರುಗಾಡುವಂಥ ಇರಸ್ಥಿತಿಯೂ ಒಂದೇಯಾಗಿರ್ಪುದು.

....

೧–೧ ವ್ರತ (ಕ), ೨–೨ x (ಕ)

IV –

1–1 ಎಂತಯ್ಯ (ತ), 2–2 x (ತ), 3–3 x (ತ)

....

ಕುಲಛಲ ಅಹಂಕಾರವಳಿದು ಶಿವಭಕ್ತಿಯ ಮಾಡಬೇಕು. ಇವನಳಿಯದೆ ಭಕ್ತರೆಂದೆಂಬವರು ಹೊಲತಿ ಶುದ್ಧನೀರಮಿಂದಂತೆ ಎಂಬುದೀ ವಚನದರ್ಥ.

೬೩೦

ಭಕ್ತರನಲ್ಲದೆ ಒಲ್ಲೆವೆಂ[1]ಬಿರಿ, ಭಕ್ತರಿಗಲ್ಲದೆ ಕೈಯಾನೆವೆಂ[1]ಬಿರಿ, ಏನ ಮಾಡುವಿರಿ? [2]ಇದೆ[2]ಲ್ಲಿ ಗೊಯ್ವಿರಿ? ಪಾವನವಾದುದನು ಲಿಂಗಕ್ಕೆ ಎಡೆಮಾಡುವುದೇ ಆಚಾರ. ವಿಷಯ[3]ಕಿಕ್ಕಿ[3] ಅಸುಗತಿಗಿಳಿಯದಿರಿ, ಕೂಡಲಸಂಗನ ಶರಣರ ಒಡವೆಯ!

I- -

ಭಕ್ತರನಲ್ಲದೆ ಒಲ್ಲೆವೆಂಬಿರಿ–ನಾವೇನಾದರೂ ಒಂದೊಸ್ತುವನ್ನು ಕೊಡಬೇಕಾದರೆ ಭಕ್ತರುಗಳಿಗೆ ಕೊಟ್ಟು ವ್ಯವಹರಿಸೇವಲ್ಲದೆ, ಭವಿಜನಾತ್ಮರುಗಳಿಗೆ, ಕೊಟ್ಟು ವ್ಯವಹರಿಸೋದಿಲ್ಲವೆಂದು ಹೇಳುವಿರಿ, ಭಕ್ತರಿಗಲ್ಲದೆ ಕೈಯಾನೆವೆಂಬಿರಿ–ನಮಗೊಂದೊಸ್ತುವೇನಾದರೂ ಬೇಕಾದರೆ ಭಕ್ತರುಗಳಿಗೆ ಕೈಯಾಂತು ಇಸಗೊಂಬೆವಲ್ಲದೆ ಭವಿಜನಾತ್ಮರುಗಳಿಗೆ ಹಸ್ತವ ಚಾಚಿ ತೆಗೆದುಕೊಂಡುದಿಲ್ಲವೆಂದು ಹೇಳಿವಿರಿ, ಏನು ಮಾಡುವಿರಿ ಏನೆನು ಗೆಯ್ವಿರಿ ಇದೆಲ್ಲಿ ಗೊಯ್ವಿರಿ–ಏನು ಸೂಳೆ ಬಸವಿದಾಸಿ ಬೇರೆ ಬೋಳಭಟ್ಟರಿಗೆ ಕೊಟ್ಟುಚಾಗಿಯ ಮಾಡುವಿರಿ. ಪಾವನವಾದುದನು–ಹಸ್ತಸ್ಪರ್ಶ ಲಿಂಗದೃಷ್ಟಿ ವಾಕ್ಯೀಲ ಮಂತ್ರಂಗಳಿಂದ ಪವಿತ್ರವಾದಂತ ರೊಟ್ಟಿ ಬುತ್ತಿ ಕಡಬು ಕಜ್ಜಾಯ ಮೊದಲಾದ ಶಿವಪದಾರ್ಥವನ್ನು ಲಿಂಗಕ್ಕೆ ಎಡೆಮಾಡುವುದೇ–ಇಷ್ಟ ಮಹಾಲಿಂಗಕ್ಕೆ ಸಮರ್ಪಿಸುವುದೇ, ಆಚಾರ–ಅದೇ ಸತ್ಪಥಾಚಾರವು.

ವಿಷಯಕಿಕ್ಕಿ–ಮನ್ಮಥವಿಚಾರಕ್ಕೋಸ್ಕರ ಸೂಳೆ ಬಸವಿ ದಾಸಿ ವೇಶಿ ಬೋಳಭಟ್ಟರಿಗೆ ಕೊಟ್ಟು ಚಾಗಿಯ ಮಾಡಿ, ಅಸುಗತಿಗಿಳಿಯದಿರಿ–ಅಧೋಗತಿಗೆ ಹೋಗದಿರಿ, ಕೂಡಲಸಂಗನ ಶರಣರ–ಜಂಗಮಮೂರ್ತಿಗಳ, ಒಡವೆಯ–ಅವರೊಡವೆಯಾದಂಥ ಹೊನ್ನು[* *] ಮೊದಲಾದುವನ್ನು ಅವರಿಗೆ ಸಮರ್ಪಣೆ ಮಾಡಿರಿ.

IV -

೧+ ದೆಂ (ತ), ೨–೨ ಎ (ತ), ೩–೩ . ಕ್ಕೆ ಇಕ್ಕಿ (ತ)

....

ಲಿಂಗದೊಡವೆಯ ಲಿಂಗಜಂಗಮಕ್ಕೆ ಇಕ್ಕೂದೇ ಆಚಾರ. ಅಂಗವಿಷಯಕ್ಕೆ ಇಕ್ಕೂದು ಅಧೋಮುಖವೆಂಬುದು ಈ ವಚನದರ್ಥ.

೬೩೧

ಮಾರಿ ಮಸಣಿಯೆಂಬಿವು ಬೇಜೆಲ್ಲ ಕಾಣಿರೋ! ಮಾರಿಯೆಂಬುದೇನು? ಕಂಗಳು ತಪ್ಪಿ ನೋಡಿದಡೆ ಮಾರಿ, ನಾಲಗೆ ತಪ್ಪಿ ನುಡಿದಡೆ ಮಾರಿ, ನಮ್ಮ ಕೂಡಲಸಂಗಮದೇವರ [1]ನೆನಹು ದಪ್ಪಿದರೆ[1] ಮಾರಿ.

I -

ಮಾರಿ–ಗ್ರಾಮದ ಮಧ್ಯದಲ್ಲಿ ಗುಡಿಯ ಕಟ್ಟಿಸಿಕೊಂಡು ಪೂಜೆಯ ಕೈಕೊಂಬುವಂಥದೇ ಮಾರಿ, ಮಸಣಿ–ಸುಡುಗಾಡದಲ್ಲಿ ಗುಡಿಯ ಕಟ್ಟಿಸಿಕೊಂಡು ಪೂಜೆ ಕೈಕೊಂಬುವಂಥದೇ ಮಸಣಿ, ಎಂಬಿವು–ಮಾರಿ ಮಸಣಿಯರೆಂದು ಹೇಳುವುದು, ಬೇಜೆಲ್ಲ ಕಾಣಿರೋ–ಭಿನ್ನವಿಲ್ಲ ಕಂಡಿರೊ ಮಾರಿಯೆಂಬುದೇನು–ಮಾರಿಯೆಂಬುವಂಥದೇನು, ಕಂಗಳು ತಪ್ಪಿ; [ಕಂಗಳು–] ಇಷ್ಟಲಿಂಗಕ್ಕಷ್ಟ ವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳಿಂದಾರಾಧಿಸಿ ಆ ಲಿಂಗವನ್ನು ಅನಿಮಿಷದೃಷ್ಟಿಯಿಂದ ನಿರೀಕ್ಷಸುವಂಥ ನಿರಿಕ್ಷಣೆಯು, ತಪ್ಪಿ–ತೊಲಗಿಸಿ,[1]ನೋಡಿದಡೆ–ಸ್ತ್ರೀಯರುಗಳ ಹಾವಭಾವ ವಿಲಾಸ ವಿಭ್ರಮಗಳ ನಿರೀಕ್ಷಣೆಯ ಮಾಡಿದರೆ, ಮಾರಿ–ಅದೇ ಮಾರಿಯಾಗಿ ತನ್ನ ಜನನ ಮರಣದಲ್ಲಿ ತಂದು ಸಂಹರಿಸುವುದಕ್ಕೆ ವೈರಿಯಾಗಿಪ್ಪುದು, ನಾಲಗೆ ತಪ್ಪಿ [ನುಡಿದಡೆ–] ಅವ್ವ ಅಕ್ಕ ತಂಗಿಯೆಂದು

ಕರೆವಂಥದನು ತೊಲಗಿ, ಏನೆ ತಾನೆ ತಲೆ ಹೋಗೆ ಬಾರೆ ಎಂದು ಕರೆದರೆ, ಮಾರಿ-ಅದೇ ಮಾರಿಯಾಗಿ ತನ್ನ ಜನನ ಮರಣಂಗಳಲ್ಲಿ ತಂದು ಸಂಹರಿಸುವುದಕ್ಕೆ ಶತ್ರುವಾಗಿರ್ಪುದು, ನಮ್ಮ ಕೂಡಲಸಂಗಮದೇವರ-ನಮ್ಮ ಪರಶಿವಲಿಂಗದ, ನೆನಹುದಪ್ಪಿದರೆ-ಲಿಂಗಧ್ಯಾನ ಲಿಂಗಸ್ಮರಣೆಯ ಮಾಡುವಂಥದನು ತೊಲಗಿದರೆ, ಮಾರಿ-ಅದೇ ಮಾರಿಯಾಗಿ ತನ್ನ ಜನನಮರಣದಲ್ಲಿ ತಂದು ಸಂಹರಿಸುವುದಕ್ಕೆ ವೈರಿಯಾಗಿರ್ಪುದು.

....

೧+ ಆಲಿಸಿ (ಕ, ಗ)

IV -

1-1 ನೆನಹ ಮಱೆದಡೆ (ತ)

....

ಪರಬ್ರಹ್ಮದ ನೆನಹ ಮಱೆದು ದೇಹೇಂದ್ರಿಯ ಜನನ ಮರಣಂಗಳಿಂದ ಘಾಸಿಯ೨ [ಹರು]೨ಯೆಂಬುದೀ ವಚನದರ್ಥ.

....

೨-೨ ಹುರಿ (ತ)

೬೩೨

ಆಯುಧವನಿಕ್ಕಿದವಂಗೆ ವೀರದ ಮಾತೇ[1]ಕೋ[1]? ಲಿಂಗವು ಅಂತರಿಸಿದವಂಗೆ ಒಳುನುಡಿ ಯಾ[1]ಕೋ[1]? [2]ಐ[3]ದೆ ಅ[3]ಣ[2]ಚಿಯಿಲ್ಲದವಳಿಗೆ ಸೌಭಾಗ್ಯದ ಹೂವಿನ ಬೊಡೇ[1]ಕೋ[1]? ಸತ್ಯವಿಲ್ಲದವಂಗೆ ನಿತ್ಯನೇಮವೇ[1]ಕೋ[1]? [4]ಕರ್ತ[4] ನಿಮ್ಮ ಒಲವಿಲ್ಲದವಂಗೆ ಶಂಭುವಿನ ಬಂಧುಗಳೇ[1]ಕೋ[1]? ಕೂಡಲ ಸಂಗಮದೇ[5]ವಾ[5], ನೀ[6]ವಿ[6]ಲ್ಲದವಂಗೆ ಶಿವಾಚಾರದ ಮಾತೇ[1]ಕೋ[1]?

I -

ಆಯುಧವನಿಕ್ಕಿದವಂಗೆ-ರಣಾಗ್ರವನ್ನು ಕಂಡಾಕ್ಷಣಕ್ಕೆ ಮುಂದಣಕಾಲು ಹಿಂದಕ್ಕಿಟ್ಟು ಕೈಗಳ ಕತ್ತಿಯನ್ನು ಬಿಟ್ಟುಕೊಟ್ಟು ಮೊಳಕಾಲುಮಂಡಿ ಒಡಿಯೋ ಸುದ್ದಿಯನರಿಯದೆ ಓಡಿಹೋಗಿ ಹುತ್ತ ವನೇರಿ ಹುಲ್ಲುಕಡ್ಡಿಯ ಕಚ್ಚಿಕೊಂಡು ನೀರುಹೊಕ್ಕಾತಂಗೆ, ವೀರದ ಮಾತೇಕೋ-ಚಾವಡಿಗಳಲ್ಲಿ ಹೆಬ್ಬಾಗಿಲಗಳಲ್ಲಿ ಕುಳಿತುಕೊಂಡು ಗಜದ ಹಿಂಡಿನೊಳಗೆ ಕಂಠೀರವ ಹೊಕ್ಕಹಾಂಗೆ ಹುಲ್ಲೆಹಿಂಡಿ ನೊಳಗೆ ಹುಲಿ ಹೊಕ್ಕಹಾಂಗೆ ಕುರಿಯ ಹಿಂಡಿನೊಳಗೆ ತೋಳ ಹೊಕ್ಕಹಾಂಗೆ ಆಚೆಲಿಂದೀಚೆಗೆ ಈಚೆಲಿಂದಾಚೆಗೆ ಕಡಕೊಂಬುತ್ತ ಬಂದೆ. ನಾನು ಬಹು ಪರಾಕ್ರಮಿಯೆಂದು ಹೇಳಿಕೊಂಬುವಂಥ ಪ್ರಸಂಗವೇನು ಕಾರಣಕ್ಕೋ.

ಲಿಂಗವು ಅಂತರಿಸಿದವಂಗೆ-ಲಿಂಗಕ್ಕರ್ಚನಾರ್ಪಣಕ್ರಿಯೆಗಳು ತಪ್ಪಿ ಜಲಪ್ರವೇಶ ಅಗ್ನಿಪ್ರವೇಶ ದಿಂದ ಅಂಗವನ್ನು ಬಿಟ್ಟು ತೊಲಗಿದವಂಗೆ, ಒಳನುಡಿಯಾಕೋ-ಲಿಂಗ ಹೋದರೇನಾಯಿತ್ತು. ಅಂತರಂಗದಲ್ಲಿ ಜ್ಞಾನ ಧ್ಯಾನ ಮೋಕ್ಷಕ್ಕೆ ಕಾರಣವಾದ ಪ್ರಾಣಲಿಂಗ ಉಂಟೆಂದು ಹೇಳುವಂಥ ಜ್ಞಾನಾನುಭಾವದ ಪ್ರಸಂಗವೇನು ಕಾರಣಕ್ಕೋ.

ಐದೆ ಅಣಚಿಯಿಲ್ಲದವಳಿಗೆ–ಐರದಾಳಿ ಕಾಶಿ ಕರಿಮಣಿ ಮೊದಲಾದವು ಇಲ್ಲದೆ ಇದ್ದಂಥ ವಿಧವಾಸ್ತ್ರೀಯಳಿಗೆ, ಸೌಭಾಗ್ಯದ ಹೂವಿನ ಬೊಟ್ಟೇಕೋ: ಸೌಭಾಗ್ಯದ–ಅಷ್ಟಸೌಭಾಗ್ಯದೊಡನೆ ಕೂಡಲ್ಪಟ್ಟ, [ಹೂವಿನ] ಬೊಟ್ಟೇಕೋ–ಹೂವನ್ನು ಮುಡಿದುಕೊಂಡು ಮುತ್ತಿನ ಬೊಟ್ಟಿಟ್ಟುಕೊಂಬುವುದೇನು ಕಾರಣಕ್ಕೋ, ಸತ್ಯವಿಲ್ಲದವಂಗೆ–ನಡೆದಂತೆ ನುಡಿ ನುಡಿದಂತೆ ನಡೆಯಿಲ್ಲದವಂಗೆ, ನಿತ್ಯನೇಮ ವೇಕೋ–ಆವಾಗಲೂ ತಪ್ಪದೆ ಮಾಡುವ ಕಟ್ಟಿನ ಕ್ರಿಯೆಗಳು ಏನು ಕಾರಣಕ್ಕೋ.

ಕರ್ತ–ಪಂಚಕೃತ್ಯಂಗಳಿಗೊಡೆಯನಾದಂಥ ಎಲೆ ಪರಶಿವಲಿಂಗವೆ, ನಿಮ್ಮ ಒಲವಿಲ್ಲದವಂಗೆ–ನಿಮ್ಮ ಒಲುಮೆಯೇ ನಿಜಮೊಕ್ಷ. ಅಂತಪ್ಪ ನಿಜ ಮೋಕ್ಷ ಉಂಟಾಗಿಲ್ಲದವಂಗೆ, ಶಂಭುವಿನ–ಸುಖೋತ್ಪತ್ಯಕ್ಕೆ ಜನಕನಾದ ಪರಶಿವಲಿಂಗದ, ಬಂಧುಗಳೇಕೋ–ಬಾಂಧವರುಗಳಾದ ಜಂಗಮಮೂರ್ತಿಗಳಿಗೆ ಸಕಲ ಪದಾರ್ಥ ವನ್ನು ನೀಡಿ ಸಂತುಷ್ಟಿಬಡಿಸುತ್ಯೆದೇವಿಯೆಂದು ಹೇಳುಕೊಂಬುವದೇನು ಕಾರಣಕ್ಕೋ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನೀವಿಲ್ಲದವಂಗೆ–ನೀನಾರಂಗದಲ್ಲಿ ಇಷ್ಟಲಿಂಗವಾಗಿ ನೆಲೆಗೊಂಡಷ್ಟ ವಿಧಾರ್ಚನೆ ಷೋಡಶೋಪಚಾರವ ಕೈಕೊಳ್ಳದಿರುವ ಕಾರಣ, ಶಿವಾಚಾರದ ಮಾತೇಕೋ–ಲಿಂಗಾಚಾರದ ಪ್ರಸಂಗವೇತಕ್ಕೋ? ಸಲ್ಲದು.

II –

1–1 ಕೆ (ಚ,ಜ). 3–3 ದ(ಚ,ಜ). 4–4 ಕರ್ತಾರ (ಚ,ಜ). 5–5 ವಯ್ಯ (ಚ,ಜ). 6–6 ನಿ (ಚ,ಜ).

....

ಆಯುಧವನಿಕ್ಕಿದವಂಗೆ ವೀರದ ಮಾತೇಕೆ?–ಭಕ್ತಿಜ್ಞಾನವೈರಾಗ್ಯವೆಂಬ ಶಸ್ತ್ರವನು ಬಿಟ್ಟುವಂಗೆ ವೀರಶೈವಾಚಾರಸಂಗ್ರಹದ ಪ್ರಸಂಗವೇನು ಕಾರಣ? ಲಿಂಗವು ಅಂತರಿಸಿದವಂಗೆ–ಇಷ್ಟಲಿಂಗವು ಜಕ್ಕರಿಸಿದವನಿಗೆ, ಒಳನುಡಿ ಯಾಕೆ?–ಅಂತರಂಗದ ಪ್ರಾಣಲಿಂಗದ ಪ್ರಸಂಗವೇನು ಕಾರಣ? ಐದಣಚಿಯಿಲ್ಲದವಳಿಗೆ ಸೌಭಾಗ್ಯದ ಹೂವಿನ ಬೊಟ್ಟೇಕೆ?–ಪಂಚಾಚಾರಂಗಳಿಲ್ಲದ ಅರೆ ಭಕ್ತನಿಗೆ ಮಹಾಜ್ಞಾನವೆಂಬ ಕುಸುಮದ ತಿಲಕವೇನು ಕಾರಣ?, ಸತ್ಯವಿಲ್ಲದವಂಗೆ ನಿತ್ಯನೇಮವೇಕೆ?–ಸದಾಚಾರ ಸನ್ಮಾರ್ಗಪಾರಮಾರ್ಥವಿಲ್ಲದ ಭಕ್ತನಿಗೆ ತ್ರಿಕಾಲಂಗಳಲ್ಲಿ ತಪ್ಪದೆ ಮಾಡುವ ಪೂಜಾಕ್ರೀಗಳೇನು ಕಾರಣ? ಕರ್ತಾರ ನಿಮ್ಮ ಒಲವಿಲ್ಲದವಂಗೆ ಶಂಭುವಿನ ಬಂಧುಗಳೇಕೆ?–ಎಲೆ ಲಿಂಗವೆ, ನಿಮ್ಮ ಪ್ರಸನ್ನತ್ವವಿಲ್ಲದ ಭಕ್ತನಿಗೆ ಸುಖೋತ್ಪತ್ಯಕ್ಕೆ ಸ್ಥಾನವಾದ ಶಿವಜ್ಞಾನಿಗಳೆಂಬ ಸಾಹಿಗಳೇನು ಕಾರಣ? ಮುಂದಕ್ಕೆ ಕಾಣಬಂದರ್ಥ.

III –

2–2 ಆಯಿರೆಣಾ (ಟ,ಡ).

....

ಆಯಿರೆಣಾಚಿಯಿಲ್ಲದವಳಿಗೆ–ಆಯಿರೆದಾಳಿಯುಂಟಾಗದವಳಿಗೆ.

ಇರುಳೆಂದೇನೋ ಕುರುಡಂಗೆ, ಹಗಲೆಂದೇನೋ ಕುರುಡಂಗೆ. ತಾಳವ ಬಾಜಿಸಿದಡೇ[1]ನೋ[1], ಪಂಚ ಮಹಾ[2]ವಾದ್ಯಂ*ಗಳ*[2] ಬಾರಿಸಿದಡೇ[1]ನೋ[1] ಕಿವುಡಂಗೆ. ಕೂಡಲಸಂಗಮದೇ[3]ವಾ[3] [4]ನಿಮ್ಮ[4] ಪಥ[5]ವಾ[5]ವುದೆಂದಱಿಯದವಂಗೆ?

I –

ಕುರುಡಂಗೆ–ಅಂಧಕಂಗೆ,ಇರುಳೆಂದೇನೋ–ನಿಶಾಕಾಲವಾಯಿತ್ತೆಂದರೆ ಹಾಂಗೆ ಕುಂತುನಿಂತಲ್ಲಿ ಹೊತ್ತುಗಳಿಯಬಾರದು. ಹುಳಹುಪ್ಪಡಿ ಕಡಿದುವೆಂದು ತನ್ನ ಗೊತ್ತಿಗೆ ಮುಟ್ಟಬೇಕೆಂದಂಬಂಥದಿದ್ದಿತ್ತೇ? ಇಲ್ಲವು, ಕುರುಡಂಗೆ–ಅಂಧಕಂಗೆ, ಹಗಲೆಂದೇನೋ–ದಿವಾಕಾಲವಾಯಿತ್ತೆಂದರೆ ಮುಂದಕ್ಕೊಂದೂರು ಕೇರಿಗೆ ಹೋಗಬೇಕು. ಉದ್ದಿಮೆ ವ್ಯಾಪರಂಗಳ ಮಾಡಬೇಕೆಂಬಥಾದಿದ್ದಿತ್ತೆ? ಇಲ್ಲವು, ಕಿವುಡಂಗೆ–ಆಕಾಶ ತತ್ತ್ವವಿಲ್ಲದ ಬಧಿರಂಗೆ, ತಾಳವ ಬಾಜಿಸಿದಡೇನು–ಝಾಗಟಿ ಕೈತಾಳವ ನುಡಿಸಿದರೇನು, ಪಂಚಮಹಾವಾದ್ಯಂಗಳ ಬಾರಿಸಿದಡೇನು–ಐದು ಬಗೆಯ ವಾದ್ಯವ ನುಡಿಸಿದರೇನು, ಕೂಡಲಸಂಗಮ ದೇವಾ–ಎಲೆ ಪರಶಿವಲಿಂಗವೆ, ನಿಮ್ಮ ಪಥವಾವುದೆಂದಱಿಯದವಂಗೆ–ಅಂಗ ಪ್ರಾಣಂಗಳಲ್ಲಿ ಇಷ್ಟ ಪ್ರಾಣಲಿಂಗ ಸಂಬಂಧವ ಮಾಡಿಕೊಂಡು ಅವಿರಳ ಜ್ಞಾನಕ್ರಿಯೆವಿಡಿ ದಾಚರಿಸುವಂಥದು ತಿಳಿಯ ದಾತಂಗೆ.

II –

1–1 ನೋ (ಚ, ಜ), 2–2 ಶಬುದವ (ಚ, ಜ), *–* ನುಡಿಸಿದಡೇನೋ (ಚ, ಜ), 3–3 ವಯ್ಯನ (ಚ, ಜ), 4–4 x (ಚ, ಜ), 5–5 ವಿನ್ನಾ (ಚ, ಜ)

....

ಇರುಳೆಂದೇನೋ ಕುರುಡಂಗೆ? ಹಗಲೆಂದೇನೋ ಕುರುಡಂಗೆ?–ಜಾತ್ಯಾಂಧಕನಾದ ಜೀವನಿಗೆ ಜ್ಞಾನವೆಂದೇನು? ಅಜ್ಞಾನವೆಂದೇನು?, ತಾಳವ ಬಾಜಿಸಿದಡೇನೋ ಪಂಚಮಹಾಶಬುದವ ಬಾರಿಸದಡೇನೋ ಕಿವುಡಂಗೆ–ನಿಜ ಶ್ರುತ ಕರ್ಣವಿಲ್ಲ ಜೀವನಿಗೆ ಶಿವೋಹಂ ಬ್ರಹ್ಮೋಹಂ ಎಂದರೇನೋ? ಪಂಚಾಕ್ಷರಿಮಂತ್ರಧ್ವಾನವನುಚ್ಚರಿಸಿದರೇನೋ ಕೇಳಾನೆ?, ಕೂಡಲಸಂಗಮದೇವಯ್ಯನ ಪಥವಿನ್ನಾವುವೆಂದಱಿಯದವಂಗೆ?–ಶಿವಾಚಾರ ಮಾರ್ಗವಿನ್ನಾವುದೆಂದು ತಿಳಿಯದ ಅಜ್ಞಾನಿಗಳಿಗೆ ಏನು ಹೇಳಿದರೂ ವ್ಯರ್ಥ.

....

೨–೨ ಶತ್ರ (ಜ)

IV –

೧–೧ ನೋ (ತ), *–*ವ(ತ), ೩–೩ ವಯ್ಯನ (ತ), ೪–೪ x (ತ), ೫–೫ ವಿನ್ನಾ (ತ)

....

ಅಜ್ಞಾನ ಸುಜ್ಞಾನವೆಂದು ಬಲ್ಲನೆ? ಜ್ಞಾನೋದಯವಿಲ್ಲದವನು, ಶಿವಮಂತ್ರ ಶಿವಕಥೆಯ ಕೇಳಬಲ್ಲನೆ? ಮಂದಮತಿಯಾದವನೆಂಬುದೀ ವಚನದರ್ಥ.

೬೩೪

ಸಿಂಗದ ನಡು ಮುಱಿಯಲಾ ಸಿಂಗವೇನು ಬಾತೆ?[1]ಸೊಂ[1]ಡಿಲು ಮುಱಿದಡೆ ಗಜವೇನು ಬಾತೆ? ಸಂಗ್ರಾಮದಲ್ಲಿ ವೀರನುಳಿ[2]ದು ಕಲಿತನವೇನು[2] ಬಾತೆ? ಶೃಂಗಾರದ ಮೂಗು ಹೋದಡೆ ಶೃಂಗಾರವೇನು ಬಾತೆ? ನಿಜ ತುಂಬಿದ ಭಕ್ತಿ ತುಳುಕಾದವರೆ ಸಂಗ ವೇನು ಬಾತೆ, ಕೂಡಲಸಂಗಮದೇವಾ?

I -

ಸಿಂಗದ ನಡು ಮುಱಿಯಲಾ ಸಿಂಗವೇನು ಬಾತೆ?–ಸಿಂಹನೆಂಬಂಥದು ತನಗಾಹಾರವಾದ ಆನೆಯನ್ನು ಹೊಡೆಯಬೇಕಾದರೆ ಎಡಕ್ಕೆ ತೋರಿ ಬಲಕ್ಕೆ ಬಲಕ್ಕೆ ತೋರಿ ಎಡಕ್ಕೆ ಹಿಂದಕ್ಕೆ ತೋರಿ ಮುಂದಕ್ಕೆ ತೋರಿ ಹಿಂದಕ್ಕೆ ಲಂಘಿಸಿ ಹಿಡಿವಲ್ಲಿ ಮಹಾಪರಾಕ್ರಮಿಯಾಗಿರ್ಪುದು. ಅಂತಪ್ಪ ಪರಾಕ್ರಮಿ ಯಾದಂಥ ಸಿಂಗದ–ಕಂಠೀರವದ, ನಡು–ಟೊಂಕ, ಮುಱಿಯಲು–ಭಗ್ನವಾಗಲು, ಸಿಂಗವೇನು ಬಾತೆ?–ಸಿಂಹನಿರ್ದೂ ಯಾತಕ್ಕೆ ಪ್ರಯೋಜನ? ಯಾತಕ್ಕೂ ಪ್ರಯೋಜನವಿಲ್ಲವು. ಸೊಂಡಿಲು ಮುಱಿದಡೆ ಗಜವೇನು ಬಾತೆ?–ಸಿಂಹಳದ್ವೀಪದ ಜಾತಿ ಆನೆಯ ಕೋರೆಗೆ ಕತ್ತಿಯನ್ನು ಕಟ್ಟಿ ಸೊಂಡಿಲಿಗೆ ಸರಪಳಿಯನ್ನು ಕೊಟ್ಟು ಅರಿಬಲಕ್ಕೆ ಯುದ್ಧಕ್ಕೆ ಬಿಟ್ಟಲ್ಲಿ ತನ್ನ ಬಲವನ್ನು ಬಿಟ್ಟು ಅರಿಯ ಬಲವನ್ನು ಸಂಹರಿಸುವಂಥ, ಸೊಂಡಿಲು–ಬರಿಗೈಯ್ಯು, ಮುಱಿದಡೆ–"ಮುರಿ ಮೋಟನೇ"ಯೆಂದು ಮೋಟನೆ ಯಾಗಿ ಹೋಗಲು, ಗಜವೇನು ಬಾತೆ–ಆ ಆನೆಯಿದ್ದೂ ಯಾತಕ್ಕೆ ಪ್ರಯೋಜನ? ಪ್ರಯೋಜನವಿಲ್ಲವು.

ಸಂಗ್ರಾಮದಲ್ಲಿ–ರಣಾಗ್ರದಲ್ಲಿ, ವೀರನುಳಿದು–ಪರಾಕ್ರಮಿಯಾದ ಪಟುಭಟನು ರಣಾಗ್ರವನ್ನು ಕಂಡಾಕ್ಷಣಕ್ಕೆ ಮುಂದಲ ಕಾಲು ಹಿಂದಕ್ಕಿಟ್ಟು ಕೈಯೊಳಗಿನ ಕತ್ತಿಯನ್ನು ಬಿಟ್ಟು ಮೊಳಕಾಲಮಂಡಿ ಬಡಿಯೋ ಸುದ್ದಿಯನರಿಯದೆ ಓಡಿ ಹುತ್ತವನೇರಿ ಹುಲ್ಲಕಚ್ಚಿದಲ್ಲಿ, ಕಲಿತನವೇನು ಬಾತೆ?–ಪರಾಕ್ರಮತ್ವವಿದ್ದೂ ಯಾತಕ್ಕೆ ಪ್ರಯೋಜನ? ಯಾತಕ್ಕೂ ಪ್ರಯೋಜನವಲ್ಲವು. ಶೃಂಗಾರದ–ಮುಖಕ್ಕೆ ಅಲಂಕಾರವಾದ, ಮೂಗು–ಘ್ರಾಣವು, ಹೋದಡೆ–ಛೇದನವಾಗಿ ಹೋದರೆ, ಶೃಂಗಾರವೇನು ಬಾತೆ?–ವಸ್ತು ಒಡವೆ ಆಭರಣಂಗಳನ್ನು ಇಟ್ಟು ತೊಟ್ಟುಕೊಂಡಿದ್ದರೆ ಯಾತಕ್ಕೆ ಪ್ರಯೋಜನ? ಯಾತಕ್ಕೂ ಪ್ರಯೋಜನವಲ್ಲವು.

ನಿಜತುಂಬಿದ–ಅಂಗಪ್ರಾಣಂಗಳಲ್ಲಿ ಇಷ್ಟಪ್ರಾಣಲಿಂಗವು ಭರಿತವಾದ, ಭಕ್ತಿ–ಶಿವಾದ್ವೈತ ಭಕ್ತಿಯು, ತುಳುಕಾಡದವರ–ಇಷ್ಟಪ್ರಾಣಲಿಂಗಂಗಳು ಅಂಗ[೧] ಪ್ರಾಣಂಗಳನು ಒಳಕೊಂಡು ಹೊರಸೂಸುತ್ತಿರ ಬೇಕು. ಹೊರಸೂಸದೆ ಇದ್ದಂಥವರ, ಸಂಗವೇನು ಬಾತೆ?–ಅವರ ತತ್ಸಂಗದಲ್ಲಿದ್ದು ಏನು ಪ್ರಯೋ ಜನ? ಏನೂ ಪ್ರಯೋಜನವಲ್ಲವು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

....

೧+– ಮನ (ಕ, ಗ).

II– -

1–1 ಸುಂ (ಚ, ಜ), 2–2 ಯಲದೇನು (ಚ, ಜ).

....

ಸಿಂಗದ ನಡು ಮುಜೆಯಲಾ ಸಿಂಗವೇನು ಬಾತೆ?–ಸುಜ್ಞಾಮದ ನೆನಹು ನಷ್ಟವಾಗಲು ಆ ಸುಜ್ಞಾನವನೇನ ಮಾಡಬೇಕು? ಸುಂಡಿಲ ಮುಜಿದಡೆ ಗಜವೇನು ಬಾತೆ?–ಆದಿಲಿಂಗ ಅನಾದಿಶರಣ ನೆಂಬ ಪೂರ್ವಾಪರಜ್ಞಾನಾಚರಣೆಯ ನೆನಹು ನಷ್ಟವಾದರೆ ಚಿತ್ತಿನ ಮಹದಹಂಕಾರಭೂಷಣವೆಂಬ ಮಾತಂಗನನೇನ ಮಾಡಬೇಕು? ಸಂಗ್ರಾಮದಲ್ಲಿ ವೀರನುಳಿಯದೇನು ಬಾತೆ?–ಭಕ್ತಿವೈರಾಗ್ಯವೆಂಬ ರಣಾಂಗಣದಲ್ಲಿ ವೀರಮಾಹೇಶ್ವರನಾಚರಣೆಯು ನಷ್ಟವಾಗಲು ಆ ವೀರಮಹೇಶ್ವರನೇನ ಮಾಡಬೇಕು? ಶೃಂಗಾರದ ಮೂಗು ಹೋದಡೆ ಶೃಂಗಾರವೇನು ಬಾತೆ?–ಸುಜ್ಞಾನಾಲಂಕಾರವಾದ ಸತ್ಕ್ರೀಯಂಬ ಘ್ರಾಣವು ನಷ್ಟವಾದರೆ ಆ ಸುಜ್ಞಾನವನೇನ ಮಾಡಬೇಕು? ನಿಜ ತುಂಬಿದ ಭಕ್ತಿ ತುಳುಕಾಡದವರ ಸಂಗವೇನು ಬಾತೆ? ಕೂಡಲಸಂಗಮದೇವಾ–ತನ್ನ ಶಿವತತ್ತ್ವದಲ್ಲಿ ಪೂರಿತವಾದ ಶಿವಾದ್ವೈತಭಕ್ತಿಯು ತುಳುಕಾಡದವರ ತತ್ಸಂಗನವನೇನ ಮಾಡಬೇಕು? ಎಲೆ ಲಿಂಗವೆ.

IV –

1–1 ಸುಂ (ತ). 2–2 ಯಲದೇನು (ತ).

....

ಗುರು ಉಪದೇಶವ ಕೇಳಿ ವೀರಶೈವ ಸ್ಥಲಕುಲಗುಣಂಗಳನಂಗೀಕರಿಸಿಕೊಂಬುದು. ಇವರೊಳಗೆ ಕಡಿಮೆಯಾದರೆ ಮೂಗುಹೋದ ಪರಿಯೆಂತೆಂಬುದೀ ವಚನದರ್ಥ.

೬೩೫

ಮುನ್ನಿನ ಆದ್ಯರ ಪಥಂಗಳು ಇನ್ನಾರಿಗೆ ಅಳವಡದು ನೋಡಾ! ಬಲ್ಲನಾಗಿ ಒಲ್ಲನವರ, ಸಲ್ಲರು ಶಿವಪಥಕ್ಕೆ, ಒಳ್ಳೆಯ ಮೈಲಾರನ ಸಿಂಗಾರದಂತೆ, ವೇಶ್ಯೆಯಬಾಯ ಎಂಜಲ ತಿಂಬ ದಾಸಿಯ ಸಂಸಾರದಂತೆ, ಕೂಡಲಸಂಗನ ಶರಣರನಜಿಯದೆ ಉಳಿದ ಭಂಗಿತರ!

I –

ಮುನ್ನಿನ–ಮೊದಲಿನ, ಆದ್ಯರ–ದಾಸಿದೇವ [1]ಸಿಂಧುಬಲ್ಲಾಳ ಸಿರಿಯಾಳಸೆಟ್ಟಿ ಮೊದಲಾದರು ವತ್ತುಮೂರು ಪುರಾತರ, ಪಥಂಗಳೂ–ವಸ್ತ್ರ ವಧುಸುತರನ್ನು ಕೊಟ್ಟು ಭಕ್ತಿಯನ್ನು ಮಾಡಿ ಮುಕ್ತಿ ಯನ್ನು ಹಡದುಕೊಂಡು ಹೋದಂಥ ಮಾರ್ಗಂಗಳು, ಇನ್ನಾರಿಗೆ ಆಳವಡದು ನೋಡಾ!–ಆಶಾ ಲಾಂಛನಿ ಉಪಾಧಿಕರುಗಳಿಗೆ ದೊರಕೊಳ್ಳದು ಕಾಣಾ. ವಲ್ಲನಾಗಿ–ಅವತರಂತರಂಗದ ಸ್ಥಿತಿಗತಿಯನ್ನು ತಿಳಿದಪ್ಪನಾಗಿ, ಬಲ್ಲನವರ–ಅವರಿಗೊಲಿದು ನಿಜಮೋಕ್ಷವನ್ನು ಕರುಣಿಸಿಕೊಡಲೊಲ್ಲನು, ಸಲ್ಲರು ಶಿವ ಪಥಕ್ಕೆ;ಶಿವಪಥಕ್ಕೆ–ಲಿಂಗಾಚಾರಮಾರ್ಗಕ್ಕೆ, ಸಲ್ಲರು–ಸಲುವಳಿಯಾಗರು. ಒಳ್ಳೆಯ ಮೈಲಾರನ– ಇಂಪಾಗಿ ಸೊಂಪಾಗಿ ಕೋಮಲತರವಾಗಿರುವಂಥ ಮಣ್ಣು ಮೈಲಾರನ, ಸಿಂಗಾರದಂತೆ–ಅಲಂಕಾರದ ಹಾಂಗೆಂಬಲ್ಲಿ, ಮೇಲೆ ನೋಡಿದರೆ ಇಂಗಳಿಕ ಅರದಾಳ ಮೊದಲಾದ ಪಂಚವಣ್ಣಿಗೆ ಬಣ್ಣ ಯುಕ್ತವಾಗಿ ಬರೆದಿರುವಂಥದು ಬಹು ಚಂದವಾಗಿರ್ಪುದು. ಅಂತರಂಗ ಹೊಟ್ಟೆ[2]ಯೊಳಗೆ ನೋಡಿದರೆ ಗೊಬ್ಬರ ಪವುಂಡಿನಾರು ಹುಲ್ಲುಸರವಿಯೇ ತುಂಬಿಕೊಂಡಿರ್ಪೂದು, ಹಾಂಗೆ;

• ಒಳ್ಳೆಯ ಮೈಲಾರನ-ಉಪಾಧಿಕನ ಬಹಿರಂಗದಲ್ಲಿ ನೋಡಿದರೆ ಲಲಾಟದಲ್ಲಿ ವಿಭೂತಿ ಕೊರಳಲ್ಲಿ ರುದ್ರಾಕ್ಷಿಮಾಲೆ ಅಂಗದ ಮೇಲೆ ಶಿವಲಿಂಗ ಮೊದಲಾದ ಭಕ್ತಿವೇಷವೇ ಒಪ್ಪುತ್ತಿಹುದು. ಅಂತರಂಗದಲ್ಲಿ ನೋಡಿದರೆ ವಂಚನೆ ಉಪಾಧಿ ಕುಹಕ ಪ್ರಪಂಚೆಂಬ ಕಾಪಟ್ಯವೇ ತುಂಬಿಕೊಂಡಿರುವುದು, ಇಂತಿವೆಲ್ಲವ ತುಂಬಿಕೊಂಡಿರುವಂಥ ಉಪಾಧಿಕನ ಇರಸ್ಥಿತಿಯೂ ಒಳ್ಳೆಯ ಮೈಲಾರನ ಇರಸ್ಥಿತಿಯೂ ಒಂದೇಯಾಗಿರ್ಪುದು. ವೇಶ್ಯೆಯ ಬಾಯ ಎಂಜಲ ತಿಂಬ-ದಾಸಿಯ ಸಂಸಾರದಂತೆ: [ವೇಶ್ಯೆಯ ಬಾಯ-] ಊರೆಲ್ಲ ಉಗುಳುವಂಥ ಪಡುಗುವೆ ವೇಶ್ಯೆಯ ಬಾಯಿ, ಅಂತಪ್ಪ ವೇಶ್ಯೆಯ ಬಾಯ, ಎಂಜಲ ತಿಂಬ-ಉಚ್ಛಿಷ್ಟವನ್ನು ಅನುಭವಿಸುವ, ದಾಸಿಯ ಸಂಸಾರದಂತೆ-ಗೌಡಿಯ[೨] ಸಂಸಾರದ ಹಾಂಗೆ, ಕೂಡಲಸಂಗನ ಶರಣರ-ಶಿವನ ಚಿತ್ರಭಾಂಗ ಸ್ವರೂಪರಾದ ಶಿವಶರಣರ, ಅಱಿಯದೆ-ಭಕ್ತಿಯನ್ನು ಮಾಡಿ ಮುಕ್ತಿಯನ್ನು ಹಡೆಯಬೇಕೆಂಬಂಥದನ್ನು ತಿಳಿಯದೆ, ಉಳಿದ-ಸಕಲಸಂಸಾರದಲ್ಲಿ ಅವಶೇಷಿತವಾದ, ಭಂಗಿತರ-ಭವಭಂಗವ ಕೊರೆತೆಯನುಳ್ಳ ಜೀವರುಗಳ ಇರಸ್ಥಿತಿಯೂ ವೇಶ್ಯೆಯ ಬಾಯ ಎಂಜಲ ತಿಂಬ ದಾಸಿಯ[೨] ಸಂಸಾರ ಇರಸ್ಥಿತಿಯೂ ಒಂದೇಯಾಗಿರ್ಪುದು.

....

೧-೧ ಈ ಹೆಸರುಗಳು ಎರಡೂ ಪ್ರತಿಗಳಲ್ಲಿ ಹಿಂದು ಮುಂದಾಗಿವೆ (ಸಂ), ೨+ ದೇಹ (ಗ).

೬೩೬

ಗೀಜಗನ ಗೂಡು, ಕೋಡಗದಣಲ ಸಂಚ, ಬಾದುಮನ ಮದುವೆ, ಬಾವಲ ಬಿದ್ದಿನಂತೆ, ಜೂಜುಗಾಱನ ಮಾತು ಬೀದಿಯ ಗುಂಡನ ಸೊಬಗು, ಓಡಿನೊಳಗಗೆಯ ಹೊಯ್ದಂತೆ ಕಾಣಿರೋ! ಶಿವನ ಆದಿ ಅಂ[1]ತ್ಯ[1]ವನಱಿಯದವನ ಭಕ್ತಿ ಸುಖ[2]ದ[2] ಶೋಧನೆಗೆ ಮದ್ದು ಕೊಂಡಂತೆ, ಕೂಡಲಸಂಗಮದೇವ!

I -

ಗೀಜಗನ ಗೂಡು-ಗೀಜಗನ ಪಕ್ಷಿಯೆಂಬಂಥದು ಸುಗ್ಗಿಯ ದಿವಸದಲ್ಲಿ ಮೆದೆಹುಲ್ಲನ್ನು ತೆಗೆದುಕೊಂಡು ಬಂದು, ಕೆರೆ ಬಾವಿ ಕಂಟಿಗಳಲ್ಲಿ ಒಳಮನೆ ಹೊರಮನೆಯೆಂದು ಮೂರಂತಸ್ತ ನಾಲ್ಕಂತಸ್ತ ಮನೆಯನ್ನು ಕಟ್ಟಿಕೊಂಡಿರುವುದು. ಕಟ್ಟಿಕೊಂಡಿದ್ದರೂ ತಾನು ತನ್ನ ಮಕ್ಕಳಿರುವುದಕ್ಕೆ ಸ್ಥಾನವಲ್ಲದೆ ಸಂಜೆ ಮುಂಜಾನೆಯಲ್ಲಿ ಚಳಿಗಾಲ ಮಳೆಗಾಲದಲ್ಲಿ ಬಂದಂಥ ಪಕ್ಷಿಗಳಿಗೆ ಜಾಗವನ್ನು ಕೊಟ್ಟು ಮಡಗಿಕೊಂಡಿರುವಂಥದು ತಿಳಿದಿಪ್ಪುದೆ? ಅರಿಯದು, ಹಾಂಗೆ, ಉಪಾಧಿಕನು ಹಿಂದೆ ಹಿತ್ತಲ ಮುಂದೆ ರಾಜಾಂಗಳ ನವರಂಗ ತೊಟ್ಟಿ ಸುಳಿ ಮಾಳಿಗೆ ಮದನಕೈಲೋವೆಗಳಿಂದ ಕಟ್ಟಿಕೊಂಡಿದ್ದರೂ ತಾನು ತನ್ನ ಸತಿಸುತಾದಿಗಳಿರುವುದಕ್ಕೆ ಸ್ಥಾನವಾಗಿಪ್ಪುದಲ್ಲದೆ ಸಂಜೆ ಮುಂಜಾನೆ ವೇಳೆಯಲ್ಲಿ ಗುರುಚರ ಮೂರ್ತಿಗಳು "ಲಿಂಗಾರ್ಪಿತ ಭಿಕ್ಷ"ಕ್ಕೆಂದು ಬಿಜಯಂಗೈಯ್ದು ಬಂದರೆ [೧]ಮಾನ ಮನ್ನಣೆಯಿಂದ[೧] ಭಕ್ತಿ ಬಿನ್ನಹವನ್ನು ಮಾಡಿ ನಾಲ್ಕೊಪ್ಪತ್ತು ಮಡಗಿಕೊಂಡಿರುವಂಥದನು ತಿಳಿದಿಪ್ಪನೆ? ಅರಿಯನು. ಅದಲ್ಲದೆ ಚಳಗಾಲ ಮಳೆಗಾಲದಲ್ಲಿ ಅರಸಿ ಬಂದಂಥ ಭಕ್ತಮಾಹೇಶ್ವರರುಗಳಿಗೆ ಜಾಗವನ್ನು ಕೊಟ್ಟಾನೆ? ಕೊಡಲರಿಯನು. ಹಾಂಗೆ, ಈ ಉಪಾಧಿಕನ ಮಂದಿರದ ಇರಸ್ಥಿತಿಯೂ ಆ ಗೀಜಗನ ಗೂಡಿನ ಇರಸ್ಥಿತಿಯೂ ಒಂದೇಯಾಗಿರ್ಪುದು.

ಕೋಡಗದಣಲ ಸಂಚ-ಲೋಕದಲ್ಲಿ ಆತ್ಮರುಗಳಾರಾದರೂ ಅಂಗಳದಲ್ಲಿ ಹದಿನೆಂಟು ಧಾನ್ಯಂಗಳನು ಒಣ ಹರವಿದಲ್ಲಿ ಕಪಿಯೆಂಬುವಂಥದು ಬಂದು ತಿಂಬುವಷ್ಟು ತಿಂದು, ಕಂಠದಲ್ಲಿ ಕಂಚಿಕಾಯಿ ಗಡತರ ನಿಂಬಿಕಾಯಿ ಗಡರತು ತುಂಬಿಕೊಂಡು ಹೋಗಿ ತಾನೇ ತಿಂದು ತಾನೆ ಪರಿಣಾಮಿಸುವುದಲ್ಲದೇ ಹಸಿದು ಬಳಲಿ ಬಂದಂಥ ಮೃಗಾದಿಗಳಿಗೆ ಕೊಡುವಂಥದು ತಿಳಿದಿಪ್ಪುದೇ? ಅರಿಯದು. ಹಾಂಗೆ, ಉಪಾಧಿಕನು ಐಶ್ವರ್ಯವಂತನಾಗಿದ್ದರೆ ತಾನು ತನ್ನ ಸತಿಸುತರು ನಂಟರು ನಲ್ಲರು ಉಂಡುಟ್ಟು ಪರಿಣಾಮಿಸುವರಲ್ಲದೆ ಹಸಿದು ಬಳಲಿಬಂದಂಥ ಭಕ್ತಮಾಹೇಶ್ವರರುಗಳಿಗೆ ನೀಡಿ ಸಂತುಷ್ಟಿಬಡಿಸುವನೆ? ಬಡಿಸಲರಿಯನು. ಹಾಂಗೆ, ಕೋಗಡದಣಲ ಸಂಚ ಇರಸ್ಥಿತಿಯೂ ಉಪಾಧಿಕನ ಐಶ್ವರ್ಯದ ಇರಸ್ಥಿತಿಯೂ ಒಂದೇಯಾಗಿರ್ಪುದು.

ಬಾದುಮನ ಮದುವೆ-ಲೋಕದಲ್ಲಿ ಆಚೆ ಕೇರಿಯ ಹತ್ತೆಂಟು ಹುಡುಗರು ಈಚೆ ಕೇರಿಯ ಹತ್ತೆಂಟು ಹುಡುಗರು ಬೀದಿ ಬಜಾರದಲ್ಲಿ ನೆರೆದುಕೊಂಡು ಅತ್ತಲಾಗರ್ಥ ಇತ್ತಲಾಗರ್ಥವಾಗಿ ಒಂದು ಹೆಣ್ಣುಗೊಂಬೆ ಒಂದು ಗಂಡುಗೊಂಬೆಗಳ ಮಾಡಿಕೊಂಡು ಹಂಚು, ಕಲ್ಲು, ಹರಳು ಮೊದಲಾದವನ್ನು ನೆರಹಿಕೊಂಡು ಹುಗ್ಗಿ, ಹೋಳಿಗೆ, ತುಪ್ಪ, ಸಕ್ಕರೆಯೆಂದು ತಾಸು ಎರಡು ತಾಸು ಮದುವೆಯ ಸಂಭ್ರಮದಿಂದಲಾಡಿ ಲಟಪಟನೆ ಬಡಿದಾಡಿಕೊಂಡು ತಮ್ಮ ತಮ್ಮ ಮನೆಗೆ ಓಡಿ ಹೋಗುವವಲ್ಲದೆ [ಊರುಉಪಟಳ]ವೆಂದು ನಿಜವಾಗಿ ಉಂಡುಟ್ಟು ಪರಿಣಾಮಿಸುವವೆ? ಪರಿಣಾಮಿಸಲರಿಯವು ಹಾಂಗೆ ಉಪಾಧಿಕನು ಮದುವೆ ಮುಂಜುವಿ ದೇವತಾ ಪ್ರಸ್ತವನ್ನು ಮಹಾಸಡಗರದಲ್ಲಿ ಮಾಡಿದರೂ ತಾನು ತನ್ನ ಹೆಂಡಿರು ಮಕ್ಕಳು ನಂಟರು ನಲ್ಲರು ಉಂಡುಟ್ಟು ಪರಿಣಾಮಿಸುವರಲ್ಲದೆ ಭಕ್ತಮಾಹೇಶ್ವರರು ಗಳಿಗೆ ನೀಡಿ ಸಂತುಷ್ಟಿಬಡಿಸುವನೆ? ಬಡಿಸಲರಿಯನು. ಅದುಕಾರಣ ಬಾದುಮನ ಮದುವೆಯ ಇರ ಸ್ಥಿತಿಯೂ ಉಪಾಧಿಕನ ಮದುವೆಯ ಮುಂಜುವೆಯ ಇರಸ್ಥಿತಿಯೂ ಒಂದೇಯಾಗಿರ್ಪುದು.

ಬಾವಲ ಬಿದ್ದಿನಂತೆ-ತೋಗಲಬಾವುಲಿಯೆಂಬುವಂಥದು ಬಾಯಲ್ಲೇ ತಿಂದು ಬಾಯಲ್ಲೇ ವಿಷ್ಟಿಸುತ್ತ, ಕಾಲು ಮೇಲಾಗಿ ತಲೆ ಕೆಳಗಾಗಿ ನೇತು ಹಾಕಿಕೊಂಡು ತಪಸಿನ ಹಾಂಗೆ ಇರುವುದು. ನೋಡುವಂಥವರಿಗೆ ಆಶ್ಚರ್ಯವಾಗಿಪ್ಪುದು. ಹಾಂಗೆ, ಉಪಾಧಿಕನು ಜಂಗಮಮೂರ್ತಿಗಳಿಗೆ ಇವರು ಜ್ಞಾನಿಗಳು ಶಿವಸ್ವರೂಪಿಗಳು ಪರಬ್ರಹ್ಮಸ್ವರೂಪಿಗಳೆಂದು ಸ್ತೋತ್ರದ ಮಾಡಿ ಮತ್ತು ಅದೇ ಬಾಯಿ ಯಲ್ಲಿ ಇವನಾಸಕ ಅಜ್ಞಾನಿ ಕಳ್ಳ ಸುಳ್ಳ ಜಾರ ಚೋರನೆಂದು ದೂಷಣೆಯ ಮಾಡುವಂಥ ಉಪಾಧಿಕನ ಇರಸ್ಥಿತಿಯೂ, ಆ ತೊಗಲಬಾವುಲಿಯ ಇರಸ್ಥಿತಿಯು ಒಂದೇಯಾಗಿಪ್ಪುದು.

ಜೂಜುಗಾಜಿನ ಮಾತು-ಲೋಕದಲ್ಲಿ ಜೂಜನಾಡುವಂಥವರುಗಳೇನಾದರೂ ಒಂದು ಕಬ್ಬಿನ ಹೊರೆಯನಾಗಲೀ ಒಂದು ಬಾಳೆದಿಂಡನಾಗಲೀ ಒಂದು ಮೊಟ್ಟೆ ತೆಂಗಿನಕಾಯನಾಗಲೀ ತೆಗೆದು ಕೊಂಡು ಬಂದು ಒಂದೇ ವೇಳೆಗೆ ಎರಡು ತುಂಡಾಗಿ ಬೀಳುವ ಹಾಂಗೆ ಒಂದೇ ಪೆಟ್ಟಿಗೆ ನೀ ಕಡಿದರೆ ನನ್ನವೆಲ್ಲ ನಿನಗೆ ಕೊಡುತ್ತೈದೇನು. ನೀನೊಂದು ವೇಳೆಗೆ ಎರಡು ತುಂಡುವಾಗುವ ಹಾಂಗೆ ಒಂದೇ ಪೆಟ್ಟಿಗೆ ಕಡಿಯಲಾರದಿದ್ದರೆ ನಿನ್ನವೆಲ್ಲ ನನಗೆ ಕೊಡಬೇಕೆಂದು. ಜೂಜನಾಡಿನಲ್ಲಿ, ಎಲ್ಲಾ ಹರಿಯ ಹೊಡೆದು, ಬುಡಕ ತುಸು ನಾರಗುಂಜು ಮಾತ್ರ ಉಳಿಯದಿರವುದು, ಅವ ಕೊಡದೆ ಇರುವ, ಇವ ಬಿಡದಿರುವ ಹಾಂಗೆ, ಉಪಾಧಿಕನು ಸ್ವಾಮೀ ತನು ನಿಮ್ಮದು ಧನ

ನಿಮ್ಮದು ಅರ್ಥಪ್ರಾಣಾಭಿಮಾನ ನಿಮ್ಮದು ನಾನು ನಿಮ್ಮ ತೊತ್ತು ತೊಂಡ ಸೇವಕನೆಂದು ಹೇಳಿಕೊಂಬುವಂಥದನು ಬಿಡ, ಹೇಳಿಕೊಂಡ ಹಾಂಗೆ ಕೊಟ್ಟು ಭಕ್ತಿಯನ್ನು ಮಾಡ, ಅದು ಕಾರಣ ಉಪಾಧಿಕನ ಇರಸ್ಥಿತಿಯೂ ಆ ಜೂಜುಗಾರನ ಇರಸ್ಥಿತಿಯೂ ಒಂದೇಯಾಗಿರ್ಪುದು.

ಬೀದಿಯ ಗುಂಡನ ಸೊಬಗು–ಲೋಕದಲ್ಲಿ ಧನಸಂಪನ್ನರಾದಂಥವರ ಮನೆಯಲ್ಲಿ ತೊತ್ತುಗೆಲಸ ಮಾಡುವಂಥ ಗೌಡಿ ಏನಾದರೂ ಹಗಲು ಬೈತನಕ ಒಳಚಾಕರಿ ಹೊರಚಾಕರಿಯೆಂದು ಮಾಡಿ ಸಾಯಂಕಾಲವಾದ ಮೇಲೆ ತಂಗಳು ಬೆಂಗಳು ಕೂಳನ್ನು ಹಾಕಿಸಿಕೊಂಡು ಸೀರೆ ಮಾಸಿದ್ದರೆ ತಿರ ಹೊರನಾಗಿ ಉಟ್ಟುಕೊಂಡು ಹೊಂಬಿತ್ತಾಳಿ ಆಭರಣವನ್ನಿಟ್ಟುಕೊಂಡು ಚಾವಡಿಯಲ್ಲಿ ಒರಗಿಕೊಂಬುವುದಕ್ಕೆ ಬೀದಿಬಾಜಾರಗುಂಟ ಹೋಗುತ್ತಿದ್ದಲ್ಲಿ ಅರಿಯದಿದ್ದಂಥವರಗಳೇನಾದರೂ ಇವಳೇನು ನಾಡಿಗನ ಮಗಳೋ ದೇಸಾಯಿಗಳ ಮಗಳೋಯೆಂದು ಅತಿ ಬೆರಗಾಗಿ ನೋಡುವರು. ಬಲ್ಲಂಥವರುಗಳೇ ಇವಳು ಧನಸಂಪನ್ನರ ಮನೆಯಲ್ಲಿರುವ ಗೌಡಿಯಲ್ಲವೆ? ಎಂದು ನಕ್ಕು ಹಾಸ್ಯವ ಮಾಡುತ್ತಿಹರು. ಹಾಂಗೆ, ನಿರ್ವಂಚಕ ಸದ್ಭಕ್ತನು ಭಕ್ತಿವೇಷವ ಧರಿಸಿಕೊಂಡಿದ್ದರೆ ಪೂಜ್ಯವಾಗಿದ್ದೀತಲ್ಲದೆ ಉಪಾಧಿಕನು ಭಕ್ತಿವೇಷನು ಧರಿಸಿಕೊಂಡಿದ್ದರೆ ಆ ಬೀದಿಗುಂಡನ ಸೊಬರಿನ ಹಾಂಗಲ್ಲದೆ ಯಾತಕ್ಕೂ ಪ್ರಯೋಜನವಲ್ಲವು.

ಓಡಿನೊಳಗಗೆಯ ಹೊಯ್ದಂತೆ ಕಾಣಿರೋ–ಭೂಮಿಯ ಮೇಲೆ ಹದಿನೆಂಟು ಧಾನ್ಯಂಗಳನು ಬಿತ್ತಿದರೆ ಬೆಳೆದು ಫಲವಾಗುವುದಲ್ಲದೆ ಓಡಿನೊಳಗೆ ಹದಿನೆಂಟು ಧಾನ್ಯಂಗಳನು ಒಗ್ಗಿ ಹೊಯ್ದರೆ ಬೆಳೆದು ಫಲವಾದಾವೆ? ಆಗಲರಿಯವು ಹಾಂಗೆ, ಜಂಗಮಮೂರ್ತಿಗಳಿಗೆ ಸಕಲ ಪದಾರ್ಥಂಗಳನು ನೀಡಿ ಸಂತಷ್ಟಿಬಡಿಸಿದರೆ ಭೂಮಿಯ ಮೇಲೆ ಹದಿನೆಂಟು ಧಾನ್ಯಂಗಳನು ಬಿತ್ತಿದರೆ ಬೆಳೆದುಫಲವಾದ ಹಾಂಗೆ ನಿತ್ಯವಾದ ನಿಜಮೋಕ್ಷವೆ ಆಗುತ್ತಿಹದು, ವಿಪ್ರರುಗಳಿಗೆ ಸಕಲಪದಾರ್ಥಂಗಳನು ನೀಡಿ ಸಂತುಷ್ಟಿಬಡಿಸಿದರೆ ಓಡಿನೊಳಗೆ ಆಗೆಯ ಹೊಯ್ದ ಹಾಂಗೆ ವ್ಯರ್ಥಸ್ಯವಾಗಿರ್ಪುದು, ಕಾಣಿರೋ–ಕಂಡಿರೋ.

ಶಿವನ ಆದಿ ಅಂತ್ಯವನಜೆಯದವನ: ಶಿವಯೆಂದರೆ ಇಷ್ಟಲಿಂಗವು, ಆದಿಯೆಂದರೆ ಪ್ರಾಣಲಿಂಗವು, ಅಂತ್ಯವನು–ಅಂಗಪ್ರಾಣಂಗಳಲ್ಲಿ ಇಷ್ಟ ಪ್ರಾಣಲಿಂಗಸಂಬಂಧವ ಮಾಡಿಕೊಂಡು ಅವಿ ರಳಜ್ಞಾನಕ್ರಿಯವಿಡಿದಾಚರಿಸುವಂಥ ಆಚರಣೆಯನ್ನು, ಅಜೆಯದವನ–ತಿಳಿಯದವನ, ಭಕ್ತಿ ಭಿನ್ನ ಭಕ್ತಿ ಯು, ಸುಖದ ಶೋಧನೆಗೆ ಮದ್ದುಕೊಂಡಂತೆ–ದೇಹದಲ್ಲಿ ರೋಗರುಜಿಯಿಳ್ಳವರುಶೋಧನೆ ಮದ್ದನ್ನು ತೆಗೆದುಕೊಂಡರೆ ಹೊಟ್ಟೆಯೊಳಗಿದ್ದಂಥ ಕ್ರಿಮಿಗಳೆಲ್ಲ ಸತ್ತುಹೋಗಿ ಚಿನ್ನಕ್ಕೆ ಪುಟಕೊಟ್ಟೋಪಾಧಿಯಲ್ಲಿ ದೇಹವರ್ಧನವಾಗುತ್ತಿಹುದು. ಉಂಬುತ್ತ ಉಡುತ್ತ ಸುಖಸಂತೋಷ ದಲ್ಲಿದ್ದವರುಗಳೇನಾದರೂ ಶೋಧನೆ ಮದ್ದನ್ನು ತೆಗೆದುಕೊಂಡರೆ ಹೊಟ್ಟೆಯೋಳಗೆ ಕಂಪಥ್ಯವಾದ ಹಾಂಗಾಗಿ ಕರುಳ ಹರಿದು ಪ್ರಾಣ ಹೋಗುತ್ತಿಹುದು. ಹಾಂಗೆ, ಸಮರಸಭಾವದಿಂದ ಭಕ್ತಿಯನ್ನು ಮಾಡಿದರೆ ಮಹಾಲಿಂಗಲದಲ್ಲಿ ಕೂಡು ವಂಥ ಕೂಟವು ದೊರೆಕೊಂಡಿತ್ತಲ್ಲದೆ ಭಿನ್ನವಿಟ್ಟುಕೊಂಡು ಭಕ್ತಿಯ ಮಾಡಿದರೆ ಸುಖಶೋಧನೆಗೆ ಮದ್ದುಕೊಂಡ ಹಾಂಗೆ ವ್ಯರ್ಥಸ್ಯವಾಗಿಪ್ಪುದು, ಕೂಡಲಸಂಗಮದೇವಾ !–ಎಲೆ ಪರಶಿವಲಿಂಗವೆ.

....

೧–೧ x (ಕ), ೨–೨ ಊರು ಉತಲೆ (ಕ, ಗ), ೩–೩ ಜಿಹ್ವೆ (ಗ)

II– –

1–1 ತು (ಚ, ಜ).

....

ಗೀಜಗನ ಗೂಡು–ಭಕ್ತಮಾಹೇಶ್ವರರುಗಳು ಬಾರದ ಪುಂಡಪಾಳ್ಯ ಕೊಟ್ಟಿಂಗಳೆಂಬ ಘಟಿಕಾಸ್ಥಾನದಲ್ಲಿ ಮನೆಯ ಮಾಡಿಕೊಂಡಿರುವಂಥ ಉಪಾಧಿಭಕ್ತನು, ಕೋಡಗದಣಲಸಂಚ–ಮನೋಪ್ರಕೃತಿಯನುಳ್ಳ ಜೀವನು ತನುಮನಧನವನು ಗುರುಲಿಂಗಜಂಗಮಕ್ಕೆ ನಿರ್ವಂಚನೆಯಿಂದೆ ಸಮರ್ಪಣೆಯ ಮಾಡದೆ ತಾನೂ ತಿನ್ನದೆ ತನ್ನ ಹೆಂಡಿರಮಕ್ಕಳಿಗಾಗಬೇಕೆಂದು ಸಂಚಿತವಾಗಿ ಮಡಗಿಕೊಂಡಿರ್ಪುದು. ಬಾದುಮನ ಮದುವೆ–ಈ ಹೊನ್ನು ಹೆಣ್ಣು ಮಣ್ಣೇನು ನಿತ್ಯವೆ? ಅನಿತ್ಯವಾಗಿರ್ಪವು, ಬಾವಲ ಬಿದ್ದಿನಂತೆ–ತೊಗಲಬಾವಲೆಹಕ್ಕಿಯು ೧೨ ಯೋಜನಾಂತರದಲ್ಲಿ ಹಣ್ಣದೆ ಎಂಬ ಜ್ಞಾನವ ಬಲ್ಲದು ಬಲ್ಲರೇನು ಮಾಡಬೇಕು? ಬಾಯಿಲೆ ತಿಂದು ಬಾಯಿಲೆ ಕೆಡಿಸೂದು. ಹಾಂಗೆ ಉಪಾಧಿಭಕ್ತನು ಗುರುಲಿಂಗಜಂಗಮ ಶಿವಸ್ವರೂಪವೆಂದು ತಿಳಿದು ಬಲ್ಲ;ಬಲ್ಲರೇನು? ದೂಷಣೆಯ ಮಾಡೂದು ಬಿಡ.

ಜೂಜುಗಾಋನ ಮಾತು–ಬಹಿರಂಗದಲ್ಲಿ ತನು ನಿಮ್ಮದು ಮನ ನಿಮ್ಮದು ಧನ ನಿಮ್ಮದು ನಾ ನಿಮ್ಮ ತೊತ್ತು ನಾ ನಿಮ್ಮ ಗೌಡಿ ಹೀಂಗೆಂದರೇನು? ತನುಮನಧನವನು ಕೊಟ್ಟರೆ ಇವರೇ ಆವರಿಸಿಕೊಂಡರಲ್ಲಾ. ಮೊದಲೇ ಇವರ ಹತ್ತುಗೊಡಬಾರದೆಂಬ ಕೇಣಸರವುಂಟಾಗಿರ್ಪುದು, ಬೀದಿಯ ಗುಂಡನ ಸೊಬಗು–ಲೌಕಿಕಾಚಾರಮಾರ್ಗವುಳ್ಳವನ ಅಷ್ಟಾವರಣಂಗಳೆಂಬ ಸೊಬಗನೇನ ಮಾಡಬೇಕು? ಅದಲ್ಲದೆ [3]ಪರದೈವಂಗಳಿಗೇಳಸುವರಯ್ಯಾ. ಅದಲ್ಲವೆ[3] ಆಚಾರಬಾಹ್ಯವಾದವನ ಅಷ್ಟಾವರಣಂಗಳೆಂಬ ಸೊಬಗನೇನ ಮಾಡಬೇಕು? ಓಡಿನೊಳಗಗೆಯ ಹೊಯಿದಂತೆ ಕಾಣಿರೋ–ಅಂಥ ಭಿನ್ನಭಕ್ತನು ಜಂಗಮಕ್ಕೆ ಭಕ್ತಿ ಮಾಡಿದಲ್ಲಿ ಅಪ್ರಯೋಜನವಾಯಿತ್ತು ನೋಡಿರೆ, ಶಿವನಾರಿ ಅಂತುವನಱಿಯೆದವನ ಭಕ್ತಿ ಸುಖದ ಶೋಧನೆಗೆ ಮದ್ದಕೊಂಡಂತೆ ಕೂಡಲಸಂಗಮದೇವಾ–ನಿಃಕಲಪರಶಿವನ ಚಿತ್ಸ್ವರೂಪವೇ ಗುರುಲಿಂಗಜಂಗಮವೆಂದು ತಿಳಿಯದವನ ಅಂತಲ್ಲದೆ ತನ್ನ ಪೂರ್ವಾಪರ ಜ್ಞಾನವನರಿದು ಗುರುವಿಂಥಾದು ಲಿಂಗವಿಂಥಾದು ಜಂಗಮವಿಂಥಾದೆಂದು ತಿಳಿದು ಭಕ್ತಿಮಾಡಿದಲ್ಲಿ ಅವರಿಗೂ ಸುಖವಾಗುವುದು ತನಗೂ ಮೋಕ್ಷವಾಗುವುದು.ಸುಮ್ಮನೆ ಕಾಬವರ ಕಂಡು ತಾನು ಭಕ್ತಿಮಾಡಿದಲ್ಲಿ ಅಪ್ರಯೋಜನವಾಯಿತ್ತೆಲೆ ಲಿಂಗವೆ.

....

3–3 x (ಚ, ಜ),

III –

ಬಾದುಮನ–ಜೋಕುಮಾರನ, ಬಾವಲಬಿದ್ದಿನದಂತೆ–ತೋಲಬಾವಲೆ ಹಕ್ಕಿಯು ಬಾಯಲ್ಲಿ ತಿಂದು ಬಾಯಲ್ಲಿ ಕೆಡಿಸುವ ಹಾಂಗೆ, ಬೀದಿಯ ಗುಂಡನ–ಎದೆಗಲ್ಲನುಳ್ಳ ಮೊಂಡನ, ಓಡಿನೊಳಗಗೆಯ ಹೊಯಿದಂತೆ–ಒಡಕು ಹಂಚಿನಲ್ಲಿ[1] ಅಗೆಯ ಹೊಯಿದ ಹಂಗೆ ಕೆಳಯಿಂಕೆ ಬೇರುವರಿಯದು ಮೆಲೆಯಂಕುರವಿಲ್ಲದೆ ಇರುವ ಹಾಂಗೆ.

....

೪+ ಜಾಗ್ರರವ (ಟ); ಜಾಗರವ (ಡ).

....

IV– –

2–2 x(ತ)

ತಾವಾರೆಂಬುದನಱಿಯದೆ, ತನ್ನ ಆದಿ ಅಂತ್ಯವೇ ಪರಬ್ರಹ್ಮವೆನ್ನದೆ ಭಕ್ತರೆಂದೆಂಬವರು ಜೂಜುಗಾಱಿನ ಮಾತು ಬೀದಿಗುಂಡನ ಪರಿಯೆಂತೆಂಬುದೀ ವಚನದರ್ಥ.

೬೩೭

ತೊತ್ತಿನ ಕೊರಳಲ್ಲಿ ಹೊಂಬಿತ್ತಾಳೆಯ [1]ಶೃಂ[1]ಗಾರವ ಮಾಡಿದಂತೆ, ಕುಚಿತ್ತರ ಸಂಗ ಸುಸಂಗಿಗೆ ಸಂಗಡ[2]ವ[2]ಲ್ಲ! ಗು[3]ಲ[3]ಗಂಜಿ ಮಾಣಿಕಕ್ಕೆ ಸರಿಯಪ್ಪುದೆ, ಕೂಡಲಸಂಗಮದೇವಾ?

I –

ತೊತ್ತಿನ ಕೊರಳಲ್ಲಿ ಹೊಂಬಿತ್ತಾಳೆಯ ಶೃಂಗಾರವ ಮಾಡಿದಂತೆ–ಲೋಕದಲ್ಲಿ ಆರಾದರೂ ಐಶ್ವರ್ಯವುಳ್ಳಂಥವರ ಮನೆಯ ಉತ್ತಮ ಸ್ತ್ರೀಯಳೇನಾದರೂ ಸಕಲಾಭರಣವನಿಟ್ಟುಕೊಂಡಿದ್ದರೆ ನೋಡುವಂಥವರುಗಳಿಗೆ ಪ್ರೀತಿಯಾಗಿಪ್ಪುದಲ್ಲದೆ, ತೊತ್ತಿನ_ಗೌಡಿಯ, ಕೊರಳಲ್ಲಿ–ಕಂಠದಲ್ಲಿ, ಹೊಂಬಿತ್ತಾಳೆಯ ಶೃಂಗಾರವ ಮಾಡಿದಂತೆ_ಹೊಂಬಿತ್ತಾಳೆಯಿಂದ ಹಸ್ತಕಡಗ ಹರಳೋಲೆ ಬುಗುಡಿ ಕೊಪ್ಪು ಚಿಂತಾಕ ಹೊನ್ನಹೂವು ಹಿಂಬಳೆ ಮುಂಬಳೆ ಮೊದಲಾದುವನ್ನು ಮಾಡಿಸಿಕೊಂಡು ಇಟ್ಟು ತೊಟ್ಟು ಬಾಚಿ ಬೈತಲೆಯು ತೆಗೆದುಕೊಂಡು ಮಿಂಚಾಗಿ ತಿರುಗಾಡುತ್ತಿದ್ದಲ್ಲಿ ಅರಿಯದಿದ್ದಂಥವರುಗಳೇನಾದರೂ ಇವಳೇನು ನಾಡಿಗರ ಮಗಳೋ ದೇಸಾಯಿಗಳ ಮಗಳೋ ಎಂದು ಅತಿ ಬೆರಗಾಗಿ ನೋಡುವರು. ಬಲ್ಲಂಥವರುಗಳೇ ಇವಳು ಗೌಡಿಯಲ್ಲವೆ? ಹೊಂಬಿತ್ತಾಳೆಯಲ್ಲಿ ಮಾಡಿಸಿದ ವಸ್ತು ಒಡವೆ ಆಭರಣವನ್ನು ಇಟ್ಟು ತೊಟ್ಟು ಮಿಂಚಾಗಿ ತಿರುಗಾಡತ್ತೈದಾಳೆಯೆಂದು ನಕ್ಕು ಹಾಸ್ಯವ ಮಾಡುತ್ತಿಹರು. ಹಾಂಗೆ, ನಿರ್ಮಂಚಕ ಸದ್ಭಕ್ತನು ಭಕ್ತಿವೇಷವನ್ನು ಧರಿಸಕೊಂಡಿದ್ದರೆ ನೋಡುವಂಥವರುಗಳಿಗೆ ಪೂಜ್ಯವಾಗಿರ್ಪುದಲ್ಲದೆ ಉಪಾಧಿಕನು ಭಕ್ತಿವೇಷವನ್ನು ಧರಿಸಿಕೊಂಡಿದ್ದರೆ ಆ ತೊತ್ತಿನ ಕೊರಳಲ್ಲಿ ಹೊಂಬಿತ್ತಾಳೆಯ ಶೃಂಗಾರದ ಮಾಡಿದ ಹಾಂಗೆ ವ್ಯರ್ಥಸ್ಯವಾಗಿರ್ಪುದು. ಕುಚಿತ್ತರ–ಅಜ್ಞಾನಿಗಳ, ಸಂಗ–ತತ್ಸಂಗವು, ಸುಸಂಗಿಗೆ–ಲೇಸುಳ್ಳ ಮಹಾಲಿಂಗದಲ್ಲಿ ಕೂಡಲ್ಪಟ್ಟಾತನಿಗೆ, ಸಂಗಡವಲ್ಲ–ಕೂಟವಲ್ಲವು.

ಗುಲಗಂಜಿ ಮಾಣಿಕಕ್ಕೆ ಸರಿಯಪ್ಪುದೆ!–ಗುಲಗಂಜಿ ಏನಾದರೂ ದುಡ್ಡು ಅಡ್ಡಕೊಟ್ಟರೆ ⁰ಸ್ಯಾರೆ⁰ ಬೊಗಸೆಯಷ್ಟು ಬರುವುದು. ಮಾಣಿಕವೇನಾದರೂ ನೂರಾರು ವರಹಕ್ಕೆ ಬೆಲೆಯಾಗುವುದು. ಹಾಂಗೆ, ಅಂತಪ್ಪ ಗುಲಗಂಜಿಯನ್ನು ಮಾಣಿಕಕ್ಕೆ ಸಮಾನವೆಂದು ಹೇಳುವುದಕ್ಕಾದೀತೆ? ಆಗದು. ಹಾಂಗೆ, ಗುಲಗಂಜಿಯ ಹಾಂಗೆ ಆಶಾಲಾಂಛನಿಯು ಮಾಣಿಕದ ಹಾಂಗೆ ಜ್ಞಾನಜಂಗಮಮೂರ್ತಿಗಳು. ಆಶಾಲಾಂಛನಿಗಳಿಗೂ ಜ್ಞಾನಜಂಗಮಮೂರ್ತಿಗಳಿಗೂ ಸಮಾನವ ಮಾಡಿ ಹೇಳುವುದಕ್ಕಾದೀತೆ?

ಆಗದು. ಮತ್ತಂ ಗುಲಗಂಜಿಯ ಹಾಂಗೆ ಉಪಾಧಿಕರು, ಮಾಣಿಕದ ಹಾಂಗೆ ನಿರ್ವಂಚಕ ಸದ್ಭಕ್ತರು, ಉಪಾಧಿಕರನು ನಿರ್ವಂಚಕಸದ್ಭಕ್ತರುಗಳಿಗೆ ಸಮಾನವ ಮಾಡಿ ಹೇಳುವುದಕ್ಕಾದೀತೆ? ಆಗದು, ಕೂಡಲಸಂಗಮದೇವಾ–ಎಲೆ ಪರಶಿವ ಲಿಂಗವೆ.

....

೧–೧ x (ಕ)

I –

1–1 ಸಿಂ (ಚ, ಜ), 2–2 ಎ (ಚ, ಜ), 3–3 ರು (ಚ, ಜ)

....

ತೊತ್ತಿನ ಕೊರಳಲ್ಲಿ ಹೊಂಬಿತ್ತಾಳೆಯ ಸಿಂಗಾರವ ಮಾಡಿದಂತೆ–ಸಮಸ್ತರ ಉಚ್ಚಿಷ್ಟವನು ಭಕ್ಷಿಸುವ ಮಾಯಾಂಶಿಕನಾದ ಜೀವನ ಅದೃಢವೆಂಬ ಕಂಠದಲ್ಲಿ ಸಂಕಲ್ಪಜ್ಞಾನಶಾಸ್ತ್ರಂಗಳು ಲಾವಣ್ಯವಾಗಿರ್ಪವು, ಕುಚಿತ್ತರ ಸಂಗ ಸುಸಂಗಿಗೆ ಸಂಗಡವಿಲ್ಲ–ಕೆಟ್ಟ ಮನಸ್ಸುಳ್ಳ ಜೀವರುಗಳ ತತ್ವಂಗವು ಲಿಂಗ ಸಂಬಂಧವುಳ್ಳ ಜ್ಞಾನಿಗಳಿಗೆ ಕೂಡಿರುವುದಿಲ್ಲ.

ಗುರುಗಂಜಿ ಮಾಣಿಕಕ್ಕೆ ಸರಿಯಪ್ಪುದೆ ಕೂಡಲಸಂಗಮದೇವಾ!–ಮಾಯಾಗುಣವನುಳ್ಳ ಜೀವರುಗಳು ಅನರ್ಘ್ಯ ಉತ್ತಮ ನಾಯಕರತ್ನಸ್ವರೂಪವಾದ ವಸ್ತುವಿಗೆ ಅಧಿಕಾರಿಗಳಾದ ಜ್ಞಾನಿಗಳಿಗೆ ಸಮಾನವಾಗರೆಲೆ ಲಿಂಗವೆ.

೬೩೮

ಕೆಂಚ ಕರಿಕನ ನೆನೆದಡೆ ಕರಿಕನಾಗಬಲ್ಲನೆ? ಕರಿಕ ಕೆಂಚನ ನೆನೆದಡೆ ಕೆಂಚನಾಗಬಲ್ಲನೆ? ದರಿದ್ರ ಸಿರಿವಂತನ ನೆನೆದಡೆ ಸಿರಿವಂತನಾಗಬಲ್ಲನೆ? ಸಿರಿವಂತ ದರಿದ್ರನ ನೆನೆದಡೆ ದರಿದ್ರನಾಗಬಲ್ಲನೆ? ಮುನ್ನಿನ ಪುರಾತರ ನೆನೆದು ಧನ್ಯ[1]ರಾದೆವೆಂಬ[1] ಮಾತಿನ ರಂಜಕರ[2]ನಾನೇ[2]ನೆಂಬೆ ಕೂಡಲಸಂಗಮದೇವಾ?

I –

ಕೆಂಚ ಕರಿಕನ ನೆನದಡೆ ಕರಿಕನಾಗಬಲ್ಲನೆ? : ಕೆಂಚ–ಕೆಂಪಾನ ಶರೀರವುಳ್ಳಾತನು, ಕರಿಕನ–ನಾವು ಹೀಂಗೆ ಕೆಂಪಗೆ ನಿಂಬಿಹಣ್ಣಿನ ಹಾಂಗಿದ್ದರೆ ಸ್ತ್ರೀಯರು ಕರೆಪುತ್ತೈದಾರೆ; ಒಲ್ಲೆನೆಂದರೆ ಕೈಮಸಗು ಮಾಡುತ್ತೈದಾರೆ, ನಾನು ತರೆಯ ಕೆಂಡಕ್ಕೆ ಮಜ್ಜನವ ನೀಡಿದೋಪಾದಿಯಲ್ಲಿ ಕಪ್ಪಾನ ಪುರಷನಾಗಿರಬೇಕೆಂದು, ನೆನೆದಡೆ–ಇಚ್ಚೈಸಿದರೆ, ಕರಿಕನಾಗಬಲ್ಲನೆ?–ಕಪ್ಪಾನ ಶರೀರವುಳ್ಳಾತನಾದಾನೆ? ಆಗಲರಿಯನು, ಕರಿಕ–ಸುಟ್ಟರೊಟ್ಟಿ ಸಮಾನವಾದಾತನು, ಕೆಂಚನ–ನಾನು ಹೀಂಗೆ ಸುಟ್ಟರೊಟ್ಟಿಗೆ ಸಮಾನವಾಗಿದ್ದರೆ ಯಾರೂ ನನ್ನ ಇತ್ತತ್ತ ಬಾರೈಯೆಂದು ಕರೆವುದಿಲ್ಲ. ಸ್ತ್ರೀಯರೊಲಿದು ಬರೋದಿಲ್ಲವು. ರಾಜಸಭೆ ದೇವಸಭೆಗಳಲ್ಲಿ ಮನ್ನಿಸೋದಿಲ್ಲ. ಒಂದಾನೊಂದು ತನಿನಿಂಬಿಯ ಹಣ್ಣಿನೋಪಾದಿಯಲ್ಲಿ ಕೆಂಪಗಾಗಿರಬೇಕೆಂದು, ನೆನೆದಡೆ–ಇಚ್ಚೈಸಿದರೆ, ಕೆಂಚನಾಗಬಲ್ಲನೆ?–[ಕೆಂಪಾನ ಶರೀರವುಳ್ಳಾತನಾದನೆ?] ಆಗಲರಿಯನು. ಕೆಂಪಾನ ಪುರುಷ ಕೆಂಪಾಗಿರುತ್ತಿಹನು, ಕಪ್ಪಾನ ಪುರುಷ ಕಪ್ಪನಾಗಿರುತ್ತಿಹನು.

ದರಿದ್ರ ಸಿರಿವಂತನ ನೆನೆದಡೆ ಸಿರಿವಂತನಾಗಬಲ್ಲನೆ? : ದರಿದ್ರ–ನಿರ್ಧನಿಕನು, ಸಿರಿವಂತನ–ನಾನು ಐಶ್ವರ್ಯವಂತನಾಗಿದ್ದರೆ ಉಂಬುತ್ತ ಉಡುವುತ್ತ ಸುಖಸಂತೋಷದಲ್ಲಿರುವೆನು, ದಾನಧರ್ಮ ಪರೋಪಕಾರಂಗಳ ಮಾಡಿಕೊಂಡಿರುವೆನೆಂದು, ಅದಲ್ಲದೆ ಬಂಧು ಬಳಗ ನಂಟರು ನಲ್ಲರು ಸೇರೋದಿಲ್ಲವೆಂದು, ನೆನದಡೆ–ಇಚ್ಛೈಸಿದರೆ, [ಸಿರಿವಂತನಾಗಬಲ್ಲನೆ?–] ಐಶ್ವರ್ಯವಂತನಾದನೆ? ಆಗಲರಿಯನು. ಸಿರಿವಂತ ದರಿದ್ರನ ನೆನೆದಡೆ ದರಿದ್ರನಾಗಬಲ್ಲನೆ? : ಸಿರಿವಂತ–ಧನಸಂಪನ್ನನು, ದರಿದ್ರನ–ನಾನು ಐಶ್ವರ್ಯವಂತನಾಗಿದ್ದರೆ ರಾಜಭಯ ಚೋರಭಯ ಅಗ್ನಿಭಯ ಮೊದಲಾದವು ಬಂದು ತಟ್ಟುತೈದಾವೆ. ನಾನು ತನು ಬಳಲಿ ಮನ ಬಳಲಿ ಸತ್ಯಶುದ್ಧಕಾಯಕವ ತಂದು ಗುರುಚರಕ್ಕೆ ಭಕ್ತಿಯ ಮಾಡಿ ನಿರ್ಧನಿಕನಾಗಬೇಕೆಂದು, ನೆನೆದಡೆ–ಇಚ್ಛೈಸಿದರೆ, ದರಿದ್ರನಾಗಬಲ್ಲನೆ?–ನಿರ್ಧನಿಕನಾದಾನೆ? ಆಗಲರಿಯನು. ದರಿದ್ರಪುರುಷ ದರಿದ್ರನಾಗಿರುತ್ತಿಹನು. ಐಶ್ವರ್ಯವಂತ ಐಶ್ವರ್ಯವಂತನಾಗಿರುತ್ತಿಹನು.

ಮುನ್ನಿನ–ಮೊದಲಿನ, ಪುರಾತನ–ದಾಸಿದೇವ ಸಿರಿಯಾಳಸೆಟ್ಟಿ ಸಿಂಧುಬಲ್ಲಾಳರಾಯ ಮೊದಲಾದರುವತ್ತುಮೂರು ಪುರಾತನರ ನೆನೆದು–ಸ್ಮರಣೆಯ ಮಾಡಿ, ಧನ್ಯರಾದೆವೆಂಬ–ಕೃತಾರ್ಥರಾದೆವೆಂದು ಹೇಳುವ, ಮಾತಿನ–ಪ್ರಸಂಗದ, ರಂಜಕರನ್ನು–ರಚನೆಯುಳ್ಳವರನ್ನು ನಾನೇನೆಂಬೆ–ನಾಯೆಂತೆಂದು ಹೇಳಲಿ ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

IV –

1–1 ನಾದೆಹೆನೆಂಬ (ತ), 2–2 ನೇನ (ತ)

....

ತನುಮನಂಗಳೆರಡೂ ಲಿಂಗಜಂಗಮಕ್ಕೆ ಸಂದು ಮಾಡಬಲ್ಲರೆ ಭಕ್ತಿ; ಮನದಲ್ಲಿ ಪುರಾತನರ ನೆನವುದು ರಂಜಕವೆಂಬುದೀ ವಚನದರ್ಥ.

೬೩೯

ಆನೆಯನೇಜೆಕೊಂಡು ಹೋದಿರೆ ನೀವು, ಕುದುರೆಯನೇಜೆಕೊಂಡು ಹೋದಿರೆ ನೀವು, ಕುಂಕುಮ ಕಸ್ತೂರಿಯ ಪೂಸಿಕೊಂಡು ಹೋದಿರೆ, ಅಣ್ಣ! ಸತ್ಯದ ನಿಲವನಜೆಯದೆ ಹೋದಿರಲ್ಲ! ಸದ್ಗುಣವೆಂಬ ಫಲವ ಬಿತ್ತದೆ ಬೆಳೆಯದೆ ಹೋದಿರಲ್ಲಾ! ಅಹಂಕಾರವೆಂಬ ಸದಮದಗಜ[1]ವೇ[1]ಜೆ [2]ಮೂ[2]ಎಧಿಗೆ ಗುಜೆಯಾಗಿ ನೀವು ಹೋದಿರಲ್ಲಾ! ನಮ್ಮ ಕೂಡಲಸಂಗಮದೇವರನಜೆಯದೆ ನರಕಕ್ಕೆ ಭಾಜನವಾದಿರಲ್ಲಾ!

I– –

ಆನೆಯುನೇಜೆಕೊಂಡು ಹೋದಿರೆ ನೀವು–ನೀವು ಉಪಾದಿಕರುಗಳು, ಜಂಗಮಮೂರ್ತಿಗಳನ ಆನೆಯನು ಶೃಂಗಾರವ ಮಾಡಿಸಿ ಅವರನು ಆನೆಯ ಮೇಲೆ ಮೂರ್ತವ ಮಾಡಿಸಿ ನೀವು ನೋಡಿ ಪರಿಣಾಮಿಸಬೇಕಲ್ಲದೆ ನೀವು ಜಂಗಮಭಕ್ತಿಬಾಹ್ಯವಾಗಿ ಆನೆಯನುಹತ್ತಿಕೊಂಡು ವಿನೋದಿಸುತ್ತಿದ್ದರಲ್ಲ ನೀವು ದೇಹಾಂತ್ಯದಲ್ಲಿ ಅಷ್ಟಮದಂಗಳೆಂಬ ಆನೆಯನ್ನು

ಹತ್ತಿಕೊಂಡು ಭವಕ್ಕೆ ಹೋಗುವಿರಿ, ಅಣ್ಣ–ಎಲೆ ಉಪಾಧಿಕರುಗಳೆಂಬ ಹಿರಿಯರುಗಳಿರಾ, ಕುದರೆಯನೇಜಿಕೊಂಡು ಹೋದಿರೆ ನೀವು–ನೀವು ಉಪಾಧಿಕರುಗಳು, ಜಂಗಮೂರ್ತಿಗಳನು ಕುದುರೆಯ ಮೇಲೆ ಮೂರ್ತವ ಮಾಡಿಸಿ ನೀವು ನೋಡಿ ಪರಿಣಾಮಿಸಿಬೇಕಲ್ಲದೆ ನೀವು ಜಂಗಮಭಕ್ತಿಬಾಹ್ಯವಾಗಿ ಕುದುರೆಯನ್ನು ಹತ್ತಿಕೊಂಡು ವಿನೋದಿಸುತ್ತಿದ್ದಿರಲ್ಲ. ನೀವು ದೇಹಾಂತ್ಯದಲ್ಲಿ ದಶವಾಯುಬಂಧೀಕೃತವಾದ ದೇಹವೆಂಬ ವಾಜಿಯನ್ನೇರಿಕೊಂಡು ಭವಕ್ಕೆ ಹೋದಿರಲ್ಲ. ಕುಂಕುಮ–ಕಾಶ್ಮೀರ, ಕಸ್ತೂರಿಯ–ಮೃಗಮದವನ್ನು, ಪೂಸಿಕೊಂಡು ಹೋದಿರೆ ಅಣ್ಣಾ–ಎಲೆ ಉಪಾಧಿಕರುಗಳೆಂಬ ಹಿರಿಯಗಳಿರಾ. ನೀವು ಜಂಗಮಮೂರ್ತಿಗಳಿಗೆ ಗಂಧ ಕಸ್ತೂರಿ ಹೂವಿನಹಾರ ಮೊದಲಾದವನ್ನು ಧರಿಸಿಕೊಂಡು ವಿನೋದಿಸುತ್ತಿದ್ದಿರಲ್ಲ. ನೀವು ದೇಹಾಂತ್ಯದಲ್ಲಿ ಗಂಧ ಕಸ್ತೂರಿ ಕುಂಕುಮ ಹೂವಿನಹಾರ ಮೊದಲಾದವನ್ನು ಧರಿಸಿಕೊಂಡು ಭವಕ್ಕೆ ಹೋದಿರಲ್ಲ ಅಣ್ಣಾ–ಎಲೆ ಉಪಾಧಿಕರುಗಳೆಂಬ ಹಿರಿಯಗಳಿರಾ.

ಸತ್ಯದ–ಯಥಾರ್ಥವಾದ ಪಾರಮಾರ್ಥದ, ನಿಲವ–ನಿಲುಕಡೆಯನ್ನು, ಅಜಿಯದೆ–ತಿಳಿಯದೆ, ಹೋದಿರಲ್ಲಾ!–ಭಕ್ತಿಬಾಹ್ಯರಾಗಿ ಭವಕ್ಕೆ ಈಡಾಗಿ ಹೋದಿರಲ್ಲಾ. ಸದ್ಗುಣವೆಂಬ–ಭಕ್ತಿಸದ್ಗುಣವೆಂಬ, ಫಲವ–ಮೋಕ್ಷವೆಂಬ ಫಳವನ್ನು, ಬಿತ್ತದೆ–"ಬಿತ್ತು ಬೀಜಸ್ಥಾಪನೇ"ಯೆಂದು ಸ್ಥಾಪನಂಗೆಯ್ಯದೇ ಬೆಳೆಯದೆ–ಮೋಕ್ಷವೆಂಬ ಪೈರಾಗಿ ವರ್ಧನವಾಗದೆ, ಹೋದಿರಲ್ಲಾ!–ಭಕ್ತಿಬಾಹ್ಯರಾಗಿ ಭವಕ್ಕೆ ಈಡಾಗಿ ಹೋದಿರಲ್ಲಾ.

ಅಹಂಕಾವೆಂಬ–೧ಅಹಂ ಅಹಂಯೆಂಬ೧ಮೂಲಾಹಂಕಾರವೆಂಬ, ಸದಮದಗಜವ–ಮದ್ದಾನೆಯನ್ನು, ಏರಿ–ಆರೋಹಣವಾಗಿ, ಮೂವಿಧಿಗೆ–ಬ್ರಹ್ಮನುತ್ಪತ್ಯ ವಿಷ್ಣುವಿನ ದುರ್ಭೋಗದ ಸ್ಥಿತಿ ರುದ್ರನ ಲಯೋಧರ್ಮದ ಹೊಡೆಗಿಚ್ಚಿಗೆ, ಗುಜಿಯಾಗಿ ಹೋದಿರಲ್ಲಾ–ಈಡಾಗಿ ಹೋದಿರಲ್ಲಾ, ನೀವು–ಉಪಾಧಿಕರು, ನಮ್ಮ ಕೂಡಲಸಂಗಮದೇವರ–ನಮ್ಮ ಪರಶಿವಲಿಂಗವನ್ನು ಅಜಿಯದೆ–ತಿಳಿಯದೆ, ನರಕಕ್ಕೆ–ನಿರಯಕ್ಕೆ–ಭಾಜನವಾದಿರಲ್ಲಾ!–ಆಲಯವಾದಿರಲ್ಲಾ.

....

೧–೧ ನಾಹಂ ನಾಹಂಯೆಂಬ (ಕ, ಗ)

III –

2–2 x (ಟ, ಡ)

....

ಆನೆಯನೇಜಿಕೊಂಡು–ಅಷ್ಟಮದಂಗಳನಾರೋಹಿಸಿಕೊಂಡು, ಹೋದಿರೆ–ಭವಕ್ಕೆ ಗಮಿಸಿದಿರೆ, ನೀವು–ಸ್ವಯವು, ಕುದುರೆಯನೇಜಿಕೊಂಡು–ದಶವಾಯುಗಳೊಡನೆ ಕೂಡಿಕೊಂಡು [ಹೋದಿರೆ–] ಭವಕ್ಕೆ ಬಿದ್ದು ಹೋದಿರೆ, ಕುಂಕುಮ–ರಜೋಗುಣವ, ಕಸ್ತೂರಿಯ–ತಮೋಗುಣವನು, ಪೂಸಿಕೊಂಡು–ಸಂಬಂಧವ ಮಾಡಿಕೊಂಡು, ಹೋದಿರೆ ಅಣ್ಣ–ಭವಕ್ಕೆ ಬಿದ್ದು ಗಮಿಸಿದಿರೆ ಎಲೆ ಅಹಂಕಾರ ಶ್ರೇಷ್ಠರುಗಳಿರಾ, ವಿಧಿಗೆ–ಅಪಮೃತ್ಯು ಕಾಲಮೃತ್ಯುವಿಗೆ ಮತ್ತಂ ಬ್ರಹ್ಮನ ಸೃಷ್ಟಿಮುಖಕ್ಕೆ, ಗುಜಿಯಾಗಿ–ಗೊತ್ತಾಗಿ, ನೀವು ಹೋದಿರಲ್ಲಾ–ನೀವು ಗಮಿಸುತ್ತಿದ್ದಿರಲ್ಲಾ, ಪರಶಿವಲಿಂಗಸ್ವರೂಪವ ತಿಳಿಯಲಜಿಯದೆ ನರಕಕ್ಕೆ ಭಾಜನವಾದಿರಲ್ಲ.

IV -

1-1 ವನೇ (ತ), 2-2 x (ತ)

....

ಸತ್ಯದಲ್ಲಿ ನಡೆದು ಪರಬ್ರಹ್ಮವ ಕೂಡದೆ ಕರಿ ತುರಗ ವಾಹನವನೇಜೆ ಆಭರಣಂಗಳನಿಟ್ಟು ಅನುಲೇಪನಂಗಳ ಹೂಸಿಕೊಂಡು ಅಹಂಕಾರಿಗಳಾಗಿ ನರಕಕ್ಕೆ ಹೋದರೆಂಬುದೀ ವಚನದರ್ಥ.

೬೪೦

ಇಂದ್ರಿಯ ನಿಗ್ರಹವ ಮಾಡಿದಡೆ ಹೋಂದುವವು ದೋಷಂಗಳು, ಮುಂದೆ ಬಂದು **ಕಾಡುವವು ಪಂಚೇಂದ್ರಿಯಂಗಳು! ಸತಿಪತಿ [1]ರತಿ[1]ಸುಖವ ಬಿಟ್ಟರೆ ಸಿರಿಯಾಳ ಚೆಂಗಳೆಯರು ? ಸತಿಪತಿ [1]ರತಿ[1]ಸುಖ ಭೋಗೋಪಭೋಗ ವಿಲಾಸವ ಬಿಟ್ಟ[2]ನೆ[2] ಸಿಂಧುಬಲ್ಲಾಳ[3]ರಾಯನು[3]? ನಿಮ್ಮ ಮುಟ್ಟಿ ಪರಧನ ಪರಸತಿಗೆಳೆಸಿದರೆ ನಿಮ್ಮ ಚರಣಕ್ಕೆ ದೂರ, ಕೂಡಲಸಂಗಮದೇವಾ !**

I -

ಇಂದ್ರಿಯ ನಿಗ್ರಹವ ಮಾಡಿದಡೆ: ಇಂದ್ರಿಯ-ಪಂಚೇಂದ್ರಿಯಂಗಳನು, ನಿಗ್ರಹವ ಮಾಡಿದಡೆ-ಕೇಳದ ಹಾಂಗೆ ಸೋಂಕದ ಹಾಂಗೆ ನೋಡದ ಹಾಂಗೆ ರುಚಿಸದ ಹಾಂಗೆ ಘ್ರಾಣಿಸಿದ ಹಾಂಗೆ ದಂಡಿಸಿದರೆ, ದೋಷಂಗಳು, ಪಾಪಂಗಳವು ಹೊಂದುವವು-ಪ್ರಾಪ್ತಿಯಾಗುತ್ತಿಹವು ಮುಂದೆ-ದೇಹಾಂತ್ಯದಲಿ, ಪಂಚೇಂದ್ರಿಯಂಗಳು-ಐದಿಂದ್ರಿಯಂಗಳು, ಬಂದು-ಎಯ್ದುಬಂದು, ಕಾಡುವವು-ಪೀಡಿಸುವವು. ಸತಿಪತಿರತಿಸುಖವ-ಸ್ತ್ರೀಪುರುಷುರುಗಳ ರತಿಕೂಟದ ಪರಿಣಾಮವನ್ನು, ಬಿಟ್ಟರೆ!-ಇಲ್ಲವು, ಅದು ಶಿವಸುಖವೆಂದು ಅನುಭವಿಸಿ ಶಿವನ ಕೃಪೆಯನ್ನು ಹಡೆದರು, ಸಿರಿಯಾಳ ಚೆಂಗಳೆಯರು-ಸಿರಿಯಾಳ ಚೆಂಗಳೆಯವರೆಂಬ ಶಿವಶರಣರು. ಸತಿಪತಿರತಿಸುಖ-ಸ್ತ್ರೀಪುರುಷರುಗಳ ರತಿಕೂಟದ ಪರಿಣಾಮವು, ಭೋಗೋಪಭೋಗ-ಅಷ್ಟಭೋಗ ಮೊದಲಾದ ರಾಜಭೋಗ ಮೊದಲಾದ ಎಪ್ಪತ್ತೆರಡು ವಿನಿಯೋಗಂಗಳ, ವಿಲಾಸವ-ವಿನೋದಿಸಿವಂಥದನು, ಬಿಟ್ಟನೆ-ಇಲ್ಲವು, ಅದು ಶಿವಸುಖವೆಂದನುಭವಿಸಿ ಶಿವನ ಕೃಪೆಯನ್ನು ಹಡದರು. ಸಿಂಧುಬಲ್ಲಾಳರಾಯನು ಸಿಂದುಬಲ್ಲಾಳರಾಯನೆಂಬ ಶಿವಶರಣನು, ನಿಮ್ಮ ಮುಟ್ಟಿ-ಗುರುಮುಖದಿಂದ ಬಂದ ಇಷ್ಟಮಹಾಲಿಂಗವನ್ನು ಮುಟ್ಟಿ ಮುಟ್ಟಿ ಆರಾಧಿಸಿ ಆರಾಧಿಸಿ, ಪರಧನ-ಅನ್ಯದ್ರವ್ಯವನು, ಪರಸತಿಗೆ-ಅನ್ಯಸ್ತ್ರೀಯಳಿಗೆ, ಎಳಸಿದರೆ-ಇಚ್ಛೈಸಿದರೆ, ನಿಮ್ಮ ಚರಣಕ್ಕೆ-ನಿಮ್ಮ ಪದಕಮಲದಲ್ಲಿ ಕೂಡುವುದಕ್ಕೆ, ದೂರ-ಎಟ್ಟುಗೊಳವು, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

III -

ಭೋಗೋಪಭೋಗ-ಸ್ಥೂಲಭೋಗ ಸೂಕ್ಷ್ಮಭೋಗಗಳು,

....

೬೩೯ನೆಯ ವಚನದ ತರುವಾಯ ೬೪೫, ೬೪೭, ೬೪೯, ೬೫೧ನೆಯ ವಚನಗಳು ಇದ್ದು ಆಮೇಲೆ ಈ ೬೪೦ನೆಯ ವಚನ ಬಂದಿದೆ. (ಸಂ)

IV -

1–1 ಸುಖ (ತ), 2–2 ರೇ(ತ), 3–3 ಯವರು (ತ), 4–4 ಯರಿ (ತ)

....

ಇಂದ್ರಿಯಂಗಳ ಲಿಂಗದಲ್ಲಿ ಸಮರ್ಪಿಸಬಲ್ಲರೆ ಇಂದ್ರಿಯಂಗಳ ವರ್ತನೆಯಿಲ್ಲ. ಅದೇನು ಕಾರಣವೆಂದರೆ ಲಿಂಗಕ್ಕಿಲ್ಲವಾಗಿ ತನಗೂ ಇಲ್ಲ. ಈ ಪರಿ ಸಿರಿಯಾಳ ಬಲ್ಲಾಳಗಾಯಿತ್ತು. ಬಿಡಬೇಕು, ಪರಧನ ಪರಸತಿಯ, ಇಂದ್ರಿಯ ನಿಗ್ರಹವ ಮಾಡಿದರೆ ಮುಂದೆ ಕಾಡಿತ್ತೆಂಬುದೀ ವಚನದರ್ಥ.

೬೪೧

ಲಿಂಗಜಂಗಮ ಒಂದೇಯೆಂದು ನಂಬಿದ ಬಳಿಕ ಅವರಂಗನೆಯರು ಲಿಂಗದ ರಾಣಿವಾಸ, ಅಲ್ಲಿಯೂ ಮೇಳ, ಇಲ್ಲಿಯೂ ಮೇಳ, ಚೌಡೇಶ್ವರಿಯಲ್ಲಿಯೂ ಮೇಳ? [1]ಮಾತೆಯೆಂಬ[1] ಭಾವ ತಪ್ಪಿ ಅಪ್ಪಿದವರ ತಲೆಯಕೊಂಬ ಕೂಡಲಸಂಗಮದೇವ.

I -

ಲಿಂಗ ಜಂಗಮ ಒಂದೇಯೆಂದು ನಂಬಿದ ಬಳಿಕ–ಲಿಂಗವೇ ಜಂಗಮದಂಗ ಜಂಗಮವೇ ಲಿಂಗದ ಪ್ರಾಣಕಳಾಚೈತನ್ಯಸ್ವರೂಪವೆಂದು ವಿಶ್ವಾಸಿಸಿ ಲಿಂಗಪೂಜೆ ಜಂಗಮದಾಸೋಹವನ್ನು ಮಾಡಿದ ಮೇಲೆ, ಅವರಂಗನೆಯರು–ಅವರ ಸ್ತ್ರೀಯರುಗಳು, ಲಿಂಗದ ರಾಣಿವಾಸ–ಪಾರ್ವತೀದೇವಿಯರಿಗೆ ಸಮಾನವು, [* ಅಲ್ಲಿಯೂ ಮೇಳ, ಇಲ್ಲಿಯೂ ಮೇಳ, ಚೌಡೇಶ್ವರಿಯಲ್ಲಿಯೂ ಮೇಳ?*] ಮಾತೆಯೆಂಬ ಭಾವ–ಬಂದ ಬಸಿರು ಉಂಡ ಮೊಲೆಯೆಂಬ ಶಿವಭಾವವು, ತಪ್ಪಿ–ತೊಲಗಿ, ಅಪ್ಪಿದವರ–ಸಂಸರ್ಗವ ಮಾಡಿದಂಥವರುಗಳನು, ಕೂಡಲಸಂಗಮದೇವ–ಪರಶಿವನಲಿಂಗವು, ತಲೆಯ ಕೊಂಬ–ತಲೆಯೆಂದರೆ ಜ್ಞಾನ, ಅಂತಪ್ಪ ಜ್ಞಾನವನು ಅಪಹರಿಸಿ ಅಜ್ಞಾನಕ್ಕೊಳಗುಮಾಡಿ ಮಾನಭಂಗವ ಮಾಡಿ ಭವಕ್ಕೆ ಹಾಕಿಬಿಡುತ್ತಿಹನು.

III -

ಅಲ್ಲಿಯೂ–ಆ ಪರಸ್ತ್ರೀಯರಲ್ಲಿಯೂ, ಇಲ್ಲಿಯೂ–ಈ ಸ್ವಸ್ತ್ರೀಯಲ್ಲಿಯೂ, ಚೌಡೇಶ್ವರಿಯಲ್ಲಿಯೂ ಸಂಯೋಗ ಉಂಟೆ? ಅಂದು ಪೂರ್ವಕಾಲದಲ್ಲಿ.

....

IV -

೧–೧ ಮೊಲೆಯಂಬ (ತ)

....

ಪರಾಶಕ್ತಿಯೇ ಸತಿ, ಪರಬ್ರಹ್ಮವೇ ಗಂಡನೆಂದು ಕಾಣಬೇಕು. ಗುರುವನೂ ಗುರುವಿನ ರಾಣಿವಾಸವನೂ ಇಂದ್ರಿಯ ವಿಕಾರದಿಂದ ಅಪ್ಪಿದರೆ ಮನುಷ್ಯರು ಚೌಡೇಶ್ವರಿಯ ಕಾಮಿಸಿ ಸತ್ತಂತಪ್ಪುವೆಂಬುದೀ ವಚನದರ್ಥ.

೬೪೨

ಒಡೆಯರು ತಮ್ಮ ಮನೆಗೆ ಒಡಗೊಂಡು ಹೋದಡೆ ತುಡುಗುಣಿತನದಿಂದ ಪರವಧುವ ನೋಡುವ ಸರಸ ಬೇಡ; ಕಾಣಿರಣ್ಣಾ! ಒಡೆಯರಸಿಯ ಸರಸ ಬೇಡ! ಕೂಳ ಸೊಕ್ಕು ತಲೆಗೇಜಿ ರಾಣಿವಾಸದೊಡನೆ ಸರಸ ಬೇಡ, ಕೂಡಲಸಂಗಮದೇವ ಕರಸಿತಗನಯ್ಯ!

I -

[* *] ಒಡೆಯರ–ಕರ್ತೃಸ್ವರೂಪವಾದ ಜಂಗಮಮೂರ್ತಿಗಳು, [ತಮ್ಮ ಮನೆಗೆ ಒಡಗೊಂಡು ಹೋದನೆ–] ತಮ್ಮ ಭಕ್ತಿಗೃಹಕ್ಕೆ ಬಿನ್ನಹ ಮಾಡಿ ಕರಕೊಂಡು ಹೋಗಿದಲ್ಲಿ, ತುಡುಗುಣಿತನದಿಂದ–ಚೋರ ಭಾವದಿಂದ, ಪರವಧುವ–[* *] ಸ್ತ್ರೀಯಳನ್ನು, ನೋಡುವ ಕಾಮಕಲಾದೃಷ್ಟಿಯಿಂದ [* *] ನಿರೀಕ್ಷಣೆಯ ಮಾಡುವ, ಸರಸ ಬೇಡ [*ಸರಸಬೇಡ*]–ಕಾಣಿರಣ್ಣಾ–ಕಂಡಿರಣ್ಣಾ ಒಡೆಯರ–ಕರ್ತೃಸ್ವರೂಪಿಗಳಾದ ಜಂಗಮಮೂರ್ತಿಗಳ, ಅರಸಿಯ–ಸ್ತ್ರೀಯಳೊಂದಿಗೆ ಸರಸಬೇಡ [* ಸರಸ ಬೇಡ*],ಕೂಳಸೊಕ್ಕು–ಅನ್ನಮದ ಪ್ರಾಯಮದ ಗರ್ವವು ಹೆಚ್ಚಿ, ತಲೆಗೇಜಿ–ಜ್ಞಾನವನಪಹರಿಸಿ ರಾಣಿವಾಸದೊಡನೆ–[* *] ಸ್ತ್ರೀಯಳೊಂದಿಗೆ, ಸರಸಬೇಡ–[* ಸರಸ ಬೇಡ*] ಕೂಡಲಸಂಗಮದೇವ–ಪರಶಿವಲಿಂಗವು, ಕರ ಸಿತಗನಯ್ಯ–ಅತ್ಯಂತ ಕೋಪವುಳ್ಳಾತನಾಗಿ ಶಿವನು ಅವರನು ಕೋಪಿಸಿ ಭವಕ್ಕೆ ಹಾಕಿಬಿಡುತ್ತಿಹನು.

೬೪೩

ನೋಡಲಾಗದು ನುಡಿಸಲಾಗದು ಪರಸ್ತ್ರೀಯ⌜ರ⌝ ಬೇಡ, ಕಾಣಿರೋ, ತಗರ ಬೆನ್ನಲಿ ಹರಿವ ಸೊಣಗನಂತೆ ಬೇಡ, ಕಾಣಿರೋ, ಒಂದಾಸೆಗೆ ಸಾಸಿರವರುಷ ನರಕ⌜ದಲ್ಲ⌝ದ್ದುವ ಕೂಡಲಸಂಗಮದೇವ.

I -

ನೋಡಲಾಗದು–ಸ್ತ್ರೀಯರುಗಳ ಹಾವಭಾವ ವಿಲಾಸವಿಭ್ರಮಂಗಳನು ಕಾಮಕಲಾದೃಷ್ಟಿಯಿಂದ ನಿರೀಕ್ಷಣೆಯ ಮಾಡಲಾಗದು, ನುಡಿಸಲಾಗದು–ಪರಸ್ತ್ರೀಯರ ಕೂಡ ಕಕೋಕಭಾಷೆಯಿಂದ ಪ್ರಸಂಗವ ಮಾಡಲಾಗದು. ಪರಸ್ತ್ರೀಯರ–ಅನ್ಯಸ್ತ್ರೀಯರ, ಸಂಗಬೇಡ–ಸಂಸರ್ಗವ ಮಾಡಬೇಕೆಂದು ಇಚ್ಛೈಸಬೇಡ, ಕಾಣಿರೋ–ಕಂಡಿರೋ, ತಗರ ಬೆನ್ನಲಿ ಹರಿವ ಸೊಣಗನಂತೆ–[* ಎಳಗನ ಬೆನ್ನಲಿ ಹರಿವ ಸೊಣಗಣಂತೆ*], ಆಶಾಲಾಂಛನಿಗೆ ನಿರ್ವಂಚಕ [**] ಸ್ತ್ರೀಯರುಗಳು ಅಯ್ಯ ಜೀಯ ಚಿತ್ತೈಸಿ ಮೂರ್ತವ ಮಾಡಿರೆಂದು ಮಧುರೋಕ್ತವಾದ ಪ್ರಸಂಗವಾಡಿದಲ್ಲಿ ಹೋ ಹೋ ಇವಳು ⌜ಕಪಟಿ⌝ ನನಗೆ ಮನಸೋತೈದಾಳೆಯೆಂದು ಅವಳು ಹೋದಲ್ಲಿಗೆ ಹೋಗಿ ಬಂದಲ್ಲಿಗೆ ಬಂದು ಕುಳಿತಲ್ಲಿ ಕುಳಿತುಕೊಂಡು. [**] ಇಚ್ಛೈಸಿಕೊಂಡಿರುವಂಥ ಆಶಾಲಾಂಛನಿಯ ಇರಸ್ಥಿತಿಯೂ ಆ ಎಳಗ [*ನಿಗೆ*] ಜೋತುಕೊಂಡಿರುವ ಮುದಿನಾಯ ಇರಸ್ಥಿತಿಯೂ ಒಂದೇಯಾಗಿರ್ಪುದು, ಬೇಡ ಕಾಣಿರೋ–ಪರಸ್ತ್ರೀಯಳನ್ನು ಸಂಸರ್ಗವ ಮಾಡಬೇಕೆಂದು ಇಚ್ಛೈಸಬೇಡ ಕಂಡಿರೋ, ಒಂದಾಸೆಗೆ–ಪರಸ್ತ್ರೀಯಳನ್ನು ಸಂಸರ್ಗವ ಮಾಡಬೇಕೆಂಬಾಪೇಕ್ಷೆಗೆ ಸಾಸಿರ ವರುಷ–ಸಾವಿರ ವರುಷ ಪರಿಯಂತರವು, ಕೂಡಲಸಂಗಮದೇವ–ಪರಶಿವಲಿಂಗವು, ನರಕದಲ್ಲಿದ್ದುವ–ನಿರಯದಲ್ಲಿ ಹಾಕಿಬಿಡುತ್ತಿಹನು.

....

೧–೧ ಯಾವ ಪಾಪಿಯೋ (ಕ)

IV –

1–1 x (ತ), 2–2 ದೊಳ (ತ)

....

ಪರವಧುವ ಕಾಮಿಸಿ ನೋಡಿದರೆ ನಾನಾಯೋನಿಯಲ್ಲಿ ಬಹನೆಂಬುದೀ ವಚನದರ್ಥ.

೬೪೪

ತೊಱೆಯ ಮೀವಣ್ಣಗಳಿರಾ, ತೊಱೆಯ ಮೀವ ಸ್ವಾಮಿಗಳಿರಾ, ತೊಱೆಯಿಂ ಭೋ ತೊಱೆಯಿಂ ಭೋ; ಪರನಾರಿಯರ ಸಂಗವ ತೊರೆಯಿಂ ಭೋ! ತೊಱೆಯಿಂ ಭೋ! ಪರಧನದಾಮಿಷವ ತೊಱೆಯಿಂ ಭೋ! ತೊಱೆಯಿಂ ಭೋ! ಇವ ತೊಱೆಯದೆ ಹೋಗಿ ತೊಱೆಯ ಮಿಂದಡೆ ಬಱುದೊಱುಯಾಗಿ ಹೋಹುದು, ಕೂಡಲಸಂಗಮದೇವ.

I –

ತೊಱೆಯ ಮೀವ–"ತೊರೆ ವಿಡಂಬೇ ನದೀ ಭೇದೇ ಚ"ಯೆಂದು ಪುಣ್ಯನದಿಗಳಲ್ಲಿಗೆ ಹೋಗಿ ಸ್ನಾನವ ಮಾಡಿಕೊಂಡು ಬರುವಂಥ, ಅಣ್ಣಗಳಿರಾ–ಎಲೆ ಭಕ್ತರುಗಳೆಂಬ ಹಿರಿಯರುಗಳಿರಾ, ತೊಱೆಯ ಮೀವ–"ತೊರೆ ವಿಡಂಬೇ ನದೀ ಭೇದೇ ಚ" ಯೆಂದು ಪುಣ್ಯತೀರ್ಥ ಪುಣ್ಯನದಿಗಳಲ್ಲಿಗೆ ಹೋಗಿ ಸ್ನಾನವ ಮಾಡಿಕೊಂಡು ಬರುವಂಥ, ಸ್ವಾಮಿಗಳಿರಾ–ಎಲೆ ಕರ್ತೃಸ್ವರೂಪವಾದ ಜಂಗಮಮೂರ್ತಿಗಳಿರಾ, ತೊಱೆಯಿಂ ಭೋ ತೊಱೆಯಂ ಭೋ!–"ತೊರೆ ವಿಡಂಬೇ ನದೀ ಭೇದೇ ಚ" ಯೆಂದು ವಿಡಂಬಿಸಿ ಬಿಡಿರೋ ವಿಡಂಬಿಸಿ ಬಿಡಿರೋ, ಪರನಾರಿಯರ–ಅನ್ಯಸ್ತ್ರೀಯರ, ಸಂಗವ–ತತ್ಸಂಗವನ್ನು ತೊಱೆಯಂ ಭೋ ತೊಱೆಯ ಭೋ–"ತೊರೆ ವಿಡಂಬೇ ನದೀ ಭೇದೇ ಚ" ಯೆಂದು ವಿಡಂಬಿಸಿ ಬಿಡಿರೋ ವಿಡಂಬಿಸಿ ಬಿಡಿರೋ.

ಪರಧನದ–ಅನ್ಯದ್ರವ್ಯದ ಮೇಲಣ, ಆಮಿಷವ–ಅಪೇಕ್ಷೆಯನ್ನು, ತೊಱೆಯಿಂ ಭೋ ತೊಱೆಯಿಂ ಭೋ–ವಿಸರ್ಜಿಸಿ ಬಿಡಿರೋ ವಿಸರ್ಜಿಸಿ ಬಿಡಿರೋ, ಇವ–ಈ ಪರಸ್ತ್ರೀ ಪರಧನಂಗಳನು, ತೊಱೆಯದೇ–ದಿಕ್ಕರಿಸಿ ಬಿಡದೆ, ಹೋಗಿ–ಎಯ್ದುಹೋಗಿ, ತೊಱೆಯ ಮಿಂದಡೆ–ಪುಣ್ಯತೀರ್ಥ ಪುಣ್ಯಕ್ಷೇತಂಗಳಿಗೆ ಹೋಗಿ ಸ್ನಾನಪಾನಂಗಳನು ಮಾಡಿಕೊಂಡು ಬಂದರೆ, ಬಱುದೊಱೆಯಾಗಿ ಹೋಹುದು–ನೀವು ಮಾಡಿದಂಥ ಪಾಪಂಗಳು ಬಿಡುಗಡೆಯಾಗಿ ಹೋದಾವೆ? ಹೋಗಲರಿಯವು, ಕೂಡಲಸಂಗಮದೇವ–ಎಲೆ ಪರಶಿವಲಿಂಗವೆ.

೬೪೫

ಸತ್ಯಶೌಚ ನಿತ್ಯನೇಮವ ತಪ್ಪದೆ ಮಾಡಬಲ್ಲಡೆ ಅ[1]ದೆ[1] ಲೇಸು, ಲೇಸು, ಮತ್ಸ್ಯ ಕೂರ್ಮ ಮಂಡೂಕ ಜಲದೊಳಗಿರ್ದ[2] ಫಲವೇನು? [3][ಚಿತ್ತಸ್ಯಾಂತರ್ಗತೋ ದೋಷಃ ತೀರ್ಥಸ್ನಾನೇ ನ

ಶುದ್ಧ್ಯತಿ । ಶತಕುಂಭಜಲೇ ಧೌತಂ ಸುರಾಭಾಂಡಮಿವಾ ಶುಚಿಃ॥][3] [4]ಎಂದಾಗಿ[4] ಅಗಡವ ಮಾಡಿ ಮಾಗಡವ ಮಿಂದಡೆ, ತಾ ಕೊಡಬಲ್ಲನೇ ಕೂಡಲಸಂಗಮದೇವ ?

....

೩-೩ ಚಿತ್ತಮಂತರ್ಗತಂ ದೃಷ್ಟ ತೀರ್ಥಸ್ನಾನೇನ ಶುದ್ಧತೇ । ಶತಕುಂಬಜಲೇ ಶೌಚಂ ಸುರಾಭಾಂಡಮಿವಾ ಶುಚೀ ॥ (ಕ, ಗ).

I -

ಸತ್ಯಶೌಚ ನಿತ್ಯನೇಮವ ತಪ್ಪದೆ ಮಾಡಬಲ್ಲದೆ : ಸತ್ಯ-"ಸ್ನಾನಂ ಮನಮಲತ್ಯಾಗಂ" ಎಂದು ಮನವ ಕಚ್ಚಿದ ಮಲತ್ರಯಂಗಳ ವರ್ತನೆಯನ್ನು ನಷ್ಟವಮಾಡಿ ಗೌರವಬುದ್ಧಿ ಲಿಂಗಲೀಯ ಜಂಗಮಾನುಭಾವ ಏಕಾದಶಪ್ರಸಾದಪರಿಜ್ಞಾನ ಧಶವಿಧಪಾದೋಧಕ ಭಕ್ತಿನಿರ್ವಹಮೆಂಬ ಷಡ್ವಿಧವ್ರತಂಗಳಾಗಿ ಅಳವಡಿಸಿಕೊಂಡಾಚರಿಸುವಂಥದೇ ಸತ್ಯ. ಶೌಚ-"ಶೌಚಮಿಂದ್ರಿಯ ನಿಗ್ರಹಃ"ಎಂದು ಇಂದ್ರಿಯಂಗಳ ವರ್ತನೆಯ ನಷ್ಟವಮಾಡಿ ಅವೆಲ್ಲ ಲಿಂಗೇಂದ್ರಿಯಂಗಳಾಗಿ ಅಳವಡಿಸಿಕೊಂಡಾಚರಿಸುವಂಥದೆ ಶೌಚ, ನಿತ್ಯನೇಮವ-ಆವಾಗಲೂ ಮಾಡುವಂಥ ಕಟ್ಟಿನ ಕ್ರಿಯೆಗಳನು, ತಪ್ಪದೆ-ತೊಲಗದೆ, ಮಾಡಬಲ್ಲಡೆ-ಅನುಗೆಯ್ಯಬಲ್ಲರೆ, ಅದೇ ಲೇಸು-ಅದೇ ಪರಿಣಾಮವು ಮತ್ಸ್ಯ-ಮೀನ, ಕೂರ್ಮ-ಆಮೆ, ಮಂಡೂಕ-ಕಪ್ಪೆ, ಜಲದೊಳಗೆ-ಉದಕದಲ್ಲಿ, ಇರ್ದು-ಇರುತ್ತಿದು, ಫಲವೇನು-ಪ್ರಯೋಜನವೇನು".

ಗ್ರಂಥ-ಗುರುವಾಕ್ಯಕ್ಕೆ ಸದೃಶವಾಗಿ ಹರವಾಕ್ಯವ ನಿರೂಪಿಸುತಿಹರು, ಚಿತ್ತಮಂತರ್ಗತಂ ದೃಷ್ಟ: ಚಿತ್ತಮಂತರ್ಗತಂ: ಚಿತ್ತ-ಮನಸ್ಸು, ಅಂತರ್ಗತಂ-ಅಂತರಂಗದ ಪಾಪದಲ್ಲಿ, ಗತಂ-ಅಡಗಿರುವಂಥದನ್ನು ಮತ್ತಂತುಮಲ್ಲದೆ ಸಕಲ ಪ್ರಪಂಚಿನೊಡನೆ ಕೂಡಿರುವಂಥದನ್ನು, ದೃಷ್ಟ-ತಾರ್ಕಣ್ಯವನ್ನು, ಕಂಡು-ನೋಡಿ, ತೀರ್ಥ ಸ್ನಾನೇನ ಶುದ್ಧತೆ-ಪುಣ್ಯತೀರ್ಥಂಗಳಿಗೆ ಹೋಗಿ ಸ್ನಾನಪಾನವ ಮಾಡಿಕೊಂಡು ಬಂದರೆ, ನ ಶುದ್ಧತೇ-ನಿರ್ಮಲವಾದೀತೆ? ಆಗಲರಿಯದು, ಸುರಾಭಾಂಡ-ಹೆಂಡದ ಗಡಿಗೆಯನ್ನು, ಶತಕುಂಭಜಲೇ ಶೌಚ-ಒಂದುನೂರು ಕೊಡ ಉದಕದಿಂದ ತೊಳೆತೊಳೆದು ಪ್ರಕ್ಷಾಲಿಸಿದರೆ, ಇವಾ ಶುಚಿಃ-ನಿರ್ಮಲವಾದೀತೆ? ಆಗದು.

ಆಗಡವ ಮಾಡಿ-ಮಾಡಬಾರದ ಪಾಪವ ಮಾಡಿ, ಮಾಗಡವ ಮಿಂದಡೆ-ಮಾಗಿಯ ಕಾಲದಲ್ಲಿ ಹೊಳೆಗೆ ಹೋಗಿ ಸ್ನಾನಪಾನವ ಮಾಡಿಕೊಂಡು ಬಂದರೆ, ಕೂಡಲಸಂಗಮದೇವ-ಪರಶಿವಲಿಂಗವು, ತಾ ಕೊಡಬಲ್ಲನೆ?-ಅಂತರಂಗದಲ್ಲಿ ನಿರ್ಮಲತ್ವವಿಲ್ಲದೆ ಬಹಿರಂಗದಲ್ಲಿ ಸುಮ್ಮನೆ ನದಿಗೆ ಹೋಗಿ ಸ್ನಾನಪಾನವ ಮಾಡಿದರೆ ತಾನೇನಾದರೂ ಇಷ್ಟಾರ್ಥಸಿದ್ದಿಯನ್ನು ಕರುಣಿಸಿಕೊಟ್ಟಾನೆ? ಕೊಡಲರಿಯನು.

III -

ಆಗಡವ ಮಾಡಿ-ಪಂತಮಹಾಪಾತಕವನೆಸಗಿ, ಮಾಗಡವ ಮಿಂದಡೆ-ಪುಣ್ಯತೀರ್ಥದಲ್ಲಿ ಸ್ನಾನವ ಮಾಡಿದರೆ.

IV- -

1–1 ದು (ತ), 2–2 ರ್ದಲ್ಲಿ (ತ), 3–3 ಚಿತ್ತಮಂತರ್ಗತಂ ದೃಷ್ಟ್ವಾ ತೀರ್ಥಸ್ನಾನೇನ ಶುದ್ಧತಿ । ಶತಕುಂಭಜಲೇ, ಶೌಚಂ ಸುರಾಭಾಂಡಮಿವಾ ಶುಚೀಃ॥ (ತ), 4–4 x (ತ)

....

ಮನಬುದ್ಧಿ ಚಿತ್ತ ಅಹಂಕಾರ, ಜೀವನುಂ ಸತ್ಯವಾದ ಷಡುಸ್ಥಲದಲಲ್ಲದೆ ಅಳಿಯವು, ಹೀಗಲ್ಲದೆ ಜಲದೊಳಗೆ ಮುಳುಗಿ ಶುದ್ಧವಾದೆನೆಂಬ ಮನುಷ್ಯರು ಸುರಾಭಾಂಡದ ಹೊಱಗೆ ತೊಳೆದ ಪರಿಯಂತೆಂಬುದೀ ವಚನದರ್ಥ.

೬೪೬

ಕುಳ್ಳಿ[1]ರ್ದು[1] ಲಿಂಗವ ಪೂಜಿಸಿ ಅಲ್ಲದಾಟವನಾಡುವರಯ್ಯಾ: ಬೆಳ್ಳೆತ್ತಿನ ಮಱ[2]ಯಲ್ಲಿ[2] ಹುಲ್ಲೆಗಂಬುತೊಡುವಂತೆ! ಕಳ್ಳ ಹಾದರಿಗ[3]ನ[3] ಕೈಯಲ್ಲಿ ಪೂಜೆ[4]ಯ ಕೊ[4]ಳ್ಳ ನಮ್ಮ ಕೂಡಲಸಂಗಮದೇವ.

I –

ಕುಳಿರ್ದು ಲಿಂಗವ ಪೂಜಿಸಿ : ಕುಳ್ಳಿರ್ದು–ನಿರ್ವಂಚಕ ಸದ್ಭಕ್ತರ ಮನೆಯಲ್ಲಿ ಕುಳಿತುಕೊಂಡಿರ್ದು, ಲಿಂಗವ ಪೂಜಿಸಿ–ಇಷ್ಟಮಹಾಲಿಂಗವನ್ನು ಅಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳಿಂದಾರಾಧಿಸಿ, ಅಲ್ಲದ–ದೇವಭಕ್ತರಿಗೆ ಯೋಗ್ಯವಲ್ಲದ, ಆಟವನಾಡುವರಯ್ಯಾ–[*ಪರಸ್ತ್ರೀಯರೊಂದಿಗೆ*] ಕೈಸರಸ ಮೈಸರಸನಾಡುವರಯ್ಯಾ, ಬೆಳ್ಳೆತ್ತಿನ ಮಱೆಯಲ್ಲಿ–[ಬಿಳಿಯ ಎತ್ತಿನ ಮಗ್ಗುಲಲ್ಲಿ] ಮೈಗೆ ಸೊಪ್ಪನ್ನು ಸುತ್ತಿಕೊಂಡು, ಹುಲ್ಲೆಗೆ ಅಂಬು ತೊಡುವಂತೆ–ಹುಲ್ಲೆಗೆ "ಅಂಬೇ"ಯೆಂದು ಅಂಬಿಟ್ಟು ಕೆಡಹುವಂಥ ಕಿರಾತನ ಇರಸ್ಥಿತಿಯೂ [*ಪರಸ್ತ್ರೀಯರೊಂದಿಗೆ*] ಕೈಸರಸ ಮೈಸರಸನಾಡುವಂಥ ಆಶಾಲಾಂಛನಿಗಳ ಇರಸ್ಥಿತಿಯೂ ಒಂದೇಯಾಗಿರ್ಪುದು. ಕಳ್ಳ–ತಸ್ಕರ, ಹಾದರಿಗನ ಪಾಣ್ಬಪುರುಷನ, ಕೈಯಲ್ಲಿ–ಹಸ್ತದಲ್ಲಿ, ನಮ್ಮ ಕೂಡಲಸಂಗಮದೇವ–ನಮ್ಮ ಪರಶಿವಲಿಂಗವು, ಪೂಜೆಯಕೊಳ್ಳ–ಆರಾಧಿಸಿಕೊಳ್ಳನು.

....

– ಈ ಭಾಗ(ಮ) ಪ್ರತಿ ಪ್ರತಿಯಲ್ಲಿದೆ.

II –

2 + ರ್ದು (ಚ, ಜ), 4–4 ಗೊ (ಚ, ಜ)

....

ಕುಳ್ಳಿರ್ದು ಲಿಂಗವ ಪೂಜಿಸಿ ಅಲ್ಲದಾಟವನಾಡುವರಯ್ಯಾ–ಸ್ವಸ್ಥಪದ್ಮಾಸನದಲ್ಲಿ ಮೂರ್ತಮಾಡಿ ಇಷ್ಟಲಿಂಗವನಾರಾಧಿಸಿ ಯೋಗ್ಯವಲ್ಲದ ಭಿನ್ನಕ್ರಿಯಾ ನಟನೆಯನು ನಟಿಸುವರಯ್ಯಾ: [೧]ಅದಲ್ಲದೆ ಪರದೈವಂಗಳಿಗೆಳಸುವರಯ್ಯಾ.[೧] ಬೆಳ್ಳೆತ್ತಿನ ಮಱೆಯಲ್ಲಿರ್ದು ಹುಲ್ಲೆಗಂಬ ತೊಡುವಂತೆ!–ನಿರ್ಮಲಜ್ಞಾನಾಸ್ಪದದಲ್ಲಿರ್ದು, ಅದಲ್ಲದೆ ಅಷ್ಟಾವರಣಂಗಳಾಸ್ಪದದಲ್ಲಿರ್ದು ಮಾಯೆಯೆಂಬ ಹರಿಣಿಗೆ ಮನವಿಕಾರವೆಂಬ ಸರಳನು ಪ್ರವೇಷ್ಟಿಸುತಿರ್ಪನು, ಕಳ್ಳ ಹಾದರಿಗನ ಕೈಯಲು ಪೂಜೆಗೊಳ್ಳ ನಮ್ಮ ಕೂಡಲಸಂಗಮದೇವ–ತಸ್ಕರ ಜಾರರ ಹಸ್ತದಿಂದ ಯಜನವನು ಕೈಕೊಳ್ಳ ನಮ್ಮ ಪರಶಿವಲಿಂಗವು.

....

೧–೧ x (ಜ)

IV– –

1–1 ರ್ದುಲ್ಲಿ (ತ), 2+ ದು (ತ), 3–3 ರ (ತ)

....

ಲಿಂಗಪೂಜೆಯ ಮಾಡುವ ಮಾಹೇಶ್ವರಗೆ ಮನಗುಣವನಳಿಯಬೇಕು. ಮನಗುಣವನಳಿಯದೆ ಲಿಂಗಪೂಜೆಯ ಮಾಡಿದರೆ ಬೆಳ್ಳತ್ತಿನ ಮರೆಯಲ್ಲಿರ್ದು ಹುಲ್ಲೆಗಂಬ ತೊಡುವಂತೆಯೆಂಬುದೀ ವಚನದರ್ಥ.

೬೪೭

ನುಡಿಯಲ್ಲಿ ಎಚ್ಚೆತ್ತು ನಡೆಯಲ್ಲಿ ತಪ್ಪಿದಡೆ ಹಿಡಿದಿರ್ದ ಲಿಂಗವು ಘಟಸರ್ಪ*[1]ನ[1]ಯ್ಯಾ *ನುಡಿಯಲು ಬಾರದು, ನಡೆಯಲುಬಾರದು, ಲಿಂಗದೇವನೆ [2]ದಿವ್ಯ[2] ಅಯ್ಯಾ, ಬಡವನ ಕೋಪ ಅವುಡಿಗೆ ಮೃತ್ಯುವಾದಂತೆ ಕಡೆಗೆ ದಾಂಟದು, ಕಾಣಾ ಕೂಡಲಸಂಗಮದೇವಾ.

I –

ನುಡಿಯುಲ್ಲಿ ಪ್ರಸಂಗದಲ್ಲಿ, ಎಚ್ಚತ್ತು–ನಾವು ಜ್ಞಾನಿಗಳು ಶಿವಸ್ವರೂಪಿಗಳು ಪರಬ್ರಹ್ಮಸ್ವರೂಪಿಗಳೆಂದು ಹೇಳಿಕೊಂಡು, ನಡೆಯಲ್ಲಿ–ಆಚರಣೆಯಲ್ಲಿ, ತಪ್ಪಿದಡೆ–ಓಸರಿಸಿದರೆ, ಹಿಡಿದಿರ್ದ–ಹಸ್ತದಲ್ಲಿ ಪಿಡಿದುಕೊಂಡಿರುವಂಥ. [ಲಿಂಗವು–] ಇಷ್ಟಮಹಾಲಿಂಗವು, ಘಟಸರ್ಪ–ಅದೇ ಯಮನೆಂಬ ಫಣಿಯಾಗಿ ಜನನ ಮರಣದಲ್ಲಿ ತಂದು ಸಂಹರಿಸುತ್ತಿಹುದು. ಅಯ್ಯ–ಎಲೆ ಲಿಂಗವೆ. ನುಡಿಯಲುಬಾರದು ನಡೆಯಲುಬಾರದು–ನಾವು ಜ್ಞಾನಿಗಳುಶಿವಸ್ವರೂಪಿಗಳು ಪರಬ್ರಹ್ಮಸ್ವರೂಪಿಗಳೆಂದು ಹೇಳಿಕೊಂಡ ಹಂಗೆ ಆಚರಿಸೇನೆಂದರಶಕ್ಯವಾಗಿರ್ಪುದು. ಲಿಂಗದೇವನೆ ದಿವ್ಯ–ಇದು ಹುಸಿ ದಿಟವೆಂಬುದಕ್ಕೆ ಗುರುಮುಖದಿಂದ ಬಂದಂಥ ಇಷ್ಟಮಹಾಲಿಂಗವೇ ಸಾಕ್ಷಿ ಅಯ್ಯ–ಎಲೆ ಲಿಂಗವೆ.

ಬಡವನ ಕೋಪ ಅವುಡಿಗೆ ಮೃತ್ಯುವಾದಂತೆ–ತುರುಕಾಣ್ಯದೇಶದಲ್ಲಿ ಒಬ್ಬ ವಾಣಿಜನೇನಾದರೂ ಒಂದು ದುಕಾನವನ್ನು ಹಾಕಿಕೊಂಡಿರುವ ಅಲ್ಲಿಗೊಬ್ಬ ಮ್ಲೇಂಛ ಬಂದು ಎಚ್ಚವನ್ನು ತೂಗಿಕೊಂಡೆದು ಕ್ರಯವನ್ನು ತೊಟ್ಟಲ್ಲಿ ಅದನ್ನು ತೆಗೆದುಕೊಂಡು ಕಾಣಿಯಷ್ಟು ಕಡಿಮೆ ಮಾಡಿ ಎಚ್ಚವನ್ನು ತೂಗಿಕೊಟ್ಟಲ್ಲಿ ಅವನು ಅದನ್ನು ತೆಗೆದುಕೊಂಡು ಹೋಗಿ ಎಡಬಲಂದಂಗಡಿಗಳಲ್ಲಿ ತೂಗಿಸಿ ನೋಡಿದಲ್ಲಿ ಒಂದು ಕಾಣಿಯಷ್ಟು ಕಡಿಮೆಯಾಗಿರುವುದು. ಎಲೋ ಹೀಗೇಕೆ ತೂಗಿಕೊಟ್ಟೆ? ಎಂದಲ್ಲಿ ಎಲ್ಲರಿಗೆ ತೂಗಿಕೊಡುವ ಹಾಂಗೆ ತೂಗಿಕೊಟ್ಟೆ. ನಿನಗೆ ಬೇರೆ ತೂಗಿಕೊಟ್ಟೆನೇ ಎಂದಲ್ಲಿ ಒಂದು ಕ್ಯಾತಿ ಕೆನ್ನೆಯ ಮೇಲೆ ಕುಟ್ಟುವ. ಇನ್ನೊಂದು ಕ್ಯಾಪಿ ಕುಟ್ಟೆಲೆ ನೋಡೇನು: ನಿನ್ನ ತಮಾಸೆ ಎಂದಲ್ಲಿ ಮತ್ತೊಂದು ಕ್ಯಾಪಿ ಕುಟ್ಟುವನು. ಹಾಂಗೆ;

ಬಡವನು–ನಿರ್ಧನಿಕನ, ಕೋಪ–ಸಿಟ್ಟು, ಅವುಡಿಗೆ ವೈರಿಯಾದ ಹಾಂಗೆಂಬಲ್ಲಿ, ಬಡವನ–ದೇಹ ಕರಣೇಂದ್ರಿಯ ವಿಷಯಂಗಳ ಜಯಿಸಲಾರದಿದ್ದಂಥ ಅಶಕ್ತನ, ಕೋಪ–ಕ್ರೋಧಾಗ್ನಿಯು, ಅದೇ ತನ್ನ ಜನನ ಮರಣಂಗಳಲ್ಲಿ ತಂದು ಸಂಹರಿಸುವುದಕ್ಕೆ ವೈರಿಯಾಗಿರುತ್ತಿಹುದು. ಕಡೆಗೆ ದಾಂಟದು–ಅವನಲ್ಲ ನಿವೃತ್ತಿಯಾಗಿ ಅಳವಡಿಸಿಕೊಂಡಾಚರಸೇನೆಂದರೆ ಅಶಕ್ಯವಾಗಿರ್ಪುದು. ಕಾಣಾ–ಕಂಡಾ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

II –

1–1 ವ (ಚ, ಜ), 2–2 ದಿಬ್ಯವೊ (ಚ, ಜ)

....

ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ ತಪ್ಪಿದಡೆ ಹಿಡಿದಿರ್ದ ಲಿಂಗವು ಘಟಸರ್ಪವಯ್ಯಾ–ವಾಕ್ಯದಲ್ಲಿ ವಿಚಾರಪರನಾಗಿ ಆಚರಣೆಯಲ್ಲಿ ಹೊರಚ್ಚಾದರೆ ಗ್ರಹಿಸಿದ ಇಷ್ಟಲಿಂಗವು ಸಂಕಲ್ಪವಿಷವನುಂಟುಮಾಡಿ ಭವಕ್ಕೆ ಹಾಕುದಕ್ಕೆ ಮಹಾಕಾಳೋರಗನಾಗಿರ್ಪುದು, ನುಡಿಯಲು ಬಾರದು ನಡೆಯಲು ಬಾರದು, ಲಿಂಗ ದೇವನೆ ದಿಬ್ಯವೊ ಅಯ್ಯಾ–ಹೊನ್ನ ಮುಟ್ಟಬಾರದು ಹೆಣ್ಣ ಮುಟ್ಟಬಾರದು ಮಣ್ಣ ಮುಟ್ಟಬಾರದೆಂದು ವಚಿಸಲು ಬಾರದು. ಆ ವಚಿಸಿದ ಹಾಂಗೆ ಆಚರಿಸಲು ಬಾರದು. ಪರಶಿವಲಿಂಗದೇವನೇ ಪ್ರಮಾಣು. ಅದಲ್ಲದೆ ಶಿವತತ್ತ್ವಜ್ಞಾನಾನುಭಾವವಚಿಸ್ಸಿನಲ್ಲಿ ಮಹಾಸುವಿಚಾರನಾಗಿ, ಕ್ರಿಯಾಚರಣೆಯಲ್ಲಿ ಹೊರಚ್ಚಾದರೆ ಹಿಂದೆ ಹೇಳಿದ ಹಾಂಗೆ ಆ ಶಿವತತ್ತ್ವಜ್ಞಾನಾನುಭಾವವಚಸ್ಸನು ವಚಿಸಲು ಬಾರದು. ಕ್ರಿವಿಡಿದಾಚರಿಸಲು ಬಾರದು. ಕರಸ್ಥಲದಲ್ಲಿರುವ ಇಷ್ಟಲಿಂಗವೇ ಪ್ರಮಾಣು.

ಬಡವನ ಕೋಪ ಅವುಡಿಗೆ ಮೃತ್ಯುವಾದಂತೆ–ಭಕ್ತಿಜ್ಞಾನವಿಹೀನವಾಗಿ ನಿತ್ರಾಣಿಯಾದವನ ನುಡಿಗಡಣೆಯ ಶಾಸ್ತ್ರದ ಕಣ್ಣಕೆಚ್ಚಹತನವು ತಾಲವ್ಯ ಮೂಲವ್ಯ ದಂತ್ಯವ ತುಟಿ ಕಟವಾಯ ರಸನೆಗೆ ಹಗೆಯಾಗಿರ್ಪುದು, ಕಡೆಗೆ ದಾಂಟದು ಕಾಣಾ ಕೂಡಲಸಂಗಮದೇವಾ–ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ ತಪ್ಪಿದವನು ಮುಕ್ತಿಮಾರ್ಗಕ್ಕೆ ಪಾರವೇದಿಸನು ಕಂಡಾ ಪರಶಿವಲಿಂಗವು.

III –

ಕಡೆಗೆ ದಾಂಟದು ಕಾಣಾ–ಕಡೆಗೆ ಸಾಗದು ಕಂಡಾ.

IV –

– ನಂತೆ (ತ), 2–2 ದಿಬ್ಯವೊ (ತ)

....

ಸತ್ಯವಾಗಿ ಲಿಂಗವ ಪೂಜಿಸಿದರೆ ನಿತ್ಯನ ಮಾಡೂದು. ಅಸತ್ಯವಾಗಿ ಲಿಂಗವ ಪೂಜಿಸಿದರೆ ಹಿಡಿದಿರ್ದ ಲಿಂಗ ಘಟಸರ್ಪನೆಂಬುದೀ ವಚನದರ್ಥ.

೬೪೮

ತನು ಶುಚಿಯಿಲ್ಲದವನ ದೇಹಾರವೇಕೆ? ದೇವರು ಕೊಡರೆಂಬ ಭ್ರಾಂತದೇಕೆ? ಮನಕ್ಕೆ ಮನಸಾಕ್ಷಿ; ಸಾಲದೆ ಲಿಂಗತಂದೆ? ಹೇಂಗೆ ಮನ ಹಾಂಗೆ ಘನ, ತಪ್ಪದು, ಕೂಡಲಸಂಗಮದೇವ.

I –

ತನು ಶುಚಿಯಿಲ್ಲದವನ–ನಮ್ಮ ದೇಹವು ಮಲಭಾಂಡಯುಕ್ತವಾದಂಥದು. ದ್ವಾದಶಮಲಯುಕ್ತವಾದಂಥದು. ಅಪವಿತ್ರವನುಳ್ಳಂಥದು, ನಮ್ಮಂಗವು ಭೂತಕಾಯ ಜಡಕಾಯವು ಪವಿತ್ರವಿಲ್ಲವೆಂದು ಹೇಳಿಕೊಂಬುವಂಥವನ, ದೇಹಾರವೇಕೆ?–ನಿರ್ಮಲವಾಗಿ ಕುಳಿತುಕೊಂಡು ಲಿಂಗಪೂಜೆಯ ಮಾಡುತ್ತೈದಾನೆಂದು ಹೇಳಿಕೊಂಬುವುದೇನು ಕಾರಣಕ್ಕೋ? ದೇವರು ಕೊಡರೆಂಬ–ನಾನು ಏಕಲಿಂಗನಿಷ್ಠಾವ್ರತವುಳ್ಳಾತನಾಗಿ ಲಿಂಗಪೂಜೆಯ ಮಾಡುತ್ತೈದೇನಿ, ಶಿವನು ನಮಗೇನು ಕಾರಣಕ್ಕೆ ಫಲಪದ ಇಷ್ಟಾರ್ಥಸಿದ್ಧಿಯನ್ನು ಕರುಣಿಸಿಕೊಂಡನೆಂದು ಹೇಳಿಕೊಂಬಂಥ, ಭ್ರಾಂತದೇಕೆ–ಜೀವಭಾವದ ಭ್ರಮಣೆ ಏನು ಕಾರಣಕ್ಕೆ, ಮನಕ್ಕೆ ಮನ–ಎನ್ನ ಮನವು ಮಲಭಾಂಡಯುಕ್ತವಾದಂಥದು ದ್ವಾದಶಮಲಯುಕ್ತವಾದಂಥದು. ಅಪವಿತ್ರವಾದಂಥದು ಪವಿತ್ರವಿಲ್ಲದಂಥ ಭೂತಕಾಯ ಜಡಕಾಯವೆಂದು ಹೇಳಿಕೊಂಬುವಂಥ ಮನಸ್ಸಿಗೂ ನಾನು ಏಕಲಿಂಗನಿಷ್ಠಾಪ್ರತಳ್ಳಾತನಾಗಿ ಮನದಲ್ಲಿ ನಿರ್ಮಲವಾಗಿ ಕುಳಿತುಕೊಂಡು ಲಿಂಗಪೂಜೆಯ ಮಾಡುತ್ತೈದೀನಿ, ಶಿವನು ನಮಗೇನು ಕಾರಣಕ್ಕೆ ಇಷ್ಠಾರ್ಥಸಿದ್ಧಿಯನ್ನು ಕರುಣಿಸಿಕೊಡಲೊಲ್ಲನೆಂದು ಹೇಳಿಕೊಂಬುವಂಥ ಮನಸ್ಸಿಗೂ, ಸಾಕ್ಷಿ–ತಾರ್ಕಣ್ಯವು, ಸಾಲದೆ?–ಅಷ್ಟೇಸಾಲದೆ? ಅಷ್ಟೇ ಸಾಕು, ಲಿಂಗ ತಂದೆ–ಲಿಂಗಯ್ಯನೆಂಬಂಥ ಎನ್ನಾತ್ಮಜನಕನೇ, ಹೇಂಗೆ ಮನ ಹಾಂಗೆ–ಹೇಂಗೆ ಮನದಲ್ಲಿ ನಿರ್ಮಲತ್ವ ಮುಂದುಗೊಂಡು ಲಿಂಗಪೂಜೆಯ ಮಾಡುತ್ತಿಹನೋ ಹಾಂಗೆ, ಘನ–ಇಷ್ಟಾರ್ಥಸಿದ್ಧಿಯಾಗುವಂಥದು, ತಪ್ಪದು–ಓರೆಯಾಗದು, ಕೂಡಲಸಂಗಮದೇವ–ಎಲೆ ಪರಶಿವಲಿಂಗವೆ.

IV –

ತನ್ನಾದಿ ಲಿಂಗವೆಂದಱಿದು ತನುಗುಣಂಗಳ ಮಱಿದು ಲಿಂಗವ ಪೂಜಿಸಿದರೆ ತಾ ಲಿಂಗವಹ, ತನುಗುಣಂಗಳಡಗದೆ ಲಿಂಗವ ಪೂಜಿಸಿದರೆ ಲಿಂಗವೇನನೂ ಕೊಡನೆಂಬುದೀ ವಚನದರ್ಥ.

೬೪೯

ನಿಚ್ಚ ನಿಚ್ಚ ಪೂಜಿಸುವ ಶರಣಂಗೆ ಅದಕ್ಕಿದೆ [1]ದಿಟ[1] ದೀವಿಗೆ: ಪಾದೋದಕ ಕೋಶಪಾವನವಲ್ಲದೆ ಏನೂ ಇಲ್ಲವಯ್ಯಾ. ಮಜ್ಜನಕ್ಕೆಱೆವುದು ಲಿಂಗ ಅದು ಲಿಂಗಕರಸ್ಥಲದ ದಿಬ್ಯ. ಗುರುವಚನ ಭಾಷಾಪತ್ರ ಶಿವಕರದಲ್ಲಿ! ಸತ್ಯದಿಂದ ನಡೆವಂಗೆ ನಿತ್ಯ ನೇಮವಾಗಿ ಸಲಿಸುವನಲ್ಲದೆ, ಹುಸಿವಂಗೆ ಒಡಲಗಿಚ್ಚಾಗಿ ಸುಡುವ! ಲಿಂಗವ ಪೂಜಿಸಿ ಮರಳಿ ಅನ್ಯಕ್ಕೆಱಗಿದಡೆ ಕೂಡಲಸಂಗಮದೇವನವರ ಹಲ್ಲು ಕಳೆವ!

I –

ನಿಚ್ಚ ನಿಚ್ಚ–ದಿನದಿನಂಪ್ರತಿಯಲ್ಲಿ ಪೂಜಿಸುವ–ಇಷ್ಟಮಹಾಲಿಂಗವನ್ನು ಅಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳಿಂದಾರಾಧಿಸುವ, ಶರಣಂಗೆ–ಶಿವಶರಣಂಗೆ, ಅದಕ್ಕೆ–

ಹಾಂಗಾರಾಧಿಸುವದಕ್ಕೆ, ಇದೆ ದಿಟ ದೀವಿಗೆ ಭಾಷಾಪತ್ರವು. ಪಾದೋದಕ–ಪಾದೋದಕ ಪ್ರಸಾದವನ್ನು ಅನುಭವಿಸುವಂಥಾತನು, ಕೋಶ–ಅಂಗವು, ಪಾವನವಲ್ಲದೆ–ನಿರ್ಮಲವಾದ ಆಚಾರಾಂಗ ಜ್ಞಾನಕಾಯವಾಗಿರ್ಪುದಲ್ಲದೆ, ಏನೂ ಇಲ್ಲವಯ್ಯ–ಭೂತಕಾಯ ಜಡಕಾಯ ಉಂಟಾಗಿಲ್ಲವಯ್ಯ.

ಮಜ್ಜನಕ್ಕೆಱೆವುದು ಲಿಂಗ–ಹತ್ತೆಂಟು ಕೊಡ ಉದಕವನ್ನು ಲಿಂಗಕಭಿಷೇಕವನ್ನು ನೀಡುವಂಥ ದಕ್ಷಿಣಭಾಗದ ಕರಸ್ಥಲವು, ಅದು ಲಿಂಗ ಕರಸ್ಥಲದ–ಹಸ್ತದಲ್ಲಿ ಲಿಂಗವನ್ನು ಪಿಡಿದುಕೊಂಡು ಲಿಂಗಪೂಜೆಯ ಮಾಡವುಂಥ ವಾಮಭಾಗದ ಕರಸ್ಥಲವು, ದಿಬ್ಯ–ಷಡ್ಗುಣೈಶ್ವರ್ಯ ಸಂಪತ್ಕರವನುಳ್ಳಂಥದು, ಗುರುವಚನ–ಗುರುವಿನ ವಾಕ್ಯವು, ಭಾಷಾಪತ್ರ–ಶಾಸನದ ಲಿಪಿಯಾಗಿರ್ಪುದು, ಶಿವಕರದಲ್ಲಿ–ಹಸ್ತದಲ್ಲಿ ಲಿಂಗವನ್ನು ಪಿಡಿದುಕೊಂಡು ಲಿಂಗಪೂಜೆಯ ಮಾಥವುಂಥ ಶಿವಹಸ್ತದಲ್ಲಿ, ಸತ್ಯದಿಂದ –ಯಥಾರ್ಥದಿಂದ, ನಡೆವಂಗೆ–ಆಚರಿಸುವಾತಂಗೆ, ನಿತ್ಯನೇಮವಾಗಿ –ಯಾವಾಗಲೂ ತಪ್ಪದೇ ಮಾಡುವು ಕಟ್ಟಿನ ಕ್ರಿಯೆಗಳಾಗಿ, ಸಲಿಸುವನಲ್ಲದೆ–ನಡೆಸುವನಲ್ಲದೆ, ಹುಸಿವಂಗೆ–ಭಕ್ತಮಾಹೇಶ್ವರರುಗಳ ಮಧ್ಯದಲ್ಲಿ ಸಟೆಯನಾಡುವಾತಂಗೆ, ಒಡಲಗಿಚ್ಚಾಗಿ–ಉಡಿಯಲ್ಲಿ ಕಟ್ಟಿಕೊಂಡಿರುವ ಅಗ್ನಿಯಾಗಿ, ಸುಡುವ–ದಹಿಸುವ, ಲಿಂಗವ ಪೂಜಿಸಿ–ಇಷ್ಟಮಹಾಲಿಂಗವನ್ನು ಅಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳಿಂದಾರಾಧಿಸಿ, ಮರಳಿ–ಪುನರಪಿಯಾಗಿ, ಅನ್ಯಕ್ಕೆಱಗಿದಡೆ–ಇತರ ದೈವಂಗಳಿಗೆ ತಲೆವಾಗಿ ನಮಸ್ಕರಿಸಿದರೆ, ಕೂಡಲಸಂಗಮದೇವ–ಪರಶಿವಲಿಂಗವು, ಅವರ–ಅಂತಪ್ಪ ಆಶಾಲಾಂಛನಿ ಉಪಾಧಿಕರುಗಳ, ಹಲ್ಲುಕಳೆವ–ದಂತಂಗಳ ಭಗ್ನವ ಮಾಡುತ್ತಿಹನು, ಅದಲ್ಲದೆ ಚಿತ್ಕರಣಂಗಳ ನಷ್ಟವ ಮಾಡಿಬಿಟ್ಟು ದುಷ್ಕರಣಂಗಳನುಂಟುಮಾಡುತ್ತಿಹನು.

III –

1–1 ದಿಷ್ಟ (ಟ) ; ದಿಟ (ಡ)

....

[ದೃಷ್ಟ] ದೀವಿಗೆ–ದೃಷ್ಟದ ದೀಪವು ಪಾದೋದಕ–ಚರಣಜಲವು, ಕೋಶಪಾವನವಲ್ಲದೆ–ಶರೀರಶುದ್ಧತೆಯಿಲ್ಲದೆ.

೬೫೦

ಪಾಪಿಗೆ ಕೋಪಿಗೆ ಭಕ್ತಿಯಾಗೆಂದಡಪ್ಪುದೆ? ನಾರಿವಾ[1]ಣವ[1]ಕ್ಕುದೆ ನಾಯಿಗೆ? ಕೂಡಲಸಂಗಮದೇವಾ, ನಿಮ್ಮ ನಂಬಿಯೂ ನಂಬದ ಡಂಬ[2]ಕರಿ[2]ಗೆ.

I –

ಪಾಪಿಗೆ–ಪಾಪಾತ್ಮನಿಗೆ, ಕೋಪಿಗೆ–ಭಕ್ತಮಾಹೇಶ್ವರರ ಮೇಲೆ ಸಿಟ್ಟುಮಾಡುವಾತಂಗೆ, ಭಕ್ತಿಯಾಗೆಂದಡಪ್ಪುದೆ?–ಶಿವಾದ್ವೈತಭಕ್ತಿ ಅಳವಟ್ಟಿತ್ತೆ? ಅಳವಡದು, ನಾಯಿಗೆ ನಾರಿವಾಣವಕ್ಕುದೆ?–ಶುನಿಗೇನಾದರೂ ಅಂಬಲಿ ಗಂಜಿಯನ್ನು ಹೊಯ್ಯಬೇಕಾದರೆ ಮರದ ಡೋಣಿ ಮಣ್ಣಪಿನ್ನೆ ನೆಲವನ್ನು ತಗ್ಗ ತೋಡಿ ಹೊಯ್ಯಬೇಕಲ್ಲದೆ ಒಳ್ಳೇ ಮುಖ ಕಾಣಬರುವಂಥ ಹರಿವಾಣದಲ್ಲಿ ಹಾಲಬೋನವನ್ನು ಕಲಸಿಹಾಕಿದರೆ ಸ್ವಸ್ಥಿರವಾಗಿ ಸುಯಿದಾನದಿಂದ ತಿನಲೊಲ್ಲದೆ ತಿನ್ನುವಷ್ಟು ತಿಂದು ಚೆಲ್ಲುವಷ್ಟು ಚೆಲ್ಲಿ ಕಚ್ಚಿಕೊಂಡು ಹೋಗಿ ಬೇಲಿಸಾಲಿನಲ್ಲಿ ಬಿಟ್ಟು ಬಿಡುತ್ತಿಹುದು ಹಾಂಗೆ.

● ನಾಯಿಗೆ–ಪಂಚೇಂದ್ರಿಯಂಗಳೊಡನೆ ಕೂಡಿ ಚರಿಸುವಂಥ ಜೀವನೆಂಬ ಶುನಿಗೆ, ನಾರಿವಾಣವಕ್ಕುದೆ?–ಪಂಚಾಚಾರವಿಡಿದಾಚರಿಸಿ ಪರಶಿವಲಿಂಗದಲ್ಲಿ ಕೂಡುವಂಥ ಕ್ರಿಯಾಸಾವಧಾನ ಅಳವಟ್ಟಿತ್ತೆ? ಅಳವಡದು. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ. ನಿಮ್ಮ–ಗುರುಮುಖದಿಂದ ಬಂದ ಇಷ್ಟಮಹಾಲಿಂಗವನ್ನು, ನಂಬಿಯೂ–ಈ ಲಿಂಗವೇ ಪ್ರಾಣ ಈ ಲಿಂಗಕ್ಕೆ ನಾನೇ ಚಿದಂಗಸ್ವರೂಪನು, ಈ ಲಿಂಗವಲ್ಲದೆ ಅನ್ಯದೈವಂಗಳ ಭಜನೆಯ ಮಾಡಬಾರದೆಂದು ವಿಶ್ವಾಸಿಸಿ, ನಂಬದ–ಆ ಲಿಂಗಕ್ಕೆ ಪ್ರಾಣಕಳಾಚೈತನ್ಯಸ್ವರೂಪರಾದ ಜಂಗಮಮೂರ್ತಿಗಳನು ಇವರೇ ಸಾಕ್ಷಾತ್ಶಿವಸ್ವರೂಪಿಗಳೆಂದು ವಿಶ್ವಾಸಿಸದ, ಡಂಬಕರಿಗೆ–ಹಿರೇತನದ ಬೂಟಕತ್ವವನುಳ್ಳ ಜೀವರುಗಳಿಗೆ ಶಿವಾದ್ವೈತಭಕ್ತಿ ದೊರಕೊಂಡಿತ್ತೆ? ದೊರೆಕೊಳ್ಳದು.

II– –

1–1 ಳ (ಚ, ಜ), 2–2 ಕಂ (ಚ, ಜ)

....

ಪಾಪಿಗೆ ಕೋಪಿಗೆ ಭಕ್ತಿಯಾಗೆಂದಡಪ್ಪುದೆ?–ದೋಷಕಾರಿಯಾದಾತ್ಮನಿಗೆ ಗುರುಭಕ್ತಿ ಲಿಂಗಪೂಜೆ ಜಂಗಮದಾಸೋಹ ಮಾಡೆಂದು ಬೋಧಿಸಿದರೆ ಆ ಬೋಧೆ ಅಳವಡದೆಂಬುದರ್ಥ. ನಾರಿವಾಳಕ್ಕುದೆ ನಾಯಿಗೆ?–ಚಿಚ್ಛಕ್ತಿಗಧಿಕಾರಿಯಾದ ಮುಕ್ತಿಫಳಾನಂದಸ್ವರೂಪವಾದ ವಸ್ತು ಇಂದ್ರಿಯಂಗಳ ವರ್ತನೆಯನುಳ್ಳ ಜೀವನೆಂಬ ಶುನಿಗೆ ಸಾಧ್ಯವಾಗದೆಂಬುದರ್ಥ. ಕೂಡಲಸಂಗಮದೇವಾ ನಿಮ್ಮ ನಂಬಿಯು ನಂಬದ ಡಂಬಕಂಗೆ–ಎಲೆ ಪರಶಿವಲಿಂಗವೆ ನಿಮ್ಮ ವಿಶ್ವಾಸಿಸಿಯೂ ವಿಶ್ವಾಸಿಸದ ಬೂಟಕನಿಗೆ ಮುಕ್ತಿಯಾಗದೆಂಬುದರ್ಥ.

೬೫೧

ಕೋಪಿ ಮಜ್ಜನಕ್ಕೆಱೆದಡ ರಕ್ತ[1]ಧಾರೆ! ಪಾಪಿ ಹೂವನೇಱೆಸಲು ಮಸೆ [2]ದಾ[2]ಯುಧ ಗಾಯ! ಕೂಪ[3]ರನಾರನೂ ಕಾಣೆನು ಮಾದರ ಚೆನ್ನಯ್ಯನಲ್ಲದೆ. ಕೂಪರನಾರ[3]ನೂ ಕಾಣೆನು ಡೋಹಾರ ಕಕ್ಕಯ್ಯನಲ್ಲದೆ. ವ್ಯಾ[4]ಪತ್ತಿ[4]ಯುಳ್ಳವ ನಮ್ಮ ಮಡಿವಾಳ ಮಾಚಯ್ಯ, ನಿನ್ನಾಪತ್ತಿಗರಿವರಯ್ಯ, ಕೂಡಲಸಂಗ[5]ಮದೇವಾ.[5]

I –

ಕೋಪಿ–ಭಕ್ತಮಾಹೇಶ್ವರರುಗಳ ಮೇಲೆ ಸಿಟ್ಟುಮಾಡುವಾತನು, ಮಜ್ಜನಕ್ಕೆಱೆದಡೆ–ಹತ್ತೆಂಟು ಕೊಡ ಉದಕವನ್ನು ಲಿಂಗಕ್ಕಭಿಷೇಕವ ನೀಡಿದರೆ, ರಕ್ತಧಾರೆ–ಲೋಕದಾತ್ಮರುಗಳ ಮೇಲೆ ರಕ್ತವನ್ನು ಚೆಲ್ಲಿದರೆ ಎಷ್ಟೊಂದು ಜಿಗುಪ್ಸೆವುಂಟಾಗುತ್ತಿಹುದೋ ಹಾಂಗೆ, ಶಿವನಿಗಷ್ಟೊಂದು ಜಿಗುಪ್ಸೆವುಂಟಾದ ಹಾಂಗಾಗಿ ಶಿವನು ಅವರ ಕೋಪಿಸಿ ಭವಕ್ಕೆ ಹಾಕಿಬಿಡುವನು. ಪಾಪಿ–ಪಾಪಾತ್ಮನು, ಹೂವನೇಱೆಸಲು–ಇಂಡೆದಂಡೆ ಕುಸುಮಂಗಳಿಂದಲಂಕರಿಸಲು, ಮಸೆದಾಯುಧ ಗಾಯ–ಲೋಕದಲ್ಲಿ ಯಾರಾದರೂ ಅಪರಾಧವ ಮಾಡಿದಂಥ ಆತ್ಮರುಗಳನ್ನು ರಾಜರುಗಳು ಹಿಡಿತರಿಸಿ ತಲೆಯ ಮೇಲೆ ಇಮ್ಮೈ

ಕೀಚಿದ ಆಯುಧವನಿಟ್ಟು ಕಡಿದರೆ ಎಷ್ಟೊಂದು ದುಃಖವುಂಟಾಗುತ್ತಿಹುದೋ ಹಾಂಗೆ ಶಿವಗಷ್ಟೊಂದು ದುಃಖವುಂಟಾದ ಹಾಂಗಾಗಿ ಶಿವನು ಅವರ ಕೋಪಿಸಿ ಭವಕ್ಕೆ ಹಾಕಿಬಿಡುತ್ತಿಹನು.

ಕೂಪರನಾರನು ಕಾಣೆನು–ಗುರುಭಕ್ತಿಯಲ್ಲಿ ಹಿತರಾಗಿ ತೆತ್ತಿಗರಾಗಿ ಆಪತ್ತಿಗರಾಗಿ [೧]ಸಹವ[೧]ಯವಾಗಿರುವಂಥವರುಗಳನ್ನು ಒರ್ವರನ್ನೂ ಕಂಡುದಿಲ್ಲವು, ಮಾದಾರ ಚೆನ್ನಯ್ಯನಲ್ಲದೆ–ಮಾದಾರ ಚೆನ್ನಯ್ಯನೆಂಬ ಶಿವಶರಣನಲ್ಲದೆ, ಕೂಪರನಾರನೂ ಕಾಣೆನು–ಗುರುಭಕ್ತಿಯಲ್ಲಿ ಹಿತರಾಗಿ ತೆತ್ತಿಗರಾಗಿ ಆಪತ್ತಿಗರಾಗಿ ಸಹವಯರಾಗಿರುವಂಥವರುಗಳನ್ನು ಒರ್ವರನೂ ಕಂಡುದಿಲ್ಲವು, ಡೋಹಾರ ಕಕ್ಕಯ್ಯನಲ್ಲದೆ–ಡೋಹಾರ ಕಕ್ಕಯ್ಯನೆಂಬ ಶಿವಶರಣನಲ್ಲದೆ.[೨] ವ್ಯಾಪ್ತಿಯುಳ್ಳವ–ವ್ಯಾಪಾರವುಂಟಾ[೩]ದವನು,[೩] ನಮ್ಮ ಮಡಿವಾಳಮಾಚಯ್ಯ–ನಮ್ಮ ಮಡಿವಾಳ ಮಾಚಯ್ಯನೆಂಬ ಶಿವಶರಣನು, ನಿನ್ನಾ ಪತ್ತಿಗರಿವರಯ್ಯ–ಗುರುಭಕ್ತಿಯಲ್ಲಿ ಹಿತರಾಗಿ ತೆತ್ತಿಗರಾಗಿ ಆಪತ್ತಿಗರಾಗಿ ಸಹವಯರಾಗಿರುವಂಥವರುಗಳು ಆರಾರೆಂದರೆ ಮಾದಾರ ಚೆನ್ನಯ್ಯ ಡೋಹಾರ ಕಕ್ಕಯ್ಯ ಮಡಿವಾಳ ಮಾಚಯ್ಯಗಳಯ್ಯ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

....

೧–೧ ಸಹಾಯ (ಕ), ೨+ ಕೂಪರನಾರನೂ ಕಾಣೆನು–ಗುರುಭಕ್ತಿಯಲ್ಲಿ ಹಿತರಾಗಿ ತೆತ್ತಿಗರಾಗಿ ಆಪತ್ತಿಗರಾಗಿ ಸಹವಯರಾಗಿ ಇರುವಂಥವರುಗಳು ಓರ್ವರನೂ ಕಂಡುದಿಲ್ಲವು (ಕ, ಗ), ೩–೩ ಗದವರನು (ಕ),

III –

ಕೂಪರಂ–ಸ್ನೇಹಿತರನು.

IV –

1+ದ (ತ), 2–2 ದಡ್ಡಾ (ತ), 3+ವ(ತ), 4–4 ಪ್ತಿ (ತ), 5–5 ಯ್ಯ (ತ).

....

ಪಾಪಕೋಪವಿಲ್ಲದವರು ಪುರಾತನರು, ಅದು ಕಾರಣ ಲಿಂಗಕ್ಕೆ ಸಂಗವಾದರು, ಕೋಪಿಪಾಪಿಗಳು ಮಜ್ಜನಕ್ಕೆಱೆದರೆ ರಕ್ತದ ಧಾರೆ, ಅಡ್ಡಾಯುಧ ಗಾಯವೆಂಬುದೀ ವಚನದರ್ಥ.

೬೫೨

ಸದಾಚಾರ ಸದ್ಭಕ್ತಿಯಿಲ್ಲದವರನೊಲ್ಲನಯ್ಯಾ; ಅವರಾರಾಧನೆ ದಂಡ! ನಿಚ್ಚ ನಿಚ್ಚ ಪ್ರಾಯಶ್ಚಿತ್ತರನೊಲ್ಲ ಕೂಡಲಸಂಗಮದೇವ ಭೂಭಾರಕರ!

I– –

ಸದಾಚಾರ–ಎಲ್ಲಾ ಭಕ್ತಮಾಹೇಶ್ವರರು ಅಹುದಹುದೆಂಬುವ ಹಾಂಗೆ ಆಚರಿಸುವಂಥದೇ ಸದಾಚಾರ, ಅದೇ ಸತ್ಕ್ರಿಯಾಚಾರವು, ಸದ್ಭಕ್ತಿಯಿಲ್ಲದವರಲೇಸಾದ ಶಿವಾದ್ವೈತ ಭಕ್ತಿವುಂಟಾಗಿಲ್ಲದವರನು, ಒಲ್ಲನಯ್ಯ–ಅವರಿಗೊಲಿದು ನಿಜಮೋಕ್ಷವನ್ನು ಕರುಣಿಸಿಕೊಡಲೊಲ್ಲನಯ್ಯಾ. ಅಪರಾರಾಧನೆ–

ಅವರು ಮಾಡುವಂಥ ಲಿಂಗಪೂಜೆ ಜಂಗಮಾರ್ಚನೆಯು ದಂಡ!–ದೊರೆಗೆ ದಂಡವ ತೆತ್ತೋಪಾದಿಯಲ್ಲ ಆಡಿದಕ್ಕೂ ಮಾಡಿದಕ್ಕೂ ಸಮಾನವಾಗಿರ್ಪುದು.

ನಿಚ್ಚ ನಿಚ್ಚ–ದಿನ ದಿನಂಪ್ರತಿಯಲ್ಲಿ, ಪ್ರಾಯಶ್ಚಿತ್ತರ–ಮಾಡಬಾರದ ಪಾಪಂಗಳನು ಮಾಡಲ್ಪಟ್ಟಂಥವರುಗಳ, ಭೂಭಾರಕರ–ಅನ್ನಕ್ಕೆ ಶತ್ರುವಾಗಿ ಭೂಮಿಗೆ ಹೊರೆಕಾರರಾಗಿರುವಂಥ ಜೀವರುಗಳ, ಕೂಡಲಸಂಗಮದೇವ–ಪರಶಿವಲಿಂಗವು, ಒಲ್ಲ–ಅವರಿಗೊಲಿದು ನಿಜಮೋಕ್ಷವನ್ನು ಕರುಣಿಸಿಕೊಡಲೊಲ್ಲನು.

IV –

ತಪ್ಪಿ ನಡೆದು ಮಾಡುವನ ಭಕ್ತಿ ತಪ್ಪಿಗೆ ಸರಿ, ಸತ್ಯವಾಗಿ ನಡೆದವನ ಭಕ್ತಿ ಮುಕ್ತಿಗೆ ಕಾರಣವೆಂಬುದೀ ವಚನದರ್ಥ.

೬೫೩

ನೂಱನೋದಿ ನೂಱ ಕೇಳಿದಡೇನು? ಆಸೆ ಹಱೆಯದು, ರೋಷಬಿಡದು. ಮಜ್ಜನಕ್ಕೆಱೆದು ಫಲವೇನು? ಮಾತಿನಂತೆ ಮನದಲಿಲ್ಲದ ಜಾತಿಡೊಂಬರ ನೋಡಿ ನಗುವ ನಮ್ಮ ಕೂಡಲಸಂಗಮದೇವ.

I –

ನೂಱನೋದಿ ನೂಱ ಕೇಳಿದಡೇನು: ನೂಱನೋದಿ–ಸಕಲ ವೇದಶಾಸ್ತ್ರಾಗಮ ಪುರಾಣಂಗಳನು ಪಠಿಸಿ, ನೂಱ ಕೇಳಿದಡೇನು?–ಆ ಓದಿದಂಥ ಶಾಸ್ತ್ರವನ್ನು ಶ್ರುತಿಗುರುಗಳ ಮುಖದಿಂದ ಸೂತ್ರಾರ್ಥ ಸ್ವರೂಪಾರ್ಥ ಸಂಬಂಧಾರ್ಥ ಪ್ರಣವಾರ್ಥ ಚಿತ್ರಾರ್ಥ ಭಾವಾರ್ಥಂಗಳನು ಬೆಸಗೊಂಡಾಲಿಸಿದರೇನು? ಆಸೆ–ಸಮಸ್ತವಸ್ತುಗಳಾಗಬೇಕೆಂಬಪೇಕ್ಷೆಯು, ಹಱೆಯದು–ನಷ್ಟವಾಗದು, ರೋಷ–ಸಿಟ್ಟು ಬಿಡದು–ಬಿಡುಗಡೆಯಾಗದು.

ಮಜ್ಜನಕ್ಕೇಱೆದು–ಹತ್ತೆಂಟು ಕೊಡ ಉದಕವನ್ನು ಲಿಂಗಕ್ಕಭಿಷೇಕವ ನೀಡಿ ಫಲವೇನು? ಪ್ರಯೋಜನವೇನು, ಮಾತಿನಂತೆ–ಹೇಳಿಕೊಂಡ ಹಾಂಗೆ, ಮನದಲಿಲ್ಲದ–ಅಂತರಂಗದಲ್ಲಿ ನಿಷ್ಠೆಯಿಲ್ಲದ, ಜಾತಿಡೊಂಬರ–ವಿದಾಂತರುಗಳಿಗೆ ಸಮಾನವಾದ ಜೀವರುಗಳನು, ನೋಡಿ–ʻನಿರೀಕ್ಷಣೆಯ ಮಾಡಿʼ, ನಮ್ಮ ಕೂಡಲಸಂಗಮದೇವ–ನಮ್ಮ ಪರಶಿವಲಿಂಗವು, ನಗುವ–ಗಹಗಹಿಸುತ್ತಿಹನು,

....

೧–೧ ಕಂಡು (ಗ)

೬೫೪

ತಂದೆ ಮಕ್ಕಳಿಗೆ ಬುದ್ಧಿಯ ಹೇಳುವಲ್ಲಿ ತಪ್ಪಿಂಗೆ ಮುನಿವನಲ್ಲದೆ ಪ್ರಾಣಕ್ಕೆ ಮುನಿಯ, ಲಿಂಗವಂತನು ಲಿಂಗವಂತರಿಗೆ ಬುದ್ಧಿಯ ಹೇಳುವಲ್ಲಿ ಅವಗುಣಕ್ಕೆ ಮುನಿವನಲ್ಲದೆ ಲಾಂಛನಕ್ಕೆ ಮುನಿಯ, ಲಿಂಗಭಕ್ತನು ಲಿಂಗಪಥವ ಹೇಳಿದಡೆ ಮಚ್ಚರಿಸುವರ ಮೆಚ್ಚ ʻನಮ್ಮʼ ಕೂಡಲಸಂಗಮದೇವ.

I- -

ತಂದೆ ಮಕ್ಕಳಿಗೆ ಬುದ್ಧಿಯ ಹೇಳವಲ್ಲಿ: ತಂದೆ–ಜನಕನು, ಮಕ್ಕಳಿಗೆ–ತನ್ನ ಹೊಟ್ಟೆಯಲಿ ಹುಟ್ಟಿದಂಥ ಪುತ್ರರುಗಳಿಗೆ, ಬುದ್ಧಿಯ ಹೇಳುವಲ್ಲಿ–ಬುದ್ಧಿಯ ಮಾತುಗಳ ಬೊಧಿಸುವಲ್ಲಿ, ತಪ್ಪಿಂಗೆ ಮುನಿವನಲ್ಲದೆ–ಕೋಲುತ್ಯೆದೇನಿ ಬಡಿವುತ್ಯೆದೇನಿ ಜಿಗಿವುತ್ಯೆದೇನಿಯೆಂದು ಅವರು ಮಾಡಿದಂಥ ಅಪರಾಧಕ್ಕೆ ಕೋಪಿಸುವನಲ್ಲದೆ, ಪ್ರಾಣಕ್ಕೆ ಮುನಿಯ–ಪ್ರಾಣವನ್ನು ಕೊಂದಾನೆ? ಕೊಲ್ಲನು.

ಲಿಂಗವಂತನು–ಶಿವಭಕ್ತನು, ಲಿಂಗವಂತರಿಗೆ–ತ್ರಿವಿಧಲಿಂಗಾರ್ಚಕರಾದ ಹರಭಕ್ತರಿಗೆ, ಬುದ್ಧಿಯ ಹೇಳುವಲ್ಲಿ–ಬುದ್ಧಿಯ ಮಾತುಗಳ ಬೋಧಿಸುವಲ್ಲಿ, ಅವಗುಣಕ್ಕೆ ಮುನಿವನಲ್ಲದೆ–ಅಜ್ಞಾನ ದುರ್ಗುಣಕ್ಕೆ ಕೋಪಿಸುವನಲ್ಲದೆ, ಲಾಂಛನಕ್ಕೆ–ಶಿವಲಾಂಛನಸ್ವರೂಪರಾದ ಜಂಗಮೂರ್ತಿಗಳಿಗೆ, ಮುನಿಯ–ಕೋಪಿಸನು.

ಲಿಂಗಭಕ್ತನು–ಶಿವಲಿಂಗಭಕ್ತನು, ಲಿಂಗಪಥವ ಹೇಳಿದಡೆ–ಲಿಂಗಾಚಾರಮಾರ್ಗವನ್ನು ಬೋಧಿಸಿದರೆ, ಮಚ್ಚರಿಸುವರ–ನಾವುಬಲ್ಲಷ್ಟು ಬಲ್ಲೆವು ನೀವೇನು ಹೇಳಬೇಕೆಂದು ಕೇಣಸರ ಮುಂದುಗೊಂಬವರ, ನಮ್ಮ ಕೂಡಲಸಂಗಮದೇವ–ನಮ್ಮ ಪರಶಿವಲಿಂಗವು, ಮೆಚ್ಚ–ಮಮಕರಿಸಿಕೊಂಡು ನಿಜಮೋಕ್ಷವನ್ನು ಕರುಣಿಸಿ ಕೊಟ್ಟಾನೆ? ಕೊಡಲರಿಯನು.

IV -

1–1 x (ತ)

....

ವಿದ್ಯಾಭ್ಯಾಸವ ಕಲಿಸುವವರು ವಿದ್ಯೆ ಬರಬೇಕೆಂದು ಬುದ್ಧಿಯ ಹೇಳುವ ಹಾಂಗೆ ಪರಮವಿದ್ಯಾನುಭಾವವ ಕಲಿಸೇವೆಂದು ಹೊಯ್ಯುವರು, ಬಯ್ಯುವರೆಂಬುದೀ ವಚನದರ್ಥ.

೬೫೫

ಗುರೂಪದೇಶ ಮಂತ್ರವೈದ್ಯ; ಜಂಗಮೋಪದೇಶ ಶಸ್ತ್ರವೈದ್ಯ ನೋಡಾ. ಭವರೋಗವ ಕಳೆವ ಪರಿಯ ನೋಡಾ. ಕೂಡಲಸಂಗನ ಶರಣರ ಅನುಭಾವ ಮಡಿವಾಳನ ಕಾಯಕದಂತೆ!

I -

ಗುರೂಪದೇಶ ಮಂತ್ರ ವೈದ್ಯ–ಹೊಟ್ಟೆಶೂಲೆ ಎದೆಶೂಲೆ ಬದಿಶೂಲೆ ಬೆನ್ನಶೂಲೆ ತಲೆಬೇನೆ ಕಣ್ಣಬೇನೆ ಕಪಾಳಬೇನೆ ಮೊದಲಾದವು ಕಾಡುತ್ತಿದ್ದಲ್ಲಿ ಮಂತ್ರವೈದ್ಯನ ಬಳಿಗೆ ಹೋಗಿ ಕೇಳಿಕೊಂಡಲ್ಲಿ ಆ ಮಂತ್ರ ವೈದ್ಯಗಾರನೇನಾದರೂ ಒಂದಿಷ್ಟು ಬೂದಿ ಮಂತ್ರಿಸಿಕೊಡುವನು. ಅದರಲ್ಲಿ ವಿಶ್ವಾಸವಿದ್ದರೆ ಆ ಕ್ಷಣಕ್ಕೆ ನಿಲ್ಲುವುದು. ಹಾಂಗೆ, ಶ್ರೀಗುರುನಾಥನು ದೀಕ್ಷಾತ್ರಯಂಗಳನ್ನು ಕರುಣಿಸಿಕೊಟ್ಟು ಗುರುಭಕ್ತಿ ಹೀಂಗೆ ಮಾಡಬೇಕು ಲಿಂಗಪೂಜೆ ಹೀಂಗೆ ಮಾಡಬೇಕು ಜಂಗಮದಾಸೋಹವ ಹೀಂಗೆ ಮಾಡಬೇಕೆಂದು ಬೋಧಿಸಿದ ಹಾಂಗೆ ಆಚರಿಸುತ್ತಿರ್ದ ಕಾರನ ಆ ಮಂತ್ರವೈದ್ಯಗಾರನ ಹಾಂಗೆ ನಿತ್ಯವಾದ ನಿಜಮೋಕ್ಷವೇ ದೊರಕೊಂಬುತ್ತಿಹುದು. ಜಂಗಮೋಪದೇಶ ಶಸ್ತ್ರವೈದ್ಯ ನೋಡಾ–ಬಾವು ಬಗದಾಳ ರಣಹುಣ್ಣುಗಳು ಮೊದಲಾದುವು ಬಂದು ಕಾಡುತ್ತಿದ್ದಲ್ಲಿ ಶಸ್ತ್ರವೈದ್ಯಗಾರನ

ತಾವಕ್ಕೆ ಹೋಗಿ ಹೇಳಿಕೊಂಡಲ್ಲಿ ಆ ಶಸ್ತ್ರವೈದ್ಯಗಾರನೇನಾದರೂ ಉಳಿಯಿಂದ ಪಾಳಿಸಿ ಒಳಗಿನ ಕೆಟ್ಟ ರಕ್ತ ಕೀವನ್ನು ತೆಗೆದು ಮೊಮ್ಮಾಯಿ ಮದ್ದನ್ನು ಹಚ್ಚಿದಲ್ಲಿ ಅದರಲ್ಲಿ ನಂಬಿಗೆಯಿದ್ದರೆ ಆ ಕ್ಷಣದಲ್ಲಿಯೇ ಒಳಿತಾಗುತ್ತಿಹುದು. ಹಾಂಗೆ ಜಂಗಮಮೂರ್ತಿಗಳ ಶಿವಾನುಭಾವವನ್ನು ಶ್ರೋತ್ರಮುಖದಲ್ಲಿ ಕೇಳಿ ಮನೋಮುಖದಲ್ಲಿ ಹಾರೈಸಿ ಹೃದಯಮುಖದಲ್ಲಿ [೨]ಇಂಬು[೨]ಮಾಡಿಕೊಂಡು ತಮ್ಮಾದಿಮಧ್ಯಾವಸಾನವನ್ನು ತಿಳಿದು ನಿತ್ಯಾನಿತ್ಯವಿವೇಕವನ್ನು ಅರಿದುಕೊಂಡಾಚರಿಸುತಿರ್ದ ಕಾರಣ ಜಂಗಮಮೂರ್ತಿಗಳ ಶಿವಾನುಭಾವವೆಂಬುದು ಆ ಶಸ್ತ್ರವೈದ್ಯಗಾರನ ಹಾಂಗೆ ನಿತ್ಯವಾದ ನಿಜಮೋಕ್ಷವೇ ಆಗುತ್ತಿಹುದು, ನೋಡಾ–ಕಂಡಾ.

ಭವರೋಗದ ಕಳೆವ ಪರಿಯ ನೋಡಾ; ಭವರೋಗವ–ಉತ್ಪತ್ಯದ ರುಜೆಯನ್ನು ಕಳೆವ–ನಷ್ಟವ ಮಾಡುವ, ಪರಿಯ ನೋಡಾ–ನಿಲುಕಡೆಯನ್ನು ಕಂಡಾ, ಕೂಡಲಸಂಗನ ಶರಣರ–ಜಂಗಮಮೂರ್ತಿಗಳ, ಅನುಭಾವ–ಶಿವಾನುಭಾವದ ಕೇಳಿಕೆಯು, ಮಡಿವಾಳನ ಕಾಯಕದಂತೆ–ಒಬ್ಬಾನೊಬ್ಬ ರಜಕನಾದಂಥವನು ಪ್ರಾತಃಕಾಲದಲ್ಲೆದ್ದು ಅವರು ನಮ್ಮ ಒಕ್ಕಲು ಇವರು ನಮ್ಮ ಒಕ್ಕಲೆಂದು ಮನೆ ಮನೆಗೆ ಹೋಗಿ ಮಡಿಯನ್ನು ಕೊಟ್ಟು ಮೈಲಿಗೆಯನ್ನು ಬಿಡಿಸಿಕೊಂಡು ತಂಗಳುಬೆಂಗಳು ಕೂಳನ್ನು ಹಾಕಿಸಿಕೊಂಡು ಮಲಿನಾಂಬರವನ್ನು [೩]ಗಂಟು[೩]ಕಟ್ಟಿ ಕತ್ತೆಯ ಮೇಲೆ ಹೇರಿಕೊಂಡು ಹಳ್ಳ ಹೊಳೆ ಕೆರೆ ಬಾವಿ ಕೊಳನ ತಡಿಗೆ ತೆಗೆದುಕೊಂಡು ಹೋಗಿ ಸವುಳು ಸಬಕಾರವ ಹಚ್ಚಿ ಉದಕದೊಳಗೆ ಗಲಬಿಲಿಸಿ ತೊಳೆದು ಬಿಸಿಲುಬ್ಬಿಗೆ ಹಾಕಿದಲ್ಲಿ ಒಂದಾನೊಂದು ಕಾಯಭಾಗದೋಪಾದಿಯಲ್ಲಿ ಬೆಳ್ಳಕ್ಕಿಯೋಪಾದಿಯಲ್ಲಿ ಮಲ್ಲಿಗೆಹೂವಿನೋಪಾದಿಯಲ್ಲಿ ಹೇಂಗೆ ಮಡಿಯ ಮಾಡಿಕೊಂಡು ಬರುತ್ತಿಹನೋ ಹಾಂಗೆ, ತ್ರಿವಿಧ ಲಿಂಗಾನುಭಾವಿಗಳಾದ ಜ್ಞಾನಗುರುಮೂರ್ತಿಗಳ ಶಿವಾನುಭಾವದ ಕೇಳಿಕೆಯಿಂದ ಅವರಂಗತತ್ತ್ವಂಗಳೆಲ್ಲ ನಷ್ಟವಾಗಿ ಹೋಗಿ ಲಿಂಗತತ್ತ್ವಂಗಳಾಗಿ ಅಳವಡುತಿರ್ದ ಕಾರಣ ಮಡಿವಾಳನ ಕಾಯಕದ ಇರಸ್ಥಿತಿಯೂ ಜಂಗಮಮೂರ್ತಿಗಳ ಶಿವಾನುಭಾವದ ಕೇಳಿಕೆಯ ಇರಸ್ಥಿತಿಯೂ ಒಂದೇಯಾಗಿರ್ಪುದು.

....

೧–೧ ಮಂತ್ರಂ (ಕ), ೨–೨ ಅಂಗವ (ಗ), ೩–೩ ಕಟ್ಟ (ಕ)

IV –

ಪರಮಬೋಧೆಯ ಹೇಳುವ ಗುರೂಪದೇಶದಿಂದ ಜಂಗಮ ಉಪದೇಶ ಶಬ್ದವ ಮೀಱಿದುದಾಗಿ, ಈ ಉಭಯ ಉಪದೇಶದಿಂದ ಭಾವವ ಮೀಱಿ ಅಖಂಡವಾದ ಬೆಳಗಾಯಿತ್ತೆಂಬುದೀ ವಚನದರ್ಥ.

೬೫೬

ಕೇಳಿರೇ, ಕೇಳಿರೇ, ಹಿರಿಯರು ಗುರುವಿನುಪದೇಶವನು. ಒಂದು ಗೀಜಗನ ಉಪದೇಶದಿಂದ ಪೌಲಸ್ತ್ಯನಂದು ಹಡೆಯನೆ ದಶಶಿರನ? ಶಿರವ ಪಱಿದಿಕ್ಕಿ ಪರಮನಿದ್ದೆಡೆಯ ಕಾಣದೇನಿಳೆಯಲ್ಲಿ? ಕರುಳ ತಂ[೧]ತ್ರಿ[೧]ಯ ಉಪದೇಶದಿಂದ ಅಸುರನಂದು ಹಡೆಯನೆ ಸುರಪದವ? ತರುಣೆ ಹರಿಣಿಯ ಉಪದೇಶದಿಂದ ಗತಿಪಥಮುಕ್ತಿಯ ಹಡೆದು ಬಟ್ಟೆಯ ಹತ್ತನೆ ವಿನಾಶಕ್ತಿರಾಯನು? ರಂಭೆಯ

ಉಪದೇಶದಿಂದ ಶಂಭುವಿನೋಲಗದಲ್ಲಿ ಕುಳ್ಳಿರನೆ ಶ್ವೇತನು? ನಮ್ಮ ಕೂಡಲಸಂಗನ ಶರಣರ ಉಪದೇಶವ ಕೇಳಿದವರಿಗೆ ದುರಿತ ಪಾಪಂಗಳು ಬಿಟ್ಟು ಹೋಗಿ, ಮನನಿರತರಾಗಿಪ್ಪರು ಲಿಂಗದಲ್ಲಿ.

I– –

ಹಿರಿಯರ–ಜ್ಞಾನಿಗಳು, ಗುರುವಿನುಪದೇಶವನು–ಶ್ರೀಗುರುನಾಥನ ಬೋಧೆನಯನ್ನು, ಕೇಳಿರೇ ಕೇಳಿರೇ–ಆಲಿಸಿರೇ, ಆಲಿಸಿರೇ ಒಂದು ಗೀಜಗನ ಉಪದೇಶದಿಂದ–ಒಂದು ಹೆಣ್ಣು ಗೀಜಗನ ಹಕ್ಕಿಯ ಬೋಧೆಯಿಂದ, ಪೌಲಸ್ತ್ಯ–ಪೌಲಸ್ತ್ಯಬ್ರಹ್ಮನು, ಅಂದು–ಆಗ, ಹಡೆಯನೆ ದಶಶಿರನ?–ಹತ್ತು ತಲೆಯನುಳ್ಳ ರಾವಣಾಸುರನ ಹಡೆದುಕೊಳ್ಳನೆ? ಹಡೆದುಕೊಂಡನು. ಶಿರವ ಪಜೆದಿಕ್ಕಿ–ಹತ್ತು ತಲೆಯೊಳಗೊಂದು ತಲೆಯನ್ನು ತೆಗದು ಬುರುಡಿಯ ಮಾಡಿ ಇಪ್ಪತ್ತು ತೋಳಿನೊಳಗೊಂದು ತೋಳನ್ನು ತೆಗೆದು ಕೈರವ ಮಾಡಿ ಬೆರಳು ತೆಗೆದು ಬಿರಡಿಯ ಮಾಡಿ ನರವ ತೆಗೆದು ತಂತಿಯ ಮಾಡಿ ರಾವಣ ಹಸ್ತವೆಂದು ನುಡಿಸಿ, ಪರಮನಿದ್ದೆಡೆಯ ಕಾಣದೇ ಪರಮೇಶ್ವರನಿದ್ದಂಥ ಸ್ಥಾನವನ್ನು ಕಂಡುದಿಲ್ಲವೆ? ಕಂಡನು, ಇಳೆಯಲ್ಲಿ–ಪಾತಾಳಲೋಕದಲ್ಲಿ.

ಕರುಳ ತಂತಿಯ ಉಪದೇಶದಿಂದ–ಕಪಿಮಾಂಸದ ಬೋಧೆಯಿಂದ, ಅಸುರ–ರಾಕ್ಷಸನು, ಅಂದು–ಆಗ, ಹಡೆಯನೆ ಸುರಪದವ?–ಕಾಮಧೇನು ಕಲ್ಪವೃಕ್ಷ ಚಿಂತಾಮಣಿ ಪರುಷದ ಖಣಿ ಪೀಯೂಷ ಮೊದಲಾದವನ್ನು ಹಡೆದುಕೊಳ್ಳನೆ? ಹಡೆದುಕೊಂಡನು, ತರುಣಿ ಹರಣಿಯ ಉಪದೇಶದಿಂದ–ಒಂದು ಹೆಣ್ಣೆರಳೆಯ ಬೋಧೆಯಿಂದ, ಗತಿಪಥಮುಕ್ತಿಯ ಹಡೆದು ಬಟ್ಟೆಯ ಹತ್ತನೆ ವಿನಾಶಕ್ತಿಯನು?–ಹೇಳಿದ್ದೇ ಕೇಳುವಂಥದೇ ಜ್ಞಾನ, ಕೇಳಿದಹಾಂಗೆ ಮಾಡುವಂಥದೇ ಕ್ರಿಯೆ. ಈ ಜ್ಞಾನಕ್ರಿಯವಿಡಿದಾಚರಿಸಿ, ಮುಕ್ತಿಯ ಪಡೆದು–ಮೋಕ್ಷವನ್ನು ಹಡೆದುಕೊಂಡು, ಬಟ್ಟೆಯ ಹತ್ತನೇ–ಮೋಕ್ಷಮಾರ್ಗಕ್ಕೆ ಆರೋಹಣವಾಗನೇ, ವಿನಾಶಕ್ತಿರಾಯನು–ವಿನಾಶಕ್ತಿದಾಯನೆಂಬ ದೊರೆಯು.

ರಂಭೆಯ ಉಪದೇಶದಿಂದ–ಊರ್ವಶಿ ರಂಭೆಯ ಬೋಧೆಯಿಂದ, ಶ್ವೇತನು–ವಿಟಶ್ವೇತನು, ಶಂಭುವಿನ–ಸುಖೋತ್ಪತ್ಯಕ್ಕೆ ಜನಕನಾದ ಪರಶಿವಲಿಂಗದ, ಓಲಗದಲ್ಲಿ–ಒಡ್ಡೋಲಗದಲ್ಲಿ ಕುಳ್ಳಿರನೆ?–ಕುಳಿತುಕೊಂಡನು. ನಮ್ಮ ಕೂಡಲಸಂಗನ ಶರಣರ–ನಮ್ಮ ಜಂಗಮಮೂರ್ತಿಗಳ, ಉಪದೇಶವ–ಶಿವಾನುಭಾವದ ಬೋಧೆಯನ್ನು, ಕೇಳಿದವರಿಗೆ–ಆಲಿಸಿದವರಿಗೆ, ದುರಿತ–ಅಷ್ಟೋತ್ತರ ಶತವ್ಯಾಧಿಗಳು, ದೋಷ–ಪಾಪಂಗಳು, ಬಿಟ್ಟುಹೋಗಿ–ತೊಲಗಿ ಹೋಗಿ, ಲಿಂಗದಲ್ಲಿ–ಇಷ್ಟಮಹಾಲಿಂಗದಲ್ಲಿ, ಮನ–ಚಿತ್ತವು, ನಿರತರಾಗಿಪ್ಪರು–ನಿಷ್ಠೆಯುಳ್ಳವರಾಗಿ ಲಿಂಗದಲ್ಲಿ ಕೂಡಿಪ್ಪರು.

III –

1–1 ತ್ರಿ (ಟ, ಡ)

ಅಸುರಂ–ರಾವಳಾಸುರನು, ಕರುಳತಂತ್ರಿಯ–ಕಪಿಯ ಮಾಂಸದ ತಂತಿಯ, ಉಪದೇಶದಿಂದ–ಗಾನದ ಅನುಗ್ರಹದಿಂದ, ಇಳೆಯಲ್ಲಿ–ಜಗತ್ತಿನಲ್ಲಿ, ಪರಮನಿದ್ದೆಡೆಯ ಕಾಣದೆ–ಪಶಿವನಿರುತಿರ್ದ ಸ್ಥಾನವನು ತಿಳಿಯದೆ, ತರುಣಿ ಹರಿಣಿಯ–ಹೆಣ್ಣೆರಳೆಯ, ಉಪದೇಶದಿಂದ, ನಿನ್ನ ಶರೀರವನು ಮಕರ ಮೀನಿಗೆ ಆಹಾರವ ಮಾಡಿದುದರಿಂದ ನಿನಗೆ ಗತಿಯಾಗುವದೆಂದು ಹೇಳಿದುದ ಕೇಳಿ ವಿನಾಶಕ್ತಿರಾಯನು ಗತಿಪಥವ ಪಡೆದನೆಂಬುದಭಿಪ್ರಾಯಂ.

....

೧-೧ ದ್ರಿ, (ಟ, ಡ)

೬೫೭

ಶಿವಚಿಂತೆ ಶಿವಜ್ಞಾನ ಭ್ರಮೆ ತಿಳಿದವಂಗಲ್ಲದೆ ಆಚಾರ ಶಿವಾಚಾರ ತಮತಮಗೆ ಸೂಣಿ³ಯೆ? ಕೂಡಲಸಂಗಮದೇವ[1]ರ[1]ನೆಜಿ³ ಪೂಜಿಸಿದವಂಗಲ್ಲದೆ.

I -

ಶಿವಚಿಂತೆ-ಇಷ್ಟಲಿಂಗಸಂಬಂಧವಾದ ಸತ್ಕ್ರಿಯಾಚಾರವು, ಶಿವಜ್ಞಾನ-ಪ್ರಾಣಲಿಂಗಸಂಬಂಧವಾದ ಸುಜ್ಞಾನವು, ಭ್ರಮೆ ತಿಳಿದಂಗಲ್ಲದೆ-ಅಂಗಪ್ರಾಣಂಗಳಲ್ಲಿ ಇಷ್ಟಪ್ರಾಣಲಿಂಗಸಂಬಂಧವ ಮಾಡಿಕೊಂಡು ಅವಿರಳ ಜ್ಞಾನಕ್ರಿಯೆವಿಡಿದಾಚರಿಸುವಂಥ, ಭ್ರಮೆ-ಭ್ರಾಂತು, ತಿಳಿದವಂಗಲ್ಲದೆ-ಅರಿದವಂಗಲ್ಲದೆ, ಆಚಾರ-ಇಷ್ಟಲಿಂಗಸಂಬಂಧವಾದ ಸತ್ಕ್ರಿಯಾಚಾರವು, ಶಿವಾಚಾರ-ಪ್ರಾಣಲಿಂಗಸಂಬಂಧವಾದ ಸುಜ್ಞಾನವು, ಕೂಡಲಸಂಗಮದೇವರ-ಇಷ್ಟಮಹಾಲಿಂಗವನ್ನು ನೆಜೆ_ಚೆನ್ನಾಗಿ, ಪೂಜಿಸಿದವಂಗಲ್ಲದೆ-ಆರಾಧಿಸಿದಾಂತಗಲ್ಲದೆ, ತಮತಗೆ-ತಮ್ಮ ತಮ್ಮ ಅರುಹಿಗೆ ತಕ್ಕಹಾಂಗೆ, ಸೂಣಿ³ಯೆ-ಏನು ಬಿದ್ದುಹೋಗುತ್ತೈದಾವೆ? ಇಲ್ಲವು.

II -

ಶಿವಚಿಂತೆ-ಶಿವನಿಗೆ ಪೂರ್ವಾಸುರರ ಭೀತಿ ಉಂಟು. ಅದನು ಜಯಿಸಿ ಸರ್ವೋತ್ಕರ್ಷವಾಗಲೆಂಬ ಶಿವಧ್ಯಾನವು, ಶಿವಜ್ಞಾನ-ಪೂರ್ವಾಚಾರ್ಯರಾಚರಣೆಯನರಿದು ವಿಚಾರಿಸುವಂಥ ಬ್ರಹ್ಮಜ್ಞಾನವು, ಭ್ರಮೆ ತಿಳಿದುವಂಗಲ್ಲದೆ-ಅನುಮಾನವೆಲ್ಲವು ನಷ್ಟವಾಗಿ ಹೋದ ಸುಜ್ಞಾನಿಗೆ ಅಂಗವಾಗಿರ್ಪವಲ್ಲದೆ ಉಳಿದ ಸಂದೇಹಿಗಳಿಗಳವಡದು ಮುಂದಕ್ಕೆ ಕಾಣಬಂದರ್ಥ.

IV -

1-1 ನ (ತ)

....

ಅಜ್ಞಾನವೆಂಬ ಕತ್ತಲೆಯ ಹರಿದಲ್ಲದೆ, ಪರಮಚಿಂತನೆ ನೆಲೆಗೊಳ್ಳದು ಲಿಂಗವ ಪೂಜಿಸಿದ ಫಲದಿಂದಲ್ಲದೆ ಪರಮಜ್ಞಾನವಾಗದೆಂಬುದೀ ವಚನದರ್ಥ.

೬೫೮

ಶ್ವಪಚನಾದಡೇನು? ಲಿಂಗಭಕ್ತನೇ ಕುಲಜನು, ನಂಬಿಯೂ ನಂಬದಿದ್ದಡೆ ಸಂದೇಹಿ ನೋಡಾ, ಕಟ್ಟಿದಡೇನು [1]ಬಿಟ್ಟ[1]ಡೇನು ಪೂಜಿಸಿದಡೇನು ಮನಮುಟ್ಟದನ್ನಕ್ಕ? ಭಾವಶುದ್ಧವಿಲ್ಲದವಂಗೆ ಭಕ್ತಿ ನೆಲೆಗೊಳ್ಳದು; ಕೂಡಲಸಂಗ[2]ಮದೇವಾ ನೀ[2]ನೊಲಿ[3]ದವಂ[3]ಗಲ್ಲದೆ.

I -

ಶ್ವಪಚನಾದಡೇನು?-ಊರಿಂದ ಹೊರಗಡೆ ಕೇರಿಯಲ್ಲಿ ಮನೆಯ ಕಟ್ಟಿಕೊಂಡಿರುವಂಥ ಹಿರೇಕುಲ ಭಕ್ತನಾದರೇನು? ಲಿಂಗಭಕ್ತನೇ-ಜ್ಞಾನೋದಯದಿಂದ ಗುರುಕಾರುಣ್ಯಮಂ ಪಡೆದು ಅಂಗದ ಮೇಲೆ ಲಿಂಗಸಂಬಂಧವ ಮಾಡಿಕೊಂಡು ಲಿಂಗಪೂಜೆಯ ಮಾಡುವಂಥ ಶಿವಭಕ್ತನೇ, ಕುಲಜನಂ-ಅವನೇ ಕುಲಶ್ರೇಷ್ಠನು, ನಂಬಿಯೂ-ಈ ಲಿಂಗವೇ ಪ್ರಾಣ ಈ ಲಿಂಗಕ್ಕೆ ನಾನೇ ಚಿದಂಗಸ್ವರೂಪನು ಈ ಲಿಂಗವಲ್ಲದನ್ಯದೈವಂಗಳ ಭಜನೆಯ ಮಾಡಬಾರದೆಂದು ವಿಶ್ವಾಸಿ, ನಂಬದಿದ್ದಡೆ-ಆ ಲಿಂಗಕ್ಕೆ ಪ್ರಾಣಕಳಾಚೈತನ್ಯರೂಪವಾದ ಜಂಗಮಮೂರ್ತಿಗಳೇ೧ ಸಾಕ್ಷಾತ್ಶಿವಸ್ವರೂಪಿಗಳೆಂದು ವಿಶ್ವಾಸಿಸಬೇಕು. ವಿಶ್ವಾಸಿಸದಿದ್ದರೆ, ಸಂದೇಹಿ ನೋಡಾ-ಆತನೇ ಸಂಕಲ್ಪಭಾವವುಳ್ಳಾತನು ಕಂಡಾ, ಕಟ್ಟಿದಡೇನು-ಆ ಲಿಂಗವನ್ನು ಸಚ್ಚೆ ಶಿವದಾರ ವಸ್ತ್ರಂಗಳಲ್ಲಿ ಧರಿಸಿಕೊಂಡಡೇನು. ಬಿಟ್ಟಡೇನು-ಆ ಲಿಂಗವನ್ನು ಹರಿದುಹಾಕಿದರೇನು, ಪೂಜಿಸಿದಡೇನು-ಆ ಲಿಂಗವನ್ನು ಮುಟ್ಟಿಮುಟ್ಟಿ ಆರಾಧಿಸಿದರೇನು? ಮನಮುಟ್ಟದನ್ನಕ್ಕ-ಮನಸ್ಸು ಲಿಂಗದಲ್ಲಿ ಕೀಲೈಸಬೇಕು. ಕೀಲೈಸದಿರುವ ಪರಿಂತರವು, ಧರಿಸಿದಡೇನು-ಲಲಾಟ ಮೊದಲಾದ ನಾಲ್ವತ್ತೆಂಟು ಸ್ಥಾನಂಗಳಲ್ಲಿ ಧಾರಣವ ಮಾಡಿಕೊಂಡರೇನು. ಭಾವಶುದ್ಧವಿಲ್ಲದವಂಗೆ-ಮನನಿರ್ಮಲವಿಲ್ಲದವಂಗೆ, ಭಕ್ತಿ-ಶಿವಾದ್ವೈತಭಕ್ತಿಯು, ನೆಲೆಗೊಳ್ಳದು-ಇಂಬುಗೊಳ್ಳದು ಕೂಡಲಸಂಗದೇವಾ-ಎಲೇ ಪರಶಿವಲಿಂಗವೆ, ನೀನೊಲಿದವಂಗಲ್ಲದೆ-ನೀ ಕೃಪೆಯಾದವಂಗಲ್ಲದೆ.

....

೧+ಇವರೇ (ಕ, ಗ)

IV- -

1-1 ಮುಟಿಪ (ತ), 2-2 ಯ್ಯ (ತ), 3-3 ದಂ (ತ)

....

ಭಾವವು ಬ್ರಹ್ಮದಲ್ಲಿ ನಿಂದಾತನೆ ಕುಲಜನು. ಇಂತಲ್ಲದವನೆ ಕೀಳುಜಾತಿ, ಆ ಭಾವವಳಿಯದೆ ಇಷ್ಟಲಿಂಗವ ಪೂಜಿಸಿದರೆ ಭಕ್ತಿನೆಲೆಗೊಳ್ಳದೆಂಬುದೀ ವಚನದರ್ಥ.

೬೫೯

ಅವರ ನಡೆವೊಂದು ನುಡಿವೊಂದಾದಡೆ ಶಿವಾಚಾರಕ್ಕವರು ಸಲ್ಲರಯ್ಯಾ! ಬಲ್ಲನು, ಸಾತ್ವಿಕರಲ್ಲದವರನೊಲ್ಲನು. ಶಿವಾಚಾರವ ಬಲ್ಲನು, ಅಲ್ಲಿ ನಿಲ್ಲನು. ಪ್ರಪಂಚಿಯ ಮನವನೊಲ್ಲನು, ಕೂಡಲಸಂಗಮದೇವ.

I -

ಅವರ ನಡೆವೊಂದು ನುಡಿವೊಂದಾದಡೆ: ಅವರ-ಅಂತಪ್ಪ ಆಶಾಲಾಂಛನಿ ಉಪಾಧಿಕರುಗಳ, ನಡೆವೊಂದು-ಕೆಟ್ಟು, ಸಕಲಸಂಸಾರ ಪ್ರಪಂಚದೊಡನೆ ಕೂಡಿ ಚರಿಸುವಂಥ ನಡಾವಳಿಯು ಬೇರಾಗಿರ್ಪುದು ನುಡಿವೊಂದಾದಡೆ-ನಾವು ಜ್ಞಾನಿಗಳು ಶಿವಸ್ವರೂಪಿಗಳು ಪರಬ್ರಹ್ಮಸ್ವರೂಪಿಗಳೆಂದು ಹೇಳಿಕೊಂಬುವಂಥ ನುಡಿಬೇರಾದರೆ, ಶಿವಚಾರಕ್ಕೆ-ಲಿಂಗಾಚಾರಮಾರ್ಗಕ್ಕೆ. ಅವರು-ಅಂತಪ್ಪ ಆಶಾಲಾಂಛನಿ ಉಪಾಧಿಕರುಗಳು, ಸಲ್ಲರಯ್ಯ-ಸಲುವಳಿಯಾಗರಯ್ಯ. ಬಲ್ಲನು-ಅವರಂತರಂಗದ

ಸ್ಥಿತಿಗತಿಯನ್ನು ಅರಿದು ಬಲ್ಲನು. ಸಾತ್ವಿಕರಲ್ಲದವರ–ಅಷ್ಟಸಾತ್ವಿಕ ಮುಂದುಗೊಂಡು ಲಿಂಗಪೂಜೆಯ ಮಾಡದವರ, ಒಲ್ಲನು–ಅವರಿಗೊಲಿದು ನಿಜಮೋಕ್ಷವನ್ನು ಕರುಣಿಸಿಕೊಡಲೊಲ್ಲನು.

ಶಿವಾಚಾರವ–ಇವರು ಒಂಚಾರವಿಡಿದಾಚರಿಸುತ್ತೈದಾದರೆ ಇವರು ಪಂಚಾಚಾರಕ್ಕೆ ತಪ್ಪಿ ಪಂಚಮಹಾಪಾತಕದೊಡನೆ ಕೂಡಿ ಚರಸುತ್ತೈದಾರೆಂಬುವಂಥದು. ಬಲ್ಲನು–ಅರಿದು ಬಲ್ಲನು, ಅಲ್ಲಿ ನಿಲ್ಲನು–ಅವರಂಗದಲ್ಲಿ ಚಿತ್ಕಲಾಲಿಂಗವಾಗಿ ನೆಲೆಗೊಳಲೊಲ್ಲನು. ಪ್ರಪಂಚಿಯ–ತನುಪ್ರಪಂಚು ಮನವಪ್ರಪಂಚು ಆತ್ಮನ ಇಂದ್ರಿಯ ವಿಷಯಪ್ರಪಂಚೇಂಬ ಪ್ರಪಂಚಿನೊಳಗೆ ಕೂಡಿ ಚರಿಸರುವಂಥ, ಮನವನೊಲ್ಲನು–ಅವರ ಮನಸ್ಸಿನಲ್ಲಿ ಪ್ರಾಣಲಿಂಗವಾಗಿ ನೆಲೆಗೊಂಡು ನಿಜಮೋಕ್ಷವನ್ನು ಕರುಣಿಸಿಕೊಡಲೊಲ್ಲನು, ಕೂಡಲಸಂಗಮದೇವ–ಪರಶಿವಲಿಂಗವು.

೬೬೦

ನಿಧಾನವನರಸಿಹೆನೆಂದು ಹೋದಡೆ ವಿಘ್ನಬಪ್ಪುದು ಮಾಂಬುದೆ? ಸದಾಶಿವನೆಂದಡೆ ಬೆದಱಿಟ್ಟಿ ಸುಡುವುದು ಮಾಂಬುದೆ? ಹದುಳಿಗನಾಗಿ ಉಳಿದಡೆ ಪದವಿಯನೀವ ಕಾಣಾ, ಕೂಡಲಸಂಗಮದೇವ.

I –

ನಿಧಾನವನಱಸಿಹೆನೆಂದು ಹೋದಡೆ: ನಿಧಾನವ–ನಿಕ್ಷೇಪ ದ್ರವ್ಯವನ್ನು, ಅಱಸಿಹೆನೆಂದು–ಹುಡುಕಬೇಕೆಂದು, ಹೋದಡೆ–ಎಯ್ದು ಹೋದರೆ, ವಿಘ್ನಬಪ್ಪುದು–ಕಂಟಕ ಬರುವಂಥದು, ಮಾಂಬುದೆ?–ಬಿಟ್ಟೀತೆ ಬಿಡದು. ಸದಾಶಿವನೆಂದಡೆ–ಅನವರತ ಮಾಂಗಲ್ಯಸ್ವರೂಪವಾದ ಪರಶಿವಲಿಂಗವೇ ಗುರುಮುಖದಿಂದಂಗದಲ್ಲಿ ಇಷ್ಟಲಿಂಗವಾಗಿ ಸಂಬಂಧವ ಮಾಡಿಕೊಂಡು ಲಿಂಗಪೂಜೆಯ ಮಾಡಿ ಲಿಂಗದ ಸ್ತೋತ್ರವ ಮಾಡಿದರೆ, ಬೆದಱಿಟ್ಟಿ–ಆಧಿವ್ಯಾಧಿ ವಿಪತ್ತುಳು ಬೆನ್ನುಬಿದ್ದು. ಸುಡುವುದು ಮಾಂಬುದೇ?–ದಹಿಸದೆ ಬಿಟ್ಟೀತೆ? ಬಿಡುದು. ಹದುಳಿಗನಾಗಿ–ಅದಕ್ಕೂ ಹೆದರಿಕೊಳ್ಳದೆ ಸದುಹೃದಯವುಳ್ಳಾತನಾಗಿ, ಉಳಿದಡೆ–ಲಿಂಗಪೂಜೆಯಲ್ಲಿ ಅವಶೇಷಿತವಾದರೆ, ಕೂಡಲಸಂಗಮದೇವ–ಪರಶಿವಲಿಂಗವು. ಪದವಿಯನೀವ ಕಾಣಾ–ತಾವೇನ ಬೇಡಿದ ಇಷ್ಟಾರ್ಥಸಿದ್ಧಿಯನ್ನು ಕುರುಣಿಸಿಕೊಂಡುತ್ತುಹನು ಕಂಡಾ.

IV –

ಪರಬ್ರಹ್ಮವ ಕೂಡೇನೆಂಬವಂಗೆ ದೇಹೇಂದ್ರಿಯಂಗಳು ಕಾಡುವವು. ದೇಹೇಂದ್ರಿಯಂಗಳು ನಿಂದರೆ ಲಿಂಗವು ಕೂಡಿಕೊಂಬನೆಂಬುದೀ ವಚನದರ್ಥ.

೬೬೧

ಅಡಿಗಡಿಗೆ ದೇವರಾಣೆ, ಅಡಿಗಡಿಗೆ ಭಕ್ತರಾಣೆ, ಅಡಿಗಡಿಗೆ ಗುರುವಿನಾಣೆ ಎಂಬ೧ ವಚನ೨ ಹೊಲ್ಲ! ಮುಂದೆ ೩ಶಿವ೩ಪಥಕ್ಕೆ ಸಲ್ಲರು. ಆದಿಯಿಂದ ಬಂದ ವಚನವೆಂದು ಶರಣರ ಕೂಡೆ ಸರಸವಾಡಿದಡೆ ೪ದ್ರೋಹ೪ ತಪ್ಪದು. ನಗುತಱಿದುಕೊಂಡಡೆ ಅಲಗು ನಡದಿಹುದೆ ಕೂಡಲಸಂಗಮದೇವಾ?

I –

ಅಡಿಗಡಿಗೆ_ಹೆಜ್ಜೆ ಹೆಜ್ಜೆಗೆ ವೇಳೆ ವೇಳೆಗೆ, ದೇವರಾಣೆ–ನಮ್ಮ ದೇವರ ಮೇಲಣ ಪ್ರತಿಜ್ಞೆಯು, ಅಡಿಗಡಿಗೆ–ಹೆಜ್ಜೆ ಹೆಜ್ಜೆಗೆ ವೇಳೆ ವೇಳೆಗೆ, ಭಕ್ತರಾಣೆ–ಭಕ್ತರ ಮೇಲಣ ಪ್ರತಿಜ್ಞೆಯು, ಅಡಿಗಡಿಗೆ ಹೆಜ್ಜೆ ಹೆಜ್ಜೆಗೆ ವೇಳೆ– ವೇಳೆಗೆ, ಗುರುವಿನಾಣೇ–ಗುರುವಿನ ಮೇಲಣ ಪ್ರತಿಜ್ಞೆಯು ಎಂಬ–ಹಿಂಗೆಂಬುವರ, ವಚನ–ವಾಕ್ಯವು, ಹೊಲ್ಲ–ಬಹು ಕ್ಷೀಣವು, ಮುಂದೆ ಶಿವಪಥಕ್ಕೆ ಸಲ್ಲರು ಮುಂದೆ–ದೇಹಾಂತ್ಯದಲ್ಲಿ, ಶಿವಪಥಕ್ಕೆ–ಲಿಂಗಚಾರಮಾರ್ಗಕ್ಕೆ, ಸಲ್ಲರು–ಯೋಗಯರಾಗರು.

ಆದಿಯಿಂದ ಬಂದ ವನಚವೆಂದು–ಅಡಿಗಡಿಗೆ ಗುರುವಿನಾಣೇ ಲಿಂಗದಾಣೆ ಜಂಗಮದಾಣೆಯೆಂದು ಆಣೆಯನ್ನು ಇಟ್ಟುಕೊಳ್ಳಬೇಡಿರಿಯೆಂದು ಹೇಳಿದಲ್ಲಿ, ಇದೇನು ನಮ್ಮ ತಲೆಯಲ್ಲೇ ಉಂಟಾಯಿತ್ತೆ? ಇಲ್ಲವು, ಮೊದಲು ಬಸವಾದಿ ಪ್ರಮಥಗಣಂಗಳು ಶಿವನ ಕೂಡೆ ನಿಮ್ಮಾಣೆ ನಿಮ್ಮ ರಾಣಿವಾಸದಾಣೆಯೆಂದು ಇಟ್ಟುಕೊಳ್ಳಲಿಲ್ಲವೆ? ಅದು ಕಾರಣ, ಆದಿಯಿಂದ ಬಂದ–ಮೊದಲು ಸಾಂಪ್ರದಾಯವಿಡಿದು ಬಂದ, ವಚನವೆಂದು–ವಾಕ್ಯವೆಂದು, ಶರಣರ ಕೂಡೆ–ಜಂಗಮಮೂರ್ತಿಗಳೊಂದಿಗೆ, ಸರಸಮಾಡಿದಡೆ–ಕೈ ಸರಸ.[**]ಮಾಡಿದರೆ, ದ್ರೋಹ–ಅಪರಾಧವು, ತಪ್ಪದು–ಓರೆಯಾಗದು.

ನಗುತಲಿಜೆದುಕೊಂಡಡೆ ಅಲಗು ನೆಡದಿಹುದೆ–ತಟ್ಟ್ಯಾಡುತ್ತ ಆಯುಧದಿಂದ ತಿವಿದುಕೊಂಡರೆ ದುಃಖವಾಗದೆ ಬಿಟ್ಟಿತೆ? ಬಿಡದು ಹಾಂಗೆ, ಅತ್ಯಂತ ಪೂಜ್ಯವಾದ ಜಂಗಮಮೂರ್ತಿಗಳೊಂದಿಗೆ ಕೈಸರಸ[* *]ವನಾಡಿ ಭವಕ್ಕೆ ಹೋಗುವಂಥವನ ಇರಸ್ಥಿತಿಯೂ ನಗುತ ಅಲಗಿನಿಂದಲಿರಿದುಕೊಂಡು ದುಃಖದಲ್ಲಿರುವಂಥವನ ಇರಸ್ಥಿತಿಯೂ ಒಂದೇಯಾಗಪ್ಪುದು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

IV –

1+ವರ (ತ), 2+ವೆ (ತ), 3–3 x (ತ), 4–4 x (ತ)

....

ಗುರುಲಿಂಗಜಂಗಮ ಭಕ್ತರಾಣೆಯನು ತಲೆಯ ಹೊಯ್ದರೆಯೂ ಇಡಲಾಗದು. ಮಹಾಪಥಕ್ಕೆ ಸಲ್ಲದು. ಶರಣರ ಕೂಡೆ ಸರಸವಾಡಿದರೆ ನಗುತಲಿಜೆದುಕೊಂಡ ಪರಿಯಂತೆಂಬುದೀ ವಚನದರ್ಥ.

೬೬೨

ಅರಗಿನ ಪುವುತ್ಥಳಿಯ ಉರಿಯ ನಾಲಿಗೆ[1]ಯ[1] ಹೊಯ್ದು [2]ಮಾತನಾಡಿಸುವ[2] ಸರಸ ಬೇಡ[3]ವೋ![3] ಬೆಣ್ಣೆಯ ಬೆನಕಂಗೆ ಕೆಂಡದುಂಡಲಿಗೆಯ ಮಾಡಿ ಚೆಲ್ಲವಾಡಿದಡೆ ಹಲ್ಲು ಹೋಹುದು ಮಾಂಬುದೆ ? ಕೂಡಲಸಂಗನ ಶರಣರೊಡನೆ ಸರಸವಾಡಿದಡೆ ಅದು ವಿರಸ ಕಾಣಿರಯ್ಯಾ!

I –

ಅರಗಿನ ಪುತ್ಥಳಿಯ–ಲಾಕ್ಷೆಯಿಂದ ಮಾಡಿದ ಬೊಂಬೆಯನು, ಉರಿಯ ನಾಲಿಗೆಯ ಹೊಯ್ದು–ಏಳು ನಾಲಿಗೆಯ ಚಾಚಿಕೊಂಡಿರುವಂಥ ಅಗ್ನಿಗೆ ಹಿಡಿದು, ಮಾತನಾಡಿಸುವ–

ಚೆನ್ನಾಗಿದ್ದಿಯಾ ಬೊಂಬೆ? ಎಂದು ಕೇಳುವ, ಸರಸ ಬೇಡವೋ ಅಥವಾ ಸರಸವಾಡಿದ್ದೇ ಉಂಟಾದರೆ ಕರಗಿ ಸುರಿದು ಹೋಗುವುದಲ್ಲದೆ ಮಾತನಾಡೀತೆ? ಆಡದು.

ಬೆಣ್ಣೆಯ ಬೆನಕಂಗೆ–ನವನೀತದಿಂ ಮಾಡಿದಂಥ ವಿನಾಯಕನಿಗೆ, ಕೆಂಡದುಂಡಲಿಗೆಯ ಮಾಡಿ–ಕೆಂಡದಲ್ಲಿ ಉಂಡಲಿಗೆ ಹುಗ್ಗಿಯನ್ನು ಮಾಡಿ, ಚೆಲ್ಲವಾಡಿದಡೆ–ಮೆಲ್ಲುಮೆಲ್ಲೆಂದು ಮೆಲ್ಲುವುದಕ್ಕೆ ಕೊಟ್ಟರೆ, ಹಲ್ಲು ಹೋಹುದು ಮಾಂಬುದೆ?–ರದನಂಗಳು ಉಚ್ಚಿಹೋಗದೆ ಇದ್ದಾವೆ? ಹೋಗುತ್ತಿಹವು.

ಕೂಡಲಸಂಗನ ಶರಣರೊಡನೆ–ಶಿವನ ಚಿತ್ಪ್ರಭಾಂಗಸ್ವರೂಪರಾದ ಜಂಗಮಮೂರ್ತಿಗಳೊಂದಿಗೆ, ಸರಸವಾಡಿದಡೆ–ಕೈಸರಸ [* *]ವನಾಡಿದರೆ, ಅದು ವಿರಸ ಕಾಣಿರಯ್ಯ–ಅದು ವಿರುದ್ಧವಾದ ಹಾಂಗಾಗಿ ಹಸ್ತಪಾದಗಳು ನೊಂದುಭಿನ್ನಭಿನ್ನವಾಗಿ ದುಃಖವಾಗುತ್ತಿಹುದು. ಹಾಂಗೆ ಅತ್ಯಂತ ಪೂಜ್ಯವಾದ ಜಂಕಮೂರ್ತಿಗಳೊಂದಿಗೆ ಕೈಸರಸ[* *]ವಾಡಿ ಭವಕ್ಕೆ ಹೋಗುವಂಥವನ ಇರಸ್ಥಿತಿಯೂ ಹಸ್ತಪಾದಂಗಳು ನೊಂದು ಲಿಂಗವು ಭಿನ್ನಭಿನ್ನವಾಗಿ ದುಃಖದಿಂದಿರುವಂಥವನ ಇರಸ್ಥಿತಿಯೂ ಒಂದೇಯಾಗಿರ್ಪುದು.

II –

1–1 x (ಚ, ಜ), 2–2 ಮಾತಾಡುವ (ಚ, ಜ), 3–3 ಕಾಣಿರೋ (ಚ, ಜ)

....

ಅರಗಿನ ಪುತ್ಥಳಿಯನುರಿಯ ನಾಲಗೆ ಹೊಯಿದು ಮಾತಾಡುವ ಸರಸ ಬೇಡ ಕಾಣಿರೋ!–ನಿರ್ಭಾವವೆಂಬ ಲಾಕ್ಷಾಸ್ವರೂಪವಾದ ಜ್ಞಾನಿಗಳನು ತಾಪತ್ರಯಾಗ್ನಿಯ ತಿಗ್ಮವೆಂಬ ರಸನೆಯ ಕಲ್ಪಿಸಿ ಪ್ರಸಂಗವ ಮಾಡುವ ಸ್ನೇಹವ ಮಾಣಿರೆಲೆ ಹಿರಿಯರುಗಳಿರಾ, ಬೆಣ್ಣೆಯ ಬೆನಕಂಗೆ ಕೆಂಡದುಂಡಲಿಗೆಯ ಮಾಡಿ ಚಲ್ಲವಾಡಿದಡೆ ಹಲ್ಲು ಹೋಹುದು–ಸದ್ವಿವೇಕಜ್ಞಾನಿಗಳಿಗೆ ಚಿಂತಾಗ್ನಿಪ್ರಸಂಗವನುಂಟುಮಾಡಿ ಹಾಸ್ಯವನಾಡಿದರೆ ಸತ್ಕರಣಂಗಳು ದುಃಷ್ಕರಣಂಗಳಾಗುವವೆಂಬುದರ್ಥ. ಮುಂದಕ್ಕೆ ಕಾಣಬಂದರ್ಥ.

೭೬೩

ಹಾವಿನ ಹೆಡೆ[1]ಯ ತೆಗೆದು[1]ಕೊಂಡು ಕೆನ್ನೆಯ ತುಱಿಸುವಂತೆ, ಉರಿವಕೊಳ್ಳಿಯ ಕೊಂಡು ಮಂಡೆಯ ಸಿಕ್ಕ ಬಿಡಿಸುವಂತೆ, ಹುಲಿಯ ಮೀಸೆಯ ಹಿಡಿದುಕೊಂಡು[2]ಲಿದುಯ್ಯಾಲೆಯ[2]ನಾಡುವಂತೆ, ಕೂಡಲಸಂಗನ ಶರಣರೊಡನೆ ಮಱೆದು ಸರಸವಾಡಿದಡೆ ಸುಣ್ಣ[3]ದ[3]ಕ[4]ಲ್ಲು[4] ಒಡಲಲ್ಲಿ ಕಟ್ಟಿಕೊಂಡು ಮಡುವ ಬಿದ್ದಂತೆ!

I –

ಹಾವಿನ ಹೆಡೆಯು ತೆಗೆದುಕೊಂಡು ಕೆನ್ನೆಯ ತುಱಿಸುವಂತೆ–ಕಪಾಳವನ್ನು ತುರಿಸಿಕೊಳಬೇಕಾದರೆ ಅಂಗೈ ಬೆರಳುಗುರುಗಳಿಂದ ತುರಿಸಿಕೊಳಬೇಕಲ್ಲದೆ ಸರ್ಪನ ಹೆಡೆ ಬಟುವಾಗೈತೆಂದು ಪಿಡಿದು ಕೆನ್ನೆಯ ತುರಿಸಿಕೊಂಬುವುದಕ್ಕೆ ಹೋದರೆ ಕಚ್ಚಿ ವಿಷವನುಗುಳಿ ಪ್ರಾಣವ ಕೊಲ್ಲದೆ ಬಿಟ್ಟಿತ್ತೆ ? ಕೊಲ್ಲುತ್ತಿಹುದು. ಹಾಂಗೆ, ಅತ್ಯಂತ ಪೂಜ್ಯವಾದ ಜಂಗಮಮೂರ್ತಿಗಳ ಕೂಡೆ ಕೈಸರಸ [* *]ವಾಡಿ ದೋಷ ದ್ರೋಹವನುಂಟು ಮಾಡಿಕೊಂಡು ಭವಕ್ಕೆ ಹೋಗುವಂಥವನ

ಇರಸ್ಥಿತಿಯೂ ಹಾವಿನ ಹೆಡೆಯು ಬಟುವಾಗೈತೆಂದು ಹಿಡಿದು ಕೆನ್ನೆಯ ತುರಿಸಿಕೊಂಬುವುದಕ್ಕೆ ಹೋದರೆ ಕಚ್ಚಿಸಿಕೊಂಡು ಸತ್ತಂಥವನ ಇರಸ್ಥಿತಿಯೂ ಒಂದೇಯಾಗಿರ್ಪುದು.

ಉರಿವ ಕೊಳ್ಳಿಯ ಕೊಂಡು ಮಂಡೆಯ ಸಿಕ್ಕ ಬಿಡಿಸುವಂತೆ-ಜಡೆಯ ಸಿಕ್ಕನ್ನು ಬಿಡಿಸಬೇಕಾದರೆ ಸಿಕ್ಕಣಿಗೆ ಸೀರಣಿಗೆ ಬಾಚಣಿಗೆ ಮೊದಲಾದವರಿಂದ ಜಡೆ ಸಿಕ್ಕನ್ನು ಬಿಡಿಸಿಕೊಳ್ಳಬೇಕಲ್ಲದೆ ಉರಿವ ಕೊಳ್ಳಿ ಕೆಂಪಾಗೈತೆಂದು ತೆಗೆದುಕೊಂಡು ಜಡೆಸಿಕ್ಕನ್ನು ಬಿಡಿಸಿಕೊಂಬುವುದಕ್ಕೆ ಹೋದರೆ ಮಂಡೆಯ ಕೂದಲೆಲ್ಲ ಸುಟ್ಟು ದುಃಖವಾಗುತ್ತಿಹುದು. ಹಾಂಗೆ, ಅತ್ಯಂತ ಪೂಜ್ಯವಾದ ಜಂಗಮಮೂರ್ತಿಗಳೊಂದಿಗೆ ಕೈಸರಸ[* *]ವಾಡಿ ದೋಷ ದ್ರೋಹವನುಂಟು ಮಾಡಿಕೊಂಡು ಭವಕ್ಕೆ ಹೋಗುವಂಥವನ ಇರಸ್ಥಿತಿಯೂ ಉರಿವ ಕೊಳ್ಳಿಯು ಕೆಂಪಗೈತೆಂದು ತೆಗೆದುಕೊಂಡು ಜಡೆಸಿಕ್ಕನ್ನು ಬಿಡಿಸಿಕೊಂಬುವುದಕ್ಕೆ ಹೋಗಿ ಮಂಡೆಯ ಕೂದಲೆಲ್ಲ ಸುಟ್ಟುಕೊಂಡು ದುಃಖದಲ್ಲಿರುವಂಥವನ ಇರಸ್ಥಿತಿಯೂ ಒಂದೇಯಾಗಿರ್ಪುದು.

ಹುಲಿಯ ಮೀಸೆಯ ಹಿಡಿದುಕೊಂಡುಲಿದುಯ್ಯಾಲೆಯನಾಡುವಂತೆ_ಉಯ್ಯಾಲೆಯನಾಡಬೇಕಾದರೆ ಕಬ್ಬಿಣಸರಪಳಿ ನೂಲಹಗ್ಗ ಮೊದಲಾದವನ್ನು ಕಟ್ಟಿಕೊಂಡು ಉಯ್ಯಾಲೆಯನಾಡಬೇಕಲ್ಲದೆ. ಘೋರಾರಣ್ಯದಲ್ಲಿ ವಟವೃಕ್ಷದ ಬುಡದಲ್ಲಿ ಮಹಂತವಾದುದೊಂದು ವ್ಯಾಘ್ರನೆಂಬುವಂಥದು ಮಲಗಿಕೊಂಡಿದ್ದಲ್ಲಿ ಅದರ ಮೀಸೆ ಉದ್ದನಾಗಿರುವವು. ಆ ಹುಲಿಯ ಮೀಸೆಯನ್ನು ಹಿಡಿದುಕೊಂಡು ಉಯ್ಯಾಲೆಯನಾಡುವುದಕ್ಕೆ ಹೋದಲ್ಲಿ ಹುಲಿಕಂಡು ಮುರಿದುಕೊಂಡು ನುಂಗಿಬಿಡುತ್ತಿಹುದು. ಹಾಂಗೆ, ಅತ್ಯಂತ ಪೂಜ್ಯವಾದ ಜಂಗಮಮೂರ್ತಿಗಳೊಂದಿಗೆ ಕೈಸರಸ [* *]ವಾಡಿ ದೋಷ ದ್ರೋಹವನುಂಟು ಮಾಡಿಕೊಂಡು ಭವಕ್ಕೆ ಹೋಗುವಂಥವನ ಇರಸ್ಥಿತಿಯೂ ಹುಲಿಯ ಮೀಸೆ ಉದ್ದನಾಗೈದಾವೆಂದು ಉಯ್ಯಾಲೆಯನಾಡುವುದಕ್ಕೆ ಹೋಗಿ ಹುಲಿ ಮುರಿದುಕೊಂಡು ತಿಂದು ಸತ್ತುಹೋದಂಥವನ ಇರಸ್ಥಿತಿಯೂ ಒಂದೇಯಾಗಿರ್ಪುದು.

ಕೂಡಲಸಂಗನ ಶರಣರೊಡನೆ-ಜಂಗಮಮೂರ್ತಿಗಳೊಂದಿಗೆ, ಮಱೆದು-ಮೋಸದಿಂದ, ಸರಸವನಾಡಿದಡೆ-ಕೈಸರಸ[* *]ವನಾಡಿದರೆ, ಸುಣ್ಣದಕಲ್ಲು ಒಡಲಲ್ಲಿ ಕಟ್ಟಿಕೊಂಡು ಮಡುವ ಬಿದ್ದಂತೆ!-ಮಡುವಿನಲ್ಲಿ ಬಿದ್ದು ಈಸನ್ನು ಕಲಿಯಬೇಕಾದರೆ ಈಸಗುಂಬಳಕಾಯಿ ನುಗ್ಗಿದಿಂಡು ಮೊದಲಾದವನ್ನು ಕಟ್ಟಿಕೊಂಡು ಮಡುವಿನಲ್ಲಿ ಬಿದ್ದರೆ ಮೇಲಕ್ಕೆ ತೇಲಿಸುವುದಲ್ಲದೆ, ಸುಣ್ಣದ ಕಲ್ಲನ್ನು ಮಡಿಲಲ್ಲಿ ಕಟ್ಟಿಕೊಂಡು ಮಡುವಿನಲ್ಲಿ ಬಿದ್ದಲ್ಲಿ ಸುಟ್ಟುಕೊಂಡು ಸತ್ತುಹೋಗುತ್ತಿಹನು. ಹಾಂಗೆ, ಅತ್ಯಂತ ಪೂಜ್ಯವಾದ ಜಂಗಮಮೂರ್ತಿಗಳೊಂದಿಗೆ ಕೈಸರಸ [* *]ವನಾಡಿ ದೋಷ ದ್ರೋಹವನ್ನುಂಟು ಮಾಡಿಕೊಂಡು ಭವಕ್ಕೆ ಹೋಗುವಂಥವನ ಇರಸ್ಥಿತಿಯೂ ಸುಣ್ಣದ ಕಲ್ಲು ಮಡಿಲಲ್ಲಿ ಕಟ್ಟಿಕೊಂಡು ಮಡುವ ಬಿದ್ದುಕೊಂಡು ಸತ್ತುಹೋಗುವಂಥವನ ಇರಸ್ಥಿತಿಯೂ ಒಂದೇಯಾಗಿರ್ಪುದು.

II –

1–1 ಗಳ (ಚ, ಜ), 2–2 ಒಲಿದು ಉಯ್ಯಲ (ಚ, ಜ), 3–3 x (ಚ, ಜ), 4–4 ಲ್ಲ (ಚ, ಜ)

....

ಹಾವಿನ ಹೆಡೆಗಳ ಕೊಂಡು ಕೆನ್ನೆಯ ತುಱಿಸುವಂತೆ-ಜಂಗಮನಿಂದೆಯನುಂಟು ಮಾಡಿಕೊಂಡು ಜ್ಞಾನಿಜಂಗಮಕ್ಕೆ ಆಚರಣೆಯ ಹೇಳುತ್ತಿರ್ಪರು. ಉರಿವ ಕೊಳ್ಳಿಯ ಕೊಂಡು ಮಂಡೆಯ ಸಿಕ್ಕ ಬಿಡಿಸುವಂತೆ-ನಿಷ್ಠುರಾಗ್ನಿಯಲ್ಲಿ ಸಿಡಿಮಿಡಿಗುಟ್ಟುವಂಥದನುಂಟುಮಾಡಿಕೊಂಡು ಜ್ಞಾನಿಜಂಗಮದ ತೊಡಕ ಬಿಡಿಸುತ್ತಿರ್ಪರು, ಹುಲಿಯ ಮೀಸೆಯ ಹಿಡಿದುಕೊಂಡು ಒಲಿದು ಉಯ್ಯಲನಾಡುವಂತೆ-ಮಹಾಜ್ಞಾನಿಗಳರಿವಾಚರಣೆಯುನುಂಟುಮಾಡಿಕೊಂಡು ಅವರ ಸಮರಸಾಚರಣೆಗೆ ಹೊಱಚ್ಚಾಗಿ ಸ್ತುತಿನಿಂದ್ಯಾದಿಗಳಲ್ಲಿ ನರ್ತಿಸಾಡುತ್ತಿಹರು, ಕೂಡಲಸಂಗನ ಶರಣರೊಡನೆ-ಪರಶಿವಲಿಂಗದಪರಮಮೂರ್ತಿಗಳಾದ ಗುರುಲಿಂಗಜಂಗಮದೊಂದಿಗೆ, ಮಱೆದು-ಭಯಭಕ್ತಿ ಕರುಣಕಿಂಕುರ್ವಾಣ ದಾಸೋಹ ನಯ ಭೃತ್ಯಭಾವ ಸಜ್ಜನ ಸತ್ಯ ಸಮತೆ ಸದ್ವಿನಯ ಗುಣನಿಷ್ಠೆಯೆಂಬಿಷ್ಟನೂ ವಿಸ್ಮೃತಿಯ ಮಾಡಿ, ಸರಸವನಾಡಿದರೆ-ಗನ್ನಗದುಕು ಹದಿರುಚದುರು ನಗೆಹಾಸ್ಯ ಪಗುಡಪರಿಹಾಸಕಂಗಳಿಂದೆ ಹಾಸ್ಯವ ಮಾಡಿದರೆ, ಸುಣ್ಣಕಲ್ಲ ಮಡಿಲಲ್ಲಿ ಕಟ್ಟಿಕೊಂಡು ಮಡುವ ಬಿದ್ದಂತೆ! ಮಹಾನುಭಾವ ಜಂಗಮದ ಶಿವಾನುಭಾವ ನುಡಿಗಡಣೆಯ ಶಾಸ್ತ್ರವನಂತರಂಗವೆಂಬ ಉಡಿಲಲ್ಲಿ ಬಂಧಿಸಿಕೊಂಡಿರ್ದು ಸುಸಾರಂಬುಧಿಯಲ್ಲಿ ಪತಿತವಾದರೆಂಬುದರ್ಥ.

೬೬೪

ಉರಿವ ಕೊಳ್ಳಿಯ ಮಂಡೆಯಲ್ಲಿಕ್ಕಿದಡೆ ಉರಿವುದು ಮಾಂಬುದೆ? ಕಲ್ಲಗುಗ್ಗರಿ ಮೆಲಿದಡೆ ಹಲ್ಲು ಹೋಹುದು ಮಾಂಬುದೆ? ಶರಣರೊಡನೆ ಸರಸವಾಡಿದಡೆ ನರಕ ತಪ್ಪದು, ಕಾಣಾ ಕೂಡಲಸಂಗಮ ದೇವಾ!

I- -

ಉರಿವ ಕೊಳ್ಳಿಯ ಮಂಡೆಯಲ್ಲಿಕ್ಕಿದಡೆ ಉರಿವುದು ಮಾಂಬುದೆ?-ಆವನೊಬ್ಬ ವಿಲಾಸಪುರುಷನೇನಾದರೂ ತುರಾಯವನ್ನು ಮುಡಿದುಕೊಳ್ಳಬೇಕಾದರೆ ಮಲ್ಲಿಗೆಹೂವು ಚೆಂಡುಹೂವು ಸಂಪಿಗೆಹೂವು ಕೇದಿಗೆಹೂವು ಮೊದಲಾದವನ್ನು ತುರಾಯಮಾಡಿ ಮುಡಿದುಕೊಳ್ಳಬೇಕಲ್ಲದೆ ಉರಿವ ಕೊಳ್ಳಿಕೆಂಪಗೈತೆಂದು ತುರಾಯವನ್ನು ಮಾಡಿ ಮುಡಿದುಕೊಂಬುವುದಕ್ಕೆ ಹೋದಲ್ಲಿ ಮಂಡೆಯ ಪಾವಡವನ್ನು ಸುಟ್ಟುಕೊಂಡು ದುಃಖವಾಗುತ್ತಿಹುದು. ಹಾಂಗೆ, ಅತ್ಯಂತ ಪೂಜ್ಯವಾದ ಜಂಗಮಮೂರ್ತಿಗಳೊಂದಿಗೆ ಕೈಸರಸ[* *] ವಾಡಿ ಭವಕ್ಕೆ ಹೋಗುವಂಥವನ ಇರಸ್ಥಿತಿಯೂ ಉರಿಯ ಕೊಳ್ಳಿಯ ತುರಾಯ ಮಾಡಿ ಮುಡಿದು ಮಂಡೆ ಪಾವಡವ ಸುಟ್ಟುಕೊಂಡು ದುಃಖದಲ್ಲಿರುವಂಥವನ ಇರಸ್ಥಿತಿಯೂ ಒಂದೇಯಾಗಿರ್ಪುದು.

ಕಲ್ಲಗುಗ್ಗರಿ ಮೆಲಿದಡೆ ಹಲ್ಲುಹೋಹುದು ಮಾಂಬಂದೆ?: [ಕಲ್ಲಗುಗ್ಗರಿ ಮೆಲಿದಡೆ-] ಗುಗ್ಗರಿಯನ್ನು ಹಾಕಿಕೊಂಡು ಮೆಲ್ಲಬೇಕಾದರೆ ಕಡಲಿಕಾಳು ಗೋದಿಕಾಳು ಅವರೆಕಾಳು ಹೆಸರುಕಾಳು ಮೊದಲಾದವನ್ನು ಗುಗ್ಗರಿ ಹಾಕಿಕೊಂಡು ಮೆದ್ದರೆ ಸ್ವಾದವಾಗಿದ್ದಾವಲ್ಲದೆ ಕಲ್ಲುಹರಳನ್ನು ಗುಗ್ಗರಿಯನ್ನು ಹಾಕಿಕೊಂಡು ಮೆದ್ದರೆ, ಹಲ್ಲುಹೋಹುದು ಮಾಂಬುದೆ?-ರದನಂಗಳು ಉಚ್ಚಿಹೋಗದೆಯಿದ್ದಾವೆ? ಹೋಗುತ್ತಿಹವು. ಹಾಂಗೆ, ಅತ್ಯಂತ ಪೂಜ್ಯವಾದ ಜಂಗಮಮೂರ್ತಿಗಳೊಂದಿಗೆ ಕೈಸರಸ [* *]ವಾಡಿ ಭವಕ್ಕೆ ಹೋಗುವಂಥವನ ಇರಸ್ಥಿತಿಯೂ ಕಲ್ಲುಗುಗ್ಗರಿಯನ್ನು ಹಾಕಿಕೊಂಡು ಮೆದ್ದು ಹಲ್ಲು ಕಳಕೊಂಡು ದುಃಖದಲ್ಲಿರುವಂಥವನ ಇರಸ್ಥಿತಿಯೂ ಒಂದೇಯಾಗರ್ಪುದು.

ಶರಣರೊಡನೆ–ಜಂಗಮಮೂರ್ತಿಗಳೊಂದಿಗೆ, ಸರಸವಾಡಿದಡೆ–ಕೈಸರಸ [* *]ವಾಡಿದರೆ, ನರಕ ತಪ್ಪದು–ನಿರಯವುಂಟಾಗುವಂಥದು, ತಪ್ಪದು–ಓರೆಯಾಗದು, ಕಾಣಾ–ಕಂಡಾ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

II –

ಉರಿವ ಕೊಳ್ಳಿಯ ಮಂಡೆಯಲಿಕ್ಕಿದಡುರಿವುದು ಮಾಂಬುದೆ?–ಕರಣಮಥನ ಕರ್ಕಶ ಕಷ್ಟನಿಷ್ಠುರೋಕ್ತಿಯನು ಜ್ಞಾನದಲ್ಲಿ ಹಾಕಿದರೆ ಜ್ವಲಿಸೂದ ಬಿಟ್ಟೀತೆ?. ಕಲ್ಲುಗುಗ್ಗರಿಯ ಮೆಲಿದರೆ ಹಲ್ಲುಹೋಹುದ ಮಾಬುದೆ?–ಕಷ್ಟನಿಷ್ಠುರೋಕ್ತಿಯಿಂದ ಮಥನಿಸಿದರೆ ದುಷ್ಕರಣಂಗಳು ವ್ಯಾಕುಳಕ್ಕೊಳಗಾಗದೆ ಬಿಟ್ಟಾವೆ? ಮುಂದಕ್ಕೆ ಕಾಣಬಂದರ್ಥ.

III –

ಕಲ್ಲುಗುಗ್ಗರಿಯ–ಶಿಲಾಗುಗ್ಗರಿಯನು, ಮೆಲದರೆ–ಖಾತಿಸಿದರೆ.

೬೬೫

ಕೋಣನ ಹೇಡೆಂಗೆ ಕುನ್ನಿ ಬಸಗುತ್ತ ಬಾಲವ ಬಡಿವಂತೆ ತಾವು ನಂಬರು, ನಂಬುವರನೂ ನಂಬಲೀಯರು! ತಾವು ಮಾಡರು, ಮಾಡುವರನೂ ಮಾಡಲೀಯರು! ಮಾಡುವ ಭಕ್ತರ ಕಂಡು ಸೈರಿಸಲಾಱದವರ ಕೂಗಿಡೆ, ಕೂಗಿಡೆ, ನರಕದಲ್ಲಿಕ್ಕುವ ಕೂಡಲಸಂಗಮದೇವ.

I –

ಕೋಣನ ಹೇಡೆಂಗೆ ಕುನ್ನಿ ಬಸುಗುತ್ತ ಬಾಲವ ಬಡಿವಂತೆ–ಲೋಕದಲ್ಲಿ ಉಪ್ಪಾರರಾಗಲೀ ಕುಂಬಾರರಾಗಲೀ ಮತ್ತಾರಾದರಾಗಲೀ ಕೋಣನ ಮೇಲೆ ಉಪ್ಪಾಗಲೀ ಸೊಪ್ಪಾಗಲೀ ಮತ್ತೇನಾದರಾಗಲೀ ಹೇರಿಕೊಂಡು ವಸಂತಕಾಲದಲ್ಲಿ ಆರುತಾಸು ಹೊತ್ತಿನಾಗ ಗಾವುದ ಇಗ್ಗಾವುದ ಸಂತೆ ಪ್ಯಾಟಿಗಳಿಗೆ ತೆಗೆದುಕೊಂಡು ಹೋಗುತ್ತಿದ್ದಲ್ಲಿ ಅವರ ಕೂಡೊಂದು ಶುನಿಯಿರುವುದು. ಆ ಕೋಣನೆಂಬುವಂಥದು ಹೇರನ್ನು ಹೊರಲಾರದೆ ಸೂರ್ಯನ ಆತ ಪಾಗ್ನಿಯ ತಡೆಯಲಾರದೆ ತೇಗುತ್ತ ಜೊಲ್ಲ ಸುರಿಸಿಕೊಳ್ಳುತ್ತ ಹೋಗುತ್ತಿರುವುದು. ಆ ಶುನಿಯೆಂಬುವಂಥದು ಸುಮ್ಮನೊಂದು ಕಡೆಗೆ ಓರೆಯಾಗಿ ಹೋಗದೆ ಬಿಸಲು ಹತ್ತಿತೇಗುತ್ತ ನಾಲಗೆಯನ್ನು ತೆರೆವುತ್ತ ಅದರ ಕಾಲೊಳಗೆ ಸುಳಿದಾಡುತ್ತಿದ್ದಲ್ಲಿ ಆ ಕೋಣನು ನಾನಂತೂ ಹೊರೆಯನ್ನು ಹೊರಲಾರದೆ ಬಿಸಿಲು ಬಡಿದು ತೇಗುತ್ತೈದೇನಿ. ಇದೇನು ಕಾರಣಕ್ಕೆ ತೇಗುತ್ತೈತೆಂದು ಅದಾದರೂ ಕೊಂಬಿಲಿ ಬಡಿವುದು, ಅವರಾದರೂ ಸಿಟ್ಟಿಲೆ ಚುಳುಕಿಲಿಂದ ಬಡಿವರು, ಹಾಂಗೆ, ನಿರ್ವಂಚಕ ಸದ್ಭಕ್ತನು ಜಂಗಮಭಕ್ತಿ ಮಾಡಬಹುದು, ಜಂಗಮದ ಗಳಗರ್ಜನೆ ದುಡುಕು ದುಂಡಾಚಾರ ಕೋಳಾಟ ಕೊಂಡಾಟ ಮೊದಲಾದವನು ಸೈರಿಸಿಕೊಂಡು ಭಕ್ತಿಯ ಮಾಡುವಂಥದು ಅತಿ ದುರ್ಘಟವೆಂದು ಹೇಳಿದಲ್ಲಿ. ಉಪಾಧಿಕನು ಶಿವನು ಕೊಟ್ಟ ಐಶ್ವರ್ಯವಿರಲಿಕ್ಕೆ ಜಂಗಮ ಭಕ್ತಿ ಮಾಡುವಂಥದು ಬಹುದೊಡ್ಡಿತ್ತೆ? ಎಂದು ಹೇಳಿಕೊಂಬುದನೇ ಬಲ್ಲನಲ್ಲದೆ ಜಂಗಮದ ಗಳಗರ್ಜನೆ ದುಡುಕು ದುಂಡಾಚಾರ ಕೋಳಾಟ ಕೊಂಡಾಟ ಮೊದಲಾದವನ್ನು ಸೈರಿಸಿಕೊಂಡು ಭಕ್ತಿಯ ಮಾಡುವಂಥವನು ಬಲ್ಲನೆ? ಅರಿಯನು, ಕುನ್ನಿ ಬಾಲವ ಬಡಿವಂತೆ, ತಾವು ನಂಬರು: ತಾವು–ಉಪಾಧಿಕರು ನಂಬರು–

ಒಂದುವಸ್ತುವೇ ಗುರುಲಿಂಗ ಜಂಗಮವಾಗಿ ಬಂದಿಪ್ಪುದೆಂದು, ನಂಬರು–ವಿಶ್ವಾಸಿಸರು. ನಂಬುವರನೂ–ವಿಶ್ವಾಸಿಸಿ ಗುರುಭಕ್ತಿಯ ಮಾಡುವಂಥವರನೂ, ನಂಬಲೀಯರು–ಗುರುಭಕ್ತಿಯ ಮಾಡಿದರೆ ಸತ್ತು ಕೆಟ್ಟು ಹೋಗತ್ತೈದಾರೆಂದು ಏನಾದರೊಂದು ಕುಯುಕ್ತಿ ಹೇಳಿ ಬಿಡಿಸುವರು.

ತಾವು–ಉಪಾಧಿಕರು, ಮಾಡರು–ವಿಶ್ವಾಸಿಸಿ ಸಮರಸದಿಂದ ತನುಮನ ಧನಂಗಳನು ಕೊಟ್ಟು ಭಕ್ತಿಯ ಮಾಡರು, ಮಾಡುವರನೂ–ಸಮರಸ ಭಾವದಿಂದ ಜಂಗಮಭಕ್ತಿಯ ಮಾಡುವಂಥವರನು, ಮಾಡಲೀಯರು–ಜಂಗಮಭಕ್ತಿಯ ಮಾಡಿದರೆ ಸತ್ತು ಕೆಟ್ಟು ಹೋಗುತ್ತೈದಾರೆಂದು ಏನಾದರೂ ಒಂದು ಕುಯುಕ್ತಿ, ಹೇಳಿ ಬಿಡಿಸುವರಯ್ಯ, ಮಾಡುವ–ಸಮರಸಭಾವದಿಂದ ತನುಮನಧನಂಗಳನು ಕೊಟ್ಟು ಭಕ್ತಿಯ ಮಾಡುವ, ಭಕ್ತರ–ನಿರ್ವಂಚಕ ಸದ್ಭಕ್ತರ, ಕಂಡು–ನೋಡಿ, ಸೈರಿಸಲಾಜಿದವರ–ಅದನು ತರಹರಿಸಸಿಕೊಂಡು ಸುಮ್ಮನಿರಲಾರದವರ, ಕೂಗಿಡೆ ಕೂಗಿಡೆ–ಶಿವಧೋ ಶಿವಧೋ ಎಂದರೂ ಬಿಡದೆ, ನರಕದಲ್ಲಿಕ್ಕುವ–ನಿರಯದಲ್ಲಿ ಹಾಕಿಬಿಡುತ್ತಿಹನು, ಕೂಡಲ ಸಂಗಮದೇವ–ಪರಶಿವಲಿಂಗವು.

....

೧ + ವ (ಕ, ಗ)

II –

ಕೋಣನ ಹೇಜೆಂಗೆ ಕುನ್ನಿ ಬಸುಕುತ್ತ ಬಾಲವ ಬಡಿವಂತೆ–ಮಹಿಷನ ಮೇಲೆ ಹೇರ ಹೇರಿಕೊಂಡು ಒಡೆಯನು ಬರುವನು, ಬಂದಲ್ಲಿ ಅವನ ಕಾಲಮೇಲೆ ಬಿದ್ದು ಹೊರಳೂದಕ್ಕೆ ಸರಿಯಲ್ಲದೆ ಆ ಹೊರೆಯನೇನು ತೆಗೆದುಕೊಂಡೀತೆ? ಮತ್ತಂ ಒಂದು ಕೋಣನು ಹೋಜೆಯ ಹೊತ್ತುಕೊಂಡು ಡೋಗ್ಯಾಡುತ್ತ ಹೋಗುವದನು ಒಂದು ನಾಯಿ ಕಂಡು ಅದಕ್ಕೂ ಎರಡು ಕೈಕಾಲವೆ, ಎನಗೂ ಎರಡು ಕೈಕಾಲವೆ ಅದಕ್ಕೂ ಎರಡು ಕಿವಿ ಐದಾವೆ ನನಗೂ ಎರಡು ಕಿವಿ ಐದಾವೆ, ಅದರ ಹೆಚ್ಚೇನು ನನ್ನ ಕಡಮೆಯೇನೆಂದು ಅಣಕಿಸಿದರೆ ಅದರ ಸಮಾನವಾದೀತೆ? ಅದರ ಹೊರೆಯ ತೆಗೆದುಕೊಂಡೀತೆ, ಹಾಂಗೆ, ಭಕ್ತಿಮಾಡುವಂಥವರುಗಳ ಕಂಡು ಗುರುಭಕ್ತಿ ಚೆಂದಾಯಿತ್ತು, ಲಿಂಗಭಕ್ತಿ ಚೆಂದಾಯಿತ್ತು, ಜಂಗಮಭಕ್ತಿ ಚೆಂದಾಯಿತ್ತೆಂದು ಬಾಯಿ ಉಪಚಾರದ ಪ್ರಸಂಗವ ಮಾಡುವನು. ಮಾಡಿದರೇನು ತಾ ಭಕ್ತಿಯ ಮಾಡನು, ಮುಂದಕ್ಕೆ ಕಾಣಬಂದರ್ಥ.

III– –

ಕುನ್ನಿ–ಸೊಣಗನು, ಬಸುಕುತ್ತ–ಸೊಂಟವ ಬಾಗಿಸುತ, ಬಡಿವಂತೆ–ಬಾಲವನು ಬಡಿಕೊಂಬೊ ಹಾಂಗೆ.

೬೬೬

ಚೇಳಿಂಗೆ ಬಸುಱಾಯಿತ್ತೇ ಕಡೆ, ಬಾಳೆಗೆ ಫಲವಾಯಿತ್ತೇ ಕಡೆ,[1] ರಣರಂಗದಲ್ಲಿ ಕಾದುವ ಓಲೆಕಾಱಂಗೆ ಓಸಜೆಸಿತ್ತೇ ಕಡೆ, ಮಾಡುವ ಭಕ್ತಂಗೆ ಮನಹೀನವಾದಡೆ ಅದೇ ಕಡೆ ಕೂಡಲಸಂಗಮ ದೇವಾ.

I -

ಚೇಳಿಂಗೆ-ವೃಶ್ಚಿಕಂಗೆ ಬಸುಱಾಯಿತ್ತೇ-ಗರ್ಭಿಣಿಯಾಗಿ ಬೆನ್ನುಬಿರಿದು ಮರಿಗಳು ಹೊಂಟುಹೋದದ್ದೇ, ಕಡೆ-ಅದಕೆ ಅದೇ ಅಂತ್ಯಕಾಲವು; ಬಾಳೆಗೆ-ರಂಭಾಸ್ತಂಭಕ್ಕೆ, ಫಲವಾಯಿತ್ತೇ-ಫಲವಾಗಿ ಗೊನೆಬಿಟ್ಟದಲ್ಲಿ ಗೊನೆಯನ್ನು ಕಡಿದುಕೊಂಡು ಬಾಳೆಯನ್ನು ಕಡೆದುಬಿಟ್ಟಿದ್ದೇ, ಕಡೆ-ಅದಕದೇ ಅಂತ್ಯಕಾಲವು, ರಣರಂಗದಲ್ಲಿ-ರಣಾಗ್ರದೊಳಗೆ, ಕಾದುವ-ಯುದ್ಧಮಾಡುವ, ಓಲೆಕಾರಂಗೆ-ಪಟುಭಟಂಗೆ, ಓಸರಿಸಿತ್ತೇ-ರಣಾಗ್ರವನ್ನು ಕಂಡಾಕ್ಷಣಕ್ಕೆ ಮುಂದಲ ಕಾಲ ಹಿಂದಕ್ಕಿಟ್ಟು ಹಿಡಿದ ಕತ್ತಿಯನ್ನುಬಿಟ್ಟು ಮೊಣಕಾಲಮಂಡೆಯ ಒಡೆಯೋ ಸುದ್ದಿಯನರಿಯದೆ ಓಡಿಹೋದಂಥವನಿಗ್ಯೇಕಡೆ-ಅವನಿಗೆ ಅದೇ ಅಂತ್ಯಕಾಲವು, ಮಾಡುವ-ಸಮರಸಭಾವದಿಂದ ತನುಮನಧನಂಗಳನ್ನು ಕೊಟ್ಟು ಭಕ್ತಿಯ ಮಾಡುವ, ಭಕ್ತಂಗೆ-ಶಿವಭಕ್ತಂಗೆ, ಮನಹೀನವಾದಡೆ-ಮನದಲ್ಲಿ ಅವಿಶ್ವಾಸವು ಹುಟ್ಟಿ ತನುಮನಧನಂಗಳನು ವಂಚಿಸಿಕೊಂಡು ಹಿಮ್ಮೆಟ್ಟಿದರೆ, ಅದೇ ಕಡೆ-ಅವನಿಗದೇ ಅಂತ್ಯಕಾಲವು, ಕೂಡಲಸಂಗಮದೇವಾ ಎಲೆ ಪರಶಿವಲಿಂಗವೇ.

II- -

1 + ನೋಡಾ (ಚ, ಜ)

....

ಚೇಳಿಂಗೆ ಬಸಿಱಾಯಿತ್ತೆ ಕಡೆ-ದೂಷಣೆಯನುಳ್ಳಾತ್ಮನಿಗೆ ದೂಷಣೆ ಹುಟ್ಟಿದುದೇ ಮರಣವು; ಬಾಳೆಗೆ ಫಲವಾಯಿತ್ತೇ ಕಡೆ ನೋಡಾ!-ಏಕವಾಕ್ಯವನುಳ್ಳ ಭಕ್ತನಿಗೆ ಫಲಪದಂಗಳ ಪ್ರಾಪ್ತಿಯುಂಟಾದುದೇ ಕಡೆ ಮರಣವು ಕಂಡಯ್ಯ. ರಣರಂಗದಲ್ಲಿ ಕಾದುವ ಓಲೆಕಾಱಂಗೆ ಓಸರಿಸಿತ್ತೆ ಕಡೆ-ಭಕ್ತಿಜ್ಞಾನವೈರಾಗ್ಯವೆಂಬ ಸಮರಸದಲ್ಲಿ ಭಕ್ತಿಜ್ಞಾನವೈರಾಗ್ಯವಿಡಿದಾಚರಿಸುವ ತ್ರಿವಿಧಲಿಂಗಾನುಭಾವಿಯು ಆಚರಣೆಗೆ ಹಿಮ್ಮೆಟ್ಟಿದುದೇ ಮರಣವು, ಮಾಡುವ ಭಕ್ತಂಗೆ ಮನಹೀನವಾದರೆ ಅದೇ ಕಡೆ ಕೂಡಲಸಂಗಮದೇವಾ-ಗುರುಭಕ್ತಿ ಲಿಂಗಪೂಜೆ ಜಂಗಮದಾಸೋಹವ ಮಾಡುವ ಸದ್ಭಕ್ತನಿಗೆ ಸಂಕಲ್ಪ ವಿಕಲ್ಪ ವಂಚನೆ ಉಪಾಸನೆ ಅಹಂಕಾರದಿಂದ ಮನಸ್ಸು ಕ್ಷೀಣವಾದರೆ ಅದೇ ಮರಣವು ಎಲೆ ಲಿಂಗವೇ.

IV -

1 + ನೋಡಾ (ಚ,)

....

ಭಕ್ತಿಯಲ್ಲಿ ಅವಿಶ್ವಾಸವಾದರೆ ಪರಮ ಮುಕ್ತಿಯಿಲ್ಲಾಯೆಂಬುದೀ ವಚನದರ್ಥ.

೬೬೭

ಹುಲಿಯ ಹಾಲು ಹುಲಿಮರಿಗಲ್ಲದೆ ಹೊಲದ ಹುಲ್ಲೆಗುಣಬಾರದು; ಕಲಿಯ ಕಾಲ ತೊಡರು ಛಲದಾಳಿಗಲ್ಲದೆ ಇಕ್ಕಬಾರದು. ಅಳಿಮನದಾಸೆಯವರ [1]ಹಲ್ಲುದೋಱಿ ಮೂಗ[1] ಕೊಯ್ವ ಕೂಡಲಸಂಗಮದೇವ.

I– –

ಹುಲಿಯ ಹಾಲು–ವ್ಯಾಘ್ರನ ಕೆಚ್ಚಲಲ್ಲಿರುವ ಕ್ಷೀರವು, ಹುಲಿಮರಿಗಲ್ಲದೆ–ವ್ಯಾಘ್ರದ ಮರಿಗೆ ಸೇವಿಸಲು ಯೋಗ್ಯವಪ್ಪುದಲ್ಲದೆ, ಹೊಲದ ಹುಲ್ಲೆಗೆ–ತಕ್ಕಿಲದಲ್ಲಿರುವಂಥ ಹರಣಿಯ ಮರಿಗೆ, ಉಣಬಾರದು–ಸೇವಿಸುವುದಕ್ಕೆ ಬಂದೀತೆ? ಬಾರದು. ಕಲಿಯ ಕಾಲ ತೊಡರು–ಪರಾಕ್ರಮಿ ಹಾಕಿರುವಂಥ ಬಿರುದು ಬಾವುಲಿಯು, ಛಲದಾಳಿಗಳಲ್ಲದೆ–ಪರಾಕ್ರಮಿಯಾಗಿದ್ದಂಥವ ಹಾಕಬೇಕಲ್ಲದೆ, ಇಕ್ಕಬಾರದು–ಹೇಡಿಗೆ ಹಾಕುವುದಕ್ಕೆ ಬಂದೀತೆ? ಬಾರದು.

ಅಳಿ ಮನದಾಸೆಯವರ–ಅನಿತ್ಯವಾದ ಹೊನ್ನು ಹೆಣ್ಣು ಮಣ್ಣಿನ ಮೇಲಣ ಅಲ್ಪಾಶೆಯನ್ನು ಮುಂದುಗೊಂಡು ಚರಿಸುವಂಥ ಜೀವರುಗಳ, ಕೂಡಲಸಂಗಮದೇವ–ಪರಶಿವಲಿಂಗವು, ಹಲ್ಲುದೋಜಿ ಮೂಗಕೊಯ್ವ–ಕರಣಂಗಳ ವರ್ತನೆಯ ಕುರುಹುಗಾಣಿಸುವ ಹಾಂಗೆ, ಆಚಾರಾಂಗವೆಂಬ ಘ್ರಾಣವನಪ ಹರಿಸಿ ಮಾನಭಂಗವ ಮಾಡಿ ಭವಕ್ಕೆ ಹಾಕಿ ಬಿಡುತ್ತಿಹನು.

II– –

1–1 ಮೂಗ ಹಲುದೋಜಿ (ಚ, ಜ)

ಹುಲಿಯ ಹಾಲು ಹುಲಿಗಲ್ಲದೆ ಹೊಲದ ಹುಲ್ಲೆಗೆ ಉಣಬಾರದು–ಮಹಾಜ್ಞಾನಿಗಳ ಜ್ಞಾನಾ ಮೃತವು ಮಹಾಜ್ಞಾನಿಗಳಿಗಲ್ಲದೆ ಜಾತಿವರ್ಣಾಶ್ರಮ ಕುಲಗೋತ್ರನಾಮಸೀಮೆಗಳೊಡನೆ ಕೂಡಿ ವರ್ತಿಸುವ ಜೀವರುಗಳಿಗೆ ಅನುಭವಿಸಲು ಯೋಗ್ಯವಲ್ಲ, ಕಲಿಯ ಕಾಲ ತೊಡರು ಛಲದಾಳಿಗಲ್ಲದೆ ಇಕ್ಕಬಾರದು–ಕಾಮಾದಿ ಅರಿಷಡ್ವರ್ಗಂಗಳನು ಜಯಿಸುವಲ್ಲಿ ಪರಾಕ್ರಮವನುಳ್ಳಂಥ ವೀರಮಾಹೇಶ್ವರನಾಚರಣೆಯ ಭಕ್ತಿಜ್ಞಾನ ವೈರಾಗ್ಯವೆಂಬ ಬಿರಿದು ಶೀಲವ್ರತನೇಮಂಗಳನು ಳ್ಳವರಿಗಲ್ಲದೆ ಹಾಕಬಾರದು, ಅಳಮನದಾಸೆಯವರ ಮೂಗ ಹಲುದೋಜಿ ಕೊಯ್ವ ಕೂಡಲಸಂಗಮದೇವ–ಹೀನಮನಸ್ಸಿನ ಅಪೇಕ್ಷೆಯುಳ್ಳವರ ಶಿವಾಭಿಮಾನವನು ಕರಣಂಗಳ ಪ್ರಕೃತಿಯುಂಟಾಗುವ ಹಾಂಗೆ ಅಪಹರಿಸಿಕೊಂಬನೆಂಬುದರ್ಥ.

IV– –

1–1 ಮೂಗ ಹಲು ದೋಜಿ (ಚ, ಜ)

....

ಆದ್ಯರ ಪಥವು ಆದ್ಯರಿಗಲ್ಲದೆ ಅಳವಡದು. ಉಳಿದವರು ಆದ್ಯರಾದೇವೆಂದರೆ ಮೂಗಕೊಯ್ವ ನೆಂಬುದೀ ವಚನದರ್ಥ.

೭೬೮

ಅರ್ಥಪ್ರಾಣಾಭಿಮಾನ ನಿಮ್ಮದೆಂಬಿರಿ, ಒತ್ತಿ ನೋಡಿದಡೆ ಮುಟ್ಟಲೀಯಿರಿ, ಮುಟ್ಟಬಂದಲ್ಲಿ ಕಠಾರಿಯ [1]ಕಳೆದುಕೊಂಡು[1] ಕಾಳಗವ [2]ನಿವಾರಿ[2]ಸುವರಲ್ಲದೆ, ಲಿಂಗ ಜಂಗಮವಂತನಾಗಬಾರದು! ಕೂಡಲ ಸಂಗಮದೇವಾ, ವೇಷಡಂಭಕರಿಗೆ ಭಕ್ತಿ ಎಂತಪ್ಪುದಯ್ಯಾ.

I– –

ಅರ್ಥಪ್ರಾಣಾಭಿಮಾನ ನಿಮ್ಮದೆಂಬಿರಿ: ಅರ್ಥ–ತಾ ಗಳಿಸಿದಂಥ ದ್ರವ್ಯವು, ಪ್ರಾಣ–ಪ್ರಾಣ ಸಂಬಂಧವಾದ ಪುತ್ರರುಗಳು, ಅಭಿಮಾನ–ತನ್ನ [*ಅಭಿಮಾನ*]. ನಿಮ್ಮದೆಂಬಿರಿ–ಗುರುಲಿಂಗಜಂಗಮದ ವಾರಕದೊಡವೆಯೆಂದು ಹೇಳುವಿರಿ. ಒತ್ತಿ ನೋಡಿದಡೆ–ತನುಮನಧನಂಗಳನು ಗುರುಲಿಂಗ ಜಂಗಮ ಮೂರ್ತಿಗಳು ಬಲತ್ಕಾರದಿಂದ ಹಿಡಿದುಕೊಂಬುವುದಕ್ಕೆ ಬಂದರೆ, ಮುಟ್ಟಲೀಯಿರಿ–ಇವ ಬಹು ಹೇಳಿಕೊಂಬುತ್ತೈದಾನೆಂದು ಹಿಡಿದು ಕೊಂಡುಬುವುದಕ್ಕೆ ಬಂದಲ್ಲಿ ಸೋಂಕಗೊಡಲರಿಯಿರಿ, ಮುಟ್ಟಬಂದಲ್ಲಿ–ಹೇಳಿಕೊಂಬುತ್ತಿದ್ದ ಹಾಂಗೆ ಜಂಗಮಮೂರ್ತಿಗಳು ತನುಮನಧನಂಗಳನು ಬಲತ್ಕಾರದಿಂದೆ ಹಿಡಿದು ಕೊಂಡಬುವುದಕ್ಕೆ ಬಂದಲ್ಲಿ, ಕಠಾರಿಯ ಕಡಳೆದುಕೊಂಡು ಕಾಳಗವ ನಿವಾರಿಸುವರಲ್ಲದೆ: ಕಠಾರಿಯ ಕಳೆದುಕೊಂಡು–ಕತ್ತಿ ಕಠಾರಿ ಕೈಚೂರಿ ಮೊದಲಾದ ಆಯುಧವ ಪಿಡಿದುಕೊಂಡು, [ನಿವಾರಿಸುವರಲ್ಲದೆ–] ಯುದ್ಧವ ಮಾಡಿ ಹಿಮ್ಮೆಟ್ಟಿಸುವರಲ್ಲದೆ, ಲಿಂಗ ಜಂಗಮವಂತನಾಗಬಾರದು–ಸಮರಸಭಾವದಿಂದೆ ಲಿಂಗಪೂಜೆ ಜಂಗಮದಾಸೋಹವನ್ನು ಮಾಡೇನೆಂದರೆ ಅಶಕ್ಯವಾಗಿರ್ಪುದು. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ವೇಷಡಂಭಕರಿಗೆ ಹುಸಿರೂಪವಾದ ಶಿವವೇಷವನ್ನು ಧರಿಸಿಕೊಂಡವರಿಗೆ, ಭಕ್ತಿ–ಶಿವಾದ್ವೈತಭಕ್ತಿಯು, ಎಂತಪ್ಪುದಯ್ಯಾ–ಹೇಂಗೆ ದೊರಕೊಂಡಿತ್ತಯ್ಯಾ.

II –

1–1 x (ಚ, ಜ), 2–2 (ನೀವಾಡಿ (ಚ, ಜ)

....

ಅರ್ಥಪ್ರಾಣಾಭಿಮಾನ ನಿಮ್ಮದೆಂಬಿರಿ–ದ್ರವ್ಯಹರಣಮಾನಸವು ಗುರುಲಿಂಗಜಂಗಮದೆಂಬಿರಿ ಒತ್ತಿ ನೋಡಿದಡೆ ಮುಟ್ಟಲೀಯರಿ–ಹಿಡಿವುದಕ್ಕೆ ಬಂದರೆ ಸೋಂಕಲೀಸರಿ, ಮುಟ್ಟಬಂದಲ್ಲಿ ಕಠಾರಿಯ ಕಾಳಗವ ನೀವಾಡಿಸುವಿರಲ್ಲದೆ–ಹಿಡಿವುದಕ್ಕೆ ಬಂದಲ್ಲಿ ಶಸ್ತ್ರವನು ತೆಗೆದುಕೊಂಡು ಚಾಚುವಿರಲ್ಲದೆ, ಲಿಂಗ ಜಂಗಮವಂತನಾಗಬಾರದು–ಆ ತನುಮನಧನವನು ಗುರುಲಿಂಗಜಂಗಮಕ್ಕೆ ಕೊಟ್ಟು ಭಕ್ತಿಮಾಡಿ ಮುಕ್ತಿಯ ಹಡೆದವನೆನಿಸಿಕೊಳಬಾರದು, ಮುಂದಕ್ಕೆ ಕಾಣಬಂದರ್ಥ.

IV –

1–1 x (ಟ, ಡ)

....

ಅರ್ಥಪ್ರಾಣಾಭಿಮಾನವನು ಗುರುಲಿಂಗಜಂಗಮದವೆಂದು ತಾವು ಅರ್ಪಿಸಿ ನಿತ್ಯರಾದರು ಪುರಾತನರು, ಉಳಿದವರು ೧[ಗುರು]೧ ಲಿಂಗಜಂಗಮದವೆಂದು ಮಾತನಾಡಿ ೨[ಆಚರಿಸದ]೨ ಅಜ್ಞಾನಿಗಳಿಗೆ ಭಕ್ತಿಯಿಲ್ಲಾ ಯೆಂಬುದೀ ವಚನದರ್ಥ.

....

೧–೧ x (ತ), ೨–೨ ಎಚ್ಚರಿಸು (ತ)

೬೭೯

ಅಲಗಲಗು ಮೋಹಿಸಿದಲ್ಲದೆ ಕಲಿತನವ ಕಾಣಬಾರದು. ನುಡಿದ ನುಡಿ ಜಾಜಿದಡೆ ಮನಕ್ಕೆ ಮನ ನಾಚಬೇಕು. ಶಬ್ದ ಗಟ್ಟಿಯತನದಲ್ಲಿ ಎಂತಪ್ಪುದಯ್ಯಾ ಭಕ್ತಿ. ಪಾಪಿಯ ಕೂಸನೆತ್ತಿದಂತೆ, ಕೂಡಲಸಂಗಮದೇವ'ರ' ಭಕ್ತಿ ಅಳಿಮನದವರಿಗಳ ವಡದಯ್ಯಾ

I -

ಅಲಗಲಗು ಮೋಹಿಸಿದಲ್ಲದೆ–ರಣಾಗ್ರದಲ್ಲಿ ಕಡಿದಾಡುವಾಗ್ಗೆ ಆಚೆಲಿದ್ದ ಸಾವಿರ ಸಂಖ್ಯೆಯ ಪಟುಭಟರೊಳಗೊಬ್ಬ ಈಚೆಲಿದ್ದ ಸಾವಿರಸಂಖ್ಯೆಯ ಪಟುಭಟರೊಳಗೊಬ್ಬ ಬಂದು ಐದು ಗೇಣಿನ ಆಯುಧವನ್ನು ಪಿಡಿದುಕೊಂಡು ಮಲ್ಲಮಲ್ಲರು ಯುದ್ಧವ ಮಾಡಿದೋಪಾದಿಯಲ್ಲಿ ಜಟ್ಟಿಜಟ್ಟಿಗಳು ಕೂಡಿ ಯುದ್ಧವ ಮಾಡಿದೋಪಾದಿಯಲ್ಲಿ ರಾಮರಾವಣರು ಕೂಡಿ ಯುದ್ಧವ ಮಾಡಿದೋಪಾದಿಯಲ್ಲಿ ಆಯುಧ ಆಯುಧವ ಕೂಡಿ ಯುದ್ಧವ ಮಾಡಿದಲ್ಲದೆ, ಕಲಿತನವ ಕಾಣಬಾರದು_ಬಂಟಾಬಂಟನೆಂಬುವಂಥದು ಅರಿಯಬಾರದು. ನುಡಿದ ನುಡಿ–ಸ್ವಾಮೀ ತನು ನಿಮ್ಮದು ಮನ ನಿಮ್ಮದು ಧನ ನಿಮ್ಮದು ಅರ್ಥಪ್ರಾಣಾಭಿಮಾನ ನಿಮ್ಮದು. ನಾನು ನಿಮ್ಮ ತೊತ್ತು ತೊಂಡ ಸೇವಕನೆಂದು ಹೇಳಿಕೊಂಬಂಥ ಪ್ರಸಂಗವು, ಜಾರಿದಡೆ–ವಾಸರಿಸಿದರೆ, ಮನಕ್ಕೆ ಮನ ನಾಚಬೇಕು–ಸ್ವಾಮೀ ತನು ನಿಮ್ಮದು ಮನ ನಿಮ್ಮದು ಧನ ನಿಮ್ಮದು ಅರ್ಥಪ್ರಾಣಾಭಿಮಾನ ನಿಮ್ಮದು ನಾನು ನಿಮ್ಮ ತೊತ್ತು ತೊಂಡ ಸೇವಕನೆಂದು ಹೇಳಿಕೊಂಡಂಥ ಮನಸ್ಸಿಗೂ ಆ ತನುಮನಧನಂಗಳನು ವಂಚಿಸಿಕೊಂಡು ಹಿಮ್ಮೆಟ್ಟಿದಂಥ ಮನಸ್ಸಿಗೂ ಅಭಿಮಾನಿಸಿ ಕೊಳಬೇಕು; ಶಬ್ದ ಗಟ್ಟಿಯತನದಲ್ಲಿ–ಸ್ವಾಮೀ ತನು ನಿಮ್ಮದು ಮನ ನಿಮ್ಮದು ಧನ ನಿಮ್ಮದು ಅರ್ಥಪ್ರಾಣಾಭಿಮಾನ ನಿಮ್ಮದು ನಾನು ನಿಮ್ಮ ತೊತ್ತು ತೊಂಡ ಸೇವಕನೆಂದು ಹೇಳಿಕೊಂಬಂಥ ವಾಕ್ಯದ ದಿಂಡಾವೃತ್ತಿಯ ಹೆಚ್ಚಿಗೆಯಲ್ಲಿ, ಭಕ್ತಿ–ಶಿವಾದ್ವೈತಭಕ್ತಿಯು, ಎಂತಪ್ಪುದಯ್ಯಾ–ಹೇಂಗೆ ಅಳವಟ್ಟಿತ್ತಯ್ಯಾ.

ಪಾಪಿಯ ಕೂಸನೆತ್ತಿದಂತೆ ಪಾಲಂಚಿಯೆಂಬ ಪಟ್ಟಣದಲ್ಲಿ ಭದ್ರದತ್ತನೆಂಬ ದೊರೆಯು ವಸಂತಕಾಲದಲ್ಲಿ ಏಳುನೆಲೆ ಚಿನ್ನದುಪ್ಪರಿಗೆಯಲ್ಲಿ ಕುಳಿತುಕೊಂಡಿದ್ದಲ್ಲಿ ಒಬ್ಬ ಶಿವಯೋಗೀಶ್ವರನು ಆರುತಾಸುವತ್ತಿನಾಗ ಲಿಂಗಾರ್ಪಿತ ಭಿಕ್ಷಕ್ಕೆ ಹೋಗುತ್ತಿದ್ದಲ್ಲಿ ಆ ದೊರೆಕಂಡು ಮೆಚ್ಚೇನೆಂದರೆ ಮೆಟ್ಟುಕಾಣ ಹೊದ್ದೇನೆಂದರೆ ಅರಿವೆ ಕಾಣ ಉಂಡೇನೆಂದರೆ ಅನ್ನವ ಕಾಣದೆ ಮನೆಮನೆಯ ತಿರಿದುಕೊಂಡು ತಿಂಬುತೈದಾನೆ ಏನು ಪಾಪವ ಮಾಡಿದ್ದಾನೋ ಎಂದಲ್ಲಿ ಆ ಮಾತ ಶಿವಯೋಗಿಶ್ವರನ ಕೇಳಿ, ಎಲೋ ಶಿವದ್ರೋಹಿ ನೀನು ಮುನ್ನೂರರುವತ್ತು ವರ್ಷಕ್ಕೊಂದು ವೇಳೆ ಶ್ರೀಶೈಲಪರ್ವತದಲ್ಲಿ ಪಾಪಿ ಕೂಸಾಗಿ ಹುಟ್ಟೆಂದು ಶಾಪವನು ಕೊಟ್ಟಲ್ಲಿ ಅದೇ ರೀತಿಯಲ್ಲಿ ಮುನ್ನೂರರುವತ್ತು ವರ್ಷಕೊಂದು ವೇಳೆ ಶ್ರೀಶೈಲ ಪರ್ವತದಲ್ಲಿ ಪಾಪಿ ಕೂಸಾಗಿ ಹುಟ್ಟಿ ಬಾಲದೊಡಿಗೆಯನ್ನು ತೊಟ್ಟುಕೊಂಡು ಸ್ತನಪಾನ ಮಾಡುವ ಶಿಶುವಿನೋಪಾದಿಯಲ್ಲಿ ಮಾರ್ಗದಲ್ಲಿ ಕುಳಿತುಕೊಂಡು ಆಡುತ್ತಿದ್ದಲ್ಲಿ ಪಥಮಾರ್ಗವೆತ್ತಿ ಹೋಗುವಂಥ ಆತ್ಮರುಗಳು ಕಂಡು ಅಯ್ಯಯ್ಯೋ ಎಂಥಾ ಚಲೋ ಕೂಸು, ಯಾವ ಪಾಪಿ ಬಿಟ್ಟುಹೋಗಿದ್ದಾಳೆಂದು ಎತ್ತಿಕೊಂಡು ಮುದ್ದಾಡುವುದಕ್ಕೆ ಹೋದಲ್ಲಿ ಅವರನು ಕಂಡು ಮುರಿದು ನುಂಗಿಕೊಂಡು ಬಯಲಾಗಿ ಹೆಂಗೆ ಹೋಗುತ್ತಿಹುದೋ ಹಾಂಗೆ, ಕೂಡಲಸಂಗಮದೇವರ–ಪರಶಿವಲಿಂಗದ, ಭಕ್ತಿ–ಶಿವಾದ್ವೈತಭಕ್ತಿಯು, ಅಳಿಮನದವರಿಗೆ–ಅನಿತ್ಯವಾದ

ಹೊನ್ನು ಹೆಣ್ಣು ಮಣ್ಣಿನ ಮೇಲಣ ಅಲ್ಪಾಶೆಯನ್ನು ಮುಂದುಗೊಂಡು ಚರಿಸುವಂಥ ಜೀವರುಗಳಿಗೆ, ಅಳವಡದಯ್ಯಾ–ದೊರೆಕೊಂಡಿತ್ತೆ? ದೊರೆಕೊಳ್ಳದು.

II –

ಅಲಗಲಗು ಮೋಹಿಸಿದಲ್ಲದೆ ಕಲಿತನವ ಕಾಣಬಾರದು–ಮಹಾಜ್ಞಾನಿಜಂಗಮವೂ ಸಮರಸಭಕ್ತಿಯನುಳ್ಳಂಥ ಭಕ್ತನೂ ಕೂಡಿದಲ್ಲದೆ ಸಮರಸ ಭಕ್ತಿಯೆಂಬ ಪರಾಕ್ರಮವನರಿಯಬಾರದು, ನುಡಿದ ನುಡಿಜಾಱಿದಡೆ ಮನಕ್ಕೆ ಮನ ನಾಚಬೇಕು–ತನು ನಿಮ್ಮದು ಮನ ನಿಮ್ಮದು ಧನ ನಿಮ್ಮದೆಂದು ವಚಿಸಿದ ವಾಕ್ಯವು ಹೊಱಚ್ಚಾದರೆ ಜಂಗಮದ ಮನಕ್ಕೆ ಭಕ್ತನ ಮನಸ್ಸು ಅಭಿಮಾನಿಸಬೇಕು. ಆ ಭಕ್ತನ ಮನಸ್ಸಿಗೆ ಜಂಗಮದ ಮನಸ್ಸು ಅಭಿಮಾನಿಸಬೇಕು, ಶಬ್ದ ಗಟ್ಟಿಯತನದಲ್ಲಿ ಎಂತಪ್ಪದಯ್ಯಾ ಭಕ್ತಿ–ವೇದಾಗಮಶಾಸ್ತ್ರಂಗಳನು ಬಲ್ಲೆನೆಂಬ ಬಲಿಷ್ಠತನದಲ್ಲಿ[೧][ಹೇಂ][೧]ಗಾಗುವದಯ್ಯಾ ಶಿವಾದ್ವೈತ ಭಕ್ತಿಯು.

ಪಾಪಿಯ ಕೂಸನೆತ್ತಿದಂತೆ–ನನ್ನ ಭಕ್ತನೆಂದು ಜಂಗಮವು ಆಶ್ರಯಿಸಿಕೊಂಡು ಮನೆಗೆ ಬಂದರೆ ಆ ಭಕ್ತನಲ್ಲಿ ವಂಚನೆ ಉದಾಸೀನ ಹುಟ್ಟುವುದು. ಈತ ಜಂಗಮವೆಂದು ಭಕ್ತನು ಬಂದರೆ ತನು ಮನ ಧನವನಪಹರಿಸಿಕೊಂಬನು, ಕೂಡಲಸಂಗಮದೇವರ ಭಕ್ತಿ ಅಳಿಮನದವರಿಗೆ ಅಳವಡದಯ್ಯಾ–ಪರಶಿವಲಿಂಗದಪರಮೂರ್ತಿಗಳಾದ ಗುರುಲಿಂಗಜಂಗಮದ ವಿಶ್ವಾಸವು ಅಲ್ಪಮನಸ್ಸಿನವರಗೆ ಅಂಗವಾಗದಯ್ಯಾ.

....

೧–೧ ಹಿಂ (ಚ, ಜ)

IV– –

1–1 x (ತ)

....

ಶಬ್ದಬ್ರಹ್ಮಗೆ ಭಕ್ತಿಯಿಲ್ಲ. ಭಕ್ತನಾದರೆ ತನುಮನದಲ್ಲಿ ಕಾಣಬಹುದು. ಅಲಗಲಗ ಮೋಹಿಸಿದಲ್ಲಿ ಕಲಿಯ ಕಾಬ ಹಾಂಗೆ, ಸಂದೇಹಿಗೆ ಪಾಪಿಯ ಕೂಸನೆತ್ತಿದಂತೆ ತನ್ನ ಭಕ್ತಿ ತನ್ನನೆ ತಿಂಬುದೆಂಬುದೀ ವಚನದರ್ಥ.

೬೭೦

ಹರ ಬೀಜ[1]ವಾದ[1]ಡೆ ಹಂದೆ ತಾನಪ್ಪನೆ? ಹಿಱಗಟ್ಟಱಯದವರ ಲೋಕ ಮೆಚ್ಚುವುದೆ? ಉಟ್ಟ ಚಲ್ಲಣ ಕೈಯ[2]ಲ್ಲಿ[2] ಪ[3]ಟ್ಟೆ[3]ವಿಡಿದು, ಗರುಡಿಯ ಕಟ್ಟಿ ಶ್ರವವ ಮಾಡುವಂತೆ ತನ್ನ ತಪ್ಪಿಸಿಕೊಂಡಡೆ ಶಿವ ಮೆಚ್ಚುವನೆ? ಅಱಯುದವರಿಗೆ ಒಳ್ಳೆ ಹೆಡೆಯೆತ್ತಿ ಆಡುವಂತೆ ಬೊಳ್ಳೆಗನ ಭಕ್ತಿ, ಕೂಡಲಸಮಗಮದೇವಾ!

I –

ಹರ ಬೀಜವಾದಡೆ–ಪರಾಕ್ರಮಿಯ ಹೊಟ್ಟೆಯಲ್ಲಿ ಹುಟ್ಟಿದಂಥ ಪಟುಭಟನೇ ತಾನಾಯಿತ್ತಾದಡೆ, ಹಂದೆ ತಾನಾಪ್ಪನೆ?–ಒಳ್ಳೇ ಪರಾಕ್ರಮ ಪುರುಷನಾದಲ್ಲದೆ ಹೇಡಿ ತಾನಾದಾನೆ? ಆಗನು. ಒಜೆಗಟ್ಟಿರಿಯದವರ ಲೋಕ ಮೆಚ್ಚುವುದೆ?–ಚಾವಡಿಗಳಲ್ಲಿ ಹೆಬ್ಬಾಗಿಲುಗಳಲ್ಲಿ ಕುಳಿತುಕೊಂಡು ನನ್ನೊಂದಿಗೆ ಕೈಗೊಟ್ಟು ಯುದ್ಧಕ್ಕೆ ಬರುವವರಿಲ್ಲೆಂದು ಕತ್ತಿಗೆ ಒರೆಯನ್ನು ಕಟ್ಟಿದಲ್ಲಿ ಈ ವಾರ್ತೆಯನ್ನು ಮತ್ತೊಬ್ಬ ಪಟುಭಟನು ಕೇಳಿ ನನ್ನಕೊಡೆ ಯುದ್ಧಕ್ಕೆ ಬಾಯೆಂದು ಕರೆದಲ್ಲಿ ಇದೇನು ಛಲಬಿರಿದಲ್ಲ, ನಮ್ಮ ಅಜ್ಜ ಆರುತೆರ ಮುತ್ಯಾಮೂರುತೆರದಲ್ಲಿ ಕಟ್ಟಿದ ಕುಲಬಿರಿದೆಂದು, ಇಜೆಯದವರ–ಯುದ್ಧವ ಮಾಡದವರ, ಲೋಕ ಮೆಚ್ಚುವುದೆ?–ಲೋಕದಾತ್ಮರುಗಳು ಮಮಕರಿಸುವರೆ? ಲೋಕದಲ್ಲಿರುವಂಥ ಪಟುಭಟರು ಮಮಕರಿಸುವರೆ? ಮಮಕರಿಸರು.

ಉಟ್ಟ ಚಲ್ಲಣ_ದಟ್ಟಿ ಚಲ್ಲಣ ಮೊದಲಾದುವನ್ನು ಉಟ್ಟುಕೊಂಡು, ಕೈಯಲ್ಲಿ–ಹಸ್ತದಲ್ಲಿ, ಪಟ್ಟೆಡಿವಿದು ಪಟ್ಟೆದಲಗನು ಹಿಡಿದುಕೊಂಡು, ಗರುಡಿಯ ಕಟ್ಟಿ–ಸಾಧಕಾಂಗದಾಲಯವನ್ನು ನಿರ್ಮಿತವು ಮಾಡಿ, ಶ್ರವವ ಮಾಡುವಂತೆ–ಸಾಧನೆಯ ಮಾಡುತ್ತಿದ್ದ ಹಾಂಗೆ, ತನ್ನ ತಪ್ಪಿಸಿಕೊಂಡಡೆ–ತಾನು ಸಾಧನೆಯ ಮಾಡುತಿದ್ದ ಹಾಂಗೆ ವೈರಿ ಹಾಕುವಂಥ ಪೆಟ್ಟನ್ನು ಹಾರಿಹೊಡೆದು ಅವನ ಮೇಲೆ ಪೆಟ್ಟು ಹಾಕುವಂಥ ಸಾಧಕನ ಕೈಯನ್ನು ಮರೆದು ಹೌಹೊಡೆದೋಪಾದಿಯಲ್ಲಿ ಸುಮ್ಮನೆ ನಿಂತುಕೊಂಡಿದ್ದರೆ, ಶಿವ ಮೆಚ್ಚುವನೆ?–ಎಡಬಲದಲ್ಲಿದ್ದಂಥ ಪಟುಭಟರುಗಳು ಮಮಕರಿಸುವರೆ? ಮಮಕರಿಸರೆಂಬ ದೃಷ್ಟೋಪಮಾನದ ಹಾಂಗೆ.

• ಹರ ಬೀಜವಾದಡೆ–ನಿರ್ವಂಚಕ ಸದ್ಭಕ್ತರ ಹೊಟ್ಟೆಯಲ್ಲಿ ಹುಟ್ಟಿದಂಥ ಚಿತ್ತಿನ ಚಿದಂಶಿಕ ತಾನಾದರೆ, ಹಂದೆ ತಾನಪ್ಪನೆ?–ತನುಮನಧನಂಗಳನು ವಂಚಿಸಿಕೊಂಡು ಹಿಮ್ಮೆಟ್ಟುವಂಥ ಉಪಾಧಿಕ ತಾನಾದಾನೆ? ಆಗಲರಿಯನು. ಒಜೆಗಟ್ಟಿರಿಯದವರ ಲೋಕ ಮೆಚ್ಚುವುದೆ: ಒಜೆಗಟ್ಟಿ–ದೇವ ಭಕ್ತ ಪದಾರ್ಥವಾದದ್ದು ಒಂದೇ ವಸ್ತುವೆಂದರಿದು ತಾನು ತಾನಾಗಿ ಮಾಡುವಂಥ ಸಮರಸಜ್ಞಾನವೆಂಬಾಯುಧವನ್ನು ಪಿಡಿದುಕೊಂಡು, ಇಜೆಯದವರ–ಇಚ್ಛಾಪದಾರ್ಥವನ್ನು ಕೊಟ್ಟು ಭಕ್ತಿಯ ಮಾಡದವರ, ಲೋಕ ಮೆಚ್ಚು ವುದೇ?–ಲೋಕದಲ್ಲಿರುವಂಥ ಭಕ್ತಮಾಹೇಶ್ವರರುಗಳು ಮಮಕರಿಸುವರೆ? ಮಮಕರಿಸರು.

ಉಟ್ಟಚಲ್ಲಣ–ಸರ್ವಾಂಗಕ್ಕೆ ಸತ್ಕ್ರಿಯಾಚಾರವೆಂಬ ಅಂಬರವನ್ನು ಅಚ್ಛಾದಿಸಿಕೊಂಡು, ಕೈಯಲ್ಲಿ–ಸುಚಿತ್ತವೆಂಬ ಹಸ್ತದಲ್ಲಿ, ಪಟ್ಟೆಯವಿಡಿದು–ಸಮರಸಜ್ಞಾನವೆಂಬ ಆಯುಧವನ್ನು ಪಿಡಿದುಕೊಂಡು, ಗರುಡಿಯ ಕಟ್ಟಿ–ಶಿವಾದ್ವೈತಭಕ್ತಿಯೆಂಬ ಆಲಯವನ್ನು ನಿರ್ಮಿತವ ಮಾಡಿ, ಶ್ರವವ ಮಾಡುವಂತೆ–ಭಕ್ತಿಸಾಧನೆಯನ್ನು ಅನುಗೈವುತಿದ್ದ ಹಾಂಗೆ, ತನ್ನ ತಪ್ಪಿಸಿಕೊಂಡಡೆ–ಅಂತರಂಗದ ಪದಾರ್ಥವನ್ನು ವಂಚಿಸಿಕೊಂಡರೆ, ಶಿವ ಮೆಚ್ಚುವನೆ?–ಪರಮೇಶ್ವರನು ಮಮಕರಿಸಿಕೊಂಡು ನಿಜಮೋಕ್ಷವನ್ನು ಕರುಣಿಸಿಕೊಟ್ಟಾನೆ? ಕೊಡಲರಿಯನು.

ಅಜೆಯದವರಿಗೆ–ಸರ್ಪನ ನಿಲುಕಡೆಯನ್ನು ತಿಳಿಯದೇ ಇದ್ದಂಥ ಹೆಡ್ಡ ಸ್ತ್ರೀಯರಿಗೆ, [೧]ಒಳ್ಳೆ ಹೆಡೆಯೆತ್ತಿ ಆಡುವಂತೆ–ಜಲದುಂದುಭನು ಉದಕದೊಳಗೆ ತಲೆಯನ್ನು ಎತ್ತಿಕೊಂಡು ಆಡುತ್ತಿದಲ್ಲಿ ಅರಿಯದಿದ್ದಂಥ ಸ್ತ್ರೀಯರುಗಳು ಎಂಥ ಚಲೋ ಸರ್ಪ ಎಂಥ ಚಲೋತ್ನಾಗಿ ಆಡುತ್ತೆತೆಂದು[೧] ಅತಿ ಬೆರಗಾಗಿ ನೋಡುವರು ಬಲ್ಲಂಥ [೨]ಸ್ತ್ರೀಯರುಗಳೇ?[೨] ಇದು ಜಲ[೩]ದುಂದುಭ[೩]ನಲ್ಲವೆ? ಎಂದು ಕಾಲಿಲೆ ಓರೆಮಾಡಿ ಉದಕವನ್ನು ತುಂಬಿಕೊಂಡು ಹೋಗುತ್ತಿಹರೋ ಹಾಂಗೆ, [೪]ಬೋ[೪]ಳ್ಳಗನ

ಭಕ್ತಿ–ಉಪಾಧಿಕನು ಮಾಡುವಂಥ ಭಿನ್ನಭಕ್ತಿದಾಸೋಹವನ್ನು ಕೈಕೊಂಬುವಂಥ ವರ್ಮವನ್ನು ಅರಿಯದೇ ಇದ್ದಂಥ ಆಶಾಲಾಂಛನಿಗಳಿಗೆ ಮೆದಿಮೆದಿ ಹೋಳಿಗೆ ನೀಡುತ್ತೈದಾನೆ, ತಂಬಿತಂಬಿಗೆ ತುಪ್ಪ ಬೊಗ್ಗಿಸುತ್ತೈದಾನೆ ಎಂದು ಹೇಳಿದಲ್ಲಿ ಆಶಾಲಾಂಛನಿಗಳಿಗೆಬಹು ಪರಿಣಾಮವಾಗುವುದು. ಉಪಾಧಿಕನು ಮಾಡುವಂಥ ಭಿನ್ನಭಕ್ತಿ ದಾಸೋಹವನ್ನು ಕೈಕೊಂಬುವಂಥ ವರ್ಮವನ್ನು ಬಲ್ಲಂಥ ಜ್ಞಾನಜಂಗಮ ಮೂರ್ತಿಗಳ ಮಧ್ಯದಲ್ಲಿ ಹಾಸ್ಯವಾಗಿರ್ಪುದು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

....

೧–೧ ಒಳ್ಳೆ ಹೆಡೆಯೆತ್ತಾಡುತ್ತೈತೆಂದು (ಕ), ೨–೨ ವರುಗಳೇ (ಕ), ೩–೩ ದುಂಡು (ಕ), ೪–೪ ಬೆಳ್ಳಿ (ಗ)

II –

1–1 ವಪ್ಪ (ಚ, ಜ), 2–2 x (ಚ, ಜ), 3, 3 ಟ್ಟೆ ಹ (ಚ, ಜ)

ಹರ ಬೀಜವಪ್ಪಡೆ ಹಂದೆ ತಾನಪ್ಪನೆ?–ಮೂಲಜ್ಞಾನಚಿತ್ಸ್ವರೂಪನಾದ ಶಿವಾಂಶಿಕನಾದರೆ ವೈರಾಗ್ಯಹೀನವಾದ ಹೆಂಬೆಯಾಗುವನೆ? ಒಱೆಗಟ್ಟಿ ಇಱಿಯದವರ ಲೋಕ ಮೆಚ್ಚುವುದೆ?–ಅಷ್ಟಾವರಣಂಗಳೆಂಬ ಕೋಶವನು ಬಂಧಿಸಿ ತನುಮನಧನವು ಗುರುಲಿಂಗಜಂಗದೆಂಬ ಶಸ್ತ್ರದಿಂದೆ ಆ ಗುರು ಲಿಂಗಜಂಗಮದಿಚ್ಛೆಯನು ತಿಳಿದು ಹಿಂದೆ ಮಾಡಲರಿಯದವರ ಜಗಜ್ಜೀವರುಗಳು ಒಲಿವರೆ?

ಉಟ್ಟ ಚಲ್ಲಣ–ಪ್ರವೇಷ್ಟಿಸಿದಂಥ ನಿಜಭಕ್ತಿಕ್ರೀಯು, ಕೈಯ ಪಟ್ಟೆಹವಿಡಿದು–ತ್ರಿಕರಣಂಗಳೆಂಬ ಹಸ್ತದಲ್ಲಿ ಸೂನ್ಯತವಿರಾಗಸತ್ಕ್ರಿಯೆಂಬ ಮೂರು ಮೇಳೈಸಿದ ಮೂಲಜ್ಞಾನವೆಂಬ ಶಸ್ತ್ರವನು ಗ್ರಹಿಸಿ, ಗರುಡಿಯ ಕಟ್ಟಿ ಶ್ರವವಮಾಡುವಂತೆ–ಭಕ್ತಿಮಂದಿರವನು ಬಂಧಿಸಿ ಭಕ್ತಿಸಾಧಕವನೆಸಗುತ್ತಿರ್ಪಂತೆ, ತನ್ನ ತಪ್ಪಿಸಿಕೊಂಡಡೆ ಶಿವ ಮೆಚ್ಚುವನೆ?–ಆತ್ಮನ ಹೊಱಚ್ಚ ಮಾಡಿಕೊಂಡರೆ ಪರಶಿವನೊಲಿವನೆ?

ಅಱಿಯದವರಿಗೆ ಒಳ್ಳೆ ಹೆಡೆಯೆತ್ತಿಯಾಡುವಂತೆ–ಉಪಾಧಿ ನಿರುಪಾಧಿ ಸಹಜ[೫]ಭಕ್ತಿಯನು ತಿಳಿಯದ ಜಂಗಮಕ್ಕೆ ಭಿನ್ನಭಕ್ತಿಯೆಂಬ ಭೋಗವ ನೆಗಹಿ ತನು ನಿಮ್ಮದು ಮನ ನಿಮ್ಮದು ಧನ ನಿಮ್ಮದೆಂದು ವಚಿಸುತಿರ್ಪರು, ಬೊಳ್ಳೆಗನ ಭಕ್ತಿ ಕೂಡಲಸಂಗಮದೇವಾ–ಅಂತರಂಗದಲ್ಲಿ ಭಕ್ತಿನೈಷ್ಠೆ ಜ್ಞಾನ ನೈಷ್ಠೆ ವೈರಾಗ್ಯನೈಷ್ಠೆಯೆಂಬ ಪ್ರಯೋಜನವಿಲ್ಲದವನ[೫] ವಿಶ್ವಾಸವು ಎಲೆ ಲಿಂಗವೆ.

....

೫–೫ x (ಚ)

III –

ಒಱೆಗಟ್ಟಿ–ಕತ್ತಿಯ ಒರೆಯನು ಅಗಸಿಯ ಬಾಗಿಲಿಗೆ ಬಂಧಿಸಿ, ಇರಿಯದವರನು–ಸಂಗ್ರಾಮದಲ್ಲಿ ಶತ್ರುಸಂಹಾರವನು ಮಾಡದವರನು. ಲೋಕ ಮೆಚ್ಚೂದೇ–ಜನ ಒಪ್ಪೀತೇ, ಉಟ್ಟಚಲ್ಲಣ–ಪ್ರವೇಷ್ಟಿಸಿದ [೪][ಛಾದನಾಂಶವು][೪], ಶ್ರವವ ಮಾಡುವಂತೆ–ಸಾಧಕವನು ಎಸಗುವ ಹಾಂಗೆ. ತನ್ನ ತಪ್ಪಿಸಿಕೊಂಡರೆ–ತಾನು ಗುರುಲಿಂಗಜಂಗಮದ ಭಕ್ತಿಯ ಮಾಡುವಲ್ಲಿ ಅಪಲಾಪಿಸಿಕೊಂಡರೆ, ಶಿವ ಮೆಚ್ಚುವನೆ?–ಪರಶಿವನು ಮಮ ಕರಿ[೫]ಸುವ[೫]ನೆ?, ಒಳ್ಳೆ [೬]ಬೊ[೬]ಳ್ಳೆ ಹಾವು, ಹೆಡೆಯೆತ್ತಿ–ದರ್ವಿಯನು ನೆಗಹಿ, ಬೊಳ್ಳಗನ–ಅಂತರಂಗದಲ್ಲಿ ಭಕ್ತಿಸಾರವಿಲ್ಲದಾತನ, ಭಕ್ತಿ–ಭಿನ್ನಭಕ್ತಿಯು.

....

೬-೬ ಚಂಡಾಂಶವು (ಟ, ಡ), ೭-೭ ಸಾ (ಟ) ೮-೮ ಹೊ(ಟ)

೬೭೧

ಮೊನೆ ತಪ್ಪಿದ ಬಳಿಕ ಅಲಗೇನು ಮಾಡುವುದು? ವಿಷ ತಪ್ಪಿದ ಬಳಿಕ ಹಾವೇನು ಮಾಡುವುದು? ಭಾಷೆ ತಪ್ಪಿದ ಬಳಿಕ ದೇವ[1] ಬಲ್ಲಿದ ಭಕ್ತನೇನ ಮಾಡುವನಯ್ಯ. ಭಾಷೆ ತಪ್ಪಿದ ಬಳಿಕ ಪ್ರಾಣದಾಸೆಯ[2] ಹಾರಿದಡೆ ಮೀಸಲ ಸೊಣಗ ಮುಟ್ಟಿದಂತೆ ಕೂಡಲಸಂಗಮದೇವಾ!

I -

ಮೊನೆ ತಪ್ಪಿದ ಬಳಿಕ-ರಣಾಗ್ರದಲ್ಲಿ ಕಡಿದಾಡುವಾಗ್ಗೆ ಸಾಧಕನ ಕೈತಪ್ಪಿ ಅಲಗಿನ ಮೊನೆ ಓರೆಯಾದ ಮೇಲೆ, ಅಲಗೇನು ಮಾಡವುದು?-ಅಂಥ ಆಯುಧ ಇಂಥ ಆಯುಧವೆಂದು ಸಿಟ್ಟಲಿಂದ ನೆಲಕಪ್ಪಳಿಸಿ ಬಡಿದರೆ ಅಲಗೇನು ಮಾಡುವುದು. ಆಯುಧದೊಂದಿಗೇನಾಗುವುದು' ವಿಷ ತಪ್ಪಿದ ಬಳಿಕ: ಕಚ್ಚಿ ವಿಷವನುಗುಳಿ ಪ್ರಾಣವ ಕೊಲ್ಲುವಂಥ, ವಿಷ-ಕ್ಷ್ವೇಡವು, ತಪ್ಪಿದ ಬಳಿಕ-ತೊಲಗಿದ ಮೇಲೆ. ಹಾವೇನ ಮಾಡುವುದು? ಸರ್ಪದೊಂದಿಗೇನಾಯಿತ್ತು? ಭಾಷೆ ತಪ್ಪಿದ ಬಳಿಕ ದೇವ ಬಲ್ಲಿದ ಭಕ್ತನೇನು ಮಾಡುವನಯ್ಯ ಭಾಷೆ-ತಾನು ಗಣಸಾಕ್ಷಿಯಾಗಿ ಹಿಡಿದಂಥ ಶೀಲವ್ರತನೇಮಾ ಚಾರಂಗಳಿಗೆ, ತಪ್ಪಿದ ಬಳಿಕ-ವ್ರತಭ್ರಷ್ಟನಾದ ಮೇಲೆ, ದೇವ-ಪರಮೇಶ್ವರನು, ಬಲ್ಲಿದ-ಜನನ ಮರಣದಲ್ಲಿ ತಂದು ಸಂಹರಿಸುವಲ್ಲಿ ಮಹಾಪರಕ್ರಮಿಯು. ಭಕ್ತನೇನು ಮಾಡುವನಯ್ಯ?-ಶಿವಭಕ್ತರೊಂದಿಗೇನಾಗುವುದಯ್ಯ ಭಾಷೆ-ತಾನು ಗಣಸಾಕ್ಷಿಯಾಗಿ ಹಿಡಿದಂಥ ಶೀಲವ್ರತ ನೇಮಾಚಾರಂಗಳಿಗೆ, ತಪ್ಪಿದ ಬಳಿಕ-ವ್ರತಭ್ರಷ್ಟನಾದ ಮೇಲೆ, ಪ್ರಾಣದಾಸೆಯನ್ನು ಹಾರಿದಡೆ-ಒಪ್ಪತ್ತಿನ ಪಾದೋದಕ ತಪ್ಪಿದರೇನಾಯಿತ್ತು ಎರಡು ಹೊತ್ತಿನ ಪಾದೋದಕ ಕಟ್ಟು ಮಾಡಿಕೊಳಬಾರದೆ? ಈ ಲಿಂಗ ಹೋದರೇನಾಯಿತ್ತು ಮತ್ತೊಂದು ಲಿಂಗವ ಧರಿಸಿಕೊಳಬಾರದೆ? ಎಂದು ಮೇಲುಯುಕ್ತಿ ಮೇಲು ವಿಚಾರವನ್ನು ಪರಾಂಬರಿಸುತ್ತೈದಿದರೆ, ಮೀಸಲ ಸೊಣಗ ಮುಟ್ಟಿದಂತೆ-ವೀರಣ್ಣ ಬಸವಣ್ಣನಿಗೆಂದು ಗುರುಲಿಂಗಜಂಗಮಕ್ಕೆ ಇದು ಸರಿ ಇದೆ. ಹಪ್ಪಳ ಸಂಡಿಗೆ ಗೌಲಿ ಬಟವಿ ಮೊದಲಾದವನ್ನು ಹಿತ್ತಲೊಳಗೆ ಮಡಿಪಾವಡವನ್ನು ಹಾಸಿ ಒಣ ಹರವಿ ಶುನಿ ಮಾರ್ಜಾಲ ಮೊದಲಾದುವು ಬಂದು ಮುಟ್ಟಿದ ಹಾಂಗೆ, ಒಬ್ಬ ಅಲ್ಪ ಮನಸ್ಸನುಳ್ಳ ಆತ್ಮವ ಕಾಯ್ದುಕೊಂಡಿರೆಂದು ಹೇಳಿದಲ್ಲಿ ಅವನು ಯಾರೂ ಕಾಣಬಾರದ ಹಾಂಗೆ ಅದರೊಳಗೊಂದಿಷ್ಟು ತೆರೆದುಕೊಂಡು ಬಾಯೊಳಗೆ ಹಾಕಿಕೊಂಡಲ್ಲಿ ಅವೆಲ್ಲ ದೇವತಾಕರ್ಯಕ್ಕೆ ಯೋಗ್ಯವಾಗದೆ ಹೇಂಗೆ ಉಚ್ಛಿಷ್ಟವಾಗುತ್ತಿಹವೋ ಹಾಂಗೆ ಅನಿತ್ಯವಾದ ಹೊನ್ನು ಹೆಣ್ಣು ಮಣ್ಣಿನ ಮೇಲಣ ಅಲ್ಪಾಶೆಯನ್ನು ಮುಂದುಗೊಂಡಾಚರಿಸುವಂಥ ಜೀವನಿಗೆ ಅಂಗಕ್ಕೆ ಲಿಂಗೋಪದೇಶ ಮನಕ್ಕೆ ಮಂತ್ರೋಪದೇಶವನ್ನು ಕರುಣಿಸಿಕೊಟ್ಟರೆ ಸಕಲಪದಾರ್ಥವನು ಲಿಂಗಕ್ಕರ್ಪಿಸಿ ಆ ಲಿಂಗಪ್ರಸಾದವನ್ನು ಪಡೆದನುಭವಿಸಲೊಲ್ಲದೆ ಸಕಲಪದಾರ್ಥವನ್ನು ಲಿಂಗಾರ್ಪಣ ವಿಹೀನವಾಗಿ ಆತ್ಮಾರ್ಪಣವಾಗಿ ಅನುಭವಿಸುತ್ತಿದ್ದ ಕಾರಣ ಅವನಂಗತತ್ವಪದಾರ್ಥಗಳೆಲ್ಲ ಲಿಂಗಾರ್ಪಿತಕ್ಕೆ ಯೋಗ್ಯವಲ್ಲದೆ ಅವೆಲ್ಲ ಮಾಯಾ ಉಚ್ಛಿಷ್ಟವಾಗಿ ಕೆಟ್ಟುಹೋಗುತ್ತಿಹವು, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

II– –

1 + ನೇನ (ಚ, ಜ), 2+ ನು (ಚ, ಜ)

....

ಮೊನೆ ತಪ್ಪಿದ ಬಳಿಕ ಅಲಗೇನ ಮಾಡುವದು? ಸಮರಸಭಕ್ತಿಯು ಹೋಱಚ್ಚಾದ ಮೇಲೆ ಭಕ್ತನೇನ ಮಾಡುವುದು, ವಿಷ ತಪ್ಪಿದ ಬಳಿಕ ಹಾವೇನ ಮಾಡುವುದು?–ವೈರಾಗ್ಯವೆಂಬ ನಂಜು ಹೋಱಚ್ಚಾದ ಮೇಲೆ ಜಂಗಮನೇನ ಮಾಡೂದು, ಭಾಷೆ ತಪ್ಪಿದ ಬಳಿಕ–ತನುಮನಧನವನು ಗುರುಲಿಂಗ ಜಂಗಮಕ್ಕೆ ಸಮರ್ಪಣೆಯ ಮಾಡುವಲ್ಲಿ ಛಲಭಾಷೆ ಹೊರಚ್ಚಾದ ಮೇಲೆ, ದೇವನೇನ ಬಲ್ಲಿದ–ನಡೆದು ತಪ್ಪಿದ ನುಡಿದು ತಪ್ಪಿದ ಪರವಾದಿ ಇವನಲಾಯೆಂದು ಕಲಿಕಾಲಕಾಮಮಾಯಾದಿಗಳ ಕೈಯಿಂದ ಬಡಿಹೊಱೆಯಾಗಿ ಬಡಿಸುವಲ್ಲಿ ಬಲಿಷ್ಠತ್ವವನುಳ್ಳಂಥ ದಿವ್ಯಕಾಂತಿಮೂರ್ತಿಯು, ಭಕ್ತನೇನ ಮಾಡುವನಯ್ಯಾ. ಭಾಷೆ ತಪ್ಪಿದ ಬಳಿಕ–ಷಟ್ಸ್ಥಲ ಬಾಯಲ್ಲಿ ಹೋಱಚ್ಚಾದ ಮೇಲೆ ತನುಮನಧನವನು ಗುರುಲಿಂಗಜಂಗಮಕ್ಕೆ ಸಮರ್ಪಣೆಯ ಮಾಡದೆ, ಪ್ರಾಣದಾಸೆಯನು ಹಾರಿದಡೆ ಮೀಸಲನು ಸೊಣಗ ಮೆಟ್ಟಿದಂತೆ ಕೂಡಲಸಂಗಮದೇವಾ–ವಂಚನೆಯಿಂದ ನನಗಾಗಬೇಕು. ನನ್ನ ಹೆಂಡರಿಗಾಗಬೇಕೆಂದು ಹರಣದ ಮೇಲೆ ಅಪೇಕ್ಷೆಯನಿಚ್ಛೈಸಿದರೆ ಆತ್ಮೋಪಹಾರವನು ಮಾಯಾ ಉಚ್ಛಿಷ್ಟವು ಸೋಂಕುವುದೆಂಬುದರ್ಥ.

III –

ದೇವ ಬಲ್ಲಿದ–ದೇವರು ಕಾಡಿ ನೋಡುವರು.

೬೭೨

ಶರಣಸಂಬಂಧವಱಿದ ಬಳಿಕ ಮರ[1]ಳಿ[1] ಭವಿಯ ಬೆರಸಲಾಗದು. ಬ್ರಹ್ಮಹತ್ಯ ಭ್ರೂಣಹತ್ಯ ವೈತರಣಿ ದುರ್ಗತಿ ಪಂಚಮಹಾಪಾತಕದಿಂದಧಿಕ ನೋಡಾ! ಅಳುಪಿ ಭವಿಯೊಡನುಂಡಡೆ ಭಕ್ತನಲ್ಲ, ಕೂಡಲಸಂಗಮದೇವಾ.

I –

ಶರಣಸಂಬಂಧವಱಿದ ಬಳಿಕ: [ಶರಣ ಸಂಬಂಧವ–] ಶರಣನೇ ಸತಿಯಾಗಿ ಲಿಂಗವೇ ಪತಿಯಾಗಿ ಹೀಂಗೆ ಶರಣಸತಿ ಲಿಂಗಪತಿತ್ವವಿಡಿದಾಚರಿಸುವಂಥ ಆಚರಣೆಯನ್ನು, ಅಱಿದ ಬಳಿಕ– ತಿಳಿದ ಮೇಲೆ, ಮರಳಿ–ಪುನರಪಿಯಾಗಿ, ಭವಿಯ ಬೆರಸಲಾಗದು–ಭವಿಗಳೊಂದಿಗೆ ತನುವಿನ ಕೊಳುಕೊಡು ಮನದ ಕೊಳುಕೊಡು. ಧನದ ಕೊಳುಕೊಡು ಎಂದು ಅರ್ಚನಾರ್ಪಣಕ್ರಿಯೆಗಳ ಮಾಡಲಾಗದು. ಬ್ರಹ್ಮಹತ್ಯ–ಬ್ರಾಹ್ಮಣನ ಕೊಂದಂಥ ಪಾಪವು, ಭ್ರೂಣಹತ್ಯ–ಬಸುರಕರಗಿಸಿ, ಶಿಶುವ ಕೊಂದಂಥ ಪಾಪವು, [1][ವೈತರಣಿ–ನರಕದ ನದಿ][1], ದುರ್ಗತಿ–ಅಧೋಗತಿಯು[2], ಪಂಚಮಹಾತಕದಿಂದಧಿಕ ನೋಡಾ–ಇವೆಲ್ಲಕ್ಕೂ ಶ್ರೇಷ್ಠವಾದ [3]ಪಾಪವೇ[3] ಸಂಭವಿಸುತ್ತಿಹುದು ಕಂಡಾ. ಅಳುಪಿ–ಪುನರಪಿಯಾಗಿ, ಭವಿಯೊಡನೆ–ಭವಿಜನಾತ್ಮರುಗಳೊಂದಿಗೆ, ಉಂಡಡೆ– ಅನುಭವಿಸಿದರೆ, ಭಕ್ತನಲ್ಲ–ಶಿವಭಕ್ತಲ್ಲವು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

....

೧-೧ ವೈ-ಗೋವು, ತರುಣಿ_ಸ್ತ್ರೀಯಳ ಕೊಂದಂಥ ಪಾಪವು (ಕ, ಗ), ೨+ ಅವಲ್ಲದೆ ಮುಖದಪ್ಪಿ, ವರ್ತಿಸುವಂಥದು (ಕ, ಗ), ೩-೩, ಪದವಿಯೇ-(ಗ)

IV -

1-1 ದು (ತ)

....

ಭವಿಯೆ ಮಹಾಪಾತಕ, ಅಳುಪಿ ಭವಿಯ ಕೂಡಿದರೆ ಅಘೋರ ನರಕವೆಂಬುದೀ ವಚನದರ್ಥ.

೬೭೩

ವೀರ ವ್ರತಿ ಭಕ್ತನೆಂದು ಹೊಗಳಿಸಿಕೊಂಬುವಿರಿ ಕೇಳಿರಯ್ಯ, ವೀರನಾದಡೆ ವೈರಿಗಳು ಮೆಚ್ಚಬೇಕು, ವ್ರತಿಯಾದಡೆ ಅಂಗನೆಯರು ಮೆಚ್ಚಬೇಕು, ಭಕ್ತನಾದಡೆ ಜಂಗಮ ಮೆಚ್ಚಬೇಕು. ಈ ನುಡಿಯೊಳಗೆ ತನ್ನ ಬಗೆಯಿರೆ ಬೇಡಿದ ಪದವಿಯನೀವ ನಮ್ಮ ಕೂಡಲಸಂಗಮದೇವ.

I -

ವೀರ ವ್ರತಿ ಭಕ್ತನೆಂದು ಹೊಗಳಿಸಿಕೊಂಬುವಿರಿ ಕೇಳಿರಯ್ಯ: ವೀರ ಪರಾಕ್ರಮಿಯ ವ್ರತಿ-ಜಿತೇಂದ್ರಿಯಪುರುಷರು. ಭಕ್ತನೆಂದು-ಶಿವಭಕ್ತನೆನುತ್ತ, ಹೊಗಳಿಸಿಕೊಂಬುವಿರಿ-ಕೀರ್ತಿಸಿಕೊಂಬುವಿರಿ, ಕೇಳಿರಯ್ಯ-ಆಲಿಸಿರಯ್ಯ.

ವೀರನಾದಡೆ-ಪರಾಕ್ರಮಿ ತಾನಾದರೆ, ವೈರಿಗಳು ಮೆಚ್ಚಬೇಕು: ವೈರಿಗಳು-ಅರಿಬಲದವರು, ಮೆಚ್ಚಬೇಕು-ಇವನು ಕುರಿಯ ಹಿಂಡಿನೊಳಗೆ ತೋಳ ಹೊಕ್ಕಹಾಂಗೆ ಹುಲ್ಲೆಹಿಂಡಿರೊಳಗೆ ಹುಲಿ ಹೊಕ್ಕಹಾಂಗೆ ಆನೆ ಹಿಂಡಿನೊಳಗೆ ಸಿಂಹ ಹೊಕ್ಕಹಾಂಗೆ ಸಿಂಹನ ಹಿಂಡಿನೊಳಗೆ ಗಂಡಭೇರುಂಡ ಹೊಕ್ಕಹಾಂಗೆ ಈಚೆಂದಾಚೆಗೆಕಡಕೊಂಬುತ್ತ ಹೋದ ಆಚೆಲಿಂದ ಈಚೆಗೆ ಕಡಕೊಂಬುತ್ತ ಬಂದ ಇವನು ಮಹಾಪರಾಕ್ರಮಿಯುಹುದೆಂದು, ಮೆಚ್ಚಬೇಕು-ಮಮಕರಿಸಬೇಕು.

ವ್ರತಿಯಾದಡೆ-ಜಿತೇಂದ್ರಿಯಾಪುರುಷ ತಾನಾದರೆ, ಅಂಗನೆಯರು-ಸ್ತ್ರೀಯರುಗಳು, ಮೆಚ್ಚಬೇಕು-ಎಷ್ಟು ನಮ್ಮ ಹಾವಭಾವವಿಲಾಸ ವಿಭ್ರಮಣೆಗನು ತೋರಿ ತರ್ಕೈಸಿಕೊಂಡರೂ ನಮ್ಮ ಪ್ರಪಂಚಿಗೆ ಒಳಗಾಗಲಿಲ್ಲ, ಇವನು ಮಹಾಜಿತೇಂದ್ರಿಯಪುರುಷನಹುದೆಂದು ಮೆಚ್ಚಬೇಕು-ಮಮಕರಿಸಬೇಕು.

ಭಕ್ತನಾದಡೆ-ನಿರ್ವಂಚಕ ಸದ್ಭಕ್ತನೇ ತಾನದರೆ, ಜಂಗಮ-ಚರಜಂಗಮವು, ಮೆಚ್ಚಬೇಕು ಇವನು ನಾವು ಕೇಳಿಕೇಳಿದ ಹಾಂಗೆಲ್ಲ ಇಚ್ಛಾಪದಾರ್ಥವನ್ನು ಕೊಟ್ಟು ಭಕ್ತಿಯ ಮಾಡಿದ, ಇವ ಮಹಾ ನಿರ್ವಂಚಕ ಸದ್ಭಕ್ತನಹುದೆಂದು, ಮೆಚ್ಚಬೇಕು-ಮಮಕರಿಸಬೇಕು.

ಈ ನುಡಿಯೊಳಗೆ-ಈ ಪ್ರಸಂಗದಲ್ಲಿ, ತನ್ನ ಬಗೆಯಿರಿ-ಭಕ್ತನಾದರೆ ಭಕ್ತಿಭಾವದ ಪರೀಕ್ಷೆ ವ್ರತಿಯಾದರೆ ಜಿತೇಂದ್ರಿಯತ್ವದ ಪರೀಕ್ಷೆ ವೀರನಾದರೆ ಪರಾಕ್ರಮತ್ವದ ಪರೀಕ್ಷೆ ಉಂಟಾಗಿರ್ದರೆ,

ಬೇಡಿದ ಪದವಿಯನೀವ–ತಾನೇನು ಬೇಡಿದ ಇಷ್ಟಾರ್ಥಸಿದ್ಧಿಯನ್ನು ಕರುಣಿಸಿಕೊಡುತ್ತಿಹನು, ನಮ್ಮ ಕೂಡಲಸಂಗಮದೇವ–ನಮ್ಮ ಪರಶಿವಲಿಂಗವು.

IV –

ವೀರಮಾಹೇಶ್ವರನಾದರೆ ಗುರುಲಿಂಗಜಂಗಮ ಮೆಚ್ಚಬೇಕು, ಆಗಮಪ್ರಮಾಣಾಗಿರಬೇಕು. ಇದ್ದರೆ ಶಿವನು ನಿತ್ಯವ ಕೊಡುವನೆಂಬುದೀ ವಚನದರ್ಥ.

೬೭೪

ಕಲಿತನ ತನಗುಳ್ಳಡೆ ಸೂಜಿಬಾಳು ಮೊದಲಾಗಿ ಕಾದಲೇ ಬೇಕು. ಶರಣಪಥ ತನಗುಳ್ಳಡೆ ಶಿವಭಕ್ತರ ಮನೆಯ ಶಿವರಸವ ಪಂಚಾಮೃತವ ಮಾಡಿಕೊಳ್ಳಬೇಕು. ಭ್ರಾಂತುವಿಡಿದು ಲಿಂಗಕ್ಕೋಗರವನಱಸುವ ಪಾತಕರ ಮೆಚ್ಚ ನಮ್ಮ ಕೂಡಲಸಂಗಮದೇವ.

I –

ಕಲಿತನ ತನಗುಳ್ಳಡೆ–ಪರಾಕ್ರಮತ್ವವೇ ತನ್ನಲ್ಲುಂಟಾಗಿದ್ದರೆ, ಸೂಜಿ–ವಸನಬಂಧಿಯು, ಬಾಳು–ಆಯುಧವು, ಮೊದಲಾಗಿ–ಇವು ಮುಂತಾಗಿ, ಕಾದಲೇಬೇಕು–ಇವು ಮೊದಲಾದಾಯುಧದೊಳಗೆ ಯಾವ ಆಯುಧವಿದ್ದರೇನು ಕಾದಿ ಗೆಲುವುದು. ಅದಲ್ಲದೆ ಮರಳಿ ಮನೆಗೆ ಹೋಗಿ ಆಯುಧವ ತೆಗೆದುಕೊಂಡು ಬರುತ್ತೈದೇನೆಂದು ತಪ್ಪಿಸಿಕೊಂಡು ಹೋಗದೆ ಎದೆಗೊಟ್ಟು ಇದಿರಾಂತು ಪಂಥವ ಹಾಕಿಕೊಂಡು ಯುದ್ಧವ ಮಾಡಲೇ ಬೇಕು.

ಶರಣಪಥ ತನಗುಳ್ಳಡೆ–ಶರಣನೇ ಸತಿಯಾಗಿ ಲಿಂಗವೇ ಪತಿಯಾಗಿ ಶರಣಸತಿ ಲಿಂಗಪತಿತ್ವವಿಡಿದಾಚರಿಸುವಂಥ ಆಚರಣೆಯೇ ತನ್ನಲ್ಲುಂಟಾಗಿದ್ದರೆ, ಶಿವಭಕ್ತರ–ಹರಭಕ್ತರ, ಮನೆಯ–ಮಂದಿರದ, ಶಿವರಸವ–ಅಂಬಲಿ ತುಂಬಿಸೊಪ್ಪನ್ನು ಎಡೆಮಾಡಿದಲ್ಲಿ, ಪಂಚಾಮೃತವ ಮಾಡಿಕೊಳಬೇಕು–ಪಂಚಾಮೃತಕ್ಕೆ ಸಮಾನವ ಮಾಡಿಕೊಂಡನುಭವಿಸಬೇಕು.

ಭ್ರಾಂತುವಿಡಿದು–ಜಿಹ್ವಾಲಂಪಟತ್ವವನ್ನು ದೃಢವಿಡಿದುಕೊಂಡು, ಲಿಂಗಕ್ಕೋಗರವನಱಸುವ–ನಮ್ಮ ಲಿಂಗಕ್ಕೆ ಅಂಬಲಿ ತುಂಬಿಸೊಪ್ಪು ಮೊದಲಾದ ಶುಷ್ಕಾನ್ನಪಾನಂಗಳು ಆಗೋದಿಲ್ಲ. ಒಳ್ಳೆಯ ಸೋಸಿದ ಕಣಕದ ಕಡಬು ಸಣ್ಣಕ್ಕಿಬೋನ ಬೆಣ್ಣೆಕಾಸಿದ ತುಪ್ಪ ಮೊದಲಾದುವಾಗಬೇಕೆಂದು, ಅಱಸುವ–ನಾಡಿಗ ದೇಸಾಯಿ ಸೆಟ್ಟಿ ಚೌದರಿಗಳ ಮನೆಗಳು ಎಲ್ಲೈದಾವೆ ಯಾವಲ್ಲೈದಾವೆ ಎಂದು ಹುಡುಕಿಕೊಂಡು ಹೋಗುವ, ಪಾತಕರ–ಪಂಚಮಹಾ ಪಾತಕರ, ನಮ್ಮ ಕೂಡಲಸಂಗಮದೇವ–ನಮ್ಮ ಪರಶಿವಲಿಂಗವು, ಮೆಚ್ಚ–ಅವರಿಗೆ ಮಮಕರಿಸಿ ನಿಜಮೋಕ್ಷವನ್ನು ಕರುಣಿಸಿಕೊಟ್ಟಾನೇ? ಕೊಡಲರಿಯನು.

II –

'ಕಲಿತನ ತನಗುಳ್ಳಡೆ–ವೀರಮಾಹೇಶ್ವರಾಚರಣೆ ಸಮರ್ಥತ್ವವು ತನಗುಂಟಾದರೆ, ಸೂಜಿಬಾಳು ಮೊದಲಾಗಿ ಕಾದಲೇ ಬೇಕು–ಸುರುಚಿರ ಪಿಂಡಾದಿಜ್ಞಾನಶೂನ್ಯಾಂತಮಾದ

ಸರ್ವಾಚಾರಸಂಪತ್ತಿನಾಚರಣೆಯನುಳ್ಳ ಮೂಲಜ್ಞಾನವೆಂಬ ಶಸ್ತ್ರವು ಮುಂತಾಗಿ ತನಗಿದಿರಾದಂಥ ಪ್ರಕೃತಿಕರಣಂಗಳೊಡನೆ ಯುದ್ಧವ ಮಾಡಬೇಕು, ಶರಣಪಥ ತನಗುಳ್ಳಡೆ-ಶರಣನೇ ಸತಿಯಾಗಿ ಲಿಂಗವೇ ಪುರುಷನಾಗಿ ಪಂಚೇಂದ್ರಿಯಂಗಳಲ್ಲಿ ಪಂಚವಿಧಲಿಂಗಸಂಬಂಧವ ಮಾಡಿಕೊಂಡಾಚರಿಸುವ ಮಾರ್ಗವು ತನಗುಂಟಾದರೆ, ಮುಂದಕ್ಕೆ ಕಾಣಬಂದರ್ಥ.[೧]

....

೧-೧ II ನೆಯ ಟೀಕೆಯಲ್ಲಿ ಜಂಬೂದ್ವೀಪ..(ವ.೬೭೯) ಎಂಬ ವಚನದ ತರುವಾಯ ಈ ವಚನ ಬಂದಿದೆ.

೬೭೫

ಕಟ್ಟಿ ಬಿಡುವನೆ ಶರಣನು? ಬಿಟ್ಟು ಹಿಡಿವನೆ ಶರಣನು? ನಡೆದು ತಪ್ಪುವನೆ ಶರಣನು? ನುಡಿದು ಹುಸಿವನೆ ಶರಣನು? [1]ಸಹಜ[1] ಸಜ್ಜನಿಕೆ ತಪ್ಪಿದಡೆ ಕೂಡಲಸಂಗ[2]ಮದೇವ[2] ಮೂಗ ಹಲ್ಲುದೋಜಿ ಕೊಯ್ವ.

I -

ಕಟ್ಟಿ ಬಿಡುವನೆ ಶರಣನು: ಕಟ್ಟಿ-ತ್ರಿವಿಧಪದಾರ್ಥವನ್ನು ಹಿಡಿದು ಭಕ್ತಿಗೃಹವನ್ನು ಕಟ್ಟಿ ಬಿಡುವನೆ-ಅಷ್ಟುದಿನ ಮಾಡಿ ಬಿಟ್ಟು ಬಿಟ್ಟಾನೇ? ಬಿಟ್ಟುಕೊಡನು, ಶರಣನು-ನಿರ್ವಂಚಕ ಸದ್ಭಕ್ತನು, ಬಿಟ್ಟುಹಿಡಿವನೆ ಶರಣನು: ಬಿಟ್ಟು-ಮಲತ್ರಯಂಗಳನು ಬಿಟ್ಟುಕೊಟ್ಟು, ಹಿಡಿವನೆ-ಬಿಟ್ಟಂಥ ಮಲತ್ರಯಂಗಳನ್ನು ದೃಢವಿಡಿದಾನೆ? ಹಿಡಿಯನು, ಶರಣನು-ಜ್ಞಾನಜಂಗಮಮೂರ್ತಿಯು.

ನಡೆದು ತಪ್ಪುವನೆ ಶರಣನು?: ನಡೆದು-ಭಕ್ತಿಜ್ಞಾನವೈರಾಗ್ಯವಿಡಿದಾಚರಿಸುತ್ತ ಐವತ್ತಾರು ದೇಶದಲ್ಲಿ ದಿಗ್ದೇಶಾಂತರನನ್ನು ಮಾಡಿ, ತಪ್ಪುವನೆ-ಮಧ್ಯದಲ್ಲಿ ಚೌಕಿಮಠಂಗಳಲ್ಲಿ ನಿಂತುಕೊಂಡು ಪಾಶಬದ್ಧನಾದಾನೆ? ಆಗನು, ಶರಣನು-ಜ್ಞಾನಜಂಗಮಮೂರ್ತಿಯು, ನುಡಿದು ಹುಸಿವನೆ ಶರಣನು?: ನುಡಿದು-ಸ್ವಾಮೀ ತನು ನಿಮ್ಮದು ಮನ ನಿಮ್ಮದು ಧನ ನಿಮ್ಮದು ಅರ್ಥಪ್ರಾಣಾಭಿಮಾನ ನಿಮ್ಮದು ನಾನು ನಿಮ್ಮ ತೊತ್ತು ತೊಂಡ ಸೇವಕನೆಂದು ಹೇಳಿಕೊಂಡು ಹುಸಿವನೆ-ಜಂಗಮಮೂರ್ತಿಗಳು ಬಂದು ಎಲೋ ಭಕ್ತ ತನುವ ಕೊಡು ಮನವ ಕೊಡು ಧನವಕೊಡು ಎಂದು ಕೇಳಿದಲ್ಲಿ ನಾನೆಲ್ಲಿ ಕೊಟ್ಟೆ? ನಾನೆತ್ತ ಹೇಳಿಕೊಂಡಿದ್ದೆ? ಎಂದು ಭಕ್ತಮಾಹೇಶ್ವರರುಗಳ ಮಧ್ಯದಲ್ಲಿ ಸಟೆಯನಾಡುವನೆ? ಆಡನು, ಶರಣನು-ನಿರ್ವಂಚಕಸದ್ಭಕ್ತನು.

ಸಹಜ ಸಜ್ಜನಿಕೆ ತಪ್ಪಿದಡೆ : ಸಹಜ-ಯಥಾರ್ಥವಾದ, ಸಜ್ಜನಿಕೆ-ಪಂಚಮಹಪಾತಕಂಗಳು ಬಿಟ್ಟು ಪಂಚಾಚರವಿಡಿದಾಚರಿಸುವಂಥ ಪರಮ ನಿರ್ಜರತ್ವಕ್ಕೆ, ತಪ್ಪಿದಡೆ-ತೊಲಗಿದರೆ, ಕೂಡಲಸಂಗಮದೇವ-ಪರಶಿವಲಿಂಗವು, ಮೂಗ-ಆಚಾರಾಂಗವೆಂಬ ಘ್ರಾಣವನ್ನು, ಹಲ್ಲುದೋಜಿಕೊಯ್ವ-ರದನಂಗಳ ಕುರುಗಾಣಿಸುವ ಹಾಂಗೆಂಬಲ್ಲಿ ಕರಣಂಗಳ ವರ್ತನೆಯನುಂಟು ಮಾಡಿ ಚಿತ್ಕರಣಂಗಳನಪಹರಿಸಿ ದುಷ್ಕರಣಂಗಳಿಗೊಳಗು ಮಾಡುತ್ತಿಹನು.

IV -

1-1 x (ತ). 2-2 ಯ್ಯ (ತ).

....

ನಡೆದು ತಪ್ಪದೆ ನುಡಿದು ಹುಸಿಯದೆ ಲಿಂಗದಲ್ಲಿ ಮನವಡಗಿದರೆ ಆತ ಮುಕ್ತ. ತಪ್ಪಿದರೆ ಸಂಗಯ್ಯ ಮೂಗಕೊಯ್ವನೆಂಬುದೀ ವಚನದರ್ಥ.

೬೭೬

ಹುಟ್ಟುವಲ್ಲಿ ಭವಿ, ಮರಳಿ ಭಕ್ತನ ಮಾಡಿ ಪೂರ್ವಾಶ್ರಯವ ಕಳೆದು, ಹೊಂದುವಲ್ಲಿ ಭವಿಯಾಗಿ ಹೋ[1]ಹ[1]ವರ ಮುಟ್ಟಲಾಗದು. ಅವನ ಮುಟ್ಟಿದವ ಮುನ್ನವೇ ವ್ರತಗೇಡಿ, ಅವನ ಶ್ರಾದ್ಧಕಾಲವೇ ಶ್ವಾನ[2]ನ[2] ಮಾಂಸ, ಅವನ ಕ್ರಿಯಾಕಾಲವೇ ಕ್ರಿಮಿಗಳು, ಅವನ ತದ್ದಿನ[3]ವೇ[3*] ಮದ್ಯಮಾಂಸ ಅದು ಕಾರಣ, ಕೂಡಲಸಂಗಮದೇವ ಅವನ ಮನೆಯ ವಿಚಾರಿಸದೆ ಹೊಕ್ಕವಂಗೆ ನಾಯಕನರಕ.

I -

ಹುಟ್ಟುವಲ್ಲಿ ಭವಿ: ಹುಟ್ಟುವಲ್ಲಿ–ಉಭಯಕುಲಶುದ್ಧವಾಗಿ ಉತ್ಪತ್ಯವಾಗುವಲ್ಲಿ, ಭವಿ–ಭೂತದೇಹಿಯು, ಮರಳಿ–ಪನರಪಿಯಾಗಿ, ಪೂರ್ವಾಶ್ರಯವ ಕಳೆದು–ಜಾತಿವರ್ಣಾಶ್ರಮ ಕುಲಗೋತ್ರ ನಾಮಾಚಾರಂಗಳ ಬೇರ್ಪಡಿಸಿ, ಭಕ್ತನಮಾಡಿ–ಅಂಗಕ್ಕೆ ಲಿಂಗೋಪದೇಶ ಮನಕ್ಕೆ ಮಂತ್ರೋಪದೇಶವನ್ನು ಕರುಣಿಸಿಕೊಟ್ಟು ಶಿವಭಕ್ತನ ಮಾಡಿ, ಹೊಂದುವಲ್ಲಿ–ದಿನ ಕಾಲಕಲ್ಪಿತಂಗಳು ಸವೆದು ವೃದ್ಧನಾಗಿ ಸತ್ತುಹೋಗುವಂಥ ವೇಳೆಯಲ್ಲಿ ಎಡಬಲದಲ್ಲಿ ಹೆಂಡಿರು ಮಕ್ಕಳು ಕುಳಿತುಕೊಂಡು ನೀನಂತೂ ಸತ್ತುಹೋಗುತ್ತಿದ್ದಿಯಲ್ಲಾ. ನಿನ್ನ ಗುರುತು ನಮಗೇನು ಕೊಟ್ಟು ಹೋಗುತ್ತಿದ್ದಿ ಎಂದು ಕೇಳಿದಲ್ಲಿ ನಾನೇನು ಕೊಟ್ಟು ಹೋಗಲಿ ನಾ ಸತ್ತುಹೋದ ಬಳಿಕ ನನ್ನ ಮನೆಯೊಳಗಿದ್ದಂಥ ಸಮಸ್ತ ವಸ್ತುವೆಲ್ಲ ನಿಮ್ಮದೆಂದು ಹೇಳುವನು. ಅದೇಕಾದೀತು ಮತ್ತೇನಾದರೂ ನಿನ್ನ ಗುರುತನ್ನು ಕೊಡಬೇಕೆಂದು ಕೇಳುವರು. ಹಾಂಗಾದರೆ ನನ್ನ ಕಂಡ ಹಾಂಗೆ ನನ್ನ ಲಿಂಗವನ್ನು ಕಂಡುಕೊಂಡು ಹೋಗಿರೆಂದು ತನ್ನ ಲಿಂಗವನ್ನು ಕೊಟ್ಟು, ಭವಿಯಾಗಿ–ಭೂತದೇಹಿಯಾಗಿ, ಹೋಹವರ–ಸತ್ತು ಹೋದವರ, ಮುಟ್ಟಲಾಗದು–ಭಕ್ತಮಾಹೇಶ್ವರರುಗಳು ಹಿಡಿದು ಕ್ರಿಯಾಸಮಾಧಿಯ ಮಾಡಿ ನಿಕ್ಷೇಪವ ಮಾಡಲಾಗದು.

ಅವನ–ಅಂತಪ್ಪ ವ್ರತಭ್ರಷ್ಟನ, ಮುಟ್ಟಿದವ–ಹಿಡಿದು ಕ್ರಿಯಾಸಮಾಧಿಯ ಮಾಡಿದವ, ಮುನ್ನವೆ–ಮೊದಲೇ, ವ್ರತಗೇಡಿ–ವ್ರತಭ್ರಷ್ಟ, ಅವನ ಶ್ರಾದ್ಧ ಕಾಲವೆ ಶ್ವಾನನ ಮಾಂಸ: ಅವನ ಶ್ರಾದ್ಧ ಕಲವೆ–ಅವನು ಇದ್ದಾಗ ಮಾಡುವಂಥ ಅನ್ನ ಉದಕಾದಿಗಳೇ, ಶ್ವಾನಮಾಂಸ–ಶುನಿಯ ಪಲಲಕ್ಕೆ ಸಮಾನವು, ಅವನ ಕ್ರಿಯಾಕಾಲವೆ–ಅವನು ಸತ್ತು ಹೋಗುವಾಗ್ಗೆ ವಿಭೂತಿವೀಳ್ಯವೆಂದು ಮಾಡುವಂಥ ಅನ್ನ ಉದಕಾದಿಗಳೆ, ಕ್ರಿಮಿಗಳು–ಹುಳುಗುಪ್ಪಿಗೆ ಸಮಾನವು, ಅವನ ತದ್ದಿನವೆ–ಅವನು ಸತ್ತು ಮೂರು ದಿವಸ ಐದು ದಿವಸ ಏಳು ದಿವಸ ಒಂಬತ್ತು ದಿವಸ ಹನ್ನೊಂದು ದಿವಸಕ್ಕೆ ಮಾಡುವಂಥ ಅನ್ನ ಉದಕಾದಿಗಳೇ, ಮದ್ಯಮಾಂಸ–ಸುರೆಮಾಂಸಕ್ಕೆ ಸಮಾನವು. ಅದು ಕಾರಣ–ಅದು ನಿಮಿತ್ತಾರ್ಥ, ಕೂಡಲಸಂಗಮದೇವ–ಎಲೆ ಪರಶಿವಲಿಂಗವೆ, ಅವನ ಅಂತಪ್ಪ ವ್ರತಭ್ರಷ್ಟನ ಮನೆಯ–ಮಂದಿರವನ್ನು, ವಿಚಾರಿಸದೆ, ಪರಾಮರಿಸದೆ ಹೊಕ್ಕವಂಗೆ–ಪ್ರವೇಶವಾಗಿ ಅರ್ಚನಾರ್ಪಣಕ್ರಿಯೆಗಳನು ಮಾಡಿದವಂಗೆ, ನಾಯಕ ನರಕ–ದೊರೆನಿರಯವೇ ಸಂಭವಿಸುತ್ತಿಹುದು.

III -

1-1 ಹೆ (ಟ, ಡ), 2-2 x (ಟ, ಡ), 3-3 ದಲ್ಲಿ (ಟ, ಡ), * + ಮಾಡಿದ ಅನ್ನವೆ (ಟ, ಡ)

....

ಭವಿಯಾಗಿ ಹೋದವರ-ಲಿಂಗಬಾಹ್ಯವಾಗಿ ಸತ್ತು ಹೋದಂಥವರುಗಳ, ಅವನ ಶ್ರಾದ್ಧಕಾಲವೆ-ಅವನಿಗೆ ಐದು ದಿನ ಹನ್ನೊಂದು ದಿವಸ ಪರಿಯಂತರಲು ಮಾಡಿದ ಓದನವೆ, ಶ್ವಾನಮಾಂಸ-ಶುನಿಯ ಪಲಲವು. ಕ್ರಿಯಾಕಾಲವೆ-ದಿನಚರಿಯಲ್ಲಿ ಮಾಡಲ್ಪಟ್ಟ ಕ್ರಿಯೆಗಳೆ, ಕ್ರಿಮಿಗಳು-ಹುಳುಗುಪ್ಪೆಯು, ತದ್ದಿನದಲ್ಲಿ-ಆವ ಮರಣವಾದ ದಿವಸದಲ್ಲಿ. ಮಾಡಿದ-ಎಸಗಿದ. ಅನ್ನವೆ-ಓದನವೆ, ಮಧ್ಯಮಾಂಸ-ಸುರಾಪಿಸಿತವು.

೬೭೭

ಒಡನೆ ಹುಟ್ಟಿದುದಲ್ಲ, ಒಡನೆ ಬೆಳೆದುದಲ್ಲ. ಎಡೆಯಲಾಗದ ಒಂದುಡುಗೆಯನುಟ್ಟು ಸಡಲಿದಡೆ ಲಜ್ಜೆ ನಾಚಿಕೆಯಾಯಿತ್ತೆಂಬ ನುಡಿ ದಿಟವಾಯಿತ್ತು ಲೋಕ[1]ದಲ್ಲಿ. [2]ಗುರುಕರುಣವ ಹಡೆದೊಡನೆ[2] ಹುಟ್ಟಿದ ನೇಮವನು ಬಿಡದಿರೆಲವೋ? ಬಿಟ್ಟಡೆ ಕಷ್ಟ, ಕೂಡಲಸಂಗಮದೇವ ನಡೆಸಿ ಕೆಡಹುವ ನಾಯಕ ನರಕದಲ್ಲಿ!.

I -

ಒಡನೆ ಹುಟ್ಟಿದುದಲ್ಲ-ತಾ ಹುಟ್ಟಿಬರುವಾಗಳು ತನ್ನೊಂದಿಗೆ ಹುಟ್ಟಿಬಂದಂಥದಲ್ಲವು, ಒಡನೆ ಬೆಳೆದುದಲ್ಲ-ತಾ ಬೆಳೆವಾಗ ತನ್ನೊಂದಿಗೆ ಬೆಳೆದುದುಲ್ಲವು, ಎಡೆಯಲಾದ-ಮಧ್ಯಕಲ್ಪನೆಯಲ್ಲಿ ಉಂಟಾದ, ಒಂದುಡುಗೆಯನುಟ್ಟು-ಹೆಣ್ಣಾದರೆ ಸೀರೆ ಕುಪ್ಪಸ ಗಂಡಾದರೆ ದಟ್ಟಿ ಚಲ್ಲಣ ಧೋತ್ರ ಮೊದಲಾದವನು ಉಟ್ಟುಕೊಂಡು, ಸಡಲಿದಡೆ-ಬೀದಿ ಬಾಜಾರದಲ್ಲಿ ಹೋಗಿ ಬರುವ ಸಮತದಲ್ಲಿ ಜಳುಪಿಸಿ ಬಿದ್ದರೆ, ಲಜ್ಜೆ ನಾಚಿಕೆಯಾಯಿತ್ತೆಂಬ-ಕೆಳಗಣದೇ ಲಜ್ಜೆ ಮೇಲಣದೇ ನಾಚಿಕೆ ಎಂಬ ಲಜ್ಜೆನಾಚಿಕೆವುಂಟಾಯಿತ್ತೆಂಬ, ನುಡಿ-ಪ್ರಸಂಗವು, ದಿಟವಾಯಿತ್ತು-ನಿಶ್ಚಯವಾಯಿತ್ತು. ಲೋಕದಲ್ಲಿ-ಲೌಕಿಕದಲ್ಲಿ.

ಗುರುಕರುಣವ-ಶ್ರೀಗುರುನಾಥನ ವೇಧಾಮಂತ್ರಕ್ರಿಯೆಗಳೆಂಬ ದೀಕ್ಷಾತ್ರಯಂಗಳಿಂದೆ ಅಂಗಕ್ಕೆ ಲಿಂಗೋಪದೇಶ ಮನಕ್ಕೆ ಮಂತ್ರೋಪದೇಶವನ್ನು, ಹಡೆದು-ಪಡೆದುಕೊಂಡು, ಒಡನೆ-ಒಂದಿಗೆ, ಹುಟ್ಟಿದ-ಉತ್ಪತ್ಯವಾದ, ನೇಮವನು-ಗುರುಭಕ್ತಿ ಲಿಂಗಪವೂಜೆ ಜಂಗಮದಾಸೋಹವೆಂಬ ಕಟ್ಟಿನ ಕ್ರಿಯೆಗಳನು, ಬಿಡದಿರೇವೋ!-ದೇಹದ ಆಲಸ್ಯದಿಂದ ಮನೋಸಂಚಲತ್ವದಿಂದ ಕರಣಂಗಳ ಉಪಟಳದಿಂದ ಮತ್ತಾರಾದರೂ ಅನ್ಯರ ಸಂಗದಿಂದಲಾದರೂ ಬಿಟ್ಟುಕೊಟ್ಟು ವ್ರತಭ್ರಷ್ಟನಾಗದಿರೆಲವೊ, ಬಿಟ್ಟಡೆ-ಅಷ್ಟು ದಿವಸ ಮಾಡಿ ಅಷ್ಟುದಿವಸ ಬಿಟ್ಟು ವ್ರತಭ್ರಷ್ಟನಾದರೆ, ಕಷ್ಟ-ಬಹು ಕ್ಷೀಣವು, ಕೂಡಲಸಂಗಮದೇವ-ಪರಶಿವಲಿಂಗವು, ನಡೆಸಿ-ಅಷ್ಟು ದಿವಸ ಆಚರಿಸಿಗೊಟ್ಟು, ನಾಯಕನರಕದಲ್ಲಿ-ದೊರೆ ನರಯದಲ್ಲಿ, ಕೆಡಹುವ-ದೇಹಾಂತ್ಯದಲ್ಲಿ ಹಾಕಿಬಿಡುತ್ತಿಹನು.

IV -

1+ ಲೌಕಿಕ (ತ), 2–2 ಹಡೆದ ಗುರುಕರುಣದೊಡನೆ (ತ)

....

ಆದಿ ಅಂತ್ಯದಲಿಲ್ಲ; ಮಧ್ಯದಲಾದ ಮಾಯೆಯನು ಮನುಷ್ಯನು ಬಿಡದೆ ನೆಡಸುವರು. ಆದಿ ಅಂತ್ಯದಲುಳ್ಳ ಸತ್ಯವಾದ ಆಚಾರವ ಬಿಟ್ಟರೆ ನಾಯಕ ನರಕವೆಂಬುದೀ ವಚನದರ್ಥ.

೬೭೮

ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ; ಛಲಬೇಕು ಶರಣಂಗೆ ಪರವಧುವ ನೊಲ್ಲೆನೆಂಬ; ಛಲಬೇಕು ಶರಣಂಗೆ ಪರದೈವವನೊಲ್ಲೆನೆಂಬ; ಛಲಬೇಕು ಶರಣಂಗೆ ಲಿಂಗಜಂಗಮ ಒಂದೆ ಎಂಬ; ಛಲಬೇಕು ಶರಣಂಗೆ ಪ್ರಸಾದ ದಿಟವೆಂಬ; ಛಲವಿಲ್ಲದವರ ಮೆಚ್ಚ ನಮ್ಮ ಕೂಡಲಸಂಗಮದೇವ.

I –

ಶರಣಂಗೆ–ಶಿವಶರಣಂಗೆ, ಪರಧನವನೊಲ್ಲೆನೆಂಬ–ಅನ್ಯದ್ರವ್ಯವನ್ನು ಹಿಡಿಯಬಾರದೆಂಬಂಥ, ಛಲಬೇಕು–ಛಲಗ್ರಾಹಕತ್ವವೇ ಉಂಟಾಗಿರಬೇಕು, ಶರಣಂಗೆ–ಶಿವಶರಣಂಗೆ, ಪರವಧುವನೊಲ್ಲೆನೆಂಬ–ಅನ್ಯಸ್ತ್ರೀಯಳ ಸಂಸರ್ಗವ ಮಾಡಬಾರದೆಂಬಂಥ, ಛಲಬೇಕು–ಛಲಗ್ರಾಹಕತ್ವವೇ ಉಂಟಾಗಿರಬೇಕು, ಶರಣಂಗೆ–ಶಿವಶರಣಂಗೆ, ಲಿಂಗಜಂಗಮ ಒಂದೆ ಎಂಬ–ಲಿಂಗವೇ ಜಂಗಮದಂಗ ಜಂಗಮವೇ ಲಿಂಗದ ಪ್ರಾಣಕಳೆಯೆಂದು ಲಿಂಗಪೂಜೆ ಜಂಗಮದಾಸೋಹವನ್ನು ಸಮರಸಭಾವದಿಂದ ಮಾಡಬೇಕೆಂಬಂಥ, ಛಲಬೇಕು–ಛಲಗ್ರಾಹಕತ್ವವೇ ಉಂಟಾಗಿರಬೇಕು, ಶರಣಂಗೆ–ಶಿವಶರಣಂಗೆ, ಪ್ರಸಾದ ದಿಟವೆಂಬ: [ಪ್ರಸಾದ–] ಆ ಚಿತ್ಕಲಾಪ್ರಸಾದವೇ ಈ ಕ್ರಿಯಾಪ್ರಸಾದವಾಗಿ ಬಂದಿರ್ಪುದು, ಈ ಪ್ರಸಾದವನ್ನು ಅನುಭವಿಸಿದರೆ ಸಮಸ್ತಪಾಪವೆಲ್ಲ ಕ್ಷಯವಾಗಿ ಹೋಗಿ ನಿತ್ಯವಾದ ನಿಜಮೋಕ್ಷವೇ ಆಗುತ್ತೈತೆಂಬಂಥ, ದಿಟವೆಂಬ–ನಿಶ್ಚಯವೆಂಬ, ಛಲಬೇಕು–ಛಲಗ್ರಾಹಕತ್ವವೇ ಉಂಟಾಗಿರಬೇಕು. ಶರಣಂಗೆ–ಶಿವಶರಣಂಗೆ, ಛಲವಿಲ್ಲದವರ–ಇಂತಿಷ್ಟರಲ್ಲಿ ಛಲಗ್ರಾಹಕತ್ವವೇ ಉಂಟಾಗಿರಬೇಕು. ಇಲ್ಲದವರ, ನಮ್ಮ ಕೂಡಲಸಂಗಮದೇವ–ನಮ್ಮ ಪರಶಿವಲಿಂಗವು, ಮೆಚ್ಚ–ಮಮಕರಿಸಿಕೊಂಡು ನಿಜಮೋಕ್ಷವನ್ನು ಕರುಣಿಸಿಕೊಟ್ಟಾನೆ? ಕರುಣಿಸಿಕೊಂಡನು.

೬೭೯

ಜಂಬೂದ್ವೀಪ ನವಖಂಡ ಪೃಥ್ವಿಯೊಳಗೆ [1]ಕೇಳಿರಯ್ಯಾ ಎರಡಾಳಿನ ಭಾಷೆಯ. [2]ಕೊಲುವೆನೆಂಬ ಭಾಷೆ ದೇವನದು, ಗೆಲುವೆನೆಂಬ ಭಾಷೆ ಭಕ್ತನದು. ಸತ್ಯವೆಂಬ ಕೂರಲಗನೇ ಕಳೆದುಕೊಂಡು ಸದ್ಭಕ್ತರು [2]ಗೆದ್ದರು,[2] ಕಾಣಾ ಕೂಡಲಸಂಗಮದೇವಾ.

....

1–1 ಎರಡಾಳಿನ ಭಾಷೆಯ ಕೇಳಿರಯ್ಯಾ (ಕ, ಗ)

I –

ಜಂಬೂದ್ವೀಪ-ಮಹಾಮೇರುಪರ್ವತವನ್ನು ಪ್ರವೇಷ್ಟಿಸಿಕೊಂಡಿರುವಂಥದೇ ಜಂಬೂದ್ವೀಪವು ಅಂತಪ್ಪ ಜಂಬೂದ್ವೀಪದ, ನವಖಂಡ ಪೃಥ್ವಿಯೊಳಗೆ-ಒಂಬತ್ತು ಖಂಡಗಳು ಯುಕ್ತವಾದ ಭೂಮಿಯಲ್ಲಿ, ಎರಡಾಳಿನ ಭಾಷೆಯ: [ಎರಡಾಳಿನ-] ಭಕ್ತನೆಂಬ ವೀರಮಾಸಾಳು ಜಂಗಮವೆಂಬ ಮಹಾವೀರಮಾಸಾಳಿನ, ಭಾಷೆಯ-ಪ್ರತಿಜ್ಞೆಯ, ಕೇಳಿರಯ್ಯಾ-ಆಲಿಸಿರಯ್ಯಾ. ಕೊಲುವೆನೆಂಬ-ಇಚ್ಛಾಪದಾರ್ಥವನ್ನು ಕೇಳಿ ಹಿಮ್ಮೆಟ್ಟಿಸಬೇಕೆಂಬಂಥ, ಭಾಷೆ-ಪ್ರತಿಜ್ಞೆಯು, ದೇವನದು-ಜಂಗದಲ್ಲುಂಟಾಗಿರ್ಪುದು, ಗೆಲುವೆನೆಂಬ-ಕೇಳಿಕೇಳಿದ ಹಾಂಗೆಲ್ಲ ಇಚ್ಛಾಪದಾರ್ಥವನ್ನು ಕೊಟ್ಟು ಭಕ್ತಿಯಮಾಡಿ ಇನ್ನೇನು ಬೇಡುತ್ತಿದ್ದೀ ಬೇಡೆಂದು ಬೇಡಿಸಿ ಹಿಮ್ಮೆಟ್ಟಿಸಬೇಕೆಂಬಂಥ, ಭಾಷೆ-ಪ್ರತಿಜ್ಞೆಯು, ಭಕ್ತನದು-ನಿರ್ವಂಚಕ ಸದ್ಭಕ್ತನಲ್ಲಿ ಉಂಟಾಗಿರ್ಪುದು.

ಸತ್ಯವೆಂಬ ಕೂರಲಗನೇ ಕಳೆದುಕೊಂಡು-ದೇವ ಭಕ್ತ ಪದಾರ್ಥವಾದದ್ದು ಒಂದೇ ವಸ್ತುವೆಂದರಿದು ತಾನುತಾನಾಗಿ ಮಾಡುವಂಥ ಸಮರಸ ಜ್ಞಾನವೆಂಬ ಆಯುಧವನ್ನು ಪಿಡಿದುಕೊಂಡು, ಸದ್ಭಕ್ತರು-ನಿರ್ವಂಚಕಸದ್ಭಕ್ತರು, ಗೆದ್ದರು-ಸಮರಸಭಾವದಿಂದ ತನುಮನಧನಂಗಳನು ಕೊಟ್ಟು ಭಕ್ತಿಯ ಮಾಡಿ ಶಿವನುಂಟುಮಾಡಿದ ಕಾಲಕಾಮಮಾಯಾಪ್ರಪಂಚವನ್ನು ಜಯಿಸಿದರು, ಕಾಣಾ-ಕಂಡಾ, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

II -

ಜಂಬೂದ್ವೀಪ ನವಖಂಡ ಪೃಥ್ವಿಯೊಳಗೆ ಕೇಳಿರಯ್ಯಾ-ಒಂಬತ್ತನೆಯ ಖಂಡವಾದ ಭೂಮಿಯಲ್ಲಿ ಲಾಲಿಸಿರಯ್ಯಾ, ಎರಡಾಳಿನ ಭಾಷೆಯ-ದೇವಾಭಕ್ತರುಗಳೆಂಬ ಸಮವಾಳಿನ ಷಟ್ಸ್ಥಲಭಾಷೆಯು, ಕೊಲುವೆನೆಂಬ ಭಾಷೆ ದೇವನದು-ಆಧಿವ್ಯಾಧಿಕಂಟಕಾದಿಗಳ ಭೀತಿಯನುಂಟುಮಾಡಿ ಸಂಹರಿಸಬೇಕೆಂಬ ಪಂಥವು ದೇವನದು, ಗೆಲುವೆನೆಂಬ ಭಾಷೆ ಭಕ್ತನದು-ಆ ಪರಮೇಶ್ವರನುಂಟುಮಾಡಿದ ಆಧಿವ್ಯಾಧಿಕಂಟಕಾದಿಗಳನು ಜಯಿಸಬೇಕೆಂಬ ಪಂಥವು ಭಕ್ತನದು, ಮುಂದಕ್ಕೆ ಕಾಣಬಂದರ್ಥ.

III -

1-1 ಎರಡಾಳಿನ ಭಾಷೆಯ ಕೇಳಿರಯ್ಯಾ (ಟ, ಡ),

....

ಎರಡಾಳಿನ ಭಾಷೆಯ-ದೇವಭಕ್ತರಿರ್ವರ ಪ್ರತಿಜ್ಞೆಯನು, ಕೇಳಿರಯ್ಯಾ-ಆಲಿಸಿರಯ್ಯಾ.

IV -

2-2 ಗೆಲುವರು (ತ)

....

ಹುಟ್ಟು ಹೊಂದ ಕೆಡಿಸಬೇಕೆಂದು ಸತ್ಯದಲ್ಲಿ ನಡೆದು ಶಿವಭಕ್ತಿಯ ಮಾಡಿ ನಿತ್ಯನಾದೆನೆಂಬ ಭಕ್ತನೊಬ್ಬ ಬಿರಿದಿನ ಮಾಸಾಳು, ಅಂತು ಭಕ್ತನೆಂಬ ಬಿರಿದಿನ ಮಾಸಾಳನು ಶಿವನೆಂಬ ಮಹಾವೀರಮಾಸಾಳು ಬಂದು ಭಕ್ತಿ[ಯಲ್ಲಿ] ಸೋಲಿಸಿ ಭವಕ್ಕೆ ತಹೆನೆಂದು ತನುವನಲ್ಲಾಡಿ ಮನವನಲ್ಲಾಡಿ ಧನವನಲ್ಲಾಡಿ ನೋಡುತ್ತಿರಲು, ಆ ಭಕ್ತರು ತನುಮನಧನದಲ್ಲಿ ಆಸೆಯಿಲ್ಲದೆ ಶಿವಂಗಿತ್ತು, ನಡೆಯಲ್ಲಿ ಸತ್ಯವ ಬಿಡದೆ ಭಕ್ತಿಯ ಮಾಡಿ ನಿತ್ಯರಾದರು ಭಕ್ತರೆಂಬುದೀ ವಚನದ ತಾತ್ಪರ್ಯಾರ್ಥ.

೬೮೦

ಮುನ್ನಿನ ಕಲಿ ವೀರಧೀರರು ಕಾದಿದ ರಣಗಳನು ಪರಿಪರಿಯಲ್ಲಿ ಬಣ್ಣಿಸಿ ಹೇಳಬಹುದಲ್ಲದೆ, ಆ ದಳ ಇದಿರಾದಲ್ಲಿ ಬಿರಿದುಪಚಾರಿಸಿ ಕಾದಿ ತೋಱಲು ಬಾರದು. ಮುನ್ನಿನ ಪುರುಷವ್ರತಿಯರು ಒಲಿಸಿದ ಆಯತವ ಪರಿಪರಿಯಲ್ಲಿ ಬಣ್ಣಿಸಿ ಹೇಳಬಹುದಲ್ಲದೆ ಪುರುಷನಿರ್ವಾಣಕ್ಕೆ ಉರಿವಗ್ನಿಯ ಹೊಕ್ಕು ತೋಱಲು ಬಾರದು. ಮುನ್ನಿನ ಪುರಾತನರೆಲ್ಲರು ತನುಮನಧನವನಿತ್ತು ಮಾಡಿ ನೀಡಿ ಲಿಂಗವ ಕೂಡಿದ ಪರಿಗಳನು ಅನುಭಾವದಲರ್ಥೈಸಿ ಹೇಳಬಹುದಲ್ಲದೆ ಮಾಡಿ ನೀಡಿ ತೋಱಲು ಬಾರದು. ಇಂತೀ ಅರೆಬಿರಿದಿನ ಬಂಟರು, ಪುರುಷವ್ರತಿಯರು, ಪುರಾತನರು ಬರಿಯ ಮಾತನಾಡಿ ಹೊಱಗೆ ಮೆಱೆವರಲ್ಲ ! ಪರೀಕ್ಷೆ ಉಂಟಾಗಿರ್ದಡೆ ಒಳಗಣದವರ ಹೆಸರ ಹಿಡಿದ ಪರಿಪರಿಯಲ್ಲಿ ಹೊಗಳುವರು. ಶರೀರ ಅರ್ಥ ಪ್ರಾಣ ಗುರುಲಿಂಗಜಂಗಮಕ್ಕೆ ಪರೀಕ್ಷೆ ಉಂಟಾಗಿದ್ದರೆ ಆತ ಮಾಹೇಶ್ವರನೆಂಬೆ, ಪುರಾತರವಳಿಯೆಂಬೆ, ಪರಮಬಂಧುಗಳಾತನ ನೆನೆನೆನೆದು ಬದುಕುವರು. ಇಂತೀ ಅನುಭಾವದಲೋದಿ ಅಕ್ಷರಾಭ್ಯಾಸವ ಸಾಧಿಸಿ ತರ್ಕಿಸಿ ನಿಂದಿಸಲಾಗದು. ಕೂಡಲಸಂಗನ ಶರಣರಿಗಲ್ಲದೆ ಅನುಭಾವವಿಲ್ಲವು.

I -

ಮುನ್ನಿನ–ಮೊದಲಿನ, ಕಲಿ–ಪರಾಕ್ರಮಿಗಳಾದ ದೇವತಾದಿ ರಾಕ್ಷಸರು, ವೀರ–ಶೂರತ್ವವನುಳ್ಳಂಥ ರಾಮರಾವಣರು, ಧೀರರು–ಅಲಗಿನ ಮೊನೆಗೆ ಹೆದರದೆಯಿದ್ದಂಥ ಕೌರವರು ಪಾಂಡವರು ಮೌರ್ಯರು ಕದಂಬರು, ಕಾದಿದ–ಯುದ್ಧವ ಮಾಡಿದ, ರಣಗಳನು–ರಣಾಗ್ರವನ್ನು, ಪರಿಪರಿಯಲ್ಲಿ ಬಣ್ಣಿಸಿ ಹೇಳಬಹುದಲ್ಲದೆ–ಈಗಿನ ಪಟುಭಟರುಗಳು ಚಾವಡಿಗಳಲ್ಲಿ ಹೆಬ್ಬಾಗಿಲಗಳಲ್ಲಿ ಕುಳಿತುಕೊಂಡು, ದೇವತಾದಿ ರಾಕ್ಷಸರು ರಾಮರಾವಣರು ಕೌರವ ಪಾಂಡವರು ಮೌರ್ಯ ಕದಂಬರ ಸಾಂಪ್ರಾಯಕರೇ ನಾವೆಂದು, ಪರಿಪರಿಯಲ್ಲಿ–ನಾನಾವಿಧದಲ್ಲಿ, ಬಣ್ಣಿಸಿ–ಒಪ್ಪವಿಟ್ಟು ಹೇಳಬಹುದುದಲ್ಲದೆ. ಆ ದಳ ಇದಿರಾದಲ್ಲಿ–ಅರಿರಾಯರ ದಂಡು ಬಂದು ಮಾರಾಂತು ಮಲೆತು ನಿಂತಲ್ಲಿ, ಬಿರದುಪಚಾರಿಸಿ–ನಾನು ಇಂಥವರ [ಒಂಟಿವೀರ] ಗಾರ ಇಂಥವರ ತೊಲಗದ ಕಂಭ ಇಂಥವರ ಮದ್ದಾನೆಯೆಂದು ಬಿರುದುಬಾವುಲಿಯನ್ನು ಉಂಟುಮಾಡಿ, ಕಾದಿ ತೋಱಲು ಬಾರದು–ಯುದ್ಧವ ಮಾಡಿ ಪರಾಕ್ರಮತ್ವದ ಪರೀಕ್ಷೆಯನ್ನು ಕಾಣಿಸಿ ಹೇಳೇ ನೆಂದರೆ ಅಶಕ್ಯವಾಗಿರ್ಪುದು.

ಮುನ್ನಿನ ಪುರುಷವ್ರತಿಯರು: ಮುನ್ನಿನ–ಮೊದಲಿನ, ಪುರುಷವ್ರತಿಯರು–ಪುರುಷಭಕ್ತಿಯಲ್ಲಿ ಅತಿರತಿ ಪ್ರೀತಿ ಪ್ರೇಮ ವಿಶ್ವಾಸವನುಳ್ಳ ಅರುಂಧತಿ ಅನಸೂಯಾದೇವಿ ಕೈಕಸಿ ಅನಲಾಯಿ ಮೊದಲಾದ ಸ್ತ್ರೀಯರುಗಳು, ಒಲಿಸಿದ–ಶಿವನ ಪ್ರಸನ್ನತೆಯ ಮಾಡಿಕೊಂಡಂಥ, ಆಯತವ–ನಿಲುಕಡೆಯನ್ನು, ಪರಿಪರಿಯಲ್ಲಿ ಬಣ್ಣಿಸಿ ಹೇಳಬಹುದಲ್ಲದೆ: ಈಗಿನ ಸ್ತ್ರೀಯರುಗಳು ಕುಟ್ಟುವಲ್ಲಿ ಬೀಸುವಲ್ಲಿ ಕುಳಿತುಕೊಂಡು ಅರುಂಧತಿ ಕೈಕಸಿ ಅನಸೂಯಾದೇವಿ ಅನಲಾಯಿ ಮೊದಲಾದ ಸ್ತ್ರೀಯರುಗಳ ಸಾಂಪ್ರದಾಯಕರೇ ನಾವೆಂದು, ಪರಿಪರಿಯಲ್ಲಿ–ನಾನಾವಿಧದಲ್ಲಿ, ಬಣ್ಣಿಸಿ–ಒಪ್ಪವಿಟ್ಟು, ಹೇಳಬಹುದಲ್ಲದೆ–ಹೇಳಿಕೊಳಬಹುದಲ್ಲದೆ, ಪುರಷನಿರ್ವಾಣಕ್ಕೆ ಉರಿವಗ್ನಿಯ ಹೊಕ್ಕು ತೋಱಲು ಬಾರದು–ಒಬ್ಬಾನೊಬ್ಬ ಪುರುಷನು ರಣಮಂಡಲಕ್ಕೆ ಹೋಗಿ ಕಾಡದಾಡಿ ಮಡಿದಲ್ಲಿ ಅವನ ಸ್ತ್ರೀಯಳು ಎಣ್ಣೆ ಅರಿಸಿಣವನ್ನು ಹಚ್ಚಿಕೊಂಡು ಹೂವನ್ನು ಮುಡಿದುಕೊಂಡು ಮನೆಮನೆಗೆ ಕೋ[ರೂ]ಟವನ್ನು

ಉಂಬುತ್ತ ಇಪ್ಪತ್ತೇಳು ದಿವಸ ಮಾಸ್ತಿಯಾಗಿ ಮೆರೆವ ಪರಿಯಂತರ ಪರಿಣಾಮವಾಗಿರುವುದು. ಕಡೆಯಲ್ಲಿ [ಸತಿ] ಕಲ್ಲಮೇಲೆ ನಿಂತುಕೊಂಡು ಕೈಯಲ್ಲಿ ನಿಂಬಿ ಹಣ್ಣನ್ನು ಪಿಡಿದುಕೊಂಡು ಕಿಚ್ಚಿನಲ್ಲಿ ಬಿದ್ದು ಪತಿವ್ರತೆಯರ ಭಾವದ ಪರೀಕ್ಷೆಯನ್ನು ಕಾಣಿಸಿಹೆನೆಂದರೆ ಅಶಕ್ಯವಾಗಿರ್ಪುದು.

ಮುನ್ನಿನ ಪುರಾತನರೆಲ್ಲರು: ಮುನ್ನಿನ–ಮೊದಲಿನ, ಪುರಾತನರೆಲ್ಲರು–ದಾಸಿದೇವ ಸಿರಿಯಾಳಸೆಟ್ಟಿ ಸಿಂಧುಬಲ್ಲಾಳರಾಯ ಮೊದಲಾದರುವತ್ತು ಮೂರು ಪುರಾತನರು, ತನುಮನಧನವನಿತ್ತು–ತನುಮನಧನಂಗಳನು ಸಮರ್ಪಿಸಿ, ಮಾಡಿ–ತ್ರಿಕಾಲದಲ್ಲಿ ಲಿಂಗಾರ್ಚನೆಯ ನನುಗೆಯ್ದು ನೀಡಿ–ಆ ಲಿಂಗಕ್ಕೆ ಪ್ರಾಣಕಳಾಚೈತನ್ಯಸ್ವರೂಪವಾದ ಜಂಗಮಕ್ಕೆ ಸಕಲಪದಾರ್ಥಂಗಳನು ಎಡೆಮಾಡಿ, ಲಿಂಗವ ಕೂಡಿದ–ಪರಶಿವಲಿಂಗದಲ್ಲಿ ಬೆರೆದ, ಪರಿಗಳನು–ನಿಲುಕಡೆಯನ್ನು, ಅನುಭಾವದಲ್ಲಿ–ಹತ್ತೆಂಟು ಕಥೆ ಕಾವ್ಯಂಗಳನು ಕಲಿತುಕೊಂಡು, ಅರ್ಥೈಸಿ, ಅನ್ವಯಮಾಡಿ, ಹೇಳಬಹುದಲ್ಲದೆ–ಅರುವತ್ತುಮೂರು ಪುರಾತನರ ಸಂಪ್ರದಾಯಕರೇ, ನಾವೆಂದು ಹೇಳಿಕೊಳ್ಳಬಹುದಲ್ಲದೆ, ಮಾಡಿ ನೀಡಿ ತೋಱಲುಬಾರದು: ಮಾಡಿ–ತ್ರಿಕಾಲ ಲಿಂಗಪೂಜೆಯನನು ಗೈಯ್ದು, ನೀಡಿ–ಆ ಲಿಂಗಕ್ಕೆ ಪ್ರಾಣಕಳಾಚೈತನ್ಯಸ್ವರೂಪವಾದ ಜಂಗಮಕ್ಕೆ ಸಕಲ ಪದಾರ್ಥಂಗಳನು ಎಡೆಮಾಡಿ, ತೋಱಲುಬಾರದು–ಭಕ್ತಿಭಾವದ ಪರೀಕ್ಷೆಯನ್ನು ಕಾಣಿಸಿಹೆನೆಂದರೆ ಅಶಕ್ಯ ವಾಗಿರ್ಪುದು.

ಇಂತೀ–ಈ ಪ್ರಕಾರವಾದ ದೆಸೆಯಿಂದ, ಅರಿಬಿರಿದಿನ ಬಂಟರು–ಅಲಗಿನ ಮೊನೆಗೆ ಹೆದರದೇ ಇದ್ದಂಥ ದೇವತಾದಿ ರಾಕ್ಷರುಗಳು ರಾಮರಾವಣರು ಕೌರವಪಾಂಡವರು ಮೌರ್ಯರು ಕದಂಬರು, ಪುರುಷವ್ರತಿಯರು–ಪುರುಷಭಕ್ತಿಯನ್ನು ಮಾಡಿ ಶಿವನ ಕೃಪೆಯನ್ನು ಪಡೆದಂಥ ಅರುಂಧತಿ ಕೈಕಸಿ ಅನಸೂಯಾದೇವಿ ಅನಲಾಯಿ ಮೊದಲಾದ ಸ್ತ್ರೀಯರುಗಳು, ಪುರಾತನರು–ಗುರುಭಕ್ತಿ ಲಿಂಗಪೂಜೆ ಜಂಗಮದಾಸೋಹವನ್ನು ಮಾಡಿ ಮುಕ್ತಿಯನ್ನು ಹಡೆದಂಥ ಅರುವತ್ತುಮೂರು ಪುರಾತನರು, ಬರಿಯ ಮಾತನಾಡಿ– ಭಕ್ತನಾದರೆ ದಾಸಿದೇವ ಸಿರಿಯಾಳಸೆಟ್ಟಿ ಸಿಂಧುಬಲ್ಲಾಳ ಮೊದಲಾದವರು ಅರುವತ್ತುಮೂರು ಪುರಾತರ ಸಾಂಪ್ರಾದಯಕರೆಂದು, ವೀರನಾದರೆ ದೇವತಾದಿ ರಾಕ್ಷಸರುಗಳು ರಾಮರಾವಣರು ಕೌರವ ಪಾಂಡವರು ಮೌರ್ಯಕದಂಬರ ಸಂಪ್ರದಾಯಕರೆಂದು, ಸ್ತ್ರೀಯರಾದರೆ ಅರುಂಧತಿ ಕೈಕಸಿ ಅನುಸೂಯಾದೇವಿ ಅನಲಾಯಿ ಮೊದಲಾದ ಸ್ತ್ರೀಯರುಗಳ ಸಂಪ್ರದಾಯಕರೇ ನಾವೆಂದು, ಹೊಱಗೆ–ಬಾಹ್ಯದಲ್ಲಿ, ಮೆರೆವರೆಲ್ಲ–ಶೋಭಿಸುವರೆಲ್ಲ, ಪರೀಕ್ಷೆ ಉಂಟಾಗಿರ್ದಡೆ–ಭಕ್ತರಾದರೆ ಭಕ್ತಿಭಾವದ ಪರೀಕ್ಷೆ ವೀರನಾದರೆ ಪರಾಕ್ರಮತ್ವದ ಪರೀಕ್ಷೆ ಸ್ತ್ರೀಯಾದರೆ ಪತಿವ್ರತಾಭಾವದ ಪರೀಕ್ಷೆ ಉಂಟಾಗಿರ್ದರೆ, ಒಳಗಣವರ ಹೆಸರ ಹಿಡಿದು–ಭಕ್ತರಾದರೆ ದಾಸಿದೇವ ಸಿರಿಯಾಳ ಸಿಂಧುಬಲ್ಲಾಳ ಮೊದಲಾದರುವತ್ತುಮೂರು ಪುರಾತನರ ಸಂಪ್ರದಾಯಕರೇ ನಾವೆಂದು, ವೀರನಾದರೆ ದೇವತಾದಿ ರಾಕ್ಷಸರು ರಾಮರಾವಣರು ಕೌರವ ಪಾಂಡವರು ಮೌರ್ಯ ಕದಂಬರ ಸಾಂಪ್ರದಾಯಕರೇ ನಾವೆಂದು, ಸ್ತ್ರೀಯರಾದರೆ ಅರುಂಧತಿ ಕೈಕಸಿ ಅನಸೂಯಾದೇವಿ ಅನಲಾಯಿ ಮೊದಲಾದ ಸ್ತ್ರೀಯರುಗಳ ಸಂಪ್ರದಾಯಕರೇ ನಾವೆಂದು, ಹೆಸರ–ಅಭಿಧಾನವನ್ನು ಹಿಡಿದು–ದೃಢವಿಡಿದು. ಪರಿಪರಿಯಲ್ಲಿ–ನೂತನ ನೂತನದಲ್ಲಿ, ಹೊಗಳುವರು–ಸ್ತೋತ್ರವ ಮಾಡುವರು, ಕೊಂಡಾಡುವರು, ಕೀರ್ತಿಸುವರು.

ಶರೀರ ಅರ್ಥ ಪ್ರಾಣ ಗುರುಲಿಂಗಜಂಗಮಕ್ಕೆ : ಶರೀರ–ತನ್ನ ದೇಹವು, ಅರ್ಥ–ತಾ ಗಳಿಸಿದಂಥ ದ್ರವ್ಯವು, ಪ್ರಾಣ–ಪ್ರಾಣಸಂಬಂಧವಾದ ಪುತ್ರರುಗಳು, ಗುರುಲಿಂಗಜಂಗಮಕ್ಕೆ–

ಸದ್ರೂಪವಾದ ಗುರು ಚಿದ್ರೂಪವಾದ ಲಿಂಗ ಆನಂದರೂಪವಾದ ಜಂಗಮಕ್ಕೆ, ಪರೀಕ್ಷೆ ಉಂಟಾಗಿರ್ದಡೆ–ಸಮರಸ ಭಾವದಿಂದ ಸಮರ್ಪಣೆಯ ಮಾಡುವಂಥ ಪರೀಕ್ಷೆ ಉಂಟಾಗಿರ್ದರೆ ಆತ ಮಾಹೇಶ್ವರನೆಂಬೆ : ಆತ ಅಂತಪ್ಪಾತನು, ಮಾಹೇಶ್ವರನೆಂಬೆ–ಸದ್ವೀರ ಮಾಹೇಶ್ವರನೆಂದು ಹೇಳುವೆ, ಪುರಾತರಾವಳಿಯೆಂಬೆ–ಪೂರ್ವಗಣಂಗಳ ಸಂಪ್ರದಾಯಕರೆಂದು ಹೇಳುವೆನು. ಪರಮಬಂಧುಗಳಾತನ–ಶ್ರೇಷ್ಠವಾದ ಬಾಂಧವರುಗಳಾದ ಜಂಗಮಕ್ಕೆ ಸಕಲ ಪದಾರ್ಥವ ನೀಡಿ ಸಂತುಷ್ಟಿಬಡಿಸಲ್ಪಟ್ಟಾತನ, ನೆನೆನೆನೆದು–ಸ್ಮರಣೆಯ ಮಾಡಿ ಸ್ಮರಣೆಯ ಮಾಡಿ, ಬದುಕುವರು–ಕೃತಾರ್ಥರಾಗುವರು.

ಇಂತೀ–ಈ ಪ್ರಕಾರದ ದೆಸೆಯಿಂದೆ, ಅನುಭಾವದಲೋದಿ–ಸಕಲ ವೇದಶಾಸ್ತ್ರಾಗಮ ಪುರಾಣಂಗಳನು ಕಲಿತುಕೊಂಡು,ಅಕ್ಷರ–ಐವತ್ತೆರಡಕ್ಷರಂಗಳನು ಕಲಿತುಕೊಂಡು, ಅಭ್ಯಾಸವ–ಅದರಿಂದ ಹತ್ತೆಂಟು ಕಥೆಕಾವ್ಯಂಗಳನು ಕಲಿತುಕೊಂಡು, ಸಾಧಿಸಿ–ಸಾಧಕತ್ವದಿಂದ ಸಾಧಿಸಿ, ತರ್ಕಿಸಿ–ಗುರುವೆಂದರೂ ನಾವೇ ಲಿಂಗವೆಂದರೂ ನಾವೇ ಜಂಗಮವೆಂದರೂ ನಾವೇ ಎಂದು ವಾದವ ಮಾಡಿ, ನಿಂದಿಸಲಾಗದು–ಗುರುವಾದರೂ ಹೀಂಗಿರಬೇಕು ಲಿಂಗವಾದರೂ ಹೀಂಗಿರಬೇಕು ಜಂಗಮವಾದರೂ ಹೀಂಗಿರಬೇಕೆಂದು ದೂಷಣೆಯ ಮಾಡಲಾಗದು.

ಕೂಡಲಸಂಗನ ಶರಣರಿಗಲ್ಲದೆ–ಜಂಗಮಮೂರ್ತಿಗಳಿಗಲ್ಲದೆ, ಅನುಭಾವವು–ಶಿವಾನುಭಾವವು, ಮಿಕ್ಕಿನ ಆಶಾಲಾಂಛನಿ ಉಪಾಧಿಕರುಗಳಿಗೆ, ಇಲ್ಲವು–ಉಂಟಾಗಿಲ್ಲವು.

....

೧–೧ ಹಲವು ಪ್ರಕಾರದಲ್ಲಿ (ಗ), ೨–೨ x(ಕ), ೩–೩ ಒಂಟೀರ (ಕ, ಗ), ೪–೪ ಭಂಟ (ಕ), ೫–೫ ಲೂ (ಕ, ಗ), ೬–೬ ಸಾತಿ (ಕ, ಗ).

III –

ಪುರುಷವ್ರತಿಯರ ಒಲಿಸಿದ ಆಯಾತವ : [ಪುರುಷವ್ರತಿಯರ–] ಪುರುಷರು ಸ್ತ್ರೀಯರನು ಸ್ತ್ರೀಯರು ಪುರುಷರುಗಳನು, ಒಲಿಸಿದ–ಮೆಚ್ಚಿಸಿದಂಥ, ಆಯತವ–ಒಪ್ಪಿಗೆಯನು, ಪುರುಷನಿರ್ವಾಣಕ್ಕೆ–ತನ್ನ ವಲ್ಲಭನ ಕೂಡೆ ನಿರ್ವಾಣಕ್ಕೆ, ಒಳಗಣವರ–ಗುರುಲಿಂಗಜಂಗಮದ ಭಕ್ತಿದಾಸೋಹವ ಮಾಡಿ ಮುಕ್ತಿಯ ಪಡೆದಂಥ ಶರಣರುಗಳ.

೬೮೧

ಕಬ್ಬಿನ ಹಣಿದವನಾಡುವರಲ್ಲದೆ, [1]ಕಾಯ[1]ದ ಹಣಿದವನಾಡುವರೆ? ಮೇಲೊಡ್ಡಾಯಿತ್ತೆಂದು, ಕೂಡಲಸಂಗಮದೇ[2]ವಾ[2], [3]ನೀ[3]ನಿಕ್ಕಿದ ಜೂಜಿಂಗೆ ಹೊಯ್ದು ಗೆದ್ದ ಸಿರಿಯಾಳ!

I - –

ಕಬ್ಬಿನ ಹಣಿದವನಾಡುವರಲ್ಲದೆ–ಲೋಕದಲ್ಲಿ ಆತ್ಮರುಗಳು ಜೂಜನ್ನು ಆಡಬೇಕಾದರೆ ಒಂದು ಕಬ್ಬಿನ ಹೊರೆಯನ್ನಾಗಲೀ ಒಂದು ಬಾಳೆ ದಿಂಡನ್ನಾಗಲೀ ಒಂದು ಮೊಟ್ಟೆ ತೆಂಗಿನಕಾಯನ್ನಾಗಲಿ ತೆಗೆದುಕೊಂಡು ಬಂದು ಇವನೆಲ್ಲ ಒಂದೇ ವೇಳೆಗೆ ಕಡಿದರೆ ನನ್ನವೆಲ್ಲ

ನಿನಗೆ ಕೊಡುತ್ತೈದೇನಿ. ಕಡಿಯಲಾರದಿದ್ದರೆ ನಿನ್ನವೆಲ್ಲ ನನಗೆ ಕೊಡಬೇಕಾದೀತೆಂದು ಜೂಜನಾಡುವರಲ್ಲದೆ, ಕಾಯದ ಹಣಿದವನಾಡವರೆ? –ನನ್ನ ದೇಹವ ನೀ ಕಡಿದು ನೋಡು ನಿನ್ನ ದೇಹವ ನಾ ಕಡಿದು ನೋಡುತ್ತೈದೇನಿ ಎಂದು ದೇಹದೇಹಕ್ಕೆ ಜೂಜನಾಡುವಂಥವರಿದ್ದಾರೇ? ಇಲ್ಲವು, ಮೇಲೊಡ್ಡಾಯಿತ್ತೆಂದು–ಕಡಿಯಲಾರದಿದ್ದರೆ ನನ್ನವೆಲ್ಲವೂ ಅವನಿಗೆ ಕೊಡಬೇಕಾದೀತೆಂದು, ಕೂಡಲಸಂಗಮದೇವಾ–ಎಲೆ ಜೂಜುಗಾರನೆ, ನೀನಿಕ್ಕಿದ–ನೀ ಹಾಕಿದಂಥ, ಜೂಜಿಂಗೆ–ಪಂಥಕ್ಕೆ, ಸಿರಿಯಾಳ–ಸಿರಿಯಾಳನೆಂಬ, ಜೂಜುಗಾರನು, ಹೊಯ್ದು ಗೆದ್ದ–ಒಂದು ವೇಳೆಗೆ ಕಡಿದು ಕತ್ತರಿಸಿ ಅವನವೆಲ್ಲ ತಾ ತೆಗೆದುಕೊಂಡನೆಂಬ ದೃಷ್ಟೋಪಮಾನದ ಹಾಂಗೆ.

● ಕಬ್ಬಿನ ಹಣಿವದವನಾಡುವರಲ್ಲದೆ–ಬಹಿರಂಗದ ಪದಾರ್ಥವ ಕೊಟ್ಟು ಭಕ್ತಿಯ ಮಾಡುವರಲ್ಲದೆ, ಕಾಯದ ಹಣಿದವನಾಡುವರೆ? –ಆತ್ಮ ಪದಾರ್ಥವನ್ನು ವಂಚಿಸಿಕೊಂಡು ಬಹಿರಂಗದ ಪದಾರ್ಥವನ್ನು ಕೊಟ್ಟು ಭಕ್ತಿಯ ಮಾಡಿದರೆ, ಮೇಲೊಡ್ಡಾಯಿತ್ತೆಂದು–ಕಿಂಚಿನ್ಮಾತ್ರ ಫಲಪದಂಗಳು ದೊರೆಕೊಂಡು ಭವದುಃಖವುಂಟಾಯಿತ್ತೆಂದು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನೀನಿಕ್ಕಿದ–ನೀನುಂಟುಮಾಡಿದ, ಜೂಜಿಂಗೆ–ಆತ್ಮ ಪದಾರ್ಥವನ್ನು ಸಮರಸಭಾವದಿಂದ ಕೊಟ್ಟು ಭಕ್ತಿಯ ಮಾಡಬೇಕೆಂಬಂಥ ಪಂಥಕ್ಕೆ ಹೊಯ್ದು .ಗೆದ್ದ ಸಿರಿಯಾಳ: [ಸಿರಿಯಾಳ–]ಸಿರಿಯಾಳನೆಂಬ ನಿರ್ವಂಚಕ ಸದ್ಭಕ್ತನು, ಹೊಯ್ದು ಗೆದ್ದ–ಒಂದೇ ವೇಳೆಗೆ ಕೊರೆದು ಬಾಣಸವ ಮಾಡಿ ನೀಡಿ ಶಿವನುಂಟುಮಾಡಿದ ಸಕಲಪ್ರಪಂಚವನ್ನು ಜಯಿಸಿದನೆಂಬ ದೃಷ್ಟೋಪಮಾನವ ಹಾಂಗೆ.

● ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನೀನಿಕ್ಕಿದ ಜೂಜಿಂಗೆ–ಆತ್ಮ ಪದಾರ್ಥವನ್ನು ಕೇಳಿ ಹಿಮ್ಮೆಟ್ಟಿಸಬೇಕೆಂಬಂಥ ಪಂಥಕ್ಕೆ ಹೊಯ್ದು ಗೆದ್ದ ಸಿರಿಯಾಳ: [ಸಿರಿಯಾಳ–] ಸಿರಿಯಾಳನೆಂಬ, ಜ್ಞಾನಕಲಾತ್ಮನು ಹೊಯ್ದು ಗೆದ್ದ–ಸಮರಸಭಾವದಿಂದ ಆತ್ಮಪದಾರ್ಥವನ್ನು ಕೊಟ್ಟು ಭಕ್ತಿಯ ಮಾಡಿ ಶಿವನುಂಟುಮಾಡಿದ ಕಾಲಕಾಮಮಾಯಾಪ್ರಪಂಚವನ್ನು ಜಯಸಿದನು.

III– –

ಕಬ್ಬಿನ–ಇಕ್ಷುದಂಡದ, ಹಣಿದವಂ–ಜೂಜನು.

IV –

1–1 ದೇಹ (ತ), 2–2 ವ (ತ), 3–3 x (ತ),

....

ದೇಹೇಂದ್ರಿಯಂಗಳಳಿದು ಭಕ್ತಿಯ ಮಾಡಿ, ಸುತನನಿಕ್ಕಿ ಶಿವನ ಗೆದ್ದ ಸಿರಿಯಾಳ, ಉಳಿದವರು ಹೂವರು ಹೂವರು ಹೂವತಂದು ಪೂಜಿಸುತ್ತಿದ್ದರೆಂಬುದೀ ವಚನದರ್ಥ.

೬೮೨

ಅರ್ಥ ಪ್ರಾಣಾಭಿಮಾನವ ಕೊಟ್ಟೆನೆಂಬುವರಲ್ಲದೆ, ಕೊಟ್ಟ ಭಕ್ತರನಾರನೂ [1]ಕಾಣೆನು[1]. ದಾಸ ತನ್ನ ವಸ್ತ್ರವ ಕೊಟ್ಟನಲ್ಲದೆ ತನ್ನ ಕೊಟ್ಟುದಿಲ್ಲ[2]ವು[2], ಬಲ್ಲಾಳ ತನ್ನ ವಧುವ ಕೊಟ್ಟನಲ್ಲದೆ ತನ್ನ ಕೊಟ್ಟುದಿಲ್ಲ[2]ವು[2], ಸಿರಿಯಾಳ ತನ್ನ ಮಗನ ಕೊಟ್ಟನಲ್ಲದೆ ತನ್ನ ಕೊಟ್ಟುದಿಲ್ಲ[2]ವು[2]. ಇವೆಲ್ಲ ಹೊಲಿಗಣ ಮಾತು! ಕೂಡಲಸಂಗಮದೇವಾ ತನ್ನ ಕೊಟ್ಟ ಸಿಂಧುಮರಾಳ[3]ನು.[3]

I –

ಅರ್ಥಪ್ರಾಣಾಭಿಮಾನವ ಕೊಟ್ಟೆನೆಂಬುವರಲ್ಲದೆ: ಅರ್ಥ–ತಾ ಗಳಿಸಿದಂಥ ದ್ರವ್ಯವು, ಪ್ರಾಣ–ಪ್ರಾಣಸಂಬಂಧವಾದ ಪುತ್ರರು, ಅಭಿಮಾನ–[*ಅಭಿಮಾನ*], ಕೊಟ್ಟೆನೆಂಬುವರಲ್ಲದೆ[* *] ಇತ್ತೆವೆಂದು ಹೇಳುವರಲ್ಲದೆ. ಕೊಟ್ಟ ಭಕ್ತರನಾರನೂ ಕಾಣೆನು: ಕೊಟ್ಟ–ಇತ್ತಂಥ, ಭಕ್ತರ–ಶಿವ ಭಕ್ತರ, ಆರನೂ ಕಾಣೆನು–ಒರ್ವರನೂ ಕಂಡುದಿಲ್ಲವು.

ದಾಸ ತನ್ನ ವಸ್ತ್ರವ ಕೊಟ್ಟನಲ್ಲದೆ: ದಾಸ–ಜಾಡರ ದಾಸಿಮಯ್ಯನು, ತನ್ನ ವಸ್ತ್ರವ–ಹನ್ನೆರಡು ವರುಷ ಪರಿಯಂತರ ನೆಯ್ದಂಥ ಪಂಚವಣ್ಣಿಗೆಯ ದೇವಾಂಗವನು, ಕೊಟ್ಟನಲ್ಲದೆ–ಇತ್ತನಲ್ಲದೆ, ತನ್ನ ಕೊಟ್ಟದು–ತಾನೆಂಬ ಪದಾರ್ಥವನ್ನು ಸಮರ್ಪಣೆಯ ಮಾಡಿದ್ದು, ಇಲ್ಲವು–ಉಂಟಾಗಿಲ್ಲವು.

ಬಲ್ಲಾಳ–ಸಿಂಧುಬಲ್ಲಾಳರಾಯನು, ತನ್ನ ವಧುವ–ತನ್ನ ಹನ್ನರೆಡು ವರುಷದ ಪಟ್ಟದಂಗನೆಯನು, ಕೊಟ್ಟನಲ್ಲದೆ–ಇತ್ತನಲ್ಲದೆ, ತನ್ನ ಕೊಟ್ಟುದು–ತಾನೆಂಬ ಪದಾರ್ಥವನ್ನು ಸಮರ್ಪಣೆಯ ಮಾಡಿದಂಥದು, ಇಲ್ಲವು–ಉಂಟಾಗಿಲ್ಲವು.

ಸಿರಿಯಾಳ–ಕಂಚಿಪಟ್ಟಣದ ಸಿರಿಯಾಳಸೆಟ್ಟಿಯು, ತನ್ನ ಮಗನ–ತನ್ನ ಏಳು ವರುಷದ ಕುಮಾರನಾದ ಚೀಲಾಳಯ್ಯನ, ಕೊಟ್ಟನಲ್ಲದೆ–ಇತ್ತನಲ್ಲದೆ, ತನ್ನ ಕೊಟ್ಟುದಿಲ್ಲವು–ತಾನೆಂಬ ಪದಾರ್ಥವನ್ನು ಸಮರ್ಪಣೆಯ ಮಾಡಿದಂಥದು ಇಲ್ಲವು.

ಇವೆಲ್ಲ ಹೊಱಗಣ ಮಾತು : ಇವೆಲ್ಲ–ತನುಮನಧನಂಗಳೆಲ್ಲವು, ಹೊಱಗಣ ಮಾತು–ಬಾಹ್ಯದ ಪದಾರ್ಥವು, ಕೂಡಲಸಂಗಮದೇವರಲ್ಲಿ–ಪರಶಿವಲಿಂಗದ ಪಾದಾರವಿಂದದಲ್ಲಿ, ತನ್ನ ಕೊಟ್ಟ–ತಾನೆಂಬ ಪದಾರ್ಥವನ್ನು ಸಮರ್ಪಿಸಿದ, ಸಿಂಧುಮರಾಳನು–ಸಿಂದುಮರಾಳರಾಯನೆಂಬ ಶಿವಶರಣನು.

III– –

ಸಿಂಧುಮರಾಳನು–ಸಿಂದುಮರಾಳನೆಂಬ ರಾಜನು, ತನ್ನ ಕೊಟ್ಟ–ಶಿವಜಂಗಮದ ಗರಗಸದಲ್ಲಿ ಕೊಱೆದರೂ ತನ್ನ ಶರೀರವನೆ ಸಮರ್ಪಿಸಿದನು.

IV– –

1–1 ಕಂಡುದಿಲ್ಲ (ತ), 2–2+ ವು (ತ), 3–3 + ನು (ತ).

....

ಹೊಱಗಣ[* *] ಪುತ್ರವಸ್ತ್ರವ ಕೊಡಬಹುದಲ್ಲದೆ ತನ್ನ ಕೊಡಬಾರದು, ತನ್ನ ಕೊಟ್ಟ ಸಿಂಧುಮರಾಳನೆಂಬುದೀ ವಚನದರ್ಥ.

೬೮೩

ಒಂದು ಮಾತೆನಬಹುದೆ ಶಬ್ದ ಸಾರಾಯುವನು? ಒಂದು ಮಾತೆನಬಹುದೆ ಶರಣಸಂಬಂಧವನು? ಕೂಡಲಸಂಗಮದೇವ ನಂಬಿಗೆ ಓಯೆಂದುದನೊಂದು ಮಾತೆನಬಹುದೆ?

I- -

ಶಬ್ದ ಸಾಯುವನು–ಸಕಲವೇದಶಾಸ್ತ್ರಾಗಮಪುರಾಣಂಗಳಿಗೆ ಶ್ರೇಷ್ಠವಾದ ಶಿವಷಡಕ್ಷರಮಂತ್ರವನ್ನು, ಒಂದು ಮಾತೆನಬಹುದೇ?–ಎಲ್ಲಾ ಲೋಕದಾತ್ಮರುಗಳ ಭಿನ್ನಮಂತ್ರಗಳೊಳಗೆ ಇದೂ ಒಂದು ಭಿನ್ನಮಂತ್ರವೆಂದು ಹೇಳುವುದಕ್ಕಾದೀತೆ? ಆಗದು. ಶರಣಸಂಬಂಧವನು–ಶರಣನೇ ಸತಿಯಾಗಿ ಲಿಂಗವೇ ಪತಿಯಾಗಿ ಶರಣಸತಿ ಲಿಂಗಪತಿತ್ವ ವಿಡಿದಾಚರಿಸುವಂಥ ಆಚರಣೆಯನು, ಒಂದು ಮಾತೆನಂಬಹುದೆ?–ಎಲ್ಲಾ ಲೋಕದಾತ್ಮರುಗಳ ಸ್ತ್ರೀಪುರುಷರ ರತಿಕೂಟದೊಳಗೆ ಇದೂ ಒಂದು ಕೂಟವೆಂದು ಹೇಳುವುದಕ್ಕಾದೀತೆ? ಆಗದು, ಕೂಡಲಸಂಗಮದೇವ–ಪರಶಿವಲಿಂಗವು, ನಂಬಿಗೆ–ಸೌಂದರ ಗಣಾಧೀಶ್ವರಂಗೆ, ಓಯೆಂದುದನು–ಓಯೆಂದು ಪ್ರಸನ್ನವಾಗಿ ನಂದಿಮುದ್ರೆ ಪಡಿಹೊನ್ನನು ಕರುಣಿಸಿ ಕೊಟ್ಟಂಥವನು, ಒಂದು ಮಾತೆನಬಹುದೆ?–ಎಲ್ಲಾ ಲೋಕದಾತ್ಮರುಗಳಾಡುವಂಥ ಪ್ರಸಂಗದೊಳಗೆ ಇದೂ ಒಂದು ಪ್ರಸಂಗವೆಂದು ಹೇಳುವುದಕ್ಕಾದೀತೆ? ಆಗದು.

II -

ಒಂದು ಮಾತೆನ್ನಬಹುದೆ ಶಬ್ದಸಾರಾಯವನು?–ಗುರುಲಿಂಗಜಂಗಮಪ್ರಸಾದವೆಂಬ ಶ್ರೇಷ್ಠಾಯಮಾನವಾದ ಚತುರ್ವಿಧವನು ವೇದಾಗಮ ಶಾಸ್ತ್ರಪುರಾಣತಂತ್ರ ಇತಿಹಾಸಾದಿ ನಾನಶಾಸ್ತ್ರಂಗಳೊಳಗೆ ಇದೊಂದು ಶಾಸ್ತ್ರವೆನಬಹುದೆ? ಒಂದು ಮಾತೆನ್ನಬಹುದೆ ಶರಣಸಂಬಂಧ? – ಶರಣಸತಿ ಲಿಂಗಪತಿತ್ವದ ಸಮ್ಯಗ್ಬಂಧವನು ಎಲ್ಲಾ ಪ್ರಸಂಗದೊಳಗೆ ಇದೊಂದು ಪರಸಂಗವೆನಬಹುದೆ? ಮುಂದಕ್ಕೆ ಕಾಣಬಂದರ್ಥ.

IV -

ಗುರುವಾಕ್ಯ, ಪರಬ್ರಹ್ಮದ ಕೂಟ, ಪರಮ ಸುಖ[೧][ಗಳು][೧] ಒಂದು ಮಾತಲ್ಲಾಯೆಂಬುದೀ ವಚನದರ್ಥ.

....

೧–೧ ವನು (ತ).

೬೮೪

ಭಕ್ತರೇ ಸಮರ್ಥರು, ಅಸಮರ್ಥರೆನಲುಂಟೆ? ಚೆನ್ನನೆತ್ತ? ಚೋಳನೆತ್ತ? ಚೆನ್ನನೊಡನುಂಡ ಶಿವನು, ಆಹಾ, ಅಯ್ಯಾ, ಚೆನ್ನ ಚೋಳನ ಮನೆಯ ಕಂಪಣಿಗನಯ್ಯಾ! ಕೂಡಲಸಂಗಮದೇವ, ಭಕ್ತಿಲಂಪ'ಟಿಗ'ನಯ್ಯಾ!

I -

ಭಕ್ತರೇ ಸಮರ್ಥರು: ಭಕ್ತರೇ–ನಿರ್ವಂಚ ಸದ್ಭಕ್ತರು, ಸಮರ್ಥರು–ಸಮರಸಭಾವದಿಂದ ಸಕಲಪದಾರ್ಥಂಗಳನು ಕೊಟ್ಟು ಭಕ್ತಿಯು ಮಾಡಿ ಶಿವನುಂಟುಮಾಡಿದ ಕಾಲಕಾಮಮಾಯಾಪ್ರಪಂಚವನ್ನು ಜಯಿಸಲ್ಪಟ್ಟಂತವರುಗಳನು, ಅಸಮರ್ಥರೆನಲುಂಟೆ?–ಭಕ್ತಿಯನ್ನು

ಮಾಡಿ ಮುಕ್ತಿಯನ್ನು ಹಡೆಯಲಾರದಿದ್ದಂಥ ಅಶಕ್ತರೆಂದು ಹೇಳುವುದಕ್ಕಾದೀತೆ? ಆಗದು. ಚೆನ್ನ-ಮಾದಾರ ಚೆನ್ನಯ್ಯನು, ಎತ್ತ-ಯಾವಕಡೆಗೆ, ಚೋಳ-ಕರಿಕಾಲಚೋಳರಾಯನು, ಎತ್ತ-ಆವಕಡೆಗೆ, ಚೆನ್ನನೊಡನೆ-ಮಾದರಚೆನ್ನಯ್ಯನೊಂದಿಗೆ, ಉಂಡ-ಅನುಭವಿಸಿದ, ಶಿವನು-ಪರಮೇಶ್ವರನು, ಆಹಾ-ಆಶ್ಚರ್ಯವು, ಅಯ್ಯಾ-ಎಲೆ ಲಿಂಗವೆ.

ಚೆನ್ನ-ಮಾದರ ಚೆನ್ನಯ್ಯನು, ಚೋಳನ-ಕರಿಕಾಲಚೋಳರಾಯನ, ಮನೆಯ-ಮಂದಿರದ, ಕಂಪಣಿಗನಯ್ಯ-ಕಟ್ಟಿಗೆ ಹೊರೆಯನ್ನು ತಂದಕೊಂಡು ಕೊಟ್ಟಿಗೆ ಬದುಕನ್ನು ಮಾಡಿಕೊಂಡಿರಲ್ಪಟ್ಟಾತನಯ್ಯ, ಕೂಡಲಸಂಗಮದೇವ-ಪರಶಿವಲಿಂಗವು, ಭಕ್ತಿಲಂಪಟಿಗನಯ್ಯ-ಭಕ್ತಿಯ ಮಾಡಲ್ಪಟ್ಟಂಥ ಸದ್ಭಕ್ತರುಗಳಲ್ಲಿ ಮರುಕತ್ವವುಳ್ಳಾತನಯ್ಯಾ.

III- -

ಕಂಪಣಿಗನಯ್ಯ-ಲದ್ದೆಯ ಹೊರುವಾತನಯ್ಯ.

IV -

1-1 ಟ (ತ)

....

ಲಿಂಗವ ನೆನದು ಲಿಂಗವ ಪೂಜಿಸುವವ ಲಿಂಗವು, ಲಿಂಗಕ್ಕೆ ಸರಿಯಿಲ್ಲವಾಗಿ ಭಕ್ತನೇ ಘನವೆಂಬುದೀ ವಚನದರ್ಥ.

೬೮೫

ನಿಸ್ಸೀಮ ಗುಗ್ಗಳವನಿಕ್ಕಿದನೊಬ್ಬ ಶರಣ, ಊಘೇ ಚಾಂಗು ಭಲಾ ಎಂಬ ಹೊಗೆ ಗಗನವ ತೀವಿ. ಓಹಿಲಯ್ಯನು ಮೆಱೆದನಂದು ಸೌರಾಷ್ಟ್ರಮಂಡಲದಲ್ಲಿ, ಕೂಡಲಸಂಗಮದೇವ ಭಕ್ತವತ್ಸಲನಾಗಿ.

I -

ನಿಸ್ಸೀಮ-ಮೇರೆ ರಹಿತವಾದ ಪೂರ್ಣಜ್ಞನೆಯಾದಂಥ, ಒಬ್ಬ ಶರಣ-ಒಬ್ಬ ಶಿವಶರಣನು, ಗುಗ್ಗಳವನಿಕ್ಕಿದ-ತನ್ನಂಗವೇ ಗುಗ್ಗಳ ಧೂಪವ ಮಾಡಿ ಸಮರ್ಪಿಸಿದ, ಉಘೇ, ಚಾಂಗು ಭಲಾ ಎಂಬ-'ಉಕಾರಂಚ ಉಮಾದೇವಿ. ಘೇಕಾರಂ ಪರಮಶಿವಾ ಉಮಾಪರಶಿವಾಯೋಗೆ ಉಘೇ ಶಬ್ದ ಇಹೋಚ್ಯತೇ'. ಎಂಬ ಹೀಂಗೆ ಭಲರೇ ಭಾಪುರೇಯೆಂದು ಹೇಳವುದು, ಹೊಗೆ-ಧೂಮ್ರವು. ಗಗನವ-ಆಕಾಶವನು, ತೀವಿ-ತುಂಬಿ, ಓಹಿಲಯ್ಯನು-ನಿಃಕುಂಭರಾಯನ ಮಗನಾದ ಓಹಿಲದೇವನು, ಅಂದು-ಆ ಕಾಲದಲ್ಲಿ, ಮೆಱೆದ ಸೌರಾಷ್ಟ್ರಮಂಡಲದಲ್ಲಿ ಸೌರಾಷ್ಟ್ರಮಂಡಲದಲ್ಲಿ-ಸೌರಾಷ್ಟ್ರಮಂಡಲವೆಂಬ ಕ್ಷೇತ್ರದಲ್ಲಿ, ಮೆಱೆದ-ಶೋಭಿಸಿದನು. ಕೂಡಲಸಂಗಮದೇವ-ಪರಶಿವಲಿಂಗವು. ಭಕ್ತವತ್ಸಲನಾಗಿ-ಭಕ್ತಿಯ ಮಾಡುವಂಥ ಸದ್ಭಕ್ತರುಗಳಲ್ಲಿ ಮರುಕತ್ವವುಳ್ಳಾತನಾಗಿ.

....

೧-೧ ಇ (ಗ).

೬೮೬

ಲಿಂಗವಶದಿಂದ ಬಂದ ನಡೆಗಳು, ಲಿಂಗವಶದಿಂದ ಬಂದ ನುಡಿಗಳು, ಲಿಂಗವಂತರು ತಾವು ಅಂಜಲೇಕೆ? ಲಿಂಗವಿರಿಸಿದಂತಿಪ್ಪುದಲ್ಲದೆ ಕೂಡಲಸಂಗಮದೇವ ಭಕ್ತರಭಿಮಾನ ತನ್ನದೆಂಬನಾಗಿ.

I– –

ಲಿಂಗವಶದಿಂದ–ಶಿವನಪ್ಪಣೆಯಿಂದ, ಬಂದ–ಉಂಟಾದ, ನಡೆಗಳು–ಆಧಿವ್ಯಾಧಿವಿಪತ್ತುಗಳು, ಲಿಂಗವಶದಿಂದ–ಶಿವನಪ್ಪಣೆವಿಡಿದು, ಬಂದ–ಉಂಟಾದ, ನುಡಿಗಳು–ಸ್ತುತಿನಿಂದ್ಯಾದಿಗಳು. ಲಿಂಗವಂತರು ತಾವು–ತ್ರಿವಿಧಲಿಂಗಾರ್ಚಕರಾದ ಶಿವಭಕ್ತರು ತಾವು, ಅಂಜಲೇಕೆ?–ಶಿವನುಂಟು ಮಾಡಿದ ಆಧಿವ್ಯಾಧಿವಿಪತ್ತು ಸ್ತುತಿನಿಂದ್ಯಾದಿಗಳಿಗೆ ಬಹಿರಂಗದಲ್ಲಿ ಭಯಂಬಡುವುದೇನು ಕಾರಣಕ್ಕೆ, ಲಿಂಗವಿರಿಸದಂತಿಪ್ಪವುದಲ್ಲದೆ–ಶಿವನು ಉಂಬುವುದಕ್ಕೆ ಉಡುವುದಕ್ಕೆ ಕೊಟ್ಟ ಸುಖಸಂತೋಷದಲ್ಲಿ ಸೈತಿರಿಸಿದರೂ ಒಳ್ಳೇದೇ. ಉಂಬುವುದಕ್ಕೆ ಉಡುವುದಕ್ಕೆ ಕೊಡದೇ ದುಃಖದಲ್ಲಿ ಸೈತಿರಿಸಿದರೂ ಒಳ್ಳೇದೇ. ಕೂಡಲಸಂಗಮದೇವ–ಪರಶಿವಲಿಂಗವು, ಭಕ್ತರ–ಶಿವಭಕ್ತರುಗಳ, ಅಭಿಮಾನ–ಬಹುಮಾನವು, ತನ್ನದೆಂಬನಾಗಿ–ತನ್ನದೆಂದು ಮಮಕರಿಸಿಕೊಂಡಿಪ್ಪನಾಗಿ.

....

ಶಿವಭಕ್ತನಾಗಿ ತನ್ನ ಹಿಡಿದಹನೆಂದು......ಎಂಬ ವನಚದ ನಂತರ ಈ ವಚನವಿದೆ (ಸಂ).

IV– –

ಭಕ್ತನ ನಡೆ ನುಡಿ ದೇಹ ಪ್ರಾಣಾಭಿಮಾನ ಲಿಂಗದವೆಂಬುದೀ ವಚನದರ್ಥ.

೬೮೭

ಶಿವಭಕ್ತನಾಗಿ ತನ್ನ ಹಿಡಿದಿಹೆನೆಂದು ಹೋದಡೆ ನುಗ್ಗುಮಾಡುವ, ನುಸಿಯ ಮಾಡುವ, ಮಣ್ಣಮಾಡುವ, ಮಸಿಯ ಮಾಡುವ, ಕೂಡಲಸಂಗಮದೇವರ ನೆರೆನಂಬಿದನಾದಡೆ ಕಡೆಗೆ ತನ್ನಂತೆ ಮಾಡುವ.

I –

ಶಿವಭಕ್ತನಾಗಿ–ಗುರುಕಾರುಣ್ಯವ ಪಡೆದು ಲಿಂಗಾಂಗಸಂಬಂಧಿಯಾದ ಹರಭಕ್ತನಾಗಿ, ತನ್ನ ಹಿಡಿದಿಹೆನೆಂದು–ಲಿಂಗಪೂಜೆಯ ಮಾಡಿ ಲಿಂಗದಲ್ಲಿ ಬೆರೆಯಬೇಕೆಂಬ, ದೃಢವಿಡಿದಿಹೆನೆಂದು. ಹೋದಡೆ–ಲಿಂಗಪೂಜೆಯ ಮಾಡುತ್ತಿದ್ದರೆ, ನುಗ್ಗು ಮಾಡುವ–ಆಧಿವ್ಯಾಧಿವಿಪತ್ತಿಗೆ ಒಳಗು ಮಾಡುವನು ನುಶಿಯ ಮಾಡುವ–ಸಪ್ತಧಾತುವೆಲ್ಲ ಸಣ್ಣಿಸಿ ಗಿಟಗಿಟಿ ಜಂತ್ರವ ಮಾಡುವನು, ಮಣ್ಣಮಾಡುವ–ಮಲತ್ರಯಂಗಳಗೊಳಗು ಮಾಡುವನು. ಮಸಿಯ ಮಾಡುವ–ಅಜ್ಞಾನಕ್ಕೊಳಗು ಮಾಡವನು.

ಕೂಡಲಸಂಗಮದೇವರ–ಪರಶಿವಲಿಂಗವನ್ನು, ನೆರೆ–ಚೆನ್ನಾಗಿ, ನಂಬಿದನಾದಡೆ–ವಿಶ್ವಾಸಿಸಿ ಲಿಂಗಪೂಜೆಯ ಮಾಡಿದನಾದರೆ ಕಡೆಗೆ–ದೇಹಾಂತ್ಯಕ್ಕೆ, ತನ್ನಂತೆ ಮಾಡುವ–ಅಂತಪ್ಪ ಭಕ್ತನ ತನ್ನೊಳಗೇಕಾರ್ಥವ ಮಾಡಿಕೊಂಬುತ್ತಿಹನು.

II –

ಶಿವಭಕ್ತನಾಗಿ ತನ್ನಹಿಡಿದಿಹೆನೆಂದು ಹೋದಡೆ–ಲಿಂಗಭಕ್ತನಾಗಿ ಆ ವಸ್ತುವನು ಗ್ರಹಿಸೆನೆಂದು ಹೋದರೆ, ನುಗ್ಗು ಮಾಡವ–ಸಕಲಸಂಸಾರಾದಿ ಮಾಯಪ್ರಪಂಚನುಳ್ಳವನ ಮಾಡುವ, ಅದಲ್ಲದೆ ಇಂದ್ರಿಯಂಗಳ ಗುಣವನುಳ್ಳ ಜೀವನ ಮಾಡುವ, ನುಸಿಯ ಮಾಡುವ ವಿಷಯಾದಿಗಳುಳ್ಳವನ ಮಾಡುವ, ಮಣ್ಣ ಮಾಡುವ–ಪೃಥ್ವಿ ತತ್ವಾಂಶೀಭೂತವಾದ ದೇಹದ ವರ್ತನೆಯುಳ್ಳವನ ಮಾಡುವ, ಮಸಿಯ ಮಾಡುವ–ಅಜ್ಞಾನಾಂಧಕಾರವಾದ ಜೀವನ ಮಾಡುವ.

ಕೂಡಲಸಂಗಮದೇವರ ನೆರೆ ನಂಬಿದನಾದಡೆ ಕಡೆಗೆ ತನ್ನಂತೆ ಮಾಡುವ–ಪರಶಿವಲಿಂಗವನು ಚೆನ್ನಾಗಿ ವಿಶ್ವಾಸಿಸಿದರೆ ಅಂತ್ಯಕ್ಕೆ ತಾನು ಹೇಂಗೆ ಚಿದ್ಘನಲಿಂಗಪದಸ್ಥನಾಗ್ಯೆದಾನೆ ಹಾಂಗೆ, ಶರಣಂಗೆ ಚಿದ್ಘನಲಿಂಗ ಪದವಿಯನರುಹಿಕೊಡುವ ನೆಂಬುದರ್ಥ.

IV– –

ಪರಶಿವನ ಕೂಡೇನೆಂದು ಹೋದರೆ ಸುಖದುಃಖವ ತಂದೊಡ್ಡಿ ನೋಯಿಸುವ, ಇದಕಂಜದೆ ನಿಂದರೆ ತನ್ನಂತೆ ಮಾಡುವನೆಂಬುದೀ ವಚನದರ್ಥ.

೬೮೮

ಅರೆವನಯ್ಯ[1]ಸಣ್ಣನಾಗುವನ್ನಕ್ಕ[1], ಒರೆವನಯ್ಯ ಬಣ್ಣಗಾಂಬನ್ನಕ್ಕ. ಅರೆದಡೆ ಸಣ್ಣನಾಗಿ, ಒರೆದಡೆ ಬಣ್ಣವಾದಡೆ ಕೂಡಲಸಂಗಮದೇವನೊಲಿದು ಸಲಹುವನು.

I –

ಅರೆವನಯ್ಯ, ಸಣ್ಣನಾಗುವನ್ನಕ್ಕ [ಸಣ್ಣನಾಗುವನ್ನಕ್ಕ–] ಗಂಧದೋಪಾದಿಯಲ್ಲಿ ಸಣ್ಣನಾಗುವ ಪರಿಯಂತರ ಅರೆದನಯ್ಯ–ಸಾಣಿಕಲ್ಲ ಮೇಲಿಟ್ಟು ಅರೆದರೆದು ನೋಡುವನಯ್ಯ. ಒರೆವನಯ್ಯ ಬಣ್ಣಗಾಂಬನ್ನಕ್ಕ [ಬಣ್ಣಗಾಂನ್ನಕ್ಕ]–ಹತ್ತು ಬಣ್ಣ ಹದಿನಾರು ಬಣ್ಣ ಹೆಚ್ಚುವ ಪರಿಯಂತರ, ಒರೆವನಯ್ಯ–ಮಚ್ಚಗಲ್ಲ ಮೇಲಿಕ್ಕಿ ಒರೆದೊರೆದು ನೋಡುವನಯ್ಯಾ, ಅರೆದಡೆ–ಸಾಣಿಕಲ್ಲ ಮೇಲಿಕ್ಕಿ ಅಲೆದರೆದು ನೋಡಿದರೆ. ಸಣ್ಣನಾಗಿ–ಸೋಸಿದ ಗಂಧದ ಹಾಂಗೆ ಸಣ್ಣನಾದರೆ, ಒರೆದಡೆ–ಮಚ್ಚಗಲ್ಲ ಮೇಲಿಕ್ಕಿ ಒರೆದೊರೆದು ನೋಡಿ, ಬಣ್ಣವಾದಡೆ–ಹತ್ತು ಬಣ್ಣ ಹದಿನಾರು ಬಣ್ಣ ಹೆಚ್ಚಿದರೆ, ಕೂಡಲಸಂಗಮದೇವ–ಕಾರಕನು, ಒಲಿದು–ಪ್ರೀತಿಯಿಂದೆ, ಸಲಹುವನು–ನೂತನವಾದ ಆಭರಣವನ್ನು ಮಾಡುತ್ತಿಹನೆಂಬ ದೃಷ್ಟೋಪಮಾನದ ಹಾಂಗೆ.

● ಅರೆವನಯ್ಯ, ಸಣ್ಣನಾಗುವನಕ್ಕ :[ಸಣ್ಣನಾಗುವನ್ನಕ್ಕ–] ಸಪ್ತಧಾತುಗಳಲ್ಲಿ ಸಣ್ಣಿಸಿ ಗಿಟಿಗಿಟಿ ಜಂತ್ರವಾಗುವ ಪರಿಯಂತರವು, ಅರೆವನಯ್ಯ–ಆಧಿವ್ಯಾಧಿವಿಪತ್ತುಗಳನುಂಟುಮಾಡಿ ನೋಡುವನಯ್ಯ, ಒರೆವನಯ್ಯ ಬಣ್ಣಗಾಂಬುವನ್ನಕ್ಕ : ಒರೆವನಯ್ಯ–ಬಹಿರಂಗದಲ್ಲಿ ಎಲೋ ಭಕ್ತ ತನುವ ಕೊಡು ಮನವ ಕೊಡು ಧನದ ಕೊಡೆಂದು ಒರೆದೊರೆದು ಕೇಳುವನಯ್ಯ, ಬಣ್ಣಗಾಂಬುವನ್ನಕ್ಕ–ಅಂತರಂಗದಲ್ಲಿ ಶಿವಾದ್ವೈತ ಭಕ್ತಿಯೆಂಬ ಬಣ್ಣ ಹೆಚ್ಚುವ ಪರಿಯಂತರವು. ಅರೆದಡೆ–ಅಧಿವ್ಯಾಧಿ ವಿಪತ್ತುಗಳನುಂಟು ಮಾಡಿದರೆ, ಸಣ್ಣನಾಗಿ–ಸಪ್ತಧಾತುಗಳೆಲ್ಲ ಸಣ್ಣಿಸಿ ಗಿಟಿಗಿಟಜಂತ್ರವಾಗಿ, ಒರೆದಡೆ–ಬಹಿರಂಗದಲ್ಲಿ ಎಲೋ ಭಕ್ತ ತನುವ ಕೊಡು ಮನವ ಕೊಡು ಧನವಕೊಡೆಂದು ಒರೆದೊರೆದು ಕೇಳಿದರೆ,

ಬಣ್ಣವಾದಡೆ–ಅಂತರಂಗದಲ್ಲಿ ಶಿವಾದ್ವೈತಭಕ್ತಿಯೆಂಬ ಬಣ್ಣಹಚ್ಚಿದರೆ, ಕೂಡಲಸಂಗಮದೇವ–ಪರಶಿವಲಿಂಗವು, ಒಲಿದು–ಕೃಪೆಯಾಗಿ, ಸಲಹುವನು–ತನ್ನ ಪಾದೋದಕ ಪ್ರಸಾದವನಿತ್ತು ರಕ್ಷಣ್ಯವ ಮಾಡುತ್ತಿಹನು.

II –

1–1 ಸಣ್ಣವಹನ್ನಕ್ಕ (ಚ, ಜ)

ಅರೆವನಯ್ಯಾ ಸಣ್ಣವಹನ್ನಕ್ಕ–ಸೂಕ್ಷ್ಮಜ್ಞಾನವಿಚಾರ ಉಂಟಾಗುವ ಪರಿಯಂತರವೂ ಕ್ರೀಯಿಂದ ಮರ್ದಿಸುವನಯ್ಯಾ, ಒರೆವನಯ್ಯಾ ಬಣ್ಣಗಾಂಬನ್ನಕ್ಕ–ಭಯಭಕ್ತಿಕರುಣಕಿಂಕುರ್ವಾಣವುಳ್ಳಾತನಾಗುವ ಪರಿಯಂತರವು ಮಂತ್ರವ ಬೋಧಿಸುವನಯ್ಯಾ, ಅರೆದಡೆ ಸಣ್ಣನಾಗಿ–ಕ್ರೀಯಲ್ಲಿ ಮರ್ದಿಸಿದರೆ ಸೂಕ್ಷ್ಮಜ್ಞಾನ ವಿಚಾರ ಉಂಟಾಗಿ, ಒರೆದಡೆ ಬಣ್ಣವಾದಡೆ–ಮಂತ್ರವನು ಬೋಧಿಸಿದರೆ ಭಯಭಕ್ತಿಕರುಣಕಿಂಕುರ್ವಾಣವುಳ್ಳಾತನಾದರೆ, ಕೂಡಲ ಸಂಗಮದೇವನೊಲಿದು, ಸಲಹುವನು–ಪರಶಿವಲಿಂಗವು ಪ್ರೀತಿಯಿಂದ ರಕ್ಷಿಸುವನು.

IV –

1–1 ಸಣ್ಣವಹನ್ನಕ್ಕ (ತ)

....

ಶಿವನು ಕೊಡುವ ಕಾಟಕ್ಕಂಜದಲೆ ನಿಂದರೆ ಶಿವನು ಒಲಿದು ಸಲಹುವನೆಂಬುದೀ ವಚನದರ್ಥ.

೬೮

ಅಂಜಿದಡಾಗದು, ಅಳುಕಿದಡಾಗದು, ವಜ್ರಪಂಜರದೊಳಗಿದ್ದಡಾಗದು, [1]ಆಗುವುದು[1] ತಪ್ಪದು ಲಲಾಟ ಲಿಖಿತ, ಕಕ್ಕುಲತೆ [2]ಬಟ್ಟ[2]ಡಾಗದು, [3]ನೋಡಾ,[3] ಧೃತಿಗೆ[3]ಟ್ಟು,[4] ಮನ ಧಾತುಗೆಟ್ಟಡೆ ಅಪ್ಪುದು ತಪ್ಪದು, ಕೂಡಲಸಂಗಮದೇವಾ.

I –

ಅಂಜಿದಡಾಗದು : [ಅಂಜಿದಡೆ–] ಶಿವನುಂಟುಮಾಡಿದ ಕಾಲ ಕಾಮಮಾಯಾಪ್ರಪಂಚಿಗೆ ಬಹಿರಂಗದಲ್ಲಿ ಭಯಂಬಟ್ಟರೆ, ಆಗದು–ಆಗುವಂಥದು ಬಿಡುಗಡೆಯಾಗದು. ಅಳುಕಿದಡಾಗದು: [ಅಳುಕಿದಡೆ–] ಶಿವನುಂಟುಮಾಡಿದ ಆಧಿವ್ಯಾಧಿವಿಪತ್ತುಗಳಿಗೆ ಅಂತರಂಗದಲ್ಲಿ ಹೆದರಿಕೊಂಡರೂ, ಆಗದು–ಉಂಟಾಗುವಂಥದು ಬಿಡುಗಡೆಯಾಗದು, ವಜ್ರಪಂಜರದೊಳಗಿದ್ದಡೆ–ಪರೀಕ್ಷಿತರಾಯನೋಪಾದಿಯಲ್ಲಿ [1]ಹಿರಿದು[1] ಮಂದಾಸನದೊಳಗಿದ್ದರೆಯೂ, ಆಗದು–ಬರುವಂಥದು, ಆಗುವುದು ತಪ್ಪದು: [ಆಗುವುದು–]ತನಗುಂಟಾಗುವಂಥದು. ತಪ್ಪದು–ಓರೆಯಾಗದು, ಲಲಾಟ ಲಿಖಿತ–ಮುನ್ನಿನ ಹಣೆಯ ಬರಹವು.

ಕಕ್ಕುಲತೆ ಬಟ್ಟಡೆ–ಹೀಂಗಾದರೆ ಬಿಡುಗಡೆಯಾಗತೈತೋ ಇಲ್ಲವೋ ಎಂದು ಅಲ್ಪಾಸೆಯನ್ನು ಮುಂದುಗೊಂಡಿದ್ದರೆ, ಆಗದು ನೋಡಾ–ಬರುವಂಥ ಕಂಟಕವು ತಪ್ಪದು ಕಂಡಾ, ಧೃತಿಗೆಟ್ಟು–ಜಲವನಗಿರಿ ಮಸ್ತಕದ ಮೇಲಿದ್ದರೂ ಬರುವಂಥದು ತಪ್ಪದೆಂಬ ಅಂತರಂಗದ[3] ಧೈರ್ಯಗುಂದಿ,

ಮನ ಧಾತುಗೆಟ್ಟಡೆ–ಮದದಲ್ಲಿ ಅಧೈರ್ಯರ್ಗಂಬಟ್ಟು ಎಂಟುಗೇಣಿನ ಶರೀರ ಏಳುಗೇಣಾಗಿ ಕುಗ್ಗಿದರೆ, ಅಪ್ಪುದು–ಆಗುವಂಥದು, ತಪ್ಪದು–ತೊಲಗದು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

....

೧–೧ ಹೀರದ (ಗ), ೨+ ನಿರಸನ (ಕ, ಗ)

II– –

....

1–1 x (ಚ, ಜ), 2–2 ಗೆ ಬಂದ (ಚ, ಜ), 3–3 x (ಚ, ಜ), 4–4 ಟ್ಟ (ಚ, ಜ)

....

ಅಂಜಿದಡಾಗದು–ಎದೆ ಬಿಚ್ಚಿದರಾಗದು, ಅಳುಕಿದಡಾಗದು–ಆತ್ಮಸತ್ವಗುಂದಿದರಾಗದು, ವಜ್ರಪಂಜರದೊಳಗಿದ್ದಡಾಗದು–ಕುಲಿಶದ ದೇಹವೆಂಬ ಹಂಜರದೊಳಗಿದ್ದರಾಗದು, ತಪ್ಪದು ಲಲಾಟಲಿಖಿತ–ಪರಮೇಶ್ವರನು ಬರೆದ ಹಣೆಯ ಬರಹವು ವಾರಿಯಾಗದು, ಕಕ್ಕುಲತೆಗೆ ಬರಡಾಗದು–ಒಡಲ ಕಕ್ಕುಲತೆಗೆ ದೇಹವೆತ್ತಿ ಹುಟ್ಟಿ ಬಂದರೆ ಅಷ್ಟಭೋಗ ಅಷ್ಟೈಶ್ವರ್ಯವು ದೊರಕೊಳ್ಳದು, ಧೃತಿಗೆಟ್ಟು ಮನ ಧಾತಗೆಟ್ಟದ ಅಪ್ಪುದು ತಪ್ಪದು ಕೂಡಲಸಂಗಮದೇವಾ–ಮೂಲಜ್ಞಾನಧೈರ್ಯವಳಿದ ಮನೋಪ್ರಕೃತಿ ನಷ್ಟವಾದರೆ ಮುಕ್ತಿಯಾಗೂದು ವಾರಿಯಾಗದು.

೬೯೦

ಹುಟ್ಟಿದ ಬಳಿಕ ಕೊಟ್ಟ ಭೋಗಂಗಳ ತಪ್ಪಿಸಿಹೆನೆಂದಡೆ ತಪ್ಪದು ನೋಡಯ್ಯ, [1]ಎನಗಿನ್ನೆಂತೋ[1] ಎನಗಿನ್ನೆಂತೋ ಎನಗಿನ್ನಂತೋ [2]ಎಂದು ಚಿಂತಿಸಬೇಡವಯ್ಯ[2], [3]"ನಾ ಭುಕ್ತಂ ಕ್ಷೀಯತೇ ಕರ್ಮ"[3] ಎಂಬ [4]ಶ್ರುತ್ಯುಕ್ತಿ[4] ತಪ್ಪದು, ಕೂಡಲಸಂಗಮದೇವಾ.

I –

ಹುಟ್ಟಿದ ಬಳಿಕ–ಉಭಯಕುಲಶುದ್ಧವಾಗಿ ಉತ್ಪತ್ಯವಾದ ಮೇಲೆ, ಕೊಟ್ಟ ಭೋಗಂಗಳ : [ಕೊಟ್ಟ–] ಶಿವನು ಅನಾದಿಯಲ್ಲಿ ಕರುಣಿಸಿ ಕೊಟ್ಟಂಥ, ಭೋಗಂಗಳ–ಅಷ್ಟಭೋಗ ಅಷ್ಟಮಹದೈಶ್ವರ್ಯವೆಂಬ ಭಾಗ್ಯವು, ತಪ್ಪಿಸಿಹೆನೆಂದಡೆ–ಮಧ್ಯದಲ್ಲಿ ಆರಾದರೂ ತಪ್ಪಿಸಬೇಕೆಂದರೆ, ತಪ್ಪದು ನೋಡಯ್ಯಾ–ತೊಲಗದು ಕಂಡಯ್ಯಾ.

ಎನಗಿನ್ನಂತೋ–ಎನಗಿದರಿಂದ ಮೃಷ್ಟಾನ್ನಪಾನಂಗಳು ಹೇಂಗೆ ದೊರಕೊಂಡಾವೋ, ಎನಗಿನ್ನೆಂತೋ–ಎನಗಿನ್ನೆಂತೋ–ಎನಗಿದರಿಂದ ವೀಳ್ಯ ಫಲಾಹಾರಂಗಳು ಹೇಂಗೆ ದೊರಕೊಂಡಾವೋ, ಎನಗಿನ್ನೆಂತೋ–ಎನಗಿದರಿಂದ ಆಚ್ಛಾದಿಸಿಕೊಂಬುವುದಕ್ಕೆ ದಿವ್ಯದುಕೂಲಂಗಳು ಹೇಂಗೆ ದೂರಕೊಂಡಾವೋ, ಎಂದು–ಹೀಂಗೆಂದು, ಚಿಂತಿಸಬೇಡಯ್ಯ–ಉಮ್ಮಳಿಸಬೇಡವಯ್ಯ. "ನಾ ಭುಕ್ತಂ ಕ್ಷೀಯತೇ ಕರ್ಮ" ಎಂಬ ಶ್ರುತ್ಯುಕ್ತಿ ತಪ್ಪದು: ನಾ ಭುಕ್ತಂ ಕ್ಷೀಯತೇ ಕರ್ಮ–ಪೂರ್ವಕರ್ಮ ಶುಭಾಶುಭವೆಂದು ಮೊದಲ ಜನ್ಮದಲ್ಲಿ ಮಾಡಿದಂತ ಕೀಳು ಮೇಲಾದ ಪುಣ್ಯಪಾಪಂಗಳನು ಅನುಭವಿಸಿದಲ್ಲದೆ ಬಿಡುಗಡೆಯಾಗದು, ಎಂಬ–ಹೀಂಗೆದು ಹೇಳುವ, ಶ್ರುತ್ಯುಕ್ತಿ–ವೇದವಾಕ್ಯವು, ತಪ್ಪದು–ಹುಸಿಯಾಗದು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

III –

3–3 ನ ಭೋಕ್ತಂ ಕ್ರೀಯತೇ ಕರ್ಮಂ (ಟ, ಡ)

....

ಕ್ರೀಯತೇ ಕರ್ಮಂ–ಮಾಡಲ್ಪಟ್ಟ ಪುಣ್ಯಪಾಪ ಕರ್ಮಗಳನೂ, ನ ಭೋಕ್ತಂ–ಅನುಭವಿಸಿದಲ್ಲದೆ ತೀರದಾಗಿ.

IV –

1–1 x (ತ), 2–2 ಎಂದೆನಬೇಡಯ್ಯ (ತ), 4–4 ಶ್ರುತಿ (ತ)

....

ಸಂಚಿತ ಪ್ರಾರಬ್ಧ ಆಗಾಮಿಗಳ ಶಿವಮಾಡಿದನಾಗಿ, ಅವು ತಪ್ಪವು, ಉಳ್ಳುದುದು ಬಹುದು, ಇಲ್ಲದುದು ಬಾರದೆಂಬುದೀ ವಚನದರ್ಥ.

೬೯೧

ಆಯುಷ್ಯ ತೀರಿದಲ್ಲದೆ ಮರಣವಿಲ್ಲ, [1]ಭವಿಷ್ಯ[1] ತೀರಿದಲ್ಲದೆ ದಾರಿದ್ರ್ಯವಿಲ್ಲ, ಅಂಜಲದೇಕೋ [2]ಅಳುಕಲದೇಕೋ ಲೋಕವಿಗರ್ಭಣೆಗೆ? [2]ಅಂಜಲದೇಕೋ ಕೂಡಲಸಂಗಮದೇವಾ ನಿಮ್ಮಾಳಾಗಿ.

....

೧–೧ ಭಾಷೆ (ಗ)

I –

ಆಯುಷ್ಯ ತೀರಿದಲ್ಲದೆ ಮರಣವಿಲ್ಲ : ಆಯುಷ್ಯ–ತಾ ಮುನ್ನ ಸಂಬಂಧಿಸಿಕೊಂಡು ಬಂದಂಥ ಆಯುಷ್ಯಪ್ರಮಾಣವು, ತೀರಿದಲ್ಲದೆ_ತಿರುಗಡೆಯಾದಲ್ಲದೆ, ಮರಣವಿಲ್ಲ–ಅಷ್ಟು ಪರಿಯಂತರ ಲಯವಿಲ್ಲವು. ಭವಿಷ್ಯ ತೀರಿದಲ್ಲದೆ ದಾರಿದ್ರ್ಯವಿಲ್ಲ : ಭವಿಷ್ಯ–ಶಿವನು ಅನಾದಿಯಲ್ಲಿ ಕರುಣಿಸಿಕೊಟ್ಟಂಥ ಅಷ್ಟಭೋಗ ಅಷ್ಟಮಹದೈಶ್ವರ್ಯವೆಂಬ ಭಾಗ್ಯವು, ತೀರಿದಲ್ಲದೆ–ತೀರ್ಕಡೆಯಾದಲ್ಲದೆ, ದಾರಿದ್ರ್ಯವಿಲ್ಲ–ಅಷ್ಟು ಪರಿಯಂತರ ಬಡತನವಿಲ್ಲವು, ಅಂಜಲದೇಕೋ–ಬಹಿರಂಗದಲ್ಲಿ ಭಯಂಬಡುವದು ಏನು ಕಾರಣಕ್ಕೋ–ಅಂತರಂಗದಲ್ಲಿ ಹೆದರಿಕೊಂಬುವುದೇನು ಕಾರಣಕ್ಕೋ, ಲೋಕವಿಗರ್ಭಣೆಗೆ–ಇವರು ಮೊದಲೆಲ್ಲ ಒಳಿತಾಗಿದ್ದವರು ಈಗ ಜಂಗಮಭಕ್ತಿಯ ಮಾಡಿ ಸತ್ತು ಕೆಟ್ಟುಹೋದರುಯೆಂದು ಆಡುವಂಥ ಲೋಕದಾತ್ಮರುಗಳ ಪ್ರಸಂಗಕ್ಕೆ, ಅಂಜಲದೇಕೋ–ಬಹಿರಂಗದಲ್ಲಿ ಭಯಂಬಡುವದು ಏನು ಕಾರಣಕ್ಕೋ, ಅಳುಕಲದೇತಕೋ–ಅಂತರಂಗದಲ್ಲಿ ಹೆದರಿಕೊಂಬುವುದೇನು ಕಾರಣಕ್ಕೋ, ಲೋಕವಿಗರ್ಭಣೆಗೆ–ಇವರು ಮೊದಲೆಲ್ಲ ಒಳತಾಗಿದ್ದವರು ಈಗ ಜಂಗಮಭಕ್ತಿಯ ಮಾಡಿ ಸತ್ತು ಕೆಟ್ಟುಹೋದರುಯೆಂದು ಆಡುವಂಥ ಲೋಕದಾತ್ಮರುಗಳ ಪ್ರಸಂಗಕ್ಕೆ, ಅಂಜಲದೇಕೋ–ಬಹಿರಂಗದಲ್ಲಿ ಹೆದರಿಕೊಂಡು ಮಾಡುವಂಥ ಲಿಂಗಪೂಜೆ ಜಂಗಮದಾಸೋಹವನ್ನು ಬಿಡುವುದೇನು ಕಾರಣಕ್ಕೋ? ಸಲ್ಲದು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೇ, ನಿಮ್ಮಾಳಾಗಿ–ನಿಮ್ಮ ಭೃತ್ಯನಾದ ಭಕ್ತನಾಗಿ.

III– –

ಲೋಕವಿಗರ್ಭಣೆಗೆ-ಜನರುಗಳ ಸ್ತುತಿನಿಂದೆಗಳಿಗೆ

IV- -

1-1 x ಭಾಷೆ (ತ), 2-2 ಲೋಕವಿಗರ್ಭಣೆಗೆ ಅಳುಕಲದೇಕೋ (ತ)

....

ಈ ಪರಮದೃಢವುಳ್ಳಾತ ಮಾಹೇಶ್ವರನೆಂಬುದೀ ವಚನದರ್ಥ.

೬೯೨

ಮನಕ್ಕೆ ಮನ ಒಂದಾಗಿ, ಧನಕ್ಕೆ ಧನ ಒಂದಾಗಿ, ನಚ್ಚಿದ ಮಚ್ಚು ಅಚ್ಚೊತ್ತಿದಂತಿರಬೇಕು. ಪ್ರಾಣಕ್ಕೆ ಪ್ರಾಣ ಒಂದಾಗಿ, ಶುಭಸೂಚನೆ ಒಂದಾಗಿರದ [1]ನಚ್ಚು ಮಚ್ಚು ಪಾವೆಯ್ದುದೇ?[1] ಶಿರ ಹಱಿದಡೇನು, ಕರುಳು ಕುಪ್ಪಳಿಸಿದಡೇನು! ಇಂತಪ್ಪ ಸಮಸ್ತವಸ್ತುವೆಲ್ಲವೂ ಹೋದಡೇನು? ಚಿತ್ತಮನಬುದ್ಧಿ ಒಂದಾದ ಮಚ್ಚು ಬಿಚ್ಚಿ ಬೇಱಾಗದಿರ್ದಡೆ ಮೆಚ್ಚುವ ನಮ್ಮ ಕೂಡಲಸಂಗಮದೇವ.

I- -

ಮನಕ್ಕೆ ಮನ ಒಂದಾಗಿ : [ಮನಕ್ಕೆ ಮನ.]-ಭಕ್ತನ ಮನವೇ ದೇವನ ಮನದಲ್ಲಿ ದೇವನ ಮನವೇ ಭಕ್ತನ ಮನದಲ್ಲಿ, ಒಂದಾಗಿ-ಏಕವಾಗಿ' ಧನಕ್ಕೆ ಧನ ಒಂದಾಗಿ: [ಧನಕ್ಕೆ ಧನ-] ಭಕ್ತನ ದ್ರವ್ಯವೇ ದೇವನ ದ್ರವ್ಯದಲ್ಲಿ ದೇವನ ದ್ರವವೇ ಭಕ್ತನ ದ್ರವ್ಯದಲ್ಲಿ, ಒಂದಾಗಿ-ಏಕವಾಗಿ, ನಚ್ಚಿದ-ನಂಬಿದ, ಮಚ್ಚು-ಮಮಕಾರವು, ಅಚ್ಚೊತ್ತಿದಂತಿರಬೇಕು-ಎರಕವೆರದೋಪಾದಿಯಲ್ಲಿ ಕೂಡಿರಬೇಕು.

ಪ್ರಾಣಕ್ಕೆ ಪ್ರಾಣ ಒಂದಾಗಿ : [ಪ್ರಾಣಕ್ಕೆ ಪ್ರಾಣ-] ಭಕ್ತನ ಹರಣವೇ ದೇವನ ಹಾರಣದಲ್ಲಿ ದೇವನ ಹರಣವೇ ಭಕ್ತನ ಹರಣದಲ್ಲಿ, ಒಂದಾಗಿ ಏಕವಾಗಿ, ಶುಭಸೂಚನೆ-ಏಕವಾಗಿರದ ಆ ಜಂಗಮಮೂರ್ತಿಗಳು ಕೆಲವು ದಿವಸದ ಪರಿಯಂತರ ಎಲ್ಲಾದರೂ ಚರಿಸಾಡಿ ಬರುತ್ತೈದೇವೆಯೆಂದು ಬಿಜಯಂಗೆಯ್ದಿರುವರು ಮತ್ತು ಕೆಲವು ದಿವಸದ ಕಾಲಾಂತರದ ಮೇಲೆ ಆ ಜಂಗಮಮೂರ್ತಿಗಳು ಆ ಭಕ್ತನ ನೋಡಬೇಕೆಂದು ಇಚ್ಛೆ ಹುಟ್ಟಿ ಬರುತ್ತಿರುವರು. ಬರುವಂಥ ವೇಳೆಯಲ್ಲಿ ಆ ಭಕ್ತನ ಬಲಗಣ್ಣು ಬಲಹುಬ್ಬು ಹಾರುವಂಥದು ಬಲಯೆದೆ ಹಾರುವಂಥದು ಬಲಭುಜ ಹರುವಂಥದು. ಇಂತಪ್ಪ ಶುಭಸೂಚನೆಯು, ಒಂದಾಗಿರದ-ಏಕವಾಗಿರದ, ನಚ್ಚು-ನಂಬಿಗೆಯು, ಮಚ್ಚು-ಮಮಕಾರವು, ಪಾರವೆಯ್ದುದೇ-ಪಾರವೇದಿಸಿ ನಿಜಮೋಕ್ಷ ದೊರೆಕೊಂಡೀತೆ? ದೊರಕೊಳ್ಳದು.

ಶಿರಹಱಿದಡೇನು-ಆ ಜಂಗಮಮೂರ್ತಿಗಳಿಗೋಸ್ಕರವಾಗಿ ಶಿರಚ್ಛೇದನವಾಗಿ ಹೋದರೇನು, ಕರುಳು ಕುಪ್ಪಳಿಸಿದಡೇನು-ಬರಬಾರದಂಥ ಕಂಟಕಾದಿಗಳು ಬಂದು ಕಾಳಜಂಗಳೆಲ್ಲ ಹರಿದು ನೆಲಕ್ಕೆ ಬಿದ್ದರೇನು, ಇಂತಪ್ಪ-ಈ ಪ್ರಕಾರವಾದ, ಸಮಸ್ತವಸ್ತುವೆಲ್ಲ-ಸಕಲ ವಸ್ತ್ರಒಡವೆ ಆಭರಣಗಳೆಲ್ಲ, ಹೋದಡೇನು-ರಾಜಚೋರರುಗಳಿಗೆ ಚಾಗಿಯಾಗಿ ಹೋದರೇನು.

ಚಿತ್ತ-ಭಕ್ತನ ಚಿತ್ತವೇ ದೇವನ ಚಿತ್ತದಲ್ಲಿ ದೇವನ ಚಿತ್ತವೇ ಭಕ್ತನ ಚಿತ್ತದಲ್ಲಿ, ಮನ-ಭಕ್ತನ ಮನವೇ ದೇವನ ಮನದಲ್ಲಿ ದೇವನ ಮನವೇ ಭಕ್ತನ ಮನದಲ್ಲಿ, ಬುದ್ಧಿ-ಭಕ್ತನ ಬುದ್ಧಿಯೇ ದೇವನ ಬುದ್ಧಿಯಲ್ಲಿ ದೇವನ ಬುದ್ಧಿಯೇ ಭಕ್ತನ ಬುದ್ಧಿಯಲ್ಲಿ, ಒಂದಾದ-ಏಕವಾದ, ಮಚ್ಚು-ಮಮಕಾರವು, ಬಿಚ್ಚಿ-ಕ್ರೀಯಲ್ಲಿ ಪಿಂಗಡಿಸಿ, ಬೇಱಾಗದಿದ್ದಡೆ-ಅರುಹಿನಲ್ಲಿ ಭಿನ್ನವಾಗದಿದ್ದರೆ, ನಮ್ಮ

ಕೂಡಲಸಂಗಮದೇವ–ನಮ್ಮ ಪರಶಿವಲಿಂಗವು ಮೆಚ್ಚುವ–ಮಮಕರಿಸಿಕೊಂಡು ನಿಜಮೋಕ್ಷವನ್ನು ಕರುಣಿಸಿಕೊಡುತ್ತಿಹನು.

IV– –

1–1 ಮಚ್ಚು ಬಿಚ್ಚ ಬೇಜಾಗದಿರ್ದರೆ ಮೆಚ್ಚು (ತ)

ಅಂತಃಕರಣ ಪ್ರಾಣದೇಹವಳಿದರೂ ಪರಶಿವಲಿಂಗದ ಸಂಗವ ಬಿಡದಿದ್ದರೆ ಅದು ಮಚ್ಚು, ಬಿಚ್ಚಿ ಬೇಜಾದರೆ ಮೆಚ್ಚ ಲಿಂಗನೆಂಬುದೀ ವಚನದರ್ಥ.

ಮಾಹೇಶ್ವರನ ಮಾಹೇಶ್ವರಸ್ಥಲ

I– –

ಮಾಹೇಶ್ವರನ ಮಾಹೇಶ್ವರಸ್ಥಲ–ಮಾಹೇಶ್ವರನ ಸ್ಥಲದೊಳಗಣ ಮಾಹೇಶ್ವರಸ್ಥಲದಾಚರಣೆಯನ್ನು ನಿರೂಪಿಸುತ್ತಿಹರು.

೬೯೩

ಎನಿಸೆನಿಸೆಂದಡೆಯೂ ನಾ ಧೃತಿಗೆಡನಯ್ಯಾ; ಎಲುದೋಱೆದಡೇನು, ನರಹಱೆದಡೇಯೂ ಕರುಳು ಕುಪ್ಪಳಿಸಿದಡೇನು, ನಾ ಧೃತಿಗೆಡೆನಯ್ಯಾ. ಶಿರ ಹಱೆದು ಅಟ್ಟೆ ನೆಲಕ್ಕೆ ಬಿದ್ದಡೆ ನಾಲಗೆ "ಕೂಡಲಸಂಗಯ್ಯ ಶರಣೆ"ನುತಿ[1][ದ್ದಿತ][1]ಯ್ಯ.

....

1–1 ದ್ದೆನ (ಕ, ಗ)

I –

ಎನಿಸೆನಿಸೆಂದಡೆಯೂ–ಎಷ್ಟು ಆಧಿವ್ಯಾಧಿ ವಿಪತ್ತುಗಳನುಂಟುಮಾಡಿ ನೋಡಿದರೆಯೂ, ನಾ ಧೃತಿಗೆಡೆನಯ್ಯಾ–ನಾನು ಸಹಜಜ್ಞಾನ ಸತ್ವಗುಂದೆನಯ್ಯಾ. ಎಲುದೋಱೆದಡೆಯೂ–ಅಸ್ಥಿಗಳು ಬೆಳ್ಳಗೆ ಕಾಣಬರುವ ಹಾಂಗೆ ಚೂರಿ ಚಾಕುಗಳಿಂದ ಕಡಿದಿರಿದು ನೋಡಿದಡೆಯೂ, ನರಹಱೆದಡೇನು–ದಾರಿ ಬಟ್ಟೆಗಳ ಗಮಿಸುವಲ್ಲಿ ಹಿಮ್ಮಡದ ನರ ಚಟ್ಟೆಂದು ಕಿತ್ತಿದರೇನು, ಕರುಳು ಕುಪ್ಪಳಿಸಿದಡೇನು–ಕಾಳಜಂಗಳ ಮೊತ್ತವು ಹರಿದು ನೆಲಕ್ಕೆ ಬಿದ್ದರೇನು. ನಾ ಧೃತಿಗೆಡೆನಯ್ಯಾ–ನಾನು ಸಹಜಜ್ಞಾನಸತ್ವಗುಂದೆನಯ್ಯಾ, ಶಿರ ಹಱೆದು–ಮಸ್ತಕವು ಛೇದನವಾಗಿ ಹೋಗಿ, ಅಟ್ಟೆ–ಅಂಗವು, ನೆಲಕ್ಕೆ ಬಿದ್ದಡೆ–ಭೂಮಿಯ ಮೇಲೆ ಪತಿತವಾದರೆ, ನಾಲಗೆ–ರಸನೆಯು, ಮತ್ತಂತುಮಲ್ಲದೆ, ಶಿರ–ಖಂಡಿತ ಜ್ಞಾನ, ಹಱೆದು–ನಷ್ಟವಾಗಿ, ಅಟ್ಟೆ–ಆಚಾರಾಂಗವು, ನೆಲಕ್ಕೆ ಬಿದ್ದಡೆ–ಚಿತ್ತವೃತ್ತಿಯಲ್ಲಿ ಸಾಮರಸ್ಯವಾದರೆ, ನಾಲಗೆ–ಶಿವಾಪೇಕ್ಷೆಯೆಂಬ ರಸನೆಯು, ಕೂಡಲಸಂಗಯ್ಯ–ಎಲೆ ಪರಶಿವಲಿಂಗವೆ, ಶರಣೆನುತಿದ್ದೆನಯ್ಯ–ಲಿಂಗಪೂಜೆಯ ಮಾಡಿ ಲಿಂಗಕ್ಕೆ ನಮಸ್ಕರಿಸುತಿದ್ದೆನಯ್ಯ.

....

೧-೧ x (ಗ)

೭೯೪

ಒಣಗಿಸಿ ಎನ್ನ ಘಣಘಣನೆ ಮಾಡಿದಡೆಯೂ, ಹರಣವುಳ್ಳನ್ನಕ್ಕ ನಿಮ್ಮ ಚರಣವ ನೆನೆವುದ ಮಾಣೆ ಮಾಣೆ, ಶರಣೆಂಬುದ ಮಾಣೆ ಮಾಣೆ, ಕೂಡಲಸಂಗಮದೇವಯ್ಯ, ಎನ್ನ ಹೆಣನ ಮೇಲೆ [1]ಕಂಚಿ[1]ಟ್ಟುಂಡೆಯೂ ಮಾಣೆ ಮಾಣೆ.

....

1-1 ಕಜ್ಜಿ (ಗ)

I- -

ಒಣಗಿಸಿ ಎನ್ನ ಘಣಘಣನೆ ಮಾಡಿದಡೆಯೂ : ಒಣಗಿಸಿ-ಒಂದಾನೊಂದು ಕ್ರೂರಕನೋಪಾದಿಯಲ್ಲಿ ದೇಹವನ್ನು ಶುಷ್ಕವನೆಯ್ದಿಸಿ, ಎನ್ನ ಘಣಘಣನೆ ಮಾಡಿದಡೆಯೂ-ದಾರಿ ಬಟ್ಟೆಗಳ ಗಮಿಸುವಲ್ಲಿ ಕಡ್ಡಿ ಕಾಷ್ಠಂಗಳು ತಗುಲಿ ಘಣಘಣನೆಂಬ ಶಬ್ದವನ್ನುಂಟು ಮಾಡಿದರೆಯೂ, ಹರಣವುಳ್ಳನ್ನಕ್ಕ-ದೇಹದಲ್ಲಿ ಪ್ರಾಣವುಂಟಾಗುವ ಪರಿಯಂತರ, ನಿಮ್ಮ ಚರಣವ-ನಿಮ್ಮ ಪಾದಕಮಲಂಗಳ, ನೆನವುದ-ಸ್ಮರಣೆಯ ಮಾಡುವಂಥದನ್ನು, ಮಾಣೆ ಮಾಣೆ-ಬಿಡೆನು ಬಿಡೆನು.

ಶರಣೆಂಬುದ-ಲಿಂಗಪೂಜೆಯ ಮಾಡಿ ಲಿಂಗಕ್ಕೆ ನಮಸ್ಕರಿಸುವಂಥವನ್ನು, ಮಾಣೆ ಮಾಣೆ-ಬಿಡೆನು ಬಿಡೆನು, ಕೂಡಲಸಂಗಮದೇವಯ್ಯ-ಎಲೆ ಪರಶಿವಲಿಂಗವೆ, ಎನ್ನ ಹೆಣನ ಮೇಲೆ [೧]ಕಂಚಿ[೧]ಟ್ಟುಂಡೆಯೂ-ನನಗೆ ದಿನಕಾಲಕಲ್ಪಿತಂಗಳು ಸವೆದು ವೃದ್ಧನಾಗಿ ಸತ್ತುಹೋಗುವಂಥ ವೇಳೆಯಲ್ಲಿ. ಎಡಬಲದಲ್ಲಿ ಭಕ್ತಮಾಹೇಶ್ವರರು ಮೂರ್ತವ ಮಾಡಿಕೊಂಡು ಅಡ್ಡಣಿಗೆಯ ಮೇಲೆ ಕಂಚಿನ ಗಂಗಾಳದೊಳಗೆ ಸಕಲಮೃಷ್ಟಾನ್ನಪದಾರ್ಥಂಗಳನು ನೀಡಿಕೊಂಡು ಸಲಿಸುತಿದ್ದಲ್ಲಿ ಇವರಂತೂ ಉಂಬುತ್ತ ಬಿಡುವುತ್ತ ಸುಖಸಂತೋಷದಲ್ಲೈದಾರೆ. ನಾನು ವ್ಯರ್ಥಸ್ಯವಾಗಿ ಸತ್ತುಹೋಗುತ್ತೈದೇನಲಾಯೆಂದು ಚಿಂತಿಸಿದೆ. ಆಗಾದರೂ ಲಿಂಗಧ್ಯಾನ ಲಿಂಗಸ್ಮರಣೆಯ ಮಾಡುವಂಥವನ್ನು, ಮಾಣೆ ಮಾಣೆ-ಬಿಡೆನು ಬಿಡೆನು.

....

೧-೧ ಕಜ್ಜಿ (ಗ)

III- -

ಗಣಗಣಾಲ (ಟ, ಡ)

....

ಗಣಗಣಾಲ ಮಾಡಿದಡೆಯೂ-ಗಳಗಳನೆ ಎಸಗಿದರೆಯೂ.

೬೫೫

ಜಾಗ್ರಸ್ವಪ್ನಸುಷುಪ್ತಿ'ಗಳ'ಲ್ಲಿ ಮತ್ತೊಂದ ನೆನೆದಡೆ ತಲೆದಂಡ ತಲೆದಂಡ! ಹುಸಿಯಾದಡೆ ದೇವಾ ತಲೆದಂಡ ತಲೆದಂಡ! ಕೂಡಲಸಂಗಮದೇವಾ ನೀವಲ್ಲದೆ ಅನ್ಯವ ನೆನೆದಡೆ ತಲೆದಂಡ, ತಲೆದಂಡ!

I –

ಜಾಗ್ರಸ್ವಸುಪ್ತಿಗಳಲ್ಲಿ–ಜಾಗ್ರಸ್ವಪ್ನಸುಷುಪ್ತಿಗಳೆಂಬ ತ್ರಿವಿಧಾವಸ್ಥೆಗಳಲ್ಲಿ, ಮತ್ತೊಂದ ನೆನೆದಡೆ–ವಿಷೌಷಧ ಕಲ್ಕಷಾಯ ಅನ್ಯದೈವದ ಸ್ಮರಣೆ ಅನ್ಯಮಂತ್ರಸ್ಮರಣೆಗಳಿಂದ ಅಯ್ಯಯೋ ನಾ ಸತ್ತೆನಲಾ, ಎನ್ನ ಪ್ರಾಣ ಉಳುಹಿಕೊಳಬೇಕೆಂದು ಇಚ್ಛೈಸಿದರೆ ತಲೆದಂಡ, ತಲೆದಂಡೆ–ಜ್ಞಾನವನಪಹರಿಸಿ ಅಜ್ಞಾನಕ್ಕೊಳಗು ಮಾಡಿ ಭವಕ್ಕೆ ಹಾಕಿಬಿಡು, ಭವಕ್ಕೆ ಹಾಕಿಬಿಡು.

ಹುಸಿಯಾದಡೆ–ಅನೃತವೇ ಎನ್ನಲುಂಟಾದರೆ, ದೇವಾ–ಎಲೆ ಒಡೆಯನೆ, ತಲೆದಂಡ ತಲೆದಂಡ–ಜ್ಞಾನವನಪಹರಿಸಿ ಅಜ್ಞಾನಕ್ಕೊಳಗು ಮಾಡಿ ಭವಕ್ಕೆ ಹಾಕಿಬಿಡು ಭವಕ್ಕೆ ಹಾಕಿಬಿಡು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನೀವಲ್ಲದೆ–ಸ್ವಾಮಿಗಳಲ್ಲದೆ, ಅನ್ಯವ–ಅನ್ಯದೈವದ ಭಜನೆಯ ಮಾಡಬೇಕು. ಅನ್ಯದೈವದ ಪ್ರತ್ಯಕ್ಷತ್ವವನ್ನು ಹಡೆಯಬೇಕೆಂದು, ನೆನೆದಡೆ–ಜ್ಞಾನವನ್ನು ಅಪಹರಿಸಿ ಇಚ್ಛೈಸಿದರೆ, ತಲೆದಂಡ, ತಲೆದಂಡ, ಜ್ಞಾನವನ್ನು ಅಪಹರಿಸಿ ಅಜ್ಞಾನಕ್ಕೊಳಗುಮಾಡಿ ಭವಕ್ಕೆ ಹಾಕಿಬಿಡು ಭವಕ್ಕೆ ಹಾಕಿಬಿಡು.

IV– –

1–1 ಯ–(ತ)

....

ಈ ಮೂಱು ವಚನವು ದೇಹದ ನಾಲ್ಕು ಸೀಳು ಮಾಡಿದರೆಯೂ ಪರಂಜ್ಯೋತಿಲಿಂಗವಲ್ಲದೆ ಮತ್ತೊಂದನಱಿಯೆನೆಂಬುದೀ ವಚನದರ್ಥ.

೬೫೬

ಸುಖ ಬಂದಡೆ ಪುಣ್ಯದ ಫಲವೆನ್ನೆನು, ದುಃಖ ಬಂದಡೆ ಪಾಪದ ಫಲವೆನ್ನೆನು, ನೀ ಮಾಡಿದಡಾಯಿತ್ತೆ'ನ್ನೆನು, ಕರ್ಮಕ್ಕೆ ಕರ್ತೃವೆ ಕಡೆಯೆ'ನ್ನೆನು, ಉದಾಸೀನವಿಡಿದು ಶರಣೆನ್ನೆನು. ಕೂಡಲಸಂಗಮದೇವಾ, ನೀ ಮಾಡಿದುಪದೇಶವು ಎನಗೀಪರಿಯಲ್ಲಿ ಸಂಸಾರಸವೆಯ ಬಳಸುವೆನು.

I– –

ಸುಖ ಬಂದಡೆ ಪುಣ್ಯದ ಫಲನ್ನೆನು: ಸುಖ ಬಂದಡೆ–ಅಷ್ಟಮಹದೈಶ್ವರ್ಯವೆಂಬ ಪರಿಣಾಮವೇ ಬಂದು ಪ್ರಾಪ್ತಿಯಾದರೆ, ಪುಣ್ಯದ ಫಲವೆನ್ನೆನು–ಮೊದಲು ನಾನೇನು ಸುಕೃತವ ಮಾಡಿದ್ದೆನೋ ಈಗಲೂ ಅದೇ ಸುಕೃತವನ್ನು ಅನುಭವಿಸುತ್ತೈದೇನೆಂದು ಹೇಳುವೆನೆ? ಹೇಳೆನು. ದುಃಖ ಬಂದಡೆ–ಉಂಬುವುದಕ್ಕಿಲ್ಲದೆ ಉಡುವುದಕ್ಕಿಲ್ಲದೆ ದಾರಿದ್ರ್ಯವೇ ಬಂದು ಪ್ರಾಪ್ತಿಯಾದರೆ,

ಪಾಪದ ಫಲವನ್ನೆನು–ಮೊದಲು ನಾನೇನು ಪಾಪವ ಮಾಡಿದ್ದೆನೋ ಈಗಲೂ ಅದೇ ದೋಷವನ್ನು ಅನುಭವಿಸುತ್ತೈದೇನೆಂದು ಹೇಳುವೆನೆ? ಹೇಳೆನು.

ನೀ ಮಾಡಿದಡಾಯಿತ್ತೆನ್ನೆನು–ಈ ಪುಣ್ಯಪಾಪಂಗಳನು ನೀನುಂಟು ಮಾಡಿದರೆ ಉಂಟಾದುವೆಂದು ಹೇಳುವೆನೆ? ಹೇಳೆನು. ಕರ್ಮಕ್ಕೆ–ನಾನು ಮಾಡಿದ ಸಂಚಿತಾದಿ ಕರ್ಮತ್ರಯಂಗಳನು ಬಿಡುಗಡೆಯ ಮಾಡಿಕೊಂಬುವುದಕ್ಕೆ, ಕರ್ತೃವೇ ಕಡೆಯೆನ್ನೆನು–ಲಿಂಗಪೂಜೆಯ ಮಾಡಿದರೆ ಬಿಡುಗಡೆಯಾಗುತ್ತೈತೆಂದು ಹೇಳುವೆನೆ? ಹೇಳೆನು. ಉದಾಸೀನವಿಡಿದು–ಲಿಂಗಪೂಜೆಯ ಮಾಡಿದರೆ ಆಧಿವ್ಯಾಧಿ ಎಡರು ಕಂಟಕ ವಿಘ್ನಾದಿಗಳು ಬಂದು ಕಾಡುತ್ತೈದಾವೋ ಏನೋ ಎಂದು, ಉದಾಸೀನವಿಡಿದು–ಉಪೇಕ್ಷತ್ವವ ದೃಢವಿಡಿದು, ಶರಣೆನ್ನೆನು–ನಮಸ್ಕಾರ ನಮಸ್ಕಾರವೆಂದು ನಮಸ್ಕರಿಸುವೆನೆ? ನಮಸ್ಕರಿಸೆನು.

ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನೀ ಮಾಡಿದ್ದು–ನೀನು ಅನುಗ್ರೈಯ್ದದು, ಉಪದೇಶವು–ಬ್ರಹ್ಮೋಪದೇಶವು, ಎನಗೆ–ನನಗೆ, ಈ ಪರಿಯಲ್ಲಿ–ಈ ರೀತಿಯಲ್ಲಿ, ಸಂಸಾರ ಸವೆಯ ಬಳಸುವೆನು–ದೇಹಾವಸಾನ ಪರಿಯಂತರದಲ್ಲಿ ಕೊಟ್ಟು ಭಕ್ತಿಯ ಮಾಡುವೆನು.

....

೧–೧ x (ಕ),

IV –

1+ ಂದೆ(ತ)

....

ಪುಣ್ಯಫಲಪದವೆಂದೆನ್ನೆನು, ಸುಖದುಃಖವ ನೀ ಮಾಡಿದರಾಯಿತ್ತು, ಕೆಡಿಸಿದರೆ ಕೆಟ್ಟಿಂತ್ತೆಂದೆನ್ನೆನು, ನೀನೆಂದು ನಾನೆಂದು ಎನ್ನೆನೆಂಬುದೀ ವಚನದರ್ಥ.

೬೯೭

ಕಾಯದ ಕಳವಳಕ್ಕಂಜಿ, 'ಕಾಯಯ್ಯಾ' ಎನ್ನೆನು, ಜೀವನೋಪಾಯಕ್ಕಂಜಿ 'ಈಯಯ್ಯಾ' ಎನ್ನೆನು. "ಯದ್ಭಾವಂ ತದ್ಭವತಿ", ಸಿರಿ ಬರಲಿ ಉರಿ ಬರಲಿ, 'ಬೇಕು–ಬೇಡೆ'ನ್ನೆನಯ್ಯಾ. ಆನು ನಿಮ್ಮ ಹಾರೆನು; ಮಾನವರ ಬೇಡೆನು, ಆಣೆ, ನಿಮ್ಮಾಣೆ ಕೂಡಲಸಂಗಮದೇವಾ.

I –

ಕಾಯದ ಕಳವಳಕ್ಕಂಜಿ, 'ಕಾಯಯ್ಯಾ' ಎನ್ನೆನು: ಕಾಯಕದ ಕಳವಳಕ್ಕೆ–ದೇಹದ ಜನನಮರಣಂಗಳು ಮೊದಲಾದ ಹಲವು ಹಂಬಲಿಕೆಗೆ, ಅಂಜಿ–ಹೆದರಿ, ಕಾಯಯ್ಯ ಎನ್ನನು: ಕಾಯು–ಕಾಯ ರಕ್ಷಣಾರ್ಥಯೆಂದು ರಕ್ಷಣೆ ಮಾಡೆಂದು,[ಎನ್ನನ್ನೆನು–] ಕೇಳೆನು, ಜೀವನೋಪಾಯಕ್ಕೆ–ಜೀವನ ಬುದ್ಧಿಗೆ, ಅಂಜಿ–ಹೆದರಿಕೊಂಡು, ಈಯಯ್ಯಾ ಎನ್ನೆನು–"ಈ ಪ್ರದಾನೇ" ಯೆಂದು ವಸ್ತುವನ್ನು ಕೊಟ್ಟು ರಕ್ಷಣ್ಯವ ಮಾಡೆಂದು ಕೇಳೆನು.

"ಯದ್ಭಾವಂ ತದ್ಭವತಿ": ಯತ್–ಹೇಂಗೆ, ಭಾವಂ–ಮನದಲ್ಲಿ ನಿರ್ಮಲತ್ವವನ್ನು ಮುಂದುಗೊಂಡು ಲಿಂಗಪೂಜೆಯ ಮಾಡುತ್ತಿಹರೋ, ತತ್–ಹಾಂಗೆ, ಭವತಿ–

ಇಷ್ಟಾರ್ಥಸಿದ್ಧಿಯಾಗುತ್ತಿಹುದು, ಸಿರಿ ಬರಲಿ-ಅಷ್ಟಭೋಗ ಅಷ್ಟಮಹದೈಶ್ವರ್ಯವೆಂಬ ಭಾಗ್ಯವೇ ಬಂದು ಪ್ರಾಪ್ತಿಸಲಿ, ಉರಿ ಬರಲಿ-ರಾಜಭಯ ಚೋರಭಯ ಅಗ್ನಿಭಯ ಮೊದಲಾದ ದುಃಖವೇ ಬಂದು ಪ್ರಾಪ್ತಿಸಲಿ, ಬೇಕು ಬೇಡೆನ್ನೆನಯ್ಯಾ-ಸುಖವೇ ಬೇಕು ದುಃಖವೇ ಬೇಡೆಂದು ಹೇಳೆನಯ್ಯಾ.

ಆನು-ಶರಣನು, ನಿಮ್ಮ-ಸ್ವಾಮಿಗಳ, ಹಾರೆನು-"ಹಾರು ಇಚ್ಛಾ"ಯೆಂಬ ಧಾತುವಿನಿಂದ ಫಲಪದಂಗಳನು ಕರುಣಿಸಿಕೊಡೆಂದು ಇಚ್ಛೈಸೆನು. ಮಾನವರ ಬೇಡೆನು-ಲೋಕದಾತ್ಮರುಗಳ ಒಂದು ವಸ್ತುವನ್ನು ಕೊಡೆಂದು ಕೇಳೆನು. ಆಣೆ-ಪ್ರತಿಜ್ಞೆಯು, ನಿಮ್ಮಾಣೆ-ಸ್ವಾಮಿಗಳ ಮೇಲಣ ಪ್ರತಿಜ್ಞೆಯು, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

೬೯೮

ನಾಳೆ ಬಪ್ಪುದು ನಮಗಿಂದೇ ಬರಲಿ, ಇಂದು ಬಪ್ಪುದು ನಮಗೀಗಲೆ ಬರಲಿ, ಇದಕಾರಂಜುವರು, ಇದಕಾರಳುಕುವರು? "ಜಾತಸ್ಯ ಮರಣಂ ಧ್ರುವಂ" ಎಂದುದಾಗಿ, ನಮ್ಮ ಕೂಡಲಸಂಗಮದೇವ[1] ಬರೆದ ಬರಹ[2] ತಪ್ಪಿಸುವಡೆ ಹರಿಬ್ರಹ್ಮಾದಿಗಳಿಗಳವಲ್ಲ!

I -

ನಾಳೆ ಬಪ್ಪುದು ನಮಗಿಂದೇ ಬರಲಿ : ನಾಳೆ ಬಪ್ಪುದು-ನಾಳೆ ಬರುವಂಥ ಆಧಿವ್ಯಾಧಿವಿಪತ್ತು ಸುಖದುಃಖ ಸ್ತುತಿನಿಂದಾದಿಗಳು, ನಮಗಿಂದೇ ಬರಲಿ-ನಮಗಿವತ್ತೇ ಬಂದು ಪ್ರಾಪ್ತಿಸಲಿ: ಇಂದು ಬಪ್ಪುದು ನಮಗೀಗಲೆ ಬರಲಿ: ಇಂದು ಬಪ್ಪುದು-ಇವತ್ತು ಬರವಂಥ ಆಧಿವ್ಯಾಧಿವಿಪತ್ತು ಸುಖದುಃಖ ಸ್ತುತಿನಿಂದಾದಿಗಳು, ನಮಗೀಗಲೇ ಬರಲಿ-ನಮಗೀಕ್ಷಣದಲ್ಲಿಯೇ ಬಂದು ಪ್ರಾಪ್ತಿಸಲಿ; ಇದಕಾರಂಜುವರು-ಇದಕ್ಕೆ ಬಹಿರಂಗದಲ್ಲಿ ಭಯಂಬಡುವಂಥವರಾರಿದ್ದಾರು, ಇದಕಾರಳುಕುವರು-ಇದಕ್ಕೆ ಅಂತರಂಗದಲ್ಲಿ ಹೆದರಿಕೊಂಬಂಥವರಾರಿದ್ದಾರು.

"ಜಾತಸ್ಯ ಮರಣಂ ಧ್ರುವಂ" ಎಂದುದಾಗಿ: ಜಾತಸ್ಯ-ಹುಟ್ಟುವಂಥಾತ್ಮನಿಗೆ, ಮರಣಂ-ಸತ್ತುಹೋಗುವಂಥದು, ಧ್ರುವಂ-ನಿಶ್ಚಯವು, ಎಂದುದಾಗಿ-ಹೀಂಗೆಂದು ಈಶ್ವರನ ವಾಕ್ಯದಲ್ಲಿ ಹೇಳುತ್ತಿಹುದಾಗಿ, ನಮ್ಮ ಕೂಡಲಸಂಗಮದೇವ ನಮ್ಮ ಪರಶಿವಲಿಂಗವು ಬರೆದ-ಲೇಖನವ ಮಾಡಿದ, ಬರಹ-ಪಂಚಾಕ್ಷರಮಂತ್ರವನ್ನು, ತಪ್ಪಿಸುವೊಡೆ-ಮಧ್ಯದಲ್ಲಿ ಒಬ್ಬರು ತೊಲಗಿಸೇನೆಂದರೆ, ಹರಿಬ್ರಹ್ಮಾದಿಗಳಿಗಳವಲ್ಲ-ಬ್ರಹ್ಮವಿಷ್ಣ್ವಾದಿಗಳಿಗೆ ಶಕ್ಯವಲ್ಲವು.

IV- -

1+ ರು (ತ), 2+ ವ (ತ)

....

ಪರಮೇಶ್ವರ ಮಾಡಿದ ಹಾಗಹುದು. ಕೆಡಿಸಿದ ಹಾಗೆ ಕೆಡುವುದು. ಉಳಿದ ದೇವತೆಗಳ ಕೈಯ[ಲಿ] ಆಗದು. ಇದಕ್ಕೆ ಅಂಜಲೇಕೆ? ಎಂಬುದೀ ವಚನದರ್ಥ.

೬೯

ಕಳಹೋದಡೆ ಕನ್ನದುಳಿಯ ಹಿಡಿವೆ, ಬಂದಿವಿಡಿದಡೆ ನಿಮ್ಮಿಂದ ಮುಂದೆ ನಡೆವೆ, ಮನ ಭೀತಿ, ಮನ ಶಂಕೆಗೊಂಡೆನಾದಡೆ ನಿಮ್ಮಾಣೆ, ನಿಮ್ಮ ಪುರಾತನರಾಣೆ! ಆಳ್ದರ ನಡೆ ಸದಾಚಾರವೆನ್ನದಿದ್ದಡೆ ಕಟ್ಟಾಳು ಶ್ರೇಷ್ಠತನಕ್ಕೆ ಹೋಹ ಕಷ್ಟವ ನೋಡಾ ಕೂಡಲಸಂಗಮದೇವಾ.

I- -

ಕಳಹೋದಡೆ ಕನ್ನದುಳಿಯ ಹಿಡಿವೆ: ಕಳಹೋದಡೆ–ಕನ್ನದ ಮಾರಯ್ಯಗಳು ಕಲ್ಯಾಣಪಟ್ಟಣದಲ್ಲಿ ತಾವು ತಮ್ಮ ಸಮಯಾಚಾರದ ಜಂಗಮಮೂರ್ತಿಗಳು ಸಹವಾಗಿ ಸಲಿಸಿಕೊಂಡು ವೀಳ್ಯವನ್ನು ನೀಡಿಕೊಂಬುವಂಥ ವೇಳೆಯಲ್ಲಿ ಪರಮೇಶ್ವರನೇ ಚರಮೂರ್ತಿಯಾಗಿ ಪ್ರಮಥಗಣಂಗಳೇ ಜಂಗಮವಾಗಿ ಕನ್ನದ ಮಾರಯ್ಯಗಳ ಮನೆಗೆ ಲಿಂಗಾರ್ಪಿತ ಭಿಕ್ಷಕ್ಕೆಂದು ಬಿಜಯಂಗೈದು ಬಂದಲ್ಲಿ ಕಂಡಾಕ್ಷಣಕ್ಕೆ ನಮಸ್ಕಾರವ ಮಾಡಿ ಉನ್ನತಾಸನ ಗದ್ದುಗೆಯ ಮೇಲೆ ಮೂರ್ತವ ಮಾಡಿಸಿ ಕೈಯೊಳಗೆ ಕನ್ನಗತ್ತಿಯನ್ನು ಹಿಡಿದುಕೊಂಡು ತಲೆಗೆ ಮಸಿ ಅರಿವೆಯನ್ನು ಕಟ್ಟಿಕೊಂಡು ಮೈಗೆ ಎಣ್ಣೆಯನ್ನು 'ಸವರಿಕೊಂಡು' ಬಿರಿ ಬಾರಿನ ಎಕ್ಕಡವನ್ನು ಮೆಟ್ಟಿಕೊಂಡು ಬೀದಿಬಾಜಾರದಲ್ಲಿ ಹೋಗುತ್ತಿರುವಂಥ ವೇಳೆಯಲ್ಲಿ ಇತ್ತ ಬಸವೇಶ್ವರಸ್ವಾಮಿಯವರು ಬಿಜ್ಜಳಾಂಕನ ಸಭೆಯಿಂದ ಐವತ್ತಾರು ದೇಶದ ಪಾರುಪತ್ಯವನ್ನು ತೀರಿಸಿ ಬರುವಂಥ ವೇಳೆಯಲ್ಲಿ, ಕನ್ನದುಳಿಯ ಹಿಡಿವೆ–ಶರಣುಶರಣಾರ್ಥಿ ಕನ್ನದ ಮಾರಯ್ಯಗಳೇ ಎತ್ತ ಹೋಗುತ್ತಿದ್ದೀರಿಯೆಂದು ಕೇಳಿದಲ್ಲಿ ಒಬ್ಬ ಚರಮೂರ್ತಿಗಳು ಲಿಂಗಾರ್ಪಿತಭಿಕ್ಷಕ್ಕೆ ಬಂದೈದಾರೆ. ಅದಕ್ಕೋಸ್ಕರ ನಾವು ಬಿಜ್ಜಳರಾಯನ ಮನೆಯ ಕನ್ನವ ಕೊರೆದು ಪದಾರ್ಥವ ತರುವುದಕ್ಕೆ ಹೋಗತ್ತೈದೇವಿಯೆಂದು ಹೇಳಿದಲ್ಲಿ ನಿಮ್ಮ ಕೈಯೊಳಗಿರುವಂಥ ಕನ್ನಗತ್ತಿಯನು ನನ್ನ ಕೈಯೊಳಗೆ ಕೊಡಿರೆಂದು ಕೇಳಿದಲ್ಲಿ, ಬಂದಿವಿಡಿದಡೆ–ಬಿಜ್ಜಳರಾಯನ ಕಾಪಿನಾಳುಗಳು ಬಂದು ಸೆರೆ ಹಿಡಿದರೆ ಏನು ಮಾಡುತ್ತಿದ್ದೀರೆಂದು ಕೇಳಿದರೆ ನಿಮಗೆ ಮಾಡುವಂಥ ಶಿಕ್ಷೆ ಎನಗೆ ಮಾಡಲೆಂದು, ನಿಮ್ಮಿಂದ ಮುಂದೆ ನಡೆವೆ–ನಿಮಗಿಂದ ಮುಂದಕ್ಕೆ ಮೂರು ಹೆಜ್ಜೆಯನ್ನು ನಡೆದು ಹೋಗುವೆನು.

ಮನ ಭೀತಿಗೊಂಡೆನಾದಡೆ–ಬಿಜ್ಜಳಾಂಕನು ಕೇಳಿದ್ದೇ ಉಂಟಾದರೆ ಏನು ಕೈ ಕೊಯಿಸಿಯಾನೋ ಕಾಲು ಕೊಯಿಸಿಯಾನೋ ಕಣ್ಣು ಕೀಳಿಸಿಯಾನೋ ಎಂದು ಮನದಲ್ಲಿ ಭಯಂಬಟ್ಟೆನಾದರೆ, ಮನ ಶಂಕೆಗೊಂಡೆನಾದಡೆ–ಬಿಜ್ಜಳಾಂಕನು ಬಸವೇಶ್ವರಸ್ವಾಮಿಗಳ ಪ್ರಧಾನಿಪಟ್ಟಕ್ಕೆ ಒಡೆಯರ ಮಾಡಿದ ಮೇಲೆ ಸಮಸ್ತ ಬದುಕಿಗೆ ತಾವೆ ಖಾವಂದರಾಗಿ ಸುಮ್ಮನಿರಬಾರದೆ? ಬಿಜ್ಜಳರಾಯ ತಮಗೇನು ಮಾಡಿದ್ದ? [* *] ಎಂದು ಲೋಕದಾತ್ಮರುಗಳು ಆಡಿ ಕೊಂಡಾರೆಂದುಮನದಲ್ಲಿ ಸಂಕಲ್ಪಭಾವವನ್ನು ಮುಂದುಗೊಂಡೆನಾದರೆ, ನಿಮ್ಮಾಣೆ–ಸ್ವಾಮಿಗಳ ಮೇಲಣ ಪ್ರತಿಜ್ಞೆಯು, ನಿಮ್ಮ ಪುರಾತನರಾಣೆ–ನಿಮ್ಮರುವತ್ತುಮೂರು ಪುರಾತರ ಮೇಲಣ ಪ್ರತಿಜ್ಞೆಯು.

ಆಳ್ದರ–ಕರ್ತನಾದಂಥ ಕನ್ನದ ಮಾರಯ್ಯಗಳ, ನಡೆ–ಆಚರಣೆಯು, ಸದಾಚಾರವೆನ್ನದಿದ್ದಡೆ–ಒಬ್ಬರ ಮನೆಯಲ್ಲಿ ಕದ್ದುಕೊಂಡು ಬರುವಂಥ ದುರಾಚಾರವೆ ಅಹುದು. ಅದನ್ನು ಸತ್ಪಥಾಚಾರವೆಂದು ಹೇಳಬೇಕು. ಹೇಳದಿದ್ದರೆ, ಕಟ್ಟಾಳು–ಹಸ್ತಪಾದವ ಜೋಡಿಸಿಕೊಂಡು ಓಲೈಸುವಂಥ ಸಂಗನ ಬಸವೇಶ್ವರನು, ಶ್ರೇಷ್ಠತನಕ್ಕೆ ಹೋಹ–ಎಲೇ ಕನ್ನದ ಮಾರಯ್ಯಗಳೇ ನೀವು ತನುವ ಬಳಲಿಸಿ

ಮನವ ಬಳಲಿಸಿ ಸತ್ಯಶುದ್ಧಕಾಯಕವನ್ನು ತೆಗೆದುಕೊಂಡು ಬಂದು ಜಂಗಮಾರ್ಚನೆಯ ಮಾಡಬೇಕಲ್ಲದೆ ಹೀಂಗೆ ಪರದ್ರವ್ಯವನ್ನು ತೆಗೆದುಕೊಂಡು ಬಂದು ಜಂಗಮಾರ್ಚನೆಯ ಮಾಡಬಹುದೆ? ಮಾಡಬಾರದೆಂದು ಮೇಲುವಿಚಾರ ಮೇಲುಯುಕ್ತಿಯ ಹೇಳುವಂಥದು, ಕಷ್ಟವ ನೋಡಾ-ಬಹು ಕ್ಷೀಣವು ಕಂಡಾ, ಕೂಡಲಸಂಗಮದೇವ-ಎಲೆ ಪರಶಿವಲಿಂಗವೆ.

....

೧-೧ ಹುಸಿಕೊಂಡು (ಗ)

೭೦೦

[1]ಜೋಳವಾಳಿಯವ ನಾನಲ್ಲವಯ್ಯ[1], [2]ನಿಮ್ಮ[2] [3]*ವೇಳೆ*ವಾಳಿಯವ[3] ನಾನ[4]ಯ್ಯ; [5]ಹಾ[5]ಳುಗೆಟ್ಟೋಡುವ ಆಳು ನಾನಲ್ಲ[6]ವಯ್ಯ[6], ಕೇಳು ಕೂಡಲಸಂಗಮದೇವಾ, ಮರಣವೆ ಮಹಾನವಮಿ [7]ಎನಗೆ[7].

....

- ವ್ಯಾಳ್ಯದ (ಕ, ಗ), ೫-೫ ಅ (ಕ, ಗ)

I -

ಜೋಳವಾಳಿಯವ ನಾನಲ್ಲವಯ್ಯ-ಒಂದು ಪಡಿ ಜೋಳಕ್ಕೆ ಚೆಂಗೂಲಿಯ ಮಾಡಲ್ಪಟ್ಟಂಥಾತ ನಾನಲ್ಲವಯ್ಯ, ನಿಮ್ಮ ವೇಳೆವಾಳಿಯವ ನಾನಯ್ಯ-ನಿಮ್ಮ ವೇಳೆಯ ಹೊತ್ತಿಗೆ ಹೋಗಿ ಕೂಲಿಯ ಮಾಡಲ್ಪಟ್ಟಾತ ನಾನಯ್ಯ. ಹಾಳುಗೆಟ್ಟೋಡುವ ಆಳು ನಾನಲ್ಲವಯ್ಯ: ಹಾಳು ಗೆಟ್ಟೋಡುವ-ಆರುತಾಸು ಹೊತ್ತಿನಾಗ ಬಂದು ಮೂರು ತಾಸುತನಕ ಕೂಲಿಯ ಮಾಡಿ ಹೊತ್ತಿರುವತ್ತಿಗೆ ಗೊತ್ತಿಗೆ ಹೋಗುವಂಥ, ಆಳು ನಾನಲ್ಲಯ್ಯ-ಚೆಂಗೂಲಿಯವ ನಾನಲ್ಲವಯ್ಯ. ಕೇಳು-ಆಲಿಸು, ಕೂಡಲಸಂಗಮದೇವಾ-ಎಲೆ ರಾಜನೇ, ಮರಣವೇ ಮಹಾನವಮಿ ಎನಗೆ-ಎಂಬಲ್ಲಿ ಲೋಕದಲ್ಲಿ ಆತ್ಮರುಗಳೇನಾದರೂ ಮಹಾನವಮಿಯ ತತ್ಕಾಲದಲ್ಲಿ ಬನ್ನಿಯ ಮುಡಿವುದಕ್ಕೆ ಹೋಗಬೇಕಾದರೆ ಉಂಡಟ್ಟು ಉಡುಗೊರೆ ಉತ್ಸಾಹ ಹೊದ್ದುಕೊಂಡು ಗಂಧಕಸ್ತೂರಿ ಮೊದಲಾದ ಪರಿಮಳದ್ರವ್ಯಂಗಳನು ಹಚ್ಚಿಕೊಂಡು ಬಹು ಸಂಭ್ರಮದಿಂದ ಹೋಗಿ ಬನ್ನಿಯ ಮುಡಿದುಕೊಂಡು ಬರುತ್ತಿಹರೋ ಹಾಂಗೆ, ಪರಾಕ್ರಮಿ ಏನಾದರೂ ರಣಾಗ್ರಕ್ಕೆ ಹೋಗಬೇಕಾದರೆ ಉಂಡುಟ್ಟು ದಟ್ಟಿ ಚಲ್ಲಣವನುಟ್ಟುಕೊಂಡು ಗೀರು ಗಂಧವನ್ನು ಹಚ್ಚಿಕೊಂಡು ಅಂಗಿಯ ತೊಟ್ಟುಕೊಂಡು ಮುಂಡಾಸವ ಸುತ್ತಿಕೊಂಡು ತುರಾಯವನ್ನು ಮುಡಿದುಕೊಂಡು ರಣಾಗ್ರಕ್ಕೆ ಹೋಗಿ ಕಡಿದಾಡಿ ಜಯಿಸಿ ಬಂದರೆ ಬಿರುದು ಬಾವುಲಿಯನ್ನು ಹಾಕಿಸುತ್ತಿಹರು. ಕಡಿದಾಡಿ ಅಲ್ಲೇ ಮಡಿದರೆ ವೀರಸ್ವರ್ಗವೆನಿಸುವದು. ಅದಲ್ಲದೆ ಕಡಿದಾಡಿ ಜಯಿಸಿಬಾರದೆ ಅತ್ತಲೇ ಹೋದರೆ ೧ರ೧ಂಡೆ ಮಾನ್ಯವ ನಡಸುತ್ತೈದಾರೆಂಬ ದೃಷ್ಟೋಪಮಾನದ ಹಾಂಗೆ.

● ಜೋಳವಾಳಿಯವ ನಾನಲ್ಲವಯ್ಯ-ಆತ್ಮಪದಾರ್ಥವನ್ನು ವಂಚಿಸಿಕೊಂಡು ಬಹಿರಂಗದ ಪದಾರ್ಥವನ್ನು ಕೊಟ್ಟು ಭಕ್ತಿಯ ಮಾಡುವಾತ ನಾನಲ್ಲವಯ್ಯ. ನಿಮ್ಮ ವೇಳೆವಾಳಿಯವ ನಾನಯ್ಯ-

ಆತ್ಮಪದಾರ್ಥವನ್ನು ಸಮರಸಭಾವದಿಂದ ಕೊಟ್ಟು ಭಕ್ತಿಯ ಮಾಡಲ್ಪಟ್ಟಾತ ನಾನಯ್ಯ. ಹಾಳುಗೆಟ್ಟೋಡುವ ಆಳು ನಾನಲ್ಲವಯ್ಯ: ಹಾಳುಗೆಟ್ಟು-ಭಿನ್ನವಿಟ್ಟುಕೊಂಡು ಭಕ್ತಿಯ ಮಾಡಿ, ಓಡುವ-ತನುಮನಧನಂಗಳನು ವಂಚಿಸಿಕೊಂಡು ಹಿಮ್ಮೆಟ್ಟುವ, ಆಳು ನಾನಲ್ಲವಯ್ಯ-ಭೃತ್ಯನಾದ ಭಕ್ತ ನಾನಲ್ಲವಯ್ಯ, ಕೇಳು-ಆಲಿಸು, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ, ಮರಣವೆ ಮಹಾನವಮಿ ಎನಗೆ: ಮರಣವೆ-ದೇಹಾವಸಾನ ಪರಿಯಂತರ ಸಮರಸಭಾವದಿಂದೆ ತನುಮನಧನಂಗಳ ಕೊಟ್ಟು ಭಕ್ತಿಯ ಮಾಡುವಂಥದೆ, ಎನಗೆ-ನನಗೆ, ಮಹಾನವಮಿ-ಮಹಾಲಿಂಗದಲ್ಲಿ ಕೂಡುವಂಥ ಕೂಟವಾಗಿಪ್ಪುದು.

....

೧-೧ ಕ (ಕ),

II- -

2-2 x (ಚ, ಜ)

....

ಜೋಳವಾಳಿಯವ ನಾನಲ್ಲಯ್ಯಾ-ಲಿಂಗಾಂಗಕ್ಕೆ ಭಿನವಿಟ್ಟು ಪೂಜಾಕ್ರೀಗಳ ಮಾಡುವಾತ ನಾನಲ್ಲ, ವೇಳೆವಾಳಿಯವ ನಾನಯ್ಯಾ-ಮಾಡುವಾತ ಕೈಕೊಳುವಾತ ನಡುವೆ ಸಲುವ ಪೂಜಾದ್ರವ್ಯವು ಒಂದೇಯೆಂದರಿದು ಮಾಡುವಂತಾತ ನಾನಯ್ಯಾ, ಅದಲ್ಲದೆ ತಾಪತ್ರಯಾಗ್ನಿವುಳ್ಳವನಲ್ಲ, ಸತ್ತ್ರಾಣವ ಜ್ಞಾನವುಳ್ಳವ ನಾನಯ್ಯ, ಹಾಳುಗೆಟ್ಟೋಡುವ ಆಳು ನಾನಲ್ಲಯ್ಯಾ-ಭಕ್ತಿಕಾಯವು ನಷ್ಟವಾಗಿ ಇಹಪರಾದಿಗಳಿಗೆಡೆಯಾಡುವ ಭಕ್ತಿಭೃತ್ಯನು ನಾನಲ್ಲಯ್ಯಾ, ಕೇಳು ಕೂಡಲಸಂಗಮದೇವಾ-ಲಾಲಿಸೆಲೆ ಲಿಂಗವೆ.

III -

1-1 ಜೋಳವಾಳಿಯಲ್ಲಯ್ಯ (ಟ, ಡ), 3-3 ಜೋಳವಾಳಿಯವ (ಟ, ಡ), 4 + ಲ್ಲ (ಟ, ಡ), 5-5 ಅ (ಟ, ಡ), 6-6 x (ಟ, ಡ),

....

ಜೋಳಹಿಾಳಿಯಲ್ಲಯ್ಯ-ಯಾವನಾಳದಲ್ಲಿ ಶಂಕರಗಂಡಾ ಎಂದು ನುಡಿಸುವಾತ ನಾನಲ್ಲವಯ್ಯಾ, ವೇಳಾವಳಿಯವ ನಾನಲ್ಲಯ್ಯ-ಲಿಂಗಾರ್ಚನೆಯ ವ್ಯಾಳೆದ ಹೊತ್ತಿಗೆ ಬರುವ ಹೊತ್ತುಹೋಕನು ನಾನಲ್ಲ ಸ್ವಾಮಿ, ಆಳುಗೆಟ್ಟೋಡುವ ಆಳು ನಾನಲ್ಲಾ-ಭಕ್ತಿಹೀನನಾಗಿ ಹೋಗುವ ಭೃತ್ಯಹೀನನಾಗಿ ಹೋಗುವ ಭೃತ್ಯನು ನಾನಲ್ಲ.

IV -

1-1 ಜೋಳವಾಳಿಯಾನಲ್ಲ (ತ), 7-7 ಯಯ್ಯಾ (ತ)

....

ಲಿಂಗದ ಪೂಜಿಸಿ ಫಲವನುಂಬವನಲ್ಲ, ೆ[ಲಿ]ಂೆಗವಿಡಿದು, ತನುಮನಂಗಳೆರಡೂ ಪರಬ್ರಹ್ಮದಲ್ಲಿ ಅಡಗುವವೆಂಬುದೀ ವಚನದರ್ಥ.

....

೨-೨ ಅ (ತ)

V- -

1-1 ಜೋಳವಾಳಿಯವ ನಾನಲ್ಲಯ್ಯ (ಪ), 3-3 ವ್ಯಾಳ್ಯಾವಳಿಯವ (ಪ), 4 + ಲ್ಲ (ಪ)

....

ಯಾವನಾಳದಲ್ಲಿ ಶಂಕರಗಂಡಾಯೆಂದು ನುಡಿಸುವ ನಾನಲ್ಲಯ್ಯ[ಎಂಬುದೀಗ] ಜೋಳವಾಳಿಯವ ನಾನಲ್ಲಯ್ಯ. ಲಿಂಗಾರ್ಚನೆಯ ವ್ಯಾಳ್ಯದ ಹೊತ್ತಿಗೆ ಬರುವ ಹೊತ್ತುಹೋಕನು ನಾನಲ್ಲ ಸ್ವಾಮಿ ಎಂಬುದೀಗ ವ್ಯಾಳ್ಯಾವಳಿಯವ ನಾನಲ್ಲಯ್ಯ.

ವ್ಯಾಳ್ಯದ ಹೊತ್ತಿಗೆ ಬರುವ ಕೂಲಿಕಾರನಲ್ಲವೆಂಬುದೀಗ ಜೋಳವಾಳಿಯವ ನಾನಲ್ಲ. ನಿಮಗೆ ಬಂದ ಕಂಟಕಕ್ಕೆ ತತ್ತಿಗೆ ನಾನೆಂಬುದೀಗ ವ್ಯಾಳ್ಯಾವಳಿಯವ ನಾನಯ್ಯ.

೭೦೧

ಕರ್ಮವೆಂಬ [1]ಅಂಕ[2]ದೊಡ[2]ನೆ[1] ತೊಡರಿದೆ; ಬಿನ್ನಪ[3]ವ[3] ಅವಧಾರು! ನಿಮ್ಮಾಳಿನ ಭಾಷೆಯ ಕಡೆಗಳಕ್ಕೆ ನೂಂಕುವೆ, ಕೆಡಹುವೆ[4]. ಅಂಕ[5]ಕರೆದಡೋ ಎನಿಸಿದಡೆ ನಿಮ್ಮಾಳಲ್ಲ! ಶಿವಶರಣೆಂಬ ದಂಡೆಯ [6]ಹೂ[6]ಡಿ ಗಣಮೇಳಾಪವೆಂಬ ಅಲಗಿನಿಂದಿಜೆವೆ, ಕೂಡಲಸಂಗಮದೇವಾ.

I -

ಕರ್ಮವೆಂಬ-ಭಕ್ತಿಸತ್ಯವೆಂಬ, ಅಂಕದೊಡನೆ, ತೊಡರಿದೆ-"ತೊಡರು ಬಂಧನೆ"ಯೆಂದು ಬಂಧಿಸಿಕೊಂಡಿಪ್ಪೆನು, ಭಿನ್ನಪವ-ಎನ್ನ ವಿಜ್ಞಾಪನವನು, ಅವಧಾರು!-ಪರಾಕಾಗಿ ಆಲಿಸು. ನಿಮ್ಮಾಳಿನ ಭಾಷೆಯ ಕಡೆಗಳಕ್ಕೆ ನೂಂಕುವೆ-ಭಕ್ತನೆಂಬ ವೀರಮಾಸಾಳುವಿದ್ದೆಡಿಗೆ ಜಂಗಮವೆಂಬ ಮಹಾವೀರಮಾಸಾಳು ಬಂದು ತನುಮನಧನಂಗಳನು ಕೇಳಿದರೆ ತನುಮನಧಂಗಳನು ಕೊಟ್ಟು ಭಕ್ತಿಯ ಮಾಡಿ ಇನ್ನೇನು ಬೇಡುತಿದ್ದೀ ಬೇಡೆಂದು ಭಕ್ತಿರಣಾಂಗಣಧ್ದಿಂದೆ ಕಡೆಗಣಕ್ಕೆ ಅಟ್ಟಿಕೊಂಡು ಹೋಗುವೆನು, ಕೆಡಹುವೆ-ಇಚ್ಛಾಪದಾರ್ಥವ ಕೊಟ್ಟು ಭಕ್ತಿಯ ಮಾಡಿ ಸಾಕುಸಾಕೆನಿಸಿ ಹಿಮ್ಮೆಟ್ಟಿಸಿ ಬಿಡುವೆನು.

ಅಂಕ ಕರೆದಡೋ ಎನಿಸಿದಡೆ-ಭಕ್ತನೆಂಬ ವೀರಮಾಸಾಳು ಇದ್ದೆಡೆಗೆ ಜಂಗಮವೆಂಬ ಮಹಾವೀರಮಾಸಾಳು ಬಂದು ಎಲೋ ಭಕ್ತ ತನುವ ಕೊಡು ಮನವಕೊಡು ಧನವಕೊಡೆಂದು ಕೇಳಿದಲ್ಲಿ ತನುಮನಧನಂಗಳನು ವಂಚಿಸಿಕೊಂಡು ಹಿಮ್ಮೆಟ್ಟಿದರೆ, ನಿಮ್ಮಾಳಲ್ಲ-ನಿಮ್ಮ ಭೃತ್ಯನಾದ ಭಕ್ತನಲ್ಲವು, ಶಿವಶರಣೆಂಬ ಗುರುನಮಸ್ಕಾರ ಲಿಂಗನಮಸ್ಕಾರ ಜಂಗಮನಮಸ್ಕಾರವೆಂಬ. ದಂಡೆಯ ಹೂಡಿ-ಶಿವಾದ್ವೈತಭಕ್ತಿಯೆಂಬ ಸಾಧಕಾಂಗದಾಲಯವ ನಿರ್ಮಿಸಿ, ಗಣಮೇಳಾಪವೆಂಬ-ಎಲ್ಲ ಶಿವಗಣಂಗಳ ಕೃಪೆಯಿಂದ ಒದಗಲ್ಪಟ್ಟ. ಅಲಗಿನಿಂದ-ಆಯುಧದಿಂದ ದೇವಭಕ್ತಪದಾರ್ಥವೆಂಬ ತ್ರಿವಿಧವಾದದ್ದು ಒಂದೇ ವಸ್ತುವೆಂದರಿದು ತಾನು ತಾನಾಗಿ ಮಾಡುವಂಥ ಸಮರಸಜ್ಞಾನವೆಂಬ ಆಯುಧವನ್ನು ಪಿಡಿದುಕೊಂಡು, ಇಜೆದೆ-ಇಚ್ಛಾಪದಾರ್ಥವನ್ನು ಕೊಟ್ಟು ಭಕ್ತಿಯ ಮಾಡುವೆನು, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

....

II –

2–2 ಡೊಂಕ (ಚ, ಜ), 3–3 x (ಚ, ಜ), 4 + ನು (ಚ, ಜ).

....

ಕರ್ಮವೆಂಬ ಅಂಕದೊಡನೆ ತೊಡರಿದೆ ಬಿನ್ನಪ ಅವಧಾರು!–ಭಕ್ತಿಕೃತ್ಯವೆಂಬ ಜಂಗಮದ ಕೊಡೆ ಭಕ್ತಿ೧ಬಿ೧ರುದಿರುತೈತೆ ಎನ್ನ ವಿಜ್ಞಾಪವನು ಕೇಳು, ನಿಮ್ಮಾಳಿನ ಭಾಷೆಯ ಕಡೆಗಳಕ್ಕೆ ನೂಕುವೆ ಕೆಡಹುವೆನು–ನಿಮ್ಮ ಭಕ್ತಿಭೃತ್ಯನ ಷಟ್ಸ್ಥಲಛಲ ಭಾಷೆಯ, ಗುರುಲಿಂಗಜಂಗಮದ ಭಕ್ತಿರಣಾಂಗಳಕ್ಕೆ ತನುಮನಧನವನು ಚಾಚುವೆ, ಅಂಕ ಕರೆದಡೋ ಎನಿಸಿದಡೆ ನಿಮ್ಮಾಳಲ್ಲ–ಪ್ರತಿ ಬಿರಿದಂಕನಾದ ಜಂಗಮವು ತನುವ ತಾ ಮನವ ತಾ ಧನವ ತಾ ಎಂದು ೨ಆಹ್ವಾನಿಸಿದರೆ೨ ತರುತೀನಿ ಸ್ವಾಮಿ ಎಂದಡೆ ನಿಮ್ಮ ಭಕ್ತಿಭೃತ್ಯನಲ್ಲ. ಅವರು ಬೇಡುವುದಕ್ಕೆ ಮೊದಲೇ ಭಕ್ತಿ ಮಾಡುವೆ, ಶಿವಶರಣೆಂಬೆ

ದಂಡೆಯ ಹೂಡಿ_ನಮಸ್ಕಾರವೆಂಬ ವೀರಮಂಡೆಯನು ಹೂಡಿ, ಗಣಮೇಳಾಪವೆಂಬ ಅಲಗಿನಿಂದಿಜೆವೆ ಕೂಡಲಸಂಗಮದೇವಾ–ಶಿವಗಣಂಗಳ ಕೂಟವೆಂಬ ಶಸ್ತ್ರದಿಂದ ಗುರುಲಿಂಗಜಂಗಮದಿಚ್ಛೆಯನು ತಿ೩ಳಿ೩ದು ಹಿಂದ ಮಾಡು೪[ವೆ]೪ನೆಂಬುದರ್ಥ.

....

೧–೧ ಬ (ತ), ೨–೨ ಯಾಚಿಸಿದರೆ ಅದಲ್ಲದೆ(ಜ), ೩–೩ ವಿ (ಜ), ೪–೪ ವ (ಚ, ಜ).

III– –

1–1 ಅಂಕದಲಿ(ಟ, ಡ).

....

ಕಡೆಗಳಕ್ಕೆ ನೂಂಕುವೆ–ಭಕ್ತಿಯ ಪಾರವೆಯ್ದಿಸುವೆನು, ಅಂಕದಲಿ–ಭಕ್ತಿಯುದ್ಧದಲಿ, ಕೆಡಹುವೆ–ಹಿಮ್ಮೆಟ್ಟಿಸುವೆನು, ಕರೆದರೆ–ಗುರುಲಿಂಗಜಂಗಮವು ಆಹ್ವಾನಿಸುತ್ತಿರಲಾಗಿ, ಓ, ಎ[ನಿ]ಸಿದರೆ ಓಯೆಂದು ಇದ್ದಲ್ಲಿ ದನಿಗೊಟ್ಟೆನಾದರೆ, ದಂಡೆಯ ಹೂಡಿ–ಪಾಡಿನಲ್ಲಿ ನಿಂದು.

IV– –

3–3 x (ತ). 5 + ವ (ತ).

....

ಗುರು ಉಪದೇಶದಿಂದ ಮಾಹೇಶ್ವರರ ಸಂಗದಿಂದ ದೇಹೇಂದ್ರಿಯಂಗಳ ಗೆದ್ದು ಘನವೆಂಬ ಲಿಂಗದಲ್ಲಿ ಕೂಡುವೆನೆಂಬುದೀ ವಚನದರ್ಥ.

V –

6–6 ಮಾ(ಪ)

....

ಹಜ್ಜೆಪಾಡಿನಿಂದುಯೆಂಬುದೀಗ ದಂಡೆಯ ಮಾಡಿ.

ಕಟ್ಟಿದೆನೊಱೆಯ, ಬಿಟ್ಟೆ ಜನ್ನಿಗೆ^೧ರೆಯ^೧, ಮುಟ್ಟಿ ಬಂದಿಱಿದಡೆ ಓಸರಿಸುವನಲ್ಲ, ಓಡದಿರು, ಓಡದಿರು ನಿಮ್ಮ ಶರಣರ ಮನೆಯ ಬಿರಿದಿನ ಅಂಕಕಾಱ, ಓಡದಿರು ಓಡದಿರು ಎಲೆ ಎಲೆ ದೇವಾ, ಎಲೆ ಎಲೆ ಸ್ವಾಮೀ, ಎಲೆ ಎಲೆ ಹಂದೇ! ಕೂಡಲಸಂಗಮದೇವಾ!

I –

ಕಟ್ಟಿದೆನೊಱೆಯ–ದೇವಭಕ್ತಪದಾರ್ಥ ತ್ರಿವಿಧವಾದದ್ದು ಒಂದೇ ವಸ್ತುವೆಂದರಿದು ತಾನು ತಾನಾಗಿ ಮಾಡುವಂಥ ಸಮರಸಜ್ಞಾನವೆಂಬ ಆಯುಧವನ್ನು ಅಂತರಂಗದಲ್ಲಿ ಬಂಧಿಸಿಕೊಂಡಿಪ್ಪೆನು. ಬಿಟ್ಟೆ ಜನ್ನಿಗೆರೆಯ–ಅಂತರಂಗದಲ್ಲಿರುವಂಥ ವಂಚನೆ ಉಪಾಧಿ ಕುಕಪ್ರಪಂಚೆಂಬ ಕಾಪಟ್ಯವನು ಬಿಟ್ಟುಕೊಟ್ಟೆನು. ಮುಟ್ಟಿ ಬಂದಿಱಿದಡೆ–ಹೇಳಿಕೊಂಬುತ್ತಿದ್ದ ಹಾಂಗೆ ಜಂಗಮಮೂರ್ತಿಗಳು ತನುಮನಧನಂಗಳನು ಓಡಿದುಕೊಂಬುವುದಕ್ಕೆ ಬಂದರೆ, ಓಸರಿಸುವನಲ್ಲ–ಕೇಳಿಕೇಳಿದ ಹಾಂಗೆಲ್ಲ ತನುಮನಧನಂಗಳನು ಕೊಟ್ಟು ಭಕ್ತಿಯ ಮಾಡುವನಲ್ಲದೆ ವಂಚಿಸಿಕೊಂಡು ಹಿಮ್ಮೆಟ್ಟುವಾತನಲ್ಲವು.

ಓಡದಿರು ಓಡದಿರು–ಒಂದು ಪದಾರ್ಥವನ್ನು ಕೇಳಿ ಅಷ್ಟರೊಳಗೆ ಸಾಕುಮಾಡಿಕೊಂಡು ಹಿಮ್ಮೆಟ್ಟದಿರು ಹಿಮ್ಮೆಟ್ಟದಿರು, ನಿಮ್ಮ ಶರಣರ–ನಿಮ್ಮ ನಿರ್ವಂಚಕ ಸದ್ಭಕ್ತರ, ಮನೆಯ–ಮಂದಿರದ, ಬಿರಿದಿನ–ಪ್ರತಾಪದ, ಅಂಕಕಾಱ–ಭಕ್ತನೆಂಬ ವೀರಮಾಸಾಳು ನಾನು, ಓಡದಿರು ಓಡದಿರು–ಒಂದು ಪದಾರ್ಥವನ್ನು ಕೇಳಿ ಅಷ್ಟರೊಳಗೆ ಸಾಕುಮಾಡಿಕೊಂಡು ಹಿಮ್ಮೆಟ್ಟದಿರು ಹಿಮ್ಮೆಟ್ಟದಿರು, ಎಲೆ ಎಲೆ–ಭೋ ಭೋ, ದೇವಾ–ಒಡೆಯನೆ, ಎಲೆ ಎಲೆ–ಭೋ ಭೋ, ಸ್ವಾಮಿ–ಕರ್ತೃಸ್ವರೂಪವಾದ ಎಲೆ ಪರಶಿವಲಿಂಗವೆ, ಎಲೆ ಎಲೆ–ಭೋ ಭೋ, ಹಂದೇ–ಹೇಡಿಯಾದಂಥ, ಎಲೆ ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.'

III –

೧–೧ ಯರ (ಟ, ಡ)

....

ಒಱೆಯ–ಕೋಶವನು, ಕಟ್ಟಿದೆ–ಭಕ್ತಿಮಂದಿರದ್ವಾರಕ್ಕೆ ಬಂಧಿಸಿದೆನು, ಜನ್ನಿಗೆಯರ–ಹರಕೆಯಾರೋಪಣಗಳನು, ಬಿಟ್ಟೆ–ತ್ಯಜಿಸಿದೆನು, ಜೀವಭಾವದ ಘಾತಿಯನು ಪ್ರಾಣಲಿಂಗದಲ್ಲಿ ಸಂಬಂಧಿಸಿದೆನೆಂಬುದೀಗ ಬಿಟ್ಟೆ ಜನ್ನಿಗೆಯರ ಎಂಬ ಶಬ್ದಕ್ಕರ್ಥ.

V –

೧–೧ ಯೇಱು, ಯರ (ಪ),

....

ಭಕ್ತಿಮಂದಿರದ್ವಾರಕ್ಕೆ ಕೋಶವ ಬಂಧಿಸಿದೆನೆಂಬುದೀಗ, ಮತ್ತಂ ಅನ್ನಮಯಕೋಶದಲ್ಲಿ ಸತ್ಕ್ರಿಯಾಚಾರವ ಸಂಬಂಧಿಸಿದೆನೆಂಬುದೀಗ ಕಟ್ಟಿದೆನೊರೆಯನೆಂಬುದರ್ಥ. ಜನ್ನಿಗೆಯೇಱು–ಹಱಕೆಯಾರೋಪಣ ಮನೆದೇವರಿಗೆ ಮತ್ತಂ ಪ್ರಾಣಲಿಂಗದಲ್ಲಿ ಸುಜ್ಞಾನದಾಘಾತಿಯ ಸಂಬಂಧಿಸಿದೆನು ಎಂಬುದೀಗ ಬಿಟ್ಟೆ ಜನ್ನಿಗೆಯರ.

೭೦೩

ಗರುಡಿಯ ಕಟ್ಟಿ, ಅಱುವತ್ತುನಾಲ್ಕು ಕೋ[1]ಲ ಅ[1]ಭ್ಯಾಸವ ಮಾಡಿದೆ[2]ನ[2]ಯ್ಯ! ಇಱಿವ ಗಾಯ[3]ದ[3] ಖಂಡೆಯದ[3] ಭೇದವಿನ್ನೂ ತಿಳಿಯದು, ಪ್ರತಿಗರುಡಿಕಾಱ [4]ಬಿರಿದಿನ[4] ಪಾಡಿಂಗೊ ದಗಲು ವೀರಪ[5]ಟ್ಟೆ[5] *ಯ* ಕಟ್ಟಿ ತಿಗುರನೇಱಿಸಿಕೊಂ[6]ಬೆ[6], ಗುರು ಕಳ[7]ನೇಱಿ ಕಠಾರಿಯ ಕೊಂಡಲ್ಲಿ ಹೋಯಿತ್ತಾಗಳೆಯೆಂದಡೆ ಎನ್ನ ನಿನ್ನಲ್ಲಿ ನೋಡು, ಕೂಡಲಸಂಗಮದೇವಾ!

I –

ಗರುಡಿಯ ಕಟ್ಟಿ–ಸಾಧಕಾಂಗದಾಲಯವನ್ನು ನಿರ್ಮಿತವ ಮಾಡಿ, ಅಱುವತ್ತುನಾಲ್ಕು ಕೋಲ ಅಭ್ಯಾಸವ ಮಾಡಿದೆನಯ್ಯ–ದಾಂಡುಕೋಲು ಮೊದಲಾದ ಅರುವತ್ತುನಾಲ್ಕು ಸಾಧನೆಯನ್ನು ಅನುಗೆಯ್ದೆನಯ್ಯ, ಇಱಿವ ಗಾಯದ ಖಂಡೆಯದ ಭೇದವು–ಎದೆಗೆ ತಿವಿವುತ್ತೈದೇನಿ ಬದಿಗೆ ತಿವಿತ್ತೈದೇನಿ ಹಣೆಗೆ ತಿವಿವುತ್ತೈದೇನಿ ಫಣಿಗೆ ತಿವಿವುತ್ತೈದೇನಿಯೆಂದು ತಟ್ಯಾಡುವಂಥದು, ಇನ್ನೂ ತಿಳಿಯದು–ಇನ್ನೂ ಅರಿಯದು.

ಪ್ರತಿಗರುಡಿಕಾಱ–ಮತ್ತೊಬ್ಬ ಐಗಾರನು, ಬಿರಿದಿನ ಪಾಡಿಂಗೊದಗಲು–ಸಾಧನೆಯ ಮಾಡುವಂಥ ವೇಳೆಗೆ ಬರಲು, ವೀರ–ಪರಾಕ್ರಮಿಯು, ಪಟ್ಟೆಯ ಕಟ್ಟಿ–ಪಟ್ಟೆಯದಲಗನ್ನು ಪಿಡಿದುಕೊಂಡು, ತಿಗುರನೇಱಿಸಿಕೊಂಬೆ–ಹಳದಿ ಕೆಮ್ಮಣ್ಣನ್ನು ಲೇಪಿಸಿಕೊಂಬುವೆನು.

ಗುರು–ಮತ್ತೊಬ್ಬ ಐಗಾರನು, ಕಳನೇರಿ ಯುದ್ಧಾಂಗಣದಲ್ಲಿ ನಿಂದು ಕಠಾರಿಯ ಕೊಂಡಲ್ಲಿ–ತನ್ನ ಕೈಯಲ್ಲಿರುವಂಥ ಆಯುಧವನ್ನು ಪಿಡಿದುಕೊಂಡಾಗಲೇ, ಹೋಯಿತ್ತಾಗಳೆಯೆಂದಡೆ–ನಾನು ಹಾಕಿರುವಂಥ ಬಿರಿದು ಬಾವುಲಿ ಕೊಸರಿಕೊಂಡು ಹೋಯಿತ್ತು, ಕೂಡಲಸಂಗಮದೇವಾ–ಎಲೆ ಐಗಾರನೇ, ಎನ್ನ ನಿನ್ನಲ್ಲಿ ನೋಡು–ನನ್ನನ್ನು ನಿನ್ನೊಂದಿಗೆ ಕೈಗೊಟ್ಟು ಯುದ್ಧವ ಮಾಡಿ ಹಿಮ್ಮೆಟ್ಟಿಸಿ ನೋಡುಯೆಂಬ ದೃಷ್ಟೋಪಮಾನದ ಹಾಂಗೆ.

● ಗರುಡಿಯ ಕಟ್ಟಿ–ಶಿವಾದ್ವೈತಭಕ್ತಿಯೆಂಬ ಸಾಧಕಾಂಗದಾಲಯವ ನಿರ್ಮಿತವ ಮಾಡಿ, ಅಱುವತ್ತುನಾಲ್ಕು ಕೋಲ ಅಭ್ಯಾಸವ ಮಾಡಿದೆನಯ್ಯ–ಅರುವ[ತ್ತುನಾಲ್ಕು] ಶೀಲವನ್ನೇ ಅಂಗವ ಮಾಡಿಕೊಂಡಾಚರಿಸಿದೆನಯ್ಯ, ಇಱಿವ ಗಾಯವ ಖಂಡೆಯದ ಭೇದವು–ಸ್ವಾಮಿ ನಿಮಗದು ಬೇಕೋ ಇದು ಬೇಕೋ ಯಾವುದು ಬೇಕೆಂದು ಅವರವರಿಚ್ಛಾ ಪದಾರ್ಥವನ್ನು ಕೊಟ್ಟು ಭಕ್ತಿಯ ಮಾಡುವಂಥದು. ಇನ್ನೂ ತಿಳಿಯದು–ಇನ್ನೂ ಅರಿಯದು.

ಪ್ರತಿ ಗರುಡಿಕಾಱ–ಜಂಗಮವೆಂಬ ಮಹಾವೀರಮಾಸಾಳನು, ಬಿರಿದಿನ ಪಾಡಿಂಗೊದಗಲು–ಭಕ್ತಿಯ ಮಾಡುವಂಥ ವೇಳೆ ಬರಲು, ವೀರ–ಭಕ್ತನೆಂಬ ವೀರಮಾಸಾಳನು, ಪಟ್ಟೆಯ ಕಟ್ಟಿ–ದೇವಭಕ್ತಪದಾರ್ಥ ತ್ರಿವಿಧವಾದದ್ದು ಒಂದೇ ವಸ್ತುವೆಂದರಿದು ತಾನು ತಾನಾಗಿ ಮಾಡುವಂಥ ಸಮರಸಜ್ಞಾನವೆಂಬ ಆಯುಧವನ್ನು ಪಿಡಿದುಕೊಂಡು, ತಿಗುರನೇಱಿಸಿಕೊಂಬೆ–ಸರ್ವಾಂಗಕ್ಕೆ ಸತ್ಕ್ರಿಯಾಚಾರವೆಂಬ ಅಂಬರವನ್ನು ಆಚ್ಛಾದಿಸಿಕೊಂಬುವೆನು.

ಗುರು–ಜಂಗಮವೆಂಬ ಮಹಾವೀರಮಾಸಾಳನ, ಕಳನೇಱಿ–ಭಕ್ತಿರಣಾಂಗದಲ್ಲಿ ನಿಂದು, ಕಠಾರಿಯ ಕೊಂಡಲ್ಲಿ–ಸಮರಸಜ್ಞಾನವೆಂಬ ಆಯುಧವನ್ನು ಪಿಡಿದುಕೊಂಡಲ್ಲಿ, ಹೋಯಿತ್ತಾ

ಗಳೆಯೆಂದಡೆ; [ಆ ಗಳೆಯೆಂದಡೆ-] ಸಮರಸಜ್ಞಾನವೆಂಬ ಆಯುಧವನ್ನು ಪಿಡಿದುಕೊಂಡಾಗಳೇ, ಹೋಯಿತ್ತು-ಭಕ್ತನೆಂಬ ಕೀರ್ತಿವಿಶೇಷವು ನಷ್ಟವಾಗಿ ಹೋಯಿತ್ತು. ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೇ, ಎನ್ನ ನಿನ್ನಲ್ಲಿ ನೋಡಾ-ಎಲೋ ಭಕ್ತ ತನುವ ಕೊಡು ಮನವಕೊಡು ಧನವಕೊಡುಯೆಂದು ಕೇಳಿ ಹಿಮ್ಮೆಟ್ಟಿಸಿ ಬಿಡು.

II -

1-1 x (ಚ, ಜ), 4-4 x ಬಿರಿದ (ಚ, ಜ), 5-5 ಟ್ಟಿ (ಚ, ಜ), 7+ನ (ಚ, ಜ)

....

ಗರುಡಿಯ ಕಟ್ಟಿ-ಭಕ್ತಿಮಂದಿರವನು ಬಂಧಿಸಿ, ಅಱುವತ್ತುನಾಲ್ಕು ಕೋಲ ಅಭ್ಯಾಸವ ಮಾಡಿದೆನಯ್ಯಾ-ಚತುಃಷಷ್ಟಿಶೀಲನೇಮಕ್ರೀಗಳನೇ ಸಾಧನೆಯ ಮಾಡಿದೆನಯ್ಯಾ, ಇಱೆವ ಗಾಯ ಖಂಡೆಯ ಭೇದವಿನ್ನೂ ತಿಳಿಯದು-ಶಿಕ್ಷಾಬೋಧೆಯಿಂದ ತಿವಿವ ಕ್ಷತ್ರಿಯ ಸುವಿವೇಕವೆಂಬ ದ್ವಾರದ ನಿಲುಕಡೆಯು ಮುಂದ ತಿಳಿಯಬಾರದು.

ಪ್ರತಿಗಱುಡಿಕಾಱ ಬಿರಿದ ಪಾಡಿಂಗೆ ಒದಗಲು-ಪ್ರತಿಬಿರಿದಂಕನಾದ ಜಂಗಮವು ಭಕ್ತಿಯ ಅನುವಿಗೆ ಆಗತವಾಗಲು, ವೀರ ಪಟ್ಟಿಯ ಕಟ್ಟಿ-ವೀರಮಾಹೇಶ್ವರಾಚರಣೆಯೆಂಬ ಪಟ್ಟಿಯನು ಬಂಧಿಸಿ, ತಿಗುರನೇರಿಸಿಕೊಂಬೆ-ಚಿತ್ತ್ರಕಾಶಜ್ಞಾನವನು ಪ್ರವೇಷ್ಟಿಸಿಕೊಂಬೆ, ಗುರು ಕಳನನೇಱೆ-ಆಚಾರ್ಯ ಸಂಗ್ರಾಮವನಡರಿ, ⁽¹ಕಠಾರಿಯ ಕೊಂಡಲ್ಲಿ ಹೋಯಿತ್ತು ಆ ಗಳೆಯೆಂದಡೆ-ಭಕ್ತಿನೈಷ್ಠಿಯೆಂಬ¹⁾ ಕಠಾರಿಯನು ತೆಗೆದುಕೊಂಡಲ್ಲಿ ಭಕ್ತಿಪದಾರ್ಥವೆಲ್ಲವು ಉರಿದುಹೋಯಿತ್ತು, ಇನ್ನಾರೂ ಭಕ್ತಿಮಾಡುವರಿಲ್ಲವೆಂದರೆ, ಎನ್ನ ನಿಮ್ಮಲ್ಲಿ ನೋಡು ಕೂಡಲಸಂಗಮದೇವಾ-ಎಲೆ ಪರಶಿವನೇ ಎನ್ನನು ನಿಮ್ಮ ಅಂಗದಲ್ಲಿ ಕಂಡುಕೊಳ್ಳಿ.

....

೧-೧ x (ಜ),

III -

1-1 ಲಿನ (ಟ, ಡ), 2-2 ವ (ಟ, ಡ), 3-3 x (ಟ, ಡ), 4-4 ಬಿರಿದ (ಟ, ಡ), *-* ಯಂ (ಟ, ಡ).

....

ಅರುವತ್ತುನಾಲ್ಕು ಕೋಲಿನಭ್ಯಾಸವ ಮಾಡಿದೆವಯ್ಯ-ಅರುವತ್ತುನಾಲ್ಕು ಶೀಲದಲಾಚರಿಸಿದೆವು, ಇಱೆವ ಲಿಂಗದಲ್ಲಿ ಏಕಾರ್ಥವಾಗುವ, ಗಾಯ ಖಂಡೆಯ-ಸಮರಸಜ್ಞಾನಕ್ರಿಯೆಗಳ, ಪ್ರತಿಗರುಡಿಕಾಱ-ಜಂಗಮವು, ಬಿರಿದ ಪಾಡಿಂಗೆ ಒದಗಲು: [ಬಿರಿದ-] ಆ ಭಕ್ತಿಯನು ಸೋಲಿಸಬೇಕೆಂದು, ಪಾಡಿಂಗೆ-ಪಂತಕ್ಕೆ, ಒದಗಲು-ಗಮಿಸಲು, ವೀರ-ವೀರಶೈವದ, ಪಟ್ಟಿಯಂ-ಪಟ್ಟೆದ ಆಯುಧವನು, ಕಟ್ಟಿ-ಸಂಬಂಧಿಸಿಕೊಂಡು, ತಿಗುರನೇಱೆಸಿಕೊಂಬೆ-ಕ್ರಿಯಾಜ್ಞಾನವನು ಹೆಚ್ಚಿಸಿಕೊಂಬೆನು, ಗುರು-ಆಚಾರ್ಯನಾದ ಜಂಗಮವು, ಕಳನೇಱೆ-ಭಕ್ತಿಮಂದಿರವೆಂಬ ಸಂಗ್ರಾಮಕ್ಕೆ ಗಮಿಸಿ, ಕಠಾರಿಯ ಕೊಂಡಲ್ಲಿ-ಲಿಂಗನಿಷ್ಠೆಯೆಂಬ ಕಠಾರಿಯನಂಗೀಕರಿಸಿದಲ್ಲಿ, ಗಳೆ-ಅಹಂಕಾರವೆಂಬ ಜ¹ಳೆ¹ವೆಯು, ಹೋಯಿತ್ತೆಂದರೆ-ನಷ್ಟವಾಯ್ತೆಂದೊಡೆ, ಕೂಡಲಸಂಗಮದೇವ-ಎಲೆ ಪರಶಿವಲಿಂಗವೆ, ಎನ್ನ ನಿಮ್ಮಲ್ಲಿ ನೋಡು³-ಎನ್ನನು ನಿಮ್ಮಲ್ಲೇಕೀಕರಿಸಿಕೋ.

....

೨-೨ ೪ (ಟ, ಡ), ೩ + ವ (ಟ, ಡ).

IV -

3-3 x (ತ), 4-4 ಬರಿ (ತ), 7 + ನ (ತ)

....

ಗುರುವಾಕ್ಯವಾದ ಮಂತ್ರಾರ್ಥದಿಂದ ಲಿಂಗವ ಪೂಜಿಸಬಹುದು. ಗುರುಲಿಂಗಕ್ಕೆ ಪ್ರಾಣಕಳೆಯಾದ ಜಂಗಮಕ್ಕೆ ಮಾಡಬೇಕು, ಮಾಡಬಾರದು. ನೀನಾನೆಂಬುದು ಅದ್ವೈತವಾದರೆ ಗುರು ಕಠಾರಿಯ ಕೊಂಡಲ್ಲಿ ಕಾಣಬಹುದೆಂಬುದೀ ವಚನದರ್ಥ.

V -

3-3 x (ಪ), 4-4 ಬಿರುದ (ಪ), 6-6 ಡು (ಪ)

....

ಮತ್ತಂ, ಜೀವಭಾವದಾಘಾತಿಯನು ಪ್ರಾಣಲಿಂಗದಲ್ಲಿ ಸಂಬಂಧಿಸಿದೆನು. ಅಱುವತ್ತುನಾಲ್ಕು ಶೀಲದಲ್ಲಿ ಆಚರಿಸಿದೆನು ಎಂಬುದೀಗ ಅಱುವತ್ತು[ನಾಲ್ಕು] ಕೋಲಿನಭ್ಯಾಸವ ಮಾಡಿದೆನಯ್ಯ. ಇರಿವ_ಲಿಂಗದಲ್ಲಿ ಏಕಾರ್ಥವ ಮಾಡುವ, ಗಾಯ ಖಂಡೆಯ-ಸಮರಸಜ್ಞಾನಕ್ರಿಯೆಗಳ, ಪ್ರತಿ ಗರಡಿಕಾರ-ಜಂಗಮವು, ಮಾರಾಂತ ಭಕ್ತಿಸಂಗ್ರಾಮವ ಜಯಿಸುವ ಜಂಗಮವು, ಬಿರುದು ನಿಷ್ಠಾಭಕ್ತಿ ತೊಡರಿನ, ಪಾಂಡಿಗೆ-ಪಂಥಕ್ಕೆ, ಒದಗಲು-ಗಮಿಸಲು, [ವೀರಪಟ್ಟೆಯ] ವೀರಶೈವಾಚಾರವೆಂಬ ಯಷ್ಟಿಯ ಅಡ್ಡಾಯುಧವನ್ನು, ಕಟ್ಟಿ-ಸಂಬಂಧಿಸಿ, ತಿಗುರನೇರಿಸಿಕೊಂಡು-ಗೀರು ಗಂಧವ ಹತ್ತಿಸಿಕೊಂಡು ಮತ್ತಂ ಕ್ರಿಯಾಜ್ಞಾನವ ಹೆಚ್ಚಿಸಿಕೊಂಡು, ಗುರು-ಆಚಾರ್ಯನಾದ ಜಂಗಮವು, ಕಳನೇರಿ-ಭಕ್ತಿಸಂಗ್ರಾಮಕ್ಕೆ ಗಮಿಸಿ, ಕಠಾರಿಯ ಕೊಂಡಲ್ಲಿ-ಲಿಂಗನಿಷ್ಠೆಯೆಂಬ ಕಡಾರನಂಗೀಕರಿಸಿದಲ್ಲಿ, ಗಳೆ-ಅಹಂಕಾರವೆಂಬ ಜಳೆಯು ಮತ್ತಂ ಭಕ್ತಿನಿಷ್ಠೆ ಹೋಯಿತ್ತೆಂದರೆ.

೭೦೪

ಶರಣರೊಡನೆ ಶ್ರವವ ಮಾಡಿ ಮಾಱುಗೋಲುಬಿಡುವೆನಯ್ಯ. ತಾಗಲಿ ತಪ್ಪಲಿ ಗೆಲುವೆನ್ನದೆಂಬೆನಯ್ಯ, ಕಳ[1]ದಿಂ[1]ದ ಕಡೆಗಳಕ್ಕೆ ಓ[2]ಡಿಸು[2]ವೆ, ಕೂಡಲಸಂಗಮದೇವಾ.

I- -

ಶರಣರೊಡನೆ-ಜಂಗಮಮೂರ್ತಿಗಳೊಂದಿಗೆ, ಶ್ರವವ ಮಾಡಿ-ಭಕ್ತಿಸಾಧನೆಯನ್ನು ಅನುಗೆಯ್ದು, ಮಾಱುಗೋಲು ಬಿಡುವೆನಯ್ಯ-ಸಕಲ ಪದಾರ್ಥವ ನೀಡಿ ಸಂತೃಪ್ತಿಬಡಿಸುವೆನಯ್ಯ, ತಾಗಲಿ-ನಾನು ಕೊಟ್ಟಂಥ ಸಕಲಪದಾರ್ಥಂಗಳನು ಸಮರ್ಪಿಸಿಕೊಂಡರೂ ಒಳ್ಳೆಯದೇ, ತಪ್ಪಲಿ-ಸಮರ್ಪಿಸಿಕೊಳ್ಳದೇ ದಾಸಿವೇಶಿ ಬೋಳ⌒ಭಟ್ಟರಿಗೆ⌒ ಕೊಟ್ಟು ಚಾಗಿಯ ಮಾಡಿದರೂ ಒಳ್ಳೆಯದೇ, ಗೆಲವೆನ್ನದೆಂಬೆನ್ನಯ್ಯ-ಕೊಟ್ಟು ಶುದ್ಧನೆಂದು ಹೇಳುವೆನಯ್ಯ.

ಕಳದಿಂದ ಕಡೆಗೆಳಕ್ಕೋಡಿಸುವೆ–ಭಕ್ತನೆಂಬ ವೀರಮಾಸಾಳು ಇದ್ದೆಡೆಗೆ ಜಂಗಮವೆಂಬ ಮಹಾವೀರಮಾಸಾಳು ಬಂದು ತನುಮನಧನಂಗಳನು ಕೇಳಿದಲ್ಲಿ ಕೇಳಿಕೇಳಿದ ಹಾಂಗೆಲ್ಲ ಕೊಟ್ಟು ಭಕ್ತಿಯ ಮಾಡಿ ಇನ್ನೇನು ಬೇಡುತ್ತಿದ್ದೀ ಬೇಡೆಂದು ಭಕ್ತಿರಣಾಂಗಣದಿಂದ ಕಡೆಗಣಕ್ಕೋಡಿಸಿಕೊಂಡು ಹೋಗುವೆನು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

....

೧–೧ ಬಸವಿರಿಂಗೆ (ಕ)

IV –

1–1 ನಿಂ(ತ), 2–2 ಡು (ತ)

....

ಮಾತಿನಲ್ಲಿ ಅದ್ವೈತವನಾಡಿ ನಾನೇ ಪರಬ್ರಹ್ಮವೆಂಬೆ. ಜಂಗಮಲಿಂಗ ಬಂದರೆ ಮಾಡಲಾಱದೆ ಓಡುವೆನೆಂಬುದೀ ವಚನದರ್ಥ.

೭೦೫

ಎಲೆ ಎಲೆ ಗಂಡುಗೂಸೇ ನೀ ಕೇಳಾ, [1]ಎನಗೊಬ್ಬ ಗಂಡನುಂಟೆಂದು, ಗಂಡುಡುಗೆಯನುಟ್ಟೆನು.[1] ಮತ್ತೊಮ್ಮೆ ಆನು ಗಂಡಪ್ಪೆನಯ್ಯಾ. ಮತ್ತೊಮ್ಮೆ ನಾನು ಹೆಣ್ಣಪ್ಪೆನಯ್ಯಾ ಕೂಡಲಸಂಗಮದೇವಾ, ನಿ[2]ಮ[2]ಗೆ ವೀರನಪ್ಪೆ, ನಿಮ್ಮ ಶರಣರಿಗೆ ವಧುವಪ್ಪೆ.

I– –

ಎಲೆ ಎಲೆ–ಭೋ ಭೋ, ಗಂಡುಗೂಸೇ–ಇಷ್ಟಲಿಂಗವೆಂಬ ರಮಣನೇ, ನೀ ಕೇಳಾ–ನೀನಾಲಿಸಾ, ಎನಗೊಬ್ಬ ಗಂಡನುಂಟೆಂದು–ಎನಗೋರ್ವ ಇಷ್ಟಲಿಂಗವೆಂಬ ರಮಣನುಂಟಾಗಿರ್ಪನೆಂದು, ಗಂಡುಡುಗೆಯನುಟ್ಟೆನು–ಸತ್ಕ್ರಿಯಾಚಾರವೆಂಬ ಅಂಬರವನ್ನು ಆಚ್ಛಾದಿಸಿಕೊಂಬೆನು, ಮತ್ತೊಮ್ಮೆ–ಮತ್ತೊಂದು ವೇಳೆಯಲ್ಲಿ, ಆನು ಗಂಡನಪ್ಪೆನಯ್ಯ–ನಾನು ಪರಾಕ್ರಮತ್ವ ಮುಂದುಗೊಂಡು ಲಿಂಗಪೂಜೆಯ ಮಾಡುತಿಪ್ಪೆನಯ್ಯ. ಮತ್ತೊಮ್ಮೆ–ಮತ್ತೊಂದು ವೇಳೆಯಲ್ಲಿ, ನಾನು ಹೆಣ್ಣಪ್ಪೆನಯ್ಯ–ನಾನು ಶರಣಸತಿಯಳಾಗಿರ್ಪೆನಯ್ಯ.

ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮಗೆ ವೀರನಪ್ಪೆ–ನೀನುಂಟುಮಾಡಿದ ಸಕಲಸಂಸಾರಪ್ರಪಂಚನ್ನು ಜಯಿಸುವುದಕ್ಕೆ ಪರಾಕ್ರಮಿಯಾಗಿಪ್ಪೆನು, ನಿಮ್ಮ ಶರಣರಿಗೆ–ನಿಮ್ಮ ಚಿತ್ಪ್ರಭಾಂಗಸ್ವರೂಪರಾದ ಗುರುಲಿಂಗಜಂಗಮಮೂರ್ತಿಗಳಿಗೆ, ವಧುವಪ್ಪೆ–ಮುಕ್ತಿವಧೂಟಿಯಾಗಿರ್ಪೆನು.

IV –

1–1 ನಿನಗೊಬ್ಬಗೆಂದುಟ್ಟೆ ಗಂಡುಡಿಗೆಯನು (ತ), 2–2 ನ (ತ)

....

ಲಿಂಗವು ಒಮ್ಮೆ ಹೆಣ್ಣಹುದು, ಒಮ್ಮೆ ಗಂಡಹುದು, ನೆನೆವಾಗ ಹೆಣ್ಣು, ನೆನಹಿಸಿಕೊಂಬಾಗ ಗಂಡು, ಅಱಿದೆನೆಂದರೆ ಅಱಿದೆನೆಂದರೆ ಅಱಿ[೧][ವುದು][೧] ಅಱುಹಿಸಿಕೊಂಬುದು ತಾನಾಗಿ, ನಿಮ್ಮ ಶರಣರಿಗೆ ಸತಿಯಪ್ಪೆನೆಂಬುದೀ ವಚನದರ್ಥ.

ಮಾಹೇಶ್ವರನ ಭಕ್ತಸ್ಥಲ

I -

ಮಾಹೇಶ್ವರನ ಭಕ್ತಸ್ಥಲ-ಮಾಹೇಶ್ವರನ ಸ್ಥಲದೊಳಗಣ ಭಕ್ತಸ್ಥಲವ ನಿರೂಪಿಸುತ್ತಿಹರು.

೨೦೬

ಕಟ್ಟುವೆನುಪ್ಪರಗುಡಿಯ ಜಗವೆಲ್ಲಅರಿಯಲು; ಮಾಡುವೆನೆನ್ನ ಕಾಯ ಕೆಡುವನ್ನಕ್ಕ. ಬೇಡುವುದೆನ್ನ ತನುಮನಧನವ. ಬೇಡಲಾಱದ ಹಂದೇ ನೀ ಕೇಳಾ, ಈ ಬಿರಿದು ಸಂದಿತ್ತು ಕೂಡಲಸಂಗಮದೇವಾ.

I -

ಕಟ್ಟುವೆನುಪ್ಪರಗುಡಿಯ ಜಗವೆಲ್ಲಅರಿಯಲು : ಜಗವೆಲ್ಲಅರಿಯಲು-ಬ್ರಹ್ಮಾಂಡವೆಲ್ಲ ಬಲ್ಲ ಹಾಂಗೆ, ಉಪ್ಪರಗುಡಿಯ ಕಟ್ಟುವೆ-ಭಕ್ತಿಗೃಹವನ್ನು ನಿರ್ಮಿಸುವೆನು, ಎನ್ನ ಕಾಯ ಕೆಡುವನ್ನಕ್ಕ-ಎನ್ನ ದೇಹಾವಸಾನ ಪರಿಯಂತರವೂ, ಮಾಡುವೆ-ತನುಮನಧನಂಗಳನು ಕೊಟ್ಟು ಭಕ್ತಿಯ ಮಾಡುವೆ, ಬೇಡುವುದೆನ್ನ ತನುಮನಧನವ : [ಎನ್ನ ತನುಮನಧನವ-] ಎನ್ನ ತನುಮನಧನಂಗಳನು, ಬೇಡುವುದು-ಕೇಳುವುದು, ಬೇಡಲಾಱದ ಹಂದೆ-ತನುಮನಧನಂಗಳನು ಕೇಳಲಾರದ ಹೇಡಿಯಾದಂಥ ಎಲೆ ಪರಶಿವಲಿಂಗವೆ, ನೀ ಕೇಳಾ-ನೀನಾಲಿಸಾ, ಈ ಬಿರಿದು ಈ ಭಕ್ತನೆಂಬ ಕೀರ್ತಿ ಯಶಸ್ಸು, ಸಂದಿತ್ತು-ಸಲುವಳುಯಾಯಿತ್ತು, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

III -

ಎನ್ನಕಾಯ ಕೆಡುವನ್ನಕ್ಕ-ಎನ್ನ ದೇಹ ಭೂಗತವಾಗುವ ಪರಿಯಂತರಲು.

೨೦೭

ಹುಟ್ಟುತ್ತ ದ್ರವ್ಯವನಱಿಯದವಂಗೆ ಒಬ್ಬ ಐಶ್ವರ್ಯವಂತ ಮಗ [1]ಹುಟ್ಟಿ[1] ಲಕ್ಷಸಂಖ್ಯೆ[2] ಹಿರಣ್ಯವ ತಂದು ಸಂತೋ[3]ಷಂ ಬ[3]ಡಿಸುವಂತೆ, ಕಾಳಗದ ಮುಖವಾವುದೆಂದಱಿಯದ ಹಂದೆ ನೃಪಂಗೆ ಒಬ್ಬ ಕ್ಷತ್ರಿಯ[4]ನಹ[4] ಕುಮಾರ ಹುಟ್ಟಿ ಕಿಗ್ಗಡಲ ರಕ್ತದ ಹೊನಲಲ್ಲಿ ಕಡಿದು ಮುಳುಗಾಡುವ ಕೊಳಗುಳವ ಕಂಡು ಪರಿಣಾಮಿಸುವಂತೆ, ಆನು ಪರಿಣಾಮಿಸುವೆನಯ್ಯಾ ಕೂಡಲಸಂಗಮದೇವಾ, ನೀವು ಬಂದೆನ್ನ ಬೇಡಿದಡೆ!

I -

ಹುಟ್ಟುತ್ತ ದ್ರವ್ಯವನರಿಯದವಂಗೆ: ಹುಟ್ಟುತ್ತ-ದೇಹಸಂಬಂಧಿಯಾಗಿ ಉತ್ಪತ್ಯವಾಗುತ್ತ, ದ್ರವ್ಯವನರಿಯುವಂಗೆ-ಐಶ್ವರ್ಯದ ಗುರುತವನರಿಯದಂಥ ದರಿದ್ರಂಗೆ, ಒಬ್ಬ ಐಶ್ವರ್ಯವಂತ ಮಗಹುಟ್ಟಿ-ಮಧ್ಯದಲೊಬ್ಬ ಭಾಗ್ಯಶಾಲಿಯಾದ ಕುಮಾರನುತ್ಪತ್ಯವಾಗಿ, ಲಕ್ಷಸಂಖ್ಯೆ ಹಿರಣ್ಯವ ತಂದು-ಘಟ್ಟ ಬೆಟ್ಟ ತುರಾವಳಿಗೆ ಹೋಗಿ ಉದ್ದಿಮೆ ವ್ಯಾಪಾರಗಳನು ಮಾಡಿ ಒಂದು ಲಕ್ಷಸಂಖ್ಯೆ ದ್ರವ್ಯವನ್ನು ಗಳಿಸಿಕೊಂಡು ಬಂದು, ಸಂತೋಷಂ ಬಡಿಸುವಂತೆ-ತಂದೆಯ ಮುಂದೆ ರಾಶಿಯ ಹೊಯ್ದು ಇದು ಇಂಥ ವರಹ ಇದು ಇಂಥ ಹೊನ್ನು ಇದು ಇಂಥ ರೂಪಾಯಿಯೆಂದು ತೋರಿದಲ್ಲಿ ನನ್ನ ಮಗ ಎಷ್ಟು ಐಶ್ವರ್ಯಸಂಪನ್ನನೆಂದು ಹೇಂಗೆ ಸಂತೋಷಂಬಡುತ್ತಿಹನೋ ಹಾಂಗೆ, ಜಂಗಮಮೂರ್ತಿಗಳು ಬಂದು ಎನ್ನ ತನುಮನಧನಂಗಳನು ಕೇಳಿದರೆ ನನಗೆ ಅಷ್ಟು ಸಂತೋಷವಾಗುತ್ತಿಹದು.

ಕಾಳಗದ ಮುಖವಾವುದೆಂದರಿಯದ ಹಂದೆ ನೃಪಂಗೆ: ಕಾಳಗದ ಮುಖ-ರಣಾಗ್ರದ ವದನವು, ಅವುದೆಂದರಿಯದ-ಯಾವುದೆಂದು ತಿಳಿಯದ, ಹಂದೆ-ಹೇಡಿಯಾದಂಥ, ನೃಪಂಗೆ-ದೊರೆಗೆ, ಒಬ್ಬ ಕ್ಷತ್ರಿಯನಹ ಕುಮಾರಹುಟ್ಟಿ-ಬಹುಪರಾಕ್ರಮಿಯಾದ ಒಬ್ಬ ಕ್ಷತ್ರಿಯಕುಲದ ಕುಮಾರನುತ್ಪತ್ಯವಾಗಿ, ಕಿಗ್ಗಡಲ-ಊರಿಗೆ ಮೂಡಗಡಿಯಾಗಿ ತೋರುವ, ರಕ್ತದ ಹೊನಲಲ್ಲಿ-ಶೋಣಿತವೇ ಹರಿವಂಥ ಹಳ್ಳದಲ್ಲಿ, ಕಡಿದು-ಯುದ್ಧವ ಮಾಡಿ, ಮುಳುಗಾಡುವ-ತೇಲಾಡುವ., ಕೊಳಗುಳವ ಕಂಡು-ರುಂಡ ಮುಂಡಂಗಳ ನೋಡಿ, ಪರಿಣಾಮಿಸುವಂತೆ-ಆ ದೊರೆಯಾದಾತನು ಏಳು ನೆಲೆ ಉಪ್ಪರಿಗೆಯ ಮೇಲೆ ಕುಳಿತಿಕೊಂಡು ನೋಡಿ, ನನ್ನ ಮಗ ಎಷ್ಟು ಪರಾಕ್ರಮಿಯೆಂದು ಹೇಂಗೆ ಸಂತೋಷಪಡುತ್ತಿಹನೋ ಹಾಂಗೆ, ಜಂಗಮಮೂರ್ತಿಗಳು ಬಂದು ತನುಮನಧನಂಗಳನು ಕೇಳಿದರೆ ನನಗಷ್ಟೊಂದು ಸಂತೋಷವಾಗುತ್ತಿಹುದು.

ಆನು ಪರಿಣಾಮಿಸುವೆನಯ್ಯ-ನಾನು ಸಂತೋಷಿಸುವನಯ್ಯ, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ, ನೀವು ಬಂದೆನ್ನ ಬೇಡಿದಡೆ: ನೀವು-ಜಂಗಮಮೂರ್ತಿಗಳು, ಬಂದು-ಭಿಕ್ಷಕ್ಕೆಂದು ಬಿಜಯಂಗೈದು ಬಂದು, ಎನ್ನ ಬೇಡಿದಡೆ-ಎನ್ನ ತನುಮನಧನಂಗಳನು ಕೇಳಿದರೆ ನನಗಷ್ಟೊಂದು ಸಂತೋಷವಾಗುತ್ತಿಹುದು.

III- -

ಕಿಗ್ಗಡಲು-ಸಮುದ್ರತನಕಲು.

IV -

1-1 ನಾದನೆ (ತ), 2-2 + ಯ (ತ), 3-3 ಷ ಪ (ತ), 4-4 x (ತ).

....

ಶರಣರು ಬಂದು ಬೇಡಿದರೆ ಆ ಸುಖಕ್ಕೆ ಸರಿಯಿಲ್ಲಾಯೆಂಬುದೀ ವಚನದರ್ಥ.

೭೦೮

ಅರ್ಥವನರ್ಥವ ಮಾಡಿ ಕೋಳಾಹಳಂಗೆಯ್ಯುತಿರಲಿ, ಹುಟ್ಟಿದ ಮಕ್ಕಳ ನವಖಂಡವ ಮಾಡಿ ಕಡಿಯುತ್ತಿರಲಿ, ಮುಟ್ಟುವ ಸ್ತ್ರೀಯ[1]ಳ[1] ಎನ್ನ ಕಣ್ಣ ಮುಂದೆ ಅಭಿಮಾನಂಗೊಂಡು ನೆರೆವುತ್ತಿರಲಿ,

ಇಂತೀ ತ್ರಿವಿಧವು ಹೊಱಗಣವು, ಇನ್ನೆನ್ನಂಗದ ಮೇಲೆ ಬರಲಿ; ಹಿಡಿ[2]ಖಂಡವ ಕೊಯ್ಯಲಿ,[2] ಇಕ್ಕುವ ಶೂಲ[3]ವ[3] ಪ್ರಾಪ್ತಿಸಲಿ, ಹಾಕೊಂದೆಸೆ ಹನ್ನೊಂದೆಸೆ[4] [5]ಮಾ[5]ಡುತ್ತಿರಲಿ, ಮತ್ತೆಯೂ ಲಿಂಗಾರಾಧನೆಯ ಮಾಡುವೆ, ಜಂಗಮಾರಾಧನೆಯ ಮಾಡುವೆ, ಪ್ರಸಾದಕ್ಕೆ ತಪ್ಪೆ! ಇಂತಪ್ಪ ಭಾಷೆ ಕಿಂಚಿತ್ತು ಹುಸಿಯಾದಡೆ ನೀನಂದೆ ಮೂಗ ಕೊಯ್ಯಿ ಕೂಡಲಸಂಗಮದೇವಾ.

I– –

ಅರ್ಥವನರ್ಥವ ಮಾಡಿ ಕೋಳಾಹಳಂಗೆಯ್ಯುತಿರಲಿ : ಅರ್ಥವ–ದ್ರವ್ಯವನ್ನು, ಅನರ್ಥವ ಮಾಡಿ–ಸೂಳೆ ಬಸವಿ ದಾಸಿವೇಶಿ ಬೊಳಭಟ್ಟರಿಗೆ ಕೊಟ್ಟು ಚಾಗಿಯ ಮಾಡಿ, ಕೋಳಾಹಳಂಗೆಯ್ಯುತಿರಲಿ–ಸೂರೆಯೋ ಸೂರೆಯೋಯೆಂದು ಸೂರೆಯ ಮಾಡುತ್ತಿರಲಿ; ಹುಟ್ಟಿದ–ಉಭಯಕುಲ ಶುದ್ಧವಾಗುತ್ಪತ್ಯವಾದ, ಮಕ್ಕಳ–ಪುತ್ರರುಗಳ, ನವಖಂಡವ ಮಾಡಿ–ಒಂಬತ್ತು ತುಂಡನಾಗುವ ಹಾಂಗೆ, ಕಡಿಯುತ್ತಿರಲಿ–ಛಿದ್ರಛಿದ್ರವ ಮಾಡುತ್ತಿರಲಿ, ಮುಟ್ಟುವ–ತಾ ಮುಟ್ಟುವಂಥ, ಸ್ತ್ರೀಯಳ–ಸತಿಯಳನ್ನು, ಎನ್ನ ಕಣ್ಣ ಮುಂದೆ–ನೋಡೋ ನೋಡೋ ಹಾಂಗೆನ್ನ ಕಣ್ಣೆದುರಲಿ, ಅಭಿಮಾನಂಗೊಂಡು–ಎದೆಯ ಮೇಲಿನ ಸೆರಗು ತಲೆಯ ಮೇಲಿನ ಮುಸುಕು ತೆಗದು ಬಹುಮಾನಂಗೊಂಡು, ನೆರೆವುತ್ತಿರಲಿ–ಕೂಡುತ್ತಿದ್ದರಿರಲಿ; ಇಂತೀ–ಈ ಪ್ರಕಾರದಿಂದ ಹೇಳಲ್ಪಟ್ಟಂಥ, ತ್ರಿವಿಧವು–ತನುಮನಧನವೆಂಬಿವು ಮೂರು, ಹೊಱಗಣವು–ಬಾಹ್ಯದ ಪದಾರ್ಥವು, ಇನ್ನೆನ್ನಂಗದ ಮೇಲೆ ಬರಲಿ–ಇನ್ನೆನ್ನ ದೇಹದ ಮೇಲೆ ಬಂದರೂ ಬರಲಿ, ಹಿಡಿ ಖಂಡದ ಕೊಯ್ಯಲಿ–ಇಕ್ಕಳದಿಂದ ಖಂಡವನ್ನು ಛಿದ್ರಿಸಿದರೂ ಛಿದ್ರಿಸಲಿ ಕಿತ್ತಿದರೂ ಇಕ್ಕುವ ಶೂಲವ ಪ್ರಾಪ್ತಿಸಲಿ–ಶೂಲಕ್ಕೆ ಹಾಕುವಂಥದು ಪ್ರಾಪ್ತಿಯಾದರೂ ಆಗಲಿ.

ಹಾಕೊಂದೆಸೆ–ಕಡಿಕಡಿದು ಒಂದೇ ಸ್ಥಾನದಲ್ಲಿ ಒಟ್ಟಬಿಡು, ಹನ್ನೊಂದೆಸೆ ಮಾಡುತ್ತಿರಲಿ–ಹನ್ನೊಂದು ತುಂಡವ ಮಾಡಿ ದಿಕ್ಕು ದಿಕ್ಕಿಗೆ ಚೆಲ್ಲಿ ದಿಗ್ಬಲಿಯ ಕೊಡುತ್ತಿದ್ದರೂ ಕೊಡಲಿ; ಮತ್ತೆಯೂ–ಮರಳಿಯೂ, ಲಿಂಗಾರಾಧನೆಯ ಮಾಡುವೆ–ಲಿಂಗಪೂಜೆಯನನುಗೈವೆನು, ಜಂಗಮಾರಾಧನೆಯ ಮಾಡುವೆ–ಆ ಲಿಂಗಕ್ಕೆ ಪ್ರಾಣಕಳಾ ಚೈತನ್ಯಸ್ವರೂಪವಾದ ಜಂಗಮಭಕ್ತಿಯನನುಗೈವೆನು. ಪ್ರಸಾದಕ್ಕೆ–ಗುರುಪ್ರಸಾದ ಲಿಂಗಪ್ರಸಾದ ಜಂಗಮಪ್ರಸಾದಕ್ಕೆ, ತಪ್ಪೆ–ತೊಲಗೆನು, ಇಂತಪ್ಪ–ಈ ಪ್ರಕಾರವಾದ, ಭಾಷೆ–ಪ್ರತಿಜ್ಞೆಯು, ಕಿಂಚಿತ್ತು–ಸ್ವಲ್ಪಿತವಾದರೂ, ಹುಸಿಯಾದಡೆ–ಅನೃತವೆನ್ನಲ್ಲುಂಟಾಗಿದ್ದರೆ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನೀನಂದೇ–ನೀನಾಕ್ಷಣದಲ್ಲಿಯೇ, ಮೂಗ ಕೊಯ್ಯಿ–ಆಚಾರಾಂಗವೆಂಬ ಘ್ರಾಣವನಪಹರಿಸಿ ಮಾನಭಂಗವ ಮಾಡಿ ಭವಕ್ಕೆ ಹಾಕಿಬಿಡು.

III– –

4+ ಯಾಗಿ (ಟ. ಡ), 5–5 ಮೂ (ಟ, ಡ).

....

ಹಾಕೊಂದೆಸೆ ಹನ್ನೊಂದುದೆಸೆಯಾಗಿ ಮೂಡುತ್ತಿರಲಿ–ಒಂದು ಶೂಲ ಹನ್ನೊಂದು ತಿಸುಳಾಗಿ ನೆತ್ತಿಯಲ್ಲಿ ಮೂಡುತ್ತಿರಲಿ.

IV –

1-1 x (ತ), 2-2 ಖಂಡಂಗಗೊಯ್ಯಲಿ (ತ), 3-3 x (ತ), 4+ ಯಾಗಿ (ತ).

....

ತನುವಿಗೆ ತಪ್ಪಿದರೆ ಧನಕ್ಕೆ ತಪ್ಪಿದರೆ ಸತಿಗೆ ತಪ್ಪಿದರೆ ಸುತಗೆ ತಪ್ಪಿದರೆ ತಪ್ಪಲಿ, ಗುರುಲಿಂಗ ಜಂಗಮದಲ್ಲಿ ಪ್ರಸಾದದಲ್ಲಿ ತಪ್ಪೆನು. ಈ ಭಾಷೆ ತಪ್ಪಿದರೆ ಮೂಗಕೊಯ್ಯಿಯೆಂಬುದೀ ವಚನದರ್ಥ.

೭೦೯

ತನುವ ಬೇಡಿದಡೀವೆ, ಮನವ ಬೇಡಿದಡೀವೆ, ಧನವ ಬೇಡಿದಡೀವೆ, ಬೇಡು ಬೇಡು ಬೇಡಲಾರದ ಹಂದೇ! ಕಣ್ಣ ಬೇಡಿದಡೀವೆ, ತಲೆಯ ಬೇಡಿದಡೀವೆ, ಕೂಡಲಸಂಗಮದೇವಾ ನಿಮಗಿತ್ತು ಶುದ್ಧನಪ್ಪೆನು, ನಿಮ್ಮ ಪುರಾತರ ಮನೆಯಲ್ಲಿ.

I- -

ತನುವ ಬೇಡಿದಡೀವೆ : [ತನುವ ಬೇಡಿದಡೆ] ಸಿಂಧುಬಲ್ಲಾಳರಾಯನ ತನುಪದಾರ್ಥವ ಸಮರ್ಪಿಸಿಕೊಂಡ ಹಾಂಗೆ ತನುಪದಾರ್ಥವನ್ನು ಕೊಡು ಕೊಡು ಭಕ್ತಾಯೆಂದು ಕೇಳಿದರೆ, ಈವೆ-ಕೊಟ್ಟು ಭಕ್ತಿಯ ಮಾಡುವೆನು. ಮನವ ಬೇಡಿದಡೀವೆ:[ಮನವ ಬೇಡಿದಡೆ-] ಸೇದಿರಾಜಯ್ಯಗಳ ಮನಪದಾರ್ಥವನ್ನು ಸಮರ್ಪಿಸಿಕೊಂಡ ಹಾಂಗೆ ಮನಪದಾರ್ಥವನ್ನು ಕೊಡು ಕೊಡು ಭಕ್ತಾಯೆಂದು ಕೇಳಿದರೆ, ಈವೆ-ಕೊಟ್ಟು ಭಕ್ತಿಯ ಮಾಡುವೆನು, ಧನವಬೇಡಿದಡೀವೆ: [ಇಮ್ಮಡಿ ಮೋನೆವಿಡಿರಾಯರ ಧನಪದಾರ್ಥವನ್ನು ಸಮರ್ಪಿಸಿಕೊಂಡ ಹಾಂಗೆ ಎನ್ನ ಧನಪದಾರ್ಥವನ್ನು ಕೂಡು ಕೊಡು ಭಕ್ತಾಯೆಂದು ಕೇಳಿದರೆ, ಈವೆ-ಕೊಟ್ಟು ಭಕ್ತಿಯ ಮಾಡುವೆನು. ಬೇಡು ಬೇಡು-ತನುಮನಧನಂಗಳನು ಕೇಳುಕೇಳು, ಬೇಡಲಾರದ-ತನುಮನಧನಂಗಳನು ಕೇಳಲಾರದ, ಹಂದೇ-ಹೇಡಿಯಾದಂಥ ಎಲೆ ಪರಶಿವಲಿಂಗವೆ.

ಕಣ್ಣ ಬೇಡಿದಡೀವೆ: [ಕಣ್ಣ ಬೇಡಿದಡೆ-] ನಾರಾಯಣನ ನೇತ್ರಕಮಲವನ್ನು ಸಮರ್ಪಿಸಿಕೊಂಡ ಹಾಂಗೆ ಎನ್ನ ನಯನವನ್ನು ಕೊಡು ಕೊಡು ಭಕ್ತಾಯೆಂದು ಕೇಳಿದರೆ, ಈವೆ-ಕೊಟ್ಟು ಭಕ್ತಿಯ ಮಾಡುವೆನು, ಅದಲ್ಲದೆ ಕಣ್ಣಯೆಂದರೆ ಇಂದ್ರಿಯಂಗಳು ಇಂದ್ರಿಯಂಗಳೆಂಬ ಪದಾರ್ಥವ ಕೇಳಿದರೆ, ಈವೆ-ಕೊಟ್ಟು ಭಕ್ತಿಯ ಮಾಡುವೆನು, ತಲೆಯ ಬೇಡಿದಡೀವೆ : ತಲೆಯ-ಸಾಂಖ್ಯತೊಂಡೆಯ ತಲೆಯ ಸಮರ್ಪಿಸಿಕೊಂಡ ಹಾಂಗೆ ಎನ್ನ ತಲೆಯ, ಬೇಡಿದಡೆ-ಕೊಟ್ಟು ಭಕ್ತಿಯ ಮಾಡುವೆನು. ಅದಲ್ಲದೆ ತಲೆಯೆಂದರೆ ಜ್ಞಾನ, ಜ್ಞಾನವೆಂಬ ಪದಾರ್ಥವನ್ನು ಕೇಳಿದರೆ, ಈವೆ-ಕೊಟ್ಟು ಭಕ್ತಿಯ ಮಾಡುವೆನು, ಕೂಡಲಸಂಗಮದೇವಾ-ಎಲೆ ಪರಿಶಿವಲಿಂಗವೆ, ನಿಮಗೆ-ಸ್ವಾಮಿಗಳಿಗೆ, ಇತ್ತು-ಕೊಟ್ಟು, ಶುದ್ಧನಪ್ಪೆನು-ಕಡೆ ಮೆದ್ದು ಕೈತೊಳೆಯಲಿಲ್ಲೆಂಬೋಪಾದಿಯಲ್ಲಿ ನಿರ್ಮಲಸ್ವರೂಪವಾಗಿರ್ಪೆನು, ನಿಮ್ಮ ಪುರಾತರ ಮನೆಯಲ್ಲಿ-ನಿಮ್ಮ ಅರುವತ್ತುಮೂರು ಪುರಾತರ ಭಕ್ತಿಗೃಹದಲ್ಲಿ.

೭೧೦

ನಾನು ಆರಂಭವ ಮಾಡುವೆನಯ್ಯಾ ಗುರುಪವೂಜೆಗೆಂದು, ನಾನು ವ್ಯವಹಾರವ ಮಾಡುವೆನಯ್ಯಾ ಲಿಂಗಾರ್ಚನೆಗೆಂದು, ನಾನು ಪರಸೇವೆಯ ಮಾಡುವೆನಯ್ಯಾ ಜಂಗಮದಾಸೋಹಕ್ಕೆಂದು. ನಾನಾವಾವ ಕರ್ಮಂಗಳ ಮಾಡಿದಡೆಯೂ ಆ ಕರ್ಮದ ಫಲಭೋಗವ ನೀ ಕೊಡುವೆಯೆಂಬುದ ನಾನು ಬಲ್ಲೆನಾಗಿ, ನೀ ಕೊಟ್ಟ ದ್ರವ್ಯವ ನಿಮಗಲ್ಲದೆ ಮತ್ತೊಂದು ಕ್ರೀಯಕ್ಕೆ ಮಾಡೆನು, ನಿಮ್ಮ ಸೊಮ್ಮು ನಿಮಗೆ ಸಲಿಸುವೆನು ನಿಮ್ಮಾಣೆ, ಕೂಡಲಸಂಗಮದೇವಾ.

I -

ನಾನು ಆರಂಭವ ಮಾಡುವೆನಯ್ಯಾ ಗುರುಪೂಜೆಗೆಂದು: ನಾನು-ಶರಣನು, ಗುರುಪೂಜೆಗೆಂದು ಗುರುಭಕ್ತಿ ಮಾಡುವುದಕ್ಕೆ ದ್ರವ್ಯವಾಗಬೇಕೆಂದು ಆರಂಭವ ಮಾಡುವೆನಯ್ಯ ಊರೂರಿಗೆ ಕಮತಂಗಳ ಹಾಕಿಸಿ ವ್ಯವಸಾಯ ಬೇಸಾಯವನ್ನು ಮಾಡಿಸುವೇನು ಅಲ್ಲಿ ಹಲಾಯುಧರ ಕೃಷಿಯಾಚಕತ್ವವೇ ಉಂಟಾಯಿತು. ನಾನು ವ್ಯವಹಾರವ ಮಾಡುವೆನಯ್ಯ: ನಾನು, ಶರಣನು ಲಿಂಗಾರ್ಚನೆಗೆಂದು-ಲಿಂಗಪವೂಜೆಯ ಮಾಡುವುದಕ್ಕೆ ದ್ರವ್ಯವಾಗಬೇಕೆಂದು, ವ್ಯವಹಾರವ ಮಾಡುವೆನಯ್ಯಾ-ಘಟ್ಟ ಬೆಟ್ಟ ತುರಾವಳಿಗೆ ಹೋಗಿ ಉದ್ದಿಮೆ ವ್ಯಾಪಾರಂಗಳನು ಮಾಡುವೆನು, ಅಲ್ಲಿ ವಾಣಿಜರ ಕೃಷಿ ಗೋಪಾಲತ್ವವೇ ಉಂಟಾಗಿರ್ಪುದು.

ನಾನು ಪರಸೇವೆಯ ಮಾಡುವೆನಯ್ಯಾ ಜಂಗಮದಾಸೋಹಕ್ಕೆಂದು-ನಾನು ಜಂಗಮಭಕ್ತಿಯ ಮಾಡುವುದಕ್ಕೆ ದ್ರವ್ಯವಾಗಬೇಕೆಂದು ಪರದೊರೆಯ ಕೈಕೆಳಗೆ ಕತ್ತಿ ಕಂದಲಿಯನ್ನು ಪಿಡಿದುಕೊಂಡು ಓಲೈಸುವೆನು. ಅಲ್ಲಿ ಅಸಿಮಸಿಯೆಂಬ ಕೃಷಿಯೇ ಉಂಟಾಗಿರ್ಪುದು. ನಾನಾಪಾಪಕರ್ಮಂಗಳ ಮಾಡಿದಡೆಯೂ-ನಾನಾವಾವ ಕೃತ್ಯಂಗಳನು ಗೆಯ್ದರೇನು, ಆ ಕರ್ಮದ ಫಲಭೋಗದ-ಆ ಕೃತ್ಯಂಗಳಿಂದಾದ ಫಲಪದಂಗಳ ಅನುಭೋಗವನ್ನು, ನೀ ಕೊಡುವೆಯೆಂಬುದ-ನೀನೀಯುತಿದ್ದೀಯೆಂಬುವಂಥದನ್ನು, ನಾನು ಬಲ್ಲೆನಾಗಿ-ನಾನು ಅರಿದು ಬಲ್ಲೆನಾಗಿ.

ನೀ ಕೊಟ್ಟ ದ್ರವ್ಯವ-ನೀನಿತ್ತ ಪದಾರ್ಥವನ್ನು ನಿಮಗಲ್ಲದೆ-ನಿಮ್ಮ ಜಂಗಮೂರ್ತಿಗಳಿಗಲ್ಲದೆ. ಮತ್ತೊಂದು ಕ್ರೀಯಕ್ಕೆ ಮಾಡೆನು-ಸೂಳೆ ಬಸವ ದಾಸಿ ವೇಶಿ ಬೋಳಭಟ್ಟರಿಗೆ ಕೊಟ್ಟು ಚಾಗಿಯ ಮಾಡೆನು, ನಿಮ್ಮ ಸೊಮ್ಮು-ನಿಮ್ಮ ಪದಾರ್ಥವು. ನಿಮಗೆ ಸಲಿಸುವೆನು-ನಿಮ್ಮ ಚಿತ್ರಭಾಂಗ ಸ್ವರೂಪರಾದ ಗುರುಲಿಂಗಜಂಗಮಮೂರ್ತಿಗಳಿಗೆ ಕೊಟ್ಟು ಭಕ್ತಿಯ ಮಾಡುವೆನು, ಕೂಡಲಸಂಗಮದೇವಾ-ಎಲೆ ಪರಶಿಲಿಂಗವೆ, ನಿಮ್ಮಾಣೆ-ಸ್ವಾಮಿಗಳ ಮೇಲಣ ಪ್ರತಿಜ್ಞೆಯು.

೭೧೧

ಹೊತ್ತಾರೆ ಎದ್ದು ಕಣ್ಣ ಹೊಸೆವುತ್ತ ಎನ್ನ ಒಡಲಿಂಗೆ, ಎನ್ನ ಒಡವೆಗೆ, ಎನ್ನ ಮಡದಿ ಮಕ್ಕಳಿಗೆಂದು ಕುದಿದೆನಾದಡೆ ಎನ್ನ ಮನಕ್ಕೆ ಮನವೇ ಸಾಕ್ಷಿ! "ಆಸನೇ ಶಯನೇ ಯಾನೇ ಸಂಪರ್ಕೇ ಸಹಭೋಜನೇ । ಸಂಚರಂತಿ ಮಹಾಘೋರೇ ನರಕೇ ಕಾಲಮಕ್ಷಯಂ॥ ಎಂಬ ಶ್ರುತಿ ಬಸವಣ್ಣನೋದುವನು" "ಭವಿ ಬಿಜ್ಜಳನ ಗದ್ದುಗೆಯ ಕೆಳಗೆ ಕುಳ್ಳಿರ್ದು ಓಲೈಸಿಹನೆಂ"ದು ನುಡಿವರಯ್ಯಾ ಪ್ರಮಥಗಣರು, ಕೊಡುವೆನುತ್ತರವ ಅವರಿಗೆ? ಕೊಡಲಮ್ಮೆ! ಹೊಲೆಯ ಹೊಲೆಯರ ಮನೆಯ

ಹೊಕ್ಕಾದಡೆಯೂ ಸಲೆ ಕೈಗೂಲಿ ಮಾಡಿದಡೆಯೂ ನಿಮ್ಮ ನಿಲವಿಂಗೆ ಕುದಿವೆನಲ್ಲದೆ, ಎನ್ನ ಒಡಲವಸರಕ್ಕೆ ಕುದಿದೆನಾದಡೆ ತಲೆದಂಡ ತಲೆದಂಡ, ಕೂಡಲಸಂಗಮದೇವಾ.

I- -

ಹೊತ್ತಾಜೆ ಎದ್ದು ಕಣ್ಣ ಹೊಸೆವುತ್ತ: ಹೊತ್ತಾಜೆ-ಪ್ರಾತಃಕಾಲದಲ್ಲಿ, ಎದ್ದು-ಉತ್ಥಾನಂಗೆಯ್ದು, ಕಣ್ಣ ಹೊಸೆವುತ್ತ-ನಯನವನ್ನು ತಿಕ್ಕುತ್ತ, ಎನ್ನ ಒಡಲಿಂಗೆ-ಎನ್ನ ಘಟರಕ್ಷಣ್ಯವ ಮಾಡಿಕೊಂಬುವುದಕ್ಕೆ, ಎನ್ನ ಒಡವೆಗೆ-ಎನ್ನ ವಸ್ತ್ರ ಒಡವೆ ಆಭರಣಂಗಳಿಗೆ ಅದಲ್ಲದೆ ನಾನು ಕೊಟ್ಟಂಥ ಕಡಬಡ್ಡಿ ಸಾಲವನ್ನು ಎತ್ತಿಕೊಂಡು ಬರುವುದಕ್ಕೆ, ಎನ್ನ ಮಡದಿ ಮಕ್ಕಳಿಗೆಂದು-ನನ್ನ ಸತಿ ಸುತಾದಿಗಳಿಗಾಗಬೇಕೆನುತ್ತ, ಕುದಿದೆನಾದಡೆ-ಕೂಳು ಕುದಿಗೊಂಡೆನಾದರೆ, ಎನ್ನ ಮನಕ್ಕೆ ಮನವೇ-ಇವತ್ತು ಎನ್ನ ಹೆಂಡಿರು ಮಕ್ಕಳಿಗಾಗಬೇಕು. ನಾಳಿಗೆ ಎನ್ನ ಹೆಂಡಿರು ಮಕ್ಕಳಿಗಾಗಬೇಕೆಂದು ಕೂಳು ಕುದಿಗೊಂಬುವಂಥ ಮನಸ್ಸಿಗೂ ಇವತ್ತು ಗುರುಲಿಂಗಜಂಗಮಕ್ಕಾಗಬೇಕು ನಾಳೆ ಗುರುಲಿಂಗಜಂಗಮಕ್ಕಾಗಬೇಕೆಂದು ಕೂಳು ಕುದಿಗೊಂಬುವಂಥ ಮನಸ್ಸಿಗೂ, ಸಾಕ್ಷಿತಾರ್ಕಣ್ಯವು.

ಗ್ರಂಥ-ಗುರುವಾಕ್ಯಕ್ಕೆ ಸದೃಶವಾಗಿ ಹರವಾಕ್ಯವ ನಿರೂಪಿಸುತ್ತಿಹರು, ಆಸನೇ-ಅಂಗಕ್ಕೆ ಲಿಂಗೋಪದೇಶ ಮನಕ್ಕೆ ಮಂತ್ರೋಪದೇಶವಿಲ್ಲದಿದ್ದಂಥ ಭವಿಜನಾತ್ಮನೂ ತಾನೂ ಒಂದೇ ಸಮಗದುರ್ಗೆಯ ಮೇಲೆ ಕುಳಿತುಕೊಂಡರೆ, ಶಯನೇ-ಭವಿಯೂ ತಾನೂ ಒಂದೇ ಹಾಸಿಗೆಯ ಮೇಲೆ ಮಲಗಿಕೊಂಡಿದ್ದರೆ, ಯಾನೇ-ಭವಿಯೂ ತಾನೂ ಒಂದೇ ಸಮಾನವಾಗಿ ಆನೆ ಕುದುರೆ ಅಂದಳ ಮೊದಲಾದ ವಾಹನವನ್ನು ಹತ್ತಿಕೊಂಡು ಹೋದರೆ, ಸಂಪರ್ಕೇ-[* *] ತಾನೂ ಭವಿಯೂ ತಾನೂ ಒಂದೇ ಪದಮಾರ್ಗವೆತ್ತಿ ಹೋಗುವಲ್ಲಿ ಅವನ ಕಾಲಧೂಳು ತನ್ನ ಮೇಲೆ ತನ್ನ ಕಾಲಧೂಳು ಅವನ ಮೇಲೆ ಬೀಸುವ ಹಾಂಗೆ ಗಮಿಸಿದರೆ, ಮಹಾಘೋರೆ?: ಮಹಾ-ಅಧಿಕವಾದ, ಘೋರೇ-ಭಯಂಕರವಾದ, ನರಕೀ-ನಿರಯದಲ್ಲಿ, ಕಾಲ-ಎಲ್ಲಾಗಳು, ಅಕ್ಷಯಂ-ಕೇಡಿಲ್ಲದೆ ಇರುತ್ತಿಹರು, ಬಿದ್ದಿಪ್ಪರು, ಎಂಬ-ಹೀಂಗೆಂದು ಹೇಳುವ, ಶ್ರುತಿ-ವೇದವಾಕ್ಯವನ್ನು, ಬಸವಣ್ಣ-ಅನಾದಿ ಸಂಗನಬಸವೇಶ್ವರನು, ಓದುವನು-ಪಠಿಸುವನು.

ಭವಿ-ಭೂತದೇಹಿಯಾದ, ಬಿಜ್ಜಳನ-ಬಿಜ್ಜಳರಾಯನ, ಗದ್ದುಗೆಯ ಕೆಳಗೆ-ಸದರಿನ ಕಿಂದಣದಲ್ಲಿ, ಕುಳ್ಳಿರ್ದು-ಮೂರ್ತವ ಮಾಡಿಕೊಂಡಿರ್ದು ಓಲೈಸಿಹನೆಂದು-ಕತ್ತಿ ಕಂದಲಿಯನ್ನು ಪಿಡಿದುಕೊಂಡು ಚಾಕರಿಯನ್ನು ಮಾಡುತ್ತೈದಾನೆನುತ್ತ, ಪ್ರಮಥಗಣರು-ಜಂಗಮಮೂರ್ತಿಗಳು, ನುಡಿವರಯ್ಯ-ಹೇಳುವರಯ್ಯ.

ಕೊಡುವೆನುತ್ತರವ-ಉತ್ತರಕ್ಕೆ ಪ್ರತ್ಯುತ್ತರವನ್ನು ಕೊಟ್ಟು ಪ್ರಸಂಗವನಾಡುವೆನೆ? ಅವರಿಗೆ-ಜಂಗಮಮೂರ್ತಿಗಳಿಗೆ, ಕೊಡಲು-ಪ್ರತ್ಯುತ್ತರ ನಾಯಕನರಕವೆಂದು ಹೇಳುತ್ತಿಹುದಾದ ಕಾರಣ ಉತ್ತರಕ್ಕೆ ಪ್ರತ್ಯುತ್ತರವನ್ನು ಕೊಟ್ಟು ಪ್ರಸಂಗವನಾಡುವುದಕ್ಕೆ, ಅಮ್ಮೆ-ಹೆದರುವೆನು, ಹೊಲೆಯ ಹೊಲೆಯರ ಮನೆಯ ಹೊಕ್ಕಾದಡೆಯೂ: ಹೊಲೆಯ-ಊರಿಂದ ಹೊರಗಡೆಯಲ್ಲಿ ಮನೆಕಟ್ಟಿಕೊಂಡಿರುವಂಥ ಚಾಂಡಾಲನು, ಹೊಲೆಯರ-ಅವನಿಂದ ಹೊರಗಡೆಯಲ್ಲಿ ಮನೆಯ ಕಟ್ಟಿಕೊಂಡಿರುವಂಥ ಶ್ವಪಚರ, ಮನೆಯ-ಮಂದಿರವನ್ನು, ಹೊಕ್ಕಾದಡೆಯೂ-ಪ್ರವೇಶವಾಗಿಯಾದರೆಯೂ, ಸಲೆ ಕೈಗೂಲಿ ಮಾಡಿಯಾದಡೆಯೂ-ಪಡಿಜೋಳಕ್ಕೆ ಚೆಂಗೂಲಿಯ[ನ]ನುಗ್ಗೈದಾದರೆಯೂ, ನಿಮ್ಮ ನಿಲವಿಂಗೆ-ಜಂಗಮಮೂರ್ತಿಗಳ ಅಂಗಕ್ಕೆ, ಕುದಿವೆನಲ್ಲದೆ-ಹಸಿದಾರು ಬಳಲಿಯಾರೆಂದು ಕೂಳು

ಕುದಿಗೊಂಬುವೆನಲ್ಲದೆ, ಎನ್ನ ಒಡಲವಸರಕ್ಕೆ–ಎನ್ನ ಘಟರಕ್ಷಣ್ಯವ ಮಾಡಿಕೊಳಬೇಕೆಂಬ ತೀವ್ರಕ್ಕೆ, ಕುದಿದೆನಾದಡೆ–ಕೂಳು ಕುದಿಗೊಂಡೆನಾದರೆ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ತಲೆದಂಡ ತಲೆದಂಡ–ತಲೆಯೆಂದರೆ ಜ್ಞಾನ, ಅಂತಪ್ಪ ಜ್ಞಾನವನು ಅಪಹರಿಸಿ ಅಜ್ಞಾನಕ್ಕೊಳಗು ಮಾಡಿ ಭವಕ್ಕೆ ಹಾಕಿಬಿಡು ಹಾಕಿಬಿಡು.

....

೧–೧ ಕ (ಕ)

೭೧೨

ದೇವ ದೇವಾ, ಬಿನ್ನಪವನವಧಾರು: ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರಾದವರನೆಲ್ಲರ ಒಂದೇ ಎಂಬೆ; ಹಾರುವ ಮೊದಲು ಶ್ವಪಚ ಕಡೆಯಾಗಿ ಭವಿಯಾದವರನೆಲ್ಲರ ಒಂದೇ ಎಂಬೆ; ಹೀಂಗೆಂದು ನಂಬುವುದೆನ್ನ ಮನವು, ಈ ನುಡಿದ ನುಡಿಯೊಳಗೆ ಎಳ್ಳು ಮೊನೆಯಷ್ಟು ಸಂದೇಹವುಳ್ಳೊಡೆ, ನೀನಂದೇ ಹಲುದೋಜೆ ಮೂಗುಕೊಯ್ಯಿ, ಕೂಡಲಸಂಗಮದೇವಾ.

I– –

ದೇವ ದೇವಾ ಬಿನ್ನಪವನವಧಾರು: ದೇವ–ಎಲ್ಲ ದೇವರಿಗೊಲ್ಲಭನಾದಂಥ ಎಲೆ ಪರಶಿವಲಿಂಗವೆ, ದೇವಾ–ಎನ್ನ ತನುಮನಧನಂಗಳಿಗೆ ಕರ್ತೃವಾದಂಥ ಎಲೆ ಒಡೆಯನೆ, ಬಿನ್ನಪವ–ವಿಜ್ಞಾಪನವನು, ಅವಧಾರು–ಪರಾಕಾಗಿ ಆಲಿಸು. ವಿಪ್ರಮೊದಲಂತ್ಯಜ ಕಡೆಯಾಗಿ: ವಿಪ್ರ ಮೊದಲು–ಬ್ರಾಹ್ಮಣನೇ ಮೊದಲಾಗಿ, ಅಂತ್ಯಜ ಕಡೆಯಾಗಿ–ಹೊಲೆಯನೇ ಅಂತ್ಯವಾಗಿ, ಶಿವಭಕ್ತರಾದವರನೆಲ್ಲರ–ಗುರುಕಾರುಣ್ಯವನ್ನು ಹಡೆದು ಲಿಂಗಾಂಗಸಂಬಂಧಿಯಾಗಿ ಹರಭಕ್ತರಾದವರನೆಲ್ಲರ, ಒಂದೇ ಎಂಬೆ–ಒಂದೇ ಕಟ್ಟೆಂದು ಹೇಳುವೆನು. ಹಾರುವ ಮೊದಲು–ವಿಪ್ರನೇ ಆದಿಯಾಗಿ, ಶ್ವಪಚ ಕಡೆಯಾಗಿ–ಹೊಲೆಯನೇ ಅಂತ್ಯವಾಗಿ, ಭವಿಯಾದವರನೆಲ್ಲರ–ಭೂತದೇಹಿಯಾದವರನೆಲ್ಲರ, ಒಂದೇ ಎಂಬೆ–ಒಂದೇ ಸಮಾನವೆಂದು ಹೇಳುವೆನು, ಎಂದು–ಹೀಗೆಂದು, ನಂಬುವುದು–ವಿಶ್ವಾಸಿಸುವದು. ಎನ್ನ ಮನವು–ಎನ್ನ ಚಿತ್ತವು.

ಈ ನುಡಿದ ನುಡಿಯೊಳಗೆ–ಈ ಹೇಳಿಕೊಂಡಂಥ ಪ್ರಸಂಗದೊಳಗೆ, ಎಳ್ಳು ಮೊನೆಯಷ್ಟು–ಎಳ್ಳುಕಾಳು ಮುಳ್ಳ ಮೊನೆಯಷ್ಟು, ಸಂದೇಹವುಳ್ಳಡೆ–ಸಂಕಲ್ಪವೇ ಉಂಟಾಗಿದ್ದರೆ, ಕೂಡಲಸಂಗಮ ದೇವಾ–ಎಲೆ ಪರಶಿವಲಿಂಗವೆ, ನೀನಂದೇ–ನೀನಾಕ್ಷಣದಲ್ಲಿಯೇ, ಹಲುದೋಜಿ ಮೂಗು ಕೊಯ್ಯಿ–ಕರಣಂಗಳ ವರ್ತನೆಯನು ಕರುಹುಗಾಣಿಸುವ ಹಾಂಗೆ ಚಿತ್ಕರಣಂಗಳನು ಅಪಹರಿಸಿ ದುಷ್ಕರಣಂಗಳಿಗೆ ಒಳಗು ಮಾಡಿ ಮಾನಭಂಗವ ಮಾಡಿ ಭವಕ್ಕೆ ಹಾಕಿಬಿಡು ಹಾಕಿಬಿಡು.

೭೧೩

ಒಲ್ಲೆನಯ್ಯಾ ಒಲ್ಲೆನಯ್ಯಾ ನಿಮ್ಮವರಲ್ಲದವರ; ಒಲ್ಲೆನಯ್ಯಾ ಒಲ್ಲೆನಯ್ಯಾ ಜಗವೆಲ್ಲಜೆಯಲು; ಒಲ್ಲೆನಯ್ಯಾ ಒಲ್ಲೆನಯ್ಯಾ ನೀ ಮುನಿದಡೆ ಮುನಿ, ಕೂಡಲಸಂಗಮದೇವಾ ನಿಮ್ಮಾಣೆ, ನಿಮ್ಮ ಪ್ರಮಥರಾಣೆ!

I –

ಒಲ್ಲೆನಯ್ಯಾ ಒಲ್ಲೆನಯ್ಯಾ ನಿಮ್ಮವರಲ್ಲದವರ; –ಅಂಗಕ್ಕೆ ಲಿಂಗೋಪದೇಶ ಮನಕ್ಕೆ ಮಂತ್ರೋಪದೇಶವಿಲ್ಲದಿದ್ದಂಥ ಭವಿಜನಾತ್ಮರುಗಳೊಂದಿಗೆ ತನುವಿನ ಕೊಳುಕೊಡು ಮನದ ಕೊಳುಕೊಡು ಧನದ ಕೊಳುಕೊಡುಯೆಂದು ಅರ್ಚನಾರ್ಪಣಕ್ರಿಯೆಗಳ ಮಾಡಲೊಲ್ಲೆನಯ್ಯಾ, ಒಲ್ಲೆನಯ್ಯಾ ಒಲ್ಲೆನಯ್ಯಾ ಜಗವೆಲ್ಲಜೆಯಲು; [ಜಗವೆಲ್ಲಜೆಯಲು–] ಬ್ರಹ್ಮಾಂಡವೆಲ್ಲ ಬಲ್ಲಹಾಂಗೆ, ಒಲ್ಲೆನಯ್ಯಾ ಒಲ್ಲೆನಯ್ಯಾ ನಿಮ್ಮಂಶೀಭೂತರಾದ ಶಿವಶರಣರಿಲ್ಲದಿದ್ದಂಥ ಭವಿ ಜನಾತ್ಮರುಗಳೊಂದಿಗೆ ತನುವಿನ ಕೊಳುಕೊಡು ಮನದ ಕೊಳಕೊಡು ಧನದ ಕೊಳುಕೊಡುಯೆಂದು ಅರ್ಚನಾರ್ಪಣಕ್ರಿಯೆಗಳನು ಮಾಡಲೊಲ್ಲೆನಯ್ಯಾ ಒಲ್ಲೆನಯ್ಯಾ ಒಲ್ಲೆನಯ್ಯಾ ನೀ ಮುನಿದಡೆ ಮುನಿ–ಮೊದಲು [೧][ನೀನು][೧] ಶೈವಾದಿ ನವಚೋಳರಿಗೆ ಪ್ರಸನ್ನವಾಗಿ ವ್ಯೋಮಯಾನದಲ್ಲಿ ಮೂರ್ತವ ಮಾಡಿಸಿ ಕಾಯವೆರಸಿ ಕೈಲಾಸಕ್ಕೆ ತೆಗೆದುಕೊಂಡು ಹೋದೆ. ನೀವೇನು ಕಾರಣಕ್ಕೆ ಅವರೊಂದಿಗೆ ಅರ್ಚನಾರ್ಪಣಕ್ರಿಯೆಗಳನು ಮಾಡಲೊಲ್ಲೆಯೆಂದು ಕೋಪಿಸಿದರೂ ಕೋಪಿಸು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮಾಣೆ–ಸ್ವಾಮಿಗಳ ಮೇಲಣ ಪ್ರತಿಜ್ಞೆಯು, ನಿಮ್ಮ ಪ್ರಮಥರಾಣೆ–ನಿಮ್ಮೆಳುನೂರೆಪ್ಪತ್ತಮರಗಣಂಗಳ ಮೇಲಣ ಪ್ರತಿಜ್ಞೆಯು.

....

೧–೧ ನಾನು (ಕ, ಗ)

IV– –

ತನುಮನದಲ್ಲಿ ಸಾಹಿತ್ಯವಿಲ್ಲದವರನೊಲ್ಲೆ; ನಿಮ್ಮಾಣೆ ನಿಮ್ಮ ಪ್ರಮಥರಾಣೆಯೆಂಬುದೀ ವಚನದರ್ಥ.

೭೧೪

ಆದಿಯಲಾಗಲಿ ವೇದದಲಾಗಲಿ ಶಾಸ್ತ್ರದಲಾಗಲಿ ಸಮಯದಲಾಗಲಿ ಎನ್ನವರೆನ್ನೆನು[1] ಎನ್ನವರೆಂದಡೆ ಸಂಗಾ ನಿಮ್ಮಲ್ಲಿಗೆ ದೂರ! ಎನ್ನವರಾದಡೆ ಜನ್ಮಕ್ಕೆ ನಡವರೆ? ಎನ್ನವರಲ್ಲ, ಕೂಡಲಸಂ[2]ಗಮದೇವಾ[2] ನಿಮ್ಮಾಣೆ!

I –

ಆದಿಯಲಾಗಲಿ–ಭವಿಗಳಿಗೂ ಭಕ್ತರುಗಳಿಗೂ ತನುವಿನ ಕೊಳುಕೊಡು ಮನದ ಕೊಳುಕೊಡು ಧನದ ಕೊಳುಕೊಡುಯೆಂದು ಅರ್ಚನಾರ್ಪಣ ಕ್ರಿಯೆಗಳುಂಟೆಂದು ಅಷ್ಟಾದಶಪುರಾಣಂಗಳಲ್ಲಿ ಹೇಳಿದರೂ ಹೇಳಲಿ, ವೇದದಲಾಗಲಿ–ನಾಲ್ಕು ವೇದಂಗಳಲ್ಲಿ ಹೇಳಿದರೂ ಹೇಳಲಿ, ಶಾಸ್ತ್ರದಲಾಗಲಿ–ಹದಿನಾರು ಧರ್ಮಶಾಸ್ತ್ರಂಗಳಲ್ಲಿ ಹೇಳಿದರೂ ಹೇಳಲಿ, ಸಮಯದಲಾಗಲಿ–ಷಟ್ಸಮಯಂಗಳಲ್ಲಿ ಹೇಳಿದರೂ ಹೇಳಲಿ, ಎನ್ನವರೆನ್ನೆನು–ಎನ್ನಂಶೀಭೂತರಾದ ಚಿಕ್ಕಪ್ಪ ದೊಡ್ಡಪ್ಪ ಅಣ್ಣತಮ್ಮರು ಮೊದಲಾದವರುಗಳೆಂದು ಹೇಳೆನು.

ಎನ್ನವರೆಂದಡೆ–ಎನ್ನಂಶೀಭೂತದವರೆಂದು ಹೇಳಿದರೆ, ಸಂಗಾ–ಎಲೆ ಪರಶಿವಲಿಂಗವೆ, ನಿಮಲ್ಲಿಗೆ–ನಿಮ್ಮ ಪಾದಕಮಲಂಗಳಲ್ಲಿ ಕೂಡುವುದಕ್ಕೆ, ದೂರ–ಎಟ್ಟುಗೊಳ್ಳೆನು, ಎನ್ನವರಾದಡೆ–

ಎನ್ನಂಶೀಭೂತದವರಾದರೆ, ಜನ್ಮಕ್ಕೆ ನಡೆವರೆ?–ಹೋತ ಕೊಂದು ಹೋಮವ ಮಾಡುವುದಕ್ಕೆ ಹೋಗುವರೆ? ೧ಹೋಗರು೧, ಎನ್ನವರಲ್ಲ–ಎನ್ನಂಶೀಭೂತದವರಲ್ಲವು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮಾಣೆ!–ನಿಮ್ಮ ಸ್ವಾಮಿಗಳ ಮೇಲಣ ಪ್ರತಿಜ್ಞೆಯು.

....

೧–೧ x (ಗ).

III –

ಆದಿಯಲಾಗಲಿ–ಪೂರ್ವಾಶ್ರಮದಲಾದರೂ ಆಗಲಿ.

IV -

1–1 + ಎನ್ನವರೆನ್ನೆನು (ತ), 2–2 ಗಾ (ತ).

....

ವೇದಶಾಸ್ತ್ರಪುರಾಣಂಗಳ ಬಲ್ಲ ಋಷಿಯರುಗಳು ಅನಂತಕಾಲವಿದ್ದರೇನು? ಮರಣ ತಪ್ಪದು, ಮರಣವ ಗೆದ್ದು ಮಹವನೊಡಗೂಡಿದವರಲ್ಲದೆ ನಮ್ಮವರಲ್ಲಾಯೆಂಬುದೀ ವಚನದರ್ಥ.

೭೧೫

ಅಣ್ಣ ತಮ್ಮ ಹೆತ್ತಪ್ಪ ಗೋತ್ರವಾದಡೇನು? ಲಿಂಗಸಾಹಿತ್ಯವಿಲ್ಲದವರ ಎನ್ನವರೆನ್ನೆನಯ್ಯಾ. ನಂಟುಭಕ್ತಿ ನಾಯಕನರಕ, ಕೂಡಲಸಂಗಮದೇವಾ!

I –

ಅಣ್ಣ–ಅಗ್ರಜನು, ತಮ್ಮ–ಅನುಜನು, ಎತ್ತಪ್ಪ–ಹಡೆದ ತಂದೆಯು, ಗೋತ್ರವಾದಡೇನು–ಒಂದೇ ಕುಲದವರಾದರೇನು, ಲಿಂಗಸಾಹಿತ್ಯವಿಲ್ಲದವರ–ಅಂಗದ ಮೇಲೆ ಲಿಂಗಸಂಬಂಧವ ಮಾಡಿಕೊಂಡು ಲಿಂಗಪೂಜೆಯ ಮಾಡದವರ, ಎನ್ನವರೆನ್ನೆನಯ್ಯಾ–ಎನ್ನ ಬಾಂಧವರುಗಳೆಂದು ಹೇಳೆನಯ್ಯಾ, ನಂಟು ಭಕ್ತಿ ನಾಯಕ ನರಕ: [ನಂಟುಭಕ್ತಿ–] ನಂಟುತನಕ್ಕೋಸ್ಕರ ಇವರು ಅವರ ಮನೆಗೆ ಹೋಗಿ ಉಂಡು ಉಡುಗೊರೆ ಉತ್ಸಾಹವನ್ನು ಹೊದ್ದು ಅವರು ಇವರ ಮನೆಗೆ ಬಂದು ಉಂಡುಟ್ಟು ಉಡುಗೊರೆ ಉತ್ಸಾಹವನ್ನು ಹೊದ್ದು ಪರಿಣಾಮಿಸಿದರೆ, ನಾಯಕ ನರಕ–ದೊರೆ ನಿರಯವೇ ಸಂಭವಿಸುತ್ತಿಹುದು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

೭೧೬

ಒಡೆಯರಿಲ್ಲದ ಮನೆಯ[1] ತುಡುಗುಣಿನಾಯಿ ಹೊಗುವಂತೆ, ನೀ[2]ವಿ[2]ಲ್ಲದವರ ಮನೆಯ ಹೊಗೆನು ಸಂಗಯ್ಯಾ, ಶ್ವಪಚೋಪಿಗಳಾಗಲಿ, ಕೂಡಲಸಂಗಯ್ಯಾ ನೀನಿದ್ದವನೇ ಕುಲಜನು.

I –

ಒಡೆಯರಿಲ್ಲದ–ಯಜಮಾನರಿಲ್ಲದ, ಮನೆಯ–ಮಂದಿರವನ್ನು, ತುಡುಗುಣಿನಾಯಿ ಹೋಗುವಂತೆ–ಕಳ್ಳನಾಯಿ ಹೊಕ್ಕು ಗಡಿಗೆ ಮಡಿಕೆಯನ್ನು ಮುಟ್ಟಿ ಅನ್ನ ಉದಕವ ಭುಂಜಿಸಿ

ಉಚ್ಛಿಷ್ಟವಮಾಡಿ ಹೋದೀತಲ್ಲಾಯೆಂದು ಕಾಯ್ದುಕೊಂಡಿರುವ ಹಾಂಗೆ, ನೀವಿಲ್ಲದವರ-ಅಂಗದ ಮೇಲೆ ಲಿಂಗ ಸಂಬಂಧವ ಮಾಡಿಕೊಂಡು ಲಿಂಗಪೂಜೆಯ ಮಾಡದವರ, ಮನೆಯ-ಮಂದಿರವನ್ನು, ಹೊಗೆನು-ಅರ್ಚನಾರ್ಪಣಕ್ರೀಗಳನ್ನು ಮಾಡಲೊಲ್ಲೆನು, ಸಂಗಯ್ಯಾ-ಎಲೆ ಪರಶಿವಲಿಂಗವೆ.

ಶ್ವಪಚೋಪಿಗಳಾಗಲಿ-ಹಿರಿಯಕುಲದವರಾಯಿತ್ತಾದಡೂ ಆಗಲಿ, ಕೂಡಲಸಂಗಯ್ಯಾ-ಎಲೆ ಪರಶಿವಲಿಂಗವೆ, ನೀನಿದ್ದವನೇ-ನೀಸಾರಂಗದಲ್ಲಿ ಇಷ್ಟಲಿಂಗವಾಗಿ ನೆಲೆಗೊಂಡು ಅಷ್ಟವಿಧಾರ್ಚನೆ, ಷೋಡಶೋಪಚಾರ ಕ್ರಿಯೆಗಳ ಕೈಕೊಂಡೊಪ್ಪುತ್ತಿದ್ದಿಯೋ ಅವನೇ, ಕುಲಜನು-ಆತನೇ ಕುಲಶ್ರೇಷ್ಠನು.

IV –

1-1 + ನು (ತ). 2-2 ನಿ (ತ)

....

ಲಿಂಗವಿಲ್ಲದವನ ಮನೆಯ ಹೊಗುವುದು ನಾಯಗುಣ, ಲಿಂಗವುಳ್ಳವನ ಮನೆಯ ಹೊಗುವುದು ಲಿಂಗದಗುಣವೆಂಬುದೀ ವಚನದರ್ಥ.

೭೧೭

ಹೊನ್ನು ಹೆಣ್ಣು ಮಣ್ಣೆಂಬ ಕರ್ಮದ ಬಲೆಯಲ್ಲಿ ವೃಥಾ[1] ಬಱುದೊಱೆ[1] ಹೋಹ ಕೆಡುಕ ಹಾರುವ ನಾನಲ್ಲ! ಹಾರುವೆನಯ್ಯಾ [2]ನಿಮ್ಮ[2] ಭಕ್ತರ ಬರವ ಗುಡಿಗಟ್ಟಿ, ಹಾರುವೆನಯ್ಯಾ [2]ನಿಮ್ಮ[2] ಶರಣರ ಬರವ ಗುಡಿಗಟ್ಟಿ, ಕೂಡಲಸಂಗಮದೇವನು ವಿಪ್ರಕರ್ಮವ ಬಿಡಿಸಿ, ಅಶುದ್ದನಶುದ್ಧ ನಮಾಡಿದನಾಗಿ!

I– –

ಹೊನ್ನು ಹೆಣ್ಣು ಮಣ್ಣೆಂಬ: ಹೊನ್ನು-ಕೆಂಪಿನ ಮಲವು, ಹೆಣ್ಣು-ಬಿಳುಪಿನ ಮಲವು, ಮಣ್ಣೆಂಬ-ಕಪ್ಪಿನ ಮಲವುಯೆಂಬ ಹೊನ್ನು ಹೆಣ್ಣು ಮಣ್ಣೆಂದು ಹೇಳುವ, ಕರ್ಮದ ಬಲೆಯಲ್ಲಿ-ಪಾಪದ ಪಾಶದಲ್ಲಿ, ಸಿಲುಕಿ-ದಶಗತವಾಗಿ, ವೃಥಾ-ಸುಮ್ಮನೆ, ಬಱುದೊಱೆ ಹೋಹ-ವ್ಯರ್ಥಸ್ಯವಾಗಿ ಸತ್ತುಹೋಗುವ, ಕೆಡುಕ ಹಾರುವ ನಾನಲ್ಲ!-ಬಹು ಕ್ಷೀಣವಾದ ವಿಪ್ರಜಾತಿಯವ ನಾನಲ್ಲವು.

ಹಾರುವೆನಯ್ಯಾ ನಿಮ್ಮ ಭಕ್ತರ ಬರುವ ಗುಡಿಗಟ್ಟಿ: ನಿಮ್ಮ ಭಕ್ತರ-"ಲಿಂಗಭಕ್ತಾಶ್ಚ ಜಂಗಮಃ"ಯೆಂದು ಲಿಂಗಭಕ್ತರಾದ ಜ್ಞಾನಜಂಗಮ ಮೂರ್ತಿಗಳ, ಬರವ-ಭಿಕ್ಷಕ್ಕೆಂದು ಬಿಜಯಂಗೈದು ಬರುವಂಥ ಚಮತ್ಕಾರಕ್ಕೆ, ಗುಡಿಗಟ್ಟಿ-ಅಂತರಂಗದ ಹರುಷಭಾವವನ್ನೇ ಗುಡಿ ತೋರಣವಾಗಿ ಅಳವಡಿಸಿಕೊಂಡು, ಆವಾಗ ಜಂಗಮಮೂರ್ತಿಗಳು ಭಿಕ್ಷಕ್ಕೆಂದು ಬಿಜಯಂಗೈದು ಬಂದಾರೋ ಅವಾಗ ಅವರ ಪಾದಾರ್ಚನೆಯ ಮಾಡೇನೋ ಆವಾಗವರು ಪಾದೋದಕ ಪ್ರಸಾದವ ಕರುಣಿಸಿ ಕೊಟ್ಟಾರೋ ಎಂದು, ಹಾರುವೆನಯ್ಯಾ-"ಹಾರು ಇಚ್ಛಾ"ಯೆಂದು ಧಾತುವಿನಿಂದ ಇಚ್ಛೈಸಿಕೊಂಡಿರ್ಪೆನು.

ಹಾರುವೆನಯ್ಯಾ ನಿಮ್ಮ ಶರಣರ ಬರವ ಗುಡಿಗಟ್ಟಿ: ನಿಮ್ಮ ಶರಣರ ಬರವ-ಸಮಯಾಚಾರದ ಜಂಗಮವು ಸಹವಾಗಿ ಕಾಯಕದ ಶೀಲವಂತರ, ಕಾಯಕಕ್ಕೆಂದು ಬಿಜಯಂಗೈದು ಬರುವಂಥ ಚಮತ್ಕಾರಕ್ಕೆ, ಗುಡಿಗಟ್ಟಿ-ಅಂತರಂಗದ ಹರುಷಭಾವವನ್ನೇ ಗುಡಿ ತೋರಣವಾಗಿ ಅಳವಡಿಸಿಕೊಂಡು,

ಆವಾಗ ಕಾಯಕದ ಶೀಲವಂತರು ಕಾಯಕಕ್ಕೆಂದು ಬಿಜಯಂಗೆಯ್ದು ಬಂದಾರೋ ಆವಾಗ ಕಾಯಕವನ್ನು ಕೊಟ್ಟು ಭಕ್ತಿಯ ಮಾಡೇನೋಯೆಂದು, ಹಾರುವೆನಯ್ಯಾ-"ಹಾರು ಇಚ್ಛಾ"ಯೆಂಬ ಧಾತುವಿನಿಂದ ಇಚ್ಛೈಸಿಕೊಂಡಿರ್ಪೆನು.

ಕೂಡಲಸಂಗಮದೇವನು-ಪರಶಿವಲಿಂಗವು, ವಿಪ್ರಕರ್ಮವ-ಷಟ್ಕರ್ಮ ಷೋಡಶ ಕರ್ಮಂಗಳಿಂದ ಕೂಡಲ್ಪಟ್ಟ ಬ್ರಾಹ್ಮಣರ ಕೃತ್ಯವನ್ನು, ಬಿಡಿಸಿ-ತೊಲಗಿಸಿ, ಅಶುದ್ಧನ-ಅಪವಿತ್ರವನುಳ್ಳ ಅಜ್ಞಾನಜೀವನ, ಶುದ್ಧ ಮಾಡಿದನಾಗಿ-ಗುರುಕಾರುಣ್ಯವ ಹಡೆದು ಲಿಂಗಾಂಗಸಂಬಂಧವನುಳ್ಳ ಶಿವಭಕ್ತರ ಮಾಡಿದನಾಗಿ.

IV -

1-1 + ಯ (ತ), 2-2 x (ತ)

....

ಜಾತಿಸೂತಕ, ಹೊನ್ನು ಹೆಣ್ಣು ಮಣ್ಣೆಂಬ ಕರ್ಮವ ಬಿಡಿಸಿ ಗುರುಲಿಂಗ ಜಂಗಮ ಭಕ್ತರ ಬರವ ಗುಡಿಗಟ್ಟಿ ಹಾರುವೆನೆಂಬುದೀ ವಚನದರ್ಥ.

೭೧೮

ವೇದಕ್ಕೆ ಒಱೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ, ತರ್ಕದ ಬೆನ್ನಬಾರನೆತ್ತುವೆ, ಆಗಮದ ಮೂಗಕೊಯ್ವೆ, ನೋಡಯ್ಯಾ, ಮಹಾದಾನಿ ಕೂಡಲಸಂಗಮದೇವ, ಮಾದಾರ ಚೆನ್ನಯ್ಯನ ಮನೆಯ ಲ್ಲುಂಡ ಕಾರಣ.[1]

I- -

ವೇದಕ್ಕೆ ಒಱೆಯ ಕಟ್ಟುವೆ : ವೇದಕ್ಕೆ-ನಾಲ್ಕು ವೇದಂಗಳಿಗೆ, ಒಱೆಯ ಕಟ್ಟುವೆ-ಗುರುಕಾರುಣ್ಯವ ಹಡೆದು ಲಿಂಗಾಮಗಸಂಬಂಧಿಗಳಾಗಿ ಆಚರಿಸುವಂಥ ಶಿವಶರಣರುಗಳಲ್ಲಿ ಜಾತಿಯನುಂಟುಮಾಡಿ ಹೇಳಿದ ಹಾಂಗೆ ಬಾಯಿ ಬಂಧಿಸುವೆನು. ಶಾಸ್ತ್ರಕ್ಕೆ-ಹದಿನಾರು ಧರ್ಮಶಾಸ್ತ್ರಂಗಳಿಗೆ, ನಿಗಳವ ನಿಕ್ಕುವೆ-ಗುರುಕಾರುಣ್ಯವ ಹಡೆದು ಲಿಂಗಾಂಗಸಂಬಂಧಿಗಳಾಗಿ ಆಚರಿಸುವಂಥ ಶಿವಶರಣರುಗಳಲ್ಲಿ ಪಾಪವ ಮಾಡಿದವರು ಪುಣ್ಯವ ಮಾಡಬೇಕು. ಪುಣ್ಯವ ಮಾಡಿದವ^ರು^ ಪಾಪವ ಮಾಡಬೇಕು, ಧರ್ಮವ ಮಾಡಿದವ^ರು^ ಕರ್ಮವ ಮಾಡಬೇಕು. ಕರ್ಮವ ಮಾಡಿದವ^ರು^ ಧರ್ಮವ ಮಾಡಬೇಕು. ಸುಖವ ಮಾಡಿದವ^ರು^ ದುಃಖವ ಮಾಡಬೇಕು. ದುಃಖವ ಮಾಡಿದವ^ರು^ ಸುಖವ ಮಾಡಬೇಕೆಂದು ಹೇಂಗೆ ಸುಖದುಃಖ ಧರ್ಮಕರ್ಮ ಪುಣ್ಯಪಾಪವೆಂಬ ಬಂಧಮೋಕ್ಷದ್ವಂದ್ವ ಕರ್ಮಂಗಳನುಂಟುಮಾಡಿ ಹೇಳದ ಹಾಂಗೆ, ನಿಗಳವನಿಕ್ಕುವೆ-ಸಂಕೋಲೆಯನಿಕ್ಕುವೆನು. ತರ್ಕದ-ವೇದ ವೇದಾಂತ ಭಾಟ್ಟ ಪ್ರಭಾಕರ ನ್ಯಾಯ ಮೀಮಾಂಸವೆಂಬ ಷಟ್ತರ್ಕಂಗಳ, ಬೆನ್ನಬಾರನೆತ್ತುವೆ-ಗುರುಕಾರಣ್ಯವ ಹಡೆದು ಲಿಂಗಾಂಗಸಂಬಂಧಿಗಳಾಗಿ ಆಚರಿಸುವಂಥ ಶಿವಶರಣರಂಗಳಲ್ಲಿ ಭಿನ್ನಜ್ಞಾನ ಭಿನ್ನಕ್ರೀಗಳನುಂಟುಮಾಡಿ ಹೇಳದ ಹಾಂಗೆ, ಮೂಗು ಕೊಯ್ವೆ ನೋಡಯ್ಯಾ-ಶಾಸ್ತ್ರಾಹಂಕಾರವೆಂಬ ಘ್ರಾಣವನು ಕೃಂತಿಸುವೆ ಕಂಡಯ್ಯಾ.]

ಮಹಾ-ಭಕ್ತರುಗಳಿಗೆ ಮಹದಾನಂದಸುಖವನ್ನು, ದಾನಿ-ಕರುಣಿಸಿಕೊಡಲ್ಪಟ್ಟಂಥ, ಕೂಡಲಸಂಗಮದೇವ-ಪರಶಿವಲಿಂಗವು, ಮಾದಾರ ಚೆನ್ನಯ್ಯನ ಮನೆಯಲ್ಲಿ-ಮಾದಾರ ಚೆನ್ನಯ್ಯನೆಂಬ ಶಿವಶರಣನ ಮಂದಿರದಲ್ಲಿ, ಉಂಡಕಾರಣ-ಅಂಬಲಿಯನ್ನು ಸವಿದುಂಡ ನಿಮಿತ್ತ.

....

೧-೧ ರಿಗೆ (ಕ)

IV -

1-1 ಮಗ ನಾನಯ್ಯ (ತ).

....

ಭಕ್ತಿಯೇ ಮುಕ್ತಿ, ಭಕ್ತಿಯೇ ಕುಲ, ಅಂತೆಂಬುದಕ್ಕೆ ಮಾದಾರ ಚೆನ್ನಯ್ಯಗೆ ಶಿವನೊಲಿದು ಒಡನುಂಡುದೇ ದೃಷ್ಟ. ಅದು ಕಾರಣ ಭಕ್ತಿಯೇ ಮುಕ್ತಿಗೆ ಸಾಧನವೆಂದು ಉಳಿದ ವೇದಾಗಮತರ್ಕಶಾಸ್ತ್ರಂಗಳೆಲ್ಲಾ ಸಟೆಯೆಂದು ಜಜೆದು ನಿರಾಕರಿಸಿ ನಡೆದರು ಶರಣರೆಂಬುದೀ ವಚನದ ತಾತ್ಪರ್ಯಾರ್ಥ.

೭೧೯

ಆವ ಕುಲವಾದಡೇನು? ಶಿವಲಿಂಗವಿದ್ದವನೇ ಕುಲಜನು. ಕುಲವನರಸುವರೆ ಶರಣರಲ್ಲಿ, ಜಾತಿಸಂಕರವಾದ ಬಳಿಕ? [1][ಶಿವ ಧರ್ಮ ಕುಲೇ ಜಾತಃ ಪುನರ್ಜನ್ಮ ನಿವರ್ಜಿತಃ। ಉಮಾ ಮಾತಾ ಪಿತಾ ರುದ್ರ ಐಶ್ವರಂ ಕುಲಮೇವ ಚ॥][1] ಎಂದುದಾಗಿ, ಒಕ್ಕುದ ಕೊಂಬೆನವರಲ್ಲಿ, ಕೂಸಕೊಡುವೆ, ಕೂಡಲಸಂಗಮದೇವಾ, ನಂಬುವೆ ನಿಮ್ಮ ಶರಣರ.[2]

....

1-1 ಶಿವೇಜಾತಕುಲೇಧರ್ಮಂ। ಪೂರ್ವಜನ್ಮ ವಿವರ್ಜಿತಃ। ಉಮ ಮಾತ ಪಿತಾ ರುದ್ರ। ಈಶ್ವರಂ ಕುಲಮೇವ ಚ॥ (ಕ, ಗ)

I -

ಆವ ಕುಲವಾದಡೇನು-ನೂರೊಂದು ಕುಲ ಹದಿನೆಂಟು ಜಾತಿಗಳೊಳಗೆ ಯಾವ ಕುಲದಾತನಾದರೇನು, ಶಿವಲಿಂಗವಿದ್ದವನೇ-ಅಂಗದ ಮೇಲೆ ಪರಮ ಮಂಗಳಸ್ವರೂಪವಾದ ಪರಶಿವಲಿಂಗವನ್ನೇ ಗುರುಕಾರುಣ್ಯಮಂ ಪಡೆದು ಗುರುಮುಖದಿಂದಿಷ್ಟಲಿಂಗವಾಗಿ ಹಡೆದುಕೊಂಡು ಅಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳಿಂದಾರಾಧಿಸುವಾತನೆ, ಕುಲಜನು-ಆತನೇ ಕುಲಶ್ರೇಷ್ಠನು. ಶರಣರಲ್ಲಿ -ಶಿವಶರಣರುಗಳಲ್ಲಿ, ಕುಲವನರಸುವರೆ?-ಇವರಾ ಜಾತಿಯವರು ಈ ಜಾತಿಯವರೆಂದು ಕುಲಸೂತಕವ ಹುಡುಕಬಹುದೆ? ಹುಡುಕಬಾರದು. ಜಾತಿಸಂಕರವಾದ ಬಳಿಕ-ಕುಲವಳಿದು ಶಿವಕುಲವಾದ ಮೇಲೆ.

ಗುರುವಾಕ್ಯಕ್ಕೆ ಸದೃಶಾಗಿ ಹರವಾಕ್ಯವ ನಿರೂಪಿಸುತ್ತಿಹರು, ಶಿವೆ-ಶ್ರೀಗುರುನಾಥನ ಕರಗರ್ಭದಲ್ಲಿ ಶಿವಲಿಂಗಪ್ರಾಣಿ ಶಿವಮಂತ್ರ ಶರೀರವುಳ್ಳಂಥ ಶಿವಶರಣರುಗಳ, ಜಾತ-ಅವರ ಜಾತಿಯೇ

ಶಿವಜಾತಿ, ಕುಲೇ-ಅವರ ಕುಲವೇ ಶಿವಕುಲವಾಗಿರ್ಪುದು, ಧರ್ಮ-ಅವರ ಧರ್ಮವೇ ಶಿವ ಸದ್ಧರ್ಮವಾಗಿರ್ಪುದು, ಪೂರ್ವಜನ್ಮ ವಿವರ್ಜಿತಃ-ಮುನ್ನಿನ ಜಾತಿ ವರ್ಣಾಶ್ರಮ ಕುಲಗೋತ್ರ ನಾಮಾಚಾರಂಗಳು ನಷ್ಟವಾಗಿಪ್ಪವು. ಉಮಾಪಾರ್ವತದೇವಿಯರೇ, ಮಾತಾ-ಜನನಿಯಾಗಿಪ್ಪಳು, ರುದ್ರ-ರುದ್ರಮೂರ್ತಿಯೆ, ಪಿತಾ-ಜನಕನಾಗಿಪ್ಪನು, ಐಶ್ವರಂ ಕುಲಮೇವ ಚಃ-ಅವರ ಕುಲವೆಲ್ಲ ಶಿವಕುಲವಾಗಿರ್ಪುದೆಂದು, ವಚಃ-ವೇದವಾಕ್ಯದಲ್ಲಿ ಹೇಳುತ್ತಿಹುದು. ಎಂದುದಾಗಿ-ಹೀಂಗೆಂದು ಈಶ್ವರನ ವಾಕ್ಯದಲ್ಲಿ ಹೇಳುತ್ತಿಹುದಾದ ಕಾರಣ, ಅವರಲ್ಲಿ-ಅಂತಪ್ಪ ಶಿವಶರಣರಲ್ಲಿ, ಒಕ್ಕುದಕೊಂಬೆನು-ಅವರೊಕ್ಕಮಿಕ್ಕ ಪ್ರಸಾದವನನುಭವಿಸುವೆನು, ಕೂಸ ಕೊಡುವೆ-ಅವರ ಗಂಡುಕೂಸಿಂಗೆ ನಮ್ಮ ಹೆಣ್ಣುಕೂಸು ಕೊಟ್ಟು ವಿವಾಹವನು ಮಾಡುವೆನು, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ, ನಿಮ್ಮ ಶರಣರ-ಶಿವನ ಚಿತ್ಪ್ರಭಾಂಗಸ್ವರೂಪರಾದ ಶಿವಶರಣರುಗಳ, ನಂಬುವೆ-ಇವರೇ ಸಾಕ್ಷಾತ್ಶಿವಸ್ವರೂಪರೆಂದು ವಿಶ್ವಾಸಿಸುವೆನು.

IV -

1-1 ಶಿವೇಜಾತ ಕುಲೇಧರ್ಮ। ಪೂರ್ವಜಲ್ಮ ವಿವರ್ಜಿತಃ॥ ಉಮಾ ಮಾತಾಪಿತಾ ರುದ್ರಾ। ಈಶ್ವರಃ ಕುಲಮೇವ ಚ (ತ).
2+ ನು (ತ)

....

ಸಮಸ್ತ ಭೂತಂಗಳಿಗೆ ಲಿಂಗವೇ ಮಾತೆ, ಆದಕಾರಣ ಇಂತಪ್ಪ ಲಿಂಗವನಱಿದಾತನೇ ಕುಲಜ, ಲಿಂಗವ ಮಱಿದಾತನೇ ಕೀಳುಜಾತಿ. ಇಂತು ಲಿಂಗವನಱಿದಾತನ ಒಕ್ಕುದನುಂಡು ಕೂಸಕೊಡುವನೆಂಬುದೀ ವಚನದರ್ಥ.

೭೨೦

ಕಳ್ಳ ಬಂದಿಕಾಱ ಹಾವಡಿಗ ಹಾದರಿಗ ಭಂಟ ಓಲೆಕಾಱನೆಂದೆನಾದಡೆ, ನೀ ಮುಂತಾಗಿ ಬಂದ ಭಕ್ತರ ನೀವೆನ್ನದಿದ್ದಡೆ ಅದೆ ದ್ರೋಹ, ನಡೆನುಡಿಗೊಮ್ಮೆ ಹುಸಿವುಂಟಾದಡೆ, ಕೂಡಲಸಂಗನ ತೋಱಿದ ಚೆನ್ನಬಸವಣ್ಣನಾಣೆ!

I -

ಕಳ್ಳ-ಚಿನ್ನ ರನ್ನ ಬೆಳ್ಳಿ ವಸ್ತ್ರಂಗಳನು ತಸ್ಕರವೃತ್ತಿಯಿಂದ ಅಪಹರಿಸಲ್ಪಟ್ಟಾತನು, ಬಂದಿಕಾಱ-ಚಿನ್ನದ ಚಿತ್ತ ಬೆಳ್ಳಿಯ ಬೆತ್ತವನ್ನು ಪಿಡಿದುಕೊಂಡು ಬಾಜು ಬಿಡಿಸುವಾತನು, ಹಾವಡಿಗ-ಹಾವಾಡಿಸುವಂಥ ಗಾರುಡಿಗನು, ಹಾದರಿಗ-ಪಾಣ್ಬಪುರುಷನು, ಭಂಟ-ಅಟ್ಟೂಳಿಗ ಹರದೂಳಿಗವನ್ನು ಮಾಡಿ ಕೊಂಡಿರುವಂಥ ಪಟುಭಟನು, ಓಲೆಕಾಱ-ಕತ್ತಿ ಕಂದಲಿಯನ್ನು ಪಿಡಿದುಕೊಂಡು ಓಲೈಸುವಂಥ ಚಾಕರಿಮಾಡುವನು, ಅಂದನಾದಡೆ-ಹೀಂಗೆಂದು ಗುಣಸಂಪಾದನೆಯ ಮಾಡಿದೆನಾದರೆ, ನೀ ಮುಂತಾಗಿ ಬಂದ-ನೀನು ಅಂಗದಲ್ಲಿ ಇಷ್ಟಲಿಂಗ ಸಹವಾಗಿ ಎಯ್ದು ಬಂದ ಭಕ್ತ-ಶಿವಭಕ್ತರ ನೀವೆನ್ನದಿದ್ದಡೆ-ಸಾಕ್ಷಾತ್ಶಿವಸ್ವರೂಪವೆಂದು ಭಾವಿಸಬೇಕು. ಭಾವಿಸದಿದ್ದರೆ, ಅದೇ ದ್ರೋಹ-ಅದೇ ಅಪರಾಧವು.

ನಡೆ-ನಡೆಯೆಂದರೆ ಕ್ರೀ, ನುಡಿಗೆ-ನುಡಿಯೆಂದರೆ ಜ್ಞಾನ, ಈ ಜ್ಞಾನಕ್ರಿಯಕ್ಕೆ, ಒಮ್ಮೆ-ಒಂದು ವೇಳೆ, ಹುಸಿವುಂಟಾದಡೆ-ಅನೃತವೇ ಎನ್ನಲುಂಟಾಗಿದ್ದರೆ, ಕೂಡಲಸಂಗನ ತೋಱಿದ-

ಅಂತರಂಗದಲ್ಲಿ ಪ್ರಾಣಲಿಂಗ ಸಂಬಂಧವನ್ನು ಅರುಹಿಕೊಟ್ಟ, ಚೆನ್ನಬಸವಣ್ಣನಾಣೆ-ಚಿಕ್ಕದಣ್ಣಾಯಕರ ಮೇಲಣ ಪ್ರತಿಜ್ಞೆಯು.

೭೨೧

ಎಡದ ಕೈಯಲಿ ಕತ್ತಿ, ಬಲದ ಕೈಯಲಿ ಮಾಂಸ, ಬಾಯಲ್ಲಿ ಸುರೆಯ ಗಡಿಗೆ, ಕೊರಳಲ್ಲಿ [1]ಲಿಂಗವಿರಲು[1] ಅವರ ಲಿಂಗವೆಂಬೆ, ಸಂಗನೆಂಬೆ, ಕೂಡಲಸಂಗಮದೇವಾ, ಅವರ ಮುಖಲಿಂಗಿಗಳೆಂಬೆ[2]ನು[2]!

I -

ಎಡದ ಕೈಯಲಿ-ವಾಮಹಸ್ತದಲ್ಲಿ, ಕತ್ತಿ-ಕಡುಗತ್ತಿಯನ್ನು ಪಿಡಿದುಕೊಂಡು, ಬಲದ ಕೈಯಲ್ಲಿ ಮಾಂಸ-ದಕ್ಷಿಣ ಹಸ್ತದಲ್ಲಿ ಮಾಂಸದ [೧]ಗಡಿಗೆ[೧]ಯನ್ನು ಪಿಡಿದುಕೊಂಡು, ಬಾಯಲ್ಲಿ-ಕವಳಿಕದಲ್ಲಿ, ಸುರೆಯ ಗಡಿಗೆ-ಹೆಂಡದ ಮಡಿಕೆಯನ್ನು ಕಚ್ಚಿಕೊಂಡು, ಕೊರಳಲ್ಲಿ-ಕಂಠದಲ್ಲಿ ಲಿಂಗವಿರಲು-ಇಷ್ಟಲಿಂಗವನ್ನು ಧಾರಣವ ಮಾಡಿಕೊಂಡಿರಲು, ಅವರ ಲಿಂಗವೆಂಬೆ: ಅವರ-ಅಂತಪ್ಪವರುಗಳ, ಲಿಂಗವೆಂಬೆ-ಪರಶಿವಲಿಂಗವೆಂದು ಭಾವಿಸುವೆನು, ಸಂಗನೆಂಬೆ-ಶಿವಸ್ವರೂಪವೆಂದು ಭಾವಿಸುವೆನು, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ, ಅವರ-ಅಂತಪ್ಪ ಶಿವಶರಣರ, ಮುಖಲಿಂಗಿಗಳೆಂಬೆನು-ಮುಖ್ಯವಾದ[೨]ಶಿವ[೨]ಸ್ವರೂಪವೆಂದು ಭಾವಿಸುವೆನು.

....

೧-೧ ಗುದಿ (ಗ), ೨-೨ ಗುರು (ಕ)

III- -

ಅವರ ಮುಖಲಿಂಗಿಗಳೆಂಬೆನು-ಆ ಶರಣರುಗಳನು ಸರ್ವೇಂದ್ರಿಯಂಗಳಲ್ಲಿಯೂ ಲಿಂಗಸಂಬಂಧವುಳ್ಳವರೆಂಬೆನು.

IV -

1-1 ದೇವರಿರಲು (ತ), 2-2+ ನು (ತ)

....

ಅಂಗದ ಮೇಲೆ ಲಿಂಗವಿರ್ಪ ಶರಣನ ಚಾರಿತ್ರವೆಂತಿರ್ದಡೆಯೂ ಆತನ ಲಿಂಗವೆಂದೆ ಕಾಣಬೇಕೆಂಬುದೀ ವಚನದ ತಾತ್ಪರ್ಯಾರ್ಥ.

೭೨೨

ಗುಮ್ಮ[1]ಟಿ[1]ಯಂತಪ್ಪ ತಾಯಿ ನೋಡೆನಗೆ, [2]ಕಲಹಕ್ಯಾತ[2]ನಂತಪ್ಪ ತಂದೆ ನೋಡೆನಗೆ, ಮೋಟನಂತಪ್ಪ ಗಂಡ ನೋಡೆನಗೆ! ಮರಗಾಲ[3]ಲಟ್ಟ[3]ಟ್ಟಿ ಸದೆದು ನೋಡಯ್ಯಾ. ಇಂದೆನ್ನ ವ[4]ಗ[4]ತನಹೋದಡೆ ಹೋಗಲಿ, ಮರಗಾಲ ಬಿ[5]ಟ್ಟೆನಾದ[5]ಡೆ ಕೂಡಲಸಂ[6]ಗಮದೇವಾ[6] ನಿಮ್ಮಾಣೆ!

I- -

ಗುಮ್ಮಟೆಯಂತಪ್ಪ ತಾಯಿ ನೋಡೆನಗೆ-ಮೊಲೆಮೂಗು ಕೊಯ್ಸಿಕೊಂಡಿರುವಂಥ ಜೋಗಿವೆಣ್ಣೇನಾದರೂ ಅಂಗದ ಮೇಲೆ ಶಿವಲಿಂಗಸಂಬಂಧವಾಗಿದ್ದರೆ ಎನ್ನ ಜನನಿಯೆಂದು ಹೇಳುವೆನು, ಕಲಹಕ್ಯಾತನಂತಪ್ಪ ತಂದೆ ನೋಡೆನಗೆ-ಎದೆಗಲ್ಲನೇನಾದರೂ ಅಂಗದಲ್ಲಿ ಲಿಂಗಸಂಬಂಧವಾಗಿದ್ದರೆ ಎನ್ನ ಜನಕನೆಂದು ಭಾವಿಸುವೆನು, ಮೋಟನಂತಪ್ಪ ಗಂಡ ನೋಡೆನಗೆ-ಕೈಕಾಲು ಕೊಯ್ಸಿಕೊಂಡಿದ್ದಂತ ಮೊಂಡನೇನಾದರೂ ಅಂಗದ ಮೇಲೆ ಲಿಂಗಸಂಬಂಧವಾಗಿದ್ದರೆ ಎನ್ನ ರಮಣನೆಂದು ಭಾವಿಸುವೆನು. ಮರಗಾಲ-ದಾರು ಚರಣಂಗಳಿಂದ, ಅಟ್ಟಟ್ಟಿ-ಓಡಿಸಾಡಿಸಿ, ಸದೆದ ನೋಡಯ್ಯಾ-ಒದೆದನು ಕಂಡಯ್ಯಾ.

ಇಂದೆನ್ನ ಒಗತನ ಹೋದಡೆ ಹೋಗಲಿ-ಇವತ್ತೇ ಎನ್ನ ಪೂಜ್ಯತ್ವವು ನಷ್ಟವಾಗಿ ಹೋದರೂ ಹೋಗಲಿ, ಮರಗಾಲ ಬಿಟ್ಟೆನಾದಡೆ-ಮೋಟಗ್ಯೆ ಮೋಟಗಾಲನು ಚಿಗಿಸಿ ನಿಜಜಂಗಮವ ಮಾಡುವಂಥದನು ಬಿಟ್ಟೆನಾದರೆ, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ, ನಿಮ್ಮಾಣೆ-ಸ್ವಾಮಿಗಳ ಮೇಲಣ ಪ್ರತಿಜ್ಞೆಯು.

II -

1-1 ಡಿ (ಚ, ಜ), 2-2 ಕಲಕೇತ (ಚ, ಜ), 3-3 ಕ (ಚ, ಜ), 4-4 ಕ (ಚ, ಜ), 5-5 ಟ್ಟ (ಚ, ಜ), 6-6 ಗಾ (ಚ, ಜ)

....

ಗುಮ್ಮಡಿಯಂತಪ್ಪ ತಾಯಿ-ನೋಡೆನಗೆ-ಚಿಚ್ಛಕ್ತಿಯಂಥ ಮಾತೆಯು ನಿರೀಕ್ಷಿಸೆನಗೆ, ಕಲಕೇತನಂತಪ್ಪ ತಂದೆ ನೋಡೆನಗೆ-ಸಕಲಕರಣಂಗಳ ಪ್ರಖ್ಯಾತಿವೆತ್ತಂಥ ಮಹಾನುಭಾವ ಗುರುಮೂರ್ತಿಯು ನಿರೀಕ್ಷಿಸೆನಗೆ, ಮೋಟನಂತಪ್ಪ ಗಂಡ ನೋಡೆನಗೆ-ಭಿನ್ನಕ್ರಿಯಾಚರಣೆಯು ನಷ್ಟವಾದಂಥ ಇಷ್ಟಲಿಂಗವೆಂಬ ವಲ್ಲಭನು ನಿರೀಕ್ಷಿಸೆನಗೆ, ಮರಗಾಲ ಕಟ್ಟಿ ಸದೆದು ನೋಡಯ್ಯಾ-ಪರಮಕಾಷ್ಠಾಚರಣೆಯನು ಬಂಧಿಸಿ ಶಿಕ್ಷಾಬೋಧೆಯಿಂದ ದಂಡಿಸಿ ನಿರೀಕ್ಷಿಸಯ್ಯಾ.

ಇಂದೆನ್ನ ಒಕತನ ಹೋದಡೆ ಹೋಗಲಿ-ಈ ದಿವಸದಲ್ಲಿ ಶರಣಸತಿ ಲಿಂಗಪತಿತ್ವಾಚರಣೆಯು ಗತವಾದರಾಗಲಿ, ಮರಗಾಲ ಬಿಟ್ಟಡೆ ಕೂಡಲಸಂಗಾ ನಿಮ್ಮಾಣೆ-ಪರಮಕಾಷ್ಠಾಚರಣೆಯನು ಮಾಣಿದೆನಾದರೆ ಲಿಂಗವೇ ನಿಮ್ಮ ಮೇಲಣ ಪ್ರತಿಜ್ಞೆಯು.

III- -

1-1 ಡಿ (ಟ, ಡ), 5-5 ಟ್ಟ (ಟ, ಡ)

....

ಗುಮ್ಮಡಿಯಂತಪ್ಪ-ಗುಮ್ಮಡಿಯೆಂಬ ಹೆಸರುಳ್ಳ, ಮರಗಾಲ ಬಿಟ್ಟಡೆ-ಮರದಕಾಲ ಕಟ್ಟಿಕೊಂಡು ಬಂದಂಥ ಜಂಗಮವನಾದರೆಯೂ ಬಿಟ್ಟರೇನು.

೭೨೩

ತನುವ ಬಂದು ಅಲೆವರಯ್ಯಾ, ಎನ್ನ ಮನವ ಬಂದು [1]ಒರೆದು[1] ನೋಡುವರಯ್ಯಾ, ಎನ್ನ ಧನವ ಬಂದು ಸೂಱೆಗೊಂಬುವರಯ್ಯಾ ಜಂಗಮವು ಅನವರತ! ಕೂಡಲಸಂಗಮದೇವಾ, ನಿಮ್ಮ ಬಯಕೆಯ ಭಂಡಾರಕ್ಕೆ ನಾನು ಶುದ್ಧನಯ್ಯಾ.

I– –

ಬಂದು–ಜಂಗಮೂರ್ತಿಗಳು ಭಿಕ್ಷಕ್ಕೆಂದು ಬಿಜಯಂಗೆಯ್ದು ಬಂದು, ತನುವ–ಸಿಂಧುಮರಾಳರಾಯನ ತನುಪದಾರ್ಥವನ್ನು ಸಮರ್ಪಿಸಿಕೊಂಡ ಹಾಂಗೆನ್ನ ತನುಪದಾರ್ಥವನ್ನು ಕೊಡು ಕೊಡು ಭಕ್ತಾಯೆಂದು, ಅಲೆವರಯ್ಯಾ–ಒರೆದೊರೆದು ಕೇಳುವರಯ್ಯಾ. ಬಂದು–ಜಂಗಮಮೂರ್ತಿಗಳು ಭಿಕ್ಷಕ್ಕೆಂದು ಬಿಜಯಂಗೈದು ಬಂದು, ಎನ್ನ ಮನವ–ಸೇದಿರಾಜಯ್ಯಗಳ ಮನಪದಾರ್ಥವನ್ನು ಸಮರ್ಪಿಸಿಕೊಂಡ ಹಾಂಗೆನ್ನ ಮನಪದಾರ್ಥವನು ಕೊಡು ಕೊಡು ಭಕ್ತಾಯೆಂದು, ಒರೆದು ನೋಡುವರಯ್ಯಾ–ಒರೆದೊರೆದು ನಿರೀಕ್ಷಣೆಯ ಮಾಡುವರಯ್ಯಾ. ಬಂದು–ಜಂಗಮಮೂರ್ತಿಗಳು ಭಿಕ್ಷಕ್ಕೆಂದು ಬಿಜಯಂಗೈದು ಬಂದು, ಎನ್ನ ಧನವ–ಇಮ್ಮಡಿ ಮೊನೆವಿಡಿರಾಯನ ಧನಪದಾರ್ಥವನ್ನು ಸಮರ್ಪಿಸಿಕೊಂಡ ಹಾಂಗೆನ್ನ ಧನಪದಾರ್ಥವನ್ನು ಕೊಡು ಕೊಡು ಭಕ್ತಾಯೆಂದು, ಸೂಱೆಗೊಂಬುವರಯ್ಯಾ–ಸೂರೆಯೋ ಸೂರೆಯೋ ಎಂದು ಸೂರೆಮಾಡಿಕೊಂಡು ಹೋಗುವರಯ್ಯಾ. ಜಂಗಮವು–ಜಂಗಮಮೂರ್ತಿಗಳು, ಅನವರತ–ಎಲ್ಲಾಗಳೂ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ ಬಯಕೆಯ–ಸಕಲಪದಾರ್ಥವನ್ನು ಸಮರ್ಪಿಸಿಕೊಂಡು ನಿಜಮೋಕ್ಷವನ್ನು ಕರುಣಿಸಿಕೊಡುವಂಥದೇ ನಿಮ್ಮ ಬಯಕೆಯು. ಅಂತಪ್ಪ ಬಯಕೆಯೆಂಬ, ಭಂಡಾರಕ್ಕೆ–ತನುಮನಧನಂಗಳೆಂಬ ಕಡವರಕ್ಕೆ, ನಾನು ಶುದ್ಧನಯ್ಯಾ–ನಾನು ನಿರ್ಮಲಸ್ವರೂಪನಾಗಿಪ್ಪೆನಯ್ಯಾ.

IV –

1–1 x (ತ)

....

ಗುರುಲಿಂಗಜಂಗಮ ಒಂದೇಆದ ಕಾರಣ ತನುಮನಧನಂಗಳು ಲಿಂಗದೊಡವೆಯೆಂಬುದೀ ವಚನದರ್ಥ.

೭೨೪

ಒಡೆಯರೊಡವೆಯ ಕೊಂಡಡೆ ಕಳ್ಳಂಗಳಲಾಯಿತ್ತೆಂಬ ಗಾದೆ ಎನಗಿಲ್ಲವಯ್ಯಾ. ಇಂದೆನ್ನ ವಧುವ, ನಾಳೆನ್ನ ಧನವ, ನಾಡದೆನ್ನ ತನುವ ಬೇಡರೇಕಯ್ಯಾ ಕೂಡಲಸಂಗಮದೇವಾ? ಆನು ಮಾಡಿದುದಲ್ಲದೆ ಬಯಸಿದ ಬಯಕೆ[1]ಗೆ[1] ಸಲುವುದೆ ಅಯ್ಯಾ?

I –

ಒಡೆಯರು ಒಡವೆಯ ಕೊಂಡಡೆ ಕಳ್ಳಂಗೆ ಅಳಲಾಯಿತ್ತೆಂಬ ಗಾದೆ ಎನಗಿಲ್ಲವಯ್ಯಾ: [ಒಡೆಯರು ಒಡವೆಯ ಕೊಂಡಡೆ–] ಪರಕಳ್ಳರೇನಾದರೂ ಬಂದು ವಸ್ತ್ರ ಒಡವೆ ಆಭರಣಂಗಳನು ಕದ್ದುಕೊಂಡು ಹೋಗುತ್ತಿದ್ದಲ್ಲಿ ಕಂಡುಹಿಡಿದು ಬಡಿದು ತೆಗೆದುಕೊಂಡರೆ, ಕಳ್ಳಂಗೆ–ತಸ್ಕರಂಗೆ, ಅಳಲಾಯಿತ್ತೆಂಬ–ದುಃಖವಾಯಿತ್ತೆಂಬ, ಗಾದೆ ಎನಗಿಲ್ಲವಯ್ಯಾ–ಗಾದೆಯ ಪ್ರಸಂಗವು ಎನ್ನಲ್ಲಿ ಉಂಟಾಗಿಲ್ಲವಯ್ಯಾ, ಎಂಬ ದೃಷ್ಟೋಪಮಾನದ ಹಾಂಗೆ,

●ಒಡೆಯರು–ಅರ್ಥಪ್ರಾಣಾಭಿಮಾನಂಗಳಿಗೆ ಕರ್ತೃಸ್ವರೂಪವಾದ ಜಂಗಮಮೂರ್ತಿಗಳು, ಒಡೆವೆಯ–ತಮ್ಮೊಡವೆಯಾದಂಥ ಹೊನ್ನು [*ಮೊದಲಾದವನ್ನು*]ಕೊಂಡಡೆ– ಸಮರ್ಪಿಸಿಕೊಂಡರೆ, ಕಳ್ಳಂಗೆ–ತಸ್ಕರನಾದ ಉಪಾಧಿಕಂಗೆ, ಅಳಲಾಯಿತ್ತೆಂಬ–ವ್ಯಾಕುಲ ಉಂಟಾಯಿತ್ತೆಂಬ, ಗಾದೆ ಎನಗಿಲ್ಲವಯ್ಯಾ–ಸಟೆಯ ಪ್ರಸಂಗವೆನ್ನಲ್ಲುಂಟಾಗಿಲ್ಲವಯ್ಯಾ.

ಇಂದೆನ್ನ ವಧುವ–ಇವತ್ತೆನ್ನ ಸ್ತ್ರೀಯಳನ್ನು, ನಾಳೆನ್ನ ಧನವ–ಮರುದಿವಸೆನ್ನ ದ್ರವ್ಯವನ್ನು, ನಾಡದೆನ್ನ ತನುವ–ಮೂರನೆಯ ದಿವಸಕ್ಕೆನ್ನಂಗವನ್ನು ಬೇಡರೇಕಯ್ಯ–ಕೇಳರೇಕಯ್ಯಾ ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಆನು ಮಾಡಿದುದಲ್ಲದೆ–ನಾನು ಸಮರಸಭಾವವಿಲ್ಲದೆ ಅನುಗೆಯ್ದುದಲ್ಲದೆ, ಬಯಸಿದ–ಇಚ್ಛೈಸಿದ, ಬಯಕೆಗೆ–ನಿಜಮೋಕ್ಷಕ್ಕೆ. ಸಲುವುದೆ–ಸಲುವಳಿಯಾಗುವುದೆ, ಅಯ್ಯಾ–ಎಲೆ ಲಿಂಗವೆ.

IV –

1–1 x (ತ)

....

ತನುಮನಂಗಳೆರಡೂ ಲಿಂಗದ ಸೋಮ್ಮಾಗಿ, ಲಿಂಗಕ್ಕೆ ಕೊಡದೆ ತನಗೆಂಬುದು ಅಜ್ಞಾನ ತನುಮನಧನಸತಿ ಲಿಂಗದ ಸೋಮ್ಮು, ಲಿಂಗಕ್ಕೆ ಕೊಟ್ಟು ನಿತ್ಯರಾದರೆಂಬುದೀ ವಚನದರ್ಥ.

೭೨೫

ಕಲಿ ಕರುಳ ತ[1]ರ್ಕೈಸಿ ಹಜೆಯಬಲ್ಲನಲ್ಲದೆ, ಸಾಯ ಕಾದಿಸುವೊಡೆ ಎಡೆಗೋಲನಿಕ್ಕುವೊಡೆ ದಾತಾರನಧೀನವಲ್ಲ[1][ವೆ?][1] ಕೂಡಲಸಂಗಮದೇವಾ, ನೀ ಮಾಡಿದಂತಿಹುದಯ್ಯಾ: ತನುಮನಧನದಲ್ಲಿ ಆನು ವಂಚನೆಯ ಬಯಸಿದಡೆಂತಹುದಯ್ಯಾ?

I –

1–1 ದೆ (ಕ, ಗ)

....

ಕಲಿ ಕರುಳ ತರ್ಕೈಸಿ ಹಜೆಯಬಲ್ಲನಲ್ಲದೆ : ಕಲಿ–ಒಬ್ಬಾನೊಬ್ಬ ದೊರೆ ಏನಾದರೂ ಇರ್ವರು ಐಗಾರರನು ಜೋಡುಗಟ್ಟಿ ಯುದ್ಧಕ್ಕೆ ಬಿಟ್ಟಿದ್ದಲ್ಲಿ ಆಚೆಕಡೆಯಿಂದೊಬ್ಬ ಐಗಾರನು ಬಂದು ಅಲಗಿನಿಂದ ತಿವಿದಲ್ಲಿ, ಪರಾಕ್ರಮಿಯು, ಕರುಳ ತರ್ಕೈಸಿ ಹಜೆಯಬಲ್ಲನಲ್ಲದೆ–ಅದನ್ನು ಒತ್ತಿಕೊಂಡು ಪ್ರಾಣ ಹೋಗೋ ಪರಿಯಂತರದಲ್ಲಿ ಯುದ್ಧವ ಮಾಡಬಲ್ಲವನಲ್ಲದೆ, ಸಾಯ ಕಾದಿಸುವೊಡೆ–

ಅಂತಪ್ಪ ಪಟುಭಟನಾದರೂ ಪ್ರಾಣ ಹೋಗೋ ಪರಿಯಂತರದಲ್ಲಿ ಯುದ್ಧವ ಮಾಡಿಸುವುದಕ್ಕಾದೀತೆ? ಆಗದು. ಎಡೆಗೋಲನಿಕ್ಕುವೊಡೆ ದಾತಾರನಧೀನವಲ್ಲದೆ–ಈರ್ವರ ಮಧ್ಯದಲ್ಲಿ ನಿಂತುಕೊಂಡು ಎಡೆಗೋಲನು ಹಾಕಿ ಬಿಡಿಸಿಕೊಳಬೇಕಾದರೆ ದೊರೆ ಅಪ್ಪಣೆಯಿಂದಲ್ಲದೆ ಮತ್ತೊಬ್ಬರೊಂದಿಗೆ ಬಿಡಿಸಿಕೊಂಡೇನೆಂದರೆ ಅಶಕ್ಯವಾಗಿರ್ಪುದೆಂಬ ದೃಷ್ಟೋಪಮಾನದ ಹಾಂಗೆ.

● ಕಲಿ–ಭಕ್ತನೆಂಬ ವೀರಮಾಸಾಳನು, ಕರುಳ ತರ್ಕೈಸಿ–ಜಂಗಮಮೂರ್ತಿಗಳ ಗಳಗರ್ಜನೆ ದುಡುಕು ದುಂಡಾಚಾರ ಕೋಳಾಟ ಕೊಂಡಾಟ ಮೊದಲಾದುವನ್ನು ಸೈರಿಸಿಕೊಂಡು ಹಜೆಯಬಲ್ಲನಲ್ಲದೆ–ಸಕಲಪದಾರ್ಥವನ್ನು ಕೊಟ್ಟು ಭಕ್ತಿಯ ಮಾಡಬಲ್ಲನಲ್ಲದೆ, ಸಾಯಕಾದಿಸುವೊಡೆ–ಅಂತಪ್ಪ ನಿರ್ವಂಚಕ ಸದ್ಭಕ್ತ[ನ]ನೇನಾದರೂ ಸಕಲಪದಾರ್ಥವನ್ನು ಸಮರ್ಪಿಸಿಕೊಂಡು ನಿರ್ಧನಿಕನ ಮಾಡುವುದಕ್ಕಾದೀತೆ? ಆಗದು. ಎಡೆಗೋಲನಿಕ್ಕುವೊಡೆ ದಾತಾರನಧೀನವಲ್ಲದೆ–ದೇವಭಕ್ತರ ಮಧ್ಯದಲ್ಲಿ ಅಮ್ಮನವರು ಸಹ ಪ್ರಸನ್ನವಾಗಿ ನಿಜಮೋಕ್ಷವನ್ನು ಕರುಣಿಸಿಕೊಡಬೇಕಾದರೆ ಪರಶಿವಲಿಂಗವಲ್ಲದೆ ಮಿಕ್ಕಿನ ದ್ವೈತಾದ್ವೈತಿಗಳೊಂದಿಗೆ ಅಶಕ್ಯವಾಗಿರ್ಪುದು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನೀ ಮಾಡಿದಂತಿಹುದಯ್ಯ–ನೀನು ಅಂತರಂಗದಲ್ಲಿ ಸಮರಸ ಜ್ಞಾನವನ್ನು ಉಂಟುಮಾಡಿದರೆ ಸಮರಸಜ್ಞಾನವೇ ಉಂಟಾಗುತ್ತಿಹುದಯ್ಯ, ನೀನು ವಂಚನೆ ಉಪಾಧಿ ಕುಹಕ ಪ್ರಪಂಚೆಂಬ ಕಾಪಟ್ಯವೇ ಉಂಟು ಮಾಡಿದರೆ ಕಾಪಟ್ಯವೇ ಉಂಟಾಗುತ್ತಿಹುದಯ್ಯ ಅಯ್ಯಾ–ಎಲೆ ಲಿಂಗವೆ, ತನುಮನಧನದಲ್ಲಿ–ತನುಮನಧನಂಗಳನು ಗುರುಲಿಂಗಜಂಗಮಕ್ಕೆ ಕೊಟ್ಟು ಭಕ್ತಿಯ ಮಾಡುವಲ್ಲಿ, ಆನು ವಂಚನೆಯ ಬಯುಸಿದಡೆಂತಹುದಯ್ಯಾ–ನಾನು ಮಾಡೋ ಬುದ್ಧಿಯನ್ನು ಇಚ್ಛೈಸಿದರೆ ಹೇಂಗೆ ದೊರಕೊಂಬುವುದಯ್ಯ?.

II –

೧ + ನ (ಚ).

....

ಕಲಿ ಕರುಳತರ್ಕೈಸಿ ಹಜೆಯಬಲ್ಲನಲ್ಲದೆ–ಕಾಮಾದಿ ಅರಿಷಡ್ವರ್ಗಂಗಳನು ಜಯಿಸುವಲ್ಲಿ ಪರಾಕ್ರಮಿಯಾದಂಥ ವೀರಮಾಹೇಶ್ವರನು ಕರಣಂಗಳ ಪ್ರಕೃತಿಯನು ತಗ್ಗಲೊತ್ತಿ ಆಚರಿಸಬಲ್ಲನಲ್ಲದೆ, ಸಾಯ ಕಾದಿಸುವೊಡೆ–ಸಂಕಲ್ಪ ವಿಕಲ್ಪ ಉದಾಸೀನ ಆಸೆ ರೋಷ ಹರುಷ ಕುಟಿಲ ಕುಹಕಕ್ಷುದ್ರ ಮಿಥ್ಯೆ ಆತ್ಮತೇಜ ಅಹಂಕಾರ ಆಧಿವ್ಯಾದಿ ಕಂಟಕಾದಿ ರೋಗರುಜೆಗಳನುಂಟುಮಾಡಿಸುವರೆ, ಕಡೆಗೋಲನಿಕ್ಕುವೊಡೆ–ಸಾಕು ಸಾಕು ನಿಲ್ಲುಯೆಂಬ ಅಭಯ ದಂಡವನು ಹಾಕುವರೆ ದಾತಾರನಾಧೀನವಲ್ಲದೆ–ಸಮಸ್ತ ಭೋಗಭಾಗ್ಯ ಐಶ್ವರ್ಯವನು ಕೊಡುವಂಥ ವಸ್ತುವಿನನುಜ್ಞೆಯಲ್ಲದೆ, ಮುಂದಕ್ಕೆ ಕಾಣ ಬಂದರ್ಥ.

....

೧ + ನ (ಚ)

III– –

ಕರುಳ ತರ್ಕೈಸಿ–ಕರುಳು ಹೊಱಹಾದರೆಯೂ ಎದೆಯಲಾವಚಿಕೊಂಡು, ಕಲಿ–ಪರಾಕ್ರಮಿಯು[೨]

೭೨೬

ಬಾಲಾಭ್ಯಾಸವ ಮಾಡಹೋದಡೆ ಎನ್ನ ಸುರಗಿ ಎನ್ನನಟ್ಟಿತ್ತು. ಎಂತಯ್ಯ ಕಲಿಯೊಡನೆ ಶ್ರವವ ಮಾಡುವೆನು? ರಾಯ ರಾಜ ಗುರು ಜಗದ ಬಿನ್ನಾಣಿಯ ತೊಡಕ ಬಿಡಿಸಬಾರದು. ಸರಸದ ಮೇಲೆ ಹಿಡಿಯಹೋದಡೆ ಚದುರಂಗದ ಮೇಲೆ ಮಸಿಯ ತೋಚಿದ ಕೂಡಲಸಂಗಮದೇವ.

I– –

ಬಾಲಾಭ್ಯಾಸವ ಮಾಡಹೋದಡೆ–ಬಾಲತ್ವದಲ್ಲಿ ಸಾಧನೆಯ ಮಾಡುತ್ತೆಯಿದ್ದರೆ, ಎನ್ನ ಸುರಗಿ–ಎನ್ನಾಯುಧವು, ಎನ್ನನಟ್ಟಿತ್ತು–ಎನ್ನ ತಾಗಿತ್ತು, ಎಂತಯ್ಯ–ಹೇಗಯ್ಯಾ, ಕಲಿಯೊಡನೆ–ಪರಾಕ್ರಮಿಯೊಂದಿಗೆ, ಶ್ರವವ ಮಾಡುವೆನು–ಸಾಧನೆಯನ್ನು ಅನುಗೈಯೆನೆಂಬ ದೃಷ್ಟೋಪಮಾನದ ಹಾಂಗೆ.

• ಬಾಲಾಭ್ಯಾಸವ ಮಾಡಹೋದಡೆ–ಬಾಲತ್ವದಲ್ಲಿ ಭಿನ್ನವಿಟ್ಟುಕೊಂಡು ಭಕ್ತಿಯ ಮಾಡುತ್ತ ಎಯಿದ್ದರೆ, ಎನ್ನ ಸುರಗಿ–ಎನ್ನ ಭಿನ್ನಭಕ್ತಿಯೆಂಬಾಯುಧವು, ಎನ್ನನಟ್ಟಿತ್ತು–ಎನ್ನನು ಜನಮರಣಂಗಳಲ್ಲಿ ತಂದು ಸಂಹರಿಸಿತ್ತು. ಎಂತಯ್ಯಾ–ಹೇಂಗಯ್ಯಾ, ಕಲಿಯೊಡನೆ–ನೈಷ್ಠೆಯಿಂದ, ಶ್ರವವ ಮಾಡುವೆನು–ಭಕ್ತಿಸಾಧನೆಯನ್ನು ಅನುಗೆಯ್ವೆನು.

ರಾಯ–ಮೂವತ್ತುಮೂರುಕೋಟಿ ದೇವತಾದಿಗಳಿಗೆ, ರಾಜ–ಒಡೆಯನಾದಂಥ ದೇವೇಂದ್ರನಿಗೆ, ಗುರು–ಆಚಾರ್ಯಸ್ವರೂನಾದಂಥ ಪರಮೇಶ್ವರನು, ಜಗದ ಬಿನ್ನಾಣಿಯ ತೊಡಕ ಬಿಡಿಸಬಾರುದು–ಜಗತ್ಕರ್ತೃವಾದ ಪರಮೇಶ್ವರನುಂಟು ಮಾಡಿದಂಥ ವಂಚನೆ ಉಪಾಧಿದಕುಹಕ ಪ್ರಪಂಚೆಂಬ ಕಾಪಟ್ಯವನ್ನು ಬಿಡಿಸಬಾರದು. ಮಧ್ಯದಲ್ಲೊಬ್ಬರು ತೊಲಗಿಸಿಹೆನೆಂದರೂ ಅಶಕ್ಯವಾಗಿರ್ಪುದು.

ಸರಸರದ ಮೇಲೆ ಹಿಡಿಯ ಹೋದಡೆ–ದೇವ ಭಕ್ತ ಪದಾರ್ಥ ತ್ರಿವಿಧವಾದದ್ದೊಂದೆ ಎಂದರಿದು ಸಮರಸಭಾವದಿಂದ ಗುರುಭಕ್ತಿ ಲಿಂಗಪೂಜೆ ಜಂಗಮದಾಸೋಹ ಪ್ರಸಾದಸೇವನೆಯ ಮಾಡುತ್ತ ಎಯಿದ್ದರೆ. ಚದುರಂಗದ ಮೇಲೆ–ತನುಮನಪ್ರಾಣಾತ್ಮಂಗದಲ್ಲಿ, ಮಸಿಯ ತೋಚಿದ ಚತುರ್ವಿಧಲಿಂಗದಾರಣೆಯನ್ನು ಅರುಹಿಕೊಟ್ಟನು, ಕೂಡಲಸಂಗಮದೇವ–ಪರಶಿವಲಿಂಗವು.

II –

ಬಾಲಾಭ್ಯಾಸವ ಮಾಡ ಹೋದಡೆ ಎನ್ನ ಸುರಗಿ ಎನ್ನನಟ್ಟಿತ್ತು–ಸಾಧಕಭಕ್ತಿಯ ಮಾಡಹೋದರೆ, ಅದಲ್ಲದೆ ಜ್ಞಾನಭಕ್ತಿಯ ಮಾಡಹೋದರೆ ಎನ್ನ ವಾಕ್‌ಶಸ್ತ್ರವು ಎನ್ನ ತಗಲಿತು. ಎಂತಯ್ಯಾ ಕಲಿಯೊಡನೆ ಶ್ರವವ ಮಾಡುವೆನು–ಹೇಂಗಯ್ಯಾ ಪರಾಕ್ರಮಿಯಾದ ಜಂಗಮದ ಕೂಡವೆ ಭಕ್ತಿ ಸಾಧನೆಯನೆಸಗುವೆನು. ರಾಯ ರಾಜ-ದೇವರಾಯ ಬೆಳಗುತ್ತಿದ್ದಂಥ ಮಾಹೇಶ್ವರಮೂರ್ತಿಯು. ಗುರು–ಆಚಾರ್ಯಸ್ವರೂಪನಾದಂಥ, ಜಗದ ಬಿನ್ನಾಣಿಯ ತೊಡಕ

ಬಿಡಿಸಬಾರದು–ಲೋಕಂಗಳಿಗೆ ಕರ್ತೃವಾದ ಪರಮೇಶ್ವರನುಂಟುಮಾಡಿದ ಭಿನ್ನಭಕ್ತಿಯೆಂಬ ಗೋಜ ಮಾಣಿಸಬಾರದು. ಸರಸದ ಮೇಲೆ ಹಿಡಿಯ ಹೋದಡೆ ಚತುರಂಗದ ಮೇಲೆ ಮಸಿಯ ತೋಜಿದ ಕೂಡಲಸಂಗಮದೇವ–ವಿನೋದದ ಮೇಲೆ ಆ ವಸ್ತುವನು ಗ್ರಹಿಸೇನೆಂದು ಹೋದರೆ ಅಂತರಂಗದಲ್ಲಿ ಅಜ್ಞಾನ ಕಾಳಿಕೆಯನುಂಟು ಮಾಡಿದ.

III –

ಬಾಲಾಭ್ಯಾಸವ ಮಾಡ ಹೋದಡೆ–ಸೂಕ್ಷ್ಮಜ್ಞಾನಕ್ರೀವಿಡಿದಾಚರಿಸ ಹೋದರೆ, ಎನ್ನ ಸುರಗಿ–ಎನ್ನ ಕತ್ತಿಯಾದ ಪ್ರಾಣಲಿಂಗವು, [೧]ಎನ್ನನಟ್ಟಿತು[೧]–ಎನ್ನನು ತನ್ನಲ್ಲೇಕಾರ್ಥವ ಮಾಡಿಕೊಂಡಿತ್ತು. ಎಂತಯ್ಯಾ–ಇದೇನಾಶ್ಚರ್ಯವಯ್ಯಾ, ಕಲಿಯೊಡನೆ–ಪರಾಕ್ರಮಿಗಳಾದ ಗುರುಲಿಂಗಜಂಗಮದೊಡನೆ, ಶ್ರವವ ಮಾಡುವೆನು–ಭಕ್ತಿಯುದ್ಧವನು ಎಸಗುವೆನು. ಜಗದ ಬಿನ್ನಾಣಿಯ–ದೇಹೇಂದ್ರಿಯ ವಿಷಯಕರಣಂಗಳ ವ್ಯಾಪಾರದಲ್ಲಿ ಲಿಂಗಸಂಬಂಧದ ಬಣಿತೆಯನುಳ್ಳಂಥ, ರಾಯ–ಶ್ರೇಷ್ಠತ್ವದಿಂದೆ, ರಾಜ–ಬೆಳಗುತ್ತಿರ್ದ, ಗುರು–ಶ್ರೀಗುರುಸ್ವಾಮಿಯ, ತೊಡಕ–ಸರ್ವಾಚಾರಸಂಪತ್ತಿನಾಚರಣೆಯ ತೊಡರನು, ಬಿಡಿಸಬಾರದು–ತ್ಯಜಿಸುವುದಕ್ಕಾಗದು. ಸರಿಸದ ಮೇಲೆ–ಕ್ರಿಯಾಜ್ಞಾನಗಳ ನೈರುತ್ತಿನ ಮೇಲೆ, ಹಿಡಿಯ ಹೋದಡೆ–ಆಚರಿಸಹೋದರೆ, ಚದುರಂಗದ ಮೇಲೆ–ಚತುಃಕರಣಂಗಳ ಉಪರಿಯಲ್ಲಿ, ಮಸಿಯ ತೋಜಿದ–ಚತುರ್ವಿಧ ಭಕ್ತಿಯನುಂಟು ಮಾಡಿದಂಥ, ಮತ್ತಂ, ಚದುರಂಗದ ಮೇಲೆ–ಚತುರ್ವಿಧಭಕ್ತಿಯ ಉಪರಿಯಲ್ಲಿ, ಮಸಿಯ ತೋಜಿದ–ಪೂರ್ಣಜ್ಞಾನ ಪ್ರಕಾಶವನುಂಟು ಮಾಡಿದಂಥ, ಕೂಡಲಸಂಗಮದೇವ–ಎಲೆ ಪರಶಿವಲಿಂಗವೆ.

....

೧–೧ x (ಟ)

IV –

ಮನವನಳಿದೆನೆಂಬುದೆ ಮನವಾಗಿ, ಮನವನಳಿವ ಪರಿಯ ಕಾಣದೆ ನೆನೆವುತ್ತಿಹುದು ಘನಲಿಂಗವೆಂಬುದೀ ವಚನದರ್ಥ.

V –

[೨]ಸೂಕ್ಷ್ಮಜ್ಞಾನ ಕ್ರಿಯಾಚಾರವನಾಚರಿಸಿದರೆ ಎಂಬುದೀಗ ಬಾಲಾಭ್ಯಾಸ ಮಾಡಹೋದರೆ ಎಂಬುದರ್ಥ. ಎನ್ನ ಸುರಗಿ–ಎನ್ನ ಖಡ್ಗವಾದ ಪ್ರಾಣಲಿಂಗವು, [ಎನ್ನನಟ್ಟಿತ್ತು–] ಎನ್ನನು ತನ್ನೊಳಗೇಕಾರ್ಥವ ಮಾಡಿತ್ತು, [ಚದುರಂಗದ ಮೇಲೆ–] ಚತುಃಕರಣಂಗಳ ವ್ಯಾಪಾರದಲ್ಲಿ, ಚತುಃಕರಣಂಗಳ ಪರಿಯಲ್ಲಿ ಮಸಿಯ ತೋಜಿದ–ಪೂರ್ಣ ಜ್ಞಾನವನುಂಟು ಮಾಡಿದನು.[೨]

....

೨–೨ ೭೮೮ನೆಯ ವಚನದ ತರುವಾಯ ಈ ವಚನ ಬಂದಿದೆ (ಸಂ)

೭೨೭

ಸಮಚಿತ್ತವೆಂಬ ನೇಮದ ಹಲಗೆಯ ಹಿಡಿದು, ಶಿವಚಿತ್ತವೆಂಬ ಕೂರಲಗ ಕೊಂಡು, ಶರಣಾರ್ಥಿಯೆಂಬ ಶ್ರವವಗಲಿತಡೆ ಆಳುತನಕ್ಕೆ ದೆಸೆಯಪ್ಪೆ ನೋಡಾ, ಮಾಱಂಕ ಜಂಗಮ ಮನೆಗೆ ಬಂದಲ್ಲಿ ಇದಿರೆದ್ದು ನಡೆವುದು, ಕೂಡಲಸಂಗಮದೇವ ನೊಲಿಸುವೊಡಿದು ಚಿಹ್ನ!

I –

ಸಮಚಿತ್ತವೆಂಬ–ಸಮ್ಯಕ್‌ಜ್ಞಾನವೆಂಬ, ನೇಮದ–ಕಟ್ಟಿನ ಕ್ರಿಯೆಗಳೆಂಬ, ಹಲಗೆಯ–ಫಲಕವನ್ನು, ಹಿಡಿದು–ದೃಢವಿಡಿದು, ಶಿವಚಿತ್ತವೆಂಬ–ಲಿಂಗಧ್ಯಾನ ಲಿಂಗಸ್ಮರಣೆಯೆಂಬ, ಕೂರಲಗ ಕೊಂಡು–ಸಮರಸಜ್ಞಾನವೆಂಬ ನಿಶಿತಾಸ್ತ್ರವನ್ನು ಸುಚಿತ್ತವೆಂಬ ಹಸ್ತದಲ್ಲಿ ಪಿಡಿದುಕೊಂಡು, ಶರಣಾರ್ಥಿಯೆಂಬ–ಗುರುನಮಸ್ಕಾರ ಲಿಂಗನಮಸ್ಕಾರ ಜಂಗಮನಮಸ್ಕಾರವೆಂಬ, ಶ್ರವವಗಲಿತಡೆ–ಭಕ್ತಿಸಾಧನೆಯನ್ನು ಅಭ್ಯಾಸಿಸಿದಡೆ, ಆಳುತನಕ್ಕೆ–ಭಕ್ತನೆಂಬ ಭೃತ್ಯತ್ವಕ್ಕೆ, ದೆಸೆಯಪ್ಪೆ ನೋಡಾ–ಕೀರ್ತಿಯೆತ್ತಿಪ್ಪೆನು ಕಂಡಾ.

ಮಾಱಂಕ ಜಂಗಮ ಮನೆಗೆ ಬಂದಲ್ಲಿ, ಮಾಱಂಕ–ಪ್ರತಿವೈರಿಯಾದ ಜಂಗಮ ಮೂರ್ತಿಗಳು, ಮನೆಗೆ–ಮಂದಿರಕ್ಕೆ, ಬಂದಲ್ಲಿ–ಭಿಕ್ಷಕ್ಕೆಂದು ಬಿಜಯಂಗೈದು ಬಂದಲ್ಲಿ, ಇದಿರೆದ್ದು–ಇದಿರಾಗಿ, ನಡೆವುದು–ಗಮಿಸುವುದು, ತಾನು ಕುಳಿತಂಥ ಸ್ಥಾನವನ್ನು ಬಿಟ್ಟು ಮುಂದಕ್ಕೆ ಮೂರು ಹೆಜ್ಜೆಯ ನಡೆದುಹೋಗಿ ಭಕ್ತಿಬಿನ್ನಹವನ್ನು ಮಾಡಿ ಕರೆದುಕೊಂಡು ಬಂದು ತಮ್ಮಲ್ಲಿದ್ದಂಥ ಪದಾರ್ಥವನ್ನು ನೀಡಿ ಸಂತುಷ್ಟಿಬಡಿಸುವುದು, ಕೂಡಲಸಂಗಮದೇವನ–ಪರಶಿವಲಿಂಗವನ್ನು, ಒಲಿಸುವೊಡೆ–ಪ್ರಸನ್ನವ ಮಾಡಿಕೊಳಬೇಕಾದರೆ, ಇದು ಚಿಹ್ನ–ಇದು ಕುರುಹು.

III –

ಸಮಚಿತ್ತವೆಂಬ–ಲಿಂಗಾಂಗಸಮಾನತ್ವವೆಂಬ, [೧]ನೇಮದ–ನಿಷ್ಠೆಯ, ಹಲಗೆಯ–ಖ್ಯಾಡೆಯವನು, ದೆಸೆಯಪ್ಪೆ ನೋಡಾ–ಶಿವಭಕ್ತಿಯ ಕೀರ್ತಿಯುಳ್ಳಾತನಾಗುವೆ ಕಂಡಾ.

....

೧ + ಲಿಂಗ (ಡ)

V –

ಸಮಚಿತ್ತವೆಂಬ–ಲಿಂಗಾಂಗ ಸಮಾನತ್ವದ ಮನಸ್ಸೆಂಬ, ಹಲಗೆಯ–ಖ್ಯಾಡೆಯವನು, ದೆಸೆಯಪ್ಪ ನೋಡಾ–ಶಿವಭಕ್ತಿಯ ಕೀರ್ತಿಯನುಳ್ಳಾತನಾಗುವೆ ಕಂಡಾ.

೭೨೮

ಅಟ್ಟಾಟಿಕೆಯ ಮಾತನಾಡಲದೇಕೋ? ಮುಟ್ಟಿ ಬಂದುದಕ್ಕಂಜಲದೇಕೋ? ಕಾದಿದಲ್ಲದೆ ಮಾಣೆನು ಓಡಿದಡೆ ಭಂಗ ಹಿಂಗದಾಗಿ, ಕೂಡಲಸಂಗಮದೇವಾ ಎನ್ನ ಭಂಗ ನಿಮ್ಮದಾಗಿ!

I –

ಅಟ್ಟಾಟಿಕೆಯ ಮಾತನಾಡಲದೇಕೋ: ಅಟ್ಟಾಟಿಕೆಯ-ಅಂತರಂಗದಲ್ಲಿ ವಂಚನೆಉಪಾಧಿ ಕುಹಕ ಪ್ರಪಂಚೆಂಬ ಕಾಪಟ್ಯವನ್ನು ತುಂಬಿಕೊಂಡು, ಮಾತನಾಡಲಬೇಕೋ-ಬಹಿರಂಗದಲ್ಲಿ ಸ್ವಾಮೀ ತನು ನಿಮ್ಮದು ಮನ ನಿಮ್ಮದು ಧನ ನಿಮ್ಮದು ಅರ್ಥಪ್ರಾಣಾಭಿಮಾನ ನಿಮ್ಮದು ನಾನು ನಿಮ್ಮ ತೊತ್ತು ತೊಂಡ ಸೇವಕನೆಂದು ಹೇಳಿಕೊಂಬುವಂಥದೇನು ಕಾರಣಕ್ಕೋ? ಮುಟ್ಟಿ ಬಂದುದಕ್ಕಂಜಲದೇಕೋ?: [ಮುಟ್ಟಿ ಬಂದುದಕ್ಕೆ-] ಹೇಳಿಕೊಂಬುತಿದ್ದ ಹಾಂಗೆ ಜಂಗಮಮೂರ್ತಿಗಳು ಎಲೆ ಭಕ್ತಾ ತನುವ ಕೊಡು ಮನವ ಕೊಡು ಧನವ ಕೊಡುಯೆಂದು ಕೇಳುವುದಕ್ಕೆ ಬಂದಲ್ಲಿ, ಅಂಜಲದೇಕೋ-ಹೆದರಿಕೊಂಡು ತನುಮನಧನಂಗಳನು ವಂಚಿಸಿಕೊಂಡು ಹಿಮ್ಮೆಟ್ಟುವುದೇನು ಕಾರಣಕ್ಕೋ? ಕಾದಿದಲ್ಲದೆ-ಸಮರಸಭಾವದಿಂದ ಕೊಟ್ಟು ಭಕ್ತಿಯ ಮಾಡಿದಲ್ಲದೆ, ಮಾಣೆನು-ಬಿಡೆನು, ಓಡಿದಡೆ-ತನುಮನಧನಂಗಳನು ವಂಚಿಸಿಕೊಂಡು ಹಿಮ್ಮೆಟ್ಟಿದರೆ, ಭಂಗ-ಕೊರತೆಯು, ಹಿಂಗದಾಗಿ-ತೊಲಗದಾಗಿ, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ, ಎನ್ನ ಭಂಗ-ಎನ್ನ ಕೊರತೆಯು, ನಿಮ್ಮದಾಗಿ-ಸ್ವಾಮಿಗಳದಾಗಿ.

IV -

ಗುರೂಪದೇಶವಾಗಿ ಪರಬ್ರಹ್ಮನ ಕೂಡುವನಲ್ಲದೆ, ಎಡೆಯಲ್ಲಿ ತಿರುಗುವನಲ್ಲ, ಎಲೆ ಲಿಂಗವೆ ಎನ್ನ ಭಂಗವು ನಿಮ್ಮದೆಂಬುದೀ ವಚನದರ್ಥ.

IV -

[೧]ಹುಡುಗರಟ್ಟುಗೂಳಿಯ ಪ್ರಸಂಗದ ಹಾಂಗೆ ತ್ರಿವಿಧಪದಾರ್ಥವ ಸಮರ್ಪಿಸದೆ ನಿರರ್ಥ ನಿರಾಯಾಸ ಪ್ರಸಂಗವನಾಡುವುದೇನು ಕಾರಣಕ್ಕೆಂಬುದೀಗ ಅಟ್ಟಾಟಿಕೆಯ ಮಾತನಾಡಲದೇಕೆ.[೧]

....

೧-೧ ೭೬ನೇ ವಚನಕ್ಕೆ ಮೊದಲು ಈ ವಚನ ಬಂದಿದೆ (ಸಂ)

೭೯

ಲಿಂಗಕ್ಕಲ್ಲದೆ ಮಾಡೆನೀ ಮನವನು, ಜಂಗಮಕ್ಕಲ್ಲದೆ ಮಾಡೆನೀ ಧನವನು, ಪ್ರಸಾದಕ್ಕಲ್ಲದೆ ಮಾಡೆನೀ ತನುವನು, ಲಿಂಗ ಜಂಗಮ ಪ್ರಸಾದಕ್ಕಲ್ಲದೆ ಬಾಯ್ದೆಱೆಯೆನೆಂಬುದೆನ್ನ ಭಾಷೆ, ಅನರ್ಪಿತವಾದಡೆ ತಪ್ಪೆನ್ನದು ಮೂಗ ಕೊಯಿ. ಕೂಡಲಸಂಗಮದೇವಾ.

I -

ಲಿಂಗಕ್ಕಲ್ಲದೆ ಮಾಡೆನೀ ಮನವನು-ಈ ಮನಃಪದಾರ್ಥವನ್ನು ಲಿಂಗಕ್ಕಲ್ಲದೆ ಮಾಡೆ, ಇಷ್ಟಲಿಂಗಕ್ಕಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳ ಮಾಡುವ ನೆವದಿಂದ ಸಮರ್ಪಣೆಯ ಮಾಡುವೆನಲ್ಲದೆ, ಮಾಡೆನು-ಹಲವು ನೆನವು ಹಲವು ಭಾಷೆ ಹಲವು ವರ್ತನೆಯೊಡನೆ ಕೂಡಿ ಚರಿಸಿ ಚಾಗಿಯಾಗಿ ಹೋಗುವ ಹಂಗೆ ಮಾಡೆನು. ಜಂಗಮಕ್ಕಲ್ಲದೆ ಮಾಡೆನೀ ಧನವನು, ಈ ಧನವನು-ಈ ದ್ರವ್ಯವನ್ನು, ಜಂಗಮಕ್ಕಲ್ಲದೆ-ಅನ್ನೋದಕ ಸಜ್ಜೆ ಶಿವದಾರ ಕೊಡೆ ಪಾದರಕ್ಷೆ ವಸ್ತ್ರ ಕಪ್ಪಟಾದಿಗಳನು ಜಂಗಮಕ್ಕೆ ಕೊಟ್ಟು ಭಕ್ತಿಯ ಮಾಡುವ ನೆವದಿಂದ ಸಮರ್ಪಣೆಯ ಮಾಡುವೆನಲ್ಲದೆ, ಮಾಡೆನು-ಸೂಳೆ ಬಸವಿ ದಾಸಿ ವೇಶಿ ಬೋಳಭಟ್ಟರಿಗೆ ಕೊಟ್ಟು ಚಾಗಿಯ ಮಾಡೆನು. ಪ್ರಸಾದಕ್ಕಲ್ಲದೆ

ಮಾಡೆನೀ ತನುವನು ಈ ತನುವನು–ಈ ಅಂಗವನ್ನು, ಪ್ರಸಾದಕ್ಕಲ್ಲದೆ–ಲಿಂಗಜಂಗಮದ ಪ್ರಸಾದವ ಸೇವನೆಯನ್ನು ಮಾಡುವುದಕ್ಕೆ ಯೋಗ್ಯವ ಮಾಡುವೆನಲ್ಲದೆ. ಮಾಡೆನು–ಮತ್ತೊಂದು ತತ್ವಾನ್ನ ತತ್ವೋದಕವನ್ನು ಅನುಭವಿಸಿ ಚಾಗಿಯಾಗಿ ಹೋಗುವ ಹಾಂಗೆ ಮಾಡೆನು.

ಲಿಂಗಜಂಗಮಪ್ರಸಾದಕ್ಕಲ್ಲದೆ ಬಾಯ್ದೆಜೆಯೆ–ಲಿಂಗಜಂಗಮಪ್ರಸಾದವನು ಸ್ವೀಕರಿಸುವುದಕ್ಕೆ ಎನ್ನ ಜಿಹ್ವೆಯನು ತೆರೆವೆನಲ್ಲದೆ ಮತ್ತೊಂದು ತತ್ತ್ವಾನ್ನ ತತ್ತ್ವೋದಕಂಗಳನು ಪಡೆದನುಭವಿಸುವುದಕ್ಕೆ ಎನ್ನ ಜಿಹ್ವೆಯನ್ನು ತೆರೆಯೆನು, ಎಂಬುದು–ಹೀಂಗೆಂದು ಹೇಳಿಕೊಂಬುವಂಥದು, ಎನ್ನ ಭಾಷೆ–ಎನ್ನ ಪ್ರತಿಜ್ಞೆಯು, ಅನರ್ಪಿತವಾದಡೆ–ತನುವೇನಾದರೂ ತತ್ತ್ವಾನ್ನತತ್ತ್ವೋದಕವನ್ನು ಅನುಭವಿಸಿ ಚಾಗಿಯಾಗಿ ಹೋದರೆ ಮನವೇನಾದರೂ ಹಲವು ನೆನದು ಹಲವು ಭಾವಿಸಿ ಹಲವು ವರ್ತನೆಯೊಡನೆ ಕೂಡಿ ಚರಿಸಿ ಚಾಗಿಯಾಗಿ ಹೋದರೆ ಧನವೇನಾದರೂ ಸೂಳೆ ಬಸವಿ ದಾಸಿ ವೇಶಿ ಬೋಳ ಭಟ್ಟರಿಗೆ ಕೊಟ್ಟು ಚಾಗಿಯಾಗಿ ಹೋದರೆ, ತಪ್ಪೆನ್ನದು–ಅಪರಾಧವೆನ್ನದು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಮೂಗಕೊಯ್ಯಿ–ಆಚಾರಾಂಗವೆಂಬ ಘ್ರಾಣವನ್ನು ಅಪಹರಿಸಿ ಮಾನಭಂಗವ ಮಾಡಿ ಭವಕ್ಕೆ ಹಾಕಿಬಿಡು.

IV –

ಸತ್ತುಚಿತ್ತಾನಂದ ಗುರುಲಿಂಗಜಂಗಮಕ್ಕೆ ತನುಮನಧನವ ಕೊಡುವೆನೆಂಬುದೀ ವಚನದರ್ಥ.

ಮಾಹೇಶ್ವರನ ಪ್ರಸಾದಿಸ್ಥಲ

I– –

ಮಾಹೇಶ್ವರನ ಪ್ರಸಾದಿಸ್ಥಲ–ಮಾಹೇಶ್ವರಸ್ಥಲದೊಳಗಣ ಪ್ರಸಾದಿಸ್ಥಲದಾಚರಣೆಯನ್ನು ನಿರೂಪಿಸುತ್ತಿಹರು.

೭೩೦

ಅಂಕ ಕಂಡಾ, ಕೋಲಾಸೆ ಮತ್ತೇಕಯ್ಯ ? ಲೆಂಕ ಕಂಡಾ, ಪ್ರಾಣದಾಸೆ ಮತ್ತೇಕಯ್ಯ ? ಭಕ್ತಿ ಕಂಡಾ, ತನುಮನ ಧನದಾಸೆ ಮತ್ತೇಕಯ್ಯ? ನಿಮ್ಮ ಅಂಕೆಗೆ ಝುಂಕೆಗೆ ಶಂಕಿಸಿದೆನಾದಡೆ ಎನ್ನ ಲೆಂಕತನಕ್ಕೆ ಹಾನಿ, ಕೂಡಲಸಂಗಮದೇವಾ.

I –

ಅಂಕ ಕಂಡಾ, ಕೋಲಾಸೆ ಮತ್ತೇಕಯ್ಯ: ಅಂಕ ಕಂಡಾ–ಪರಾಕ್ರಮಿ ತಾನೆಂದು ಕಂಡ, ಕೋಲಾಸೆ ಮತ್ತೇಕಯ್ಯಾ–ಒಬ್ಬಾನೊಬ್ಬ ದೊರೆ ಏನಾದರೂ ಇರ್ವರ ಐಗಾರರನ್ನು ಜೋಡುಗಟ್ಟಿ "ಯುದ್ಧಕ್ಕೆ" ಬಿಟ್ಟಿದ್ದಲ್ಲಿ ಪ್ರಾಣಹೋಗೋ ಪರಿಯಂತರದಲ್ಲಿ ಯುದ್ಧವನ್ನು ಮಾಡಬೇಕಲ್ಲದೆ ಆವಾಗ ಎಡಗೋಲ ಹಾಕಿಯಾರೋ ಆವಾಗ ಬಿಡಿಸಿಕೊಂಡಾರೋ ಎಂಬಂಥ ಎಡೆಗೋಲಿನ ಮೇಲಣ

ಅಪೇಕ್ಷೆ ಏನು ಕಾರಣಕ್ಕಯ್ಯಾ. ಲೆಂಕ ಕಂಡಾ ಪ್ರಾಣದಾಸೆ ಮತ್ತೇಕಯ್ಯ: ಲೆಂಕ ಕಂಡಾ–ಅ[ಟ್ಟೂಳಿ]ಗ ಹರಿದೂಳಿಗವನ್ನು ಮಾಡಿಕೊಂಡಿರುವಂಥ ಭೃತ್ಯನೇ ತಾನೆಂದು ಕಂಡ, ಪ್ರಾಣದಾಸೆ ಮತ್ತೇಕಯ್ಯ?–ಅವರು ಆವುದಾನೊಂದು ಊರುಕೇರಿಗೆ ಹೊಲಗದ್ದೆ ತೋಟಗಳಿಗೇನಾದರೂ ಹಗಲಾರು ತಾಸೊತ್ತಿನಾಗ ಹೋಗೆಂದರೂ ಹೋಗಿ ಇರುಳಾರುತಾಸೊತ್ತಿನಾಗ ಹೋಗೆಂದರು ಹೋಗಬೇಕಲ್ಲದೆ ಹಗಲಾರು ತಾಸೊತ್ತಿನಾಗ ಹೋದರೆ ಹುಲಿ ಕರಡಿ ಕಳ್ಳರ ಭಯ ಇರುಳಾರು ತಾಸೊತ್ತಿನಾಗ ಹೋದರೆ ಭೂತ ಪ್ರೇತ ಪಿಶಾಚ ಬ್ರಹ್ಮರಾಕ್ಷಸಿ ಭಯ ಕಳ್ಳಕಾಕರ ಭಯ, ಪ್ರಾಣ ಹೋದೀತೋ ಇದ್ದೀತೋ ಎಂಬ ಪ್ರಾಣದ ಮೇಲಣ ಅಭಿಲಾಷೆ ಏನು ಕಾರಣಕ್ಕಯ್ಯಾ, ಮತ್ತಂತುಮಲ್ಲದೆ.

● ಅಂಕ ಕಂಡಾ, ಕೋಲಾಸೆ ಮತ್ತೇಕಯ್ಯ: ಅಂಕ ಕಂಡಾ–ನಿರ್ವಂಚಕ ಸದ್ಭಕ್ತ ತಾನೆಂದು ಕಂಡ, ಕೋಲಾಸೆ ಮತ್ತೇಕಯ್ಯಾ–ಸಮರಸಭಾವದಿಂದ ತನುಮನಧನಂಗಳನು ಗುರುಲಿಂಗಜಂಗಮಕ್ಕೆ ಕೊಟ್ಟು ಭಕ್ತಿಯ ಮಾಡುವಂಥದೇ ಉಂಟಾಗಿರಬೇಕಲ್ಲದೆ ಭಿನ್ನವಿಟ್ಟುಕೊಂಡು ತನುಮನಧನಂಗಳನು ವಂಚಿಸಿಕೊಂಬುವುದೇನು ಕಾರಣಕ್ಕಯ್ಯ. ಲೆಂಕ ಕಂಡಾ ಪ್ರಾಣದಾಸೆ ಮತ್ತೇಕಯ್ಯಾ: ಲೆಂಕ ಕಂಡಾ–ಪ್ರಸಾದಿ ಭಕ್ತನೇ ತಾನೆಂದು ಕಂಡ, ಪ್ರಾಣದಾಸೆ ಮತ್ತೇಕಯ್ಯಾ–ಆ ಚಿತ್ಕಲಾಪ್ರಸಾದವೇ ಈ ಕ್ರಿಯಾಪ್ರಸಾದವಾಗಿ ಬಂದಿರ್ಪುದು. ಈ ಪ್ರಸಾದವನ್ನು ಅನುಭವಿಸಿದರೆ ಸಮಸ್ತಪಾಪಕ್ಷಯವಾಗಿ ಹೋಗಿ ನಿತ್ಯವಾದ ನಿಜಮೋಕ್ಷವಾಗುತ್ತೈತೆಂಬ ಭಾವಬೇಕಲ್ಲದೆ ಇದು ಹಳಸೈತೆ ಕೊಳೆಸೈತೆ ನೂಲಿಸಿಗವಿದ್ದೈತೆ ಇದ ತೆಗದುಕೊಂಡರೆ ಎನ್ನ ದೇಹಕ್ಕೆ ಒಡಂಬಡಿಕೆಯಾಗದು. ಪ್ರಾಣ ಹೋದೀತೋ ಇದ್ದೀತೋಯೆಂದು ಪ್ರಾಣದ ಮೇಲಣ ಅಭಿಲಾಷೆ ಏನು ಕಾರಣಕ್ಕೆ? ಸಲ್ಲದು. ಭಕ್ತ ಕಂಡಾ ತನುಮನಧನದಾಸೆ ಮಾತೇಕಯ್ಯಾ: ಭಕ್ತ ಕಂಡಾ ನಿರ್ವಂಚಕ ಸದ್ಭಕ್ತನೇ ತಾನೆಂದ ಕಂಡ, ತನುಮನಧನದಾಸೆ ಮತ್ತೇಕಯ್ಯಾ–ಸಮರಸ ಭಾವದಿಂದ ತನುಮನಧನಂಗಳನು ಕೊಟ್ಟು ಭಕ್ತಿಯ ಮಾಡುವುದೆ ಉಂಟಾಗಿರಬೇಕಲ್ಲದೆ ತನುಮನಧನಂಗಳನು ವಂಚಿಸಿಕೊಳಬೇಕೆಂಬಂಥ ಲುಬ್ಧತ್ವವೇನು ಕಾರಣಕ್ಕೆ? ಸಲ್ಲದು.

ನಿಮ್ಮ ಅಂಕೆಗೆ–ಸಕಲಪದಾರ್ಥವನ್ನು ಕೊಟ್ಟು ಭಕ್ತಿಯ ಮಾಡಬೇಕೆಂಬಂಥ ಅನುಜ್ಞೆಗೆ, ಝುಂಕೆಗೆ–ಅವರೊಂದಿಗೆ ಎಲೋ ಗೋವಾ ಗುಲಾಮಾಯೆಂದು ಜರಿದು ಝುಂಕರಿಸಿ ನುಡಿಸಿಕೊಂಬುವುದಕ್ಕೆ, ಶಂಕಿಸಿದೆನಾದಡೆ–ಮನದಲ್ಲಿ ಸಂಕಲ್ಪಭಾವವ ಮುಂದುಗೊಂಡೆನಾದರೆ, ಎನ್ನ ಲೆಂಕತನಕ್ಕೆ–ಎನ್ನ ಭಕ್ತನೆಂಬ ಭೃತ್ಯತ್ವಕ್ಕೆ, ಹಾನಿ–ಕೊರತೆ ಬರುತಿಹುದು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

....

೧–೧ x (ಕ). ೨–೨ ಟ್ಟುಣಿ (ಕ, ಗ). ೩–೩ ಅರಿ (ಕ). ೪–೪ ಸ (ಗ).

೭೩೧

ನೀನಿರಿಸಿದ ಮನದಲ್ಲಿ ನಾನಂಜೆನಯ್ಯ, ಮನವು ಮಹಾಘನಕ್ಕೆ ಶರಣುಗತಿ ಹೊಕ್ಕುದಾಗಿ. ನೀನಿರಿಸಿದ ಧನದಲ್ಲಿ ನಾನಂಜೆನಯ್ಯಾ, ಧನವು ಸತಿಸುತಮಾತಾಪಿತರಿಗೆ ಹೋಗದಾಗಿ. ನೀನಿರಿಸಿದ

ತನುವಿನಲ್ಲಿ ನಾನಂಜೆನಯ್ಯ, ತನುವು ಸರ್ವಾರ್ಪಿತದಲ್ಲಿ ನಿಯತ ಪ್ರಸಾದಭೋಗಿಯಾಗಿ. ಇದು ಕಾರಣ ವೀರಧೀರ ಸಂಗ್ರಾಹಕನಾಗಿ, ನಾ ನಿಮಗಂಜೆನಯ್ಯ ಕೂಡಲಸಂಗಮದೇವಾ!

I– –

ನೀನಿರಿಸಿದ ಮನದಲ್ಲಿ ನಾನಂಜೆನಯ್ಯ : [ನೀನಿರಿಸಿದ–] ನೀನು ಅನಾದಿಯಲ್ಲಿ ಕರುಣಿಸಿಕೊಟ್ಟ, ಮನವು–ಮನಪದಾರ್ಥವು, ಮಹಾಘನಕ್ಕೆ–ಮಹಾಘನವೇ ತಾನಾದ ಇಷ್ಟಲಿಂಗಕ್ಕೆ, ಶರಣುಗತಿ ಹೊಕ್ಕುದಾಗಿ–ನಮಸ್ಕಾರವೆಂದು ನಮಸ್ಕರಿಸಿ ಗತಿಮತಿಚೈತನ್ಯವೆಂದು ನಿಮ್ಮ ಮೊರೆ ಬಿದ್ದು ಲಿಂಗಪೂಜೆಯ ಮಾಡುತ್ತಿರ್ದಕಾರಣ, ಮನದಲ್ಲಿ–ಮನಪದಾರ್ಥದಲ್ಲಿ, ನಾನಂಜೆನಯ್ಯಾ–ಹೆದರಿಕೊಳ್ಳೆನಯ್ಯಾ.

ನೀನಿರಿಸಿದ ಧನದಲ್ಲಿ ನಾನಂಜೆನಯ್ಯ : ನೀನಿರಿಸಿದ–ನೀನು ಅನಾದಿಯಲ್ಲಿ ಕರುಣಿಸಿಕೊಟ್ಟ೧, ಧನವು–ದ್ರವ್ಯವು, ಸತಿಸುತ–ಮಾತಾಪಿತರಿಗೆ, ಹೋಗದಾಗಿ–ಹೆಂಡಿರುಮಕ್ಕಳು ತಂದೆತಾಯಿಗಳಿಗೆ ಹೋಗದಾಗಿ, ಹಾಂಗೆ, ಜಂಗಮಕ್ಕೆ ಸಮರ್ಪಿಸುತ್ತಿದ್ದ ಕಾರಣ, ಧನದಲ್ಲಿ–ಧನಪದಾರ್ಥದಲ್ಲಿ, ನಾನಂಜೆನಯ್ಯ–ನಾನು ಹೆದರಿಕೊಳ್ಳೆನಯ್ಯಾ.

ನೀನಿರಿಸಿದ ತನುವಿನಲ್ಲಿ ನಾನಂಜೆನಯ್ಯ: ನೀನಿರಿಸಿದ ತನುಪದಾರ್ಥವು ತನುತ್ರಯಂಗಳಲ್ಲಿ ಬರಲ್ಪಟ್ಟ ರೂಪುರುಚಿತೃಪ್ತಿಗಳನು ಇಷ್ಟಪ್ರಾಣಭಾವ ಲಿಂಗಗಳಿಗೆ ಸಮರ್ಪಿಸಿ ಆ ತ್ರಿವಿಧಲಿಂಗಮುಖಗಳಿಂದುಳುಮೆಯಾಗಿ ಬರಲ್ಪಟ್ಟ ಶುದ್ಧಸಿದ್ಧಪ್ರಸಿದ್ಧ ಪ್ರಸಾದವನ್ನು ಅನುಭವಿಸುತ್ತಿರ್ದ ಕಾರಣ, ನೀನಿರಿಸಿದ ತನುವಿನಲ್ಲಿ–ನೀನು ಅನಾದಿಯಲ್ಲಿ ಕರುಣಿಸಿಕೊಟ್ಟಂಥ ತನುಪದಾರ್ಥದಲ್ಲಿ, ನಾನಂಜೆನಯ್ಯ–ನಾನು ಹೆದರಿಕೊಳ್ಳೆನಯ್ಯಾ.

ನಿಯತಪ್ರಸಾದ ಭೋಗಿಯಾಗಿ: ನಿಯತ–ಯಥಾರ್ಥವಾದ, ಪ್ರಸಾದಭೋಗಿಯಾಗಿ–ಶುದ್ಧಸಿದ್ಧಪ್ರಸಿದ್ಧ ಪ್ರಸಾದವನ್ನು ಪಡೆದನುಭವಿಸಲ್ಪಟ್ಟಾತನಾಗಿ, ಇದು ಕಾರಣ–ಇದು ನಿಮಿತ್ತಾರ್ಥ, ವೀರ–ತನುವಿನಲ್ಲಿ ಗುರುಸಂಬಂಧವ ಮಾಡಿಕೊಂಡು ಗುರುಭಕ್ತಿಯ ಮಾಡಿ ಶಿವನುಂಟುಮಾಡಿದ ಸಕಲಸಂಸಾರಪ್ರಪಂಚನ್ನು ಜಯಿಸಲ್ಪಟ್ಟಾತನು, ಧೀರ–ಮನದಲ್ಲಿ ಲಿಂಗಸಂಬಂಧವ ಮಾಡಿಕೊಂಡು ಲಿಂಗಪೂಜೆಯ ಮಾಡಿ ಶಿವನುಂಟುಮಾಡಿದ ಆಧಿವ್ಯಾಧಿವಿಪತ್ತನ್ನು ಜಯಿಸಲ್ಪಟ್ಟಾತನು, ಸಮಗ್ರಾಹಕನಾಗಿ–ಪ್ರಾಣಜ್ಞಾನದಲ್ಲಿ ಜಂಗಮವ ಸಂಬಂಧವ ಮಾಡಿಕೊಂಡು ಜಂಗಮಭಕ್ತಿಯ ಮಾಡಿ ಶಿವನುಂಟುಮಾಡಿದ ಕಾಲಕಾಮಮಾಯಾಪ್ರಪಂಚನ್ನು ಜಯಿಸುವಲ್ಲಿ ಸಮರ್ಥನಾಗಿ, ನಾ ನಿಮಗಂಜೆನಯ್ಯಾ–ಆನು ನಿಮಗೆ ಹೆದರಿಕೊಳ್ಳೆನಯ್ಯಾ, ಕುಡಲಸಂಗಮದೇವಾ–ಎಲೆ ಪರಶಿವಲಿಂಗವೆ.

....

೧+ ಧನದಲ್ಲಿ–ಧನಪದಾರ್ಥದಲ್ಲಿ, ನಾನಂಜೆನಯ್ಯಾ–ನಾನು ಹೆದರಿಕೊಳ್ಳೆನಯ್ಯಾ. (ಕ,ಗ).

III –

ತನುವು–ಎನ್ನ ಚಿದಂಗವು,ಸರ್ವಾರ್ಪಿತದಲ್ಲಿ–ಸರ್ವೇಂದ್ರಿಯಂಗಳಲ್ಲಿಯೂ ಲಿಂಗಸಂಗ ಸಮರಸದ.

IV– –

೧-೧ ನಿಮಗಾನಂಜೆ (ತ).

....

ಮನವು ಮಹದಲ್ಲಿ ನಿಂದು, ಆ ಮಹವೇ ತನುವನೊಳಕೊಂಡು, ಆ ಮಹಂತಾದ ಜಂಗಮಕ್ಕೆ ಧನ ಸಂದಿತಾಗಿ ನೀವಿರಿಸಿದ ತನುಮನದಲ್ಲಿ ಅಂಜೆನೆಂಬುದೀ ವಚನದರ್ಥ.

೭೩೨

ಹಲ್ಲು ಹತ್ತಿ ನಾಲಗೆ ಹೊರಳದಿದ್ದಲ್ಲಿ ಮನವೆರಡಾದಡೆ ಆಣೆ, ನಿಮ್ಮಾಣೆ! ಮಾಡುವ ನೇಮಕ್ಕೆ ಛಲವಿಲ್ಲದಿದ್ದಡೆ ಆಣೆ, ನಿಮ್ಮಾಣೆ! ಕೂಡಲಸಂಗಮದೇವಾ ಎನ್ನ ಮನವ ನೋಡಲೆಂದಟ್ಟಿದಡೆ ಪ್ರಸಾದವಲ್ಲದೆ ಕೊಂಡೆನಾದಡೆ ಆಣೆ, ನಿಮ್ಮಾಣೆ,

I -

ಹಲ್ಲು ಹತ್ತಿ-ಆಧಿವ್ಯಾಧಿವಿಪತ್ತುಗಳಿಂದ ಕೆಳಗಣ ಮೇಲಣ ಹಲ್ಲು ಕೂಡಿ ಗಿಟಗಿರಿದು, ನಾಲಗೆ-ರಸನೆಯು, ಹೊರಳದಿದ್ದಲ್ಲಿ-ಮಾತುಕಥೆ ಪ್ರಸಂಗವನಾಡುವುದಕ್ಕೆ ಬಾರದೇ ನಾಲಗೆ ತೊದಲಾಗಿ ಹೋಗುತ್ತಿದ್ದಲ್ಲಿ, ಮನವೆರಡಾದಡೆ-ಅನ್ಯದೈವದ ಭಜನೆಯ ಮಾಡಬೇಕು, ಅನ್ಯದೈವದ ಪ್ರತ್ಯಕ್ಷತ್ವವನ್ನು ಹಡೆಯಬೇಕೆಂದು ಮನವಿಬ್ಭಾಗವಾದರೆ, ಆಣೆ-ಪ್ರತಿಜ್ಞೆಯು, ನಿಮ್ಮಾಣೆ-ಸ್ವಾಮಿಗಳ ಮೇಲಣ ಪ್ರತಿಜ್ಞೆಯು.

ಮಾಡುವ-ಗುರುಭಕ್ತಿ ಲಿಂಗಪೂಜೆ ಜಂಗಮದಾಸೋಹವನ್ನು ಅನುಗೆಯ್ವ, ನೇಮಕ್ಕೆ-ಕಟ್ಟಿನ ಕ್ರೀಗಳಿಗೆ, ಛಲವಿಲ್ಲದಿದ್ದಡೆ-ಇಂತಿಷ್ಟು ತಪ್ಪಿದರೆ ಪ್ರಾಣವೇ ಕಡೆಯೆಂಬಂಥ ಛಲಗ್ರಾಹಕತ್ವವೇ ಇರಬೇಕು, ಆಣೆ-ಪ್ರತಿಜ್ಞೆಯು, ನಿಮ್ಮಾಣೆ-ಸ್ವಾಮಿಗಳ ಮೇಲಣ ಪ್ರತಿಜ್ಞೆಯು.

ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ, ಎನ್ನ ಮನವ ನೋಡಲೆಂದು-ಸಂಗನಬಸವೇಶ್ವರನ ಚಿತ್ರವನ್ನು ಪರಾಂಬರಿಸಲೆನುತ್ತ, ಅಟ್ಟಿದಡೆ-ಗೋರಾಂಟೇಶ್ವರನೇ ಬೆನ್ನಬಳಿಯಾಗಿ ಹುಟ್ಟೆಂದು ಕಳಿಸಿಕೊಟ್ಟರೆ, ಪ್ರಸಾದವಲ್ಲದೆ-ಶಿವಪ್ರಸಾದವಲ್ಲದೆ, ಕೊಂಡೆನಾದಡೆ-ಆತ್ಮಾರ್ಪಣವಾಗಿ ಅನುಭವಿಸಿದೆನಾದರೆ, ಆಣೆ-ಪ್ರತಿಜ್ಞೆಯು, ನಿಮ್ಮಾಣೆ-ಸ್ವಾಮಿಗಳ ಮೇಲಣ ಪ್ರತಿಜ್ಞೆಯು.

....

೧-೧ x (ಕ), ೨-೨ x (ಗ)

IV -

ದೇಹವಳಿದರೆಯೂ ಹಿಡಿದ ನೇಮವ್ರತವ ಬಿಡೆನೆಂಬುದೀ ವಚನದರ್ಥ.

೭೩೩

ಹೊಕ್ಕಲ್ಲಿ ಹೊಕ್ಕು ನಿಮ್ಮೊಕ್ಕುದನುಂಬುವನ ಕುಲವೇನೋ ದೇವಾ ನೀ ಒಲಿದವನ, ಸ್ವಾಮೀ ನೀ ಹಿಡಿದವನ ಕುಲವೇನೋ, ಕುಲಕ್ಕೆ ತಿಲಕ ನಮ್ಮ ಮಾದಾರಚೆನ್ನಯ್ಯ ನಿಮ್ಮಿಂದಧಿಕ ಕೂಡಲಸಂಗಮದೇವಾ.

I -

ಹೊಕ್ಕಲ್ಲಿ ಹೊಕ್ಕು ನಿಮ್ಮೊಕ್ಕುದನುಂಬುವನ ಕುಲವೇನೋ?: [ಹೊಕ್ಕಲ್ಲಿ–] ನೀನಾರಂಗದಲ್ಲಿ ಇಷ್ಟಲಿಂಗವಾಗಿ ನೆಲೆಗೊಂಡು ಕಿಂಚಿದ್ದಳ ಚುಳಕೋದಕದಿಂದ ಆರಾಧಿಸಿಕೊಂಬುತ್ತಿದ್ದಿಯೋ ಅವರುಗಳಲ್ಲಿ, ಹೊಕ್ಕು–ಪ್ರವೇಶವಾಗಿ, ನಿಮ್ಮ ಒಕ್ಕುದನುಂಬುವನ–ನಿಮ್ಮ ಒಕ್ಕ ಮಿಕ್ಕ ಪ್ರಸಾದವನ್ನು ಪಡೆದನುಭವಿಸುವಂಥವನ, ಕುಲವೇನೋ?–ಅವರಲ್ಲಿ ಕುಲಸೂತಕವನ್ನು ಹುಡುಕುವುದೇನೋ?. ದೇವಾ–ಎಲೆ ಒಡೆಯನೆ, ನೀ ಒಲಿದವನ–ನೀ ಕೃಪೆಯಾದವನ, ಸ್ವಾಮೀ–ಎಲೆ ಕರ್ತೃಸ್ವರೂಪವಾದಂಥ ದೇವನೇ, ನೀ ಹಿಡಿದವನ–ನಮ್ಮವನೆಂದು ಅಂಗೀಕರಿಸಿದವನ, ಕುಲವೇನೋ–ಅವರಲ್ಲಿ ಕುಲ ಸೂತಕವನ್ನು ಹುಡುಕುವುದೇನೋ? ಕುಲಕ್ಕೆ–ಸಮಸ್ತ ಕುಲಕ್ಕೂ, ತಿಲಕ–ಕುಲಲಲಾಮ ಕುಲಸಾರ್ವಭೌಮ, ನಮ್ಮ ಮಾದಾರ ಚೆನ್ನಯ್ಯ–ನಮ್ಮ ಮಾದಾರ ಚೆನ್ನಯ್ಯನೆಂಬ ಶಿವಶರಣನು, ನಿಮ್ಮಿಂದ–ಸ್ವಾಮಿಗಳಿಂದ, ಅಧಿಕ–ಶ್ರೇಷ್ಠನು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

೭೩೪

ಹುಟ್ಟಿದ ಮಕ್ಕಳೆಲ್ಲ ಪ್ರಾಣಾಭಿಮಾನಕ್ಕೆ ಒಡೆಯರಾದ ಪರಿಯ ನೋಡಾ! ಅಟ್ಟಡಿಗೆಯ ವಿಷವನು ನಿಮಗೆ ಕೊಟ್ಟಲ್ಲದೆ ಉಣ್ಣೆನೆಂಬ ಭಾಷೆ! ಕೂಡಲಸಂಗಮದೇವಾ, [1]ನಿ[2]ಮ[2]ಗೆಂದಟ್ಟಡಿಗೆಯ ನೀಡ ಕಲಿಸಿದಾತ [3]ನಮ್ಮ[3] ಕೆಂಭಾವಿ[4] ಭೋಗಯ್ಯ.

I– -

ಹುಟ್ಟಿದ ಮಕ್ಕಳೆಲ್ಲ: ಹುಟ್ಟಿದ–ಉಭಯಕುಲಶುದ್ಧವಾಗಿ ಉತ್ಪತ್ಯವಾದ. ಮಕ್ಕಳೆಲ್ಲ–ಪುತ್ರರುಗಳೆಲ್ಲ, ಅರ್ಥಪ್ರಾಣಾಭಿಮಾನಕ್ಕೆ : ಅರ್ಥ–ತಾ ಗಳಿಸಿದಂಥ ದ್ರವ್ಯಕ್ಕೆ, ಪ್ರಾಣ–ಪ್ರಾಣಸಂಬಂಧವಾದ ಪುತ್ರರುಗಳು, ಅಭಿಮಾನಕ್ಕೆ–ತನ್ನ [*ಅಭಿಮಾನ*]ಗಳಿಗೆ, ಒಡೆಯರಾದ–ಕರ್ತರಾದ, ಪರಿಯ ನೋಡಾ!–ನಿಲುಕಡೆಯ ಕಂಡಾ! ಅಟ್ಟ–ಪಾಕವ ಮಾಡಿದ, ಅಡಿಗೆಯ–ಪದಾರ್ಥವನ್ನು, ವಿಷವನು–ಕ್ಷ್ವೇಡವನ್ನು, ನಿಮಗೆ–ಪರಶಿವಲಿಂಗಕ್ಕೆ, ಕೊಟ್ಟಲ್ಲದೆ, ಸಮರ್ಪಣೆಯ ಮಾಡಿದಲ್ಲದೆ, ಉಣ್ಣನೆಂಬ–ಆತ್ಮಾರ್ಪಣ ವಾಗನುಭವಿಸೆನೆಂಬ, ಭಾಷೆ, ಪ್ರತಿಜ್ಞೆಯು. ಕೂಡಲಸಂಗಮದೇವಾ–ಎಲೆ ಪರಶಿಲಿಂಗವೆ, ನಿಮಗೆಂದು–ಸ್ವಾಮಿಗಳಿಗೆಂದು, ಅಟ್ಟ–ಪಾಕವ ಮಾಡಿದ, ಅಡಿಗೆಯ–ಪದಾರ್ಥವನ್ನು, ನೀಡಕಲಿಸಿದಾತ–ಸಕಲಪದಾರ್ಥವನ್ನು ಸಮರ್ಪಣೆಯ ಮಾಡೆಂದು ಅಭ್ಯಾಸಿಸಿದಾತನು, ನಮ್ಮ ಕೆಂಭಾವಿ ಭೋಗಯ್ಯ–ನಮ್ಮ ಕೆಂಭಾವಿ ಭೋಗಯ್ಯನೆಂಬ ಶಿವಶರಣನು.

IV -

1 + ಯ್ಯಾ (ತ), 2–2 ನ (ತ), 3–3 x (ತ), 4 + ಯ, (ತ)

....

ದೇಹ ಹುಸಿಯೆಂದಾಗಲೆ, ದೇಹಸಂಬಂಧವಾದಾಗಲೆ ದೇಹಸಂಬಂಧವಾದ ಪುತ್ರರು ಮುನ್ನವೆ ಹುಸಿ, ಹುಸಿಯಾದ ಪುತ್ರರು ಧನಕ್ಕೆ ಒಡೆಯರಾದ ಪರಿಯ ನೋಡಾ. ಸತ್ಯವಾದ ಲಿಂಗದಲ್ಲಿ ವಿಷವಮೃತವನು ಸಮರ್ಪಣೆಯ ಮಾಡಿದರು ಶರಣರು. ಭೋಗಯ್ಯನಿಂದ ನಡೆಯ ಕಲಿತನೆಂಬುದೀ ವಚನದರ್ಥ.

೭೩೫

ಅಂಗದ ಮೇಲಣ ಲಿಂಗ ಹಿಂಗಿ ಬಂದ ಸುಖವನಾರಿಗರ್ಪಿಸುವೆ? ಹಿಂಗಲಾಗದು ಲಿಂಗ ಭಕ್ತಿಪಥಕ್ಕೆ ಸಲ್ಲದಾಗಿ! ಹಿಂಗಲಾಗದು ಲಿಂಗ ಶರಣಪಥಕ್ಕೆ ಸಲ್ಲದಾಗಿ! ಕೂಡಲಸಂಗಮದೇವನ ಹಿಂಗಿನುಂಗಿದುಗಳು ಕಿಲ್ಬಿಷ!

I -

ಅಂಗಧ ಮೇಲಣ ಲಿಂಗ ಹಿಂಗಿ–ತನುವಿನ ಮೇಲೆ ಸಂಬಂಧವಾದ ಇಷ್ಟಮಹಾಲಿಂಗ ವಿರಹಿತವಾಗಿ, ಬಂದ–ಎಯ್ದು, ಬಂದಸುಖವನು–ಸ್ರಕ್ಚಂದನ ವನಿತಾದಿ ಪರಿಣಾಮವನ್ನು, ಆರಿಗರ್ಪಿಸುವೆ?–ಇನ್ನಾರಿಗೆ ಸಮರ್ಪಣೆಯ ಮಾಡುವೆನು? ಹಿಂಗಲಾಗದು ಲಿಂಗ–ಲಿಂಗಾರ್ಪಣವಿಹೀನವಾಗಿ ಆತ್ಮಾರ್ಪಣವಾಗಿ ಅನುಭವಿಸಲಾಗದು, ಭಕ್ತಿಪಥಕ್ಕೆ–ಶಿವಾದ್ವೈತಭಕ್ತಿಮಾರ್ಗಕ್ಕೆ, ಸಲ್ಲದಾಗಿ–ಸಲುವಳಿಯಾಗದಾಗಿ, ಹಿಂಗಲಾಗದು ಲಿಂಗ,ಲಿಂಗಾರ್ಪಣ ವಿಹೀನವಾಗಿ ಆತ್ಮಾರ್ಪಣವಾಗಿ ಅನುಭವಿಸಲಾಗದು, ಶರಣಪಥಕ್ಕೆ–ಶರಣನೇ ಸತಿಯಾಗಿ ಲಿಂಗವೇ ಪತಿಯಾಗಿ ಶರಣಪತಿ ಲಿಂಗಪತಿತ್ವವಿಡಿದಾಚರಿಸುವಂಥ ಶರಣಸ್ಥಲದ ಮಾರ್ಗಕ್ಕೆ, ಸಲ್ಲದಾಗಿ–ಸಲುವಳಿಯಾಗದಾಗಿ, ಕೂಡಲಸಂಗಮದೇವರ ಹಿಂಗಿ–ಅಂಗದಲ್ಲಿ ಲಿಂಗಸಂಬಂಧವಾದ ಇಷ್ಟಲಿಂಗವಿರಹಿತವಾಗಿ, ನುಂಗಿದ–ಆತ್ಮಾರ್ಪಣವಾಗಿ ಅನುಭವಿಸಿದ, ಉಗುಳು–ಮಧುರಾದಿ ಷಡ್ವಿಧ ರುಚಿಪದಾರ್ಥವು, ಕಿಲ್ಬಿಷ–ಹುಳುಗುಪ್ಪಿಗೆ ಸಮಾನವು.

೭೩೬

ಬತ್ತೀಸಾಯುಧದಲ್ಲಿ ಅಭ್ಯಾಸವ ಮಡಿದಡೇನು? ಹಗೆಯ ಕೊಲುವೊಡೆ ಒಂದಲಗು ಸಾಲದೆ? ಲಿಂಗವ ಗೆಲುವೊಡೆ 'ಶರಣ ಸತಿ ಲಿಂಗ ಪತಿ'ಯೆಂಬುದೊಂದಲಗು ಸಾಲದೆ ? ಎನಗೆ ನಿನಗೆ ಜಂಗಮಪ್ರಸಾದವೆಂಬುದೊಂದಲಗು ಸಾಲದೆ? ಕೂಡಲಸಂಗಮದೇವಾ.

I– -

ಬತ್ತೀಸಾಯುಧದಲ್ಲಿ–ಮೂವತ್ತೆರಡಾಯುಧಂಗಳಲ್ಲಿ, ಅಭ್ಯಾಸವ ಮಾಡಿದಡೇನು? –ಸಾಧನೆಯಮಾಡಿ ಅನುಗೈದರೇನು ? ಹಗೆಯ–ವೈರಿಯನು, ಕೊಲುವೊಡೆ–ಸಂಹರಿಸುವೊಡೆ, ಒಂದಲಗು ಸಾಲದೇ?–ಮೂವತ್ತೆರಡು ಆಯುಧಂಗಳಿದ್ದೇನು ಮಾಡುವುದಕ್ಕೆ, ಒಂದೆ ಆಯುಧವಿದ್ದರೆ ಸಾಲದೆ?–ಅಷ್ಟೇ ಸಾಲದೇ? ಅಷ್ಟೇ ಸಾಕು. ಲಿಂಗವ ಗೆಲುವೊಡೆ–ಶಿವನುಂಟುಮಾಡಿದ ಸಕಲಸಂಸಾರಪ್ರಪಂಚನ್ನು ಜಯಿಸಬೇಕಾದರೆ, ಶರಣಸತಿ ಲಿಂಗಪತಿಯೆಂಬ–ಶರಣನೇ ಸತಿಯಾಗಿ ಲಿಂಗವೇ ಪತಿಯಾಗಿ ಶರಣಸತಿ ಲಿಂಪತಿತ್ವವಿಡಿದಾಚರಿಸುವಂಥ, ಒಂದಲಗು ಸಾಲದೇ?–[ಒಂದಾಯುಧವು ಸಾಲದೇ?] ಅಷ್ಟೇ ಸಾಲದೆ? ಅಷ್ಟೇ ಸಾಕು. ಎನಗೆ–ಶರಣಂಗೆ, ನಿನಗೆ–ಲಿಂಗಕ್ಕೆ, ಜಂಗಮಪ್ರಸಾದವೆಂಬ–ಜಂಗಮದ ಶೇಷಪ್ರಸಾದ ಸೇವನೆಯೆಂಬ, ಒಂದಲಗು ಸಾಲದೆ?–ಒಂದಾಯುಧವು ಸಾಲದೆ? ಅಷ್ಟೇ ಸಾಲದೆ? ಅಷ್ಟೇ ಸಾಕು. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

ಮಾಹೇಶ್ವರನ ಪ್ರಾಣಲಿಂಗಿಸ್ಥಲ

I -

ಮಾಹೇಶ್ವರನ ಪ್ರಾಣಲಿಂಗಿಸ್ಥಲ–ಮಾಹೇಶ್ವರಸ್ಥಲದೊಳಗಣ ಪ್ರಾಣಲಿಂಗಿಸ್ಥಲದಾಚರಣೆಯನ್ನು ನಿರೂಪಿಸುತ್ತಿಹರು.

೭೩೭

ಕೊಲ್ಲೆನಯ್ಯ ಪ್ರಾಣಿಗಳ, ಮೆಲ್ಲೆನಯ್ಯ ಬಾಯಿಚ್ಚೆಗೆ, ಒಲ್ಲೆನಯ್ಯ, ಪರಸತಿಯರ ಸಂಗವ, ಬಲ್ಲೆನಯ್ಯ ಮುಂದೆ ತೊಡಕುಂಟೆಂಬುದ! ಬಳ್ಳದ ಬಾಯಂತೆ ಒಂದೇ ಮನವ ಮಾಡಿ ನಿಲ್ಲೆಂದು ನಿಲಿಸಯ್ಯ, ಕೂಡಲಸಂಗಮದೇವಾ.

I– -

ಕೊಲ್ಲೆನಯ್ಯ ಪ್ರಾಣಿಗಳ,–ನಿರಪರಾಧಿ ಜೀವರುಗಳ, ಕೊಲ್ಲೆನಯ್ಯ–ಪ್ರಾಣಹಿಂಸೆಯ ಮಾಡೆನಯ್ಯ, ಬಾಯಿಚ್ಚೆಗೆ–ಷಡ್ರುಚಿಗಳಲ್ಲಿ ಎರಕವಾಗಿರುವ ಜಿಹ್ವಾಲಂಪಟತ್ವದ ಪ್ರೀತಿಗೆ, ಮೆಲ್ಲೆನಯ್ಯ–ಆತ್ಮಾರ್ಪಣವಾಗಿ ಅನುಭವಿಸೆನಯ್ಯ, ಒಲ್ಲೆನಯ್ಯ ಪರಸತಿಯರ ಸಂಗವ: ಪರಸತಿಯವರ–ಅನ್ಯಸ್ತ್ರೀಯರ, ಸಂಗವ–ಸಂಸರ್ಗವನ್ನು, ಒಲ್ಲೆನಯ್ಯ–ಮಾಡಲೊಲ್ಲೆನಯ್ಯ, ಮುಂದೆ–ದೇಹಾಂತ್ಯಕ್ಕೆ, ತೊಡಕುಂಟೆಂಬುದ–ಜನನ ಮರಣಂಗಳೆಂಬ ಗೊಜಡುಂಟೆಂದು ಹೇಳುವಂಥದು, ಬಲ್ಲೆನಯ್ಯ–ಅರಿದು ಬಲ್ಲೆನಯ್ಯ.

ಬಳ್ಳದ ಬಾಯಿಯಂತೆ–ಹದಿನೆಂಟು ಧಾನ್ಯಂಗಳನು ಅಳೆವುದಕ್ಕೆ ಪ್ರಸ್ತದ ಬಾಯಿ ಒಂದೇಯಲ್ಲದೆ ಧಾನ್ಯಕೊಂದೊಂದು ಬಾಯುಂಟೆ? ಇಲ್ಲವು ಹಾಂಗೆ, ಬಳ್ಳದ ಬಾಯಹಾಂಗೆ, ಒಂದೇ ಮನವ ಮಾಡಿ–ಒಂದೇ ಉನ್ಮನಿಯ ಮನಸವ ಮಾಡಿ, ನಿಲ್ಲೆಂದು ಲಿಂಗದಲ್ಲಿ ತರಹರವಾಗೆನುತ್ತ, ನಿಲಿಸಯ್ಯ–ಅಂತರಂಗದಲ್ಲಿ ಪ್ರಾಣಲಿಂಗವಾಗಿ ನೆಲೆಗೊಳಿಸಯ್ಯ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

೭೩೮

ಆನೆ ಅಂಕುಶಕ್ಕಂಜುವುದೆ ಅಯ್ಯ? ಮಾಣದೆ ಸಿಂಹದ ನಖವೆಂದಂಜುವುದಲ್ಲದೆ, ಅನು ಈ ಭವಿ ಬಿಜ್ಜಳಂಗಂಜುವೆನೆ ಅಯ್ಯ? ಕೂಡಲಸಂಗಮದೇವಾ, ನೀವು ಸರ್ವಜೀವದಯಾ ಪಾರಿಯಾದ ಕಾರಣ ನಿಮಗಂಜುವೆನಲ್ಲದೆ.

I -

ಆನೆ ಅಂಕುಶಕ್ಕಂಜುವುದೆ ಅಯ್ಯ: ಆನೆ-ಮತ್ತಮದಹಸ್ತಿಯು, ಅಂಕುಶಕ್ಕೆ-ಶೃಣಿಗೆ, ಅಂಜುವುದೆ-ಹೆದರುವುದೆ, ಅಯ್ಯ-ಎಲೆ ಲಿಂಗವೆ, ಮಾಣದೆ-ಬಿಡದೆ, ಸಿಂಹದ-ಕಂಠೀರವನ, ನಖವೆಂದು-ಉಗುರೆನುತ್ತ, ಅಂಜುವುದಲ್ಲದೆ-ಹೆದರುವುಲ್ಲದೆ, ಆನು-ಸಂಗನಬಸವೇಶ್ವರನು, ಈ ಭವಿ ಬಿಜ್ಜಳಂಗೆ, ಚಾಳೋಕ್ಯರಾಯನ ಪುತ್ರನಾದ ಬಿಜ್ಜಳರಾಯನೆಂಬ ಹುಲ್ಲು ಮನುಜಂಗೆ, ಅಂಜುವೆನೆ-ಹೆದರುವೆನೆ, ಅಯ್ಯ-ಎಲೆ ಲಿಂಗವೆ, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ, ನೀವು ಸರ್ವಜೀವದಯಾಪಾರಿಯಾದ ಕಾರಣ-ಸರ್ವಜೀವದಯಾಚಿತ್ತಕಾರುಣ್ಯರಸಭರತತ್ವ ಮುಂದುಗೊಂಡು ಸಮಸ್ತಪ್ರಾಣಿಗಳ ಮೇಲಣ ಕೃಪೆಯುಳ್ಳಾತನಾಗಿ ನೆಲಸಿರುವ ನಿಮಿತ್ತ, ನಿಮಗಂಜುವೆನಲ್ಲದೆ-ಅವನು ಶಿವನಿಂದ ಉಂಟಾದ ಪ್ರಾಣಿ ಅವನಲ್ಲಿ ಶಿವನುಂಟಾಗಿರ್ಪನೆಂದು, ನಿಮಗೆ-ಪರಶಿವಲಿಂಗಕ್ಕೆ, ಅಂಜುವೆನಲ್ಲದೆ-ಹೆದರುವೆನಲ್ಲದೆ, ಈ ಭವಿ ಬಿಜ್ಜಳನೆಂಬ ಹುಲ್ಲುಮನುಜಂಗಂಜುವೆನೆ? ಅಂಜೆನು.

೭೩೯

ಬಂದಿಹೆನೆಂದು ಬಾರದಿರ್ದಡೆ ಬಟ್ಟೆಗಳ ನೋಡುತ್ತಿರ್ದ್ದೆನಯ್ಯ, ಇನ್ನಾರನಟ್ಟುವೆ, ಇನ್ನಾರನಟ್ಟುವೆ, ಇನ್ನಾರ ಪಾದವ ಹಿಡಿವೆನಯ್ಯ? ಕೂಡಲಸಂಗನ ಶರಣರು ಬಾರದಿರ್ದಡೆ ಅಟ್ಟುವೆನೆನ್ನ ಪ್ರಾಣವನು!

I -

ಬಂದಿಹೆನೆಂದು-ಪ್ರಭುಸ್ವಾಮಿಗಳು ಸೊನ್ನಲಾಪುರಕ್ಕೆ ಹೋಗಿ ಸಿದ್ಧರಾಮೇಶ್ವರನ ಕೂಡಿಕೊಂಡು ಕಲ್ಯಾಣಪಟ್ಟಣಕ್ಕೆ ಬಂದು ಬಸವೇಶ್ವರಸ್ವಾಮಿಗಳೊಂದಿಗೆ ಬಿನ್ನವನ್ನು ಕೈಕೊಂಡು ನಾವು ಇತ್ತ ಸವಾಲಕ್ಷ ಯೋಜನಪರ್ವತಕ್ಕೆ ದೇಶಾಂತರಿಯ ಹೋಗಿ ಬರುತ್ತೈದೇವೆಂದು ಹೇಳಿದಲ್ಲಿ, ಆಗ ಬಸವೇಶ್ವರನು ಸ್ವಾಮಿ ನೀವು ಬರುವುದಕ್ಕೂ ನೀವು ಬಾರದಕ್ಕೂ ಕುರುಹುವೇನೆಂದು ಬಿನ್ನಪಂಗೆಯ್ದು ಕೇಳಿದಲ್ಲಿ ನೀನು ಶೂನ್ಯ ಸಿಂಹಾಸನವನ್ನು ರಚಿಸು. ಅದರ ಮೇಲೆ ಯಾರು ಬಂದು ಮೂರ್ತವ ಮಾಡುತ್ತೈದಾರೋ ಅವರೇ ನಾವೆಂದು ತಿಳಿ. ಇಲ್ಲಿಗೆ ಹನ್ನೆರಡು ವರುಷ ತುಂಬೋದರೊಳಗೆ ಬರುತ್ತೈದೇವಿಯೆಂದು ಹೇಳಿ ಇತ್ತ ಸವಾಲಕ್ಷ ಯೋಜನಪರ್ವತಕ್ಕೆ ದೇಶಾಂತರವನ್ನು ಹೋಗಿ ಪಶ್ಚಿಮದ ಗವಿಯಲ್ಲಿ ಶಿವಯೋಗಕ್ಕೆ ಮೂರ್ತವ ಮಾಡಿಕೊಂಡಿರ್ದಲ್ಲಿ ಹನ್ನೆರಡು ವರುಷವಾಗುವುದು.[೧] ಹನ್ನೆರಡು ವರುಷ ತುಂಬೋದರೊಳಗೆ ಕಲ್ಯಾಣ ಪಟ್ಟಣಕ್ಕೆ ಬಿಜಯಂಗೆಯ್ದು ಬಂದು ಶೂನ್ಯಸಿಂಹಾಸನದ ಮೇಲೆ ಮೂರ್ತವ ಮಾಡಿಕೊಂಡಿಹೆನೆನುತ್ತ, ಬಾರದಿರ್ದಡೆ ಪ್ರಭುಸ್ವಾಮಿಗಳು ಹನ್ನೆರಡು ವರುಷ ತುಂಬೋದರೊಳಗಾಗಿ ಕಲ್ಯಾಣಪಟ್ಟಣಕ್ಕೆ ಬಿಜಯಂಗೆಯಿದು ಶೂನ್ಯಸಿಂಹಾಸನದ ಮೇಲೆ ಮೂರ್ತವ ಮಾಡಿಕೊಳಬೇಕು. ಮೂರ್ತವ ಮಾಡಿಕೊಳುವುದಕ್ಕೆ ಬಾರದೆ ತಡವಾದರೆ, ಬಟ್ಟೆಗಳ ನೋಡುತ್ತಿರ್ದೆನಯ್ಯ-ಕಲ್ಯಾಣಪಟ್ಟಣದ ನಾಲ್ಕು ಮಾರ್ಗಕ್ಕೆ ಕಾಪಿನಾಳುಗಳ ಕಳುಹಿಕೊಟ್ಟು ಮಾರ್ಗಮಾರ್ಗವನ್ನು ನಿರೀಕ್ಷಣೆಯ ಮಾಡುತ್ತಿರ್ದೆನಯ್ಯ.

ಇನ್ನಾರನಟ್ಟುವೆ-ಪ್ರಭುಸ್ವಾಮಿಗಳ ಬಿನ್ನಹವನ್ನು ಮಾಡಿ ಬಿಜಯಂಗೆಯ್ಸಿ ತನ್ನಿಯೆಂದು ಕಿನ್ನರಿಯ ಬ್ರಹ್ಮಯ್ಯಗಳ ಕಳುಹಿಕೊಡಲೋ. ಇನ್ನಾರನಟ್ಟುವೆ-ಹಡಪದಪ್ಪಣ್ಣಗಳ ಕಳುಹಿಕೊಡಲೋ. ಇನ್ನಾರ ಪಾದವ ಹಿಡಿವೆನಯ್ಯ-ಮಡಿವಾಳಸ್ವಾಮಿಗಳ ಪಾದವ ಹಿಡಿದು ಬಿನ್ನಹವ ಮಾಡಿ ಕಳುಹಿ

ಕೊಡಲೋ, ಕೂಡಲಸಂಗನ ಶರಣರು-ಅಲ್ಲಮಪ್ರಭುಸ್ವಾಮಿಗಳು, ಬಾರದಿರ್ದಡೆ-ಹನ್ನೆರಡು ವರುಷ ತುಂಬೋದರೊಳಗೆ ಕಲ್ಯಾಣ ಪಟ್ಟಣಕ್ಕೆ ಬಂದು ಶೂನ್ಯಸಿಂಹಾಸನದ ಮೇಲೆ ಮೂರ್ತವ ಮಾಡಿಕೊಳಬೇಕು. ಮೂರ್ತವ ಮಾಡಿಕೊಂಬುವುದಕ್ಕೆ ಪ್ರಭುಸ್ವಾಮಿಗಳು ಬಾರದೆ ತಡವಾದರೆ, ಅಟ್ಟುವನೆನ್ನ ಪ್ರಾಣವನು-ಎನ್ನ ಹರಣವನು ಬಿಡುವೆನೆಂಬ ದೃಷ್ಟೋಪಮಾನದ ಹಾಂಗೆ.

● ಬಂದಿಹೆನೆಂದು-ಇಷ್ಟಲಿಂಗದ ಚಿತ್ಕಳೆಯೇ ಅಂತರಂಗದಲ್ಲಿ ಪ್ರಾಣಲಿಂಗವಾಗಿ ನೆಲೆಗೊಳ್ಳಬೇಕೆಂದು, ಬಾರದಿರ್ದಡೆ-ಇಷ್ಟಲಿಂಗದ ಚಿತ್ಕಳೆಯೇ ಅಂತರಂಗದಲ್ಲಿ ಪ್ರಾಣಲಿಂಗವಾಗಿ ನೆಲೆಗೊಳ್ಳಬೇಕು, ನೆಲೆಗೊಳ್ಳದಿರ್ದಡೆ, ಬಟ್ಟೆಗಳ ನೋಡುತ್ತಿದ್ದೇನಯ್ಯ-ಆ ಇಷ್ಟಲಿಂಗಕ್ಕೆ ಅಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳಿಂದಾರಾಧಿಸಿ ಅನಿಮಿಷದೃಷ್ಟಿಯಿಂದ ನಿರಿಕ್ಷಣೆಯ ಮಾಡುತ್ತಿರ್ದೆನಯ್ಯಾ. ಇನ್ನಾರನಟ್ಟುವೆ-ಆ ಇಷ್ಟಲಿಂಗದ ಚಿತ್ಕಲೆಯೇ ಅಂತರಂಗದಲ್ಲಿ ಪ್ರಾಣಲಿಂಗವಾಗಿ ಸಂಬಂಧವ ಮಾಢಕೊಂಡಿರೆಂದು[೨] ದೀಕ್ಷಾಗುರುದೇವನ ಬೆಸಗೊಳ್ಳಲೋ. ಇನ್ನಾರ ಪಾದವ ಹಿಡಿವೆನಯ್ಯ-ಇಷ್ಟಲಿಂಗದ ಚಿತ್ಕಳೆಯೇ ಅಂತರಂಗದಲ್ಲಿ ಪ್ರಾಣಲಿಂಗವಾಗಿ ಸಂಬಂಧವ ಮಾಡಕೊಂಡಿರೆಂದು ಮಹಾಜ್ಞಾನಗುರುದೇವನ ಬೆಸಗೊಳಲೋ, ಕೂಡಲಸಂಗನ ಶರಣರು ಬಾರದಿರ್ದಡೆ-ಇಷ್ಟಲಿಂಗದ ಚಿತ್ಕಳೆಯೇ ಅಂತರಂಗದಲ್ಲಿ ಪ್ರಾಣಲಿಂಗವಾಗಿ ನೆಲೆಗೊಳ್ಳಬೇಕು. ನೆಲೆಗೊಳ್ಳದೆ ಇದ್ದರೆ, ಅಟ್ಟುವೆನೆನ್ನ ಪ್ರಾಣವನು-ಎನ್ನ ಪ್ರಾಣವನ್ನು ಪ್ರಾಣಲಿಂಗದಲ್ಲಿ ಸಾಮರಸ್ಯವ ಮಾಡುವೆನು.

....

೧+ ಹನ್ನೆರಡು ವರುಷವಾದ ಮೇಲೆ (ಕ, ಗ), ೨-೨ + ೦ (ಕ, ಗ)

ಮಾಹೇಶ್ವರನ ಶರಣಸ್ಥಲ

I -

ಮಾಹೇಶ್ವರನ ಶರಣಸ್ಥಲ-ಮಾಹೇಶ್ವರಸ್ಥಲದೊಳಗಣ ಶರಣಸ್ಥಲದಾಚರಣೆಯನ್ನು ನಿರೂಪಿಸುತ್ತಿಹರು.

೭೪೦

ಅರಸರು [1]ಮಂಚಕ್ಕೆ ಬರಸಿ ಎನ್ನ ಬೆರಸಿದ[1] ಬಳಿಕ ಆನಂಜುವಳೇ? ಆನು ಸಿರಿಯಕ್ಕನು. ಪರುಷ ಮುಟ್ಟಿದ ಬಳಿಕ ಲೋಹವೇ? ಕೂಡಲಸಂಗಮದೇವ ಎನ್ನನೊಲ್ಲದಡಾನು ಬದುಕುವೆನೆ?

I -

ಅರಸರು ಮಂಚಕ್ಕೆ ಬರಸಿ : ಅರಸರು-ದೊರೆಗಳು, ಮಂಚಕ್ಕೆ ಬರಸಿ-ಪರ್ಯ್ಯಂಕದ ಮೇಲೆ ಬರಸಿಕೊಂಡು, ಎನ್ನ ಬೆರೆಸಿದ ಬಳಿಕ-ದೊರೆಯೆನ್ನ ಸಂಸರ್ಗವ ಮಾಡಿದ ಮೇಲೆ, ಆನಂಜುವಳೇ-ಮಿಕ್ಕಿನ ಗೌಡಿ ಗುಲಾಮರಿಗೆ ನಾನು ಹೆದರುವೆನೆ? ಹೆದರೆನು ಆನು ಸಿರಿಯಕ್ಕನು-

ನಾನು ಐಶ್ವರ್ಯವುಳ್ಳಾಯಕಳು, ಪರುಷ ಮುಟ್ಟಿದ ಬಳಿಕ–ಅರಸು ಸಂಸರ್ಗವ ಮಾಡಿದ ಮೇಲೆ, ಲೋಹವೇ?–ಎಲ್ಲಾ ಗೌಡಿಗಳೊಳಗೆ ಇದೂ ಒಂದು ಗೌಡಿಯೆಂಬ ಭಾವವುಂಟೆ? ಇಲ್ಲವು ಕೂಡಲಸಂಗಮದೇವ–ರಾಜನು, ಎನ್ನ ಒಲ್ಲದೊಡೆ–ನನ್ನ ಒಳಗಾಗದಿರ್ದರೆ, ಆನು ಬದುಕುವೆನೆ?–ನಾನು ಜೀವಿಸುವೆನೆ? ಜೀವಿಸೆನೆಂಬ ದೃಷ್ಟೋಪಮಾನದ ಹಾಂಗೆ.

● ಅರಸರು–ರಾಜಾಧಿರಾಜ ಕೂಡಲಸಂಗಯ್ಯನೆಂಬ ಪ್ರಾಣಲಿಂಗದೇವರು, ಮಂಚಕ್ಕೆ ಬರಸಿ–ಚತುರ್ವಿಧಲಿಂಗದಾಚರಣೆಯನ್ನು ಅರುಹಿಕೊಟ್ಟು ಎನ್ನ ಬೆರಸಿದ ಬಳಿಕ–ಚತುರ್ವಿಧ ಅಂಗದಲ್ಲಿ ಚತುರ್ವಿಧಲಿಂಗವಾಗಿ ನೆಲೆಗೊಂಡ ಮೇಲೆ, ಆನಂಜುವಳೇ–ಅಂಗಮನಪ್ರಾಣಾತ್ಮಂಗಳ ವರ್ತನೆಗೆ ಹೆದರುವೆನೆ? ಹೆದರೆನು. ಆನು ಸಿರಿಯಕ್ಕನು–ನಾನು ಸರ್ವಾಚಾರಸಂಪತ್ತಿನಾಚರಣೆ ಕ್ರೀಯಗಳ ಐಶ್ವರ್ಯವುಳ್ಳಾಯಕಳು, ಪರುಷ ಮುಟ್ಟಿದ ಬಳಿಕ–ಪರಮಪಾವನ ಪವಿತ್ರಸ್ವರೂಪವಾದ ಮಹಾಘನಲಿಂಗವೇ ಗೂರುಪದೇಶದಿಂದ ಇಷ್ಟಲಿಂಗವಾಗಿ ಬಂದು ಅಂಗದಲ್ಲಿ ಸಂಬಂಧವಾಗಲು, ಲೋಹವೇ?–ಆಚಾರಾಂಗಜ್ಞಾನಕಾಯವಾಗಿರ್ಪುದಲ್ಲದೆ ಭೂತಕಾಯಜಡಕಾಯವುಂಟೆ? ಇಲ್ಲವು ಕೂಡಲಸಂಗಮದೇವಾ–ಎಲೆ ಪರಶಿವ ಲಿಂಗವೆ, ಎನ ಬಲ್ಲದೊಡೆ–ಚತುರ್ವಿಧ ಅಂಗದಲ್ಲಿ ಚತುರ್ವಿಧಲಿಂಗಸಂಬಂಧವಾಗಿ ನೆಲೆಗೊಳಬೇಕು. ನೆಲೆಗೊಳ್ಳದೆ ಇರ್ದಡೆ, ಆನು ಬದುಕುವೆನೆ?–ನಾನು ಕೃತಾರ್ಥನಾದೇನೆ? ಕೃತಾರ್ಥನಾಗೆನು.

II– –

1–1 ಎನ್ನ ಮಂಚಕ್ಕ ಬರಿಸವೆರಸಿದ (ಚ. ಜ), 2ನೇ(ಚ. ಜ)

....

ಅರಸರು–ಪರಮಾತ್ಮಸ್ವರೂವಾದ ಶಿವಾನುಭಾವಿಗಳು, ಎನ್ನ ಮಂಚಕ್ಕೆ ಬರಿಸವೆರಸಿದ ಬಳಿಕ–ಭಕ್ತಿಜ್ಞಾನವೈರಾಗ್ಯ ಐಶ್ವರ್ಯವೆಂಬ ಚತುರ್ವಿಧವು ಕೀಲೈಸಿದ ಪರ್ಯಂಕಕೆ ಆಗತವ ಮಾಡಿಸಿ ಶರಣಸತಿಯ ಕೂಡಿದ ಮೇಲೆ, ಆನಂಜುವಳೆ?–ಶರಣಸತಿಯು ಕಲಿಕಾಲಕಾಮಮಾಯಾದಿಗಳಿಗೆ ಹೆದರುವೆನೆ? ಆನು ಸಿರಿಯಕ್ಕನೇ?–ಶರಣಸತಿಯು ಚಿದೈಶ್ವಯ್ಯ ಚೆಲ್ವಿಕೆಯನುಳ್ಳಾಯಕಳು, ಪರುಷ ಮುಟ್ಟದ ಬಳಿಕ–ಮಹಾಜ್ಞಾನವೆಂಬ ಪಾಂಡುರವು ಸೋಂಕಿದ ಮೇಲೆ, ಲೋಹವೇ?–ಪಂಚಕರಣ ಸಪ್ತಧಾತುಯುಕ್ತವಾದ ದೇಹಭಾವವಿದ್ದೀತೆ? ಕೂಡಲಸಂಗಮದೇವ ಎನ್ನನೊಲ್ಲದಡಾನು ಬದುಕುವೆನೆ?–ಪರಶಿವಲಿಂಗವು ಶರಣಸತಿಯ ಮಚ್ಚಲೊಲ್ಲದಡೆ ಆನು ಜೀವಿಸುವೆನೆ?

೭೪೧

ಎಲ್ಲಿ ಹೊಕ್ಕಲ್ಲಿ ನಿನ್ನ ವಿಕಾರವ ಮಾಣೆ: ಗರುವತನವೇ? ದಾಸನ ವಸ್ತ್ರವ [1]ಸೀಳಿದ್ದೊಂದು[1] ಗುರುವತನವೆ? ಸಿರಿಯಾಳನ ಮಗನ [2]ಬೇಡಿದ್ದೊಂದು[2] ಗರುವತನವೇ? [3]ಬಲ್ಲಾಳನ ವಧುವ ಬೇಡಿದ್ದೊಂದು ಗರುವತನವೆ?[3] ಕೋಡಗವ ಹುಲ್ಲಲ್ಲಿ [4]ಮುಸುಕಿಟ್ಟಂತೆ[4] ಕೂಡಲಸಂಗಮದೇವಾ ನಿ[5]ಮ್ಮ[5] ಪರಿ!

I– –

ಎಲ್ಲಿ ಹೊಕ್ಕಲ್ಲಿ–ನೀನಾರಂಗದಲ್ಲಿ ಕೃಪೆಯಾಗಿ ಇಷ್ಟಲಿಂಗವಾಗಿ ನೆಲೆಗೊಂಡು ಅಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳನು ಕೈಕೊಂಡು ಕಿಂಚಿದ್ದಳಚುಳಕೋದಕಂಗಳಿಂದ ಆರಾಧಿಸಿಕೊಂಬುತಿದ್ದಿಯೋ, ಅಲ್ಲಿ–ಅವರಂಗದಲ್ಲಿ, ನಿನ್ನ ವಿಕಾರವ–ಲಕ್ಷ್ಮೀಯ ಐಶ್ವರ್ಯ ದೇವೇಂದ್ರನ ಪದವಿ ಮೊದಲಾದುವನ್ನು ಕರುಣಿಸಿಕೊಡುತ್ತೈದೀನಿಯಂಬುವಂಥದನು, ಮಾಣೇ–ಬಿಡೆನು, ಗರುವತನವೆ!–ನಿನಗೊಂದು ಹಿರಿಯತನವೆ?

ದಾಸನ ವಸ್ತ್ರವ ಸೀಳಿದ್ದೊಂದು ಗರುವತನವೆ: ದಾಸಮಯ್ಯನ, ವಸ್ತ್ರವ–ಹನ್ನೆರಡು ವರುಷ ನೆಯ್ದಂಥ ಪಂಚವಣ್ಣಿಗೆಯ ದೇವಾಂಗವನ್ನು, ಸೀಳಿದ್ದು–ತೆಗೆದುಕೊಂಡು ಹರಿದೆನೆಂದು ಹೇಳುವಂಥದು, ಒಂದು ಗರುವತನವೆ–ನಿಮಗೊಂದು ಹಿರಿತನವೆ, ಸಿರಿಯಾಳನ ಮಗನ ಬೇಡಿದ್ದೊಂದು ಗರುವತನವೇ: ಸಿರಿಯಾಳನ–ಕಂಚಿಪಟ್ಟಣದ ಸಿರಿಯಾಳಸೆಟ್ಟಿಯ, ಮಗನ–ಏಳು ವರುಷದ ಕುಮಾರನಾದ ಚೀಲಾಳಯ್ಯನ, ಬೇಡಿದ್ದೊಂದು–ಯಾಚಿಸಿ ತೆಗೆದುಕೊಂಡು ಕೊರೆದು ಬಾಣಸವ ಮಾಡಿಸಿದೆನೆಂಬುವಂಥದು, ಗರುವತನವೆ–ನಿಮಗೊಂದು ಹಿರಿಯತನವೆ.

ಬಲ್ಲಾಳನ ವಧುವ ಬೇಡಿದ್ದೊಂದು ಗರುವತನವೆ: ಬಲ್ಲಾಳನ–ಸಿಂಧುಬಲ್ಲಾಳರಾಯನ, ವಧುವ–ಹನ್ನೆರಡು ವರುಷದ ಪಟ್ಟದಂಗನೆಯುನ್ನು, ಬೇಡಿದ್ದೊಂದು–ಯಾಚಿಸಿ ತೆಗೆದುಕೊಂಡೆನೆಂಬುವಂಥದು, ಗರುವತನವೆ–ನಿಮಗೊಂದು ಹಿರಿಯತನವೆ, ಕೋಡಗವ ಹುಲ್ಲಲ್ಲಿ ಮುಸುಕಿಟ್ಟಂತೆ–ಮಾವಿನಕಾಯಿ ಬಾಳೆಕಾಯಿ ಮೊದಲಾದವನು ಒತ್ತಿಹಾಕಿದರೆ ಇದ್ದ ಸ್ಥಾನದಲ್ಲಿ ಇರುವುದಲ್ಲದೆ, ಕೋಡಗವ–ಕಪಿಯನ್ನು, [ಹುಲ್ಲಲ್ಲಿ ಮುಸುಕಿಟ್ಟಂತೆ–] ಹಿಡಿದುಕೊಂಡು ಬಂದು ಹುಲ್ಲಿನೊಳಗೆ ಹೊಗಿಸಿ ಮೇಲೆ ಹುಲ್ಲನ್ನು ಮುಚ್ಚಿದರೆ, ಸುಮ್ಮನಿರದೆ ಬಗೆದುಕೊಂಡು ಹೇಂಗೆ ಏಳುತ್ತಿಹುದೋ ಹಾಂಗೆ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ ಪರಿ–ನಿಮ್ಮನಾರು ಕಿಂಚಿದ್ದಳಚುಳಕೋದಕಂಗಳಿಂದ ಆರಾಧಿಸುತ್ತಿಹರೋ ಅವರಿಗೆ ಲಕ್ಷ್ಮೀಯ ಐಶ್ವರ್ಯ ದೇವೇಂದ್ರನ ಪದವಿ ಮೊದಲಾದುವನ್ನು ಕರುಣಿಸಿ ಕೊಡುತ್ತೈದೀನಿಯೆಂಬುವಂಥದು, ನಿಮ್ಮ ಪರಿ–ನಿಮ್ಮ ನಿಲುಕಡೆಯು.

IV –

1–1 ನುಡುವುದೊಂದು (ತ), 2–2– ಬೇಡುವುದೊಂದು(ತ) 3–3 x (ತ) 4–4 ಮುಸುಕಿದಂತೆ (ತ), 5–5 ನ್ನ(ತ).

....

ವಿಕಾರವಿಲ್ಲದ ಬ್ರಹ್ಮದಲ್ಲಿ ವಿಕಾರವ ಕಂಡು, ಶರಣರು ಸರಸವನಾಡಿ ದಾಸನ ವಸ್ತ್ರವನುಡುವುದು, ಸಿರಿಯಾಳನ ಮಗನ ಬೇಡುವುದು ಗರುವತನವೆಂಬುದೀ ವಚನದರ್ಥ.

೭೪೨

ಸಿರಿಯಾಳನ ಮಗನ ಬಾಣಸವ ಮಾಡಿಸಿ ಉಣಲೊಲ್ಲದೆ ಕಾಡಿದೆ, ಚೋಳನ ಮನೆಯಲ್ಲುಣಲೊಲ್ಲದೆ ಕಾಡಿದೆ, ಚೆನ್ನಯ್ಯನ ಮನೆಯಲುಂಡೆ, ಒಬ್ಬರಿಗೊಂದು ಪರಿಯಮಾಡಿದೆ ಕೂಡಲಸಂಗಮದೇವಾ!

I -

ಸಿರಿಯಾಳನ–ಕಂಚಿಪಟ್ಟಣದ ಸಿರಿಯಾಳಸೆಟ್ಟಿಯ, ಮಗನ–ಏಳು ವರುಷದ ಕುಮಾರನಾದ ಚೀಲಾಳಯ್ಯನ, ಬಾಣಸವ ಮಾಡಿಸಿ–ಬಾಗಿನವನನುಗೆಯಿಸಿ, ಉಣಲೊಲ್ಲದೆ–ಅನುಭವಿಸಲೊಲ್ಲದೆ, ಕಾಡಿದೆ–ಪೀಡಿಸಿದೆ, ಚೋಳನ–ಕರಿಕಾಲ ಚೋಳರಾಯನ, ಮನೆಯಲ್ಲಿ–ಮಂದಿರದಲ್ಲಿ, ಉಣಲೊಲ್ಲದೆ–ಅನುಭವಿಸಲೊಲ್ಲದೆ, ಕಾಡಿದೆ–ಪೀಡಿಸಿದೆ. ಚೆನ್ನಯ್ಯನ–ಮಾದಾರ ಚೆನ್ನಯ್ಯನ, ಮನೆಯಲ್ಲಿ–ಗೃಹದಲ್ಲಿ, ಉಂಡೆ–ಅಂಬಕಳವನನುಭವಿಸಿ ಸಾಯುಜ್ಯ ಪದವಿಯನ್ನು ಕರುಣಿಸಿಕೊಟ್ಟೆ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಒಬ್ಬರಿಗೊಂದು ಪರಿಯಮಾಡಿದೆ–ಸಿರಿಯಾಳಸೆಟ್ಟಿಗೆ ಪ್ರಾಣಪ್ರಸಾದವ ಕರುಣಿಸಿಕೊಟ್ಟೆ, ಕರಿಕಾಲ ಚೋಳನಿಗೆ ಹೊನ್ನಮಳೆ ಕರೆಸಿದೆ ಮಾದಾರ ಚೆನ್ನಯ್ಯನಿಗೆ ಸಾಯುಜ್ಯಪದವಿಯ ಕರುಣಿಸಿಕೊಟ್ಟು ಒಬ್ಬರಿಗೊಂದು ಒಬ್ಬರಿಗೊಂದು ರೀತಿಯ ಮಾಡಿದೆ.

೭೪೩

ಒಬ್ಬನ ಮನೆಯಲುಂಡು ಹೊತ್ತುಗ[1]ಳೆದೆ,[1] ಒಬ್ಬನ ಮನೆಯಲುಡಲೊಂದು ಗಳಿಸಿದೆ, ಗರ್ವ ಬೇಡ ಬೇಡ ನಿನಗೆ! ಚೆನ್ನಯ್ಯನ ಮನೆಯಲಂಬಲಿಯನುಂಡು ಬದುಕಿದೆ, ಗರ್ವ ಬೇಡ ಬೇಡ! ಕೂಡಲಸಂಗಮದೇವಾ ಸಿರಿಯಾಳನಿಂದ ಮಾನಸ ಲೋಕಂಗಂಡೆ!

I -

ಒಬ್ಬನ ಮನೆಯಲುಂಡು–ಸಿರಿಯಾಳಸೆಟ್ಟಿಯ ಗೃಹದಲ್ಲಿ ಅನುಭವಿಸಿ, ಹೊತ್ತುಗಳೆದೆ–ವೇಳೆಗಳೆದೆ, ಒಬ್ಬನ ಮನೆಯಲು–ಜಾಡರ ದಾಸಿಮಯ್ಯನ ಗೃಹದಲ್ಲಿ, ಉಡಲೊಂದು ಗಳಿಸಿದೆ–ಆಚ್ಛಾದಿಸಿಕೊಂಬುವುದಕ್ಕೊಂದು ಪಾವುಡವನ್ನು ಪ್ರಾಪ್ತಿಯ ಮಾಡಿಕೊಂಡೆ, ನಿನಗೆ–ಪರಶಿವಲಿಂಗಕ್ಕೆ, ಗರ್ವ ಬೇಡ ಬೇಡ–ಅಹಂಕಾರವು ಬೇಡ ಬೇಡವು, ಚೆನ್ನಯ್ಯನ ಮನೆಯಲ್ಲಿ–ಮಾದಾರ ಚೆನ್ನಯ್ಯನ ಗೃಹದಲ್ಲಿ, ಅಂಬಲಿಯನುಂಡು–ಅಂಬಕಳವನನುಭವಿಸಿ, ಬದುಕಿದೆ–ಜೀವಿಸಿದೆ, ಕೂಡಲ ಸಂಗಮದೇವಾ–ಎಲೆ ಪರಶಿವಲಿಂಗವೆ. ಗರ್ವ ಬೇಡ ಬೇಡ–ಹಿರಿಯತನವು ಬೇಡ ಬೇಡ, ಸಿರಿಯಾಳನಿಂದ–ಕಂಚಿಪಟ್ಟಣದ ಸಿರಿಯಾಳ ಸೆಟ್ಟಿಯಿಂದ, ಮಾನಸಲೋಕಂಗಂಡೆ–ಭೂಪ್ರದಕ್ಷಿಣವ ಮಾಡಿದೆ.

III– -

1–1 ಳವೆ (ಟ, ಡ)

....

ಹೊತ್ತುಗಳವೆ–ಸೌಂದರ ನಂಬ್ಯಣ್ಣನ ಕೂಡೆ ಯಾಳ್ಯವ ಕಳೆದೆ.೧

....

೧+ಯು (ತ)

V -

1–1 ಳೆವೆ (ಪ)

....

ಹೊತ್ತುಗಳೆದೆ–ಸೌಂದರ ನಂಬಣ್ಣನ ಕೂಡೆ ವಾಳ್ಯವ ಕಳೆದೆ.

೭೪೪

ಹರಿಯಜ[1]ಸುರಮನು[1]ಮುನಿಗಳೆಲ್ಲರೂ ನಿಜ ನಿಮ್ಮ ಬಾಗಿಲ ಕಾಯ್ದಿಹರು. ಏನು ಕಾರಣ ನೀವು ಬಾಣನ ಬಾಗಿಲ ಕಾಯ್ದಿರಿ? ಡಿಂಗರಿಗನ ಮನೆಗೆ ಅಂಗಜಾ[2]ಹ[2]ವಕ್ಕೆ [3]ಹೋಗಿ[3] ಇದ್ದವರೊಳರೆ ಕೂಡಲ ಸಂಗಮದೇವಾ?

I –

ಹರಿಯಜಸುರಮನುಮುನಿಗಳೆಲ್ಲರೂ–ಬ್ರಹ್ಮವಿಷ್ಣುಮನುಮುನಿದೇವತಾದಿಗಳೆಲ್ಲರೂ, ನಿಜ–ಸ್ವಕೀಯವಾದ, ನಿಮ್ಮ ಬಾಗಿಲ–ನಿಮ್ಮ ಭಕ್ತಿದ್ವಾರದ ಕಡೆಬಾಗಿಲವನು, ಕಾಯ್ದಿಹರು–ಕಾಯ್ದುಕೊಂಡಿರುತ್ತಿಹರು, ಏನು ಕಾರಣ–ಏನು ನಿಮಿತ್ತಾರ್ಥ, ನೀವು ಬಾಣನ ಬಾಗಿಲ ಕಾಯ್ದಿರಿ–ನೀವು ಬಾಣಾಸುರನ ಕಡೆ ಬಾಗಿಲವನ್ನು ಕಾಯ್ದುಕೊಂಡಿರ್ದು ಸಹಸ್ರತೋಳನ್ನು ಕರುಣಿಸಿಕೊಟ್ಟು ಏನು ಕಾರಣ ಅರ್ಚಿಸಿಕೊಂಡಿರಿ, ಡಿಂಗರಿಗನ–ಭೃತ್ಯನಾದ ಸೌಂದರನಂಬೆಣ್ಣನ, ಮನೆಗೆ–ಮಂದಿರಕ್ಕೆ, ಅಂಗಜಾಹವಕ್ಕೆ ಹೋಗಿ–ಮನ್ಮಥನ ಕೇಳಿಯೆಳಸುವುದಕ್ಕೈದು ಹೋಗಿ, ಇದ್ದವರೊಳರೇ–ಹಡಪವನ್ನು ಹೊತ್ತು ನಡಪ[೧] [ತ್ರಿ][೧]ಯಾದವರುಂಟೆ? ಇಲ್ಲವು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

....

೧–೧ ತಿ (ಕ,ಗ)

III –

2–2 x (ಟ, ಡ), 3–3 ಗಮಿಸಿ (ಟ, ಡ)

....

ಅಂಗಜಾವಕ್ಕೆ ಗಮಿಸಿ[೧]

....

೧ 'ಟ' ಪ್ರತಿಯಲ್ಲಿ ಇದರ ಮುಂದೆ ಸ್ಥಳ ಬಿಡಲಾಗಿದೆ.

IV –

1–1 x (ತ), 2–2 x (ತ)

....

ಸಮಸ್ತ ದೇವತೆಗಳೆಲ್ಲರೂ ಪರಮೇಶ್ವರನ ಬಾಗಿಲಕಾಯ್ದಿಹರು ಪರಮೇಶ್ವರ ಭಕ್ತಾಧೀನನಗಿ ಭಕ್ತರ ಬಾಗಿಲ ಕಾಯ್ದನೆಂಬುದೀ ವಚನದರ್ಥ.

IV –

2–2 x (ಪ)

....

ಅಂಗಜಾವಕ್ಕೆ ಹೋಗಿ–ಪೂಜಾವಸಾನಕ್ಕೆ ಗಮಿಸಿ.

೭೪೫

ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ, ಪಾತಾಳಲೋಕದಿಂದತ್ತತ್ತ ನಿಮ್ಮ ಶ್ರೀಚರಣ, ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀಮಕುಟ! [1]["ಪಾದಭಿನ್ನಾಹಿ ಲೋಕಾಯ ಮೌಳಿಬ್ರಹ್ಮಾಂಡಭಿತ್ತಯೇ। ಭುಜಾಕ್ರಾಂತ ದಿಗಾಂತಾಯ ಭೂತಾನಾಂ ಪತಯೇ ನಮಃ॥"][1] ಎಂದುದಾಗಿ, ಅಗಮ್ಯ ಅಗೋಚರ ಅಪ್ರಮಾಣ ಕೂಡಲಸಂಗಮದೇವಾ ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯ!

....

1–1 ಪಾದಾಹಿ ಭಿನ್ನ ಲೋಕಾನಾಂ । ಮೌಳಿ ಬ್ರಹ್ಮಾಂಡ ಭಿತ್ತಯೋಂ । ಭುಜಕ್ರಾಂತದಿಗಾಂತಾನಾಂ । ಭೂತಾಯ ಃ ಪತಯೇ ನಮಃ । (ಕ, ಗ).

I –

ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ : ನಿಮ್ಮಗಲ–ನಿಮ್ಮ ಮಹತ್ವಾತಿಶಯವು, ಜಗದಗಲ–ಜಗತ್ತಿನಲ್ಲಿ ಪೂರ್ಣವಾಗಿರ್ಪುದು, ಮುಗಿಲಗಲ–ಆಕಾಶದಲ್ಲಿ ಪೂರ್ಣವಾಗಿರ್ಪುದು, ಮಿಗೆಯಗಲ–ಭೂಮಿ ಆಕಾಶವನ್ನು ಒಳಕೊಂಡು ಆಚೆಗಾಚೆಗೆ ಮಿಗೆಮಿಗೆಯಾ।। ತೋ।ರುತ್ತಿರ್ಪುದು. ನಿಮ್ಮ ಶ್ರೀಚರಣ: ಶ್ರೀ–ಐಶ್ವರ್ಯೋಪಲಕ್ಷಿತವಾದ, ನಿಮ್ಮ ಚರಣ–ನಿಮ್ಮ ಪದಕಮಲಂಗಳು, ಪಾತಾಳ ಲೋಕದಿಂದತ್ತತ್ತ–ಸಪ್ತಪಾತಾಳಗಳನು ಒಳಗೊಂಡು ಆಚೆಗಾಚೆಗೆ ಮಿಗೆಮಿಗೆಯಾಗಿ ತೋರುತ್ತಿರ್ಪವು, ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀಮಕುಟ: ಶ್ರೀ–ಐಶ್ವರ್ಯೋಪಲಕ್ಷಿತವಾದ. ನಿಮ್ಮ ಮಕುಟ–ನಿಮ್ಮ ಕಿರೀಟವು, ಬ್ರಹ್ಮಾಂಡದಿಂದ–ಉಪರಿ ಬ್ರಹ್ಮಾಂಡದ ಗೋಡೆಯನ್ನು ಒಡೆದುಕೊಂಡು, ಅತ್ತ–ಆಚೆಗಾಚೆಗೆ ಮಿಗೆಮಿಗೆಯಾಗಿ ತೋರುತ್ತಿರ್ಪುದು.

ಗ್ರಂಥ: ಗುರುವಾಕ್ಯಕ್ಕೆ ಸದೃಶವಾಗಿ ಹರವಾಕ್ಯವ ನಿರೂಪಿಸುತ್ತಿಹರು, ಪಾದಾಭಿನ್ನೇನ ಲೋಕನಿನಾಂ: ಪಾದಾ–ಚರಣವು, ಭಿನ್ನೇನ ಲೋಕಾನಾಂ–ಸಪ್ತಪಾತಾಳವನ್ನು ಒಳಗೊಂಡು ಆಚೆಗಾಚೆಗೆ ಮಿಗೆಮಿಗೆಯಾಗಿ ತೋರುತಿರ್ಪವು. ಮೌಳಿ ಬ್ರಹ್ಮಾಂಡ ಭಿತ್ತಯೋ: ಮೌಳಿ–ಮಸ್ತಕವು ಉಪರಿಬ್ರಹ್ಮಾಂಡದ ಗೋಡೆಯನ್ನು ಪಡೆದುಕೊಂಡು ಆಚೆಗಾಚೆಗೆ ಮಿಗೆಮಿಗೆಯಾಗಿ ತೋರುತ್ತಿರ್ಪುದು. ಭುಜಕ್ರಾಂತದಿಗಂತನಾಂ : ಭುಜ–ನಿಮ್ಮ ತೋಳುಗಳು, ಆಕ್ರಾಂತದಿಗಂತಾನಾಂ–ಅಷ್ಟದಿಕ್ಕುಗಳನ್ನು ಒಳ ಕೊಂಡು ಆಚೆಗಾಚೆಗೆ ಮಿಗೆಮಿಗೆಯಾಗಿ ತೋರುತ್ತಿರ್ಪುದು. ಭೂತ ಪತಯೇ–ಸಮಸ್ತಪ್ರಾಣಿಗಳಿಗೆ ಚೈತನ್ಯಸ್ವರೂಪವಾಗಿ ಆಹಾರವ್ಯವಹಾರಭೋಗಬುಕ್ತ್ಯಾದಿಗಳ ಕೊಟ್ಟು ರಕ್ಷಣ್ಯಮಾಡುವಂಥ ಪರಶಿವಲಿಂಗಕ್ಕೋಸ್ಕರ, ನಮಃ–ನಮಸ್ಕಾರವು, ಎಂದುದಾಗಿ–ಹೀಗೆಂದು ಈಶ್ವರನ ವಾಕ್ಯದಲ್ಲಿ ಹೇಳುತ್ತಿಹುದಾಗಿ, ಅಗಮ್ಯ–ಆರಿಗೂ ಗಮಿಸಿ ಕಾಣಿಸಿಕೊಳಬಾರದಿದ್ದಂಥ, ಅಗೋಚರ–ಚಕ್ಷುರಾದಿಂದ್ರಿಯಂಗಳಿಗೆ ಎಟಕದಾರದಿದ್ದಂಥ, ಅಪ್ರಮಾಣ–ಷೋಡಶಪ್ರಮಾಣಂಗಳಿಗೆ ಮೀರಿ ತೋರಲ್ಪಟ್ಟ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಎನ್ನ ಕರಸ್ಥಲಕ್ಕೆ–ಎನ್ನ ತನುವಿನ ವಾಮಭಾಗದ ಕರಸ್ಥಲಕ್ಕೆ, ಬಂದು–ಇಷ್ಟಲಿಂಗವಾಗಿ ಬಿಜಯಂಗೆಯ್ದು ಬಂದು, ಚುಳುಕಾದಿರಯ್ಯ–

ಚಕಿತಹೃದಯುಮನುಳ್ಳವರುಗಳಾದಿರಲ್ಲ. ಅದಲ್ಲದೆ ಕಿಂಚಿದ್ದಳಚುಳುಕೋದಕಂಗಳಿಂದ ಆರಾಧಿಸಿಕೊಂಬುವುದಕ್ಕೆ ಒಪ್ಪಿ ವಶವಾದಿರಯ್ಯ.

೭೪೬

ಗೋತ್ರನಾಮವ ಬೆಸಗೊಂಡಡೆ ಮಾತ [1]ನೂಂ[1]ಕದೆ ಸುಮ್ಮನಿದ್ದಿರಿ ಇದೇನಯ್ಯ? ತಲೆ ಕುತ್ತಿ ನೆಲನ ಬರೆ[2]ವು[2]ತಿದ್ದಿರಿ ಇದೇನಯ್ಯ? ಗೋತ್ರ ಮಾದಾರ ಚೆನ್ನಯ್ಯ, ಡೋಹಾರ ಕಕ್ಕಯ್ಯನೆಂಬುದೇ[3]ನೋ[3] ಕೂಡಲಸಂಗ[4]ಮದೇವಾ?[4]

I –

ಗೋತ್ರನಾಮವ ಬೆಸಗೊಂಡಡೆ–ಅಜಹರಿಸುರಪಮನುಮುನಿಗಳೆಲ್ಲರೂ ಪರಮೇಶ್ವರನ ಕೂಡಿಕೊಂಡು ಪರ್ವತರಾಜನ ಮನೆಗೆ ಹೆಣ್ಣು ಕೇಳುವುದಕ್ಕೆ ಹೋದಲ್ಲಿ, ಗೋತ್ರ–ನಮ್ಮ ಕುಲವಾವುದು, ನಾಮವ ಬೆಸಗೊಂಡಡೆ–ನಿಮ್ಮ ಅಭಿಧಾನವೇನೆಂದು ಕೇಳಿದರೆ, ಮಾತನೂಂಕದೆ–ಪ್ರಸಂಗವನಾಡದೆ, ಸುಮ್ಮನಿದ್ದಿರಿ–ಉಸುರದೆ ಇದ್ದಿರಿ, ಇದೇನಯ್ಯ?–ಇದೇನು ಕಾರಣಕ್ಕೆ, ಇದೇನಾಶ್ಚರ್ಯವಯ್ಯ?

ತಲೆ ಕುತ್ತಿ–ತಲೆ ಕೆಳಗೆ ಹಾಕಿಕೊಂಡು, ನೆಲನ ಬರೆವುತ್ತಿದ್ದಿರಿ–ಹೆಬ್ಬೆರಳಿನ ಕಡ್ಡಿಯಲ್ಲಿ ನೆಲನ ಗೀಜುತ್ತಿದ್ದಿರಿ, ಇದೇನಯ್ಯ?–ಇದೇನಾಶ್ಚರ್ಯವಯ್ಯ? ಗೋತ್ರ ಮಾದಾರ ಚೆನ್ನಯ್ಯ ಡೋಹಾರ ಕಕ್ಕಯ್ಯನೆಂಬುದೇನೋ: ಗೋತ್ರ–ನಮ್ಮ ಕುಲವು.[ಮಾದಾರ ಚೆನ್ನಯ್ಯ ಡೋಹಾರ ಕಕ್ಕಯ್ಯನೆಂಬುದೇನೋ–]

ಮಾದಾರ ಚೆನ್ನಯ್ಯ ಡೋಹಾರ ಕಕ್ಕಯ್ಯನೆಂದು ಹೇಳಬಾರದೆ? ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

III –

ಮಾತ ನೂಂಕದೆ–ಓಯೆಂದು ಪ್ರಸಂಗಿಸದೆ.

IV –

1–1 ನೂ (ತ), 2–2 ಯು (ತ), 3–3 ನು (ತ), 4–4 ಯ್ಯ (ತ)

....

ಜನನ ಮರಣವಿಲ್ಲದ ಬ್ರಹ್ಮಕ್ಕೆ ಜಾತಿಗೋತ್ರವಿಲ್ಲ, ಜಾತಿಗೋತ್ರ ಶರಣ ಮಾದಾರಚೆನ್ನಯ್ಯ, ಹೋಹಾರ ಕಕ್ಕಯ್ಯನೆಂಬುದೀ ವಚನದರ್ಥ.

V –

ಮಾತ ನೂಂಕದೆ–ಓಯೆಂದು ಪ್ರಸಂಗಿಸದೆ.

೭೪೭

ನಿಷ್ಠೆಯಿಂದ ಲಿಂಗವ ಪೂಜಿಸಿ ಮತ್ತೊಂದು ವ[1]ರ[1]ವನಱಿಯದ ಶರಣರು, ಸರ್ಪನ ಹೆಡೆಯ ಮಾಣಿಕದಂತಿಪ್ಪರು ಭೂಷಣರಾಗಿ! ದರ್ಪಣದೊಳಗಣ ಪ್ರತಿಬಿಂಬದಂತೆ ಹಿಂಗದಿರ್ಪರು ಕೂಡಲಸಂಗಮದೇವಾ, ನಿಮ್ಮ ಶರಣರು.

I -

ನಿಷ್ಠೆಯಿಂದ ಲಿಂಗವ ಪೂಜಿಸಿ–ಈ ಲಿಂಗವೇ ಪ್ರಾಣ, ಈ ಲಿಂಗಕ್ಕೆ ನಾನೇ ಚಿದಂಗಸ್ವರೂಪನು, ಈ ಲಿಂಗಹೋದರೆ ಈ ಲಿಂಗದೊಡನೆ ಪ್ರಾಣವಕೊಟ್ಟೇನು. ಈ ಲಿಂಗವಲ್ಲದನ್ಯದೈವಂಗಳ ಭಜನೆಯ ಮಾಡಬಾರದೆಂಬಂಥ ಏಕಲಿಂಗನೈಷ್ಠಿಕಾಪರತ್ವಯುಕ್ತವಾಗಿ ಇಷ್ಟಮಹಾಲಿಂಗವನ್ನು ಅಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯಗಳಿಂದಾರಾಧಿಸಿ, ಮತ್ತೊಂದು ಪಥವನಜೆಯದ–ಅನ್ಯದೈವದ ಭಜನೆಯ ಮಾಡಬೇಕೆಂಬಂಥ ಮಾರ್ಗವನ್ನು ತಿಳಿಯದ, ಶರಣರು–ಶಿವಶರಣರು, ಸರ್ಪನ ಹೆಡೆಯ ಮಾಣಿಕದಂತೆ ಭೂಷಣರಾಗಿಪ್ಪರು–ಸರ್ಪನಿಗೂ ಸರ್ಪನ ಹೆಡೆಯ ಮಾಣಿಕಕ್ಕೂ ಹೇಂಗೆ ಭಿನ್ನವಿಲ್ಲದೆ ಕೂಡಿರುತ್ತಿಹುದೋ ಹಾಂಗೆ ಅನರ್ಘ್ಯ ಉತ್ತಮ ನಾಯಕರತ್ನಸ್ವರೂಪವಾದ ಪರಬ್ರಹ್ಮದಲ್ಲಿ ಚಿತ್ತಿನ ೧ಚಿದ೧ಹಂಕಾರ ಚಿದ್ಭೂಷಣ ಸ್ವರೂಪರಾದ ಶಿವಶರಣರು ಅಡಗಿರ್ದು ಮಿಗೆ ಮಾರ್ಪೊಳೆವುತಿರ್ಪರು, ದರ್ಪಣದೊಳಗಣ ಪ್ರತಿಬಿಂಬದಂತೆ ಹಿಗದಿರ್ಪರು–ದರ್ಪಣಕ್ಕೂ ದರ್ಪಣದೊಳಗರುವ ಪ್ರತಿಬಿಂಬಕ್ಕೂ ಭಿನ್ನವಿಲ್ಲದೆ ಹೇಂಗೆ ಏಕವಾಗಿಪರ್ವುದೋ ಹಾಂಗೆ, ಜ್ಞಾನದರ್ಪಣಸ್ವರೂಪವಾದ ಪರಬ್ರಹ್ಮದಲ್ಲಿ ಚಿಚ್ಛಾಯಸ್ವರೂಪರಾದ ಶಿವಶರಣರಡಗಿರ್ದು ಮಿಗೆ ಮಾರ್ಪೊಳೆವುತಿರ್ಪರು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ ಶರಣರು–ನಿಮ್ಮ ಶಿವಶರಣರು.

....

೧–೧ ಮಹ (ಕ)

II -

೧–೧ ದಾರ್ಥ (ಚ, ಜ)

....

ನಿಷ್ಠೆಯಿಂದ ಲಿಂಗವ ಪೂಜಿಸಿ–ಏಕೋಭಾವದ ನಂಬುಗೆಯಿಂದ ಇಷ್ಟಲಿಂಗವನಾರಾಧಿಸಿ, ಮತ್ತೊಂದು ಪದಾರ್ಥವಜೆಯದ ಶರಣರು–ಮರಳೇಕವಾದ ಇತರ ಮಾರ್ಗವನು ತಿಳಿಯದ ಶಿವಶರಣರು. ಸರ್ಪನ ಹೆಡೆಯ ಮಾಣಿಕದಂತಿಪ್ಪರು, ಭೂಷಣರಾಗಿ–ಶಿವತತ್ವವೆಂಬ ಸರಿಸೃಪನ ಮಸ್ತಕದಲ್ಲಿ ನಿಃಕಲಲಿಂಗವೆಂಬ ಆಭರಣವಾಗಿಪ್ಪರು ಮುಂದಕ್ಕೆ ಕಾಣಬಂದರ್ಥ.

III -

ಭೂಷಣರಾಗಿ–ಶಿವಭಕ್ತಿಯ ಆಭರಣವುಳ್ಳವರಾಗಿ.

೭೪೮

ಶಿವಲಿಂಗಕ್ಕೆ ಸರಿ ಬೇಱೆ ಲೋಕವಿಲ್ಲ; ಶಿವಮಂತ್ರಕ್ಕೆ ಸರಿ ಬೇಱೆ ಮಂತ್ರವಿಲ್ಲ. ಜಗಕ್ಕೆ ಇಕ್ಕಿದೆ ಮುಂಡಿಗೆಯನೆತ್ತಿಕೊಳ್ಳಿ, ಕೂಡಲಸಂಗಯ್ಯನೊಬ್ಬನೇ ದೈವವೆಂದು.

I -

ಶಿವಲೋಕ್ಕೆ ಸರಿ ಬೇಜೆ ಲೋಕವಿಲ್ಲ: ಶಿವಲೋಕಕ್ಕೆ–ಕೈಲಾಸಲೋಕಕ್ಕೆ, ಸರಿ–ಸಮಾನವಾಗಿ, ಬೇಱೆ–ಇನ್ನು ಬೇರೆ ಲೋಕವಿಲ್ಲ–ಇಂದ್ರಲೋಕ, ಚಂದ್ರಲೋಕ, ನಿಮ್ಮಲೋಕ

ಬೊಮ್ಮಲೋಕವೆಂದುಂಟಾಗಿದ್ದಾವೆ? ಇಲ್ಲವು. ಶಿವಮಂತ್ರಕ್ಕೆ–ಶಿವಷಡಕ್ಷರಮಂತ್ರಕ್ಕೆ, ಸರಿ–ಸಮಾನವಾಗಿ, ಬೇಱ್‌ ಇನ್ನು ಬೇರೆ, ಮಂತ್ರವಿಲ್ಲ–ಇಂದ್ರಮಂತ್ರ ಚಂದ್ರಮಂತ್ರ, ಗೋಪಾಲಮಂತ್ರವೆಂದುಂಟೆ? ಇಲ್ಲವು. ಕೂಡಲಸಂಗಯ್ಯನೊಬ್ಬನೇ ದೈವವೆಂದು–ಪರಮೇಶ್ವರನೊಬ್ಬನೇ ಕರ್ತನೆನುತ್ತ, ಜಗಕ್ಕೆ–ಲೋಕಕ್ಕೆ, ಮುಂಡಿಗೆಯನಿಕ್ಕಿದೆ–ತಲೆಸುತ್ತನ್ನು ತೆಗೆದು ಮಡಗಿದೆನು, ಎತ್ತಿಕೊಳ್ಳಿ–ನೆಗಹಿಕೊಳ್ಳಿ.

III– –

ಮುಂಡಿಗೆಯು–ಹದಿಸ್ಸನು.

V– –

ಮುಂಡಿಗೆಯ–ಹದಿಸ್ಸನು.

೭೪೯

"ಈಶ್ವರ ಸದ್ಭಾವೇ ಕಿಂ ಪ್ರಮಾಣಂ" ಎಂಬ ಮೀಮಾಂಸಕನ ಮೂಗಿನ ಕೊನೆಯನ್ನು [1][ವಿಶ್ವತಶ್ಚಕ್ಷುಋುತ ವಿಶ್ವತೋ ಮುಖಃ ವಿಶ್ವತೋಬಾಹುರುತ ವಿಶ್ವತಃ ಪಾತ್‌। ಸಂಬಾಹುಭ್ಯಾಂ ಧಮತಿ ಸಂಪತತ್ರೈ ದ್ಯಾವಾ ಭೂಮೀ ಜನಯನ್‌ ದೇ[2]ವ[2] ಏ[3]ಕ[3]ವಿವ"][1] ಎಂಬ ಸುರಗಿಯಲಿಱಿದು ವೈಶೇಷಿಕವೆಂಬ ಇಟ್ಟಿಗೆಯಲೊರಸಿ ಕೂಡಲಸಂಗಯ್ಯನೆಂಬ ಕನ್ನಡಿಯ ತೋಱುವೆನು.

....

ವಿಶ್ವತೋ ಚಕ್ಷುರುತಃ ವಿಶ್ವತೋ ಮುಖೋ ವಿಶ್ವತೋ ಬಾಹುರುತಂ ವಿಶ್ವತೋ ಪಾತ್‌। ಸಮ ಬಾಹುಭ್ಯಾಂ ದಮತಿಃ ಸಂಪದ ತ್ರೈದೇವಾ ಭೂಮಿ ಜನಯನ್ನ ದಿವಾ ಏಕ ವಿವ। (ಕ, ಗ).

I –

ಈಶ್ವರ–ಪಂಚಕೃತ್ಯಂಗಳಿಗೊಡೆಯನಾದಂಥ ಪರಮೇಶ್ವರನು, ಸದ್ಭಾವೇ–ಈಶ್ವರನು ಆರೆಂದು ನೆನೆದು ಭಾವಿಸುವಂಥದು, ಕಿಂ ಪ್ರಮಾಣು ಎಂಬ–ಏನು ಪ್ರಯೋಜನವೆಂದು ಹೇಳುವ. ಮೀಮಾಂಸಕನ–ಮೀಮಾಂಸಕನೆಂಬ ಚೈತನ್ಯ, ಮೂಗಿನ ಕೊನೆಯನು–ದುರಭಿಮಾನಶಾಸ್ತ್ರದ ಅಹಂಕಾರವೆಂಬ ನಾಸಿಕದ ತುದಿಯನ್ನು, ವಿಶ್ವತೋ ಚಕ್ಷು–ಒಂದು ಕಡೆಗೆ ನಯನವಿದ್ದು ಒಂದು ಕಡೆಗೆ ನಯನವಿಲ್ಲದಾತನಲ್ಲವು; ಎಲ್ಲಾ ಕಡೆಗೆ ನಯನವುಳ್ಳಾತನೆಂದು ಹೇಳುವಂಥದು, ಋತ–ಸತ್ಯವು. ವಿಶ್ವತೋಮುಖೋ–ಒಂದು ಕಡೆಗೆ ವದನವಿದ್ದು ಒಂದು ಕಡೆಗೆ ವದನವಿಲ್ಲದಾತನಲ್ಲವು: ಎಲ್ಲಾ ಕಡೆಗೆ ವದನವುಳ್ಳಾತನೆಂದು ಹೇಳಿವಂಥದು, ಋತಂ–ಸತ್ಯವು, ವಿಶ್ವತೋ ಬಾಹು–ಒಂದು ಕಡೆಗೆ ತೋಳುಗಳಿದ್ದು ಒಂದು ಕಡೆಗೆ ತೋಳುಗಳಿಲ್ಲದಾತನಲ್ಲವು: ಎಲ್ಲಾ ಕಡೆಗೆ ತೋಳುಗಳುಳ್ಳಾತನೆಂದು ಹೇಳುವಂಥದು, ಋತಂ–ಸತ್ಯವು ವಿಶ್ವತೋ ಪಾತ್‌–ಒಂದುಕಡೆಗೆ ಚರಣವಿದ್ದು ಒಂದು ಕಡೆಗೆ ಚರಣವಿಲ್ಲದಾತನಲ್ಲವು; ಎಲ್ಲಾಕಡೆಗೆ ಚರಣವುಳ್ಳಾತನೆಂದು ಹೇಳುವಂಥದು. ಋತಂ–ಸತ್ಯವು. ವಿಶ್ವತೋ ಪಾತ್‌–ʼಜಗತ್ತ್ವರೂಪನ್ನುʼ ತ್ರೈ–ಬ್ರಹ್ಮ ವಿಷ್ಣು ಇಂದ್ರಾದಿಗಳು ಜಪತಪ ಆರಾಧನೆ ಕ್ರಿಯೆಗಳನು ಮಾಡಿ ಹಸ್ತಾಂಜಲಿತರಾಗಿ ಸಮ್ಮುಖದಲ್ಲಿ ನಿಂತುಕೊಂಡಿರ್ದಲ್ಲಿ, ಸಂಪದ–ಐಶ್ವರ್ಯವನ್ನು, ಸಂಬಾಹುಭ್ಯಾಂ–ಎರಡೂ ಹಸ್ತಂಗಳಿಂದೆ, ದಮತೀ–ಕರುಣಿಸಿ ಕೊಡಲ್ಪಟ್ಟಾತನು, ದೇವಾ–ಎಲೆ ಒಡೆಯನೆ, ಭೂಮಿ–ಪೃಥ್ವಿಯು, ದಿವಾ–ಆಕಾಶವು, ಜನಯನ್‌–ಭೂಮಿ ಆಕಾಶ ಮಧ್ಯದಲ್ಲಿ ಹುಟ್ಟಲ್ಪಟ್ಟ

ಸಮಸ್ತಾತ್ಮರುಗಳಿಗೆ ಆಹಾರವ್ಯವಹಾರಭೋಗಭುಕ್ತ್ಯಾದಿಗಳ ಕೊಟ್ಟು ರಕ್ಷಣ್ಯವ ಮಾಡುವಂಥ, ಏಕಏವ-ಪರಮೇಶ್ವರನೊಬ್ಬನೇ ಕರ್ತನೆಂದು ಹೇಳುವ, ಸುರಗಿಯಲಿ-ಆಯುಧದಲಿ, ಇಱಿದು-ಛೇದಿಸಿ, ವೈಶೇಷಿಕವೆಂಬ-ವಿಶೇಷತ್ವೆಂದು ಹೇಳುವ, ಇಟ್ಟಿಗೆಯಲಿ-ಇಟ್ಟಂಗಿ ಕಲ್ಲಿನಿಂದ ಒರಸಿ-ತಿಕ್ಕಿ, ಕೂಡಲಸಂಗಯ್ಯನೆಂಬ-ಪರಶಿವಲಿಂಗವೆಂಬ, ಕನ್ನಡಿಯ-ದರ್ಪಣವನ್ನು, ತೋಱುವೆನು, ಕಾಣಿಸುವೆನು.

....

೧-೧ ಜಗತ್ಪುರುಷನು (ಗ)

III -

2-2 ವಾಃ (ಟ, ಡ). 3-3 ಕಃ (ಟ, ಡ).

....

ಈಶ್ವರ ಸದ್ಭಾವೇ ಕಿಂ ಪ್ರಮಾಣವೆಂಬ : ಈಶ್ವರ-ಐಶ್ವರ್ಯಕ್ಕೆ ಕರ್ತೃವಾದ ಪರಶಿವನ, ಸದ್ಭಾವೇ-ಉಂಟಹತನಕ್ಕೆ, ಕಿಂ ಪ್ರಮಾಣಯೆಂಬ-ಆವುದು ಪ್ರಮಾಣವು ಎಂಬಂಥ, ಮೀಮಾಂಸಕನ-ಮೀಮಾಂಸಕವಾದಿಯ, ಸಂ ಬಾಹುಭ್ಯಾಂ ಧಮತಿ ಸುವತ್ರೈರ್ಧ್ಯಾವಾಭೂಮಿ ಜನಮನ್ ದೇವಾಃ: ಸು-ಲೇಸಾದ, ಬಾಹುಭ್ಯಾಂ-ತೋಳುಗಳೆರಡಱಿಂದೆ, ಧಮತಿ-ತಗ್ಗಿಸಲುಪಟ್ಟ, ಸಂಪದ-ಸಂಪತ್ತನುಳ್ಳಂಥ, ತ್ರೈಃ-ವೇದಂಗಳಲ್ಲಿ, ದ್ಯಾವಾಭೂಮಿ-ಭೂಮ್ಯಾಕಾಶಗಳ ಮಧ್ಯದಲ್ಲಿ ಜನಯನ್-ಹುಟ್ಟಿದಂಥ, ದೇವಾಃ-ದೇವತೆಗಳಿಗೆ, ಏಕ ವಿವಾ-ಒರ್ವನೆ ಒಡೆಯನು, ಎಂಬ-ಹೀಗೆಂಬಂಥ, ವೈಶೇಷಿಕವೆಂಬ-ವೈಶೇಷಿಕವೆಂಬಂಥ.

V -

೨-೨ ವಾಃ (ಪ)

....

ಈಶ್ವರ ಸದ್ಭಾವ ಕಿಂ ಪ್ರಮಾಣವೆಂಬ : [ಈಶ್ವರ] ಐಶ್ವರ್ಯಕ್ಕೆ ಕರ್ತೃವಾದ ಪರಶಿವನ, ಸದ್ಭಾವ-ಉಂಟಹತನಕ್ಕೆ, ಕಿಂ ಪ್ರಮಾಣು-ಆವುದು ಪ್ರಮಾಣವು, ಎಂಬ-ಹೀಂಗೆಂಬಂಥ ಮೀಮಾಂಸಕನ-ಮೀಮಾಂಸಕನೆಂಬ ವಾದಿಯ, ಸಂ-ಲೇಸಾದ, ಭಾಹುಭ್ಯಾಂ-ತೋಳುಗಳಿಂದ, ಧಮತಿ-ತಗ್ಗಿಸಲ್ಪಟ್ಟ, ಸಂಪದ-ಸಂಪತ್ತನುಳ್ಳಂಥ, ತ್ರೈಃ-ವೇದಂಗಳಲ್ಲಿ, ದ್ಯಾವಾಭೂಮ್ಯಾಕಾಶಂಗಳ ಮಧ್ಯದಲಿ, ಜನಯನ್-ಹುಟ್ಟಿದಂಥ, ದೇವಾ-ದೇವತೆಗಳಿಗೆ, ಏಕ ಏವ-ಒರ್ವನೆ ಒಡೆಯನು, ಎಂಬ ಹೀಂಗೆಂಬಂಥ ಸುರಗಿಯಲ್ಲಿ.

೭೫೦

ಪಂಚಬ್ರಹ್ಮವ ಕೆಡಿಸಿತ್ತು; ಪ್ರಣವಮಂತ್ರವನೀಡಾಡಿತ್ತಲ್ಲ; ಕರ್ಮಂಗಳನೆ ಕಳೆಯಿತ್ತು; ಕ್ರಿಯೆಗಳನೆ ಮೀಱಿತ್ತಲ್ಲ; ಆಗಮದ ಹಲ್ಲ ಕಳೆಯಿತ್ತು ಕೂಡಲಸಂಗಯ್ಯನ ಭಕ್ತಿಗಜವು [1]ಅ[1]ಹೋ!

I -

ಕೂಡಲಸಂಗಯ್ಯನ–ಪರಶಿವಲಿಂಗದ, ಭಕ್ತಿಗಜವು–ಶಿವಾದ್ವೈತಭಕ್ತಿಯೆಂಬ ಆನೆಯು, ಪಂಚಬ್ರಹ್ಮವ ಕೆಡಿಸಿತ್ತು–ಪಂಚಭೂತಯುಕ್ತವಾದ ದೇಹ ಭಾವದ ಪ್ರಪಂಚನ್ನು ನಷ್ಟವಮಾಡಿ ಆಚಾರಾಂಗವಾಗಿ ಅಳವಡಿಸಿ ಇಷ್ಟಲಿಂಗಸಂಬಂಧವ ಮಾಡಿಸಿಕೊಟ್ಟಿತ್ತು, ಪ್ರಣವಮಂತ್ರವನೀಡಾಡಿತ್ತಲ್ಲ: ಪ್ರಣವ[ಮಂತ್ರವನು–] ಪ್ರಣವಪಂಚಾಕ್ಷರಿಮಂತ್ರವನ್ನು, ಈಡಾಡಿತ್ತಲ್ಲ–ಅನಾಹತಕರ್ಣದ್ವಾರದಲ್ಲಿ ಪ್ರಣವಮಂತ್ರೋಪದೇಶವನ್ನು ಬೋಧಿಸಿ ಮೂರು ಮೂರು ಐದುಐದು ಆರಾರಾಗಿ ತೋರುವ ತತ್ತ್ವಂಗಳ ವರ್ತನೆಯೆಲ್ಲ ನಷ್ಟವ ಮಾಡಿ ಅವೆಲ್ಲ ಮಂತ್ರತತ್ತ್ವವಾಗಿ ಅಳವಡಿಸಿಕೊಟ್ಟು ಅಲ್ಲಿ ಪ್ರಾಣಲಿಂಗ ಸಂಬಂಧವ ಮಾಡಿತ್ತಯ್ಯ.

ಕರ್ಮಂಗಳನೆ–ಸಂಚಿತಾದಿ ಕರ್ಮತ್ರಯಂಗಳನೆ, ಕಳೆಯಿತ್ತು–ನಷ್ಟವ ಮಾಡಿತ್ತು, ಕ್ರಿಯೆಗಳನೆ–ಭಿನ್ನ ಕ್ರೀಗಳನೆ, ಮೀಜೆತ್ತಲ್ಲ–ಅತಿಕ್ರಮಿಸಿತ್ತಲ್ಲ, ಆಗಮದ–ಭಿನ್ನಾಗಮದ, ಹಲ್ಲ ಕಳೆಯಿತ್ತು–ರದನಂಗಳನು ಭಗ್ನವ ಮಾಡಿತ್ತು, ಅಹೋ–ಇಷ್ಟನೆಲ್ಲ ಮಾಡಿತ್ತು.

IV –

1–1 x (ತ)

....

ಪಂಚಬ್ರಹ್ಮಮಯವೀಗ ಜಗತ್ತೆಂಬ ಪಂಚಭೂತಕಾಯವ ಕೆಡಿಸಿ ಸರ್ವಾಂಗಲಿಂಗವ ಮಾಡಿತ್ತು. ಭಕ್ತಿಯೆಂಬುದೀಗ, ಪಂಚಬ್ರಹ್ಮವ ಕೆಡಿಸಿತ್ತುಯೆಂಬ ಶಬ್ದಕ್ಕರ್ಥ. ಪ್ರಣವಪಂಚಾಕ್ಷರಿಯನೆ ಅನುಶ್ರುತವೂ ಜಿಹ್ವೆಯಲ್ಲಿ ಉಚ್ಚರಿಸುತ್ತಿಹುದೆ ಭಕ್ತಿ, ಅಂತು ಭಕ್ತನು ಉಚ್ಚರಿಸುತ್ತಿಹ ಪ್ರಣವ ಮಂತ್ರವು ಸರ್ವಪಾಪಾತ್ಮರ ಕರ್ಣದಲ್ಲಿ ಬಿದ್ದು ಸರ್ವಾತ್ಮರೂ ಮುಕ್ತರಾಗುತ್ತಿಹರೆಂಬುದೀಗ, ಪ್ರಣವಮಂತ್ರವನೀಡಾಡಿತ್ತು ಎಂಬ ಶಬ್ದಕ್ಕರ್ಥ. ಅಂತು ಅವಿರಳಭಾವದಿಂದ ಲಿಂಗದಲ್ಲಿ ಭೇದವಿಲ್ಲದೆ ಮಾಡುತೀರ್ಪ ಭಕ್ತಂಗೆ ಸಂಚಿತ ಪ್ರಾರಬ್ಧ ಆಗಾಮಿಯೆಂಬ ಕರ್ಮಂಗಳು ಕೆಟ್ಟುಹೋದವುಯೆಂಬುದೀಗ, ಕರ್ಮಂಗಳೆಲ್ಲವ ಕೆಡಿಸಿತ್ತು ಎಂಬ ಶಬ್ದಕ್ಕರ್ಥ. ಅಂತು ತಾನು ಜೀವನೆಂಬ ಭಾವವಳಿದು ಲಿಂಗವೆಂಬ ಭಾವ ಘಟಿಸಿ ಲಿಂಗೋಪಾಸ್ತಿಯ ಮಾಡುತ್ತಿಪ್ಪುದೇ ಭಕ್ತಿ, ಅಂತಪ್ಪ ಭಕ್ತಿಯಿಂದ ಕ್ರಿಯಾಫಲ ವಿಲ್ಲವೆಂಬುದೀಗ ಕ್ರೀಯನೆಲ್ಲವ ಮೀಜೆತ್ತು ಎಂಬ ಶಬ್ದಕ್ಕರ್ಥ. ಸಂಕಲ್ಪವಿಕಲ್ಪವೆಂಬುದೀಗ, ಹೊಲ್ಲೆಂಬ ಶಬ್ದಕ್ಕರ್ಥ. ಅಂತು ಶಿವಜೀವರೆಂದೆಂದೂ ಭಿನ್ನರೆಂದು ಹೇಳುವ ಆಗಮದ ಸಂಕಲ್ಪವಿಕಲ್ಪಂಗಳ ಹುಸಿಮಾಡಿ ಕಳೆಯಿತ್ತು, ಭಕ್ತಿಯೆಂಬುದೀಗ ಆಗಮದ ಹಲ್ಲ ಕಳೆಯಿತ್ತು ಎಂಬ ಶಬ್ದಕ್ಕರ್ಥ. ಅಂತು ಜೀವನೇ ಅಂಗ ಶಿವನೇ ಲಿಂಗ ಲಿಂಗಾಂಗವೆರಡೂ ಒಂದೇ ಪರಬ್ರಹ್ಮವೆಂದರಿದು ಭಿನ್ನಭಾವವಿಲ್ಲದೆ ಮಾಡುತ್ತಿಪ್ಪದೇ ಭಕ್ತಿ. ಅಂತಪ್ಪ ಭಕ್ತ ತಾನೆ ಶಿವನೆಂದಜೆದು ಮಾಡುತ್ತಿಪ್ಪಲ್ಲಿ ಆನೆಂಬ ಶಬ್ದಕ್ಕರ್ಥವಾಯಿತ್ತಾಗಿ ಆನೆಂಬುದೀಗ ಗಜವೆಂಬ ಶಬ್ದಕ್ಕರ್ಥ. ಅಂತು ತಾನು ಶಿವನೆಂದಜೆದು ಭಿನ್ನಭಾವವಿಲ್ಲದೆ ಮಾಡುತ್ತಿರ್ಪುದೆ ಮಾಡುತ್ತಿರ್ಪುದೆ ಭಕ್ತಿ, ಇಂತಪ್ಪ ಮಹತ್ವದ ಆಶ್ಚರ್ಯ ವನುಳ್ಳುದೆಂಬುದೀಗ⁽ ಭಕ್ತಿಜಗ ಹೋ ಎಂಬ ಶಬ್ದಕ್ಕರ್ಥ.

....

⁽+ ಭಕ್ತಿ (ತ)

೭೫೧

ವೇದ ನಡನಡುಗಿತ್ತು, ಶಾಸ್ತ್ರವಗಲಿ ಕೆಳಕ್ಕೆ ಸಾರಿತ್ತಯ್ಯ, ತರ್ಕ ತರ್ಕಿಸಲಜೆಯದೆ ಮೂಗು ವಟ್ಟುದಯ್ಯ, ಆಗಮ ಹೆಜೆತೊಲಗಿ ಅಗಲಿತ್ತಯ್ಯ ನಮ್ಮ ಕೂಡಲಸಂಗಯ್ಯನು ಚೆನ್ನಯ್ಯನ ಮನೆಯಲುಂಡ ಕಾರಣ!

I -

ನಮ್ಮ ಕೂಡಲಸಂಗಯ್ಯನು–ನಮ್ಮ ಪರಶಿವಲಿಂಗವು, ಚೆನ್ನಯ್ಯನ–ಮಾದಾರ ಚೆನ್ನಯ್ಯನ, ಮನೆಯಲ್ಲಿ–ಮಂದಿರದೊಳಗೆ, ಉಂಡ ಕಾರಣ–ಅಂಬಕಳವನನುಭವಿಸಿ ಸಾಯುಜ್ಯಪದವಿಯನು ಕರುಣಿಸಿ ಕೊಟ್ಟನಿಮಿತ್ತ, ವೇದ ನಡನಡುಗಿತ್ತು : ವೇದ–ನಾಲ್ಕು ವೇದಂಗಳು, ನಡನಡುಗಿತ್ತು–ಶಿವಶರಣರಲ್ಲಿ ಜಾತಿವಿಜಾತಿಯನುಂಟುಮಾಡಿ ಹೇಳಿದರೆ ಶಿವನಿಂದ ಏನು ಶಿಕ್ಷೆ ಬಂದೀತೋ ಏನು ಕೊರತೆ ಬಂದೀತೋ ಎಂದು ಚಕಿತಹೃದಯನಾಗಿಪ್ಪವು.

ಶಾಸ್ತ್ರ–ಅನಂತಕ ಮೊದಲಾದ ಹದಿನಾರು ಧರ್ಮಶಾಸ್ತ್ರಂಗಳು, ಅಗಲಿ–ವಿಯೋಗವಾಗಿ, ಕೆಳಕ್ಕೆ ಸಾರಿತ್ತಯ್ಯ–ಶಿವಶರಣರುಗಳಲ್ಲಿ ಪುಣ್ಯವ ಮಾಡಿದವರಿಗೆ ಪಾಪವ ಮಾಡಬೇಕು; ಪಾಪವ ಮಾಡಿದವರಿಗೆ ಪುಣ್ಯವ ಮಾಡಬೇಕು. ಧರ್ಮವ ಮಾಡಿದವರಿಗೆ ಕರ್ಮವ ಮಾಡಬೇಕು; ಕರ್ಮವ ಮಾಡಿದವರಿಗೆ ಧರ್ಮವ ಮಾಡಬೇಕು. ಸುಖವ ಮಾಡಿದವರಿಗೆ ದುಃಖವ ಮಾಡಬೇಕು, ದುಃಖವ ಮಾಡಿದವರಿಗೆ ಸುಖವ ಮಾಡಬೇಕು. ಹೀಂಗೆ ಸುಖದುಃಖ ಪುಣ್ಯಪಾಪ ಧರ್ಮಕರ್ಮ ಎಂಬ ಬಂಧಮೋಕ್ಷದ್ವಂದ್ವಕರ್ಮಂಗಳನು ಉಂಟುಮಾಡಿ ಹೇಳಿದರೆ ಶಿವನಿಂದೇನು ಶಿಕ್ಷೆಬಂದೀತೋ ಏನು ಕೊರತೆ ಬಂದೀತೋ ಎಂದು ಹೇಳುವುದಕ್ಕೆ ಹೆದರಿ, ಅಗಲಿ–ವಿಯೋಗವಾಗಿ, ಕೆಳಕ್ಕೆ–ಕೆಳಗಡೆಗೆ, ಸಾರಿತ್ತಯ್ಯ–ಹೆರೆಸಾರಿತ್ತಯ್ಯ.

ತರ್ಕ–ವೇದವೇದಾಂತಭಾಟ್ಟಪ್ರಭಾಕರನ್ಯಾಯಮೀಮಾಂಸಕವೆಂಬ ಷಟ್ತರ್ಕಂಗಳು, ತರ್ಕಿಸಲಜೆಯದೆ–ಶಿವಶರಣರುಗಳಲ್ಲಿ ಅಲ್ಲಾದುದನೇ ಅಹುದುಮಾಡಿ ಅಹುದಾದುದನೇ ಅಲ್ಲಮಾಡಿ ಹೇಳಿದರೆ ಶಿವನಿಂದ ಏನು ಶಿಕ್ಷೆ ಬಂದೀತೋ ಏನು ಕೊರತೆ ಬಂದೀತೋ ಎಂದು, ಮೂಗುವಟ್ಟುದಯ್ಯ–ಶಬ್ದ ಮುಗ್ಧವಾಗಿ ಸುಮ್ಮನಿರ್ಪುದಯ್ಯ.

ಆಗಮ–ಇಪ್ಪತ್ತೆಂಟು ದಿವ್ಯಾಗಮಂಗಳು, ಹೆಜೆ ತೊಲಗಿ–ಹೆರೆಸಾರಿ, ಅಗಲಿತ್ತಯ್ಯ–ವಿಯೋಗ ವಾಯಿತ್ತಯ್ಯ.

೭೫೨

ಚಿಕ್ಕದೊಂದು ಹೊತ್ತಗೆ[1]ಯ[1] ಬೆನಕನ ಕರಡಿಗೆಯಯ್ಯ. ನೀಡುಂಡುಟ್ಟು ಗೊರವನಯ್ಯ. ಪುಣ್ಯವೇನಾದಡಾಗಲಿ ಡಕ್ಕೆಯ ಮೇಲೆ ಅಕ್ಕಿಯ ತಳೆದೆನು. ನಮ್ಮ ಕೂಡಲಸಂಗಮದೇವನಲ್ಲದೆ [3]ಮತ್ತನ್ಯ[3]ದೈವವುಂಟೆನ್ನದಿರು ಕಂಡಾ!

I -

[1]ಪರಮೇಶ್ವರನು ದಾರುಕಾರಣ್ಯಕ್ಕೆ ಕೌಶಿಕಾದಿ ಪಂಚಋಷಿಗಳಿಗೆ ನಿಗಮಂಗಳನು ಬೋಧಿಸುವುದಕ್ಕೆ ಹೋಗಬೇಕಾದರೆ, ಚಿಕ್ಕದೊಂದು ಹೊತ್ತಗೆಯ–ಸಣ್ಣದೊಂದು ಶಕುನದ

ಹೊತ್ತಗೆಯನ್ನು ಹಸ್ತದಲ್ಲಿ ಪಿಡಿದುಕೊಂಡು, ಬೆನಕನ ಕರಡಿಗೆಯಯ್ಯ–ಕಕ್ಷಪಾಳದಲ್ಲಿ ಒಂದು ಎಕ್ಕೆಯ ಬೆನಕನ ಮಡಗಿಕೊಂಡು, ನೀಡಿ–ಮೃಷ್ಟಾನ್ನ ಪದಾರ್ಥಂಗಳನು ಎಡೆ ಮಾಡಿದಲ್ಲಿ, ಉಂಡು–ಅನುಭವಿಸಿ, ಉಟ್ಟು–ವಸ್ತ್ರ ಕಪ್ಪಟಾದಿಗಳನು ಆಚ್ಛಾದಿಸಿಕೊಂಡು, ಗೊರವನಯ್ಯ–ಬೊಜ್ಜು ಹೊಟ್ಟೆಯನ್ನುಳ್ಳ ಯಕ್ಷರುದ್ರನಯ್ಯ.

ಪುಣ್ಯವೇನಾದಡಾಗಲಿ–ಎನ್ನ ಸುಕೃತದಿಂದ ಏನಾದರಾಗಲಿ, ಡಕ್ಕೆಯ ಮೇಲೆ–ಬುಡಬುಡಕೆಯ ಮೇಲೆ, ಅಕ್ಕಿಯ ತಳೆದೆನು–ತಂಡುಲವ ಸಂಪ್ರೋಕ್ಷಣಂಗೆಯ್ದೆನು. ನಮ್ಮ ಕೂಡಲಸಂಗಮದೇವನಲ್ಲದೆ_ನಮ್ಮ ಪರಶಿವಲಿಂಗನಲ್ಲದೆ, ಮತ್ತನ್ಯದೈವವುಂಟೆನ್ನದಿರು ಕಂಡಾ_ಶಿವನೆ ದೈವವಲ್ಲದೆ ಮತ್ತೊಂದು ಅನ್ಯದೇವವುಂಟೆಂದು ಹೇಳದಿರು ಕಂಡಾ ಎಂಬುದರ್ಥ.

● ಚಿಕ್ಕದೊಂದು ಹೊತ್ತಗೆಯ–ಸ್ಥೂಲತನುವಿನಲ್ಲಿ ಸತ್ಕ್ರಿಯಾಸ್ವರೂಪವಾದ ಇಷ್ಟಲಿಂಗ ಸಂಬಂಧವ ಮಾಡಿಕೊಂಡು, ಬೆನಕನ ಕರಡಿಗೆಯಯ್ಯ–ಸೂಕ್ಷ್ಮತನುವಿನಲ್ಲಿ ಸುಜ್ಞಾನಸ್ವರೂಪವಾದ ಪ್ರಾಣಲಿಂಗವ ಸಂಬಂಧವ ಮಾಡಿಕೊಂಡು, ನೀಡಿ–ಅಂಗಮನಪ್ರಾಣಲಿಂಗಳಲ್ಲಿ ಬರುವ ರೂಪರುಚಿ ತೃಪ್ತಿಗಳನು ಇಷ್ಟಪ್ರಾಣಭಾವಲಿಂಗಂಗಳಿಗೆ ಕೊಟ್ಟು, ಉಂಡು–ಆ ಇಷ್ಟ ಪ್ರಾಣಭಾವಲಿಂಗದ ಮುಖದಿಂದ ಬರಲ್ಪಟ್ಟ ಶದ್ಧಸಿದ್ಧಪ್ರಸಿದ್ಧ ಪ್ರಸಾದವನ್ನು ಪಡೆದನುಭವಿಸಿ, ಉಟ್ಟು–ಶಿವಸುಖವನಾಚ್ಛಾದಿಸಿಕೊಂಡು, ಗೊರವನಯ್ಯ–ಪೂಜ್ಯವಾದ ಶಿವಶರಣನಯ್ಯ.

ಪುಣ್ಯವೇನಾದಡಾಗಲಿ–ಮೊದಲ ಜನ್ಮದಲ್ಲಿ ಮಾಡಿದ ಪುಣ್ಯಪಾಪಂಗಳು ಇಲ್ಲವೆಯಾಗಿ ಹೋಗಲಿ, ಡಕ್ಕೆಯ ಮೇಲೆ–ಆತ್ಮಾಂಗಳದಲ್ಲಿ, ಅಕ್ಕಿಯ ತಳೆದೆನು–ಸತ್ತುವಿನ ನಿಜತಂಡುಲಸ್ವರೂಪವಾದ ಭಾವಲಿಂಗ ಸಂಬಂಧವ ಮಾಡಿಕೊಂಡಿರ್ಪೆನು. ನಮ್ಮ ಕೂಲಸಂಗಮದೇವನಲ್ಲದೆ–ನಮ್ಮ ಪರಶಿವಲಿಂಗವಲ್ಲದೆ, ಮತ್ತನ್ಯದೈವ ಉಂಟೆನ್ನದಿರು–ತ್ರಿವಿಧಲಿಂಗಕ್ಕೆ ಸಮಾನವಾದ ಸ್ಥಾವರಲಿಂಗಂಗಳುಂಟಾಗಿರ್ಪುದೆಂದು ನುಡಿಯದಿರು, ಕಂಡ–ಕಾಣಾ.

....

೧+ ಚಿಕ್ಕದೊಂದು ಹೊತ್ತಗೆಯ(ಕ, ಗ).

II –

1–1 x (ಚ, ಜ). 2–2 ಅನ್ಯ (ಚ, ಜ).

....

ಚಿಕ್ಕದೊಂದು ಹೊತ್ತುಗೆ ಬೆನಕನ ಕರಡಿಗೆಯುಯ್ಯಾ–ಸಮಸ್ತತತ್ತ್ವಂಗಳನು ಸಂಗ್ರಹಿಸಿಕೊಂಡಿರುವಂಥ ಸೂಕ್ಷ್ಮತರವಾದ ದೇಹವು ಸುಜ್ಞಾನ ಸ್ವರೂಪವಾದ ಪ್ರಾಣಲಿಂಗಕ್ಕೆ ದೇಹಭಾವವಳಿದು ಆಚಾರಾಂಗವೆಂಬ ಕರಂಡಿಗೆಯಾಗಿರ್ಪುದಯ್ಯಾ. ನೀಡುಂಡುಟ್ಟ ಗೊರವನಯ್ಯಾ: ನೀಡಿ–ಪ್ರಾಣಲಿಂಗದೊಡನೆ ಕೂಡಿದ ಷಡ್ವಧಲಿಂಗಕ್ಕೆ ಷಡ್ವಿಧರುಚಿಪದಾರ್ಥವ ಗಡಣಿಸಿ, ಉಂಡು–ಷಡ್ವಿಧಲಿಂಗಮುಖದಿಂದ ಬಂದ ಪ್ರಸಾದಾಮೃತವನನುಭವಿಸಿ, ಉಟ್ಟ–ಶಿವಸುಖಪ್ರಸಾದಾಂಬರವನು ಪ್ರವೇಷ್ಟಿಸಿಕೊಂಡು, ಗೊರವನಯ್ಯಾ–ಮಹಾನುಭಾವ ಗುರುಮೂರ್ತಿಯಯ್ಯಾ.

ಪುಣ್ಯವೇನಾದಡಾಗಲಿ–ಸುಕೃತವೇನಾದರಾಗಲಿ, ಡಕ್ಕೆಯ ಮೇಲೆ ಅಕ್ಕಿಯ ತಳೆದೆನು–ಆಚಾರಾಂಗದ ಮೇಲೆ ಸತ್ತೆಂಬ ನಿಜತಂಡುಲಸ್ವರೂಪವಾದ ಇಷ್ಟಲಿಂಗವನು ಧರಿಸಿದೆನು. ನಮ್ಮ

ಕೂಡಲಸಂಗಮದೇವನಲ್ಲದೆ ಅನ್ಯದೈವ ಉಂಟೆನ್ನದಿರು ಕಂಡಾ-ನಮ್ಮ ಸಂಬಂಧವಾ ಪರಶಿವಲಿಂಗವಲ್ಲದೆ ಪರದೈವ ಉಂಟೆಂದು ಹೇಳದಿರು ಕಂಡಾ.

III -

1-1 x (ಟ,ಡ).

....

ಚಿಕ್ಕದೊಂದು ಹೊತ್ತುಗೆ-ಸಕಲತತ್ತ್ವಸಂಕೋಚಿತಮಪ್ಪ ಮಂತ್ರಾಂಗವು, ಬೆನಕನ ಕರಡಿಗೆ-ಶುದ್ಧವಿದ್ಯಾಪ್ರಸನ್ನಪ್ರಸಾದಮೂರ್ತಿಯಾದ ಪ್ರಾಣಲಿಂಗವು. ನೀಡಿ-ಸಕಲಪದಾರ್ಥವನು ಲಿಂಗಕ್ಕೆ ಸಮರ್ಪಿಸಿ, ಉಂಡು-ಆ ಲಿಂಗಪ್ರಸಾದವನು ಸ್ವೀಕರಿಸಿಯನುಭವಿಸಿ, ಉಟ್ಟು-ಆ ಪೂರ್ಣ ಪ್ರಸಾದವನು ಸರ್ವಾಂಗದಲ್ಲಳವಡಿಸಿಕೊಂಡು, ಗೊರವನಯ್ಯ-"ಗುರೋರ್ಭಾವಃಗೊರವಃ ಎಂದು ಗುರುಸ್ವರೂಪನಯ್ಯ. ಡಕ್ಕೆಯ ಮೇಲೆ-ಚಿನ್ನಾದಕ್ಕಾಶ್ರಯವಾದ ಚಿತ್ಕಾಯದ ಮೇಲೆ, ಅಕ್ಕಿಯ ತಳೆದೆನು-ಚಿದ್ವಸ್ತುರೂಪದಿಷ್ಟಲಿಂಗವನ್ನು ಗುರುಪದೇಶದಿಂದ ಸಂಬಂಧಿಸಿಕೊಂಡೆನು,

V -

೧-೧ x (ಪ).

....

ಚಿಕ್ಕದೊಂದು ಹೊತ್ತುಗೆ-ಸಕಲತತ್ತ್ವಸಂಕೋಚಿತಮಪ್ಪ ಮಂತ್ರಾಂಗವು. ಬೆನಕನ ಕರಡಿಗೆಯಯ್ಯ-ಶುದ್ಧವಿದ್ಯಾಪ್ರಸನ್ನಪ್ರಸಾದಮೂರ್ತಿಯಾದ ಪ್ರಾಣಲಿಂಗವು. ನೀಡುಂಡುಟ್ಟ ಗೊರವನಯ್ಯ ನೀಡಿ-ಸಕಲಪದಾರ್ಥವ ಲಿಂಗಕ್ಕೆ ಸಮರ್ಪಿಸಿ, ಉಂಡು-ಆ ಲಿಂಗಪ್ರಸಾದವನು ಭುಂಜಿಸಿ, ಉಟ್ಟು-ಆ ಪೂರ್ಣಪ್ರಸಾದವನು ಸರ್ವಾಂಗದಲ್ಲಿ ಪ್ರವೇಷ್ಟಿಸಿಕೊಂಡು, ಗೊರವನಯ್ಯ-"ಗುರೋರ್ಭಾವಃಗೊರವಃ ಎಂದು ಗುರುಸ್ವರೂಪನಯ್ಯ. ಡಕ್ಕೆಯ ಮೇಲೆ-ಚಿನ್ನಾದಕ್ಕಾಶ್ರಯವಾದ ಚಿತ್ಕಾಯದ ಮೇಲೆ, ಅಕ್ಕಿಯ ತಳೆದೆನು-ಚಿದ್ವಸ್ತುಸ್ವರೂಪವಾದ ಇಷ್ಟಲಿಂಗವನು ಗುರೂಪದೇಶದಿಂದೆ ಧಾರಣಂಗೆಯ್ದೆನು,

---

೭೫೩

ನೀನಲ್ಲದನ್ಯದೈವವುಂಟೆಂಬವನ ಬಾಯ ಕೆನ್ನೆವಾರೆ ಸೀಳಿದಲ್ಲದೆ ಎನ್ನ ಮುನಿಸು ಹೋಗದಯ್ಯ, ಎನ್ನ ಕೋಪವಡಗದಯ್ಯ, ಎನ್ನ ಬಿನ್ನಪವನವಧರಿಸು ಕೂಡಲಸಂಗಮದೇವಾ.

I -

ನೀನಲ್ಲದೆ-ಪರಶಿವಲಿಂಗವಲ್ಲದೆ, ಅನ್ಯದೈವವುಂಟೆಂಬವನ-ಶಿವನಿಗೆ ಸಮಾನವಾದ ಮತ್ತೊಂದು ದೈವ ಉಂಟೆಂದು ಹೇಳುವಂಥವನ, ಬಾಯ-ಕವಳಿಕವನು, ಕೆನ್ನೆವಾರೆ-ಕಪಾಳ ಪರಿಯಂತರವು, ಸೀಳಿದಲ್ಲದೆ-ಜಿಗಿದು ಹರಿದಲ್ಲದೆ, ಎನ್ನ ಮುನಿಸು-ಎನ್ನ ಬೇಸರವು, ಹೋಗದಯ್ಯ-ಬಿಡುಗಡೆಯಾಗಿ ಹೋಗದಯ್ಯ. ಎನ್ನ ಕೋಪ-ಎನ್ನ ಸಿಟ್ಟು, ಅಡಗದಯ್ಯ-ನಷ್ಟವಾಗದಯ್ಯ. ಎನ್ನ ಬಿನ್ನಪವ-ಎನ್ನ ವಿಜ್ಞಾಪನವನು, ಅವಧರಿಸು-ಪರಾಕಾಗಿ ಆಲಿಸು, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೇ.

೭೫೪

ಆರು ಮುನಿದು ನಮ್ಮನೇನು ಮಾಡುವ[1]ರಯ್ಯಾ?[1] ಊರು ಮುನಿದು ನಮ್ಮನೆಂತು ಮಾಡುವ[1]ರಯ್ಯ.?[1] ನಮ್ಮ ಕುನ್ನಿಗೆ ಕೂಸು ಕೊಡಬೇಡ; ನಮ್ಮ ಸೊಣಗಂಗೆ ತಳಿಗೆಯಲಿಕ್ಕ ಬೇಡ! ಆನೆಯ ಮೇಲೆ ಹೋಹ[2]ನ ಶ್ವಾನ ಕಚ್ಚಬಲ್ಲುದೆ, ನಮಗೆ ನಮ್ಮ ಕೂಡಲಸಂಗಯ್ಯನುಳ್ಳನ್ನಕ್ಕರ?

I -

ಆರು ಮುನಿದು:[ಆರು–]ಷಡುದರುಶನ[೧]ಷಣ್ಮತ[೧]ದವರು, ಮುನಿದು–ಕೋಪಿಸಿ, ನಮ್ಮನೇನು ಮಾಡುವರಯ್ಯ–ಮಠ ಮನೆಗಳ ಮೇಲಣ ಬಿಸಿಲು[೨]ತೆಗೆಸಿಯಾರೆ? ತೆಗೆಸರಯ್ಯ[೨]. ಊರು ಮುನಿದು: [ಊರು–] ಗ್ರಾಮದಲ್ಲಿರುವಂಥ ಸಕಲಾತ್ಮರುಗಳು, ಮುನಿದು–ಕೋಪಿಸಿ, ನಮ್ಮನೆಂತು ಮಾಡುವರಯ್ಯ–ನಮ್ಮ ಹಿತ್ತಲ ಬೇಲಿಯ ಕಳ್ಳಿಯ ಕಡಿದುಕೊಂಡು ಹೋಗಿ ತಮ್ಮ ಹಿತ್ತಲಿಗೆ ಹಚ್ಚಿಕೊಂಡರೂ ಹಚ್ಚಿಕೊಳ್ಳಲಿ.

ನಮ್ಮ ಕುನ್ನಿಗೆ–ನಮ್ಮ ಕಡೆಬಾಗಿಲನು ಕಾಯ್ದುಕೊಂಡಿರುವಂಥ ಶುನಿಗೆ, ಕೂಸಕೊಡಬೇಡ–ತಮ್ಮ ಹೊಟ್ಟೆಯಲ್ಲಿ ಹುಟ್ಟಿದಂಥ ಹೆಣ್ಣು ಶಿಶುವನ್ನು ಕೊಟ್ಟು ವಿವಾಹಮಾಡಿ ನಂಟಾಚಾರವ ಮಾಡಬೇಡವು. ನಮ್ಮ ಸೊಣಗಂಗೆ–ನಮ್ಮ ಶುನಕಂಗೆ, ತಳಿಗೆಯಲಿಕ್ಕ ಬೇಡ–ತಾ ಉಂಬುವಂಥ ಗಂಗಾಳದಲ್ಲಿ ಸಕಲಪದಾರ್ಥವನ್ನು ನೀಡಿ ಆಳಿಯ ಗೂಳಿಗೆ ಕರೆಯಬೇಕೆಂಬ ಲೋಕದ ಘಸಣಿ ಬೇಡ. ಆನೆಯ ಮೇಲೆ ಹೋಹನ–ಮತ್ತಮದ ಹಸ್ತಿಯ ಮೇಲೆ ಹತ್ತಿಕೊಂಡು ಹೋಗುವಂಥವನ. ಶ್ವಾನ ಕಚ್ಚಬಲ್ಲದೆ–ಶುನಿಕಚ್ಚವುದೆ? ಕಚ್ಚಲರಿಯದೆಂಬ ದೃಷ್ಟೋಪಮಾನದ ಹಾಂಗೆ.

● ಆನೆಯ ಮೇಲೆ ಹೋಹನ–ಚಿತ್ತನ ಚಿದಹಂಕಾರ ಚಿದ್ಭೂಷಣಸ್ವರೂಪವಾದ ಪರಬ್ರಹ್ಮದಲ್ಲಿ ಹತ್ತಿಗೆಯನುಳ್ಳಂಥ ಶಿವಶರಣನ, ಶ್ವಾನ ಕಚ್ಚ ಬಲ್ಲುದೆ–ಶುನಿಗೆ ಸಮಾನವಾದ ಜೀವರುಗಳಾಡುವಂಥ ಸ್ತುತಿನಿಂದ್ಯಾದಿಗಳು ತಟ್ಟಬಲ್ಲವೆ? ತಟ್ಟಲರಿಯವು. ನಮಗೆ–ಬಸವಣ್ಣಂಗೆ, ನಮ್ಮ ಕೂಡಲ ಸಂಗಯ್ಯನುಳ್ಳನ್ನಕ್ಕರ–ನಮ್ಮ ಪರಮೇಶ್ವರನ ಕರುಣೆಯುಂಟಾಗಿರುವ ಪರಿಯಂತರ ಲೋಕದಾತ್ಮರುಗಳ ನಚ್ಚು ಮಚ್ಚು ನಮಗೇಕಯ್ಯ.

....

೧–೧ x (ಗ), ೨–೨ ತೆಗೆದರೆ ತೆಗೆದರಯ್ಯ (ಕ)

IV -

1–1 ರು (ತ), 2+ ವ (ತ)

....

ಪರಬ್ರಹ್ಮವೆಂಬ ಮಹಾಗಜವನೇಜೆದವಂಗೆ ಸಮಸ್ತ ನರರು ರಾಕ್ಷಸರು ಇಂದ್ರಿಯಂಗಳೆಂಬ ನಾಯಿಗಳು ಏನು ಮಾಡಬಲ್ಲವೆಂಬುದೀ ವಚನದರ್ಥ.

೭೫೫

ನ್ಯಾಯನಿಷ್ಠುರಿ, ದಾಕ್ಷಿಣ್ಯಪರ ನಾನಲ್ಲ, ಲೋಕವಿರೋಧಿ, ಶರಣ ಆರಿಗೂ ಅಂಜುವನಲ್ಲ, ಕೂಡಲಸಂಗ1[1]ನ[1] ರಾಜತೇಜ[2]ದೊಳಗಿ[2]ಪ್ಪನಾಗಿ.

I- -

ನ್ಯಾಯ-ಒಬ್ಬ ಶೀಲವಂತನೇನಾದರೂ ಸಮಯಾಚಾರಕ್ಕೆ ಜಂಗಮಮೂರ್ತಿಗಳನು ಮಡಗಿಕೊಂಡು ಅವರ ಪಾದೋದಕ ಪ್ರಸಾದವನ್ನು ಕಟ್ಟು ಮಾಡಿಕೊಂಡಿರುವನು. ಈರ್ವರಿಗೂ ಕೆಟ್ಟುಬಂದು ಬೇಸರಗೊಂಡು ಹೊರಹೊರಗಾಗಿದ್ದಲ್ಲಿ, ಒಂದಾನೊಂದು ದಿವಸ ಸಲಿಸುವಂಥ ವೇಳೆಯಲ್ಲಿ 'ಸ್ವಾಮಿ ನಾನು ಪ್ರಸಾದವ ನೀಡಿಸಿಕೊಂಡೆನೋ ಇಲ್ಲವೋ' ಎಂದು ಕೇಳಿದಲ್ಲಿ 'ಹೇಂಗೋ ನಮಗೆ ನೆನಪಿಲ್ಲ'ವೆಂದು ಚೌಕಿಮಠಂಗಳಿಗೆ ಹೋಗಿ, ಭಕ್ತಮಾಹೇಶ್ವರರುಗಳೊಂದಿಗೆ 'ಇವತ್ತು ನಮ್ಮ ಶೀಲವಂತ ನಮ್ಮೊಂದಿಗೆ ಪ್ರಸಾದವ ನೀಡಿಸಿಕೊಳ್ಳಲಿಲ್ಲ'ವೆಂದು ಹೇಳಿದಲ್ಲಿ. ಆ 'ಭಕ್ತಮಾಹೇಶ್ವರರುಗಳು ಶೀಲವಂತನ ಕರೆಸಿ,' 'ಏನೋ ಶೀಲವಂತ ಇವತ್ತು ನಿಮ್ಮಯ್ಯನವರೊಂದಿಗೆ ಪ್ರಸಾದವ ನೀಡಿಸಿಕೊಳಲಿಲ್ಲವಂತೆ ಯಾಕೆಂ'ದು ಕೇಳಿದಲ್ಲಿ 'ನಾನೇಕೆ ನೀಡಿಸಿಕೊಳಲಿಲ್ಲ ಅಯ್ಯನವರೇ ಸುಳ್ಳು ಹೇಳುತ್ತೈದಾರೆಂ'ದು ಆಡಿದಲ್ಲಿ, 'ಇದು ಅರುಹು ಆಚರಣೆ ಪ್ರಸಂಗವಲ್ಲ. ನಮ್ಮ ಕೂಡ ಸೇಸ್ಯವಲ್ಲ. ಎಡಬಲ ಗ್ರಾಮದಲ್ಲಿ ಗುರುಚರಮೂರ್ತಿಗಳೈದಾರೆ, ಅಲ್ಲಿಗೆ ಹೋಗಿಸ್ಯೆಸಲ್ಲ ಮಾಡಿಸಿಕೊಂಡು ಬನ್ನಿ'ಯೆಂದು ನ್ಯಾಯಕ್ಕೆ ಕೊಟ್ಟು ಕಳಿಸಿಕೊಡುವಾತ ನಾನಲ್ಲವು; ನಿಷ್ಠುರಿ [ದಾಕ್ಷಿಣ್ಯಪರ ನಾನಲ್ಲ-] ಗುರುಚರಮೂರ್ತಿಗಳೇನಾದರೂ ಹರ ಗುರುವಾಕ್ಯಗಲ್ಲಿ ಪೇಳಿದ ಹಾಂಗೆ ಸ್ಥೂಲವಾದರೆ ಸ್ಥೂಲ ಸೂಕ್ಷ್ಮವಾದರೆ ಸೂಕ್ಷ್ಮವೆಂದು ವಿಭಾಗಿಯ ಮಾಡಿಕೊಡಬೇಕಲ್ಲದೆ ಆ ಭಕ್ತನೇನಾದರೂ ಭಕ್ತಿಬಿನ್ನಹವನ್ನು ಮಾಡದೆ ಉಪೇಕ್ಷವ ಮಾಡಿಬಿಟ್ಟಲ್ಲಿ 'ಈ ಅಯ್ಯನವರು ಅಷ್ಟಾವಧಾನವನುಳ್ಳವರು ಹಳೆಗಾಲದ ದೇವರು ಇವರು ಯಾಕೆ ಸುಳ್ಳುಹೇಳಿಯಾರು. ಇವನು ಮಹಾ ಗರ್ವಿ. ಇವನು ಸುಳ್ಳುಹೇಳುತ್ತೈದಾನೆಂ'ದು ಸಿಟ್ಟುಮಾಡಿ ಹೇಳುವಾತ ನಾನಲ್ಲವು. ಆ ಭಕ್ತನೇನಾದರೂ ಭಕ್ತಿಬಿನ್ನಹವನ್ನು ಮಾಡಿ ಉಡುಗೊರೆ ಉತ್ಸಾಹವನ್ನು ಹೊದಿಸಿ ಮಾನಮನ್ನಣೆಯಿಂದ ಕಳಿಸಿಕೊಟ್ಟಿದ್ದಲ್ಲಿ 'ಈ ಅಯ್ಯನವರು ಮದ್ದುಗಾರ ದೇವರು ಮುಪ್ಪಿನ ದೇವರು ಇವರೇ ಸುಳ್ಳುಹೇಳುತ್ತೈದಾರೆ. ಆ ಭಕ್ತನು ಅಷ್ಟಾವಧಾನವುಳ್ಳವ ಅವನೇಕೆ ತಪ್ಪಿಯಾನೆಂ'ದು ದಾಕ್ಷಿಣ್ಯವ ಮುಂದುಗೊಂಡು ಹೇಳುವಾತ ನಾನಲ್ಲವು. ಲೋಕವಿರೋಧಿ-ಲೋಕದಾತ್ಮರುಗಳ ಸ್ತುತಿನಿಂದ್ಯಾದಿಗಳಿಗೆ ಹೆದರುವಾತನಲ್ಲವು, ಕೂಡಲಸಂಗನ-ಪರಶಿವಲಿಂಗದ, ರಾಜತೇಜದೊಳಗಿಪ್ಪನಾಗಿ-ಚಿತ್ತಿನ ಚಿದ್ವಾರದಲ್ಲಿ ಕೂಡಿರ್ಪನಾಗಿಯೆಂಬ ದೃಷ್ಟೋಪಮಾನದ ಹಾಂಗೆ.

● ನ್ಯಾಯ-ಯತಿ ಆಶ್ರಯದಲ್ಲಿ ಚೌಕಿಮಠವಿರುವುದು, ಬಾವಿ ಇರುವವುದು, ಪುಷ್ಪದ ಗಿಡಗಳಿರುವವು. ಒಬ್ಬ ವಿರಕ್ತರು ಎಡಬಲ ಗ್ರಾಮದಲ್ಲಿ ಲಿಂಗಾರ್ಪಿತವ ಮಾಡಿಕೊಂಡು ಬಂದು ಓದುತ್ತ ಹಾಡುತ್ತ ಶಿವಾರ್ಚನೆಯ ಮಾಡುತ್ತಿರುವರು. ಎಡಬಲ ಗ್ರಾಮಂಗಳಲ್ಲಿರುವಂಥ ಭಕ್ತರುಗಳು ಬಂದು ನಮಸ್ಕಾರವ ಮಾಡಿ ಪತ್ರಪುಷ್ಪಾದಿಗಳ ತೆಗೆದುಕೊಂಡು ಹೋಗುವರು. ಒಂದಾನೊಂದು ದಿವಸದಲ್ಲಿ ಆ ಅಯ್ಯನವರಿಗೆ ಶರೀರದಲ್ಲಿ ಸುಸ್ತಿಯಾಗಿ ಪವಡಿಸಿಕೊಂಡಿದ್ದಲ್ಲಿ ಎಂದಿನ ಹಾಂಗೆ ಎಡಬಲ ಗ್ರಾಮದಲ್ಲಿದ್ದಂಥ ಭಕ್ತರುಗಳು ಬಂದು ನೋಡಿದಲ್ಲಿ, ಅಯ್ಯನವರು ಇಷ್ಟೊತ್ತಿಗೆ ಓದುತ್ತ ಹಾಡುತ್ತ ಶಿವಾರ್ಚನೆಯ ಮಾಡುತ್ತಿರುವರು. ಇವತ್ತೇನು ಕಾರಣಕ್ಕೆ ಪವಡಿಸಿಕೊಂಡೈದಾರೆಂದು

ಪತ್ರಪುಷ್ಪಾದಿಗಳನು ಎತ್ತಿಕೊಂಡು ನಮಸ್ಕಾರವ ಮಾಡುವ ನೆವದಿಂದ ಪಾದವಿಡಿದು ನೋಡಿದಲ್ಲಿ ತುಸು ಬೆಚ್ಚಗಿರುವವು. ಸ್ವಾಮೀ ನಮ್ಮ ಮನೆಗೆ ಬರಬೇಕೆಂದು ಬಿನ್ನಹವ ಮಾಡಿ ಕರೆದಲ್ಲಿ ಅವರು ಬಾರದೇ ಇದ್ದಲ್ಲಿ, ಸ್ವಾಮೀ ನಿಮಗೆ ಆಗಿಬಾರದಂಥ ಜೈನಚಾರ್ವಾಕ ಮಾಯಾವಾದಿಗಳು ನಿಮ್ಮಯ್ಯನವರು ಅಡವಿಯಲ್ಲಿರ್ದು ಸತ್ತು ಕೆಟ್ಟುಹೋಗುತ್ತೈದಾನೆಂದು ಆಡಿಕೊಂಡಾರು, ಬನ್ನಿ ಸ್ವಾಮಿಯೆಂದು ಬಲಾತ್ಕಾರದಿಂದ ಬಿನ್ನಹವನ್ನು ಮಾಡಿ ಕರಕೊಂಡು ಬರುವಾತ ನಾನಲ್ಲವು. ನಿಷ್ಠುರಿ–ಛೇ! ಜಾಳೆ ನಿನ್ನ ಸಂಸಾರದ ಗುಡಿಸಲಿಗೆ ನಾನೇಕೆ ಬರಲಿಯೆಂದು ಸಿಟ್ಟು ಮಾಡುವಾತ ನಾನಲ್ಲವು, ದಾಕ್ಷಿಣ್ಯಪರ ನಾನಲ್ಲ–ಮತ್ತೊಬ್ಬ ಭಕ್ತನು ಸ್ವಾಮೀ ನಮ್ಮ ಮನೆಯ ಸಮೀಪದಲ್ಲಿ ಚೌಕಿಮಠ ಐತೆ ಬಾವಿ ಐತೆ ಪುಷ್ಪದ ಗಿಡಗಳೈದಾವೆ ನಾನು ನಿಮ್ಮ ಸೇವಕನಲ್ಲವೆ ? ಎನ್ನ ಹೆಂಡರು ಮಕ್ಕಳು ನಿಮ್ಮ ಭೃತ್ಯರಲ್ಲವೆ ದಯಮಾಡಿರಿ ಸ್ವಾಮಿಯೆಂದು ಕರೆದಲ್ಲಿ ದಾಕ್ಷಿಣ್ಯ ಮುಂದುಗೊಂಡು ಬರುವಾತ ನಾನಲ್ಲವು.

ಲೋಕವಿರೋಧಿ–ಲೋಕದಾತ್ಮರುಗಳ ನಚ್ಚು ಮಚ್ಚುವಿಗೆ ಹಗೆಯಾಗಿರ್ಪನು, ಶರಣ–ಜ್ಞಾನಜಂಗಮೂರ್ತಿಯು, ಆರಿಗೂ ಅಂಜುವನಲ್ಲ–ಶಿವನುಂಟು ಮಾಡಿದ ಆಧಿವ್ಯಾಧಿವಿಪತ್ತುಗಳಿಗೆ ಹೆದರುವಾತನಲ್ಲವು, ಕೂಡಲಸಂಗನ–ಪರಶಿವಲಿಂಗದ, ರಾಜತೇಜದೊಳಗಿಪ್ಪನಾಗಿ–ಭಕ್ತಿಜ್ಞಾನದಲ್ಲಿ ಕೂಡಿರ್ಪನಾಗಿ.

III –

1–1 ಮದೇವರ (ಟ, ಡ). 2–2ದಲ್ಲಿ (ಟ, ಡ).

....

ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ–ಪರಶಿವಲಿಂಗದ ಭಕ್ತಿಸಾಮ್ರಾಜ್ಯದ ಯಶಸ್ಸಿನಲ್ಲಿ ನೆಲೆಸಿರುವನಾಗಿ.

V –

1–1 ಮದೇವರ(ಪ). 2–2 ದಲ್ಲಿ(ಪ)

....

ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ–ಪರಶಿವಲಿಂಗದ ಭಕ್ತಿಸಾಮ್ರಾಜ್ಯದ ಯಶಸ್ಸಿನಲ್ಲಿ ನೆಲೆಸಿರುವನಾಗಿ.

೭೫೬

ಊರ ಮುಂದೆ ಹಾಲ ಹಳ್ಳ ಹರಿವುತ್ತಿರಲು, [1]ವಾಳೆ[1]ಯಾವಿನ ಬೆನ್ನ[2]ಲಿ[2] ಹರಿಯ[3]ಲದೇ[3]ಕಯ್ಯ ಲಜ್ಜೆಗೆಡಲೇಕೆ? ನಾಣುಗೆಡಲೇಕೆ? ನಮಗೆ ನಮ್ಮ ಕೂಡಲಸಂಗಮದೇವರುಳ್ಳನ್ನಕ್ಕ ಬಿಜ್ಜಳನ ಭಂಡಾರ ನಮಗೇಕಯ್ಯ.

I– –

ಊರ ಮುಂದೆ-ಗ್ರಾಮದ ಸಮ್ಮುಖದಲ್ಲಿ, ಹಾಲೇಹಳ್ಳವಾಗಿ ಹರಿವುತ್ತಿರಲು-ಹಳ್ಳವಾಗಿ ಚರಿಸುತ್ತಿರಲು, ವಾಳೆಯಾವಿನ ಬೆನ್ನಲಿ ಹರಿಯಲದೇಕಯ್ಯ-ತನಗೆ ಹಾಲು ಮೊಸರು ಬೇಕಾದರೆ ಹಳ್ಳದಿಂದ ತಂದು ಬಳಸಿಕೊಳಬೇಕಲ್ಲದೆ ಒಂದು ಗೊಡ್ಡಾಕಳ ಕೊಂಡು ಕೊಂಡು ಬಂದು ನೀರನ್ನು ಹಾಕಿ ಮಡ್ಡಿ ಮುರುವನ್ನು ತಿನಿಸಿ ಮೈ ಕೈ ತಡವಿ ಹಾಲನ್ನು ಕರೆದನುಭವಿಸುತ್ತೈದೇನಿಯೆಂದು ಹೇಳಿಕೊಂಬುವುದೇನು ಕಾರಣಕ್ಕಯ್ಯ.

ಲಜ್ಜೆಗೆಡಲೇಕೆ? ನಾಣುಗೆಡಲೇಕೆ? ನಮ್ಮ ಕೂಡಲಸಂಗಮದೇವರುಳ್ಳನ್ನಕ್ಕ-ನಮ್ಮ ಪರಮೇಶ್ವರನು ಕರುಣಿಸಿಕೊಟ್ಟಂಥ ಪಂಚಪರುಷ ಉಂಟಾಗಿರುವ ಪರಿಯಂತರ, ಬಿಜ್ಜಳನ ಭಂಡಾರ ನಮಗೇಕಯ್ಯ-ಬಿಜ್ಜಳನ ದ್ರವ್ಯವನ್ನು ತೆಗೆದುಕೊಂಡು ಲಜ್ಜೆ ನಾಚಿಕೆಯನ್ನು ಹೋಗಲಾಡಿಸಿ ಕೊಂಬುವುದೇನು ಕಾರಣಕ್ಕಯ್ಯ ಎಂಬ ದೃಷ್ಟೋಪಮಾನದ ಹಾಂಗೆ.

●ಊರ ಮುಂದೆ-ಆಚಾರಂಗವೆಂಬ ಗ್ರಾಮದ ಸಮ್ಮುಖದಲ್ಲಿ, ಹಾಲಹಳ್ಳ ಹರಿವುತ್ತಿರಲು-ಅಮೃತಕುಂಭಸ್ವರೂಪವಾದ ಇಷ್ಟಲಿಂಗವು ನೆಲೆಗೊಂಡಿರಲು, ವಾಳೆಯಾವಿನ ಬೆನ್ನಲಿ ಹರಿಯ ಲದೇಕಯ್ಯ -ಸ್ಥಾವರಾದಿಗಳಿದ್ದೆಡೆಗೆ ಹೋಗಿ ಎಣ್ಣೆ ಮಜ್ಜನವನು ಮಾಡಿಸಿ, ಎಲೆ ಪೂಜೆಯನ್ನು ಕಟ್ಟಿಸಿ ಪರವು ಪಾಡ್ಯವನ್ನು ಮಾಡಿ ದಾನದಕ್ಷಿಣೆಯನ್ನೂ ಕೊಟ್ಟು ಅಡ್ಡಡ್ಡ ಬಿದ್ದು ಆರಾಧಿಸಿ ಇಷ್ಟಾರ್ಥಸಿದ್ಧಿಯನ್ನು ಪಡೆದನುಭವಿಸಬೇಕೆಂಬಂಥದೇತಕ್ಕಯ್ಯ.

ಲಜ್ಜೆಗೆಡಲೇಕೆ? ನಾಣುಗೆಡಲೇಕೆ? ನಮಗೆ ನಮ್ಮ ಕೂಡಲಸಂಗಮದೇವರುಳ್ಳನ್ನಕ್ಕ-ನಮ್ಮ ಪರಮೇಶ್ವರನು ಕರುಣಿಸಿಕೊಟ್ಟಂಥ ಇಹದ ಪ್ರಸಾದ ಭೋಗ ಪರದ ನಿಜಮೋಕ್ಷ ಉಂಟಾಗಿರುವ ಪರಿಯಂತರ, ಬಿಜ್ಜಳನ ಭಂಡಾರ ನಮಗೇಕಯ್ಯ-ಎಮ್ಮ ಸಂಬಂಧವಾದ ಚತುರ್ವಿಧ ಫಲಪದಂಗಳನ್ನು ಪಡೆದನುಭವಿಸಿ ಕ್ರಿಯಾಭಿಮಾನ ಜ್ಞಾನಾಭಿಮಾನವನ್ನು ಹೋಗಲಾಡಿಸಿ ಕೊಂಬುವುದೇನು ಕಾರಣಕ್ಕಯ್ಯ.

II -

1-1 ಒಜೌ (ಚ, ಜ) 3-3 ಲೇ(ಚ, ಜ)

ಊರ ಮುಂದೆ ಹಾಲಹಳ್ಳ ಹರಿವುತ್ತಿರಲು-ಆಚಾರವೆಂಬ ಗ್ರಾಮದ ಮುಂದೆಸೆಯಲ್ಲಿ ಶಿವಾನುಭಾವಾಮೃತಕ್ಕೆ ಸ್ಥಾನವಾದ ಮಹಾನುಭಾವ ಗುರುಮೂರ್ತಿಗಳು ಚರಿಸುತ್ತಿರಲು, ಒಜೆಯಾವಿನ ಬೆನ್ನಲಿ ಹರಿಯಲೇಕಯ್ಯ-ಸಂಕಲ್ಪವಿಕಲ್ಪಜ್ಞಾನಿಗಳ ಬೆಂಬಳಿಯಲ್ಲಿ ಚರಿಸುದೇನಿದ್ದಿತ್ತು.

ಲಜ್ಜೆಗೆಡಲೇಕೆ?-ಇಷ್ಟೊಂದು ಶಾಸ್ತ್ರವ ನೋಡಿರುತ್ತೈದಾನೆ, ಇವನ ಜಿಹ್ವೆ ಅಷ್ಟಾರೂ ಸ್ಪಷ್ಟವಿಲ್ಲಯೆಂದು ಅಭಿಮಾನವನು ಹೋಗಲಾಡಿಕೊಳಲೇಕೆ, ನಾಣುಗೆಡಲೇಕೆ-ಈ ಸೀಮೆಯಲ್ಲಿ ಇವರು ಶಾಸ್ತ್ರವ ಹೇಳುತ್ತೈದಾರೆಯೆಂದರೆ ಇವರ ಠಾವಿಗೆ ಹೋಹಣ. ೧ಆ ಸೀಮೆಯಲ್ಲಿ ಅವರು ಶಾಸ್ತ್ರವ ಹೇಳುತ್ತೈದಾರೆ ಎಂದರೆ ಅವರ ಠಾವಿಗೆ ಹೋಹಣ೧ ಹೀಂಗೆ ದೇಶಭ್ರಷ್ಟಾಗೂದೇನು ಕಾರಣ? ಮುಂದಕ್ಕೆ ಕಾಣಬಂದರ್ಥ.೨

....

೧-೧x(ಜ), ೨+ಮಾಹೇಶ್ವರಸ್ಥಲ ಸಮಾಪ್ತ ಮಂಗಳ ಮಹಾ ಶ್ರೀ ಶ್ರೀ ಶ್ರೀ (ಚ); + ಮಾಹೇಶ್ವರನ ಐಕ್ಯ ಶ್ರೀ ಶ್ರೀ (ಜ).

III –

1–1 ಒಜೆ (ಟ, ಡ), 2–2 x (ಟ, ಡ)

....

ಒಜೆಯಾವಿನ–ಕೊಟ್ಯಾಕಳಿನ, ಬೆನ್ನ–ಹಿಂಭಾಗದ.

೭೫೭

ಹೋಗಬಿಟ್ಟು, ಮರಳಿ ಹಿಂದೆ ನೋಡಿ, ಮತ್ತಾಗಬೇಕೆಂಬ ಸಂದೇಹವುಳ್ಳನ್ನಕ್ಕ ಅದೇ ಪರ[1]ದಾ[1]ರ, ನಾಯಕ ನರಕ ತಪ್ಪದು. ಅನ್ಯವಧುವೆಂಬುದು ನಿಮ್ಮ ರಾಣಿವಾಸ, ಇದೇ ದಿಬ್ಯ ಕೂಡಲಸಂಗಮದೇವಾ.

....

1–1 ದ್ವಾ (ಕ, ಗ)

I –

[೧]ಏಕಾಂತಸ್ಥಾನದಲ್ಲಿ ಚೌಕಂತಸ್ಥಾನದಲ್ಲಿ ಚೌಕಿಮಠಗಳಿದ್ದಲ್ಲಿ ವಿರಕ್ತರುಗಳಿದ್ದೆಡೆಗೆ ನಿರ್ವಂಚಕ ಸದ್ಭಕ್ತರ ಸ್ತ್ರೀಯರುಗಳು ವೀಳ್ಯ ಫಲಹಾರ ಧೂಪಗಾಣಿಕೆ ಮೊದಲಾದುವನ್ನು ತಂದಿಟ್ಟು ಅಡ್ಡಬಿದ್ದು ನಮಸ್ಕರಿಸಿ ಬರುವಂಥ ವೇಳೆಯಲಿ, ಹೋಗಬಿಟ್ಟು–ಆ ಸ್ತ್ರೀಯರನ್ನು ಮುಂದಕ್ಕೆ ಮೂರು ಹೆಜ್ಜೆಯ ಗಮಿಸಗೊಟ್ಟು, ಮರಳಿ–ಪವುನರಪಿಯಾಗಿ, ಹಿಂದೆ ನೋಡಿ–ಅವರ ಕಟಿಪೂರವಾರವನ್ನು ನಿರೀಕ್ಷಣೆಯ ಮಾಡಿ, ಮತ್ತೆ–ಮರಳಿ, ಆಗಬೇಕೆಂಬ–ಇಂತಪ್ಪ ಸ್ತ್ರೀಯಳು ನನಗಾಗಬೇಕೆಂಬಂಥ, ಸಂದೇಹವುಳ್ಳನ್ನಕ್ಕ–ಸಂಕಲ್ಪವುಂಟಾಗಿರುವ ಪರಿಯಂತರವು, ಅದೇ ಪರ[೨][ದಾ][೨]ರ–ಅದೇ ಜಾರಭಾವ, ಅದೇ ಪರಸ್ತ್ರೀಯರ ಸಂಸರ್ಗವು, ನಾಯಕ ನರಕ–ದೊರೆನಿರಯವು, ತಪ್ಪದು–ತೊಲಗದು. ಅನ್ಯವಧುವೆಂಬುದು–ಪರಸ್ತ್ರೀಯರೆಂಬುವಂಥದು, ನಿಮ್ಮ ರಾಣಿವಾಸ–ಪಾರ್ವತಾದೇವಿಯರಿಗೆ ಸಮಾನವು, ಕೂಡಲಸಂಗಮದೇವ–ಎಲೆ ಪರಶಿವಲಿಂಗವೆ, ಇದೇ ದಿಬ್ಯ–ಇದೇ ತಾರ್ಕಣ್ಯವು.

....

೧ + ಹೋಗಬಿಟ್ಟು (ಕ, ಗ), ೨–೨ ದ್ವಾ (ಕ, ಗ)

೭೫೮

ಕಂಡುದಕ್ಕೆಳಸೆನೆನ್ನ ಮನದಲ್ಲಿ, ನೋಡಿ [1]ಎಳಸೆ[1]ನೆನ್ನ ಕಂಗಳಲ್ಲಿ, ಆಡಿ ಹುಸಿಯೆನೆನ್ನ ಜಿಹ್ವೆಯಲ್ಲಿ. ಕೂಡಲಸಂಗಮದೇವಾ, ನಿಮ್ಮ ಶರಣರ ಪರಿ ಇಂತುಟಯ್ಯ.

....

1–1 ಸೋಲೆ (ಕ, ಗ).

I –

ಕಂಡುದಕ್ಕೆಳಸೆನೆನ್ನ ಮನದಲ್ಲಿ-ಭಕ್ತರ ಮನೆಗೆ ಜಂಗಮಮೂರ್ತಿಗಳು ಲಿಂಗಾರ್ಪಿತಕ್ಕೆ ಹೋದಲ್ಲಿ ಚೀನಿ ಚೀನಾಂಬರ ಪಟ್ಟಪಟ್ಟಾವಳಿ ತೋಪು ಶಕಲಾತಿ ತುಪ್ಪಳವಾಸ ಮೊದಲಾದವನ್ನು ಜವಳಿ ಪೆಂಡೆಯ ಮಾಡಿ ಒಟ್ಟಿರುವರು. ಹೊನ್ನು ವರಹ ರೂಪಾಯಿ ಮೊದಲಾದವನ್ನು ಒಡ್ಡೊಡ್ಡು ಮಾಡಿ ಎಣಿಸುತ್ತಿರುವರು,- ಇಂತಪ್ಪ ಐಶ್ವರ್ಯ ದಿವ್ಯದುಕೂಲಂಗಳನು ಎನಗಾಗಬೇಕೆಂದು, ನೋಡಿ-ಕಣ್ಣತುಂಬ ನಿರೀಕ್ಷಣೆಯ ಮಾಡಿ, ಎನ್ನ ಮನದಲ್ಲಿ-ಎನ್ನ ಚಿತ್ತದಲ್ಲಿ, ಎಳಸೆ-ಇಚ್ಛೈಸೆನು, ನೋಡಿ [1]ಎಳಸೆ[1]ನೆನ್ನ ಕಂಗಳಲ್ಲಿ-ರಾಜಸಭೆ ದೇವಸಭೆ ಮೊದಲಾದವರುಗಳಲ್ಲಿ ಸೌಂದರ್ಯವಾದ ಸ್ತ್ರೀಯಳಿದ್ದಲ್ಲಿ ನೋಡಿ ಕಾಮಕಲಾದೃಷ್ಟಿಯಿಂದ ಹಾವಭಾವ ವಿಲಾಸವಿಭ್ರಮಂಗಳ ನಿರೀಕ್ಷಣೆಂಬ ಮಾಡಿ ಇಂತಪ್ಪ ಸ್ತ್ರೀಯಳೆನಗೇನಾಗಬೇಕೆಂದು ಇಚ್ಛೈಸೆನೆನ್ನ [2]ನಯನ[2]ದಲ್ಲಿ. ಆಡಿ ಹುಸಿಯೆನೆನ್ನ ಜಿಹ್ವೆಯಲ್ಲಿ : ಆಡಿ-ಸ್ವಾಮಿ ತನು ನಿಮ್ಮದು ಮನ ನಿಮ್ಮದು ಧನ ನಿಮ್ಮದು ಅರ್ಥಪ್ರಾಣಾಭಿಮಾನ ನಿಮ್ಮದು, ನಾನು ನಿಮ್ಮ ತೊತ್ತು ತೊಂಡ ಸೇವಕನೆಂದು ಹೇಳಿಕೊಂಡು, ಹುಸಿಯ-ಭಕ್ತ ಮಾಹೇಶ್ವರರುಗಳ ಮಧ್ಯದಲ್ಲಿ ನಾನೆಲ್ಲಿ ಹೇಳಿಕೊಂಡಿದ್ದೆನೆಂದು, ಎನ್ನ ಜಿಹ್ವೆಯಲ್ಲಿ-ಎನ್ನ ರಸನೆಯಲ್ಲಿ, ಹುಸಿಯೆ-ಸಟೆಯನಾಡೆನು, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ, ನಿಮ್ಮ ಶರಣರ ಪರಿ ಇಂತುಟಯ್ಯ : ನಿಮ್ಮ ಶರಣರ-ನಿಮ್ಮ ನಿರ್ವಂಚಕ ಸದ್ಭಕ್ತಜ್ಞಾನಜಂಗಮಮೂರ್ತಿಗಳ, ಪರಿ-ನಿಲುಕಡೆಯು, ಇಂತುಟಯ್ಯ-ಹೀಂಗಿರ್ಪುದಯ್ಯ.

....

೧-೧ ಸೋಲೆ (ಕ, ಗ), ೨-೨ ಮನ (ಕ).

IV -

1-1 ಸೋಲೆ (ತ)

....

ಪಂಚೇಂದ್ರಿಯದ ಗುಣವನಱಿಯರು, ಸತ್ಯದಲ್ಲಿ ನಡೆವರು ಶರಣರೆಂಬುದೀ ವಚನದರ್ಥ.[3]

....

೩+ ಅಂತು ವಚನ ೨೬ಕ್ಕಂ ಮಂಗಳಮಹಾ ಶ್ರೀ ಶ್ರೀ ಶ್ರೀ (ತ).

೭೫೯

ಆಪ್ಯಾಯನಕನ್ನವ ನೀಡುವೆ, ಲಾಂಛನಕ್ಕೆ ಶರಣೆಂಬೆ, ಲಾಂಛನಕ್ಕೆ ತಕ್ಕ ಆಚರಣೆ ಇಲ್ಲದಿದ್ದಡೆ, ಕೂಡಲಸಂಗಮದೇವಾ ನೀ ಸಾಕ್ಷಿಯಾಗಿ ಛೀ ಎಂಬೆನು.

I -

ಆಪ್ಯಾಯನಕನ್ನವ ನೀಡುವೆ-ಹಸಿದುಬಂದ ಜಂಗಮಕ್ಕೆ ಅನ್ನ, ತೃಷೆಯಾಗಿ ಬಂದ ಜಂಗಮಕ್ಕೆ ಪಾನ್ಯ, ಶೀತಗ್ರಹೀತವಾಗಿ ಬಂದ ಜಂಗಮಕ್ಕೆ ವಸ್ತ್ರ ಕಪ್ಪಟಂಗಳನು ಕೊಟ್ಟು ಭಕ್ತಿಯ ಮಾಡುವೆನು. ಲಾಂಛನಕ್ಕೆ ಶರಣೆಂಬೆ: [ಲಾಂಛನಕ್ಕೆ-] ಶಿವಲಾಂಛನಕ್ಕೆ ಸ್ವರೂಪವಾದ ಜಂಗಮಮೂರ್ತಿಗಳಿಗೆ, ಶರಣೆಂಬೆ-ನಮಸ್ಕಾರವೆಂದು ನಮಸ್ಕರಿಸುವೆನು. ಲಾಂಛನಕ್ಕೆ ತಕ್ಕ-

ಶಿವಲಾಂಛನಕ್ಕೆ ¹ಸರಿಯಾಗಿ¹ ಆಚರಣೆ ಇಲ್ಲದಿದ್ದಡೆ-ನಡಾವಳಿ ಇರಬೇಕು; ಇಲ್ಲದಿದ್ದರೆ, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ, ನೀ ಸಾಕ್ಷಿಯಾಗಿ-ನೀ ತಾರ್ಕಣ್ಯವಾಗಿ, ಛೀ ಎಂಬೆನು-ಇದು ಜ್ಞಾನಜಂಗಮಸ್ಥಲದಾಚರಣೆಯಲ್ಲವೆಂದು ಜರಿದು ²ಧೀಕರಿಸಿ² ಬಿಡುವೆನು.

....

೧-೧ ತಕ್ಕ (ಕ) ೨-೨ ಧೀಕಾರವಮಾಡಿ (ಕ).

೭೬೦

ಮಾಡುವ ನೀಡುವ ಭಕ್ತನ ಕಂಡಡೆ ನಿಧಿನಿಧಾನವ ಕಂಡಂತಾಯಿತ್ತು. ಪಾದೋದಕಪ್ರಸಾದವ ಕೊಂಬ ಭಕ್ತನ ಕಂಡಡೆ ಹೋದ ಪ್ರಾಣ ಬಂದಂತಾಯಿತ್ತು. ಅನ್ಯರ ಮನೆಗೆ ಹೋಗಿ ತನ್ನುದರವ ಹೊರೆಯದ ಅಚ್ಚ ಶರಣರ ಕಂಡಡೆ ನಿಶ್ಚಯವಾಗಿ ಕೂಡಲಸಂಗಯ್ಯನೆಂಬೆನು.

I -

ಮಾಡುವ ನೀಡುವ ಭಕ್ತನ ಕಂಡಡೆ : ಮಾಡುವ-ಸಮರಸಭಾವದಿಂದ ಶ್ರೀಕಾದಲ್ಲಿ ¹ಲಿಂಗಾರ್ಚನೆಯ¹ನನುಗೈವ, ನೀಡುವ- ಆ ಲಿಂಗಕ್ಕೆ ಪ್ರಾಣ ಕಳಾಚೈತನ್ಯಸ್ವರೂಪವಾದ ಜಂಗಮಕ್ಕೆ ತನುಮನಧನಂಗಳನು ಎಡೆಮಾಡುವ, ಭಕ್ತನ-ನಿರ್ವಂಚಕ ಸದ್ಭಕ್ತನ, ಕಂಡಡೆ-ನೋಡಿದರೆ, ನಿಧಿನಿಧಾನವ ಕಂಡಂತಾಯಿತ್ತು, ನಿಧಿ-ನಿಕ್ಷೇಪದ್ರವ್ಯವು ನಿಧಾನವ-ಬಳಸುವ ದ್ರವ್ಯವನ್ನು, ಕಂಡಂತಾಯಿತ್ತು-ನಿಧಿನಿಧಾನವ ಕಂಡರೆ ಎಷ್ಟೊಂದು ಸಂತೋಷವಾಗುತ್ತಿಹುದೋ ಹಾಂಗೆ, ಜಂಗಮಮೂರ್ತಿಗಳು ಬಂದು ತನುಮನಧನಂಗಳನು ಕೇಳಿದರೆ ನನಗಷ್ಟೊಂದು ಸಂತೋಷವಾಗುತ್ತಿಹುದಯ್ಯ.

ಪಾದೋದಕ ಪ್ರಸಾದವ ಕೊಂಬ-ಪಾದೋದಕ ಪ್ರಸಾದವನ್ನು ಅಸಂಭವಿಸುವ, ಭಕ್ತನ-ಶಿವಭಕ್ತನ, ಕಂಡಡೆ-ನೋಡಿದರೆ, ಹೋದಪ್ರಾಣ ಬಂದಂತಾಯಿತ್ತು-ಹೋದಪ್ರಾಣ ಬಂದರೆ ಎಷ್ಟೊಂದು ಸಂತೋಷವಾಗುತ್ತಿಹುದೋ ಹಾಂಗೆ, ಜಂಗಮಮೂರ್ತಿಗಳು ಬಂದು ತನುಮನಧನಂಗಳನು ಕೇಳಿದರೆ ನನಗಷ್ಟೊಂದು ಸಂತೋಷವಾಗುತ್ತಿಹುದು.

ಅನ್ಯರ ಮನೆಗೆ-ಪರರ ಮನೆಗೆ, ಹೋಗಿ ಆಚಾರಭ್ರಷ್ಟರ ಗೃಹಕ್ಕೆ ಹೋಗಿ, ಎಯ್ದು ಹೋಗಿ, ತನ್ನುದರದ ಹೊರೆಯದ-ತನ್ನ ಘಟರಕ್ಷಣ್ಯವ ಮಾಡಿಕೊಳದ, ²ಅಚ್ಚ ಶರಣರ-ಬಚ್ಚಬರಿಯ² ಚಿತ್ಸ್ವರೂಪರಾದ ಶಿವಶರಣರ, ಕಂಡಡೆ-ದರುಶನವಾದರೆ, ನಿಶ್ಚಯವಾಗಿ-ಯಥಾರ್ಥವಾಗಿ, ಕೂಡಲಸಂಗಯ್ಯನೆಂಬೆನು-ಪರಶಿವಲಿಂಗವೇ ನೀವೆಂದು ಭಾವಿಸುವೆನು.

....

೧-೧ ಲಿಂಗಪೂಜೆಯ(ಗ) ೨-೨ ಅಚ್ಚ-ಬರಿಯ(ಕ)

ಗುರುಭಕ್ತಿಯ ಮಾಡಬಹುದಲ್ಲದೆ ಲಿಂಗಭಕ್ತಿಯ ಮಾಡಬಾರದು. ಲಿಂಗಭಕ್ತಿಯ ಮಾಡಬಹುದಲ್ಲದೆ ಜಂಗಮಭಕ್ತಿಯ ಮಾಡಬಾರದು. ಜಂಗಮಭಕ್ತಿಯ ಮಾಡಬಹುದಲ್ಲದೆ ಸಮಯಭಕ್ತಿಯ ಮಾಡಬಾರದು. ಸಮಯಭಕ್ತಿಯ ಮಾಡಬಹುದಲ್ಲದೆ ಸಮಯಸಂತೋಷವ ಮಾಡಬಾರದು. ಇವೆಲ್ಲವನು ಮಾಡಬಹುದಲ್ಲದೆ ತನ್ನ ತಾನಱಿಯಬಾರದು. ತನ್ನ ತಾನಱಿದಿಹೆನೆಂಬ ಹಂಕಾರವುಳ್ಳಡೆ ನಿಮ್ಮವರಿಗೆ ದೂರ, ಎಲೆ ದೇವಾ. ಅನ್ಯಕ್ಕೆ ಆಸೆಮಾಡಿದೆನಾದಡೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ ಕೂಡಲಸಂಗಮದೇವಾ!

I -

ಗುರುಭಕ್ತಿಯ ಮಾಡಬಹುದಲ್ಲದೆ–ವರುಷಕ್ಕೊಂದು ವೇಳೆ ಮನೆಗೆ ಗುರುಮೂರ್ತಿಗಳು ಬಂದಲ್ಲಿ ಅಂಗ ಆಪ್ತ ಸ್ಥಾನ ಸದ್ಭಾವವೆಂಬ ಚತುರ್ವಿಧ ಗುರುಭಕ್ತಿಯನನುಗೈದರೂ ಗೆಯ್ಯಬಹುದಲ್ಲದೆ, ಲಿಂಗಭಕ್ತಿಯ ಮಾಡಬಾರದು–ಗುರುಮುಖದಿಂದ ಬಂದ ಇಷ್ಟಮಹಾಲಿಂಗಕ್ಕೆ ತ್ರಿಕಾಲಂಗಳಲ್ಲಿ ತಪ್ಪದ ಹಾಂಗೆ ಅಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳಿಂದಾರಾಧಿಸೇನೆಂದರೆ ಅಶಕ್ಯವಾಗಿರ್ಪುದು. ಲಿಂಗಭಕ್ತಿಯ ಮಾಡಹುದಲ್ಲದೆ–ತ್ರಿಕಾಲಂಗಳಲ್ಲಿ ತಪ್ಪದ ಹಾಂಗೆ ಲಿಂಗಪವೂಜೆಯನನುಗೈದರೂ ಅನುಗೆಯ್ಯಬಹುದಲ್ಲದೆ, ಜಂಗಮಭಕ್ತಿಯ ಮಾಡಬಾರದು–ಆ ಲಿಂಗಕ್ಕೆ ಪ್ರಾಣಕಳಾಚೈತನ್ಯಸ್ವರೂಪವಾದ ಜಂಗಮಮೂರ್ತಿಗಳಿಗೆ ಅನ್ನೋದಕ ಸಜ್ಜೆ ಶಿವದಾರ ಕೊಡೆ ಪಾದರಕ್ಷೆ ವಸ್ತ್ರ ಕಪ್ಪಡಂಗಳನು ಕೊಟ್ಟು ಭಕ್ತಿಯ ಮಾಡೇನೆಂದರೆ ಅಶಕ್ಯವಾಗಿರ್ಪುದು.

ಜಂಗಮಭಕ್ತಿಯ ಮಾಡಬಹುದಲ್ಲದೆ–ಅನ್ನೋದಕ ಸಜ್ಜೆ ಶಿವದಾರ ಕೊಡೆ ಪಾದರಕ್ಷೆ ವಸ್ತ್ರ ಕಪ್ಪಟಂಗಳನ್ನು ಕೊಟ್ಟು ಜಂಗಮಭಕ್ತಿಯನನುಗೈದರೂ ಗೆಯ್ಯಬಹುದಲ್ಲದೆ, ಸಮಯಭಕ್ತಿಯ ಮಾಡಬಾರದು–ಅಂಗದ ಮೇಲೆ ಲಿಂಗವಿದ್ದವರೆಲ್ಲ ಸಂಗಯ್ಯನ ಸರಿಯೆಂದು ಎಲ್ಲಾ ಸಮಯಗಣಂಗಳಿಗೆ ಒಂದೇ ಸಮಾನಭಕ್ತಿಯ ಮಾಡೇನೆಂದರೆ ಅಶಕ್ಯವಾಗಿರ್ಪುದು.

ಸಮಯಭಕ್ತಿಯ ಮಾಡಬಹುದಲ್ಲದೆ–ಅಂಗದ ಮೇಲೆ ಲಿಂಗವಿದ್ದವರೆಲ್ಲ ಸಂಗಯ್ಯನ ಸರಿಯೆಂದು ಎಲ್ಲಾ ಸಮಯಗಣಂಗಳಿಗೆ ಒಂದೇ ಸಮಾನವಾಗಿ ಭಕ್ತಿಯನನುಗೈಯ್ದರೂ ಗೆಯ್ಯಬಹುದಲ್ಲದೆ, ಸಮಯಸಂತೋಷವ ಮಾಡಬಾರದು–ಅಂಗದ ಮೇಲೆ ಲಿಂಗವಿದ್ದವರೆಲ್ಲ ಸಂಗಯ್ಯನ ಸರಿಯೆಂದು ಎಲ್ಲ ಸಮಯವ ಗಣಂಗಳಿಗೆ ಹೆಚ್ಚುಕುಂದಿಲ್ಲದೆ ಒಂದೆ ಸಮಾನವಾಗಿ ಕೊಟ್ಟು ಸಂತೃಪ್ತಿಬಡಿಸೇನೆಂದರೆ ಅಶಕ್ಯವಾಗಿರ್ಪುದು.

ಇವೆಲ್ಲವನು ಮಾಡಬಹುದಲ್ಲದೆ–ಹಿಂದೆ ಹೇಳಿದಷ್ಟನ್ನು ಅನುಗೆಯ್ದರೂ ಅನುಗೆಯ್ಯಬಹುದಲ್ಲದೆ, ತನ್ನ ತಾನಱಿಯಬಾರದು–ತಾನಾರು ತನ್ನ ನಿಜವೇನು, ತಾನೆಲ್ಲ ಶಿವಸ್ವರೂಪವೆಂದು ತಿಳಿದೇನೆಂದರೆ ಅಶಕ್ಯವಾಗಿರ್ಪುದು. ತನ್ನ ತಾನಱಿದಿಹೆನೆಂಬ–ತಾನಾರು ತನ್ನ ನಿಜವೇನು ತಾನೆಲ್ಲ ಶಿವಸ್ವರೂಪವೆಂದು ತಿಳಿದೇನೆಂದು ಹೇಳುವ, ಅಹಂಕಾರವುಳ್ಳಡೆ–ಚಿದಹಂಕಾರವುಂಟಾದರೆ, ನಿಮ್ಮವಂಗೆ ದೂರ–ನಿಮ್ಮ ಪ್ರಮಂಥಗಣಂಗಳಲ್ಲಿ ಕೂಡುವುದಕ್ಕೆ ಎಟ್ಟುಗೊಳುವು. ಎಲೆ–ಭೋ, ದೇವಾ–ದಿವ್ಯಲಾವಣ್ಯಕಾಂತಿಯನುಳ್ಳ ಎಲೆ ಪರಶಿವಲಿಂಗವೆ, ಅನ್ಯಕ್ಕೆ–

ಅನಾಚಾರಕ್ಕೆ, ಆಸೆ ಮಾಡಿದೆನಾದಡೆ–ಅಪೇಕ್ಷೆಯ ಮುಂದುಗೊಂಡೆನಾದರೆ, ನಿಮ್ಮಾಣೆ–ಸ್ವಾಮಿಗಳ ಮೇಲಣ ಪ್ರತಿಜ್ಞೆಯು, ನಿಮ್ಮ ಪ್ರಮಥರಾಣೆ–ನಿಮ್ಮ ಪ್ರಮಥಗಣಂಗಳ ಮೇಲಣ ಪ್ರತಿಜ್ಞೆಯು ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

೭೬೨

ದಾಸನಂತೆ ತವನಿಧಿಯ ಬೇಡುವನಲ್ಲ; ಚೋಳನಂತೆ ಹೊನ್ನಮಳೆಗಱೆಸೆಂಬುವನಲ್ಲ; ಅಂಜದಿರು! ಅಂಜದಿರು! ಅವರಂದದವ ನಾನಲ್ಲ, ಎನ್ನ ತಂದೆ ಕೂಡಲಸಂಗಮದೇವಾ, ಸದ್ಭಕ್ತಿಯನೇ ಕರುಣಿಸೆನಗೆ.

I– –

ದಾಸನಂತೆ–ಜೇಡರ ದಾಸಿಮಯ್ಯನ ಹಾಂಗೆ, ತವನಿಧಿಯ ಬೇಡುವನಲ್ಲ–ಎಂದೆಂದಿಗೂ ತೀರುಗಡೆಯಾದಂಥ ತವನಿಧಿಪ್ರಸಾದವನ್ನು ಕರುಣಿಸಿಕೊಡಿರೆಂದು ಕೇಳುವಾತ ನಾನಲ್ಲವು, ಚೋಳನಂತೆ–ಕರಿಕಾಲಚೋಳರಾಯನ ಹಾಂಗೆ, ಹೊನ್ನಮಳೆಗರೆಸೆಂಬುವನಲ್ಲ–ಸುವರ್ಣವೃಷ್ಠಿಯನ್ನು ಬರಮಾಡಿಸೆಂದು ಹೇಳುವಾತ ನಾನಲ್ಲವು, ಅಂಜದಿರು–ಈತನೆಲ್ಲಿ ಒಂದೊಸ್ತುವ ಕೇಳಿಯಾನೋ ಎಂದು ಬಹಿರಂಗದಲ್ಲಿ ಭಯಂಬಡದಿರು, ಅಂಜದಿರು–ಈತನೆಲ್ಲಿ ಒಂದೊಸ್ತುವನ್ನು ಕೇಳಿಯಾನೋ ಎಂದು ಅಂತರಂಗದಲ್ಲಿ ಹೆದರಿಕೊಳ್ಳದಿರು, ಅವರಂದದವ ನಾನಲ್ಲ–ಅವರ ಹಾಂಗೆ ಒಂದೊಸ್ತುವನ್ನು ಕೊಟ್ಟು ಒಂದೊಸ್ತುವನ್ನು ಹಡೆವಾತ ನಾನಲ್ಲವು, ಎನ್ನ ತಂದೆ–ಎನ್ನಾತ್ಮಜನಕನಾದಂಥ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಸದ್ಭಕ್ತಿಯನೇ–ಶಿವಾದ್ವೈತಭಕ್ತಿಯನ್ನೆ, ಕರುಣಿಸು–ಕೃಪೆಮಾಡು.

೭೬೩

ಲಿಂಗದಲ್ಲಿ ಸಮ್ಯಕ್ಕರು, ಲಿಂಗದಲ್ಲಿ ಸ[1][ದಾರ್ತ][1]ರು, ಲಿಂಗದ ಸೊಮ್ಮು ಸಂಬಂಧವನಱೆದ ಸ್ವಾಮಿಭೃತ್ಯರೆಲ್ಲರೂ, ನಿಮ್ಮ ಬೇಡೆನಂಜದಿರು. ಎನಗೆ ಮರ್ತ್ಯಲೋಕದ ಮಹಾಗಣಂಗಳುಂಟು, ಇದು ಕಾರಣ, ಕೂಡಲಸಂಗಮದೇವರ ಲೋಕವ ಹಂಚಿಕೊಳ್ಳಿ ನಿಮನಿಮಗೆ.

....

1–1 ದರ್ಥ (ಕ, ಗ)

I –

ಲಿಂಗದಲ್ಲಿ ಸಮ್ಯಕ್ಕರು: ಲಿಂಗದಲ್ಲಿ–ಇಷ್ಟಮಹಾಲಿಂಗದಲ್ಲಿ, ಸಮ್ಯಕ್ಕರು–ಲೇಸಾಗಿ ಕೂಡಲ್ಪಟ್ಟಂಥವರುಗಳು, ಲಿಂಗದಲ್ಲಿ–ಇಷ್ಟಮಹಾಲಿಂಗದಲ್ಲಿ, ಸ⌐ದಾರ್ತ⌐ರು: ಸದಾ–ಆವಾಗಲೂ, ಆರ್ತರು–ಬಯಕೆಯನುಳ್ಳಂಥವರುಗಳು, ಲಿಂಗದ ಸೊಮ್ಮು–ಶಿವನೊಡವೆಯಾದಂಥ ಹೊನ್ನು ಹೆಣ್ಣು ಮಣ್ಣನ್ನು [* *] ಸಮರ್ಪಿಸುವಂಥ, ಸಂಬಂಧವನಱೆದ–ಸ್ವಾಯತವನ್ನು ತಿಳಿದ, ಸ್ವಾಮಿಭೃತ್ಯರೆಲ್ಲರೂ–ಪರಶಿವಲಿಂಗವೆ ಕರ್ತೃ ತಾವೇ ಭೃತ್ಯರಂಗಳಾಗಿರುವಂಥವರುಗಳೆಲ್ಲರೂ,

ನಿಮ್ಮ-ಪರಶಿವಲಿಂಗವನ್ನು, ಬೇಡೆ-ಒಂದೊಸ್ತುವನ್ನು ಕೊಡುಯೆಂದು ಕೇಳೆನು, ಅಂಜದಿರಿ-ಈತನಲ್ಲಿ ಒಂದೊಸ್ತುವನ್ನು ಕೇಳಿಯಾನೋ ಎಂದು ಬಹಿರಂಗದಲ್ಲಿ ಭಯಂಬಡದಿರಿ.

ಎನಗೆ-ಸಂಗನಬಸವೇಶ್ವರನಿಗೆ, ಮರ್ತ್ಯಲೋಕದ-ಭೂಲೋಕದ, ಮಹಾಗಣಂಗಳುಂಟು-ಮಹಾಶಿವಗಣಂಗಳುಂಟಾಗಿರ್ಪರು, ಇದು ಕಾರಣ ಇದು ನಿಮಿತ್ತಾರ್ಥ, ನಿಮನಿಮಗೆ-ನಿಮ್ಮ ನಿಮ್ಮ ಅರುಹಿಗೆ, ತಕ್ಕಹಾಂಗೆ ಕೂಡಲಸಂಗಮದೇವರ-ಪರಶಿವಲಿಂಗದ, ಲೋಕವ-ಈರೇಳು ಹದಿನಾಲ್ಕು ಭುವನಂಗಳನು, ಹಂಚಿಕೊಳ್ಳಿ-ವಿಭಾಗೆಯ ಮಾಡಿಕೊಂಡು ನಿಮ್ಮ ನಿಮ್ಮ ಪದಂಗಳನು, ಪಡೆದುಕೊಂಡು ದಿವ್ಯ ತೇಜಸ್ಸುಳ್ಳವರಾಗಿರುತ್ತಿರಿರಿ.

....

೧-೧ ದರ್ಥ (ಕ, ಗ), ೨+ ನಾನು-ಶರಣನು (ಕ, ಗ).

ಮಾಹೇಶ್ವರನ ಐಕ್ಯಸ್ಥಲ

I -

ಮಾಹೇಶ್ವರನ ಐಕ್ಯಸ್ಥಲ-ಮಾಹೇಶ್ವರಸ್ಥಲದೊಳಗಣ ಐಕ್ಯಸ್ಥಲದಾಚರಣೆಯನ್ನು ನಿರೂಪಿಸುತ್ತಿಹರು.

೭೬೪

ಅಂದಂದಿನ ಹೊದ್ದಿಗೆಯ ಬಿಂದುಮಾತ್ರದಲಾದ ಅಂದವ ಕೆಡಿಸಲಜೆಯದ ಅಂಧಕರ ನೋಡಾ! ಸಮರಸವಿಲ್ಲದೆ ನೆರಹಿ ಮಾಡಿ ಭಕ್ತರಾದೆವೆಂಬವರ ನಾನೇನೆಂಬೆ? ಆಚಾರವಂಚಕರ ಎನಗೊಮ್ಮೆ ತೋಱದಿರು ಕೂಡಲಸಂಗಮದೇವಾ ನಿಮ್ಮ ಧರ್ಮ! ನಿಮ್ಮ ಧರ್ಮ!

I -

ಅಂದಂದಿನ-ಅಯಾಯ ಕಾಲದಿಂದುಂಟಾದ, ಹೊದ್ದಿಗೆಯ ತಂದೆತಾಯಿಗಳ ಕೂಟದ, ಬಿಂದುಮಾತ್ರದಲಾದ-ಸಪ್ತಧಾತು-ಸಮ್ಮಿಶ್ರವಾದ ದೇಹವಿಡಿದು ಹುಟ್ಟಿದ, ಅಂದವ ಕೆಡಿಸಲಜೆಯದ-ದೇಹಭಾವದ ವರ್ತನೆಯನ್ನು ನಷ್ಟವಮಾಡಿ ಆಚಾರಾಂಗವಾಗಿ ಅಳವಡಿಸಿಕೊಂಬುವಂಥದನು ತಿಳಿದಿರಬೇಕು; ತಿಳಿಯದ, ಅಂಧಕರ ನೋಡಾ-ಜಾತ್ಯಂಧಕರುಗಳಾದ ಜೀವರುಗಳ ನೋಡಾ, ಸಮರಸವಿಲ್ಲದೆ- ಅಂಗವಾದದ್ದು ಲಿಂಗವಾದದ್ದು ಪೂಜಾ ರೂಪವಾದದ್ದು ಒಂದೇ ವಸ್ತುವೆಂದರಿದು ತಾನುತಾನಾಗಿ ಮಾಡುವ ಸಮರಸಕ್ರೀಯುಂಡಾಗಿಲ್ಲದೆ, ನೆರಹಿಮಾಡಿ-ಅಡ್ಡಣಗಿ ಪಾಚಾಲಿ ಬಿಂದಗಿ ಹರಿವಾಣ ಶ್ರೀರುದ್ರತಟ್ಟೆ ಗೋಮುಖತಟ್ಟೆ ಅರ್ಘ್ಯಸೌಟು ಮೊದಲಾದ ರಂಜನೆಕ್ರೀಗಳನು ಹರಹಿಕೊಂಡು ಲಿಂಗಪೂಜೆಯನ್ನು ಮಾಡಿ, ಭಕ್ತರಾದೆವೆಂಬವರ-ನಿರ್ವಂಚಕ ಸದ್ಭಕ್ತರಾದೆವೆಂದು ಹೇಳಿಕೊಬುವಂಥವರ, ನಾನೇನೆಂಬೆ-ನಾನೇನೆಂದು ಹೇಳಲಿ.

ಆಚಾರವಂಚಕರ–ಪಂಚಾಚಾರದಲ್ಲಿ ಮಾಜೋಬುದ್ಧಿವುಳ್ಳವರ, ಎನಗೆ ತೋಱದಿರು–ಅವರ ದರುಶನವನ್ನು ಕಾಣಿಸದಿರು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ ಧರ್ಮ ನಿಮ್ಮ ಧರ್ಮ–ಅದು ನಿಮ್ಮ ಕೃಪೆಯು, ನಿಮ್ಮ ಕೃಪೆಯು.

೭೬೫

ಕಲಿಯ ಕೈಯ ಕೈದುವಿನಂತಿರಬೇಕಯ್ಯ, ಎಲುದೋಱೆ ಸರಸವಾಡಿದಡೆ ಸೈರಿಸಬೇಕಯ್ಯ, ರಣದಲ್ಲಿ ತಲೆ ಹಱೆದು ಅಟ್ಟೆ ನೆಲಕ್ಕೆ ಬಿದ್ದು ಬೊಬ್ಬಿಡಲದಕ್ಕೊಲಿವ ನಮ್ಮ ಕೂಡಲಸಂಗಮದೇವ.

I –

ಕಲಿಯ ಕೈಯ ಕೈದುವಿನಂತಿರಬೇಕಯ್ಯ: ಕಲಿಯ–ಪರಾಕ್ರಮಿಯ, ಕೈಯ–ಹಸ್ತದಲ್ಲಿ ಪಿಡಿದಿರುವ, ಕೈದುವಿನಂತಿರಬೇಕಯ್ಯ–ಆಯುಧದ ಹಾಂಗಿರಬೇಕಯ್ಯ, ಎಲುದೋಱೆ ಸರಸವಾಡಿದಡೆ– ಅಸ್ಥಿಗಳು ಬೆಳ್ಳಗೆ ಕಾಣಬರುವ ಪರಿಯಂತರ ಕತ್ತಿ ಕಠಾರಿ ಕೈಚೂರಿ ಮೊದಲಾದವುಗಳಿಂದ ಕಡಿದಿರಿದು ನೋಡಿದರೂ, ಸೈರಿಸಬೇಕಯ್ಯ–ಅದನ್ನು ತರಹರ ಮಾಡಿಕೊಂಡು ಯುದ್ಧವ ಮಾಡುತ್ತಿರಬೇಕಯ್ಯ.

ರಣದಲ್ಲಿ–ರಣಾಗ್ರದಲ್ಲಿ, ತಲೆ–ಮಸ್ತಕವು, ಹಱೆದು–ಛೇದನವಾಗಿ, ಅಟ್ಟೆ–ದೇಹವು, ನೆಲಕ್ಕೆ ಬಿದ್ದು–ಭೂಮಿಯ ಮೇಲೆ ಪತಿತವಾಗಿ, ಬೊಬ್ಬಿಡಲದಕ್ಕೆ–ಬೊಬ್ಬೆಯನ್ನು ಹೊಯ್ದು ಕೂಗುವುದಕ್ಕೆ, ಕೂಡಲಸಂಗಮದೇವ–ರಾಜನು, ಒಲಿವ–ಮೆಚ್ಚಿಕೊಂಡು ಬಿರುದುಬಾವುಲಿಯನ್ನು ಹಾಕಿಸುತ್ತೈದಾನೆಂಬ ದೃಷ್ಟೋಪಮಾನದ ಹಾಂಗೆ.

• ಕಲಿಯ ಕೈಯ ಕೈದುವಿನಂತಿರಬೇಕಯ್ಯ: ಕಲಿಯ–ಭಕ್ತನೆಂಬ ವೀರಮಾಸಾಳನ, ಕೈಯ–ಸುಚಿತ್ತವೆಂಬ ಹಸ್ತದಲ್ಲಿ ಪಿಡಿದಿರುವ, ಕೈದುವಿನಂತಿರಬೇಕಯ್ಯ–ಸಮರಸವೆಂಬ ಆಯುಧವನ್ನು ಪಿಡಿದುಕೊಂಡು ಕೇಳಿದಹಾಂಗೆ ಕೊಟ್ಟು ಭಕ್ತಿಯ ಮಾಡುತ್ತಿರಬೇಕಯ್ಯ, ಎಲುದೋಱೆ ಸರಸವಾಡಿದಡೆ–ಸಪ್ತಧಾತು ಸಣ್ಣಿಸಿ ಗಿಟಗಿಟಿ ಜಂತ್ರವಾಗುವ ಪರಿಯಂತರ ಆಧಿವ್ಯಾಧಿ ವಿಪತ್ತುಗಳನುಂಟುಮಾಡಿ ನೋಡಿದರೆ, ಸೈರಿಸಬೇಕಯ್ಯ–ಅದನ್ನು ತರಹರಿಸಿಕೊಂಡು ಭಕ್ತಿಯ ಮಾಡುತ್ತಿರಬೇಕಯ್ಯ.

I– –

ರಣದಲ್ಲಿ–ಭಕ್ತಿರಣಾಂಗಣದಲ್ಲಿ, ತಲೆ–ಖಂಡಿತಜ್ಞಾನವು, ಹಱೆದು–ನಷ್ಟವಾಗಿ, ಅಟ್ಟೆ–ಆಚಾರಾಂಗವು, ನೆಲಕ್ಕೆ ಬಿದ್ದು–ಚಿತ್ಪೃಥ್ವಿಯಲ್ಲಿ ಸಾಮರಸ್ಯವಾಗಿ, ಬೊಬ್ಬಿಡಲದಕ್ಕೆ–ಶಿವೋऽಹಂ ಪ್ರಣೋಹಂ ಬ್ರಹ್ಮೋऽಹಂ ಎಂದು ಉಚ್ಚರಿಸುವುದಕ್ಕೆ, ಕೂಡಲಸಂಗಮದೇವ–ಪರಶಿವಲಿಂಗವು, ಒಲಿವ–ಕೃಪೆಯಾಗಿ ನಿಜಮೋಕ್ಷವನ್ನು ಕರುಣಿಸಿಕೊಡುತ್ತಿಹನು.

೭೬೬

ಆಸೆ ರೋಷ ಹರುಷಾದಿಗಳೆಂಬ ಕರಣೇಂದ್ರಿಯವ ಮುಟ್ಟಲೀಯದೆ ಆಚಾರವ ಶಿವಾಚಾರವ ಮಾಡುವೆ, ಭಯಭಕ್ತಿಯಿಂದ ತೋಱುವೆ. ಮನದಲ್ಲಿ ವಂಚನೆಯಿಲ್ಲದೆ ಭಾವಶುದ್ಧವಾಗಿ ಪೂಜೆಯ ಮಾಡುವೆ, ಎನ್ನ ಪ್ರಾಣಶಕ್ತಿಯಿಂದ ಕೂಡುವೆ ಕೂಡಲಸಂಗಮದೇವರ.

I -

ಆಸೆ–ಅನ್ನಾಚ್ಛಾದನ ಹೊನ್ನು ಹೆಣ್ಣು ಮಣ್ಣಾಗಬೇಕೆಂಬಪೇಕ್ಷೆಯು, ರೋಷ–ಕೊಡದೆ ಇದ್ದಲ್ಲಿ ಸಿಟ್ಟು ಮುಂದುಗೊಂಬುವುದು, ಹರುಷ–ಕೊಟ್ಟಲ್ಲಿ ಸಂತೋಷವು. ಆದಿಗಳೆಂಬ–ಇವು ಮೊದಲಾದುವೆಂದು ಹೇಳುವ, ಕರಣ–ಪಂಚಕರಣಂಗಳು ಚತುಃಕರಣಂಗಳು, ಇಂದ್ರಿಯವ–ಪಂಚೇಂದ್ರಿಯಂಗಳ, ಮುಟ್ಟಲೀಯದೆ–ಸೋಂಕಗೊಡದೆ, ಆಚಾರವ ಶಿವಾಚಾರವ ಮಾಡುವೆ: ಆಚಾರವ–ಇಷ್ಟಲಿಂಗ ಸಂಬಂಧವಾದ ಸತ್ಕ್ರಿಯಾಚಾರವ, ಶಿವಾಚಾರವ–ಪ್ರಾಣಲಿಂಗಸಂಬಂಧವಾದ ಸುಜ್ಞಾನಾಚಾರವ, ಮಾಡುವೆ–ಅಂಗಪ್ರಾಣಂಗಳಲ್ಲಿ ಇಷ್ಟಪ್ರಾಣಲಿಂಗಸಂಬಂಧವ ಮಾಡಿಕೊಂಡು ಜ್ಞಾನಕ್ರೀವಿಡಿದಾಚರಿಸುವೆನು, ಭಯಭಕ್ತಿಯಿಂದ ತೋಱುವೆ–ಇಂತಪ್ಪ ಆಚರಣೆಯನು ಭಯಭಕ್ತಿ ಭೃತ್ಯಾಚಾರದಿಂದ ಭಕ್ತಮಾಹೇಶ್ವರರುಗಳಿಗೆ ಅರುಹಿ ಕೊಡುವೆನು.

ಮನದಲ್ಲಿ–ಚಿತ್ತದಲ್ಲಿ, ವಂಚನೆಯಿಲ್ಲದೆ–ಮಾಚೊಬುದ್ಧಿವುಂಟಾಗಿಲ್ಲದೆ, ಭಾವಶುದ್ಧವಾಗಿ ಪೂಜೆಯ ಮಾಡುವೆ–ಮನನಿರ್ಮಲವಾಗಿ ಲಿಂಗಪೂಜೆಯನನುಗ್ಗೈಯ್ವೆನು, ಎನ್ನ ಪ್ರಾಣಶಕ್ತಿಯಿಂದ–ಎನ್ನ ಪ್ರಾಣಜ್ಞಾನದಿಂದ, ಕೂಡಲಸಂಗಮದೇವರ–ಪರಶಿವಲಿಂಗನ, ಕೂಡುವೆ–ಬೆರೆಸುವೆನು.

೭೬೭

ಪೂರ್ವಬೀಜ ವಾಯುಪ್ರಾಣಿಯಲ್ಲ, ಲಿಂಗ ಪ್ರಾಣಿಯಾ[1]ದ[1] ಶರಣನು. ಏಕೋಗ್ರಾಹಿ[2]ಯಾಗಿ[2] ಭಾವಭೇದವಿ[3]ಲ್ಲವಾ[3]ಗಿ ಮನಪ್ರವೇಶಿಯಾ[4]ದ[4] ಶರಣನು. ನಿಮ್ಮುವ ಪೂಜಿಸಿ ತನುಧರ್ಮವ ಮಱೆದು ನಿಮ್ಮ ಪ್ರತಿಬಿಂಬದಂತಿಪ್ಪ ಕೂಡಲಸಂಗಮದೇವಾ, ನಿಮ್ಮ ಶರಣ[5]ರು[5] [6]ಅನುಪಮ[6].

I -

ಪೂರ್ವಬೀಜ–ಚಿತ್ತಿನ ಚಿದಶಿಕನಾದ ಶರಣನು, ವಾಯುಪ್ರಾಣಿಯಲ್ಲ–ಹೊನ್ನೇ ಪ್ರಾಣ ಹೆಣ್ಣೇ ಪ್ರಾಣ ಮಣ್ಣೇ ಪ್ರಾಣವಾಗಿರುವಾತನಲ್ಲವು. ಲಿಂಗದ ಪ್ರಾಣಿಯಾದ ಶರನು–ಗುರುವೇ ಪ್ರಾಣ ಲಿಂಗವೇ ಪ್ರಾಣ ಜಂಗಮವೇ ಪ್ರಾಣವಾಗುಳ್ಳ ಶಿವಶರಣನು, ಏಕೋಗ್ರಾಹಿಯಾಗಿ–ಏಕ ಏವನ ದ್ವಿತೀಯಸ್ವರೂಪವಾದ ಪರಬ್ರಹ್ಮವನ್ನೇ ಅಂಗಮನಪ್ರಾಣಂಗಳಲ್ಲಿ ಇಷ್ಟಲಿಂಗಸ್ವರೂಪಿನಿಂದ ಗ್ರಹಿಸಲ್ಪಟ್ಟಾತನು. ಭಾವಭೇದವಿಲ್ಲವಾಗಿ–ಶರಣಲಿಂಗಕ್ಕೆ ಭಿನ್ನಭಾವವುಂಟಾಗಿಲ್ಲವಾಗಿ, ಮನಪ್ರವೇಶಿಯಾದ ಶರಣನು–ಮನಸ್ಸು ಪ್ರಾಣಲಿಂಗದಲ್ಲಿ ಕೂಡಲ್ಪಟ್ಟಂಥ ಶಿವಶರಣನು.

ನಿಮ್ಮುವ ಪೂಜಿಸಿ–ಇಷ್ಟಮಹಾಲಿಂಗವನ್ನು ಅಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳಿಂದಾರಾಧಿಸಿ, ತನುಧರ್ಮವ–ಉಣಬೇಕು ಉಡಬೇಕು ಇಡಬೇಕು ತೊಡಬೇಕು ಷಟ್ಪ್ರಕಾರವಾದ ಸ್ತ್ರೀಯರುಗಳ [೧]ಭೋಗಿಸ[೧]ಬೇಕೆಂಬುವಂಥದನು, ಮಱೆದು–ವಿಸ್ಮೃತಿಯನೆಯ್ದಿಸಿಬಿಟ್ಟು, ನಿಮ್ಮ ಪ್ರತಿಬಿಂಬದಂತಿರ್ಪ–ನಿಮ್ಮ ಪ್ರತಿಛಾಯದೋಪಾದಿಯಲ್ಲಿ ಬ್ರಹ್ಮದಲ್ಲಿ ಕೂಡಿ ಬ್ರಹ್ಮವೇ ತಾವಾಗಿರ್ಪ [೨]ಲಿಂಗದಲ್ಲಿ ಕೂಡಿ ಲಿಂಗವೇ ತಾವಾಗಿರ್ಪ,[೨] ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಅನುಪಮ–ಉಪಮಿಸಬಾರದ, ನಿಮ್ಮ ಶರಣರು–ನಿಮ್ಮ ಶಿವಶರಣರು.[೩]

....

೧–೧ ಸಂಸರ್ಗವ ಮಾಡ (ಗ), ೨–೨ x (ಗ), ೩+ ಇಂತೀ ಮಹೇಶ್ವರಸ್ಥಲ ಸಮಾಪ್ತ। ಮಂಗಳ ಮಹಾ ಶ್ರೀ ಶ್ರೀ ಶ್ರೀ ಶ್ರೀ ಶ್ರೀ (ಕ, ಗ),

III –

....

1–1 x(ಟ, ಡ), 2–2 x(ಟ, ಡ), 3–3 ಲ್ಲಾ(ಟ, ಡ), 4–4x(ಟ, ಡ), 5–5 ನು(ಟ, ಡ), 6–6x(ಟ, ಡ)

....

[1]ಪೂರ್ವಜೀವಭಾವದಹಂಕಾರದ ಮಿಥ್ಯಾಜೀವಿಯಲ್ಲವೆಂಬುದೀಗ ಪೂರ್ವಬೀಜ ವಾಯುಪ್ರಾಣಿಯಲ್ಲವೆಂಬ ಶಬ್ದಕ್ಕರ್ಥ. ಏಕೋಗ್ರಾಹಿ–ತನ್ನ ಅಂತರಂಗ ಬಹಿರಂಗವೆರಡರಲ್ಲಿಯೂ ಲಿಂಗಸಂಬಂಧವನುಳ್ಳಂಥಾ, ಭಾವ–ಮನಸ್ಸಿನಲ್ಲಿ, ಭೇದವಿಲ್ಲಾಗಿ–ಅಂಗ ಬೇರೆ ಲಿಂಗ ಬೇರೆಯೆಂಬ ಭಿನ್ನಭಾವವುಂಟಾಗದಾಗಿ, ಆ ಶರಣನು–ಏಕಲಿಂಗನಿಷ್ಠಾಪರತ್ವವನುಳ್ಳ ಶಿವಶರಣನು, ಮನಪ್ರವೇಶಿ–ಮನಸ್ಸು ಲಿಂಗದಲ್ಲಿ ಏಕತ್ವವುಳ್ಳಾತನು, ಕೂಡಲಸಂಗಮದೇವ–ಎಲೆ ಪರಶಿವಲಿಂಗವೆ, ನಿಮ್ಮ ಶರಣನು–ನಿಮಗಂಗವಾಗಿ ಎರಡಳಿದಂಥ ಶಿವಶರಣನು, ನಿಮ್ಮುವ–ಲಿಂಗವನು, ಪೂಜಿಸಿ–ಅರ್ಚಿಸಿ, ತನುಧರ್ಮವ ಮಱೆದು–ದೇಹದ ವ್ಯಾಪಾರವನು ಗುರುಲಿಂಗಜಂಗಮದ ಪೂಜಾಸ್ತೋತ್ರಧ್ಯಾನ ಸಮರ್ಪಣಾದಿಗಳಿಂದೆ ವಿಸ್ಮೃತಿಗೆಯ್ದು, ನಿಮ್ಮ–ಲಿಂಗದಲ್ಲಿ, ಪ್ರತಿಬಿಂಬದಂತೆ–ಮಾರ್ಪೊಳಪಿನ, ಹಾಂಗೆ ಇಪ್ಪ–ಇರುತಿರುವನು.[2]

....

೧+ಪೂರ್ವಾಬೀಜ ವಾಯು ಪ್ರಾಣಿಯಲ್ಲ (ಟ), ೨+ ಶ್ರೀ ಶ್ರೀ ಶ್ರೀ ಮಾಹೇಶ್ವರಸ್ಥಲದ ನುಡಿಗಳು ಸಮಾಪ್ತ ಶ್ರೀ ಶ್ರೀ ಶ್ರೀ ಶಿವಾಯನಮಃ (ಟ); ಮಾಹೇಶ್ವರಸ್ಥಲದ ನುಡಿಗಳು ಸಮಾಪ್ತ ಮಹಾ ಶ್ರೀ ಶ್ರೀ ಶ್ರೀ (ಡ).

V –

ಪೂರ್ವಜೀವಭಾವದಿಂದಹಂಕಾರದ ಮಿಥ್ಯಾಜೀವಿಯಲ್ಲವೆಂಬುದೀಗ ಪೂರ್ವಬೀಜ ವಾಯು ಪ್ರಾಣಿಯಲ್ಲವೆಂಬುದರ್ಥ. ಏಕೋಗ್ರಾಹಿ–ಗುರು ಕೊಟ್ಟ ಇಷ್ಟವೊಂದನೆ ಅಂತರಂಗದಲ್ಲಿ ಪ್ರಾಣಲಿಂಗವಾಗಿ ಗ್ರಹಿಸಲ್ಪಟ್ಟ ಶರಣನು.[3]

....

೩+ ಇಂತಿವು ಮಾಹೇಶ್ವರಸ್ಥಲದ ನುಡಿಗಳು (ಪ).

❖❖

ಪ್ರಸಾದಿಸ್ಥಲ

[ಪ್ರಸಾದಿಸ್ಥಲ–ಪ್ರಸಾದಿಸ್ಥಲದ ವಚನದರ್ಥವ ನಿರೂಪಿಸುತ್ತಿಹರು (ಕ,ಗ)].

ಪ್ರಸಾದಿಯ ಜ್ಞಾನಿಸ್ಥಲ

I -

ಪ್ರಸಾದಿಯ ಜ್ಞಾನಿಸ್ಥಲ–ಪ್ರಸಾದಿ ಪ್ರಸಾದಿಸ್ಥಲದೊಳಗಣ ಜ್ಞಾನಸ್ಥಲದಾಚರಣೆಯನು ನಿರೂಪಿಸುತ್ತಿಹರು.

೭೬೮

ಹಸಿವಾಯಿತ್ತೆಂದು ಅರ್ಪಿತವ ಮಾಡುವರಯ್ಯ; ತೃಷೆಯಾಯಿತ್ತೆಂದು ಮಜ್ಜನಕ್ಕೆಱೆವರಯ್ಯ, ಹಸಿವು ತೃಷೆ ವಿಷಯಕ್ಕೆ ಬಳಲುವರಯ್ಯ! ಹಸಿವಾಯಿತ್ತೆಂದು ಅರ್ಪಿತವ ಮಾಡಲಿಲ್ಲ; ತೃಷೆಯಾಯಿತ್ತೆಂದು ಮಜ್ಜನಕ್ಕೆಱೆಯಲಿಲ್ಲ. ಇದು ಕಾರಣ ಕೂಡಲಸಂಗನ ಪೂಜಿಸಿ ಪ್ರಸಾದವ ಹಡೆದವರೊಬ್ಬರೂ ಇಲ್ಲ[1]ವು.[1]

I -

ಹಸಿವಾಯಿತ್ತೆಂದು ಅರ್ಪಿತವ ಮಾಡುವರಯ್ಯ: [ಹಸಿವಾಯಿತ್ತೆಂದು–] ಪ್ರಸಾದಿಭಕ್ತನಾದ ಮೇಲೆ ಪ್ರಾತಃಕಾಲದಲ್ಲೆದ್ದು ಸಮಯಾಚಾರದ ಜಂಗಮಮೂರ್ತಿಗಳನ್ನು ಕರಕೊಂಡು ಬಂದು ಶಿವಾರ್ಚನೆಯ ಮಾಡಿಕೊಂಡು ಕೃಷಿಯ ಮಾಡುವುದಕ್ಕೆ ಹೋಗಬೇಕಲ್ಲದೆ ಆರು ಏಳು ತಾಸುಹೊತ್ತಿನ ತನಕ ಕೃಷಿಯ ಮಾಡಿ ಆರು ಏಳು ತಾಸಿನ ಮೇಲೆ ಮನೆಗೆ ಬಂದು ಅಂಗದ ಹಸಿವಾಯಿತೆಂದು ಸಮಯಾಚಾರದ ಜಂಗಮಮೂರ್ತಿಗಳನ್ನು ಕರಕೊಂಡು ಬಂದು, ಅರ್ಪಿತವ ಮಾಡುವರಯ್ಯ– ಅಂಗದ ಹಸಿವಾಯಿತ್ತೆಂದು ಅಂಗ ಮುಂತಾಗಿ ಹಸಿವನು ಅಡಗಿಸಿಕೊಂಬುವರಯ್ಯ. ತೃಷೆಯಾಯಿತ್ತೆಂದು ಮಜ್ಜನಕ್ಕೆಱೆವರಯ್ಯ: [ತೃಷೆಯಾಯಿತ್ತೆಂದು–] ಪ್ರಸಾದಿಭಕ್ತನಾದ ಮೇಲೆ ಪ್ರಾತಃಕಾಲದಲ್ಲೆದ್ದು ಸಮಯಾಚಾರದ ಜಂಗಮಮೂರ್ತಿಗಳ ಕರಕೊಂಡು ಬಂದು ಶಿವಾರ್ಚನೆಯ ಮಾಡಿಕೊಂಡು ಕೃಷಿಯ ಮಾಡುವುದಕ್ಕೆ ಹೋಗಬೇಕಲ್ಲದೆ ಆರು ಏಳು ತಾಸು ಹೊತ್ತಿನ ತನಕ ಮೋಡಾಮೋಡಿಯಿಂದ ಕೃಷಿಯನ್ನು ಮಾಡಿ ಆರು ಏಳು ತಾಸು ಹೊತ್ತಿನ ಮೇಲೆ ಮನೆಗೆ ಬಂದು ತೃಷೆಯಾಯಿತೆಂದು ಸಮಯಾಚಾರದ ಜಂಗಮಮೂರ್ತಿಗಳನು ಕರಕೊಂಡು ಬಂದು, ಮಜ್ಜನಕ್ಕೆಱೆವರಯ್ಯ–ಅಂಗದ ತೃಷೆಯಾಯಿತ್ತೆಂದು ಅಂಗ ಮುಂತಾಗಿ ತೃಷೆಯನ್ನು ಅಡಗಿಸಿಕೊಂಬುವರಯ್ಯ. ಹಸಿವು ತೃಷೆ ವಿಷಯಕ್ಕೆ ಬಳಲುವರಯ್ಯ: [ಹಸಿವು ತೃಷೆ–] ಅಂಗದ ಹಸಿವಾಯಿತೆಂದು ಅಂಗದ ತೃಷೆಯಾಯಿತ್ತೆಂದು

ಅಂಗಮುಂತಾಗಿ ಹಸಿವು ತೃಷೆಗಳನು ಅಡಗಿಸಿಕೊಂಡು, ವಿಷಯಕ್ಕೆ-ಮನ್ಮಥ ವಿಚಾರಕ್ಕೋಸ್ಕರ, ಬಳಲುವರಯ್ಯ-ಆಯಾಸಂಬಡುವರಯ್ಯ.

ಹಸಿವಾಯಿತ್ತೆಂದು ಅರ್ಪಿತವ ಮಾಡಲಿಲ್ಲ-ಅಂಗದ ಹಸಿವಾಯಿತೆಂದು ಅಂಗಮುಂತಾಗಿ ಹಸಿವನು ಅಡಗಿಸಿಕೊಂಬುವರಲ್ಲದೆ ಲಿಂಗದ ಹಸಿವಾಯಿತ್ತೆಂದು ಅಂಗಮುಂತಾಗಿ ಹಸಿವನ್ನು ಅಡಗಿಸಿಕೊಂಬುವಂಥ ಪ್ರಸಾದಿಭಕ್ತರೊಳಗೆ ಒರ್ವರುಂಟಾಗಿಲ್ಲವು. ತೃಷೆಯಾಯಿತ್ತೆಂದು[ಮಜ್ಜನಕ್ಕೆರೆಯಲಿಲ್ಲ-] ಅಂಗಮುಂತಾಗಿ ತೃಷೆಯನ್ನು ಅಡಗಿಸಿಕೊಂಬುವರಲ್ಲದೆ ಲಿಂಗವ ತೃಷೆಯಾಯಿತ್ತೆಂದು ಲಿಂಗಮುಂತಾಗಿ ತೃಷೆಯನ್ನು ಅಡಗಿಸಿಕೊಂಡಂಥ ಪ್ರಸಾದಿಭಕ್ತರೊಳಗೆ ಒರ್ವರುಂಟಾಗಿಲ್ಲವು.

ಇದು ಕಾರಣ-ಇದು ನಿಮತ್ತಾರ್ಥ. ಕೂಡಲಸಂಗನ ಪೂಜಿಸಿ-ಇಷ್ಟಮಹಾಲಿಂಗವನ್ನು ಅಷ್ಟವಿಧಾರ್ಚನೆ ಷೋಡಶೋಪಾಚಾರ ಕ್ರಿಯೆಗಳಿಂದಾರಾಧಿಸಿ, ಪ್ರಸಾದವ ಹಡೆದವರೊಬ್ಬರೂ ಇಲ್ಲವು-ಲಿಂಗವ ಹಸಿವಾಯಿತ್ತು ಲಿಂಗವ ತೃಷೆಯಾಯಿತ್ತೆಂದು ಅಂಗಮುಂತಾಗಿ ಹಸಿವು-ತೃಷೆಗಳನು ಅಡಗಿಸಿಕೊಂಡು ವಿಷಯಪ್ರಪಂಚಿನೊಡನೆ ಕೂಡಿ ಚಲಿಸುವರಲ್ಲದೆ ಲಿಂಗವ ಹಸಿವಾಯಿತ್ತು ಲಿಂಗಲ್ಲಿ ತೃಷೆಯಾಯಿತ್ತೆಂದು ಲಿಂಗಮುಂತಾಗಿ ಹಸಿವು ತೃಷೆಗಳನು ಅಡಗಿಸಿಕೊಂಡಂಥ ಪ್ರಸಾದಿಭಕ್ತರೊಳಗೊರ್ವರುಂಟಾಗಿಲ್ಲವು.

III -

1-1 x (ಟ, ಡ),

....

ಪೂಜಿಸಿ-ಇಷ್ಟಲಿಂಗದಷ್ಟವಿಧಾರ್ಚನೆ ಷೋಡಶೋಪಚಾರ ಪೂಜಾಕ್ರಿಯೆಗಳ ಮಾಡಿ; [ಪ್ರಸಾದವ-] ಪರಶಿವಲಿಂಗವು ಸಾದತ್ವವನು, ಪಡೆದವರೊಬ್ಬರೂ ಇಲ್ಲ-ಹಡೆದುಕೊಂಡವರಾರನೂ ಕಾಣೆನು.

೭೬೯

ಮುತ್ತು ನೀರಲ್ಲಿ ಹುಟ್ಟಿ ಮತ್ತೆ ನೀರಪ್ಪುದೆ? ಗುರುಕಾರುಣ್ಯವ ಹಡೆದ ಭಕ್ತನು ಹಿಂದಣ ಪೂರ್ವಾಶ್ರಯವ ಬೆರಸಿದಡೆ ಗುರುದ್ರೋಹ. ಲಿಂಗದ್ರೋಹ, ಜಂಗಮದ್ರೋಹ, ಆಚಾರದ್ರೋಹ, ಪ್ರಸಾದದ್ರೋಹ. ಇಂತೀ ಪಂಚಮಹಾಪಾತಕಂಗಳು ಭಕ್ತಂಗಲ್ಲದೆ ಭವಿಗೆಲ್ಲಿಹದೊ? ಗುರುವಿದು ಲಿಂಗವಿದು ಜಂಗಮವಿದು ಆಚಾರವಿದು ಪ್ರಸಾದವಿದೆಂದಱಿಯದಿದ್ದಡೆ [1]ಕುಂಭೀಪಾಕ[1] ನಾಯಕ ನರಕ, ಕೂಡಲಸಂಗಮದೇವಾ!

....

1-1 ಕುಂಭಿನಿ ಪಾತಕ (ಕ, ಗ),

I -

ಮುತ್ತು ನೀರಲ್ಲಿ ಹುಟ್ಟಿ ಮತ್ತೆ ನೀರಪ್ಪುದೆ: ಮುತ್ತು-ಮೌಕ್ತಿಕವು ನೀರಲ್ಲಿ-ಸ್ವಾತಿಸಲಿಲದಲ್ಲಿ, ಹುಟ್ಟಿ-ಉತ್ಪತ್ತ್ಯವಾಗಿ. ಮತ್ತೇ-ಮರಳಿ, ನೀರಪ್ಪುದೆ,-ಹಾಂಗೆ ಮೌಕ್ತಿಕವಾಗಿದ್ದೀತಲ್ಲದೆ ಸ್ವಾತಿಸಲಿಲವಾ

ದೀತೆ? ಆಗದು. ಗುರುಕಾರುಣ್ಯವ–ಮುನ್ನಿನ ಪೂರ್ವಾಶ್ರಯವ ಬಿಟ್ಟು ಶ್ರೀಗುರುನಾಥನ ವೇಧಾಮಂತ್ರಗಳೆಂಬ ದೀಕ್ಷಾತ್ರಯಂಗಳಿಂದ ಅಂಗಕ್ಕೆ ಲಿಂಗೋಪದೇಶ ಮನಕ್ಕೆ ಮಂತ್ರೋಪದೇಶವನ್ನು, ಹಡೆದ–ಪಡೆದ, ಭಕ್ತನು–ಶಿವಭಕ್ತನು, ಹಿಂದಣ ಪೂರ್ವಾಶ್ರಯವ ಬೆರಸಿದಡೆ–ಮೊದಲಜಾತಿ ವರ್ಣಾಶ್ರಮ ಕುಲಗೋತ್ರ ನಾಮಾಚಾರಂಗಳೊಡನೆ ಕೂಡಿದರೆ, ಗುರುದ್ರೋಹ–ಗುರುವಿನಕೊಂದಂಥ ಪಾತಕವು, ಲಿಂಗದ್ರೋಹ–ಲಿಂಗವನೊಡೆದಂತ ಪಾತಕವು, ಜಂಗಮದ್ರೋಹ–ಜಂಗಮವ ಕೊಂದಂಥ ಪಾತಕವು, ಆಚಾರದ್ರೋಹ–ಪಾದೋದಕಕ್ಕೆ ತಪ್ಪಿದಂಥ ಪಾತಕವು, ಪ್ರಸಾದದ್ರೋಹ–ಪ್ರಸಾದಕ್ಕೆ ತಟ್ಟಿದಂಥ ಪಾತಕವು, ಇಂತೀ–ಈ ಪ್ರಕಾರದ ದೆಸೆಯಿಂದ ಹೇಳಲ್ಪಟ್ಟಂಥ, ಪಂಚ–[೧]ಐದಾದ,[೧] ಮಹಾ [ಪಾತಕಂಗಳು–] ಎಲ್ಲಾಪಾತಕಂಗಳೊಳಗೆ ಇವೈದು ಶ್ರೇಷ್ಠವಾದ ಪಾತಕಂಗಳು, ಭಕ್ತಂಗಲ್ಲದೆ ಶಿವಭಕ್ತಂಗಲ್ಲದೆ, ಭವಿಗೆಲ್ಲಿಹದೊ–ಅಂಗಕ್ಕೆ ಲಿಂಗೋಪದೇಶ ಮನಕ್ಕೆ ಮಂತ್ರೋಪದೇಶವಿಲ್ಲದಿದ್ದಂಥ ಭೂತದೇಹಿಗಳಿಗೆತ್ತಣದೊ? ಇಲ್ಲವು.

ಗುರುವಿದು–ನಿಃಕಲಬ್ರಹ್ಮದ ಸದ್ರೂಪವೇ ಗುರುವಾಗಿ ಬಂದಿಪ್ಪುದು, ಲಿಂಗವಿದು–ನಿಃಕಲಬ್ರಹ್ಮದ ಚಿದ್ರೂಪವೇ ಲಿಂಗವಾಗಿ ಬಂದಿಪ್ಪುದು, ಜಂಗಮವಿದು–ನಿಃಕಲಬ್ರಹ್ಮದ ಆನಂದವೇ ಜಂಗಮವಾಗಿ ಬಂದಿಪ್ಪುದು, ಆಚಾರವಿದು–ನಿಃಕಲಬ್ರಹ್ಮದ ಪರಿಪೂರ್ಣವೇ ಪಾದೋದಕವಾಗಿ ಬಂದಿಪ್ಪುದು. ಪ್ರಸಾದವಿದು–ನಿಃಕಲಬ್ರಹ್ಮದ ನಿತ್ಯತ್ವವೇ ಪ್ರಸಾದವಾಗಿ ಬಂದಿಪ್ಪುದು. ಇದೆಂದಱಿಯದಿದ್ದಡೆ–ಇದೆಂದು ತಿಳಿದಿರಬೇಕು ತಿಳಿಯದಿರ್ದರೆ, [೨]ಕುಂಭೀಪಾಕ[೨] ನಾಯಕನರಕ–ಕುಂಭೀಪಾಕ ನಾಯಕನರಕವೆಂಬುದವೆಂಥದು ಆನೆತಲೆಗಡುತರ ಒಡಲಿರ್ಪುದು ಆನೆ ಸೊಂಡಿಲ ಗಾತ್ರ ಬಾಯಿರ್ಪುದು. ಅದರೊಳಗೆ ನೂರಾರು ನಾಯಕ ನರಕ ತುಂಬಿರ್ಪವು, ಅಂತಪ್ಪನಾಯಕ ನರಕ ಉಂಟಾಗುತ್ತಿ[೩]ಹುದು[೩] ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

....

೧–೧ ಐದನೆ, (ಕ), ೨–೨ ಕುಂಭಿನಿಪಾಕ, (ಕ, ಗ), ೩–೩ ಹವು (ಕ)

III –

ಪೂರ್ವಾಶ್ರಯವ–ತನ್ನ ಪೂರ್ವಾಚಾರದ ಮೊದಲ ವರ್ತನೆಯನು. ಬೆರಸಿದರೆ–ಕೂಡಿ ವರ್ತಿಸಿದೆನಾದರೆ, ಗುರುದ್ರೋಹ–ಗುರುವಿಗೆ ಮಾಡಿದಪರಾಧಿಯು, ಗುರುವಿದು ಗುರುಭಕ್ತಿಯಿದು.

೭೭೦

ಸೂಳೆಗೆ ಮಚ್ಚಿ ಸೂಳೆಯ ಬಂಟರೆಂಜಲ ತಿಂಬುವುದೀ ಲೋಕ. ಅಡಗ ಮಚ್ಚಿ ಸೊಣಗನೆಂಜಲ ತಿಂಬುವುದೀ ಜಗವೆಲ್ಲ. ಲಿಂಗವ ಮಚ್ಚಿ ಜಂಗಮಪ್ರಸಾದವ ಕೊಂಬುವರ ನೋಡಿ ನಗುವ[1]ವ[1]ರ [2]ಕುಂಭೀಪಾಕ[2] ನಾಯಕ ನರಕದಲ್ಲಿಕ್ಕುವ ಕೂಡಲಸಂಗಮದೇವ.

....

2–2 ಕುಂಭನಿಪಾತಕ (ಕ, ಗ)

I –

ಈ ಲೋಕ–"ಲೋಕಸ್ತು ಭುವನೇಜನೇ" ಎಂದು ಹೇಳುತ್ತಿಹುದಾದ ಕಾರಣ ಲೋಕದಲ್ಲಿರುವಂಥ ಆತ್ಮರುಗಳು, ಸೂಳೆಗೆ–ಬಾಜಾರದಲ್ಲಿ ಮನೆಯ ಕಟ್ಟಿಕೊಂಡಿರುವಂಥ ಪಣ್ಯಾಂಗನೆಗೆ, ಮಚ್ಚಿ–ಮಮಕರಿಸಿ, ಸೂಳೆಯ ಬಂಟರೆಂಜಲ ತಿಂಬುವುದೀ ಲೋಕ–ಚಾವುಡಿಗಳಲ್ಲಿ ಹೆಬ್ಬಾಗಿಲಗಳಲ್ಲಿ ಕುಳಿತುಕೊಡು ನಿಮ್ಮ ಒಡತಿಯನ್ನು ನಮಗೊಲಿಸಿಕೊಡೆಂದು ವೀಳ್ಯವ ಹಾಕಿಕೊಂಬೋ ನೆವದಿಂದ ಫಲಹಾರಂಗಳ ನೆವದಿಂದ ಗುಡಿಗುಡಿ ಸೇದುವ ನೆವದಿಂದ, ಸೂಳೆಯ–ವೇಶ್ಯಾಸ್ತ್ರೀಯಳ, ಬಂಟನ–ಅವಳ ಕೈಕಳಗೆ ಅಟ್ಟೂಳಿಗೆ [1]ಹರದೂ[1]ಳಿಗವನ್ನು ಮಾಡಿಕೊಂಡಿರುವಂಥ ಭೃತ್ಯನ, ಎಂಜಲುಚ್ಚಿಷ್ಟವನ್ನು, ತಿಂಬುವುದು–ಅನುಭವಿಸುವುದು, ಈ ಲೋಕ–ಈ ಜಗತ್ತೆಲ್ಲ.

ಅಡಗ ಮಚ್ಚಿ ಸೊಣಗನೆಂಜಲ ತಿಂಬುವುದೀ ಜಗವೆಲ್ಲ: ಅಡಗ ಮಚ್ಚಿ–ಮಾಂಸವನ್ನು ಮಮಕರಿಸಿ, ಸೊಣಗನೆಂಜಲ ತಿಂಬುವುದು–ಶುನಿಉಚ್ಚಿಷ್ಟವನನುಭವಿಸುತ್ತಿಹರೆಂಬಲ್ಲಿ ಕಿರಾತರುಗಳೇನಾದರೂ ಬಿಗಿಬಾರಿನ ಎಕ್ಕಡವ ಮೆಟ್ಟಿಕೊಂಡು ಕೈಯಲ್ಲಿ ಡೊಣ್ಣೆಯ ಪಿಡಿದುಕೊಂಡು ನಾಲ್ಕಾರು ನಾಯಿಗಳನು ಅಡವಿಗೆ ಕರೆಕೊಂಡು ಹೋಗಿ ಹುಲ್ಲೆಯನಾಗಲಿ ಮೊಲನನಾಗಲಿ ಕಂಡು ಹುಸಿ ಬಿಟ್ಟಲ್ಲಿ ಕಚ್ಚಿ ಹಿಡಿದಲ್ಲಿ ಅದರ ಬಾಯಿ ಒಳಗಿನ ಉಚ್ಛಿಷ್ಟವನ್ನು ತೆಗೆದುಕೊಂಡನುಭವಿಸುತ್ತಿಹರು. ಈ ಜಗವೆಲ್ಲ–ಈ ಲೋಕವೆಲ್ಲ.

ಲಿಂಗವ ಮಚ್ಚಿ: ಲಿಂಗವ–ಇಷ್ಟಮಹಾಲಿಂಗವನ್ನು, ಮಚ್ಚಿ–ಮಮಕರಿಸಿ, ಜಂಗಮಪ್ರಸಾದವ–ಜಂಗಮದ ಶೇಷಪ್ರಸಾದವನ್ನು, ಕೊಂಬುವರ ಅನುಭವಿಸುವಂಥವರ, ನೋಡಿ–ನಿರೀಕ್ಷಣೆಯ ಮಾಡಿ, ನಗುವವರ–ಯಾವ ಜಾತಿಯವರೋ ಜಂಗಮವಾಗಿ ಬಂದಿರ್ಪರು ಪ್ರಸಾದವೆಂದವರ ಉಚ್ಛಿಷ್ಟವನನುಭವಿಸುತ್ತೈದಾರೆ ಎಂದು, ನೋಡಿ–ನಿರೀಕ್ಷಣೆಯ ಮಾಡಿ, ನಗುವವರ–ಗಹಗಹಿಸುವಂಥವರನು, ಕೂಡಲಸಂಗಮದೇವ–ಪರಶಿವಲಿಂಗವು, [2]ಕುಂಭೀಪಾಕ[2] ನಾಯಕ ನರಕದಲ್ಲದಕ್ಕುವ–[2]ಕುಂಭೀ ಪಾಕ[2] ನಾಯಕ ನರಕವೆಂಬುವಂಥದು ಆನೆತಲೆ ಗಡುತರ ಒಡಲಿರ್ಪುದು, ಆನೇ ಸೊಂಡಿಲ ಗಾತ್ರ ಬಾಯಿರ್ಪುದು. ಅದರೊಳಗೆ ನೂರಾರು ನಾಯಕನರಕ ತುಂಬಿರ್ಪವು. ಅಂತಪ್ಪ ನಾಯಕ ನರಕವೇ ಉಂಟಾಗುತ್ತಿಹುದು.

....

೧–೧ ಅರಿಯೂ (ಕ), ೨–೨ ಕುಂಬಿನಿಪಾತಕ (ಕ, ಗ)

III –

1–1 x (ಟ, ಡ)

....

ನಗುವರ–ಹಳಿದು ಹಾಸ್ಯವ ಮಾಡುವರನು.

೭೭೧

[1]ಹೊಲೆಯುಂಟೇ ಲಿಂಗವಿದ್ದೆಡೆಯಲ್ಲಿ? ಕುಲವುಂಟೇ ಜಂಗಮವಿದ್ದೆಡೆಯಲ್ಲಿ? ಎಂಜಲುಂಟೇ ಪ್ರಸಾದವಿದ್ದೆಡೆಯಲ್ಲಿ? ಇಂತೀ ಅಪವಿತ್ರದ ನುಡಿಯ ನುಡಿವ ಸೂತಕವೇ ಪಾತಕ! ನಿಃಕ[2]ಳಂಕ[2] ನಿಜೈಕ್ಯ ತ್ರಿವಿಧನಿರ್ಣಯ ಕೂಡಲಸಂಗಮದೇವಾ, ನಿಮ್ಮ ಶರಣರಿಗಲ್ಲದಿಲ್ಲ.

I -

ಲಿಂಗವಿದ್ದೆಡೆಯಲ್ಲಿ ಹೊಲೆಯುಂಟೆ? ಲಿಂಗವಿದ್ದೆಡೆಯಲ್ಲಿ–ಸ್ಥಾವರಲಿಂಗವು ನೆಲೆಗೊಂಡಿರುವ ಕ್ಷೇತ್ರದಲ್ಲಿ ಪಂಚಕೋಶ ಪರಿಯಂತರದಲ್ಲಿ ಶಿವಕ್ಷೇತ್ರವೆಂಬ ಅಭಿಧಾನವುಂಟಾಗಿರ್ಪುದಲ್ಲದೆ, ಹೊಲೆಯುಂಟೇ–ಅಪವಿತ್ರ ಭೂಮಿಯುಂಟೆ? ಇಲ್ಲವು, ಕುಲವುಂಟೆ ಜಂಗಮವಿದ್ದೆಡೆಯಲ್ಲಿ: [ಜಂಗಮವಿದ್ದೆಡೆಯಲ್ಲಿ–] ಅರ್ಥಪ್ರಾಣಾಭಿಮಾನಂಗಳಿಗೆ ಕರ್ತೃವಾದ ಜ್ಞಾನಜಂಗಮದಲ್ಲಿ, ಕುಲವುಂಟೇ–ಜಾತಿಜಾತಿಯೆಂಬ ಕುಲಸೂತಕ ಉಂಟಾಗಿದ್ದೀತೆ? ಇಲ್ಲವು. ಎಂಜಲವುಂಟೇ ಪ್ರಸಾದವಿದ್ದೆಡೆಯಲ್ಲಿ: ಪ್ರಸಾದವಿದ್ದೆಡೆಯಲ್ಲಿ–ಚಿತ್ಕಲಾಪ್ರಸಾದದಲ್ಲಿ, ಎಂಜಲುಂಟೇ–ಉಚ್ಚಿಷ್ಟವೆಂಬ ಭಾವ ಉಂಟಾಗಿದ್ದಿತ್ತೆ? ಇಲ್ಲವು.

ಇಂತೀ–ಈ ಪ್ರಕಾರದ ದೆಸೆಯಿಂದ, ಅಪವಿತ್ರದ ನುಡಿಯ ನುಡಿವ–ಸ್ಥಾವರಲಿಂಗವು ನೆಲೆಗೊಂಡಿರುವಂಥ ಕ್ಷೇತ್ರದಲ್ಲಿ ಅಪವಿತ್ರ ಭೂಮಿ, ಅರ್ಥ ಪ್ರಾಣಾಭಿಮಾನಂಗಳಿಗೆ ಕರ್ತೃವಾದ ಜ್ಞಾನಜಂಗಮದಲ್ಲಿ ಜಾತಿವಿಜಾತಿ, ಚಿತ್ಕಲಾಪ್ರಸಾದದಲ್ಲಿ ಎಂಜಲುಂಟುಮಾಡಿ ಹೇಳುವ, ಸೂತಕವೇ–ಭಿನ್ನವಾದ ಸಂಕಲ್ಪವೇ, ಪಾತಕ–ಅದೇ ಪಂಚಮಹಾಪಾತಕವೆಂಬ ದೃಷ್ಟೋಪಮಾನದ ಹಾಂಗೆ.

● ಹೊಲೆಯುಂಟೇ ಲಿಂಗವಿದ್ದೆಡೆಯಲ್ಲಿ–ಇಷ್ಟಮಹಾಲಿಂಗವು ನೆಲೆಗೊಂಡಿರುವಂಥ ಶರಣ ರಂಗದಲ್ಲಿ ಆಚಾರಂಗ ಜ್ಞಾನಕಾಯವಾಗಿರ್ಪುದಲ್ಲದೆ ಭೂತಕಾಯ ಜಡಕಾಯವೆಂದುಂಟೆ? ಇಲ್ಲವು. ಕುಲವುಂಟೆ ಜಂಗಮವಿದ್ದೆಡೆಯಲ್ಲಿ–ಜಂಗಮವು ನೆಲೆಗೊಂಡಿರುವಂಥ ಪ್ರಾಣಜ್ಞಾನದಲ್ಲಿ ಪ್ರಾಣವಳಿದು ಚಿತ್ಪ್ರಾಣವಾಗಿರ್ಪುದಲ್ಲದೆ ಕರಣಂಗಳ ವರ್ತನೆ ಉಂಟೆ? ಇಲ್ಲವು. ಎಂಜಲುಂಟೇ ಪ್ರಸಾದವಿದ್ದೆಡೆಯಲ್ಲಿ: [ಪ್ರಸಾದವಿದ್ದೆಡೆಯಲ್ಲಿ–] ಚಿತ್ಕಲಾಪ್ರಸಾದವು ನೆಲೆಗೊಂಡಂಥ ಆತ್ಮಾಂಗದಲ್ಲಿ, ಎಂಜಲುಂಟೆ–ಆತ್ಮವಳಿದು ಚಿದಾತ್ಮವಾಗಿಪರ್ಪುದಲ್ಲದೆ ಅನಿತ್ಯಭಾವ ಉಂಟೆ? ಇಲ್ಲವು.

ಇಂತೀ ಅಪವಿತ್ರದ ನುಡಿಯ ನುಡಿವ: ಇಂತೀ–ಈ ಪ್ರಕಾರದ ದೆಸೆಯಿಂದ, ಅಪವಿತ್ರದ ನುಡಿಯ ನುಡಿವ–ಇಷ್ಟಲಿಂಗವು ನೆಲೆಗೊಂಡಿರುವಂಥ ಶರಣನಂಗದಲ್ಲಿ ಭೂತಕಾಯ ಜಡಕಾಯ, ಜಂಗಮವು ನೆಲೆಗೊಂಡಿರುವಂಥ ಪ್ರಾಣಜ್ಞಾನದಲ್ಲಿ ಕರಣಂಗಳ ವರ್ತನೆ, ಪ್ರಸಾದ ನೆಲೆಗೊಂಡಿರುವಂಥ ಆತ್ಮಾಂಗದಲ್ಲಿ ಅನಿತ್ಯಭಾವವನ್ನು ಉಂಟುಮಾಡಿ ಹೇಳುವ, ಸೂತಕವೇ–ಭಿನ್ನವಾದ ಸಂಕಲ್ಪವೇ ಪಾತಕ–ಅದೇ ಪಂಚಮಹಾಪಾತಕವು, ನಿಃಕಳಂಕ ತನುಪ್ರಪಂಚು ಮನಪ್ರಪಂಚು ಆತ್ಮನ ಇಂದ್ರಿಯವಿಷಯಪ್ರಪಂಚದಲ್ಲಿ, ನಿಜೈಕ್ಯ–ಅಂಗದಲ್ಲಿ ಲಿಂಗ ಪ್ರಾಣದಲ್ಲಿ ಜಂಗಮ ಆತ್ಮದಲ್ಲಿ ಪ್ರಸಾದ ತುಂಬಲ್ಪಟ್ಟ, ತ್ರಿವಿಧ–ಲಿಂಗಪೂಜೆ ಜಂಗಮದಾಸೋಹ ಪ್ರಸಾದಸೇವನೆಯ ಮಾಡುವಂಥ, ನಿರ್ಣಯ–ನಿಶ್ಚಯಾರ್ಥವು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ ಶರಣರಿಗಲ್ಲದೆ, ಶಿವಶರಣರಿಗಲ್ಲದೆ, ಇಲ್ಲ–ಮಿಕ್ಕಿ ಆಶಾಲಾಂಛನಿ ಉಪಾಧಿಕರುಗಳಿಗೆ ಉಂಟಾಗಿಲ್ಲವು.

....

೧–೧ ಸಂ (ಕ)

II -

1 + ಪ್ರಸಾದಿಸ್ಥಲ (ಚ, ಜ) 2–2 ಳ (ಚ, ಜ)

....

ಹೊಲೆಯುಂಟೆ ಲಿಂಗವಿದ್ದೆಡೆಯಲ್ಲಿ?–ಪರಶಿವಲಿಂಗವಿದ್ದ ಸ್ಥಾನದಲ್ಲಿ ಸೂತಕವಿದ್ದಹುದೆ? ಕುಲವುಂಟೆ ಜಂಗಮವಿದ್ದೆಡೆಯಲ್ಲಿ?–ಮಹಾಜ್ಞಾನಿ ಜಂಗಮವಿದ್ದ ಸ್ಥಾನದಲ್ಲಿ ಗೋತ್ರದ ಹೊಲೆಯಿದ್ದ ಹುದೆ? ಎಂಜಲುಂಟೆ ಪ್ರಸಾದವಿದ್ದೆಡೆಯಲ್ಲಿ?–ಶೇಷವಿದ್ದ ಸ್ಥಾನದಲ್ಲಿ ಉಚ್ಛಿಷ್ಟಭಾವಿದ್ದಹುದೆ?

ಇಂತಿ ಅಪವಿತ್ರದ ನುಡಿಯ ನುಡಿವ ಸೂತಕವೇ ಪಾತಕ–ಈ ಲಿಂಗವಿದ್ದ ಸ್ಥಾನದಲ್ಲಿ ಹೊಲೆಯುಂಟು, ಜಂಗಮವಿದ್ದ ಸ್ಥಾದಲ್ಲಿ ಕುಲವುಂಟು[೧] ಪ್ರಸಾದವಿದ್ದಲ್ಲಿ ಎಂಜಲುಂಟೆಂದು ಕಲ್ಪಿಸಿ ಪಾವನವಲ್ಲದ ವಾಕ್ಯವನು ಬೊಗಳುವ ಹೊಲೆ [೨][ಯೇ][೨] ದೋಷವು. ನಿಃಕಳ ನಿಜೈಕ್ಯ–ಕಲಾತೀತವಾದ ಶಿವೈಕ್ಯವು, ತ್ರಿವಿಧ ನಿರ್ಣಯ ಕೂಡಲಸಂಗಮದೇವಾ ನಿಮ್ಮ ಶರಣರಿಗಲ್ಲದಿಲ್ಲ–ನಿಃಕಲಬ್ರಹ್ಮನ ಸದ್ರೂಪ [೩]ಚಿದ್ರೂಪ[೩]ವೇ ಲಿಂಗವು. [೪]ಆನಂದ[೪] ಸ್ವರೂಪವೇ ಜಂಗಮವು, ನಿತ್ಯತ್ವವೇ ಪ್ರಸಾದವೆಂಬ ಮೂರರ ಹಸಿಗೆಯು ಎಲೆ ಪರಶಿವಲಿಂಗವೆ ನಿಮ್ಮ ಶಿವಶರಣರಿಗಲ್ಲದೆ ಉಳಿದ ಜೀವರುಗಳಿಗೆ ನಾಸ್ತಿಯು.

● ಮತ್ತಂ ಇಷ್ಟಲಿಂಗವು ಉಂಟಾಗಿರ್ದ ಸ್ಥಾನದಲ್ಲಿ ಕೊಲ್ಲಿಪಾಕಶಿಲೆ ಮಂಟೂರಶಿಲೆ ಶ್ರೀಶೈಲ [೫]ಶಿಲೆ[೫]ಯೆಂಬ ಕರ್ಕಶಭಾವವಿದ್ದಿತ್ತೆ? ಆ ಲಿಂಗದ ಪ್ರಾಣಕಳಾಚೈತನ್ಯಸ್ವರೂಪವಾದ ಮಹಾಜ್ಞಾನಜಂಗಮ ಉಂಟಾಗಿರ್ದಸ್ಥಾನದಲ್ಲಿ ಗೋತ್ರದ ಹೊಲೆಯುದ್ದಿಹುದೆ? ಚಿತ್ಕಲಾಪ್ರಸಾದವೇ ಜ್ಞಾನಾನುಭಾವ[ರಸಾದವಾಗಿರ್ದಲ್ಲಿ ಉಚ್ಛಿಷ್ಟಭಾವವಿದ್ದೀತೆ? ಈ ತೆರದಲ್ಲಿ ಹೇಳಿದ ಪವಿತ್ರವಲ್ಲದಿದ್ದಂಥ ವಾಕ್ಯವನು ಬೊಗಳುವ ಹೊಲೆಯೇ ದೋಷವು, ಕಲಾತೀತವಾದ ನಿಃಕಲಬ್ರಹ್ಮದಲ್ಲಿ ಆತ್ಮ ಏಕತ್ವವನುಳ್ಳಂಥ ಲಿಂಗಜಂಗಮಪ್ರಸಾದವೆಂಬ ಮೂರರ ಆ ಮಹಾಲಿಂಗವೇ ಇಷ್ಟಲಿಂಗವಾಗಿ ಬಂದಿತ್ತು. ಆ ನಿರಂಜನಬ್ರಹ್ಮವೇ ಮಹಾಜ್ಞಾನಿ ಜಂಗಮವಾಗಿ ಬಂದಿತ್ತು. ಆ ಚಿತ್ಕಲಾಪ್ರಸಾದವೇ ಜ್ಞಾನಾನುಭಾವ ಪ್ರಸಾದವಾಗಿ ಬಂದಿತ್ತೆಂಬ ಹಸಿಗೆಯು, ಎಲೆ ಲಿಂಗವೇ ನಿಮ್ಮ ಶಿವಶರಣರಿಗಲ್ಲದೆ ಉಳಿದ ದೇವರುಗಳಿಗೆ ನಾಸ್ತಿಯು.

....

೨–೨ ಯ (ಚ, ಜ), ೩–೩ x (ಚ), ೪–೪ ಅನಂತ (ಜ), ೫–೫ x (ಜ)

III –

ಎಂಜಲುಂಟೆ–ಉಚ್ಛಿಷ್ಟಸೂತಕ ಒಳವೆ? ಇಲ್ಲವೆಂಬುದರ್ಥ.

IV– –

೧ + ಅಪವಿತ್ರದ ನುಡಿಯ ನಡುವೆ ಸೂತಕವೆ? ಇನ್ನು ಪ್ರಸಾದಿಸ್ಥಲ ಪ್ರಸಾದಿಸ್ಥಲದ ವಚನಗಳು (ತ)

....

ಸಾಕಾರವಪ್ಪ ಜೀವಭಾವವಳಿದು ಅಂಗವೆಲ್ಲ ಲಿಂಗವೆ ಆದ ಶರಣಂಗೆ ಲಿಂಗಜಂಗಮಪ್ರಸಾದ ಸಂಗಸಮರಸವಾಗಿರ್ದ ಕಾರಣ ಶರಣಂಗೆ ಕುಲಸೂತಕ. ಹೊಲೆಸೂತಕ, ಎಂಜಲುಸೂತಕ, ಮೊದಲಾದ ಸೂತಕಂಗಳು ಉಂಟೆಂದು ನುಡಿದರೆ ಪಂಚಮಹಾಪಾತಕವೆಂಬುದೆ? ವಚನದ ತಾತ್ಪರ್ಯಾರ್ಥ.

೭೭೨

ಬಾರದು ಬಾರದು ಭಕ್ತಂಗೆ ಪರಧನ ಪರಸತಿ, ಬಾರದು ಬಾರದು [1]ವಿ[1]ಷಯಂಗೆ ಪಶುಪತಿಯ ವ್ರತವು, ಬಾರದು ಬಾರದು ಭವಭಾರಿಗೆ ಕೂಡಲಸಂಗಮದೇವ[2]ರ[2] ಒಕ್ಕುದ ಕೊಳಬಾರದು.

I– –

ಭಕ್ತಂಗೆ–ಗುರುಕಾರುಣ್ಯವ ಪಡೆದು ಶಿವಭಕ್ತನಾದಂಥ ಹರಭಕ್ತಂಗೆ, ಪರಧನ–ಅನ್ಯದ್ರವ್ಯವು, ಪರಸತಿ–ಅನ್ಯಸ್ತ್ರೀಯರ, ಬಾರದು ಬಾರದು–ತೆಗೆದುಕೊಳಬಾರದು ತೆಗೆದುಕೊಳಬಾರದು. ವಿಷಯಂಗೆ–ಮನ್ಮಥವಿಕಾರಿಗೆ, ಪಶುಪತಿಯ ವ್ರತವು–ಬ್ರಹ್ಮಾದಿಪಶುಗಳಿಗೆ ಒಡೆಯನಾದ ಶಿವನು ಸಂಬಂಧವಾದ ಷಡ್ವಿಧಶೀಲವನ್ನೇ ಅಂಗವ ಮಾಡಿಕೊಂಡು ಷಡ್ವಿಧವ್ರತವನ್ನೇ ಪ್ರಾಣವ ಮಾಡಿಕೊಂಡು ಆಚರಿಸುವಂಥ ಆಚರಣೆಯು, ಬಾರದು ಬಾರದು–ಆಚಾರಾಂಗವ ಮಾಡಿಕೊಂಡಾಚರಿಸೇನೆಂದರೆ ಅಶಕ್ಯವಾಗಿರ್ಪುದು.

ಭವಭಾರಿಗೆ–ಎಲ್ಲಾ [1]ಎ[1]ಡೆಯಲ್ಲಿ ಹುಟ್ಟಿಬರುವಂಥ ಉತ್ಪತ್ಯದ ತೂಕವುಳ್ಳಾತಂಗೆ, ಕೂಡಲಸಂಗಮದೇವರ–ಪರಶಿವಲಿಂಗದೇವರ, ಒಕ್ಕುದ ಕೊಳಬಾರದು–ಅವರೊಕ್ಕ ಮಿಕ್ಕ ಪ್ರಸಾದವನನುಭವಿಸೇನೆಂದರೆ, ಬಾರದು ಬಾರದು–ಅಳವಡದು, ಅಳವಡದು.

....

೧–೧ ಕ (ಗ)

IV– –

1–1 ನಿರ್ವಿ (ತ), 2+2 ನ (ತ)

....

ಅಜ್ಞಾನಿಯಾದ ಮನುಷ್ಯಂಗೆ ಶಿವಭಕ್ತಿ ಅಳವಡದು, ಶಿವಭಕ್ತಂಗೆ ಅಜ್ಞಾನನವಾದ ಗುಣವಳವಡದು. ಸತ್ತು ಹುಟ್ಟುವ ಮನುಷ್ಯಂಗೆ ಅಖಂಡ ಸ್ವರೂಪವಾದ ಪ್ರಾಸಾದವಿಲ್ಲಾಯೆಂಬುದೀ ವಚನದರ್ಥ.

೭೭೩

ಹುತ್ತದ ಮೇಲಣ ರಜ್ಜು ಮುಟ್ಟಿದಡೆ ಸಾವರು ಶಂಕಿತರಾದವರು, ಸರ್ಪದಷ್ಟವಾದಡೆಯೂ ಸಾಯರು ನಿಃಶಂಕಿತರಾದವರು. ಕೂಡಲಸಂಗಮದೇವಯ್ಯ, ಶಂಕಿತಂಗೆ ಪ್ರಸಾದ ಸಿಂಗಿ ಕಾಳಕೂಟವಿಷವು!

I –

ಹುತ್ತದ ಮೇಲಣ–ವಾಲ್ಮೀಕದ ಮೇಲಣ, ರಜ್ಜು–ಹುಲ್ಲಸರವಿಯು, ಮುಟ್ಟಿದಡೆ–ಸೋಂಕಿದರೆ, ಶಂಕಿತರಾದವರು–ಎಲ್ಲಿ ಸರ್ಪ ಕಡಿದೀತೋ ಎಲ್ಲಿ ಸತ್ತೇವೋ ಎಂದು ಸಂಕಲ್ಪಭಾವವನ್ನು ಮುಂದುಗೊಂಬುವಂಥವರು, ಸಾವರು–ಅದೇ ಸರ್ಪವೇ ಕಚ್ಚಿದ ಹಾಂಗಾಗಿ ವಿಷವೇರಿ ಮೃತವಾಗುತ್ತಿಹರು. ಸರ್ಪದಷ್ಟವಾದಡೆಯೂ ಸಾಯರುಂ ನಿಃಶಂಕಿತರಾದವರು–ಶಿವ[1]ಕೊಟ್ಟ[1] ಆಯುಷ್ಯವಿರಲಿಕ್ಕೆ ಈ ಹುಳು ಪ್ರಾಣಿಯಿಂದ ಏನಾಗುತ್ತೈತೆಂದು ಸಂಕಲ್ಪಭಾವವ ಮುಂದುಗೊಳ್ಳದವರು ಸಾಯರು ಅಥವಾ ಒಂದು ವೇಳೆ ಸರ್ಪದಷ್ಟವಾದರೂ, ಸಾಯರು–ಮೃತವಾಗರು.

ಕೂಡಲಸಂಗಮದೇವಯ್ಯ-ಎಲೆ ಪರಶಿವಲಿಂಗವೇ, ಶಂಕಿತಂಗೆ-ಈ ಪ್ರಸಾದವ ಸೇವನೆಯ ಮಾಡಿದರೆ ಆಧಿವ್ಯಾದಿವಿಪತ್ತು ಬಿಡುತ್ತೈದಾವೋ ಎಡರು ಬಡತನ ಕಂಟಕಾದಿಗಳು ಬಿಡುತ್ತೈದಾವೋ ಎಂದು ಅವಿಶ್ವಾಸದಿಂದ ಅನುಭವಿಸುವಾತಂಗೆ, ಪ್ರಸಾದ-ಗುರುಲಿಂಗಜಂಗಮಪ್ರಸಾದವು, ಸಿಂಗಿ ಕಾಳ ಕೂಟವಿಷವು-ಅದೇ ಹಾಳಾಹಳಕೂಟ ವಿಷವಾಗಿ ಜನನಮರಣಂಗಳಲ್ಲಿ ತಂದು ಸಂಹರಿಸುತ್ತಿಹುದು.

....

೧-೧ ಕೋಟಿ (ಕ)

II- -

ಹುತ್ತದ ಮೇಲಣ ರಜ್ಜು ಮುಟ್ಟಿದಡೆ ಸಾವರು ಶಂಕಿತರಾದವರು-ನವದ್ವಾರಯುಕ್ತವಾದ ದೇಹವೆಂಬ ವಾಲ್ಮೀಕದಲ್ಲಿಯ ಅನುಮಾನವೆಂಬ ಸರವಿ ಸೋಂಕಿದರೆ ಸಂದೇಹವುಳ್ಳವರುಗಳು [೨]ಮೃತವಾಗುವರು[೨]. ಸರ್ಪದಷ್ಟವಾದಡೆಯೂ ಸಾಯರು ನಿಶ್ಯಂಕಿತರಾದವರು-ಮರೀಚಿಕ ಜಲದಂತೆ ಮೇಘಾಡಂಬರದ ಹಾಂಗ ಆ ಲಿಂಗದಲಿ ಒಂದು ವೇಳೆ ಮಾಯಾಪ್ರಪಂಚು ತೋರಿದರೂ ಆ ಲಿಂಗದಲ್ಲಿಯೆ ಅಡಗಿ ಹೋಗುವಂಥ ನಿವೃತ್ತಿಯನು ತಿಳಿದು ಬಲ್ಲರು. ಅದು ಕಾರಣವಾಗಿ ಮನೋಪ್ರಕೃತಿಯೆಂಬ ಸರೀಸೃಪನು ಮುಟ್ಟಿದರೆಯೂ ನಿಸ್ಸಂದೇಹವುಳ್ಳವರುಗಳು ಮೃತಿಗತ ವಾಗರು.

ಕೂಡಲಸಂಗಮದೇವಯ್ಯ ಶಂಕಿತಂಗೆ ಪ್ರಸಾದ ಸಿಂಗಿ ಕಾಳಕೂಟವಿಷವು-ಎಲೆ ಲಿಂಗವೇ ಆಗಮಜ್ಞಾನಸಂಕಲ್ಪಕೃತಿಸ್ವಭಾವವನುಳ್ಳ ದುರ್ಭಾವಿಗೆ ಚಿತ್ಕಲಾಪ್ರಸಾದವು ಕಪ್ಪಿನೊಡನೆ ಕೂಡಿದ ನಂಜು.

....

೨-೨ ಮೃತಗತವಾಗುವರು (ಚ).

III -

ಶಂಕಿತಂಗೆ-ಸಂಕಲ್ಪಜೀವಿಗೆ, ಸಿಂಗಿ-ಉರಿಸಿಂಗಿಯು.

IV -

ನಂಬಿದರೆ ಪ್ರಸಾದ ಪರಮಾಮೃತ, ನಂಬದಿದ್ದರೆ ಪ್ರಸಾದ ಮಹಾವಿಷವೆಂಬುದೀ ವಚನದರ್ಥ.

೭೭೪

ನಂಬಿದಡೆ ಪ್ರಸಾದ, ನಂಬಿದಿರ್ದಡೆ ವಿಷವು, ತುಡುಕಬಾರದು ನೋಡಾ. ಲಿಂಗಪ್ರಸಾದ ಸಂಗನ ಪ್ರಸಾದ. **ಕೂಡಲಸಂಗನ ಪ್ರಸಾದ ಸಿಂಗಿಕಾಳಕೂಟವಿಷವು.**

I -

ನಂಬಿದಡೆ ಪ್ರಸಾದ-ಚಿತ್ಕಲಾಪ್ರಸಾದವೇ ಕ್ರೀಪ್ರಸಾದವಾಗಿ ಬಂದಿರ್ಪುದು. ಈ ಪ್ರಸಾದವನ್ನು ಅನುಭವಿಸದರೆ ಸಮಸ್ತ ಪಾಪಕ್ಷಯವಾಗಿ ಹೋಗಿ ನಿತ್ಯವಾದ ನಿಜಮೋಕ್ಷವೇ ಆಗುತ್ತಿಹುದೆಂದು, ನಂಬಿದಡೆ-ವಿಶ್ವಾಸಿಸಿದೊಡೆ, ಪ್ರಸಾದ-ಅದು ಶಿವಪ್ರಸಾದವು. ನಂಬದಿರ್ದಡೆ-ಈ ಪ್ರಸಾದ ಸೇವನೆಯ ಮಾಡಿದರೆ ಆಧಿಗಳು ಬಿಡುತ್ತೈದಾವೋ ವ್ಯಾಧಿಗಳು ಬಿಡುತ್ತೈದಾವೋ ಎಡರು ಕಂಟಕ ಬಡತನಂಗಳು ಬಿಡುತ್ತೈದಾವೋ ಎಂದು ಅವಿಶ್ವಾಸದಿಂದ ಅನುಭವಿಸಿದರೆ, ವಿಷವು-ಕ್ಷ್ವೇಡವಾಗಿರ್ಪುದು.

ತುಡುಕಬಾರದು–ಅವಿಶ್ವಾಸದಿಂದ ಅನುಭವಿಸಬಾರದು, ನೋಡಾ–ಕಾಣಾ, ಲಿಂಗ ಪ್ರಸಾದ–ಗುರುಪ್ರಸಾದವು. ಸಂಗಪ್ರಸಾದ–ಲಿಂಗಪ್ರಸಾದವು, ಕೂಡಲಸಂಗನ ಪ್ರಸಾದ–ಜಂಗಮಪ್ರಸಾದವು, ಸಿಂಗಿ ಕಾಳಕೂಟವಿಷವು–ಅದೇ ಹಾಳಾಹಳಕೂಟ ವಿಷವಾಗಿ ಜನನಮರಣಂಗಳಲ್ಲಿ ತಂದು ಸಂಹರಿಸುತ್ತಿಹುದು.

IV –

[೧]ಸಂದೇಹಿಗೆ ವಿಷವು ಪ್ರಸಾದವು[೧] ನಿಃಸಂದೇಹಿಗೆ ಪರಬ್ರಹ್ಮವಾಗಿಹುದು ಪ್ರಸಾದವೆಂಬುದೀ ವಚನದರ್ಥ.

....

೧–೧ 'ಸಂದೇಹಿಗೆ ವಿಷವಾಗುವುದು ಪ್ರಸಾದ' ಎಂದು ಇದರ ಅರ್ಥ (ಸಂ).

೭೭೫

ಪಂಡಿತನಾಗಲಿ, ಮೂರ್ಖನಾಗಲಿ ಸಂಚಿತಕರ್ಮ[1]ವ[1]ನುಂಡಲ್ಲದೆ ಬಿಡದು. ಪ್ರಾರಬ್ಧ ಕರ್ಮ[2]ವ[2] ಭೋಗಿಸದಲ್ಲದೆ ಹೋಗದೆಂದು ಶ್ರುತಿ ಸಾರುತ್ತೆದಾವೆ ನೋಡಾ; ತಾನಾವ ಲೋಕದೊಳಗಿದ್ದಡೆಯೂ ಬಿಡದು. ಕರ್ಮದ ಫಲಗೂಡಿ ಕೂಡಲಸಂಗಮದೇವಂಗೆ ಆತ್ಮನೈವೇದ್ಯನ ಮಾಡಿದವನೇ ಧನ್ಯ[3]ನು.[3]

I –

ಪಂಡಿತನಾಗಲಿ–ಸಕಲವೇದಶಾಸ್ತ್ರಾಗಮಪುರಾಣಂಗಳನು ಬಲ್ಲಂಥ ವಿದ್ವಾಂಸನಾದರೂ ಆಗಲಿ, ಮೂರ್ಖನಾಗಲಿ–ಏನೇನೂ ಅರಿಯದಿದ್ದಂಥ ಮೂಢನಾದರಾಗಲಿ, ಸಂಚಿತಕರ್ಮವನುಂಡಲ್ಲದೆ ಬಿಡದು: [ಸಂಚಿತಕರ್ಮವನು–] ಮೊದಲ ಜನ್ಮದಲ್ಲಿ ಮಾಡಿ ಮಾಡಿ ಕೂಡಲಿಕ್ಕಿದಂಥದೇ ಸಂಚಿತಕರ್ಮ, ಆ ಸಂಚಿತ ಕರ್ಮವನ್ನು ಉಂಡಲ್ಲದೆ–ಅನುಭವಿಸಿದಲ್ಲದೆ, ಬಿಡದು–ಬಿಡುಗಡೆಯಾಗದು.

ಪ್ರಾರಬ್ಧಕರ್ಮವ–ಆಗ ಮಾಡಿ ಈಗ ಭೋಗಿಸುವಂಥದೇ ಪ್ರಾರಬ್ಧಕರ್ಮವು, ಆ ಪ್ರಾರಬ್ಧಕರ್ಮವನ್ನು, ಭೋಗಿಸಿದಲ್ಲದೆ–ಅನುಭವಿಸಿದಲ್ಲದೆ, ಹೋಗದೆಂದು–ಬಿಡುಗಡೆಯಾಗಿ ಹೋಗದೆನುತ್ತ, ಶ್ರುತಿ–ವೇದವಾಕ್ಯಂಗಳು, ಸಾರುತೈದಾವೆ ನೋಡಾ–ಡಂಗರಿಸುತೈದಾವೆ ಕಂಡಾ.

ತಾನಾವ ಲೋಕದೊಳಗಿದ್ದಡೆಯೂ–ತಾನು ಇಹಲೋಕ ಪರಲೋಕ ಮೊದಲಾದ ಹದಿನಾಲ್ಕು ಭುವನದೊಳಗಿದ್ದರೆಯೂ, ಬಿಡದು–ಬಿಡುಗಡೆಯಾಗದು. ಕರ್ಮದ ಫಲಗೂಡಿ: ಕರ್ಮ–ಸಂಚಿತಾದಿ ಕರ್ಮತ್ರಯಂಗಳ, ಫಲ–ಫಲಂಗಳನು, ಕೂಡಿ–ಒಬ್ಬುಳಿಯಾಗಿ, ಕೂಡಲಸಂಗಮದೇವಂಗೆ–ಇಷ್ಟಮಹಾಲಿಂಗಕ್ಕೆ, ಆತ್ಮನೈವೇದ್ಯವ ಮಾಡಿದವನೇ–ಆತ್ಮಪದಾರ್ಥವನ್ನೆ ರೂಪುಪದಾರ್ಥವಾಗಿ ಸಮರ್ಪಣೆಯ ಮಾಡಿದಾತನೇ, ಧನ್ಯನು–ಕೃತಾರ್ಥನು.

III –

ಪಂಡಿತನಾಗಲಿ–ಬಲ್ಲಾತನಾಗಲಿ, ಮೂರ್ಖನಾಗಲಿ–ಅಜ್ಞಾನಿಯಾದಡೂ ಆಗಲಿ, ತಾನು–ಆತ್ಮನು.

IV –

1–1 x (ತ), 2–2 x (ತ), 3–3 x (ತ)

....

ಜೀವಭಾವವಳಿದು ಬ್ರಹ್ಮವಾದವಂಗೆ ಸಂಚಿತಪ್ರಾರಬ್ಧವಿಲ್ಲ. ಬಲ್ಲವನಾಗಲಿ ಅಱಿಯದವನಾಗಲಿ ಆವ ಲೋಕದೊಳಗಿದ್ದರೆಯೂ ಕರ್ಮವುಂಡಲ್ಲದೇ ಹೋಗದೆಂಬುದೀ ವಚನದರ್ಥ.

೭೭೬

ಒಲ್ಲೆನೆಂಬುದು ವೈರಾಗ್ಯ, ಒಲಿವೆನೆಂಬುದು ಕಾಯಗುಣ, ಆವ ಪದಾರ್ಥವಾದಡೇನು? ತಾನಿದ್ದೆಡೆಗೆ ಬಂದುದ ಲಿಂಗಾರ್ಪಿತವ ಮಾಡಿ ಭೋಗಿಸುವುದೇ [1]ಸದಾ[1]ಚಾರ. ಕೂಡಲಸಂಗಮ ದೇವರನೊಲಿಸಬಂದ ಪ್ರಸಾದಕಾಯವ ಕೆಡಿಸಲಾಗದು.

I –

ಒಲ್ಲೆನೆಂಬುದು ವೈರಾಗ್ಯ–ಯತೀಶ್ವರರುಗಳಿರುವಂಥ ಸ್ಥಾನಕ್ಕೆ ಭಕ್ತಮಾಹೇಶ್ವರರುಗಳು ವೀಳ್ಯಫಲಾಹಾರ ಧೂಪಗಾಣಿಕೆ ಮೊದಲಾದುವನ್ನು ತೆಗೆದುಕೊಂಡು ಹೋಗಿ ಮುಂದಿಟ್ಟು ನಮಸ್ಕಾರವ ಮಾಡಿದಲ್ಲಿ ಅಷ್ಟರೊಳಗಷ್ಟನಾದರೂ ತೆಗೆದುಕೊಂಡು ಸಮಾಧಾನವ ಮಾಡಿ ಕಳಿಸಿಕೊಡಬೇಕಲ್ಲದೆ ನಾವು ಒಲ್ಲೆವೆಂದು ಕತ್ತೆ ಒದ್ದುಕೊಂಬುವ ಹಂಗೆ ಒದ್ದುಕೊಂಬುವಂಥದು ಸಹಜವೈರಾಗ್ಯವೇ? ಅಲ್ಲ.[೧] ಒಲಿವೆನೆಂಬುದು–ಮತ್ತು ಏಕಾಂತಸ್ಥಾನದಲ್ಲಿ ಕುಳಿತುಕೊಂಡು ನಮ್ಮ ಲಿಂಗಕ್ಕೆ ಇಂಥಿಂಥ ಪದಾರ್ಥವಾಗಬೇಕೆಂದು ತರಿಸಿಕೊಂಡನುಭವಿಸುವಂಥದು, ಕಾಯಗುಣ–ದೇಹದ ಉಪಾಧಿಯು. ಆವ ಪದಾರ್ಥವಾದಡೇನು? ತಾನಿದ್ದೆಡೆಗೆ–ಶರಣನಿರುವಂಥ ತಾವಕ್ಕೆ, ಬಂದುದ–ಲಿಂಗಾಣತಿಯಿಂದ್ಯೆದು ಬಂದುದ. ಲಿಂಗಾರ್ಪಿತವ ಮಾಡಿ–ಲಿಂಗಕ್ಕೆ ಸಮರ್ಪಿಸಿ, ಭೋಗಿಸುವುದೇ–ಅನುಭವಿಸುವುದೇ, ಸದಾಚಾರ–ಅದೇ ಸತ್ಪಥಾಚಾರವು.

ಕೂಡಲಸಂಗಮದೇವರನೊಲಿಸ ಬಂದ–ಶಿವಾಧಿಕ್ಯವಿಡಿದಾಚರಿಸಿ, ಶಿವನ ಕೃಪೆಯನ್ನು ಹಡೆಯಬೇಕೆಂದು ಎಯ್ದುಬಂದ, ಪ್ರಸಾದಕಾಯವ–ಶಿವ ಪ್ರಸಾದದಿಂದುಂಟಾದ ಚಿತ್ಕಾಯವನ್ನು, ಕೆಡಿಸಲಾಗದು–[೨][ಹಳ][೨] ಹಳಕ್ಕೆ ಅನ್ನವ ತೆಗೆದುಕೊಂಡು ಹಳ[೨][ಹಳ][೨]ಕ್ಕೆ ವಸ್ತ್ರ ಕಪ್ಪಟಂಗಳನು ಹೊದ್ದುಕೊಂಡು ತಪನಿಗ್ರಹಾದಿಗಳಿಂದ ದೇಹವನ್ನು ದಂಡಿಸಲಾಗದು.

....

೧ + ಅಂತ ವೈರಾಗ್ಯವು (ಕ, ಗ), ೨–೨+ ಹಾಳಾ (ಕ, ಗ)

III –

ಕಾಯಗುಣ–ಅಂಗದ ಪ್ರಕೃತಿಗುಣವು, ಆವ ಪದಾರ್ಥವಾದರೇನು–ಯಾವ ಪಡಿ ಪದಾರ್ಥ ದೊಱೆಕೊಂಡುದನು, ಭೋಗಿಸುವುದೆ–ಲಿಂಗ ಪ್ರಸಾದವನು ಸ್ವೀಕರಿಸುವಂಥದೆ.

IV– –

1-1 ಆ (ತ)

....

ಲಿಂಗದಿಂದಾದ ಅಂಗಕ್ಕೆ ಲಿಂಗಪ್ರಸಾದವನಿತ್ತು ಸಲಹುವದು, ಒಲ್ಲೆ ಬೇಕೆನ್ನೆನೆಂಬುದೀ ವಚನದರ್ಥ.

೭೭೭

ಒಪ್ಪವ ನುಡಿವಿರಯ್ಯ ತುಪ್ಪವ ತೊಡದಂತೆ, ಶರಣ ತನ್ನ ಮೆಱೆವನೆ ಬಿನ್ನಾಣಿಯಂತೆ? ಕೂಡಲಸಂಗನ ಪ್ರಸಾದದಿಂದ ಬದುಕುವನಲ್ಲದೆ ತನ್ನ ಮೆ[1]ರೆ[1]ವನೆ?

I –

ಒಪ್ಪವ ನುಡಿವಿರಯ್ಯ ತುಪ್ಪವ ತೊಡೆದಂತೆ: [ತುಪ್ಪವ ತೊಡೆದಂತೆ–] ರಂಭಾಪರ್ಣದ ಮೇಲೆ ಘೃತಲೇಪನ ಮಾಡಿದ ಹಾಂಗೆ ಜನ[?]ಸೇವ್ಯವಾಗುವ ಹಂಗೆ ಕರ್ಣಶೋಭಿತವಾಗುವ ಹಾಂಗೆ, ಒಪ್ಪವ ನುಡಿವಿರಯ್ಯ–ನಾವು ಅಚ್ಚಪ್ರಸಾದಿಗಳು ನಿಚ್ಚಪ್ರಸಾದಿಗಳು ಸಮಯಪ್ರಸಾದಿಗಳು ಪಾದೋದಕಪ್ರಸಾದವ ಕಟ್ಟಿನ ಕ್ರೀಯುಳ್ಳವರೆಂದು ಹೇಳಿಕೊಂಡು, ಶರಣ ತನ್ನ ಮೆಱೆವನೆ: ಶರಣ–ಶಿವಶರಣನು, ತನ್ನ ಮೆಱೆವನೆ–ತನ್ನ ವಿಶೇಷವನ್ನು ಹೇಳಿಕೊಂಡು ಶೋಭಿಸಿಯಾನೆ ಬಿನ್ನಾಣಿಯಂತೆ–ಮಿಸುನಿ ಚಿನ್ನದ ಕುಶಲ ಕೆಲಸವನ್ನು ಮಾಡುವ ಕಾರಕನು ಆವುದಾನೊಂದು ಪದಕವನು ಕಾಸಿ ಒಪ್ಪವಿಡುವಾಗ ಇದರ ಕುಂದಣ ಹ್ಯಾಂಗೈತೆ ಇದರ ಪ್ರಕಾಶ ಹ್ಯಾಂಗೈತೆ ಇದರ ಒಪ್ಪ ಹ್ಯಾಂಗೈತೆಯೆಂದು ಹೇಳಿಕೊಂಡು ಹ್ಯಾಂಗೆ ಶೋಭಿಸುತ್ತಿಹನೋ ಹಾಂಗೆ, ಶರಣ–ಪ್ರಸಾದಿಭಕ್ತನು, ತನ್ನ ಮೆರೆವನೆ–ನಾವು ಅಚ್ಚಪ್ರಸಾದಿಗಳು ಸಮಯಪ್ರಸಾದಿಗಳು ಪಾದೋದಕ ಪ್ರಸಾದದ ಕಟ್ಟಿನ ಕ್ರೀಯುಳ್ಳವರೆಂದು ಹೇಳಿಕೊಂಡು ಶೋಭಿಸಿಯಾನೆ? ಶೋಭಿಸನು.

ಕೂಡಲಸಂಗನ ಪ್ರಸಾದಿಂದ–ಶಿವಪ್ರಸಾದ ಸೇವನೆಯಿಂದ, ಬದುಕುವನಲ್ಲದೆ–ಕೃತಾರ್ಥನಾಗುವನಲ್ಲದೆ, ತನ್ನ ಮೆರೆವನೆ–ನಾವು ಅಚ್ಚಪ್ರಸಾದಿಗಳು ನಿಚ್ಚಪ್ರಸಾದಿಗಳು ಸಮಯಪ್ರಸಾದಿಗಳು ಪಾದೋದಕಪ್ರಸಾದದ ಕಟ್ಟಿನ ಕ್ರಿಯುಳ್ಳವರೆಂದು ಹೇಳಿಕೊಂಡು ಶೋಭಿಸಿಯಾನೆ? ಶೋಭಿಸನು.

....

೧–೧ ವೈಶ್ಯ (ಕ)

III –

ಬಿನ್ನಾಣಿಯಂತೆ–ಆಟಗಾರನ ಹಾಂಗೆ, ಶರಣ ತನ್ನ ಮೆರೆವನೆ?–ತನ್ನ ಮಹತ್ವವನು ಪರರ ಕೂಡೆ ಹೇಳಿಕೊಳ್ಳನು.

IV –

1-1 ಅ (ತ)

....

ಪರಬ್ರಹ್ಮವಾದ ಪ್ರಸಾದವೆ ಪ್ರಾಣವಾಗಿಪ್ಪನಲ್ಲದೆ ಉಳಿದ ಮಾತುಗಳನಾಡ ಶರಣನೆಂಬುದೀ ವಚನದರ್ಥ.

೭೭೮

ಅರ್ಪಿತ ಅರ್ಪಿತ[1]ವೆನುತ್ತಿಪ್ಪಿರಿ[1] ಗುರುವಿಂಗೆ ಕೊಡುವುದು ಅರ್ಪಿತವೆ? [2]ಸವೆದು[2]ಕೊಡಬೇಕಲ್ಲದೆ. ಅರ್ಪಿತ ಅರ್ಪಿತ [1]ವೆನುತ್ತಿಪ್ಪಿರಿ[1] ಲಿಂಗಕ್ಕೆ ಕೊಡುವುದು ಅರ್ಪಿತವೆ? [2]ಸವೆದು[2]ಕೊಡಬೇಕಲ್ಲದೆ. ಅರ್ಪಿತ ಅರ್ಪಿತ[3]ವೆ[3]ನುತ್ತಿಹರೆಲ್ಲರೂ ಅರ್ಪಿತ ಮುಖವನಱೆ[4]ಯರಿ [4]ನೋಡಾ, ಜಂಗಮಕ್ಕೆ ನೀಡಿ ಜಂಗಮಪ್ರಸಾದವ ಕೊಂಡರೆ ನಿನಗರ್ಪಿತ ಕಾಣಾ, ಕೂಡಲಸಂಗಮದೇವಾ.

I –

ಅರ್ಪಿತ ಅರ್ಪಿತವೆನುತ್ತಿಪ್ಪಿರಿ–ತನುಪದಾರ್ಥವನು ಗುರುವಿಂಗೆ ಸಮರ್ಪಣೆಯ ಮಾಡುತ್ತೈದೇವಿ ಸಮರ್ಪಣೆಯ ಮಾಡುತ್ತೈದೇವಿಯೆಂದು ಹೇಳಿಕೊಂಬುತ್ತಿದ್ದೀರಿ. ಗುರುವಿಂಗೆ ಕೊಡುವುದು ಅರ್ಪಿತವೆ? ಸವೆದು ಕೊಡಬೇಕಲ್ಲದೆ–ತನುವು ಗುರುವು ಒಂದೇ ಎಂಬ ಭಾವದಿಂದ ತನು ಪದಾರ್ಥವನು ಗುರುವಿಂಗೆ ಸಮರ್ಪಣೆಯ ಮಾಡಬೇಕಲ್ಲದೆ ತನುವು ಬೇರೆ ಗುರುವು ಬೇರೆಂದು ಭಿನ್ನವಿಟ್ಟುಕೊಂಡು ತನುಪದಾರ್ಥವನ್ನು ಗುರುವಿಂಗೆ ಸಮರ್ಪಿಸುವಂಥದು ಅರ್ಪಿತವೇ? ಅರ್ಪಿತದೊಳಗಲ್ಲವು.

ಅರ್ಪಿತ ಅರ್ಪಿತವೆನುತ್ತಿಪ್ಪಿರಿ–ಮನಪದಾರ್ಥವನು ಲಿಂಗಕ್ಕೆ ಸಮರ್ಪಿಸುತ್ತೈದೇವಿ, ಸಮರ್ಪಿಸುತ್ತೈದೇವಿಯೆಂದು ಹೇಳಿಕೊಂಬುತ್ತಿದ್ದೀರಿ. ಲಿಂಗಕ್ಕೆ ಕೊಡುವುದು ಅರ್ಪಿತವೆ, ಸವೆದು ಕೊಡಬೇಕಲ್ಲದೆ–ಮನವು ಲಿಂಗವು ಒಂದೆಂಬ ಭಾವದಿಂದ ಮನಪದಾರ್ಥವನ್ನು ಸಮರ್ಪಣೆಯ ಮಾಡಬೇಕಲ್ಲದೆ ಮನವು ಬೇರೆ ಲಿಂಗವು ಬೇರೆಂದು ಭಿನ್ನವಿಟ್ಟುಕೊಂಡು ಮನಪದಾರ್ಥವನ್ನು ಲಿಂಗಕ್ಕೆ ಸಮರ್ಪಿಸುವಂಥದು ಅರ್ಪಿತವೆ? ಅರ್ಪಿತದೊಳಗಲ್ಲವು.

ಅರ್ಪಿತ ಅರ್ಪಿತವೆನುತ್ತಿಹರು–ಧನಪದಾರ್ಥವನು ಜಂಗಮಕ್ಕೆ ಸಮರ್ಪಿಸುತ್ತೈದೇವಿ ಸಮರ್ಪಿಸುತ್ತೈದೇವಿಯೆಂದು ಹೇಳಿಕೊಂಬುತ್ತಿದ್ದೀರಿ ಎಲ್ಲರೂ–ಸಮಸ್ತಭಕ್ತಮಾಹೇಶ್ವರರು. ಅರ್ಪಿತಮುಖವನಱೆಯಿರಿ–ಧನವೂ ಜಂಗಮವೂ ಒಂದೇಯೆಂಬ ಭಾವದಿಂದ ಧನಪದಾರ್ಥವನ್ನು ಜಂಗಮಕ್ಕೆ ಸಮರ್ಪಣೆಯ ಮಾಡಬೇಕಲ್ಲದೆ ಧನವು ಬೇರೆ ಜಂಗಮವು ಬೇರೆಂದು ಭಿನ್ನವಿಟ್ಟುಕೊಂಡು ಧನಪದಾರ್ಥವನ್ನು ಜಂಗಮಕ್ಕೆ ಸಮರ್ಪಿಸುವಂಥದು ಅರ್ಪಿತವೆ? ಅರ್ಪಿತದೊಳಗಲ್ಲವು, ನೋಡಾ–ಕಂಡಾ.

ಜಂಗಮಕ್ಕೆ ನೀಡಿ–ಜಂಗಮಮೂರ್ತಿಗಳಿಗೆ ತನುಮನಧನಂಗಳು ಮೊದಲಾದ ಸಕಲಪದಾರ್ಥವನ್ನು ಎಡೆಮಾಡಿ, ಜಂಗಮಪ್ರಸಾದವ ಕೊಂಡರೆ–ಜಂಗಮದ ಶೇಷಪ್ರಸಾದವನ್ನು ಅನುಭವಿಸಿದರೆ. ನಿನಗರ್ಪಿತ ಕಾಣಾ, ನಿನಗೆ–ಪರಶಿವಲಿಂಗಕ್ಕೆ, ಅರ್ಪಿತ ಕಾಣಾ–ಸಮರ್ಪಣೆಯಾಗುತ್ತಿಹುದು ಕಂಡಾ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

III– –

1–1 ವೆಂದುನುತ್ತಿಹಿರಿ (ಟ, ಡ), 2–2 ಸವಿಸವಿದು (ಟ, ಡ), 4–4 ದಿಲ್ಲ (ಟ, ಡ)

....

ಅರ್ಪಿತಮುಖವಂ–ಲಿಂಗದ ಜಿಹ್ವೆಯನು, ಲಿಂಗಾರ್ಪಣಕ್ಕೆ ಯೋಗ್ಯವಾದ ಜಂಗಮಭಕ್ತಿಯ ಮಹತ್ವವನು, ಅಜೆದಿಲ್ಲ ನೋಡಾ–ತಿಳಿಯಿರಿ ಕಂಡಾ.

IV –

1–1 ವೆಂದುನುತ್ತಿಹಿರಿ (ತ), 2–2 ಸವಿಸವಿದು (ತ), 3–3 ವೆಂದೆ (ತ). 4–4 ವೆಂದೆ (ತ)

....

ಗುರುಲಿಂಗಜಂಗಮಕ್ಕೆ ಅರ್ಪಿಸಿಕೊಂಬುದು ಪ್ರಸಾದವಲ್ಲ, ಅಲ್ಲಿ ತಾನೆಂಬ ಅಹಂಕಾರವಡಗಿಸಿ ಜಂಗಮಪ್ರಸಾದವ ಕೊಂಡರೆ ಅರ್ಪಿತವಾಯಿತ್ತೆಂಬುದೀ ವಚನದರ್ಥ.

ಪ್ರಸಾದಿಯ ಪ್ರಸಾದಿಸ್ಥಲ

I –

ಪ್ರಸಾದಿಯ ಪ್ರಸಾದಿಸ್ಥಲ, ಪ್ರಸಾದಿಸ್ಥಲದೊಳಗಣ ಪ್ರಸಾದಿಸ್ಥಲದಾಚರಣೆಯನ್ನು ನಿರೂಪಿಸುತ್ತಿಹರು.

೭೭೯

ಗುರುಲಿಂಗಜಂಗಮದಿಂದೆ ಪಾದೋದಕಪ್ರಸಾದವಾಯಿತ್ತು. ಆ ಭಾವವೇ ಮಹಾನುಭಾವವಾಗಿ ಎನಗೆ ಮತ್ತೆ ಬೇಱೆ ಪ್ರಸಾದವೆಂಬುದಿಲ್ಲ, ಕೂಡಲಸಂಗಮದೇವಾ.

II –

ಗುರುಲಿಂಗಜಂಗಮದಿಂದೆ–ಸದ್ರೂಪವಾದ ಗುರು ಚಿದ್ರೂಪವಾದ ಲಿಂಗ ಆನಂದರೂಪವಾದ ಜಂಗಮದಿಂದ, ಪಾದೋದಕ–ಗುರುಪಾದೋದಕ ಲಿಂಗಪಾದೋದಕ ಜಂಗಮಪಾದೋದಕ. ಪ್ರಸಾದವಾಯಿತ್ತು–ಗುರುಪ್ರಸಾದ ಲಿಂಗಪ್ರಸಾದ ಜಂಗಮಪ್ರಸಾದವಾಯಿತ್ತು. ಆ ಭಾವವೇ–ಹಿಂಗೆಂದರಿವಂಥ ಶಿವಭಾವವೇ, ಮಹಾನುಭಾವವಾಗಿ–ಮಹಾಶಿವಾನುಭಾವವಾಗಿ, ಎನಗೆ–ನನಗೆ. ಮತ್ತೆ–ಮರಳಿ, ಬೇಱೆ–ಇನ್ನು ಬೇರೆ, ಪ್ರಸಾದವೆಂಬುದು–ಅನ್ಯದೈವದ ಭಜನೆಯ ಮಾಡಬೇಕು: ಅನ್ಯದೈವದ ಪ್ರತ್ಯಕ್ಷತ್ವವನ್ನು ಪಡೆಯಬೇಕೆಂಬುವಂಥದು, ಇಲ್ಲ–ಉಂಟಾಗಿಲ್ಲವು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

III –

ಆ ಭಾವವೇ–ಆ ಗುರುಲಿಂಗಜಂಗಮದಿಂದ ಪಾದೋದಕಪ್ರಸಾದ ಉಂಟಾಯಿತ್ತೆಂಬಂಥ ವಿಶ್ವಾಸವೆ, ಮಹಾನುಭಾವವಾಗಿ–ಶಿವಾನುಭಾವವಾಯಿತ್ತಾಗಿ ಭಕ್ತಿದಾಸೋಹವೆಂಬಂಥ.

IV -

ಪ್ರಸಾದವೆಂದರೆ ಪರವಸ್ತು, ಪರವಸ್ತುವೇ ಮೂಜಾದ ಗುರುಲಿಂಗಜಂಗಮಕ್ಕೆ ಅರ್ಪಿಸಿದ ಉದಕ ಮೊದಲಾದ ಪದಾರ್ಥಂಗಳೆಲ್ಲ ಪಾದೋದಕ ಪರಸಾದವಾಯಿತ್ತು. ಅಂತಾದ ಪಾದೋದಕಪ್ರಸಾದವೇ ಪರವಸ್ತುವೆಂಬುದನಜೆದು ನಿಶ್ಚಯಭಾವದಿಂದ[೧] ಸೇವಿಸುವ ಭಕ್ತನ ಅಂಗಪ್ರಾಣಮನಭಾವವೆಲ್ಲಾ ಪರವಸ್ತುವೆಯಾಗಿಪ್ಪ[೨][ವಾ][೨]ಗಿ ಶರಣಂಗೆ ಬೇಜೆ ಪರವಸ್ತುವೆಂಬುದಿಲ್ಲ ವೆಂಬುದೀ ವಚನದ ತಾತ್ಪರ್ಯಾರ್ಥ.

....

೧+ ಆ ಪಾದೋಕ ಪ್ರಸಾದವ (ತ) ೨-೨ ನಾ (ತ)

೭೮೦

ದಾಸೋಹವೆಂಬ ಸೋ[೧]ಹ[೧]ಗೊಂಡು ಹೋಗಿ ಗುರುವ ಕಂಡೆ, ಲಿಂಗವ ಕಂಡೆ, ಜಂಗಮವ ಕಂಡೆ, ಪ್ರಸಾದವ ಕಂಡೆ, ಇಂತೀ ಚತುರ್ವಿಧಸಂಪನ್ನನಾದೆ ಕಾಣಾ, ಕೂಡಲಸಂಗಮದೇವಾ.

I- -

ದಾಸೋಹವೆಂಬ ಸೋಹಗೊಂಡು ಹೋಗಿ ದಾಸೋಹವೆಂಬ-ಗುರುಭಕ್ತಿ ಲಿಂಗಪೂಜೆ ಜಂಗಮದಾಸೋಹವೆಂಬ, ಸೋಹಗೊಂಡು ಹೋಗಿ-ಸೂಚನೆಮಾರ್ಗವಿಡಿದು ಹೋಗಿ, ಗುರುವ-ನಿಃಕಲಬ್ರಹ್ಮದ ಸದ್ರೂಪವೇ ಗುರುವಾಗಿ ಬಂದಿರ್ಪುದೆಂದರಿದು ತನುವಿನಲ್ಲಿ ಗುರುಸಂಬಂಧವ ಮಾಡಿಕೊಂಡು ಗುರುಭಕ್ತಿಯ ಮಾಡುವಂಥದನು. ಕಂಡೆ-ಅರಿದೆನು, ಲಿಂಗ-ನಿಃಕಲಬ್ರಹ್ಮದ ಚಿದ್ರೂಪವೇ ಲಿಂಗವಾಗಿ ಬಂದಿರ್ಪುವೆಂದರಿದು ಮನದಲ್ಲಿ ಲಿಂಗಸಂಬಂಧವ ಮಾಡಿಕೊಂಡು ಲಿಂಗಪೂಜೆಯ ಮಾಡುವಂಥದನು, ಕಂಡೆ-ಅರಿದೆನು, ಜಂಗಮವ-ನಿಃಕಲಬ್ರಹ್ಮದ ಆನಂದತ್ವವೇ ಜಂಗಮವಾಗಿ ಬಂದಿರ್ಪುದೆಂದರಿದು ಪ್ರಾಣಜ್ಞಾನದಲ್ಲಿ ಜಂಗಮಸಂಬಂಧವ ಮಾಡಿಕೊಂಡು ಜಂಗಮಭಕ್ತಿಯ ಮಾಡುವಂಥದನು, ಕಂಡೆ-ಅರೆದೆನು, ಪ್ರಸಾದವ-ನಿಃಕಲಬ್ರಹದ ನಿತ್ಯತ್ವವೇ ಪ್ರಸಾದವಾಗಿ ಬಂದಿರ್ಪುದೆಂದರಿದು ಆತ್ಮಾಂಗದಲ್ಲಿ ಪ್ರಸಾದಸಂಬಂಧವ ಮಾಡಿಕೊಂಡು ಪ್ರಸಾದಸೇವನೆಯ ಮಾಡುವಂಥದನು, ಕಂಡೆ-ಅರೆದೆನು.

ಇಂತೀ-ಈ ಪ್ರಕಾರದ ದೆಸೆಯಿಂದ, ಚತುರ್ವಿಧಸಂಪನ್ನನಾದೆ ಕಾಣಾ-ತನುವಿನಲ್ಲಿ ಗುರು ಮನದಲ್ಲಿ ಲಿಂಗ ಪ್ರಾಣದಲ್ಲಿ ಜಂಗಮ [೧]ಆತ್ಮಾಂಗ[೧]ದಲ್ಲಿ ಪ್ರಸಾದಸಂಬಂಧವ ಮಾಡಿಕೊಂಡು ಗುರುಭಕ್ತಿ, ಲಿಂಗಪವೂಜೆ ಜಂಗಮದಾಸೋಹ ಪ್ರಸಾದಸೇವನೆಯ ಮಾಡುವಲ್ಲಿ, ಸಂಪನ್ನನಾದೆ-ಲೋಲುಪ್ತಿ ಉಳ್ಳಾತನಾದೆನು, ಕಾಣಾ-ಕಂಡಾ, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

....

೧+೧ ಆತ್ಮ (ಕ).

III -

೧+೧ ಹೆ(ಟ, ಡ).

....

ಸೋಹೆಗೊಂಡು–ಮಾರ್ಗವಿಡಿದು ಹೋಗಿ.

IV –

ಭಕ್ತಾದಿ ಐಕ್ಯಾಂತ ಪರಿಯಂತರ ನಡೆದು, ಸತ್ತುಚಿತ್ತಾನಂದನಿತ್ಯಾತ್ಮಕವಾದ ಪ್ರಸಾದವ ಕಂಡೆನೆಂಬುದೀ ವಚನದರ್ಥ.

ಪ್ರಸಾದಿಯ ಭಕ್ತಸ್ಥಲ

I –

ಪ್ರಸಾದಿಯ ಭಕ್ತಸ್ಥಲ–ಪ್ರಸಾದಿಸ್ಥಲದೊಳಗಣ ಭಕ್ತಸ್ಥಲದಾಚರಣೆಯನ್ನು ನಿರೂಪಿಸುತ್ತಿಹರು.

೭೮೧

ಸಜ್ಜನ ಶರಣರ ಕಂಡು ಎನ್ನ ಮನ ಉಬ್ಬಿತ್ತು ನೋಡಿರಯ್ಯಾ! ಶ್ರೀಗುರುಪಾದವ ಹಿಡಿದು ಪಾವನ[1]ವಾ[1]ದೆನಯ್ಯಾ! ಪಾದೋದಕ ಪ್ರಸಾದದಿಂದ ಭವಗೆಟ್ಟೆನು, ಕೂಡಲಸಂಗಮದೇವಾ.

I –

ಸಜ್ಜನ ಶರಣರ–ಪಂಚಮಹಾತಕಂಗಳನು ಬಿಟ್ಟು ಪಂಚಾಚಾರವಿಡಿದಾಚರಿಸುವಂಥ ಪರಮನಿರ್ಜರರಾದ ಶಿವಶರಣರ, ಕಂಡು–ನೋಡಿ, ಎನ್ನ ಮನ–ಎನ್ನ ಚಿತ್ತವು, ಒಂದುಹೊರೆ ಎರಡುಹೊರೆ ಮೂರು ಹೊರೆ ನಾಲ್ಕು ಹೊರೆ ಉಬ್ಬಿತ್ತು–ಹೆಚ್ಚಿತ್ತು, ನೋಡಿರಯ್ಯಾ–ಕಂಡಿರಯ್ಯಾ, ಶ್ರೀಗುರುಪಾದವ ಹಿಡಿದು–ಶ್ರೀಗುರುನಾಥನ ಪಾದಕಮಲಸ್ವರೂಪವಾದ ಇಷ್ಟಲಿಂಗವನ್ನು ಅಂಗದಲ್ಲಿ ಧೃಢವಿಡಿದು, ಪಾವನವಾದೆನಯ್ಯಾ–ಪವಿತ್ರಸ್ವರೂಪವಾದೆನಯ್ಯಾ, ಪಾದೋದಕ ಪ್ರಸಾದದಿಂದ–ಪಾದೋದಕ ಪ್ರಸಾದವನ್ನು ಪಡೆದನುಭವಿಸುವುದರಿಂದ, ಭವಗೆಟ್ಟೆನು–ಉತ್ಪತ್ಯವ ನಷ್ಟವ ಮಾಡಿಕೊಂಡೆನು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

IV –

1–1 ನಾ (ತ).

....

ಜ್ಞಾನಾನಂದವಾದ ಜಂಗಮವ ಕಂಡು ಮನ ಉಬ್ಬಿತ್ತು. ಅವರ ಪಾದೋದಕ ಪ್ರಸಾದ ದಿಂದ ಭುವಗೆಟ್ಟೆನೆಂಬುದೀ ವಚನದರ್ಥ.

೭೮೨

ಕಿವಿಯ ಸೂತಕ ಹೋಯಿತ್ತು ಸದ್ಗುರುವಿನ ವಚನದಿಂದ; ಕಂಗಳ ಸೂತಕ ಹೋಯಿತ್ತು ಸದ್ಭಕ್ತರ ಕಂಡೆನಾಗಿ; [1]ಕೈಯ[1] ಸೂತಕ ಹೋಯಿತ್ತು ನಿಮ್ಮ [2]ಶ್ರೀ[2]ಚರಣವ ಮುಟ್ಟಿದೆನಾಗಿ; ಬಾಯ ಸೂತಕ ಹೋಯಿತ್ತು ನಿಮ್ಮ ಒಕ್ಕುದ ಕೊಂಡೆನಾಗಿ; ನಾನಾ ಸೂತಕ ಹೋಯಿತ್ತು ನಿಮ್ಮ ಶರಣರ ಅನುಭಾವಿಯಾಗಿ, ಕೂಡಲಸಂಗಮದೇವ ಕೇಳಯ್ಯಾ, ಎನ್ನ ಮನದ ಸೂತಕ ಹೋಯಿತ್ತು ನೀವಿಲ್ಲದಿ[3]ಲ್ಲವೆಂದ[3]ಜಿದೆನಾಗಿ.

I –

ಕಿವಿಯ ಸೂತಕ ಹೋಯಿತ್ತು ಸದ್ಗುರುವಿನ ವಚನದಿಂದ: ಸದ್ಗುರುವಿನ ವಚನದಿಂದ [ಸತ್–] ಲೇಸಾದ, [ಗುರುವಿನ ವಚನದಿಂದ–]ಶ್ರೀಗುನಾಥನು ಅನಾಹತ ಕರ್ಣದ್ವಾರಂಗಳಲ್ಲಿ ಶಿವಷಡಕ್ಷರಮಂತ್ರವನ್ನು ಉಪದೇಶಿಸುವುದರಿಂದ, ಕಿವಿಯ ಸೂತಕ ಹೋಯಿತ್ತು–ಹಾಳುಹರಟೆ ಸ್ಮರಲೀಲಾಪದ್ಯ ಕಾಳಗದ ವಾರ್ತೆ ಮೊದಲಾದವನ್ನು ಕೇಳುವಂಥ ಭಿನ್ನಶ್ರವಣ ನಷ್ಟವಾಗಿ ಹೋಗಿ ಶಿವಶಾಸ್ತ್ರ ಶಿವಾಗಮ ಶಿವಪುರಾಣ ಆದ್ಯರ ವಚನ ಮೊದಲಾದವನ್ನು ಕೇಳುವಂಥ ಶಿವಶ್ರವಣವಾಗಿ ಅಳವಟ್ಟಿತ್ತು.

ಕಂಗಳ ಸೂತಕ ಹೋಯಿತ್ತು ಸದ್ಭಕ್ತರ ಕಂಡೆನಾಗಿ: [ಸದ್ಭಕ್ತರ–] "ಲಿಂಗಭಕ್ತಾಶ್ಚ ಜಂಗಮ" ಎಂಬ ಲಿಂಗಭಕ್ತರಾದ ಜ್ಞಾನಜಂಗಮ ಮೂರ್ತಿಗಳನು, ಕಂಡೆನಾಗಿ–ದರುಶನವಾದೆನಾಗಿ, ಕಂಗಳ ಸೂತಕ ಹೋಯಿತ್ತು–ಸ್ತ್ರೀಯರ ಹಾವಭಾವವಿಲಾಸ ವಿಭ್ರಮಗಳನು ನಿರೀಕ್ಷಣೆಯ ಮಾಡುವಂಥ ಭಿನ್ನದೃಷ್ಟಿಯು ನಷ್ಟವಾಗಿ ಹೋಗಿ ಲಿಂಗಪೂಜೆಯ ಮಾಡಿ ಲಿಂಗದ ನಿರೀಕ್ಷಣೆಯ ಮಾಡುವಂಥ ಸುಜ್ಞಾನ ಚಕ್ಷುವಾಗಿ ಅಳವಟ್ಟಿತ್ತು.

ಕೈಯ ಸೂತಕ ಹೋಯಿತ್ತು ನಿಮ್ಮ ಶ್ರೀಚರಣವ ಮುಟ್ಟಿದೆನಾಗಿ; [ನಿಮ್ಮ ಕಾಂತಿವೆತ್ತ ಪದಕಮಲ ಸ್ವರೂಪವಾದಿಷ್ಟಲಿಂಗವನು ಮುಟ್ಟಿ ಮುಟ್ಟಿ ಆರಾಧಿಸಿದೆನಾಗಿ, ಕೈಯ ಸೂತಕ ಹೋಯಿತ್ತು–ಗಂಗಾಳಬಾರಿಸುವಂಥದು ಎರಡು ಕೈಯಲ್ಲಿ ತಲೆತುರಿಸಿ ಕೊಂಬುವಂಥದು ಕಲ್ಲ ಮೇಲೆ ಕಲ್ಲಿಟ್ಟು ಒಡೆವಂಥದು ಕುಚಮರ್ದನ ಮಾಡುವಂಥ ಕುಚಿತ್ತಹಸ್ತ ನಷ್ಟವಾಗಿ ಹೋಗಿ ಸುಚಿತ್ತಹಸ್ತವಾಗಿ ಅಳವಟ್ಟಿತ್ತು.

ಬಾಯ ಸೂತಕ ಹೋಯಿತ್ತು ನಿಮ್ಮ ಒಕ್ಕುದ ಕೊಂಡೆನಾಗಿ :[ನಿಮ್ಮ ಒಕ್ಕುವ ಕೊಂಡೆನಾಗಿ–] ನಿಮ್ಮ ಒಕ್ಕು ಮಿಕ್ಕ ಪ್ರಸಾದವನ್ನು ಪಡೆದನುಭವಿಸಿದೆನಾಗಿ, ಬಾಯಸೂತಕ ಹೋಯಿತ್ತು–ಷಡ್ರುಚಿಗಳಲ್ಲಿ ಎರಕವಾಗಿರುವ ಜಿಹ್ವಾಲಂಪಟತ್ವವು ನಷ್ಟವಾಗಿ ಹೋಗಿ ಶಿವಸುಖಪ್ರಸನ್ನತೆ ಪ್ರಸಾದವನ್ನು ಸ್ವೀಕರಿಸುವಂಥ ಶಿವಾಪೇಕ್ಷೆಯೆಂಬ ರಸನೆಯಾಗಿ ಅಳವಟ್ಟಿತ್ತು.

ನಾನಾ ಸೂತಕ ಹೋಯಿತ್ತು ನಿಮ್ಮ ಶರಣರ ಅನುಭಾವಿಯಾಗಿ : [ನಿಮ್ಮ ಶರಣರ ಅನುಭಾವಿಯಾಗಿ–] ನಿಮ್ಮ ತ್ರಿವಿಧಲಿಂಗಾನುಭಾವಿಗಳಾದ ಶಿವಶರಣರ ಶಿವಾನುಭಾವವನ್ನು ಬೆಸೆಗೊಂಡು ಹೇಳುವುದರಿಂದ, ನಾನಾ ಸೂತಕ ಹೋಯಿತ್ತು–ಕಿವಿಸೂತಕ ಬಾಯಿಸೂತಕ ಕಂಗಳಸೂತಕ ಕೈಯ ಸೂತಕ ಮೊದಲಾದ ಹಲವು ಸಂಕಲ್ಪಂಗಳು ನಷ್ಟವಾಗಿ ಹೋದವು.

ಕೂಡಲಸಂಗಮದೇವ–ಎಲೆ ಪರಶಿವಲಿಂಗವೆ, ಕೇಳಯ್ಯಾ–ಆಲಿಸಯ್ಯಾ, ನಿವಲ್ಲದಿಲ್ಲೆಂದಱಿದೆನಾಗಿ ಎನ್ನ ಮನದ ಸೂತಕ ಹೋಯಿತ್ತು: [ಎನ್ನ ಮನದ ಸೂತಕ ಹೋಯಿತ್ತು–] ಮನವು ಹಲವು ನೆನಹು ಹಲವು ಭಾಷೆ ಹಲವು ವರ್ತನೆಯೊಡನೆ ಕೂಡಿ ಚರಿಸುವಂಥ ಮನದ ವರ್ತನೆಯು ನಷ್ಟವಾಗಿ ಹೋಗಿ ಉನ್ಮನಿಯ ಮನಸ್ಸಾಗಿ ಅಳವಟ್ಟಿತ್ತು. ನೀವಲ್ಲದೆ–ಪರಶಿವಲಿಂಗವಲ್ಲದೆ, ಇಲ್ಲವೆಂದು–ಅತಃಪರ ಮತ್ತೊಂದು ದೈವ ಉಂಟಾಗಿಲ್ಲವೆಂದು, ಅಱಿದೆನಾಗಿ–ತಿಳಿದೆನಾಗಿ,

....

೧–೧ ಸಂ (ಕ, ಗ).

III– –

2–2 x (ಟ, ಡ).

....

ಕ್ರಿಯಾಚಾರದಲ್ಲಿ ಪ್ರವರ್ತಿಸಿ ಶ್ರೀಗುರುದೇವನ ವಾಕ್‌ಜ್ಞಾನಾನುಭಾವಮಂತ್ರೋಪದೇಶದಿಂದ ಎನ್ನ ಶ್ರೋತ್ರಕ್ಕೆ ಶಬ್ದಾದಿ ವಾಕ್ಯದ ಸೂತಕನಿವೃತ್ತಿಯಾಯಿತ್ತೆಂಬುದೀಗ ಕಿವಿಯ ಸೂತಕ ಹೋಯಿತ್ತು ಸದ್ಗುರುವಿನ ವಚನದಿಂದ ಎಂಬ ಶಬ್ದಕ್ಕರ್ಥ. ಪರಶಿವಲಿಂಗಸ್ವರೂಪವಾದ ಶರಣರ ದರ್ಶನದಿಂದ ಎನ್ನ ನೇತ್ರಕ್ಕೆ ತಟ್ಟುವ ರೂಪಾದಿ ಪದಾರ್ಥದ ಸೂತಕನಿವೃತ್ತಿಯಾಗಿ ಲಿಂಗಕ್ಕೆ ಸಮರ್ಪಣೆಯಾಯಿತ್ತೆಂಬುದೀಗ, ಕಂಗಳ ಸೂತಕ ಹೋಯಿತ್ತು ಸದ್ಭಕ್ತರ ಕಂಡೆನಾಗಿ ಎಂಬ ಶಬ್ದಕ್ಕರ್ಥ.

ಕೂಡಲಸಂಗಮದೇವಾ ಎಲೆ ಪರಶಿವಲಿಂಗವೆ, ನಿಮ್ಮ ಪಾದಕಮಲ ಸ್ವರೂಪಾದಿ ಇಷ್ಟಲಿಂಗವನು ಗುರೂಪದೇಶದಿಂದ ಕರಸ್ಥಲದಲ್ಲಿ ಸಂಬಂಧಿಸಿಕೊಂಡೆನಾಗಿ ಎನ್ನ ಕರಮುಟ್ಟಿ ಮಾಡುವ ಕ್ರೀಗಳೆಲ್ಲವೂ ಲಿಂಗಕ್ರೀಗಳಾದುವೆಂಬುದೀಗ, ಕೈಯಸೂತಕ ಹೋಯಿತ್ತು ನಿಮ್ಮ ಚರಣವ ಮುಟ್ಟಿದೆನಾಗಿ ಎಂಬ ಶಬ್ದಕ್ಕರ್ಥ.

ಸುಜ್ಞಾನಸ್ವರೂಪಾದ ಜಂಗಮಪ್ರಸಾದವ ಸ್ವೀಕರಿಸಿ ಎನ್ನ ಜಿಹ್ವಾಲಂಪಟಸೂತಕ ನಿವೃತ್ತಿಯಾಯಿತ್ತೆಂಬುದೀಗ, ಬಾಯ ಸೂತಕ ಹೋಯಿತ್ತು ನಿಮ್ಮ ಒಕ್ಕುದ ಕೊಂಡೆನಾಗಿ ಎಂಬ ಶಬ್ದಕ್ಕರ್ಥ. ತ್ರಿವಿಧಲಿಂಗಾನುಭಾವಿಗಳ ವಾಕ್‌ಜ್ಞಾನಾನುಭಾವದಿಂದ ಎನ್ನ ಸರ್ವಾಂಗಸೂತಕ ನಿವೃತ್ತಿಯಾಯಿತ್ತೆಂಬುದೀಗ ನಾನಾ ಸೂತಕ ಹೋಯತ್ತು ನಿಮ್ಮ ಶರಣರನುಭಾವಿಯಾಗಿ ಎಂಬ ಶಬ್ದಕ್ಕರ್ಥ. ಲಿಂಗವೇ ತಾನೆಂದು ತಿಳಿದ ಕಾರಣ ಎನ್ನ ಮನಸಿನ, ಸಂಕಲ್ಪವಿಕಲ್ಪನಿವೃತ್ತಿಯಾಯಿತ್ತು ಎಂಬುದೀಗ ಎನ್ನ ಮನದ ಸೂತಕ ಹೋಯಿತ್ತು ನೀವಲ್ಲದಿಲ್ಲವೆಂದಱಿದೆಯಾಗಿ ಕೇಳಯ್ಯ ಎಂಬ ಶಬ್ದಕ್ಕರ್ಥ.

IV –

1–1 ಕಾಯವ (ತ), 2–2 ಲ್ಲೆಂ (ತ).

....

ಪಂಚಭೌತಿಕಂಗಳೆ ತನುಮನಧನೇಂದ್ರಿಯಂಗಳಾದವು. ಆ ತನುಮನಧನ ಇಂದ್ರಿಯಂಗಳ ವಾಸನೆಯ ಗುರುಲಿಂಗಜಂಗಮದ ದರ್ಶನಸ್ಪರ್ಶನ¹ಅವರ ಪ್ರಸಾದ ಅವರ ಅನುಭಾವದಱಿವು

ಮೊದಲಾದವಱಿಂದ ನೇತಿಮಾಡಿ ಕಳೆದು[2] ತಾನೆಲ್ಲಾ ಲಿಂಗವೆದಱಿದು ಮನದ ಸಂಕಲ್ಪ ಸಂಶಯ ಸೂತಕ ಕಳೆದಿಪ್ಪನು ಶರಣನೆಂಬುದೀ ವಚನದ ತಾತ್ಪರ್ಯಾರ್ಥ.

....

೧=ದ(ತ), ೨+ ಶರಣ (ತ).

೭೮೩

ಲಿಂಗಪ್ರಸಾದಿಗಳಿಲ್ಲದವರ ಸಂಗ ಭಂಗವೆಂದುದು ಗುರುವಚನ, ಲಿಂಗಪ್ರಸಾದಿಗಳಿಲ್ಲದವರ ಸಂಗ ಪಂಚಮಹಾಪಾತಕವೆಂದುದು ಲಿಂಗವಚನ. [1]ಗ್ರಂಥ॥[1] ಅಸನೇ ಯಾನೇ ಸಂಪರ್ಕೇ ಸಹಭೋಜನೇ। ಸಂಚರಂತಿ ಮಹಾಘೋರೇ ನರಕೇ ಕಾಲಮಕ್ಷಯಂ॥ [2]ಎ[2]ಂದುದಾಗಿ ಕೂಡಲಸಂಗಮದೇವಾ ನಿಮ್ಮ ಶರಣರಿಂಗೆ ಶರಣೆಂದು ಶುದ್ಧನಯ್ಯ.

I –

ಲಿಂಗಪ್ರಸಾದಿಗಳಲ್ಲಿದವರ–ಸಕಲಪದಾರ್ಥವನ್ನು ಲಿಂಗಕ್ಕರ್ಪಿಸಿ ಆ ಲಿಂಗಪ್ರಸಾದಸೇವನೆ ಇಲ್ಲದವರ, ಸಂಗ–ಸಂಪರ್ಕವು, ಭಂಗವೆಂದುದು–ಭವ ಭಂಗದ ಕೊರಕೆಯೆಂದು ಹೇಳುತ್ತಿಹುದು, ಗುರುವಚನ–ಗುರುವಾಕ್ಯವು, ಲಿಂಗಪ್ರಸಾದಿಗಳಲ್ಲದವರ–ಸಕಲಪದಾರ್ಥವನ್ನು ಲಿಂಗಕ್ಕರ್ಪಿಸಿ ಆ ಲಿಂಗಪ್ರಸಾದ ಸೇವನೆ ಇಲ್ಲದವರುಗಳ, ಸಂಗ–ಅವರ[1]ಸಂಪರ್ಕವು[1], ಪಂಚ ಮಹಾಪಾತಕವೆಂದುದು–ಐದನೆಯ ಪಾತಕವೆಂದು ಹೇಳುತ್ತಿಹುದು. ಲಿಂಗವಚನ–ಹರ ವಾಕ್ಯವು.

ಗ್ರಂಥ–ಗುರುವಾಕ್ಯಕ್ಕೆ ಸದೃಶವಾಗಿ ಹರವಾಕ್ಯವ ನಿರೂಪಿಸುತ್ತಿಹರು, ಆಸನೇ–ಸಕಲ ಪದಾರ್ಥವನ್ನು ಲಿಂಗಕ್ಕರ್ಪಿಸಿ ಆ ಲಿಂಗಪ್ರಸಾದವನನುಭವಿಸುವಂಥ ಶಿವಭಕ್ತರುಗಳೂ ಸಕಲ ಪದಾರ್ಥಂಗಳನು ಲಿಂಗಕ್ಕರ್ಪಿಸದೇ ಆತ್ಮಾರ್ಪಣವಾಗಿ ಅನುಭವಿಸುವಂಥ ಭೂತಾತ್ಮರುಗಳೂ ಒಂದೇ ಗರ್ದುಗೆಯ ಮೇಲೆ ಕುಳಿತುಕೊಂಡರೆ, ಶಯನೇ–ಅವರೂ ತಾವೂ ಒಂದೇ ಹಾಸಿಗೆಯ ಮೇಲೆ ಪವಡಿಸಿದರೆ, ಯಾನೇ–ಅವರೂ ತಾವೂ ಒಂದೇ ವಾಹನಂಗಳನು ಏರಿದರೆ, ಸಂಪರ್ಕೇ–ಅವರೂ ತಾವೂ ಒಂದಾಗಿ ಕೈಸರಸರ ಮೈಸರಸವಾಡಿದರೆ, ಸಹಭೋಜನೇ–ಅವರೂ ತಾವೂ ಒಂದೇ ಪಂಕ್ತಿಯಲ್ಲಿ ಕುಳಿತುಕೊಂಡನುಭವಿಸಿದರೆ, ಸಂಚರಂತಿ–ಅವರೂ ತಾವೂ ಒಂದೊಂದಿಗೆ ದಾರಿ ಬಟ್ಟೆಗಳನ್ನು ಗಮಿಸಿದರೆ, ಮಹಾ–ದೊಡ್ಡಿತ್ತಾದ, ಘೋರೇ–ಭಯಂಕರವಾದ, ನರಕೇ–ನಿರಯವು, ಕಾಲು–ಎಲ್ಲಾ ಕಾಲದಲ್ಲಿಯೂ, ಅಕ್ಷಯಂ–ಕೇಡಿಲ್ಲದೆ ಉಂಟಾಗುತ್ತಿಹುದು, ಎಂದುದಾಗಿ–ಹೀಗೆಂದು ಈಶ್ವರನ ವಾಕ್ಯದಲ್ಲಿ ಹೇಳುತ್ತಿಹುದಾದ ಕಾರಣ, ಕೂಡಲಸಂಗಮದೇವಾ–ಎಲೆ ಪರಶಿವ ಲಿಂಗವೆ, ನಿಮ್ಮ ಶರಣರಿಗೆ–ನಿಮ್ಮ ಶಿವಶರಣರಿಗೆ, ಶರಣೆಂದು–ನಮಸ್ಕಾರವೆಂದು ನಮಸ್ಕರಿಸಿ, ಶುದ್ಧನಯ್ಯ–ಕಡಲೆಮೆದ್ದು ಕೈತೊಳೆಯಲಿಲ್ಲವೆಂಬೋಪಾದಿಯಲ್ಲಿ ನಿರ್ಮಲಸ್ವರೂಪನಾಗಿಪ್ಪೆನಯ್ಯ.

....

೧–೧ ತತ್ಸಂಗವು(ಗ)

IV –

1–1 ಟೀ। ಸಾಕ್ಷಿ (ತ), 2–2 ಇತಂ (ತ).

....

ಪರಂಜ್ಯೋತಿಲಿಂಗದ ಪ್ರಸಾದವ ಕೊಳ್ಳದವರ ಸಂಗಡ ಕುಳ್ಳಿರಲಾಗದು, ಮಾತನಾಡಲಾಗದು, ಅವರ ಕೂಡ ಉಣಲಾಗದು, ಉಂಡರೆ ಮಹಾಘೋರನರಕವೆಂದಿತ್ತು ಗುರುವಚನವೆಂಬುದೀ ವಚನದರ್ಥ.

೭೮೪

ಸೈದಾನವ ತಂದು ನೀಡುವೆನಲ್ಲದೆ ಸಂಬಂ[1]ಧಿ[1] ನಾನಲ್ಲವಯ್ಯ. ಕರ್ತಂಗೆ ಭೃತ್ಯಾಚಾರವ ಮಾಡಿ ಒಕ್ಕುದ ಕೊಂಡಿಪ್ಪೆನಯ್ಯ. ಭೋಗಾದಿ ಭೋಗವ ಸಮಾನವಾಗಿ ಭೋಗಿಸಲು ಅಘೋರ ನರಕದಲ್ಲಿಕ್ಕುವ ಕೂಡಲಸಂಗಮದೇವ.

I –

ಸೈದಾನವ ತಂದು–ಅಕ್ಕಿ ಬೇಳೆ ಬೆಲ್ಲ ಕಣಕ ತುಪ್ಪ ಸಕ್ಕರಿ ಮೊದಲಾದುವನ್ನು ಆಗುಮಾಡಿಕೊಂಡು ಬಂದು, ನೀಡುವೆನಲ್ಲದೆ–ಪಾಕವ ಮಾಡಿ ಜಂಗಮಮೂರ್ತಿಗಳಿಗೆ ಎಡೆಮಾಡುವೆನಲ್ಲದೆ, ಸಂಬಂಧಿ ನಾನಲ್ಲವಯ್ಯ–ನಾನು ಭಕ್ತಿಯ ಮಾಡುತ್ತೈದೇನಿ ಇವರು ಕೈಕೊಳ್ಳುತ್ತೈದಾರೆ, ಸಲುವ ಪದಾರ್ಥವೆನ್ನದು, ಅದಕೆ ಎನ್ನಿಂದ ಅವರಿಗೆ ತೃಪ್ತಿಯಾಗುತೈತೆಂಬ ಅಹಂಕಾರವ ನಾ ತಿಳಿಯೆನಯ್ಯ, ಕರ್ತಂಗೆ–ಒಡೆಯರಾದ ಜಂಗಮಮೂರ್ತಿಗಳಿಗೆ, ಭೃತ್ಯಾಚಾರವ ಮಾಡಿ–ಭಯಭಕ್ತಿ ಕಿಂಕುರ್ವಾಣದಿಂದ ಸಕಲಪದಾರ್ಥವನ್ನು ಕೊಟ್ಟು ಭಕ್ತಿಯ ಮಾಡಿ, ಒಕ್ಕುದಕೊಂಡಿಪ್ಪನೆಯ್ಯ–ಅವರೊಕ್ಕು ಮಿಕ್ಕ ಪ್ರಸಾದವನ್ನನುಭವಿಸಿಕೊಂಡಿರುವೆನಯ್ಯ.

ಭೋಗಾದಿಭೋಗವ–ಅಷ್ಟಭೋಗ ಮೊದಲಾದ ಅನೇಕ ಉಪಭೋಗಂಗಳನು, ಸಮಾನವಾಗಿ–ಒಂದೇ ಸಮಾನವಾಗಿ, ಭೋಗಿಸಲು–ಅನುಭವಿಸಲು, ಕೂಡಲಸಂಗಮದೇವ–ಪರಶಿವಲಿಂಗವು, ಅಘೋರನರಕದಲ್ಲಿಕ್ಕುವ–ಭಯಂಕರವಾದ ನಿರಯದಲ್ಲಿ ಹಾಕಿಬಿಡುತ್ತಿಹನು.

III –

1–1 ಧ (ಟ, ಡ).

....

ಸಂಬಂಧ ನಾನಲ್ಲಯ್ಯ–ಗುರುಲಿಂಗಜಂಗಮದ ಭಕ್ತಿಸಂಬಂಧವುಳ್ಳಾತನು ನಾನಲ್ಲವಯ್ಯ.

೭೮೫

ಶುದ್ಧವ ಗುರುವಿಂಗೆ ಕೊಟ್ಟು ಶುದ್ಧವಾಯಿತ್ತೆಂಬೆನಯ್ಯ, ಸಿದ್ಧವ ಲಿಂಗಕ್ಕೆ ಕೊಟ್ಟು ಸಿದ್ಧವಾಯಿತ್ತೆಂಬೆನಯ್ಯ, ಪ್ರಸಿದ್ಧವ ಜಂಗಮಕ್ಕೆ ಕೊಟ್ಟು ಪ್ರಸಿದ್ಧವಾಯಿತೆಂಬೆನಯ್ಯ, ಗುರುಲಿಂಗಜಂಗಮವ[1]ನು[1] ಏಕತ್ರ[2]ವಾಗಿ ಕಾಣಲಜೆಯದಿದ್ದಡೆ ಶುದ್ಧ ಸಿದ್ಧಪ್ರಸಿದ್ಧ ಒಡನೆ ನಗುತ್ತೈದಾವೆ! ತನುಮನಧನವ ನಿವೇದಿಸಲಜೆಯೆನಾಗಿ ಕೂಡಲಸಂಗಮದೇವ, ಒಲಿ ಎಂದಡೆಂತೊಲಿವ?

....

2+ಯ (ಕ, ಗ).

I –

ಶುದ್ಧವ ಗುರುವಿಂಗೆ ಕೊಟ್ಟು–ತನುವಿನಲ್ಲಿ ಗುರುಸಂಬಂಧವ ಮಾಡಿಕೊಂಡು ಅಂಗ ಆಪ್ತ ಸ್ಥಾನ ಸದ್ಭಾವವೆಂಬ ಚತುರ್ವಿಧಭಕ್ತಿಯ ಮಾಡುವ ನೆವದಿಂದ ತನುಪದಾರ್ಥವ ಗುರುವಿಂಗೆ ಸಮರ್ಪಣೆಯ ಮಾಡಿ, ಶುದ್ಧವಾಯಿತ್ತೆಂಬೆನಯ್ಯ, ಶುದ್ಧಪ್ರಸಾದ ಸ್ವರೂಪವಾದ ಗುರುವಿನಲ್ಲಿ ಕೂಡಿ ಗುರು ಸ್ವರೂಪವಾಯಿತ್ತೆಂದು ಹೇಳುವೆನಯ್ಯ.

ಸಿದ್ಧವ ಲಿಂಗಕ್ಕೆ ಕೊಟ್ಟು–ಮನಪದಾರ್ಥವ ಲಿಂಗಕ್ಕೆ ಕೊಟ್ಟು ಮನದಲ್ಲಿ ಲಿಂಗಸಂಬಂಧವ ಮಾಡಿಕೊಂಡು ಅಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳ ಮಾಡುವ ನೆವದಿಂದ ಮನಪದಾರ್ಥವ ಲಿಂಗಕ್ಕೆ ಸಮರ್ಪಣೆಯ ಮಾಡಿ, ಸಿದ್ಧವಾಯಿತ್ತೆಂದೆನಯ್ಯ–ಆ ಲಿಂಗವರ್ಪಿಸಿಕೊಂಡ ಮನವೆಲ್ಲವೂ ಲಿಂಗದಲ್ಲಿ ಕೂಡಿ ಲಿಂಗಸ್ವರೂಪವಾಯಿತ್ತೆಂದು ಹೇಳುವೆನಯ್ಯ.

ಪ್ರಸಿದ್ಧವ–ಪ್ರಾಣಾದಿದ್ರವ್ಯಪದಾರ್ಥವನು, ಜಂಗಮಕ್ಕೆ ಕೊಟ್ಟು–ಪ್ರಾಣಜ್ಞಾನದಲ್ಲಿ ಜಂಗಮಸಂಬಂಧವ ಮಾಡಿಕೊಂಡು ಅನ್ನೋದಕ ಸಜ್ಜೆ ಶಿವಧಾರ ಕೊಡೆ ಪಾದರಕ್ಷೆ ವಸ್ತ್ರ ಕಪ್ಪಟಂಗಳನು ಕೊಟ್ಟು ಭಕ್ತಿಯ ಮಾಡುವ ನೆವದಿಂದ ಧನಪದಾರ್ಥವನ್ನು ಜಂಗಮಕ್ಕೆ ಸಮರ್ಪಣೆಯ ಮಾಡಿ, ಪ್ರಸಿದ್ಧವಾಯಿತ್ತೆಂಬೆನಯ್ಯ–ಆ ಜಂಗಮವರ್ಪಿಸಿಕೊಂಡ ಪ್ರಾಣಾದಿದ್ರವ್ಯಪದಾರ್ಥವೆಲ್ಲವೂ ಜಂಗಮದಲ್ಲಿ ಕೂಡಿ ಜಂಗಮಸ್ವರೂಪವಾಯಿತ್ತೆಂದು ಹೇಳುವೆನಯ್ಯ.

ಗುರುಲಿಂಗಜಂಗಮವನು–ಶುದ್ಧಸಿದ್ಧಪ್ರಸಿದ್ಧಸ್ವರೂಪವಾದ ಗುರುಲಿಂಗಜಂಗಮವನು, ಏಕತ್ರ೧ವಾಗಿ ಕಾಣಲರಿಯದಿದ್ದಡೆ–ಒಂದೇ ಸ್ವರೂಪವೆಂದು ತಿಳಿಯಬೇಕು; ತಿಳಿಯದಿದ್ದರೆ, [ಶುದ್ಧಸಿದ್ಧಪ್ರಸಿದ್ಧ–] ಶುದ್ಧಸಿದ್ಧಪ್ರಸಿದ್ಧಸ್ವರೂಪವಾದ ಗುರುಲಿಂಗಜಂಗಮವು, ಒಡನೆ ನಗುತ್ತೈದಾವೆ–ಅಂಗ ಪ್ರಾಣಾತ್ಮಾಂಗದಲ್ಲಿ ನೆಲೆಗೊಳ್ಳದೆ ಗಹಗಹಿಸಿ ಹಾಸ್ಯೋಪಮಾನವ ಮಾಡುತ್ತೈದಾವೆ.

ತನುಮನಧನವ ನಿವೇದಿಸಲರಿಯೆನಾಗಿ–ತನುಮನಧನವ ಸಮರ್ಪಣೆ ಮಾಡುವಂಥದನು ತಿಳಿಯೆನಾಗಿ, ಕೂಡಲಸಂಗಮದೇವ–ಪರಶಿವಲಿಂಗವು, ಒಲಿಯೆಂದಡೆ–ಪ್ರಸನ್ನವಾಗಿ ನಿಜಮೋಕ್ಷವನ್ನು ಕರುಣಿಸಿಕೊಂಡುಯೆಂದು ಹೇಳಿದರೆ, ಎಂತೊಲಿವ–ಹೇಂಗೆ ಒಲಿದು ನಿಜಮೋಕ್ಷವನ್ನು ಕರುಣಿಸಿ ಕೊಟ್ಟಾನು? ಕೊಡಲರಿಯನು.

....

೧+ಯ (ಕ, ಗ).

III –

ಶುದ್ಧವ ಗುರುವಿಂಗೆ ಕೊಟ್ಟು ಶುದ್ಧವಾಯಿತ್ತೆಂಬೆನಯ್ಯ–ಅಂಗ ಆಪ್ತ ಸ್ಥಾನ ಸದ್ಭಾವವೆಂಬ ಚತುರ್ವಿಧಭಕ್ತಿಯಿಂದ ತನುಪದಾರ್ಥವನು ಗುರುವಿಂಗೆ ಸಮರ್ಪಿಸಿ ಎನ್ನ ತನುಪವಿತ್ರವಾಯಿತ್ತು೨ ಸಿದ್ಧವ ಲಿಂಗಕ್ಕೆ ಕೊಟ್ಟು ಸಿದ್ಧವಾಯಿತೆಂಬೆನಯ್ಯ–ಮಂತ್ರ ಧ್ಯಾನ ಜಪ ಸ್ತೋತ್ರಾದಿಗಳಿಂದ ಎನ್ನ ಮನಪದಾರ್ಥವನು ಲಿಂಗಕ್ಕೆ ಸಮರ್ಪಿಸಿ ಮನಸ್ಸು ಮಂತ್ರಸ್ವರೂಪವಾಯಿತ್ತು. ಪ್ರಸಿದ್ಧವ ಜಂಗಮಕ್ಕೆ

ಕೊಟ್ಟು ಪ್ರಸಿದ್ಧವಾಯಿತ್ತೆಂಬೆನಯ್ಯ-ಅನ್ನಾಚ್ಛಾದನ ಅಲಂಕಾರಾದಿ ವಸ್ತುಗಳನು ನಿರ್ವಂಚನೆಯಿಂದೆ ಜಂಗಮಕ್ಕೆ ಸಮರ್ಪಿಸಿದೆನಾಗಿ ಎನ್ನ ಪ್ರಾಣವು ಪವಿತ್ರವಾಯಿತ್ತೆಂಬುದರ್ಥ. ಶುದ್ಧ ಸಿದ್ಧ ಪ್ರಸಿದ್ಧ-ಗುರುಲಿಂಗಜಂಗಮವು, ಒಡನೆ ಕೂಡೆ ನಗುತ್ತೈದಾವೆ-ಹಳಿದು ಹಾಸ್ಯವ ಮಾಡುತ್ತೈದಾವೆ.

....

೨ + ಎಂಬುದರ್ಥ (ಟ); ಎಂಬ ಶಬ್ದಕ್ಕರ್ಥ (ಡ).

IV –

೧-೧ x (ಡ).

....

ಶುದ್ಧವೆಂದರೆ ಗುರು, ಸಿದ್ಧವೆಂದರೆ ಲಿಂಗ, ಪ್ರಸಿದ್ಧವೆಂದರೆ ಜಂಗಮನು, ಅಂತಪ್ಪ ಲಿಂಗತ್ರಯಂಗಳ ಶ್ರೀಗುರು ಅಂಗತ್ರಯಂಗಳಿಗೆ ಸಂಬಂಧವ ಮಾಡಿದಾಗವೆ ಭಕ್ತನ ತನುವೆ ಗುರು, ಮನವೆ ಲಿಂಗ, ಪ್ರಾಣಾದ್ರವ್ಯಂಗಳೆಲ್ಲಾ ಜಂಗಮವಾಯಿತ್ತೆಂಬ ಭೇದವನಱಿದು ಅಭಿನ್ನಭಾವಘಟಿಸಿಪ್ಪ ಭಕ್ತನು, ತನ್ನ ಗುರುರೂಪಾದ ತನುವನೆ ಗುರುವಿಂಗೆ ಸಮರ್ಪಿಸಿ ತನು ಗುರುಸ್ವರೂಪವಾಯಿತ್ತೆನಬೇಕು. ಲಿಂಗರೂಪಾದ ಮನವನೆ ಲಿಂಗಕ್ಕರ್ಪಿಸಿ ಮನ ಲಿಂಗವಾಯಿತ್ತೆನಬೇಕು. ಜಂಗಮರೂಪಾದ ಪ್ರಾಣಾದಿದ್ರವ್ಯಂಗಳನೆಲ್ಲವ ಜಂಗಮಕ್ಕರ್ಪಿಸಿ ಪ್ರಾಣಾದಿದ್ರವ್ಯಂಗಳನೆಲ್ಲವ ಜಂಗಮದಾಯಿತ್ತೆನಬೇಕು ಎಂಬುದೀಗ ಶುದ್ಧವ ಗುರುವಿಂಗೆ ಕೊಟ್ಟು ಶುದ್ಧವಾಯಿತ್ತೆಂಬೆನಯ್ಯಾ. ಸಿದ್ಧವ ಲಿಂಗಕ್ಕೆ ಕೊಟ್ಟು ಸಿದ್ಧವಾಯಿತ್ತೆಂಬೆನಯ್ಯಾ, ಪ್ರಸಿದ್ಧವ ಜಂಗಮಕ್ಕೆ ಕೊಟ್ಟು ಪ್ರಸಿದ್ಧವಾಯಿತೆಂಬೆನಯ್ಯ ಎಂಬ ಶಬ್ದಕ್ಕರ್ಥ. ಅಂತು ಲಿಂಗಾಂಗಸಂಬಂಧವಾದಾಗಲೇ ಭಕ್ತನ ತನುಮನಪ್ರಾಣಾದಿದ್ರವ್ಯಂಗಳೆಲ್ಲಾ ಲಿಂಗ ರೂಪಾದ ಭೇದವನರಿದು, ಲಿಂಗರೂಪಾದ ಪದಾರ್ಥಂಗಳ ಲಿಂಗಕ್ಕರ್ಪಿಸಿ ಪ್ರಸಾದವೆಂದು ಗ್ರಹಿಸಿ ಭೇದವಿಲ್ಲದಿರ್ದಡಾತನೆ ಪ್ರಸಾದಸ್ವರೂಪನು. ಅಂತಲ್ಲದೆ ಗುರುಲಿಂಗಜಂಗಮವ ಭಿನ್ನವಿಟ್ಟು ಕಂಡು ತನುಮನಧನವ ಸಮರ್ಪಿಸಿದಾತಂಗೆ ಫಲಪದಂಗಳ ಕೋಯೆಂದು ನುಡಿದು ಕೊಡುತ್ತಿಹರು, ತ್ರಿವಿಧಲಿಂಗಂಗಳು ಭಿನ್ನವಾಗಿಯೆಂಬುದೀಗ, ಗುರುಲಿಂಗಜಂಗಮವನೇಕಾರ್ಥವಾಗಿ ಕಾಣಲಱಿಯದಿರ್ದೊಡೆ ಶುದ್ಧಪ್ರಸಿದ್ಧಪ್ರಸಾದ ಒಡನೆ ನುಡಿವುತ್ತೈದಾದೆ ತನುಮನಧನವ ನಿವೇದಿಸಲಱಿಯೆನಾಗಿಯೆಂಬ ಶಬ್ದಕ್ಕರ್ಥ. ಅಂತು ತ್ರಿವಿಧಲಿಂಗವ ಭಿನ್ನವಿಟ್ಟು ಪದಾರ್ಥವನರ್ಪಿಸಿ, ಶಿವನ ಶಿವತತ್ತ್ವವ ಬೇಡಿದರೆ ಶಿವನ ಕೃಪೆಯಾಗೆನೆಂಬುದೀಗ ಕೂಡಲಸಂಗಮದೇವ ರೊಲಿಯೆಂದರೆಂತೊಲಿವನೆಂಬ ಶಬ್ದಕ್ಕರ್ಥ.

....

೩ ಈ ವಚನ ಮತ್ತು ಟೀಕೆ ೧೬೩೫ನೆಯ ಹಸ್ತಪ್ರತಿಯ ಬಿಡಿಗರಿಯಲ್ಲಿದೆ.

ಪ್ರಸಾದಿಯ ಮಾಹೇಶ್ವರಸ್ಥಲ

I -

ಪ್ರಸಾದಿಯ ಮಾಹೇಶ್ವರಸ್ಥಲ-ಪ್ರಸಾದಿಸ್ಥಲದೊಳಗಣ ಮಾಹೇಶ್ವರಸ್ಥಲದಾಚರಣೆಯನ್ನು ನಿರೂಪಿಸುತ್ತಿಹನು.

೭೮೬

ಒಡಲ ಕಳವಳಕ್ಕೆ, ಬಾಯ ಸವಿಗೆ ಬಯಸಿ ಉಂಡೆನಾದಡೆ ನಿಮ್ಮ ತೊತ್ತಿನ ಮಗ [1]ನಾನಲ್ಲಯ್ಯ[1]! ಬೇ[2]ಡೆ[2]ಬೇ[2]ಡೆ[2], ನಿಮ್ಮ ನಂಬಿದ ಸದ್ಭಕ್ತರ, ಅವರೊಕ್ಕುದನುಂಬೆ ಅವರಂದಂತೆ [3]ನಡವೆ[3]. ಎನ್ನೊಡೆಯ ಕೂಡಲಸಂಗಮದೇವನೊಲ್ಲದವರ ಹಿಡಿದೆನಾದಡೆ ನಿಮ್ಮ ಪಾದದಾಣೆ!

....

2–2 ಡ (ಕ, ಗ)

I -

ಒಡಲ ಕಳವಳಕ್ಕೆ-ದೇಹದ ಜನನಮರಣ ಮೊದಲಾದ ಹಲವು ಹಂಬಲಿಕೆಗೆ, ಬಾಯ ಸವಿಗೆ-ಷಡ್ರುಚಿಗಳಲ್ಲಿ ಎರಕವಾಗಿರುವ ಜಿಹ್ವಾಲಂಪಟತ್ವದ ಪ್ರೀತಿಗೆ, ಬಯಸಿ-ಇಂತಿಂಥ ಪದಾರ್ಥವಾಗಬೇಕೆಂದು ಇಚ್ಛೈಸಿ ಉಂಡೆನಾದಡೆ ಆತ್ಮಾರ್ಪಣವಾಗಿ ಅನುಭವಿಸಿದೆನಾದರೆ, ನಿಮ್ಮ ತೊತ್ತಿನ ಮಗ ನಾನಲ್ಲಯ್ಯ-ನಿಮ್ಮ ಭೃತ್ಯನ ಕುಮಾರ ನಾನಲ್ಲಯ್ಯಾ.

ಬೇಡ ಬೇಡ ಫಲಪದಂಗಳನು ಕರುಣಿಸಿ ಕೊಡಬೇಡ ಕೊಡಬೇಡ, ನಿಮ್ಮ-ಇಷ್ಟಮಹಾಲಿಂಗವನ್ನು, ನಂಬಿದ-ಈ ಲಿಂಗಕ್ಕೆ ಪ್ರಾಣ ಈ ಲಿಂಗಕ್ಕೆ ನಾನೇ ಚಿದಂಗಸ್ವರೂಪನು ಈ ಲಿಂಗವಲ್ಲದೆ ಅನ್ಯದೈವಂಗಳ ಭಜನೆಯ ಮಾಡಬಾರದೆಂದು ವಿಶ್ವಾಸಿಸಿದ, ಸದ್ಭಕ್ತ-"ಲಿಂಗಭಕ್ತಾಶ್ಚ ಜಂಗಮ"ಎಂದು ಲಿಂಗಭಕ್ತರಾದ ಜಂಗಮಮೂರ್ತಿಗಳ, ಅವರೊಕ್ಕುದನುಂಬೆ-ಅವರೊಕ್ಕು ಮಿಕ್ಕ ಪ್ರಸಾದವನ್ನು ಅನುಭವಿಸುವೆನು. ಅವರಂದಂತೆ ನಡೆವೆ-ಅವರು ಹೇಳಿದ ಹಾಂಗೆ ಕೊಟ್ಟು ಭಕ್ತಿಯ ಮಾಡಿಕೊಂಡಾಚರಿಸುವೆನು.

ಎನ್ನೊಡೆಯ-ಎನಗೆ ಕರ್ತೃನಾದ, ಕೂಡಲಸಂಗಮದೇವನ-ಪರಶಿವಲಿಂಗವ, ಒಲ್ಲದವರ-ನಮ್ಮವನೆಂದು ಅಂಗೀಕರಿಸಿದವರ, ಹಿಡಿದೆನಾದಡೆ-ನಮ್ಮವನೆಂದು ಧೃಡವಿಡಿದೆನಾದರೆ, ನಿಮ್ಮ ಪಾದದಾಣೆ-ನಿಮ್ಮ ಪಾದಕಮಲಂಗಳ ಪ್ರತಿಜ್ಞೆಯು.

III -

1–1 ನಲ್ಲ (ಟ, ಡ), 2–2 ಡ (ಟ, ಡ)

....

ಒಡಲ ಕಳವಳಕ್ಕೆ-ಅಂಗದ ವಿಕಳತೆಗೆ, ಬಾಯ ಸವಿಗೆ-ಜಿಹ್ವಾಲಂಪಟಕ್ಕೋಸ್ಕರವಾಗಿ, ನಿಮ್ಮ ತೊತ್ತಿನ ಮಗನಲ್ಲ-ನಿಮಗಂಗವಾದ ಚಿಚ್ಛಕ್ತಿಯ ಚಿತ್ಪುತ್ರನಲ್ಲವು. ನಿಮ್ಮ-ಲಿಂಗವನು, ಬೇಡೆ ಬೇಡೆ-ಸಕಲಪದಾರ್ಥಗಳನು ಯಾಚಿಸೆ, ಯಾಚಿಸೆನು.

IV- -

1–1 ನಲ್ಲ (ತ), 2–2 ಡ (ತ) ಎಂಬೆ(ತ)

ಅಂಗದ ಗುಣದಲ್ಲಿ ಉಂಬುವವನಲ್ಲ. ನಿಮ್ಮ ಶರಣರ ಪ್ರಸಾದವಲ್ಲದೆ ಕೊಳ್ಳೆ. ನಿಮ್ಮಾಣೆಯೆಂಬುದೀ ವಚನದರ್ಥ.

೭೮೭

ಲಿಂಗಮುಖದಿಂದ ಬಂದ ಪ್ರಸಾದವಲ್ಲದೆ ಕೊಂಡೆನಾದಡೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ! ಲಿಂಗಾರ್ಪಿತವಲ್ಲದೆ ಉದಕವ ಮುಕ್ಕುಳಿಸಿದೆನಾದಡೆ ಸಲ್ಲೆನು ನಿಮ್ಮ ಗಣಾಚಾರಕ್ಕಯ್ಯ. ಲಿಂಗಾರ್ಪಿತವಲ್ಲದೆ ಹಲ್ಲುಕಡ್ಡಿಯ ಕೊಂಡೆನಾದೊಡೆ ನಾ ಬಲ್ಲೆ ಮುಂದೆ ಭವಘೋರನರಕವೆಂಬುದ! ನಿಮಗೆತ್ತಿದ ಕರದಲ್ಲಿ ಮತ್ತೊಂದಕ್ಕೆ ಕೈಯಾನೆನು. ಅಳವಱಿಯದೆ ನುಡಿದೆನು. ಕಡೆಮುಟ್ಟಸ[1]ದಿದ್ದಡೆ ತಲೆದಂಡ ತಲೆದಂಡ ಕೂಡಲಸಂಗಮದೇವಾ.

I -

ಲಿಂಗಮುಖದಿಂದ ಬಂದ–ಸಕಲಪದಾರ್ಥವನು ಲಿಂಗಕ್ಕೆ ಸಮರ್ಪಣೆಯ ಮಾಡಿ ಲಿಂಗಮುಖದಿಂದುಳುಮೆಯಾಗಿ ಬಂದಂಥ, ಪ್ರಸಾದವಲ್ಲದೆ–ಲಿಂಗಶೇಷವಲ್ಲದೆ, ಕೊಂಡೆನಾದಡೆ–ತತ್ಪಾನ್ನ ತತ್ತೋದಕಂಗಳನು ಆತ್ಮಾರ್ಪಣವಾಗಿ ಅನುಭವಿಸಿದೆನಾದರೆ, ನಿಮ್ಮಾಣೆ–ನಿಮ್ಮ ಪಾದದ ಮೇಲಣ ಪ್ರತಿಜ್ಞೆಯು, ನಿಮ್ಮ ಪ್ರಮಥರಾಣೆ–ನಿಮ್ಮ ಪ್ರಮಥಗಣಂಗಳ ಪಾದದ ಮೇಲಣ ಪ್ರತಿಜ್ಞೆಯು. ಲಿಂಗಾರ್ಪಿತವಲ್ಲದೆ–ಲಿಂಗಕ್ಕರ್ಪಿಸಿದಲ್ಲದೆ, ಉದಕವ–ಜಲವನು, ಮುಕ್ಕುಳಿಸಿದೆನಾದೊಡೆ–ಗಂಡೂಷಂಗೆಯ್ದೆನಾದರೆ, ನಿಮ್ಮ ಗಣಾಚಾರಕ್ಕೆ–ನಿಮ್ಮ ಶಿವಗಣಂಗಳ ಕವಳಿಗೆಗೆ, ಸಲ್ಲೆನಯ್ಯ–ಸಲುವಳಿಯಾಗೆನಯ್ಯ. ಲಿಂಗಾರ್ಪಿತವಲ್ಲದೆ ಲಿಂಗಕರ್ಪಿಸಿದಲ್ಲದೆ, ಹಲ್ಲು ಕಡ್ಡಿಯ–ದಂತಧಾವನಂಗೆಯ್ವ ಕಾಷ್ಠವನು, ಕೊಂಡೆನಾದೊಡೆ–ಜಿಹ್ವೆಯಲ್ಲಿ ಮಡಗಿಕೊಂಡೆನಾದರೆ, ಮುಂದೆ–ದೇಹಾಂತ್ಯಕ್ಕೆ, ಭವಘೋರ–ಎಲ್ಲಾ ಎಡೆಯಲ್ಲಿ ಹುಟ್ಟಿ ಹುಟ್ಟಿ ಬರುವಂಥ ಭಯಂಕರವಾದ, ನರಕವೆಂಬುದ–ನಿರಯವೆಂಬುದನು, ನಾ ಬಲ್ಲೆ–ನಾ ತಿಳಿದಿರ್ಪೆನು.

ನಿಮಗೆತ್ತಿದ ಕರದಲ್ಲಿ–ನಿಮಗೆ ನಮಸ್ಕರಿಸಿದ ಕರದಲ್ಲಿ, ಮತ್ತೊಂದಕ್ಕೆ ಕೈಯಾನೆನು–ಮತ್ತೊಂದು ದೈವದ ಭಜನೆಯ ಮಾಡಿ ಒಂದು ಫಲಪದವ ಕೊಡುಯೆಂದು ಹಸ್ತವನೊಡ್ಡಿ ಯಾಚಿಸಿ ತೆಗೆದುಕೊಳ್ಳೆನು, ಅಳವ–ಇಂತಪ್ಪ ಆಚರಣೆಯನ್ನು ಕಟ್ಟುಮಾಡಿಕೊಂಡರೆ ದೇಹಾವಸಾನ ಪರಿಯಂತರ ಪಾರವೇದಿಸುವೆನು; ಇಂತಪ್ಪ ಆಚರಣೆಯನ್ನು ಕಟ್ಟುಮಾಡಿಕೊಂಡೆನಾದರೆ ಪಾರವೇದಿಸಲರಿಯೆನೆಂಬುವಂಥದನು. ಅಱಿಯದೆ–ತಿಳಿಯದೆ, ನುಡಿವೆನು–ಹೇಳಿಕೊಂಡೆನು.ಕಡೆಮುಟ್ಟಸದಿದ್ದಡೆ–ದೇಹಾವಸಾನ ಪರಿಯಂತರವೂ ಪಾರವೇದಿಸಬೇಕು. ಪಾರವೇದಿಸದಿದ್ದರೆ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ತಲೆದಂಡ ತಲೆದಂಡ–ಜ್ಞಾನವನು ಅಪಹರಿಸಿ ಅಜ್ಞಾನಕ್ಕೊಳಗು ಮಾಡಿ ಭವಕ್ಕೆ ಹಾಕಿಬಿಡು ಭವಕ್ಕೆ ಹಾಕಿಬಿಡು.

III -

೧+ ಲಿಸ (ಟ, ಡ).

....

ಅಳವಡೆಯದೆ ನುಡಿದೆನು–ಎನ್ನ ಶಕ್ತ್ಯಾನುಸಾರವನು ತಿಳಿಯದೆ ವಚಿಸಿದೆನು. ಕಡೆಮುಟ್ಟಿ–ಎನ್ನ ದೇಹಾವಸಾನಪರಿಯಂತರವು, ಸಲಿಸದಿದ್ದಡೆ–ಯೋಗ್ಯವಾಗಿಸದೆ ಇದ್ದರೆ, ಕೂಡಲಸಂಗಮದೇವ–ಎಲೆ ಪರಶಿವಲಿಂಗವೆ, ತಲೆದಂಡ ತಲೆದಂಡ–ಎನ್ನ ಸುಜ್ಞಾನಶಿರಸ್ಸೇ ಅಪರಾಧವು ಅಪರಾಧವು.

ಪ್ರಸಾದಿಯ ಪ್ರಾಣಲಿಂಗಿಸ್ಥಲ

I –

ಪ್ರಸಾದಿಯ ಪ್ರಾಣಲಿಂಗಿಸ್ಥಲ–ಪ್ರಸಾದಿಸ್ಥಲದೊಳಗಣ ಪ್ರಾಣಲಿಂಗಿಸ್ಥಲದಾಚರಣೆಯನ್ನು ನಿರೂಪಿಸುತ್ತಿಹರು.

೭೮೮

ಮೌನದಲುಂಬುವುದು ಆಚಾರವಲ್ಲ; ಲಿಂಗಾರ್ಪಿತವ ಮಾಡಿದ ಬಳಿಕ ತುತ್ತಿಗೊಮ್ಮೆ ಶಿವಶರಣೆನುತ್ತಿರಬೇಕು. ಕರಣ ವೃತ್ತಿಗಳಡಗುವವು, ಕೂಡಲಸಂಗ'ಮ' ದೇವನ ನೆನವುತ್ತಲುಂಡಡೆ.

I –

ಮೌನದಲುಂಬುವುದು–ಅಭಾಷಣನಾಗಿ ಅನುಭವಿಸುವಂಥದು, ಆಚಾರವಲ್ಲ–ಅದು ಶಿವಾಚಾರದೊಳಗಲ್ಲವು. ಲಿಂಗಾರ್ಪಿತವ ಮಾಢಿದ ಬಳಿಕ–ಸಕಲಪದಾರ್ಥವನ್ನು ಲಿಂಗಕ್ಕೆ ಸಮರ್ಪಣೆಯ ಮಾಡಿ ಲಿಂಗಪ್ರಸಾದವನ್ನು ಅನುಭವಿಸುತ್ತಿರ್ದ ಮೇಲೆ, ತುತ್ತಿಗೊಮ್ಮೆ–ಭೋ[ಗ] ಭೋ[ಗ]ಕ್ಕೊಂದು ವೇಳೆ ಶಿವಶರಣೆನುತ್ತಿರಬೇಕು–ಗುರುನಮಸ್ಕಾರ ಲಿಂಗನಮಸ್ಕಾರ ಜಂಗಮನಮಸ್ಕಾರವೆಂದು ಸ್ಮರಣೆಯ ಮಾಡುತ್ತಿರಬೇಕು. ಮತ್ತಂತುಮಲ್ಲದೆ ಮಂತ್ರಸ್ಮರಣೆಯ ಮಾಡುತ್ತಿರಬೇಕು.

ಕೂಡಲಸಂಗಮದೇವನ–ಪರಶಿವಲಿಂಗದೇವನ, ನೆನವುತ್ತಲುಂಡಡೆ–ಸ್ಮರಿಸುತ್ತ ಅನುಭವಿಸಿದರೆ, ಕರಣವೃತ್ತಿಗಳಡಗುವವು–ಕರಣಂಗಳ ವರ್ತನೆಯು ನಷ್ಟವಾಗಿ ಹೋಗುವುದು: ಮತ್ತಂತುಮಲ್ಲದೆ ಚಿತ್ಕರಣಂಗಳಾಗಿ ಅಳವಡುವವು.

....

೧–೧ ಜ್ಯ (ಕ, ಗ)

IV –

1–1 ನ (ತ)

....

ಪರಮಮಂತ್ರಗಳಿಂದ ಪರಮನ ಚಿಂತೆಯಲುಂಡರೆ, ಕರಣಂಗಳು ಕೆಡುವದೆಂಬುದೀ ವಚನದರ್ಥ.

....

೨. ಈ ವಚನ ಮತ್ತು ಟೀಕೆ ೧೬೨೫ನೆಯ ನಂಬರಿನ ಹಸ್ತಪ್ರತಿಯ ಬಿಡಿಗರಿಯಲ್ಲಿದೆ.

೭೪೯

ಕಾಯದ ಕೈಯಲು ಕರಣದ ಕೈಯಲು ಪದಾರ್ಥವ ಹಿಡಿವಲ್ಲಿ ನಿಮಗೆ ಕೊಡುವ ಭರದ ಭೀತಿಯಿಂದಾನಜೆಯದಿಪ್ಪೆನಾಗಿ ಎನ್ನ ನೀನಜೆದು ಸಲಹುತ್ತಿಪ್ಪೆಯಯ್ಯ, ಕೂಡಲಸಂಗಮದೇವಾ.

I -

ಕಾಯದ ಕೈಯಲು–ತನುವಿಹಸ್ತ ಮನದಹಸ್ತ ಆತ್ಮನ ಹಸ್ತದಲ್ಲಿ, ಕರಣದ ಕೈಯಲು–ಸುಚಿತ್ತಾದಿ ಸದ್ಭಾವಾಂತ್ಯಮಾದ ಷಟ್ಕರಣಂಗಳ ಹಸ್ತದಿಂದಲೂ, ಪದಾರ್ಥವ ಹಿಡಿವಲ್ಲಿ.–ತ್ರಿವಿಧ ಷಡ್ವಿಧ ಪದಾರ್ಥಂಗಳನು ಪೃಥಪಿಡಿವಲ್ಲಿ, ನಿಮಗೆ ಕೊಡುವ ಭರದ ಭೀತಿಯಿಂದ : ನಿಮಗೆ–ತ್ರಿವಿಧ ಷಡ್ವಿಧಲಿಂಗಕ್ಕೆ, ಕೊಡುವ–ತ್ರಿವಿಧಷಡ್ವಿದ ಪದಾರ್ಥವನ್ನು ತ್ರಿವಿಧ ಷಡ್ವಿಧಲಿಂಗಕ್ಕೆ ಸಮರ್ಪಿಸದೆ ಆತ್ಮಾರ್ಪಣವಾಗಿ ಅನುಭವಿಸಿದರೆ ಭವ ಉಂಟಾಗುತ್ತೈತೆಂಬ, ಭೀತಿಯಿಂದ–ಭಯದಿಂದ, ಆನಜೆಯದಿಪ್ಪೆನಾಗಿ–ತ್ರಿವಿಧ ಷಡ್ವಿಧ ಅಂಗದಲ್ಲಿ ಬರಲ್ಪಟ್ಟ ತ್ರಿವಿಧ ಷಡ್ವಿಧ ಪದಾರ್ಥವನ್ನು ತ್ರಿವಧ ಷಡ್ವಿಧ ಹಸ್ತದಿಂದ ಪಿಡಿದು ತ್ರಿವಿಧಷಡ್ವಿವಿಧಲಿಂಗಕ್ಕೆ ಸಮರ್ಪಿಸುವಂಥದನು ಆನು ತಿಳಿಯದೆ ಇರುವೆನಾಗಿ, ಎನ್ನ ನೀನಜೆದು–ತ್ರಿವಿಧಷಡ್ವಿಧ ಅಂಗದಲ್ಲಿ ಬರಲ್ಪಟ್ಟ ತ್ರಿವಿಧಷಡ್ವಿಧ ಪದಾರ್ಥವನ್ನು ಕೈಕೊಂಡು ತ್ರಿವಿಧ ಷಡ್ವಿಧ ಅನು ತಿಳಿಯದೆ ಇರುವೆನಾಗಿ, ಎನ್ನ ನೀನಜೆದು–ತ್ರಿವಿಧ ಷಡ್ವಿಧ ಅಂಗದಲ್ಲಿಯು ಬರಲ್ಪಟ್ಟ ತ್ರಿವಿಧಷಡ್ವಿಧ ಪದಾರ್ಥವನ್ನು ಕೈಕೊಂಡು ತ್ರಿವಿಧ ಷಡ್ವಿಧ ಪ್ರಸಾದವನ್ನು ಕರುಣಿಸಿಕೊಟ್ಟು, ಸಲಹುತ್ತಿಪ್ಪೆಸಯ್ಯ–ರಕ್ಷಣ್ಯವ ಮಾಡುತ್ತಿರುವೆನಯ್ಯ, ಕೂಡಲಸಂಗಮದೇವ–ಎಲೆ ಪರಶಿವಲಿಂಗವೆ.

III- -

ಕಾಯದ ಕರಣದ ಕೈಯಲ್ಲಿ–ಅಂಗಕರಣಂಗಳ ಕ್ರಿಯಾಜ್ಞಾನಹಸ್ತದಲ್ಲಿ.

IV -

ಲಿಂಗಕ್ಕೆ ನೀಡುವ ಭರದಲ್ಲಿ ತನುಮನಂಗಳ ಮಜಿ[1]ದಿಹ[1]; ಆ ಲಿಂಗವೆ ತನುಮನವಾಗಿಹುದೆಂಬುದೀ ವಚನದರ್ಥ.

....

೧+ ಆ ಲಿಂಗವೆ ತನುಮನಂಗಳ ಮಜಿದಿಹ (ತ). ೨. ಈ ವಚನ ಮತ್ತು ಟೀಕೆ ೧೬೨೫ನೆಯ ನಂಬರಿನ ಹಸ್ತಪ್ರಿಯ ಬಿಡಿಗರಿಯಲ್ಲಿದೆ.

೭೯೦

ಆಳಿಕಾಜಿನೆನಗೊಬ್ಬ ಮಗ ಹುಟ್ಟಿದನೆಂದು ಆಳಿಕೆಯ [1]ಕೆಡಲೀ[2]ಸ[2]ದೆ[1] ನಡೆಸುವ ನಮ್ಮಯ್ಯ. ಪಂಚಭೂತ ಕಾಯವ ಭವಿಯೆಂದೆ[3]ನ[3]ಲೀಯದೆ ಪ್ರಸಾದಕಾಯವ ಮಾಡಿ ಸಲಹುವ ನಮ್ಮಯ್ಯ. ಆಳಿ [4]ಸಾ[4]ವಲ್ಲಿ ಅವಧಾನಿಯಾಗಿದ್ದಡೆ ಆಳ್ದನು ನಮ್ಮ ಕೂಡಲಸಂಗಮದೇವ.

I -

ಆಳಿಕಾಜಿನು–ಸರ್ವಾಚಾರಸಂಪತ್ತಿನಾಚರಣೆಯುಳ್ಳಂಥ ಶ್ರೀಗುರುನಾಥನು, ಎನಗೊಬ್ಬಮಗ ಹುಟ್ಟಿದನೆಂದು–ನನಗೊಬ್ಬ ಶಿಷ್ಯೋತ್ತಮನುತ್ಪತ್ಯವಾದನೆನುತ್ತ, ಆಳಿಕೆಯ–ಸರ್ವಾಚಾರಸಂಪತ್ತಿನಾಚರಣೆಯನು, ಕೆಡಲೀಸದೆ–ತರಹರವಾಗಗೊಡದೆ, ನಮ್ಮಯ್ಯ–ಎನ್ನ ಕರ್ತನಾದಂಥ ಶ್ರೀಗುರುನಾಥನು, ನಡೆಸುವ–ದೇಹವಸಾನ ಪರಿಯಂತರ ಪಾರವೇದಿಸುವ.

ಪಂಚಭೂತಕಾಯವ ಪಂಚಭೂತಯುಕ್ತವಾದ ದೇಹವನ್ನು, ಭವಿಯೆಂದೆನಲೀಯದೆ–ಭೂತಕಾಯವೆಂದು ಹೇಳಗೊಡದೆ, ಪ್ರಸಾದಕಾಯವ ಮಾಡಿ–ಆಚಾರಾಂಗಜ್ಞಾನಕಾಯವ ಮಾಡಿ, ನಮ್ಮಯ್ಯ–ನಮ್ಮ ಕರ್ತನಾದಂಥ ಶ್ರೀಗುರುನಾಥನು, ಸಲಹುವ–ರಕ್ಷಣ್ಯವ ಮಾಡುವ.

ಆಳಿ–ಸರ್ವಾಚಾರಸಂಪತ್ತಿನಾಚರಣೆವಿಡಿದಾಚರಿಸಿ, ಸಾವಲ್ಲಿ–ಲಿಂಗದಲ್ಲಿ ನಿಃಪತಿಯಾಗುವಲ್ಲಿ, ಅವಧಾನಿಯಾಗಿದ್ದರೆ–ಅತ್ಯಂತ ಸುಯ್ಧಾನಿಯಾಗಿದ್ದರೆ, ನಮ್ಮ ಕೂಡಲಸಂಗಮದೇವ–ನಮ್ಮ ಪರಶಿವಲಿಂಗವು, ಆಳ್ದನು–ಕರ್ತನು.

II– –

ಆಳಿಕಾಜಿನೆನಗೊಬ್ಬ ಮಗ ಹುಟ್ಟಿದನೆಂದು–ಭಿನ್ನಕ್ರೀಯನು ಹಾಸ್ಯೋಪಮಾನವ ಮಾಡಿ ಸಮರಸಕ್ರೀವಿಡಿದಾಚರಿಸುವಂಥ ಶ್ರೀಗುರುದೇವನಿಗೆ ಒರ್ವನಾದ ಇಷ್ಟಲಿಂಗವೆಂಬ ಕುಮಾರನುದಯವಾದನೆಂದು, ಆಳಿಕೆಯ ಕೆಡಲೀಸದೆ ನಡೆಸುವ ನಮ್ಮಯ್ಯ–[೧]ಆ[೧] ಸಮರಸಕ್ರೀಯನು ನಷ್ಟವಾಗಲೀಸದೆ ಪಾರವೇದಿಸುವ ನಮ್ಮ ಶ್ರೀಗುರುದೇವನು. ಪಂಚಭೂತಕಾಯವ–ಪಂಚಭೂತಯುಕ್ತವಾದ ದೇಹವನ್ನು, ಭವಿಯೆಂದೆನಲೀಯದೆ–[೨]ಲಿಂಗವಿಲ್ಲವೆಂದೆನಲೀಸದೆ[೨] ಪ್ರಸಾದಕಾಯವ ಮಾಡಿ–ಪ್ರಸಾದಾಂಗವ ಮಾಡಿ, ಸಲಹುವ ನಮ್ಮಯ್ಯ–ರಕ್ಷಣ್ಯವ ಮಾಡುವ ನಮ್ಮ ಶ್ರೀಗುರುದೇವನು.

ಆಳಿ ಸಾವಲ್ಲಿ ಅವಧಾನಿಯಾಗಿದ್ದಡೆ ಆಳ್ದನು ನಮ್ಮ ಕೂಡಲಸಂಗಮದೇವ–ಆ ಸಮರಸಕ್ರೀಯು ನಿಷ್ಪತಿಯಾಗುವಲ್ಲಿ ಆರೈಕೆಯುಳ್ಳಾತನಾಗಿರ್ದಡೆ ಕರ್ತನು ನಮ್ಮ ಪರಶಿವಲಿಂಗವು.

....

೧–೧ x (ಚ) ೨–೨ ಲಿಂಗವೆಂದೆನಿಸಲೀಸದೆ (ಚ)

III– –

4–4 ಸವೆ (ಟ, ಡ)

....

[ಕಿ]ಸತ್ಕ್ರಿಯಾಲೀಲಾಲೋಲನಾಗಿ ಏಕೋದೇವನಾದ ಇಷ್ಟಲಿಂಗವೆಂಬ ಚಿತ್ಪುತ್ರನು ಗುರುಮುಖದಿಂದುದಯವಾದನೆಂಬುದೀಗ, ಆಳಿಕಾರನೆನೆಗೊಬ್ಬ ಮಗ ಹುಟ್ಟಿದನೆಂಬ ಶಬ್ದಕ್ಕರ್ಥ. ಆಳ್ದನು–ತನ್ನೊಳಗೇಕಾರ್ಥವ ಮಾಡಿಕೊಂಬನು ಪರಶಿವಲಿಂಗವು. ಆಳಿಕೆಯು–ಸರ್ವಾಚಾರಸಂಪತ್ತಿನಾಚರಣೆಯನು, ಆಳಿ–ಸರ್ವಾಚಾರಸಂಪತ್ತಿನಾಚರಣೆಯನುಳ್ಳ ಶರಣನು. ಸವೆವಲ್ಲಿ–ಸಕಲ ಪಡಿಪದಾರ್ಥಗಳನು ಗುರುಲಿಂಗಜಂಗಮಕ್ಕೆ ಸಮರ್ಪಣೆಯ ಮಾಡುವಲ್ಲಿ, ಅವಧಾನಿಯಾಗಿದ್ದರೆ–ಸಾವಧಾನವುಳ್ಳಾತನಾಗಿರುತ್ತಿದ್ದರೆ, ತನ್ನೊಳಗೇಕಾರ್ಥ ಮಾಡಿಕೊಂಬನು ಪರಶಿವಲಿಂಗವು.

....

೩+ ಆಳಿಕಾಜಿನೆನಗೊಬ್ಬ ಮಗ ಹುಟ್ಟಿದನೆಂದು (ಟ, ಡ)

IV –

2–2 ಯ (ತ), 3–3 ನಿ ಸ (ತ)

....

ಶಿವಸಾಮ್ರಾಜ್ಯವನಾಳುವ ಭಕ್ತಿಜ್ಞಾನವನಿತ್ತು ಭಕ್ತರ ಸಲಹುತ್ತಿಪ್ಪಾತನು ಗುರುವಾದ ಕಾರಣ ಶ್ರೀಗುರುವೆಂಬಾತನೀಗ ಅಳಿಕಾಜಿನೆಂಬ ಶಬ್ದಕ್ಕರ್ಥ. ಅಂತಪ್ಪ ಶ್ರೀಗುರುವಿನ ಕರಕಮಲದಲುದಯಿಸಿದ ತತ್‌ಶಿಷ್ಯನೆಂಬಾತನೀಗ, ಮಗ ಹುಟ್ಟಿದನೆಂಬ ಶಬ್ದಕ್ಕರ್ಥ. ಅಂತು ಉದಯಿಸಿದ ಶಿಷ್ಯಂಗೆ ಶ್ರೀಗುರು ತನ್ನ ಒಡೆತನ ಕೆಡದ ಹಾಂಗೆ ಆ ಶಿಷ್ಯನ ಪಂಚಭೂತಕಾಯವನಳಿದು ಲಿಂಗಾಂಗಸಂಬಂಧಿಯ ಮಾಡಿ ಲಿಂಗಕಾಯವೆನಿಸಿ ಭವಿತ್ವವ ಕಳೆದು ಭಕ್ತನೆಂದೆನಿಸಿ ಶಿವಕ್ರೀಯಲ್ಲಿ ನಡೆಸಿ ಸಲಹಿದಾತ ಗುರುವಾದ ಕಾರಣ ಆಳಿಕೆಯ ಕೆಡಲೀಯದೆ ನಡೆಸುವ ನಮ್ಮಯ್ಯ ಪಂಚಭೂತಕಾಯವ ಭವಿಯೆಂದೆನಿಸಲೀಯದೆ ಪ್ರಸಾದ ಕಾಯವ ಮಾಡಿ ಸಲಹುವನಮ್ಮಯ್ಯನೆಂಬ ಶಬ್ದಕ್ಕರ್ಥ. ಪ್ರಸಾದಕಾಯವೆಂದರೆ ಲಿಂಗಕಾಯ, ಅಂತು ಲಿಂಗಕಾಯವಾದ ಭಕ್ತ ೪[ನಿಗೆ]೪ ಆ ಲಿಂಗಕಾಯ ಸುಭೋಗಂಗಳ ಲಿಂಗಕ್ಕರ್ಪಿಸುವ ಸಾವಧಾನವ ಮಱೆಯದೇ ಅರ್ಪಿಸುವ ಭಾವ ದೇಹಾಂತ್ಯದಲ್ಲಿ ಇರ್ದಡೆ ಆ ಶರಣ ಲಿಂಗವಪ್ಪನೆಂಬುದೀಗ ಆಳಿ ಸಾವಲ್ಲಿ ಅವಧಾನಿಯಾಗಿರ್ದಡೆ ಆಳ್ದನು ನಮ್ಮ ಕೂಡಲಸಂಗಮದೇವನೆಂಬ ಶಬ್ದಕ್ಕರ್ಥ.

....

೪–೪ ನು (ತ)

V –

1–1 ಕೆಡಿಸಲೀಯದೆ (ಪ)

....

೫ಸತ್ಕ್ರಿಯಾಲೀಲಾಲೋಲನಾಗಿ ಏಕೋದೇವನಾದ ಇಷ್ಟಲಿಂಗನೆಂಬ ಪುತ್ರನು ಗುರುಮುಖದಿಂದುದಯವಾದನೆಂಬುದೀಗ, ಆಳಿಕಾಜಿನೆನಗೊಬ್ಬ ಮಗ ಹುಟ್ಟಿದನೆಂಬುದರ್ಥ. ಆಳಿಕೆಯ–ಸರ್ವಾಚಾರ ಸಂಪತ್ತಿನಾಚರಣೆಯನು, ಆಳಿಕೆಯ ಕೆಡಿಸಲೀಯದೆ–ಸರ್ವಾಚಾರಸಂಪತ್ತು, ನಷ್ಟವಾಗಗೊಡದೆ, ಆಳಿ ಸಾವಲ್ಲಿ–ಸತ್ಕ್ರಿಯಾಚಾರಸ್ವರೂಪವಾದ ಶರಣನು ಸಾವಲ್ಲಿ, ಐಕ್ಯವಾಗುವಲ್ಲಿ, ಅವಧಾನಿಯಾಗಿದ್ದಡೆ–ಲಿಂಗದಲ್ಲಿ ಎಚ್ಚರಿಕೆಯುಳ್ಳಾತನಾಗಿದ್ದರೆ,

....

೫ + ಪ್ರಸಾದಿಸ್ಥಲ (ಪ),

೭೯೧

ಶಿವಾಚಾರವೆಂಬುದೊಂದು ಬಾಳ ಬಾ[1]ಯಿ[1]ಧಾರೆ. ಲಿಂಗ [2]ಮೆ[2]ಚ್ಚಬೇಕು, ಜಂಗಮ [2]ಮೆ[2]ಚ್ಚಬೇಕು, ಪ್ರಸಾದ [2]ಮೆ[2]ಚ್ಚಿ ತನ್ನಲ್ಲಿ [3]ಸ್ವಯ[2]ವಾಗಿರಬೇಕು. ಬಿಚ್ಚಿ ಬೇರಾದಡೆ [2]ಮೆ[2]ಚ್ಚ ನಮ್ಮ ಕೂಡಲಸಂಗಮದೇವ.

....

2–2 ಮ (ಕ, ಗ)

I –

ಶಿವಾಚಾರವೆಂಬುದೊಂದು ಬಾಳ ಬಾಯಿಧಾರೆ–ಅಲಗಿನ ಮೊನೆಯ ಮೇಲೆ ನಡೆದಾಡಬೇಕಾದರೆ [1]ಧಾರೆಗಟ್ಟು[1] ಮೊನೆಗಟ್ಟು ದಿಕ್ಕುಗಟ್ಟನು ಬಲ್ಲಂಥವರು ತಿರುಗಾಡುವರಲ್ಲದೆ ಧಾರೆಗಟ್ಟು ಮೊನೆಗಟ್ಟು ದಿಕ್ಕುಗಟ್ಟನ್ನು ಅರಿಯದೆ ಇದ್ದಂಥವರು ನಲಿದಾಡುವಂಥದನು ಬಲ್ಲರೆ? ಅರಿಯರು. ಹಾಂಗೆ, ಅಷ್ಟಾವರಣವನ್ನೇ ಅಂಗವ ಮಾಡಿಕೊಂಡು ಪಂಚಾಚಾರವನ್ನೇ ಪ್ರಾಣವ ಮಾಡಿಕೊಂಡು ಏಕಲಿಂಗನಿಷ್ಠಾಪರನಾಗಿ ಆಚರಿಸುವಂಥ ಆಚರಣೆಯು ಕ್ರಿಯಾಚಾರದಲ್ಲಿ ಸುಯಿಧಾನಿಯಾದ ಶಿವಶರಣಂಗೆ ಅರಿಯಬರುವುದಲ್ಲದೆ ಮಿಕ್ಕಿನ ದ್ವೈತಾದ್ವೈತಿಗಳಿಗೆ ಅಲಗಿನ ಮೊನೆಯ ಮೇಲೆ ನಡೆದಾಡಿದ ಹಾಂಗೆ ಅಶಕ್ಯವಾಗಿರ್ಪುದು. ಲಿಂಗ ಮೆಚ್ಚಬೇಕು–ಲಿಂಗವು ಮಮಕರಿಸಿ ಮನದಲ್ಲಿ ನೆಲೆಗೊಳ್ಳಬೇಕು, ಜಂಗಮ ಮಚ್ಚಬೇಕು–ಜಂಗಮವು ಮಮಕರಿಸಿ ಪ್ರಾಣಜ್ಞಾನದಲ್ಲಿ ನೆಲೆಗೊಳ್ಳಬೇಕು. ಪ್ರಸಾದ ಮಚ್ಚಿ ತನ್ನಲ್ಲಿ ಸ್ವಯವಾಗಿರಬೇಕು–ಪ್ರಸಾದವು ಮಮಕರಿಸಿ ಆತ್ಮಾಂಗದಲ್ಲಿ ನೆಲೆಗೊಳ್ಳಬೇಕು, ಬಿಚ್ಚಿಕ್ರೀಯಲ್ಲಿ ಏಂಗಡಿಸಿ, ಬೇಱಾದಡೆ–ಮನದಲ್ಲಿ ಲಿಂಗವು ಪ್ರಾಣದಲ್ಲಿ ಜಂಗಮವು ಆತ್ಮಾಂಗದಲ್ಲಿ ಪ್ರಸಾದವು ಭಿನ್ನವಾದರೆ, ನಮ್ಮ ಕೂಡಲಸಂಗಮದೇವ–ನಮ್ಮ ಪರಶಿವಲಿಂಗವು, ಮಚ್ಚ–ಅವರಿಗೆ ಮಮಕರಿಸಿ ನಿಜಮೋಕ್ಷವನ್ನು ಕರುಣಿಸಿಕೊಟ್ಟಾನೆ? ಕರುಣಿಸಿಕೊಡನು.

....

೧–೧ ಕಟ್ಟು (ಕ),

IV –

1–1 ಯ (ತ), 3–3 ಸ್ವಾಯತ (ತ)

....

ಮನಜ್ಞಾನವೆರಡೂ ಪರಬ್ರಹ್ಮದಲ್ಲಿ ಅಡಗಿ ಎರಡಿಲ್ಲದಿರಬೇಕೆಂಬುದೀ ವಚನದರ್ಥ.

ಪ್ರಸಾದಿಯ ಶರಣಸ್ಥಲ

I –

ಪ್ರಸಾದಿಯ ಶರಣಸ್ಥಲ–ಪ್ರಸಾದಿಸ್ಥಲದೊಳಗಣ ಶರಣಸ್ಥಲದಾಚರಣೆಯನ್ನು ನಿರೂಪಿಸುತ್ತಿಹರು.

೭೮೨

ತ್ರಿವಿಧಪ್ರಸಾದವೆಂದೆಂಬರು ಅದೆಂ[1]ತಿ[1]ಹುದೋ? ಶುದ್ಧಪ್ರಸಾದ [2]ಗುರುವಿನದು[2], ಸಿದ್ಧಪ್ರಸಾದ [3]ಲಿಂಗದ್ದು[3], ಪ್ರಸಿದ್ಧ ಪ್ರಸಾದ [4]ಜಂಗಮದ್ದು[4]. ಇಂತೀ ತ್ರಿವಿಧ ಒಂದಾದವರ ತೋಱಾ, ಕೂಡಲಸಂಗಮದೇವಾ.

I –

ತ್ರಿವಿಧಪ್ರಸಾದವೆಂದೆಂಬರು–ಶುದ್ಧಸಿದ್ಧಪ್ರಸಿದ್ಧಪ್ರಸಾದವನ್ನು ಪಡೆದನುಭವಿಸಲ್ಪಟ್ಟವರುಗಳೆಂದು ಹೇಳುವರು, ಅದೆಂತಿಹುದೋ?–ಅದು ಹೇಂಗಿರ್ಪುದೋ. ಶುದ್ಧಪ್ರಸಾದ ಗುರುವಿನದು–ತನುಪದಾರ್ಥವ ಗುರುವಿಗೆ ಸಮರ್ಪಿಸಿ ಗುರುವಿನ ಕೃಪಾದೃಷ್ಟಿಯಿಂದ ಒದಗಲ್ಪಟ್ಟಂಥದೇ ಶುದ್ಧ ಪ್ರಸಾದವು. ಸಿದ್ದಪ್ರಸಾದ ಲಿಂಗದ್ದು–ಮನಪದಾರ್ಥವ ಲಿಂಗಕ್ಕೆ ಸಮರ್ಪಿಸಿ ಆ ಲಿಂಗಮುಖದಿಂದುಳುಮೆಯಾಗಿ ಬರಲ್ಪಟ್ಟಂಥದೇ ಸಿದ್ಧಪ್ರಸಾದವು, ಪ್ರಸಿದ್ಧಪ್ರಸಾದ ಜಂಗಮದ್ದು–ಪ್ರಾಣದ್ರವ್ಯ ಪದಾರ್ಥವ ಜಂಗಮಕ್ಕೆ ಸಮರ್ಪಣೆಯ ಮಾಡಿ ಆ ಜಂಗಮದ ಕೃಪೆಯಿಂದ ಒದಗಲ್ಪಟ್ಟಂಥದೇ ಪ್ರಸಿದ್ಧಪ್ರಸಾದವು, ಇಂತೀ–ಈ ಪ್ರಕಾರದಿಂದ, ತ್ರಿವಿಧ ಒಂದಾದವರ–ಶುದ್ಧಸಿದ್ಧಪ್ರಸಿದ್ಧಪ್ರಸಾದ ಸ್ವರೂಪವಾದ ಗುರುಲಿಂಗಜಂಗಮವೆಂಬೇಕದಂಥವರುಗಳ, ತೋಱಿ–ಅವರ ದರುಶನವನ್ನು ಕಾಣಿಸಿಕೊಡಾ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

V– –

1–1 ತ (ತ), 2–2 ಲಿಂಗದದು (ತ), 3–3 ಜಂಗಮದದು (ತ), 4–4 ಗುರುವಿನದದು (ತ)

....

ಗುರುಲಿಂಗಜಂಗಮಕ್ಕೆ ಪದಾರ್ಥಂಗಳ ಸಮರ್ಪಿಸಿ ಪಡೆವ ಶುದ್ಧಸಿದ್ಧಪ್ರಸಿದ್ಧಪ್ರಸಾದಂಗಳ ಭಿನ್ನವಿಟ್ಟು ಅಱೆದು ಭೋಗಿಸುವ ಭಿನ್ನಭಾವಿಗಳಿಗೆ ಸಕಲ ಫಲಪದಂಗಳುಂಟು. ತನುಮನಧನವ ಗುರುಲಿಂಗಜಂಗಮಕ್ಕೆ ಅರ್ಪಣವ ಮಾಡಿ ತನು ಶುದ್ಧಪ್ರಸಾದವಾಯಿತ್ತು, ಮನ ಸಿದ್ಧಪ್ರಸಾದವಾಯಿತ್ತು, ದ್ರವ್ಯಪದಾರ್ಥಂಗಳೆಲ್ಲಾ ಪ್ರಸಿದ್ಧಪ್ರಸಾದವಾಯಿತ್ತೆಂಬ ಭಿನ್ನಭಾವಘಟಿಸಿದ ಶರಣನೇ ತ್ರಿವಿಧಪ್ರಸಾದ ಸ್ವರೂಪನು. ಅಂತಪ್ಪ ಶರಣನ ದರ್ಶನ ಸ್ಪರ್ಶನವ ಮಾಡಿದವರೆಲ್ಲಾ ನಿತ್ಯರಾಗಿ ಭಾಳ್ದರೆಂಬುದೀ ವಚನದ ತಾತ್ಪರ್ಯಾರ್ಥ.

೭೯೩

ಅವಾವ ಭಾವದಲ್ಲಿ ಶಿವನ ನಂಬಿದ ಶರಣರು ಎಂತಿದ್ದಡೇನಯ್ಯ? ಆವಾವ ಭಾವದಲ್ಲಿ ಶಿವನ ನಂಬಿದ ಮಹಿಮರು ಎಂತಿದ್ದಡೇನಯ್ಯ? ಸುಚರಿತ್ರರೆಂತಿದ್ದಡೇನಯ್ಯ? ಅವಲೋಹವ ಕಳೆವ ಪರುಷವೆಂತಿದ್ದಡೇನಯ್ಯ? ಕೂಡಲಸಂಗನ ಶರಣರು ರಸದವಾರಿಧಿಗಳು ಎಂತಿದ್ದಡೇನಯ್ಯ?

I –

ಅವಾವ ಭಾವದಲ್ಲಿ_ಆವುದಾನೊಂದು ಭಕ್ತಿಸತ್ಕ್ರಿಯೆಯಲ್ಲಿ, ಶಿವನ–ಪರಮೇಶ್ವರನ, ನಂಬಿದ–ಬಳ್ಳ ಸೈಕತ ಅಜಹಿಕ್ಕಿ ಅಂಗನೆಯರ ಕುಚ ಮೊದಲಾದುವು ಲಿಂಗವೆಂಬ ಭಾವದಿಂದ ನಂಬಿ ವಿಶ್ವಾಸಿಸಿದ, ಶರಣರು–ಶಿವಶರಣರು, ಎಂತಿದ್ದಡೇನಯ್ಯ–ಆವ ಕ್ರೀ ಆವ ಜ್ಞಾನ ಆವ ಚರಿತ್ರದೊಡನೆ ಕೂಡಿ ಚರಿಸುತ್ತಿರ್ದರೇನು ಕೊರತೆಯೆ? ಆ ಮಹಾತ್ಮರುಗಳಿಗೆ ಕೊರತೆ ಇಲ್ಲವು.

ಆವಾವ ಭಾವದಲ್ಲಿ_ಆವುದಾನೊಂದು ಭಕ್ತಿಸತ್ಕ್ರೀಯಲ್ಲಿ ಶಿವನ–ಪರಮೇಶ್ವರನ, ನಂಬಿದ–ಬಳ್ಳ ಸೈಕತ ಅಜಹಿಕ್ಕಿ ಅಂಗನೆಯರ ಕುಚ ಮೊದಲದವು ಲಿಂಗವೆಂಬ ಭಾವದಿಂದ ನಂಬಿ ವಿಶ್ವಾಸಿಸಿದ

ಮಹಿಮರು–ಮಹತ್ವಾತಿಶಯವನುಳ್ಳಂಥ ಶಿವಶರಣರು ಎಂತಿದ್ದಡೇನಯ್ಯ–ಆವ ಕ್ರೀ ಆವ ಜ್ಞಾನ ಆವ ಚರಿತ್ರದೊಡನೆ ಕೂಡಿ ಚರಿಸುತ್ತಿರ್ದರೇನು ಕೊರತೆಯೇ ಆ ಮಹಾತ್ಮರುಗಳಿಗೆ ಕೊರತೆಯಿಲ್ಲವು.

ಸುಚರಿತ್ರರು : ಸು–ಲೇಸಾದಂಥ, [ಚರಿತ್ರರು–] ನಡಾವಳಿಯನುಳ್ಳಂಥವರುಗಳು, ಎಂತಿದ್ದಡೇನಯ್ಯ–ಆವ ಕ್ರೀ ಆವ ಜ್ಞಾನ ಆವ ಚರಿತ್ರದೊಡನೆ ಕೂಡಿ ಚರಿಸಿದರೇನು, ಆ ಮಹಾತ್ಮರುಗಳಿಗೆ ಕೊರತೆಯೇ ಕೊರೆಯಿಲ್ಲವು. ಅವಲೋಹವ–ಆಯಃಕಾಂತಾದಿ ಪಂಚಲೋಹಂಗಳ, ಕಳೆವ–ಬೇರ್ಪಡಿಸುವ, ಪರುಷವು–ವರುಷದ ಖಣಿಯು, ಎಂತಿದ್ದಡೇನಯ್ಯ–ಅಡ್ಡನಾಗಿರ್ದರೇನು ನೀಳನಾಗಿರ್ದರೇನು ಡೊಂಕನಾಗಿರ್ದರೇನು? ಡೊಸಕನಾಗಿರ್ದರೇನು, ಕೂಡಲಸಂಗನ ಶರಣರು ರಸದ ವಾರಿಧಿಗಳು–ರಸಸಮುದ್ರದಲ್ಲಿ ಬಿದ್ದಂಥ ತೃಣಕಾಷ್ಠಂಗಳೆಲ್ಲವೂ ಕರಗಿ ಸುವರ್ಣಮಯ ವಾಗುತ್ತಿಹವೋ ಹಾಂಗೆ ಸಕಲ ಪದಾರ್ಥಂಗಳು ಶರಣನ ಅಂಗಮುಖದಿಂದ ಲಿಂಗಕ್ಕೆ ಬಂದು ತಟ್ಟಲು ವಿಯೋಗವಿಲ್ಲದೆ ಅಲ್ಲೇ ಲಿಂಗಾರ್ಪಿತವಾಗುತ್ತಿರ್ದ ಕಾರಣ, ಕೂಡಲಸಂಗನ ಶರಣರು–ಶಿವನ ಚಿತ್ಪ್ರಭಾಂಗಸ್ವರೂಪರಾದ ಶಿವಶರಣರು, ರಸದ ವಾರಿಧಿಗಳು–ರಸಸಮುದ್ರದ ಸ್ವರೂಪಿಗಳು, ಎಂತಿದ್ದಡೇನಯ್ಯ–ಆವ ಕ್ರೀ ಆವ ಜ್ಞಾನ ಆವ ಚರಿತ್ರದೊಡನೆ ಕೂಡಿ ಚರಿಸಿದರೇನು ಕೊರತೆಯೇ? ಆ ಮಹಾತ್ಮರುಗಳಿಗೆ ಕೊರತೆಯೇ? ಕೊರತೆ ಇಲ್ಲವು.

IV –

ಭಾವದ ಪರಿಗಳು ಬೇರಾದರೇನು? ಭಾವಿಸಿಕೊಂಬ ಬ್ರಹ್ಮವೊಂದೇ ಶರಣರು [ರ]ಸದ ವಾರಿಧಿಯಂತೆ ಅಖಂಡಿತರಾಗಿದ್ದರೆಂಬುದೀ ವಚನದರ್ಥ.

೭೯೪

ಉ[1]ಱೆ[1] ತಾಗಿದ ಮೃಗವು ಒಂದಡಿಯನಿಡುವುದೆ? ತನುವ ತಾಗಿದ ಸುಖವು ಅಗಲುವುದೆ? ಕೂಡಲಸಂಗನ ಶರಣರನುಭಾವವಱಿದವರ ಮರಳಿ ಮರ್ತ್ಯರೆಂದೆನಬಹುದೆ? [2]ಅಯ್ಯ.[2]

I –

ಉ^ಱೆ^–ಚೆನ್ನಾಗಿ, ತಾಗಿದ–ಬಾಣವ ನಟ್ಟುಕೊಂಡ, ಮೃಗವು–ಎರಳೆಯು, ಒಂದಡಿಯನಿಡುವುದೆ?–ಅಲ್ಲೇ ಬಿದ್ದು ಸತ್ತು ಹೋಗುವುದಲ್ಲದೆ ಮುಂದಕ್ಕಡಿಯಿಟ್ಟು ಗಮಿಸೀತೆ? ಗಮಿಸಲರಿಯದು. ತನುವ–ಅಂಗವನು, ಶರಣನ ದೇಹವನು, ತಾಗಿದ–ತಟ್ಟಿದ, ಸುಖವು–ಸ್ರಕ್ಚಂದನ ಮತಾದಿ ಪರಿಣಾಮಂಗಳು, ಅಗಲುವುದೆ–ವಿಯೋಗವಾದೀತೆ? ಆಗದು ಎಂಬಲ್ಲಿ, ಉಪ್ಪಿನ ಕಟ್ಟೆಯಲ್ಲಿ ಬಿದ್ದ ತೃಣಕಾಷ್ಠಾಂಗಳೆಲ್ಲವೂ ಉಪ್ಪುಮಯವಾಗುವ ಹಾಂಗೆ ರಸಘುಂಟಿಕೆಯ ನುಂಗಿದ ಸಿದ್ದನ ಲಿಂಗಕ್ಕೆ ಬಂದು ತಟ್ಟುವ ಅಲಗು ಆಯುಧಂಗಳನು ಆ ರಸಘುಂಟಿಕೆ ಅಂತುಕೊಂಬುವ ಹಾಂಗೆ, ಶರಣನಂಗಕ್ಕೆ ಎಂದು ತಟ್ಟುವ ಪದಾರ್ಥಂಗಳಷ್ಟೂ ಲಿಂಗಕ್ಕೆ ಸಮರ್ಪಣೆಯಾಗುತ್ತಿಹದು.

ಕೂಡಲಸಂಗನ ಶರಣರ–ತ್ರಿವಿಧಲಿಂಗಾನುಭಾವಿಗಳಾದ ಜ್ಞಾನಗುರುಮೂರ್ತಿಗಳ, ಅನುಭಾವವಱಿದವರ–ಶಿವಾನುಭಾವವನ್ನು ಬೆಸಗೊಂಡು ಬೀಳುವಂಥವರುಗಳ, ಮರಳಿ–ಪುನರಪಿಯಾಗಿ, ಮರ್ತ್ಯರೆಂದೆನಬಹುದೆ?–ಎಲ್ಲಾ ಲೋಕದಾತ್ಮರುಗಳೊಳಗೆ ಅವರೂ ಮನುಷ್ಯರುಗಳೊಳಗೆಂದು ಕೇಳುವುದಕ್ಕಾದೀತೆ? ಆಗದು, ಅಯ್ಯ–ಎಲೆ ಲಿಂಗವೆ.

I -

1-1 ಜೆ (ತ), 2-2 x (ತ).

....

ಜೀವ ಗುಣವನಡಗಿ ಮಹಾನುಭಾವಿಯಾದವರ ಮರ್ತ್ಯರೆಂದೆನಬಾರದೆಂಬುದೀ ವಚನದರ್ಥ.

೭೯೫

ನಿಮ್ಮ ಶ್ರೀಪಾದವ ಮುಟ್ಟಿ ಎನ್ನ ಕರ್ಮ ಹಜೆಯಿತ್ತು, ನಿಮ್ಮ ಪ್ರಸಾದದಿಂದ ನಾನು ಭವಗೆಟ್ಟೆ ನೋಡಯ್ಯ! ಮನಪರುಷ, ದೃಷ್ಟಿಪರುಷ, ಭಾವಪರುಷ, [ನುಡಿಪರುಷ] ಲಿಂಗಗಣಂಗಳು. ಕೂಡಲಸಂಗಮದೇವಾ ನಿಮ್ಮ ಶರಣರನುಭಾವದಿಂದಲಾನು ಸುಖಿಯಾದೆನು!

I -

ನಿಮ್ಮ ಶ್ರೀಪಾದವ ಮುಟ್ಟಿ ಎನ್ನ ಕರ್ಮ ಹಜೆಯಿತ್ತು: ನಿಮ್ಮ ಶ್ರೀಪಾದವ-ನಿಮ್ಮ ಕಾಂತಿವೆತ್ತ ಪದಕಮಲಸ್ವರೂಪವಾದ ಇಷ್ಟಲಿಂಗವನ್ನು, ಮುಟ್ಟಿ-ಆರಾಧಿಸಿ, ಎನ್ನ ಕರ್ಮ-ಎನ್ನ ಸಂಚಿತಾದಿ ಕರ್ಮತ್ರಯಂಗಳು, ಹಜೆಯಿತ್ತು-ನಷ್ಟವಾಗಿ ಹೊಯಿತ್ತು. ನಿಮ್ಮ ಪ್ರಸಾದದಿಂದ-ನಿಮ್ಮ ಗುರುಲಿಂಗಜಂಗಮಪ್ರಸಾದ ಸೇವನೆಯಿಂದ, ನಾನು ಭವಗೆಟ್ಟೆ ನೋಡಯ್ಯ, ಉತ್ಪತ್ಯವ ನಷ್ಟವ ಮಾಡಿಕೊಂಡೆನು ಕಂಡಯ್ಯ.

ಮನಪರುಷ-ಬಸವೇಶ್ವರಸ್ವಾಮಿಗಳು ಮನದಲ್ಲಿ ನೆನದ ಗೊಲ್ಲತಿಯ ಕೊಡವನ್ನು ತಡೆದು ನಿಲ್ಲಿಸಿದುದೇ ಮನಪರುಷವು, ದೃಷ್ಟಿಪರುಷ-ಬಸವೇಶ್ವರ ಸ್ವಾಮಿಗಳು ವಿಮಾನದಲ್ಲಿ ಹೋಗುವಂಥ ಹೆಣನ ನೋಡೆ ಪ್ರಾಣವ ಪಡೆದಂಥದ್ದೇ ದೃಷ್ಟಿಪರುಷವು. ಭಾವಪರುಷ-ಬಸವೇಶ್ವರಸ್ವಾಮಿಗಳು ಮಹಾದೇವಸೆಟ್ಟಿಗೆ ತೊಗರಿ ಜೋಳದ ರಾಶಿಯನ್ನು ಮುತ್ತು ಮಾಣಿಕ ರತ್ನಂಗಳ ಮಾಡಿಕೊಟ್ಟಂಥದೇ ಭಾವಪರುಷವು. ಬಸವೇಶ್ವರಸ್ವಾಮಿಗಳು ಕನ್ನದ ಮಾರಯ್ಯಗಳು ಕನ್ನವನಿಕ್ಕಿದ ಮಣ್ಣಿನ ಮೇಲೆ ತಿರುಗಾಡಿ ಸುವರ್ಣಮಾಡಿ ತೋರಿದಂಥದು; ಅದಲ್ಲದೆ ಬಡವಿಯ ಮಗನ ಮಣ್ಣೆತ್ತನ್ನು ನಿಜದೆತ್ತು ಮಾಡಿ ನಡೆಸಿದಂಥದೇ ನಡೆಪರುಷ. ನುಡಿಪರುಷ-ಬಸವೇಶ್ವರಸ್ವಾಮಿಗಳು ಚಿತ್ರದಲ್ಲಿ ಬರದಿದ್ದಂಥ ಬೊಂಬೆಗಳನು ಚಿತ್ರಗಾರ ಸಂಗಯ್ಯಗಳೇ ಬನ್ನಿರೆಂದು ನಿಜಜಂಗಮವ ಮಾಡಿ ಕರೆದಂಥದೇ ನುಡಿಪರುಷವು. ಲಿಂಗಗಣಂಗಳು-ಪಂಚಪರುಷವನುಳ್ಳ ಶಿವಗಣಂಗಳು.

ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ, ನಿಮ್ಮ ಶರಣರ-ನಿಮ್ಮ ಜಂಗಮಮೂರ್ತಿಗಳ ಅನುಭಾವದಿಂದ-ಶಿವಾನುಭಾವವನ್ನು ಬೆಸಗೊಂಡು ಕೇಳುವದರಿಂದ, ಆನು ಸುಖಿಯಾದೆನು-ನಾನು ಪರಿಣಾಮಿಯಾದೆನೆಂಬ ದೃಷ್ಟೋಪಮಾನದ ಹಾಂಗೆ.

● ಮನಪರುಷ-ಶರಣನ ಜ್ಞಾನದಲ್ಲಿ ಪರಮಪಾವನ ಪವಿತ್ರ ಸ್ವರೂಪವಾದ ಪ್ರಾಣಲಿಂಗ ಸಂಬಂಧವಾಗಿರ್ಪುದು, ದೃಷ್ಟಿಪರುಷ-ಶರಣನ ಲಿಂಗದಲ್ಲಿ ಸತ್ಕ್ರಿಯಾಸ್ವರೂಪವಾದ ಇಷ್ಟಲಿಂಗ ನಿಲೆಗೊಂಡಿಪ್ಪದು. ಭಾವಪರುಷ-ಶರಣನ ಆತ್ಮಾಂಗದಲ್ಲಿ ಮಹಾಜ್ಞಾನಸ್ವರೂಪವಾದ ಭಾವಲಿಂಗ ಸಂಬಂಧವಾಗಿಪ್ಪುದು. ಲಿಂಗಗಣಂಗಳು-ಶ್ರೀವಿಧಾಂಗದಲ್ಲಿ ತ್ರಿವಿಧಲಿಂಗಸಂಬಂಧವ ಮಾಡಿಕೊಂಡು ತ್ರಿವಿಧ ಭಕ್ತಿವಿಡಿದಾಚರಿಸುವಂಥ ಹರಗಣಂಗಳು, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ,

ನಿಮ್ಮ ಶರಣರನುಭಾವದಿಂದ: ನಿಮ್ಮ ಅಂದರೆ ಗುರುಮೂರ್ತಿಗಳು, ಶರಣರೆಂದರೆ ಗುರುವಿನ ದೀಕ್ಷಾತ್ರಯಂಗಳಿಂದುದಯವಾದ ಇಷ್ಟಪ್ರಾಣಭಾವಲಿಂಗಂಗಳು, ಅನುಭಾವದಿಂದ-ತನುತ್ರಯಂಗಳಲ್ಲಿ ಬರಲ್ಪಟ್ಟ ರೂಪುರುಚಿತೃಪ್ತಿಗಳನು ಇಷ್ಟ ಪ್ರಾಣಭಾವಲಿಂಗಂಗಳಿಗೆ ಸಮರ್ಪಿಸಿ ಆ ತ್ರಿವಿಧಲಿಂಗಮುಖದಿಂದ ಬರಲ್ಪಟ್ಟ ಶುದ್ಧಸಿದ್ಧಪ್ರಸಿದ್ಧ ಪ್ರಸಾದವನ್ನು ಪಡೆದನುಭವಿಸಿ, ಆನು ಸುಖಿಯಾದೆನು-ಆನು ಪರಮಪರಿಣಾಮಿಯಾದೆನು.

IV -

ಶ್ರೀ ಗುರುವಿನ ಪಾದಸೋಂಕು ದೊರೆಕೊಂಡ, ಶಿವಪ್ರಸಾದ ದೊರಕೊಂಡ ಶಿವಶರಣರ ಅನುಭಾವದಿಂದ ಅಜೆವು ದೊರಕೊಂಡ ಶರಣಂಗೆ ಭವಕರ್ಮವಿಲ್ಲ, ಆ ಶರಣ ನಿತ್ಯಾನಂದಸುಖಿಯಾಗಿಪ್ಪನೆಂಬುದೀ ವಚನದ ತಾತ್ಪರ್ಯಾರ್ಥ.

ಪ್ರಸಾದಿಯ ಐಕ್ಯಸ್ಥಲ

I -

ಪ್ರಸಾದಿಯ ಐಕ್ಯಸ್ಥಲ-ಪ್ರಸಾದಿಯ ಸ್ಥಲದೊಳಗಣ ಐಕ್ಯಸ್ಥಲದಾಚರಣೆಯನ್ನು ನಿರೂಪಿಸುತ್ತಿಹರು.

೭೯೬

ನಡೆ ಚೆನ್ನ, ನುಡಿ ಚೆನ್ನ, ಎಲ್ಲಿ ನೋಡಿದಡೆ ಚೆನ್ನ! ಪ್ರಮಥರೊಳಗೆ ಚೆನ್ನ, ಪುರಾತರೊಳಗೆ ಚೆನ್ನ, ಸವಿ[1]ದು[1] ನೋಡಿ ಅಂಬಲಿ ರುಚಿಯಾಯಿತ್ತೆಂದು, ಕೂಡಲಸಂಗಮದೇವಂಗೆ ಬೇಕೆಂದು ಕೈದೆಗೆದ ನಮ್ಮ ಚೆನ್ನ!

I -

ನಡೆ ಚೆನ್ನ-ಮಾದಾರ ಚೆನ್ನಯ್ಯಗಳ ನಡಾವಳಿಯು ಬಹು ಚೆನ್ನಾಗಿರ್ಪುದು, ನುಡಿ-ಮಾದಾರ ಚೆನ್ನಯ್ಯಗಳ ನುಡಿ ಪ್ರಸಂಗವು, ಚೆನ್ನ-ಬಹು ಚೆನ್ನಾಗಿರ್ಪುದು, ಎಲ್ಲಿ ನೋಡಿದಡೆ ಚೆನ್ನ-ರಾಜಸಭೆ ದೇವಸಭೆಗಳಲ್ಲಿ ನೋಡಿದರೂ ಮಾದಾರ ಚೆನ್ನಯ್ಯಗಳ ನಡಾವಳಿಯು ಬಹುಚೆನ್ನಾಗಿರ್ಪುದು. ಮತ್ತಂತುಮಲ್ಲದೆ, [ಎಲ್ಲಿ ನೋಡಿದಡೆ-] ಸಕಲ ವೇದಶಾಸ್ತ್ರಾಗಮಪುರಾಣಂಗಳಲ್ಲಿ ನೋಡಿದರೂ, ಚೆನ್ನ-ಮಾದಾರ ಚೆನ್ನಯ್ಯಗಳ ನಡಾವಳಿಯೇ ಬಹು ಚೆನ್ನಾಗಿರ್ಪುದು.

ಪ್ರಮಥರೊಳಗೆ-ಏಳುನೂರೆಪ್ಪತ್ತಮರಗಣಂಗಳೊಳಗೆ ನೋಡಿದರೂ ಮಾದಾರ ಚೆನ್ನಯ್ಯಗಳ ನಡಾವಳಿಯೇ, ಚೆನ್ನ-ಬಹು ಚೆನ್ನಾಗಿರ್ಪುದು, ಪುರಾತರೊಳಗೆ-ಅರವತ್ತುಮೂರು ಪುರಾತರೊಳಗೆ ನೋಡಿದರೂ ಮಾದಾರ ಚೆನ್ನಯ್ಯಗಳ ನಡಾವಳಿಯೇ, ಚೆನ್ನ-ಬಹು ಚೆನ್ನಾಗಿರ್ಪುದು, ಸವಿದು ನೋಡಿ-ಸ್ವೀಕರಿಸಿ ನೋಡಿದ, ಅಂಬಲಿ-ಅಂಬಕಳವು, ರುಚಿಯಾಗಿತ್ತೆಂದು-ಸ್ವಾದವಾಯಿತ್ತೆನುತ್ತೆ,

ಕೂಡಲಸಂಗಮದೇವಂಗೆ–ಪರಶಿವಲಿಂಗಕ್ಕೆ, ಬೇಕೆಂದು–ಆರೋಗಣೆಯಾಗಬೇಕೆನುತ್ತ, ಕೈದೆಗೆದ–ಹಸ್ತವನ್ನು ಅಂತರಿಸಿದನು, ನಮ್ಮ ಚೆನ್ನ–ನಮ್ಮ ಮಾದಾರ ಚೆನ್ನಯ್ಯನೆಂಬ ದೃಷ್ಟೋಪಮಾನದ ಹಾಂಗೆ.

● ನಡೆ ಚೆನ್ನ–ಶರಣನ ಸತ್ಕ್ರಿಯಾಚಾರವೆಂಬ ಅಂಗದಲ್ಲಿ ಕಾಯಕಾಂತಿಲಾವಣ್ಯವನುಳ್ಳ[೧] [ಇಷ್ಟಲಿಂಗವು][೧] ಸಂಬಂಧವಾಗಿರ್ಪುದು, [೨]ನುಡಿ ಚೆನ್ನ–ಶರಣನ ಮನದಲ್ಲಿ ಕಾಯಕಾಂತಿಲಾವಣ್ಯವನುಳ್ಳ [೩][ಪ್ರಾಣಲಿಂಗವು][೩] ಸಂಬಂಧವಾಗಿರ್ಪುದು,[೨] [೪]ಎಲ್ಲಿ ನೋಡಿದಡೆ ಚೆನ್ನ[೪]–ಶರಣನ ಆತ್ಮಾಂಗದಲ್ಲಿ ಕಾಯ ಕಾಂತಿಲಾವಣ್ಯವನುಳ್ಳ ಭಾವಲಿಂಗವು ಸಂಬಂಧವಾಗಿರ್ಪುದು.

ಪ್ರಮಥರೊಳಗೆ ಚೆನ್ನ–ಶರಣನ ಇಪ್ಪತ್ತೈದು ತತ್ತ್ವಂಗಳೊಳಗೆ ಇಪ್ಪತ್ತೈದು ಲಿಂಗಸಂಬಂಧವಾಗಿರ್ಪುದು, ಪುರಾತರೊಳಗೆ ಚೆನ್ನ–ಶರಣನ ಷಡೀಂದ್ರಿಯಂಗಳಲ್ಲಿ ಷಡ್ವಿಧಲಿಂಗಸಂಬಂಧವಾಗಿಪ್ಪುದು. ಸವಿದು ನೋಡಿ–ರೂಪಪದಾರ್ಥವನ್ನು ಇಷ್ಟಲಿಂಗಕ್ಕೆ ಕೊಟ್ಟು, ಅಂಬಲಿ ರುಚಿಯಾಯಿತ್ತೆಂದು–ರೂಪಿನೊಳಗಣ ರುಚಿಪದಾರ್ಥವು ಪ್ರಾಣಲಿಂಗಕ್ಕೆ ಸಮರ್ಪಣೆಯಾಗಬೇಕೆಂದು, ಕೂಡಲಸಂಗಮದೇವಂಗೆ ಬೇಕೆಂದು–ರುಚಿಯೊಳಗಣ ತೃಪ್ತಿ ಪದಾರ್ಥವು ಭಾವಲಿಂಗಕ್ಕೆ ಸಮರ್ಪಣೆಯಾಗಬೇಕೆನುತ್ತ, ಕೈದೆಗೆದ–ಶಿವಾನುಭಾವವೆಂಬ ಹಸ್ತವನ್ನು ಬೇರ್ಪಡಿಸಿದನು, ನಮ್ಮ ಚೆನ್ನ–ಸರ್ವಸೂತಕ ವಿರಹಿತನಾದ ಶಿವಶರಣನು.

....

೧–೧ ಪ್ರಾಣಲಿಂಗವು (ಕ, ಗ), ೨–೨ x (ಕ), ೩–೩ ಭಾವಲಿಂಗವು (ಗ), ೪–೪ x (ಗ)

II –

ನಡೆ ಚೆನ್ನ–ಕ್ರಿಯಾಚರಣೆಯಲ್ಲಿ [೫]ಇಷ್ಟ[೫]ಲಿಂಗದ ಸುಜ್ಞಾನಾಚರಣೆಯೇ ಲಾವಣ್ಯವಾಗಿಪ್ಪುದು, ನುಡಿ ಚೆನ್ನ–ಜ್ಞಾನಾನುಭಾವದ ವಚಸ್ಸಿನಲ್ಲಿ ಪ್ರಾಣಲಿಂಗದ ಸುಜ್ಞಾನಾಚರಣೆಯೇ ಲಾವಣ್ಯವಾಗಿಪ್ಪುದು, ಎಲ್ಲಿ ನೋಡಿದಡೆ ಚೆನ್ನ–ಆವಾ[೬]ವಾ[೬]ಚರಣೆಯಲ್ಲಿ ನಿರೀಕ್ಷಿಸಿದರೆಯೂ ಪ್ರಾಣಲಿಂಗದ ಸುಜ್ಞಾನಾಚರಣೆಯೇ ಲಾವಣ್ಯವಾಗೊಪ್ಪುತ್ತಿಹುದು.

ಪ್ರಮಥರೊಳಗೆ ಚೆನ್ನ–ನೂತನ ಪುರಾತನರಲ್ಲಿಯೂ ಪ್ರಾಣಲಿಂಗದ ಸುಜ್ಞಾನಾಚರಣೆಯೇ ಲಾವಣ್ಯವಾಗಿರ್ಪುದು, ಪುರಾತರೊಳಗೆ ಚೆನ್ನ–ಪೂರ್ವಾಚಾರ್ಯರುಗಳೊಳಗೆ ಪ್ರಾಣಲಿಂಗದ ಸುಜ್ಞಾನಾಚರಣೆಯೇ ಲಾವಣ್ಯವಾಗಿರ್ಪುದು, ಮುಂದಕ್ಕೆ ಕಾಣಬಂದರ್ಥ.[೭]

....

೫–೫ ಪ್ರಾಣ (ಚ), ೬-೬x (ಚ) ೭ + ಪ್ರಸಾದಿಸ್ಥಲ ಸಂಪೂರ್ಣ ಮಂಗಳ ಮಹಾ ಶ್ರೀ ಶ್ರೀ ಶ್ರೀ ಶ್ರೀ (ಜ).

IV– –

1–1 x (ತ).

....

ವೇದಶಾಸ್ತ್ರಾಗಮಂಗಳು ಹೇಳಿದ, ಕ್ರಿಯೋಕ್ತವಾಗಿ ಮಾಡಿದ ಪೂಜಾನೈವೇದ್ಯಂಗಳೊಳಲ್ಲಿ ಶಿವನು ಸಂತುಷ್ಟನಲ್ಲ, ಸದ್ಭಕ್ತರು ಎಂತು ಮಾಡಿದ ಪೂಜಾನೈವೇದ್ಯಂಗಳಲ್ಲಿ ಶಿವನು ಸಂತುಷ್ಟನು, ಅದು ಕಾರಣ ಸರ್ವೇಂದ್ರಿಯಸುಖಂಗಳ ಶಿವಂಗರ್ಪಿಸಬಲ್ಲ ಸದ್ಭಕ್ತರ ಕ್ರಿಯಾಚಾರಿತ್ರವೆಂತಿರ್ದಡೆಯೂ

ಶಿವಂಗೂ, ಅಂತು ಶಿವನೊಪ್ಪಿದುದೇ ಚೆನ್ನ. ಅದು ಕಾರಣ ಶಿವನೊಪ್ಪಿದ ಮಾದಾರ ಚೆನ್ನಯ್ಯ ಚೆನ್ನಾದ ರುದ್ರಗಣಂಗಳೊಳಗೆಂಬುದೀ ವಚನದ ತಾತ್ಪರ್ಯಾರ್ಥ.

೭೯೭

ಲಿಂಗವಿಕಾರಿಗೆ ಅಂಗವಿಕಾರವೆಂಬುದಿಲ್ಲ. ಜಂಗಮವಿಕಾರಿಗೆ ಧನವಿಕಾರವೆಂಬುದಿಲ್ಲ. ಪ್ರಸಾದವಿಕಾರಿಗೆ ಮನೋವಿಕಾರವೆಂಬುದಿಲ್ಲ. ಇಂತೀ ತ್ರಿವಿಧಗುಣವನಱಿದಾತನು ಅಚ್ಚ ಲಿಂಗೈಕ್ಯನು, ⁽೧⁾ಅಚಲಿತ ಮಹಿಮನು⁽೧⁾ ಕೂಡಲಸಂಗಮದೇವಾ.

I- -

ಲಿಂಗವಿಕಾರಿಗೆ–ಅಂಗದಲ್ಲಿ ಲಿಂಗಸಂಬಂಧವ ಮಾಡಿಕೊಂಡು ಲಿಂಗಪೂಜೆಯ ಮಾಡುವಾತಂಗೆ, ಅಂಗವಿಕಾರವೆಂಬುದಿಲ್ಲ–ತನುವಿನ ಮನ್ಮಥವಿಕಾರವೆಂಬುದುಂಟಾಗಿಲ್ಲವು. ಜಂಗಮವಿಕಾರಿಗೆ–ಪ್ರಾಣಜ್ಞಾನದಲ್ಲಿ ಪ್ರಾಣಾದಿದ್ರವ್ಯಪದಾರ್ಥವನ್ನು ಸೂಳೆ ಬಸವಿ ದಾಸಿ ವೇಶ್ಯೆ ಬೋಳಭಟ್ಟರು ಮೊದಲಾದವರುಗಳಿಗೆ ಕೊಟ್ಟು ಚಾಗಿಯ ಮಾಡಬೇಕೆಂಬಂಥ ದ್ರವ್ಯದ ವಿಕಾರ ಉಂಟಾಗಿಲ್ಲವು. ಪ್ರಸಾದವಿಕಾರಿಗೆ–ಆತ್ಮಾಂಗದಲ್ಲಿ ಪ್ರಸಾದಸಂಬಂಧವ ಮಾಡಿಕೊಂಡು ಪ್ರಸಾದಸೇವನೆಯ ಮಾಡುವಾತಂಗೆ, ಮನೋವಿಕಾರವೆಂಬುದಿಲ್ಲ–ಮನವು ಹಲವು ನೆನೆದು ಹಲವು ಭಾವಿಸಿ ಹಲವು ವರ್ತನೆಯೊಡನೆ ಕೂಡಿ ಚರಿಸಬೇಕೆಂಬ ಮನದ ವಿಕಾರ ಉಂಟಾಗಿಲ್ಲವು.

ಇಂತೀ–ಈ ಪ್ರಕಾರವಾದ, ತ್ರಿವಿಧಗುಣವನಱಿದಾತನು:[ತ್ರಿವಿಧಗುಣವನು–] ಲಿಂಗಪೂಜೆ ಜಂಗಮದಾಸೋಹ ಪ್ರಸಾದಸೇವನೆಯ ಮಾಡುವಂಥದನ್ನು, ಅಱಿದಾತನು–ತಿಳಿದಾತನು. ಅಚ್ಚಲಿಂಗೈಕ್ಯನು–ಬಚ್ಚಬರಿಯ ಚಿತ್ಸ್ವರೂಪವಾದ ಶಿವಲಿಂಗೈಕ್ಯನು, ಅಚಲಿತ–⁽೧⁾[ಚಲನೆಗೆ]⁽೧⁾ ಬಾರದ, ಮಹಿಮನು–ಮಹತ್ವಾತಿಶಯವುಳ್ಳಾತನು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.[೨]

....

೧–೧ ರಚನೆಗೆ(ಗ). ೨+ಪ್ರಸಾದಿಸ್ಥಲ ಸಂಪೂರ್ಣ ಮಂಗಲಮಹಾ ಶ್ರೀ ಶ್ರೀ ಶ್ರೀ ಶ್ರೀ ಶ್ರೀ (ಕ); ಇಂತೆಂಬಲ್ಲಿಗೆ ಬಸವಣ್ಣನವರ ವಚನಂಗಳಲ್ಲಿ ಪ್ರಸಾದಿಯ ಸ್ಥಲದ ವಚನಂಗಳೆಂಬ ತೃತೀಯ ಪ್ರಕರಣಂ ಸಂಪೂರ್ಣಂ ಮಂಗಳಮಹಾ ಶ್ರೀ ಶ್ರೀ. ಶ್ರೀರಸ್ತು ಶುಭಮಸ್ತು ಶ್ರೀಗುರುಭ್ಯೋನಮಃ(ಗ).

III -

ಇಂತೀ ತ್ರಿವಿಧಗುಣವಂ–ತನುಮನಧನಂಗಳನು, ಅಱಿಯದಿದ್ದರೆ–ಗುರುಲಿಂಗಜಂಗಮದಿಂದೆ ಭಿನ್ನವಿಟ್ಟು ತಿಳಿಯದಿದ್ದರೆ, ಆತನು–ಅಂತಪ್ಪ ಶರಣನು, ಅಚ್ಚ–ಸ್ವಚ್ಛವಾದ, ಲಿಂಗೈಕ್ಯನು–ಪರಶಿವಲಿಂಗದಲ್ಲೇಕಾರ್ಥವುಳ್ಳಾತನೆಂಬೆನು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.[೩]

....

೩+ಪ್ರಸಾದಿಸ್ಥಲದ ನುಡಿಗಳು ಸಮಾಪ್ತಂ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶಿವಾಯನಮಃ (ಟ); ಪ್ರಸಾದಿಸ್ಥಲದ ನುಡಿಗಳು ಸಮಾಪ್ತ ಮಂಗಳಮಹಾ ಶ್ರೀ ಶ್ರೀ ಶ್ರೀ ಶ್ರೀ ಶ್ರೀ(ಡ).

IV -

1-1 x (ತ),

....

ತ್ರಿವಿಧಲಿಂಗದಲ್ಲಿ ತ್ರಿವಿಧವನರ್ಪಿಸಿದಾತ ಪರಿಪೂರ್ಣನೆಂಬುದೀ ವಚನದರ್ಥ.[೪]

....

೪+ ಅಂತೂ ವಚನ ೯೦ಕ್ಕಂ ಮಂಗಳ ಮಹಾಶ್ರೀ ಶ್ರೀ ಶ್ರೀ (ತ).

❖❖

ಪ್ರಾಣಲಿಂಗಿಸ್ಥಲ

[ಪ್ರಾಣಲಿಂಗಿಸ್ಥಲ–ಅಂಗ ಪ್ರಾಣಂಗಳಲ್ಲಿ ಇಷ್ಟ ಪ್ರಾಣಲಿಂಗಸಂಬಂಧವ ಮಾಡಿಕೊಂಡು ಆ ಲಿಂಗದಲ್ಲಿ ಅವಿರಳಜ್ಞಾನಕ್ರಿಯಿಡಿದಾಚರಿಸುವಂಥ ಭೇದವನ್ನೇ ಹೇಳುತ್ತಿಹುದಾದ ಕಾರಣ ಇದಕ್ಕೆ ಪ್ರಾಣಲಿಂಗಿಸ್ಥಲವೆಂದು ಹೇಳಲ್ಪಟ್ಟಿತ್ತು(ಕ, ಗ.)]

ಪ್ರಾಣಲಿಂಗಿಯ ಜ್ಞಾನಿಸ್ಥಲ

I- -

ಪ್ರಾಣಲಿಂಗಿಯ ಜ್ಞಾನಿಸ್ಥಲ-ಪ್ರಾಣಲಿಂಗಿಯ ಸ್ಥಲದೊಳಗಣ ಜ್ಞಾನಿಸ್ಥಲವನ್ನು ನಿರೂಪಿಸುತ್ತಿಹರು.

೭೯೮

'ಪ್ರಾಣಲಿಂಗ ಪ್ರತಿಗ್ರಾಹಕನಾದ ಬಳಿಕ ಲಿಂಗವಿರಹಿತವಾಗಿ ನಡೆವ ಪರಿ ಇನ್ನೆಂತೋ? ಲಿಂಗವಿರಹಿತವಾಗಿ ನುಡಿವ ಪರಿ ಇನ್ನೆಂತೋ ? ಪಂಚೇಂದ್ರಿಯಸುಖವನು ಲಿಂಗವಿರಹಿತವಾಗಿ ಭುಂಜಿಸಲಾಗದು; ಲಿಂಗವಿರಹಿತವಾಗಿ ಉಗುಳ ನುಂಗಲಾಗದು, ಇಂತೆಂದುದು ಕೂಡಲಸಂಗನ ವಚನ.

I- -

ಪ್ರಾಣಲಿಂಗ-ಪ್ರಾಣಕಳಾಸ್ವರೂಪವಾದ ಇಷ್ಟಲಿಂಗವನ್ನು, ಪ್ರತಿಗ್ರಾಹಕನಾದ ಬಳಿಕ-ಆ ಇಷ್ಟಲಿಂಗದ ಚಿತ್ಕಳೆಯೇ ಅಂತರಂಗದಲ್ಲಿ ಪ್ರಾಣಲಿಂಗ ಸ್ವರೂಪಿನಿಂದ ಸಂಬಂಧವ ಮಾಡಿಕೊಂಡು ಆ ಪ್ರಾಣಲಿಂಗವನ್ನೇ ಪ್ರತ್ಯೇಕ ತತ್ತ್ವಂಗಳಲ್ಲಿ ಪ್ರತ್ಯೇಕ ಲಿಂಗಂಗಳಾಗಿ ಸಂಬಂಧವ ಮಾಡಿಕೊಂಡಾಚರಿಸುತಿದ್ದ ಮೇಲೆ, ಲಿಂಗವಿರಹಿತವಾಗಿ-ಇಷ್ಟಲಿಂಗಕ್ಕೆ ವಿಲಕ್ಷಣವಾಗಿ, ನಡೆವ ಪರಿ ಇನ್ನೆಂತೋ-ಸಮಸ್ತಕ್ರೀಗ [ಳನಾ]ಚರಿಸುವ ಬಗೆ ಇನ್ನು ಹೇಂಗೋ. ಮತ್ತಂ, ಲಿಂಗವಿರಹಿತವಾಗಿ ನಡೆವ ಪರಿ ಇನ್ನೆಂತೋ-ದಾರಿ ಬಟ್ಟೆಗಳ ಗಮಿಸುವ ಬಗೆ ಇನ್ನು ಹೇಗೋ, ಲಿಂಗವಿರಹಿತವಾಗಿ ನುಡಿವ ಪರಿ ಇನ್ನೆಂತೋ-ಮಾತು ಕಥೆ ಪ್ರಸಂಗವನಾಡುವ ಬಗೆ ಇನ್ನು ಹೇಂಗೋ.

ಪಂಚೇಂದ್ರಿಯ ಸುಖವನು-ಪಂಚೇಂದ್ರಿಯ ಮುಖದಿಂದ ಬರಲ್ಪಟ್ಟ ಪಂಚವಿಷಯಂಗಳ ಪರಿಣಾಮವನು. ಲಿಂಗವಿರಹಿತವಾಗಿ-ಪಂಚವಿಧಲಿಂಗಕ್ಕೆ ವಿಲಕ್ಷಣವಾಗಿ, ಭುಂಜಿಸಲಾಗದು-ಆತ್ಮಾರ್ಪಣವಾಗಿ ಅನುಭವಿಸಲಾಗದು. ಲಿಂಗವಿರಹಿತವಾಗಿ-ಇಷ್ಟಲಿಂಗಕ್ಕೆ ವಿಲಕ್ಷಣವಾಗಿ, ಉಗುಳ ನುಂಗಬಾರದು-ಷಡ್ರುಚಿಗಳನನುಭವಿಸಲಾಗದು, ಕೂಡಲಸಂಗನ ವಚನ-ಪರಶಿವಲಿಂಗದ ವಾಕ್ಯಾನುಭಾವವು. ಇಂತೆಂದುದು-ಹೀಂಗೆಂದು ಹೇಳುತ್ತಿಹುದು.

....

೧-೧ ಆ (ಕ.ಗ).

II- -

1 + ಪ್ರಾಣಲಿಂಗಿಯ ಸ್ಥಲ (ಚ.ಜ).

....

ಪ್ರಾಣಲಿಂಗ ಪ್ರತಿಗ್ರಾಹಕನಾದ ಬಳಿಕ-ಅಂತರಂಗದ ಚಿಲ್ಲಿಂಗವನೇ ಗುರುಮುಖದಿಂದ ಬಹಿಷ್ಕರಿಸಿ ಇಷ್ಟಲಿಂಗವಾಗಿ ಗ್ರಹಿಸಿದ ಮೇಲೆ, ಮುಂದಕ್ಕೆ ಕಾಣಬಂದರ್ಥ.

IV -

1 + ಇನ್ನು ಪ್ರಾಣಲಿಂಗಿಯ ಸ್ಥಲದ ವಚನ (ತ).

....

ಅಂತರಂಗದಲ್ಲಿ ಆತ್ಮಜ್ಯೋತಿಲಿಂಗವ ಧರಿಸಿದ ಬಳಿಕ ಪಂಚೇಂದ್ರಿಯಂಗಳ ಮನದಲಡಗಿಸಿ. ಮನವು ಲಿಂಗ ನೆನಹಿನಲಿರಬೇಕೆಂಬುದೀ ವಚನದರ್ಥ.

೭೯

[1]ಹತ್ತು ಸಾವಿರ ಗೀತವ ಮಾಡಿ ಅರ್ಥವಿಟ್ಟಲ್ಲಿ ಫಲವೇನು ಮುಟ್ಟುವ ತೆಱನನಱಿಯದನ್ನಕ್ಕ? ಕಟ್ಟಿದಡೇನು ಬಿಟ್ಟಡೇನು ಮನವು ಲಿಂಗದಲ್ಲಿ ಮುಟ್ಟದನ್ನಕ್ಕ ? ಮಾತಿನ[2]ಲ್ಲಿ[2] ಒಲಿಸಿ ಮಹ[3]ತ್ವವ[3]ಪ್ಪ ಲಿಂಗವ ಕಂಡೆಹೆನೆಂಬ ಪಾತಕರ ಮೆಚ್ಚ ನಮ್ಮ ಕೂಡಲಸಂಗಮದೇವ.

I- -

● ಹತ್ತುಸಾವಿರ ಗೀತವ-ಮೂವತ್ತೆರಡು ರಾಗ ಅರವತ್ತುನಾಲ್ಕು ಮಿಶ್ರಯುಕ್ತವಾಗಿ ಸಮಸ್ತ ಸ್ವರವಚನಂಗಳಿಂದ ರಾಗರಚನೆಯನ್ನು, ಹಾಡಿ-ಪಾಡಿ. ಅರ್ಥವಿಟ್ಟಲ್ಲಿ-ಇದು ಕಾಂಬೋಡಿ ರಾಗ ಇದು ಗುಂಡಕ್ರೀರಾಗ ಇದು ರಾಗ ಸಾಳಂಗಭೈರವಿ ಕಾಸಾಳರಾಗವೆಂದು ಅರ್ಥವ ಮಾಡಿ ಒಪ್ಪವಿಟ್ಟು ಹೇಳಿದಲ್ಲಿ, ಫಲವೇನು-ಪ್ರಯೋಜನವೇನು ಎಂಬುದರ್ಥ.

ಹತ್ತುಸಾವಿರ ಗೀತವ ಹಾಡಿ-ಸಕಲವೇದಶಾಸ್ತ್ರಾಗಮ ಪುರಾಣಂಗಳನು ಕಲಿತುಕೊಂಡು, ಅರ್ಥವಿಟ್ಟಲ್ಲಿ -ಸೂತ್ರಾರ್ಥ ಸ್ವರೂಪಾರ್ಥ ಸಂಬಂಧಾರ್ಥ ಚಿತ್ರಾರ್ಥ ಪ್ರಣವಾರ್ಥ ಭಾವಾರ್ಥಂಗಳನು ಒಪ್ಪವಿಟ್ಟು ಹೇಳಿದಲ್ಲಿ. ಫಲವೇನು-ಪ್ರಯೋಜನವೇನು. ಮುಟ್ಟುವ ತೆಱನನಱಿಯದನ್ನಕ್ಕ?-ಇಷ್ಟಮಹಾಲಿಂಗವನ್ನು ಮುಟ್ಟಿ ಮುಟ್ಟಿ ಆರಾಧಿಸುವಂಥವನು ತಿಳಿದಿರಬೇಕು. ತಿಳಿಯದಿರುವ ಪರಿಯಂತರ, ಕಟ್ಟಿದಡೇನು-ಲಿಂಗವನ್ನು ಸಜ್ಜೆ ಶಿವದಾರ ವಸ್ತ್ರದಲ್ಲಿ ಧರಿಸಿಕೊಂಡರೇನು. ಬಿಟ್ಟಡೇನು-ಆ ಲಿಂಗವನ್ನು ಹರಿದು ಹಾಕಿದರೇನು. ಆರಾಧಿಸದೆ ಬಿಟ್ಟುಕೊಟ್ಟರೇನು, ಮನವು ಲಿಂಗದಲ್ಲಿ ಮುಟ್ಟದನ್ನಕ್ಕ?-ಮನವು ಲಿಂಗಧ್ಯಾನ ಲಿಂಗಸ್ಮರಣೆಯಲ್ಲಿ ಕೀಲೈಸಬೇಕು. ಕೀಲೈಸದಿರುವ ಪರಿಯಂತರ.

ಮಾತಿನಲ್ಲಿ–ವಾಕ್ಯದಲ್ಲಿ, ಒಲಿಸಿ–ಪ್ರಸನ್ನತೆಯ ಮಾಡಿಕೊಂಡು, ಮಹತ್ವವಪ್ಪ ಲಿಂಗವ ಕಂಡೆಹೆನೆಂಬ–ಮಹತ್ವಾತಿಶಯವನುಳ್ಳ ಮಹಾಲಿಂಗದಲ್ಲಿ ಕೂಡುವಂಥ ಕೂಟವನ್ನು ಅರಿದೆನೆಂಬ, ಪಾತಕರ–ಪಂಚಮಹಾಪಾತಕರನು, ಮೆಚ್ಚ–ಮಮಕರಿಸಿಕೊಂಡು ನಿಜಮೋಕ್ಷವನ್ನು ಕರುಣಿಸಿಕೊಟ್ಟಾನೆ? ಕೊಡಲರಿಯನು. ನಮ್ಮ ಕೂಡಲಸಂಗಮದೇವ–ನಮ್ಮ ಪರಶಿವಲಿಂಗವು.

III– –

2–2 ಲೆ (ಟ, ಡ).

....

ಮುಟ್ಟುವ ತೆಱನಂ–ಸಕಲಪದಾರ್ಥವನು ಲಿಂಗ ಮುಂತಾಗಿ ಪರಿಗ್ರಹಿಸುವ ಪ್ರಕಾರವನು, ಅರಿಯದನ್ನಕ್ಕ–ಅಷ್ಟವಿಧಸಕೀಲ ಸಂಬಂಧಂಗಳಿಂದೆ ತಿಳಿಯದಿರುವತನಕಲು, ಮಾತಿನಲೆ–ಬಱಿಯ ವಾಗ್ಜಾಲ ಪ್ರಸಂಗದಿಂದಲೆ.

IV –

2–2 ಲೆ (ತ). 3–3 ತ್ತ (ತ).

....

ಮನವು ಲಿಂಗದಲ್ಲಿ ಅಡಗದೆ, ಹೇಳುವ ಕೇಳುವ ವಚನಂಗಳ ಮಾಡಿದವರ ಜ್ಞಾನವಜ್ಞಾನವೆಂಬುದೀ ವಚನದರ್ಥ.

V –

1 + ಪ್ರಾಣಲಿಂಗಿಯ ಸ್ಥಲ (ಪ).

....

ಮುಟ್ಟುವ ತೆಱನಂ : [ಮುಟ್ಟುವ–] ಸಕಲಪದಾರ್ಥವನು ಲಿಂಗ ಮುಂತಾಗಿ ಪರಿಗ್ರಹಿಸುವ, ತೆಱನಂ–ಪ್ರಕಾರವನು.

೮೦೦

ಶ್ವಾನಜ್ಞಾನ ಗಜಜ್ಞಾನ ಕುಕ್ಕುಟ ಜ್ಞಾನವೆಂಬ ಜ್ಞಾನತ್ರಯಂಗಳೇನಾದುವು? ಕೂಡಲಸಂಗಮದೇವಾ ನಿಮ್ಮನಱಿಯದ ಜ್ಞಾನವೆಲ್ಲ ಅಜ್ಞಾನ!

I– –

ಶ್ವಾನಜ್ಞಾನ–ಶುನಿಯೆಂಬುವಂಥದು ಬೂದಿಗುಂಡಿಯೊಳಗೆ ಒರಗಿಕೊಂಡಿರ್ದಲ್ಲಿ ಅದಕ್ಕೆ ಜಾತಿಸ್ಮರತ್ವವು ತಲೆದೋರಿ ನಾನು ಮೊದಲ ಜನ್ಮದಲ್ಲಿ ರಾಜನಾಗಿದ್ದೆ ಮಂತ್ರಿಯಾಗಿದ್ದೆ ಅಷ್ಟಭೋಗ

ಅಷ್ಟಮಹದೈಶ್ವರ್ಯವನ್ನು ಪಡೆದನುಭವಿಸಿಕೊಂಡಿದ್ದೆ. ನಾನು ಮಾಡಿದ ಅಕೃತ್ಯದಿಂದ ಈ ಶುನಿಜನ್ಮ ಸಂಭವಿಸಿತ್ತು. ಈಗ ಇನ್ನಾದರೂ ಒಬ್ಬರ ಕಚ್ಚಬಾರದು ಒಬ್ಬರ ಬೊಗಳಬಾರದು ಪಿಸಿತಾಹಾರವ ತಿನ್ನಬಾರದು. ಚೌಕಿಮಠಗಳಲ್ಲಾಗಲಿ ಭಕ್ತರ ಗೃಹಗಳಲ್ಲಾಗಲಿ ಆಶ್ರಯಿಸಿಕೊಂಡಿರ್ದು ಎನ್ನ ಶುನಿಜನ್ಮವ ಸಾರ್ಥಕವ ಮಾಡಿಕೊಳಬೇಕೆಂದು ಧ್ಯಾನಿಸುವಂಥದೇ ಶುನಿಜ್ಞಾನವು.

ಗಜಜ್ಞಾನ–ಸಿಂಗಳದ್ವೀಪದ ಜಾತಿ ಆನೆಯ ಕೋರೆಗೆ ಕತ್ತಿಯನ್ನು ಕಟ್ಟಿ ಸೊಂಡಿಲಿಗೆ ಸರಪಳಿಯನ್ನು ಕೊಟ್ಟು ಅರಿಬಲಕ್ಕೆ ಯುದ್ಧಕ್ಕೆ ಬಿಟ್ಟಲ್ಲಿ ತನ್ನ ಬಲವನ್ನು ಬಿಟ್ಟು ಅರಿಬಲವನ್ನು ಸಂಹರಿಸವಂಥದೇ ಗಜಜ್ಞಾನವು, ಕುಕ್ಕುಟಜ್ಞಾನ–ಬೆಳಗೊಂದು ಜಾವದಲ್ಲೆದ್ದು ಕೂಗುವಂಥದೆ ಕುಕ್ಕುಟಜ್ಞಾನವು, ಎಂಬ–ಹೀಗೆಂದು ಹೇಳುವ, ಜ್ಞಾನತ್ರಯಂಗಳ–ಶ್ವಾನಜ್ಞಾನ ಗಜಜ್ಞಾನ ಕುಕ್ಕುಟಜ್ಞಾನವೆಂಬೀ ಜ್ಞಾನ ಮೂರು, ಏನಾದುವು?–ಏನು ಪ್ರಾಪ್ತಿಯಾದವು? ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮನಱಿಯದ–ನಿಮ್ಮ ತಿಳಿಯದ, ಜ್ಞಾನವೆಲ್ಲ–ಶ್ವಾನಜ್ಞಾನ ಗಜಜ್ಞಾನ ಕುಕ್ಕುಟಜ್ಞಾನವೆಲ್ಲವು, ಅಜ್ಞಾನ–ಮರವೆ ಜ್ಞಾನವೆಂಬುದರ್ಥ. ಮತ್ತಂ,

• ಶ್ವಾನಜ್ಞಾನ–ಹಿಂದಣ ಯುಗಯುಗಾಂತರದ ಸುದ್ದಿಯನ್ನು ತಿಳಿದು ಹೇಳುವಂಥದೇ ಭೂತಜ್ಞಾನವು. ಗಜಜ್ಞಾನ–ಮುಂದಣ ಯುಗ ಯುಗಾಂತರದ ಸುದ್ದಿಯನ್ನು ತಿಳಿದು ಹೇಳುವಂಥದೇ ಭವಿಷ್ಯಜ್ಞಾನವು, ಕುಕ್ಕುಟಜ್ಞಾನ–ನಾಲ್ಕೆಂಟು ದಿವಸದೊಳಗಾಗುವಂಥ ಸುದ್ಧಿಯನ್ನು ತಿಳಿದು ಹೇಳುವಂಥದೇ ವರ್ತಮಾನ ಜ್ಞಾನವು, ಎಂಬ–ಹೀಗೆಂದು ಹೇಳುವ, ಜ್ಞಾನತ್ರಯಂಗಳು–ಭೂತಭವಿಷ್ಯದ್ವರ್ತಮಾನಂಗಳೆಂಬ ತ್ರಿಕಾಲಜ್ಞಾನಂಗಳು, ಏನಾದವು?–ಏನು ಪ್ರಾಪ್ತಿಯಾಗಿ ಹೋದವು?

ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮನಱಿಯದ–ನಿಮ್ಮ ತಿಳಿಯದ, ಜ್ಞಾನವೆಲ್ಲ–ಭೂತಭವಿಷ್ಯದ್ವರ್ತಮಾನವೆಂಬ ತ್ರಿಕಾಲ ಜ್ಞಾನತ್ರಯಂಗಳೆಲ್ಲವು, ಅಜ್ಞಾನ–ಮರವೆ ಜ್ಞಾನವು.

III–– –

ಜ್ಞಾನತ್ರಯಂಗಳೇನಾದವು–ಅವಱಿಂದೆ ಪ್ರಯೋಜನವೇನುಂಟಾದವು.

IV –

ಲಿಂಗಾಂಗಸಂಬಂಧಸ್ವರೂಪವನರಿವುದೇ ಸಮ್ಯಕ್‌ಜ್ಞಾನ, ಅಂತಪ್ಪ ಸಮ್ಯಕ್‌ಜ್ಞಾನಂಗಳು ಮೊದಲಾದ ಜ್ಞಾನಂಗಳೆಲ್ಲವು ಅಜ್ಞಾನವೆಂಬುದೀ ವಚನದ ತಾತ್ಪರ್ಯಾರ್ಥ.

೮೦೧

ಗುರು ತೋಱಿದ ಲಿಂಗವು ಮನಸ್ಥಲವಾಗಿರಲು, ಪವನಭೇದದಿಂದಱಿದಿಹೆನೆಂದಡೆ ಅದೇ [1]ದ್ರೋಹ! [1] ಇಡಾಪಿಂಗಳಾ ಸುಷುಮ್ನಾನಾಳವಿಡಿದು ಅಱಿದೆಹೆನೆಂದಡೆ ಕೂಡಲಸಂಗಮದೇವ ಮೂಗ ಕೊಯ್ಯದೆ ಮಾಂಬನೆ?

I– –

ಗುರು ತೋಱಿದ ಲಿಂಗವು–ಶ್ರೀಗುರುನಾಥನು ವೇಧಾಮಂತ್ರಕ್ರಿಯೆಗಳೆಂಬ ದೀಕ್ಷಾತ್ರಯಗಳಿಂದ ಕರುಣಿಸಿಕೊಟ್ಟಂಥ ಇಷ್ಟಮಹಾಲಿಂಗವು, ಮನ ಸ್ಥಲವಾಗಿರಲು–ಅಂತರಂಗದಲ್ಲಿ ಪ್ರಾಣಲಿಂಗವಾಗಿ ನೆಲೆಗೊಂಡಿರಲು, ಪವನಭೇದದಿಂದ–ವಾಯುಧಾರಣಯೋಗದಿಂದ, ಅಱಿದಿಹೆನೆಂದಡೆ–ತಾರಕ ಬ್ರಹ್ಮದಲ್ಲಿ ಕೂಡುವಂಥ ಕೂಟವನು ತಿಳಿದಿಹೆನೆಂದಡೆ. ಅದೇ ದ್ರೋಹ!–ಅದೇ ಅಪರಾಧವು.

ಇಡಾ ಪಿಂಗಳಾ ಸುಷುಮ್ನಾನಾಳವಿಡಿದು–ಇಡಾ ಪಿಂಗಳಾ ಸುಷುಮ್ನಾವೆಂಬ ತ್ರಿನಾಳದಲ್ಲಿ ತುಂಬಿ ಚರಿಸುವ ಪ್ರಾಣವಾಯುವನು, ದೃಢವಿಡಿದು ಅಱಿದಿಹೆನೆಂದಡೆ–ತಾರಕಬ್ರಹ್ಮದ ಸ್ವಸ್ವರೂಪವನ್ನು ತಿಳಿದೇನೆಂದರೆ, ಕೂಡಲಸಂಗಮದೇವ–ಪರಶಿವಲಿಂಗವು, ಮೂಗ ಕೊಯ್ಯದೆ ಮಾಂಬನೆ?–ಆಚಾರಾಂಗವೆಂಬ ಘ್ರಾಣವನಪಹರಿಸಿ ಮಾನಭಂಗವ ಮಾಡಿ ಭವಕ್ಕೆ ಹಾಕದೆ ಬಿಟ್ಟಾನೆ? ಬಿಡನು.

III– –

ಗುರೂಪದೇಶದಿಂದಂಗದ ಮೇಲೆ ಸಂಬಂಧವಾದಿಷ್ಟಲಿಂಗ ಮನಸ್ಥಲದಲ್ಲಿ ಪ್ರಾಣಲಿಂಗವಾಗಿ ನೆಲಸಿರಲು ಎಂಬುದೀಗ ಗುರು ತೋಱಿದ ೧[ಲಿಂಗವು]೧ ಮನಸ್ಥಲವಾಗಿರಲು ಎಂಬ ಶಬ್ದಕ್ಕರ್ಥ. ಈಡೆ ಪಿಂಗಳೆಯಲ್ಲಿ ಚರಿಸುವ ವಾಯುವನು ಕರಣಮುದ್ರಾಸನಬಂಧಾದಿಗಳಿಂದ ಭೃಕುಸ್ಥಲದಲ್ಲಿ ತಡೆದುನಿಲ್ಲಿಸಿ ಇಷ್ಟಲಿಂಗದಿಂದ ಹೊರತಾಗಿ ಭಿನ್ನವಿಟ್ಟು ಅಂತರ್ಲಕ್ಷ್ಯಾನುಸಂಧಾನದಿಂದ ಪರಬ್ರಹ್ಮನಱಿಯಬೇಕೆಂದಿಚ್ಛೈಸುವುದೇ ಶಿವದ್ರೋಹವೆಂಬುದೀಗ, ಪವನಭೇದದಿಂದಱಿದಿಹೆನೆಂದಡೆ ಅದೇ ದ್ರೋಹವೆಂಬ ಶಬ್ದಕ್ಕರ್ಥ.

....

೧-೧ x(ಟ,ಡ).

IV– –

ಮನದ ಮಧ್ಯದಲ್ಲಿದ್ದ ಲಿಂಗದಲ್ಲಿಯೇ ಮನವ ನಿಲಿಸದೆ ಇಡಾ ಪಿಂಗಳದ ವಾಯುವ ನಿಲಿಸಬೇಕೆಂಬುದು ಅಜ್ಞಾನವೆಂಬುದೀ ವಚನದರ್ಥ.

V– –

1–1 ದೋಹದ (ಪ).

....

ಈಡೆ ಪಿಂಗಳೆಯಲ್ಲಿ ಚರಿಸುವ ವಾಯುವನು ಕರಣಮುದ್ರಾಸನಬಂಧಾದಿಗಳಿಂದ ಭೃಕುಟಿಸ್ಥಲದಲ್ಲಿ ತಡೆದು ನಿಲ್ಲಿಸಿ, ಇಷ್ಟಲಿಂಗದಿಂದ ಹೊಱತಾಗಿ ಭಿನ್ನವಿಟ್ಟು ಅಂತರ್ಲಕ್ಷ್ಯಾನುಸಂಧಾನದಿಂದ ಪರಬ್ರಹ್ಮವನಱಿಯಬೇಕೆಂದಿಚ್ಛೈಸುವುದೆ ೧[ದ್ರೋಹ]೧ ವೆಂಬುದೀಗ, ಪವನಭೇದದಿಂದಱಿದಿಹೆನೆಂದಡ ಅದೇ ೧[ದ್ರೋಹ]೧

....

1–1 ದೋಹನ (ಪ).

೮೦೨

ಕಬ್ಬುನ ಪರುಷವೇಧಿಯಾದಡೇನು, ಕಬ್ಬುನ ಹೊನ್ನಾಗದೋ[1]ಡಾ[1] ಪರುಷವದೇಕೋ ? ಮನೆಯೊಳಗೆ ಕತ್ತಲೆ ಹಜೆಯದೊ[1]ಡಾ[1] ಜ್ಯೋತಿಯದೇಕೋ? ಕೂಡಲಸಂಗಮದೇವರ [2]ಮನ[2] ಮಟ್ಟಿ ಪೂಜಿಸಿ ಕರ್ಮ ಹಜೆಯದೋ [2]ಡಾ[2] ಪೂಜೆಯದೇಕೋ?

....

1–1 ಡೆ (ಕ.ಗ).

I– –

ಕಬ್ಬುನ–ಕಾರ್ಬೊನ್ನವು, ಪರುಷವೇಧಿಯಾದಡೇನು–ಪರುಷದ ಖಣಿ ಸೋಂಕಿದರೇನು, ಕಬ್ಬುನ–ಕಾರ್ಬೊನ್ನವು, ಹೊನ್ನಾಗದೊಡೆ–ಕಾರ್ಬೊನ್ನಿನ ವರ್ತನೆ ನಷ್ಟವಾಗಿ ಸುವರ್ಣವಾಗಬೇಕು. ಆಗದಿರುವ ಪರಿಯಂತರ, ಪರುಷವದೇಕೋ–ಪರುಷವನ್ನು ಸಂದುಕಗಳಲ್ಲಿ ಪೆಟ್ಟಿಗೆಗಳಲ್ಲಿ ಮಡಗಿ ಜೋಕೆ ಮಾಡಿಕೊಂಡಿರಬೇಕೆಂಬ ಘೋರ ಏನು ಕಾರಣಕ್ಕೆ ? ಸಲ್ಲದು. ಮನೆಯೊಳಗೆ–ಮಂದಿರದಲ್ಲಿ, ಕತ್ತಲೆ ಹಜೆಯದೊಡೆ–ಕಾವಳವು ನಷ್ಟವಾಗಬೇಕು ನಷ್ಟವಾಗದೆ ಇದ್ದರೆ, ಜ್ಯೋತಿಯದೇಕೋ? –ದೀಪವನ್ನು ಮುಟ್ಟಿಸಿದಲ್ಲಿ ಕಾವಳವೆಲ್ಲವೂ ಹೋಗಿ ಬೆಳಗು ಪ್ರಭಾವಿಸಬೇಕು. ಪ್ರಭಾವಿಸದೆ ಇದ್ದರೆ ಆ ದೀಪವನ್ನು ಚಾಟಿನಲ್ಲಿಟ್ಟು ಬತ್ತಿಯನ್ನು ಹಾಕಿ ಎಣ್ಣೆಯ ನೀಡಿ ಜೋಕೆ ಮಾಡಿಕೊಂಡಿರಬೇಕೆಂಬಂಥ ಘೋರ ಏನು ಕಾರಣಕ್ಕೆ? ಸಲ್ಲದು.

ಕೂಡಲಸಂಗಮದೇವರ–ಇಷ್ಟಮಹಾಲಿಂಗವನ್ನು, ಮನಮುಟ್ಟಿ ಪೂಜಿಸಿ–ಮನಶುದ್ಧವಾಗಿ ಆರಾಧಿಸಿ, ಕರ್ಮಹಜೆಯದೊಡೆ–ಸಂಚಿತಾದಿ ಕರ್ಮತ್ರಯಂಗಳ ವರ್ತನೆ ನಷ್ಟವಾಗಬೇಕು. ನಷ್ಟವಾಗದೆ ಇದ್ದರೆ, ಪೂಜೆಯದೇಕೋ–ಆ ಲಿಂಗವನ್ನು ತ್ರಿಕಾಲಂಗಳಲ್ಲಿ ಆರಾಧಿಸಬೇಕೆಂಬಂಥ ಘೋರ ಯಾತಕ್ಕೆ? ಸಲ್ಲದು.

II– –

2–2 x (ಚ.ಜ).

....

ಕಬ್ಬುನ ಪರುಷವೇಧಿಯಾದಡೇನು !–ಪಂಚಕರಣಸಪ್ತಧಾತುಯುಕ್ತವಾದ ದೇಹಭಾವನುಳ್ಳ ಜೀವ[ನ]ನು ಮಹಾಜ್ಞಾನಪಾಂಡುರಸ್ವರೂಪವಾದ ಗುರುಮೂರ್ತಿಯು ಅನುಗ್ರಹ ಮಾಡಿದರೇನು? ಕಬ್ಬುನ ಹೊನ್ನಾಗದಡಾ ಪರುಷವದೇಕೋ ?–ಆ ದೇಹಭಾವವು ನಷ್ಟವಾಗಿ ಚಿತ್ಪ್ರಕಾಶಜ್ಞಾನಿಯಾಗದಿರ್ದಡೆ ಆ ಮಹಾಜ್ಞಾನಪಾಂಡುರಸ್ವರೂಪವಾದ ಗುರುಮೂರ್ತಿಯನೇನ ಮಾಡಬೇಕು ? ಮನೆಯೊಳಗೆ ಕತ್ತಲೆ ಹಜೆಯದೊಡಾ ಜ್ಯೋತಿಯದೇಕೋ ?–ಅಂತರಂಗವೆಂಬ ಗ್ರಹದಲ್ಲಿ ಅಜ್ಞಾನಾಂಧಕಾರವು ನಷ್ಟವಾಗದಿರ್ದೊಡೆ ಆ ಜ್ಞಾನದೀಪ್ತಿಯನೇನ ಮಾಡಬೇಕು?

ಕೂಡಲಸಂಗಮದೇವರ ಮುಟ್ಟಿ ಪೂಜಿಸಿ ಕರ್ಮ ಹರಿಯದೊಡಾ ಪೂಜೆಯದೇಕೋ?–ಪರಶಿವಲಿಂಗವನು ಸರ್ವಾಂಗದಲ್ಲಿ ಸರ್ವಲಿಂಗವಾಗಿ ಸ್ಪರ್ಶನಗೆಯ್ದು ತ್ರಿಕಾಲಪಂಚಕಾಲಂಗಳಲ್ಲಿ ಅರ್ಚಿ ೧[ಸೆ]೧ ಸಂಚಿತಾದಿ ಕರ್ಮತ್ರಯಂಗಳು ನಷ್ಟವಾಗದಿರ್ದಡೆ ಆ ಅರ್ಚನೆಯನೇನ ಮಾಡಬೇಕು.

....

೧–೧ ಸಿ (ಚ.ಜ).

III– –

ಕಬ್ಬುನ ಹೊ ೨[ನ್ನಾ]೨ಗದೊಡೆ–ಕಿಲುಬುಗಬ್ಬುನದ ಗುಣ ಕೆಡದೆ ಇದ್ದರೆ, ಆ ಪರುಷವದೇಕೋ?–ಆ ಸಿದ್ಧರಸವಿದ್ದು ಏನು ಪ್ರಯೋಜನವೋ?

....

೨–೨x (ಟ).

IV –

ಮನವು ಲಿಂಗವ ಕೂಡದೆ. ಗುರೂಪದೇಶವಾದ ಮಂತ್ರಂಗಳಿಂದ ಅಹುದಿಲ್ಲಾಯೆಂಬುದೀ ವಚನದರ್ಥ.

೮೦೩

ಅಹಂಕಾರ ಮನವನಿಂಬುಗೊಂಡಲ್ಲಿ ಲಿಂಗ ತಾನೆಲ್ಲಿಪ್ಪುದೋ? ಅಹಂಕಾರಕ್ಕೆ ಎಡೆಗೊಡದೆ ಲಿಂಗ[1]ತನುವಾರಬೇಕು. ಅಹಂಕಾರ ರಹಿತವಾದಲ್ಲಿ ಸನ್ನಿಹಿತ ಕಾಣಾ, ಕೂಡಲಸಂಗಮದೇವ.

I –

ಅಹಂಕಾರ ಮನವನಿಂಬುಗೊಂಡಲ್ಲಿ–೧[ಅಹಂ ಅಹಂ]೧ಯೆಂಬ ಮೂಲ ಅಹಂಕಾರವು ಮನಸ್ಸನ್ನು ಒಳಕೊಂಡಲ್ಲಿ. ಲಿಂಗ ತಾನೆಲ್ಲಿಪ್ಪುದೋ–ಪ್ರಾಣಲಿಂಗವು ತಾನೆಲ್ಲಿ ನೆಲೆಗೊಂಬುದೊ, ಅಹಂಕಾರಕ್ಕೆ–೧[ಅಹಂ ಅಹಂ]೧ಯೆಂಬ ಮೂಲ ಅಹಂಕಾರಕ್ಕೆ, ಎಡೆಗೊಡದೆ–ಇಂಬುಗೊಡದೆ, ಲಿಂಗತನುವಾಗಿರಬೇಕು–ಲಿಂಗತನುವೇ ಚಿತ್ತು, ಆ ಚಿತ್ತೇ ತನ್ನಂಗವಾಗಿರಬೇಕು, ಅಹಂಕಾರ–೧[ಅಹಂ ಅಹಂ]೧ ಯೆಂಬ ಮೂಲ ಅಹಂಕಾರವು. ರಹಿತವಾದಲ್ಲಿ–ವಿಲಕ್ಷಣವಾದಲ್ಲಿ, ಕೂಡಲಸಂಗಮದೇವ–ಪರಶಿವಲಿಂಗವು. ಸನ್ನಿಹಿತ ಕಾಣಾ–ಅಂತರಂಗದಲ್ಲಿ ಪೂರ್ಣ ಪ್ರಾಣಲಿಂಗವಾಗಿ ನೆಲೆಗೊಂಡಿರ್ಪನು ಕಂಡಾ.

....

೧–೧ ನಾಹಂ ನಾಹಂ (ಕ.ಗ).

III– –

1 + ವೇ (ಟ, ಡ).

....

ಲಿಂಗವೇ ತನುವಾಗಿರಬೇಕು–ಅಂಗವೇ ಲಿಂಗ, ಲಿಂಗವೇ ಅಂಗವಾಗಿ ಸಂಬಂಧವಾಗಿರಬೇಕು.

IV– –

ನಾನೆಂಬ ಅಹಂಕಾರವಿದ್ದಲ್ಲಿ ಲಿಂಗವಿಲ್ಲ. ನಾನೆಂಬ ಅಹಂಕಾರವಡಗಿದರೆ ಲಿಂಗವಿಹುದೆಂಬುದೀ ವಚನದರ್ಥ.

೮೦೪

ನುಡಿದಡೆ ಮುತ್ತಿನ ಹಾರದಂತಿರಬೇಕು. ನುಡಿದಡೆ ಮಾಣಿಕ್ಯದ ದೀಪ್ತಿಯಂತಿರಬೇಕು. ನುಡಿದಡೆ ಸ್ಫಟಿಕದ ಸಲಾಕೆಯಂತಿರಬೇಕು. ನುಡಿದಡೆ ಲಿಂಗಮೆಚ್ಚಿ ಅಹುದಹುದೆನಬೇಕು. ನುಡಿಯೊಳಗಾಗಿ ನಡೆಯದಿದ್ದಡೆ ಕೂಡಲಸಂಗಮದೇವನೆಂತೊಲಿವನಯ್ಯ?

I– –

ನುಡಿದಡೆ–ಶಿವತತ್ತ್ವಜ್ಞಾನಾನುಭಾವದ ಪ್ರಸಂಗವನಾಡಿದರೆ, ಮುತ್ತಿನ ಹಾರದಂತಿರಬೇಕು–ಮುತ್ತಿಗೂ ಮುತ್ತಿನ ಪ್ರಕಾಶಕ್ಕೂ ಹೇಗೆ ಭಿನ್ನವಿಲ್ಲದಿರುವುದೋ ಹಾಂಗೆ ಅಂಗಕ್ಕೂ ಲಿಂಗಕ್ಕೂ ಭಿನ್ನವಿಲ್ಲವೆಂದು ಅಂಗವು ಇಷ್ಟಲಿಂಗದಲ್ಲಿ ಕೂಡುವಂಥದನ್ನೇ ಬೋಧಿಸಬೇಕು. ನುಡಿದಡೆ–ಶಿವತತ್ತ್ವಜ್ಞ್ಯಾನಾನುಭಾವದ ಪ್ರಸಂಗವನಾಡಿದರೆ. ಮಾಣಿಕ್ಯದ ದೀಪ್ತಿಯಂತಿರಬೇಕು–ಮಾಣಿಕಕ್ಕೂ ಮಾಣಿಕದ ಪ್ರಕಾಶಕ್ಕೂ ಹೇಂಗೆ ಭಿನ್ನವಿಲ್ಲದೆ ಇರುತ್ತಿಹುದೋ ಹಾಂಗೆ ಪ್ರಾಣಕ್ಕೂ ಪ್ರಾಣಲಿಂಗಕ್ಕೂ ಭಿನ್ನವಿಲ್ಲವೆಂದು ಪ್ರಾಣವು ಪ್ರಾಣಲಿಂಗದಲ್ಲಿ ಕೂಡಿರಬೇಕೆಂದು ಬೋಧಿಸಬೇಕು.

ನುಡಿದಡೆ–ಶಿವತತ್ತ್ವ ಜ್ಞಾನಾನುಭಾವದ ಪ್ರಸಂಗವನಾಡಿದರೆ. ಸ್ಫಟಿಕದ ಸಲಾಕೆಯಂತಿರಬೇಕು–ಸ್ಫಟಿಕಕ್ಕೂ ಸ್ಫಟಿಕದ ಪ್ರಕಾಶಕ್ಕೂ ಹೇಂಗೆ ಭಿನ್ನವಿಲ್ಲದಿರುವುದೋ ಹಾಂಗೆ ಆತ್ಮಕ್ಕೂ ಭಾವಲಿಂಗಕ್ಕೂ ಭಿನ್ನವಿಲ್ಲವೆಂದು ಆತ್ಮನು ಭಾವಲಿಂಗದಲ್ಲಿ ಕೂಡಿರಬೇಕೆಂದು ಬೋಧಿಸಬೇಕು. ನುಡಿದಡೆ–ಶಿವ ತತ್ತ್ವಜ್ಞಾನಾನುಭಾವದ ಪ್ರಸಂಗವನಾಡಿದರೆ, ಲಿಂಗ–ಮಹಾಲಿಂಗವು, ಮಚ್ಚಿ–ಮಮಕರಿಸಿ, ಅಹುದಹುದೆನಬೇಕು–ತ್ರಿವಿಧಂಗದಲ್ಲಿ ತ್ರಿವಿಧಲಿಂಗವಾಗಿ ನೆಲೆಗೊಳ್ಳಬೇಕು.

ನುಡಿಯೊಳಗಾಗಿ–ಶಿವತತ್ತ್ವಜ್ಞಾನಾನುಭಾವದ ಪ್ರಸಂಗದೊಳಗಾಗಿ. ನಡೆಯದಿದ್ದಡೆ–ಹೀಗೆಂದು ಹೇಳಿಕೊಂಡ ಹಾಂಗೆ ಆಚರಿಸಬೇಕು. ಆಚರಿಸದಿದ್ದರೆ. ಕೂಡಲಸಂಗಮದೇವ–ಪರಶಿವಲಿಂಗವು. ಎಂತೊಲಿವನಯ್ಯ–ಹೇಂಗೆ ಒಲಿದು ನಿಜಮೋಕ್ಷವನ್ನು ಕರುಣಿಸಿಕೊಟ್ಟಾನು? ಕರುಣಿಸಿಕೊಡನು.

II– –

ನುಡಿದಡೆ ಮುತ್ತಿನಹಾರದಂತಿರಬೇಕು–ಶಿವತತ್ತ್ವಜ್ಞಾನಾನುಭಾವವನೊಚಿಸಿದರೆ ಮೌಕ್ತಿಕದ ಮಾಲೆಯ ಹಾಂಗೆ ಶುದ್ಧಜ್ಞಾನಿಯಾಗಿರಬೇಕು. ನುಡಿದಡೆ ಮಾಣಿಕ್ಯದ ದೀಪ್ತಿಯಂತಿರಬೇಕು–ಮುಕ್ತಿಕ್ರಿಯಾಸಂಚಿತ ಸುಸಂಕಥಾಗೋಷ್ಠಿಯನೊಚಿಸಿದರೆ ೧ಎಳೆ೧ಯ ಮಾಣಿಕದ ಹಾಂಗೆ ಹೊಳೆವ

ಜ್ಞಾನಜ್ಯೋತಿಯಾಗಿರಬೇಕು. ನುಡಿದಡೆ ಸ್ಫಟಿಕದ ಸಲಾಕೆಯಂತಿರಬೇಕು-ಪ್ರಣವಾರ್ಥವನೊಚಿಸಿದರೆ ಪಳಕಿನ ಸರದ ಹಾಂಗೆ ನಿರ್ಮಲಜ್ಞಾನಿಯಾಗಿರಬೇಕು. ನುಡಿದಡೆ ಲಿಂಗಮೆಚ್ಚಿ ಅಹುದಹುದೆನಬೇಕು-ಜ್ಞಾನಾನುಭಾವವನೊಚಿಸಿದರೆ ಪರಶಿವಲಿಂಗ ಒಲಿದು ಈತ ಭಕ್ತಿಸ್ಥಲವುಳ್ಳಾತನಹುದು; ಈತ ಮಾಹೇಶ್ವರಸ್ಥಲವುಳ್ಳಾತನಹುದೆನಬೇಕು. ನುಡಿಯೊಳಗಾಗಿ ನಡೆಯದಿದ್ದಡೆ ಕೂಡಲಸಂಗಮದೇವ ನೆಂತೊಲಿವನಯ್ಯಾ ಜ್ಞಾನಾನುಭಾವ[೨]ದ[೨] ವಚಸ್ಸಿನೊಳಗಾಗಿ ಕ್ರೀವಿಡಿದಾಚರಿಸದಿದ್ದರೆ ಪರಶಿವಲಿಂಗವು ಹೇಂಗೆ ಮೆಚ್ಚುವನಯ್ಯಾ.

....

೧-೧ ಯಳಿ(ತ). ೨-೨ ವ (ಜ).

III- -

ನುಡಿದಡೆ-ವಾಕ್‌ಜ್ಞಾನಾನುಭಾವದಿಂದ ಪ್ರಸಂಗಿಸಿದರೆ, ಮುತ್ತಿನ ಹಾರದಂತಿರಬೇಕು-ಮೌಕ್ತಿಕದ ದಾಮದ ಹಾಂಗೆ ನೇರಿತ್ತಾಗಿ ನಿರ್ಮಲವಾಗಿರಬೇಕು. ನುಡಿದಡೆ-ವಾಕ್‌ಜ್ಞಾನಾನುಭಾವದಿಂದ ಪ್ರಸಂಗಿಸಿದರೆ, [ಸ್ಫಟಿಕದ ಸಲಾಕೆಯಂತಿರಬೇಕು-] ಪಳಕಿನ ಸಲಾಕೆಯ ಹಾಂಗೆ ಅಂತರಂಗ ಬಹಿರಂಗ ಒಂದೇಯಾಗಿರಬೇಕು.

IV- -

ಮಂತ್ರಂಗಳಾದ ಮಾತನೆ ನುಡಿವುದು. ಪರಮಜ್ಞಾನಾನುಭಾವವಾದ ಮಾತನೆ ಆಡುವುದು, ನುಡಿದಂತೆ ನಡೆದರೆ ಲಿಂಗಮೆಚ್ಚುವನೆಂಬುದೀ ವಚನದರ್ಥ.

೮೦೫

ಮನದ ಕೊನೆಯ ಮೊನೆಯ ಮೇಲೆ ಮನೆಯ ಮಾಡಿಕೊಂಡಿಪ್ಪನೊಬ್ಬ ದಾಸೋಹಿ. ಆದಿವಿಡಿದು ಬಂದಾತನೇ ಭಕ್ತ, ಅನಾದಿವಿಡಿದು ಬಂದಾತನೇ ಜಂಗಮ! ಆದಿ ಗುರು, ಅನಾದಿ ಶಿಷ್ಯ! ಈ ಉಭಯ ಕುಳಸ್ಥಳವ ಬಲ್ಲಡೆ ಆತ ಲಿಂಗಸಂಬಂಧಿ, ಕೂಡಲಸಂಗಮದೇವಾ.

I- -

ಮನದ ಕೊನೆಯ ಮೊನೆಯ ಮೇಲೆ-ಮನೋಹರವಾದ ರಮಣೀಯವಾದ ನೆನಹಿನಾಗ್ರದಲ್ಲಿ, ಮನೆಯಮಾಡಿಕೊಂಡಿಪ್ಪ-ಉನ್ಮನಿಯ ಮನಸ್ಸೆಂಬ ಆಲಯವ ಮಾಡಿಕೊಂಡಿರುವ, ಒಬ್ಬ ದಾಸೋಹಿ-ಒಬ್ಬ ಶಿವದಾಸೋಹಿಯಾದ ಪ್ರಾಣಲಿಂಗದೇವನು, ಆದಿವಿಡಿದು ಬಂದಾತನೇ-ಚಿತ್ತನ್ನೇ ಅಂಗವ ಮಾಡಿಕೊಂಡು ಬಂದಾತನೇ. ಭಕ್ತ-ನಿರ್ವಂಚಕ ಸದ್ಭಕ್ತನು, ಅನಾದಿವಿಡಿದು ಬಂದಾತನೇ-ಚಿದ್ಘನಲಿಂಗವನ್ನೇ ಪ್ರಾಣವ ಮಾಡಿಕೊಂಡು ಬಂದಾತನೇ, ಜಂಗಮ-ಜ್ಞಾನಿಜಂಗಮವು. ಆದಿ ಗುರು-ನಿಃಕಲಬ್ರಹ್ಮದ ಸದ್ರೂಪವೇ ಗುರು, ಅನಾದಿ ಶಿಷ್ಯ-ನಿಃಕಲಬ್ರಹ್ಮದ ಚಿದ್ರೂಪವೇ ಶಿಷ್ಯನು.

ಈ ಉಭಯ ಕುಳಸ್ಥಳವ-ಭಕ್ತನೂ ಶಿಷ್ಯನೂ ಚಿತ್ಸ್ವರೂಪು ಗುರುವೂ ಜಂಗಮವೂ ಚಿದ್ಘನಲಿಂಗಸ್ವರೂಪುವೆಂಬುವಂಥದನು, ಬಲ್ಲಡೆ-ಅರಿದು ಬಲ್ಲರೆ, ಆತನೇ-ಅಂತಪ್ಪ ಶಿವಶರಣನೇ, ಲಿಂಗಸಂಬಂಧಿ-ಅಂಗದಲ್ಲಿ ಇಷ್ಟಲಿಂಗ ಪ್ರಾಣದಲ್ಲಿ ಪ್ರಾಣಲಿಂಗ ಸಂಬಂಧಿಯು, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

II- -

ಮನದ-ಹೃದಯದ, ಕೊನೆಯ-ಅಜ್ಞಾಚಕ್ರದ, ಮೊನೆಯ ಮೇಲೆ-ಬ್ರಹ್ಮರಂಧ್ರದಗ್ರದಲ್ಲಿ, ಮನೆಯ ಮಾಡಿಕೊಂಡಿಪ್ಪನೊಬ್ಬ ದಾಸೋಹಿ-ಆಶ್ರಯವ ಮಾಡಿಕೊಂಡಿರ್ಪನೊರ್ವನಾದ ನಿಃಕಲಲಿಂಗವೆಂಬ ದಾಸೋಹಿ. ಅದಿವಿಡಿದು ಬಂದಾತನೇ ಭಕ್ತ-ಆ ನಿಃಕಲಲಿಂಗವನೇ ಮಹಾಲಿಂಗವಾಗಿ ಗ್ರಹಿಸಿ ಬಂದಾತನೇ ಅಖಂಡಭಕ್ತನು, ಅನಾದಿವಿಡಿದು ಬಂದಾತನೇ ಜಂಗಮ-ಆ ನಿಃಕಲಲಿಂಗವನೇ ಪ್ರಾಣಲಿಂಗವಾಗಿ ಗ್ರಹಿಸಿ ಬಂದ ಅಖಂಡಭಕ್ತನೇ ಗುರುಸ್ವರೂಪ, ಅನಾದಿಶಿಷ್ಯ-ಆ ನಿಃಕಲಲಿಂಗವನೇ ಪ್ರಾಣಲಿಂಗವಾಗಿ ಗ್ರಹಿಸಿಬಂದ ಮಹಾಜ್ಞಾನಿ ಜಂಗಮವೇ ಶಿಷ್ಯಸ್ವರೂಪ.

ಈ ಉಭಯಕುಳಸ್ಥಳವ ಬಲ್ಲಡೆ ಆತ ಲಿಂಗಸಂಬಂಧಿ ಕೂಡಲಸಂಗಮದೇವಾ-ಈ ದೇವಭಕ್ತರುಗಳ ಗುರುಶಿಷ್ಯರ ಇಷ್ಟಪ್ರಾಣಲಿಂಗದಾಚರಣೆಯನು ತಿಳಿದು ಬಲ್ಲರೆ ಆತನೇ ಅಂಗದಲ್ಲಿ ಇಷ್ಟಲಿಂಗಸಂಬಂಧಿ ಮನದಲ್ಲಿ ಪ್ರಾಣಲಿಂಗಸಂಬಂಧಿ ಎಲೆ ಲಿಂಗವೆ.

● ಮತ್ತಂ, ಮನದ ಮನೋಹರದ ರಮಣೀಯ ತೂರ್ಯಾಗ್ರದಲ್ಲಿ ಗೃಹವ ಮಾಡಿಕೊಂಡಿಹ ಪ್ರಾಣಲಿಂಗವೆಂಬ ದಾಸೋಹಿ. ಆ ಪ್ರಾಣ ಲಿಂಗವನೇ ಇಷ್ಟಲಿಂಗವಾಗಿ ಗ್ರಹಿಸಿ ಬಂದಾತನೇ ಅಖಂಡಭಕ್ತನು. ಆ ಪ್ರಾಣಲಿಂಗವನೇ ನಿಃಕಲಲಿಂಗವಾಗಿ ಗ್ರಹಿಸಿ ಬಂದಾತನೇ ಮಹಾಜ್ಞಾನಿ ಜಂಗಮವು. ಆ ಪ್ರಾಣಲಿಂಗವನೇ ಇಷ್ಟಮಹಾಲಿಂಗವಾಗಿ ಗ್ರಹಿಸಿ ಬಂದ ಅಖಂಡಭಕ್ತನೇ ಗುರುಸ್ವರೂಪ. ಆ ಪ್ರಾಣಲಿಂಗವನೇ ನಿಃಕಲಲಿಂಗವಾಗಿ ಗ್ರಹಿಸಿ ಬಂದ ಮಹಾಜ್ಞಾನಿಜಂಗಮವೇ ಶಿಷ್ಯಸ್ವರೂಪ. ಈ ಇಷ್ಟ ಪ್ರಾಣಲಿಂಗ ದೇವ ಭಕ್ತರ ಆಚರಣೆಯನು ತಿಳಿದು ಬಲ್ಲರೆ ಆತನೇ ಇಷ್ಟಲಿಂಗ ಸಂಬಂಧಿಯಹುದು, ಪ್ರಾಣಲಿಂಗ ಸಂಬಂಧಿಯಹುದು.

III- -

ಶರಣನ ಧ್ಯಾನಾಗ್ರದ ರಮಣೀಯಸ್ಥಲದಲ್ಲಿ ಸದಾಚಾರಸದ್ಭಕ್ತಿಪ್ರವರ್ತನೆಯನುಳ್ಳ ಪರಶಿವಲಿಂಗವು ಆಶ್ರಯವ ಮಾಡಿಕೊಂಡು ಪ್ರಾಣಲಿಂಗವಾಗಿ ನೆಲಸಿರ್ಪನೆಂಬುದೀಗ ಮನದ ಕೊನೆಯ, ಮೇಲೆ ಮನೆಯ ಮಾಡಿಕೊಂಡಿಪ್ಪನೊಬ್ಬ ದಾಸೋಹಿ ಎಂಬ ಶಬ್ದಕ್ಕರ್ಥ. ಆ ನಿಃಕಲಪರಶಿವನ ಸದ್ರೂಪವೇ ಶಿಷ್ಯನ ಬೋಧೋಪದೇಶ ಕಾರಣಾರ್ಥವಾಗಿ ಗುರುಸ್ವರೂಪವಾಯಿತ್ತೆಂಬುದೀಗ ಅದಿವಿಡಿದು ಬಂದಾತನೇ ಭಕ್ತನೆಂಬ ಶಬ್ದಕ್ಕರ್ಥ. ಆ ನಿಃಕಲಪರಶಿವನ ಚಿದ್ರೂಪವೇ ಗುರೂಪದೇಶ ಕಾರಣಾರ್ಥವಾಗಿ ಶಿಷ್ಯನಾಯಿತ್ತೆಂಬುದೀಗ ಅನಾದಿವಿಡಿದು ಬಂದಾತನೇ ಜಂಗಮವೆಂಬ ಶಬ್ದಕ್ಕರ್ಥ.

IV- -

ಅಜಿವೇ ಮೊದಲು. ಅಜುಹಿಸಿಕೊಂಬುದೇ ಕಡೆ. ಈ ಎರಡೂ ಒಂದಾದುದೇ ಲಿಂಗ. ಇದು ಹೃದಯದಲ್ಲಿ ಸಾಹಿತ್ಯವಾಗಿಪ್ಪುದೆಂಬುದೀ ವಚನದರ್ಥ.

೮೦೬

ಅರಿದರಿದು ಸಮಗಾಣಿಸಬಾರದು, ತ್ರಾಸಿನ ಕಟ್ಟಳೆಯಂತಿನಿತು ವೆಗ್ಗಳವಾದಡೆ ಈಶ್ವರ [1][ನೊಡೆ][1] [2]ಹಾಕದೆ ಮಾಣ್ಬನೆ?[2] ಪಾತ್ರಾಪಾತ್ರವೆಂದು ಕಂಡಡೆ ಶಿವನೆಂತು ಮೆಚ್ಚುವನು? ಜೀವ ಜೀವಾತ್ಮ ಸರಿಯೆಂದು ಕಂಡಡೆ ಸಮವೇಧಿಸದಿಪ್ಪನೆ ಶಿವನು? ತನ್ನ ಮನದಲ್ಲಿ "ಯತ್ರ ಜೀವಃ ತತ್ರ ಶಿವಃ" ಎಂದು ಸರ್ವಜೀವ ದಯಾಪಾರಿಯಾದಡೆ ಕೂಡಲಸಂಗಮದೇವನು ಕೈಲಾಸದಿಂದ ಬಂದು ಎತ್ತಿಕೊಳ್ಳದಿಪ್ಪನೆ?

....

೧-೧ ನೋಡಿ ವದೆಯ (ಕ); ವದೆ (ಗ)

I- -

ಅರಿದರಿದು-ದೇವನಾದದ್ದು ಭಕ್ತನಾದದ್ದು ಪದಾರ್ಥವಾದದ್ದು ಅಂಗವಾದದ್ದು ಲಿಂಗವಾದದ್ದು ಪೂಜಾಕ್ರಿಯಗಳಾದದ್ದು ಒಂದೇ ವಸ್ತುವೆಂದು ತಿಳಿತಿಳಿದು, ಸಮಗಾಣಿಸಬಾರದು-ಸಮರಸಭಾವದಿಂದ ಗುರುಭಕ್ತಿ ಲಿಂಗಪೂಜೆ ಜಂಗಮದಾಸೋಹವನ್ನು ಮಾಡೇನೆಂದರೆ ಅಶಕ್ಯವಾಗಿರ್ಪುದು. ತ್ರಾಸಿನ ಕಟ್ಟಳೆಯಂತೆ: ತ್ರಾಸಿನಯೆಂದಡೆ-ತಕ್ಕಡಿಯ, ಕಟ್ಟಳೆಯೆಂದರೆ-ಗುಂಡು, ಆ ತ್ರಾಸಿನಲ್ಲಿ ಗುಂಡನಿಕ್ಕಿ ತೂಗಿದರೆ ಹೆಚ್ಚಾದರೆ ನೆಲಕ್ಕೆ ಕುಂದುರುವುದು; ಕಡಿಮೆಯಾದರೆ ಮೇಲಕ್ಕೆ ಏಳುವುದು. ಹಾಂಗೆ, ಇನಿತು ವೆಗ್ಗಳವಾದಡೆ-ಲಿಂಗವೇ ಶ್ರೇಷ್ಠ ಜಂಗಮವೇ ಸಾಮಾನ್ಯ; ಜಂಗಮವೇ ಶ್ರೇಷ್ಠ ಲಿಂಗವೇ ಸಾಮಾನ್ಯವೆಂದು ಹೇಳಿದರೆ, ಈಶ್ವರನು-ಪಂಚಕೃತ್ಯಂಗಳಿಗೆ ಒಡೆಯನಾದಂಥ ಪರಶಿವಲಿಂಗವು. [೧][ಒಡೆ][೧] ಹಾಕದೆ ಮಾಣ್ಬನೆ?-ಕಿಂಚಿನ್ಮಾತ್ರ ಫಲಪದಂಗಳನು ಕೊಟ್ಟು ಭವಕ್ಕೆ ಹಾಕದೆ ಬಿಟ್ಟಾನೆ? ಹಾಕುತ್ತಿಹನು.

ಪಾತ್ರಪಾತ್ರವೆಂದು ಕಂಡಡೆ-ಲಿಂಗವೇ ಯೋಗ್ಯ ಜಂಗಮವೇ ಅಯೋಗ್ಯ, ಜಂಗಮವೇ ಅಯೋಗ್ಯವೆಂದು ತಿಳಿದೆನಾದರೆ, ಶಿವನು-ಪರಮೇಶ್ವರನು, ಎಂತು ಮೆಚ್ಚುವನು-ಹೇಂಗೆ ಮಮಕರಿಸಿಕೊಂಡು ನಿಜಮುಕ್ತಿಯ ಕರುಣಿಸಿ ಕೋಟ್ಟಾನು? ಕರುಣಿಸಿ ಕೊಡನು. ಜೀವ-ತನ್ನಾತ್ಮನು. ಜೀವಾತ್ಮ-ಮತ್ತೊಬ್ಬರಾತ್ಮನು, ಸರಿಯೆಂದು ಕಂಡಡೆ-ಅವರ ಸುಖದು:ಖವೇ ನನ್ನ ಸುಖದು:ಖ ನನ್ನ ಸುಖದುಃಖವೇ ಅವರ ಸುಖ ದು:ಖವೆಂದು ತಿಳಿದರೆ, ಶಿವನು-ಪರಮೇಶ್ವರನು, ಸಮವೇಧಿಸದಿಪ್ಪನೆ?-ತನ್ನಲ್ಲಿ ಏಕಾರ್ಥವ ಮಾಡಿಕೊಳ್ಳದೆ ಇದ್ದಾನೆ? ಏಕಾರ್ಥವ ಮಾಡಿಕೊಳುತ್ತಿಹನು.

ತನ್ನ ಮನದಲ್ಲಿ-ತನ್ನ ಚಿತ್ತದಲ್ಲಿ. ಯತ್ರ-ಯಾವ ಸ್ಥಳದಲ್ಲಿ, ಜೀವಃ-ಜೀವಾತ್ಮರುಗಳಿರುತ್ತಿಹರೋ. ತತ್ರ-ಆ ಸ್ಥಾನದಲ್ಲಿ, ಶಿವಃ ಎಂದು-ಪರಮೇಶ್ವರನೇ ನೆಲಸಿರ್ಪನೆನುತ್ತ. ಸರ್ವಜೀವದಯಾಪಾರಿಯಾದಡೆ-ಸಮಸ್ತ ಪ್ರಾಣಿಗಳ ಮೇಲಣ ಕೃಪೆಯನ್ನು ಮುಂದುಗೊಂಡಿರುವಾತನಾದರೆ, ಕೂಡಲಸಂಗಮದೇವ-

ಪರಶಿವಲಿಂಗವು, ಕೈಲಾಸದಿಂದ-ಶಾಂಭವಲೋಕದಿಂದ, ಬಂದು-ಬಿಜಯಂಗೈದು ಬಂದು. ಎತ್ತಿಕೊಳ್ಳದಿಪ್ಪನೆ?-ತನ್ನಲ್ಲಿ ಏಕಾರ್ಥವ ಮಾಡಿಕೊಳ್ಳದೆ ಇದ್ದಾನೆ? ಮಾಡಿಕೊಳ್ಳುತ್ತಿಹನು.

....

೧-೧ ವಡೆಯ (ಕ.ಗ).

III- -

2-2 ಇಕ್ಕದೆ ಮಾಣುವನ (ಟ. ಡ)

....

ಅಜಿದಜಿದು-ಅಂಗವೆ ಲಿಂಗ ಲಿಂಗವೇ ಅಂಗವೆಂಬುವನು ತಿಳಿದು, ತ್ರಾಸ ಕಟ್ಟಳೆಯ ಹಾಂಗೆ ಅಂಗ ಲಿಂಗಕ್ಕೆ ಸಮಾನವಾಗಿರಬೇಕಲ್ಲದೆ ಹೆಚ್ಚು ಕಡಿಮೆಯಾಗಿ ಕಂಡಲ್ಲಿ ಅಜ್ಞಾನಿಯ ಮಾಡಿ ಭವಕ್ಕೆ ಹಾಕಿ ಬಿಡುವನೆಂಬುದೀಗ ಈಶ್ವರನು ಒಡೆಯಿಕ್ಕದೆ ಮಾಣುವನೆ? ಎಂಬ ಶಬ್ದಕ್ಕರ್ಥ.

೮೦೭

ಸ್ಥಾವರ ಜಂಗಮವೆಂಬುಭಯ ಪಕ್ಷವೊಂದೇ. ಆವ ಮುಖದಲ್ಲಿ ಬಂದರೂ ತೃಪ್ತಿವೊಂದೇ. ಕೂಡಲಸಂಗಮದೇವರ ಆಪ್ಯಾಯನವೊಂದೇ.

I- -

ಸ್ಥಾವರ-ಇಷ್ಟಲಿಂಗವು, ಜಂಗಮವೆಂಬ-ಚರಲಿಂಗವೆಂದು ಹೇಳುವ. ಉಭಯಪಕ್ಷ-ಎರಡರ ವಿಶ್ವಾಸ, [ಒಂದೇ-] ಒಂದೇಯಾಗಿಪ್ಪುದು. [ಆವ ಮುಖದಲ್ಲಿ ಬಂದಡೂ ತೃಪ್ತಿವೊಂದೇ.]-ಗಂಡಭೇರುಂಡ ಪಕ್ಷಿಗೆ ಶರೀರವೊಂದು ಕೊಕ್ಕು ಎರಡಾಗಿಪ್ಪವು. ಯಾವ ಕೊಕ್ಕಿನಲ್ಲಿ ಆಹಾರವ ತೆಗೆದುಕೊಂಡರೂ ಶರೀರಕ್ಕೆ ತೃಪ್ತಿಯಾಗುತ್ತಿಹುದು. ಹಾಂಗೆ ಶಿವಂಗೆ ಲಿಂಗಜಂಗಮವೆಂಬ ಎರಡು ಮುಖವಾಗಿಪ್ಪವು. ಲಿಂಗಕ್ಕೆ ಸಕಲಪದಾರ್ಥವನು ಸಮರ್ಪಣೆಯ ಮಾಡಿದರೂ ಶಿವನಿಗೆ ಸಮರ್ಪಣೆಯಾಗುತ್ತಿಹುದು. ಜಂಗಮಕ್ಕೆ ಸಕಲಪದಾರ್ಥವನು ಸಮರ್ಪಣೆಯ ಮಾಡಿದರೂ ಶಿವನಿಗೆ ಸಮರ್ಪಣೆಯಾಗುತ್ತಿಹುದು. ಕೂಡಲಸಂಗಮದೇವರ -ಪರಶಿವಲಿಂಗದೇವರ, ಆಪ್ಯಾಯನವೊಂದೇ-ತೃಪ್ತಿವೊಂದೇಯಾಗಿರ್ಪುದು.

III -

[ಸ್ಥಾವರಜಂಗಮವೆಂಬ-] ಸ್ಥಾವರ ಜಂಗಮವು ಎಂಬ, ಉಭಯಪಕ್ಷ-ಎರಡು ರೂಪವ, ಆಪ್ಯಾಯನವೊಂದೇ-ಹಸಿವುವೊಂದೇ ಸರಿ.

IV -

ಅಂಗಮನವೊಂದೆ. ಅಂಗಮನ ಲಿಂಗದಲಡಗಿದ್ದ ಪರಿಣಾಮವೆ ಮುಕ್ತಿಯೆಂಬುದೀ ವಚನದರ್ಥ.

೮೦೮

ಮುತ್ತು ಉದಕದಲಾಗದು, ಉದಕ ಮುತ್ತಿನಲಾಗದು, ತತ್ತ್ವಘಟಿಸಿದ [1]ಶುಭ[1] ಮುಹೂರ್ತದಲ್ಲಲ್ಲದೆ. ಚಿತ್ತವೇದ್ಯವಾಗದು ಸದ್ಗುರುವಿನ ಕರುಣಕ್ಕಲ್ಲದೆ, ಕರ್ತೃ ಕೂಡಲಸಂಗಮದೇವರ ಒಲವಿನ ದಯದ ಚಿತ್ತವಿಡಿದಂಗಲ್ಲದೆ ಶಿವತತ್ತ್ವ ಸಾಹಿತ್ಯವಾಗದು.

I– –

ಮುತ್ತು ಉದಕಲಾಗದು; ಮುತ್ತು–ಮೌಕ್ತಿಕವು. ಉದಕದಲು–ಸ್ವಾತಿ ಸಲಿಲದಲ್ಲಿ, ಆಗದು–ಊಂಟಾಗದು. ಉದಕ–ಸ್ವಾತಿ ಸಲಿಲವು, ಮುತ್ತಿನಲಾಗದು–ಮೌಕ್ತಿಕದಲ್ಲಿ ಉಂಟಾಗದು. ತತ್ತ್ವಘಟಿಸಿದ ಶುಭಮುಹೂರ್ತದಲ್ಲಲ್ಲದೆ–ತಾಮ್ರಪರ್ಣಿ ಎಂಬುವಂಥ ನದಿಯು ಬಂದು ಸಮುದ್ರವ ಕೂಡಿದಲ್ಲಿ ಚಿತ್ತಿಯ ಬಿಸಿಲ ಕಾಯ್ದು ಅಮೃತಗಳಿಗೆಯಲ್ಲಿ ಸ್ವಾತಿವೃಷ್ಟಿಯಂಕುರಿಸಿ ಚಿಪ್ಪಿನಲ್ಲಿ ಬಿದ್ದು ಮುತ್ತಾಗಿ ನೆಲೆಗೊಂಡಿತ್ತಲ್ಲದೆ ಎಲ್ಲ ವೇಳೆಯಲ್ಲಿ ಬಿದ್ದು ಮುತ್ತಾಗಿ ನೆಲೆಗೊಂಡೀತೆ? ನೆಲೆಗೊಳ್ಳದು.

ಚಿತ್ತವೇದ್ಯವಾಗದು ಸದ್ಗುರುವಿನ ಕರುಣಕ್ಕಲ್ಲದೆ–ಶ್ರೀಗುರುನಾಥನು ವೇಧಾಮಂತ್ರಕ್ರೀಗಳೆಂಬ ದೀಕ್ಷಾತ್ರಯಂಗಳಿಂದ ಕರುಣಿಸಿಕೊಟ್ಟ ಇಷ್ಟ ಲಿಂಗವೇ ಅಂತರಂಗದಲ್ಲಿ ಪ್ರಾಣಲಿಂಗವಾಗಿ ನೆಲೆಗೊಂಡಿತ್ತಲ್ಲದೆ ಸಂತೆ [1]ಪೇಟೆಗೆ[1] ಹೋಗಿ ದುಡ್ಡು ಅಡ್ಡವ [2]ಚಕ್ಕಚೌಲ ಮೊದಲಾದವನ್ನು[2] ಕೊಟ್ಟು ಒಂದು ಲಿಂಗವನ್ನು ಕೊಂಡುಕೊಂಡು ಬಂದು ತನ್ನಿಚ್ಛೆಯಲ್ಲಿ ತಾ ಕಟ್ಟಿಕೊಂಡು ಪೂಜಿಸುವಂಥದು ಅಂತರಂಗದಲ್ಲಿ ಪ್ರಾಣಲಿಂಗವಾಗಿ ನೆಲೆಗೊಂಡಿತ್ತೇ? ನೆಲೆಗೊಳ್ಳಲರಿಯದು. ಕರ್ತೃ–ಪಂಚಕೃತ್ಯಂಗಳಿಗೊಡೆಯನಾದಂಥ, ಕೂಡಲಸಂಗಮದೇವರ–ಪರಶಿವಲಿಂಗದ, ಒಲವಿನ ದಯದ ಚಿತ್ತವಿಡಿದಂಗಲ್ಲದೆ–ಇಷ್ಟಲಿಂಗಕ್ಕಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳಿಂದಾರಾಧಿಸಿ ಆ ಇಷ್ಟಲಿಂಗದ ಚಿತ್ಕಳೆಯನ್ನೇ ಅಂತರಂಗದಲ್ಲಿ ಪ್ರಾಣಲಿಂಗವಾಗಿ ದೃಢವಿಡಿದಾತಂಗಲ್ಲದೆ, ಶಿವತತ್ತ್ವ ಸಾಹಿತ್ಯವಾಗದು–ಆ ಪ್ರಾಣಲಿಂಗವೇ ಆತ್ಮಾಂಗದಲ್ಲಿ ಭಾವಲಿಂಗವಾಗಿ ನೆಲೆಗೊಳ್ಳದು.

....

೧–೧ ಸಾರಿಗೆ (ಗ), ೨–೨ X (ಗ).

III– –

1–1 ಸು (ಟ.ಡ).

....

ತತ್ತ್ವವ್ಯಾಖ್ಯವು ಘಟಿಸಿದ–ಸಂಬಂಧವಾದ. ಸುಮೂಹೂರ್ತದಲ್ಲಲ್ಲದೆ–ಶುಭಸೂಚನೆಯಲ್ಲಲ್ಲದೆ. ಶಿವತತ್ತ್ವ ಸಾಹಿತ್ಯವಾಗದು–ಪರಶಿವಲಿಂಗವು ಅಂತರಂಗದಲ್ಲಿ ಪ್ರಾಣಲಿಂಗ, ಬಹಿರಂಗದಲ್ಲಿಷ್ಟಲಿಂಗವಾಗಿ ಗುರುಮುಖದಿಂದ ಸಂಬಂಧವಾಗದು.

IV– –

1–1 ಸು (ತ).

....

ಅಂಗ ಲಿಂಗವಾಗದು. ಲಿಂಗವಂಗ[೩][ವ][೩] ಕೂಡದು. ಗುರೂಪದೇಶವಾದರೆ ಅಂಗ ಲಿಂಗವ ಕೂಡಿ ಮುಕ್ತನಹೆನೆಂಬುದೀ ವಚನದರ್ಥ.

....

೩–೩ ಮೇ (ತ).

೮೧೯

ಕಾಯದ ಗಡ[1]ಣ[1] ಕೆಲಬರಿಗುಂಟು. ಜೀವದ ಗಡ[1]ಣ[1] ಕೆಲಬರಿಗುಂಟು. ಭಾವದ ಗಡ[1]ಣ[1] ಕೆಲಬರಿಗುಂಟು, ವಚನದ ಗಡ[1]ಣ[1] ಕೆಲಬರಿಗುಂಟು, ಪ್ರಾಣಲಿಂಗದ ಗಡ[1]ಣ[1] ಆರಿಗೂ ಇಲ್ಲ, ಕೂಡಲಸಂಗನ ಶರಣ[2]ರೊಳಗೆ[2] ತಂಗಟೂರ ಮಾರಯ್ಯಂಗಲ್ಲದೆ.

I– –

ಕಾಯದ ಗಡಣ ಕೆಲಬರಿಗುಂಟು–ಊರು ತೊರೆದು ಘೋರಾರಣ್ಯಕ್ಕೆ ಹೋಗಿ ಪವನಾಹಾರ ಪರ್ಣಾಹಾರ ಜಲಾಹಾರ ಫಲಾಹಾರ ಉಕ್ಕಿನ ಚೂರ್ಣ ಶಿಲಾಚೂರ್ಣ ಭಸ್ಮಚೂರ್ಣ ಮೊದಲಾದವನ್ನು ಕೊಂಡು ಕೋಡಗಲ್ಲ ಮೇಲೆ ಪಂಚಾಗ್ನಿಯ ಮಧ್ಯದಲ್ಲಿ ಏಕಪಾದಸ್ಥಿತವಾಗಿ ನಿಂದು ಉಗ್ರ ತಪಸ್ಸನ್ನು ಮಾಡಿ ತಪನಿಗ್ರಹಾದಿಗಳಿಂದ ದೇಹವನ್ನು ದಂಡಿಸುವಂಥ ಪೆರ್ಚುಗೆಯು ಹಲವು ಕೆಲವು ತಪಸಿಗಳಿಗೆ ಉಂಟಾಗಿರ್ಪುದು.

ಜೀವದ ಗಡಣ ಕೆಲಬರಿಗುಂಟು–ಅಂಗ ಬೇರೆ ಲಿಂಗ ಬೇರೆಂದು ಅಂಗಾಂಗವೆರಡಕ್ಕೂ ಭಿನ್ನವಿಟ್ಟುಕೊಂಡು ಪೂಜಿಸುವಂಥ ಪೆರ್ಚುಗೆಯು ಹಲವು ಕೆಲವು ಸಿದ್ಧಾಂತಿಗಳಿಗೆ ಉಂಟಾಗಿರ್ಪುದು.

ವಚನದ ಗಡಣ ಕೆಲಬರಿಗುಂಟು–ಸಕಲವೇದಶಾಸ್ತ್ರಾಗಮಪುರಾಣಂಗಳನು ಕಲಿತುಕೊಂಡು ಶ್ರುತಜ್ಞಾನಬಲದಿಂದ ಅರುಹಿನಿಂದ ನಿರವಯ ಬ್ರಹ್ಮವನ್ನು ಕುರುಹಿಟ್ಟುಕೊಂಡು "ಆತ್ಮಾ ಕೇವಲಃ ಶಿವಃ" ಆತ್ಮನೇ ಬ್ರಹ್ಮವೆಂದು ಹೇಳುವಂಥ ಪೆರ್ಚುಗೆಯು ಹಲವು ಕೆಲವು ವೇದಾಂತಿಗಳಿಗೆ ಉಂಟಾಗಿರ್ಪುದು.

ಭಾವದಗಡಣ ಕೆಲಬರಿಗುಂಟು–ಉದಯ ಮಧ್ಯಾಹ್ನ ಸಾಯಂಕಾಲದಲ್ಲಿ ಹೃದಯ ಭ್ರೂಮಧ್ಯ ಬ್ರಹ್ಮರಂಧ್ರಸ್ಥಾನದಲ್ಲಿ ನಾದಲಕ್ಷ ಬಿಂದುಲಕ್ಷ ಕಳಾಲಕ್ಷಯೋಗದಿಂದ ವಸ್ತುವನ್ನು ಕಂಡು ಕುರುಹಿಟ್ಟು ಧ್ಯಾನಾನಂದ ಮಾತ್ರದಿಂದ ವಸ್ತುವಿನಲ್ಲಿ ಕೂಡಿ ಧ್ಯಾನಿಸಿ ಧ್ಯಾನ ನಿಂದಲ್ಲಿ ವಸ್ತುಭಿನ್ನವಾಗಿರ್ಪುದೆಂಬುವಂಥ ಪೆರ್ಚುಗೆಯು ಹಲವು ಕೆಲವು ಭಿನ್ನಯೋಗಾಭ್ಯಾಸಿಗಳಿಗೆ ಉಂಟಾಗಿರ್ಪುದು.

ಪ್ರಾಣಲಿಂಗದ ಗಡಣ ಆರಿಗೂ ಇಲ್ಲ–ಪ್ರಾಣವನ್ನು ಪ್ರಾಣಲಿಂಗದಲ್ಲಿ ಸಾಮರಸ್ಯ ಮಾಡುವಂಥ ಪೆರ್ಚುಗೆಯು ಹಲವು ಕೆಲವು ದ್ವೈತಾದ್ವೈತಿ ಭಿನ್ನಯೋಗಾಭ್ಯಾಸಿ ತಪಸಿಗಳೊಳಗೆ ಒರ್ವರಿಗೂ ಉಂಟಾಗಿಲ್ಲವು. ಕೂಡಲಸಂಗನ ಶರಣರೊಳಗೆ–ಶಿವನ ಚಿತ್ಪ್ರಭಾಂಗಸ್ವರೂಪರಾದ ಶಿವಶರಣರಲ್ಲಿ, ತಂಗಟೂರ ಮಾರಯ್ಯಂಗಲ್ಲದೆ–ಪ್ರಾಣವನ್ನು ಲಿಂಗದಲ್ಲಿ ಸಾಮರಸ್ಯವ ಮಾಡುವಂಥ ಪೆರ್ಚುಗೆಯು ತಂಗಟೂರ ಮಾರಯ್ಯ[೧]ಗಳೆಂಬ ಶಿವಶರಣರುಗಳಿಗೆ ಅಳವಡುವುದಲ್ಲದೆ ಮಿಕ್ಕಿನ ದ್ವೈತಾದ್ವೈತಿ ಭಿನ್ನಯೋಗಾಭ್ಯಾಸಿ ತಪಸಿಗಳಿಗೆ ಅಳವಟ್ಟೀತೇ? ಅಳವಡದು.

....

೧ + ಮಾರಾಭ್ಯರು (ಕ.ಗ).

II– –

ಕಾಯದ ಗಡಣ ಕೆಲಬರಿಗುಂಟು–ಶರೀರಸಿದ್ಧಿಯ ಪೆರ್ಚಿಕೆಯು. ೧[ತಾ ಸಾಯಂ]೧ದರೆ ಸಾಯಬೇಕು. ಉಳಿಯೆಂದರೆ ಉಳಿಯಬೇಕು. ಅದೇನು ಶರೀರವನು ಕತ್ತಿಲಿ ಕಡಿದರೂ ಹರಿಯಬಾರದು. ಆ ದೇಹದ ಪೆರ್ಚಿಕೆಯು ದ್ವೈತಿಗಳಿಗುಂಟಾಗಿರ್ಪುದು. ಜೀವದ ಗಡಣ ಕೆಲಬರಿಗುಂಟು–ಜೀವನ ಪೆರ್ಚಿಕೆಯು, ತಾ ಸಾಯೆಂದರೆ ಸಾಯಬೇಕು, ಉಳಿಯೆಂದರೆ ಉಳಿಯಬೇಕು. ಆ ಜೀವನ ಪೆರ್ಚಿಕೆಯು ಅದ್ವೈತಿಗಳಿಗುಂಟಾಗಿರ್ಪುದು. ಭಾವದ ಗಡಣ ಕೆಲಬರಿಗುಂಟು–ಆತ್ಮನಾ ಹೆಚ್ಚು ತಾ ಹೆಚ್ಚು "ಆತ್ಮಾ ಕೇವಲಃ ಶಿವಃ" ಎಂಬ ಆತ್ಮನ ಪೆರ್ಚಿಕೆಯು ಯೋಗಮಾರ್ಗಿಗಳಿಗುಂಟಾಗಿರ್ಪುದು. ವಚನದ ಗಡಣ ಕೆಲಬರಿಗುಂಟು–ತಾ ಬಾಯೆಂದರೆ ಬರಬೇಕು ಹ್ಹೋಂಗೆಂದರೆ ಹೋಗಬೇಕು. ಇಂಥ ವಾಕ್‌ಸಿದ್ಧಿಯ ಪೆರ್ಚಿಕೆಯು ಸರ್ವಾತ್ಮರುಗಳಿಗುಂಟಾಗಿರ್ಪುದು. ಮುಂದಕ್ಕೆ ಕಾಣಬಂದರ್ಥ.

....

೧–೧ ತ್ರಾ ಸಾವಿ(ಚ).

III– –

ಕಾಯದ ಗಡಣ–ಅಂಗವನು ಪರಶಿವಲಿಂಗಕ್ಕೆ ಸಮರ್ಪಣೆಯ ಮಾಡುವ ಹೆಚ್ಚುಗಾರಿಕೆಯು, ಕೆಲಬರಿಗುಂಟು–ಸಿಂಧುಮರಾ[೨]ಳ[೨] ಮೊದಲಾದ ಕೆಲವು ಶರಣರಿಗೊಳವು. ಜೀವದ ಗಡಣ–ಆತ್ಮನನು ಪರಶಿವನಿಗೆ ಸಮರ್ಪಣೆಯ ಮಾಡುವಂಥದು, ಭಾವದ ಗಡಣ– ಭಾವವನು ಭಾವಲಿಂಗಕ್ಕೆ ಸಮರ್ಪಿಸುವ ಹೆಚ್ಚುಗಾರಿಕೆಯು, ಕೆಲಬರಿಗುಂಟು ಹಲವು ಕೆಲಂಬರಿಗೊಳವು.

....

೨–೨ ಯ (ಡ)

IV– –

1–1 ಣೆ (ತ). 2–2 ರಲ್ಲಿ (ತ).

....

ದೇಹ ಜೀವ ಭಾವ ಶಬ್ದಂಗಳ ಬಲ್ಲವರುಂಟು. ಪ್ರಾಣನ ಗುಣವಳಿದು ಪರಂಜ್ಯೋತಿಯಾದವರಪೂರ್ವವೆಂಬುದೀ ವಚನದರ್ಥ.

V– –

ಕಾಯದ ಗಡಣ–ಅಂಗವನು ಪರಶಿವನಿಗೆ ಸಮರ್ಪಣೆಯ ಮಾಡುವ ಪೆರ್ಚುಗೆಯು, ಕೆಲಬರಿಗುಂಟು–ಸಿಂಧುಮರಾಳ ಓಹಿಲಯ್ಯ ಮೊದಲಾದ ಕೆಲಬರಿಗೊಳವು. ಜೀವದ ಗಡಣ–ಆತ್ಮನನು ಪರಶಿವನಿಗೆ ಸಮರ್ಪಣೆಯ ಮಾಡುವ ಪೆರ್ಚುಗಾರಿಕೆಯು. ಭಾವದ ಗಡಣ–ಭಾವವನು ಭಾವಲಿಂಗಕ್ಕೆ ಸಮರ್ಪಿಸುವ ಪೆರ್ಚುಗಾರಿಕೆಯು.

೮೧೧

ಚಂದ್ರಕಾಂತದ ಶಿಲೆಯಲ್ಲಿ ಜಲವಿಲ್ಲದನ್ನಕ್ಕ ಶೈತ್ಯವ ತೋಱುವ ಪರಿಯೆಂತೋ? ಸೂರ್ಯಕಾಂತದ ಶಿಲೆಯಲ್ಲಿ ಅಗ್ನಿಯಿಲ್ಲದನ್ನಕ್ಕ ಉಷ್ಣವ ತೋರುವ ಪರಿಯೆಂತೋ? ಶರಣಂಗೆ ಭಕ್ತಿ ಕಾಯವಿಲ್ಲದನ್ನಕ್ಕ ಕೂಡಲಸಂಗಯ್ಯನನ˘ಜೆ˘ವ ಪರಿಯೆಂತೋ?

I– –

ಚಂದ್ರಕಾಂತದ ಶಿಲೆಯಲ್ಲಿ–ಚಂದ್ರಕಾಂತದ ಕಲ್ಲಿನಲ್ಲಿ. ಜಲವಿಲ್ಲದನ್ನಕ್ಕ–ಉದಕವಿರಬೇಕು. ಇಲ್ಲದಿರುವ ಪರಿಯಂತರ. ಶೈತ್ಯವ ತೋಱುವ ಪರಿಯಂತೋ–ಶೀತಕಿರಣಂಗಳು ಕಾಣಿಸುವ ನಿಲುಕಡೆ ಇನ್ನ್ಯಾಂಗೋ ಎಂಬಲ್ಲಿ ಚಂದ್ರನು ಪೂರ್ವಾದ್ರಿಯಿಂದ ಉದಯವಾಗಿ ಬಂದು ತನ್ನ ಷೋಡಶ ಕಲೆಗಳನು ಪ್ರತಿಬಿಂಬಿಸಿದಲ್ಲಿ ನಾಲ್ಕಂಗುಲ ಐದಂಗುಲ ಪ್ರಮಾಣ ಉದಕ ಹುಟ್ಟಿ ಕಲ್ಲುಗಟ್ಟಿ ಚರಿಸುವದು. ಅದರಲ್ಲಿ ಉದಕ ಇದ್ದ ಕಡೆಯಿಂದಲೇ ಚರಿಸುವುದಲ್ಲದೆ ಇಲ್ಲದೇ ಇದ್ದರೆ ಚರಿಸುವ ಪರಿಯೆಂತೋ? ಹರಿವ ನಿಲುಕಡೆ ಹೇಂಗೋ.

ಸೂರ್ಯಕಾಂತದ ಶಿಲೆಯಲ್ಲಿ–ಅಗ್ನಿಕಾಂತದ ಕಲ್ಲಿನಲ್ಲಿ. ಅಗ್ನಿ–ಪಾವಕನು. ಇಲ್ಲದನ್ನಕ್ಕ–ಉಂಟಾಗಿರಬೇಕು; ಉಂಟಾಗಿರದ ಪರಿಯಂತರವು. ಉಷ್ಣವ ತೋಱುವ–ಸೆಕೆಯನ್ನು ಕಾಣಿಸುವ, ಪರಿಯೆಂತೋ–ನಿಲುಕಡೆ ಹೇಂಗೋ ಎಂಬಲ್ಲಿ ಸೂರ್ಯನು ಪ್ರಾತಃಕಾಲದಲ್ಲಿ ಪೂರ್ವಾದ್ರಿಯಿಂದ ಉದಯವಾಗಿ ಬಂದು ತನ್ನ ಉಷ್ಣಕಿರಣವನು ಪ್ರತಿಬಿಂಬಿಸಲು ಅಗ್ನಿ ಹುಟ್ಟಿ ಎಡಬಲದಲ್ಲಿದ್ದಂಥ ತೃಣಕಾಷ್ಠಂಗಳನು ದಹಿಸುವುದು. ಅದರಲ್ಲಿ ಅಗ್ನಿಯಿದ್ದ ಕಡೆಯಿಂದಲೇ ದಹಿಸುವುದಲ್ಲದೆ ಇಲ್ಲದಿದ್ದರೆ ದಹಿಸುವ ಪರಿಯೆಂತೋ? ಸುಡುವ ನಿಲುಕಡೆ ಹೇಂಗೋ?

ಶರಣಂಗೆ ಭಕ್ತಿ ಕಾಯವಿಲ್ಲದನ್ನಕ್ಕ–ಷಡ್ವಿಧಪ್ರಭೇದವಾದ ಭಕ್ತಿಕಾಯವೇ ಒಡಲಾಗಿರಬೇಕು. ಒಡಲಾಗಿಲ್ಲದೆ ಇರುವ ಪರಿಯಂತರವು. ಕೂಡಲ ಸಂಗಯ್ಯನ–ಷಡ್ವಿಧಪ್ರಭೇದವಾದ ಭಕ್ತಿಕಾಯ ಒಡಲಾಗಿದ್ದರೆ ಪರಶಿವಲಿಂಗವ ನಿಲುಕಡೆಯನ್ನು ತಿಳಿದಾನಲ್ಲದೆ ಷಡ್ವಿಧಪ್ರಭೇದವಾದ ಭಕ್ತಿಕಾಯ ಒಡಲಾಗಿಲ್ಲದೆ ಇದ್ದರೆ ಪರಶಿವಲಿಂಗದ ನಿಲುಕಡೆಯನ್ನು, ಅಱಿವ ಪರಿಯೆಂತೋ?–ತಿಳಿವ ಬಗೆ ಹೇಂಗೋ?

II– –

ಚಂದ್ರಕಾಂತದ ಶಿಲೆಯಲ್ಲಿ ಜಲವಿಲ್ಲದನ್ನಕ್ಕ ಶೈತ್ಯವ ತೋಱುವ ಪರಿಯೆಂತೋ?–ಪರಮಶಾಂತಿಜ್ಞಾನದೃಢತ್ವದಲ್ಲಿ ಪರಮಾನಂದ ಜಲವುಂಟಾಗ ದನಕ ಪರಮಶಾಂತಿಜ್ಞಾನ ಕಾಣಿಸುವ ಪ್ರಕಾರವು ಹೇಂಗೋ? ಸೂರ್ಯಕಾಂತದ ಶಿಲೆಯಲ್ಲಿ ಅಗ್ನಿ ಇಲ್ಲದನ್ನಕ್ಕ ಉಷ್ಣವ ತೋಱುವ ಪರಿಯೆಂತೋ? –ಚಿದಾದಿತ್ಯಜ್ಞಾನದೃಢತ್ವದಲ್ಲಿ ವೈರಾಗ್ಯವುಂಟಾಗದನ್ನಬರ ಮಹಾಜ್ಞಾನತಿಗ್ಮವ ಕಾಣಿಸುವ ಪ್ರಕಾರವು ಹೇಂಗೋ. ಶರಣಂಗೆ ಭಕ್ತಿಕಾಯವಿಲ್ಲದನ್ನಕ್ಕ ಕೂಡಲಸಂಗಯ್ಯನನಱಿವ ಪರಿಯೆಂತೋ? –ಶಿವಜ್ಞಾನಸಂಪನ್ನನಾದ ಶಿವಶರಣನಿಗೆ ಶಿವಾದ್ವೈತಶ್ರದ್ಧೆ ಉಂಟಾಗದನ್ನಬರ ಪರಶಿವಲಿಂಗವನು ತಿಳಿವ ಪ್ರಕಾರವು ಹೇಂಗೋ?

IV– –

1–1 ಱಿಸು (ತ).

....

ಒಂದೇ ಪರವಸ್ತು ಲಿಂಗಾಂಗವೆರಡಾಯಿತ್ತು. ಆ ಎರಡಾದಲ್ಲಿ ಆ ಪರವಸ್ತುವಿನ ಸಮೇತವಾಗಿಪ್ಪ ಚಿತ್‌ಶಕ್ತಿಯೂ ಎರಡಾಯಿತ್ತು. ಅಂತಾದ ಲಿಂಗದಲ್ಲಿ ಸಮೇತವಾಗಿಪ್ಪ ಚಿತ್ತುವೆ ಶಕ್ತಿಯೆನಿಸಿತ್ತು: ಅಂಗವಾದ ಆತ್ಮನಲ್ಲಿ ಸಮೇತವಾದ ಚಿತ್ತುವೆ ಭಕ್ತಿಯೆಂದೆನಿಸಿತ್ತು. ಅದು ಕಾರಣ ಶಿವಾಂಶಿಕವಾದ ಶರಣನ ಆತ್ಮಾಂಗದಲ್ಲಿ ಸಮೇತವಾಗಿದ್ದ ಚಿತ್ತುವೆ ತನ್ನ ನಿಜ ಸ್ವರೂಪಮಪ್ಪ ಲಿಂಗವನರೆದ ಭಕ್ತಿಮಾಡಿ ಲಿಂಗವಾಗಿಪ್ಪುದು ಶರಣಂಗೆ ಸಹಜ. ಅದು ಹೇಂಗೆಂದೊಡೆ ಚಂದ್ರಕಾಂತದ ಶಿಲೆಯಲ್ಲಿ ಸಮೇತವಾಗಿರ್ದ ಉದಕ ಹೇಂಗೆ ತೋಱಿ ಅಡಗುತ್ತಿಪ್ಪುದು ಹಾಂಗೆ ಸೂರ್ಯಕಾಂತದ ಶಿಲೆಯಲ್ಲಿ [1]ಸಮೇತವಾಗಿರ್ದ ಅಗ್ನಿ ಹೇಂಗೆ ತೋರಿ ಅಡಗುತ್ತಿಪ್ಪುದು ಹಾಂಗೆ ಎಂಬುದೀ ವಚನದ ತಾತ್ಪರ್ಯಾರ್ಥ.

....

೧ + ಅ (ತ)

೮೧೧

ಮುನ್ನೂಱಱುವತ್ತು ನಕ್ಷತ್ರಕ್ಕೆ ಬಾಯ್ಬಿಟ್ಟುಕೊಂಡಿಪ್ಪುದೆ ಸಿಂಪು? ಅದು ಸ್ವಾತಿಗಲ್ಲದೆ ಬಾಯ್ದೆಱೆಯದು ಕೇಳಾ[1] ತಂದೆ. ಎಲ್ಲವಕ್ಕೆ ಬಾಯಬಿಟ್ಟಡೆ ತಾನೆಲ್ಲಿಯ ಮುತ್ತಪ್ಪುದೋ? ಪರಮಂಗಲ್ಲದೆ ಹರುಷತಿಕೆಯಿಲ್ಲವೆಂದು ಕರಣಾದಿಗುಣಂಗಳ ಮಱೆದರು; ಇದು ಕಾರಣ ಕೂಡಲಸಂಗನ ಶರಣರು ಸಪ್ತವ್ಯಸನಿಗಳಲ್ಲಾಗಿ.

I– –

ಮುನ್ನೂಱಱುವತ್ತು ನಕ್ಷತ್ರಕ್ಕೆ–ಮುನ್ನೂರರವತ್ತು ದಿನ ನಕ್ಷತ್ರಂಗಳಿಗೆ, ಬಾಯ್ಬಿಟ್ಟುಕೊಂಡಿಪ್ಪುದೆ–ಜಿಹ್ವೆಯನ್ನು ತೆರೆದುಕೊಂಡಿದ್ದಿತ್ತೆ, ಸಿಂಪು–ಶುಕ್ತಿಯು, ಅದು ಸ್ವಾತಿಗಲ್ಲದೆ–ಅದು ಸ್ವಾತಿ ನಕ್ಷತ್ರಕ್ಕಲ್ಲದೆ.

ಬಾಯ್ದೆಱೆಯದು–ಜಿಹ್ವೆಯನು ತೆರೆಯದು, ಕೇಳಾ–ಆಲಿಸಾ. ತಂದೆ–ಎನ್ನಾತ್ಮಜನಕನಾದ ಎಲೆ ಪರಶಿವಲಿಂಗವೆ. ಎಲ್ಲವಕ್ಕೆ–ಮುನ್ನೂರರುವತ್ತು ದಿನ ನಕ್ಷತ್ರಂಗಳೆಲ್ಲಕ್ಕೆಯೂ, ಬಾಯಬಿಟ್ಟಡೆ–ಜಿಹ್ವೆಯನ್ನು ತೆರೆದರೆ, ತಾನೆಲ್ಲಿಯ ಮುತ್ತಪ್ಪುದೋ?–ತಾನೆಲ್ಲಿ ಮೌಕ್ತಿಕವಾದೀತೊ. ಆಗದು.೧

ಪರಮಂಗಲ್ಲದೆ–ಚಿತ್ಸ್ವರೂಪವಾದ ಶಿವಶರಣಂಗಲ್ಲದೆ. ಹರುಷತಿಕೆಯಿಲ್ಲವೆಂದು–ಸರ್ವಾಚಾರಸಂಪತ್ತಿನಾಚರಣೆ ಕ್ರೀಗಳು ಉಂಟಾಗಿಲ್ಲವೆಂದು, ಇದು ಕಾರಣ–ಇದು ನಿಮಿತ್ತಾರ್ಥ, ಕೂಡಲಸಂಗನ ಶರಣರು–ಶಿವನ ಚಿತ್ಪ್ರಕಾಶಸ್ವರೂಪರಾದ ಶಿವಶರಣರು, ಸಪ್ತವ್ಯಸನಿಗಳಲ್ಲಾಗಿ–ಸಪ್ತವ್ಯಸನಂಗಳ ವರ್ತನೆಗಳಿಲ್ಲವಾಗಿ, ಕರಣಾದಿಗುಣಂಗಳ–ಮನ ಮೊದಲಾದ ಸಮಸ್ತಕರಣಂಗಳ ವರ್ತನೆಯನ್ನು, ಮಱೆದರು–ವಿಸ್ಮೃತಿಯನೆಯ್ದಿಸಿಬಿಟ್ಟರು.

....

೧ + ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ (ಕ.ಗ).

II– –

೧ + ಕೇಳು (ಚ.ಜ).

....

ಮುನ್ನೂಱಱುವತ್ತು ನಕ್ಷತ್ರಕ್ಕೆ೨–ತ್ರಿಶತಷಷ್ಟಿದಿನ ನಕ್ಷತ್ರಂಗಳ ಹೇಳಿಕೇಳಿ ಅದರಿಂದ ಬಂದ ಹವಿಸ್ಸಾದಿಗಳನು ಪಡೆದು ಒಡಲು ಹೊರೆವುದಕ್ಕೆ. ಸಿಂಪು–ಭಕ್ತಿಜ್ಞಾನವೈರಾಗ್ಯವನುಳ್ಳ. ಶರಣನು, ಬಾಯಬಿಟ್ಟುಕೊಂಡಿಪ್ಪುದೆ?–ಇಂದಿನ ದಿನ ಹೇಂಗೆ ಇಂದಿನ ನಕ್ಷತ್ರ ಹೇಂಗೆ ಹೇಳು ಎಂದು ತನ್ನ ಶಿವಾಪೇಕ್ಷೆಯೆಂಬ ಜಿಹ್ವೆಯನು ತೆಗೆದುಕೊಂಡಿದ್ದಾನೆ? ಅದು ಸ್ವಾತಿಗಲ್ಲದೆ ಬಾಯದೆರೆಯದು ಕೇಳಾ ಕೇಳು ತಂದೆ ಆ ಶರಣನು ಪರಮಶಾಂತಿ ಜ್ಞಾನವನುಳ್ಳ ಮಹಾನುಭಾವಗುರುಮೂರ್ತಿಗಳಿಗಲ್ಲದೆ ಶಿವಾಪೇಕ್ಷೆಯೆಂಬ ಜಿಹ್ವೆಯ ತೆರೆಯನು ಲಾಲಿಸಾ ಲಾಲಿಸು ೩ಆಲವಾಲಾಂಬು೩ ಸ್ವರೂಪವಾದ ಗುರುಮೂರ್ತಿಯೆ, ಎಲ್ಲವಕ್ಕೆ ಬಾಯ ಬಿಟ್ಟಡೆ ತಾನೆಲ್ಲಿಯ ಮುತ್ತಪ್ಪುದು–ವೇದಶಾಸ್ತ್ರಾಗಮಪುರಾಣತರ್ಕತಂತ್ರ ಇತಿಹಾಸಾದಿನಾನಾಶಾಸ್ತ್ರಂಗಳಿಗೆ ನಿಮ್ಮ ಶಾಸ್ತ್ರವು ಹೇಂಗೆ ಹೇಳಿಯೆಂದು ತಮ್ಮ ಶಿವಾಪೇಕ್ಷೆಯನು ಬಿ೪ಚ್ಚಿ೪ದರೆ ತಾವಾವ ಠಾವಿನಲ್ಲಿ ಮುಮುಕ್ಷು ಜನರಹರು.

ಪರಮಂಗಲ್ಲದೆ ಹರುಷತಿಕೆಯಿಲ್ಲೆಂದು–ಪರಮಾತ್ಮಸ್ವರೂಪವಾದ ತ್ರಿವಿಧ ಲಿಂಗಾನುಭಾವಿಗಳಿಗಲ್ಲದೆ ಪರಮಪರಿಣಾಮವು ಉಳಿದ ಜೀವರುಗಳಿಗೆ ನಾಸ್ತಿಯೆಂದು, ಮುಂದಕ್ಕೆ ಕಾಣಬಂದರ್ಥ.

....

೨ + ಬಾಯಬಿಟ್ಟುಕೊಂಡಿಪ್ಪುದೆ ಸಿಂಪು (ಚ, ಜ). ೩–೩ ಅವಾಂಬು (ಚ). ೪–೪ ಚ್ಚ (ಚ).

IV– –

೧ + ಕೇಳು (ತ).

....

ಮನವು ಲಿಂಗವನಲ್ಲದೆ ನೆನೆಯದು. ನೆನೆದರೆ ಲಿಂಗವೆಯಹುದು. ಉಳಿದವರಲ್ಲಿ ನಿತ್ಯವಿಲ್ಲವೆಂಬುದೀ ವಚನದರ್ಥ.[೫]

....

೫ ಈ ವಚನ ಮತ್ತು ಟೀಕೆ ೧೬೨೫ ನೆಯ ಹಸ್ತಪ್ರತಿಯ ಒಂದು ಗರಿಯ ಮೇಲಿದೆ (ಸಂ).

ಪ್ರಾಣಲಿಂಗಿಯ ಪ್ರಾಣಲಿಂಗಿಸ್ಥಲ

I- -

ಪ್ರಾಣಲಿಂಗಿಯ ಪ್ರಾಣಲಿಂಗಿಸ್ಥಲ-ಪ್ರಾಣಲಿಂಗಿಯ ಸ್ಥಲದೊಳಗಣ ಪ್ರಾಣಲಿಂಗಿಸ್ಥಲವ ನಿರೂಪಿಸುತ್ತಿಹರು.

೮೧೨

ಮೆಯ್ಗೆ ಕಾಹ ಹೇಳುವರಲ್ಲದೆ ಮನಕ್ಕೆ ಕಾಹ ಹೇಳುವರೆ? ಅಣಕದ ಮಿಂಡನ ಹೊಸ ಪರಿಯ ನೋಡಾ! ಕೂಡಲ ಸಂಗಮದೇವನೆನ್ನ ಮನವ ನಂಬದೆ ತನ್ನಲ್ಲಿದ್ದ ಲೇಸ ಕಾಹ ಹೇಳಿದನು.

I- -

ಮೆಯ್ಗೆ ಕಾಹ ಹೇಳುವರಲ್ಲದೆ- ಕಿರಾತರಾದ ದೊರೆಗಳೇನಾದರೂ ತಮ್ಮ ಸ್ತ್ರೀಯರು ಪರಪುರುಷರ ನೋಡಿ ಯಾರು ಪರಪುರುಷರ ನೆನೆದಾರು ಪರಪುರುಷರ ಇಚ್ಛೈಸಿಯಾರು ಪರಪುರುಷರ ಸಂಸರ್ಗವ ಮಾಡಿಯಾರೆಂದು ಅಂತ:ಪುರದಲ್ಲಿ ಮಡಗಿ ತನ್ನಲ್ಲಿದ್ದ ದಾಸಿಯರು ಕೊಜ್ಜೇರು ಜಾತಿ ಗೊಲ್ಲರನು ಹಾಕಿ ಕಾಯ್ದುಕೊಂಡಿರುಯೆಂದು ಹೇಳುವರಲ್ಲದೆ. ಮನಕ್ಕೆ ಕಾಹ ಹೇಳುವರೆ? –ಆ ಸ್ತ್ರೀಯಳ ಮನಸ್ಸಿಗೇನಾದರೂ ಪರಪುರುಷರ ನೆನೆಯಬೇಡ ಪರಪುರುಷರ ಇಚ್ಛೈಸಬೇಡ ಪರಪುರುಷರ ಸಂಸರ್ಗವ ಮಾಡಬೇಡೆಂದು ಕಾಯ್ದುಕೊಂಡಿರುಯೆಂದು ಹೇಳುವಂಥವರುಂಟೇ? ಇಲ್ಲವು. ಅಣಕದ ಮಿಂಡನ ಹೊಸಪರಿಯ ನೋಡಾ–ಮೇಲೆಬಿದ್ದು ವ್ಯವಹರಿಸುವ ರಮಣನ ನಿಲುಕಡೆ ಹೀಂಗಿರ್ಪುದು ಕಂಡಾ. ಕೂಡಲಸಂಗಮದೇವ–ರಾಜನು, ಎನ್ನ ಮನವ–ಸ್ತ್ರೀಯಳ ಮನಸ್ಸನು, ನಂಬದೆ–ಪತಿವ್ರತಾಂಗನೆಯೆಂದು ವಿಶ್ವಾಸಿಸದೆ, ತನ್ನಲ್ಲಿದ್ದ ಲೇಸ ಕಾಹ ಹೇಳಿದನು–ತನ್ನಲ್ಲಿದ್ದ ದಾಸಿಯರು ಕೊಜ್ಜೇರು ಜಾತಿಗೊಲ್ಲರನು ಹಾಕಿ ಕಾಯ್ದುಕೊಂಡಿರುಯೆಂದು ಹೇಳಿದನೆಂಬ ದೃಷ್ಟೋಪಮಾನದ ಹಾಂಗೆ.

● ಮೈಗೆ ಕಾಹ ಹೇಳುವರಲ್ಲದೆ: [ಮೈಗೆ ಕಾಹ–] ಬಹಿರಂಗದಲ್ಲಿ ಇಷ್ಟಲಿಂಗಕ್ಕೆ ಅಷ್ಟವಿಧಾರ್ಚನೆ ಷೋಡಶೋಪಚಾರ ಕ್ರೀಗಳಿಂದಾರಾಧಿಸಿರೆಂದು, ಹೇಳುವರಲ್ಲದೆ–ನಿರೂಪಿಸುವರಲ್ಲದೆ, ಮನಕ್ಕೆ ಕಾಹ ಹೇಳುವರೆ? –ಅಂತರಂಗದ ಪ್ರಾಣಲಿಂಗಕ್ಕೆ ಮಂತ್ರಧ್ಯಾನಜಪಸ್ತೋತ್ರ ನಿರ್ಗುಣಪೂಜಾ ಕ್ರೀಗಳಿಂದ ಆರಾಧಿಸಿರೆಂದು ಹೇಳುವಂಥವರುಂಟೆ? ಇಲ್ಲವು. ಅಣಕದ ಮಿಂಡನ ಹೊಸ ಪರಿಯ ನೋಡಾ–ಅಂತರಂಗದಲ್ಲಿ ಪ್ರಾಣಲಿಂಗಸಂಬಂಧತ್ವವನ್ನು ತಿಳಿಯದೆ ಬಹಿರಂಗದಲ್ಲಿ ಇಷ್ಟಲಿಂಗವನ್ನು ಭಿನ್ನವಿಟ್ಟುಕೊಂಡಾರಾಧಿಸಿ ದೇಹಕರಣೇಂದ್ರಿಯ ವಿಷಯಪ್ರಪಂಚಿನೊಡನೆ ಕೂಡಿ ಚರಿಸುವಂಥವರುಗಳ ಭವದಲ್ಲಿ ತಂದು ಸಂಹರಿಸುವಂಥ ಇಷ್ಟಲಿಂಗವೆಂಬ ರಮಣನ ನೂತನದ ಬಗೆ ಹೀಂಗಿರ್ಪುದು ಕಂಡಾ. ಕೂಡಲಸಂಗಮದೇವ–ಪರಶಿವಲಿಂಗವು, ಎನ್ನ ಮನವ–ಶರಣಸತಿಯಳ ಚಿತ್ತವನು, ನಂಬದೆ–ಏಕಲಿಂಗನಿಷ್ಠಾಪರನೆಂದು ವಿಶ್ವಾಸಿಸದೆ, ತನ್ನಲ್ಲಿದ್ದ–ಇಷ್ಟಲಿಂಗದಲ್ಲಿ ಸಂಬಂಧವಾದ, ಲೇಸ–ಚಿತ್ಕಲೆಯನು, ಕಾಹ ಹೇಳಿದನು–ಅಂತರಂಗದಲ್ಲಿ ಪ್ರಾಣಲಿಂಗಸಂಬಂಧತ್ವವನ್ನು ಅರುಹಿಸಿಕೊಟ್ಟನು.

II– –

ಮೆಯ್ಗೆ ಕಾಹ ಹೇಳುವರಲ್ಲದೆ–ಆಚಾರಾಂಗಕ್ಕೆ ಸತ್ಕ್ರಿಯಾಚಾರವೆಂಬ ಕಾಹ ಕಟ್ಟನೆ ಬೋಧಿಸುವರಲ್ಲದೆ, ಮನಕ್ಕೆ ಕಾಹ ಹೇಳುವರೇ?–ಮನವು ಹಲವು ಕಡೆಯಲ್ಲಿ ಚರಿಸುತ್ತದೆ. ಮನವನು ಇಂಥಲ್ಲಿ ನಿಲ್ಲಿಸಬೇಕೆಂದು ಸುಜ್ಞಾನಾಚರಣೆಯ ಕಾಹ ಕಟ್ಟನೆ ಬೋಧಿಸುವರೆ? ಅಣಕದ ಮಿಂಡನ ಹೊಸ ಪರಿಯ ನೋಡಾ–ಸಕಲಪ್ರಪಂಚವನು ಹಾಸ್ಯೋಪಮಾನವ ಮಾಡಿಬಿಡಲ್ಪಟ್ಟ ಮಹಾನುಭಾವಗುರುಮೂರ್ತಿಯು ಬಹಿರಂಗದಲ್ಲಿ ಕ್ರಿಯಾಚರಣೆಯ ಬೋಧಿಸುತ್ತಿದ್ದ ಹಾಂಗೆ ಆ ಇಷ್ಟಲಿಂಗದ ಚಿತ್ಕಲೆಯೇ ಅಂತರಂಗದಲ್ಲಿ ಪ್ರಾಣಲಿಂಗವಾಹಾತನ ಜ್ಞಾನಾಚರಣೆಯನು ಬೋಧಿಸಿದ ಪ್ರಕಾರವ ಕಂಡಾ. ಕೂಡಲಸಂಗಮದೇವನೆನ್ನ ಮನವ ನಂಬದೆ ತನ್ನಲ್ಲಿದ್ದ ಲೇಸ ಕಾಹ ಹೇಳಿದನು–ಪರಶಿವಲಿಂಗವು ಎನ್ನ ಮಾನಸವನು ನಚ್ಚದೆ ತನ್ನಲ್ಲುಂಟಾಗಿರ್ದ ಭಕ್ತಿ ಜ್ಞಾನವೈರಾಗ್ಯದ ಪರಿಣಾಮವನು ಕಾಹ ಕಟ್ಟಾಗಿ ಬೋಧಿಸಿದನೆಂಬುದರ್ಥ.

III– –

ಎನ್ನ ಮನವ–ಎನ್ನ ಮನಸನು, ನಂಬದೆ–ಪ್ರಪಂಚಿನಲ್ಲಿ ವರ್ತಿಸೀತು ಎಂದು ತನ್ನಲ್ಲಿದ್ದ ಸದ್ಗುಣವ ಕಾವಲಾಗಿ ಸಂಬಂಧಿಸಿದನೆಂಬುದೀಗ ಮನವ ನಂಬದೆ ತನ್ನಲ್ಲಿದ್ದ ಲೇಸ ಕಾಹ ಹೇಳಿದನೆಂಬ ಶಬ್ದಕ್ಕರ್ಥ.

IV– –

ಅಂಗವ ನಿಲಿಸುವರಲ್ಲದೆ ಮನವ ನಿಲಿಸುವ ಪರಿಯ ನೋಡಾ. ಮನದ ಮಲ್ಲಿಕಾರ್ಜುನನು ತನ್ನ ನೇಹ ನಿಲ್ಲಿರಿಸಿದನೆಂಬುದೀ ವಚನದರ್ಥ.

V– –

ಎನ್ನ ಮನವ ನಂಬದೆ–ಎನ್ನ ಮನಸ್ಸು ಪ್ರಪಂಚಿನಲ್ಲಿ ವರ್ತಿಸಿತ್ತೆಂದು ನಚ್ಚದೆ ತನ್ನಲಿದ್ದ ಗುಣವಂ, ಕಾಹ ಹೇಳಿದನು–ತನ್ನ ಸಂಬಂಧವಾದ ಲಿಂಗದಲ್ಲಿ ಕಟ್ಟಮಾಡಿದನು.

೮೧೩

ಮನವಂಚನೆಯೆ ಅನ್ಯಲಿಂಗಾರ್ಚನೆ! ಅದು ನಿಜವಲ್ಲ, ನಿಜವಲ್ಲ. ಕೂಡಲಸಂಗಮದೇವನು ಮನದಂತರ್ಯಾಮಿ ತಾನಾಗಿ.

I– –

ಮನ ವಂಚನೆಯೆ–ಮನವು ಹಲವು ನೆನೆದು ಹಲವು ಭಾವಿಸಿ ಹಲವು ವರ್ತನೆಯೊಡನೆ ಕೂಡಿ ಚರಿಸುವಂಥದೆ ಮನವಂಚನೆಯು, ಅನ್ಯ ಲಿಂಗಾರ್ಚನೆ–ಅದೇ ಅನ್ಯದೈವದ ಭಜನೆಯಾಗಿರ್ಪುದು. ಅದು ನಿಜವಲ್ಲ. ನಿಜವಲ್ಲ–ಅದು ಯಥಾರ್ಥವಾದ ಪೂಜೆಯಲ್ಲವೆಂದು ಕೈಕೊಳ್ಳದಿರ್ಪನು, ಕೂಡಲಸಂಗಮದೇವನು–ಪರಶಿವಲಿಂಗವು. ಮನದಂತರ್ಯಾಮಿ ತಾನಾಗಿ–ಈ ಮನವು ಹಲವು ನೆನೆದು ಹಲವು ಭಾವಿಸಿ ಹಲವು ವರ್ತನೆಯೊಡನೆ ಕೂಡಿ ಚರಿಸುತೈತೆ ಎಂಬುವಂಥದನು ಬಲ್ಲನು. ಈ ಮನವಳಿದು ಉನ್ಮನಿತತ್ತ್ವಸ್ವರೂಪವಾಗಿ ಲಿಂಗದಲ್ಲಿ ಕೂಡುತೈತೆಂಬುವಂಥದನು ಬಲ್ಲನು, ಅರಿದು ಬಲ್ಲನು.

IV– –

ಮನವು ಲಿಂಗದಲ್ಲಿ ಅಡಗದೆ ಬಾಹ್ಯದ ಲಿಂಗಪೂಜೆ ಸತ್ಯವಲ್ಲವೆಂಬುದೀ ವಚನದರ್ಥ.

೮೧೪

ಸರ್ಪನ ಸಂಯೋಗ, ಜ್ಯೋತಿಯ ಪತಂಗನ ಬೆಸನದಂತೆ, ಮನದ ಮದವಳಿಯದೆ ನಿಮ್ಮ ಕೃಪೆಯಿಂದ ನಿಮ್ಮ ನೆನೆವೆ. ಎನ್ನ ಭಾವದ[1] ಕೊನೆಯ ಮೊನೆಯ ಮೇಲೆ ಮನೆಯ ಮಾಡಿಕೊಂಡಿಪ್ಪೆಯಯ್ಯ ಕೂಡಲಸಂಗಮದೇವಾ ನೀನೆನ್ನ ಪ್ರಾಣನಾಥನಾಗಿ.

I– –

ಸರ್ಪನ ಸಂಯೋಗ–ಸರ್ಪಂಗಳೆರಡೂ ಇತರೇತರವಾಗಿ ಕೂಡುವಂಥ ಕೂಟವನ್ನು ಬೇರ್ಪಡಿಸಿ ಕಾಣಬಾರದೆಂಬುವ ಹಾಂಗೆ ಶರಣನಂಗವು ಇಷ್ಟ ಲಿಂಗದಲ್ಲಿ ಕೂಡಿರ್ಪುದು, ಜ್ಯೋತಿಯ ಪತಂಗನ ಬೆಸನದಂತೆ–ಶಲಭನೆಂಬುವಂಥದು ದೀಪಕ್ಕೆರಗಿದರೆ ಸತ್ತೇನೆಂಬುವಂಥದನ್ನು ತಿಳಿಯದೆ ಹೇಂಗೆ ಮೋಹಿಸಿ ಬಿದ್ದು ಸುಟ್ಟುಕೊಂಡು ಸತ್ತುಹೋಗುತ್ತಿಹುದೋ ಹಾಂಗೆ ಶರಣನ ಪ್ರಾಣವು ಪ್ರಾಣಲಿಂಗದಲ್ಲಿ ಕೂಡಿರ್ಪುದು, ಮನದ ಮದವಳಿಯದೆ–ಮನವು ಅಷ್ಟಮದ ಮೊದಲಾದ ಸಕಲತತ್ತ್ವಂಗಳ ವರ್ತನೆಯೊಡನೆ ಕೂಡಿ ಚರಿಸುವಂಥದನು ತಿಳಿಯದೆ. ನಿಮ್ಮ ಕೃಪೆಯಿಂದೆ–ನಿಮ್ಮ ಕೃಪೆಯೆಂದರೆ ಜ್ಞಾನವು. ಆ ಜ್ಞಾನದಿಂದ, ನಿಮ್ಮ ನೆನೆವೆ–ಲಿಂಗಧ್ಯಾನ ಲಿಂಗಸ್ಮರಣೆಯ ಮಾಡುವೆ.

ಎನ್ನ ಭಾವದ ಕೊನೆಯ ಮೊನೆಯ ಮೇಲೆ–ಮನದ ಮನೋಹರವಾದ ರಮಣೀಯವಾದ ನೆನೆಹಿನಾಗ್ರದಲ್ಲಿ. ಮನೆಯ ಮಾಡಿಕೊಂಡಿಪ್ಪೆಯಯ್ಯ–ಉನ್ಮನಿಯ ಮನಸ್ಸೆಂಬ ಆಲಯವ

ಮಾಡಿಕೊಂಡಿಪ್ಪೆಯಯ್ಯ. ಕೂಡಸಂಗಮದೇವಾ–ಎಲೆ ಪರಶಿವಲಿಂಗವೆ, ನೀನೆನ್ನ ಪ್ರಾಣನಾಥನಾಗಿ–ನೀವೆನ್ನ ಪ್ರಾಣದೊಲ್ಲಭನಾಗಿ.

II– –

ಸರ್ಪನ ಸಂಯೋಗ–ಮನಃಪ್ರಪಂಚೆಂಬ ಸರೀಸೃಪನ ಒಡನಾಡಿದರೆ ವಿಷಯ ಪ್ರಪಂಚನೇ ಉಂಟು ಮಾಡುತ್ತೈತೆ ಅದರೊಡನಾಟವೆನಗೇಕೆ, ಜ್ಯೋತಿಯ ಪತಂಗನ ಬೆಸನದಂತೆ–ಮನವು ಇಂದ್ರಿಯ ವಿಷಯಂಗಳಲ್ಲಿ ಮಗ್ನವಾಗಿಪ್ಪುದು. ಅದಲ್ಲದೆ ಸತ್ತ್ವಾಣಜ್ಞಾನ ಸ್ವರೂಪವಾದ ವಸ್ತು ಇತರರ್ಗೆ ಕಾಣಿಸದೆ ಅತಿ ರಹಸ್ಯವಾಗಿಪ್ಪುದು. ಮನವು ಪ್ರಾಣಲಿಂಗದಲ್ಲಿ ಪ್ರವೇಶವಾಗಿಪ್ಪುದು ಮುಂದಕ್ಕೆ ಕಾಣಬಂದರ್ಥ.

III– –

ಬೆಸನದಂತೆ–ವ್ಯಸನದ ಹಾಂಗೆ, ಮನದ ಮದವ–ಎನ್ನ ಮನಸ್ಸಿನ ಅಹಂಕಾರವನು, ಕೊನೆಯ–ಧ್ಯಾನಾಗ್ರದ, ಮೊನೆಯ ಮೇಲೆ–ರಮಣೀಯ ಸ್ಥಲದಲ್ಲಿ.

IV– –

1 + ಮನದ (ತ).

....

ಭಾವಕ್ಕೊಡೆಯನಾಗಿ ಭಾವದ ಮಧ್ಯದಲ್ಲಿಪ್ಪವನಾಗಿ ಭಾವವಳಿದು ಪರಂಜ್ಯೋತಿಲಿಂಗವ ಕೂಡುವೆನೆಂಬುದೀವಚನದರ್ಥ.

V– –

ನೀವು–ಲಿಂಗವು, ಭಾವದ ಕೊನೆಯ ಮೊನೆಯ ಮೇಲೆ–ಧ್ಯಾನಾಗ್ರಧರಮಣಿಸ್ಥಾನದಲ್ಲಿ, ಮನೆಯ ಮಾಡಿಕೊಂಡಿಪ್ಪೆಯಯ್ಯ–ಆಶ್ರಯವ ಮಾಡಿಕೊಂಡಿಪ್ಪೆಯಯ್ಯ.

೮೧೫

ಪೃಥ್ವಿ ಅಪ್ಪು ತೇಜ ವಾಯು ಆಕಾಶ ನಿರಂಜನದೇವಾ! ನಿಮ್ಮ ಮಹಿಮೆಯು ಪ್ರಣವಸ್ವರೂಪಂಗಲ್ಲದೆ ಕಾಣಲಾರಿಗೆಯೂ ಬಾರದಯ್ಯ. ಜ್ಞಾನಜ್ಯೋತಿಯ ಧ್ಯಾನದಿಂದ ನಾಳಶುದ್ಧದ್ವಾರ[1]ವಾ[1]ಗಿ ಆರಾಧಿಸಿ ಕಂಡೆ ನಮ[2] ಕೂಡಲಸಂಗಮದೇವನ.

I– –

ಪೃಥ್ವಿ–ಭೂಮಿಯು, ಅಪ್ಪು–ಉದಕವು. ತೇಜ–ಅಗ್ನಿಯು, ವಾಯು–ಮಾರುತನು, ಆಕಾಶ–ಅಂಬರವು, ಇವು ಬಂದಲ್ಲಿ ಚಂದ್ರ ಸೂರ್ಯ ಆತ್ಮರುಗಳು ಬರುವವು, ನಿರಂಜನ ನಿರಂಜನಬ್ರಹ್ಮವು ಅಷ್ಟತನುವು ಬ್ರಹ್ಮಾಂಡಾದಿಪ್ರಪಂಚನುಂಟುಮಾಡಿಕೊಂಡು ವಿನೋದಿಸುವಂಥ, ದೇವ–ಎಲೆ ಒಡೆಯನೆ. ನಿಮ್ಮ ಮಹಿಮೆಯು ನಿಮ್ಮ ಮಹತ್ವಾತಿಶಯವು, ಪ್ರಣವಸ್ವರೂಪಂಗಲ್ಲದೆ–ಚಿತ್ಸ್ವರೂಪನಾದ

ಶಿವಶರಣಂಗಲ್ಲದೆ, ಕಾಣಲಾರಿಗೆಯೂ ಬಾರದಯ್ಯ-ಬ್ರಹ್ಮವಿಷ್ಣ್ವಾದಿಗಳೊಳಗೊರ್ವರಿಗೆಯೂ ಅರಿದೇನೆಂದರೆ ಅಶಕ್ಯವಾಗಿರ್ಪುದಯ್ಯ.

ಜ್ಞಾನಜ್ಯೋತಿಯ ಧ್ಯಾನದಿಂದ-ಜ್ಞಾನೋದಯದಿಂದ, ನಾಳ-ನವನಾಳಯುಕ್ತವಾದಂಥ ದೇಹವು, ದ್ವಾರ-ಸದ್ವಿವೇಕವನುಳ್ಳ ಮನಸ್ಸು, ಶುದ್ಧವಾಗಿ-ದೇಹವಳಿದು ಆಚಾರಾಂಗವಾಗಿ ಮನವಳಿದು ಉನ್ಮನಿ ತತ್ತ್ವಸ್ವರೂಪವಾಗಿ, ಆರಾಧಿಸಿ-ಇಷ್ಟಮಹಾಲಿಂಗವನು ಅಷ್ಟವಿಧಾರ್ಚನೆ ಷೋಡಶೋಪಚಾರಕ್ರೀಗಳಿಂದರ್ಚಿಸಿ, ನಮ್ಮ ಕೂಡಲಸಂಗಮದೇವನ-ನಮ್ಮ ಪರಶಿವಲಿಂಗವನ್ನು. ಕಂಡೆ-ಅಂತರಂಗದಲ್ಲಿ ಪ್ರಾಣಲಿಂಗಸ್ವರೂಪಿನಿಂದ ಸಂಬಂಧವಾಗಿರುವಂಥದನ್ನು ಅರಿದೆನು.

II- -

ಹಿಂದಕ್ಕೆ ಕಾಣಬಂದರ್ಥ. ಪ್ರಣವಸ್ವರೂಪಂಗಲ್ಲದೆ ಕಾಣಲಾರಿಗೆಯೂ ಬಾರದಯ್ಯ-ಪಂಚಭೂತಂಗಳೇ ಪಂಚಾಕ್ಷರಿಸ್ವರೂಪು. ಆತ್ಮನೇ ಓಂಕಾರ ಪ್ರಣವಸ್ವರೂಪು. ಪಂಚಾಕ್ಷರಂಗಳೇ ಅಂಗ. ಓಂಕಾರಪ್ರಣವವೇ ಆತ್ಮನು ಇಂತೀ ಷಟ್ಸ್ಥಲಾತ್ಮಕಶರೀರಧರಂಗಲ್ಲದೆ ಆ ವಸ್ತುವ ನೋಡುವುದಕ್ಕೆ ಷಟ್ಸಮಯಾದಿಗಳಿಗಾರಿಗೆಯೂ ಅರಿಯಬಾರದಯ್ಯ.

ಜ್ಞಾನಜ್ಯೋತಿಯ ಧ್ಯಾನದಿಂದ-ಅರಿವಿನ ದೀಪ್ತಿಸ್ವರೂಪವಾದ ಪ್ರಾಣಲಿಂಗದ ಚಿಂತನೆಯಿಂದ, ನಾಳಶುದ್ಧದ್ವಾರವಾಗಿ-ಮನವು ಪವಿತ್ರಮಾರ್ಗವಾಗಿ, ನಮ್ಮ ಕೂಡಲಸಂಗಮದೇವನ ಆರಾಧಿಸಿ ಕಂಡೆ-ನಮ್ಮ ಸಂಬಂಧವಾದ ಪರಶಿವಲಿಂಗವನು ಪೂಜಿಸಿ ನಿಜವ ನೋಡಿದೆನೆಂಬುದರ್ಥ.

II- -

1-1 ನಾ(ಟ, ಡ).

....

ದೇವಾ-ಎಲೆ ಒಡೆಯನೆ, ನಿರಂಜನ-ನಿರ್ಗುಣಸ್ವರೂಪವು, ನಾಳಶುದ್ಧದ್ವಾರನಾಗಿ- ಪವಿತ್ರವಾದ ಮನೋಮಾರ್ಗವುಳ್ಳಾತನಾಗಿ.

IV- -

1-1 ನಾ(ತ). 2+ ನು (ತ).

....

ಪಂಚಭೌತಿಕಸ್ವರೂಪನಾಗಿ ರಂಜಿಸುವ ರಂಜನಾಮೂರ್ತಿಯಲ್ಲದೆಯಿದ್ದ ಅಖಂಡಚಿತ್ಪ್ರಣವಪ್ರಕಾಶಸ್ವರೂಪೇ ಲಿಂಗವೆಂಬುದೀಗ ಪೃಥ್ವಿ ಅಪ್ಪು ತೇಜ ವಾಯು ಆಕಾಶ ನಿರಂಜನದೇವಾಯೆಂಬ ಶಬ್ದಕ್ಕರ್ಥ. ಅಂತಪ್ಪ ಮಹಾಲಿಂಗದ ಘನತೆಯನು ಚಿತ್ಪ್ರಣವಜ್ಞಾನವು ಅಂಗದಲ್ಲಿ ಪ್ರಕಾಶಿಸಿದ ಶರಣಂಗಲ್ಲದೆ ಅಱಿಯಲಾರಿಗೆಯೂ ಬಾರದೆಂಬುದೀಗ ನಿರಂಜನದೇವಾ ನಿಮ್ಮ ಮಹಿಮೆಯ ಪ್ರಣವಸ್ವರೂಪಂಗಲ್ಲದೆ ಅಱಿಯಲಾರಿಗೆಯೂಬಾರದೆಂಬ ಶಬ್ದಕ್ಕರ್ಥ. ಅಂತಪ್ಪ ಶಿವಜ್ಞಾನಾಂಗದಲ್ಲಿ ಪ್ರಕಾಶವಾದ ಜ್ಞಾನಪ್ರಕಾಶದಿಂದ ಮಹಾಘನಲಿಂಗವ ಪ್ರತ್ಯಕ್ಷವಾಗಿ ಕಂಡು ಲಿಂಗಧ್ಯಾನ ಘಟಿಸಿತ್ತೆಂಬುದೀಗ

ಜ್ಞಾನಜ್ಯೋತಿಯ ಧ್ಯಾನವೆಂಬ ಶಬ್ದಕ್ಕರ್ಥ. ನಾಳವೆಂದರೆ ಮನೋದ್ವಾರ. ಆಧಾರವೆಂದರೆ ಅಂಗಸ್ವರೂಪು. ಅಂತಪ್ಪ ಮನದ ಅಜ್ಞಾನಗಳೆಲ್ಲಾ ಶಿವಧ್ಯಾನದಿಂದಳಿದು ಕಾಯವೆಲ್ಲಾ ಜ್ಞಾನಕಾಯವಾಯಿತ್ತು ಶರಣಂಗೆಂಬುದೀಗ ನಾಳಶುದ್ಧದ್ವಾರನಾಗಿಯೆಂಬ ಶಬ್ದಕ್ಕರ್ಥ. ಅಂತು ಜ್ಞಾನಕಾಯವಾದ ಅಂಗವನೆ ಲಿಂಗಕ್ಕರ್ಪಿಸಿ ಶರಣನೆಲ್ಲಾ ಲಿಂಗಸ್ವರೂಪಿಯಾದ. ಅಂತು ತಾನು ಲಿಂಗವಾಗಿದ್ದುದ ತಾನೆ ಕಂಡ ಶರಣನೆಂಬುದೀಗ ಆರಾಧಿಸಿಕಂಡೆನು ನಮ್ಮ ಕೂಡಲಸಂಗಮದೇವನನೆಂಬ ಶಬ್ದಕ್ಕರ್ಥ.

V- -

ನಾಳಶುದ್ಧದ್ವಾರನಾಗಿಸಿ.

೮೧೬

ಪಶ್ಚಿಮಪದ್ಮಾಸನದಲ್ಲಿ ಕು[1]ಳ್ಳಿರ್ದು[1] [2]ನೆ[2]ಟ್ಟೆಲುವ ಮುಔದು ತುಟಿ ಮಿಡುಕದೆ ಅಟ್ಟೆ[ಡೆ]ಯಾಡಿತ್ತಲ್ಲ! ಬಿಟ್ಟ ಕಣ್ಣು ಬಿಗಿದ ಹುಬ್ಬು ಬ್ರಹ್ಮರಂಧ್ರದಲ್ಲಿ ಕ[3]ಟ್ಟಿ[3] ಗುಡಿಯ, ಕೂಡಲಸಂಗಮದೇವ ಹಿಡಿವಡೆವ.

II- -

ಪಶ್ಚಿಮ-ಮೂಲಜ್ಞಾನದಿಂದ ತಿಳಿದು, ನೆಟ್ಟ-ಚೆನ್ನಾಗಿ ಎಲುವ ಮುಔದು-ರುಜುಕಾಯನಾಗಿ, ಪದ್ಮಾಸನದಲ್ಲಿ ಕುಳ್ಳಿರ್ದು-ಸ್ವಸ್ತಪದ್ಮಾಸನದಲ್ಲಿ ಮೂರ್ತವ ಮಾಡಿಕೊಂಡಿರ್ದು, ತುಟಿ ಮಿಡುಕದೆ-ಅನ್ಯಮಂತ್ರಸ್ಮರಣೆಯ ಮಾಡದೆ, ಅಟ್ಟೆ-ದೇಹವು, ಎಡೆಯಾಡಿತ್ತಲ್ಲ-ಲಿಂಗಪೂಜೆಯ ಮಾಡುತ್ತ ಹಿಂದಕ್ಕೆ ಮುಂದಕ್ಕೆ ಎಡಕ್ಕೆ ಬಲಕ್ಕೆ ತೊನೆತೊನೆಯಾಡಿತ್ತಲ್ಲ.

ಬಿಟ್ಟ ಕಣ್ಣು-ಆ ಲಿಂಗವನ್ನು ಅನಿಮಿಷದೃಷ್ಟಿಯಿಂದ ನಿರೀಕ್ಷಿಸುವಂಥ ಅನಿಮಿಷದೃಷ್ಟಿಯು, ಬಿಗಿದ ಹುಬ್ಬು-ಆ ಲಿಂಗವನ್ನು ಅನಿಮಿಷದೃಷ್ಟಿಯಿಂದ ನಿರೀಕ್ಷಣೆಯ ಮಾಡುವಲ್ಲಿ ಒಂದಾನೊಂದು ಏರಿಸಿದ ಸಿಂಗಾಡಿಯೋಪಾದಿಯಲ್ಲಿ ಬಿಗಿದಿಪ್ಪವು, ಬ್ರಹ್ಮರಂಧ್ರದಲ್ಲಿ-ಆ ಶರಣನು ಗುರುಮುಖದಿಂ ಬಂದ ಇಷ್ಟಲಿಂಗಕ್ಕೆ ಅಷ್ಟವಿಧಾರ್ಚನೆ ಷೋಡಶೋಪಚಾರಕ್ರೀಗಳಿಂದರ್ಚಿಸಿ ಅನಿಮಿಷದೃಷ್ಟಿಯಿಂದ ನಿರೀಕ್ಷಣೆಯ ಮಾಡಲು ಆ ಇಷ್ಟಲಿಂಗದ ಚಿತ್ಕಳೆಯೇ ನೇತ್ರವೆಂಬ ಸೂತ್ರವನೊಳಕೊಂಡು ಅದೇ ಮನಸ್ಸಂಬಂಧವಾಗಿ ಮನವೆಂಬುದೇ ಪವನಸಂಬಂಧವಾಗಿ ಪವನವೆಂಬುದೇ ಪ್ರಾಣಸಂಬಂಧವಾಗಿ ಪ್ರಾಣದಲ್ಲಿ ಪ್ರಾಣಲಿಂಗವಾಗಿ ನೆಲೆಗೊಳ್ಳಲು ಆ ಪ್ರಾಣಲಿಂಗವು ತಾನೇ ಷಡಾಧಾರಚಕ್ರಂಗಳಲ್ಲಿ ಷಡ್ವಿಧಲಿಂಗವಾಗಿ ನೆಲೆಗೊಳ್ಳಲು ಬ್ರಹ್ಮರಂಧ್ರದಲ್ಲಿ ನಿಷ್ಕಲಲಿಂಗವಾಗಿ ನೆಲೆಗೊಂಡಲ್ಲಿ ಆ ಶರಣನು ಷಡ್ವಿಧಲಿಂಗಕ್ಕೆ ಷಡ್ವಿಧಶಕ್ತಿಯಿಂದಂಗವಾಗಿ ಪಶ್ಚಿಮದ್ವಾರವನು ಬಗೆದೊಗೆದು ಶಿವಯೋಗಸಾಧನ ಸಂಪತ್ತಿನಿಂದೆ ಬ್ರಹ್ಮರಂಧ್ರವನೆಯ್ದಿ ಅಲ್ಲಿರುವ ನಿಷ್ಕಲಬ್ರಹ್ಮದಲ್ಲಿ ಕೂಡಿ ಆ ನಿಷ್ಕಲಬ್ರಹ್ಮಕ್ಕೆ ಪರಮಾನಂದವೆಂಬ ವಾರಿಯಿಂದ ಮಜ್ಜನಕ್ಕೆರೆದು ಪರಮಶಾಂತಿಯೆಂಬ ಗಂಧವ ಧರಿಸಿ ನಿತ್ಯತ್ವವೆಂಬ ಅಕ್ಷತೆಯನಿಟ್ಟು ಬ್ರಹ್ಮರಂಧ್ರದ ಸಹಸ್ರದಳಕಮಲವನೇ ಪುಷ್ಪದ ಪೂಜೆಯಾಗಿ ಅಳವಡಿಸಿ ರತಿಪ್ರೇಮ ಪ್ರೀತಿಪ್ರಕಾಶವನೆ ಏಕಾರತಿ ಪಂಚಾರತಿ ನಿರಂಜನಾರತಿಯಾಗಿ ಬೆಳಗಿ ಸ್ವಾನುಭಾವಸೌರಭ್ಯವನೇ ಧೂಪವಾಗಿ ಬೀಸಿ ನಿಜಾತ್ಮದ್ರವ್ಯವನೇ ಪದಾರ್ಥವಾಗಿ ಸಮರ್ಪಣೆಯ ಮಾಡಿ ನಿಜಭಕ್ತಿ ರಾಗರಸವೆಂಬ ತಾಂಬೂಲವ ಸಮರ್ಪಣೆಯ ಮಾಡಿದಂಥ ಶಿವಶರಣನು, ಗುಡಿಯ ಕಟ್ಟಿ-ಅಂತರಂಗದ ಹರುಷ ಭಾವವನ್ನೇ

ಗುಡಿತೋರಣವಾಗಿ ಅಳವಡಿಸಿಕೊಂಡು, ಕೂಡಲಸಂಗಮದೇವ–ನಿಷ್ಕಲಬ್ರಹ್ಮದೇವನು, ಹಿಡಿವಡೆವ–ಶರಣನು ಮಾಡುವಂಥ ಮಹಾಜ್ಞಾನದ ಪೂಜೆಗೆ ವಶವಾಗಿರ್ಪನು.

II– –

1–1 ಳಿತು (ಚ, ಜ). 2–2 ನಿ (ಚ.ಜ). 3–3 ಟ್ಟು (ಚ, ಜ).

....

ಪಶ್ಚಿಮಪದ್ಮಾಸನದಲ್ಲಿ ಕುಳಿತು–ಸ್ವಸ್ಥಪದ್ಮಾಸನದಲ್ಲಿ ಮೂರ್ತಮಾಡಿ, ನಿಟ್ಟೆಲುವ ಮುಜಿದು–ಮೂರೇಳಿಪ್ಪತ್ತೊಂದು ಗ್ರಂಥಿಗಳನು ಸುಷಿರವ ಮಾಡಿ, ತುಟಿ ಮಿಡುಕದೆ–ಓಷ್ಠ ಸ್ಪಂದನವಾಗದೆ, ಅದಲ್ಲದೆ ಶಬ್ದ ಸಂಚಲವಾಗದೆ, ೧ಅಟ್ಟಿಯಾಡಿತ್ತಲ್ಲ೧–ಆಚಾರಾಂಗವು ಜ್ಞಾನಕ್ರೀಯಲ್ಲಿ ನಟಿಸಿತ್ತಲ್ಲಾ.

ಬಿಟ್ಟ ಕಣ್ಣು–ಅನಿಮಿಷದೃಷ್ಟಿಯು, ಬಿಗಿದ ಹುಬ್ಬು–ಬಂಧಿಸಿದ ಖೇಚರಮುದ್ರೆಯಿಂದ, ಬ್ರಹ್ಮರಂಧ್ರದಲ್ಲಿ–ಅಜರಂಧ್ರದಲ್ಲಿ, ಕಟ್ಟು ಗುಡಿಯ–ಹರುಷಭಾವವೆಂಬ ಗುಡಿಯ ಬಂಧಿ೨ಸು.೨ ಕೂಡಲಸಂಗಮದೇವ ಹಿಡಿವಡೆವ–ಹೀಂಗಾದರೆ ಪರಶಿವಲಿಂಗವು ಹಸ್ತಗತವಾದನು.

● ಅದಲ್ಲದೆ ಗುರುಕಾರುಣ್ಯವ ಪಡೆದು ಅಂಗಲಿಂಗಸಂಬಂಧಿಯಾದ ಶರಣನು ತನ್ನ ತನುವಿನ ವಾಮಭಾಗದ ಕರದ ಪಂಚಾಂಗುಲಿಗಳೆಂಬ ಸೀಗುರಿಗಳಿಂದಲಂಕೃತವಾದಾಲಯದ ವೇದಿಕೆಯಲ್ಲಿರ್ದ ಇಷ್ಟಲಿಂಗಕ್ಕೆ ಅಷ್ಟವಿಧಾರ್ಚನೆ ಷೋಡಶೋಪಚಾರಪೂಜಾಕ್ರೀಗಳ ಮಾಡಿ, ೩ವ್ಯಾಘ್ರ೩ ದೃಷ್ಟಿ ಕುರಂಗದೃಷ್ಟಿ ಸಂಚಾರದೃಷ್ಟಿ ಭಯಂಕರದೃಷ್ಟಿ ಊರ್ಧ್ವದೃಷ್ಟಿ ಅಧೋದೃಷ್ಟಿಗಳೆಂಬ ಛತ್ತೀಸದೃಷ್ಟಿಗಳಿಲ್ಲದೆ ಅರೆವಿರಿದ ತಾವರೆಯೋಪಾದಿಯಲ್ಲಿ ಶ್ರೇಷ್ಠಾನಿಮಿಷದೃಷ್ಟಿಗಳಿಂದ ನಿರೀಕ್ಷಣೆಯ ಮಾಡಲು ಆ ಇಷ್ಟಲಿಂಗದ ಚಿತ್ಕಲೆ ತಾನೆ ನೇತ್ರವೆಂಬ ಸೂತ್ರವನೊಳಕೊಂಡು ಹೃತ್ಕಮಲ ಕರ್ಣಿಕಾಕುಹರದ ಮಧ್ಯದಲ್ಲಿ ಪ್ರಾಣಲಿಂಗವಾಯಿತ್ತು. ಆ ಪ್ರಾಣಲಿಂಗವು ತಾನೆ ಆಧಾರಚಕ್ರದಲ್ಲಿ ಆಚಾರಲಿಂಗವಾಗಿ ಸ್ವಾದಿಷ್ಠಾನಚಕ್ರದಲ್ಲಿ ಗುರುಲಿಂಗವಾಗಿ ಮಣಿಪೂರಕ ಚಕ್ರದಲ್ಲಿ ಶಿವಲಿಂಗವಾಗಿ ಪೂರ್ವಕಕ್ಷೆಯ ನಿರ್ಬಂಧಿಸಿಕೊಂಡು ಅಲ್ಲಿಂದ ಉತ್ತರಕಕ್ಷೆಮಯವಪ್ಪ ಅನಾಹತದಲ್ಲಿ ಜಂಗಮಲಿಂಗವಾಗಿ ವಿಶುದ್ಧಿಯಲ್ಲಿ ಪ್ರಸಾದಲಿಂಗವಾಗಿ ಆಜ್ಞೇಯದಲ್ಲಿ ಮಹಾಲಿಂಗವಾಗಿ ಬ್ರಹ್ಮರಂಧ್ರದ ಸಹಸ್ರದಳಕಮಲದಲ್ಲಿ ನಿ:ಕಲಲಿಂಗವಾಗಿ ಗ್ರಹಣಕೊಳಗಾದನೆಂಬುದರ್ಥ.

....

೧–೧ ಅಟ್ಟಿ ಆದಿತಲ್ಲ (ಜ). ೨–೨ ಸಿ (ಜ). ೩–೩ ವ್ಯಗ್ರ (ಜ).

III– –

1–1 ಳಿತು (ಟ.ಡ) 3–3 ಟ್ಟು (ಟ.ಡ).

....

ಪಶ್ಚಿಮಪದ್ಮಾಸನದಲ್ಲಿ–ಸ್ವಸ್ಥಪದ್ಮಾಸನದಲ್ಲಿ, ಕುಳಿತು–ಮೂರ್ತಮಾಡಿ, ನೆಟ್ಟೆಲುವ ಮುಜಿದು–ಕಸೇರ್ದಂಡವನು ನೇಜಿತ್ತಾಗಿಸಿ, ತುಟಿ ಮಿಡುಕದೆ–ಓಷ್ಠಸ್ಪಂದನವಾಗದೆ, ಅಟ್ಟಿಯಾಡಿತಲ್ಲ–ಕಬಂಧವು

ವಿನೋದಿಸಿತ್ತಲ್ಲ. ಬ್ರಹ್ಮರಂಧ್ರದಲ್ಲಿ–ಅಜರಂಧ್ರಸ್ಥಲದಲ್ಲಿ, ಗುಡಿಯ ಕಟ್ಟು–ಹರ್ಷಭಾವವನು ಸಂಬಂಧಿಸು, ಕೂಡಲಸಂಗಮದೇವ–ಪರಶಿವಲಿಂಗವು, ಹಿಡಿವಡೆವ–ಹಸ್ತಗತವಾದನು.

IV– –

೧–೧ ಳಿತು (ತ). ೩–೩ ಟ್ಟು (ತ)

....

ಪದ್ಮಾಸನದಲ್ಲಿ ಕುಳ್ಳಿರ್ದು ಇಡಾ ಪಿಂಗಳವ ನಿಲಿಸಿ ಸುಷುಮ್ನ ಬಟ್ಟೆಯ ತೆಱಹುಮಾಡಿ ಸಮಸ್ತಕರಣೇಂದ್ರಿಯಂಗಳ ಕೆಡಿಸಿ ಬ್ರಹ್ಮರಂಧ್ರದ ಮಹಾಜ್ಯೋತಿಯಲ್ಲಿ ನಿಂದಿತ್ತೆಂಬುದೀ ವಚನದರ್ಥ.

V– –

ತುಟಿ ಮಿಡುಕದೆ–ಓಷ್ಠ ಸ್ಪಂದನವಾಗದೆ. ಅಟ್ಟೆಯಾಡಿತ್ತಲ್ಲ–ಕಬಂಧವು ವಿನೋದಿಸಿತಲ್ಲ. [1]ಬಿಟ್ಟ ಕಣ್ಣು–ಎವೆ ಹಳಚದಿರ್ದ ನಾಸಿಕಾಗ್ರದೃಷ್ಟಿಯು, ಬಿಗಿದ ಹುಬ್ಬು–ಬಿಲ್ಲನೇಱಿಸಿದೋಪಾದಿಯಲ್ಲಿರ್ದ ಭೃಕುಟಿಯು, ಬ್ರಹ್ಮರಂಧ್ರದಲ್ಲಿ, ಕಟ್ಟು ಗುಡಿಯ–'ಗುಡಿಗಟ್ಟು ವರ್ಣಪೂರರೇಖಾಯಾ'ಯೆಂದು ಹರ್ಷಭಾವವನಂಗೀಕರಿಸಿ, ಕೂಡಲಸಂಗಮದೇವ–ಪರಶಿವಲಿಂಗವು, ಹಿಡಿವಡೆದ–ಹಸ್ತಗತವಾದನು.

....

೧ + ಬ್ರಹ್ಮರಂಧ್ರದಲ್ಲಿ (ಪ).

೮೧೭

ಸುನಾದಬಿಂದು [1]ಕಳಾ[1]ಮಂತ್ರದಗ್ರದ ಕೊನೆಯಲ್ಲೈದುದೇ? ಸೋಽಹಂ ಸೋಽಹಂ ಎನುತ್ತಿದ್ದಿತ್ತು; ಕೋಹಂs [2]ಅಳಿದು[2] ಬ್ರಹ್ಮರಂಧ್ರ[3]ದಲ್ಲಿ[3]. [4][ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ! ಆನಂದಂ ಬ್ರಹ್ಮಣೋ ವಿದ್ವಾನ್ ನ ಬಿಭೇತಿ ಕುತಶ್ಚನ!!][4] [5]ಇಂತೆಂದುದಾಗಿ[5] ಅಗಮ್ಯ ಕೂಡಲಸಂಗಮದೇವನಲ್ಲದೆ ಮತ್ತಾರು ಇಲ್ಲ.

....

4–4 ಯಥೋ ವಾಚ್ಯ ಪ್ರವರ್ತಂತೇ ಅಪ್ರಾಪ್ಯ ಮನಸಾ ಸಹ! ಆನಂದ ಬ್ರಹ್ಮಣೋ ವಿದ್ವಾನ್ ನ ಪಿಭೇತಿ ಪುನಶ್ಚನ: (ಕ.ಗ)

I– –

ಸುನಾದ–ಆಕಾರಪ್ರಣಮವು. ಬಿಂದು–ಉಕಾರಪ್ರಣಮವು. ಕಳಾ–ಮಕಾರಪ್ರಣವವು, ಮಂತ್ರ–ಈ ಅಉಮಾಕ್ಷರತ್ರಯಂಗಳೊಂದಾದ ಪ್ರಣವ ಬ್ರಹ್ಮಲಿಂಗಕ್ಕೆ ಅಷ್ಟವಿಧಾರ್ಚನೆ ಷೋಡಶೋಪಚಾರ ಕ್ರೀಗಳಿಂದರ್ಚಿಸಿ ಅನಿಮಿಷದೃಷ್ಟಿಯಿಂದ ನಿರೀಕ್ಷಣೆಯ ಮಾಡಲು ಆ ಇಷ್ಟಲಿಂಗದ ಚಿತ್ಕಲೆಯೇ ನೇತ್ರವೆಂಬ ಸೂತ್ರವನೊಳಕೊಂಡು ದೃಷ್ಟಿಗ್ರಾಹ್ಯವಾಗಿ ಅದೇ ಮನಸ್ಸಂಬಂಧವಾಗಿ ಮನವೆಂಬುದೇ ಪವನಸಂಬಂಧವಾಗಿ ಪವನವೆಂಬುದೇ ಪ್ರಾಣ ಸಂಬಂಧವಾಗಿ ಪ್ರಾಣದಲ್ಲಿ ಪ್ರಾಣಲಿಂಗವಾಗಿ

ನೆಲೆಗೊಂಡು ಆ ಪ್ರಾಣಲಿಂಗವೇ ಷಡಾಧಾರಚಕ್ರಂಗಳಲ್ಲಿ ಷಡ್ವಿಧಲಿಂಗವಾಗಿ ನೆಲೆಗೊಳಲು ಆ ಶರಣನು ಷಡ್ವಿಧಲಿಂಗಕ್ಕೆ ಷಡ್ವಿಧ ಭಕ್ತಿಯಿಂದಂಗವಾಗಿ, ಅಗ್ರದ ಕೊನೆಯಲ್ಲೈದುದೆ–ಬ್ರಹ್ಮರಂಧ್ರಲ್ಲಿ ನೆಲೆಗೊಂಡಿರುತ್ತಿದ್ದುದೇ, ಬ್ರಹ್ಮರಂಧ್ರದಲ್ಲಿ–ಬ್ರಹ್ಮರಂಧ್ರದೊಳಗೆ, ಶರಣನು ಪಶ್ಚಿಮದ್ವಾರವನು ಬಗೆದೊಗೆದು ಶಿವಯೋಗಸಾಧನ ಸಂಪತ್ತಿನಿಂದ ಬ್ರಹ್ಮರಂಧ್ರವನೆಯ್ದಿ ಅಲ್ಲಿರುವ ನಿಃಕಲಬ್ರಹ್ಮದಲ್ಲಿ ಕೂಡಿರುವಂಥ ಶಿವಶರಣನು, ಕೋಹಂ–ಅಹಂ ಕಃ? ತಾನಾರೆಂಬಂಥ ಭಾವವನು, ಅಳಿದು–ನಷ್ಟವ ಮಾಡಿ, ಸೋಽಹಂ ಸೋಽಹಂ ಎನ್ನುತ್ತಿದ್ದಿತ್ತು: ಸೋಽಹಂ– ಆ ಬ್ರಹ್ಮವೇ ನಾನು, ಸೋಽಹಂ–ಆ ಬ್ರಹ್ಮವೇ ನಾನುಯೆಂದು, ಎನ್ನುತ್ತಿದ್ದಿತ್ತು–ಉಚ್ಚರಿಸುತ್ತಿದ್ದಿತ್ತು.

ವಾಚ್ಯ–ವೇದಂಗಳು, ಯೇತ್–ಆವುದಾನೊಂದು ಪರಬ್ರಹ್ಮವನು. ಮನಸಾಸಹ–ಮನಸ್ಸಿನ ಸಾಮರ್ಥ್ಯದೊಡನೆ ಕೂಡಿ, ಅಪ್ರಾಪ್ಯ–ಪ್ರಾಪ್ತಿಸಲರಿಯದೆ. ನಿವರ್ತಂತೇ–ಮಿಗೆ ವರ್ತಿಸುತ್ತಿಹವು. ಆನಂದಬ್ರಹ್ಮಣೋ–ಸತ್ತುಚಿತ್ತಾನಂದ ತ್ರಿವಿಧಲಕ್ಷಣವನುಳ್ಳಂಥ ಪರಬ್ರಹ್ಮವನು, ವಿದ್ವಾನ್–ಬಲ್ಲಂಥ ಶಿವಶರಣನು, ನ ಬಿಭೇತಿ ಪುನಶ್ಚನ:–ಮರಳಿ ದೇಹವ ಧರಿಸಿಕೊಂಡು ಹುಟ್ಟಿ ಬಂದು ಸಕಲಸಂಸಾರಪ್ರಪಂಚಿಗೆ ಒಳಗಾಗುತ್ತೈದಾನೆಯೆಂದು ಎತ್ತಣದು ಇಲ್ಲವು. ಇಂತೆಂದುದಾಗಿ–ಹೀಗೆಂದು ಈಶ್ವರನ ವಾಕ್ಯದಲ್ಲಿ ಹೇಳುತ್ತಿಹುದಾದ ಕಾರಣ, ಅಗಮ್ಯ– ಆರಿಗೂ ಗಮಿಸಿ ಕಾಣಿಸಿಕೊಳಬಾರದೆ ಇದ್ದಂಥ, ಕೂಡಲಸಂಗಮದೇವನಲ್ಲದೆ–ಪರಶಿವಲಿಂಗವಲ್ಲದೆ. ಮತ್ತಾರೂ ಇಲ್ಲ–ಮತ್ತೊಂದು ದೈವ ಉಂಟಾಗಿಲ್ಲವು.

II– –

೧–೧ ಪ್ರಣವ (ಚ.ಜ). ೨–೨ X (ಚ.ಜ). ೩–೩ ದೊಳಗೆ (ಚ.ಜ).

....

ಸುನಾದ–ಲೇಸಾದ ಧ್ವಾನವನುಳ್ಳ ಪ್ರಾಣಲಿಂಗವು, ಬಿಂದು–ಚಿದ್ಬಿಂದುಸ್ವರೂಪವಾದ ಇಷ್ಟಲಿಂಗವು, ಪ್ರಣವಮಂತ್ರ– ಚಿತ್ಕಳಾಸ್ವರೂಪವಾದ ಭಾವಲಿಂಗವು, ಅಗ್ರದ ಕೊನೆಯಲ್ಲೈದುದೆ–ಒಂದೇ ಆದಂಥ ಚಿತ್ತಿನಲ್ಲಿ ನಿಃಕಲಲಿಂಗವಾಗಿರುತ್ತದೆ. ಸೋಽಹಂ ಸೋಽಹಂ ಎಂದೆನುತಿದ್ದಿತ್ತು ಕೋಽಹಂ ಬ್ರಹ್ಮರಂಧ್ರದೊಳಗೆ–ಆರಿಗೂ ಅರಿಯಬಾರದಿರ್ದಂಥ ಅಜರಂಧ್ರದಲ್ಲಿ ನಾನೇ ವಸ್ತುಸ್ವರೂಪು ನಾನೇ ವಸ್ತುಸ್ವರೂಪು ಎನುತ್ತಿದ್ದಿತ್ತು; ಮುಂದಕ್ಕೆ ಕಾಣಬಂದರ್ಥ.

III– –

1–1 ಪ್ರಣವ (ಟ.ಡ). 5–5 ಎಂದುದಾಗಿ (ಟ.ಡ).

....

ಸು–ಲೇಸಾದ, ನಾದಬಿಂದು–ಚಿನ್ನಾದ ಚಿದ್ಬಿಂದುಗಳಿಗಾಶ್ರಯವಾದ, ಪ್ರಣವಮಂತ್ರಾಗ್ರದ–ಓಂಕಾರದುಪರಿಯ, ಕೊನೆಯಲಿ–ರಮಣೀಯಸ್ಥಲದಲ್ಲಿ, ಸೋಽಹಂ ಸೋಽಹಂ ಎಂದೆನುತ್ತ–ಅಹಂ ಸ: ಅಹಂ ಸ: ಎಂದೆನುತ್ತೆ. ಐದುದೇ–ಪರಬ್ರಹ್ಮವಿರುತ್ತದೆ. ಕೋಽಹಂ: ಅಹಂ–ನಾನು, ಕ:–ಆವಾತನು, ಎಂದೆನುತ್ತಿದ್ದಿತ್ತು–ಹೀಗೆಂಬ ಪ್ರಶ್ನೆಯುಂಟಾಗಿದ್ದಿತ್ತು.

ಸಾಕ್ಷಿ ಶ್ರುತಿಃ ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ ! ಆನಂದಂ ಬ್ರಹ್ಮಣೋ ವಿದ್ವಾನ್ ನ ಬಿಭೇತಿ ಕುತಶ್ಚನ!!

ಯತಃ-ಯಾವುದಾನೊಂದು ಕಾರಣದ ದೆಸೆಯಿಂದೆ. ವಾಚಃ-ನಿಗಮವಾಕ್ಯಂಗಳು, ಮನಸಾ ಸಹ-ಮನಸ್ಸಿನೊಡನೆ ಕೂಡಿ, ಅಪ್ರಾಪ್ಯ-ಆ ಪರವಸ್ತುವನು ಎಯ್ದಲಜೆಯದೆ. ನಿವರ್ತಂತೇ-ಹಿಂದಿರುಗುತ್ತಿರ್ದವು. ಆನಂದಂ-ಹರ್ಷವನುಳ್ಳ, ವಿದ್ವಾನ್-ಜ್ಞಾನಿಯಾದಂಥ, ಬ್ರಾಹ್ಮಣಃ-ಬ್ರಾಹ್ಮಣನಿಗೆ, ಕುತಶ್ಚನ-ಒಂದು ವೇಳೆಯಾದಡೆಯೂ, ನ ಬಿಭೇತಿ-ಭೀತಿಯುಂಟಾಗಿರ್ಪುದು, ಎಂದುದಾಗಿ-ಹೀಂಗೆಂದು ಶಿವಾಗಮವಾಕ್ಯ ಹೇಳಿದುದಾಗಿ, ಅಗಮ್ಯ-ತಿಳಿಯಲಶಕ್ಯನಾದಂಥ, ಕೂಡಲಸಂಗಮದೇವನಲ್ಲದೆ-ಪರಶಿವಲಿಂಗವೇ ತಾನಲ್ಲದೆ, ಮತ್ತಾರೂ ಇಲ್ಲ-ಅತ:ಪರವಾಗಿ ಮತ್ತಾವ ದೈವವೂ ಉಂಟಾಗಲರಿಯದೆಂಬುದರ್ಥ.

IV- -

1-1 ಪ್ರಣವ (ತ). 2-2 ಎಂಬುದ ಕಳೆದು (ತ). 3-3 ದೊಳಗೆ(ತ). 4+ ಸಾಕ್ಷಿ (ತ).

....

ಪ್ರಣವಮಂತ್ರವು ಆವ ಠಾವಿನಲ್ಲಿ ಅಡಗಿತ್ತು ಅದೇ ಅದ್ವೈತ. ಅದ್ವೈತವೇ ತಾನಾಗಿ ಬೇರಿಲ್ಲವೆಂಬುದೀ ವಚನದರ್ಥ.

V- -

1-1 ಪ್ರಣವ (ಪ).

....

ಸು-ಲೇಸಾದ, ನಾದಬಿಂದು-ಚಿನ್ನಾದಚಿದ್ಬಿಂದುಗಳಿಗಾಶ್ರಯವಾದ. ಪ್ರಣವಮಂತ್ರಾಗ್ರದ-ಓಂಕಾರದುಪರಿಯ, ಕೊನೆಯಲಿ-ರಮಣೀಯ ಸ್ಥಲದಲ್ಲಿ ಐದುವುದೆ, ಸೋಽಹಂ ಸೋಽಹಂ ಎನುತ್ತಿದ್ದಿತ್ತು- ಅಹಂ ಸ: ಅಹಂ ಸ: ಎಂದೆನುತ್ತೆ ಪರಬ್ರಹ್ಮವಿರುತ್ತದೆ, ಬ್ರಹ್ಮರಂಧ್ರದಲಿ, ಕೋಽಹಂ-ಅಹಂ ಕ: ನಾನಾರುಯೆನುತ್ತಿದ್ದಿತ್ತು.

೮೧೮

ಬೆಳಗಿನೊಳಗಣ ಬೆಳಗು ಮಹಾಬೆಳಗು. ಶಿವಶಿವಾ, ಪರಮಾಶ್ರಯವೆ ತಾನಾಗಿ ಶತಪತ್ರಕಮಲಕರ್ಣಿಕಾ [1]ಮಧ್ಯ[1] ದಲ್ಲಿ ಸ್ವತಸ್ಸಿದ್ಧನಾಗಿಪ್ಪ ನಮ್ಮ ಕೂಡಲಸಂಗಮದೇವ.

I- -

ಬೆಳಗಿನೊಳಗಣ ಬೆಳಗು ಮಹಾಬೆಳಗು; ಬೆಳಗು-ಅಂಗದಲ್ಲಿ ನೆಲೆಗೊಂಡು ಬೆಳಗುವ ಸತ್ಕ್ರಿಯಾಚಾರಸ್ವರೂಪವಾದ ಇಷ್ಟಲಿಂಗವು, ಒಳಗಣ-ಮನದಲ್ಲಿ ನೆಲೆಗೊಂಡು ಬೆಳಗುವ

ಸುಜ್ಞಾನಸ್ವರೂಪವಾದ ಪ್ರಾಣಲಿಂಗವು, ಬೆಳಗು–ಆತ್ಮಾಂಗದಲ್ಲಿ ನೆಲೆಗೊಂಡು ಬೆಳಗುವ ಮಹಾಜ್ಞಾನಸ್ವರೂಪವಾದ ಭಾವಲಿಂಗವು, ಮಹಾಬೆಳಗು–ತ್ರಿವಿಧಲಿಂಗವನ್ನು ಒಳಕೊಂಡು ತೋರುವ ಮಹಾಲಿಂಗದ ಪ್ರಕಾಶವು.

ಶಿವಶಿವಾ–ಲಿಂಗವೇ, ಲಿಂಗವೇ, ಪರಮಾಶ್ರಯವೆ ತಾನಾಗಿ–ತ್ರಿವಿಧಲಿಂಗವನ್ನು ಒಳಕೊಂಬುವುದಕ್ಕೆ ಮಹಾಲಿಂಗವೇ ಆಲಯವಾಗಿ , ಶತಪತ್ರ ಕಮಲಕರ್ಣಿಕಾಮಧ್ಯದಲ್ಲಿ–ಸಾವಿರೆಸಳಿನ ಕಮಲವನುಳ್ಳ ಬ್ರಹ್ಮರಂಧ್ರದೊಳಗೆ, ಸ್ವತಸ್ಸಿದ್ಧನಾಗಿಪ್ಪ–ಸ್ಥಿರಚಿತ್ತವುಳ್ಳವನಾಗಿರುವ, ನಮ್ಮ ಕೂಡಲಸಂಗಮ ದೇವ–ನಮ್ಮ ನಿಃಕಲಬ್ರಹ್ಮವು.

II– –

ಬೆಳಗಿನೊಳಗಣ ಬೆಳಗು ಮಹಾಬೆಳಗು ಶಿವಶಿವಾ–ಸತ್ಕ್ರಿಯಾಪ್ರಕಾಶಸ್ವರೂಪವಾದ ಇಷ್ಟಲಿಂಗವು, ಸುಜ್ಞಾನಪ್ರಕಾಶಸ್ವರೂಪವಾದ ಪ್ರಾಣಲಿಂಗವು, ಮಹಾಜ್ಞಾನಪ್ರಕಾಶಸ್ವರೂಪವಾದ ಭಾವಲಿಂಗವು, ಹರಹರಾ, ಪರಮಾಶ್ರಯವೆ ತಾನಾಗಿ–ತ್ರಿವಿಧಲಿಂಗವನೊಳಕೊಂಡು ತೋಱುವ ಪರಾಶಕ್ತಿ ಪ್ರಣವದಲ್ಲಿ ರಮಿಸುತ್ತಿರ್ದ ಮಹಾಲಿಂಗಕ್ಕೆ ಜ್ಞಾನಕರಣಸ್ವರೂಪವಾದಾತ್ಮನೆ ಅಂಗಸ್ವಯವಾಗಿ, ಶತಪತ್ರಕಮಲಕರ್ಣಿಕಾ ಮಧ್ಯದಲ್ಲಿ ಸ್ವತಸ್ಸಿದ್ಧನಾಗಿಪ್ಪ ನಮ್ಮ ಕೂಡಲಸಂಗಮದೇವ–ಮಹಾಲಿಂಗವೆ ಷಡ್ವಿಧಲಿಂಗವಾಗಿ ಷಡಾಧಾರಚಕ್ರಂಗಳನೊಳಕೊಂಡು ಅಲ್ಲಿಂದ ಪಶ್ಚಿಮದ್ವಾರವನು ಬಗೆದೊಗೆದು ಬ್ರಹ್ಮರಂಧ್ರದ ಸಹಸ್ರಕಮಲದೊಳಗಣ ನೂರೆಸಳ ಕಂಜದ ಕಿಂಜಲ್ಕಂಗಳ ವಳಯದಲ್ಲಿ ತಾನು ನಿಃಕಲಲಿಂಗವಾದಲ್ಲಿ ನೆರೆ ನಿರ್ಧಾರವಾಗಿರ್ಪ ಪರಶಿವಲಿಂಗವು.

III– –

1–1 ಗ (ಟ.ಡ).

....

ಬೆಳಗಿನೊಳಗಣ–ಕ್ರಿಯಾಪ್ರಕಾಶದಲ್ಲಿಯ, ಬೆಳಗು–ಜ್ಞಾನಪ್ರಕಾಶವು, ಮಹಾಬೆಳಗು–ಜ್ಞಾನಪ್ರಕಾಶಕ್ಕೆ, ಶಿವಶಿವ–ಹರಹರ, ಪರಮ–ಪರಬ್ರಹ್ಮವೆ, ಆಶ್ರಯವೆ ತಾನಾಗಿ–ಆಲಯಸ್ಥಳವೆ ಸ್ವಯವಾಗಿ, ಶತಪತ್ರಕಮಲಕರ್ಣಿಕಾಗ್ರದಲ್ಲಿ–ಸಹಸ್ರದಳಕಮಲಕರ್ಣಿಕಾಗ್ರದಲ್ಲಿ, ನಮ್ಮ–ಮಮಕರ್ತೃವಾದ, ಕೂಡಲ ಸಂಗಮದೇವ–ಪರಶಿವಲಿಂಗವು, ಸ್ವತಃ–ತನ್ನಿಂದ ತಾನೆ, ಪ್ರಸಿದ್ಧನಾಗಿರ್ಪ–ಪ್ರಖ್ಯಾತನಾಗಿರುವನು.

IV– –

ಮ^[ಹ]^ವೆಂಬ ಬೆಳಗಿಗೆ ಬೆಳಗಾದ ಮಹಾಬೆಳಗು; ಆ ಬೆಳಗು ನಾನಾತತ್ತ್ವಂಗಳಿಗೆ ಆಲಯ; ಶತಪತ್ರ ಕಮಳದಲ್ಲಿ ತಾನೆ ಇರುತ್ತಿಹುದೆಂಬುದೀ ವಚನದರ್ಥ.

....

೧–೧ ನ (ತ)

೮೧೯

ಆಚಾರ ಶಿವಾಚಾರವೆಂದರಿಯದ ಕಾರಣ, [1]ಷಡು[1]ದರುಶನಂಗಳೆಲ್ಲ ತಮತಮಗೆ ಶರಣೆನುತ್ತಿದ್ದುವು. ಮಹ[2]ತ್ವದ ಸಮಯಾದಿ ಶೈವಂಗ[3]ಳೆಂಬುವೆಲ್ಲ[3] [4]ಶರಣು[4] ಶರಣೆನುತ್ತಿದ್ದುವು. ನಮ್ಮ ಕೂಡಲಸಂಗನ ಶರಣರು ಮಾಡಿದ ವಿನಿಯೋಗ ಬಹಿರಂಗದಲ್ಲಿ ವರ್ತಿಸುವರಿಗೆಲ್ಲಿಯದೊ?

I– –

ಆಚಾರ–ಇಷ್ಟಲಿಂಗಸಂಬಂಧವಾದ ಸತ್ಕ್ರಿಯಾಚಾರವು. ಶಿವಾಚಾರ–ಪ್ರಾಣಲಿಂಗಸಂಬಂಧವಾದ ಸುಜ್ಞಾನಾಚಾರವು, ಎಂದಱಿಯದ–ಹೀಂಗೆಂದು ತಿಳಿಯದ, ಕಾರಣ–ಅಂಗಪ್ರಾಣಂಗಳಲ್ಲಿ ಇಷ್ಟಪ್ರಾಣಲಿಂಗಗಳ ಸಂಬಂಧವ ಮಾಡಿಕೊಂಡು ಅವಿರಳಕ್ರೀಜ್ಞಾನವಿಡಿದಾಚರಿಸುವಂಥದನು ತಿಳಿಯದ ನಿಮಿತ್ಯ, ಷಡುದರುಶನಂಗಳೆಲ್ಲ–ಆರುದರುಶನಗಳಷ್ಟೂ, ತಮತಮಗೆ–ತಮ್ಮ ತಮ್ಮಷ್ಟಕ್ಕೆ, ಶರಣೆನುತಿದ್ದವು–ಭಿನ್ನವಿಟ್ಟುಕೊಂಡರಿದು ಭಿನ್ನವಿಟ್ಟುಕೊಂಡು ಧ್ಯಾನಿಸಿ ಭಿನ್ನವಿಟ್ಟುಕೊಂಡು ಪೂಜಿಸಿ ಭಿನ್ನವಿಟ್ಟುಕೊಂಡು ನಮಸ್ಕರಿಸುತ್ತಿಹವು.

ಮಹತ್ವದ–ಮಹತ್ವಾತಿಶಯದ, ಸಮಯಾದಿ–ಷಟ್ಸಮಯಂಗಳು ಮೊದಲಾದ, ಶೈವಂಗಳೆಲ್ಲ–ಸಮಸ್ತಶೈವಂಗಳಷ್ಟೂ, ಶರಣು ಶರಣೆನುತ್ತಿದ್ದವು–ಭಿನ್ನವಿಟ್ಟುಕೊಂಡರಿದು ಭಿನ್ನವಿಟ್ಟುಕೊಂಡು ಧ್ಯಾನಿಸಿ ಭಿನ್ನವಿಟ್ಟುಕೊಂಡು ಪೂಜಿಸಿ ಭಿನ್ನವಿಟ್ಟುಕೊಂಡು ನಮಸ್ಕರಿಸಿ ಭಿನ್ನ ಫಲಪದಂಗಳನು ಪಡೆದನುಭವಿಸುತ್ತಿಹವು. ನಮ್ಮ ಕೂಡಲಸಂಗನ ಶರಣರು–ಶಿವನ ಚಿತ್ಪ್ರಭಾಂಗಸ್ವರೂಪರಾದ ಶಿವಶರಣರು, ಮಾಡಿದ–ಅನುಗೆಯ್ದ, ವಿನಿಯೋಗ–ಸರ್ವಾಚಾರಸಂಪತ್ತಿನಾಚರಣೆಯು. ಬಹಿರಂಗದಲ್ಲಿ–ಬಹಿರ್ವಳಯದಲ್ಲಿ, ವರ್ತಿಸುವವರಿಗೆಲ್ಲಿಯದೊ–ದೇಹಕರಣೇಂದ್ರಿಯ ವಿಷಯಪ್ರಪಂಚಿನೊಡನೆ ಕೂಡಿ ಚರಿಸುವಂಥವರುಗಳಿಗೆತ್ತಣದೊ? ಇಲ್ಲವು.

II– –

2+ ತ(ಚ, ಜ).

....

ಆಚಾರ ಶಿವಾಚಾರವೆಂದಱಿಯದ ಕಾರಣ–ಸತ್ಕ್ರಿಯಾಚಾರ ಲಿಂಗಾಚಾರವೆಂ[೧]ದ[೧]ಭಿನ್ನವಿಟ್ಟು ತಿಳಿಯದ ನಿಮಿತ್ಯವು, ಷಡ್ದರ್ಶನಂಗಳೆಲ್ಲ ತಮತಮಗೆ ಶರಣೆನುತ್ತಿದ್ದವು–ಆರುದರ್ಶನಗಳೆಲ್ಲ ಸ್ವಯಕ್ಕೆ ಸ್ವಯವೇ ತಕ್ಕ ಹಾಂಗೆ ಆ ಶರಣನ ಮಹಿಮೆಯ ಕಂಡು ನಮಸ್ಕಾರವೆನುತ್ತಿರ್ಪುವು. ಮಹತತ್ವದ–ಮಹಲಿಂಗತತ್ವದ, ಸಮಯಾದಿ ಶೈವಂಗಳೆಲ್ಲ ಶರಣು ಶರಣೆನುತ್ತಿದ್ದಾವು–ಷಟ್ಸಮಯ ಮೊದಲಾದ ಷಟ್ಶೈವಂಗಳೆಲ್ಲಾ ತಮ್ಮ ತಮ್ಮ ಅರಿವಿಗೆ ತಕ್ಕ ಹಾಂಗೆ ಆ ಶರಣನಾಚರಣೆಯನು ಕಂಡು ನಮಸ್ಕಾರ ನಮಸ್ಕಾರವೆನುತ್ತಿರ್ಪವು. ನಮ್ಮ ಕೂಡಲಸಂಗನ ಶರಣರು ಮಾಡಿದ–ನಮ್ಮ ಪರಶಿವಲಿಂಗದ ಪರಮೂರ್ತಿಗಳಾದ ಶಿವಶರಣರುಗಳೆಸಗಿದ, ವಿನಿಯೋಗ–ವಿಶೇಷವಾಗಿ [೨][ಮೇಲ್ವಾಯ್ದು][೨] ಕೂಡುವ ಸಮರಸ ಭಕ್ತಿಯು, ಬಹಿರಂಗದಲ್ಲಿ ವರ್ತಿಸುವವರಿಗೆಲ್ಲಿಯದೊ–ಹೊರಗೆ ಭಿನ್ನವಿಟ್ಟು ಪೂಜಾಕ್ರೀಗಳ ಮಾಡಿ ಫಲಪದಂಗಳನು ಪಡೆದನುಭವಿಸುವಂಥ ಜೀವರುಗಳಿಗೆತ್ತಣದು.

....

೧–೧ ದು (ಚ). ೨–೨ ಮೇಲವಾಯಿದು (ಚ); ಮೇಲಾದಯಿದು(ಜ).

III– –

1–1 x(ಟ,ಡ). 3–3 ಳೆಲ್ಲ (ಟ,ಡ). 4-4 x (ಟ,ಡ).

....

ಆಚಾರ–ಕ್ರಿಯಾ[೩]ಚಾರ[೩] ಜ್ಞಾನಾಚಾರಂಗಳು, ಮಹತ್ವದ–ಮಹಿಮೆಯನುಳ್ಳಂಥ, ಶಿವಾಚಾರವೆಂ[೪]ದಜೆಯದ ಕಾರಣ–ಲಿಂಗಾಚಾರಂಗಳೆಂದು ತಿಳಿಯದ ನಿಮಿತ್ಯದಿಂದೆ, ದರುಶನಂಗಳೆಲ್ಲ–ಷಡುದರುಶನಗಳೆಲ್ಲವು, ತಮತಮಗೆ–ಸ್ವಯಸ್ವಯಕ್ಕೆ, ಶರಣೆನುತ್ತಿದ್ದವು–ಭಿನ್ನವಿಟ್ಟು ನಮಸ್ಕಾರಂಗಳ ಮಾಡು[೪]ತ್ತಿರ್ದುವು, ಸಮಯ–ಷಟ್ಸಮಯವು, ಆದಿ–ಮೊದಲಾದ, ಶೈವಂಗಳೆಲ್ಲ–ಸಪ್ತಶೈವಂಗಳೆಲ್ಲವು, ಶರಣೆನುತ್ತಿರ್ದವು–ಅನ್ಯ ದೈವಂಗಳ ಕುರಿತು ಭಿನ್ನವಿಟ್ಟು ಪೂಜೋಪಚಾರಂಗಳನು ಎಸಗುತ್ತಿರ್ದಪವು. ನಮ್ಮ ಕೂಡಲಸಂಗನ ಶರಣರು–ಶಿವಶರಣರುಗಳು, ಮಾಡಿದ–ಎಸಗಿದ, ವಿನಿಯೋಗ–ಅಂತರಂಗದಲ್ಲಿ ಮಾಡುವ ಪ್ರಾಣಲಿಂಗದ ನಿರ್ಗುಣ ಪೂಜೋಪಚಾರಗಳೆಲ್ಲವು, [೫]ಬಾಹಿರಂಗದ ಜಡಕ್ರೀದಲ್ಲಿ ವರ್ತಿಸುವ ದ್ವೈತಿಗಳಿಗೆತ್ತಣದೆಂಬುದೀಗ ಬಹಿರಂಗದಲ್ಲಿ ವರ್ತಿಸುವವರಿಗೆಲ್ಲಿಯದೊ ಎಂಬ ಶಬ್ದಕ್ಕರ್ಥ.

....

೩–೩ x(ಡ) ೪–೪ x(ಟ) ೫+ ಬಹಿರಂಗಬಲ್ಲಿ ವರ್ತಿಸುವವರಿಗೆ (ಟ.ಡ).

IV– –

ವಿನಿಯೋಗ–ಅಂಗದಲ್ಲಿ ಮಾಡುವ ಪ್ರಾಣಲಿಂಗದ ಪೂಜೋಪಚಾರವು.

೮೨೦

ತಮತಮಗೆಲ್ಲ ನೊಸಲ ಕಣ್ಣವರು, ತಮತಮಗೆಲ್ಲ ನಂದಿವಾಹನರು, ತಮತಮಗೆಲ್ಲ ಖಟ್ವಾಂಗ, ಕಪಾಲತ್ರಿಶೂಲಧರರು, ದೇವರಾರು? ಭಕ್ತರಾರು? ಹೇಳಿರಯ್ಯ! ಕೂಡಲಸಂಗಮದೇವಾ, ನಿಮ್ಮ ಶರಣರು ಸ್ವತಂತ್ರರು. ಎನ್ನ ಬಚ್ಚಬಜೆಯ ಬಸವನೆನಿಸಯ್ಯ.

I– –

ತಮತಮಗೆಲ್ಲ ನೊಸಲ ಕಣ್ಣವರು; ತಮತಮಗೆಲ್ಲ–ತಮ್ಮ ತಮ್ಮ ಅರುಹಿಗೆ ತಕ್ಕ ಹಾಂಗೆಲ್ಲ, ನೊಸಲ ಕಣ್ಣವರು–ಶಿವನ ಕುರಿತು ಜಪತಪ ಆರಾಧನೆ ಕ್ರೀಗಳನು ಮಾಡಿ ಹಣೆಗಣ್ಣನು ಹಡೆದುಕೊಂಡಂಥ ರುದ್ರಗಣಂಗಳು ಕೆಲವರು; ತಮತಮಗೆಲ್ಲ–ತಮ್ಮ ತಮ್ಮ ಅರುಹಿಗೆ ತಕ್ಕ ಹಾಂಗೆಲ್ಲ, ನಂದಿವಾಹನರು–ಶಿವನ ಕುರಿತು ಜಪತಪಾರಾಧನೆ ಕ್ರೀಗಳನು ಮಾಡಿ ವೃಷಭವಾಹನವನು ಹಡೆದುಕೊಂಡಂಥ ರುದ್ರಗಣಂಗಳು ಕೆಲವರು.

ತಮತಮಗೆಲ್ಲ–ತಮ್ಮ ತಮ್ಮ ಅರುಹಿಗೆ ತಕ್ಕ ಹಾಂಗೆಲ್ಲ, ಖಟ್ವಾಂಗ–ಶಿವನ ಕುರಿತು ಜಪತಪಾರಾಧನೆ ಕ್ರೀಗಳ ಮಾಡಿ, ಖಟ್ವಾಂಗ–ಖಟ್ವಾಂಗವೆಂಬ ಆಯುಧವು, ಕಪಾಲ–ಬ್ರಹ್ಮಕಪಾಲವು, ತ್ರಿಶೂಲಧರರು–ಮುಮ್ಮೊನೆ ಆಯುಧವನ್ನು ಧರಿಸಿಕೊಂಡಂಥ ರುದ್ರಗಣಂಗಳು ಕೆಲವರು, ದೇವರಾರು–ಇದರೊಳಗೆ ದೇವರಾಗಿ ಪೂಜೆಕೈಕೊಂಬುವಂಥವರಾರು, ಭಕ್ತರಾರು–ಭಕ್ತರಾಗಿ ಭಕ್ತಿಯ ಮಾಡುವಂಥವರಾರು, ಹೇಳಿರಯ್ಯ–ನಿರೂಪಿಸಿರಯ್ಯ.

ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ ಶರಣರು–ನಿಮ್ಮ ಶಿವಶರಣರು. ಸ್ವತಂತ್ರರು–ಇಹದಲ್ಲಿದ್ದರೆ ಮಾಯಾಧೀನರಹಿತರು ಪರದಲ್ಲಿದ್ದರೆ ಪರಾಧೀನರಹಿತರು. ಇಹಪರವೆರಡೂ ತಮ್ಮಾಧೀನವಾಗಿ ಪರತಂತ್ರರಹಿತವಾದ ಬ್ರಹ್ಮದಲ್ಲಿ ಕೂಡಿ ಬ್ರಹ್ಮವೇ ತಾವಾಗಿಪ್ಪರು. ಎನ್ನ–ನನ್ನನು, ಬಚ್ಚ ಬಜೆಯ–ಅಚ್ಚ ವಿಷಯವಾಗಿ ತೋರುವ, ಬಸವನೆನಿಸಯ್ಯ–ಚಿತ್ಸ್ವರೂಪವಾದ ವೃಷಭೇಶ್ವರನೆಂದು ಹೇಳಿಸಯ್ಯ.

III– –

ಖಟ್ವಾಂಗ–ವಿಷ್ಣುವಿನ ಕಸೇರ್ಧಂಡವು, ಬಚ್ಚಬಜೆಯ–ಕೇವಲವಾದ, ಬಸವನೆನಿಸಯ್ಯ–ಸದ್ಧರ್ಮಸ್ವರೂಪನೆನಿಸಯ್ಯ.

IV– –

ಖಟ್ವಾಂಗ–ವಿಷ್ಣುವಿನ ಕಸೇರದಂಡವು, ಬಜೆಯ–ಕೇವಲವಾದ, ಬಸವನೆನಿಸಯ್ಯ–ಸದ್ಧರ್ಮಸ್ವರೂಪನೆನಿಸಯ್ಯ.

೮೨೧

ಲಿಂಗದಲ್ಲನುದಿನ ವೇಳೆ, ಜಂಗಮದಲ್ಲನುಭಾವ ಸಮಯಾಚಾರ: ಲಿಂಗದಲ್ಲನುದಿನ ವೇಳೆ. ಈ ಉಭಯಾಚಾರದಿಂದ ತಿಳಿದ ತಿಳಿವು ಲಿಂಗದಲ್ಲನುದಿನ ವೇಳೆ. ಬೇಱೆ ತೋಱಲಿಲ್ಲ, ಲಿಂಗಜಂಗಮದಲ್ಲಿ ಲೀಯವಾದ ಸಮಯಾಚಾರ, ಇದು ಕಾರಣ, ಕೂಡಲಸಂಗಮದೇವಾ ಲಿಂಗದಲ್ಲನುದಿನ ವೇಳೆ.

I– –

ಗುರುವಿನಲ್ಲಿ ಸದಾಚಾರ ಗುರುವಿನಲ್ಲಿ ಸದಾಚಾರ–ಅಂಗದಲ್ಲಿ ಗುರುಸಂಬಂಧವ ಮಾಡಿಕೊಂಡು ಅಂಗ ಆಪ್ತ ಸ್ಥಾನ ಸದ್ಭಾವನೆಂಬ ಚತುರ್ವಿಧ ಭಕ್ತಿಗಳಿಂದ ಗುರುಭಕ್ತಿಯ ಮಾಡುವುದು, ಲಿಂಗದಲ್ಲನುದಿನ ವೇಳೆ–ಗುರುವುುಖದಿಂ ಬಂದಿಷ್ಟಲಿಂಗಕ್ಕೆ ಅಷ್ಟವಿಧಾರ್ಚನೆ ಷೋಡಶೋಪಚಾರಕ್ರೀಗಳಿಂದ ಪೂಜೆಯ ಮಾಡುವುದು, ಜಂಗಮದಲ್ಲನುಭಾವ–ಆ ಲಿಂಗದ ಪ್ರಾಣಕಳಾಚೈತನ್ಯಸ್ವರೂಪವಾದ ಚರಲಿಂಗಕ್ಕೆ ಸಕಲಪದಾರ್ಥವನು ಕೊಟ್ಟು ಭಕ್ತಿಯ ಮಾಡಿ ಆ ಚರಲಿಂಗದ ಶಿವಾನುಭಾವವನು ಬೆಸಗೊಂಡಾಲಿಸುವುದು, ಸಮಯಾಚಾರ–ಅಂಗಕ್ಕೆ ಲಿಂಗವೇ

ಸಮಯಾಚಾರ, ಪ್ರಾಣಕ್ಕೆ ಜಂಗಮವೇ ಸಮಯಾಚಾರ, ಲಿಂಗದಲ್ಲನುದಿನ ವೇಳೆ–ಗುರುಮುಖದಿಂ ಬಂದಿಷ್ಟಲಿಂಗಕ್ಕೆ ಅಷ್ಟವಿಧಾರ್ಚನೆ ಷೋಡಶೋಪಚಾರಕ್ರೀಗಳಿಂದ ಪೂಜಿಸುವುದು.

ಈ ಉಭಯಾಚಾರದಿಂದ–ಈ ಲಿಂಗಪೂಜೆ ಜಂಗಮದಾಸೋಹ ಮಾಡುವುದರಿಂದ, ತಿಳಿದ–ಅರಿದಂಥ, ತಿಳಿವು–ಅರಿವು, ಲಿಂಗದಲ್ಲನುದಿನ ವೇಳೆ–ಗುರುಮುಖದಿಂದ ಬಂದಂಥ ಇಷ್ಟಲಿಂಗಕ್ಕೆ ಎಲ್ಲಾಗಳೂ ಅಷ್ಟವಿಧಾರ್ಚನೆ ಷೋಡಶೋಪಚಾರಕ್ರೀಗಳಿಂದರ್ಚಿಸುವುದು, ಬೇಱೆ–ಪೃಥಕ್ಕಾಗಿ, ತೋಱಲಿಲ್ಲ–ಅಂಗದಿಂದ ಲಿಂಗಪಾಣ್ರದಿಂದ ಜಂಗಮವು ಭಿನ್ನವಾಗಿ ಕಾಣಿಸಲಿಲ್ಲವು. ಲಿಂಗ ಜಂಗಮದಲ್ಲಿ ಲೀಯವಾದ–ಲಿಂಗಜಂಗಮವೆಂಬೆರಡರಲ್ಲಿ ತರಹರವಾದ, ಸಮಯಾಚಾರ–ಅಂಗಕ್ಕೆ ಲಿಂಗವೆ ಸಮಯಾಚಾರ ಪ್ರಾಣಕ್ಕೆ ಜಂಗಮವೆ ಸಮಯಾಚಾರ, ಇದು ಕಾರಣ–ಇದು ನಿಮಿತ್ತಾರ್ಥ, ಕೂಡಲ ಸಂಗಮದೇವಾ–ಎಲೆ ಪರಶಿವಲಿಂಗವೆ, ಲಿಂಗದಲ್ಲನುದಿನ ವೇಳೆ–ಗುರುಮುಖದಿಂ ಬಂದಂಥ ಇಷ್ಟಮಹಾಲಿಂಗಕ್ಕಷ್ಟವಿಧಾರ್ಚನೆ ಷೋಡಶೋಪಚಾರ ಕ್ರೀಗಳಿಂದರ್ಚಿಸುವುದು.

III– –

ಗುರುವಿನಲ್ಲಿ–ಶ್ರೀಗುರುಸ್ವಾಮಿಯಲ್ಲಿ, ಸದಾಚಾರ–ಸತ್ಯವಾಗಾಚರಿಸುವಂಥಾದೆ, ಲಿಂಗದಲ್ಲಿ–ಇಷ್ಟಲಿಂಗದಲ್ಲಿ, ಅನುದಿನ–ಎಲ್ಲಾಗಳು, ವೇಳೆ–ಪೂಜೋಪಚಾರವು, ಜಂಗಮದಲ್ಲಿ–ಚರಲಿಂಗದಲ್ಲಿ, ಅನುಭಾವ–ಜ್ಞಾನಾನುಭಾವದ, ಸಮಯಾಚಾರ–ಸತ್ಯವಾಗಾಚರಿಸುವಂಥಾದೆ, ಲಿಂಗದಲ್ಲಿ–ಪ್ರಾಣಲಿಂಗದಲ್ಲಿ, ಅನುದಿನ–ಎಲ್ಲಾಗಳು, ವೇಳೆ–ಆಯಾಯ ತತ್ಕಾಲಕ್ಕೆ ಮಾಡುವ ಪೂಜೋಪಚಾರವು.

V– –

ಗುರುವಿನಲ್ಲಿ–ಶ್ರೀಗುರುದೇವನಲ್ಲಿ, ಸದಾಚಾರ–ಸತ್ಯವಾಗಿ ಸೇವೋಪಚಾರವ ಮಾಡುವಂಥಾದೆ, ಲಿಂಗದಲ್ಲಿ–ಇಷ್ಟಲಿಂಗದಲ್ಲಿ, ವೇಳೆ–ತಾತ್ಕಾಲದ ಪೂಜೋಪಚಾರವು, ಜಂಗಮದಲ್ಲಿ–ಚರಲಿಂಗದಲ್ಲಿ, ಅನುಭಾವ–ಜ್ಞಾನಾನುಭಾವವ ಬೆಸಗೊಂಬುವುದು, ಸಮಯಾಚಾರ–ಆ ಜಂಗಮದ ಪಾದತೀರ್ಥವ ಅನವರತ ಸೇವಿಸುವಂಥ ಸಮಯಾಚಾರವೆ, ಲಿಂಗದಲ್ಲಿ–ಇಷ್ಟಲಿಂಗದಲ್ಲಿ, ಅನುದಿನ ವೇಳೆ–ಎಲ್ಲಾಗಳು ತಾತ್ಕಾಲದ ಪೂಜೋಪಚಾರವಾಗಿರ್ಪುದು. ಈ ಉಭಯ–ಈ ಹಿಂದೆ ಹೇಳಿದಂಥ, ಆಚಾರದಿಂದ–ಗುರುಭಕ್ತಿ ಜಂಗಮಭಕ್ತಿಯೆಂಬ ದ್ವಂದ್ವಾಚಾರದಿಂದ, ತಿಳಿದ–ಅರಿದ, ತಿಳಿವು–ಜ್ಞಾನವು.

೮೨೨

ಉಳ್ಳವರು ಶಿವಾಲಯ ಮಾಡುವರು, ನಾನೇನು ಮಾಡುವೆ ಬಡವನಯ್ಯ, ಎನ್ನ ಕಾಲೇ ಕಂಬ, ದೇಹವೇ ದೇಗುಲ, ಶಿರವೇ ಹೊನ್ನ ಕಲಶವಯ್ಯ, ಕೂಡಲಸಂಗಮದೇವಾ, ಕೇಳಯ್ಯ ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ.

I– –

ಉಳ್ಳವರು–ಲಕ್ಷಸಂಖ್ಯೆ ದ್ರವ್ಯವುಳ್ಳಂಥ ಷಡುಚಕ್ರವರ್ತಿಗಳು ನವಚೋಳರು ನವಬಲ್ಲಾಳರು ಷೋಡಶಮಹಾರಾಯರು ಮೊದಲಾದಂಥವರುಗಳು, ಶಿವಾಲಯ ಮಾಡುವರು–ಗರ್ಭಗೃಹವೆಂದು

ಸುಖನಾಶಿಯೆಂದು ರಂಗಮಂಟಪವೆಂದು ಪೌಳಿಯೆಂದು ಗುಡಿಗೋಪುರಂಗಳನು ನಿರ್ಮಿಸಿ ಲಿಂಗಸ್ಥಾಪ್ಯವ ಮಾಡಿ ಲಿಂಗಪೂಜೆಯ ಮಾಡುತ್ತಿಹರು, ನಾನೇನು ಮಾಡುವೆ–ಅವರುಗಳ ಹಾಂಗೆ ಗುಡಿಗೋಪುರಂಗಳನು ನಿರ್ಮಿಸಿ ಲಿಂಗಸ್ಥಾಪ್ಯವ ಮಾಡಿ ಲಿಂಗಪೂಜೆಯ ಮಾಡುವೆನೆ? ಮಾಡೆನು. ಬಡವನಯ್ಯಾ–ನಿರ್ಧನಿಕ ನಾನಯ್ಯ.

ಎನ್ನ ಕಾಲೇ ಕಂಬ–ಎನ್ನ ಹೋಹ ಬಾಹ ಎಡೆಯಾಟಕ್ಕೆ ಕಾರಣವಾದ ಚರಣಂಗಳೇ ತಿದ್ದಿ ತೀರ್ಚಿ ಒಪ್ಪುವೆತ್ತ ದೃಢಬುದ್ಧಿಸ್ತಂಭಂಗಳಾಗಿಪ್ಪವು, ದೇಹವೇ ದೇಗುಲ–ಕಾರಣತನುವೇ ಗರ್ಭಗೃಹವಾಗಿ ಸೂಕ್ಷ್ಮತನುವೇ ಸುಖನಾಶಿಯಾಗಿ ಸ್ಥೂಲತನುವೆ ರಂಗಮಂಟಪವಾಗಿ ತ್ರಿಕೂಟವೆ ಶಿವಾಲಯವಾಗಿಪ್ಪುದು, ಶಿರವೇ ಹೊನ್ನಕಲಶವಯ್ಯ–ಮಸ್ತಕವೆ ಬಂಗಾರದ ಕಳಸವಾಗಿರ್ಪುದುಯ್ಯ.

ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಕೇಳಯ್ಯ–ಆಲಿಸಯ್ಯ, ಸ್ಥಾವರಕ್ಕಳಿವುಂಟು–ಕಾಲಾಂತರದ ಮೇಲೆ ಹುಲ್ಲು ಕಲ್ಲು ಬಿದ್ದು ನಾಶವಾಗುವಂಥದುಂಟಾಗಿಪ್ಪುದು, ಜಂಗಮಕ್ಕೆ–ಭಕ್ತರಂತರಂಗದಲ್ಲಿ ಸಂಬಂಧವಾಗಿರುವಂಥ ಪ್ರಾಣಲಿಂಗಕ್ಕೆ, ಅಳಿವಿಲ್ಲ–ನಾಶವಿಲ್ಲವು.

ಪ್ರಾಣಲಿಂಗಿಯ ಭಕ್ತಸ್ಥಲ

I– –

ಪ್ರಾಣಲಿಂಗಿಯ ಭಕ್ತಸ್ಥಲ–ಪ್ರಾಣಲಿಂಗಿಸ್ಥಲದೊಳಗಣ ಭಕ್ತಸ್ಥಲದಾಚರಣೆಯನ್ನು ನಿರೂಪಿಸುತ್ತಿಹರು.

೮೨೩

ಅಷ್ಟದಳಕಮಲಾತ್ಮದೊಳಗೆ, ನೆಟ್ಟನೆ [1]ಮನಃ [1]ಪ್ರೇರಕನೆಂದು [2]ನಾ ನಿಮ್ಮ[2] ನಂಬಿದೆ, ಮತ್ತೊಂದನಱಿಯದೆ [3]ಮತ್ತೊಂದ ಕೇಳದೆ[3]. ನಿತ್ಯಸ್ವತಂತ್ರನು ನೀನೆ. ದೃಷ್ಟಲಿಂಗ ಜಂಗಮವೊಂದೆಯೆಂದಿಪ್ಪೆನು. [4]ಪರಮ[4] ಪ್ರಭುವೆ, ಕೂಡಲಸಂಗಮದೇವ.

I– –

ಅಷ್ಟದಳಕಮಲಾತ್ಮದೊಳಗೆ–ಹೃದಯದೆಂಟೆಸಳಿನ ಕಮಲದ ಮಧ್ಯದಲ್ಲಿ, ನೆಟ್ಟನೆ–ಘಮ್ಮನೆ, ಮನಃಪ್ರೇರಕನೆಂದು–ಮನದಲ್ಲಿ ಪ್ರೀತಿ ಪ್ರೇಮ ವಿಶ್ವಾಸವನುಳ್ಳಂಥ ಪ್ರಾಣಲಿಂಗವು ನೆಲೆಗೊಂಡಿರ್ಪನೆಂದು, ನಾ ನಿಮ್ಮ ನಂಬಿದೆ–ನಾ ನಿಮ್ಮ ವಿಶ್ವಾಸಿಸಿದೆನು. ಮತ್ತೊಂದನಱಿಯದೆ: ಮತ್ತೊಂದು–ಹಲವು ನೆನವು ಹಲವು ಭಾಷೆ ಹಲವು ವರ್ತನೆಯೊಡನೆ ಕೂಡಿ ಚರಿಸುವಂಥದನು, ಅಱಿಯದೆ–ತಿಳಿಯದೆ, ಮತ್ತೊಂದ ಕೇಳದೆ–ಮತ್ತೊಂದು ಭಿನ್ನಶಬ್ದವನ್ನು ಆಲಿಸದೆ, ನಿತ್ಯಸ್ವತಂತ್ರನು ನೀನೆ; ನಿತ್ಯ–ಎಲ್ಲಾಗಳೂ, ಸ್ವತಂತ್ರನು ನೀನೆ–ಪರತಂತ್ರರಹಿತವಾದ ಪರಬ್ರಹ್ಮವು ನೀನೆ. ದೃಷ್ಟಲಿಂಗ–ದೃಷ್ಟಲಿಂಗವೆಂದರೆ ಇಷ್ಟಲಿಂಗವು, ಜಂಗಮ–

ಚರಜಂಗಮವು. ಒಂದೆಯೆಂದು–ಲಿಂಗವೇ ಜಂಗಮದಂಗ ಜಂಗಮವೇ ಲಿಂಗದ ಪ್ರಾಣಕಳೆಯೆಂದು, ಇಪ್ಪೆನು–ವಿಶ್ವಾಸಿಸಿ ಲಿಂಗಪೂಜೆ ಜಂಗಮದಾಸೋಹವನ್ನು ಸಮರಸಭಾವದಿಂದ ಮಾಡುತ್ತಿರ್ಪೆನು, ಪರಮ ಪ್ರಭುವೆ–ಅನುಗ್ರಹನಿಗ್ರಹಸಾಮರ್ಥ್ಯವನುಳ್ಳ ಸ್ವತಂತ್ರಕರ್ತೃವಾದಂಥ, ಕೂಡಲಸಂಗಮದೇವ–ಎಲೆ ಪರಶಿವಲಿಂಗವೆ.

III– –

ಅಷ್ಟದಳಕಮಲಾತ್ಮದೊಳಗೆ ನೆಟ್ಟನೆ ಮನಃಪ್ರೇರಕನೆಂದು–ಹೃದಯಕಮಲದಧೋಮುಖವಾದ ಎಂಟುದಳಂಗಳಲ್ಲಿ ಚರಿಸಲ್ಪಟ್ಟ ಜೀವನಿಗೆ ತತ್ಕರ್ಮವನು ಪ್ರೇರಿಸಲ್ಪಟ್ಟಾತನೆಂದು, ನಂಬಿದೆ–ನಚ್ಚಿದೆನು.

IV– –

1–1 x (ತ). 2–2 x (ತ). 3–3 x (ತ). 4–4 x (ತ).

....

ಹೃದಯುಕಮಳಮಧ್ಯದಲ್ಲಿಹಂಥಾ ಲಿಂಗವು ಭೂತಂಗಳಿಗಾಧಾರವಾಗಿ ಅಜಿ[ವುದ]ಋಹಿಸಿಕೊಂಬುದೊಂದೇಯೆಂಬುದೀ ವಚನದರ್ಥ.

....

೧–೧ ವನ (ತ)

IV---

ಅಷ್ಟದಳಕಮಲಾತ್ಮದೊಳಗೆ ನೆಟ್ಟನೆ ನಮಃಪ್ರೇರಕನೆಂದು ಹೃದಯ ಹೃದಯಕಮಲಧೋ ಮುಖವಾದ ಎಂಟುದಳಂಗಳಲ್ಲಿ ಚರಿಸಲ್ಪಟ್ಟ ಜೀವನಿಗೆ ತತ್ಕರ್ಮವನ್ನು ಪ್ರೇರಿಸಲ್ಪಟ್ಟಾತನೆಂದು

....

೧+ವೆ (ಪ).

೭೨೪

ನಿನ್ನ ನಾನಱಿಯದ ಮುನ್ನ ನೀನೆಲ್ಲಿದ್ದೆ [1]ಯಯ್ಯ,[1] ಎನ್ನೊಳಗಿದ್ದು ನಿನ್ನ ತೋಱಲಿಕ್ಕೆ ನೀನೆ ರೂಪಾದೆ. ಇನ್ನು ಜಂಗಮವೇ ಲಿಂಗವೆಂದು ನಂಬಿದೆ, ಕೂಡಲಸಂಗಮದೇವಾ.

I– –

ನಿನ್ನ ನಾನಱಿಯದ ಮುನ್ನಃ ನಿನ್ನ–ಪರಶಿವಲಿಂಗವನ್ನು, ನಾನಱಿಯದ ಮುನ್ನ–ಗುರುಮುಖದಿಂದಂಗದಲ್ಲಿ ಇಷ್ಟಲಿಂಗವಾಗಿ ಸಂಬಂಧವ ಮಾಡಿಕೊಂಡರಿಯದಕ್ಕಿಂದ ಮೊದಲೇ, ನೀನೆಲ್ಲಿದ್ದೆಯಯ್ಯ–ನೀನು ಎನ್ನಲ್ಲಿ ಭಿನ್ನವಾಗಿದ್ದೀಯೆ ? ಇಲ್ಲವು. ಎನ್ನೊಳಗಿದ್ದು–ಎನ್ನಂತರಂಗದಲ್ಲಿ ಪ್ರಾಣಲಿಂಗವಾಗಿ ನೆಲೆಗೊಂಡಿರ್ದು, ನಿನ್ನ ತೋರಲಿಕ್ಕೆ–ನಿಮ್ಮ ಸರ್ವಾಚಾರಸಂಪತ್ತಿನಾಚರಣೆ ಕ್ರಿಗಳ

ವಿಭವತ್ವವನ್ನು ಉಂಟು ಮಾಡಿ ಕಾಣಿಸಲಿಕ್ಕೆ, ನೀನೆ ರೂಪಾದೆ–ನೀನೆ ಸಾಕಾರವಾದಿಷ್ಟಲಿಂಗವಾಗಿ ಅಂಗದಲ್ಲಿ ನೆಲೆಗೊಂಡಿರ್ಪೆ. ಇನ್ನು ಜಂಗಮವೇ ಲಿಂಗವೆಂದು–ಇನ್ನು ಜಂಗಮವೇ ಸಾಕ್ಷಾತ್ಶಿವ ಸ್ವರೂಪವೆನುತ್ತ. ನಂಬಿದೆ–ವಿಶ್ವಾಸಿಸಿದೆನು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

III– –

1–1 x (ಚ.ಜ).

....

ನಿನ್ನ ನಾನಱಿಯದ ಮುನ್ನ ನೀನೆಲ್ಲಿದ್ದೆ–ಎಲೆ ಪರಶಿವಲಿಂಗವೆ ನಿನ್ನ ನಾ ತಿಳಿವುದಕ್ಕೆ ಮೊದಲೆ ನೀನಾವ ಸ್ಥಾನದಲ್ಲಿರ್ದೆ, ಎನ್ನೊಳಗಿದ್ದು ನಿನ್ನ ತೋಱಲಿಕೆ ನೀನೆ ರೂಪಾದೆ–ಎನ್ನಂತರಂಗದಲ್ಲಿ ಪ್ರಾಣಲಿಂಗವಾಗಿರ್ದು ಆ ಪ್ರಾಣಲಿಂಗವೆ ಗುರುಮುಖದಿಂ ಬಹಿಷ್ಕರಿಸಿ ಇಷ್ಟಲಿಂಗವಾಗಿ ಕಾಣಿಸಲಿಕೆ ವೃತ್ತ ಗೋಳಕ ಗೋಮುಖಂಗಳಿಂದೆ [೧]ಸ್ವರೂಪಿಸೀಪ್ರಕಾರವಾದೆ[೧] ಇನ್ನು ಜಂಗಮ[೨]ವೆ[೨] ಲಿಂಗವೆಂದು ನಂಬಿದೆ ಕೂಡಲಸಂಗಮದೇವಾ–ಇಷ್ಟರ ಮೇಲೆ ಸುಜ್ಞಾನ ಜಂಘೆಯಿಟ್ಟು ಚರಿಸುವ ಪ್ರಾಣಲಿಂಗವೆ ಇಷ್ಟಲಿಂಗವೆಂದು ವಿಶ್ವಾಸಿಸಿದೆನೆಲೆ ಲಿಂಗವೆ.

....

೧–೧ ಸ್ವರೂಪಿ ಕರವಾದೆ (ಚ). ೨–೨x (ಜ).

IV– –

x (ತ).

....

ಅಜ್ಞಾನವನತಿಗಳೆದಾ ಲಿಂಗವ ಕಂಡೆ[ನೆಂ]ದು ತೋಱಲು ತಾನೇ ಬೋ[ಧ]ರೂಪನಾದವೆಂಬುದೀ ವಚನದರ್ಥ.

ಅ೨೫

ಗುರು ಮುನಿದಡೊಂದು ದಿನ ತಾಳುವೆ, ಲಿಂಗ ಮುನಿದಡೆ ದಿನವರೆ ತಾಳುವೆ, ಜಂಗಮ ಮುನಿದಡೆ ಕ್ಷಣಮಾತ್ರ ತಾಳಿದೆನಾದಡೆ ಎನ್ನ ಪ್ರಾಣದ ಹೋಕು ಕೂಡಲಸಂಗಮದೇವಾ.

I– –

ಗುರು ಮುನಿದಡೆ ಒಂದು ದಿನ ತಾಳುವೇ [ಗುರು ಮುನಿದಡೆ–] ಗುರುಮೂರ್ತಿಗಳಿಗೆ ಸೇವಾಸತ್ಕಾರಂಗಳನು ಮಾಡುವಲ್ಲಿ ತಪ್ಪು ಅಪರಾಧದಿಂದ ಕೋಪಿಸಿದರೆ, ಒಂದು ದಿನ ತಾಳುವೆ– ಒಂದು ದಿವಸ ಪರಿಯಂತರ ಚೌಕಿಮಠಗಳಲ್ಲಾಗಲಿ ಭಕ್ತರ ಗೃಹಗಳಲ್ಲಾಗಲಿ ಪುಷ್ಪ ವಾಟಿಕೆಗಳಲ್ಲಾಗಲಿ ಮುಖವ ತೋರಿಸಿಕೊಳ್ಳದೆ ಅಡಗಿಕೊಂಡಿದ್ದು ಮರುದಿವಸ ಬಂದು ತಪ್ಪು ಅಪರಾಧ ಸ್ವಾಮಿಯೆಂದು ಅಡ್ಡಬಿದ್ದು ಹೇಳಿಕೊಂಡಲ್ಲಿ ಏನು ತಪ್ಪನಾದರೂ ಪಾಲಿಸಿಕೊಂಡು ಸೇವಾಸತ್ಕಾರವನ್ನು ಕೈಕೊಂಬುತ್ತಿಹರು.

ಲಿಂಗ ಮುನಿದಡೆ–ಲಿಂಗಕ್ಕೆ ಅರ್ಚನಾರ್ಪಣಕ್ರೀಗಳು ತಪ್ಪಿ ಜಲಪ್ರವೇಶ ವನಪ್ರವೇಶ ಅಗ್ನಿಪ್ರವೇಶದಿಂದ ಅಂಗವನ್ನು ಬಿಟ್ಟು ತೊಲಗಿಹೋದರೆ, ದಿನವರೆ ತಾಳುವೆ–ಒಂದು ದಿನ ಮಧ್ಯಾಹ್ನ ಪರಿಯಂತರ ಕುಂತ ನಿಂತ ಸ್ಥಾನಂಗಳಲ್ಲಾಗಲಿ ಅಪವಿತ್ರಸ್ಥಾನಂಗಳಲ್ಲಾಗಲಿ ಪುಷ್ಪದ ವಾಟಿಕೆಗಳಲ್ಲಾಗಲಿ ನೋಡಿ ಸೂಕ್ಷ್ಮವಾಗಿದ್ದರೆ ಧರಿಸಿಕೊಂಬುವೆನು, ಸ್ಥೂಲವಾಗಿದ್ದರೆ ಪ್ರಾಣವ ಬಿಡುವೆನು.

ಜಂಗಮ ಮುನಿದಡೆ–ಜಂಗಮಮೂರ್ತಿಗಳಿಗೆ ಭಕ್ತಿಬಿನ್ನಹವನ್ನು ಮಾಡುವಲ್ಲಿ ತಪ್ಪು ಅಪರಾಧದಿಂದ ಕೋಪಿಸಿದರೆ, ಕ್ಷಣಮಾತ್ರ ತಾಳಿದೆನಾದಡೆ ಎನ್ನ ಪಾಣದ ಹೋಕು: [ಕ್ಷಣಮಾತ್ರ ತಾಳಿದೆನಾದಡೆ–] ಕ್ಷಣಾರ್ಧಕ್ಷಣವಾದರೂ ಸೈರಿಸಿಕೊಂಡು ಸುಮ್ಮನಿರ್ದೆನಾದರೆ, ಎನ್ನ ಪ್ರಾಣದ ಹೋಕು–ಎನ್ನ ಪ್ರಾಣವೆ ಹೋಗುತ್ತಿಹುದು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

III– –

ಎನ್ನ ಪ್ರಾಣದ ಹೋಕು–ನನ್ನ ಪ್ರಾಣದ ಕಡೆ.

ಲ೨೬

ಅರಸು ಮುನಿದಡೆ ನಾಡೊಳಗಿರಬಾರದಯ್ಯ; ಗಂಡ ಮುನಿದಡೆ ಹೆಂಡತಿ ಮನೆಯೊಳಗಿರಬಾರದಯ್ಯ, ಕೂಡಲಸಂಗಮದೇವಾ, ಜಂಗಮ ಮುನಿದಡೆ ನಾನೆಂತು ಬದುಕುವೆ?

I– –

ಅರಸು ಮುನಿದಡೆ ನಾಡೊಳಗಿರಬಾರದಯ್ಯ: ಅರಸು–ರಾಜ್ಯವನಾಳುವಂಥ ದೊರೆಯು. ಮುನಿದಡೆ–ತಪ್ಪು ಅಪರಾಧದಿಂದ ಕೋಪಿಸಿದರೆ, ನಾಡೊಳಗಿರಬಾರದಯ್ಯ–ಪರದೇಶಕ್ಕೆ ಹೋಗಿ ಒಂದು ಹೇಳಿಕೆ ಕೇಳಿಕೆಯಿಂದ ದೊರೆಯ ಸಿಟ್ಟು ಸಮಾಧಾನವಾದ ಮೇಲೆ ಬಂದು ಅವನ ದೇಶದಲ್ಲಿರಬೇಕಲ್ಲದೆ ಕಡೆಗಡೆಯಲ್ಲಿದ್ದರೆ ನಮ್ಮನೇನು ಮಾಡಿಯಾನೆಂದು ಬಂದು ಮನೆಕಟ್ಟಿಕೊಂಡಿದ್ದರೆ ಹಿಡಿತರಿಸಿ ತಲೆಹೊಯ್ಸಿ ಬಿಡುತ್ತಿಹನು.

ಗಂಡ ಮುನಿದಡೆ ಹೆಂಡತಿ ಮನೆಯೊಳಗಿರಬಾರದಯ್ಯ: ಗಂಡ–ತನ್ನ ಸ್ವಭರ್ತೃವಾದ ರಮಣನು, ಮುನಿದಡೆ–ತಪ್ಪು ಅಪರಾಧದಿಂದ ಕೋಪಿಸಿದರೆ, ಮನೆಯೊಳಗಿರಬಾರದಯ್ಯ–ನೆರೆಹೊರೆ ಮನೆಯಲ್ಲಿ ಕುಳಿತುಕೊಂಡು ಗಂಡನ ಸಿಟ್ಟು ಸಮಾಧಾನವಾದ ಮೇಲೆ ಬಂದು ಮನೆಯಲ್ಲಿರಬೇಕಲ್ಲದೆ ನಾನೊಂದು ಮೂಲ್ಯಾಗಿದ್ದರೆ ತಾನೊಂದು ಮೂಲ್ಯಾಗಿದ್ದಾನೆಂದು ಒಂದು ಮೂಲ್ಯಾಗ ಕುಳಿತುಕೊಂಡಿದ್ದರೆ ಗಂಟಿನ ಚಬಕವನ್ನು ತೆಗೆದುಕೊಂಡು ಮೈಯನೆಲ್ಲ ಒಡೆಹೊಯ್ದು ಅಟ್ಟಿಬಿಡುತ್ತಿಹನು. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಜಂಗಮ ಮುನಿದಡೆ–ಜಂಗಮಮೂರ್ತಿಗಳು ಕೋಪಿಸಿದರೆ, ನಾನೆಂತು ಬದುಕುವೆ–ನಾ ಹೇಂಗೆ ಜೀವಿಸುವೆನು.

೮೨೭

ರಚ್ಚೆಯ ನೆರವಿಗೆ ನಾಣ್ಣುಡಿ ಇಲ್ಲದಿಹುದೆ? ಅದಱಂತೆನಬಹುದೆ ಸಜ್ಜನಸ್ತ್ರೀಯ? ಅದಱಂತೆನಬಹುದೆ ಭಕ್ತಿರತಿಯ? [1][ಕರುಳಕಲೆ][1] ಪ್ರಕಟತವುಂಟೆ? ಕೂಡಲಸಂಗಮದೇವಾ.

....

1-1 ಕುರುಳು ತಲೆ (ಕ.ಗ).

I- -

ರಚ್ಚೆಯ ನೆರವಿಗೆ ನಾಣ್ಣುಡಿ ಇಲ್ಲದಿಹುದೆ?-ಪೇಟೆ ಮನೆ ಪುರ ಪಟ್ಟಣ ಸ್ಥಾನಂಗಳಲ್ಲಿ ಕಳವು ಹಾದರವ ಮಾಡಿದಂಥ ಸ್ತ್ರೀಯರುಗಳ ತಳವಾರರು ಕಂಡುಹಿಡಿದು ಕುಳ್ಳಿರಿಸಿದಲ್ಲಿ ಊರು ಕೇರಿಗೆ ನೀರು ನಿಡಿಗೆ ಹೋಗಿ ಬರುವಂಥ ಸ್ತ್ರೀಯರುಗಳು ನೋಡಿ ಇವಳು ಇಂಥಾತನ ಹೆಂಡತಿ ಇಂಥಾತನ ಸೊಸೆ ಇಂಥಾತನ ಮಗಳೆಂದು ಆಡಿಕೊಳ್ಳದೆ ಬಿಟ್ಟಾರೆ? ಬಿಡರು.

ಅದಱಂತೆನಬಹುದೆ ಸಜ್ಜನಸ್ತ್ರೀಯ: [ಸಜ್ಜನಸ್ತ್ರೀಯ-] ತನ್ನ ಸ್ವಭರ್ತೃವೆ ಗತಿಮತಿಯೆಂದು ಇರುವಂಥ ಪತಿವ್ರತಾಂಗನೆಯ, ಅದಱಂತೆನಬಹುದೇ?-ಆ ಹಾದರಗಿತ್ತಿಯ ಸಮಾನ ಮಾಡಿ ಹೇಳುವುದಕ್ಕಾದೀತೇ? ಆಗದು. ಅದರಂತೆನಬಹುದೆ ಭಕ್ತಿರತಿಯ: [ಭಕ್ತಿರತಿಯ-] ಪುರುಷಭಕ್ತಿಯಲ್ಲಿ ಅತಿರತಿ ಪ್ರೀತಿಪ್ರೇಮ ಫಿಶ್ವಾಸವುಳ್ಳಾಯಕಳ, ಅದರಂತೆನಬಹುದೆ?-ಆ ಹಾದರಗಿತ್ತಿಯ ಸಮಾನ ಮಾಡಿ ಹೇಳುವುದಕ್ಕಾದೀತೆ? ಆಗದು.

[1][ಕರುಳಕಲೆ][1] ಪ್ರಕಟಿತವುಂಟೆ ?-ಬಾಹ್ಯದಲ್ಲಿ ಬಾಹು ಬಗದಾಳ ರಣಹುಣ್ಣು ಮೊದಲಾದ ಹುಣ್ಣುಗಳಾಗಿ ಹೋದರೆ ಕಲೆ ಕಂಡಾವಲ್ಲದೆ ಹೊಟ್ಟೆಯೊಳಗೆ ಹುಣ್ಣುಗಳಾಗಿ ಹೋದರೆ ಕಲೆ ಕಂಡಾವೆ? ಕಾಣಲರಿಯವು. ಹಾಂಗೆ ಲೋಕದಲ್ಲಿ ಸ್ತ್ರೀಪುರುಷರುಗಳು ಏಕಾಂತಸ್ಥಾನದಲ್ಲಿ ಕೂಡಿದಂಥ ಕೂಟವನ್ನು ತಮ್ಮಲ್ಲೇ ಗೋಪ್ಯವ ಮಾಡಿಕೊಂಡಿರಬೇಕಲ್ಲದೆ [* *] ಪುರುಷ ಒತ್ತಟ್ಟಿಗೆ ಹೇಳಿಕೊಂಡು ಸ್ತ್ರೀಯಳೂ[* *] ಒತ್ತಟ್ಟಿಗೆ ಹೇಳಿಕೊಂಡು ಪ್ರಕಟಮಾಡಿಕೊಂಬುವುದಕಾದೀತೆ? ಆಗದು ಎಂಬ ದೃಷ್ಟೋಪಮಾನದ ಹಾಂಗೆ.

● ರಚ್ಚೆಯ ನೆರವಿಗೆ ನಾಣ್ಣುಡಿ ಇಲ್ಲದಿಹುದೆ? : [ರಚ್ಚೆಯ ನೆರವಿಗೆ-]ಒಬ್ಬ ಭಕ್ತನೇನಾದರೂ ಶೀಲವ್ರತ ನೇಮಾಚಾರಂಗಳನು ಕಟ್ಟುಮಾಡಿಕೊಂಡಿದ್ದು ಮಧ್ಯದಲ್ಲಿ ಶೀಲವ್ರತನೇಮಾಚಾರಂಗಳಿಗೆ ತಪ್ಪಿ ವ್ರತಭ್ರಷ್ಟನಾದಲ್ಲಿ, ನಾಣ್ಣುಡಿ ಇಲ್ಲದಿಹುದೆ?- ಇವನು ಶೀಲಕ್ಕೆ ತಪ್ಪಿದ ವ್ರತಕ್ಕೆ ತಪ್ಪಿದ ನೇಮಕ್ಕೆ ತಪ್ಪಿದ ಆಚಾರಂಗಳಿಗೆ ತಪ್ಪಿದನೆಂದು ಆಡಿಕೊಳದೆ ಬಿಟ್ಟಾರೆ? ಬಿಡರು ಅದಱಂತೆನಬಹುದೆ ಸಜ್ಜನ ಸ್ತ್ರೀಯ: [ಸಜ್ಜನ ಸ್ತ್ರೀಯ-] ಶರಣನೇ ಸತಿಯಾಗಿ ಲಿಂಗವೇ ಪತಿಯಾಗಿ ಶರಣಸತಿ ಲಿಂಗಪತಿತ್ವವಿಡಿದಾಚರಿಸುವಂಥ ಶರಣಸತಿಯಳನ್ನು ಅದರಂತೆನಬಹುದೆ?-ಆ ವ್ರತಭ್ರಷ್ಟನ ಸಮಾನವ ಮಾಡಿ ಹೇಳುವುದಕ್ಕಾದೀತೆ? ಆಗದು. ಅದಱಂತೆನಬಹುದೆ ಭಕ್ತಿರತಿಯ: [ಭಕ್ತಿರತಿಯ-] ಗುರುಭಕ್ತಿಯಲ್ಲಿ ಅತಿರತಿ ಪ್ರೀತಿಪ್ರೇಮವಿಶ್ವಾಸವನುಳ್ಳ ಶರಣಸತಿಯಳನು, ಅದರಂತೆನಬಹುದೆ?-ಆ ವ್ರತಭ್ರಷ್ಟನ ಸಮಾನವ ಮಾಡಿ ಹೇಳವುದಕ್ಕಾದೀತೆ? ಆಗದು. ಕರುಳಕಲೆ ಪ್ರಕಟಿತವುಂಟೆ?-ಲೋಕದಲ್ಲಿ ಸ್ತ್ರೀ ಪುರುಷರು

ಏಕಾಂತ ಸ್ಥಾನದಲ್ಲಿ ಕೂಡುವಂಥ ಕೂಟವನ್ನು ತಮ್ಮಲ್ಲೆ ಗೋಪ್ಯವ ಮಾಡಿಕೊಂಡಿರಬೇಕಲ್ಲದೆ ಕಂಡ ಕಂಡವರ ಮುಂದೆ ಹೇಳಿ ಪ್ರಕಟಿತವ ಮಾಡಿಕೊಂಬುವುದಕ್ಕಾಗೀತೆ? ಆಗದು. ಹಾಂಗೆ, ಶರಣನು ತನ್ನ ಮನಸ್ಸು ಲಿಂಗದಲ್ಲಿ ಕೂಡುವಂಥ ಕೂಟವನ್ನು ತನ್ನಲ್ಲಿಯೇ ಗೋಪ್ಯವ ಮಾಡಿಕೊಂಡಿರಬೇಕಲ್ಲದೆ ನನ್ನ ಮನಸ್ಸು ಲಿಂಗದಲ್ಲಿ ಹಾಂಗೆ ಕೂಡ್ಯೆತೆ ಹೀಂಗೆ ಕೂಡ್ಯೆತೆಯಂದು ಹೇಳಿ ಪ್ರಕಟಿತವ ಮಾಡಿಕೊಂಬುವಂಥದುಂಟೆ? ಇಲ್ಲವು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

....

೧–೧ ಕುರುಳು ತಲೆ (ಕ.ಗ).

III– –

ರಚ್ಚೆಯ ನುಡಿಗೆ–ಲೋಕದ ಚರ್ಚೆಯ ಗೋಷ್ಠಿಗೆ, ಭಕ್ತಿ ರತಿಯ ೧ಕ೧ರುಳ ಕಲೆ–ಅಂತರಂಗದ ಭಕ್ತಿಯ ಗುಟ್ಟು,

....

೨–೨ ಕು(ಡ).

V– –

ರಚ್ಚೆಯ ನುಡಿಗೆ–ಲೋಕದ ಚರ್ಚೆಗೋಷ್ಠಿಗೆ, ಭಕ್ತಿರತಿಯ ಕರುಳ ಕಲೆ–ಅಂತರಂಗದ ಭಕ್ತಿಯ ಗುಟ್ಟು,

---

೬೨೮

ಭೂತವೊಲಿದಾತ್ಮನ ಸೋಂಕಿದ ಬಳಿಕ ಭೂತನ ಗುಣವಲ್ಲದೆ ಆತ್ಮನ ಗುಣವುಂಟೆ? ಗುರುಕಾರುಣ್ಯವಾಗಿ ಹಸ್ತಮಸ್ತಕ ಸಂಯೋಗವಾದ ಬಳಿಕ ಗುರುಲಿಂಗಜಂಗಮವೆ ಗತಿಮತಿಯಾಗಿರ್ದೆನು ಕಾಣಾ, ಕೂಡಲಸಂಗಮದೇವಾ.

I– –

ಭೂತವೊಲಿದಾತ್ಮನ ಸೋಂಕಿದ ಬಳಿಕ; ಭೂತ–ಗ್ರಹವು, ಒಲಿದು–ಮನಸ್ಸಿಟ್ಟು, ಆತ್ಮನ ಸೋಂಕಿದ ಬಳಿಕ–ಆತ್ಮನ ಅವಗ್ರಹಿಸಿದ ಮೇಲೆ, ಭೂತನ ಗುಣವಲ್ಲದೆ–ಭೂತನ ನಡೆ ಭೂತನ ನುಡಿ ಭೂತನ ಚರಿತ್ರವಲ್ಲದೆ, ಆತ್ಮನ ಗುಣವುಂಟೆ?–ಆತ್ಮನ ಸ್ವಯನಡೆ ಸ್ವಯನುಡಿ ಸ್ವಯಚರಿತ್ರವುಂಟೆ? ಇಲ್ಲವು. ಹಾಂಗೆ,

● ಭೂತವೊಲಿದಾತ್ಮನ ಸೋಂಕಿದ ಬಳಿಕ–ಚಿತ್ತಿನ ಮದಹಂಕಾರ ಚಿದ್ಭೂಷಣಸ್ವರೂಪವಾದ ಪರಬ್ರಹ್ಮವು ಕೃಪೆಯಾಗಿ ಗುರುಮುಖದಿಂದಂಗದಲ್ಲಿ ಇಷ್ಟಲಿಂಗವಾಗಿ ನೆಲೆಗೊಂಡ ಮೇಲೆ, ಭೂತನ ಗುಣವಲ್ಲದೆ–ಲಿಂಗದ ನಡೆ ಲಿಂಗದ ನುಡಿ ಲಿಂಗದ ಚರಿತ್ರವಲ್ಲದೆ, ಆತ್ಮನ ಗುಣವುಂಟೆ?– ಅಂಗದ ನಡೆ ಅಂಗದ ನುಡಿ ಅಂಗದ ಚರಿತ್ರವುಂಟೆ? ಇಲ್ಲವು.

ಗುರುಕಾರುಣ್ಯವಾಗಿ-ಶ್ರೀಗುರುನಾಥನ ಕೃಪೆಯಾಗಿ, ಹಸ್ತ-ತನ್ನ ದಕ್ಷಿಣಭಾಗದ ಹಸ್ತಾರವಿಂದವನು, ಮಸ್ತಕ-ಶಿಷ್ಯನ ವಿಮಲಮಸ್ತಕದಲ್ಲಿ, ಸಂಯೋಗವಾದ ಬಳಿಕ- ವೇಧಾ ಮಂತ್ರ ಕ್ರೀಗಳೆಂಬ ದೀಕ್ಷಾತ್ರಯಂಗಳಿಂದ ನ್ಯಸ್ತಂಗೆಯ್ದು ಮೇಲೆ, ಗುರುಲಿಂಗ ಜಂಗಮವೆ ಗತಿಮತಿಯಾಗಿರ್ದೆನು ಕಾಣಾ-ಗುರುಲಿಂಗಜಂಗಮವೆ ಗತಿಮತಿಚೈತನ್ಯವೆಂದು ಮೊರೆಬಿದ್ದು ಗುರುಭಕ್ತಿ ಲಿಂಗಪೂಜೆ ಜಂಗಮದಾಸೋಹವನ್ನು ಮಾಡುತ್ತಿರ್ಪೆನು ಕಂಡಾ, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

III- -

ಭೂತ ಒಲಿದು-ಭೂತ ಮೆಚ್ಚಿಕೊಂಡು, ಆತ್ಮನ ಸೋಂಕಿದ ಬಳಿಕ-ಜೀವಾತ್ಮನಿಗೆ ಸೋಂಕಿದ ಮೇಲೆ.

೮೨೯

ಹಸಿವು ತೃಷೆ ನಿದ್ರೆ ವಿಷಯಂಗಳ ಮಱೆದೆ ನೀವು ಕಾರಣ! ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಂಗಳ ಮಱೆದೆ ನೀವು ಕಾರಣ! ಪಂಚೇಂದ್ರಿ ಸಪ್ತಧಾತು ಅಷ್ಟಮದಂಗಳ ಮಱೆದೆ ನೀವು ಕಾರಣ ! ಕೂಡಲಸಂಗಮದೇವಾ ಕೇಳಯ್ಯ, ನಿಮ್ಮ ಶರಣರಿಗೆ ಆಪ್ಯಾಯನವಾದಡೆ ಎನಗೆ ತೃಪ್ತಿಯಾಯಿತ್ತು.

I- -

ಹಸಿವು-ಉದರಾಗ್ನಿಯ ದೀಪನವು, ತೃಷೆ-ನೀರಡಿಕೆಯು, ನಿದ್ರೆ-ಶಯನವು, ವಿಷಯಂಗಳ-ಪಂಚವಿಷಯಂಗಳನು, ಮಱೆದೆ-ವಿಸ್ಮೃತಿಯನೆಯ್ದಿಸಿ ಬಿಟ್ಟೆನು, ನೀವು ಕಾರಣ-ಗುರುಭಕ್ತಿಯ ಮಾಡಿ ಗುರುಕಾರುಣ್ಯವ ಹಡೆಯಬೇಕೆಂಬ ನಿಮಿತ್ತ, ಕಾಮ-ಬಯಕೆಯು, ಕ್ರೋಧ-ಸಿಟ್ಟು, ಲೋಭ-ಲುಬ್ಧತ್ವವು, ಮೋಹ-ಮಮಕಾರವು, ಮದ-ಉನ್ಮದವು, ಮತ್ಸರಂಗಳ-ಕೇಣಸರಂಗಳ, ಮಱೆದೆ-ವಿಸ್ಮೃತಿಯನೆಯ್ದಿಸಿ ಬಿಟ್ಟೆನು, ನೀವು ಕಾರಣ-ಲಿಂಗಪೂಜೆಯ ಮಾಡಿ ಲಿಂಗದ ಕರುಣವ ಹಡೆಯಬೇಕೆಂಬ ನಿಮಿತ್ತ, ಪಂಚೇಂದ್ರಿಯ-ಐದೇಂದ್ರಿಯಂಗಳ, ಸಪ್ತಧಾತುಗಳ-ಏಳುಧಾತುಗಳ, ಅಷ್ಟ ಮದಂಗಳ-ಅಂತರಂಗದ ಅಷ್ಟಮದಂಗಳ ಬಹಿರಂಗದ ಅಷ್ಟಮದಂಗಳ ಅಷ್ಟಮೂರ್ತಿಯ ಮದಂಗಳ, ಮಱೆದೆ-ವಿಸ್ಮೃತಿಯನೈಯ್ದಿಸಿ ಬಿಟ್ಟೆನು, ನೀವು ಕಾರಣ-ಜಂಗಮದ ಭಕ್ತಿಯ ಮಾಡಿ ಜಂಗಮದ ಕರುಣವನ್ನು ಹಡೆವ ನಿಮಿತ್ತ.

ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ. ಕೇಳಯ್ಯ-ಆಲಿಸಯ್ಯ, ನಿಮ್ಮ ಶರಣರಿಗೆ-ನಿಮ್ಮ ಜಂಗಮಮೂರ್ತಿಗಳಿಗೆ, ಆಪ್ಯಾಯನವಾದಡೆ-ಕ್ಷುಧೆಯಾಗಿ ಲಿಂಗಾರ್ಪಿತ ಭಿಕ್ಷಕ್ಕೆಂದು ಬಿಜಯಂಗೆಯ್ದು ಬಂದಲ್ಲಿ ಸಕಲಪದಾರ್ಥಂಗಳನು ನೀಡಿ ಸಂತುಷ್ಟಿಬಡಿಸಿದರೆ, ಎನಗೆ ತೃಪ್ತಿಯಾಯಿತ್ತು-ಎನಗೆ ಸಂತುಷ್ಟಿಯಾಯಿತ್ತು.

III- -

ನೀವು ಕಾರಣ-ಗುರೂಪದೇಶದಿಂದ ಎನ್ನಂಗದಲ್ಲಿ ನೀವು [ಇಷ್ಟಲಿಂಗವಾಗಿ] ಸಂಬಂಧವಾದ ನಿಮಿತ್ತವು, ನೀವು ಕಾರಣ-ಗುರುಲಿಂಗಜಂಗಮದ ಸ್ತೋತ್ರಮಂತ್ರಾದಿಗಳನಂಗೀಕರಿಸಿ ಎನ್ನ [ಪ್ರಾಣದಲ್ಲಿ]

ಪ್ರಾಣಲಿಂಗವಾಗಿ ನೆಲಸಿದ ನಿಮಿತ್ತವು, ನೀವು ಕಾರಣ–ಮನೋಲಯ ನಿರ್ಗುಣಪೂಜೆಯನಂಗೀಕರಿಸಿ ಎನ್ನ ಭಾವದಲ್ಲಿ ಭಾವಲಿಂಗವಾಗಿ ನೀವು ನೆಲೆಗೊಂಡ ಕಾರಣವು, ಕೂಡಲಸಂಗಮದೇವ– ೧ ಎಲೆ ಪರಶಿವಲಿಂಗವೆ, ನಿಮ್ಮ ಶರಣರಿಗೆ–ಮಗಂಗವಾಗಿ ಎರಡಳಿದಂಥ ನಿಜ ಶರಣರಿಗೆ, ಆಪ್ಯಾಯನವಾದರೆ–ತೃಪ್ತಿಯಾದೊಡೆ, ಎನಗೆ ತೃಪ್ತಿಯಾಯಿತ್ತು–ನನ್ನ ಹಸಿವಡಗಿತ್ತು.

....

೧ + ಎಲೆ ಪರಶಿವ (ಟ,ಡ).

V– –

ಗುರೂಪದೇಶದಿಂದ ಎನ್ನಂಗದಲ್ಲಿ ಇಷ್ಟಲಿಂಗವು ಸಂಬಂಧವಾದ ನಿಮಿತ್ಯ ನೀವು ಕಾರಣ. ಗುರುಲಿಂಗಜಂಗಮದ ಸ್ತೋತ್ರಮಂತ್ರಾದಿಗಳನಂಗೀಕರಿಸಿ ಎನ್ನ ಪ್ರಾಣದಲ್ಲಿ ಪ್ರಾಣಲಿಂಗವಾಗಿ ನೆಲೆಸಿದ ನಿಮಿತ್ಯ ನೀವು ಕಾರಣ, ಮನೋಲಯ ನಿರ್ಗುಣಪೂಜೆಯನಂಗೀಕರಿಸಿ ಎನ್ನ ಭಾವದಲ್ಲಿ ಭಾವಲಿಂಗವಾಗಿ ನೀವು ನೆಲೆಗೊಂಡ ನಿಮಿತ್ಯ [ನೀವು ಕಾರಣ].

೮೩೦

ತನು ನಿಮ್ಮದೆಂದ ಬಳಿಕ ಎನಗೆ ಬೇರೆ ತನುವಿಲ್ಲ. ಮನ ನಿಮ್ಮದೆಂದ ಬಳಿಕ ಎನಗೆ ಬೇರೆ ಮನವಿಲ್ಲ. ಧನ ನಿಮ್ಮದೆಂದ ಬಳಿಕ ಎನಗೆ ಬೇರೆ ಧನವಿಲ್ಲ. ಇಂತೀ ತ್ರಿವಿಧವು ನಿಮ್ಮದೆಂದರಿದ ಬಳಿಕ ಎನಗೆ ಬೇರೆ ವಿಚಾರವುಂಟೆ? ಕೂಡಲಸಂಗಮದೇವಾ ಏಕೋಭಾವ.

V– –

ತನು ನಿಮ್ಮದೆಂದ ಬಳಿಕ–ತನುವು ಗುರುವಿನ ವಾರಕದೊಡವೆಯೆಂದು ಹೇಳಿದ ಮೇಲೆ, ಎನಗೆ–ನನಗೆ, ಬೇರೆ–ಇನ್ನು ಬೇರೆ, ತನುವಿಲ್ಲ–ತನ್ನ ತನುವೆಂಬ ಭಾವವುಂಟಾಗಿಲ್ಲವು, ಮನ ನಿಮ್ಮದೆಂದ ಬಳಿಕ–ಮನವು ಲಿಂಗದ ವಾರಕದೊಡವೆಯೆಂದು ಹೇಳಿದ ಮೇಲೆ, ಎನಗೆ–ನನಗೆ, ಬೇರೆ–ಇನ್ನು ಬೇರೆ, ಮನವಿಲ್ಲ–ತನ್ನ ಮನವೆಂಬ ಭಾವವುಂಟಾಗಿಲ್ಲವು. ಧನ ನಿಮ್ಮದೆಂದು ಬಳಿಕ–ದ್ರವ್ಯವು ಜಂಗಮದ ವಾರಕದೊಡವೆಯೆಂದು ಹೇಳಿದ ಮೇಲೆ, ಎನಗೆ–ನನಗೆ, ಬೇರೆ–ಇನ್ನು ಬೇರೆ, ಧನವಿಲ್ಲ–ತನ್ನ ದ್ರವ್ಯವೆಂಬಂಥ ಭಾವವುಂಟಾಗಿಲ್ಲವು. ಇಂತೀ–ಈ ಪ್ರಕಾರವಾದ, ತ್ರಿವಿಧವು–ತನುಮನಧನವೆಂಬ ಮೂರು ಪದಾರ್ಥವು, ನಿಮ್ಮದೆಂದರಿದ ಬಳಿಕ–ಗುರುಲಿಂಗಜಂಗಮದ ವಾರಕದೊಡವೆಯೆಂದು ತಿಳಿದ ಮೇಲೆ, ಎನಗೆ–ನನಗೆ, ಬೇರೆ–ಇನ್ನು ಬೇರೆ, ವಿಚಾರವುಂಟೆ–ತನುವೆನ್ನದು ಮನವೆನ್ನದು ಧನವೆನ್ನದೆಂಬಂಥ ಭಾವದ ವಿವೇಕ ಉಂಟಾಗಿದ್ದಿತೇ? ಇಲ್ಲವು, ಕೂಡಲಸಂಗಮದೇವಾ–ಎಲೆ ಪರಶಿವ ಲಿಂಗವೆ, ಏಕೋಭಾವ–ಒಂದೇ ಶಿವಭಾವವು.

ಪ್ರಾಣಲಿಂಗಿಯ ಮಾಹೇಶ್ವರಸ್ಥಲ

I- -

ಪ್ರಾಣಲಿಂಗಿಯ ಮಾಹೇಶ್ವರಸ್ಥಲ–ಪ್ರಾಣಲಿಂಗಸ್ಥಲದೊಳಗಣ ಮಾಹೇಶ್ವರಸ್ಥಲದಾಚರಣೆಯನ್ನು ನಿರೂಪಿಸುತ್ತಿಹರು.

೮೩೧

ಆಕಳ, ಕಳ್ಳರು ಕೊಂಡೊಯ್ದರೆನ್ನದಿರಿಂ ಭೋ ನಿಮ್ಮ ಧರ್ಮ! ಬೊಬ್ಬಿಡದಿರಿಂ ಭೋ ನಿಮ್ಮ ಧರ್ಮ! ಆಱಿಡದಿರಿಂ ಭೋ ನಿಮ್ಮ ಧರ್ಮ! ಅಲ್ಲಿಯುಂಬಡೆಯೂ ಸಂಗ ಇಲ್ಲಿಯುಂಬಡೆಯೂ ಸಂಗ! ಕೂಡಲಸಂಗಮದೇವಾ ಏಕೋಭಾವ.

I- -

ಆಕಳ–ಹೊರಹಟ್ಟಿ ಗೋವುಗಳನ್ನು, ಕಳ್ಳರು–ತಸ್ಕರರು, ಕೊಂಡೊಯ್ದರೆನ್ನದಿರಿಂ ಭೋ–ತೆಗೆದುಕೊಂಡು ಹೋದರೆಂದು ಹೇಳದಿರಿಂ ಭೋ, ನಿಮ್ಮ ಧರ್ಮ–ಎಲೆ ತುರುಗಾವಿಲ ರಾಮಯ್ಯಗಳೇ ಅದು ನಿಮ್ಮ ಕೃಪೆಯು. ಬೊಬ್ಬಿಡದಿರಿಂ ಭೋ–ತುಟಿಯ ಮೇಲೆ ಬೆರಳುಗಳಿಂದ [**] ಬೊಬ್ಬಿಟ್ಟು ಕೂಗದಿರಿಂ ಭೋ, ನಿಮ್ಮ ಧರ್ಮ–ಎಲೆ ತುರುಗಾವಿಲ ರಾಮಯ್ಯಗಳೇ ಅ[illegible] ಕೃಪೆಯು. ಆಱಿಡದಿರಿಂ ಭೋ–ಎಲ್ಲಿಗೆ ತೆಗೆದುಕೊಂಡು ಹೋದರು? ಯಾವಲ್ಲಿಗೆ ತೆಗೆದುಕೊಂಡು ಹೋದರು? ಎಂದು ದಿಕ್ಕು ದಿಕ್ಕಿಗೆ ಮಾರ್ಗ ಮಾರ್ಗಕ್ಕೆ ಕಾಪಿನಾಳುಗಳನು ಕಳುಹಿಸಿ ಹುಡಿಕಿಸದಿರಿಂ ಭೋ, ನಿಮ್ಮ ಧರ್ಮ–ಎಲೆ ತುರುಗಾವಿಲ ರಾಮಯ್ಯಗಳೇ, ನಿಮ್ಮ ಧರ್ಮ–ಅದು ನಿಮ್ಮ ಕೃಪೆಯು.

ಅಲ್ಲಿಯುಂಬಡೆಯೂ ಸಂಗ–ಹೋದಲ್ಲಿ ಏನಾದರೂ ಭವಿಜನಾತ್ಮರುಗಳಿಗೆ ಕರೆವುತ್ತೈದಾವೆ? ಇಲ್ಲವು. ಅಲ್ಲಿಯೂ ಶಿವಭಕ್ತರುಗಳಿಗೆ ಕರೆವುತ್ತೈದಾವು. ಅಲ್ಲಿದ್ದರೆಯೂ ಜಂಗಮಾರ್ಚನೆಗೆ ಆಗುತಿರ್ದ ಕಾರಣ, ಅಲ್ಲಿದ್ದರೆಯೂ ಶಿವಂಗೆ ಸಮರ್ಪಣೆಯಾಗುತ್ತಿಹುದು. ಇಲ್ಲಿಯುಂಬಡೆಯೂ ಸಂಗ–ಇಲ್ಲಿ ನಮ್ಮ ಮನೆಯೊಳಗಿದ್ದರೆಯೂ ಜಂಗಮಾರ್ಚನೆಗೆ ಆಗುತ್ತಿದ್ದ ಕಾರಣ ಇಲ್ಲಿದ್ದರೆಯೂ ಶಿವಂಗೆ ಸಮರ್ಪಣೆಯಾಗುತ್ತಿಹುದು, ಕೂಡಲಸಂಗಮದೇವಾ–ಎಲೆ ಪರ ಶಿವಲಿಂಗವೆ. ಹೋದವೆಂಬ ಚಿಂತಿಯಿಲ್ಲದೆ ಇದ್ದವೆಂಬ ಸಂತೋಷವಿಲ್ಲದೆ, ಏಕೋಭಾವ–ಒಂದೇ ಶಿವಭಾವವುಂಟಾಗಿರ್ಪುದು.

೮೩೨

ಅರ್ಥ ಪ್ರಾಣಾಭಿಮಾನವನೊಪ್ಪಿಸಿದಲ್ಲಿ ಭಕ್ತನಪ್ಪೆನೆ? ಅಲ್ಲ. ಆದಿರುದ್ರನ ಮಗಳು ಆದಿಶಕ್ತಿ, ಆದಿ ಶಕ್ತಿಯ ಮಗ ವಿಷ್ಣು, ವಿಷ್ಣುವಿನರ್ಧಾಂಗಿ ಲಕ್ಷ್ಮಿ. ಈ ತೊತ್ತಿನ ತೊತ್ತು ಪಡಿದೊತ್ತನೊಪ್ಪಿಸಿದಲ್ಲಿ ಭಕ್ತನಪ್ಪೆನೆ? ಅಲ್ಲ. ಎನ್ನ ಮನದೊಡೆಯ ಮಹಾದೇವಾ ನಿಮ್ಮ ಮನವ ನಿಮಗೊಪ್ಪಿಸಿ ನಾನು ಶುದ್ಧ ಕಾಣಾ ಕೂಡಲಸಂಗಮದೇವಾ.

I– –

ಅರ್ಥಪ್ರಾಣಾಭಿಮಾನವನೊಪ್ಪಿಸಿದಲ್ಲಿ ಭಕ್ತನಪ್ಪೆನೆ? ಅಲ್ಲ: ಅರ್ಥ–ತಾ ಗಳಿಸಿದಂಥ ದ್ರವ್ಯವು, ಪ್ರಾಣ–ಪ್ರಾಣಸಂಬಂಧವಾದ ಪುತ್ರರುಗಳು, ಅಭಿಮಾನ–ತನ್ನ [*ಅಭಿಮಾನವನ್ನು*], ಒಪ್ಪಿಸಿದಲ್ಲಿ–ಕೊಟ್ಟು ಭಕ್ತಿಯ ಮಾಡಿದಲ್ಲಿ, ಭಕ್ತನಪ್ಪೆನೆ? ಅಲ್ಲ–ನಿರ್ವಂಚಕ ಸದ್ಭಕ್ತನಾದೇನೆ? ಆಗಲರಿಯೆನು. ಆದಿರುದ್ರನ ಮಗಳು ಆದಿಶಕ್ತಿ–ಜಗತ್ತಿನುದಯಾಧಾರ ವಿಶ್ರಾಂತಿಗೆ ಮೂಲಕಾರಣವಾದ ಸದಾಶಿವಮೂರ್ತಿಯ ಸದ್ಯೋಜಾತ ಮುಖದಲ್ಲಿ ಹುಟ್ಟಲ್ಪಟ್ಟಾಯಕಳೇ ಕ್ರಿಯಾಶಕ್ತಿ. ಆದಿಶಕ್ತಿಯ ಮಗವಿಷ್ಣು: ಆದಿಶಕ್ತಿಯ–ಆ ಕ್ರಿಯಾಶಕ್ತಿಯ, ಮಗ–ಯೋನಿಕಮಲದಲ್ಲಿ ಹುಟ್ಟಲ್ಪಟ್ಟಾತ, ವಿಷ್ಣು–ನಾರಾಯಣನು. ಆ ವಿಷ್ಣುವಿನ–ಆ ನಾರಾಯಣನ, ಅರ್ಧಾಂಗಿ–ಅಂಗವಾದಾಯಕಳೇ, ಲಕ್ಷ್ಮಿ–ಕಮಲಾದೇವಿಯು.

ಈ ತೊತ್ತಿನ ತೊತ್ತು ಪಡಿದೊತ್ತನೊಪ್ಪಿಸಿದಲ್ಲಿ ಭಕ್ತನಪ್ಪೆನೆ? ಅಲ್ಲ: [ಈ ತೊತ್ತಿನ ತೊತ್ತು ಪಡಿದೊತ್ತಿನ–] ಜಗತ್ತಿನುದಯಾಧಾರವಿಶ್ರಾಂತಿಗೆ ಮೂಲಕಾರಣವಾದ ಸದಾಶಿವಮೂರ್ತಿಯ ಸದ್ಯೋಜಾತಮುಖದಲ್ಲಿ ಹುಟ್ಟಲ್ಪಟ್ಟಾಯಕಳೇ ಕ್ರೀಯಾಶಕ್ತಿ. ಆ ಕ್ರಿಯಾಶಕ್ತಿಯ ಯೋನಿಕಮಲದಲ್ಲಿ ಹುಟ್ಟಲ್ಪಟ್ಟಾತನೆ ನಾರಾಯಣನು. ಆ ನಾರಾಯಣನಿಗೆ ಅರ್ಧಾಂಗಿಯಾದಾಯಕಳೇ ಲಕ್ಷ್ಮೀ. ಈ ಲಕ್ಷ್ಮಿ ಸಂಬಂಧವಾದ ಅರ್ಥಪ್ರಾಣಾಭಿಮಾನಂಗಳನು, ಒಪ್ಪಿಸಿದಲ್ಲಿ–ಕೊಟ್ಟು ಭಕ್ತಿಯ ಮಾಡಿದಲ್ಲಿ, ಭಕ್ತನಪ್ಪೆನೆ? ಅಲ್ಲ–ನಿರ್ವಂಚಕ ಸದ್ಭಕ್ತನಾದೇನೆ? ಆಗಲರಿಯೆನೆಂಬುದರ್ಥ.

● ಆದಿರುದ್ರನ ಮಗಳು ಆದಿಶಕ್ತಿ–ತತ್ವಭುವನಬ್ರಂಹ್ಮಾಂಡಂಗಳಿಗೆ ಮೂಲಕಾರಣವಾದ ಮಹಾಲಿಂಗಮೂರ್ತಿಯ ತನಯಳೇ ಪರಾಶಕ್ತಿ. ಆದಿಶಕ್ತಿಯ ಮಗ–ಕುಮಾರನೆ, ವಿಷ್ಣು–ಆತ್ಮನು. ಆ ವಿಷ್ಣುವಿನ ಅರ್ಧಾಂಗಿಯೆ–ಆ ಆತ್ಮಂಗೆ ಅಂಗವಾಗಿರುವವಾಯಕಳೇ. ಲಕ್ಷ್ಮಿ–ಮಹಾಶಕ್ತಿಯು. ತೊತ್ತಿನ ತೊತ್ತು ಪಡಿದೊತ್ತನೊಪ್ಪಿಸಿದಲ್ಲಿ ಭಕ್ತನಪ್ಪೆನೆ? ಅಲ್ಲ: [ತೊತ್ತಿನ ತೊತ್ತು ಪಡಿದೊತ್ತನು–] ತತ್ವಭುವನಬ್ರಹ್ಮಾಂಡಂಗಳಿಗೆ ಮೂಲ ಕಾರಣವಾದ ಮಹಾಲಿಂಗಮೂರ್ತಿಯ ತನಯಳೇ ಪರಾಶಕ್ತಿ. ಆ ಪರಾಶಕ್ತಿಯ ಕುಮಾರನೆ ಆತ್ಮನು. ಆ ಆತ್ಮನಿಗೆ ಅಂಗವಾದಾಯಕಳೇ ಮಾಯಾ ಶಕ್ತಿಯು. ಆ ಮಾಯಾಶಕ್ತಿಸಂಬಂಧವಾದ ಹೊನ್ನು ಹೆಣ್ಣು ಮಣ್ಣನು. ಒಪ್ಪಿಸಿದಲ್ಲಿ–ಕೊಟ್ಟು ಭಕ್ತಿಯ ಮಾಡಿದಲ್ಲಿ, ಭಕ್ತನಪ್ಪೆನೆ? ಅಲ್ಲ–ನಿರ್ವಂಚಕ ಸದ್ಭಕ್ತನಾದಾನೇ? ಆಗಲರಿಯನು.

ಎನ್ನ ಮನದೊಡೆಯ–ಎನ್ನ ಮನಕ್ಕೆ ಕರ್ತೃವಾದಂಥ, ಮಹಾದೇವ–ಎಲ್ಲಾ ದೇವರಿಗೆ ವಲ್ಲಭನಾದಂಥ, ನಿಮ್ಮ ಮನವ–ನಿಮ್ಮ ಮಾನಾಪಮಾನವನ್ನು, ನಿಮಗೆ ಒಪ್ಪಿಸಿ–ನೀನು ಅನಾದಿಯಲ್ಲಿ ಕರುಣಿಸಿಕೊಟ್ಟ ಮನಪದಾರ್ಥವನ್ನು ನಿಮಗೆ ಸಮರ್ಪಿಸಿ, ಶುದ್ಧ ಕಾಣಾ–ಕಡಲೆ ಮೆದ್ದು ಕೈತೊಳೆಯಲಿಲ್ಲವೆಂಬೋಪಾದಿಯಲ್ಲಿ ನಿರ್ಮಲಸ್ವರೂಪವಾಗಿಪ್ಪೆನು ಕಂಡಾ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

೮೩೩

ಮಾಡುವಾತ ನಾನಲ್ಲವಯ್ಯ, ನೀಡುವಾತ ನಾನಲ್ಲವಯ್ಯ, ಬೇಡುವಾತ ನಾನಲ್ಲವಯ್ಯ ನಿಮ್ಮ ಕಾರಣ್ಯವಲ್ಲದೆ. ಎಲೆ ದೇವ ಮನೆಯ ತೊತ್ತಲಸಿದಡೆ ಒಡತಿ ಮಾಡಿಕೊಂಬಂತೆ ನಿನಗೆ ನೀನೆ ಮಾಡಿಕೋ ಕೂಡಲಸಂಗಮದೇವ.

I- -

ಮಾಡುವಾತ ನಾನಲ್ಲವಯ್ಯ–ತ್ರಿಕಾಲಲಿಂಗಪೂಜೆಯನನುಗೈವಾತ ನಾನಲ್ಲವಯ್ಯ, ನೀಡುವಾತ ನಾನಲ್ಲವಯ್ಯ– ಆ ಲಿಂಗಕ್ಕೆ ಪ್ರಾಣಕಳಾಚೈತನ್ಯ ಸ್ವರೂಪವಾದ ಜಂಗಮಕ್ಕೆ ತನುಮನಧನಂಗಳನು ಎಡೆಮಾಡುವಾತನು ನಾನಲ್ಲವಯ್ಯ. ಬೇಡುವಾತ ನಾನಲ್ಲವಯ್ಯ–ಫಲಪದಂಗಳನು ಕರುಣಿಸಿ ಕೊಡುಯೆಂದು ಕೇಳುವಾತ ನಾನಲ್ಲವಯ್ಯ. ನಿಮ್ಮ ಕಾರುಣ್ಯವಲ್ಲದೆ–ನಿಮ್ಮ ಕೃಪೆಯೇ ನಿಜಮೋಕ್ಷವು. ಆ ನಿಜಮೋಕ್ಷವೊಂದಲ್ಲದೆ. ಎಲೆದೇವ–ಎಲೆ ಒಡೆಯನೆ, ಮನೆಯ ತೊತ್ತಲಸಿದಡೆ–ಗೃಹದೊಳಗಿರುವಂಥ ಗೌಡಿಗೆ ದಣಿವಾಗಿ ಮಲಗಿದರೆ, ಒಡತಿ ಮಾಡಿಕೊಂಬಂತೆ–ಗೃಹದ ಯಜಮಾನ ಸ್ತ್ರೀಯಳು ಕಸಮುಸುರೆಯನ್ನು ತೆಗೆದುಕೊಂಡು ನೀರು ನೀಡಿಯನ್ನು ತಂದುಕೊಂಡು ಮಕ್ಕಳು ಮರಿಗಳನು ಹೇಂಗೆ ಸಂತವಿಟ್ಟುಕೊಂಡು ಹೋಗುತ್ತಿಹಳೋ ಹಾಂಗೆ, ಉಪಾಧಿಕನು ಅಲಸಿದರೆ ನಿರ್ವಂಚಕ ಸದ್ಭಕ್ತನಿಗೆ ದೇವಭಕ್ತವಪದಾರ್ಥ ತ್ರಿವಿಧವಾದದ್ದು ಒಂದೇ ವಸ್ತುವೆಂದರಿದು ತಾನು ತಾನಾಗಿ ಮಾಡುವಂಥ ಸಮರಸಜ್ಞಾನವನು ಕರುಣಿಸಿಕೊಟ್ಟು, ನಿನಗೆ ನೀನೆ ಮಾಡಿಕೋ–ನಿನಗೆ ನೀನೆ ಪದಾರ್ಥವನು ಸಮರ್ಪಿಸಿಕೊ, ಕೂಡಲಸಂಗಮದೇವ–ಎಲೆ ಪರಶಿವಲಿಂಗವೆ.

೮೩೪

ಮುನ್ನಿನ ಜನ್ಮದಲ್ಲಿ ಗುರುಲಿಂಗಜಂಗಮವ ಪೂಜಿಸಲಜಿಯದ ಕಾರಣ ಬಹುಜನ್ಮಕ್ಕೆ ತಂದಿಕ್ಕಿದೆ ಅಯ್ಯ ಎನ್ನನು. ಎನಗೆ ಗುರುಪಥವ ತೋಜಿದವರಾರು? ಲಿಂಗಪಥವ ತೋಜಿದವರಾರು? ಜಂಗಮಪಥವ ತೋಜಿದವರಾರು? ಪಾದೋದಕ ಪ್ರಸಾದವ ತೋಜಿದವರಾರು? ತೋಜುವ ಮನವೆ ನೀವೆಂದರಿದೆ. ಎನಗಿನ್ನಾವ ಭವವಿಲ್ಲ ಕೂಡಲಸಂಗಮದೇವಾ.

ಮುನ್ನಿನ ಜನ್ಮದಲ್ಲಿ–ಮೊದಲ ಜನ್ಮದಲ್ಲಿ, ಗುರು–ಸದ್ರೂಪವಾದ ಗುರುವು, ಲಿಂಗ–ಚಿದ್ರೂಪವಾದ ಲಿಂಗವು, ಜಂಗಮವ–ಆನಂದಸ್ವರೂಪವಾದ ಚರಲಿಂಗವನು, ಪೂಜಿಸಲಜಿಯದ ಕಾರಣ–ತನುವಿನಲ್ಲಿ ಗುರು ಮನದಲ್ಲಿ ಲಿಂಗ ಪ್ರಾಣದಲ್ಲಿ ಜಂಗಮ ಸಂಬಂಧವ ಮಾಡಿಕೊಂಡು ಗುರುಭಕ್ತಿ ಲಿಂಗಪೂಜೆ ಜಂಗಮದಾಸೋಹವನ್ನು ಮಾಡುವಂಥದನ್ನು ತಿಳಿಯದ ನಿಮಿತ್ತ, ಎನ್ನನು–ನನ್ನನ್ನು, ಬಹುಜನ್ಮಕ್ಕೆ ತಂದು–ಸಪ್ತಜನ್ಮ ಮೊದಲಾದ ಅನೇಕ ಜನ್ಮಾಂತರ ಗತಿಗಳಿಗೆ ಆಗು ಮಾಡಿಕೊಂಡು ಬಂದು, ಇಕ್ಕಿದೆ–ಹುಟ್ಟಿ ಹುಟ್ಟಿ ಬರಿಸಿದೆ, ಅಯ್ಯ–ಎಲೆ ಲಿಂಗವೆ.

ಎನಗೆ–ನನಗೆ, ಗುರುಪಥವ ತೋಜಿದವರಾರು: [ಗುರುಪಥವ–]ತನುವಿನಲ್ಲಿ ಗುರುಸಂಬಂಧವ ಮಾಡಿಕೊಂಡು ಗುರುಭಕ್ತಿಯ ಮಾಡುವಂಥ ಮಾರ್ಗವನು. ತೋಜಿದವರಾರು–

ಅರುಹಿಕೊಟ್ಟಂಥವರಾರು, ಲಿಂಗಪಥವ ತೋಱಿದವರಾರು: [ಲಿಂಗಪಥವ–] ಮನದಲ್ಲಿ ಲಿಂಗಸಂಬಂಧವ ಮಾಡಿಕೊಂಡು ಲಿಂಗಪೂಜೆಯ ಮಾಡುವಂಥ ಮಾರ್ಗವನ್ನು, ತೋಱಿದವರಾರು–ಅರುಹಿಕೊಟ್ಟಂಥವರಾರು. ಜಂಗಮಪಥವ ತೋಱಿದವರಾರು. [ಜಂಗಮಪಥವ–] ಪ್ರಾಣಜ್ಞಾನದಲ್ಲಿ ಜಂಗಮಸಂಬಂಧವ ಮಾಡಿಕೊಂಡು ಜಂಗಮಭಕ್ತಿಯ ಮಾಡಬೇಕೆಂಬಂಥ ಮಾರ್ಗವನ್ನು, ತೋಱಿದವರಾರು–ಅರುಹಿಕೊಟ್ಟಂಥವರಾರು. ಪಾದೋದಕವ ತೋಱಿದವರಾರು:[ಪಾದೋದಕವ–] ಸರ್ವಾಂಗದಲ್ಲಿ ಪಾದೋದಕಸಂಬಂಧವ ಮಾಡಿಕೊಂಡು ಪಾದೋದಕ ಸೇವನೆಯ ಮಾಡಬೇಕೆಂಬಂಥ ಮಾರ್ಗವನ್ನು, ತೋಱಿದವರಾರು–ಅರುಹಿಕೊಟ್ಟಂಥವರಾರು. ಪ್ರಸಾದವ ತೋಱಿದವರಾರು: [ಪ್ರಸಾದವ–] ಆತ್ಮಾಂಗದಲ್ಲಿ ಪ್ರಸಾದಸಂಬಂಧವ ಮಾಡಿಕೊಂಡು ಪ್ರಸಾದಸೇವನೆಯ ಮಾಡಿಕೊಂಬಂಥ ಮಾರ್ಗವನ್ನು, ತೋಱಿದವರಾರು–ಅರುಹಿಕೊಟ್ಟಂಥವರಾರು. ತೋರುವ–ಕಾಣಿಸುವ, ಮನವೆ–ಚಿತ್ತವೆ, ನೀವೆಂದರಿದೆ ನೀವೆಂದು ತಿಳಿದೆನು. ಎನಗಿನ್ನಾವ ಭವವಿಲ್ಲ–ಎನಗಿನ್ನಾವುದಾನೊಂದು ಉತ್ಪತ್ಯ ಉಂಟಾಗಿಲ್ಲವು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

ಪ್ರಾಣಲಿಂಗಿಯ ಪ್ರಸಾದಿಸ್ಥಲ

I– –

ಪ್ರಾಣಲಿಂಗಿಯ ಪ್ರಸಾದಿಸ್ಥಲ–ಪ್ರಾಣಲಿಂಗಿ ಸ್ಥಲದೊಳಗಣ ಪ್ರಸಾದಿಸ್ಥಲದಾಚರಣೆಯನ್ನು ನಿರೂಪಿಸುತ್ತಿಹರು.

೮೩೫

ಜನ್ಮಜನ್ಮಕ್ಕೆ ಹೋಗಲೀಯದೆ 'ಸೋऽಹಂ'ಯೆಂದೆನಿಸದೆ, 'ದಾಸೋऽಹಂ'ಯೆಂದೆನಿಸಯ್ಯ; ಲಿಂಗಜಂಗಮಪ್ರಸಾದದ ನಿಲವತೋಱಿ ಬದುಕಿಸಯ್ಯ, ಕೂಡಲಸಂಗಮದೇವಾ ನಿಮ್ಮ ಧರ್ಮ.

I– –

ಜನ್ಮಜನ್ಮಕ್ಕೆ ಹೋಗಲೀಯದೆ–ಸಪ್ತಜನ್ಮ ಮೊದಲಾದ ಅನೇಕ ಜನ್ಮಾಂತರಗತಿಗಳಿಗೆ ಹೋಗಗೊಡದೆ. 'ಸೋऽಹಂ'ಯೆಂದೆನಿಸದೆ–'ಸೋऽಹಂ' ಆ ಬ್ರಹ್ಮವೇ ನಾನೆಂಬ ಗರ್ವ ಹುಟ್ಟಗೊಡದೆ. 'ದಾಸೋऽಹಂ'ಯೆಂದೆನಿಸಯ್ಯ–"ಅಹಂ ದಾಸೋऽಹಂ" ಎಂದು ಗುರುಲಿಂಗಜಂಗಮವೇ ಕರ್ತೃವಾಗಿ ನಾನೇ ಭೃತ್ಯನಾಗಿ ಕರ್ತೃಭೃತ್ಯ ಭಾವದಿಂದ ಭಕ್ತಿಯ ಮಾಡಲ್ಪಟ್ಟಾತನೆಂದು ಹೇಳಿಸಯ್ಯ, ಲಿಂಗಜಂಗಮಪ್ರಸಾದದ–ಲಿಂಗಪೂಜೆ ಜಂಗಮದಾಸೋಹ ಪ್ರಸಾದಸೇವನೆಯ ಮಾಡುವಂಥ. ನಿಲವ–ನಿಲುಕಡೆಯನ್ನು. ತೋಱಿ–ಕಾಣಿಸಿ, ಬದುಕಿಸಯ್ಯ–ಕೃತಾರ್ಥನ ಮಾಡಿಸಯ್ಯ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ ಧರ್ಮ–ಅದು ನಿಮ್ಮ ಕೃಪೆಯು.

೮೩೬

ಆಸೆ ಆಮಿಷ ತಾಮಸದಿಂದ ಭವಬಂಧನವಾದುದನರಿಯ! ತ್ರಿವಿಧ ತ್ರಿವಿಧಾವಸ್ಥೆಯ ಮರೆಯ! ಓಂ ನಮಃ ಶಿವಾಯ ಶರಣೆಂಬುದ ಬಿಡದೆ ನೆನೆ ಮನವೆ! [1][ಮಹತಃ ಶಿವಲಿಂಗಸ್ಯ ಮಹತೋ ಜಂಗಮಸ್ತಥಾ][1] ಕೂಡಲಸಂಗಮದೇವನ ಪ್ರಸಾದ ಸಾನಿಧ್ಯದಿಂದ ಭವಜನ್ಮಕರ್ಮ ಪಂಚಭೂತಪೂರ್ವನಾಸ್ತಿ.

....

1–1 ಮಹಾಂತೋ ಶಿವಲಿಂಗಸ್ಯ ಮಹಾಂತೋ ಜಂಗಮಸ್ತಥಾ(ಕ.ಗ).

I– –

ಆಸೆ–ಅನ್ನಾಚ್ಛಾದನ ಹೊನ್ನು ಹೆಣ್ಣು ಮಣ್ಣಾಗಬೇಕೆಂಬ ಅಪೇಕ್ಷೆಯು, ಆಮಿಷ–ಹೊನ್ನಿದ್ದೂ ಹೊನ್ನಾಗಬೇಕು ಹೆಣ್ಣಿದ್ದೂ ಹೆಣ್ಣಾಗಬೇಕು ಮಣ್ಣಿದ್ದೂ ಮಣ್ಣಾಗಬೇಕೆಂಬ ಆಸೆಯೊಳಗಣ ಅತಿಕಾಂಕ್ಷೆಯು, ತಾಮಸದಿಂದ–ಅಜ್ಞಾನದಿಂದ, ಭವ–ಎಲ್ಲಾ ಎಡೆಯಲ್ಲಿ ಹುಟ್ಟಿಹುಟ್ಟಿ ಬರುವಂಥ ಉತ್ಪತ್ಯವು, ಬಂಧನವಾದುದನಱಿಯ–ಕಾಲಕಾಮರಿಂದ ಶಿಕ್ಷೆಯಾದೀತೆಂಬಂಥದನ್ನು ತಿಳಿಯ, ತ್ರಿವಿಧ–ತ್ರಿವಿಧತನುತ್ರಯಂಗಳನು, ತ್ರಿವಿಧಾವಸ್ಥೆಯ–ತನುತ್ರಯ ಸಂಬಂಧವಾದ ಜಾಗ್ರಸ್ವಪ್ನಸುಷುಪ್ತಿಯೆಂಬ ಮೂರವಸ್ಥೆಯನ್ನು, ಮಱೆಯ–ವಿಸ್ಮೃತಿಯನೈದಿಸಿ ಬಿಡ, ಓಂ ನಮಃ ಶಿವಾಯ ಶರಣೆಂಬುದ–ಓಂ ಓಂ ನಮಃ ಶಿವಾಯಯೆಂಬ ಶಿವಷಡಕ್ಷರ ಮಂತ್ರಸ್ಮರಣೆಯಿಂದ ಲಿಂಗಪೂಜೆಯ ಮಾಡಿ ಲಿಂಗಕ್ಕೆ ನಮಸ್ಕರಿಸುವಂಥದನು, ಬಿಡದೆ–ವಿಸರ್ಜಿಸದೆ, ನೆನೆ–ಲಿಂಗಧ್ಯಾನ ಲಿಂಗಸ್ಮರಣೆಯ ಮಾಡು, ಮನವೆ–ಚಿತ್ತವೆ.

ಮಹಾಂತೋ ಶಿವಲಿಂಗಸ್ಯ–ಮನದಲ್ಲಿ ಮಹತ್ವಾತಿಶಯವನುಳ್ಳ ಲಿಂಗಸಂಬಂಧವ ಮಾಡಿಕೊಂಡು ಲಿಂಗಪೂಜೆಯ ಮಾಡುವುದು, ಮಹಾಂತೋ ಜಂಗಮಸ್ತಥಾ–ಪ್ರಾಣಜ್ಞಾನದಲ್ಲಿ ಮಹತ್ವಾತಿಶಯವನುಳ್ಳ ಜಂಗಮಸಂಬಂಧವ ಮಾಡಿಕೊಂಡು ಜಂಗಮಭಕ್ತಿಯ ಮಾಡುವುದು. ಕೂಡಲಸಂಗಮದೇವನ–ಪರಶಿವಲಿಂಗದ, ಪ್ರಸಾದಸಾನಿಧ್ಯದಿಂದ–ಆತ್ಮಾಂಗದಲ್ಲಿ ಮಹತ್ವಾತಿಶಯವನುಳ್ಳ ಪ್ರಸಾದಸಂಬಂಧವ ಮಾಡಿಕೊಂಡು ಪ್ರಸಾದ ಸೇವನೆಯ ಮಾಡುವುದರಿಂದ, ಭವ–ಉತ್ಪತ್ಯವು, ಜನ್ಮ–ಹುಟ್ಟುವಂಥದು, ಕರ್ಮ–ಸಂಚಿತಾದಿ ಕರ್ಮತ್ರಯಂಗಳು, ಪಂಚಭೂತ–ಪಂಚಭೂತಯುಕ್ತವಾದ ದೇಹದ, ಪೂರ್ವನಾಸ್ತಿ–ಮುನ್ನಿನ ಜಾತಿ ವರ್ಣಾಶ್ರಮ ಕುಲಗೋತ್ರ ನಾಮಾಚಾರಂಗಳು ನಷ್ಟವಾಗಿಪ್ಪವು.

III– –

ಆಮಿಷ–ಅತಿಕಾಂಕ್ಷೆಯು, ತ್ರಿವಿಧ–ತ್ರಿವಿಧಾವಸ್ಥೆಯು, ಮಱೆಯಾ–ಜೀವತ್ರಯಸಂಬಂಧವಾದವಸ್ಥಾತ್ರಯಂಗಳ ಪ್ರಪಂಚನು ಲಿಂಗದಲ್ಲಿ ತರಹರವ ಮಾಡಾ, ಮಹತಃ–ಮಹಿಮೆಯನುಳ್ಳ, ಶಿವಲಿಂಗಸ್ಯ–ಶಿವಲಿಂಗದ, ಮಹತಃ–ಮಹಿಮೆಯನುಳ್ಳ, ಜಂಗಮ–ಚರಲಿಂಗದ, ತಥಾ–ಪ್ರಸಿದ್ಧವಾದ, ಕೂಡಲಸಂಗಮದೇವನ–ಪರಶಿವಲಿಂಗದ, ಪ್ರಸಾದಸಾನಿಧ್ಯದಿಂದ–ಪ್ರಸನ್ನತ್ವದ

ಸಂಬಂಧದಿಂದ, ಭವ–ಹುಟ್ಟಲು ತಕ್ಕ, ಜನ್ಮ–ಉತ್ಪತ್ಯದ, ಕರ್ಮ–ದ್ವಂದ್ವಕರ್ಮದ, ಪಂಚಭೂತ–ಪೃಥ್ವ್ಯಾದಿ ಐದು ಭೂತಗಳ, ಪೂರ್ವ–ಪೂರ್ವ[1]ವಿ[1]ಕೃತಿಯು, ನಾಸ್ತಿ–ಲಿಂಗದಲ್ಲಿ ನಿವೃತ್ತಿಯು.

....

1–1 x(ಟ).

V– –

ತ್ರಿವಿಧ ತ್ರಿವಿಧಾವಸ್ಥೆಯ ಮಱೆಯ–ಜೀವತ್ರಯಸಂಬಂಧವಾದ ಅವಸ್ಥಾತ್ರಯಂಗಳ ಪ್ರಪಂಚನು ತ್ರಿವಿಧಲಿಂಗದಲ್ಲಿ ಸಮರ್ಪಣೆಯ ಮಾಡ.

೮೩೭

ಬೆಟ್ಟಕ್ಕೆ ಬೆಳ್ಳಾರ ಸುತ್ತಿತ್ತಯ್ಯ, ಪಾಪದ ಬಲೆಯ ತಂದು ಮುಂದೆ ಒಡ್ಡಿದರಯ್ಯ. ಬೇಂಟೆಕಾಱನು ಮೃಗವನಟ್ಟಿ ಮೃಗ ಗೋರಿಗೊಳಗಾಗದಯ್ಯ. ಹರನೊಡ್ಡಿದ ಬಲೆಯಲ್ಲಿ ಸಿ[1]ಲುಕಿ[1]ದ ಮೃಗವು ಕೂಡಲಸಂಗಮದೇವಂಗಾ[2]ರೋಗಣೆಯಾಯಿತ್ತು[2].

I– –

ಬೆಟ್ಟಕ್ಕೆ–ಗುಡ್ಡಕ್ಕೆ, ಬೆಳ್ಳಾರ–ಬೇಲಿಯು, ಸುತ್ತಿತ್ತಯ್ಯ–ಪ್ರವೇಷ್ಟಿಸಿತ್ತಯ್ಯ. ಪಾಪದ ಬಲೆಯ–ಪಾಪಯುಕ್ತವಾದಂಥ ಜಾಲವನ್ನು, ತಂದು–ತೆಗೆದುಕೊಂಡು ಬಂದು, ಮುಂದೆ–ಮೃಗ ಬರುವಂಥ ಎದುರಿಗೆ, ಒಡ್ಡಿದರಯ್ಯ–ಹರಹಿದರಯ್ಯ. ಬೇಂಟೆಕಾಱನು–ಕಿರಾತನು, ಮೃಗವ–ಎರಳೆಯನ್ನು, ಅಟ್ಟಿ–ಓಡಿಸಲು, ಮೃಗ–ಎರಳೆಯು, ಗೋರಿಗೊಳಗಾಗದಯ್ಯ–ಕಿರಾತನ ಪಾಶಕ್ಕೆ ವಶವಾಗದಯ್ಯ, ಹರನೊಡ್ಡಿದ ಬಲೆಯಲ್ಲಿ: ಹರನು–ರಾಜನು, ಒಡ್ಡಿದ–ಹಾಕಿದ, ಬಲೆಯಲ್ಲಿ–ಜಾಲದಲ್ಲಿ, ಸಿಲುಕಿದ–ವಶಗತವಾದ, ಮೃಗವು–ಎರಳೆಯು, ಕೂಡಲಸಂಗಮದೇವಂಗೆ–ರಾಜನಿಗೆ, ಆರೋಗಣೆಯಾಗಿತ್ತು–ಆಹುತಿಯಾಯಿತ್ತೆಂಬ ದೃಷ್ಟೋಪಮಾನದ ಹಾಂಗೆ.

● ಬೆಟ್ಟಕ್ಕೆ–ಮೂಲ ಅಹಂಕಾರವೆಂಬ ಅದ್ರಿಗೆ, ಬೆಳ್ಳಾರ–ಪಂಚಭೂತಯುಕ್ತವಾದ ದೇಹವೆಂಬ ಬಲಿಯು, ಸುತ್ತಿತ್ತಯ್ಯ–ಪ್ರವೇಷ್ಟಿಸಿಕೊಂಡಿತ್ತಯ್ಯ. ಪಾಪದ ಬಲೆಯ–ಪಾಪದ ಸ್ವರೂಪವಾದ ಹೊನ್ನು ಹೆಣ್ಣು ಮಣ್ಣೆಂಬ ಪಾಶವನ್ನು, ತಂದು–ಆಗುಮಾಡಿಕೊಂಡು ಬಂದು. ಮುಂದೆ–ಆತ್ಮನ ಕ್ರಿಯಾದೃಷ್ಟಿಯ ಸಮ್ಮುಖದಲ್ಲಿ, ಒಡ್ಡಿದರಯ್ಯ–ಉಂಟುಮಾಡಿದರಯ್ಯ. ಬೇಂಟೆಕಾಱನು–ಯಮನೆಂಬ ವ್ಯಾಧನು. ಮೃಗವ–ಜೀವರುಗಳನು, ಅಟ್ಟಿ–ಜನನ ಮರಣಂಗಳಲ್ಲಿ ತಂದು ಸಂಹರಿಸಲು, ಮೃಗ–ಸಜ್ಜೀವಸ್ವರೂಪವಾದ ಶರಣನು, ಗೋರಿಗೊಳಗಾಗದಯ್ಯ– ಅಷ್ಟರೊಳಗೆ ಶಿವಕೃಪೆಯಾಗಿ ಅಂತರಂಗದಲ್ಲಿ ಜ್ಞಾನೋದಯವಾಗಿ ಗುರೂಪಾವಸ್ಥೆಯಮಾಡಿ ಗುರುಕಾರುಣ್ಯವ ಹಡದು ಲಿಂಗಾಂಗಸಂಬಂಧಿಯಾದಂಥ ಶಿವಶರಣನು ಯಮನ ಮರಣಬಾಧೆಗೆ ವಶಗತವಾಗನಯ್ಯ. ಹರನೊಡ್ಡಿದ ಬಲೆಯಲ್ಲಿ–ಪರಮೇಶ್ವರನುಂಟುಮಾಡಿದ ಸತ್ಕ್ರಿಯಾಚಾರವೆಂಬ ಪಾಶದಲ್ಲಿ, ಸಿಲುಕಿದ–ವಶಗತವಾದ, ಮೃಗ–ಸಜ್ಜೀವಸ್ವರೂಪವಾದ ಶರಣನು,

ಕೂಡಲಸಂಗಮದೇವಂಗೆ–ಇಷ್ಟಮಹಾಲಿಂಗಕ್ಕೆ, ಆರೋಗಣೆಯಾಯಿತ್ತು.–ಆತ್ಮದ ಪದಾರ್ಥವೇ ರೂಪುಪದಾರ್ಥವಾಗಿ ಸಮರ್ಪಣೆಯಾಯಿತ್ತು.

II– –

1–1 ಕ್ಕೆ (ಚ, ಜ). 2–2 ಓಗರವಾಯಿತ್ತು (ಚ, ಜ).

....

ಬೆಟ್ಟಕ್ಕೆ ಬೆಳ್ಳಾರ ಸುತ್ತಿತ್ತಯ್ಯ–ಸ್ಥೂಲತನುವನು ಪ್ರವೇಷ್ಟಿಸಿಕೊಂಡಿರುವಂಥ ಮೂಲಹಂಕಾರವೆಂಬ ಪರ್ವತಕ್ಕೆ ಇಂದ್ರಿಯಂಗಳೆಂಬ ಬೇಲಿಯು ಪ್ರವೇಷ್ಟಿಸಿಕೊಂಡಿತ್ತಯ್ಯ. ಪಾಪದ ಬಲೆಯ ತಂದು ಮುಂದೆ ಒಡ್ಡಿದರಯ್ಯ–ದೋಷಯುಕ್ತವಾದ ಮಲತ್ರಯಂಗಳೆಂಬ ಪಾಶವನಾಗುಮಾಡಿ ತಂದು ಭವಿಷ್ಯದಲ್ಲಿ ಮಡಗಿದರಯ್ಯ. ಬೇಂಟೆಕಾಜಿನು ಮೃಗವನಟ್ಟಿ–ಯಮನೆಂಬ ವ್ಯಾಧನು ಜೀವನೆಂಬ ಮೃಗವನು ತಗುಳಲಾಗಿ, ಮೃಗ [೧]ಗೋರಿ[೧]ಗೊಳಗಾಗದಯ್ಯ–ಜೀವನು ಮರಣವೆಂಬ ಲಕ್ಷಕ್ಕೆ ವಶಗತವಾಗದಯ್ಯ. ಹರನೊಡ್ಡಿದ ಬಲೆಯಲ್ಲಿ ಸಿಕ್ಕಿದ ಮೃಗವು ಕೂಡಲಸಂಗಮದೇವಂಗೋಗರವಾಯಿತ್ತು–ಪರಮೇಶ್ವರನುಂಟುಮಾಡಿದ ಮಹಾನುಭಾವವೆಂಬ ಬಲೆಯಲ್ಲಿ ವಶಗತವಾದ ಸಜ್ಜೀವನು ಪರಶಿವಲಿಂಗಕ್ಕೆ ಓದನವಾಯಿತ್ತು.

● ಮತ್ತಂ ತನುತ್ರಯವೆಂಬದ್ರಿಗೆ ಅವಸ್ಥಾತ್ರಯಂಗಳೆಂಬ ಬೆಳ್ಳಾರವು ಪ್ರವೇಷ್ಟಿಸಿತ್ತಯ್ಯ. ಪಂಚಮಹಾದೋಷದ ಜಾಲವನು ತಂದು ಅಗ್ರದಲ್ಲುಂಟು ಮಾಡಿದರಯ್ಯ. ಪರಮೇಶ್ವರನು ಜೀವನನೋಡಿಸಲಾಗಿ ಅಷ್ಟರಲ್ಲಿಯೇ ಜ್ಞಾನೋದಯವಾಯಿತ್ತು. ಆ ಜ್ಞಾನೋದಯ ಬಲದಿಂದ ಸಕಲ ಸಂಸಾರಾದಿ ಮಾಯಾಪ್ರಪಂಚನು ಬಿಡುಗಡೆಯ ಮಾಡಿದ ಸಜ್ಜೀವನು ಭಿನ್ನಕ್ರಿಯಾಲಕ್ಷ್ಯಕ್ಕೆ ವಶಗತವಾಗದಯ್ಯ. ಕಾಲಕಾಮದಕ್ಷಾಧ್ವರ ತ್ರಿಪುರಧ್ವಂಸಿಯಾದ ಪರಮೇಶ್ವರನುಂಟುಮಾಡಿದ ಸುಬುದ್ಧಿಯೆಂಬ ಜಾಲದಲ್ಲಿ ವಶಗತವಾದ ಸಜ್ಜೀವನು ಪರಶಿವಲಿಂಗಕ್ಕೆ ಓದನವಾಯಿತ್ತು.

● ಮತ್ತಂ ಆಶೆಯೆಂಬ ಪರ್ವತಕ್ಕೆ ಆಮಿಷವೆಂಬ ಬೆಳ್ಳಾರವು ಸುತ್ತಿತ್ತಯ್ಯ. ತಾಮಸದ ಬಲೆಯನುಂಟು ಮಾಡಿಕೊಂಡು ಬಂದು ಮುಂದಿಕ್ಕಿನಲ್ಲಿ ಹೂಡಿದರಯ್ಯ. ಮಹಾನುಭಾವ ಗುರುಮೂರ್ತಿಯು ಸಜ್ಜೀವನನು ಮಹಾನುಭಾವದತ್ತ ತಗುಳಲು. ಆ ಸಜ್ಜೀವನು ಶಿಕ್ಷೆಯ ಲಕ್ಷ್ಯಕ್ಕೆ ವಶಗತವಾಗದಯ್ಯ. ಶಿವನುಂಟುಮಾಡಿದ ಮಹಾಜ್ಞಾನವೆಂಬ ಬಲೆಯಲ್ಲಿ ವಶಗತವಾದ ಶಿವಾಂಶಿಕನಹ ಜ್ಞಾನಕಲಾತ್ಮಕನು ಮಹಾನುಭಾವಗುರುಮೂರ್ತಿಯ ಶಿಕ್ಷಾಬೋಧೆಗೆ ವಶಗತವಾಯಿತ್ತೆಂಬುದರ್ಥ.

....

೧–೧ ಬಲಿ (ಜ)

III– –

1–1 ಕ್ಕೆ (ಟ.ಡ). 2–2 ಓಗರವಾಯಿತ್ತು (ಟ.ಡ)

....

ಬೆಟ್ಟಕ್ಕೆ–ಅಹಂಕಾರಯುಕ್ತವಾದ ದೇಹವೆಂಬ ಪರ್ವತಕ್ಕೆ, ಬೆಳ್ಳಾರ ಸುತ್ತಿತ್ತಯ್ಯ–ಕ್ರಿಯಾಚಾರವೆಂಬ ಬಲೆಯಾವೈತವಾಯಿತ್ತಯ್ಯ. ಪಾಪದ–ಪಾಪಕರ್ಮವೆಂಬ. ಬಲೆಯ–ಜಾಲವನು, ತಂದು–ಆಗು ಮಾಡಿತಂದು, ಮುಂದೆ–ಜೀವನ ಪುರಸ್ಸರದಲ್ಲಿ, ಒಡ್ಡಿದರಯ್ಯ–ಕಾಲಕಾಮಾದಿಗಳೆಂಬ ಜಾಲಗಾರರು ಪ್ರತೀಕಾರವ ಮಾಡಿದರಯ್ಯ. ಬೇಂಟೆಕಾರನು–ಯಮನೆಂಬ ಸರವಿಕಾರನು, ಮೃಗವಂ–ಜೀವನೆಂಬ ಮಿಗವನು, ಅಟ್ಟಿ–ಪ್ರಪಂಚಿನಿಂದ ಓಡಿಸಲು, ಮೃಗ ಗೋರಿಗೊಳಗಾಗದಯ್ಯ–ಅಂತಪ್ಪ ಜೀವನಿಗೆ ಸುಜ್ಞಾನೋದಯವಾಗಿ ಪ್ರಪಂಚಿನ ತೋಹಿಗೊಶಗತವಾಗದಯ್ಯ. ಹರಂ–ಪರಶಿವನು, ಒಡ್ಡಿದ–ಆಗು ಮಾಡಿದ, ಬಲೆಯಲ್ಲಿ–ಭಕ್ತಿಪಾಶದಲ್ಲಿ, ಸಿಕ್ಕಿದ–ಪ್ರತಿಬದ್ಧವಾದ, ಮೃಗವು–ಜೀವನ ಸ್ವರೂಪವಳಿದ ಸಜ್ಜೀವನು, ಕೂಡಲಸಂಗಮದೇವಂಗೆ–ಪರಶಿವಲಿಂಗಕ್ಕೆ, ಓಗರವಾಯಿತ್ತು–ಸಮರ್ಪಣೆಯಾಯಿತ್ತು.

V– –

2–2 ಓಗರವಾಯಿತ್ತು (ಪ).

....

ಬೆಟ್ಟಕ್ಕೆ–ಅಹಂಕಾರಯುಕ್ತವಾದ ದೇಹವೆಂಬ ಪರ್ವತಕ್ಕೆ, ಬೆಳ್ಳಾರ ಸುತ್ತಿತ್ತಯ್ಯ–ಕ್ರಿಯಾಚಾರವೆಂಬ ಬಲೆಯಾವೃತ್ತವಾಯಿತಯ್ಯ. ಪಾಪದ–ಪಾಪಕರ್ಮವೆಂಬ. ಬಲೆಯ–ಜಾಲವನು, ತಂದು–ಆಗುಮಾಡಿ, ಮುಂದೆ–ಜೀವನ ಪುರಸ್ಸರದಲ್ಲಿ, ಒಡ್ಡಿದರಯ್ಯ–ಪ್ರತೀಕಾರ ಮಾಡಿದರಯ್ಯ. ಬೇಂಟೆಕಾಱನು–ಯಮನೆಂಬ ಕಿರಾತನು. ಮೃಗವಂ–ಜೀವನೆಂಬ ಮೃಗವನು, ಅಟ್ಟೆ–ಪ್ರಪಂಚಿನಿಂದ ಓಡಿಸಲಾಗಿ. ಮೃಗ ಗೋರಿಗೊಳಗಾಗದಯ್ಯ–ಅಂತಪ್ಪ ಜೀವನಿಗೆ ಸುಜ್ಞಾನೋದಯವಾಗಿ ಯಮನ ಸಂಹಾರಪಾಶಕ್ಕೆ ವಶಗತವಾಗದಯ್ಯ. ಹರಂ–ಪರಶಿವನು. ಒಡ್ಡಿದ–ಪ್ರತೀಕಾರವ ಮಾಡಿದ. ಬಲೆಯಲ್ಲಿ–ಭಕ್ತಿಪಾಶದಲ್ಲಿ, ಸಿಲುಕಿದ–ಪ್ರತಿಬದ್ಧವಾದ, ಮೃಗವು–ಸಜ್ಜೀವನು. ಕೂಡಲಸಂಗಮದೇವಂಗೆ–ಪರಶಿವಲಿಂಗಕ್ಕೆ. ಓಗರವಾಯಿತ್ತು–ಸಮರ್ಪಣೆಯಾಯಿತ್ತು.

೮೩೮

ಪರಿಯಾಣವೆ ಭಾಜನವೆಂಬರು ಪರಿಯಾಣ ಭಾಜನವಲ್ಲ; ಲಿಂಗಕ್ಕೆ ತನ್ನ ಮನವೇ ಭಾಜನ. ಪ್ರಾಣವನು ಬೀಸರವೋಗದೆ ಮೀಸಲಾಗರ್ಪಿಸಬಲ್ಲಡೆ ಕೂಡಿಕೊಂಡಿಪ್ಪ ನಮ್ಮ ಕೂಡಲಸಂಗಮದೇವ.

I– –

ಲಿಂಗಕ್ಕೆ–ಗುರುಮುಖದಿಂದ ಬಂದ ಇಷ್ಟಮಹಾಲಿಂಗಕ್ಕೆ ಸಕಲಪದಾರ್ಥವನ್ನು ಸಮರ್ಪಿಸುವುದಕ್ಕೆ. ಪರಿಯಾಣವೆ–ಚಿನ್ನದ ಪರಿಯಾಣ ಬೆಳ್ಳಿಯ ಪರಿಯಾಣ ಕಂಚಿನ ಪರಿಯಾಣ ಮೃತ್ತಿಕಾ ಪರಿಯಾಣವೇ, ಭಾಜನವೆಂಬರು–ಗಂಗಾಳವೆಂದು ಹೇಳುವರು. ಪರಿಯಾಣ–ಚಿನ್ನದ ಪರಿಯಾಣ ಬೆಳ್ಳಿಯ ಪರಿಯಾಣ ಕಂಚಿನ ಪರಿಯಾಣ ಮೃತ್ತಿಕಾ ಪರಿಯಾಣವು, ಭಾಜನವಲ್ಲ–ಗಂಗಾಳವಲ್ಲವು. ಲಿಂಗಕ್ಕೆ–ಇಷ್ಟಮಹಾಲಿಂಗಕ್ಕೆ, ತನ್ನ ಮನವೇ–ತನ್ನ ಚಿತ್ತವೇ, ಭಾಜನ–ತಳಿಗೆಯಾಗಿಪ್ಪುದು, ಪ್ರಾಣವನು–ಹರಣವನು, ಬೀಸರವೋಗದೆ–ದಳಪ್ರಕೃತಿಯೊಡನೆ ಕೂಡಿ ಚರಿಸಿ ಚಾಗಿಯಾಗಿ ಹೋಗಗೊಡದೆ, ಮೀಸಲಾಗಿ ಅರ್ಪಿಸಬಲ್ಲಡೆ–ನಿರ್ಮಲವಾದ ಉನ್ಮನಿಮನಸ್ಸಾಗಿ

ಅಳವಡಿಸಿಕೊಂಡಾಚರಿಸಬಲ್ಲರೆ, ನಮ್ಮ ಕೂಡಲಸಂಗಮದೇವ–ನಮ್ಮ ಪರಶಿವಲಿಂಗವು, ಕೂಡಿಕೊಂಡಿಪ್ಪ–ಅಂತಪ್ಪ ಭಕ್ತನ ತನ್ನಲ್ಲಿ ಏಕಾರ್ಥವ ಮಾಡಿಕೊಂಬುತ್ತಿಹನು.

IV– –

ಮನದ ಮಧ್ಯದಲ್ಲಿದ್ದ ಲಿಂಗಕ್ಕೆ ಮನವನರ್ಪಿಸಬಲ್ಲರೆ ಲಿಂಗವಾಗಿಪ್ಪನೆಂಬುದೀ ವಚನದರ್ಥ.

೮೫೯

ಆತ್ಮ ಲಿಂಗ, ಪರಮಾತ್ಮ ಜಂಗಮ, ತನುಮಧ್ಯೆ ಪ್ರಸಾದವಾಯಿತ್ತು. ನಿಶ್ಚಿಂತ ನಿವಾಸವಾಯಿತ್ತು. ಕೂಡಲಸಂಗನ ಶರಣರ ಸಂಗದಿಂದ ನಿಶ್ಚಿಂತ ನಿವಾಸವಾಯಿತ್ತು!

I– –

[೧]ಆತ್ಮ ಲಿಂಗ–ಅಂಗದಲ್ಲಿ ಇಷ್ಟಲಿಂಗಸಂಬಂಧವಾಗಿರ್ಪುದು, ಪರಮಾತ್ಮ ಜಂಗಮ–ಪ್ರಾಣದಲ್ಲಿ ಜಂಗಮಸಂಬಂಧವಾಗಿರ್ಪುದು, ತನುಮಧ್ಯೆ ಪ್ರಸಾದವಾಯಿತ್ತು–ಆತ್ಮಾಂಗದಲ್ಲಿ ಪ್ರಸಾದಸಂಬಂಧವಾಗಿರ್ಪುದು, ನಿಶ್ಚಿಂತನಿವಾಸವಾಯಿತ್ತು–ಚಿಂತೆರಹಿತವಾದ ಲಿಂಗಜಂಗಮಪ್ರಸಾದವೊಡಗೂಡುವುದಕೆ ತನುಮನಾತ್ಮಾಂಗವೇ ಆಲಯವಾಗಿರ್ಪುದು. ಕೂಡಲಸಂಗನ ಶರಣರ ಸಂಗದಿಂದ–ಲಿಂಗಪೂಜೆ ಜಂಗಮದಾಸೋಹ ಪ್ರಸಾದಸೇವನೆಯ ಮಾಡುವುದರಿಂದ, ನಿಶ್ಚಿಂತನಿವಾಸವಾಯಿತ್ತು–ಚಿಂತೆರಹಿತವಾದ ಲಿಂಗಜಂಗಮಪ್ರಸಾದವೊಡಗೂಡುವುದಕ್ಕೆ ಲಿಂಗಜಂಗಮಪ್ರಸಾದವೇ ಆಲಯವಾಗಿರ್ಪುದೆಂಬ ದೃಷ್ಟೋಪಮಾನದ ಹಾಂಗೆ.

● ಆತ್ಮ ಲಿಂಗ–ಅಂಗದಲ್ಲಿ ಇಷ್ಟಲಿಂಗಸಂಬಂಧವಾಗಿರ್ಪುದು, ಪರಮಾತ್ಮ ಜಂಗಮ–ಪ್ರಾಣದಲ್ಲಿ ಪ್ರಾಣಲಿಂಗಸಂಬಂಧವಾಗಿರ್ಪುದು. ತನ್ನ ಮಧ್ಯೆ ಪ್ರಸಾದವಾಯಿತ್ತು–ಆತ್ಮಾಂಗದಲ್ಲಿ ಭಾವಲಿಂಗಸಂಬಂಧವಾಗಿರ್ಪುದು, ನಿಶ್ಚಿಂತ ನಿವಾಸವಾಯಿತ್ತು–ಚಿಂತೆರಹಿತವಾದ ಇಷ್ಟಪ್ರಾಣಭಾವ ಲಿಂಗಂಗಳಡಗುವುದಕ್ಕೆ ತನುಮನಾತ್ಮಂಗಳೇ ಆಲಯವಾಗಿರ್ಪುವು. ಕೂಡಲಸಂಗನ ಶರಣರ ಸಂಗದಿಂದ: ಕೂಡಲಸಂಗನೆಂದರೆ ಗುರುಮೂರ್ತಿಗಳು. ಶರಣರೆಂದರೆ ಆ ಗುರುವಿನ ದೀಕ್ಷಾತ್ರಯಂಗಳಿಂದುದಯವಾದ ಇಷ್ಟಪ್ರಾಣಭಾವಲಿಂಗಂಗಳಿಗೆ, ಸಂಗದಿಂದ–ತನುತ್ರಯಂಗಳಲ್ಲಿ ಬರಲ್ಪಟ್ಟ ರೂಪುರುಚಿತೃಪ್ತಿಗಳನು ಇಷ್ಟಪ್ರಾಣಭಾವಲಿಂಗಗಳಿಗೆ ಸಮರ್ಪಿಸಿ ಆ ತ್ರಿವಿಧಮುಖದಿಂದುಳುಮೆಯಾಗಿ ಬರಲ್ಪಟ್ಟ ಶುದ್ಧಸಿದ್ಧಪ್ರಸಿದ್ಧಪ್ರಸಾದವನು ಪಡೆದನುಭವಿಸುವುದರಿಂದ, ನಿಶ್ಚಿಂತನಿವಾಸವಾಯಿತ್ತು–ಚಿಂತೆರಹಿತವಾದ ಇಷ್ಟಪ್ರಾಣಭಾವಲಿಂಗವಡಗುವುದಕ್ಕೆ ಮಹಾಲಿಂಗವೇ ಆಲಯವಾಗಿರ್ಪುದು.

....

೧+ ಆತ್ಮಲಿಂಗ ತನುಮಧ್ಯೆ ಪ್ರಸಾದವಾಯಿತ್ತು (ಕ, ಗ).

II– –

ಆತ್ಮಲಿಂಗ-ಜೀವಾತ್ಮಸ್ವರೂಪವಾದಿಷ್ಟಲಿಂಗವು, ಪರಮಾತ್ಮ ಜಂಗಮ-ಪರಮಾತ್ಮ ಸ್ವರೂಪವಾದ ಪ್ರಾಣಲಿಂಗವು, ತನುಮಧ್ಯ ಪ್ರಸಾದವಾಯಿತ್ತು-ಸೂಕ್ಷ್ಮತನುವಿಗೆ ಮಧ್ಯಸ್ಥವಾದ ಕಾರಣತನುವಿನಲ್ಲಿ ಪ್ರಸಿದ್ಧ ಪ್ರಸಾದಸ್ವರೂಪವಾದ ತೃಪ್ತಿಲಿಂಗವು ಸಂಬಂಧವಾಯಿತ್ತು. ನಿಶ್ಚಿಂತ ನಿವಾಸವಾಯಿತ್ತು-ತನುಮನಾತ್ಮರುಗಳಲ್ಲಿ ಇಷ್ಟಪ್ರಾಣಭಾವಲಿಂಗಸಂಬಂಧವ ಮಾಡಿಕೊಂಡು ಕ್ರಿಯಾಜ್ಞಾನಭಾವಾಚರಣೆ ವಿಡಿದಾಚರಿಸುವ ಶರಣಂಗೆ ತ್ರಿವಿಧಲಿಂಗವನೊಳಕೊಂಡು ತೋಱುವ ಮಹಾಲಿಂಗವೇ ಸ್ಥಾನವಾಯಿತ್ತು. ಕೂಡಲಸಂಗನ ಶರಣರ ಸಂಗದಿಂದ ನಿಶ್ಚಿಂತ ನಿವಾಸವಾಯಿತ್ತು-ಪರಶಿವಲಿಂಗದ ಪರಮೂರ್ತಿಗಳಾದ ಶಿವಾನುಭವಿಗಳ ಸಂಸರ್ಗದಿಂದ ನಿ:ಕಲಲಿಂಗದ ಜ್ಞಾನಚಿತ್ತುವೆ ಸ್ಥಾನವಾಯಿತ್ತು.

III- -

ಆತ್ಮ-ಜೀವನು, ಲಿಂಗ-ಇಷ್ಟಲಿಂಗವು, ಪರಮಾತ್ಮ-ಪರಮಾತ್ಮನೆ, ಜಂಗಮ-ಪ್ರಾಣಲಿಂಗವು, ತನು ಮಧ್ಯೆ-ಆ ಲಿಂಗಜಂಗಮದ ನಡುವೆ, ಪ್ರಸಾದವಾಯಿತ್ತು -ಪ್ರಸನ್ನ ಶೇಷವುಂಟಾಯಿತ್ತು. ನಿಶ್ಚಿಂತ-ಚಿಂತೆರಹಿತವಾದ ಪರಬ್ರಹ್ಮವೆ, ನಿವಾಸವಾಯಿತ್ತು-ಶರಣಂಗಾಶ್ರಯವಾಯಿತ್ತು. ಕೂಡಲಸಂಗನ ಶರಣರ ಸಂಗದಿಂದ-ಶಿವಶರಣರುಗಳ ಸಂಪರ್ಕದ ಕ್ರಿಯಾಜ್ಞಾನದನುಭಾವದಿಂದ, ನಿಶ್ಚಿಂತ-ಚಿಂತೆರಹಿತವಾದ ಪರವಸ್ತು, ನಿವಾಸವಾಯಿತ್ತು-ಆಶ್ರಯವಾಯಿತ್ತು.

IV- -

ಗಣಸಮ್ಮೇಳದಿಂ ಶ್ರೀಗುರು ಇಷ್ಟಲಿಂಗಕಳಾಸಂಬಂಧವ ಜೀವಾತ್ಮಂಗೆ ಮಾಡಿ ಜೀವಭಾವವನಳಿದು ಶಿವಾತ್ಮನ ಮಾಡಿದನಾಗಿ ಆತ್ಮಲಿಂಗವೆಂಬ ಶಬ್ದಕ್ಕರ್ಥ. ಅಂತು ಜೀವವಳಿದು ತನ್ನನೆಲ್ಲಾ ಲಿಂಗವೆಂದೇ ಕಾಬ ಪರಮಚೈತನ್ಯಸ್ವರೂಪೇ ಜಂಗಮವೆಂಬುದೀಗ ಪರಮಾತ್ಮ ಜಂಗಮವೆಂಬ ಶಬ್ಧಕ್ಕರ್ಥ. ಅಂತು ಅಜೀವ ಪರಮಚೈತನ್ಯಜ್ಞಾನವೇ ಜಂಗಮವಾಗಿ ಅಱುಹಿಸಿಕೊಂಬ ಜೀವಾತ್ಮನೆಲ್ಲಾ ಲಿಂಗವಾಗಿರ್ದ ಶರಣನ ದೇಹಸುಖಂಗಳನಜೆದು ಅರ್ಪಿಸುವ ಅಜೀವೆಲ್ಲಾ ಜಂಗಮ, ಅರ್ಪಿಸಿಕೊಂಡು ಭೋಗಿಸುವನೆಲ್ಲಾ ಲಿಂಗವಾದ ಕಾರಣ ಅರ್ಪಿತವಾದ ದೇಹಾದಿ ಸುಖಂಗಳೆಲ್ಲಾ ಲಿಂಗವೆಂಬುದೀಗ ತನುಮಧ್ಯ ಪ್ರಸಾದವಾಯಿತ್ತೆಂಬ ಶಬ್ದಕ್ಕರ್ಥ. ಅಂತು ದೇಹ ಲಿಂಗವಾದ ಬಳಿಕ ಭವಬಂಧನದ ಚಿಂತೆ ಹೋಗಿ ನಿಶ್ಚಿಂತವಾಸವಾಯಿತ್ತು ಶರಣಂಗೆ, ಅಂತಾದ ನಿಶ್ಚಿಂತದ ಸುಖವು ನಿಮ್ಮ ಶರಣರ ಅನುಭಾವಸಂಗದಿಂದವೆಂಬುದೀಗ[೧] ಕೂಡಲಸಂಗನ ಶರಣರ ಸಂಗದಿಂದ ನಿಶ್ಚಿಂತ ನಿವಾಸವಾಯಿತ್ತು ಎಂಬ ಶಬ್ದಕ್ಕರ್ಥ.

....

೧+ ನಿಶ್ಚಿಂತನಿವಾಸವಾಯಿತ್ತು (ತ).

V- -

ಆತ್ಮ-ಜೀವಾತ್ಮನೆ, ಲಿಂಗ-ಇಷ್ಟಲಿಂಗವು, ಪರಮಾತ್ಮನೆ ಜಂಗಮ-ಪ್ರಾಣಲಿಂಗವು, ತನುಮಧ್ಯೆ-ಆ ಲಿಂಗ ಜಂಗಮದ ನಡುವೆ, ಪ್ರಸಾದವಾಯಿತ್ತು-ಪ್ರಸನ್ನ ಶೇಷವುಂಟಾಯಿತ್ತು.

೮೪೦

ಲೋಹ ಪರುಷವ ಮುಟ್ಟುಡಿವುದಲ್ಲದೆ ಪರುಷ ಪರುಷವ ಮುಟ್ಟುವುದೆ ಅಯ್ಯ? [1]ಅಂಗ[1]ವಿಡಿದಂಗೆ ಪ್ರಸಾದವಲ್ಲದೆ ಲಿಂಗವಿಡದಂಗೆ ಪ್ರಸಾದವೆಲ್ಲಿಯದೊ? "ಅಣೋರಣೀಯಾನ್ ಮಹತೋ ಮಹೀಯಾನ್" ಹಿರಿದಿಂಗೆ ಹಿರಿದು, ಕಿಱಿದಿಂಗೆ ಕಿಱಿದು, ವಾಙ್ಮನಕ್ಕಗೋಚರ, ಕೂಡಲಸಂಗಮದೇವಾ ಸ್ವರೂಪು ಪ್ರಸಾದ; ನಿರೂಪು ಲಿಂಗೈಕ್ಯ

I- -

ಲೋಹ–ಆಯಸ್ಕಾಂತಾದಿ ಪಂಚಲೋಹಂಗಳು, ಪರುಷ ಮುಟ್ಟುವುದಲ್ಲದೆ–ಪರುಷದ ಖಣಿಯನು ಸೋಂಕಿ ಸುವರ್ಣವಾಗಿ ಸಕಲಾತ್ಮರ ಅಂಗದ ಮೇಲೆ ಆಭರಣಂಗಳಾಗಿ ಶೋಭಿಸಬೇಕೆಂಬ ಕಾಂಕ್ಷೆವುಂಟಾಗಿರ್ಪುದಲ್ಲದೆ, ಪರುಷ–ಪರುಷದ ಖಣಿಯು, ಪರುಷವ ಮುಟ್ಟುವುದೆ–ತನ್ನಿಂದ ಶ್ರೇಷ್ಠವಾದ ಖಣಿಯನ್ನು ಸೋಂಕಿ ಪವಿತ್ರವಾಗಬೇಕೆಂಬ ಕಾಂಕ್ಷೆ ಉಂಟಾಗಿದ್ದಿತ್ತೆ? ಇಲ್ಲವು. ಅಯ್ಯ–ಎಲೆ ಲಿಂಗವೆ. ಅಂಗವಿಡಿದಂಗೆ–ದೇಹಭಾವದ ಪ್ರಪಂಚನ್ನು ದೃಢವಿಡಿದಾತಂಗೆ, ಪ್ರಸಾದವಲ್ಲದೆ–ಶಿವನ ಪ್ರಸನ್ನತ್ವವ ಹಡೆದುಕೊಂಡು ಫಲಪದಂಗಳನು ಪಡೆದನುಭವಿಸಬೇಕೆಂಬ ಕಾಂಕ್ಷೆ ಉಂಟಾಗಿಪ್ಪುದಲ್ಲದೆ, ಲಿಂಗ ವಿಡಿದಂಗೆ–ಶ್ರೀಗುರುನಾಥನ ವೇಧಾಮಂತ್ರಕ್ರೀಗಳೆಂಬ ದೀಕ್ಷಾತ್ರಯಂಗಳಿಂದಂಗದಲ್ಲಿ ಇಷ್ಟಲಿಂಗವನ್ನು ದೃಢವಿಡಿದಾತಂಗೆ, ಪ್ರಸಾದವೆಲ್ಲಿಯದೊ–ಗುರುಲಿಂಗಜಂಗಮದ ಶೇಷವನೇ ಅನುಭವಿಸುವನಲ್ಲದೆ ಶಿವನ ಪ್ರತ್ಯಕ್ಷತ್ವವ ಮಾಡಿಕೊಂಡು ಭಿನ್ನಫಲಪದಂಗಳನು ಪಡೆದನುಭವಿಸಬೇಕೆಂಬ ಕಾಂಕ್ಷೆ ಉಂಟಾಗಿದ್ದಿತ್ತೆ? ಇಲ್ಲವು.

ಅಣೋರಣೀಯಾನ್–ಸೂಕ್ಷ್ಮಕ್ಕತಿಸೂಕ್ಷ್ಮವಾದಂತಹ, ಮಹತೋಮಹೀಯಾನ್–ಸ್ಥೂಲಕ್ಕತಿಸ್ಥೂಲವಾದಾತನು. ಹಿರಿದಿಂಗೆ ಹಿರಿದು–ದೊಡ್ಡಿತ್ತಕ್ಕೆ ದೊಡ್ಡಿತ್ತ ವಾದಾತನು, ಕಿಱಿದಿಂಗೆ ಕಿಱಿದು–ಸ್ವಲ್ಪಕ್ಕೆ ಸ್ವಲ್ಪಿತವಾದಾತನು, ಮಾಙ್ಮನಕ್ಕೆ–ವಾಕ್ಯದ ನುಡಿಗೆ ಮನಸ್ಸಿನ ನೆನಹಿಗೆ, ಅಗೋಚರ–ಗೋಚರಿಸಬಾರದಿದ್ದಂಥಾತನು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ. ಸ್ವರೂಪು ಪ್ರಸಾದ–ಸಾಕಾರವಾದಂಗದಲ್ಲಿ ಇಷ್ಟಲಿಂಗವು ಸಂಬಂಧವಾಗಿಪ್ಪುದು, ನಿರೂಪು ಲಿಂಗೈಕ್ಯ–ನಿರಾಕಾರವಾದ ಮನಸ್ಸಿನಲ್ಲಿ ಪ್ರಾಣಲಿಂಗವು ಸಂಬಂಧವಾಗಿಪ್ಪುದು.

ಮತ್ತಂ, ಸ್ವರೂಪು ಪ್ರಸಾದ–ಸಾಕಾರವಾದ ಇಷ್ಟಲಿಂಗವು ಅಂಗದಲ್ಲಿ ಸಂಬಂಧವಾಗಿಪ್ಪುದು, ನಿರೂಪು ಲಿಂಗ–ನಿರಾಕಾರವಾದ ಪ್ರಾಣಲಿಂಗವು ಮನಸ್ಸಿನಲ್ಲಿ ಸಂಬಂಧವಾಗಿಪ್ಪುದು, ಐಕ್ಯ–ಅಂಗ ಪ್ರಾಣಂಗಳಲ್ಲಿ ಇಷ್ಟ ಪ್ರಾಣಲಿಂಗವು ಸಂಬಂಧವಾಗಿಪ್ಪವು, ಇಷ್ಟ ಪ್ರಾಣಂಗಳಲ್ಲಿ ಅಂಗ ಪ್ರಾಣಂಗಳು ಸಂಬಂಧವಾಗಿಪ್ಪವು.

III- -

[1]ಗುರೂಪದೇಶದಿಂದಂಗದ ಮೇಲಿಷ್ಟಲಿಂಗವ ಸಂಬಂಧಿಸಿಕೊಂಡು ಅಂಗಲಿಂಗವೆಂದೆರಡಿಟ್ಟು ಕ್ರಿಯಾಜ್ಞಾನವಿಡಿದಾಚರಿಸಿ ಲಿಂಗದಲ್ಲಿ ಕೂಡಬೇಕೆಂಬ ಶರಣನಿಗೆ ಲಿಂಗದ ಪ್ರಸನ್ನತ್ವವಲ್ಲದೆ ಅಂಗವೇ

ಲಿಂಗ ಲಿಂಗವೇ ಅಂಗವಾದ ಶರಣನಿಗೆ ಭಾವದೊಳಕೊಳಲಱಿಯದೆಂಬುದೀಗ ಅಂಗವಿಡಿದಂಗೆ ಪ್ರಸಾದವಲ್ಲದೆ ಲಿಂಗವಿಡಿದಂಗೆ ಪ್ರಸಾದವೆಲ್ಲಿಯದೋ ಎಂಬ ಶಬ್ದಕ್ಕರ್ಥ. ಸ್ವರೂಪು–ಆಕಾರವುಳ್ಳಂಥಾದಕ್ಕೆ, ಪ್ರಸಾದ–ಪ್ರಸನ್ನತೆಯು, ನಿರೂಪು–ನಿರ್ಗುಣವಾಗಿರುವಂಥದೆ, ಲಿಂಗೈಕ್ಯ–ಲಿಂಗದಲ್ಲಿ ಏಕತ್ವವು.

....

೧+ ಅಂಗವಿಡಿದಂಗೆ ಪ್ರಸಾದವಲ್ಲದೆ ಲಿಂಗವಿಡಿದಂಗೆ ಪ್ರಸಾದವೆಲ್ಲಿಯದೋ (ಟ).

V– –

1–1 ತನು (ಪ).

....

ತನುವಿಡಿದಂಗೆ–ಗುರೂಪದೇಶದಿಂದಂಗದ ಮೇಲೆ ಇಷ್ಟಲಿಂಗವ ಸಂಬಂಧಿಸಿಕೊಂಡು ಅಂಗಲಿಂಗವೆಂದೆಱಡಿಟ್ಟು ಕ್ರಿಯಾಜ್ಞಾನವಿಡಿದಾಚರಿಸಿ ಲಿಂಗದಲ್ಲಿ ಕೂಡಬೇಕೆಂಬ ಶರಣನಿಗೆ [ಪ್ರಸಾದವಲ್ಲದೆ–] ಲಿಂಗಪ್ರಸಾದತ್ವವಲ್ಲದೆ.

೮೪೧

ಜಂಗಮವೇ ಲಿಂಗವೆನಗೆ, ಜಂಗಮವೇ ಪ್ರಾಣವೆನಗೆ, ಕೂಡಲಸಂಗಮದೇವಾ ಎನಗೆಯೂ ನಿನಗೆಯೂ ಜಂಗಮ ಪ್ರಸಾದವೇ ಪ್ರಾಣ ಕಂಡಯ್ಯಾ!

I– –

ಎನಗೆ–ನನಗೆ, ಜಂಗಮವೇ–ಚರಲಿಂಗವೇ, ಲಿಂಗ–ಸಾಕ್ಷಾತ್ಶಿವಸ್ವರೂಪು, ಎನಗೆ–ನನಗೆ, ಜಂಗಮವೇ–ಚರಲಿಂಗವೇ, ಪ್ರಾಣ–ಹರಣವು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಎನಗೆಯೂ– ಶರಣನಿಗೆಯೂ, ನಿನಗೆಯೂ–ಲಿಂಗಕ್ಕೆಯೂ, ಜಂಗಮಪ್ರಸಾದವೇ ಜಂಗಮದ ಶೇಷ ಪ್ರಸಾದವೇ, ಪ್ರಾಣಕಂಡಯ್ಯ–ಹರಣವಾಗಿಪ್ಪುದು ಕಾಣಯ್ಯಾ.

೮೪೨

ಅಯ್ಯಾ ನೀನೆಂದಡೆ [1]ಎಂಬೆನು[1], ನಿನ್ನ ಹಂಗೇನು ಹರಿಯೇನು? ನಿನ್ನ ಮುಖದಲ್ಲಿ ಒಂದಗಳು ಸವೆಯದು, ನಿನ್ನ ಪ್ರಸಾದವ ಕೊಂಡೆನ್ನ ಭವಕ್ಕೆ ಬೀಜವಾಯಿತ್ತು! ಜಂಗಮವೇ ಲಿಂಗವೆಂದು ಒಕ್ಕುದ ಕೊಂಡಡೆ ಎನ್ನ ಭವಂ ನಾಸ್ತಿಯಾಯಿತ್ತು, ಕಾಣಾ ಕೂಡಲಸಂಗಮದೇವಾ.

I– –

ಅಯ್ಯಾ–ಎಲೆ ಲಿಂಗವೆ, ನೀನೆಂದಡೆ–ನೀನು ಕಿಂಚಿದ್ದಳ ಚುಳಕೋದಕಂಗಳಿಂದ ಆರಾಧಿಸುವಂಥವರಿಗೆ ಲಕ್ಷ್ಮಿಯ ಐಶ್ವರ್ಯ ದೇವೇಂದ್ರನ ಭೋಗ ಮೊದಲಾದವು ಆಗುತ್ತೈದಾವೆಂದು

ಹೇಳಿದರೆ, ಎಂಬೆನು–ನಾನು ಆಗುತ್ತೈದಾವೆಂದು ಹೇಳುವೆನು. ನಿನ್ನ ಹಂಗೇನು–ನಿನ್ನ ಹಂಗೇ ಚತುರ್ವಿಧಫಲ ಪದಂಗಳು, ಆ ಚತುರ್ವಿಧ ಫಲಪದಂಗಳನು ಕರುಣಿಸಿಕೊಟ್ಟರೂ ಒಲ್ಲೆನು. ಹರಿಯೇನು–ಆ ಚತುರ್ವಿಧಫಲಪದಂಗಳನು ಪಡೆದನುಭವಿಸಲೋಸ್ಕರವಾಗಿ ಇಹದಿಂದ ಪರಕ್ಕೆ ಪರದಿಂದ ಇಹಕ್ಕೆ ಎಡೆಯಾಡೆನು. ನಿನ್ನ ಮುಖದಲ್ಲಿ ಒಂದಗಳು ಸವೆಯದು: ಸಕಲಪದಾರ್ಥಂಗಳನು ಗಡಣಿಸಿ ತಂದು ಮುಂದಕ್ಕೆ ಕೊಟ್ಟಲ್ಲಿ ನೋಟ ಮಾತ್ರ ರೂಪು ಮಾತ್ರ ಗ್ರಹಿಸುವಿರಲ್ಲದೆ. ಒಂದಗುಳು–ಒಂದು ಸಿಕ್ತಮಾತ್ರ, ಒಂದಣುಮಾತ್ರವು[ನಿನ್ನ ಮುಖದಲ್ಲಿ–] ನಿನ್ನ ಜಿಹ್ವೆಯಲ್ಲಿ, ನಿನ್ನ ಬಾಯಲ್ಲಿ; ಸವೆಯದು–ಸಮರ್ಪಣೆಯಾಗದು.

ನಿನ್ನ ಪ್ರಸಾದವ ಕೊಂಡು–ನಿನ್ನ ಪ್ರಸಾದವೇ ಚತುರ್ವಿಧಫಲಪದಂಗಳು. ಆ ಚತುರ್ವಿಧಫಲಪದಂಗಳನ್ನು ಪಡೆದನುಭವಿಸಿ, ಎನ್ನ–ನನ್ನ, ಭವಕ್ಕೆ ಬೀಜವಾಯಿತ್ತು–ಎಲ್ಲಾ ಎಡೆಯಲ್ಲಿ ಹುಟ್ಟಿ ಹುಟ್ಟಿ ಬರುವಂಥ ಉತ್ಪತ್ಯಕ್ಕೆ ಕಾರಣವಾಯಿತ್ತು. ಜಂಗಮವೇ ಲಿಂಗವೆಂದು–ಜಂಗಮವೇ ಸಾಕ್ಷಾತ್ಶಿವ ಸ್ವರೂಪವೆಂದು, ಒಕ್ಕುದ ಕೊಂಡಡೆ–ಒಕ್ಕಮಿಕ್ಕಪ್ರಸಾದವನನುಭವಿಸಿದರೆ, ಎನ್ನ ಭವಂ ನಾಸ್ತಿಯಾಯಿತ್ತು–ಎನ್ನ ಸಂಸಾರಪ್ರಪಂಚು ನಷ್ಟವಾಗಿ ಹೋಗಿ ಗುರುವಿನ ಕರಗರ್ಭದಲ್ಲಿ ಉತ್ಪತ್ಯ, ಲಿಂಗದಲ್ಲಿ ಸ್ಥಿತಿ, ಪರತತ್ವವಾದ ಜಂಗಮದಲ್ಲಿ ಐಕ್ಯತ್ವವಾಗಿ ಅಳವಟ್ಟಿತ್ತು. ಕಾಣಾ–ಕಂಡಾ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

III– –

1–1 ಏನೆಂಬೆನು (ಟ.ಡ).

....

ಅಯ್ಯಾ–ಎಲೆ ಒಡೆಯನೆ, ನೀನೆಂದಡೆ–ಪೂಜಿಸಿದಂಥ ಇಷ್ಟಾರ್ಥಸಿದ್ಧಿಯನು ಕೊಟ್ಟೇನುಯೆಂದು ನೀನು ನಿರೂಪಿಸಿದರೆ, ಏನೆಂಬೆನು–ಏನೆಂದು ಬಿನ್ನೈಸುವೆನು, ನಿನ್ನ ಹಂಗೇನು–ನಿನ್ನನ್ನು ಭಿನ್ನವಿಟ್ಟು ಪೂಜಿಸಿ ಫಲಪದಂಗಳ ಪಡೆವ ಉಪಾಧಿಕೆ ಏನು ಪ್ರಯೋಜನವು, ಹರಿಯೇನು–ನೀ ಕೊಟ್ಟ ಫಲ ಪದಂಗಳನನುಭವಿಸಿದಲ್ಲಿ ಭವಕ್ಕೆ ಹೋಗುವ ಖಂಡಿತವೇನು ಪ್ರಯೋಜನವು.

V– –

1–1 ಏನೆಂಬೆನು(ಪ).

....

ಅಯ್ಯಾ–ಎಲೆ ಒಡೆಯನೆ, ನೀನೆಂದಡೆ–ನೀನು ಪೂಜಿಸಿದಂಥದಕ್ಕೆ ಇಷ್ಟಾರ್ಥಸಿದ್ಧಿಯನು ಯಾಚಿಸುಯೆಂದು ನಿರೂಪಿಸಿದರೆ, ಏನೆಂಬೆನು–ಏನೆಂದು ಬಿನ್ನೈಸುವೆನು. ನಿನ್ನ ಹಂಗೇನು ನಿನ್ನನ್ನು ಭಿನ್ನವಿಟ್ಟು ಪೂಜಿಸಿ ಫಲಪದಂಗಳ ಪಡೆವ [ಉಪಾಧಿಕೆ]ಯೇನು, ಹಜೆಯೇನು–ನೀ ಕೊಟ್ಟ ಫಲಪದಂಗಳು ತೀರಿದಲ್ಲಿ ಭವಕ್ಕೆ ಹೋಗುವ ಖಂಡಿತವೇನು ಪ್ರಯೋಜನವು.

....

1–1 ಪಾಡಿಕೆ (ಪ).

ೞ೪೩

ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯ. ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಯ್ಯ. ಸತ್ಯದ ಬಲದಿಂದ ಅಸತ್ಯದ ಕೇಡು ನೋಡಯ್ಯ. ಪರುಷದ ಬಲದಿಂದ ಅವಲೋಹದ ಕೇಡು ನೋಡಯ್ಯ. ಕೂಡಲಸಂಗನ ಶರಣರನುಭಾವದಿಂದ ಎನ್ನ ಭವದ ಕೇಡು ನೋಡಯ್ಯ.

I- -

ಜ್ಞಾನದ ಬಲದಿಂದ-ಅರುಹಿನ ಹೆಚ್ಚುಗೆಯಿಂದ, ಅಜ್ಞಾನದ ಕೇಡು ನೋಡಯ್ಯ-ಮರವೆಯ ಲುಕ್ಸಾನವನು ಕಂಡಯ್ಯ. ಜ್ಯೋತಿಯ ಬಲದಿಂದ-ದೀವಿಗೆಯ ಹೆಚ್ಚುಗೆಯಿಂದ, ತಮಂಧದ ಕೇಡು ನೋಡಯ್ಯ-ಕಾವಳದ ಲುಕ್ಸಾನವನು ಕಂಡಯ್ಯ. ಸತ್ಯದ ಬಲದಿಂದ-ಪಾರಮಾರ್ಥದ ಹೆಚ್ಚುಗೆಯಿಂದ, ಅಸತ್ಯದ ಕೇಡು ನೋಡಯ್ಯ-ಸಟೆಯ ಲುಕ್ಸಾನವನು ಕಂಡಯ್ಯ. ಪರುಷದ ಬಲದಿಂದ-ಪರುಷದ ಖಣಿಯ ಹೆಚ್ಚುಗೆಯಿಂದ, ಅವಲೋಹದ ಕೇಡು ನೋಡಯ್ಯ-ಆಯಸ್ಕಾಂತಾದಿ ಪಂಚಲೋಹಂಗಳ ಲುಕ್ಸಾನವನು ಕಂಡಯ್ಯ. ಕೂಡಲಸಂಗನ ಶರಣರ-ತ್ರಿವಿಧಲಿಂಗಾನುಭಾವಿಗಳಾದ ಜ್ಞಾನಗುರು ಮೂರ್ತಿಗಳ, ಅನುಭಾವದಿಂದ-ಶಿವಾನುಭಾವವನ್ನು ಬೆಸಗೊಂಡಾಲಿಸುವುದರಿಂದ, ಎನ್ನ ಭವದ ಕೇಡು ನೋಡಯ್ಯ-ಎನ್ನ ಉತ್ಪತ್ಯದ ಲುಕ್ಸಾನವನು ಕಂಡಯ್ಯ ಎಂಬುದರ್ಥ.

● ಜ್ಞಾನದ ಬಲದಿಂದ-ತನುವಿನಲ್ಲಿ ಗುರುಸಂಬಂಧವ ಮಾಡಿಕೊಂಡು ಅಂಗ ಆಪ್ತ ಸ್ಥಾನ ಸದ್ಭಾವವೆಂಬ ಚತುರ್ವಿಧಭಕ್ತಿಯ ಮಾಡುವುದರಿಂದ, ಅಜ್ಞಾನದ ಕೇಡು ನೋಡಯ್ಯ-ಮರವೆ ಸ್ವರೂಪವಾದ ದೇಹಭಾವದ ಪ್ರಪಂಚು ನಷ್ಟವಾಗಿ ಹೋಗಿ ಆಚಾರಾಂಗವಾಗಿ ಅಳವಡುತ್ತಿಹುದು ಕಂಡಯ್ಯ. ಜ್ಯೋತಿಯ ಬಲದಿಂದ-ಮನದಲ್ಲಿ ಲಿಂಗಸಂಬಂಧವ ಮಾಡಿಕೊಂಡು ಲಿಂಗಪೂಜೆಯ ಮಾಡುವುದರಿಂದ, ತಮಂಧದ ಕೇಡು ನೋಡಯ್ಯ- ಮನೋವರ್ತನೆ ನಷ್ಟವಾಗಿ ಹೋಗಿ ಉನ್ಮನಿಯ ಮನಸ್ಸಾಗಿ ಅಳವಡುತ್ತಿಹುದು ಕಂಡಯ್ಯ. ಸತ್ಯದ ಬಲದಿಂದ-ಪ್ರಾಣದಲ್ಲಿ ಜಂಗಮಸಂಬಂಧವ ಮಾಡಿಕೊಂಡು ಜಂಗಮಭಕ್ತಿಯ ಮಾಡುವುದರಿಂದ, ಅಸತ್ಯದ ಕೇಡು ನೋಡಯ್ಯ-ಪ್ರಾಣನ ವರ್ತನೆಯೆಲ್ಲ ನಷ್ಟವಾಗಿ ಹೋಗಿ ಚಿತ್ಪ್ರಾಣವಾಗಿ ಅಳವಡುತ್ತಿಹುದು ಕಂಡಯ್ಯ. ಪರುಷದ ಬಲದಿಂದ-ಆತ್ಮಾಂಗದಲ್ಲಿ ಪರಮಪಾವನ ಪವಿತ್ರಸ್ವರೂಪವಾದ ಪ್ರಸಾದಸಂಬಂಧವ ಮಾಡಿಕೊಂಡು ಪ್ರಸಾದ ಸೇವನೆಯ ಮಾಡುವುದರಿಂದ, ಅವಲೋಹದ ಕೇಡು ನೋಡಯ್ಯ-ಆತ್ಮನ ವರ್ತನೆಯೆಲ್ಲ ನಷ್ಟವಾಗಿ ಹೋಗಿ ಚಿದಾತ್ಮನಾಗಿ ಅಳವಡುತ್ತಿಹುದು ಕಂಡಯ್ಯ. ಕೂಡಲಸಂಗನ ಶರಣನುಭಾವದಿಂದ-ತನುವಿನಲ್ಲಿ ಗುರು ಮನದಲ್ಲಿ ಲಿಂಗ ಪ್ರಾಣದಲ್ಲಿ ಜಂಗಮ ಆತ್ಮಾಂಗದಲ್ಲಿ ಪ್ರಸಾದಸಂಬಂಧವ ಮಾಡಿಕೊಂಡು ಗುರುಭಕ್ತಿ ಲಿಂಗಪೂಜೆ ಜಂಗಮದಾಸೋಹ ಪ್ರಸಾದಸೇವನೆಯ ಮಾಡುವುದರಿಂದ, ಎನ್ನ ಭವದ ಕೇಡು ನೋಡಯ್ಯ-ಎನ್ನ ತನುವರ್ತನೆ ಮನವರ್ತನೆ ಪ್ರಾಣನವರ್ತನೆ ಆತ್ಮನ ವರ್ತನೆಯ ಲುಕ್ಸಾನವನು ಕಂಡಯ್ಯ.

೮೪೪

ಆದ್ಯರ ವಚನ ಆದ್ಯರಿಗಾಯಿತ್ತು, ವೇದ್ಯರಿಗಲ್ಲದೆ ಸಾಧ್ಯವಾಗದು. ಕೂಡಲಸಂಗಮದೇವಾ ನಿಮ್ಮನುಭಾವದಿಂದ ಎನ್ನ ಭವಂ ನಾಸ್ತಿಯಾಯಿತ್ತು.

I– –

ಆದ್ಯರ ವಚನ–ದಾಸಿದೇವ ಸಿರಿಯಾಳಸೆಟ್ಟಿ ಸಿಂಧುಬಲ್ಲಾಳ ಮೊದಲಾದ ಅರುವತ್ತುಮೂರು ಪುರಾತನರು ನಿರ್ಮಿಸಿದಂಥ ವಚನಶಾಸ್ತ್ರಂಗಳಲ್ಲಿ ಹೇಳಿದ ಹಾಂಗೆ ತನುಮನಧನಂಗಳನು ಗುರುಲಿಂಗಜಂಗಮಕ್ಕೆ ಕೊಟ್ಟು ಭಕ್ತಿಯ ಮಾಡುವಂಥದು, ಆದ್ಯರಿಗಾಯಿತ್ತು–ದಾಸಿದೇವ ಸಿರಿಯಾಳ ಸಿಂಧುಬಲ್ಲಾಳರಾಯ ಮೊದಲಾದ ಅರುವತ್ತುಮೂರು ಪುರಾತನರಿಗೆ ಅಳವಟ್ಟಿತ್ತು. ವೇದ್ಯರಿಗಲ್ಲದೆ ಅವರ ಸಂಪ್ರದಾಯಕರಾದ ನಿರ್ವಂಚಕಸದ್ಭಕ್ತರುಗಳಿಗಲ್ಲದೆ, ಸಾಧ್ಯವಾಗದು–ಹೊನ್ನೇ ಪ್ರಾಣ ಹೆಣ್ಣೇ ಪ್ರಾಣ ಮಣ್ಣೇ ಪ್ರಾಣವಾಗಿರುವ ಆಶಾಲಾಂಛನಿ ಉಪಾಧಿಕರುಗಳಿಗೆ ದೊರಕೊಳ್ಳದು. ಕೂಡಲ ಸಂಗಮದೇವಾ–ಎಲೆ ಪರಶಿವಲಿಂಗವೆ. ನಿಮ್ಮನುಭಾವದಿಂದ–ನಿಮ್ಮ ಶಿವಾನುಭಾವವನ್ನು ಬೆಸಗೊಂಡು ಕೇಳುವುದರಿಂದ, ಎನ್ನ ಭವಂ ನಾಸ್ತಿಯಾಯಿತ್ತು–ಎನ್ನ ಉತ್ಪತ್ಯವು ನಷ್ಟವಾಗಿ ಹೋಯಿತ್ತು.

೮೪೫

ಅಸಂಬಂಧ ಸಂಬಂಧವಾಯಿತ್ತು. ಲಿಂಗಸಾರಾಯರ ಸನುಮತದಿಂದ ಉತ್ತಮ ಮಧ್ಯಮ[1] ಕೆಡಿಸಿತ್ತು. ಏಕೋ ಸತಿಪತಿ ಗುಣದಿಂದ. [2]ಗ[2]ರುವರ [3]ಗರುವತನ[3] [4]ಕೂಡಲಸಂಗಯ್ಯನ ಅನುಭಾವದಿಂದ.

....

3–3 ಗರುವತನವ (ಕ.ಗ).

I– –

ಸಾರಾಯ[ರ]–ಶ್ರೇಷ್ಠ [೧][ರಾದವರ],[೧] ಲಿಂಗ–ಮಹಾಲಿಂಗದಲ್ಲಿ ಕೂಡಲ್ಪಟ್ಟಂಥ, ಸನುಮತದಿಂದ–ತ್ರಿವಿಧಲಿಂಗಾನುಭವಿಗಳಾದ ಜ್ಞಾನಗುರು ಮೂರ್ತಿಗಳ ವೇಧಾಮಂತ್ರಕ್ರಿಗಳೆಂಬ ದೀಕ್ಷಾತ್ರಯಂಗಳ ಒಡಂಬಡಿಕೆಯಿಂದ, ಅಸಂಬಂಧ ಸಂಬಂಧವಾಯಿತ್ತು–ಬ್ರಹ್ಮ ವಿಷ್ಣ್ವಾದಿಗಳಿಗೆ ಅಸಾಧ್ಯವಾದ ಮಹಾಲಿಂಗವೆ ಗುರುಮುಖದಿಂದ ಇಷ್ಟಲಿಂಗವಾಗಿ ಬಂದು ಅಂಗದಲ್ಲಿ ನೆಲೆಗೊಂಡಿತ್ತು. ಏಕೋ ಸತಿಪತಿ ಗುಣದಿಂದ–ಏಕ ಏವ ನ ದ್ವಿತೀಯ ಸ್ವರೂಪವಾದ ಪರಬ್ರಹ್ಮವನು ಗುರುಮುಖದಿಂದ ಅಂಗದಲ್ಲಿ ಇಷ್ಟಲಿಂಗವಾಗಿ ಸಂಬಂಧವ ಮಾಡಿಕೊಂಡು ಶರಣಸತಿ ಲಿಂಗಪತಿ ಭಾವವಿಡಿದಾಚರಿಸುವುದರಿಂದ, ಉತ್ತಮ ಮಧ್ಯಮ ಕೆಡಿಸಿತ್ತು–ಬ್ರಹ್ಮನುತ್ಪತ್ಯ ಮತ್ತು ವಿಷ್ಣುವಿನ ದುರ್ಭೋಗಸ್ಥಿತಿಯನ್ನು ನಷ್ಟವ ಮಾಡಿ ಗುರುವಿನಲ್ಲಿ ಉತ್ಪತ್ಯ, ಲಿಂಗದಲ್ಲಿ ಸ್ಥಿತಿ ಭೋಗವಾಗಿ ಅಳವಡಿಸಿತ್ತು. ಕೂಡಲಸಂಗಯ್ಯನ–ಪರಶಿವಲಿಂಗದೇವನ, ಅನುಭಾವದಿಂದ–ಶಿವಾನುಭಾವವನ್ನು ಬೆಸಗೊಂಡು ಕೇಳುವುದರಿಂದ, ಗುರುವರ ಗರುವತನ–ಪೂಜ್ಯರ ಪೂಜತ್ವವೇ ಅಳವಟ್ಟಿತ್ತು.

....

೧–೧ ವಾದ (ಕ.ಗ).

II– –

1+ವ(ಜ). 2–2 ಗು (ಚ.ಜ).

....

ಅಸಂಬಂಧ ಸಂಬಂಧವಾಯಿತ್ತು–ಇಷ್ಟಮಹಾಲಿಂಗದಲ್ಲಿ ಒಡಂಬಡಿಕೆಯಿಂದ ಕೂಡುವದರಿಂದ ಕಾಯಸಂಬಂಧವು ನಷ್ಟವಾಗಿ ಹೋಗಿ ಆಚಾರಾಂಗಸಂಬಂಧವಾಯಿತ್ತು. ಲಿಂಗಸಾರಾಯರ ಸನುಮತದಿಂದ–ಪರಶಿವಲಿಂಗದಲ್ಲಿ ಶ್ರೇಷ್ಠಾಯಮಾನವನುಳ್ಳ ಮಹಾನುಭಾವಿಗಳ ಸಂಬಂಧದಿಂದೆ, ಉತ್ತಮ ಮಧ್ಯಮ[2] ಕೆಡೆಸಿತ್ತು–ದ್ವೈತಾದ್ವೈತವ ನಷ್ಟವ ಮಾಡಿತ್ತು, ಕೂಡಲಸಂಗಯ್ಯನನುಭಾವದಿಂದ–ಪರಶಿವಲಿಂಗದ ಜ್ಞಾನಾನುಭಾವದಿಂದ, ಏಕೋ ಸತಿಪತಿಗುಣದಿಂದ ಗುರುವರ[3] ಗರುವತನ ಕೆಡೆಸಿತ್ತು–ಶರಣಸತಿ ಲಿಂಗಪತಿತ್ವದಿಂದ ದೇಹಪ್ರಾಣಂಗಳ ಮೂಲಹಂಕಾರವನು ನಷ್ಟವ ಮಾಡಿತ್ತು.

....

2+ವ (ಜ). 3+ಗುರುವರ(ಜ).

III– –

1+ವ(ಟ,ಡ). 2–2 ಗು (ಟ.ಡ). 3–3 ಗುರುವತನವ (ಟ.ಡ). 4+ಕೆಡೆಸಿತ್ತು (ಟ.ಡ).

....

ಲಿಂಗಸಾರಾಯರ ಸನುಮತದಿಂದ–ಲಿಂಗದಲ್ಲಿ ಶ್ರೇಷ್ಠತ್ವವನುಳ್ಳಂಥ ಶರಣರ ಜ್ಞಾನಾನುಭವದಿಂದ, ಅಸಂಬಂಧ–ಸಂಬಂಧವಲ್ಲದಿರ್ದ ಜೀವನೆಂಬಂಗವು, ಸಂಬಂಧವಾಯಿತ್ತು–ಲಿಂಗದಲ್ಲಿ ಸಮರಸವಾಯಿತ್ತು. ಏಕೋ ಸತಿಪತಿಗುಣದಿಂದ–ಶರಣನೆ ಸತಿ ಲಿಂಗವೆ ಪತಿಯೆಂಬ ಪೂರ್ಣಜ್ಞಾನಾಚರಣೆಯಿಂದ, ಉತ್ತಮ ಮಧ್ಯಮವ ಕೆಡಿಸಿತ್ತು–ಲಿಂಗವೇ ಶ್ರೇಷ್ಠ ಶರಣನೆ ಕನಿಷ್ಠವೆಂಬ ಭಿನ್ನಭಾವವ ನಷ್ಟವ ಮಾಡಿತ್ತು. ಕೂಡಲಸಂಗಯ್ಯನ ಅನುಭಾವದಿಂದ–ಶಿವಾನುಭವದಿಂದ, ಗುರುವರ–ಗುರುತ್ವವನುಳ್ಳಂಥಾ ಶರಣರ, ಗರುವತನವ–ಚಿದಹಂಕಾರವನು, [ಕೆಡಿಸಿತ್ತು–] ನಿವೃತ್ತಿ ಮಾಡಿತ್ತು.

V– –

2–2 ಗು (ಪ).

....

ಲಿಂಗಸಾರಾಯರ ಸನುಮತದಿಂದ–ಲಿಂಗಸಂಬಂಧದಿಂದೆ ಶ್ರೇಷ್ಠತ್ವವುಳ್ಳಂಥ ಶರಣರ ಜ್ಞಾನಾನುಭಾವದ ಒಡಂಬಡಿಕೆಯಿಂದ, ಅಸಂಬಂಧ–ಸಂಬಂಧವಲ್ಲದಿರ್ದ ಜೀವನೆಂಬಂಗವು,

ಸಂಬಂಧವಾಯಿತ್ತು-ಲಿಂಗದಲ್ಲಿ ಸಮರಸವಾಯಿತ್ತು. ಏಕೋ ಸತಿಪತಿ ಗುಣದಿಂದ-ಶರಣನೆ ಸತಿ ಲಿಂಗವೆ ಪತಿಯೆಂಬ ಪೂರ್ಣಜ್ಞಾನಾಚರಣೆಯಿಂದ, ಗುರುವರ-ಆಚಾರ್ಯ ಶ್ರೇಷ್ಠರ, ಗರುತನವ-ಚಿದಹಂಕಾರವನು, [ಕೆಡಿಸಿತ್ತು-]ನಿವೃತ್ತಿಯ ಮಾಡಿತ್ತು.

ಪ್ರಾಣಲಿಂಗಿಯ ಶರಣಸ್ಥಲ

I- -

ಪ್ರಾಣಲಿಂಗಿಯ ಶರಣಸ್ಥಲ-ಪ್ರಾಣಲಿಂಗಿಯ ಸ್ಥಲದೊಳಗಣ ಶರಣಸ್ಥಲದಾಚರಣೆಯನ್ನು ನಿರೂಪಿಸುತ್ತಿಹರು.

೮೪೬

ಶರಣಸನ್ನಿಹಿತ ಐಕ್ಯವಹಲ್ಲಿ ಹರಿಬ್ರಹ್ಮಾದಿಗಳು ಮೊದಲಾದ ತೆತ್ತೀಸಕೋಟಿ ದೇವರ್ಕಳು ಉಘೇ ಉಘೇ ಎನುತ್ತಿರಲು ಐಕ್ಯ ಬಸವಣ್ಣಂಗೆ ಠಾವಾವುದಯ್ಯಯೆಂದಡೆ: ಅಂಗದ ಕಳೆಯಲ್ಲಿ ಬಲದಲ್ಲಿ ಬ್ರಹ್ಮನ ಸ್ಥಾನ, ಎಡದಲ್ಲಿ ನಾರಾಯಣನ ಸ್ಥಾನ ಒಲ್ಲೆನಯ್ಯ! ಕೊರಳು ಗರಳಸ್ಥಾನ, ಬಾಯಿ ಅಪ್ಪುವಿನ ಸ್ಥಾನ, ನಾಸಿಕ ವಾಯುವಿನ ಸ್ಥಾನ, ಕಂಗಳು ಅಗ್ನಿಯ ಸ್ಥಾನ, ಜಡೆ ಗಂಗೆಯ ಸ್ಥಾನ, ನೊಸಲು ಚಂದ್ರನ ಸ್ಥಾನ, ಹಿಂದು ಸೂರ್ಯನ ಸ್ಥಾನ, ಚರಣಂಗಳು ಅಷ್ಟದಿಕ್ಪಾಲಕರ ಸ್ಥಾನ, ಗುಹ್ಯ ಕಾಮನ ಸ್ಥಾನ, ಹಸ್ತಂಗಳು ಕಪಾಲ ಖಟ್ವಾಂಗ ತ್ರಿಶೂಲ ಡಮರುಗ ಸ್ಥಾನ, ದೇಹ ರುಂಡಮಾಲೆಯ ಸ್ಥಾನ, ಕರ್ಣ ನಾಗೇಂದ್ರನ ಸ್ಥಾನ, ಇಂತೀ ಸ್ಥಾನಂಗಳ ನಾನೊಲ್ಲೆನಯ್ಯ. ಹೃದಯಕಮಲಮಧ್ಯದ ಅಂತರಾಳದ ಏಕಪೀಠದ ಸಿಂಹಾಸನದ ತೆರಪುಗೊಡು ಕೂಡಲಸಂಗಮದೇವಾ.

I- -

ಶರಣ ಸನ್ನಹಿತ ಐಕ್ಯವಹಲ್ಲಿ: ಶರಣ-ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮಮೂರ್ತಿಗಳು ಏಳುನೂರೆಪ್ಪತ್ತಮರ ಗಣಂಗಳು ಅರವತ್ತು ಮೂರು ಪುರಾತನರುಗಳಲ್ಲಿ, ಸನ್ನಿಹಿತ-ಕೂಡಲ್ಪಟ್ಟ ಸಂಗನಬಸವೇಶ್ವರನು, ಐಕ್ಯವಹಲ್ಲಿ-ಸಂಗಮೇಶ್ವರಲಿಂಗದಲ್ಲಿ ಏಕಾರ್ಥವಾಗುವಲ್ಲಿ, ಹರಿಬ್ರಹ್ಮಾದಿಗಳು-ಬ್ರಹ್ಮವಿಷ್ಣ್ವಾದಿಗಳು, ಮೊದಲಾದ-ಮುಖ್ಯವಾದ, ತೆತ್ತೀಸಕೋಟಿ ದೇವರ್ಕಳು-ಮೂವತ್ತುಮೂರು ಕೋಟಿ ದೇವತಾದಿಗಳು, ಉಘೇ ಉಘೇ ಎನುತ್ತಿರಲು-ಉಘೇ ಚಾಂಗು ಭಲರೇ ಬಾಪುರೇಯೆಂದು ಕೊಂಡಾಡುತ್ತಿರಲು. ಐಕ್ಯ-ಮಹಾಲಿಂಗದಲ್ಲಿ ಸಾಮರಸ್ಯವು, ಬಸವಣ್ಣಂಗೆ-ಅನಾದಿಸಂಸಿದ್ಧವಾದ ಸಂಗನಬಸವೇಶ್ವರಂಗೆ, ಠಾವಾವುದಯ್ಯಯೆಂದಡೆ-ಸ್ಥಾನವಾವುದಯ್ಯ ಸ್ವಾಮಿ ಎಂದು ಬೆಸಗೊಂಡರೆ, ಅಂಗದ ಕಳೆಯಲ್ಲಿ-ನಮ್ಮ ಅಂಗದ ಅವಯವಂಗಳಲ್ಲಿ, ನೆಲೆಗೊಂಡಿರಲು, ಬಲದಲ್ಲಿ ಬ್ರಹ್ಮನಸ್ಥಾನ-ನಮ್ಮ ಬಲಭಾಗದಲ್ಲಿ ನೆಲೆಗೊಂಡೀಯಾ ಸಂಗನಬಸವೇಶ್ವರನೇ ಎಂದು ಕೇಳಿದಲ್ಲಿ ಅಲ್ಲಿ ಬ್ರಹ್ಮನೈದಾನೆ ನಾವು ಬಂದರೆ ಅವನು ತೊಲಗಬೇಕಾದೀತು ಅವನಿಗೆ ದುಃಖವಾದೀತೆಂದು

ಅಲ್ಲಿ ನೆಲೆಗೊಳದಿಪ್ಪನು. ಎಡದಲ್ಲಿ ನಾರಾಯಣನ ಸ್ಥಾನ–ನಮ್ಮ ವಾಮಭಾಗದಲ್ಲಿ ನೆಲೆಗೊಂಡೀಯಾ ಸಂಗನಬಸವೇಶ್ವರನೆಂದು ಕೇಳಿದಲ್ಲಿ ಅಲ್ಲಿ ವಿಷ್ಣುವೈದಾನೆ ನಾವು ಬಂದರೆ ಅವನು ತೊಲಗಬೇಕಾದೀತು ಅವನಿಗೆ ದುಃಖವಾದೀತೆಂದು ಅಲ್ಲಿ ನೆಲೆಗೊಳದಿಪ್ಪನು. ಎಡದಲ್ಲಿ ನಾರಾಯಣನ ಸ್ಥಾನ–ನಮ್ಮ ವಾಮಭಾಗದಲ್ಲಿ ನೆಲೆಗೊಂಡೀಯಾ ಸಂಗನಬಸವೇಶ್ವರನೆಂದು ಕೇಳಿದಲ್ಲಿ ಅಲ್ಲಿ ವಿಷ್ಣುವೈದಾನೆ ನಾವು ಬಂದರೆ ಅವನು ತೊಲಗಬೇಕಾದೀತು ಅವನಿಗೆ ದು:ಖವಾದೀತೆಂದು ಅಲ್ಲಿ ನೆಲೆಗೊಳ್ಳದಿಪ್ಪನು, ಒಲ್ಲೆನಯ್ಯ–ಅಲ್ಲಿ ನೆಲೆಗೊಳಲೊಲ್ಲೆನಯ್ಯ.

ಕೊರಳು ಗರಳಸ್ಥಾನ–ಎನ್ನ ಕಂಠದಲ್ಲಿ ನೆಲೆಗೊಂಡೀಯಾ ಸಂಗನಬಸವೇಶ್ವರನೇ ಎಂದು ಕೇಳಿದಲ್ಲಿ, ಅಲ್ಲಿ ಹಾಳಾಹಳಕೂಟವಿಷವೈತೆ, ನಾನು ಬಂದರೆ ಅದು ತೊಲಗಬೇಕಾದೀತು ಅದಕ್ಕೆ ದು:ಖವಾದೀತೆಂದು ಅಲ್ಲಿ ನೆಲೆಗೊಳ್ಳದಿಪ್ಪನು. ಬಾಯಿ ಅಪ್ಪುವಿನ ಸ್ಥಾನ–ನಮ್ಮ ಜಿಹ್ವೆಯಲ್ಲಿ ನೆಲೆಗೊಂಡೀಯಾ ಸಂಗನಬಸವೇಶ್ವರನೇ ಎಂದು ಕೇಳಿದಲ್ಲಿ ಅಲ್ಲಿ ಉದಕವೈತೆ, ನಾವು ಬಂದರೆ ಅದು ತೊಲಗಬೇಕಾದೀತು, ಅದಕ್ಕೆ ದು:ಖವಾದೀತೆಂದು ಅಲ್ಲಿ ನೆಲೆಗೊಳ್ಳದಿಪ್ಪನು. ನಾಸಿಕ ವಾಯುವಿನ ಸ್ಥಾನ–ಎನ್ನ ಘ್ರಾಣದಲ್ಲಿ ನೆಲೆಗೊಂಡೀಯಾ ಸಂಗನಬಸವೇಶ್ವರನೇ ಎಂದು ಕೇಳಿದರೆ, ಅಲ್ಲಿ ವಾಯುವೈತೆ ನಾವು ಬಂದರೆ ಅದು ತೊಲಗಬೇಕಾದೀತು ಅದಕ್ಕೆ ದುಃಖವಾದೀತೆಂದು ಅಲ್ಲಿ ನೆಲೆಗೊಳ್ಳದಿಪ್ಪನು. ಕಂಗಳು ಅಗ್ನಿಯ ಸ್ಥಾನ–ನಮ್ಮ ನೇತ್ರದಲ್ಲಿ ನೆಲೆಗೊಂಡೀಯಾ ಸಂಗನಬಸವೇಶ್ವರನೇ ಎಂದು ಕೇಳಿದರೆ ಅಲ್ಲಿ ಅಗ್ನಿ ಐತೆ ನಾವು ಬಂದರೆ ಅದು ತೊಲಗಬೇಕಾದೀತು ಅದಕ್ಕೆ ದುಃಖವಾದೀತೆಂದು ಅಲ್ಲಿ ನೆಲೆಗೊಳ್ಳದಿಪ್ಪನು. ಜಡೆ ಗಂಗೆಯಸ್ಥಾನ–ನಮ್ಮ ಜಟಾಮಕುಟದಲ್ಲಿ ನೆಲೆಗೊಂಡೀಯಾ ಸಂಗನಬಸವೇಶ್ವರನೇ ಎಂದು ಕೇಳಿದರೆ ಅಲ್ಲಿ ದೇವಗಂಗೆ ಐದಾಳೆ ನಾವು ಬಂದರೆ ಅದು ತೊಲಗಬೇಕಾದೀತು ಆಕೆಗೆ ದುಃಖವಾದೀತೆಂದು ಅಲ್ಲಿ ನೆಲೆಗೊಳ್ಳದಿಪ್ಪನು. ಜಡೆ ಗಂಗೆಯಸ್ಥಾನ –ನಮ್ಮ ಜಟಾಮಕುಟದಲ್ಲಿ ನೆಲೆಗೊಂಡೀಯಾ ಸಂಗನಬಸವೇಶ್ವರನೇ ಎಂದು ಕೇಳಿದರೆ ಅಲ್ಲಿ ದೇವಗಂಗೆ ಐದಾಳೆ ನಾವು ಬಂದರೆ ಅದು ತೊಲಗಬೇಕಾದೀತು ಆಕೆಗೆ ದುಃಖವಾದೀತೆಂದು ಅಲ್ಲಿ ನೆಲೆಗೊಳ್ಳದಿಪ್ಪನು. ನೊಸಲು ಚಂದ್ರಸ್ಥಾನ–ನಮ್ಮ ಫಣಿಯಲ್ಲಿ ನೆಲೆಗೊಂಡೀಯಾ ಸಂಗನಬಸವೇಶ್ವರನೇ ಎಂದು ಕೇಳಿದರೆ ಅಲ್ಲಿ ಚಂದ್ರನೈದಾನೆ, ನಾವು ಬಂದರೆ ಅವನು ತೊಲಗಬೇಕಾದೀತು ಅವನಿಗೆ ದುಃಖವಾದೀತೆಂದು ಅಲ್ಲಿ ನೆಲೆಗೊಳ್ಳದಿಪ್ಪನು. ಹಿಂದು ಸೂರ್ಯನ ಸ್ಥಾನ–ನಮ್ಮ ಪಶ್ಚಿಮದಲ್ಲಿ ನೆಲೆಗೊಂಡೀಯಾ ಸಂಗನಬಸವೇಶ್ವರನೇ ಎಂದು ಕೇಳಿದರೆ ಅಲ್ಲಿ ಆದಿತ್ಯನೈದಾನೆ ನಾವು ಬಂದರೆ ಅವನು ತೊಲಗಬೇಕಾದೀತು ಅವನಿಗೆ ದುಃಖವಾದೀತೆಂದು ಅಲ್ಲಿ ನೆಲೆಗೊಳ್ಳದಿಪ್ಪನು.

ಚರಣಂಗಳು ಅಷ್ಟದಿಕ್ಪಾಲಕರ ಸ್ಥಾನ–ಎನ್ನ ಪದಕಮಲದಲ್ಲಿ ನೆಲೆಗೊಂಡೀಯಾ ಸಂಗನಬಸವೇಶ್ವರನೇ ಎಂದು ಕೇಳಿದರೆ ಅಲ್ಲಿ ಅಷ್ಟದಿಕ್ಪಾಲಕರು ನೆಲೆಗೊಂಡೈದಾರೆ ನಾವು ಬಂದರೆ ಅವರು ತೊಲಗಬೇಕಾದೀತು ಅವರಿಗೆ ದು:ಖವಾದೀತೆಂದು ಅಲ್ಲಿ ನೆಲೆಗೊಳ್ಳದಿಪ್ಪನು, ಗುಹ್ಯ ಕಾಮನಸ್ಥಾನ–ನಮ್ಮ ಗೋಪ್ಯಸ್ಥಾನದಲ್ಲಿ ನೆಲೆಗೊಂಡೀಯಾ ಸಂಗನಬಸವೇಶ್ವರನೇ ಎಂದು ಕೇಳಿದರೆ ಅಲ್ಲಿ ಕಾಮನೈದಾನೆ ನಾವು ಬಂದರೆ ಅವನು ತೊಲಗಬೇಕಾದೀತು ಅವನಿಗೆ ದುಃಖವಾದೀತೆಂದು ಅಲ್ಲಿ ನೆಲೆಗೊಳ್ಳದಿಪ್ಪನು, ಹಸ್ತಂಗಳು ಕಪಾಲ ಖಟ್ವಾಂಗ ತ್ರಿಶೂಲ ಡಮರಂಗ ಸ್ಥಾನ–ನಮ್ಮ ಕರದಲ್ಲಿ ನೆಲೆಗೊಂಡೀಯಾ

ಸಂಗನಬವೇಶ್ವರನೇ ಎಂದು ಕೇಳಿದರೆ ಅಲ್ಲಿ ಕಪಾಲ ಖಟ್ವಾಂಗ ತ್ರಿಶೂಲ ಡಮರಂಗ ಮೊದಲಾದವು ಐದಾವೆ ನಾವು ಬಂದರೆ ಅವು ತೊಲಗಬೇಕಾದೀತು ಅದಕ್ಕೆ ದು:ಖವಾದೀತೆಂದು ಅಲ್ಲಿ ನೆಲೆಗೊಳ್ಳದಿಪ್ಪನು. ದೇಹ ರುಂಡಮಾಲೆಯ ಸ್ಥಾನ–ಎನ್ನಂಗದಲ್ಲಿ ನೆಲೆಗೊಂಡೀಯಾ ಸಂಗನಬಸವೇಶ್ವರನೇ ಎಂದು ಕೇಳಿದರೆ ಅಲ್ಲಿ ರುಂಡಮಾಲೆಗಳೈದಾವೆ ನಾವು ಬಂದರೆ ಅವು ತೊಲಗಬೇಕಾದೀತು ಅವಕ್ಕೆ ದು:ಖವಾದೀತೆಂದು ಅಲ್ಲಿಯೂ ನೆಲೆಗೊಳ್ಳದಿಪ್ಪನು. ಕರ್ಣ ನಾಗೇಂದ್ರನ ಸ್ಥಾನ–ನಮ್ಮ ಶ್ರೋತ್ರದಲ್ಲಿ ನೆಲೆಗೊಂಡೀಯಾ ಸಂಗನಬಸವೇಶ್ವರನೇ ಎಂದು ಕೇಳಿದರೆ ಅಲ್ಲಿ ಪದ್ಮ ಮಹಾಪದ್ಮವೆಂಬ ಸರ್ಪಂಗಳು ನೆಲೆಗೊಂಡೈದಾವೆ ನಾವು ಬಂದರೆ ಅವು ತೊಲಗಬೇಕಾದೀತು ಅವಕ್ಕೆ ದು:ಖವಾದೀತೆಂದು ಅಲ್ಲಿ ನೆಲೆಗೊಳ್ಳದಿಪ್ಪನು.

[ಇಂತೀ ಸ್ಥಾನಂಗಳ–] ಈ ಪ್ರಕಾರವಾದ ನಾನಾ ಸ್ಥಾನಂಗಳ, ನಾನೊಲ್ಲೆನಯ್ಯ–ಇವು ಮೊದಲಾದ ನಾಲ್ವತ್ತೆಂಟು ಸ್ಥಾನಂಗಳಲ್ಲಿ ನಾನು ನೆಲೆಗೊಳ್ಳಲೊಲ್ಲೆನಯ್ಯ. ಹೃದಯಕಮಲಮಧ್ಯದ–ಹೃತ್ಕಮಲದ, ಅಂತರಾಳದ; ಏಕಪೀಠದ–ಒಂದೇ ಪ್ರಣವಪೀಠದ, ಸಿಂಹಾಸನದ–ಗರ್ದುಗೆಯ, ತೆರಪುಗೊಡು–ಇಂಬುಗೊಡು, ಪ್ರಾಣಲಿಂಗದೇವನಾಗಿ ಮೂರ್ತವ ಮಾಡಿಕೊಂಡಾನು; ದೇವರಿಗೆ ದೇವನಾಗಿ ಮೂರ್ತವ ಮಾಡಿಕೊಂಡಾನು ಸಂಗನಬಸವೇಶ್ವರನುಯೆಂದು ಮಡಿವಾಳಯ್ಯಗಳು ಸ್ತುತಿಸುತ್ತಿರ್ದರು, ಕೂಡಲಸಂಗಮದೇವ–ಎಲೆ ಪರಶಿವಲಿಂಗವೆ..

೮೪೭

ನೀನೊಲಿದಡೆ ಒಲಿ, ಒ[1]ಲಿಯ[1]ದಿದ್ದಡೆ ಸಮವೇಧಿಸಿಕೊಳ್ಳಯ್ಯ, ಲಿಂಗದ ಬೆಳಗನೊಳಕೊಂಡು ಸಮವೇಧಿಸಿಕೊಳ್ಳಯ್ಯ, ಕೂಡಲಸಂಗಮದೇವರಲ್ಲಿ ತದ್ಗತನಾದೆನಯ್ಯಾ.

I– –

ನೀನೊಲಿದಡೆ ಒಲಿ–ನೀನು ಕೃಪೆಯಾಗಿ ನಿಜಮೋಕ್ಷವನ್ನು ಕರುಣಿಸಿಕೊಟ್ಟರೆ ಕೊಡು. ನೀ ಒಲಿಯದಿದ್ದಡೆ–ನೀನು ಕೃಪೆಯಾಗಿ ನಿಜಮೋಕ್ಷವನ್ನು ಕರುಣಿಸಿಕೊಡದಿದ್ದರೆ, ಸಮವೇದಿಸಿಕೊಳ್ಳಯ್ಯ–ನಿಮ್ಮಲ್ಲಿ ಏಕಾರ್ಥವ ಮಾಡಿಕೊಳ್ಳಯ್ಯ, ಲಿಂಗದ ಬೆಳಗನು– ಇಷ್ಟಲಿಂಗದ ಸತ್ಕ್ರಿಯಾಪ್ರಕಾಶವೇ ಶರಣನ ಸರ್ವಾಂಗವನ್ನು, ಒಳಕೊಂಡು–ಅವಗ್ರಹಿಸಿಕೊಂಡು, ಸಮವೇದಿಸಿಕೊಳ್ಳಯ್ಯ– ನಿಮ್ಮೊಳಗೇಕಾರ್ಥವ ಮಾಡಿಕೊಳ್ಳಯ್ಯ. ಕೂಡಲಸಂಗಮದೇವರಲ್ಲಿ–ಪರಶಿವಲಿಂಗದೇವರಲ್ಲಿ, ತದ್ಗತನಾದೆನಯ್ಯಾ– ಎರಕವೆರೆದೋಪಾದಿಯಲ್ಲಿ ಕೂಡಲ್ಪಟ್ಟಾತನಾದೆನಯ್ಯಾ.

III –

ಸಮವೇದಿಸಿಕೊಳ್ಳಯ್ಯ–ನಿನ್ನೊಳಗೇಕಾರ್ಥವ ಮಾಡಿಕೊಳ್ಳಯ್ಯ.

IV –

1–1 ಲ್ಲ (ತ)

....

ಮ^[ಹದ]^ ಮಹಾಪ್ರಕಾಶವಾದ ಲಿಂಗದಲ್ಲಿ ಕೂಡಿದೆನೆಂಬುದೀ ವಚನದರ್ಥ.

....

೧-೧ ನವ (ತ)

V -

ಸಮವೇಧಿಸಿಕೊಳ್ಳಯ್ಯ -ನಿಮ್ಮೊಳಗೇಕಾರ್ಥವ ಮಾಡಿಕೊಳ್ಳಯ್ಯ.

ಲ೪ಲ

ಮಾಡುವರಿಲ್ಲ, ನೀ ಮಾಡದೆ ನಿಲ ಸಾಲೆ. ನೀಡುವರಿಲ್ಲ, ನೀ ನೀಡದೆ ನಿಲ ಸಾಲೆ, ಬೇಡುವರಿಲ್ಲ, ನೀ ಬೇಡದೆ ನಿಲ ಸಾಲೆ. ಕೂಡುವರಿಲ್ಲ, ನೀ ಕೂಡದೆ ನಿಲ ಸಾಲೆ. ಕೂಡಲಸಂಗಮದೇವ, ತಾನು ತಾನಾಗಿ ನೀ ನೋಡದೆ ನಿಲ ಸಾಲೆ !

I- -

ಮಾಡುವರಿಲ್ಲ ನೀ ಮಾಡದೆ-ನಿಮ್ಮ ಶರಣರು ಸಮರಸಭಾವದಿಂದ ಲಿಂಗಪೂಜೆಯ ಮಾಡುವರಲ್ಲದೆ ಭಿನ್ನವಿಟ್ಟುಕೊಂಡು ಲಿಂಗಪೂಜೆಯ ಮಾಡುವರಲ್ಲವು, ಸಮರಸಭಾವದಿಂದ ಲಿಂಗಪೂಜೆಯ ಮಾಡಿದವರಿಗೆ ಸಮರಸಭಾವವನ್ನು ಕರುಣಿಸಿಕೊಟ್ಟಲ್ಲದೆ, ನಿಲ ಸಾಲೆ-ತರಹರಿಸಲಾರೆಯು. ನೀಡುವರಿಲ್ಲ ನೀ ನೀಡದೆ-ನಿಮ್ಮ ಶರಣರು ಸಮರಸಭಾವದಿಂದ ತನುಮನಧನಂಗಳನ್ನು ಎಡೆಮಾಡುವರಲ್ಲದೆ ಭಿನ್ನವಿಟ್ಟುಕೊಂಡು ತನುಮನಧನಂಗಳನ್ನು ಎಡೆಮಾಡುವರಲ್ಲ, ಸಮರಸಭಾವದಿಂದ ತನುಮನಧನಂಗಳನ್ನು ಎಡೆಮಾಡುವಂಥವರಿಗೆ ಸಮರಸಭಾವವನು ಕರುಣಿಸಿಕೊಟ್ಟಲ್ಲದೆ, ನಿಲ ಸಾಲೆ-ತರಹರಿಸಲಾರೆಯು. ಬೇಡುವರಿಲ್ಲ ನೀ ಬೇಡದೆ -ನಿಮ್ಮ ಶರಣರು ನಿಜಮೋಕ್ಷವನ್ನು ಬೇಡುವರಲ್ಲದೆ ಭಿನ್ನಫಲಪದಂಗಳ ಬೇಡುವರಲ್ಲ. ನಿಜಮೋಕ್ಷವನ್ನೇ ಬೇಡುವಂಥವರಿಗೆ ನಿಜಮೋಕ್ಷವನ್ನೇ ಕರುಣಿಸಿಕೊಟ್ಟಲ್ಲದೆ, ನಿಲ ಸಾಲೆ-ತರಹರಿಸಲಾರೆಯು. ಕೂಡುವರಿಲ್ಲ ನೀ ಕೂಡದೆ-ನಿಮ್ಮ ಶರಣರು ಸಮರಸಭಾವದಿಂದ ಲಿಂಗದಲ್ಲಿ ಕೂಡುವರಲ್ಲದೆ ಭಿನ್ನವಿಟ್ಟುಕೊಂಡು ಕೂಡುವಂಥವರಲ್ಲ, ಸಮರಸಭಾವದಿಂದ ಲಿಂಗದಲ್ಲಿ ಕೂಡುವಂಥ ಕೂಟವನ್ನು ಕರುಣಿಸಿಕೊಟ್ಟಲ್ಲದೆ. ನಿಲ ಸಾಲೆ-ತರಹರಿಸಲಾರೆಯು.

ಕೂಡಲಸಂಗಮದೇವ-ಎಲೆ ಪರಶಿವಲಿಂಗವೆ, ತಾನು ತಾನಾಗಿ-ಲಿಂಗವೇ ತಾನು ತಾನೇ ಲಿಂಗವಾಗಿ, ನೀ ನೋಡದೆ-ನಿಮ್ಮ ಶರಣರು ಸಮರಸ ದೃಷ್ಟಿಯಿಂದ ಲಿಂಗವ ನಿರೀಕ್ಷಣೆಯ ಮಾಡುವರಲ್ಲದೆ ಭಿನ್ನದೃಷ್ಟಿಯಿಂದ ಲಿಂಗನಿರೀಕ್ಷಣೆಯ ಮಾಡುವರಲ್ಲವು, ಸಮರಸದೃಷ್ಟಿಯಿಂದ ಲಿಂಗ ನಿರೀಕ್ಷಣೆಯ ಮಾಡುವಂಥವರಿಗೆ ಸಮರಸದೃಷ್ಟಿಯನ್ನೇ ಕರುಣಿಸಿ ಕೊಟ್ಟಲ್ಲದೆ, ನಿಲ ಸಾಲೆ-ತರಹರಿಸಲಾರೆಯು.

III -

ಮಾಡುವರಿಲ್ಲ-ಅಂಗ ಲಿಂಗಕ್ಕೆ ಭಿನ್ನವಿಟ್ಟು ಪೂಜಿಸಿ ಫಲಪದಂಗಳ ಯಾಚಿಸುವ ಶರಣರುಂಟಾಗರು, ನೀ ಮಾಡದೆ ನಿಲ ಸಾಲೆ-ನೀನು ಫಲ ಪದಂಗಳನು ಕೊಟ್ಟು ಭವಕ್ಕೆ ಹಾಕುವದನು ತರಹರಿಸೆಲೆ ಪರಶಿವಲಿಂಗವೆ.

V -

ಮಾಡುವವರಿಲ್ಲ-ಅಂಗ ಲಿಂಗಕ್ಕೆ ಭಿನ್ನವಿಟ್ಟು ಪೂಜಿಸಿ ಫಲಪದಂಗಳ ಯಾಚಿಸುವ ಶರಣರಿಲ್ಲ, ನೀ ಮಾಡದೆ ನಿಲ ಸಾಲೆ-ಫಲಪದಂಗಳ ಕೊಟ್ಟು ಭವಕ್ಕೆ ಹಾಕುವದನು ತರಹರವ ಮಾಡೆಲೆ ಲಿಂಗವೆ.

೮೪೯

ಆಲಿಕಲ್ಲ ಹರಳಿನಂತೆ, ಅರಗಿನ ಪುತ್ಥಳಿಯಂತೆ, ತನು ಕರಗಿ ನೆರೆವ ಸುಖವ ನಾನೇನೆಂಬೆ. ಕಡೆಗೋಡಿವರಿದುವೆನಗಯ್ಯಾ ನಯನದ[1] ಶ್ರು[1] ಜಲಂಗಳು! ನಮ್ಮ ಕೂಡಲಸಂಗಮದೇವರ [2]ಮನ[2] ಮುಟ್ಟಿ ನೆರೆವ ಸುಖವ ನಾ[3]ನೇ[3]ನೆಂಬೆನಯ್ಯ !

I- -

ಆಲಿಕಲ್ಲ ಹರಳಿನಂತೆ-ಪಯೋಧರಫಳವೆಂಬುವಂಥದು ಮಹದಾಕಾಶದ ಬಲದಿಂದ ಗಟ್ಟಿಗೊಂಡು ನೋಡನೋಡಲು ಭೂಮಿಯ ಮೇಲೆಬಿದ್ದು ಕರಗಿ ನೀರಕೂಡಿ ನೀರಾಗಿ ಹರಿದು ಹೋದ ಹಾಂಗೆ ಅಂಗವು ಇಷ್ಟಲಿಂಗದಲ್ಲಿ ಕೂಡಿರ್ಪುದು, ಅರಗಿನ ಪುತ್ಥಳಿಯಂತೆ-ಲಾಕ್ಷೆಯನ್ನು ಅಗ್ನಿಯ ಮೇಲೆ ಮಡಗಿದರೆ ಹೇಂಗೆ ಶಿಥಿಲವಾಗುತ್ತಿಹುದೋ ಹಾಂಗೆ ಪ್ರಾಣವು ಪ್ರಾಣಲಿಂಗದಲ್ಲಿ ಕೂಡಿರ್ಪುದು. ತನು ಕರಗಿ-ಅಂಗವು ಇಷ್ಟಲಿಂಗದಲ್ಲಿ ಪ್ರಾಣವು ಪ್ರಾಣಲಿಂಗದಲ್ಲಿ ಲೀನವಾಗಿ, ನೆರೆವ-ಅಂಗವು ಇಷ್ಟಲಿಂಗದಲ್ಲಿ ಪ್ರಾಣವು ಪ್ರಾಣಲಿಂಗದಲ್ಲಿ ಕೂಡುವ, ಸುಖವ-ಪರಿಣಾಮವನ್ನು, ನಾನೇನೆಂಬೆ-ನಾನೆಂತೆಂದು ಹೇಳಲಿ. ನಯನದಶ್ರುಜಲಂಗಳು-ಅಂತರಂಗದಲ್ಲಿ ಉಕ್ಕಿದ ಹರುಷಾನಂದಜಲಂಗಳು, ಎನಗೆ-ನನಗೆ, ಕಡೆಗೋಡಿವರಿದುವೆನಗಯ್ಯ-ಎರಡೂ ಲೋಚನಾಗ್ರದಲ್ಲಿ ಧಾರಾವೃಷ್ಟಿಯಾಗಿ ಕುರಿಸಿದವಯ್ಯಾ. ನಮ್ಮ ಕೂಡಲಸಂಗಮದೇವರ-ನಮ್ಮ ಇಷ್ಟಮಹಾಲಿಂಗವನ್ನು, ಮನಮುಟ್ಟಿ-ಮನ ಶುದ್ಧವಾಗಿ ಆರಾಧಿಸಿ, ನೆರೆವ-ಅಂಗವು ಇಷ್ಟಲಿಂಗದಲ್ಲಿ ಪ್ರಾಣವು ಪ್ರಾಣಲಿಂಗದಲ್ಲಿ ಕೂಡುವಂಥ, ಸುಖವ-ಪರಿಣಾಮವನ್ನು, ನಾನೇನೆಂಬೆನಯ್ಯ-ನಾನೆಂತೆಂದು ಹೇಳುವೆನಯ್ಯ.

II -

ಆಲಿಕಲ್ಲ ಹರಳಿನಂತೆ- ಹರುಷಾನಂದಜಲ ಘಟ್ಟಿ ಸ್ವರೂಪವಾದ ಶರಣನು ಪರಮಾನಂದ ಜಲಸ್ವರೂಪವಾದ ವಸ್ತುವನು ಕೂಡಿ ಆ ವಸ್ತುವೆ ತಾನಾಗಿರ್ಪನು. ಅರಗಿನ ಪುತ್ಥಳಿಯಂತೆ-ನಿರ್ಭಾವಸ್ವರೂಪವಾದ ಶರಣನು ಮಹಾಜ್ಞಾನಾಗ್ನಿ ಸ್ವರೂಪವಾದ ವಸ್ತುವನು ಕೂಡಿ ಆ ವಸ್ತುವೆ ತಾನಾಗಿರ್ಪನು. ಮುಂದಕ್ಕೆ ಕಾಣಬಂದರ್ಥ.

IV- -

೧-೧ ಸುಖ (ತ). ೨-೨ x (ತ). ೩-೩ ರಿಗೇ (ತ)

ಮನವಳಿದು ಲಿಂಗದಲ್ಲಿ ಕೂಡುವ ಸುಖವನುಪಮಿಸಬಾರದೆಂಬುದೀ ವಚನದರ್ಥ.

೮೫೦

ನಾಲಗೆ ತಾಗಿದ ರುಚಿಗೆ ಮನವೇ ಸಾಕ್ಷಿ, ಸಾಲದೇ ಅಯ್ಯ? ಮಾಲೆಗಾಜಿನ ಕೇಳಿ ನನೆ ಅರಳುವುದೆ [1]ಅಯ್ಯ?[1] ಆಗಮವನಿದಿರಿಂಗೆ ತೋಱುವುದು ಆಚಾರವೆ ಅಯ್ಯ? ನಮ್ಮ ಕೂಡಲಸಂಗನ ಕೂಡಿದ ಕೂಟದ ಕರುಳ [2][ಕ][2]ಲೆಯನು ಇದಿರಿಂಗೆ ತೋಱುವುದು ಆಚಾರವೇ ಅಯ್ಯಾ?

....

೨-೨ ತ (ಕ.ಗ)

I -

ನಾಲಗೆ-ರಸನೆಗೆ, ತಾಗಿದ-ತಟ್ಟಿದ, ರುಚಿಗೆ-ಸ್ವಾದಕ್ಕೆ, ಮನವೇ ಸಾಕ್ಷಿ-ಇದು ಸ್ವಾದವಾಗೈತೆ, ಇದು ಸ್ವಾದವಲ್ಲೆಂಬುವುದಕ್ಕೆ, ಮನವೇ-ಮನಸ್ಸೇ, ಸಾಕ್ಷಿ-ತಾರ್ಕಣ್ಯವು, ಸಾಲದೆ ಅಯ್ಯ-ಅಷ್ಟೇ ಸಾಲದೆ? ಅಯ್ಯಾ. ಮಾಲೆಗಾಜಿನ ಕೇಳಿ ನನೆ ಅರಳುವುದೆ ಅಯ್ಯ-ಪುಷ್ಪದ ಮೊಗ್ಗೆಯ ತನ್ನ ಋತು ಕಾಲಕ್ಕೆ ಅರಳುವುದಲ್ಲದೆ ಇಂಥ ವೇಳೆಯಲ್ಲಿ ವಿಕಸನವಾಗಬೇಕು, ಇಂಥ ವೇಳೆಯಲ್ಲಿ ವಿಕಸನವಾಗಬಾರದೆಂದು ತಮ್ಮಡಿಗನ ಕೇಳಿ ವಿಕಸನವಾಗುತ್ತೈತೆ? ಇಲ್ಲವು. ಆಗಮವನಿದಿರಿಂಗೆ ತೋಱುವುದು ಆಚಾರವೆ ಅಯ್ಯ?-ಇಪ್ಪತ್ತೆಂಟು ದಿವ್ಯಾಗಮಂಗಳನು ಜ್ಞಾನೋದಯವಾಗಿ ಬಂದಂಥವರಿಗೆ ಅರುಹಿ ಕೊಡಬೇಕಲ್ಲದೆ ತಾನಾಗಿ ಹೋಗಿ ಮೇಲೆ ಬಿದ್ದು ಅರುಹಿಕೊಡುವುದಕ್ಕಾದೀತೆ? ಆಗದು. ಮತ್ತಂತುಮಲ್ಲದೆ;

● ನಾಲಗೆ-ರಸನೇಂದ್ರಿಗೆ, ತಾಗಿದ-ತಟ್ಟಿದ, ರುಚಿಗೆ-ಶಿವಸುಖಪ್ರಸನ್ನತಾಪ್ರಸಾದ ಸ್ವೀಕಾರಕ್ಕೆ, ಮನವೇ ಸಾಕ್ಷಿ-ನಾನು ಶಿವಸುಖಪ್ರಸನ್ನತಾ ಪ್ರಸಾದಸ್ವೀಕಾರದೊಡನೆ ಕೂಡುತ್ತೈದೇನಿ, ನಾನು ತಾತ್ವಾನ್ನ ತತ್ಫೋದಕಂಗಳನ್ನು ಅನುಭವಿಸುತ್ತೈದೇನೆಂಬುದಕ್ಕೆ, ಮನವೇ-ಮನಸ್ಸೇ, ಸಾಕ್ಷಿ-ತಾರ್ಕಣ್ಯವು, ಸಾಲದೆ-ಅಷ್ಟೇ ಸಾಲದೆ, ಅಯ್ಯ- ಎಲೆ ಲಿಂಗವೆ. ಮಾಲೆಗಾಜಿನ ಕೇಳಿ ನನೆ ಅರಳುವುದೆ-ಅಂತರಂಗದಲ್ಲಿ ಜ್ಞಾನೋದಯವಾಗಬೇಕಾದರೆ ತನಗೆ ತಾನೇ ಜ್ಞಾನೋದಯವಾಗಬೇಕಲ್ಲದೆ ಶ್ರುತಿ ಗುರುಗಳನು ಬೆಸಗೊಂಡು ಜ್ಞಾನೋದಯವಾಗುತ್ತೈತೆ? ಇಲ್ಲವು. ಅಯ್ಯ-ಎಲೆ ಲಿಂಗವೆ. ಆಗಮವ ಇದಿರಿಂಗೆ ತೋಱುವುದು ಆಚಾರವೆ-ತಾನು ಆಗಮೋಕ್ತವಾಗಿ ಮಾಡುವಂಥ ಲಿಂಗಪೂಜಾಕ್ರೀಗಳನ್ನು ತನ್ನಲ್ಲಿಯೇ ಗೋಪ್ಯವ ಮಾಡಿಕೊಂಡಿರಬೇಕಲ್ಲದೆ ಕಂಡ ಕಂಡವರ ಮುಂದೆ ಹೇಳಿ ಪ್ರಕಟವ ಮಾಡಿಕೊಂಬುವುದಕ್ಕಾದೀತೆ? ಆಗದು, ಅಯ್ಯ-ಎಲೆ ಲಿಂಗವೆ.

ನಮ್ಮ ಕೂಡಲಸಂಗನ-ನಮ್ಮ ಪರಶಿವಲಿಂಗವ, ಕೂಡಿದ-ಬೆರೆದ, ಕೂಟದ-ಸಮರಸದ, ಕರುಳ ೧[ಕ]೧ಲೆಯನಿದಿರಿಂಗೆ ತೋಱುವುದು ಆಚಾರವೆ ಅಯ್ಯಾ-ಲೋಕದ ಸ್ತ್ರೀಪುರುಷರುಗಳು

ಏಕಾಂತ ಸ್ಥಾನದಲ್ಲಿ ಕೂಡಿದಂಥ ಕೂಟವನ್ನು ತಮ್ಮಲ್ಲಿಯೇ ಗೋಪ್ಯವ ಮಾಡಿಕೊಂಡಿರಬೇಕಲ್ಲದೆ ನಾನು ಸ್ತ್ರೀಯಳೊಂದಿಗೆ ಹಾಂಗೆ ಕೂಡಿದೆ ಹೀಂಗೆ ಕೂಡಿದನೆಂದು ಕಂಡ ಕಂಡವರ ಮುಂದೆ ಹೇಳಿಕೊಂಬುದಕ್ಕೆ ಬಂದೀತೆ? ಬಾರದು. ಹಾಂಗೆ, ತನ್ನ ಮನಸ್ಸು ಲಿಂಗದಲ್ಲಿ ಕೂಡಿರುವಂಥ ಕೂಟವನ್ನು ತನ್ನಲ್ಲಿಯೇ ಗೋಪ್ಯವ ಮಾಡಿಕೊಂಡಿರಬೇಕಲ್ಲದೆ ನನ್ನ ಮನಸ್ಸು ಲಿಂಗದಲ್ಲಿ ಹಾಂಗೆ ಕೂಡೈತೆ ಹೀಂಗೆ ಕೂಡೈತೆ ಎಂದು ಕಂಡ ಕಂಡವರ ಮುಂದೆ ಹೇಳಿ ಪ್ರಕಟವ ಮಾಡಿಕೊಂಬುವುದಕ್ಕಾದೀತೆ ? ಆಗದು.

....

೧-೧ ತ (ಕ.ಗ).

III -

ಆಗಮವನಿದಿರಿಂಗೆ ತೋರುವುದು-ಕ್ರಿಯಾಚಾರ ಜ್ಞಾನಾಚಾರಗಳನು ಅನ್ಯರಿಗೆ ಕಾಣಿಸುವುದು, ಆಚಾರವೆ ಅಯ್ಯ-ನಡಾವಳಿಯೆ ಸ್ವಾಮಿ, ಕರುಳ ಕಲೆಯಂ-ಜ್ಞಾನದ ಸಾಮರಸ್ಯವನು.

IV- -

1-1 x (ತ).

....

ಮನವು ಬ್ರಹ್ಮದಲ್ಲಿ ಕೂಡಿದ ಕೂಟವ ಆರಿಗೂ ಹೇಳಬಾರದೆಂಬುದೀ ವಚನದರ್ಥ.

V -

ಆಗಮವನಿದಿರಿಂಗೆ ತೋಱುವುದು-ಕ್ರಿಯಾಜ್ಞಾನಾಚರಣೆಗಳನು ಅನ್ಯರಿಗೆ ಕಾಣಿಸುವುದು, ತತ್ವಜ್ಞಾನಿಗಳಲ್ಲದವರಿಗೆ ಹೇಳುವುದು. [ಆಚಾರವೆ ಅಯ್ಯ-] ನಡವಳಿಯಲ್ಲ, ಕರುಳ ಕಲೆಯಂ-ಜ್ಞಾನದ ಸಾಮರಸ್ಯವನು.

ಪ್ರಾಣಲಿಂಗಿಯ ಐಕ್ಯಸ್ಥಲ

I -

ಪ್ರಾಣಲಿಂಗಿಯ ಐಕ್ಯಸ್ಥಳ-ಪ್ರಾಣಲಿಂಗಿಯ ಸ್ಥಲದೊಳಗಣ ಐಕ್ಯಸ್ಥಳದಾಚರಣೆಯನು ನಿರೂಪಿಸುತ್ತಿಹರು.

ಎಲ್ಲರ ಗಂಡರ ಪರಿಯಂತಲ್ಲ ನೋಡವ್ವ ನಮ್ಮ ನಲ್ಲ. ಸುಳಿಯಲಿಲ್ಲ, ಸುಳಿದು [1]ಸಿಂಗಾರವ ಮಾಡಲಿಲ್ಲ; ಕೂಡಲಸಂಗಮದೇವ[2] ತನ್ನೊಳಗೆನ್ನ ಬೈಚಿಟ್ಟನಾಗಿ.

I –

ನಮ್ಮ ನಲ್ಲ–ಶರಣಸತಿಯಳಿಗೆ ವಲ್ಲಭನಾದ ಇಷ್ಟಲಿಂಗವೆಂಬ ರಮಣನು, ಎಲ್ಲರ ಗಂಡರ ಪರಿಯಂತಲ್ಲ–ದ್ವೈತಾದ್ವೈತ ಭಿನ್ನಯೋಗಾಭ್ಯಾಸಿಗಳ ಅಂಗ ಮನ ೧ಪ್ರಾಣಂಗಳಲ್ಲಿ೧ ನೆಲೆಗೊಂಡಿರುವ ಇಷ್ಟ ಪ್ರಾಣ ಭಾವಲಿಂಗದ ಹಾಂಗಲ್ಲವು, ನೋಡವ್ವ–ಕಂಡವ್ವ, ಸುಳಿಯಲಿಲ್ಲ–ಭಿನ್ನಜಾಕ್ರೀಗಳನು ಕೈಕೊಂಡೊಪ್ಪಲಿಲ್ಲವು. ಸುಳಿದು–ಭಿನ್ನಪೂಜಾಕ್ರೀಗಳನು ಕೈಕೊಂಡು, ಸಿಂಗಾರವ ಮಾಡಲಿಲ್ಲ–ಆತ್ಮನಿಗೆ ಚತುರ್ವಿಧ ಫಲಪದಂಗಳನು ಅಲಂಕಾರವ ಮಾಡಲಿಲ್ಲವು. ಕೂಡಲಸಂಗಮದೇವ–ಪರಶಿವಲಿಂಗವು, ತನ್ನೊಳಗೆನ್ನ ಬೈಚಿಟ್ಟನಾಗಿ–ತನ್ನೊಳಗೆನ್ನನು ಗೋಪ್ಯವ ಮಾಡಿಕೊಂಡನಾಗಿ.

....

೧–೧ ಆತ್ಮಾಂಗದಲ್ಲಿ (ಕ).

II –

2 + ನು (ಚ, ಜ).

....

ಎಲ್ಲರ ಗಂಡರ ಪರಿಯಂತಲ್ಲ ನೋಡವ್ವ–ದ್ವೈತಾದ್ವೈತಕ್ಕೆ ಕರ್ತೃವಾದ ಭಿನ್ನಲಿಂಗಗಳೆಂಬ ವಲ್ಲಭರ ಪ್ರಕಾರದಹಂಗಲ್ಲ ನೋಡಲೆ ಮಾತೃಸ್ಥಾನವಾದ ಮಹಾನುಭಾವಚಿಚ್ಛಕ್ತಿಯೇ ಎಂದು ಕ್ರಿಯಾಶಕ್ತಿಸ್ವರೂಪವಾದ ಶರಣನು ಜ್ಞಾನಶಕ್ತಿಯೊಡನೆ ಬಿನ್ನೈಸುತ್ತಿಹನು. ನಮ್ಮ ನಲ್ಲ ಸುಳಿಯಲಿಲ್ಲ–ನಮಗೊಲ್ಲಭನಾದ ಇಷ್ಟಲಿಂಗವೆಂಬ ಪುರುಷನು ಭಿನ್ನಕ್ರೀಯಲ್ಲಿ ಸಂಚರಿಸಲಿಲ್ಲ, ಸುಳಿದು–ಭಿನ್ನಕ್ರೀಯಲ್ಲಿ ಸಂಚರಿಸಿ, ಸಿಂಗಾರವ ಮಾಡಲಿಲ್ಲ–ಫಲ ಪದಂಗಳನಲಂಕರಿಸಲಿಲ್ಲ, ಕೂಡಲಸಂಗಮದೇವನು ತನ್ನೊಳಗೆನ್ನ ಬೈಚಿಟ್ಟನಾಗಿ–ಪರಶಿವಲಿಂಗವು ತನ್ನಂತರಂಗದಲ್ಲಿ ಎನ್ನ ಪ್ರಾಣಲಿಂಗವಾಗಿ ಮಡಗಿಕೊಂಡನೆಂಬುದರ್ಥ.

III –

1 + ಸುಳಿದು (ಟ, ಡ).

....

ಸುಳಿದು ಸುಳಿದು–ಜ್ಞಾನಕ್ರಿಯೆಗಳಲ್ಲಿ ಸಂಚರಿಸಿ ಸಂಚರಿಸಿ, ಮತ್ತಂ, ಸರ್ವಾಚಾರಸಂಪತ್ತಿನಲ್ಲಾಚರಿಸಿ, ಸಿಂಗಾರವ ಮಾಡಲಿಲ್ಲ–ಅಷ್ಟವಿಧಸಕೀಲ೨ ಸಂಬಂಧ ವನಳವಡಿಸಲಿಲ್ಲವು.

....

೨ + ಸಂಗ (ಟ).

IV– –

2+ ನು (ತ).

....

ಲಿಂಗವು ಅಖಂಡವಾಗಿ ಖಂಡಲಿಂಗವ ತನ್ನೊಳಗಿರಿಸಿಕೊಂಡನೆಂಬುದೀ ವಚನದರ್ಥ.

V –

ಸುಳಿದು–ಸರ್ವಾಚಾರಸಂಪತ್ತಿನಲ್ಲಿ ಆಚರಿಸಿ, ಸಿಂಗಾರವ ಮಾಡಲಿಲ್ಲ–ಭಿನ್ನಕ್ರಿಯಾಲಂಕಾರವ ಮಾಡಲಿಲ್ಲ.[೩]

....

೩ + ಶ್ರೀ (ಪ)

ಲ೫೨

ಜ್ಞಾನದ ಗಮನದ ಸಹಜದ ಉದಯದಲ್ಲಿ ಏನೆಂದಜೆಯೆನು[1], ಲಿಂಗದ ಬೆಳಗನೊಳಕೊಂಡುದಾಗಿ ಏನೆಂದಜೆಯೆನು; ಕೂಡಲಸಂಗಮದೇವ[2]ರ[2] ಧ್ಯಾನದಿಂದ ನಾನೇನೆಂದಜೆಯೆನು.

I –

ಜ್ಞಾನದ–ಸುಜ್ಞಾನದ, ಗಮನದ–ಗಮನವೆಂದರೆ ಸತ್ಕ್ರಿಯೆ, ಸಹಜದ ಉದಯದಲ್ಲಿ–ಯಥಾರ್ಥವಾದ ಇಷ್ಟಲಿಂಗವನ್ನು ಅಷ್ಟವಿಧಾರ್ಚನೆ ಷೋಡಶೋಪಚಾರಕ್ರೀಗಳಿಂದಾರಾಧಿಸುವಲ್ಲಿ, ಏನೆಂದಜೆಯೆನು–ಅಂಗ ಬೇರೆ ಲಿಂಗ ಬೇರೆಂಬುವಂಥ ಭಿನ್ನಭಾವವನು ತಿಳಿಯೆನು. ಲಿಂಗದ ಬೆಳಗನೊಳಕೊಂಡುದಾಗಿ–ಇಷ್ಟಲಿಂಗದ ಚಿತ್ಕಲೆಯನ್ನೆ ಅಂತರಂಗದಲ್ಲಿ ಪ್ರಾಣಲಿಂಗವಾಗಿ ಸಂಬಂಧವ ಮಾಡಿಕೊಂಡು ಮಂತ್ರಧ್ಯಾನಜಪಸ್ತೋತ್ರನಿರ್ಗುಣ ಪೂಜಾಕ್ರೀಗಳಿಂದಾರಾಧಿಸುವುದರಿಂದ, ಏನೆಂದಜೆಯೆನು–ಪ್ರಾಣ ಬೇರೆ ಪ್ರಾಣಲಿಂಗ ಬೇರೆಂಬ ಭಿನ್ನಭಾವವ ತಿಳಿಯೆನು. ಕೂಡಲಸಂಗಮದೇವರ ಧ್ಯಾನದಿಂದ–ಆ ಪ್ರಾಣಲಿಂಗವನೇ ಆತ್ಮಾಂಗದಲ್ಲಿ ಭಾವಲಿಂಗವಾಗಿ ಸಂಬಂಧವ ಮಾಡಿಕೊಂಡು ಆ ಭಾವಲಿಂಗಕ್ಕೆ ಮನೋಲಯ ನಿರಂಜನ ಪೂಜಾಕ್ರೀಗಳಿಂದಾರಾಧಿಸುವುದುದರಿಂದ, ನಾನೇನೆಂದು–ಆತ್ಮ ಬೇರೆ ಭಾವಲಿಂಗ ಬೇರೆಂಬ ಭಿನ್ನಭಾವವನು, ಅಜೆಯೆನು–ತಿಳಿಯೆನು.

II –

೧ + ಎಂತೆಂದಱಿಯೆನು (ಚ,ಜ). ೨-೨ ನ (ಚ, ಜ).

....

ಜ್ಞಾನದ-ಸುಜ್ಞಾನಾಚಾರಣೆ ಸ್ವರೂಪನಾದ ಪ್ರಾಣಲಿಂಗದ, ಗಮನದ-ಸತ್ಕ್ರಿಯಾಚರಣೆಸ್ವರೂಪವಾದ ಇಷ್ಟಲಿಂಗದ, ಸಹಜದ-ಮಹಾಜ್ಞಾನಾಚರಣೆಸ್ವರೂಪವಾದ ಭಾವಲಿಂಗದ, ಉದಯದಲ್ಲಿ – ಈ ತ್ರಿವಿಧಲಿಂಗಾನುಭಾವೋತ್ಪತ್ಯದಲ್ಲಿ, ಏನೆಂದಱಿಯೆನು-ಇಷ್ಟಲಿಂಗವೆಂದು ಭಿನ್ನವಿಟ್ಟು ತಿಳಿಯೆನು, ಎಂತೆಂದಱಿಯೆನು-ಪ್ರಾಣಲಿಂಗವೆಂದು ಭಿನ್ನವಿಟ್ಟು ತಿಳಿಯೆನು, ಲಿಂಗದ ಬೆಳಗನೊಳಕೊಂಡುದಾಗಿ-ಇಷ್ಟ ಪ್ರಾಣ ಸಮರಸ ಏಕಾದ್ವೈತಸ್ವರೂಪವಾದ ಭಾವಲಿಂಗದ ಮಹಾಜ್ಞಾನಪ್ರಕಾಶವ ಗ್ರಹಿಸಿಕೊಂಡುದಾಗಿ, ಏನೆಂದಱಿಯೆನು-ಭಾವಲಿಂಗವೆಂದು ಭಿನ್ನವಿಟ್ಟು ತಿಳಿಯೆನು, ಕೂಡಲಸಂಗಮದೇವನ ಧ್ಯಾನದಿಂದ ನಾನೇನೆಂದಱಿಯೆನು-ತ್ರಿವಿಧಲಿಂಗವನೊಳಕೊಂಡು ತೋಱುವ ಪರಶಿವಲಿಂಗದ ಚಿಂತನೆಯಿಂದ ಲಿಂಗೈಕ್ಯವೆಂದು ತಿಳಿಯೆನು.

● ಮತ್ತಂ, ಜ್ಞಾನದ-ಜ್ಞಾತೃವಿನ, [೧]ಗಮನದ[೧]-ಜ್ಞಾನದ, ಸಹಜದ ಉದಯದಲ್ಲಿ-[೨]ಜ್ಞೇಯದುತ್ಪತ್ಯದಲ್ಲಿ,[೨] ಏನೆಂದಱಿಯೆ-ಜ್ಞಾತೃವೆಂದರಿಯೆನು, ಎಂತೆಂದಱಿಯೆ-ಜ್ಞಾನವೆಂದು ತಿಳಿಯೆನು, ಲಿಂಗದ ಬೆಳಗನೊಳಕೊಂಡುಬಾಗಿ-ನಿಃಕಲಲಿಂಗದ ಚಿತ್ಪ್ರಕಾಶವು ಒಳಗುಮಾಡಿಕೊಂಡುದಾಗಿ, ಏನೆಂದಱಿಯೆನು-ವಸ್ತುವೆಂದು ತಿಳಿಯೆನು, ಕೂಡಲಸಂಗಮದೇವನ ಧ್ಯಾನದಿಂದ ಏನೆಂದಱಿಯೆನು-ಪರಶಿವಲಿಂಗದ ಚಿಂತನೆಯಿಂದ ಶರಣ ಲಿಂಗವೆಂದು ತಿಳಿಯೆನು.[೩]

....

೧-೧ ಗಮನ (ಜ), ೨-೨ ಉತ್ಪತ್ಯದಲ್ಲಿ (ಜ), ೩+ಪ್ರಾಣಲಿಂಗಿಸ್ಥಲ ಸಮಾಪ್ತ ಮಂಗಳಮಹಾ ಶ್ರೀ (ಜ).

IV- -

2-2 ನ (ತ).

....

ಅಱಿವು ಲಿಂಗದಲ್ಲಿ ಅಡಗಿ, ಅಖಂಡಿತವಾದ ಬೆಳಗಾಗಿ ನಾನೇನೆಂಬುದನಱಿಯೆನೆಂಬುದೀ ವಚನದರ್ಥ.[೪]

....

೪+ ಅಂತು ವಚನ ೧೯ಕ್ಕಂ ಮಂಗಳಮಹಾ ಶ್ರೀ ಶ್ರೀ ಶ್ರೀ (ತ).

೮೫೩

ಕಾಯವೆಂಬ ಘಟಕ್ಕೆ ಚೈತನ್ಯವೆಂಬ ಸಯದಾನ, ಸಮತೆಯೆಂಬ ಜಲ, ಕರಣಾದಿಗಳೇ ಶ್ರ[೧]ಪ[೧]ಣ, ಜ್ಞಾನವೆಂಬ ಅಗ್ನಿಯನಿಕ್ಕಿ, ಮತಿಯೆಂಬ ಸುಟ್ಟುಗದಲ್ಲಿ ಘಟ್ಟಿಸಿ, ಪಾಕಕ್ಕೆ ತಂದು, ಭಾವದಲ್ಲಿ ಕುಳ್ಳಿರಿಸಿ, ಪರಿಣಾಮದೋಗರವ ನೀಡಿದಡೆ ಕೂಡಲಸಂಗಮ ದೇವಂ ಗಾರೋಗಣೆಯಾಯಿತ್ತು.

I -

ಕಾಯವೆಂಬ-ದೇಹವೆಂಬ, ಘಟಕ್ಕೆ-ಭಾಂಡಕ್ಕೆ, ಚೈತನ್ಯವೆಂಬ-ಆತ್ಮಚೈತನ್ಯವೆಂಬ, ಸಯದಾನ-ಪದಾರ್ಥವು, ಸಮತೆಯೆಂಬ-ಸರ್ವಸಮತಾ ಭಾವವೆಂಬ, ಜಲ-ಉದಕವು, ಕರಣಾದಿಗಳೇ-ಮನ ಮೊದಲಾದ ಸಕಲಕರಣಾದಿಗಳೇ, ಶ್ರಪಣ-ಕಟ್ಟಿಗೆಯು, ಜ್ಞಾನವೆಂಬ-ಸಮ್ಯಕ್‌ಜ್ಞಾನವೆಂಬ, ಅಗ್ನಿಯ-ವಹ್ನಿಯನ್ನು, ಇಕ್ಕಿ-ಪುಟವಮಾಡಿ, ಮತಿಯೆಂಬ-ಬುದ್ಧಿವಿವೇಕವೆಂಬ, ಸಟ್ಟುಗದಲ್ಲಿ-ದರ್ವಿಯಲ್ಲಿ, ಘಟ್ಟಿಸಿ-ತಿರಿವಿ, ಪಾಕಕ್ಕೆ ತಂದು-ಸಮರಸವೆಂಬ ಪಾಕಕ್ಕೆ ಆಗುಮಾಡಿಕೊಂಡು ಬಂದು, ಭಾವದಲ್ಲಿ-ಉನ್ಮನಿಯ ಮನಸ್ಸೆಂಬ ಆತ್ಮಾಂಗದಲ್ಲಿ, ಕುಳ್ಳಿರಿಸಿ-ಗಡಣಿಸಿ, ಪರಿಣಾಮದೋಗರವ ನೀಡಿದಡೆ-ಸುಖದುಃಖಮೋಹರೂಪೆಂಬ ಪರಿಣಾಮ ಪದಾರ್ಥವನ್ನು ಎಡೆಮಾಡಿದರೆ, ಕೂಡಲಸಂಗಮದೇವಂಗೆ-ಇಷ್ಟಮಹಾಲಿಂಗಕ್ಕೆ, ಆರೋಗಣೆಯಾಯಿತ್ತು-ಆತ್ಮಪದಾರ್ಥವೇ ರೂಪುಪದಾರ್ಥವಾಗಿ ಸಮರ್ಪಣೆಯಾಯಿತ್ತು.

III -

೧-೧ ವ (ಟ).

....

ಶ್ರಪಣ-ಕಟ್ಟಿಗೆಗಳು, ಮತಿಯೆಂಬ-ಸುಬುದ್ಧಿಯೆಂಬ, ಸಟ್ಟುಗದಲ್ಲಿ-ಕೋಲಿನಲ್ಲಿ, ಘಟ್ಟಿಸಿ-ತಿಜೆವಿಕೊಟ್ಟು.

ಲ೫೪

ಕಂಗಳು ತುಂಬಿದ ಬಳಿಕ ನೋಡಲಿಲ್ಲ. ಕಿವಿಗಳು ತುಂಬಿದ ಬಳಿಕ ಕೇಳಲಿಲ್ಲ. ಕೈಗಳು ತುಂಬಿದ ಬಳಿಕ ಪೂಜಿಸಲಿಲ್ಲ. ಮನ ತುಂಬಿದ ಬಳಿಕ ನೆನೆಯಲಿಲ್ಲ; ಮಹಾಂತ ಕೂಡಲಸಂಗಮದೇವನ.

I -

ಕಂಗಳು ತುಂಬಿದ ಬಳಿಕ-ನೇತ್ರದಲ್ಲಿ ನಿರೀಕ್ಷಣಾಸ್ವರೂಪವಾದ ಶಿವಲಿಂಗದ ಮೂರ್ತಿವಿಗ್ರಹವು ಭರಿತವಾದ ಮೇಲೆ, ನೋಡಲಿಲ್ಲ-ಸ್ತ್ರೀಯರುಗಳ ಹಾವಭಾವವಿಲಾಸವಿಭ್ರಮಂಗಳ ನಿರೀಕ್ಷಣೆಯ ಮಾಡಲಿಲ್ಲವು. ಕಿವಿಗಳು ತುಂಬಿದ ಬಳಿಕ-ಶ್ರೋತ್ರದಲ್ಲಿ ಈಳನಸ್ವರೂಪವಾದ ಪ್ರಸಾದಲಿಂಗವು ಭರಿತವಾದ ಮೇಲೆ, ಕೇಳಲಿಲ್ಲ-ಹಾಳುಹರಟೆ ಸ್ಮರಲೀಲಾಪದ್ಯ ಕಾಳಗದ ವಾರ್ತೆ ಮೊದಲಾದವನ್ನು ಆಲಿಸಲಿಲ್ಲವು. ಕೈಗಳು ತುಂಬಿದ ಬಳಿಕ-ಹಸ್ತದಲ್ಲಿ ಸತ್ಕ್ರಿಯಾಸ್ವರೂಪವಾದ ಇಷ್ಟಲಿಂಗದ ಮೂರ್ತಿವಿಗ್ರಹವು ಭರಿತವಾದ ಮೇಲೆ, ಪೂಜಿಸಲಿಲ್ಲ-ಅನ್ಯದೈವದ ಭಜನೆಯ ಮಾಡಲಿಲ್ಲವು, ಮನ ತುಂಬಿದ ಬಳಿಕ-ಮನದಲ್ಲಿ ಲಿಂಗಧ್ಯಾನ ಲಿಂಗಸ್ಮರಣೆಯು ಭರಿತವಾದ ಮೇಲೆ, ನೆನೆಯಲಿಲ್ಲ-ಭಿನ್ನಮಂತ್ರಸ್ಮರಣೆಯ ಮಾಡಲಿಲ್ಲವು. ಮಹಾಂತ ಮಹಾತತ್ವಾತಿಶಯವನುಳ್ಳ, ಕೂಡಲಸಂಗಮದೇವನ-ಇಷ್ಟಮಹಾಲಿಂಗವನ್ನು, ಪರಶಿವಲಿಂಗವನ್ನು.

೮೫೫

ಅಡಿಗಡಿಗೆ ಸ್ಥಾನ[1]ನದಿ[1], ಅಡಿಗಡಿಗೆ ದಿವ್ಯಕ್ಷೇತ್ರ, ಅಡಿಗಡಿಗೆ ನಿಧಿಯು ನಿಧಾನ[2]ನೋಡಾ! ಆತನ ಇರವೇ ವಾರಣಾಸಿ ಅವಿಮುಕ್ತಕ್ಷೇತ್ರ, ಕೂಡಲಸಂಗನ ಶರಣ[3]ನು[3] ಸ್ವತಂತ್ರನಾಗಿ.

I –

ಪ್ರಭುಸ್ವಾಮಿಗಳು ಸೊನ್ನಲಾಪುರಕ್ಕೆ ಹೋಗಿ ಸಿದ್ಧರಾಮೇಶ್ವರನ ಕರಕೊಂಡು ಕಲ್ಯಾಣಪಟ್ಟಣಕ್ಕೆ ಬರುವಂಥ ವೇಳೆಯಲ್ಲಿ, ಅಡಿಗಡಿಗೆ–ಸಿದ್ಧರಾಮೇಶ್ವರನ ಹೆಜ್ಜೆಹೆಜ್ಜೆಗೆ, ಸ್ಥಾನ–ಘಟಿಕಾಸ್ಥಾನವು, ನದಿ–ಅರವತ್ತಾರುಕೋಟಿ ಪುಣ್ಯತೀರ್ಥಂಗಳು, ಅಡಿಗಡಿಗೆ–ಸಿದ್ಧರಾಮೇಶ್ವರನ ಹೆಜ್ಜೆ ಹೆಜ್ಜೆಗೆ, ದಿವ್ಯಕ್ಷೇತ್ರ–ಎಂಬತ್ತೆಂಟುಕೋಟಿ ಪುಣ್ಯಕ್ಷೇತ್ರಂಗಳು, ಅಡಿಗಡಿಗೆ–ಸಿದ್ಧರಾಮೇಶ್ವರ ಹೆಜ್ಜೆಹೆಜ್ಜೆಗೆ, ನಿಧಿಯು–ನಿಕ್ಷೇಪದ್ರವ್ಯ, ನಿಧಾನ–ಬಳ⁽ಸುವ⁾ ದ್ರವ್ಯವು, ನೋಡಾ–ಕಂಡಾ. ಆತನ–ಅಂತಪ್ಪ ಸಿದ್ಧರಾಮೇಶ್ವರನ, ಇರವೇ–ಸ್ವಸ್ವರೂಪವೇ, ವಾರಣಾಸಿ–ಕಾಶಿಕ್ಷೇತ್ರವು, ಅವಿಮುಕ್ತ ಕ್ಷೇತ್ರ–ಜೀವನ್ಮುಕ್ತಿಕ್ಷೇತ್ರವು, ಕೂಡಲಸಂಗನ ಶರಣನು–ಸಿದ್ಧರಾಮೇಶ್ವರನು, ಸ್ವತಂತ್ರನಾಗಿ–ಪರತಂತ್ರವಾ[ಗ]ದ ಬ್ರಹ್ಮವೇ ತಾನಾಗಿರ್ಪನೆಂಬ ದೃಷ್ಟೋಪಮಾನದ ಹಾಂಗೆ,

● ಅಡಿಗಡಿಗೆ–ಅಡಿಯೆಂದರೆ ಕ್ರೀ ಮತ್ತಡಿಯೆಂದರೆ ಜ್ಞಾನ, ಈ ಕ್ರಿಯಾಜ್ಞಾನವಿಡಿದಾಚರಿಸುವಂಥ ಶರಣನಂತರಂಗದಲ್ಲಿ, ಸ್ಥಾನ–ಷಡ್ವಿಧ ಅಂಗವು, ನದಿ–ಷಡ್ವಿಧ ಲಿಂಗವು, ಅಡಿಗಡಿಗೆ–ಅಡಿಯೆಂದರೆ ಜ್ಞಾನ ಮತ್ತಡಿಯೆಂದರೆ ಕ್ರೀ, ಈ ಜ್ಞಾನಕ್ರಿಯಾಚಾರವಿಡಿದಾಚರಿಸುವಂಥ ಶರಣನಂತರಂಗದಲ್ಲಿ, ದಿವ್ಯಕ್ಷೇತ್ರ–ಷಡ್ವಿಧ ಪಾದೋದಕವು, ಅಡಿಗಡಿಗೆ–ಅಡಿಯೆಂದರೆ ಜ್ಞಾನ ಮತ್ತಡಿಯೆಂದರೆ ಕ್ರೀ, ಈ ಕ್ರಿಯಾಜ್ಞಾನವಿಡಿದಾಚರಿಸುವಂಥ ಶರಣನಂತರಂಗದಲ್ಲಿ, ನಿಧಿಯು–ಷಡ್ವಿಧಪದಾರ್ಥವು, ನಿಧಾನ–ಷಡ್ವಿಧಪ್ರಸಾದವು, ನೋಡಾ–ಕಂಡಾ. ಆತನ–ಅಂತಪ್ಪ ಶಿವಶರಣನ, ಇರವೇ–ಸ್ವಸ್ವರೂಪವೇ, ವಾರಣಾಸಿ–ಕಾಶಿಕ್ಷೇತ್ರಕ್ಕೆ ಸಮಾನವು, ಅವಿಮುಕ್ತಕ್ಷೇತ್ರ–ಬಾಳುತ್ತಲೇ ನಿಜಮೋಕ್ಷಸ್ವರೂಪನು. ಕೂಡಲಸಂಗನ ಶರಣನು–ಶಿವಶರಣನು, ಸ್ವತಂತ್ರನಾಗಿ–ಇಹದಲ್ಲಿದ್ದರೆ ಮಾಯಾಧೀನರಹಿತನು ಪರದಲ್ಲಿದ್ದರೆ ಪರಾಧೀನರಹಿತನು. ಇಹಪರವೆರಡೂ ತನ್ನಧೀನವಾಗಿ ಪರತಂತ್ರರಹಿತವಾದ ಬ್ರಹ್ಮದಲ್ಲಿ ಕೂಡಿ ಬ್ರಹ್ಮವೇ ತಾನಾಗಿರ್ಪನಾಗಿ[೨]

....

೧–೧ ಸಬಾರದ (ಗ). ೨+ಪ್ರಾಣಲಿಂಗಿಸ್ಥಲ ಸಂಪೂರ್ಣ ಮಂಗಳಮಹಾ ಶ್ರೀ ಶ್ರೀ ಶ್ರೀ ಶ್ರೀ ಶ್ರೀ (ಕ.ಗ).

III –

1–1 ನಿಧಿ (ಟ, ಡ). 2+ವೆ (ಟ, ಡ). 3–3 x (ಟ, ಡ).

....

ನಿಧಿ–ನವನಿಧಿಗಳು, ನಿಧಿಯು–ಪುಣ್ಯತೀರ್ಥಂಗಳು, ನಿಧಾನವೆ ನೋಡಾ–ನಿಕ್ಷೇಪದ್ರವ್ಯವೆ ಕಂಡಾ, ಕೂಡಲಸಂಗನ ಶರಣ–ಶಿವಶರಣನು, ಸ್ವತಂತ್ರನಾಗಿ–ಸ್ವಯಾಧೀನವುಳ್ಳಾತನಾಗಿ, ಆತನಿರವೆ–ಆತನಿಂಗಿತವೆ, ವಾರಣಾಸಿ–ಕಾಶಿಕ್ಷೇತ್ರವು, ಅವಿಮುಕ್ತಕ್ಷೇತ್ರ–ಆತನಿರ್ದುದೆ ಮುಕ್ತಿಸ್ಥಲವಾಗಿರ್ಪುದು[೩].

....

೩+ ಇಂತಿವುಪ್ರಾಣಲಿಂಗಿಸ್ಥಲದ ನುಡಿಗಳು ಸಂಪೂರ್ಣಂ ಶ್ರೀ ಶ್ರೀ ಶ್ರೀ ಶ್ರೀ ಗುರುಭ್ಯೇನಮಃ (ಟ); ಇಂತಿವು ಪ್ರಾಣಲಿಂಗಿಸ್ಥಲದ ನುಡಿಗಳು ಪೂರ್ಣಂ ಶ್ರೀ ಶ್ರೀ : (ಡ).

❖❖

ಶರಣಸ್ಥಲ

[ಶರಣಸ್ಥಲ–ಶರಣನೇ ಸತಿಯಾಗಿ ಲಿಂಗವೇ ಪತಿಯಾಗಿ ಶರಣಸತಿ ಲಿಂಗಪತಿತ್ವವಿಡಿದಾಚರಿಸುವಂಥ ಭೇದವನ್ನೇ ಪೇಳುತ್ತಿಹುದಾದ ಕಾರಣ ಇದಕ್ಕೆ ಶರಣಸ್ಥಲವೆಂದು ಹೇಳಲ್ಪಟ್ಟಿತ್ತು (ಕ.ಗ.)]

ಶರಣನ ಜ್ಞಾನಿಸ್ಥಲ

I- -

ಶರಣನ ಜ್ಞಾನಿಸ್ಥಲ-ಶರಣಸ್ಥಲದೊಳಗಣ ಜ್ಞಾನಿ [ಸ್ಥಲದಾಚರಣೆಯನ್ನು ನಿರೂಪಿಸುತ್ತಿಹರು.]

೮೫೬

[1]ಧನದಲ್ಲಿ ಶುಚಿ, ಪ್ರಾಣದಲ್ಲಿ ನಿರ್ಭಯ, ಇದಾ[2]ವಾತಂ[2]ಗಳವಡವುದಯ್ಯ? ನಿಧಾನ ತಪ್ಪಿಬಂದಡೆ ಒಲ್ಲೆವೆಂಬುವರಿಲ್ಲ. ಪ್ರಮಾದವಶ[3]ದಿಂ[3] ಬಂದಡೆ ಹುಸಿಯೆನೆಂಬುವರಿಲ್ಲ. ನಿರಾಶೆ ನಿರ್ಭಯ, ಕೂಡಲಸಂಗಮದೇವಾ, ನೀನೊಲಿದ ಶರಣಂಗಲ್ಲದಿಲ್ಲ.

I -

ಧನದಲ್ಲಿ ಶುಚಿ-ಪರದ್ರವ್ಯವನ್ನು ಹಿಡಿಯಬಾರದೆಂಬಂಥ ಅರ್ಥಜ್ಞಾನಸನ್ಯಾಸತ್ವವು, ಪ್ರಾಣದಲ್ಲಿ ನಿರ್ಭಯ-ಏಕಾಂತಸ್ಥಾನದಲ್ಲಿ ಯತೀಶ್ವರಿರುವಂಥ ತಾವಕ್ಕೆ ಸ್ತ್ರೀಯರುಗಳು ಬಂದು ತಮ್ಮ ಹಾವಭಾವ ವಿಲಾಸವಿಭ್ರಮಣೆಗಳನು ತೋರಿ [*ನಮಗೆ*] ಒಳಗಾಗು ಒಲ್ಲದಿದ್ದರೆ ಗುಲ್ಲುಮಾಡಿ ತಲೆಹೊಯ್ಸಿ ಬಿಡುತ್ತೈದೇವಿಯೆಂದು ಹೇಳಿದಲ್ಲಿ ಪ್ರಾಣಹೋದರೂ ಇದೇ ಲಿಂಗೈಕ್ಯವೆಂದು [*ಅವರಿಗೆ*] ಒಳಗಾಗದೆ ಇರುವಂಥದೆ ಸ್ತ್ರೀಜ್ಞಾನ ಸನ್ಯಾಸತ್ವವು. ಇದಾವಾತಂಗೆ ಅಳವಡವುದಯ್ಯ-ಈ ಅರ್ಥಜ್ಞಾನಸನ್ಯಾಸತ್ವವು ಸ್ತ್ರೀಜ್ಞಾನಸನ್ಯಾಸತ್ವವು ಇದಾವಾತನಿಗೆ ದೊರಕೊಂಬುವುದಯ್ಯ.

ನಿಧಾನ ತಪ್ಪಿ ಬಂದಡೆ-ಮಧ್ಯದಲ್ಲಿ ನಿಕ್ಷೇಪದ್ರವ್ಯವು ತೊಲಗಿ ಬಂದರೆ; ಅಣ್ಣ ಕಾಣದ ಹಾಂಗೆ ತಮ್ಮ, ತಮ್ಮ ಕಾಣದ ಹಾಂಗೆ ಅಣ್ಣನು ಕೊಟ್ಟರೆ, ಒಲ್ಲೆವೆಂಬುವುರಿಲ್ಲ-ನಾನಾಗಿ ಬಯಸಲಿಲ್ಲ, ತಾನಾಗಿ ಬಂದಿತೆಂದು ತೆಗೆದುಕೊಂಬುವರಲ್ಲದೆ ಪರದ್ರವ್ಯವನ್ನು ಹಿಡಿಯಬಾರದೆಂದು ತಿರಸ್ಕಾರವ ಮಾಡಿ ಬಿಡುವಂಥವರು ಒಬ್ಬರೂ ಉಂಟಾಗಿಲ್ಲವು. ಪ್ರಮಾದವಶದಿಂದ ಬಂದಡೆ-ಮಧ್ಯದಲ್ಲಿ ಒಬ್ಬ ಸ್ತ್ರೀಯಳು ಒಲಿದು ಬಂದರೆ, ಹುಸಿಯೆನೆಂಬುವರಿಲ್ಲ-ನಾನಾಗಿ ಬಯಸಲಿಲ್ಲ ತಾನಾಗಿ ಬಂದಿತೆಂದು ಅವಳ ಸಂಸರ್ಗವ ಮಾಡುವರಲ್ಲದೆ ಪರಸ್ತ್ರೀಯಗಳ ಸಂಸರ್ಗವ ಮಾಡಬಾರದೆಂದು ತಿರಸ್ಕಾರವ ಮಾಡಿಬಿಡುವಂಥವರು ಒಬ್ಬರೂ ಉಂಟಾಗಿಲ್ಲವು. ನಿರಾಶೆ-ಪರದ್ರವ್ಯವನ್ನು ಹಿಡಿಯಬಾರದೆಂಬಂಥ ಅರ್ಥಜ್ಞಾನಸನ್ಯಾಸತ್ವವು, ನಿರ್ಭಯ-ಪರಸ್ತ್ರೀಯಳ ಸಂಸರ್ಗವ

ಮಾಡಬಾರದೆಂಬಂಥ ಸ್ತ್ರೀಜ್ಞಾನಸನ್ಯಾಸತ್ವವು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನೀನೊಲಿದ–ನೀನು ಕೃಪೆಯಾದ, ಶರಣಂಗಲ್ಲದೆ–ಶಿವಶರಣಂಗಲ್ಲದೆ, ಇಲ್ಲ–ಮಿಕ್ಕಿನ ಆಶಾಲಾಂಛನಿ ಉಪಾಧಿಕರುಗಳಿಗೆ ಉಂಟಾಗಿಲ್ಲ.

III –

3–3 x (ಟ, ಡ).

....

ಪ್ರಮಾದವಶ ಬಂದರ–೧[ದೋ]೧ಷದ ದಿನ ಪ್ರಾಪ್ತಿಯಗುತ್ತಿರಲಾಗಿ.

....

೧–೧ ಮೋ (ಟ, ಡ).

IV– –

1 + ಇನ್ನು ಶರಣಸ್ಥಲದ ವಚನ (ತ). 2–2 ವಂ (ತ). 3–3 x (ತ)

....

ಪ್ರಾಣಮನವೆಂಬೆರಡೂ ಅಳಿದು ಬ್ರಹ್ಮವಾದನಾಗಿ ಉಳಿದ ಸುಖಂಗಳ ಬಯಸ ಶರಣನೆಂಬುದೀ ವಚನದರ್ಥ.

V– –

೨ಧನದಲ್ಲಿ–ದ್ರವ್ಯದಲ್ಲಿ, ಶುಚಿ–ಪವಿತ್ರವು, ಪ್ರಾಣದಲ್ಲಿ ನಿರ್ಭಯ–ಪ್ರಾಣಲಿಂಗ ಪತಿತವಾಗುತ್ತಿರಲಾಗಿ ಪ್ರಾಣತ್ಯಾಗವ ಮಾಡುವುದೇ ಪ್ರಾಣದಲ್ಲಿ ನಿರ್ಭಯ, ಪ್ರಮಾದವಶದಿಂದ–ಮೋಸದ ದಿನದಿಂದ, ಬಂದರೆ–ವಿಘ್ನ ಬಂದರೆ, ಹುಸಿಯೆನೆಂಬುವರಿಲ್ಲ–ಅಬದ್ಧವ ನುಡಿಯೆನೆಂಬರಿಲ್ಲ.

....

೨ + ಶರಣಸ್ಥಲ (ಪ).

೮೫೭

ಶರಣ ೧ಸನ್ನಿಹಿತವಪ್ಪ೧ ನಿಜಗುಣಭರಿತನಹಡೆ, ಸತ್ವ ರಜ ತಮ ಕ್ರೋಧ ಬಿಡದನ್ನಕ್ಕ ಅನುಭಾವವೆಲ್ಲಿಹುದೋ? ಆತ್ಮಸ್ತುತಿ ಪರನಿಂದೆಯ ಬಿಡದನ್ನಕ್ಕ, ಅರಿಷಡ್ವರ್ಗ ದಶವಾಯು ಬೆರೆಸಿಪ್ಪ ೨ಕಳಂಕವ೩ಿಪ್ಪ೨ ತನು೩ವ೩ ಬಿಡದನ್ನಕ್ಕ ಸಂಸಾರ ಮಾದಲ್ಲದೆ, ಶರಣ ಸಜ್ಜನಿಕೆ ಸಮಯಾಚಾರ ನಿಜವ್ರತವು ದುರಾಚಾರಿಗಳಿಗಳವಡದು ನಮ್ಮ ಕೂಡಲಸಂಗನ ಶರಣರಿಗಲ್ಲ೪ದೆ.೪

I –

ಶರಣ–ಶರಣನೇ ಸತಿಯಾಗಿ ಲಿಂಗವೇ ಪತಿಯಾಗಿ ಶರಣಸತಿ ಲಿಂಗಪತಿತ್ವ ವಿಡಿದಾಚರಿಸುವಂಥ ಶರಣಸ್ಥಲದ ಮಾರ್ಗದಲ್ಲಿ, ಸನ್ನಿಹಿತವಪ್ಪ– ಅರುಹಿನ ಒಡಂಬಡಿಕೆಯಿಂದ ಕೊಡಲ್ಪಟ್ಟ, ನಿಜಗುಣಭರಿತನಹಡೆ–ಇಂತಪ್ಪ ಸಹಜ ಸದುಗುಣವೇ ತನ್ನಲ್ಲಿ ಉಂಟಾಗಿದ್ದರೆ, ಸತ್ವ–ಸತ್ವಗುಣ ಹತ್ತು, ರಜ–ರಜೋಗುಣ ಎಂಟು, ತಮ–ತಮೋಗುಣ ಎಂಟು, ಕ್ರೋಧ–ಸಿಟ್ಟು, ಬಿಡದನ್ನಕ್ಕ–ನಷ್ಟವಾಗಬೇಕು, ನಷ್ಟವಾಗದೆ ಇರುವ ಪರಿಯಂತರ, ಅನುಭಾವವೆಲ್ಲಿಹದೋ?–ಶಿವಾನುಭಾವವು ಎಲ್ಲೈತೋ? ಇಲ್ಲವು.

ಆತ್ಮಸ್ತುತಿ–ನಾವು ಜ್ಞಾನಿಗಳು ಶಿವಸ್ವರೂಪಿಗಳು ಪರಬ್ರಹ್ಮಸ್ವರೂಪಿಗಳೆಂದು ಹೇಳಿಕೊಂಬುವಂಥದೆ ಆತ್ಮಸ್ತುತಿ, ಪರನಿಂದೆಯ–ಪರರುಗಳನು ಇವರು ಆಸಕರು ಅಜ್ಞಾನರು ಕಳ್ಳರು ಸುಳ್ಳರು ಜಾರರು ಚೋರರೆಂದು ದೂಷಣೆಯ ಮಾಡುವಂಥದು, ಬಿಡದನ್ನಕ್ಕ–ನಷ್ಟವಾಗಬೇಕು, ನಷ್ಟವಾಗದೆ ಇರುವ ಪರಿಯಂತರ, ಅರಿಷಡ್ವರ್ಗ–ಕಾಮಾದಿ ಆರು ವರ್ಗಂಗಳ, ದಶವಾಯು–ಹತ್ತು ಪ್ರಕಾರವಾದ ಮಾರುತಂಗಳ, ಬೆರೆಸಿಪ್ಪ–ಕೂಡಿರುವ, ಕಳಂಕವಪ್ಪ ತನುವ–ಕಷ್ಟದೊಡನೆ ಕೂಡಲ್ಪಟ್ಟ ದೇಹಪ್ರಪಂಚು, ಬಿಡದನ್ನಕ್ಕ–ನಷ್ಟವಾಗಬೇಕು, ನಷ್ಟವಾಗದೆ ಇರುವ ಪರಿಯಂತರ, ಸಂಸಾರ ಮಾದಲ್ಲದೆ– ದೇಹಸಂಸಾರ ನಷ್ಟವಾದಲ್ಲದೆ, ಶರಣ ಸಜ್ಜನಿಕೆ–ಶರಣನೇ ಸತಿಯಾಗಿ ಲಿಂಗವೇ ಪತಿಯಾಗಿ ಶರಣಸತಿ ಲಿಂಗಪತಿತ್ವವಿಡಿದಾಚರಿಸುವಂಥ ಪರಮ ನಿರ್ಜರತ್ವಕ್ಕೆ, ಸಮಯಾಚಾರ–ಅಂಗಕ್ಕೆ ಲಿಂಗವೇ ಸಮಯಾಚಾರ, ಪ್ರಾಣಕ್ಕೆ ಜಂಗಮವೇ ಸಮಯಾಚಾರ, ನಿಜವ್ರತವು–ಷಡ್ವಿಧಶೀಲವ್ರತನೇಮಾಚಾರಂಗಳು, ದುರಾಚಾರಿಗಳಿಗೆ–ಹೊಲ್ಲನಡಾವಳಿಯನುಳ್ಳ ಜೀವರುಗಳಿಗೆ, ಅಳವಡದು–ದೊರಕೊಳ್ಳದು, ನಮ್ಮ ಕೂಡಲಸಂಗನ ಶರಣರಿಗಲ್ಲದೆ–ಶಿವನ ಚಿತ್ರ್ಭಾಂಗಸ್ವರೂಪರಾದ ಶಿವಶರಣರಿಗಲ್ಲದೆ ಮಿಕ್ಕಿನ ಆಶಾಲಾಂಛನಿ ಉಪಾಧಿಕರುಗಳಿಗೆ ಉಂಟಾಗಿಲ್ಲವು.

II –

1–1 ಸನ್ನಿಹಿತನಪ್ಪ (ಚ.ಜ.)

....

ಶರಣಸನ್ನಿಹಿತನಪ್ಪ –ಶಿವಶರಣರಲ್ಲಿ ಒಡಂಬಡಿಕೆಯಿಂದ ಕೂಟಸ್ಥವಾದಂಥ, ನಿಜಗುಣಭರಿತನಹಡೆ–ಸಮರಸಸದ್ಭಕ್ತಿವಿಷಯದಲ್ಲಿ ತುಂಬಿದಾತನಾಗಬೇಕಾದರೆ, ಮುಂದಕ್ಕೆ ಕಾಣಬಂದರ್ಥ.

III –

1–1 ಸನ್ಮತವಪ್ಪ (ಟ, ಡ). 2–2 x (ಟ, ಡ). 3–3 x (ಟ, ಡ).

....

ಶರಣ–ಶಿವಶರಣರುಗಳಲ್ಲಿ, ಸನ್ಮತವಪ್ಪ–ಒಡಂಬಡಿಕೆಯಾದ, ನಿಜಗುಣಭರಿತನಹಡೆ–ಸಹಜ ಸದ್ಗುಣದಿಂದೆ ತುಂಬಲ್ಪಟ್ಟಾತನಾಗುವಡೆ. ಸತ್ವ–ಸತ್ವಗುಣದಜಡಶಾಂತಿಯು, ರಜ–

ರಜೋಗುಣದಹಂಕಾರವು, ತಮ-ತಮೋಗುಣದಜ್ಞಾನದ ಬಳಲಿಕೆಯು, ಕ್ರೋಧ-ಸಿಟ್ಟುಗಳು, ಬಿಡದನ್ನಕ್ಕ-ತ್ಯಜಿಸದಿರುವ ಪರಿಯಂತರಲು, ಅನುಭಾವವೆಲ್ಲಿಯದೊ? -ಜ್ಞಾನಾನುಭವ ಯಾವಕಡೆಯಣದೊ.

ಆತ್ಮಸ್ತುತಿ-ತನ್ನ ಸ್ತೋತ್ರವು, ಪರನಿಂದೆ-ಅನ್ಯದೂಷಣೆಯು, ಬಿಡದನ್ನಕ್ಕ-ತ್ಯಜಿಸದಿರುವತನಕಲು, ಅರಿಷಡ್ವರ್ಗ-ರಿಪುಷಟ್ಕಂಗಳು, ದಶವಾಯು-ಹತ್ತು ವಾಯುಗಳ ವ್ಯಾಪಾರ, ಬೆರಸಿಪ್ಪ-ಕೂಡಿರುವ, ಕಳಂಕವಪ್ಪ-ಕಲ್ಮಷದೊಡನೆ ಕೂಡಿದ, ತನು-ದೇಹಭಾವವು, ಬಿಡದನ್ನಕ್ಕ-ಬಿಡುಗಡೆಯಾಗದಿರುವ ಪರಿಯಂತರಲು, ಸಂಸಾರಮಾದಲ್ಲದೆ-ಕಾಯಜೀವಸಂಸ್ಕೃತಿಯು ನಿವೃತ್ತಿಯಾದಲ್ಲದೆ, ಸಜ್ಜನಿಕೆ-ಸತ್ಯಜ್ಞಾನತಪಧೃತಿಶೀಲನೈಷ್ಠೆಗಳನುಳ್ಳ ಸತ್ಪುರಷತ್ವವು, ಸಮಯಾಚಾರ-ಗುರುಲಿಂಗಜಂಗಮದ ಸಹಪಙ್ತಿ ಸಹಭೋಜನವು. ನಿಜ-ಬ್ರಹ್ಮದ, ವ್ರತವು-ಧಾರಣವು, ನಮ್ಮ-ಮಮಕರ್ತೃವಾದ, ಕೂಡಲಸಂಗನ ಶರಣರಿಗಲ್ಲದೆ-ಶಿವಶರಣರಿಗಲ್ಲದೆ, ದುರಾಚಾರಿಗಳಿಗಳವಡದು-ದುರ್ಮುಖಿಗಳಿಗಳವಡದು, ಸಂಬಂಧವಾಗದು.

IV- -

1-1 ಸನ್ಮತವಪ್ಪ (ತ). 2-2 x (ತ). 4-4 ದಿಲ್ಲ (ತ).

....

ಲಿಂಗದಲ್ಲಿ ಕೂಡುವರೆ ದೇಹೇಂದ್ರಿಯಮನಃ ಪ್ರಾಣ ಮೊದಲಾದ ಕರಣಂಗಳುಳ್ಳ ಭವಿಗೆಯಾಗದು, ಸತ್ವವುಳ್ಳ ಶರಣಂಗೆ ಲಿಂಗದ ಕೂಟವಹುದೆಂಬುದೀ ವಚನದರ್ಥ.

V- -

ಸಂಸಾರಮಾದಲ್ಲದೆ-ಜನನಮರಣರೂಪದುಃಖಪ್ರವಾಹವೆಂಬ ಸಂಸೃತಿನಿವಾರಣವಾದಲ್ಲದೆ, ಶರಣಸ್ಥಲದ, ಸಜ್ಜನಿಕೆ-ಸತ್ಯಜ್ಞಾನತಪೋಧೃತಿ ಶೀಲನೈಷ್ಠೆಯೆಂಬ ಸಜ್ಜನತ್ವವುಳ್ಳ, ಸಮಯಾಚಾರ-ಗುರುಲಿಂಗಜಂಗಮದ ಸಹಪಂಕ್ತಿ ಸಹಭೋಜನ, ನಿಜವ್ರತ-ಲಿಂಗಾಧಾರಣವ್ರತವು.

ಲ೫೮

ಹಲಬರ ನುಂಗಿದ ಹಾವಿಂಗೆ ತಲೆ ಬಾಲವಿಲ್ಲ ನೋಡಾ! ಕೊಲ್ಲುವುದು ತ್ರೈಜಗವೆಲ್ಲವ, ತನಗೆ ಬೇಱೆ ಪ್ರಳಯವಿಲ್ಲ. [1]ನಾಲ್ಕಡಿಯಲ್ಲಿ ಎಯ್ದುವುದು[1], [2]ಲೋಕದ ಕಥೆ[2]ಯನೆ ಕಾಂಬುದು, ಸೂಕ್ಷ್ಮಪಥದಲ್ಲಿ ನಡೆವುದು, ತನಗೆ ಬೇಱೆ ಒಡಲಿಲ್ಲ ಅಹಂಮೆಂಬ ಗಾರುಡಿಗನ ನುಂಗಿತ್ತು, ಕೂಡಲಸಂಗನ [3]ಶರಣರಲ್ಲದುಳಿದರ[3].

I -

ಹಲಬರ-ಹಲವು ಕೆಲವು ದೇವದಾನವಮಾನವರುಗಳ, ನುಂಗಿದ-"ನುಂಗುಗಿಳನೇ"ಯೆಂದು ಗಿಳನಂಗೈದ, ಹಾವಿಂಗೆ-ಮನೋಕುಂಡಲಿಯೆಂಬ ಸರ್ಪನಿಗೆ, ತಲೆಬಾಲವಿಲ್ಲ ನೋಡಾ : ತಲೆ-ಜ್ಞಾನವೆಂಬ ಶಿರಸ್ಸು, ಬಾಲ-ಕ್ರೀಯೆಂಬ ಪುಚ್ಛವು, ಇಲ್ಲನೋಡಾ-ಉಂಟಾಗಿಲ್ಲ

ಕಂಡಾ, ತ್ರೈಜಗವೆಲ್ಲವ–ಸ್ವರ್ಗಮರ್ತ್ಯಪಾತಾಳವೆಂಬ ಮೂರುಕೋಲದಲ್ಲಿದ್ದಂಥ ದೇವದಾನಮಾನವಾದಿಗಳನು, ಕೊಲ್ಲುವುದು–ಜನನಮರಣಂಗಳಲ್ಲಿ ತಂದು ಸಂಹರಿಸುತ್ತಿಹುದು, ತನಗೆ ಬೇಱೆ ಪ್ರಳಯವಿಲ್ಲ–ಎಲ್ಲ ಆತ್ಮರುಗಳಿಗೆ ತಾನೇ ಚೈತನ್ಯವಾಗಿರ್ಪುದಲ್ಲದೆ ತನಗೆ ಬೇರೆ ಪ್ರಳಯವಿಲ್ಲ, ಲಯವಿಲ್ಲವು.

ನಾಲ್ಕಡಿಯಲ್ಲಿ ಎಯ್ದುವುದು–ಚತುಃಕರಣಂಗಳೊಡನೆ ಕೂಡಿ ಚರಿಸುತ್ತಿಹುದು, ಲೋಕದ ಕಥೆಯನೆ ಕಾಂಬುದು–ಲೋಕದಾತ್ಮರುಗಳ ಹಾಂಗೆ ಜಾತಿವರ್ಣಾಶ್ರಮಕುಲಗೋತ್ರನಾಮಾಚಾರಂಗಳ ವರ್ತನೆಯೊಡನೆ ಕೂಡಿ ಚರಿಸುವುದು, ಸೂಕ್ಷ್ಮಪಥದಲ್ಲಿ ನಡೆವುದು–ಮನೋಮಾರ್ಗದಲ್ಲಿ ಗಮಿಸುವುದು, ತನಗೆ ಬೇಱೆ ಒಡಲಿಲ್ಲ–ಎಲ್ಲಾ ಆತ್ಮರುಗಳ ಅಂಗವನೆ ಆಲಯುವ ಮಾಡಿಕೊಂಡಿರ್ಪುದಲ್ಲದೆ ತನಗೆ ಬೇರೆ ಪಂಚಭೂತಯುಕ್ತವಾದ ದೇಹ ಸಾಕಾರ ಉಂಟಾಗಿಲ್ಲವು, ಅಹಂವೆಂಬ–ಆತ್ಮಾ ಕೇವಲಃ ಶಿವಃ ಆತ್ಮನೇ ಬ್ರಹ್ಮವೆಂದು ಹೇಳುವ, ಗಾರುಡಿಗನ–ವಾಗದ್ವೈತಿಯ, ನುಂಗಿತ್ತು–ಅವಗ್ರಹಿಸಿತ್ತು, ಕೂಡಲಸಂಗನ ಶರಣರಲ್ಲದೆ–ಶಿವನ ಚಿತ್ಪ್ರಭಾಂಗಸ್ವರೂಪರಾದ ಶಿವಶರಣರಲ್ಲದೆ, ಉಳಿದವರ–ಸಕಲಪ್ರಪಂಚಿನಲ್ಲಿ ಅವಶೇಷಿತವಾದ ದ್ವೈತಾದ್ವೈತಿಗಳನು, ನುಂಗಿತ್ತು–ಅವಗ್ರಹಿಸಿತ್ತು.

II– –

ಹಲಬರ ನುಂಗಿದ ಹಾವಿಂಗೆ ತಲೆಬಾಲವಿಲ್ಲ ನೋಡಾ–ಅನಂತ ಹಿರಿಯರನೊಳಕೊಂಡ ಅಜ್ಞಾನಮಾಯಾಸರಿಸೃಪಂಗೆ ಸುಜ್ಞಾನಸತ್ಕ್ರೀಯು ಇಲ್ಲ ಕಂಡಾ, ಕೊಲುವುದು ತ್ರೈಜಗವೆಲ್ಲವ–ಮೂರು ಲೋಕದಲ್ಲಿರ್ದ ಸಮಸ್ತಾತ್ಮರುಗಳನು ಸಂಹರಿಸುವುದು, ಮುಂದಕ್ಕೆ ಕಾಣಬಂದರ್ಥ.

III –

1–1 ನಾಕಡಿಯನೆಯ್ದುವುದು (ಟ, ಡ), 3–3 ಶರಣರುಗಳಲ್ಲದೆ ಉಳಿದವರ (ಟ, ಡ)

....

ಹಲಬರ–ದ್ವೈತಾದ್ವೈತ ಹಠಯೋಗಮಾರ್ಗಸ್ಥರನು, ನುಂಗಿದ–ಪ್ರಪಂಚಿನಿಂದೆ ಗಿಳನಂಗೆಯ್ದು, ಹಾವಿಂಗೆ–ಮನೋಕುಂಡಲಿಯೆಂಬ ಸರ್ಪನಿಗೆ, ತಲೆಬಾಲವಿಲ್ಲ ನೋಡಾ–ಸತ್ಕ್ರೀಸಮ್ಯಜ್ಞಾನಗಳೆಂಬ ಶಿರಪುಚ್ಛಗಳುಂಟಾಗವು ಕಂಡಾ, ತ್ರೈಜಗವೆಲ್ಲವ–ತನುತ್ರಯಗಳಲ್ಲಿ ಸಂಬಂಧವಾದ ಜೀವತ್ರಯಗಳೆಲ್ಲವನು, ಕೊಲ್ಲುವುದು–ಹತಿಸುವುದು, ಬೇಱೆ ಪ್ರಳಯವಿಲ್ಲ–ಬೇಱೆ ನಾಶವುಂಟಾಗದು. ನಾಲ್ಕಡಿಯನೆಯ್ದುವುದು–ಚತುಃಕರಣಂಗಳೊಡನೆ ಕೂಡಿ ವರ್ತಿಸುವುದು. ಲೋಕದ ಕಡೆಯನೆ ಕಾಂಬುದು–ಲೋಕದಾತ್ಮರುಗಳಿಗೆ ಲಯವನ್ನುಂಟುಮಾಡುವುದು, ಸೂಕ್ಷ್ಮಪಥದಲ್ಲಿ ನಡೆವುದು–ಇಂದ್ರಿಯಂಗಳಿಗೆ ಗೋಚರವಾಗದೆ ನೆನಹು ಮಾರ್ಗದಲ್ಲಿ ವರ್ತಿಸುವುದು. ತನಗೆ – ಆ ಮನಃಕುಂಡಲಿಗೆ. ಬೇಱೆ ಒಡಲಿಲ್ಲ–ಪೃಥಕ್ಕಾಗಿ ಶರೀರಸಂಬಂಧವುಂಟಾಗದು. ಅಹಂಮೆಂಬ–ನಾನುಯೆಂಬಂಥ, ಗಾರುಡಿಗನ–ಮಂತ್ರಸಂಬಂಧಿಯನು, ಕೂಡಲಸಂಗನ ಶರಣರುಗಳಲ್ಲದೆ ಉಳಿದವರ–ಶಿವಶರಣರುಗಳಲ್ಲದೆ ಅವಶೇಷಿತವಾದವರುಗಳನ್ನು, ನುಂಗಿತ್ತು–ಮನಃಪ್ರಪಂಚು ಗಿಳನಂಗೆಯ್ದಿತ್ತು.

IV– –

2–2 ಡೆ (ತ).

....

ಮನ೧[ವೆಲ್ಲ]೧ ಶರಣಂಗೆ ಲಿಂಗವಾಗಿ ಮನೋವಿಕಾರವೆಲ್ಲವನೊಳಗೊಂಡಿಹುದು, ಮನದಿಂಧ ಪ್ರಳಯವೆಲ್ಲರಿಗೆ, ಆ ಮನಕ್ಕೆ ಆಕಾರವಿಲ್ಲ. ಆ ಮನವು ನಾಲ್ಕು ಕರಣರೂಪಾಗಿಹುದು. ಮನವೇ ಶಿವಪಥಕ್ಕೆ ನಡೆವುದು ಮನದಹಂಕಾರದಿಂದ ಬಲ್ಲವರೆಲ್ಲಾ ಅಡಗಿಹರೆಂಬುದೀ ವಚನದರ್ಥ.

೧–೧ ದಲಿಲ್ಲ (ತ).

V –

1–1 ನಾಲ್ಕಡಿಯನೆಯ್ದುವುದು (ಪ) 2–2 ಡೆ (ಪ)

....

ಹಲಬರ–ದ್ವೈತಾದ್ವೈತ ಹಠಯೋಗಮಾರ್ಗಸ್ಥರನು, ನುಂಗಿದ–ಪ್ರಪಂಚಿನಿಂದ ಗಿಳನಂಗೆಯ್ದು, ಹಾವಿಂಗೆ–ಮನಃಕುಂಡಲಿಯೆಂಬ ಸರ್ಪನಿಗೆ. ತಲೆ ಬಾಲವಿಲ್ಲ ನೋಡಾ–ಜ್ಞಾನಕ್ರಿಯೆಗಳೆಂಬ ಶಿರಃಪುಚ್ಛಗಳಿಲ್ಲ ಕಂಡಾ, ತ್ರೈಜಗವೆಲ್ಲವ–ತನುತ್ರಯಂಗಳಲ್ಲಿ ಸಂಬಂಧವಾದ ಜೀವತ್ರಯಂಗಳೆಲ್ಲವನು, ಕೊಲುವುದು–ಹತಿಸುವುದು, ತನಗೆ ತನಗೆ ಬೇಱೆ ಪ್ರಳಯವಿಲ್ಲ–ತನಗೆ ತನಗೆ ಬೇಱೆ ನಾಶವಿಲ್ಲ. ನಾಲ್ಕಡಿಯನೆಯ್ದುವುದು–ಚತುಃಕರುಣಂಗಳೊಡನೆ ಕೂಡಿ ವರ್ತಿಸುವುದು,ಲೋಕದ ಕಡೆಯನೆ ಕಾಂಬುದು–ಜಗಜ್ಜನರಿಗೆ ಲಯವನ್ನುಂಟುಮಾಡುವುದು, ಸೂಕ್ಷ್ಮಪಥದಲ್ಲಿ ನಡೆವುದು–ಇಂದ್ರಿಯಂಗಳಿಗೆ ಗೋಚರವಾಗೆ ನೆನಹು ಮಾರ್ಗದಲ್ಲಿ ವರ್ತಿಸುವುದು, ತನಗೆ–ಆವ ಮನಃಕುಂಡಲಿಗೆ, ಬೇಱೆ–ಪೃಥಕ್ಕಾಗಿ, ಒಡಲಿಲ್ಲ–ಶರೀರವಿಲ್ಲವು, ಅಹಮೆಂಬ–ನಾನುಯೆಂಬ ಗಾರುಡಿಗನ–ಮಂತ್ರಸಂಬಂಧಿಯ, ನುಂಗಿತ್ತು.

೮೫೫

ಆದಿತ್ಯ ಸೋಮರು [1]ಆಗಿ[1] ಹೋಗುತ್ತಿದ್ದಾರು, ಬ್ರಹ್ಮ ಪ್ರಳಯಕ್ಕೊಳಗಾದ, ಹರಿಯ ಸಿಂಹಾಸನವಡಗಿತ್ತು, [2]ಅಂತು[2] ನಾಸ್ತಿ [3]ಇಂತು[3] ನಾಸ್ತಿ[4]! ರೋಮಜರೆಂಬವರು [5]ಸಿಟ್ಟು[5]ಗುಟ್ಟಿ ತರುಮರದಡಿಯಲ್ಲಿದ್ದರು. ಮಾರ್ಕಂಡೇಯ ಮಹಾಮುನಿ ಸ್ವೇಚ್ಛಾಮರಣೆಯೆನಿಸಿಕೊಂಡನಲ್ಲದೆ ಲಿಂಗದ ನಿ[6]ಜ[6]ವನಱಿಯನು. ಇದು ಕಾರಣ ಕೂಡಲಸಂಗಮದೇವಾ ನೀವು ಮಾಡಿದ ಬಯಲು ಭಕ್ಷಿಸಿತ್ತು ಅನಂತ ಹಿರಿಯರನು.

I –

ಆದಿತ್ಯಸೋಮರು–ಸೂರ್ಯಚಂದ್ರರು, ಆಗಿ–ಪೂರ್ವಾದ್ರಿಯಿಂದ ಉದಯವಾಗಿ, ಹೋಗುತ್ತಿದ್ದಾರು–ಪಶ್ಚಿಮಾದ್ರಿಯಲ್ಲಿ ವಿಡಂಬಿಸಿ ಹೋಗುತ್ತಿದ್ದಾರು. ಹಾಂಗೆ ಆದಿತ್ಯಸೋಮರು

ಆಗಿ ಪರಶಿವಲಿಂಗಕ್ಕೆ ಲೀಲೆದೋರಿ ಈ ಅಷ್ಟತನುಬ್ರಹ್ಮಾಂಡಾದಿ ಸಕಲಪ್ರಪಂಚವನ್ನು ಉಂಟು ಮಾಡಿಕೊಂಡು ವಿನೋದಿಸಿ ಆ ಲೀಲಾಂತ್ಯದಲ್ಲಿ ನಿಃಕಲಬ್ರಹ್ಮದಲ್ಲಿ ಅಡಗಿ ವಿಡಂಬಿಸಿ ಹೋಗುತ್ತಿದ್ದಾರು. ಬ್ರಹ್ಮ ಪ್ರಳಯಕ್ಕೊಳಗಾದ–ವಿರಿಂಚಿಯು ಲಯಕ್ಕೊಳಗಾದನು. ಹರಿಯ–ನಾರಾಯಣನ, ಸಿಂಹಾಸನವಡಗಿತ್ತು–ದುರ್ಭೋಗದ ಸ್ಥಿತಿಯು ನಷ್ಟವಾಗಿ ಹೋಯಿತ್ತು. ಅಂತು ನಾಸ್ತಿ–ಅಷ್ಟತನು ಬ್ರಹ್ಮಾಂಡಾದಿಸಕಲಪ್ರಪಂಚು ನಿಃಪತ್ತಿಯು. ಇಂತು ನಾಸ್ತಿ–ಬ್ರಹ್ಮವಿಷ್ಣ್ವಾದಿಗಳು ನಿಃಪತ್ತಿಯು, ರೋಮಜರೆಂಬುವರು–ರೋಮಜ ಮೀನಜಮಹಾಮುನಿಗಳೆಂಬವರು, ಸಿಟ್ಟುಗುಟ್ಟಿ–ಕರಣಂಗಳ ಮೇಲೆ ವೈರಾಗ್ಯವನು ಮುಂದುಗೊಂಡು, ತರುಮರದಡಿಯಲ್ಲಿದ್ದರು–ಸಸಿವೃಕ್ಷಾದಿಗಳನೆ ಆಲಯವ ಮಾಡಿಕೊಂಡು ತನುದಂಡನೆಯ ಮಾಡುತ್ತ ತಪಸಿಗಳಾಗಿ ಕುಳಿತುಕೊಂಡಿದ್ದರು. ಮಾರ್ಕಂಡೇಯಮಹಾಮುನಿ–ಮಾರ್ಕಂಡೇಯನೆಂಬ ದೊಡ್ಡ ಋಷೀಶ್ವರನು, ಸ್ವೇಚ್ಛಾಮರಣಿಯೆನಿಸಿ ಕೊಂಡನಲ್ಲದೆ–ತನ್ನ ಸ್ವಇಚ್ಛೆಯಲ್ಲಿ ಮರಣವುಳ್ಳಾತನೆಂದು ಹೇಳಿಸಿಕೊಂಡನಲ್ಲದೆ, ಲಿಂಗದ–ಮಹಾಲಿಂಗದ, ನಿಜವನಜೆಯನು–ಸ್ವಸ್ವರೂಪಿನ ನಿಲುಕಡೆಯನು ತಿಳಿಯನು. ಇದು ಕಾರಣ–ಇದು ನಿಮಿತ್ತಾರ್ಥ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನೀವು ಮಾಡಿದ–ನೀವು ಉಂಟುಮಾಡಿದ, ಬಯಲು–ಮಿಥ್ಯವಾದ ಮಾಯಾಪ್ರಪಂಚು, ಅನಂತ–ಬಹಳವಾದ, ಹಿರಿಯರನು–ದೊಡ್ಡವರಾದ ಬ್ರಹ್ಮವಿಷ್ಣ್ವಾದಿಗಳನು. ೧ಭಕ್ಷಿಸಿತ್ತು೧–ಮುರಿದು ನುಂಗಿತ್ತು.

....

೧–೧ ನುಂಗಿತ್ತು (ಕ, ಗ)

III– –

1–1 ಅಡಗಿ (ಟ, ಡ), 2–2 ಅತೋ (ಟ, ಡ), 3–3 (ಇತೋ (ಟ, ಡ), 4+ಇಂತು (ಟ, ಡ), 6–6 ಲಟ್ಟ (ಟ, ಡ)

....

ಆದಿತ್ಯಸೋಮರು–ಜೀವಪ್ರಾಣವಾರುತಂಗಳು, ಅಡಗಿಹೋಗುತ್ತಿದ್ದರು–ಜನನಮರಣಂಗಳಿಗೊಳಗಾಗುತ್ತಿದ್ದರು, ಬ್ರಹ್ಮ ಪ್ರಳಯಕ್ಕೊಳಗಾದ ವಿರಿಂಚಿಯ ಉತ್ಪತ್ತಿಯು ನಾಶವಾಯಿತ್ತು. ಹರಿಯ ಸಿಂಹಾಸನವಡಗಿತ್ತು–ವಿಷ್ಣುವಿನ ಸ್ಥಿತಿಯಡಗಿತ್ತು, ಅತೋ ನಾಸ್ತಿ–ಆ ಬ್ರಹ್ಮನ ಸೃಷ್ಟಿಯು ನಷ್ಟವು, [ಇತೋ ನಾಸ್ತಿ–ಈ] ವಿಷ್ಣುವಿನ ಸ್ಥಿತಿಯು ನಷ್ಟವು. ಇಂತು ಈ ಪ್ರಕಾರದಲ್ಲಿ, ರೋಮಜರೆಂಬುವರು–ರೋಮಜ ಮೀನಜ ಚಿಪ್ಪಜರೆಂಬ ಮುನಿಗಳು, ಸಿಟ್ಟುಗುಟ್ಟಿ–ಜನ್ಮಕ್ಕೆ ಹೇಸಿ, ತರುಮರದಡಿಯಲ್ಲಿದ್ದರು–ದಾರುವನಾಶ್ರಯದಲ್ಲಿ ತಪವನಾಚರಿಸಿರ್ದರು, ಮಾರ್ಕಂಡೇಯಮಹಾಮುನಿ ಮಾರ್ಕಂಡೇಯಮುನೀಶ್ವರನು, ಸ್ವೇಚ್ಛಾಮರಣಿಯೆನಿಸಿಕೊಂಡನಲ್ಲದೆ–ತನ್ನಿಚ್ಛೆಯ ಸಾವನೇ ಬೇಡಿಕೊಂಡನಲ್ಲದೆ, ಲಿಂಗದ ನಿಲವನಜೆಯನು–ವಸ್ತುವಿನ ೨ನಿಲವನು೨ ತಿಳಿಯಲಿಲ್ಲನು. ಇದು ಕಾರಣ–ಇದು ನಿಮಿತ್ಯವಾಗಿ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನೀವುಮಾಡಿದ–ನೀವು ಆಗುಮಾಡಿದಂಥ, ಬಯಲು–ಭ್ರಾಂತರೂಪಾದ ಮಾಯೆಯು, ಅನಂತ ಬಹಳವಾದ, ಹಿರಿಯರನು–ಅಹಂಕಾರ ಶ್ರೇಷ್ಠರನು, ಭಕ್ಷಿಸಿತ್ತು–ಪ್ರಪಂಚನಿಂದೆ ನುಂಗಿ ಬಿಟ್ಟಿತ್ತು.

....

೨–೨ ನಿಲುಕಡೆಯನು (ಡ)

IV– –

2–2 ಅತೋ (ತ) 3–3 ಇತೋ (ತ)

....

ದ್ವೈತವಳಿದು ಅದ್ವೈತವಾದ ಲಿಂಗವಾದರು ಶರಣರು, ಆದಿತ್ಯ, ಸೋಮ, ಬ್ರಹ್ಮ, ವಿಷ್ಣು, ರೋಮಜ ಮಾರ್ಕಂಡೇಯ ಮೊದಲಾಗಿ ಲಿಂಗದ ನಿಜವನಱಿಯದೆ ಮನದಿಂದ ಕೆಟ್ಟರೆಂಬುದೀ ವಚನದರ್ಥ.

V –

5–5 ಬಟ್ಟ (ಪ)

....

ಆದಿತ್ಯಸೋಮರು–ಸೂರ್ಯ ಚಂದ್ರರು, ಆಗಿ ಹೋಗುತ್ತಿದ್ದಾರು–ಹುಟ್ಟಿ ಹೊಂದುತಿದ್ದಾರು ಮತ್ತು ಜೀವಪ್ರಾಣಮಾರುತಂಗಳು ಆಗಿ ಹೋಗುತ್ತಿದ್ದಾರು: ಜನನ ಮರಣವಾಗುತ್ತಿದ್ದಾರು. ಹರಿಯ ಸಿಂಹಾಸನವಡಗಿತ್ತು–ವಿಷ್ಣುವಿನ ಸ್ಥಿತಿನಷ್ಟವಾಯಿತ್ತು. ಅಂತು ನಾಸ್ತಿ ಗುರೋಪದೇಶದಿಂದಂಗದ ಮೇಲೆ ಇಷ್ಟಲಿಂಗ ಧಾರಣವಾಗಲಾಗಿ ಆ ಬ್ರಹ್ಮನ ಸೃಷ್ಟಿ ನಾಸ್ತಿಯಾಯಿತ್ತು. ಇಂತು ನಾಸ್ತಿ–ಮಂತ್ರದೀಕ್ಷೆಯಿಂದೆ ಅಂತರಂಗದಲ್ಲಿ ಪ್ರಾಣಲಿಂಗಸಂಬಂಧವಾಗಲಾಗಿ ವಿಷ್ಣುವಿನ ಸ್ಥೀತಿ ನಷ್ಟವಾಯಿತ್ತು. ರೋಮಜರೆಂಬರು–ರೋಮಜ ಮೀನಜ ಚಿಪ್ಪಜರೆಂಬ ಮಹಾಮುನಿಗಳು, ಬಟ್ಟಗುಟ್ಟಿ ಜನ್ಮಕ್ಕೆ ಹೇಸಿ, ತರುಮರದಡಿಯಲ್ಲಿದ್ದರು–ದಾರುವನಾಶ್ರಯದಲ್ಲಿ ತಪವನಾಚರಿಸುತ್ತಿದ್ದರು.

೮೬೦

ಆದಿಯುಲ್ಲಿ ಶಿವಬೀಜ[1]ವಾಗದಿದ್ದಡೆ[1] ವೇದ್ಯವಾಗದು ಶಿವಜ್ಞಾನ ಶಿವಭಕ್ತಿ. ಲಿಂಗ[2]ಸ್ಥಲವಳವಡದು, ಜಂಗಮಸ್ಥಲವಳವಡದು, ಪಾದೋದಕ[3]ಸ್ಥಲವಳವಡದು[3], ಪ್ರಸಾದಸ್ಥಲವಳವಡದು, ನರಕದಲ್ಲಿ ಬೀಳುವ ಕರ್ಮಿಗಳಿಗೆ ಕೂಡಲಸಂಗನ ಶರಣರನುಭಾವ ನೆಲೆಗೊಳ್ಳದು.

I –

ಆದಿಯಲ್ಲಿ ಶಿವಬೀಜವಾಗದ್ದಿದ್ದಡೆ: ಆದಿಯಲ್ಲಿ–ಪೂರ್ವದಲ್ಲಿ, ಶಿವಬೀಜವಾಗದಿದ್ದಡೆ–ಶಿವಯೆಂದರೆ ನಿಃಕಲಬ್ರಹ್ಮವು, ಬೀಜವೆಂದರೆ ಚಿತ್ತು, ಆಗದಿದ್ದಡೆ–ಚಿತ್ತು ಚಿದ್ಘನಲಿಂಗವೆ [ತಾನಾಗಬೇಕು, ತಾನಾಗದೆಯಿದ್ದರೆ, ಶಿವಜ್ಞಾನ–ಪರಶಿವಜ್ಞಾನವು, ಶಿವಭಕ್ತಿ–ಶಿವಾದ್ವೈತಭಕ್ತಿಯು, ವೇದ್ಯವಾಗದು

ದೊರೆಕೊಳ್ಳದು, ಲಿಂಗಸ್ಥಲ–ಮನದಲ್ಲಿ ಲಿಂಗಸಂಬಂಧವ ಮಾಡಿಕೊಂಡು ಲಿಂಗಪೂಜೆಯ ಮಾಡುವಂಥದು, ಅಳವಡದು–ದೊರೆಕೊಳ್ಳದು, ಜಂಗಮಸ್ಥಳವು–ಪ್ರಾಣದಲ್ಲಿ ಜಂಗಮಸಂಬಂಧವ ಮಾಡಿಕೊಂಡು ಜಂಗಮಭಕ್ತಿಯ ಮಾಡುವಂಥದು. ಅಳವಡದು–ದೊರೆಕೊಳ್ಳದು. ಪಾದೋದಕಸ್ಥಲವು–ಸರ್ವಾಂಗದಲ್ಲಿ ಪಾದೋದಕಸಂಬಂಧ ಮಾಡಿಕೊಂಡು ಪಾದೋದಕವ ಸೇವನೆಯ ಮಾಡುವಂಥದು. ಅಳವಡದು–ದೊರೆಕೊಳ್ಳದು. ಪ್ರಸಾದಿಸ್ಥಲವು–ಆತ್ಮಾಂಗದಲ್ಲಿ ಪ್ರಸಾದಸಂಬಂಧವ ಮಾಡಿಕೊಂಡು ಪ್ರಸಾದಸೇವನೆಯ ಮಾಡುವಂಥದು, ಅಳವಡದು–ದೊರೆಕೊಳ್ಳದು.

ನರಕದಲ್ಲಿ ಬೀಳುವ ಕರ್ಮಿಗಳಿಗೆ–ನಿರಯದಲ್ಲಿ ಬಿದ್ದು ಹೊರಳಾಡುವ ಪಾಪಾತ್ಮರುಗಳಿಗೆ, ಕೂಡಲಸಂಗನ ಶರಣರ–ಶಿವನ ಚಿತ್ಪ್ರಭಾಂಗಸ್ವರೂಪರಾದ ೧ಶಿವಶರಣರ೧, ಅನುಭಾವ–ಶಿವಾನುಭಾವವು, ನೆಲೆಗೊಳ್ಳದು–ತಮ್ಮಲ್ಲಿ ಇಂಬುಕೊಳ್ಳದು.

....

೧–೧ ಜಂಗಮಮೂರ್ತಿಗಳ (ಕ)

IV –

1–1 ವಲ್ಲದವರಿಗೆ (ತ). 2 + ಕುಲ (ತ). 3–3 X (ತ)

....

ತಾನು ಶಿವಾಂಶಿಕನೆಂದಱಿದು, ತನ್ನ ನಿಜವ ತಿಳಿದು ಆಚರಿಸಬಲ್ಲ ಶರಣಂಗೆ ಶಿವಜ್ಞಾನ ಶಿವಭಕ್ತಿಯಳವಟ್ಟು ಲಿಂಗಾಂಗಸಂಬಂಧ ಘಟಿಸಿ, ಆ ಶರಣನು ಲಿಂಗವೇ ಆಗಿಪ್ಪನಲ್ಲದೆ, ದ್ವೈತಭಾವದಿಂದ ಎಂದೆಂದೂ ಮಲಮಾಯಾಕರ್ಮಯುಕ್ತನಪ್ಪ ಜೀವ ತಾನೆಂಬ ಕರ್ಮಕಾಂಡಿಗಳಿಗೆ ಭವಕರ್ಮ ನರಕ ತಪ್ಪದೆಂಬುದೀ ವಚನದ ತಾತ್ಪರ್ಯಾರ್ಥ.

೮೬೧

ಮರುಳ ಕಂಡ ಕನಸಿನ ಪರಿಯಂತೆ ಶಿವಾಚಾರ, ಕರಿಯು ಕನ್ನಡಿಯೊಳಡಗಿದಂತಯ್ಯ! ಗುಣಿ ಅವಗುಣಿಯೊಡನಾಡಿದಡೆ ಅದೇ ಆತನ ಕರ್ಮದ ಫಲ ನೋಡಾ! ಕೂಡಲಸಂಗನ ಶರಣನುಭಾವ ಭವದುಃಖಿಗಳಿಗೆ ವೇದ್ಯವಾಗದಯ್ಯ.

I –

ಮರುಳ ಕಂಡ ಕನಸಿನ ಪರಿಯಂತೆ–ಶಿಶುವೇನಾದರೂ ಸುಖದುಃಖ ಮೊದಲಾದ ಸ್ವಪ್ನಂಗಳನು ಕಂಡು ಒಬ್ಬರ ಕೂಡ ಹೇಳುವುದಕ್ಕೆ ವಾಕ್ಪಟುತ್ವವಿಲ್ಲದೆ ಆ ಶಿಶುವಿನಲ್ಲಿ ಹೇಗೆ ಅತಿರಹಸ್ಯವಾಗಿರುತ್ತಿಹುದೋ ಹಾಂಗೆ, ಶಿವಾಚಾರ–ಅಷ್ಟಾವರಣವನ್ನೇ ಅಂಗವನು ಮಾಡಿಕೊಂಡು ಪಂಚಾಚಾರವನ್ನೇ ಪ್ರಾಣವ ಮಾಡಿಕೊಂಡು ಏಕಲಿಂಗನಿಷ್ಠಾವ್ರತನಾಗಿ ಆಚರಿಸುವಂಥ ಆಚರಣೆಯು

ಕ್ರಿಯಾಚಾರದಲ್ಲಿ ಸುಯಿಧಾನಿಯಾದ ಶಿವಶರಣಗೆ ಅಳವಡುವುದಲ್ಲದೆ ಮಿಕ್ಕಿನ ದ್ವೈತಾದ್ವೈತಿಗಳಿಗೆ ಮರುಳು ಕಂಡ ಕನಸಿನ ಪರಿಯ ಹಾಂಗೆ ಶಕ್ಯವಾಗಿರ್ಪುದು. ಕರಿಯು ಕನ್ನಡಿಯೊಳಡಗಿದಂತಯ್ಯ : ಕರಿಯು-ಘನಗಾತ್ರವಾದ ಆನೆಯು, ಕನ್ನಡಿಯೊಳಡಗಿದಂತಯ್ಯ-ಸೂಕ್ಷ್ಮವಾದ ಆದರ್ಶದಲ್ಲಿ ಅಡಗಿಕೊಂಡು ಹೇಂಗೆ ಮಿಗೆ ಮಾರ್ಪೊಳೆವುತ್ತಿಹುದೋ ಹಾಂಗೆ. ಚಿತ್ತಿನ ಚಿದಹಂಕಾರ ಚಿದ್ಭೂಷಣಸ್ವರೂಪವಾದ ಪರಬ್ರಹ್ಮವು ಜ್ಞಾನದರ್ಪಣಸ್ವರೂಪವಾದ ಶರಣನಲ್ಲಡಗಿ ಮಿಗೆ ಮಾರ್ಪೊಳೆವುತ್ತಿಹುದು.

ಗುಣಿ ಅವಗುಣಿಯೊಡನಾಡಿದಡೆ : ಗುಣಿ -ಸದ್ಗುಣವುಳ್ಳಾತನು. ಅವಗುಣಿಯೊಡನಾಡಿದಡೆ- ದುರ್ಗುಣವುಳ್ಳವರೊಂದಿಗೆ ಸಂಸರ್ಗವ ಮಾಡಿದರೆ, ಅದೇ ಆತನ ಕರ್ಮಫಲ ನೋಡಾ-ಅದೇ ಅವನಿಗೆ ಪಾಪದ ಫಲವಾಗಿ ಸಂಭವಿಸುತ್ತಿಹುದು ಕಂಡಾ. ಕೂಡಲಸಂಗನ ಶರಣರ- ತ್ರಿವಿಧಲಿಂಗಾನುಭಾವಿಗಳಾದ ಜ್ಞಾನಗುರುಮೂರ್ತಿಗಳ, ಅನುಭಾವ-ಶಿವಾನುಭಾವವು. ಭವದುಃಖಿಗಳಿಗೆ-ಉತ್ಪತ್ಯದ ವ್ಯಥೆಯನುಳ್ಳಂಥ ಜೀವರುಗಳಿಗೆ. ವೇದ್ಯವಾಗದಯ್ಯ ದೊರೆಕೊಳ್ಳದಯ್ಯ.

II -

ಮರುಳ ಕಂಡ ಕನಸಿನ ಪರಿಯಂತೆ ಶಿವಾಚಾರ-ಹುಚ್ಚಾತ್ಮನು ಸುಖದುಃಖವಾದ ಆಶ್ಚರ್ಯಸ್ವಪ್ನವನು ಕಂಡು ತನ್ನಲ್ಲಿ ತಾನೇ ಗಹಗಹಿಸಿ ನಗುವನಲ್ಲದೆ ಇದಿರಾಗಿ ಒಬ್ಬರ ಕೂಡೆ [೧]ಉಸಿರಾನೆ? ಉಸಿರನೆಂಬ ಹಾಂಗೆ[೧] ಲಿಂಗಾಚಾರವು. ಕರಿಯು ಕನ್ನಡಿಯೊಳಡಗಿದಂತಯ್ಯ- ಸ್ಥೂಲಾಯಮಾನವಾದ ಚಿತ್ತಿನ ಮಹದಂಕಾರಭೂಷಣಸ್ವರೂಪವಾದ ವಸ್ತು[೨]ವೇ[೨] ಶರಣನ ಸೂಕ್ಷ್ಮವಾದ ಜ್ಞಾನಮಧ್ಯದಲ್ಲಿ ಅಡಗಿರುತ್ತಿಹುದಯ್ಯ, ಮುಂದಕ್ಕೆ ಕಾಣಬಂದರ್ಥ.

....

೧-೧ ಉಸುರಾನೆಂಬ ಹಾಂಗೆ (ಜ). ೨-೨ X (ಛ).

೮೬೨

ಉಂಬ ಬಟ್ಟಲು ಬೇಱೆ ಕಂಚಲ್ಲ. ನೋಡುವ ದರ್ಪಣ ಬೇಱೆ ಕಂಚಲ್ಲ; ಭಾಂಡ ಒಂದೇ; ಭಾಜನ ಒಂದೇ, ಬೆಳಗೆ ಕನ್ನಡಿಯೆನಿಸಿತ್ತಯ್ಯ! ಆಜೆದಡೆ ಶರಣ ಮಱೆಯದೆ ಮಾನವ; ಮಱೆಯದೆ ಪೂಜಿಸು ನಮ್ಮ ಕೂಡಲಸಂಗಮ[೧]ದೇವ[೧]ನ.

I- -

ಉಂಬ ಬಟ್ಟಲು-ಅನುಭವಿಸುವಂಥ ಗಂಗಾಳವು. ಬೇಱೆ-ಇನ್ನು ಬೇರೆ. ಕಂಚಲ್ಲ- ಕಾಂಸ್ಯವಲ್ಲವು. ನೋಡುವ-ನಿರೀಕ್ಷಣೆಯ ಮಾಡುವಂಥ, ದರ್ಪಣ-ಕನ್ನಡಿಯು, ಬೇಱೆ-ಇನ್ನು ಬೇರೆ, ಕಂಚಲ್ಲ-ಕಾಂಸ್ಯವಲ್ಲವು. ಭಾಂಡ-ಹಿತ್ತಾಳಿ ತಾಮ್ರದಿಂದ ಮಾಡಿದಂಥ ಚರಿಗೆ ಕೊಡಪಾನಂಗಳು, ಒಂದೇ ಭಾಜನ-ಕಂಚಿನಲ್ಲಿ ಮಾಡಿದಂಥ ಗಂಗಾಳ ಬಟ್ಟಲುಗಳು ಒಂದೇ. ಬೆಳಗೆ ಕನ್ನಡಿಯೆನಿಸಿತ್ತಯ್ಯ-

ಬೂದಿಯನ್ನು ಹಾಕಿ ಬೆಳಗಿ ತೊಳೆದಲ್ಲಿ ದರ್ಪಣವೆಂದು ಹೇಳಿಸಿಕೊಂಡಿತ್ತಯ್ಯ. ಅಱಿದಡೆ-ಬ್ರಹ್ಮಾಂಡಾದಿ ಸಕಲಸಂಸಾರಪ್ರಪಂಚೆಲ್ಲ ಅನಿತ್ಯ, ನಾನೆ ನಿತ್ಯಸ್ವರೂಪನೆಂಬ ಜ್ಞಾನವನ್ನು ತಿಳಿದರೆ, ಶರಣ-ಶಿವಶರಣನು, ಮಱೆದಡೆ-ಬ್ರಹ್ಮಾಂಡಾದಿಸಕಲ ಪ್ರಪಂಚೆಲ್ಲ ಅನಿತ್ಯ, ನಾನೇ ನಿತ್ಯಸ್ವರೂಪನೆಂಬಂಥ ಜ್ಞಾನವನ್ನು ಮರೆತುಬಿಟ್ಟರೆ. ಮಾನವ-ನರಮನುಷ್ಯನು, ಮಱೆಯದೆ ಪೂಜಿಸು ನಮ್ಮ ಕೂಡಲಸಂಗಮದೇವನ-ಇಷ್ಟ ಮಹಾಲಿಂಗವನ್ನು ವಿಸ್ಮೃತಿಯನೈಯ್ದಿಸಿ ಬಿಡದೆ ಆರಾಧಿಸಿ ಇಷ್ಟಾರ್ಥಸಿದ್ಧಿಯನು ಹಡೆದುಕೊ.

IV- -

1-1 x (ತ)

....

ಅಜ್ಞಾನದಿಂದ ಮನುಷ್ಯ, ಅಜ್ಞಾನವಳಿದಱೆ ತಾನೇ ಬ್ರಹ್ಮವೆಂಬುದೀ ವಚನದರ್ಥ.

೮೬೩

ಕೆಱೆ ಹಳ್ಳ ಬಾವಿಗಳು ಮೈದೆಗೆದಡೆ ಗುಳ್ಳೆ ಗೊರಜೆ ಚಿಪ್ಪು[1]ಗಳ[1] ಕಾಣಬ[2]ಹವು[2]. ವಾರಿಧಿ ಮೈದೆಗೆದಡೆ ರತ್ನಂಗಳು ಕಾಣಬಹುದು. ನಮ್ಮ ಕೂಡಲಸಂಗನ ಶರಣರು ಮನದೆಱೆದು ಮಾತನಾಡಿದಡೆ ಲಿಂಗವ ಕಾಣಬಹುದು!

I- -

ಕೆಱೆ-ತಟಾಕವು, ಹಳ್ಳ-ಪ್ರವಾಹವು. ಬಾವಿಗಳು-ಕೂಪಗಳು, ಮೈದೆಗೆದಡೆ-ಒಣಗಿ ಬತ್ತಿದರೆ, ಗುಳ್ಳೆ-ಮೀನುಗಳು, ಗೊರಜೆ-ಏಡಿಗಳು, ಚಿಪ್ಪುಗಳು-ಕಪ್ಪೆಚಿಪ್ಪುಗಳು, ಕಾಣಬಹವು-ಅರಿಯಬರುವವು. ವಾರಿಧಿ-ಸಮುದ್ರವು, ಮೈದೆಗೆದಡೆ-ಅರತುಹೋದರೆ, ರತ್ನಂಗಳು ಕಾಣಬಹವು-ಮುತ್ತುರತ್ನಂಗಳು ಅರಿಯಬರುತ್ತಿಹವು. ನಮ್ಮ ಕೂಡಲಸಂಗನ ಶರಣರು-ನಮ್ಮ ಶಿವನ ಚಿತ್ಪ್ರಭಾಂಗಸ್ವರೂಪರಾದ ಶಿವಶರಣರು, ಮನದೆಱೆದು-ಮನಶುದ್ಧವಾಗಿ, ಮಾತನಾಡಿದಡೆ-ಶಿವತತ್ವಜ್ಞಾನಾನುಭಾವದಿಂದ ಪ್ರಸಂಗವನಾಡಿದರೆ, ಲಿಂಗವ ಕಾಣಬಹುದು-ಕೈಲಾಸಕ್ಕಧಿಪತಿಯಾದ ಮಹಾಲಿಂಗದಲ್ಲಿ ಕೂಡುವಂಥ ಕೂಟವನ್ನು ಅರಿಯಬಹುದು.

II -

1-1 x (ಚ, ಜ) 2-2 ಹುದು (ಚ, ಜ)

....

ಕೆಱೆ-ಸಿದ್ಧಾಂತಿಯು, ಹಳ್ಳ-ವೇದಾಂತಿಯು, ಬಾವಿಗಳು-ಯೋಗಮಾರ್ಗಿಗಳು, ಮೈದೆಗೆದಡೆ-ಜಿಹ್ವೆಯನು ಬಿಚ್ಚಿದರೆ, ಗುಳ್ಳೆಗೊರಜೆ ಚಿಪ್ಪು ಕಾಣಬಹುದು-ಕಾಮುಕಶಾಸ್ತ್ರ

ಮೋಹಮಾರ್ಗಶಾಸ್ತ್ರ ಕಕೋಕಶಾಸ್ತ್ರ ಹಿಂದ^ಣವರು ಕಡಿದಾಡಿದುದೆ ಕಾಣಿಸುತ್ತಿಹುದು. ವಾರಿಧಿ ಮೈದೆಗೆದಡೆ ರತ್ನಂಗಳು ಕಾಣಬಹ^ವು-ಪರಶಿವ ಸಮುದ್ರಸ್ವರೂಪವಾದ ಮಹಾಜ್ಞಾನಿಗಳು ಜಿಹ್ವೆಯನು ಬಿಚ್ಚಿದರೆ ನವವಿಧಾಂಗ ನವವಿಧಲಿಂಗದಾಚರಣೆಯೆ ಕಾಣಿಸುತ್ತಿರ್ಪುದು. ಕೂಡಲಸಂಗನ ಶರಣರು ಮನದೆಱೆದು ಮಾತನಾಡಿದರೆ ಲಿಂಗವ ಕಾಣಬಹುದು-ಪರಶಿವಲಿಂಗದ ಪರಮೂರ್ತಿಗಳಾದ ಶಿವಶರಣರುಗಳು ಮಾನಸವನು ಬಿಚ್ಚಿ ಪ್ರಣವಾರ್ಥ ಸ್ವರೂಪಾರ್ಥ ಸಂಬಂಧಾರ್ಥವನೊಚಿಸಿದರೆ ತ್ರಿವಿಧ ಷಡ್ವಿಧ ನವವಿಧಲಿಂಗಸ್ವರೂಪವಾದ ನಿಃಕಲಲಿಂಗವನರಿಯಬಹುದು.

....

೧-೧ x (ಜ)

೮೬೪

ಪುಣ್ಯ ಪಾಪವೆಂಬ ಉಭಯಕರ್ಮವನಾರು ಬಲ್ಲರಯ್ಯ? ಇವನಾರುಂಬರು? ಕಾಯ ತಾನುಂಬಡೆ ಕಾಯ ಮಣ್ಣು, ಜೀವ ತಾನುಂಬಡೆ ಜೀವ [1]ತಾ[1] ಬಯಲು! ಈ ಉಭಯನಿರ್ಣಯವ ಕೂಡಲಸಂಗಮದೇವಾ ನಿಮ್ಮ ಶರಣ[2]ರು[2] ಬಲ್ಲ[3]ರು.[3]

I -

ಪುಣ್ಯ-ಯಜ್ಞಾದಿಕೃತ್ಯಂಗಳಿಂದಾಗುವಂಥದೆ ಪುಣ್ಯವು, ಪಾಪ-ಹಿಂಸಾದಿಕೃತ್ಯಂಗಳಿಂದಾಗು ವಂಥದೆ ಪಾಪವು, ಎಂಬ-ಹೀಗೆಂದು ಹೇಳುವ, ಉಭಯಕರ್ಮಗಳನು-ಎರಡರ ಕೃತ್ಯಂಗಳನು. ಆರು ಬಲ್ಲರಯ್ಯ-ಯಾರು ತಿಳಿದು ಬಲ್ಲರಯ್ಯ. ಇವನಾರುಂಬರು?-ಇವನಾರನುಭವಿಸುವರು? ಕಾಯ ತಾನುಂಬಡೆ ಕಾಯಮಣ್ಣು-ಲೋಕದಲ್ಲಿ ಕೆಲವಾತ್ಮರುಗಳು ಪುಣ್ಯಪಾಪಂಗಳನು ದೇಹವೇ ಅನುಭವಿಸುತ್ತೈತೆಂದು ಹೇಳುವರು. ದೇಹ ಹೇಂಗೆ ಅನುಭವಿಸಿತ್ತು? ದೇಹ ಮಣ್ಣು, ಅಚೇತನವು. ಜೀವವನ್ನೇ ಪ್ರಾಣವ ಮಾಡಿಕೊಂಡು ದೇಹವಿರ್ಪುದು ಜೀವವನ್ನೇ ಪ್ರಾಣವಮಾಡಿಕೊಂಡು ಅನುಭವಿಸುತ್ತಿಹುದು. ಜೀವ ತಾನುಂಬಡೆ ಜೀವ ತಾ ಬಯಲು-ಲೋಕದಲ್ಲಿ ಕೆಲವಾತ್ಮರುಗಳು ಸುಖದುಃಖಂಗಳನು ಜೀವನೇ ಅನುಭವಿಸುತ್ತೈತೆಂದು ಹೇಳುವರು. ಜೀವನು ಹೇಂಗೆ ಅನುಭವಿಸಿತ್ತು? ಜೀವ ಬಯಲು, ಮಿಥ್ಯಸ್ವರೂಪವು. ದೇಹವನ್ನೇ ಅಂಗವ ಮಾಡಿಕೊಂಡು ಜೀವವಿರ್ಪುದು, ದೇಹವನ್ನೇ ಅಂಗವ ಮಾಡಿಕೊಂಡು ಅನುಭವಿಸುತ್ತಿಹುದು.

ಈ ಉಭಯ-ಈ ಪುಣ್ಯ ಪಾಪಂಗಳ ವರ್ತನೆಯನು ನಷ್ಟವ ಮಾಡಿ ಪುಣ್ಯವನೇ ಪ್ರಸಾದಭೋಗವಾಗಿ ಪಾಪವನೆ ಭಕ್ತಿಸತ್ಕ್ರಿಯೆಗಳಾಗಿ ಅಳವಡಿಸಿಕೊಂಡಾಚರಿಸುವಂಥ, ನಿರ್ಣಯವ-ನಿಶ್ಚಯಾರ್ಥವನು, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೇ, ನಿಮ್ಮ ಶರಣರು-ನಿಮ್ಮ ಶಿವಶರಣರು, ಬಲ್ಲರು-ಅರಿದು ಬಲ್ಲರು.

IV -

1-1 x (ತ), 2-2 x (ತ), 3-3 x (ತ)

....

ದೇಹಪ್ರಾಣ ಒಂದಾದಲ್ಲಿ ಪುಣ್ಯಪಾಪಂಗಳಾದವು. ದೇಹಪ್ರಾಣಂಗಳು ಬೇಱಾದಱಿ ಹುಸಿಯಾಯಿತ್ತು. ಈ ಹುಸಿ ಮಹಾಲಿಂಗದಲ್ಲಿ ತೋಱಿ ಅಡಗಿತ್ತು. ಇದ ಶರಣ ಬಲ್ಲನೆಂಬುದೀ ವಚನದರ್ಥ.

೮೬೫

ನಾರುಳಿಯ [1]ಹಣಿಯದವ[1]ನಾರಾಡೆಯೂ [2]ಆಡಿದಡೆ[2], ನಾರುಳಿ[3]ದಡೆ[3] ಮುಂದೆ ಅಂಕುರಿತ ಫಲ ತಪ್ಪದು. ಮಾಡುವನ್ನಕ್ಕ ಫಲದಾಯಕ ! ಮಾಟವಱಿತು ನಿಮ್ಮಲ್ಲಿ ಸ್ವಯವಾದಡೆ ಆತನೆ ಅಚ್ಚ ಶರಣನಯ್ಯ, ಕೂಡಲಸಂಗಮದೇವಾ.

I -

ನಾರುಳಿಯ ಹಣಿಯದವನಾರಾದೊಡೆಯೂ ಆಡಿದಡೆ-ಲೋಕದಲ್ಲಿ ಆತ್ಮರುಗಳು ಜೂಜನಾಡಬೇಕಾದರೆ ಒಂದು ಕಬ್ಬಿನ ಹೊರೆಯನಾಗಲಿ ಒಂದು ಮೊಟ್ಟೆ ತೆಂಗಿನಕಾಯನಾಗಲಿ ತೆಗೆದುಕೊಂಡು ಬಂದು ಬೀದಿಬಾಜಾರದಲ್ಲಿ ಹತ್ತೆಂಟಕ್ಕೆ ನೆರೆದಿದ್ದಲ್ಲಿ ಮುಂದಿಟ್ಟು ಒಂದೇ ವೇಳೆಗೆ ನೀ ಕಡಿ, ಕಡಿದದ್ದೇ ಉಂಟಾದರೆ ಎನ್ನವನೆಲ್ಲ ನಿನಗೆ ಕೊಡುತ್ತೈದೇನಿ. ನೀ ಕಡಿಯಲಾರದಿದ್ದರೆ ನಿನ್ನವನೆಲ್ಲ ನನಗೆ ಕೊಡಬೇಕಾದೀತೆಂದು ಜೂಜನ್ನು ಆಡಿದಲ್ಲಿ, ನಾರುಳಿದಡೆ ಎಲ್ಲಾ ಹರಿದು ಬುಡಕ ತುಸು ನಾರುಳಿದರೆ, ಮುಂದೆ ಅಂಕುರಿತ ಫಲ-ಅವನವೆಲ್ಲ ತೆಗದುಕೊಡುವಂಥದು, ತಪ್ಪದು-ವಾರ್‍ಯಾಗದು ಎಂಬ ದೃಷ್ಟೋಪಮನದ ಹಾಂಗೆ,

- ನಾರುಳಿಯ ಹಣಿಯದವನಾರಾದಡೆಯೂ ಆಡಿದಡೆ, ನಾರುಳಿ........ದಡೆ-ಆತ್ಮಪದಾರ್ಥವನ್ನು ವಂಚಿಸಿಕೊಂಡು ಬಹಿರಂಗದ ಪದಾರ್ಥವನ್ನು ಕೊಟ್ಟು ಭಕ್ತಿಯ ಮಾಡಿದಡೆ, ಮುಂದೆ ಅಂಕುರಿತ ಫಲ ತಪ್ಪದು; ಮುಂದೆ-ದೇಹಾಂತ್ಯದಲ್ಲಿ ಅಂಕುರಿತ ಫಲ-ಕಿಂಚಿನ್ಮಾತ್ರ ಫಲಪದಂಗಳು ದೊರೆಕೊಂಡು ಭವದುಃಖ ಉಂಟಾಗುವಂಥದು, ತಪ್ಪದು-ವಾರ್‍ಯಾಗದು.

ಮಾಡುವನ್ನಕ್ಕ-ಭಿನ್ನವಿಟ್ಟುಕೊಂಡು ಭಕ್ತಿಯ ಮಾಡುವ ಪರಿಯಂತರ, ಫಲದಾಯಕ-ಭಿನ್ನಭಕ್ತಿಯಿಂದುಂಟಾದ ಚತುರ್ವಿಧಫಲಪದಂಗಳ ಅನುಭವಿಸಲ್ಪಟ್ಟಾತನು, ಮಾಟವಱಿತು-ಭಿನ್ನಭಕ್ತಿಯ ಮಾಟವು ನಷ್ಟವಾಗಿ, ನಿಮ್ಮಲ್ಲಿ-ಸ್ವಾಮಿಗಳಲ್ಲಿ, ಸ್ವಯವಾದಡೆ-ಸಾಮಾರಸ್ಯವಾದರೆ, ಆತನೇ-ಅಂತಪ್ಪಾತನೇ, ಅಚ್ಚ ಶರಣನಯ್ಯ-ಬಚ್ಚ ಬರಿಯ ಚಿತ್‌ಸ್ವರೂಪವಾದ ಶಿವಶರಣನಯ್ಯ, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

II -

1-1 ಹಣ್ಣಿದವ (ಚ.ಜ), 2-2 ಆಡರೆ (ಚ.ಜ), 3-3 ಯಲು (ಚ.ಜ)

....

ನಾರುಳಿಯ ಹ^ಣ್ಣಿ^ದವನಾರಾದಡೆಯೂ ಆಡರೆ ?-ಕಾಯಜೀವಸಂಸಾರದ ಭಿನ್ನಕ್ರೀ ಭಿನ್ನಜ್ಞಾನ ಹ^ಣ್ಣಿ^ದವನು ಆದಾರದೆ ಆಡದೆ ಇದ್ದಾರೆ? ನಾರುಳಿಯಲು-ದೇಹಾತ್ಮರುಗಳ ಕೃತಿಯುಂಟಾಗಲು, ಮುಂದೆ ಅಂಕುರಿತ ಫಲ ತಪ್ಪದು-ಪುರಸ್ಸರದಲ್ಲಿ ಹುಟ್ಟುವಂಥ ಪ್ರಾಪ್ತಿಯು ವಾರಿಯಾಗದು. ಮಾಡುವನ್ನಕ್ಕ ಫಲದಾಯಕ-ಲಿಂಗಾಂಗಕ್ಕೆ ಭಿನ್ನವಿಟ್ಟು ಪೂಜಾಕ್ರೀಗಳ ಮಾಡೂದುಂಟಾಗಿರುವ ಪರಿಯಂತರವು ಫಲಪದಂಗಳ ಪಡೆಯಲ್ತಕ್ಕಾತನು, ಮಾಟವಱಿತು ನಿಮ್ಮಲ್ಲಿ ಸಯವಾದಡೆ-ಭಿನ್ನಪೂಜಾಕ್ರೀಯು ನಿಷ್ಪತ್ತಿಯಾಗಿ ಲಿಂಗದಲ್ಲಿ ನಿತ್ಯನಾದರೆ, ಮುಂದಕ್ಕೆ ಕಾಣಬಂದರ್ಥ.

....

೧-೧ ಣಿ (ಚ)

III –

1-1 ಹಣಿದವ (ಟ.ಡ) 2-2 ಆದರೆ (ಟ.ಡ) 3-3 ಯಲು (ಟ, ಡ)

....

ಸತ್ಕ್ರೀಯಗಳನು ಸಮ್ಯಕ್‌ಜ್ಞಾನದಲ್ಲಿ ಮಥನವ ಮಾಡಿದವರಾರಾದೊಡೆಯೂ ಉಂಟಾದರೆಯೆಂಬುದೀಗ, ನಾರುಳಿಯ ಹಣಿದವನಾರಾದರೆಯೂ ಆಡಿದರೆಯೆಂಬ ಶಬ್ದಕ್ಕರ್ಥ. ನಾರುಳಿಯಲು-ಕ್ರಿಯಾಫಲವವಶೇಷಿತವಾಗಲು, ಮುಂದೆ-ಜನ್ಮಾಂತರಕೆ, ಅಂಕುರಿತಫಲ ತಪ್ಪದು-ಜೀವನಿಗೆ ಜೀವಭಾವ ಬಿಡಲಱಿಯದು. ಮಾಡುವನ್ನಕ್ಕ-ಅಂಗಲಿಂಗಕ್ಕೆ ಭಿನ್ನವಿಟ್ಟು ಪೂಜೆಯನೆಸಗುವ ಪರಿಯಂತರವು, ಫಲದಾಯಕ-ಫಲಪದಂಗಳನು ಕೊಡಲ್ಪಟ್ಟಾತನು, ಮಾಟವಱಿತು-ನಾ ಮಾಡುತ್ತೈದೇನೆ ಇವರು ಕೈಕೊಳುತ್ತೈದಾರೆಯೆಂಬ ಭಿನ್ನಭಾವವು ಲಿಂಗದಲ್ಲಿ ನಿಷ್ಪತ್ತಿಯಾಗಿ, ನಿಮ್ಮಲ್ಲಿ ಸ್ವಯವಾದರೆ-ಲಿಂಗದಲ್ಲಿ ಸಹಜ ಸಮರಸೈಕ್ಯವು ದೊರೆಕೊಂಡರೆ, ಆತನೆ ^೨^ಅಂತಾತನೆ^೨^. ಅಚ್ಚ-ಸ್ವಚ್ಛವಾದ, ಶರಣನಯ್ಯ-^೩^ಶರಣಸ್ಥಲದಾತನಯ್ಯ^೩^ ಕೂಡಲಸಂಗಮದೇವ-ಎಲೆಪರಶಿವಲಿಂಗವೆ.

....

೨-೨ x (ಡ) ೩-೩ x (ಡ)

V –

1-1 ಹಣಿದವ (ಪ) 2-2 ಆದರೆ (ಪ) 3-3 ಯಲು (ಪ)

ಸತ್ಕ್ರಿಯೆಗಳನು ಸಮ್ಯಕ್‌ಜ್ಞಾನದಲ್ಲಿ ಮಥನವ ಮಾಡಿದವರಾರಾದೊಡೆ ಯುಂಟಾದರೆಯೆಂಬುದೀಗ, ನಾರುಳಿಯ ಹಣಿದವನಾರಾದರೂ ಆಡಿದರೆಯೆಂಬ ಶಬ್ದಕ್ಕರ್ಥ. ನಾರುಳಿಯಲು ಕ್ರಿಯಾಫಲವವಶೇಷಿತವಾಗಲು, ಮುಂದೆ-ಜನ್ಮಾಂತರದಲ್ಲಿ, ಅಂಕುರಿತ ಫಲ ತಪ್ಪದು-ಜೀವನಿಗೆ (ಜೀವಭಾವ) ಬಿಡಲಱಿಯದು. ಮಾಡುವನ್ನಕ್ಕ-ಅಂಗಲಿಂಗಕ್ಕೆ ಭಿನ್ನವಿಟ್ಟು ಪೂಜೆಯನೆಸಗುವ ಪರ್ಯಂತರವು, ಫಲದಾಯಕ-ಫಲಪ್ರಾಪ್ತಿಯುಳ್ಳಾತನು, ಮಾಟವಱಿತು-ನಾ ಮಾಡುತ್ತೈದೇನೆ ಇವರು

ಕೈಕೊಳುತ್ತೈದಾರುಯೆಂಬ ಬಿನ್ನಭಾವವು ಲಿಂಗದಲ್ಲಿ ನಿಷ್ಪತ್ತಿಯಾಗಿ, ನಿಮ್ಮಲ್ಲಿ ಸ್ವಯವಾದರೆ–ಲಿಂಗದಲ್ಲಿ ಸಹಜ ಸಮರಸೈಕ್ಯವು ದೊರೆಕೊಂಡರೆ.

೮೬೬

ಭಕ್ತನ ಮಠವೆಂಬದು ಜಂಗಮವು ನಡೆದುಬಂದಲ್ಲಿ, ಆ ಭಕ್ತನು ಕಾಣುತ್ತ ಆಸನ ತ್ಯಜತೆಯ ಮಾಡುತ್ತ, ಕೊಂಕುತ್ತ ಕೈಮುಗಿದು ನಿಂದಿರ್ದು ಬಾಗಿ ಬಳುಕುತ್ತ, 'ಬಿಜಯಂ ಮಾಡಿ ದೇವಾ' ಎಂದು ಕರೆದು ಕುಳ್ಳಿರಿಸಿ, ಪಾದಾರ್ಚನೆಯ ಮಾಡಿ ಪಾದೋದಕಮಂ ಕೊಂಡು,. ವಿಭೂತಿ ವೀಳ್ಯಮಂ ಕೊಟ್ಟು, ಕಂಗಳು ತುಂಬಿ ನಿರೀಕ್ಷಿಸಿ, ಶ್ರೋತ್ರ ತುಂಬಿ ಹಾರೈಸಿ, ಬಾಯ ತುಂಬಿ ಮಾತನಾಡಿ [1]ಏನಗೈದು ಬೆಸನೆಂದು[1] ತನು ಕರಗಿ ಮನ ಕರಗಿ ನೋಡಿ ಮಾಡುವುದು ಭಕ್ತಸ್ಥಲ. ಬಡವನಾಗಲಿ ಬಲ್ಲಿದನಗಲಿ ಇನಿತು ಮುಖ್ಯವಾಗಿ ಮಾಡಿಸಿಕೊಂಬುವುದು ಜಂಗಮಸ್ಥಲ. ಈ ಎರಡೊಂದಾದ ಘನವನಂತಿಂತೆಂದುಪಮಿಸಬಾರದಂತಿರಲಿ! ಇನಿತಲ್ಲದೆ ಮಾಡಿದ ಮಾಟ ಭಕ್ತಸ್ಥಲಕ್ಕೆ ಸಲ್ಲದು, ಫಲದಾಯಕನೈಸೆ! ಇನಿತಲ್ಲದೆ ಮಾಡಿಸಿಕೊಂಬುವುದು ಜಂಗಮಸ್ಥಲಕ್ಕೆ ಸಲ್ಲದು, ಉಪಜೀವಿತನೈಸೆ! ಈ ಎರಡಕ್ಕೆಯೂ ಭವ ಹಿಂಗದು, ಕಾಣಾ ಕೂಡಲಸಂಗಮದೇವಾ.

I –

ಭಕ್ತನ ಮಠವೆಂದು : ಭಕ್ತನ–ಶಿವಭಕ್ತನ, ಮಠವೆಂದು–ಭಕ್ತಿಗೃಹವೆಂದು, ಜಂಗಮವು–ಜಂಗಮಮೂರ್ತಿಗಳು, ನಡೆದು ಬಂದಲ್ಲಿ–ಭಿಕ್ಷಕ್ಕೆಂದು ಬಿಜಯಂಗೈಯ್ದು ಬಂದಲ್ಲಿ, ಭಕ್ತನು – ಆ ಶಿವಭಕ್ತನು, ಕಾಣುತ್ತ–ಜಂಗಮಸ್ವರೂಪನು ಕಣ್ಣ ತುಂಬಿ ನೋಡುತ್ತ, ಆಸನ ತ್ಯಜತೆಯ ಮಾಡುತ್ತ – ತಾನು ಕುಳಿತಂಥ ಗದ್ದುಗೆಯನ್ನು ಬಿಟ್ಟು ಮುಂದಕ್ಕೆ ಮೂರು ಹೆಜ್ಜೆಯ ನಡೆದು ಬಂದು, ಕೊಂಕುತ್ತ–ಚಕಿತಹೃದಯನಾಗಿ ಎಂಟು ಗೇಣಿನ ಶರೀರ ಏಳು ಗೇಣಾಗುತ್ತ. ಕೈಮುಗಿದು–ಹಸ್ತಾಂಜಲಿತನಾಗಿ, ನಿಂದಿರ್ದು–ನೆಟ್ಟಗೆ ನಿಂತುಕೊಂಡಿರ್ದು, ಬಾಗಿ–ಶಿರಬಾಗಿ, ಬಳಕುತ್ತ–ಅಲುಗಾಡುತ್ತ, ಬಿಜಯಂ ಮಾಡಿ–ಚಿತ್ತೈಸಿ, ದೇವಾ–ಎಲೆ ಒಡೆಯನೆ, ಎಂದು, ಹೀಂಗೆಂದು, ಕರೆದು–ಆಹ್ವಾನಿಸಿ, ಕುಳ್ಳಿರಿಸಿ–ಮೂರ್ತವ ಮಾಡಿಸಿ ಪಾದಾರ್ಚನೆಯ ಮಾಡಿ–ಪಾದಂಗಳನು ಪ್ರಕ್ಷಾಲನಂಗೆಯ್ದು, ಪಾದೋದಕಮಂ ಕೊಂಡು–ಪಾದೋದಕ ಪ್ರಸಾದವನ್ನು ಪಡೆದನುಭವಿಸಿ, ವಿಭೂತಿ ವೀಳ್ಯಮಂ ಕೊಟ್ಟು–ವಿಭೂತಿ ಮುಂತಾದ ತಾಂಬೂಲವನ್ನು ಸಮರ್ಪಿಸಿ, ಕಂಗಳು ತುಂಬಿ ನಿರೀಕ್ಷಿಸಿ–ಅವರ ಮೂರ್ತಿವಿಗ್ರಹವನ್ನು ಎರಡು ನಯನ ತುಂಬಿ ನಿರೀಕ್ಷಣೆಯ ಮಾಡಿ, ಶ್ರೋತ್ರ ತುಂಬಿ ಹಾರೈಸಿ–ಅವರಾಡುವಂಥ ಶಿವಾನುಭವದ ಪ್ರಸಂಗವನ್ನು ಶ್ರವಣಂಗಳು ತುಂಬಿ ಭರಿತವಾಗೋ ಹಾಂಗೆ ಆಲಿಸಿ, ಬಾಯ ತುಂಬಿ ಮಾತನಾಡಿ–ಅವರ ಕೂಡ ಶಿವತತ್ವಜ್ಞಾನಾನುಭಾವದ ಪ್ರಸಂಗವನ್ನು ಜಿಹ್ವೆ ತುಂಬಿ ಮಾತನಾಡಿ, ಏಗೈದು–ಆವಕಡೆಯಿಂದ ಚಿತ್ತಯಿಸಿದಿರಿ, ಬೆಸನೆಂದು–ಅಪ್ಪಣೆಯನ್ನು ಪಾಲಿಸಿರೆಂದು, ತನು–ಅಂಗವು ಅವರ ಸೇವೆ ಸತ್ಕಾರದಲ್ಲಿ, ಕರಗಿ–ಲೀನವಾಗಿ, ಮನ–ಮನಸ್ಸು ಅವರ ಶಿವಾನುಭಾವದಲ್ಲಿ ಕರಗಿ–ಲೀನವಾಗಿ, ನೋಡಿ–ಅವರು ಬಂದ ಬರವ ನಿಂದ ನಿಲುಕಡೆಯನ್ನು ನಿರೀಕ್ಷಣೆ ಮಾಡಿ, ಮಾಡುವುದು–ಸಮರಸಭಾವದಿಂದ ತನುಮನಧನಂಗಳನು ಕೊಟ್ಟು ಭಕ್ತಿಯ ಮಾಡುವುದು. ಭಕ್ತಸ್ಥಲ–ಅದೇ ಶಿವಾದ್ವೈತಭಕ್ತಸ್ಥಲವು.

ಬಡವನಾಗಲಿ–ಆಗ ತಂದು ಕಾಸಿಕೊಂಡು ಕುಡಿದಂಥ ನಿರ್ಧನಿಕನಾದರೂ ಆಗಲಿ, ಬಲ್ಲಿದನಾಗಲಿ–ಘಟ್ಟ ಬೆಟ್ಟ ತುರಾವಳಿಗೆ ಹೋಗಿ ಉದ್ದಿಮೆ ವ್ಯಾಪಾರಂಗಳನು ಮಾಡುವಂಥ ಐಶ್ವರ್ಯವಂತನಾದರೂ ಆಗಲಿ, ಇನಿತು ಮುಖ್ಯವಾಗಿ–ಇಂತಿಷ್ಟು ಮೊದಲಾಗಿ, ಮಾಡಿಸಿಕೊಂಬುವುದು–ಅನುಗೆಯ್ಸಿಕೊಂಬುವುದು ಜಂಗಮಸ್ಥಲ–ಅದೇ ಜ್ಞಾನಜಂಗಮಸ್ಥಲವು. ಈ ಎರಡು–ಈ ನಿರ್ವಂಚಕಸದ್ಭಕ್ತ ಜ್ಞಾನಜಂಗಮಮೂರ್ತಿಯೆಂಬುಭಯವು, ಒಂದಾದ–ಏಕವಾದ, ಘನವ–ಅಧಿಕತ್ವವನ್ನು, ಅಂತಿಂತೆಂದು–ಸನ್ಮಾತ್ರವಾಗಿರ್ಪುದು ಚಿನ್ಮಾತ್ರವಾಗಿರ್ಪುದು ಎಂದು, ಉಪಮಿಸಬಾರದು–ವಾಚ್ಯಕ್ಕೆ ತಂದು ಹೇಳುವಂಥದು, ಅಂತಿರಲಿ–ಅದು ಹಾಂಗಿರಲಿ.

ಇನಿತಲ್ಲದೆ–ಇಷ್ಟಲ್ಲದೆ, ಮಾಡಿದ–ಭಿನ್ನವಿಟ್ಟುಕೊಂಡು ಭಕ್ತಿಯನ್ನು ಅನುಗೆಯ್ದ, ಮಾಟ–ಭಿನ್ನಭಕ್ತಿ ಮಾಟವು, ಭಕ್ತಸ್ಥಲಕ್ಕೆ–ಶಿವಾದ್ವೈತಭಕ್ತ ಸ್ಥಲಕ್ಕೆ, ಸಲ್ಲದು–ಯೋಗ್ಯವಾಗದು, ಫಲದಾಯಕನ್ನೆಸೆ–ಚತುರ್ವಿಧ ಫಲದಂಗಳನು ಪಡೆದನುಭವಿಸಲ್ಪಟ್ಟಾತನಷ್ಟೇ, ಇನಿತಲ್ಲದೆ ಮಾಡಿಸಿಕೊಂಬುವುದು–ಇಷ್ಟಲ್ಲದೆ ಕೈಕೊಂಬುವುದು. ಜಂಗಮಸ್ಥಲಕ್ಕೆ ಸಲ್ಲದು–ಜ್ಞಾನಿಜಂಗಮಸ್ಥಲಕ್ಕೆ ಸಲುವಳಿಯಾಗದು, ಉಪಜೀವಿತನ್ನೆಸೆ–ಒಡಲ ಹೊರೆಕೊಂಬುವನಷ್ಟೇ, ಈ ಎರಡಕ್ಕೆಯೂ–ಆಶಾಲಾಂಛನಿ ಉಪಾಧಿಕರುಗಳೆಂಬೀರ್ವರಿಗೆಯೂ, ಭವ–ಹುಟ್ಟಿ ಹುಟ್ಟಿ ಬರುವಂಥ ಉತ್ಪತ್ತ್ಯವು, ಹಿಂಗದು–ತೊಲಗದು ಕಾಣಾ–ಕಂಡಾ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

III –

1–1 ಏಗುವೆ ಬೆಸನೇನೆಂದು (ಟ, ಡ)

....

ಏಗುವೆ–ಏನನು ಮಾಡಲಿ, ಬೆಸನೇನೆಂದು–ಅಪ್ಪಣೆಯೇನೆಂದು, ಉಪಜೀವಿತನ್ನೆಸೆ–ಒಬ್ಬ ಭಕ್ತರ ಹೊಂದಿ ಹೊಟ್ಟೆಯ [1]ಹೊಜಿ[1]ಕೊಂಬವನ್ನೆಸೆ

....

೧–೧ x (ಡ)

೮೬೭

ಲಿಂಗನಿಷ್ಠೆ ಪೂಜೆಯಲ್ಲಿ ಬೀಯವಾಯಿತ್ತು; ಭಕ್ತಿನಿಷ್ಠೆ ಆಚರಣೆಯಲ್ಲಿ ಬೀಯವಾಯಿತ್ತು; ಪ್ರಸಾದನಿಷ್ಠೆ ಬೆರಕೆಯಲ್ಲಿ ಬೀಯವಾಯಿತ್ತು. ಒಂದೊಂದು ನಿಷ್ಠೆ ಅಂದಂದಿಗೆ ಬೀಯವಾಯಿತ್ತು. ಕೂಡಲಸಂಗಮ[1]ದೇವ[1]ನ ಭಕ್ತಿ ತ್ರಿಜಗವನಾಳಿಗೊಂಡಿತ್ತು.

I –

ಲಿಂಗನಿಷ್ಠೆ ಪೂಜೆಯಲ್ಲಿ–ಲಿಂಗಪೂಜೆಯ ಮಾಡುತ್ತಿದ್ದ ಹಾಂಗೆ ಆವುದಾನೊಂದು ಹರಕೆಯ ಮಾಡಿಕೊಂಡಿದ್ದಲ್ಲಿ, ಬೀಯವಾಯಿತ್ತು–ಭಿನ್ನವಾಯಿತ್ತು; ಅದಲ್ಲದೆ ಭಿನ್ನವಿಟ್ಟುಕೊಂಡು ಲಿಂಗಪೂಜೆಯ

ಮಾಡಿದಲ್ಲಿ ಬೀಯವಾಯಿತ್ತು-ಭಿನ್ನವಾಯಿತ್ತು, ಭಕ್ತಿನಿಷ್ಠೆ-ಆಚರಣೆಯಲ್ಲಿ ಭಕ್ತಿ ಮಾಡುತ್ತಿದ್ದ ಹಾಂಗೆ ಪದಾರ್ಥವನ್ನು ವಂಚಿಸಿಕೊಂಡಲ್ಲಿ, ಬೀಯವಾಯಿತ್ತು-ಭಿನ್ನವಾಗಿತ್ತು; ಅದಲ್ಲದೆ ಭಿನ್ನವಿಟ್ಟುಕೊಂಡು ಭಕ್ತಿಯ ಮಾಡಿದಲ್ಲಿ, ಬೀಯವಾಯಿತ್ತು-ಭಿನ್ನವಾಯಿತ್ತು; ಪ್ರಸಾದನಿಷ್ಠೆ ಬೆರಕೆಯಲ್ಲಿ -ಶಿವಪ್ರಸಾದವನ್ನು ಅನುಭವಿಸುತ್ತಿದ್ದ ಹಾಂಗೆ ಉಚ್ಛಿಷ್ಟ ಭಾವ ಸುಳಿಯಲ್ಲಿ, ಬೀಯವಾಯಿತ್ತು-ಭಿನ್ನವಾಯಿತ್ತು; ಅದಲ್ಲದೆ ಭಾಂಡಭಾಜನಲ್ಲಿ ಇದ್ದಂಥದೆ ಪದಾರ್ಥ, ಲಿಂಗಜಂಗಮ ಜಿಹ್ವೆ ಸೋಂಕಿ ಬಂದುದೇ ಪ್ರಸಾದ ಎನ್ನ ಜಿಹ್ವೆ ಸೋಂಕಿ ಬಂದುದೇ ಉಚ್ಛಿಷ್ಟವೆಂದಲ್ಲಿ ಬೀಯವಾಯಿತ್ತು. ಒಂದೊಂದಱ ನಿಷ್ಠೆ-ಲಿಂಗಪೂಜೆಯ ಮಾಡುತ್ತಿದ್ದ ಹಾಂಗೆ ಹರಕೆಯ ಮಾಡಿಕೊಂಡಿದ್ದಂಥದು, ಭಕ್ತಿಯನ್ನು ಮಾಡುತ್ತಿದ್ದ ಹಾಂಗೆ ಪದಾರ್ಥವನ್ನು ವಂಚಿಕೊಂಡಂಥದು ಪ್ರಸಾದವನ್ನು ಅನುಭವಿಸುತ್ತಿದ್ದ ಹಾಂಗೆ ಉಚ್ಛಿಷ್ಟ ಭಾವ ಸುಳಿದಂಥದು ಒಂದೊಂದರಲ್ಲಿ ನಿಷ್ಠೆಯು, ಅಂದಂದಿಗೆ ಆಯಾಮ ಕಾಲಕ್ಕೆ, ಬೀಯವಾಗಿತ್ತು-ಭಿನ್ನವಾಯಿತ್ತು. ಕೂಡಲಸಂಗಮದೇವನ ಪರಶಿವಲಿಂಗದ, ಭಕ್ತಿ-ಶಿವಾದ್ವೈತಭಕ್ತಿಯು, ತ್ರಿಜಗವನಾಳಿಗೊಂಡಿತ್ತು-ಲಿಂಗಪೂಜೆ ಜಂಗಮದಾಸೋಹ ಪ್ರಸಾದಸೇವನೆಯ ಮಾಡುವಂಥದು ಸ್ವರ್ಗ ಮರ್ತ್ಯಪಾತಾಳವೆಂಬ ಮೂರುಲೋಕದಲ್ಲಿರುವ ದೇವದಾನವಮಾನವರುಗಳಿಗೆ ಅಳವಡದೆ ಹಾಸ್ಯೋಪಮಾನವೆಂದು ಹಾಸ್ಯಕ್ಕೊಳಗುಮಾಡಿತ್ತು.

IV- -

1-1 X (ತ)

....

ಲಿಂಗಪೂಜೆ ಭಕ್ತಿ ಆಚರಣೆ, ಪ್ರಸಾದನಿಷ್ಠೆ ತ್ರಿವಿಧವು ಮನದಿಂದಾದವು, ಮನವಡಗಿದರೆ ತ್ರಿವಿಧವೆಂದು ತೋಱಲಿಲ್ಲ, ಮಹಾಘನವಾಗಿಹುದು. ಈ ಘನವನಱಿಯದೆ ಮೂಱುಲೋಕವೆಲ್ಲಾ ಮರುಳಾಯಿತ್ತೆಂಬುದೀ ವಚನದರ್ಥ.

೮೬೮

ತೆಱನನಱಿವುದಪೂರ್ವ, ಅಱಿದು ಮಱೆವುದಪೂರ್ವ, ಕೂಡೆ ಶರಣೆಂಬುದಪೂರ್ವ, ಕೂಡಲಸಂಗಮದೇವ^ನ^ ಭಕ್ತಿ ಅಭಿಮಾನಿಯ ಜವ್ವನದಂತೆ!

I -

ತೆಱನನಱಿವುದಪೂರ್ವ : [ತೆಱನನು-] ಬ್ರಹ್ಮಾಂಡಾದಿ ಸಕಲಸಂಸಾರಪ್ರಪಂಚೆಲ್ಲ ಅನಿತ್ಯ, ನಾನೇ ನಿತ್ಯಸ್ವರೂಪವೆಂಬಂಥ ಜ್ಞಾನವನ್ನು ಅಱಿವುದು-ತಿಳಿವುದು, ಅಪೂರ್ವ-ಎತ್ತಲಾನುಕೊರ್ವರುಂಟಾಗಿರ್ಪರು, ಅಱಿದು ಮಱೆವುದಪೂರ್ವ-ಬ್ರಹ್ಮಾಂಡಾದಿ ಸಕಲಸಂಸಾರಪ್ರಪಂಚೆಲ್ಲ ಅನಿತ್ಯ. ನಾನೇ ನಿತ್ಯವಾದ ಶಿವಸ್ವರೂಪನೆಂಬಂಥ ಜ್ಞಾನವನ್ನು, ಅಱಿದು-ತಿಳಿದು, ಮಱೆವುದು-ವಿಸ್ಮೃತಿಯನೆಯ್ದಿಸಿಬಿಡುವಂಥದು, ಅಪೂರ್ವ-ಎತ್ತಲಾನುಕಾರು ಒರ್ವನಿಗೆ ಉಂಟಾಗಿರ್ಪುದು, ಕೂಡೆ-ಒಂದಿಗೆ, ಶರಣೆಂಬುದು-ಲಿಂಗಪೂಜೆಯ ಮಾಡಿ ಲಿಂಗಕ್ಕೆ

ನಮಸ್ಕಾರವೆಂದು ನಮಸ್ಕರಿಸುವುದು, ಅಪೂರ್ವ–ಎತ್ತಲಾನುಕಾರ ಒರ್ವನಿಗೆ ಉಂಟಾಗಿರ್ಪುದು, ಕೂಡಲಸಂಗಮದೇವನ –ಪರಶಿವಲಿಂಗದ, ಭಕ್ತಿ–ಶಿವಾದ್ವೈತಭಕ್ತಿಯು, ಅಭಿಮಾನಿಯ ಜವ್ವನದಂತೆ–ಪತಿವ್ರತಾಂಗನೆಯಾದ ಯೌವನಸ್ತ್ರೀಯಳ ವಯಸ್ಸು ಸ್ವಭರ್ತೃವಾದ ರಮಣನಿಗೆ ಅರಿಯಬರುವುದಲ್ಲದೆ ಮಿಕ್ಕಿನ ಗಾಂಪಧಾರಿಗಳಿಗೆ ಪಾಣ್ಬಪುರುಷರುಗಳಿಗೆ ಅರಿಯ ಬಂದೀತೇ? ಅರಿಯ ಬರದು, ಹಾಂಗೆ,

● ಶರಣನ ತ್ರಿವಿಧ ಷಡ್ವಿಧ ಅಂಗದಲ್ಲಿ ಬರುವ ತ್ರಿವಿಧ ಷಡ್ವಿಧ ಪದಾರ್ಥವನ್ನು ಕೈಗೊಂಡು ತ್ರಿವಿಧ ಷಡ್ವಿಧ ಪ್ರಸಾದವನ್ನು ಕರುಣಿಸಿಕೊಡುವಂಥದು ಪರಶಿವಲಿಂಗಕ್ಕೆ ಅರಿಯಬರುವುದಲ್ಲದೆ ಮಿಕ್ಕಿನ ದ್ವೈತಿಗಳಿಗೆ ಅಭಿಮಾನಿ ಜವ್ವನದ ಹಾಂಗೆ ಅಶಕ್ಯವಾಗಿರ್ಪುದು.

III –

ತೆಱನಂ–ಭಕ್ತಿಯ ಮರ್ಮವನು, ಅಱಿವುದು–ತಿಳಿವಂಥಾದು, ಅಪೂರ್ವ–ಎಲ್ಲಿಗಾದರೂ ಒಬ್ಬರು, ಅಱಿದು–ಆ ಭಕ್ತಿಯ ಮರ್ಮವನು ತಿಳಿದು–ಮಱೆವುದು–ಪ್ರಪಂಚನು ವಿಸ್ಮೃತಿಗೆಯ್ವಂಥದು, ಅಪೂರ್ವ–ಅತಿನೂತನವು, ಕೂಡಲಸಂಗಮದೇವನ–ಪರಶಿವಲಿಂಗದ, ಭಕ್ತಿ–ಶ್ರದ್ಧೆಯು, ಅಭಿಮಾನಿಯ ಜವ್ವನದಂತೆ–ಅಭಿಮಾನವನ್ನುಳ್ಳ ಸ್ತ್ರೀಯಳಲ್ಲಿ ಕಾಮಾಭಿಮಾನವು ರಹಸ್ಯವಾಗಿರುವ ಹಾಂಗೆ, ಪರಶಿವನ ಶ್ರದ್ಧೆಯು ಸದ್ಭಕ್ತಿಶಿವಶರಣರುಗಳಲ್ಲಿ ಪ್ರಕಟವಿಲ್ಲದೆ ರಹಸ್ಯವಾಗಿರ್ಪುದೆಂಬ ಶಬ್ದಕ್ಕರ್ಥ.

IV– –

ದೇಹಿಂಯಾಗಿರ್ದಲ್ಲಿ ಜ್ಞಾನೋದಂಯುವಾಗಿ ತಾನು ಶಿವನೆಂದು ತನ್ನ ನಿಜವನಱಿವುದಪೂರ್ವವೆಂಬುದೀಗ, ತೆಱನನಱಿವುದಪೂರ್ವವೆಂಬ ಶಬ್ದಕ್ಕರ್ಥ ಅಂತು ತಾನು ಶಿವನೆಂದು ತನ್ನ ನಿಜವನಱಿದಲ್ಲಿ ಶಿವಭಾವವ ನೆಲೆಗೊಂಡು ದೇಹಸಂಸಾರದಹಂಮಮತೆಗಳ ಮಱೆವುದಪೂರ್ವವೆಂಬುದೀಗ, ಅಱಿದು ಮಱೆವುದಪೂರ್ವವೆಂಬ ಶಬ್ದಕ್ಕರ್ಥ, ಅಂತು ತಾನು ಶಿವನೆಂದಱಿದು ದೇಹೋಹಂ ಮಮತೆಯ ಮಱೆದು ಶಿವಜ್ಞಾನವಾಗಿರ್ದಾಗಲೇ ಶಿವಂಗೆ ದಾಸೋಹಿಯಾಗಿ ಭಕ್ತಿಯ ಮಾಡುವದಪೂರ್ವವೆಂಬುದೀಗ, ಕೂಡೆ ಶರಣೆಂಬುದಪೂರ್ವವೆಂಬ ಶಬ್ದಕ್ಕರ್ಥ. ಅಂತಪ್ಪ ಭಕ್ತಕಾಯವೇ ಶಿವನ ಕಾಯವಾಗಿ ಆ ಭಕ್ತನ ಕಾಯಸುಖಂಗಳನೆಲ್ಲವ ಶಿವನೆ ಸುಖಿಸುತ್ತಿಹನು. ಅದು ಹೇಗೆಂದೊಡೆ ಪತಿವ್ರತಾಂಗನೆಯ ಜವ್ವನದ ಮೊಸಲಾದ ಸುಖವನ್ನೆಲ್ಲವನು ಪತಿಯೇ ಭೋಗಿಸುವಂತೆಯೆಂಬುದೀಗ, ಕೂಡಲಸಂಗಮದೇವನ ಭಕ್ತಿಯಭಿಮಾನಿಯ ಜವ್ವನದಂತೆಯೆಂಬ ಶಬ್ದಕ್ಕರ್ಥ.

....

೧ + ೧ (ತ)

V– –

1–1 ರ (ಪ)

....

ತೆಱನಂ–ಭಕ್ತಿವರ್ಮವನು, [ಅಱಿದು–] ತಿಳಿದು, ಮಱೆವುದು–ಪ್ರಪಂಚನು ವಿಸ್ಮೃತಿಗೆಯ್ವಂಥದು, ಅಪೂರ್ವ–ಎಲ್ಲಿಗಾದರೂ ಒಬ್ಬರು, ಕೂಡಲಸಂಗಮದೇವರ–ಪರಶಿವಲಿಂಗದ, ಭಕ್ತಿ ಸಮರಭಕ್ತಿಯು, ಅಭಿಮಾನಿಯ ಜವ್ವನದಂತೆ–ಪತಿವ್ರತೆಯ ಸ್ತನದ ಹಾಂಗೆ ರಹಸ್ಯವಾಗಿರ್ಪುದು.

೮೬೪

ಐದು ಮಾನವ ಕುಟ್ಟಿ, ಒಂದು ಮಾನವ ಮಾಡು, ಕಂಡಾ ಮದವಳಿಗೆ ! ಇದು ನಮ್ಮ ಬಾಳುವೆ, ಮದುವಳಿಗೆ ! ಇದು ನಮ್ಮ ವಿಸ್ತಾರ, ಮದುವಳಿಗೆ ! ಮದವಳಿದು ನಿಜವುಳಿದು ಬಳಿಕ ಅದು ಸತ್ಯ ಕಾಣಾ, ಕೂಡಲಸಂಗಮದೇವಾ.

I –

ಐದು ಮಾನವ–ಪಂಚೇಂದ್ರಿಯಂಗಳೊಡನೆ ಕೂಡಿ ಚರಿಸುವಂಥ ಮನ ಮೊದಲಾದ ಸಕಲಕರಣಂಗಳನು, ಕುಟ್ಟಿ–ಶಿವಾನುಭಾವವೆಂಬ ಒನಕೆಯಿಂದ ಹೊಳ್ಳುಗುಟ್ಟಿ, ಒಂದು ಮಾನವ ಮಾಡು ಕಂಡಾ–ಒಂದೇ ಉನ್ಮನಿಯ ಮನಸ್ಸಾಗಿ ಅಳವಡಿಸು ಕಂಡಾ, ಮದವಳಿಗೆ–ಶರಣಸತಿಯಳಿಗೆ, ಇದು ನಮ್ಮ ಬಾಳುವೆ–ಪಂಚೇಂದ್ರಿಯಂಗಳೊಡನೆ ಕೂಡಿ ಚರಿಸುವಂಥ ಮನ ಮೊದಲಾದ ಸಕಲ ಕರಣಂಗಳನು ಶಿವಾನುಭಾವವೆಂಬ ಒನಕೆಯಿಂದ ಹೊಳ್ಳುಗುಟ್ಟಿ ಒಂದೇ ಉನ್ಮನಿಯ ಮನಸ್ಸಾಗಿ ಅಳವಡಿಸಿಕೊಂಡಾಚರಿಸುವಂಥದು, ಇದು ನಮ್ಮ ಬಾಳುವೆ–ಇದು ನಮ್ಮ ಬದುಕು, ಮದುವಳಿಗೆ–ಶರಣ ಸತಿಯಳಿಗೆ, ಇದು ನಮ್ಮ ವಿಸ್ತಾರ–ಇದು ನಮ್ಮ ಸರ್ವಾಚಾರಸಂಪತ್ತಿನಾಚರಣೆ ಕ್ರಿಯೆಗಳ ವೈಶಾಲ್ಯವು, ಮದವಳಿಗೆ–ಶರಣ ಸತಿಯಳಿಗೆ, ಮದವಳಿದು–ಸಂಸ್ಥಿತಾದಿ ಅಷ್ಟಮದ ಮೊದಲಾದ ಸಕಲತತ್ತ್ವಂಗಳ ವರ್ತನೆಯು ನಷ್ಟವಾಗಿ, ನಿಜವುಳಿದ ಬಳಿಕ–ಅವೆಲ್ಲ ಅಷ್ಟವಿಧಭಕ್ತಿಯಾಗಿ ಅಳವಡಿಸಿಕೊಂಡು ಸ್ವಕೀಯವಾದ ಬ್ರಹ್ಮದಲ್ಲಿ ಅವಶೇಷಿತವಾದ ಮೇಲೆ, ಅದು ಸತ್ಯ ಕಾಣಾ–ಅದು ಯಥಾರ್ಥವು ಕಂಡಾ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

II –

ಐದು ಮಾನವ ಕುಟ್ಟಿ ಒಂದು ಮಾನದ ಮಾಡು ಕಂಡಾ ಮದವಳಿಗೆ–ಪಂಚಕರಣಂಗಳ ಪ್ರಕೃತಿಯನು ನಷ್ಟವ ಮಾಡಿ ಏಕ ಮನಸ್ಸು ಮಾಡಿ ನೋಡಾ ಶರಣಸತಿಯೇ, ಇದು ನಮ್ಮ ಬಾಳುವೆ ಮದವಳಿಗೆ–ಇದು ನಮ್ಮ ಶರಣಸತಿ ಲಿಂಗಪತಿತ್ವದ ಬದುಕು ಶರಣಸತಿಯೇ, ಇದು ನಮ್ಮ ವಿಸ್ತಾರ ಮದವಳಿಗೆ ಇದು ನಮ್ಮ ಶರಣಸತಿ ಲಿಂಗಪತಿತ್ವದಾಚರಣೆಯ ವೈಶಾಲ್ಯವು ಶರಣಸತಿಯೆ, ಮದವಳಿದು ನಿಜ ಉಳಿದ ಬಳಿಕ ಅದು ಸತ್ಯ ಕಾಣಾ–ಮನಸ್ಸಿನ ಸಂಕಲ್ಪ ವಿಕಲ್ಪ ನಷ್ಟವಾಗಿ ಉನ್ಮಾನಸವಾದ ಮೇಲೆ ಅದು ಪರಮಾರ್ಥ[೧]ವಲಾ.[೧]

....

–೧ ಲ್ಲಾ (ಜ)

III –

ಮದವಳಿಗೆ–ಸಮರಸಶುಭಕರಣದಾಚರಣೆಯನುಳ್ಳ ಎಲೆ ಶರಣಸತಿಯೆ, ಐದು ಮಾನವ ಕುಟ್ಟಿ ಒಂದು ಮಾನವ ಮಾಡು ಕಂಡಾ–ಪಂಚಕರಣಂಗಳ ವರ್ತನೆಯನು ಮಂತ್ರಲಿಂಗಸಂಬಂಧದಿಂದ ನಿವೃತ್ತಿಯ ಮಾಡಿ ಲಿಂಗದಲ್ಲಿ ಏಕಮನವಾಗಿಸು ಕಂಡಾ, ಇದು–ಇದು ತಾನು, ನಮ್ಮ ವಿಸ್ತಾರ–ನಮ್ಮ ಸರ್ವಾಚಾರ ಸಂಪತ್ತಿನಾಚರಣೆಯ ವೈಶಾಲ್ಯವು.

IV –

ಐದು ಮುಖವಾಗಿ ಹರಿವ ಮನವ ಜ್ಞಾನಕ್ರಿಯೆಯಿಂದ ಮಥನಿಸಿ ಮಥನಿಸಿ ಲಿಂಗದೊಳಗೊಂದುಗೂಡಿ ಅಷ್ಟತನುವಿನ ಮದಂಗಳಳಿದಡೆ ಆತ್ಮನು ತನ್ನ [೨][ಮುನ್ನಿನ][೨] ನಿಜವಪ್ಪ ಸತ್ತುಚಿತ್ತಾನಂದನಿತ್ಯಪರಿಪೂರ್ಣಲಿಂಗವೆಯಾಗಿ ಬಾಳುವನೆಂಬುದೀ ವಚನದ ತಾತ್ಪರ್ಯಾರ್ಥ.

....

೨–೨ ಮುನಿವ (ತ)

V– –

ಮದವಳಿಗೆ–ಅಷ್ಟಮದಂಗಳಳಿದು ಅಷ್ಟಾವರಣಸಂಬಂಧವಾದ ಎಲೆ ಶರಣಸತಿಯೆ, ಐದು ಮಾನವ ಕುಟ್ಟಿ–ಪಂಚಭೂತಪಂಚಕರಣಂಗಳ ವರ್ತನೆಯನು ಮಂತ್ರಲಿಂಗಸಂಬಂಧದಿಂದ ನಿವೃತ್ತಿ ಮಾಡಿ, ಒಂದು ಮಾನವ ಮಾಡು ಕಂಡಾ–ಲಿಂಗದಲ್ಲಿ ಏಕಮನವಾಗಿಸು ಕಂಡಾ, ಇದು–ಇದು ತಾನು, ನಮ್ಮ ಬಾಳುವೆ–ನಮ್ಮ ಸಂಬಂಧವಾದ ಜೀವನಾರ್ಥವು, ಇದು ನಮ್ಮ ವಿಸ್ತಾರ–ಇದು ನಮ್ಮ ಶರಣರ ಪೂರ್ವಾಚಾರಸಂಪತ್ತಿನಾಚರಣೆಯ ವಿಶಾಲವು, ಮದವಳಿದು–ಅಹಂ ಬ್ರಹ್ಮಂವೆಂಬ ಗರ್ವ ನಷ್ಟವಾಗಿ ನಿಜವುಳಿದ ಬಳಿಕ–ನಿಯತಾರ್ಥವಾದ ವಸ್ತುಸ್ವರೂಪದಿಂದೆ ನಿತ್ಯನಾ [೩][ದ ಮೇಲೆ][೩]

....

೩–೩ ದೆಲೆ (ಪ) ; + ಲಿಂಗವಿಡಿದು ಲಿಂಗಸಿದ್ಧಿ–ನಪುಂಸಕಲಿಂಗಸ್ವರೂಪವಾದ ಮನಸ್ಸನು ಪ್ರಾಣಲಿಂಗದಲ್ಲಿ ಸಂಬಂಧಿಸಿ (ಪ); ವಚನ ೮೭೭ ನೋಡಿರಿ (ಸಂ).

೮೭೦

ಕುಲಮದವಳಿಯದನ್ನಕ್ಕ ಶರಣನಾಗಲೇಕೆ? ವಿಧಿವಶ ಬಿಡದನ್ನಕ್ಕ ಭಕ್ತನಾಗಲೇಕೆ? ಹಮ್ಮಿನ ಸೊಮ್ಮಿನ ಸಂಬಂಧ[1] ಬಿಟ್ಟು [2]ಕಿಂಕರರ ಕಿಂಕರ[2]ನಾಗಿರಬೇಕು. ಹೆಪ್ಪೆಜೆದ ಹಾಲು ಕೆಟ್ಟು ತುಪ್ಪವಪ್ಪಂತೆ ಇಪ್ಪರು, ಕೂಡಲಸಂಗಮದೇವಾ ನಿಮ್ಮ ಶರಣರು !

I –

ಕುಲಮದವಳಿಯದನ್ನಕ್ಕ–ನೂರಾವೊಂದು ಕುಲ ಹದಿನೆಂಟು ಜಾತಿಗಳೊಳಗೆ ನಮ್ಮ ಕುಲ ಹೆಚ್ಚು ನಮ್ಮ ಜಾತಿ ಹೆಚ್ಚೆಂದು ಹೇಳಿಕೊಂಬುವಂಥ ಕುಲಮದ ನಷ್ಟವಾಗಬೇಕು. ನಷ್ಟವಾಗದಿರುವ ಪರಿಯಂತವು, ಶರಣನಾಗಲೇಕೆ?–ಶರಣನೇ ಸತಿಯಾಗಿ ಲಿಂಗವೇ ಪತಿಯಾಗಿ ಶರಣಸತಿ ಲಿಂಗಪತಿತ್ವವಿಡಿದಾಚರಿಸುವಂಥ ಶರಣಸ್ಥಲದಾಚರಣೆವುಳ್ಳಾತನೆಂದು ಹೇಳಿಕೊಂಬುವುದೇನು ಕಾರಣಕ್ಕೆ? ವಿಧಿವಶ ಬಿಡದನ್ನಕ್ಕ–ಬ್ರಹ್ಮಲಿಖಿತವು ನಷ್ಟವಾಗಬೇಕು. ನಷ್ಟವಾಗದಿರುವ ಪರಿಯಂತರವು, ಭಕ್ತನಾಗಲೇಕೆ?–ತ್ರಿವಿಧಪದಾರ್ಥವಿಡಿದು ಭಕ್ತಿಗೃಹವ ಕಟ್ಟಿ ತನುಮನಧನಂಗಳನು ಗುರುಲಿಂಗಜಂಗಮಕ್ಕೆ ಕೊಟ್ಟು ಭಕ್ತಿಯ ಮಾಡುವಂಥ ಭಕ್ತಿಸ್ಥಲದಾಚರಣೆಯುಳ್ಳಾತನೆಂದು ಹೇಳಿಕೊಂಬುವುದೇನು ಕಾರಣಕ್ಕೆ? ಹಮ್ಮಿನ–ಅಹಂಕಾರದ, ಸೊಮ್ಮಿನ–ಸೊಬಗಿನ, ಸಂಬಂಧ–ಸ್ವಾಯತವನ್ನು, ಬಿಟ್ಟು–ಬಿಟ್ಟುಕೊಟ್ಟು, ಕಿಂಕರರ ಕಿಂಕರನಾಗಿರಬೇಕು–ಭೃತ್ಯರ ಭೃತ್ಯನಾಗಿರಬೇಕು, ಹೆಪ್ಪೆಱೆದ ಹಾಲು ಕೆಟ್ಟು ತುಪ್ಪವಪ್ಪಂತೆ ಇಪ್ಪರು–ಹಾಲನ್ನು ಕರಕೊಂಡು ಹದನಕ್ಕೆ ಕಾಸಿ ಹೆಪ್ಪುಗೊಟ್ಟಲ್ಲಿ ಗೋದಧಿಯಾಗುವುದು. ಆ ದಧಿಯನ್ನು ಮಥನಿಸಿದಲ್ಲಿ ನವನೀತ ಹೊರಡುವುದು. ಆ ನವನೀತವನ್ನು ಹದನಕ್ಕೆ ಕಾಸಿದಲ್ಲಿ ಆಜ್ಯವಾಗುವುದು. ಆ ಆಜ್ಯವು ಸಮಸ್ತ ಆತ್ಮರುಗಳಿಗೆ ಸಲಿಸುವುದಕ್ಕೆ ಹೇಂಗೆ ಪ್ರೀತಿಯಾಗುತ್ತಿಹುದೋ ಹಾಂಗೆ ಘೃತಕಾಠಿಣ್ಯ ಮನ್ಮೂರ್ತಿಸಚ್ಚಿದಾನಂದ ಲಕ್ಷಣವನುಳ್ಳ ಬ್ರಹ್ಮದಲ್ಲಿ ಕೂಡಿ ಬ್ರಹ್ಮವೇ ತಾವಾಗಿರ್ಪರು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ ಶರಣರು–ನಿಮ್ಮ ಜ್ಞಾನಾನಂದಸುಖಸ್ವರೂಪಿಗಳಾದ ಶಿವಶರಣರು.

II –

ಹಿಂದಕ್ಕೆ ಕಾಣಬಂದರ್ಥ, ಹೆಪ್ಪನೆಱೆದ ಹಾಲು ಕೆಟ್ಟು ತುಪ್ಪವಪ್ಪಂತೆ ಇಪ್ಪರು ಕೂಡಲಸಂಗಮದೇವಾ ನಿಮ್ಮ ಶರಣರು–ಎಲೆ ಲಿಂಗವೆ ನಿಮ್ಮ ಶಿವಶರಣರು ಶಿವಾನುಭಾವೆಂಬ ೧ಆಳೆಯನು ಪೋಷಿಸಿದಲ್ಲಿ೧ ಸಮುಸಾರಾಮೃತವು ನಷ್ಟವಾಗಿ ಘೃತಕಾಠಿಣ್ಯಸಚ್ಚಿದಾನಂದ ಮನ್ಮೂರ್ತಿಸ್ವರೂಪವಾದ ವಸ್ತುವಾಗಿಪ್ಪರು.

....

೧–೧ ಆಳೆಯನು ಹೋಗಿಸಿದಲ್ಲಿ (ಚ)

III– –

೧ + ವ (ಟ, ಡ)

....

ಹಮ್ಮಿನ ಸೊಮ್ಮಿನ ಸಂಬಂಧವ ಬಿಟ್ಟು–ನಾನು ನಾನೆಂಬ ದುರಭಿಮಾನವು ನಷ್ಟವಾಗಿ, ಹೆಪ್ಪನೆಱೆದ ಹಾಲು ತನ್ನ ಪೂರ್ವಕ್ರೀಯಳಿದು ತುಪ್ಪವಾಗಿರುವಾಗ ಹಾಂಗೆ ಪೂರ್ವಕ್ರೀಯಳಿದು ಗುರೂಪದೇಶದಿಂದ ಲಿಂಗಸ್ವರೂಪರಾಗಿರ್ಪರುಯೆಂಬುದೀಗ [ಹೆಪ್ಪನೆಱೆದ ಹಾಲು ಕೆಟ್ಟು ತುಪ್ಪವಪ್ಪಂತೆ ಎಂಬ ಶಬ್ದಕ್ಕರ್ಥ] ಇಪ್ಪರು–ಇರುವರು

IV– –

....

ಗುರುಕರುಣದಲ್ಲಿ ಪುನರ್ಜಾತನಾದ ಶರಣನು, ಕುಲಮದ ಮೊದಲಾದ ಮದಂಗಳ ಬಿಡಬೇಕು. ಕುಲಭಯ ಭಕ್ತಂಗಿಲ್ಲವೆಂಬ ನಿಶ್ಚಯವಿರಬೇಕು. ತನುಮನಧನ ತನ್ನವೆಂಬ ಅಹಂಮಮತೆಗಳಿಲ್ಲದೆ ಎಲ್ಲವೂ ಶಿವಸೊಮ್ಮೆಂದು ಶಿವಗಣಂಗಳಿಗೆ ಕೊಟ್ಟು ಶಿವಶರಣರ ಆಳಿನಾಳೆಂದಿಪ್ಪ ಭಕ್ತಿಯನೆ ಬಿಡದಿರಬೇಕು. ಅಂತಪ್ಪ ಜ್ಞಾನಭಕ್ತಿಯಳವಟ್ಟಡೆ ಶರಣನೇ ಲಿಂಗವಾಗಿಪ್ಪನು, ಮರಳಿ ಮಾನವನಾಗನು. ಅದು ಹೇಂಗೆಂದೊಡೆ ಹೆಪ್ಪನೆಱೆದ ಹಾಲು ಕೆಟ್ಟು ತುಪ್ಪವಾದ ಬಳಿಕ ಮರಳಿ ಹಾಲಾಗದೆಂಬುದೀ ವಚನದ ತಾತ್ಪರ್ಯಾರ್ಥ.

೮೭೧

ಮಣ್ಣ ಮಡಿಕೆ'ಯು' ಮಣ್ಣಾಗದು ಕ್ರೀಯಳಿದು. ಬೆಣ್ಣೆ ಕರಗಿ ತುಪ್ಪವಾಗಿ ಮರಳಿ ಬೆಣ್ಣೆಯಾಗದು ಕ್ರೀಯಳಿದು. ಹೊನ್ನು ಕಬ್ಬುನವಾಗದು ಕ್ರೀಯಳಿದು. ಮುತ್ತು ನೀರಲ್ಲಿ ಹುಟ್ಟಿ ಮತ್ತೇ ನೀರಾಗದು ಕ್ರೀಯಳಿದು. ಕೂಡಲಸಂಗನ ಶರಣನಾಗಿ, ಮರಳಿ ಮಾನವನಾಗನು ಕ್ರೀಯಳಿದು.

I– –

ಮಣ್ಣ ಮಡಕೆಯು ಮಣ್ಣಾಗದು ಕ್ರೀಯಳಿದು – ಒಬ್ಬಾನೊಬ್ಬ ಕುಲಾಲನೇನಾದರೂ ಅಡವಿಗೆ ಹೋಗಿ ಮಣ್ಣನ್ನು ತೆಗೆದುಕೊಂಡು ಬಂದು ನಾಲ್ಕೆಂಟು ದಿವಸ ಕೊಳೆಯಿಟ್ಟು ಆ ಕೊಳೆತಂಥ ಮಣ್ಣನ್ನು ಕಾಲಲ್ಲಿ ತುಳಿದು ಕೈಯಲ್ಲಿ ಕಲಸಿ ಮುದ್ದೆಯ ಮಾಡಿ ತಿಗರಿಯ ಮೇಲೆ ಹೂಡಿ ದಂಡದಿಂದ ತಿರುವಿ ಗೋಳಕಾಕಾರದಿಂದ ಮೇಲಕ್ಕೆಬ್ಬರಿಸಿ ದಿನಸಾವರಿ ಭಾಂಡಗಳನು ನಿರ್ಮತವ ಮಾಡಿ ನೆರಳಲ್ಲಿಟ್ಟು ಒಣಗಿಸಿ ಆವುಗೆಯ ಕೊಟ್ಟಿಗೆಯಲ್ಲಿ ಒಟ್ಟಿ ಸುಟ್ಟು ಭಾಂಡವಾದಂಥದು ಕ್ರೀಯಳಿದು ನಷ್ಟವಾಗಿ, ಹಾಂಗೇ ಭಾಂಡವಾಗಿದ್ದಿತ್ತಲ್ಲದೆ ಮರಳಿ ಮೃತ್ತಿಕೆಯಾದೀತೆ? ಆಗಲರಿಯದು. ಬೆಣ್ಣೆ ಕರಗಿ ತುಪ್ಪವಾಗಿ ಮರಳಿ ಬೆಣ್ಣೆಯಾಗದು ಕ್ರೀಯಳಿದು. ಆಕಳನ್ನು ಕರಕೊಂಡು ಹಾಲನ್ನು ಹದನಕ್ಕೆ ಕಾಸಿ ಹೆಪ್ಪಗೊಟ್ಟಲ್ಲಿ ದಧಿಯಾಗುವುದು. ಆ ದಧಿಯಾದಂಥದನು ಮಥನಿಸಿದಲ್ಲಿ ನವನೀತ ಹೊರಡುವುದು. ಆ ನವನೀತವನ್ನು ಹದನಕ್ಕೆ ಕಾಸಿದಲ್ಲಿ ಆಜ್ಯವಾಗುವುದು. ಆ ಆಜ್ಯವಾದಂಥದು ಕ್ರೀಯಳಿದು ನಷ್ಟವಾಗಿ ಹಾಂಗೆ ತುಪ್ಪವಾಗಿದ್ದಿತಲ್ಲದೆ ಮರಳಿ ಬೆಣ್ಣೆಯಾದೀತೆ? ಆಗಲರಿಯದು.

[ಹೊನ್ನು ಕಬ್ಬುನವಾಗದು] ಕಬ್ಬುನ ಪರುಷಮುಟ್ಟಿ ಕಾರ್ಬೊನ್ನವಾಗದು. ಕ್ರೀಯಳಿದು– ನಷ್ಟವಾಗಿ, ಹಾಂಗೆ ಸುವರ್ಣವಾಗಿದ್ದಿತ್ತಲ್ಲದೆ ಮರಳಿ ಕಾರ್ಬೊನ್ನವಾದೀತೆ? ಆಗಲರಿಯದು. ಮುತ್ತು ನೀರಲ್ಲಿ ಹುಟ್ಟಿ ನೀರಾಗದು ಕ್ರೀಯಳಿದು ತಾಮ್ರಪರ್ಣಿಯೆಂಬಂಥ ಹೊಳೆಯು ಬಂದು ಸಮುದ್ರವನ್ನು ಕೂಡುವಂಥ ವೇಳೆಯಲ್ಲಿ ಚಿತ್ತಿಬಿಸಿಲು ಕಾದಲ್ಲಿ ಸಮುದ್ರದೊಳಗಿದ್ದಂಥ ಚಿಪ್ಪುಗಳೆಲ್ಲವೂ ಮೇಲಕ್ಕೆ ಬಂದು ಬಾಯನ್ನು ತೆರೆದುಕೊಂಡಿರುವಂಥ ವೇಳೆಯಲ್ಲಿ ಸ್ವಾತಿವೃಷ್ಟಿಯಂಕುರಿಸಲು ಆ ಚಿಪ್ಪಿನೊಳಗೆ ಬಿದ್ದಂಥ ಉದಕವೆಲ್ಲವೂ ಆಣಿಮುತ್ತು ತೆನೆಮುತ್ತು ಕಟ್ಟಾಣಿಮುತ್ತು ಸುಪ್ಪಾಣಿ ಮುತ್ತು ಸೂರ್ತಿಮುತ್ತೆಂದು ಮುತ್ತಾಗಿ ನೆಲೆಗೊಂಡಂಥದು, ಕ್ರೀಯಳಿದು – ನಷ್ಟವಾಗಿ ಮತ್ತೇ ನೀರಾಗದು. ಹಾಂಗೆ ಮುತ್ತಾಗಿದ್ದಿತ್ತಲ್ಲದೆ

ಮರಳಿ ಸ್ವಾತಿ ಸಲಿಲವಾದೀತೆ? ಆಗಲರಿಯದು. ಕೂಡಲಸಂಗನ ಶರಣನಾಗಿ ಮರಳಿ ಮಾನವನಾಗನು ಕ್ರೀಯಳಿದು–ಗುರುಕಾರುಣ್ಯವನು ಹಡೆದು ಲಿಂಗಾಂಗಸಂಬಂಧಿಯಾಗಿ ಶಿವಶರಣನಾಗಿದ್ದಂಥಾತನು ಕ್ರೀಯಳಿದು ನಷ್ಟವಾಗಿ ಮರಳಿ ಮಾನವನಾಗ. ಹಾಂಗೆ ಶರಣನಾಗಿದ್ದನಲ್ಲದೆ ಮನುಷ್ಯನಾದಾನೆ? ಆಗಲರಿಯನು.

II –

1–1 x (ಚ. ಜ)

....

ಮಣ್ಣ ಮಡಕೆ ಮಣ್ಣಾಗದು ಕ್ರೀಯಳಿದು–ವಿಷಯಮೃತ್ತಿಕೆಸಂಬಂಧವಾದ ದೇಹಭಾವವನ್ನುಳ್ಳ ಜೀವನು ಮತ್ತೆ ಮೊದಲಮಾಟವು ನಷ್ಟವಾಗಿ ವಿಷಯಮೃತ್ತಿಕೆಸಂಬಂಧವಾದ ದೇಹಭಾವವನ್ನುಳ್ಳ ಜೀವನಾಗನು. ಬೆಣ್ಣೆ ಕರಗಿ ತುಪ್ಪವಾಗಿ ಮರಳಿ ಬೆಣ್ಣೆಯಾಗದು ಕ್ರೀಯಳಿದು–ಆತ್ಮವಿವೇಕವು ಲೀನವಾಗಿ ಮಹಾಜ್ಞಾನಾಜ್ಯವಾಗಿ ಮತ್ತೆ ಮೊದಲಮಾಟವು ನಷ್ಟವಾಗಿ ಆತ್ಮವಿವೇಕವಾಗದು.

ಹೊನ್ನು ಕಬ್ಬುನವಾಗದು ಕ್ರೀಯಳಿದು–ಚಿತ್ಪ್ರಕಾಶಜ್ಞಾನಿಯಾದಾತನು ಮತ್ತೆ ಮೊದಲಮಾಟವು ನಷ್ಟವಾಗಿ ಪಂಚಕರಣ ಸಪ್ತಧಾತುಯುಕ್ತವಾದ ದೇಹಭಾವವನ್ನುಳ್ಳವನಾಗನು. ಮುತ್ತು ನೀರಲ್ಲಿ ಹುಟ್ಟಿ ಮತ್ತೇ ನೀರಾಗದು ಕ್ರೀಯಳಿದು–ನಿರ್ಮಲಜ್ಞಾನಿಯಾದ ಶರಣನು ಮನೋಪ್ರಕೃತಿಯಲ್ಲಿ ಉದಿಸಿ ಮರಳಿ ಮೊದಲಮಾಟವು ನಷ್ಟವಾಗಿ ಮನೋಪ್ರಕೃತಿಯುಳ್ಳವನಾಗನೆಂಬುದರ್ಥ, ಮುಂದಕ್ಕೆ ಕಾಣಬಂದರ್ಥ.

....

೧–೧ ಗೆ (ಜ)

III– –

ಕ್ರೀಯಳಿದು–ಪರುಷದ ಸೋಂಕಿನ ಕ್ರೀಯು ನಷ್ಟವಾಗಿ, ಮರಳಿ–ಮತ್ತೆ, ಕ್ರೀಯಳಿದು–ಆ ಗುರೂಪದೇಶದ ಕ್ರೀ ನಷ್ಟವಾಗಿ ಮಾನವನಾಗನು–ಮನುಷ್ಯಮಾತ್ರದವನಾಗನು.

IV –

1–1 x (ತ)

....

ದೇಹೇಂದ್ರಿಯದ ಗುಣವಳಿದು ಪರಬ್ರಹ್ಮವಾದ ಬಳಿಕ ಮರಳಿ ಮನುಷ್ಯರಾಗರೆಂಬುದೀ ವಚನದರ್ಥ.

೮೭೨

ಪೂರ್ವಜನ್ಮನಿವೃತ್ತಿಯಾಗಿ ಗುರುಕರುಣವಿಡಿದವಂಗೆ [1]ಭವ[1]ವೆಲ್ಲಿಹದೋ? [2]ಬಂಧನವೆಲ್ಲಿಹದೋ ಸಂಕಲ್ಪವಿಕಲ್ಪ [3]ವ[3] ಕಳೆದುಳಿದವಂಗೆ, ಕೂಡಲಸಂಗಮದೇವರ ತ್ರಿಸಂಧ್ಯಾಕಾಲದಲ್ಲಿ ಮಾಣದೆ ನೆನೆವಂಗೆ?

I –

ಪೂರ್ವಜನ್ಮನಿವೃತ್ತಿಯಾಗಿ ಮುನ್ನಿನ ಜಾತಿವರ್ಣಾಶ್ರಮಕುಲಗೋತ್ರನಾಮಾಚಾರಂಗಳು ನಷ್ಟವಾಗಿ ಹೋಗಿ, ಗುರುಕರುಣವಿಡಿದವಂಗೆ ಶ್ರೀಗುರುನಾಥನ ವೇಧಾಮಂತ್ರಕ್ರೀಗಳೆಂಬ ದೀಕ್ಷಾತ್ರಯಂಗಳಿಂದ ಅಂಗದಲ್ಲಿ ಇಷ್ಟಲಿಂಗವನ್ನು ದೃಢವಿಡಿದಾತಂಗೆ, ಭವವೆಲ್ಲಿಹದೋ–ತನ್ನ ನಿಜವನ್ನು ಮರೆದು ಅಜ್ಞಾನದಿಂದ ದೇಹಸಂಬಂಧಿಯಾಗಿ ಬ್ರಹ್ಮನಸೃಷ್ಟಿಗೊಳಗಾಗಿ ಹುಟ್ಟಿಬರುವಂಥ ಉತ್ಪತ್ಯವು ಎಲ್ಲಿಹದೋ? ಇಲ್ಲವು. ಬಂಧನವೆಲ್ಲಿಹದೋ–ಮಾಡಬಾರದ ಪಾಪಂಗಳನು ಮಾಡಿ ಕಾಲಕಾಮರ ಶಿಕ್ಷೆಗೆ ಒಳಗಾಗುವಂಥ ಬಾಧತ್ವವು ಎಲ್ಲಿಹದೋ? ಇಲ್ಲವು. ಸಂಕಲ್ಪವಿಕಲ್ಪವ–ಅರಿವುಮರವು ಜ್ಞಾನಅಜ್ಞಾನವೆಂಬ ಸಂಕಲ್ಪವಿಕಲ್ಪವನು, ಕಳೆದು–ನಷ್ಟವಮಾಡಿ, ಉಳಿದವಂಗೆ–ಲಿಂಗದಲ್ಲಿ ಅವಶೇಷಿತವಾದಾತಂಗೆ, ಕೂಡಲಸಂಗಮದೇವರ–ಇಷ್ಟಮಹಾಲಿಂಗವನ್ನು, ತ್ರಿಸಂಧ್ಯಾಕಾಲದಲ್ಲಿ–ಉದಯ ಮಧ್ಯಾಹ್ನ ಸಾಯಂಕಾಲದಲ್ಲಿ ಮಾಣದೆ–ಬಿಡದೆ, ನೆನೆವಂಗೆ–ಲಿಂಗಧ್ಯಾನ ಲಿಂಗಸ್ಮರಣೆಯ ಮಾಡುವಾತಂಗೆ ಎಲ್ಲೈತೋ? ಇಲ್ಲವು.

IV –

1–1 ಬಂಧನ (ತ). 2 + ಭವ (ತ), 3–3 ವೆಂಬ ಸಂದೇಹ (ತ)

....

ಆದಿ ಮಧ್ಯ ಅಂತ್ಯವಿಲ್ಲದ ಪರಬ್ರಹ್ಮವಾದವಂಗೆ ಸಂಕಲ್ಪವಿಕಲ್ಪ ಜನನಮರಣ ಮೊದಲಾದ ಕಲ್ಪಗಳಿಲ್ಲವೆಂಬುದೀ ವಚನದರ್ಥ.

೮೭೩

ಲಗ್ನವೆಲ್ಲಿಹದೋ ವಿಘ್ನವಲ್ಲಿಹದೋ ಸಂಗಯ್ಯ? ದೋಷವೆಲ್ಲಿಹದೋ ದುರಿತವೆಲ್ಲಿಹದೋ ಸಂಗಯ್ಯ? ನಿಮ್ಮ [1]ಮಾಣದೆ[1] ನೆನೆವಂಗೆ ಭವಕರ್ಮವೆಲ್ಲಿಹದೋ? ಕೂಡಲಸಂಗಮದೇವಾ[2]

I –

ಲಗ್ನವೆಲ್ಲಿಹದೋ–ಆವಾಗಲೂ ಲಿಂಗಪೂಜೆಯ ಮಾಡಿ ಲಿಂಗದ ಕರುಣವನ್ನು ಹಡೆವಾತಂಗೆ ಶುಭದಿನದಲ್ಲಿ ಲಿಂಗಪೂಜೆಯು ಮಾಡಬೇಕು, ಅಶುಭದಿನದಲ್ಲಿ ಲಿಂಗಪೂಜೆಯು ಮಾಡಬಾರದೆಂಬಂಥದು ಎಲ್ಲೈತೋ? ಇಲ್ಲವು. ವಿಘ್ನವೆಲ್ಲಿಹದೋ–ಕಂಕಟವೆಲ್ಲಿಹದೋ ? ಇಲ್ಲವು. ಸಂಗಯ್ಯ–ಎಲೆ ಲಿಂಗವೆ ? ದೋಷವೆಲ್ಲಿಹದೋ–ಪಾಪವೆಲ್ಲೈತೋ? ಇಲ್ಲವು. ದುರಿತವೆಲ್ಲಿಹದೋ–

ಅಷ್ಟೋತ್ತರಶತವ್ಯಾಧಿಗಳು ಎಲ್ಲೈದಾವೆ? ಇಲ್ಲವು. ಸಂಗಯ್ಯ–ಎಲೆ ಲಿಂಗವೆ? ನಿಮ್ಮ ಮಾಣದೆ–ನಿಮ್ಮ ಬಿಡದೆ, ನೆನೆವಂಗೆ ಲಿಂಗಧ್ಯಾನ ಲಿಂಗಸ್ಮರಣೆಯ ಮಾಡುವಾತಂಗೆ, ಭವ–ಉತ್ಪತ್ಯವು, ಕರ್ಮವೆಲ್ಲಿಹದೋ–ಸಂಚಿತಾದಿ ಕರ್ಮತ್ರಯಂಗಳು ಎಲ್ಲಿಹವೋ? ಇಲ್ಲವು. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

IV –

1–1 x (ತ) 2–2 ಯ್ಯ (ತ).

....

ಸದಾ ಲಿಂಗವ ನೆನೆವಂಗೆ ದೋಷದುರಿತ ಲಗ್ನವಿಘ್ನ ಭವಕರ್ಮವಿಲ್ಲವೆಂಬುದೀ ವಚನದರ್ಥ.

ಶರಣನ ಶರಣಸ್ಥಲ

I– –

ಶರಣನ ಶರಣಸ್ಥಲ–ಶರಣಸ್ಥಲದೊಳಗಣ ಶರಣಸ್ಥಲದಾಚರಣೆಯನ್ನು ನಿರೂಪಿಸುತ್ತಿಹರು.

೮೭೪

ಶರಣ ನಿದ್ರೆಗೈದಡೆ ಜಪ ಕಾಣಿರೋ, ಶರಣನೆದ್ದು ಕುಳಿತಡೆ ಶಿವರಾತ್ರಿ ಕಾಣೀರೋ. ಶರಣ ನಡೆದುದೇ ಪಾವನ ಕಾಣಿರೋ. ಶರಣ ನುಡಿದುದೇ ಶಿವತತ್ತ್ವ ಕಾಣಿರೋ. ನಮ್ಮ ಕೂಡಲಸಂಗನ ಶರಣ[1]ರ[1] ಕಾಯವೇ ಕೈಲಾಸ, ಕಾಣಿರೋ !

I– –

ಶರಣ–ಶಿವಜ್ಞಾನಸಂಪನ್ನನಾದ ಶಿವಶರಣನು, ನಿದ್ರೆಗೈದಡೆ ಜಪ–ರಾತ್ರಿಕಾಲದಲ್ಲಿ ಶಿವಾರ್ಚನೆಯ ಮಾಡಿಕೊಂಡು ಶಿವಾರ್ಪಿತವ ಮಾಡಿಕೊಂಡು ಪವಡಿಸಿಕೊಂಡಲ್ಲಿ ಇಡಾನಾಡಿಯೇ ಅಕಾರಪ್ರಣವನಾಗಿ ಪಿಂಗಳನಾಡಿಯೇ ಉಕಾರಪ್ರಣವವಾಗಿ ಮಧ್ಯನಾಡಿಯೇ ಮಕಾರಪ್ರಣಮವಾಗಿ ತುಂಬುವುದೇ–ಷಡಕ್ಷರವಾಗಿ ಸೂಸುವುದೇ ಪಂಚಾಕ್ಷರಿಯಾಗಿ ತಡೆದು ನಿಲ್ಲಿಸುವುದೇ ಪರಾಶಕ್ತಿಪ್ರಣಮವಾಗಿ ಹೋಗುತ್ತ ಐವತ್ತೊಂದು ವೇಳೆ ಬರುತ್ತ ಐವತ್ತೊಂದು ವೇಳೆ ಶಿವೋಹಂ ಬ್ರಹ್ಮೋಹಂ ಪ್ರಣವೋಹಂಯೆಂದುಚ್ಚರಿಸಲು ನೂರಾಯೆರಡಾಗಿಪ್ಪವು. ಅದರೊಳಗೆ ಮೇಲಿನ ಮೂಲ ಷಡಕ್ಷರ ಬಂದು ಕೂಡಲು ನೂರಾಯೆಂಟು ಜಪಮಾಲಿಕೆ ಮಣಿಗಳಾಗಿ ಒಪ್ಪುತ್ತಿಹವು, ಕಾಣಿರೋ–ಕಂಡಿರೋ.

ಶರಣನೆದ್ದು ಕುಳಿತಡೆ ಶಿವರಾತ್ರಿ ಕಾಣಿರೋ; ಶರಣನು –ಶಿವಶರಣನು, ಎದ್ದು ಕುಳಿತಡೆ–ಶರಣನಿಗೆ ನಿದ್ರೆ ತೀರಿ ಎಚ್ಚರವಾಗಿ ಶಿವಧ್ಯಾನದಲ್ಲಿ ಮೂರ್ತವಮಾಡಿಕೊಂಡಿದ್ದಲ್ಲಿ, ಶಿವರಾತ್ರಿ–ಶಿವರಾತ್ರಿ ಸಂಕಣ್ಣಯ್ಯಗಳ ಹಾಂಗೆ ಬೇಡರ ಕಣ್ಣಪ್ಪಯ್ಯಗಳ ಹಾಂಗೆ ಏಕಾಗ್ರಚಿತ್ತದಿಂದೆಚ್ಚತ್ತು ಮಾಡುವಂಥ ಲಿಂಗಪೂಜೆಯ ಫಲವಾಗಿರ್ಪುದು. ಅದಲ್ಲದೆ ಶಿವಲಿಂಗಧಾರಣ ಶಿವಲಿಂಗಪೂಜೆ ಶಿವಭಕ್ತಿ ಶಿವಮಂತ್ರ ಶಿವಧ್ಯಾನವೆಂಬ ಶಿವಯೋಗಪಂಚಕವಾಗಿರ್ಪುದು, ಕಾಣಿರೋ–ಕಂಡಿರೋ.

ಶರಣ ನಡೆದುದೇ ಪಾವನ; ಶರಣ–ಶಿವಶರಣನು, ನಡೆದುದೇ–ದಾರಿಬಟ್ಟೆಯನ್ನು ಗಮಿಸುವಂಥದೇ, ಪಾವನ–ಪವಿತ್ರ ಸ್ವರೂಪು, ಕಾಣಿರೋ–ಕಂಡಿರೋ, ಶರಣ ನುಡಿದುದೇ ಶಿವತತ್ವ ಕಾಣಿರೋ; ಶರಣ–ಶಿವಶರಣನು, ನುಡಿದುದೇ–ಮಾತು ಕಥೆ ಪ್ರಸಂಗವನಾಡಿದಂಥದೇ, ಶಿವತತ್ತ್ವ–ಶಿವತತ್ವ ಜ್ಞಾನಾನುಭಾವದ ಪ್ರಸಂಗವಾಗಿ ಅಳವಟ್ಟಿರ್ಪುದು, ಕಾಣಿರೋ–ಕಂಡಿರೋ, ನಮ್ಮ ಕೂಡಲಸಂಗನ ಶರಣರ–ನಮ್ಮ ಶಿವನ ಚಿತ್ಪ್ರಭಾಂಗಸ್ವರೂಪರಾದ ಶಿವಶರಣರ, ಕಾಯವೇ–ದೇಹವೇ, ಕೈಲಾಸ–ಸಾಂಬಲೋಕವು, ಕಾಣಿರೋ–ಕಂಡಿರೋ.

II– –

ಶರಣ ನಿದ್ದೆಗೈದಡೆ ಜಪ ಕಾಣಿರೋ–ಶಿವಶರಣನ ಸೂಸುವೆಲ್ಲವು ಪಂಚಾಕ್ಷರಿ ತುಂಬುವೆಲ್ಲವು ಷಡಕ್ಷರಿ ತಡೆದು ನಿಲಿಸುವೆಲ್ಲವು ಪರಾಶಕ್ತಿಪ್ರಣವ ಸ್ವರೂಪವಾಗಿ ಷಡಾಧಾರಚಕ್ರಂಗಳಲ್ಲಿ ಹೋಗುತ್ತೈವತ್ತೊಂದು ವೇಳೆ ಬರುತ್ತೈವತ್ತೊಂದು ವೇಳೆ ಚರಿಸಿದಲ್ಲಿ ನೂರೆರಡಾಯಿತ್ತು. ಮೂಲಷಡಕ್ಷರಿ ಕೂಡಿದಲ್ಲಿ ನೂರೆಂಟಾಯಿತ್ತು. ಅದೇ ಮಂತ್ರಮಣಿ ಮಾಲಿಕೆಯನುಷ್ಠಾನವಾಗೊಪ್ಪುತ್ತಿಹುದು. ಶರಣನೆದ್ದು ಕುಳಿತಡೆ ಶಿವರಾತ್ರಿ ಕಾಣಿರೋ– ಶಿವಶರಣನು ಮಾರ್ಗಕ್ರೀಯಲ್ಲಿ ಮೂರ್ತ ಮಾಡಿದರೆ ಶಿವಯೋಗ ನೋಡಿರೋ, ಮುಂದಕ್ಕೆ ಕಾಣಬಂದರ್ಥ.

IV –

1–1 ನ (ತ)

....

ತಾನೇ ಪರಂಜ್ಯೋತಿಸ್ವರೂಪನಾಗಿ ನಡೆನುಡಿ ನಿದ್ರೆ ಎಚ್ಚರಿಕೆ ಮೊದಲಾದ ಇವೆಲ್ಲವು ಶಿವಚರಿತೆಯೆಂಬುದೀ ವಚನದರ್ಥ.

೮೭೫

ಉಪಮಿಸಬಾರದ ಉಪಮಾತೀತರು. ಕಾಲಕರ್ಮರಹಿತರು, ಭವವಿರಹಿತರು, ಕೂಡಲಸಂಗಮದೇವಾ, ನಿಮ್ಮ ಶರಣರು.

I –

ಉಪಮಿಸಬಾರದು–ಸಕಲವೇದಶಾಸ್ತ್ರಾಗಮಪುರಾಣಂಗಳ ವಾಚ್ಯಕ್ಕೆ ತಂದು ಹೇಳುವುದಕ್ಕೆ ಅಶಕ್ಯವಾದ, ಉಪಮಾತೀತರು–ವಾಕ್ಯಕ್ಕೆ ಮೀರಿ ತೋರಲ್ಪಟ್ಟಂಥವರು. ಕಾಲಕರ್ಮ–ಮಾಯಾಸಂಬಂಧವಾದ ಸಂಚಿತಾದಿಕರ್ಮತ್ರಯಂಗಳಿಗೆ, ರಹಿತರು–ವಿಲಕ್ಷಣಸ್ವರೂಪಿಗಳು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ ಶರಣರ–ನಿಮ್ಮ ಶಿವಶರಣರು, ಭವ–ಉತ್ಪತ್ಯಕ್ಕೆ, ವಿರಹಿತರು–ವಿಲಕ್ಷಣಸ್ವರೂಪಿಗಳು.

೮೭೬

ಭವಕ್ಕೆ ಹುಟ್ಟುವನಲ್ಲ, ಸಂದೇಹಿ ಸೂತಕಿಯಲ್ಲ, ಆಕಾರನಿರಾಕಾರನಲ್ಲ ನೋಡಯ್ಯ. ಕಾಯವಂಚಕನಲ್ಲ, ಜೀವವಂಚಕನಲ್ಲ, ಶಂಕೆಯಿಲ್ಲದ ಮಹಾಮಹಿಮ ನೋಡಯ್ಯ. ಕೂಡಲಸಂಗನ ಶರಣ[1]ರು[1] ಉಪಮಾತೀತ[1]ರು[1] ನೋಡಯ್ಯ.

I –

ಭವಕ್ಕೆ ಹುಟ್ಟುವನಲ್ಲ–ಬ್ರಹ್ಮನ ಸೃಷ್ಟಿಗೊಳಗಾಗಿ ದೇಹಸಂಬಂಧಿಯಾಗಿ ಉತ್ಪತ್ಯವಾಗುವಾತನಲ್ಲವು, ಸಂದೇಹಿ–ನಾನು ವಸ್ತುಸ್ವರೂಪನಹುದೋ ಅಲ್ಲವೋ ಎಂಬ ಮನಸ್ಸಂಕಲ್ಪದ, ಸೂತಕಿಯಲ್ಲ–ಭಿನ್ನಸೂತಕವುಳ್ಳಾತನಲ್ಲವು. ಆಕಾರನಿರಾಕಾರನಲ್ಲ ನೋಡಯ್ಯ–ಆಕಾರವೆಂದರೆ ಜೀವನು, ನಿರಾಕಾರವೆಂದರೆ ಪರಮನು, ಅಲ್ಲ ನೋಡಯ್ಯ–ಜೀವಪರಮರ ಎರಡರ ಎಣಿಕೆಗೆ ಸಿಕ್ಕಿ ಗಣನೆಗೆ ಒಳಗಾಗುವಾತನಲ್ಲವು ಕಂಡಯ್ಯ.

ಕಾಯಕವಂಚಕನಲ್ಲ–ಹದಿನೆಂಟು ಧಾನ್ಯಂಗಳನು ಕಣಜಪಣತಾದಿಗಳಿಂದ ತೆಗೆದುಕೊಂಡು ಕುಟ್ಟುವಲ್ಲಿ ಬೀಸುವಲ್ಲಿ ತಟ್ಟುವಂಥ ದುಃಖವು ಧಾನ್ಯಂಗಳಿಗಲ್ಲದೆ ಕಣಜಪಣತಾದಿಗಳಿಗೆ ಇಲ್ಲವೆಂಬ ಹಾಂಗೆ ಪುಣ್ಯಪಾಪ ಸುಖದುಃಖಗಳು ಜೀವನಿಗಲ್ಲದೆ ದೇಹಕ್ಕಿಲ್ಲವೆಂದು ಹೇಳುವಂಥ ಸಿದ್ಧಾಂತಿಗಳ ಹಾಂಗೆ ದೇಹವನ್ನು ವಂಚಿಸಿಕೊಂಡು ಪ್ರಸಂಗವನಾಡುವಾತನಲ್ಲವು, ಜೀವವಂಚಕನಲ್ಲ–ಹದಿನೆಂಟು ಧಾನ್ಯಂಗಳನು ಕಣಜ ಪಣತಾದಿಗಳಿಗೆ ತುಂಬುವಲ್ಲಿ ಹೆಟ್ಟುವುದು ಕುಟ್ಟುವುದು ಗುದ್ದುವುದು ತಿವಿಯುವುದು ಕಣಜಪಣತಾದಿಗಳಿಗಲ್ಲದೆ ಧಾನ್ಯಕ್ಕೆ ಇಲ್ಲವೆಂಬುವ ಹಾಂಗೆ ಪುಣ್ಯಪಾಪ ಸುಖದುಃಖಗಳು ದೇಹಕ್ಕಲ್ಲದೆ ಜೀವನಿಗಿಲ್ಲವೆಂದು ಹೇಳುವಂಥ ವೇದಾಂತಿಗಳ ಹಾಂಗೆ ಜೀವವನ್ನು ವಂಚಿಸಿಕೊಂಡು ಪ್ರಸಂಗವನಾಡುವಾತನಲ್ಲವು, ಶಂಕೆಯಿಲ್ಲದ ನಾನು ವಸ್ತುಸ್ವರೂಪನಹುದೋ ಅಲ್ಲವೋ ಎಂಬ ಮನಸ್ಸಂಕಲ್ಪವುಂಟಾಗಿಲ್ಲದ, ಮಹಾಮಹಿಮ ನೋಡಯ್ಯ–ಮಹತ್ವಾತಿಶಯವನುಳ್ಳಾತ ಕಂಡಯ್ಯ. ಕೂಡಲಸಂಗನ ಶರಣರು–ಶಿವನ ಚಿತ್ಪ್ರಾಂಗಸ್ವರೂಪರಾದ ಶಿವಶರಣರು, ಉಪಮಾತೀತರು ನೋಡಯ್ಯ–ವಾಚಕ್ಕೆ ಮೀರಿ ತೋರಲ್ಪಟ್ಟಂಥವರು ಕಂಡಯ್ಯ.

IV –

1–1 x (ತ)

....

ದೇಹ ಪ್ರಾನ ಜನನ ಸೂತಕ ಸಂದೇಹ ಕಾಯವಂಚನೆ ಜೀವವಂಚನೆ ಇವು ಮೊದಲಾದ ಅವಗುಣವುಯಿಲ್ಲದೆ ಪರಬ್ರಹ್ಮವೇಯಾಗಿಪ್ಪರು ಶರಣರೆಂಬುದೀ ವಚನದರ್ಥ.

೮೭೭

ಬ್ರಹ್ಮಂಗೆ ವಾಕ್ಪರುಷ, ವಿಷ್ಣುವಿಂಗೆ ನಯನಪರುಷ, ರುದ್ರಂಗೆ ಹಸ್ತಪುರುಷ, ನಮ್ಮ ಕೂಡಲಸಂಗನ ಶರಣ'ರಿ'ಗೆ ಪಾದವೇ ಪರುಷ !

I –

ಬ್ರಹ್ಮಂಗೆ ವಾಕ್ಪರುಷ–ಬ್ರಹ್ಮನು ಪ್ರಾತಃಕಾಲದಲ್ಲೆದ್ದು ಸಾಂಗೋಪಾಂಗ ಶರೀರಶುದ್ಧತೆಯ ಮಾಡಿಕೊಂಡು ಶುಚಿರ್ಭೂತನಾಗಿ ರತ್ನಗಂಬಳಿಯ ಗರ್ದುಗೆಯ ಮೇಲೆ ಮೂರ್ತವ ಮಾಡಿಕೊಂಡು ಭವನೆಂಬ ಮೂರ್ತಿಯ ಧ್ಯಾನಿಸಿ, 'ಇದಂ ಭೂತ್ವಾ' ಎಂದು ನೆನೆದು ಒಂದು ಕ್ಷೋಣಿ ಪ್ರಾಣಿಗಳನು ಉತ್ಪತ್ಯವ ಮಾಡುತಿರ್ದ ಕಾರಣ ಬ್ರಹ್ಮಂಗೆ ವಾಕ್ಸಿದ್ಧಿ ಉಂಟಾಗಿರ್ಪುದು. ವಿಷ್ಣುವಿಂಗೆ ನಯನಪರುಷ–ನಾರಾಯಣನು ಮಧ್ಯಾಹ್ನ ಕಾಲದಲ್ಲಿ ಶರೀರಶುದ್ಧತೆಯ ಮಾಡಿಕೊಂಡು ಶುಚಿರ್ಭೂತನಾಗಿ ಶ್ಯಾಮವರ್ಣಕಂಬಳಿಯ ಗರ್ದುಗೆಯ ಮೇಲೆ ಮೂರ್ತವ ಮಾಡಿಕೊಂಡು ಮೃಡನೆಂಬ ಮೂರ್ತಿಯ ಧ್ಯಾನಿಸಿ ಬ್ರಹ್ಮನಿಂದುತ್ಪತ್ಯವಾದ ಒಂದು ಕ್ಷೋಣಿ ಪ್ರಾಣಿಗಳನ್ನು ರಕ್ಷಕನೆಂದು ತನ್ನ ಜ್ಞಾನಚಕ್ಷುವಿನಿಂದ ನಿರೀಕ್ಷಣೆಯ ಮಾಡಿ ಸ್ಥಿತಿಭೋಗವನ್ನು ಕೊಟ್ಟು ರಕ್ಷಣ್ಯವ ಮಾಡುತಿರ್ದ ಕಾರಣ ನಾರಾಯಣನಿಗೆ ನಯನಸಿದ್ಧಿ ಉಂಟಾಗಿರ್ಪುದು. ರುದ್ರಂಗೆ ಹಸ್ತಪರುಷ–ರುದ್ರನು ಸಾಯಂಕಾಲದಲ್ಲಿ ಸಾಂಗೋಪಾಂಗ ಶರೀರಶುದ್ಧತೆಯ ಮಾಡಿಕೊಂಡು ಶುಚಿರ್ಭೂತನಾಗಿ ಕರಿಯ ಕಂಬಳಿಯ ಗರ್ದುಗೆಯ ಮೇಲೆ ಸ್ಥಿರಚಿತ್ತನಾಗಿ ಸ್ವಸ್ಥಪದ್ಮಾಸನದಲ್ಲಿ ಮೂರ್ತವ ಮಾಡಿಕೊಂಡು ಹರನೆಂಬ ಮೂರ್ತಿಯ ಧ್ಯಾನಿಸಿ 'ಹುತಭುಕ್ ಹುತಭುಕ್' ಎಂದು ನೆನೆದು ತನ್ನ ಖಂಡೆಯವನ್ನು ತೆಗೆದುಕೊಂಡು ಝಳಿಪಿಸಿ ಬ್ರಹ್ಮನಿಂದುತ್ಪವಾಗಿ ವಿಷ್ಣುವಿನಿಂದ ಸ್ಥಿತಿಭೋಗವನ್ನುಂಡು ಸೊಕ್ಕಿದಂಥ ಒಂದು ಕ್ಷೋಣಿ ಪ್ರಾಣಿಗಳನು ಲಯವ ಮಾಡುತಿರ್ದ ಕಾರಣ ರುದ್ರಂಗೆ ಹಸ್ತಪರುಷವುಂಟಾಗಿರ್ಪುದು. ಬ್ರಹ್ಮವಿಷ್ಣಾದಿಗಳು ಜಪತಪ ಆರಾಧನೆ ಕ್ರೀಗಳನು ಮಾಡಿ ಹಸ್ತಾಂಜಲಿತರಾಗಿ ಸಮ್ಮುಖದಲ್ಲಿ ನಿಂತುಕೊಂಡಿರ್ದಲ್ಲಿ ತನ್ನ ಹಸ್ತವನ್ನು ತೋರಿದಾಕ್ಷಣಕ್ಕೆ ಇಷ್ಟಾರ್ಥಸಿದ್ಧಿ ಅಭಿಮತಂಗಳು ಆಗುತಿರ್ದ ಕಾರಣ ರುದ್ರಂಗೆ ಹಸ್ತಪರುಷ ಉಂಟಾಗಿರ್ಪುದು, ನಮ್ಮ ಕೂಡಲಸಂಗನ ಶರಣರಿಗೆ–ನಮ್ಮ ಪರಶಿವಲಿಂಗಪರಾವತಾರ ಮೂರ್ತಿಗಳಾದ ಮೋಳಿಗೆಮಾರಯ್ಯಗಳಿಗೆ, ಪಾದವೇ ಪರುಷ ಜಂಗಮಮೂರ್ತಿಗಳ ಪದಕಮಲಂಗಳೇ ಪರುಷದ ಖಣಿಗೆ ಸಮಾನವಾಗಿರ್ಪವು.

IV– –

1–1 ೦(ತ)

....

ಬ್ರಹ್ಮನು ಜಗಸೃಷ್ಟಿಯಾಗಬೇಕೆಂದು ನುಡಿದಲ್ಲಿ ಜಗತ್ರಯಹುದೆಂಬುದೀಗ, ಬ್ರಹ್ಮಂಗೆ ವಾಕ್ಪುರುಷವೆಂಬ ಶಬ್ದಕ್ಕರ್ಥ, ವಿಷ್ಣು ಜಗವ ನೋಡಿ ರಕ್ಷಿಸುತ್ತಿಹನೆಂಬುದೀಗ, ವಿಷ್ಣುವಿಂಗೆ ನಯನಪರುಷವೆಂಬ ಶಬ್ದಕ್ಕರ್ಥ. ರುದ್ರನ ಹಸ್ತದಿಂದ ಜಗತ್ಸಂಹಾರವಹುದೆಂಬುದೀಗ, ರುದ್ರಂಗೆ ಹಸ್ತಪರುಷ ಎಂಬ ಶಬ್ದಕ್ಕರ್ಥ. ಇಂತೀ ತ್ರಿಮೂರ್ತಿಗಳಂತಲ್ಲ ಶರಣರ ಪಾದವು. ಶರಣುವೊಕ್ಕ ಭಕ್ತಜನಂಗಳಿಗೆ ಉತ್ಪತ್ಯಸ್ಥಿತಿಲಯಗಳದು ನಿತ್ಯವಪ್ಪ ಶಿವನ ಪದವ ಕೂಡುತ್ತಿಹುದೆಂಬುದೀಗ, ನಮ್ಮ ಕೂಡಲಸಂಗನ ಶರಣರಿಗೆ ಪಾದವೇ ಪರುಷವೆಂಬ ಶಬ್ದಕ್ಕರ್ಥ.

೮೭೮

ಸಮುದ್ರ ಘನವೆಂಬೆನೆ ? ಧರೆಯ ಮೇಲಡಗಿತ್ತು. ಧರೆ ಘನವೆಂಬೆನೆ? ನಾಗೇಂದ್ರನ ಫಣಾಮಣಿಯ ಮೇಲಡಗಿತ್ತು. ನಾಗೇಂದ್ರ ಘನವೆಂಬೆನೆ? ಪಾರ್ವತಿಯ ಕಿಱುಕುಣಿಕೆಯ ಮುದ್ರೆ[1]ಯಾಯಿತ್ತು. ಅಂಥ ಪಾರ್ವತಿ[2]ದೇವಿಯ[2] ಘನವೆಂಬೆನೆ? ಪರಮೇಶ್ವರನ ಅರ್ಧಾಂಗಿಯಾದಳು. ಅಂಥ ಪರಮೇಶ್ವರನ ಘನವೆಂಬೆನೆ? ನಮ್ಮ ಕೂಡಲಸಂಗನ ಶರಣರ ಮನದ ಕೊನೆಯ ಮೊನೆಯ ಮೇಲಡಗಿದನು.

I- -

ಸಮುದ್ರ ಘನವೆಂಬೆನೆ? : ಸಮುದ್ರ–ಅಬ್ಧಿಯು, ಘನವೆಂಬೆನೆ?–ಬಹುಶ್ರೇಷ್ಠವೆಂದು ಹೇಳುವೆನೆ? ಧರೆಯ ಮೇಲಡಗಿತ್ತು–ಪಂಚಶತಕೋಟಿ ಯೋಜನವಿಸ್ತೀರ್ಣವಾದ ಭೂಮಿಯ ಮೇಲೊಂದು ಕಡೆ ಪಾರ್ಶ್ವದಲ್ಲಿ ಲೀನವಾಯಿತ್ತು. ಧರೆ–ಭೂಮಿಯು, ಘನವೆಂಬೆನೆ?–ಬಹುಶ್ರೇಷ್ಠವೆಂದು ಹೇಳುವೆನೆ? ನಾಗೇಂದ್ರನ–ಮಹಾಶೇಷನ, ಫಣಾಮಣಿಯ ಮೇಲಡಗಿತ್ತು–ನಡುವಣ ಪೆಡೆಯ ಮೇಲೆ ಒಂದಾನೊಂದು ನಿಂಬಿಯ ಭಾಗವನು ಮಡುಗಿದೋಪಾದಿಯಲ್ಲಿ ಲೀನವಾಯಿತ್ತು. ಗೋಪ್ಯವಾಯಿತ್ತು. ನಾಗೇಂದ್ರ–ಮಹಾಶೇಷನ, ಘನವೆಂಬೆನೆ?–ಬಹುಶ್ರೇಷ್ಠವೆಂದು ಹೇಳುವೆನೆ? ಪಾರ್ವತಿಯ–ಗಿರಿಜಾದೇವಿಯರ, ಕಿಱುಕುಣಿಕೆಯ–ಕನಿಷ್ಠ ಬೆರಳಿಗೆ, ಮುದ್ರೆಯಾಯಿತ್ತು– ಮುದ್ರೆ ಉಂಗುರವಾಯಿತ್ತು. ಅಂಥ–ಹಾಂಗೊಪ್ಪಲ್ಪಟ್ಟ, ಪಾರ್ವತೀ ದೇವಿಯ–ಗಿರಿಜಾದೇವಿಯವರ, ಘನವೆಂಬೆನೆ?–ಬಹುಶ್ರೇಷ್ಠವೆಂದು ಹೇಳುವೆನೆ? ಪರಮೇಶ್ವರನ–ಪ್ರಕೃತಿತತ್ತ್ವಂಗಳಿಗೆ ಒಡೆಯನಾದ ಪರಶಿವಲಿಂಗದ ಅರ್ಧಾಂಗಿಯಾದಳು–ವಾಮಭಾಗದ ಅರ್ಧಶರೀರದಲ್ಲಿ ಒಪ್ಪುತ್ತಿಹಳು, ಅಂಥ ಪರಮೇಶ್ವರನ, ಘನವೆಂಬೆನೆ?–ಬಹುಶ್ರೇಷ್ಠವೆಂದು ಹೇಳುವೆನೆ? ನಮ್ಮ ಕೂಡಲಸಂಗನ ಶರಣರ–ಶಿವನ ಚಿತ್ಪ್ರಭಾಂಗಸ್ವರೂಪರಾದ ಶಿವಶರಣರ, ಮನದ ಕೊನೆಯ ಮೊನೆಯ ಮೇಲೆ–ಮನಕ್ಕೆ ಮನೋಹರವಾದ ರಮಣೀಯವಾದ ನೆನಹಿನಗ್ರದಲ್ಲಿ, ಅಡಗಿದನು–ಪ್ರಾಣಲಿಂಗದೇವನಾಗಿ ನೆಲಸಿರ್ಪನು.

IV– -

1 + ಯುಂಗುರ (ತ) 2–2 x (ತ)

....

ಅಜಿವಿನ ಮಧ್ಯದಲ್ಲಿ ಅಖಂಡಲಿಂಗವಡಗಿದ ಕಾರಣ ಅಂಥಾ ಶರಣರೇ ಘನವೆಂಬುದೀ ವಚನದರ್ಥ.

೮೭೬

ಆಚಾರಲಿಂಗವಿಡಿದು ಅನುಭಾವಲಿಂಗಸಿದ್ಧಿ, ಅನುಭಾವಲಿಂಗವಿಡಿದು ಮಾರ್ಗಕ್ರಿ^೧^ಯಾ^೧^ಲಿಂಗಸಿದ್ಧಿ. ಮಾರ್ಗಕ್ರಿ^೧^ಯಾ^೧^ ಲಿಂಗವಿಡಿದು ಮೀರಿದ ಕ್ರಿಯಾಲಿಂಗಸಿದ್ಧಿ. ಮೀರಿದ ಕ್ರಿ^೧^ಯಾ^೧^ಲಿಂಗವಿಡಿದು ಕ್ರಿಯಾ೨ನಿಃಪತಿ೨ಲಿಂಗಸಿದ್ಧಿ. ಇದುಕಾರಣ ಕೂಡಲ ಸಂಗಮದೇವಾ ಲಿಂಗವಿಡಿದು ಲಿಂಗಸಿದ್ಧಿ!

I -

ಆಚಾರಲಿಂಗವಿಡಿದು–ಬಹಿರಂಗದಲ್ಲಿ ಸತ್ಕ್ರಿಯಾಚಾರವನು ದೃಢವಿಡಿವುದರಿಂದ ಅನುಭಾವಲಿಂಗಸಿದ್ಧಿ–ಅಂತರಂಗದಲ್ಲಿ ಜ್ಞಾನವು ಸಾಧ್ಯವಾಗುತ್ತಿಹುದು. ಅನುಭಾವಲಿಂಗವಿಡಿದು–ಅಂತರಂಗದಲ್ಲಿ ಜ್ಞಾನವನು ದೃಢವಿಡಿವುದರಿಂದ, ಮಾರ್ಗಕ್ರಿಯಾಲಿಂಗಸಿದ್ಧಿ–ಬಹಿರಂಗದಲ್ಲಿ ಇಷ್ಟಲಿಂಗವು ಸಾಧ್ಯವಾಗುತ್ತಿಹುದು. ಮಾರ್ಗಕ್ರಿಯಾಲಿಂಗವಿಡಿದು–ಬಹಿರಂಗದಲ್ಲಿ ಇಷ್ಟಲಿಂಗವನ್ನು ದೃಢವಿಡಿವುದರಿಂದ, ಮೀರಿದ ಕ್ರಿಯಾಲಿಂಗಸಿದ್ಧಿ–ಅಂತರಂಗದಲ್ಲಿ ಪ್ರಾಣಲಿಂಗವು ಸಾಧ್ಯವಾಗುತ್ತಿಹುದು. ಮೀರಿದ ಕ್ರಿಯಾಲಿಂಗವಿಡಿದು–ಅಂತರಂಗದಲ್ಲಿ ಪ್ರಾಣಲಿಂಗವನ್ನು ದೃಢವಿಡಿವುದರಿಂದ, ಕ್ರಿಯಾನಿಃಪತಿಲಿಂಗ ಸಿದ್ಧಿ–ಆತ್ಮಾಂಗದಲ್ಲಿ ಭಾವಲಿಂಗವು ಸಾಧ್ಯವಾಗುತ್ತಿಹುದು. ಇದುಕಾರಣ–ಇದು ನಿಮಿತ್ಯಾರ್ಥ. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಲಿಂಗವಿಡಿದು ಲಿಂಗಸಿದ್ಧಿ–ಬಹಿರಂಗದಲ್ಲಿ ಸತ್ಕ್ರೀಯಾಚಾರವನು ದೃಢವಿಡಿವುದರಿಂದ ಅಂತರಂಗದಲ್ಲ ಜ್ಞಾನವು ಸಾಧ್ಯವಾಗುತ್ತಿಹುದು. ಅಂತರಂಗದಲ್ಲಿ ಜ್ಞಾನವನು ದೃಢವಿಡಿವುದರಿಂದ ಬಹಿರಂಗದಲ್ಲಿ ಇಷ್ಟಲಿಂಗವು ಸಾಧ್ಯವಾಗುತ್ತಿಹುದು. ಬಹಿರಂಗದಲ್ಲಿ ಇಷ್ಟಲಿಂಗವನು ದೃಢವಿಡಿವುದರಿಂದ ಅಂತರಂಗದಲ್ಲಿ ಪ್ರಾಣಲಿಂಗವು ಸಾಧ್ಯವಾಗುತ್ತಿಹುದು. ಅಂತರಂಗದಲ್ಲಿ ಪ್ರಾಣಲಿಂಗವನ್ನು ದೃಢವಿಡಿವುದರಿಂದ ಆತ್ಮಾಂಗದಲ್ಲಿ ಭಾವಲಿಂಗವು ಸಾಧ್ಯವಾಘುತ್ತಿಹುದು ಎಂಬುದರ್ಥ.

● ಆಚಾರಲಿಂಗವಿಡಿದು–ಘ್ರಾಣದಲ್ಲಿ ಆಚಾರಲಿಂಗವನು ದೃಢವಿಡಿವುದರಿಂದ–ಅನುಭಾವಲಿಂಗಸಿದ್ಧಿ–ಜಿಹ್ವೆಯಲ್ಲಿ ಗುರುಲಿಂಗವು ಸಾಧ್ಯವಾಗುತ್ತಿಹುದು. ಅನುಭಾವಲಿಂಗವಿಡಿದು–ಜಿಹ್ವೇಂದ್ರೀಯಲ್ಲಿ ಗುರುಲಿಂಗವನ್ನು ದೃಢವಿಡಿವುದರಿಂದ ಮಾರ್ಗಕ್ರೀಯಾಲಿಂಗಸಿದ್ಧಿ–ನೇತ್ರೇಂದ್ರಿಯಲ್ಲಿ ಶಿವಲಿಂಗವು ಸಾಧ್ಯವಾಗುತ್ತಿಹುದು. ಮಾರ್ಗಕ್ರಿಯಾಲಿಂಗವಿಡಿದು–ನಯನೇಂದ್ರಿಯಲ್ಲಿ ಶಿವಲಿಂಗವನ್ನು ದೃಢವಿಡಿವುದರಿಂದ ಮೀರಿದ ಕ್ರಿಯಾಲಿಂಗ ಸಿದ್ಧಿ–ತ್ವಗೇಂದ್ರಿಯಲ್ಲಿ ಜಂಗಮಲಿಂಗವು ಸಾಧ್ಯವಾಗುತ್ತಿಹುದು. ಮೀರಿದ ಕ್ರಿಯಾಲಿಂಗವಿಡಿದು–ತ್ವಗೇಂದ್ರಿಯಲ್ಲಿ ಜಂಗಮಲಿಂಗವನ್ನು ದೃಢವಿಡಿವುದರಿಂದ, ಕ್ರಿಯಾನಿಃಪತಿಲಿಂಗಸಿದ್ಧಿ–ಶ್ರವಣೇಂದ್ರಿಯಲ್ಲಿ ಪ್ರಸಾದಲಿಂಗವು ಸಾಧ್ಯವಾಗುತ್ತಿಹುದು. ಕ್ರಿಯಾನಿಃಪತಿಲಿಂಗವಿಡಿದು ಶ್ರವಣೇಂದ್ರಿಯಲ್ಲಿ ಪ್ರಸಾದ ಲಿಂಗವನ್ನು ದೃಢವಿಡಿವುದರಿಂದ ಹೃದಯೇಂದ್ರಿಯಲ್ಲಿ ಮಹಾಲಿಂಗವು ಸಾಧ್ಯವಾಗುತ್ತಿಹುದು. ಇದು ಕಾರಣ–ಇದು ನಿಮಿತ್ತಾರ್ಥ,

ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ, ಲಿಂಗವಿಡಿದು ಲಿಂಗಸಿದ್ಧಿ-ಘ್ರಾಣದಲ್ಲಿ ಆಚಾರಲಿಂಗವನ್ನು ದೃಢವಿಡಿವುದರಿಂದ ಜಿಹ್ವೇಂದ್ರಿಯಲ್ಲಿ ಗುರುಲಿಂಗಸಾಧ್ಯವಾಗುತ್ತಿಹುದು. ಜಿಹ್ವೇಂದ್ರಿಯಲ್ಲಿ ಗುರುಲಿಂಗವನ್ನು ದೃಢವಿಡಿವುದರಿಂದ ನಯನೇಂದ್ರಿಯಲಿ ಶಿವಲಿಂಗವು ಸಾಧ್ಯವಾಗುತ್ತಿಹುದು. ನಯನೇಂದ್ರಿಯಲ್ಲಿ ಶಿವಲಿಂಗವನ್ನು ದೃಢವಿಡಿವುದರಿಂದ ತ್ವಗೇಂದ್ರಿಯಲ್ಲಿ ಜಂಗಮಲಿಂಗವು ಸಾಧ್ಯವಾಗುತ್ತಿಹುದು. ತ್ವಗೇಂದ್ರಿಯಲ್ಲಿ ಜಂಗಮಲಿಂಗವನ್ನು ದೃಢವಿಡಿವುದರಿಂದ ಶ್ರವಣೇಂದ್ರಿಯಲ್ಲಿ ಪ್ರಸಾದಲಿಂಗವು ಸಾಧ್ಯವಾಗುತ್ತಿಹುದು. ಶ್ರವಣೇಂದ್ರಿಯಲ್ಲಿ ಪ್ರಸಾದಲಿಂಗವನ್ನು ದೃಢವಿಡಿವುದರಿಂದ ಹೃದಯೇಂದ್ರಿಯಲ್ಲಿ ಮಹಾಲಿಂಗವು ಸಾಧ್ಯವಾಗುತ್ತಿಹುದು.

II –

1–1 x (ಚ, ಜ). 2–2 ನಿಷ್ಪತ್ತಿ (ಚ, ಜ)

....

ಆಚಾರಲಿಂಗವಿಡಿದು ಅನುಭಾವಲಿಂಗ ಸಿದ್ಧಿ-ಪಂಚಾಚಾರಸ್ವರೂಪವಾದ ಆಚಾರಲಿಂಗವನು ಪರಿಗ್ರಹಿಸಿ ಅನುಭವಭಕ್ತಿಸ್ವರೂಪವಾದ ಜಂಗಮಲಿಂಗಸಾಧ್ಯತ್ವವು. ಅನುಭಾವಲಿಂಗವಿಡಿದು ಮಾರ್ಗಕ್ರೀಲಿಂಗಸಿದ್ಧಿ-ಅನುಭಾವಭಕ್ತಿಸ್ವರೂಪವಾದ ಜಂಗಮಲಿಂಗವನು ಪರಿಗ್ರಹಿಸಿ ಗುರುಲಿಂಗ ಸಾಧ್ಯತ್ವವು. ಮಾರ್ಗಕ್ರೀಲಿಂಗವಿಡಿದು ಮೀರಿದ ಕ್ರೀಲಿಂಗಸಿದ್ಧಿ-ಗುರುಲಿಂಗಸಾಧ್ಯತ್ವವನು ಪರಿಗ್ರಹಿಸಿ ಪ್ರಸಾದಲಿಂಗ ಸಾಧ್ಯತ್ವವು. ಮೀರಿದ ಪರಿಗ್ರಹಿಸಿ ಕ್ರಿಯಾಲಿಂಗವಿಡಿದು ಕ್ರಿಯಾನಿಷ್ಪತ್ತಿಲಿಂಗಸಿದ್ಧಿ-ಪ್ರಸಾದಲಿಂಗ ಸಾಧ್ಯತ್ವವನ್ನು ಪರಿಗ್ರಹಿಸಿ ಕ್ರಿಯಾಚರಣೆ ತರಹರವಾದ ಮಹಾಲಿಂಗಸಾಧ್ಯತ್ವವು ಇದು ಕಾರಣ ಕೂಡಲಸಂಗಮದೇವಾ ಲಿಂಗವಿಡಿದು ಲಿಂಗಸಿದ್ಧಿ-ಇದು ನಿಮಿತ್ತವು ಎಲೆ ಪರಶಿವಲಿಂಗವೆ ಮಹಾಲಿಂಗವನು ಪರಿಗ್ರಹಿಸಿದಲ್ಲಿ ಪ್ರಸಾದಲಿಂಗ ಸಾಧ್ಯವಾಗಿರ್ಪುದು.

III –

ಲಿಂಗವಿಡಿದು ಲಿಂಗಸಿದ್ಧಿ-ನಪುಂಸಕಲಿಂಗಸ್ವರೂಪಾದ ಮನಸ್ಸನು ಪ್ರಾಣಲಿಂಗದಲ್ಲಿ ಸಂಬಂಧಿಸಿಯೆಂಬುದರ್ಥ.

IV –

2–2 ನಿಷ್ಪತ್ತಿ (ತ)

....

ಅಂಗಲಿಂಗ ಅನುಭಾವಲಿಂಗ ಪ್ರಾಣಲಿಂಗ ಭಾವಲಿಂಗ ಮಹಾಲಿಂಗ ಇಂತೀ ಲಿಂಗಗಳು ಒಂದಜಿಂದೊಂದು ಸಿದ್ಧಿಸಿ ಲಿಂಗವಿಡಿದು ಲಿಂಗವಾಯಿತ್ತೆಂಬುದೀ ವಚನದರ್ಥ.

V –

2–2 ನಿಷ್ಪತ್ತಿ (ಪ)

....

ಆಚಾರಲಿಂಗವಿಡಿದು-ಗುರೂಪದೇಶದಿಂದೆ ಪಂಚಾಚಾರಸ್ವರೂಪವಾದ ಪ್ರಾಣಲಿಂಗವನು ಅಂತರಂಗದಲ್ಲಿ ಪರಿಗ್ರಹಿಸಿ, ಅನುಭಾವಲಿಂಗಸಿದ್ಧಿ-ಯಥಾರ್ಥಜ್ಞಾನಸ್ವರೂಪವಾದ ಪ್ರಾಣಲಿಂಗಸಾಧ್ಯವಾಯಿತ್ತು. ಅನುಭಾವಲಿಂಗವಿಡಿದು-ಪ್ರಾಣಲಿಂಗವ ಪರಿಗ್ರಹಿಸಿ ಮಾರ್ಗಕ್ರಿಯಾಲಿಂಗಸಿದ್ಧಿ-ಸಗುಣಕ್ರಿಯಾಸ್ವರೂಪವಾದಿಷ್ಟಲಿಂಗಸಾಧ್ಯವಾಯಿತ್ತು. ಮಾರ್ಗಕ್ರಿಯಾಲಿಂಗವಿಡಿದು-ಸ್ಥೂಲತನುವಿನಲ್ಲಿ ಇಷ್ಟಲಿಂಗವನು ಪರಿಗ್ರಹಿಸಿ, ಮೀಜಿದ ಕ್ರಿಯಾಲಿಂಗಸಿದ್ಧಿ-ನಿರ್ಗುಣಕ್ರಿಯಾಸ್ವರೂಪವಾದ ಪ್ರಾಣಲಿಂಗಸಾಧ್ಯವಾಯಿತ್ತು. ಮೀಜಿದ ಕ್ರಿಯಾಲಿಂಗವಿಡಿದು-ನಿರ್ಗುಣಕ್ರಿಯಾಸ್ವರೂಪವಾದ ಪ್ರಾಣಲಿಂಗವ ಪರಿಗ್ರಹಿಸಿ, ಕ್ರಿಯಾನಿಷ್ಪತ್ತಿಲಿಂಗಸಿದ್ಧಿ-ಕ್ರಿಯಾವಿಶ್ರಾಂತಿಸ್ವರೂಪವಾದ ಭಾವಲಿಂಗವು ಆತನಲ್ಲಿ ಸಾಧ್ಯವಾಯಿತ್ತು. ಇದು ಕಾರಣ ಹೀಗಾದುದೇ ನಿಮಿತ್ಯ. ಲಿಂಗವಿಡಿದು ಲಿಂಗಸಿದ್ಧಿ-ತೃಪ್ತಿಲಿಂಗವಿಡಿದು ಮಹಾಲಿಂಗಸಾಧ್ಯವಾಯಿತ್ತು.

....

೮೮೧ನೇ ವಚನದ ಟೀಕೆಯ ನಂತರ ಈ ವಚನದ ಟೀಕೆ ಇದೆ. (ಸಂ).

೮೮೦

ನೆಲನೊಂದೇ ಹೊಲಗೇರಿ ಶಿವಾಲಯಕ್ಕೆ. ಜಲವೊಂದೇ ಶೌಚ ಮಜ್ಜನಕ್ಕೆ. ಕುಲವೊಂದೇ ತನ್ನ ತಾನಜಿದವಂಗೆ. ಫಲವೊಂದೇ ಷಡುದರುಶನ ಮುಕ್ತಿಗೆ. ನಿಲವೊಂದೇ ಕೂಡಲಸಂಗಮದೇವಾ, ನಿಮ್ಮನಜಿದವಂಗೆ.

I- -

ನೆಲವೊಂದೇ ಹೊಲಗೇರಿ ಶಿವಾಲಯಕ್ಕೆ : ಶಿವಾಲಯಕ್ಕೆ-ದೇವಾಲಯವನ್ನು ಕಟ್ಟುವುದಕ್ಕೆ, ಹೊಲಗೇರಿ-ಚಾಂಡಾಲರ ಕೇರಿಯನ್ನು ಶ್ವಪಚರ ಕೇರಿಯನು ಕಟ್ಟುವುದಕ್ಕೆ, ನೆಲಿನೊಂದೇ-ಭೂಮಿಯೆಲ್ಲ ಒಂದೇಯಾಗಿರ್ಪುದು. ಆದರೇನಾಯಿತ್ತು ಶಿವಾಲಯವನ್ನು ಕಟ್ಟಿದಂಥ ಭೂಮಿಯೇ ಪವಿತ್ರ ಭೂಮಿಯಾಗಿರ್ಪುದು. ಹೊಲಗೇರಿ ಚಾಂಡಾಲಕೇರಿ ಕಟ್ಟಿದಂಥ ಭೂಮಿಯೇ ಅಪವಿತ್ರಭೂಮಿಯಾಗಿರ್ಪುದು. ಜಲವೊಂದೇ ಶೌಚ ಮಜ್ಜನಕ್ಕೆ : ಶೌಚಕ್ಕೆ-ಗುದಗುಹ್ಯದ್ವಾರಂಗಳನು ತೊಳೆವುದಕ್ಕೆ. ಮಜ್ಜನಕ್ಕೆ- ಮಜ್ಜನಭೋಜನಪಾಕಪ್ರಯತ್ನಂಗಳ ಮಾಡುವುದಕ್ಕೆ. ಜಲವೊಂದೇ-ಉದಕವೆಲ್ಲ ಒಂದೇಯಾಗಿರ್ಪುದು. ಆದರೇನಾಯಿತ್ತು? ಮಜ್ಜನಭೋಜನಪಾಕಪ್ರಯತ್ನಂಗಳ ಮಾಡುವಂಥ ಉದಕವೇ ಪವಿತ್ರವಾಗಿರ್ಪುದು. ಗುದಗುಹ್ಯದ್ವಾರಂಗಳನುತೊಳದಂಥ ಉದಕವೇ ಅಪವಿತ್ರವಾಗಿರ್ಪುದು. ತನ್ನ ತಾನಜಿದವಂಗೆ-ತಾನಾರು? ತನ್ನ ನಿಜವೇನು? ತಾನೆಲ್ಲಾ ಶಿವಸ್ವರೂಪವೆಂಬಂಥ ಜ್ಞಾನವನ್ನು ತಿಳಿದವಂಗೆ, ಕುಲವೊಂದೇ-ನೂರಾವೊಂದು ಕುಲ ಹದಿನೆಂಟು ಜಾತಿಗಳು ಎಲ್ಲಾ ಒಂದೇಯಾಗಿರ್ಪುವು. ಫಲವೊಂದೇ ಷಡುದರುಶನ ಮುಕ್ತಿಗೆ;[ಷಡುದರುಶನ-] ಷಡುದರುಶನದ ಷಣ್ಮತದವರಿಗೆ, ಮುಕ್ತಿಗೆ-ಖಂಡಿತ ಮೋಕ್ಷವನ್ನು ಕರುಣಿಸಿಕೊಡುವುದಕ್ಕೆ,ಫಲವೊಂದೇ-ಪರಬ್ರಹ್ಮವು ಒಂದೇಯಾಗಿರ್ಪುದು. ನಿಲವೊಂದೇ ಕೂಡಲಸಂಗಮದೇವಾ ನಿಮ್ಮನಜಿದವಂಗೆ :

ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮನರಿದವಂಗೆ–ಪರಶಿವಲಿಂಗವನ್ನು ತಿಳಿದವಂಗೆ, ನಿಲವೊಂದೆ–ನಿಲುಕಡೆಯು ಒಂದೇಯಾಗಿರ್ಪುದೆಂಬ ದೃಷ್ಟೋಪಮಾನದ ಹಾಂಗೆ.

● ನೆಲನೊಂದೇ ಹೊಲಗೇರಿ ಶಿವಾಲಯಕ್ಕೆ : ಶಿವಾಲಯಕ್ಕೆ–ಶಿವಭಕ್ತರುಗಳಿಗೆ, ಹೊಲಗೇರಿ–ಭವಿಜನಾತ್ಮರುಗಳಿಗೆ, ನೆಲನೊಂದೇ–ಪೃಥ್ವಿತತ್ವಸ್ವರೂಪವಾದ ದೇಹವೆಲ್ಲ ಒಂದೇಯಾಗಿರ್ಪುದು. ಆದರೇನಾಯಿತ್ತು? ಶಿವಭಕ್ತರುಗಳಂಗವೇ ಆಚಾರಾಂಗಜ್ಞಾನಕಾಯವಾಗಿರ್ಪುದು. ಭವಿಜನಾತ್ಮರುಗಳಂಗವೇ ಭೂತಕಾಯಜಡಕಾಯವಾಗಿರ್ಪುದು. ಜಲವೊಂದೇ ಶೌಚಮಜ್ಜನಕ್ಕೆ : ಮಜ್ಜನಕ್ಕೆ–ಶಿವಭಕ್ತರುಗಳಿಗೆ, ಶೌಚ–ಭವಿಜನಾತ್ಮರುಗಳಿಗೆ, ಜಲವೊಂದೇ–ಅಪ್ಪುತತ್ತ್ವಸ್ವರೂಪವಾದ ಮನಸ್ಸೆಲ್ಲ ಒಂದೇಯಾಗಿರ್ಪುದು. ಆದರೇನಾಯಿತ್ತು? ಶಿವಭಕ್ತರುಗಳ ಮನಸ್ಸೇ ಉನ್ಮನಿಯ ಮನಸ್ಸಾಗಿರ್ಪುದು. ಭವಿಜನಾತ್ಮರುಗಳ ಮನಸ್ಸೇ ಹಲವು ನೆನೆದು ಹಲವು ಭಾವಿಸಿ ಹಲವು ವರ್ತನೆಯೊಡನೆ ಕೂಡಿ ಚರಿಸುವಂಥ ಭಿನ್ನಮನಸ್ಸಾಗಿರ್ಪುದು. ತನ್ನ ತಾನರಿದವಂಗೆ–ತಾನಾರು, ತನ್ನ ನಿಜವೇನು? ತಾನೆಲ್ಲ ಶಿವಸ್ವರೂಪನೆಂಬಂಥ ಜ್ಞಾನವನ್ನು ತಿಳಿದವಂಗೆ ಕುಲವೊಂದೇ–ಕುಲವೆಲ್ಲ ಶಿವಕುಲವಾಗಿರ್ಪುದು, ಷಡುದರುಶನ ಮುಕ್ತಿಗೆ, ಷಟ್ಸ್ಥಲಬ್ರಹ್ಮಿಗಳಿಗೆ ನಿಜಮೋಕ್ಷವನ್ನು ಕರುಣಿಸಿಕೊಡುವುದಕ್ಕೆ, ಫಲವೊಂದೇ–ಮೋಕ್ಷಫಲಸ್ವರೂಪವಾದ ಇಷ್ಟಲಿಂಗವೆಲ್ಲ ಒಂದೇಯಾಗಿರ್ಪುದು, ನಿಲವೊಂದೇ ಕೂಡಲಸಂಗಮದೇವಾ ನಿಮ್ಮನರಿದವಂಗೆ : ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮನರಿದವಂಗೆ–ನಿಮ್ಮ ತಿಳಿದವಂಗೆ, ನಿಲವೊಂದೇ–ಆತನ ನಿಲವೆಲ್ಲ ಶಿವನಿಲವಾಗಿಪ್ಪುದು.

III– –

ಹೊಲಗೇರಿ–ಚಾಂಡಾಲವಾಟಿಯು, ಶಿವಾಲಯಕ್ಕೆ–ಲಿಂಗಾಲಯಕ್ಕೆಯು, [ನೆಲನೊಂದೇ]–ನೆಲನೇಕವೇ ಸರಿ. ಶೌಚ–ಶೌಚಕ್ರಿಯೆಗೆಯೂ, ಮಜ್ಜನಕ್ಕೆ–ಲಿಂಗದಭಿಷೇಕಕ್ಕೆಯೂ, ಜಲವೊಂದೇ–ಉದಕವೊಂದೇ, ತನ್ನ ತಾನರಿದವಂಗೆ–ತನ್ನ ನಿಜವನು ತಿಳಿದ ಶರಣಂಗೆ, ಕುಲವೊಂದೇ–ಕುಲಸೂತಕವುಂಟಾಗದು.

ಶರಣನ ಭಕ್ತಸ್ಥಲ

I –

ಶರಣನ ಭಕ್ತಸ್ಥಲ–ಶರಣನ ಸ್ಥಲದೊಳಗಣ ಭಕ್ತಸ್ಥಲದಾಚರಣೆಯನ್ನು ನಿರೂಪಿಸುತ್ತಿಹರು.

ಮಧ್ಯಪಿಂಡಂಗಳೆಲ್ಲವೂ ಶಿವನಿದ್ದೆಡೆಯನಱಿಯ[1]ವು.[1] ಪೂರ್ವಪಿಂಡಂಗಳೆಲ್ಲವೂ ಶಿವನಾದ್ಯಂತವನಱಿಯ[1]ವು.[1] ಕಾಲಪಿಂಡಂಗಳೆಲ್ಲವು ಶಿವನ ನಿಲುಕಡೆಯುನಱಿಯುದೆ ಕಾಲಚಕ್ರದೊಳಗಾದ[3]ವು. ಸಂಶಯಪಿಂಡಂಗಳೆಲ್ಲವೂ ಮಱೆದು ನಿಮ್ಮ ಶರಣರ [4]ಸೇವೆಯಲ್ಲಿರಿಸಯ್ಯ, ಕೂಡಲಸಂಗಮದೇವಾ.

I –

ಮಧ್ಯಪಿಂಡಂಗಳೆಲ್ಲವೂ – ಸೂಕ್ಷ್ಮತನುವಿನಲ್ಲಿ ಪ್ರಾಣಲಿಂಗಸಂಬಂಧವ ಮಾಡಿಕೊಂಡು ಪ್ರಾಣಲಿಂಗವೇ ಪರವೆಂದು ಹೇಳುವಂಥ ವೇದಾಂತಿಗಳಷ್ಟೂ ಶಿವನಿದ್ದೆಡೆಯನಱಿಯವು– ಶಿವನಿರುವಂಥದೇ ಸತ್ಕ್ರಿಯಾಚಾರ, ಆ ಸತ್ಕ್ರಿಯಾಮಾರ್ಗವನ್ನು ತಿಳಿಯವು. ಪೂರ್ವಪಿಂಡಗಳೆಲ್ಲವೂ ಸ್ಥೂಲತನುವಿನಲ್ಲಿ ಇಷ್ಟಲಿಂಗಸಂಬಂಧ ಮಾಡಿಕೊಂಡು ಇಷ್ಟಲಿಂಗವೇ ಪರವೆಂದು ಹೇಳುವಂಥ ಸಿದ್ಧಾಂತಿಗಳಷ್ಟೂ ಶಿವನ–ಪರಮೇಶ್ವರನ ಆದಿ–ಆದಿಯೆಂದರೆ ಇಷ್ಟಲಿಂಗವು, ಅಂತ್ಯ–ಅಂತ್ಯವೆಂದರೆ ಪ್ರಾಣಲಿಂಗವು, ಅಱಿಯವು–ಅಂಗಪ್ರಾಣಂಗಳಲ್ಲಿ ಇಷ್ಟಪ್ರಾಣ ಲಿಂಗಂಗಳ ಸಂಬಂಧವ ಮಾಡಿಕೊಂಡು ಅವಿರಳಜ್ಞಾನ ಕ್ರೀವಿಡಿದಾಚರಿಸುವಂಥದನ್ನು ತಿಳಿಯವು. ಕಾಲಪಿಂಡಗಳೆಲ್ಲವೂ ಕಾರಣತನುವಿನಲ್ಲಿ ಭಾವಲಿಂಗಸಂಬಂಧವ ಮಾಡಿಕೊಂಡು ಭಾವಲಿಂಗವೇ ಪರವೆಂದು ಹೇಳುವಂಥ ಭಿನ್ನಯೋಗಾಭ್ಯಾಸಿಗಳಷ್ಟೂ, ಶಿವನ ನಿಲುಕಡೆಯನಱಿಯದೆ–ಶಿವನಿರುವಂಥದೇ ಮಹಾಜ್ಞಾನವು ಆ ಮಹಾಜ್ಞಾನದ ನಿಲುಕಡೆಯನ್ನು ತಿಳಿಯದೆ,ಕಾಲಚಕ್ರದೊಳಗಾದವು–ದ್ವೈತಾದ್ವೈತ ಭಿನ್ನಯೋಗಾಭ್ಯಾಸಿಗಳಷ್ಟೂ ಯಮನ ಮರಣದ ಬಾಧೆಗೆ ವಶವಾದವು. ಸಂಶಯಪಿಂಡಂಗಳೆಲ್ಲವು ದ್ವೈತಾದ್ವೈತಭಿನ್ನಯೋಗಾಭ್ಯಾಸಿಗಳಷ್ಟನ್ನೂ, ಮಱೆದು–ವಿಸ್ಮೃತಿಯನೆಯ್ದಿಸಿಬಿಟ್ಟು, ನಿಮ್ಮ ಶರಣರ ಸೇವೆಯಲ್ಲಿರಿಸಯ್ಯ; ನಿಮ್ಮ ಶರಣರ–ನಿಮ್ಮ ಜಂಗಮಮೂರ್ತಿಗಳ, ಸೇವೆಯಲ್ಲಿರಿಸಿಯ್ಯ–ಸುಶ್ರೂಷೆಯಲ್ಲಿ ಸೈತಿರಿಸಯ್ಯ. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

III– –

1–1 ರು (ಟ, ಡ) 3+ ವೆಲ್ಲ (ಟ, ಡ)

....

ಮಧ್ಯಪಿಂಡಗಳೆಲ್ಲವು ಶಿವನಿಂದುತ್ಪತ್ಯರಾದ ಬ್ರಹ್ಮನಾರಾಯಣರೆಲ್ಲವರೂ, ಶಿವನಿದ್ದೆಡೆಯನು ॥ಗ್ರಂಥ॥ ಅರಗ್ವದೇ ಚ ⁽ಬುಲ್ವೇಚ⁾ ಲಿಂಗೇ ಚ ಗುರುವಿಗ್ರಹೇ ಶಿವಯೋಗಿ ಶರೀರೇ ಚ ಸದಾ ಸನ್ನಿಹಿತಶ್ಶಿವಃ ॥ ಎಂದು ಆ ಪರಶಿವನಿರುತಿದ್ದ ಸ್ಥಳವನು, ಅಱಿಯರು–ತಿಳಿಯರು. ಪೂರ್ವಪಿಂಡಂಗಳೆಲ್ಲವೂ–ಶಿವನಿಂದೆ ಆದಿಯಲ್ಲಿ ಉದಯವಾದ ವೇದಪುರುಷರೆಲ್ಲರು, ಶಿವನಾದ್ಯಂತವನಱಿಯರು–ಪರಶಿವಲಿಂಗದ ಪೂರ್ವಾಪರವನು ತಿಳಿಯಲಱಿಯರೆಂಬುದರ್ಥ. ಕಾಲಪಿಂಡಂಗಳೆಲ್ಲವೂ–ಭೂತಭವಿಷದ್ವರ್ತಮಾನಕಾಲಂಗಳ ಸಮೂಹವೆಲ್ಲವು, ಶಿವನ ನಿಲುಕಡೆಯನಱಿಯದೆ–ಶಿವನ ಸ್ವರೂಪನು ತಿಳಿಯದೆ ಕಾಲ ಚಕ್ರದೊಳಗಾದವೆಲ್ಲವು– ಕಾಲಂಗಳಸಮೂಹದಲ್ಲಿ ವಶಗತವಾಗಿರಲ್ಪಟ್ಟವಾದ ಸಮಸ್ತವೂ ಬ್ರಹ್ಮದೇವರ

ಜಡಸೃಷ್ಟಿಯಿಂದುತ್ಪತ್ಯರಾದಾತ್ಮರುಗಳ ಪ್ರಪಂಚವೆಲ್ಲವನು, ಮಱೆದು–ಶಿವಧ್ಯಾನ ಶಿವಮಂತ್ರಸ್ಮರಣೆಯಿಂದ ವಿಸ್ಮೃತಿಗೆಯ್ದು, ನಿಮ್ಮ ಶರಣರ ಸೇವೆಯಲ್ಲಿ ನಿಮಗಂಗವಾಗಿ ಎರಡಳಿದ ನಿಜಶರಣರ ಸುಶ್ರೂಷೆಯಲ್ಲಿ ಅಯ್ಯಾ ಸ್ವಾಮಿಯಾದಂಥ, ಕೂಡಲಸಂಗಮದೇವಾ_ಈಡೆ ಪಿಂಗಳೆ ಸುಷುಮ್ನೆಯೆಂಬ ತ್ರಿಕೂಟಸ್ಥಲದಲ್ಲಿ ಕೂಡಿರ್ದಂಥ ಎಲೆ ಪರಶಿವಲಿಂಗವೆ.

....

೧–೧ x (ಟ) ೨–೨ + ಶಿವ (ಡ)

IV– –

2–2 x (ತ)

....

ಬ್ರಹ್ಮ ವಿಷ್ಣು ರುದ್ರ ಇಂದ್ರ ಚಂದ್ರ ಮನುಷ್ಯರು ಇವರು ಮೊದಲಾಗಿ ಶಿವನಂತ್ಯವನಱೆಯರು. ಆದಿ ಅಂತ್ಯವಿಲ್ಲದ ಲಿಂಗದಲ್ಲಿ ತಾನೆಂಬುದಳಿದು ಲಿಂಗವೇ ಆದ ಶರಣರ ಸಂಗದಲ್ಲಿರಿಸೆನ್ನನೆಂಬುದೀ ವಚನದರ್ಥ.

V– –

4 + ಪಾದ (ಪ)

....

ಮಧ್ಯಪಿಂಡಗಳೆಲ್ಲವು ಶಿವನಿಂದುತತ್ಯವಾದ ಬ್ರಹ್ಮನಾರಾಯಣರೆಲ್ಲರು, ಶಿವನಿದ್ದೆಡೆಯನಱೆಯವು–ವಾದದಿಂದೆ ಪಾದ ಮಕುಟಂಗಳ ತಿಳಿಯವು. ಪೂರ್ವಪಿಂಡಗಳೆಲ್ಲವು –ಪರಶಿವನಿಂದುತ್ಪತ್ಯವಾದ ವೇದಪುರುಷರೆಲ್ಲರು, ಶಿವನಾದ್ಯಂತವನಱೆಯವು–ಪರಶಿವಲಿಂಗದ ಪೂರ್ವಾಪರವ ತಿಳಿಯವು. ಕಾಲಪಿಂಡಂಗಳೆಲ್ಲವು–ಭೂತಭವಿಷ್ಯದ್ವರ್ತಮಾನಕಾಲಂಗಳ ಸಮೂಹವೆಲ್ಲವು, ಶಿವನ ನಿಲುಕಡೆಯನಱೆಯದೆ–ಪರಶಿವನ ಸ್ವರೂಪವ ತಿಳಿಯದೆ, ಕಾಲಚಕ್ರದೊಳಗಾದವು–ಕಾಲಸಮೂಹಕ್ಕೆ ವಶಗತವಾದವು. ಸಂಶಯಪಿಂಡಂಗಳೆಲ್ಲವು ಮಱೆದು–ಬ್ರಹ್ಮನ ಸೃಷ್ಟಿಯಿಂದುಂಟಾದ ಆತ್ಮದ ಪ್ರಪಂಚವೆಲ್ಲವನು ವಿಸ್ಮೃತಿಗೆಯ್ದು, ನಿಮ್ಮ ಶರಣರ–ನಿಮ್ಮ ಸಂಬಂಧವಾದ ದೀಕ್ಷಾಗುರು ಜ್ಞಾನಗುರುಗಳ, ಪಾದಸೇವೆಯಲ್ಲಿರಿಸು–ಇಷ್ಟ ಪ್ರಾಣ ಭಾವಲಿಂಗಂಗಳ ಭಜನೆಯಲ್ಲಿ ಮಡುಗು.

೮೮೨

ಪರತತ್ತ್ವದ ನಿಜಸಂಯುಕ್ತರ, ನಾನು ನೀನೆಂಬ ಶಬ್ದಸುಖಿಗಳ ತೋರಾ ಎನಗೆ. ಮಹಾನುಭಾವರ ತೋರಾ ಎನಗೆ. ಲಿಂಗೈಕ್ಯರ, ಲಿಂಗಸುಖಿಗಳ, ಲಿಂಗಗೂಡಾಗಿಪ್ಪವರ,

ಲಿಂಗಾಭಿಮಾನಿಗಳ ತೋರಾ ಎನಗೆ. ಅಹೊರಾತ್ರಿ[1]ಯಲ್ಲಿ[1] ನಿಮ್ಮ ಶರಣರ ಸೇವೆಯಲ್ಲಿರಿ[2]ಸಯ್ಯ[2] ಕೂಡಲಸಂಗಮದೇವಾ.

I- -

ಪರತತ್ತ್ವದ ನಿಜಸಂಯುಕ್ತರ : ಪರತತ್ತ್ವದ, ಮಹಾಲಿಂಗತತ್ತ್ವದ, ನಿಜಸಂಯುಕ್ತರ-ಸ್ವಕೀಯವಾದ ಬ್ರಹ್ಮದಲ್ಲಿ ಕೂಡಲ್ಪಟ್ಟಂಥವರುಗಳ, ನಾನು ನೀನೆಂಬ-ಶರಣಲಿಂಗವೆಂಬ, ಶಬ್ದಸುಖಿಗಳ-ನುಡಿ ಪರಿಣಾಮಿಗಳ, ತೋಱಾ-ಅವರ ದರುಶನವನ್ನು ಕಾಣಿಸಾ, ಎನಗೆ-ನನಗೆ, ಮಹಾನುಭಾವರ-ಮಹಾನುಭಾವರುಗಳ, ತೋಱಾ-ಅವರ ದರುಶನವನ್ನು ಕಾಣಿಸಾ, ಎನಗೆ-ನನಗೆ, ಲಿಂಗೈಕ್ಯರ-ಶಿಖಿಕರ್ಪೂರಸಂಯೋಗವಾದ ಹಾಂಗೆ ಮಹಾಲಿಂಗದಲ್ಲಿ ಕೂಡಲ್ಪಟ್ಟಂಥವರುಗಳ, ಲಿಂಗಸುಖಿಗಳ-ಲಿಂಗದಲ್ಲಿ ಪರಿಣಾಮವುಳ್ಳಂಥವರುಗಳ, ಲಿಂಗಗೂಡಾಗಿಪ್ಪವರ-ತಮ್ಮಂಗವು ಅಡಗುವುದಕ್ಕೆ ಆಲಯವಾಗಿರುವಂಥರುಗಳ, ಲಿಂಗಾಭಿಮಾನಿಗಳ-ಲಿಂಗವನ್ನೇ ಸಹಾಭಿಮಾನಿಸಿ ಕೊಂಡಿರುವಂಥವರುಗಳ, ತೋಱಾ-ಅವರ ದರುಶನವನ್ನು ಕಾಣಿಸಾ, ಎನಗೆ-ನನಗೆ, ಅಹೋರಾತ್ರಿಯಲ್ಲಿ- ದಿವಾರಾತ್ರಿಗಳಲ್ಲಿ, ನಿಮ್ಮ ಶರಣರ-ನಿಮ್ಮ ಜಂಗಮಮೂರ್ತಿಗಳ, ಸೇವೆಯಲ್ಲಿರಿಸಯ್ಯ-ಸುಶ್ರೂಷೆಯಲ್ಲಿ ಸೈತಿರಿಸಯ್ಯ, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

IV -

1-1 x (ತ) 2-2 ಸು (ತ)

....

ತಾನೆಂಬುದಳಿದು ಲಿಂಗವಾಗಿ, ನಿಃಶಬ್ದವಾದ ಲಿಂಗಾನುಭಾವವಾಗಿ, ಲಿಂಗದಲ್ಲಿ ಎರಡಿಲ್ಲದೆ ಲಿಂಗವೇ ಆಗಿ, ಲಿಂಗಾಭಿಮಾನಿಗಳಾಗಿದ್ದ ಶರಣರ ಸೇವೆಯಲ್ಲಿರಿಸೆಂಬುದೀ ವಚನದರ್ಥ.

ೞೞ೩

ಅಯ್ಯಾ, ಸಜ್ಜನ ಸದ್ಭಾವರ ಸಂಗದಿಂದ ಮಹಾನುಭಾವರ ಕಾಣಬಹುದಯ್ಯ. ಮಹಾನುಭಾವರ ಸಂಗದಿಂದ ಶ್ರೀಗುರುವನಱಿಯಬಹುದು; ಲಿಂಗವನಱಿಯಬಹುದು; ಜಂಗಮವನಱಿಯಬಹುದು; ಪ್ರಸಾದವನಱಿಯಬಹುದು; ತನ್ನ ತಾನಱಿಯಬಹುದು. ಇದು ಕಾರಣ, ಸದ್ಭಕ್ತರ ಸಂಗವನೇ ಕರುಣಿಸು, ಕೂಡಲಸಂಗಮದೇವಾ ನಿಮ್ಮ ಧರ್ಮ.

I -

ಅಯ್ಯಾ ಸಜ್ಜನ ಸದ್ಭಾವರ ಸಂಗದಿಂದ ಮಹಾನುಭಾವರ ಕಾಣಬಹುದಯ್ಯ; ಅಯ್ಯಾ -ಎಲೆ ಲಿಂಗವೆ, ಸಜ್ಜನಸದ್ಭಾವರ ಸಂಗದಿಂದ-ಸಜ್ಜನ ಸತ್ಪುರುಷರಾದ ಶಿವಭಕ್ತರ ತತ್ಸಂಗದಲ್ಲಿರ್ದುಕೊಂಡು ಅವರ ಹೊರಚಾಕರಿಯನ್ನು ಮಾಡಿಕೊಂಡಿರುವುದರಿಂದ, ಮಹಾನುಭಾವರ ಕಾಣಬಹುದಯ್ಯ-ಗುರುಚರಮೂರ್ತಿಗಳು ಒಂಟಿಗಾರ ವಿರಕ್ತರುಗಳು ಭಿಕ್ಷಕ್ಕಾದರೂ ಬಂದಿರುವರು;

ಬಿನ್ನಹಮಾಡಿ ಕರಕೊಂಡಾದರೂ ಬಂದಿರುವರು. ಅಮವಾಸ್ಯೆ ಕಾವಳದಲ್ಲಿ ಮನೆಯಿಂದ ಮಠಕ್ಕೆ ದೀವಿಗೆಯನ್ನು ಹಿಡಿದುಕೊಂಡು ಹೋಗುವುದರಿಂದ; ಮಹಾನುಭಾವರ ಕಾಣಬಹುದಯ್ಯ-ಶಿವಾನುಭಾವರ ಅರಿಯಬಹುದಯ್ಯ.

ಮಹಾನುಭಾವರ ಸಂಗದಿಂದ-ಅವರ ತತ್ಸಂಗದಲ್ಲಿರ್ದುಕೊಂಡು ಮನೆಯಿಂದ ಮಠಕ್ಕೆ ಮಠದಿಂದ ಮನೆಗೆ ದೀವಟಿಗೆಯನ್ನು ಹಿಡಿದುಕೊಂಡು ಎಡೆಮಾಡುವುದರಿಂದೆ, ಶ್ರೀಗುರುವನು-ಸ್ವಾಮೀ ನನಗೆ ಲಿಂಗಾಂಗಸಂಬಂಧವನ್ನು ಕರುಣಿಸಿಕೊಡಿರೆಂದು ಕೇಳಿದಲ್ಲಿ ನಾವು ಕರುಣಿಸಿಕೊಡಲಿಕ್ಕಾಗದು. ಎಡಬಲಗ್ರಾಮದಲ್ಲಿ ಚರಂತಿದೇವರು ಪಟ್ಟದೇವರು ಆರಾಧ್ಯದೇವರು ಅತೀತದೇವರು ಮೊದಲಾದವರುಗಳೈದಾರೆ. ಅವರೇ ಕರುಣಿಸಿಕೊಡುತ್ತೈದಾರೆ ಹೋಗಿರಿಯೆಂದು ಕಳಿಸಿಕೊಟ್ಟಲ್ಲಿ ಆಗಾ ಗುರುಮೂರ್ತಿಗಳಿದ್ದೆಡೆ ಹೋಗಿ ಅವರಿಗೆ ಸುಶ್ರೂಷೆಯನ್ನು ಮಾಡುವಂಥದನ್ನು, ಅಜೆಯಬಹುದು-ತಿಳಿಯಬಹುದು. ಲಿಂಗವನಜೆಯಬಹುದು-ಹೀಂಗಿರುತ್ತಿದ್ದ ಹಾಂಗೆ ಸ್ವಾಮಿ ನಮಗೆ ಲಿಂಗಾಂಗ ಸಂಬಂಧವನ್ನು ಕರುಣಿಸಿಕೊಡಿರೆಂದು ಕೇಳಿದಲ್ಲಿ ಅವರು ಮೂರುತಿಂಗಳು ವಿಭೂತಿಯ ಕೊಟ್ಟು ನೋಡುವರು. ಆರು ತಿಂಗಳು ರುದ್ರಾಕ್ಷಿಯ ಕೊಟ್ಟು ನೋಡುವರು. ಒಂದು ವರುಷ ತೋರುಲಿಂಗವ ಕೊಟ್ಟು ನೋಡುವರು. ಅದರಲ್ಲಿ ನಂಬಿಗೆಯಿದ್ದರೆ ದೀಕ್ಷಾತ್ರಯಗಳಿಂದ ಲಿಂಗಾಂಗಸಂಬಂಧವನ್ನು ಕರುಣಿಸಿಕೊಡುತ್ತಿಹರು, ಜಂಗಮವನಜೆಯುಬಹುದು-ಭಕ್ತಮಾಹೇಶ್ವರರುಗಳು ನೀನು ಹೇಂಗಾದರೂ ಲಿಂಗಪೂಜೆಯ ಮಾಡುತ್ತಿದ್ದೀ ಸಮಯಾಚಾರಕ್ಕೊಬ್ಬ ಜಂಗಮಮೂರ್ತಿಗಳನ್ನು ಕಟ್ಟುಮಾಡಿಕೊಂಡು ಸಲಿಸಬಾರದೇ? ಎಂದು ಹೇಳಿದಲ್ಲಿ ಜಂಗಮವನ್ನು ಕಟ್ಟುಮಾಡಿಕೊಂಡು ಜಂಗಮಭಕ್ತಿಯ ಮಾಡುವಂಥದನ್ನು ತಿಳಿಯಬಹುದು. ಪ್ರಸಾದವನಜೆಯಬಹುದು : (ಪ್ರಸಾದವನು-) ಭಕ್ತಮಹೇಶ್ವರರುಗಳು ನೀನು ಹೇಂಗಾದರೂ ಸಮಯಾಚಾರಕ್ಕೆ ಜಂಗಮಮೂರ್ತಿಗಳನ್ನು ಕಟ್ಟು ಮಾಡಿಕೊಂಡಿದ್ದಿ. ಪ್ರಸಾದ ಮುಂತಾಗಿ ಸಲ್ಲಿಸಬಾರದೆ? ಎಂದು ಹೇಳಿದಲ್ಲಿ ಪ್ರಸಾದವನ್ನು ನೀಡಿಸಿಕೊಂಡು ಸಲಿಸುವಂಥದನು, ಅಜೆಯಬಹುದು-ತಿಳಿಯಬಹುದು. ತನ್ನ ತಾನಜೆಯಬಹುದು; [ತನ್ನ ತಾನು] ತಾನಾರು ? ತನ್ನ ನಿಜವೇನು? ತಾನೆಲ್ಲ ಶಿವಸ್ವರೂಪನೆಂಬಥ ಜ್ಞಾನವನ್ನು ಅಜೆಯಬಹುದು-ತಿಳಿಯಬಹುದು.

ಇದು ಕಾರಣ-ಇದು ನಿಮಿತ್ತಾರ್ಥ, ಸದ್ಭಕ್ತರ ಸಂಗವನ್ನೇ-ಸತ್ಪುರುಷರಾದ ಶಿವಭಕ್ತರ ಹೊರಚಾಕರಿಯನ್ನೇ ಮಾಡಿಕೊಂಡಿರುವಂಥದನ್ನೇ, ಕರುಣಿಸು-ಕೃಪೆಮಾಡು. ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ. ನಿಮ್ಮ ಧರ್ಮ-ಅದು ನಿಮ್ಮ ಕೃಪೆಯೆಂಬ ದೃಷ್ಟೋಪಮಾನದ ಹಾಂಗೆ.

● ಅಯ್ಯಾ-ಎಲೆ ಲಿಂಗವೆ, ಸಜ್ಜನಸದ್ಭಾವರ ಸಂಗದಿಂದ-ಪಂಚಮಹಾಪಾತಕಂಗಳನು ಬಿಟ್ಟು ಪರಮನಿರ್ಜರರಾದಂಥ ನಿರ್ವಂಚಸದ್ಭಕ್ತರ ಸನ್ನಿಧಿಯಲ್ಲಿ ಇದ್ದುಕೊಂಡು ಅವರು ಹೇಳಿದ ಹಾಂಗೆ ಭಕ್ತಿಯ ಮಾಡಿಕೊಂಡಿರುವುದರಿಂದ, ಮಹಾನುಭಾವರ ಕಾಣಬಹುದಯ್ಯ-ತ್ರಿವಿಧಲಿಂಗಾನುಭಾವಿಗಳಾದ ಶಿವಾನುಭಾವಿಗಳ ಕಾಣಬಹುದಯ್ಯ. ಅವರ ಶಿವಾನುಭಾವವನ್ನು ಶ್ರೋತೃಮುಖದಲ್ಲಿ ಕೇಳಿ ಮನೋಮುಖದಲ್ಲಿ ಹಾರೈಸಿ ಹೃದಯಮುಖದಲ್ಲಿ ಅಂಗವ ಮಾಡಿಕೊಂಡು ಆದಿಮಧ್ಯಾವಸಾನನಿತ್ಯಾವಿವೇಕವನ್ನು ತಿಳಿದುಕೊಂಡು ಆವರಿಸಬಹುದಯ್ಯ.

ಮಹಾನುಭಾವರ ಸಂಗದಿಂದ–ತ್ರಿವಿಧಲಿಂಗಾನುಭಾವಿಗಳಾದ ಜ್ಞಾನಗುರುಮೂರ್ತಿಗಳ ಶಿವಾನುಭಾವ ಗೋಷ್ಠಿಯಲ್ಲಿ ಕೂಡಿರುವುದರಿಂದ, ಶ್ರೀಗುರುವನಜೆಯಬಹುದು–ತನುವಿನಲ್ಲಿ ಗುರುಸಂಬಂಧವ ಮಾಡಿಸಿಕೊಂಡು ಗುರುಭಕ್ತಿಯ ಮಾಡುವಂಥದನು ತಿಳಿಯಬಹುದು. ಲಿಂಗವನಜೆಯಬಹುದು–ಮನದಲ್ಲಿ ಲಿಂಗಸಂಬಂಧವ ಮಾಡಿಕೊಂಡು ಲಿಂಗಪೂಜೆಯ ಮಾಡುವಂಥದನು ತಿಳಿಯಬಹುದು. ಜಂಗಮವನಜೆಯಬಹುದು–ಪ್ರಾಣಜ್ಞಾನದಲ್ಲಿ ಜಂಗಮದ ಸಂಬಂಧವ ಮಾಡಿಕೊಂಡು ಜಂಗಮಭಕ್ತಿ ಮಾಡುವಂಥದನು ತಿಳಿಯುಬಹುದು. ಪ್ರಸಾದವನಜೆಯಬಹುದು–ಆತ್ಮಾಂಗದಲ್ಲಿ ಪ್ರಸಾದ ಸಂಬಂಧವ ಮಾಡಿಕೊಂಡು ಪ್ರಸಾದ ಸೇವನೆಯ ಮಾಡುವಂಥದನು ತಿಳಿಯಬಹುದು. ತನ್ನ ತಾನಜೆಯಬಹುದು–ತಾನಾರು? ತನ್ನ ನಿಜವೇನು? ತಾನೆಲ್ಲ ಶಿವಸ್ವರೂಪನೆಂಬುವಂಥ ಜ್ಞಾನವನ್ನು ತಿಳಿಯಬಹುದು.

ಇದು ಕಾರಣ–ಇದು ನಿಮಿತಾರ್ಥ, ಸದ್ಭಕ್ತರ ಸಂಗವನೇ–ಪಂಚಮಹಾಪಾತಕಂಗಳನು ಬಿಟ್ಟು ಪರಮನಿರ್ಜರರಾದಂಥ ನಿರ್ವಂಚಕಸದ್ಭಕ್ತರ ಸನ್ನಿಧಿಯಲ್ಲಿದ್ದುಕೊಂಡು ಅವರು ಹೇಳಿದ ಹಾಂಗೆ ಭಕ್ತಿಯ ಮಾಡಿಕೊಂಡಿರುವಂಥದನೆ, ಕರುಣಿಸು–ಕೃಪೆಮಾಡು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ ಧರ್ಮ–ಅದು ನಿಮ್ಮ ಕೃಪೆಯು.

IV –

ಸತ್ಯವಾದ ಅನುಭಾವದಿಂದ ಸತ್ತಾದ ಗುರುವ ಕಾಣಬಹುದು. ಆ ಗುರುವಿನಿಂದ ಚಿತ್ತಾದ ಲಿಂಗವ ಕಾಣಬಹುದು. ೧[ಆ]೧ ಚಿತ್ತಾದ ಲಿಂಗದಿಂದ ಆನಂದವಾದ ಜಂಗಮವ ಕಾಣಬಹುದು. ೧[ಆ]೧ ಆನಂದವಾದ ಜಂಗಮದಿಂದ ಸತ್ತುಚಿತ್ತಾನಂದನೊಳಕೊಂಡು ಅಖಂಡಿತವಾದ ಪ್ರಸಾದವ ಕಾಣಬಹುದು. ಆ ಅಖಂಡಿತವಾದ ಪ್ರಸಾದದ ಪರಿಣಾಮದಿಂದ ತಾ ಪರಬ್ರಹ್ಮವೆಂದಜೆಯಬಹುದೆಂಬುದೀ ವಚನದರ್ಥ.

....

೧–೧ x (ತ)

ಲಲಳ

ಮರ ಮರ ಮಥನದಿಂದ ಅಗ್ನಿಹುಟ್ಟಿ ಆ ಮರಗಳೆಲ್ಲವ ಸುಡದಿಹುದೆ? ಮಹಾನುಭಾವರ ಸಂಗದಿಂದ ಜ್ಞಾನಾಗ್ನಿ ಹುಟ್ಟಿ ಎನ್ನ ತನುಗುಣಂಗಳೆಲ್ಲವ ಸುಡದಿಹುದೇ? ಇದು ಕಾರಣ, ಮಹಾನುಭಾವರ ತೋಜೆಸಿ ಬದುಕಿಸಾ ಕೂಡಲಸಂಗಮದೇವಾ.

I –

ಮರ ಮರ ಮಥನದಿಂದ–ಒಂದಾನೊಂದು ಸರೋವರದಲ್ಲಿ ಆಚೆ ಕಡೆಯ ವೃಕ್ಷ ಈಚೆ ಕಡೆಯ ವೃಕ್ಷವು ಕೂಡಿ ಒಂದಕ್ಕೊಂದು ಹೊಸೆದಾಡುವುದರಿಂದ, ಅಗ್ನಿ–ಪಾವಕನು, ಹುಟ್ಟಿ–ಉತ್ಪತ್ಯವಾಗಿ, ಮರಗಳೆಲ್ಲವ–ವೃಕ್ಷಂಗಳೆಲ್ಲವನ್ನೂ, ಸುಡದಿಹುದೆ? ದಹಿಸದೆ ಬಿಟ್ಟೀತೆ? ಬಿಡದು.

ಮಹಾನುಭಾವರ ಸಂಗದಿಂದ–ತ್ರಿವಿಧಲಿಂಗಾನುಭಾವಿಗಳಾದ ಜ್ಞಾನಗುರುಮೂರ್ತಿಗಳ ಶಿವಾನುಭವವನ್ನು ಬೆಸಗೊಂಡು ಕೇಳುವುದರಿಂದ, ಜ್ಞಾನಾಗ್ನಿ ಹುಟ್ಟಿ–ಸಮ್ಯಕ್ ಜ್ಞಾನವೆಂಬ ವಹ್ನಿಯು ಉತ್ಪತ್ಯವಾಗಿ, ತನುಗುಣಂಗಳೆಲ್ಲವ–ದೇಹದ ಪ್ರಪಂಚವೆಲ್ಲವನು, ಸುಡದಿಹುದೇ–ನಷ್ಟವ ಮಾಡಿಬಿಟ್ಟು ಆಚಾರಾಂಗಜ್ಞಾನಕಾಯವಾಗಿ ಅಳವಡಿಸಿಕೊಡದಿದ್ದೀತೆ? ಅಳವಡಿಸಿಕೊಡುತ್ತಿಹುದು. ಇದು ಕಾರಣ–ಇದು ನಿಮಿತ್ತಾರ್ಥ, ಮಹಾನುಭಾವರ–ಮಹಾನುಭಾವಿಗಳ ತೋಱಿಸಿ ಬದುಕಿಸಾ–ಅವರ ದರುಶನವನ್ನು ಕಾಣಿಸಿಕೊಟ್ಟು ಕೃತಾರ್ಥವ ಮಾಡು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

೮೮೫

ಅಱಿದುದ ಅಱಿಯಲೊಲ್ಲದು ಅದೆಂತಯ್ಯ? [1]ಮಱೆದುದ[1] ಮಱೆಯಲೊಲ್ಲದು ಅದೆಂತಯ್ಯ? ಅಱಿದು ಮಱೆ[2]ವ[2] ಮನವ ಕೂಡಲಸಂಗಯ್ಯ ತಾನೇ ಬಲ್ಲ.

I –

ಅಱಿದುದ ಅಱಿಯಲೊಲ್ಲದು–ಲೋಕದಾತ್ಮರುಗಳು ನಿತ್ಯವೆಂದು ತಿಳಿದಂಥದೆ ಹೊನ್ನು ಹೆಣ್ಣು ಮಣ್ಣು. ಅದಕ್ಕೆ ಮಿಥ್ಯವಾಗಿರುವಂಥದೇ ಚಿತ್ತು, ಆ ಚಿತ್ಸ್ವರೂಪವೇ ನಾನೆಂದು ತಿಳಿಯಲೊಲ್ಲದು, ಅದೆಂತಯ್ಯ?–ಅದು ಹೇಂಗಯ್ಯ? ಮಱೆದುದ ಮಱೆಯಲೊಲ್ಲದು–ಲೋಕದಾತ್ಮರುಗಳು ಮರೆತು ಬಿಟ್ಟಂಥದೆ ಶಿವತತ್ವ ಆ ಶಿವತತ್ವವನ್ನು ತಾನು ಅವರ ಹಾಂಗೆ ಮರೆತು ಬಿಡಲೊಲ್ಲದು. ಅದೆಂತಯ್ಯ?–ಅದು ಹೇಂಗಯ್ಯ. ಅಱಿದು, ಅಱಿವ ಮನವ: ಅಱಿದು–ಬ್ರಹ್ಮಾಂಡಾದಿಸಕಲಸಂಸಾರಪ್ರಪಂಚೆಲ್ಲ ಅನಿತ್ಯ ನಾನೇ ನಿತ್ಯಸ್ವರೂಪವೆಂಬಂಥ ಜ್ಞಾನವನ್ನು ತಿಳಿದು, ಮಱೆವ–ಬ್ರಹ್ಮಾಂಡಾದಿ ಸಕಲಸಂಸಾರ ಪ್ರಪಂಚೆಲ್ಲ ಅನಿತ್ಯ, ನಾನೇ ನಿತ್ಯಸ್ವರೂಪನೆಂಬಂಥ ಜ್ಞಾನವನು ಮರೆತು ಬಿಡುವ, ಮನವ–ಮನಸ್ಸನ್ನು ಕೂಡಲಸಂಗಯ್ಯ–ಪರಶಿವಲಿಂಗವು, ತಾನೇ ಬಲ್ಲ–ತನಗೇ ಅರಿಯಬರುವುದು.

II– –

1–1 ಮಱಿದು (ತ) 2–2 ದ (ತ)

....

ಅಱಿದುದ–ತಾನು ಸ್ವಾನುಭಾವಗುರೂಪದೇಶದಿಂದೆ ಸಾಕ್ಷಾತ್ಕಾರವಾಗಿ ತಿಳಿದಂಥ ಪರಶಿವತತ್ತ್ವವನು, ಅಱಿಯಲೊಲ್ಲದು–ಮತ್ತೇ ಮತ್ತೆಯೂ ಆ ವಸ್ತುವಿನ ನಿಲುಕಡೆಯ ತಿಳಿದು ಆ ಲಿಂಗದಲ್ಲೇಕಾರ್ಥವಾಗಲಱಿಯದು. ಅದೆಂತಯ್ಯ ಆ ವಸ್ತುವಿನಲ್ಲಿ ಕೂಡುವ ಪ್ರಕಾರ ಹೇಂಗಯ್ಯ. ಮಱೆದು–ವಿಸ್ಮೃತಿಗೆಯ್ದಂಥ ವಿಷಯಪ್ರಪಂಚವೆಲ್ಲವನು, ಮಱೆಯಲೊಲ್ಲದು–ಲಿಂಗಧ್ಯಾನ ಸ್ಮರಣೆಯಿಂದ ಮತ್ತೆಯೂ ಮತ್ತೆಯೂ ವಿಸ್ಮೃತಿಗೆಯ್ಯಲರಿಯದು, ಅದೆಂತಯ್ಯ?–ಮುಕ್ತಿಮಾರ್ಗವು ದೊರೆಕೊಂಬುವುದು ಹೇಂಗಯ್ಯ? ಅಱಿದು–ಆ ಪರಶಿವತತ್ತ್ವವೇ ತಾನೆಂದು ತಿಳಿದು, ಮಱೆದ–ಸಕಲಪ್ರಪಂಚನು ವಿಸ್ಮೃತಿಗೆಯ್ದು, ಮನವ–ಎನ್ನ ಮನಸ್ಸನ್ನು, ಕೂಡಲಸಂಗಯ್ಯ ತಾನೇ ಬಲ್ಲ–ತ್ರಿಕೂಟಸ್ಥಲಸ್ಥಿತವಾದಂಥ ಪರಶಿವಲಿಂಗವು ತಾನೇ ತಿಳಿದಿರುವನೆಂಬುದರ್ಥ.

೮೮೬

ಮೊಸಲು ಬೀಸರವಾದ ಪರಿಯ ನೋಡಾ: ಕಾಲು ತಾಗಿದ ಅಗ್ಗವಣಿ, ಕೈಮುಟ್ಟಿದರ್ಪಿತ, ಮನ ಮುಟ್ಟಿದಾರೋಗಣೆಯನೆಂತು ಘನವೆಂಬೆನಯ್ಯ? ಬಂದ ಪರಿಯಲಿ ಪರಿಣಾಮಿಸಿ, ನಿಂದ ಪರಿಯಲಿ ನಿಜವಮಾಡಿ, ಆ'ನ'ಂದ ಪರಿಯಲಿ ಕೈಕೋ ಕೂಡಲಸಂಗಮದೇವಾ.

I- -

ಮೊಸಲು ಬೀಸರವಾದ ಪರಿಯು ನೋಡಾ: ಮೊಸಲು-ನಿರ್ಮಲವಾದ ಆಚಾರಾಂಗಜ್ಞಾನಕಾಯವು, ಬೀಸರವಾದ-ಭೂತಕಾಯ ಜಡಕಾಯವಾದ, ಪರಿಯ ನೋಡಾ-ನಿಲುಕಡೆಯ ಕಂಡಾ. ಕಾಲು ತಾಗಿದ ಅಗ್ಗವಣಿ-ಪ್ರಾತಃಕಾಲದಲ್ಲೆದ್ದು ಬಿಂದಿಗೆ ಕುಜಾಯಿಗಳು ಮೊದಲಾದುವನ್ನು ತೆಗೆದುಕೊಂಡು ಹಳ್ಳ ಹೊಳೆ ಕೆರೆ ಬಾವಿ ಕೊಳನ ತಡಿಗಳಲ್ಲಿಗೆ ಹೋಗಿ ಕಣಕಾಲು ಮೊಣಕಾಲು ಉದಕದೊಳಗೆ ನಿಂತುಕೊಂಡು ಆ ಉದಕವನ್ನು ಮೊಗೆದುಕೊಂಡು ಬಂದು ಲಿಂಗಕ್ಕೆ ಅಭಿಷೇಕವ ಮಾಡೇನೆಂದರೆ ಕಾಲು ಸೋಂಕಿ ಉಚ್ಛಿಷ್ಟವಾಗಿರ್ಪುವು, ಉಚ್ಛಿಷ್ಟವಾದಂತಹ ಉದಕವನ್ನು ತೆಗೆದುಕೊಂಡು ಬಂದು ಹೇಂಗೆ ಅಭಿಷೇಕವ ಮಾಡಲಿ, ಕೈಮುಟ್ಟಿದರ್ಪಿತ-ಸಕಲಪದಾರ್ಥವನ್ನು ಗಡಣಿಸಿ ತಂದು ಮುಂದಕ್ಕೆ ಕೊಟ್ಟಲ್ಲಿ ಹಸ್ತ ಸೋಂಕಿ ಆ ಉಚ್ಛಿಷ್ಟವಾಗಿರ್ಪುದು. ಆ ಉಚ್ಛಿಷ್ಟವಾದಂಥ ಪದಾರ್ಥವನ್ನು ತೆಗೆದುಕೊಂಡು ಹೇಂಗೆ ಲಿಂಗಕ್ಕೆ ಸಮರ್ಪಿಸಲಿ, ಮನ ಮುಟ್ಟಿದಾರೋಗಣೆ-ಸಕಲ ಪದಾರ್ಥವನು ಗಡಣಿಸಿ ತಂದು ಮುಂದಕ್ಕೆ ಕೊಟ್ಟಲ್ಲಿ ಇದು ಇಂಥ ಪದಾರ್ಥ, ಇದು ಇಂಥ ಪದಾರ್ಥ ಇಷ್ಟಾದರೆ ಸಲಿಸೇನು ಇಷ್ಟಾದರೆ ಸಲಿಸಲಾರೆನೆಂದು ನೆನೆದಲ್ಲಿ ಮನಸೋಂಕಿ ಉಚ್ಛಿಷ್ಟವಾದಂಥ ಪದಾರ್ಥವನ್ನು ತೆಗೆದುಕೊಂಡು ಬಂದು ಲಿಂಗಕ್ಕೆ ಹೇಂಗೆ ಸಮರ್ಪಿಸುವೆನು, ಎಂತು ಘನವೆಂಬೆನಯ್ಯ-ಹೇಂಗೆ ಶ್ರೇಷ್ಠವೆಂದು ಹೇಳುವೆನಯ್ಯ.

ಬಂದ ಪರಿಯಲಿ-ಶರಣನ ಮುಖದಲ್ಲಿ ಪವಿತ್ರವಾಗಿ ಬರಲಿ ಅಪವಿತ್ರವಾಗಿ ಬರಲಿ ಬಂದಂಥ ನಿಲುಕಡೆಯಲ್ಲಿ, ಪರಿಣಾಮಿಸಿ-ಸಂತೋಷಿಸಿ ನಿಂದ ಪರಿಯಲಿ ನಿಜವ ಮಾಡಿ ಶರಣನ ಮುಖದಿಂದ ಪವಿತ್ರವಾಗಿ ಬರಲಿ ಅಪವಿತ್ರವಾಗಿ ಬರಲಿ, ನಿಂದ ಪರಿಯಲಿ ನಿಂದ ನಿಲುಕಡೆಯಲ್ಲಿ ನಿಜವ ಮಾಡಿ-ಯಥಾರ್ಥವ ಮಾಡಿ, ಆನಂದ ಪರಿಯಲಿ-ಸಂತೋಷ ಪರಿಯಲಿ, ಕೈಕೋ-ಸಮರ್ಪಿಸಿಕೋ ಎಂಬ ದೃಷ್ಟೋಪಮಾನದ ಹಾಂಗೆ.

• ಬಂದ ಪರಿಯಲಿ-ಮಹಾಲಿಂಗವೇ ಗುರುಮುಖದಿಂದ ಇಷ್ಟಲಿಂಗವಾಗಿ ಬಂದು ಅಂಗದಲ್ಲಿ ಸಂಬಂಧವಾದ ನಿಲುಕಡೆಯಲ್ಲಿ ಪರಿಣಾಮಿಸಿ ರೂಪುಪದಾರ್ಥವನ್ನು ಇಷ್ಟಲಿಂಗಕ್ಕೆ ಕೊಟ್ಟು, ನಿಂದ ಪರಿಯಲಿ ಆ ಇಷ್ಟಲಿಂಗದ ಚಿತ್ಕಳೆಯೇ ಅಂತರಂಗದಲ್ಲಿ ಪ್ರಾಣಲಿಂಗವಾಗಿ ನೆಲೆಗೊಂಡ ನಿಲುಕಡೆಯಲ್ಲಿ, ನಿಜವಮಾಡಿ-ರೂಪಿನೊಳಗಣ ರುಚಿಪದಾರ್ಥವನ್ನು ಪ್ರಾಣಲಿಂಗಕ್ಕೆ ಸಮರ್ಪಣೆಯ ಮಾಡಿ. ಆನಂದ ಪರಿಯಲಿ-ಪ್ರಾಣಲಿಂಗವೇ ಆತ್ಮಾಂಗದಲ್ಲಿ ಭಾವಲಿಂಗವಾಗಿ

ನೆಲೆಗೊಂಡ ನಿಲುಕಡೆಯಲ್ಲಿ, ಕೈಕೋ–ರುಚಿಪದಾರ್ಥದೊಳಗಣ ತೃಪ್ತಿಪದಾರ್ಥವನ್ನು ಸಮರ್ಪಿಸಿಕೋ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

III– –

1–1 ನೆಂ (ಟ, ಡ)

....

ಮೀಸಲು – ಸ್ವಚ್ಛವು, ಬೀಸರವಾದ ಲಿಂಗನಿವೇದನಕ್ಕೆ ಭಿನ್ನವಾದ, ಪರಿಯ ನೋಡಾ–ಪ್ರಕಾರವನು ನೀನಾಗೆ ನೀನು ವಿಚಾರಿಸಿ ನೋಡಾ. ಕಾಲು ತಾಗಿದ–ಚರಣಸಂಘಟ್ಟನವಾದ, ಅಗ್ಗವಣಿ–ಅಗ್ಗವಣಿಯು ಲಿಂಗಕ್ಕೆ ಮಜ್ಜನೋದಕವು, ಕೈಮುಟ್ಟಿದರ್ಪಿತ–ಹಸ್ತದಿಂದೆ ಗ್ರಹಿಸಲ್ತಕ್ಕ ಪದಾರ್ಥವೇ ಲಿಂಗಕ್ಕೆ ಸಮರ್ಪಣೆಯು, ಮನಮುಟ್ಟಿದಾರೋಗಣೆಯಂ–ಎನ್ನ ಮನಸ್ಸಿನಿಂದೆ ಗ್ರಹಿಸಲ್ತಕ್ಕ ಪದಾರ್ಥವೇ ಲಿಂಗಾರ್ಪಣವೆಂಬ ಪ್ರಕಾರವನು, ಎಂತು ಘನವೆಂಬೆನಯ್ಯ–ಹೇಂಗೆ ಲಿಂಗಕ್ಕಧಿಕಾರ್ಪಣವೆಂದು ಹೇಳುವೆನಯ್ಯ.

ಬಂದ ಪರಿಯಲಿ–ಶರಣನ ಮುಖದಿಂದೆ ಪದಾರ್ಥವು ಒದಗಿದ ಪ್ರಕಾರದಲಿ, ಪರಿಣಾಮಿಸಿ–ಆ ಪದಾರ್ಥವ ತೆಗೆದುಕೊಂಡು ಸಂತೋಷಿಸಿ, ನಿಂದ ಪರಿಯಲಿ–ಲಿಂಗದಲ್ಲಿ ನೆಲಸಿದ ಪ್ರಕಾರದಲ್ಲಿ, ನಿಜವ ಮಾಡಿ–ಲಿಂಗಸ್ವರೂಪವಾಗಿಸಿ, ಆನಂದ ಪರಿಯಲಿ–ನಾನು ಹೇಂಗೆ ಲಿಂಗಾರ್ಪಣವನೆಸಗುತ್ತೈದೇನೋ ಹಾಂಗೆ, ಕೈಕೋ–ಹಾಂಗೆ ಲಿಂಗಾರ್ಪಣವ ಮಾಡಿಕೋ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

೮೮೭

ಹಾಲೆಂಜಲು ಪೇಯನ, ಉದಕ ಎಂಜಲು ಮತ್ಸ್ಯದ, ಪುಷ್ಪ ಎಂಜಲು ತುಂಬಿಯ, ಎಂತು ಪೂಜಿಸುವೆನಯ್ಯ ಶಿವ ಶಿವಾ! ಈ ಎಂಜಲ ಅತಿಗಳೆವೊಡೆ ಎನ್ನಳವಲ್ಲ, ಬಂದುದ ಕೈಕೋ ಕೂಡಲಸಂಗಮದೇವಾ.

I –

ಹಾಲೆಂಜಲು ಪೇಯನ – ಪ್ರಾತಃಕಾಲದಲೆದ್ದು ಆಕಳನು ಕರಕೋಬೇಕಾದರೆ ಕರುವ ಬಿಟ್ಟಲ್ಲದೆ ಮೊಲೆಯ ತೊರೆಯದು; ಆಕಳು ಕೊಡದು, ಮೊದಲು ಕರುವಬಿಟ್ಟು ಕಡೆಯಲ್ಲಿ ಹಾಲನ್ನು ಕರಕೊಂಡಲ್ಲಿ ಕರ ತಿಂದು ಉಚ್ಛಿಷ್ಟವಾಗಿರ್ಪುದು, ಉಚ್ಛಿಷ್ಟವಾದಂಥ ಕ್ಷೀರವನ್ನು ತೆಗೆದುಕೊಂಡು ಬಂದು ನಾನು ಲಿಂಗಕ್ಕೆ ಹೇಂಗೆ ಅಭಿಷೇಕವ ನೀಡಲಿ, ಉದಕ ಎಂಜಲು ಮತ್ಸ್ಯದ ಪ್ರಾತಃಕಾಲದಲೆದ್ದು ಬಿಂದಿಗೆ ಕುಜಾಯುವನ್ನು ತೆಗೆದುಕೊಂಡು ಬಂದು ಹಳ್ಳ ಹೊಳೆ ಕೆರೆ ಬಾವಿ ಕೊಳನ ತಡಿಗಳಲ್ಲಿಗೆ ಹೋಗಿ ಹತ್ತೆಂಟು ಕೊಡ ಉದಕವನ್ನು ಮೊಗೆದುಕೊಂಡು ಬಂದು ಲಿಂಗಕ್ಕೆ ಅಭಿಷೇಕವ ನೀಡೆನೆಂದರೆ ಮೀನೆಂಬುವಂಥದು ಉದಕವನ್ನೇ ಹಾಸಿಕೊಂಡು ಉದಕವನ್ನೇ ಹೊದ್ದುಕೊಂಡು ಉದಕವನ್ನೇ ಜೀವಚೈತನ್ಯವ ಮಾಡಿಕೊಂಡಿರುವುದು. ಮೀನ

ಸೋಂಕಿ ಉಚ್ಛಿಷ್ಟವಾಗಿರ್ಪುದು, ಆ ಉಚ್ಛಿಷ್ಟವಾದ ಉದಕವನ್ನೇ ತೆಗೆದುಕೊಂಡು ಬಂದು ಲಿಂಗಕ್ಕೆ ನಾನು ಹೇಂಗೆ ನೀಡಲಿ, ಪುಷ್ಪ ಎಂಜಲು ತುಂಬಿಯ–ಪ್ರಾತಃಕಾಲದಲ್ಲಿ ಎದ್ದು ಹೂವಿನ ಕರಡಿಗೆ ಜೋಳಿಗೆ ಮೊದಲಾದುವನ್ನು ತೆಗೆದುಕೊಂದು ಪುಷ್ಪದ ವನಾಂತರಗಳಿಗೆ ಹೋಗಿ ಪತ್ರಪುಷ್ಪಾದಿಗಳನು ತೆಗೆದುಕೊಂಡು ಬಂದು ಲಿಂಗಕ್ಕೆ ಧರಿಸೇನೆಂದರೆ ಭ್ರಮರ ಸೋಂಕಿ ಉಚ್ಛಿಷ್ಟವಾಗಿರ್ಪುವು. ಆ ಉಚ್ಛಿಷ್ಟವಾದಂಥ ಪತ್ರಪುಷ್ಪಾದಿಗಳನು ತೆಗೆದುಕೊಂಡು ಬಂದು ಲಿಂಗಕ್ಕೆ ನಾನು ಹೇಂಗೆ ಧರಿಸಲಿ, ಎಂತು ಪೂಜಿಸುವೆನಯ್ಯ–ನಾನು ಹೇಂಗೆ ಅರ್ಚಿಸುವೆನಯ್ಯ, ಶಿವ ಶಿವಾ–ಲಿಂಗವೇ ಲಿಂಗವೇ.

ಈ ಎಂಜಲನತಿಗಳೆವೊಡೆ : ಈ ಎಂಜಲ–ಈ ಉಚ್ಛಿಷ್ಟ ಭಾವವನ್ನು, ಅತಿಗಳೆವೊಡೆ–ನಷ್ಟವ ಮಾಡುವಡೆ, ಎನ್ನಳವಲ್ಲ–ಎನ್ನ ಕೂಡಶಕ್ಯವಲ್ಲವು, ಬಂದುದ–ಶರಣನ ಮುಖದಿಂದ ಪವಿತ್ರವಾಗಿ ಬರಲಿ ಅಪವಿತ್ರವಾಗಿ ಬರಲಿ ಬಂದಂಥ ನಿಲುಕಡೆಯಲ್ಲಿ, ಕೈಕೋ–ಸಮರ್ಪಿಸಿಕೋ, ಕೂಡಲಸಂಗಮದೇವಾ–ಎಲೆ ಪರಿಶಿವಲಿಂಗವೆ.

೭೭೭

ಶುದ್ಧವಾಯಿತ್ತೆಂಬೆನೆ ? ಸುಯಿಧಾನಿ ನಾನಲ್ಲ. ಅನುವಾಯಿತ್ತೆಂಬೆನೆ? ಅವಧಾನಿ ನಾನಲ್ಲ. ಸುಯಿಧಾ[1]ನ[1] ಅವಧಾ[1]ನ[1]ದರ್ಪಿತವ ನಾನಱಿಯೆ. ಇದ್ದ ಪರಿಯಲಿ ನೀಡಿದಡೆ ಬಂದ ಪರಿಯಲಿ ಕೈಕೋ, ಕೂಡಲಸಂಗಮೇವಾ.

I –

ಶುದ್ಧವಾಯಿತ್ತೆಂಬೆನೆ? – ಸಾಂಗೋಪಾಂಗ ಶರೀರಶುದ್ಧತೆಯ ಮಾಡಿಕೊಂಡು ಶುಚಿರ್ಭೂತನಾಗಿ ಅಂಗ ಬೇರೆ ಲಿಂಗ ಬೇರೆಂದು ಲಿಂಗಾಂಗವೆರಡಕ್ಕೂ ಭಿನ್ನವಿಟ್ಟುಕೊಂಡಾರಾಧಿಸುವೆನೆ? ಸುಯಿಧಾನಿ ನಾನಲ್ಲ–ಭಿನ್ನ ಪೂಜಾಕ್ರೀಗಳಲ್ಲಿ ಅತ್ಯಂತ ಸಾವಧಾನವುಳ್ಳಾತ ನಾನಲ್ಲವು. ಅನುವುವಾಯಿತ್ತೆಂಬೆನೆ?–ಸಕಲ ವೇದಶಾಸ್ತ್ರಾಗಮಪುರಾಣಂಗಳನು ಓದಿಕೊಂಡು ಶ್ರುತಜ್ಞಾನದ ಬಲದಿಂದ ಅರುಹಿನಿಂದ ನಿರವಯಲ ಬ್ರಹ್ಮವನೆ ಕುರುಹಿಟ್ಟುಕೊಂಡು 'ಆತ್ಮಾ ಕೇವಲಃ ಶಿವಃ' ಎಂದು ಆತ್ಮನೇ ಬ್ರಹ್ಮನೆಂದು ಹೇಳುವೆನೆ? ಅವಧಾನಿ ನಾನಲ್ಲ–ಭಿನ್ನಜ್ಞಾನದಲ್ಲಿ ಅತ್ಯಂತ ಸಾವಧಾನವುಳ್ಳಾತ ನಾನಲ್ಲವು. ಸುಯಿಧಾನ–ಭಿನ್ನಕ್ರಿಯಾಚಾರವು, ಅವಧಾನ–ಭಿನ್ನಜ್ಞಾನಾಚಾರವು. ಅರ್ಪಿತವ ನಾನು–ಅಂಗ ಪ್ರಾಣಂಗಳಲ್ಲಿ ಇಷ್ಟಪ್ರಾಣಲಿಂಗ ಸಂಬಂಧವ ಮಾಡಿಕೊಂಡು ಅವಿರಳಜ್ಞಾನ ಕ್ರೀವಿಡಿದಾಚರಿಸುವಂಥ ಆಚರಣೆಯನ್ನು, ಅಱಿಯೆ–ತಿಳಿಯೆನು.

ಇದ್ದ ಪರಿಯಲಿ ನೀಡಿದಡೆ: ಇದ್ದ ಪರಿಯಲಿ–ಶರಣನ ಮುಖದಿಂದ ಪವಿತ್ರವಾಗಿ ಬರಲಿ ಅಪವಿತ್ರವಾಗಿ ಬರಲಿ ಇದ್ದಂಥ ನಿಲುಕಡೆಯಲ್ಲಿ, ನೀಡಿದಡೆ ಸಮರ್ಪಿಸಿದರೆ, ಬಂದ ಪರಿಯಲಿ–ಶರಣನ ಮುಖದಿಂದ ಪವಿತ್ರವಾಗಿ ಬರಲಿ ಅಪವಿತ್ರವಾಗಿ ಬರಲಿ ಬಂದಂಥ ನಿಲುಕಡೆಯಲ್ಲಿ ಕೈಕೋ–ಸಮರ್ಪಿಸಿಕೋ, ಕೂಡಲಸಂಗಮದೇವಾ – ಎಲೆ ಪರಶಿವಲಿಂಗವೆ.

III –

1–1 ನಿ (ಟ, ಡ)

....

ಶುದ್ಧವಾಯಿತ್ತೆಂಬೆನೆ?–ಸಕಲಪದಾರ್ಥವು ಲಿಂಗಮುಖದಿಂದೆ ಸಮರ್ಪಣೆಯಾಗಿ ಪವಿತ್ರವಾಯಿತ್ತೆಂದು ಹೇಳುವೆನೆ? ಸುಯಿಧಾನಿ ನಾನಲ್ಲ–ಆಯಾಯ ಪದಾರ್ಥವು ತಟ್ಟಿಮುಟ್ಟಿದಲ್ಲಿ ಆಯಾಯ ಪದಾರ್ಥವನು ಆಯಾಯ ಲಿಂಗಕ್ಕೆ ಅಱಿವಿನ ಮುಖದಿಂದೆ ಸಮರ್ಪಿಸುವಲ್ಲಿ ಎಚ್ಚರಿಕೆಯುಳ್ಳಾತನಲ್ಲವು. ಅನುವಾಯಿತ್ತೆಂಬೆನೆ?–ಸಕಲಪದಾರ್ಥವು ಲಿಂಗಾರ್ಪಣಕ್ಕೆ ಯೋಗ್ಯವಾಯಿತ್ತೆಂದು ಹೇಳುವೆನೆ? ಅವಧಾನಿ ನಾನಲ್ಲ–ಆಯಾಯ ಪದಾರ್ಥವನು ಆಯಾಯ ಲಿಂಗಕ್ಕೆ ಸಮರ್ಪಿಸುವಲ್ಲಿ ಲಿಂಗದ ನೆನಹುಳ್ಳಾತ ನಾನಲ್ಲವು. ಸುಯಿಧಾನಿ–ಲಿಂಗದಲ್ಲೆಚ್ಚರಿಕೆಯುಳ್ಳಾತನು, ಅವಧಾನಿ–ಆವುದಾನೊಂದು ಪದಾರ್ಥವ ಲಿಂಗಕ್ಕೆ ಸಮರ್ಪಿಸುವಲ್ಲಿ ಅವಧಾನತ್ವವನ್ನು ತಿಳಿಯೆನು, ಮತ್ತೆ[೧] ಲಿಂಗದಲ್ಲಿ ಎಚ್ಚರಿಕೆ ಅವಧಾ[೨][ನ][೨]ತ್ವದಿಂದೆ ಸಮರ್ಪಿಸುವ ಸಮರ್ಪಣದ ವಿಶೇಷವನು ನಾನು ತಿಳಿಯೆನೆಂಬುದೀಗ ಸುಯಿಧಾನಿ ಅವಧಾನಿ ಅರ್ಪಿತವ ನಾನಱಿಯೆನೆಂಬ ಶಬ್ದಕ್ಕರ್ಥ.

....

೧ + ಸುಯಿಧಾನಿ ಅವಧಾನಿ ಅರ್ಪಿತವನಾನಱಿಯೆ (ಟ, ಡ), ೨–೨ ರ (ಟ, ಡ)

೮೮೯

ಪಾದಾರ್ಚನೆಯ ಮಾಡುವೆನಯ್ಯ; ಪಾದೋದಕದ ಹಂಗಿಗೆ. ಶರಣಾರ್ಥಿಯೆಂಬೆನಯ್ಯ; ಒಕ್ಕುದ ಕೊಂಬ ಹಂಗಿಗೆ. ಎಡೆಯಾಟ ಕಡಬಡ್ಡಿಯ ಕೊಟ್ಟು ಕೆಟ್ಟಿತ್ತು ನೋಡಾ ಎನ್ನ ಭಕ್ತಿ! ಕೂಡಲಸಂಗನ ಶರಣರ ನಿಲವನಱಿಯದೆ ಮುಯ್ಯಿಗೆ ಮುಯ್ಯಾಗಿ ಕೆಟ್ಟಿತ್ತು ಎನ್ನ ಭಕ್ತಿ.

I –

ಪಾದಾರ್ಚನೆಯ ಮಾಡುವೆನಯ್ಯ ಪಾದೋದಕದ ಹಂಗಿಗೇ: [ಪಾದೋದಕದ] ಸುಮ್ಮನೆ ಪಾದೋದಕವ ಕೊಡಿರಿ ಸ್ವಾಮಿಯೆಂದು ಕೇಳಿದರೆ ಛೇ ಜಾಳೆ ನಿನಗೆಲ್ಲಿ ಪಾದೋದಕವೆಂದು ಧಿಕ್ಕಾರವ ಮಾಡಿಯಾರೆಂದು ತಿಳಿದು ಪಾದೋದಕವನ್ನು ಅನುಭವಿಸುವಂಥ, ಹಂಗಿಗೆ–ವಾಂಛಕ್ಕೆ, ಪಾದಾರ್ಚನೆಯ ಮಾಡುವೆನಯ್ಯ. ನಮಸ್ಕಾರವೆಂದು ನಮಸ್ಕರಿಸಿ ಪಾದವನ್ನು ಪ್ರಕ್ಷಾಲನವ ಮಾಡುವೆನಯ್ಯ. ಶರಣಾರ್ಥಿಯೆಂಬೆನಯ್ಯ ಒಕ್ಕುದ ಕೊಂಬ ಹಂಗಿಗೆ: [ಒಕ್ಕುದ ಕೊಂಬ] ಸುಮ್ಮಗೆ ಪ್ರಸಾದವ ನೀಡಿರಿ ಸ್ವಾಮಿಯೆಂದು ಕೇಳಿದರೆ ಛೇ ಜಾಳೆ ನಿನಗೆಲ್ಲಿಯ ಪ್ರಸಾದವೆಂದು ಧಿಃಕಾರವ ಮಾಡಿಯಾರೆಂದು ತಿಳಿದು ಅವರೊಕ್ಕ ಮಿಕ್ಕ ಪ್ರಸಾದವನ್ನು ಅನುಭವಿಸುವಂಥ, ಹಂಗಿಗೆ–ವಾಂಛಕ್ಕೆ, ಶರಣಾರ್ಥಿಯೆಂಬೆನಯ್ಯ–ಶರಣಾರ್ಥಿಯೆಂದು ನಮಸ್ಕರಿಸಿ ಪ್ರಸಾದವ ನೀಡಿಕೊಂಡು ಚಲಿಸುವೆನಯ್ಯ. ಎಡೆಯಾಟ ಕಡಬಡ್ಡಿಯ ಕೊಟ್ಟು: ನೂರಾರು ವರಹವನ್ನು ಸಾಲವ ಕೊಟ್ಟು, ಎಡೆಯಾಟ–ತಮ್ಮ ಮನೆಯಿಂದ ಅವರ ಮನೆಗೆ ಅವರ ಮನೆಯಿಂದ ತಮ್ಮ ಮನೆಗೆ ಎಡೆಯಾಟ, ಕಡಬಡ್ಡಿಯ ಕೊಟ್ಟು: ಕಡ–ಕೈಗಡ ಕುರುಹುಗಡ, ಬಡ್ಡಿಯ ಕೊಟ್ಟು–ಬಡ್ಡಿಯ ತೆಗೆದುಕೊಂಡರೆ ಹಾಗ ಬಡ್ಡಿ

ಮೀಸಬಡ್ಡಿ ಬೇಳೆಬಡ್ಡಿಯೆಂದು ಬಡ್ಡಿಯ ತೆಗೆದುಕೊಂಡರೆ, ನೋಡಾ ಎನ್ನ ಭಕ್ತಿ–ಎನ್ನವಿಶ್ವಾಸವು, ಕೆಟ್ಟಿತ್ತು–ನಷ್ಟವಾಯಿತ್ತೆಂಬ ದೃಷ್ಟೋಪಮಾನದ ಹಾಂಗೆ.

● ಕಡಕೊಟ್ಟು–ಭಿನ್ನವಿಟ್ಟುಕೊಂಡು ಭಕ್ತಿಯ ಮಾಡಿ, ಎಡೆಯಾಟ–ಕೊಡುಕೊಂಬೋಸ್ಥಾನ ಕೂಟ ಮಾಟಸ್ಥಾನ ಇಕ್ಕೆರೆವಸ್ಥಾನಂಗಳಿಗೆ ಎಡೆಯಾಡುವಂಥದೆ ಎಡೆಯಾಟವು. [ಕಡ ಬಡ್ಡಿಯ ಕೊಟ್ಟು–] ಕಡ ಬಡ್ಡಿಯ ತೆಗೆದುಕೊಂಡರೆ ಭಿನ್ನಭಕ್ತಿಯಿಂದುಂಟಾದ ಚತುರ್ವಿಧಫಲ ಪದಂಗಳನು ಪಡೆದನುಭವಿಸಿದರೆ, ಎನ್ನ ಭಕ್ತಿ–ನಾ ಮಾಡುವಂಥ ಜಂಗಮಭಕ್ತಿಯು. ಕೆಟ್ಟಿತ್ತು ನೋಡಾ–ನಾಶವಾಯಿತ್ತು ಕಂಡಾ. ಕೂಡಲಸಂಗನ ಶರಣರ–ಶಿವನ ಚಿತ್ರಭಾಂಗಸ್ವರೂಪರಾದ ಜಂಗಮಮೂರ್ತಿಗಳ, ನಿಲವನು–ಸ್ವಸ್ವರೂಪಿನ ನಿಲುಕಡೆಯನ್ನು, ಅಱಿಯದೆ–ತಿಳಿಯದೆ, ಮುಯ್ಯಿಗೆ ಮುಯ್ಯಾಗಿ–ಉಪಕಾರಕ್ಕುಪಕಾರವಾಗಿ, ಎನ್ನ ಭಕ್ತಿ–ಎನ್ನ ಭಿನ್ನಭಕ್ತಿಯು. ಕೆಟ್ಟಿತ್ತು–ನಾಶವಾಯಿತ್ತು.

III– –

ಕಡ–ಸಕಲಪಡಿಪದಾರ್ಥಗಳನು ಲಿಂಗಕ್ಕೆ ಸಮರ್ಪಣೆಯ ಮಾಡಿ, ಆ ಲಿಂಗದಿಂದೆ ಫಲಪದಂಗಳ ಪಡೆದುಕೊಂಬಂತ ಕಡವನು, ಬಡ್ಡಿಯ–ಸಕಲಪದಾರ್ಥಗಳನ್ನು ಲಿಂಗಕ್ಕೆ ಸಮರ್ಪಿಸಿ ಆ ಲಿಂಗದ ಪ್ರಸಾದವನ್ನು ಕೊಂಬಂಥ ಬಡ್ಡಿಯನ್ನು, ಕೊಟ್ಟು– ಇತ್ತು[೧] ಆ ಲಿಂಗದಿಂದೆ ಪ್ರಸಾದ ಫಲಂಗಳನು ಪಡೆದು ಮೋಕ್ಷಾರ್ಥವಿಲ್ಲದೆ ನಾಸ್ತಿಯಾಯಿತ್ತೆಂಬುದೀಗ ಕೆಟ್ಟಿತ್ತು ನೋಡಾ ಎಂಬ ಶಬ್ದಕ್ಕರ್ಥ. ಎನ್ನ ಭಕ್ತಿ–ಎನ್ನ ಭಿನ್ನಭಕ್ತಿಯು, ಕೂಡಲಸಂಗನ ಶರಣರ ನಿಲವನರಿಯದೆ – ನಿರಾಶಾ ನಿರ್ವಂಚನೆಯುಳ್ಳ ಶಿವಶರಣರ ಸಹಜಸಮರಸಭಕ್ತಿಯನು ತಿಳಿಯದೆ, ಮುಯ್ಯಿಗೆ ಮುಯ್ಯಾಗಿ–ಮುಯ್ಯಿಗೆ ಮುಯ್ಯಾಗಿ, ಎನ್ನ ಭಕ್ತಿ – ನನ್ನ ಸಮರಸಭಕ್ತಿಯು, ಕೆಟ್ಟಿತ್ತು–ಭಿನ್ನಭಕ್ತಿಯಾಯಿತ್ತು.

೧ + ಕೆಟ್ಟಿತ್ತು ನೋಡಾ (ಟ, ಡ)

೮೯೦

[1]ಯಸ್ಯ ಕ್ರಿಯಾ ತಸ್ಯ ಭವತಿ'[1] ಯೆಂದು ಕಟ್ಟಾಚಾರದಲ್ಲಿದ್ದು ನಾನು ಅನುಸರಿಸಿಕೊಂಡು ನಡೆವನ್ನಕ್ಕ ಕರ್ಮಕಾಂಡಿಯಲ್ಲ. ಉತ್ಪತ್ಯಸ್ಥಿತಿಭೋಗಭುಕ್ತಿಕಾಯವುಳ್ಳನ್ನಕ್ಕ[2]ರ[2] ಭಕ್ತಕಾಂಡಿಯಲ್ಲ. ಪರವು ಸಾಧ್ಯವಾಯಿತ್ತೆಂದು ಕ್ರೀಯೆಲ್ಲವ ಮೀಱಿ ನಡೆವೆನು, ಪರತತ್ತ್ವವನಱಿದಿಹೆನೆಂಬಕ್ಕ[2]ರ[2] ಜ್ಞಾನಕಾಂಡಿಯಲ್ಲ. ಇನ್ನು ಕರ್ಮಕಾಂಡ ಭಕ್ತಿಕಾಂಡ ಜ್ಞಾನಕಾಂಡ ಈ ತ್ರಿವಿಧದಲ್ಲಿ ವಂಚಕನಾದಡೆ ಈಸು ವಿಧದೊಳಗೆ ಅಂಗವಿಲ್ಲ. ಮೇಲೆ ಸತ್ಪುರುಷರ ಸಂಗವಿಲ್ಲ. ಯುಕ್ತಿಯಿಲ್ಲ, ಎನಗೆ ಭಕ್ತಿಯೆಂತಹದಯ್ಯ? ಬಲ್ಲವರ ಬೆಸಗೊಂಡಡೆ ಎನ್ನ ಬಿಮ್ಮ ಕೆಟ್ಟಿಹುದೆಂದು [3]ಮೆಲ್ಲ[3]ಮೆಲ್ಲನೆ ಪ್ರಸಂಗ [4]ಮುಖ[4]ದಿಂದ ತಿಳಿದು ನೋಡುವೆ. ಕೂಡಲಸಂಗಮದೇವಾ, ಎನ್ನವಗುಣವ ನೋಡದೆ ಶಿವರಾತ್ರಿ ಸಂಕಣ್ಣಯ್ಯಗಳಿಗೆ ಕರುಣಿಸಿದಂತೆ ಎನಗೆ ಕೃಪೆ ಮಾಡಯ್ಯ.

I –

'ಯಸ್ಯ ಕ್ರಿಯಾ ತಸ್ಯ ಭವತಿ'ಯೆಂದು : ಯಸ್ಯ-ಹೇಂಗೆ, ಕ್ರಿಯಾ-ಕ್ರಿಯಾವಿಡಿದು ಆಚರಿಸುತ್ತಿಹನೋ, ತಸ್ಯ-ಹಾಂಗೆ, ಭವತಿ-ಇಷ್ಟಾರ್ಥಸಿದ್ಧಿಯಾಗುತ್ತಿಹುದು. ಎಂದು-ಹೀಗೆಂದು, ಕಟ್ಟಾಚಾರದಲ್ಲಿದ್ದು-ಕಟ್ಟಿನ ಕ್ರಿಯೆಗಳಲ್ಲಿ ಕೂಡಿರ್ದು, ನಾನು ಅನುಸರಿಸಿಕೊಂಡು-ನಾನಂಗೀಕರಿಸಿಕೊಂಡು, ನಡೆವನ್ನಕ್ಕ-ಆಚರಿಸುವ ಪರಿಯಂತರ. ಕರ್ಮಕಾಂಡಿಯಲ್ಲ-ಭಿನ್ನಕ್ರೀಯುಳ್ಳಾತನಲ್ಲದೆ ಸಮರಸಕ್ರೀವುಳ್ಳಾತನಲ್ಲವು. ಉತ್ಪತ್ಯ-ಬ್ರಹ್ಮನ ಸೃಷ್ಟಿಯು, ಸ್ಥಿತಿ-ವಿಷ್ಣುವಿನ ದುರ್ಭೋಗ ಸ್ಥಿತಿಯು, ಭೋಗ-ಅಷ್ಟಭೋಗ ಮೊದಲಾದ ಅನೇಕ ಭೋಗಂಗಳನು ಭುಕ್ತಿ ಕಾಯವುಳ್ಳನ್ನಕ್ಕರ-ಅನುಭವಿಸುವಂಥ ದೇಹಸಾಕಾರವುಂಟಾಗುವ ಪರಿಯಂತರ, ಭಕ್ತಕಾಂಡಿಯಲ್ಲ-ಭಿನ್ನಭಕ್ತಿವುಳ್ಳಾತನಲ್ಲದೆ ಸಮರಸಭಕ್ತಿವುಳ್ಳಾತನಲ್ಲವು. ಪರವು ಸಾಧ್ಯವಾಯಿತ್ತೆಂದು-ಪರವೆಂದರೆ ಮಹಾಲಿಂಗವು. ಆ ಮಹಾಲಿಂಗದಲ್ಲಿ ಕೂಡುವಂಥ ಕೂಟವೇ ದೊರೆಕೊಂಡಿತ್ತೆಂದು, ಕ್ರೀಯೆಲ್ಲವ ಸಕಲಕ್ರೀಗಳಷ್ಟನ್ನೂ, ಮೀಱಿ-ಅತಿಕ್ರಮಿಸಿ, ನಡೆವೆನು-ಆತ್ಮಾ ಕೇವಲಃ ಶಿವಃ ಆತ್ಮನೇ ಬ್ರಹ್ಮವೆಂದಾಚರಿಸುವೆನು. ಪರತತ್ತ್ವವನಱಿದಿಹೆನೆಂಬನ್ನಕ್ಕರ-ಮಹಾಲಿಂಗತತ್ವದಲ್ಲಿ ಕೂಡೇನೆಂಬಂಥ ಕೂಟವನ್ನು ತಿಳಿದೆನೆಂದು ಹೇಳುವ ಪರಿಯಂತರು, ಜ್ಞಾನಕಾಂಡಿಯಲ್ಲ-ಭಿನ್ನಜ್ಞಾನವುಳ್ಳಾತನಲ್ಲದೆ ಸಮರಸಜ್ಞಾನವುಳ್ಳಾತನಲ್ಲವು.

ಇನ್ನು ಈ ಪ್ರಕಾರದ ದೆಸೆಯಿಂದ ಕರ್ಮಕಾಂಡ ಭಕ್ತಿಕಾಂಡ ಜ್ಞಾನಕಾಂಡವೆಂಬ, ಈ ತ್ರಿವಿಧದಲ್ಲಿ ಮೂರರಲ್ಲಿ ವಂಚಕನಾದಡೆ-ಮಾಜೋಬುದ್ಧಿವುಳ್ಳಾತನಾದರೆ, ಈಸು ವಿಧದೊಳಗೆ ಕರ್ಮಕಾಂಡ ಭಕ್ತಿಕಾಂಡ ಜ್ಞಾನಕಾಂಡವೆಂಬ ಮೂರು ಪ್ರಕಾರದಲ್ಲಿ ಅಂಗವಿಲ್ಲ-ಅಂಗದ ಮೇಲೆ ಇಷ್ಟಲಿಂಗ ಸಂಬಂಧವಿಲ್ಲವು, ಮೇಲೆ-ಆಮೇಲೆ, ಸತ್ಪುರುಷರ-ಸತ್ಪುರುಷರಾದ ಶಿವಭಕ್ತರುಗಳ, ಸಂಗವಿಲ್ಲ-ತತ್ಸಂಗವಿಲ್ಲವು. ಎನಗೆ-ನನಗೆ, ಯುಕ್ತಿಯಿಲ್ಲ-ಜ್ಞಾನವಿಲ್ಲವು, ಭಕ್ತಿಯೆಂತಹುದಯ್ಯ?-ಶಿವಾದ್ವೈತಭಕ್ತಿ ಹೇಂಗೆ ದೊರೆಕೊಂಬುವದಯ್ಯ ? ಬಲ್ಲವರ ಬೆಸಗೊಂಡಡೆ-ನಿತ್ಯಾನಿತ್ಯವಿವೇಕವನು ಅರಿದು ಬಲ್ಲಂಥ ಜ್ಞಾನಗುರುಮೂರ್ತಿಗಳನು ಬೆಸಗೊಂಡು ಕೇಳಿದರೆ, ಎನ್ನ ಬಿಮ್ಮು ಕೆಟ್ಟಿಹುದೆಂದು-ಎನ್ನ ಭಿನ್ನಸ್ವರತ್ವವು ನಷ್ಟವಾದೀತೆನುತ್ತ, ಮೆಲ್ಲಮೆಲ್ಲನೆ-ಮೆಲ್ಲಮೆಲ್ಲಕೆ[೧], ಪ್ರಸಂಗ ಮುಖದಿಂದ-ಪ್ರಸಂಗವನಾಡುವ ನೆವದಿಂದ, ನೋಡುವೆ-ಸ್ವಾಮೀ ಈ ಕಂದಕ್ಕೆ ಅರ್ಥ ಹೇಂಗೆ? ಗದ್ಯಕ್ಕೆ ಅರ್ಥ ಹೇಂಗೆ? ಪದ್ಯಕ್ಕೆ ಅರ್ಥ ಹೇಂಗೆ? ವೃತ್ತಕ್ಕೆ ಅರ್ಥ ಹೇಂಗೆಂದು ತಿಳಿದು ನೋಡುವೆನು, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ, ಎನ್ನವಗುಣವ ನೋಡದೆ-ಎನ್ನ ಗುಣಾವಗುಣಂಗಳನು ಪರಾಂಬರಿಸದೆ, ಶಿವರಾತ್ರಿ ಸಂಕಣ್ಣಯ್ಯಗಳಿಗೆ-ಶಿವರಾತ್ರಿ ಸಂಕಣ್ಣಯ್ಯಗಳೆಂಬ ಶಿವಶರಣಂಗೆ, ಕರುಣಿಸಿದಂತೆ-ಕೃಪೆಮಾಡಿದ ಹಾಂಗೆ, ಎನಗೆ-ನನಗೆ, ಕೃಪೆಮಾಡಯ್ಯ-ದಯಮಾಡಯ್ಯ.

....

೧ + ಲವಲವಿಕೆ (ಗ)

III- -

4-4 x (ಟ, ಡ)

....

ಕರ್ಮಕಾಂಡಿಯಲ್ಲ–[೨]ಕ್ರಿಯಾಮಾರ್ಗಸ್ಥನು[೨] ಅಲ್ಲವು, ಈ ಸುವಿಧದೊಳಗೆ–ಈ ಲೇಸಾದ ಆಚರಣೆಗಳಲ್ಲಿ, ಅಂಗವಿಲ್ಲ–ಎರಕವುಂಟಾಗದು, ಪ್ರಸಂಗದಿಂದ–ಒಂದಾನೊಂದು ಮಾತಿನ ನೆವದಿಂದ.

....

೨–೨ ಕ್ರಿಯಾಗಮಸ್ಥನು (ಡ)

IV– –

1–1 ಸತ್ಕ್ರೀ ಸತ್ಯ ಭವತಿ (1625) 2–2 x (ತ) 3–3 x (ತ) 4–4 x (ತ)

....

ಕರ್ಮಭಕ್ತಿಜ್ಞಾನವೆಂಬ ತ್ರಿಕಾಂಡದೊಳಗೆ ಕರ್ಮಿಯಾದರೆ ಕರ್ಮದಲ್ಲಿ ನಿರತನಾಗಿರಬೇಕು. ಭಕ್ತನಾದರೆ ಭಕ್ತಿಯಲ್ಲಿ ನಿರತನಾಗಿರಬೇಕು. ಜ್ಞಾನಿಯಾದರೆ ಜ್ಞಾನದಲ್ಲಿ ನಿರತನಾಗಿರಬೇಕು. ತಾನೆಂಬ ಅಹಂಕಾರವಳಿದು ಬಲ್ಲವರ ಕೇಳಬೇಕು. ಸದ್ಯೋನ್ಮುಕ್ತಿಯ ಶರಣರಿಗೆ ಕರುಣಿಸಿದಂತೆ ಕೊಡೆಂಬುದೀ ವಚನದರ್ಥ.

V –

ಈ ಸುವಿಧದೊಳಗೆ–ಈ ಲೇಸಾದಾಚರಣೆಯೊಳಗೆ, ಅಂಗವಿಲ್ಲ–ಇಷ್ಟಲಿಂಗಸಂಬಂಧವಿಲ್ಲ.

೪೯೧

ಕಳಾಬಿಂದುವಟಾಮುಖಿ ಎಂಬ ಹೆಂಗೂಸಿನ ಕೈಯ[1]ಲ್ಲಿ[1] ಜಲಾಕಾರವೆಂಬ ಗಡಿಗೆಯಿದ್ದಿತ್ತು. ಆ ಗಡಿಗೆಯಲ್ಲಿ ಚನ್ನಬಸವಣ್ಣ ನೀರು ತಂದ. ಮಡಿವಾಳಯ್ಯ ಸೈದಾನವ ತಂದ. ಇದಱ ಒಲೆಯಡಿಯನುರುಹಿಕೊಂಡ[2] ಕೂಡಲಸಂಗಮದೇವ.

I– –

ಕಳಾಬಿಂದುವಟಾಮುಖಿಯೆಂಬ : ಕಳಾಯೆಂದರೆ ಆಕಾರಪ್ರಣಮವು. ಬಿಂದು–ಬಿಂದುಯೆಂದರೆ ಉಕಾರಪ್ರಣಮವು, ವಟಾ–ವಟಾಯೆಂದರೆ ಮಕಾರಪ್ರಣಮವು, ಮುಖಿ–ಈ ಅಉಮಾಕ್ಷರತ್ರಯಂಗಳಿಗೆ ಮುಖ್ಯವಾಗಿರುವಂಥದೇ ಪರಾಶಕ್ತಿ ಎಂಬ–ಹೀಂಗೆಂದು ಹೇಳುವ, ಹೆಂಗೂಸಿನ–ಪರಾಶಕ್ತಿಯ ಭೃತ್ಯಳೆ ಮಾಯಾ ಶಕ್ತಿಯು, ಆ ಮಾಯಾ ಶಕ್ತಿಯ ಸ್ವರೂಪವಾದ ಜೀವನ, ಕೈಯಲ್ಲಿ–ಕುಚಿತ್ತವೆಂಬ ಹಸ್ತದಲ್ಲಿ, ಜಲಾಕಾಶವೆಂಬ ಗಡಿಗೆಯಿದ್ದಿತ್ತು. ಜಲಬುದ್ಬುದಮಯ ಸ್ವರೂಪವಾದ ದೇಹದಲ್ಲಿ, ಚೆನ್ನಬಸವಣ್ಣ ನೀರು ತಂದ–ಚನ್ನಬಸವಣ್ಣನೆಂಬ ಜ್ಞಾನಗುರುಮೂರ್ತಿಯು ಅಂಗದಲ್ಲಿ ಸತ್ತುವಿನ ನಿಜತಂಡುಲಸ್ವರೂಪವಾದಿಷ್ಟಲಿಂಗ ಸಂಬಂಧವ ಮಾಡಿಕೊಟ್ಟನು, ಇದಱ–ಈ ಲಿಂಗಾಂಗ ಸಂಬಂಧಿಯಾದ ಶರಣನ ಒಲೆಯಡಿನುರಹಿ ಕೊಡಾ: ಇಲೆಯೆಂದರೆ ತನುತ್ರಯಂಗಳು, ತನುತ್ರಯಂಗಳಿಗೆ ಮಧ್ಯಸ್ತವಾಗಿರುವಂಥದೇ ಹೃದಯೇಂದ್ರಿಯವು. ಆ ಹೃದಯೇಂದ್ರಯದಲ್ಲಿ ನೆಲಸಿರುವಂಥ ಜ್ಞಾನವನು ಪ್ರಭಾವಿಸಿ ಕೊಡಾ ಎಂಬುದರ್ಥ.

● ಕಳಾಬಿಂದುವಟಾಮುಖಿಯೆಂಬ : ಕಳಾಯೆಂದರೆ ಚಿತ್ಕಳೆಯು, ಬಿಂದುಯೆಂದರೆ ಚಿದ್ಬಿಂದು, ವಟಾಯೆಂದರೆ ಚಿನ್ನಾದವು, ಮುಖಿಯೆಂಬ ಈ ಚಿನ್ನಾದ ಚಿದ್ಬಿಂದು ಚಿತ್ಕಳೆ ಮುಖ್ಯವಾಗಿರುವಂಥದೆ ಮೂಲಜ್ಞಾನಚಿತ್ತುವೆಂಬ, ಹೀಂಗೆಂದು ಹೇಳುವ ಹೆಂಗೂಸಿನ–ಆಚಿತ್ತಿನಿಂದ ಚಿನ್ನಾದ ಚಿದ್ಬಿಂದು ಚಿತ್ಕಳೆ ಮೂಲಚಿತ್ತವೆಂಬ ಚತುರ್ವಿಧವು ಘಟ್ಟಿಗೊಂಡು ಅಖಂಡಗೋಳಾಕಾರ ತೇಜೋಮೂರ್ತಿಯಪ್ಪ, ಮಹಾಲಿಂಗವು ಪುಟ್ಟಿತ್ತು. ಆ ಮಹಾಲಿಂಗದಿಂದ ಚಿಚ್ಚಕ್ತಿ ಪುಟ್ಟಿತ್ತು. ಆ ಚಿಚ್ಛಕ್ತಿ ಸ್ವರೂಪವಾದ ಶರಣನ, ಕೈಯಲ್ಲಿ–ಸುಚಿತ್ತವೆಂಬ ಹಸ್ತದಲ್ಲಿ, ಜಲಾಕಾರವೆಂಬ ಗಡಿಗೆ ಇದ್ದಿತು–ದೀಕ್ಷಾಗುರುಮೂರ್ತಿಯು ಕ್ರಿಯಾದೀಕ್ಷೆಯಿಂದಂಗದಲ್ಲಿ ಇಷ್ಟಲಿಂಗಸಂಬಂಧವ ಮಾಡಿದನು, ಆ ಗಡಿಗೆಯಲ್ಲಿ–ಲಿಂಗಾಂಗಸಂಬಂಧವನುಳ್ಳ ಶರಣನಂತರಂಗದಲ್ಲಿ, ಚೆನ್ನಬಸವಣ್ಣ ನೀರುತಂದ–ಚೆನ್ನಬಸವಣ್ಣನೆಂಬ ಶಿಕ್ಷಾಗುರುದೇವನು ಮಂತ್ರದೀಕ್ಷೆಯಿಂದ ಮನದಲ್ಲಿ ಪ್ರಾಣಲಿಂಗವ ಸಂಬಂಧವ ಮಾಡಿಕೊಟ್ಟನು. ಮಡಿವಾಳಯ್ಯ–ಮಡಿವಾಳಯ್ಯಗಳೆಂಬ ಜ್ಞಾನಗುರುಮೂರ್ತಿಯು, ಸೈದಾನವತಂದ–ವೇದಾದೀಕ್ಷೆಯಿಂದ ಆತ್ಮಾಂಗದಲ್ಲಿ ಭಾವಲಿಂಗ ಸಂಬಂಧವ ಮಾಡಿಕೊಟ್ಟನು. ಇದಱ–ತ್ರಿವಿಧಾಂಗದಲ್ಲಿ ತ್ರಿವಿಧಲಿಂಗ ಸಂಬಂಧವ ಮಾಡಿಕೊಂಡು ತ್ರಿವಿಧಭಕ್ತಿವಿಡಿದಾಚರಿಸುವಂಥ ಶರಣನ, ಒಲೆಯಡಿಯನುರಹಿ ಕೂಡಾ: ಒಲೆಯೆಂದರೆ ತನುತ್ರಯಂಗಳು, ಆ ತನುತ್ರಯಂಗಳ ಮಧ್ಯಸ್ಥವಾಗಿರುವಂಥದೆ ಹೃದಯೇಂದ್ರೀಯ. ಆ ಹೃದಯೇಂದ್ರಿಯದಲ್ಲಿ ನೆಲೆಸಿರುವ ಜ್ಞಾನವನ್ನು ಪ್ರಭಾವಿಸಿಕೊಡಾ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

II –

1–1 ಲು (ಚ, ಜ)

....

ಕಳಾಬಿಂದುವಟಾಮುಖಿಯೆಂಬ ಹೆಂಗೂಸಿನ ಕೈಯಲು–ನಾದಬಿಂದುಕಳೆಗಳೆಂಬ ತ್ರಿವಿಧವು ಒಂದುಗೂಡಿದ ಪರಾಶಕ್ತಿಯ ನೆನಹೆಂಬ ಹಸ್ತದಲ್ಲಿ ಜಲಾಕಾರವೆಂಬ ಗಡಿಗೆಯಿದ್ದಿತ್ತು–ಆತ್ಮಸ್ವರೂಪೆಂಬ ದೇಹಘಟ್ಟವಿದ್ದಿತ್ತು. ಆ ಗಡಿಗೆಯಲ್ಲಿ ಚೆನ್ನಬಸವಣ್ಣ ನೀರು ತಂದ–ಆ ದೇಹವೆಂಬ ಘಟದಲ್ಲಿ ಚಿಕ್ಕದಣ್ಣಾಯಕರೆಂಬ ಜ್ಞಾನಗುರುಮೂರ್ತಿಯು ಪ್ರಾಣ೧ಲಿಂಗ೧ಸಂಬಂಧವನು ಬೋಧಿಸಿದ. ಮಡಿವಾಳಯ್ಯ ಸೈದಾನವ ತಂದ ಕ್ರಿಯಾಘನ ಮೂರ್ತಿಯು ಸತ್ತೆಂಬ ನಿಜತಂಡುಲಸ್ವರೂಪವಾದ ಇಷ್ಟಲಿಂಗವನು ಸಂಬಂಧವ ಮಾಡಿಕೊಟ್ಟ. ಇದಱ ಒಲೆಯಡಿಯನುರುಹಿ ಕೊಡಾ ಕೂಡಲಸಂಗಮದೇವಾ–ಈ ತ್ರಿವಿಧಾಂಗದಲ್ಲಿ ತ್ರಿವಿಧಲಿಂಗಸಂಬಂಧವಮಾಡಿಕೊಂಡು ಕ್ರಿಯಾಜ್ಞಾನಭಾವಾಚರಣೆವಿಡಿದಾಚರಿಸುವಂಥಾಚರಣೆಯನು ತಿಳಿಹಿ ಕೊಡಾ ಎಲೆ ಲಿಂಗವೆ.

....

೧–೧ x (ತ)

III –

1–1 ಲು (ಟ, ಡ) 2–2 + ಪ್ರಭುವೆ (ಟ, ಡ)

....

ಕಲಾಬಿಂದುವಟಾಮುಖಿಯೆಂಬ-ಚಿನ್ನಾದ ಚಿದ್ಬಿಂದು ಚಿತ್ಕಲಾಸ್ವರೂಪವಾದ, ಹೆಂಗೂಸಿನ ಕೈಯಲು-ಶರಣ ಸತಿಯ ಸುಚಿತ್ತವೆಂಬ ಹಸ್ತದಲ್ಲಿ ಜಲಾಕಾರವೆಂಬ-ಚಿಜ್ಜಲಸ್ವರೂಪವೆಂಬ, ಗಡಿಗೆಯಿದ್ದಿತು-ಚಿದ್ಭಾಂಡಸ್ವರೂಪವಾದಿಷ್ಟಲಿಂಗವು ಗುರೂಪದೇಶದಿಂದಂಗದ ಮೇಲೆ ಸಂಬಂಧವಾಯಿತ್ತು. ಆ ಗಡಿಗೆಯಲ್ಲಿ-ಆ ಚಿದ್ಭಾಂಡಸ್ವರೂಪಾದಿಷ್ಟಲಿಂಗದಲ್ಲಿ, ಚೆನ್ನಬಸವಣ್ಣ-ದೀಕ್ಷಾಗುರುಸ್ವಾಮಿಯು, ನೀರತಂದ-ಜಲಸ್ವರೂಪಾದ ಮನಸ್ಸನು ಲಿಂಗದಲ್ಲಿ ಸಂಯೋಗಿಸಿದನು. ಮಡಿವಾಳಯ್ಯ-ಶಿಕ್ಷಾಗುರುದೇವನು, ಸಯಿದಾನವ ತಂದ ಸಕಲೇಂದ್ರಿಯಂಗಳ ಮುಖದಿಂದೆ ಬಂದ ವಿಷಯಪದಾರ್ಥಗಳನು ಲಿಂಗಮುಖದಲ್ಲಿ ಸಮರ್ಪಿಸಿದನು. ಕೂಡಲಸಂಗಮದೇವಾ-ತ್ರಿಕೂಟಸ್ಥಲಸ್ಥಿತವಾದಂಥ, ಪ್ರಭುವೆ-ಎಲೆ ಜ್ಞಾನಗುರುದೇವನೆ, ಇದಱ ಒಲೆಯಡಿಯನರುಹಿ ಕೊಡಾ-ತಾನು ತನ್ನಜೀವು ಶಿವತ್ತ್ವವೆಂಬ ತ್ರಿಪುಟಿಜ್ಞಾನವನು ಸುಜ್ಞಾನದಿಂದ ಸಮರಸವ ಮಾಡಿ ಪೂರ್ಣಜ್ಞಾನವಾಗಿಸಾ.

IV –

1–1 ಲು (ತ) 2 + ಪ್ರಭುವೆ (ತ)

....

ಶೂನ್ಯವಾದ ಪರಾಶಕ್ತಿಯಿಂದಾದುದು ಶರೀರ. ಆ ದೇಹದಲ್ಲಿ ಪರಜ್ಞಾನಾನಂದವು ಚೆನ್ನಬಸವಣ್ಣನಿಂದ ಆಯಿತ್ತು. ಆ ಜ್ಞಾನವನೊಳಕೊಂಬ ಪರಬ್ರಹ್ಮವು ಮಡಿವಾಳಯ್ಯನಿಂದಾಯಿತ್ತು. ಅಜೀವ ಅಱುಹಿಸಿಕೊಂಬ ಉಭಯವೊಂದಾಗಿನಿಂದ ನಿಲವ ಕೂಡಲಸಂಗಮದೇವಾ ಕೊಡುಯೆಂಬುದೀ ವಚನದರ್ಥ.

V –

2 + ಪ್ರಭುವೆ (ಪ)

....

ಕಳಾಬಿಂದುವಟಾಮುಖಿಯೆಂಬ ಹೆಂಗೂಸಿನ ಕೈಯಲ್ಲಿ-ಚಿತ್ಕಳೆ ಚಿದ್ಬಿಂದು ಚಿನ್ನಾದಸ್ವರೂಪವಾದ ಶರಣಸತಿಯ ಹಸ್ತದಲ್ಲಿ, ಜಲಾಕಾರವೆಂಬ ಚಿಜ್ಜಲಸ್ವರೂಪವೆಂಬ, ಗಡಿಗೆಯಿದ್ದಿತ್ತು-ಇಷ್ಟಲಿಂಗವೆಂಬ ಘಟವು ಗುರೋಪದೇಶದಿಂದೆ ನೆಲೆಸಿತ್ತು. ಆ ಗಡಿಗೆಯಲ್ಲಿ – ಆ ಚಿದ್ಭಾಂಡಸ್ವರೂಪದಿಷ್ಟಲಿಂಗದಲ್ಲಿ, ಚೆನ್ನಬಸವಣ್ಣ-ದೀಕ್ಷಾಗುರುವು, ನೀರತಂದ-ಮನಸ್ಸನು ಲಿಂಗದಲ್ಲಿ ಸಂಬಂಧವ ಮಾಡಿದನು. ಮಡಿವಾಳಯ್ಯ-ಶಿಕ್ಷಾಗುರುವು, ಸಯದಾನವ ತಂದ-ಸಕಲೇಂದ್ರಿಯಂಗಳ ಮುಖದಿಂದೆ ಬಂದ ವಿಷಯ ಪದಾರ್ಥಂಗಳ ಲಿಂಗಮುಖದಲ್ಲಿ ಸಮರ್ಪಿಸಿದನು. ಪ್ರಭುವೇ-ಎಲೆ ಜ್ಞಾನಗುರುವೆ, ಇದರೊಲೆಯಡಿಯನುರುಹಿಕೊಡಾ-ತಾನು ತನ್ನಜೀವು ಶಿವತತ್ತ್ವವೆಂಬ ತ್ರಿಪುಟಿಜ್ಞಾನದಧೋಭಾಗೆಯನು ಜ್ಞಾನಾಗ್ನಿಯಲ್ಲಿ ಸಮರಸಪಾಕವ ಮಾಡಿಕೊಡಾ.

೮೯೨

ದಿಟವ ಮಾಡಿ ಪೂಜಿಸಿದಡೆ ಸಟೆಯ ಮಾಡಿ ಕಳೆವೆ. ಸಟೆಯ ಮಾಡಿ ಪೂಜಿಸಿದಡೆ ದಿಟವ ಮಾಡಿ ಕಳೆವೆ. ಏನೆಂಬೆ ಎಂತೆಂಬೆ? ಸುಖಕ್ಕೆ ತುಂಬಿದ ದೀವಿಗೆ ಮನೆಯೆಲ್ಲವ ಸುಡುವಂತೆ ಅನು ಮಾಡಿದ ಭಕ್ತಿ ಎನಗಿಂತಾಗಿತ್ತು ಕೂಡಲಸಂಗಮದೇವಾ.

I –

ದಿಟವ ಮಾಡಿ ಪೂಜಿಸಿದಡೆ–ದೇಹಕರಣೇಂದ್ರಿಯವಿಷಯಪ್ರಪಂಚು ನಿತ್ಯವೆಂದಾರಾಧಿಸಿದರೆ, ಸಟೆಯ ಮಾಡಿ–ಇದು ನಿಶ್ಚಯವಾದ ಪೂಜೆಯಲ್ಲವೆಂದು ಕೈಕೊಳ್ಳದೆ. ಕಳವೆ–ಬೇರ್ಪಡಿಸಿಬಿಡುವೆ. ಸಟೆಯ ಮಾಡಿ–ದೇಹಕರಣೇಂದ್ರಿಯವಿಷಯಪ್ರಪಂಚು ಅನಿತ್ಯವೆಂದು ಸಮರಸಭಾವದಿಂದ, ಪೂಜಿಸಿದಡೆ–ಆರಾಧಿಸಿದರೆದಿಟವ ಮಾಡಿ ಕಳೆವೆ–ಇದು ನಿಶ್ಚಯವಾದ ಪೂಜೆಯೆಂದು ಕೈಗೊಂಡು ಅನಿಷ್ಟಪಂಚಕವೆಲ್ಲ ನಷ್ಟವ ಮಾಡಿಬಿಟ್ಟು ಇಷ್ಟಾರ್ಥಸಿದ್ಧಿಯನು ಕರುಣಿಸಿಕೊಡುವೆ.

ಏನೆಂಬೆ–ದೇಹಕರಣೇಂದ್ರಿಯ ವಿಷಯ ಪ್ರಪಂಚು ನಿತ್ಯವೆಂದು ಪೂಜಿಸಿದರೆ ಅದು ಭಿನ್ನಪೂಜೆಯೆಂದು ಮಿಥ್ಯವ ಮಾಡಿಬಿಡುವಂಥದನ್ನು ಏನೆಂದು ಹೇಳಲಿ, ಎಂತೆಂಬೆ–ದೇಹಕರಣೇಂದ್ರಿಯ ವಿಷಯಪ್ರಪಂಚು ಮಿಥ್ಯವೆಂದು ಸಮರಸಭಾವದಿಂದ ಪೂಜಿಸಿದರೆ ಇದು ನಿಶ್ಚಯವಾದ ಪೂಜೆಯೆಂದು ಅನಿಷ್ಟಪಂಚಕಂಗಳನು ನಷ್ಟವ ಮಾಡಿ ಇಷ್ಟಾರ್ಥಸಿದ್ಧಿಯನು ಕರುಣಿಸಿಕೊಡುವಂಥದನು ಏನೆಂದು ಹೇಳಲಿ, ಸುಖಕ್ಕೆ ತುಂಬಿದ ದೀವಿಗೆ: ಸುಖಕ್ಕೆ ರತಿಕೂಟದ ಪರಿಣಾಮಕ್ಕೆ, ತುಂಬಿದ–ಮುಟ್ಟಿಸಿದ, ದೀವಿಗೆ–ದೀಪವು, ಮನೆಯೆಲ್ಲವ ಸುಡುವಂತೆ–ಪರಿದಿಖಾನಿಗೆ ಹತ್ತಿಕೊಂಡು ಗೃಹವೆಲ್ಲವನು ದಹಿಸಿಬಿಟ್ಟ ಹಾಂಗೆ, ಆನು ಮಾಡಿದ–ನಾನು ಅನುಗೆಯ್ದ ಭಕ್ತಿ–ಭಿನ್ನಭಕ್ತಿಯು ಎನಗೆ–ನನಗೆ, ಇಂತಾಯಿತ್ತು–ಈ ರೀತಿಯಾಯಿತ್ತು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

೮೯೩

ಎಂಬತ್ತೆಂಟು ಪವಾಡವ ಮೆಱೆದು ಹಗರಣದ ಚೋಹದಂತಾಯಿತ್ತೆನ್ನ ಭಕ್ತಿ! ತನುವಿನೊಳಗೆ ಮನ ಸಿಲುಕದೆ ಮನದೊಳಗೆ ತನು ಸಿಲುಕದೆ ತನು[1]ವೆಲ್ಲ[1] ಅಲ್ಲಮನಲ್ಲಿ ಸಿಲುಕಿತ್ತು. ಮನ[1]ವೆಲ್ಲ[1] ಚೆನ್ನಬಸವಣ್ಣನಲ್ಲಿ ಸಿಲುಕಿತ್ತು. ನಾನೇತಱಲ್ಲಿ ನೆನೆವೆನಯ್ಯಾ, ಕೂಡಲಸಂಗಮದೇವಾ?

I –

ಎಂಬತ್ತೆಂಟು ಪವಾಡವ ಮೆಱೆದು–ನಾನೇನಾದರೂ ತನು ಬಳಲಿ ಮನ ಬಳಲಿ ಸತ್ಯಶುದ್ಧಕಾಯಕವ ತಂದು ಜಂಗಮಭಕ್ತಿ ಮಾಡಿದೆನೆ? ಇಲ್ಲವು. ದಿನ ಒಂದಕ್ಕೆ ಎಂಬತ್ತೆಂಟು ಪವಾಡಂಗಳನು ಮೆರೆವುತ್ತ ಒಂದೊಂದು ಪವಾಡಕ್ಕೆ ಹನ್ನೆರಡುಸಾವಿರ ವರಹ ಪಾದಗಾಣಿಕೆಯನ್ನು ತೆಗೆದುಕೊಂಬುತ್ತ ಅದರಿಂದ ಬಂದಂಥ ದ್ರವ್ಯವನ್ನು ಲಕ್ಷದ ಮೇಲೆ ತೊಂಬತ್ತಾರುಸಾವಿರ ಜಂಗಮಭಕ್ತಿಯ ಮಾಡುವಂಥದು, ಹಗರಣದ ಚೋಹದಂತೆ–ಬಹುರೂಪಗಾರರು ಸಭಾಮಧ್ಯದಲ್ಲಿ

ಆಟವನ್ನು ಆಡುತ್ತಿದ್ದ ಹಾಂಗೆ ಆ ಆಟವನ್ನು ಮರೆಸಿ ಮತ್ತೊಂದಾಟವನ್ನು ತಂದು ನಿಂದಿರಿಸಿದಲ್ಲಿ ಸಮಸ್ತಾತ್ಮರುಗಳು ಹೇಂಗೆ ಗಹಗಹಿಸುತ್ತಿಹರೋ ಹಾಂಗೆ, ಆಯಿತ್ತು-ಆ ರೀತಿಯಾಯಿತ್ತು, ಎನ್ನ ಭಕ್ತಿ-ನಾ ಮಾಡುವಂಥ ಜಂಗಮಭಕ್ತಿಯು.

ತನುವಿನೊಳಗೆ-ತನುಪ್ರಪಂಚಿನಲ್ಲಿ, ಮನ-ಮನೋಪ್ರಪಂಚು, ಸಿಲುಕದೆ-ವಶಗತವಾಗದೆ, ಮನದೊಳಗೆ-ಮನೋಪ್ರಪಂಚಿನಲ್ಲಿ, ತನು-ತನು ಪ್ರಪಂಚು, ಸಿಲುಕದೆ-ವಶಗತವಾಗದೆ, ತನುವೆಲ್ಲ-ಅಂಗವೆಲ್ಲವು, ಅಲ್ಲಮನಲ್ಲಿ-ಅಲ್ಲಮಾಪ್ರಭುಸ್ವಾಮಿಗಳ ಸೇವಾಸತ್ಕಾರದಲ್ಲಿ,. ಸಿಲುಕಿತ್ತು-ವಶಗತವಾಯಿತ್ತು. ಮನವೆಲ್ಲ-ಮನಸ್ಸೆಲ್ಲ, ಚೆನ್ನಬಸವಣ್ಣನಲ್ಲಿ-ಚೆನ್ನಬಸವೇಶ್ವರ ಸ್ವಾಮಿಗಳ ಶಿವಾನುಭಾವದಲ್ಲಿ, ಸಿಲುಕಿತ್ತು-ವಶಗತವಾಯಿತ್ತು. ನಾನೇತಱಲ್ಲಿ ನೆನೆವೆನಯ್ಯ-ನಾನೇತರಲ್ಲಿ ಸ್ತೋತ್ರವ ಮಾಡಲಯ್ಯ ಎಂಬುದರ್ಥ.

● ತನುವೆಲ್ಲ-ಅಂಗವೆಲ್ಲವು, ಅಲ್ಲಮನಲ್ಲಿ-ಅಲ್ಲಮಾಪ್ರಭುಸ್ವಾಮಿಗಳೇ ತಾನಾದ ಇಷ್ಟಲಿಂಗದಲ್ಲಿ, ಸಿಲುಕಿತ್ತು-ವಶಗತವಾಯಿತ್ತು. ಮನವೆಲ್ಲ-ಮನಸ್ಸೆಲ್ಲವೂ, ಚೆನ್ನಬಸವಣ್ಣನಲ್ಲಿ-ಚೆನ್ನಬಸವೇಶ್ವರ ಸ್ವಾಮಿಗಳೇ ತಾನಾದ ಪ್ರಾಣಲಿಂಗದಲ್ಲಿ ಸಿಲುಕಿತ್ತು-ವಶಗತವಾಯಿತ್ತು. ನಾನೇತಱಲ್ಲಿ ನೆನೆವೆನಯ್ಯಾ-ನಾನೇತರಲ್ಲಿ ಲಿಂಗಧ್ಯಾನ ಲಿಂಗಸ್ಮರಣೆಯ ಮಾಡುವೆನಯ್ಯಾ, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

III- -

1-1 x (ಱ, ಡ)

....

ತನು-ಎನ್ನ ತನುಪದಾರ್ಥವು, ಅಲ್ಲಮನಲ್ಲಿ ಸಿಲುಕಿತ್ತು-ಸುಜ್ಞಾನಜಂಗಮಭಕ್ತಿಯಲ್ಲಿ ಸಂಬಂಧವಾಯಿತ್ತು. ಮನ-ಮನಸ್ಸು, ಚೆನ್ನಬಸವಣ್ಣನಲ್ಲಿ ಸಿಲುಕಿತ್ತು-ಲಿಂಗಭಕ್ತಿಯಲ್ಲಿ ಸಂಬಂಧವಾಯಿತ್ತು.

V -

ತನುವಿನೊಳಗೆ ಮನ ಸಿಲುಕದೆ-ಶಿವಮೂರ್ತಿಯಾದ ಇಷ್ಟಲಿಂಗದಲ್ಲಿ ಮನಸ್ಸು ಪ್ರತಿಬದ್ಧವಾಗದೆ, ಮನದೊಳಗೆ-ಎನ್ನ ಮನಸ್ಸಿನಲ್ಲಿ ತನುವೆಲ್ಲ ಸಿಲುಕಿತ್ತು-ವಿಸ್ತಾರವಾದಿಷ್ಟಲಿಂಗಸಂಬಂಧವಾಯಿತ್ತು. ಮತ್ತಂ ತನುವೆಲ್ಲ ಸಿಲುಕಿತ್ತು. ಪ್ರಭುಸ್ವಾಮಿಯಲ್ಲಿ-ಪ್ರಭುವೆಂಬ ಸುಜ್ಞಾನಜಂಗಮದಲ್ಲಿ ಸಂಬಂಧವಾಯಿತ್ತು. ಮನ ಚೆನ್ನಬಸವಣ್ಣನಲ್ಲಿ ಸಿಲುಕಿತ್ತು-ಮನಸ್ಸು ಲಿಂಗದಲ್ಲಿ ಸಂಬಂಧವಾಯಿತ್ತು.

೮೯೪

ಭಕ್ತನೆನಿಸುವೆನಯ್ಯ ಮೆಲ್ಲಮೆಲ್ಲನೆ, ಯುಕ್ತನೆನಿಸುವೆನಯ್ಯ ಮೆಲ್ಲಮೆಲ್ಲನೆ, ಪ್ರಸಾದಿಯೆನಿಸುವೆನಯ್ಯ ಮೆಲ್ಲಮೆಲ್ಲನೆ, ಪ್ರಾಣಲಿಂಗಿಯೆಂದೆನಿಸುವೆನಯ್ಯ ಮೆಲ್ಲಮೆಲ್ಲನೆ, ಸಾರಿ ಶರಣನೆನಿಸುವೆನಯ್ಯ ಮೆಲ್ಲಮೆಲ್ಲನೆ, ಎಡಹುಗುಳಿಗಳ ದಾಂಟಿ ಬರಬರ ಲಿಂಗೈಕ್ಯನೆನಿಸುವೆನಯ್ಯ, ಕೂಡಲಸಂಗಮದೇವಾ ನಿಮ್ಮಿಂದಧಿಕನೆನಿಸುವೆನಯ್ಯ.

I –

ಮೆಲ್ಲಮೆಲ್ಲನೆ–ಜ್ಞಾನಕ್ರೀಯವಿಡಿದಾಚರಿಸುತ್ತಿರ್ದ ಹಾಂಗೆ, ಭಕ್ತನೆನಿಸುವೆನಯ್ಯ–ತ್ರಿವಿಧಪದಾರ್ಥವನ್ನು ಹಿಡಿದು ಭಕ್ತಿಗೃಹವನ್ನು ಕಟ್ಟಿ ಭಕ್ತಿ ಮಾಡುವಂಥ ಭಕ್ತಸ್ಥಲದಾಚರಣೆವುಳ್ಳಾತನೆಂದು ಹೇಳಿಸುವೆನಯ್ಯ, ಮೆಲ್ಲಮೆಲ್ಲನೆ–ಭಕ್ತಸ್ಥಲವಿಡಿದಾಚರಣೆವಿಡಿದಾಚರಿಸುತಿರ್ದ ಹಾಂಗೆ, ಯುಕ್ತನೆನಿಸುವೆನಯ್ಯ–ಅಷ್ಟಾವರಣವನ್ನೇ ಅಂಗವ ಮಾಡಿಕೊಂಡು ಪಂಚಾಚಾರವನ್ನೇ ಪ್ರಾಣವ ಮಾಡಿಕೊಂಡು ಏಕಲಿಂಗನಿಷ್ಠಾಪರನಾಗಿ ಆಚರಿಸುವಂಥ ಮಾಹೇಶ್ವರ ಸ್ಥಲದಾಚರಣೆವುಳ್ಳಾತನೆಂದು ಹೇಳಿಸುವೆನಯ್ಯ.

ಮೆಲ್ಲಮೆಲ್ಲನೆ ಮಾಹೇಶ್ವರಸ್ಥಲವಿಡಿದಾಚರಿಸುತ್ತಿರ್ದ ಹಾಂಗೆ, ಪ್ರಸಾದಿಯೆನಿಸುವೆನಯ್ಯ–ತನುತ್ರಯಂಗಳಲ್ಲಿ ಬರಲ್ಪಟ್ಟ ರೂಪುರುಚಿ ತೃಪ್ತಿಗಳನು ಇಷ್ಟಪ್ರಾಣಭಾವಲಿಂಗಗಳಿಗೆ ಸಮರ್ಪಿಸಿ ಆ ತ್ರಿವಿಧಲಿಂಗದ ಮುಖದಿಂದ ಉಳುಮೆಯಾಗಿ ಬರಲ್ಪಟ್ಟ ಶುದ್ಧಸಿದ್ಧಪ್ರಸಾದವನ್ನು ಪಡೆದನುಭವಿಸುವಂಥ ಪ್ರಸಾದಿಸ್ಥಲದಾಚರಣೆಯುಳ್ಳಾತನೆಂದು ಹೇಳಿಸುವೆನಯ್ಯ, ಮೆಲ್ಲಮೆಲ್ಲನೆ–ಪ್ರಸಾದಿಸ್ಥಲವಿಡಿದಾಚರಿಸುತ್ತಿದ್ದ ಹಾಂಗೆ. ಪ್ರಾಣಲಿಂಗಿಯೆಂದೆನಿಸುವೆನಯ್ಯ–ಅಂಗಪ್ರಾಣಂಗಳಲ್ಲಿ ಇಷ್ಟಪ್ರಾಣಲಿಂಗವ ಸಂಬಂಧವ ಮಾಡಿಕೊಂಡು ಅವಿರಳಜ್ಞಾನಕ್ರೀಯವಿಡಿದಾಚರಿಸುವಂಥ ಪ್ರಾಣಲಿಂಗಿಸ್ಥಲದಾಚರಣೆಯುಳ್ಳಾತನೆಂದು ಹೇಳಿಸುವೆನಯ್ಯ.

ಮೆಲ್ಲಮೆಲ್ಲನೆ–ಪ್ರಾಣಲಿಂಗಿಸ್ಥಲವಿಡಿದಾಚರಿಸುತ್ತಿರ್ದ ಹಾಂಗೆ, ಆಚರಿಸುತ್ತಿದ್ದ ಹಾಂಗೆ, ಸಾರಿ–ಹೊಂದಿಗೆ, ಶರಣನೆನಿಸುವೆನಯ್ಯ–ಶರಣನೇ ಸತಿಯಾಗಿ ಲಿಂಗವೇ ಪತಿಯಾಗಿ ಶರಣಸತಿ ಲಿಂಗಪತಿತ್ವವಿಡಿದಾಚರಿಸುವಂಥ ಶರಣಸ್ಥಲದಾಚರಣೆಯುಳ್ಳಾತನೆಂದು ಹೇಳಿಸುವೆನಯ್ಯ. ಮೆಲ್ಲಮೆಲ್ಲನೆ–ಶರಣಸ್ಥಲವಿಡಿದಾಚರಿಸುತ್ತಿದ್ದ ಹಾಂಗೆ, ಎಡಹುಗುಳಿಗಳ ದಾಂಟಿ–ಒಂದೊಂದು ಸ್ಥಲವನ್ನೇ ಅಂಗವ ಮಾಡಿಕೊಂಡಾಚರಿಸಿ, ಬರಬರ–ಭಕ್ತಿಯ ಮಾಡುತ್ತಿದ್ದ ಹಾಂಗೆ, ಲಿಂಗೈಕ್ಯನೆನಿಸುವೆನಯ್ಯ–ಶಿಖಿಕರ್ಪೂರಸಂಯೋಗವಾದ ಹಾಂಗೆ ಮಹಾಲಿಂಗದಲ್ಲಿ ಕೂಡಲ್ಪಟ್ಟ ಐಕ್ಯಸ್ಥಲದಾಚರಣೆಯುಳ್ಳಾತನೆಂದು ಹೇಳಿಸುವೆನಯ್ಯ. ಮೆಲ್ಲಮೆಲ್ಲನೆ–ಐಕ್ಯಸ್ಥಲವಿಡಿದಾಚರಿಸುತಿದ್ದ ಹಾಂಗೆ, ಆಚರಿಸುತಿದ್ದ ಹಾಂಗೆ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮಿಂದ–ಸ್ವಾಮಿಗಳಿಂದ ಅಧಿಕನೆನಿಸುವೆನಯ್ಯ–ಶ್ರೇಷ್ಠವೆಂದು ಹೇಳಿಸುವೆನಯ್ಯ.

III– –

ಎಡಹುಗುಳಿಗಳ–ಇಂದ್ರಿಯವಿಷಯಂಗಳೆಂಬ ವಿಘ್ನಕಂಟಕಂಗಳನು, ದಾಂಟಿ–ಲಿಂಗಸಂಬಂಧದಿಂದೆ ನಿವೃತ್ತಿಯ ಮಾಡಿ, ಬರಬರ–ಕ್ರಿಯಾಜ್ಞಾನವಿಡಿದಾಚರಿಸುತ್ತಿರಲಾಗಿ, ಕೂಡಲಸಂಗಮದೇವ–ಎಲೆ ಪರಶಿವಲಿಂಗವೆ, ನಿಮ್ಮಿಂದಧಿಕ–ಲಿಂಗದಿಂದೆ ಶ್ರೇಷ್ಠರನು, ಗ್ರಂಥ: ಯದ್ಯಪಸ್ಯೇತ್ರಿಕಾಲಜ್ಞಃ ತ್ರೈಲೋಕ್ಯಾಕರ್ಷಣ ಕ್ಷಮಃ ! ತಥಾಪಿ ಲೌಕಿಕಾಚಾರಂ ! ಮನಸಾಪಿ ನ ಲಂಘಯೇತ್ ॥

ಯತ್–ಎಂಥಾತನಾಯಿತ್ತಾದೊಡೆಯೂ, ತ್ರಿಕಾಲಜ್ಞಃ–ಭೂತಭವಿಷ್ಯದ್ವರ್ತಮಾನಕಾಲಗಳನು ಬಲ್ಲಂಥಾತನು, ಅಪಿ–ಆದೊಡೆಯೂ, ತ್ರೈಲೋಕ್ಯ–ಮೂರುಲೋಕಗಳನು, ಆಕರ್ಷಣ–

ಬರಸೆಳೆಕೊಂಬಲ್ಲಿ, ಕ್ಷಮಃ-ಸಮರ್ಥನು, ಸ್ಯಾತ್-ಆದಾತನು, ತಥಾಪಿ-ಆದೊಡೆಯೂ, ಲೌಕಿಕಾಚಾರಂ-ಲೋಕಾಚಾರದ ನಡವಳಿಯನು, ಮನಸಾಪಿ-ಮನಸ್ಸಿನಿಂದಾದೊಡೆಯು, ನ ಲಂಘಯೇತ್-ಮೀಱಲಾಗದು.

೮೯೫

"ಬಸವ ಬಾರಯ್ಯ ಮರ್ತ್ಯಲೋಕದೊಳಗೆ ಭಕ್ತರುಂಟೆ? ಹೇಳಯ್ಯ" ಮತ್ತಾರೂ ಇಲ್ಲಯ್ಯ, ಮತ್ತಾರೂ ಇಲ್ಲಯ್ಯ, ನಾನೊಬ್ಬನೆ ಭಕ್ತನು, ಮರ್ತ್ಯಲೋಕದೊಳಗಣ ಭಕ್ತರೆಲ್ಲರೂ ಜಂಗಮಲಿಂಗ ನೀನೆ ಅಯ್ಯ; ಕೂಡಲಸಂಗಮದೇವಾ.

ಬಸವ-ಎಲೆ ಸಂಗನಸಬವೇಶ್ವರನೇ, ಬಾರಯ್ಯ-ಇತ್ತ ಬಾರಯ್ಯ, ಮರ್ತ್ಯಲೋಕದೊಳಗೆ-ಭೂಲೋಕದೊಳಗೆ, ಭಕ್ತರುಂಟೆ?-ಶಿವಭಕ್ತರುಂಟೆ? ಹೇಳಯ್ಯ-ನಿರೂಪಿಸಯ್ಯ, ಮತ್ತಾರೂ ಇಲ್ಲಯ್ಯ-ಅತಃಪರ ಮತ್ತೊಬ್ಬರುಂಟಾಗಿಲ್ಲಯ್ಯಾ, ನಾನೊಬ್ಬನೇ ಭಕ್ತನು-ನಾನೊಬ್ಬನೇ ಶಿವಭಕ್ತನು. ಮರ್ತ್ಯಲೋಕದೊಳಗಣ-ಭೂಲೋಕದೊಳಗಣ, ಭಕ್ತರೆಲ್ಲರೂ-ಶಿವಭಕ್ತರೆಲ್ಲರೂ, ಜಂಗಮಲಿಂಗ ನೀವೆ ಅಯ್ಯ-ಅವರಂಗದಲ್ಲಿ ಇಷ್ಟಲಿಂಗವಾಗಿ ನೆಲೆಗೊಂಡಿರುವಂಥ ಚರಲಿಂಗವು ನೀವೇ ಅಯ್ಯ, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

ಶರಣನ ಮಾಹೇಶ್ವರಸ್ಥಲ

ಶರಣನ ಮಾಹೇಶ್ವರಸ್ಥಲ-ಶರಣಸ್ಥಲದೊಳಗಣ ಮಾಹೇಶ್ವರಸ್ಥಲದಾಚರಣೆಯನ್ನು ನಿರೂಪಿಸುತ್ತಿಹರು.

೮೯೬

ಪರಮಪ್ರಭುವೇ ನೀ ಮುನಿದೆನ್ನ ಮರ್ತ್ಯಲೋಕದೊಳಗಿರಿಸಿದಡೆ ಆನು ಸೈರಿಸಿದೆನಯ್ಯ. ಕುಲಮದ ಛಲಮದ ಇದೇನಯ್ಯ? ದರುಶನ ಭ್ರಾಂತಿ ಇದೇನಯ್ಯ? ಕ್ರಿಯಾಕರ್ಮಸೂತಕ ಇದೇನಯ್ಯ? ಗ್ರಂಥ : [1][ಯದ್ಯಪಿ ಸ್ಯಾತ್ ತ್ರಿಕಾಲಜ್ಞಃ[1] ತ್ರೈಲೋಕ್ಯಾಕರ್ಷಣ ಕ್ಷಮಃ ॥ ತಥಾಪಿ ಲೌಕಿಕಾಚಾರಂ । ಮನಸಾಪಿ ನ ಲಂಘಯೇತ್ ॥][1] ಇಂತೆಂಬುದ ಮೀಱಿದೆನಾಗಿ ಲಿಂಗಯ್ಯ ನಿಮ್ಮ ನಂಬಿದೆನಯ್ಯ. ಇನ್ನು ಕಲಿಯುಗದಲ್ಲಿ ಬಳಸಿದಡೆ ಕೂಡಲಸಂಗಮದೇವಾ ನಿಮ್ಮ ರಾಣಿವಾಸದಾಣೆ.

....

1–1 ಯದ್ಯ ಪಶ್ಯ ಃ ತ್ರಿಕಾಲಗ್ನ ಃ । ತ್ರೈಲೋಕ್ಯಂಕರ್ಷಣಾಕ್ರಮಃ ತಥಾಪಿ ಲೌಕಿಕಾಚಾರಂ ಮನಸಾಪಿ ನ ಲಂಘಯೇತ್ ॥ (ಕ, ಗ)

I– –

ಪರಮಪ್ರಭುವೇ–ಸ್ವತಂತ್ರಕರ್ತೃವಾದ ಅಲ್ಲಮಪ್ರಭುಸ್ವಾಮಿಗಳೆ, ನೀ ಮುನಿದು–ನೀ ಕೋಪಿಸಿ, ಎನ್ನ–ಸಂಗನಬಸವೇಶ್ವರನ, ಮರ್ತ್ಯಲೋಕದೊಳಗೆ–ಭೂಲೋಕದೊಳಗೆ, ಇರಿಸಿದಡೆ–ದೇಹಸಂಬಂಧಿಯಾಗಿ ಹುಟ್ಟಿಸಿ ಸಕಲಸಂಸಾರಪ್ರಪಂಚಿನಲ್ಲಿ ಮಡಗಿದರೆ, ಆನು ಸೈರಿಸಿದೆನಯ್ಯ?: ಆನು–ಸಂಗನಬಸವೇಶ್ವರನು, ಸೈರಿಸಿದೆನಯ್ಯ–ಅದನ್ನು ತರಹರಮಾಡಿಕೊಂಡು ಭಕ್ತಿಯ ಮಾಡಿದೆನಯ್ಯ. ಕುಲಮದ–ಎನ್ನ ಕುಲ ಹೆಚ್ಚು ಜಾತಿ ಹೆಚ್ಚೆಂದು ಕೇಳಿಕೊಂಬುವಂಥದೇ ಕುಲಮದವು, ಛಲಮದವು–ಹಿಡಿದಂಥ ಪಂಥಕ್ಕೆ ಬಿಡದೆ ಹೋರಾಡುವಂಥದೆ ಛಲಗ್ರಾಹಕತ್ವವು, ಇದೇನಯ್ಯ–ಇದೇನು ಕಾರಣಕ್ಕೆ ಉಂಟಾಯಿತಯ್ಯ, ದರುಶನ–ಷಡದರುಶನಗಳ, ಭ್ರಾಂತಿ–ಜೀವಭಾವದ ಭ್ರಮಣೆಯು, ಇದೇನಯ್ಯ–ಇದೇನು ಕಾರಣಕ್ಕೆ ಉಂಟಾಯಿತಯ್ಯ, ಕ್ರಿಯಾಭಿನ್ನಕ್ರಿಯೆಯು, ಕರ್ಮ–ಷಟ್ಕರ್ಮಂಗಳೊಡನೆ ಕೂಡಿದ, ಸೂತಕ–ತನುವಿನ ಪಂಚಸೂತಕವು, ಇದೇನಯ್ಯ–ಇದೇನು ಕಾರಣಕ್ಕೆ ಉಂಟಾಯಿತಯ್ಯ,

ಗ್ರಂಥ–ಗುರುವಾಕ್ಯಕ್ಕೆ ಸದೃಶವಾಗಿ ಹರವಾಕ್ಯವ ನಿರೂಪಿಸುತ್ತಿಹರು, ಯದ್ಯ ಪಸ್ಯಃ ತ್ರಿಕಾಲಗ್ನಃ ಯಸ್ಯಃ–ಆವಾತನು, ತ್ರಿಕಾಲ–ಭೂತಭವಿಷದ್ವರ್ತಮಾನವೆಂಬ ತ್ರಿಕಾಲಂಗಳನು, ಜ್ಞಾನ–ಬಲ್ಲಾತನು, ಯದ್ಯಪಿ–ಎತ್ತಲಾನು, ತ್ರೈಲೋಕ್ಯಕರ್ಷಣಾಕ್ಷಮಃ ತ್ರೈಲೋಕ್ಯ–ಸ್ವರ್ಗಮರ್ತ್ಯಪಾತಾಳವೆಂಬ ಮೂರು ಲೋಕಂಗಳನು, ಆಕರ್ಷಣ–ಸೆಳೆವಲ್ಲಿ ಕ್ಷಮಃ–ಸಮರ್ಥನು, ತಥಾಪಿ ಲೌಕಿಕಾಚಾರಂ: ತಥಾಪಿ –ಹಾಂಗಾಯಿತ್ತಾದರೂ, ಲೌಕಿಕಾಚಾರಂ–ಶ್ರುತಿಚೋದ್ಯಮಾದ ವಿಪ್ರಕರ್ಮವನ್ನು ಮನಸಾಪಿ ನ ಲಂಘಯೇತ್ : ಮನಸಾಪಿ–ಮನಸ್ಸಿನಿಂದೆ, ನ ಲಂಘಯೇತ್–ದಾಂಟಲಾಗದು. ಇಂತೆಂಬುದ–ಹೀಗೆಂದು ಹೇಳುವಂಥ ಈಶ್ವರನ ವಾಕ್ಯವನ್ನು, ಮೀಜೀದೆನಾಗಿ–ಅತಿಕ್ರಮಿಸಿದೆನಾಗಿ, ಲಿಂಗಯ್ಯ–ಎಲೆ ಪರಶಿವಲಿಂಗವೆ, ನಿಮ್ಮ ಸ್ವಾಮಿಗಳನ್ನು ನಂಬಿದೆನಯ್ಯ–ವಿಶ್ವಾಸಿಸಿ ಲಿಂಗಪೂಜೆ ಜಂಗಮದಾಸೋಹವನ್ನು ಮಾಡಿದೆನಯ್ಯ.

ಇನ್ನು ಕಲಿಯುಗದಲ್ಲಿ–ಇನ್ನು ಮರ್ತ್ಯಲೋಕದಲ್ಲಿ ಬಳಸಿದಡೆ, ದೇಹಸಂಬಂಧಿಯಾಗಿ ಹುಟ್ಟಿ ಸಕಲಪ್ರಪಂಚಿನೊಳಗೆ ಕೂಡಿ ಚರಿಸಿದರೆ, ಕೂಡಲ ಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ ರಾಣಿವಾಸದಾಣೆ–ನಿಮ್ಮ ಪಾರ್ವತೀದೇವಿಯರ ಮೇಲಣ ಪ್ರತಿಜ್ಞೆಯು.

೮೯೭

ತನುಮನಧನವೆಂಬ ಮೂರು ಕನ್ನ[1]ಡಿ[1] ನೋಡಯ್ಯ. ಎನ್ನದೂ ಅಲ್ಲ ನಿನ್ನದೂ ಅಲ್ಲ. ಬಚೆಯ ಭ್ರಮೆಯ ಮಾತು. ಆ ಭ್ರಮೆಯೊಳಗಾಗದೆ ನಿಮ್ಮ ಚರಣವ ಬಿಡೆನು, ಕೂಡಲಸಂಗಮದೇವಾ.

I –

ತನುಮನಧನವೆಂಬ–ತನುಮನಧನವೆಂದು ಹೇಳಿಕೊಂಬುವ, ಮೂರು ಕನ್ನಡಿ ನೋಡಯ್ಯ: ಮೂರು–ತ್ರಿವಿಧವು, ಕನ್ನಡಿನೋಡಯ್ಯ–ದರ್ಪಣದೋಪಾದಿಯಲ್ಲಿ ತೆರೆಮರೆಯಾಗಿರ್ಪುವು ಕಂಡಯ್ಯ, ಎನ್ನದೂ ಅಲ್ಲ ಎನ್ನ ಸಂಬಂಧವಾದುದಲ್ಲವು, ನಿನ್ನದೂ ಅಲ್ಲ–ನಿನ್ನ ಸಂಬಂಧವಾದುದಲ್ಲವು, ಬಜೆಯ–ಮಿಥ್ಯಾಸ್ವರೂಪವಾದ, ಭ್ರಮೆಯ–ಭ್ರಾಂತಿನ, ಮಾತು–ಪ್ರಸಂಗವು, ಆಭ್ರಮೆಯೊಳಗಾಗದೆ–ಆ ಜೀವ ಭಾವದ ಭ್ರಮೆಗೆ ವಶಗತವಾಗದೆ, ನಿಮ್ಮ ಚರಣವ–ನಿಮ್ಮ ಕಾಂತಿವೆತ್ತ ಪದಕಮಲಂಗಳ ಭಕ್ತಿಯನ್ನು, ಬಿಡೆನು–ಬಿಟ್ಟುಕೊಡೆನು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

III –

1–1 ಡ (ಟ, ಡ)

....

ತನುಮನಧನವೆಂಬ–ಅರ್ಥಪ್ರಾಣಾಭಿಮಾವೆಂಬಂಥವು, ಕನ್ನಡ ನೋಡಯ್ಯಾ–ಕಪಟವು ಕಂಡಯ್ಯ, ಆ ಭ್ರಮೆಗೊಳಗಾಳದೆ ಆ ತನುಮನಧನಂಗಳ ಭ್ರಾಂತಿಗೆ ವಶಗತವಾಗೆನು.

V –

1–1 ಡ (ಪ)

....

ತನುಮನಧನವೆಂಬ–ತನುಮನಧನವೆಂಬಂಥ ಕನ್ನಡ ನೋಡಯ್ಯ, ಕಪಟವು ಕಂಡಯ್ಯ.

೪೯೮

ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯನು, ಮೆಲ್ಲ ಮೆಲ್ಲನೆ ಆದೆಹೆನೆಂಬನ್ನಬರ ನಾನೇನು ವಜ್ರದೇಹಿಯೆ? ನಾನೇನು ಅಮೃತವ ಸೇವಿಸಿದೆನೆ? ನಾನೇನು ಮಱುಜೀವಣಿಯ ಕೊಂಡೆನೇ? ನುಡಿಯೊಳಗೆ ಷಟುಸ್ಥಲ ಬಂದು ಎನ್ನಮನವನಿಂಬುಗೊಳ್ಳದಿದ್ದರೆ ಸುಡುವೆನೀತನುವ ಕೂಡಲಸಂಗಮದೇವಾ.

I –

ಮೆಲ್ಲ ಮೆಲ್ಲನೆ ಜ್ಞಾನಕ್ರೀಯವಿಡಿದಾಚರಿಸುತ್ತಿದ್ದ ಹಾಂಗೆ, ಭಕ್ತ–ತ್ರಿವಿಧಪದಾರ್ಥವನ್ನು ಹಿಡಿದು ಭಕ್ತಿಗೃಹವನ್ನು ಕಟ್ಟಿ ಗುರುಲಿಂಗಜಂಗಮಕ್ಕೆ ತನುಮನಧನಂಗಳನು ಕೊಟ್ಟು ಭಕ್ತಿಯ ಮಾಡುವಂಥ ಭಕ್ತಸ್ಥಲದಾಚರಣೆಯುಳ್ಳಾತನು, ಮೆಲ್ಲ ಮೆಲ್ಲನೆ ಭಕ್ತಿಸತ್ಕ್ರೀಯಾಚಾರವಿಡಿದು ಆಚರಿಸುತ್ತಿದ್ದ ಸಾಂಗೆ ಆಚರಿಸುತ್ತಿದ್ದ ಹಾಂಗೆ, ಮಾಹೇಶ್ವರ–ಅಷ್ಟಾವರಣವನ್ನೇ ಅಂಗವ ಮಾಡಿಕೊಂಡು ಪಂಚಾಚಾರವನ್ನೇ ಪ್ರಾಣವ ಮಾಡಿಕೊಂಡು ಏಕಲಿಂಗ ನಿಷ್ಠಾಪರನಾಗಿ ಆಚರಿಸುವಂಥ ಮಾಹೇಶ್ವರಸ್ಥಲದಾಚರಣೆಯುಳ್ಳಾತನು, ಮೆಲ್ಲ ಮೆಲ್ಲನೆ ಮಾಹೇಶ್ವರಸ್ಥಲವಿಡಿದಾಚರಿಸುತ್ತಿದ್ದ ಹಾಂಗೆ ಆಚರಿಸುತ್ತಿದ್ದ ಹಾಂಗೆ, ಪ್ರಸಾದಿ–ಸ್ಥೂಲಸೂಕ್ಷ್ಮಕಾರಣವೆಂಬ ತನುತ್ರಯಂಗಳಲ್ಲಿ ಬರಲ್ಪಟ್ಟ

ರೂಪುರುಚಿತೃಪ್ತಿಗಳನು ಇಷ್ಟಪ್ರಾಣಭಾವಲಿಂಗಗಳಿಗೆ ಸಮರ್ಪಿಸಿ ಆ ತ್ರಿವಿಧಲಿಂಗಮುಖದಿಂದ ಮದುಳುಮೆಯಾಗಿ ಬರಲ್ಪಟ್ಟ ಶುದ್ರಸಿದ್ಧಪ್ರಸಿದ್ಧಪ್ರಸಾದವನ್ನು ಪಡೆದನುಭವಿಸುವಂಥ ಪ್ರಸಾದಿಸ್ಥಲದಾಚರಣೆಯುಳ್ಳಾತನು, ಮೆಲ್ಲ ಮೆಲ್ಲನೆ ಪ್ರಸಾದಿಸ್ಥಲವಿಡಿದಾಚರಿಸುತ್ತಿದ್ದ ಹಾಂಗೆ ಆಚರಿಸುತ್ತಿದ್ದ ಹಾಂಗೆ, ಪ್ರಾಣಲಿಂಗಿ–ಅಂಗಪ್ರಾಣಂಗಳಲ್ಲಿ ಇಷ್ಟಪ್ರಾಣಲಿಂಗ ಸಂಬಂಧವ ಮಾಡಿಕೊಂಡು ಅವಿಳಜ್ಞಾನಕ್ರೀಯವಿಡಿದಾಚರಿಸುವಂಥ ಪ್ರಾಣಲಿಂಗಿಸ್ಥಲವಿಡಿದಾಚರಿಸುತ್ತಿದ್ದ ಮೆಲ್ಲ ಮೆಲ್ಲನೆ–ಪ್ರಸಾದಿಸ್ಥಲವಿಡಿದಾಚರಿಸುವಂಥ ಪ್ರಾಣಲಿಂಗಿಸ್ಥಲದಾಚರಣೆಯುಳ್ಳಾತನು. ಮೆಲ್ಲ ಮೆಲ್ಲನೆ–ಪ್ರಾಣಲಿಂಗಿಸ್ಥಲವಿಡಿದಾಚರಿಸುತ್ತಿದ್ದ ಹಾಂಗೆ ಆಚರಿಸುತ್ತಿದ್ದ ಹಾಂಗೆ, ಶರಣ–ಶರಣನೇ ಸತಿಯಾಗಿ ಲಿಂಗವೇ ಪತಿಯಾಗಿ ಶರಣಸತಿಲಿಂಗಪತಿತ್ವವಿಡಿದಾಚರಿಸುವಂಥ ಶರಣಸ್ಥಲದಾಚರಣೆಯುಳ್ಳಾತನು ಮೆಲ್ಲ ಮೆಲ್ಲನೆ ಶರಣಸ್ಥಲದಾಚರಣೆವಿಡಿದಾಚರಿಸುತ್ತಿದ್ದ ಹಾಂಗೆ ಆಚರಿಸುತ್ತಿದ್ದ ಹಾಂಗೆ, ಐಕ್ಯನು–ಶಿಖಿಕರ್ಪೂರಸಂಯೋಗವಾದ ಹಾಂಗೆ ಮಹಾಲಿಂಗದಲ್ಲಿ ಕೂಡಲ್ಪಟ್ಟ ಐಕ್ಯಸ್ಥಲದಾಚರಣೆಯುಳ್ಳಾತನು.

ಮೆಲ್ಲ ಮೆಲ್ಲನೆ–ಐಕ್ಯಸ್ಥಲವಿಡಿದಾಚರಿಸುತ್ತಿದ್ದ ಹಾಂಗೆ ಆಚರಿಸುತ್ತಿದ್ದ ಹಾಂಗೆ, ಆದೆಹೆನೆಂಬನ್ನಬರ ಷಡ್ವಿಧಅಂಗದಲ್ಲಿ ಷಡ್ವಿಧಲಿಂಗಸಂಬಂಧವ ಮಾಡಿಕೊಂಡು ಷಡ್ವಿಧಭಕ್ತಿವಿಡಿದಾಚರಿಸುವ ಪರಿಯಂತರ, ನಾನೇನು ವಜ್ರದೇಹಿಯೇ? ನಾನೇನಾದರೂ ವಜ್ರದೇಹವನ್ನು ಧರಿಸಿಕೊಂಡು ಇದ್ದುದೇ ಉಂಟಾದರೆ ದೇಹವು ಕೆಡದೆ ನಿತ್ಯವಾಗಿರುವುದು. ಅಥವಾ ಒಂದು ವೇಳೆ ಷಟ್‌ಸ್ಥಲವಿಡಿದಾಚರಿಸಿದರೂ ಆಚರಿಸುವೆನು. ಅದು ಕಾರಣ ನಾನೇನು ವಜ್ರ ದೇಹಿಯೇ? ಅಲ್ಲವು, ನಾನೇನು ಅಮೃತವ ಸೇವಿಸಿದೆನೆ?–ನಾನೇನಾದರೂ ಅಮೃತಸೇವನೆಯ ಮಾಡಿ ಉಂಟಾದರೆ ದೇಹವು ಕೆಡದೆ ನಿತ್ಯವಾಗಿರುವುದು ಅಥವಾ ಒಂದು ವೇಳೆ ಷಟ್‌ಸ್ಥಲವಿಡಿದಾಚರಿಸಿದರೂ ಆಚರಿಸುವೆನು. ಅದು ಕಾರಣ ನಾನೇನು ಅಮೃತ ಸೇವನೆಯ ಮಾಡಿದೆನೆ? ಇಲ್ಲವು, ನಾನೇನು ಮಱುಜೇವಣಿಯ ಕೊಂಡೆನೆ?–ನಾನೇನಾದರೂ ಮರುಜೇವಣಿಯ ಕೊಂಡಿದ್ದೇ ಉಂಟಾದರೆ ದೇಹವು ಕೆಡದೆ ನಿತ್ಯವಾಗಿರುವುದು, ಅಥವಾ ಒಂದು ವೇಳೆ ಷಡುಸ್ಥಲವಿಡಿದಾಚರಿಸಿದರೂ ಆಚರಿಸುವೆನು. ಅದು ಕಾರಣ ನಾನು ಮರುಜೇವಣಿಯ ಕೊಂಡೆನೆ? ಇಲ್ಲವು ನುಡಿದ ನುಡಿಯೊಳಗೆ ಹೇಳಿಕೊಂಡ ಪ್ರಸಂಗದಲ್ಲಿ ಷಡುಸ್ಥಲ–ಷಡ್ವಿಧ ಅಂಗಲಿಂಗಭಕ್ತಿಗಳನು, ಬಂದು–ಎಯ್ದು ಬಂದು, ಎನ್ನ ಮನವನಿಂಬುಗೊಳ್ಳದಿದ್ದಡೆ–ತ್ರಿವಿಧ ಷಡ್ವಿಧ ಅಂಗದಲ್ಲಿ ತ್ರಿವಿಧ ಷಡ್ವಿಧ ಲಿಂಗವಾಗಿ ನೆಲೆಗೊಳ್ಳಬೇಕು. ನೆಲೆಗೊಳ್ಳದೆ, ಇದ್ದರೆ, ಈ ತನುವ–ದೇಹವನ್ನು ಸುಡುವೆ–ದಹಿಸುವೆನು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

೮೯

ಕುಲಗೆಟ್ಟಡೆ ಕೆಡಬಹುದಲ್ಲದೆ ಛಲಗೆಡಬಾರದು; ಛಲಗೆಟ್ಟಡೆ ಕೆಡಬಹುದಲ್ಲದೆ ಭಕ್ತಿಯ ಅನುವ ಕೆಡಬಾರದು. ಭಕ್ತಿಯ ಅನುವ ಕೆಟ್ಟಡೆ ಕೆಡಬಹುದಲ್ಲದೆ ಆಯತ ಕೆಡಬಾರದು. ಆಯತ ಕೆಟ್ಟಡೆ ಕೆಡಬಹುದಲ್ಲದೆ ಸ್ವಾಯತ ಕೆಡಬಾ[1]ರ[1]ದು. ಸ್ವಾಯತ ಕೆಟ್ಟಡೆ ಕೆಡಬಹುದಲ್ಲದೆ ಸನ್ನಿಹಿತ ಕೆಡಬಾರದು. ಎಲೆ ಕೂಡಲಸಂಗಮದೇವಯ್ಯ ಮುನ್ನ ಮುಟ್ಟಿ[2]ದ್ದೇ[2] ಮುಟ್ಟಿ[3]ದ್ದು[3] ಇನ್ನು ಮುಟ್ಟಿದೆನಾದಡೆ ನಿಮ್ಮ ರಾಣಿವಾಸದಾಣೆ!

I -

ಕುಲಗೆಟ್ಟಡೆ ಕೆಡಬಹುದಲ್ಲದೆ-ಕುಲ ಹೆಚ್ಚು ಜಾತಿ ಹೆಚ್ಚೆಂದು ಹೇಳಿಕೊಂಬುವಂಥ ಕುಲಮದವರ್ತನೆಯನ್ನು ನಷ್ಟವ ಮಾಡಿಬಿಟ್ಟೂ ಬಿಡಬಹುದಲ್ಲದೆ, ಛಲಗೆಡಬಾರದು-ಆ ಕಾಲಕ್ಕೆ ಬಿಡದೆ ಹೋರಾಡುವಂಥ ಛಲಮದ ವರ್ತನೆಯನ್ನು ನಷ್ಟವ ಮಾಡಿಕೊಳಬರದು. ಛಲಗೆಟ್ಟಡೆ ಕೆಡಬಹುದಲ್ಲದೆ-ಆ ಕಾಲಕ್ಕೆ ಬಿಡದೆ ಹೋರುವ ಛಲಗ್ರಾಹಕತ್ವವನ್ನು ನಷ್ಟಮಾಡಿಬಿಟ್ಟರೂ ಬಿಡಬಹುದಲ್ಲದೆ, ಭಕ್ತಿಯ ಅನುವ ಕೆಡಬಾರದು: ಭಕ್ತಿಯ-ಭಕ್ತಿಯ ಶಿವಾದ್ವೈತಭಕ್ತಿಯ, ಅನುವ-ಒಪ್ಪವನ್ನು, ಕೆಡಬಾರದು-ಭಕ್ತಿಯ ಅನುವ ಕೆಟ್ಟಡೆ ಕೆಡಬಹುದಲ್ಲದೆ-ಭಕ್ತಿಯ ಶಿವಾದ್ವೈತಭಕ್ತಿಯ ಅನುವ-ಒಪ್ಪವನ್ನು ಕೆಟ್ಟಡೆ ಕೆಡಬಹುದಲ್ಲದೆ-ನಷ್ಟವ ಮಾಡಿಬಿಟ್ಟರೂ ಬಿಡಬಹುದಲ್ಲದೆ ಆಯತ ಕೆಡಬಾರದು "ಆಯತಂ ಇಷ್ಟಲಿಂಗಂ ಚ" ಎಂದು ಅಂಗದಲ್ಲಿ ಇಷ್ಟಲಿಂಗಸಂಬಂಧವ ಮಾಡಿಕೊಂಡು ಇಷ್ಟಲಿಂಗವೇ ಪರವೆಂದು ಆಚರಿಸುವಂಥ ಆಚರಣೆಯು ಕೆಡಬಾರದು. ಆಯತ ಕೆಟ್ಟಡೆ ಕೆಡಬಹುದಲ್ಲದೆ -"ಆಯತಂ ಇಷ್ಟಲಿಂಗಂ ಚ" ಯೆಂದು ಅಂಗದಲ್ಲಿ ಇಷ್ಟಲಿಂಗಸಂಬಂಧವ ಮಾಡಿಕೊಂಡು ಇಷ್ಟಲಿಂಗವೇ ಪರವೆಂದಾಚರಿಸುವಂಥ ಆಚರಣೆಯನ್ನು ನಷ್ಟ ಮಾಡಿಬಿಟ್ಟರೂ ಬಿಡಬಹುದಲ್ಲದೆ ಸ್ವಾಯತ ಕೆಡಬಾರದು, "ಸ್ವಾಯತಂ ಪ್ರಾಣಲಿಂಗಂ ಚ" ಎಂದು ಮನದಲ್ಲಿ ಪ್ರಾಣಲಿಂಗಸಂಬಂಧವ ಮಾಡಿಕೊಂಡು ಪ್ರಾಣಲಿಂಗವೇ ಪರವೆಂದಾಚರಿಸುವಂಥ ಆಚರಣೆಯನ್ನು ನಷ್ಟವ ಮಾಡಿಕೊಳಬಾರದು. ಸ್ವಾಯತ ಕೆಟ್ಟಡೆ ಕೆಡಬಹುದಲ್ಲದೆ, "ಸ್ವಾಯತಂ ಪ್ರಾಣಲಿಂಗಂ ಚ" ಎಂದು ಮನದಲ್ಲಿ ಪ್ರಾಣಲಿಂಗಸಂಬಂಧವ ಮಾಡಿಕೊಂಡು ಪ್ರಾಣಲಿಂಗವೇ ಪರವೆಂದು ಆಚರಿಸುವಂಥ ಆಚರಣೆಯನ್ನು ನಷ್ಟವ ಮಾಡಿಬಿಟ್ಟರೂ ಬಿಡಬಹುದಲ್ಲದೆ, ಸನ್ನಿಹಿತ ಕೆಡಬಾರದು. "ಸನ್ನಹಿತಂ ಭಾವಲಿಂಗಂ ಚ" ಎಂದು ಆತ್ಮಾಂಗದಲ್ಲಿ ಭಾವಲಿಂಗಸಂಬಂಧವ ಮಾಡಿಕೊಂಡು ಭಾವಲಿಂಗವೇ ಪರವೆಂದಾಚರಿಸುವಂಥ ಆಚರಣೆಯನ್ನು ನಷ್ಟವ ಮಾಡಿಕೊಳಬಾರದು.

ಎಲೆ ಭೋ ಕೂಡಲಸಂಗಮದೇವಯ್ಯ-ಎಲೆ ಪರಶಿವಲಿಂಗವೆ, ಮುನ್ನ ಮುಟ್ಟಿದ್ದೇ ಮುಟ್ಟಿದ್ದು-ಮೊದಲು ಮಲತ್ರಯಂಗಳೊಡಣೆ ಕೂಡಿ ಚರಿಸಿದ್ದೇ ಚರಿಸಿದ್ದು, ಇನ್ನು ಮುಟ್ಟಿದೆನಾದಡೆ -ಇನ್ನೊಂದು ವೇಳೆ ಮಲತ್ರಯಂಗಳೊಡನೆ ಕೂಡಿ ಚರಿಸಿದೆನಾದರೆ ನಿಮ್ಮ ರಾಣಿವಾಸದಾಣೆ - ನಿಮ್ಮ ಪಾರ್ವತಿದೇವಿಯರ ಮೇಲಣ ಪ್ರತಿಜ್ಞೆಯೆಂಬ ದೃಷ್ಟೋಪಮಾನದ ಹಾಂಗೆ.

● ಕುಲಗೆಟ್ಟಡೆ ಕೆಡಬಹುದಲ್ಲದೆ, ಘ್ರಾಣದಲ್ಲಿ ಪಂಚಾಚಾರಸ್ವರೂಪವಾದಾಚಾರಲಿಂಗವನ್ನು ಸಂಬಂಧ ಮಾಡಿಕೊಂಡು ಆಚಾರಲಿಂಗವೇ ಪರವೆಂದಾಚರಿಸುವಂಥ ಭಕ್ತಿಸ್ಥಲದಾಚರಣೆಯನ್ನು ನಿಃಪತಿಮಾಡಿದರೂ ಮಾಡಬಹುದಲ್ಲದೆ, ಛಲಗೆಡಬಾರದು-ಜಿಹ್ವೆಯಲ್ಲಿ ಮಂತ್ರಮೂರ್ತಿಸ್ವರೂಪವಾದ ಗುರುಲಿಂಗಸಂಬಂಧವ ಮಾಡಿಕೊಂಡು ಗುರುಲಿಂಗವೇ ಪರವೆಂದಾಚರಿಸುವಂಥ ಮಾಹೇಶ್ವರಸ್ಥಲ ದಾಚರಣೆಯನ್ನು ನಿಃಪತಿಯ ಮಾಡಬಾರದು. ಛಲಗೆಟ್ಟಡೆ ಕೆಡಬಹುದಲ್ಲದೆ, ಜಿಹ್ವೆಯಲ್ಲಿ ಮಂತ್ರಮೂರ್ತಿಸ್ವರೂಪವಾದ ಗುರುಲಿಂಗಸಂಬಂಧವ ಮಾಡಿಕೊಂಡು ಗುರುಲಿಂಗವೇ ಪರವೆಂದಾಚರಿಸುವಂಥ ಮಾಹೇಶ್ವರಸ್ಥಲದಾಚರಣೆಯನ್ನು ನಿಃಪತಿಯ ಮಾಡಿದರೂ ಮಾಡಬಹುದಲ್ಲದೆ, ಭಕ್ತಿಯ ಅನುವ ಕೆಡಬಾರದು-ನೇತ್ರದಲ್ಲಿ ನಿರೀಕ್ಷಣಸ್ವರೂಪವಾದ ಶಿವಲಿಂಗಸಂಬಂಧವ ಮಾಡಿಕೊಂಡು ಶಿವಲಿಂಗವೇ ಪರವೆಂದಾಚರಿಸುವಂಥ

ಪ್ರಸಾದಿಸ್ಥಲದಾಚರಣೆಯನ್ನು ನಿಃಪತಿಯ ಮಾಡಬಾರದು. ಭಕ್ತಿಯ ಅನುವ ಕೆಟ್ಟಡೆ ಕೆಡಬಹುದಲ್ಲದೆ –ನೇತ್ರದಲ್ಲಿ ನಿರೀಕ್ಷಣಸ್ವರೂಪವಾದ ಶಿವಲಿಂಗಸಂಬಂಧವ ಮಾಡಿಕೊಂಡು ಶಿವಲಿಂಗವೇ ಪರವೆಂದು ಆಚರಿಸುವಂಥ ಪ್ರಸಾದಿಸ್ಥಲದಾಚರಣೆಯನ್ನು ನಿಃಪತಿಯ ಮಾಡಿದರೂ ಮಾಡಬಹುದಲ್ಲದೆ, ಆಯತ ಕೆಡಬಾರದು ತ್ವಕ್ಕಿನಲ್ಲಿ ಯಜನಸ್ವರೂಪವಾದ ಜಂಗಮಲಿಂಗ ಸಂಬಂಧವ ಮಾಡಿಕೊಂಡು ಜಂಗಮಲಿಂಗವೇ ಪರವೆಂದಾಚರಿಸುವಂಥ ಪ್ರಾಣಲಿಂಗಿಸ್ಥಲದಾಚರಣೆಯನ್ನು ನಿಃಪತಿಯ ಮಾಡಬಾರದು. ಆಯತ ಕೆಟ್ಟಡೆ ಕೆಡಬಹುದಲ್ಲದೆ–ತ್ವಕ್ಕಿನಲ್ಲಿ ಯಜನಸ್ವರೂಪವಾದ ಜಂಗಮಲಿಂಗಸಂಬಂಧವ ಮಾಡಿಕೊಂಡು ಜಂಗಮಲಿಂಗವೇ ಪರವೆಂದಾಚರಿಸುವಂಥ ಪ್ರಾಣಲಿಂಗಿಸ್ಥಲದಾಚರಣೆಯನ್ನು ನಿಃಪತಿಯ ಮಾಡಿದರೂ ಮಾಡಬಹುದಲ್ಲದೆ, ಸ್ವಾಯತ ಕೆಡಬಾರದು–ಶ್ರೋತ್ರದಲ್ಲಿ ಈಳನಸ್ವರೂಪವಾದ ಪ್ರಸಾದಲಿಂಗ ಸಂಬಂಧವ ಮಾಡಿಕೊಂಡು ಪ್ರಸಾದಲಿಂಗವೇ ಪರವೆಂದಾಚರಿಸುವಂಥ ಶರಣಸ್ಥಲದಾಚರಣೆಯನ್ನು ನಿಃಪತಿ [ಮಾಡಬಾರದು] ಸ್ವಾಯತ ಕೆಟ್ಟಡೆ ಕೆಡಬಹುದಲ್ಲದೆ–ಶ್ರೋತ್ರದಲ್ಲಿ ಈಶನ ಸ್ವರೂಪವಾದ ಪ್ರಸಾದಲಿಂಗಸಂಬಂಧವ ಮಾಡಿಕೊಂಡ ಪ್ರಸಾದಲಿಂಗವೇ ಪರವೆಂದಾಚರಿಸುವಂಥ ಶರಣಸ್ಥಲದಾಚರಣೆಯನ್ನು ನಿಃಪತಿಯ ಮಾಡಿದರೂ ಮಾಡಬಹುದಲ್ಲದೆ. ಸನ್ನಿಹಿತ ಕೆಡಬಾರದು–ಹೃದಯದಲ್ಲಿ ಮಹಾಲಿಂಗಸಂಬಂಧವ ಮಾಡಿಕೊಂಡು ಮಹಾಲಿಂಗವೇ ಪರವೆಂದಾಚರಿಸುವಂಥ ಐಕ್ಯಸ್ಥಲದಾಚರಣೆಯನ್ನು ನಿಃಪತಿಯ ಮಾಡಬಾರದು.

ಎಲೆ–ಭೋ, ಕೂಡಲಸಂಗಮದೇವಾ–ಪರಶಿವಲಿಂಗವೆ, ಮುನ್ನ ಮುಟ್ಟಿದ್ದೇ–ಮೊದಲು ಪಂಚೇಂದ್ರೀಯಂಗಳೊಡನೆ ಕೂಡಿ ಚರಿಸಿದ್ದೇ ಚರಿಸಿದ್ದು. ಇನ್ನು ಮುಟ್ಟಿದೆನಾದಡೆ ಇನ್ನೊಂದು ವೇಳೆ ಪಂಚೇಂದ್ರಿಯಂಗಳೊಡನೆ ಕೂಡಿ ಚರಿಸಿದೆನಾದರೆ, ನಿಮ್ಮ ರಾಣಿವಾಸದಾಣೆ–ನಿಮ್ಮ ಪಾರ್ವತಿದೇವಿಯರ ಮೇಲಣ ಪ್ರತಿಜ್ಞೆಯು.

II –

1–1 ದಯ್ಯ (ಟ, ಡ) 2–2 ತ್ತೇ (ಟ, ಡ) 3–3 ತ್ತು (ಟ, ಡ)

....

ಆಯತ ಇಷ್ಟಲಿಂಗದ ಕ್ರಿಯೆಗಳು ಸ್ವಾಯತ ಪ್ರಾಣಲಿಂಗದ ನಿರ್ಗುಣಕ್ರಿಯೆಗಳು. ಕೆಡಬಾರದಯ್ಯ–ನಷ್ಟವಾಗಬಾರದಯ್ಯ, ಮುನ್ನ ಮುಟ್ಟಿತ್ತೇ ಮುಟ್ಟಿತ್ತು–ಕುಲಛಲಂಗಳನು ಗುರೂಪದೇಶವಾಗುವುದಕ್ಕೆ ಮೊದಲೇ [೧]ಅಂಗೀಕರಿಸಿದ್ದೇ[೧] ಅಂಗೀಕರಿಸಿದ್ದಲ್ಲದೆ, ಇನ್ನು ಮುಟ್ಟಿದೆನಾದಡೆ ಇನ್ನು ಅವ ಹಿಡಿದುಕೊಂಡು ಹೋರಾಡಿದೆನಾದರೆ.

....

೧–೧ X(ಡ)

V– –

೨–೨ ತ್ತೇ (ಪ) ೩–೩ ತ್ತು (ಪ)

....

ಆಯತ ಇಷ್ಟಲಿಂಗದ ಕ್ರೀಯು ಸ್ವಾಯತ ಪ್ರಾಣಲಿಂಗದ ಕ್ರಿಯೆಯು ಮುನ್ನ ಮುಟ್ಟಿತ್ತೇ ಮುಟ್ಟಿತ್ತು ಕುಲಛಲಂಗಳ ಗುರೂಪದೇಶಕ್ಕೆ ಮೊದಲೇ ಅಂಗೀಕರಿಸಿದ್ದಲ್ಲದೆ, ಇನ್ನು ಮುಟ್ಟಿದೆನಾದಡೆ –ಇನ್ನು ಹಿಡಿದುಕೊಂಡು ಹೋರಾಡಿದೆನಾದರೆ.

೯೦೦

ಅಷ್ಟವಿದಾರ್ಚನೆ, ಷೋಡಶೋಪಚಾರವಲ್ಲದೆ ನಿಮ್ಮ ಮುಟ್ಟಲಱಿಯದವರ ಕಂಡಡೆ ಅಯ್ಯನೆಂತೆಂಬೆನವರ? ಆವಾವ ಭಾವದಲ್ಲಿ ಆವಾವ ಜ್ಞಾನದಲ್ಲಿ ಆವಾವ ಮುಖದಲ್ಲಿ ಅಱಿವವರಾರಿದ್ದಾರಯ್ಯ? ಏನೆಂಬೆ? ನಿಮ್ಮಲ್ಲಿ ಸಮ್ಯಕ್ಕರಾದ ಸತ್ಯಶರಣರ ಕಂಡು ಕೂಡಲಸಂಗಮದೇವಾ, ಅವರ ಅಯ್ಯನೆಂಬೆನು.

I –

ಅಷ್ಟವಿಧಾರ್ಚನೆ–ಎಂಟುತರದರ್ಚನೆಯು, ಷೋಡಶೋಪಚಾರವಲ್ಲದ–ಅರ್ಘ್ಯಾದಿ, ಪ್ರದಕ್ಷಿಣಾಂತ್ಯಮಾದ ಹದಿನಾರು ತೆರದ ಉಪಚಾರವಲ್ಲದೆ, ನಿಮ್ಮ ಮುಟ್ಟಲು–ನಿಮ್ಮ ಮುಟ್ಟಿ ಮುಟ್ಟಿ ಆರಾಧಿಸುವಂಥದನು, ಅಱಿಯದವರ–ತಿಳಿಯದವರ, ಕಂಡಡೆ–ನೋಡಿದರೆ, ಅಯ್ಯನೆಂತೆಂಬೆನವರ–ಅಂತಪ್ಪವರುಗಳ ಶಿವಸ್ವರೂಪಜ್ಞಾನಿಗಳೆಂದು ಹೇಂಗೆ ಹೇಳುವೆನು. ಆವಾವ ಭಾವದಲ್ಲಿ–ಆವುದಾನೊಂದು ಭಿನ್ನಭಕ್ತಿಯಲ್ಲಿ ಆವಾವ ಜ್ಞಾನದಲ್ಲಿ–ಆವುದಾನೊಂದು ಭಿನ್ನಜ್ಞಾನದಲ್ಲಿ ಆವಾವ ಮುಖದಲ್ಲಿ–ಆವುದಾನೊಂದು ಖಂಡಿತವೈರಾಗ್ಯದಲ್ಲಿ, ಅಱಿವವರಾರಿದ್ದಾರಯ್ಯ–ತಿಳಿದಂಥವರಾರಿದ್ದಾರಯ್ಯ, ಏನೆಂಬೆ?–ಎಂತೆಂದು ಹೇಳುವೆ? ನಿಮ್ಮಲ್ಲಿ–ಸ್ವಾಮಿಗಳಲ್ಲಿ, ಸಮ್ಯಕ್ಕರಾದ–ಲೇಸಾಗಿ ಕೂಡಲ್ಪಟ್ಟವರುಗಳಾದ, ಸತ್ಯಶರಣರ–ಯಥಾರ್ಥವಾದ ಶಿವಶರಣರ, ಕಂಡು ನೋಡಿ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಅವರ–ಅಂತಪ್ಪ ಮಹಿಮರನು, ಅಯ್ಯನೆಂಬೆನು–ಶಿವಸ್ವರೂಪಿಗಳೆಂದು ಹೇಳುವೆನು.

೯೦೧

ಮರನ ಹೂವ ಕೊಯ್ದು ಮರಕ್ಕೇಱಿಸಿ, ನದಿಯ ಉದಕವ ನದಿಗರ್ಪಿತವ ಮಾಡಿ, ಕಱುವನಗಲಿಸಿ ತಾಯ ಮೊಲೆವಾಲಮಱುಗಿಸಿ ಕಱೆದುಣಬೇಡವೋ! ಕೂಡಲಸಂಗಮದೇವಾ ನೀ ಮಾಡಿದ ಮಾಯೆ, ಹಲಬರ ಬಾಯ ಟೊ[1]ಣೆದು[1] ಹೋಯಿತ್ತು!

I –

ನದಿಯ ಉದಕವ ನದಿಗರ್ಪಿತವ ಮಾಡಿ–ಪರಮಾನಂದಜಲಸ್ವರೂಪವಾದ ಸದಾಶಿವನ ವಾಮದೇವಮುಖದಲ್ಲಿ ಅಪ್ಪುತತ್ತ್ವ ಪುಟ್ಟಿತ್ತು. ಆ ಅಪ್ಪುತತ್ತ್ವಸಂಬಂಧವಾದ ಉದಕವನು ಹಳ್ಳ

ಹೊಳೆ ಕೆರೆ ಬಾವಿಗಳಿದ್ದೆಡೆಗೆ ಬಿಂದಿಗೆ ಕುಜಾಯಿಗಳನು ತೆಗೆದುಕೊಂಡು ಹೋಗಿ ಮೊಗೆದುಕೊಂಡು ಬಂದು ಆ ಸದಾಶಿವಮೂರ್ತಿಯೇ ತಾನಾದ ಇಷ್ಟಮಹಾಲಿಂಗಕ್ಕೆ ಅಭಿಷೇಕವ ಮಾಡಿ, ಮರನ ಹೂವ ಕೊಯ್ದು ಮರಕ್ಕೆ ಏಜೆಸಿ–ಅಖಂಡಚಿದ್ಬ್ರಹ್ಮ ವೃಕ್ಷಸ್ವರೂಪವಾದ ಸದಾಶಿವನ ಸದ್ಯೋಜಾತಮುಖದಲ್ಲಿ ಪೃಥ್ವಿತತ್ತ್ವ ಪುಟ್ಟಿತ್ತು; ಆ ಪೃಥ್ವಿತತ್ತ್ವಸಂಬಂಧವಾದ ಪತ್ರ ಪ್ರಸೂನಂಗಳ ತಂದು ಆ ಸದಾಶಿವಮೂರ್ತಿಯೇ ತಾನಾದ ಇಷ್ಟಮಹಾಲಿಂಗಕ್ಕೆ ಧರಿಸಿ, ಆ ಸದಾಶಿವಮೂರ್ತಿಯ ಅಘೋರಮುಖದಲ್ಲಿ ಅಗ್ನಿತತ್ತ್ವ ಪುಟ್ಟಿತ್ತು. ಆ ಅಗ್ನಿತತ್ತ್ವ ಸಂಬಂಧವಾದ ಧೂಪದೀಪಾರತಿಗಳನು ಸಮರ್ಪಿಸಿ, ಆ ಸದಾಶಿವಮೂರ್ತಿಯ ತತ್ಪುರುಷಮುಖದಲ್ಲಿ ವಾಯುತತ್ತ್ವ ಪುಟ್ಟಿತ್ತು. ಆ ವಾಯುತತ್ತ್ವ ಸಂಬಂಧವಾದ ತಾಲವೃಂತಂಗಳನು ಸಮರ್ಪಿಸಿ ಆ ಸದಾಶಿವಮೂರ್ತಿಯ ಈಶಾನ್ಯಮುಖದಲ್ಲಿ ಆಕಾಶತತ್ತ್ವ ಪುಟ್ಟಿತ್ತು. ಆ ಆಕಾಶತತ್ತ್ವ ಸಂಬಂಧವಾದ ಗಂಟೆ ದರ್ಪಣಂಗಳನು ಸಮರ್ಪಿಸಿ, ಆ ಸದಾಶಿವಮೂರ್ತಿಯ ಮನದಲ್ಲಿ ಚಂದ್ರತತ್ತ್ವ ಪುಟ್ಟಿತ್ತು. ಆ ಚಂದ್ರತತ್ತ್ವ ಸಂಬಂಧವಾದ ಗಂಧಾಕ್ಷತೆಗಳನು ಸಮರ್ಪಿಸಿ ಆ ಸದಾಶಿವಮೂರ್ತಿಯ ನಯನದಲ್ಲಿ ಸೂರ್ಯತತ್ತ್ವದಲ್ಲಿ ಪುಟ್ಟಿತ್ತು. ಆ ಸೂರ್ಯತತ್ತ್ವಸಂಬಂಧವಾದ ಏಕಾರತಿ ದ್ವಾರತಿ ನಿರಂಜನಾರತಿ ಕಲಿಗಣಾರತಿ ಪಂಚಾರತಿ ಪಂಚಕಲಶಗಳನು ಸಮರ್ಪಿಸಿ ಆ ಸದಾಶಿವಮೂರ್ತಿಯ ಗೋಪ್ಯಮುಖದಲ್ಲಿ ಆತ್ಮತತ್ತ್ವ ಪುಟ್ಟಿತ್ತು. ಆ ಆತ್ಮತತ್ತ್ವಸಂಬಂಧವಾದ ವೀಳ್ಯಫಲಾಹಾರಗಳನು ಸಮರ್ಪಿಸಿ, ಕಱುವನಗಲಿಸಿ–ಭಿನ್ನವಿಟ್ಟುಕೊಂಡು ಭಕ್ತಿಯ ಮಾಡಿ, ತಾಯ ಮೊಲೆವಾಲ ಮಱುಗಿಸಿ–ಪರಶಿವಲಿಂಗವೆಂಬ ಜನನಿಗೆ ಕೃಪೆಯನು ಹುಟ್ಟಿಸಿ, ಕಱೆದುಣಬೇಡವೊ–ಆ ಭಿನ್ನಭಕ್ತಿಯಿಂದುಂಟಾದ ಫಲಪದಂಗಳನು ಪಡೆದನುಭವಿಸಬೇಡೆಲವೋ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನೀ ಮಾಡಿದ ನೀ ಉಂಟು ಮಾಡಿದ, ಮಾಯೆ–ಮಾಯಾಶಕ್ತಿಯು, ಹಲಬರ ಬಾಯಟೊಣೆದು ಹೋಯಿತ್ತು–ಹಲವು–ಕೆಲವು, ದೇವದಾನವಮಾನವರ ಶಿವಾಪೇಕ್ಷೆಯೆಂಬ ರಸನೆಯನ್ನು ಅಪಹರಿಸಿ ಭಿನ್ನಾಪೇಕ್ಷೆಯೆಂಬ ರಸನೆಗೆ ಒಳಗು ಮಾಡಿ ತನ್ನ ತಪ್ಪಿಸಿಕೊಂಡು ವಿಲಕ್ಷಣವಾಗಿ ಹೋಯಿತ್ತು.

V– –

1–1 ಣದೇ (ಚ, ಜ)

ಮರನ ಹೂವ ಕೊಯ್ದು ಮರಕ್ಕೇಜೆಸಿ–ಶಿವನ ಸದ್ಯೋಜ್ಯಾತಮುಖದಲ್ಲಿ ಪೃಥ್ವಿ ಪುಟ್ಟಿತ್ತು. ಆ ಪೃಥ್ವಿಯಲ್ಲಿ ಹುಟ್ಟಿದ ವೃಕ್ಷದ[೧] ಪ್ರಸೂನವವನು ಲವನಂಗೆಯ್ದು ಪರಬ್ರಹ್ಮ[೨]ವೃಕ್ಷ[೨]ಸ್ವರೂಪನಾದ ಇಷ್ಟಲಿಂಗಕ್ಕೆ ಸಮರ್ಪಣೆಯ ಮಾಡಿ, ನದಿಯುದಕವ ನದಿಗರ್ಪಿತವ ಮಾಡಿ–ವಾಮದೇವಮುಖದಲ್ಲಿ ಅಪ್ಪುಪುಟ್ಟಿತ್ತು. ಆ ಅಪ್ಪುವನು ದೇವಗಂಗೆಯನು ತಳೆದ [೩]ವಸ್ತುವಿಗೆ[೩] ಸಮರ್ಪಣೆಯ ಮಾಡಿ, ಕಱುವನಗಲಿಸಿ–ಮನುವನು ವಿಯೋಗವ ಮಾಡಿಸಿ, ತಾಯ ಮೊಲೆವಾಲ ಮಱುಗಿಸಿ–ಶ್ರೀ ಗುರುದೇವನ ಅಮೃತಕುಂಭಸ್ವರೂಪವಾದಿಷ್ಟಲಿಂಗವನು ಕರುಂಬಿಸಿ, ಕಱೆದುಣಬೇಡವೋ ಫಲಪದಂಗಳನಾಹ್ವಾನಿಸಿ ಅನುಭವಿಸಬೇಡವೋ, ಕೂಡಲಸಂಗಮದೇವಾ ನೀ ಮಾಡಿದ ಮಾಯೆ, ಹಲಬರ ಬಾಯ ಟೊಣದೇ ಹೋಯಿತ್ತು–ಎಲೆ ಲಿಂಗವೆ ನೀನುಂಟುಮಾಡಿದ ಮಾಯಾಪ್ರಕೃತಿಯು ಬಲ್ಲಬಲ್ಲವರೆಂಬ [೪]ಯತಿ[೪]ವ್ರತಿ ಯೋಗಿಗಳ ಭಿನ್ನಾಪೇಕ್ಷೆಯೆಂಬ ಜಿಹ್ವೆಯನು ಸಂಕಲ್ಪವಿಕಲ್ಪವೆಂಬ ಸೊಡ್ಡ ಹೆಟ್ಟಿಹೋಯಿತ್ತು.

೧+ಲ್ಲಿ(ಚ) ೨-೨ X (ಚ) ೩-೩ ವಸುವಿಗೆ(ಚ) ೪-೪ವಲೆ(ಜ);

III- -

ಮಱುಗಿಸಿ-ಮೊ [೫][ಲೆ][೫] ಯ ತುರಿಸಿ.

೫-೫ರೆ(ಟ, ಡ)

ಆಕಳ ಮಱುಗಿಸಿ-ಮೊ[೬][ಲೆ][೬]ಯನು ತುರಿಸಿ

೬-೬ ರೆ(ಪ)

೯೦೨

ತಾಪತ್ರಯವೆಂದಡೆ ರೂಪು ಕಾಣುತ್ತ, ಕನಲಿದ ಕೋಪದಲ್ಲಿ ಶಿವಕಳೆ[1] ಕರಡಿಗೆಯನೆ ಮುಱಿದ; ಧೂಪದ ಗುಂಡಿಗೆಯನೊಡೆದ; ದೀಪಾರತಿಯ ನಂದಿಸಿದ; [2]ಬಾ[2]ಹ ಪರಿಯಾಣದೋಗರವ ತುಡುಕಿದ; ಪಾಪಕರ್ಮ [3][ಸಂಹರನು][3] ಕೂಡಲಸಂಗಮದೇವಾ ನಿಮ್ಮ ಶರಣ!

....

3-3 x (ಕ. ಗ).

I- -

ತಾಪತ್ರಯವೆಂದಡೆ ರೂಪು ಕಾಣುತ್ತ: ಒಬ್ಬ ಚರಮೂರ್ತಿ ಏನಾದರೂ ಸುಂದರಿಯಾದ ಸ್ತ್ರೀಯಳನ್ನು ವಿವಾಹಮಾಡಿಕೊಂಡು ಒಂದು ಮಂದಿರವನ್ನು ಕಟ್ಟಿಕೊಂಡಿರುವರು. ಆರು ತಾಸುತನಕ ಮೋಡಾಮೋಡಿಯಿಂದ ಕೃಷಿತದನ್ನು ಮಾಡಿ ಆರು ತಾಸಿನ ಮೇಲೆ ಮನೆಗೆ ಬಂದು, ತಾಪತ್ರಯವೆಂದಡೆ-ಅರ್ಥವೇನೆಂದರೆ, ರೂಪುಕಾಣುತ್ತ-ಆ ಸ್ತ್ರೀಯಳ ದರುಶನವಾಗುತ್ತ ಆ ಸ್ತ್ರೀಯಳ ಮುಖವ ನಿರೀಕ್ಷಣೆಯ ಮಾಡುತ್ತ, ಕೋಪದಲ್ಲಿ-ಸಿಟ್ಟಿನಿಂದ, ಕನಲಿದ-ಕೋಪಿಸಿದ ಎಂಬಲ್ಲಿ ತುಂಡಮುಂಡೆ ನಾನು ಹಸಿದುಬಂದ್ಯೆದೇನೆಂದು ಬೈದು, ಶಿವಕಳೆ ಕರಡಿಗೆಯನೆ-ವಿಭೂತಿ ಕರಡಿಗೆ ಪುಷ್ಪದ ಕರಡಿಗೆಯನ್ನು ಕೊಟ್ಟಲ್ಲಿ, ಮುಱಿದ-ಭಗ್ನವ ಮಾಡಿದನು, ಧೂಪದ ಗುಂಡಿಗೆಯನು-ಧೂಪಾರತಿಯನ್ನು ಕೊಟ್ಟಲ್ಲಿ, ಒಡೆದ-ಭಗ್ನವ ಮಾಡಿದನು. ದೀಪಾರತಿಯ-ಅಚ್ಚೆಳ್ಳೆಣ್ಣೆ ದೀವಿಗೆ ತುಪ್ಪದ ದೀವಿಗೆ ಮೊದಲಾದವನ್ನು ಮುಟ್ಟಿಸಿಟ್ಟಲ್ಲಿ, ನಂದಿಸಿದ-ಕಾಲಿಲೊದೆದು ಕೆಡಹಿದನು. ಬಾಹ ಪರಿಯಾಣದೋಗರವ-ಹಸಿದು ಬಂದ್ಯೆದಾರೆಂದು ಚಮತ್ಕಾರದಿಂದ ಸಕಲಪದಾರ್ಥಂಗಳನು ಗಡಣಿಸಿ ತಂದು ಮುಂದಕ್ಕೆ ಕೊಟ್ಟಲ್ಲಿ, ತುಡುಕಿದ-ಕಸಿದುಕೊಂಡು ಆತ್ಮಾರ್ಪಣವಾಗಿ ಅನುಭವಿಸಿದನು. ಕೂಡಲಸಂಗಮದೇವಾ-ಎಲೆ ಮಾವನೆ, ನಿಮ್ಮ ಶರಣ-ನಿಮ್ಮ ಪುತ್ರನು, ಪಾಪಕರ್ಮ-ಬಹು ಸಿಟ್ಟುಳ್ಳಾತನು. ಹೀಂಗಾದರೆ ನಾ ಹೇಂಗೆ ಬದುಕು ಮಾಡಬೇಕೆಂದು ಆ ಸ್ತ್ರೀಯಳು ತನ್ನ ಮಾವನ ಮುಂದೆ ಹೇಳುತ್ತಿಹಳೆಂಬ ದೃಷ್ಟೋಪಮಾನದ ಹಾಂಗೆ.

● ತಾಪತ್ರಯವೆಂದಡೆ–ತಾಪತ್ರಯಸ್ವರೂಪವಾದ ದೇಹವು ಆತ್ಮಂಗೆ ಸಂಬಂಧವಾಯಿತ್ತೆಂದು ಹೇಳಿದರೆ, ರೂಪು ಕಾಣುತ್ತ–ದೇಹಭಾವದ ಪ್ರಪಂಚನ್ನು ನೋಡುತ್ತ, ಕೋಪದಲ್ಲಿ–ಜ್ಞಾನೋದಯದಿಂದ ಕನಲಿದ ಜ್ಞಾನೋದಯಗುರೂಪಾವಸ್ಥೆಯಿಂದ ದೇಹದ ವರ್ತನೆಯನ್ನು ನಷ್ಟವ ಮಾಡಿಬಿಟ್ಟು ಆಚಾರಾಂಗಸ್ವರೂಪವನ್ನೈದಿಸಿ ಕ್ರಿಯಾದೀಕ್ಷೆಯಿಂದ ಅಂಗದಲ್ಲಿ ಇಷ್ಟಲಿಂಗವ ಸಂಬಂಧವ ಮಾಡಿದನು. ಶಿವಕಳೆ ಕರಡಿಗೆಯನೆ ಮುಚಿದ–ಸೂಕ್ಷ್ಮತನುವಿನ ವರ್ತನೆಯನ್ನು ನಷ್ಟವಮಾಡಿ ಮಂತ್ರದೀಕ್ಷೆಯಿಂದ ಮನದಲ್ಲಿ ಪ್ರಾಣಲಿಂಗಸಂಬಂಧವ ಮಾಡಿದನು. ಧೂಪದ ಗುಂಡಿಗೆಯನೊಡೆದ–ಕಾರಣ ತನುವಿನ ವರ್ತನೆಯನ್ನು ನಷ್ಟವ ಮಾಡಿ ವೇಧಾದೀಕ್ಷೆಯಿಂದ ಆತ್ಮಾಂಗದಲ್ಲಿ ಭಾವಲಿಂಗಸಂಬಂಧವ ಮಾಡಿದನು. ದೀಪಾರತಿಯ ನಂದಿಸಿದ–ಭಿನ್ನಜ್ಞಾನಾಭಿನ್ನಕ್ರಿಯೆಗಳ ನಷ್ಟವಮಾಡಿ [1][ಅ][1] ಭಿನ್ನಜ್ಞಾನ [1][ಅ][1] ಭಿನ್ನಕ್ರಿಯಾಚಾರವಾಗಿ ಅಳವಡಿಸಿಕೊಂಡಾಚರಿಸಿದನು. ಬಾಹ ಪರಿಯಾಣದೋಗರವ ತುಡುಕಿದ –ತನುತ್ರಯಂಗಳಲ್ಲಿ ಬರಲ್ಪಟ್ಟ ರೂಪುರುಚಿತೃಪ್ತಿಗಳನು ಇಷ್ಟಪ್ರಾಣಭಾವಲಿಂಗಂಗಳಿಗೆ ಸಮರ್ಪಿಸಿ ಆ ತ್ರಿವಿಧಲಿಂಗದ ಮುಖದಿಂದುಳುಮೆಯಾಗಿ ಬರಲ್ಪಟ್ಟ ಶುದ್ಧಸಿದ್ಧಪ್ರಸಿದ್ಧಪ್ರಸಾದವನ್ನು ಪಡೆದನುಭವಿಸಿದನು. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ ಶರಣ–ನಿಮ್ಮ ಶಿವಶರಣನು, ಪಾಪಕರ್ಮ [ಸಂಹರನು–] ಪುಣ್ಯಪಾಪಂಗಳ ವರ್ತನೆಯನ್ನು ನಷ್ಟವಮಾಡಿ ಪುಣ್ಯವನ್ನೇ ಪ್ರಸಾದ ಭೋಗವಾಗಿ ಪಾಪವನ್ನೇ ಭಕ್ತಿ ಸತ್ಕ್ರಿಯೆಗಳಾಗಿ ಅಳವಡಿಸಿಕೊಂಡಾಚರಿಸಿದನು.

....

೧–೧ ಆ (ಕ. ಗ).

II– –

1 + ಯ(ಚ); + ಯದ (ಜ). 2–2 ಬ (ಚ, ಜ).

ತಾಪತ್ರಯವೆಂದಡೆ ರೂಪಕಾಣುತ್ತ–ಬೇಗೆ ಮೂರೆಂದರೆ ಭಿನ್ನಕ್ರೀಯ ಸಾಕಾರವ ನಿರೀಕ್ಷಣೆಯ ಮಾಡುತ್ತ, [2]ಕನಲಿದ[2] ಕೋಪದಲ್ಲಿ–ಕೋಪಿಸಿ[3]ದ[3] ಕ್ರೋಧದಲ್ಲಿ, ಶಿವಕಳೆಯದ ಕರಡಿಗೆಯನೆ ಮುಚಿದು–ಲಿಂಗಪೂಜಾಕ್ರೀಗಳಿಗಾಶ್ರಯವಾದ ದೇಹವೆಂಬ ಕರಂಡವನು ಭಗ್ನವ ಮಾಡಿ, ಧೂಪದ ಗುಂಡಿಗೆಯನೊಡೆದು–ಸ್ವಾನುಭಾವ ಸದ್ವಾಸನೆ ಆಶ್ರಯವಾದ ಮಾನಸವನು ಭಗ್ನವ ಮಾಡಿ, ದೀಪಾರತಿಯ ನಂದಿಸಿದ–ಸುಜ್ಞಾನದೀಪ್ತಿಯನು ನಷ್ಟವ ಮಾಡಿದ, ಬಹ ಪರಿಯಾಣದೊಗರವ ತುಡುಕಿದ–ತೃಪ್ತಿಪದಾರ್ಥವನು ಕೈಗೊಂಡ. ಪಾಪಕರ್ಮ[ಸಂಹರನು] ಕೂಡಲಸಂಗಮದೇವಾ ನಿಮ್ಮ ಶರಣ–ಎಲೆ ಲಿಂಗವೆ ನಿಮ್ಮ ಶರಣರು ಪಾಪವೆಲ್ಲವು ಪ್ರಸಾದಭೋಗ, ಪುಣ್ಯವೆಲ್ಲವು ಭಕ್ತಿಕ್ರಿಯಾರೂಪವಾಗಿ ಆಚರಿಸುತ್ತಿಹರು.

....

೨–೨ ತನ್ನಲ್ಲಿದ್ದ (ಜ). ೩–೩ X (ಜ)

III– –

1–1 + ಯದ (ಟ, ಡ). 2–2 ಬ (ಟ, ಡ)

....

ತಾಪತ್ರಯವೆಂದಡೆ–ತಾಪತ್ರಯದ ದುಃಖವೆಂದರೆ, ರೂಪಕಾಣುತ್ತ–ರೂಪಾದಿ ಪದಾರ್ಥಗಳ ನಿರೀಕ್ಷಣೆಯ ಮಾಡುತ್ತ, ಕನಲಿದ ಕೋಪದಲ್ಲಿ–ಜೀವಭಾವದಿಂದೆ ಭುಂಜಿಸಬಾರದೆಂಬ ಕ್ರೋಧದ ಸಿಟ್ಟಿನಲ್ಲಿ, ಶಿವಕಳೆಯದ ಕರಡಗೆಯನೆ ಮುಚಿದ–ಸ್ಥೂಲತನುವಿನ ವರ್ತನೆಯನು ಇಷ್ಟಲಿಂಗದ ಸತ್ಕ್ರೀಯಿಂದ ನಿವೃತ್ತಿಯ ಮಾಡಿದನು. ದೀಪಾರತಿಯ ನಂದಿಸಿದ–ಕಾರಣತನುವಿನ ವರ್ತನೆಯನು ಭಾವಲಿಂಗದ ಮನೋರ್ಲಯನಿರಂಜನಪೂಜೆಯಿಂದೆ ನಿವೃತ್ತಿಯ ಮಾಡಿದನು. ಬಹ–ಪ್ರಾಪ್ತವಾಗುವ, ಪರಿಯಾಣದ–ಇಂದ್ರಿಯಂಗಗಳಲ್ಲಿಯ, ಓಗರವ–ವಿಷಯಪದಾರ್ಥಗಳನು, ತುಡುಕಿದ–ಸುಚಿತ್ತಾದಿ ಹಸ್ತಂಗಳಿಂದೆ ಆಚಾರಾದಿ ಲಿಂಗಂಗಳಿಗೆ ಸಮರ್ಪಣೆಯ ಮಾಡಿದನು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ ಶರಣ–ನಿಮ್ಮ ಶಿವಶರಣನು, ಪಾಪಕರ್ಮ [ಸಂಹರನು]–ನಿವೃತ್ತಿಯಾಚರಣೆಯುಳ್ಳಾತನು.

V– –

ತಾಪತ್ರಯವೆಂದಡೆ–ತಾಪ ಮೂಱರ ದುಃಖವೆಂದರೆ, ರೂಪಕಾಣುತ್ತ–ರೂಪಾದಿ ಪದಾರ್ಥಂಗಳ ನಿರೀಕ್ಷಣೆಯ ಮಾಡುತ್ತ, ಕನಲಿದ–ಕೋಪದಲ್ಲಿ ಕ್ರೋಧಿಸಿದ, ಸಿಟ್ಟಿನಲ್ಲಿ, ಶೀವಕಳೆಯ ಕರಡಿಗೆಯ ಮುಚಿದ–ಸ್ಥೂಲತನುವಿನ ವರ್ತನೆಯನು ಲಿಂಗದಲ್ಲಿ ನಿವೃತ್ತಿ ಮಾಡಿದನು. ಧೂಪದ ಗುಂಡಿಯನೊಡೆದ–ಸೂಕ್ಷ್ಮತನುವಿನ ಮಾಯಾಮಲದ ವರ್ತನೆಯನು ಪ್ರಾಣಲಿಂಗದ ನಿರ್ಗುಣಪೂಜೆಯಲ್ಲಿ ನಿವೃತ್ತಿ ಮಾಡಿದನು. ದೀಪಾರತಿಯ ನಂದಿಸಿದ–ಕಾರಣತನುವಿನ ಕಾರ್ಮಿಕ ಮಲದ ವಾಸನೆಯನು ಭಾವಲಿಂಗದ ನಿರಂಜನಪೂಜೆಯಲ್ಲಿ ನಿವೃತ್ತಿ ಮಾಡಿದನು. [ಬಹ] ಪ್ರಾಪ್ತವಾಗುವ, ಪರಿಯಾಣದ ಇಂದ್ರಿಯಂಗಳೆಂಬ ಪಾತ್ರೆಯಲ್ಲಿಯ, ಓಗರವ–ವಿಷಯಪದಾರ್ಥಂಗಳನು, ತುಡುಕಿದ –ಸುಚಿತ್ತಾದಿ ಹಸ್ತಂಗಳಿಂದೆ ಆಚಾರಾದಿ ಷಡ್ವಿಧಲಿಂಗಂಗಳಿಗೆ ಸಮರ್ಪಣೆ ಮಾಡಿದನು. [ಕೂಡಲಸಂಗಮದೇವಾ–] ಎಲೆ ಪರಶಿವಲಿಂಗವೆ, ನಿಮ್ಮ [ಶರಣ–] ನಿಮ್ಮ ಶಿವಶರಣನು, [ಪಾಪಕರ್ಮ ಸಂಹರನು–] ಪಾಪಕರ್ಮದೋಷಕೃತ್ಯ ನಿವೃತ್ತಿಯುಳ್ಳಾತನು.

೯೦೩

ಈ ಲೋಕದ[1] ಭೀತರು ಆ ಲೋಕದ ಕಲಿಗಳು. ಸಾಲೋಕ್ಯ ಸಾಮೀಪ್ಯ ಸಾಯುಜ್ಯರೆಲ್ಲರೂ ಅಜನಿತಂಗೆ ಸರಿಯೆ? ಮೂಜಗದಲ್ಲಿ ನಿರತರು ಕೂಡಲಸಂಗನ ಶರಣರು, ತ್ರಿವಿಧನಜೆಯರಾಗಿ.

I– –

ಈ ಲೋಕದ–ಈ ಮರ್ತ್ಯಲೋಕದ ಪಂಚಮಹಾಪಾತಕಂಗಳಿಗೆ, ಮತ್ತಂ, ಈ ಲೋಕದ –ಈ ದೇಹದ ಅಷ್ಟಭೋಗಮಲತ್ರಯಂಗಳಿಗೆ, ಭೀತರು–ಭಯಸ್ತರಾಗಿ ಬಿಡಲ್ಪಟ್ಟಂಥವರು. ಆ ಲೋಕದ–ಆ ಲೋಕವೆಂದರೆ ಸ್ವರ್ಗಲೋಕವು. ಸ್ವರ್ಗಲೋಕದಲ್ಲಿ ಉಂಟಾದ ಚತುರ್ವಿಧ ಫಲಪದಂಗಳನು ಜಯಿಸುವಲ್ಲಿ, ಕಲಿಗಳು–ಪರಾಕ್ರಮಿಗಳು, ಸಾಲೋಕ್ಯ–"ಸಾಲೋಕೇನ ವರ್ತತೇ

ಸಾಲೋಕ್ಯಂ" ಎಂದು ಶಿವನ ಕುರಿತು ಜಪತಪ ಆರಾಧನೆ ಕ್ರಿಯೆಗಳನು ಮಾಡಿ ಕಾಯವೆರಸಿ ಕೈಲಾಸಕ್ಕೆ ಹೋಗಿ ಹಿಂದೆ ಹಿತ್ತಲು ಮುಂದೆ ರಾಜಾಂಗಣ ನವರಂಗಕೋಟೆ ಸುಳಿ ಮದನಕೈಲೋವೆಗಳಿಂದ ಅಲಂಕಾರವಾದ ಮಂದಿರವನ್ನು ಕಟ್ಟಿಕೊಂಡು ಅಮೃತಾಹಾರಿಗಳಾಗಿ ದಿವ್ಯಶರೀರಿಗಳಾಗಿ ತೇಜಸ್ಸುಳ್ಳವರಾಗಿ ಸೋಮಬೀದಿ ಸೂರ್ಯಬೀದಿಗಳಲ್ಲಿ ತಿರುಗಾಡುವಂಥದೇ. ಸಾಲೋಕ್ಯ ಪದವಿಯು, ಸಾಮೀಪ್ಯ-"ಸಾಮೀಪ್ಯೇನ ಸಹವರ್ತತಿ ಸಾಮೀಪ್ಯಂ" ಎಂದು ಶಿವನ ಸನ್ನಿಧಿಯಲ್ಲಿ ಕುಳಿತುಕೊಂಡು ಶಿವನ ಒಡ್ಡೋಲಗವನ್ನು ನೋಡುವಂಥದೇ ಸಾಮೀಪ್ಯಪದವಿಯು. ಸಾರೂಪ್ಯ-"ಸಾರೂಪೇನ ಸಹವರ್ತಂತಿ ಸಾರೂಪ್ಯಂ" ಎಂದು ಶಿವನಾಮರೂಪವ ಧರಿಸಿಕೊಂಡೈದಾನೋ ತಾನೂ ಅದೇ ರೂಪವ ಧರಿಸಿಕೊಂಡಿರುವಂಥದೆ ಸಾರೂಪ್ಯಪದವಿಯು. ಸಾಯುಜ್ಯ-"ಸಾಯುಜ್ಯೇನ ಸಹವರ್ತತಿ ಸಾಯುಜ್ಯಂ" ಎಂದು ನಿರಕ್ಷೀರ ನ್ಯಾಯದ ಹಾಂಗೆ ರುದ್ರಪಶುಪತಿಗಳ ಹಾಂಗೆ ಶಿವನ ಅರಮನೆಯೇ ತನ್ನ ಅರಮನೆ ತನ್ನ ಅರಮನೆಯೇ ಶಿವನ ಅರಮನೆ. ಶಿವನ ಬೊಕ್ಕಸವೇ ತನ್ನ ಬೊಕ್ಕಸ ತನ್ನ ಬೊಕ್ಕಸವೇ ಶಿವನ ಬೊಕ್ಕಸ. ಶಿವನ ದೇಹವೇ ತನ್ನ ದೇಹ ತನ್ನ ದೇಹವೇ ಶಿವನ ದೇಹ. ಶಿವನಾರೋ ತಾನಾರೋ ಎಂದು ಭಿನ್ನವಿಲ್ಲದೆ ಕೂಡಿರುವಂಥದೇ ಸಾಯುಜ್ಯ ಪದವಿಯು. ಎಲ್ಲರೂ – ಈ ಚತುರ್ವಿಧ ಫಲಪದಂಗಳನು ಪಡೆದನುಭವಿಸಲ್ಪಟ್ಟಂಥವರುಗಳೆಲ್ಲರೂ, ಅಜನಿತಂಗೆ-ಅಯೋನಿಸಂಭವನಾದ ಪರಶಿವಲಿಂಗಕ್ಕೆ?, ಸರಿಯೆ?-ಸಮಾನವೆ?

ಮೂಜಗದಲ್ಲಿ – ತ್ರೈಲೋಕ್ಯದಲ್ಲಿ, ನಿರತರು-ನಿಶ್ಚಯಾರ್ಥವುಳ್ಳವರುಗಳು, ಕೂಡಲಸಂಗನ ಶರಣರು-ಶಿವನ ಚಿತ್ರಭಾಂಗಸ್ವರೂಪರಾದ ಶಿವಶರಣರು, ತ್ರಿವಿಧವನು-ಬ್ರಹ್ಮನುತ್ಪತ್ಯ ವಿಷ್ಣುವಿನ ಸ್ಥಿತಿ ರುದ್ರನ ಹೊಡೆಗಿಚ್ಚನ್ನು, ಅಱಿಯರಾಗಿ-ತಿಳಿಯರಾಗಿ.

III– –

ಈ ಲೋಕದ ಭೀತರು-ಈ ಮರ್ತ್ಯಲೋಕದ ಪ್ರಪಂಚಿನಲ್ಲಿ ಭಯವುಳ್ಳವರು. ಆ ಲೋಕದ ಕಲಿಗಳು-ಶಿವಲೋಕದಲ್ಲಿ ಪರಾಕ್ರಮವುಳ್ಳವರು.

V– –

1 + ಲ್ಲಿ (ಪ)

....

ಈ ಲೋಕದಲ್ಲಿ-ಈ ಮರ್ತ್ಯಲೋಕದ ದುರ್ವತನೆಯಲ್ಲಿ, [ಭೀತರು-] ಭೀತಿಯುಳ್ಳವರು. ಆ ಲೋಕದ ಕಲಿಗಳು-ಕೈಲಾ[ಸ]ದ ಷಟ್ಸ್ಥಲ ಜ್ಞಾನಿಗಳು.

೯೦೪

ತಾಗು ನಿರೋಧ ಆಗುಹೋಗನಱಿಯದ ಶರಣನ ಚರಿತ್ರವ ನೋಡಿ ನೋಡಿ ಬೆಱಗಾದೆನಯ್ಯ ಕೂಡಲಸಂಗಮದೇವರಲ್ಲಿ ತಾನೇ ಸುಯ್ಯಾನಿಯಾಗಿ.

I- -

ತಾಗು ನಿರೋಧ-ಸುಖದುಃಖಂಗಳು, ಆಗುಹೋಗು-ಹುಟ್ಟು ಹೊಂದುಗಳನು, ಅಱಿಯದ--ತಿಳಿಯದ, ಶರಣನ-ಶಿವಶರಣನ, ಚರಿತ್ರವ-ನಡಾವಳಿಯನ್ನು, ನೋಡಿನೋಡಿ-ನಿರೀಕ್ಷಣೆಯ ಮಾಡಿ ಮಾಡಿ, ಬೆಱಗಾದೆನಯ್ಯ-ನಾಸಿಕದ ಮೇಲೆ ತರ್ಜನಿಯನಿಟ್ಟುಕೊಂಡು ಆಶ್ಚರ್ಯಂಬಟ್ಟೆನಯ್ಯ, ಕೂಡಲಸಂಗಮದೇವರಲ್ಲಿ-ಪರಶಿವಲಿಂಗದೇವರ ಪಾದಾರವಿಂದದೊಳಗೆ, ತಾನೇ ಸುಯ್ಯಾನಿಯಾಗಿ-ತಾನೇ ಅತ್ಯಂತ ಸಾವಧಾನವುಳ್ಳಾತನಾಗಿ.

೯೦೫

ಜಗವ ಸುತ್ತಿಪ್ಪುದು ನಿಮ್ಮ ಮಾಯೆ ಅಯ್ಯ; ನಿಮ್ಮ ಸುತ್ತಿಪ್ಪುದು ಎನ್ನ ಮನ ನೋಡಯ್ಯ. ಜಗಕ್ಕೆ ಬಲ್ಲಿದನು ನೀನು, ನಿನಗೆ ಬಲ್ಲಿದನು ನಾನು ಕಂಡಯ್ಯ. ಕರಿಯು ಕನ್ನಡಿಯೊಳಡಗಿದಂತಯ್ಯ, ಎನ್ನೊಳಗೆ ನೀನಡಗಿದೆ ಕೂಡಲಸಂಗಮದೇವಾ.

I- -

ಜಗವ ಸುತ್ತಿಪ್ಪುದು ನಿಮ್ಮ ಮಾಯೆ ಅಯ್ಯ : ಜಗವ-ಬ್ರಹ್ಮಾಂಡವೆಲ್ಲವನು, ಸುತ್ತಿಪ್ಪುದು-ಒಳಕೊಂಡಿಪ್ಪುದು, ನಿಮ್ಮ ಮಾಯೆ-ನಿನ್ನಿಂದುಂಟಾದ ಮಾಯಾಶಕ್ತಿಯು, ಅಯ್ಯ-ಎಲೆ ಲಿಂಗವೆ, ನಿಮ್ಮ ಸುತ್ತಿಪ್ಪುದು ಎನ್ನ ಮನ ನೋಡಯ್ಯ : [ಎನ್ನ ಮನ-] ಎನ್ನ ಮನಸ್ಸು, ನಿಮ್ಮ ಸುತ್ತಿಪ್ಪುದು -ನಿಮ್ಮ ಒಳಕೊಂಡಿಪ್ಪುದು, ನೋಡು-ಕಂಡಾ, ಅಯ್ಯ-ಎಲೆ ಲಿಂಗವೆ. ಜಗಕ್ಕೆ ಬಲ್ಲಿದನು ನೀನು: [ಜಗಕ್ಕೆ-] ಜಗದಾತ್ಮರುಗಳನು ಜನನಮರಣಂಗಳಲ್ಲಿ ತಂದು ಸಂಹರಿಸುವಲ್ಲಿ, ನೀನು-ಪರಶಿವಲಿಂಗವು. ಬಲ್ಲಿದನು-ಸಮರ್ಥನು. ನಿನಗೆ ಒಲ್ಲಿದನು ನಾನು ಕಂಡಯ್ಯ; ನಾನು-ಶರಣನು, ನಿನಗೆ-ಪರಶಿವಲಿಂಗಕ್ಕೆ ಬಲ್ಲಿದನು-ನೀನುಂಟುಮಾಡಿದ ಸಕಲ ಸಂಸಾರಪ್ರಪಂಚನು ಜಯಿಸುವಾತನು, ಕಂಡಾ-ಕಾಣಾ, ಅಯ್ಯ-ಎಲೆ ಲಿಂಗವೆ. ಕರಿಯು ಕನ್ನಡಿಯೊಳಡಗಿದಂತಯ್ಯ: ಕರಿಯು-ಘನಗಾತ್ರವಾದಾನೆಯು, ಕನ್ನಡಿಯೊಳಡಗಿದಂತಯ್ಯ-ಸೂಕ್ಷ್ಮವಾದ ಆದರ್ಶದಲ್ಲಿ ಅಡಗಿ ಹೇಂಗೆ ಮಿಗೆ ಮಾರ್ಪೊಳಿದತ್ತಿಹುದೋ ಹಾಂಗೆ ಚಿತ್ತಿನ ಚಿದಹಂಕಾರಚಿದ್ಭೂಷಣಸ್ವರೂಪವಾದ ಪರಬ್ರಹ್ಮವು ಜ್ಞಾನದರ್ಪಣಸ್ವರೂಪವಾದ ಶರಣನಲ್ಲಿ ಅಡಗಿ ಮಿಗೆ ಮಾರ್ಪೊಳೆವುತ್ತಿರ್ಪುದು. ಎನ್ನೊಳಗೆ ನೀನಡಗಿದೆ: ಎನ್ನೊಳಗೆ ಎನ್ನಂತರಂಗದಲ್ಲಿ, ನೀನು-ಲಿಂಗವು, ಅಡಗಿದೆ-ಲೀನವಾದೆ, ಕೂಡಲಸಂಗಮದೇವಾ ಎಲೆ ಪರಶಿವಲಿಂಗವೆ.

ಶರಣನ ಪ್ರಸಾದಿಸ್ಥಲ

I– –

ಶರಣನ ಪ್ರಸಾದಿಸ್ಥಲ–ಶರಣಸ್ಥಲದೊಳಗಣ ಪ್ರಸಾದಿಸ್ಥಲದಾಚರಣೆಯನ್ನು ನಿರೂಪಿಸುತ್ತಿಹರು.

೯೦೬

ಎನಗೆ ಗುರುವಿನ ಪ್ರಸಾದ, ನಿನಗೆ ಚೆನ್ನನ ಪ್ರಸಾದ, ಎನಗೆಯೂ ನಿನಗೆಯೂ ಸಮಯಾಚಾರ ಸರಿ. ಕೂಡಲಸಂಗಮದೇವಾ, ನೀನೆನಗೆ ಚಿಕ್ಕತಮ್ಮ!

I– –

ಎನಗೆ ಗುರುವಿನ ಪ್ರಸಾದ: ಎನಗೆ–ಶರಣನಿಗೆ, ಗುರುವಿನ ಪ್ರಸಾದ–ನಿಃಕಲಬ್ರಹ್ಮದ ಸ್ವರೂಪವಾದ ಶ್ರೀ ಗುರುನಾಥನ ಪ್ರಸಾದಸೇವನೆ ಉಂಟಾಗಿರ್ಪುದು, ನಿನಗೆ–ಲಿಂಗಕ್ಕೆ, ಚೆನ್ನನ ಪ್ರಸಾದ–ಚೆನ್ನನಯೆಂದರೆ ನಿರಂಜನಬ್ರಹ್ಮವು. ಆ ನಿರಂಜನಬ್ರಹ್ಮವೇ ತಾನಾದ ಜಂಗಮಪ್ರಸಾದಸೇವನೆ ಉಂಟಾಗಿರ್ಪುದು, ಎನಗೆಯೂ–ಶರಣನಿಗೆಯೂ, ನಿನಗೆಯೂ–ಲಿಂಗಕ್ಕೆಯೂ, ಸಮಯಾಚಾರ–ಅಂಗಕ್ಕೆ ಲಿಂಗವೇ ಸಮಯಚಾರ ಪ್ರಾಣಕ್ಕೆ ಜಂಗಮವೇ ಸಮಯಾಚಾರ, ಸರಿ–ಸಮಾನವಾಗಿರ್ಪುದು. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನೀನೆನಗೆ–ಪರಶಿವಲಿಂಗವೆನಗೆ, ಚಿಕ್ಕತಮ್ಮ–ಸಣ್ಣತಮ್ಮನು.

೯೦೭

ಶುದ್ಧಾತ್ಮ ಪರಮಾತ್ಮರಿಬ್ಬರೂ ಒಂದು ರತ್ನಕ್ಕೆ ಹೆಣಗಾಟವನಾ[2]ಡುತ್ತಿ[2]ಹರು. ಅವರ ಹೆಣಗಾಟವ ನೋಡಿ ಆ ರತ್ನವ ಸೆಳೆದುಕೊಂಡಡೆ ಕೂಡಲಸಂಗಮದೇವಂಗೆ ಆರೋಗಣೆಯಾಯಿತ್ತು.

I– –

ಶುದ್ಧಾತ್ಮ ಪರಮಾತ್ಮರಿಬ್ಬರೂ: ಶುದ್ಧಾತ್ಮ–ಅಂಗ ಬೇರೆ ಲಿಂಗ ಬೇರೆಂದು ಲಿಂಗಾಂಗವೆರಡಕ್ಕೂ ಭಿನ್ನವಿಟ್ಟುಕೊಂಡಾರಾಧಿಸುವಂಥ ಸಿದ್ಧಾಂತಿಯು, ಪರಮಾತ್ಮ–ಸಕಲವೇದಶಾಸ್ತ್ರಾಗಮಪುರಾಣಂಗಳನು ಕಲಿತುಕೊಂಡು ಶ್ರುತಿಜ್ಞಾನಬಲದಿಂದ ಅರುಹಿನಿಂದ ನಿರವಯಬ್ರಹ್ಮವನ್ನೇ ಕುರುಹಿಟ್ಟುಕೊಂಡು "ಆತ್ಮಾ ಕೇವಲಃ ಶಿವಃ" ಆತ್ಮನೇ ಬ್ರಹ್ಮವೆಂದು ಹೇಳುವಂಥ ವೇದಾಂತಿಯು, ಇವರಿಬ್ಬರೂ–ದ್ವೈತಾದ್ವೈತಿಗಳಿರ್ವರೂ, ಒಂದು ರತ್ನಕ್ಕೆ–ಒಂದು ಅನರ್ಘ್ಯ ಉತ್ತಮನಾಯಕ ರತ್ನಸ್ವರೂಪವಾದ ಪರಬ್ರಹ್ಮಕ್ಕೆ, ಹೆಣಗಾಟವನಾಡುತ್ತಿಹರು–ಸಾಕಾರವೇ ದೈವ ನಿರಾಕಾರವೇ ದೈವವೆಂದು ಹೋರಾಟವನಾಡುತ್ತಿಹರು. ಅವರ–ದ್ವೈತಾದ್ವೈತಿಗಳ, ಹೆಣಗಾಟವ ನೋಡಿ–ಆಯಾಸವ ಕಂಡು, ಆ ರತ್ನವ ಸೆಳೆದುಕೊಂಡಡೆ–ಅನರ್ಘ್ಯ ಉತ್ತಮನಾಯಕ ಸ್ವರೂಪವಾದ

ಪ್ರರಬ್ರಹ್ಮವನ್ನೇ ಗುರುಮುಖದಿಂದಿಷ್ಟಲಿಂಗವಾಗಿ ಅಂಗದಲ್ಲಿ ಸಂಬಂಧವ ಮಾಡಿಕೊಂಡರೆ, ಕೂಡಲಸಂಗಮದೇವಂಗೆ-ಇಷ್ಟಮಹಾಲಿಂಗಕ್ಕೆ ಆರೋಗಣೆಯಾಯಿತ್ತು-ಆತ್ಮಪದಾರ್ಥವೇ ರೂಪುಪದಾಥವಾಗಿ ಸಮರ್ಪಣೆಯಾಯಿತ್ತು.

II- -

1-1 ಔ, (ಚ.ಜ).

....

ಶುದ್ಧಾತ್ಮ ಪರಮಾತ್ಮರಿಬ್ಬರೂ-ದ್ವೈತಾದ್ವೈತಿಗಳೀರ್ವರೂ, ಒಂದು ರತ್ನಕ್ಕೆ ಹೆಣಗಾಟವನಾಡಿಹರು-ಏಕವಹ ಅನರ್ಘ್ಯ ಉತ್ತಮನಾಯಕರತ್ನ ಸ್ವರೂಪವಾದ ಪ್ರಾಣಲಿಂಗಕ್ಕೆ ಹೋರಾಟವನಾಡಿಹರು. ಅವರ ಹೆಣಗಾಟವ ನೋಡಿ-ಆ ದ್ವೈತಾದ್ವೈತಗಳ ಹೋರಾಟವ ಕಂಡು, ಆ ರತ್ನವ ೧ಸೆಳೆದುಕೊಂಡಡೆ೧-ಆ ಅನರ್ಘ್ಯ ಉತ್ತಮನಾಯಕ ರತ್ನಸ್ವರೂಪವಾದ ಪ್ರಾಣಲಿಂಗವನು ಕಸಕೊಂಡರೆ, ಕೂಡಲಸಂಗಮದೇವಂಗಾರೋಗಣೆಯಾಯಿತ್ತು- ಪರಶಿವಲಿಂಗಕ್ಕರ್ಪಿತವಾಯಿತ್ತು.

೧-೧ ಸೆಳಕೊಂಡರು (ಜ).

III- -

1-1 ಔ (ಟ, ಡ).

....

ಶುದ್ಧಾತ್ಮ ಪರಮಾತ್ಮರಿಬ್ಬರೂ-ಸಿದ್ಧಾಂತಿ ವೇದಾಂತಿಗಳಿರ್ವರೂ, ಒಂದು ರತ್ನಕ್ಕೆ--ಒಂದು ಜ್ಞಾನವೆಂಬ ರತ್ನಕ್ಕೆ, ಹೆಣಗಾಟವನಾಡಿಹರು-ಭಿನ್ನಕ್ರೀ ಭಿನ್ನಜ್ಞಾನದಿಂದೆ ಹೋರಾಡುತ್ತಿದ್ದರು. ಆ ರತ್ನವ ಸೆಳೆದುಕೊಂಡರೆ-ಆ ಪೂರ್ಣಜ್ಞಾನವೆಂಬ ರತ್ನವನು ಬರಸೆಳೆದುಕೊಂಡು ಆಗುಮಾಡಿಕೊಂಡರೆ, ಕೂಡಲಸಂಗಮದೇವಂಗೆ-ಪರಶಿವಲಿಂಗಕ್ಕೆ, ಆರೋಗಣೆಯಾಯಿತ್ತು-ಆತ್ಮಾರ್ಪಣೆಯಾಯಿತ್ತು.

V- -

1-1 ಔ (ಪ).

....

ಶುದ್ಧಾತ್ಮ ಪರಮಾತ್ಮರಿಬ್ಬರೂ-ಸಿದ್ಧಾಂತಿ ವೇದಾಂತಿಗಳಿರ್ವರೂ, ಒಂದು ರತ್ನಕ್ಕೆ-ಅದ್ವಿತೀಯವಾದ ಜ್ಞಾನವೆಂಬ ರತ್ನಕ್ಕೆ, ಹೆಣಗಾಟವನಾಡಿಹರು-ಭಿನ್ನಕ್ರೀ ಭಿನ್ನಜ್ಞಾನದಿಂದೆ ಹೋರಾಡುತ್ತಿಹರು. ಆ ರತ್ನವ ಸೆಳೆದುಕೊಂಡರೆ-ಆ ಪೂರ್ಣಜ್ಞಾನಸ್ವರೂಪವಾದ ಪ್ರಾಣಲಿಂಗವನು ಗುರೂಪದೇಶದಿಂದೆ ತನ್ನಂಗದಲ್ಲಿ ಧರಿಸಿಕೊಂಡರೆ, ಕೂಡಲಸಂಗಮದೇವಂಗಾರೋಗಣೆಯಾಯಿತ್ತು-ಪರಶಿವಲಿಂಗದಲ್ಲಿ ಸಮರ್ಪಣೆಯಾಯಿತ್ತು.

೯೦೮

ಆ ರತ್ನಪ್ರಸಾದವನಾರಾಧಿಸುತ್ತಿರಲು ಆ ಪ್ರಸಾದ[1]ದಲ್ಲಿ[1] ಬೀಳುತ್ತ ಆಳು[2]ತ್ತಿ[3]ದ್ದಿತ್ತು[3] ನೋಡಾ. ಅದ ಹಲಬರು ನೋಡಿ ನೋಡಿ ಹೋಗುತ್ತಿದ್ದಾರು. ಆ ಪ್ರಸಾದ ತಾನೇ ಬಂದು ಎನ್ನ ಸುತ್ತಿಕೊಂಡಿತ್ತು. ಇದ ಪದಾರ್ಥವ ಮಾಡಿಕೊಡಯ್ಯ ಕೂಡಲಸಂಗಮದೇವಾ.

I– –

ಆ ರತ್ನಪ್ರಸಾದವನಾರಾಧಿಸುತ್ತಿರಲು–ಅನರ್ಘ್ಯ ಉತ್ತಮ ನಾಯಕರತ್ನಸ್ವರೂಪವಾದ ಪರಬ್ರಹ್ಮವನ್ನು ಗುರುಮುಖದಿಂದ ಇಷ್ಟಲಿಂಗವಾಗಿ ಅಂಗದಲ್ಲಿ ಸಂಬಂಧವ ಮಾಡಿಕೊಂಡು ಅಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳಿಂದಾರಾಧಿಸುತ್ತಿರಲು, ಆ ಪ್ರಸಾದದಲ್ಲಿ–ಆ ಚಿತ್ಕಲಾಪ್ರಸಾದ ಸ್ವರೂಪವಾದ ಮಹಾಲಿಂಗದಲ್ಲಿ, ಬೀಳುತ್ತ ಆಳುತ್ತಿದ್ದಿತ್ತು–ಹುಟ್ಟುತ್ತ ಹೊಂದುತ್ತ ಅರಿವುತ್ತ ಮರೆವುತ್ತ ಹೊದಕುಳಿಗೊಂಬುತ್ತ ಇದ್ದಿತ್ತು, ನೋಡಾ–ಕಂಡಾ. ಅದ–ಆ ಪರಬ್ರಹ್ಮವನ್ನು, ಹಲಬರು–ಹಲವು ಕೆಲವು ದೇವದಾನವಮಾನವರುಗಳು, ನೋಡಿ ನೋಡಿ–ನಿರೀಕ್ಷಣೆಯ ಮಾಡಿ ಮಾಡಿ, ಹೋಗುತ್ತಿದ್ದಾರು–ಜನನಮರಣಂಗಳಿಗೆ ಈಡಾಗಿ ಹೋಗುತ್ತಿದ್ದಾರು. ಆ ಪ್ರಸಾದ ತಾನೇ–ಆ ಚಿತ್ಕಲಾಪ್ರಸಾದಸ್ವರೂಪವಾದ ಮಹಾಲಿಂಗವು ತಾನೇ, ಬಂದು–ಗುರೂಪದೇಶದಿಂದ್ಯೆದು ಬಂದು, ಎನ್ನ ಸುತ್ತಿಕೊಂಡಿತ್ತು–ಎನ್ನಂಗದಲ್ಲಿ ಇಷ್ಟಲಿಂಗವಾಗಿ ನೆಲೆಗೊಂಡಿತ್ತು. ಇದ ಪದಾರ್ಥವ ಮಾಡಿಕೊಡಯ್ಯ–ಆತ್ಮ ಪದಾರ್ಥವನೇ ರೂಪುಪದಾರ್ಥವಾಗಿ ಸಮರ್ಪಣೆಯ ಮಾಡಿಕೊಡಯ್ಯ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

II– –

3–3 ದ್ದುದು (ಚ, ಜ).

....

ಆ ರತ್ನಪ್ರಸಾದವನಾರಾಧಿಸುತ್ತಿರಲು–ಆತ್ಮನು ಅನರ್ಘ್ಯ ಉತ್ತಮನಾಯಕರತ್ನ ಸ್ವರೂಪವಾದ ಪ್ರಾಣಲಿಂಗವನು ಪೂಜಿಸುತ್ತಿರಲು, ಆ ಪ್ರಸಾದದಲ್ಲಿ ಬೀಳುತ್ತ ಆಳುತ್ತಿದ್ದುದು ನೋಡಾ–ಆ ಪ್ರಾಣಲಿಂಗವು ಆತ್ಮನಲ್ಲಿ ಹುಟ್ಟಿ ಅಡುಗುತ್ತಿದ್ದಿತ್ತು ಕಂಡಾ. ಅದ ಹಲಬರು ನೋಡಿ ನೋಡಿ ಹೋಗುತ್ತಿದ್ದರು–ಆ ಪ್ರಾಣಲಿಂಗಸಂಬಂಧವನು ಷಟ್ಸಮಯಾದಿಗಳು ಕಂಡು ಕಂಡು ಅದು ಅಂಗವಾಗದೆ ವಿಮುಖವಾಗಿ ಭವದತ್ತ ಹೋಗುತ್ತಿದ್ದರು. ಆ ಪ್ರಸಾದ ತಾನೆ ಬಂದು ಎನ್ನ ಸುತ್ತಿಕೊಂಡಿತ್ತು–ಆ ಮಹಾನುಭಾವಪ್ರಸಾದ ಸ್ವಯವೇ ಆಗತವಾಗಿ ಆತ್ಮವನಾವರಿಸಿಕೊಂಡಿತ್ತು. ಇದ ಪದಾರ್ಥವ ಮಾಡಿಕೊಡಯ್ಯಾ ಕೂಡಲಸಂಗಮದೇವಾ–ಇದೀಗ ಮೊದಲೇ ಪೂರ್ಣಪ್ರಸಾದವೆಂಬ ಭಾವನೆ ಇರುತ್ತದೆ. ಇದನೀಗಲೇ ಕ್ರೀಯಲ್ಲಿ ಅರಿದು ಇಷ್ಟಲಿಂಗಕ್ಕೆ ಕಳೆಸಾನಿಧ್ಯವ ಮಾಡುವ ಹಾಂಗೆ ಜೀವಕಳೆಯ ಮಾಡಿಕೊಡಾ ಎಲೆಲಿಂಗವೆ.

III– –

ಆ ರತ್ನಪ್ರಸಾದವಂ-ಆ ಪೂರ್ವಜ್ಞಾನವೆಂಬ ರತ್ನಪ್ರಸಾದವನು. ಆರಾಧಿಸುತ್ತಿರಲು-ಪೂಜಿಸುತ್ತಿರಲು, ಆ ಪ್ರಸಾದದಲ್ಲಿ-ಆ ಪೂರ್ಣಜ್ಞಾನ ಸ್ವರೂಪವಾದ ರತ್ನಪ್ರಸಾದದಲ್ಲಿ, ಬೀಳುತ್ತ-ಅಲ್ಲಿ ಪತನವಾಗುತ್ತ, ಆಳುತ್ತ-ಆ ಪೂರ್ಣಪ್ರಸಾದದಲ್ಲಿಯೇ ಮುಳುಗುತ್ತ ತೇಲುತ್ತ, ಇದ್ದಿತ್ತು ನೋಡಾ-ಆ ಶರಣನ ಮನಸ್ಸು ಅಲ್ಲಿಯೇ ನೆಲಸಿತ್ತು ಕಂಡಾ. ಅದ-ಪೂರ್ಣಜ್ಞಾನಪ್ರಸಾದವನು, ಹಲಬರು-ಷಡುದರುಶನ ಮತಾಂತರಿಗಳು. ನೋಡಿ ನೋಡಿ ಹೋಗುತ್ತಿದ್ದರು-ಭಿನ್ನಕ್ರೀ ಭಿನ್ನಜ್ಞಾನದಿಂದೆ ಭಿನ್ನವಿಟ್ಟು ನಿರೀಕ್ಷಣೆಯ ಮಾಡಿಮಾಡಿ ಭವಕ್ಕೆ ಹೋಗುತ್ತಿದ್ದರು ಕಂಡಾ. ಆ ಪ್ರಸಾದ ತಾನೇ-ಆ ಪೂರ್ಣ ಜ್ಞಾನವೆಂಬ ರತ್ನಪ್ರಸಾದ ತಾನೇ, ಬಂದು-ತನ್ನ ಕರುಣದಿಂದೆ ತಾನೆ ಆಗಮಿಸಿ, ಎನ್ನ-ಶರಣನ, ಸುತ್ತಿಕೊಂಡಿತ್ತು-ನನ್ನ ಸರ್ವಾಂಗದಲ್ಲಿಯೂ ಸರ್ವಾಂಗಲಿಂಗವಾಗಿ ಸಂಬಂಧವಾಯಿತ್ತು. ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ, ಇದ ಪದಾರ್ಥವ ಮಾಡಿಕೊಡಯ್ಯ-ಆತ್ಮದ್ರವ್ಯವ ಮಾಡಿ ಅಂಗೀಕರಿಸಿಕೊಳ್ಳಯ್ಯ.

V- -

1-1 ಅಲ್ಲಿಯೇ (ಪ), 2+ತ್ತೇಳು (ಪ).

....

ಆ ರತ್ನಪ್ರಸಾದವ-ಆ ಪೂರ್ಣಜ್ಞಾನವೆಂಬ ಪ್ರಸನ್ನಸ್ವರೂಪವಾದ ವಸ್ತುವಿಗೆ. ಆರೋಗಿಸುತ್ತಿರಲು-ಸಕಲ ಪದಾರ್ಥವನರ್ಪಿಸಿ ಆ ಪ್ರಸಾದವನು ಶರಣ ಸೇವಿಸುತ್ತಿರಲು, ಆ ಪ್ರಸಾದ-ಆ ಪ್ರಸನ್ನ ಸ್ವರೂಪವಾದ ಲಿಂಗವು, ಅಲ್ಲಿಯೇ-ಆ ಶರಣನಲ್ಲಿಯೇ, ಆಳುತ್ತೇಳುತ್ತಿದ್ದಿತ್ತು ನೋಡಾ-ಅಂತರಂಗ ಬಹಿರಂಗದಲ್ಲಿ ಇಷ್ಟಪ್ರಾಣವಾಗಿ ನೆಲಸಿರ್ಪುದು ಕಂಡಾ.[೧] ಅದ-ಜ್ಞಾನವೆಂಬ ರತ್ನವನು, ಹಲಬರು-ಷಡುದರ್ಶನ ಪಡುಮಂತದವರು, ನೋಡಿನೋಡಿ-ಭಿನ್ನಜ್ಞಾನಂಗಳಿಂದ ನಿರೀಕ್ಷಣೆಯ ಮಾಡಿ ಮಾಡಿ, ಹೋಗುತ್ತಿದ್ದಾರು-ಭವಭಧದಲ್ಲಿ ಎಡೆಯಾಡುತ್ತಿದ್ದಾರು. ಆ ಪ್ರಸಾದ ತಾನೆ ಬಂದು-ಆ ಪೂರ್ಣಜ್ಞಾನವೆಂಬ ರತ್ನಪ್ರಸಾದ ತಾನೆ ಬಂದು ಎಯ್ದಿ, ಎನ್ನ-ಶರಣನ, ಸುತ್ತಿಕೊಂಡಿತ್ತು-ಎನ್ನ ಸರ್ವಾಂಗದಲ್ಲಿಯೂ ಸರ್ವಾಂಗವಾಗಿ ಸಂಬಂಧವಾಯಿತ್ತು. ಕೂಡಲಸಂಗಮದೇವ-ಎಲೆ ಪರಶಿವಲಿಂಗವೆ, ಇದ ಪದಾರ್ಥವ ಮಾಡಿ ಕೊಡಯ್ಯ-ಆ ರತ್ನದ್ರವ್ಯವಮಾಡಿ ಅಂಗೀಕರಿಸಿಕೊಳ್ಳಯ್ಯ.

....

೧-೧ + ಆ ಜ್ಞಾನರತ್ನವನು ಮತ್ತಂ ಅಲ್ಲಿ ಕ್ರಿಯಾಜ್ಞಾನರಹಿತವಾದ ದ್ವೈತಾದ್ವೈತಿಗಳ ಮಧ್ಯದಲ್ಲಿ ಬೀಳುತ್ತಲಿದ್ದಿತ್ತು. ಆಳಿ ಮುಳುಗುತ್ತಿದ್ದಿತ್ತು ಕಂಡಾ. (ಪ).

ಎಲ್ಲರ ಗಂಡರು ಬೇಟೆಂಗೆ ಹೋದರು ನೀನೇಕೆ ಹೋಗೆ, ಎಲೆ ಗಂಡನೆ? ಸತ್ತುದ ತಾರದಿರು, ಕೈಮುಟ್ಟಿ ಕೊಲ್ಲದಿರು, ಅಡಗಿಲ್ಲದೆ ಮನೆಗೆ ಬಾರದಿರು! ದೇವರ ಧರ್ಮ[1]ದಿಂದ[2] ಒಂದು[1] ಬೇಂಟೆ ದೊರೆಕೊಂಡಡೆ ಕೂಡಲಸಂಗಮದೇವಂ[2]ಗೆ ಅರ್ಪಿತವ ಮಾಡುವ ಎಲೆ ಗಂಡನೆ[3].

I– –

ಎಲ್ಲರ ಗಂಡರು–ಎಲ್ಲರ ರಮಣರು, ಬೇಂಟೆಗೆ ಹೋದರು–ಬೇಂಟೆಯನಾಡುವುದಕ್ಕೆ ಎಯ್ದು ಹೋದರು, ನೀನೇಕೆ ಹೋಗೆ ಎಲೆ ಗಂಡನೆ?–ನೀನೇನು ಕಾರಣಕ್ಕೆ ಹೋಗಲೊಲ್ಲೆ ರಮಣನೆ? ಸತ್ತುದ ತಾರದಿರು–ಸತ್ತಂಥ ಪ್ರಾಣಿಯನ್ನು ಮನೆಗೆ ತೆಗೆದುಕೊಂಡು ಬಾರದಿರು, ಕೈಮುಟ್ಟಿ ಕೊಲ್ಲದಿರು–ಕೈಮುಟ್ಟಿ ಪ್ರಾಣಹಿಂಸೆಯ ಮಾಡದಿರು. ಅಡಗಿಲ್ಲದೆ–ಮಾಂಸವಿಲ್ಲದೆ, ಮನೆಗೆ ಬಾರದಿರು–ಗೃಹಕ್ಕೆ ಎಯ್ತರದಿರು. ದೇವರ ಧರ್ಮದಿಂದ–ಮನೆದೈವ ಕುಲದೈವದ ಕೃಪೆಯಿಂದ, ಒಂದು ಬೇಂಟೆ ದೊರಕೊಂಡಡೆ–ಒಂದು ಎರಳೆಯ ಮರಿಯಾಗಲಿ ಶಶಕನ ಮರಿಯಾಗಲಿ ಸಿಕ್ಕರೆ, ಕೂಡಲಸಂಗಮದೇವಂಗೆ–ಸಮಸ್ತರನು ಪ್ರತಿಪಾಲನವ ಮಾಡುವಂಥ ರಾಜನಿಗೆ, ಅರ್ಪಿತವ ಮಾಡುವ–ಆಹುತಿಯನ್ನು ಕೊಡುವ, ಎಲೆ ಗಂಡನೆ–ಎಲೆ ರಮಣನೆ ಎಂಬ ದೃಷ್ಟೋಮಾನದ ಹಾಂಗೆ.

● ಎಲ್ಲರ ಗಂಡರು–ದ್ವೈತಾದ್ವೈತ ಭಿನ್ನಯೋಗಾಭ್ಯಾಸಿಗಳ ಅಂಗ ಮನ ಆತ್ಮಾಂಗದಲ್ಲಿ ನೆಲೆಗೊಂಡಿರುವ ಇಷ್ಟಪ್ರಾಣಭಾವಲಿಂಗಗಳು, ಬೇಂಟೆಗೆ ಹೋದರು–ಭಿನ್ನವಿಟ್ಟುಕೊಂಡು ಅರುಹಿಸಿ ಭಿನ್ನವಿಟ್ಟುಕೊಂಡು ಧ್ಯಾನಿಸಿ ಭಿನ್ನವಿಟ್ಟುಕೊಂಡು ಪೂಜಿಸಿ ಆ ಪೂಜೆಗೆ ಕಿಂಚಿನ್ಮಾತ್ರ ಫಲಪದಂಗಳನ್ನು ಕರುಣಿಸಿಕೊಟ್ಟು ತಮ್ಮ ತಪ್ಪಿಸಿಕೊಂಡು ವಿಲಕ್ಷಣವಾಗಿ ಹೋದರು. ನೀನೇಕೆ ಹೋಗೆ–ನೀನು ಅವರ ಹಾಂಗೆ ಭಿನ್ನವಿಟ್ಟುಕೊಂಡು ಅರುಹಿಸಿ ಭಿನ್ನವಿಟ್ಟುಕೊಂಡು ಧ್ಯಾನಿಸಿ ಭಿನ್ನವಿಟ್ಟುಕೊಂಡು ಪೂಜಿಸಿ ಆ ಪೂಜೆಗೆ ತಕ್ಕ ಕಿಂಚಿನ್ಮಾತ್ರ ಫಲಪದಂಗಳನು ಕರುಣಿಸಿಕೊಟ್ಟು ತನ್ನ ತಪ್ಪಿಸಿಕೊಂಡು ವಿಲಕ್ಷಣವಾಗಿ ಹೋಗಲೊಲ್ಲೆ, ಎಲೆ ಗಂಡನೆ?–ಎಲೆ ಇಷ್ಟಲಿಂಗವೆಂಬ ರಮಣನೆ? ಸತ್ತುದ ತಾರದಿರು–ಜ್ಞಾನಹೀನವಾದ ವರ್ತನೆಯನ್ನು ಉಂಟುಮಾಡದಿರು, ಕೈಮುಟ್ಟಿ ಕೊಲ್ಲದಿರು–ತಪನಿಗ್ರಹಾದಿಗಳಿಂದ ದೇಹವನ್ನು ದಂಡಿಸದಿರು. ಅಡಗಿಲ್ಲದೆ–ಸಮರಸಪೂಜಾಕ್ರಿಯೆಗಳಿಲ್ಲದೆ, ಮನೆಗೆ ಬಾರದಿರು–ಅಂತರಂಗದಲ್ಲಿ ಪ್ರಾಣಲಿಂಗವಾಗಿ ಬಿಜಯಂಗೆಯ್ಯದಿರು, ದೇವರ ಧರ್ಮದಿಂದ–ಶ್ರೀಗುರುನಾಥನ ಕೃಪೆಯಿಂದ, ಬೇಂಟೆ ದೊರೆಕೊಂಡಡೆ–ಇಷ್ಟಲಿಂಗದ ಚಿತ್ಕಲೆಯೇ ಅಂತರಂಗದಲ್ಲಿ ಪ್ರಾಣಲಿಂಗವಾಗಿ ನೆಲೆಗೊಂಡರೆ, ಕೂಡಲಸಂಗಮದೇವಂಗೆ–ಇಷ್ಟಮಹಾಲಿಂಗಕ್ಕೆ, ಅರ್ಪಿತವ ಮಾಡುವ–ಆತ್ಮ ಪದಾರ್ಥವನ್ನೇ ರೂಪು ಪದಾರ್ಥವಾಗಿ ಸಮರ್ಪಣೆಯ ಮಾಡುವ, ಎಲೆ ಗಂಡನೆ–ಎಲೆ ಇಷ್ಟಲಿಂಗವೆಂಬ ರಮಣನೆ.

II– –

1–1 ದಲೊಂದು (ಚ, ಜ).

....

ಎಲ್ಲರ ಗಂಡರು-ಸಮಸ್ತ ದ್ವೈತಾದ್ವೈತಕ್ಕೆ ಕರ್ತೃವಾದ ಭಿನ್ನಲಿಂಗಂಗಳೆಂಬ ವಲ್ಲಭರು, ಬೇಂಟೆಗೆ ಹೋದರು-ಭಿನ್ನಪೂಜಾಕ್ರಿಗಳನು ಕೈಕೊಂಡು ಫಲಪದಂಗಳ ತರುವುದಕ್ಕೆ ಹೋದರು. ನೀನೇಕೆ ಹೋಗೆ ಎಲೆ[೧] ಗಂಡನೆ-ನೀನೇನು ಕಾರಣ ಎನ್ನಿಂದ ಭಿನ್ನವಿಟ್ಟು ಪೂಜಾಕ್ರೀಗಳ ಕೈಕೊಂಡು ಫಲ ಪದಂಗಳನು ತರುವುದಕ್ಕೆ ಹೋಗೆ ಎಲೆ ಇಷ್ಟಲಿಂಗವೆಂಬ ಪುರುಷನೆ, ಸತ್ತುದ ತಾರದಿರು-ಮೃತಿಗತಕ್ಕೆ ಕಾರಣವಾದ ದೇಹಭಾವವನುಂಟು ಮಾಡಿಕೊಂಡು ಬರದಿರು. ಕೈಮುಟ್ಟಿ ಕೊಲ್ಲದಿರು-ಆತ್ಮನ ಬಳಲಿಸದಿರು. ಅಡಗಿಲ್ಲದೆ ಮನೆಗೆ ಬಾರದಿರು-ತೃಪ್ತಿಪದಾರ್ಥವನು ಕೈಕೊಳ್ಳ[೨]ದೆ[೨] ಅಂತರಂಗವೆಂಬ ಗೃಹಕ್ಕೆಯ್ದದಿರು. ದೇವರ ಧರ್ಮದಲೊಂದು ಬೇಂಟೆ ದೊರೆಕೊಂಡಡೆ-ದಿವ್ಯಕಾಂತಿಮೂರ್ತಿಯ ಸುಕೃತದಿಂದ ಏಕವಾದಂಥ ಉನ್ಮಾನಸವೆಂಬ ಬೇಹುಗಾಕ್ರೀಯ ಪ್ರಾಪ್ತಿಯಾದರೆ, ಕೂಡಲಸಂಗಮದೇವಂಗರ್ಪಿತವ ಮಾಡುವೆನೆಲೆ ಗಂಡನೆ-ಪರಶಿವಕ್ಕೆ ಲಿಂಗಕ್ಕೆ ನಿವೇದಿಸುವೆನೆಲೆ ಪುರುಷನೆ.

● ಮತ್ತಂ, ಸಮಸ್ತ ಬ್ರಹ್ಮ ವಿಷ್ಣ್ವಾದಿಗಳೆಂಬ ಪುರುಷರು ಭಿನ್ನಪೂಜಾಕ್ರೀಗಳನು ಕೈಕೊಂಡು ಅವರಿಗೆ ಇಷ್ಟಾರ್ಥಸಿದ್ಧಿಯೆಂಬ ಫಲಪದಂಗಳ ತರುವುದಕ್ಕೆ ಹೋದರು. ನೀನೇನು ಕಾರಣ ಎನ್ನಿಂದ ಭಿನ್ನವಿಟ್ಟು ಪೂಜಾಕ್ರೀಗಳ ಕೈಕೊಂಡು ಫಲಪದಂಗಳ ತರುವುದಕ್ಕೆ ಹೋಗೆ? ಎಲೆ ಇಷ್ಟಲಿಂಗವೆಂಬ ಪುರುಷನೆ. ಸರ್ವಜೀವದಯಾಪರನೊಬ್ಬ ಗಣೇಶ್ವರನೆಂದು ವೇದಾಂತಜ್ಞಾನವನುಂಟು ಮಾಡಿಕೊಂಡು ಬಾರದಿರು. ಸರ್ವಜನಪ್ರಳಯಕನವನೊಬ್ಬ ಗಣೇಶ್ವರನೆಂದು ಸಿದ್ಧಾಂತಕ್ರೀಗಳನುಂಟು ಮಾಡಿಕೊಂಡು ಬಾರದಿರು. ತೃಪ್ತಿಪದಾರ್ಥವನು ಕೈಕೊಳ್ಳದೆ ಅಂತರಂಗವೆಂಬ ಗೃಹಕ್ಕೆಯ್ದದಿರು. ದಿವ್ಯಕಾಂತಿಮೂರ್ತಿಯ ಸುಕೃತದಿಂದ ಏಕಧ್ಯಾನವೆಂಬ ಬೇಹುಗಾರ ಕ್ರೀಯು ಪ್ರಾಪ್ತಿಯಾದರೆ ಪರಶಿವಲಿಂಗಕ್ಕೆ ನಿವೇದಿಸುವೆನೆಂಬುದರ್ಥ.

....

೧ + ಲಿಂಗವೆಂಬ (ಜ), ೨-೨ ದ (ಚ).

III- -

1-2 ರಲ್ಲಿ (ಟ, ಡ).

....

ಎಲ್ಲರ ಗಂಡರು: ಎಲ್ಲರ-ಸಮಸ್ತ ಆತ್ಮರುಗಳ, ಗಂಡರು-ವಲ್ಲಭರಾದ ವಿಷ್ಣುವಿರಿಂಚಿ ಮೊದಲಾದವರೆಲ್ಲರು, ಬೇಂಟೆಗೆ ಹೋದರು-ಪ್ರಪಂಚಿನ ಸರದಿಯ ವಿನೋದಿಸುವುದಕ್ಕಾಗಮಿಸಿದರು. ಎಲೆ ಗಂಡನೆ-ಇಷ್ಟಲಿಂಗದೇವನೆಂಬ ಎಲೆ[೩] ಪುರುಷನೆ, ನೀನೇಕೆ ಹೋಗೆ-ನೀನೇನು ಕಾರಣಕ್ಕೆ ಪ್ರಪಂಚಿನ ಸರವಿಗಿಚ್ಛೈಸಲೊಲ್ಲೆ. ಸತ್ತುದ-ಸದ್ರೂಪವಾದಂಥ ವಸ್ತುವನು, ತಾರದಿರು-ಪ್ರಪಂಚಿನ ದಿಕ್ಕಿಗಭಿಮುಖವಾಗಿಸದಿರು. ಕೈಮುಟ್ಟಿ ಕೊಲ್ಲದಿರು-ಸುಚಿತ್ತಾದಿ ಹಸ್ತಗಳಿಂದ ಇಂದ್ರಿಯಂಗಳನು

ದಂಡಿಸದಿರು. ಅಡಗಿಲ್ಲದೆ-ಚಿದಾತ್ಮನೆಂಬ ಸರವಿ ದೊಱಕೊಂಡಲ್ಲದೆ, ಮನೆಗೆ ಬಾರದಿರು-ಚಿದಂಗಕ್ಕಾಗಮಿಸದಿರು. ದೇವರ ಧರ್ಮದಲ್ಲಿ-ಪರಶಿವಲಿಂಗದ ದಯದಿಂದಲಿ, ಒಂದು ಬೇಂಟೆ ದೊಱಕೊಂಡರೆ-ಚಿದಾತ್ಮನೆಂಬ ದ್ರವ್ಯವು ಪ್ರಾಪ್ತಿಯಾದರೆ. ಕೂಡಲಸಂಗಮದೇವಂಗೆ-ಪರಶಿವಲಿಂಗಕ್ಕೆ, ಎಲೆ ಗಂಡನೆ-ಎಲೆ ವಲ್ಲಭನೆ, ಅರ್ಪಿತವ ಮಾಡುವೆ-ಸಮರ್ಪಣೆಯನು ಎಸಗುವೆನು.

....

3 + ಪರಮ (ಡ).

IV– –

೩-೩ ಗಾರೋಗಣೆಯಾಯಿತ್ತು (೧೬೨೫)

....

ಮಾಯಾಶಕ್ತಿಯರೊಲ್ಲಭರಾದ ದ್ವೈತಾದ್ವೈತಿಗಳು ಫಲಪದ ಮುಕ್ತಿಗಳ ಕುರಿತು ಭಿನ್ನಕ್ರಿಯೆಯನಾಚರಿಸುತ್ತಿಹರು. ಜ್ಞಾನಶಕ್ತಿವಲ್ಲಭನಪ್ಪ ಶರಣನ ಫಲಪದ ಮುಕ್ತಿಗಳ ಕುರಿತು ಉಪಾಧಿಕ್ರಿಯೆಗಳ ಮಾಡಲಿಲ್ಲವೆಂಬುದೀಗ, ಎಲ್ಲರ ಗಂಡರು ಬೇಂಟೆಗೆ ಹೋದರು ನೀನೇಕೆ ಹೋಗೆ ಎಲೆಗಂಡನೆಂಬ ಶಬ್ದಕ್ಕರ್ಥ. ಜ್ಞಾನಹೀನವಾದ ಜೀವಭಾವವನುಂಟುಮಾಡಿಕೊಳಬೇಡವೆಂಬುದೀಗ, ಸತ್ತುದ ತಾರದಿರು ಎಂಬ ಶಬ್ದಕ್ಕರ್ಥ, ತಪನಿಗ್ರಹಾದಿಗಳಿಂದ ಆತ್ಮದಂಡಣೆಯ ಮಾಡಬಾರದೆಂಬುದೀಗ, ಕೈಮುಟ್ಟಿ ಕೊಲ್ಲದಿರು ಎಂಬ ಶಬ್ದಕ್ಕರ್ಥ. ಇಷ್ಟಲಿಂಗ ಸಂಬಂಧ ಸತ್ಕ್ರಿಯಾಚಾರನೊಳಕೊಂಡು ಪ್ರಾಣಲಿಂಗದಲ್ಲೈದ ಚಿತ್ತೆಂಬುದೀಗ, ಅಡಗಿಲ್ಲದೆ ಮನೆಗೆ ಬಾರದಿರು ಎಂಬ ಶಬ್ದಕ್ಕರ್ಥ. ಚಿತ್ಸ್ವರೂಪವಾದ ಶರಣನು ಗುರುಕರುಣದಿಂದ ಜ್ಞಾನಕಲಾತ್ಮನ ಲಿಂಗಾರ್ಪಿತವ ಮಾಡಿ ಮುಕ್ತನಾದನೆಂಬುದೀಗ, ದೇವರ ಧರ್ಮದಲೊಂದು ಬೇಟೆ ದೊರಕೊಂಡರೆ ಕೂಡಲಸಂಗಮದೇವಂಗಾರೋಗಣೆಯಾಯಿತ್ತೆಂಬ ಶಬ್ದಕ್ಕರ್ಥ."

....

೪ ಈ ವಚನ ಮತ್ತು ಟೀಕು 'ತ' (IV) ಪ್ರತಿಯಲ್ಲಿರದೆ, ೧೬೨೫ನೆಯ ನಂಬರಿನ ಪ್ರತಿಯಲ್ಲಿದೆ(ಸಂ).

V– –

1–2 ದಲಿ (ಪ).

....

ಎಲ್ಲರ-ಸಮಸ್ತರ, ಗಂಡರು-ವಿಷ್ಣುವಿರಿಂಚಿಗಳು, ಬೇಂಟೆಗೆ ಹೋದರು-ಪ್ರಪಂಚಿನ ಸರವಿಯ ವಿನೋದಿಸುವುದಕ್ಕೆಯ್ದಿದರು. ಎಲೆ ಗಂಡನೆ-ಎಲೆ ಇಷ್ಟಲಿಂಗವೆಂಬ ವಲ್ಲಭನೆ, ನೀನೇಕೆ ಹೋಗೆ-ನೀನೇನು ಕಾರಣಕ್ಕೆ ಪ್ರಪಂಚಿನ ಸರವಿಗೆಯ್ದಲೊಲ್ಲೆ. ಸತ್ತುದ ತಾರದಿರು-ಸದ್ರೂಪವಾದ ವಸ್ತುವನು ಭವಕ್ಕೆ ಹಾಕದಿರು. ಕೈಮುಟ್ಟಿ ಕೊಲ್ಲದಿರು-ಸುಚಿತ್ತಾದಿ ಹಸ್ತಂಗಳಿಂದೆ ಇಂದ್ರಿಯಂಗಳ ದಂಡಿಸದಿರು. ಅಡಗಿಲ್ಲದೆ-ಚಿದಾತ್ಮನೆಂಬ ಸರವಿ ದೊರೆಕೊಂಡಲ್ಲದೆ, ಮನೆಗೆ ಬಾರದಿರು-ಚಿದಂಗಕ್ಕೆಯ್ದದಿರು.

ದೇವರ ಧರ್ಮದಲಿ–ಪರಶಿವನ ದಯದಿಂದೆ ಒಂದು ಬೇಂಟೆ ದೊರಕೊಂಡರೆ–ಚಿದಾತ್ಮನೆಂಬ ಪದಾರ್ಥವು ಪ್ರಾಪ್ತವಾದರೆ, ಕೂಡಲಸಂಗಮದೇವಂಗೆ ಅರ್ಪಿತವ ಮಾಡುವೆ–ಮಹಾಲಿಂಗಕ್ಕೆ ಸಮರ್ಪಣೆಯ ಮಾಡುವೆನು.

ಶರಣನ ಪ್ರಾಣಲಿಂಗಿಸ್ಥಲ

I– –

ಶರಣನ ಪ್ರಾಣಲಿಂಗಿಸ್ಥಲ–ಶರಣಸ್ಥಲದೊಳಗಣ ಪ್ರಾಣಲಿಂಗಿಸ್ಥಲದಾಚರಣೆಯನ್ನು ನಿರೂಪಿಸುತ್ತಿಹರು.

೯೧೦

ಕಣ್ಣೊಳಗೆ ಕಣ್ಣಿದ್ದು ಕಾಣಲೇಕಜೆ[1]ಯಿ[1]ರಯ್ಯ? ಕಿವಿಯೊಳಗೆ ಕಿವಿಯಿದ್ದು ಕೇಳಲೇಕಜಿ[3][1]ಯಿ[1]ರಯ್ಯ? ಘ್ರಾಣದೊಳಗೆ ಘ್ರಾಣವಿದ್ದು ವಾಸಿಸಲೇಕಜೆ[1]ಯಿ[1]ರಯ್ಯ? ಜಿಹ್ವೆಯೊಳಗೆ ಜಿಹ್ವೆ[1]ಯಿ[1]ದ್ದು ರುಚಿಸಲೆಕಜೆ[1]ಯಿ[1]ರಯ್ಯ? [2]ತ್ವಕ್ಕಿನೊಳಗೆ ತ್ವಕ್ಕಿದ್ದು ಸೋಂಕಲೇಕಜೆಯಿರಯ್ಯ? ಪ್ರಾಣದೊಳಗೆ ಪ್ರಾಣವಿದ್ದುದನೇಕಜೆ[1]ಯಿ[1]ರಯ್ಯ? ಕಾಯದೊಳಗೆ ಕಾಯವಿದ್ದು [3]ಬಿಡದು[3] ಬೇಱಾಗದು. ಕೂಡಲಸಂಗಮದೇ[4]ವಾ ನೀ[4]ನಿಕ್ಕಿದ ಅಣಕದ ಭೇದವ ಭೇದಿಸಬಾರ[5]ದು.[5]

I– –

ಕಣ್ಣೊಳಗೆ ಕಣ್ಣಿದ್ದು: ಕಣ್ಣೊಳಗೆ–ನೇತ್ರದೊಳಗೆ ಕಣ್ಣಿದ್ದು–ಪ್ರತಿನಯನವಾದ ಶಿವಲಿಂಗ ನೆಲಸಿರುವಂಥದನು, ಕಾಣಲೇಕಜೆಯಿರಯ್ಯ: [ಕಾಣಲು–] ನೇತ್ರೇಂದ್ರಿಯಮುಖದಲ್ಲಿ ಬರಲ್ಪಟ್ಟ ಚಿತ್ರವಿಚಿತ್ರವಾದ ರೂಪುಪದಾರ್ಥವನ್ನು ಶಿವಲಿಂಗಕ್ಕೆ ಸಮರ್ಪಿಸಿ ಆ ಶಿವಲಿಂಗ ಮುಂತಾಗಿ ನಿರೀಕ್ಷೆಯ ಮಾಡುವಂಥದನು, ಯಾಕಜೆಯಿರಯ್ಯ–ಏನು ಕಾರಣಕ್ಕೆ ತಿಳಿಯಿರಯ್ಯ. ಕಿವಿಯೊಳಗೆ–ಶ್ರೋತ್ರೇಂದ್ರಿಯದಲ್ಲಿ, ಕಿವಿಯಿದ್ದು–ಪ್ರತಿಶ್ರವಣವಾದ ಪ್ರಸಾದ ಲಿಂಗವು ನೆಲೆಗೊಂಡಿರುವಂಥದನು, ಕೇಳಲೇಕಜೆಯಿರಯ್ಯ; [ಕೇಳಲು–] ಆ ಶ್ರೋತ್ರೇಂದ್ರಿಯಮುಖದಲ್ಲಿ ಬರಲ್ಪಟ್ಟ ನಾದಾದಿ ಶಬ್ದಪದಾರ್ಥವನ್ನು ಪ್ರಸಾದ ಲಿಂಗಕ್ಕೆ ಸಮರ್ಪಿಸಿ ಆ ಪ್ರಸಾದಲಿಂಗ ಮುಂತಾಗಿ ಆಲಿಸುವಂಥದನು, ಯಾಕಜೆಯಿರಯ್ಯ–ಏನು ಕಾರಣಕ್ಕೆ ತಿಳಿಯರಯ್ಯ. ಘ್ರಾಣದೊಳಗೆ–ನಾಸಿಕೇಂದ್ರಿಯದಲ್ಲಿ, ಘ್ರಾಣವಿದ್ದು–ಪ್ರತಿಘ್ರಾಣವಾದಾಚಾರಲಿಂಗವು ನೆಲೆಗೊಂಡಿರ್ದು, ವಾಸಿಸಲೇಕಜೆಯಿರಯ್ಯ; [ವಾಸಿಸಲು]– ಘ್ರಾಣೇಂದ್ರಿಂಯಮುಖದಲ್ಲಿ ಬರಲ್ಪಟ್ಟ ಚಂಪಕಾದಿಕುಸುಮ ಚಂದನಾದಿಗಂಧಪದಾರ್ಥವನ್ನು ಆಚಾರಲಿಂಗ ಮುಂತಾಗಿ ಘ್ರಾಣಿಸುವಂಥದನು ಯಾಕಜೆಯಿರಯ್ಯ–ಏನು ಕಾರಣಕ್ಕೆ ತಿಳಿಯಿರಯ್ಯ. ಜಿಹ್ವೆಯೊಳಗೆ ರಸನೇಂದ್ರಿಯಲ್ಲಿ, ಜಿಹ್ವೆಯಿದ್ದು–ಪ್ರತಿಜಿಹ್ವೆಯಾದ ಗುರುಲಿಂಗವು ನೆಲೆಗೊಂಡಿದ್ದು ರುಚಿಸಲೇಕಜೆಯಿರಯ್ಯ [ರುಚಿಸಲು]–ಜಿಹ್ವೇಂದ್ರಿಯಮುಖದಲ್ಲಿ

ಬರಲ್ಪಟ್ಟ ಮಧುರಾದಿ ಷಡ್ರುಚಿಪದಾರ್ಥವನ್ನು ಆ ಗುರುಲಿಂಗಕ್ಕೆ ಸಮರ್ಪಿಸಿ ಗುರುಲಿಂಗ ಮುಂತಾಗಿ ರುಚಿಸುವಂಥದನು, ಯಾಕಜೆಯಿರಯ್ಯ–ಏನು ಕಾರಣಕ್ಕೆ ತಿಳಿಯರಯ್ಯ. ತ್ವಕ್ಕಿನೊಳಗೆ–ತ್ವಗೇಂದ್ರಿಯದಲ್ಲಿ ತ್ವಕ್ಕಿದ್ದು–ಪ್ರತಿ ತ್ವಕ್ಕಾದ ಜಂಗಮಲಿಂಗವು ನೆಲೆಗೊಂಡಿದ್ದು, ಸೋಂಕಲೇಕಜೆಯಿರಯ್ಯ: [ಸೋಂಕಲು] ತ್ವಗೇಂದ್ರಿಯಮುಖದಲ್ಲಿ ಬರಲ್ಪಟ್ಟ ಮೃದಾದಿಸರ್ಶನ ಪದಾರ್ಥವನ್ನು ಜಂಗಮಲಿಂಗಕ್ಕೆ ಸಮರ್ಪಿಸಿ ಆ ಜಂಗಮಲಿಂಗ ಮುಂತಾಗಿ ಸೋಂಕುವುದನು ಯಾಕಜೆಯಿರಯ್ಯ ಏನು ಕಾರಣಕ್ಕೆ ತಿಳಿಯಿರಯ್ಯ.

ಪ್ರಾಣದೊಳಗೆ–ಹೃದಯೇಂದ್ರಿಯದಲ್ಲಿ ಪ್ರಾಣವಿದ್ದುದನು–ಪ್ರತಿಹೃದಯವಾದ ಮಹಾಲಿಂಗವು ನೆಲೆಗೊಂಡಿದ್ದುದನು ಯಾಕಜೆಯಿರಯ್ಯ–ಹೃದಯೇಂದ್ರಿಯಮುಖದಲ್ಲಿ ಬರಲ್ಪಟ್ಟ ಸಮಸ್ತತೃಪ್ತಿ ಪದಾರ್ಥವನ್ನು ಮಹಾಲಿಂಗಕ್ಕೆ ಸಮರ್ಪಿಸಿ ಆ ಮಹಾಲಿಂಗ ಮುಂತಾಗಿ ಆನಂದಿಸುವಂಥದನು, ಯಾಕಜೆಯಿರಯ್ಯ–ಏನು ಕಾರಣಕ್ಕೆ ತಿಳಿಯಿರಯ್ಯ. ಕಾಯದೊಳಗೆ ಷಡಿಂದ್ರಿಯಂಗಳಲ್ಲಿ, ಕಾಯವಿದ್ದು–ಪ್ರತಿಕಾಯವಾದ ಷಡ್ವಿಧಲಿಂಗವು ನೆಲೆಗೊಂಡಿದ್ದು, ಬಿಡದು–ಷಡಿಂದ್ರಿಯಂಗಳಿಂದ ಷಡ್ವಿಧಲಿಂಗವು ಬಿಡುಗಡೆಯಾಗದು. ಬೇಜೂಗದು–ಷಡ್ವಿಧಲಿಂಗದಿಂದ ಷಡ್ವಿಧಅಂಗವು ಭಿನ್ನವಾಗದು, ಕೂಡಲಸಂಗಮ ದೇವಾ–ಎಲೆ ಪರಶಿವಲಿಂಗವೆ, ನೀನಿಕ್ಕಿದ–ನೀನುಂಟುಮಾಡಿದ, ಅಣಕದ ಭೇದದ–ಷಡಿಂದ್ರಯಂಗಳ ವರ್ತನೆಯನ್ನು ಉಂಟುಮಾಡಿ–ಹಾಸ್ಯವ ಮಾಡಿ ಭವಕ್ಕೆ ಹಾಕಿಬಿಡಬೇಕೆಂಬಂಥ ನಿಲುಕಡೆಯನ್ನು ಭೇದಿಸಬಾರದು–ಷಡಿಂದ್ರಿಯಂಗಳಲ್ಲಿ ಷಡ್ವಿಧಲಿಂಗಸಂಬಂಧವ ಮಾಡಿಕೊಂಡು ಆ ಷಡಿಂದ್ರಿಯಂಗಳಲ್ಲಿ ಬರಲ್ಪಟ್ಟ ಷಡ್ವಿಧಪದಾರ್ಥಂಗಳನು ಷಡ್ವಿಧಲಿಂಗಕ್ಕೆ ಸಮರ್ಪಿಸಿ ಆ ಷಡ್ವಿಧಲಿಂಗ ಮುಂತಾಗಿ ಪಡೆದನುಭವಿಸೇನೆಂದರೆ ಅಶಕ್ಯವಾಗಿರ್ಪುದು.

II– –

1–1 ಯ (ಚ, ಜ). 2–2 ಸ್ಪರ್ಶನದೊಳಗೆ ಸ್ಪರ್ಶನವಿದ್ದು ಮುಟ್ಟಲೇಕೆಜೆಯರಯ್ಯ(ಚ, ಜ)3–3 ಬಿಚ್ಚಿ(ಚ); ಬಿಟ್ಟು(ಜ) 4–4 ನಿ(ಚ, ಜ)

....

ಕಣ್ಣೊಳಗೆ ಕಣ್ಣಿದ್ದು ಕಾಣಲೇಕಜೆಯಿರಯ್ಯ–ಶಿವಲಿಂಗದ ಪ್ರಸಾದದೃಷ್ಟಿಯಲ್ಲಿ [1]ಶರಣನ ಪದಾರ್ಥದೃಷ್ಟಿಯಿದ್ದು, ಸಮರಸವಿಟ್ಟು ನೋಡಲೇಕರಿಯಿರಯ್ಯ, ಕಿವಿಯೊಳಗೆ ಕಿವಿಯಿದ್ದು ಕೇಳಲೇಕಜೆಯಿರಯ್ಯ–ಸೂನೃತಲಾಲನಸ್ವರೂಪನಾದಶರಣನ ಪ್ರಸಾದಶ್ರವಣದಲ್ಲಿ ಅಂಗದ ನಿಜಾಶ್ರುತಪದಾರ್ಥಶ್ರವಣವಿರ್ದು ಸಮರಸವಿಟ್ಟು ಲಾಲಿಸಲೇಕರಿಯಿರಯ್ಯ. ಘ್ರಾಣದೊಳಗೆ ಘ್ರಾಣವಿದ್ದು ವಾಸಿಸಲೇಕಜೆಯಿರಯ್ಯ–ಲಿಂಗದ ಪ್ರಸಾದಘ್ರಾಣದಲ್ಲಿ ಶರಣನ ಪದಾರ್ಥಘ್ರಾಣವಿದ್ದು ಸಮರಸವಿಟ್ಟು ಆಘ್ರಾಣಿಸಲೇಕರಿಯಿರಯ್ಯ, ಜಿಹ್ವೆಯೊಳಗೆ ಜಿಹ್ವೆವಿದ್ದು ರುಚಿಸಲೇಕಜೆಯಿರಯ್ಯ–ಲಿಂಗದ ಪ್ರಸಾದಜಿಹ್ವೆಯಲ್ಲಿ ಶರಣನ ಪದಾರ್ಥಜಿಹ್ವೆಯಿದ್ದು ಸಮರಸವಿಟ್ಟು ರುಚಿಸಲೇಕಜೆಯಿರಯ್ಯ, ಸ್ಪರ್ಶದೊಳಗೆ ಸ್ಪರ್ಶನವಿದ್ದುಮುಟ್ಟಲೇಕಜೆಯಿರಯ್ಯ–ಲಿಂಗದ ಪ್ರಸಾದ ತ್ವಗಿಂದ್ರಿಯದಲ್ಲಿ ಶರಣನ ಪದಾರ್ಥ ತ್ವಗಿಂದ್ರಿಯವಿರ್ದು ಸಮರಸವಿಟ್ಟು ಸ್ಪರ್ಶಿಸಲೇಕರಿಯಿರಯ್ಯ. ಪ್ರಾಣದೊಳಗೆ ಪ್ರಾಣವಿದ್ದುದನೇಕಜೆಯಿರಯ್ಯ–ಲಿಂಗದ ಹರಣದೊಳಗೆ ಶರಣನ ಚಿದಹರಣವಿರ್ದುದನೇನು ಕಾರಣ ತಿಳಿಯರಯ್ಯ, ಕಾಯದೊಳಗೆ ಕಾಯವಿದ್ದು [3]ಬಿಚ್ಚಿ[3] ಬೇಜಾಗದು–ಶರಣನ ಆಚಾರಾಂಗದಲ್ಲಿ

ಲಿಂಗದ ಚಿದಂಗವಿರ್ದು ವಿಭಜಿಸಿ ವಿಯೋಗವಾಗದು. ಕೂಡಲಸಂಗಮದೇವನಿಕ್ಕಿದ ಅಣಕದ ಭೇದವಭೇದಿಸಬಾರದಯ್ಯ-ಪರಶಿವಲಿಂಗವು ಹಾಕಿದ ಲಿಂಗಾಂಗಸಂಬಂಧದಸಮರಸೇಂದ್ರಿಯುಲ್ಲಾಸದ ಸ್ವರೂಪನರಿಯಬಾರದಯ್ಯ.

....

೧-೧ ಶರಣ (ಚ). ೨-೨ ಬಿಟ್ಟು(ಜ)

III- -

1-1 ಯ (ಟ, ಡ). 4-4 ವ (ಟ, ಡ) 5-5 ದಯ್ಯ(ಟ, ಡ)

....

ಕಣ್ಣೊಳಗೆ ಕಣ್ಣಿದ್ದು-ಶರಣನ ನೇತ್ರದಲ್ಲಿ ಲಿಂಗದ ನೇತ್ರಗಳು ಸಂಬಂಧವಾಗಿರ್ದು, ಕಾಣಲೇಕಱಿಯಿರಯ್ಯ-ಲಿಂಗಮುಂತಾಗಿ ನಿರೀಕ್ಷಣೆಯ ಮಾಡಲೇನು ಕಾರಣ ತಿಳಿಯದೆ ಇರುವಿರಯ್ಯ, ಇದೇ ಪ್ರಕಾರದಲ್ಲಿ ಮುಂದೆ ತಿಳಿದುಕೊಂಬುದು ಕೂಡಲಸಂಗಮದೇವನಿಕ್ಕಿದ-ಪರಶಿವಲಿಂಗವು ಜಗಕ್ಕೆ ಹಾಕಿಬಿಟ್ಟಂಥ, ಅಣಕದ ಮಾಯಾಪ್ರಪಂಚಿನ ಭೇದವ, ವಿಶೇಷವನು, ಭೇದಿಸಬಾರದಯ್ಯ-ತಿಳಿವುದಕ್ಕಸಾಧ್ಯವಯ್ಯ.

V- -

1-1 ಯ (ಪ).

....

ಕಣ್ಣೊಳಗೆ ಕಣ್ಣಿದ್ದು-ಶರಣನ ನೇತ್ರದಲ್ಲಿ ಲಿಂಗದ ನೇತ್ರಗಳು ಸಂಬಂಧವಾಗಿದ್ದು, ಕಾಣಲೇಕಱಿಯರಯ್ಯ-ಲಿಂಗಮುಂತಾಗಿ ನಿರೀಕ್ಷಣೆಯ ಮಾಡಲೇನು ಕಾರಣ ತಿಳಿಯರಯ್ಯ. ಕಿವಿಯೊಳಗೆ ಕಿವಿಯಿದ್ದು-ಶರಣನಶ್ರೋತ್ರದೊಳಗೆ ಲಿಂಗದ ಶ್ರೋತ್ರವಿದ್ದು, ಕೇಳಲೇಕಱಿಯರಯ್ಯ-ಪ್ರಸಾದಲಿಂಗಮುಂತಾಗಿ ಆ ಸುಶಬ್ದ ಪ್ರಸಾದವನಾಲಿಸಲೇಕಱಿಯರಯ್ಯ. ಈ ಕ್ರಮದಿಂದಱಿದುಕೊಳ್ವೊದು.

೯೧೧

ಗ್ರಹ ಬಂದು ಆವರಿಸಲೊಡನೆ ತನ್ನ ಮಱೆಸುವುದು. ಮತ್ತೊಂದಕ್ಕಿಂಬು ಕೊಡಲೀಯದಯ್ಯ. ಕೂಡಲಸಂಗಮದೇವನಱಿವು ಅನುಪಮವಾಗಲೊಡನೆ ಬೆವಹಾರದೊಳಗಿರಲೀಯದಯ್ಯ.

I- -

ಗ್ರಹ ಬಂದು ಆವರಿಸಲೊಡನೆ: ಗ್ರಹ-ಭೂತವು, ಬಂದು-ಎಯ್ದು ಬಂದು. ಆವರಿಸಲೊಡನೆ-ಆತ್ಮನಿಗೆ ಹಿಡಿದುಕೊಂಡಷ್ಟಕ್ಕೆ, ತನ್ನ ಮಱೆಸುವುದು-ಭೂತನಸ್ವಯನಡೆ ಸ್ವಯನುಡಿ ಸ್ವಯಚರಿತ್ರೆಯಲ್ಲದೆ, ಮತ್ತೊಂದಕ್ಕೆ ಇಂಬುಕೊಡಲೀಯದಯ್ಯ-ಆತ್ಮನ ಸ್ವಯನಡೆ ಸ್ವಯನುಡಿ ಸ್ವಯಚರಿತ್ರೆ ಉಂಟೆ? ಇಲ್ಲವೆಂಬುದರ್ಥ.

● ಗ್ರಹ ಬಂದು ಆವರಿಸಲೊಡನೆ–ಚಿತ್ತಿನ ಚಿದಹಂಕಾರ ಚಿದ್ಭೂಷಣಸ್ವರೂಪವಾದ ಪರಬಹ್ಮವುಗುರೂಪದೇಶದಿಂದ ಎಯ್ದು ಬಂದು ಅಂಗದಲ್ಲಿ ಇಷ್ಟಲಿಂಗವಾಗಿ ನೆಲೆಗೊಂಡಷ್ಟಕ್ಕೆ, ತನ್ನವಮಱಿಸುವುದು–ಲಿಂಗದ ನಡೆ ಲಿಂಗದ ನುಡಿ ಲಿಂಗದ ಚರಿತ್ರವಲ್ಲದೆ, ಮತ್ತೊಂದಕ್ಕಿಂಬುಗೊಡಲೀಯದಯ್ಯ–ಅಂಗದ ನಡೆ ಅಂಗದ ನುಡಿ ಅಂಗದ ಚರಿತ್ರೆ ಉಂಟೆ? ಇಲ್ಲವು. ಕೂಡಲಸಂಗಮದೇವನ ಅಱಿವು ಅನುಪಮವಾಗಲೊಡನೆ–ಇಷ್ಟಲಿಂಗದಚಿತ್ಕಳೆಯೇ ಅಂತರಂಗದಲ್ಲಿ ಪ್ರಾಣಲಿಂಗವಾಗಿ ನೆಲೆಗೊಂಡಷ್ಟಕ್ಕೆ, ಬೆವಹಾರದೊಳಗಿರಲೀಯದಯ್ಯ–ಭಿನ್ನಪೂಜಾಕ್ರಿಯೆಗಳಲ್ಲಿ ಬೆರೆಯಗೊಡದಯ್ಯ. ಅದಲ್ಲದೆ ಷಟ್‌ಕೃಷಿವ್ಯಾಪಾರಗಳಲ್ಲಾಚರಿಸಗೊಡದು, ಅಯ್ಯ–ಎಲೆ ಲಿಂಗವೆ.

III– –

ತನಗೆ ಶಿವತತ್ತ್ವ ಜಗಜ್ಞಾನವಳವಟ್ಟಲ್ಲಿ ಲೋಕದ ವ್ಯವಹಾರದಲ್ಲಿ ವರ್ತಿಸದೆಂಬುದೀಗ ಅಱಿವು ಅನುಪಮವಾಗಲೊಡನೆ ಬೆವಹಾರದೊಳಗಿರಲೀಯದಯ್ಯ ಎಂಬ ಶಬ್ದಕ್ಕರ್ಥ.

ಗ್ರಹ ಬಂದು ಆವರ್ತಿಸಿದ ಮನುಜನ ವರ್ತನಗುಣಧರ್ಮವೆಲ್ಲವೂ ಮಱೆದು ಆಗ್ರಹದ ಸ್ವಧರ್ಮವರ್ತನಗುಣವೇ ಆಗಿಪ್ಪಂತೆ ಅಖಂಡ ಚೈತನ್ಯಲಿಂಗದ ಚಿತ್ತುವಿಗೆ ಕೃಪೆದೋಱಿ ಆತ್ಮನ ಅಂತರಂಗವಾಗಿದ್ದ ಲಿಂಗವು ಬಹಿಷ್ಕರಿಸಿ ಸರ್ವಾಂಗವನಾವರ್ತಿಸಲು ಜೀವಾತ್ಮನ ವರ್ತನಗುಣಧರ್ಮವಳಿದು ಲಿಂಗದ ಸತ್ಕ್ರಿಯಾಚಾರಿತ್ರವೇ ಆಗಿ ಲಿಂಗವು ತಾನೇಯಾಗಿಪ್ಪನಾಗಿ ಶರಣ ಮರಳಿ ಮಾನವನಾಗನೆಂಬುದೀ ವಚನದ ತಾತ್ಪರ್ಯಾರ್ಥ.

೯೧೨

ಭೂತಿಕನ ಸೀರೆಯ ಸಾತ್ವಿಕ ನೆಱೆಯುಟ್ಟಡೆ ಭೂತಿಕ ಸಾತ್ವಿಕನಾದ, ಸಾತ್ವಿಕ ಭೂತಿಕನಾದ. ಈ ಮಾತು ಬಿದ್ದುದು ನೋಡಾ ರಾಜಬೀದಿಯಲ್ಲಿ ಅಯ್ಯ. ಭೂತ ಕೆಣಕಿದಡಿಲ್ಲ, ಮಾತು ಮುಚ್ಚಿದಡಿಲ್ಲ. ಓತು ಕೂಡುವ ಅನುವ ಕೂಡಲಸಂಗಮದೇವ ತಾನೆ ಬಲ್ಲ.

I– –

ಭೂತಿಕನ ಸೀರೆಯ: ಭೂತಿಕನ–ಭೂತಹಿಡಿದಂಥ ಆತ್ಮನ, ಸೀರೆಯ–ಉಟ್ಟುತೊಟ್ಟಂಬರವನ್ನು, ಸಾತ್ವಿಕ–ಸಹಜಪುರುಷನು, ನೆಱೆ–ಚೆನ್ನಾಗಿ, ಉಟ್ಟಡೆ–ತನ್ನ ಸರ್ವಾಂಗಕ್ಕೆ ಆಚ್ಛಾದಿಸಿಕೊಂಡರೆ. ಭೂತಿಕ–ಭೂತಹಿಡಿದಂಥಾತ್ಮನು, ಸಾತ್ವಿಕನಾದ–ಸಹಜಪುರುಷನಾದನು. ಸಾತ್ವಿಕ–ಸಹಜಪುರುಷನು, ಭೂತಿಕನಾದ–ಭೂತಹಿಡಿದಂಥಾತ್ಮನಾದನು. ಈ ಮಾತು ಬಿದ್ದುದು: ಈ ಮಾತು–ಈ ಪ್ರಸಂಗವು: ಬಿದ್ದುದು–ಪತಿತವಾದುದು, ರಾಜಬೀದಿಯಲ್ಲಿ–ತೆರಪಿಲ್ಲದ ಹಾಂಗೆ ಸಮಸ್ತಜನಂಗಳು ಹೋಗಿಬರುವಂಥ ಮಹಾರಾಜಬಾಜಾರದಲ್ಲಿ. ಭೂತ ಕೆಣಕಿದಡಿಲ್ಲ: ಭೂತ–ಭೂತಹಿಡಿದಂಥ ಆತ್ಮನ, ಕೆಣಕಿದಡೆ–ಮಾತನಾಡಿಸಿದರೆ, ಇಲ್ಲ–ಅಲ್ಲೇನೂ ಹುರುಳಿಲ್ಲವು. ಮಾತು ಮುಚ್ಚಿದಡಿಲ್ಲ–ನೀನುಮಾತನಾಡಬೇಡಸುಮ್ಮನಿರುಯೆಂದರೆ ಸುಮ್ಮನಿರನು, ಓತು–ಚೆನ್ನಾಗಿ. ಕೂಡುವ–

ಬೆರೆವ, ಅನುವ–ಒಪ್ಪವನು. ಕೂಡಲಸಂಗಮದೇವ ತಾನೆ ಬಲ್ಲ–ಆ ಭೂತವನ್ನು ಬಿಡಿಸಿ ಮಾತನಾಡಿಸಬೇಕಾದರೆ ಪ್ರವೀಣನಾದ ಗಾರುಡಿಗನಿಗೇ ಅರಿಯಬರುವುದಲ್ಲದೆ ಉಳೀದವರಿಗೆ ಅಶಕ್ಯವಾಗಿರ್ಪುದೆಂಬ ದೃಷ್ಟೋಪಮಾನದ ಹಾಂಗೆ.

● ಭೂತಿಕನ–ಚಿತ್ತಿನ ಚಿದಹಂಕಾರ ಚಿದ್ಭೂಷಣಸ್ವರೂಪವಾದ ಪರಬ್ರಹ್ಮದ–[ಸೀರೆಯ]–ಸತ್ಕ್ರಿಯಾಚಾರವೆಂಬ ಅಂಬರವನ್ನು, ಸಾತ್ವಿಕ–ಸಮ್ಯಕ್‌ಜ್ಞಾನಿಯಾದ ಶರಣನು, ನೆಱೆ–ಚೆನ್ನಾಗಿ, ಉಟ್ಟಡೆ–ಸರ್ವಾಂಗಕ್ಕೆ ಆಚ್ಛಾದಿಸಿಕೊಂಡರೆ, ಭೂತಿಕ–ಚಿತ್ತಿನ ಚಿದಹಂಕಾರ ಚಿದ್ಭೂಷಣಸ್ವರೂಪವಾದ ಪರಬ್ರಹ್ಮವು, ಸಾತ್ವಿಕನಾದ ಸಮ್ಯಕಜ್ಞಾನಿಯಾದ ಶರಣನಲ್ಲಿಕೂಡಿ ಶರಣನೇ ತಾನಾದನು. ಸಾತ್ವಿಕ–ಸಮ್ಯಕ್ ಜ್ಞಾನಿಯಾದ ಶರಣನು, ಭೂತಿಕನಾದ–ಚಿತ್ತಿನ ಚಿದಹಂಕಾರ ಚಿದ್ಭೂಷಣಸ್ವರೂಪವಾದ ಪರಬ್ರಹ್ಮದಲ್ಲಿ ಕೂಡಿ ಬ್ರಹ್ಮವೇ ತಾನಾದನು. ಈ ಮಾತು–ಏಕವಾಕ್ಯದ ಪ್ರತಿಷ್ಠೆಯರುಹಿನ ಜ್ಞಾನವು, ರಾಜಬೀದಿಯಲ್ಲಿ–ಶಿವಾದ್ವೈತಭಕ್ತಿಯೆಂಬ ಬಾಜಾರದಲ್ಲಿ, ಬಿದ್ದುದು ನೋಡಯ್ಯ–ಸಾಮರಸ್ಯವಾಯಿತ್ತು ಕಂಡಯ್ಯ. ಭೂತ–ಚಿತ್ತಿನ ಚಿದಹಂಕಾರಸ್ವರೂಪವಾದ ಪರಬ್ರಹ್ಮವನು, ಕೆಣಕಿದಡೆ–ಭಿನ್ನವಿಟ್ಟುಕೊಂಡರಿದೇನೆಂದರೆ, ಇಲ್ಲ–ಉಂಟಾಗಿಲ್ಲವು. ಮಾತು–ಏಕವಾಖ್ಯದಪ್ರತಿಷ್ಠೆಯರುಹಿನ ಜ್ಞಾನವು, ಮುಟ್ಟಿದಡೆ–ಭಿನ್ನವಿಟ್ಟುಕೊಂಡು ಪೂಜಿಸೇನೆಂದರೆ, ಇಲ್ಲ–ಉಂಟಾಗಿಲ್ಲವು, ಓತು–ಚೆನ್ನಾಗಿ, ಕೂಡುವ–ಬ್ರಹ್ಮದಲ್ಲಿ ಬೆರೆವ, ಅನುವ–ಒಪ್ಪವನು, ಕೂಡಲಸಂಗಮದೇವ ತಾನೇ ಬಲ್ಲ–ಪರಶಿವಲಿಂಗಕ್ಕೆ ಅರಿಯಬರುವುದು.

II– –

ಭೂತಿಕನ ಸೀರೆಯ ಸಾತ್ವಿಕ ನೆಱೆ ಉಟ್ಟಡೆ–ಚಿಚ್ಛಕ್ತಿಸ್ವರೂಪವಾದ ಶ್ರೀಗುರುದೇವನ ಕ್ರಿಯಾಂಬರವನು ಸತ್ವಗುಣವನುಳ್ಳಂಥ ಶಿಷ್ಯನು ೧ಚೆನ್ನಾಗಿ೧ ಪ್ರವೇಷ್ಟಿಸಿಕೊಂಡರೆ, ಭೂತಿಕ ಸಾತ್ವಿಕನಾದ–ಆ ಶ್ರೀಗುರುದೇವನು ಸತ್ವಗುಣವನುಳ್ಳ ಶಿಷ್ಯನಾದ. ಸಾತ್ವಿಕ ಭೂತಿಕನಾದ ಆ ಸತ್ವಗುಣವುಳ್ಳ ಶಿಷ್ಯನು ಶ್ರೀಗುರುದೇವನಾದ. ಈ ಮಾತು–ಈ ಗುರುಶಿಷ್ಯರೆಂಬ ದ್ವೈತವಳಿದು ಸೇವ್ಯಬ್ರಹ್ಮವಾದ ಪ್ರಸಂಗವು, ರಾಜ ಬೀದಿಯಲ್ಲಿ ಬಿದ್ದುದು ನೋಡಾ–ಶಿವಯೋಗಮಾರ್ಗದಲ್ಲಿ ಪತಿತವಾದುದು ಕಂಡಾ. ಅಯ್ಯಾ ಭೂತ ಕೆಣಕಿದಡಿಲ್ಲ–ಎಲೆ ಸ್ವಾಮಿ ಆತ್ಮಜ್ಞಾನದಿಂದ ಮಥನಿಸಿದರಿಲ್ಲ. ಮಾತು ಮುಚ್ಚಿದಡಿಲ್ಲ–ತಾ ಕೇಳುವಂಥ ಮಹಾನುಭಾವಪ್ರಸಂಗವನು ಮುದ್ರಿಸಿಕೊಂಡರಿಲ್ಲ. ಮುಂದಕ್ಕೆ ಕಾಣಬಂದರ್ಥ.

....

೧–೧ ಭಿನ್ನಾಗಿ (ಚ).

III– –

ಭೂತಿಕನ–ಸಕಲಪ್ರಾಣಿಗಳಿಗೆ ಚೈತನ್ಯನಾದ ಪರಶಿವಲಿಂಗದ, ಸೀರೆಯ–ಜ್ಞಾನಾಂಬರವನು, ಸಾತ್ವಿಕ–ಸತ್ವಗುಣಸಂಬಂಧವನುಳ್ಳ ೨ಶರಣನು, ಉಟ್ಟಡೆ–ಅಳವಡಿಸಿಕೊಂಡಲ್ಲಿ,೨ ಭೂತಿಕ ಸಕಲಪ್ರಾಣಿಗಳಿಗೆ ಚೈತನ್ಯನಾದ ಪರಶಿವಲಿಂಗವು, ಸಾತ್ವಿಕನಾದ–ಸತ್ವಗುಣಸಂಬಂಧಿಯಾದ ಶರಣನಾದನು. ಸಾತ್ವಿಕ–ಸತ್ವಗುಣಸಂಬಂಧವನುಳ್ಳ ಶರಣನು. ಭೂತಿಕನಾದ–ಸಕಲಪ್ರಾಣಿಗಳಿಗೆ

ಚೈತನ್ಯನಾದ ಪರಶಿವಮೂರ್ತಿಯಾದನು.ಈ ಸರ್ವಾಚಾರಸಂಪತ್ತಿನಾಚರಣೆಯು ಮಹಾಲಿಂಗದ ಪೂರ್ಣಜ್ಞಾನಾಚರಣೆಯಲ್ಲಿ ಸಂಬಂಧವಾಗಿರ್ಪುದೆಂಬುದೀಗ, ಈ ಮಾತು ಬಿದ್ದುದು ನೋಡಾ ರಾಜಬೀದಿಯುಲ್ಲಿ ಅಯ್ಯ ಎಂಬ ಶಬ್ದಕ್ಕರ್ಥ. ಪಂಚವಿಶತಿತತ್ತ್ವಸ್ವರೂಪವಾದ ದೇಹಸಂಬಂಧಿಯಾದತ್ಮನು ಜ್ಞಾನಗುರೋಪದೇಶದಿಂದ ತಿಳಿದು ನೋಡಿದಲ್ಲಿ ಆ ಪರಬ್ರಹ್ಮಸ್ವರೂಪ ವಾಗಿರ್ಪುದೆಂಬುದೀಗ, ಭೂತ ಕೆಣಕಿದಡಿಲ್ಲವೆಂಬ ಶಬ್ದಕ್ಕರ್ಥ. ನಾಹಂ ಕೋಽಹಂ ಸೋಽಹಂ ಎಂಬ ಭಿನ್ನ ವಾಕ್ಯಗಳು ಪ್ರಣವಮಂತ್ರಸಂಬಂಧವಾದ ಅಕಾರ ಉಕಾರ ಮಕಾರವೆಂಬ ತ್ರಿವಿಧಮಂತ್ರ ಸಂಬಂಧದಿಂದೆ ನಿವೃತ್ತಿಯಾಗಿರ್ಪುದೆಂಬುದೀಗ ಮಾತು ಮುಚ್ಚಿದರಿಲ್ಲವೆಂಬುದರ್ಥ. ಸ್ನೇಹದಿಂದ ಲಿಂಗದಲ್ಲಿ ಸಮರಸವಾಗುವ ಭೇದವ ಪರಶಿವಲಿಂಗಸ್ವರೂಪವಾದ ಶರಣ ತಾನೆ ತಿಳಿದಿರ್ಪನೆಂಬುದೀಗ, ಓತು ಕೊಡುವ ಕೂಡಲಸಂಗಮದೇವ ತಾನೆ ಬಲ್ಲನೆಂಬ ಶಬ್ದಕ್ಕರ್ಥ.

....

೨–೨ ಶರಣನಳವಡಿಸಿಕೊಂಡಲ್ಲಿ(ಚ). ೩+ ಲೋಕಾಚಾರದೊಡನೆ ಕೂಡಿ ವರ್ತಿಸಲೀಸದೆಂಬುದೀ ವಚನದರ್ಥ(ಚ, ಜ)

IV– –

ಪರಬ್ರಹ್ಮವು ಮಾಯಾದೇಹವ ತೊಟ್ಟ ಬಳಿಕ ಮಾ[೪][ಯೆಯಾ][೪]ಗಿ ತೋಜಿತ್ತು. ಮಾ[೫][ಯೆಯ][೫]ಳಿದು ಮಹಾ[೬]ಜ್ಞಾನ[೬]ವಾಯಿತ್ತು. ಜ್ಞಾನವು ಮಾಯವಾಗಿ ಜ್ಞಾನಾತೀತದಲ್ಲಿದಲ್ಲಿ ಅಡಗಿತ್ತು. ವಾಕುಮನಂಗಳ ಅಡಗಿಸೂದ[೭][ರಿ][೭]ದುಯೆಂಬುದೀ ವಚನದರ್ಥ.

....

೪–೪ ಯಾವಾ(ತ), ೫–೫ ಯವ(ಚ). ೬–೬ ಘನ(೧೬೨೫) ೭–೭ ದೆ(ತ)

V– –

ಭೂತಿಕನ ಸೀರೆಯ: [ಭೂತಿಕನ–] ಸಕಲಪ್ರಾಣಿಗಳಿಗೆ ಚೈತನ್ಯನಾದ ಪರಶಿವಲಿಂಗದ, ಸೀರೆಯ–ಜ್ಞಾನಾಂಬರವನು[೮] ಸತ್ವಗುಣಸಂಬಂಧವಾದ ಶರಣನಳವಡಿಸಿಕೊಂಡರೆಂಬುದೀಗ ಭೂತಿಕನ ಸೀರೆಯ ಸಾತ್ವಿಕನೆಜೆಯುಟ್ಟರೆಯೆಂಬುದರ್ಥ. ಭೂತಿಕ ಸಾತ್ವಿಕನಾದ–ಸಕಲ ಪ್ರಾಣಿಗಳಿಗೆ ಚೈತನ್ಯನಾದ ಪರಶಿವನೆ ಸತ್ವಗುಣಸಂಬಂಧವಾದ ಶರಣನಾದ. ಈ ಸರ್ವಾಚಾರಸಂಪತ್ತಿ ನಾಚರಣೆಯು ಮಹಾಲಿಂಗದ ಪೂರ್ಣಜ್ಞಾನಾಚರಣೆಯಲ್ಲಿ ಸಂಬಂಧಿಯಾಗಿರ್ಪುದೆಂಬುದೀಗ ಈ ಮಾತು ಬಿದ್ದುದ ರಾಜಬೀದಿಯೆಂಬುದರ್ಥ. ಪಂಚವಿಂಶತಿತತ್ತ್ವಸ್ವರೂಪವಾದ ದೇಹ ಸಂಬಂಧಯಾದಾತ್ಮನು ಜ್ಞಾನ ಗುರೋಪದೇಶದಿಂದ ತಿಳಿದು ನೋಡಿದಲ್ಲಿ ಆ ಪರಬ್ರಹ್ಮಸ್ವರೂಪವಾಗಿರ್ಪುದೆಂಬುದೀಗ, ಭೂತ ಕೆಣಕಿದಡಿಲ್ಲವೆಂಬುದರ್ಥ. ನಾಹಂ ಕೋಽಹಂ ಸೋಽಹಂ ಎಂಬ ಭಿನ್ನವಾಕ್ಯಂಗಳನು ಪ್ರಣವಮಂತ್ರದಲಿ ಸಂಬಂಧವ ಮಾಡಲು ನಿವೃತ್ತಿಯಾಗಿರ್ಪುದೆಂಬುದೀಗ, ಮಾತು ಮುಚ್ಚಿದರಿಲ್ಲವೆಂಬುದರ್ಥ. ಸ್ನೇಹದಿಂದ ಲಿಂಗದಲ್ಲಿ ಸಮರಸವಾಗುವ ಭೇದವನು ಪರಶಿವಲಿಂಗ ಸ್ವರೂಪವಾದ ಶರಣ ತಾನೆ ತಿಳಿದಿರ್ಪನೆಂಬುದೀಗ, ಓತು ಕೊಡುವನುವ ಕೂಡಲಸಂಗಮದೇವ ತಾನೆ ಬಲ್ಲ.

....

೮ + ಸಾತ್ವಿಕನಾದ(ಪ). ೯ + ಓತು(ಪ).

ಶರಣನ ಐಕ್ಯಸ್ಥಲ

I- -

ಶರಣನ ಐಕ್ಯಸ್ಥಲ-ಶರಣಸ್ಥಲಕದೊಳಗಣ ಐಕ್ಯಸ್ಥಲದಾಚರಣೆಯನ್ನು ನಿರೂಪಿಸುತ್ತಿಹರು.

೯೧೩

ಮನೆಯ ಗಂಡನ ಮನೆವಾರ್ತೆಯನೇನ ಹೇಳುವೆನವ್ವಾ, ಅಂಗವಿದ್ಯೆಯನೊಲ್ಲ. ಕಂಗಳೊಳಗಣಕಸವ ಕಳೆದಲ್ಲದೆ ನೋಡಲೀಯ. ಕೈಯ ತೊಳೆದಲ್ಲದೆ ಮುಟ್ಟಲೀಯ. ಕಾಲ ತೊಳೆದಲ್ಲದೆ ಹೊದ್ದಲೀಯ. [1]ಇಂತೀ ಸರ್ವಾಂಗ ತಲೆದೊಳೆದ ಕಾರಣ ಕೂಡಲಸಂಗಮದೇವನೆನ್ನ ಕೂಡಿಕೊಂಡನವ್ವಾ!

I- -

ಮನೆಯ ಗಂಡನ ಮನೆವಾರ್ತೆಯನೇನ ಹೇಳುವೆನವ್ವಾ: ಮನೆಯ ಗಂಡನ-ಆಲಯಕ್ಕೆ ಕರ್ತನಾದ ರಮಣನ, ಮನೆ ವಾರ್ತೆಯ-ಮನೆಯ ನಡಾವಳಿಯನ್ನು, ಏನ ಹೇಳುವೆ-ನಾನೇನೆಂದು ಹೇಳಲಿ, ಅವ್ವ-ಎಲೆ ತಾಯಿಯೆ, ಅಂಗವಿದ್ಯೆಯನೊಲ್ಲ-ತನುಚೇಷ್ಟೆಯೊಡನೆ ಕೂಡಿ ಚರಿಸಲ್ಲೊಲ್ಲನು. ಕಂಗಳೊಳಗಣ-ನೇತ್ರದೊಳಗಣ, ಕಸವ-ರಜಾಸೆಳ್ಳನ್ನು, ಕಳೆದಲ್ಲದೆ-ತೊಳೆದುಕೊಂಡಲ್ಲದೆ, ನೋಡಲೀಯು-ನಿರೀಕ್ಷಣೆಯು ಮಾಡಗೊಡನು. ಕೈಯು ತೊಳೆದಲ್ಲದೆ-ಹಸ್ತವನ್ನು ಪ್ರಕ್ಷಾಲಿಸಿಕೊಂಡಲ್ಲದೆ.ಮುಟ್ಟಲೀಯ-ಸೋಂಕಗೊಡನು. ಕಾಲ ತೊಳೆದಲ್ಲದೆ-ಚರಣವನ್ನು ಪ್ರಕ್ಷಾಲಿಸಿಕೊಂಡಲ್ಲದೆ ಹೊದ್ದಲೀಯ-ಹೊದ್ದಗೊಡನು. ಇಂತೀ ಸರ್ವಾಂಗ ತಲೆದೊಳೆದ ಕಾರಣ-ಅರೆಪಾದದಿಂದ ಹಿಡಿದು ನಡುನೆತ್ತಿಪರಿಯಂತಲ ಪ್ರಕ್ಷಾಲಿಸಿಕೊಂಡ ನಿಮಿತ್ತ, ಕೂಡಲಸಂಗಮದೇವ-ಮನೆಯ ಗಂಡನು, ಎನ್ನ ಕೂಡಿಕೊಂಡನು-ಎನ್ನ ಬೆರೆದುಕೊಂಡನು, ಅವ್ವ-ಎಲೆ ತಾಯಿಯೆ ಏಂಬ ದೃಷ್ಟೋಪಮಾನದ ಹಾಂಗೆ.

● ಮನೆಯ ಗಂಡನ-ಆಚಾರಾಂಗವೆಂಬ ನಿಳಯಕ್ಕೆ ಕರ್ತನಾದ ಇಷ್ಟಲಿಂಗವೆಂಬ ರಮಣನ, ಮನೆವಾರ್ತೆಯನೇನ ಹೇಳುವೆನವ್ವಾ: ಮನೆವಾರ್ತೆಯ-ಜ್ಞಾನಕ್ರಿಯಾಚಾರವನ್ನು, ಏನಹೇಳುವೇ-ಎಂತೆಂದು ನಿರೂಪಿಸುವೆನು, ಅವ್ವ-ಶರಣಸತಿಯಳೇ. ಅಂಗವಿದ್ಯೆಯನೊಲ್ಲ-ದೇಹ ಪ್ರಪಂಚಿನನೊಡನೆ ಚರಿಸಗೊಡಲೊಲ್ಲನು. ಅಲ್ಲದೆ ಭಿನ್ನಜ್ಞಾನ ಭಿನ್ನಕ್ರಿಯೆಗಳುಳ್ಳಂಥವರುಗಳಿಗೆ

ನಿಜಮೋಕ್ಷವನ್ನು ಕರುಣಿಸಿಕೊಡಲೊಲ್ಲನು. ಕಂಗಳೊಳಗಣ-ಭಿನ್ನದೃಷ್ಟಿಯೊಳಗಣ, ಕಸವ-ಮರಣರೂಪಮಾದ ಅಜ್ಞಾನವೆಂಬ ಅರೆಗಸವ, ಕಳೆದಲ್ಲದೆ-ಬೇರ್ಪಡಿಸಿ ಸುಜ್ಞಾನದೃಷ್ಟಿಯಾಗಿ ಅಳವಡಿಸಿಕೊಂಡಲ್ಲದೆ, ನೋಡಲೀಯ-ಅನಿಮಿಷದೃಷ್ಟಿಯಿಂದ ನಿರೀಕ್ಷಣೆಯ ಮಾಡಗೊಡನು. ಕೈಯ-ಕುಚಿತ್ತವೆಂಬ ಹಸ್ತವನ್ನು, ತೊಳೆದಲ್ಲದೆ-ಜ್ಞಾನಾನಂದ ಜಲದಿಂದ ಪ್ರಕ್ಷಾಲಿಸಿ ಸುಚಿತ್ತವೆಂಬ ಹಸ್ತವಾಗಿ ಅಳವಡಿಸಿಕೊಂಡಲ್ಲದೆ, ಮುಟ್ಟಲೀಯ-ಕ್ರೀವಿಡಿದಾಚರಿಸಿಗೊಡನು, ಕಾಲ-ದಿಶ್ಚರಿತ್ರವೆಂಬ ಚರಣವನ್ನು, ತೊಳೆದಲ್ಲದೆ-ಜ್ಞಾನಾನಂದಜಲದಿಂದ ಪ್ರಕ್ಷಾಲಿಸಿ ಸಚ್ಚರಿತ್ರ ಚರಣವಾಗಿ ಅಳವಡಿಸಿಕೊಂಡಲ್ಲದೆ, ಹೊದ್ದಲೀಯ-ಜ್ಞಾನವಿಡಿದಾಚರಿಸಗೊಡನು. ಇಂತೀ ಸರ್ವಾಂಗದ ತಲೆದೊಳೆದ ಕಾರಣ: ಇಂತೀ-ಈ ಪ್ರಕಾರವಾದ, ಸರ್ವಾಂಗ-ಸಮಸ್ತ ಅವಯವಂಗಳ, ತಲೆದೊಳೆದ ಕಾರಣ-ಜ್ಞಾನಾನಂದಜಲದಿಂದ ಪ್ರಕ್ಷಾಲಿಸಿ ಸುಜ್ಞಾನದೃಷ್ಟಿ ಸುಚಿತ್ತಹಸ್ತ ಸಚ್ಚರಿತ್ರವೆಂಬಚರಣವಾಗಿ ಅಳವಡಿಸಿಕೊಂಡ ನಿಮಿತ್ತ, ಕೂಡಲಸಂಗಮದೇವ-ಪರಶಿವಲಿಂಗವು, ಎನ್ನ ಕೂಡಿಕೊಂಡನು-ನನ್ನನು ತನ್ನೊಳಗೆ ಏಕಾರ್ಥವ ಮಾಡಿಕೊಂಡನು, ಅವ್ವಾ-ಎಲೆ ಶರಣಸತಿಯಳೆ.

II- -

ಮನೆಯ ಗಂಡನ ಮನೆವಾರ್ತೆಯನೇನ ಹೇಳುವೆನವ್ವಾ-ಆಚಾರಂಗವೆಂಬ ಗೃಹಕ್ಕೆ ವಲ್ಲಭನಾದ ಇಷ್ಟಲಿಂಗದೇವನ ಕ್ರಿಯಾಚರಣೆಯನೇನೆಂದು ನಿರೂಪಿಸುವೆನು. ಎಲೆ ಮಾತೃಸ್ಥಾನವಾದ ಮಹಾನುಭಾವ ಚಿಚ್ಛಕ್ತಿಯೆ. ಅಂಗವಿದ್ಯೆಯನೊಲ್ಲ-ದೇಹದ ಮರೆಯನೊಲ್ಲ. ಕಂಗಳೊಳಗಣ ಕಸವ ಕಳೆದಲ್ಲದೆ ನೋಡಲೀಯ-ಕ್ರಿಯಾದೃಷ್ಟಿಯೊಳಗಣ ಭಿನ್ನಕ್ರಿಯಾದೃಷ್ಟಿಯ ನಷ್ಟವ ಮಾಡಿದಲ್ಲದೆ ನಿರೀಕ್ಷಿಸಲೀಸ ಕೈಯ ತೊಳೆದಲ್ಲದೆ ಮುಟ್ಟಲೀಯ-ಕುಚಿತ್ತವೆಂಬ ಹಸ್ತವ ನಷ್ಟವ ಮಾಡಿದಲ್ಲದೆ ಸೋಂಕಲೀಸ. ಕಾಲ ತೊಳೆದಲ್ಲದೆ ಹೊದ್ದಲೀಯ-ಬಿನ್ನಕ್ರಿಯಾಚರಣೆಯನು ನಷ್ಟವ ಮಾಡಿದಲ್ಲದೆ ಮುಟ್ಟಲೀಸ. ಅದಲ್ಲದೆ ಅಂತರಂಗವೆಂಬ ಗೃಹಕ್ಕೆ ಕರ್ತೃವಾದ ಪ್ರಾಣಲಿಂಗವೆಂಬ ಪುರುಷನ ಜ್ಞಾನಾಚರಣೆಯನೇನೆಂದು ನಿರೂಪಿಸುವೆನು. ಅಜ್ಞಾನವನೊಲ್ಲ-ಅನಿಮಿಷದೃಷ್ಟಿಯೊಳಗಣ ಅಜ್ಞಾನವೆಂಬ ಅರೆಗಸವ ನಷ್ಟವ ಮಾಡಿದಲ್ಲದೆ, ಕರಣಂಗಳ ಪ್ರಕೃತಿಯ ನಷ್ಟವ ಮಾಡಿದಲ್ಲದೆ, ಕರ್ಮೇಂದ್ರಿಯಂಗಳ ಪ್ರಕೃತಿಯ ನಷ್ಟವ ಮಾಡಿದಲ್ಲದೆ, ಇಂತೀ ಸರ್ವಾಂಗ ತಲೆದೊಳೆದ ಕಾರಣ-ಈ ತೆರದಲ್ಲಿ ಹೇಳಿದ ಸಕಲಾಂಗವು ವೃತ್ತಿಜ್ಞಾನವನು ನಷ್ಟವ ಮಾಡಿದ ನಿಮಿತ್ತವು. ಕೂಡಲಸಂಗಮದೇವನೆನ್ನ ಕೂಡಿಕೊಂಡನವ್ವಾ-ಪರಶಿವಲಿಂಗವು ಆತ್ಮನ ಸರ್ವಾಂಗದಲ್ಲಿ ಸರ್ವಾಂಗಲಿಂಗವಾಗಿ ತರ್ಕೈಸಿಕೊಂಡ.

III- -

ಇಷ್ಟಲಿಂಗದ ಸತ್ಕ್ರಿಯಾಚರಣೆಯನೇನೆಂದುಪಮಿಸುವೆನೆಂದು ಕ್ತಿಯಾಶಕ್ತಿಸ್ವರೂಪವಾದ ಶರಣನು ಸುಜ್ಞಾನಶಕ್ತಿಯೆಂಬ ಮಾತೆಯ ಕೂಡೆ ಮಾಡುವ ಪ್ರಶ್ನೆಯು ಎಂಬುದೀಗ ಮನೆಯ ಗಂಡನ ಮನೆವಾರ್ತೆಯನೇನ ಹೇಳುವೆನವ್ವಾ ಎಂಬ ಶಬ್ದಕ್ಕರ್ಥ. ದೇಹಭಾವದ ವರ್ತನೆಯನಂಗೀಕರಿಸಿನೆಂಬುದೀಗ ಅಂಗವಿದ್ಯೆಯನೊಲ್ಲನೆಂಬ ಶಬ್ದಕ್ಕರ್ಥ. ಭಿನ್ನರೂಪಭ್ರಾಂತಿ

ನಷ್ಟವಾದಲ್ಲದೆ ಲಿಂಗನಿರೀಕ್ಷಣೆ ದೊರಕೊಳ್ಳದೆಂಬುದೀಗ ಕಂಗಳೊಳಗಣ ಕಸವ ಕಳೆದಲ್ಲದೆ ನೋಡಲೀಯನೆಂಬ ಶಬ್ದಕ್ಕರ್ಥ. ಕುಚಿತ್ತಾದಿಹಸ್ತಗಳು ಮಂತ್ರಲಿಂಗಸಂಬಂಧದಿಂದೆ ನಿವೃತ್ತಿಯಾದಲ್ಲದೆ ಸುಚಿತ್ತಾದಿ ಹಸ್ತಗಳಲ್ಲಿ ಲಿಂಗಸ್ಪರ್ಶನ ದೊರೆಕೊಳ್ಳಲಿಲ್ಲವೆಂಬುದೀಗ ಕೈಯ ತೊಳೆದಲ್ಲದೆ ಮುಟ್ಟಲೀಯನೆಂಬ ಶಬ್ದಕ್ಕರ್ಥ. ದುಶ್ಚರಿತ್ರವೆಂಬ ಚರಣ ನಿವೃತ್ತಿಯಾಗಿ ಸಚ್ಚರಿತ್ರ ನೆಲೆಗೊಂಡಲ್ಲದೆ ಲಿಂಗವು ತನ್ನ ದಿಕ್ಕ ಹೊದ್ದಲೀಸನೆಂಬುದೀಗ, ಕಾಲ ತೊಳೆದಲ್ಲದೆ ಹೊದ್ದಲೀಯನೆಂಬ ಶಬ್ದಕ್ಕರ್ಥ. ಇಂತು-ಹೀಂಗೆ ಸಕಲೇಂದ್ರಿಯಗಳು ಮಂತ್ರ ಲಿಂಗಸಂಬಂಧದಿಂದ ನಿವೃತ್ತಿಯಾಗಿ ಸುಜ್ಞಾನವಳವಟ್ಟ ಕಾರಣ ಲಿಂಗದಲ್ಲಿ ಏಕಾರ್ಥ ದೊರೆಕೊಂಡಿತ್ತೆಂಬುದೀಗ ಸರ್ವಾಂಗ ತಲೆದೊಳೆದ ಕಾರಣ ಕೂಡಲಸಂಗಮದೇವನೆನ್ನ ಕೂಡಿಕೊಂಡನವ್ವಾ ಎಂಬ ಶಬ್ದಕ್ಕರ್ಥ.

....

೧-೧ ಗ (ಡ).

IV- -

ಶರಣನೆಂಬ ಸತಿಗೆ ಪತಿಯಾಗಿರ್ದ ಲಿಂಗ ಶರಣನ ತನುಮನಕ್ಕೆ ಕರ್ತೃ. ಅಂತು ಕರ್ತೃವಾಗಿಪ್ಪ ಲಿಂಗದ ಜ್ಞಾನಕ್ರಿಯಾಚಾರಿತ್ರವ ಹೇಳುವೊಡೆ ಆಶ್ಚರ್ಯವೆಂಬುದೀಗ, ಮನೆಯ ಗಂಡನ ಮನೆವಾರ್ತೆಯನೇನ ಹೇಳುವೆನವ್ವಾ ಎಂಬ ಶಬ್ದಕ್ಕರ್ಥ. ಅಂತಪ್ಪ ಲಿಂಗದ ಜ್ಞಾನಕ್ರಿಯಾಚಾರಿತ್ರವೆಂತೆಂದೊಡೆ ಆ ದೇಹಭಾವದ ಅಜ್ಞಾನ ಹಿಂಗದೆ ಭಿನ್ನಜ್ಞಾನಿಯಾಗಿರ್ದಡೆ ಲಿಂಗವೊಲ್ಲನೆಂಬುದೀಗ, ಅಂಗವಿದ್ಯೆಯನೊಲ್ಲನೆಂಬ ಶಬ್ದಕ್ಕರ್ಥ. ಅಂತು ಲಿಂಗವ ಭಿನ್ನವಿಟ್ಟು ಕಾಣುತ್ತಿಪ್ಪ ಅಜ್ಞಾನವೀಗ ಜ್ಞಾನದೃಕ್ಕಿನೊಳಗಣ ಕಸವೆಂದಱಿದು ಕಳೆದು ಅಭಿನ್ನಜ್ಞಾನಿಯಾದಲ್ಲದೆ ಲಿಂಗವು ಕಾಣಿಸಿಕೊಂಬುದೀಗ ಕಂಗಳೊಳಗಣ ಕಸವ ಕಳೆದಲ್ಲದೆ ನೋಡಲೀಯನೆಂಬ ಶಬ್ದಕ್ಕರ್ಥ. ಹಸ್ತವೆಂದ ಭಾವ. ಅಂತು ಲಿಂಗವ ಭಿನ್ನವಿಟ್ಟು ಭಾವಿಸುವ ಭಾವದ ಭಿನ್ನಸೂತಕವ ಸದ್ವಿವೇಕಜಲದಿಂ ತೊಳೆದು ಕಳೆದು ಭಿನ್ನ ಅಭಿನ್ನಭಾವಿಯಾದಲ್ಲದೆ ಲಿಂಗವು ಕೈವಶವಾಗದೆಂಬುದೀಗ ಕೈದೊಳೆದಲ್ಲದೆ ಮುಟ್ಟಲೀಯನೆಂಬ ಶಬ್ದಕ್ಕರ್ಥ. ಪಾದವೆಂದರೆ ಕ್ರಿಯಾಚಾರ. ಅಂತು ಲಿಂಗವ ಭಿನ್ನವಿಟ್ಟು ಆಚರಿಸುವ ಭಿನ್ನಕ್ರಿಯಾಕರ್ಮ ಸೂತಕವನು ಸದ್ವಿವೇಕಜಲದಿಂ ತೊಳೆದು ಕಳೆದು ಅಭಿನ್ನಕ್ರೀಯನಾಚರಿಸಿದಲ್ಲದೆ ಲಿಂಗವು ತನ್ನೊಳಗೆ ಬೆಱೆಯಲೀಯನೆಂಬುದೀಗ, ಕಾಲುದೊಳೆದಲ್ಲದೆ ಹೊದ್ದಲೀಯನೆಂಬ ಶಬ್ದಕ್ಕರ್ಥ. ಇಂತೀ ಭಿನ್ನಜ್ಞಾನ ಭಿನ್ನಭಾವ ಭಿನ್ನಕ್ರೀಗಳೆಂಬ ಅಂಗಭಾವದ ಅಜ್ಞಾನವೆಲ್ಲವನು ಸಮ್ಯಕ್ ಜ್ಞಾನಜಲದಿಂ ತೊಳೆದು ಕಳೆದು ಅಭಿನ್ನಜ್ಞಾನಭಾವಕ್ರೀಯಳವಟ್ಟ ಕಾರಣ ಶರಣನಲ್ಲಿ ಲಿಂಗವು ಭಿನ್ನವಿಲ್ಲದೆ ಬೆರೆದು ಶರಣನೆಲ್ಲಾ ಲಿಂಗವೆಯಾಗಿರ್ದನೆಂಬುದೀಗ, ಇಂತೀ ಸರ್ವಾಂಗ ತಲೆಕೆಳಗಾದ ಕಾರಣ ಕೂಡಲಸಂಗಮದೇವನೆನ್ನ ಕೂಡಿಕೊಂಡನವ್ವಾಯೆಂಬ ಶಬ್ದಕ್ಕರ್ಥ.

V- -

ಇಷ್ಟಲಿಂಗದ ಕ್ರಿಯಾಚಾರಣೆಯನೇನೆಂದು ಬಿನ್ನವಿಸಲಿಯೆಂದು ಕ್ರಿಯಾಶಕ್ತಿಸ್ವರೂಪವಾದ ಶರಣನು ಜ್ಞಾನಶಕ್ತಿಯೆಂಬ ಮಾತೆಯ ಕೂಡೆ ಮಾತಾಡುವ ಪ್ರಶ್ನೆಯೆಂಬುದೀಗ ಮನೆಯ ಗಂಡನ

ಮನೆವಾರ್ತೆಯನೇನ ಹೇಳುವೆನವ್ವಾವೆಂಬುದರ್ಥ. ದೇಹಭಾವದ ವರ್ತನೆಯನಂಗೀಕರಿಸನೆಂಬುದೀಗ ಅಂಗವಿದ್ಯೆಯನೊಲ್ಲನೆಂಬುದರ್ಥ. ಭಿನ್ನರೂಪಭ್ರಾಂತಿನಷ್ಟವಾದಲ್ಲದೆ ಲಿಂಗನಿರೀಕ್ಷಣೆ ದೊರೆಕೊಳ್ಳದೆಂಬುದೀಗ, ಕಂಗಳೊಳಗಣ ಕಸವ ಕಳೆದಲ್ಲದೆ ನೋಡಲೀಯನೆಂಬ ಶಬ್ದಕ್ಕರ್ಥ. ಕುಚಿತ್ತಾದಿಹಸ್ತಂಗಳು ನಿವೃತ್ತಿಯಾದಲ್ಲದೆ ಸುಚಿತ್ತಾದಿ ಹಸ್ತಂಗಳಲ್ಲಿ ಲಿಂಗಷಡ್ವಿಧ ಸಂಬಂಧವಾಗದೆಂಬುದೀಗ, ಕೈಯ ತೊಳೆದಲ್ಲದೆ ಮುಟ್ಟಲೀಯನೆಂಬುದರ್ಥ. ದುಶ್ಚರಿತ್ರವ ನಿವೃತ್ತಿ ಮಾಡಿದಲ್ಲದೆ ಲಿಂಗವು ತನ್ನ ದಿಕ್ಕ ಹೊದ್ದ[ಲೀ]ಸನೆಂಬುದೀಗ, ಕಾಲ ತೊಳೆದಲ್ಲದೆ ಹೊದ್ದಲೀಯನೆಂಬುದರ್ಥ. ಇಂತು ಹಿಂದೆ ಸರ್ವೇಂದ್ರಿಯಂಗಳು ನಿವೃತ್ತಿಯಾಗಿ ಸುಜ್ಞಾನವಳವಟ್ಟ ನಿಮಿತ್ತವು ತನ್ನಲ್ಲಿ ಶರಣನ ಏಕಾರ್ಥವ ಮಾಡಿ ಕೊಂಡನೆಂದು ಸಂಗನಬಸವೇಶ್ವರನು: ರೂಪಿಸುತ್ತಿರ್ಪನೆಂಬುದೀಗ, ಕೂಡಲಸಂಗಮದೇವ ಕೂಡಿಸಿಕೊಂಡನೆಂಬುದರ್ಥ.

೯೧೪

ಅಳಿಯನ ಕಂಡಡೆ ನಾಚೆಂಬೆ ಮಗಳೆ, ಅಳಿಯನ ಕಂಡಡೆ ತೊಲಗೆಂಬೆಮಗಳೆ, ನಾಚುವರೆ ಮೋಱೆಯಿಲ್ಲ, ತೊಲಗುವರೆ ನೆಲನಿಲ್ಲ! ಇಬ್ಬರಿಗೊಬ್ಬ ಗಂಡನಾದ ಬಳಿಕ ಇನ್ನೆಲ್ಲಿಯ ಮೋಱೆ ಮಗಳೆ? ಕೂಡಲಸಂಗಯ್ಯ[1]ನೆಂಬ ಗಂಡನಾದ ಬಳಿಕ ಇನ್ನೆಲ್ಲಿಯ ಮೋಱೆ ಮಗಳೆ?

I– –

ಅಳಿಯನ ಕಂಡಡೆ– ಸೋದರಳಿಯನ ಕಂಡರೆ, ನಾಚೆಂಬ–ಅಭಿಮಾನಿಸಿಕೋ, ಮಗಳೆ–ಎಲೆ ತನಯಳೆ, ಅಳಿಯನ ಕಂಡಡೆ–ಸೋದರಳಿಯನ ನೋಡಿದರೆ, ತೊಲಗೆಂಬೆ–ಓರೆ ಬಿದ್ದು ಹೋಗೆಂದು ಹೇಳುವೆ, ಮಗಳೆ–ಎಲೆ ತನಯಳೆ, ನಾಚುವರೆ–ಅಭಿಮಾನಿಸಿಕೊಂಬುವರೆ, ಮೋಱೆಯಿಲ್ಲ–ಮುಖದಲ್ಲಿ ಕಂದುಕಲೆ ಕುಂದು ಕೊರತೆ ಇಲ್ಲವು. ತೊಲಗುವರೆ–ಓರೆಗೆ ಬಿದ್ದು ಹೋದನೆಂದರೆ ನೆಲನಿಲ್ಲ–ಮನೆ ವಿಶಾಲವಾಗಿಲ್ಲವು, ಇಬ್ಬರಿಗೊಬ್ಬ ಗಂಡನಾದ ಬಳಿಕ–ತಾಯಿ ಮಗಳೆಂಬ ಈರ್ವರಿಗೂ ಒಬ್ಬ ರಮಣನಾದ ಮೇಲೆ, ಇನ್ನೆಲ್ಲಿಯ ಮೋಱೆ–ಇನ್ನೆಲ್ಲಿಯ ಓರೆಯು, ಮಗಳೆ ಎಲೆ ತನಯಳೆ ಎಂಬ ದೃಷ್ಟೋಪಮಾನದ ಹಾಂಗೆ.

● ಅಳಿಯನ–ಜ್ಞಾನಶಕ್ತಿಯ ತನಯಳೇ ಕ್ರಿಯಾಶಕ್ತಿ. ಆ ಕ್ರಿಯಾಶಕ್ತಿಯ ವಲ್ಲಭನಾದ ಇಷ್ಟಲಿಂಗದೇವನೆಂಬ ರಮಣನ, ಕಂಡಡೆ ನಾಚೆಂಬೆ–ಭಿನ್ನಕ್ರೀಯಿಂದ ಪೂಜಿಸೆಂದು ಹೇಳುವೆ, ಮಗಳೆ–ಎಲೆ ಶರಣಸತಿಯಳೆ, ಅಳಿಯನ–ಕ್ರಿಯಾಶಕ್ತಿಯ ಅಗ್ರಜಳೇ ಜ್ಞಾನಶಕ್ತಿ, ಆ ಜ್ಞಾನಶಕ್ತಿಯ ರಮಣನಾದ ಪ್ರಾಣಲಿಂಗದೇವನ, ಕಂಡಡೆ–ನೋಡಿದರೆ, ತೊಲಗೆಂಬೆ–ಭಿನ್ನಜ್ಞಾನದಿಂದ ಅರುಹೆಂದು ಹೇಳುವೆ, ಮಗಳೆ–ಎಲೆ ಶರಣಸತಿಯಳೆ, ನಾಚುವರೆ–ಭಿನ್ನಕ್ರೀಯಿಂದ ಪೂಜಿಸುವರೆ, ಮೋಱೆಯಿಲ್ಲ–ಭಿನ್ನಕ್ರೀಯಕ್ಕೆ ತೆರಪಿಲ್ಲವು. ತೊಲಗುವರೆ–ಭಿನ್ನಜ್ಞಾನದಿಂದ ಅರುಹೆಂದು ಹೇಳುವರೆ, ನೆಲನಿಲ್ಲ–ಭಿನ್ನಜ್ಞಾನಕ್ಕೆ ತೆರಪಿಲ್ಲವು. ಇಬ್ಬರಿಗೊಬ್ಬ ಗಂಡನಾದ ಬಳಿಕ–ಜ್ಞಾನಶಕ್ತಿ ಕ್ರಿಯಾಶಕ್ತಿ ಎಂಬೀರ್ವರಿಗೂ ಒಬ್ಬ ಗಂಡನಾದ ಮೇಲೆ ಮಹಲಿಂಗವೇ ಇಷ್ಟಪ್ರಾಣಲಿಂಗವಾಗಿ ಅಂಗಪ್ರಾಣಂಗಳಲ್ಲಿ ನೆಲೆಗೊಂಡ ಮೇಲೆ ಇನ್ನೆಲ್ಲಿಯ ಮೋಱೆ–ಭಿನ್ನವಿಟ್ಟುಕೊಂಡು ಪೂಜಿಸುವದು ಇನ್ನೆಲ್ಲಿಹದೋ ಮಗಳೆ–ಎಲೆ

ಶರಣಸತಿಯಳೆ. ಕೂಡಲಸಂಗಯ್ಯನೆಂಬ ಗಂಡನಾದ ಬಳಿಕ–ಮಹಾಲಿಂಗವೇ ಇಷ್ಟಪ್ರಾಣಲಿಂಗವಾಗಿ ಅಂಪ್ರಾಣಂಗಳಲ್ಲಿ ನೆಲೆಗೊಂಡ ಮೇಲೆ, ಇನ್ನೆಲಿಯ ಮೋಜೆ–ಭಿನ್ನವಿಟ್ಟುಕೊಂಡರುಹಿಸಿಕೊಂಬುವುದು ಇನ್ನೆಲ್ಲಿಹದೋ, ಮಗಳೆ–ಎಲೆ ಶರಣಸತಿಯಳೆ.

II– –

1 + ಮದೇವ(ಚ, ಜ)

....

ಅಳಿಯನ ಕಂಡಡೆ–ಶರಣನ ನೋಡಿದರೆ, ನಾಚೆಂಬೆ ಮಗಳೆ–ಅಂಗಲಿಂಗವೆಂದೆರಡಾಗಿ ವರ್ತಿಸುವನೆಂಬೆ ಕ್ರಿಯಾಶಕ್ತಿಯೆಂಬ ಸಾಹೆಳೆ, ಅಳಿಯನ ಕಂಡಡೆ–ಶರಣನ ನೋಡಿದರೆ, ತೊಲಗೆಂಬೆ ಮಗಳೆ–ಭಿನ್ನವಿಟ್ಟು ವರ್ತಿಸುವೆನೆಂಬೆ ಕ್ರಿಯಾಶಕ್ತಿಯೆಂಬ ಸಾಹೆಳೆ ನಾಚುವರೆ ಮೋರೆಯಿಲ್ಲ–ಅಂಗಲಿಂಗವೆಂದು ಭಿನ್ನವಿಟ್ಟು ವರ್ತಿಸುವರೆ ಸದ್ವಿವೇಕವೆಂಬ ವಕ್ತ್ರವಿಲ್ಲ. ತೊಲಗುವರೆ ನೆಲನಿಲ್ಲ–ಲಿಂಗವನು ಬಿಟ್ಟು ವಿಯೋಗವಾಗುವರೆ ಭಿನ್ನಕ್ರೀಯೆಂಬ ಮರಿಯಾದೆಯಿಲ್ಲ. ಇಬ್ಬರಿಗೊಬ್ಬ ಗಂಡನಾದ ಬಳಿಕ–ಇನ್ನೆಲ್ಲಿಯ ಮೋರೆ–ಮಗಳೆ ಗುರುಶಿಷ್ಯರೀರರ್ವರಿಗೆ ಏಕಮೇವಾದ್ವಿತೀಯವಾದ ಇಷ್ಟ ಮಹಾಲಿಂಗವೆಂಬ ಪುರುಷನಾದ ಮೇಲೆ ಇನ್ನಾವ ಕಡೆಯ ಸದ್ವಿವೇಕವೆಂಬ ಭಿನ್ನ ವಕ್ತ್ರವು ಕ್ರಿಯಾಶಕ್ತಿಯೆಂಬ ಸಾಹೆಳೆ ಕೂಡಲಸಂಗಮದೇವಯ್ಯನೆಂಬ ಗಂಡನಾದ ಬಳಿಕ ಇನ್ನೆಲಿಯ ಮೋರೆ ಮಗಳೇ–ಪರಶಿವಲಿಂಗವೆಂಬ ಪುರುಷನಾದ ಮೇಲೆ ಇನ್ನಾವ ಕಡೆಯ ಸದ್ವಿವೇಕವೆಂಬ ಭಿನ್ನವಕ್ತ್ರವು ಕ್ರಿಯಾಶಕ್ತಿಯೆಂಬ ಸಾಹೆಳೆ.

....

೧–೧ ಹ (ಜ).

III– –

1 + ಮದೇವ (ಟ, ಡ).

....

ಇಷ್ಟಲಿಂಗವೆಂಬ ಜಾಮಾತೃವಿನ ದರ್ಶನಮಾತ್ರದಿಂದೆ ಅಂತರಂಗದಷ್ಟಪಾಶ ಬಹಿರಂಗದ ಪಂಚಪಾಶಂಗಳ ನಿವೃತ್ತಿಯ ಮಾಡೆಂದು ಜ್ಞಾನಶಕ್ತಿಯೆಂಬ ಮಾತೆ ಕ್ರಿಯಾಶಕ್ತಿಸ್ವರೂಪವಾದ ಶರಣಸತಿಯ ಕೂಡೆ ಮಾಡುವ ಪ್ರಶ್ನೆಯೆಂಬುದೀಗ ಅಳಿಯನ ಕಂಡರೆ ನಾಚೆಂಬೆ ಮಗಳೆಯೆಂಬ ಶಬ್ದಕ್ಕರ್ಥ. ಇಷ್ಟಲಿಂಗದೇವನೆಂಬ ಜಾಮಾತೃವಿನ ದರ್ಶನವಾದಲ್ಲಿ ಪ್ರಪಂಚಿನಿಂದೆ ಹೊರಚ್ಚಾಗುಯೆಂದು ಜ್ಞಾನಶಕ್ತಿಯೆಂಬ ಮಾತೆಯು ಕ್ರಿಯಾಶಕ್ತಿಯ ಕೂಡೆ ಮಾಡುವ ಪ್ರಶ್ನೆಯೆಂಬುದೀಗ ಅಳಿಯನ ಕಂಡರೆ ತೊಲಗೆಂಬೆ ಮಗಳೆಯೆಂಬ ಶಬ್ದಕ್ಕರ್ಥ. ನಾಚುವರೆ ಮೋರೆಯಿಲ್ಲ–ಅಭಿಮಾನಿಸಿಕೊಂಬುವರೆ ದುರ್ವಿವೇಕವೆಂಬ ವದನವುಂಟಾಗಲಜೆಯದು. ತೊಲಗುವರೆ–ಹೊರಚ್ಚಾಗುವರೆ, ನೆಲೆನಿಲ್ಲ–ದೇಹಭಾವದ ವರ್ತನೆಯು ಶರಣಸತಿಗೆ ದೊರೆಕೊಳ್ಳೆಂಬುದರ್ಥ. "ಜ್ಞಾನಶಕ್ತಿಸ್ವರೂಪವಾದ ಶ್ರೀಗುರುದೇವನು ಕ್ರಿಯಾಶಕ್ತಿಸ್ವರೂಪವಾದ ಶರಣಸತಿಯರೀರ್ವರಿಗೂ ಇಷಲಿಂಗದೇವನೊರ್ವನೇ

ವಲ್ಲಭನಾದ ಮೇಲೆ ದುರ್ವಿವೇಕವೆಂಬ ವದನವುಂಟಾಗದುಯೆಂದು ಜ್ಞಾನಶಕ್ತಿಸ್ವರೂಪವಾದ ಶ್ರೀಗುರುದೇವನು ಕ್ರಿಯಾಶಕ್ತಿಸ್ವರೂಪವಾದ ಶರಣಸತಿಕೂಡೆ ಮಾಡುವ ಪ್ರಶ್ನೆಯೆಂಬುದೀ ಇಬ್ಬರಿಗೊಬ್ಬ ಗಂಡನಾದ ಬಳಿಕ ಇನ್ನೆಲಿಯ ಮೋರೆ ಮಗಳೆ ಎಂಬ ಶಬ್ದಕ್ಕರ್ಥ. ಕೂಡಲಸಂಗಮದೇವಯ್ಯನೆಂಬ– ಪರಶಿವಲಿಂಗವೆಂಬ, ಗಂಡನಾದ ಬಳಿಕ–ವಲ್ಲಭನಾದ ಮೇಲೆ, ಇನ್ನೆಲ್ಲಿಯ ಮೋರೆ ಮಗಳೆ– ಇನ್ನಾವ ಕಡೆಯ ದುರ್ವಿವೇಕವೆಂಬ ವಕ್ತ್ರವು ಶರಣಸತಿಯೆ ಇಲ್ಲವೆಂಬುದರ್ಥ.

....

೨–೨ ಯ (ಡ). ೩ + ಇಬ್ಬರಿಗೆ (ಟ, ಡ)

IV– –

1 + ಮದೇವ (ತ).

....

ಶರಣನ ಜ್ಞಾನಕ್ರೀಗಳೆಂಬುವೀಗ ಜ್ಞಾನಶಕ್ತಿ ಕ್ರಿಯಾಶಕ್ತಿಯವು ಇಂತಪ್ಪ ಶಕ್ತಿಯರಿಬ್ಬರೊಳಗೆ ಜ್ಞಾನಶಕ್ತಿಯ ಮಗಳು ಕ್ರಿಯಾಶಕ್ತಿ. ಅಂತಪ್ಪ ಕ್ರಿಯಾಶಕ್ತಿಗೆ ವಲ್ಲಭನಾ೪[ದ]೪ ನಿತ್ಯವಸ್ತು ತಾನೆ ಇಷ್ಟಲಿಂಗನಾ೪[ಗೆ]೪ ಆ ಇಷ್ಟಲಿಂಗವು ಜ್ಞಾನಶಕ್ತಿಗೆ ಅಳಿಯನೆನಿಸಿದನು. ಅಂತೆನಿಸಿದ ಇಷ್ಟಲಿಂಗವು ಕ್ರಿಯಾಶಕ್ತಿಯಲ್ಲಿ ಕೂಡಿರಲು ಆ ಕ್ರಿಯಾಶಕ್ತಿಯು ತನ್ನ ಮಾತೃಸ್ಥಾನವಾದ ಜ್ಞಾನಶಕ್ತಿಯಿಂದ ಇಷ್ಟಲಿಂಗದ ಭಿನ್ನಭಾವವೆಂತೆಂದು ವಿಚಾರಿಸುತ್ತಿರ್ದು ಆ ವಿಚಾರಿಸುವ ಜ್ಞಾನಕ್ಕೆ ಎಡೆದೆಜೆಹಿಲ್ಲದೆ ಅಭಿನ್ನವಾಗಿಪ್ಪ ಇಷ್ಟಲಿಂಗದ ಘನವನಜಿದು ಜ್ಞಾನಶಕ್ತಿಯು ಕ್ರಿಯಾಶಕ್ತಿಯ ಕೂಡೆ ಎನಗೆ ನಿನಗ ಇಬ್ಬರಿಗೆಯೂ ಲಿಂಗವೊಬ್ಬನೇ ಗಂಡನಾಗಿ ಭಿನ್ನಜ್ಞಾನದ ಮೋಜೆಯಿಳಿದನೆಂದು ಜ್ಞಾನಶಕ್ತಿ ಕ್ರಿಯಾಶಕ್ತಿಗೆ ಅರುಹಿಕೊಡಲು ಅರುಹಿಕೊಟ್ಟ ಅಭಿನ್ನಜ್ಞಾನಕ್ರೀಯಿಂದ ಲಿಂಗವೆಯಾದ ಶರಣನೆಂಬುದೀ ವಚನದ ತಾತ್ಪರ್ಯಾರ್ಥ.

....

೪–೪ ಗಿ (ತ).

V– –

ಇಷ್ಟಲಿಂಗವೆಂಬ ಜಾಮಾತೃವಿನ ದರ್ಶನದ ಮಾತ್ರದಿಂದೆ ಅಂತರಂಗದಷ್ಟಪಾಶ ಬಹಿರಂಗದ ಪಂಚಪಾಶಂಗಳ ನಿವೃತ್ತಿಯ ಮಾಡೆಂದು ಜ್ಞಾನಶಕ್ತಿಯೆಂಬ ಮಾತೆ ಕ್ರಿಯಾಶಕ್ತಿಸ್ವರೂಪವಾದ ಶರಣಸತಿಯ ಕೂಡೆ ಮಾಡುವ ಪ್ರಶ್ನೆಯೆಂಬುದೀಗ ಅಳಿಯನ ಕಂಡರೆ ನಾಚೆಂಬೆ ಮಗಳೆಂಬ ಶಬ್ದಕ್ಕರ್ಥ. ಮಗಳೆ–ಎಲೆ ಶರಣಸತಿಯೆ, ತೊಲಗು–ಪ್ರಪಂಚಿನಿಂದೆ ಹೊರಚ್ಚಾಗು. ನಾಚುವರೆ ಮೋಜೆಯಿಲ್ಲ–ಅಭಿಮಾನಿಸುವರೆ ದುರ್ವಿವೇಕವೆಂಬ ವದನನಾಸ್ತಿ. ತೊಲಗುವರೆ–ಹೊರಚ್ಚಾಗುವರೆ, ನೆಲನಿಲ್ಲ–ಪೃಥ್ವೀತತ್ತ್ವಸಂಬಂಧವಾದ ದೇಹಭಾವವಿಲ್ಲ, ಇಬ್ಬರಿಗೆ–ಜ್ಞಾನಶಕ್ತಿ ಸ್ವರೂಪವಾದ ಶ್ರೀಗುರುದೇವ ಕ್ರಿಯಾಶಕ್ತಿಸ್ವರೂಪವಾದ ಶರಣಸತಿಯರಿರ್ವರಿಗೂ, ಒಬ್ಬನೇ–ಅದ್ವಿತೀಯವಾದಿಷ್ಟಲಿಂಗ ದೇವನೆ, ವಲ್ಲಭನಾದ ಬಳಿಕಯೆಂಬುದೀಗ ಗಂಡನಾದ ಬಳಿಕ, ಇನ್ನೆಲ್ಲಿಯ ಮೋರೆ ಮಗಳೆ–ಮತ್ತೆ

ದುರ್ವಿವೇಕವುಂಟಾಗದೆಂದು ಜ್ಞಾನಶಕ್ತಿಸ್ವರೂಪವಾದ ಶ್ರೀಗುರುದೇವನೆಂಬ ಮಾತೆಯು ಕ್ರಿಯಾಶಕ್ತಿಸ್ವರೂಪವಾದ ಶರಣಸತಿಯ ಕೂಡಿ ಮಾಡುವ ಪ್ರಶ್ನೆಯು.

೯೧೫

ಸತ್ಯವಿದೆ ಸಮಾಧಾನವಿದೆ ಮನಕ್ಕೆ ಬಾರದಿದೇನಯ್ಯ? ಸರ್ವಸನುಮತವೆಂಬ ಸುಖವಿದೆ ಮನಕ್ಕೆ ಸೋಂಕದಿದೇನಯ್ಯ? ಆ[1]ನು ನೀ[2]ನೆಂಬುದೊಂದು ಘನವಿದೆ. ಕೂಡಲಸಂಗಮದೇವಾ ಭ್ರಮೆಯೋ?

I– –

ಸತ್ಯವಿದೆ–ಯಥಾರ್ಥವಾದ ಪರಬ್ರಹ್ಮವೇ ಗುರುಮುಖದಿಂದ ಇಷ್ಟಲಿಂಗವಾಗಿ ಬಂದು ಅಂಗದಲ್ಲಿ ನೆಲೆಗೊಂಡುದುದು ತಾನೇ, ಸಮಾಧಾನವಿದೆ– ಸರ್ವಸಮತಾಭಾವವನುಳ್ಳ ಪರಬ್ರಹ್ಮವು ಇದು ತಾನೇ. ಮನಕ್ಕೆ ಬಾರದು–ಮನದಲ್ಲಿ ಪ್ರಾಣಲಿಂಗವಾಗಿ ನೆಲೆಗೊಂಡಿರಲೊಲ್ಲದು. ಇದೇನಯ್ಯ–ಇದೇನು ಕಾರಣವಯ್ಯ, ಸರ್ವಸನುಮತವೆಂಬ–ಸರ್ವಾಚಾರಸಂಪತ್ತಿನಾಚರಣೆ ಕ್ರಿಯೆಗಳ ಒಡಂಬಡಿಕೆಯಿಂದ, ಸುಖವಿದೆ–ಪರಿಣಾಮಸ್ವರೂಪವಾದಪರಬ್ರಹ್ಮವೇ ಗುರುಮುಖದಿಂದ ಅಂಗದಲ್ಲಿ ಇಷ್ಟಲಿಂಗವಾಗಿಬಂದು ನೆಲೆಗೊಂಡಿದುದು ತಾನೇ, ಮನಕ್ಕೆ ಸೋಂಕದು–ಮನದಲ್ಲಿ ಪ್ರಾಣಲಿಂಗವಾಗಿ ನೆಲೆಗೊಳ್ಳಲೊಲ್ಲನು, ಇದೇನಯ್ಯ–ಇದೇನು ಕಾರಣವಯ್ಯ. ಆನು ನೀನೆಂಬುದೊಂದು–ಶರಣ ಲಿಂಗವೆಂದು ಹೇಳುವುದೊಂದು, ಘನವಿದೆ–ಅಧಿಕತರವಾದ ಪರಬ್ರಹ್ಮವೇ ಗುರುಮುಖದಿಂದಿಷ್ಟಲಿಂಗವಾಗಿ ಬಂದು ಅಂಗದಲ್ಲಿ ನೆಲೆಗೊಂಡುದುದು ತಾನೇ ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ ಭ್ರಮೆಯೋ–ಅಂತರಂಗದಲ್ಲಿ ಪ್ರಾಣಲಿಂಗವಾಗಿ ನೆಲೆಗೊಳ್ಳಲಿಲ್ಲವೆಂದು ಹೇಳುವಂಥದು ಭ್ರಾಂತಿಯೇ ಸರಿ.

II– –

1–1 X (ಚ, ಜ).

....

ಸತ್ಯವಿದೆ–ಪರಮಾರ್ಥವಾದ ಕ್ರಿಯಾಚರಣೆ ಇದೆ. ಸಮಾಧಾನವಿದೆ–ಚಿತ್ತೋಪಸಮತೆಯಾದ ಜ್ಞಾನಾಚರಣೆಯು ಇದೆ. ಮನಕ್ಕೆ ಬಾರದಿದೇನಯ್ಯಾ–ಉನ್ಮಾನಸಕ್ಕೆ ಪ್ರಾಣಲಿಂಗವಾಗಿ ಅಗತವಾಗದಿದೇನಾಶ್ಚರ್ಯವಯ್ಯ, ಸರ್ವಸನುಮತವೆಂಬ ಸುಖವಿದೆ–ಸರ್ವಾಚಾರಸಂಪತ್ತಿ ನಾಚರಣೆಯ ಕೂಟಸ್ಥವು ಇದೆ. ಮನಕ್ಕೆ ಸೋಂಕದಿದೇನಯ್ಯ–ಉನ್ಮಾನಸಕ್ಕೆ ಪ್ರಾಣಲಿಂಗವಾಗಿ ಮುಟ್ಟದಿದೇನಾಶ್ಚರ್ಯವಯ್ಯ. ಆ ನೀನೆಂಬುದೊಂದು ಘನವಿದೆ–ಶರಣ ಲಿಂಗವೆಂಬುದೊಂದು ಅಧಿಕತ್ವವಿದು ತಾನೇ ಕೂಡಲಸಂಗಮದೇವ ಭ್ರಮೆಯೋ–ಎಲೆ ಪರಮಶಿವಲಿಂಗವೇ– ಅನುಮಾನವೂ

III– –

ಸತ್ಯವಿದೆ–ಯಥಾರ್ಥಜ್ಞಾನಸಂಬಂಧ ಉಂಟಾಗಿರುತ್ತದೆ. ಸಮಾಧಾನವಿದೆ–ಸಕಲೇಂದ್ರಿಯಂಗಳ ವಿಷಯಪದಾರ್ಥಗಳಲ್ಲಿ ಲಿಂಗಸಂಬಂಧವ ಮಾಡಿ ಆ ಲಿಂಗಪ್ರಸಾದವ ಸ್ವೀಕರಿಸುವ ತರಹರ ಉಂಟಾಗಿರುತ್ತದೆ. ಮತ್ತಂ ಶಮೆ ದಮೆ ಶಾಂತಿದಾಂತಿಗಳ ತರಹರ ಉಂಟಾಗಿರುತ್ತದೆ. ಸರ್ವಸನುಮತವೆಂಬ ಸುಖವಿದೆ–ಸಮಸ್ತ ಇಂದ್ರಿಯಂಗಳಲ್ಲಿ [೧]ಲಿಂಗ[೧] ಪರಿಣಾಮ ಉಂಟಾಗಿರುತ್ತದೆ. ಮನಕ್ಕೆ ಬಾರದಿದೇನಯ್ಯ–ಈ ಪ್ರಕಾರದಲ್ಲಿದ್ದಲ್ಲಿ ಶರಣಸತಿಯಾಚರಣೆಯು ನಿನ್ನ ಮನಸ್ಸಿಗೆ ಮಂಜುಳವಾಗದೆ ಇರುವುದಿದೇನು ಕಾರಣವಯ್ಯ, ಮನಕ್ಕೆ ಸೋಂಕದಿದೇನಯ್ಯ–ನನ್ನ ಮನಸ್ಸಿಗೆ ತಿಳಿಯಲ್ಪಡದೆಯಿರುವುದೇನು ಕಾರಣವಯ್ಯ. ಆನು ನೀನೆಂಬುದೊಂದು ಘನವಿದೆ–ಶರಣ ಲಿಂಗಸಂಬಂಧವೆಂಬುದೊಂದಧಿಕತ್ವವುಂಟಾಗಿರುತ್ತದೆ. ಕೂಡಲಸಂಗಮದೇವ–ಎಲೆ ಪರಶಿಲಿಂಗವೆ, ಭ್ರಮೆಯೋ–ಲಿಂಗಭ್ರಾಂತೋ.

....

೧–೧ X (ಡ).

IV– –

1–1 X (ತ).

ಸತ್ತುಚಿತ್ತಾನಂದವಪ್ಪ ನಿತ್ಯವಸ್ತು ಅಂಗದೊಳಹೊಱಗೆ ಪರಿಪೂರ್ಣವಾಗಿದ್ದು ಮನವ ವೇಧಿಸದೆ ಮನವ ಸೋಂಕದೆ ಮನಕ್ಕೆ ಕಾಣಿಸಿಕೊಳ್ಳದೆ ಇಪ್ಪದು. ಅದೇಕಯ್ಯ ಎಂದಡೆ ಮನದಜೀವು ದೇಹದ ಭ್ರಾಂತಿಯಲ್ಲಿ ಭ್ರಮೆಗೊಂಡಿಪ್ಪ ಕಾರಣವೆಂಬುದೀ ವಚನದರ್ಥ.

V– –

1–2 X (ಪ).

ಸತ್ಯವಿದೆ–ಯಥಾರ್ಥವಿರುತ್ತದೆ, ಸಮಾಧಾನವಿದೆ–ಚಿತ್ತನಿರ್ಧರವಿರುತ್ತದೆ, ಮನಕ್ಕೆ ಬಾರದಿದೇನಯ್ಯ–ಎನ್ನ ಮನಸ್ಸಿಗೆ ಬಿಜಯುಂಗೆಯ್ಯದಿರುವುದಿದೇನು ಕಾರಣವಯ್ಯ, ಸರ್ವಸನುಮತವೆಂಬ ಸುಖವಿದೆ–ಸಕಲೇಂದ್ರಿಯಗಳಲ್ಲಿ ಲಿಂಗಪರಿಣಾಮವುಂಟಾಗಿದೆ. ಮನಕ್ಕೆ ಸೋಂಕದಿದೇನಯ್ಯ–ಮನಸ್ಸಿಗೆ ಅಂಗೀಕಾರವಾಗದಿದೇನು ಕಾರಣವಯ್ಯ. ಆನೆಂಬುದು–ಶರಣ ಲಿಂಗಸಂಬಂಧವೆಂಬುದು, ಒಂದು ಘನವಿದೆ–ಒಂದು ಅಧಿಕತ್ವವಿರುತ್ತಿದೆ.[೨]

....

೨ ಈ ಟೀಕೆಯು "ಸಿನೆಬಂಜೆಯರಿಬ್ಬರಿಗೊಬ್ಬ........." ವಚನದ ಟೀಕೆಯ ನಂತರವಿದೆ(ಸಂ).

೯೧೬

ಸಿನೆ ಬಂಜೆಯರಿಬ್ಬರಿಗೊಬ್ಬ ಮಗ ಹುಟ್ಟಿ ಅವನೆನ್ನ ರಿಣಕ್ಕೆ ಒಡೆಯನಾದ, ಅವನೆನ್ನ ಧನಕ್ಕೆ ಒಡೆಯನಾದ. ಆನು ಗಳಿಸಿದ ಒಮ್ಮನಕ್ಕೆ ಅಗಲದೆ ಮೋಹಿತನಾದ. ಕೂಡಸಂಗಮದೇವನಂತಪ್ಪ ಮಗ ಹುಟ್ಟಿದಡೆ ಇ[1]ದ್ದೆ[1]ನಯ್ಯ ಕಾಯ[2] ಮಾತೆಯಾಗಿ, ಜೀವ[2] ಪಿತನಾಗಿ [3]ನೀ[3]ನಿರಿಸಿದಂತೆ.

I- -

ಸಿನೆ ಬಂಜೆಯರಿಬ್ಬರಿಗೊಬ್ಬ ಮಗ ಹುಟ್ಟಿ: [ಸಿನೆ ಬಂಜೆಯರಿಬ್ಬರಿಗೆ-] ಹುಟ್ಟುಬಂಜೆಯರಾದ ಸ್ತ್ರೀ ಪುರುಷರೀರ್ವರಿಗೂ, ಒಬ್ಬ ಮಗ ಹುಟ್ಟಿ-ಒಬ್ಬ ಕುಮಾರನುತ್ಪತ್ಯವಾಗಿ, ಅವನೆನ್ನ ರಿಣಕ್ಕೆ-ಆತನೆನ್ನ ಸಾಲಕ್ಕೆ, ಒಡೆಯನಾದ-ಕರ್ತನಾದನು. ಅವನೆನ್ನ ಧನಕ್ಕೆ-ಆತನೆನ್ನ ದ್ರವ್ಯಕ್ಕೆ, ಒಡೆಯನಾದ-ಕರ್ತನಾದನು. ಆನು ಗಳಿಸಿದ-ನಾನು ಗಳಿಸಿ ಗಳಿಸಿ ಗುಡ್ಡೆ ಹಾಕಿದ, ಒಮ್ಮನಕ್ಕೆ-ಹದಿನೆಂಟು ಧಾನ್ಯಂಗಳಿಗೆ, ಅಗಲದೆ-ವಿಯೋಗವಾಗದೆ, ಮೋಹಿತನಾದ-ಮಮಕಾರವುಳ್ಳಾತನಾದನು. ಕೂಡಲಸಂಗಮದೇವನಂತಪ್ಪ ಮಗ ಹುಟ್ಟಿದಡೆ-ದೀರ್ಘಾಯುಷ್ಯ ದೀರ್ಘಭವಿಷ್ಯವನುಳ್ಳ ಕುಮಾರನುತ್ಪತ್ಯವಾದರೆ-ಇದ್ದೆನಯ್ಯ-ಇರುರ್ತಿದೆನಯ್ಯ. ಕಾಯ ಮಾತೆಯಾಗಿ-ದೇಹವೇ ತಾಯಾಗಿ, ಜೀವ ಪಿತನಾಗಿ ಜೀವನೇ ತಂದೆಯಾಗಿ, ನೀನಿರಿಸಿದಂತೆ-ನೀನು ಉಂಬುವದಕ್ಕೆ ಉಡುವುದಕ್ಕೆ ಕೊಟ್ಟು ಸುಖದಲ್ಲಿ ಸೈತಿರಿಸಿದರೂ ಒಳ್ಳೇದೇ. ಉಂಬುವುದಕ್ಕೆ ಉಡುವುದಕ್ಕೆ ಕೊಡದೇ ದುಃಖದಲ್ಲಿ ಸೈತಿರಿಸಿದರೂ ಒಳ್ಳೇದೇ ಎಂಬ ದೃಷ್ಟೋಪಮಾನದ ಹಾಂಗೆ.

● ಸಿನೆಬಂಜೆಯರಿಬ್ಬರಿಗೊಬ್ಬ ಮಗ ಹುಟ್ಟಿ: [ಸಿನೆಬಂಜೆಯರಿಬ್ಬರಿಗೆ]-ಜರಾಮರಣವಿವರ್ಜಿತರಾದ ಗುರುಶಿಷ್ಯರೆಂಬಿರ್ವರಿಗೆ, ಒಬ್ಬ ಮಗ ಹುಟ್ಟಿ-ಒಬ್ಬ ಇಷ್ಟಲಿಂಗವೆಂಬ ಕುಮಾರನುತ್ಪತ್ಯವಾಗಿ, ಅವನು-ಇಷ್ಟಲಿಂಗವೆಂಬ ಕುಮಾರನು, ಎನ್ನ ರಿಣಕ್ಕೆ- ನನ್ನ ಸಂಚಿತ ಪ್ರಾರಬ್ಧ ಆಗಾಮಿಯೆಂಬ ಕರ್ಮತ್ರಯಂಗಳ ವರ್ತನೆಗಳನ್ನು ನಷ್ಟವ ಮಾಡುವುದಕ್ಕೆ, ಒಡೆಯನಾದ-ಕರ್ತನಾದನು. ಅವನು-ಆ ಇಷ್ಟಲಿಂಗವೆಂಬ ಕುಮಾರನು. ಎನ್ನ ಧನಕ್ಕೆ-ಎನ್ನ ಪ್ರಾಣಕ್ಕೆ, ಒಡೆಯನಾದ ಕರ್ತನಾದನು. ಆನು ಗಳಿಸಿದ ಒಮ್ಮನಕ್ಕೆ: ಆನು ಗಳಿಸಿದ-ಆನು ಆಚರಿಸಿದ, ಒಮ್ಮನಕ್ಕೆ-ಒಂದೇ ಉನ್ಮನೀಯ ಮನಸ್ಸೆಂಬ ಕ್ರಿಯಾಭಿಮಾನಕ್ಕೆ, ಅಗಲದೆ-ಸರ್ವಾಚಾರಸಂಪತ್ತಿನಾಚರಣೆ ಕ್ರಿಯೆಗೆ ವಿನಿಯೋಗವಾಗದೆ, ಮೋಹಿತನಾದ-ಸಮ್ಮೋಹಿಯಾದ ಪ್ರಾಣಲಿಂಗವಾಗಿ ನೆಲೆಗೊಂಡನು. ಕೂಡಸಂಗಮದೇವನಂತಪ್ಪ ಮಗ ಹುಟ್ಟಿದಡೆ-ಇಷ್ಟಲಿಂಗವೆಂಬ ಕುಮಾರನುತ್ಪತ್ಯವಾದರೆ, ಇದ್ದನಯ್ಯ-ಜ್ಞಾನಕ್ರಿಯೆವಿಡಿದಾಚರಿಸುತಿದ್ದೆನಯ್ಯ. ಕಾಯ ಮಾತೆಯಾಗಿ-ದೇಹವೇ ಮಾತೃಸ್ವರೂಪವಾದ ಇಷ್ಟಲಿಂಗದಲ್ಲಿ ಕೂಡಿ ಇಷ್ಟಲಿಂಗವಾಗಿ, ಜೀವ ಪಿತನಾಗಿ-ಜೀವವೇ ಜನಕಸ್ವರೂಪವಾದ ಪ್ರಾಣಲಿಂಗದಲ್ಲಿ ಕೂಡಿ ಪ್ರಾಣಲಿಂಗವಾಗಿ, ನೀನಿರಿಸಿದಂತೆ-ನೀನು ಅಂಗಪ್ರಾಣಂಗಳಲ್ಲಿ ಇಷ್ಟಪ್ರಾಣಲಿಂಗಸಂಬಂಧವ ಮಾಡಿಕೊಂಡು ಅವಿರಳಜ್ಞಾನಕ್ರಿಯೆವಿಡಿದಾಚರಿಸೆಂದು ಸೈತಿರಿಸಿದರೂ ಒಳ್ಳೇದೆ, ನೀನು ಅಂಗಪ್ರಾಣಂಗಳಲ್ಲಿ ಇಷ್ಟಪ್ರಾಣಸಂಬಂಧವ ಮಾಡಿಕೊಂಡು ಅವಿರಳಜ್ಞಾನಕ್ರಿಯೆವಿಡಿದಾಚರಿಸಗೊಡದೆ ಅಜ್ಞಾನಮಾಯಾಪ್ರಪಂಚಿಗೊಳಗು ಮಾಡಿದರೂ ಒಳ್ಳೇದೆ? ಮತ್ತಂತುಮಲ್ಲದೆ.

ಕಾಯ ಮಾತೆಯಾಗಿ-ದೇಹವಳಿದು ಆಚಾರಾಂಗವಾಗಿ, ಜೀವಪಿತನಾಗಿ-ಪ್ರಾಣವಳಿದು ಚಿತ್ಪ್ರಾಣವಾಗಿ, ನೀನಿರಿಸಿದಂತೆ-ನೀನು ಇಹದ ಪಲಪರದ ಪದಂಗಳನು ನಷ್ಟವ ಮಾಡಿ ಇಹದ ಪ್ರಸಾದಭೋಗ ಪರದ ನಿಜಮೋಕ್ಷದಲ್ಲಿ ಸೈತಿಸಿದರೂ ಒಳ್ಳೇದೇ. ಇಹದ ಪ್ರಸಾದಭೋಗ, ಪರದ ನಿಜಮೋಕ್ಷದಲ್ಲಿ ಸೈತಿರಿಸದೆ ಇಹದ ಫಲಪರದ ಪದಂಗಳಿಗೆ ಒಳಗು ಮಾಡಿದರೂ ಒಳ್ಳೇದೇ.

II- -

1–1 ದ್ದ(ಚ, ಜ).

....

ಸಿನೆಬಂಜೆಯರಿಬ್ಬರಿಗೊಬ್ಬ ಮಗಹುಟ್ಟಿ–ಫಲಪದಂಗಳಪೇಕ್ಷೆಯಿಲ್ಲದೆ ಶಿಷ್ಯ ಮೋಕ್ಷಾಪೇಕ್ಷೆಯಿಲ್ಲದ ಗುರುವೆಂಬ ಈರ್ವರಿಗೆ ಪ್ರಾಣಲಿಂಗವೆಂಬ ಕುಮಾರನುದಯವಾಗಿ, ಅವನೆನ್ನ ರಿಣಕ್ಕೆ ಒಡೆಯನಾದ–ಆ ಪ್ರಾಣಲಿಂಗವು ಆತ್ಮನ ಸುಖದುಃಖಕ್ಕೆ ಕರ್ತೃವಾದ, ಅವನೆನ್ನ ಧನಕ್ಕೆ ಒಡೆಯನಾದ–ಆ ಪ್ರಾಣಲಿಂಗವು ಆತ್ಮನ ಜ್ಞಾನಕ್ಕೆ ಕರ್ತೃವಾದ. ಆನು ಗಳಿಸಿದ ಒಮ್ಮನಕ್ಕೆ ಅಗಲದೆ ಮೋಹಿತನಾದ–ಆ ಶರಣನು ಕೂಡಲಿಕ್ಕಿದ ಏಕಧ್ಯಾನಸಮಾಚಿತ್ತಕ್ಕೆ ವಿಯೋಗವಾಗದೆ ಮಮಕಾರವುಳ್ಳಾತನಾದ. ಕೂಡಲಸಂಗಮದೇವನಂತಪ್ಪ–ಪರಶಿವಲಿಂಗದಂತಹ, ಮಗ ಹುಟ್ಟಿದಡೆ–ಆ ಪ್ರಾಣಲಿಂಗವೇ ಇಷ್ಟಲಿಂಗವಾಗುದಯವಾದರೆ, ಇದ್ದನಯ್ಯ ಕಾಯ ಮಾತೆಯಾಗಿ ಜೀವ ಪಿತನಾಗಿ ನೀನಿರಿಸಿದಂತೆ–ಫಲಪದಂಗಳಪೇಕ್ಷೆಯಿಲ್ಲದ ಚಿದಂಗಸ್ವರೂಪವಹ ಶಿಷ್ಯನೇ ಅಂಗವಾಗಿ ಮೋಕ್ಷಾಪೇಕ್ಷೆಯಿಲ್ಲದ ಚಿತ್ಪ್ರಾಣಸ್ವರೂಪವಹ ಗುರುವೇ ತಂದೆಯಾಗಿ ಲಿಂಗೈಕ್ಯನು ಮಡಗಿದ ಹಾಂಗೆ ಲಿಂಗವು ಇದ್ದನಯ್ಯ.

III– –

1–1 ದ್ದ(ಟ, ಡ). 3–3 ನಾ (ಟ, ಡ)

....

ಕರ್ಮಫಲಪ್ರಾಪ್ತಿರಹಿತರಾದ ಗುರುಶಿಷ್ಯರ ಮಧ್ಯದಲ್ಲಿಷ್ಟಲಿಂಗವೆಂಬ ಪುತ್ರನುದಯವಾದನೆಂಬುದೀಗ, ಸಿನೆಬಂಜೆಯರಿಬ್ಬರಿಗೊಬ್ಬ ಮಗ ಹುಟ್ಟಿ ಎಂಬ ಶಬ್ದಕ್ಕರ್ಥ. ಆ ಇಷ್ಟಲಿಂಗವೆಂಬ ಪುತ್ರನು ಎನ್ನ ಪೂಜಾಕ್ರಿಯಂಗಳೆಂಬ ರಿಣಕ್ಕೆ ಕರ್ತೃವಾಗಿರ್ಪನೆಂಬುದೀಗ, ಅವನೆನ್ನ ರಿಣಕ್ಕೆ ಒಡೆಯನಾದನೆಂಬ ಶಬ್ದಕರ್ಥ, ಅವನೆನ್ನ ಸುಜ್ಞಾನದ್ರವ್ಯಕ್ಕೆ ಕರ್ತೃವಾಗಿರ್ಪನೆಂಬುದೀಗ ಅವನೆನ್ನ ಧನಕ್ಕೊಡೆಯನಾದನೆಂಬ ಶಬ್ದಕ್ಕರ್ಥ. ಶರಣಸತಿಯಾಗಮಾಡಿದ ಲಿಂಗದಲ್ಲಿಯ ಏಕಮನಸ್ಸಿಗೆ ವಿಯೋಗವಾಗದೆ ಕೂಡಿರ್ಪನೆಂಬುದೀಗ, ಆನು ಗಳಿಸಿದ ಒಮ್ಮನಕ್ಕೆ ಅಗಲದೆ ಮೋಹಿತನಾದನೆಂಬ ಶಬ್ದಕ್ಕರ್ಥ. ಕೂಡಲಸಂಗಮದೇವನಂತಪ್ಪ–ಪರಶಿವಲಿಂಗವೇ ಆದಂಥ, ಮಗ ಹುಟ್ಟಿದರೆ–ಚಿತ್ಪುತ್ರನುದಯವಾದರೆ, ಕಾಯ ಮಾತೆಯಾಗಿ, ಚಿದಂಗವೇ ಜನನಿಯಾಗಿ–[ಜೀವಪಿತನಾಗಿ] ಚಿದಾತ್ಮನೇ ಜನಕನಾಗಿ, ನಾನಿರಿಸಿದಂತೆ–ಹೇಂಗೆ ಶರಣನು ಅಂಗದಲಳವಡಿಸಿಕೊಂಡಾಚರಿಸುತ್ತಿರ್ದಪನೋ ಹಾಂಗೆ, ಇದ್ದನಯ್ಯ–ಸಂಬಂಧವಾಗಿರುತಿರ್ದನಯ್ಯ.

IV– –

3–3 ನಾ (ತ).

....

ಅಖಂಡ ಚಿತ್ಪ್ರಭಾಶಕ್ತಿಯನುಳ್ಳಾತನು ಪರವಸ್ತು, ಅಂತಪ್ಪ ಪರಶಿವನೂ ಆ ಚಿತ್ ಶಕ್ತಿಯೂಯೆಂಬ ಇಬ್ಬರಿಗೂ ಎಂದೆಂದೂ ಹುಟ್ಟು ಹೊಂದುಗಳಿಲ್ಲವಾಗಿ, ಅಂತು ಹುಟ್ಟು

ಹೊಂದುಗಳೆಂಬವೆರಡು ಎಂದೂ ಅವರಿಗೆ ಹುಟ್ಟಲಿಲ್ಲದೆ ಬಂಜೆಯಾಗಿರ್ದರೆಂಬುದೀಗ, ಸಿನೆಬಂಜೆಯರೆಂಬ ಶಬ್ದಕ್ಕರ್ಥ. ಅಂತಪ್ಪ ಪರವಸ್ತು ತಾನೇ ಕೃಪೆಯಿಂದ ಆತ್ಮನ ಅಂತರಂಗದಲ್ಲಿ ತನ್ನ ಚಿತ್ ಶಕ್ತಿಯ ಪ್ರಭಾವಿಸಿ ಬಹಿರಂಗದಲ್ಲಿ ತಾನೇ ಗುರುವಾಗಿ ಬಂದು ಉಪದೇಶಿಸಲು ಚಿಲ್ಲಿಂಗ ಉದಯಿಸಿ ಇಷ್ಟಲಿಂಗವಾಗಿ ಶರಣನ ಕರಸ್ಥಲಕ್ಕೆ ಬಂದಿತ್ತೆಂಬುದೀಗ, ಇಬ್ಬರಿಗೊಬ್ಬ ಮಗ ಹುಟ್ಟಿಯೆಂಬ ಶಬ್ದಕ್ಕರ್ಥ. ಅಂತು ಶಿವಶಕ್ತಿಯರಿಬ್ಬರಿಂದುದಯಿಸಿದ ಇಷ್ಟಲಿಂಗವು ಜೀವನ ಸಂಚಿತ ಪ್ರಾರಬ್ಧ ಆಗಾಮಿಯೆಂಬ ಕರ್ಮಲಿಖಿತದ ಸಾಲವ ತೀರಿಸಿ ಕಳೆದು, ಶರಣಂಗೆ ಪತಿಯಾಗಿ ಶರಣನ ತನುಮನಧನಕ್ಕೆಯೂ ಲಿಂಗವೇ ಕರ್ತೃವಾಗಿ ಇರ್ದನೆಂಬುದೀಗ, ಅವನೆನ್ನ ರಿಣಕ್ಕೆ ಒಡೆಯನಾದ ಅವನೆನ್ನ ಧನಕ್ಕೆ ಒಡೆಯನಾದನೆಂಬ ಶಬ್ದಕ್ಕರ್ಥ. ಅಂತು ಶರಣ ತಾನು ಸತಿಯಾಗಿ ಲಿಂಗವೇ ಪತಿಯಾಗಿ ಬೆರೆದು ಬೇಜಿಲ್ಲದಿಪ್ಪ ಏಕೋಭಾವದ ಮನವ ಗುರುಭಕ್ತಿಯಿಂದ ಪಡೆದ ಕಾರಣ ಆ ಶರಣನ ಮನ ಕರಣಂಗಳು ಮೊದಲಾದ ಸರ್ವಾಂಗವೆಲ್ಲವೂ ಲಿಂಗಕ್ಕೆ ಪ್ರೀತಿಯಾಗಿ, ಶರಣನ ಅಂಗಸುಖಂಗಳನೆಲ್ಲವ ಇಷ್ಟಲಿಂಗವೇ ಒಳಕೊಂಡು ಭೋಗಿಸುತ್ತಿಹನೆಂಬುದೀಗ, ಆನು ಗಳಿಸಿದ ಒಮ್ಮನಕ್ಕೆ ಅಗಲದೆ ಮೋಹಿತನಾದ ಕೂಡಲಸಂಗಮದೇವನಂತಪ್ಪ ಮಗ ಹುಟ್ಟಿ ಎಂಬ ಶಬ್ದಕ್ಕರ್ಥ.

V– –

1–1 ದ್ದ(ಪ). 2 + ವೆ(ಪ) 3–3 ನಾ (ಪ)

ಕರ್ಮಫಲಪ್ರಾಪ್ತಿರಹಿತರಾದ ಗುರುಶಿಷ್ಯರೀರ್ವರ ಮಧ್ಯದಲ್ಲಿ ಇಷ್ಟಲಿಂಗವೆಂಬ ಪುತ್ರನುದಯವಾಗಿಯೆಂಬುದೀಗ, ಸಿನೆಬಂಜೆಯರಿಬ್ಬರಿಗೊಬ್ಬಮಗ ಹುಟ್ಟಿಯೆಂಬುದರ್ಥ. ಆ ಲಿಂಗವೆಂಬ ಪುತ್ರನು ಎನ್ನ ಪೂಜಾಕ್ರಿಯೆಗಳೆಂಬ ರಿಣಕ್ಕೆ ಕರ್ತೃವಾದನೆಂಬುದೀಗ ಅವನೆನ್ನ ರಿಣಕ್ಕೊಡೆಯನಾದನೆಂಬ ಶಬ್ದಕ್ಕರ್ಥ. ಆನು–ಶರಣಸತಿಯು, ಗಳಿಸಿದ–ಪಡೆದಂಥ, ಮತ್ತಂ ಆಗುಮಾಡಿದ ಲಿಂಗದಲ್ಲಿಯ ಏಕಮನಸ್ಸಿಗೆ, ಅಗಲದೆ–ವಿಯೋಗವಾಗದೆ ಮೋಹಿತನಾದ–ಮಮಕಾರವುಳ್ಳಾತನಾಗಿ ಕೂಡಿರ್ಪನೆಂಬುದೀಗ ಆನು ಗಳಿಸಿದ ಒಮ್ಮನಕ್ಕೆ ಅಗಲದೆ ಮೋಹಿತನಾದನೆಂಬ ಶಬ್ದಕ್ಕರ್ಥ. ಕೂಡಲಸಂಗಮದೇವನಂತಪ್ಪ–ಪರಶಿವಲಿಂಗವೆಯಾದಂಥ, ಮಗ ಹುಟ್ಟಿದರೆ–ಚಿತ್ಪುತ್ರನುದಯವಾದರೆ, ಕಾಯವೆ ಮಾತೆಯಾಗಿ–ಚಿದಂಗವೆ ಜನನಿಯಾಗಿ, ಜೀವವೆ ಪಿತನಾಗಿ–ಚಿದಾತ್ಮವೆ ಜನಕನಾಗಿ ನಾನಿರಿಸಿದಂತೆ–ಹೇಂಗೆ ಶರಣನು ಅಂಗದಲ್ಲಿ ಅಳವಡಿಸಿಕೊಂಡು ಆಚರಿಸುತಿರ್ದಪನೊ ಹಾಂಗೆ,[ಇದ್ದನಯ್ಯ–] ನೆಲಸಿರುತಿರ್ದನು.

೯೧೭

ಪೂಜೆಯುಳ್ಳನ್ನಬರ ಲಿಂಗವ ಹಾಡಿದೆ. ಮಾಟವುಳ್ಳನ್ನಬರ ಜಂಗಮವ ಹಾಡಿದೆ. ಜಿಹ್ವೆಯುಳ್ಳನ್ನಬರ ಪ್ರಸಾದವ ಹಾಡಿದೆ. ಈ ತ್ರಿವಿಧ ನಾಸ್ತಿಯಾದ ಬಳಿಕ ನನ್ನ ನಾ ಹಾಡಿಕೊಂಡೆ ಕಾಣಾ, ಕೂಡಲಸಂಗಮದೇವಾ.

I– –

ಪೂಜೆಯುಳ್ಳನ್ನಬರ–ಅಂಗವಾದದ್ದು ಲಿಂಗವಾದದ್ದು ಪೂಜಾರೂಪವಾದದ್ದು ಒಂದೇ ವಸ್ತುವೆಂದರಿದು ತಾನು ತಾನಾಗಿ ಮಾಡುವಂಥ ಸಮರಸ ಕ್ರಿಯೆ ಉಂಟಾಗಿರುವ ಪರಿಯಂತರ, ಲಿಂಗವ ಹಾಡಿದೆ–ಶರಣನ ಅರುಹಿನ ಬಗೆಗೆ ಕ್ರಿಯಾಭೇದದ ಚಿಂತನೆದೋರಿ, ॥ಕಂದ॥ ನೀನೇ ನಿಧಿ ನೀನೇ ಮಂತ್ರ। ನೀನಾರ್ಚನೆ ನೀನೇ ಭಕ್ತಿ ನೀನುಪದೇಶಂ॥ನೀನೇ ಜಪತಪವೆನಗಂ। ನೀನಿದನಜಿಯಾ ಪ್ರಸನ್ನಶಂಕರಲಿಂಗಾ॥ ಎಂದು ಕಂದವೃತ್ತಗದ್ಯಪದ್ಯಪ್ರಬಂಧಗಳಿಂದ ಲಿಂಗದ ಕುಲಾವಳಿಯನೆತ್ತಿಕೊಂಡು ಸ್ತೋತ್ರವ ಮಾಡುವೆನು. ಮಾಟವುಳ್ಳನ್ನಬರ–ದೇವನಾದದ್ದು ಭಕ್ತನಾದದ್ದು, ಪದಾರ್ಥವಾದದ್ದು ಒಂದೇ ವಸ್ತುವೆಂದರಿದು ತಾನು ತಾನಾಗಿ ಮಾಡುವಂಥ ಸಮರಸಜ್ಞಾನ ಉಂಟಾಗಿರುವ ಪರಿಯಂತರ, ಜಂಗಮವ ಹಾಡಿದೆ–ಲಿಂಗಪೂಜೆ ಜಂಗಮದಾಸೋಹ ಪ್ರಸಾದಸೇವನೆಯ ಮಾಡಬೇಕೆಂಬಂಥ ಶರಣನ ಅರುಹಿನ ಬಗೆಗೆ ಅರುಹಿನ ಕ್ರಿಯಾಭೇದದ ಚಿಂತನದೋರಿ॥ಗ್ರಂ॥ ಜಂಗಮೋ ಜಗದಾರಾಧ್ಯಃ । ಜಂಗಮಶ್ಚ ಜಗತ್ಪತಿಃ। ಜಂಗಮಸ್ತು ಜಗತ್ಪೂಜ್ಯಃ। ಜಗತ್ಪಾವನ ಜಂಗಮ॥ ಎಂದು ಇವರು ಅನಾದಿಭಕ್ತರ ಭಕ್ತಿಯನ್ನು ಕೈಕೊಂಡು ಮುಕ್ತಿಯನ್ನು ಕರುಣಿಸಿಕೊಟ್ಟಂಥವರು, ಭಕ್ತವತ್ಸಲರು ಮುಕ್ತಿಪ್ರದಾಯಕರು, ನಿರಂಜನಗಣಾಧೀಶ್ವರನ ಸಾಂಪ್ರದಾಯಕರೇ ಇವರೆಂದು ಜಂಗಮದ ಬಿರುದಾವಳಿಯನೆತ್ತಿಕೊಂಡು ಸ್ತೋತ್ರವಮಾಡಿದೆನು. ಜಿಹ್ವೆಯುಳ್ಳನ್ನಬರ–ಶಿವಸುಖಪ್ರಸನ್ನತೆ ಪ್ರಸಾದವನ್ನು ಪಡೆದನುಭವಿಸಬೇಕೆಂಬಂಥ ಶಿವಾಪೇಕ್ಷೆಯೆಂಬ ರಸನೆ ಉಂಟಾಗಿರುವ ಪರಿಯಂತರವು, ಪ್ರಸಾದವ ಹಾಡಿದೆ–ಶರಣನ ಅರುಹಿನ ಬಗೆಗೆ ಕ್ರಿಯಾಭೇದದ ಚಿಂತನೆದೋರಿ. ॥ಗ್ರಂಥ॥೧ [ಪ್ರಸಾದೋ ಗಿರಿಜಾದೇವಿ] ಸಿದ್ಧ ಕಿನ್ನರ ಗುಹ್ಯಕ] ವಿಷ್ಣುಪ್ರಮುಖದೇವಾನಾಂ ।ಅಗ್ರಗಣ್ಯ ಅಗೋಚರಃ॥]೧ ಎಂದು ಪಿಪೀಲಿಕಂಗೆ ರುದ್ರ ಪದವಿಯಾದಂಥದು ಬಿಬ್ಬಿಬಾಚಯ್ಯಗಳು ಗೊಬ್ಬೂರ ಸುಟ್ಟಂಥದು ಮರುಳಶಂಕರದೇವರು ಹನ್ನೆರಡು ವರುಷ ಪರಿಯಂತರದಲ್ಲಿ ಪ್ರಸಾದಕೊಂಡದೊಳಗಿರ್ದು ನಿತ್ಯಕಾಯರಾಗಿ ನಿಜಮೋಕ್ಷವನು ಹಡೆದಂಥ ಪ್ರಸಾದದ ಮಹತ್ವಾತೀಶಯವನ್ನು ಎತ್ತಿಕೊಂಡು ಸ್ತೋತ್ರವ ಮಾಡಿದೆನು.

ಈ ತ್ರಿವಿಧನಾಸ್ತಿಯಾದ ಬಳಿಕ–ಲಿಂಗಪೂಜೆ ಜಂಗಮದಾಸೋಹ ಪ್ರಸಾದಸೇವನೆಯ ಮಾಡುವಂಥದು ನಿಃಪತಿಯಾದ ಮೇಲೆ, ನನ್ನ ನಾ ಹಾಡಿಕೊಂಡೆ–ಶರಣನ ಅರುಹಿನ ಬಗೆಗೆ ಕ್ರಿಯಾಭೇದದ ಚಿಂತನೆದೋರಿದೆ. "ಸ್ವಯಮೇವ ನಮಸ್ಕಾರಂ" ಎಂದು ನನಗೆ ನಾನೇ ಸ್ತೋತ್ರವ ಮಾಡಿಕೊಂಡೆನು, ಕಾಣಾ–ಕಂಡಾ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

....

೧–೧ ಪ್ರಸಾದಂ ಗಿರಿಜಾದೇವಿ। ಸಿದ್ಧ ಕಿನ್ನರ ಗುಹ್ಯಕಮ। ವಿಷ್ಣು ಪ್ರಮುಖ ದೇವಾನಾಂ। ಅಗ್ರಗಣ್ಯಮಗೋಚರಂ॥(ಕ, ಗ).

III– –

ಅಷ್ಟವಿಧಾರ್ಚನೆ ಷೋಡಶೋಪಚಾರದ ಪೂಜೆಯುಂಟಾಗಿರುವ ಪರಿಯಂತರಲು ಇಷ್ಟಲಿಂಗ ಸ್ತೋತ್ರವನೆಸಗಿದೆನೆಂಬುದೀಗ ಪೂಜೆಯುಳ್ಳನ್ನಬರ ಲಿಂಗವ ಹಾಡಿದೆನೆಂಬ ಶಬ್ದಕ್ಕರ್ಥ.

ಭಕ್ತಿದಾಸೋಹ ಉಂಟಾಗಿರುವ ಪತಿಯಂತರಲು ಚರಲಿಂಗವ ಕೀರ್ತಿಸಿದೆನೆಂಬುದೀಗ ಮಾಟವುಳ್ಳನ್ನಬರ ಜಂಗಮವ ಹಾಡಿದೆನೆಂಬ ಶಬ್ದಕ್ಕರ್ಥ. ಲಿಂಗಪ್ರಸಾದದ ಸೇವೆಯುಂಟಾಗಿರುವ ಪರಿಯಂತರಲು ಶೇಷ ಮಹತ್ವವನೆ ಕೊಂಡಾಡಿದೆನೆಂಬುದೀಗ, ಜಿಹ್ವೆಯುಳ್ಳನ್ನಬರ ಪ್ರಸಾದವ ಹಾಡಿದೆನೆಂಬ ಶಬ್ದಕ್ಕರ್ಥ. ತ್ರಿವಿಧ ದಾಸೋಹವು ತ್ರಿವಿಧ ಲಿಂಗದಲ್ಲಿ ನಿಷ್ಪತಿಯಾದ ಮೇಲೆ ತನ್ನ ಸ್ವಸ್ವರೂಪನೇ ತಾನು ಕೀರ್ತಿಸುತ್ತಿರ್ದಪನು ಶಿವಶರಣನೆಂಬುದೀಗ, ಈ ತ್ರಿವಿಧ ನಾಸ್ತಿಯಾದ ಬಳಿಕ ಎನ್ನ ನಾ ಹಾಡಿಕೊಂಡೆ ಕಾಣಾ ಕೂಡಲಸಂಗಮದೇವಾ ಎಂಬ ಶಬ್ದಕ್ಕರ್ಥ.

IV– –

ಸತ್ತು ಚಿತ್ತಾನಂದವಪ್ಪ ಲಿಂಗಜಂಗಮಪ್ರಸಾದವೇ ತನ್ನ ನಿಜವೆಂದರಿದು ಆ ಲಿಂಗಜಂಗಮಪ್ರಸಾದಕ್ಕೆ ತನುಮನಪ್ರಾಣಂಗಳನರ್ಪಿಸುವನ್ನಕ್ಕ ಶರಣನ ಅಱಿವಿಂಗೆ ಕ್ರಿಯಾಭೇದ ಚಿಂತನೆದೋಱುತ್ತಿದಿತ್ತು. ಆ ತನುಮನಪ್ರಾಣಂಗಳ ಲಿಂಗಜಂಗಮಪ್ರಸಾದಕ್ಕೆ ಅರ್ಪಿಸಿ ಲಿಂಗಜಂಗಮಪ್ರಸಾದದೊಳೈಕ್ಯವಾದಲ್ಲಿ ಆ ಅಱಿವಿನ ಭೇದಚಿಂತನೆಯಳಿದು ಶರಣನೆಲ್ಲಾ ಲಿಂಗವೆಯಾಗಿರ್ದನು. ಅಂತು ಲಿಂಗವೆಯಾಗಿರ್ದ ಶರಣನು ಮಾಡುತ್ತಿದ್ದ ಕ್ರೀಯೆಲವೂ ತನ್ನ ತಾನರ್ಚಿಸಿಕೊಂಬ ಸ್ವಲೀಲಾನಂದ ಭಕ್ತಿಯೆಂಬುದೀ ವಚನದ ತಾತ್ಪರ್ಯಾರ್ಥ.

೯೧೮

ಅನಾಯಾಸದಿಂದ ಮನೆಯ ಮಾಡಿ, ನಿರಾಯಾಸದಿಂದ ಪರಮಸುಖಿ! ರೂಪಿಸುವಲ್ಲಿ ರೂಪಾಧಿಕ, ನೋಡುವಲ್ಲಿ ನೋಟ ಘನ! ಇಂತಪ್ಪ ಸಹಜಸಂಗಿಯ ನಿಲವಿನ ಪರಿ ಉದಕದೊಳಗಣ ಬಿಂದು. ಉದಯರತ್ನದಂತೆ ಕೂಡಲಸಂಗನ ಶರಣರ ನಿಲವು.

I– –

ಅನಾಯಾಸದಿಂದ ಮನೆಯ ಮಾಡಿ–ಶರಣನು ಆ ಲಿಂಗಕ್ಕೆ ಗೂಢವಾಗಿರುವುದಕ್ಕೆ ತನ್ನಂಗವನ್ನೇ ಆಲಯವ ಮಾಡಿ. ನಿರಾಯಾಸದಿಂದ–ಆಯಾಸಕರ್ಮಕ್ರಿಯಂಗಳೇನೂ ಇಲ್ಲದೆ ಇರುವುದರಿಂದ, ಪರಮಸುಖಿ–ಇಷ್ಟಲಿಂಗಕ್ಕಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆ ಗಳಿಂದಾರಾಧಿಸುವಲ್ಲಿ ಪರಮಪರಿಣಾಮಿಯು. ರೂಪಿಸುವಲ್ಲಿ–ಶ್ರೀಗುರುನಾಥನು ಗಣಸಮ್ಮೇಳದಿಂದ ಅಂತರಂಗದ ಪ್ರಾಣಲಿಂಗವನ್ನೆ ಬಹಿರಂಗದಲ್ಲಿ ದೀಕ್ಷಾತ್ರಯಂಗಳಿಂದ ಇಷ್ಟಲಿಂಗವ ಮಾಡಿ ಕರುಣಿಸಿ ಕೊಡುವಲ್ಲಿ ಸದಾಶಿವನ ಪಂಚಮುಖವನ್ನೇ ಪಂಚಕಲಶವಾಗಿ ಸ್ಥಾಪ್ಯಂಗೊಳಿಸಿ ಷಡಕ್ಷರಮಂತ್ರಧ್ಯಾನ ಆಹ್ವಾನದೃಷ್ಟಿಯಿಂದ ಕುರುಹಿಟ್ಟು ವೃತ್ತ ಗೋಳಕ ಗೋಮುಖಾಕಾರಂಗಳಿಂದ ವ್ಯಕ್ತತರವಾದ ಇಷ್ಟಲಿಂಗವ ಮಾಡಿ ಕರುಣಿಸಿ ಕೊಡುವಲ್ಲಿ ರೂಪಾಧಿಕ–ಲಿಂಗ ಒಂದನ್ನೇ ಕುರುಹಿಡಿವುತ್ತಿಹನು. ನೋಡುವಲ್ಲಿ ಅನಿಮಿಷದೃಷ್ಟಿಯಿಂದ ನಿರೀಕ್ಷಣೆಯ ಮಾಡುವಲ್ಲಿ, ನೋಟ ಘನ ದೃಙ್ಮನಭಾವಂಗಳು ಆ ಲಿಂಗದಲ್ಲಿ ಕೀಲೈಸಿರ್ಪವು.

ಇಂತಪ್ಪ–ಹೀಂಗೊಪ್ಪಲ್ಪಟ್ಟ, ಸಹಜಸಂಗಿಯ ನಿಲುವಿನ ಪರಿ–ಯಥಾರ್ಥವಾದ ತನ್ನ ನಿಜದಲ್ಲಿ ಕೂಡಿ ತಾನೇ ವಿನೋದಿಸಲ್ಪಟ್ಟ ಶರಣನ ನಿಲುಕಡೆಯು, ಉದಕದೊಳಗಣ ಬಿಂದು ಉದಯರತ್ನದಂತೆ–ಸೂರ್ಯನು ಪೂರ್ವಾದ್ರಿಯಿಂದ ಉದಯವಾಗಿ ಬಂದು ತನ್ನ ಕಿರಣವನ್ನು ಉದಕದಲ್ಲಿ ಪ್ರತಿಬಿಂಬಿಸಲು ಆ ಉದಕದ ಗುಣಧರ್ಮಕರ್ಮವರ್ಣಂಗಳಲ್ಲಿ ಬೆರೆಯದೆ ಹೇಂಗೆ ವಿಲಕ್ಷಣವಾಗಿ ಉದಕದೊಳಗೆ ಕೂಡಿ ಉದಕವೇ ತಾನಾಗಿಹುದೋ ಹಾಂಗೆ ಜಲಬುದ್ಬುದಮಯಸ್ವರೂಪವಾದ ಶರಣನು ಚಿದಬ್ಧಿಸ್ವರೂಪವಾದ ಬ್ರಹ್ಮವೇ ತಾನಾಗಿರ್ಪನೆಂಬ ದೃಷ್ಟೋಪಮಾನದ ಹಾಂಗೆ.

● ರೂಪಿಸುವಲ್ಲಿ ರೂಪಾಧಿಕ: ರೂಪಿಸುವಲ್ಲಿ–ಅಧಿಕವಾದ ಇಷ್ಟಲಿಂಗವನ್ನೇ ಕುರುಹಿಡಿವಲ್ಲಿ ಲಿಂಗವು ತನಗೆ ತಾನೇ ಅರ್ಚಿಸಿಕೊಳ್ಳುವುದಕ್ಕೋಸ್ಕರ ಶರಣನಂಗವನ್ನೇ ಚಿದಾಲಯವ ಮಾಡಿಕೊಂಡಿರ್ಪುದು. ನಿರಾಯಾಸದಿಂದ–ಆಯಾಸಕರ್ಮಕ್ರಿಯೆಗಳೇನೂ ಇಲ್ಲದೆ ಇರುವುದರಿಂದ. ಪರಮ ಸುಖಿ–ಪರಮ ಪರಿಣಾಮಿಯು. ನೋಡುವಲ್ಲಿ–ಅನಿಮಿಷದೃಷ್ಟಿಯಿಂದ ನಿರೀಕ್ಷಣೆಯ ಮಾಡುವಲ್ಲಿ, ನೋಟ ಘನ–ದೃಙ್ಮನಭಾವಂಗಳು ಲಿಂಗದಲ್ಲಿ ಕೀಲೈಸಿರ್ಪವು.

ಇಂತಪ್ಪ–ಹೀಂಗೊಪ್ಪಲ್ಪಟ್ಟ, ಸಹಜಸಂಗಿಯ ನಿಲವಿನ–ತನ್ನ ನಿಂದು ತಾನೇ ವಿನೋದಿಸಲ್ಪಟ್ಟ ಶರಣನ, ಪರಿ–ನಿಲುಕಡೆ, ಉದಕದೊಳಗಣ ಬಿಂದು ಉದಯರತ್ನದಂತೆ–ಸೂರ್ಯನು ಪ್ರಾತಃಕಾಲದಲ್ಲಿ ಪೂರ್ವಾದ್ರಿಯಿಂದ ಉದಯವಾಗಿ ತನ್ನ ಕಿರಣವನ್ನು ಹುಲ್ಲಿನ ತುದಿಯಲ್ಲಿರುವ ಇಬ್ಬನಿಯ ಮೇಲೆ ಪ್ರತಿಬಿಂಬಿಸಲು ಆಗಾಗ್ಗೆ ತಿದ್ದಿ ತೀರ್ಚಿ ಒಪ್ಪವಿಟ್ಟ ನೂತ್ನದ ಹರಳಿನೋಪಾದಿಯಲ್ಲಿ ರತ್ನದೋಪಾದಿಯಲ್ಲಿ ಮುತ್ತಿನೋಪಾಯದಿಯಲ್ಲಿ ಆ ಸೂರ್ಯನಲ್ಲಿಯೇ ತೋರಿ ಆ ಸೂರ್ಯನಲ್ಲಿಯೇ ಹೇಂಗೆ ಅಡಗಿಹೋಗುತ್ತಿಹುದೋ ಹಾಂಗೆ ಅನರ್ಘ್ಯ ಉತ್ತಮನಾಯಕರತ್ನ ಸ್ವರೂಪವಾದ ಶರಣನು ಚಿದಾದಿತ್ಯಸ್ವರೂಪವಾದ ಬ್ರಹ್ಮದಲ್ಲಿ ಕೂಡಿ ಬ್ರಹ್ಮವೇ ತಾನಾಗಿರ್ಪನು, ಕೂಡಲಸಂಗನ ಶರಣರ–ಶಿವನ ಚಿತ್ರಭಾಂಗಸ್ವರೂಪರಾದ ಶಿವಶರಣರ ನಿಲವು–ನಿಲುಕಡೆಯು.

II– –

ಅನಾಯಾಸದಿಂದ–ಆಯಾಸ ಕ್ರೀಗಳಿಲ್ಲದಿಹತನದಿಂದ, ಅದಲ್ಲದೆ ಅಷ್ಟಾಂಗಯೋಗಂಗಳೆಂಬ ಭಿನ್ನಯೋಗಾಭ್ಯಾಸದಿಂದ, ಮನೆಯ ಮಾಡಿ–ಭಕ್ತಿಗೃಹವ ಮಾಡಿ, ನಿರಾಯಾಸದಿಂದ–ನಿರಪೇಕ್ಷೆಯಿಂದ, ಪರಮಸುಖಿ–ಉತ್ಕೃಷ್ಟವಾದ ಲಿಂಗಪರಿಣಾಮಿಯು ರೂಪಿಸುವಲ್ಲಿ ರೂಪಾಧಿಕ–ಆ ಪ್ರಾಣ ಲಿಂಗವನೇ ಇಷ್ಟಲಿಂಗವಾಗಿ ಕೊಡುವಲ್ಲಿ ಭಿನ್ನಕ್ರಿಯಾಸಾಕಾರಕ್ಕೆ ಘನವು, ನೋಡುವಲ್ಲಿ ನೋಟ ಘನ–ಅನಿಮಿಷದೃಷ್ಟಿಯಿಂದ ನಿರೀಕ್ಷಿಸುವಲ್ಲಿ ಭಿನ್ನದೃಷ್ಟಿಗೆ ಅಧಿಕವಾಗಿರ್ಪುದು. ಇಂತಹ–ಹೀಂಗಾದಂಥ, ಸಹಜಸಂಗಿಯ ನಿಲವಿನ ಪರಿ–ಆತ್ಮವನು ಮಹಾಲಿಂಗದಲ್ಲಿ ಸಂಪರ್ಕವ ಮಾಡಿದಂಥ ಶರಣನಾಚರಣೆಯ ಪ್ರಕಾರವು ಉದಕದೊಳಗಣ ಬಿಂದು ಉದಯರತ್ನದಂತೆ ಕೂಡಲಸಂಗನ ಶರಣನ ನಿಲವು–ಸದ್ವಿವೇಕಜಲಸ್ವರೂಪವಾದ ಶರಣನು ಚಿದಾದಿತ್ಯ ಸ್ವರೂಪವಾದ ವಸ್ತುವಿನಲ್ಲಿ ಕೂಡಿ ಎರಡಳಿದು ಒಂದೇಯಾಗಿ ಮಾರ್ಪೊಳೆವುತ್ತಿಹನೆಂಬುದರ್ಥ.

....

೧ +ಕರ್ಮ (ಚ).

III– –

ಪ್ರಪಂಚಿನಾಯಾಸವಿಲ್ಲದೆ ಸರ್ವೇಂದ್ರಿಯಂಗಳನು ಲಿಂಗಕ್ಕಾಶ್ರಯವನೆಸಗಿಯೆಂಬುದೀಗ, ಅನಾಯಾಸದಿಂದ ಮನೆಯ ಮಾಡಿಯೆಂಬ ಶಬ್ದಕ್ಕರ್ಥ. ಇಂದ್ರಿಯಂಗಳುಪದ್ರವಿಲ್ಲದೆ ಲಿಂಗಭೋಗೋಪಭೋಗದಿಂದ ಪರಬ್ರಹ್ಮಪರಿಣಾಮಿಯಾಗಿರ್ಪ ಶರಣನೆಂಬುದೀಗ ನಿರಾಯಾಸದಿಂದ ಪರಮಸುಖಿಯೆಂಬ ಶಬ್ದಕ್ಕರ್ಥ. ನೋಡುವ ರೂಪೆಲ್ಲ ಲಿಂಗನಿರೀಕ್ಷಣೆಯಾಗಿರ್ಪುದು ಶಿವಶರಣನಿಗೆಂಬುದೀಗ ರೂಪಿಸುವ ರೂಪಾಧಿಕನೆಂಬ ಶಬ್ದಕ್ಕರ್ಥ. ಲಿಂಗನಿರೀಕ್ಷಣೆಯೆ ಅಲ್ಲದೆ ಭಿನ್ನನಿರೀಕ್ಷಣೆಯುಳ್ಳಾತನಲ್ಲವೆಂಬುದೀಗ ನೊಡುವಲ್ಲಿ ಘನವೆಂಬ ಶಬ್ದಕ್ಕರ್ಥ. ಸಮರಸಾಚರಣೆಯುಳ್ಳ ಶರಣನಿರವು ಉದಕದೊಳಗೆ ಹನಿಕೂಡಿಯೊಂದಾಗುವ ಹಾಂಗೆ ಲಿಂಗದಲ್ಲೇಕವಾಗಿರ್ಪನೆಂಬುದೀಗ ಇಂತಹ ಸಹಜಸಂಗಿಯ ನಿಲವಿನ ಪರಿ ಪ್ರಾತಃಕಾಲದ ಬಾಲಾರ್ಕನ ಹಾಂಗೆ ಶರಣನಾಚರಣೆಗಳೆಲ್ಲವೂ ಲಿಂಗದಲ್ಲಿ ನಿರ್ಮಲವಾಗಿರ್ಪವೆಂಬುದೀಗ ಉದಯರತ್ನದಂತೆ ಕೂಡಲಸಂಗನ ಶರಣನ ನಿಲವುಯೆಂಬ ಶಬ್ದಕ್ಕರ್ಥ.

IV– –

ಮಹಾಘನಲಿಂಗವು ತನ್ನ ತಾನರ್ಚಿಸಿಕೊಂಬ ಲೀಲಾವಿಲಾಸದಿಂದ ದೇಹವೆಂಬ ಮನೆಯ ಮಾಡಿಕೊಂಡು ಶರಣರೂಪಾಗಿ ತನ್ನ ನಿಜಸ್ವರೂಪವನೆ ಸಾಕಾರವ ಮಾಡಿ ಕರಸ್ಥಲದಲ್ಲಿ ಮೂರ್ತಿಗೊಳಿಸಿ ತನ್ನ ತಾನರ್ಚಿಸಿಕೊಳ್ಳುತ್ತ, ಆ ಇಷ್ಟಲಿಂಗವ ಭಿನ್ನವಿಡದೆ ಅಖಂಡಿತಜ್ಞಾನದೃಷ್ಟಿಯಿಂದ ನೋಡುತ್ತ ತನ್ನ ಶಿವತತ್ತ್ವದ ಘನಸುಖವ ಹಿಂಗದೆ ಸುಖಿಸುತ್ತಿಪ್ಪ ಶರಣನು. ಅಂತಪ್ಪ ಶರಣನ ಪರಿಯೆಂತೆಂದೊಡೆ ಉದಯಕಾಲದ ಸೂರ್ಯನ ತೇಜ ಜಲಬಿಂದುಗಳಲ್ಲಿ ಪ್ರತಿಬಿಂಬಿಸಿ ಬೆಳಗಿ ತೋಱುತ್ತಿರ್ದು ಆ ಜಲಬಿಂದುಗಳಲ್ಲಿ ಆ ತೇಜ ನಿರ್ಲೇಪವಾಗಿಪ್ಪಂತೆ ಶರಣ ದೇಹವಿಡಿದಿರ್ದು ದೇಹಿಯಲ್ಲ ನಿರ್ಲೇಪನಾಗಿಪ್ಪ೨ನೆಂಬುದೀ ವಚನದ ತಾತ್ಪರ್ಯಾರ್ಥ.

....

೨ + ಶರಣ (ತ, ೧೬೨೫).

V– –

ಪ್ರಪಂಚಿನಾಯಾಸವಿಲ್ಲದೆ ಸರ್ವೇಂದ್ರಿಯಂಗಳನು ಲಿಂಗಕ್ಕಾಶ್ರಯವನೆಸಗಿದಯೆಂಬುದೀಗ, ಅನಾಯಾಸದಿಂದೆ ಮನೆಯುಮಾಡಿಯೆಂಬುದರ್ಥ. ಇಂದ್ರಿಯುಗಳುಪದ್ರವಿಲ್ಲದೆ ಲಿಂಗಭೋಗೋಪಭೋಗದಿಂದೆ ಪರಬ್ರಹ್ಮಪರಿಣಾಮವುಳ್ಳಾತನಾಗಿರ್ಪನೆಂಬುದೀಗ, ನಿರಾಯಾಸದಿಂದ ಪರಮಸುಖಿಯೆಂಬ ಶಬ್ದಕ್ಕರ್ಥ. ನೋಡುವ ರೂಪೆಲ್ಲ ಲಿಂಗನಿರೀಕ್ಷಣೆಯಾಗಿಪ್ಪುದು ಶರಣನೆಂಬುದೀಗ, ರೂಹಿಸುವಲ್ಲಿ ರೂಪಾಧಿಕನೆಂಬ ಶಬ್ದಕ್ಕರ್ಥ. ಲಿಂಗನಿರೀಕ್ಷಣೆಯಲ್ಲದೆ ಭಿನ್ನನಿರೀಕ್ಷಣೆಯುಳ್ಳಾತನಲ್ಲವೆಂಬುದೀಗ ನೋಡುವಲ್ಲಿ ನೋಟಘನವೆಂಬ ಶಬ್ದಕ್ಕರ್ಥ. ಸಮರಸಾಚಾರಣೆಯುಳ್ಳ ಶರಣನಿರವು ಉದಕದೊಳಗೆ ಹನಿಕೂಡಿಯೊಂದಾಗುವ ಹಾಂಗೆ ಲಿಂಗದಲ್ಲೇಕವಾಗಿರ್ಪನೆಂಬುದೀಗ,

ಇಂತಹ ಸಹಜಸಂಗಿಯ ನಿಲವಿನ ಪರಿ[3] ಉದಕದೊಳಗಣ ಬಿಂದುವೆಂಬ ಶಬ್ದಕ್ಕರ್ಥ. ಪ್ರಾತಃಕಾಲದ ಬಾಲಾರ್ಕನ ಹಾಂಗೆ ಶರಣನಾಚರಣೆಗಳೆಲ್ಲವೂ ಲಿಂಗದಲ್ಲಿ ನಿರ್ವಲಯವಾಗಿರ್ಪವೆಂಬುದೀಗ [ಉದಕದೊಳಗಣ ಬಿಂದು] ಉದಯರತ್ನದಂತೆ ಕೂಡಲಸಂಗನ ಶರಣನ ನಿಲುವುಯೆಂಬ ಶಬ್ದಕ್ಕರ್ಥ.

....

3 + ಉದಕದೊಳಗಣ ಬಿಂದು ಉದಯ ರತ್ನದಂತೆ (ಪ).

೯೧೯

ಮರುಳು ತಲೆ ಹುರುಳು ತಲೆ ನೀನೆ ದೇವಾ. ಹೆಂಗೂಸು ಗಂಡುಗೂಸು ನೀನೆ ದೇವಾ, ಎಮ್ಮಕ್ಕನ ಗಂಡ ನೀನೆ ದೇವಾ. ಕೂಡಲಸಂಗಮದೇವಾ, ಭ್ರಾಂತಳಿದು ಭಾವ ನಿಂದುದಾಗಿ.

I– –

ಮರುಳು ತಲೆಯೆಂದರೆ ಜ್ಞಾನವು, ಹುರುಳು ತಲೆ–ಹುರುಳು ತಲೆಯೆಂದರೆ ಕ್ರಿಯೆಯು, ಈ ಜ್ಞಾನಕ್ರಿಯಾಸ್ವರೂಪವು, ನೀನೆ ದೇವಾ–ನೀನೆ ಪರಶಿವಲಿಂಗವು, ಹೆಂಗೂಸು –ಶರಣಸತಿಯಳು, ಗಂಡುಗೂಸು–ಇಷ್ಟಲಿಂಗವೆಂಬ ರಮಣನು, ನೀನೆ ದೇವಾ–ನೀನೆ ಪರಶಿವಲಿಂಗವು. ಎಮ್ಮಕ್ಕನ ಗಂಡ–ಕ್ರಿಯಾಶಕ್ತಿಯ ಅಗ್ರಜಳೇ ಜ್ಞಾನಶಕ್ತಿ, ಆ ಜ್ಞಾನಶಕ್ತಿಯ ವಲ್ಲಭನಾದ ಪ್ರಾಣಲಿಂಗದೇವನು, ನೀನೆ ದೇವಾ–ನೀನೆ ಪರಶಿವಲಿಂಗವು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಭ್ರಾಂತಳಿದು–ಜೀವಭಾವದ ಭ್ರಮಣೆಯು ನಷ್ಟವಾಗಿ, ಭಾವ ನಿಂದುದಾಗಿ–ಶಿವಭಾವವೇ ತನ್ನಲ್ಲಿ ನೆಲೆಗೊಂಡುದಾಗಿ.

II– –

ಮರುಳು ತಲೆ ಹುರುಳು ತಲೆ ನೀನೆ ದೇವಾ–ಕ್ರಿಯಾಜ್ಞಾನಸ್ವರೂಪು ಸ್ವಯವೇ ದೇವಾ, ಹೆಂಗೂಸು ಗಂಡುಗೂಸು ನೀನೆ ದೇವಾ–ಶರಣಸತಿ ಲಿಂಗಪತಿ ಸ್ವಯವೇ ದೇವಾ, ಎಮ್ಮಕ್ಕನ ಗಂಡ ನೀನೇ ದೇವಾ–ಚಿಚ್ಛಕ್ತಿವಲ್ಲಭನಾದ ಇಷ್ಟಮಹಾಲಿಂಗವು ಸ್ವಯವೇ ದೇವಾ, ಕೂಡಲಸಂಗಮದೇವಾ ಭ್ರಾಂತಳಿದು ಭಾವ ನಿಂದುದಾಗಿ–ಎಲೆ ಪರಶಿವಲಿಂಗವೇ ಮನಸ್ಸಿನ ಸಂಕಲ್ಪ ವಿಕಲ್ಪವಳಿದು ಉನ್ಮಾನಸ ಸ್ವರೂಪವಾದ ವಸ್ತುವಾಗಿ ನೆಲಸಿತ್ತೆಂಬುದರ್ಥ.

III– –

ಜ್ಞಾನಕ್ರಿಯಾಚಾರಸ್ವರೂಪವಾಗಿರುವಾತನು ಪರಶಿವಲಿಂಗವೆಯೆಂಬುದೀಗ, ಮರುಳು ತಲೆ ಹುರುಳು ತಲೆ ನೀನೆ ದೇವಾ ಎಂಬ ಶಬ್ದಕ್ಕರ್ಥ. ಶರಣಸತಿ ಲಿಂಗಪತಿತ್ವದಾಚರಣೆಯುಳ್ಳಾತನು ಪರಶಿವಲಿಂಗವೆಂಬುದೀಗ, ಹೆಂಗೂಸು ಗಂಡುಗೂಸು ನೀನೆ ದೇವಾ ಎಂಬ ಶಬ್ದಕ್ಕರ್ಥ. ಜ್ಞಾನಶಕ್ತಿಸ್ವರೂಪಾದ ಶ್ರೀಗುರುದೇವನಿಗೆ ಇಷ್ಟಲಿಂಗವೆ ವಲ್ಲಭನಾಗಿರ್ಪನೆಂಬುದೀಗ ಎಮ್ಮಕ್ಕನ ಗಂಡ ನೀನೆ ದೇವ ಎಂಬ ಶಬ್ದಕ್ಕರ್ಥ ಶರಣಲಿಂಗವೆಂಬ ಭಿನ್ನಭ್ರಾಂತಿಯಳಿದೇಕೋಭಾವದಲ್ಲಿ ನೆಲಸಿರ್ಪುದೆಂಬುದೀಗ ಕೂಡಲಸಂಗಮದೇವ ಭ್ರಾಂತವಳಿದು ಭಾವ ನಿಂದುದಾಗಿ ಎಂಬ ಶಬ್ದಕ್ಕರ್ಥ.

IV– –

ಜ್ಞಾನ ಅಜ್ಞಾನಕ್ಕೆ ಪರಬ್ರಹ್ಮವೆ ಆದಿಯಾಗಿ ಅಱಿವ ಅಱುಹಿಸಿಕೊಂಬ ಲಿಂಗವು ಒಂದೇ ಆಗಿ ಭಾವದಪ್ಪುದು ಬ್ರಹ್ಮವೆಂಬುದೀ ವಚನದರ್ಥ.

V– –

ಜ್ಞಾನಕ್ರಿಯಾಚಾರಸ್ವರೂಪವಾಗಿರುವಾತನು ಪರಶಿವಲಿಂಗವೆಯೆಂಬುದೀಗ, ಮರುಳು ತಲೆ ಹುರುಳು ತಲೆ ನೀನೆ ದೇವ ಎಂಬ ಶಬ್ದಕ್ಕರ್ಥ. ಶರಣಸತಿ ಲಿಂಗಪತಿತ್ವದಾಚರಣೆಯುಳ್ಳಾತನು ಪರಶಿವಲಿಂಗವೆಯೆಂಬುದೀಗ ಹೆಣ್ಣುಗೂಸು ಗಂಡುಗೂಸು ನೀನೆ ದೇವಾ ಎಂಬ ಶಬ್ದಕ್ಕರ್ಥ. ಜ್ಞಾನ ಶಕ್ತಿಸ್ವರೂಪಾದ ಶ್ರೀಗುರುದೇವನಿಗೆ ಇಷ್ಟಲಿಂಗವೆಂಬ ವಲ್ಲಭನಾಗಿರ್ಪನೆಂಬುದೀಗ, ಎಮ್ಮಕ್ಕನ ಗಂಡ ನೀನೆ ದೇವ ಎಂಬ ಶಬ್ದಕ್ಕರ್ಥ.೧ ಶರಣ ಲಿಂಗವೆಂಬ ಭಿನ್ನಭ್ರಾಂತಳಿದೇಕೋಭಾವದಲ್ಲಿ ನೆಲಸಿರ್ಪನೆಂಬುದೀಗ ಕೂಡಲಸಂಗಮದೇವ ಭ್ರಾಂತಳಿದು ನಿಂದುದಾಗಿ ಎಂಬ ಶಬ್ದಕ್ಕರ್ಥ.

....

೧ + ಕೂಡಲಸಂಗಮದೇವ ಭ್ರಾಂತಳಿದು ನಿಂದುದಾಗಿ (ಪ).

೯೨೦

ತೆಱಹಿಲ್ಲದ ನಡೆ, ತೆಱಹಿಲ್ಲದ ನುಡಿ, ತೆಱಹಿಲ್ಲದ ಸಂಭಾಷಣೆಯ ಸುಖವು. ತೆಱಹಿಲ್ಲ[1]ದ[1] ನಂಬಿ[1]ದ[1] ಸ್ವಾನುಭಾವದ ಸುಖ[2]ವು[2] ತೆಱಹಿಲ್ಲದ ಮಹಿಮೆ, ತೆಱಹಿಲ್ಲದ ವಿಚಾರ ಕೂಡಲಸಂಗಮದೇವಾ ನಿಮ್ಮ ಶರಣಂಗೆ.

I– –

ತೆಱಹಿಲ್ಲದ ಅಂಗ ಲಿಂಗಕ್ಕೆ ಭಿನ್ನವಿಲ್ಲದ, ನಡೆ–ಅಭಿನ್ನಕ್ರಿಯೆಯುಂಟಾಗಿಪ್ಪುದು. ತೆಱಹಿಲ್ಲದ –ಪ್ರಾಣ ಪ್ರಾಣಲಿಂಗಕ್ಕೆ ಭಿನ್ನವಿಲ್ಲದ, ನುಡಿ–ಅಭಿನ್ನಜ್ಞಾನವುಂಟಾಗಿಪ್ಪುದು. ತೆಱಹಿಲ್ಲದ–ಆತ್ಮ ಭಾವಲಿಂಗಕ್ಕೆ ಭಿನ್ನವಿಲ್ಲದ, ಸಂಭಾಷಣೆಯ–ಸಮರಸಸಂಭಾಷಣೆಯ, ಸುಖವು–ಪರಿಣಾಮವು, ತೆಱಹಿಲ್ಲದ– ಅಂಗ ಲಿಂಗಕ್ಕೆ ಭಿನ್ನವಿಲ್ಲದ, ನಂಬಿದ–ವಿಶ್ವಾಸಿಸಿದ, ಸ್ವಾನುಭಾವದ–ಸ್ವಾತ್ಮಜ್ಞಾನದ, ಸುಖವು– ಪರಿಣಾಮವು. ತೆಱಹಿಲ್ಲದ–ಪ್ರಾಣ ಪ್ರಾಣಲಿಂಗಕ್ಕೆ ಭಿನ್ನವಿಲ್ಲದ, ಮಹಿಮೆ–ಮಹತ್ವಾತಿಶಯವು, ತೆಱಹಿಲ್ಲದ–ಆತ್ಮ ಭಾವಲಿಂಗಕ್ಕೆ ಭಿನ್ನವಿಲ್ಲದ, ವಿಚಾರ–ವಿವೇಕವುಂಟಾಗಿರ್ಪುದು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ನಿಮ್ಮ ಶರಣಂಗೆ–ನಿಮ್ಮ ಶಿವಶರಣಂಗೆ.೧

....

೧ + ಇಂತೀ ಶರಣಸ್ಥಲ ಸಮಾಪ್ತ ಮಂಗಳ ಮಹಾ ಶ್ರೀ ಶ್ರೀ ಶ್ರೀ ಶ್ರೀ ಶ್ರೀ (ಕ, ಗ).

II– –

1-1 ದೆ (ಚ, ಜ). 2-2 ವ(ಚ, ಜ)

ತೆಱಹಿಲ್ಲದ ನಡೆ-ಭಿನ್ನವಿಲ್ಲದ ಕ್ರಿಯಾಚರಣೆ ಸ್ವರೂಪವಾದಿಷ್ಟಲಿಂಗವು, ತೆಱಹಿಲ್ಲದ ನುಡಿ-ಭಿನ್ನವಿಲ್ಲದ ಜ್ಞಾನಾನುಭಾವಸ್ವರೂಪವಾದ ಪ್ರಾಣಲಿಂಗವು, ತೆಱಹಿಲ್ಲದೆ ಸಂಭಾಷಣೆ ಸುಖವು-ಭಿನ್ನವಲ್ಲದ ಸಮ್ಯಗ್ಭಾಷಣಸ್ವರೂಪವಾದ ಭಾವಲಿಂಗದ ಸೌಖ್ಯವು, ತೆಱಹಿಲ್ಲದ ನಂಬಿದೆ-ಭಿನ್ನವಿಲ್ಲದೆ ತ್ರಿವಿಧಲಿಂಗವನೊಳಕೊಂಡು ತೋಱಲ್ಪಟ್ಟ ಮಹಾಲಿಂಗವನೆ ವಿಶ್ವಾಸಿಸಿದೆ. ಸ್ವಾನುಭಾವಸುಖವ-ಮನದೊಳಗೆ ಭಿನ್ನವಿಲ್ಲದೆ ಬೆಳಗುವ ಸ್ವಾತ್ಮಜ್ಞಾನ ಪರಿಣಾಮವನು, ತೆಱಹಿಲ್ಲದ ಮಹಿಮೆ-ಭಿನ್ನವಿಲ್ಲದ ಮಹತ್ವವು, ತೆಱಹಿಲ್ಲದ ವಿಚಾರ-ಭಿನ್ನವಿಲ್ಲದ ನಿತ್ಯಾನಿತ್ಯ ವಿವೇಕವು, ಕೂಡಲಸಂಗಮದೇವಾ ನಿಮ್ಮ ಶರಣಂಗೆ-ಎಲೆ ಪರಶಿವಲಿಂಗವೆ ನಿಮ್ಮ ಶಿವಶರಣನಿಗೆ.[೨]

....

೨ + ಶರಣಸ್ಥಲ ಸಮಾಪ್ತ ಶ್ರೀ ಶ್ರೀ ಶ್ರೀ(ಚ); ಶರಣಸ್ಥಲ ಸಮಾಪ್ತ ಮಂಗಳ ಮಹಾಶ್ರೀ ಶ್ರೀ ಶ್ರೀ ಶ್ರೀ ಶ್ರೀ(ಜ)

III- -

1-1 ದೆ(ಟ, ಡ)

....

ಕೂಡಲಸಂಗದೇವಾ-ಎಲೆ ಪರಶಿವಲಿಂಗವೆ, ನಿಮ್ಮ ಶರಣಂಗೆ-ನಿಮಗಂಗವಾಗಿ ಎರಡಳಿದಂಥ ನಿಜಶರಣಂಗೆ, ಅಂಗ ಲಿಂಗಕ್ಕೆ ಭಿನ್ನವಿಲ್ಲದ ಸಮರಸಕ್ರಿಯಾಚರಣೆಯೆಂಬುದೀಗ ತೆಱಹಿಲ್ಲದ ನಡೆಯೆಂಬುದರ್ಥ. ಅಂಗ ಲಿಂಗಕ್ಕೆ ಭಿನ್ನವಿಲ್ಲದ ಸಮರಸಜ್ಞಾನಾನುಭಾವದ ಪ್ರಸಂಗವೆಂಬುದೀಗ, ತೆಱಹಿಲ್ಲದ ನುಡಿಯೆಂಬುದರ್ಥ. ಅಂಗಲಿಂಗಕ್ಕೆ ಭಿನ್ನವಿಲ್ಲದ ವಾಕ್ ಜ್ಞಾನಾನುಭಾವದ ಪ್ರಸಂಗವೆಂಬುದೀಗ ತೆಱಹಿಲ್ಲದ ಸಂಭಾಷಣೆಯ ಸುಖವು, ಅಂಗ ಲಿಂಗಕ್ಕೆ ಭಿನ್ನವಿಲ್ಲದೆ ವಿಶ್ವಾಸಿಸಿ ಸ್ವಯಸ್ವರೂಪಜ್ಞಾನಪರಿಣಾಮಿಯಾಗಿಪ್ಪನು ಶಿವಶರಣನು ಎಂಬುದೀಗ, ತೆಱಹಿಲ್ಲದೆ ನಂಬಿದೆ ಸ್ವಾನುಭಾವಸುಖವು ಎಂಬುದರ್ಥ. ಅಂಗ ಲಿಂಗಕ್ಕೆ ಖಂಡಿತವಿಲ್ಲದ ಮಹತ್ವಾತಿಶಯವು ಎಂಬುದೀಗ ತೆಱಹಿಲ್ಲದ ಮಹಿಮೆಯೆಂಬುದರ್ಥ. ಅಂಗ ಲಿಂಗಕ್ಕೆ ಖಂಡಿತರಹಿತವಾದ ಸದ್ವಿಚಾರವುಂಟಾಗಿರ್ಪುದು ಎಂಬುದೀಗ ತೆಱಹಿಲ್ಲದ ವಿಚಾರವೆಂಬುದರ್ಥ.[೩]

....

೩ + ಶರಣಸ್ಥಲದ ನುಡಿಗಳು ಸಮಾಪ್ತಂ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಗುರುಭ್ಯೋನಮಃ(ಟ); ಶರಣಸ್ಥಲದ ನುಡಿಗಳು ಸಂಪೂರ್ಣ ಶ್ರೀ ಶ್ರೀ(ಡ)

IV- -

1-1 ದೆ(ತ) 2-2 x (ತ)

ಅಖಂಡಪರಿಪೂರ್ಣವಾಗಿಪ್ಪ ಮಹಾಘನಲಿಂಗವು ತನ್ನ ಗಮ್ಯವೆಂದು ಅಭಿನ್ನಜ್ಞಾನದಿಂದ ಕಂಡಱಿದು ನಂಬಿದ ಶರಣನು ಲಿಂಗವ ಭಿನ್ನವಿಡದೆ ಕ್ರೀಯನಾಚರಿಸುವ, ಲಿಂಗವ ಭಿನ್ನವಿಡದೆ ಲಿಂಗಾನುಭಾವದ ವರ್ತನೆಯ ನುಡಿದು ಸುಖಿಸುವ, ಲಿಂಗವ ಭಿನ್ನವಿಡದೆ ಲಿಂಗಾಂಗ

ಸಂಯೋಗಿಯಾಗಿ ಲಿಂಗ ಸುಖವ ಸುಖಿಸುತ್ತಿಪ್ಪನು. ಅಂತು ಸ್ವಾನುಭಾವದಿಂದ ತನ್ನ ನಿಜವೇ ಮಹಾಘನಲಿಂಗವೆಂದು ಕಂಡು ನಂಬಿ ಲಿಂಗವೆಯಾಗಿ ನಿತ್ಯ ಸುಖಿಯಾಗಿಪ್ಪಮಹತ್ವವು. ಅಭಿನ್ನಜ್ಞಾನಾಚಾರವಳವಟ್ಟ ಶರಣಂಗಲ್ಲದೆ ಮತ್ತಾರಿಗೂ ಇಲ್ಲವೆಂಬುದೀ ವಚನದ ತಾತ್ಪರ್ಯಾರ್ಥ.[೪]

....

೪ + ಅಂತು ವಚನ ೩೫೪ ಕ್ಕಂ ಮಂಗಳ ಮಹಾ ಶ್ರೀ ಶ್ರೀ (ತ)

V– –

ಕೂಡಲಸಂಗಮದೇವ–ಎಲೆ ಪರಶಿವಲಿಂಗವೆ, ನಿಮ್ಮ ಶರಣಂಗೆ–ನಿಮಗಂಗವಾಗಿ ಎರಡಳಿದಂಥ ನಿಜಶರಣಂಗೆ, ಅಂಗಲಿಂಗಕ್ಕೆ ಭಿನ್ನವಿಲ್ಲದಸಮರಸಕ್ರಿಯಾಚರಣೆಯೆಂಬುದೀಗ ತೆಱಹಿಲ್ಲದನಡೆಯೆಂಬುದಕ್ಕರ್ಥ. ಅಂಗ ಲಿಂಗಕ್ಕೆ ಭಿನ್ನವಿಲ್ಲದ ಸಮರಸಜ್ಞಾನಾನುಭಾವದ ಪ್ರಸಂಗವೆಂಬುದೀಗ ತೆಱಹಿಲ್ಲದ ನುಡಿಯೆಂಬುದಕ್ಕರ್ಥ.[೫]

....

೫ + ಶ್ರೀ (ಪ)

❖❖

ಐಕ್ಯಸ್ಥಲ

[ಐಕ್ಯಸ್ಥಲ-ಶಿಖಿಕರ್ಪುರಸಂಯೋಗವಾದ ಹಾಂಗೆ ಮಹಾಲಿಂಗದಲ್ಲಿ ಕೂಡುವಂಥ ಭೇದವನ್ನೇ ಹೇಳುತ್ತಿಹುದಾದ ಕಾರಣ ಇದಕ್ಕೆ ಐಕ್ಯಸ್ಥಲವೆಂದು ಹೇಳಲ್ಪಟ್ಟಿತ್ತು (ಕ.ಗ.)]

ಐಕ್ಯನ ಜ್ಞಾನಿಸ್ಥಲ

I- -

[ಐಕ್ಯನ ಜ್ಞಾನಿಸ್ಥಲ-] ಆ ಐಕ್ಯಸ್ಥಲದೊಳಗಣ ಜ್ಞಾನಿಸ್ಥಲದಾಚರಣೆಯನ್ನು ನಿರೂಪಿಸುತ್ತಿಹರು.

೯೨೧

ಮೂಱಿಱಿಶಾಪ್ಯಾಯನ ಐದು ಬೆಟ್ಟವನಿಂಬುಗೊಂಡು ಅಕಟಕಟಾ, ಮಾಡಿ ಕೆಟ್ಟರು ಮಾಡದೆ ಕೆಟ್ಟರು. ನೀಡಿ ಕೆಟ್ಟರು ನೀಡದೆ ಕೆಟ್ಟರು. ಕೂಡಲಸಂಗಮದೇ[1]ವಾ[1] ಬಸುಱಿ ಮಧ್ಯದ ಬಯಲ ಸಮಾಧಿಯಲ್ಲಿಕ್ಕದೇ ಕೆಟ್ಟರು.

I- -

ಐದು ಬೆಟ್ಟವನಿಂಬುಗೊಂಡು-ಪಂಚಭೂತಯುಕ್ತವಾದ ದೇಹವನ್ನು ಧರಿಸಿಕೊಂಡು, ಮೂಱಿಱಿಶಾಪ್ಯಾಯನ-ಹೊನ್ನಿದ್ದೂ ಹೊನ್ನಾಗಬೇಕು ಹೆಣ್ಣಿದ್ದೂ ಹೆಣ್ಣಾಗಬೇಕು ಮಣ್ಣಿದ್ದೂ ಮಣ್ಣಾಗಬೇಕೆಂಬ ಆಶೆಯೊಳಗಣ ಅತಿಕಾಂಕ್ಷೆಯನ್ನು ಮುಂದುಗೊಂಡು, ಅಕಟಕಟಾ-ಲಿಂಗವೇ ಲಿಂಗವೇ, ಮಾಡಿ ಕೆಟ್ಟರು-ಅಂಗ ಬೇರೆ ಲಿಂಗ ಬೇರೆಂದು ಲಿಂಗಾಂಗವೆರಡಕ್ಕೂ ಭಿನ್ನವಿಟ್ಟುಕೊಂಡು ಕ್ರೀಗಳ ಮಾಡಿ ಕೆಟ್ಟರು. ಕಿಂಚಿನ್ಮಾತ್ರ ಫಲಪದಗಳ ಪಡೆದುಕೊಂಡು ಶಿವತತ್ತ್ವ ಕೆಟ್ಟು ಜೀವರಾದರು. ಮಾಡದೆ ಕೆಟ್ಟರು-ಅಂಗವಾದದ್ದು ಲಿಂಗವಾದದ್ದು ಪೂಜಾರರೂಪವಾದದ್ದು ಒಂದೇ ವಸ್ತುವೆಂದರಿದು ತಾನು ತಾನಾಗಿ ಸಮರಸಭಾವದಿಂದ ಲಿಂಗಪೂಜೆಯ ಮಾಡದೇ ಕಾಂಬವರ ಕಂಡು ಭಿನ್ನವಿಟ್ಟುಕೊಂಡು ಲಿಂಗಪೂಜೆಯ ಮಾಡಿ ಕಿಂಚಿನ್ಮಾತ್ರ ಫಲಪದಂಗಳನು ಪಡೆದುಕೊಂಡು ಶಿವತತ್ತ್ವಗೆಟ್ಟು ಜೀವರಾದರು. ನೀಡಿ ಕೆಟ್ಟರು-ದೇವ ಬೇರೆ ಭಕ್ತ ಬೇರೆ ಪದಾರ್ಥ ಬೇರೆಂದು ಭಿನ್ನವಿಟ್ಟುಕೊಂಡು ತನುಮನಧನಂಗಳನು ಜಂಗಮಕ್ಕೆಡೆಮಾಡಿ ಕಿಂಚಿನ್ಮಾತ್ರ ಫಲಪದಂಗಳನು ಪಡೆದುಕೊಂಡು ಶಿವತತ್ತ್ವಗೆಟ್ಟು ಜೀವರಾದರು. ನೀಡದೆ ಕೆಟ್ಟರು-ದೇವನಾದದ್ದು ಭಕ್ತನಾದದ್ದು ಪದಾರ್ಥವಾದದ್ದು ಒಂದೇ ವಸ್ತುವೆಂದರಿದು ತಾನುತಾನಾಗಿ ಸಮರಸಭಾವದಿಂದ ತನುಮನಧನಗಳನು ಜಂಗಮಕ್ಕೆಡೆಮಾಡದೆ ಕಾಂಬವರ ಕಂಡು ಭಿನ್ನವಿಟ್ಟುಕೊಂಡು ತನುಮನಧನಂಗಳನು ಜಂಗಮಕ್ಕೆಡೆ ಮಾಡಿ ಕಿಂಚಿನ್ಮಾತ್ರ ಫಲಪದಂಗಳನು ಪಡೆದುಕೊಂಡು ಶಿವತತ್ತ್ವಗೆಟ್ಟು ಜೀವರಾದರು.

ಕೂಡಲಸಂಗಮದೇವಾ–ಕೂಡಲಸಂಗಮದೇವರೆಂದರೆ ನಿಃಕಲಬ್ರಹ್ಮವು. ಬಸುಱ ಮಧ್ಯದಯೆಂದರೆ ಚಿತ್ತು. ಬಯಲ ಸಮಾಧಿಯಲ್ಲಿಕ್ಕದೆ ಕೆಟ್ಟರು. ಸಮರಸಭಾವದಿಂದ ಲಿಂಗಪೂಜೆ ಜಂಗಮದಾಸೋಹವನ್ನು ಮಾಡಿ ಚಿತ್ತುವಿನಲ್ಲಿ ತನ್ನಂಗ ಚಿದ್ಘನಲಿಂಗದಲ್ಲಿ ತನ್ನ ಪ್ರಾಣವನ್ನು ಕೂಡದೆ ಕಾಂಬವರ ಕಂಡು ಭಿನ್ನವಿಟ್ಟುಕೊಂಡು ಲಿಂಗಪೂಜೆ ಜಂಗಮದಾಸೋಹವನ್ನು ಮಾಡಿ ಕಿಂಚಿನ್ಮಾತ್ರಫಲಪದಂಗಳನು ಪಡೆದುಕೊಂಡು ಶಿವತತ್ತ್ವಗೆಟ್ಟು ಜೀವರಾದರು.

II– –

1–1 ವನ (ಜ, ಜ).

....

ಮೂಱಱಾಪ್ಯಾಯನ ಐದು ಬೆಟ್ಟವನಿಂಬುಗೊಂಡು ಮಲತ್ರಯಂಗಳ ಮೇಲಣ ಪ್ರೀತಿಯು ಪಂಚೇಂದ್ರಿಯಂಗಳೆಂಬ ಪರ್ವತವನೆಡೆಗೊಂಡು ಅದಲ್ಲದೆ ತ್ರಿಪುಟಿಜ್ಞಾನದ ಮೇಲಣ ಪ್ರೀತಿಯು ಪಂಚಕರಣಂಗಳೆಂಬ ಪರ್ವತವನೆಡೆಗೊಂಡು. ಅಕಟಕಟಾ–ಅಯ್ಯೋ ಅಯ್ಯೋ, ಮಾಡಿ ಕೆಟ್ಟರು–ಸಮರಸವಿಟ್ಟು ಮಾಡಿ ಭಿನ್ನವಿಳಿದರು, ಮಾಡದೆ ಕೆಟ್ಟರು–ಸಮರಸವಿಟ್ಟು ಮಾಡದೆ ಶಿವತತ್ತ್ವವಳಿದು ಜೀವರಾದರು. ನೀಡಿ ಕೆಟ್ಟರು–ಸಮರಸವಿಟ್ಟು ಸಕಲಪದಾರ್ಥಂಗಳ ಎಡೆಮಾಡದೆ ಶಿವತತ್ತ್ವವಳಿದು ಜೀವರಾದರು. ಕೂಡಲಸಂಗಮದೇವನ–ಪರಶಿವಲಿಂಗವನು ಬಸುಱ ಮಧ್ಯದ ಬಯಲ ಸಮಾಧಿಯಲ್ಲಿಕ್ಕದೆ ಕೆಟ್ಟರು–ಅಂತರಂಗವಳಯದ ನಿರ್ವಯಲ ಚಿತ್ತೇಕಾಗ್ರತೆಯಲ್ಲಿ ಪ್ರಾಣಲಿಂಗವಾಗಿ ಮಡಗದೆ ಸಮರಸವಳಿದು ಜೀವರಾದರು.

....

೧–೧ x (ಚ).

III– –

1–1 ವನ (ಟ, ಡ).

I– –

ಗುರುಲಿಂಗಜಂಗಮಕ್ಕೆ ತನುಮನಧನವೆಂಬ ತ್ರಿವಿಧಪದಾರ್ಥವ ಸಮರ್ಪಿಸಿದಲ್ಲಿ ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದವಾಗಿ ಎನ್ನ ಪಂಚಭೂತಕಾಯದಲ್ಲಿ ಸಂಬಂಧವಾಗಿರ್ಪುದೆಂಬುದೀಗ, ಮೂಱಱಾಪ್ಯಾಯನದೈದು ಬೆಟ್ಟವನಿಂಬುಗೊಂಡುದೆಂಬ ಶಬ್ದಕ್ಕರ್ಥ. ಗುರುಲಿಂಗಜಂಗಮಕ್ಕೆ ತನುಮನಧನಂಗಳನು ನಿರ್ವಂಚಕತ್ವದಿಂದೆ ಸಮರ್ಪಿಸಿ ಭವಂನಾಸ್ತಿಯಾದರೆಂಬುದೀಗ ಮಾಡಿ ಕೆಟ್ಟರೆಂಬ ಶಬ್ದಕ್ಕರ್ಥ. ತನುಮನಧನಂಗಳನು ಗುರುಲಿಂಗಜಂಗಮಕ್ಕೆ ಸಮರ್ಪಣೆಯ ಮಾಡಲಱಿಯದೆ ಭವಕ್ಕೆ ಬಿದ್ದು ಹೋದರೆಂಬುದೀಗ, ಮಾಡದೆ ಕೆಟ್ಟರೆಂಬ ಶಬ್ದಕ್ಕರ್ಥ. ಇಷ್ಟಲಿಂಗ[ಕ್ಕೆ]ಷ್ಟ ವಿಧಾರ್ಚನೆ ಷೋಡಶೋಪಚಾರವನು ಮಾಡಿ ಫಲಪದರಹಿತರಾದರೆಂಬುದೀಗ ನೀಡಿ ಕೆಟ್ಟರೆಂಬ ಶಬ್ದಕ್ಕರ್ಥ. ಇಷ್ಟಲಿಂಗ[ಕ್ಕೆ]ಷ್ಟ ವಿಧಾರ್ಚನೆ ಮಾಡದೆ ಭವಕ್ಕೆ ಬಿದ್ದು ಹೋದರೆಂಬುವುದೀಗ, ನೀಡದೆ ಕೆಟ್ಟರೆಂಬ

ಶಬ್ದಕ್ಕರ್ಥ. ಪರಶಿವಲಿಂಗದ ಚಿದ್ಗರ್ಭದ ನಡುವಣ ಚಿದ್ಬಯಲ ಚಿತ್ತೈಕಾಗ್ರತೆಯಲ್ಲಿ ಮನಸ್ಸನೇಕಾರ್ಥವ ಮಾಡಲರಿಯದೆ ಭಿನ್ನಜ್ಞಾನವಿಡಿದಾಚರಿಸಿ ಫಲಪದ ಮುಕ್ತಿಗಳನನುಭವಿಸಿ ತಾಪತ್ರಯಕ್ಕೊಳಗಾಗಿ ಕಡೆಯಲಿ ಯಮನ ಬಾಧೆಗೊಳಗಾದರೆಂಬುದೀಗ, ಕೂಡಲಸಂಗಮದೇವನ ಬಸುಱ ಮಧ್ಯದ ಬಯಲ ಸಮಾಧಿಯಲ್ಲಿಕ್ಕದೆ ಕೆಟ್ಟರೆಂಬ ಶಬ್ದಕ್ಕರ್ಥ.

IV– –

1–1 ವನ(ತ)

....

[೧]ಐದು ಬೆಟ್ಟಗಳೆಂದರೆ ಪಂಚತತ್ತ್ವಂಗಳು. ಅಂತಪ್ಪ ಪಂಚತತ್ತ್ವಯುಕ್ತವಾದ ದೇಹವನೆ ಆಶ್ರಯವ ಮಾಡಿಕೊಂಡು ಆತ್ಮ[೨][ರು][೨] ಹೊನ್ನು ಹೆಣ್ಣು ಮಣ್ಣನೆ ಬಯಸುತ್ತ ಲಿಂಗಜಂಗಮವ ಭಿನ್ನವಿಟ್ಟು ಪೂಜೆಯ ಮಾಡಿ ನೀಡಿ ಭವಕ್ಕೆ ಈಡಾಗಿ ಕೆಟ್ಟರು. ಕೆಲವರು ಲಿಂಗಜಂಗಮದ ಪೂಜೆಯ ಮಾಡದೆ ನೀಡದೆ ಅಜ್ಞಾನದಿಂದ ಭವಕ್ಕೆ ಈಡಾಗಿ ಕೆಟ್ಟರು ಅನಂತ ಜೀವರು. ಮುನ್ನವೆಂಬುದೀಗ, ಮೂಱಱಾಪ್ಯಾಯನ ಐದುಬೆಟ್ಟನಿಂಬುಗೊಂಡು ಅಕಟಕಟಾ ಮಾಡಿ ಕೆಟ್ಟರು ಮಾಡದೆ ಕೆಟ್ಟರು ನೀಡದೆ ಕೆಟ್ಟರುಯೆಂಬ ಶಬ್ದಕ್ಕರ್ಥ. ಅಂತಪ್ಪ ಹೊನ್ನು ಹೆಣ್ಣು ಮೊದಲಾದ ಫಲಪದಂಗಳೇನನೂ ಬಯಸದೆ ನಿರವಯಪರಿಪೂರ್ಣಲಿಂಗವೇ ತನ್ನ ನಿಜವೆಂದಱಿದು ಲಿಂಗವನೇ ಬಯಸಿ ಲಿಂಗಭಕ್ತಿಯನೆ ಮಾಡಿ ಲಿಂಗದೊಳಗೆ ಆತ್ಮಾಂಗವ ಸಂಗಿಸಿ ಕೂಡಿ ಬೆರೆದು ಭಿನ್ನವಳಿದು ನಿರವಲಯಲಿಂಗವೆಯಾಗಿಪ್ಪ ಲಿಂಗೈಕ್ಯರು ಅಪೂರ್ವವೆಂಬುದೀಗ, ಕೂಡಲಸಂಗಮದೇವನ ಬಸುಱ ಮಧ್ಯದ ಬಯಲ ಸಮಾಧಿಯಲ್ಲಿ ನಿಲ್ಲದೆ ಕೆಟ್ಟರೆಂಬ ಶಬ್ದಕ್ಕರ್ಥ.

....

೨ + ಇನ್ನು ಐಕ್ಯಸ್ಥಲದ ವಚನ (ತ). ೩–೩ ನು(ತ)

V– –

1–1 ವರ (ಪ).

....

[೧]ಗುರುಲಿಂಗಜಂಗಮಕ್ಕೆ ತನುಮನಧನವೆಂಬ ತ್ರಿವಿಧಪದಾರ್ಥ ಸಮರ್ಪಿಸಿದಲ್ಲಿ ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದವಾಗಿ ಎನ್ನ ಪಂಚಭೂತಕಾಯದಲ್ಲಿ ಸಂಬಂಧವಾಗಿರ್ಪುದೆಂಬುದೀಗ, ಮೂಱಱಾಪ್ಯಾಯನ ಐದು ಬೆಟ್ಟವನಿಂಬುಗೊಂಡುದೆಂಬ ಶಬ್ದಕ್ಕರ್ಥ. ಗುರುಲಿಂಗಜಂಗಮಕ್ಕೆ ತನುಮನಧನಂಗಳ ಸಮರ್ಪಿಸಿ ಭವಂನಾಸ್ತಿಯಾದರೆಂಬುದೀಗ, ಮಾಡಿಕೆಟ್ಟರೆಂಬ ಶಬ್ದಕ್ಕರ್ಥ. ತನುಮನಧನಂಗಳನು ಗುರುಲಿಂಗಜಂಗಮಕ್ಕೆ ಸಮರ್ಪಣೆಯ ಮಾಡಲಱಿಯದೆ ಭವಕ್ಕೆ ಬಿದ್ದು ಹೋದರೆಂಬುದೀಗ ಮಾಡದೆ ಕೆಟ್ಟರೆಂಬುದರ್ಥ. ಇಷ್ಟಲಿಂಗಕ್ಕಷ್ಟವಿಧಾರ್ಚನೆ ಷೋಡಶೋಪಚಾರವನ್ನು ಮಾಡಿ ಫಲಪದರಹಿತರಾದರೆಂಬುದೀಗ, ನೀಡಿ ಕೆಟ್ಟರೆಂಬ ಶಬ್ದಕ್ಕರ್ಥ. ಇಷ್ಟಲಿಂಗದಷ್ಟವಿಧಾರ್ಚನೆಯ ಮಾಡದೆ ಭವಕ್ಕೊಳಗಾದರೆಂಬುದೀಗ, ನೀಡದೆ ಕೆಟ್ಟರೆಂಬ ಶಬ್ದಕ್ಕರ್ಥ

ಪರಶಿವಲಿಂಗದ ಚಿದ್ಗರ್ಭದ ನಡುವಣ ಚಿದ್ಬಯಲ ಚಿತ್ತೈಕಾಗ್ರತೆಯಲ್ಲಿ ಮನಸ್ಸನೇಕಾರ್ಥವ ಮಾಡಲಜೆಯದೆ ಭಿನ್ನಕ್ರೀ ಭಿನ್ನಜ್ಞಾನವಿಡಿದಾಚರಿಸಿ ಫಲಪದ ಮುಕ್ತಿಗಳನನುಭವಿಸಿ ತಾಪತ್ರಯಕ್ಕೊಳಗಾಗಿ ಕಡೆಯಲ್ಲಿ ಯಮನ ಬಾಧೆಗೊಳಗಾದರೆಂಬುದೀಗ, ಕೂಡಲಸಂಗಮದೇವರ ಬಸುಱ ಮಧ್ಯದ ಬಯಲಸಮಾಧಿಯಲ್ಲಿಕ್ಕದೆ ಕೆಟ್ಟರೆಂಬ ಶಬ್ದಕ್ಕರ್ಥ.

....

೪+ಐಕ್ಯಸ್ಥಲ (ಹ)

೯೨೨

ಉಮಾದಿನಾಥ[1]ರೊಂದು[1] ಕೋಟಿ, ಪಂಚವಕ್ತ್ರ[1]ರೊಂದು[1] ಕೋಟಿ, ನಂದಿವಾಹನರೊಂದು ಕೋಟಿ ನೋಡಯ್ಯ. ಸದಾಶಿವರೊಂದು ಕೋಟಿ, ಗಂಗೆವಾಳುಕಸಮಾರುದ್ರರು. ಇವರೆಲ್ಲರೂ ಕೂಡಲಸಂಗನ ಸಾನಿಧ್ಯರಲ್ಲದೆ ಸಮರಸವೇದ್ಯರೊಬ್ಬರೂ ಇಲ್ಲ.

I– –

ಉಮಾದಿನಾಥರೊಂದು ಕೋಟಿ–ಶಿವನ ಕುರಿತು ಜಪತಪ ಆರಾಧನೆ ಕ್ರಿಯೆಗಳನು ಮಾಡಿ ಗಂಗೆಗೌರಿಯರೆಂಬ ಈರ್ವರ ಅಭಿಧಾನವುಳ್ಳ ಸ್ತ್ರೀಯರನು ಪಡೆದುಕೊಂಡಂಥ ರುದ್ರಗಣಂಗಳು ಒಂದು ಕೋಟಿಯು. ಪಂಚವಕ್ತ್ರರೊಂದು ಕೋಟಿ–ಶಿವನ ಕುರಿತು ಜಪತಪಾರಾಧನೆ ಕ್ರಿಯೆಗಳನು ಮಾಡಿ ಐದು ಮುಖವನ್ನು ಹಡೆದುಕೊಂಡಂಥ ರುದ್ರಗಣಂಗಳೊಂದು ಕೋಟಿಯುಂಟಾಗಿಪ್ಪರು, ನಂದಿವಾಹನರೊಂದು ಕೋಟಿ–ಶಿವನ ಕುರಿತು ಜಪತಪಾರಾಧನೆ ಕ್ರಿಯೆಗಳನು ಮಾಡಿ ವೃಷಭವಾಹನವನ್ನು ಹಡೆದುಕೊಂಡಂಥ ರುದ್ರಗಣಂಗಳೊಂದು ಕೋಟಿ ಉಂಟಾಗಿರ್ಪರು. ನೋಡಯ್ಯ–ಕಂಡಯ್ಯ, ಸದಾಶಿವರೊಂದು ಕೋಟಿ–ಶಿವನ ಕುರಿತು ಜಪತಪಾರಾಧನೆ ಕ್ರಿಯೆಗಳನು ಮಾಡಿ ಸದಾಶಿವಮೂರ್ತಿಯ ಪದವಿಯನ್ನು ಪಡೆದುಕೊಂಡಂಥ ರುದ್ರಗಣಂಗಳೊಂದು ಕೋಟಿ ಉಂಟಾಗಿರ್ಪರು. ಗಂಗೆವಾಳುಕ ಸಮಾರುದ್ರರು–ಗಂಗೆಯ ಮಳಲಿಗೆ ಸಮಾನವಾದ ಸಾದೃಶ್ಯವಾದ ರುದ್ರಗಣಂಗಳು, ಇವರೆಲ್ಲರೂ–ಹಿಂದೆ ಹೇಳಲ್ಪಟ್ಟಂಥ ರುದ್ರಗಣಂಗಳೆಲ್ಲರೂ, ಕೂಡಲಸಂಗನ ಸಾನಿಧ್ಯರಲ್ಲದೆ–ಪರಶಿವಲಿಂಗದ ಎಡಬಲ ಸಮೀಪದಲ್ಲಿ ಇದ್ದುಕೊಂಡು ತಮ್ಮ ತಮ್ಮ ಪದಂಗಳ ಪಡೆದುಕೊಂಡು ದಿವ್ಯತೇಜಸ್ಸುಳ್ಳವರಾಗಿ ಇರುತ್ತಿಹರಲ್ಲದೆ, ಸಮರಸವೇದ್ಯರೊಬ್ಬರೂ ಇಲ್ಲ–ನೀರಕ್ಷೀರ ನ್ಯಾಯದ ಹಾಂಗೆ ರುದ್ರಪಶುಪತಿಗಳ ಹಾಂಗೆ ಸಮರಸಭಾವದಿಂದ ಲಿಂಗದಲ್ಲಿ ಸಮರಸೈಕ್ಯವಾದಂಥವರು, ಒಬ್ಬರೂ ಇಲ್ಲ–ಒರ್ವರೂ ಉಂಟಾಗಿಲ್ಲವು.

IV– –

1–1 ರು(ತ)

ಅದ್ವೈತವಾದ ಬ್ರಹ್ಮದಲ್ಲಿ ನೀರು ನೀರು ಕೂಡಿದಂತೆ ಕೂಡಲಜೆಯದೆ ಲಿಂಗವಿಡಿದು ತೇಜೋಮೂರ್ತಿಯಾಗಿ ತೋರುತ್ತಿದ್ದರು ಸಮಸ್ತ ರುದ್ರಗಣಂಗಳೆಂಬುದೀ ವಚನದರ್ಥ.

೯೨೩

ರಕ್ಕಸಿಯ ಮನೆಯಲು ಭೋಜನವನುಂಡು ತೃಪ್ತಿಯಾಯಿತ್ತೆಂದು ಬೆಸಗೊಂಡಡೆ ಹೇಳಿಹೆನು. ನೀರ ಕೈಯಲು ಕಿಚ್ಚು ಬಯಕೆಯ ಕೊಟ್ಟಂತೆ ಸಾಯುಜ್ಯ ಪದವಿಯನವರೆತ್ತ ಬಲ್ಲರು? ಮಹಾದಾನಿ ಕೂಡಲಸಂಗನ ಸಮರಸದ ಸುಖವನವರೆತ್ತ ಬಲ್ಲರು?

I– –

ರಕ್ಕಸಿಯ ಮನೆಯಲು ಭೋಜನವನುಂಡು–ಮೂರುಲೋಕದೊಳಗಿರುವಂಥ ದೇವದಾನವಮಾನವಾದಿಗಳ ಮುರಿದು ಮಾಜುವಾಯಕಳೇ ಮಾಯಾಶಕ್ತಿಯು, ಆ ಮಾಯಾಶಕ್ತಿಗಾಲಯವಾಗಿವಂಥದೇ ದೇಹವು. ಆ ದೇಹಸಂಬಂಧವಾದ ಪ್ರಾರಬ್ಧಭೋಗವನನುಭವಿಸಿ, ತೃಪ್ತಿಯಾಯಿತ್ತೆಂದು–ಬ್ರಹ್ಮದಲ್ಲಿ ಕೂಡಿ ಸಂತೃಪ್ತಿಯಾಯಿತೆಂದು, ಬೆಸಗೊಂಡಡೆ–ಬೆಸಗೊಂಡು ಕೇಳಿದರೆ, ಹೇಳಿಹೆನು–ನಿರೂಪಿಸುವೆನು. ನೀರ ಕೈಯಲು ಕಿಚ್ಚು ಬಯಕೆಯ ಕೊಟ್ಟಂತೆ–ಬೆಂಕಿಯನೇನಾದರೂ ಜೋಪಾನವ ಮಾಡಬೇಕಾದರೆ ಕಟ್ಟಿಗೆಯಲ್ಲಿ ಕುರುಳಿನಲ್ಲಿಟ್ಟು ಮೇಲೆ ಬೂದಿಯನ್ನು ಮುಚ್ಚಿ ಒತ್ತಿದರೆ ಜೋಪಾನದಿಂದಿರುವುದಲ್ಲದೆ ಉದಕದಲ್ಲಿಟ್ಟರೆ ಚುರ‍್ರೆಂದು ಆರಿಹೋಗುವುದು. ಹಾಗೆ ಜಲಬುದ್ಬುದಮಯಸ್ವರೂಪವಾದ ದೇಹವನ್ನು ಧರಿಸಿಕೊಂಡು ಆ ದೇಹ ಸಂಬಂಧವಾದ ಪ್ರಾರಬ್ಧಭೋಗವನುಭವಿಸುತ್ತ ಚಿದಗ್ನಿಸ್ವರೂಪಾದ ಬ್ರಹ್ಮದಲ್ಲಿ ಕೂಡಿ ಬ್ರಹ್ಮವೇಯಾಗೈದೇವೆಯೆಂದು ಹೇಳಿದರೆ ಬ್ರಹ್ಮದಲ್ಲಿ ಕೂಡುವಂಥದು ಅಳವಟ್ಟಿತ್ತೆ? ಅಳವಡದು. ಸಾಯುಜ್ಯಪದವಿಯನು–ಶಿವಸಾಯುಜ್ಯಪದವಿಯನ್ನು, ಅವರೆತ್ತ ಬಲ್ಲರು?–ಅವರಾವ ಕಡೆಗೆಂದು ತಿಳಿದಿಪ್ಪರು? ಅರಿಯರು. ಮಹಾ–ಭಕ್ತರುಗಳಿಗೆ ಮಹದಾನಂದಸುಖವನ್ನು, ದಾನಿ–ಕರುಣಿಸಿಕೊಡಲ್ಪಟ್ಟಂಥ, ಕೂಡಲಸಂಗನ–ಪರಶಿವಲಿಂಗದ, ಸಮರಸ–ಅವಿರಳ ಭಾವದ ಏಕರಸದ, ಸುಖವನ್ನು–ಪರಿಣಾಮವನ್ನು, ಅವರೆತ್ತ ಬಲ್ಲರು?–ಅವರಾವಕಡೆಗೆಂದು ತಿಳಿದಿಪ್ಪರು? ಅರಿಯರು.

II– –

ರಕ್ಕಸಿಯ ಮನೆಯಲು ಭೋಜನವನುಂಡು–ಸಮಸ್ತದೇವದಾನವಮಾನವರನು ತನ್ನ ಮೋಹವೆಂಬ ಮುಖದ್ವಾರದಿಂದಗಿದಗಿದು ಭಕ್ಷಿಸುವಂಥ ಮಾಯಾದೈತ್ಯಾಳಿಗಾಶ್ರಯವಾದ ದೇಹದಲ್ಲಿ ಫಲಪದಂಗಳನನುಭವಿಸಿ, ತೃಪ್ತಿಯಾಯಿತ್ತೆಂದು ಬೆಸಗೊಂಡಡೆ–ಸಂತೃಪ್ತಿಯಾಯಿತ್ತೆಂದು ಕೇಳಿದರೆ, ಹೇಳಿಹೆನು–ನಿರೂಪಿಸೇನು. ನೀರ ಕೈಯಲು ಕಿಚ್ಚ ಬೈಕೆಯ ಕೊಟ್ಟಂತೆ–ಸುಚಿತ್ತವೆಂಬ ಹಸ್ತದಲ್ಲಿ ಚಿದಗ್ನಿಸ್ವರೂಪವಾದ ವಸ್ತುವನು ಭಕ್ತಿಗಿತ್ತರೆ, ಸಾಯುಜ್ಯಪದವಿಯನವರೆತ್ತಬಲ್ಲರು–ಶಿವನಲ್ಲಿ ಎರಡಳಿದೊಂದಾಗಿರುವ ಐಕ್ಯಪದವಿಯನು ಜೀವರುಗಳಾವ ಕಡೆಯಲ್ಲಿ ತಿಳಿದುಬಲ್ಲರು. ಮಹಾದಾನಿ–ಮೋಕ್ಷಾನಂದಸುಖವನು ಕರುಣಿಸಿಕೊಡಲ್ಪಟ್ಟಂಥ, ಕೂಡಲಸಂಗನ ಸಮರಸದ ಸುಖವನವರೆತ್ತಬಲ್ಲರು–ಪರಶಿವಲಿಂಗದ ಸರಿಸಾರಸೌಖ್ಯವನು ಆವಕಡೆಯಲ್ಲಿ ತಿಳಿದುಬಲ್ಲರು.

....

೧ X (ಜ).

III– –

ಮಾಯಾಸಂಬಂಧವಾದ ದೇಹಪ್ರಪಂಚನನುಭವಿಸಿದಾತ್ಮನಿಗೆ ಪರಮಾಮೃತಸ್ವರೂಪವಾದ ಮುಕ್ತಿಯ ಸಂತೃಪ್ತಿ ತೊಲಗಿ ತಾಪತ್ರಯದ ದುಃಖ ದೊರಕೊಂಡಿತ್ತೆಂಬುದೀಗ, ರಕ್ಕಸಿ ಮನೆಯಲು ಭೋಜನವನುಂಡಡೆ ತೃಪ್ತಿಯಾಯಿತ್ತೆಂದು ಬೆಸಗೊಂಡರೆ ಹೇಳಿಹೆನು ಎಂಬ ಶಬ್ದಕ್ಕರ್ಥ. ಉದಕದ ಕೈಯಲು ಬೆಂಕಿಯು ಮರೆಸಿ ಮಡಗೆಂದು ಕೊಟ್ಟಲ್ಲಿ ನಂದಿಹೋಗುವ ಹಾಂಗೆ ಮನೋವ್ಯಾಪಾರವನುಳ್ಳಾತ್ಮನ ಮಧ್ಯದಲ್ಲಿ ಜ್ಞಾನಾಗ್ನಿ ನಷ್ಟವಾಗಿರ್ಪುದು ಎಂಬುದೀಗ ನೀರ ಕೈಯಲು ಕಿಚ್ಚ ಬೈಕೆಯ ಕೊಟ್ಟಂತೆಯೆಂಬ ಶಬ್ದಕ್ಕರ್ಥ. ಪರಶಿವಲಿಂಗದಲ್ಲಿಯ ಸಮರಸೈಕ್ಯದ ಪರಿಣಾಮವನು ಸಾಯುಜ್ಯಾದಿ ಪದಸ್ಥರು ಕಂಡು ತಿಳಿಯಲಱಿಯರೆಂಬುದೀಗ ಸಾಯುಜ್ಯಪದವಿಯನವರೆತ್ತಬಲ್ಲರು ಮಹಾದಾನಿ ಕೂಡಲಸಂಗನ ಸಮರಸದ ಸುಖವನವರೆತ್ತ ಬಲ್ಲರು ಎಂಬ ಶಬ್ದಕ್ಕರ್ಥ.

V– –

ಮಾಯಾಸಂಬಂಧವಾದ ದೇಹಪ್ರಪಂಚನನುಭವಿಸಿದಾತ್ಮನಿಗೆ ಪರಮಾಮೃತಸ್ವರೂಪವಾದ ಮುಕ್ತಿಯ ಸಂತೃಪ್ತಿ ತೊಲಗೆ ತಾಪತ್ರಯದ ದುಃಖ ದೊರೆಕೊಂಡಿತ್ತೆಂಬುದೀಗ ರಕ್ಕಸಿಯ ಮನೆಯಲು ಭೋಜನವನುಂಡು ತೃಪ್ತಿಯಾಯಿತ್ತೆಂದು ಬೆಸಗೊಂಡರೆ ಹೇಳಿಹೆನುಯೆಂಬ ಶಬ್ದಕ್ಕರ್ಥ. ಉದಕದ ಕೈಯಲ್ಲಿ ಬೆಂಕಿಯು ಮರೆಸಿ ಮಡಗೆಂದು ಕೊಟ್ಟಲ್ಲಿ ನಂದಿಹೋಗುವ ಹಾಂಗೆ ಮನೋವ್ಯಾಪಾರವನುಳ್ಳಾತ್ಮನು ಮಧ್ಯದಲ್ಲಿ ಜ್ಞಾನಾಗ್ನಿನಷ್ಟವಾಗಿರ್ಪುದೆಂಬುದೀಗ, ನೀರ ಕೈಯಲು ಕಿಚ್ಚ ಬೈಕೆಯ ಕೊಟ್ಟಂತೆಯೆಂಬ ಶಬ್ದಕ್ಕರ್ಥ. ಪರಶಿವಲಿಂಗದಲ್ಲಿ ಸಮರಸೈಕ್ಯದ ಪರಿಣಾಮವನು ಸಾಯುಜ್ಯಾದಿ ಫಲಪದಸ್ಥರು ಕಂಡು ತಿಳಿಯರೆಂಬುದೀಗ, ಮಹಾದಾನಿ ಕೂಡಲಸಂಗನ ಸಮರಸ ಸುಖವನವರೆತ್ತ ಬಲ್ಲರೆಂಬ ಶಬ್ದಕ್ಕರ್ಥ.

೯೨೪

ಬಯಲ ರೂಪಮಾಡಬಲ್ಲಾತನೆ ಶರಣನು. ಆ ರೂಪ ಬಯಲಮಾಡಬಲ್ಲಾತನೆ ಲಿಂಗಾನುಭಾವಿ. [1]ಬಯಲ ರೂಪ ಮಾಡಲಱಿಯದಿದ್ದಡೆ ಎಂತು ಶರಣನೆಂಬೆ? ಆ ರೂಪ ಬಯಲ ಮಾಡಲಱಿಯದಿದ್ದಡೆ ಎಂತು ಲಿಂಗಾನುಭಾವಿಯೆಂಬೆ? ಈ ಉಭಯ ಒಂದಾದಡೆ ನಿಮ್ಮಲ್ಲಿ ತೆಱಹುಂಟೆ ಕೂಡಲಸಂಗಮದೇವಾ?

I– –

ಬಯಲ ರೂಪಮಾಡಬಲ್ಲಾತನೆ ಶರಣನು: ಬಯಲ ರೂಪಮಾಡಬಲ್ಲಾತನೆ– ನಿರಾಕಾರವಾದ ಪ್ರಾಣಲಿಂಗವನ್ನು ಸಾಕಾರವಾದಿಷ್ಟಲಿಂಗವ ಮಾಡಿ ಅಂಗದಲ್ಲಿ ಸಂಬಂಧವ ಮಾಡಿಕೊಂಡು ಆ ಇಷ್ಟಲಿಂಗಕ್ಕೆ ಅಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳಿಂದಾರಾಧಿಸ

ಬಲ್ಲಾತನೇ, ಶರಣನು–ಆತನೇ ಶಿವಶರಣನು. ಆ ರೂಪ ಬಯಲಮಾಡಬಲ್ಲಾತನೆ: ಆ ರೂಪ–ಸಾಕಾರವಾದಿಷ್ಟಲಿಂಗವನ್ನು, ಬಯಲಮಾಡಬಲ್ಲಾತನೆ–ನಿರಾಕಾರವಾದ ಪ್ರಾಣಲಿಂಗವ ಮಾಡಿ ಅಂತರಂಗದಲ್ಲಿ ಸಂಬಂಧವ ಮಾಡಿಕೊಂಡು ಆ ಪ್ರಾಣಲಿಂಗಕ್ಕೆ ಮಂತ್ರಧ್ಯಾನ ಜಪಸ್ತೋತ್ರನಿರ್ಗುಣಪೂಜಾಕ್ರಿಯೆಗಳಿಂದಾರಾಧಿಸಬಲ್ಲಾತನೇ, ಲಿಂಗಾನುಭಾವಿ–ಆತನೇ ಶಿವಾನುಭಾವಿಯು. ಬಯಲ ರೂಪಮಾಡಲಜಿಯದಿದ್ದಡೆ–ನಿರಾಕಾರವಾದ ಪ್ರಾಣಲಿಂಗವನ್ನು ರೂಪುಮಾಡಲರಿಯದಿದ್ದಡೆ, ಸಾಕಾರವಾದಿಷ್ಟಲಿಂಗವ ಮಾಡಿ ಅಂಗದಲ್ಲಿ ಸಂಬಂಧವ ಮಾಡಿಕೊಂಡು ಆ ಇಷ್ಟಲಿಂಗಕ್ಕೆ ಅಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳಿಂದಾರಾಧಿಸುವಂಥದನು ತಿಳಿದಿರಬೇಕು. ತಿಳಿಯಲರಿಯದಿದ್ದರೆ, ಎಂತು ಶರಣನೆಂಬೆ?–ಶರಣನೇ ಸತಿಯಾಗಿ ಲಿಂಗವೇ ಪತಿಯಾಗಿ ಶರಣಸತಿ ಲಿಂಗಪತಿತ್ವವಿಡಿದಾಚರಿಸುವಂಥ ಶರಣಸ್ಥಲದಾಚರಣೆಯುಳ್ಳಾತನೆಂದು ಹೇಂಗೆ ಹೇಳುವೆನು. ಆ ರೂಪ ಬಯಲಮಾಡಲಜಿಯದಿದ್ದಡೆ: ಆ ರೂಪ–ಸಾಕಾರವಾದಿಷ್ಟಲಿಂಗವನು, ಬಯಲಮಾಡಲಜಿಯದಿದ್ದಡೆ–ನಿರಾಕಾರವಾದ ಪ್ರಾಣಲಿಂಗವ ಮಾಡಿ ಅಂತರಂಗದಲ್ಲಿ ಸಂಬಂಧವ ಮಾಡಿಕೊಂಡು ಆ ಪ್ರಾಣಲಿಂಗಕ್ಕೆ ಮಂತ್ರಧ್ಯಾನಜಪಸ್ತೋತ್ರನಿರ್ಗುಣ ಪೂಜಾಕ್ರಿಯೆಗಳಿಂದಾರಾಧಿಸುವಂಥದನು ತಿಳಿದಿರಬೇಕು. ತಿಳಿಯಲರಿಯದೆ ಇದ್ದರೆ, ಎಂತು ಲಿಂಗಾನುಭಾವಿಯೆಂಬೆ?–ಹೇಂಗೆ ಶಿವಾನುಭಾವಿಯೆಂಬೆನು? ಈ ಉಭಯವೊಂದಾದಡೆ–ಇಷ್ಟ ಪ್ರಾಣ ಸಮರಸ ಏಕತ್ವವಾದ ಆತ್ಮಾಂಗದಲ್ಲಿ ಭಾವಲಿಂಗವು ಸಂಬಂಧವಾದರೆ, ನಿಮ್ಮಲ್ಲಿ ತೆರಹುಂಟೆ?–ಅಂತಪ್ಪ ಶರಣನು ಪರಶಿವಲಿಂಗದಲ್ಲಿ ಕೂಡಿಪ್ಪನಲ್ಲದೆ ಭಿನ್ನವಾಗೈದಾನೇ? ಇಲ್ಲವು, ಕೂಡಲ ಸಂಗಮದೇವಾ–ಎಲೆ ಪರಶಿವಲಿಂಗವೆ.

II– –

1 + ಆ (ಚ.ಜ.)

ಬಯಲ ರೂಪ ಮಾಡಬಲ್ಲಾತನೆ ಶರಣನು–ಚಿದ್ಬಯಲಿನ ಬಯಲಪ್ಪ ಚಿತ್ಪ್ರಭಾಲಿಂಗವನು ಇಷ್ಟಮಹಾಲಿಂಗಾಕಾರವ ಮಾಡಿಕೊಂಡಾಚರಿಸಬಲ್ಲಾತನೆ ಶಿವಶರಣನು. ಆ ರೂಪ ಬಯಲಮಾಡಬಲ್ಲಾತನೆ ಲಿಂಗಾನುಭಾವಿ–ಆ ಇಷ್ಟಮಹಾಲಿಂಗವನು ಚಿದ್ಬಯಲಿನ ಬಯಲಪ್ಪ ಚಿತ್ಪ್ರಭಾಲಿಂಗವ ಮಾಡಿಕೊಂಡಾಚರಿಸಬಲ್ಲಾತನೆ ಶಿವಾನುಭಾವಿ. ಆ ಬಯಲರೂಪಮಾಡಲಜಿಯದಿದ್ದಡೆ ಎಂತು ಶರಣನೆಂಬೆ–ಆ ಚಿದ್ಬಯಲಿನ ಬಯಲಪ್ಪ ಚಿತ್ಪ್ರಭಾಲಿಂಗವನು ಇಷ್ಟಲಿಂಗಸ್ವರೂಪವ ಮಾಡಿಕೊಂಡಾಚರಿಸಲರಿಯದಿದ್ದರೆ ಹೇಂಗೆ ಶಿವಶರಣನೆಂಬೆ. ಆ ರೂಪ ಬಯಲ ಮಾಡಲರಿಯದಿದ್ದಡೆ ಎಂತು ಲಿಂಗಾನುಭಾವಿಯೆಂಬೆ–ಆ ಇಷ್ಟಮಹಾಲಿಂಗವನು ಚಿದ್ಬಯಲಿನ ಬಯಲಪ್ಪ ಚಿತ್ಪ್ರಭಾಲಿಂಗವನು ಮಾಡಿಕೊಂಡಾಚರಿಸಲರಿಯದಿದ್ದರೆ ಹೇಂಗೆ ಶಿವಾನುಭಾವಿಯೆಂಬೆ. ಈ ಉಭಯ ಒಂದಾದಡೆ ನಿಮ್ಮಲ್ಲಿ ತೆರಹುಂಟೆ ಕೂಡಲಸಂಗಮದೇವಾ–ಈ ಇಷ್ಟಪ್ರಾಣಲಿಂಗವೆರಡೂ ಏಕವಾದರೆ ಎಲೆ ಲಿಂಗವೆ ನಿಮ್ಮಲ್ಲಿ ಭಿನ್ನವುಂಟೆ?

III– –

ನಿರಾಕಾರವಾದ ಪರವಸ್ತುವನು ಗುರೂಪದೇಶದಿಂದಂಗದ ಮೇಲಿಷ್ಟಲಿಂಗವಾಗಿ ಸಂಬಂಧಿಸಿಕೊಂಡು ಶರಣಸತಿ ಲಿಂಗಪತಿಯಾಗಿ ಆಚರಿಸಬಲ್ಲಾತನೆ ಶಿವಶರಣನೆಂಬುದೀಗ, ಬಯಲುರೂಪಮಾಡಬಲ್ಲಾತನೆ ಶರಣನು ಎಂಬ ‘ಶಬ್ದಕ್ಕರ್ಥ.’ ಅಂಗತತ್ವಗಳೆಲ್ಲವನು ಲಿಂಗತತ್ವಗಳಲ್ಲಿ ಹುದುಗಿ ನಿರ್ವಲಯನೆಯ್ದಬಲ್ಲಾತನೆ ಶಿವತತ್ವಾನುಭಾವಿಯೆಂಬೆನೆಂಬುದೀಗ, ಆ ರೂಪ ಬಯಲುಮಾಡಬಲ್ಲಾತನೆ ಲಿಂಗಾನುಭಾವಿಯೆಂಬೆನೆಂಬ ‘ಶಬ್ದಕ್ಕರ್ಥ.’ ಸಗುಣ ತತ್ವವೇ ಅಂಗ ನಿರ್ಗುಣತ್ವವೆ ಲಿಂಗವಾಗಾಚರಿಸಲಜೆಯದವನ ಶಿವಶರಣನೆಲಿಲ್ಲವೆಂಬುದೀ ಬಯಲರೂಪ ಮಾಡಲಜೆಯದಿದ್ದರೆ ಎಂತು ಶರಣನೆಂಬೆ ಎಂಬ ‘ಶಬ್ದಕ್ಕರ್ಥ.’ ಅಂಗ ಕ್ರಿಯೆಗಳೆಲ್ಲವನು ಲಿಂಗಕ್ರಿಯೆಗಳಲ್ಲಳವಡಿಸಿ ಸಮರಜ್ಞಾನದಿಂದ ಲಿಂಗದಲ್ಲೇಕಾರ್ಥವಾಗಜೆಯದಾತನನ್ನು ಶಿವಶರಣನೆಲಿಲ್ಲವೆಂಬುದೀಗ ಆರೂಪ ಬಯುಲ ವಾಡಲಜೆಯುದಿದ್ದರೆ ಎಂತು ಲಿಂಗಾನುಭಾವಿಯೆಂಬೆನೆಂಬ ‘ಶಬ್ದಕ್ಕರ್ಥ.’ ಅಂಗಲಿಂಗಳೇಕವಾದ ಶರಣನಿಗೆ ಲಿಂಗದಲ್ಲಿ ಸಮರಸೈಕ್ಯ ದೂರೆಕೊಂಡಿತ್ತೆಂಬುದೀಗ ಈ ಉಭಯ ಒಂದಾದರೆ ನಿಮ್ಮಲ್ಲಿ ತೆಱಹುಂಟೆ ಕೂಡಲಸಂಮದೇವಾ ಎಂಬ ‘ಶಬ್ದಕ್ಕರ್ಥ.’

....

೧-೧ x (ಡ).

IV- -

ನಿರಾಕಾರವಾಗಿರ್ದ ಪರಬ್ರಹ್ಮನ ಸಾಕಾರವ ಮಾಡಿ ಕರಮನಭಾವಂಗಳಲ್ಲಿ ಪಿಡಿದು ಲಿಂಗಾಂಗಸಂಯೋಗಿಯಾಗಿ ಅಂಗಸುಖಂಗಳನೆಲ್ಲವ ಲಿಂಗಕ್ಕೆ ಅರ್ಪಿಸಬಲ್ಲಾತನೆ ಶರಣನು. ಅಂತು ಲಿಂಗಾಂಗವೆಂಬ ಭೇದವಳಿದು ಒಂದೇ ಮಹಾಘನಲಿಂಗವೆಯಾಗಿ ತನ್ನನಜೆದು ಲಿಂಗವೇಯಾಗಿರ್ದ ಶರಣನು ಲಿಂಗಕ್ಕೆ ಭಿನ್ನನಲ್ಲ. ಅಂತಪ್ಪ ಲಿಂಗಾನುಸಂಬಂಧವ ಮಾಡಲರಜೆಯದಿರ್ದವರು ಶರಣರಲ್ಲ. ಲಿಂಗಾನುಭಾವಿಗಳಲ್ಲವೆಂಬುದೀ ವಚನದ ತಾತ್ಪರ್ಯಾರ್ಥ.

ನಿರಾಕಾರವಾದ ಪರವಸ್ತುವನು ಗುರೂಪದೇಶದಿಂದ ಅಂಗದ ಮೇಲಿಷ್ಟಲಿಂಗವಾಗಿ ಸಂಬಂಧಿಸಿಕಕೊಂಡು ಶರಣಸತಿ ಲಿಂಗಪತಿಯಾಗಿ ಆಚರಿಸಬಲ್ಲಾತನೆ ಶರಣನೆಂಬುದೀಗ, ಬಯಲ ರೂಪಮಾಡಬಲ್ಲಾತನೇ ಶರಣನೆಂಬ ಶಬ್ದಕರ್ಥ. ಅಂಗತತ್ವಂಗಳೆಲ್ಲವನು ಲಿಂಗತತ್ವಂಗಳಲ್ಲಿ ಹುದುಗಿಸಿ ನಿರ್ವಲಯನೆಯ್ದಬಲ್ಲಾತನೆ ಶಿವತತ್ತ್ವಾನುಭಾವಿಯೆಂಬುದೀಗ, ಆ ರೂಪ ಬಯಲಮಾಡಬಲ್ಲಾತನೆ ಲಿಂಗಾನುಭಾವಿಯೆಂಬ ಶಬ್ದಕ್ಕರ್ಥ. ಸಗುಣ ತತ್ತ್ವವೇ ಅಂಗ ನಿರ್ಗುಣತತ್ತ್ವವೇ ಲಿಂಗವಾಗಾಚರಿಸಜೆಯದವನ ಶಿವಶರಣನೆನಲಿಲ್ಲವೆಂಬುದೀಗ ಈ ಉಭಯ ಬಯಲ ರೂಪಮಾಡಲಜೆಯದಿದ್ದರೆಂತು ಶರಣನೆಂಬೆನೆಂಬ ಶಬ್ದಕರ್ಥ. ಅಂಗಕ್ರಿಯೆಗಳನೆಲ್ಲವನು ಲಿಂಗಕ್ರಿಯೆಗಳಲ್ಲಿ ಅಳವಡಿಸಿ ಸಮರಸಜ್ಞಾನದಿಂದ ಲಿಂಗದಲ್ಲೇಕಾರ್ಥವಾಗಲಜೆಯದಾತನು ಶಿವಶರಣನೆನಲಿಲ್ಲ ವೆಂಬುದೀಗ ಆ ರೂಪ ಬಯುಲವಾಡಲಜೆಯದಿದ್ದರೆ ಎಂತು ಲಿಂಗಾನುಭಾವಿಯೆಂಬೆನೆಂಬ ಶಬ್ದಕ್ಕರ್ಥ.

೯೨೫

ದೇವಲೋಕ ಮರ್ತ್ಯಲೋಕವೆಂಬ ಸೀಮೆಯುಳ್ಳನ್ನಕ್ಕ ಕೇವಲ ಶರಣನಾಗಲರಿಯ! ಸತ್ತು ಬೆರೆಸಿಹೆನೆಂದಡೆ ಕಬ್ಬಿನ ತುದಿಯ ಮೆಲಿದಂತೆ ಕೂಡಲಸಂಗಮದೇವಾ.

I– –

ದೇವಲೋಕ ಮರ್ತ್ಯಲೋಕವೆಂಬ ಸೀಮೆಯುಳ್ಳನ್ನಕ್ಕ: ದೇವಲೋಕ–ಕೈಲಾಸಲೋಕದಲ್ಲಿ ಶಿವನ ಕುರಿತು ಜಪತಪಾರಾಧನೆ ಕ್ರಿಯೆಗಳನು ಮಾಡಿ. [ಮರ್ತ್ಯಲೋಕವೆಂಬ–]ಮರ್ತ್ಯಲೋಕಕ್ಕೆ ಬಂದು ಧರ್ಮಾರ್ಥಧರ್ಮ ಕಾಮಮೋಕ್ಷಗಳೆಂಬ ಚತುರ್ವಿಧಫಲಪದಂಗಳನು ಪಡೆದನುಭವಿಸಬೇಕೆಂಬ, ಸೀಮೆಯುಳ್ಳನ್ನಕ್ಕ–ಮೇರೆ ಕಟ್ಟುಂಟಾಗಿರುವ ಪರಿಯಂತರ, ಕೇವಲ ಶರಣನಾಗಲರಿಯ: ಕೇವಲ–ಬಚ್ಚಬರಿಯ ಚಿತ್ಸ್ವರೂಪನಾದ, ಶರಣನಾಗಲರಿಯ–ಶರಣನೇ ಸತಿಯಾಗಿ ಲಿಂಗವೇ ಪತಿಯಾಗಿ ಶರಣಸತಿಲಿಂಗಪತಿತ್ವವಿಡಿದಾಚರಿಸುವಂಥ ಆಚರಣೆಯನ್ನು ತಿಳಿಯನು.

ಸತ್ತು ಬೆರೆಸಿಹೆನೆಂದೆಡೆ: ಸತ್ತು–ಮೃತವಾಗಿ, ಬೆರೆಸಿಹೆನೆಂದಡೆ–ಪರಬ್ರಹ್ಮದಲಿ ಕೂಡಿಹೆನೆಂದರೆ, ಕಬ್ಬಿನ ತುದಿಯ ಮೆಲಿದಂತೆ–ಕಬ್ಬನ್ನು ಮೆಲಿಯ ಬೇಕಾದರೆ ತುದಿಯಿಂದ ಬುಡದ ಕಡೆಗೆ ಮೆದ್ದುಕೊಂತ ಹೋದರೆ ಸ್ವಾದವಾಗಿರುವುದು ಅದಲ್ಲದೆ ಬುಡದಿಂದ ತುದಿತನಕ ಮೆದ್ದುಕೊಂಡು ಹೋದರೆ ಮೆದ್ದ ಮೆದ್ದ ಹಾಂಗೆ ಸಪ್ಪೆಯಾಗಿ ಸವುಳಾಗಿರುವುದುಯೆಂಬ ಹಾಂಗೆ ಅವಸಾನ ಪರಿಯಂತರ ಅಜ್ಞಾನಿಯಾಗಿ ಆಚರಿಸಿ ಅಂತ್ಯದಲ್ಲಿ ಜ್ಞಾನಿಯಾಗಿ ಆಚರಿಸಿದರೆ ಕಬ್ಬಿನ ತುದಿಯಿಂದ ಹಿಡಿದು ಬುಡದತನಕ ಮೆದ್ದರೆ ಸ್ವಾದವಾಗಿದ್ದ ಹಾಂಗೆ ನಿತ್ಯವಾದ ನಿಜ ಮೋಕ್ಷವೇ ಆಗುತ್ತಿಹುದು. ಅವಸಾನ ಪರಿಯಂತರದಲ್ಲಿ ಜ್ಞಾನಿಯಾಗಿ ಆಚರಿಸಿ ಅಂತ್ಯದಲ್ಲಿ ಅಜ್ಞಾನಿಯಾಗಿ ಆಚರಿಸಿದರೆ ಕಬ್ಬಿನ ಬುಡದಿಂದ ಹಿಡಿದು ತುದಿತನಕ ಮೆದ್ದುಕೊಂತ ಹೋದರೆ ಸಪ್ಪೆಯಾಗಿ ಸವುಳಾಗಿದ್ದ ಹಾಂಗೆ ವ್ಯರ್ಥವಾಗಿರ್ಪುದು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

II– –

ದೇವಲೋಕ ಮರ್ತ್ಯಲೋಕವೆಂಬ ಸೀಮೆಯುಳ್ಳನ್ನಕ್ಕ ಕೇವಲ ಶರಣನಾಗಲರಿಯ–ಸಾಂಭವಲೋಕ ಮಾನವಲೋಕವೆಂಬ ಮೇರೆ ಉಂಟಾಗಿರುವ ಪರಿಯಂತರವು ಬಚ್ಚಬರಿಯ ಶಿವಶರಣನಾಗಲರಿಯ. ಸತ್ತು ಬೆರೆಸಿಹೆನೆಂದಡೆ ಕಬ್ಬಿನ ತುದಿಯ ಮೆಲಿದಂತೆ ಕೂಡಲಸಂಗಮದೇವಾ–ದೇಹವಿದ್ದ ಹಾಂಗೆ ಜ್ಞಾನೋದಯವಾಗಿ ಗುರುಕಾರುಣ್ಯವ ಪಡೆದು ಲಿಂಗಾಂಗಸಂಬಂಧಿಯಾಗಿ ಅಂಗಪ್ರತ್ಯಂಗಸಾಂಗೋಪಾಂಗಾದಿಗಳೆಲ್ಲವನು ಲಿಂಗದಲ್ಲಿ ಸಮರಸೈಕ್ಯವ ಮಾಡಬೇಕಲ್ಲದೆ ಸತ್ತ ಹಿಂದೆ ಹಾರು ಎತ್ತ ಬಿದ್ದರೇನೆಂದು ಸತ್ತ ಹಿಂದೆ ಆ ವಸ್ತುವಿನಲ್ಲಿ ಕೂಡಿದೆನೆಂಬುದು ವೃಥಾಯ ಎಲೆ ಲಿಂಗವೆ.

III– –

ಕ್ರಿಯಾಜ್ಞಾನಂಗಳ ಮೇಱೆವಿಡಿದಾಚರಿಸುವ ಪರಿಯಂತರಲು ಅಚ್ಚಲಿಂಗೈಕ್ಯ ನಾಗಲಜೆಯನೆಂಬುದೀಗ, ದೇವಲೋಕ ಮರ್ತ್ಯಲೋಕವೆಂಬ ಸೀಮೆಯುಳ್ಳನ್ನಕ್ಕ ಕೇವಲ ಶರಣನಾಗಲಜೆಯನೆಂಬ ಶಬ್ದಕ್ಕರ್ಥ. ಕಬ್ಬಿನ ತುದಿಯ ಮೆಲಿದಲ್ಲಿ ಕ್ಷಾರ ತೋರುವ ಹಾಂಗೆ ಸತ್ತು ಲಿಂಗದಲ್ಲಿ ಕೂಡಿಹೆನೆಂಬಾತನಿಗೆ ಜೀವನ್ಮುಕ್ತಿ ಪರಿಣಾಮ ದೊರಕೊಳ್ಳದೆಂಬುದೀಗ ಸತ್ತು ಬೆರೆಸಿಹೆನೆಂದರೆ ಕಬ್ಬಿನ ತುದಿಯ ಮೆಲಿದಂತೆ ಕೂಡಲಸಂಗಮದೇವಾ ಎಂಬ [೧]ಶಬ್ದಕ್ಕರ್ಥ.[೧]

....

೧–೧ x (ಡ)

V– –

ಕ್ರಿಯಾಜ್ಞಾನಂಗಳ ಮೇಱೆವಿಡಿದಾಚರಿಸುವ ಪರಿಯಂತರವು ಅಚ್ಚ ಲಿಂಗೈಕ್ಯನಲ್ಲವೆಂದುದೀಗ ದೇವಲೋಕ ಮರ್ತ್ಯಲೋಕವೆಂಬ ಸೀಮೆಯುಳ್ಳನ್ನಕ್ಕ ಕೇವಲ ಶರಣನಾಗಲಜೆಯನೆಂಬ ಶಬ್ದಕ್ಕರ್ಥ. ಕಬ್ಬಿನ ತುದಿಯ ಮೆದ್ದಲ್ಲಿ ಕ್ಷಾರವಾಗಿ ತೋಱುವಹಾಂಗೆ ಸತ್ತು ಲಿಂಗದಲ್ಲಿ ಕೂಡಿಹೆನೆಂಬಾಗೆ ಜೀವನ್ಮುಕ್ತಿ ಪರಿಣಾಮದೊರಕೊಳ್ಳದೆಂಬುದೀಗ, ಸತ್ತು ಬೆರೆಸಿಹೆನೆಂದರೆ ಕಬ್ಬಿನ ತುದಿಯ ಮೆಲಿದಂತೆಯೆಂಬುದರ್ಥ.

೬೨೬

ಮಾತಿಲ್ಲ ನುಡಿಯಿಲ್ಲ ಏತಕ್ಕೆ ಮುನಿವಿರಿ? ಮಾತನಾಡಿದಡೆ [1]ಕೆಯ್ಯ[1] ಬೆಳೆಸೆಂಬನಜೆಯಿರೆ ಅಯ್ಯಾ? ಮಾತುಗೆಟ್ಟಲ್ಲದೆ ತಾನಾಗಬಾರದು, ಕೂಡಲಸಂಗಮದೇವ,[2] ಮಾತಿಂದ ಬಕ್ಕು ಭವಭಾರ ಘೋರ.

....

1–1 ಕೈ (ಕ, ಗ)

I– –

ಮಾತಿಲ್ಲ–ಸರಸಕ್ರೀಯಿಲ್ಲವು, ನುಡಿಯಿಲ್ಲ–ಸರಸಜ್ಞಾನವಿಲ್ಲವು, ಏತಕ್ಕೆ ಮುನಿವಿರಿ–ನಾವು ಲಿಂಗಪೂಜೆಯ ಮಾಡುತ್ತೈದೇವಿ ಶಿವನು ನಮಗೆ ಫಲಪ್ರದ ಇಷ್ಟಾರ್ಥಸಿದ್ಧಿಗಳನ್ನು ಕೊಡಲಿಲ್ಲವೆಂದು ಕಂಡಕಂಡವರ ಕೂಡ ಏನು ಕಾರಣಕ್ಕೆ ಹೇಳಿಕೊಂಬುತಿದ್ದೀರಿ. ಮಾತನಾಡಿದಡೆ–ಭಿನ್ನವಿಟ್ಟುಕೊಂಡು ಪೂಜಿಸಿದರೆ, ಕೆಯ್ಯ ಬೆಳೆಸೆಂಬುದನು–ಸಲಿಕೆ ಗುದ್ದಲಿಗಳಿಂದ ಭೂಮಿಯನಗಿದು ಮಡಿಗಳನ್ನು ಕಟ್ಟಿ ಹರವೆಬೀಜ ಮೆಂತೆಬೀಜ ಮೊದಲಾದವನು ಬಿತ್ತಿದರೆ ಆಗಾಗ್ಗೆ ಅಷ್ಟಷ್ಟು ಮಾತ್ರ ಫಲ ದೊರಕೊಂಬುವುದು. ಅದಲ್ಲದೆ ನೇಗಿಲವನ್ನು ಹೂಡಿ ಹರಗಿ ಹಸನವ ಮಾಡಿ ಹದಿನೆಂಟು ಧಾನ್ಯಂಗಳನು ಬಿತ್ತಿದರೆ ಕಾಲಾಂತರ ಪರಿಯಂತದಲಿ ಉಂಬುವುದಕ್ಕೆ ಬರುವವು. ಹಾಗೆ, ಸಮರಸಭಾವದಿಂದ ಲಿಂಗಪೂಜೆಯ ಮಾಡಿದರೆ ನಿತ್ಯವಾದ ನಿಜಮೋಕ್ಷವೇ ಆಗುತ್ತಿಹುದು.

ಭಿನ್ನವಿಟ್ಟುಕೊಂಡು ಲಿಂಗಪೂಜೆಯ ಮಾಡಿದರೆ ಕಿಂಚಿನ್ಮಾತ್ರ ಫಲಪದಂಗಳು ದೊರೆಕೊಂಡು ಕಡೆಗೆ ಭವದುಃಖವೇ ಉಂಟಾಗುವಂತದನು, ಅಜೆಯಿರೆ–ತಿಳಿಯಿರೆ, ಅಯ್ಯ–ಎಲೆ ಲಿಂಗವೆ.

ಮಾತುಗೆಟ್ಟಲ್ಲದೆ–ಭಿನ್ನಪೂಜಾಕ್ರೀಯೆಗಳು ನಷ್ಟವಾದಲ್ಲದೆ, ತಾನಾಗಬಾರದು–ತಾನಾರು? ತನ್ನ ನಿಜವೇನು? ತಾನೆಲ್ಲ ಶಿವಸ್ವರೂಪನೆಂಬಂಥದನು ತಿಳಿಯಬಾರದು, ಕೂಡಲಸಂಗಮದೇವ–ಎಲೆ ಪರಶಿವಲಿಂವೆ, ಮಾತಿಂದ–ಭಿನ್ನಪೂಜಾಕ್ರಿಯೆಗಳಿಂದ, ಭವ–ಎಲ್ಲಾ ಎಡೆಯಲ್ಲಿ ಹುಟ್ಟಿಹುಟ್ಟಿ ಬರುವಂಥಗ ಭಾರ–ಹೊರೆಯು, ಘೋರ–ಭಯಂಕರವಾದ ನರಕವಾಗುವಂಥದು, ಬಕ್ಕು–ಆಗುತ್ತಹುದು.

II– –

1–1 ಕೈಯ (ಚ, ಜ). 2 + ಯ್ಯ (ಚ, ಜ)

....

ಮಾತಿಲ್ಲ ನುಡಿಯಿಲ್ಲ ಏತಕ್ಕೆ ಮುನಿವಿರಿ?–ಸ್ತೋತ್ರವಿಲ್ಲ ಮಂತ್ರವಿಲ್ಲ ಏನು ಕಾರಣ ಕೋಪಿಸುವಿರಿ. ಮಾತಾಡಿದಡೆ ಕೈಯಬೆಳೆಸೆಂಬುದನಜೆಯಿರಿ ಅಯ್ಯ–ಸ್ತೋತ್ರಮಂತ್ರಾದಿಗಳ ಮಾಡಿದರೆ ಫಲಪದಂಗಳು ದೊರಕೊಂಬುತ್ತೈದಾವೆಯೆಂಬುದ ತಿಳಿಯಿರಿ ಎಲೆ ಸ್ವಾಮಿಯೆ? ಅದಿಲ್ಲದೆ ತರ್ಕದ ಪ್ರಸಂಗವಿಲ್ಲ ಶಬ್ದ ಸಂಸ್ಕೃತ ಅಪಭ್ರಂಶ ಮೊದಲಾದವನು ಕಲಿತು ಹೇಳಿ ಕೇಳಿ ಒಡಲ ಹೊರೆವುದಲ್ಲವೇನು ಕಾರಣ ಕೋಪಿಸುವಿರಿ. ಶಬ್ದ ಸಂಸ್ಕೃತ ದೇಸಿ ಭಾಷೆಯನು ಕಲಿತುಹೇಳಿದರೆ ಹಚ್ಚಡ ಸೆಲ್ಲೆ ಕಂಬಳಿ ಮೊದಲಾದುವು ದೊರಕೊಂಬುತ್ತೈದಾವೆಯೆಂಬುದ ತಿಳಿಯಿರಿ ಎಲೆ ಸ್ವಾಮಿಯೆ. ಮಾತುಗೆಟ್ಟಲ್ಲದೆ ತಾನಾಗಬಾರದು–ಸ್ತೋತ್ರಮಂತ್ರಾದಿಗಳು ನಷ್ಟವಾದಲ್ಲದೆ ವಸ್ತುಸ್ವರೂಪ ತಾನಾಗಬಾರದು. ಅದಲ್ಲದೆ ಶಬ್ದ ಸಂಸ್ಕೃತ ಮೊದಲಾದವನು ಕಲಿತು ಹೇಳಿ ಒಡಲ ಹೊಜೆವುದು ನಷ್ಟವಾದಲ್ಲದೆ ತಾನಾರು? ತನ್ನ ಸ್ವರೂಪವೇನೆಂಬುದರಿಯಬಾರದು. ಅದಲ್ಲದೆ ವಸ್ತುವೇ ತಾನು ತಾನೇ ವಸ್ತುವೆಂಬುದರಿಯಬಾರದು. ಕೂಡಲಸಂಗಮದೇವಯ್ಯ ಮಾತಿಂದ ಬಕ್ಕು ಭವಭಾರಘೋರ–ಸ್ತೋತ್ರ ಮಂತ್ರಾದಿಗಳ ಮಾಡಿದಲ್ಲಿ ಫಲಪದಂಗಳು ದೊರಕೊಂಬವು. ಆ ಫಲಪದಂಗಳಿಂದ ಜನ್ಮ ಸಂಸಾರದ ಹೊಜೆಯೂ ಭಯಂಕರವಾದ ನಿರಿಯೂ ಪ್ರಾಪ್ತಿಯಾಗೂದೆಂಬುದರ್ಥ.

III– –

ಅಂತರಂಗದಲ್ಲಿ ಜ್ಞಾನ ಬಹಿರಂಗದಲ್ಲಿ ಸತ್ಕ್ರಿಯಾಪ್ರಸಂಗವುಂಟಾಗದೆ ಪರಶಿವಲಿಂಗವು ಪ್ರಸನ್ನವಾಗಲೊಲ್ಲನೆಂದೇಕೆ ಪ್ರಸಂಗಿಸುವಿರಿಯೆಂಬುದೀಗ, ಮಾತಿಲ್ಲ ನುಡಿಯಿಲ್ಲ ಏತಕ್ಕೆ ಮುನಿವಿರಿಯೆಂಬ ಶಬ್ದಕ್ಕರ್ಥ. ಜ್ಞಾನಾನುಭವದ ಪ್ರಸಂಗ ಮಾಡಿದ ಹಾಂಗೆ ಸತ್ಯವಾಗಿ ಆಚರಿಸಿದರೆ ಪರಶಿವಲಿಂಗದ ಪ್ರಸನ್ನತ್ವವಂದಿಗೆವುಂಟಾಗಿರ್ಪುದೆಂಬುದೀಗ, ಮಾತಾಡಿದರೆ ಕಯ್ಯ ಬೆಳಸೆಂಬುದನಜೆಯಿರಿ ಎಂಬ ಶಬ್ದಕ್ಕರ್ಥ. ಶರಣ ಲಿಂಗವೆಂಬ ಭಿನ್ನಶಬ್ದ[೧]ವಳಿದಲ್ಲದೆ[೧] ನಿರ್ಗುಣವಸ್ತುವಿನ ನಿಲುಕಡೆ ದೊರಕೊಳಲರಿದೆಂಬುದೀಗ, ಮಾತುಗೆಟ್ಟಲ್ಲದೆ ತಾನಾಗಬಾರದೆಂಬ [೨]ಶಬ್ದಕ್ಕರ್ಥ[೨]. ನಾಹಂ ಕೋಽಹಂ ಸೋಽಹಂ ಎಂಬ ಭಿನ್ನ ವಾಕ್ಯದಿಂದ ಆತ್ಮನಿಗೆ ಜನ್ಮಸಂಸಾರದ ಹೊರೆಯುಂಟಾಗಿರ್ಪುದೆಂಬುದೀಗ, ಮಾತಿಂದ ಬಕ್ಕು ಭವಭಾರಘೋರವೆಂಬ [೨]ಶಬ್ದಕ್ಕರ್ಥ.[೨]

....

೧-೧ ವಿಲ್ಲದ (ಡ). ೨-೨ x (ಡ)

V- -

1-1 ಕಯ್ಯ (ಪ).

ಅಂತರಂಗದಲ್ಲಿ ಜ್ಞಾನ ಬಹಿರಂಗದಲ್ಲಿ ಸತ್ಕ್ರಿಯಾಪ್ರಸಂಗವುಂಟಾಗದೆ ಪರಶಿವಲಿಂಗವು ಪ್ರಸನ್ನವಾಗಲೊಲ್ಲನೆಂದೇಕೆ ಪ್ರಸಂಗಿಸುವಿರಿಯೆಂಬುದೀಗ, ಮಾತಿಲ್ಲ ನುಡಿಯಿಲ್ಲ ಯಾತಕ್ಕೆ ಮುನಿವಿರಿಯೆಂಬ ಶಬ್ದಕ್ಕರ್ಥ. ಜ್ಞಾನಾನುಭಾವದ ಪ್ರಸಂಗವ ಮಾಡಿದ ಹಾಂಗೆ ಸತ್ಯವಾಗಿ ಆಚರಿಸಿದರೆ ಪರಶಿವಲಿಂಗದ ಪ್ರಸನ್ನತ್ವವಂದಿಗೆವುಂಟಾಗಿರ್ಪುದೆಂಬುದೀಗ ಮಾತನಾಡಿದರೆ ಕಯ್ಯ ಬೆಳೆಸೆಂಬುದನರಿಯಿರೆ ಅಯ್ಯಾ ಎಂಬ ಶಬ್ದಕ್ಕರ್ಥ. ಶರಣ ಲಿಂಗವೆಂಬ ಭಿನ್ನಶಬ್ದ ನಿಃಶಬ್ದವಾಗದೆ ನಿರ್ಗುಣವಸ್ತುವಿನ ನಿಲುಕಡೆ ದೊರಕೊಳ್ಳದೆಂಬುದೀಗ ಮಾತುಕೆಟ್ಟಲ್ಲದೆ ತಾನಾಗಬಾರದೆಂಬ ಶಬ್ದಕ್ಕರ್ಥ. ನಾಹಂ ಕೋಽಹಂ ಸೋಽಹಂಮೆಂಬ ಭಿನ್ನವಾಕ್ಯದಿಂದ ಆತ್ಮನಿಗೆ ಜನ್ಮಸಂಸಾರದ ಕಟ್ಟು ಹೊರೆಯುಂಟಾಗಿಪ್ಪುದೆಂಬದೀಗ ಮಾತಿಂದ ಬಕ್ಕು ಭವಬಂಧನಘೋರವೆಂಬ ಶಬ್ದಕ್ಕರ್ಥ.

೬೨೭

ಏನನಾದಡೆಯೂ ಸಾಧಿಸಬಹುದು, ಮತ್ತೇನನಾದಡೆಯೂ ಸಾಧಿಸಬಹುದಯ್ಯ. ತಾನಾರೆಂಬುದ ಸಾದೀಸ[1]ಬಾರದು[1], ಕೂಡಲಸಂಗಮದೇವರ ಕರುಣವುಳ್ಳವಂಗಲ್ಲದೆ.

I- -

ಏನನಾದಡೆಯೂ-ಸಕಲವೇದಶಾಸ್ತ್ರಾಗಮಪುರಾಣಂಗಳನಾಯಿತ್ತಾದರೆಯೂ, ಸಾಧಿಸಬಹುದು-ಅಭ್ಯಾಸವ ಮಾಡಿಕೊಳಬಹುದು. ಮತ್ತೇನನಾದಡೆಯೂ-ಯಮನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರಧ್ಯಾರಣಸಮಾಧಿಯೆಂಬ ಅಷ್ಟಾಂಗಯೋಗಂಗಳನಾದರೆಯೂ, ಸಾಧಿಸಬಹುದಯ್ಯ-ಅಭ್ಯಸಿಸಬಹುದಯ್ಯ. ಕೂಡಲಸಂಗಮದೇವರ-ಪರಶಿವಲಿಂಗದ, ಕರುಣವುಳ್ಳವಂಗಲ್ಲದೆ-ಕೃಪೆಯುಂಟಾದಾತಂಗಲ್ಲದೆ, ತಾನಾರೆಂಬುದ ಸಾಧಿಸಬಾರದು-ತಾನಾರು? ತನ್ನ ನಿಜವೇನು? ತಾನೆಲ್ಲ ಶಿವಸ್ವರೂಪನೆಂಬಂಥ ಶಿವಜ್ಞಾನವನ್ನು ಅಭ್ಯಸಿಸೇನೆಂದರೆ ಅಶಕ್ಯವಾಗಿಪ್ಪುದು.

II- -

ಏನನಾದಡೆಯೂ ಸಾಧಿಸಬಹುದು-ಅಷ್ಟಮಹದೈಶ್ವರ್ಯದೊಳಗಾವುದನಾದರೆಯೂ ಸಿದ್ಧಿಯ ಮಾಡಿಕೊಳಬಹುದು. ಮತ್ತೆ-ಮರಳಿ, ಏನನಾದಡೆಯೂ ಸಾಧಿಸಬಹುದು-ಅಷ್ಟಮಹಾಸಿದ್ಧಿಗಳೊಳಗಾವುದನಾದರೆಯೂ ಸಿದ್ಧಿಯ ಮಾಡಿಕೊಳಬಹದು. ತಾನಾರೆಂಬುದ ಸಾಧಿಸಬಾರದು-ತಾನಾರು? ತನ್ನ ಸ್ವರೂಪೇನೆಂಬುದನು ಸಿದ್ಧಿಯ ಮಾಡಿಕೊಳಬಾರದು. ಕೂಡಲಸಂಗಮದೇವರ ಕರುಣವುಳ್ಳವಂಗಲ್ಲದೆ-ಪರಶಿವಲಿಂಗದ ಕೃಪೆಯನುಳ್ಳ ಶರಣಂಗೆ ನಿಜ ಸಿದ್ಧಿಸೂದಲ್ಲದೆ ಜೀವರುಗಳಿಗೆ ಸಿದ್ಧಿ[೧]ಸ[೧]ದೆಂಬುದರ್ಥ.

....

೧–೧ ಪ(ಚ).

III– –

ಷಟ್‌ಕ್ರಿಯೆ ವ್ಯವಹಾರಂಗಳನಾವನಾದರೆಯೂ ಅಭ್ಯಸಿಸಬಹುದು. ಚೌಷಷ್ಟಿಕಲಾವಿದ್ಯೆಗಳೊಳಗಾವುದನಾದೊಡೆಯೂ ಅಭ್ಯಸಿಸಬಹುದು. ಕೂಡಲಸಂಗಮದೇವರ ಕರುಣವುಳ್ಳವಂಗಲ್ಲದೆ –ಪರಶಿವಲಿಂಗದ ಕೃಪಾಪ್ರಸನ್ನತ್ವವ ಹಡೆದಂತಾತನಿಗಲ್ಲದೆ, ತಾನಾರೆಂಬುದ ಸಾಧಿಸಬಾರದು– ನಾನೇ ಪರವಸ್ತುವೆಂಬ ಬ್ರಹ್ಮಜ್ಞಾನವನಭ್ಯಸಿಸಲಶಕ್ಯವಾಗಿರ್ಪುದೆಂಬುದರ್ಥ.

IV– –

1–1 ಬಹುದು (ತ).

....

ಆದಿ ಅಂತ್ಯವಲ್ಲದ ಸಹಜವಾಗಬಾರದು: ಉಳಿದ ವಿದ್ಯೆಗಳೇನಾದರೆಯೂ ಕಲಿಯಬಹುದು. ಮಹಾಲಿಂಗದ ಕರುಣವುಂಟಾದರೆ ಸಹಜವೆಂಬುದೀ ವಚನದರ್ಥ.

V– –

ಷಟ್ಕ್ರಯೆವ್ಯವಹಾರಂಗಳನಾವುದನಾದರೆ ಅಭ್ಯಸಿಸಬಹುದು. ಚೌಷಷ್ಟಿಕಳಾವಿದ್ಯೆಂಗಳನಾವುದನಾದೊಡೆಯೂ ಅಭ್ಯಸಿಸಬಹುದು ಎಂಬುದೀಗ ಏನನಾದರೆಯೂ ಸಾಧಿಸಬಹುದು ಮತ್ತೇನನಾದರೆಯೂ ಸಾಧಿಸಬಹುದು. ನಾನೇ ಪರವಸ್ತುವೆಂಬ ಬ್ರಹ್ಮಜ್ಞಾನವನಭ್ಯಾಸಿಸಲಶಕ್ಯವೆಂಬುದರ್ಥ.

೬೨೮

ಜೀವಾತ್ಮ ಅಂತರಾತ್ಮನ ಸುದ್ದಿಯ ಬೆಸಗೊಂ[1]ಡ[1]ಡೆ ಹೇಳಿಹೆ ಕೇಳಿಭೋ. [2]ಹು[2]ಸಿಯ ಸಂಕಲೆ[3]ಯಾಗಿರ್ದ[3]ಲ್ಲಿ ಕಾಯ್ದುಕೊಂಡಿರ್ದನೊಬ್ಬ; ಕಥೆ[4]ಕನಸುಮಾಡಿ ಹೇಳುತ್ತಿರ್ದನೊಬ್ಬ, ಪರಾಪರಕ್ಕೆ ಹೋಗಿ ಪರಮನ ಸುದ್ದಿಯ ಕೊಂಡು ಬರುತ್ತಿ[5]ರ್ದ[5]ನೊಬ್ಬ[6]. [7]ಅವರ ಮೂವರನು[7] ಕೆಡೆಮೆಟ್ಟಿ ಹೋಹಾಗ ಲೋಕ ನಿ[8]ರ್ಬುದ್ಧಿ[8]ಗೊಂಡಿತು. ಕೂಡಲಸಂಗಮದೇವಾ.

I– –

ಜೀವಾತ್ಮ–ಅಂಗ ಬೇರೆ ಲಿಂಗ ಬೇರೆಂದು ಲಿಂಗಾಂಗವೆರಡಕ್ಕೂ ಭಿನ್ನವಿಟ್ಟು ಕೊಂಡಾರಾಧಿಸುವಂಥ ಸಿದ್ಧಾಂತಿಯು, ಅಂತರಾತ್ಮ–ಸಕಲವೇದ ಶಾಸ್ತ್ರಾಗಮ ಪುರಾಣಂಗಳನು ಕಲಿತುಕೊಂಡು ಶ್ರುತಜ್ಞಾನಬಲದಿಂದ ಅರುಹಿನಿಂದ ನಿರವಯಲಬ್ರಹ್ಮವನ್ನು ಕುರುಹಿಟ್ಟುಕೊಂಡು "ಆತ್ಮಾ ಕೇವಲಃ ಶಿವಃ" ಆತ್ಮನೇ ಬ್ರಹ್ಮವೆಂದು ಹೇಳುವಂಥ ವೇದಾಂತಿಯು, ಸುದ್ದಿಯ–ದ್ವೈತಾದ್ವೈತಿಗಳ

ವರ್ತನೆಯನ್ನು, ಬೆಸಗೊಂಡಡೆ–ಕೇಳಿದರೆ, ಹೇಳಿಹೆ ಕೇಳಿಭೋ–ನಿರೂಪಿಸುವೆನಾಲಿಸಿರೋ. ಹುಸಿಯ ಸಂಕಲೆಂಯಾಗಿರ್ದಲ್ಲಿ–ಸಪ್ತಧಾತುಸಮ್ಮಿಶ್ರವಾದ ದೇಹವನು ಧರಿಸಿಕೊಂಡಿರ್ದಲ್ಲಿ. ಕಾಯ್ದುಕೊಂಡಿರ್ದನೊಬ್ಬ–ಲಿಂಗಾಂಗವೆರಡಕ್ಕೂ ಭಿನ್ನವಿಟ್ಟುಕೊಂಡಾರಾಧಿಸುತ್ತಿರ್ದನು ಓರ್ವನಾದ ಸಿದ್ಧಾಂತಿಯು, ಕಥೆಕನಸುಮಾಡಿ ಹೇಳುತಿರ್ದನೊಬ್ಬ–ಸಕಲವೇದ ಶಾಸ್ತ್ರಾಗಮಪುರಾಣಂಗಳನು ಕಲಿತುಕೊಂಡು ಶ್ರುತಜ್ಞಾನಬಲದಿಂದ ಅರುಹಿನಿಂದ ನಿರವಯಬ್ರಹ್ಮವನ್ನೇ ಕುರುಹಿಟ್ಟುಕೊಂಡು "ಆತ್ಮಾ ಕೇವಲಃ ಶಿವಃ" ಆತ್ಮನೇ ಬ್ರಹ್ಮವೆಂದು ಹೇಳುವಂಥ. ಒಬ್ಬ–ಓರ್ವನಾದ ವೇದಾಂತಿಯು, ಪರಾಪರಕ್ಕೆ ಹೋಗಿ ಪರಮನ ಸುದ್ದಿಯಕೊಂಡು ಬರುತ್ತಿರ್ದನು–ಆಧಾರ ಚಕ್ರಂಗಳಿಗೆ ಉಪರಿಯಾಗಿ ತೋರುವಂಥದೇ ಬ್ರಹ್ಮರಂಧ್ರ. ಆ ಬ್ರಹ್ಮರಂಧ್ರದಲ್ಲಿ ನೆಲೆಗೊಂಡಿರುವಂಥದೆ ನಿಃಕಲಬ್ರಹ್ಮವು. ಆ ನಿಃಕಲಬ್ರಹ್ಮದಲ್ಲಿಗೆ ಶಿವಯೋಗಸಾಧನಸಂಪತ್ತಿನಿಂದ ಎಯ್ದು ಹೋಗಿ ಕೂಡಲ್ಪಟ್ಟಂಥವರುಗಳೇ ನಾವೆಂದು ಹೇಳುತ್ತಿರ್ದನು. ಒಬ್ಬ–ಓರ್ವನಾದ ಭಿನ್ನಯೋಗಾಭ್ಯಾಸಿಯು.

ಅವರ ಮೂವರನು–ದ್ವೈತಾದ್ವೈತ ಭಿನ್ನಯೋಗಾಭ್ಯಾಸಿಗಳೆಂಬ ತ್ರೈವರನು. ಕೆಡೆಮೆಟ್ಟಿ–ಸಚ್ಚರಿತ್ರವೆಂಬ ಚರಣದಿಂದ ಅಧಸ್ಸು ಮಾಡಿ ತುಳಿದು, ಹೋದಾಗ–ಅಂಗ ಪ್ರಾಣಂಗಳಲ್ಲಿ ಇಷ್ಟ ಪ್ರಾಣಲಿಂಗಸಂಬಂಧವ ಮಾಡಿಕೊಂಡಾಚರಿಸುತ್ತ ಲಿಂಗದತ್ತಭಿಮುಖವಾಗಿ ಎಯ್ದು ಹೋಗುವಾಗ, ಲೋಕ–"ಲೋಕಸ್ತು ಭುವನೇ ಜನೇ"ಯೆಂದು ಜಗತ್ತು, ನಿರ್ಬುದ್ಧಿಗೊಂಡಿತ್ತು–ಜ್ಞಾನಬಾಹ್ಯರಾಗಿರ್ಪರು. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

II– –

1–1 ಬ (ಚ,ಟ), 3–3 ಯ ನಿಕ್ಕಿ (ಚ.ಜ). 5–5 ಫ(ಚ.ಜ)7–7 ಅವರಿಬ್ಬರನೂ (ಚ.ಜ). 8–8 ರ್ಭೀತಿ (ಚ.ಜ).

....

ಜೀವಾತ್ಮನಂತರಾತ್ಮನ ಸುದ್ದಿಯ ಬೆಸಗೊಂಬಡೆ ಹೇಳಿಹೆ ಕೇಳಿಭೋ–ಜೀವಾತ್ಮ ಅಂತರಾತ್ಮರುಗಳ ವಾರ್ತೆಯನು ಕೇಳುವರೆ ನಿರೂಪಿಸೇನು ಲಾಲಿಸಿರೋ. ಹುಸಿಯ ಸಂಕಲೆಯನಿಕ್ಕಿದಲ್ಲಿ ಕಾದುಕೊಂಡಿರ್ದನೊಬ್ಬ–ಮಲತ್ರಯಯುಕ್ತವಾದ ಭಿನ್ನಕ್ರೀಯೆಂಬ ಸಂಕೋಲೆಯನುಂಟು ಮಾಡಿದಲ್ಲಿ ಆಶ್ರಯಿಸಿಕೊಂಡಿರ್ಪನೋರ್ವನಾದ ಸಿದ್ಧಾಂತಿಯು. ಕಥೆ ಕನಸಮಾಡಿ ಹೇಳುತ್ತಿದ್ದನೊಬ್ಬ–ಕಾಳಗದ ಕಥೆ ನೀಲಗವಾರ್ತೆಯನು ಸ್ವಪ್ನಗತವಾದ ವಸ್ತುವೆಂದು ಉಸುರುತ್ತಿರ್ದನೊರ್ವನಾದ ವೇದಾಂತಿಯ. ಪರಾಪರಕ್ಕೆ ಹೋಗಿ ಪರಮನ ಸುದ್ದಿಯಕೊಂಡು ಬರುತ್ತಿಪ್ಪನೊಬ್ಬ–ಉತ್ತರೋತ್ತರವಾದ ಬ್ರಹ್ಮರಂಧ್ರಕ್ಕೆಯ್ದಿ ಪರಮಾತ್ಮಸ್ವರೂಪವಾದ ನಿಃಕಲಲಿಂಗದ ವಾರ್ತೆಯನಾಗತವ ಮಾಡಿಕೊಂಡು ಬರುತಿರ್ಪನೋರ್ವನಾದ ಯೋಗಮಾರ್ಗಿಯು, ಅವರಿಬ್ಬರನು ಕಡೆಮೆಟ್ಟಿ ಹೋದಾಗ–ಆ ಸಿದ್ಧಾಂತಿ ವೇದಾಂತಿಗಳೀರ್ವರಾಚರಣೆಯನು ಬೀಳ್ತುಳಿದು ಶಿವಯೋಗಸಂಪತ್ತಿನ ಸಾಧನದಿಂದ ಮೋಕ್ಷದತ್ತೆಯ್ದುವಾಗ, ಲೋಕ ನಿರ್ಭೀತಿಗೊಂಡಿತ್ತು ಕೂಡಲಸಂಗಮದೇವಾ–ಸಕಲಕರಣಂಗಳಿಗಾಶ್ರಯುವಾದ ತನುತ್ರಯುವೆಂಬ ಜಗತ್ತು ನಿರ್ಭಯಗೊಂಡಿತ್ತೆಲೆ ಲಿಂಗವೆ.

III– –

2–2 ಹ (ಟ, ಡ). 4 +ಯ (ಟ, ಡ) 5–6 ಪ್ಪ (ಟ, ಡ) 7–7 ಅವರಿಬ್ಬರನು (ಟ, ಡ)

....

ಆಶಾಜೀವಭಾವವನಳಿಯದೆ ಮಾಯಾಪಾಶವೆಂಬ ಶೃಂಖಲವು ಆತ್ಮನಿಗೆ ತೊಡಕಿರ್ಪಲ್ಲಿಯೆಂಬುದೀಗ ಹಸಿಯ ಸಂಕಲೆಯಾಗಿದ್ದಲ್ಲಿಯೆಂಬ ಶಬ್ದಕ್ಕರ್ಥ. ಬಹಿರಂಗದ ವಿಷಯಪ್ರಪಂಚಿನಲ್ಲಿ ಎಱಿಕವಾಗಿರ್ಪ ವಿಶ್ವಜೀವನೆಂಬುದೀಗ ಕಾದುಕೊಂಡಿರ್ದನೊಬ್ಬನೆಂಬ [೧]ಶಬ್ದಕ್ಕರ್ಥ.[೧] ತೋಱುವ ತೋಱಿಕೆಗಳೆಲ್ಲವನು ಸ್ವಪ್ನ ಕಾಣಿಕೆಯಂತೆ ಮಿಥ್ಯೆವೆಂದು ತಿರಸ್ಕರಿಸಿ ತನ್ನ ಸ್ವರೂಪಾದ ಬ್ರಹ್ಮ[ನಲ್ಲಿ] ತರಹರವಾಗಿರ್ಪನು ಅಂತರಾತ್ಮನೆಂಬುದೀಗ ಕಥೆಯ ಕನಸಮಾಡಿ ಹೇಳುತ್ತಿರ್ದನೊಬ್ಬನೆಂಬ ಶಬ್ದಕ್ಕರ್ಥ. ದ್ವೈತಾದ್ವೈತಗಳ ಭಿನ್ನಕ್ರೀ ಭಿನ್ನಜ್ಞಾನಗಳನು ನಷ್ಟವ ಮಾಡಿ ಸಮರಸಜ್ಞಾದ ಕ್ರೀವಿಡಿದಾಚರಿಸಿ ಲಿಂಗದಲ್ಲಿ ಕೂಡುವ ಶರಣನ ಸಕಲಕರಣಂಗಳು ಪ್ರಕೃತಿವರ್ತನೆಯಳಿದು ಲಿಂಗದಲ್ಲಿ ತರಹರವಾಗಿರ್ಪವೆಂಬುದೀಗ ಅವರಿಬ್ಬರನೂ ಕೆಡೆಮೆಟ್ಟಿ ಹೋಹಾಗ ಲೋಕ ನಿರ್ಬುದ್ಧಿಗೊಂಡಿತ್ತೆಂಬ [೨]ಶಬ್ದಕ್ಕರ್ಥ.[೨]

....

೧–೧ x (ಟ, ಡ). ೨–೨ x (ಡ)

IV– –

1–1 ಬ(ತ) 2–2 ಹ (ತ) 5–5 ಪ್ಪ (ತ) 7–7 ಅವರಿಬ್ಬರನೂ (ತ)

....

ಅಂಗವಿಡಿದಿಪ್ಪುದು ಜೀವ. ಶಬ್ದವಿಡಿದಿಪ್ಪುದು ಪ್ರಾಣ. ಅಱಿವುವಿಡಿದಿಪ್ಪುದು ಪರವು. ಇಂತೀ ಜೀವಾತ್ಮ ಅಂತರಾತ್ಮ ಪರಮಾತ್ಮನಾದ ಅಱಿವು; ಈ ತ್ರಿವಿಧವು ಅಳಿದಲ್ಲದೆ ಐಕ್ಯನಾಗಬಾರದೆಂಬುದೀ ವಚನದರ್ಥ.

V– –

4 + ಯ (ಪ) 7–7 ಇವರಿಬ್ಬರನು (ಪ)

ಆಶಾಜೀವಭಾವವಳಿಯದೆ ಅಬದ್ಧವಾದ ಮಾಯಾಪಾಶವೆಂಬ ಶೃಂಖಲವು ಆತ್ಮನಿಗೆ ತೊಡಕಿರ್ದಲ್ಲಿಯೆಂಬುದೀಗ, ಹುಸಿಯ ಸಂಕಲೆಯಾಗಿರ್ದಲ್ಲಿಯೆಂಬ ಶಬ್ದಕ್ಕರ್ಥ. ಬಹಿರಂಗದ ವಿಷಯಪ್ರಪಂಚಿನಲ್ಲಿಯಧಿಕವಾರ್ಪನೊಬ್ಬ ವಿಶ್ವಜೀವನೆಂಬುದೀಗ ಕಾಯ್ದುಕೊಂಡಿರ್ದನೊಬ್ಬನೆಂಬ ಶಬ್ದಕ್ಕರ್ಥ. ತೋಱುವ ತೋಱಿಕೆಗಳೆಲ್ಲವನು ಸ್ವಪ್ನದ ಕಾಣಿಕೆಯಂತೆ ಮಿಥ್ಯವೆಂದು ತಿರಸ್ಕರಿಸಿ ತನ್ನ ಸ್ವರೂಪವಾದ ಬ್ರಹ್ಮದಲ್ಲಿ ತರಹರವಾಗಿರ್ಪನು ಪರಮಾತ್ಮನೆಂಬುದೀಗ, ಕಥೆಯ ಕನಸಮಾಡಿ ಹೇಳುತ್ತಿರ್ದನೊಬ್ಬನೆಂಬ ಶಬ್ದಕ್ಕರ್ಥ. ದ್ವೈತಾದ್ವೈತಿಗಳ ಭಿನ್ನಕ್ರಿಯೆಗಳ ಭಿನ್ನಜ್ಞಾನ ನಿವೃತ್ತಿ ಮಾಡಿ ಸಮರಸಜ್ಞಾನದಕ್ರೀವಿಡಿದಾಚರಿಸಿ ಪರಾತ್ಪರವಪ್ಪ ಅದ್ವೈತಬ್ರಹ್ಮಲ್ಲಿ ಏಕಾರ್ಥವಾಗಿರ್ಪನು

ಶಿವಶರಣನೆಂಬುದೀಗ, ಪರಾಪರಕ್ಕೆ ಹೋಗಿ ಪರಮ ಸುದ್ದಿಯಕೊಂಡು ಬರುತ್ತಿರ್ದನೊಬ್ಬನೆಂಬ ಶಬ್ದಕ್ಕರ್ಥ. ದ್ವೈತಾದ್ವೈತಗಳ ಭಿನ್ನಜ್ಞಾನನ ಭಿನ್ನಕ್ರಿಯೆಗಳನು ನಷ್ಟವ ಮಾಡಿ ಸಮರಸ ಕ್ರೀವಿಡಿದಾಚರಿಸಿ ಲಿಂಗದಲ್ಲಿ ಕೂಡುವ ಶರಣನ ಸಕಲಕರಣಂಗಳನು ಪ್ರವೃತ್ತಿವರ್ತನೆಯುಳಿದು ತರಹರವಾಗಿರ್ಪನೆಂಬುದೀಗ, ಇವರಿಬ್ಬರನೂ ಕೆಡೆಮೆಟ್ಟಿ ಹೋಹಾಗ ಲೋಕ ನಿರ್ಬುದ್ಧಿಗೊಂಡಿತ್ತೆಂಬ ಶಬ್ದಕ್ಕರ್ಥ.

೯೨೯

ಸಮರತಿ ಸಮಕಳೆ ಸಮಸುಖ [1]ಎಂಬ[1] ಸ್ವಾನುಭಾವ[2] ಹಿರಿದು ಕಿಱಿ[3]ದಾದು[3]ದನಾರೂ ಅಱಿಯರು. ಪಾಷಾಣಪರೀಕ್ಷೆವಂತನಂತೆ ಗುರುವಿಲ್ಲದವರಂತಿರಲಿ, ಕೂಡಲಸಂಗ[4]ಮದೇವ[4]ಯ್ಯಾ ಗುರುವುಳ್ಳವರ ನಿಜವಿಂತುಟು.

ಸಮರತಿ–ಅಂಗದ ರತಿಯೇ ಲಿಂಗದ ರತಿ ಲಿಂಗದ ರತಿಯೇ ಅಂಗದ ರತಿಯು, ಸಮಕಳೆ–ಅಂಗದ ಕಳೆಯೇ ಲಿಂಗದ ಕಳೆ ಲಿಂಗದ ಕಳೆಯೇ ಅಂಗದ ಕಳೆ. ಸಮಸುಖ–ಅಂಗದ ಪರಿಣಾಮವೇ ಲಿಂಗದ ಪರಿಣಾಮವು ಲಿಂಗದ ಪರಿಣಾಮವೇ ಅಂಗದ ಪರಿಣಾಮವು. ಎಂಬ–ಹೀಂಗೆಂದು ಹೇಳುವಂಥ, ಸ್ವಾನುಭಾವ–ಸ್ವಾತ್ಮಜ್ಞಾನವು, ಹಿರಿದು ಕಿಱಿದಾದುದನು–ಬ್ರಹ್ಮವಿಷ್ಣ್ವಾದಿಗಳಿಗೆ ಅಧಿಕವಾದ ಮಹಾಘನಲಿಂಗವೇ ಗುರೂಪದೇಶದಿಂದ ಇಷ್ಟಲಿಂಗವಾಗಿ ಬಂದು ಅಂಗದಲ್ಲಿ ಸಂಬಂಧವಾಗಿರುವಂಥದನು, ಆರೂ ಅಱಿಯರು–ದ್ವೈತಾದ್ವೈತಿ ಭಿನ್ನಯೋಗಾಭ್ಯಾಸಿಗಳೊಳ ಗೊರ್ವರಿಗೆಯೂ ತಿಳಿಯದು. ಪಾಷಾಣಪರೀಕ್ಷೆವಂತನಂತೆ–ನವರತ್ನಂಗಳಿಗೆ ಬೆಲೆಯ ಕಟ್ಟಬೇಕಾದರೆ ಎತ್ತಲಾನುಕಾದರೂ ರಾಜವಾಣಿಜಗೇ ಅರಿಯಬರುವುದಲ್ಲದೆ ಮಿಕ್ಕಿನ ಹುಲ್ಲುವಾಣಿಜರಿಗೆ ಅರಿಯ ಬಂದೀತೆ? ಬರಲರಿಯದು. ಹಾಂಗೆ ಅನರ್ಘ್ಯ ಉತ್ತಮನಾಯಕರತ್ನ ಸ್ವರೂಪವಾದ ಪರಬ್ರಹ್ಮದಲ್ಲಿ ಕೂಡುವಂಥ ಕೂಟವು ಚಿತ್ತಿನ ಚಿದಹಂಕಾರಚಿದ್ಭೂಷಣಸ್ವರೂಪರಾದ ಶಿವಶರಣರಿಗೆ ಅರಿಯಬರುವುದಲ್ಲದೆ ಮಿಕ್ಕಿನ ದ್ವೈತಾದ್ವೈತಿ ಭಿನ್ನಯೋಗಾಭ್ಯಾಸಿಗಳಿಗೆ ಪಾಷಾಣಪರೀಕ್ಷೆವಂತನ ಹಾಂಗೆ ಅವಶ್ಯವಾಗಿರ್ಪುದು. ಗುರುವಿಲ್ಲದವರು–ತನುವಿನಲ್ಲಿ ಗುರುಸಂಬಂಧವ ಮಾಡಿಕೊಂಡು ಗುರುಭಕ್ತಿಯನ್ನು ಮಾಡಿ ಗುರುಕೃಪೆಯನ್ನು ಹಡೆಯದಂತವರು. ಅಂತಿರಲಿ–ಹಾಂಗಿರಲಿ. ಕೂಡಲಸಂಗಮದೇವಯ್ಯಾ–ಎಲೆ ಪರಶಿವಲಿಂಗವೆ, ಗುರುವುಳ್ಳವರ–ತನುವಿನಲ್ಲಿ ಗುರು ಸಂಬಂಧವ ಮಾಡಿಕೊಂಡು ಗುರುಭಕ್ತಿಯನ್ನು ಮಾಡಿ ಗುರುವಿನ ಕೃಪೆಯನ್ನು ಹಡೆದಂಥವರ, ನಿಜವು–ಸ್ವಸ್ವರೂಪವು. ಇಂತುಟು–ಹೀಂಗಿರ್ಪುದು.

II– –

1–1 X (ಚ, ಜ) 2 + ವು (ಚ, ಜ) 3–3 X (ಚ, ಜ)

....

ಸಮರತಿ–ಶರಣನ ಪ್ರೀತಿಯೇ ಲಿಂಗದ ಪ್ರೀತಿ ಲಿಂಗದ ಪ್ರೀತಿಯೇ ಶರಣನ ಪ್ರೀತಿ, ಸಮಕಳೆ–ಶರಣನ ಕಾಂತಿಯೇ ಲಿಂಗದ ಕಾಂತಿ ಲಿಂಗದ ಕಾಂತಿಯೇ ಶರಣನ ಕಾಂತಿ . ಸಮಸುಖ–ಶರಣನ ಸುಖವೇ ಲಿಂಗದ ಸುಖ ಲಿಂಗದ ಸುಖವೇ ಶರಣನ ಸುಖ. ಸ್ವಾನುಭಾವವು– ಶರಣನ ಸ್ವಾತ್ಮಜ್ಞಾನವೇ ಲಿಂಗದ ಸ್ವಾತ್ಮಜ್ಞಾನವು ಲಿಂಗದ ಸ್ವಾತ್ಮಜ್ಞಾನವೇ ಶರಣನ ಸ್ವಾತ್ಮಜ್ಞಾನವು. ಹಿರಿದು ಕಿಱಿದನಾದರೂ ಅಱಿಯರು–ಶರಣನೇ ಹಿರಿದು ಲಿಂಗವೇ ಕಿರಿದು ಲಿಂಗವೇ ಹಿರಿದು ಶರಣನೇ ಕಿರಿದು ಹೀಂಗೆ ಹೆಚ್ಚುಕಡಿಮೆಯಾದುದನು ದ್ವೈತಾದ್ವೈತಿಗಳು ತಿಳಿಯರು. ಪಾಷಾಣಪರೀಕ್ಷೆವಂತನಂತೆ–ಒಂದಾನೊಂದು ರತ್ನವನು ಪರೀಕ್ಷೆದಾರನ ಕೈಯಲಿ ಕೊಟ್ಟರೆ ಇದು ಒಳ್ಳೇರತ್ನ ಹೊಲ್ಲರತ್ನವೆಂದು ನೋಡಿಕೊಡುವನ ಹಾಂಗೆ, ಗುರುವಿಲ್ಲದವರಂತಿರಲಿ–ತ್ರಿವಿಧಷಡ್ವಿಧನವವಿಧಲಿಂಗದಾಚರಣೆಯ ನರುಹಿಕೊಡುವಂಥ ಆಚಾರ್ಯನಾಸ್ತಿಯಾದವರು ಹಾಂಗಿರಲಿ, ಕೂಡಲಸಂಗಮದೇವಯ್ಯ ಗುರುವುಳ್ಳವರ ನಿಜವಿಂತುಟು–ಎಲೆ ಪರಶಿವಲಿಂಗವೆ ಆಚಾರ್ಯನುಂಟಾದವರ ಸ್ವಯಂಪ್ರಕಾಶವು ೧ಹೀಂಗಿದ್ದಹುದು.೧

....

೧–೧ ಹಿಂಗದಹುದು (ಜ).

III– –

1–1 X (ಟ, ಡ). 4–4 X (ಟ, ಡ)

....

ಸಮರತಿ–ಲಿಂಗಾಂಗಸಮಾನತ್ವದ ಕ್ರೀಡೆಯು, ಸಮಕಳೆ–ಲಿಂಗಾಂಗಸಮಾನತ್ವದ ಜ್ಞಾನವು. ಸಮಸುಖ–ಲಿಂಗಾಂಗಸಮಾನತ್ವದ ಭೋಗವು, ಸ್ವಾನುಭಾವ–ಸ್ವಾತ್ಮಜ್ಞಾನಸ್ವರೂಪವಾದ ಪರಬ್ರಹ್ಮವು, ಹಿರಿದು ಕಿಱಿದಾದುದ–ಶರಣ ಲಿಂಗವೆಂದು ಶೇಷ್ಠ ಕನಿಷ್ಠಸ್ವರೂಪಿನಿಂದ ಉಭಯಪ್ರಕಾರವಾದಂಥದನು, ಆರೂ ಅಱಿಯರು–ದ್ವೈತಾದ್ವೈತಹಠಯೋಗಮತಸ್ಥರಾರೂ ತಿಳಿಯರು. ಪಾಷಾಣಪರೀಕ್ಷಕನಂತೆ–ರತ್ನಪರೀಕ್ಷೆಯನು ಬಲ್ಲವನ ಹಾಂಗೆ, ಗುರುವಿಲ್ಲದವರಂತಿರಲಿ–ಗುರೋಪದೇಶದಿಂದಂಗದ ಮೇಲಿಷ್ಟ[1]ಲಿಂಗ[1]ಸಂಬಂಧವುಂಟಾಗದಿರ್ದಂಥವರು ಹಾಂಗಿರಲಿ, ಕೂಡಲಸಂಗಯ್ಯ–ಎಲೆ ಪರಶಿವ ಲಿಂಗವೆ, ಗುರುವುಳ್ಳವರ ನಿಜವು–ಗುರೂಪದೇಶದಿಂದಂಗದ ಮೇಲಿಷ್ಟ ಲಿಂಗಸಂಬಂಧವುಳ್ಳವರ ಲಿಂಗಾಂಗಸಮರಸಜ್ಞಾನ ನಿಲುಕಡೆಯು, ಇಂತುಟು–ಹೀಂಗೆಂಬುದರ್ಥ.

● ರತ್ನ ಪರೀಕ್ಷೆಯುಳ್ಳವನ ಹಾಂಗೆ ಗುರೂಪದೇಶದಿಂದ ಲಿಂಗಾಂಗಸಂಬಂಧದ ಸಮರಸವ ತಿಳಿದ ಶರಣನಿಗೆ ತನ್ನಿಷ್ಟಲಿಂಗದಲ್ಲಿ ಸಮರತಿ ಸಮಕಳೆ ಸಮಸುಖವಲ್ಲದೆ ಷಟ್‌ಸ್ಥಲ ಜ್ಞಾನೋಪದೇಶವಿಲ್ಲದ ಪ್ರಕೃತಿಜೀವರುಗಳಿಗೆ ಸ್ವಾತ್ಮಜ್ಞಾನಸ್ವರೂಪವಾದ ವಸ್ತುವಂಗಲಿಂಗಗಳೆಂದೆರಡಾದ ಭೇದವು ಗೋಚರಿಸದುಯೆಂಬುದೀ[4] ವಚನದ ತಾತ್ಪರ್ಯಾರ್ಥವು.

....

೨-೨ x (ಟ). ೩ + ಗ (ಡ)

IV- -

1-1 x (ತ).

ಅಖಂಡಚಿದಾನಂದಸಮರತಿಕಳಾಪರಿಪೂರ್ಣಸ್ವರೂಪನಾಗಿ ಹೆಚ್ಚು ಕುಂದಿಲ್ಲದೆ ಇರ್ದ ಮಹಾಘನಲಿಂಗವು ತನ್ನ ಸ್ವಭಾವದಿಂದವೆ ತಾನರ್ಚಿಸಿಕೊಂಬ ಲೀಲಾವಿಲಾಸದೋಱ್ ಲಿಂಗ[೪] ಶರಣೆಂಬ ಹಿರಿದು ಕಿರಿದಾಯಿತ್ತು. ಅಂತು ಹಿರಿದು ಕಿಱಿದಾದುದೊಂದೇ ವಸ್ತುವೆಂದು ಶರಣ ತನ್ನ ನಿಜವ ಗುರುಕರುಣದಿಂದಲಱಿದು, ಶರಣನೆಲ್ಲಾ ಲಿಂಗವೆಯೆಂದು, ತನ್ನ ಲಿಂಗಸ್ವರೂಪವ ತಾನೇ ಅರ್ಚಿಸಿಕೊಳ್ಳುತ್ತಿಪ್ಪನು. ಅಂತಪ್ಪ ಶರಣನ ಚಾರಿತ್ರವ ಇತರ ಮಾರ್ಗಿಗಳಾರೂ ಅಱಿಯರು. ಅದು ಹೇಗೆಂದೊಡೆ ರತ್ನಪಾಷಾಣತೇಜದ ಕಾಂತಿಯೆಲ್ಲಾ. ಪಾಷಾಣಗಳಿಗಿಲ್ಲದಂತೆ. ಅಂತಪ್ಪ ರತ್ನ ಪಾಷಾಣಜಾತಿಕಳೆಗಳನಱಿವ ದೃಷ್ಟವಾಳಿಕೆಯು ಒಬ್ಬಂಗಲ್ಲದೆ ಎಲ್ಲರಿಗೆಯೂ ಇಲ್ಲದಂತೆ ಶರಣನ ಜ್ಞಾನಚಾರಿತ್ರವಾರಿಗೆಯೂ ಇಲ್ಲವೆಂಬುದೀ ವಚನದ ತಾತ್ಪರ್ಯಾರ್ಥ.

....

೪ + ವು(ತ).

V- -

1-1 x (ಪ)

....

ರತ್ನ ಪರೀಕ್ಷೆಯುಳ್ಳವನ ಹಾಂಗೆ ಗುರೋಪದೇಶದಿಂದ ಲಿಂಗಾಂಗಸಂಬಂಧದ ಸಮರಸವ ತಿಳಿದ ಶರಣನಿಗೆ ತನ್ನಿಷ್ಟಲಿಂಗದಲ್ಲಿ ಸಮರತಿ ಸಮಕಳೆ ಸಮಸುಖವಲ್ಲದೆ ಷಟ್‌ಸ್ಥಲಜ್ಞಾನೋಪದೇಶವಿಲ್ಲದೆ ಪ್ರಕೃತಿಜೀವರುಗಳಿಗೆ ಲಿಂಗಾಂಗಸಾಮರಸ್ಯದ ಪರಿಣಾಮ ಸ್ವಾತ್ಮಜ್ಞಾನಾನುಭಾವ ದೊರೆಕೊಳ್ಳದೆಂಬುದೀಗ ಸಮರತಿ ಸಮಕಳೆ ಸಮಸುಖ ಸ್ವಾನುಭಾವ ಹಿರಿದು ಕಿಱಿದಾದುದನಾದರೂ ಅಱಿಯರೆಂಬ ಶಬ್ದಕರ್ಥ.

೯೩೦

ಗುರು ಶಿಷ್ಯಸಂಬಂಧವಾದುದಕ್ಕೆ ಇದು ಚಿಹ್ನ. ಹಿಂದ ಬಿಟ್ಟು ಮುಂದೆ ಹಿಡಿಯಲೆ ಬೇಕು. ಕೂಡಲಸಂಗಮದೇವಾ ಕೇಳಯ್ಯ, ಕಿಚ್ಚಿನೊಳಗೆ ಕೋಲು ಬೈಚಿಟ್ಟಂತಿರಬೇಕು.

I- -

ಗುರು ಶಿಷ್ಯ ಸಂಬಂಧವಾದುದಕ್ಕೆ ಚಿದ್ರೂಪವಾದ ಶಿಷ್ಯನು ಸದ್ರೂಪವಾದ ಗುರುವಿನಲ್ಲಿ ಕೂಡಿ ದೀಕ್ಷಾತ್ರಯಂಗಳಿಂದ ಅಂಗಕ್ಕೆ ಲಿಂಗೋಪದೇಶ ಮನಕ್ಕೆ ಮಂತ್ರೋಪದೇಶವನ್ನು ಹಡೆದುದಕ್ಕೆ, ಇದು ಚಿಹ್ನ–ಇದ ಕುರುಹು. ಹಿಂದ ಬಿಟ್ಟು–ಹಿಂದಲ ಜಾತಿವರ್ಣಾಶ್ರಮಕುಲಗೋತ್ರ ನಾಮಾಚಾರಂಗಳನು ನಷ್ಟವಮಾಡಿಬಿಟ್ಟು, ಮುಂದ ಹಿಡಿಯಲೆಬೇಕು–ಮುಂದಾಗಿವಂಥ ನಿಜಮೋಕ್ಷವನ್ನು ದೃಢವಿಡಿಯಲೇಬೇಕು. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಕೇಳಯ್ಯಾ–ಆಲಿಸಯ್ಯಾ. ಕಿಚ್ಚಿನೊಳಗೆ ಕೋಲು ಬೈಚಿಟ್ಟಂತಿರಬೇಕು–ದಂಡವನ್ನು ಅಗ್ನಿಯೊಳಗೆ ಮಡಗಿದರೆ ಹೇಂಗೆ ಸುಟ್ಟು ಬೂದಿಯಾಗುತ್ತಿಹುದೋ ಹಾಂಗೆ ಪರಮಕಾಷ್ಠಸ್ವರೂಪವಾದ ಶರಣನು ಚಿದಗ್ನಿಸ್ವರೂಪವಾದ ಲಿಂಗದಲ್ಲಿ ಕೂಡಿ ಲಿಂಗವೇ ತಾನಾಗಿಪ್ಪನು.

II– –

ಗುರು ಶಿಷ್ಯ ಸಂಬಂಧವಾದುದಕ್ಕೆ ಇದು ಚಿಹ್ನೆ–ಸದ್ರೂಪವಾದ ಗುರುವೆ ಚಿದ್ರೂಪವಾದ ಶಿಷ್ಯನ ಪ್ರಾಣದಲ್ಲಿ ಚಿದ್ರೂಪವಾದ ಶಿಷ್ಯನ ಸದ್ರೂಪವಾದ ಗುರುವಿನಂಗದಲಗಲಿ ಕೂಟಸ್ಥವಾದುದಕ್ಕೆ ಇದು ಕುರುಹು. ಹಿಂದ ಬಿಟ್ಟು ಮುಂದ ಹಿಡಿಯಲೇಬೇಕು–ಮಾರ್ಗಕ್ರೀಯ ವಿಸರ್ಜಿಸಿ ಮೀರಿದ ಕ್ರೀಯನು ಗ್ರಹಿಸಲೇಬೇಕು. ಕೂಡಲಸಂಗಮದೇವ ಕೇಳಯ್ಯಾ–ಎಲೆ ಪರಶಿವಲಿಂಗವೇ ಲಾಲಿಸು ಸ್ವಾಮಿ. ಕಿಚ್ಚಿನೊಳಗೆ ಕೋಲು ಬೈಚಿಟ್ಟಂತಿರಬೇಕು–ಅಗ್ನಿಯಲ್ಲಿ ಕಾಷ್ಠವನು ಮಾಜಿ ಮಡಗಿದ ಹಾಂಗೆ ಮಹಾನುಭಾವ ಗುರುವಿನಲ್ಲಿ ನಿರಹಂಭಾವದಂಡಸ್ವರೂಪವಾದ ಶಿಷ್ಯನೇಕಾರ್ಥವಾಗಿರಬೇಕು.

III– –

[ಗುರು–ಶಿಷ್ಯ ಸಂಬಂಧವಾದುದಕ್ಕೆ] ಅಂಗಲಿಂಗಸಾಮರಸ್ಯದೇಕತ್ವವು ದೊರೆಕೊಂಡುದಕ್ಕೆ, ಮತ್ತುಂ ಸಮ್ಯಜ್ಞಾನಸತ್ಕ್ರಿಯೆಗಳು ಲಿಂಗದಲ್ಲೇಕಾರ್ಥವಾದಂಥದಕ್ಕೆ, ಇದು ಚಿಹ್ನ–ಇದು ಕುರುಹು. ಹಿಂದ ಬಿಟ್ಟು–ತನ್ನ ಪೂರ್ವಾಚಾರದ ಜಾತಿವರ್ಣಾಶ್ರಮಕುಲಗೋತ್ರನಾಮ ೧ಬಂದ೧ ಬಟ್ಟೆ ಮೊದಲಾದವನು ಸಮರಸಕ್ರೀ ಸಮರಸಜ್ಞಾನದಿಂದೆ ತ್ಯಜಿಸಿ, ಮುಂದ ಹಿಡಿಯಲೇಬೇಕು–ಜ್ಞಾನಗುರೋಪದೇಶದಿಂದೆ ದೊರಕೊಂಡ ಷಟ್‌ಸ್ಥಲಜ್ಞಾನಕ್ರೀವಿಡಿದಾಚರಿಸಿ ಲಿಂಗದಲ್ಲೊಡವೆರೆಯಲೇಬೇಕು, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಕೇಳಯ್ಯ–ಲಾಲಿಸಯ್ಯ, ಅಗ್ನಿಯಲ್ಲಿ ಕಟ್ಟಿಗೆಯ ಬೈಚಿಟ್ಟಲ್ಲಿ ಅಗ್ನಿಸ್ವರೂಪವೇ ಆಗಿರುವ ಹಾಂಗೆ ಗುರೂಪದೇಶದಿಂದಂಗದ ಇಷ್ಟಲಿಂಗ ಸಂಬಂಧವಾದ ಬಳಿಕ ಜಾತಿವರ್ಣಾಶ್ರಮವಳಿದು ಸಕಲ ಕ್ರಿಯೆಗಳೆಲ್ಲ ಲಿಂಗಕ್ರಿಯೆಗಳಾಗಾಚರಿಸಿ ಲಿಂಗದಲ್ಲಿ ಭಿನ್ನವಿಲ್ಲದಿರಬೇಕೆಂಬುದೀಗ, ಕಿಚ್ಚಿನೊಳಗೆ ಕೋಲ ಬೈಚಿಟ್ಟಂತಿರಬೇಕು ಎಂಬ ಶಬ್ದಕ್ಕರ್ಥ.

....

೧–೧ ಸಂಬಂಧ (ಡ).

IV– –

ಅಜೆವು ದೇಹೇಂದ್ರಿಯಂಗಳ ಬಿಟ್ಟು ಪರಬ್ರಹ್ಮದಲ್ಲಿ ಕೂಡಬೇಕು, ಗುರುಶಿಷ್ಯ ಸಂಬಂಧವಾದರೆ ಕಿಚ್ಚಿನೊಳಗೆ ಬೆಂದ ಕಟ್ಟಿಗೆ ಕಿಚ್ಚಾದಂತೆ ಮಹಾಘನವೇ ಆಯಿತ್ತೆಂಬುದೀ ವಚನದರ್ಥ.

V– –

ಅಗ್ನಿಯಲ್ಲಿ ಕಟ್ಟಿಗೆಯು ಬಯಿಚಿಟ್ಟಲ್ಲಿ ಅಗ್ನಿಸ್ವರೂಪೆಯಾಗಿರುವ ಹಾಂಗೆ ಗುರೂಪದೇಶದಿಂದಂಗದ ಮೇಲೆ ಇಷ್ಟಲಿಂಗಸಂಬಂಧವಾದ ಬಳಿಕ ಜಾತಿವರ್ಣಾಶ್ರಮವಳಿದು ಸಕಲಕ್ರಿಯೆಗಳೆಲ್ಲ ಲಿಂಗಕ್ರಿಯೆಗಳಾಚರಿಸಿ ಲಿಂಗದಲ್ಲಿ ಭಿನ್ನವಿಲ್ಲದಿರಬೇಕೆಂಬುದೀಗ, ಕಿಚ್ಚಿನೊಳಗೆ[೨] ಕೋಲ ಬೈಚಿಟ್ಟಂತಿರಬೇಕೆಂಬ ಶಬ್ದಕ್ಕರ್ಥ.

....

೨ + ಅರಿ (ಪ).

೯೩೧

ಲಿಂಗವ ಪೂಜಿಸಿ ಫಲವೇನಯ್ಯಾ, ಸಮರತಿ ಸಮಕಳೆ ಸಮಸುಖವನರಿಯದನ್ನಕ್ಕ? ಲಿಂಗವ ಪೂಜಿಸಿ ಫಲವೇನಯ್ಯಾ, ಕೂಡಲಸಂಗಮದೇವರ ಪೂಜಿಸಿ ನದಿಯೊಳಗೆ ನದಿ ಬೆರದಂತಾಗ[1]ದನ್ನಕ್ಕ?

I– –

ಲಿಂಗವ ಪೂಜಿಸಿ ಫಲವೇನಯ್ಯಾ: ಲಿಂಗವ ಪೂಜಿಸಿ–ಗುರುಮುಖದಿಂ ಬಂದ ಇಷ್ಟಮಹಾಲಿಂಗಕ್ಕಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳಿಂದಾರಾಧಿಸಿ. ಫಲವೇನಯ್ಯಾ–ಪ್ರಯೋಜನವೇನಯ್ಯ. ಸಮರತಿ ಸಮಕಳೆ ಸಮಸುಖ[ವನರಿಯದನ್ನಕ್ಕ–] ಅಂಗವು ನಾದಬಿಂದುಕಳಾ ಸ್ವರೂಪವನುಳ್ಳಂಥದು. ಲಿಂಗವು ನಾದಬಿಂದುಕಳಾಸ್ವರೂಪವನುಳ್ಳಂಥದು. ಭಕ್ತಿಯು ನಾದಬಿಂದು ಕಳಾಸ್ವರೂಪವುಳ್ಳಂಥದುಯೆಂಬುವಂಥದನು ತಿಳಿಯಬೇಕು. ತಿಳಿಯದಿರುವ ಪರಿಯಂತರವು, ಲಿಂಗವ ಪೂಜಿಸಿ–ಇಷ್ಟಮಹಾಲಿಂಗವನ್ನು ಅಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳಿಂದಾರಾಧಿಸಿ, ಫಲವೇನಯ್ಯಾ–ಪ್ರಯೋಜನವೇನಯ್ಯಾ, ಕೂಡಲಸಂಗಮದೇವರ–ಇಷ್ಟಮಹಾಲಿಂಗವನ್ನು, ಪೂಜಿಸಿ ಆರಾಧಿಸಿ, ನದಿಯೊಳಗೆ ನದಿ ಬೆರದಂತಾಗದನ್ನಕ್ಕ–ಅತ್ತಲಿಂದೊಂದು ಹೊಳೆ ಇತ್ತಲಿಂದೊಂದು ಹೊಳೆ ಬಂದು ಮಧ್ಯದಲ್ಲಿ ಹೇಂಗೆ ಸಮರಸವಾಗಿ ಹೋಗುತ್ತಿಹುದೋ ಹಾಂಗೆ ಜಲಬುದ್ಬುದಮಯ ಸ್ವರೂಪವಾದ ಶರಣನು ಚಿದಬ್ದಿಸ್ವರೂಪವಾದ ಬ್ರಹ್ಮದಲ್ಲಿ ಕೂಡಿ ಬ್ರಹ್ಮವೇ ತಾನಾಗುತ್ತಿರ್ಪನು.

II– –

ಲಿಂಗವ ಪೂಜಿಸಿ ಫಲವೇನಯ್ಯ–ತ್ರಿಕಾಲ ಪಂಚಕಾಲಂಗಳಲ್ಲಿ ಇಷ್ಟಲಿಂಗವನು ಭಜಿಸಿ ಪ್ರಯೋಜನವೇನು ಸ್ವಾಮಿ, ಸಮರತಿ–ಪ್ರಾಣವು ಅಕಾರಪ್ರಣವದಲ್ಲಿ ಕೂಡುವ ಸರಿಸಾರ ಪ್ರೀತಿಯು, ಸಮಕಳೆ–ಆತ್ಮನು ಮಕಾರಪ್ರಣವದಲ್ಲಿ ಕೂಡುವ ಸರಿಸಾರ ಕಾಂತಿಯು, ಸಮಸುಖವನರಿಯದನ್ನಕ್ಕ–ಅಂಗವು ಉಕಾರಪ್ರಣವದಲ್ಲಿ ಕೂಡುವ ಸರಿಸಾರ ಪ್ರೀತಿಯು.

● ಮತ್ತಂ, ಆ ನಿಃಕಲಬ್ರಹವೇ ಕ್ರಿಯಾಗುರುವಾಗಿ ಬಂದನಲಾ ಎಂದರಿದು ಆ ಗುರುವಿಂಗೆ ಅಂಗಾಪ್ತಸ್ಥಾನಸದ್ಭಾವವೆಂಬ ಚತುರ್ವಿಧ ಭಕ್ತಿಯನು ಮಾಡುವ ಸರಿಸಾರ ಪ್ರೀತಿಯು ಆ ಮಹಾಲಿಂಗವೇ ಇಷ್ಟಲಿಂಗವಾಗಿ ಬಂದಿತೆಂದರಿದು ಆ ಇಷ್ಟಲಿಂಗಕಷ್ಟವಿಧಾರ್ಚಣೆ ಷೋಡಶೋಪಚಾರವ ಮಾಡುವಂಥ ಸರಿಸಾರ ಕಾಂತಿಯು, ಆ ಸದಾಶಿವತತ್ತ್ವವೇ ಜಂಗಮವಾಗಿ ಬಂದನಲಾ ಎಂದರಿದು ಈ ಜಂಗಮಕ್ಕೆ ೧೮ ತೆರೆದ ಭಕ್ತಿಯ ಮಾಡುವಂಥ ಸರಿಸಾರ ಸೌಖ್ಯವನು ತಿಳಿಯದನ್ನಬರ, ಅದಲ್ಲದೆ, ಪ್ರಾಣವು ಪ್ರಾಣಲಿಂಗದಲ್ಲಿ ಕೂಡುವಂಥ ಸರಿಸಾರ ಪ್ರೀತಿಯು. ಅಂಗವು ಇಷ್ಟಲಿಂಗದಲ್ಲಿ ಕೂಡುವಂಥ ಸರಿಸಾರ ಪ್ರೀತಿಯು, ಆತ್ಮನು ಭಾವಲಿಂಗದಲ್ಲಿ ಕೂಡುವಂಥ ಸರಿಸಾರ ಸೌಖ್ಯವನು ತಿಳಿಯದನ್ನಬರ, ಅಂತುಮಲ್ಲದೆ, ಶ್ರೀಗುರುವಿನ ಕರಕಮಲವೆಂಬ ನಿರ್ಯೋನಿಯಲ್ಲಿ ಸಂ೧ಜನ್ಯ೧ವಾಗುವಂಥ ಸರಿಸಾ ಪ್ರೀತಿಯು, ಅಂಗ ಮುಂತಾಗಿ ಬಹ ಸಕಲಪದಾರ್ಥವನು ಲಿಂಗಕ್ಕರ್ಪಿಸಿ ಆ ಲಿಂಗಮುಖದಿಂದೊದಗಿದ ಪ್ರಸಾದವನು ಪಡೆದನುಭವಿಸುವ ಸರಿಸಾರ೨ ಕಾಂತಿಯು, ಪರಶಿವತತ್ತ್ವಸ್ವರೂಪವಾದ ಜಂಗಮದಲ್ಲೇಕಾರ್ಥವಾಗುವಂಥ ಸರಿಸಾರ೨ ಸೌಖ್ಯವನು ತಿಳಿಯದನ್ನಬರ, ಮುಂದಕೆ ಕಾಣಬಂದರ್ಥ.

....

೧–೧ ಜ್ಯ (ಚ). ೨–೨ X (ಜ)

III– –

1–1 ಸಿ (ಟ, ಡ).

ಹೊಳೆಯೊಳಗೆ ಹೊಳೆ ಕೂಡಿ ಭೇದವಿಲ್ಲದಿರುವ ಹಾಂಗೆ ಲಿಂಗದಲ್ಲಿ ಶರಣ ಕೂಡಿ ಭಿನ್ನರಹಿತನಾಗಿರ್ಪನೆಂಬುದೀಗ, ನದಿಯೊಳಗೆ ನದಿ ಬೆರಸಿದನ್ನಕ್ಕಯೆಂಬ ಶಬ್ದಕ್ಕರ್ಥ.

ಐಕ್ಯನ ಐಕ್ಯಸ್ಥಲ

I– –

ಐಕ್ಯನ ಐಕ್ಯಸ್ಥಲ–ಐಕ್ಯಸ್ಥಲದೊಳಗಣ ಐಕ್ಯಸ್ಥಲದಾಚರಣೆಯನ್ನು ನಿರೂಪಿಸುತ್ತಿಹರು.

೯೩೨

ಒಲೆ[1]ಯಡಿ[1]ಯನುರುಹಿದಡೆ ಹೊಗೆ ಗೋಳಕನಾಥನ ಕೊರಳ ಸುತ್ತಿತ್ತು, ಮಹಿತಳನ ಜಡೆ ಸೀಯಿತ್ತು. ಮರೀ[2]ಚಿ[2]ಕನ ಶಿರ ಬೆಂದಿತ್ತು. ರುದ್ರನ ಹಾವುಗೆ ಉರಿಯಿತ್ತು. [3]ದೇವ[3]ಗಣಂಗಳು ನಿವಾ[4]ಟ[4]ವಾದರು. ಮಡದಿಯರೈವರು ಮುಡಿಯ ಹಿಡಿದುಕೊಂಡು ಹೋದರು. ಕೂಡಲಸಂಗಮದೇವ ಭಸ್ಮಧಾರಿಯಾ[5]ದ.[5]

I– –

ಒಲೆ–ಒಲೆಯೆಂದರೆ ತನುತ್ರಯಂಗಳು, ಅಡಿ–ಅಡಿಯೆಂದರೆ ಆ ತನುತ್ರಯಂಗಳಿಗೆ ಮಧ್ಯಸ್ಥವಾಗಿರುವ ಹೃದಯೇಂದ್ರಿಯ, ಆ ಹೃದಯೇಂದ್ರಿಯದಲ್ಲಿ ನೆಲೆಸಿರುವ ಜ್ಞಾನವನು, ಉರುಹಿದಡೆ–ಪ್ರಭಾವಿಸಿದರೆ, ಹೊಗೆ–ಮಹಾಜ್ಞಾನಾಗ್ನಿಯೆಂಬ ಸ್ಫುರಣೆಯು, ಗೋಳಕನಾಥನ ಕೊರಳ ಸುತ್ತಿತ್ತು–ಆತ್ಮನ ದೇಹಭಾವದ ಪ್ರಪಂಚು ನಷ್ಟವ ಮಾಡಿ ಆಚಾರಾಂಗವಾಗಿ ಅಳವಡಿಸಿತ್ತು. ಮಹೀತಳನ–ಜೀವನ, ಜಡೆ–ಅಹಂಕಾರಮಮಕಾರವೆಂಬ ಹೆಣಿಕೆ, ಸೀಯಿತ್ತು–ನಿರಹಂಕಾರ ನಿರ್ಮಮಕಾರವಾಗಿ ಅಳವಡಿಸಿತ್ತು. ಮರೀಚಿಕನ–ಮನಸಿನ, ಶಿರ–ವೃತ್ತಿಯು, ಬೆಂದಿತ್ತು–ಭಿನ್ನಜ್ಞಾನ ನಷ್ಟವಾಗಿ ಅಭಿನ್ನಜ್ಞಾನವಾಗಿ ಅಳವಟ್ಟಿತ್ತು. ರುದ್ರನ–ದುಃಖಾಪಹಾರಿಯಾದ ಶರಣನ, ಹಾವಿಗೆ ಉರಿಯಿತ್ತು–ಭಿನ್ನಜ್ಞಾನ ಭಿನ್ನ ಕ್ರಿಯೆಗಳು ನಷ್ಟವಾಗಿ ಅಭಿನ್ನಜ್ಞಾನ ಅಭಿನ್ನಕ್ರಿಯಾಚಾರವಾಗಿ ಅಳವಟ್ಟಿತ್ತು. ದೇವಗಣಂಗಳು–ಮನ ಮೊದಲಾದ ಸಕಲಕರಣಂಗಳು, ನಿವಾಟವಾದರು–ಲಿಂಗಕರಣಂಗಳಾದವು. ಮಡದಿಯರೈವರು–ಶರಣನ ಅಂಗಸಂಬಂಧವಾದ ಪಂಚಶಕ್ತಿಯರು, ಮುಡಿಯ ಹಿಡಿದುಕೊಂಡು–ಬಹಿರ್ಮುಖವಳಿದು ಅಂತರ್ಮುಖದ ಪಶ್ಚಿಮ ಜ್ಞಾನವನು ದೃಢವಿಡಿದುಕೊಂಡು, ಹೋದರು–ಪಂಚವಿಧ ಲಿಂಗದತ್ತಭಿಮುಖವಾಗಿ ಎಯ್ದು ಹೋದರು. ಕೂಡಲಸಂಗಮದೇವ–ನಿಃಕಲಬ್ರಹ್ಮದೇವನು, ಭಸ್ಮಧಾರಿಯಾದ–ಚಿತ್ತವನ್ನೇ ತನ್ನಂಗವ ಮಾಡಿಕೊಂಡಾಚರಿಸುತ್ತಿಪ್ಪನು.

II– –

1–1 x (ಚ.ಜ), 2–2 ಚ (ಚ, ಜ), 4–4 ತ (ಚ, ಜ).

....

ಒಲೆಯನುರುಹಿದಡೆ–ತನುತ್ರಯಸಂಬಂಧವಾದ ಅವಸ್ಥಾತ್ರಯಂಗಳು ತಾಪತ್ರಯಾಗ್ನಿಯಿಂದುಜ್ವಲಿಸಿದಡೆ, ಹೊಗೆ–ಆಶೆರೋಷವೆಂಬ ಧೂಮವು, ಗೋಳಕನಾಥನ ಕೊರಳಸುತ್ತಿತ್ತು–ತೈಜಸಜೀವನ ನೆನಹೆಂಬ ಕಂಠವನಾವರಿಸಿತ್ತು. ಮಹೀತಳನ ಜಡೆ ¹ಸೀಯಿತ್ತು¹–ವಿಶ್ವಜೀವನ ಸ್ಥೂಲತನುವನು ಸುಟ್ಟಿತ್ತು. ಮರೀಚಕನ ಶಿರ ಬೆಂದಿತ್ತು–ಕಾರಣತನುವಿಗೆ ಕರ್ತೃವಾದ ಪ್ರಾಜ್ಞಜೀವನ ವಿವೇಕವೆಂಬ ಶಿರಸ್ಸು ದಹನವಾಯಿತ್ತು. ರುದ್ರನ ಹಾವುಗೆ ಉರಿಯಿತ್ತು–ತನುತ್ರಯ ಅವಸ್ಥಾತ್ರಯ ತಾಪತ್ರಯ ಆಶೆರೋಷಹರುಷವನು ಪ್ರವೇಷ್ಟಿಸಿಕೊಂಡ ದುಃಖವ ನೋಡಿಸೇನೆಂಬಾತನ ಕ್ರಿಯಾಜ್ಞಾನವೆಂಬ ಪಾವಗೊರಡು ದಹನವಾಯಿತ್ತು. ದೇವಗಣಂಗಳು ನಿವಾತವಾದರು–ಕರಣಗಣಂಗಳು ಲಯವಾದರು. ಮಡದಿಯರೈವರು ಮುಡಿಯ ಹಿಡಿದುಕೊಂಡು ಹೋದರು–ಪಂಚವಿಧಶಕ್ತಿಯರು ಮೂಲಹಂಕಾರವನು ಗ್ರಹಿಸಿಕೊಂಡು ಹೋದರು. ಕೂಡಲಸಂಗಮದೇವ ಭಸ್ಮಧಾರಿಯಾದ–ಪರಶಿವಲಿಂಗವು ಚಿತ್ತಿನ ಮರೆಗೊಂಡಾತನಾದ.

● ಮತ್ತಂ, ತ್ರಿವಿಧಾಂಗದಲ್ಲಿ ತ್ರಿವಿಧಲಿಂಗವ ಸಂಬಂಧವ ಮಾಡಿಕೊಂಡು ಕ್ರಿಯಾಜ್ಞಾನಭಾವಾಚರಣೆವಿಡಿಯದೆಯ್ದಿದರೆ ಮಹಾಜ್ಞಾನವೆಂಬ ಧೂಮವು ತೈಜಸಜೀವನ ನೆನಹೆಂಬ

ಕಂಠವನು ಪ್ರವೇಷ್ಟಿಸಿತ್ತು. ವಿಶ್ವಜೀವನ ಕರ್ಮೇಂದ್ರಿಯಂಗಳೆಂಬ ಜಡೆಯು ದಹನವಾಯಿತ್ತು. ಪ್ರಾಜ್ಞಜೀವನ ವಿವೇಕವೆಂಬ ಶಿರಸ್ಸು ದಗ್ಧವಾಯಿತ್ತು. ಬ್ರಹ್ಮಾಂಡಕ್ಕೆ ಕರ್ತೃವಾದ ಬ್ರಹ್ಮನ ಜನನಮರಣಂಗಳೆಂಬ ಹಾವುಗೆ ಸುಟ್ಟಿತ್ತು. ಸಕಲಕರಣಂಗಳಳಿದು ಲಿಂಗಕರಣಂಗಳಾದವು. ಪಂಚಶಕ್ತಿಯರು ಮೂಲಜ್ಞಾನವನು ಗ್ರಹಿಸಿಕೊಂಡು ನಿವೃತ್ತಿಮಾರ್ಗದತ್ತೆಯ್ದಿದರು. ಪರಶಿವಲಿಂಗವು ಚಿತ್ತಿನಲ್ಲಿ ಏಕಾರ್ಥವಾದನೆಂಬುದರ್ಥ.

....

೧-೧ ದೈಯಿಸಿತ್ತು (ಜ).

III- -

೨-೨ ಚ (ಟ, ಡ).

....

ತ್ರಿಪುಟಿಜ್ಞಾನವನು ಶ್ರುತಿಗುರುಸ್ವಾನುಭಾವಜ್ಞಾನದಿಂದೆ ಪಟುಮಾಡಲು ಜೀವನ ಅದೃಢಕಂಠವನು ಮುಸುಕಿಪ್ಪ ಜೀವನ ಜೀವಭಾವವಳಿದು ಬ್ರಹ್ಮನ ಸೃಷ್ಟಿ ನಷ್ಟವಾಯಿತ್ತೆಂಬುದೀಗ ಒಲೆಯಡಿಯನುರುಹಿದರೆ ಹೊಗೆ ಗೋಳಕನಾಥನ ಕೊರಳ ಸುತ್ತಿತ್ತೆಂಬ ಶಬ್ದಕ್ಕರ್ಥ. ಆ ಪೂರ್ಣಜ್ಞಾನವು ಶರಣನ ಸರ್ವಾಂಗದಲ್ಲಿ ಸಂಬಂಧವಾಗಲು ಅಂತರಾತ್ಮನ ಗುಣವಳಿದು ವಿಷ್ಣುವಿನ ಸ್ಥಿತಿ ನಷ್ಟವಾಯಿತ್ತೆಂಬುದೀಗ ಮಹೀತಳನ ಜಡೆ ಸೀಯಿತ್ತೆಂಬ ²ಶಬ್ದಕ್ಕರ್ಥ.² ಆ ಸ್ವಾತ್ಮಜ್ಞಾನವು ಶರಣನ ಸಕಲಕರಣಂಗಳಲ್ಲಿ ಸಂಬಂಧವಾಗಲು ಪರಮಾತ್ಮನ ಚಿದಹಂಕಾರ ನಿವೃತ್ತಿಯಾಗಿ ರುದ್ರನ ಲಯವು ನಷ್ಟವಾಯಿತ್ತೆಂಬುದೀಗ, ಮರೀಚಕನ ಶಿರ ಬೆಂದಿತ್ತೆಂಬ ²ಶಬ್ದಕ್ಕರ್ಥ². ಆ ಪೂರ್ಣಜ್ಞಾನವು ಸರ್ವಾಂಗದಲ್ಲಳವಟ್ಟ ಶರಣನಿಗೆ ನಾನು ಬ್ರಹ್ಮಸ್ವರೂಪನಹುದೊ ಅಲ್ಲವೊ ಎಂಬ ಸಂಕಲ್ಪವಿಕಲ್ಪಜ್ಞಾನವು ಜ್ಞಾನಾಗ್ನಿಯಿಂದ ದಹನವಾಗಿ ಲಿಂಗದಲ್ಲಿ ನಿಷ್ಪತ್ತಿಯಾಯಿತ್ತೆಂಬುದೀಗ, ರುದ್ರನ ಹಾವುಗೆ ಉರಿಯಿತ್ತೆಂಬ ²ಶಬ್ದಕ್ಕರ್ಥ.² ಶರಣನ ಸರ್ವೇಂದ್ರಿಯಂಗಳು ಲಿಂಗದಲ್ಲೇಕಾರ್ಥವಾದವೆಂಬುದೀಗ, ದೇವಗಣಂಗಳು ನಿವಾಟವಾದರೆಂಬ ²ಶಬ್ದಕ್ಕರ್ಥ.² ಪಂಚ ಲಿಂಗಂಗಳಂಗವಾದ ಪಂಚಶಕ್ತಿಯರು ತಮಗೆ ಕರ್ತೃವಾದ ಲಿಂಗಗಳಲ್ಲೇಕಾರ್ಥವಾದರೆಂಬುದೀಗ ಮಡದಿಯರೈವರು ಮುಡಿಯ ಹಿಡಿದುಕೊಂಡು ಹೋದರೆಂಬ ಶಬ್ದಕ್ಕರ್ಥ. ಶರಣನ ಸರ್ವಾಚಾರಸಂಪತ್ತಿನಾಚರಣೆಯು ಲಿಂಗದಲ್ಲಿ ನಿಷ್ಪತ್ತಿಯಾದಲ್ಲಿ ಶರಣ ಲಿಂಗವೆಂಬ ಭೇದವಿಲ್ಲದೆ ಅವಿರಳವಾಗಿ ನೆಲಸಿದನೆಂಬುದೀಗ, ಕೂಡಲಸಂಗಮದೇವ ಭಸ್ಮಧಾರಿಯಾದನೆಂಬ ಶಬ್ದಕ್ಕರ್ಥ.

....

೨-೨ x (ಡ)

IV- -

2-2 ಚ (ತ), 3-3 ರುದ್ರ (ತ), 5-5 ದೆಯ್ಯೆ (ತ).

ಒಲೆಯೆಂದರೆ ತನುತ್ರಯಂಗಳು. ಅಂತಪ್ಪ ತನುತ್ರಯಂಗಳಿಗೆ ಚೈತನ್ಯಾಧಾರವಾಗಿ ಹೃದಯದಲ್ಲಿಪ್ಪ ಚಿದಗ್ನಿಯನು ಸ್ವಾನುಭಾವಬೋಧೆಯಿಂದ ಪ್ರಭಾವಿಸಿದ ಶರಣನೆಂಬುದೀಗ, ಒಲೆಯಡಿಯನುರುಹಿದರೆಯೆಂಬ ಶಬ್ದಕ್ಕರ್ಥ. ಅಂತು ಪ್ರಭಾವಿಸಿದ ಚಿದಗ್ನಿಯ ತೇಜಸ್ಫುರಣೆ ಶರಣನ ಸರ್ವಾಂಗವನವಗ್ರಹಿಸಲು ಗೋಳಕನಾಥನೆಂಬ ದೇಹಕ್ಕೆ ಕಂಟಕವಾಗಿ ದೇಹವಾಸನೆಯಳಿಯಿತ್ತೆಂಬುದೀಗ ಹೊಗೆ ಗೋಳಕನಾಥನ ಕೊರಳ ಸುತ್ತಿತ್ತೆಂಬ ಶಬ್ದಕ್ಕರ್ಥ ಮಹೀತಳನೆಂದರೆ ದೇಹವ ತಾಳಿರ್ದ ಜೀವನು, ಜಡೆಯೆಂದರೆ ದೇಹೋಹಂ ಭಾವ. ಅಂತು ಜೀವನ ದೇಹೋಹಂ ಭಾವ ನಾಶವಾಯಿತ್ತೆಂಬುದೀಗ, ಮಹೀತಳನ ಜಡೆ ಸೀಯಿತ್ತುಯೆಂಬ ಶಬ್ದಕ್ಕರ್ಥ, ಮರೀಚಕನೆಂದರೆ ಮನಸ್ಸು. ಅಂತಪ್ಪ ಮನದ ದುರ್ವಿವೇಕವೆಂಬ ಶಿರಸ್ಸು ಹೋಯಿತ್ತೆಂಬುದೀಗ ಮರೀಚಕನ ಶಿರ ಬೆಂದಿತ್ತು [ಎಂಬ] ಶಬ್ದಕ್ಕರ್ಥ. ರುದ್ರನೆಂದಡೆ ಲಿಂಗವು. ಆ ರುದ್ರನ ಹಾವುಗೆಯೆಂದರೆ ಲಿಂಗವ ಭಿನ್ನವಿಟ್ಟು ಆಚರಿಸುವ ಭಿನ್ನಕ್ರಿಯಾ ಜ್ಞಾನಂಗಳು. ಅಂತಪ್ಪ ಭಿನ್ನಕ್ರಿಯಾಜ್ಞಾನಂಗಳಳಿದು ಅಖಂಡ ಜ್ಞಾನಪ್ರಕಾಶವಾಗಿ ಲಿಂಗದಲ್ಲಿ ಭಿನ್ನವಳಿದ ಶರಣನೆಂಬುದೀಗ ರುದ್ರನ ಹಾವುಗೆ ಉರಿಯಿತ್ತೆಂಬ ಶಬ್ದಕ್ಕರ್ಥ. ಅಂತು ಸರ್ವಾಂಗವೆಲ್ಲ ಅಖಂಡಚಿತ್ಪ್ರಕಾಶಲಿಂಗವೇ ಆದ ಶರಣನ ಅಂಗದ ಕರಣಂಗಳೆಲ್ಲವೂ ಲಿಂಗವೇಯಾದವೆಂಬುದೀಗ, ರುದ್ರಗಣಂಗಳು ನಿವಾಟವಾದರುಯೆಂಬ ಶಬ್ದಕ್ಕರ್ಥ. ಅಂತಪ್ಪ ಶರಣನ ಅಂಗದ ಷಡ್ವಿಧಶಕ್ತಿಯರೆಲ್ಲರೂ ಬಹಿರ್ಮುಖವನಳಿದು ಅಂತರ್ಮುಖವಾದುದೀಗ ಪಶ್ಚಿಮಮುಖ. ಅಂತಪ್ಪ ಪಶ್ಚಿಮಮುಖವಪ್ಪ ಅಂತರಂಗದ ಅಭಿನ್ನಜ್ಞಾನವಿಡಿದು ಶಿವತತ್ತ್ವವನೈದಿದರೆಂಬುದೀಗ, ಮಡದಿಯರೈವರು ಮುಡಿಯ ಹಿಡಿದುಕೊಂಡು ಹೋದರುಯೆಂಬ ಶಬ್ದಕ್ಕರ್ಥ. ಅಂತು ಶರಣನೆಲ್ಲಾ ಅಖಂಡಚಿತ್ಪ್ರಕಾಶಲಿಂಗವೇ ಯಾಗಿರ್ದನೆಂಬುದೀಗ, ಭಸ್ಮಧಾರಿಯಾದೆಯ್ಯೆ ಕೂಡಲಸಂಗಮದೇವ ಎಂಬ ಶಬ್ದಕ್ಕರ್ಥ.

V– –

2–2 ಚ (ಪ).

....

ತ್ರಿಪುಟಿಜ್ಞಾನವನು ಶ್ರುತಗುರುಸ್ವಾನುಭಾವಜ್ಞಾನದಿಂದ ಪಟುಮಾಡಲು ಜೀವನ ಅದೃಢಕಂಠವನು ಮುಸುಕಲು ಜೀವಭಾವವಳಿದು ಬ್ರಹ್ಮನ ಸೃಷ್ಟಿ ನಷ್ಟವಾಯಿತ್ತೆಂಬುದೀಗ ಒಲೆಯಡಿಯನುರುಹಿದರೆ ಹೊಗೆ ಗೋಳಕನಾಥನ ಕೊರಳ ಸುತ್ತಿತ್ತುಯೆಂಬ ಶಬ್ದಕ್ಕರ್ಥ. ಆ ಪೂರ್ಣಜ್ಞಾನವು ಶರಣನ ಸರ್ವಾಂಗದಲ್ಲಿ ಸಂಬಂಧವಾಗಲು ಅಂತರಾತ್ಮನಷ್ಟಪಾಶಗುಣವಳಿದು ವಿಷ್ಣುವಿನ ಸ್ಥಿತಿ ನಷ್ಟವಾಯಿತ್ತೆಂಬುದೀಗ, ಮಹೀತಳನ ಜಡೆ ಸೀಯೆತ್ತೆಂಬ ಶಬ್ದಕ್ಕರ್ಥ. ಆ ಸ್ವಾತ್ಮಜ್ಞಾನವು ಶರಣನ ಸಕಲಕರಣಂಗಳಲ್ಲಿ ಸಂಬಂಧವಾಗಲು ಪರಮಾತ್ಮನ[3] ಚಿದಹಂಕಾರ ನಿವೃತ್ತಿಯಾಗಿ ರುದ್ರನ ಲಯ ನಷ್ಟವಾಯಿತ್ತೆಂಬುದೀಗ ಮರೀಚಕನ ಶಿರ ಬೆಂದಿತ್ತೆಂಬ ಶಬ್ದಕ್ಕರ್ಥ. ಆ ಪೂರ್ಣಜ್ಞಾನವು ಸರ್ವಾಂಗದಲ್ಲಿ ಅಳವಟ್ಟ ಶರಣನಿಗೆ ನಾನು ಬ್ರಹ್ಮವಹುದೋ ಅಲ್ಲವೋಯೆಂಬ ಸಂಕಲ್ಪವಿಕಲ್ಪಜ್ಞಾನವು ಜ್ಞಾನಾಗ್ನಿಯಿಂದ ದಹನವಾಗಿ ಲಿಂಗದಲ್ಲಿ ನಃಪತಿಯಾಯಿತ್ತೆಂಬುದೀಗ, ರುದ್ರನ ಹಾವುಗೆ ಉರಿಯಿತ್ತೆಂಬ ಶಬ್ದಕ್ಕರ್ಥ. ಶರಣನ ಸರ್ವೇಂದ್ರಿಯಂಗಳು ಲಿಂಗದಲ್ಲೇಕಾರ್ಥವಾದವೆಂಬುದೀಗ ದೇವಗಣಂಗಳು ನಿವಾಟವಾದರೆಂಬ ಶಬ್ದಕ್ಕರ್ಥ. ಪಂಚಲಿಂಗಂಗಳಿಗಂಗವಾದ ಪಂಚಶಕ್ತಿಯರು ತಮಗೇಕಾರ್ಥವಾದ

ಲಿಂಗಂಗಳಲ್ಲಿ ಏಕಾರ್ಥವಾದರೆಂಬುದೀಗ ಮಡದಿಯರೈವರು ಮುಡಿಯ ಹಿಡಿದುಕೊಂಡು ಹೋದರೆಂಬ ಶಬ್ದಕ್ಕರ್ಥ. ಶರಣನ ಸರ್ವಾಚಾರಸಂಪತ್ತಿನಾಚರಣೆಯು ಲಿಂಗದಲ್ಲಿ ನಿಃಪತಿಯಾದಲ್ಲಿ ಶರಣ ಲಿಂಗವೆಂಬ ಭೇದವಿಲ್ಲದೆ ಸಮ್ಯಜ್ಞಾನ ಭಸ್ಮವನು ಧರಿಸಿದನು.

....

೩+ ಲಯ(ಪ).

೯೩೩

ಆ ಭಸ್ಮ ತಾಗಿ ಬ್ರಹ್ಮ ತನ್ನ ಕಪಾಲವ ಹಿಡಿದನು; ಗಣನಾಥನ ಐವತ್ತೆರಡು ಸರ ಹಜೆದು ಬಿದ್ದವು. ಆ ಭಸ್ಮ ತಾಗಿ ಅಂಡಜಮುಗ್ಧೆಯ ಮೂಱು ಮೊಲೆ ಹಜೆದು ಬಿದ್ದವು. ನಾದಪ್ರಿಯ ನಂದಿಯನೇಱಿಕೊಂಡು ಅತೀತನ ಮೇಲೆ ಆನಂದ ಸಿಂಹಾಸನವನಿಕ್ಕಿ ಕುಳಿತು, ಕೂಡಲಸಂಗಮದೇವರ ದೇವತ್ವ ಕೆಟ್ಟಿತ್ತು.

I– –

ಆ ಭಸ್ಮತಾಗಿ–ನಿಃಕಲಬ್ರಹ್ಮಕ್ಕಂಗವಾಗಿರ್ದ ಚಿತ್ತೇ ಅಂತರಂಗದಲ್ಲಿ ಜ್ಞಾನೋದಯವಾಗಿ, ಬ್ರಹ್ಮ–ಜರಾಮರಣವಿವರ್ಜಿತನಾದ ಶರಣನು, ತನ್ನ ಕಪಾಲವ ಹಿಡಿದನು–ಶುದ್ಧಜ್ಞಪ್ತಿಸ್ವರೂಪವಾದ ಇಷ್ಟಲಿಂಗವನ್ನು ಅಂಗದಲ್ಲಿ ದೃಢವಿಡಿದುಕೊಂಡನು. ಗಣನಾಥನ–ಜೀವನ, ಐವತ್ತೆರಡು ಸರ ಹಜೆದುಬಿದ್ದವು–ಐವತ್ತೆರಡು ದಳಪ್ರಕೃತಿಯೊಡನೆ ಕೂಡಿ ಚರಿಸಲ್ಪಟ್ಟ ಜೀವನ ವರ್ತನೆ ನಷ್ಟವಾಗಿ ಸಜೀವಸ್ವರೂಪವಾಗಿ ಆ ದಳಗಳೆಲ್ಲ ಲಿಂಗಕ್ಕೆ ಪೂಜೋಪಕರಣಂಗಳಾಗಿ ಅಳವಡಿಸಿಕೊಂಡಿರ್ಪನು. ಆ ಭಸ್ಮತಾಗಿ–ಆ ನಿಃಕಲಬ್ರಹ್ಮಕ್ಕಂಗವಾದ ಚಿತ್ತೇ ಅಂತರಂಗದಲ್ಲಿ ಜ್ಞಾನೋದಯವಾಗಿ, ಅಂಡ–ಚಿದ್ಬ್ರಹ್ಮಾಂಡ ಅಲ್ಲಿ, ಜ–ಹುಟ್ಟಲ್ಪಟ್ಟಂಥದೆ ಪ್ರಪಂಚ, ಬ್ರಹ್ಮಾಂಡ. ಆ ಪ್ರಪಂಚಬ್ರಹ್ಮಾಂಡದಲ್ಲಿ ಹುಟ್ಟಲ್ಪಟ್ಟಾಯಕಳೆ ಮಾಯಾಶಕ್ತಿ, ಆ ಮಾಯಾಶಕ್ತಿಯೆಂಬ, ಮುಗ್ಧೆಯ ಮೂಱು ಮೊಲೆ ಹಜೆದು ಬಿದ್ದವು–ಸಂಸಾರವಿಷಯಜಲವನ್ನು ತುಂಬಿಕೊಂಡಿರುವ ಮೂರು ಮೊಲೆ; ಹೊನ್ನು ಹೆಣ್ಣು ಮಣ್ಣೆಂಬ ಮೂರುಸ್ತನಂಗಳು–ಹರಿದು ನಷ್ಟವಾಗಿಪ್ಪವು. ನಾದ–ಸಾಮವೇದಾದಿಗಾನಂಗಳಲ್ಲಿ, ಪ್ರಿಯ–ಪ್ರೀತಿಯುಳ್ಳಂಥ ಸದಾಶಿವ ಮೂರ್ತಿಯು, ನಂದಿಯನೇಱಿಕೊಂಡು ಮನಸ್ಸಿನ ಜ್ಞಾನದಲ್ಲಿ ಪ್ರಾಣಲಿಂಗವಾಗಿ ನೆಲೆಗೊಂಡು, ಅತೀತನ ಮೇಲೆ–ಆತ್ಮಾಂಗದ ಮೇಲೆ, ಆನಂದಸಿಂಹಾಸನವನಿಕ್ಕಿ–ಮಹಾಜ್ಞಾನವೆಂಬ ಪ್ರಣವ ಪೀಠವ ನಿರ್ಮಿತನ ಮಾಡಿ, ಏರಿ–ಆರೋಹಣವಾಗಿ, ಕುಳಿತು–ಭಾವಲಿಂಗವಾಗಿ ಮೂರ್ತವ ಮಾಡಿಕೊಂಡು, ಕೂಡಲಸಂಗಮದೇವರ–ಇಷ್ಟಮಹಾಲಿಂಗದ, ದೇವತ್ವ ಕೆಟ್ಟಿತ್ತು–ಬಹಿರಂಗದಲ್ಲಿ ಕರ್ತೃಭಾವದಿಂದ ಪೂಜಾಕ್ರಿಯೆಗಳನು ಕೈಕೊಂಬುವಂಥದು ನಷ್ಟವಾಗಿ ಹೋಗಿ ಆ ಚಿತ್ತವನ್ನೇ ಅಂಗವ ಮಾಡಿಕೊಂಡಿರ್ಪರು.

II– –

ಆ ಭಸ್ಮ ತಾಗಿ ಬ್ರಹ್ಮ ತನ್ನ ಕಪಾಲವಿಡಿದನು–ಪೂರ್ವಸ್ಮರಣೆಯ ಮಹಾಜ್ಞಾನ ಭಸಿತವು ತಗಲಿ, ಬ್ರಹ್ಮತತ್ವಾಂಸಿಭೂತವಾದಂಥ ವಿಶ್ವಜೀವನು, ಶುದ್ಧಜ್ಞಪ್ತಿಸ್ವರೂಪವಾದಿಷ್ಟಲಿಂಗವೆಂಬ ಪಾತ್ರೆಯನು ಗ್ರಹಿಸಿದನು, ಗಣನಾಥನ ಐವತ್ತೆರಡು ಸರ ಹಜೆದು ಬಿದ್ದವು–ಇಂದ್ರಿಯಂಗಳಿಗೆ ಕರ್ತೃವಾದ ತೈಜಸಜೀವನ ೫೨ ದಳಕುಳ ಅಕ್ಷರವರ್ಣಾಧಿದೇವತೆಗಳೆಲ್ಲವು ನಿಷ್ಪತ್ತಿಯಾದವು. ಆ ಭಸ್ಮತಾಗಿ–ಪೂರ್ವಸ್ಮರಣೆಯ ಚಿದ್ಭಸಿತವು ತಗಲಿ, ಅಂಡಜ ಮುಗ್ಧೆಯ ಮೂಱು ಮೊಲೆ ಹಜೆದು ಬಿದ್ದವು–ಬ್ರಹ್ಮಾಂಡದಲ್ಲಿ ಹುಟ್ಟಿ ಮೌಢ್ಯಳಾದ ಮಾಯಾಶಕ್ತಿಯ ಮಲತ್ರಯಂಗಳೆಂಬ ಸ್ತನವು ನಷ್ಟವಾದವು. ಅದಲ್ಲದೆ ಬ್ರಹ್ಮಾಂಡಕ್ಕೆ ಕರ್ತೃವಾದಂಥ ಶರಣನು ಶುದ್ಧಜ್ಞಪ್ತಿಸ್ವರೂಪವಾದ ಇಷ್ಟಲಿಂಗವೆಂಬ ಪಾತ್ರೆಯನು ಗ್ರಹಿಸಿದನು. ಸಕಲಕರಣಂಗಳಿಗೆ ಕರ್ತೃವಾದ ಪ್ರಾಣಲಿಂಗದೇವನ ೫೨ ದಳಕುಳ ಅಕ್ಷರವರ್ಣಾದಿ ದೇವತೆಗಳೆಲ್ಲವು ೫೨ ಮಂತ್ರಲಿಂಗಸ್ವರೂಪವಾದವು. ಆತ್ಮನಲ್ಲಿ ಹುಟ್ಟಿ ಶಬ್ದಮುಗ್ಧವನುಳ್ಳ ಚಿಚ್ಛಕ್ತಿಯ ಕ್ರಿಯಾಜ್ಞಾನಭಾವಾಚರಣೆಯೆಂಬ ಸ್ತನಂಗಳು ನಿಷ್ಪತ್ತಿಯಾದವು. ನಾದಪ್ರಿಯ ನಂದಿಯನೇಜೆಕೊಂಡು–ಪ್ರಣವಘೋಷದಲ್ಲಿ ಪ್ರೀತಿಯನುಳ್ಳಂಥ ಪ್ರಾಣಲಿಂಗವು ಸದ್ಧರ್ಮವನಡರಿಕೊಂಡು, ಅತೀತನ ಮೇಲೆ–ಆತ್ಮನ ಮೇಲೆ, ಆನಂದಸಿಂಹಾಸನವನಕ್ಕಿ ಕುಳಿತು–ಮಹಾಜ್ಞಾನಾಹ್ಲಾದವೆಂಬ ಸಿಂಹವಿಷ್ಟರವನು ಹಾಕಿ ಭಾವಲಿಂಗವಾಗಿ ಮೂರ್ತಮಾಡಿಕೊಂಡು, ಕೂಡಲಸಂಗಮದೇವರ ದೇವತ್ವ ಕೆಟ್ಟಿತ್ತು–ಪರಶಿವಲಿಂಗದೊಡೆತನವಳಿಯಿತ್ತೆಂಬುದರ್ಥ. ಅದಲ್ಲದೆ ಮಹಾಲಿಂಗ ಬೇರೆ ತಾ ಬೇರೆಂಬ ಭಿನ್ನವಳಿಯಿತ್ತು.

III– –

[೧]ಆ[೧] ಪೂರ್ಣಜ್ಞಾನವು ಶರಣನ ಸರ್ವಾಂಗವ ಮುಸುಕಲಾಗಿ ಬ್ರಹ್ಮನ ಸೃಷ್ಟಿಯಳಿದು ಶ್ರೀಗುರುದೇವನ ಕರುಣೋಪದೇಶದಿಂದಂಗದಲ್ಲಿ ಸಂಬಂಧವಾದಿಷ್ಟಲಿಂಗದಲ್ಲಿ ಶರಣನಡಗಿರ್ಪನೆಂಬುದೀಗ, ಆ ಭಸ್ಮತಾಗಿ ಬ್ರಹ್ಮ ತನ್ನ ಕಪಾಲವಿಡಿದನೆಂಬ ಶಬ್ದಕ್ಕರ್ಥ. ಅ ಪರಿಪೂರ್ಣಜ್ಞಾನವಳವಡಲಾಗಿ ಆತ್ಮನ ಐವತ್ತೆರಡು ಜೀವನಾಕ್ಷರದ ವರ್ತನೆ ನಿವೃತ್ತಿಯಾಗಿ ಐವತ್ತೆರಡು ಮಂತ್ರಲಿಂಗಸ್ವರೂಪವಾಗಿರ್ಪುವೆಂಬುದೀಗ, ಗಣನಾಥನ ಐವತ್ತೆರಡು ಸರ ಹರಿದು ಬಿದ್ದವೆಂಬ [೨]ಶಬ್ದಕ್ಕರ್ಥ.[೨] [೩]ಆ[೩]ಪರಿಪೂರ್ಣಜ್ಞಾನವು ಶರಣನಂತರಂಗಲ್ಲಿ ಪರಿಪೂರ್ಣವಾಗಲಾಗಿ ಮಾಯಾಸಂಬಂಧವಾದ ಶರೀರತ್ರಯದ ಸೃಷ್ಟಿಸ್ಥಿತಿಸಂಹಾರವು ನಷ್ಟವಾಗಿ ಲಿಂಗದಲ್ಲೇಕತ್ವ ಉಂಟಾಗಿರ್ಪುದೆಂಬುದೀಗ, ಆ ಭಸ್ಮತಾಗಿ ಅಂಡಜಮುಗ್ಧೆಯ ಮೂಱು ಮೊಲೆ ಹಜೆದು ಬಿದ್ದವೆಂಬ [೨]ಶಬ್ದಕ್ಕರ್ಥ[೨] ನಾದಪ್ರಿಯನಾದ ಪರಶಿವನು ಸಕಲತತ್ತ್ವೋತ್ತೀರ್ಣವಾದ ಪ್ರಣವ ಗದ್ದುಗೆಯ ಅವಿರಳಾನಂದವೆಂಬಾಸನದಲ್ಲಿ ನಿಜಾನಂದದಿಂದೆ ಕುಳಿತಲ್ಲಿ ಜಗತ್ತಿನ ಲೀಲಾವ್ಯವಹಾರವು ನಷ್ಟವಾಗಿರ್ಪುದೆಂಬುದೀಗ, ನಾದಪ್ರಿಯ ನಂದಿಯನೇಜೆಕೊಂಡು ಅತೀತನ ಮೇಲೆ ಆನಂದಸಿಂಹಾಸನವಿಕ್ಕಿ [೪]ಕುಳಿತ[೪] ಕೂಡಲಸಂಗಮದೇವರ ದೇವತ್ವ ಕೆಟ್ಟಿತ್ತೆಂಬ [೨]ಶಬ್ದಕ್ಕರ್ಥ.[೨]

೧–೧ x (ಡ), ೨–೨ x (ಡ), ೩–೩ ಆ (ಟ), ೪–೪ ಕುಳ್ಳಿತ್ತು (ಟ)

IV– –

ಆ ಮಹಾಬೆಳಗಾದ ಜ್ಞಾನವಾಗಲು ದೇಹವು ನಾನೆಂಬುದಳಿಯಿತ್ತು. ಐವತ್ತೆರಡಕ್ಷರಂಗಳೆಂಬ ಶಬ್ದಂಗಳಡಗಿದವು. ಸತ್ತುಚಿತ್ತಾನಂದವೆಂಬ ತ್ರಿಶಕ್ತಿಗಳಡಗಿದವು. ಶಬ್ದಂಗಳಿಂದ ಪ್ರಮಾಣಿಸಿಕೊಂಬ ಶಿವನು ನಿಃಶಬ್ದಬ್ರಹ್ಮವಾಯಿತ್ತು. ನಿಃಶಬ್ದಬ್ರಹ್ಮವಾಗಲೊಡನೆ ನಾನೀನೆಂಬುಭಯವಡಗಿತ್ತೆಂಬುದೀ ವಚನದರ್ಥ.

V- -

ಆ ಪೂರ್ಣಜ್ಞಾನವು ಶರಣನ ಸರ್ವಾಂಗವ ಮುಸುಕಲಾಗಿ ಬ್ರಹ್ಮನ ಸೃಷ್ಟಿಯಳಿದು ಶ್ರೀಗುರುಕರುಣೋಪದೇಶದಿಂದಂಗದಲ್ಲಿ ಸಂಬಂಧವಾದಿಷ್ಟ ಲಿಂಗದಲ್ಲಿ ಶರಣನಡಗಿರ್ಪನೆಂಬುದೀಗ ಆ ಭಸ್ಮತಾಗಿ ಬ್ರಹ್ಮ ತನ್ನ ಕಪಾಲವ ಪಿಡಿದನೆಂಬ ಶಬ್ದಕ್ಕರ್ಥ. ಆ ಪರಿಪೂರ್ಣಜ್ಞಾನವಳವಡಲಾಗಿ ಆತ್ಮನ ಐವತ್ತೆರಡು ಜೀವನಾಕ್ಷರದ ವರ್ತನೆ ನಿವೃತ್ತಿಯಾಗಿ ಐವತ್ತೆಱಡು ಮಂತ್ರಲಿಂಗಸ್ವರೂಪವಾಗಿರ್ಪನೆಂಬುದೀಗ ಗಣನಾಥನೈವತ್ತೆಱಡು ಸರ ಹಱಿದು ಬಿದ್ದವೆಂಬ ಶಬ್ದಕ್ಕರ್ಥ. ಆ ಪರಿಪೂರ್ಣಜ್ಞಾನವು ಶರಣನಂತರಂಗ ಬಹಿರಂಗದಲ್ಲಿ ಪರಿಪೂರ್ಣವಾಗಲಾಗಿ ಮಯಾಸಂಬಂಧವಾದ ಶರೀರತ್ರಯದ ಸೃಷ್ಟಿಸ್ಥಿತಿಸಂಹಾರವು ನಷ್ಟವಾಗಿ ಲಿಂಗದಲ್ಲೇಕಾರ್ಥ ವುಂಟಾಗಿರ್ಪುದೆಂಬುದೀಗ ಆ ಭಸ್ಮತಾಗಿ ಅಂಡಜಮುಗ್ಧೆಯ ಮೂಱು ಮೊಲೆ ಹರಿದು ಬಿದ್ದವೆಂಬ ಶಬ್ದಕ್ಕರ್ಥ. ನಾದಪ್ರಿಯ ಪರಶಿವನು ಸಕಲತತ್ತ್ವೋತ್ತೀರ್ಣವಾದ ಪ್ರಣವ ಗದ್ದುಗೆಯಲ್ಲಿ ಅವಿರಳಾನಂದವೆಂಬಾಸನದಲ್ಲಿ ಕುಳಿತಲ್ಲಿ ಜಗತ್ತಿನ ಲೀಲಾ ವ್ಯವಹಾರ ನಷ್ಟವಾಗಿರ್ಪುವೆಂಬುದೀಗ ನಾದಪ್ರಿಯ ನಂದಿಯನೇಱಿಕೊಂಡು ಅತೀತನ ಮೇಲೆ ಆನಂದಸಿಂಹಾಸನವಿಕ್ಕಿ ಕುಳಿತ ಕೂಡಲಸಂಗಮದೇವರ ದೇವತ್ವ ಕೆಟ್ಟಿತ್ತು ಎಂಬ ಶಬ್ದಕ್ಕರ್ಥ.

೯೩೪

ನಾನೊಮ್ಮೆ ಬೇಂಟೆ[1]ಯ[1] ಹೋದಡೆ ಭಸಿತಕ್ಕಾಹುತಿಯನಿಕ್ಕಿಹೆನೆಂದು ಸಾಸಿರದೇಳುನೂಱು ವರುಷ ಒಬ್ಬ ರಾಜನ ಕೊಂದೆನು. ಅವನ ಹೆಂಡತಿ ಐವತ್ತೆರಡು [2]ಕಣ್ಣುಳ್ಳವಳು[2]. [3]ಅವಳು[3] ತನ್ನ ಹೂಮುಡಿಯ ಬಿಟ್ಟು ಅತ್ತಳು. ಅವಳ ಬಾಯಲ್ಲಿ ಅಜ ಬಿದ್ದ, ಕಂಗಳಲ್ಲಿ ಧೂಮಕೇತು ಬಿದ್ದ, ಕೂಡಲಸಂಗಮದೇವರ ದೇವತ್ವ ಕೆಟ್ಟಿತ್ತು.

I- -

ನಾನು-ಶರಣನು, ಒಮ್ಮೆ-ಒಂದು ವೇಳೆ, ಬೇಂಟೆಯ ಹೋದಡೆ-ಇಷ್ಟಲಿಂಗಕ್ಕಷ್ಟವಿಧಾರ್ಚನೆ ಷೋಡಶೋಪಚಾರಕ್ರಿಯೆಗಳಿಂದಾರಾಧಿಸುತ್ತ ಎಯ್ದಿದರೆ, ಭಸಿತಕ್ಕಾಹುತಿಯನಿಕ್ಕಿಹೆನೆಂದು-ಆ ಇಷ್ಟಲಿಂಗದ ಚಿತ್ಕಲೆಯನ್ನೇ ಅಂತರಂಗದಲ್ಲಿ ಪ್ರಾಣಲಿಂಗವಾಗಿ ಸಂಬಂಧವ ಮಾಡಿಕೊಂಡು ಆ ಪ್ರಾಣ ಲಿಂಗಕ್ಕೆ ಮಂತ್ರಧ್ಯಾನಜಪಸ್ತೋತ್ರನಿರ್ಗುಣಪೂಜಾಕ್ರಿಯೆಗಳಿಂದಾರಾಧಿಸೇನೆಂದರೆ, ಸಾವಿರದೇಳುನೂಱುವರುಷ ಒಬ್ಬ ರಾಜನ ಕೊಂದೆನು-ಅಷ್ಟವಿಧ ಸಕೀಲ ಮೊದಲಾದ ಸರ್ವಾಚಾರಸಂಪತ್ತಿನಾಚರಣೆ ಕ್ರಿಯೆಗಳ ಕಡೆಯಲ್ಲಿ ಐವತ್ತೆರಡು ದಳ ಪ್ರಕೃತಿಯೊಡನೆ ಕೂಡಿ

ಚರಿಸುವ ಜೀವನ ವರ್ತನೆಯ ನಷ್ಟವ ಮಾಡಿ ಸಜ್ಜೀವಸ್ವರೂಪವಾಗಿ ಆ ದಳಗಳನೆಲ್ಲ ಲಿಂಗಕ್ಕೆ ಪೂಜೋಪಕರಣಂಗಳಾಗಿ ಅಳವಡಿಸಿಕೊಂಡಿರ್ಪನು.

ಅವನ–ಆತ್ಮನ, ಹೆಂಡತಿ–ಅಂಗವಾದ ಮಾಯಾಶಕ್ತಿಯು, ಐವತ್ತೆರಡು ಕಣ್ಣುಳ್ಳವಳು–ಐವತ್ತೆರಡು ದಳಪ್ರಕೃತಿಯೊಡನೆ ಕೂಡಿ ಚರಿಸುತ್ತಿಹಳು. ಅವಳು–ಆ ಮಾಯಾಶಕ್ತಿಯು, ತನ್ನ ಹೂಮುಡಿಯ ಬಿಟ್ಟು–ತನ್ನ ಭಿನ್ನಜ್ಞಾನ ಭಿನ್ನಕ್ರಿಯೆಗಳನು ನಷ್ಟವ ಮಾಡಿಬಿಟ್ಟು ಅಭಿನ್ನಜ್ಞಾನ ಅಭಿನ್ನಕ್ರಿಯೆಯಿಂದ ಶುದ್ಧವಿದ್ಯಾಶಕ್ತಿಯಾಗಿ, ಅತ್ತಳು–ಶಿವೋऽಹಂ ಬ್ರಹ್ಮೋऽಹಂ ಪ್ರಣಮೋऽಹಂ ಎಂದುಚ್ಚರಿಸಿದಳು. [ಅವಳ–] ಆ ಜ್ಞಾನಶಕ್ತಿಯ, ಬಾಯಲ್ಲಿ–ಶಿವಾಪೇಕ್ಷೆಯೆಂಬ ರಸನೆಯಲ್ಲಿ, ಅಜಬಿದ್ದ–ಬ್ರಹ್ಮನುತ್ಪತ್ಯವು ನಷ್ಟವಾಗಿ ಹೋಗಿ ಗುರುವಿನಲ್ಲಿ ಉತ್ಪತ್ಯವಾಗಿ ಅಳವಟ್ಟಿತ್ತು. ಕಂಗಳಲ್ಲಿ–ಸುಜ್ಞಾನ ಚಕ್ಷುವಿನಲ್ಲಿ, ಧೂಮಕೇತು ಬಿದ್ದ–ವಿಷ್ಣುವಿನ ಸ್ಥಿತಿಭೋಗನಷ್ಟವಾಗಿ ಹೋಗಿ ಲಿಂಗದಲ್ಲಿ ಸ್ಥಿತಿಭೋಗವಾಗಿ ಅಳವಟ್ಟಿಹುದು. ಕೂಡಲಸಂಗಮದೇವರ–ರುದ್ರಮೂರ್ತಿಯ, ದೇವತ್ವ ಕೆಟ್ಟಿತ್ತು–ಸಂಹಾರಕೃತ್ಯವು ನಿಃಪತಿಯಾಗಿ ಚಿತ್ತವನ್ನೇ ಅಂಗವಮಾಡಿಕೊಂಡಿರ್ಪರು.

II– –

1–1 ಗೆ(ಚ, ಜ), 2–2 ಕಣ್ಣವಳು (ಚ, ಜ), 3–3 x (ಚ, ಜ).

....

ನಾನು–ಲಿಂಗೈಕ್ಯನು, ಒಮ್ಮೆ–ಒಂದುವೇಳೆ, ಭಸಿತಕ್ಕಾಹುತಿಯನಿಕ್ಕಿಹೆನೆಂದು ಬೇಂಟೆಗೆ ಹೋದಡೆ–ಚಿದ್ಭಸ್ಮಕ್ಕಾಹಾರವಾದೆಹೆನೆಂದು ಆತ್ಮಶುದ್ಧತೆಗೈದಿದರೆ, ಸಾಸಿರದೇಳುನೂಱು ವರುಷ ಒಬ್ಬ ರಾಜನ ಕೊಂದೆನು–ಸಹಸ್ರ[೧] ಕರಣಕಾಲ ವ್ಯಾಳಪ್ರಕೃತಿಗಾಶ್ರಯವಾದ ಜೀವನ ಸಂಹರಿಸಿದೆನು. ಅವನ ಹೆಂಡತಿ ಐವತ್ತೆರಡು ಕಣ್ಣವಳು–ಆ ಜೀವನ ಸತಿಯಳು ೫೨ ಅಕ್ಷರವನುಳ್ಳ ಮಾಯಾಂಗನೆಯು, ತನ್ನ ಹೂಮುಡಿಯ ಬಿಟ್ಟು ಅತ್ತಳು–ಸ್ವಸಂಬಂಧವಾದ ವಿಷಯಂಗಳೆಂಬ ಕುಸುಮವನು ಮೂಲಾಹಂಕಾರವೆಂಬ ಮುಡಿಯನು ಮಾಣಿಸಿ ಶೋಕಿಸಿದಳು. ಅವಳ ಬಾಯಲ್ಲಿ ಅಜಬಿದ್ದ–ಆ ಮಾಯಾಂಗನೆಯ ಭಿನ್ನಾಪೇಕ್ಷೆಯಲ್ಲಿ ಬ್ರಹ್ಮ ಹುಟ್ಟಿದ. ಕಂಗಳಲ್ಲಿ ಧೂಮಕೇತು ಬಿದ್ದ–ನೇತ್ರದಲ್ಲಿ ಅಗ್ನಿಹುಟ್ಟಿತ್ತು. ಹುಟ್ಟಿದಲ್ಲಿ ಅಷ್ಟದಿಕ್ಪಾಲಕರುದಯವಾಗಿ, ಕೂಡಲಸಂಗಮದೇವರ ದೇವತ್ವ ಕೆಟ್ಟಿತ್ತು–ಹೀಂಗಾದ ಬಳಿಕ ಪರಶಿವಲಿಂಗದೇವರ ದೇವತ್ವವಳಿಯಿತ್ತೇ ಸರಿ.

● ಮತ್ತಂ, ಬ್ರಹ್ಮರಂಧ್ರದಲ್ಲಿ ಸಹಸ್ರದಳಕಮಲವದರ ಮಧ್ಯದಲ್ಲಿ ಉತ್ತಾಯವಾದ ಶತಪತ್ರಕಮಲವದರ ಮಧ್ಯದಲ್ಲಿ ಚಿದ್ಬಿಂದುಸ್ವರೂಪವಾದ ನಿಃಕಲಬ್ರಹ್ಮವೆಂಬ ಓರ್ವ ಕ್ರೀಜನ ತಾ ಬೇರೆ ಲಿಂಗ ಬೇರೆಂಬ ದ್ವೈತವ ನಷ್ಟಮಾಡಿದೆನು. ಆ ನಿಃಕಲಬ್ರಹ್ಮದ ಸತಿಯಾದ ಚಿಚ್ಛಕ್ತಿಯು ೫೨ ಮಂತ್ರ ಲಿಂಗಸ್ವರೂಪುಳ್ಳಾಯಕಳು. ಆ ಚಿಚ್ಛಕ್ತಿಸ್ವಸಂಬಂಧವಾದ ಸತ್ಕ್ರಿಯೆಂಬ ಕುಸುಮವನು ಮೂಲಜ್ಞಾನವೆಂಬ ಮುಡಿಯನು ನಿಷ್ಪತ್ತಿಯ ಮಾಡಿ ಶಿವೋऽಹಂ ಬ್ರಹ್ಮೋऽಹಂ ಪ್ರಣಮೋऽಹಂ ಎಂದು ರೋದನವ ಮಾಡಿದಳು. ಆ ಚಿಚ್ಛಕ್ತಿಯ ಶಿವಾಪೇಕ್ಷೆಯೆಂಬ ಜಿಹ್ವೆಯಲ್ಲಿ ಪರಬ್ರಹ್ಮಸ್ವರೂಪವಾದ ಶರಣನುದಯವಾದ ಜ್ಞಾನದೃಷ್ಟಿಯಲ್ಲಿ ಚಿದಗ್ನಿಸ್ವರೂಪವಾದ ಲಿಂಗ ಉದಯವಾಯಿತ್ತು. ಹೀಂಗಾದ ಬಳಿಕ ಶರಣ ಬೇರೆ ಲಿಂಗ ಬೇರೆಂಬ ಭಿನ್ನಭಾವವು ನಷ್ಟವಾಯಿತ್ತು.

....

೧ + ಪ್ರ (ಚ).

III– –

2–2 ಕಣ್ಣವಳು (ಟ,ಡ), 3–3 x (ಟ,ಡ).

....

ಗುರುಕಾರುಣ್ಯದಿಂದ ಲಿಂಗಾಂಗಸಂಬಂಧಿಯಾದ ಶರಣನು ಸರ್ವಾಚಾರ ಸಂಪತ್ತಿನಾಚರಣೆಯ ಮುಂದುಗೊಂಡು ಆಚರಿಸಿ ಲಿಂಗೋಪಭೋಗಿಯಾಗಿ ಆಚರಣೆ ಸಮಾಪ್ತಿಯಾದ ಬಳಿಕ ಲಿಂಗದಲ್ಲೇಕಾರ್ಥವಾದನೆಂಬುದೀಗ, ನಾನೊಮ್ಮೆ ಬೇಂಟೆಯು ಹೋದರೆ ಭಸಿತಕ್ಕಾಹುತಿಯನಿಕ್ಕಿಹೆನೆಂದು ಎಂಬ ಶಬ್ದಕ್ಕರ್ಥ. ಗುರೂಪದೇಶದಿಂದ ಲಿಂಗಾಂಗ ಸಂಬಂಧಿಯಾದ ಶರಣನು ರಜೋಗುಣದಿಂದ ಅನೇಕಜನ್ಮಂಗಳಲ್ಲಿ ಎಡೆಯಾಡುತ್ತಿರ್ದ ಆತ್ಮನನು ಮಂತ್ರಲಿಂಗಸಂಸ್ಕಾರದಿಂದ ಲಿಂಗದಲ್ಲೇಕಾರ್ಥವ ಮಾಡಿದನೆಂಬುದೀಗ, ಸಾಸಿರದೇಳ್ನೂರು ವರ್ಷ ಒಬ್ಬ ರಾಜನ ಕೊಂದೆನೆಂಬ ⁽ಶಬ್ದಕ್ಕರ್ಥ.⁾ ಆ ಜೀವನ ಸಂಬಂಧವಾದ ಮಾಯಾಂಗನೆಯು ಐವತ್ತೆರಡು ಜೀವನಾಕ್ಷರಂಗಳೆಂಬ ಭಿನ್ನದೃಕ್ಕಿನ ನಿರೀಕ್ಷಣೆಯಿಂದ ಪ್ರಪಂಚನಿರೀಕ್ಷಿಸುತ್ತಿರ್ದು ಇದು ನನ್ನ ನಿಜಪದವಲ್ಲವೆಂದು ಸುಜ್ಞಾನೋದಯವಾಗಿ ವಿಷಯಜ್ಞಾನವ ನಷ್ಟವ ಮಾಡಿ ಶಿವೋಹಂ ಶಿವೋಹಂ ಎನುತಿರ್ದಳೆಂಬುದೀಗ ಅವನ ಹೆಂಡತಿ ಐವತ್ತೆರಡು ಕಣ್ಣವಳು ತನ್ನ ಹೂಮುಡಿಯ ಬಿಟ್ಟು ಅತ್ತಳು ಎಂಬ ⁽ಶಬ್ದಕ್ಕರ್ಥ.⁾ ಆ ಶುದ್ಧವಿದ್ಯಾಸ್ವರೂಪಾದ ಶರಣನ ಶಿವಾಪೇಕ್ಷೆಯೆಂಬ ಜಿಹ್ವೆಯಲ್ಲಿ ಬ್ರಹ್ಮನ ಸೃಷ್ಟಿ ನಷ್ಟವಾಯಿತ್ತೆಂಬುದೀಗ, ಅವಳ ಬಾಯಲ್ಲಿ ಅಜ ಬಿದ್ದನೆಂಬ ⁽ಶಬ್ದಕ್ಕರ್ಥ.⁾ ಅ ಶರಣಸತಿಯ ಜ್ಞಾನಾಚರಣೆಯಲ್ಲಿ ಪ್ರಾರಬ್ಧಭೋಗವೆಲ್ಲ ಲಿಂಗಭೋಗೋಪಭೋಗವಾಗಿ ಲಿಂಗಪ್ರಸಾದಸೇವನೆಯುಳ್ಳ ಶರಣನಿಗೆ ವಿಷ್ಣುವಿಗೆ ಸ್ಥಿತಿಕೃತ್ಯ ನಷ್ಟವಾಗಿರ್ಪುದೆಂಬುದೀಗ, ಕಂಗಳಲ್ಲಿ ಧೂಮಕೇತು ಬಿದ್ದ ಎಂಬ ⁽ಶಬ್ದಕ್ಕರ್ಥ.⁾ ಶರಣನ ಸರ್ವಾಚಾರಸಂಪತ್ತಿನಾಚರಣೆ ನಿಷ್ಪತಿಯನೆಯ್ದಿದಲ್ಲಿ ಪರಶಿವಲಿಂಗದ ಲೀಲಾಚದುರು ನಿರ್ಗುಣತ್ವವನೆಯ್ದಿತ್ತೆಂಬುದೀಗ, ಕೂಡಲಸಂಗಮದೇವರ ದೇವತ್ವ ಕೆಟ್ಟಿತ್ತೆಂಬ ⁽ಶಬ್ದಕ್ಕರ್ಥ.⁾

....

೧–೧ x (ಡ).

V– –

೨–೨ ಕಂಗಳು (ಪ)

....

ಗುರುಕಾರುಣ್ಯದಿಂದ ಲಿಂಗಾಂಗಸಂಬಂಧಿಯಾದ ಶರಣನು ಸರ್ವಾಚರಣೆಯ ಮುಂದುಗೊಂಡು ಆಚರಿಸಿ ಆ ಆಚರಣೆ ಸಮಾಪ್ತಿಯಾದ ಬಳಿಕ ಲಿಂಗದಲ್ಲೇಕಾರ್ಥ[ವಾದ] ನೆಂಬುದೀಗ, ನಾನೊಮ್ಮೆ ಬೇಂಟೆಯ ಹೋದರೆ ಭಸಿತಕ್ಕಾಹುತಿಯನಿಕ್ಕಿಹೆನೆಂದು ಎಂಬ ಶಬ್ದಕ್ಕರ್ಥ.

ಗುರೂಪದೇಶದಿಂದ ಅಂಗಲಿಂಗಸಂಬಂಧಿಯಾದ ಶರಣನು ರಜೋಗುಣದಿಂದ ಅನೇಕಜನ್ಮಂಗಳಲ್ಲಿ ಎಡೆಯಾಡುತಿರ್ದ ಆತ್ಮನನ್ನು ಮಂತ್ರಸಂಸ್ಕಾರದಿಂದ ಲಿಂಗದಲ್ಲೇಕ್ಯಾರ್ಥವ ಮಾಡಿದನೆಂಬುದೀಗ, ಸಾಸಿರದೇಳ್ನೂಱು ವರ್ಷ ಒಬ್ಬ ರಾಜನಕೊಂದೆನೆಂಬ ಶಬ್ದಕ್ಕರ್ಥ.

ಶತಾನಿ ಷಡ್ದಿವಾರಾತ್ರೌ ಸಹಸ್ರಾಣ್ಯೇಕವಿಂಶತಿ। ಹಂಸ ಹಂಸೇತಿ ತನ್ಮಂತ್ರಂ ಜೀವೋ ಜಪತಿ ಸರ್ವದಾ॥ ಅಜಪಾನಾಂ ಚ ಗಾಯತ್ರೀಂ ಯೋಗಿನಾಂ ಮೋಕ್ಷದಾಯಿನೀಂ॥ ಎಂಬುದಾಹರಣೆಯಿಂ ಇಪ್ಪತ್ತೊಂದು ಸಾವಿರದೇಳುನೂಱು ಹಂಸಮಂತ್ರವನು ಹಗಲಿರುಳು ರಜೋಗುಣ ಯುಕ್ತವಾದ ಜೀವನು ಜಪಿಸುತ್ತಿರಲಾಗಿ ಜೀವನ ಗುಣಾವಳಿ ಇತ್ತೆಂಬುದೀಗ, ಸಾವಿರದೇಳ್ನೂಱು ವರ್ಷ ಒಬ್ಬ ರಾಜನ ಕೊಂದೆನೆಂಬ ಶಬ್ದಕ್ಕರ್ಥ. ಆ ಜೀವನ ಸಂಬಂಧವಾದ ಮಾಯಾಂಗನೆಯು ಐವತ್ತೆಱಡು ಜೀವನಾಕ್ಷರಂಗಳೆಂಬ ಭಿನ್ನದೃಕ್ಕಿನ ನಿರೀಕ್ಷಣೆಯಿಂದ ಪ್ರಪಂಚ ನಿರೀಕ್ಷಿಸುತ್ತಿದ್ದು ನನ್ನ ನಿಜವಲ್ಲವೆಂದು ಸುಜ್ಞಾನೋದಯವಾಗಿ ವಿಷಯಜ್ಞಾನವ ನಷ್ಟಮಾಡಿ ಶಿವೋಹ ಶಿವೋऽಹಮೆನುತಿರ್ದಳೆಂಬುದೀಗ, ಅವನ ಹೆಂಡತಿಗೆ ಐವತ್ತೆರಡು ಕಂಗಳು ಅವಳು ತನ್ನ ಹೂಮುಡಿಯಬಿಟ್ಟು ಅಳುತ್ತಿದ್ದಾಳು ಎಂಬ ಶಬ್ದಕ್ಕರ್ಥ. ಆ ಶುದ್ಧವಿದ್ಯಾಸ್ವರೂಪವಾದ ಶರಣನ ಶಿವಾಪೇಕ್ಷೆಯೆಂಬ ಜಿಹ್ವೆಯಲ್ಲಿ ಬ್ರಹ್ಮನ ಸೃಷ್ಟಿ ನಷ್ಟವಾಯಿತ್ತೆಂಬುದೀಗ ಅವಳ ಬಾಯಲ್ಲಿ ಅಜ ಜಿದ್ದನೆಂಬ ಶಬ್ದಕ್ಕರ್ಥ. ಆ ಶರಣಸತಿಯ ಜ್ಞಾನಾಚರಣೆಯಲ್ಲಿ ಪ್ರಾರಬ್ಧ ಕರ್ಮವೆಲ್ಲಾ ಭೋಗವೆಲ್ಲಾ ಲಿಂಗಭೋಗೋಪಭೋಗವಾಗಿ ಲಿಂಗಪ್ರಸಾದ ಸೇವನೆಯನುಳ್ಳ ಶರಣನಿಗೆ ವಿಷ್ಣುವಿನ ಸ್ಥಿತಿಕೃತ್ಯ ನಷ್ಟವಾಯಿತ್ತೆಂಬುದೀಗ ಕಂಗಳಲ್ಲಿ ಧೂಮಕೇತು ಬಿದ್ದನೆಂಬ ಶಬ್ದಕ್ಕರ್ಥ. ಶರಣನ ಸರ್ವಾಚಾರಸಂಪತ್ತಿನಾಚರಣೆ ನಿಃಪತಿನೆಯ್ದಿದಲ್ಲಿ ಪರಶಿವಲಿಂಗದ ಲೀಲಾಮಹಿಮೆ ನಿಃಪತಿಯಾಯಿತ್ತೆಂಬುದೀಗ ಕೂಡಲಸಂಗಮದೇವರ ದೇವತ್ವಕೆಟ್ಟಿತ್ತು ಎಂಬ ಶಬ್ದಕ್ಕರ್ಥ.

೯೩೫

ಲಿಂಗಾರ್ಚನೆಯ ಮಾಡುವ ಮಹಿಮರೆಲ್ಲರೂ [1]ಸಲಿಗೆ[1]ವಂತರಾಗಿ ಒಳಗೈದಾರೆ. ಅನು ದೇವಾ ಹೊಱಗ[2]ಣ[2]ವನು. ಸಂಬೋಳಿ[3]ಸಂಬೋಳಿ[3]ಯೆನುತ್ತ ಇಂಬಿನಲ್ಲಿದ್ದೇನೆ. ಕೂಡಲಸಂಗಮದೇವಾ ನಿಮ್ಮ ನಾಮವಿಡಿದನಾಮಿಕ ನಾ[4]ನಯ್ಯ[4].

I- -

ಲಿಂಗಾರ್ಚನೆಯ ಮಾಡುವ-ಇಂಡೆ ದಂಡೆ ಕುಸುಮಂಗಳಿಂದ ಅಲಂಕರಿಸಿ ಭಿನ್ನವಿಟ್ಟುಕೊಂಡು ಲಿಂಗಪೂಜೆಯನನುಗೈವ, ಮಹಿಮರೆಲ್ಲರೂ-ಮಹತ್ವಾತಿಶಯವನುಳ್ಳ ಉಪಾಧಿಕರುಗಳೆಲ್ಲರೂ, ಸಲಿಗೆವಂತರಾಗಿ-ಶಿವನಿಂದ ಮಾನಮನ್ನಣೆಯ ಹಡೆಯಲ್ಪಟ್ಟವರುಗಳಾಗಿ, ಒಳಗೈದಾರೆ-ಚತುರ್ವಿಧ ಫಲಪದಂಗಳಿಗೆ ವಶವಾಗೈದಾರೆ. ಆನು-ಶರಣನು, ದೇವಾ-ಎಲೆ ಒಡೆಯನೆ, ಹೊಱಗಣವನು-ಚತುರ್ವಿಧಫಲಪದಂಗಳಿಗೆ ವಿಲಕ್ಷಣನು. ಸಂಬೋಳಿ ಸಂಬೋಳಿಯೆನುತ್ತೆ-ಲಿಂಗವೇ ಲಿಂಗವೇ ಎನುತ್ತೆ, ಇಂಬಿನಲ್ಲಿದ್ದೇನೆ-ಅತಿ ವಿಶಾಲೋನ್ನತವಾದ ಬ್ರಹ್ಮದಲ್ಲಿ ಕೂಡಿ ಬ್ರಹ್ಮವೇ ತಾನಾಗಿರ್ಪೆನು, ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ, ನಿಮ್ಮ ನಾಮವಿಡಿದ-ನಿಮ್ಮಯ

ಅದ್ವಯ ಅಭಿಧಾನವಾದ ಪ್ರಣವಪಂಚಾಕ್ಷರಮಂತ್ರವನ್ನು ದೃಢವಿಡಿದ. ಅನಾಮಿಕ ನಾನಯ್ಯ–ಸಂಸಾರದ ಸರ್ವಸೂತಕ ವಿರಹಿತನಾದ ಮುಮುಕ್ಷಸ್ವರೂಪ ನಾನಯ್ಯ.

II– –

3–3 x (ಚ, ಜ), 4–4 ನು (ಜ).

....

ಲಿಂಗಾರ್ಚನೆಯ ಮಾಡುವ ಮಹಿಮರೆಲ್ಲರೂ ಸಲಿಗೆವಂತರಾಗಿ ಒಳಗೆ ಐದಾರೆ–ಇಷ್ಟಲಿಂಗಕ್ಕೆ ೮ ತೆರದ ಆರಾಧನೆಯ ಮಾಡುವ ಮಹಾತ್ಮರೆಲ್ಲರೂ ಸಗಾಟಿಕೆಯುಳ್ಳವರಾಗಿ ಅದಲ್ಲದೆ ಸಮರಸವುಳ್ಳವರಾಗಿ ಕೈಲಾಸದಲ್ಲಿ ಶಿವನ ಸನ್ನಿಧಿಯಲ್ಲಿರುತ್ತೈದಾರೆ. ಆನು ದೇವಾ ಹೊಜಗಣವಸು–ಬಸವೇಶ್ವರನು ತಾವು ಎಲೆ ಪರಮೇಶ್ವರನೆ ಬಹಿರಂಗದವನು. ಸಂಬೋಳಿ ಎನುತ್ತ–ಎಷ್ಟುದಿನ ಶಿವನ ಸನ್ನಿಧಿಯಲ್ಲಿ ಇದ್ದೀರಿ ತಾಳಿ ತಾಳಿ ಹೀಂಗೆನುತ್ತ, ಇಂಬಿನಲ್ಲಿ ಇದೇನೆ–ಬಸವೇಶ್ವರನೆಂಬುತಾರೆ, ಫಲಪದಂಗಳ ಕೊಡುವಂಥ ವಸ್ತು, ಆ ವಸ್ತುವಿಗಾಶ್ರಯವಾದುದೆ ಚಿತ್ತು. ಆ ಚಿತ್ತಿನಲ್ಲಿ ನಾನಿರುತ್ತೈದೇನೆ. ಕೂಡಲಸಂಗಮದೇವಾ ನಿಮ್ಮ ನಾಮವಿಡಿದ ಅನಾಮಿಕ ನಾನು–ಎಲೆ ಪರಶಿವಲಿಂಗವೆ ನಿಮ್ಮದ್ವಯಾಭಿಧಾನವಾದ ಪಂಚಾಕ್ಷರಿಮಂತ್ರವನು ಗ್ರಹಿಸಿ ಮಾಯಾ ದುರ್ನಾಮವಿಲ್ಲದಾತ ನಾನು.

III– –

1–1 ಸಲ್ಲಿಲಿಗೆ (ಟ); ಸಲ್ಲೀಲೆ (ಡ). 2–2 ಳ (ಟ, ಡ).

....

ಅಂಗ ಲಿಂಗಕ್ಕೆ ಭಿನ್ನವಿಟ್ಟು ಪೂಜಿಸಿ ಶಿವನ ಕೃಪೆಯ ಪಡೆದು ಪುಷ್ಪಕಾರೂಢರಾಗಿ ಕೈಲಾಸಕ್ಕೆ ಹೋಗಿ ಫಲಪದಸ್ಥರಾಗಿಪ್ಪರು ಎಂಬುದೀಗ ಲಿಂಗಾರ್ಚನೆಯ ಮಾಡುವ ಮಹಿಮರೆಲ್ಲರೂ [೧][ಸಲಿಗೆ][೧]ವಂತರಾಗಿ ಒಳಗೈದಾರೆ ಎಂಬ ಶಬ್ದಕ್ಕರ್ಥ. ಲಿಂಗದಲ್ಲೇಕತ್ವವನುಳ್ಳ ಶರಣನು ಫಲಪದಂಗಳಿಗೆ ವಿರಹಿತನಾಗಿ ಸಕಲಕರಣಂಗಳ ತರಹರದಿಂದೆ ಚಿಲ್ಲಿಂಗದ ಚಿದ್ಗರ್ಭದಲ್ಲಿ ಆಶ್ರಯವುಳ್ಳಾತನಾಗಿರ್ಪುದೆಂಬುದೀಗ ಆನು ದೇವ ಹೊಱಗಳವನು ಸಂಬೋಳಿ ಸಂಬೋಳಿಯೆನುತ್ತ ಇಂಬಿನಲ್ಲಿ ಇದೇನೆ ಎಂಬ [೨]ಶಬ್ದಕ್ಕರ್ಥ. ಶರಣನು ಮನದಲ್ಲಿ ಶಿವಾಭಿಧಾನಮಂತ್ರವನು ಪರಿಗ್ರಹಿಸಿ ಸರ್ವಸೂತಕ ವಿರಹಿತನಾಗಿರ್ಪನೆಂಬುದೀಗ, ಅನಾಮಿಕ[೩]ನಾದೆ[೩]ನೆಂಬ [೨]ಶಬ್ದಕ್ಕರ್ಥ.[೨]

....

೧–೧ ಸಲ್ಲಿಲಿಗೆ (ಟ); ಸಲ್ಲೀಲೆ (ಡ), ೨–೨ x (ಟ), ೩–೩ x (ಡ).

IV– –

4–4 ನು (ತ).

....

ಲಿಂಗವ ಭಿನ್ನವಿಟ್ಟು ಪೂಜಿಸಿ ಚತುರ್ವಿಧಪದಂಗಳ ಪಡೆದು ಶಿವಲೋಕದೊಳಗೆ ಶಿವನಲ್ಲಿ ತೇಜಿಷ್ಠರಪ್ಪ ಮಹಿಮೆವಂತರಂತಲ್ಲ; ಶಿವಶರಣರ ಪರಿಬೇಜಿ. ಅದೆಂತೆಂದೊಡೆ ಲಿಂಗವೇ ತಾನೆಂದಜೆದು ಶಿವೋऽಹಂ ಶಿವೋऽಹಮೆಂಬ ಶಿವನ ಅದ್ವಯನಾಮವಿಡಿದು ಚತುರ್ವಿಧಪದಂಗಳಿಗೆ ಹೊಱಗಾಗಿ ಕಡೆಮೊದಲಿಲ್ಲದ ನಿರ್ನಾಮವಸ್ತುವೆ ತಾನಾದ ಶರಣನೆಂಬುದೀ ವಚನದ ತಾತ್ಪರ್ಯಾರ್ಥ.

V– –

2–2 ಳ (ಪ್ರ), 3–3 x (ಪ), 4–4 ನು (ಪ).

....

ಅಂಗ ಲಿಂಗಕ್ಕೆ ಭಿನ್ನವಿಟ್ಟು ಪೂಜೆಯ ಮಾಡಿ ಶಿವನ ಕೃಪೆಯ ಪಡೆದು ಪುಷ್ಪಕಾರೂಢರಾಗಿ ಫಲಪದಂಗಳಿಗೆ ವಶಗತವಾಗಿರ್ಪರೆಂಬುದೀಗ ಲಿಂಗಾರ್ಚನೆಯ ಮಾಡುವ ಮಹಿಮರೆಲ್ಲರೂ ಸಲಿಗೆವಂತರಾಗಿ ಒಳಗೈದಾರೆ ಎಂಬ ಶಬ್ದಕ್ಕರ್ಥ. ಲಿಂಗದಲ್ಲೇಕಾರ್ಥವನುಳ್ಳ ಶರಣನು ಫಲಪದಂಗಳಿಗೆ ವಿರಹಿತನಾಗಿ ಸಕಲಕರಣಂಗಳ ತರಹರದಿಂದ ಚಿಲ್ಲಿಂಗದ ಚಿದ್ಗರ್ಭದಲ್ಲಿ ಆಶ್ರಯವುಳ್ಳಾತನಾಗಿರ್ಪ ನೆಂಬುದೀಗ, ಆನು ದೇವಾ ಹೊಱಗಳವನು ಸಂಬೋಳಿಯೆನುತ್ತ ಇಂಬಿನಲ್ಲೈದೇನೆಯೆಂಬ ಶಬ್ದಕ್ಕರ್ಥ. ಶರಣನು ಮನದಲ್ಲಿ ಶಿವಾವಿಧಾನಮಂತ್ರವನು ಪರಿಗ್ರಹಿಸಿ ಸರ್ವಸೂತಕ ವಿರಹಿತನಾಗಿರ್ಪನೆಂಬುದೀಗ ಕೂಡಲಸಂಗಮದೇವ ನಿಮ್ಮ [ನಾಮ]ವಿಡಿದಿರ್ಪನಾಮಿಕ ನಾನೆಂಬ ಶಬ್ದಕ್ಕರ್ಥ.

೬೩೬

ಶಿವಾಶಿವಾ ಮೂರ್ತಿಗೆ ಸತ್ಯಶುದ್ಧವುಂಟೆಂಬಿರಿ. ಸತ್ಯಶುದ್ಧವುಳ್ಳವಂಗೆ ಗುರುವಿಲ್ಲ, ಸತ್ಯಶುದ್ಧವುಳ್ಳವಂಗೆ ಲಿಂಗವಿಲ್ಲ, ಸತ್ಯಶುದ್ಧವುಳ್ಳವಂಗೆ ಜಂಗಮವಿಲ್ಲ, ಸತ್ಯಶುದ್ಧವುಳ್ಳವಂಗೆ ಪ್ರಸಾದವಿಲ್ಲ, ಸತ್ಯಶುದ್ಧವುಳ್ಳವಂಗೆ ಗಣತ್ವವಿಲ್ಲ ಕೇಳಿರೆ, ಸತ್ಯಶುದ್ಧ ದೇವರಿಗೆ ಉಪಚಾರವುಂಟು, ಸತ್ಯಶುದ್ಧದೇವರಿಗೆ ಧ್ಯಾನ ಮೌನ ಅನುಷ್ಠಾನವುಂಟು, ಸತ್ಯಶುದ್ಧ ಉಪದೇಶಕ್ಕೆ ಜಪತಪ [1]ಸಂಧ್ಯಾ[1] ಸಮಾಧಿ ಹೋಮನೇಮನಿತ್ಯ ಅಷ್ಟವಿಧಾರ್ಚನೆ ಷೋಡಶೋಪಚಾರವುಂಟು. ಸತ್ಯಶುದ್ಧದೇವರಿಗೆ ಉಪಚಾರವುಂಟಾದ ಕಾರಣ ಇಂತಪ್ಪ ಸತ್ಯಶುದ್ಧಗುರುವಿಂಗೆ ಶರಣೆನ್ನೆ. ಇಂತಪ್ಪ ಸತ್ಯಶುದ್ಧ ಲಿಂಗಕ್ಕೆ ಶರಣೆನ್ನೆ. ಇಂತಪ್ಪ ಸತ್ಯಶುದ್ಧ ಜಂಗಮಕ್ಕೆ ಶರಣೆನ್ನೆ. ಇಂತಪ್ಪ ಸತ್ಯಶುದ್ಧ ಪ್ರಸಾದಕ್ಕೆ ಕೈಯಾನೆ. ಇವರೆಲ್ಲರೂ ಬ್ರಹ್ಮನ ಮಕ್ಕಳು. ಎನಗೆ ಸತ್ಯವಿಲ್ಲ; ಅಸತ್ಯವಿಲ್ಲವು. ಆವ ಸಹಜವು ಇಲ್ಲದ ಲಿಂಗೈಕ್ಯ ಕಾಣಾ ಕೂಡಲಸಂಗಮದೇವಾ.

I– –

ಶಿವಾಶಿವಾ–ಲಿಂಗವೇ ಲಿಂಗವೇ, ಮೂರ್ತಿಗೆ–ಮಹಲಿಂಗದಲ್ಲಿ ಕೂಡಲ್ಪಟ್ಟ, ಶರಣಂಗೆ, ಸತ್ಯಶುದ್ಧವುಂಟೆಂಬಿರಿ–ಭಿನ್ನಜ್ಞಾನ ಭಿನ್ನಕ್ರಿಯೆಗಳುಂಟೆಂದು ಹೇಳುವಿರಿ, ಸತ್ಯಶುದ್ಧವುಳ್ಳವಂಗೆ–ಭಿನ್ನಜ್ಞಾನಭಿನ್ನಕ್ರಿಯೆಗಳು ಉಂಟಾಗಿರುವಾತಂಗೆ, ಗುರುವಿಲ್ಲ–ತನುವಿನಲ್ಲಿ ಗುರುಸಂಬಂಧತ್ವವು

ಉಂಟಾಗಿಲ್ಲವು. ಸತ್ಯಶುದ್ಧವುಳ್ಳವಂಗೆ–ಭಿನ್ನಜ್ಞಾನ ಭಿನ್ನಕ್ರಿಯೆಗಳುಂಟಾಗಿರುವಾತಂಗೆ, ಲಿಂಗವಿಲ್ಲ–ಮನದಲ್ಲಿ ಲಿಂಗಸಂಬಂಧವುಂಟಾಗಿಲ್ಲವು. ಸತ್ಯಶುದ್ಧವುಳ್ಳವಂಗೆ–ಭಿನ್ನಜ್ಞಾನ ಭಿನ್ನಕ್ರಿಯೆಗಳುಂಟಾಗಿರುವಾತಂಗೆ, ಜಂಗಮವಿಲ್ಲ–ಪ್ರಾಣದಲ್ಲಿ ಜಂಗಮಸಂಬಂಧತ್ವವುಂಟಾಗಿಲ್ಲವು. ಸತ್ಯಶುದ್ಧವುಳ್ಳವಂಗೆ–ಭಿನ್ನಜ್ಞಾನ ಭಿನ್ನಕ್ರಿಯೆಗಳುಂಟಾಗಿರುವಾತಂಗೆ, ಪ್ರಸಾದವಿಲ್ಲ–ಆತ್ಮಾಂಗದಲ್ಲಿ ಪ್ರಸಾದಸಂಬಂಧತ್ವವುಂಟಾಗಿಲ್ಲವು. ಸತ್ಯಶುದ್ಧವುಳ್ಳವಂಗೆ–ಭಿನ್ನಜ್ಞಾನ ಭಿನ್ನಕ್ರಿಯೆಗಳುಂಟಾಗಿರುವಾತಂಗೆ, ಗಣತ್ವವಿಲ್ಲ–ಶಿವಗಣಂಗಳ ಕೃಪೆವುಂಟಾಗಿಲ್ಲವು, ಕೇಳಿರೆ–ಆಲಿಸಿರೆ.

ಸತ್ಯಶುದ್ಧದೇವರಿಗೆ–ಭಿನ್ನಜ್ಞಾನ ಭಿನ್ನಕ್ರಿಯೆಗಳುಂಟಾಗಿರುವಾತನ ತನುವಿನಲ್ಲಿ ನೆಲೆಗೊಂಡಿರುವ ಗುರುವಿಂಗೆ, ಉಪಚಾರವುಂಟು–ಭಿನ್ನವಿಟ್ಟುಕೊಂಡು ಧ್ಯಾನಿಸುವಂಥದು ಭಿನ್ನವಿಟ್ಟುಕೊಂಡು ಪೂಜಿಸುವಂಥದುಂಟಾಗಿರ್ಪುದು. ಸತ್ಯಶುದ್ಧದೇವರಿಗೆ–ಭಿನ್ನಜ್ಞಾನ ಭಿನ್ನಕ್ರಿಯಾಚಾರವುಂಟಾಗಿರುವಾತನ ಮನದಲ್ಲಿ ನೆಲೆಗೊಂಡಿರುವ ಲಿಂಗಕ್ಕೆ, [ಧ್ಯಾನ–] ಅಂತರಂಗದಲ್ಲಿ ಶಿವತತ್ತ್ವವನ್ನು ಧ್ಯಾನಿಸುವಂಥದೆ ಧ್ಯಾನ, ಮೌನ–ಆ ಧ್ಯಾನದಲ್ಲಿ ಕೂಡಿ ಸುಮ್ಮನಿರುವಂಥದೇ ಮೌನ. ಅನುಷ್ಠಾನವುಂಟು–ಅಂಗನ್ಯಾಸ ಕರನ್ಯಾಸ ಭಸ್ಮನ್ಯಾಸವೆಂದು ಸ್ಥಾನಸ್ಥಾನವನ್ನು ಮುಟ್ಟಿಕೊಂಬುವಂಥದು ಉಂಟಾಗಿರ್ಪುದು. ಸತ್ಯಶುದ್ಧ ಉಪದೇಶಕ್ಕೆ–ಭಿನ್ನಜ್ಞಾನ ಭಿನ್ನಕ್ರಿಯಾಚಾರ ಉಂಟಾಗಿರುವಾತನ ಪ್ರಾಣಜ್ಞಾನದಲ್ಲಿ ನೆಲೆಗೊಂಡಿರುವಂಥ ಜಂಗಮಕ್ಕೆ, ಜಪ–ಪವಳ ಪದ್ಮಾಕ್ಷಿ ಪುತ್ರಜೀವಿ ಶಂಖ ಮೌಕ್ತಿಕ ಕುಶಗ್ರಂಥಿ ಮೊದಲಾದವರಿಂದ ನೂರು ಇನ್ನೂರು ಮುನ್ನೂರು ನಾನೂರು ಐನೂರು ಹತ್ತುಸಾವಿರ ಹನ್ನೆರಡುಸಾವಿರ ಜಪವ ಮಾಡುವಂಥದೇ ಜಪ, ಭಿನ್ನವಿಟ್ಟುಕೊಂಡು ಜಪವ ಮಾಡುವಂಥದು ಭಿನ್ನವಿಟ್ಟುಕೊಂಡು ಬೋಧಿಸುವಂಥದು, ತಪ–ಊರು ತೊರೆದು ಘೋರಾರಣ್ಯಕ್ಕೆ ಹೋಗಿ ಪವನಾಹಾರ ಪರ್ಣಹಾರ ಜಲಾಹಾರ ಫಲಾಹಾರ ಉಕ್ಕಿನ ಚೂರ್ಣ ಲೋಹದ ಚೂರ್ಣ ಭಸ್ಮಚೂರ್ಣ ಮೊದಲಾದವನು ತೆಗೆದುಕೊಂಡು ಕೋಡಗಲ್ಲ ಮೇಲೆ ಪಂಚಾಗ್ನಿಗಳ ಮಧ್ಯದಲ್ಲಿ ಏಕಪಾದಸ್ಥಿತನಾಗಿ ಉಗ್ರತಪಸ್ಸನ್ನು ಮಾಡುವಂಥದೇ ತಪ, ಭಿನ್ನವಿಟ್ಟುಕೊಂಡು ತಪವ ಮಾಡುವಂಥದು, ಸಂಧ್ಯಾ–ಸಂಧ್ಯಾವಂದನೆಕ್ರಿಯೆಗಳು ಸಮಾಧಿ–ತಾ ಕುರುಹಿಟ್ಟಂಥ ವಸ್ತುವಿನಲ್ಲಿ ಚಿತ್ತೈಕಾಗ್ರತೆಯಿಂದ ಮನೋಲ್ರ್ಯಯವನ್ನೈದಿಸಿಕೊಡುವಂಥದೇ ಸಮಾಧಿ. ಹೋಮ–ಹದಿನೆಂಟು ಧಾನ್ಯಂಗಳನು ತುಪ್ಪ ತೈಲದಲ್ಲಿ ಸಮ್ಮಿಶ್ರಂಗೈದು ಅಗ್ನಿಪುರುಷನಿಗೆ ಆಹುತಿಯನ್ನು ಕೊಟ್ಟು ಯಜ್ಞವ ಮಾಡುವಂಥದೇ ಹೋಮ–ನೇಮ–ಚಾಂದ್ರಾಯಣ ಕೃಚ್ಛಾಂದ್ರಾಯಣವ್ರತಂಗಳು, ನಿತ್ಯ–ಆವಾಗಲೂ ತಪ್ಪದೆ ಮಾಡುವ ಕಟ್ಟಿನ ಕ್ರಿಯೆಗಳು. ಅಷ್ಟವಿಧಾರ್ಚನೆ–ಎಂಟುತರದರ್ಚನೆಯು, ಷೋಡಶೋಪಚಾರ–ಅರ್ಘ್ಯಾದಿ ಪ್ರದಕ್ಷಿಣಾಂತ್ಯಮಾದ ಹದಿನಾರು ತೆರದ ಉಪಚಾರಂಗಳು, ಉಂಟು–ಉಂಟಾಗಿರ್ಪವು.

ಸತ್ಯಶುದ್ಧದೇವರಿಗೆ–ಭಿನ್ನಜ್ಞಾನ ಭಿನ್ನಕ್ರಿಯಾಚಾರ ಉಂಟಾಗಿರುವಾತನ ತನುಮನಪ್ರಾಣಂಗಳಲ್ಲಿ ನೆಲೆಗೊಂಡಿರುವಂಥ ಗುರುಲಿಂಗಜಂಗಮಕ್ಕೆ, ಉಪಚಾರ ಉಂಟಾದ ಕಾರಣ–ಭಿನ್ನವಿಟ್ಟುಕೊಂಡು ಬೋಧಿಸುವಂಥದು ಭಿನ್ನವಿಟ್ಟುಕೊಂಡು ಧ್ಯಾನಿಸುವಂಥದು ಭಿನ್ನವಿಟ್ಟುಕೊಂಡು ಪೂಜಿಸುವಂಥದು ಉಂಟಾದ ನಿಮಿತ್ತು. ಇಂತಪ್ಪ–ಹೀಂಗೊಪ್ಪಲ್ಪಟ್ಟ, ಸತ್ಯಶುದ್ಧಗುರುವಿಂಗೆ–ಭಿನ್ನಜ್ಞಾನ ಭಿನ್ನಕ್ರಿಯೆಗಳುಂಟಾಗಿರುವಾತನ ತನುವಿನಲ್ಲಿ ನೆಲೆಗೊಂಡಿರುವಂಥ ಗುರುವಿಂಗೆ. ಶರಣೆನ್ನೆ–ನಮಸ್ಕಾರವೆಂದು ನಮಸ್ಕರಿಸೆನು. ಇಂತಪ್ಪ–ಹೀಂಗೊಪ್ಪಲ್ಪಟ್ಟ,

ಸತ್ಯಶುದ್ಧಗುರುವಿಂಗೆ–ಭಿನ್ನಜ್ಞಾನ ಭಿನ್ನಕ್ರಿಯೆಗಳುಂಟಾಗಿರುವಾತನ ಮನದಲ್ಲಿ ನೆಲೆಗೊಂಡಿರುವಂಥ ಲಿಂಗಕ್ಕೆ. ಶರಣೆನ್ನೆ–ನಮಸ್ಕಾರವೆಂದು ನಮಸ್ಕರಿಸೆನು. ಇಂತಪ್ಪ–ಹೀಂಗೊಪ್ಪಲ್ಪಟ್ಟ, ಸತ್ಯಶುದ್ಧಜಂಗಮಕ್ಕೆ–ಭಿನ್ನಜ್ಞಾನ ಭಿನ್ನಕ್ರಿಯೆಗಳುಂಟಾಗಿರುವಾತನ ಪ್ರಾಣಜ್ಞಾನದಲ್ಲಿ ನೆಲೆಗೊಂಡಿರುವಂಥ ಜಂಗಮಕ್ಕೆ. ಶರಣೆನ್ನೆ–ನಮಸ್ಕಾರವೆಂದು ನಮಸ್ಕರಿಸೆನು. ಇಂತಪ್ಪ–ಹೀಂಗೊಪ್ಪಲ್ಪಟ್ಟ, ಸತ್ಯಶುದ್ಧಪ್ರಸಾದಕ್ಕೆ–ಭಿನ್ನಜ್ಞಾನ ಭಿನ್ನಕ್ರಿಯೆಗಳುಂಟಾಗಿರುವಾತನ ಆತ್ಮಾಂಗದಲ್ಲಿ ನೆಲೆಗೊಂಡಿರುವಂಥ ಕೈಯಾನೆ–ಶರಣಾರ್ಥಿಯೆಂದು ಹಸ್ತವಾಂತು ತೆಗೆದುಕೊಂಡನುಭವಿಸೆನು ಇವರೆಲ್ಲರೂ–ಹಿಂದೆ ಹೇಳಲ್ಪಟ್ಟಂಥವರುಗಳೆಲ್ಲರೂ, ಬ್ರಹ್ಮನ ಮಕ್ಕಳು–ಬ್ರಹ್ಮನ ಸೃಷ್ಟಿಗೊಳಗಾಗಿಪ್ಪರು. ಎನಗೆ–ನನಗೆ, ಸತ್ಯವಿಲ್ಲ–ಆವುದಾನೊಂದು ಭಿನ್ನಭಕ್ತಿವುಂಟಾಗಿಲ್ಲವು. ಅಸತ್ಯವಿಲ್ಲವು–ಅವುದಾನೊಂದು ಭಿನ್ನಜ್ಞಾನವುಂಟಾಗಿಲ್ಲವು. ಅವ ಸಹಜವೂ ಇಲ್ಲದ–ಅವುದಾನೊಂದು ಖಂಡಿತವೈರಾಗ್ಯವುಂಟಾಗಿಲ್ಲದ, ಲಿಂಗೈಕ್ಯ ಕಾಣಾ–ಶಿಖಿಕರ್ಪುರ ಸಂಯೋಗವಾದ ಹಾಂಗೆ ಮಹಾಲಿಂಗದಲ್ಲಿ ಕೂಡಲ್ಪಟ್ಟಾತನು ಕಂಡಾ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

II– –

1–1 ಪೂಜೆ (ಜ.ಜ).

....

ಶಿವಶಿವಾ ಮೂರ್ತಿಗೆ ಸತ್ಯಶುದ್ಧ ಉಂಟೆಂಬಿರಿ–ಹರಹರಾ ವಿಗ್ರಹವನುಳ್ಳ ವಸ್ತುವಿಂಗೆ ಭಿನ್ನಕ್ರಿಯಾಪಾರಮಾರ್ಥಪವಿತ್ರತ್ವವುಂಟೆಂಬಿರಿ. ಸತ್ಯ ಶುದ್ಧವುಳ್ಳವಂಗೆ ಗುರುವಿಲ್ಲ–ಭಿನ್ನಕ್ರಿಯಾಪಾರಮಾರ್ಥಪವಿತ್ರತ್ವವು ಉಂಟಾದವಂಗೆ ಗುರುಸಂಬಂಧವಿಲ್ಲ. ಸತ್ಯಶುದ್ಧವುಳ್ಳವಂಗೆ ಲಿಂಗವಿಲ್ಲ–ಭಿನ್ನಕ್ರಿಯಾ ಪಾರಮಾರ್ಥಪವಿತ್ರತ್ವವು ಉಂಟಾದವಂಗೆ ಲಿಂಗಸಂಬಂಧವಿಲ್ಲ. ಸತ್ಯಶುದ್ಧವುಳ್ಳವಂಗೆ ಜಂಗಮವಿಲ್ಲ–ಭಿನ್ನಕ್ರಿಯಾಪಾರಮಾರ್ಥಪವಿತ್ರತ್ವವು ಉಂಟಾದವಂಗೆ ಜಂಗಮಸಂಬಂಧವಿಲ್ಲ. ಸತ್ಯಶುದ್ಧವುಳ್ಳವಂಗೆ ಪ್ರಸಾದವಿಲ್ಲ–ಭಿನ್ನಕ್ರಿಯಾಪಾರಮಾರ್ಥಪವಿತ್ರತ್ವವು ಉಂಟಾದವಂಗೆ ಪ್ರಸಾದಸಂಬಂಧವಿಲ್ಲ. ಸತ್ಯಶುದ್ಧವುಳ್ಳವಂಗೆ ಗಣತ್ವವಿಲ್ಲ ಕೇಳಿರೆ–ಭಿನ್ನಕ್ರಿಯಾ ಪಾರಮಾರ್ಥಪವಿತ್ರತ್ವವು ಉಂಟಾದವಂಗೆ ಗಣಸಂಬಂಧವಿಲ್ಲ ಲಾಲಿಸಿರೇ.

ಸತ್ಯಶುದ್ಧದೇವರಿಗೆ ಉಪಚಾರವುಂಟು–ಭಿನ್ನಕ್ರಿಯಾಪಾರಮಾರ್ಥಪವಿತ್ರತ್ವವು ಉಂಟಾದದೇವರಿಗೆ ಭಿನ್ನ ಉಪಚಾರವುಂಟು. ಸತ್ಯಶುದ್ಧದೇವರಿಗೆ ಧ್ಯಾನಮೌನ ಅನುಷ್ಠಾನ ಉಂಟು–ಭಿನ್ನಕ್ರಿಯಾಪಾರಮಾರ್ಥಪವಿತ್ರತ್ವವು ಉಂಟಾದ ದೇವರಿಗೆ ಭಿನ್ನಧ್ಯಾನ ಮೌನ ಅನುಷ್ಠಾನ ಉಂಟು. ಸತ್ಯಶುದ್ಧ ಉಪದೇಶಕ್ಕೆ ಜಪತಪಪೂಜೆಸಮಾಧಿಹೋಮನೇಮನಿತ್ಯ ಅಷ್ಟವಿಧಾರ್ಚನೆ ಷೋಡಶೋಪಚಾರವುಂಟು–ಭಿನ್ನಕ್ರಿಯಾಪಾರಮಾರ್ಥಪವಿತ್ರತ್ವವನುಳ್ಳ ಅನುಗ್ರಹಕ್ಕೆ ಭಿನ್ನವಿಟ್ಟು ಮಾಡೂದುಂಟು. ಸತ್ಯಶುದ್ಧದೇವರಿಗೆ ಉಪಚಾರ ಉಂಟಾದ ಕಾರಣ–ಭಿನ್ನಕ್ರಿಯಾಪಾರಮಾರ್ಥ ಪವಿತ್ರತ್ವವನುಳ್ಳ ದೇವರಿಗೆ ಭಿನ್ನಸತ್ಕಾರಗಳುಂಟಾದ ನಿಮಿತ್ತವು. ಇಂತಪ್ಪ ಸತ್ಯಶುದ್ಧಗುರುವಿಂಗೆ ಶರಣೆನ್ನೆ–ಹೀಗಾದ ಭಿನ್ನಕ್ರಿಯಾಪಾರಮಾರ್ಥಪವಿತ್ರತ್ವವು ಉಂಟಾದ ಗುರುವಿಗೆ ನಮಸ್ಕಾರವ ಮಾಡೆ. ಇಂತಪ್ಪ ಸತ್ಯಶುದ್ಧಲಿಂಗಕ್ಕೆ ಶರಣೆನ್ನೆ–ಹೀಂಗಾದ ಭಿನ್ನಕ್ರಿಯಾಪಾರಮಾರ್ಥಪವಿತ್ರತ್ವವುಂಟಾದ ಲಿಂಗಕ್ಕೆ ನಮಸ್ಕಾರವ ಮಾಡೆ. ಇಂತಪ್ಪ ಸತ್ಯಶುದ್ಧಜಂಗಮಕ್ಕೆ ಶರಣೆನ್ನೆ–ಹೀಂಗಾದ ಭಿನ್ನಕ್ರಿಯಾಪಾರಮಾರ್ಥಪವಿತ್ರತ್ವ ಉಂಟಾದ

ಜಂಗಮಕ್ಕೆ ನಮಸ್ಕಾರವ ಮಾಡೆ. ಇಂತಪ್ಪ ಸತ್ಯಶುದ್ಧ ಪ್ರಸಾದಕ್ಕೆ ಕೈಯಾನೆ–ಹೀಂಗಾದ ಭಿನ್ನಕ್ರಿಯಾಪಾರಮಾರ್ಥದ ತತ್ವಾನ್ನ ಪ್ರಸಾದಕ್ಕೆ ಹಸ್ತವಚಾಚಿ. ಇವರೆಲ್ಲರೂ ಬ್ರಹ್ಮನ ಮಕ್ಕಳು–ಹಿಂದೆ ಹೇಳಿದವರೆಲ್ಲರೂ ಅಜನ ಸೃಷ್ಟಿಗೊಳಗಾದವರು.

● ಮತ್ತಂ, ಸಮರಸಕ್ರಿಯಾಪಾರಮಾರ್ಥಪವಿತ್ರತ್ವವನುಳ್ಳ ಶರಣನಿಗೆ ಗುರು ಭಿನ್ನವಲ್ಲ. ಸಮರಸಕ್ರಿಯಾಪಾರಮಾರ್ಥಪವಿತ್ರತ್ವವನುಳ್ಳ ಶರಣನಿಗೆ ಲಿಂಗ ಭಿನ್ನವಿಲ್ಲ. ಹಾಂಗೆ ಜಂಗಮವು ಭಿನ್ನವಿಲ್ಲ. ಪ್ರಸಾದವು ಭಿನ್ನವಿಲ್ಲ. ದೇವಗಣಸಮೂಹವು ಭಿನ್ನವಿಲ್ಲ. [೧]ಲಾಲಿಸಿರೆ, ಸಮರಸಕ್ರಿಯಾ ಪಾರಮಾರ್ಥ[೧] ಪವಿತ್ರತ್ವವನುಳ್ಳ ದೇವರಿಗೆ ಸಮರಸವಿಟ್ಟು ಮಾಡುವ ಉಪಚಾರವುಂಟು. ಸಮರಸಕ್ರಿಯಾ ಪಾರಮಾರ್ಥಪವಿತ್ರತ್ವವುಂಟಾದ ದೇವರಿಗೆ ಲಿಂಗಸ್ಮರಣೆಯು ಮುಗ್ಧತ್ವವು ಅನುಷ್ಠಾನಕ್ರಿಯೆಗಳುಂಟು. ಸಮರಸಕ್ರಿಯಾಪಾರಮಾರ್ಥಪವಿತ್ರತ್ವವು ಉಂಟಾದ ಅನುಗ್ರಹಕ್ಕೆ ಅನುಷ್ಠಾನ ಶರೀರನಿಗ್ರಹ ಆರಾಧನೆ ಮನೋಲಯ ಯಜ್ಞತ್ರಿಕಾಲಂಗಳಲ್ಲಿ ತಪ್ಪದೆ ಮಾಡುವ ೮ ತೆರದರ್ಚನೆ ೧೬ ತೆರದ[೨] ಸತ್ಕಾರಗಳುಂಟು. ಸಮರಸಕ್ರಿಯಾಪಾರಮಾರ್ಥಪವಿತ್ರತ್ವವು ಉಂಟಾದ ದೇವರಿಗೆ ಸಮರಸವಿಟ್ಟು ಮಾಡೂದುಂಟು. ಅದು ನಿಮಿತ್ತವು ಹೀಂಗಾದ ಸಮರಸಕ್ರಿಯಾಪಾರಮಾರ್ಥ ಪವಿತ್ರತ್ವವು ಉಂಟಾದ ಗುರುವಿಗೆ ಭಿನ್ನವಿಟ್ಟು ನಮಸ್ಕರಿಸಿ ಉಳಿದುವನು ಹೀಂಗೆ ಮಾಡುವುದು.

....

೧–೧ ಸಮರಸಕ್ರಿಯಾಪಾರಮಾರ್ಥ ಲಾಲಿಸಿರೆ (ಜ). ೨–ಷೋಡಶೋಪಚಾರ (ಜ)

III– –

ನಿತ್ಯನಿರಂಜನಪರವಸ್ತುವಿಗೆ ಸಚ್ಚಿದಾನಂದಾದಿಲಕ್ಷಣಗಳಿಂದ ಮೂರ್ತಿಗೊಳಿಸಿ ಸತ್ಯಶುದ್ಧದಿಗುಣಗಳನು ಕಲ್ಪಿಸಿ ಭಿನ್ನವಿಟ್ಟು ಪೂಜಿಸುವವರಿಗೆ ಬ್ರಹ್ಮನ ಸೃಷ್ಟಿ ವಿಷ್ಣುವಿನ ಸ್ಥಿತಿ ರುದ್ರನ ಲಯವಲ್ಲದೆ ಆದ್ಯಂತಶೂನ್ಯರಹಿತವಾಗಿ ಪರಿಪೂರ್ಣವಾದ ಮಹಾಲಿಂಗದಲ್ಲಿ ಕ್ರಿಯಾಜ್ಞಾನಭಾವನಿಸ್ಪತ್ತಿಯಾದ ಶರಣನಿಗೆ ಅಚ್ಚಲಿಂಗೈಕ್ಯವೆಂಬುದೀಗ, ಶಿವಶಿವಾ ಮೂರ್ತಿಗೆ ಸತ್ಯಶುದ್ಧ ಉಂಟೆಂಬಿರಿ ಎಂಬೀವಚನ[೩] ತಾತ್ಪರ್ಯಾರ್ಥವು.

....

೩ + ದರ್ಥ(ಟ)

V– –

ನಿತ್ಯನಿರಂಜನಪರವಸ್ತುವಿಗೆ ಸಚ್ಚಿದಾನಂದಾದಿಲಕ್ಷಣದಿಂದೆ ಮೂರ್ತಿಗೊಳಿಸಿ ಸತ್ಯಶುದ್ಧಾದಿಗುಣಂಗಳನು ಕಲ್ಪಿಸಿ ಭಿನ್ನವಿಟ್ಟು ಪೂಜಿಸುವವರಿಗೆ ಬ್ರಹ್ಮನ ಸೃಷ್ಟಿ ವಿಷ್ಣುವಿನ [ಸ್ಥಿತಿ] ರುದ್ರನ ಲಯವಲ್ಲದೆ ಆದ್ಯಂತ ಶೂನ್ಯರಹಿತವಾಗಿ ಪರಿಪೂರ್ಣವಾದ ಮಹಾಲಿಂಗದಲ್ಲಿ ಕ್ರಿಯಾಜ್ಞಾನಭಾವನಿಃಪತಿಯಾದ ಶರಣಂನಿಗಚ್ಚಲಿಂಗೈಕ್ಯವೆಂಬುದೀಗ, ಶಿವ ಶಿವಾ ಮೂರ್ತಿಗೆ ಸತ್ಯಶುದ್ಧವುಂಟೆಂಬಿರಿಯೆಂಬೀ ವಚನದ ತಾತ್ಪರ್ಯಾರ್ಥ.

ಐಕ್ಯನ ಭಕ್ತಸ್ಥಲ

I- -

[ಐಕ್ಯನ ಭಕ್ತಸ್ಥಲ–] ಐಕ್ಯಸ್ಥಲದೊಳಗಣ ಭಕ್ತಸ್ಥಲದಾಚರಣೆಯನ್ನು ನಿರೂಪಿಸುತ್ತಿಹರು.

೯೩೭

ಭಕ್ತನಾಯಿತ್ತೇ ಭಕ್ತಿದಾಸೋಹ. ಯುಕ್ತನಾಯಿತ್ತೇ ಯುಕ್ತಿದಾಸೋಹ. ಐಕ್ಯನಾಯಿತ್ತೇ ಮಮಕಾರದಾಸೋಹ. ಸರ್ವರಲ್ಲಿ ದಾಸೋಹವೇ ಬೇಕು. ಈ ದಾಸೋಹದನುವ ಕೂಡಲಸಂಗಮದೇವಾ ತಾನೆ ಬಲ್ಲ.

I- -

ಭಕ್ತನಾಯಿತ್ತೇ ಭಕ್ತಿದಾಸೋಹ: ಭಕ್ತನಾಯಿತ್ತೇ–ತ್ರಿವಿಧಪದಾರ್ಥವನ್ನು ಹಿಡಿದು ಭಕ್ತಿಗೃಹವನ್ನು ಕಟ್ಟಿ ಭಕ್ತಿಯ ಮಾಡುವಂಥ ಭಕ್ತಸ್ಥಲದಾಚರಣೆಯುಳ್ಳಾತನಾಯಿತ್ತಾದೊಡೆ, ಭಕ್ತಿದಾಸೋಹ–ತನ್ನನಾಶ್ರಯಿಸಿ ಬಂದಂಥ ಭಕ್ತರುಗಳಿಗೆ ತ್ರಿವಿಧಪದಾರ್ಥವನ್ನು ಹಿಡಿದು ಭಕ್ತಿಗೃಹವನ್ನು ಕಟ್ಟಿ ಭಕ್ತಿಯ ಮಾಡೆಂದು ಬೋಧಿಸುವಂಥ ಭಕ್ತದಾಸೋಹವೇ ಉಂಟಾಗಿರಬೇಕು. ಯುಕ್ತನಾಯಿತ್ತೇ ಯುಕ್ತಿದಾಸೋಹ: ಯುಕ್ತನಾಯಿತ್ತೇ–ಅಷ್ಟಾವರಣವೇ ಅಂಗವ ಮಾಡಿಕೊಂಡ ಪಂಚಾಚಾರವನ್ನೇ ಪ್ರಾಣವ ಮಾಡಿಕೊಂಡು ಏಕಲಿಂಗನಿಷ್ಠಾಪರನಾಗಿ ಆಚರಿಸುವಂಥ ಮಾಹೇಶ್ವರಸ್ಥಲದಾಚರಣೆಯುಳ್ಳಾತನೇ ತಾನಾಯಿತ್ತಾದಡೇ, ಯುಕ್ತಿದಾಸೋಹ–ತನ್ನನಾಶ್ರಯಿಸಿ ಬಂದಂಥ ಮಾಹೇಶ್ವರರುಗಳಿಗೆ ಆದಿಮಧ್ಯಾವಸಾನನಿತ್ಯಾನಿತ್ಯ ವಿವೇಕವನ್ನು ತಿಳಿದುಕೊಂಡು ಜ್ಞಾನಿಳಾಗಿ ಆಚರಿಸಿದರೆ ಬೋಧಿಸುವಂಥ ಯುಕ್ತಿದಾಸೋಹವೇ ಉಂಟಾಗಿರಬೇಕು. ಐಕ್ಯನಾಯಿತ್ತೇ ಮಮಕಾರ ದಾಸೋಹ: ಐಕ್ಯನಾಯಿತ್ತೇ–ಶಿಖಿಕರ್ಪುರಸಂಯೋಗವಾದ ಹಾಂಗೆ ಮಹಾಲಿಂಗದಲ್ಲಿ ಕೂಡಲ್ಪಟ್ಟೈಕ್ಯಸ್ಥಲದಾಚರಣೆಯುಳ್ಳಾತನೇ ತಾನಾಯಿತ್ತಾದೊಡೆ, ಮಮಕಾರ ಮಮಕಾರ ದಾಸೋಹ–ತನ್ನನಾಶ್ರಯಿಸಿ ಬಂದಂಥ ಐಕ್ಯರುಗಳಿಗೆ ಸರ್ವದಯಾಚಿತ್ತಕಾರುಣ್ಯರಸಭರಿತತ್ವ ಮುಂದಗೊಂಡು ಸಮಸ್ತ ಪ್ರಾಣಿಗಳ ಮೇಲೆ ಕೃಪೆಯುಳ್ಳವರೇ ನೀವಾಗಿರೆಂದು ಬೋಧಿಸುವಂಥ ಮಮಕಾರ ದಾಸೋಹವೇ ಉಂಟಾಗಿರಬೇಕು. ಸರ್ವರಲ್ಲಿ–ಸಮಸ್ತರಲ್ಲಿಯೂ, ದಾಸೋಹವೇ ಬೇಕು–ಭಕ್ತನಾದರೆ ಭಕ್ತಿ ದಾಸೋಹ ಯುಕ್ತನಾದರೆ ಯುಕ್ತಿ ದಾಸೋಹ ಐಕ್ಯನಾದರೆ ಮಮಕಾರ ದಾಸೋಹವೇ ಉಂಟಾಗಿರಬೇಕು. ಈ ದಾಸೋಹದ–ಗುರುಲಿಂಗ ಜಂಗಮದ ಭಕ್ತಿ ದಾಸೋಹದ, ಅನುವ–ಒಪ್ಪವನ್ನು, ಕೂಡಲಸಂಗಮದೇವ ತಾನೆ ಬಲ್ಲ–ಪರಶಿವಲಿಂಗಕ್ಕರಿಯ ಬರುವುದು.

II- -

ಭಕ್ತನಾಯಿತ್ತೇ ಭಕ್ತಿದಾಸೋಹ–ಸದ್ಭಕ್ತನಾದರೆ ತನುಮನಧನವನು ಗುರುಲಿಂಗಜಂಗಮಕ್ಕೆ ಸಮರ್ಪಣೆಯ ಮಾಡಬೇಕು. ಯುಕ್ತನಾಯಿತ್ತೇ ಯುಕ್ತಿದಾಸೋಹ–ಜ್ಞಾನಿಯಾದರೆ ಶಿವಾನುಭಾವವನು ಬೋಧಿಸಬೇಕು. ಐಕ್ಯನಾಯಿತ್ತೇ ಮಮಕಾರದಾಸೋಹ–ಲಿಂಗೈಕ್ಯನಾದರೆ ಷಟ್‌ಸ್ಥಲಂಗಳಲ್ಲಿ ಪ್ರೀತಿಯಾಗಿರುವುದೇ ದಾಸೋಹ, ಮುಂದಕ್ಕೆ ಕಾಣಬಂದರ್ಥ.

೯೩೮

[1]ಜಲವ ನುಂಗಿತ್ತಯ್ಯ ಎನ್ನ ಕರವು, ಪತ್ರೆಯ ನುಂಗಿತ್ತಯ್ಯ ಎನ್ನ [2]ಶಿಖಿ[2], ಏನಯ್ಯ[3] ಮಂತ್ರ ಅಭಿನ್ನವಾಯಿತ್ತು ! ಇಂತೀ ದ್ವಿ[4]ವಿ[4]ಧ ಒಂದಾಗುವ ಮುನ್ನ ಕೂಡಲಸಂಗಮದೇವರು ಪೂಜೆಗೊಂಡ[5]ರು.

I– –

ಎನ್ನ ಕರವು–ಶರಣನ ವಾಮಭಾಗದ ಹಸ್ತದಲ್ಲಿ ನೆಲಗೊಂಡಿರುವ ಸತ್ಕ್ರಿಯಾಸ್ವರೂಪವಾದಿಷ್ಟ ಲಿಂಗವು, ಜಲವ ನುಂಗಿತ್ತಯ್ಯ–ಜಲಬುದ್ಬುದಮಯ ಸ್ವರೂಪವಾದ ದೇಹವನ್ನು ಅವಗ್ರಹಿಸಿತ್ತಯ್ಯ, ಎನ್ನ ಶಿಖಿ ಆ ಇಷ್ಟಲಿಂಗದ ಚಿತ್ಕಲೆಯಾ ಶರಣನಂತರಂಗದಲ್ಲಿ ನೆಲೆಗೊಂಡಿರುವ ಚಿದಗ್ನಿ ಸ್ವರೂಪವಾದ ಪ್ರಾಣಲಿಂಗವು, ಪತ್ರೆಯು ನುಂಗಿತ್ತಯ್ಯ–ಎನ್ನ ಹೃದಯದೆಂಟೆಸಳಕಮಲ ನೊಳಕೋಡಿತ್ತಯ್ಯ, ಏನಯ್ಯ–ಇದೇನು ಕಾರಣವಯ್ಯ, ಮಂತ್ರ–ಮಂತ್ರಮೂರ್ತಿಯಾದ ಪ್ರಾಣಲಿಂಗವು. ಅಭಿನ್ನವಾಯಿತ್ತು –ಅಭಿನ್ನಭಾವದಿಂದ ಸಮರಸವಾಯಿತ್ತು. ಇಂತೀ–ಈ ಪ್ರಕಾರವಾದ, ದ್ವಿವಿಧ ಒಂದಾಗದ ಮುನ್ನ–ಅಂಗ ಪ್ರಾಣಗಳು ಇಷ್ಟ ಪ್ರಾಣಂಗಳಲ್ಲಿ ಕೂಡಿ ಏಕವಾಗದಕಿಂದ ಮೊದಲೆ, ಕೂಡಲಸಂಗಮದೇವರು–ನಿಃಕಲಬ್ರಹ್ಮ ದೇವರು, ಪೂಜೆಗೊಂಡರು–ಆ–ಪ್ರಾಣಲಿಂಗವೇ ಆತ್ಮಾಂಗದಲ್ಲಿ ಭಾವಲಿಂಗವಾಗಿ ಮನೋಲಯ ನಿರಂಜನ ಪೂಜಾಕ್ರಿಯೆಗಳಿಂದಾರಾಧಿಸಿಕೊಂಡರು.

II– –

2–2 ಶಿರವು (ಚ, ಜ) 3 + ಏನಯ್ಯ (ಜ).

....

ಜಲವ ನುಂಗಿತಯ್ಯ ಎನ್ನ ಕರವು–ಎನ್ನ ವಾಮಭಾಗದ ಪಾಣಿತಾಣದಲ್ಲಿರ್ದ ಇಷ್ಟಲಿಂಗವು ಮನವನೊಳಕೊಂಡಿತ್ತಯ್ಯ, ಪತ್ರೆಯ ನುಂಗಿತ್ತಯ್ಯ ಎನ್ನ ಶಿರವು–ಶರಣನ ಜ್ಞಾನವು ಸುಜ್ಞಾನ ಸ್ವರೂಪವಾದ ಪ್ರಾಣಲಿಂಗವನೊಳಗೊಂಡಿತ್ತಯ್ಯ, ಏನಯ್ಯ ಮಂತ್ರ ಭಿನ್ನವಾಯಿತು–ಏನು ಕಾರಣವಯ್ಯ ಮಂತ ಭೇದವಾಯಿತ್ತು. ಇಂತೀ ದ್ವಿವಿಧ ಒಂದಾಗದ ಮುನ್ನ ಕೂಡಲಸಂಗಮದೇವರು ಪೂಜೆಗೊಂಡರು–ಈ ಕ್ರಿಯಾಜ್ಞಾನವೇಕವಾಗೂದಕ್ಕೆ ಮೊದಲೇ ಆರಾಧಿಸಿಕೊಂಡರು.

....

೧ + ಏನಯ್ಯ (ಜ).

III– –

4–4 X (ಟ, ಡ).

....

ಇಂತೀ ದ್ವಿ[ವಿ]ಧ–ಈ ಕ್ರಿಯಾಜ್ಞಾನಂಗಳು, ಒಂದಾಗದ ಮುನ್ನ–ಮಂತ್ರ ಲಿಂಗವೇಕಾರ್ಥವಾ[ಗ]ದ ಕೂಡೆ, ಕೂಡಲಸಂಗಮದೇವರು ಪೂಜೆಗೊಂಡರು–ಪರಶಿವಲಿಂಗವು ಅರ್ಚನೆಯನಂಗೀಕರಿಸಿದರೆಂಬ ಶಬ್ದಕ್ಕರ್ಥ.

೨–೨ X (ಟ, ಡ) ೩–೩ X (ಟ, ಡ) .

V– –

1 + ಸ(ಪ) 5 + ಪ(ಪ)

ಶ್ರೀಗುರುದೇವನು ಕ್ರಿಯಾದೀಕ್ಷೆಯಿಂದ ಕರಸ್ಥಲಕ್ಕೆ ಕೊಟ್ಟ ಇಷ್ಟಲಿಂಗವು ಶರಣನ ಭಿನ್ನ ವಿಷಯರಸವ ನಷ್ಟವ ಮಾಡಿತ್ತೆಂಬುದೀಗ ಸಜಲವ ನುಂಗಿತ್ತಯ್ಯ ಎನ್ನ ಕರವು ಎಂಬ ಶಬ್ದಕ್ಕರ್ಥ. ವೇಧಾದೀಕ್ಷೆಯಿಂದ ಶ್ರೀ ಗುರುದೇವನು, ಸೂಕ್ಷ್ಮ ತನುವಿನಲ್ಲಿ ಸ್ಥಾಪಿಸಿದ ಚಿದ್ರ ಸ್ವರೂಪವಾದ ಪ್ರಾಣಲಿಂಗವು ಹೃದಯದಧೋಮುಖವಾದಷ್ಟದಳಂಗಳಲ್ಲಿ ಚರಿಸುವ ಜೀವನ ವರ್ತನೆಯ ನಷ್ಟವ ಮಾಡಿತ್ತೆಂಬುದೀಗ, ಪತ್ರೆಯ ನುಂಗಿತ್ತಯ್ಯ ಎನ್ನ ಶಿಖಿಯೆಂಬ ಶಬ್ದಕ್ಕರ್ಥ. ಶ್ರೀಗುರುದೇವನು ಕರ್ಣದಲ್ಲಿ ಮಂತ್ರೋಪದೇಶವ ಮಾಡಿ ಕಾರಣ ತನುವಿನಲ್ಲಿ ಸಂಬಂಧಿಸಿದ ಭಾವಲಿಂಗವು ಕರಣಂಗಳ ವರ್ತನೆಯ ನಷ್ಟವ ಮಾಡಿತ್ತೆಂಬುದೀಗ, ಏನಯ್ಯ ಮಂತ್ರ ಭಿನ್ನವಾಯಿತ್ತೆಂಬ ಶಬ್ದಕ್ಕರ್ಥ.

ಗ್ರಂ॥ ಮಂತ್ರಮಧ್ಯೇ ಭವೇಲ್ಲಿಂಗಂ ಲಿಂಗಮಧ್ಯೇ ಭವೇಚ್ಛಿವಃ। ಮಂತ್ರಲಿಂಗದ್ವಯೋರೈಕ್ಯಂ ಇಷ್ಟಲಿಂಗಂತು ಶಾಂಕರೀ॥ ಎಂದು ಮಂತ್ರ ಮಧ್ಯದಲ್ಲಿ ಲಿಂಗವಿರ್ಪುದು, ಲಿಂಗಮಧ್ಯದಲ್ಲಿ ಶಿವನಿರ್ಪನು. ಮಂತ್ರಲಿಂಗಂಗಳೆರಡೂ ಏಕತ್ವವುಳ್ಳ ಇಷ್ಟಲಿಂಗವೆಂದು ಶರಣನು ಸಮರಸಪೂಜೆ ಮಾಡಲಾಗಿ ಆ ಪೂಜೆಯ ಕೈಕೊಂಡು ಪರಶಿವನು, ಆ ಶರಣನ ತನ್ನಲ್ಲಿ ಐಕ್ಯವ ಮಾಡುವನೆಂಬುದೀಗ, ಇಂತೀ ದ್ವಿವಿಧ ಒಂದಾಗದ ಮುನ್ನ ಕೂಡಲಸಂಗಮದೇವರು ಪೂಜೆಗೊಂಡರೆಂಬ ಶಬ್ದಕ್ಕರ್ಥ.

೯೩೯

ಎಲ್ಲವ ಬೇಡಿದರೆಮ್ಮವರು, ಒಂದಬೇಡ ಮಱೆದರಯ್ಯ, ಮರ್ತ್ಯಲೋಕದ ಮಹಾಗಣಂಗಳು ಒಂದ ಬೇಡ ಮರೆದರು. ಕೂಡಲಸಂಗಮದೇವಾ ಎನ್ನ ಬೇಡ ಮರೆದರು.

I– –

ಎಲ್ಲವ ಬೇಡಿದರೆಮ್ಮವರು: [ಎಮ್ಮವರು]–ನಮ್ಮ ಜ್ಞಾನಜಂಗಮಮೂರ್ತಿಗಳು, ಎಲ್ಲವ ಬೇಡಿದರು–ಸಮಸ್ತ ಪದಾರ್ಥವನ್ನು ಕೇಳಿದರು. ಒಂದು ಬೇಡ ಮರೆದರಯ್ಯ:[ಒಂದು ಬೇಡ–]

ಒಂದು ಪದಾರ್ಥವನ್ನು ಕೇಳುವಂಥದನು. ಮರೆದರಯ್ಯ–ವಿಸ್ಮೃತಿಯನೈದಿಸಿ ಬಿಟ್ಟರಯ್ಯ. ಮರ್ತ್ಯಲೋಕದ ಮಹಾಗಣಂಗಳು: ಮರ್ತ್ಯಲೋಕದ–ಭೂಲೋಕದ, ಮಹಾಗಣಂಗಳು, ಮಹಾಶಿವಗಣಂಗಳು ಒಂದು ಬೇಡ ಮರೆದರು. ಒಂದು ಬೇಡ–ಒಂದು ಪದಾರ್ಥವನ್ನು ಕೇಳುವಂಥದನು, ಮರೆದರು–ವಿಸ್ಮೃತಿಯನೂದಿಸಿ ಬಿಟ್ಟರು. ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ, ಎನ್ನ ಬೇಡ ಮರೆದರು: (ಎನ್ನಬೇಡ–) ನಾನೆಂಬ ಪದಾರ್ಥವನ್ನು ಕೇಳುವಂತದನು, ಮರೆದರು–ವಿಸ್ಮೃತಿಯನೈದಸಿ ಬಿಟ್ಟರು.

III– –

ಎಮ್ಮವರು–ನಮ್ಮ ಪೂರ್ವಪುರಾತನರು, ಒಂದ ಬೇಡ ಮರೆದರಯ್ಯ–ಲಿಂಗದಲ್ಲೇಕಾರ್ಥವಾಗುವ ಜ್ಞಾನವೊಂದನು ಯಾಚಿಸುವದನು ವಿಸ್ಮೃತಿಗೈದರಯ್ಯ.

V– –

ಎಮ್ಮವರು–ಪೂರ್ವಪುರಾತನರು, ಒಂದ ಬೇಡ ಮಱೆದರಯ್ಯ–ಲಿಂಗದಲ್ಲೇಕಾರ್ಥವಾಗುವ ಒಂದದ್ವೈತ ಜ್ಞಾನವನು ಯಾಚಿಸುವುದನು ವಿಸ್ಮೃತಿಗೆಯ್ದರು.

೯೪೦

ಭಿತ್ತಿಯಲ್ಲದ ಚಿತ್ತಾರದಂತೆ ಭಕ್ತಿಯಿಲ್ಲದ ಪ್ರಮಥನಾಗಿ[1] ಎಂದಿಪ್ಪೆ[1]ನಯ್ಯಾ? ಸತ್ಯವಿಲ್ಲದ ಶರಣನಾಗಿ [1]ಎಂದಿಪ್ಪೆ[1]ನಯ್ಯಾ? ಗೆರೆಯಿಲ್ಲದ ಕೋಲಿನಲ್ಲಿ [2]ಉದ್ದರಿ[2]ಯನಿಕ್ಕಿದ ಭಂಡದ [3]ಹರದನ[3]ಂತಾದೆನಯ್ಯಾ ಕೂಡಲಸಂಗಮದೇವಾ.

I– –

ಭಿತ್ತಿಯಿಲ್ಲದ ಚಿತ್ತಾರದಂತೆ–ಅಶ್ವಾವಳಿ ಗಜಾವಳಿ ಮೃಗಾವಳಿ ಸ್ತ್ರೀಸಾಲು ಪುರಷಸಾಲು ಮೊದಲಾದುವನ್ನು ಪಟಭಿತ್ತಿಗಳ ಮೇಲೆ ಬರೆದರೆ ಕಣ್ಣಿಗೆ ಸಾಕಾರವಾಗಿ ಕಾಣಬಂದಾವಲ್ಲದೆ ಮನಸ್ಸಿನಲ್ಲಿ ಬರೆಯಬೇಕೆಂದು ನೆನೆದರೆ ಕಣ್ಣಿಗೆ ಸಾಕಾರವಾಗಿ ಕಾಣಬಂದಾವೆ? ಕಾಣಲರಿಯವು. ಹಾಂಗೆ ಭಿತ್ತಿಯಿಲ್ಲದ ಚಿತ್ತಾರದಂತೆ ಸಮರಸಭಾವದಿಂದ ಲಿಂಗಪೂಜೆ ಜಂಗಮದಾಸೋಹವನ್ನು ಮಾಡಿದರೆ. ಪಟಭಿತ್ತಿಗಳ ಮೆಲೆ ಅಶ್ವಾವಳಿ ಗಜಾವಳಿ ಮೃಗಾವಳಿ ಸ್ತ್ರೀಸಾಲು ಪುರಷಸಾಲು ಮೊದಲಾದವನ್ನು ಬರೆದರೆ ಕಣ್ಣಿಗೆ ಸಾಕಾರವಾಗಿ ಕಾಣಬಂದ ಹಾಗೆ ನಿತ್ಯವಾದ ನಿಜಮೋಕ್ಷವೇ ಉಂಟಾಗುತ್ತಿಹುದು. ಭಿನ್ನವಿಟ್ಟುಕೊಂಡು ಲಿಂಗಪೂಜೆ ಜಂಗಮದಾಸೋಹವನ್ನು ಮಾಡಿದರೆ ಭಿತ್ತಿಯಿಲ್ಲದ ಚಿತ್ತಾರದ ಹಾಂಗೆ ವ್ಯರ್ಥಸ್ಯವಾಗಿರ್ಪುದು.

● ಮತ್ತಂತುಮಲ್ಲದೆ, ಭಿತ್ತಿಯಿಲ್ಲದ–ಆಧಾರಕರ್ತೃಸ್ವರೂಪವಾದ ಜಂಗಮಭಕ್ತಿಯಿಲ್ಲದ, ಚಿತ್ತಾರದಂತೆ–ವಿಚಿತ್ರಮುಕ್ತಿಸ್ವರೂಪವಾದ ಲಿಂಗ ಪೂಜೆಯ ಮಾಡಿ ಲಿಂಗದ ಕೃಪೆಯನ್ನು ಪಡೆಯಬೇಕೆಂದರೆ ದೊರಕೊಂಡಿತ್ತೆ? ದೊರೆಕೊಳ್ಳದು. ಭಕ್ತಿಯಿಲ್ಲದ ಪ್ರಮಥನಾಗಿ–ಅನಾದಿನಿರ್ವಂಚಕ

ಸದ್ಭಕ್ತನಾಗಿ, ಎಂದಿಪ್ಪೆನಯ್ಯಾ-ಲಿಂಗದಲ್ಲಿ ಅವಕಾಲಕ್ಕೆ ಕೂಡಿರ್ಪೆನಯ್ಯಾ. ಸತ್ಯವಿಲ್ಲದ ಶರಣನಾಗಿ-ಲೋಕದವರ ಕಣ್ಣಮುಂದೆ ನಿತ್ಯವಾಗಿರುಂಥದೇ ಹೊನ್ನು, ಹೆಣ್ಣು, ಮಣ್ಣು, ಅದಕ್ಕೆ ಮಿಥ್ಯವಾಗಿರುವಂಥದೇ ಚಿತ್ತು. ಆ ಚಿತ್ಸ್ವರೂಪವೇ ತಾನಾಗಿ, [ಎಂದಿಪ್ಪೆನಯ್ಯ-] ಲಿಂಗದಲ್ಲಿ ಆವಕಾಲಕ್ಕೆ ಕೂಡಿರ್ಪೆನೋ.

ಗೆರೆಯಿಲ್ಲದ ಕೋಲಿನಲ್ಲಿ ಉದ್ದರಿಯನಿಕ್ಕಿದ ಭಂಡದ ಹರದನಂತೆ-ಸೇರಿನ ಗೆರೆ ಪಂಚೇರಿನ ಗೆರೆ ಧಡೆದ ಗೆರೆ ಎಂದು ಅಳತೆಪ್ರಮಾಣವಿದ್ದಂಥ ಚಿಂ೧ತ೧ಕೋಲಿನಲ್ಲಿ, ಉದ್ದರಿ-ಎಚ್ಚವನ್ನು ತೂಗಿ ಕೊಟ್ಟರೆ ಇಷ್ಟು ವೆಚ್ಚವಾಯಿತ್ತು? ಇಷ್ಟು ಲಾಭವಾಯಿತ್ತು? ಇಷ್ಟು ಲುಕ್ಸಾನವಾಯಿತ್ತು? ಇಷ್ಟು ಲೆಕ್ಕವ ಬರೆಯಬೇಕೆಂಬ ಮಿತವನ್ನು ತಿಳಿದಾನಲ್ಲದೆ, ಮನೋಹಾಳತ ಕಣ್ಣಿನಹಾಳತ ಕೈಯಹಾಳತದಲ್ಲಿ ಕೊಟ್ಟರೆ ಕೊಂಡವನಿಗೂ ಕಾಣಬಾರದೆ ಕೊಟ್ಟವನಿಗೂ ಕಾಣಬಾರದೆ ಹೇಂಗೆ ತಬ್ಬಿಗೊಳುತ್ತಿಹನೋ ಹಾಂಗೆ ನಿರ್ವಂಚಕಸದ್ಭಕ್ತ ಮಾಡುವ ಭಕ್ತಿಯಿಂದ ನಿಜಮೋಕ್ಷವಲ್ಲದೆ ಫಲಪದಂಗಳುಂಟೇ? ಇಲ್ಲವು. ಸಮರಸಭಾವದಿಂದ ಲಿಂಗಪೂಜೆ ಜಂಗಮದಾಸೋಹವನ್ನು ಮಾಡಿದರೆ ಅಳತೆ ಪ್ರಮಾಣವಿದ್ದಂಥ ಚಿಂತಕೋಲಿನಿಂದ ಉದ್ದರಿಯ ತೂಗಿಕೊಟ್ಟಂಥ ಹರದನಿಗೆ ಸಂತೋಷವಾದ ಹಾಂಗೆ ನಿತ್ಯವಾದ ನಿಜಮೋಕ್ಷವೇ ಆಗುತ್ತಿಹುದು. ಭಿನ್ನವಿಟ್ಟುಕೊಂಡು ಲಿಂಗಪೂಜೆ ಜಂಗಮದಾಸೋಹವನ್ನು ಮಾಡಿದರೆ ಅಳತೆಯಿಲ್ಲದ ಚಿಂತಕೋಲಿನಿಂದ ಉದ್ದರಿಯ ತೂಗಿಕೊಟ್ಟ ಹರದನಿಗೆ ದುಃಖವಾದ ಹಾಂಗೆ. ಆದೆನಯ್ಯಾ-ವ್ಯರ್ಥಸ್ಯವಾಗಿರ್ಪುದಯ್ಯ. ಕೂಡಲಸಂಗಮದೇವ-ಎಲೆ ಪರಶಿವಲಿಂಗವೆ.

....

೧-೧ ತಾ (ಕ)

III- -

2-2 ಉದ್ರೆ (ಟ)

....

ಹಲವು ಪ್ರಮಾಣದ ಗೆರೆಯಿಲ್ಲದ ಚಿಂತಗೋಲಿನಲ್ಲಿ ೨ಉದ್ದರೆ೨ಯನು ಕೊಟ್ಟ ಹರದನ ಮೂಲದ್ರವ್ಯವು ಪ್ರಮಾಣವಿಲ್ಲದೆ ನಷ್ಟವಾಗಿ ಹೋಗುವ ಹಾಂಗೆ ಸಮರಸಭಕ್ತಿಯನುಳ್ಳ ಐಕ್ಯಸ್ಥಲದ ಭಕ್ತನಿಗೆ ಭಿನ್ನಫಲಪದಂಗಳು ರಹಿತದಾಗಿರ್ಪುವೆಂಬುದೀಗ, ಗೆರೆಯಿಲ್ಲದ ಕೋಲಿನಲ್ಲಿ ಉದ್ದರೆಯನಿಕ್ಕಿದ ಭಂಡದ ಹರದನಂತಾದೆನಯ್ಯ ಕೂಡಲಸಂಗಮದೇವ ಎಂಬ ಶಬ್ದಕ್ಕರ್ಥ.

೨-೨ ಉದ್ರೆ (ಟ)

IV- -

1-1 ರ್ದೆ (ಜ) 3-3 x (ತ)

ಭಿತ್ತಿಯಲ್ಲಿ ಬರೆಯಲಿಲ್ಲದೆ ಚಿತ್ರಕನು ತನ್ನ ಮನದಲ್ಲಿ ರೂಹಿಸಿದ ರೂಹ ರೂಪಿಗೆ ಬಾರದಂತೆ ತಾನೆಂಬ ಭಾವವಳಿದು ಮಾಡುವ ಮಾಡಿಸಿಕೊಂಬೆರಡೂ ಶಿವನೆಯೆಂಬ ಭಾವ ಘಟಿಸಿ ಮಾಡುವ ಸದ್ಭಕ್ತನ ಕೈಗಳಿಂದ ಫಲಭೋಗಶರೀರಿಯಾಗಿ ಭವಕ್ಕೆ ಬರಲಿಲ್ಲ. ಆ ಭಕ್ತನ ಆದಿ

ಶಿವನೆಯಾಗಿಪ್ಪನೆಂಬುದೀಗ ಭಿತ್ತಿಯಿಲ್ಲದ ಚಿತ್ತಾರದಂತೆ ಭಕ್ತಿಯಿಲ್ಲದ ಪ್ರಮಥನಾಗಿರ್ದನಯ್ಯಾಯೆಂಬ ಶಬ್ದಕ್ಕರ್ಥ. ತೋಱುವ ತೋಱಿಕೆಯೆಲ್ಲವೂ ಸತ್ಯವಾಗಿ ಕಾಣಿಸುತ್ತಿಹುದು ಜೀವರಿಗೆ ನಿರವಯವಾಗಿಪ್ಪ ಚಿತ್ಸ್ವರೂಪವಾರಿಂಗೆಯೂ ಕಾಣಿಸದೆ ಅಸತ್ಯವಾಗಿಹುದು. ಅಂತು ಅರಿವೆಯೂ ಕಾಣಿಸದೆಯಿಪ್ಪ ಚಿತ್ಸ್ವರೂಪವೇ ಶರಣನೆಂಬುದೀಗ, ಸತ್ಯವಿಲ್ಲ ಶರಣನಾಗಿರ್ದನಯ್ಯಾ ಎಂಬ ಶಬ್ದಕ್ಕರ್ಥ. ಅಂತು ಶರಣ ಮಾಡಿದ ಕ್ರೀಗಳೆಲ್ಲಾ ನಿಃಫಲವೆಂಬುದೀಗ, ಗೆರೆಯಿಲ್ಲದ ಕೋಲಿನಲ್ಲಿ ಉದ್ದರೆಯನಿಕ್ಕಿದ ಭಂಡದ[೩][ಹರದನ][೩]ಂತಾದೆನಯ್ಯಯೆಂಬ ಶಬ್ದಕ್ಕರ್ಥ.

೩–೩ x (ತ)

V– –

2–2 ಉದ್ರೆ (ಪ)

....

ಹಲವು ಪ್ರಮಾಣದ ಗೆರೆಯಿಲ್ಲದ ಚಿಂಚುಕೋಲಿನಲ್ಲಿ ಉದ್ದರೆಯನು ಕೊಟ್ಟ ಹರದನ ಮೂಲದ್ರವ್ಯ ಪ್ರಮಾಣವಿಲ್ಲದೆ ನಷ್ಟವಾಗಿ ಹೋಗುವ ಹಾಂಗೆ ಸಮರಸಭಕ್ತಿಯನುಳ್ಳ ಐಕ್ಯಸ್ಥಲದ ಭಕ್ತಂಗೆ ಲಿಂಗಪೂಜೆಯಿಂದೆ ಪಡೆದನುಭವಿಸುವಂಥ ಫಲಪದಂಗಳು ರಹಿತವಾಗಿರ್ಪವೆಂಬುದೀಗ ಗೆರೆಯಿಲ್ಲದ ಕೋಲಿನಲ್ಲಿ ಉದ್ದರೆಯನಿಕ್ಕಿದ ಭಂಡದ ಹರದನಂತಾದೆನಯ್ಯ ಕೂಡಲಸಂಗಮದೇವಯೆಂಬ ಶಬ್ದಕ್ಕರ್ಥ.

೯೪೧

ಆಯತ [2]ಒಂದೆಡೆ[2]ಯಲ್ಲಿ ತೆಱನನಱಿ[2]ಯರಾಗಿ ನೋಡಬಾರದು[2] ನುಡಿಸಬಾರದು, ಅದು ತಿದ್ದಬಾರದ ಡೊಂಕು ಕೂಡಲಸಂಗನ ಭಕ್ತಿ!

I– –

ಆಯತ ಒಂದೆಡೆಯಲ್ಲಿ–"ಆಯತಂ ಇಷ್ಟಲಿಂಗಂಚ" ಎಂದು ಅಂಗದಲ್ಲಿ ಇಷ್ಟಲಿಂಗ ಸಂಬಂಧವಾಗಿರ್ಪುದು, ತೆಱನನಱಿಯರಾಗಿ: [ತೆಱನನು–] ಇಷ್ಟಲಿಂಗದ ಚಿತ್ಕಲೆಯನ್ನೇ ಅಂತರಂಗದಲ್ಲಿ ಪ್ರಾಣಲಿಂಗವಾಗಿ ಸಂಬಂಧವ ಮಾಡಿಕೊಂಡು ಆ ಪ್ರಾಣಲಿಂಗಕ್ಕೆ ಮಂತ್ರಧ್ಯಾನಜಪಸ್ತೋತ್ರನಿರ್ಗುಣ ಪೂಜಾಕ್ರಿಯೆಗಳಿಂದಾರಾಧಿಸುವಂಥದನು, ಅಱಿಯರಾಗಿ–ತಿಳಿಯರಾಗಿ, ನೋಡಬಾರದು–ದ್ವೈತಾದ್ವೈತಿಗಳು ಭಿನ್ನವಿಟ್ಟುಕೊಂಡು ನಿರೀಕ್ಷಣೆಯ ಮಾಡಬಾರದು. ನುಡಿಸಬಾರದು–ದ್ವೈತಾದ್ವೈತಿಗಳು ಭಿನ್ನವಿಟ್ಟುಕೊಂಡು ಪ್ರಸಂಗಿಸಬಾರದು, ಅದು–ಅಂಗ ಪ್ರಾಣಂಗಳಲ್ಲಿ ಇಷ್ಟ ಪ್ರಾಣಲಿಂಗಸಂಬಂಧವ ಮಾಡಿಕೊಂಡು ಅವಿರಳಜ್ಞಾನಕ್ರಿಯೆವಿಡಿದಾಚರಿಸುವಂಥ ಆಚರಣೆಯು, ತಿದ್ದಬಾರದ ಡೊಂಕು–ಲೋಕದಲ್ಲಿ ತಿದ್ದೋ ಡೊಂಕು ತಿದ್ದಬಾರದ ಡೊಂಕೆಂದು ಎರಡು ಪ್ರಕಾರವುಂಟು. ತಿದ್ದೋ ಡೊಂಕೇ ಜಾಲಿಕಟ್ಟಿಗೆ ಹುಣಸೆಕಟ್ಟಿಗೆ ಬಿದಿರಕಟ್ಟಿಗೆ ಬೆತ್ತದ ಕಟ್ಟಿಗೆ ಇವು ತಿದ್ದುವ ಡೊಂಕು. ತಿದ್ದಬಾರದ ಡೊಂಕೇ ಅವಡಲಕಟ್ಟಿಗೆ ಎಕ್ಕೆಕಟ್ಟಿಗೆ ನುಗ್ಗೇಕಟ್ಟಿಗೆ ತಿದ್ದಬಾರದ ಡೊಂಕು ಎಂಬ ಹಾಂಗೆ,

ಕೂಡಲಸಂಗನ–ಪರಶಿವಲಿಂಗದ, ಭಕ್ತಿ–ಶಿವಾದ್ವೈತಭಕ್ತಿಯು ದ್ವೈತಾದ್ವೈತಿಗಳ ಭಿನ್ನಜ್ಞಾನಕ್ರಿಯೆಗಳನು ಬಿಟ್ಟು ಅಂಗ ಪ್ರಾಣಂಗಳಲ್ಲಿ ಇಷ್ಟ ಪ್ರಾಣಲಿಂಗಸಂಬಂಧವ ಮಾಡಿಕೊಂಡು ಅವಿರಳಜ್ಞಾನಕ್ರಿಯೆವಿಡಿದಾಚರಿಸಿ ಎಂದು ಬೋಧಿಸಿದರೆ ಅಳವಡದೆ ತಿದ್ದಬಾರದ ಡೊಂಕಿನ ಹಾಂಗೆ ಅಶಕ್ಯವಾಗಿರ್ಪುದು.

II– –

೨ + ನೋಡಿ (ಚ.ಜ)

....

ಆಯತ ಒಂದೆಡೆಯಲ್ಲಿ ತೆಜಿನನಜೆಯರಾಗಿ–ಆಯತವೆಂದರೆ ಅನು, ಅನುವೆಂದರೆ ಬೆಂಬಳಿ. ಬೆಂಬಳಿಯೆಂದರೆ ಮಹಾಜ್ಞಾನ. ಮಹಾಜ್ಞಾನವೆಂದರೆ ಚಿತ್ತು. ಆ ಚಿತ್ತೇ ನಿಃಕಲಲಿಂಗವು. ಆ ನಿಃಕಲಿಂಗವು ಬ್ರಹ್ಮರಂಧ್ರಸ್ಥಾನದಲ್ಲಿ ಸಂಬಂಧವಾಗಿರ್ಪುದು. ಆ ನಿಃಕಲಲಿಂಗವನು ಶಿವಯೋಗಸಂಪತ್ತಿನ ಸಾಧನದಿಂದೆಯ್ದಿ ಕೂಡುವ ಮರ್ಯಾದೆಯನು ತಿಳಿಯರಾಗಿ, ನೋಡಬಾರದು–ಜೀವರುಗಳಿಗೆ ನಿರೀಕ್ಷಿಸಲು ಅಶಕ್ಯವು, ನೋಡಿ ನುಡಿಸಬಾರದು–ಆ ವಸ್ತುವನು ಕಂಡು ಸಾಕಾರವಾಗಿದೆ ನಿರಾಕಾರವಾಗಿದೆಯೆಂದು ಜೀವರುಗಳು ಪ್ರಸಂಗಿಸಲು ಅಶಕ್ಯವು. ಅದು ತಿದ್ದಬಾರದ ಡೊಂಕು ಕೂಡಲಸಂಗನ ಭಕ್ತಿ–ಪರಶಿವಲಿಂಗದಲ್ಲಿ ಶಿವಯೋಗಸಂಪತ್ತಿನ ಸಾಧನದಿಂದೆಯ್ದಿ ಕೊಡುವಂಥ ಸಮರಸಭಕ್ತಿಯು ಜೀವರುಗಳಿಗರಿಯಬಾರದೆಂಬುದರ್ಥ.[೧]

....

೧ + ಬಸವೇಶ್ವರನ ವಚನ ಸಮಾಪ್ತ ಮಂಗಳಮಹಾ ಶ್ರೀಶ್ರೀಶ್ರೀಶ್ರೀಶ್ರೀ ಮತ್ಸಚ್ಚಿದಾನಂದ ನಿತ್ಯಪರಿಪೂರ್ಣ ಪರಂಜ್ಯೋತಿಸ್ವರೂಪರಾದ, ಅನಾದಿಪರಮೇಶ್ವರ ನಂತರಂಗದಲ್ಲಿ ಆದಿವಾಹನವಾದ ನಂದೀಶ್ವರನೆಂಬ ಅನಾದಿಭಕ್ತನ ಹೃದಯವಾದ ಪ್ರಾಣಲಿಂಗವೆಂಬ ಪರಮಜಂಗಮವೇ ಲಿಂಗಾಂಗಸಮರಸದ ಪಟ್‌ಸ್ಥಲಾಚರಣೆಯ ನಟಿಸಿ ಮೆರವೆನೆಂಬ ಲೀಲಾವಿನೋದವನು ಕುರಿತು ಪ್ರಭುವೆಂಬಭಿಧಾನದಿಂದ ಮರ್ತ್ಯಲೋಕಕ್ಕವತರಿಸಿ ಮಂಗಳವಾಡದೊಳಗಿರ್ದ ಬಸವಾದಿಪ್ರಮಥರ್ಗೆ ಭಾವಬ್ರಹ್ಮದಲ್ಲಿ ನಿಃಪತಿಯನೆಯ್ದುವ ನಿಜಲಿಂಗೈಕ್ಯವನರುಹಿಕೊಟ್ಟುದ್ಧರಿಸಿ, ಅಂತಪ್ಪ ಆದ್ಯರಾಚರಣೆಯನೊಳಕೊಂಡು ತಮ್ಮ ಕರಸ್ಥಲದಲ್ಲಿ ಬೆಳಗುತ್ತಿರ್ದ ಶೂನ್ಯೋಪಬ್ರಹ್ಮದಲ್ಲಿ ಸಂಗ ಪ್ರಭುಸ್ವಾಮಿಗಳೆ ವೇದ್ಯಗಣಂಗಳೊಡನಾಡಿಯಾ ವೇದ್ಯರಾಚರಣೆಯನೊಳಕೊಂಡು ಸಾಧ್ಯಗಣಂಗಳಿಗೆ ತಾ ಸಾಧ್ಯನಾಗಿ ಇಪ್ಪತ್ತೊಂದು ಗುರುಸಂಪ್ರದಾಯವಿಡಿದು ಬಂದ ಆಚಾರ್ಯಪೀಠದ ಚೆನ್ನಬಸವೇಶ್ವರನೆಂಬ ದಿವ್ಯಜ್ಞಾನಗುರುಮೂರ್ತಿಯ ಕರಕಮಲದೊಳುದಯವಾಗಿ ಸಿದ್ಧೇಶ್ವರನೆಂಬಭಿದಾನವ ತಳೆದು ಸ್ವಯಸ್ಥಲವ ಬಿಟ್ಟು ಚಿರಸ್ಥಲದವರೊಡಗೂಡಿ ತಿರಣಾ ಮಲೆಯ ಅಣ್ಣಾಮಲೇಶ್ವರನೆಂಬ ಲಿಂಗದ ಗುಡಿಗೆ ಬಂದು ಆ ಲಿಂಗದ ಭಕಿಯಿಂದ ಮೌಕ್ತಿಕದ ಹಾರಗಳನು ಕೈಕೊಂಬಲ್ಲಿ ಷಟ್ಸ್ಥಲಬ್ರಹ್ಮದ ವೀರಾಗತಿಯನಾಚರಿಸಬೇಕೆಂಧು ಅವರೊಳಗೆ ನಾವು ವಿರಕ್ತರೆಂದುಚ್ಚರಿಸಿ ಚಿರಸ್ಥಲವ ಬಿಟ್ಟು ಪರಸ್ಥಲದ ಪರಬ್ರಹ್ಮವಾಗಿ ಅನೇಕ ದೇಶಚಾರಿತ್ರಂಗಳ ನೊಡಿಕೊಂಡು ಭೇಷಜ ಪರ್ವತಕ್ಕೆ ಬರಲು, ಅಲ್ಲಿರ್ದ ಸೀತಾಳ ಮಲ್ಲೇಶ್ವರನೆಂಬ ಲಿಂಗವು ಚರಶೇಷವ ತಳೆದು ತಮ್ಮ ಕರಪಾತ್ರೆಯ ಭಿಕ್ಷವನು ಭಕ್ತಿಯಿಂ ನಮಿಸಿ ನೀಡಲದ ಸ್ವೀಕರಿಸಲು, ಆ ಲಿಂಗವು ಇನ್ನು ಶಿವಾನುಭಾವ ಪ್ರತಿಪಾದನೆಯ ಮಾಡೆಂದು ನಿರೂಪಿಸಲು ಆ ನಿರೂಪಣೆಯವಿಡಿದು ಷಟ್ಸ್ಥಲಾನುಭಾವವನು ಬೋಧಿಸುವಲ್ಲಿ ಪ್ರಥಮಾಚಾರ್ಯರಾದ ಸಿದ್ಧೇಶ್ವರ ಸ್ವಾಮಿಗಳು ಅವರ ಬೋಧಾಪುತ್ರರಾದ ಬೋಳ ಬಸವೇಶ್ವರಸ್ವಾಮಿಗಳು,

ಅವರ ಬೋಧಾಪುತ್ರರಾದ ಗುಮ್ಮಳಾಪುರದ ಸಿದ್ಧವೀರಣ್ಣ ಸ್ವಾಮಿಗಳು, ಅವರ ಬೋಧಾಪುತ್ರರಾದ ಕಟ್ಟಿಗೆಹಳ್ಳಿಸ್ವಾಮಿಗಳು, ಅವರ ಬೋಧಾಪುತ್ರರಾದ ಮುರಿಗೆಸ್ವಾಮಿಗಳು, ಅವರ ಬೋಧಾಪುತ್ರರಾದ ರೇವಣ ಸಿದ್ಧೇಶ್ವರಸ್ವಾಮಿಗಳು.

....

೨–೨ x(ಜ)

III– –

ಸಮರಸಭಕ್ತಿಯ ಹೊಲಬನಱಿಯದಾತನು ಲಿಂಗವ ಪೂಜಿಸಿ ಫಲಪದಂಗಳ ಪಡೆವನಲ್ಲದೆ ಸಮರಸೈಕ್ಯವ ಹಡೆಯಲಱಿಯನೆಂಬುದೀಗ ಆಯತ ಒಂದೆಡೆಯಲ್ಲಿ ತೆರನನಱಿಯರಾಗಿ ಎಂಬ ಶಬ್ದಕ್ಕರ್ಥ. ಅಂಗ ಲಿಂಗಕ್ಕೆ ಭಿನ್ನವಿಟ್ಟು ಪೂಜಿಸದೆ ಇದ್ದ ಶರಣನಿಗೆ ಲಿಂಗದಲ್ಲೇಕತ್ವವಲ್ಲದೆ ಭಿನ್ನವಾದ ದೊರಕೊಳ್ಳದೆಂಬುದೀಗ ನೋಡಬಾರದು ನುಡಿಸಬಾರದು ಅದು ತಿದ್ದಬಾರದ ಡೊಂಕು ಕೂಡಲಸಂಗನ ಭಕ್ತಿಯೆಂಬ [೩]ಶಬ್ದಕ್ಕರ್ಥ.[೩]

....

3–3 x (ಟ).

V– –

1–1 ವೊಂದೆಸೆ(ಪ) 2 + ನೋಡಿ(ಪ).

ಸಮರಭಕ್ತಿಯ ಹೊಲಬನಱಿಯದಾತನು ಲಿಂಗವ ಪೂಜಿಸಿ ಫಲಪದಂಗಳ ಪಡೆವನಲ್ಲದೆ ಸಮರಸೈಕ್ಯವ ದೊರೆಕೊಳ್ಳನೆಂಬುದೀಗ ಆಯತ ವೊಂದೆಸೆಯಲ್ಲಿ ತೆರನನಱಿಯರಾಗಿಯೆಂಬ ಶಬ್ದಕ್ಕರ್ಥ. ಆ ಲಿಂಗಕ್ಕೆ ಭಿನ್ನವಿಟ್ಟ ಪೂಜಿಸಿ ಆ ಲಿಂಗ ಬೇಱೆ ತಾ ಬೇಱೆಂದು ನಿರೀಕ್ಷಿಸಬಾರದೆಂಬುದೀಗ ನೋಡಬಾರದು ಎಂಬ ಶಬ್ದಕ್ಕರ್ಥ. ಭಿನ್ನವಿಟ್ಟು ನಿರೀಕ್ಷಿಸಿ ಫಲಪದಂಗಳ ಕೊಡೆಂದು ಲಿಂಗವ ಕೇಳಲಾಗದೆಂಬುದೀಗ ನೋಡಿ ನುಡಿಸಬಾರೆಂಬ ಶಬ್ದಕ್ಕರ್ಥ.

....

4 + ನೋಡಿ ನುಡಿಸಬಾರದು (ಪ).

ಐಕ್ಯನ ಮಾಹೇಶ್ವರಸ್ಥಲ

I– –

ಐಕ್ಯನ ಮಾಹೇಶ್ವರಸ್ಥಲ–ಐಕ್ಯಸ್ಥಲದೊಳಗಣ ಮಾಹೇಶ್ವರಸ್ಥಲದಾಚರಣೆಯನ್ನು ನಿರೂಪಿಸುತ್ತಿಹರು.

೯೪೨

ಸತ್ತು ಹುಟ್ಟುವನಲ್ಲ, ಸಂದೇಹಿ ಸೂತಕಿಯಲ್ಲ, ಆಕಾರ ನಿರಾಕಾರಲ್ಲ ನೋಡಯ್ಯ! ಕಾಯವಂಚಕನಲ್ಲ ಜೀವವಂಚಕನಲ್ಲ ನಿರಂತರ ಸಹಜ ನೋಡಯ್ಯ! ಶಂಕೆಯಿಲ್ಲದ ಮಹಾಮಹಿಮ ನೋಡಯ್ಯ. ಕೂಡಲಸಂಗನ ಶರಣನು ಉಪಮಾತೀತ[1]ನು[1] [2]ನೋ[2]ಡಯ್ಯ.

I– –

ಸತ್ತು ಹುಟ್ಟುವವನಲ್ಲ: ಸತ್ತು–ಲಿಂಗದಲ್ಲಿ ಕೂಡಿ ಲಿಂಗವೇತಾನಾದ ಶರಣನು. ಹುಟ್ಟುವನಲ್ಲ–ಮರಳಿ ದೇಹವ ಧರಿಸಿಕೊಂಡು ಹುಟ್ಟಿಬರುವಾತನಲ್ಲವು. ಸಂದೇಹಿ ಸೂತಕಿಯಲ್ಲ: ಸಂದೇಹಿ–ನಾನು ವಸ್ತುಸ್ವರೂಪನಹುದೋ ಅಲ್ಲವೋ ಎಂಬಂಥ ಮನೋಸಂಕಲ್ಪದ, ಸೂತಕಿಯಲ್ಲ–ಭಿನ್ನ ಸೂತಕವುಳ್ಳನಲ್ಲವು. ಆಕಾರ ನಿರಾಕಾರ: ಆಕಾರವೆಂದರೆ ಜೀವನು, ನಿರಾಕಾರವೆಂದರೆ ಪರಮನು, ಅಲ್ಲ ನೋಡಯ್ಯ–ಈ ಜೀವ ಪರಮ ಎರಡರ ಏಣಿಕೆಗೆ ಸಿಕ್ಕಿ ಗಣನೆಗೆ ಒಳಗಾಗುವಾತನಲ್ಲವು ಕಂಡಯ್ಯ.

ಕಾಯ ವಂಚಕನಲ್ಲ–ಹದಿನೆಂಟು ಧಾನ್ಯಂಗಳ ಕಣಜ ಪಣತಾದಿಗಳಿಂದ ತೆಗೆದುಕೊಂಡು ಕುಟ್ಟುವಲ್ಲಿ ಬೀಸುವಲ್ಲಿ ತಟ್ಟುವಂಥ ದುಃಖವು ಧಾನ್ಯಕಲ್ಲದೆ ಬೀಜ ಪಣತಾದಿಗಳಿಗಿಲ್ಲವೆಂಬುವ ಹಾಂಗೆ ಸುಖದುಃಖಗಳು ಜೀವನಿಗಲ್ಲದೆ ದೇಹಕ್ಕಿಲ್ಲವೆಂದು ಹೇಳುವಂಥ ಸಿದ್ಧಾಂತಿಗಳ ಹಾಂಗೆ ದೇಹವನ್ನು ವಂಚಿಸಿಕೊಂಡು ಪ್ರಸಂಗವಾಡುವಾತನಲ್ಲವು. ಜೀವ ವಂಚಕನಲ್ಲ–ಹದಿನೆಂಟು ಧ್ಯಾನಂಗಳನು ಕಣಜ ಪಣತಾದಿಗಳಿಗೆ ತುಂಬುವಲ್ಲಿ ಹೆಟ್ಟುವುದು ಕುಟ್ಟುವುದು ಗುದ್ದುವುದು ತಿವಿಯುವುದು ಕಣಜ ಪಣತಾದಿಗಳಿಗಲ್ಲದೆ ಧ್ಯಾನಕ್ಕಿಲ್ಲವೆಂಬುವ ಹಾಂಗೆ ಸುಖದುಃಖಗಳು ದೇಹಕ್ಕಲ್ಲದೆ ಜೀವನಿಗಿಲ್ವೆಂದು ಹೇಳುವಂಥ ವೇದಾಂತಿಗಳ ಹಾಂಗೆ ಜೀವವನ್ನು ವಂಚಿಸಿಕೊಂಡು ಪ್ರಸಂಗವನಾಡುವಾತನಲ್ಲವು. ನಿರಂತರ–ಎಲ್ಲಾಗಳೂ, ಸಹಜ ನೋಡಯ್ಯ–ಸಹಜಸ್ವಭಾವವುಳ್ಳ ಬ್ರಹ್ಮದಲ್ಲಿ ಕೊಡಲ್ಪಟ್ಟಾತನು ಕಂಡಯ್ಯ.

ಶಂಕೆಯಿಲ್ಲದ–ನಾನು ವಸ್ತುಸ್ವರೂಪನಹುದೋ ಅಲ್ಲವೊ ಎಂಬಂಥ ಮನೋಸಂಕಲ್ಪವಿಲ್ಲದ, ಮಹಾಮಹಿಮ ನೋಡಯ್ಯ–ಮಹತ್ವಾತಿಶಯವನುಳ್ಳಾತನು ಕಂಡಯ್ಯ. ಕೂಡಲಸಂಗನ ಶರಣನು–ಶಿವನ ಚಿತ್ರಭಾಂಗಸ್ವರೂಪವಾದ ಶಿವಶರಣನು, ಉಪಮಾತೀತನು ನೋಡಯ್ಯ–ವಾಚ್ಯಂಗಳಿಗೆ ಮಿಗೆ ಮೀರಿ ತೋರಲ್ಪಟ್ಟಾತನು ಕಂಡಯ್ಯ.

III– –

1–1 X (ಟ, ಡ). 2–2 ಕಂ (ಟ, ಡ)

....

ಸದ್ರೂಪವಾದ ಬ್ರಹ್ಮವೇ ತಾನೆಂದು ಗುರುಮುಖದಿಂದ ತಿಳಿದ ಶರಣನು ಮರಳಿ ಭವಕ್ಕೆ ಬಂದು ಜನ್ಮಾಂತರಕ್ಕೆ ಹೋಗುವಾತನಲ್ಲನೆಂಬುದೀಗ, ಸತ್ತು ಹುಟ್ಟುವನಲ್ಲವೆಂಬ ಶಬ್ದಕರ್ಥ.

ಶ್ರುತಜ್ಞಾನ ಸ್ವಾನುಭಾವ ಗುರೂಪದೇಶದಿಂದ ತಾನೇ ಪರಬ್ರಹ್ಮಸ್ವರೂಪವೆಂದರಿದ ಶರಣನು ಮರಳಿ ಜೀವ ಭಾವ ಮುಂದುಗೊಂಡು ನಾನು ಬ್ರಹ್ಮಸ್ವರೂಪು ಅಹುದೋ ಅಲ್ಲವೋ ಎಂಬ ಸಂಕಲ್ಪ ಭ್ರಾಂತಿಯುಳ್ಳಾತನಲ್ಲವೆಂಬುದೀಗ, ಸಂದೇಹಿ ಸೂತಕಿಯಲ್ಲವೆಂಬ ಶಬ್ದಕ್ಕರ್ಥ. ದೇಹಾತ್ಮರುಗಳ ಪ್ರಪಂಚುಳ್ಳಾತನಲ್ಲವೆಂಬುದೀಗ, ಆಕಾರ ನಿರಾಕಾರನಲ್ಲ ನೋಡಯ್ಯ ಎಂಬ ೨ಶಬ್ದಕ್ಕರ್ಥ.೨

ಅಂಗಕ್ರಿಯೆಗಳು ಲಿಂಗಕ್ರಿಯೆಗಳಲ್ಲಿ ಕೂಡಿ ನಡೆಸುವಲ್ಲಿ ಅಪಲಾಪನಾಭಾವ ವುಳ್ಳಾತನಲ್ಲವೆಂಬುದೀಗ ಕಾಯವಂಚಕನಲ್ಲವೆಂಬ ೨ಶಬ್ದಕ್ಕರ್ಥ.೨ ಜೀವನೋಪಾಯದ ವರ್ತನೆಯುಳ್ಳಾತನಲ್ಲೆಂಬುದೀಗ ಜೀವವಂಚಕನಲ್ಲವೆಂಬ ೨ಶಬ್ದಕ್ಕರ್ಥ೨ ನಿರಂತರ–ಎಲ್ಲಾಗಳು, ಸಹಜ ನೋಡಯ್ಯ–ಸಹಜ ಸಮರಸಜ್ಞಾನಾನುಭಾವವುಳ್ಳಾತನು ಕಂಡಯ್ಯ. ಶಂಕೆಯಿಲ್ಲದ–ಸರ್ವಾಚಾರಸಂಪತ್ತಿನಾಚರಣೆಯಲ್ಲಿ ಒಂದಿಷ್ಟೂ ಸಂದೇಹವುಂಟಾಗದೆ ಇರ್ದ, ಮಹಾ–ಪೂಜ್ಯವಾದ, ಮಹಿಮ ನೋಡಯ್ಯ–ಮಹತ್ಪುರುಷನ ನಿರೀಕ್ಷಣೆಯ ಮಾಡಯ್ಯ. ಕೂಡಲಸಂಗನ ಶರಣ–ಪರಮಶಿವಲಿಂಗದಲ್ಲೇಕತ್ವವನುಳ್ಳಂಥ ಶಿವಶರಣನು, ಉಪಮಾತೀತ ಕಂಡಯ್ಯ–ಲಿಂಗದಲ್ಲಿ ಹೋಲುವೆ ರಹಿತನು ಕಾಣಾ ಎಲೆ ಸ್ವಾಮಿ.

....

೧ + ಶಬ್ದ(ಡ). ೨–೨ X (ಡ).

IV– –

ಜನನ ಮರಣವಿಲ್ಲ ಆಕಾರ ನಿರಾಕಾರವಿಲ್ಲ. ಕಾಯ ಜೀವ ಹಲವು ಕಾಲ ಇರಬೇಕೆಂಬ ಸಂದೇಹವಿಲ್ಲ. ಆವಂಗವೂ ಅಲ್ಲದ ಅಖಂಡಬ್ರಹ್ಮವೆಂಬುದೀ ವಚನದರ್ಥ.

V– –

೩ದೇಹಾತ್ಮರುಗಳ ಪ್ರಪಂಚುಳ್ಳಾತನಲ್ಲವೆಂಬುದೀಗ ಆಕಾರ ನಿರಾಕಾರನಲ್ಲ ನೋಡಯ್ಯ ಎಂಬ ಶಬ್ದಕ್ಕರ್ಥ.

೩ + ಐಕ್ಯನ ಮಾಹೇಶ್ವರ ಸ್ಥಲ (ತ).

೯೪೩

ದಶದಿಕ್ಕು ಧರೆ ಗಗನವೆಂಬುದ ನಾನಱಿಯೆನಯ್ಯ "ಲಿಂಗಮಧ್ಯೇ ಜಗತ್ಸರ್ವಂ" ಎಂಬುದ ನಾನಱಿಯನಯ್ಯ. ಲಿಂಗ ಸೋಂಕಿನ ಸುಖದೊಳಗೆ ಕೂಡಲ ಸಂಗಮದೇವಯ್ಯ, ಅಂಬುಧಿಯೊಳಗೆ ಬಿದ್ದ ಆಲಿಕಲ್ಲಿನಂತೆ ಭಿನ್ನಭಾವವನಱಿಯದೆ ಶಿವಶಿವಾ ಎನುತಿದ್ದೆನು ನಾನು.

I– –

ದಶದಿಕ್ಕು–ಇಂದ್ರಾದಿ ಹತ್ತು ದಿಕ್ಕುಗಳು, ಧರೆ–ಭೂಮಿಯು, ಗಗನವೆಂಬುದ–ಆಕಾಶವೆಂದು ಹೇಳುವಂಥದನು. ನಾನಱಿಯೆನಯ್ಯ–ನಾ ತಿಳಿಯೆನಯ್ಯ. ಅದಲ್ಲದೆ, ದಶದಿಕ್ಕು–ಪ್ರಾಣಾದಿ

ಹತ್ತುವಾಯುಗಳು, ಧರೆ-ಪೃಥ್ವಿ ತತ್ತ್ವಸ್ವರೂಪವಾದ ದೇಹವು, ಗಗನವೆಂಬುದು-ಆಕಾಶತತ್ತ್ವ ಸ್ವರೂಪವಾದ. ಆತ್ಮನೆಂಬುದ, ನಾನಜೆಯೆನಯ್ಯ-ನಾ ತಿಳಿಯೆನಯ್ಯ, "ಲಿಂಗಮಧ್ಯೆ ಜಗತ್ಸರ್ವಂ" ಎಂಬುದ ನಾನಜೆಯೆನಯ್ಯ: ಲಿಂಗಮಧ್ಯೇ-ಮಹಾಲಿಂಗದ ಗರ್ಭಮಧ್ಯದಲ್ಲಿ, ಜಗತ್ಸರ್ವ; ಎಂಬುದ-ಸಮಸ್ತ ಜಗತ್ತು ಅಡಗಿರ್ಪುದೆಂಬವಂಥದನು. ನಾನಜೆಯೆನಯ್ಯ-ನಾ ತಿಳಿಯೆನಯ್ಯ;

ಲಿಂಗಸೋಂಕಿನ-ಮಹಾಲಿಂಗವನ್ನೇ ಗುರುಮುಖದಿಂದ ಅಂಗದಲ್ಲಿ ಇಷ್ಟಲಿಂಗವಾಗಿ ಸಂಬಂಧವ ಮಾಡಿಕೊಂಡು ಮುಟ್ಟಿ ಮುಟ್ಟಿ ಆರಾಧಿಸುವಂಥ, ಸುಖದೊಳಗೆ-ಲಿಂಗಪೂಜೆಯ ಮಾಡುವಂಥ ಪರಿಣಾಮದಲ್ಲಿ, ಕೂಡಲಸಂಗಮದೇವಯ್ಯ-ಎಲೆ ಪರಶಿವಲಿಂಗವೆ, ಅಂಬುಧಿಯೊಳಗೆ ಬಿದ್ದ ಅಲಿಕಲ್ಲಿನಂತೆ: ಅಂಬುಧಿಯೊಳಗೆ-ಸಮುದ್ರದಲ್ಲಿ, ಬಿದ್ದ-ಪತಿತವಾದ, ಆಲಿಕಲ್ಲಿನಂತೆ -ಪಯೋಧರ ಫಳವೆಂಬುವಂಥದು ನಾದಾಕಾಶದ ಬಲದಿಂದ ಗಟ್ಟಿಗೊಂಡು ನೋಡನೋಡಲು ಅಂಬುಧಿಯೊಳಗೆ ಬಿದ್ದು ಕರಗಿ ನೀರುಕೂಡಿ ನೀರಾಗಿ ಹರಿದುಹೋದ ಹಾಂಗೆ, ಭಿನ್ನಭಾವವನಜೆಯದೆ-ಅಂಗಬೇರೆ ಲಿಂಗಬೇರೆಂಬ ಖಂಡಿತಭಾವವನ್ನು ತಿಳಿಯದೆ, ನಾನು-ಶರಣನು, ಶಿವಶಿವಾ ಎನ್ನುತಿದ್ದೆನು-ಲಿಂಗವೇ ಲಿಂಗವೇಯೆಂದು ಲಿಂಗಧ್ಯಾನ ಲಿಂಗಸ್ಮರಣೆಯ ಮಾಡುತ್ತಿದ್ದೆನು.

೯೪೪

ಮಿಥ್ಯವನಳಿದುಳಿದ ಸತ್ಯಪ್ರಸಾದಿ, ಅಂಜನವಿಲ್ಲದ ನಿರಂಜನಪ್ರಸಾದಿ, ದುಃಖವನಳಿದ ಘನಾನಂದಪ್ರಸಾದಿ, ಅನಿತ್ಯವಿಲ್ಲದ ನಿತ್ಯಪ್ರಸಾದಿ, ಖಂಡಿತವಿಲ್ಲದ ಅಖಂಡಿತಪ್ರಸಾದಿ, ಕೂಡಲಸಂಗಮದೇವರಲ್ಲಿ ತಾನೆ ಪ್ರಸಾದಿ.

I- -

ಮಿಥ್ಯವನಳಿದುಳಿದ ಸತ್ಯಪ್ರಸಾದಿ: ಮಿಥ್ಯವ-ಅನಿತ್ಯತ್ವವನ್ನು, ಅಳಿದು-ನಷ್ಟವ ಮಾಡಿ, ಉಳಿದ-ಅವಶೇಷಿತವಾದ, ಸತ್ಯಪ್ರಸಾದಿ-ಯಥಾರ್ಥವಾದ ಶಿವಪ್ರಸಾದಿಯು, ಅಂಜನವಿಲ್ಲದ-ಮಾಯಾಪ್ರಪಂಚಿನ ಕಾಳಿಕೆಯೇನೂ ಉಂಟಾಗಿಲ್ಲದ, ನಿರಂಜನಪ್ರಸಾದಿ-ಅವಿದ್ಯಾರಚನೆಗೆ ಬಾರದ ಶಿವಪ್ರಸಾದಿಯು. ದುಃಖವನಳಿದ-ವ್ಯಾಕುಲನಷ್ಟವಾದ, ಘನಾನಂದಪ್ರಸಾದಿ-ಅಧಿಕತರವಾದ ಶಿವಪ್ರಸಾದಿಯು, ಅನಿತ್ಯವಿಲ್ಲದ-ಅಶಾಶ್ವತವಿಲ್ಲದ, ನಿತ್ಯ ಪ್ರಸಾದಿ-ಯಥಾರ್ಥವಾದ ಶಿವಪ್ರಸಾದಿಯು, ಖಂಡಿತವಿಲ್ಲದ-ಭಿನ್ನವಿಲ್ಲದ, ಅಂಖಡಿತಪ್ರಸಾದಿ-ಪರಿಪೂರ್ಣವಾದ ಶಿವಪ್ರಸಾದಿಯು, ಕೂಡಲಸಂಗಮ ದೇವರಲ್ಲಿ-ಪರಶಿವಲಿಂಗದಲ್ಲಿ, ತಾನೆ ಪ್ರಸಾದಿ-ತಾನೆ ಶಿವಪ್ರಸಾದಿಯೆಂಬ ದೃಷ್ಟೋಪಮಾನದ ಹಾಗೆ.

● ಮಿಥ್ಯವನಳಿದು-ಅನಿತ್ಯಸ್ವರೂಪವಾದ ದೇಹಭಾವದ ಪ್ರಪಂಚವ ನಷ್ಟ ಮಾಡಿ, ಉಳಿದ-ತಾನೇ ಲಿಂಗವಾಗಿ ಆಚಾರಾಂಗದಲ್ಲಿ ಅವಶೇಷಿತವಾದ, ಸತ್ಯಪ್ರಸಾದಿ-ಯಥಾರ್ಥವಾದ ತನುವಿನಲ್ಲಿ ಗುರುಸಂಬಂಧವ ಮಾಡಿಕೊಂಡು ಗುರುಭಕ್ತಿಯ ಮಾಡಲ್ಪಟ್ಟಾತನು, ಅಂಜನವಿಲ್ಲದ-ಮನೋ ಪ್ರಪಂಚಿಲ್ಲದ, ನಿರಂಜನಪ್ರಸಾದಿ-ಅವಿದ್ಯಾರಚನೆಗೆ ಬಾರದ ಮನದಲ್ಲಿ ಲಿಂಗಸಂಬಂಧವ ಮಾಡಿಕೊಂಡು ಲಿಂಗಪೂಜೆಯ ಮಾಡಲ್ಪಟ್ಟಾತನು. ದುಃಖವನಳಿದ-ಪ್ರಾಣನ ವರ್ತನೆಯ ನಷ್ಟವಮಾಡಿದ, ಘನಾನಂದಪ್ರಸಾದಿ-ಅಧಿಕತರವಾದ ಪ್ರಾಣಜ್ಞಾನದಲ್ಲಿ ಜಂಗಮವ ಸಂಬಂಧವ ಮಾಡಿಕೊಂಡು

ಜಂಗಮಭಕ್ತಿಯ ಮಾಡಲ್ಪಟ್ಟಾತನು, ಅನಿತ್ಯವಿಲ್ಲದ–ಆತ್ಮನ ವರ್ತನೆ ನಷ್ಟವಾದ, ನಿತ್ಯಪ್ರಸಾದಿ–ಯಥಾರ್ಥವಾದ ಆತ್ಮಾಂಗದಲ್ಲಿ ಪ್ರಸಾದಸಂಬಂಧವ ಮಾಡಿಕೊಂಡು ಪ್ರಸಾದಸೇವನೆಯ ಮಾಡಲ್ಪಟ್ಟಾತನು. ಖಂಡಿತವಿಲ್ಲದ–ಸರ್ವಾಂಗದ ವರ್ತನೆಯುಂಟಾಗಿಲ್ಲದ, ಅಖಂಡಿಪ್ರಸಾದಿ–ಪರಿಪೂರ್ಣವಾದ ಸರ್ವಾಂಗದಲ್ಲಿ ಪಾದೋದಕವ ಸಂಬಂಧಮಾಡಿಕೊಂಡು ಪಾದೋದಕಸೇವನೆಯ ಮಾಡಲ್ಪಟ್ಟಾತನು. ಕೂಡಲಸಂಗಮದೇವರಲ್ಲಿ–ಪರಶಿವಲಿಂಗದ ಪಾದಾರವಿಂದದಲ್ಲಿ, ತಾನೇ ಪ್ರಸಾದಿ–ತಾನೇ ಶಿವಪ್ರಸಾದಿಯು.

....

೧. ಬೆಳಗಿನೊಳಗಣ ಬೆಳಗು....ಎಂಬ ವಚನದ ನಂತರ (ಕ.ಗ ಪ್ರತಿಯಲ್ಲಿ)ವಿದೆ. (ಸಂ.)

ಐಕ್ಯನ ಪ್ರಸಾದಿಸ್ಥಲ

I– –

ಐಕ್ಯನ ಪ್ರಸಾದಿಸ್ಥಲ–ಐಕ್ಯ ಸ್ಥಲದೊಳಗಣ ಪ್ರಸಾದಿಸ್ಥಲದಾಚರಣೆಯನು ನಿರೂಪಿಸುತ್ತಿಹರು.

೯೪೫

ಹುಸಿಯಿಂದ ಜನಿಸಿದೆ[1]ನಯ್ಯ[1] ಮರ್ತ್ಯಲೋಕದೊಳಯಿಂಕೆ, ಹುಸಿಯಿಂದ ಲಿಂಗವ ಹೆಸರುಗೊಂಡು ಕರೆದೆನಯ್ಯ, ಅದು ಎನಗೆ ಭಾವವಲ್ಲ, ನಿರ್ಭಾವವಲ್ಲದೆ ನಿಂ[2]ದಿತ್ತ[2]ಯ್ಯ. ಅದರ ಅವಯವಂಗಳೆಲ್ಲ ಜಂಗಮವಯ್ಯ, ಅದಕ್ಕೆ ಎನ್ನಲ್ಲುಳ್ಳ ಸೈದಾನವ [3]ಮಾಡಿ[3] ನೀಡಿದೆನಯ್ಯ. ಆ ಪ್ರಸಾದಕ್ಕೆ ಶರಣೆಂ[4]ಬೆ[4]ನಯ್ಯ. ಅದು ಸಾರವೂ ಅಲ್ಲ ನಿಸ್ಸಾರವೂ ಅಲ್ಲ. ಆ ಪ್ರಸಾದದಲ್ಲಿ [5]ತಾ[5]ನೇ ತದ್ಗತನಾದೆನು ಕಾಣಾ, ಕೂಡಲಸಂಗಮದೇವಾ.

I– –

ಹುಸಿಯಿಂದ ಜನಿಸಿದೆನಯ್ಯ ಮರ್ತ್ಯಲೋಕದೊಳಯಿಂಕೆ: ಹುಸಿಯಿಂದ–ಭಕ್ತಮಾಹೇಶ್ವರರುಗಳ ಮಧ್ಯದಲ್ಲಿ ಸಟೆಯನಾಡುವುದರಿಂದ, ಮರ್ತ್ಯಲೋಕದೊಳಯಿಂಕೆ–ಭೂಲೋಕದಲ್ಲಿ ಜನಿಸಿದೆನಯ್ಯ–ಉತ್ಪತ್ಯವಾದೆನಯ್ಯ. ಹುಸಿಯಿಂದ–ಅನಿತ್ಯವಾದ ದೇಹವು ಆತ್ಮನಿಗೆ ಸಂಬಂಧವಾದುದರಿಂದ ಲಿಂಗವ–ಮಹಾಲಿಂಗವನ್ನು, ಹೆಸರುಗೊಂಡು–ನಾಮರೂಪು ಕ್ರಿಯೆಗಳನುಂಟುಮಾಡಿ, ಕರೆದೆನಯ್ಯ–ಹೇಳಿದೆನಯ್ಯ. ಅದು–ಮಹಾಲಿಂಗವು, ಎನಗೆ –ಶರಣನಿಗೆ, ಭಾವವಲ್ಲ–ಭಿನ್ನಭಾವದಿಂದ ಭಾವಿಸಲ್ತಕ್ಕದ್ದು ಅಲ್ಲವು. ನಿರ್ಭಾವವಲ್ಲದೆ–ಭಿನ್ನವಿಲ್ಲದ ಅಭಿನ್ನಭಾವದಿಂದ ಭಾವಿಸಲು, ನಿಂದಿತ್ತಯ್ಯ–ಇಷ್ಟಲಿಂಗವಾಗಿ ಅಂಗದಲ್ಲಿ ಸಂಬಂಧವಾಯಿತ್ತಯ್ಯ.

ಅದರ–ಮಹಾಲಿಂಗದ, ಅವಯವಂಗಳೆಲ್ಲ–ಜ್ಞಾನಕ್ರಿಯೆಗಳೆಲ್ಲವು, ಜಂಗಮವಯ್ಯ–ಚರಜಂಗಮವಯ್ಯ. ಅದಕ್ಕೆ–ಆ ಮಹಾಲಿಂಗಕ್ಕೆ, ಎನ್ನಲ್ಲುಳ್ಳ–ಎನ್ನಲ್ಲುಂಟಾದ, ಸ್ಥೈದಾನವ ಮಾಡಿ ನೀಡಿದೆನಯ್ಯ–ಆತ್ಮಪದಾರ್ಥವನೇ ರೂಪುಪದಾರ್ಥವಾಗಿ ಸಮರ್ಪಣೆಯ ಮಾಡಿದೆನಯ್ಯ. ಆ ಪ್ರಸಾದಕ್ಕೆ–ಆ ಚಿಕ್ಕಲಾಪ್ರಸಾದಸ್ವರೂಪವಾದ ಮಹಾಲಿಂಗಕ್ಕೆ, ಶರಣೆಂಬೆನಯ್ಯ–ನಮಸ್ಕಾರವೆಂದು ನಮಸ್ಕರಿಸಿದೆನಯ್ಯ. ಅದು–ಆ ಮಹಾಲಿಂಗವು, ಸಾರವೂ ಅಲ್ಲ–ಸಂಸಾರಿಯರ ವಿಷಯರಸದಂತಲ್ಲವು. ಅದು–ಆ ಮಹಾಲಿಂಗವು, ನಿಸ್ಸಾರವೂ ಅಲ್ಲ–ಸಂಸಾರವಿಷಯರಸ ದುಸ್ಸಾರವರತ ಜ್ಞಾನಾನಂದ ಸುಖಸ್ವರೂಪವಾದುದಲ್ಲವೆಂಬುದರ್ಥ.

● ಅದು ಸಾರವೂ ಅಲ್ಲ–ದೇಹದ ವರ್ತನೆಯುಳ್ಳಂಥದಲ್ಲವು, ನಿಸ್ಸಾರವೂ ಅಲ್ಲ–ಆತ್ಮನ ವರ್ತನೆಯುಳ್ಳಂಥದಲ್ಲವು. ಆ ಚಿತ್ಕಲಾಪ್ರಸಾದಸ್ವರೂಪವಾದ ಮಹಾಲಿಂಗದಲ್ಲಿ, ನಾನು ತದ್ಗತವಾದೆನು–ನಾನು ಎರಕವೆರೆದೋಪಾದಿಯಲ್ಲಿ ಕೂಡಲ್ಪಟ್ಟಾತನಾದೆನು. ಕಾಣಾ–ಕಂಡಾ ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

III– –

1–1 X (ಟ, ಡ) 4–4 ದ (ಟ, ಡ.). 5–5 ನಾ (ಟ, ಡ).

ಪರಶಿವನ ಜಗದ್ವೈಭವದ ಲೀಲಾವಿಲಾಸಕ್ಕೋಸ್ಕರವಾಗಿ ತಥ್ಯವಾದಾತ್ಮನು ಮಿಥ್ಯವಾದ ಮಾಯೋಪಾಧಿಯ ಹೊಂದಿ ಜಗದ್ರೂಪವಾದಯೆಂಬುದೀಗ, ಹುಸಿಯಿಂದ ಜನಿಸಿದೆ ಮರ್ತ್ಯಲೋಕದೊಳಯಿಂಕೆ ಎಂಬ ಶಬ್ದಕ್ಕರ್ಥ, ನಿರಾಕಾರವಾದ ಪರಬ್ರಹ್ಮವನು ಅಭಿಧಾನಾಕಾರಂಗಳಿಗೆ ಅಂಕಿಸಿಕೊಂಡಾಹ್ವಾನಿಸುವೆನೆಂಬುದೀಗ, ಹುಸಿಯಿಂದ ಲಿಂಗವ ಹೆಸರುಗೊಂಡು ಕರೆದೆನಯ್ಯ ಎಂಬ ಶಬ್ದಕ್ಕರ್ಥ. ಅದು ಭಾವಿಸಿ ಪೂಜಿಸುವಂಥದು, ಎನಗೆ–ಶರಣನಿಗೆ, ಭಾವವು ಅಲ್ಲ–ಭಿನ್ನಭಾವವು ಅಲ್ಲವು, ನಿರ್ಭಾವವು ಅಲ್ಲದೆ–ಸಮರಸಭಾವವು ಅಲ್ಲದೆ, ನಿಂದಿತ್ತಯ್ಯ–ಸಮರಸಕ್ರೀ ಸಮರಸಜ್ಞಾನದಿಂದೆ ತರಹರವಾಯಿತ್ತಯ್ಯ.

ಅದಱ–ಆ ಲಿಂಗದ ಅವಯವಂಗಳೆಲ್ಲ–ಅಂಗೋಪಾಂಗಗಳೆಲ್ಲವು, ಜಂಗಮನಯ್ಯ–ಚರಲಿಂಗವಯ್ಯ, ಅದಕ್ಕೆ–ಆ ಲಿಂಗಕ್ಕೆ, ಎನ್ನಲ್ಲುಳ್ಳ–ಎನ್ನಲ್ಲುಂಟಾದ, ಸ್ಥೈದಾನವ ಮಾಡಿ ನೀಡಿದೆನಯ್ಯ–ಆತ್ಮಪದಾರ್ಥವನೇ ರೂಪುಪದಾರ್ಥವಾಗಿ ಸಮರ್ಪಣೆ ಮಾಡಿದೆನಯ್ಯ. ಆ ಪ್ರಸಾದಕ್ಕೆ–ಆ ಪೂರ್ಣಪ್ರಸಾದಸ್ವರೂಪವಾದಂಥಾದಕ್ಕೆ, ಶರಣೆಂದೆನಯ್ಯ–ನಮಸ್ಕಾರವೆಂದೆನಯ್ಯ. ಅದು–ಆ ವಸ್ತುವು, ಸಾರವೂ ಅಲ್ಲ–ಜೀವಸಾರವೂ ಅಲ್ಲವು, ನಿಸ್ಸಾರವೂ ಅಲ್ಲ–ನಿರಾಕಾರವೂ ಅಲ್ಲವು. ಆ ಪ್ರಸಾದದಲ್ಲಿ–ಪೂರ್ಣಪ್ರಸಾದದಲ್ಲಿ, ನಾನೇ–ಶರಣಸತಿ ನಾನೇ, ತದ್ಗತನಾದೆ ಕಾಣಾ–ಏವಾದೆನು ಕಂಡಾ, ಕೂಡಲಸಂಗಮದೇವ–ಎಲೆ ಪರಶಿವಲಿಂಗವೆ.

....

೧–೧ X (ಡ).

IV– –

2-2 ಮದ (ತ) 3-3 X (ತ). 5-5-ನಾ (ತ)

....

ಶಿವಾಂಶಿಕರುಗಳಾದ ಆತ್ಮರುಗಳಜೀವಿಂಗೆ ಶಿವಾಜ್ಞೆಯಿಂದ ಮಿಥ್ಯಮಜಿವೆ ಎಡೆಗೊಳಲು ಹುಸಿ ದೇಹಕರಣ ಸಂಬಂಧಿಯಾಗಿ ಹುಟ್ಟಿದೆನೆಂಬುದೀಗ, ಹುಸಿಯಿಂದ ಜನಿಸಿದೆನಯ್ಯ ಮರ್ತ್ಯಲೋಕದೊಳಯಿಂಕೆಯೆಂಬ ಶಬ್ದಕ್ಕರ್ಥ, ಅಂತಾದ ಹುಸಿ ದೇಹಸಂಬಂಧದಿಂದ ನಾಮರೂಪಿಲ್ಲದ ವಸ್ತುವ ನಾಮ ರೂಪ ಮಾಡಿ ಕರೆಯಲಾಯಿತ್ತೆಂಬುದೀಗ, ಹುಸಿಯಿಂದ ಲಿಂಗವ ಹೆಸರಗೊಂಡು ಕರೆದೆನಯ್ಯಯೆಂಬ ಶಬ್ದಕ್ಕರ್ಥ. ಅಂತಪ್ಪ ಮಹಾಲಿಂಗವ ಭಾವಿಸಿಹೆನೆಂದಡೆ ಭಾವಕ್ಕೆ ಭಿನ್ನವಾಗಿ ಗೋಚರಿಸದಾಗಿ ಲಿಂಗವ ಭಿನ್ನವಿಟ್ಟು ಭಾವಿಸುವ ಭಾವವಿಲ್ಲ ಶರಣಂಗೆಂಬುದೀಗ, ಅದು ಎನಗೆ ಭಾವವೂ ಅಲ್ಲವೆಂಬ ಶಬ್ದಕರ್ಥ. ಅಂತು ಲಿಂಗವ ಭಾವಿಸದೆ ಜೀವನಾಗಿ ಸುಮ್ಮನೆ ಇರ್ದವನಲ್ಲ. ಲಿಂಗದಲ್ಲಿ ಅಭಿನ್ನಭಾವಿಯಾಗಿಪ್ಪನು ಶರಣ. ಅಂತಪ್ಪ ಶರಣನ ಸರ್ವಾಂಗ ಲಿಂಗವಾಗಿ ಭಿನ್ನದೋರದೇ ಇದ್ದಿತ್ತೆಂಬುದೀಗ, ನಿರ್ಭಾವವಲ್ಲದೆ ನಿಂದುದಯ್ಯಯೆಂಬ ಶಬ್ದಕ್ಕರ್ಥ.

ಅಂತು ಸರ್ವಾಂಗಲಿಂಗವಾದಲ್ಲಿ ಅಂಗದಲ್ಲಿ ಚರಿಸುವ ಕರಣಂಗಳೆಲ್ಲ ಚರಲಿಂಗವೆಂಬುದೀಗ, ಅದಱ ಅವಯವಂಗಳೆಲ್ಲ ಜಂಗಮವಯ್ಯಯೆಂಬ ಶಬ್ದಕ್ಕರ್ಥ. ಅಂತು ಇಂದ್ರಿಯ ಕರಣಂಗಳೆಲ್ಲ-ಜಂಗಮವಾಗಿಪ್ಪ ಕಾರಣ ಶರಣನ ಅಂಗಕ್ಕೆ ಬಂದ ವಿಷಯಪದಾರ್ಥಂಗಳೆಲ್ಲ ಜಂಗಮಕ್ಕೆ ಅರ್ಪಿತವಾಯಿತ್ತೆಂಬುದೀಗ, ಅದಕ್ಕೆ ಎನ್ನಲ್ಲುಳ್ಳ ಸಯಿಧಾನವ ನೀಡಿದನಯ್ಯಯೆಂಬ ಶಬ್ದಕ್ಕರ್ಥ. ಅಂತು ಸರ್ವವಿಷಯಪದಾರ್ಥಂಗಳೆಲ್ಲ ಲಿಂಗಾರ್ಪಿತವಾಗಿ ಪ್ರಸಾದವಾಯಿತೆಂದು ಭಕ್ತಿಯಿಂದ ಸೇವಿಸಿದೆನೆಂಬುದೀಗ ಆ ಪ್ರಸಾದಕ್ಕೆ ಶರಣೆಂಬೆನಯ್ಯಯೆಂಬ ಶಬ್ದಕ್ಕರ್ಥ. ಅಂತು ದೇಹೇಂದ್ರಿಯ ವಿಷಯ ಪದಾರ್ಥಂಗಳೆಲ್ಲ ಲಿಂಗಮಯವಾದ ಕಾರಣ ಶರಣಂಗೆ ಸಂಸಾರವಿಲ್ಲವೆಂಬುದೀಗ, ಅದು ಸಾರವೂ ಅಲ್ಲವೆಂಬ ಶಬ್ದಕ್ಕರ್ಥ. ಅಂತು ಸಂಸಾರವಿದೆ ಶರಣಂಗೆ ಲಿಂಗಾನಂದಸಾರ ಉಂಟಾದ ಕಾರಣ ನಿಸ್ಸಾರವುಯೆಂಬುದೀಗ, ನಿಸ್ಸಾರವೂ ಅಲ್ಲಯೆಂಬ ಶಬ್ದಕ್ಕರ್ಥ. ಅಂತು ಲಿಂಗದಲ್ಲಿ ಭಿನ್ನವಳಿದು ಲಿಂಗಭೋಗೋಪಭೋಗಿಯಾಗಿರ್ದ ಶರಣನೆಂಬುದೀಗ, ಆ ಪ್ರಸಾದದಲ್ಲಿ ನಾನೇ ತದ್ಗತನಾದೆ ಕಾಣಾಯೆಂಬ ಶಬ್ದಕ್ಕರ್ಥ.

V- -

1-1 X (ಪ).

೨ಪರಶಿವನ ಲೀಲಾಜಗದ್ವೈಭವಕ್ಕೋಸ್ಕರವಾಗಿ ತಥ್ಯವಾದಾತ್ಮನು ಮಿಥ್ಯವಾದ ಜಗದ್ರೂಪವಾದನೆಂಬುದೀಗ, ಹುಸಿಯಿಂದ ಜನಿಸಿದೆ ಮರ್ತ್ಯದೊಳಯಿಂಕೆಯೆಂಬ ಶಬ್ದಕ್ಕರ್ಥ ನಿರಾಕಾರವಾದ ಪರಬ್ರಹ್ಮವನು ಅಭಿಧಾನಾಕಾರುಗಳಿಗೆ ಅಂಕಿಸಿಕೊಂಡು ಅಹ್ವಾನಿಸುವನೆಂಬುದೀಗ, ಹುಸಿಯಿಂದ ಲಿಂಗವ ಹೆಸರುಗೊಂಡು ಕರೆದನಯ್ಯಯೆಂಬ ಶಬ್ದಕ್ಕರ್ಥ.

....

೨ + ಐಕ್ಯನ ಪ್ರಸಾದಿ (ಪ).

೯೪೬

ಬೆಳಗಿನೊಳಗಣ ಬೆಳಗು ಮಹಾಬೆಳಗೆಂಬ ಪ್ರಸಾದದಲ್ಲಿ ಒದಗಿದ ಪ್ರಸಾದಿಯ ಪರಿಣಾಮದ ಪರಮಾನಂದವನೇನೆಂದುಪಮಿಸುವೆನಯ್ಯ? ಪರಮಾಶ್ರಯವೇ ತಾನಾಗಿ, ಕೂಡಲಸಂಗಮದೇವಾ, ಚೆನ್ನಬಸವಣ್ಣನೆಂಬ ಮಹಾಪ್ರಸಾದಿ ಎನ್ನ ವಾಙ್ಮನಕ್ಕಗೋಚರನ ನಾನೇನೆಂಬೆನಯ್ಯ?

I– –

ಬೆಳಗಿನೊಳಗಣ ಬೆಳಗು: [ಬೆಳಗಿನ–] ಅಂಗದಲ್ಲಿ ನೆಲೆಗೊಂಡ ಬೆಳಗುವ ಸತ್ಕ್ರಿಯಾ ಪ್ರಕಾಶ ಸ್ವರೂಪವಾದ ಇಷ್ಟಲಿಂಗವು, ಒಳಗಣ–ಮನದಲ್ಲಿ ನೆಲೆಗೊಂಡಿರುವ ಸುಜ್ಞಾನ ಪ್ರಕಾಶ ಸ್ವರೂಪವಾದ ಪ್ರಾಣಲಿಂಗವು, ಬೆಳಗು–ಆತ್ಮಾಂಗದಲ್ಲಿ ನೆಲೆಗೊಂಡ ಬೆಳಗುವ ಮಹಾಜ್ಞಾನ ಸ್ವರೂಪನಾದ ಭಾವಲಿಂಗವು, ಮಹಾಬೆಳಗೆಂಬ–ತ್ರಿವಿಧಲಿಂಗವನ್ನು ಒಳಕೊಂಡು ತೋರಲ್ಪಟ್ಟ ಮಹಾಲಿಂಗ ಪ್ರಕಾಶವೆಂದು ಹೇಳುವ, ಪ್ರಸಾದದಲ್ಲಿ–ಚಿತ್ಕಲಾಪ್ರಸಾದ ಸ್ವರೂಪವಾದ ಮಹಾಲಿಂಗದಲ್ಲಿ, ಒದಗಿದ–ಉತ್ಪತ್ಯವಾದ, ಪ್ರಸಾದಿಯ–ಶಿವಪ್ರಸಾದಿಯ, ಪರಿಣಾಮದ–ಸುಖಸ್ವರೂಪವಾದ, ಪರಮ–ಶ್ರೇಷ್ಠವಾದ, ಆ–ನಂಧವ–ಸಂತೋಷವನ್ನು, ಏನೆಂದುಪಮಿಸುವೆನಯ್ಯ–ಎಂತೆಂದು ವಾಚ್ಯಕ್ಕೆ ತಂದು ಹೇಳುವೆನಯ್ಯ. ಪರಮಾಶ್ರಯವೇ ತಾನಾಗಿ–ತ್ರಿವಿಧಲಿಂಗವನ್ನು ಒಳಕೊಂಡು ತೋರುವುದಕ್ಕೆ ಮಹಾಲಿಂಗವೇ ತ್ಯಾಗಾಂಗ ಭೋಗಾಂಗ ಯೋಗಾಂಗ ಸ್ವರೂಪಿನಿಂದ ಆಲಯಸ್ಥಾನವೇ ತಾನಾಗಿ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ ಚೆನ್ನಬಸವಣ್ಣನೆಂಬ–ಚೆನ್ನಬಸವೇಶ್ವರನೆಂದು ಹೇಳುವ, ಮಹಾಪ್ರಸಾದಿ–ಚಿತ್ಕಲಾಪ್ರಸಾದ ಸ್ವರೂಪವಾದ ಮಹಾಲಿಂಗವು. ಎನ್ನ ವಾಙ್ಮನಕ್ಕೆ ಅಗೋಚರ–ಎನ್ನ ವಾಕ್ಯದ ಸಂಭ್ರಮದ ಮನದ ನೆನಹಿಂಗೆ ಮಿರಿ ತೋರಲ್ಪಟ್ಟಾತನ, ನಾನೇನೆಂಬೆನಯ್ಯ–ನಾನೇನೆಂತೆಂದು ವಾಚ್ಯಕ್ಕೆ ತಂದು ಹೇಳುವೆನಯ್ಯ.

ಐಕ್ಯನ ಪ್ರಾಣಲಿಂಗಿಸ್ಥಲ

I– –

ಐಕ್ಯನ ಪ್ರಾಣಲಿಂಗಿಸ್ಥಲ–ಐಕ್ಯಸ್ಥಲದೊಳಗಣ ಪ್ರಾಣಲಿಂಗಿಸ್ಥಲದಾಚರಣೆಯನು ನಿರೂಪಿಸುತ್ತಿಹರು.

೯೪೭

ಆಯತವೆಂಬುದು ಭಂಗ, ಸ್ವಾಯತವೆಂಬುದು [1]ಭವ[1]; ಆಯತವನಜೆಯೆ ಸ್ವಾಯತವನಜೆಯೆ ಭಾವದಲ್ಲಿ ವ್ರತಗೆಟ್ಟದಾಗಿ, ಆ ಭಾವದಲ್ಲಿ ಜೀವಸಂಹಾರಿ, ಕೂಡಲಸಂಗಮದೇವ ಸರ್ವನಿವಾಸಿಯಾಗಿ.

I– –

ಆಯತವೆಂಬುದು "ಆಯತಂ ಇಷ್ಟಲಿಂಗಂ ಚ" ಎಂದು ಅಂಗದಲ್ಲಿ ಇಷ್ಟಲಿಂಗವ ಸಂಬಂಧವ ಮಾಡಿಕೊಂಡು ಇಷ್ಟಲಿಂಗವೆ ಪರವೆಂದು ಹೇಳುವಂಥದು, ಭಂಗ–ಕೊರತೆಯು. ಸ್ವಾಯತವೆಂಬುದು "ಸ್ವಾಯತಂ ಪ್ರಾಣಲಿಂಗಂ ಚ" ಎಂದು ಮನದಲ್ಲಿ ಪ್ರಾಣಲಿಂಸಂಬಂಧವ ಮಾಡಿಕೊಂಡು ಪ್ರಾಣಲಿಂಗವೇಪರವೆಂದು ಹೇಳುವಂಥದು. ಭವ–ಉತ್ಪತ್ಯವು. ಆಯತವನು "ಆಯತಂ ಇಷ್ಟಲಿಂಗಂ ಚ" ಎಂದು ಅಂಗದಲ್ಲಿ ಇಷ್ಟಲಿಂಗ ಸಂಬಂಧವ ಮಾಡಿಕೊಂಡು ಇಷ್ಟಪ್ರಾಣಲಿಂಗವೇ ಪರವೆಂದು ಹೇಳುವಂಥದು, ಅಜೆಯೆ–ತಿಳಿಯೆನು. ಸ್ವಾಯತವನು–"ಸ್ವಾಯತಂ ಪ್ರಾಣಲಿಂಗಂ ಚ" ಎಂದು ಮನದಲ್ಲಿ ಪ್ರಾಣಲಿಂಗಸಂಬಂಧವ ಮಾಡಿಕೊಂಡು ಪ್ರಾಣಲಿಂಗವೇ ಪರವೆಂದು ಹೇಳುವಂಥದನು. ಅಜೆಯೆ–ತಿಳಿಯೆನು, ಭಾವದಲ್ಲಿ–ಶಿವಭಾವದೊಡನೆ ಕೂಡಿರುವ ಮನದಲ್ಲಿ ವ್ರತಗೆಟ್ಟುದಾಗಿ–ಭಿನ್ನ ನೇಮವ್ರತಕ್ರಿಯೆಗಳುನಷ್ಟವಾದುದಾಗಿ.

ಆ ಭಾವದಲ್ಲಿ–ಆ, ಶಿವಭಾವದೊಡನೆ ಕೂಡಿರುವ ಮನದಲ್ಲಿ, ಕೂಡಲಸಂಗಮದೇವ – ಪರಮಶಿವಲಿಂಗವು, ಸರ್ವನಿವಾಸಿಯಾಗಿ–ಸರ್ವಾಚಾರ ಸಂಪತ್ತಿನಾಚರಣ ಕ್ರಿಯೆಗಳಡಗುವುದಕ್ಕೆ ಮಹಾಲಿಂಗವೆ ಆಲಯವಾಗಿ, ಜೀವ ಸಂಹಾರಿ–ದಳಪ್ರಕೃತಿಯೊಡನೆ ಕೂಡಿ ಚರಿಸುವ ಜೀವನ ವರ್ತನೆ ನಷ್ಟವಾಗಿಪ್ಪುದಾಗಿ.

III– –

ಇಷ್ಟಲಿಂಗಕ್ಕೆ ಅಷ್ಟವಿಧಾರ್ಚನೆ ಷೋಡಶೋಪಚಾರವ ಮಾಡಿ ಫಲಪದಂಗಳ ಪಡೆದನುಭವಿಸಿದಲ್ಲಿ ಜನ್ಮದ ಕೊರತೆ ಉಂಟಾಗಿರ್ಪುದೆಂಬುದೀಗ, ಆಯತವೆಂಬುದು ಭಂಗವೆಂಬ ಶಬ್ದಕ್ಕರ್ಥ. ಭಿನ್ನಜ್ಞಾನದಲ್ಲಿ ಕೂಡಿ ವರ್ತಿಸಿದುದರಿಂದ ಮುಂದೆ ಭವ ಉಂಟಾಗಿರ್ಪುದೆಂಬುದೀಗ ಸ್ವಾಯತವೆಂಬುದು ಭವವೆಂಬ ಶಬ್ದಕ್ಕರ್ಥ. ಆಯತವನಜೆಯೆ–ಅಂಗದಲ್ಲಿ ಇಷ್ಟಲಿಂಗಸಂಬಂಧವೆಂಬುದನು ಅರಿಯೆನು. ಸ್ವಾಯತವನಜೆಯೆ–ಪ್ರಾಣದಲ್ಲಿ ಪ್ರಾಣ ಲಿಂಗಸಂಬಂಧವೆಂಬುದನು ತಿಳಿಯೆನು. ಭಾವದಲ್ಲಿ ವ್ರತಗೆಟ್ಟುದಾಗಿ–ಭಿನ್ನಕ್ರೀ ಭಿನ್ನಜ್ಞಾನಗಳಿಂದೆ ಲಿಂಗೈಕ್ಯವ್ರತವು ನಷ್ಟವಾಗಿರ್ಪುದಾಗಿ.

ಮತ್ತಂ, ಸಮರಸಜ್ಞಾನಿಕ್ರಿಯೆಗಳಿಂದೆ ಲಿಂಗದಲ್ಲೇಕತ್ವವು ದೊರೆಕೊಂಬುವದಾಗಿ, ಪರಶಿವಲಿಂಗವು ಸರ್ವಾಂತರ್ಯಾಮಿಯಾದ ಕಾರಣ ಪೂರ್ಣ ಜ್ಞಾನದಿಂದ ಜೀವಭಾವವಳಿದು ಲಿಂಗದಲ್ಲನೇಕತ್ವವುಂಟಾಗಿರ್ಪುದೆಂಬುದೀಗ, ಆ ಭಾವದಲ್ಲಿ ಜೀವಸಂಹಾರಿ ಕೂಡಲಸಂಗಮದೇವ ಸರ್ವನಿವಾಸಿಯಾಗಿ ಎಂಬ ಶಬ್ದಕ್ಕರ್ಥ.

....

೧–೧ X (ಡ). ೨ + ವ (ಡ)

IV– –

1–1 ಭಂಗ(ತ)

....

ಭಾವವಡಗಿ ನಿರ್ಭಾವವಾಗಿ ಪ್ರಾಣಭಾವವಳಿದು ಪರತತ್ವವಾಯಿತ್ತೆಂಬುದೀ ವಚನದರ್ಥ.

V– –

೧–೧ ಭಂಗ(ಪ)

....

[೨]ಇಷ್ಟಲಿಂಗಕ್ಕಷ್ಟವಿಧಾರ್ಚನೆ ಷೋಡಶೋಪಚಾರಂಗಳ ಮಾಡಿ ಫಲಪದಂಗಳ ಪಡೆದನುಭವಿಸಿದ ಜನ್ಮದ ಕೊಱತೆಯುಂಟಾಗಿರ್ಪುದೆಂಬುದೀಗ, ಆಯತವೆಂಬುದು ಭಂಗವೆಂಬ ಶಬ್ದಕ್ಕರ್ಥ. ಭಿನ್ನಜ್ಞಾನದಲ್ಲಿ ಕೂಡಿ ವರ್ತಿಸಿದುದಱಿಂದ ಮುಂದೆ ಭವವುಂಟಾಗಿರ್ಪುದೆಂಬುದೀಗ, ಸ್ವಾಯತವೆಂಬುದು ಭಂಗವೆಂಬ ಶಬ್ದಕ್ಕರ್ಥ. ಭಿನ್ನಕ್ರೀಭಿನ್ನ ಜ್ಞಾನಂಗಳಿಂದೆ ಐಕ್ಯವ್ರತವು ನಷ್ಟವಾಗಿರ್ಪುದೆಂಬದೀಗ ಭಾವದಲಿ ವ್ರತಗೆಟ್ಟುದಾಗಿಯೆಂಬ ಶಬ್ದಕ್ಕರ್ಥ. ಪರಶಿವಲಿಂಗವು ಸರ್ವಾಂತರ್ಯಾಮಿಯಾದ ಕಾರಣ ಪೂರ್ಣಜ್ಞಾನದಿಂದೆ ಜೀವಭಾವವಳಿದು ಲಿಂಗದಲ್ಲೇಕತ್ವವುಂಟಾಗಿರ್ಪುದೆಂಬುದೀಗ, ಆ ಭಾವದಲ್ಲಿ ಜೀವಸಂಹಾರಿ ಕೂಡಲಸಂಗಮ ಸರ್ವನಿವಾಸಿಯಾಗಿಯೆಂಬ ಶಬ್ದಕ್ಕರ್ಥ.

....

೩ + ಐಕ್ಯನ ಪ್ರಾಣಲಿಂಗಿ (ಪ).

೯೪೮

ಸ್ವಯಂಲಿಂಗದನುಭಾವ ತನಗೆ ದೊರೆಕೊಂಡ ಬಳಿಕ ದೇವಲೋಕವೆಂಬುದೇನೋ? ಮರ್ತ್ಯಲೋಕವೆಂಬುದೇನೋ? ಆವುದಱಲ್ಲಿ[1] ಭೇದವೇನಯ್ಯ, ಕೂಡಲಸಂಗಮದೇವಾ, ಬಳಿಕ ಆಲಸ್ಯವುಂಟೇ?

I– –

ಸ್ವಯಲಿಂಗದನುಭಾವ ತನಗೆ ದೊರೆಕೊಂಡ ಬಳಿಕ, ಸ್ವಯಲಿಂಗದ–ಇಷ್ಟಲಿಂಗದ, ಅನುಭಾವ–ಚಿಕ್ಕಲೆಯು, ತನಗೆ ದೊರೆಕೊಂಡ ಬಳಿಕ–ಅಂತರಂಗದಲ್ಲಿ ಪ್ರಾಣಲಿಂಗವಾಗಿ ನೆಲೆಗೊಂಡ ಮೇಲೆ. ದೇವಲೋಕವೆಂಬುದೇನೋ?–ಕೈಲಾಸಲೋಕವೆಂಬುದೇನೋ?, ಮರ್ತ್ಯಲೋಕ ವೆಂಬುದೇನೋ–ಮಾನವಲೋಕವೆಂಬುದೇನೋ? ಆವುದಱಲ್ಲಿ ಭೇದವೇನಯ್ಯ ಕೈಲಾಸದಲ್ಲಿದ್ದರೆ ಇಷ್ಟಲಿಂಗವೆ ತಾನಾದ ಮಹಾಲಿಂಗಕ್ಕೆ ಜ್ಞಾನಶಕ್ತಿಯಿಂದ ಪ್ರಾಣವಾಗಿಪ್ಪನು. ಮರ್ತ್ಯಲೋಕದಲ್ಲಿದ್ದರೆ ಮಹಾಲಿಂಗವೆ ತಾನಾದ ಇಷ್ಟಲಿಂಗಕ್ಕೆ ಕ್ರಿಯಾಶಕ್ತಿಯಿಂದ ಅಂಗವಾಗಿರ್ಪನು, ಅದು ಕಾರಣ–ಅದು ನಿಮಿತ್ತಾರ್ಥ, ಆವುದರಲ್ಲಿ ಭೇದವೇನಮ್ಮ–ಭಿನ್ನವೇನಯ್ಯ, ಕೂಡಲಸಂಗಮದೇವಾ–ಎಲೆ

ಪರಶಿವಲಿಂಗವೆ, ಬಳಿಕ ಆಲಸ್ಯವುಂಟೆ?–ಭಿನ್ನ ನೇಮವ್ರತಕ್ರಿಯೆಗಳನು ಹಿಡಿದಾಚರಿಸಬೇಕೆಂಬ ವಿಳಂಬವುಂಟೆ? ಇಲ್ಲ.

III– –

1 + ಯೂ(ಟ. ಡ)

....

ಪ್ರಾಣಲಿಂಗಸಂಬಂಧವಾದ ಸಮರಸಜ್ಞಾನಾನುಭಾವವು ತನಗೆ ದೊರೆಕೊಂಡ ಬಳಿಕ ಇಹಲೋಕ ಪರಲೋಕವೆಂಬುಚ್ಚನೀಚತೆಗಳಂಡಲೆ ಪ್ರಾಣ ಲಿಂಗಿಗೆ ದೊರೆಕೊಳ್ಳಲರಿದೆಂಬುದೀಗ, ಸ್ವಯಲಿಂಗದನುಭಾವ ತನಗೆ ದೊರೆಕೊಂಡ ಬಳಿಕ ದೇವಲೋಕವೆಂಬುದೇನೊ? ಮರ್ತ್ಯಲೋಕವೆಂಬುದೇನೋ? ಎಂಬ ಶಬ್ದಕ್ಕರ್ಥ, ಆವುದರಲ್ಲಿಯೂ ಭೇದವೇನಯ್ಯ–ಇಹ ಪರಲೋಕಗಳೆಂಬೆರಡರಲ್ಲಿ ಭಿನ್ನಭೇದ ಉಂಟೇನಯ್ಯ, ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ. ಲಿಂಗಸ್ವರೂಪವಾದ ಶರಣನು ಮರಳಿ ಲಿಂಗದಲ್ಲಿ ಕೂಡನೆಂಬ ಜಡತ್ವವುಂಟಾಗದು ಎಂಬುದೀಗ, ಬಳಿಕ ಆಲಸ್ಯವುಂಟೆ? ಎಂಬ ಶಬ್ದಕ್ಕರ್ಥ.

....

೧–೧ ಜಿ (ಟ) ರಿಯ(ಡ)

IV– –

1 +ಯೂ (ತ)

....

ಸತ್ಯವಾದ ಪರಬ್ರಹ್ಮವು ತಾನಾದ ಬಳಿಕ ಇಹ ಪರವಿಲ್ಲದೆ ಅಖಂಡಿತವಾಯಿತ್ತೆಂಬುದೀ ವಚನದರ್ಥ.

V– –

ಪ್ರಾಣಲಿಂಗಸಂಬಂಧವಾದ ಸಮರಸಜ್ಞಾನಾನುಭಾವವು ತನಗೆ ದೊರೆಕೊಂಡ ಬಳಿಕ ಇಹಲೋಕ ಪರಲೋಕವೆಂಬುಚ್ಚನೀಚತ್ವಂಗಳಂಡಲೆ ಪ್ರಾಣಲಿಂಗಿಗೆ ದೊರೆಕೊಳ್ಳವೆಂಬುದೀಗ, ಸ್ವಯಲಿಂಗದನುಭಾವ ತನಗೆ ದೊರೆಕೊಂಡ ಬಳಿಕ ದೇವಲೋಕ ಮರ್ತ್ಯಲೋಕವೆಂ[ಬುದೇನೋ] ಎಂಬ ಶಬ್ದಕರ್ಥ, ಲಿಂಗಸ್ವರೂಪನಾದ ಶರಣನು ಮರಳಿ ಲಿಂಗದಲ್ಲಿ ಕೂಡನೆಂಬ ಜಡತ್ವವುಂಟಾಗದು ಎಂಬುದೀಗ, ಬಳಿಕ ಆಲಸ್ಯವುಂಟೆಯೆಂಬ ಶಬ್ದಕ್ಕರ್ಥ.

೯೪೯

ಏನೆಂಬೆನೇನೆಂಬೆ ಒಂದೆರಡಾದುದ? ಏನೆಂಬೆನೇನೆಂಬೆ ಎರಡೊಂದಾದುದ? ಏನೆಂಬೆನೇನೆಂಬೆ ಅವಿರಳಘನವ ಮಹಾದಾನಿ ಕೂಡಲಸಂಗಯ್ಯ[1] ತಾನೆ ಬಲ್ಲ!

I– –

ಏನೆಂಬೆನೇನೆಂಬೆ ಒಂದೆರಡಾದುದ: ಒಂದು–ಏಕಮೇವ ನ ದ್ವಿತೀಯ ಸ್ವರೂಪವಾದ ಪರಬ್ರಹ್ಮವು, ಎರಡಾದುದ–ಅಂಗ ಲಿಂಗವೆಂಬ ಉಭಯವಾದಂಥದನು, ಏನೆಂಬೆನೇನೆಂಬೆ–ಏನೆಂದು ಹೇಳಲಿ ಎಂತೆಂದು ಹೇಳಲಿ, ಎರಡು–ಅಂಗ ಲಿಂಗವೆಂಬ ಉಭಯವು. ಒಂದಾದುದ–ಏಕಮೇವ ನ ದ್ವಿತೀಯ ಸ್ವರೂಪವಾದ ಪರಬ್ರಹ್ಮವಾದುದ, ಏನೆಂಬೆನೇನೆಂಬೆ–ಏನೆಂದು ಹೇಳಲಿ ಎಂತೆಂದು ಹೇಳಲಿ, ಅವಿರಳ–ಅಭಿನ್ನಸ್ವರೂಪವಾದ, ಘನವ–ಅಧಿಕವನ್ನು, ಮಹಾದಾನಿ:[ಮಾಹಾ–] ಭಕ್ತರುಗಳಿಗೆ ಮಹದಾನಂದಸುಖವನ್ನು, ದಾನಿ–ಕರುಣಿಸಿಕೊಡುವಂಥ, ಕೂಡಲಸಂಗಯ್ಯ ತಾನೆ ಬಲ್ಲ–ಪರಶಿವಲಿಂಗಕ್ಕರಿಯ ಬರುತ್ತಿಹುದು.

IV– –

1 + ಮದೇವ(ತ).

....

ಅಖಂಡಾದ್ವಯಮಪ್ಪ ಪರಶಿವಲಿಂಗವು ತಾನೇ ತನ್ನ ಲೀಲೆಯಿಂದ ಲಿಂಗ[೧] ಶರಣನೆಂಬೆರಡಾಗಿ ಪೂಜ್ಯ ಪೂಜಕರೆನಿಸಿದ ಬಳಿಕ ಲಿಂಗಾಂಗೈಕ್ಯಕ್ರೀಯಿಂದ ಭೇದವಳಿದು ಶರಣನೆಲ್ಲಾ ಮಹಾಘನಲಿಂಗವೇ ತಾನಾಗಿಪ್ಪನು. ಅಂತು ಶರಣನೆಲ್ಲಾ ಲಿಂಗವೇಯಾಗಿಪ್ಪ ವರವ ಲಿಂಗವೇ ಕೊಟ್ಟು ಲಿಂಗವಾದುದ ಲಿಂಗವೇ ಬಲ್ಲನಲ್ಲದೆ ಅವಱ ಅಱುಹಿಸಿಕೊಂಬುವೆರಡಿಲ್ಲವೆಂಬುದೀ ವಚನದ ತಾತ್ಪರ್ಯಾರ್ಥ.

೧ + ವು(ತ).

೯೫೦

ಕುಱುಹಿಲ್ಲ ಕುಱುಹಿಲ್ಲ ಲಿಂಗವೆಂದೆಂಬಡೆ. ತೆಱಹಿಲ್ಲ ತೆಱಹಿಲ್ಲ ಜಂಗಮವೆಂದೆಂಬಡೆ. ಇದೆ ನೋಡಾ ಶಿವಾಚಾರ, ಇದೆ ನೋಡಾ ಶಿವದೊಡಕು! "ಆತ್ಮನಃ ಪ್ರಕೃತಿ ಸ್ವಭಾವಃ" ಎಂದುದಾಗಿ ಮುಟ್ಟಬಾರದ ಠಾವ ಮಱಗೊಂಡಿಪ್ಪ ಮಮಕರ್ತ ಕೂಡಲಸಂಗಮದೇವ.

I– –

ಕುಱುಹಿಲ್ಲ ಕುಱುಹಿಲ್ಲ ಲಿಂಗವೆಂದೆಂಬಡೆ: [ಲಿಂಗವೆಂದೆಂಬಡೆ–]ಅಂಗದಲ್ಲಿ ಇಷ್ಟಲಿಂಗಸಂಬಂಧವಾಗಲು ಅಂಗವೆಲ್ಲ ಇಷ್ಟಲಿಂಗಸ್ವರೂಪವೆಂದು ಹೇಳುವುದಕ್ಕೆ, ಕುಱುಹಿಲ್ಲ ಕುಱುಹಿಲ್ಲ–ಲಿಂಗಾಂಗಕ್ಕೆ ಭಿನ್ನವಿಲ್ಲ ಭಿನ್ನವಿಲ್ಲವು. ತೆಱಹಿಲ್ಲ ತೆಱಹಿಲ್ಲ ಜಂಗಮವೆಂದೆಂಬಡೆ:

[ಜಂಗಮವೆಂದೆಂಬಡೆ–] ಪ್ರಾಣದಲ್ಲಿ ಪ್ರಾಣಲಿಂಗಸಂಬಂಧವಾಗಲು ಪ್ರಾಣವೆಲ್ಲ ಪ್ರಾಣಲಿಂಗಸ್ವರೂಪವೆಂದು ಹೇಳುವರೆ ತೆಱಹಿಲ್ಲ ತೆಱಹಿಲ್ಲ–ಪ್ರಾಣ ಲಿಂಗಕ್ಕೆ ಲಿಂಗ ಪ್ರಾಣಕ್ಕೆ ಭಿನ್ನವಿಲ್ಲ ಭಿನ್ನವಿಲ್ಲವು. ಇದೆ ನೋಡಾ ಶಿವಾಚಾರ–ಇದೆ ಕಂಡಾ ಸತ್ಕ್ರಿಯಾಚಾರವು, ಇದೆ ನೋಡಾ ಶಿವದೊಡಕು–ಇದೆ ಕಂಡಾ ಪರಶಿವಜ್ಞಾನವು. "ಆತ್ಮನಃ ಪ್ರಕೃತಿ ಸ್ವಭಾವಃ" ಎಂದುದಾಗಿ: [ಆತ್ಮನಃ ಪ್ರಕೃತಿ–] ಆತ್ಮನ ಪ್ರಕೃತಿಪ್ರಪಂಚಿನಿಂದ ಸ್ವಭಾವಃ ಎಂದುದಾಗಿ–"ಆತ್ಮಾ ಕೇವಲಃ ಶಿವಃ" ಆತ್ಮನೇ ಬ್ರಹ್ಮವೆಂದು ಹೇಳುವ ದೃಷ್ಟೋಪಮಾನದ ಹಾಂಗೆ,

● ಇದೆ ನೋಡಾ ಶಿವಾಚಾರ : [ಶಿವಾಚಾರ–] ಅಂಗದಲ್ಲಿ ಇಷ್ಟಲಿಂಗಸಂಬಂಧವಾಗಲು ಅಂಗವೆಲ್ಲ ಇಷ್ಟಲಿಂಗಸ್ವರೂಪವೆಂದು ಹೇಳುವಂಥ ಇಷ್ಟಲಿಂಗಸಂಬಂಧವಾದ ಸತ್ಕ್ರಿಯಾಚಾರವು, ಇದೆ ನೋಡಾ–ಇದೆ ಕಂಡಾ. ಇದೆ ನೋಡಾ ಶಿವದೊಡಕು: [ಶಿವದೊಡಕು–] ಪ್ರಾಣಲಿಂಗಸಂಬಂಧವಾಗಲು ಪ್ರಾಣವೆಲ್ಲ ಪ್ರಾಣಲಿಂಗಸ್ವರೂಪವೆಂದು ಹೇಳುವಂಥ ಪ್ರಾಣಲಿಂಗಸಂಬಂಧವಾದ ಸುಜ್ಞಾನವು. ಇದೆ ನೋಡಾ–ಇದೆ ಕಂಡಾ. "ಆತ್ಮನಃ ಪ್ರಕೃತಿ ಸ್ವಭಾವಃ" ಎಂಬುದಾಗಿ–ಆತ್ಮಾಂಗದಲ್ಲಿ ಚಿತ್ಪ್ರಣಮಸ್ವರೂಪವಾದ ಭಾವಲಿಂಗವು ಸಂಬಂಧವಾಗಿರ್ಪುದೆಂದು ಹೇಳುತ್ತಿಹುದಾಗಿ, ಮುಟ್ಟಬಾರದ–ದ್ವೈತಾದ್ವೈತಿಗಳು ಸೋಂಕುವುದಕ್ಕೆ ಅಶಕ್ಯವಾದ, ಠಾವ–ಬ್ರಹ್ಮರಂಧ್ರಸ್ಥಾನವನ್ನು, ಮಱೆಗೊಂಡಿಪ್ಪ–ಆಲಯವ ಮಾಡಿಕೊಂಡಿರುವ, ಮಮಕರ್ತ–ಎನಗೊಡೆಯನಾದಂಥ, ಕೂಡಲಸಂಗಮದೇವ–ಪರಶಿವಲಿಂಗವು.

III– –

ವೇದಾಗಮಂಗಳಱಿವುದಶಕ್ಯವಾದ ಪೂರ್ಣಜ್ಞಾನದಲ್ಲಡಗಿ ಅವಿರಳವಾಗಿರ್ಪನೆಂಬುದೀಗ ಮುಟ್ಟಬಾರದ ಠಾವ ಮಱೆಗೊಂಡಿಪ್ಪನೆಂಬ ಶಬ್ದಕ್ಕರ್ಥ.

V– –

ವೇದಾಗಮಂಗಳಱಿವುದಶಕ್ಯವಾದ ಪೂರ್ಣಜ್ಞಾನದಲ್ಲಿ ಅಡಗಿ ಅವಿರಳವಾಗಿರ್ಪನೆಂಬುದೀಗ ಮುಟ್ಟಬಾರದ ಠಾವ ಮಱೆಗೊಂಡಿಪ್ಪನೆಂಬ ಶಬ್ದಕ್ಕರ್ಥ.

ಐಕ್ಯನ ಶರಣಸ್ಥಲ

I– –

ಐಕ್ಯನ ಶರಣಸ್ಥಲ–ಐಕ್ಯಸ್ಥಲದೊಳಗಣ ಶರಣಸ್ಥಲದಾಚರಣೆಯನ್ನು ನಿರೂಪಿಸುತ್ತಿಹರು.

೬೫೧

ಭೂ ತೋಯ ಪಾವಕ ಸಮೀರಣ ಅಂಬರಾದಿಗಳೆಲ್ಲ ಆದಿಯಾಧಾರದ ಪರಮಾತ್ಮಲಿಂಗದಲ್ಲಿ! ಆದಿಮಧ್ಯಾವಸಾನವರ್ಜಿಯದ ಅಗಮ್ಯವೇದಾದಿಸಕಲಶಾಸ್ತ್ರಾಗಮಪ್ರಮಾಣರು ಅದನಂತಿಂತೆದುಪಮಿಸಲಿಲ್ಲ, ಮಹಾಂತ ಕೂಡಲಸಂಗಮದೇವಾ.

I– –

ಭೂ–ಪೃಥ್ವಿಯು, ತೋಯ–ಉದಕವು, ಪಾವಕ–ಅಗ್ನಿಯು, ಸಮೀರಣ–ವಾಯು, ಅಂಬರಾದಿಗಳೆಲ್ಲ–ಆಕಾಶಾದಿ ದೇವತೆಗಳಿಲ್ಲ, ಆದಿಯಾಧಾರದ–ತತ್ತ್ವಭುವನಬ್ರಹ್ಮಾಂಡಗಳಿಗೆ ಮೂಲಕಾರಣವಾದ, ಪರಮಾತ್ಮಲಿಂಗದಲ್ಲಿ–ಜೀವಾತ್ಮನ ವರ್ತನೆಯಲ್ಲಿ ಹೊದ್ದಿರುವಂಥ ಮಹಾಲಿಂಗದಲ್ಲಿ, ಆದಿಮಧ್ಯಾವಸಾನವ–ಉತ್ಪತ್ತಿಸ್ಥಿತಿಲಯಂಗಳನ್ನು, ಅರ್ಜಿಯದ–ತಿಳಿಯದ, ಅಗಮ್ಯ–ಅರಿಗೂ ಗಮಿಸಿ ಕಾಣಿಸಿಕೊಳಬಾರದ, ವೇದ–ನಾಲ್ಕು ವೇಂದಂಗಳಿಗೆ, ಆದಿ–ಮೊದಲಾದ ಸಕಲಶಾಸ್ತ್ರಾಗಮ–ನಮಸ್ತಶಾಸ್ತ್ರಾಗಮಂಗಳ ಪ್ರಮಾಣರು–ಮಿತವನ್ನು ಅರಿದು ಬಲ್ಲಂಥವರುಗಳು, ಅದನು –ಆ ಪರಬ್ರಹ್ಮವನ್ನು ಅಂತಿಂದೆಂದು ಸನ್ಮಾತ್ರವಾಗಿರ್ಪುದು ಚಿನ್ಮಾತ್ರವಾಗಿರ್ಪುದೆಂದು, ಉಪಮಿಸಲಿಲ್ಲ–ವಾಚ್ಯಕ್ಕೆ ತಂದು ಹೇಳಲಿಲ್ಲವು. ಮಹಾಂತ–ಮಹಿಮಾಪದವನುಳ್ಳ ಕೂಡಲಸಂಗಮದೇವಾ–ಎಲೆ ಪರಶಿವಲಿಂಗವೆ.

೬೫೨

ಮಹಾಲಿಂಗದ ಸ್ಥಾನಂಗಳು ಮಹಾಲಿಂಗದ ಹೆಸರಲ್ಲದೇ ಲಿಂಗ ಬೇಱೆ ರೂಪು ನಿರೂಪನಲ್ಲ. ಲಿಂಗ ಬೇಱೆ ಕಾಯ ಸಂಬಂಧಿಯಲ್ಲ. ಲಿಂಗ ಬೇಱೆ ಮಹಾಘನದಿಂದತ್ತತ್ತಲೆ ! ಕೂಡಲಸಂಗಮದೇವರ ನಿಲವು ಆರಿಗೆಯೂ ಅಳವಡದು!

I– –

ಮಹಾಲಿಂಗದ ಸ್ಥಾನಂಗಳು–ಸ್ಥಾವರಲಿಂಗವು ನೆಲೆಗೊಂಡಿರುವಂಥ ಕ್ಷೇತ್ರಂಗಳು, ಮಹಾಲಿಂಗದ ಹೆಸರಲ್ಲದೆ–ಪಂಚಕೋಶಪರಿಯಂತರದಲ್ಲಿ ಶಿವಕ್ಷೇತ್ರವೆಂಬ ಅಭಿಧಾನವುಂಟಾಗಿರ್ಪುದಲ್ಲದೆ ಲಿಂಗ ಬೇಱೆ ರೂಪು ನಿರೂಪನಲ್ಲ–ಕ್ಷೇತ್ರದಲ್ಲಿ ನೆಲೆಗೊಂಡಿರುವಂಥ ಸ್ಥಾವರಲಿಂಗವು ಬೇರಲ್ಲವು; ನಿರೂಪಲಿಂಗವು ಬೇರಲ್ಲವು ಕೈಲಾಸದಲ್ಲಿ ನೆಲೆಗೊಂಡಿರುವ ಮಹಾಲಿಂಗವು ಬೇರಲ್ಲವೆಂಬುದರ್ಥ.

● ಮಹಾಲಿಂಗದ ಸ್ಥಾನಂಗಳು–ಮಹಾಲಿಂಗವೇ ತಾನಾದ ಇಷ್ಟಲಿಂಗಕ್ಕಂಗವಾದ ಶರಣನ ದೇಹವು, ಮಹಾಲಿಂಗದ ಹೆಸರಲ್ಲದೆ–ಆಚಾರಾಂಗ ಜ್ಞಾನಕಾಯವಾಗಿಪ್ಪುದಲ್ಲದೆ ಲಿಂಗ ಬೇಱೆ ರೂಪು ನಿರೂಪನಲ್ಲ; ರೂಪುಲಿಂಗ–ಅಂಗದಲ್ಲಿ ನೆಲೆಗೊಂಡಿರುವಂತ ಇಷ್ಟಲಿಂಗವು ಬೇರಲ್ಲ–ಅನ್ಯವಲ್ಲವು, ನಿರೂಪಲಿಂಗ–ಮನದಲ್ಲಿ ನೆಲೆಗೊಂಡಿರುವ ಪ್ರಾಣಲಿಂಗವು ಬೇರಲ್ಲ ಅನ್ಯವಲ್ಲವು. ಲಿಂಗ ಬೇಱೆ ಮಹಾಘನದಿಂದತ್ತತ್ತಲೆ ಆ ಲಿಂಗವೇ ಪ್ರಾಣವಾದ ಶರಣನಿಗೆ ದುರ್ಗುಣವಪ್ಪ

ಮತ್ತೊಂದು ವಾಯುಪ್ರಾಣವುಂಟಾಗಿಲ್ಲವು, ಕೂಡಲಸಂಗಮದೇವರ ವರಶಿವಲಿಂಗದ, ನಿಲವು-ಅನಂತಕೋಟಿಭುವನ ಬ್ರಹ್ಮಾಂಡಗಳನು ಉಂಟುಮಾಡಿಕೊಂಡು ವಿನೋದಿಸುವಂಥ ನಿಲುಕಡೆಯು ಆರಿಗೆಯೂ ಅಳವಡದು-ಬ್ರಹ್ಮವಿಷ್ಣಾವಪದಸ್ಥರಿಗೋರ್ವರಿಗೆ ದೊರಕೊಳ್ಳದು.

....

೧ + ಶರಣನ ದೇಹವನ್ನೇ ತನಗೊಡಲ ಮಾಡಿಕೊಂಡಿಪ್ಪುದಲ್ಲದೆ (ಕ.ಗ.)

IV- -

ನಾಮಕ್ಕೆ ಬಂದ, ರೂಪಿಗೆ ಬಂದ ದೇಹ ಪರಬ್ರಹ್ಮವೆಂಬುಭಯವು ಅಲ್ಲದೆ, ಹೇಳಬಾರದ, ಕೇಳಬಾರದ ನಿಂದ ನಿಲವು ಆರಿಗೆಯೂ ಅಳವಡದೆಂಬುದೀ ವಚನದರ್ಥ.

೯೫೩

ಹುತ್ತಕ್ಕೆ ಏಸು ಬಾಯಾದಡೇನು? ಸರ್ಪನಿಪ್ಪುದೊಂದೇ ಸ್ಥಾನ! ಭಾವಭಾವಿಸಿ, ಭ್ರಮೆಯಳಿದು ನೋಡಾ. ಆ ಭಾವ ಭಾವಿಸಲು ನಿರ್ಭಾವ ಕೂಡಲಸಂಗಮದೇವಾ.

I- -

ಹುತ್ತಕ್ಕೆ-ವಲ್ಮೀಕಕ್ಕೆ, ಏಸು ಬಾಯಾದಡೇನು?-ಎಷ್ಟು ಕೋವಿಗಳುಂಟಾದಡೇನು?, ಸರ್ಪನಿಪ್ಪವುದು-ಫಣಿಯಿರವಂಥದು, ಒಂದೇ ಸ್ಥಾನ-ಒಂದೇ ಕೋವಿಯು. ಆದರೇನಾಯಿತ್ತು ಆ ಸರ್ಪನು ಯಾವ ಕೋವಿಯಲ್ಲಿದೆಯೋ ಕಚ್ಚೀತೆಂಬ ಭೀತಿಯುಂಟಾಗಿಪ್ಪುದೆಂಬ ಹಾಂಗೆ.

● ಹುತ್ತಕ್ಕೆ-ನವದ್ವಾರಯುಕ್ತವಾದ ದೇಹಕ್ಕೆ ಏಸು ಬಾಯಾದಡೇನು-ಎಷ್ಟು ಇಂದ್ರಿಯಂಗಳುಂಟಾಗಿರ್ದರೇನು? ಸರ್ಪನಿಪ್ಪುದು-ಸತ್ಪ್ರಣವ ಜ್ಞಾನಸ್ವರೂಪವಾದ ಪರಬ್ರಹ್ಮವಿರುವಂಥದು, ಒಂದೇ ಸ್ಥಾನ-ಒಂದೇ ಅಂಗವು, ಭಾವ-ಶಿವಭಾವಸ್ವರೂಪವಾದ ಶರಣನು, ಭಾವಿಸಿ-ಶಿವಭಾವದಿಂದ ಅಂದು ನೆನೆದು ಧ್ಯಾನಿಸಿ, ಭ್ರಮೆಯಳಿದು-ಜೀವಭಾವದ ಭ್ರಾಂತು ಅಳಿದು ನಷ್ಟವಾಗಿ ಉಳಿದುದು ತಾನೇ ಲಿಂಗವಾಗಿ ಅವಶೇಷಿತವಾದುದು. ನೋಡಾ-ಕಂಡಾ, ಆ ಭಾವ-ಆ ಮನವು, ಭಾವಿಸಲು-ಶಿವಭಾವದಿಂದರಿದು ನೆನೆದು ಧ್ಯಾನಿಸಲು, ನಿರ್ಭಾವ-ಭಾವಾತೀತವಾದ ಬ್ರಹ್ಮದಲ್ಲಿ ಸಾಮರಸ್ಯವು ಕೂಡಲಸಂಗಮದೇವಾ-ಎಲೆ ಪರಶಿವಲಿಂಗವೆ.

IV- -

ಹುತ್ತಕ್ಕೆ ಏಸು ಬಾಯಾದರೇನು? ಸರ್ಪ ನೆಲೆಗೊಂಡಿಪ್ಪುದೊಂದೇ ಸ್ಥಾನ. ಅಂತು ಒಂದೇ ಸ್ಥಾನದಲ್ಲಿ ಸರ್ಪ ನೆಲೆಗೊಂಡಿಹ ಕಾರಣ ಹಾವಿನ ಹುತ್ತವಾಯಿತ್ತು ಹೇಂಗೆ ಹಾಂಗೆ ದೇಹೇಂದ್ರಿಯ ಕರಣಂಗಳು ಹಲವಕ್ಕೆ ಮುಖ್ಯಕಾರಣವೀಗ ಭಾವ. ಅಂತಪ್ಪ ಭಾವದಲಿ ಲಿಂಗದ ನೆಲೆಗೊಳಿಸಿ ದೇಹ ಭ್ರಾಂತಿಯನಳಿದು ಲಿಂಗವನೆ ಭಾವಿಸಿ ಹಿಂಗದೆ ನೋಡುತ್ತಿರ್ಪ ಭಾವವೆಲ್ಲ ಲಿಂಗವೆಯಾಗಿಪ್ಪುದು. ಅಂತು ಭಾವಿಸುವ ಶರಣನೆಲ್ಲಾ ಲಿಂಗೈಕ್ಯವಾದ ಬಳಿಕ ಲಿಂಗದೇಹವೆನಿಸಿತ್ತೆಂಬುದೀ ವಚನದ ತಾತ್ಪರ್ಯಾರ್ಥ.

೧-೧ X (ತ).

೯೫೪

ವೇದ ವೇಧಿಸಲಜೆಯದೆ ಅಭೇದ್ಯಲಿಂಗವೆಂದು ನಡನಡುಗಿತ್ತು. ಶಾಸ್ತ್ರ ಸಾಧಿಸಲಜೆಯದೆ ಅಸಾಧ್ಯಲಿಂಗವೆಂದು ಸಾರುತ್ತೈದಾವೆ. ತರ್ಕ ತರ್ಕಿಸಲಜೆಯದೆ ಅತರ್ಕ್ಯಲಿಂಗವೆಂದು ಮೌನಗೊಂಡವು. ಆಗಮ ಅಗಮ್ಯಲಿಂಗವೆಂದು ಗಮಿಸಲಜೆಯದೇ ಹೋದವು. ನರರು ಸುರರು ಅಂತುವ ಕಾಣರು, ನಮ್ಮ ಕೂಡಲಸಂಗನ ಪ್ರಮಾಣ ಶರಣ ಬಲ್ಲ.

I- -

ವೇದ-ವೇದಂಗಳು, ವೇಧಿಸಲಜೆಯದೆ-ಪರಬ್ರಹ್ಮವನ್ನು ಭೇದಿಸಿ ಕಾಣಲರಿಯದೆ, ಅಭೇದ್ಯಲಿಂಗವೆಂದು-ಆರಿಗೂ ಭೇದಿಸಬಾರದ ಮಹಾಲಿಂಗವೆನುತ್ತ. ನಡನಡುಗಿತ್ತು-ಚಕಿತಹೃದಯನಾಗಿ ಗದಗದನೆ ಕಂಪಿಸಿತ್ತು. ಶಾಸ್ತ್ರ-ಹದಿನಾರು ಧರ್ಮಶಾಸ್ತ್ರಗಳು, ಸಾಧಿಸಲಜೆಯದೆ-ಪರಬ್ರಹ್ಮವನ್ನು ಸಾಧಿಸಿ ಕಾಣಲರಿಯದೆ, ಅಸಾಧ್ಯ ಲಿಂಗವೆಂದು-ಆರಿಗೂ ಸಾಧಿಸಭಾರದ ಮಹಾಲಿಂಗವೆನುತ್ತ, ಸಾರುತ್ತೈದಾವೆ-ಡಂಗರಿಸುತ್ತೈದಾವೆ. ತರ್ಕ-ವೇದವೇದಾಂತ ಭಾಟ್ಟಪ್ರಭಾಕರ ನ್ಯಾಯವೀಮಾಂಸಕವೆಂಬ ಷಟ್ತರ್ಕಂಗಳು, ತರ್ಕಿಸಲಜೆಯದೆ-ಪರಬ್ರಹ್ಮವನ್ನು ತರ್ಕಿಸಲರಿಯದೆ, ವಾದಿಸಿ ಕಾಣಲರಿಯದೆ, ಅತರ್ಕ್ಯಲಿಂಗವೆಂದು ಆರಿಗೂ ತರ್ಕಿಸಬಾರದ ಮಹಾಲಿಂಗವೆನುತ್ತ, ಮೌನಗೊಂಡವು-ವಾಙ್ನೇಮ ಮುಂದುಗೊಂಡು ಶಬ್ದಮುಗ್ಧವಾಗಿ ಸುಮ್ಮನಿರ್ಪವು.

ಆಗಮ-ಕಾಮಿಕಾದಿವಾತುಲಾಂತ್ಯಮಾದ ಇಪ್ಪತ್ತೆಂಟು ದಿವ್ಯಾಗಮಂಗಳು, ಅಗಮ್ಯ ಲಿಂಗವೆಂದು-ಆರಿಗೂ ಗಮಿಸಿ ಕಾಣಿಸಿಕೊಳಬಾರದ ಮಹಾಲಿಂಗವೆನುತ್ತ, ಗಮಿಸಲಜೆಯದೆ-ಗಮಿಸಿ ಕಾಣಲರಿಯದೆ, ಹೋದವು-ವ್ಯರ್ಥಸ್ಯವಾಗಿ ಹೋದವು. ನರರು ಬಹುಮುಖದ ಮನುಷ್ಯರುಗಳು, ಸುರರು ಮೂವತ್ತುಮೂರುಕೋಟಿ ದೇವತೆಗಳು, ಅಂತುವ ಕಾಣರು-ಪರಶಿವಲಿಂಗದ ನಿಲುಕಡೆಯನ್ನು ಅರಿಯರು. ನಮ್ಮ ಕೂಡಲಸಂಗಮ-ನಮ್ಮ ಪರಶಿವಲಿಂಗದ, ಪ್ರಮಾಣವ-ಮಿತವನ್ನು, ಶರಣ-ಶಿವಶರಣನು, ಬಲ್ಲ-ಅರಿದು ಬಲ್ಲನು.

೯೫೫

ವೇದಾತೀತ, ಷಡ್ವರ್ಣರಹಿತ, ಅಷ್ಟತ್ರಿಂಶತ್ಕಲಾತೀತ, ವ್ಯೋಮಾತೀತ ಕೂಡಲ ಸಂಗಮದೇವ.

I- -

ವೇದಾತೀತ: ವೇದ-ನಾಲ್ಕು ವೇದಂಗಳಿಗೆ, ಅತೀತ-ಮೀರಿ ತೋರಲ್ಪಟ್ಟಾತನು, ಷಡ್ವರ್ಣ-ಷಡ್ವರ್ಣಯುಕ್ತವಾದ ದೇಹಪ್ರಪಂಚೆಗೆ, ರಹಿತ-ಮೀರಿ ತೋರಲ್ಪಟ್ಟಾತನು, ಅಷ್ಟತ್ರಿಂಶತ್ಕಲಾ-ಚಂದ್ರನ ಹದಿನಾರು, ಸೂರ್ಯನ ಹನ್ನೆರಡು, ಅಗ್ನಿಯ ಹತ್ತು ಇಂತೀ ಮೂವತ್ತೆಂಟು ಕಲೆಗಳಿಗೆ, ಅತೀತ-

ಮೀರಿ ತೋರಲ್ಪಟ್ಟಾತನು. ವ್ಯೋಮ–ಆಕಾಶಕ್ಕೆ, ಅತೀತ–ಮೀರಿ ತೋರಲ್ಪಟ್ಟಾತನು, ಕೂಡಲಸಂಗಮದೇವ–ಪರಶಿವಲಿಂಗವು.

IV– –

ವೇದ ಶ್ರುತಿಗಳಿಂದ ವಚಿಸಿ ಹೇಳಬಾರದು, ವಾಙ್ಮನಕ್ಕಗೋಚರವಾಗಿಪ್ಪುದು ಆ ಪರಬ್ರಹ್ಮವೆಂಬುದೀಗ, ವೇದಾತೀತವೆಂಬ ಶಬ್ದಕ್ಕರ್ಥ. ನಾದಾಕ್ಷರಸ್ವರೂಪಾದ ಷಡುವರ್ಣಂಗಳಿಲ್ಲದ ಅನಕ್ಷರಸ್ವರೂಪೇ ಪರಬ್ರಹ್ಮನೆಂಬುದೀಗ ಷಡುವರ್ಣರಹಿತವೆಂಬ ಶಬ್ದಕ್ಕರ್ಥ, ಮೂವತ್ತೆಂಟು ಕಲಾಸ್ವರೂಪನಪ್ಪ ಪಂಚಸಾದಾಖ್ಯಮೂರ್ತಿಯಾಗದೇ ಇದ್ದ ನಿಃಕಲಪರಬ್ರಹ್ಮವೆಂಬುದೀಗ, ಅಷ್ಟತ್ರಿಂಶತ್ಕಳಾತೀತನೆಂಬ ಶಬ್ದಕ್ಕರ್ಥ. ಆಕಾಶಾದಿ ತತ್ತ್ವಂಗಳು ಇಲ್ಲದ ಅಖಂಡವೆ ಪರಬ್ರಹ್ಮವೆಂಬುದೀಗ, ವ್ಯೋಮಾತೀತನೆಂಬ ಶಬ್ದಕ್ಕರ್ಥ. ಇಂತು ಉಪಮಿಸಬಾರದ ಅನುಪಮವಸ್ತು ಭಕ್ತದೇಹಿಕ ದೇವನಾಗಿ ಕೂಡಿಹ ಕೂಟದಲ್ಲಿ ವಿಯೋಗವಿಲ್ಲದೆ ಸದಾಸಂಯೋಗಿಯಾಗಿಹನೆಂಬುದೀಗ, ಕೂಡಲಸಂಗಮದೇವ ಯೆಂಬ ಶಬ್ದಕ್ಕರ್ಥ.

೯೫೬

ವಿಶ್ವಜಿತನು, ಧನುರ್ಜಿತನು, [1]ಸರ್ವ[1]ಜಿತನು, [2]ಸುತ್ರಾಮಜಿ[2]ತನು,[3] ನೃಜಿತನು, ಊರ್ವರಾಜಿತನು, ಅಶ್ವಜಿತನು, ಗೋಜಿತನು, [4]ಅಚ್ಯುತ[5]ಜಿತ[5]ನು,[4] ಸುಸಂವೇದ್ಯನು, ವೇದನಾದಾತೀತನು. [6]ತೂರ್ಯ[6]ಪ[7]ರಮಾ[7]ನಂದ ನಿರವಯ ಸೂರ್ಯಕೋಟಿ ಪ್ರಭೆಯ ಬೆಳಗಿನ ಸಹಸ್ರಕಿರಣದಗ್ರಪಟಲದ ಬೆಳಗು ಕೂಡಲಸಂಗ[8]ಮದೇವ.[8]

I– –

ವಿಶ್ವಜಿತನು–ಜಗತ್ಪ್ರಪಂಚವನ್ನು ಜಯಿಸಲ್ಪಟ್ಟಾತನು, ಧನುರ್ಜಿತನು–ರಾಕ್ಷಸರ ಪದವಿಯನ್ನು ಜಯಿಸಲ್ಪಟ್ಟಾತನು. ಸರ್ವಜಿತನು–ಸ್ವರ್ಗಲೋಕದ ಪದವಿಯನ್ನು ಜಯಿಸಲ್ಪಟ್ಟಾತನು. ಸುತ್ರಾಮಜಿತನು–ದೇವೇಂದ್ರನ ಪದವಿಯನ್ನು ಜಯಿಸಲ್ಪಟ್ಟಾತನು. ನೃಜಿತನು–ನರದೊರೆಗಳ ಪದವಿಯನ್ನು ಜಯಿಸಲ್ಪಟ್ಟಾತನು, ಊರ್ವರಾಜಿತನು–ಪಂಪಾಕ್ಷೇತ್ರದಲ್ಲಿ ಪಾರ್ವತಿಯರನು ವಿವಾಹವಾಗಿ, ಉರು–ಉನ್ನತವಾದ, ರಾಜಿತನು–ಶೋಭಿಸಲ್ಪಟ್ಟಾತನು, ಅಶ್ವಜಿತನು–ನೂರಾವೊಂದು ಕುದುರೆಯ ತಂದು ಯಜ್ಞವ ಮಾಡಿ ಆ ಯಜ್ಞದಿಂದಾದಂಥ ಪದವಿಯನ್ನು ಜಯಿಸಲ್ಪಟ್ಟಾತನು, ಗೋಜಿತನು–ಬ್ರಹ್ಮಪದವಿಯನ್ನು ಜಯಿಸಲ್ಪಟ್ಟಾತನು. ಅಚ್ಯುತಜಿತನು–ನಾರಾಯಣನ ಪದವಿಯನ್ನು ಜಯಿಸಲ್ಪಟ್ಟಾತನು, ಸುಸಂವೇದ್ಯನು–ಚಿಚ್ಛಕ್ತಿಯಲ್ಲಿ ಲೇಸಾಗಿ ಕೂಡಲ್ಪಟ್ಟಾತನು. ವೇದನಾದಾತೀತನು: ವೇದ–ನಾಲ್ಕು ವೇದಂಗಳ, ನಾದ–ಅರುಹಿಂಗೆ, ಅತೀತನು–ಮೀರಿ ತೋರಲ್ಪಟ್ಟಾತನು.

ತೂರ್ಯ–ಅರುಹುಸ್ವರೂಪವಾದ, ಪರಮಾನಂದ–ಶ್ರೇಷ್ಠವಾದ ಸುಖಸ್ವರೂಪವಾದ, ನಿರವಯ–ನಿರಾಕಾರವಾದ. ಸೂರ್ಯಕೋಟಿ–ಕೋಟಿ ಸೂರ್ಯರ, ಪ್ರಭೆಯ–ಪ್ರಕಾಶದ, ಬೆಳಗಿನ–ಕಾಂತಿಯ, ಸಹಸ್ರಕಿರಣದ–ಸಾವಿರಜಾಲಂಗಳ, ಅಗ್ರ–ತುದಿಯ, ಪಟಲದ–ಆವರಣದ, ಬೆಳಗು–ಇಂತಿವರನು ಕೀಳ್ಪಡಿಸಿಕೊಂಡು ಪ್ರಕಾಶಿಸಲ್ಪಟ್ಟಾತನು. ಕೂಡಲಸಂಗಮದೇವ–ಪರಶಿವಲಿಂಗವು.

....

೧+ ಸಂ.ಲೇಸಾಗಿ (ಕ, ಗ).

III– –

1–1 ಸ್ವ(ಟ). 3+ಸ್ವಜಿತನು (ಟ,ಡ), 5–5 x (ಟ,ಡ), 6–6 ತುರೀಯಿ (ಟ.ಡ.) 7–7 ರಾ (ಟ.ಡ), 8–8ಯ್ಯ(ಟ.ಡ),

....

ಆದಿಯಾಧಾರದ ಶಿವಶಕ್ತಿಸ್ವರೂಪಾದ, ವಿಶ್ವಜಿತನು–ನಾರಾಯಣನ ಪ್ರಕೃತಿಯನು ಗೆದ್ದಂಥ, ಧನುಜಿತನು–ಕಾಮಚಾಪದ ಹತಿಯನು ಗೆದ್ದಂಥ, ಸರ್ವ‍ಜಿತನು–ಸಕಲಪ್ರಪಂಚನು ಗೆದ್ದಂಥ, ಸೂತ್ರಾಮಜಿತನು–ಜ್ಞಾನಸೂತ್ರದಿಂದ ಪಡೆಯಲ್ಪಟ್ಟಂಥ, ನೃಜಿತನು–ಭವರೋಗವನು ಗೆದ್ದಂಥ, ಊರ್ವರಾಜಿತನು–ಜಗತ್ಪ್ರಪಂಚವನು ಗೆದ್ದಂಥ, ಅಶ್ವಜಿತನು–ಪ್ರಾಣವಯು‍ಪ್ರಕೃತಿಯನು ಗೆದ್ದಂಥ, ಗೋಜಿತನು–ಇಂದ್ರಿಯಂಗಳನು ಗೆದ್ದಂಥ, ಸ್ವರ್ಜಿತನು–ಸ್ವರ್ಗಲೋಕದ ಪ್ರಪಂಚವನು ಗೆದ್ದಂಥ, ಅಚ್ಯುತನು–ನಾಶರಹಿತನಾದಂಥ, ಅರ್ಜಿತನು–ಅರಿಷಡ್ವರ್ಗಂಗಳನು ಗೆದ್ದಂಥ, ಸುಸಂವೇದ್ಯನು–ಜ್ಞಾನದಿಂದೆ ತಿಳಿಸಿಕೊಳಲು ತಕ್ಕಂಥ, ವೇದನಾದಾತೀತನು–ವೇದನಾದಗಳನು ಮೀರಿದಂಥ, ತುರೀಯ–ಸಕಲತತ್ವೋತ್ತೀರ್ಣನಾದಂಥ, ಪರಾನಂದ–ಶ್ರೇಷ್ಠಾನಂದವುಳ್ಳಂಥ, ನಿರವಯ–ಅವಯವಂಗಳೇನೂ ಇಲ್ಲದೆ ಇದ್ದಂಥ, ಸೂರ್ಯಕೋಟಿ–ಅನೇಕಾದಿತ್ಯರುಗಳ, ಪ್ರಭೆಯ–ಸ್ಫುರಣೆಯ, ಬೆಳಗಿನ–ಪ್ರಕಾಶದ, ಸಹಸ್ರಕಿರಣದ–ಸಾವಿರಮಯೂಖಂಗಳ, ಅಗ್ರ–ಉಪರಿಯ, ಪಟಲದ–ಸಮೂಹದ, ಬೆಳಗು–ಚಿತ್ಪ್ರಕಾಶವು, ಕೂಡಲಸಂಗಯ್ಯ–ಪರಶಿವಲಿಂಗವು.

....

೧ ಸ್ವ (ಟ). ೨ + ವಿನ (ಟ.ಡ)

V– –

1 ಸ್ವ(ಪ). 2–2 ಸೂತ್ರಾಜಿ (ಪ). 4–4 ಅರ್ಜಿತನು(ಪ). 6–6 ತುರೀಯ (ಪ). 7–7 ರಾ (ಪ). 8–8ಯ್ಯ(ಪ)

....

ಆದಿಯಾಧಾರದ ಶಿವಶಕ್ತಿಸ್ವರೂಪವಾದ, ವಿಶ್ವಜಿತನು–ನಾರಾಯಣನ ಪ್ರಕೃತಿಯ ಗೆದ್ದಂಥ, ಧನುಜಿತನು–ಕಾಮಾಚಾಪವನು ಗೆದ್ದಂಥ, ಸ್ವರ್ಜಿತನು–ಸ್ವರ್ಗಪ್ರಪಂಚನು ಗೆದ್ದಂಥ, ಸೂತ್ರಾರ್ಜಿತನು–ಜ್ಞಾನಸೂತ್ರದಿಂದ ಪಡೆಯಲ್ಪಟ್ಟಂಥ, ನೃಜಿತನು–ಆತ್ಮರ ಪ್ರಪಂಚನು ಗೆದ್ದಂಥ, ಊರ್ವರಾಜಿತನು–ಭೂಪತಿಗಳ ಪ್ರಪಂಚನು ಗೆದ್ದಂಥ, ಗೋಜಿತನು–ಇಂದ್ರಿಯಗಳನು ಗೆದ್ದಂಥ, ಅಶ್ವಜಿತನು–ಪ್ರಾಣವಾಯುವಿನ ಪ್ರಕೃತಿಯನು ಗೆದ್ದಂಥ, ಅರ್ಜಿತನು–ಅರಿಷಡ್ವರ್ಗಂಗಳನು ಗೆದ್ದಂಥ, ಸುಸಂವೇರ್ಧ್ಯನು ಜ್ಞಾನದಿಂದ ತಿಳಿಸಿಕೊಳಲ್ತಕ್ಕಂಥ, ವೇದನಾದಾತೀತನು–ವೇದನಾದಂಗಳನು ಮಿಱಿದಂಥ, ತುರೀಯ–ಸಕಲತತ್ತ್ವೋತ್ತೀರ್ಣನಾದಂಥ, ಪರಾನಂದ–ಶ್ರೇಷ್ಠಾನಂದವನುಳ್ಳಂಥ, ನಿರವಯ–ಅವಯವಂಗಳೇನೂ ಇಲ್ಲದೆ ಇರ್ದಂಥ, ಸೂರ್ಯಕೋಟಿ–ಅನೇಕಾದಿತ್ಯರುಗಳ, ಪ್ರಭೆಯ–

ಸ್ಫುರಣೆಯ, ಬೆಳಗಿನ–ಪ್ರಕಾಶದ, ಸಹಸ್ರಕಿರಣದ–ಸಾವಿರ ಮಯೂಖಂಗಳ, ಅಗ್ರಪಟಲದ: ಅಗ್ರ–ಉಪರಿಯ, ಪಟಲದ–ಸಮೂಹದ, ಬೆಳಗು–ಚಿತ್ಪ್ರಕಾಶವು, ಕೂಡಲಸಂಗಯ್ಯ–ಪರಮಶಿವಲಿಂಗವು[೩].

....

೩ + ಶ್ರೀ (ಪ)

೯೫೭

ಸಹಸ್ರಶೀರ್ಷನಾದಿಪುರಷನೊಬ್ಬ ಪುರುಷನು. ವೇದಪುರುಷನೊಬ್ಬ ಪುರುಷನು. ತ್ರಿಪಾದನೂರ್ಧ್ವಪುರುಷನೊಬ್ಬ ಪುರುಷನು. ಜ್ಯೋತಿಪುರುಷನೊಬ್ಬ ಪುರುಷನು. ಉದಯನ್ಮುಖನೊಬ್ಬ ಪುರುಷನು. ಉದಯನ್ಮುಖನೊಬ್ಬ ಪುರುಷನು. ವಿರಾಟಪುರುಷನೊಬ್ಬ ಪುರುಷನು. ವಿರಾಜಪುರುಷನೊಬ್ಬ ಪುರುಷನು. ಆದಿಪುರುಷನೊಬ್ಬ ಪುರುಷನು. ವಿಯತ್ಪುರುಷನೊಬ್ಬ ಪುರುಷನು. ತದ್ವಿಯತ್ಪುರುಷೋತ್ಪುರುಷರಿಲ್ಲದ ಪ್ರಭೆಯ ಬೆಳಗಿದೆ ನೋಡಿರೆ, ವೇದನಾದಾತೀತ ತೂರ್ಯಪರಮಾನಂದನಿರವಯ ಷಟ್‌ತ್ರಿಂಶತ್ಪ್ರಭಾಪಟಲದ ಪ್ರಭೆಯ ಬೆಳಗಿದೆ ನೋಡಿರೆ, ಬೆಳಗಿನೊಳಗಣ ಮಹಾಬೆಳಗಿನ ಬೆಳಗು ಕೂಡಲಸಂಗಯ್ಯ.

I– –

ಸಹಸ್ರಶೀರ್ಷ–ಸಾವಿರ ಮಸ್ತಕಕೆ ಒಂದೇ ದೇಹವನುಳ್ಳ ಶಿವಮೂರ್ತಿಯವನೋರ್ವನು. ಅನಾದಿಪುರುಷನೊಬ್ಬ ಪುರಷನು–ತತ್ತ್ವಭುವನ ಬ್ರಹ್ಮಾಂಡಂಗಳಿಗೆ ಮೂಲಕಾರಣವಾದ ಶಿವಮೂರ್ತಿ ಅವನೋರ್ವನು, ವೇದಪುರುಷನೊಬ್ಬ ಪುರುಷನು–ಚತುರ್ವೇದ ನಾಲ್ಕುವೇದ ಅನಂತವೇದ ಮೊದಲಾದವು ಹೀಗೆಂದು ನಿಗಮಗಳೊಬ್ಬುಳಿಯಾಗುಳ್ಳ ಶಿವಮೂರ್ತಿಯವನೊರ್ವನು. ಅದಲ್ಲದೆ ಶ್ರೀಶೈಲದ ತಪ್ಪಲಲ್ಲಿ ಒಪ್ಪುವ ವಟವೃಕ್ಷದ ಕೆಳಗೆ ಶಂಭುಭಟನೆಂಬಭಿಧಾನದಿಂದೆ ಮೂರ್ತವ ಮಾಡಿಕೊಂಡು ಕೌಶಿಕಾದಿ ಪಂಚಋಷಿಗಳಿಗೆ ನಿಗಮಗಳನು ಬೋಧಿಸುವ ದಕ್ಷಿಣಮೂರ್ತಿಯೆಂಬ ಶಿವಮೂರ್ತಿಯವನೋರ್ವನು. ಜ್ಯೋತಿಪುರುಷನೊಬ್ಬ ಪುರುಷನು–ಬ್ರಹ್ಮ ವಿಷ್ಣ್ವಾದಿಗಳ ಮಧ್ಯದಲ್ಲಿ ಅಂಬ[ರ]ಸ್ಥಂ ದಶಯೋಜನೆಯೆಂದು ಹತ್ತುಗಾವುದ ಬಳಸಿದ ಶರೀರವುಳ್ಳಾತನಾಗಿ ಭೂಮಿಗೂ ಆಕಾಶಕ್ಕೂ ಕೀಲುಕೊಟ್ಟೋಪಾದಿಯಲ್ಲಿ ಉರಿಲಿಂಗೋದ್ಭವಮೂರ್ತಿಯಾಗಿ ಜ್ಯೋತಿರ್ಮಯಾಕಾರದಿಂದ ಸ್ಥಾಣುಮೂರ್ತಿಯಾಗಿ ನೆಗಳಿದಂಥ ಶಿವಮೂರ್ತಿ ಅವನೋರ್ವನು. ತ್ರಿಪಾದನೂರ್ಧ್ವಪುರುಷನೊಬ್ಬ ಪುರುಷನು–ಒಂದು ಪಾದವನ್ನು ಭೂಮಿಯ ಮೇಲೂರಿ ಒಂದು ಪಾದವನ್ನು ಆಕಾಶಕ್ಕೆ ನೆಗಹಿ ಮತ್ತೊಂದು ಪಾದದಿಂದ ಗಿದುಗಿಮನೆ ತಿರುಗಿ ನಾಟ್ಯವನಾಡುವ ಭೃಂಗಿರಿಟಿ ತಾಂಡವಾಡಂಬರವಾದ ಶಿವಮೂರ್ತಿಯವನೊರ್ವನು. ಉದಯನ್ಮುಖನೊಬ್ಬ ಪುರುಷನು–ಪೂರ್ವದಿಕ್ಕೇ ಬೆನ್ನಾಗಿ ಪಶ್ಚಿಮದಿಕ್ಕೇ ಮುಖವಾಗಿ ಪಶ್ಚಿಮದಿಕ್ಕೇ ಬೆನ್ನಾಗಿ ಪೂರ್ವದಿಕ್ಕೆ ಮುಖವಾಗಿರುವಂಥ ಮೂರ್ತಿ ಅವನೋರ್ವನು. ಉದಯನ್ಮುಖನೊಬ್ಬ ಪುರುಷನು–ಉತ್ತರದಿಕ್ಕೇ ಬೆನ್ನಾಗಿ ದಕ್ಷಿಣದಿಕ್ಕೇ ಮುಖವಾಗಿ ದಕ್ಷಿಣದಿಕ್ಕೇ ಬೆನ್ನಾಗಿ ಉತ್ತರದಿಕ್ಕೇ ಮುಖವಾಗಿರುವ ಶಿವಮೂರ್ತಿ ಅವನೋರ್ವನು. ವಿರಾಟಪುರುಷನೊಬ್ಬ ಪುರುಷನು–ಔದುಂಬರಾಣಿ ಪುಷ್ಪಾಣಿಯೆಂದು

ಒಂದಾನೊಂದು ಅತ್ತಿಮರಕ್ಕೆ ಮೆತ್ತಿಕೊಂಡಿರುವ ಔದುಂಬರ ಫಲೋಪಾದಿಯಲ್ಲಿ ಅನಂತಕೋಟಿ ಭುವನ ಬ್ರಹ್ಮಾಂಡಗಳನು ತನ್ನ ರೋಮ ಕೂಪಾದಿಗಳಲ್ಲಿ ಮೆತ್ತಿಕೊಂಡಿರುವ ವಿರಾಣ್ಮೂರ್ತಿ ಹಿರಣ್ಯಗರ್ಭ ಅಂತರ್ಯಾಮಿಯೆಂಬ ಶಿವಮೂರ್ತಿಯವನೋರ್ವನು. ವಿರಾಜಪುರಷನೊಬ್ಬ ಪುರುಷನು–ಶ್ರೀ ಕೈಲಾಸದಲ್ಲಿ ನವರತ್ನ ಖಚಿತವಾದ ದಿವ್ಯಸಿಂಹಾಸನದ ಪೀಠದ ಮೇಲೆ ಮೂರ್ತವ ಮಾಡಿಕೊಂಡು ನವಕೋಟಿಬ್ರಹ್ಮರು ದಶಕೋಟಿ ನಾರಾಯಣರು ಎಂಟುಕೋಟಿ ರುದ್ರರು ಮೂವತ್ತುಮೂರುಕೋಟಿ ದೇವತಾದಿಗಳು ಅರುವತ್ತಾರುಕೋಟಿ ರಾಕ್ಷಸರು ಎಂಬತ್ತೆಂಟುಕೋಟಿ ಯಮಿ ಜನಂಗಳು ಅಷ್ಟಕೋಟಿ ನಾಗರ್ಕಳು ಅನಂತಕೋಟಿ ಗರುಡಗಂಧರ್ವಸಿದ್ಧವಿದ್ಯಾಧರರು ಕಿನ್ನರಕಿಂಪುರಷರು ಗಂಗೆಮಳಲಿಗೆ ಸಮಾನವಾದ ರುದ್ರಗಣಂಗಳಿಂದೋಲೈಸಿಕೊಂಬುವಂಥ ಶಿವಮೂರ್ತಿಯವನೋರ್ವನು.

ಆದಿಪುರುಷನೊಬ್ಬ ಪುರುಷನು–ಉತ್ಪತ್ತಿಸ್ಥಿತಿಯುಂಗಳನುಂಟುಮಾಡಿಕೊಂಡು ವಿನೋದಿಸುವಂಥ ಶಿವಮೂರ್ತಿ ಅವನೋರ್ವನು. ವಿಯತ್ಪುರುಷನೊಬ್ಬ ಪುರುಷನು–ಆಕಾಶವೇ ಕುಂಡಳವಾಗಿ ಅಂಬರವೇ ಕೇಶವಾಗಿ ಅಂಬರವೇ ಕುಂಡಳವಾಗಿ ಆಕಾಶವೇ ಕೇಶವಾಗಿರುವ ಶಿವಮೂರ್ತಿಯವನೋರ್ವನು. ತದ್ವಿಯತ್ಪುರುಷೋತ್ಪುರುಷರಿಲ್ಲದ: ತದ್ವಿಯತ್–ಅದು ಕಾರಣವಾಗಿ, ಪುರುಷೋತ್ಪುರುಷರಿಲ್ಲದ–ವಾಮದೇವಮೂರ್ತಿಯೇ ಆದಿಯಾಗಿ ಅಂಬರಕೇಶನೆಂಬ ಮೂರ್ತಿಯೇ ಕಡೆಯಾದ ಬ್ರಹ್ಮವಿಷ್ಣ್ವಾದಿಗಳೆಂಬುಭಯಮೂರ್ತಿಗಳುಂಟಾಗಿಲ್ಲದ, ಪ್ರಭೆಯ–ಕಾಂತಿಯ, ಬೆಳಗಿದೆ ನೋಡಿರೆ–ಮೇಲಣ ಮಹಾಲಿಂಗವೇ ಇದು ಕಂಡಿರೆ. ವೇದ–ಋಗ್ಯಜುಸ್ಸಾಮಥರ್ವಣವೆಂಬ ನಾಲ್ಕು ವೇದಂಗಳ, ನಾದ–ಅರುಹಿಂಗೆ, ಅತೀತ–ಮೀರಿ ತೋರಲ್ಪಟ್ಟ, ತೂರ್ಯ–ಅರುಹಿನ ಸ್ವರೂಪವಾದ, ಪರಮ–ಉತ್ಕೃಷ್ಟವಾದ, ಆನಂದ–ಸಂತೋಷಸ್ವರೂಪವಾದ, ನಿರವಯ–ಕರಚರಣಾದ್ಯವಯವಂಗಳಿಲ್ಲದ, ಷಟ್‌ತ್ರಿಂಶತ್ಪ್ರಭಾಪಟಲದ: ಷಟ್‌ತ್ರಿಂಶತ್–ಶಿವಾದಿಭೂಮ್ಯಾಂತ್ಯಮಾದ ಮೂವತ್ತಾರು ತತ್ತ್ವಂಗಳ, ಪ್ರಭಾ–ಪ್ರಕಾಶದ, ಪಟಲದ–ಆವರಣದ, ಪ್ರಭೆಯ–ಕಾಂತಿಯ, ಬೆಳಗಿದೆ ನೋಡಿರೆ–ಮೇಲಣ ಮಹಾಲಿಂಗದ ಪ್ರಕಾಶವಿದು ಕಂಡಿರೆ. ಬೆಳಗಿನೊಳಗಣ ಮಹಾ ಬೆಳಗು: ಬೆಳಗು–ಅಂಗದಲ್ಲಿ ನೆಲೆಗೊಂಡು ಬೆಳಗುವ ಇಷ್ಟಲಿಂಗದ ಸತ್ಕ್ರಿಯಾಪ್ರಕಾಶವು, ಒಳಗಣ–ಮನದಲ್ಲಿ ನೆಲೆಗೊಂಡು ಬೆಳಗುವ ಪ್ರಾಣಲಿಂಗದ ಸುಜ್ಞಾನ ಪ್ರಕಾಶವು, ಬೆಳಗು–ಆತ್ಮಾಂಗದಲ್ಲಿ ನೆಲೆಗೊಂಡು ಬೆಳಗುವ ಭಾವಲಿಂಗದ ಮಹಾಜ್ಞಾನಪ್ರಕಾಶವು. ಮಹಾಬೆಳಗು–ತ್ರಿವಿಧಲಿಂಗವನೊಳಕೊಂಡು ತೋರುವ ಮಹಾಲಿಂಗದ ಪ್ರಕಾಶವು, ಕೂಡಲಸಂಗಯ್ಯ–ಪರಶಿವಲಿಂಗವು.

III– –

ತ್ರಿಪಾದಊರ್ಧ್ವಪುರುಷನೊಬ್ಬನು–ಭೃಂಗೀಶ್ವರನೊರ್ವನು, ಉದನ್ಮುಖನೊಬ್ಬ–ಉತ್ತರಮುಖವನುಳ್ಳ, ವಾಮದೇವ ಮೂರ್ತಿಯು.[೧]

....

೧+ ಇತಿ ಶ್ರೀಮದ್ಬಸವರಾಜದೇವರ ಷಟ್ಸ್ಥಲದ ವಚನದ ಗಟ್ಟಿಗಟ್ಟಿ ನುಡಿಗಳು ಸಂಪೂರ್ಣಂ(ಡ): ಇತಿ ಶ್ರೀಮದ್ಬಸಮರಾಜದೇವರ ಷಟ್ಸ್ಥಲದ ವಚನದ ಗಟ್ಟಿಗಟ್ಟಿ ನುಡಿಗಳು ಸಮಾಪ್ತ ಮಂಗಳ ಮಹಾ ಶ್ರೀ ಶ್ರೀ ಶ್ರೀ ಶ್ರೀ ಶ್ರೀ, ಸಚ್ಚಿದಾನಂದ ನಿತ್ಯಪರಿಪೂರ್ಣ

ಅವಿರಳಪರಂಜ್ಯೋತಿ ಲೀಲಾವಿಗ್ರಹಮೂರ್ತಿಯಾದ ಶ್ರೀಸೋಮಶೇಖರ ಲಿಂಗಚರಣಾರದಿಂದ ಮಕರಂದರಸಪಾನಪೀನ ಮತ್ತ ಮಧುಕರಾಯಮಾನ ಸೋಮಶೇಖರಶಿವಯೋಗಿಕೃತ ಬಸವರಾಜದೇವರ ಷಟ್ಸ್ಥಲದ ವಚನದ ಬೆಡಗಿನ ಟೀಕು ಪರಿಸಮಾಪ್ತ ಮಂಗಳ ಮಹಾ ಶ್ರೀ ಶ್ರೀ ಶ್ರೀ ಶ್ರೀ ಶ್ರೀ(ಟ).

೯೫೮

ಅಷ್ಟತನುಮೂರ್ತಿ ಲಿಂಗವೆಂದೆಂಬರು. ಇವರಾರೆಂದು ನಾನಜೆಯೆನಯ್ಯ. ಆದಿಯ ಮಗನತೀತನು, ಅತೀತನ ಮಗ ಆಕಾಶ, ಆಕಾಶದ ಮಗ ವಾಯು, ವಾಯುವಿನಮಗನಗ್ನಿ, ಅಗ್ನಿಯ ಮಗನಪ್ಪು, ಅಪ್ಪುವಿನ ಮಗ ಪೃಥ್ವಿ, ಪೃಥ್ವಿಯ ಮಗ ಚಂದ್ರ, ಚಂದ್ರನ ಮಗ ಸೂರ್ಯ, ಸೂರ್ಯನ ಮಗ ದೇಹ, ದೇಹದ ಮಗನಾತ್ಮ. ಇಂತೀ ಅಷ್ಟತನುವೆಲ್ಲಕ್ಕೆಯೂ ಉತ್ಪತ್ಯವುಂಟು, ಅಜಾತಜನಿತ ನಮ್ಮ ಕೂಡಲಸಂಗಮದೇವಂಗೆ ಮಾತಾಪಿತರುಗಳಿಲ್ಲ.

I- -

ಅಷ್ಟತನುಮೂರ್ತಿ–ಎಂಟು ತನುಮೂರ್ತಿಗಳನು, ಲಿಂಗವೆಂದೆಂಬರು–ದೈವವೆಂದು ಹೇಳುವರು, ಇವರು–ಈ ಅಷ್ಟತನುಮೂರ್ತಿಗಳು, ಆರೆಂದು–ಯಾರಿಂದ ಉತ್ಪತ್ಯವಾದುವೆನುತ್ತ, ನಾನಜೆಯೆನಯ್ಯ–ನಾ ತಿಳಿಯೆನಯ್ಯ. ಆದಿಯ ಮಗನು–ಮಹಾಲಿಂಗದಿಂದುತ್ಪತ್ಯನಾದಾತನು. ಅತೀತನು–ಸದಾಶಿವಮೂರ್ತಿಯು, ಅತೀತನ ಮಗನು–ಸದಾಶಿಮೂರ್ತಿಯ ಈಶಾನ್ಯ ಮುಖದಿಂದುತ್ಪತ್ಯವಾದುದು. ಆಕಾಶ–ಅಂಬರವು, ಆಕಾಶದ ಮಗ–ಈಶಾನ್ಯಮುಖದಿಂದ ಆಕಾಶ ಪುಟ್ಟಿದಲ್ಲಿ, ವಾಯು–ತತ್ಪುರುಷ ಮುಖದಲ್ಲಿ ವಾಯು ಪುಟ್ಟಿತ್ತು. ವಾಯುವಿನ ಮಗ–ತತ್ಪುರುಷ ಮುಖದಲ್ಲಿ ವಾಯು ಪುಟ್ಟಿದಲ್ಲಿ. ಅಗ್ನಿ–ಅಘೋರಮುಖದಲ್ಲಿ ಅಗ್ನಿ ಪುಟ್ಟಿತ್ತು. ಅಗ್ನಿಯ ಮಗ–ಅಘೋರಮುಖದಲ್ಲಿ ಅಗ್ನಿ ಪುಟ್ಟಿದಲ್ಲಿ. ಅಪ್ಪು–ವಾಮದೇವಮುಖದಲ್ಲಿ ಅಪ್ಪು ಪುಟ್ಟಿತ್ತು. ಅಪ್ಪುವಿನ ಮಗ–ವಾಮದೇವಮುಖದಲ್ಲಿ ಅಪ್ಪು ಪುಟ್ಟಿದಲ್ಲಿ. ಪೃಥ್ವಿ–ಸದ್ಯೋಜಾತಮುಖದಲ್ಲಿ ಪೃಥ್ವಿ ಪುಟ್ಟಿತ್ತು. ಪೃಥ್ವಿಯ ಮಗ–ಸದ್ಯೋಜಾತಮುಖದಲ್ಲಿ ಪೃಥ್ವಿ ಪುಟ್ಟಿದಲ್ಲಿ. ಚಂದ್ರ ಮನೋಮಧ್ಯದಲ್ಲಿ ಚಂದ್ರನುತ್ಪತ್ಯವಾದನು. ಚಂದ್ರನಮಗ–ಮನಸ್ಸಿನಲ್ಲಿ ಚಂದ್ರನುತ್ಪತ್ಯವಾದ್ಲಲಿ. ಸೂರ್ಯ–ನಯನದಲ್ಲಿ ಭಾಸ್ಕರನುತ್ಪತ್ಯನಾದನು. ದೇಹದ ಮಗನಾತ್ಮ–ನಯನಮಧ್ಯದಲಿ ಭಾಸ್ಕರನುತ್ಪತ್ಯವಾದಲ್ಲಿ ಗೋಪ್ಯಮುಖದಲ್ಲಿ ಆತ್ಮನು ಉತ್ಪತ್ಯವಾದನು.

ಇಂತೀ–ಈ ಪ್ರಕಾರದಿಂದ ಹೇಳಲ್ಪಟ್ಟ, ಅಷ್ಟತನುವೆಲ್ಲಕ್ಕೆಯೂ–ಎಂಟು ತನುಮೂರ್ತಿಗಳೆಲ್ಲಕ್ಕೆಯೂ, ಉತ್ಪತ್ಯವುಂಟು–ಜನನವುಂಟು. ಅಜಾತ–ಜನನವಿಲ್ಲದ, ಜನಿತ–ಹುಟ್ಟಲ್ಪಟ್ಟಾತನೇ ಅಲ್ಲವು, ಅಥವಾ ಹುಟ್ಟಿದರೆಯೂ ಶ್ರೀಗುರುಮೂರ್ತಿಯು ಅಂತಶ್ಚಿದ್ಭಾವಮನಕರಕಮಲದಲ್ಲಿ ಹುಟ್ಟಲ್ಪಟ್ಟಾತನು ನಮ್ಮ ಕೂಡಲಸಂಮದೇವಂಗೆ–ನಮ್ಮ ಸಂಬಂಧವಾದ ಪರಶಿವಲಿಂಗಕ್ಕೆ, ಮಾತಾಪಿತರುಗಳಿಲ್ಲ–ಜನನಿಜನಕರುಗಳುಂಟಾಗಿಲ್ಲವು.

೯೫೯

ಘನಗಂಭೀರ ಮಹಾಘನದೊಳಗೆ ಘನಕ್ಕೆ ಘನವಾಗಿರ್ದೆನಯ್ಯ. ಕೂಡಲಸಂಗಯ್ಯನೆಂಬ ಮಹಾಬೆಳಗಿನೊಳಗಿದ್ದೇನೆಂಬ ಶಬ್ದಮುಗ್ಧವಾದುದನೇನೆಂಬೆನಯ್ಯ.

I- -

ಘನ-ಸಾಂದ್ರವಾದ, ಗಂಭೀರ-ಗುಂಪಾದ, ಮಹಾಘನದೊಳಗೆ-ಅಧಿಕತರವಾದ ಮಹಾಲಿಂಗದೊಳಗೆ ಕೂಡಿ, ಘನಕ್ಕೆ-ಅಧಿಕವಾದ ಮಹಾಲಿಂಗಕ್ಕೆ, ಘನವಾಗಿರ್ದೆನಯ್ಯ-ಚಿಚ್ಛಕ್ತಿಯಿಂದಂಗವಾಗಿರ್ದೆನಯ್ಯ. ಕೂಡಲಸಂಗಯ್ಯನೆಂಬ-ಪರಮಶಿವಲಿಂಗವೆಂದು ಹೇಳುವ. ಮಹಾಬೆಳಗಿನ-ಮಹಾಬೆಳಗಿನ ಎಂದರೆ ನಿಃಕಲಬ್ರಹ್ಮವು, ಬೆಳಗಿನ-ಬೆಳಗಿನ ಎಂದರೆ ಆ ನಿಃಕಲಬ್ರಹ್ಮಕ್ಕಂಗವಾದ ಚಿತ್ತು, ಒಳಗಿದ್ದೇನೆಂಬ-ಚಿತ್ತಿನಲ್ಲಿ ಅಂಗ ಚಿದ್ಘನಲಿಂಗದಲ್ಲಿ ಪ್ರಾಣವನು ಕೂಡಿ ಆ ಚಿತ್ತೇ ಅಂಗ ಚಿದ್ಘನಲಿಂಗವೇ ಪ್ರಾಣವಾಗಿ ಎಯ್ದುವೆಯೆಂದು ಹೇಳುವಂಥ, ಶಬ್ದ-ನುಡಿಯು, ಮುಗ್ಧವಾದುದನು-ನಿಃಪತಿಯಾದಂಥದನು, ಏನೆಂಬೆನಯ್ಯ-ಎಂತೆಂದು ವಾಚ್ಯಕ್ಕೆ ತಂದು ಹೇಳುವೆನಯ್ಯ, ವಾಚ್ಯಕ್ಕೆ ತಂದು ಹೇಳಿಹೆನೆಂದರೆ ವಾಚಾತೀತವಾಗಿಹುದು.

೯೬೦

ಸಮಸ್ತ ಕತ್ತಲೆಯ ಮಸಕವ ಕಳೆದಿಪ್ಪ [1][ಇರವ][1] ನೋಡಾ, ಬೆಳಗಿಂಗೆ ಬೆಳಗು ಸಿಂಹಾಸನವಾಗಿ[3] ಬೆಳಗು ಬೆಳಗು ಕೂಡಿದ ಕೂಟವ ಕೂಡಲಸಂಗಯ್ಯ ತಾನೆ ಬಲ್ಲ.

....

೧-೧ ಇವರವ (ಕ.ಗ)

I- -

ಸಮಸ್ತ-ಸಕಲತತ್ತ್ವಂಗಳಿಗೆ ಆಶ್ರಯವಾಗಿರುವಂಥ ದೇಹದ, ಕತ್ತಲೆಯ-ಅಜ್ಞಾನಸ್ವರೂಪವಾದ ಮನಸ್ಸಿನ, ಮಸಕವ-ಹೆಚ್ಚಿಗೆಯನು, ಕಳೆದಿಪ್ಪ-ಬೇರ್ಪಡಿಸಿ ಅಂಗ ಪ್ರಾಣಂಗಳಲ್ಲಿ ಇಷ್ಟ ಪ್ರಾಣಲಿಂಗಸಂಬಂಧವ ಮಾಡಿಕೊಂಡು ಅವಿರಳಜ್ಞಾನಕ್ರಿಯೆವಿಡಿದಾಚರಿಸುವ, [೧][ಇರವ][೧] ನೋಡಾ-ಸ್ವಸ್ವರೂಪವನು ಕಂಡಾ, ಬೆಳಗಿಂಗೆ ಸುಜ್ಞಾನಸ್ವರೂಪವಾದ ಬಸವೇಶ್ವರಂಗೆ, ಬೆಳಗು-ಮಹಾಜ್ಞಾನಪ್ರಕಾಶವನುಳ್ಳ ಸಂಗಮೇಶ್ವರನು, ಸಿಂಹಾಸನವಾಗಿ-ಗರ್ದುಗೆಯಾಗಿ[೨], ಬೆಳಗು-ಮಹಾಜ್ಞಾನಪ್ರಕಾಶವನುಳ್ಳ ಬಸವೇಶ್ವರನು, ಬೆಳಗ-ಮಹಾಜ್ಞಾನಸ್ವರೂಪವಾದ ಸಂಗಮೇಶ್ವರನಲ್ಲಿ, ಕೂಡಿದ-ಸಮರಸವಾದ, ಕೂಟವ-ಸಮರಸವನು, ಕೂಡಲಸಂಗಯ್ಯ ತಾನೆ ಬಲ್ಲ-ಪರಮಶಿವಲಿಂಗಕ್ಕೇ ತಿಳಿಯಬರುತ್ತಿಹುದು.

....

೧–೧ ಇವರವ (ಕ.ಗ) ೨ + ಸುಜ್ಞಾನ ಪ್ರಕಾಶವನುಳ್ಳ ಬಸವೇಶ್ವರನು (ಕ, ಗ).

IV– –

2+ ಪ್ಪ (ತ) 3 + ನೆ (ತ)

....

ಸಮ್ಯಕ್‌ಜ್ಞಾನೋದಯವಾದ ಶರಣನ ಅಂಗದೊಳಗೆ ಅಜ್ಞಾನಭ್ರಾಂತಿಗುಣಂಗಳೇನೂ ಇಲ್ಲದೆ ಶರಣನೆಲ್ಲಾ ಜ್ಞಾನಪ್ರಕಾಶಾಂಗಮಯವಾಗಿರ್ದನು, ಅಂತಿರ್ದ ಶರಣನ ಜ್ಞಾನಪ್ರಕಾಶಾಂಗವನೆ ಪೀಠವ ಮಾಡಿಕೊಂಡು ಮಹಾಪ್ರಕಾಶಲಿಂಗವು ಭಿನ್ನವಿಲ್ಲದೆ ಮೂರ್ತಿಗೊಂಡು ಲಿಂಗಾಂಗಸಂಗದ ಕ್ರೀಯನಾಚರಿಸುತ್ತಿಪ್ಪುದ ಶರಣ ಕಂಡು ಚೋದ್ಯಂಬಡುತ್ತಿರ್ದನೆಂಬುದೀಗ, ಸಮಸ್ತ ಕತ್ತಲೆಯ ಮಸಕವ ಕಳೆದಿಪ್ಪ ಇರವ ನೋಡಾ ಬೆಳಗಿಂಗೆ ಬೆಳಗು ಸಿಂಹಾಸನವಾಗಿಪ್ಪ[ನೆಂಬ] ಶಬ್ದಕ್ಕರ್ಥ. ಅಂತಪ್ಪ ಲಿಂಗಾಂಗಸಂಯೋಗವಾಗಿ ಭೇದವಳಿದು ಶರಣನೆಂಬಂಗವೆಲ್ಲ ಲಿಂಗವೇಯಾದಲ್ಲಿ ಆ ಲಿಂಗದ ಇರವ ಆ ಲಿಂಗವೇ ಬಲ್ಲನಲ್ಲದೆ ಉಪಮಿಸಿ ಹೇಳಬಾರದೆಂಬುದೀಗ, ಬೆಳಗು ಬೆಳಗನೇ ಕೂಡಿದ ಕೂಡಲಸಂಗಯ್ಯ ತಾನೆ ಬಲ್ಲನೆಂಬ ಶಬ್ದಕ್ಕರ್ಥ.

೯೬೧

ಅಂತರಂಗ ಬಹಿರಂಗ ಆತ್ಮಸಂಗ ಒಂದೇ ಅಯ್ಯ! ನಾದಬಿಂದುಕಳಾತೀತ ಆದಿಯಾಧಾರ ನೀನೆ ಅಯ್ಯ! ಆರೂಢದ ಕೂಟದ ಸುಖವ ಕೂಡಲಸಂಗ[1]ಮದೇವ[1]ಯ್ಯ ತಾನೆ ಬಲ್ಲ.

I– –

ಅಂತರಂಗ ಬಹಿರಂಗ ಆತ್ಮಸಂಗ ಒಂದೇ ಅಯ್ಯ: ಅಂತರಂಗ–ಅಂತರಂಗದಲ್ಲಿ ಪ್ರಾಣಲಿಂಗವಾಗಿ ನೆಲೆಗೊಂಡಿರುವಾತನು, ಬಹಿರಂಗ–ಬಹಿರಂಗದಲ್ಲಿ ಇಷ್ಟಲಿಂಗವಾಗಿ ನೆಲೆಗೊಂಡಿರುವಾತನು. ಆತ್ಮಸಂಗ–ಆತ್ಮಾಂಗದಲ್ಲಿ ಭಾವಲಿಂಗವಾಗಿ ನೆಲೆಗೊಂಡಿರುವಾತನು. ಒಂದೇ ಅಯ್ಯ–ತ್ರಿವಿಧಸ್ವರೂಪವಾದ ಒಂದೇ ಮಹಾಲಿಂಗವಯ್ಯ. ನಾದಬಿಂದುಕಳಾತೀತ:ನಾದ–ಪ್ರಣಮವು, ಬಿಂದು–ದೇಹವು, ಕಳಾ–ಆತ್ಮನು, ಅತೀತ–ತನುತ್ರಯಂಗಳಿಗೆ ಮೀರಿ ತೋರಲ್ಪಟ್ಟ, ಆದಿ–ಆದಿಯೆಂದರೆ ಪಿಂಡವು, ಆಧಾರ–ಆಧಾರವೆಂದರೆ ಬ್ರಹ್ಮಾಂಡವು, ನೀನೆ ಅಯ್ಯ–ತತ್ತ್ವಭುವನಬ್ರಹ್ಮಾಂಡಗಳಿಗೆ ಮೀರಿ ತೋರಲ್ಪಟ್ಟ ಮಹಾಲಿಂಗವು ನೀನೆ ಅಯ್ಯ, ಆರೂಢದ–ಪರಿಪೂರ್ಣಜ್ಞಾನದ, ಕೂಟದ ಸುಖವ–ಪರಿಣಾಮುವನು ಕೂಡಲಸಂಗಮದೇವಯ್ಯ ತಾನೆ ಬಲ್ಲ–ಪರಶಿವಲಿಂಗಕ್ಕೆ ಅರಿಯಬರುತ್ತಿಹುದು.[೧]

....

೧ + ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಬಸವೇಶ್ವರನೆಂಬ ಮಹಾಜ್ಞಾನಗುರುಮೂರ್ತಿಗಳು, ನಿರೂಪಿಸಿದ–ಉಪದೇಶಿಸಿದ ಷಟುಸ್ಥಲದ ವಚನ–ಷಡ್ವಿಧ ಅಂಗ ಲಿಂಗಭಕ್ತಿಗಳನು ಹೇಳುವಂಥ ವಾಕ್ಯಾನುಭಾವವು ಸಮಾಪ್ತ, ಎಲ್ಲ ಭಕ್ತ ಮಾಹೇಶ್ವರರುಗಳ

ಶ್ರೋತ್ರಮುಖದಲ್ಲಿಯೇ ಮುಕ್ತಶಯವಾಯಿತ್ತು. ಮಂಗಳ ಮಂಗಳವೆಂದರೆ ನಿರ್ಮಲವು ಮಹಾವೆಂದರೆ ನಿರ್ಮಲವು ಮತ್ತು ಮಹಾವೆಂದರೆ ದೊಡ್ಡಿತ್ತಾದಂಥದು ಶ್ರೀಯೆಂದರೆ ಜ್ಞಾನ ಮತ್ತು ಶ್ರೀಯೆಂದರೆ ಐಶ್ವರ್ಯ ಮತ್ತು ಶ್ರೀಯೆಂದರೆ ಪೂಜ್ಯ. ಇಂತಪ್ಪ ಜ್ಞಾನೈಶ್ವರ್ಯಪೂಜ್ಯವಸಿಳ್ಳ ಶಾಸ್ತ್ರವನ್ನು ಬರೆನಿದ ಪಾಠವ ಮಾಡಿಕೊಂಡು ಜ್ಞಾನಗುರುಮೂರ್ತಿಯಿದ್ದೆಡೆಗೆ ಹೋಗಿ ದೀರ್ಘದಂಡನಮಸ್ಕಾರ ಮುಂತಾದ ಭಕ್ತ್ಯೋಪಚಾರಗಳಿಂದ ಅಡಿಗೆರಗಿ ಈ ಶಾಸ್ತ್ರದ ಅಥವಾ ಅನ್ವಯ ಅಭಿಪ್ರಾಯ ವರ್ಣಂಗಳನ್ನು ಶ್ರೋತ್ರಮುಖದಲ್ಲಿ ಕೇಳಿ ಮನೋಮುಖದಲ್ಲಿ ಹಾರೈಸಿ ಹೃದಯ ಮುಖದಲ್ಲಿಂಬುಗೊಂಡು ಅಂಗವ ಮಾಡಿಕೊಂಡಾಚರಿಸುವಂಥ ಶಿವಶರಣರೆಲ್ಲರು...ದಲಿ ಐಶ್ವರ್ಯವನು ಪಡೆದು ಬಾಳುತ್ತಿಹರೆಂಬುದೀ ಶಾಸ್ತ್ರದ ಫಲಶ್ರುತಿಯು ಸಮಾಪ್ತ ಮಂಗಳ ಮಹಾ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ. ಭಕ್ತಸ್ಥಲಕ್ಕೆ ಸೇರಿದ ವಚನಳು ೫೨೪ ಮಾಹೇಶ್ವರಸ್ಥಲಕ್ಕೆ ಸೇರಿದ ವಚನಗಳು ೨೪೦, ಪ್ರಸಾದಿಸ್ಥಲಕ್ಕೆ ಸೇರಿದ ವಚನಗಳನು ೩೦, ಪ್ರಾಣಲಿಂಗಿಸ್ಥಲಕ್ಕೆ ಸೇರಿದ ವಚನಗಳು ೫೮ ಶರಣಸ್ಥಲಕ್ಕೆ ಸೇರಿದ ವಚನಗಳು ೬೪ ಐಕ್ಯಸ್ಥಲಕ್ಕೆ ಸೇರಿದ ವಚನಗಳು ೪೧, ಅಂತು ಏಕು [೯೫೯]ಕ್ಯಂ ಮಂಗಳಮಹಾ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ... ಪ್ರಜೋತ್ಪತ್ತಿನಾಮ ಸಂವತ್ಸರ ವೈಶಾಖಶುದ್ಧ ಬುಧವಾರ ಬಸವರಾಜದೇವರ ವಚನಶಾಸ್ತ್ರ ಮುಗಿಸಿದ್ದು, ಕಂದ॥ ತಪ್ಪಂ ಬರ..ಲು ಬಿಡಿರಿ, ತಪ್ಪಕ್ಕು ಶುದ್ದಮಕ್ಕುಂ । ತಪ್ಪುಳ್ಳಡೆ ತಿದ್ದಿಕೊಂಬುದುತ್ತಮ ಪುರುಷರ್ ॥ ೧ ॥

....

೧-೧ ೯೬೧ (ಕ, ಗ).

IV- -

೧-೧ (ತ)

....

ಒಳಗೂ ಹೊರಗೂ ಆದಿ ಮಧ್ಯ ಅಂತ್ಯವಿಲ್ಲದ ಅಖಂಡಿತಲಿಂಗವೆಂಬುದೀ ವಚನದರ್ಪ.[೨]

....

೨ + ಐಕ್ಯಸ್ಥಲ ಸಮಾಪ್ತ ಮಂಗಳಮಹಾಶ್ರೀ ಶ್ರೀ ಶ್ರೀ ಶ್ರೀ ಶ್ರೀ; ಭಕ್ತಿಸ್ಥಲಕ್ಕೆ ಸೇರಿದ ವಚನ *[೧೫೬]* ಮಾಹೇಶ್ವರಸ್ಥಲಕ್ಕೆ ವಚನ ೯೪, ಪ್ರಸಾದಿಸ್ಥಲಕ್ಕೆ ವಚನ ೨೫, ಪ್ರಾಣಲಿಂಗಿಯ ವಚನ ೨೯, ಶರಣಸ್ಥಲಕ್ಕೆ ವಚನ ೩೪, ಐಕ್ಯಸ್ಥಲಕ್ಕೆ ವಚನ ೨೧. ಅಂತು ವಚನ ೦[೩೫೮]೦ ಕ್ಕಂ ಮಂಗಳ ಮಹಾ ಶ್ರೀ ಶ್ರೀ ಶ್ರೀ ಶ್ರೀ.

....

- ೧೭ (ತ)೦-೦ ೩೭೪(ತ)

❖❖

ಹೆಚ್ಚಿನ ವಚನ ಟೀಕೆ

● ಲಿಂಗಲೀಲಾವಿಲಾಸ ಚಾರಿತ್ರ ● ಏಕೋತ್ತರಶತಸ್ಥಲಸಾರ ● ವಿಶೇಷಾನುಭವ ಷಟ್ಸ್ಥಲ
● ಇತರ ವಚನಟೀಕೆ

ಲಿಂಗಲೀಲಾ ವಿಲಾಸ ಚಾರಿತ್ರ

೯೬೨

ಅಮೂಲ್ಯನಪ್ರಮಾಣನಗೋಚರಲಿಂಗ, ಆದಿಮಧ್ಯಾವಸಾನಂಗಳಿಲ್ಲದ ಸ್ವತಂತ್ರಲಿಂಗ, ನಿತ್ಯನಿರ್ಮಲಲಿಂಗ, ಅಯೋನಿಸಂಭವ ನಮ್ಮ ಕೂಡಲಸಂಗಮದೇವರು. ॥೧॥

- -

ನಿಷ್ಕಲಪರಬ್ರಹ್ಮವು ತನ್ನ ಲೀಲಾಸ್ವತಂತ್ರತೆಯಿಂದ ಅಖಂಡಗೋಳಕಾಕಾರ ತೇಜೋಮೂರ್ತಿಯಾಗಿ ಮಹಾಲಿಂಗವಾಯಿತ್ತಲ್ಲದೆ ನಾದ ಬಿಂದು ಕಳೆಗಳಿಂದಾದ ಮೂರ್ತಿಯಲ್ಲವೆಂಬುದೀಗ, 'ಅಮೂಲ್ಯ'ನೆಂಬ ಶಬ್ದಕ್ಕರ್ಥ. ಅದು ಕಾರಣ ಮಹಾಲಿಂಗವು ಶಕ್ತಿಯಿಂದ ಹುಟ್ಟಿದುದಲ್ಲವೆಂಬುದೀಗ, 'ಅಯೋನಿಸಂಭವ'ನೆಂಬ ಶಬ್ದಕ್ಕರ್ಥ. ಅಂತಾದ ಮಹಾಲಿಂಗವು ನಿತ್ಯವನುಳ್ಳುದಾಗಿ ನಿರ್ಮಲವನುಳ್ಳುದಾಗಿ ಉತ್ಪತ್ತಿಸ್ಥಿತಿಲಯಂಗಳಿಲ್ಲದುದಾಗಿ, ವಾಙ್ಮನಸ್ಸಿಗೆ ಅಗೋಚರವಾಗಿಪ್ಪುದು ಆ ಮಹಾಲಿಂಗವೆಂಬುದೀ ವಚನದ ಅಪರಾರ್ಥದರ್ಥ.

೯೬೩

ಪ್ರಣವಾರೂಢನು, ಪ್ರಣವಸ್ವರೂಪನು, ಪ್ರಣವಪ್ರಕೃತಿಸಂಜ್ಞನು, ಪ್ರಣವಷಡಂಗಸಮರಸ ನಮ್ಮ ಕೂಡಲಸಂಗಮದೇವರು. ॥೨॥

- -

ಚಿತ್‌ಪ್ರಣವಬಿಂದುಪೀಠದಲ್ಲಿ ಚಿತ್‌ಪ್ರಣವನಾದವಪ್ಪ ಮಹಾಲಿಂಗವು ವಿಯೋಗವಿಲ್ಲದೆ ಇಪ್ಪನೆಂಬುದೀಗ, 'ಪ್ರಣವಾರೂಢನು ಪ್ರಣವ ಸ್ವರೂಪನು' ಎಂಬ ಶಬ್ದಕ್ಕರ್ಥ. ಅಂತಪ್ಪ ಪ್ರಣವನಾದ ಸುಚೈತನ್ಯಲಿಂಗಪುರುಷನು ತನ್ನ ಚಿತ್‌ಪ್ರಣವಪ್ರಕಾಶಸಾಮರ್ಥ್ಯವೆ ಶಕ್ತಿಯಾಗಿ ಉಳ್ಳವನೆಂಬುದೀಗ, 'ಪ್ರಣವಪ್ರಕೃತಿಸಂಜ್ಞನು' ಎಂಬ ಶಬ್ದಕ್ಕರ್ಥ. ಅಂತು ಪ್ರಣವನಾದ ಚೈತನ್ಯವೆ ಲಿಂಗ. ಆ ಲಿಂಗದ ಪರಮಪ್ರಕಾಶಾಂಗವೆ ಶಕ್ತಿ. ಅಂತಾದ ಚಿತ್ಕಲಾಂಗಶಕ್ತಿಯಾಗಿ ಆ ಷಡ್ವಿಧಕಲಾಶಕ್ತಿಗಳಿಗೆ ತನ್ನಂಗವಾಗಿ ಭಿನ್ನವಿಲ್ಲದೆ ಷಟ್‌ಸಾದಾಖ್ಯಲಿಂಗಮೂರ್ತಿಯಾಗಿಪ್ಪನು ತನ್ನ ಸ್ವಲೀಲೆಯಿಂದಲೆಂಬುದೀಗ, 'ಪ್ರಣವಷಡಂಗಸಮರಸ ನಮ್ಮ ಕೂಡಲಸಂಗಮದೇವರು' ಎಂಬ ಶಬ್ದಕ್ಕರ್ಥ.

೯೬೪

ಬಯಲು ಮೂರ್ತಿಯಾಗಿ ನಿಂದನೊಬ್ಬ ಶರಣ. ಆತನ ವಿದ್ಯೆಬುದ್ಧಿಯಿಂದ ಹುಟ್ಟಿದಾತ ಬ್ರಹ್ಮ. ಆತನ ಶಾಂತಿ ಸೈರಣೆಯಿಂದ ಹುಟ್ಟಿದಾತ ವಿಷ್ಣು. ಆತನ ಕೋಪಕ್ರೋಧದಿಂದ ಹುಟ್ಟಿದಾತ ರುದ್ರ ಈ ಮೂಱು ಪೀಠವಂತಿರಲಿ, ಆ ಶರಣನನಱಿದು ಶರಣೆನುತ್ತಿರ್ದೆನು ಕೂಡಲಸಂಗಮದೇವಾ.॥೩॥

\- -

ನಿಷ್ಕಲ ನಿರವಯ ಪರಿಪೂರ್ಣ ಚೈತನ್ಯಜ್ಞಾನಪ್ರಭಾಬೆಳಗೆ ಮೂರ್ತಿಯಾಗಿ ನಿಂದಿರ್ದ ಮಹಾಲಿಂಗವು ತನ್ನ ಸ್ವಲೀಲೆಯಿಂದ ನಿರವಯವಾಗಿಪ್ಪುದಾಗಿ ಲಿಂಗವೆಂಬುದೀಗ 'ಬಯಲೆ'ಂಬ ಶಬ್ದಕ್ಕರ್ಥ. ಅಂತಪ್ಪ ನಿರವಯಲಿಂಗವೆ ಪಂಚಸಾದಾಖ್ಯಮುಖವನೆಯ್ದಿ ಮೂರ್ತಿಯಾಗಿ ಸದಾಶಿವನೆಂಬ ಶರಣನಾದನೆಂಬುದೀಗ, 'ಬಯಲು ಮೂರ್ತಿಯಾಗಿ ನಿಂದನೊಬ್ಬ ಶರಣ' ಎಂಬ ಶಬ್ದಕ್ಕರ್ಥ. ಅಂತು ಅಖಂಡಚಿಚ್ಚೈತನ್ಯಪ್ರಭಾಬೆಳಗೆ ಅಂಗಕರಚರಣಂಗಳಾಗಿ ಮೂರ್ತಿಯಾದ ಸದಾಶಿವನು ತನ್ನನುಪಾವಸ್ಥೆಯಂ ಮಾಡುವ ಉಪಾಸಕರಿಲ್ಲದಿರಬಾರದೆಂಬ ರಾಜಸಾಹಂಕಾರ ತಲೆದೋಱೆ ಜಗತ್ ಸೃಷ್ಟಿಗೆ ಬುದ್ಧಿಯಾದ ಪ್ರಭಾವಜ್ಞಾನಮಂ ಬೆರ್ಪಡಿಸೆ, ಬ್ರಹ್ಮ ಮೊದಲಾದ ಆತ್ಮರುಗಳ ಜಗತ್‌ಸೃಷ್ಟಿಯಾಯಿತ್ತೆಂಬುದೀಗ, 'ಆತನ ವಿದ್ಯೆಬುದ್ಧಿಯಿಂದ ಹುಟ್ಟಿದಾತ ಬ್ರಹ್ಮ'ನೆಂಬ ಶಬ್ದಕ್ಕರ್ಥ. ಅಂತು ಸದಾಶಿವನು ಸೇವ್ಯನಪ್ಪ ರಾಜಸಬುದ್ಧಿದೋಱೆ ಚಿಂತಿಸಿದ ಚಿತ್ತುವಿನ ಪ್ರಭಾಕಿರಣರಾಜಸವೆ ಸೇವಕರಪ್ಪ ಆತ್ಮರಾದ ಆ ಆತ್ಮರುಗಳಿಗೆ ಭೋಗಸುಖಶಾಂತಿಯನಿತ್ತು ನಡಸುವ ಸ್ಥಿತಿಧರ್ಮಮಂ ಚಿಂತಿಸೆ ಕರುಣಶಾಂತಿದಯಚಿತ್ತವಾದ ಸಾತ್ವಿಕಗುಣಬುದ್ಧಿದೋಱೆ, ಶಿವನ ಚಿತ್ತದಲ್ಲಿ ಹೊಳೆಯಲು ಆ ಹೊಳೆದ ಚಿತ್ತಿನ ಛಾಯೆ ಬುದ್ಧಿಯಂ ಬೇರ್ಪಡಿಸೆ ಆತ್ಮರುಗಳ ದೇಹಕರಣ ಇಂದ್ರಿಯ ವಿಷಯಸುಖ ಭೋಗಂಗಳಾಗಿ, ಮಿಥ್ಯಾಸ್ಥಿತಿಕರ್ಮಂಗಳನುಳ್ಳ ಮಾಯಾಸ್ವರೂಪವಪ್ಪ ವಿಷ್ಣುವಾಗಲು, ಆ ಮಾಯಾಮಿಥ್ಯದ ಸ್ಥಿತಿಕರ್ಮವಳಿಯದಂತೆ ಆ ಮಾಯೆಗೆ ಗುಣ ತ್ರಾಣ ತಾನಾಗಿ ಸ್ಥಿತಿಯ ನಡಸುತ್ತಿಹ ಶಾಂತಿಯನುಳ್ಳ ಶಿವನೆಂಬುದೀಗ, 'ಆತನ ಶಾಂತಿ ಸೈರಣೆಯಿಂದ ಹುಟ್ಟಿದಾತ ವಿಷ್ಣು'ವೆಂಬ ಶಬ್ದಕ್ಕರ್ಥ. ಅಂತು ಶಿವನಿಂದಾಗಿ ಆತ್ಮರುಗಳಿಗೆ ಶಿವಭಾವ ತಲೆದೋಱದೆ ದೇಹಸುಖಭೋಗಂಗಳಿಂದ ಶಿವನ ಮಱೆದು ಅಹಂಕರಿಸಿದ ಕಾಲ ಕಾಮ ದಕ್ಷ ದೈತ್ಯರು ಮೊದಲಾದ ದುಷ್ಟಾತ್ಮರುಗಳ ಕಂಡು ಶಿವನು ಚಿತ್ತದಲ್ಲಿ ಕೋಪಿಸಿದ ಕೋಪಾಗ್ನಿಜ್ಞಾನಮಂ ಬೇರ್ಪಡಿಸೆ ಲಯೋಧರ್ಮವನುಳ್ಳ ರುದ್ರಸ್ವರೂಪವಾಯಿತ್ತೆಂಬುದೀಗ, 'ಆತನ ಕೋಪಕ್ರೋಧದಿಂದ ಹುಟ್ಟಿದಾತ ರುದ್ರ'ನೆಂಬ ಶಬ್ದಕ್ಕರ್ಥ. ಇಂತು ಶಿವನು ಜಗತ್‌ಸೃಷ್ಟಿಸ್ಥಿತಿಸಂಹಾರಂಗಳಂ ಮಾಡುವ ಕರ್ತೃ ತಾನಾಗಿ ತಾನಲ್ಲದಂತಿಪ್ಪ ಚದುರಿನಿಂದ ಬ್ರಹ್ಮ ವಿಷ್ಣು ರುದ್ರರೆಂಬ ತ್ರಿಗುಣಸ್ವರೂಪರಂ ಹುಟ್ಟಿಸಿ ಅಧಿಕಾರವನಿತ್ತು ತಾನಲ್ಲದಂತೆ ಇಹನು ಸದಾಶಿವನು ತನ್ನ ಲೀಲಾ ಸ್ವತಂತ್ರತೆಯಿಂದ. ಅಂತು ತ್ರಿಗುಣಾತ್ಮಕರಾದ ತ್ರಿಮೂರ್ತಿಗಳಂ ಬಿಟ್ಟು ಆ ಸದಾಶಿವಮೂರ್ತಿಯೊಬ್ಬನೇ ಸೇವ್ಯನೆಂದಱಿದು ಸೇವಕನಾಗಿ ಶರಣುವೊಕು ಬದುಕಿದೆನೆಂಬುದೀಗ, 'ಈ ಮೂಱು ಪೀಠವಂತಿರಲಿ ಆ ಶರಣನನಱಿದು ಶರಣೆನುತಿದ್ದೆ ಕೂಡಲಸಂಗಮದೇವಾ' ಎಂಬ ಶಬ್ದಕ್ಕರ್ಥ.

೯೬೫

ಆದಿಪುರುಷನ ಮನವು ಮಹವನಕ್ಕಾಡಿ, ಮತ್ತಲ್ಲಿಯೆ ಆನಂದದಿಂದ ಆ ನಿರವಯವು ಬೆಸಲಾಯಿತ್ತು. ಧರೆ ಅಂಬರವಾರುಧಿ ಸಹಿತ ಜಾರೆಯೆಂದರೆ ಜಗದಲ್ಲಿ ನಿಂದರು ಚೌರಾಸಿಲಕ್ಷ ಜೀವಜಾಲಂಗಳು. ಹಾರೆಯೆಂದರೆ ಆಕಾಶದಲ್ಲಿ ನಿಂದರು ಗರುಡಗಂಧರ್ವ ಸಿದ್ಧವಿದ್ಯಾಧರ ದೇವರ್ಕಳು ಮೊದಲಾದ ದೇವಸಮೂಹಂಗಳೆಲ್ಲಾ ಕೂಡಲಸಂಗಮದೇವಾ, ನೀವು ಮನದಲ್ಲಿ ಸಂಕಲ್ಪಿಸಿ ಆಗೆಂದಡೆ ಆದುವು. ॥೪॥

- -

ತತ್ತ್ವಂಗಳೇನೂ ಇಲ್ಲದ ಮೊದಲಿರ್ದ ಪರಶಿವನು ತನ್ನ ಘನತೆಗೆ ತನ್ನ ಚಿತ್ತು ಹೆಚ್ಚಿ ಹಿಗ್ಗಾಗಿ ಘನತರದಹಂಭಾವದಾನಂದದಲಿ ವಿಶ್ರಮಿಸಿ ನಿಂದಿತ್ತೆಂಬುದೀಗ, 'ಆದಿಪುರುಷನ ಮನವು ಮಹವನಕ್ಕಾಡಿ ಮತ್ತಲ್ಲಿಯೆ ಆನಂದದಿಂದ' ಎಂಬ ಶಬ್ದಕ್ಕರ್ಥ. ಅಂತು ಪರಬ್ರಹ್ಮವು ತನ್ನ ಘನತೆಗೆ ತಾನೆ ಹೆಚ್ಚಿ ಮಹದಹಂಕಾರದಲ್ಲಿ ಆನಂದಿಸಿದ ಚಿತ್ತಿನ ನೆನಹಿಂದವೆ ಸಾಕಾರದ ತೋಜೆಕೆಯ ವಿಲಾಸದ ನೆನಹುದೋಜೆಸಿ ತನ್ನ ನಿರವಯದಲ್ಲಿಯೆ ಸಾಕಾರಮೂರ್ತಿಯಾಗಿ ನಿಂದಿತ್ತೆಂಬುದೀಗ, 'ಆ ನಿರವಯವು ಬೆಸಲಾಯಿತ್ತೆ'ಂಬ ಶಬ್ದಕ್ಕರ್ಥ. ಅಂತು ನಿರವಯವಸ್ತು ಸಾಕಾರವಾದ ನೆನಹಿನ ಚಿತ್ತುವಿಂದವೆ ದೇವತಾದಿಗಳು ಸಕಲಾತ್ಮರು ಅಷ್ಟತನುಗಳು ಮೊದಲಾದ ಜಗತ್ತೆಲ್ಲಾ ಜನಿಸಿತ್ತು. ಅಂತು ಪರಶಿವನ ಲೀಲೆಯಿಂದ ಸಾಕಾರವಾದ ಚಿತ್ತಿನಿಂದ ಜನಿಸಿದ ಚಿತ್ತುಮಯವೀ ಜಗತ್ತೆಂದುದಾಗಿ, ಮುನ್ನ ಆತ್ಮರು ಮೊದಲಾದ ತತ್ವಂಗಳೇನೂ ಇಲ್ಲವೆಂಬುದೀ ವಚನದ ತಾತ್ಪರ್ಯಾರ್ಥ.

೯೬೬

ಜಗತ್ತೆಂಬ ಯಂತ್ರದ ಹಾಹೆಗೆ ಅಜ್ಞಾನವೆಂಬ ತುಷವ ತೊಡಿಸಿ, ಅಹಂ ಮಮತೆಯೆಂಬ ಸೊಕ್ಕನಿಕ್ಕಿ, ಬಾರದ ಬಟ್ಟೆಯಲ್ಲಿ ಬರಿಸಿ, ಕಾಣದ ದುಃಖವ ಕಾಣಿಸಿ, ಉಣ್ಣದ ಆಪ್ಯಾಯನನುಣಿಸಿ ಮಾರಾರಿ ವಿನೋದಿಸಿದೆ ನೀ ಕೂಡಲಸಂಗಮದೇವಾ ॥೫॥

- -

ಪರಶಿವನು ತನ್ನ ಚಿದ್ವಿಲಾಸದಿಂದಾದ ಆತ್ಮರುಗಳಿಗೆ ತನ್ನ ನಿಜವ ಮಱೆವ ಅಜ್ಞಾನಮಂ ಪುಟ್ಟಿಸಿ, ಅಹಂ ಮಮತೆಯನೆಯ್ದಿಸಿ, ತನುವಾಸನಾ ಸಂಬಂಧಿಗಳಂ ಮಾಡಿ, ಜನನ ಮರಣಕ್ಕೆ ತಂದು, ಶಿವನು ನೋಡಿ ವಿನೋದಿಸುತ್ತಿರ್ದನೆಂಬುದೀ ವಚನದ ತಾತ್ಪರ್ಯಾರ್ಥ.

೯೬೭

ಗುಬ್ಬಿ ಹೆಜಿರ ಮನೆಯ ತನ್ನ ಮನೆಯೆಂಬಂತೆ, ಧರೆ ಧನ ವನಿತೆಯರು ಎನ್ನವರು ತನ್ನವರೆಂದು ಹೋರಿ ಹೋರಿ ಸಾವುತ್ತಿದೆ ಜೀವ, ಸರ್ವಕರ್ತೃ ಕೂಡಲಸಂಗಯ್ಯನೊಬ್ಬನೆಯೆಂದಱಿಯದೆ ಕೆಟ್ಟರು. ॥೬॥

- -

ಸರ್ವಾತ್ಮಮಯವಾದ ಶಿವನೊಬ್ಬನೆಯೆಂಬಱಿವು ಆತ್ಮಂಗೆ ಶಿವಾಜ್ಞೆಯಿಂದ ಮಱೆದು ಮಾಯಾದೇಹ ವಿಷಯಪದಾರ್ಥಂಗಳು ತನ್ನವೆಂದು ಆಸೆಮಾಡಿ ತಥ್ಯಮಿಥ್ಯದಿಂದ ಸತ್ತು ಹುಟ್ಟುತ್ತಿಹನು ಜೀವನಾಗಿ. ಅಂತು ಜೀವನಾಗಿ ತಾನು ಶಿವನೆಂಬುದ ಮಱೆದು ಕೆಟ್ಟನೆಂಬುದೀ ವಚನದ ತಾತ್ಪರ್ಯಾರ್ಥ.

೯೬೮

ಮರೀಚಿಯೊಳಡಗಿದ ಬಿಸಿಲಿನಂತೆ ಇದ್ದಿತ್ತು. ಕ್ಷೀರದೊಳಗಣ ತುಪ್ಪದಂತೆ ಇದ್ದಿತ್ತು. ಚಿತ್ರಕನೊಳಡಗಿದ ಚಿತ್ರದ ಪಟದಂತೆ ಇದ್ದಿತ್ತು. ಆಲಿಯೊಳಗಣ ತೇಜದ ಗೋಪ್ಯದಂತೆ ಇದ್ದಿತ್ತು. ನುಡಿಯೊಳಡಗಿಟ ಅರ್ಥದಂತಿತ್ತು ಕೂಡಲಸಂಗಮಯ್ಯ ನಿಮ್ಮ ನಿಲವು. ॥೭॥

- -

ಶಿವಾಂಶಿಕವಾದ ಆತ್ಮನು ಜಡಪಿಂಡಸಂಬಂಧಿಯಾಗಿ ತನ್ನ ನಿಜವ ಮಱೆದಿಪ್ಪಲ್ಲಿ ಆ ಆತ್ಮನ ನಿಜದ ನಿಲವಪ್ಪ ಪರಬ್ರಹ್ಮವೆಂತಿದ್ದೆತ್ತೆಂದಡೆ, ಆ ಆತ್ಮಾಂತರ್ಗತವಾಗಿ ಆ ಪಿಂಡದಲ್ಲಿಪ್ಪುದು. ಅದು ಹೇಗೆಂದಡೆ ಪರಿಪೂರ್ಣವಾಗಿರ್ದ ಬಿಸಿಲಿನೊಳಗೆ ಮರೀಚಿಕಾಜಲಛಾಯೆದೋಱಲು ಆ ತೋಱೆದ ಮರೀಚಿಕದೊಳಗೆ ಆ ಪರಿಪೂರ್ಣವಾದ ಬಿಸಿಲಿರ್ದು ಕಾಣಿಸದೆ ಇಪ್ಪಂತೆ ಆ ಪರಬ್ರಹ್ಮದ ಅಖಂಡಚಿತ್ತ್ರಕಾಶದೊಳಗೆ ತೋಱಿದ ಮಿಥ್ಯಾಮಾಯಾ ಛಾಯಾಜಲರೂಪವಾದ ಪಿಂಡದೊಳಗೆ ಅಖಂಡಚಿಚ್ಚೈತನ್ಯಪ್ರಕಾಶವಿರ್ದು ಕಾಣಿಸದೆ ಇಪ್ಪುದೆಂಬುದೀಗ, 'ಮರೀಚಿಯೊಳಗಡಗಿದ ಬಿಸಿಲಿನಂತೆ' ಎಂಬ ಶಬ್ದಕ್ಕರ್ಥ. ಹಾಲಿನೊಳಗೆ ತುಪ್ಪವಿರ್ದು ಪರಿಮಳದೋಱದೆ ಹಾಲಿನಂತೆ ತದಾಕಾರವಾಗಿರ್ದು ಬೇರ್ಪಡಿಸಿ ಕಾಣಿಸಬಾರದಿಪ್ಪಂತೆ ಪರಮಾತ್ಮ ಲಿಂಗವು ಪಿಂಡರೂಪದಲ್ಲಿ ತದಾಕಾರವಾಗಿಪ್ಪುದು. ಅಂತಿರ್ದು ತನ್ನ ಶಿವಸದ್ವಾಸನೆ ತಲೆದೋಱದೆ ಅಡಗಿಪ್ಪುದೆಂಬುದೀಗ, 'ಕ್ಷೀರದೊಳಗಣ ತುಪ್ಪದಂತೆ ಇದ್ದಿತ್ತು' ಎಂಬ ಶಬ್ದಕ್ಕರ್ಥ. ಚಿತ್ರಕನ ಭಾವದಲ್ಲಿಪ್ಪ ಚಿತ್ರದ ರೂಹು ಕಾಣಿಸದೆ ಇಪ್ಪಂತೆ ಚಿತ್ತ್ರಭಾಚೈತನ್ಯಲಿಂಗವು ಪಿಂಡಮಧ್ಯದಲ್ಲಿರ್ದು ತನ್ನರೂಪು ಕಾಣಿಸದೆ ಇಪ್ಪುದೆಂಬುದೀಗ, 'ಚಿತ್ರಕನೊಳಗಡಗಿದ ಚಿತ್ರಪಟದಂತೆ ಇದ್ದಿತ್ತು' ಎಂಬ ಶಬ್ದಕ್ಕರ್ಥ. ಕಂಗಳ ಪಟಲದೊಳಗಿಪ್ಪ ಸೂಕ್ಷ್ಮಪ್ರಭೆ ಕುಱುಹಿಂಗೆ ಬಾರದಂತೆ ಚಿತ್ತ್ರಭಾಲಿಂಗವು ಪಿಂಡಸ್ಥವಾಗಿರ್ದು ಕುಱುಹುದೋಱದೆಂಬುದೀಗ, 'ಆಲಿಯೊಳಗಣ ತೇಜದ ಗೋಪ್ಯದಂತಿದ್ದಿತ್ತು' ಎಂಬ ಶಬ್ದಕ್ಕರ್ಥ. ತತ್ತ್ವಾನುಭಾವದ ನುಡಿಯರ್ಥ ಎಲ್ಲರಿಗೆ ಕಾಣಿಸದೆ ಗೋಪ್ಯವಾಗಿ ಇಪ್ಪಂತೆ ಚಿದ್ಬೋಧಾಮೂರ್ತಿಯಪ್ಪ ಚಿಲ್ಲಿಂಗವು ಪಿಂಡಸ್ಥವಾಗಿರ್ದುದ ವಿವರಿಸಬಾರದೆಂಬುದೀಗ 'ನುಡಿಯೊಳಗಡಗಿದ ಅರ್ಥದಂತಿದ್ದಿತ್ತು' ಎಂಬ ಶಬ್ದಕ್ಕರ್ಥ.

೯೬೯

ಕಲ್ಲೊಳಗೆ ಹೊನ್ನುಂಟು, ಮರದೊಳಗೆ ಅಗ್ನಿಯುಂಟು, ಹಾಲೊಳಗೆ ತುಪ್ಪವುಂಟು, ಅಂತರಾಮಿಯಲ್ಲಿ ಶಿವನಿಹನು. ಇದೇನು ಕಾರಣ ಕತ್ತಲೆ ಕಾಣಬಾರದು ? ತೋಱಬಲ್ಲ ಗುರು ಸುಳಿಯನು ಕೂಡಲಸಂಗಮದೇವಾ. ॥೮॥

- -

ಮಱವೆಯನೆಯ್ದಿಪ್ಪ ಕಲುಹೃದಯಾತ್ಮರೊಳಗೆ ಚಿತ್ರಕಾಶಲಿಂಗವಡಗಿಹನೆಂಬುದೀಗ, 'ಕಲ್ಲೊಳಗೆ ಹೊನ್ನುಂಟು' ಎಂಬ ಶಬ್ದಕ್ಕರ್ಥ. ಜಡಕಾಷ್ಠ ಸ್ವರೂಪಾದ ಪಿಂಡದೊಳಗೆ ಗತವನೆಯ್ದಿ ಚಿದಗ್ನಿಯಿಪ್ಪುದೆಂಬುದೀಗ, 'ಮರದೊಳಗೆ ಅಗ್ನಿಯುಂಟು' ಎಂಬ ಶಬ್ದಕ್ಕರ್ಥ. ಆ ಪಿಂಡಸಂಬಂಧಿಯಾಗಿರ್ದ ಆತ್ಮನಲ್ಲಿ ಅಂತರ್ಗತವಾಗಿ ಶಿವಸದ್ವಾಸನಾಘೃತವಿಪ್ಪುದೆಂಬುದೀಗ, 'ಹಾಲೊಳಗೆ ತುಪ್ಪವುಂಟು' ಎಂಬ ಶಬ್ದಕ್ಕರ್ಥ. ಅಂತು ಶಿವಾಂಶಿಕವಾದ ಆತ್ಮನು ಜಡಪಿಂಡಸ್ಥವಾಗಿಪ್ಪಲ್ಲಿ ಆತ್ಮನ ನಿಜಸ್ವರೂಪವಪ್ಪ ಶಿವತತ್ವವು ಆತ್ಮಾಂತರ್ಗತವಾಗಿ ಪಿಂಡದಲ್ಲಿ ಅಡಗಿಪ್ಪುದೆಂಬುದೀಗ 'ಅಂತರಾಮಿಯಲ್ಲಿ ಶಿವನಿಹನು' ಎಂಬ ಶಬ್ದಕ್ಕರ್ಥ. ಅಂತು ಆತ್ಮ ತನ್ನ ನಿಜವಪ್ಪ ಪರವಸ್ತು ತನ್ನಲ್ಲಿ ತಾನಾಗಿರ್ದು ತಾ ಕಾಣದಿರ್ಪ ಅಜ್ಞಾನಸಂಬಂದ ಜೀವಂಗೆ ಶಿವಾಜ್ಞೆಯಿಂದ ಬಂದಿತ್ತೆಂಬುದೀಗ, 'ಇದೇನು ಕಾರಣ ಕತ್ತಲೆ ಕಾಣಬಾರದು' ಎಂಬ ಶಬ್ದಕ್ಕರ್ಥ. ಅಂತಿಪ್ಪ ಆತ್ಮಂಗೆ ತನ್ನಲ್ಲಿಪ್ಪ ತನ್ನ ಶಿವತತ್ತ್ವವ ತನಗೆ ಅಱುಹಿ ಕೊಡಬಲ್ಲುದು ಸಮ್ಯಗ್‌ಜ್ಞಾನವಾದ ಕಾರಣ, ಅಂತಪ್ಪ ಸಮ್ಯಗ್‌ಜ್ಞಾನ ಸಂಚರಿಸಿ ಪ್ರಭಾವಿಸದೆಂಬುದೀಗ, 'ತೋಱಬಲ್ಲ ಗುರು ಸುಳಿಯನು ಕೂಡಲ ಸಂಗಮದೇವಾ' ಎಂಬ ಶಬ್ದಕ್ಕರ್ಥ.

೯೭೦

ಸಂಜೆಯ ಮಂಜಿನ ಕಪ್ಪು ಅಂಜಿದಡೆ ಶಂಕೆ ತದ್ರೂಪವಾಗಿ ನಿಂದಿತ್ತು. ತನ್ನ ಭಾವದ ನಟನೆ ನಡೆವನ್ನಕ್ಕರ ನಡೆಯಿತ್ತು. ಅದು ನಿಂದಲ್ಲಿಯೆ ನಿಂದಿತ್ತು. ಅದರಂತುವನಱಿದಡೆ ಹಿಂದೆ ಹುಸಿ, ಮುಂದೆ ಕೂಡಲಸಂಗಮದೇವರ ನಿಲವು ತಾನೆ. ॥೯॥

- -

ಹಗಲಿನ ಇರುಳಿನ ಸಂಧಿ ಸಂಜೆಯೆನಿಸಿದಂತೆ, ಆತ್ಮನ ಅಱಿವು ಆ ದೇಹದ ಮಱವೆ ಎರಡಱ ಸಂಗದ ಸಂಧಿಯಲ್ಲಿ ಮನವೆಂಬ ಅಜ್ಞಾನ ಹುಟ್ಟಿತ್ತೆಂಬುದೀಗ, 'ಸಂಜೆಯ ಮಂಜಿನ ಕಪ್ಪು' ಎಂಬ ಶಬ್ದಕ್ಕರ್ಥ. ಅಂತಪ್ಪ ಮನದಿಂದ 'ದೇಹೋಹ'ವೆಂದು ಭವಭೀತಿ ಶಂಕೆದೋಱ ಆ ದೇಹ ಶಂಕಾರೂಪವಾಗಿ ಜೀವವೆನಿಸಿ ದೃಶ್ಯನಾದನೆಂಬುದೀಗ, 'ಅಂಜಿದಡೆ ಶಂಕೆ ತದ್ರೂಪವಾಗಿನಿಂದಿತ್ತು' ಎಂಬ ಶಬ್ದಕ್ಕರ್ಥ. ಅಂತು ಆತ್ಮನ ಭಾವ ದೇಹದ ಭ್ರಾಂತಿಯನ್ನೆದಿ ಚರಿಸುವನ್ನಕ್ಕ ದೇಹಿಯಾಗಿ ಭವದಲ್ಲಿ ಬರುತ್ತಿರ್ದನೆಂಬುದೀಗ 'ತನ್ನ ಭಾವದ ನಟನೆ ನಡೆವನ್ನಕ್ಕರ ನಡೆಯಿತ್ತು' ಎಂಬ ಶಬ್ದಕ್ಕರ್ಥ. ಅಂತು ದೇಹಿಯಾಗಿರ್ದಾತ್ಮಂಗೆ ಜ್ಞಾನೋದಯವಾಗಲೊಡನೆ ಆ ದೇಹೋಹಮೆಂಬ ಭಾವದ

ಭ್ರಾಂತಿಯಳಿಯಿತ್ತು. ಆ ದೇಹದ ಭ್ರಾಂತಿಯಳಿದಲ್ಲಿಯೇ ದೇಹ ತೋಱಿಕೆಯ ಹುಸಿ ನಿಂದುಹೋಯಿತ್ತು. ಅಂತು ತನ್ನಲ್ಲಿ ತೋಱಿದ ಹುಸಿದೇಹವಾಸನೆಯನಡಗಿಸುವ ಕ್ರಿಯಾಭೇದವನಱಿದಡೆ ಹಿಂದಣ ಜನನ ಮರಣವಿಲ್ಲ, ಮುಂದೆ ಶಿವ ತಾನೆಂಬುದೀಗ, 'ಅದು ನಿಂದಲ್ಲಿಯೆ ನಿಂದಿತ್ತು. ಅದರಂತುವನಱಿದಡೆ ಹಿಂದೆ ಹುಸಿ, ಮುಂದೆ ಕೂಡಲಸಂಗಮದೇವರ ನಿಲವು ತಾನೆ' ಎಂಬ ಶಬ್ದಕ್ಕರ್ಥ.

೯೭೧

ವನದ ಕೋಗಿಲೆ ಮನೆಗೆ ಬಂದರೆ ತನ್ನ ವನವ ನೆನೆವುದ ಮಾಣ್ಬುದೇ ? ಮಲೆಯ ಗಜವು ಮನೆಗೆ ಬಂದರೆ ತನ್ನ ಮಲೆಯ ನೆನೆವುದ ಮಾಣ್ಬುದೇ ? ಕೂಡಲಸಂಗನ ಶರಣರು ಮಱೆದು ಮರ್ತ್ಯಕ್ಕೆ ಬಂದರೆ ತಮ್ಮ ಆದಿಮಧ್ಯಾಂತರಂಗದ ಲಿಂಗವ ನೆನೆವುದ ಮಾಣ್ಬರೇ ? ॥೧೦॥

- -

ಆನೆಗಳು ಕೋಗಿಲೆಗಳು ತಮ್ಮ ನಿಜಜನನಸ್ಥಲವನಗಲಿ ಬಂಧನಕ್ಕೆ ಬಂದಲ್ಲಿ ತಮ್ಮ ನಿಜಸ್ಥಲವನೆ ಚಿಂತಿಸುತಿಪ್ಪಂತೆ ಶಿವನ ಚಿದಂಶವಾದ ಶರಣರು ಶಿವಾಜ್ಞೆಯಿಂದ ತಮ್ಮ ನಿಜವ ಮಱೆದು ಮಾಯಾದೇಹಸಂಸಾರಯುಕ್ತವಾಗಿ ಮರ್ತ್ಯಕ್ಕೆ ಬಂದಲ್ಲಿ ಶಿವಜ್ಞಾನೋದಯದಿಂದ ತಮ್ಮ ನಿಜಸ್ವರೂಪವೆ ಲಿಂಗವೆಂದಱಿದು ಅಂತರಂಗದ ಅಱಿವೆಲ್ಲಾ ಲಿಂಗವ ಬೆರಸುವ ನೆನಹಿನ ಚಿಂತನೆಯ ಆತುರಗುಂದದೆ ಇಪ್ಪರು ಶರಣರೆಂಬುದೀ ವಚನದ ತಾತ್ಪರ್ಯಾರ್ಥ.

೯೭೨

ಅಱಿದಿಹೆನೆಂದಡೆ ಅಱುಹಿಂಗಸಾಧ್ಯ. ನೆನೆದಿಹೆನೆಂದಡೆ ನೆನಹಿಂಗಸಾಧ್ಯ. ಭಾವಿಸಿಹೆನೆಂದಡೆ ಭಾವಕ್ಕಸಾಧ್ಯ. ವಾಙ್ಮನಕ್ಕಗೋಚರವನಱಿವ ಪರಿಯೆಂತಯ್ಯ ಗುರು ತೋಱದನ್ನಕ್ಕ ? ಗುರು ಶಿಷ್ಯರ ಮಧ್ಯದಲ್ಲಿ ಸ್ವಯಂಜ್ಯೋತಿಲಿಂಗ ಉದಯವಪ್ಪುದೆಂಬ ಶ್ರುತಿ ಹುಸಿಯೆ ಕೂಡಲಸಂಗಮದೇವಯ್ಯಾ ? ನಿಮ್ಮ ಮಹಾನುಭಾವರ ಮಥನದಿಂದ ಎನ್ನಲ್ಲಿ ನಿಜವ ನೆಲೆಗೊಳಿಸಾ ಪ್ರಭುವೇ. ॥೧೧॥

- -

ಮನ ಭಾವ ಜ್ಞಾನಂಗಳಿಗೆ ಅಗೋಚರವಾಗಿಪ್ಪ ಪರಬ್ರಹ್ಮವು ಗುರುಮುಖದಿಂದಲುದಯಿಸಿ ಪ್ರತ್ಯಕ್ಷವಾಗಿ ಶಿಷ್ಯನ ಕರದಲ್ಲಿ ಬೆಳಗುವನೆಂಬ ಶ್ರುತಿ ಹುಸಿಯಲ್ಲ. ಎನ್ನಲ್ಲಿ ನಿಜಲಿಂಗವ ಸಾಹಿತ್ಯವ ಮಾಡೆಂದು ಗುರುವಿಂಗೆ ಬಿನ್ನೈಸುವ ಶಿಷ್ಯನ ಬಿನ್ನಹವೆಂಬುದೀ ವಚನದ ತಾತ್ಪರ್ಯಾರ್ಥ.

೯೭೩

ಎನ್ನ ಕಾಯದ ಕರಸ್ಥಲದಲ್ಲಿ ಪ್ರಭುದೇವರ ಕಂಡೆನು. ಎನ್ನ ಮನದ ಕರಸ್ಥಲದಲ್ಲಿ ಚೆನ್ನಬಸವಣ್ಣನ ಕಂಡೆನು. ಎನ್ನಱುಹಿನ ಕರಸ್ಥಲದಲ್ಲಿ ಮಡಿವಾಳಯ್ಯನ ಕಂಡೆನು. ಒಳಹೊಱಗು ಹೊಱಗೊಳಗೆಂಬ

ಭೇದವನಱಿಯದೆ ಇದ್ದೆನು. ಕೂಡಲಸಂಗಮ ದೇವಯ್ಯ, ನಿಮ್ಮ ಶರಣರು ಎನ್ನ ಪಾವನ ಮಾಡಿದ ಪರಿಣಾಮವ ಅಂತಿಂತೆನಲಮ್ಮದೆ ನಮೋ ನಮೋ ಎನುತಿರ್ದೆನು. ॥೧೨॥

- -

ಆನಂದಸ್ವರೂಪಾದ ಕಾರಣತತ್ತ್ವವೇ ಜಂಗಮವಾಯಿತ್ತಾಗಿ, ಆ ಜಂಗಮವೆ ಇಷ್ಟಲಿಂಗವಾಗಿ ಅನಿಷ್ಟವ ನಷ್ಟವ ಮಾಡಿ ಕರಸ್ಥಲದಲ್ಲಿ ನೆಲೆಗೊಂಡಿರ್ದುದ ಪ್ರತ್ಯಕ್ಷವಾಗಿ ಕಂಡ ಬಸವಣ್ಣನೆಂಬುದೀಗ, 'ಎನ್ನ ಕಾಯದ ಕರಸ್ಥಲದಲ್ಲಿ ಅಲ್ಲಮಪ್ರಭುದೇವರ ಕಂಡೆನು.' ಎಂಬ ಶಬ್ದಕ್ಕರ್ಥ. ಚಿತ್ಸ್ವರೂಪಾದ ಸೂಕ್ಷ್ಮತತ್ತ್ವವೇ ಚೆನ್ನಬಸವಣ್ಣನಾಗಿ ಬಂದು ತನ್ನ ಮನದ ಕರಸ್ಥಲದಲ್ಲಿ ಜ್ಞಾನಸ್ವರೂಪನಾಗಿ ನೆಲೆಗೊಂಡು ಪ್ರಾಣಲಿಂಗವಾಗಿ ತನ್ನ ವಾಯುಪ್ರಾಣಗುಣವಳಿದಿರ್ದುದ ಪ್ರತ್ಯಕ್ಷವಾಗಿ ಕಂಡ ಬಸವಣ್ಣನೆಂಬುದೀಗ, 'ಎನ್ನ ಮನದ ಕರಸ್ಥಲದಲ್ಲಿ ಚೆನ್ನಬಸವಣ್ಣನ ಕಂಡೆನು' ಎಂಬ ಶಬ್ದಕ್ಕರ್ಥ. ಸತ್ತುವೆನಿಸಿಹ ಅಖಂಡ ಘನವಪ್ಪ ಸ್ಥೂಲಬ್ರಹ್ಮವೇ ಮಡಿವಾಳನಾಗಿ ಬಂದು ತನ್ನ ದುರ್ಭಾವದ ಮಲಿನವ ಕಳೆದು ಸದ್ಭಾವಲಿಂಗವಾಗಿ ತನ್ನಲ್ಲಿ ನೆಲೆಗೊಂಡಿರ್ದುದ ಪ್ರತ್ಯಕ್ಷವಾಗಿ ಕಂಡ ಬಸವಣ್ಣನೆಂಬುದೀಗ, 'ಎನ್ನ ಅಱುವಿನ ಕರಸ್ಥಲದಲ್ಲಿ ಮಡಿವಾಳಯ್ಯನ ಕಂಡೆನು' ಎಂಬ ಶಬ್ದಕ್ಕರ್ಥ. ಅಂತು ತ್ರಿವಿಧಲಿಂಗದಿಂದ ತನುಮನಪ್ರಾಣಂಗಳೆಲ್ಲಾ ಲಿಂಗವಾಗಿ ಅಂತರಂಗ ಬಹಿರಂಗವೆಂಬ ಭೇದವಿಲ್ಲದೆ ಸರ್ವಾಂಗಲಿಂಗವಾಗಿರ್ದನೆಂಬುದೀಗ, 'ಒಳಹೊಱಗು ಹೊಱಗೊಳಗು ಎಂಬ ಭೇದವನಱಿಯದೆ ಇದ್ದೆನು' ಎಂಬ ಶಬ್ದಕ್ಕರ್ಥ. ಇಂತು ಲಿಂಗಶರಣರ ಉಪದೇಶದಿಂದ ಲಿಂಗಾಂಗಸಂಬಂಧಿಯಾಗಿ ನಿತ್ಯ ಸುಖವಡೆದ ಕ್ರಿಯೋಪದೇಶವ ಇಷ್ಟಲಿಂಗವಿಲ್ಲದ ಸಿದ್ಧರಾಮಯ್ಯದೇವರಿಗೆ ಹೇಳಬಾರದು. ಹೇಳದಿರಲೂಬಾರದು ಎಂದು ಅನ್ಯೋಪದೇಶವಾಗಿ ನಮಸ್ಕಾರಮುಖದಲ್ಲಿ ಬಸವರಾಜದೇವರು ನಿರೂಪಿಸಿದರೆಂಬುದೀಗ, 'ನಿಮ್ಮ ಶರಣರು ಎನ್ನ ಪಾವನವ ಮಾಡಿದ ಪರಿಣಾಮವ ಅಂತಿಂತೆನಲಮ್ಮದೆ ನಮೋ ನಮೋ ಎನುತಿರ್ದೆನು' ಎಂಬ ಶಬ್ದಕ್ಕರ್ಥ.

೯೭೪

ಅಯ್ಯಾ ಮರದೊಳಗೆ ಅಗ್ನಿಯಿರ್ದಡೇನಯ್ಯಾ ಮಥನಿಸಿ ತೋಱುವರಿಲ್ಲದನ್ನಕ್ಕರ ಕಾಣಬಹುದೇ? ಜಗದೊಳಗೆ ಕೂಡೆ ಪರಿಪೂರ್ಣಶಿವನೆಂದಡೆ ಅಂತರಂಗದಲ್ಲಿ ಕಾಣಬಹುದೇ? ಆದಿ ಲಿಂಗ ಅನಾದಿ ಶರಣನೆಂಬ ಭೇದವ ತಿಳುಹಿ, ನಿಜಪ್ರಾಣದೊಳಗಿಪ್ಪ ಸುಜ್ಞಾನಲಿಂಗವ ಕರಸ್ಥಲಕ್ಕೆ ತಂದು, ಆ ಕರಸ್ಥಲದ ಲಿಂಗವ ಎನ್ನ ಸರ್ವಾಂಗದೊಳಗೆ ಪ್ರತಿಷ್ಠಿಸಿ ತೋಱಿ, ನಿತ್ಯನಿಜಲಿಂಗೈಕ್ಯದ ಹೊಲಬಿನ ಹರಿವ ತೋಱಿಸಿ ಮರ್ತ್ಯಲೋಕದೊಳಗೆಲ್ಲಾ ಇಂದು ಮೊದಲಾಗಿ ಪ್ರಾಣಲಿಂಗದ ಘನವ ಹರಹಿ, ಶಿವಭಕ್ತಿಯನುದ್ಧರಿಸಿದನು. ಕೂಡಲಸಂಗಮದೇವರಲ್ಲಿ ಚೆನ್ನಬಸವಣ್ಣನೆನ್ನನಾಗು ಮಾಡಿ ಉಳುಹಿದನಾಗಿ ಇನ್ನು ಮರ್ತ್ಯಲೋಕಕ್ಕೆ ಬಂದೆನಾದರೆ ಚೆನ್ನಬಸವಣ್ಣನ ಶ್ರೀಪಾದದಾಣೆ ! ॥೧೩॥

- -

ಏನೂ ಇಲ್ಲದಿರ್ದ ನಿಷ್ಕಲವಸ್ತುವಿನಲ್ಲಿ ಚಿತ್ತು ಉದಯಿಸಿತ್ತು. ಆ ಚಿತ್ತುವಿಂದ ಮಹಾಲಿಂಗಸ್ವರೂಪವಾಯಿತ್ತಾಗಿ ಅಂತು ಲಿಂಗಕ್ಕಿಂದ ಅನಾದಿ ಚಿತ್ತುವಾದ ಕಾರಣ ಆ ಚಿತ್ಸ್ವರೂಪವೇ

ಶರಣನೆಂಬುದೀಗ, 'ಆದಿ ಲಿಂಗ ಅನಾದಿ ಶರಣ'ನೆಂಬ ಶಬ್ದಕ್ಕರ್ಥ. ಅಂತು ತನ್ನಂತರಂಗವಾಗಿರ್ದ, ತನ್ನ ನಿಜವಪ್ಪ ಚಿತ್ಕಲಾಲಿಂಗವ ಪ್ರತ್ಯಕ್ಷವ ಮಾಡಿ ಕರಸ್ಥಲಕ್ಕೆ ತಂದು, ಆ ಲಿಂಗವ ತನ್ನ ನಿಜವೆಂದು ಭಿನ್ನಭಾವವ ಬಿಡಿಸಿ ಅಂಗವನೆಲ್ಲಾ ಲಿಂಗವ ಮಾಡಿದ ಗುರು ಚೆನ್ನಬಸವಣ್ಣನಿಂದ ಲಿಂಗವಾದೆನಾಗಿ ಇನ್ನು ತನಗೆ ಜನನ ಮರಣವಿಲ್ಲವೆಂದು ಬಸವಣ್ಣ ನುಡಿದನೆಂಬುದೀ ವಚನದ ತಾತ್ಪರ್ಯಾರ್ಥ.

೯೭೫

ಕಂಗಳ ಮುಂದಣ ಶ್ರೀಗುರುಲಿಂಗವು ಹಿಂಗಿದಡೆ ವ್ರತಕ್ಕೆ ಭಂಗವಾದುದೆಂದು ತಂದುಕೊಟ್ಟ ಶ್ರೀಗುರು ಕರಸ್ಥಲದಲ್ಲಿ ಪ್ರಾಣಲಿಂಗವ. ಅದ ಮುಟ್ಟಲೊಡನೆ ತನುಪ್ರಸಾದ ಮನಪ್ರಸಾದ ಧನಪ್ರಸಾದವಾಯಿತ್ತು. ಇಂತು ಸರ್ವಾಂಗಪ್ರಸಾದವಾಯಿತ್ತು ಕೂಡಲಸಂಗಮದೇವಾ ॥೧೪॥

- -

ಪರಬ್ರಹ್ಮವೆ ಗುರುಮೂರ್ತಿಯಾಗಿ ಬಂದು ಶಿಷ್ಯಂಗೆ ಪ್ರತ್ಯಕ್ಷವಾಗಿ ಕಾಣಿಸಿ ತನ್ನ ನಿಜಸ್ವರೂಪವ ಕಾಣದೆ ಮಱೆದಡೆ ಭವಿಯಾಗಿ ಭವಬಂಧನದಲ್ಲಿ ತೊಳಲುವನೆಂದು ಆ ಶಿಷ್ಯನ ನಿಜದ ನಿಲವಪ್ಪ ಪ್ರಾಣಕಳಾಲಿಂಗವ ಕರಸ್ಥಲಕ್ಕೆ ತಂದುಕೊಡಲು ಆ ಲಿಂಗಕಳೆಯನು ಅನನ್ಯಭಾವದಿಂದ ಮುಟ್ಟಿ ಭಾವಿಸಲೊಡನೆ ತನು ಮನ ಇಂದ್ರಿಯ ವಿಷಯಪದಾರ್ಥಂಗಳೆಲ್ಲಾ ಲಿಂಗಸ್ವರೂಪವಾಯಿತ್ತು ಶಿಷ್ಯಂಗೆಂಬುದೀ ವಚನದ ತಾತ್ಪರ್ಯಾರ್ಥ.

೯೭೬

ತೊಂಡಲ ಮುಡಿದುಕೊಂಡು, ತಮ್ಮ ತಮ್ಮ ಗಂಡರ ಹಿಂದುಗೊಂಡು ನಾಡ ಮಿಂಡರ ನೋಡುತ್ತಲಿ, ಇಂದು ನಮ್ಮ ಹುಲಿ ಹೋಯಿತ್ತು ಬನ್ನಿರೇ. ಗಂಡರ ಗಂಡನವ್ವಾ ಕೂಡಲಸಂಗ ಕಂಡರೆ ಮೂಗಕೊಯ್ವಾ. ॥೧೫॥

- -

ಭಕ್ತನೆಂಬ ಮುತ್ತೈದೆಗೆ ಅಂಗದ ಮೇಲಣ ಲಿಂಗವೆ ಗಂಡ, ವಿಭೂತಿ ರುದ್ರಾಕ್ಷಿಯ ಅಲಂಕಾರವೇ ತೊಂಡಲು ಎಂಬುದೀಗ, 'ತೊಂಡಲು ಮುಡಿದುಕೊಂಡು ತಮ್ಮ ತಮ್ಮ ಗಂಡರ ಹಿಂದುಗೊಂಡು' ಎಂಬ ಶಬ್ದಕ್ಕರ್ಥ. ಅಂತು ವಿಭೂತಿ ರುದ್ರಾಕ್ಷಿಯ ಧರಿಸಿಕೊಂಡು ಅಂಗದ ಮೇಲೆ ಲಿಂಗವಿದ್ದು ಅನ್ಯದೈವಭಜನೆಗೆ ಮನವೆಳಸುತ್ತಿಹರು ಎಂಬುದೀಗ, 'ನಾಡ ಮಿಂಡರ ನೋಡುತ್ತಲಿ' ಎಂಬ ಶಬ್ದಕ್ಕರ್ಥ. ಅಂತು ಅಂಗದ ಮೇಲೆ ಲಿಂಗವಿದ್ದು ಅನ್ಯ ದೈವವ ಭಜಿಸುತ್ತ ನಾವು ಭಕ್ತರೆಂದು ತಮಗೆ ಕಾಲವ್ಯಾಘ್ರಭಯ ಹೋಯಿತ್ತೆಂದು ನುಡಿವುತ್ತಿಹರೆಂಬುದೀಗ, 'ಇಂದು ನಮ್ಮ ಹುಲಿ ಹೋಯಿತ್ತು ಬನ್ನಿರೇ' ಎಂಬ ಶಬ್ದಕ್ಕರ್ಥ. ಅಂತು ಲಿಂಗವಿರ್ದು ಅನ್ಯದೈವವ ಭಜಿಸುವರ ಮಾನಹಾನಿಯ ಮಾಡಿ ಕಾಲನ ಕೈಯ ಬಡಿಸುವ ಶಿವನೆಂಬುದೀಗ, 'ಗಂಡರ ಗಂಡನವ್ವಾ ಕೂಡಲಸಂಗ ಕಂಡರೆ ಮೂಗಕೊಯ್ವಾ' ಎಂಬ ಶಬ್ದಕ್ಕರ್ಥ.

೯೭೭

ಎನ್ನ ತನುಮನವೆರಡನೂ ಗುರು ಕರುಣದಿಂದ ಲಿಂಗದಲ್ಲಿ ಏಕವ ಮಾಡಿದನಾಗಿ ಎನ್ನಂತರಂಗ ಬಹಿರಂಗವೆರಡೂ ನಿಮ್ಮವು ನೋಡಾ ! ನಿಮ್ಮಂತರಂಗದೊಳಗೆ ನಿಮ್ಮನೆ ಇಂಬಿಟ್ಟುಕೊಂಬೆ. ನಿಮ್ಮ ಬಹಿರಂಗದೊಳಗೆ ನಿಮ್ಮನೆ ನಿಜವಾಗಿ ಪೂಜಿಸುವೆ ! ನಿಮ್ಮ ಅಱಿವಿಂದ ನಿಮ್ಮನೆ ಅಱಿವೆ ಕಾಣಾ ಕೂಡಲಸಂಗಮದೇವಾ ॥೧೬॥

- -

ಶ್ರೀಗುರು ಶಿಷ್ಯನ ಅಂತರಂಗದಲ್ಲಿ ಅಡಗಿರ್ದ ಚಿತ್ಕಲಾಲಿಂಗವ ತಂದು ಕಾಯಮನಭಾವಂಗಳಿಗೆ ಸಾಹಿತ್ಯವ ಮಾಡಿ ಲಿಂಗಾಂಗಸಂಬಂಧವಾದ ಬಳಿಕ ಭಿನ್ನಭಾವವಿಲ್ಲದೆ ಇಷ್ಟ ಭಕ್ತನ ಅಂಗವೇ ಲಿಂಗದಂಗ. ಭಕ್ತನ ಪ್ರಾಣವೇ ಲಿಂಗಪ್ರಾಣವಾಗಿ ಅಱಿವ ಅಱುಹಿಸಿಕೊಂಬ, ಪೂಜಿಸುವ ಪೂಜಿಸಿಕೊಂಬವೆಲ್ಲಾ ಲಿಂಗವೆಯಾಗಿರ್ದ ಸದ್ಭಕ್ತನೆಂಬುದೀ ವಚನದ ತಾತ್ಪರ್ಯಾರ್ಥ.

೯೭೮

ಅಱಿತುದಯ್ಯ ಅಂಗಗುಣ. ಒಱಿತುದಯ್ಯಾ ಭಕ್ತಿರಸ. ಆವರಿಸಿತ್ತಯ್ಯಾ ಲಿಂಗವಂಗವನು. ಏನೆಂದಱಿಯೆನಯ್ಯಾ ಲೋಕ ಲೌಕಿಕವ. ಲಿಂಗಭ್ರಾಂತನಾದೆನಯ್ಯಾ, ಕೂಡಲಸಂಗಮದೇವಾ ನಿಮ್ಮ ಕರುಣವೆನ್ನನೆಡೆಗೊಂಡಿತ್ತಾಗಿ. ॥೧೭॥

- -

ಸಮ್ಯಗ್‌ಜ್ಞಾನೋದಯದಿಂದ ದೇಹದ ಅಜ್ಞಾನವಳಿದು ಶಿವನಲ್ಲಿ ಅತಿರತಿಯಾದ ಭಕ್ತಿಯೊದಗಲು, ಆ ಭಕ್ತಕಾಯ ಮಮಕಾಯವೆಂದು ಲಿಂಗವು ಆ ಭಕ್ತನ ಸರ್ವಾಂಗವನವಗ್ರಹಿಸಿ, ಜೀವಭಾವವಳಿದು, ಲೌಕಿಕಾಚಾರಧರ್ಮವ ಮಱೆದು, ತಾನೆಲ್ಲಾ ಲಿಂಗವಾಗಿ, ತನ್ನ ಕಾಣುತ್ತಿರ್ಪ ಲಿಂಗಭ್ರಾಂತಿ ನೆಲೆಗೊಂಡು ಲಿಂಗವಾಗಿಪ್ಪನು ಸದ್ಭಕ್ತನು. ಇಂತಪ್ಪ ಸದ್ಭಕ್ತಿ ಶಿವನು ಕೃಪೆಮಾಡಲು ಆಯಿತ್ತೆಂಬುದೀ ವಚನದ ತಾತ್ಪಯಾರ್ಥ.

೯೭೯

ಭಕ್ತನ ಕಾಯವ ಜಂಗಮ ಧರಿಸಿಪ್ಪ ನೋಡಾ ! ಜಂಗಮದ ಪ್ರಾಣವ ಭಕ್ತ ಧರಿಸಿಪ್ಪ ನೋಡಾ ! ಭಕ್ತನಲ್ಲಿಯೂ ಭಕ್ತ ಜಂಗಮವೆರಡೂ ಸನ್ನಿಹಿತ. ಜಂಗಮದಲ್ಲಿಯೂ ಭಕ್ತ ಜಂಗಮವೆರಡೂ ಸನ್ನಿಹಿತ. ಜಂಗಮಕ್ಕಾದರೆಯೂ ಭಕ್ತಿಯೇ ಬೇಕು. ಭಕ್ತಂಗೆಂತೂ ಭಕ್ತಿಸ್ಥಲ ಬೇಕು. ಆ ಭಕ್ತನ ಅರ್ಥಪ್ರಾಣಾಭಿಮಾನಕ್ಕೆ ತಾನೆ ಕರ್ತನೆಂದು ಬಂದ ಜಂಗಮ, ಆ ಭಕ್ತನ ಮನೆಗೆ ಕರ್ತನಾಗಿ ಹೊಕ್ಕು ತನುಮನಧನಂಗಳನೆಲ್ಲವನೊಳಕೊಂಡು, ಆ ಭಕ್ತನ ಪಾವನವ ಮಾಡಬಲ್ಲರೆ ಆತ ಜಂಗಮವೆಂಬೆ. ಆ

ಜಂಗಮದ ಗಳಘರ್ಜನೆಯ ಸೈರಿಸಿ, ಮುಡುಹಿಂಗೆ ಮುನ್ನೂಱು ಪಟ್ಟವ ಕಟ್ಟುತ್ತಿರ್ದರೆ ಆತ ಭಕ್ತನೆಂಬೆ. ತನ್ನ ಮಠಕ್ಕೆ ತಾ ಬಹಡೆ ಮುನಿಸುಂಟೇ? ಕೂಡಲಸಂಗನ ಶರಣರ ಮನೆಯ ಬಾಗಿಲಗಾಹಿ ನಾನಾಗಿ ಗೃಹದ ಕರ್ತರು ಗೃಹಕ್ಕೆ ಬಹಡೆ ಬೇಕೆನ್ನೆ ಬೇಡೆನ್ನೆ. ॥೧೮॥

- -

ಚಿತ್‌ಪರಮಚೈತನ್ಯಮಪ್ಪ ಪ್ರಾಣಸ್ವರೂಪೇ ಜಂಗಮವೆಂಬ ಭಾವ ಘಟಿಸಿ, ತ್ರಿಪದಾರ್ಥಂಗಳಲ್ಲಿ ವಂಚನೆಯಿಲ್ಲದೆ ಜಂಗಮಕ್ಕರ್ಪಿಸಿ, ತನ್ನದೆಂಬ ಕರ್ತೃತ್ವಭಾವವಿಲ್ಲದಿರ್ದಡೆ ಭಕ್ತ. ಅಂತಲ್ಲದೆ ಪದಾರ್ಥದಲ್ಲಿ ವಂಚನೆಯುಳ್ಳವನೇ ಜೀವಿ. ಅಂತು ನಿರ್ವಂಚಕನಾಗಿ ಮಾಡುವ ಭಕ್ತನ ಪದಾರ್ಥಂಗಳು ತನ್ನವೆಂದು ಶಿವಾಚಾರದಲ್ಲಿ ಕೈಕೊಂಡು ಭಕ್ತಿಯ ತೋಱಿ ಮುಕ್ತನ ಮಾಡಬಲ್ಲರೆ ಜಂಗಮ. ಅಂತಲ್ಲದೆ ಪದಾರ್ಥಂಗಳ ಹಿಡಿಯಬಾರದೆಂದು ವೈರಾಗ್ಯ ಮೊದಲಾದ ವ್ರತನೇಮಂಗಳಲ್ಲಿ ಆಚರಿಸುವರೆಲ್ಲಾ ಜಡರೆಂಬುದೀ ವಚನದ ತಾತ್ಪರ್ಯಾರ್ಥ.

೯೮೦

ಮಾಡುವಂತಿರಬೇಕು, ಮಾಡದಂತಿರಬೇಕು, ಮಾಡುವ ಮಾಟದೊಳಗೆ ತಾನಿಲ್ಲದಿರಬೇಕು. ಕೂಡಲಸಂಗಮದೇವರ ನೋಡುತ್ತ ನೋಡುತ್ತ ನೋಡದಂತಿರಬೇಕು ॥೧೯॥

- -

ಗುರುಲಿಂಗಜಂಗಮಕ್ಕೆ ತ್ರಿವಿಧಪದಾರ್ಥಂಗಳ ಕ್ರೀಯಿಂದ ಸಮರ್ಪಿಸುವಲ್ಲಿ ಕರ್ತೃಭೃತ್ಯನಾಗಿ ಮಾಡುತ್ತಿರಬೇಕು ಭಕ್ತ. ಅಂತು ಮಾಡುವ ಭಕ್ತನು ತಾನೆಂಬ ಭಾವವಿಲ್ಲದೆ ಮಾಡುವ ಮಾಡಿಸಿಕೊಂಬವೆರಡೂ ಒಂದೇ ಲಿಂಗವೆಂದು ಕಾಣುತ್ತಿರ್ಪ ಜ್ಞಾನದೃಕ್ಕುಳ್ಳಾತನೇ ಭಕ್ತನೆಂಬುದೀ ವಚನದ ತಾತ್ಪರ್ಯಾರ್ಥ.

೯೮೧

ಭವವಿಲ್ಲದ ಭಕ್ತನ ಪರಿಯ ನೋಡಾ ! ಮನಃಪ್ರಾಣಮುಕ್ತ, ಭವವಿರಹಿತ, ಒಡಲಿಲ್ಲದ ಜಂಗಮದ ಪರಿಯ ನೋಡಾ ! ಸಿಡಿಲು ಮಿಂಚಿನ ಬೆಳಗನೊಂದೆಡೆಯಲ್ಲಿ ಹಿಡಿಯಲುಂಟೇ? ಉಭಯವೊಂದಾದವರ ಕಂಡಡೆ ನೀನೆಂಬೆ ಕೂಡಲಸಂಗಮದೇವಾ ॥೨೦॥

- -

ಫಲಪದ ಮುಕ್ತಿಗಳೇನೂ ಬಯಸದೆ ಗುರುಲಿಂಗಜಂಗಮದಲ್ಲಿ ನಿರ್ವಂಚಕನಾಗಿ ಸತ್ಕ್ರೀಯನುಳ್ಳ ಭಕ್ತಂಗೆ ಭವವಿಲ್ಲ. ಬಯಲೊಳಗೆ ತೋಱಿ ಅಡಗುವ ಮಿಂಚಿನ ಬೆಳಗ ರೂಹಿಸಿ ಕುಱುಹಿಡಬಾರದಂತೆ ತನುವಾಸನೆಯನಳಿದು ಸಮ್ಯಗ್‌ಜ್ಞಾನಸ್ವರೂಪನಾಗಿ ಲಿಂಗವಿಡಿದಾಚರಿಸುತಿರ್ದು ಲಿಂಗದಲ್ಲಿ ಅಡಗುವಾತನೇ ಜಂಗಮ. ಆ ಜಂಗಮವ ರೂಹಿಸಿ ಕುಱುಹಿಡಬಾರದು. ಅಂತಪ್ಪ ಭಕ್ತಿಜ್ಞಾನಯುಕ್ತವಾಗಿ ಆಚರಿಸುವ ಶರಣನೇ ಲಿಂಗವೆಂಬುದೀ ವಚನದ ತಾತ್ಪರ್ಯಾರ್ಥ.

೯೮೨

ಇನ್ನು ಮುಕ್ತಿಯೆಂದು ಮನದಲ್ಲಿ ಹೊಳೆದು ಕಾಮಿಸುವನ್ನಕ್ಕರ ಪ್ರಸಾದಲಿಂಗಸಾಹಿತ್ಯವಾದುದಿಲ್ಲ. ಇನ್ನು ಪರವೆಂದು ಮನದಲ್ಲಿ ಹೊಳೆದು ಕಾಮಿಸುವನ್ನಕ್ಕರ ಜಂಗಮಲಿಂಗಸಾಹಿತ್ಯವಾದುದಿಲ್ಲ. [ಇನ್ನು] ಶಿವಲಿಂಗ ಕರದಲ್ಲಿರ್ದಂತೆ ಇನ್ನೊಂದು ಲಿಂಗವುಂಟೆಂದು ಮನದಲ್ಲಿ ಹೊಳೆದು ಕಾಮಿಸುವನ್ನಕ್ಕರ ಶಿವಲಿಂಗಸಾಹಿತ್ಯವಾದುದಿಲ್ಲ. ಇನ್ನು ವಿಶೇಷತತ್ತ್ವ ಉಂಟೆಂದು ಮನದಲ್ಲಿ ಹೊಳೆದು ಕಾಮಿಸುವನ್ನಕ್ಕರ ಗುರುಲಿಂಗಸಾಹಿತ್ಯವಾದುದಿಲ್ಲ. ಇಂತು ಗುರುಲಿಂಗ ಶಿವಲಿಂಗ ಜಂಗಮಲಿಂಗ ಪ್ರಸಾದಲಿಂಗ ಈ ಲಿಂಗಚತುರ್ವಿಧವೂ ಏಕೀಕರಿಸಿದ ಮಹಾಮಹಿಮಂಗೆ ಇನ್ನು ಕಾಮಿಸಲಿಲ್ಲ, ಕಲ್ಪಿಸಲಿಲ್ಲ, ಭಾವಿಸಲಿಲ್ಲ, ಚಿಂತಿಸಲಿಲ್ಲ. ಆತ ನಿಶ್ಚಿಂತ, ಪರಮಸುಖಿ, ಪರಿಣಾಮಿ. ಆತನಿರ್ದುದೆ ಕೈಲಾಸ, ಆತನ ಸರ್ವಾಂಗವೆಲ್ಲಾ ಲಿಂಗಮಯವಯ್ಯ ಕೂಡಲಸಂಗಮ ದೇವಯ್ಯ. ॥೨೧॥

- -

ಶ್ರೀಗುರು ಉಪದೇಶಿದ ಇಷ್ಟಲಿಂಗವು ಸರ್ವಾಂಗವನಿಂಬುಗೊಂಡು, ಪ್ರಾಣಮನ ಇಂದ್ರಿಯಂಗಳೆಲ್ಲಾ ಲಿಂಗಸ್ವರೂಪಾಗಿ ಭಿನ್ನವಿಲ್ಲದೆ ಲಿಂಗವೆಯಾಗಿರ್ಪನಾಗಿ ಶರಣಂಗೆ ಚತುರ್ವಿಧಫಲಪದಂಗಳ ಬಯಕೆಯಿಲ್ಲ, ಆತನಿರ್ದುದೆ ಕೈಲಾಸೆ, ಆತನೆಂತಿರ್ದುದೆಲ್ಲಾ ಪರಮಪದ. ಇಂತಪ್ಪ ಲಿಂಗಾಂಗಸಂಬಂಧದ ಭೇದವನಱಿಯದೆ ಅಂಗದ ಮೇಲಿ ಲಿಂಗವಿರ್ದು ಭಿನ್ನವಿಟ್ಟು ಪೂಜಿಸಿ ಫಲಪದಂಗಳ ಬಯಸುವ ಜೀವರ ಅಂಗದಲ್ಲಿ ಲಿಂಗಕಳೆಯಿರದೆಂಬುದೀ ವಚನದ ತಾತ್ಪರ್ಯಾರ್ಥ.

೯೮೩

ಆಹ್ವಾನವಿಲ್ಲ ಪ್ರಾಣಲಿಂಗವಾಗಿ. ವಿಸರ್ಜನವಿಲ್ಲ ಲಿಂಗ ನೆಲೆಗೊಂಡಿಪ್ಪುದಾಗಿ. ಇದು ಕಾರಣ ಆಹ್ವಾನ ವಿಸರ್ಜನವಿಲ್ಲ. ಶರಣನ ಪರಿ ಬೇಱೆ ಅಂಗಸಂಗವೇ ಲಿಂಗಸಂಗ, ಲಿಂಗಸಂಗವೇ ಮನ, ಕೂಡಲಸಂಗನ ಶರಣ ಸುಯಿಧಾನಿ. ॥೨೨॥

- -

ಗುರುಕರುಣದಿಂದ ಲಿಂಗಾಂಗಸಂಬಂಧಿಯಾದ ಶರಣನ ತನುಮನಪ್ರಾಣಂಗಳೆಲ್ಲಾ ಲಿಂಗವಾದವು. ಅಂತು ಲಿಂಗವಾದ ಶರಣ ಲಿಂಗವು ತಾನೆಯೆಂಬ ಎಚ್ಚಱಿಗುಂದದಿಪ್ಪನು. ಅಂತಪ್ಪ ಶರಣಂಗೆ ಲಿಂಗವ ಬೇಱಿಟ್ಟು ಕರೆಯಲಿಲ್ಲ, ಕಳುಹಲಿಲ್ಲವೆಂಬುದೀ ವಚನದ ತಾತ್ಪರ್ಯಾರ್ಥ.

೯೮೪

ಆಹ್ವಾನಿಸಿ ಕರೆವಲ್ಲಿ ಎಲ್ಲಿರ್ದನೋ, ಈರೇಳುಲೋಕ ಹದಿನಾಲ್ಕು ಭುವನವನೊಳಕೊಂಡಿಪ್ಪ ದಿವ್ಯವಸ್ತು? ಮತ್ತೆ ವಿಸರ್ಜಿಸಿ ಬಿಡುವಾಗ ಎಲ್ಲಿ ಅಡಗಿರ್ದನೋ, ಮುಳ್ಳೂಱಿ ತೆಱಹಿಲ್ಲದಿಪ್ಪ ಅಖಂಡವಸ್ತು? ಬಱಿಯ ಮಾತಿನ ಬಳಕೆಯ ತೂತಜ್ಞಾನವ ಬಿಟ್ಟು, ನೆಟ್ಟನೆ ತನ್ನ ಕರಸ್ಥಲದೊಳಗೆ ಇರುತ್ತಿಪ್ಪ ಇಷ್ಟಲಿಂಗವ ದೃಷ್ಟಿಸಿ ನೋಡಲು, ಅಲ್ಲಿ ತನ್ನ ಮನಕ್ಕೆ ಮನ ಸಂಧಾನವಾದ ದಿವ್ಯ ನಿಶ್ಚಯವೊದಗಿ, ಆ ದಿವ್ಯನಿಶ್ಚಯದಿಂದ ಕುಳವಡಗಿ ಅದ್ವೈತವಪ್ಪುದು. ಇದುಕಾರಣ ನಮ್ಮ ಕೂಡಲಸಂಗನ ಶರಣರು ಆಹ್ವಾನ ವಿಸರ್ಜನವೆಂಬವುಭಯ ಜಡತೆಯ ಬಿಟ್ಟು, ತಮ್ಮ ತಮ್ಮ ಕರಸ್ಥಲದಲ್ಲಿ ನಿಶ್ಚಯಿಸಿದರಾಗಿ ಸ್ವಯಲಿಂಗವಾದರು. ॥೨೩॥

- -

ಲಿಂಗವು ಪೂರ್ಣವೆಂದಱಿಯದೆ, ಆಹ್ವಾನ ವಿಸರ್ಜನವೆಂದು ಕರೆದು ಕಳುಹುವ, ಹಿಡಿದು ಹಿಂಗುವ ಖಂಡಿತಭಾವವ ಬಿಟ್ಟು, ಅಖಂಡಪರಂಜ್ಯೋತಿ ಲಿಂಗವ ಕರಸ್ಥಲದಲ್ಲಿ ಧರಿಸಿ, ಅಭಿನ್ನಜ್ಞಾನದಿಂದ ಆಲೋಕಿಸಿ ತನ್ನ ನಿಜವ ಇಷ್ಟಲಿಂಗವೆಂದಱಿದು, ನಿಶ್ಚಯದಿಂದ ಭಿನ್ನಭಾವಜಡತೆಯನಳಿದು, ಲಿಂಗವಾಗಿ ಲಿಂಗವ ಭಜಿಸುತ್ತ ದ್ವೈತವಲ್ಲದಿಪ್ಪರು ಶರಣರೆಂಬುದೀ ವಚನದ ತಾತ್ಪರ್ಯಾರ್ಥ.

೯೮೫

ಕರ್ಣದ ಸೂತಕ ಹೋಯಿತ್ತು ಸದ್ಗುರುವಿನ ವಚನದಿಂದ. ಕಂಗಳ ಸೂತಕ ಹೋಯಿತ್ತು ಸದ್ಭಕ್ತರ ಕಂಡೆನಾಗಿ. ಕಾಯದ ಸೂತಕ ಹೋಯಿತ್ತು ನಿಮ್ಮ ಚರಣವ ಮುಟ್ಟಿದೆನಾಗಿ. ಬಾಯ ಸೂತಕ ಹೋಯಿತ್ತು ನಿಮ್ಮೊಕ್ಕುದ ಕೊಂಡೆನಾಗಿ. ನಾನಾಸೂತಕ ಹೋಯಿತ್ತು ನಿಮ್ಮ ಶರಣರ ಅನುಭಾವವ ಕೇಳಿದೆನಾಗಿ. ಕೂಡಲಸಂಗಮದೇವಯ್ಯ ಎನ್ನ ಮನದ ಸೂತಕ ಹೋಯಿತ್ತು ನೀವಲ್ಲದನ್ಯವಿಲ್ಲೆಂದಱಿದೆನಾಗಿ. ॥೨೪॥

- -

ಪಂಚಭೌತಿಕಂಗಳೇ ತನು ಮನ ಧನೇಂದ್ರಿಯಂಗಳಾದುವು. ಆ ತನು ಮನ ಇಂದ್ರಿಯಂಗಳ ವಾಸನೆಯ ಗುರುಲಿಂಗಜಂಗಮದ ದರುಶನ ಸ್ಪರ್ಶನ ಅವರ ಪ್ರಸಾದ ಅವರ ಅನುಭಾವದಱಿವು ಮೊದಲಾದವಱಿಂದ ನೆಲೆಮಾಡಿ ಕಳೆದು, ಶರಣ ತಾನೆಲ್ಲಾ ಲಿಂಗವೆಂದಱಿದು ಮನದ ಸಂಕಲ್ಪ ಸಂಶಯ ಸೂತಕವ ಕಳೆದಿಪ್ಪನು ಶರಣನೆಂಬುದೀ ವಚನದ ತಾತ್ಪರ್ಯಾರ್ಥ.

೯೮೬

ಅರ್ಪಿಸುವ ಸುಖ ತಪ್ಪದೆ ಇಂಬುಗೊಂಡಿತ್ತಾಗಿ ಅಲ್ಲಿಯೇ ಅರ್ಪಿತವಾಯಿತ್ತಯ್ಯಾ! ಅಂಗವೆಂಬ ಶಂಕೆ ತಾನೆತ್ತ ಹೋಯಿತ್ತೆಂದಱಿಯೆ ! ಕಾಯಸುಖವೇ ಲಿಂಗಸುಖಕ್ಕೀಡಾಯಿತ್ತು ! ಅಂತಪ್ಪ ಅರ್ಪಿತ ದಷ್ಟ ತಲೆಗೇಱಿದಲ್ಲಿ ನೀ ಮುಂತಾಗಿರ್ದೆ ಕೂಡಲ ಸಂಗಮದೇವಾ. ॥೨೫॥

- -

ಜೀವಾತ್ಮನೆಂಬಂಗವ ಮಹಾಘನಲಿಂಗಕ್ಕೆ ಸಂಬಂಧವ ಮಾಡಿ ಅರ್ಪಿಸಿ, ಲಿಂಗಮುಖವನಱಿದು ಹಿಂಗದೆಯಿಪ್ಪ ಶರಣನ ದೇಹೇಂದ್ರಿಯ ಸುಖಂಗಳೆಲ್ಲಾ ಲಿಂಗಾರ್ಪಿತವಾದವೆಂಬುದೀಗ, 'ಅರ್ಪಿಸುವ ಸುಖ ತಪ್ಪದೆ ಇಂಬುಗೊಂಡಿತ್ತಾಗಿ ಅಲ್ಲಿಯೆ ಅರ್ಪಿತವಾಯಿತ್ತಯ್ಯಾ' ಎಂಬ ಶಬ್ದಕ್ಕರ್ಥ. ಅಂತು ಜೀವಾತ್ಮನೆಂಬಂಗವ ಲಿಂಗಾರ್ಪಿತವ ಮಾಡಿದ ಶರಣಂಗೆ ಶಿವಭಾವ ಘಟಿಸಿತ್ತಾಗಿ ಜೀವಭಾವವಿಲ್ಲದೆ ಹೋಯಿತ್ತೆಂಬುದೀಗ, 'ಅಂಗವೆಂಬ ಶಂಕೆ ತಾನೆತ್ತ ಹೋಯಿತ್ತೆಂದಱಿಯೆ'ನೆಂಬ ಶಬ್ದಕ್ಕರ್ಥ. ಅಂತು ಜೀವಾತ್ಮನು ತಾ ಮೊದಲಾಗಿ ಕಾಯದ ಸುಖಂಗಳನೆಲ್ಲವ ಲಿಂಗಕ್ಕರ್ಪಿಸಿದ. ಕಾರಣ ಶರಣಂಗೆ ಲಿಂಗಸುಖ ದೊರಕಿತ್ತೆಂಬುದೀಗ, 'ಕಾಯಸುಖವೇ ಲಿಂಗಸುಖಕ್ಕೀಡಾಯಿತ್ತು' ಎಂಬ ಶಬ್ದಕ್ಕರ್ಥ. ತನುಸುಖಂಗಳನೆಲ್ಲವ ಲಿಂಗಕ್ಕರ್ಪಿಸಲು ಶರಣನು ಅರ್ಪಿಸಿಕೊಂಡ ಲಿಂಗವು ಆ ಶರಣನ ಸರ್ವಾಂಗವನವಗ್ರಹಿಸಿತ್ತೆಂಬುದೀಗ 'ಅಂತಪ್ಪ ಅರ್ಪಿತ ದಷ್ಟ'ವೆಂಬ ಶಬ್ದಕ್ಕರ್ಥ. ಅಂತು ಶರಣನ ಸರ್ವಾಂಗ ಲಿಂಗವಾಗಿ ಭಿನ್ನವಿಲ್ಲದಿದ್ದುದ ಅಭಿನ್ನಜ್ಞಾನಮುಖದಿಂದಲಱಿದು ಲಿಂಗವೆಯಾಗಿರ್ದ ಶರಣನೆಂಬುದೀಗ 'ದಷ್ಟ ತಲೆಗೇಱಿದಲ್ಲಿ ನೀ ಮುಂತಾಗಿರ್ದೆ'ನೆಂಬ ಶಬ್ದಕ್ಕರ್ಥ.

೯೮೭

ಲೋಹ ಪರುಷವ ಮುಟ್ಟುವುದಲ್ಲದೆ ಪರುಷ ಲೋಹವ ಮುಟ್ಟುವುದೇ ? ಅಂಗವಿಡಿದಂಗೆ ಲಿಂಗವುಂಟಲ್ಲದೆ ಲಿಂಗವಿಡಿದಂಗೆ ಅಂಗವುಂಟೇ? ಅಣೋರಣೀಯಾನ್ ಮಹತೋ ಮಹೀಯಾನ್, ಹಿರಿದಿಂಗೆ ಹಿರಿದು, ಕಿಱಿದಿಂಗೆ ಕಿಱಿದು, ವಾಙ್ಮನಕ್ಕಗೋಚರ ಕೂಡಲಸಂಗಮದೇವ, ಸ್ವರೂಪುಪ್ರಸಾದ ನಿರೂಪುಪ್ರಸಾದದಿಂದ ನಿಂದುದು ! ॥೨೬॥

- -

ಕಬ್ಬುನ ಪರುಷವ ಮುಟ್ಟಿ ಸುವರ್ಣವಹುದು ತಥ್ಯ. ಪರುಷ ಕಬ್ಬುನವ ಮುಟ್ಟಿ ಕಬ್ಬುನವಾದಿತ್ತೆಂಬುದು ತಥ್ಯವಲ್ಲದ ಹಾಂಗೆ ಎಂದೆಂದೂ ಮಲಮಾಯಾದಿದೇಹಸಂಬಂಧಿಯಪ್ಪ ಜೀವ ತಾನೆಂದು ಲಿಂಗವ ಭಿನ್ನವಿಟ್ಟು ಪೂಜಿಸಿ ಫಲಪದವ ಪಡೆದು ಬದುಕಿಹೆನೆಂಬಾತಂಗೆ ಲಿಂಗವು ಭಿನ್ನವಾಗಿಪ್ಪುದೆಂಬುದೀಗ, 'ಅಂಗವಿಡಿದಂಗೆ ಲಿಂಗವುಂಟಲ್ಲದೆ' ಎಂಬ ಶಬ್ದಕ್ಕರ್ಥ. ಅಂತು ಲಿಂಗವ ಭಿನ್ನವಿಡದೇ ಲಿಂಗದ ತದಂಶವಾದ ಸಾಕಾರಲಿಂಗವು ತಾನೆಂದಱಿದು ತನ್ನ ನಿಜಸ್ವರೂಪವನೆ ಇಷ್ಟಲಿಂಗವ ಮಾಡಿ ಕರದಲ್ಲಿ ಪಿಡಿದು ಭಿನ್ನಭಾವವಿಲ್ಲದೆ ಪೂಜಿಸುತ್ತಿಪ್ಪ ಶರಣನ ಸಂಗವಿಡಿದು ದೇಹ ಲಿಂಗವಪ್ಪುದಲ್ಲದೆ ಶರಣ ದೇಹಸಂಗವಿಡಿದು ದೇಹಿಯಾಗನೆಂಬುದೀಗ, 'ಲಿಂಗವಿಡಿದಂಗೆ ಅಂಗವುಂಟೇ' ಎಂಬ ಶಬ್ದಕ್ಕರ್ಥ. ಅಂತು ಮಹಾಘನವಸ್ತು ಸಕಲತತ್ತ್ವಂಗಳನೊಳಕೊಂಡಿರ್ದು ಮಹವೆನಿಸಿಪ್ಪುದು ತಾನೆ, ಅಣುರೂಪವಾದ ಆತ್ಮರೊಳು ಅಣುರೂಪವಾಗಿ ಸಾಕಾರವನೈದಿಪ್ಪ ಶರಣನು ತಾನೆಯಾಗಿಪ್ಪನೆಂಬುದೀಗ, 'ಅಣೋರಣೀಯಾನ್ ಮಹತೋ ಮಹೀಯಾನ್, ಹಿರಿದಿಂಗೆ ಹಿರಿದು, ಕಿಱಿದಿಂಗೆ ಕಿಱಿದು' ಎಂಬ ಶಬ್ದಕ್ಕರ್ಥ. ನಿರಾಕಾರಪ್ರಸಾದವೆಂದರೆ ಲಿಂಗ. ಸಾಕಾರಪ್ರಸಾದವೆಂದಡೆ ಶರಣ. ಅಂತು ವಾಙ್ಮನಕ್ಕೆ ಬಾರದ ನಿರಾಕಾರ ಲಿಂಗದ ತದಂಶವೇ ಸಾಕಾರವಾಗಿ ಶರಣನೆನಿಸಿದನೆಂಬುದೀಗ, 'ವಾಙ್ಮನಕ್ಕ

ಗೋಚರ ಕೂಡಲಸಂಗಮದೇವ ಸ್ವರೂಪುಪ್ರಸಾದ ನಿರೂಪುಪ್ರಸಾದದಿಂದ ನಿಂದುದು ಎಂಬ ಶಬ್ದಕ್ಕರ್ಥ.

೯೮೮

ಕಂಗಳ ಪೂಜೆ ಲಿಂಗಕ್ಕರ್ಪಿತ. ಮನ ಮುಟ್ಟಿದಾರೋಗಣೆಯೆಂಬುದೇನೋ, ಸಂಕಲ್ಪವಿರಹಿತ ನಿಮ್ಮ ಶರಣಂಗೆ ? ಆಗಮ ವಿರಹಿತ ಶರಣನಲ್ಲದೇನೋ ? ಶರಣಂಗೆ ಸೀಮೆಯೆಂಬುದೇನೋ ? ಕಾಯದ ಕೈಯಲ್ಲಿ ಲಿಂಗಾರ್ಪಿತ, ಅದು ಕಿಲ್ಬಿಷ ಕೂಡಲ ಸಂಗಮದೇವಾ ! ॥೨೭॥

- -

ಒಳಹೊಱಗೆ ತೆಱಹಿಲ್ಲದ ಅಖಂಡಲಿಂಗವು ತನಗನನ್ಯವಾಗಿದ್ದುದ ಅಭಿನ್ನಜ್ಞಾನದೃಕ್ಕಿಂದ ಕಂಡು, ಭಿನ್ನವಿಡದೆ ಮಾಡುವ ಪೂಜೆಯೆಲ್ಲಾ ಲಿಂಗಕ್ಕರ್ಪಿತವಹುದೆಂಬುದೀಗ, 'ಕಂಗಳ ಪೂಜೆ ಲಿಂಗಕ್ಕರ್ಪಿತವೆಂಬ ಶಬ್ದಕ್ಕರ್ಥ. ಅಂತು ಅಭಿನ್ನಜ್ಞಾನದಿಂದ ಲಿಂಗವ ಭಿನ್ನವಿಡದೆ ಮಾಡುವ ಮಾಡಿಸಿಕೊಂಬವೆರಡೂ ಲಿಂಗವೇಯೆಂದು ಭಕ್ತಿಮಾಡುವ ಶರಣನಲ್ಲಿ ಲಿಂಗವು ಭಿನ್ನವಿಲ್ಲದಿಪ್ಪನಾಗಿ ಆ ಶರಣ ತನ್ನ ಸ್ವಯಿಚ್ಛೆಯಿಂದ ಎಂತು ಮಾಡುವುದೆಲ್ಲಾ ಲಿಂಗಕ್ಕೆ ಸತ್ಕ್ರಿಯಾಪೂಜೆ. ಅಂತಪ್ಪ ಶರಣನೆಲ್ಲಾ ಲಿಂಗವು ತಾನೆಯಾಗಿ ಆ ಶರಣನ ಅಂಗೇಂದ್ರಿಯಂಗಳೆಲ್ಲಾ ಲಿಂಗವೆಯಾಗಿಪ್ಪನಾಗಿ ಆ ಶರಣ ನೋಡಿದ ಮುಟ್ಟಿದ ಪದಾರ್ಥಂಗಳೆಲ್ಲಾ ಲಿಂಗಾರ್ಪಿತವಾದವಾಗಿ ಪ್ರಸಾದವಾಯಿತ್ತು. ಅಂತು ಪ್ರಸಾದವಾದ ಪದಾರ್ಥಂಗಳನೇ ಇಷ್ಟಲಿಂಗಕ್ಕೆ ಅರ್ಪಿಸಿ, ಅಂತು ಅರ್ಪಿತವಾದ ಪ್ರಸಾದವ ಭೋಗಿಸುತ್ತಿಹುದಾಗಿ ಶರಣಂಗೆ ತನು ಮುಟ್ಟಿದ ಮನ ಮುಟ್ಟಿದ ಪದಾರ್ಥ ಅರ್ಪಿತವಾಗದು, ಆಯಿತ್ತೆಂಬ ಸಂಕಲ್ಪವಿಲ್ಲ. ಉಳಿದ ವ್ರತ ನಿಯಮಂಗಳ ಸೀಮಾಸಂಗಿಲ್ಲ ಶರಣನೆಂಬುದೀಗ, 'ಮನ ಮುಟ್ಟಿದ ಆರೋಗಣೆಯೆಂಬುದೇನೋ ? ಸಂಕಲ್ಪವಿರಹಿತ ನಿಮ್ಮ ಶರಣಂಗೆ ಸೀಮೆಯೆಂಬುದೇನೋ?' ಎಂಬ ಶಬ್ದಕ್ಕರ್ಥ. ಶಿವ ಜೀವರೆಂದೆಂದೂ ಭಿನ್ನರೆಂದು ಹೇಳುವ ಆಗಮಮಾರ್ಗದ ಕರ್ಮಕಾಂಡವ ಹೊದ್ದುವನಲ್ಲ ಶರಣನೆಂಬುದೀಗ, 'ಆಗಮವಿರಹಿತ ಶರಣನಲ್ಲದೇನೋ' ಎಂಬ ಶಬ್ದಕ್ಕರ್ಥ. ಅಂತಪ್ಪ ಶರಣನ ಕ್ರಿಯಾಚಾರಿತ್ರವನಱಿಯದೆ ಲಿಂಗವ ಭಿನ್ನವಿಟ್ಟು ಜೀವ ತಾನೆಂದು, ತನ್ನ ತನು ಮನ ಮುಟ್ಟಿದ ಉಚ್ಛಿಷ್ಟ ದ್ರವ್ಯಂಗಳ ತಂದು ಲಿಂಗಕ್ಕರ್ಪಿತವ ಮಾಡುವರೆಲ್ಲರೂ ಭವಹೇತುಗಳಾಗಿ ಕ್ರಿಮಿಕೀಟಕ ಜಾತಿಗಳಾಗಿ ತೊಳಲಿ ಬಳಲುತ್ತಿಹರೆಂಬುದೀಗ, 'ಕಾಯದ ಕೈಯಲ್ಲಿ ಲಿಂಗಾರ್ಪಿತವದು ಕಿಲ್ಬಿಷ'ವೆಂಬ ಶಬ್ದಕ್ಕರ್ಥ.

೯೮೯

ತನು ಮುಟ್ಟಿ ಮನ ಮುಟ್ಟದೆ ದೂರವಾದರಯ್ಯಾ, ಬೆಲೆವೆಣ್ಣಿನಂತೆ. ಸೂಳೆ ತನು ಮುಟ್ಟಿ ಅಪ್ಪುವಳಲ್ಲದೆ ಮನ ಮುಟ್ಟಿ ಅಪ್ಪಳಾಗಿ, ಆಚಾರವಱಿಯದ ಅರೆಮರುಳುಗಳು ಸುಖವನೆತ್ತಬಲ್ಲರು ಕೂಡಲಸಂಗಮದೇವಾ ? ॥೨೮॥

- -

ಅನಿತ್ಯವಾದ ಮಾಯಾದೇಹಭೋಗಸುಖಂಗಳ ಬಯಕೆಯನಳಿದು ಅಂಗ ಪ್ರಾಣಂಗಳ ಲಿಂಗಕ್ಕರ್ಪಿಸಿ, ಲಿಂಗಸುಖವ ಪಡೆದು, ಅಂಗ ಪ್ರಾಣಂಗಳೆಲ್ಲಾ ಲಿಂಗವೆಯಾಗಿಪ್ಪ ಪದವನಱಿಯದೆ, ದೇಹಭೋಗಕ್ಕಾಗಿ ಲಿಂಗವ ಪೂಜಿಸಿ, ಫಲಪದವ ಪಡೆವ ಅಜ್ಞಾನಿಗಳೆಲ್ಲರೂ ವೇಶ್ಯಾಂಗನೆಯರಂತೆಂಬುದೀ ವಚನದ ತಾತ್ಪರ್ಯಾರ್ಥ.

೯೯೦

ಅಱಿವಿನ ತೃಪ್ತಿಗೆ ಅನುಭಾವವೇ ಆಶ್ರಯ. ಲಿಂಗಾನುಭಾವದಿಂದ ನಿಮ್ಮ ಕಂಡೆನ್ನ ಮಱಿದೆ ಕೂಡಲಸಂಗಮದೇವಾ. ॥೨೯॥

- -

ಜ್ಞಾನೋದಯವಾದ ಶರಣನ ಅಱಿವಿನ ಆಪ್ಯಾಯನವೆಲ್ಲಾ ಶಿವಾಪೇಕ್ಷೆಯಾಗಿಪ್ಪುದು. ಆ ಶಿವಾಪೇಕ್ಷೆಯಾಗಿಪ್ಪ ಅಱಿವಿಗೆ ಅನನ್ಯವಾಗಿಪ್ಪ ಲಿಂಗದ ಅನುವನಱಿದು, ಕ್ರೀಯಿಂದ ಲಿಂಗಾಂಗಸಂಯೋಗಾನುಭಾವಿಯಾಗಿ ಭಿನ್ನವಳಿದಲ್ಲಿ, ಅಱಿವಿನ ಆಪ್ಯಾಯನವಡಗಿ, ತಾನೆಲ್ಲಾ ಲಿಂಗಸ್ವರೂಪಿಯಾಗಿ ತನ್ನ ಕಾಣುತ್ತಿರ್ದನಾಗಿ ಲಿಂಗಕ್ಕೆ ಭಿನ್ನ ನಾನೆಂಬುದ ಮಱೆದು ಲಿಂಗವೆಯಾಗಿರ್ದ ಶರಣನೆಂಬುದೀ ವಚನದ ತಾತ್ಪರ್ಯಾರ್ಥ.

೯೯೧

ಶರಣ ಲಿಂಗದಲ್ಲಿ ಕೂಡಲು ಮಹಾಪಥವಯ್ಯಾ ! ದೃಢದೃಢಾಂಗ ಮಧ್ಯಸ್ಥನಾಗಿ ಕೂಡಲಸಂಗಮದೇವರ ನಾಮವತಿಸುಖವೆಂದುದು! ॥೩೦॥

- -

ಶರಣ ಲಿಂಗದಲ್ಲಿ ಸಮರಸೈಕ್ಯವನೆಯ್ದುವ ಜ್ಞಾನಕ್ರಿಯಾಮಾರ್ಗವ ಹೇಳುವಡೆ ಅತಿ ಘನತೆಯನುಳ್ಳುದು. ಅದನಾರೂ ಅಱಿಯರೆಂಬುದೀಗ, 'ಶರಣ ಲಿಂಗದಲ್ಲಿ ಕೂಡಲು ಮಹಾಪಥವಯ್ಯಾ'ಯೆಂಬ ಶಬ್ದಕ್ಕರ್ಥ. ಅಂತು ಶರಣ ಲಿಂಗವ ಕೂಡುವ ಭಕ್ತಿಮಾರ್ಗವೆಂತೆಂದಡೆ: ಸ್ಥಿರವಾದ ಲಿಂಗಕ್ಕೆ ಅಸ್ಥಿರವಾದ ದೇಹೇಂದ್ರಿಯ ಸುಖಂಗಳನೆಲ್ಲವನರ್ಪಿಸುತ್ತ ಶರಣನು ಲಿಂಗದೇಹ ಮಧ್ಯದಲ್ಲಿ ಭಕ್ತಿಸ್ವರೂಪನಾಗಿರ್ದನೆಂಬುದೀಗ, 'ದೃಢದೃಢಾಂಗ ಮಧ್ಯಸ್ಥನಾಗಿ'ಯೆಂಬ ಶಬ್ದಕ್ಕರ್ಥ. ಅಂತು ಶರಣ ಲಿಂಗಕ್ಕೆ ದೇಹವನರ್ಪಿಸಿ, ಭಕ್ತಿಜ್ಞಾನದಿಂದ ಲಿಂಗವಾಗಿ ಶಿವೋಹಂ ಶಿವೋಹಂ ಎಂಬ ಶಿವನ ಅದ್ವಯನಾಮಸ್ಮರಣೆವಿಡಿದು ಶಿವಸುಖವ ಪಡೆದ ಶರಣನೆಂಬುದೀಗ, 'ಮಧ್ಯಸ್ಥನಾಗಿ ಕೂಡಲಸಂಗಮದೇವನ ನಾಮವತಿಸುಖವೆಂದುದು' ಎಂಬ ಶಬ್ದಕ್ಕರ್ಥ.

೯೯೨

ಅಱಿವಿನ ಅಪ್ಯಾಯನಕ್ಕೆ ಅನುಭಾವವೇ ತೃಪ್ತಿ. ಅಱಿವು ನೆಱೆ ಕೂಡಿ ಆಕಾರವೆ ಪ್ರಾಣವಾಗಿ ವಿಶ್ರಮಿಸಿದ ಬಳಿಕ ಶ್ರೀಗುರು ಕೃಪೆಯ ಮಾಡಿದ ಪ್ರಾಣಲಿಂಗದ ಘನವೆಂತೆಂದೊಡೆ : ಮತ್ಸ್ಯ ನುಂಗಿದ ಮಾಣಿಕ್ಯದಂತೆ, ಮುತ್ತು ನುಂಗಿದ ನೀರಿನಂತೆ, ಕಣ್ಣಾಲಿ ನುಂಗಿದ ನೋಟದಂತೆ. ಬಯಲನೊಳಕೊಂಡ ಬ್ರಹ್ಮಾಂಡದೊಳಗಿಪ್ಪ ಸ್ವಯಾನುಭಾವಿಗಳ ಅನುಭಾವವ ತೋಱಿ ಬದುಕಿಸಾ ಕೂಡಲಸಂಗಮದೇವಾ ! ॥೩೧॥

- -

ಸಮ್ಯಗ್‌ಜ್ಞಾನೋದಯವಾದ ಶರಣನಱಿವಿಂಗೆ ಲಿಂಗದ ಬಯಕೆ ಘನವಾಗಿಹುದೆಂಬುದೀಗ 'ಅಱಿವಿನ ಆಪ್ಯಾಯನ'ವೆಂಬ ಶಬ್ದಕ್ಕರ್ಥ. ಅಂತು ಶಿವಾಪೇಕ್ಷನಾಗಿರ್ದ ಶರಣಂಗೆ ಗುರುಕೃಪೆಯಿಂದ ಆತ್ಮಾಂತರ್ಗತವಾಗಿರ್ದ ಪರಮಚಿತ್ಕಲಾಲಿಂಗವು ಬಹಿಷ್ಕರಿಸಿ ಕರಸ್ಥಲಕ್ಕೆ ಬಂದು, ಸರ್ವಾಂಗವನೊಳಕೊಂಡು ಶರಣನ ಅಱಿವಿಂಗೆ ಪ್ರತ್ಯಕ್ಷವಾಗಿ, ಲಿಂಗಾಂಗಸಂಗದನುಭವ ನೆಲೆಗೊಂಡು, ಶರಣನ ಅಱಿವಿನ ಆಪ್ಯಾಯನ ಅಡಗಿತ್ತೆಂಬುದೀಗ, 'ಅಱಿವಿನ ಆಪ್ಯಾಯನಕ್ಕೆ ಅನುಭಾವವೇ ತೃಪ್ತಿ'ಯೆಂಬ ಶಬ್ದಕ್ಕರ್ಥ. ಅಂತು ಲಿಂಗಾಂಗಸಂಗದನುಭವದಲ್ಲಿ ಅಱಿವಿಂಗೆ ತೃಪ್ತಿಯಾಗಿ, ಭಿನ್ನಭಾವವಳಿದು, ಅಭಿನ್ನ ಜ್ಞಾನಿಯಾದ ಶರಣನ ಪ್ರಾಣಾಂಗವೆಲ್ಲಾ ಲಿಂಗಸ್ವರೂಪೆಯಾಗಿಪ್ಪುದೆಂಬುದೀಗ 'ಅಱಿವು'ನೆಱೆ ಕೂಡಿ ಆಕಾರವೇ ಪ್ರಾಣವಾಗಿ' ಎಂಬ ಶಬ್ದಕ್ಕರ್ಥ. ಅಂತು ದೇಹವಿರ್ದಂತೆ ಪ್ರಾಣಲಿಂಗವಾಗಿರ್ದ ಶರಣನ ಮಹತ್ವವೆಂತಿರ್ಪುದೆಂದೊಡೆ : ಮತ್ಸ್ಯನುಂಗಿದ ಮಾಣಿಕ್ಯದ ಪ್ರಭೆ ಆ ಮತ್ಸ್ಯನಂಗದೊಳಗೆಲ್ಲಾ ತುಂಬಿ ಸರ್ವೇಂದ್ರಿಯಂಗಳಲ್ಲಿ ಪ್ರಕಾಶಿಸುತ್ತಿರ್ಪಂತೆ, ಶರಣನ ಪ್ರಾಣಲಿಂಗದ ಚಿತ್‌ಪ್ರಭೆ ಶರಣನಂಗದೊಳಗೆ ಪರಿಪೂರ್ಣವಾಗಿ ಸರ್ವೇಂದ್ರಿಯಂಗಳಲ್ಲಿ ಪ್ರಕಾಶಿಸುತ್ತಿಹುದೆಂಬುದೀಗ, 'ಶ್ರೀಗುರು ಕೃಪೆಮಾಡಿದ ಪ್ರಾಣಲಿಂಗದ ಘನವೆಂತೆಂದೊಡೆ : 'ಮತ್ಸ್ಯನುಂಗಿದ ಮಾಣಿಕ್ಯದಂತೆ' ಎಂಬ ಶಬ್ದಕ್ಕರ್ಥ. ಮತ್ತೆಂತೆಂದೊಡೆ : ಉದಕವೆ ಬಲಿದು ಮುತ್ತಾಗಿ ಮರಳಿ ಉದಕವಾಗದಂತೆ, ವಾಯುಪ್ರಾಣವೇ ಲಿಂಗಪ್ರಾಣವಾದ ಶರಣನು ಮರಳಿ ವಾಯುಪ್ರಾಣಿಯಾಗನೆಂಬುದೀಗ, 'ಮುತ್ತು ನುಂಗಿದ ನೀರಿನಂತೆ' ಎಂಬ ಶಬ್ದಕ್ಕರ್ಥ. ಮತ್ತೆಂತೆಂದೊಡೆ : ಕಣ್ಣಾಲಿಯೊಳಗಿಪ್ಪ ದಿವ್ಯತೇಜವು ಸರ್ವಜಗತ್ತಿನ ಸ್ವರೂಪುಗಳ ಕುರೂಪುಗಳ ಕಾಣುತ್ತಿಹುದು. ತನ್ನ ರೂಪನಾರಿಗೆಯೂ ಕಾಣಿಸಿಕೊಳ್ಳದೆ ಇಹುದು. ಅದು ಹೇಂಗೆ ಹಾಂಗೆ ಶರಣ ತನ್ನ ಚಿತ್‌ಪ್ರಭಾದೃಕ್ಕಿಂದ ಜಗದಾತ್ಮರ ಅಂತರಂಗದ ಅಱಿವು ಮಱವೆಯ ಕಾಣುತ್ತಿಹನಲ್ಲದೆ ಶರಣನಂತರಂಗವೆಲ್ಲಾ ಚಿತ್ಪ್ರಭಾಲಿಂಗವೆಯಾಗಿಪ್ಪುದ ಜಗದಾತ್ಮರು ಅಱಿಯರೆಂಬುದೀಗ, 'ಕಣ್ಣಾಲಿ ನುಂಗಿದ ನೋಟದಂತೆ' ಎಂಬ ಶಬ್ದಕ್ಕರ್ಥ. ಪ್ರಪಂಚು ಬ್ರಹ್ಮಾಂಡಂಗಳೆಲ್ಲಾ ಹುಸಿತೋಱಿಕೆ. ಆ ಹುಸಿತೋಱಿಕೆಯೆಂಬುದೇ 'ಬಯಲು' ಎಂಬ ಶಬ್ದಕ್ಕರ್ಥ. ಅಂತು ಹುಸಿತೋಱಿಕೆಯೆಂಬ ಬಯಲನೊಳಕೊಂಡಿಪ್ಪುದು ಚಿದ್‌ಬ್ರಹ್ಮಾಂಡವಾದ ಕಾರಣ 'ಬಯಲನೊಳಕೊಂಡ ಬ್ರಹ್ಮಾಂಡ'ವೆಂಬ ಶಬ್ದಕ್ಕರ್ಥ. ಅಂತಪ್ಪ ಚಿದ್‌ಬ್ರಹ್ಮಾಂಡವೇ ಶರಣನ ಸ್ವಯಜ್ಞಾನಪ್ರಕಾಶವಾಗಿ ಶರಣನ ಸರ್ವಾಂಗವನೊಳಕೊಂಡು ಬೆಳಗುತ್ತಿಪ್ಪ ಕಾರಣ 'ಬ್ರಹ್ಮಾಂಡದೊಳಗಿಪ್ಪ'ನೆಂಬ ಶಬ್ದಕ್ಕರ್ಥ. ಅಂತು ಶರಣ ತನ್ನ ಸ್ವಯಜ್ಞಾನದಿಂದ ತನ್ನ ನಿಜವೇ ಲಿಂಗವೆಂದಱಿದು ಲಿಂಗಾಂಗಸಂಗದನುಭಾವವಳವಟ್ಟು ಲಿಂಗವೆಯಾಗಿಪ್ಪರು ಶರಣರೆಂಬುದೀಗ, 'ಸ್ವಯಾನುಭಾವಿಗಳೆ'ಂಬ ಶಬ್ದಕ್ಕರ್ಥ. ಅಂತು ಸ್ವಯಾನುಭಾವಿಗಳಾಗಿಪ್ಪ ಶರಣರ ಅನುಭಾವವನಱಿವುದು ಶಿವಕೃಪೆಯಾದಾತಂಗಲ್ಲದಿಲ್ಲವೆಂಬುದೀಗ, 'ಸ್ವಯಾನುಭಾವಿಗಳ ಅನುಭಾವವ ತೋಱಿ ಬದುಕಿಸಾ ಕೂಡಲಸಂಗಮದೇವಾ' ಎಂಬ ಶಬ್ದಕ್ಕರ್ಥ.

೯೯೩

ಆಚಾರವನಾಚಾರವಾಯಿತ್ತು. ಸೀಮೆ ನಿಸ್ಸೀಮೆಯಾಯಿತ್ತು. ಪ್ರಾಣಸಂಚ ತಪ್ಪಿ ಲಿಂಗಸಂಚವಾಯಿತ್ತು. ಎಲ್ಲಿ ಶಬ್ದವಲ್ಲಿಯೆ ಲಿಂಗಸ್ವಾಯತವಾಯಿತ್ತು. ಎಲ್ಲಿ ಸೋಂಕಲ್ಲಿಯೆ ಲಿಂಗಸ್ವಾಯತವಾಯಿತ್ತು. ಎಲ್ಲಿ ರೂಪಲ್ಲಿಯೇ ಲಿಂಗಸ್ವಾಯತವಾಯಿತ್ತು. ಎಲ್ಲಿ ರುಚಿ ಅಲ್ಲಿಯೇ ಲಿಂಗಸ್ವಾಯತವಾಯಿತ್ತು. ಎಲ್ಲಿ ಗಂಧ ಅಲ್ಲಿಯೇ ಲಿಂಗಸ್ವಾಯತವಾಯಿತ್ತು. ಕೂಡಲ ಸಂಗಮದೇವರ ಕರುಣರಸಾಬ್ಧಿ ಕಡೆಗೋಡಿವರಿಯಿತ್ತಯ್ಯ ಎನ್ನ ಮೇಲೆ ! ॥೩೨॥

- -

ಲೌಕಿಕಾಚಾರದ ಸೀಮೆ ಸಂಬಂಧವೆಲ್ಲವೂ ಅಳಿದು, ಲಿಂಗಾಚಾರವಳವಟ್ಟು, ಅಂಗ ಪ್ರಾಣ ಇಂದ್ರಿಯಂಗಳೆಲ್ಲಾ ಲಿಂಗವೆಯಾದ ಕಾರಣ, ಕೇಳಿದ ಶಬ್ದ, ಮುಟ್ಟಿದ ಸ್ಪರ್ಶನ, ನೋಡಿದ ರೂಪು, ಸವಿದ ರುಚಿ, ವಾಸಿಸಿದ ಗಂಧ ಮೊದಲಾದವೆಲ್ಲಾ ಲಿಂಗವೆಯಾದುವು ಗುರುಕೃಪೆಯಾದ ಶರಣಂಗೆಂಬುದೀ ವಚನದ ತಾತ್ಪರ್ಯಾರ್ಥ.

೯೯೪

ಅನುಭಾವವಿಲ್ಲದ ಭಕ್ತಿ ಅನುವಿಂಗೆ ಬಾರದು. ಅನುಭಾವವಿಲ್ಲದ ಲಿಂಗ ಸಮರಸಸುಖವನೀಯದು. ಅನುಭಾವಿಲ್ಲದ ಪ್ರಸಾದ ಪರಿಣಾಮವ ಕೊಡದು. ಅನುಭಾವವಿಲ್ಲದೆ ಅಱಿಯಬಾರದು. ತನ್ನಲ್ಲಿ ತಾ ಸನ್ನಿಹಿತವುಳ್ಳಡೆ ಶಿವಶರಣರ ಸಂಗವೇತಕ್ಕೆ ಎನಲುಂಟೇ ? ಕೂಡಲಸಂಗಮದೇವಯ್ಯಾ, ನಿಮ್ಮ ಅನುಭಾವವ ಮಾತಿನ ಮಥನವೆನಬಹುದೇ ? ॥೩೩॥

- -

ತನ್ನ ನಿಜವೇ ಲಿಂಗವೆಂದಱಿದು. ಲಿಂಗಭಕ್ತಿಯ ಮಾಡಿ ಲಿಂಗವೆಯಾಗಿರ್ದನೆಂಬಾತಂಗೆ ಲಿಂಗಾನುಭಾವಿಗಳ ಅನುಭಾವದ ಕೇಳಿಕೆಯ ಬಿಡದೆ ಕೇಳುತ್ತಿರ್ದಲ್ಲದೆ ಲಿಂಗದ ನಿಜಸುಖವನನುಭವಿಸುವ ಅನುವಿನ ಭಕ್ತಿಜ್ಞಾನಸಾಧ್ಯವಲ್ಲವೆಂಬುದೀ ವಚನದ ತಾತ್ಪರ್ಯಾರ್ಥ.

೯೯೫

ಬಸುಱಿ ಬಾಯಾಗಿ, ಬಾಯೆ ಬಸುಱಾಗಿಪ್ಪುದ ತೊಡೆದ. ಕಣ್ಣೆ ತಲೆಯಾಗಿ ತಲೆಯೇ ಕಣ್ಣಾಗಿ ಇರಿಸಿದ. ಕಾಲೆ ಕೈಯಾಗಿ ಕೈಯೆ ಕಾಲಾಗಿ ನಡೆಸಿದ. ನೆಳಲ ಸುಟ್ಟು ಸೀರೆಯನುಡುಗೊಱಿಯನೆನಗೆ ಕೊಟ್ಟನು. ಮಥನವಿಲ್ಲದ ಸಂಗಸುಖವನೆನಗೆ ತೋಱಿದನು. ಕೂಡಲಸಂಗಮದೇವಾ, ಪ್ರಭುವಿನ ಶ್ರೀಪಾದಕ್ಕೆ ಶರಣೆನುತಿರ್ದನು. ॥೩೪॥

- -

ಹೊಟ್ಟೆಗೆ ಬಾಯಿಗೆ ಭೇದವಿಲ್ಲದೆ ಅನ್ನವನುಂಡುಂಡು ಒಡಲನೆ ಹೊರೆವುತ್ತಿಹ ಜೀವಭಾವವನಳಿದು ಲಿಂಗಪ್ರಾಣಿಯೆನಿಸಿ ಪ್ರಸಾದಕಾಯವ ಮಾಡಿದ ಶ್ರೀಗುರುವೆಂಬುದೀಗ, 'ಬಸುಱ ಬಾಯಾಗಿ, ಬಾಯೆ ಬಸುಱಾಗಿಪ್ಪುದ ತೊಡೆದ'ನೆಂಬ ಶಬ್ದಕ್ಕರ್ಥ. ಕಣ್ಣೆಂದರೆ ಜ್ಞಾನದೃಕ್ಕು, ತಲೆಯೆಂದರೆ ಜ್ಞೇಯಸ್ವರೂಪಮಪ್ಪ ಲಿಂಗವು. ಅಂತು ಶರಣನ ಜ್ಞಾನದೃಕ್ಕೆಲ್ಲಾ ಮಹಾಘನಲಿಂಗವೆಯಾಗಿ, ಆ ಮಹಾಘನಲಿಂಗವೆಲ್ಲಾ ಜ್ಞಾನದೃಕ್ಕೆಯಾಗಿಪ್ಪ ಅವಿರಳಲಿಂಗಾಂಗಸಂಬಂಧವ ಮಾಡಿದ ಶ್ರೀಗುರುವೆಂಬುದೀಗ, 'ಕಣ್ಣೆ ತಲೆಯಾಗಿ, ತಲೆಯ ಕಣ್ಣಾಗಿ ಇರಿಸಿದ'ನೆಂಬ ಶಬ್ದಕ್ಕರ್ಥ. ಕಾಲೆಂದರೆ ಕ್ರಿಯಾಚಾರ, ಕೈಯೆಂದರೆ ಸದ್ಭಾವ ಹಸ್ತ, ಅಂತಪ್ಪ ಕ್ರಿಯೆಯೆಲ್ಲಾ ಸದ್ಭಾವನೆಯಾಗಿ, ಸದ್ಭಾವವೆಲ್ಲಾ ಕ್ರಿಯೆಯಾಗಿ ಭಿನ್ನವಿಲ್ಲದೆ ಆಚರಿಸುವಂತೆ ಮಾಡಿದ ಶ್ರೀಗುರುವೆಂಬುದೀಗ, 'ಕಾಲೆ ಕೈಯಾಗಿ, ಕೈಯೆ ಕಾಲಾಗಿ ನಡೆಸಿದ'ನೆಂಬ ಶಬ್ದಕ್ಕರ್ಥ. ನೆಳಲೆಂದರೆ ಮನಸ್ಸು. ಅಂತಪ್ಪ ಮನದ ಅಜ್ಞಾನಗುಣವ ದಹಿಸಿದುದೇ ಜ್ಞಾನಾಗ್ನಿ, ಅಂತಪ್ಪ ಜ್ಞಾನಪ್ರಕಾಶವನೆ ಶರಣನ ಸರ್ವಾಂಗಕ್ಕೆ ಅಂಬರವ ಮಾಡಿ ಉಡಿಸಿದ ಶ್ರೀಗುರುವೆಂಬುದೀಗ, 'ನೆಳಲ ಸುಟ್ಟು ಸೀರೆಯನುಡುಗೊಱೆಯನೆನಗೆ ಕೊಟ್ಟ'ನೆಂಬ ಶಬ್ದಕ್ಕರ್ಥ. ಅಂತು ಭಿನ್ನಸಂಗದಿಂದ ಮಥನವಿಲ್ಲದೆ ತಾನೆ ಅಭಿನ್ನನಾಗಿಪ್ಪ ಮಹಾಘನ ಲಿಂಗದ ಸಂಗಸುಖವನಱಹಿ ತೋಱದನು ಶ್ರೀಗುರುವೆಂದು ಗುರುವಿನ ಪಾದಕ್ಕೆ ನಮಸ್ಕಾರವ ಮಾಡುತ್ತಿರ್ದ ಶರಣನೆಂಬುದೀಗ, 'ಮಥನವಿಲ್ಲದ ಸಂಗಸುಖವನೆನಗೆ ತೋಱದ ಪ್ರಭುವಿನ ಪಾದಕ್ಕೆ ಶರಣೆನುತಿರ್ದೆನು' ಎಂಬ ಶಬ್ದಕ್ಕರ್ಥ.

೯೯೬

ಅಱವು ಮಱವೆಯೊಳಡಗಿ, ಮಱವೆ ಅಱವಿನೊಳಡಗಿ ತೆಱಹಿಲ್ಲದಿದ್ದೆನೆಂಬ ಹಮ್ಮಿದೇನೋ ? ಹಮ್ಮಿದೇನೋ? ಬ್ರಹ್ಮಾದ್ ಬ್ರಹ್ಮವನುಂಗಿ ಮತ್ತಾ ಪರಬ್ರಹ್ಮವು ನಾನೆಂದೆಂಬ ಹಮ್ಮಿದೇನೋ ? ಹಮ್ಮಿದೇನೋ? ಆದಿಶೂನ್ಯವು ಶೂನ್ಯ, ಮಧ್ಯಶೂನ್ಯವು ಶೂನ್ಯ, ಅಂತ್ಯಶೂನ್ಯವು ಶೂನ್ಯವಾದ ಬಳಿಕ ಅಲ್ಲಿಂದತ್ತ ನಿಂದ ನಿಲವನಾರು ಬಲ್ಲರು ಹೇಳಾ ! ಬಯಲು ಚಿತ್ರಿಸಿದ ಚಿತ್ರವನಾ ಬಯಲೆ ಅಱವಂತೆ ಕೂಡಲಸಂಗಮದೇವಾ, ನಿಮ್ಮ ಶರಣರ ನಿಲವು. ॥೩೫॥

- -

ಶಿವಾಂಶಿಕನಾದ ಆತ್ಮನ ನಿಜದಱವು ಮಱವೆಗೊಳಗಾಗಿ ದೇಹಸಂಬಂಧಿಯಾದನಾತ್ಮನು ಶಿವಾಜ್ಞೆಯಿಂದಲೆಂಬುದೀಗ, 'ಅಱವು ಮಱವೆಯೊಳಡಗಿ'ಯೆಂಬ ಶಬ್ದಕ್ಕರ್ಥ. ಅಂತಪ್ಪ ಆತ್ಮಂಗೆ ಶಿವಕೃಪೆಯಿಂದ ಸಮ್ಯಗ್‌ಜ್ಞಾನೋದಯವಾಗಲು ಆ ಮಱವೆಯಳಿದು ಹೋಯಿತ್ತೆಂಬುದೀಗ 'ಮಱವೆ ಅಱವಿನೊಳಡಗಿ'ಯೆಂಬ ಶಬ್ದಕ್ಕರ್ಥ. ಅಂತು ಕೇವಲ ಜ್ಞಾನಸ್ವರೂಪ ತಾನೆಂದಱದು ಚಿದಹಂ ಎನಲು, ಚಿದಹಂಭಾವವೆ ಜನನಕ್ಕೆ ಕಾರಣವೆಂದಱದು, ಆ ಚಿದಹಂಭಾವವಳಿದು ತೆಱಹಿಲ್ಲದ ನಿಜ ಚಿತ್‌ಸ್ವರೂಪನೆಯಾಗಿರ್ದ ಶರಣನೆಂಬುದೀಗ, 'ತೆಱಹಿಲ್ಲದಿರ್ದೆನೆಂಬ ಹಮ್ಮಿದೇನೋ? ಹಮ್ಮಿದೇನೋ?' ಎಂಬ ಶಬ್ದಕ್ಕರ್ಥ. ಎಂದೆಂದೂ ದೇಹೇಂದ್ರಿಯಂಗಳು ಬ್ರಹ್ಮಕ್ಕಿಲ್ಲವಾಗಿ, ಅಂತಪ್ಪ ಬ್ರಹ್ಮಾಂಶಿಕನಾದ

ಆತ್ಮಂಗೆಯೂ ಅನಾದಿಯಲ್ಲಿ ದೇಹೇಂದ್ರಿಯಂಗಳಿಲ್ಲವೆಂಬುದೀಗ, 'ಆದಿಶೂನ್ಯವು ಶೂನ್ಯ'ವೆಂಬ ಶಬ್ದಕ್ಕರ್ಥ. ಅಂತು ಅನಾದಿಯಲ್ಲಿ ಆತ್ಮಂಗೆ ದೇಹೇಂದ್ರಿಯಾದಿಗಳೇನೂ ಇಲ್ಲದೆ ಇದ್ದಲ್ಲಿ ಶಿವಾಜ್ಞೆಯಿಂದ ಆತ್ಮನ ಮಧ್ಯದಲ್ಲಿ ದೇಹಸಂಬಂಧಿಯಾದಲ್ಲಿ ಸಮ್ಯಗ್‌ಜ್ಞಾನೋದಯದಿಂದ ಆ ದೇಹೇಂದ್ರಿಯಂಗಳೆಲ್ಲವ ಲಿಂಗಾರ್ಪಿತವ ಮಾಡಿ, ದೇಹೇಂದ್ರಿಯಾದಿಗಳು ತನಗಿಲ್ಲದೆಯಿರ್ದ ಶರಣನೆಂಬುದೀಗ, 'ಮಧ್ಯಶೂನ್ಯವು ಶೂನ್ಯ'ವೆಂಬ ಶಬ್ದಕ್ಕರ್ಥ. ಅಂತು ಮಧ್ಯದಲ್ಲಿ ತೋಱಿದ ಅಂಗೇಂದ್ರಿಯಂಗಳೆಲ್ಲವ ಲಿಂಗಾರ್ಪಿತವ ಮಾಡಿ, ಅಂಗೇಂದ್ರಿಯಂಗಳು ತನಗಿಲ್ಲದೆ ತಾನು ಲಿಂಗಸ್ವರೂಪನಾಗಿರ್ದನಾಗಿ, ಶರಣಂಗೆ ಮುಂದೆ ಪರಿಭವವಿಲ್ಲದೆ ಹೋಯಿತ್ತೆಂಬುದೀಗ, 'ಅಂತ್ಯಶೂನ್ಯವು ಶೂನ್ಯ'ವೆಂಬ ಶಬ್ದಕ್ಕರ್ಥ. ಅಂತು ಆದಿಮಧ್ಯಾವಸಾನಂಗಳಲ್ಲಿಯೂ ಲಿಂಗವಾದ ಶರಣನ ನಿಲವನುಪಮಿಸಿ ಹೇಳಬಾರದೆಂಬುದೀಗ, 'ಅಲ್ಲಿಂದತ್ತ ನಿಂದ ನಿಲವನಾರು ಬಲ್ಲರು ಹೇಳಾ?' ಎಂಬ ಶಬ್ದಕ್ಕರ್ಥ. ಬಯಲೆಂದಡೆ ಲಿಂಗವು. ಅಂತಪ್ಪ ಲಿಂಗವು ತನ್ನ ಲೀಲಾವಿಲಾಸದಿಂದ ನಾನಾ ಚಿತ್ರವಿಚಿತ್ರವಾದ ಮಾಯಾದೇಹ ದೇಹಿಗಳ ಸುಖದುಃಖ ಬಂಧಮೋಕ್ಷಂಗಳ ಕಲ್ಪಿಸಿ, ಅವರ ದುಃಖಾವಸ್ಥೆಗಳು ತನ್ನ ಹೊದ್ದದೆ, ತಾನವನಱಿಯದೆ, ಸದಾನಂದಸುಖಿಯಾಗಿಹನು ಲಿಂಗವು. ಅದೇಕಯ್ಯಾಯೆಂದಡೆ : ಲಿಂಗಕ್ಕೆ ಉತ್ಪತ್ಯಸ್ಥಿತಿಗಳ ಹೊದ್ದಿಯೂ ಹೊದ್ದದೆ ಲಿಂಗವೆಯಾಗಿಪ್ಪರು ಶರಣರೆಂಬುದೀಗ, 'ಬಯಲು ಚಿತ್ರಿಸಿದ ಚಿತ್ರವನಾ ಬಯಲೇ ಅಱಿವಂತೆ ಕೂಡಲಸಂಗಮದೇವಾ, ನಿಮ್ಮ ಶರಣರ ನಿಲವು'ಯೆಂಬ ಶಬ್ದಕ್ಕರ್ಥ.

೯೯೭

ಎಮ್ಮವರಿಗೆ ಸಾವಿಲ್ಲ, ಎಮ್ಮವರು ಸಾವನಱಿಯರು, ಸಾವೆಂಬುದು ಸ್ವಯವಲ್ಲ. ಲಿಂಗದಲ್ಲಿ ಉದಯವಾದ ಲಿಂಗೈಕ್ಯಂಗೆ ಆ ಲಿಂಗದಲ್ಲಿಯಲ್ಲದೆ ಬೇಱೆ ಮತ್ತೊಂದೆಡೆಯುಂಟೇ, ಕೂಡಲ ಸಂಗಮದೇವಾ? ॥೩೬॥

- -

ಮಹಾಘನಲಿಂಗದ ಚಿತ್‌ಕಲಾಂಶವೇ ಶರಣರೂಪಾಗಿ ಲಿಂಗಾಂಗಸಂಯೋಗಿಯಾಗಿ ಚರಿಸಿ, ಲಿಂಗದೊಳೈಕ್ಯವನೆಯ್ದಿ ನಿತ್ಯರಾಗಿಪ್ಪರಾಗಿ ಶರಣರು ಸಾವು ಹುಟ್ಟನಱಿಯರು ಭವಜೀವಿಗಳಂತೆ ಎಂಬುದೀ ವಚನದ ತಾತ್ಪರ್ಯಾರ್ಥ.

೯೯೮

ಉರಿಯೊಳಗಣ ಕರ್ಪೂರಕ್ಕೆ ಕರಿಯುಂಟೇ ಅಯ್ಯಾ ? ಬಯಲ ಮರೀಚಿಯ ಜಲಕ್ಕೆ ಕೆಸಱುಂಟೇ ಅಯ್ಯಾ ? ವಾಯುವನಪ್ಪಿದ ಪರಿಮಳಕ್ಕೆ ನಿರ್ಮಾಲ್ಯ ಉಂಟೇ ಅಯ್ಯಾ ? ನೀವು ನೆಱೆಯೊಲಿದ ಬಳಿಕ ಎನಗೆ ಭವವುಂಟೇ? ಕೂಡಲಸಂಗಮದೇವಾ, ನಿಮ್ಮ ಚರಣಕಮಲದೊಳಗೆ ಇಂಬಿಟ್ಟುಕೊಳ್ಳಯ್ಯಾ !॥೩೭॥

- -

ಲಿಂಗವು ನೆಱೆಯೊಲಿದು ಅಂಗವನಪ್ಪಿ ಲಿಂಗಾಂಗಸಂಯೋಗಿಯಾದ ಶರಣಂಗೆ ಜನನ ಮರಣವಿಲ್ಲವಾಗಿ ಆ ಶರಣ ತಾನು ಲಿಂಗವೆಂಬ ಅಱಿವಿನ ತೋಱಿಕೆಯ ಭಿನ್ನವಳಿದು ಲಿಂಗೈಕ್ಯನಪ್ಪ ಕಾಲದಲ್ಲಿ ಶರಣನು ಸಮರಸಭಕ್ತಿಯಿಂದ ಬೇಡಿದ ಬೇಡಿಕೆಯೆಂಬುದೀ ವಚನದ ತಾತ್ಪರ್ಯಾರ್ಥ.

೯೯೯

ಸಮಸುಖಸಂಧಾನವಿಲ್ಲದ ಸಂಗ ನೋಡಾ ! ತಾಗು ನಿರೋಧವಿಲ್ಲದ ಸಂಗ ನೋಡಾ ! ಆವಂಗೆ ಆವಂಗೆ ಅನುಭಾವವಿಲ್ಲದ ಸಂಗ ನೋಡಾ ! ಕೂಡಲಸಂಗಮದೇವಾ, ಲಿಂಗೈಕ್ಯಸಂಗ ನೋಡಾ !! ॥೩೮॥

- -

ಅಂಗಕ್ಕೆ ಲಿಂಗವ ಭಿನ್ನವಿಟ್ಟು ಸಂಗವ ಮಾಡಿ ಸುಖಿಸಿಹೆನೆಂದಡೆ ಲಿಂಗಸಂಗವಿಲ್ಲವೆಂಬುದೀಗ, 'ಸಮಸುಖಸಂಧಾನವಿಲ್ಲದ ಸಂಗ ನೋಡಾ' ಎಂಬ ಶಬ್ದಕ್ಕರ್ಥ. ಅಂತು ಭಿನ್ನವಿಟ್ಟು ಕೂಡಿ ಅಗಲಿ ಸುಖದುಃಖವ ಕೊಡುವ ಸಂಗವಲ್ಲ ಲಿಂಗಸಂಗವೆಂಬುದೀಗ, 'ತಾಗು ನಿರೋಧವಿಲ್ಲದ ಸಂಗ ನೋಡಾ' ಎಂಬ ಶಬ್ದಕ್ಕರ್ಥ. ಅಂತು ಲಿಂಗಾಂಗಸಂಗದನುಭವವ ಲಿಂಗ ಶರಣರಲ್ಲದೆ ಮತ್ತಾರೂ ಅಱಿಯರೆಂಬುದೀಗ, 'ಆವಂಗೆ ಆವಂಗೆ ಅನುಭವವಿಲ್ಲದ ಸಂಗ ನೋಡಾ' ಎಂಬ ಶಬ್ದಕ್ಕರ್ಥ. ಅಂತಪ್ಪ ಮಹಾಘನಲಿಂಗವು ತನಗೆ ಅನನ್ಯಪರಿಪೂರ್ಣವೆಂದಱಿದು ಲಿಂಗವನನ್ಯವಿಡದೆ ಲಿಂಗಾಂಗಸಂಗಿಯಾಗಿ ಭೇದವಿಲ್ಲದೆ ಲಿಂಗೈಕ್ಯನಾಗಿಪ್ಪುದೇ ಲಿಂಗಾಂಗಸಂಗವೆಂಬುದೀಗ, 'ಕೂಡಲಸಂಗಮದೇವಾ, ಲಿಂಗೈಕ್ಯಸಂಗ ನೋಡಾ' ಎಂಬ ಶಬ್ದಕ್ಕರ್ಥ.

೧೦೦೦

ಅಱಿಯಲಿಲ್ಲದ ಅಱಿವು ಅವಗ್ರಹಿಸಿತ್ತಾಗಿ ಅಱಿಯಲಿಲ್ಲ. ಮಱೆಯಲಿಲ್ಲ ನಿಜವು ನಿಂದಿತ್ತಾಗಿ, ನಿರ್ನಾಮವಾಯಿತ್ತಾಗಿ ನಿಷ್ಪತಿಯಾಯಿತ್ತು! ಅಗಮ್ಯದಲ್ಲಿ ಗಮನಗೆಟ್ಟಿತ್ತು! ನಿಂದಲ್ಲಿ ನಿರಾಳವಾಯಿತ್ತು! ಕೂಡಲಸಂಗಮದೇವರಲ್ಲಿ ಶಬ್ದ ಮುಗ್ಧವಾಯಿತ್ತು ॥೩೯॥

ಶ್ರುತಿಮತಿಗಳಱಿವಿಂಗೆ ಅಗೋಚರವಾಗಿಪ್ಪ ಅಖಂಡ ಚಿಚ್ಚೈತನ್ಯಲಿಂಗವು ಶರಣನನವಗ್ರಹಿಸಿ ಭೇದವಳಿದು ಶರಣನೆಲ್ಲಾ ಲಿಂಗವಾದಲ್ಲಿ ಲಿಂಗವ ಭಿನ್ನವಿಟ್ಟು ಅಱಿಯಲಿಲ್ಲ. ಅಂತು ಲಿಂಗವ ಭಿನ್ನವಿಟ್ಟು ಅಱಿವ ಭಿನ್ನಜ್ಞಾನದ ಮಱವೆಯಿಲ್ಲದೆ ಹೋಗಿ ಅಖಂಡಜ್ಞಾನಸ್ವರೂಪನಪ್ಪ ನಿಜವಸ್ತುವೆಯಾಗಿ ನಿಂದ ಶರಣನ ನಿಲವಿಂಗೆ ನಾಮರೂಪುಗಳಿಲ್ಲ. ತಾನೆ ಬ್ರಹ್ಮವೆಂಬ ಅಱಿವಿನ ತೋಱಿಕೆಯ ಹಮ್ಮಿಲ್ಲದೆ ನಿಷ್ಪತ್ತಿಯನೈದಿ, ನಿರ್ಗಮನಿಯಾಗಿನಿಂದು, ನಿಃಕಲವಸ್ತುವೆಯಾಗಿ ನಿಶ್ಶಬ್ದಬ್ರಹ್ಮವೆಯಾಗಿರ್ದ ಶರಣನೆಂಬುದೀ ವಚನದ ತಾತ್ಪರ್ಯಾರ್ಥ.

೧೦೦೧

ಮಾಡಿ ಮಾಡಿಸಿಕೊಂಬವೆರಡಱ ನಿಲುಕಡೆ ಒಂದೇ. ಗುರುವೊಂದೇ, ಲಿಂಗವೊಂದೇ, ಜಂಗಮವೊಂದೇ, ಪ್ರಸಾದವೊಂದೇ. ಒಂದಾದಲ್ಲಿ ಎರಡಾಗಿ ಮಾಡುವ ಭಕ್ತ ನೀನೇ ಕೂಡಲಸಂಗಮದೇವಾ. ॥೪೦॥

- -

ಒಂದೆಯಾಗಿರ್ದ ಪರಬ್ರಹ್ಮವು ತಾನೆ ತನ್ನ ಸ್ವಲೀಲಾನಂದದಿಂದ ಗುರುಲಿಂಗ ಜಂಗಮ ಪ್ರಸಾದವೆಂಬ ಚತುರ್ವಿಧವಾಗಿ, ಆ ಚತುರ್ವಿಧಕ್ಕೆ ಭಕ್ತಿಯ ಮಾಡುವ ಭಕ್ತ ತಾನೆಯಾಗಿ, ತನ್ನ ತಾನರ್ಚಿಸಿಕೊಳ್ಳುತ್ತಿಹ ಶಿವ ತಾನೆ ಎಂಬುದೀ ವಚನದ ತಾತ್ಪರ್ಯಾರ್ಥ.

೧೦೦೨

ಲಿಂಗಗಂಭೀರ ನಿಸ್ಸಂಗಿಯ ಸಂಗವ ನಾನೇನೆಂಬೆನಯ್ಯಾ ! ಪರಮಾರ್ಥದಿಂದ ಗಮಿಸುವ ಗಮನವ ನಾನೇನೆಂಬೆನಯ್ಯಾ ! ಕೂಡಲಸಂಗನ ಶರಣರು ಕಾಯವ ನೆವದಿಂದಲರ್ಪಿಸುವ ಬೆಡಗ ನಾನೇನೆಂಬೆನಯ್ಯಾ! ॥೪೧॥

- -

ಅಖಂಡಪರಿಪೂರ್ಣ ಚಿತ್‌ಪರಮಲಿಂಗವು ಮಾಯಾದೇಹಸಂಸಾರಸಂಗವಿಲ್ಲದೆಯಿರ್ದು, ತನ್ನ ತಾನರ್ಚಿಸಿಕೊಂಬ ಲೀಲಾವಿಲಾಸದಿಂದ ಶರಣ ರೂಪಾಗಿ ದೇಹಸಂಗವಿಡಿದಿರ್ದು. ಆ ದೇಹವಾಸನೆಯ ಹೊದ್ದದೆ ಇಪ್ಪ ಶರಣರ ಪರಿ ಆಶ್ಚರ್ಯವೆಂಬುದೀಗ, 'ಲಿಂಗಗಂಭೀರ ನಿಸ್ಸಂಗಿಯ ಸಂಗವ ನಾನೇನೆಂಬೆನಯ್ಯಾ' ಎಂಬ ಶಬ್ದಕ್ಕರ್ಥ. ಅಂತು ಚಿತ್ಪರಮಲಿಂಗವು ತಾನೇ ಶರಣನಾಗಿ ತನ್ನ ತಾನರ್ಚಿಸಿಕೊಳ್ಳುತ್ತಿಹನು. ಅಂತು ತನ್ನ ತಾನರ್ಚಿಸಿಕೊಂಬ ಶಿವಜ್ಞಾನಾಚಾರವನುಪಮಿಸಬಾರದೆಂಬುದೀಗ, 'ಪರಮಾರ್ಥದಿಂದ ಗಮಿಸುವ ಗಮನವ ನಾನೇನೆಂಬೆನಯ್ಯಾ' ಎಂಬ ಶಬ್ದಕ್ಕರ್ಥ. ಅಂತು ಚಿತ್ಪರಮಲಿಂಗವು ತಾನೇ ಶರಣನಾಗಿ, ತನ್ನ ತಾನರ್ಚಿಸಿಕೊಂಬ ಭಕ್ತಿಯ ನೆವದಿಂದ ದೇಹಸುಖಂಗಳನರ್ಪಿಸಿಕೊಂಡು ನಿರ್ಲೇಪಿಯಾಗಿಪ್ಪ ಶರಣನ ಬೆಡಗು ಆಶ್ಚರ್ಯವೆಂಬುದೀಗ, 'ಕೂಡಲಸಂಗನ ಶರಣರು ಕಾಯವ ನೆವದಿಂದಲರ್ಪಿಸುವ ಬೆಡಗ ನಾನೇನೆಂಬೆನಯ್ಯಾ' ಎಂಬ ಶಬ್ದಕ್ಕರ್ಥ.

೧೦೦೩

ಸಾಸಿವೆಯ ಮೇಲೆ ಸಾಗರ ಹರಿದಂತಾಯಿತ್ತಯ್ಯ ಎನ್ನ ಭಕ್ತಿ. ಆನಂದದಿಂದ ನಲಿನಲಿದಾಡುವೆ. ಆನಂದದಿಂದ ಕುಣಿ ಕುಣಿದಾಡುವೆ. ಕೂಡಲಸಂಗನ ಶರಣರು ಬಂದಡೆ ಉಬ್ಬಿಕೊಬ್ಬಿ ಹರುಷದಲೋಲಾಡುವೆ. ॥೧॥

- -

ನಾನು ಮಾಡುವ ಭಕ್ತಿ ಅಲ್ಪತರ. ಅಲ್ಪವಾದ ಭಕ್ತಿಯ ಕೈಕೊಳಬೇಕೆಂದು ಶಿವ ತಾನೆ ವಿಶ್ವಮುಖವಾದ ಗುರುಲಿಂಗಜಂಗಮವಾಗಿ ಬಿಜಯಂಗೆಯ್ಯಲು, ನಾ ಮಾಡುವ ಭಕ್ತಿಯು ಘನತೆಯಲ್ಲವೆಂದು ಆ ಭಕ್ತಿಯಲ್ಲಿ ಹರುಷಿತನಾಗಿರ್ದನೆಂಬುದೀ ವಚನದರ್ಥ.

೧೦೦೪

ತನುವಿಡಿದಿಹುದು ಪ್ರಕೃತಿ. ಪ್ರಕೃತಿವಿಡಿದಿಹುದು ಪ್ರಾಣ. ಪ್ರಾಣವಿಡಿದಿಹುದು ಜ್ಞಾನ. ಜ್ಞಾನವಿಡಿದಿಹುದು ಗುರು. ಇಂತು ಗುರುಲಿಂಗಜಂಗಮಪ್ರಸಾದವ ಸಗುಣವೆಂದು ಹಿಡಿದು ನಿರ್ಗುಣವೆಂದು ಕಂಡ ಸಂದೇಹಿವ್ರತಗೇಡಿಗಳನೇನೆಂಬೆ ಕೂಡಲಸಂಗಮದೇವಾ. ॥೨॥

- -

ಸಮ್ಯಕ್‌ಜ್ಞಾನಿಯಾದ ಶರಣ ತನುಮನಪ್ರಾಣಭಾವಗಳಲ್ಲಿ ಕಟ್ಟಿಪ್ಪ ಮಾಯೆ ಮೊದಲಾದ ಸಕಲಪ್ರಪಂಚಸಂಹರಿಸಿ ಅಂಗಮನಪ್ರಾಣಭಾವಂಗಳಲ್ಲಿ ಶ್ರೀಗುರುಲಿಂಗಜಂಗಮಪ್ರಸಾದವನಳವಡಿಸಿ ಕೊಂಡಿಪ್ಪ. ಇಂತಪ್ಪ ಪರವಸ್ತು ಸಕಲನಿಃಕಲವೆಂದರಿಯದೆ ಸಾಕಾರವೆಂದು ಬಿಟ್ಟು ನಿರಾಕಾರವೆಂದು ಪಿಡಿವ ಅಜ್ಞಾನವ್ರತಗೇಡಿಗಳ ಮುಖವ ತೋರದಿರೆಂದು ಲಿಂಗವ ಬೇಡಿದ ಶರಣನೆಂಬುದೀ ವಚನದ ತಾತ್ಪರ್ಯಾರ್ಥ.

೧೦೦೫

ಗುರುವಚನವ ತನ್ನೊಳಗಿಂಬಿಟ್ಟುಕೊಂಡ ಪ್ರಸಾದಿಯ ಪ್ರಸಾದಿಯೆಂಬೆ. ಲಿಂಗವಚನವ ತನ್ನೊಳಗಿಂಬಿಟ್ಟುಕೊಂಡ ಪ್ರಸಾದಿಯ ಪ್ರಸಾದಿಯೆಂಬೆ. ಜಂಗಮವಚನವ ತನ್ನೊಳಗಿಂಬಿಟ್ಟುಕೊಂಡ ಪ್ರಸಾದಿಯ ಪ್ರಸಾದಿಯೆಂಬೆ. ಪ್ರಸಾದವಚನವ ತನ್ನೊಳಗಿಂಬಿಟ್ಟುಕೊಂಡ ಪ್ರಸಾದಿಯ ಪ್ರಸಾದಿಯೆಂಬೆ. ಇಂತೀ ಚತುರ್ವಿಧಸಂಪನ್ನ ಕೂಡಲಸಂಗಯ್ಯನಲ್ಲಿ ಚೆನ್ನಬಸವಣ್ಣನು. ॥೩॥

- -

ಸತ್ತುಚಿತ್ತಾನಂದ ನಿತ್ಯವೇ ಗುರುಲಿಂಗಜಂಗಮಪ್ರಸಾದವೆಂದರಿದರಿವೇ ಅಂಗವಾದ ಪ್ರಸಾದಿಯು, ಗುರುಲಿಂಗಜಂಗಮಮುಖದಿಂದುದಯವಾದ ಪ್ರಸಾದವೇ ಪರವಸ್ತುವೆಂದರಿದು ಸ್ವೀಕರಿಸುತಿಪ್ಪ ಭಕ್ತನು ತನ್ನ ತನುಮನಪ್ರಾಣದರಿವಿನಲ್ಲಿ ಗುರುಲಿಂಗಜಂಗಮಪ್ರಸಾದವ ಧರಿಸಿ ಲಿಂಗವಾಗಿಪ್ಪನೆಂಬುದೀ ವಚನಾರ್ಥ.

೧೦೦೬

ಅನ್ನವನಿಕ್ಕಿದರೆ ಪುಣ್ಯವಹುದು. ವಸ್ತ್ರವ ಕೊಟ್ಟಡೆ ಧರ್ಮವಹುದು. ಹಿರಣ್ಯವ ಕೊಟ್ಟಡೆ ಕ್ರೀಯಹದು. ತ್ರಿಕರಣ ಶುದ್ಧವಾಗಿ ನಡೆದರೆ ಮುಕ್ತಿಯಹುದು, ಕೂಡಲಸಂಗಮದೇವಾ. ॥೪॥

- -

ಅನ್ನವಸ್ತ್ರಮಾಣವ ಕೊಟ್ಟರೆ ಸ್ತ್ರೀಪುತ್ರಧನದಿಂದೆ ಸುಖವಹುದು; ಮುಕ್ತಿಯಿಲ್ಲ. ಮನವು ಮಹಾಬ್ರಹ್ಮದಲ್ಲಡಗಿದರೆ ನಿತ್ಯವಹನೆಂಬುದೀ ವಚನಾರ್ಥ.

೧೦೦೭

ಸಜ್ಜನಸದ್ಭಾವಿ ಅನ್ಯರ ಕೈಯಾಂತು ಬೇಡ. ಲಿಂಗವ ಮುಟ್ಟಿದ ಕೈಮೀಸಲು. ಕಂಗಳಲೊಸೆದು ನೋಡ ಪರವಧುವ. ಮನದಲ್ಲಿ ಅನ್ಯರ ನೆನೆಯ. ಮಾನವರ ಸೇವೆಯ ಮಾಡ. ಲಿಂಗದ ಹಂಗನೊಲ್ಲ. ಧನದಲ್ಲಿ ವಂಚನೆಯಿಲ್ಲ. ಕೂಡಲಸಂಗಮದೇವಾ ನಿಮ್ಮ ಶರಣ. ॥೫॥

- -

ಶರಣ ಪರಧನ ಪರಸ್ತ್ರೀಯರುಗಳಿಗಾಸೆಮಾಡುವನಲ್ಲ. ಲಿಂಗಪೂಜಿಸಿ ಫಲಪದಂಗಳ ಬೇಡುವನಲ್ಲ. ಶರಣ ನಿಃಕಾಮ್ಯವಾಗಿ ಲಿಂಗಭಕ್ತಿಯ ಮಾಡುತ್ತಿಹನೆಂಬುದೀ ವಚನಾರ್ಥ.

೧೦೦೮

ಅಂಗದ ಮೇಲೆ ಲಿಂಗಪ್ರತಿಷ್ಠೆಯ ಮಾಡಿದ ಬಳಿಕ, ಮರಳಿ ಭವಿಯ ನೆಂಟನೆಂದು ಬೆರಸಿದಡೆ ಕೊಂಡಮಾರಿಂಗೆ ಹೋಹುದು ತಪ್ಪದು. ತ್ರಿವಿಧನಾಶಕನು. ಹಸಿಯ ಮಣ್ಣಿನಲ್ಲಿ ಮಾಡಿದ ಮಡಕೆ ಅಗ್ನಿಮುಖದಲ್ಲಿ ಶುದ್ಧವಾದ ಬಳಿಕ ಅದು ತನ್ನ ಪೂರ್ವಕುಲವ ಬೆರಸೂದೆ? ಸಾಕ್ಷಿ ॥ ಅಗ್ನಿದಗ್ಧ ಘಟಃ ಪ್ರಾಹು । ನಭೂಯೋ ಮೃತಕಾಯತೇ । ತತ್ಕಿವಾಚಾರಸಂಗೇನ । ನಪುನರ್ಮಾನುಷೋ ಭವೇತ್ ॥ ಎಂದುದಾಗಿ ಇದು ಕಾರಣ ಪೂರ್ವನಾಸ್ತಿಯಾದ ಭಕ್ತನಪೂರ್ವ ಕೂಡಲಸಂಗಮದೇವಾ.॥೬॥

- -

ಮರವೆಯೆಂಬ ಭವಿಯಳಿದು ಅರಿವೆಂಬ ಭಕ್ತನಾದ ಬಳಿಕ ತಿರುಗಿ ಭಕ್ತ ಭವಿಯ ಬೆರಸ. ಅದು ಹೇಂಗೆಂದೊಡೆ ಸಾಕ್ಷಿ: ಅಗ್ನಿ–ಅಗ್ನಿಯಿಂದೆ, ದಗ್ಧ–ಸುಡಲ್ಪಟ್ಟ, ಘಟಂ–ಮಡಕೆಯು, ಭೂಯಃ–ಮರಳಿ, ನಮೃತ್ತಿಕಾಯತೇ–ಮಣ್ಣಾಗುತ್ತಿರದು, ಇತಿ–ಹೀಂಗೆಂದು, ಪ್ರಾಹು–ಹೇಳುತ್ತಿರ್ಹರು, ತತ್–ಅದುಕಾರಣ, ಶಿವಾಚಾರ–ಶಿವಾರ್ಚನ ಶಿವಪೂಜೆಯೊಡತಣ, ಸಂಗೇನ–ಸಂಗದಿಂದ, ಪುನಃ–ಮರಳಿ, ಮನುಷ್ಯನು, ನಭವೇತ್–ಆಗನು. ಅಗ್ನಿಯಲ್ಲಿ ಬೆಂದ ಮಡಕೆ ಮರಳಿ ಮಣ್ಣಾಗದೆಂಬುದೀ ವಚನಾರ್ಥ.

೧೦೦೯

ಜಂಗಮವೆ ಲಿಂಗವೆನಗೆ, ಜಂಗಮವೆ ಪ್ರಾಣವೆನಗೆ. ಕೂಡಲಸಂಗಮದೇವಯ್ಯ ನನಗೆಯೂ ನಿನಗೆಯೂ ಜಂಗಮಪ್ರಸಾದವೇ ಪ್ರಾಣ ಕಾಣಾ ತಂದೆ. ॥೭॥

- -

ಅಂಗ ಲಿಂಗಕ್ಕೆ ಪರಬ್ರಹ್ಮವೇ ಪ್ರಾಣವಾದ ಕಾರಣ, ಆ ಪರಬ್ರಹ್ಮವೆ ಜಂಗಮವಾಗಿ ಲಿಂಗಕ್ಕೂ ಅಂಗಕ್ಕೂ ಆ ಜಂಗಮ ಪ್ರಸಾದವೇ ಪ್ರಾಣವೆಂಬುದೀ ವಚನಾರ್ಥ.

೧೦೧೦

ಶಿವನೇ ಜಗತ್ರಯಕ್ಕೊಡೆಯನೆಂದುದು ವೇದ. ಉತ್ಪತ್ತಿಸ್ಥಿತಿಲಯ ಕಾರಣನೆಂದುದು ವೇದ. "ಈಶಃ ಸರ್ವಸ್ಯ ಜಗತಃ ಪ್ರಭುಃ ಪ್ರೇರಕೋ ವಿಶ್ವಭುಕ್" ಎಂಬ ಶ್ರುತಿ. ಇದು ಕಾರಣ ಕೂಡಲಸಂಗಮದೇವನೊಬ್ಬನೆ ದೇವ. ॥೮॥

- -

ಮನುಮುನಿದೇವತಾದಿಗಳಿಗೊಡೆಯನಾದ ಶಿವನೇ ಸೃಷ್ಟಿಸ್ಥಿತಿಸಂಹಾರಕ್ಕೆ ಕರ್ತನೆಂಬುದಕ್ಕೆ ತಾರ್ಕಣೆಯು. ಶ್ರುತಿ ॥ ಈಶಃ – ಈಶ್ವರನು, ಸರ್ವಸ್ಯ – ಸಮಸ್ತವಾಗಿರ್ದಂಥ, ಜಗತಾ–ಜಗತ್ತಿಗೆ, ಪ್ರೇರಕ–ನಿಯಾಮಕವಾಗಿರ್ದಂಥ. ಪ್ರಭು–ಕರ್ತನಾಗಿರ್ದಂಥ. ವಿಶ್ವಭುಕ್–ಸಂಹಾರಕನು, ಏಕೋದೇವ ಪ್ರತಿಷ್ಠಾಪನೆಯಮಾಡಿದ ಬಸವಣ್ಣನೆಂಬುದೀ ವಚನಾರ್ಥ.

೧೦೧೧

ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ. ಪಾತಾಳಲೋಕದಿಂದತ್ತತ್ತ ನಿಮ್ಮ ಶ್ರೀಚರಣ. ಬ್ರಹ್ಮಾಂಡಲೋಕದಿಂದತ್ತತ್ತ ನಿಮ್ಮ ಶ್ರೀಮಕುಟ. ಗ್ರಂಥ ॥ ಪಾದಾಭಿನ್ನಾಹಿಲೋಕಾಯ । ಮೌಳಿಬ್ರಹ್ಮಾಂಡ ಭಿತ್ತಿಯೇ । ಭುಜಾಕ್ರಾಂತ ದಿಗಂತಾಯ । ಭೂತಾನಾಂ ಪತಯೇ ನಮಃ ॥ ಎಂದುದಾಗಿ ಅಗಮ್ಯನಗೋಚರನಪ್ರತಿಮಲಿಂಗವೆ ನೀನೆನ್ನ ಕರಸ್ಥಲಕ್ಕೆ ಬಂದು ಚುಳುಕಾದೆ ಕೂಡಲಸಂಗಮದೇವಾ.॥೯॥

- -

ಚರಾಚರ ಪಂಚಭೂತಂಗಳ ಗರ್ಭೀಕರಿಸಿಕೊಂಡಿರ್ಪ ಮಹಾಲಿಂಗವು ಭೂಮಿಯಾಕಾಶ ದಿಕ್ಕುಗಳ ಮೀರಿ ತೋರುತ್ತಿಹನೆಂಬುದಕ್ಕೆ ತಾರ್ಕಣೆಯು ॥ ಪಾದ–ಪಾದಂಗಳಿಂದ, ಅಭಿನ್ನ–ಕೂಡಿದಂಥ, ಅಹಿಲೋಕಾಂಯ–ಪಾತಾಳಲೋಕವುಳ್ಳ, ಮೌಳಿಬ್ರಹ್ಮಾಂಡಭಿತ್ತಿಂಯೇ: ಮೌಳಿ–ಜಟಾಜೂಟದಿಂದಾಕ್ರಮಿಸಲ್ಪಟ್ಟ, ಬ್ರಹ್ಮಾಂಡಭಿತ್ತಿಯೇ–ಉಪರಿಬ್ರಹ್ಮಾಂಡದ ಗೋಡೆಯನುಳ್ಳ, ಭುಜಃ–ಭುಜಗಳಿಂದೆ, ಆಕ್ರಾಂತ–ಆಕ್ರಮಿಸಲ್ಪಟ್ಟ, ದಿಗಂತಾಯ–ದಿಕ್ಕುಗಳ ಕಡೆಯುಳ್ಳಂಥ, ಭೂತಾನಾಂ – ಪ್ರಾಣಿಗಳಿಗೆ, ಪತಯೇ–ಒಡೆಯನಾದ ಶಿವಂಗೋಸ್ಕರ, ನಮಃ–ನಮಸ್ಕಾರವು. ವಾಙ್ಮನಕ್ಕಗೋಚರವಾದ ಖಂಡಮಹಾಲಿಂಗವು ಕರಸ್ಥಲಕ್ಕಿಷ್ಟಲಿಂಗವಾಯಿತ್ತೆಂದು ಬಸವೇಶ್ವರದೇವರು ನಿರೂಪಿಸಿದರೆಂಬುದೀ ವಚನಾರ್ಥ.

೧೧೧೨

ಅಂಗ ಲಿಂಗಸಂಬಂಧವಾದವರ ಲಿಂಗವೆಂದೇ ಕಾಬುದು. "ಕೀಟೋಪಿಭ್ರಮರಾಯತೇ" ಎಂಬ ನ್ಯಾಯದಂತೆ, ಅಂಗ ಲಿಂಗಸೋಂಕಿ ಲಿಂಗವಾಯಿತ್ತಾಗಿ, ಲಿಂಗವೆಂದೇ ಕಾಬುದು. ಸಾಕ್ಷಿ ॥ ಸರ್ಪದಷ್ಟಸ್ಯ ಯದ್ದೇಹಂ ವಿಷದೇಹವತ್ । ಲಿಂಗದಷ್ಟಸ್ಯ ಯದ್ದೇಹಂ ತದ್ದೇಹಂ ಲಿಂಗದೇಹವತ್ ॥ ಎಂದುದಾಗಿ ಸರ್ವಾಂಗಲಿಂಗ ಕೂಡಲಸಂಗನ ಶರಣನು. ॥೧೦॥

- -

ಅಂಗ ಲಿಂಗಸಂಬಂಧಿಯಾದ ಲಿಂಗದೇಹಿಯ ಲಿಂಗವೆಂಬುದಕ್ಕೆ ತಾರ್ಕಣೆಯು. ಯದ್ದೇಹಂ : ಯತ್–ಆವುದಾನೊಂದು, ದೇಹಂ–ದೇಹವನು, ಸರ್ಪ–ಸೃಪನು. ದಷ್ಟಸ್ಯ–ಕಚ್ಚಲು, ತದ್ದೇಹಂ–ಆ ಶರೀರವು, ವಿಷದೇಹವತ್–ವಿಷದೇಹವಹುದು. ಯದ್ದೇಹಂ : ಯತ್–ಆವುದಾನೊಂದು, ದೇಹಂ–ದೇಹವನು. ಲಿಂಗದಷ್ಟಸ್ಯ–ಲಿಂಗಸಂಬಂಧವಾಗಲು, ತದ್ದೇಹಂ–ಆ ದೇಹವು, ಲಿಂಗದೇಹವತ್–ಲಿಂಗದೇಹವೇ ಅಹುದು. ಲಿಂಗದೇಹಿಗಳಾದ ಶರಣರ ಲಿಂಗವೆಂದೇ ಕಾಣಬೇಕೆಂಬುದೀ ವಚನಾರ್ಥ.

೧೧೧೩

ಅಂದಂದಿಂಗೆ ಬಂದ ಪದಾರ್ಥವನೆಂದೆಂದು ತಾನುಂಬ ಕೈಯಲ್ಲಿಯಂತೋ, ಲಿಂಗಕ್ಕೆ ಕೊಡುವುದೆಂತೋ ಲಿಂಗಕ್ಕೆ ಸಲುವುದೆಂತೋ ಮಂಚವೊಂದೇ ಸಂಚು ಬೇರೆಂಬ ಪ್ರಪಂಚಿಯನೊಲ್ಲ ಕೂಡಲಸಂಗಮದೇವ. ॥೧೧॥

- -

ಅಂಗದ ಮೇಲೆ ಲಿಂಗವಿದ್ದು ಅಭಿನ್ನಭಾವ ಘಟಿಸದೆ ಎರಡುಮಾಡಿಕೊಂಡು ಸಕಲಪದಾರ್ಥವ ಕೈಯ್ಯಲ್ಲಿಹಿಡಿದು ಲಿಂಗಕ್ಕರ್ಪಿಸಿ ಭುಂಜಿಸಿಹೆನೆಂಬ ಅಜ್ಞಾನಿಯ ಮುಖದಲ್ಲಿ ಲಿಂಗಾರ್ಪಿತವಿಲ್ಲೆಂಬುದೀ ವಚನಾರ್ಥ.

೧೦೧೪

ಲಿಂಗಾಭಿಮಾನಿಗೆ ಅಂಗಾಶ್ರಯವಿಲ್ಲ ನೋಡಾ. ಬಂದುದೆ ಪರಿಣಾಮ, ನಿಂದುದೆ ನಿವಾಸ. ಅದು ಇದು ಎಂಬುದಿಲ್ಲ ಕೂಡಲಸಂಗನ ಶರಣಂಗೆ. ॥೧೨॥

- -

ಪೂಜ್ಯ ಪೂಜಕನೆಂಬೆರಡಾದುದೊಂದೇ ವಸ್ತುವೆಂದರಿದು, ಭಿನ್ನಭಾವವಿಲ್ಲದೆ ಶಿವೋಹಂ ಎಂಬ ಶಿವಭಾವ ಘಟಿಸಿ, ದಾಸೋಹವ ಮಾಡುತ್ತಿರ್ಪ ಸದ್ಭಕ್ತನು ದೇಹಸಂಬಂಧಿಯಲ್ಲ. ಆ ದೇಹವಿಡಿದಿರ್ದೊಡೆಯೂ ಪರಮಪರಿಣಾಮಿ. ಆತನಿರ್ದುದೇ ಕೈಲಾಸ. ಆತಂಗಿಹಪರವೆಂಬ ಸಂಶಯವಿಲ್ಲ. ಆ ಶರಣನೇ ಲಿಂಗವೆಂಬುದೀ ವಚನಾರ್ಥ.

೧೦೧೫

ಭಕ್ತನು ಶಾಂತನಾಗಿರಬೇಕು, ತನ್ನ ಕುರಿತು ಬಂದ ಠಾವಿನಲ್ಲಿ ಸತ್ಯನಾಗಿರಬೇಕು, ಭೂತಹಿತವಹ ವಚನವ ನುಡಿಯಬೇಕು, ಲಿಂಗಜಂಗಮದಲ್ಲಿ ನಿಂದೆ ಇಲ್ಲದಿರಬೇಕು, ಸಕಲಪ್ರಾಣಿಗಳ ತನ್ನಂತೆ ಭಾವಿಸಬೇಕು, ತನುಮನಧನವ ಗುರುಲಿಂಗಜಂಗಮಕ್ಕೆ ಸವೆಸಬೇಕು, ಅಪಾತ್ರದಾನವ ಮಾಡಲಾಗದು, ಸಕಲೇಂದ್ರಿಯಂಗಳ ತನ್ನ ವಶವ ಮಾಡೂದು, ಇದೇ ಮೊದಲಲ್ಲಿ ಬೇಹ ಶೌಚ ನೋಡಾ, ಲಿಂಗವ ಪೂಜಿಸಿ ಪ್ರಸಾದವ ಪಡೆವೊಡೆ ಎನಗಿದೇ ಸಾಧನ ಕೂಡಲಸಂಗಮದೇವಾ. ॥೧೩॥

- -

ಶಾಂತಿ ಸತ್ಯ ಭೂತಹಿತ ಇಂದ್ರಿಯನಿಗ್ರಹವಂ ಮಾಡಬೇಕು. ಲಿಂಗವಿಲ್ಲದವರಿಗೆ ಮಾಡಲಾಗದು. ತನುಮನಧನವ ಗುರುಲಿಂಗಜಂಗಮಕ್ಕೆ ಮಾಡಿ ಅಖಂಡಿತ ಪ್ರಸಾದವ ಪಡೆದೆನೆಂಬುದೀ ವಚನಾರ್ಥ.

೧೦೧೬

ಅರ್ಪಿಸುವ ಸುಖ ತಪ್ಪದೆ ಇಂಬುಗೊಂಡಿತ್ತಾಗಿ ಅಲ್ಲಿಯೇ ಅರ್ಪಿತವಾಯಿತ್ತಯ್ಯಾ. ಅಂಗವೆಂಬ ಶಂಕೆ ತಾನೆತ್ತ ಹೋಯಿತ್ತೆಂದರಿಯೆ. ಕಾಯಸುಖವೇ ಲಿಂಗಸುಖಕ್ಕೀಡಾಯಿತ್ತು. ಅಂತಪ್ಪ ಅರ್ಪಿತ ದಷ್ಟ ತಲೆಗೇರಿದಲ್ಲಿ ನೀ ಮುಂತಾಗಿರ್ದೆ ಕೂಡಲಸಂಗಮದೇವಾ. ॥೧೪॥

- -

ಜೀವಾತ್ಮನೆಂಬಂಗವ ಮಹಾಘನಲಿಂಗಕ್ಕೆ ಸಂಬಂಧವ ಮಾಡಿ ಅರ್ಪಿಸಿ ಲಿಂಗಮುಖವನರಿದು ಹಿಂಗದಿರ್ಪ ಶರಣನ ದೇಹೇಂದ್ರಿಯಸುಖಂಗಳೆಲ್ಲ ಲಿಂಗಾರ್ಪಿತವಾದವೆಂಬುದೀಗ, ಅರ್ಪಿಸುವ ಸುಖ ತಪ್ಪದೆ ಇಂಬುಗೊಂಡಿತ್ತಾಗಿ ಅಲ್ಲಿಯೇ ಅರ್ಪಿತವಾಯಿತ್ತಯ್ಯಾ ಎಂಬುದರ್ಥ. ಅಂತು

ಜೀವಾತ್ಮನೆಂಬಂಗವ ಲಿಂಗಾರ್ಪಿತವ ಮಾಡಿದ ಶರಣಂಗೆ ಶಿವಭಾವಘಟಿಸಿತ್ತಾಗಿ ಜೀವಭಾವವಿಲ್ಲದೇ ಹೋಯಿತ್ತೆಂಬುದೀಗ, ಅಂಗವೆಂಬ ಶಂಕೆ ತಾನೆತ್ತ ಹೋಯಿತ್ತೆಂದರಿಯೆನೆಂಬುದರ್ಥ. ಅಂತು ಜೀವಾತ್ಮನು ತಾ ಮೊದಲಾಗಿ ಕಾಯಸುಖಂಗಳೆಲ್ಲವ ಲಿಂಗಕ್ಕರ್ಪಿಸಿದ ಕಾರಣ ಶರಣಂಗೆ ಲಿಂಗಸುಖ ದೊರಕಿತ್ತೆಂಬುದೀಗ, ಕಾಯಸುಖವೇ ಲಿಂಗಸುಖಕ್ಕೀಡಾಯಿತ್ತೆಂಬುದರ್ಥ. ತನುಸುಖಂಗಳೆಲ್ಲವ ಲಿಂಗಕ್ಕರ್ಪಿಸಲು ಶರಣ ಅರ್ಪಿಸಿಕೊಂಡು ಲಿಂಗವು ಆ ಶರಣನ ಸರ್ವಾಂಗವನವಗ್ರಹಿಸಿತ್ತೆಂಬುದೀಗ ಅಂತಪ್ಪ ಅರ್ಪಿತದಷ್ಟವೆಂಬುದರ್ಥ. ಅಂತು ಶರಣನ ಸರ್ವಾಂಗ ಲಿಂಗವಾಗಿ ಭಿನ್ನವಿಲ್ಲದಿರ್ದುದ ಭಿನ್ನಜ್ಞಾನಮುಖದಿಂದೆ ಅರಿದು ಲಿಂಗವೇ ಆಗಿರ್ದ ಶರಣನೆಂಬುದೀಗ, ದಷ್ಟ ತಲೆಗೇರಿದಲ್ಲಿ ನೀ ಮುಂತಾಗಿರ್ದೆ ಕೂಡಲಸಂಗಮದೇವಾ ಎಂಬುದರ್ಥ.

೧೦೧೭

ಜ್ಞಾನಾಮೃತವೆಂಬ ಜಲಧಿಯ ಮೇಲೆ ಸಂಸಾರವೆಂಬ ಹಾವಸೆ ಬಂದು ಮುಸುಕುತ್ತಿಹುದು. ನೀರಮೊಗೆವರು ಬಂದು ನೂಂಕಿದಲ್ಲದೆ ತೆರಳದು. ಮರಳಿ ಮರಳಿ ಮುಸುಕೂದು ಮಾಣದಯ್ಯಾ ಅಗಳೂ ಎನ್ನುವ ನೆನೆವುತ್ತಿರಬೇಕೆಂದು ಬೇಗ ಗುರುವಪ್ಪೈಸಿ ತನ್ನ ಪ್ರಸಾದವೆಂದು ಕುರುಹ ತ್ರಿಕಾಲ ಮಾಡಹೇಳಿದ ಲಿಂಗಪೂಜೆಯ ತನ್ನನರಿಯಬೇಕೆಂದು. ಕೆರೆಯ ನೀರನುಂಡು ತೊರೆಯ ನೀರ ಹೊಗಳುವ ಅರೆಮರುಳರ ಮೆಚ್ಚ ನಮ್ಮ ಕೂಡಲಸಂಗಮದೇವನು. ॥೧೫॥

- -

ಶಿವಾಂಶಿಕನಾದ ಜ್ಞಾನಕಲಾತ್ಮಂಗೆ ಶಿವಾಜ್ಞೆಯಿಂದ ದೇಹಸಂಬಂಧವಾಗಲು ಸಂಸಾರ ಮಲಮಾಯಾ ಕರ್ಮಂಗಳು ಅವಗ್ರಹಿಸಿದವೆಂಬುದೀಗ, ಜ್ಞಾನಾಮೃತವೆಂಬ ಜಲಧಿಯ ಮೇಲೆ ಸಂಸಾರವೆಂಬ ಹಾವಸೆ ಬಂದು ಮುಸುಕುತ್ತಿಹುದೆಂಬುದರ್ಥ. ಆ ದೇಹಸಂಬಂಧಿಯಾದಾತ್ಮಂಗೆ ಸುಜ್ಞಾನೋದಯವಾಗಿ ಶ್ರೀಗುರುಕಾರುಣ್ಯದಿಂದೆ ಅಜ್ಞಾನಮಾಯಾಪ್ರಪಂಚಳಿದು ಹೋಯಿತ್ತೆಂಬುದೀಗ, ನೀರ ಮೊಗೆವರು ಬಂದು ನೂಂಕಿದಲ್ಲದೆ ತೆರಳದೆಂಬುದರ್ಥ. ಗುರೂಪದೇಶವಿಲ್ಲದೆ ಜ್ಞಾನೋದಯ ಮೋಕ್ಷವೆಂಬ ಅದ್ವೈತ ಜ್ಞಾನಿಯ ಮಾಯಾಪ್ರಪಂಚು ಅವಗ್ರಹಿಸಿತ್ತೆಂಬುದೀಗ, ಮರಳಿ ಮರಳಿ ಮುಸುಕೂದು ಮಾಣದಯ್ಯಾ ಎಂಬುದರ್ಥ. ಆ ಭಿನ್ನಜ್ಞಾನದ ನಿವೃತ್ತಿಯ ಮಾಡಿ ಸಮ್ಯಜ್ಞಾನಿಯಾದ ಶರಣನ ನಿಜಾಂತರಂಗದಲ್ಲಿರ್ಪ ಚಿತ್ಕಲಾಲಿಂಗ ಬಹಿಷ್ಕರಿಸಿ ಕರಸ್ಥಲದಲ್ಲಿ ಕೊಟ್ಟು ಲಿಂಗಪೂಜೆಯಮಾಡೆ ನೀನೆಲ್ಲಾ ಲಿಂಗವೆಂದರುಹಿದನೆಂಬುದೀಗ, ಅಗಳೂ ಎನ್ನುವ ನೆನೆವುತ್ತಿರಬೇಕೆಂದು ಬೇಗ ಗುರುವೊಪ್ಪಿಸಿ ತನ್ನಪ್ರಸಾದವೆಂದು ಕುರುಹ ತ್ರಿಕಾಲ ಮಾಡಹೇಳಿದ ಲಿಂಗಪೂಜೆಯ ಮಾಡಿ ನೀನೆಲ್ಲಾ ತನ್ನನರಿಯಬೇಕೆಂದುಯೆಂಬುದರ್ಥ, ಇಂತಪ್ಪ ಸತ್ಕ್ರಿಯಾ ಸಂಬಂಧವಿಲ್ಲದೆ ದೇಹೇಂದ್ರಿಯ ವಿಷಯಸುಖವನನುಭವಿಸಿ ಬರಿ ಅರಿವಿನಿಂದ ಬ್ರಹ್ಮವಾದೆನೆಂಬ ಅಜ್ಞಾನಿಗಳಿಗೆ ಮುಕ್ತಿಯಿಲ್ಲವೆಂಬುದೀಗ, ಕೆರೆಯ ನೀರನುಂಡು ತೊರೆಯ ನೀರ ಹೊಗಳುವ ಅರೆಮರುಳುಗಳ ಮೆಚ್ಚ ನಮ್ಮ ಕೂಡಲಸಂಗಮದೇವನೆಂಬುದರ್ಥ.

೧೧೧೮

ದಶದಿಕ್ಕು ಧರೆ ಗಗನವೆಂಬುದ ನಾನರಿಯೆನಯ್ಯಾ. 'ಲಿಂಗಮಧ್ಯೇ ಜಗತ್ಸರ್ವಂ' ಎಂಬುದ ನಾನರಿಯೆನಯ್ಯಾ. ಲಿಂಗ ಸೋಂಕಿನ ಸುಖದೊಳಗೆ ಶಿವಶಿವಾ ಎನುತಿರ್ದೆನಯ್ಯಾ. ಕೂಡಲಸಂಗಮದೇವಯ್ಯಾ ಅಂಬುಧಿಯೊಳಗೆ ಬಿದ್ದ ಆಲಿಕಲ್ಲಿನಂತೆ ಭಿನ್ನಭಾವವಿಲ್ಲದೆ ಶಿವಶಿವಾ ಎನುತಿರ್ದೆನಯ್ಯಾ. ॥೧೬॥

- -

ಭಾವಬ್ರಹ್ಮದಲ್ಲಡಗಿ ದಿಕ್ಕುದೆಸೆಧರೆಗಗನವೆಂಬುದನರಿಯದಿರ್ದೆನೆಂಬುದೀ ವಚನಾರ್ಥ.

೧೧೧೯

ಸ್ಥೂಲತನುವೆಂಬ ಭಾಂಡದಲ್ಲಿ ಸರ್ವಾಚಾರವೆಂಬ ಸೈದಾನ ತುಂಬಿದೆ. ತುಂಬಲೊಡನೆ ಅಗ್ನಿಯಿಲ್ಲದ ಮುನ್ನ ಪಾಕವಾಯಿತ್ತು. ಮೇಲುಸಾಧನವಿಲ್ಲದ ಮುನ್ನ ರುಚಿ ಪಕ್ವವಾಯಿತ್ತು. ಅವನು ಸೂಕ್ಷ್ಮತನುವೆಂಬ ಭಾಂಡದಲ್ಲಿ ಬರಿಕೆಯ್ದ ಕಾರಣ ತನುವಿನಲ್ಲಿ ಕುಳ್ಳಿರ್ದು ಉಂಡೆನೆಂದನುಮಾಡಲು, ಪ್ರಕೃತಿಯಳಿದು ಒಂದೇ ಭಾಂಡವಾದುದ ಕಂಡು ಉಣ್ಣಲೊಲ್ಲದೆ ಅನ್ಯರಿಗಿಕ್ಕದೆ ಎನ್ನದೆನ್ನದೆ ಸೈದಾನವ ತೆಗೆದು ಬಳಸಿ ಬೀಸರವೋಗದೆ ಒಂದರೊಳಗೊಂದಿದ್ದಿತ್ತೆನ್ನದೆ ಉಂಡು ಸುಖಿಯಾದೆನಯ್ಯಾ ಕೂಡಲಸಂಗಮದೇವಾ. ॥೧೭॥

- -

ಸಮ್ಯಕ್‌ಜ್ಞಾನೋದಯವಾಗಿ ದೇಹವಾಸನೆಯಳಿದು ಗುರುಕಾರುಣ್ಯವ ಪಡೆದು ಲಿಂಗಸಂಬಂಧಿಯಾದ ಶರಣನಂಗವೆಂಬುದೀಗ, ಸ್ಥೂಲತನುವೆಂಬ ಭಾಂಡದಲ್ಲಿಯೆಂಬುದರ್ಥ. ಆ ಲಿಂಗಸಂಗಿಯಾದ ಶರಣ ಸರ್ವಾಚಾರಸಂಪತ್ತೆಂಬ ಸಾಧನ ದಿವ್ಯವ ಲಿಂಗದಲ್ಲಿ ಅಳವಡಿಸಿದನೆಂಬುದೀಗ, ಸರ್ವಾಚಾರವೆಂಬ ಸಯಿಧಾನವ ತುಂಬಿದನೆಂಬುದರ್ಥ. ಆ ಸತ್ಕ್ರಿಯಾಜ್ಞಾನವಿಡಿದಾಚರಿಸುತ್ತಿದ್ದ ಶರಣ ತಾಪತ್ರಯಾಗ್ನಿಯಿಲ್ಲದ ಸುಜ್ಞಾನಾಗ್ನಿಯಲ್ಲಿ ಸಮರಸ ಪಾಕವ ಮಾಡಿ ಶ್ರುತಜ್ಞಾನವಿಲ್ಲದೆ ಸಮ್ಯಗ್‌ಜ್ಞಾನದಿಂದ ಲಿಂಗಾರ್ಪಿತವ ಮಾಡಿದನೆಂಬುದೀಗ ತುಂಬಲೊಡನೆ ಅಗ್ನಿಯಿಲ್ಲದ ಮುನ್ನ ಪಾಕವಾಯಿತ್ತು. ಮೇಲುಸಾಧನವಿಲ್ಲದ ಮುನ್ನ ರುಚಿ ಪಕ್ವವಾಯಿತ್ತೆಂಬುದರ್ಥ.

ಈ ಇಷ್ಟಲಿಂಗಾರ್ಪಿತವ ಮಾಡಿದ ಶರಣನು ರೂಪಿನೊಳಗಣ ರುಚಿಪದಾರ್ಥ ಅಂತರಂಗವೆಂಬ ಜ್ಞಾನಭಾಜನದಲ್ಲಿರ್ದ ಪ್ರಾಣಲಿಂಗಕ್ಕರ್ಪಿತವ ಮಾಡಿದನೆಂಬುದೀಗ ಅವನು ಸೂಕ್ಷ್ಮತನುವೆಂಬ ಭಾಂಡಾದಲ್ಲಿ ಬರಿಕೆಯ್ದು ಎಂಬುದರ್ಥ. ಆ ಪ್ರಾಣಲಿಂಗಾರ್ಪಿತವ ಮಾಡಿದ ಶರಣ ತನ್ನಾತ್ಮಾಂಗದಲ್ಲಿ ಆನಂದಸ್ವರೂಪವಾಗಿರ್ಪ ಭಾವಲಿಂಗಕ್ಕರ್ಪಿತವ ಮಾಡಿ ಆ ಪ್ರಸಾದವ ಸ್ವೀಕರಿಸಿ ನಿಂದು ಇಚ್ಛೈಸಲು ಅಲ್ಲಿ ತಾನು ಲಿಂಗವೆಂಬ ಭಿನ್ನವಳಿದು ಅಖಂಡಬ್ರಹ್ಮನೇ ಆಗಿರ್ದ

ಶರಣನೆಂಬುದೀಗ, ಕಾರಣತನುವಿನಲ್ಲಿ ಕುಳ್ಳಿರ್ದು ಉಂಡೆನೆಂದನುಮಾಡಲು ಪ್ರಕೃತಿಯಳಿದು ಒಂದೆ ಭಾಂಡವಾದುದ ಕಂಡು ಎಂಬುದರ್ಥ.

ಆ ಘನಲಿಂಗವೇಧಿಯಾಗಿರ್ಪ ಶರಣ ಭಿನ್ನವಿಟ್ಟು ಲಿಂಗಕ್ಕರ್ಪಿಸದೆ ದ್ವೈತಾದ್ವೈತಿಗಳಿಗೆ ಅರುಹದೆ ತಾನೆ ಲಿಂಗವಾದನೆಂಬಹಂಕಾರವಿಲ್ಲವೆಂಬುದೀಗ, ಉಣಲೊಲ್ಲದೆ ಅನ್ಯರಿಗಿಕ್ಕದೆ ಎನ್ನದೆನ್ನದೆಯೆಂಬುದರ್ಥ. ತಾನೆಂಬಹಂಕಾರವಳಿದ ಶರಣ ದೇಹೇಂದ್ರಿಯವಿಷಯಪದಾರ್ಥವ ಭಿನ್ನವಿಟ್ಟರ್ಪಿಸದೆ ಅಭಿನ್ನಭಾವದಿಂದ ಲಿಂಗಕ್ಕರ್ಪಿಸಿ ಪ್ರಸಾದವ ಸ್ವೀಕರಿಸಿದ ಶರಣ ಭವದತ್ತ ಹೋಗನೆಂಬುದೀಗ, ಸಯಿಧಾನವ ತೆಗೆದು ಬಳಸದೆ ಬಳಸಿ ಬೀಸರಹೋಗದೆ ಎಂಬುದರ್ಥ. ಭವರಹಿತವಾದ ಶರಣ ತಾನು ಲಿಂಗವೆಂಬ ದ್ವೈತಾಭಾವವಳಿದು ಶಿವಸುಖವ ಸುಖಿಸಿದ ಶರಣನು ಅಖಂಡ ಬ್ರಹ್ಮವಾಗಿರ್ದನೆಂಬುದೀಗ ಒಂದರೊಳಗೊಂದು ಇದ್ದಿತ್ತೆನ್ನದೆ ಉಂಡು ಸುಖಿಯಾದೆನಯ್ಯಾ ಕೂಡಲಸಂಗಮದೇವಾ ಎಂಬುದರ್ಥ.

ವಿಶೇಷಾನುಭವ ಷಟ್ಸ್ಥಲ

೧೦೨೦

ಕೀಟಕ, ಸೂತ್ರದ ನೂಲ ಗೂಡುಮಾಡಿ ಸುತ್ತಿರ್ಪಂತೆ ಸೂತ್ರಕ್ಕೆ ನೂಲನೆಲ್ಲಿಂದ ತಂದಿತ್ತಯ್ಯಾ? ಊಟಿಯಿಲ್ಲ, ಅದಕ್ಕೆ ಹಂಜಿ ಮುನ್ನವೆ ಇಲ್ಲ. ನೂತವರಾರೊ ? ತನ್ನೊಡಲ ನೂಲ ತೆಗೆದು ಪಸರಿಸಿ ಅದಱಕೊಳು ಪ್ರೀತಿಯಿಂದೊಲಿದಾಡಿ ತುದಿಯಲ್ಲಿ ತನ್ನೊಳಗದ ಮಡಗಿಕೊಂಡಿಪ್ಪಂತೆ ತನ್ನಿಂದಾದ ಜಗವ ತನ್ನೊಳಗೆಯ್ದಿಸಿಕೊಳಬಲ್ಲ ನಮ್ಮ ಕೂಡಲಸಂಗಮದೇವರು ॥೧॥

- -

ತನ್ನ ಗರ್ಭದ ನೂಲ ತೆಗೆದು ವಿನೋದಿಸಿದಂತ್ಯದಲ್ಲಿ ತನ್ನೊಳಗಡಗಿಸಿಕೊಂಬ ಕೀಟಕದಂತೆ ಜಗತ್ತಿನ ಲಯಗಮನಂಗಳ ಲೀಲಾಸ್ವತಂತ್ರಗುಣವನುಳ್ಳುದು ಮಹಾಘನಲಿಂಗವೆಂಬುದೀ ವಚನದಭಿಪ್ರಾಯ.

೧೦೨೧

ಅಜ್ಞಾನದಿಂದ ಹುಟ್ಟಿತ್ತು ಅಹಂ ಮಮತೆ. ಅಜ್ಞಾನದಿಂದ ಹುಟ್ಟಿತ್ತು ಮನಸಂಚಲ. ಅಜ್ಞಾನದಿಂದ ಹುಟ್ಟಿತ್ತು ಇಂದ್ರಿಯೋದ್ರೇಕ. ಅಜ್ಞಾನದಿಂದ ಹುಟ್ಟಿತ್ತು ದೇಹಮೋಹ. ಅಜ್ಞಾನದಿಂದ ಹುಟ್ಟಿತ್ತು ಅತಿಕಾಂಕ್ಷೆ. ಅಜ್ಞಾನದಿಂದ ಹುಟ್ಟಿತ್ತು ತ್ರಿವಿಧಮಲ. ಅಜ್ಞಾನದಿಂದ ಹುಟ್ಟಿತ್ತು ಸಂಸಾರ. ಅಜ್ಞಾನದಿಂದ ಹುಟ್ಟಿತ್ತು ರಾಗದ್ವೇಷ. ಅಜ್ಞಾನದಿಂದ ಹುಟ್ಟಿತ್ತು ಸರ್ವ ಪ್ರಪಂಚು. ಅಜ್ಞಾನದಿಂದ ಹುಟ್ಟಿತ್ತು ಸರ್ವದುಃಖ. ಕೂಡಲಸಂಗಮದೇವಾ, ಈ ಅಜ್ಞಾನಭ್ರಮೆಯ ಕೆಡಿಸಿದಲ್ಲದೆ ನಿಮ್ಮನೊಡಗೂಡಬಾರದಯ್ಯಾ. ॥೨॥

- -

ಜೀವಂಗೆ ಅಜ್ಞಾನವಶದಿಂ ದೇಹಮೋಹ ಮನಃಸಂಚಲ ಇಂದ್ರಿಯೋದ್ರೇಕ ಸಕಲಪ್ರಪಂಚು ಮಲತ್ರಯ ಅತಿಕಾಂಕ್ಷೆ ಆಶೆರೋಷ ಅಹಂಮಮತೆ ಸಂಸಾರದುಃಖ ಸಂಭವಿಸಿರ್ಪುದಾಗಿ ಇವನತಿಗಳೆದಲ್ಲದೆ ನಿಜವನೆಯ್ದಬಾರದೆಂಬುದೀ ವಚನಾರ್ಥ.

೧೦೨೨

ಸಂಸಾರಸರ್ಪನ ಹೇಳಿಗೆಯ ಬಿಡಿಸಲುಬಾರದು, ಬಿಟ್ಟಡೆ ಕಟ್ಟಲುಬಾರದು ನೋಡಾ. ಬಿಡಿಸುವ ಬೆಡಗಿನ್ನೆಂತೊ ? ಕಾಮ ಕ್ರೋಧ ಲೋಭ ಮೋಹ ಮದ ಮತ್ಸರವೆಂಬ ವಿಷದ ಹಲ್ಲಿಂಗಿನ್ನಾವುದು ಗಾರುಡವಯ್ಯಾ ಮಹಾದಾನಿ ಕೂಡಲಸಂಗಮದೇವಾ ! ॥೩॥

- -

ಸಂಸಾರವೆಂಬ ಮಹೋಗ್ರದಂಷ್ಟ್ರ ಕಾಳೋರಗನ ಹೇಳಿಗೆಯಪ್ಪ ದೇಹಬಂಧವ ನೀಗಬಾರದು. ನೀಗಿದಡೆ ಹಲವು ಮುಖವಾಗಿ ಹರಿವ ಸಂಸಾರ ಸರ್ಪನ ಬಂಧಿಸಬಾರದಾರಿಗೆಯು. ಅರಿಷಡ್ವರ್ಗಂಗಳೆಂಬ ವಿಷದಂತಂಗಳು ಮುಟ್ಟದಂತೆ ಪರಿಹರಿಸುವ ನಿಜೋಪದೇಶವ ಮುಕ್ತಿದಾನಶೀಲನಾದ ಶಿವಂಗೆ ಕರುಣಿಸೆಂದು ಬಿನ್ನೈಸುತಿರ್ದ ಜ್ಞಾನಕಲಾತ್ಮನೆಂಬುದೀ ವಚನಾರ್ಥ.

೧೦೨೩

ನಾರಗೋಣಿಯ ಮೂಲೆಯ ಹೊಲಿದು ನೀರಭಂಡವ ತುಂಬಿದರಯ್ಯಾ ಊರೊಳಗೈವರು ಕಳ್ಳರು. ಸಾರಲೀಯರು, ಧರ್ಮವಿಲ್ಲಯ್ಯಾ ಊರನುರಿಗೊಳ್ಳದ ಮುನ್ನ ಕೂಡಿಕೊಳ್ಳಿ ಕೂಡಲಸಂಗಮದೇವಾ. ॥೪॥

- -

ಪಂಚಭೂತಗ್ರಾಮದಲ್ಲಿ ಪರಮಾರ್ಥ ವಂಚಕರಾದ ಪಂಚಕರಣಂಗಳು ಪ್ರಾಣವಾಯುವಿಕಾರಬದ್ಧರೂಪಮಾದಂತರಂಗದಲ್ಲಿ ವಿಷಯರಸ ದ್ರವ್ಯವ ಭರಿತವ ಮಾಡೆ ಮನೋದ್ಧಾರವ ಬಂಧಿಸಿಕೊಂಡಿರಲದೀಗ, 'ನಾರಗೋಣಿಯ ಮೂಲೆಯ ಹೊಲಿದು ನೀರಭಂಡವ ತುಂಬಿದರಯ್ಯಾ ಊರೊಳಗೈವರು ಕಳ್ಳರೆಂಬ ಶಬ್ದಕ್ಕರ್ಥ. ಆ ಕರಣಂಗಳು ಸದ್ಗುಣಂಗಳು ಪ್ರವೇಶಿಸಿದಂತೆ ಇಂದ್ರಿಯದ್ವಾರಂಗಳಲ್ಲಿ ದುರ್ವರ್ತನೆಯ ಮುಂದುಗೊಂಡಿರ್ಪವೆಂಬುದೀಗ, 'ಸಾರಲೀಯರು ಧರ್ಮವಿಲ್ಲಯ್ಯಾ' ಎಂಬ ಶಬ್ದಕ್ಕರ್ಥ. ಇಂತಪ್ಪ ದೇಹತಾಪತ್ರಯಾಗ್ನಿಯಲ್ಲಿ ಕೆಡದ ಮೊದಲೆ ನಿನ್ನವನೆಂದಂಗೀಕರಿಸಿ ಕೃಪೆಮಾಡು ಗುರುವೇಯೆಂದು ಬಿನ್ನೈಸುತಿರ್ದ ಶಿಷ್ಯನೆಂಬುದೀಗ, 'ಊರನುರಿಗೊಳ್ಳದ ಮುನ್ನ ಕೂಡಿಕೊಳ್ಳಿ ಕೂಡಲಸಂಗಮದೇವಾ' ಎಂಬ ಶಬ್ದಕ್ಕರ್ಥ.

೧೦೨೪

ಅಱಿವಿಂದಱಿದು ತನುವ ತಟ್ಟದೆ ಮುಟ್ಟದೆ ಇದ್ದೆನಯ್ಯಾ. ಅಂತರಂಗ ಸನ್ನಿಹಿತ ಬಹಿರಂಗ ನಿಶ್ಚಿಂತನಾಗಿದ್ದೆನಯ್ಯಾ. ಸ್ವಾತಿಯ ಬಿಂದುವ ಬಯಸುವ ಚಿಪ್ಪಿನಂತೆ ಗುರುಕಾರುಣ್ಯವ ಬಯಸುತ್ತಿದ್ದೆ ಕೂಡಲಸಂಗಮದೇವಾ. ॥೫॥

- -

ನಿಯತಕಾಲದಲ್ಲಿ ಸ್ವಾತಿಯ ಸಲಿಲವ ಬಯಸಿ ಮೌಕ್ತಿಕದ ಶುಕ್ತಿ ಬಾಯಬಿಡುವಂತೆ ಅಂತರಂಗದ ಸುವಿಚಾರದಿಂ ತನ್ನ ತಾನಱಿದು ನಿಶ್ಚಯಿಸಿ ಬಹಿರಂಗದ ಸಕಲಪ್ರಪಂಚುಮಂ ಪೊರ್ದದೆ ನಿರ್ವ್ಯಾಕುಲನಾಗಿ ಶ್ರೀಗುರುಕಾರುಣ್ಯವ ಪಡೆವ ತವಕದಿಂದಿರ್ದ ಶರಣನೆಂಬುದೀ ವಚನಾರ್ಥ.

೧೦೨೫

ಆಗದ ಕಾಲಕ್ಕೆ ಆಗೆಂದಡಾಗದು. ಆಗಬೇಕೆಂದು ನಾನು ಬೆಂಬಿದ್ದೆನಯ್ಯಾ. ಆಗುಮಾಡುವಂತೆ ನೀನು ಆಡಿಬಹ ಮಕ್ಕಳಿಗೆ ಊಡಿಸುವ ತಾಯಂತೆ ನೋಡಿ ಸಲಹೆನ್ನ ಕೂಡಲಸಂಗಮದೇವಾ. ॥೬॥

- -

ಶಿವಕಾರುಣ್ಯವೆಂಬುದು ತನ್ನಿಚ್ಛೆಗಾಗದು, ಶಿವನು ಕರುಣಿಸಿದಂದಿಂಗಲ್ಲದೆ. ಇದನಱಿದ ಶರಣನು 'ಎನ್ನ ಗುಣದೋಷಂಗಳಂ ಪ್ರತಿಪಾದಿಸದೆ ಕೃಪೆಯಿಂದೀಕ್ಷಿಸಿ ರಕ್ಷಿಸೆಂ'ದು ಶಿವೋಪಾಸ್ತಿಯ ಮಾಡುತ್ತಿರ್ದನೆಂಬುದೀ ವಚನದ ತಾತ್ಪರ್ಯಾರ್ಥ.

೧೦೨೬

ಭಕ್ತಿರತಿಯೆಂಬ ಮದುವೆಗೆ ಕಣಗಿಲೆಲೆಯ ಉಂಗುವನಿಕ್ಕಿ, ಮೊಲ್ಲೆಮಲ್ಲಿಗೆಯ ತೆಱಿಯ ಕಟ್ಟಿ, ಸೇವಂತಿಗೆಯ ಚಪ್ಪರವನಿಕ್ಕಿ, ಪುಷ್ಪಜಾತಿಗಳೆಲ್ಲ ನಿಬ್ಬಣ ಬನ್ನಿರೆ, ನಮಗೆಯೂ ನಮ್ಮ ಕೂಡಲಸಂಗಮದೇವಂಗೆಯೂ ಮದುವೆ. ॥೭॥

- -

ಲಿಂಗಾನುಭಾವದ ಶ್ರದ್ಧಾತುರತ್ವವೇ ಶರಣಸತಿಗೆ ಮಹೋತ್ಸಾಹವೆನಿಸಿತ್ತೆಂಬುದೀಗ, 'ಭಕ್ತಿರತಿಯೆಂಬ ಮದುವೆಗೆ' ಎಂಬ ಶಬ್ದಕ್ಕರ್ಥ. ಆ ಮಹೋತ್ಸವಕ್ಕೆ ಪ್ರಥಮವೀಗ ಸದ್ವಿವೇಕವ್ರತವದನೆ ಕೃತನಿಶ್ಚಯಭಾವದಲ್ಲಿ ಸಂಬಂಧಿಸಲದೀಗ, 'ಕಣಗಿಲೆಲೆಯ ಉಂಗುರವನಿಕ್ಕಿ' ಎಂಬ ಶಬ್ದಕ್ಕರ್ಥ. ಆ ಮಂಗಳೋತ್ಸವಕ್ಕೆ ಸದ್ವಾಸನಾಸಂಬಂಧವಪ್ಪ ಆಚಾರವಿಚಾರಂಗಳ ನೆರಿಕೆಯಾಗಿ ಸದ್ಭಾವವೆ ಹಂದರವಾಗಿ ಸದಾಚಾರವೆ ಹಸೆಯಾಗಿ ಸರ್ವಾಚಾರವೆ ಅಲಂಕೃತೋಪಕರಣ ಸಾಧನವಾಗಿ ಸಂಭ್ರಮಿಸುತ್ತಿಹಳು ಶರಣಸತಿ ಎಂಬುದೀ ವಚನಾರ್ಥ.

೧೦೨೭

ಉದಕದ ಬರವು ವಿಶ್ವಕ್ಕೆ ಹೊಸ ಪರಿಯೆಂಬಂತೆ, ಮಾಟವ ಮಾಡುವೆನು ಜಂಗಮಕ್ಕೆ. ನಿರವಯದ ಸುಳುಹು ನಿಬ್ಬೆಱಗಿನ ಬರವಿಂಗೆ, ಕೂಡಲಸಂಗಮದೇವ ಕೇಳಯ್ಯಾ, ಇಂತಲ್ಲದೆ ನಿಮ್ಮ ನಿಜವನಱಿಯಬಾರದೆನಗೆ. ॥೮॥

- -

ಸಮುದ್ರೋದಕ ವೃಷ್ಟಿರೂಪಿಂ ಧರೆಯ ಮೇಲೆ ಸುರಿಯಲು ಜಗವೆಲ್ಲಕ್ಕೂ ಪರಿಣಾಮವಪ್ಪಂತೆ ತಾನಿದಿರೆಂಬ ಅಱಿವಿನ ತೋಱಿಕೆ ಇಲ್ಲದ ನಿರಾಕಾರವಸ್ತು ಭಕ್ತನ ಕುರಿತು ಜಂಗಮವಾಗಿ ಚರಿಸಿ ಬರಲು ಜಗತ್ಪಾವನವಹುದಾಗಿ, ಆ ಜಂಗಮಭಕ್ತಿಯಲ್ಲಿ ತತ್ಪರನಾಗಿರ್ಪ ಲಿಂಗಶರಣನು ಇಂತಲ್ಲದೆ ಲಿಂಗಾನುಭಾವ ಘಟಿಸದ ಕಾರಣವೆಂಬುದೀ ವಚನಾರ್ಥ.

೧೦೨೮

ಶಿವಶಿವಾ ಎಂಬ ಮಂತ್ರವೆನಗೆ ಅಮೃತಾರೋಗಣೆಯೊ ಎನ್ನ ತಂದೆ, ಹರಹರಾ ಎಂಬ ಮಂತ್ರವೆನಗೆ ಅಮೃತಾರೋಗಣೆಯೊ ಎನ್ನ ತಂದೆ, ಶ್ರೀವಿಭೂತಿ ರುದ್ರಾಕ್ಷಿಯೆ ಭಕ್ತಿಮುಕ್ತಿಗೆ ಸಾಧನವೊ ಎನ್ನ ತಂದೆ, ಎನಗಿದೇ ಗತಿ ಮತಿ ಚೈತನ್ಯ ಕೂಡಲ ಸಂಗಮದೇವಾಯ್ಯಾ, ನಿಮ್ಮ ನಾಮದ ರುಚಿ ತುಂಬಿತೊ ಎನ್ನ ತನುವಾ. ॥೯॥

- -

ಭಸ್ಮರುದ್ರಾಕ್ಷಧಾರಣವೆ ಭಕ್ತಿಗೆ ಕಾರಣ. ಶಿವಮಂತ್ರಸ್ಮರಣೆಯೆ ನಿತ್ಯತ್ವವನೀವ ಸುಧಾರಸಸೇವನೆಯೆಂದಱಿದು ಜಪಿಸುವ ಶರಣಂಗೆ ಮನವೆಂಬ ಕೂಪದಲ್ಲಿ ಶಿವಧ್ಯಾನಾಮೃತ ಪರಿಪೂರ್ಣವಾಗಿ ನಡೆನುಡಿ ಚೈತನ್ಯಯವೆನಿಸಿರ್ಪುದೆಂಬಂದೀ ವಚನದ ತಾತ್ಪರ್ಯಾರ್ಥ.

೧೦೨೯

ತ್ರಿವಿಧವನಿತ್ತು ರೂಹು ಮಾತು ಬಳಿಕುಂಟೆ ಅಯ್ಯಾ ? ತನುವ ಕೊಡೆನಾಗಿ ಇದಿರುತ್ತರವಿದೆ; ಮನವ ಕೊಡೆನಾಗಿ ಆನೆಂಬ ಹಂಕಾರವಿದೆ; ಧನವ ಕೊಡೆನಾಗಿ ಪ್ರಪಂಚಿನ ಬಳಕೆ ಇದೆ; ಕೂಡಲಸಂಗಯ್ಯಾ, ಎಂತು ಭಕ್ತನಪ್ಪೆನು. ॥೧೦॥

- -

ತ್ರಿವಿಧದಾಸೋಹಿ ನಾನೆಂಬನ್ನಕ್ಕರ ತ್ರಿವಿಧಕ್ಕೆ ತ್ರಿವಿಧವ ಕೊಟ್ಟುದು ಹುಸಿ. ಅದೆಂತೆಂದಡೆ, ಗುರುಸೇವೆಯಲ್ಲಿ ತನುವಂಚಕನಾದವಂಗೆ ಮಾರ್ಮಲೆವ ಪ್ರತ್ಯುತ್ತರವಿಹುದು. ಲಿಂಗಾರ್ಚನಕ್ರಿಯೆಗಳಲ್ಲಿ

ಧ್ಯಾನನಿಷ್ಠೆಗಳಿಲ್ಲದ ಮನವಂಚಕಂಗೆ ಅದ್ವೈತದ ಅಹಂಕಾರ ಬಿಡದು. ಜಂಗಮ ದಾಸೋಹದಲ್ಲಿ ಧನವಂಚಕನಾದವಂಗೆ ಉತ್ತಮ ಮಧ್ಯಮ ಕನಿಷ್ಠವೆಂದು ಪ್ರತಿಪಾದಿಸಿ ಪೂಜ್ಯಾಪೂಜ್ಯವನಱಿಸಿ ಮಾಡುವ ಪ್ರಪಂಚು ಮುಂದುಗೊಂಡುದಾಗಿ ಇಂತಪ್ಪವರು ಸದ್ಭಕ್ತರಲ್ಲವೆಂಬುದೀ ವಚನಾರ್ಥ.

೧೦೩೦

ಆಸೆ ಇಚ್ಛೆಗೆ ಎನ್ನ ಮನ ಘಾಸಿ ಮಾಡದಿರಯ್ಯಾ. ದಾಸೋಹಿಯಾಗಿರ್ಪ ದಾಸನಾಗಿರಿಸೆನ್ನ ಕೂಡಲಸಂಗಮದೇವಾ, ನಿನ್ನ ಧರ್ಮ. ॥೧೧॥

- -

ಉಪಾಧಿಯಿಂದುಪತಾಪಂಬಡದೆ ನಿರುಪಾಧಿಕದಾಸೋಹವೆ ನಿತ್ಯವೆಂಬ ಬಯಕೆಯಲ್ಲಿರ್ದ ಸದ್ಭಕ್ತನೆಂಬುದೀ ವಚನಾರ್ಥ.

೧೦೩೧

ಕೊಂಡುದಿಲ್ಲ ಕೊಟ್ಟುದಿಲ್ಲ, ಲಗ್ಗವಿಲ್ಲ ವಿಲಗ್ಗವಿಲ್ಲ. ನಮಗೆ ನಿಮಗೆ ಸಂಬಂಧವಿಲ್ಲ, ನಮಗೆ ನಿಮಗೆ ಭಾವಭೇದವಿಲ್ಲ, ಕೂಡಲಸಂಗಮದೇವಾ, ಇರು ಇರದೆ ಮಾಣು. ॥೧೨॥

- -

ಭಕ್ತಂಗೆಯೂ ದೇವಂಗೆಯೂ ಕೊಡುವ ದಾಸತ್ವವಿಲ್ಲ, ಕೊಂಬ ಉಪಾಧಿಯಿಲ್ಲ. ಹಿಡಿದು ಸೇವಿಸಲಿಲ್ಲ. ಬಿಟ್ಟು ಅಹಂಕರಿಸಲಿಲ್ಲ. ಮಾಟಕೂಟದ ಹಂಗಿಲ್ಲ. ಭಿನ್ನಭಾವವಿಲ್ಲ. ಅದೇಕೆಂದಡೆ, ಮಾಡುವ ಮಾಡಿಸಿಕೊಂಬುವ ಉಭಯವು ಶಿವನಾದ ಕಾರಣ, ಶಿವನಧಿಕಾರವಿಲ್ಲ ಸದ್ಭಕ್ತಂಗೆ ಎಂಬುದೀ ವಚನಾರ್ಥ.

೧೦೩೨

ಭಕ್ತಿ ಎಂಬುದು ಅನಿಯಮ ನೋಡಯ್ಯಾ. ಅದು ವಿಷದ ಕೊಡ, ತುಡುಕಬಾರದು, ಅಂಗಕ್ಕೆ ಹಿತವಲ್ಲ, ಸಿಂಗಿ ನೋಡಯ್ಯಾ ಅದು, ವಿಚಿತ್ರ ವಿಸ್ಮಯ ಕೂಡಲಸಂಗಮದೇವಾ ! ॥೧೨॥

- -

ಭಕ್ತಿ ಎಂಬುದು ಅಪ್ರಮಾಣಿ, ಅತಿ ದುರ್ಘಟ, ಅಸಾಧ್ಯ, ಅಂಗಗುಣವಿರೋಧಿ, ಅಪೂರ್ವ, ಅತಿಶಯವಾದುದಱಿಂ ನಿಷ್ಕಾಮಪರರಿಂಗಲ್ಲದೆ ಅಳವಡದೆಂಬುದೀ ವಚನಾರ್ಥ.

೧೦೩೩

ಹದಿನಾಱಿರ್ದಡೆ ಎಂಟ ಮಾಡುವ ಸಂಗಯ್ಯದೇವರು, ಎಂಟಿರ್ದಡೆ ನಾಲ್ಕ ಮಾಡುವ ಸಂಗಯ್ಯದೇವರು, ನಾಲ್ಕಿರ್ದಡೆ ಎರಡ ಮಾಡುವ ಸಂಗಯ್ಯದೇವರು, ಎರಡಿರ್ದಡೆ ಒಂದ ಮಾಡುವ ಸಂಗಯ್ಯದೇವರು, ಆ ಒಂದು ಇಲ್ಲವೆಯ ಮಾಡುವ ಸಂಗಯ್ಯದೇವರು. ತಿರಿಕನ ಶೋಭಿತನ ಮಾಡುವ ಸಂಗಯ್ಯದೇವರು, ತಿರಿತಿನ ಹೋದಡೆ ಹುಟ್ಟದೆನಿಸುವ ಸಂಗಯ್ಯದೇವರು, ಇದಾವುದಕ್ಕೆ ಸೆಡೆಯದಿರ್ದಡೆ ಕೂಡಲಸಂಗಮದೇವರು ತನ್ನಂತೆ ಮಾಡುವ. ॥೧೪॥

- -

ಭಕ್ತನಾದ ಬಳಿಕ ದೈವಾಧೀನದಿಂ ಹಿರಿಹಿರಿದಾದ ಸಕಲೈಶ್ವರ್ಯ ಭೋಗಾದಿಭೋಗಂಗಳು ಕಿಱಿಕಿಱಿದಾಗಿ ಕೆಟ್ಟು ದಾರಿದ್ರ್ಯ ದುಃಖವೆಡೆಗೊಂಡು ಕರಕಷ್ಟನೆನಿಸಿದಡೂ ದೃಢನಿಷ್ಠೆ ಚಲಪದದ ಬಲುಹ ಬಿಡದಿರ್ದಡೆ ಶಿವನ ಕೃಪೆಯಹುದೆಂಬುದೀ ವಚನದ ತಾತ್ಪರ್ಯಾರ್ಥ.

೧೦೩೪

ಪವಿತ್ರಲಿಂಗಕ್ಕೆ ಅಪವಿತ್ರವ ಕೊಡಲೊಲ್ಲೆನೆಂಬುದು ಎನ್ನ ಭಾಷೆ. ಧರೆಯೊಳು ಬೆಳೆದುವೆಲ್ಲಾ ಅಪವಿತ್ರವೆಂಬುದ ಬಲ್ಲೆನಾಗಿ ನಾನವನೊಲ್ಲೆ. ಪಾತಿಗೆಟ್ಟ ಹೊಲದಲ್ಲಿ ಒಂದು ಲಿಂಗಮೂರ್ತಿದೋಱಿದಡೆ ಅದು ದಿವ್ಯಕ್ಷೇತ್ರ, ಅಲ್ಲಿದ್ದವರೆಲ್ಲರೂ ಪವಿತ್ರಕಾಯರು. ಇದು ಕಾರಣ, ಅನಘ ಅನಾದಿ ಜಂಗಮಮುಖದಿಂದೊಗೆದ ಪ್ರಸಾದ ಕೂಡಲಸಂಗಯ್ಯಾ ನಿಮಗೆ ನೈವೇದ್ಯ, ಎನಗೆ ಪ್ರಸಾದ ತಪ್ಪದು, ನಿಮ್ಮವರು ಸವಿದ ಸವಿಯ ಕೈಯಾಂತು ಕೊಂಡುದ ನಾ ಬಲ್ಲೆನಾಗಿ. ॥೧೫॥

- -

ಭೂತಜಾತಪದಾರ್ಥವೆಲ್ಲವೂ ಮಾಯೋಚ್ಛಿಷ್ಟವಾದ ಕಾರಣ ಲಿಂಗಾರ್ಪಿತಕ್ಕೆ ಯೋಗ್ಯವಲ್ಲೆಂದಱಿದು ಮಂತ್ರಸಂಸ್ಕಾರಪಿಂಡದಲ್ಲಿ ಲಿಂಗೋದಯವಾದಡೆ ಪರಮಪವಿತ್ರಸ್ವರೂಪರೆಂದು ತಿಳಿದು ಅಂತಪ್ಪ ನಿರ್ದೋಷಿಯಾದ ಚಿದ್ರೂಪಜಂಗಮದ ಪ್ರಸಾದವ ಲಿಂಗಕ್ಕೆ ನಿವೇದಿಸಿ ತಚ್ಛೇಷವನನು ಭವಿಸುತ್ತಿಹನು ಪ್ರಸಾದಿ. ಶಿವನು ಭಕ್ತಪ್ರಸಾದಸಂತುಷ್ಟನಾದ ಕಾರಣವೆಂಬುದೀ ವಚನದ ತಾತ್ಪರ್ಯಾರ್ಥ.

೧೦೩೫

ಬಿತ್ತು ಬೆಳೆಯಿತ್ತು, ಕೆಯಿ ಕೊಯ್ಯಿತ್ತು, ಗೂಡು ಮುಱಿಯಿತ್ತು, ಕುತ್ತರಿ ಒಟ್ಟಿತ್ತು, ಒಕ್ಕಿತ್ತು, ತೂಱಿತ್ತು, ಅಳೆಯಿತ್ತು, ಸಲಗೆ ತುಂಬಿತ್ತು. ಕೂಡಲಸಂಗಮದೇವಯ್ಯಾ. ಮೇಟಿ ಕಿತ್ತಿತ್ತು, ಕಣಜ ಹಾಳಾಯಿತ್ತಯ್ಯಾ. ॥೧೬॥

- -

ಶರಣ ತನ್ನ ತನುವೆಂಬ ಸುಕ್ಷೇತ್ರದಲ್ಲಿ ಮುಕ್ತಿಹೇತುವ ಶಿವತತ್ತ್ವಸಂಬಂಧಿಸಲು ಅಲ್ಲಿ ವಿವೇಕಾಂಕುರ ತಲೆದೋಱೆ, ಸರ್ವಾನುಭಾವಕ್ರಿಯೆಗಳಿಂ, ವರ್ಧನವಾಗಲದೀಗ 'ಬಿತ್ತು ಬೆಳೆಯಿತ್ತು' ಎಂಬ ಶಬ್ದಕ್ಕರ್ಥ. ಇಂತು ಫಲಿಸಿದ ಸದ್ಭಕ್ತಿ ಕ್ರಿಯೆಗಳ ನಿಷ್ಠಾಮುಖದಿಂ ತದಂಗದಿಂ ಬೇರ್ಪಡಿಸಿ, ಮನದಲ್ಲಿ ಒಂದುಗೂಡಿ, ಸಾವಧಾನಮುಖದಿಂ ಪೂರ್ವಭಾಗೆಯನುಳಿದು ಉತ್ತರ ಭಾಗೆಯನಂತರ್ಮುಖದಲ್ಲಿ ವೇದಿಸಲದೀಗ 'ಕೆಯ್ಯಕೊಯ್ಯಿತ್ತು, ಗೂಡು ಮುಱಿಯಿತ್ತು, ಕುತ್ತರಿ ಒಟ್ಟಿತ್ತೆಂಬ ಶಬ್ದಕ್ಕರ್ಥ. ಆ ನಿಜಾವಧಾನದ ಅಂತರ್ಮುಖಕ್ರಿಯೆಗಳನನುಭವಮುಖದಿಂ ಮಥನಿಸಿ, ಸುಜ್ಞಾನಮುಖದಿಂ ಶುದ್ಧವ ಮಾಡಲದೀಗ 'ಒಕ್ಕಿತ್ತು ತೂಱಿತ್ತೆಂಬ' ಶಬ್ದಕ್ಕರ್ಥ.

೧೦೩೬

ಒಡೆದ ಹಂಚು ಮರಳಿ ಮಡಕೆಯಾಗಬಲ್ಲುದೆ ? ಕೆಟ್ಟ ವ್ರತಗೇಡಿ ಭಕ್ತನಾಗಬಲ್ಲನೆ ? ಬಾಳೆಗೆ ಫಲವೆ ಕಡೆ. ಚೇಳಿಗೆ ಗರ್ಭವೆ ಕಡೆ. ಕೂಳು ಮಾಱಿಹೆಡೆಯುಂಟು, ಸೀರೆ ಮಾಱಿಹೆಡೆಯಂಟು, ಭಕ್ತಿ ಮಾಱಿಹೆಡೆಯುಂಟೆ ಕೂಡಲಸಂಗಮದೇವಾ ? ॥೧೭॥

- -

ವ್ರತ ತಪ್ಪಿದಲ್ಲಿ ಪ್ರಾಣವೇ ಕಡೆಯಲ್ಲದೆ ಪ್ರಾಯಶ್ಚಿತವಿಲ್ಲವೆಂಬುದೀ ವಚನದ ತಾತ್ಪರ್ಯಾರ್ಥ

೧೦೩೭

ಅಹುದಹುದು, ಕೆಱಿಯ ತಪ್ಪಿ ಬಾವಿಯ ಬಿದ್ದಂತೆ. ಮುಳ್ಳ ಕಳೆದು ದಸಿಯ ಬೆಟ್ಟದಂತೆ. ಬದುಕಿದ ಹಕ್ಕಿಯ ಕಿಚ್ಚಿನೊಳಗಿಕ್ಕುವರೆ ಕೂಡಸಲಸಂಗಮದೇವಾ ? ॥೧೮॥

- -

ಭವಿತ್ವವಳಿದು ಭಕ್ತನಾಗಿ ಅನುಸರಿಸಿ ನಡೆಯಲು ಅದು ಕೆಱಿಯ ತಪ್ಪಿ ಬಾವಿಯ ಬಿದ್ದಂತೆ, ಮೇಲು ಶೀಲವನಂಗೀಕರಿಸಲು ಅದು ಮುಳ್ಳ ಕಳೆದು ದಸಿಯ ಬೆಟ್ಟದಂತೆ. ಅದಕ್ಕನುಕೂಲವಾದವರಿಗೆ ಬದುಕಿದ ಹಕ್ಕಿಯ ಕಿಚ್ಚಿನೊಳಗಿಕ್ಕುವಂತೆ ದೋಷ ತಪ್ಪದೆಂಬುದೀ ವಚನಾರ್ಥಸೂಚನೆ.

೧೦೩೮

ಊರಮಾರಿಯ ಮೂಗ ಕೊಯ್ವೆ, ಆಲದ ಬ್ರಹ್ಮನ ಹಲ್ಲ ಕಳೆವೆ. ಅಂತರದವ ನಮ್ಮ ಲೆಂಕ ನೋಡಾ, ಆಕಾಶದವ ನಮ್ಮಾಳು ನೋಡಾ, ಎಮಗೆ ಕೂಡಲಸಂಗಯ್ಯನುಂಟು, ಕಟ್ಟುಜವನೆಂಬ ತರುವಲಿಗೊಱಿಯ. ॥೧೯॥

- -

ಮೃತ್ಯು ಮಾರಿ ಮೊದಲಾದ ನಿಕೃಷ್ಟ ದೈವಂಗಳ ಭಂಡುಮಾಡಿ ಕಳೆವ ಪ್ರತಿಜ್ಞೆ ವೀರಮಾಹೇಶ್ವರಗಿದೆಂಬುದೀ ವಚನದ ತಾತ್ಪರ್ಯಾರ್ಥ.

೧೦೩೯

ದೇವರು ಕಾಮನ ಕೊಂದನೆಂಬರು. ದೇವಂಗಿಬ್ಬರು ಹೆಂಡಿರುಂಟು. ದೇವರು ಕಾಮನ ಕೊಂದುದಿಲ್ಲ ಕಾಣಿಭೋ ! ಕಾಮ ವೈರಿಗಳು ಕಾಮನ ಕೊಂದು ಮೂವರಿತ್ತಲೈದಾರೆ ಕೂಡಲಸಂಗಯ್ಯನಲ್ಲಿ, ಶುಕನು, ಸೊನ್ನಲಿಗೆಯ ಸಿದ್ಧರಾಮಯ್ಯನು, ಹನುಮಂತನು. ॥೨೦॥

- -

ಶಿವನು ಕಾಮನ ಅಚೇತನದೊಡಲ ಭೌತಿಕಾಗ್ನಿಯಿಂದುರುಹಿ ಚೇತನವಾದ ಜೀವವನುಳುಹಿ ಮನಸಿಜನೆನಿಸಿದ ಪಂಥಕ್ಕೆ ಮನವೊಲಿದು ಕಾಮಿನಿಯರೊಡನಾಡಿದ ಕಾರಣ ಕಾಮಾರಿಯೆಂಬ ಬಿರಿದು ಸಲ್ಲದೆ ಪೋಪುದೆಂದು ಬಳಿಕ ಅಚೇತನವಾದ ಮನಃಕಾಮನ ಶಿವಜ್ಞಾನಾಗ್ನಿಯಿಂ ದಹಿಸಿ ಹುಟ್ಟುಗೆಡಿಸಿ ಸತಿಯರ ಸಂಗವನೊಲ್ಲದ ಕಾರಣ ಮನೋಭವನ ಜಯಿಸಿದ ಶಿವನ ಬಿರಿದಿನ ವಿಕ್ರಮರು ಶರಣರೆಂಬುದೀ ವಚನಾರ್ಥ.

೧೦೪೦

ಎಮ್ಮಯ್ಯನ ಬಲ್ಲವರು ಒಮ್ಮೆಯೂ ಅರ್ಪಿಸರು. ಅರ್ಪಿಸುವನ್ನಬರ ಎಮ್ಮಯ್ಯ ಸುಮ್ಮನಿರನು. ಬೆಂದ ಬಿಸಿಯಾಱಿದಡೆ ಪ್ರಾಣೇಶನೊಲ್ಲನು. ಕೂಡಲಸಂಗಮದೇವನುಪಚಾರದರ್ಪವನೋಗಡಿಸುವ.॥೨೪॥

- -

ಲಿಂಗಾರ್ಪಿತಕ್ಕೆಂದು ಬಂದ ಸಕಲಸುಖಂಗಳ ಶಿವಭಾವದಿಂದರ್ಪಿಸಲಱಿಯದೆ ಜೀವಭಾವದಿಂದರ್ಪಿಸಲು ಅದು ಲಿಂಗಾರ್ಪಿತವಾಗದಾಗಿ ಉಪಚಾರ ಮಾತ್ರವಲ್ಲದೆ ಸಹಜವಲ್ಲ. ಇದನುಳಿದ ಸಹಜಸಂಬಂಧನವಱಿದ ಪರಮಪ್ರಸಾದಿಗಳು ಕೊಟ್ಟುಕೊಂಬ ದಂದುಗವಳಿದುಳಿದ ಕಾರಣ ಲಿಂಗವವರಲ್ಲಿ ಸದಾನಂದ ಸುಖದಿಂದಿರ್ಪುದೆಂಬುದೀ ವಚನಾರ್ಥ.

೧೦೪೧

ಬಾಗಿಲ ಮುಂದೆ ಬಾಳೆ ಬಿತ್ತುವುದಯ್ಯಾ, ಬಾಳೆ ಗೊನೆವಾಗದ ಮುನ್ನ ಕೂಡಿಕೊಳ್ಳಿ ಕೂಡಲಸಂಗಮದೇವನ. ॥೨೨॥

ಸಕಲ ಕರಣಂಗಳು ಬಾಹ್ಯಾಭ್ಯಂತರದೊಳೆಡೆಯಾಡುತ್ತಿಹವು. ಮನೋದ್ವಾರದಿಂದ ಅದು ನಿಮಿತ್ತಂ ಮನಕ್ಕೆ ಬಾಗಿಲೆಂಬ ನಾಮವಾಯಿತ್ತು. ಆ ಮನೋಮುಖದಲ್ಲಿ ವಿವೇಕವೆಂಬ ಕದಳಿಯನುಂಟು ಮಾಡಿದಲ್ಲದೆ ಶುಭಮಂಗಲವೆನಿಸದೆಂಬುದೀಗ. 'ಬಾಗಿಲ ಮುಂದೆ ಬಾಳೆ ಬಿತ್ತುವುದಯ್ಯ' ಎಂಬ ಶಬ್ದಕ್ಕರ್ಥ. ಆ ವಿವೇಕಕರ್ಮಫಲಪ್ರಾಪ್ತಿಯನೆಯ್ದಲು ನಾಶವಹುದಾಗಿ ಆ ದೇವತಾ ಉತ್ಸಾಹಕ್ಕೆ ಶುಭವಾಗದು. ಅಂತಾಗದ ಮುನ್ನವೆ ಶಿವಲಿಂಗವನಂತರಂಗದಲ್ಲಿ ಸಾಹಿತ್ಯವ ಮಾಡಿಕೊಳ್ಳಬೇಕು. ಶಿವಜ್ಞಾನಿಗಳೆಂಬುದೀಗ, 'ಬಾಳೆ ಗೊನೆವಾಗದ ಮುನ್ನ ಕೂಡಿಕೊಳ್ಳಿ ಕೂಡಲಸಂಗಮದೇವನ' ಎಂಬ ಶಬ್ದಕ್ಕರ್ಥ.

೧೦೪೨

ಚಂದ್ರಶಿಲೆಯಲ್ಲಿ ಪಾವಕ ಹುಟ್ಟಿ, ಇಡೆಪಿಂಗಳ ಮಧ್ಯದಲ್ಲಿ ಅನಿಲ ತುಂಬಿ ಅರಿದರಿದು ನಿಮ್ಮ ನೆನೆವ ಪರಿಕರ ಹೊಸತು ! ಅಜೆವಡೆ ತಲೆಯಿಲ್ಲ, ಹಿಡಿವಡೆ ಮುಡಿಯಿಲ್ಲ, ಕೂಡಲಸಂಗಮದೇವಾ, ನಿಮ್ಮ ಶರಣನ ಪರಿಯಿಂತುಟು ಅರಿದರಿದು. ॥೨೩॥

ಶಾಂತಿಕಲಾಸಂಬಂಧವಪ್ಪ ನಿರ್ಮಲಪ್ರಕಾಶಾಂಗದಲ್ಲಿ ಮೂಲಾಗ್ನಿಪ್ರಕಾಶವಾಗಲದೀಗ, 'ಚಂದ್ರಶಿಲೆಯಲ್ಲಿ ಪಾವಕ ಹುಟ್ಟಿ'ಯೆಂಬ ಶಬ್ದಕ್ಕರ್ಥ. ಆ ಮೂಲಾಗ್ನಿಪ್ರಕಾಶಮಂತ್ರಚೈತನ್ಯವಾಗಿ ನಾಳತ್ರಯಂಗಳಲ್ಲಿ ತೀವಿ ಚೇತನಿಸುತ್ತಿರ್ದಿತ್ತೆಂಬುದೀಗ, 'ಇಡಾಪಿಂಗಳ ಮಧ್ಯದಲ್ಲಿ ಅನಿಲ ತುಂಬಿ'ಯೆಂಬ ಶಬ್ದಕ್ಕರ್ಥ. ಆ ಮಂತ್ರಚೈತನ್ಯವಾವರಿಸಿ ಶಿವೋಹಂ ಶಿವೋಹಂ ಎನುತ್ತಿರ್ಪ ಶಿವಯೋಗಿಯ ನಿಲವಾರಿಗೆಯೂ ಅಳವಡದೆಂಬುದೀಗ, 'ಅರಿದರಿದು ನಿಮ್ಮ ನೆನೆವ ಪರಿಕರ ಹೊಸತೆ'ಂಬ ಶಬ್ದಕ್ಕರ್ಥ. ಇಂತಪ್ಪ ಶಿವಯೋಗಿಗೆ ಭಿನ್ನವಿವೇಕವಿಲ್ಲದ ಕಾರಣವದ ಛೇದಿಸಿಹನೆನಲಿಲ್ಲ ಕರ್ಮಬಂಧವಿಲ್ಲದ ಕಾರಣವದ ನಿಗ್ರಹಿಸಿದೆನೆನಲಿಲ್ಲವೆಂಬುದೀಗ, 'ಅಜೆವಡೆ ತಲೆಯಿಲ್ಲ, ಹಿಡಿವಡೆ ಮುಡಿಯಿಲ್ಲ ನಿಮ್ಮ ಶರಣನ ಪರಿಯಿಂತುಟು ಅರಿದರಿದು'ಯೆಂಬ ಶಬ್ದಕ್ಕರ್ಥ.

೧೦೪೩

ಪ್ರಾಣಾದಿ ವಾಯುಗಳ ಕಳೆದು ಭಕ್ತರಾದರೆಮ್ಮವರು. ಅದೆಂತೆಂದಡೆ : ಅಲ್ಲಲ್ಲಿರ್ದ ದಶವಾಯುಗಳ ದಶಸ್ಥಾನದಲ್ಲಿ ನಿಲಿಸಿ, ಭಕ್ತಿಯ ಮಾಡುವ ಪರಿಯ ಹೇಳಿಹೆ ಕೇಳಿರಣ್ಣಾ. ಪ್ರಾಣವಾಯುವ ನಿಲಿಸಿದರು ಪ್ರಾಣಲಿಂಗದಲ್ಲಿ. ಅಪಾನವಾಯುವ ನಿಲಿಸಿದರು ಪ್ರಸಾದಲಿಂಗದಲ್ಲಿ. ವ್ಯಾನವಾಯುವ ನಿಲಿಸಿದರು ಚತುರ್ವಿಧಪದದ ಬಯಕೆಯಳಿದ ಲಿಂಗಧ್ಯಾನದಲ್ಲಿ. ಉದಾನವಾಯುವ ನಿಲಿಸಿದರು ಉದ್ದೇಶದಿಂದ ನಡೆವ ಅನ್ಯಗಮನವ ಕೆಡಿಸಿ ನಿರ್ಗಮನವೆಂಬ ಸುಚಿತ್ತದಲ್ಲಿ. ಸಮಾನವಾಯುವ ನಿಲಿಸಿದರು ಸಮ್ಯಗ್

ಜ್ಞಾನದ ಸ್ವಯಂಜ್ಯೋತಿಯ ಬೆಳಕಿನ ಕಳೆಯಲ್ಲಿ. ನಾಗವಾಯುವ ನಿಲಿಸಿದರು ಸುಚಿತ್ತ ಸುಬುದ್ಧಿ ಸಂಗೋಷ್ಠಿಯ ಸುಜ್ಞಾನದ ಬೆಳಕಿನ ಕಳೆಯೊಳಗೆ ಸುಳಿದಾಡುವ ಮಹಾಲಿಂಗವಂತರ ಅನುಭಾವದಲ್ಲಿ. ಕೂರ್ಮವಾಯುವ ನಿಲಿಸಿದರು ಶಿವಶ್ರುತಿ, ಶಿವಮಂತ್ರ, ಷಡಕ್ಷರಿಬೀಜಂಗಳ ಜಪಿಸುವಲ್ಲಿ. ಕಿಕಿಲವಾಯುವ ನಿಲಿಸಿದರು ಚತುರ್ವಿಧ ಪುರುಷಾರ್ಥಂಗಳ ಕಳೆದು ಷಡ್ವಿಧ ಭಕ್ತಿರತಿಯಾನಂದ ಸೊಮ್ಮುಸಂಬಂಧದ ಕೂಟದಲ್ಲಿ, ತೆಱಹಿಲ್ಲದ ತನ್ನ ತಾನಱಿವಲ್ಲಿ. ದೇವದತ್ತ ವಾಯುವ ನಿಲಿಸಿದರು ಶಿವಲಿಂಗವೆ ಲಿಂಗ, ಶಿವ ಭಕ್ತರೆ ಕುಲಜರು, ಶಿವಾಗಮವೆ ಆಗಮ, ಶಿವಾಚಾರವೆ ಆಚಾರವೆಂಬ ಏಕೋಭಾವದ ನಿಷ್ಠೆಯಿಂದ ಭಾಷೆಯ ನುಡಿದು ದೃಢವಿಡಿದು ಅನ್ಯವ ಜಱಿವಲ್ಲಿ. ಧನಂಜಯ ವಾಯುವ ನಿಲಿಸಿದರು ಅನಂತಪರಿಯಲ್ಲಿ ಧಾವತಿಗೊಂಡು ಕಾಯಕ್ಲೇಶದಿಂದ ತನುಮನ ಬಳಲಿ ಗಳಿಸಿದಂತಹ ಧನವ ಅನರ್ಥವ ಮಾಡಿ ಕೆಡಿಸದೆ ಲಿಂಗಾರ್ಚನೆಯಂ ಮಾಡಿ ಗುರುಲಿಂಗ ಜಂಗಮವೆಂಬ ತ್ರಿವಿಧ ದಾಸೋಹದ ಪರಿಣಾಮದಲ್ಲಿ. ಈ ದಶವಾಯುಗಳ ಪ್ರಯತ್ನಕ್ಕೆ ಧ್ಯಾನ, ಗಮನ, ಸಂಗ, ಸುಬುದ್ಧಿ, ನಿರ್ಗುಣ, ತಮಂಧ, ಕೋಪ, ಚಿಂತೆ ಎಂಬಿವರ ದುಶ್ಚಿತ್ತವಂ ಮುಱಿದು ಅಹಂಕಾರವಳಿದು, ದಶವಾಯುಗಳ ದಶಸ್ಥಾನದಲ್ಲಿ ನಿಲಿಸಿ, ಭಕ್ತರಾಗಬೇಕು ಕಾಣಿರೆ, ಎಲೆ ಅಣ್ಣಗಳಿರಾ ಅಲ್ಲಲ್ಲಿ ಇವಱ ಓತು ಭರವ ಕೆಡಿಸಿ ತಗ್ಗಲೊತ್ತಿ ಮೇಲೆ ತಲೆಯೆತ್ತಲೀಯದೆ, ದಶವಾಯುಗಳ ದಶಸ್ಥಾನದಲ್ಲಿ ನಿಲಿಸಿ, ದಶಾವಸ್ಥೆಯಿಂ ಲಿಂಗವನೊಲಿಸಿದ ಮಹಾಮಹಿಮನ ಮಸ್ತಕವೇ ಶ್ರೀಪರ್ವತ ಲಲಾಟವೆ ಕೇತಾರವೆನಿಸುವುದು. ಆತನ ಹೃದಯದಲ್ಲಿ ಅಷ್ಟಾಷಷ್ಟಿ ತೀರ್ಥಂಗಳಪ್ಪವು. ಆತನ ಶ್ರೀಪಾದ ವಾರಣಾಸಿ ಅವಿಮುಕ್ತಿಕ್ಷೇತ್ರದಿಂದ ವಿಶೇಷ. ಆತನ ಪಾದಾಂಗುಷ್ಠ ಬಿಂದುವಿಗೆ ಸಮಸ್ತ ತೀರ್ಥಕ್ಷೇತ್ರ ಸಪ್ತಸಮುದ್ರಂಗಳಂ ತಿರುಗಿ ಮಿಂದ ಒಂದು ಕೋಟಿ ಫಲ ಸರಿಯಲ್ಲ. ಆತನು ಸತ್ಯವೆಂಬ ವ್ರತವನೇಱಿ ನಿಷ್ಠೆಯೆಂಬ ಕೊನೆಯ ಹಿಡಿದು ಪರಬ್ರಹ್ಮವೆಂಬ ಫಲವ ಸುವಿವೇಕದಿಂ ಸವಿದು ಸುಖಿಯಾಗಿರ್ಪನಾಗಿ. ಆತನು ಪುಣ್ಯಾಪಾಪವೆಂಬೆರಡಱ ಸುಖದುಃಖದವನಲ್ಲ. ಗತಿಯ ವಗತಿಯೆಂಬೆರಡಱ ಮತಿಗೇಡಿಯಲ್ಲ. ಧರ್ಮಕರ್ಮವೆಂಬೆರಡಱ ಭ್ರಮೆಯವನಲ್ಲ. ಆತನ ನಿಲವು ಪುಷ್ಪನುಂಗಿದ ಪರಿಮಳದಂತೆ, ಆಲಿಕಲ್ಲ ನುಂಗಿದ ಅಪ್ಪುವಿನಂತೆ, ಅಗ್ನಿಯಾಹುತಿಗೊಂಡ ಘೃತದಂತೆ, ಕಬ್ಬುನವುಂಡ ನೀರಿನಂತೆ, ಉರಿಯುಂಡ ಕರ್ಪೂರದಂತೆ ಆತಂಗೆ ತೋಱಲೊಂದು ಪ್ರತಿಯಿಲ್ಲ, ಎಣೆಯಿಲ್ಲ. ಆತ ನಿತ್ಯನಿರಂಜನ ಚಿನ್ಮಯ ಚಿದ್ರೂಪ ನಿಶ್ಚಿಂತ ನಿರಾಳನಯ್ಯಾ ಕೂಡಲಸಂಗಮದೇವಾ, ನಿಮ್ಮ ಪ್ರಾಣಲಿಂಗಸಂಬಂಧಿಯ ನಿಲವು ಮಹವ ನುಂಗಿದ ಬಯಲು. ॥೨೪॥

- -

ದಶವಾಯುವಿಕಾರವಳಿದುಳಿದ ಶಿವಯೋಗಿಯ ನಿಲವನುಪಮಿಸಬಾರದೆಂಬುದೆ ವಚನದ ತಾತ್ಪರ್ಯಾರ್ಥ.

೧೦೪೪

ಹಗಲಾಯಿತ್ತು ಹೋಗದು, ಇರುಳಾಯಿತ್ತು ನಿದ್ರೆಬಾರದು. ಉಳಿದವರ ಮಾತು ಸಾಗದು, ಉಳಿದವರ ಮಾತು ಸಾಗದು, ಕೂಡಲಸಂಗಯ್ಯನಲ್ಲದೆ ಒಲ್ಲದು ಮನ. ॥೨೫॥

- -

ಲಿಂಗರತಿ ಮನಪ್ರವೇಶವಾಗಿ ಅನ್ಯವಿಷಯಭ್ರಾಂತುಗಳಳಿದುಳಿದ ಶರಣಸತಿ ಜಾಗ್ರದ ವ್ಯವಹಾರಧರ್ಮ, ಸ್ವಪ್ನದ ಭ್ರಾಂತು ಮುಖ ಹಿಂಗಿ ಕರಣಂಗಳ ಶಬ್ದಸಂದಣಿಗಿಚ್ಛೈಸದೆ ಕಾಮಾತುರಿಯಾಗಿರ್ಪಳೆಂಬುದೀ ವಚನಾರ್ಥ.

೧೦೪೫

ಒಡನಿರ್ದ ಸತಿಯೆಂದು ನಂಬಿದೆ ನಂಬಿದೆ. ಕೈವಿಡಿದ ಸಜ್ಜನ ಸತಿಯೆಂದು ನಂಬಿದೆ ನಂಬದೆ ನಿನ್ನ. ಅಯ್ಯೋ ನಮ್ಮಯ್ಯನ ಕೈನೊಂದಿತು. ಕಳೆದುಕೊಡಾ ಎಲೆ ಚಾಂಡಾಲಗಿತ್ತಿ, ಕಳ್ಳನ ಮನೆಗೊಬ್ಬ ಬಲುಗಳ್ಳ ಬಂದಡೆ ಕೂಡಲಸಂಗಯ್ಯನಲ್ಲದಾರೂ ಇಲ್ಲ. ॥೨೬॥

- -

ಚಿಚ್ಛಕ್ತಿಸಮೇತವಾದ ಅವಿರಳ ಶಿವತತ್ತ್ವಸ್ವರೂಪ ತಾನೆಂದಱಿದು ಆಕೆಯ ಕೈವಿಡಿದು ಶ್ರದ್ಧಾಭಾವಿಯಾಗಿರ್ದ ಶರಣನೆಂಬುದೀಗ, 'ಒಡನಿರ್ದ ಸತಿಯೆಂದು ನಂಬಿದೆ ನಂಬಿದೆ ಕೈವಿಡಿದ ಸಜ್ಜನಸತಿಯೆಂದು ನಂಬಿದೆ ನಂಬಿದೆ, ನಿನ್ನ ಎಂಬ ಶಬ್ದಕ್ಕರ್ಥ. ಇಂತೀ ಸರ್ವಸೂತಕದೋಷರಹಿತವಾದ ಚಿಚ್ಛಕ್ತಿಯ ಕೈಹಿಡಿದ ಸೇವ್ಯಗುಣದಿಂ ಶರಣ ತನ್ನಂಗದಲ್ಲಿ ಲಿಂಗ ಬಂದು ಸ್ವಾಯತವಾಗಲು ದೃಢಬುದ್ಧಿಯಿಂದಾ ಶಿವಭಾವ ಅಂತಃಕರಣಂಗಳ ಬಂಧನಕ್ಕೊಳಗಾಗದಂತೆ ಸಮ್ಯಕ್ ಜ್ಞಾನವ ಪ್ರಭಾವಿಸುತಿರ್ದನೆಂಬುದೀ ವಚನಾರ್ಥ.

೧೦೪೬

ಮನದ ತಲೆವಾಗಿಲಲ್ಲಿ ಸದಾ ಸನ್ನಿಹಿತನಾಗಿರು ಧರ್ಮಿ ! ಎನಗೆ ಬರ್ಪ ಸುಖಂಗಳನವಧರಿಸು ದಾನಿ! ನಿಮ್ಮ ಮುಟ್ಟಬಂದಲ್ಲದೆ ಮುಟ್ಟೆನೆಂಬ ನಿಷ್ಠೆಗೆ ನೀನೊಡೆಯ ಕೂಡಲಸಂಗಮದೇವಾ. ॥೨೭॥

- -

ಮನದ ನೆನಹಿನಲ್ಲಿ ಲಿಂಗವನನುಸಂಧಾನಿಸಿ, ಸರ್ವೇಂದ್ರಿಯಸುಖವನರ್ಪಿಸಿ ತತ್ಪ್ರಸಾದವನನುಭವಿಸುವ ದೃಢಭಾವ ಕರಿಗೊಂಡಿರ್ದ ಶರಣನೆಂಬುದೀ ವಚನಾರ್ಥ.

ಇತರ ವಚನ ಟೀಕೆ*

೧೦೪೭

ವೇದಕ್ಕೊಳಿಕೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ, ತರ್ಕದ ಬೆನ್ನಬಾರನೆತ್ತುವೆ, ಆಗಮದ ಮೂಗ ಕೊಯಿವೆ, ನೋಡಯ್ಯ, ಕೂಡಲಸಂಗಮದೇವಯ್ಯಾ, ಮಾದಾರ ಚನ್ನಯ್ಯನ ಮನೆಯ ಮಗ ನಾನಯ್ಯ. ॥೧॥

- -

ವೇದ ಆಗಮ ತರ್ಕ ಪುರಾಣಂಗಳಿಗೆ ಹೊಱಗು ಮಹಾಶಿವನು, ಅಂಥಾ ಶಿವನನಱಿದಾತನೆ ಶಿವನು. ಅಂಥಾ ಶಿವಶರಣ ಮಾದಾರ ಚನ್ನಯ್ಯನ ತೊತ್ತಿನಮಗನೆಂಬುದೀ ವಚನದರ್ಥ.

೧೦೪೮

ಹತ್ತು ಸಾವಿರ ಗೀತವ ಹಾಡಿ ಅರ್ಥವಿಟ್ಟಲ್ಲಿ ಫಲವೇನು ಮುಟ್ಟುವ ತೆಱನನಱಿಯದನಕ್ಕ ? ಕಟ್ಟಿದರೇನು ಬಿಟ್ಟರೇನು ಮನವು ಲಿಂಗದಲ್ಲಿ ಮುಟ್ಟದನ್ನಕ್ಕ ? ಮಾತಿನಲೆ ಒಲಿಸಿ ಮಹದಪ್ಪ ಲಿಂಗವ ಕಂಡೆನೆಂಬ ಪಾತಕನ ಮೆಚ್ಚ ಕೂಡಲಸಂಗಮದೇವಾ. ॥೨॥

- -

ಮನವು ಲಿಂಗದಲ್ಲಿ ಅಡಗದೆ ಹೇಳುವ ಕೇಳುವ ಕೋಟಿ ವಚನಂಗಳನೋದಿದವರ ಜ್ಞಾನವೆಂಬುದೀ ವಚನದರ್ಥ.

೧೦೪೯

ನಾಲಗೆ ಉಂಡರು ಬೇಗ ಮನವೆ ಸಾಕ್ಷಿ ಸಾಲದೆ ಅಯ್ಯಾ? ಮಾಲೆಗಾಱನ ಕೇಳಿ ನನೆ ಅರಳೂದೆ? ಆಗಮವನಿದಿರಿಂಗೆ ತೋಱೂದು ಆಚಾರವೆ ಅಯ್ಯಾ? ನಮ್ಮ ಕೂಡಲಸಂಗನ ಕೂಡಿದ ಕೂಟವ. ॥೩॥

- -

ಕರುಳುಕಲೆಯನಿದಿರಿಂಗೆ ತೋರುವುದು ಆಚಾರವೆ ಅಯ್ಯ. ಮನವು ಬ್ರಹ್ಮದಲ್ಲಿ ಕೂಡಿದ ಕೂಟವ ಆರಿಗೂ ಹೇಳಬಾರದೆಂಬುದೀ ವಚನದರ್ಥ.

---

* ಇಲ್ಲಿಂದ ತರುವಾಯದ ಟೀಕಿನವಚನಗಳನ್ನು ಕೆ.ಆರ್. ಆಯ್. ೬೬೩ನೆಯ ತಾಳೆಪ್ರತಿಯಿಂದ ಎತ್ತಿಕೊಳ್ಳಲಾಗಿದೆ.

೧೦೫೦

ಅಯ್ಯಾ ನಿಮ್ಮ ಶರಣರು ಕಾಯವೆಂಬ ಕರ್ಮವ ಹೊದ್ದದ ನಿಃಕ್ಕರ್ಮಿಗಳಯ್ಯಾ. ಅಯ್ಯಾ ನಿಮ್ಮ ಶರಣರು ಮನದಲ್ಲಿ ನಿರ್ಲೇಪಜ್ಞಾನಿಗಳಯ್ಯ. ಕೂಡಲಸಂಗಮದೇವಾ ನಿಮ್ಮ ಶರಣರ ಘನವ ನೀವೆ ಬಲ್ಲಿರಿ. ॥೪॥

- -

ದೇಹ ಮನವೆಂಬೆರಡೂ ಅಳಿದು ಅಖಂಡಲಿಂಗದಲ್ಲಿ ಅಱಿವು ಎರಡಿಲ್ಲದೆ ಒಂದೆಯಾಗಿ ಇಹುದೆಂಬುದೀ ವಚನದರ್ಥ.

೧೦೫೧

ಲಿಂಗವ ಪೂಜಿಸಿ ಫಲವೇನಯ್ಯ ಸಮರತಿ ಸಮಕಳೆ ಸಮರಸ ಸಮಸುಖವನಱಿಯದನ್ನಕ್ಕರ? ಲಿಂಗವ ಪೂಜಿಸಿ ಫಲವೇನಯ್ಯ, ಕೂಡಲಸಂಗಮದೇವರ ಪೂಜಿಸಿ, ನದಿಯೊಳಗೆ ನದಿಬೆರಸಿದಂತಾಗದನ್ನಕ್ಕರ? ॥೫॥

- -

ನಿಃಶಬ್ದಬ್ರಹ್ಮವಾಗಲೊಡನೆ ನೀನಾನೆಂಬ ಉಭಯವಡಗಿ ನಿಂದಿತ್ತೆಂಬುದೀ ವಚನದರ್ಥ.

❖❖

ಅನುಬಂಧಗಳು

ಅನುಬಂಧ : ೧

ಬಸವಣ್ಣನವರ ವಚನಗಳ ಟೀಕೆಯ ಅಂಕಿ–ಸಂಖ್ಯೆಗಳ ತೌಲನಿಕ ವಿವರಣೆ

ವಚನ ಕ್ರಮಾನುಕ್ರಮಣಿಕೆ

ಅನುಬಂಧ : ೨

ಬಸವಣ್ಣನವರ ವಚನಗಳ ಟೀಕೆಯ ಅಂಕಿ–ಸಂಖ್ಯೆಗಳ ತೌಲನಿಕ ವಿವರಣೆ ವಚನಗಳ ಅಕ್ಷರಾನುಕ್ರಮಣಿಕೆ

ಅನುಬಂಧ : ೩

ಲಿಂಗಲೀಲಾವಿಲಾಸಚಾರಿತ್ರದಲ್ಲಿಯ ಬಸವಣ್ಣನವರ ಟೀಕಿನ ವಚನಗಳ ವಿವರ

ಅನುಬಂಧ : ೪

ಗಮನಾರ್ಹ ಪದಕೋಶ

ಅನುಬಂಧ : ೧

ಬಸವಣ್ಣನವರ ವಚನಗಳ ಟೀಕೆಯ ಅಂಕಿ–ಸಂಖ್ಯೆಗಳ ತೌಲನಿಕ ವಿವರಣೆ

ವಚನಗಳ ಕ್ರಮಾನುಕ್ರಮಣಿಕೆ

	I	II	III	IV	V
೫೨೮	ಜ್ಞಾನಿ ನೀನು ಸ್ವಾಮಿ ನೀನು	n	n	y	n
೫೨೯	ಶ್ರುತಿಗಗಮ್ಮ ದ್ವಾದಶಾದಿತ್ಯರಪ್ರತಿಮ	n	y	n	n
೫೩೦	ಉಪ್ಪರಗುಡಿ ನಂದಿವಾಹನ ಸದ್ಯೋಜಾತನ	n	y	y	n
೫೩೧	ವೇದಸ್ವಯಂಭೂಯೆಂಬ ವಾದಿ ನೀ	n	y	n	n
೫೩೨	ಶ್ರುತಿತತಿಯ ಶಿರದ ಮೇಲೆ	n	n	y	n
೫೩೩	ಸಕಳ ನಿಃಕಳವ ಕೂಡಿಕೊಂಡಿಪ್ಪೆಯಾಗಿ	n	n	n	n
೫೩೪	ಎತ್ತೆತ್ತ ನೋಡಿದಡತ್ತ ನೀನೆ ದೇವಾ	n	n	y	n
೫೩೫	ಜಲ ಕೂರ್ಮನಾಗ ಮೇದಿನಿ ಸಪ್ತಸಾಗರ	n	n	n	n
೫೩೬	ರುದ್ರ ಮುಖದಲ್ಲಿ ವಿಷ್ಣು ಭುಜದಲ್ಲಿ	n	n	y	n
೫೩೭	ವಿಶ್ವಾಧಿಕೋ ರುದ್ರನ ಹೊಗಳುವ	n	n	y	n
೫೩೮	ಐದುದೇ ಬ್ರಹ್ಮನ ಕಪಾಲ ಕರದಲ್ಲಿ	n	n	y	n
೫೩೯	ಹರನ ಕೊರಳಲ್ಲಿಪ್ಪ ಕರೋಟಿಮಾಲೆಯ	n	n	y	n
೫೪೦	ಅದರಿದವು ಪಾದಾಘಾತದಿಂದೆ ಧರೆ	y	y	y	y
೫೪೧	ಆಱುಕೋಟಿ ಬ್ರಹ್ಮರು ಮಡಿವಲ್ಲಿ	n	n	n	n
೫೪೨	ಯುಗ ಜುಗ ಪ್ರಳಯವಾದಂದು	n	n	y	n
೫೪೩	ಒಬ್ಬ ಕೆಂಚ ಒಬ್ಬ ಕರಿಕ	n	n	n	n
೫೪೪	ಹರಿಹರ ಒಂದೇಯೆಂದಡೆ ಸುರಿಯುವೆ	n	n	n	n
೫೪೫	ವಿಷ್ಣು ಕರ್ಮಿ ರುದ್ರ ನಿಃಕರ್ಮಿ	n	y	y	y
೫೪೬	ಅಮೃತವತಿ ಸೋಮ ಶಂಭುವಿಂಗೆ	n	n	n	n
೫೪೭	ಇಬ್ಬರು ಮೂವರು ದೇವರೆಂದು	n	n	y	n

	I	II	III	IV	V
೫೪೮	ಹುಟ್ಟಿಸುವಾತ ಬ್ರಹ್ಮನೆಂಬರು	n	n	y	n
೫೪೯	ಕೇಶವನಲ್ಲದೆ ಅತಃಪರಂ ದೈವವಿಲ್ಲ	n	n	y	n
೫೫೦	ನಾರಾಯಣನೆಂಬವನಕಾಣೆ ಗೀರಾಯಣ	n	n	n	n
೫೫೧	ಅಮೃತವ ಕಡೆವಲ್ಲಿ ವಿಷವಟ್ಟಿ ಸುಡುವಲ್ಲಿ	n	n	n	n
೫೫೨	ವಿಷ್ಣುಬಲ್ಲಿದನೆಂಬೆನೆ ದಶಾವತಾರದಲ್ಲಿ	n	n	n	n
೫೫೩	ಮಱೆಯಲಾಗದು ಹಱೆಯ	y	n	n	n
೫೫೪	ಬಿದಿರೆಲೆಯ ಮೆಲಿದಡೆ ಮೆಲಿದಂತಲ್ಲದೆ	y	y	n	n
೫೫೫	ಆವಾಗಲೂ ಲೋಗರ ಮನೆಯ	n	n	n	n
೫೫೬	ಗಾಡಿಗ ಡಿಂಬುಗಂಗೆ ಚೆಕ್ಕು ಮುಟ್ಟಿಗೆ	n	y	n	n
೫೫೭	ಹಾಳು ಮೊರಡಿಗಳಲ್ಲಿ ಊರದಾರಿ	n	n	n	n
೫೫೮	ಅರಗು ತಿಂದು ಕರಗುವ ದೈವವ	n	n	n	n
೫೫೯	ಮಾರಿವ್ವೆಯ ನೋಂತು ಕೊರಳಲ್ಲಿ	n	n	n	n
೫೬೦	ಉಣಲುಡಲು ಮಾರಿಯಲ್ಲದೆ	n	n	n	n
೫೬೧	ಮೊಱನ ಗೋಟಿಗೆ ಬಪ್ಪ ಕಿಱುಕುಳ	n	n	n	n
೫೬೨	ಬನ್ನಿರೆ ಅಕ್ಕಗಳು ಹೋಗಿರೆ ಆಲದ	n	n	n	n
೫೬೩	ಮಡಕೆ ದೈವ ಮೊಱ ದೈವ	n	y	n	n
೫೬೪	ರಿಣತಪ್ಪಿದ ಹೆಂಡತಿಯಲ್ಲಿ	y	y	n	n
೫೬೫	ಲಿಂಗಶಿವಾಲಯದ ಮುಂದೆ ಸಿಂಹ	n	n	n	n
೫೬೬	ಗುಡಿಯೊಳಗೆದ್ದು ಗುಡಿಯ ನೇಣು	n	n	n	n
೫೬೭	ಅಸಮಾಕ್ಷ ಲಿಂಗಕ್ಕೆ ಅನ್ಯದೈವ	n	y	n	n
೫೬೮	ಶಿವಮಯ ವಿಷ್ಣುವಲ್ಲ ವಿಷ್ಣಮಯ	n	n	y	n
೫೬೯	ಅವಲಕ್ಷಣ ನಾಯ ನುಡಿಯ	y	y	n	n
೫೭೦	ವಿಷ್ಣುವಿನ ಪೂಜಿಸಿ ಮುಡುಹ	n	n	y	n
೫೭೧	ಬ್ರಾಹ್ಮಣನೆ ದೈವವೆಂದು ನಂಬಿದ	n	y	n	n
೫೭೨	ಆದಿಪುರಾಣ ಅಸುರಿಂಗೆ ಮಾರಿ	n	n	n	n
೫೭೩	ನಿಮ್ಮ ವಚನವೆನ್ನ ಪುಣ್ಯವೆಂಬುದು	n	y	n	n
೫೭೪	ಮಾತಿನ ಮಾತಿಂಗೆನ್ನ ಕೊಂದಹರೆಂದು	n	n	n	n
೫೭೫	ದಕ್ಷಯಾಗವ ಮಾಡಲೆಂದು	n	y	n	n
೫೭೬	ಏನಯ್ಯಾ ವಿಪ್ರರು ನುಡಿದಂತೆ	n	n	n	n
೫೭೭	ಹೊಲೆಯೊಳಗೆ ಹುಟ್ಟಿ ಕುಲವ	n	y	n	n
೫೭೮	ಇಟ್ಟಿಯ ಹಣ್ಣ ನರಿ ತಿಂದು	n	n	n	n

	I	II	III	IV	V
೫೭೯	ಮಿಂಬುಲಿಗನ ಹಕ್ಕಿಯಂತೆ	n	y	n	n
೫೮೦	ಮಾಣದೆ ಅರಳೆಯ ಮರನ ತಿಟ್ಟನೆ	n	n	n	n
೫೮೧	ನೀರಕಂಡಲ್ಲಿ ಮುಳುಗುವರಯ್ಯಾ	n	n	n	n
೫೮೨	ಕಣ್ಣಮುಚ್ಚಿ ಕನ್ನಡಿಯ ತೋಱುವಂತೆ	n	n	n	n
೫೮೩	ಬ್ರಹ್ಮ ಸಭೆ ನೆರೆದಲ್ಲಿ ಬ್ರಹ್ಮವಿತ್ತುಗಳು	n	y	n	n
೫೮೪	ಕುಲದಲ್ಲಿ ಹಾರುವನು ಬ್ರಹ್ಮೇತಿಗೆ	y	y	n	y
೫೮೫	ನರಜನ್ಮದಲ್ಲಿ ಹುಟ್ಟಿ ಲಿಂಗಮುಖವ	n	y	n	y
೫೮೬	ಕಿಚ್ಚು ದೈವವೆಂದು ಹವಿಯನಿಕ್ಕುವ	n	n	n	n
೫೮೭	ವೇದವನೋದಿದ ವಿಪ್ರರು ಹೊನಲಲ್ಲಿ	n	y	n	n
೫೮೮	ಎನಿಸನೋದಿದಡೇನು ಎನಿಸಕೇಳಿದಡೇನು	n	y	n	n
೫೮೯	ನಿಮ್ಮುವನಱಿಯದ ಕಾರಣ ಕೈಯಲ್ಲಿ	n	n	n	n
೫೯೦	ವ್ಯಾಸ ಬೋವತಿಯ ಮಗ	n	n	n	n
೫೯೧	ಹೊಲೆಗಂಡಲ್ಲದೆ ಪಿಂಡದ ನೆಲೆ	n	y	n	n
೫೯೨	ಕೊಲ್ಲುವನೇ ಮಾದಿಗ ಹೊಲಸು	n	n	n	n
೫೯೩	ಹಾರುವ ಭಕ್ತಿ ಓಡಿನೊಳಗೆ ಅಗೆಯ	n	n	n	n
೫೯೪	ನಾನು ಭಕ್ತ ನಾನು ಪ್ರಸಾದಿ	n	y	n	n
೫೯೫	ಹೊನ್ನ ನೇಗಿಲಲುತ್ತಿ ಎಕ್ಕೆಯ	y	n	n	n
೫೯೬	ಜಾತಿವಿಡಿದು ಸೂತಕವನರಸುವರೆ	n	n	n	n
೫೯೭	ಹೊಲೆಯ ಮಾದಿಗ ಭಕ್ತನಾದಡಡೆ	n	y	n	n
೫೯೮	ಕುಱಿಯ ಹಿಂಡು ಉಲಿವ ಕಬ್ಬಿನ	y	n	n	n
೫೯೯	ಪ್ರಣವನುಚ್ಚರಿಸುವ ಅಪ್ರಮಾಣಿಕ	y	n	n	n
೬೦೦	ವೇದವನೋದಿದಡೇನು ಶಾಸ್ತ್ರವ	n	n	n	n
೬೦೧	ನೀವು ಹಿರಿಯರೆಂಬಿರಿ ಕರ್ಮಿಗಳು	n	n	n	y
೬೦೨	ನಿಜಭಾವ ಲಕ್ಷ್ಮೀಸರಸ್ವತಿ ಒಲಿದಡೆ	y	n	n	n
೬೦೩	ಆದ್ಯರಿಗಲ್ಲದೆ ವೇದ್ಯವಾಗದು	n	y	n	n
೬೦೪	ಎಲ್ಲರಿಗಿಂದಲೂ ಎಮ್ಮವರಧಿಕರು	n	y	n	n
೬೦೫	ಅಯ್ಯಾ ನಿಮ್ಮ ಶರಣರ ಚಮ್ಮಾವುಗೆಗೆ	n	n	n	n
೬೦೬	ದೇವಾ ನಿಮ್ಮ ಪೂಜಿಸಿ ಚೆನ್ನನ	n	n	n	n
೬೦೭	ಚತುರ್ವೇದಿಯಾದಡೇನು ಲಿಂಗವಿಲ್ಲ	n	y	n	n
೬೦೮	ಭಕ್ತಿಹೀನರ ದಾಸೋಹವ ಸದ್ಭಕ್ತರು	n	n	y	n
೬೦೯	ಬಂದು ಬಲ್ಲಹ ಬಿಡಲು ಹೊಲಗೇರಿ	n	y	y	n

	I	II	III	IV	V
೬೧೦	ಲಿಂಗವಿಲ್ಲದೆ ನಡೆವವರ ಲಿಂಗವಿಲ್ಲದೆ	n	n	n	n
೬೧೧	ಇಪ್ಪತ್ತುನಾಲ್ಕು ತಿಥಿಗಳಿಂದ ವೆಗ್ಗಳ	n	n	n	n
೬೧೨	ಅಶ್ವಮೇಧಯಾಗವಂತಿರಲಿ	n	n	y	n
೬೧೩	ವೇದಶಾಸ್ತ್ರ ಬಲ್ಲವರ	n	y	y	n
೬೧೪	ಹಾರುವರೆಲ್ಲರೂ ನೆರೆದು ಶೂದ್ರನ	n	n	n	n
೬೧೫	ದೇವನೊಬ್ಬ ನಾಮ ಹಲವು	n	n	n	n
೬೧೬	ಕರ್ತನ ಪೂಜಿಸಿ ಕುಚಿತದೈವಕ್ಕೆಱಗು	n	n	n	n
೬೧೭	ಕಂಡಕಂಡವರನೆಲ್ಲ ಗಂಡರೆಂದೆಂಬ	n	n	n	n
೬೧೮	ನಂಬಿದ ಹೆಂಡತಿಗೆ ಗಂಡನೊಬ್ಬನೆ	n	n	n	n
೬೧೯	ಉಣಿಸುವ ಉಡಿಸುವ ಗಂಡನಿದ್ದಂತೆ	y	n	n	n
೬೨೦	ಅಷ್ಟಮಿ ನವಮಿ ಎಂಬ ಕಲ್ಪಿತವೇಕೊ	n	n	n	n
೬೨೧	ಎಲವೋ ಎಲವೋ ಪಾಪಕರ್ಮವ	n	n	n	n
೬೨೨	ಹಲವು ಕೊಂಬಿಂಗೆ ಹಾಯಲು ಬೇಡ	y	n	n	n
೬೨೩	ದ್ವಿಜರಿಗೆ ಕೊಟ್ಟು ಹಲಬರು ಕೆಟ್ಟರು	n	n	n	n
೬೨೪	ಎಚ್ಚು ವಾಲಿಯ ಕೊಂದ	n	y	n	y
೬೨೫	ವಿಪ್ರರ ಕರೆದು ನೃಪರುಗಳು	y	y	n	n
೬೨೬	ಅರಸು ವಿಚಾರ ಸಿರಿಯ ಶೃಂಗಾರ	y	y	n	n
೬೨೭	ಬೇವಿನ ಬೀಜವ ಬಿತ್ತಿ ಬೆಲ್ಲದ	y	y	n	n
೬೨೮	ಕರ್ತನನಱಿಯದವನು ವಿಪ್ರನಾದಡೇನು	n	n	n	n
೬೨೯	ಉಂಬಲ್ಲಿ ಉಡುವಲ್ಲಿ ಕ್ರೀಯಳಿಯಿತ್ತೆಂಬರು	n	n	y	n
೬೩೦	ಭಕ್ತರನಲ್ಲದೆ ಒಲ್ಲೆಂಬಿರಿ	n	n	y	n
೬೩೧	ಮಾರಿ ಮಸಣಿ ಎಂಬಿವು ಬೇಱಿಲ್ಲ	n	n	y	n
೬೩೨	ಆಯುಧವನಿಕ್ಕಿದವಂಗೆ ವೀರದ	y	y	n	n
೬೩೩	ಇರುಳೆಂದೇನೋ ಕುರುಡಂಗೆ	y	n	y	n
೬೩೪	ಸಿಂಗದ ನಡು ಮುರಿಯಲಾ	y	n	y	n
೬೩೫	ಮುನ್ನಿನ ಆದ್ಯರ ಪಂಥಗಳು	n	n	n	n
೬೩೬	ಗೀಜಗನ ಗೂಡು ಕೋಡಗದಣಲ	y	y	y	n
೬೩೭	ತೊತ್ತಿನ ಕೊರಳಲಿ ಹೊಂಬಿತ್ತಾಳೆಯೆ	y	n	n	n
೬೩೮	ಕೆಂಚ ಕರಿಕನ ನೆನೆದಡೆ	n	n	y	n
೬೩೯	ಆನೆಯನೇಱಿಕೊಂಡು ಹೋದಿರೆ ನೀವು	n	y	y	n
೬೪೦	ಇಂದ್ರಿಯ ನಿಗ್ರಹವ ಮಾಡಿದಡೆ	n	y	y	n

	I	II	III	IV	V
೬೪೧	ಲಿಂಗ ಜಂಗಮ ಒಂದೇಯೆಂದು	n	y	y	n
೬೪೨	ಒಡೆಯರು ತಮ್ಮ ಮನೆಗೆ ಒಡಗೊಂಡು	n	n	n	n
೬೪೩	ನೋಡಲಾಗದು ನುಡಿಸಲಾಗದು	n	n	y	n
೬೪೪	ತೋಱೆಯ ಮೀವಣ್ಣಗಳಿರಾ	n	n	n	n
೬೪೫	ಸತ್ಯಶೌಚ ನಿತ್ಯ ನೇಮವ ತಪ್ಪದೆ	n	y	y	n
೬೪೬	ಕುಳ್ಳಿರ್ದು ಲಿಂಗವ ಪೂಜಿಸಿ	y	n	y	n
೬೪೭	ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ	y	y	y	n
೬೪೮	ತನು ಶುಚಿಯಿಲ್ಲದವನ ದೇಹಾರವೇಕೆ	n	n	y	n
೬೪೯	ನಿಚ್ಚ ನಿಚ್ಚ ಪೂಜಿಸುವ ಶರಣಂಗೆ	n	y	n	n
೬೫೦	ಪಾಪಿಗೆ ಕೋಪಿಗೆ ಭಕ್ತಿಯಾಗೆಂದಡಪ್ಪುದೆ	y	n	n	n
೬೫೧	ಕೋಪಿ ಮಜ್ಜನಕ್ಕೆಱೆದಡೆ	n	y	y	n
೬೫೨	ಸದಾಚಾರ ಸದ್ಭಕ್ತಿಯಿಲ್ಲದವರ	n	n	y	n
೬೫೩	ನೂಱನೋದಿ ನೂಱಕೇಳಿದಡೇನು	n	n	n	n
೬೫೪	ತಂದೆ ಮಕ್ಕಳಿಗೆ ಬುದ್ದಿಯ ಹೇಳುವಲ್ಲಿ	n	n	y	n
೬೫೫	ಗುರೂಪದೇಶ ಮಂತ್ರವೈದ್ಯ	n	n	y	n
೬೫೬	ಕೇಳಿರೇ ಕೇಳಿರೇ ಹಿರಿಯರು	n	y	n	n
೬೫೭	ಶಿವಚಿಂತೆ ಶಿವಜ್ಞಾನ ಭ್ರಮೆ	y	n	y	n
೬೫೮	ಶ್ವಪಚನಾದಡೇನು ಲಿಂಗಭಕ್ತನೇ	n	n	y	n
೬೫೯	ಅವರ ನಡೆವೊಂದು ನುಡಿವೊಂದಾದಡೆ	n	n	n	n
೬೬೦	ನಿಧಾನವನಱಸಿಹೆನೆಂದು ಹೋದಡೆ	n	n	y	n
೬೬೧	ಅಡಿಗಡಿಗೆ ದೇವರಾಣೆ ಅಡಿಗಡಿಗೆ	n	n	y	n
೬೬೨	ಅರಗಿನ ಪುತ್ಥಳಿಯ ಉರಿಯ	y	n	n	n
೬೬೩	ಹಾವಿನ ಹೆಡೆಯ ತೆಗೆದುಕೊಂಡು	y	n	n	n
೬೬೪	ಉರಿವ ಕೊಳ್ಳಿಯ ಮಂಡೆಯಲ್ಲಿಕ್ಕಿದಡೆ	y	y	n	n
೬೬೫	ಕೋಣನ ಹೇಱಿಂಗೆಮ ಕುನ್ನಿ ಬಸುಗುತ್ತ	y	y	n	n
೬೬೬	ಚೇಳಿಂಗೆ ಬಸುಱಾಯಿತ್ತೇ ಕಡೆ	y	n	y	n
೬೬೭	ಹುಲಿಯ ಹಾಲು ಹುಲಿಮರಿಗಲ್ಲದೆ	n	y	y	n
೬೬೮	ಅರ್ಥಪ್ರಾಣಾಭಿಮಾನ ನಿಮ್ಮದೆಂಬಿರಿ	y	n	y	n
೬೬೯	ಅಲಗಲಗು ಮೋಹಿಸಿದಲ್ಲದೆ	y	n	y	n
೬೭೦	ಹರ ಬೀಜವಾದಡೆ ಹಂದೆ ತಾನಪ್ಪನೆ	y	y	n	n
೬೭೧	ಮೊನೆ ತಪ್ಪಿದ ಬಳಿಕ ಅಲಗೇನು	y	y	n	n

I		II	III	IV	V
೬೭೨	ಶರಣಸಂಬಂಧವನಅಜಿದ ಬಳಿಕ ಮರಳಿ	n	n	y	n
೬೭೩	ವೀರವ್ರತಿ ಭಕ್ತನೆಂದು ಹೊಗಳಿಸಿ	n	n	y	n
೬೭೪	ಕಲಿತನ ತನುಗುಳ್ಳಡೆ ಸೂಜಿಬಾಳು	y	n	n	n
೬೭೫	ಕಟ್ಟಿ ಬಿಡುವೆನೆ ಶರಣು ಬಿಟ್ಟು	n	n	y	n
೬೭೬	ಹುಟ್ಟುವಲ್ಲಿ ಭವಿ ಮರಳಿ ಭಕ್ತನ	n	y	n	n
೬೭೭	ಒಡನೆ ಹುಟ್ಟಿದುದಲ್ಲ ಒಡನೆ	n	n	y	n
೬೭೮	ಛಲಬೇಕು ಶರಣರಿಗೆ ಛಲಬೇಕು	n	n	n	n
೬೭೯	ಜಂಬೂದ್ವೀಪ ನವಖಂಡ ಪೃಥ್ವಿ	y	y	y	n
೬೮೦	ಮುನ್ನಿನ ಕಲಿ ವೀರಧೀರರು ಕಾದಿದ	n	y	n	n
೬೮೧	ಕಬ್ಬಿನ ಹಣಿದವನಾಡುವರಲ್ಲದೆ	n	y	y	n
೬೮೨	ಅರ್ಥಪ್ರಾಣಾಭಿಮಾನವ ಕೊಟ್ಟೆನೆಂಬುವರ	n	y	y	n
೬೮೩	ಒಂದು ಮಾತೆನಬಹುದೆ ಶಬ್ದ ಸಾರಾಯ	y	n	y	n
೬೮೪	ಭಕ್ತರೇ ಸಮರ್ಥರು ಅಸಮರ್ಥರೆನಲು	n	y	y	n
೬೮೫	ನಿಸ್ಸೀಮ ಗುಗ್ಗಳವನಿಕ್ಕಿದನೊಬ್ಬ ಶರಣ	n	n	n	n
೬೮೬	ಲಿಂಗವಶದಿಂದ ಬಂದ ನಡೆಗಳು	n	n	y	n
೬೮೭	ಶಿವಭಕ್ತನಾಗಿ ತನ್ನ ಹಿಡಿದಿಹೆನೆಂದು	y	n	y	n
೬೮೮	ಅರೆವನಯ್ಯ ಸಣ್ಣನಾಗುವನ್ನಕ್ಕ	y	n	y	n
೬೮೯	ಅಂಜಿದಡಾಗದು ಅಳುಕಿದಡಾಗದು	y	n	n	n
೬೯೦	ಹುಟ್ಟಿದ ಬಳಿಕ ಕೊಟ್ಟ ಭೋಗಂಗಳ	n	y	y	n
೬೯೧	ಆಯುಷ್ಯ ತೀರಿದಲ್ಲದೆ ಮರಣವಿಲ್ಲ	n	y	y	n
೬೯೨	ಮನಕ್ಕೆ ಮನ ಒಂದಾಗಿ ಧನಕ್ಕೆ	n	n	y	n
೬೯೩	ಎನಿಸೆನಿಸೆಂದಡೆಯೂ ನಾ ದ್ರತಿಗೆಡೆ	n	n	n	n
೬೯೪	ಒಣಗಿಸಿ ಎನ್ನ ಘಣಘಣನೆ ಮಾಡಿ	n	y	n	n
೬೯೫	ಜಾಗ್ರಸ್ವಪ್ನಸುಷುಪ್ತಿಗಳಲ್ಲಿ	n	n	y	n
೬೯೬	ಸುಖ ಬಂದೆಡೆ ಪುಣ್ಯದ ಫಲವೆನ್ನನು	n	n	y	n
೬೯೭	ಕಾಯದ ಕಳವಳಕ್ಕಂಜಿ ಕಾಯಯ್ಯಾ	n	n	n	n
೬೯೮	ನಾಳೆ ಬಪ್ಪುದು ನಮಗಿಂದೇ ಬರಲಿ	n	n	y	n
೬೯೯	ಕಳಹೋದೆಡೆ ಕನ್ನದುಳಿಯ ಹಿಡೆವೆ	n	n	n	n
೭೦೦	ಜೋಳವಾಳಿಯವ ನಾನಲ್ಲವಯ್ಯ	y	y	y	y
೭೦೧	ಕರ್ಮವೆಂಬ ಅಂಕದೊಡನೆ ತೊಡರಿದೆ	y	y	y	y
೭೦೨	ಕಟ್ಟಿದನೊಱೆಯ ಬಿಟ್ಟೆ ಜನ್ನಿಗೆರೆಯ	n	y	n	y

	I	II	III	IV	V
೭೦೩	ಗರುಡಿಯ ಕಟ್ಟಿ ಅಱುವತ್ತುನಾಲ್ಕು	y	y	y	y
೭೦೪	ಶರಣರೊಡನೆ ಶ್ರವವ ಮಾಡಿ	n	n	y	n
೭೦೫	ಎಲೆ ಎಲೆ ಗಂಡುಗೂಸೇ ನೀ ಕೇಳಾ	n	n	y	n
೭೦೬	ಕಟ್ಟುವೆನುಪ್ಪರಗುಡಿಯ	n	y	n	n
೭೦೭	ಹುಟ್ಟುತ್ತ ದ್ರವ್ಯವನಱಿಯದವಂಗೆ	n	y	y	n
೭೦೮	ಅರ್ಥವನರ್ಥವ ಮಾಡಿ ಕೋಳಾಹಳ	n	y	y	n
೭೦೯	ತನುವ ಬೇಡಿದಡೀವೆ ಮನವ	n	n	n	n
೭೧೦	ನಾನು ಆರಂಭ ಮಾಡುವೆನಯ್ಯಾ	n	n	n	n
೭೧೧	ಹೊತ್ತಾಱೆ ಎದ್ದು ಕಣ್ಣ ಹೊಸೆವುತ್ತ	n	n	n	n
೭೧೨	ದೇವ ದೇವಾ ಬಿನ್ನಪವನವಧಾರು	n	n	n	n
೭೧೩	ಒಲ್ಲೆನಯ್ಯಾ ಒಲ್ಲೆನಯ್ಯಾ ನಿಮ್ಮವರಲ್ಲದ	n	n	y	n
೭೧೪	ಆದಿಯಾಗಲಿ ವೇದದಲಾಗಲಿ	n	y	y	n
೭೧೫	ಅಣ್ಣ ತಮ್ಮ ಹೆತ್ತಪ್ಪ ಗೋತ್ರ	n	n	n	n
೭೧೬	ಒಡೆಯರಿಲ್ಲದ ಮನೆಯ ತುಡಿಗುಣಿನಾಯಿ	n	n	y	n
೭೧೭	ಹೊನ್ನು ಹೆಣ್ಣು ಮಣ್ಣೆಂಬ ಕರ್ಮದ	n	n	y	n
೭೧೮	ವೇದಕ್ಕೆ ಒಱೆಯ ಕಟ್ಟುವೆ	n	n	y	n
೭೧೯	ಅವ ಕುಲವಾದಡೇನು ಶಿವಲಿಂಗವಿದ್ದ	n	n	y	n
೭೨೦	ಕಳ್ಳ ಬುದ್ಧಿಕಾಱ ಹಾವಾಡಿಗ	n	n	y	n
೭೨೧	ಎಡದ ಕೈಯಲ್ಲಿ ಕತ್ತಿ ಬಲದ	n	y	y	n
೭೨೨	ಗುಮ್ಮಟಿಯಂತಪ್ಪ ತಾಯಿ	y	y	n	n
೭೨೩	ತನುವ ಬಂದು ಅಲೆವರಯ್ಯಾ	n	n	y	n
೭೨೪	ಒಡೆಯರೊಡೆವೆಯ ಕೊಂಡಣಿ	n	n	y	n
೭೨೫	ಕಲಿ ಕರುಳ ತರ್ಕೈಸಿ ಹಱಿಯ	y	y	n	n
೭೨೬	ಬಾಲಾಭ್ಯಾಸವ ಮಾಡಹೋದಡೆ ಎನ್ನ	y	y	y	y
೭೨೭	ಸಮಚಿತ್ತವೆಂಬ ನೇಮದ ಹಲಗೆಯ	y	n	n	y
೭೨೮	ಅಟ್ಟಾಟಿಕೆಯ ಮಾತನಾಡಲದೇಕೋ	n	n	y	y
೭೨೯	ಲಿಂಗಕ್ಕಲ್ಲದೇ ಮಾಡೆನಿ ಮನವನು	n	n	y	n
೭೩೦	ಅಂಕ ಕಂಡಾ ಕೋಲಾಸೆ ಮತ್ತೇಕಯ್ಯಾ	n	n	n	n
೭೩೧	ನೀನಿರಿಸಿದ ಮನದಲಿ ನಾನಂಜೆನಯ್ಯಾ	n	y	y	n
೭೩೨	ಹಲ್ಲು ಹತ್ತಿ ನಾಲಗೆ ಹೊರಳದಿದ್ದಲ್ಲಿ	n	n	y	n
೭೩೩	ಹೊಕ್ಕಲ್ಲಿ ಹೊಕ್ಕು ನಿಮ್ಮೊಕ್ಕುದ	n	n	n	n

	I	II	III	IV	V
೭೩೪	ಹುಟ್ಟಿದ ಮಕ್ಕಳೆಲ್ಲಾ ಪ್ರಾಣಾಭಿಮಾನಕ್ಕೆ	n	n	y	n
೭೩೫	ಅಂಗದ ಮೇಲಣ ಲಿಂಗ ಹಿಂಗಿ	n	n	n	n
೭೩೬	ಬತ್ತೀಸಾಯುಧದಲ್ಲಿ ಅಭ್ಯಾಸವ	n	n	n	n
೭೩೭	ಕೊಲ್ಲೇನಯ್ಯ ಪ್ರಾಣಿಗಳ ಮೆಲ್ಲೆನಯ್ಯ	n	n	n	n
೭೩೮	ಆನೆ ಅಂಕುಶಕ್ಕಂಜುವುದೆ ಅಯ್ಯ	n	n	n	n
೭೩೯	ಬಂದಿಹೆನೆಂದು ಬಾರದಿರ್ದಡೆ ಬಟ್ಟೆಗಳ	n	n	n	n
೭೪೦	ಅರಸರು ಮಂಚಕ್ಕೆ ಬರಸಿ ಎನ್ನ	y	n	n	n
೭೪೧	ಎಲ್ಲಿ ಹೊಕ್ಕಲ್ಲಿ ನಿನ್ನ ವಿಕಾರವ ಮಾಣೆ	n	n	y	n
೭೪೨	ಸಿರಿಯಾಳನ ಮಗನ ಬಾಣಸವ	n	n	n	n
೭೪೩	ಒಬ್ಬನ ಮನೆಯಲುಂಡು ಹೊತ್ತುಗಳೆದ	n	y	n	y
೭೪೪	ಹರಿಯಜಸುರಮನಮುನಿಗಳೆಲ್ಲರೂ	n	y	y	y
೭೪೫	ಜಗದಗಲ ಮುಗಿಲಗದ	n	n	n	n
೭೪೬	ಗೋತ್ರನಾಮವ ಬೆಸೆಗೊಂಡಡೆ	n	y	y	y
೭೪೭	ನಿಷ್ಠೆಯಿಂದ ಲಿಂಗವ ಪೂಜಿಸಿ	y	y	n	n
೭೪೮	ಶಿವಲೋಕಕ್ಕೆ ಸರಿ ಬೇಱೆಲೋಕವಿಲ್ಲ	y	y	n	n
೭೪೯	ಈಶ್ವರ ಸದ್ಭಾವೇ ಕಿಂ ಪ್ರಮಾಣಂ	n	y	n	y
೭೫೦	ಪಂಚಬ್ರಹ್ಮವ ಕೆಡಿಸಿತ್ತು ಪ್ರಣವ	n	n	y	n
೭೫೧	ವೇದ ನಡನಡುಗಿತ್ತು ಶಾಸ್ತ್ರವಗಲಿ	n	n	n	n
೭೫೨	ಚಿಕ್ಕದೊಂದು ಹೊತ್ತಗೆಯ ಬೆನಕನ	y	y	n	y
೭೫೩	ನೀನಲ್ಲದನ್ಯದೈವವುಂಟೆಂಬವನ	n	n	n	n
೭೫೪	ಆರು ಮುನಿದು ನಮ್ಮನೇನ	n	n	y	n
೭೫೫	ನ್ಯಾಯನಿಷ್ಠುರಿ ದಾಕ್ಷಿಣ್ಯಪರ	n	y	n	y
೭೫೬	ಊರ ಮುಂದೆ ಹಾಲು ಹಳ್ಳ	y	y	n	n
೭೫೭	ಹೋಗಬಿಟ್ಟು ಮರಳಿ ಹಿಂದೆ	n	n	n	n
೭೫೮	ಕಂಡುದಕ್ಕೆಳಸನೆನ್ನ ಮನದಲಿ	n	n	y	n
೭೫೯	ಆಪ್ಯಾಯನಕನ್ನವ ನೀಡುವೆ	n	n	n	n
೭೬೦	ಮಾಡುವ ನೀಡುವ ಭಕ್ತನ ಕಂಡಡೆ	n	n	n	n
೭೬೧	ಗುರುಭಕ್ತಿಯ ಮಾಡಬಹುದಲ್ಲದೆ	n	n	n	n
೭೬೨	ದಾಸನಂತೆ ತವನಿಧಿಯ ಬೇಡುವವನಲ್ಲ	n	n	n	n
೭೬೩	ಲಿಂಗದಲ್ಲಿ ಸಮ್ಯಕ್ಕರು ಲಿಂಗದಲ್ಲಿ	n	n	n	n
೭೬೪	ಅಂದಂದಿನ ಹೊದ್ದಿಗೆಯ ಬಿಂದುಮಾತ್ರ	n	n	n	n

	I	II	III	IV	V
೭೬೫	ಕಲಿಯ ಕೈಯ ಕೈದುವಿನಂತಿರಬೇಕಯ್ಯ	n	n	n	n
೭೬೬	ಆಸೆ ರೋಷಹರುಷಾದಿಗಳೆಂಬ	n	n	n	n
೭೬೭	ಪೂರ್ವಬೀಜ ವಾಯುಪ್ರಾಣಿಯಲ್ಲ	n	y	n	y
೭೬೮	ಹಸಿವಾಯಿತ್ತೆಂದು ಅರ್ಪಿತವ	n	y	n	n
೭೬೯	ಮುತ್ತು ನೀರಲ್ಲಿ ಹುಟ್ಟಿ ಮತ್ತೆ	n	y	n	n
೭೭೦	ಸೂಳೆಗೆ ಮಚ್ಚಿ ಸೂಳೆಯ ಬಂಟರೆಂಜಲ	n	y	n	n
೭೭೧	ಹೊಲೆಯುಂಟೇ ಲಿಂಗವಿದ್ದೆಡೆಯಲ್ಲಿ	y	y	y	n
೭೭೨	ಬಾರದು ಬಾರದು ಭಕ್ತಂಗೆ ಪರಧನ	n	n	y	n
೭೭೩	ಹುತ್ತದ ಮೇಲಣ ರಜ್ಜು ಮುಟ್ಟಿದಡೆ	y	y	y	n
೭೭೪	ನಂಬಿದಡೆ ಪ್ರಸಾದ ನಂಬದಿದ್ದಡೆ	n	n	y	n
೭೭೫	ಪಂಡಿತನಾಗಲಿ ಮೂರ್ಖನಾಗಲಿ	n	y	y	n
೭೭೬	ಒಲ್ಲೆನೆಂಬುದು ವೈರಾಗ್ಯ ಒಲಿವೆನೆಂಬುದು	n	y	y	n
೭೭೭	ಒಪ್ಪವ ನುಡಿವರಯ್ಯಾ ತುಪ್ಪವ	n	y	y	n
೭೭೮	ಅರ್ಪಿತ ಅರ್ಪಿತವೆನ್ನುತ್ತಿಪ್ಪಿರಿ	n	y	y	n
೭೭೯	ಗುರುಲಿಂಗಜಂಗಮದಿಂದೆ ಪಾದೋದಕ	n	y	y	n
೭೮೦	ದಾಸೋಹವೆಂಬ ಸೋಹಗೊಂಡು	n	y	y	n
೭೮೧	ಸಜ್ಜನ ಶರಣರ ಕಂಡು ಎನ್ನ ಮನ	n	y	y	n
೭೮೨	ಕಿವಿಯ ಸೂತಕ ಹೋಯಿತ್ತು ಸದ್ಗುರು	n	y	y	n
೭೮೩	ಲಿಂಗಪ್ರಸಾದಿಗಳಲ್ಲದವರ ಸಂಗ	n	n	y	n
೭೮೪	ಸೈದಾನವ ತಂದು ನೀಡುವೆನಲ್ಲದೆ	n	y	n	n
೭೮೫	ಶುದ್ಧವ ಗುರುವಿಂಗೆ ಕೊಟ್ಟು ಶುದ್ಧ	n	y	y	n
೭೮೬	ಒಡಲ ಕಳವಳಕ್ಕೆ ಬಾಯ ಸವಿಗೆ	n	y	y	n
೭೮೭	ಲಿಂಗ ಮುಖದಿಂದ ಬಂದ ಪ್ರಸಾದ	n	y	n	n
೭೮೮	ಮೌನದಲುಂಬುದು ಆಚಾರವಲ್ಲ	n	n	y	n
೭೮೯	ಕಾಯದ ಕೈಯಕಲು ಕರಣದ	n	y	y	n
೭೯೦	ಆಳಿಕಾಜಿನೆನಗೊಬ್ಬ ಮಗ ಹುಟ್ಟಿ	y	y	y	y
೭೯೧	ಶಿವಾಚಾರವೆಂಬುದೊಂದು ಬಾಳ	y	n	y	n
೭೯೨	ತ್ರಿವಿಧ ಪ್ರಸಾದವೆಂದೆಂಬರು	n	n	y	n
೭೯೩	ಆವಾವ ಭಾವದಲಿ ಶಿವನ ನಂಬಿದ	n	n	y	n
೭೯೪	ಉಜಿಯ ತಾಗಿದ ಮೃಗವು	n	n	y	n
೭೯೫	ನಿಮ್ಮ ಶ್ರೀಪಾದವು ಮುಟ್ಟಿ ಎನ್ನ	n	n	y	n

	I	II	III	IV	V
೭೯೬	ನಡೆ ಚೆನ್ನ ನುಡಿ ಚೆನ್ನ	y	n	y	n
೭೯೭	ಲಿಂಗವಿಕಾರಿಗೆ ಅಂಗವಿಕಾರವೆಂಬುದಿಲ್ಲ	n	y	y	n
೭೯೮	ಪ್ರಾಣಲಿಂಗ ಪ್ರತಿಗ್ರಾಹಕನಾದ	y	n	y	n
೭೯೯	ಹತ್ತುಸಾವಿರ ಗೀತವ ಮಾಡಿ	n	y	y	y
೮೦೦	ಶ್ವಾನಜ್ಞಾನ ಗಜಜ್ಞಾನ ಕುಕ್ಕುಟಜ್ಞಾನ	n	y	y	n
೮೦೧	ಗುರು ತೋಱಿದ ಲಿಂಗವು ಮನಸ್ಥಲ	n	y	y	y
೮೦೨	ಕಬ್ಬುನ ಪರುಷವೇಧಿಯಾದಡೇನು	y	y	y	n
೮೦೩	ಅಹಂಕಾರ ಮನವನಿಂಬುಗೊಂಡಲ್ಲಿ	n	y	y	n
೮೦೪	ನುಡಿದರೆ ಮುತ್ತಿನ ಹಾರದಂತಿರಬೇಕು	y	y	y	n
೮೦೫	ಮನದ ಕೊನೆಯ ಮೊನೆಯ ಮೇಲೆ	y	y	y	n
೮೦೬	ಅರಿದರಿದು ಸಮಗಾಣಿಸಬಾರದು	n	y	n	n
೮೦೭	ಸ್ಥಾವರ ಜಂಗಮವೆಂಬುಭಯ ಪಕ್ಷವೊಂದೆ	n	y	y	n
೮೦೮	ಮುತ್ತು ಉದಕಲಾಗದು ಉದಕ	n	y	y	n
೮೦೯	ಕಾಯದ ಗಡಣ ಕೆಲಬರಿಗುಂಟು	y	y	y	y
೮೧೦	ಚಂದ್ರಕಾಂತದ ಶಿಲೆಯಲ್ಲಿ ಜಲ	y	n	y	n
೮೧೧	ಮುನ್ನೂಱಱುವತ್ತು ನಕ್ಷತ್ರಕ್ಕೆ	y	n	y	n
೮೧೨	ಮೆಯ್ಗೆ ಕಾಹ ಹೇಳುವರಲ್ಲದೆ ಮನಕ್ಕೆ	y	y	y	y
೮೧೩	ಮನವಂಚನೆಯೆ ಅನ್ಯ ಲಿಂಗಾರ್ಚನೆ	n	n	y	n
೮೧೪	ಸರ್ಪನ ಸಂಯೋಗ ಜ್ಯೋತಿಯ	y	y	y	y
೮೧೫	ಪೃಥ್ವಿ ಅಪ್ಪು ತೇಜ ವಾಯು ಆಕಾಶ	y	y	y	y
೮೧೬	ಪಶ್ಚಿಮ ಪದ್ಮಾಸನದಲ್ಲಿ ಕುಳ್ಳಿರ್ದು	y	y	y	y
೮೧೭	ಸುನಾದಬಿಂದುಕಳಾ ಮಂತ್ರದಗ್ರದ	y	y	y	y
೮೧೮	ಬೆಳಗಿನೊಳಗಣ ಬೆಳಗು ಮಹಾಬೆಳಗು	y	y	y	n
೮೧೯	ಆಚಾರ ಶಿವಾಚಾರವೆಂದಱಿಯದ	y	y	n	y
೮೨೦	ತಮತಮಗೆಲ್ಲರು ನೊಸಲಕಣ್ಣರು	y	n	y	n
೮೨೧	ಗುರುವಿನಲ್ಲಿ ಸದಾಚಾರ ಲಿಂಗದಲ್ಲನುದಿನ	n	y	n	y
೮೨೨	ಉಳ್ಳವರು ಶಿವಾಲಯ ಮಾಡುವರು	n	n	n	n
೮೨೩	ಅಷ್ಟದಳಕಮಲಾತ್ಮದೊಳಗೆ ನೆಟ್ಟನೆ	n	y	y	y
೮೨೪	ನಿನ್ನ ನಾನಱಿಯದಮುನ್ನ ನೀನೆಲ್ಲಿದ್ದೆ	y	n	y	n
೮೨೫	ಗುರು ಮುನಿದೊಡೊಂದು ದಿನ	y	n	n	n
೮೨೬	ಅರಸು ಮುನಿದೊಡೆ ನಾಡೊಳಗಿರ	n	n	n	n

	I	II	III	IV	V
೮೨೭	ರಚ್ಚೆಯ ನೆರವಿಗೆ ನಾಣ್ಣುಡಿ	y	y	n	y
೮೨೮	ಭೂತವೊಲಿದಾತ್ಮನ ಸೋಂಕಿದ	n	y	n	n
೮೨೯	ಹಸಿವು ತೃಷೆ ನಿದ್ರೆ ವಿಷಯಂಗಳ	n	y	n	y
೮೩೦	ತನು ನಿಮ್ಮದೆಂದ ಬಳಿಕ ಎನಗೆ	n	n	n	n
೮೩೧	ಆಕಳ ಕಳ್ಳರು ಕೊಂಡೊಯ್ದರೆನ್ನದಿರಿಂ	n	n	n	n
೮೩೨	ಅರ್ಥ ಪ್ರಾಣಾಭಿಮಾನವನೊಪ್ಪಿಸಿದಲ್ಲಿ	n	n	n	n
೮೩೩	ಮಾಡುವಾತ ನಾನಲ್ಲವಯ್ಯಾ	n	n	n	n
೮೩೪	ಮುನ್ನಿನ ಜನ್ಮದಲ್ಲಿ ಗುರುಲಿಂಗಜಂಗಮ	n	n	n	n
೮೩೫	ಜನ್ಮಜನ್ಮಕ್ಕೆ ಹೋಗಲೀಯದೆ	n	n	n	n
೮೩೬	ಆಸೆ ಆಮಿಷ ತಾಮಸದಿಂದ ಭವ	n	y	n	y
೮೩೭	ಬೆಟ್ಟಕ್ಕೆ ಬೆಳ್ಳಾರ ಸುತ್ತಿತ್ತಯ್ಯ	y	y	n	y
೮೩೮	ಪರಿಯಾಣವೆ ಭಾಜನವೆಂಬರು	n	n	y	n
೮೩೯	ಆತ್ಮ ಲಿಂಗ ಪರಿಮಾತ್ಮ ಜಂಗಮ	y	y	y	y
೮೪೦	ಲೋಹ ಪರುಷವ ಮುಟ್ಟುವುದಲ್ಲದೆ	n	y	n	y
೮೪೧	ಜಂಗಮವೇ ಲಿಂಗವೆನಗೆ ಜಂಗಮವೇ	n	n	n	n
೮೪೨	ಅಯ್ಯಾ ನೀನೆಂದಡೆ ಎಂಬೆನು	n	y	n	y
೮೪೩	ಜ್ಞಾನದ ಬಲದಿಂದ ಅಜ್ಞಾನದ ಕೇಡು	n	n	n	n
೮೪೪	ಆದ್ಯರ ವಚನ ಆದ್ಯರಿಗಾಯಿತ್ತು	n	n	n	n
೮೪೫	ಅಸಂಬಂಧ ಸಂಬಂಧವಾಯಿತ್ತು	y	y	n	y
೮೪೬	ಶರಣಸನ್ನಹಿತ ಐಕ್ಯವಹಲ್ಲಿ	n	n	n	n
೮೪೭	ನೀನೊಲಿದಡೆ ಒಲಿ ಒಲಿಯದಿದ್ದಡೆ	n	y	y	y
೮೪೮	ಮಾಡುವರಿಲ್ಲ ನೀ ಮಾಡದೆ ನಿಲ ಸಾಲೆ	n	y	n	y
೮೪೯	ಆಲಿಕಲ್ಲ ಹರಳಿನಂತೆ ಅರಗಿನ ಪುತ್ಥಳಿ	y	n	y	n
೮೫೦	ನಾಲಿಗೆ ತಾಗಿದ ರುಚಿಗೆ ಮನವೇ	n	y	y	y
೮೫೧	ಎಲ್ಲರ ಗಂಡರ ಪರಿಯಂತಲ್ಲ	y	y	y	y
೮೫೨	ಜ್ಞಾನದ ಗಮನದ ಸಹಜದ	y	n	y	n
೮೫೩	ಕಾಯವೆಂಬ ಘಟ್ಟಕ್ಕೆ ಚೈತನ್ಯವೆಂಬ	n	y	n	n
೮೫೪	ಕಂಗಳು ತುಂಬಿದ ಬಳಿಕ ನೋಡಲಿಲ್ಲ	n	n	n	n
೮೫೫	ಅಡಿಗಡಿಗೆ ಸ್ಥಾನ ನದಿ ಅಡಿಗಡಿಗೆ	n	y	n	n
೮೫೬	ಧನದಲ್ಲಿ ಶುಚಿ ಪ್ರಾಣದಲ್ಲಿ ನಿರ್ಭಯ	n	y	y	y
೮೫೭	ಶರಣರ ಸನ್ನಿಹಿತವಪ್ಪ ನಿಜಗುಣ	y	y	y	y

I		II	III	IV	V
೮೫೮	ಹಲಬರ ನುಂಗಿದ ಹಾವಿಂಗೆ	y	y	y	y
೮೫೯	ಆದಿತ್ಯ ಸೋಮರು ಆಗಿಹೋಗುತ್ತಿದ್ದಾರೆ	n	y	y	y
೮೬೦	ಆದಿಯಲ್ಲಿ ಶಿವಬೀಜವಾಗದಿದ್ದಡೆ	n	n	y	n
೮೬೧	ಮರುಳ ಕಂಡ ಕನಸಿನ ಪರಿಯಂತೆ	y	n	n	n
೮೬೨	ಉಂಬ ಬಟ್ಟಲು ಬೇರೆ ಕಂಚಲ್ಲ	n	n	y	n
೮೬೩	ಕೆಱೆ ಹಳ್ಳಬಾವಿಗಳು ಮೈದೆಗೆದಡೆ	y	n	n	n
೮೬೪	ಪುಣ್ಯ ಪಾಪವೆಂಬ ಉಭಯಕರ್ಮ	n	n	y	n
೮೬೫	ನಾರುಳಿಯ ಹಣಿದವ ನಾರಾದಡೆಯೂ	n	y	n	y
೮೬೬	ಭಕ್ತನ ಮಠವೆಂದು ಜಂಗಮವು	n	y	n	n
೮೬೭	ಲಿಂಗನಿಷ್ಠೆ ಪೂಜೆಯಲ್ಲಿ ಬೀಯವಾಯಿತು	n	n	y	n
೮೬೮	ತೆಱನನಱಿವುದಪೂರ್ವ ಅಱಿದು	n	y	y	y
೮೬೯	ಐದು ಮಾನವ ಕುಟ್ಟಿ ಒಂದು ಮಾನವ	y	y	y	y
೮೭೦	ಕುಲಮದವಳಿಯದನ್ನಕ್ಕ ಶರಣ	y	y	y	n
೮೭೧	ಮಣ್ಣ ಮಡಕೆಯು ಮಣ್ಣಾಗದು	y	y	y	n
೮೭೨	ಪೂವಜನ್ಮ ನಿವೃತ್ತಿಯಾಗಿ ಗುರುಕರುಣ	n	n	y	n
೮೭೩	ಲಗ್ನವೆಲ್ಲಿಯದೋ ವಿಘ್ನವೆಲ್ಲಿಯದೋ	n	n	y	n
೮೭೪	ಶರಣ ನಿದ್ರೆಗೈದಡೆ ಜಪ ಕಾಣರೋ	y	n	y	n
೮೭೫	ಉಪಮಿಸಬಾರದು ಉಪಮಾತೀತರು	n	n	n	n
೮೭೬	ಭವಕೆ ಹುಟ್ಟುವನಲ್ಲ ಸಂದೇಹಿ	n	n	y	n
೮೭೭	ಬ್ರಹ್ಮಂಗೆ ವಾಕ್ಪುರುಷ ವಿಷ್ಣುವಿಂಗೆ	n	n	y	n
೮೭೮	ಸಮುದ್ರ ಘನವೆಂಬೆನೆ ಧರೆಯ	n	n	y	n
೮೭೯	ಆಚಾರಲಿಂಗವಿಡಿದು ಅನುಬಾವಲಿಂಗ	y	y	y	y
೮೮೦	ನೆಲನೊಂದೇ ಹೊಲಗೇರಿ ಶಿವಾಲಯಕ್ಕೆ	n	y	n	n
೮೮೧	ಮಧ್ಯಪಿಡಂಗಳೆಲ್ಲವೂ ಶಿವನಿದ್ದೆಡೆಯ	n	y	y	y
೮೮೨	ಪರತತ್ವ ನಿಜ ಸಂಯುಕ್ತರ ನಾನು	n	n	y	n
೮೮೩	ಅಯ್ಯಾ ಸಜ್ಜನ ಸದ್ಭಾವರ ಸಂಗದಿಂದ	n	n	y	n
೮೮೪	ಮರಮರಮಥಣದಿಂದ ಅಗ್ನಿ ಹುಟ್ಟಿ	n	n	n	n
೮೮೫	ಅಱಿದುದ ಅಱಿಯಲೊಲ್ಲದು ಅದೆಂತಯ್ಯ	n	y	n	n
೮೮೬	ಮಿಸಲು ಬೀಸರವಾದ ಪರಿಯ ನೋಡಾ	n	y	n	n
೮೮೭	ಹಾಲೆಂಜಲು ಪೇಯನ ಉದಕವೆಂಜಲು	n	n	n	n
೮೮೮	ಶುದ್ಧವಾಯಿತ್ತೆಂಬೆನೆ ಸುಯಿಧಾನಿ	n	y	n	n

I	II	III	IV	V
೬೮೯ ಪಾದಾರ್ಚನೆಯ ಮಾಡುವೆನಯ್ಯ	n	y	n	n
೬೯೦ ಯಸ್ಯಕ್ರಿಯಾ ತಸ್ಯ ಭವತಿ;ಯೆಂದು	n	y	y	y
೬೯೧ ಕಳಾಬಿಂದುವಟಾಮುಖಿಯೆಂಬ	y	y	y	y
೬೯೨ ದಿಟವ ಮಾಡಿ ಪೂಜಿಸಿದೆಡೆ ಸಟೆಯ	n	n	n	n
೬೯೩ ಎಂಬತ್ತೆಂಟು ಪವಾಡವ ಮೆಱೆದು	n	y	n	y
೬೯೪ ಭಕ್ತನೆನಿಸನಯ್ಯ ಮೆಲ್ಲಮೆಲ್ಲನೆ	n	y	n	n
೬೯೫ ಬಸವ ಬಾರಯ್ಯ ಮರ್ತ್ಯಲೋಕದೊಳಗೆ	n	n	n	n
೬೯೬ ಪರಮ ಪ್ರಭುವೇ ನೀ ಮುನಿದೆನ್ನ	n	n	n	n
೬೯೭ ತನುಮನ ಧನವೆಂ ಮೂರು ಕನ್ನಡಿ	n	y	n	y
೬೯೮ ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ	n	n	n	n
೬೯೯ ಕುಲಗೆಟ್ಟಡೆ ಕೆಡಬಹುದಲ್ಲದೆ	n	y	n	y
೭೦೦ ಅಷ್ಟವಿಧಾರ್ಚನೆ ಷೋಡಶೋಪಚಾರ	y	y	n	y
೭೦೧ ಮರನ ಹೂವ ಕೊಯ್ದು ಮರಕ್ಕೇರಿಸಿ	y	y	n	y
೭೦೨ ತಾಪತ್ರಯವೆಂದೆಡೆ ರೂಪು ಕಾಣುತ್ತ	y	y	n	y
೭೦೩ ಈ ಲೋಕದ ಬೀತರು ಆ ಲೋಕದ	n	y	n	y
೭೦೪ ತಾಗು ನಿರೋಧ ಆಗುಹೋಗ	n	n	n	n
೭೦೫ ಜಗವು ಸುತ್ತಿಪ್ಪುದು ನಿಮ್ಮ ಮಾಯೆ	n	n	n	n
೭೦೬ ಎನಗೆ ಗುರುವಿನ ಪ್ರಸಾದ ನಿನಗೆ	n	n	n	n
೭೦೭ ಶುದ್ಧಾತ್ಮ ಪರಮಾತ್ಮರಿಬ್ಬರೂ ಒಂದು	y	y	n	y
೭೦೮ ಆ ರತ್ನ ಪ್ರಸಾದವನಾರಾಧಿಸುತ್ತಿರಲು	y	y	n	y
೭೦೯ ಎಲ್ಲರ ಗಂಡರು ಬೇಂಟೆಗೆ ಹೋದರು	y	y	y	y
೭೧೦ ಕಣ್ಣೊಳಗೆ ಕಣ್ಣಿದ್ದು ಕಾಣಲೇಕಜಿಯರಯ್ಯ	y	y	n	y
೭೧೧ ಗ್ರಹ ಬಂದು ಆವರಿಸಲೊಡನೆ	n	y	y	n
೭೧೨ ಭೂತಕನ ಸೀರೆಯ ಸಾತ್ವಿಕ	y	y	y	y
೭೧೩ ಮನೆಯ ಗಂಡನ ಮನೆಯ ವಾರ್ತೆಯ	y	y	y	y
೭೧೪ ಅಳಿಯನ ಕಂಡಂಡೆ ನಾಚೆಂಬೆ ಮಗಳೆ	y	y	y	y
೭೧೫ ಸತ್ಯವಿದೆ ಸಮಾಧಾನವಿದೆ ಮನಕ್ಕೆ	y	y	y	y
೭೧೬ ಸಿನಿಬಂಜೆಯರಿಬ್ಬರಿಗೊಬ್ಬ ಮಗ ಹುಟ್ಟಿ	y	y	y	y
೭೧೭ ಪೂಜೆಯುಳ್ಳನಬರ ಲಿಂಗವ ಹಾಡಿದೆ	n	y	y	n
೭೧೮ ಅನಾಯಾಸದಿಂದ ಮನೆಯಮಾಡಿ	y	y	y	y
೭೧೯ ಮರುಳತಲೆ ಹುರುಳುತಲೆ ನೀನೆ	y	y	y	y

I	II	III	IV	V
೯೨೦ ತೆಱಹಿಲ್ಲದ ನಡೆ ತೆಱಹಿಲ್ಲದ ನುಡಿ	y	y	y	y
೯೨೧ ಮೂಱಱೂಪ್ಯಾಯನ ಐದು ಬೆಟ್ಟವ	y	y	y	y
೯೨೨ ಉಮಾದಿನಾಥರೊಂದು ಕೋಟಿ	n	n	y	y
೯೨೩ ರಕ್ಕಸಿಯ ಮನೆಯಲು	y	y	n	y
೯೨೪ ಬಯಲ ರೂಪ ಮಾಡಬಲ್ಲಾತನೆ	y	y	y	y
೯೨೫ ದೇವಲೋಕ ಮರ್ತ್ಯಲೋಕವೆಂಬ	n	y	n	y
೯೨೬ ಮಾತಿಲ್ಲ ನುಡಿಯಿಲ್ಲ ಏತಕೆ	y	y	n	y
೯೨೭ ಏನನಾದಡೆಯೂ ಸಾದಿಸಬಹುದು	y	y	y	y
೯೨೮ ಜೀವಾತ್ಮ ಅಂತರಾತ್ಮನ ಸುದ್ದಿಯ	y	y	y	y
೯೨೯ ಸಮರತಿ ಸಮಕಳೇ ಸಮಸುಖ	y	y	y	y
೯೩೦ ಗುರುಶಿಷ್ಯ ಸಂಬಂಧವಾದುದಕ್ಕೆ	y	y	y	y
೯೩೧ ಲಿಂಗವ ಪೂಜಿಸಿ ಫಲವೇನಯ್ಯಾ	y	y	n	n
೯೩೨ ಒಲೆಯಡಿಯನುರುಹಿದಡೆ ಹೊಗೆ	y	y	y	y
೯೩೩ ಆ ಭಸ್ಮಕ್ಕಾಗಿ ಬ್ರಹ್ಮ ತನ್ನ ಕಪಾಲವ	y	y	y	y
೯೩೪ ನಾನೊಮ್ಮೆ ಬೇಂಟೆಯ ಹೋದಡೆ	y	y	n	y
೯೩೫ ಲಿಂಗಾರ್ಚನೆಯ ಮಾಡುವ ಮಹಿಮೆ	y	y	y	y
೯೩೬ ಶಿವಶಿವಾ ಮೂರ್ತಿಗೆ ಸತ್ಯಶುದ್ಧ	y	y	n	y
೯೩೭ ಭಕ್ತನಾಯಿತ್ತೇ ಭಕ್ತಿದಾಸೋಹ	y	n	n	n
೯೩೮ ಜಲವ ನುಂಗಿತ್ತಯ್ಯ ಎನ್ನ ಕರುವು	y	y	n	y
೯೩೯ ಎಲ್ಲವ ಬೇಡಿದರೆಮ್ಮವರು ಒಂದ	n	y	n	y
೯೪೦ ಭಿತ್ತಿಯಿಲ್ಲದ ಚಿತ್ತಾರದಂತೆ	n	y	y	y
೯೪೧ ಆಯತ ಒಂದೆಡೆಯಲ್ಲಿ ತೆಱನನಱಿ	y	y	n	y
೯೪೨ ಸತ್ತು ಹುಟ್ಟುವನಲ್ಲ ಸಂದೇಹಿ ಸೂತಕಿ	n	y	y	y
೯೪೩ ದಶದಿಕ್ಕು ಧರೆ ಗಗನವೆಂಬುದ	n	n	n	n
೯೪೪ ಮಿಥ್ಯವನಳಿದುಳಿದ ಸತ್ಯಪ್ರಸಾದಿ	n	n	n	n
೯೪೫ ಹುಸಿಯಿಂದ ಜನಿಸದಯ್ಯ	n	y	y	y
೯೪೬ ಬೆಳಗಿನೊಳಗಣ ಬೆಳಗು ಮಹಾಬೆಳಗೆಂಬ	n	n	n	n
೯೪೭ ಆಯತವೆಂಬುದು ಭಂಗ ಸ್ವಾಯತ	n	y	y	y
೯೪೮ ಸ್ವಯಲಿಂಗದನುಭಾವ ತನಗೆ	n	y	y	y
೯೪೯ ಏನೆಂಬೆನೇನೆಂಬೆ ಒಂದೆರಡಾದುದು	n	n	y	n
೯೫೦ ಕುಱುಹಿಲ್ಲ ಕುಱುಹಿಲ್ಲ ಲಿಂಗವೆಂದೆಂಬಡೆ	n	y	n	y
೯೫೧ ಭೂ ತೋಯ ಪಾವಕ ಸಮೀರಣ	n	n	n	n

I	II	III	IV	V
೯೫೨ ಮಹಾಲಿಂಗದ ಸ್ಥಾನಂಗಳು ಮಹಾಲಿಂಗದ	n	n	y	n
೯೫೩ ಹುತ್ತಕ್ಕೆ ಏಸು ಬಾಯಾದಡೇನು	n	n	y	n
೯೫೪ ವೇದ ವೇಧಿಸಲಜಿಯದೆ ಅಭೇದ್ಯ	n	n	n	n
೯೫೫ ವೇದಾತೀತ ಷಡ್ವರ್ಣರಹಿತ	n	n	y	n
೯೫೬ ವಿಶ್ವಜಿತನು ಧನುರ್ಜಿತನು	n	y	n	y
೯೫೭ ಸಹಸ್ರಶೀರ್ಷನಾದಿಪುರುಷನೊಬ್ಬ	n	y	n	n
೯೫೮ ಅಷ್ಟತನುಮೂರ್ತಿ ಲಿಂಗವೆಂದೆಂಬರು	n	n	n	n
೯೫೯ ಘನಗಂಭೀರ ಮಹಾಘನದೊಳಗೆ	n	n	n	n
೯೬೦ ಸಮಸ್ತ ಕತ್ತಲೆಯ ಮಸಕವ	n	n	n	n
೯೬೧ ಅಂತರಂಗ ಬಹಿರಂಗ ಆತ್ಮಸಂಗ	n	n	y	n

❖❖

ಅನುಬಂಧ : ೨

ಬಸವಣ್ಣನವರ ವಚನಗಳ ಟೀಕೆಯ ಅಂಕಿ–ಸಂಖ್ಯೆಗಳ ತೌಲನಿಕ ವಿವರಣೆ

ವಚನಗಳ ಅಕ್ಷರಾನುಕ್ರಮಣಿಕೆ

	I	II	III	IV	V
	ಅ				
೭೩೦	ಅಂಕಕಂಡಾ ಕೋಲಾಸೆ ಮತ್ತೇಕಯ್ಯಾ	n	n	n	n
೭೩೫	ಅಂಗದೆ ಮೇಲಣ ಲಿಂಗ ಹಿಂಗಿ	n	n	n	n
೬೯೮	ಅಂಜಿದಡಾಗದು ಅಳುಕಿದಡಾಗದು	y	n	n	n
೯೬೧	ಅಂತರಂಗ ಬಹಿರಂಗ ಆತ್ಮ ಸಂಗ	n	n	y	n
೭೫೪	ಅಂದಂದಿನ ಹೊದ್ದಿಗೆಯ ಬಿಂದು	n	n	n	n
೭೨೮	ಅಟ್ಟಾಟಿಕೆಯ ಮಾತನಾಡಲದೇಕೋ	n	n	y	y
೬೬೧	ಅಡಿಗಡಿಗೆ ದೇವರಾಣಿ ಅಡಿಗಡಿಗೆ	n	n	y	n
೮೫೫	ಅಡಿಗಡಿಗೆ ಸ್ಥಾನ ನದಿ ಅಡಿಗಡಿಗೆ	n	y	n	n
೭೧೫	ಅಣ್ಣ ತಮ್ಮ ಹೆತ್ತಪ್ಪ ಗೋತ್ರ	n	n	n	n
೯೧೮	ಅನಾಯಾಸದಿಂದ ಮನೆಯ ಮಾಡಿ	y	y	y	y
೬೬೬	ಅರ್ಥ ಪ್ರಾಣಭಿಮಾನವ ನಿಮ್ಮದೆಂಬಿರಿ	y	n	y	n
೬೮೨	ಅರ್ಥ ಪ್ರಾಣಭಿಮಾನವ ಕೊಟ್ಟೆನೆಂಬುವ	n	y	y	n
೮೩೨	ಅರ್ಥ ಪ್ರಾಣಭಿಮಾನವನೊಪ್ಪಿಸಿದಲ್ಲಿ	n	n	n	n
೭೦೮	ಅರ್ಥವನರ್ಥವ ಮಾಡಿ ಕೋಳಾಹಳ	n	y	y	n
೫೪೦	ಅದರಿದವು ಪಾದಾಘಾತದಿಂದೆ ಧರೆ	y	y	y	y
೭೭೮	ಅರ್ಪಿತ ಅರ್ಪಿತವೆನ್ನುತ್ತಿಪ್ಪಿರಿ	n	y	y	n
೫೫೧	ಅಮೃತವ ಕಡೆವಲ್ಲಿ ವಿಷವಟ್ಟಿ	n	n	n	n
೫೪೬	ಅಮೃತವತಿ ಸೋಮ ಶಂಭುವಿಂಗೆ	n	n	n	n
೮೪೨	ಅಯ್ಯಾ ನೀನೆಂದಡೆ ಎಂಬೆನು	n	y	n	y
೬೦೫	ಅಯ್ಯಾ ನಿಮ್ಮ ಶರಣರ ಚಮ್ಮಾವುಗೆಗೆ	n	n	n	n
೮೮೩	ಅಯ್ಯಾ ಸಜ್ಜನ ಸದ್ಭಾವರ ಸಂಗದಿಂದ	n	n	y	n

	I	II	III	IV	V
೬೬೨	ಅರಗಿನ ಪುತ್ಥಳಿಯ ಉರಿಯ ನಾಲಿಗೆ	y	n	n	n
೫೫೮	ಅರಗು ತಿಂದು ಕರಗುವ ದೈವವ	y	n	n	n
೭೪೦	ಅರಸರು ಮಂಚಕ್ಕೆ ಬರಸಿ ಎನ್ನ	y	n	n	n
೮೨೬	ಅರಸು ಮುನಿದೊಡೆ ನಾಡೊಳಗಿರ	n	n	n	n
೬೨೬	ಅರಸು ವಿಚಾರ ಸಿರಿಯ ಶೃಂಗಾರ	y	y	n	n
೮೦೬	ಅರಿದರಿದು ಸಮಗಾಣಿಸಬಾರದು	n	y	n	n
೮೮೫	ಅಜಿದುದ ಅಜಿಯಲೊಲ್ಲದು	n	y	n	n
೬೮೮	ಅರೆವನಯ್ಯ ಸಣ್ಣನಾಗುವನ್ನಕ್ಕ	y	n	y	n
೬೬೯	ಅಲಗಲಗು ಮೋಹಿಸಿದಲ್ಲದೆ	y	n	y	n
೬೫೯	ಅವರ ನಡೆವೊಂದು ನುಡಿವೊಂದಾದಡೆ	n	n	n	n
೫೬೯	ಅವಲಕ್ಷಣ ನಾಯನುಡಿಯ	y	y	n	n
೬೧೨	ಅಶ್ವಮೇಧಯಾಗವಂತಿರಲಿ	n	n	y	n
೯೫೮	ಅಷ್ಟತನುಮೂರ್ತಿ ಲಿಂಗವೆಂದೆಂಬರು	n	n	n	n
೮೨೩	ಅಷ್ಟದಳ ಕಮಲಾತ್ಮದೊಳಗೆ ನೆಟ್ಟನೆ	n	y	y	y
೬೨೦	ಅಷ್ಟಮಿ ನವಮಿ ಎಂಬ ಕಲ್ಪಿತವೇಕೊ	n	n	n	n
೯೦೦	ಅಷ್ಟವಿಧಾರ್ಚನೆ ಷೋಡಶೋಪಚಾರ	y	y	n	y
೮೪೫	ಅಸಂಬಂಧ ಸಂಬಂಧವಾಯಿತ್ತು	y	y	n	y
೫೬೭	ಅಸಮಾಕ್ಷ ಲಿಂಗಕ್ಕೆ ಅನ್ಯದೈವ	n	y	n	n
೮೦೩	ಅಹಂಕಾರ ಮನವನಿಂಬುಗೊಂಡಲ್ಲಿ	n	y	y	n
೯೧೪	ಅಳಿಯನ ಕಂಡಡೆ ನಾಚೆಂಬೆ ಮಗಳೆ	y	y	y	y
	ಆ				
೮೩೧	ಆಕಳ ಕಳ್ಳರು ಕೊಂಡೊಯ್ದರೆನ್ನ	n	n	n	n
೮೭೯	ಆಚಾರಲಿಂಗವಿಡಿದು ಅನುಭಾವಲಿಂಗ	y	y	y	y
೮೧೯	ಆಚಾರ ಶಿವಾಚಾರವೆಂದಜಿಯದ	y	y	n	y
೮೩೯	ಆತ್ಮ ಲಿಂಗ ಪರಮಾತ್ಮ	y	y	y	y
೮೪೪	ಆದ್ಯರ ವಚನ ಆದ್ಯರಿಗಾಯಿತ್ತು	n	n	n	n
೬೦೩	ಆದ್ಯರಿಗಲ್ಲದೆ ವೇದ್ಯವಾಗದು	n	y	n	n
೮೫೯	ಆದಿತ್ಯ ಸೋಮರು ಆಗಿಹೋಗು	n	n	n	y
೫೭೨	ಆದಿಪುರಾಣ ಅಸುರಿಂಗೆ ಮಾರಿ	n	n	n	n
೭೧೪	ಆದಿಯಲಾಗಲಿ ವೇದದಲಾಗಲಿ	n	y	y	n

	I	II	III	IV	V
೮೬೦	ಆದಿಯಲ್ಲಿ ಶಿವಬೀಜವಾಗದಿದ್ದಡೆ	n	n	y	n
೭೩೮	ಆನೆ ಅಂಕುಶಕ್ಕಂಜುವುದೆ ಅಯ್ಯ	n	n	n	n
೬೩೯	ಆನೆಯನೇಱಿಕೊಂಡು ಹೋದಿರೆ	n	y	y	n
೭೫೯	ಆಪ್ಯಾಯನಕನ್ನವ ನೀಡುವೆ	n	n	n	n
೯೩೩	ಆ ಭಸ್ಮತಾಗಿ ಬ್ರಹ್ಮ ತನ್ನ ಕಪಾಲವ	y	y	y	y
೯೪೧	ಆಯತ ಒಂದೆಡೆಯಲ್ಲಿ ತೆಱನನಱಿ	y	y	n	y
೯೪೭	ಆಯತವೆಂಬುದು ಭಂಗ ಸ್ವಾಯತ	n	y	y	y
೬೩೨	ಆಯುಧವನಿಕ್ಕಿದವಂಗೆ ವೀರದ	y	y	n	n
೬೯೧	ಆಯುಷ್ಯ ತೀರಿದಲ್ಲದೆ ಮರಣವಿಲ್ಲ	n	y	y	n
೯೦೮	ಆರತ್ನ ಪ್ರಸಾದವನಾರಾಧಿಸುತ್ತಿರಲು	y	y	n	y
೭೫೪	ಆರು ಮುನಿದು ನಮ್ಮನೇನ	n	n	y	n
೫೪೧	ಆಱಿಕೋಟಿ ಬ್ರಹ್ಮರು ಮಡಿವಲ್ಲಿ	n	n	n	n
೮೪೯	ಆಲಿಕಲ್ಲ ಹರಳಿನಂತೆ ಅರಗಿನ	y	n	y	n
೭೧೯	ಆವ ಕುಲವಾದಡೇನು ಶಿವಲಿಂಗವಿದ್ದ	n	n	y	n
೫೫೫	ಆವಾಗಲೂ ಲೋಗರ ಮನೆಯ	n	n	n	n
೭೯೩	ಆವಾವ ಭಾವದಲಿ ಶಿವನ ನಂಬಿದ	n	n	y	n
೮೩೬	ಆಸೆ ಆಮಿಷ ತಾಮಸದಿಂದ	n	y	n	y
೭೬೬	ಆಸೆ ರೋಷಹರುಷಾದಿಗಳೆಂಬ	n	n	n	n
೭೯೦	ಅಳಿಕಾಱನೆನಗೊಬ್ಬ ಮಗ ಹುಟ್ಟಿ	y	y	y	y
	ಇ				
೯೪೦	ಇಂದ್ರಿಯ ನಿಗ್ರಹವ ಮಾಡಿದಡೆ	n	y	y	n
೫೭೮	ಇಟ್ಟಿಯ ಹಣ್ಣ ನರಿ ತಿಂದು	n	n	n	n
೬೧೧	ಇಪ್ಪತ್ತುನಾಲ್ಕು ತಿಥಿಗಳಿಂದ ವೆಗ್ಗಳ	n	n	n	n
೫೪೭	ಇಬ್ಬರು ಮೂವರು ದೇವರೆಂದು	n	n	y	n
೬೩೩	ಇರುಳೆಂದೇನೋ ಕುರುಡಂಗೆ	y	n	y	n
	ಈ				
೯೦೩	ಈ ಲೋಕದ ಭೀತರು ಆ ಲೋಕದ	n	y	n	y
೭೪೯	ಈಶ್ವರ ಸದ್ಭಾವೇ ಕಿಂ ಪ್ರಮಾಣಂ	n	y	n	n
	ಉ				
೮೬೨	ಉಂಬ ಬಟ್ಟಲು ಬೇಱೆ ಕಂಚಲ್ಲ	n	n	y	n
೬೨೯	ಉಂಬಲ್ಲಿ ಉಡುವಲ್ಲಿ ಕ್ರೀಯಳಿಯಿತ್ತೆಂಬರು	n	n	y	n

	I	II	III	IV	V
೫೬೦	ಉಣಲುಡಲು ಮಾರಿಯಲ್ಲದೆ	n	n	n	n
೬೧೯	ಉಣಿಸುವ ಉಡಿಸುವ ಗಂಡನಿದ್ದಂತೆ	y	n	n	n
೮೭೫	ಉಪಮಿಸಬಾರದ ಉಪಮಾತೀತರು	n	n	n	n
೫೩೦	ಉಪ್ಪರಗುಡಿ ನಂದಿವಾಹನ ಸದ್ಯೋಜಾತನ	n	y	y	n
೯೨೨	ಉಮಾದಿನಾಥರೊಂದು ಕೋಟಿ	n	n	y	n
೬೬೪	ಉರಿವ ಕೊಳ್ಳಿಯ ಮಂಡೆಯಲ್ಲಿಕ್ಕಿದಡೆ	y	y	n	n
೭೯೪	ಉಱೆಯ ತಾಗಿದ ಮೃಗವು	n	n	y	n
೮೨೨	ಉಳ್ಳವರು ಶಿವಾಲಯ ಮಾಡುವರು	n	n	n	n
	ಊ				
೭೫೬	ಊರ ಮುಂದೆ ಹಾಲು ಹಳ್ಳ	y	y	n	n
	ಎ				
೮೯೩	ಎಂಬತ್ತೆಂಟು ಪವಾಡವ ಮೆಱೆದು	n	y	n	y
೬೨೪	ಎಚ್ಚು ವಾಲಿಯ ಕೊಂದ	n	y	n	y
೭೨೧	ಎಡದ ಕೈಯಲ್ಲಿ ಕತ್ತಿ ಬಲದ	n	y	y	n
೫೩೪	ಎತ್ತೆತ್ತ ನೋಡಿದಡತ್ತ ನೀನೆ ದೇವಾ	n	n	y	n
೯೦೬	ಎನಗೆ ಗುರುವಿನ ಪ್ರಸಾದ ನಿನಗೆ	n	n	n	n
೫೮೮	ಎನಿಸನೋದಿದಡೇನು ಎನಿಸ	n	y	n	n
೬೯೩	ಎನಿಸೆನಿಸೆಂದಡೆಯೂ ನಾ ಧೃತಿಗೆಡೆ	n	n	n	n
೬೨೧	ಎಲವೋ ಎಲವೋ ಪಾಪಕರ್ಮವ	n	n	n	n
೮೫೧	ಎಲ್ಲರ ಗಂಡರ ಪರಿಯಂತಲ್ಲ	y	y	y	y
೯೦೯	ಎಲ್ಲರ ಗಂಡರು ಬೇಂಟೆಗೆ ಹೋದರು	y	y	y	y
೬೦೪	ಎಲ್ಲರಿಗಿಂದಲೂ ಎಮ್ಮವರಧಿಕರು	n	y	n	n
೯೩೯	ಎಲ್ಲವ ಬೇಡಿದರೆಮ್ಮವರು ಒಂದ ಬೇಡ	n	y	n	y
೭೪೧	ಎಲ್ಲಿ ಹೊಕ್ಕಲ್ಲಿ ನಿನ್ನ ವಿಕಾರದ ಮಾಣೆ	n	n	y	n
೭೦೫	ಎಲೆ ಎಲೆ ಗಂಡುಗೂಸೇ ನೀ ಕೇಳಾ	n	n	y	n
	ಏ				
೯೨೭	ಏನನಾದಡೆಯೂ ಸಾದಿಸಬಹುದು	y	y	y	y
೫೭೬	ಏನಯ್ಯಾ ವಿಪ್ರರು ನುಡಿದಂತೆ	n	n	y	n
೯೪೯	ಏನೆಂಬೆನೇನೆಂಬೆ ಒಂದೆರಡಾದುದು	n	n	y	n
	ಐ				
೫೩೮	ಐದುದೇ ಬ್ರಹ್ಮನಕಪಾಲ	n	n	y	n

	I	II	III	IV	V
೮೬೯	ಐದು ಮಾನವ ಕುಟ್ಟಿ ಒಂದು ಮಾನವ	y	y	y	y
	ಒ				
೬೮೩	ಒಂದು ಮಾತೆನಬಹುದೆ ಶಬ್ದಸಾರಾಯ	y	n	y	n
೬೭೭	ಒಡನೆ ಹುಟ್ಟಿದುದಲ್ಲ ಒಡನೆ	n	n	y	n
೭೮೬	ಒಡಲ ಕಳವಳಕ್ಕೆ ಬಾಯಸವಿಗೆ	n	y	y	n
೬೪೨	ಒಡೆಯರು ತಮ್ಮ ಮನೆಗೆ ಒಡಗೊಂಡು	n	n	n	n
೭೧೬	ಒಡೆಯರಿಲ್ಲದ ಮನೆಯ	n	n	y	n
೭೨೪	ಒಡೆಯರೊಡೆವೆಯ ಕೊಂಡಡೆ	n	n	y	n
೬೯೪	ಒಣಗಿಸಿ ಎನ್ನ ಘಣಘಣನೆ ಮಾಡಿ	n	y	n	n
೭೭೭	ಒಪ್ಪವ ನುಡಿವರಯ್ಯಾ ತುಪ್ಪವ	n	y	y	n
೫೪೩	ಒಬ್ಬಕೆಂಚ ಒಬ್ಬ ಕರಿಕ	n	n	n	n
೭೪೩	ಒಬ್ಬನ ಮನೆಯಲುಂಡು ಹೊತ್ತುಗಳೆದ	n	y	n	y
೯೩೨	ಒಲೆಯಡಿಯನುರುಹಿದಡೆ ಹೊಗೆ	y	y	y	y
೭೧೩	ಒಲ್ಲೆನಯ್ಯಾ ಒಲ್ಲೆನಯ್ಯಾ	n	n	y	n
೭೭೬	ಒಲ್ಲೆನೆಂಬುದು ವೈರಾಗ್ಯ	n	y	y	n
	ಕ				
೮೫೪	ಕಂಗಳು ತುಂಬಿದ ಬಳಿಕ ನೋಡಲಿಲ್ಲ	n	n	n	n
೬೧೭	ಕಂಡಕಂಡವರನೆಲ್ಲ ಗಂಡೆರೆಂಬ	n	n	n	n
೭೫೮	ಕಂಡುದಕ್ಕೆಳಸನೆನ್ನ ಮನದಲ್ಲಿ	n	n	y	n
೭೦೨	ಕಟ್ಟಿದೆನೊಳಿಯ ಬಿಟ್ಟೆ ಜನ್ನಿಗೆರೆಯ	n	y	n	y
೬೭೫	ಕಟ್ಟಿ ಬಿಡುವನೆ ಶರಣು ಬಿಟ್ಟು	n	n	y	n
೭೦೬	ಕಟ್ಟುವೆನುಪ್ಪರ ಗುಡಿಯ	n	y	n	n
೫೮೨	ಕಣ್ಣಮುಚ್ಚಿ ಕನ್ನಡಿಯ ತೋಱು	n	n	n	n
೯೧೦	ಕಣ್ಣೊಳಗೆ ಕಣ್ಣಿದ್ದು	y	y	n	y
೬೨೮	ಕರ್ತನನಱಿಯದವನು ವಿಪ್ರನಾದಡೇನು	n	n	n	n
೬೧೬	ಕರ್ತನ ಪೂಜಿಸಿ ಕುಚಿತದೈವಕ್ಕೆ	n	n	n	n
೬೮೧	ಕಬ್ಬಿನ ಹಣಿದವನಾಡುವರಲ್ಲದೆ	n	y	y	n
೮೦೨	ಕಬುನ ಪರುಷವೇಧಿಯಾದಡೇನು	y	y	y	n
೭೦೧	ಕರ್ಮವೆಂಬ ಅಂಕದೊಡಳ ತೊಡರಿದೆ	y	y	y	y
೫೯೮	ಕಱಿಯ ಹಿಂಡು ಉಲಿವ ಕಬ್ಬಿನ	y	n	n	n
೭೨೫	ಕಲಿಕರುಳ ತರ್ಕೈಸಿ ಹಱಿಯ	y	y	n	n

	I	II	III	IV	V
೬೭೪	ಕಲಿತನ ತನುಗುಳ್ಳಡೆ ಸೂಜಿಬಾಳು	y	n	n	n
೭೬೫	ಕಲಿಯ ಕೈಯ ಕೈದುವಿನಂತಿರಬೇಕಯ್ಯ	n	n	n	n
೬೯೯	ಕಳಹೋದೆಡೆ ಕನ್ನದುಳಿಯ ಹಿಡೆವೆ	n	n	n	n
೭೨೦	ಕಳ್ಳ ಬಂದಿಕಾಱ ಹಾವಡಿಗ	n	n	y	n
೮೯೧	ಕಳಾಬಿಂದುವಟಾಮುಖಿಯೆಂಬ	y	y	y	y
೬೯೭	ಕಾಯದ ಕಳವಳಕ್ಕಂಜಿ ಕಾಯಯ್ಯಾ	n	n	n	n
೭೮೯	ಕಾಯದ ಕೈಯಲು ಕರಣದ	n	y	y	n
೮೦೯	ಕಾಯದ ಗಡಣ ಕೆಲಬರಿಗುಂಟು	y	y	y	y
೮೫೩	ಕಾಯವೆಂಬ ಘಟ್ಟಕ್ಕೆ ಚೈತನ್ಯವೆಂಬ	n	y	n	n
೫೮೬	ಕಿಚ್ಚು ದೈವವೆಂದು ಹವಿಯನಿಕ್ಕುವ	n	n	n	n
೭೮೨	ಕಿವಿಯ ಸೂತಕ ಹೋಯಿತ್ತು	n	y	y	n
೯೫೦	ಕುಱುಹಿಲ್ಲ ಕುಱುಹಿಲ್ಲ ಲಿಂಗವೆಂದೆಂಬಡೆ	n	y	n	y
೮೯೯	ಕುಲಗೆಟ್ಟಡೆ ಕೆಡಬಹುದಲ್ಲದೆ	n	y	n	y
೫೮೪	ಕುಲದಲ್ಲಿ ಹಾರುವನು ಬ್ರಹ್ಮೇತಿಗೆ	y	y	n	y
೮೭೦	ಕುಲಮದವಳಿಯದನ್ನಕ್ಕ ಶರಣೆ	y	y	y	n
೬೪೬	ಕುಳ್ಳಿರ್ದು ಲಿಂಗವ ಪೂಜಿಸಿ	y	n	y	n
೬೩೮	ಕೆಂಚ ಕರಿಕನ ನೆನೆದಡೆ ಕರಿಕ	n	n	y	n
೮೬೩	ಕೆಱೆ ಹಳ್ಳ ಬಾವಿಗಳು ಮೈದೆಗೆದಡೆ	y	n	n	n
೫೪೯	ಕೇಶವನಲ್ಲದೆ ಅತಃಪರಂ ದೈವವಿಲ್ಲ	n	n	y	n
೬೫೬	ಕೇಳಿರೇ ಕೇಳಿರೇ ಹಿರಿಯರು	n	y	n	n
೬೫೧	ಕೋಪಿ ಮಜ್ಜನಕ್ಕೆಱೆದಡೆ	n	y	y	n
೫೯೨	ಕೊಲ್ಲುವನೆ ಮಾದಿಗ ಹೊಲಸು	n	n	n	n
೭೩೭	ಕೊಲ್ಲೆನಯ್ಯ ಪ್ರಾಣಿಗಳ ಮೆಲ್ಲೆನಯ್ಯ	n	n	n	n
೬೬೫	ಕೋಣನ ಹೇಱಿಂಗೆ ಕುನ್ನಿ ಬಸುಗುತ್ತ	y	y	n	n
೬೫೧	ಕೋಪಿ ಮಜ್ಜನಕ್ಕೆಱೆದಡೆ	n	y	y	n
	ಗ				
೭೦೩	ಗರುಡಿಯ ಕಟ್ಟಿ ಅಱುವತ್ತುನಾಲ್ಕು	y	y	y	y
೯೧೧	ಗ್ರಹಬಂದು ಆವರಿಸಲೊಡನೆ ತನ್ನ	n	y	y	n
೫೫೬	ಗಾಡಿಗ ಡಿಂಬುಗಂಗೆ ಚೆಕ್ಕು ಮುಟ್ಟಿಗೆ	n	y	n	n
೬೩೬	ಗೀಜಗನ ಗೂಡು ಕೋಡಗದಣಲ	y	y	y	n
೫೬೬	ಗುಡಿಯೊಳಗಿದ್ದು ಗುಡಿಯ ನೇಣು	n	n	n	n

I		II	III	IV	V
೭೨೨	ಗುಮ್ಮಟಿಯಂತಪ್ಪ ತಾಯಿ	y	y	n	n
೮೦೧	ಗುರುತೋಱಿದ ಲಿಂಗವು ಮನಸ್ಥಲ	n	y	y	y
೭೬೧	ಗುರುಭಕ್ತಿಯ ಮಡಬಹುದಲ್ಲದೆ	n	n	n	n
೮೨೫	ಗುರು ಮುನಿದೊಡೊಂದು ದಿನ	n	y	n	n
೭೭೯	ಗುರುಲಿಂಗಜಂಗಮದಿಂದ ಪಾದೋದಕ	n	y	y	n
೮೨೧	ಗುರುವಿನಲ್ಲಿ ಸದಾಚಾರ ಲಿಂಗದಲ್ಲನುದಿನ	n	y	n	y
೯೩೦	ಗುರುಶಿಷ್ಯ ಸಂಬಂಧವಾದುದಕ್ಕೆ ಇದು	y	y	y	y
೬೫೫	ಗುರೂಪದೇಶ ಮಂತ್ರ ವೈದ್ಯ	n	n	y	n
೭೪೬	ಗೋತ್ರನಾಮವ ಬೆಸೆಗೊಂಡಡೆ	n	y	y	y
೯೫೯	ಘನ ಗಂಭೀರ ಮಹಾಘನದೊಳಗೆ	n	n	n	n
	ಚ				
೮೧೦	ಚಂದ್ರಕಾಂತದ ಶಿಲೆಯಲ್ಲಿ ಜಲ	y	n	y	n
೬೦೭	ಚತುರ್ವೇದಿಯಾದಡೇನು ಲಿಂಗವಿಲ್ಲ	n	y	n	n
೭೫೨	ಚಿಕ್ಕದೊಂದು ಹೊತ್ತಗೆಯ ಬೆನಕನ	y	y	n	y
೬೬೬	ಚೇಳಿಂಗೆ ಬಸಱಾಯಿತ್ತೇ ಕಡೆ	y	n	y	n
	ಛ				
೬೭೮	ಛಲಬೇಕು ಶರಣಂಗೆ ಛಲಬೇಕು	n	n	n	n
	ಜ				
೮೪೧	ಜಂಗಮವೇ ಲಿಂಗವೆನಗೆ ಜಂಗಮವೇ	n	n	n	n
೬೭೯	ಜಂಬೂದ್ವೀಪ ನವಖಂಡಪೃಥ್ವಿ	y	y	y	n
೭೪೫	ಜಗದಗಲ ಮುಗಿಲಗದ	n	n	n	n
೯೦೫	ಜಗವು ಸುತ್ತಿಪ್ಪುದು ನಿಮ್ಮ ಮಾಯೆ	n	n	n	n
೮೩೫	ಜನ್ಮ ಜನ್ಮಕ್ಕೆ ಹೋಗಲೀಯದೆ	n	n	n	n
೫೩೫	ಜಲಕೂರ್ಮನಾಗಮೇದಿನಿ ಸಪ್ತಸಾಗರ	n	n	n	n
೯೩೮	ಜಲವ ನುಂಗಿತ್ತಯ್ಯ ಎನ್ನ ಕರುವು	y	y	n	y
೬೯೫	ಜಾಗ್ರ ಸ್ವಪ್ನ ಸುಷುಪ್ತಿಗಳಲ್ಲಿ	n	n	y	n
೫೯೬	ಜಾತಿವಿಡಿದು ಸೂತಕವನರಸುವರೆ	n	n	n	n
೯೨೮	ಜೀವಾತ್ಮ ಅಂತರಾತ್ಮನ ಸುದ್ದಿಯ	y	y	y	y
೭೦೦	ಜೋಳವಾಳಿಯವ ನಾನಲ್ಲವಯ್ಯ	y	y	y	y
	ತ				
೬೫೪	ತಂದೆ ಮಕ್ಕಳಿಗೆ ಬುದ್ದಿಯ ಹೇಳುವಲ್ಲಿ	n	n	y	n

	I	II	III	IV	V
೮೩೦	ತನು ನಿಮ್ಮದೆಂದ ಬಳಿಕ ಎನಗೆ	n	n	n	n
೮೯೭	ತನುಮನಧನವೆಂಬ ಮೂರು ಕನ್ನಡಿ	n	y	n	y
೭೨೩	ತನುವ ಬಂದು ಅಲೆವರಯ್ಯಾ	n	n	y	n
೭೦೯	ತನುವ ಬೇಡಿದಡೀವೆ ಮನವ	n	n	n	n
೬೪೯	ತನು ಶುಚಿಯಿಲ್ಲದವನ ದೇಹಾರವೇಕೆ	n	n	y	n
೮೨೦	ತಮತಮಗೆಲ್ಲರು ನೊಸಲಕಣ್ಣರು	y	n	y	n
೯೦೪	ತಾಗು ನಿರೋಧ ಆಗು ಹೋಗುನಜೆ	n	n	n	n
೯೦೨	ತಾಪತ್ರಯವೆಂದರೆ ರೂಪು	y	y	n	y
೭೯೨	ತ್ರಿವಿಧಮ ಪ್ರಸಾದವೆಂದೆಂಬರು	n	n	y	n
೮೬೮	ತೆಱನಱಿವುದಪೂರ್ವ ಅಜೆದು	n	y	y	y
೮೬೮	ತೆಱನಱಿವುದಪೂರ್ವ ಅಜೆದು	n	y	y	y
೯೨೦	ತೆಱಹಿಲ್ಲದೆ ನಡೆ ತೆಱಹಿಲ್ಲದ ನುಡಿ	y	y	y	y
೬೪೪	ತೋಱಿಯ ಮೀವಣ್ಣಗಳಿರಾ	n	n	n	n
	ದ				
೯೪೩	ದಶದಿಕ್ಕು ಧರೆ ಗಗನವೆಂಬುದ	n	n	n	n
೫೭೫	ದಕ್ಷ ಯಾಗವ ಮಾಡಲೆಂದು	n	y	n	n
೮೫೬	ಧನದಲ್ಲಿ ಶುಚಿ ಪ್ರಾಣದಲ್ಲಿ ನಿರ್ಭಯ	n	y	y	y
೭೬೨	ದಾಸನಂತೆ ತವನಿಧಿಯ ಬೇಡುವವನಲ್ಲ	n	n	n	n
೭೮೦	ದಾಸೋಹವೆಂಬ ಸೋಹಗೊಂಡು	n	y	y	n
೮೯೨	ದಿಟವ ಮಾಡಿ ಪೂಜಿಸಿದೆಡೆ ಸಟೆಯು	n	n	n	n
೬೨೩	ದ್ವಿಜರಿಗೆ ಕೊಟ್ಟು ಹಲಬರು ಕೆಟ್ಟರು	n	n	n	n
೭೧೨	ದೇವದೇವಾ ಬಿನ್ನಪವನವಧಾರು	n	n	n	n
೬೧೫	ದೇವನೊಬ್ಬ ನಾಮ ಹಲವು	n	n	n	n
೯೨೫	ದೇವಲೋಕ ಮರ್ತ್ಯಲೋಕವೆಂಬ	n	y	n	y
೬೦೬	ದೇವಾ ನಿಮ್ಮ ಪೂಜಿಸಿ ಚೆನ್ನನ	n	n	n	n
	ನ				
೭೭೪	ನಂಬಿದಡೆ ಪ್ರಸಾದ ನಂಬದಿದ್ದಡೆ	n	n	y	n
೬೧೮	ನಂಬಿದ ಹೆಂಡತಿಗೆ ಗಂಡನೊಬ್ಬನೆ	n	n	n	n
೭೯೬	ನಡೆ ಚೆನ್ನ ನುಡಿ ಚೆನ್ನ	y	n	y	n
೫೮೫	ನರಜನ್ಮದಲ್ಲಿ ಹುಟ್ಟಿ ಲಿಂಗಮುಖವ	n	y	n	y
೭೧೦	ನಾನು ಆರಂಭವ ಮಾಡುವೆನಯ್ಯಾ	n	n	n	n

	I	II	III	IV	V
೫೯೪	ನಾನು ಭಕ್ತ ನಾನು ಪ್ರಸಾದಿ	n	y	n	n
೯೩೪	ನಾನೊಮ್ಮೆ ಬೇಂಟೆಯ ಹೋದಡೆ	y	y	n	y
೫೫೦	ನಾರಾಯಣನೆಂಬವನ ಕಾಣೆ ಗೀರಾಯಣ	n	n	n	n
೮೬೫	ನಾರುಳಿಯ ಹಣಿದವನಾರಾದಡೆಯೂ	n	y	n	y
೮೫೦	ನಾಲಿಗೆ ತಾಗಿದ ರುಚಿಗೆ ಮನವೇ ಸಾಕ್ಷಿ	n	y	y	y
೬೯೮	ನಾಳೆಬಪ್ಪುದು ನಮಗಿಂದೇ ಬರಲಿ	n	n	y	n
೭೫೫	ನ್ಯಾಯ ನಿಷ್ಠುರಿ ದಾಕ್ಷಿಣ್ಯದಪರ	n	y	n	y
೬೪೯	ನಿಚ್ಚ ನಿಚ್ಚ ಪೂಜಿಸುವ ಶರಣಂಗೆ	n	y	n	n
೬೦೨	ನಿಜಭಾವ ಲಕ್ಷ್ಮೀಸರಸ್ವತಿ ಒಲಿದಡೆ	y	n	n	n
೬೬೦	ನಿಧಾನವನಱಸಿಹೆನೆಂದು ಹೋದಡೆ	n	n	y	n
೮೨೪	ನಿನ್ನ ನಾನಱಿಯದ ಮುನ್ನ ನೀನೆಲ್ಲಿದ್ದೆ	y	n	y	n
೫೭೩	ನಿಮ್ಮ ವಚನವೆನ್ನ ಪುಣ್ಯವೆಂಬುದು	n	y	n	n
೭೯೫	ನಿಮ್ಮ ಶ್ರೀಪಾದವು ಮುಟ್ಟೆ ಎನ್ನ	n	n	y	n
೫೪೯	ನಿಮ್ಮುವನಱಿಯದ ಕಾರಣ ಕೈಯಲ್ಲಿ	n	n	n	n
೭೪೭	ನಿಷ್ಠೆಯಿಂದ ಲಿಂಗವ ಪೂಜಿಸಿ	y	y	n	n
೬೮೫	ನಿಸ್ಸೀಮ ಗುಗ್ಗಳವನಿಕ್ಕಿದನೊಬ್ಬ ಶರಣ	n	n	n	n
೭೫೩	ನೀನಲ್ಲದನ್ಯದೈವವುಂಟೆಂಬವನ	n	n	n	n
೭೩೧	ನೀನಿರಿಸಿದ ಮನದಲಿ ನಾನಂಜೆನಯ್ಯಾ	n	y	y	n
೮೪೭	ನೀನೊಲಿದಡೆ ಒಲಿ ಒಲಿಯದಿದ್ದಡೆ	n	y	y	y
೫೮೧	ನೀರ ಕಂಡಲ್ಲಿ ಮುಳುಗುವರಯ್ಯಾ	n	n	n	n
೬೦೧	ನೀವು ಹಿರಿಯರೆಂಬಿರಿ ಕರ್ಮಿಗಳು	n	n	n	y
೮೦೪	ನುಡಿದರೆ ಮುತ್ತಿನಹಾರದಂತಿರಬೇಕು	y	y	y	n
೬೪೭	ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ	y	y	y	n
೬೫೩	ನೂಱನೋದಿ ನೂಱ ಕೇಳಿದಡೇನು	n	n	n	n
೮೮೦	ನೆಲನೋದೇ ಹೊಲಗೇರಿ ಶಿವಾಲಯಕ್ಕೆ	n	y	n	n
೬೪೩	ನೋಡಲಾಗದು ನುಡಿಸಲಾಗದು	n	n	y	n
	ಪ				
೭೫೦	ಪಂಚಬ್ರಹ್ಮವ ಕೆಡಿಸಿತ್ತು ಪ್ರಣವ	n	n	y	n
೭೭೫	ಪಂಡಿತನಾಗಲಿ ಮೂರ್ಖನಾಗಲಿ	n	y	y	n
೮೮೨	ಪರತತ್ವ ನಿಜಸಂಯುಕ್ತರ ನಾನು	n	n	y	n
೮೯೬	ಪರಮಪ್ರಭುವೇ ನೀ ಮುನಿದೆನ್ನ	n	n	n	n

	I	II	III	IV	V
೮೩೮	ಪರಿಯಾಣವೆ ಭಾಜನವೆಂಬರು	n	n	y	n
೮೧೬	ಪಶ್ಚಿಮ ಪದ್ಮಾಸನದಲ್ಲಿ ಕುಳ್ಳಿರ್ದು	y	y	y	y
೮೧೫	ಪೃಥ್ವಿ ಅಪ್ಪು ತೇಜವಾಯು ಆಕಾಶ	y	y	y	y
೫೯೯	ಪ್ರಣವನುಚ್ಚರಿಸುವ ಅಪ್ರಮಾಣಿಕ	y	n	n	n
೬೮೯	ಪಾದಾರ್ಚನೆಯ ಮಾಡುವೆನಯ್ಯ	n	y	n	n
೬೫೦	ಪಾಪಿಗೆ ಕೋಪಿಗೆ ಭಕ್ತಿಯಾಗೆಂದಡಪ್ಪುದೆ	y	n	n	n
೨೯೮	ಪ್ರಾಣಲಿಂಗ ಪ್ರತಿಗ್ರಾಹಕನಾದ	y	n	y	n
೫೬೪	ಪುಣ್ಯಪಾಪವೆಂಬ ಉಭಯಕರ್ಮ	n	n	y	n
೯೧೨	ಪೂಜೆಯುಳ್ಳನ್ನಬರ ಲಿಂಗವ ಹಾಡಿದೆ	n	y	y	n
೮೨೭	ಪೂವಜನ್ಮನಿವೃತ್ತಿಯಾಗಿ ಗುರುಕರುಣ	n	n	y	n
೨೬೨	ಪೂರ್ವಬೀಜ ವಾಯುಪ್ರಾಣಿಯಲ್ಲ	n	y	n	y
	ಬ				
೨೩೯	ಬಂದಿಹೆನೆಂದು ಬಾರದಿರ್ದಡೆ ಬಟ್ಟೆಗಳ	n	n	n	n
೬೦೯	ಬಂದು ಬಲ್ಲಹ ಬಿಡಲು ಹೊಲಗೇರಿ	n	y	y	n
೨೩೬	ಬತ್ತೀಸಾಯುಧದಲ್ಲಿ ಅಭ್ಯಾಸವ	n	n	n	n
೫೬೭	ಬನ್ನಿರೆ ಅಕ್ಕಗಳು ಹೋಗಿರೆ ಆಲದ	n	n	n	n
೯೭೪	ಬಯಲ ರೂಪ ಮಾಡಬಲ್ಲಾತನೆ	y	y	y	y
೮೯೫	ಬಸವ ಬಾರಯ್ಯ ಮರ್ತ್ಯಲೋಕದೊಳಗೆ	n	n	n	n
೨೨೭	ಬಾರದು ಬಾರದು ಭಕ್ತಂಗೆ ಪರಧನ	n	n	y	n
೩೭೬	ಬಾಲಾಭ್ಯಾಸವ ಮಾಡಹೋದಡೆ ಎನ್ನ	y	y	y	y
೮೨೨	ಬ್ರಹ್ಮಂಗೆ ವಾಕ್ಪರುಷ ವಿಷ್ಣುವಿಂಗೆ	n	n	y	n
೫೮೩	ಬ್ರಹ್ಮಸಭೆ ನೆರೆದಲ್ಲಿ ಬ್ರಹ್ಮವಿತ್ತುಗಳು	n	y	n	n
೮೬೬	ಭಕ್ತನ ಮತವೆಂದು ಜಂಗಮವು	n	y	n	n
೯೩೨	ಭಕ್ತನಾಯಿತ್ತೇ ಭಕ್ತಿದಾಸೋಹ	y	n	n	n
೮೯೪	ಭಕ್ತನೆನಿಸುವಯ್ಯ ಮೆಲ್ಲಮೆಲ್ಲನೆ	n	y	n	n
೮೯೮	ಭಕ್ತಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ	n	n	n	n
೬೩೦	ಭಕ್ತರನಲ್ಲದೆ ಒಲ್ಲೆಂಬರಿ	n	n	y	n
೬೮೪	ಭಕ್ತರೆಸಮರ್ಥರು ಅಸಮರ್ಥರೆನಲುಂಟೆ	n	y	y	n
೬೦೮	ಭಕ್ತಿಹೀನರ ದಾಸೋಹವ ಸದ್ಭಕ್ತರು	n	n	y	n
೮೨೬	ಭವಕ್ಕೆ ಹುಟ್ಟುವನಲ್ಲ ಸಂದೇಹಿ	n	n	y	n
೫೨೧	ಬ್ರಾಹ್ಮಣನೆ ದೈವವೆಂದು ನಂಬಿದ	n	y	n	n

	I	II	III	IV	V
೫೫೪	ಬಿದಿರೆಲೆಯ ಮೆಲಿದಡೆ ಮೆಲಿದಂತಲ್ಲದೆ	y	y	n	n
೯೪೦	ಭಿತ್ತಿಯಿಲ್ಲದ ಚಿತ್ತಾರದಂತೆ ಭಕ್ತಿಯಿಲ್ಲದ	n	y	y	y
೯೧೨	ಭೂತಿಕನ ಸೀರೆಯ ಸಾತ್ವಿಕ	y	y	y	y
೮೨೮	ಭೂತವೊಲಿದಾತ್ಮನ ಸೋಂಕಿದ	n	y	n	n
೯೫೧	ಭೂತೋಯ ಪಾವಕ ಸಮೀರಣ	n	n	n	n
೮೩೭	ಬೆಟ್ಟಕ್ಕೆ ಬೆಳ್ಳಾರ ಸುತ್ತಿತ್ತಯ್ಯ	y	y	n	y
೮೧೮	ಬೆಳಗಿನೊಳಗಣ ಬೆಳಗು ಮಹಾಬೆಳಗು	y	y	y	n
೯೪೬	ಬೆಳಗಿನೊಳಗಣ ಬೆಳಗು ಮಹಾಬೆಳಗೆಂಬ	n	n	n	n
೬೨೭	ಬೇವಿನ ಬೀಜವ ಬಿತ್ತಿ ಬೆಲ್ಲದ	y	y	n	n
	ಮ				
೫೬೩	ಮಡಕೆ ದೈವ ಮೊಱದೈವ	n	y	n	n
೮೭೧	ಮಣ್ಣ ಮಡಕೆಯು ಮಣ್ಣಾಗದು	y	y	y	n
೮೮೧	ಮಧ್ಯ ಪಿಡಂಗಳೆಲ್ಲವೂ ಶಿವನಿದ್ದೆಡೆಯ	n	y	y	y
೮೦೫	ಮನದ ಕೊನೆಯ ಮೊನೆಯ ಮೇಲೆ	y	y	y	n
೮೧೩	ಮನವಂಚನೆಯೆ ಅನ್ಯ ಲಿಂಗಾರ್ಚನೆ	n	n	y	n
೯೦೧	ಮರನ ಹೂವ ಕೊಯ್ದು ಮರಕ್ಕೇರಿಸಿ	y	y	n	y
೮೮೪	ಮರ ಮರ ಮಥಣದಿಂದ ಅಗ್ನಿಹುಟ್ಟಿ	n	n	n	n
೮೬೧	ಮರುಳ ಕಂಡ ಕನಸಿನ ಪರಿಯಂತೆ	y	n	n	n
೯೧೯	ಮರುಳ ತಲೆ ಹುರುಳು ತಲೆ ನೀನೆ	y	y	y	y
೫೫೩	ಮಱೆಯಲಾಗದು ಹೆಱೆಯ	y	n	n	n
೯೫೨	ಮಹಾಲಿಂಗದ ಸ್ಥಾನಂಗಳು ಮಹಾಲಿಂಗದ	n	n	y	n
೭೬೦	ಮಾಡುವ ನೀಡುವ ಭಕ್ತನ ಕಂಡಡೆ	n	n	n	n
೮೪೮	ಮಾಡುವರಿಲ್ಲ ನೀ ಮಾಡದೆ ನಿಲ ಸಾಲೆ	n	y	n	y
೮೩೩	ಮಾಡುವಾತ ನಾನಲ್ಲವಯ್ಯಾ	n	n	n	n
೫೮೦	ಮಾಣದೆ ಅರಳೆಯ ಮರನ ತಿಟ್ಟನೆ	n	n	n	n
೫೭೪	ಮಾತಿನ ಮಾತಿನಂಗೆನ್ನ ಕೊಂದಹರೆಂದು	n	n	n	n
೬೨೬	ಮಾತಿಲ್ಲ ನುಡಿಯಿಲ್ಲ ಏತಕ್ಕೆ	y	y	n	y
೬೫೯	ಮಾರಿಕವ್ವೆಯ ನೋಂತು ಕೊರಳಲ್ಲಿ	n	n	n	n
೬೩೧	ಮಾರಿ ಮಸಣಿ ಎಂಬಿವು ಬೇಱಿಲ್ಲ	n	n	y	n
೯೪೪	ಮಿಥ್ಯವನಳಿದುಳಿದ ಸತ್ಯಪ್ರಸಾದಿ	n	n	n	n
೫೭೯	ಮೀಂಬುಲಿಗನ ಹಕ್ಕಿಯಂತೆ ನೀರ	n	y	n	n

	I	II	III	IV	V
೮೮೬	ಮೊಸಲು ಬೀಸರವಾದ ಪರಿಯ	n	y	n	n
೮೦೮	ಮುತ್ತು ಉದಕದಲಾಗದು ಉದಕ	n	y	y	n
೭೬೯	ಮುತ್ತು ನೀರಲ್ಲಿ ಹುಟ್ಟಿ ಮತ್ತೆ	n	y	n	n
೬೩೫	ಮುನ್ನಿನ ಆದ್ಯರ ಪಥಂಗಳು	n	n	n	n
೬೮೦	ಮುನ್ನಿನ ಕಲಿ ವೀರಧೀರರು ಕಾದಿದ	n	y	n	n
೮೩೪	ಮುನ್ನಿನ ಜನ್ಮದಲ್ಲಿ ಗುರುಲಿಂಗಜಂಗಮವ	n	n	n	n
೮೧೧	ಮುನ್ನಿನ ಜನ್ಮದಲ್ಲಿ ಗುರುಲಿಂಗಜಂಗಮವ	y	n	y	n
೯೨೧	ಮೂಱುಱುಾಪ್ಯಾಯನ ಐದು ಬೆಟ್ಟವ	y	y	y	y
೮೧೨	ಮೆಯ್ಗೆ ಕಾಹ ಹೇಳೂವರಲ್ಲದೆ ಮನಕ್ಕೆ	y	y	y	y
೬೨೧	ಮೊನ್ನೆ ತಪ್ಪಿದ ಬಳಿಕ ಅಲಗೇನು	y	y	n	n
೫೬೧	ಮೊಱಿನ ಗೋಟಿಗೆ ಬಪ್ಪ ಕಿಱುಕುಳ	n	n	n	n
೭೮೮	ಮೌನದಲುಂಬುದು ಆಚಾರವಲ್ಲ	n	n	y	n
	ಯ				
೮೯೦	ಯಸ್ಯಕ್ರಿಯಾ ತಸ್ಯ ಭವತಿ;ಯೆಂದು	n	y	y	y
೫೪೬	ಯುಗಜುಗ ಪ್ರಳಯವಾದಂದು	n	y	y	y
	ರ				
೯೨೩	ರಕ್ಕಸಿಯ ಮನೆಯಲು	y	y	n	y
೮೨೭	ರಜ್ಜೆಯ ನೆರವಿಗೆ ನಾಣ್ಣುಡಿ	n	y	n	y
೫೬೪	ರಿಣ ತಪ್ಪಿದ ಹೆಂಡತಿಯಲ್ಲಿ	y	y	n	n
೫೬೪	ರುದ್ರಮುಖದಲ್ಲಿ ವಿಷ್ಣು ಭುಜದಲ್ಲಿ	n	n	y	n
	ಲ				
೮೨೩	ಲಗ್ನವೆಲ್ಲಿಯದೋ ವಿಘ್ನವೆಲ್ಲಿಯದೋ	n	n	y	n
೭೨೯	ಲಿಂಗಕ್ಕಲ್ಲದೇ ಮಾಡೆನೀ ಮನವನು	n	n	y	n
೬೪೧	ಲಿಂಗ ಜಂಗಮ ಒಂದೇಯೆಂದು	n	y	y	n
೭೬೩	ಲಿಂಗದಲ್ಲಿ ಸಮ್ಯಕ್ಕರು ಲಿಂಗದಲ್ಲಿ	n	n	n	n
೮೬೭	ಲಿಂಗನಿಷ್ಠೆ ಪೂಜೆಯಲ್ಲಿ ಬೀಯ	n	n	y	n
೭೮೩	ಲಿಂಗಪ್ರಸಾದಿಗಳಲ್ಲದವರ ಸಂಗ	n	n	y	n
೯೩೧	ಲಿಂಗವ ಪೂಜಿಸಿ ಫಲವೇನಯ್ಯಾ	y	y	n	n
೭೮೭	ಲಿಂಗಮುಖದಿಂದ ಬಂದ ಪ್ರಸಾದ	n	y	n	n
೬೮೬	ಲಿಂಗವಶದಿಂದ ಬಂದ ನಡೆಗಳು	n	n	y	n
೭೯೭	ಲಿಂಗವಿಕಾರಿಗೆ ಅಂಗವಿಕಾರವೆಂಬುದಿಲ್ಲ	n	y	y	n

I		II	III	IV	V
೬೧೦	ಲಿಂಗವಿಲ್ಲದೆ ನಡೆವವರ ಲಿಂಗವಿಲ್ಲದೆ	n	n	n	n
೫೬೫	ಲಿಂಗ ಶಿವಾಲಯದ ಮುಂದೆ ಸಿಂಹ	n	n	n	n
೯೩೫	ಲಿಂಗಾರ್ಚನೆಯ ಮಾಡುವ ಮಹಿಮೆ	y	y	y	y
೮೪೦	ಲೋಹ ಪರುಷವ ಮುಟ್ಟುವುದಲ್ಲದೆ	n	y	n	y
	ವ				
೬೨೫	ವಿಪ್ರರ ಕರೆದು ನೃಪರುಗಳು	y	y	n	n
೯೫೬	ವಿಶ್ವಜಿತನು ಧನುರ್ಜಿತನು	n	y	n	y
೯೩೭	ವಿಶ್ವಾಧಿಕೋ ರುದ್ರನ ಹೊಗಳುವ	n	n	y	n
೫೪೫	ವಿಷ್ಣು ಕರ್ಮಿ ರುದ್ರ ನಿಃಕರ್ಮಿ	n	y	y	y
೫೫೨	ವಿಷ್ಣು ಬಲ್ಲಿದನೆಂಬೆನೆ ದಶಾವತಾರದಲ್ಲಿ	n	n	n	n
೫೨೦	ವಿಷ್ಣುವಿನ ಪೂಜಿಸಿ ಮುಡುಹ	n	n	y	n
೬೭೩	ವೀರವ್ರತಿ ಭಕ್ತನೆಂದು ಹೊಗಳಿಸಿ	n	n	y	n
೭೧೮	ವೇದಕ್ಕೆ ಒಱೆಯಕಟ್ಟುವೆ	n	n	y	n
೭೫೧	ವೇದ ನಡುನಡುಗಿತ್ತು ಶಾಸ್ತ್ರವಗಲಿ	n	n	n	n
೬೦೦	ವೇದವನೋದಿದಡೇನು ಶಾಸ್ತ್ರವ	n	n	n	n
೫೮೭	ವೇದವನೋದಿದ ವಿಪ್ರರು ಹೊನಲಲ್ಲಿ	n	y	n	n
೯೫೪	ವೇದ ವೇಧಿಸಲಱಿಯದೆ ಅಭೇದ್ಯ	n	n	n	n
೬೧೩	ವೇದಶಾಸ್ತ್ರ ಬಲ್ಲವರ	n	y	y	n
೫೩೧	ವೇದ ಸ್ವಯಂಭೂಯೆಂಬ ವಾದಿ ನೀ	n	y	n	n
೯೫೫	ವೇದಾತೀತ ಷಡ್ವರ್ಣರಹಿತ	n	n	y	n
೫೯೦	ವ್ಯಾಸ ಬೋವತಿಯ ಮಗ	n	n	n	n
	ಶ				
೮೭೪	ಶರಣ ನಿದ್ರೆಗೈದೆಡೆ ಜಪಕಾಣರೋ	y	n	y	n
೭೦೪	ಶರಣರೊಡನೆ ಶ್ರವವ ಮಾಡಿ	n	n	y	n
೬೭೨	ಶರಣಸಂಬಂಧವನಱಿದ ಬಳಿಕ ಮರಳಿ	n	n	y	n
೮೪೬	ಶರಣ ಸನ್ನಿಹಿತ ಐಕ್ಯವಹಲ್ಲಿ	n	n	n	n
೮೫೭	ಶರಣ ಸನ್ನಿಹಿತವಪ್ಪ ನಿಜಗುಣ	y	y	y	y
೬೫೮	ಶ್ವಪಚನಾದಡೇನು ಲಿಂಗಭಕ್ತನೇ	n	n	y	n
೮೦೦	ಶ್ವಾನಜ್ಞಾನ ಗಜಜ್ಞಾನ ಕುಕ್ಕುಟಜ್ಞಾನ	n	y	y	n
೬೫೭	ಶಿವಚಂತೆ ಶಿವಜ್ಞಾನ ಭ್ರಮೆ	y	n	y	n
೬೮೭	ಶಿವಭಕ್ತನಾಗಿ ತನ್ನ ಹಿಡಿದಿಹೆನೆಂದು	y	n	y	n

	I	II	III	IV	V
೫೬೮	ಶಿವಮಯ ವಿಷ್ಣುವಲ್ಲ ವಿಷ್ಣುಮಯ	n	n	y	n
೭೪೮	ಶಿವಲೋಕಕ್ಕೆ ಸರಿ ಬೇಱೆಲೋಕವಿಲ್ಲ	n	y	n	y
೯೩೬	ಶಿವಶಿವಾ ಮೂರ್ತಿಗೆ ಸತ್ಯಶುದ್ಧ	y	y	n	y
೭೯೧	ಶಿವಾಚಾರವೆಂಬುದೊಂದು ಬಾಳ	y	n	y	n
೭೮೫	ಶುದ್ಧವ ಗುರರುವಿಂಗೆ ಕೊಟ್ಟು ಶುದ್ಧ	n	y	y	n
೮೮೮	ಶುದ್ಧವಾಯಿತ್ತೆಂಬೆನೆ ಸುಯಿಧಾನಿ	n	y	n	n
೯೦೭	ಶುದ್ಧಾತ್ಮ ಪರಮಾತ್ಮರಿಬ್ಬರೂ ಒಂದು	y	y	n	y
೫೨೯	ಶ್ರುತಿಗಗಮ್ಯ ದ್ವಾದಶಾದಿತ್ಯರಪ್ರತಿಮ	n	y	n	n
೫೩೨	ಶ್ರುತಿತತಿಯ ಶಿರದ ಮೇಲೆ	n	n	y	n
	ಸ				
೫೩೩	ಸಕಳ ನಿಃಕಳವ ಕೂಡಿಕೊಂಡಿಪ್ಪೆ	n	n	n	n
೭೮೭	ಸಜ್ಜನ ಶರಣರ ಕಂಡು ಎನ್ನಮನ	n	n	y	n
೬೪೫	ಸತ್ಯಶೌಚ ನಿತ್ಯ ನೇಮವ ತಪ್ಪದೆ	n	y	y	n
೯೧೫	ಸತ್ಯವಿದೆ ಸಮಾಧಾನವಿದೆ ಮನಕ್ಕೆ	y	y	y	y
೯೪೨	ಸತ್ತು ಹುಟ್ಟುವನಲ್ಲ ಸಂದೇಹಿ ಸೂತಕಿ	n	y	y	y
೬೫೨	ಸದಾಚಾರ ಸದ್ಭಕ್ತಿಯಿಲ್ಲದವರ	n	n	y	n
೮೧೪	ಸರ್ಪನ ಸಂಯೋಗ ಜ್ಯೋತಿಯ	y	y	y	y
೭೨೭	ಸಮಚಿತ್ತವೆಂಬನೇಮದ ಹಲಗೆಯ	y	n	n	y
೯೨೯	ಸಮರತಿ ಸಮಕಳೆ ಸಮಸುಖ	y	y	y	y
೯೬೦	ಸಮಸ್ತ ಕತ್ತಲೆಯ ಮಸಕವ	n	n	n	n
೮೭೮	ಸಮುದ್ರ ಘನವೆಂಬೆನೆ ಧರೆಯ	n	n	y	n
೯೫೨	ಸಹಸ್ರಶೀರ್ಷನಾದಿ ಪುರುಷನೊಬ್ಬ	n	y	n	n
೯೪೮	ಸ್ವಯಂಲಿಂಗದನುಭಾವ ತನಗೆ	n	y	y	y
೮೦೭	ಸ್ಥಾವರ ಜಂಗಮವೆಂಬುಭಯ ಪಕ್ಷವೊಂದೆ	n	y	y	n
೬೩೪	ಸಿಂಗದ ನಡು ಮುರಿಯಲಾ	y	n	y	n
೯೧೬	ಸಿನೆಂಜೆಯರಿಬ್ಬರಿಗೊಬ್ಬ ಮಗ ಹುಟ್ಟಿ	y	y	y	y
೭೪೨	ಸಿರಿಯಾಳನ ಮಗನ ಬಾಣಸವ	n	n	n	n
೬೯೬	ಸುಖ ಬಂದೆಡೆ ಪುಣ್ಯದ ಫಲವೆನ್ನನು	n	n	y	n
೮೧೭	ಸುನಾದಬಿಂದು ಕಳಾಮಂತ್ರದಗ್ರದ	y	y	y	y
೭೭೦	ಸೂಳೆಗೆ ಮಚ್ಚಿ ಸೂಳೆಯ ಬಂಟರೆಂಜಲ	n	y	n	n
೭೮೪	ಸೈದಾನವ ತಂದು ನೀಡುವೆನಲ್ಲದೆ	n	y	n	n

I		II	III	IV	V
	ಹ				
೭೯೯	ಹತ್ತುಸಾವಿರ ಗೀತವ ಮಾಡಿ	n	y	y	y
೫೩೯	ಹರನ ಕೊರಳಲ್ಲಿಪ್ಪ ಕರೋಟಿ ಮಾಲೆಯ	n	n	y	n
೬೭೦	ಹರ ಬೀಜವಾದಡೆ ಹಂದೆ ತಾನಪ್ಪನೆ	y	y	n	n
೭೪೪	ಹರಿಯಜ ಸುರಮನುಮುನಿಗಳೆಲ್ಲರ	n	y	y	y
೫೪೪	ಹರಿಹರ ಒಂದೇಯೆಂದಡೆ ಸುರಿಯುವೆ	n	n	n	n
೮೫೮	ಹಲಬರ ನುಂಗಿದ ಹಾವಿಂಗೆ	y	y	y	y
೬೨೨	ಹಲವು ಕೊಂಬಿಂಗೆ ಹಾಯಲು ಬೇಡ	y	n	n	n
೭೩೨	ಹಲ್ಲು ಹತ್ತಿ ನಾಲಗೆ ಹೊರಳದಿದ್ದಲ್ಲಿ	n	n	y	n
೭೬೮	ಹಸಿವಾಯಿತ್ತೆಂದು ಅರ್ಪಿತವ	n	y	n	n
೮೭೯	ಹಸಿವು ತೃಷೆ ನಿದ್ರೆ ವಿಷಯಂಗಳ	n	y	n	y
೫೯೩	ಹಾರುವನ ಭಕ್ತಿ ಓಡಿನೊಳಗೆ ಅಗೆಯ	n	n	n	n
೬೧೪	ಹಾರುವರೆಲ್ಲರೂ ನೆರೆದು ಶೂದ್ರನ	n	n	n	n
೮೮೭	ಹಾಲೆಂಜಲು ಪೇಯನ ಉದಕವೆಂಜಲು	n	n	n	n
೬೬೩	ಹಾವಿನ ಹೆಡೆಯ ತೆಗೆದುಕೊಂಡು	y	n	n	n
೫೫೭	ಹಾಳು ಮೊರಡಿಗಳಲ್ಲಿ ಊರದಾರಿ	n	n	n	n
೬೯೦	ಹುಟ್ಟಿದ ಬಳಿಕ ಕೊಟ್ಟ ಭೋಗಂಗಳ	n	y	y	n
೭೩೪	ಹುಟ್ಟಿದ ಮಕ್ಕಳೆಲ್ಲಾ ಪ್ರಾಣಾಭಿಮಾನಕ್ಕೆ	n	n	y	n
೫೪೮	ಹುಟ್ಟಿಸುವಾತ ಬ್ರಹ್ಮನೆಂಬರು	n	n	y	n
೭೦೭	ಹುಟ್ಟುತ್ತ ದ್ರವ್ಯವನಜೆಯದವಂಗೆ	n	y	y	n
೬೭೬	ಹುಟ್ಟುವಲ್ಲಿ ಭವಿ ಮರಿ ಭಕ್ತನ	n	y	n	n
೯೫೩	ಹುತ್ತಕ್ಕೆ ಏಸು ಬಾಯಾದಡೇನು	n	n	y	n
೭೭೩	ಹುತ್ತದ ಮೇಲಣ ರಜ್ಜು ಮುಟ್ಟಿದಡೆ	y	y	y	n
೬೬೭	ಹುಲಿಯ ಹಾಲು ಹುಲಿಮರಿಗಲ್ಲದೆ	n	y	y	n
೯೪೫	ಹುಸಿಯಿಂದ ಜನಿಸದಯ್ಯ	n	y	y	y
೭೩೩	ಹೊಕ್ಕಲ್ಲಿ ಹೊಕ್ಕು ನಿಮ್ಮೊಕ್ಕುದ	n	n	n	n
೭೧೧	ಹೊತ್ತಾಱೆ ಎದ್ದು ಕಣ್ಣಹೊಸೆವುತ್ತ	n	n	n	n
೫೯೫	ಹೊನ್ನ ನೇಗಿಲಲುತ್ತಿ ಎಕ್ಕೆಯ	y	n	n	n
೭೧೭	ಹೊನ್ನು ಹೆಣ್ಣು ಮಣ್ಣೆಂಬ ಕರ್ಮದ	n	n	y	n
೫೯೧	ಹೊಲೆಗಂಡಲ್ಲದೆ ಪಿಂಡದ ನೆಲೆ	n	y	n	n
೫೯೭	ಹೊಲೆಯ ಮಾದಿಗ ಭಕ್ತನಾದಡೆ	n	y	n	n
೭೭೧	ಹೊಲೆಯುಂಟೇ ಲಿಂಗವಿದ್ದೆಡೆಯಲ್ಲಿ	y	y	y	n

	I	II	III	IV	V
೫೭೭	ಹೊಲೆಯೊಳಗೆ ಹುಟ್ಟಿ ಕುಲವ	n	y	n	n
೭೫೭	ಹೋಗಬಿಟ್ಟು ಮರಳಿ ಹಿಂದೆ	n	n	n	n
	ಜ್ಞ				
೮೫೨	ಜ್ಞಾನದ ಗಮನದ ಸಹಜದ	y	n	y	n
೮೪೩	ಜ್ಞಾನದ ಬಲದಿಂದ ಅಜ್ಞಾನದ ಕೇಡು	n	n	n	n
೫೨೮	ಜ್ಞಾನಿ ನೀನು ಸ್ವಾಮಿ ನೀನು	n	n	y	n

❖❖

ಅನುಬಂಧ : ೩

ಲಿಂಗಲೀಲಾವಿಲಾಸಚಾರಿತ್ರದಲ್ಲಿಯ ಬಸವಣ್ಣನವರ ಟೀಕಿನ ವಚನಗಳ ವಿವರ

ವಚನಗಳ ಕ್ರಮಾನುಕ್ರಮಣಿಕೆ		ವಚನಗಳ ಅಕ್ಷರಾನುಕ್ರಮಣಿಕೆ	
೯೬೨	ಅಮೂಲ್ಯನಪ್ರಮಾಣನಗೋಚರ	೯೯೪	ಅನುಭಾವವಿಲ್ಲದ ಭಕ್ತಿ
೯೬೩	ಪ್ರಣವಾರೂಢನು ಪ್ರಣವಾರೂಢನು	೯೮೬	ಅರ್ಪಿಸುವ ಸುಖ ತಪ್ಪದೆ
೯೬೪	ಬಯಲು ಮೂರ್ತಿಯಾಗಿ ನಿಂದನೊಬ್ಬ	೯೬೨	ಅಮೂಲ್ಯನಪ್ರಮಾಣನಗೋಚರ
೯೬೫	ಆದಿಪುರುಷನ ಮನವು ಮನವ ನಕ್ಕಾಡಿ	೯೭೪	ಅಯ್ಯಾ ಮರದೊಳಗೆ ಅಗ್ನಿಯಿರ್ದಡೆ
೯೬೬	ಜಗತ್ತೆಂಬ ಯಂತ್ರದ ಹಾಹೆಗೆ	೯೭೮	ಅರತುದಯ್ಯಾ ಅಂಗಗುಣ
೯೬೭	ಗುಬ್ಬಿ ಹೆರರ ಮನೆಯ	೯೭೨	ಅರಿದಿಹೆನೆಂದರೆ ಅರುಹಿಂಗಸಾಧ್ಯ
೯೬೮	ಮರೀಚಿಯೊಳಡಗಿದ ಬಿಸಿಲಿನಂತೆ	೧೦೦೦	ಅರಿಯಲಿಲ್ಲದ ಅರಿವು
೯೬೯	ಕಲ್ಲೊಳಗೆ ಹೊನ್ನುಂಟು ಮನದೊಳಗೆ	೯೯೨	ಅರಿವಿನ ಅಪ್ಯಾಯನಕ್ಕೆ
೯೭೦	ಸಂಜೆಯ ಮಂಜಿನ ಕಪ್ಪು	೯೯೦	ಅರಿವಿನ ತೃಪ್ತಿಗೆ
೯೭೧	ವನದ ಕೋಗಿಲೆ ಮನೆಗೆ ಬಂದರೆ	೯೯೬	ಅಱಿವು ಮಱವೆಯೊಳಡಗಿ
೯೭೨	ಅರಿದಿಹೆನೆಂದರೆ ಅರುಹಿಂಗಸಾಧ್ಯ	೯೯೩	ಆಚಾರವನಾಚಾರವಾಯಿತ್ತು
೯೭೩	ಎನ್ನ ಕಾಯದ ಕರಸ್ಥಲದಲ್ಲಿ	೯೬೫	ಆದಿಪುರುಷನ ಮನವು ಮನವ
೯೭೪	ಅಯ್ಯಾ ಮರದೊಳಗೆ ಅಗ್ನಿಯಿರ್ದಡೆ	೯೮೩	ಆಹ್ವಾನವಿಲ್ಲ ಪ್ರಾಣಲಿಂಗವಾಗಿ
೯೭೫	ಕಂಗಳ ಮುಂದಣ ಶ್ರೀಗುರುಲಿಂಗವು	೯೮೪	ಆಹ್ವಾನಿಸಿ ಕರೆವಲ್ಲಿ
೯೭೬	ತೊಂಡಿಲ ಮುಡಿದುಕೊಂಡು	೯೮೨	ಇನ್ನು ಮುಕ್ತಿಯೆಂದು ಮನದಲ್ಲಿ
೯೭೭	ಎನ್ನ ತನುಮನವೆರಡನು	೯೯೮	ಉರಿಯೊಳಗಣ ಕರ್ಪುರಕ್ಕೆ
೯೭೮	ಅರತುದಯ್ಯಾ ಅಂಗಗುಣ	೯೨೩	ಎನ್ನಕಾಯದ ಕರಸ್ಥಲದಲ್ಲಿ
೯೭೯	ಭಕ್ತನ ಕಾಯವ ಜಂಗಮ	೯೭೭	ಎನ್ನ ತನು ಮನವೆರಡನು
೯೮೦	ಮಾಡುವಂತಿರಬೇಕು ಮಾಡದಂತಿರಬೇಕು	೯೯೭	ಎಮ್ಮವರಿಗೆ ಸಾವಿಲ್ಲ
೯೮೧	ಭವವಿಲ್ಲದ ಭಕ್ತನ	೯೮೮	ಕಂಗಳಪೂಜೆ ಲಿಂಗಕ್ಕರ್ಪಿತ
೯೮೨	ಇನ್ನು ಮುಕ್ತಿಯೆಂದು ಮನದಲ್ಲಿ	೯೭೫	ಕಂಗಳ ಮುಂದಣ ಶ್ರೀಗುರುಲಿಂಗವು

೯೮೩ ಆಹ್ವಾನವಿಲ್ಲ ಪ್ರಾಣಲಿಂಗವಾಗಿ
೯೮೪ ಆಹ್ವಾನಿಸಿ ಕರೆವಲ್ಲಿ
೯೮೫ ಕರ್ಣದ ಸೂತಕ ಹೋಯಿತ್ತು
೯೮೬ ಅರ್ಪಿಸುವ ಸುಖ ತಪ್ಪದೆ
೯೮೭ ಲೋಹ ಪರುಷವ ಮುಟ್ಟುವುದಲ್ಲದೆ
೯೮೮ ಕಂಗಳ ಪೂಜೆ ಲಿಂಗಕ್ಕರ್ಪಿತ
೯೮೯ ತನುಮುಟ್ಟಿ ಮನಮುಟ್ಟದೆ
೯೯೦ ಅರಿವಿನ ತೃಪ್ತಿಗೆ
೯೯೧ ಶರಣ ಲಿಂಗದಲಿ ಕೂಡಲು
೯೯೨ ಅರಿವಿನ ಆಪ್ಯಾಯನಕ್ಕೆ
೯೯೩ ಆಚಾರವನಾಚಾರವಾಯಿತ್ತು
೯೯೪ ಅನುಭಾವವಿಲ್ಲದ ಭಕ್ತಿ
೯೯೫ ಬಸುಱೆ ಬಾಯಾಗಿ
೯೯೬ ಅಱಿವು ಮಱವೆಯೊಳಡಗಿ
೯೯೭ ಎಮ್ಮವರಿಗೆ ಸಾವಿಲ್ಲ
೯೯೮ ಉರಿಯೊಳಗಣ ಕರ್ಪುರಕ್ಕೆ
೯೯೯ ಸಮಸುಖ ಸಂಧಾನವಿಲ್ಲದ
೧೦೦೦ ಅರಿಯಲಿಲ್ಲದ ಅರಿವು
೧೦೦೧ ಮಾಡಿ ಮಾಡಿಸಿಕೊಂಬವೆರಡರ
೧೦೦೨ ಲಿಂಗ ಗಂಭೀರ ನಿಸ್ಸಂಗಿಯ

೯೮೫ ಕರ್ಣದ ಸೂತಕ ಹೋಯಿತ್ತು
೯೬೯ ಕಲ್ಲೊಳಗೆ ಹೊನ್ನುಂಟು ಮನದೊಳಗೆ
೯೬೭ ಗುಬ್ಬಿ ಹೆರರ ಮನೆಯ
೯೬೬ ಜಗತ್ತೆಂಬ ಯಂತ್ರದ ಹಾಹೆಗೆ
೯೮೯ ತನುಮುಟ್ಟಿ ಮನ ಮುಟ್ಟದೆ
೯೭೬ ತೊಂಡಿಲ ಮುಡಿದುಕೊಂಡು
೯೬೩ ಪ್ರಣವಾರೂಢನು ಪ್ರಣವಾರೂಢನು
೯೬೪ ಬಯಲು ಮೂರ್ತಿಯಾಗಿ ನಿಂದನೊಬ್ಬ
೯೯೫ ಬಸುಱೆ ಬಾಯಾಗಿ
೯೭೯ ಭಕ್ತನ ಕಾಯವ ಜಂಗಮ
೯೮೧ ಭವವಿಲ್ಲದ ಭಕ್ತನ
೯೬೮ ಮರೀಚಿಯೊಳಗಡಗಿದ ಬಿಸಲಿನಂತೆ
೧೦೦೧ ಮಾಡಿ ಮಾಡಿಸಿಕೊಂಬವೆರಡರ
೯೮೦ ಮಾಡುವಂತಿರಬೇಕು ಮಾಡದಂತಿರಬೇಕು
೧೦೦೨ ಲಿಂಗ ಗಂಭೀರ ನಿಸ್ಸಂಗಿಯ
೯೮೭ ಲೋಹ ಪರುಷವ ಮುಟ್ಟುವುದಲ್ಲದೆ
೯೭೧ ವನದ ಕೋಗಿಲೆ ಮನೆಗೆ ಬಂದರೆ
೯೯೧ ಶರಣ ಲಿಂಗದಲ್ಲಿ ಕೂಡಲು
೯೭೦ ಸಂಜೆಯ ಮಂಜಿನ ಕಪ್ಪು
೯೯೯ ಸಮಸುಖ ಸಂಧಾನವಿಲ್ಲದ

❖❖

ಏಕೋತ್ತರಶತಸ್ಥಲಸಾರದಲ್ಲಿಯ ಬಸವಣ್ಣನವರ ಟೀಕಿನ ವಚನಗಳ ವಿವರ

ವಚನಗಳ ಕ್ರಮಾನುಕ್ರಮಣಿಕೆ	ವಚನಗಳ ಅಕ್ಷರಾನುಕ್ರಮಣಿಕೆ
೧೦೦೩ ಸಾಸಿವೆಯ ಮೇಲೆ ಸಾಗರ	೧೦೦೮ ಅಂಗದ ಮೇಲೆ ಲಿಂಗ ಪ್ರತಿಷ್ಠೆ
೧೦೦೪ ತನುವಿಡಿದು ಪ್ರಕೃತಿ	೧೦೧೨ ಅಂಗಲಿಂಗ ಸಂಬಂಧವಾದವರ
೧೦೦೫ ಗುರುವಚನವ ತನ್ನೊಳ	೧೦೧೩ ಅಂದಂದಿಂಗೆ ಬಂದ
೧೦೦೬ ಅನ್ನವನಿಕ್ಕಿದರೆ ಪುಣ್ಯವ	೧೦೦೬ ಅನ್ನವನಿಕ್ಕಿದರೆ ಪುಣ್ಯವ
೧೦೦೭ ಸಜ್ಜನ ಸದ್ಭಾವಿ ಅನ್ಯರ	೧೦೦೬ ಅರ್ಪಿಸುವ ಸುಖತಪ್ಪದೆ
೧೦೦೮ ಅಂಗದ ಮೇಲೆ ಲಿಂಗ ಪ್ರತಿಷ್ಠೆ	೧೦೦೫ ಗುರುವಚನವ ತನ್ನೊಳ
೧೦೦೯ ಜಂಗಮವೇ ಲಿಂಗವೆನಗೆ	೧೦೦೯ ಜಂಗಮವೇ ಲಿಂಗವನಗೆ
೧೦೧೦ ಶಿವನೇ ಜಗತ್ರಯಕ್ಕೊಡೆಯ	೧೦೧೧ ಜಗದಗಲ ಮುಗಿಲಗಲ
೧೦೧೧ ಜಗದಗಲ ಮುಗಿಲಗಲ	೧೦೦೪ ತನುವಿಡಿದು ಪ್ರಕೃತಿ
೧೦೧೨ ಅಂಗಲಿಂಗ ಸಂಬಂಧವಾದವರ	೧೦೦೮ ದಶದಿಕ್ಕು ಧರೆಗಗನ
೧೦೧೩ ಅಂದಂದಿಂಗೆ ಬಂದ	೧೦೧೫ ಭಕ್ತನು ಶಾಂತನಾಗಿರಬೇಕು
೧೦೧೪ ಲಿಂಗಾಭಿಮಾನಿಗೆ	೧೦೧೪ ಲಿಂಗಾಭಿಮಾನಿಗೆ
೧೦೧೫ ಭಕ್ತನು ಶಾಂತನಾಗಿರಬೇಕು	೧೦೧೦ ಶಿವನೇ ಜಗತ್ರಯಕ್ಕೊಡೆಯ
೧೦೧೬ ಅರ್ಪಿಸುವ ಸುಖತಪ್ಪದೆ	೧೦೦೭ ಸಜ್ಜನ ಸದ್ಭಾವಿ ಅನ್ಯರ
೧೦೧೭ ಜ್ಞಾನಾಮೃತವೆಂಬ ಜಲಧಿಯ	೧೦೦೩ ಸಾಸಿವೆಯ ಮೇಲೆ ಸಾಗರ
೧೦೧೮ ದಶದಿಕ್ಕು ಧರೆಗಗನ	೧೦೧೮ ಸ್ಥೂಲತನುವೆಂಬ ಭಾಂಡದಲ್ಲಿ
೧೦೧೯ ಸ್ಥೂಲತನುವೆಂಬ ಭಾಂಡದಲ್ಲಿ	೧೦೧೭ ಜ್ಞಾನಾಮೃತವೆಂಬ ಜಲಧಿಯ ಮೇಲೆ

❖❖

ವಿಶೇಷಾನುಭವ ಷಟ್ಸ್ಥಲದಲ್ಲಿಯ ಬಸವಣ್ಣನವರ ಟೀಕಿನ ವಚನಗಳ ವಿವರ

ವಚನಗಳ ಕ್ರಮಾನುಕ್ರಮಣಿಕೆ

ವಚನಗಳ ಅಕ್ಷರಾನುಕ್ರಮಣಿಕೆ

೧೦೪೦ ಎಮ್ಮಯ್ಯನ ಬಲ್ಲವರು ಒಮ್ಮೆಯೂ	೧೦೪೧ ಬಾಗಿಲ ಮುಂದೆ ಬಾಳೆ
೧೦೪೧ ಬಾಗಿಲ ಮುಂದೆ ಬಾಳೆ	೧೦೩೫ ಬಿತ್ತು ಬೆಳೆಯಿತ್ತು ಕೆಯ್
೧೦೪೨ ಚಂದ್ರಶಿಲೆಯಲ್ಲಿ ಪಾವಕಹುಟ್ಟಿ	೧೦೪೬ ಮನದ ತಲೆಬಾಗಿಲಲ್ಲಿ ಸದಾ ಸನ್ನಿಹಿತ
೧೦೪೩ ಪ್ರಾಣಾದಿವಾಯುಗಳ್ಳ ಕಳೆದು	೧೦೨೮ ಶಿವಾ ಶಿವಾ ಎಂಬ ಮಂತ್ರವೆನಗೆ
೧೦೪೪ ಹಗಲಾಯಿತ್ತು ಹೋಗದು	೧೦೨೨ ಸಂಸಾರಸರ್ಪನ ಹೇಳಿಗೆಯ
೧೦೪೫ ಒಡನಿರ್ದ ಸತಿಯೆಂದು ನಂಬಿದೆ	೧೦೪೪ ಹಗಲಾಯಿತ್ತು ಹೋಗದು
೧೦೪೬ ಮನದ ತಲೆಬಾಗಿಲಲ್ಲಿ ಸದಾ ಸನ್ನಿಹಿತ	೧೦೩೩ ಹದಿನಾರಿರ್ದಡೆ ಎಂಟ ಮಾಡುವ

❖❖

ಇತರ ವಚನ ಟೀಕೆಯಲ್ಲಿಯ ಬಸವಣ್ಣನವರ ಟೀಕಿನ ವಚನಗಳ ವಿವರ

ವಚನಗಳ ಕ್ರಮಾನುಕ್ರಮಣಿಕೆ	ವಚನಗಳ ಅಕ್ಷರಾನುಕ್ರಮಣಿಕೆ
೧೦೪೭ ವೇದಕ್ಕೊಜೆಯ ಕಟ್ಟುವೆ	೧೦೫೦ ಅಯ್ಯಾ ನಿಮ್ಮ ಶರಣರು
೧೦೪೮ ಹತ್ತುಸಾವಿರ ಗೀತವ ಹಾಡಿ	೧೦೪೯ ನಾಲಗೆ ಉಂಡರು ಬೇಗೆ
೧೦೪೯ ನಾಲಗೆ ಉಂಡರು ಬೇಗೆ	೧೦೫೧ ಲಿಂಗವ ಪೂಜಿಸಿ
೧೦೫೦ ಅಯ್ಯಾ ನಿಮ್ಮ ಶರಣರು	೧೦೪೭ ವೇದಕ್ಕೊಜೆಯು ಕಟ್ಟುವೆ
೧೦೫೧ ಲಿಂಗವ ಪೂಜಿಸಿ	೧೦೪೮ ಹತ್ತುಸಾವಿರ ಗೀತವ ಹಾಡಿ

❖❖

ಅನುಬಂಧ : ೪

ಗಮನಾರ್ಹ ಪದಕೋಶ


ದೇವರು–ದೇವಾಲಯ

ವ್ಯಕ್ತಿನಾಮ

ಸ್ಥಳನಾಮ

ಗ್ರಂಥನಾಮ

❖❖



ಡಾ. ಎಂ. ಎಂ. ಕಲಬುರ್ಗಿ ಅವರು ಸುಪ್ರಸಿದ್ಧ ಸಂಶೋಧಕರು. ವ್ಯಕ್ತಿ ನೆಲೆಯಲ್ಲಿ ಅವರು ಬರೆದದ್ದು ಅಪಾರ; ಸಾಂಸ್ಥಿಕ ನೆಲೆಯಲ್ಲಿ ಅವರು ಮಾಡಿದ ಸಾಧನೆಗಳು ಶಿಖರಪ್ರಾಯವಾದವುಗಳು. ಗ್ರಾಮೀಣ ಶ್ರಮಸಂಸ್ಕೃತಿ ಹಾಗೂ ವಿಜಯಪುರ ಜಿಲ್ಲೆಯ, ಸಿಂದಗಿ ತಾಲ್ಲೂಕಿನ ಯರಗಲ್ಲ ಗ್ರಾಮದ ಅವಿಭಕ್ತ ಕುಟುಂಬ ಪರಿಸರ ಪ್ರಭಾವದಲ್ಲಿ ಬೆಳೆದು ಬಂದ ಡಾ. ಕಲಬುರ್ಗಿ ಅವರು ಇಡೀ ನಾಡನ್ನೇ ಅವಿಭಕ್ತವಾಗಿ ಕಂಡವರು.

ಹೀಗಾಗಿ ಅವರು ನಾಡಿನ ತುಂಬೆಲ್ಲ ಹರಡಿಕೊಂಡಿರುವ ಸಂಘ-ಸಂಸ್ಥೆಗಳೊಂದಿಗೆ ಮಠ-ಮಾನ್ಯಗಳೊಂದಿಗೆ ಸರಕಾರಿ ಇಲಾಖೆಗಳೊಂದಿಗೆ ಒಡನಾಟವಿಟ್ಟುಕೊಂಡು ಅನೇಕ ಯೋಜನೆಗಳನ್ನು ಹುಟ್ಟು ಹಾಕಿದರು. ಹಲವಾರು ಪ್ರತಿಷ್ಠಾನಗಳನ್ನು ಸ್ಥಾಪಿಸುತ್ತ ಅವುಗಳನ್ನು ಕನ್ನಡದ ಪ್ರಾತಿನಿಧಿಕ ಸಂಸ್ಥೆಗಳನ್ನಾಗಿ ರೂಪಿಸಿದರು.

ಇಂಥ ಅಪರೂಪದ ವ್ಯಕ್ತಿಯ ಬಹುಮುಖ ಸಾಧನೆಯನ್ನು ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅವರ ಸಮಗ್ರ ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸಿ ಸಂಪುಟಗಳಲ್ಲಿ ಪ್ರಕಟಿಸುವುದು, 'ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ'ಯ ಮುಖ್ಯ ಉದ್ದೇಶವಾಗಿದೆ.

ಈಗಾಗಲೇ ಇಂಥ ಹಲವು ಯೋಜನೆಗಳನ್ನು ಯಶಸ್ವಿಯಾಗಿ ಪೂರೈಸುತ್ತ ಬಂದ ನಮ್ಮ ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಮೂಲಕ ಈ ಕಾರ್ಯವನ್ನು ಈಡೇರಿಸಲು ಅವಕಾಶ ದೊರೆತುದು ಸಂತೋಷದ ಸಂಗತಿ. ಈ ಕಾರ್ಯ ನಾವು ಭಾವಿಸಿದಷ್ಟು ಸುಲಭವಾದುದಲ್ಲ. ಅಲ್ಲಲ್ಲಿ ಚದುರಿ ಹೋಗಿರುವ ಪ್ರಕಟಿತ ಹಾಗೂ ಅಪ್ರಕಟಿತ ಕೃತಿಗಳು, ಚಿತ್ರಗಳು, ಧ್ವನಿ ಮುದ್ರಿಕೆಗಳು, ದೃಶ್ಯಮಾಧ್ಯಮಗಳು ಮತ್ತು ಪತ್ರಿಕೆಗಳಲ್ಲಿ ಪ್ರಕಟವಾದ ವಿಷಯಗಳನ್ನು ಸಂಗ್ರಹಿಸುವ ಹಂತಗಳಲ್ಲಿ ವಿದ್ವಾಂಸರು ವಿಶೇಷವಾಗಿ ಶ್ರಮಿಸಬೇಕಾಗುತ್ತದೆ. ನಮ್ಮ ಸುದೈವಕ್ಕೆ ಸಮರ್ಥ ಸಂಪಾದಕರಾದ ಡಾ. ವೀರಣ್ಣ ರಾಜೂರ ಹಾಗೂ ಎಲ್ಲ ಕಾರ್ಯಗಳನ್ನು ಸಂಯೋಜಿಸಲು ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ದೊರಕಿದ್ದಾರೆ. ಈ ಯೋಜನೆಯ ಕಾರ್ಯದರ್ಶಿಗಳು, ಸಲಹಾ ಸಮಿತಿ ಸದಸ್ಯರು ಮತ್ತು ನಾಡಿನ ಹಲವಾರು ವಿದ್ವಾಂಸರು ಈ ಕಾರ್ಯದಲ್ಲಿ ಆಸಕ್ತಿವಹಿಸಿ ಕೈಜೋಡಿಸಿದ್ದಾರೆ. ಇವರೆಲ್ಲರ ಸಹಯೋಗದಲ್ಲಿ ಕನ್ನಡಕ್ಕೆ ಹೊಸದೊಂದು ಅಮೂಲ್ಯವಾದ ಆಕರ ಸಂಪತ್ತು ದೊರಕುವಂತಾದುದು ಹೆಮ್ಮೆಯ ಸಂಗತಿಯಾಗಿದೆ.

ಡಾ. ಎಂ.ಬಿ.ಪಾಟೀಲ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ

ಮಾಜಿ ಗೃಹಸಚಿವರು, ಕರ್ನಾಟಕ ಸರ್ಕಾರ

ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ - ೫೮೬೧೦೩

ದಿ ಪ್ರಿಂಟ್ ಪಾಯಿಂಟ್, ಬೆಂ. ಮೊ : 97390 67359